Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಇಸವಿ.

ಅಂತರಂಗ
ಉಡುಪಿ.
ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24
ವಾರ ೩೪] Founder. SRI A. B. SHETTY. [No. 34
ಉಡುಪಿ • 3-5-1945 • ಮಂಗಳೂರು.

ಅಮೃತಾಂಜನ
REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them" Vide Order No. 1786-ECI/44/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No. 4755-N/44.

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20—4—1945 and will be closed at the discretion of the Directors, not earlier than 31—5—1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act, 1913. Liability of Members is Limited)

Registered Head Office:- **Hampankatta, MANGALORE.**
Bombay Office:- **26, Noble Chambers, Fort Bombay.**
Factory:- **MALPE, South Kanara.**
Depots at:- **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food, Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish, Etc.**
2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.
3. The Madras Government has been approached to subscribe for half the capital and appoint a Government Director and render technical advice to the Company.
4. A Scientific Advisory Council will be formed and Technical Experts will be appointed to carry on intense research work in the Industry.
5. Arrangements are being made to procure Military contracts.
6. The Madras Government has been requested to supply the Company all the modern equipments useful for the purpose of the Company.
7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset.

MANGALORE,
19th April, 1945

Mangalore Jarapoa,
Managing Director.

ವಿಜಯೀತ್ರಯ : : : : :

ಝುಕೋವ್; ರೊಕೊಸ್ಸೋವ್ಸ್ಕಿ; ಕೊನೀವ್

ಲೇಖಕ—ಎಚ್ ಜೆ. ಉಕ್ಸಲೆನ್.

ಸೋವಿಯೆಟಿನ ಬದ್ಧ ವಿರೋಧಿಯಾದ ನಾಜೀ ಜರ್ಮನಿಯ ಹೃದಯಕ್ಕೆ ಮಾರ್ಶಲ್ ಸ್ಟಾಲಿನರು ನಾಟಿಸಿರುವ ತ್ರಿಶೂಲವೆಂದರೆ ಈ ತ್ರಿಮೂರ್ತಿಗಳೇ— ಝುಕೋವ್, ರೊಕೊಸ್ಸೋವ್ಸ್ಕಿ, ಕೊನೀವ್. ಎಷ್ಟೆಂದರೂ ಕಪಟತ್ವ ಕಲಿತನವನ್ನು ಗೆಲ್ಲುವಂತಿಲ್ಲ; ರಣ ಧೈರ್ಯದ ಕೆಂಪು ಸೇನೆಯೊಂದಲ್ಲದೆ ಜರ್ಮನಿಯನ್ನೀ ರೀತಿ ಜಯ್ಸುರಿ ಮಾಡುವ ಮತ್ತೊಂದು ಶಕ್ತಿ ಪ್ರಪಂಚದಲ್ಲಿರಲಿಲ್ಲ. ಹಿಟ್ಲರ್ ಲೋಕೈಕ ಯೋಧ; ಯೋಧರನ್ನಾತ ಗುರುತಿಸಬಲ್ಲ; ನಾಳೆ ಪ್ರಾಣಬಿಡುವಾಗ ಹಿಟ್ಲರ್ ಕನವರಿಸುತ್ತಾನಾದರೆ ಈ ರಶ್ಯನ್ ಸೇನಾನಿತ್ರಯದ ಶಕ್ತಿ, ಚಾತುರ್ಯ, ಸಾಹಸಗಳನ್ನೇ. ನೀಪರ್ ಹೊಳೆಯಿಂದ ಬರ್ಲಿನ್ ನಗರದ ವರೆಗೂ ನಾಜೀ ಜರ್ಮನಿಯನ್ನು ಸುಡುತ್ತಾ ಹೋದ ಸೂರು ಕೆಂಡಗಳ ಮೂವರು ಕೆಂಪು ಸೇನಾನಿಗಳ ಪರಿಚಯ ಇಲ್ಲಿದೆ. ಸಂ. ನ

ಝುಕೋವ್

ಮೋಸ್ಕೋ ನಗರದ ರಸ್ತೆಗಳ ಧ್ವನಿವರ್ಧಕಗಳು ಹೊಸ ವಿಜಯಗಳನ್ನು ಘೋಷಿಸುವಾಗಲೆಲ್ಲಾ "ಮಾರ್ಶಲ್ ಸ್ಟಾಲಿನರ ದಿನದ ವಿಜಯಾಜ್ಞೆ (ಓರ್ಡರ್ ಓಫ್ ದಿ ಡೇ) ಯು......." ಎಂದು ಪ್ರಾರಂಭಿಸಿ 'ಕಮಾಂಡರ್......ರಿಗೆ" ಎಂದು ಇಂದಿನ ವಿಜಯೀ ಸೇನಾನಿಗಳ ಹೆಸರನ್ನು ಜೋಡಿಸಿ ಹೇಳುವ ಸಂಪ್ರದಾಯ ಹೀಗಾಗಿ ಕೆಂಪು ಸೇನೆಯು ವಿಜಯ ಪಡೆಯುತ್ತಾ ಹೋದಂತೆ ಕೆಂಪು ಸೇನೆಯ ಮಾರ್ಶಲರ, ಹೆಸರುಗಳ ರಶ್ಯದ ಜನತೆಯ ಮೆದುಳೊಳಗೆ ಶಾಶ್ವತವಾಗಿ ಹೆಣೆದುಕೊಳ್ಳುತ್ತಾ ಬಂದಿವೆ. ಇಂತಹ ಪ್ರಥಮ ವಿಜಯಾಜ್ಞೆಯು ಪ್ರಥಮತಃ ಹೊರಟುದೆಂದರೆ ಮೋಸ್ಕೋದ ಹೆಬ್ಬಾಗಿಲಿಂದ ಜರ್ಮನ್ ಸೇನೆಯನ್ನು ಹಿಂದೂಡಿದಾಗ. ಅದು ಗ್ರಿಗೋರಿ ಕೋನ್‌ಸ್ಟೆಂಟಿನೋವಿಚ್ ಝುಕೋವರ ವಿಳಾಸಕ್ಕೆ ಹೊರಟಿದ್ದಿತು.

ಇದು ನಡೆದುದು 1941 ನೇ ಶರದೃತುವಿನ ಅಂತ್ಯಭಾಗದಲ್ಲಿ. ರಶ್ಯನ್ ಸೇನೆಯು ಸಂಪೂರ್ಣವಾಗಿ ಧ್ವಂಸವಾಯಿತು ಎಂದು ಹಿಟ್ಲರ್ ಆ ಒಕ್ಟೋಬರ್ 3ರಲ್ಲೇ ಘೋಷಿಸಿದ್ದ. ಮಾರ್ಶಲ್ ಸ್ಟಾಲಿನರೊಬ್ಬರನ್ನು ಬಿಟ್ಟು, ರಶ್ಯನ್ ಸರಕಾರವೇ ಮೋಸ್ಕೋದಿಂದ ಕುಯಿಬಿಶೆವ್ ನಗರಕ್ಕೆ ವರ್ಗಾಯಿಸಲ್ಪಟ್ಟಿದ್ದಿತು. ಮೋಸ್ಕೋ ಪತನವು ಕೆಲವು ವಾರಗಳೊಳಗಿನ ಪ್ರಶ್ನೆಯೆಂಬಂತೆ ಆಗ ಕಾಣುತಿತ್ತು. ಅಂತಹ ಕಗ್ಗತ್ತಲ ಕಾಲದಲ್ಲಿ ಝುಕೋವ್ ಅಲ್ಲಿಯ ಸೇನಾನಿತ್ವ ವಹಿಸಿ ಮುಂದೆ ಬಂದ. ಅಧಿಕಾರೀ ವರ್ಗವನ್ನು ಕ್ರೆಮ್ಲಿನಿನಲ್ಲಿರುವ ತನ್ನ ಕೋಣೆಯಲ್ಲಿ ಒಟ್ಟುಗೂಡಿಸಿ ಹೇಳಿದ. "ನಿಮ್ಮ ಕೈಗಳನ್ನು ಮೇಲಕ್ಕೆತ್ತಿರಿ; ನನ್ನಂತೆಯೇ ಉಚ್ಚರಿಸಿರಿ—ಮೋಸ್ಕೋವಿಗೆ ಎಂದೆಂದಿಗೂ ಪತನವಿಲ್ಲ ಎಂದು ನಾವು ದೃಢವಾಗಿ ಪ್ರತಿಜ್ಞೆ ತೊಡುತ್ತೇವೆ."

ಂಂ ಂಂ ಂಂ

ಸರಿ, ಹಾಗೆಯೇ ಆಯಿತು. ಈಗ ಪ್ರಾಯ 48 ಆಗಿರುವ ಝುಕೋವ್ ಬೆಳಕಿಗೆ ಬಂದುದು ಆಗಲೇ. ಒಂದು ಅಸಾಮಾನ್ಯ ಜೀವನವು—ಸಣ್ಣ 'ಬೇಸಾಯಗಾರ ಕುಟುಂಬ'ವೊಂದರಲ್ಲಿ 1897ರಲ್ಲಿ ಆರಂಭವಾಗಿದ್ದ ಆ ಜೀವನವು—ತನ್ನ ಪಾಲಿನ ಅಗ್ರಪೀಠ ಹೊಂದಲು ಮೇಲೇರುತ್ತಿದೆ. 1915ರಲ್ಲಿ 18 ವರುಷದ ಝುಕೋವ್ ರಶ್ಯನ್ ಸಾಮ್ರಾಜ್ಯ ಸೇನೆಯ ಖಾಸಗೀ ಸೋಲ್ಜರನಾಗಿ ಪ್ರಥಮತಃ ಯುನಿಫೋರ್ಮ್ ಧರಿಸಿದ್ದ. ಅಲ್ಲಿಯ ಅಂತರ್ಯುದ್ಧದಲ್ಲಿ ಟಿಮೊಶೆಂಕೋವಿನ ಕೈಕೆಳಗೆ ಅವ ಹೋರಾಡಿದ್ದ. ಆ ಅಂತರ್ಯುದ್ಧ ಕೆಂಪು ಸೇನೆಯ ವಿಜಯದೊಂದಿಗೆ ಮುಗಿಯಿತು.

ಂಂ ಂಂ ಂಂ

ಹೊರಗಿನ ವೈರಿಗಳ ಕೈವಾಡ ನಡೆಯದಂತೆ ತಾನು ಸ್ವತಃ ಭದ್ರವಾಗಿರಬೇಕೆಂಬುದನ್ನು ನವನಿರ್ಮಾಣಗೊಂಡ ಸೋವಿಯೆಟ್ ರಶ್ಯವರಿತಿದ್ದಿತು. ರಶ್ಯದ ರಕ್ಷಣಾ ಸಿದ್ಧತೆಯ ಒಂದು ಮುಖ್ಯಾಂಗವಾಗಿ ಸಮರ್ಥಾಧಿಕಾರಿಗಳ ತರಬೇತಿಯಾರಂಭವಾಯಿತು. ಶಾಪೋಶ್ನಿಕೋವ್ ಮತ್ತು ಪ್ರೊರೊಶಿಲೋವರು ಮಿಲಿಟರಿ ಎಕೆಡೆಮಿಯ ಅಧ್ಯಾಪಕರಾಗಿದ್ದರು. ಝುಕೋವ್ ಅವರ ವಿದ್ಯಾರ್ಥಿಯಾದ. ಸೇನಾನಿ ಮಂಡಲಕ್ಕಾಗಿ ಶಿಕ್ಷಣವೀಯುವ ಫ್ರುನ್ಸೆ ಮಿಲಿಟರಿ ಎಕೆಡೆಮಿಗೆ ಆರಿಸಲ್ಪಟ್ಟ ವಿದ್ಯಾರ್ಥಿಗಳಲ್ಲಿ ಝುಕೋವ್ ಒಬ್ಬ. 1933ರಲ್ಲಿ ಅತಿ ಮೇಲ್ದರ್ಜೆಯ ಗೌರವಗಳನ್ನು ಸಂಪಾದಿಸಿ ಅವನು ಈ ಸೇನಾಶಿಕ್ಷಣದಲ್ಲಿ ಪಾಸಾದ.

ಂಂ ಂಂ ಂಂ

1937ರಲ್ಲಿ ಅವನೊಂದು ಕಾಲ್ಬಲದ ಕಮಾಂಡರ್ ಆದ. ಒಂದೇ ವರುಷದೊಳಗೆ ಮೊಂಗೋಲಿಯಾದ ಚಾಕಿಂಗೋಲ್ ಎಂಬಲ್ಲಿ ನಡೆದ ಗಡಿ ಹೋರಾಟದಲ್ಲಿ ತನ್ನ ಟೇಂಕು ಧಾಳಿಯಿಂದ ಜಪಾನರನ್ನೋಡಿಸಿ ಅಗ್ನಿ ಪರೀಕ್ಷೆಯ ಕೀರ್ತಿ ಸ್ಥಾನ ಪಡೆದ. 1940ರಲ್ಲಿ ಮಿಲಿಟರಿ ಜಿಲ್ಲೆಯಾದ ಕೀವಿನ ಪ್ರಮುಖ ಸೇನಾನಿಯಾಗಿ ನೇಮಕ ಹೊಂದಿದನಲ್ಲದೆ ಕೆಲಕಾಲದ ವರೆಗೆ ಸೇನಾನಿ ಮಂಡಲದ ನಾಯಕನಾಗಿ ಇದ್ದ. ರಶ್ಯನ್ ಡಿಪ್ಯುಟಿ ಡಿಫೆನ್ಸ್ ಕಮಿಸಾರ್ ಆಗಿ ನೇಮಕ ಹೊಂದಿದ 1941ರ ಒಕ್ಟೋಬರಿನಲ್ಲೇ ಮೋಸ್ಕೋವಿನ ರಕ್ಷಣಾ ನಾಯಕನಾದುದು. ಈ ನೇಮಕದ ಕುರಿತು ಒಂದು ಮಾತು ಪ್ರಚಾರದಲ್ಲಿದೆ. ಸ್ಟಾಲಿನನ ಅನುಯಾಯಿಗಳಿಗೆ ಝುಕೋವನ ನೇಮಕವು ಏನೇನೋ ರುಚಿಸಲಿಲ್ಲವಂತೆ. "ಝುಕೋವ್ ಯಾಕೆ? ಆಲೋಚಿಸುವ ಮಟ್ಟಿಗೆ ಆತ ತೀರಾ ಮಂದಗತಿಯ ಮನುಷ್ಯ" ಎಂದು ಅವರೆಲ್ಲಾ ಆಕ್ಷೇಪಿಸಿದಾಗ "ಆಗಿರಬಹುದು; ಆದರೆ ಒಂದು ವಿಷಯವನ್ನು ಎರಡು ಬಾರಿ ಯೋಚಿಸುವ ಅಗತ್ಯವೇ ಅವನಿಗಿಲ್ಲ" ಎಂದು ಸ್ಟಾಲಿನ್ ಉತ್ತರಿಸಿದರಂತೆ. ಸ್ಟಾಲಿನನಿಟ್ಟ ಈ ನಂಬಿಕೆಯು ಸಂಪೂರ್ಣ ಸರಿಯೆನ್ನಿಸಿತು. ಯುದ್ಧ ಮರ್ಮ ಚಾತುರ್ಯ ಹಾಗೂ ಯುದ್ಧರಂಗ ಚಾಲಕತ್ವದಿಂದ ಸ್ಟಾಲಿನ್‌ಗ್ರಾಡ್ ವಿಜಯ ಮತ್ತು ಲೆನಿನ್‌ಗ್ರಾಡ್ ಬಂಧಮುಕ್ತತೆಯಲ್ಲಿ ರಶ್ಯವು ಪಡೆದ ವಿಜಯದೊಂದಿಗೆ ಝುಕೋವನ ಹೆಸರು ಅತಿ ಮುಖ್ಯವಾಗಿ ಸೇರಿದೆ. ಜರ್ಮನಿಯ ಪತನವನ್ನು ಬಹ್ವಂಶ ಸಾಧಿಸಿದ ಸೇನೆಯೆಂದರೆ ಝುಕೋವನದು. ಮೋಸ್ಕೋದ ಭವಿಷ್ಯ ಮತ್ತು ಯುದ್ಧಾದೃಷ್ಟವು ತೂಕಮಾಡಲ್ಪಡುತ್ತಿದ್ದ ಆ ಒಕ್ಟೋಬರಿನಲ್ಲಿ ಝುಕೋವನ ಪಾಲಿಗೆ ಅವನ ಆಜ್ಞಾಧಾರಿಗಳಾದ ಇಬ್ಬರು ಯುವಕ ಲೆಫ್ಟನೆಂಟ ಜನರಲರಿದ್ದರು. ಅವರಿಬ್ಬರೂ ಈಗಲೂ ಅವನ ಪಕ್ಕದಲ್ಲೇ ಇದ್ದಾರೆ; ಇಬ್ಬರೂ ರಶ್ಯದ ಮಾರ್ಶಲರಾಗಿದ್ದಾರೆ.

ರೊಕೊಸ್ಸೋವ್‌ಸ್ಕಿ

ಕೋನ್‌ಸ್ಟೇಂಟೈನ್ ಕೊನ್ಸ್ಟೆಂಟಿನೋ ಎಚ್ ರೊಕೊಸ್ಸೋವ್‌ಸ್ಕಿಯೇ ಅವರಲ್ಲೊಬ್ಬ. ಉದ್ದ, ತೆಳುಮನುಷ್ಯನಾಗಿದ್ದು ನೋಡುವಾಗ 50 ವರುಷದವನಂತೆ ಕಾಣುತ್ತಾನೆ. ಆತ ವಾರ್ಸಾದ ಓರ್ವ ಎಂಜಿನ್ ಡ್ರೈವರನ ಮಗ. ಪ್ರಥಮತಃ ಝಾರನ ಸೇನೆಯಲ್ಲಿ ಇದ್ದವ. ಆತನ ಯೋಧಪ್ರತಿಭೆಯು ಪ್ರಕಾಶಕ್ಕೆ ಬರಲು ರಶ್ಯನ್ ಕ್ರಾಂತಿ ಅನುಕೂಲವಾಯಿತು. ಸುಪ್ರಸಿದ್ಧ 30ನೇ ಡಿವಿಜನಿನ ನಾಯಕನಾಗಿ ಆತ ಕೋಲ್ಚ್ಯಾಕನಿಗೆದುರಾಗಿ ಹೋರಾಡಿದ. ಆ ಮೇಲಿನ ಶಾಂತಿಯ ಅವಧಿಯಲ್ಲಿ ರೊಕೊಸ್ಸೋವ್‌ಸ್ಕಿ ಸೇನಾವಿಜ್ಞಾನವನ್ನು ಕಲಿಯುವದರಲ್ಲೇ ತಲ್ಲೀನನಾಗಿದ್ದ. ಮಿಲಿಟರಿ ಎಕೆಡೆಮಿಯಲ್ಲಿ ಕಲಿಯುತ್ತಿರುವಾಗಲೇ ಝುಕೋವನು ಪ್ರಥಮತಃ ಆತನಿಂದ ಆಕರ್ಷಿಸಲ್ಪಟ್ಟ. ಶಿಕ್ಷಣ ಮುಗಿದೊಡನೆ ಅವನಿಗೊಂದು ಕಾಲ್ಬಲದ ನಾಯಕತ್ವ ದೊರೆಯಿತು. 1941ನೇ ಜೂನಿನಲ್ಲಿ ಅವನು ಟೇಂಕು ದಳದ ನಾಯಕನಾಗಿದ್ದ. ಅಲ್ಪಾವಧಿಯೊಳಗೆ ಮೋಸ್ಕೋ ರಕ್ಷಣೆಯಲ್ಲಿ ಪ್ರಾಮುಖ್ಯ ಪಾತ್ರ ವಹಿಸಿದ ಸೇನೆಯೊಂದರ ನಾಯಕತ್ವವು ಅವನದಾಗಿದ್ದಿತು. ಮೋಸ್ಕೋ ಯುದ್ಧಾರಂಭದಲ್ಲಿ ರೊಕೊಸ್ಸೋವ್‌ಸ್ಕಿ ಗಾಯಗೊಂಡು ರಣರಂಗಾಸ್ಪತ್ರೆಯಲ್ಲಿ ಮಲಗಿದ್ದನೆಂದೂ, ಅಂತಹ ಸ್ಥಿತಿಯಲ್ಲೂ ತನ್ನನ್ನು ರಣರಂಗಕ್ಕೆ ಕಳುಹಲೇ ಬೇಕೆಂದು ಆತ ಸ್ಟಾಲಿನನೊಡನೆ ಸ್ವತಃ ಹಟಹಿಡಿದನೆಂದೂ ವಾರ್ತೆಯಿದೆ. ಅದು ಹೇಗಿದ್ದರೂ ಮೋಸ್ಕೋದಲ್ಲಿ ಪ್ರದರ್ಶಿಸಲ್ಪಟ್ಟ ಒಂದು ಚಿತ್ರವು ಈ ಕುರಿತು ಉತ್ತೇಜನ ಬರಿಸುತ್ತಿದೆ. ಮೋಸ್ಕೋ ಹೋರಾಟದ ವೇಳೆ ಸ್ಟಾಲಿನನು ತನ್ನ ಸೇನಾನಿಗಳೊಡನೆ ಸಮ್ಮೇಲನ ಸೇರಿರುವ ಚಿತ್ರವದು. ಸ್ಟಾಲಿನನ ಹಿಂಭಾಗದಲ್ಲಿ ತಲೆಗೆ ಬೇಂಡೇಜ್ ಕಟ್ಟಿಕೊಂಡ ರೊಕೊಸ್ಸೋವ್‌ಸ್ಕಿ ನಿಂತಿದ್ದಾನೆ ರೊಕೊಸ್ಸೋವ್‌ಸ್ಕಿ ನಾಮವು ಚರಿತ್ರೆಯಲ್ಲಿ ಉಲ್ಲೇಖ ಪಡೆದುದು ಸ್ಟಾಲಿನ್‌ಗ್ರಾಡ್ ಹೋರಾಟದಲ್ಲಿ. ಸ್ಟಾಲಿನ್‌ಗ್ರಾಡ್ ಮುತ್ತಿಗೆ ಬಿಡಿಸಿದ ನಾಜೀ ಜನರಲ್ ಫೀಲ್ಡ್ ಮಾರ್ಶಲ್ ಪಾವ್ಲುಲ್ ಶರಣು ಬರುವಂತೆ ಮಾಡಿದ ಸೇನೆಗಳ ನಾಯಕನೇ ರೊಕೊಸ್ಸೋವ್‌ಸ್ಕಿ. ರೊಕೊಸ್ಸೋವ್‌ಸ್ಕಿ ಮತ್ತು ಕೈದಿ ಪಾವ್ಲುಲನನ್ನು ಒಟ್ಟಾದಾಗಿನ ದೃಶ್ಯದ ಚಲಚ್ಚಿತ್ರವೊಂದು ಚಿರಕಾಲದ ದಾಖಲೆಯಾಗಿ ಎತ್ತಲ್ಪಟ್ಟಿದೆ.



ಮಾರ್ಶಲ್ ಸ್ಟಾಲಿನ್
ಅಥವಾ
ಆಧುನಿಕ ತ್ರಿಶೂಲಧಾರಿ.

ಅಭಿವೃದ್ಧಿ ತೋರಿಸುವ ಪಟ್ಟಿ.

	1940	1942	1944
	ರೂಪಾಯಿ	ರೂಪಾಯಿ	ರೂಪಾಯಿ
ತೆತ್ತ ಭಂಡವಾಳ	3,93,000	14,96,000	26,34,000
ಕ್ಷೇಮನಿಧಿ	4,50,000	4,50,000	10,34,000
ಠೇವಣಾತಿಗಳು	86,72,000	1,45,51,000	2,39,69,000
ಸರಕಾರೀ ಭದ್ರತೆಗಳು	11,19,000	63,17,000	1,17,93,000
ಲಾಭಾಂಶ	72,000	1,53,000	2,75,000
ಜುಮ್ಲಾ ಸಂಪತ್ತು	1,03,44,000	2,07,35 000	3 46.46 000

ಸಂಖ್ಯೆಗಳೆಲ್ಲಾ ಸಾವಿರಗಳಿಗೆ ಸರಿಪಡಿಸಿದವುಗಳು.

ನಮ್ಮ ಶಾಖೆಗಳು:— ಕ್ವಿಲನ್, ಆಲಪ್ಪಿ, ಎರ್ನಾಕುಲಮ್, ಕೊಚ್ಚಿನ್, ಕಲ್ಲಿಕೋಟೆ, ಕಣ್ಣಾನೂರು, ಮಂಗಳೂರು, ಬೆಂಗಳೂರು, ಬೆಳಗಾಂವ್, ಧಾರವಾಡ, ಹುಬ್ಬಳ್ಳಿ, ಚಿಕ್ಕಮಗಳೂರು, ಮಧುರಾ, ಸೇಲಮ್, ಇರೋಡ್, ಕೊಯಮುತ್ತೂರು, ಇತ್ಯಾದಿ, ಇತ್ಯಾದಿ. ಮುಂಬಾಯಿ ನಗರದಲ್ಲಿ **4** ಶಾಖೆಗಳು

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED

(Incorporated in British India liability of Members Limited.)

ವ್ಯಕ್ತಿ ಮತ್ತು ವಾರ್ತೆ

ಮುಸಲನಿಯ ಕೈಸೆರೆ

ಉತ್ತರ ಇಟೆಲಿಯಲ್ಲಿ ಪ್ರತಿಭಟನೆಗೆದ್ದ ದೇಶಭಕ್ತ ಇಟೆಲಿಯನರು ಸಿನ್ಯೋ° ಎಂಬಲ್ಲಿ ಮುಸಲನಿಯನ್ನು ಸೆರೆಹಿಡಿದರೆಂದು ಸಾಧಾರ ವಾರ್ತೆ ಪ್ರಕಟಿಸಲ್ಪಟ್ಟಿದೆ ಗ್ರ್ಯಾಝಿಯಾನಿ, ಪುಪ್ರೊಲಿಸ, ಫಾರಿನಕ್ಕಿ ಮತ್ತು ಇತರ ಪ್ರಮುಖ ಮುಸಲನಿ ಬಂಟರೂ ಬಂಧಿಸಲ್ಪಟ್ಟಿದ್ದಾರೆ. ಎಲ್ಲರನ್ನೂ ರೋಮಿಗೆ ತರುವ ಸಂಭವವಿದ ಎಲ್ಲರಿಗೂ ವಿಚಾರಣೆ ಮತ್ತು ಮರಣ ಶಿಕ್ಷೆ ಕಾದಿದೆ.

ಪಿಟೈನರ ಬಂಧನ

ಫ್ರಾನ್ಸು ಹಿಟ್ಲರನಿದಿರ. ದೊಗ್ಗ್ಲಿಓರದಂದಿನಿಂದ ಮಿತ್ರರಿಂದ ಬಿಡುಗಡೆ ಹೊಂ

ಕೊನೀವ್

ಮೋಸ್ಕೋದ ಮುಂಭಾಗದಲ್ಲಿ ಝುಕೋವನ ಕೈಕೆಳಗೆ ಹೋರಾಡಿದ ಮತ್ತೊಬ್ಬ ತರುಣ ಸೇನಾನಿಯೇ ಇವಾನ್ ಸ್ಟೆಪನೋವಿಚ್ ಕೊನೀವ್. ಮೊದಲಿನ ಇಬ್ಬರಂತೆ ಇವನೂ ಪ್ರಥಮತಃ ಝಾರನ ಸೇನೆಯಲ್ಲೇ ಕೆಲಸಮಾಡಿದವ ರಷ್ಯನ್ ಕ್ರಾಂತಿಯಿಂದ ಹಿಡಿದ ಕಿಡಿಗಳಂತಿರುವ ತರುಣ ರಾಜಕೀಯ ಯೋಧರ ಪ್ರತಿಬಿಂಬವಾಗಿಯೇ ಕೊನೀವನೂ ಇದ್ದಾನೆ. ಅವನೂ ಕೆಂಪು ಸೇನೆಯಲ್ಲಿ ಸೇರಿಯೇ ತೀವ್ರ ಪ್ರಗತಿ ಪಡೆದಿದ್ದಾನೆ. ತನ್ನೀ ಅನುಯಾಯಿಯ ಕುರಿತು ಝುಕೋವನಾಡಿರುವ ಇಯೊಂದು ವಾಕ್ಯದಿಂದ ಅವರೊಳಗಿನ ಸಂಬಂಧವೆಷ್ಟು ಮಧುರವಾದುದೆಂಬುದನ್ನರಿಯಬಹುದು "ಕೊನೀವನಿಗೆ ವ್ರದು ಸರಿಯೆಂದು ಕಾಣುತ್ತದೋ ಹಾಗೆ ಮಾಡಲಿ, ಯಾವ ಜರ್ಮನನೂ ಅವನಿದಿರು ನಿಲ್ಲಲು ಸಮರ್ಥನಾಗುವಂತಿಲ್ಲ" ತನ್ನ ಯುದ್ಧ ಮರ್ಮವನ್ನು ಕೊನೀವನು ಬೋಧಿಸಿರುವ ರೀತಿಹೀಗೆ. "ನಾವೇನುಮಾಡುತ್ತೇವೆಂದು ವೈರಿ ನಿರೀಕ್ಷಿಸುತ್ತಾನೆಂಬುದನ್ನು ಪ್ರಥಮತಃ ಖಂಡಿತಮಾಡಿಕೊಳ್ಳಿ-ಆ ಮೇಲೆ ತದ್ವಿರುದ್ಧವಾಗಿಯೇ ಮಾಡಿರಿ." ರೊಕೊಸ್ಸೋವ್ಸ್ಕಿಯ ಹೆಸರು ಸ್ಟಾಲಿನ್‌ಗ್ರಾಡಿನಿಂದ ಪ್ರಕಾಶಗೊಂಡಂತೆ ಕೊನೀವನ ಹೆಸರು ಕೋರ್ಸನಿನ ಮುತ್ತಿಗೆಯಿಂದ ಪ್ರಸಿದ್ಧಿಗೊಂಡಿದೆ. ಅಲ್ಲಿಯೇ ೭ನೇ ಜರ್ಮನ್ ಸೇನೆ ಧ್ವಂಸವಾಗಿ ಬರ್ಲಿನ್ ದ್ವಾರವು ತೆರಲಾಯಿತು ಈ ವರುಷ ಅಲ್ಲಿಂದ ಹೊರಟ ಕೊನೀವನ ಸೇನೆಯೀಗ ಜರ್ಮನಿಯೊಳಗೆ ಬಹಳ ದೂರಕ್ಕೆ ಹೋಗಿದೆ

ದುವ ವರೆಗೂ ಅದರ ನಾಯಕನಾಗಿದ್ದ, ಪರಾಜಿತ ಫ್ರಾನ್ಸಿನ ಆಳ್ವಿಕೆಯನ್ನು ತಕ್ಕಡಿಯಲ್ಲಿಟ್ಟು ಅತಿ ವಿಚಕ್ಷಣತೆಯಿಂದ ವರ್ತಿಸಿದ್ದ ಮಾರ್ಶಲ್ ಪಿಟೈನರನ್ನು ಫ್ರಾನ್ಸ್-ಸ್ವಿಸ್ ಗಡಿಯಲ್ಲಿ ದಸ್ತಗಿರಿಮಾಡಿ ಪ್ಯಾರಿಸಿಗೆ ತರಲಾಗಿದೆ. ಅಲ್ಲಿಯೇ ಫ್ರೆಂಚ್ ದ್ರೋಹಿಕಕ್ಷಿಗೆ ಅವರ ವಿಚಾರಣೆ ನಡೆಯಲಿದ ೮೯ರ ಮುದುಕ ಪಿಟೇನರೀಗ ಒಂದು ಮನೆಯಲ್ಲಿ ಬಲವಾದ ಪಹರೆಯೊಳಗೆ ಕಠೋರ ವಿಚಾರಣೆಯನ್ನೆದುರು ನೋಡುತ್ತಿದ್ದಾರೆ.

ಪಿಟೇನ್ ದ್ರೋಹಿಯೆ?

ತನ್ನನ್ನು ಸಿಟ್ಟಿನಿಂದ ಗೃಹದೊಳಗೆ ಕೂಡಿಸಿದೊಡನೆ ಪಿಟೇನರ ಪ್ರಾರ್ಥನೆಯೆಂದರೆ ಸ್ವತಂತ್ರ ಫ್ರಾಂಚರ ನಾಯಕ ಡಿಗೋಲೆಯವರ ಭಾವಚಿತ್ರವನ್ನು ತನ್ನ ಮುಂಭಾಗದ ಗೋಡೆಗೆ ತೂಗಹಾಕಬೇಕೆಂಬುದೇ ಸದ್ಯ ಸಂದೇಹದ ಕಾರ್ಮೋಡ ಕವಿದಿದೆಯಾದರೂ ತನ್ನ ಹೆಸರು ನಿರ್ಮಲಗೊಳ್ಳಲಿರುವದೆಂದೂ, ತನ್ನ ಮನಸ್ಸಾಕ್ಷಿ ಪರಿಶುದ್ಧವಿದೆಯೆಂದೂ ಪಿಟೈನರಂದಿದ್ದಾರೆ ತಮ್ಮ ಮುದಿನಾಯಕ ಪಿಟೈನರಿಗೆ ಮರಣ ಶಿಕ್ಷೆ ವಿಧಿಸುವ ಕುರಿತು ಫ್ರಾನ್ಸಿನ ಜನಮತ ವಿರುದ್ಧವಿದ ಅವರು ಮರಣದಂಡನೆಗರ್ಹರಾದರೂ, ನ್ಯಾಯನಿರ್ಣಾಯಕ ಜ್ಯೂರಿಗಳು ವಿನಾಯತಿ ಪಡಿಸಬಹುದೆಂದು ಸರಕಾರೀ ವಕೀಲರ ಸೂಚನೆ

ಗೋರಿಂಗನ ರಾಜೀನಾಮೆ

ಅಖಿಲ ಜರ್ಮನಿಯಲ್ಲಿ ಹಿಟ್ಲರನಿಗೆರಡನೆಯ ಜನಪ್ರಿಯಾಧಿಕಾರಿಯೂ, ಆಜೇಯ ನಾಜೀ ವಿಮಾನ ಬಲದ ಸರ್ವ ಸೇನಾನಿಯೂ ಆಗಿದ್ದ ಫೀಲ್ಡ್ ಮಾರ್ಶಲ್ ಗೋರಿಂಗನು ಅತೀವ ಹೃದಯರೋಗಕ್ಕೀಡಾಗಿರುವುದರಿಂದ ತನ್ನ ಸ್ಥಾನಕ್ಕೆ ರಾಜೀನಾಮೆಯಿತ್ತಿರುವನೆಂದೂ, ಹಿಟ್ಲರನದನ್ನಂಗೀಕರಿಸಿ ಗೋರಿಂಗನ ಸ್ಥಾನವನ್ನು ಜನರಲ್ ರಿಟ್ಟರ್ ಫೋನ್ ಗ್ರೇಮನಿಗಿತ್ತಿದ್ದಾನೆಂದೂ ಪ್ರಕಟವಾಗಿದೆ. ತನ್ನ ಹೆಂಡತಿ, ಮಗಳು ಮತ್ತು ೩ ಮಿಲಿಯ ಸ್ಟರ್ಲಿಂಗು ಬೆಲೆಯ ನಗನಾಣ್ಯಗಳನ್ನು ಕಟ್ಟಿಕೊಂಡು ಗೋರಿಂಗ್ ಅಜ್ಞಾತ ಸ್ಥಳಕ್ಕೆ ಸರಾಗ ಪಲಾಯನ ಕೈಗೊಂಡನೆಂದು ಮೋಸ್ಕೋ ರೇಡಿಯೋ ಘೋಷಿಸಿದ

ಬರ್ಲಿನಿನಲ್ಲೇ ಹಿಟ್ಲರನ ಅಂತ್ಯ?

ಜರ್ಮನ್ ಸೇನೆಯ ಭವಿಷ್ಯ ಸೂಚಕನಾಗಿದ್ದ ಲೆಫ್ಟಿನೆಂಟ್ ಜನರಲ್ ಕರ್ಲ್ ಡಿಟ್‌ಮಾರನು ಪಶ್ಚಿಮ ರಂಗದ ಮೇಡ್ಗಬರ್ಗನಲ್ಲಿ ಅಮೇರಿಕನ್ ೯ನೇ ಸೇನೆಗೆ ಸೆರೆ ಸಿಕ್ಕಿದ್ದಾನೆ 'ಹಿಟ್ಲರನು ಬರ್ಲಿನಿನಲ್ಲೇ ಸಾಯುತ್ತಾನೆ; ಯುದ್ಧವಿನ್ನು ಕೆಲವೇ ದಿನಗಳೊಳಗೆ ಮುಗಿಯುವದು' ಎಂದಾತ ತನ್ನನ್ನು ಹಿಡಿದವರೊಡನೆ ಹೇಳಿದ್ದಾನೆ. ಪ್ರಷ್ಯದ ಸೇನಾನಿ ವೋನ್ ಡ ಪರ್ಸ್ಟನ್ ಸ್ಟೈನರ್, ಓವರ್ ಪ್ರೆಸ್ ಎಡ್ಮಿರಲ್, ೧೦೦ ಅಧಿಕಾರಿಗಳು ಮತ್ತು ಹಲವು ೧೦ ಸಾವಿರ ಎಸ್. ಎಸ್. ಸೈನಿಕರು ಅಮೇರಿಕನರಿಗೆ ಸೆರೆಸಿಕ್ಕಿದ್ದಾರೆ

ಡಿಗೋಲೆಯ ಎದೆಗಾರಿಕೆ

ಜರ್ಮನಿಯ ಸ್ಟುಟ್‌ಗಾರ್ಟನ್ನು ಫ್ರೆಂಚ್ ಸೇನೆಯಾಕ್ರಮಿಸಿಕೊಂಡು ನಿಂತಿದೆ ಅದನ್ನು ಅಮೇರಿಕನ್ ಸೇನೆಗೆ ಬಿಟ್ಟುಕೊಡಬೇಕೆಂದು ಜರ್ಮನಿಯಲ್ಲಿರುವ ಅಮೇರಿಕನ್ ಮಿಲಿಟರಿ ಸರಕಾರವು ಮಾಡಿಕೊಂಡ ವಿಜ್ಞಾಪನೆಯನ್ನು ಡಿಗೋಲೆ ತಿರಸ್ಕರಿಸಿದ್ದಾರೆ ಫ್ರೆಂಚ್ ಮಂತ್ರಿ ಮಂಡಲವು ಡಿಗೋಲೆಯವರನ್ನು ಸಮರ್ಥಿಸಿ 'ಜರ್ಮನಿಯಲ್ಲಿ ಫ್ರೆಂಚರ ಗಡಿಯಾವುದೆಂಬ ನಿರ್ಣಯವು ಫ್ರೆಂಚ್ ಮತ್ತು ಮಿತ್ರ ಸರಕಾರಗಳೊಳಗೆ ಆಗುವ ವರೆಗೆ ಸ್ಟುಟ್‌ಗಾರ್ಟ್ ಫ್ರೆಂಚ್ ಮಿಲಿಟರಿ ಸರಕಾರದ ಕೈಯಲ್ಲೇ ಇರಬೇಕು" ಎಂದ ಘೋಷಿಸಿದೆ

ಲೋರ್ಡ್ ವೇವೆಲರ ನಿರಾಶೆ?

ವೈಸರಾಯಿ ವೇವೆಲರು ಲಂಡನಿಗೆ ಹೋಗಿ ತಿಂಗಳು ಕಳೆದರೂ, ಅಮೆರಿ ಚರ್ಚಿಲ್ ಮತ್ತು ಬ್ರಿಟಿಷ್ ಮಂತ್ರಿಗಳೊಡನೆ ಧಾರಾವಾಹಿ ಸಂಭಾಷಣೆಗಳನ್ನವರು ನಡೆಯಿಸಿದ್ದರೂ, ಅಧಿಕೃತವಾದ ಒಂದೇ ಒಂದು ಶಬ್ದವೂ ಇದು ವರೆಗೆ ಪ್ರಕಟವಾಗಿಲ್ಲ. ವೇವೆಲ್-ಅಮೆರಿ ಮತ್ತು ವೇವೆಲ್ ಚರ್ಚಿಲ್ಲರೊಳಗೆ ಅಭಿಪ್ರಾಯಭೇದಗಳಿದ್ದಿರುವವೆಂದೂ. ಕ್ರಿಪ್ಸ್ ಕೊಡುಗೆಗಿಂತ ಒಂದೇ ಒಂದು ಹೆಜ್ಜೆ ಮುಂದಿಡಲು ಚರ್ಚಿಲ್ಲರು ಸಿದ್ಧರಿಲ್ಲವೆಂದೂ, ಈ ಕಾರಣದಿಂದಾಗಿ ಕಳವಳ ತೊರೆಡಲಿದ್ದ ಕಾರ್ಯಕ್ರಮವನ್ನು ಗದ್ದರಿಸಿಕೊಂಡ.

ಇನ್ನು ಕೆಲವು ದಿನ ವೇವೆಲರು ಲಂಡನಿನಲ್ಲಿ ನಿಲ್ಲಬೇಕಾಯಿತೆಂದೂ ಪ್ರಕಟವಾಗಿದ ಆದರೆ ಅಧಿಕಾರೀ ವರ್ಗವು ಈ ಊಹೆಯನ್ನು ಅಲ್ಲಗಳೆದಿದೆ

ವಿಂಡ್ಸರರ ಹೆಸರು ಸೂಚನೆ

ಹಿಂದೀ ಬಿಕ್ಕಟ್ಟನ್ನು ಸೌಹಾರ್ದ್ರತೆಯಿಂದ ನಿವಾರಿಸಬೇಕೆಂಬ ಉತ್ಕಟೇಚ್ಛೆಯಿರುವ ಲೋರ್ಡ್ ವೇವೆಲರಿಗೆ, ಲಂಡನಿನ ಅಪ್ರಾಗತಿಕರಿಂದ ಬಿದ್ದಿರುವ ತಡೆಗಳು ಅಸಹನೀಯವಾಗಿ ಅವರು ವೈಸರಾಯೀ ಹುದ್ದೆಗೇನೇ ರಾಜಿಕೊಡುವ ಸಂಭವವಿದೆಯೊಂದೂಮ್ಮೆ ಪ್ರಕಟವಾಯಿತು. ಡ್ಯೂಕ್ ಓಫ್ ವಿಂಡ್ಸರರು ಭಾರತ ವೈಸರಾಯಿಯಾಗುವರೆಂದು ಹರಡಿದ್ದ ಸುದ್ದಿಯನ್ನು ಅಧಿಕಾರೀ ವರ್ಗವು ಕೂಡಲೇ ಅಲ್ಲಗಳೆದಿದೆ, ಹಿಂದುಸ್ಥಾನದ ಸಮಸ್ಯೆಯು ಬಹುಮುಖವಾದ್ದರಿಂದ ಅದರ ತೀರ್ಮಾನಕ್ಕೆ ಸಮಯವಿನ್ನೂ ಬೇಕಂತೆ. ವೇವೆಲರು ಹಿಂದುಸ್ಥಾನಕ್ಕೆ ಬಂದ ಮೇಲೆಯೇ ಅಧಿಕೃತ ಪ್ರಕಟಣೆ

ಫ್ರೆಂಚ್ ಹಕ್ಕಿಗಳು ದಾರಿಹೋದವು!

ಫ್ರಾನ್ಸಿನ ಪತನದ ವೇಳೆ ಅಲ್ಲಿಯ ಮುಖ್ಯ ಮಂತ್ರಿಯಾಗಿದ್ದ ರೈನಾಡ್, ಮಾಜೀ ಫ್ರೆಂಚ್ ಪ್ರಧಾನಿ ದಲಾದಿಯಾರ್, ಮಾಜೀ ಫ್ರೆಂಚ್ ಸೇನಾನಿ ಜನರಲ್ ಗೇಮ್ಲಿನ್ ನಾಜೀ ಬಂಧನದಿಂದ ತಪ್ಪಿಸಿಕೊಂಡು ಸ್ವಿಜರ್ಲೆಂಡಿನೊಳಗೆ ಹೊಕ್ಕಿರುವರೆಂದು ಪೇರಿಸ್ ರೇಡಿಯೋ ಘೋಷಿಸಿದೆ ಜರ್ಮನಿಯ ಸೆರೆಗೃಹಗಳಲ್ಲಿ ಕೊಳೆಯುತ್ತಿದ್ದ ಪ್ರಮುಖರು ಮತ್ತು ಸಾಮಾನ್ಯರನೇಕ ಮಂದಿ ಸ್ವತಂತ್ರರಾಗಿದ್ದಾರೆ.

ಶ್ರೀಮತಿ ಪಂಡಿತರ ಪ್ರಚಾರ

ಫ್ರಿಸ್ಕೋ ಸಮ್ಮೇಳನಕ್ಕೆ ತೆರಳಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದೀ ಪ್ರಶ್ನೆಯ ಕಡೆಗೆ ಅಲ್ಲಿಯ ಜನವನ್ನೆಳೆಯುವದರಲ್ಲಿ ಪೂರ್ಣ ಯಶಸ್ಸು ಪಡೆದಿದ್ದಾರೆ ಬ್ರಿಟಿಷ್ ಪ್ರತಿನಿಧಿಗಳಾದ ಈಡೆನ್, ಅಟ್ಲೀಗಳ ಸಾಮ್ರಾಜ್ಯವಾದಕ್ಕೆ ಪ್ರತಿಭಟಿಸಿಯೂ ದುಡಿದಿದ್ದಾರೆ. ಅವರ ಪತ್ರಿಕಾ ಪ್ರತಿನಿಧಿ ಸಮ್ಮೇಲನವು, ನೊಲಟೊವ್, ಸ್ಟೆಟ್ಟಿನಸ್, ಅಟ್ಲೀಗಳಂತಹ ಪ್ರಮುಖರಾಜ್ಯಾಧಿಕಾರಿಗಳ ಸಮ್ಮೇಲನಗಳಿಗೆ ಸದೃಶವಾಗಿದೆ ಸರಕಾರೀ ನೇಮಿತ ಹಿಂದೀ ಪ್ರತಿನಿಧಿಗಳ ಮಾತಿಗೆ ಬೆಲೆಬಾರದಂತಾಗಿದ

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 19-4-1945 } [illegible] Rau, MANAGING DIRECTOR

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ, ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ ಜೀವವಿಮೆ!

ನಿಮ್ಮ ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಪ್ತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಕರ್ತವ್ಯ ಪಾಲನೆಗೆ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರೀತಿಯಾಯತಿ, ಸೌಕರ್ಯ ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ವಿ ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಸಾನ್ ಫ್ರಾನ್ಸಿಸ್ಕೋ ಸಮ್ಮೇಲನ

ಪರಸ್ಪರ ಮನಃ ಕಷಾಯ.

ಲೋಕವನ್ನು ಯುದ್ಧ ಕುಂಡದಿಂದೆತ್ತಿ ಶಾಂತಿ ಸುಖಾಸನವೇರಿಸುವ ಮಧ್ಯ ಮೆಟ್ಟಲಿನಂತಿರುವ ಜಾಗತಿಕ ಸಮ್ಮೇಲನವು—ಚರಿತ್ರಾಪೂರ್ವ ಲೋಕ ಪ್ರತಿನಿಧಿ ಸಭೆಯು ಇದೇ ಎಪ್ರಿಲ್ ತಾ 25ರಲ್ಲಿ ಅಮೇರಿಕದ ಸಾನ್‌ಫ್ರಾನ್ಸಿಸ್ಕೋ ನಗರದ ಭವ್ಯ ಭವನಗಳಲ್ಲಿ ಆರಂಭವಾಗಿದೆ. 46ರಾಷ್ಟ್ರಗಳ ಸುಮಾರು 200 ಮಂದಿ ಪ್ರತಿನಿಧಿಗಳು 900 ಮಂದಿ ಸಹಾಯಕರೊಡನೆ ಅಲ್ಲಿ ಹಾಜರಿದ್ದಾರೆ ಸಮ್ಮೇಲನದ ಕಾರ್ಯದರ್ಶಿ ಮಂಡಳದಲ್ಲಿ 300 ಮಂದಿಯಿದ್ದಾರಲ್ಲದೆ, ಇಡೀ ಜಗತ್ತಿನ 1200 ಮಂದಿ ಪತ್ರಿಕಾ ಪ್ರತಿನಿಧಿಗಳು ಲೇಖನಿಯೊಡನೆ ಹಾಜರಾಗಿದ್ದಾರೆ. ಪರಿಷತ್ತು ಸೇರುವ ಸ್ಥಳದ ಅಧಿಪತಿ ಅಮೇರಿಕನ್ ಸರಕಾರವು ಲೋಕ ಪ್ರತಿನಿಧಿಗಳಿಗೆ ಆತಿಥ್ಯವೀಯುವ 'ಮನೆಯೊಡೆಯ'ನ ಹೊಣೆ ಹೊತ್ತು ಸಮ್ಮೇಲನಕ್ಕಾಗಿ ಸುಮಾರು 1,400,000 ಡೋಲರುಗಳನ್ನು ವ್ಯಯಿಸುತ್ತಿದೆ. ವಿದೇಶೀ ಪ್ರತಿನಿಧಿಗಳ ಖಾಸಗೀ ವೆಚ್ಚವನ್ನು ಬಿಟ್ಟು ಉಳಿದುದೆಲ್ಲವನ್ನೂ ಅಮೇರಿಕವೇ ನೋಡಿಕೊಳ್ಳುತ್ತಿದೆ.

ಸಮ್ಮೇಲನದ ಉದ್ಘಾಟನೆ

ಅಮೇರಿಕಾಧ್ಯಕ್ಷ ಟ್ರುಮೇನರು ವಾಷಿಂಗ್ಟನಿನಿಂದಲೇ ಸ್ಫೂರ್ತಿದಾಯೀ ರೇಡಿಯೋ ಭಾಷಣವೊಂದರ ಮೂಲಕ ಸಮ್ಮೇಲನವನ್ನಾರಂಭಿಸಿದರು. ವ್ಯಕ್ತಿಗತ ಅಭಿರುಚಿಯನ್ನು ಜಾಗತಿಕ ಶಾಂತಿಪ್ರೇಮದ ವಿಶಾಲ ಧೋರಣೆಯಾಗಿ ಮಾರ್ಪಡಿಸಿಕೊಳ್ಳಿರೆಂದು ಪ್ರತಿನಿಧಿಗಳನ್ನು ಪ್ರೇರೇಪಿಸುತ್ತಾ ಟ್ರುಮೇನರಂದಿದ್ದಾರೆ. "ತನ್ನಷ್ಟಕ್ಕೆ ತಾನಿರುವುದು ಅಸಾಧ್ಯವೆಂಬುದನ್ನು ಮನುಷ್ಯನು ಎಂದೋ ಕಲಿತಿದ್ದಾನೆ. ಈ ಮೂಲಭೂತ ತತ್ವವು ರಾಷ್ಟ್ರಗಳಿಗೂ ಅನ್ವಯಿಸುವದು ಯುದ್ಧದಲ್ಲಿ ನಾವು ಪ್ರತ್ಯಪ್ರತ್ಯೇಕವಾಗಿರಲಿಲ್ಲ; ಶಾಂತಿಯಲ್ಲಿ ಪ್ರತ್ಯೇಕವಾಗಿರುವ ಎದೆಗಾರಿಕೆ ನಮಗೆ ಬೇಡ. ಇನ್ನೊಂದು ಯುದ್ಧವಸಾಧ್ಯವಾಗುವಂತೆ ನಾವು ಸತ್ಯಕ್ಕೂ ಸಾಧಿಸಬೇಕು. ಲೋಕ ಗೆಲ್ಲುವ ಹಂಚಿಕೆ ತಯಾರಿಸುವ ಹುಚ್ಚರನ್ನು ಪ್ರತಿಭಟಿಸುವದಕ್ಕಾಗಿ ನಾವು ಪ್ರತಿಯೊಂದು ತಲೆಮಾರಿನಲ್ಲೂ ಯುವಕ ಕುಸುಮಗಳನ್ನು ಬಲಿಕೊಡುವ ಹವ್ಯಾಸ ಮುಂದುವರಿಯಬಾರದು ಯಾವುದೇ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪುಗಳು ತಮ್ಮ ವಾದವನ್ನು ಬೊಂಬು ಮತ್ತು ಬೆಯನೆಟುಗಳಿಂದ ಮುಂದೊತ್ತಲು ಇನ್ನು ಮುಂದೆ ನಾವು ಬಿಡಲಾರೆವು. 'ಬಲವೇ ನ್ಯಾಯ' ಎಂದಿರುವ ವಿರೋಧಿಗಳ ಮೂಲ ತತ್ವವನ್ನು ನಮ್ಮ ಒಮ್ಮತದ ಕಾರ್ಯಗಳ ಮೂಲಕ 'ನ್ಯಾಯವೇ ಬಲ' ಎಂದು ಮಾರ್ಪಡಿಸಬೇಕು. ಯುದ್ಧದಲ್ಲಿ ಒಟ್ಟೊಟ್ಟಿಗೆ ಸಾಯುವ ಇಚ್ಛೆ ನಮಗಿಲ್ಲವಾದರೆ ಶಾಂತಿಯಲ್ಲಿ ಒಟ್ಟಿಗೆ ಜೀವಿಸುವದನ್ನು ನಾವು ಕಲಿಯಬೇಕು." ಅಮೇರಿಕದ ಗೃಹಕಾರ್ಯದರ್ಶಿ ಮಿ ಎಡ್ವರ್ಡ್ ಸ್ಟೆಟ್ಟಿನಸರ ಚಿಕ್ಕ ಸ್ವಾಗತ ಭಾಷಣದೊಡನೆ ಸಮ್ಮೇಲನದ ಪ್ರಾರಂಭೋತ್ಸವ ಮುಗಿಯಿತು.

ಅಧ್ಯಕ್ಷತೆಗೆ ಆಕ್ಷೇಪ

ಮರುದಿನ ಸೇರಿದ ಚುಕ್ಕಾಣಿ ಸಮಿತಿ (Steering committee) ಯು ಪ್ರಾರಂಭದಲ್ಲೇ ರಶ್ಯನ್ ಪ್ರತಿನಿಧಿಗಳ ನಾಯಕ ಎಮ್. ಮೊಲಟೊವರಿಂದಾಗಿ ಪ್ರಥಮ ಹಜ್ಜೆಯಿಡುವಾಗಲೇ ಹಾವನ್ನು ಕಂಡಂತೆ ಗಾಬರಿ ನಿರ್ಮಾಣವಾಯಿತು. ಸಮ್ಮೇಲನದ ಎಗ್ಜಿಕ್ಯೂಟಿವ್ ಮತ್ತು ಸ್ಟೀಯರಿಂಗ್ ಸಮಿತಿ ಸಭೆಗಳ ಶಾಶ್ವತಾಧ್ಯಕ್ಷಸ್ಥಾನಕ್ಕೆ ಅಮೇರಿಕನ್ ಪ್ರತಿನಿಧಿಗಳ ನಾಯಕ ಎಡ್ವರ್ಡ್ ಸ್ಟೆಟ್ಟಿನಸರನ್ನು ಬ್ರಿಟಿಷ್ ಪ್ರತಿನಿಧಿಗಳ ನಾಯಕ ಮಿ. ಅಂತೋನಿ ಈಡೆನರು ಸೂಚಿಸಿದರು. ಮುಂದಾಳು ಚತುರ್ರಾಷ್ಟ್ರಗಳ ನಾಲ್ಕು ಮಂದಿ ಶಾಶ್ವತಾಧ್ಯಕ್ಷರಾಗಬೇಕೆಂದೂ ಅವರು ಸರ್ತಿ ಪ್ರಕಾರ ಅಧ್ಯಕ್ಷ ಸ್ಥಾನ ವಹಿಸಬೇಕೆಂದೂ ಮೊಲೊಟವರು ಪ್ರತಿಸೂಚನೆ ತಂದಾಗ ಆರಂಭವೇ ಆತುರದಾಯಿಯಾಯಿತು; ಸಭೆ ಉದ್ವೇಗಗೊಂಡಿತು. ಆದರೆ ಮಿ. ಈಡೆನರು ಪ್ರಸಂಗಾವಧಾನತೆಯಿಂದ ಮಧ್ಯಗಾಮೀ ಮಾರ್ಗಸೂಚಿಸಿದರು. ಪೂರ್ಣ ಸಮ್ಮೇಲನದ ನಾಲ್ಕು ಸಭೆಗಳ ಅಧ್ಯಕ್ಷತೆಯು ಮೊಲೊಟವರ ಸೂಚನೆಯಂತೆ ಸರ್ತಿ ಪ್ರಕಾರ ಚತುರ್ರಾಷ್ಟ್ರಗಳದಾಗಬೇಕು ಆದರೆ ಎಗ್ಜಿಕ್ಯೂಟಿವ್ ಮತ್ತು ಸ್ಟೀಯರಿಂಗ್ ಕಮಿಟಿಯ ಶಾಶ್ವತಾಧ್ಯಕ್ಷರು ಸ್ಟೆಟ್ಟಿನಸರೇ ಆಗಬೇಕೆಂಬುದೇ ಮಿ ಈಡೆನರ ಮರು ಸೂಚನೆ. ಮೊಲಟವರೊಬ್ಬರನ್ನು ಬಿಟ್ಟು ಮಿಕ್ಕವರೆಲ್ಲಾ ಕೈಯೆತ್ತಿ ಇದಕ್ಕೊಪ್ಪಿಗೆ ಸೂಚಿಸಿದರಂತೆ. ಕೂಡಲೇ ಪ್ರಮುಖ ಚತುರ್ರಾಷ್ಟ್ರಗಳ ಪ್ರತಿನಿಧಿಗಳು ಮತ್ತೊಂದು ಕೋಣೆ ಸೇರಿ ಗುಪ್ತ ಯೋಚನೆ ನಡೆಸಿ, ಕೆಲವೇ ಮಿನಿಟುಗಳಲ್ಲಿ ಹೊರಬಂದ ಮೇಲೂ 'ಯಾವ ತೀರ್ಮಾನವೂ ಆಗಲಿಲ್ಲ' ಎಂಬ ಮೊಲಟವರ ಹೇಳಿಕೆಯಿಂದ ಸಭೆ ಪುನಃ ಚಕಿತವಾಯಿತು. ಆ ದಿನದ ಸಭೆಗೆ ಈ ಘರ್ಷಣೆಯೇ ಮುಕ್ತಾಯವಿತ್ತಿತು. ಅಧ್ಯಕ್ಷತೆಯ ಜಗಳ ಸಮಾಧಾನಕರವಾಗಿ ತೀರ್ಮಾನವಾಗದಿದ್ದರೆ ತಾನು ಪರಿಷತ್ತಿನಿಂದಲೇ ಹಿಂದೆಗೆಯುವೆನೆಂಬ ಮೊಲಟವರ ಬೆದರಿಕೆಯಿಂದಾಗಿ ಆರಂಭದಲ್ಲೇ ಕವಿದ ನಿರಾಶೆಯ ಕಾರ್ಮೋಡವು ಆ ಮೇಲೂ ಚೆದರುವ ಮತ್ತು ಪುನಃ ಕರಿಛಾಯೆ ಕವಿಯುವ ಹವ್ಯಾಸದಿಂದ ವಾತಾವರಣ ಮಸಕಾಗಿಯೇ ಇದೆ.

ರಷ್ಯದ ತೀವ್ರ ಭಿನ್ನಾಭಿಪ್ರಾಯ.

ತ್ರಿರಾಷ್ಟ್ರಗಳ ತ್ರಿವಿಧ ಧೋರಣೆ

ಭದ್ರತಾ ಸಮ್ಮೇಲನದ ಮೊದಲ ಮಹಾಸಭೆಯಲ್ಲಿ ಮಾಡಿದ ಭಾಷಣಗಳಲ್ಲೇ ಅಮೇರಿಕ, ಇಂಗ್ಲಂಡು, ರಶ್ಯಗಳ ಆಂತರಿಕ ಭಿನ್ನ ಧೋರಣೆಗಳು ಬೆಳಕಿಗೆ ಬಿದ್ದಿವೆ. ತಿಂಗಳುಗಳ ಮೊದಲೇ ಮಾಡಲ್ಪಟ್ಟಿರುವ ಡಂಬಾರ್ಟನ್ ಓಕ್ಸ್‌ನ ಸೂಚನೆಗಳನ್ನು ಸರಿಯಾಗಿ ಶೋಧಿಸಿ, ಆ ಕುರಿತು ಬಂದಿರುವ ವಿಧಾಯಕ ತಿದ್ದುಪಡಿಗಳನ್ನು ಪರ್ಯಾಲೋಚಿಸಿ, ಮುಂದಿನ ಘಟನೆಗಳಿಗನುಗುಣವಾದ ತಿದ್ದುಪಡಿಗಳಿಗವಕಾಶವಿರುವ ಒಂದು ಸ್ಪಷ್ಟ ನಿರ್ಧಾರ ಮಾಡುವದೇ ಈ ಸಮ್ಮೇಲನದ ಧ್ಯೇಯವೆಂದು ಸ್ಟೆಟ್ಟಿನಸರಂದಿದ್ದಾರೆ. ಈ ಯುದ್ಧದಲ್ಲಿ ಪ್ರಮುಖ ರಾಷ್ಟ್ರಗಳು ಹೊತ್ತ ಹೊಣೆಗನುಸಾರವಾಗಿ, ಮುಂದಿನ ಜಗತ್ತಿನಲ್ಲೂ ವಿಶೇಷಾಧಿಕಾರ ವಹಿಸಲು ಬದ್ಧವಿವೆ ಎಂಬ ಒಳಧ್ವನಿಯೊಂದು ಮಿ ಈಡೆನರ ಮತ್ತು ಮಿ ಸ್ಟೆಟ್ಟಿನಸರ ಭಾಷಣಗಳಲ್ಲಿ ಸೂಕ್ಷ್ಮವಾಗಿ ಸೇರಿದ್ದಿತು. ಯುದ್ಧಾರಂಭದ ಮೊದಲು ರಶ್ಯಕ್ಕೆ ದೊರೆತಿದ್ದ ತಿರಸ್ಕಾರ, ಯುದ್ಧಾವಧಿಯಲ್ಲಿ ಫೇಸಿಸ್ಟರನ್ನು ತಡೆಯಲಾಗದ ಪಾಶ್ಚಿಮಾತ್ಯ ರಾಷ್ಟ್ರಗಳ ದೌರ್ಬಲ್ಯದ ನೆನಪನ್ನು ಹುಟ್ಟಿಸಿ, ಭಾವೀ ವ್ಯವಸ್ಥೆಯಲ್ಲಿ ಅಂತಹ ದೋಷಗಳು ಮುಂದೆಬರಬಹುದೆಂಬ ಸ್ಪಷ್ಟ ಎಚ್ಚರಿಕೆ ಮೊಲಟವರ ಭಾಷಣದಲ್ಲಿತ್ತು. ಡಂಬಾರ್ಟನ್ ಓಕ್ಸ್‌ನಲ್ಲಿ ತಯಾರಿಸಲ್ಪಟ್ಟ, ಯಾಲ್ಟಾ ಸಮ್ಮೇಲನದಲ್ಲಾದ ನಿರ್ಧಾರಗಳೇ ಭಾವೀ ವ್ಯವಸ್ಥೆಯ ಪ್ರಮುಖಾಧಾರಗಳೆಂದು ಮೊಲಟವರ ವಾದ. ಬ್ರಿಟಿಷ್ ಪ್ರತಿನಿಧಿ ಮಿ. ಈಡೆನರು ಆ ವಾದಕ್ಕೆ ಅಗೋಚರ ಅಡ್ಡಗಾಲಿಟ್ಟಂತಿದೆ. ಯಾಲ್ಟಾ ನಿರ್ಧಾರಗಳು ಮುಖ್ಯವಾದರೂ ಅವು ತಿದ್ದಲ್ಪಡಲು ಬಾಧ್ಯವಿವೆ ಎಂದು ಬ್ರಿಟಿಷ್ ವಿದೇಶಮಂತ್ರಿಯಂದಿದ್ದಾರೆ. 14 ವರುಷಗಳಿಂದ ಒದ್ದಾಡುತ್ತಿರುವ ಚೀನದ ಪ್ರತಿನಿಧಿ ಸೂಂಗರ ಮಾತಿನಲ್ಲಿ ಶಾಂತಿಯ ಬಾಯಾರಿಕೆಯೊಂದೇ ಕಾಣುತಿತ್ತು

ಮಧ್ಯ ಪಂಚಾಯತಿಕೆ

ಪೂರ್ಣಾಧಿವೇಶನದ ಅಧ್ಯಕ್ಷತೆಯು ಸರ್ತಿ ಪ್ರಕಾರ ಚತುರ್ರಾಷ್ಟ್ರಗಳೊಳಗೆ ಬದಲಾಯಿಸಲ್ಪಡಬೇಕು, ಎಕ್ಸಿಕ್ಯೂಟಿವ್ ಮತ್ತು ಸ್ಟೀಯರಿಂಗ್ ಕಮಿಟಿಗಳ ಅಧ್ಯಕ್ಷತೆ ಸ್ಟೆಟ್ಟಿನಸರದೇ ಎಂಬ ಈಡೆನ್ ಸೂಚನೆಯೇ ಮರುದಿನದ ಪೂರ್ಣ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಪ್ರಥಮತಃ ಮೊಲಟವರು ಎರಡು ತಿದ್ದುಪಡಿಗಳನ್ನು ಮುಂತಂದರೂ ಚೀನಿ, ನ್ಯೂಝಿಲೇಂಡ್, ಫಿಲಿಪ್ಪಾಯಿನ್ಸ್ ಪ್ರತಿನಿಧಿಗಳ ಭಾಷಣ ಕೇಳಿ ಸಾಮೂಹಿಕ ಹಿತದೃಷ್ಟಿಯಿಂದ ಹಿಂದೆಗೆದು ಸ್ಟೆಟ್ಟಿನಸರಿಂದ ಹಸ್ತಲಾಘವ ಪಡೆದರು. ಪ್ರಥಮತಃ 11ರಾಷ್ಟ್ರಗಳ ಪ್ರತಿನಿಧಿಗಳು ಮಾತ್ರವಿರಬೇಕೆಂದಿದ್ದ ಎಕ್ಸಿಕ್ಯೂಟಿವ್ ಕಮಿಟಿಯಲ್ಲಿ 14ರಾಷ್ಟ್ರಗಳಿಗೆ ಪ್ರಾತಿನಿಧ್ಯ ದೊರೆಯಿತು ಪೋಲೆಂಡಿಗೆ ಪ್ರಾತಿನಿಧ್ಯವೀಯಬೇಕೆಂಬ ಪ್ರಶ್ನೆಯನ್ನು—ಮಿತ್ರ ಪಾಳೆಯದೊಳಗಿನ ಮುಖ್ಯ ಕಚ್ಚಾಟದ ವಿಷಯವನ್ನು—ಮೊಲಟವರು ಮುಂತಂ

The Prithvi Insurance Co., Ltd., Madras.

ANNOUNCEMENT

Glad to announce that a branch of our company has been opened on 26-4-'45 at Hampankatta, Mangalore.

ದಿ ಪೃಥ್ವಿ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸು.

ನಮ್ಮ ಕಂಪೆನಿಯ ಹೊಸ ಶಾಖೆಯು ತಾ. 26-4-45ರಲ್ಲು ಮಂಗಳೂರು ಹಂಪನಕಟ್ಟೆಯಲ್ಲಿ ತೆರೆಯಲ್ಪಟ್ಟದೆಯೆಂದು ತಿಳಿಸಲು ಸಂತೋಷಪಡುತ್ತೇವೆ

NANDIAPPA SHETTY HALNAD,
Branch Manager,
The Prithvi Insurance Company, Ltd.,
Hampankatta, MANGALORE

ನೋಟಿಸು

THE
Vijaya Bank Ltd., Kaup.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡದೆ ಬಡ್ಡಿ ಸಹಾ ಹೆಚ್ಚು ಸಮಯ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸು ಜ್ಯಾರಿಯಾಗದೆ ವಾಪಸು ಬಂದಿರುವುದರಿಂದ ಈ ಮೂಲಕ ಜಾಹೀರುಪಡಿಸುವುದೇನೆಂದ್ರೆ —

ಸದರಿ ನಗಗಳನ್ನು 12-5-45 ಶನಿವಾರ ಮಧ್ಯಾಹ್ನ ಘಂಟೆ 11ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತ ಕಂಡ ದಿನಕ್ಕೆ ಮುಂದುವರಿಸಲ್ಪಡುವುದು ತಿಳಿದಿರುವುದು.

ಸಾಲದ ನಂಬ್ರ	ಅಸಾಮಿಯ ಹೆಸರು.	Rs As. Ps
136/36	ಇಬ್ರಾಹಿಂ ಸಾಹೇಬ್, ಹಸನ್ ಸಾಹೇಬರ ಮಗ, ಮುಲ್ಲಾರು ದರಖಾಸ್ತು	2 2 6
157 41	ಕೊಸಪ್ಪ ಆಚಾರಿ, ಉಳಿಯಾರಗೋಳಿ ನಾರಾಯಣ ಆಚಾರಿ ಮಗ, ಉಳಿಯಾರಗೋಳಿ ಗ್ರಾಮ.	5 0 0

Office of the Bank,
Kaup.
Date 27 4-45:

K. Sitharama Shetty,
Agent, Kaup

ದರು. ಇದು ಯಾಲ್ಟಾ ನಿರ್ಧಾರದಂತೆ ಪ್ರಮುಖ ಚತುರ್‍ರಾಷ್ಟ್ರಗಳು ತನ್ಮೊಳಗೆ ತೀರ್ಮಾನಿಸಬೇಕಾದ ವಿಷಯವೆಂದು ಸ್ಟೆಟ್ಟಿನಸ್ ಮತ್ತು ಈಡೆನ್ ಬಲವಾಗಿ ವಿರೋಧಿಸಿದರು. ಈ ಕುರಿತು ಬೇರೆ ಪ್ರತಿನಿಧಿಗಳೂ ಬಾಯಿ ಹಾಕಿ ಚರ್ಚೆ ದೀರ್ಘವಾಯಿತು. ಕೊನೆಗೆ ಚತುಷ್ಪ್ರಮುಖರ ತೀರ್ಮಾನಕ್ಕೆ ಅದನ್ನು ಬಿಡತಕ್ಕದ್ದೆಂದೇ ಸಭೆ ನಿರ್ಧರಿಸಿತು, ಆದರೆ ಬಿಳಿ ರಶ್ಯಾ ಮತ್ತು ಉಕ್ರೈನುಗಳಿಗೂ ಪ್ರತ್ಯೇಕ ಪ್ರಾತಿನಿಧ್ಯ ಪಡೆಯುವ ಮಟ್ಟಿಗೆ ಮೊಲಟವರು ವಿಜಯಿಯಾದರು. ಈಗ ರಶ್ಯವೊಂದೇ ಆ ಸಮ್ಮೇಲನದಲ್ಲಿ ಮೂರು ರಾಷ್ಟ್ರಾಧಿಕಾರ ಪಡೆದಿದೆ.

ನಿರಾಶೋದಯ

ಫ್ರಿಸ್ಕೋ ಸಮ್ಮೇಲನದ ಪ್ರಥಮ ಪರಿಣಾಮವೆಂದರೆ ನಿರಾಶೆ, ನಿರುತ್ತೇಜನಗಳೇ. ಸಮ್ಮೇಲನದ ಸ್ವರೂಪ ಮತ್ತು ಧೋರಣೆಗಳು ರಶ್ಯದ ಸಂದೇಹವನ್ನು ಬಲಗೊಳಿಸಿವೆ ಬ್ರಿಟಿಷ್ ಅಮೇರಿಕಗಳು ಇನ್ನೂ ಅಪ್ರಾಗತಿಕರ ಕೈಯಲ್ಲಿವೆಯಾದ್ದರಿಂದ ತನ್ನ ಪ್ರಗತಿಶೀಲತೆಗಿರುವ ಭಾವೀ ಗಂಡಾಂತರದ ಕುರಿತು ಸೋವಿಯೆಟ್ ಪ್ರಮುಖರು ಬಹಳ ಜಾಗರೂಕತೆ ವಹಿಸಿದ್ದಾರೆ. ಸ್ಟಾಲಿನ್ ವಿಜಯವೆಂದು ಹೆಸರಾದ ತ್ರಿಮೂರ್ತಿಗಳ ಯಾಲ್ಟಾ ನಿರ್ಧಾರದಲ್ಲಿದ್ದ ರಶ್ಯದ ಗುಣಾಂಶವು ಫ್ರಿಸ್ಕೋ ಸಮ್ಮೇಲನದಲ್ಲಿ ಮಾಯವಾಗುವ ಅಪಾಯವಿದೆ. ಮೇಲಾಗಿ ಸಮ್ಮೇಲನದ ಪ್ರತಿನಿಧಿಗಳಲ್ಲಿ ಬಹುಮತೀಯರು ಹಳೇ ಮನೋವೃತ್ತಿಯರು; ಅಪ್ರಾಗತಿಕರು. 'ಅದೊಂದು ಸೇಟರು ಮತ್ತು ಅಧಿಕಾರಿಗಳ ಸಮ್ಮಿಲನದಂತೆ ಕಾಣುತ್ತಿದೆ' ಎಂದೊಬ್ಬ ಪ್ರತ್ಯಕ್ಷದರ್ಶಿ ಬರೆದಿದ್ದಾರೆ. ಹಳೆಯ 'ರಾಷ್ಟ್ರಕೂಟ'ದಲ್ಲಿದ್ದು ಅದರ ಅಪಜಯಕ್ಕೆ ಕಾರಣರಾದ ಹಳೇ ಹದ್ದುಗಳು ಹಲವರು ಈ ಸಮ್ಮೇಲನದಲ್ಲಿಯೂ ಇದ್ದಾರೆ. ಈಡೆನ್, ಹೆಲ್ಲಿಫೇಕ್ಸರೂ ಆ ಪಂಗ್ತಿಯವರೇ. ಗುಪ್ತ ಪೋಲೀಸನ ದೃಷ್ಟಿಯ ಗುರಿಯಾಗಿದ್ದುಕೊಂಡೇ ಓರ್ವ ಪ್ರತಿನಿಧಿ ಮಾತ್ರ ಕೆಂಪು ಚೀನದ ಪರವಾಗಿ ಇದ್ದಾನೆ. ಕೆಲವು ಎಣ್ಣೆ ಕಂಪೆನಿಗಳ ಅನುಗ್ರಹ ಬಲದಿಂದ ಅರಬ್ ರಾಷ್ಟ್ರಗಳ ಪ್ರತಿನಿಧಿಗಳು ಅಲ್ಲಿದ್ದಾರೆ. ಹಿಂದೀ ಸರಕಾರವು ತನ್ನ ಮೂರು ಕೈಗೊಂಬೆಗಳನ್ನು ಅಲ್ಲಿ ಆಡಿಸುತ್ತಿದೆಯಲ್ಲದೆ ಭಾರತದ ಜನ ಪ್ರತಿನಿಧಿಗಳಿಗೆ ಸ್ಥಾನದೊರೆತಿಲ್ಲ. ಅಲ್ಲಿರುವ ಪ್ರಮುಖರಿಗೂ ಪ್ರಕಾಶ ಬೀರಬಲ್ಲ ನೆಹರುಗಳಂಥವರ ಗೈರುಹಾಜರಿಯು ಒಡೆದು ಕಾಣುತ್ತಿದೆ. ಒಟ್ಟಿನ ಮೇಲೆ ಜಗತ್ತಿನ ನಾಗರಿಕರ ಪ್ರತಿನಿಧಿಗಳು ಕೂಡಿ ಬಂದಿಲ್ಲ-ಕೂತಿರುವವರ ಅಭಿಪ್ರಾಯಗಳೂ ಕೂಡಿಬಂದಿಲ್ಲ. ಇದು ಲೋಕ ಶಾಂತಿಸ್ಥಾಪನೆಗೆ ಸೇರಿರುವ ಸಮ್ಮೇಲನದ ಸ್ವರೂಪ!


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಪ್ ವ್ಯಾಸಾಚಾರ್ಯ,
ಕಳಪೇಟೆ, ಉಡುಪಿ.

ರಶ್ಯವನ್ನು ಬಿಟ್ಟು ಇಂಗ್ಲಾಂಡು ಅಮೇರಿಕಗಳಿಗೆ ಜರ್ಮನ್ ಶರಣಾಬಂತೆ?

ಹಿಟ್ಲರ್ ಸತ್ತನೆ? ಸುದ್ದಿಯ ಕೋಲಾಹಲ.

ಜರ್ಮನಿಯು ಇಂಗ್ಲಾಂಡು ಅಮೇರಿಕಗಳಿಗೆ ನಿಶ್ಶರ್ತವಾಗಿ ಶರಣು ಬರುವದೆಂಬ ಸೂಚನೆಯನ್ನು ಹಿಮ್ಲರನು ಇಂಗ್ಲಾಂಡು ಅಮೇರಿಕಾ ಸರಕಾರಗಳಿಗೆ ಕಳುಹಿರುವನೆಂಬ ಸುದ್ದಿಯೊಂದು ಎಪ್ರಿಲ್ ತಾ 28ರಲ್ಲಿ ಸ್ಫೋಟಗೊಂಡು ಸಾನ್ ಫ್ರಾನ್ಸಿಸ್ಕೋ ಮತ್ತು ಲಂಡನ್ ವಾಷಿಂಗ್ಟನುಗಳ ಪ್ರಮುಖರು ಕೂಡಾ ಆನಂದದ ಅಮಲಿನಿಂದ ಕುಣಿದಾಡಿದ್ದರು. ಸ್ಟೆಟ್ಟಿನಸ್, ಮೊಲಟವ್, ಈಡೆನರಿಗೆ ಈ ವಾರ್ತೆಯು ರವಾನೆಯಾಗಿದ್ದಿತು. ರಶ್ಯವನ್ನು ಬಿಟ್ಟೇ ಸಂಧಿ ಮಾಡಿಕೊಂಡು ಮಿತ್ರ ಪಾಳಯದೊಳಗೆ ಬಿರುಕನ್ನು ಉಂಟುಮಾಡಲು ಹಿಮ್ಲರನು ಹೂಡಿದ ಕೊನೆಯ ಕುಯುಕ್ತಿಯಿದು ಎಂದು ನಂಬಲಾಗಿದೆ. ಹಿಟ್ಲರನೂ ಅವನ ಬದ್ಧ ಅನುಯಾಯಿಗಳೂ ಇದಕ್ಕೆ ವಿರೋಧವಿದ್ದರಂತೆ. ಆದರೆ ಜರ್ಮನಿಯ ಹ್ಯಾಕಮಾಂಡ್ ಹಿಮ್ಲರನ ಈ ಸೂಚನೆಗೊಪ್ಪಿಗೆ ಕೊಟ್ಟದೆಯೆಂದು ತಿಳಿದು ಬರುತ್ತದೆ.

ಇಂಗ್ಲಾಂಡು ಅಮೇರಿಕಗಳ ತಿರಸ್ಕಾರ

ಹಿಮ್ಲರನಿಂದ ಬ್ರಿಟಿಷ್ ಅಮೇರಿಕ ಸರಕಾರಗಳಿಗೆ ಶರಣು ಸೂಚನೆ ಹೋಗಿರುವದು ಸತ್ಯವೆಂಬುದಕ್ಕೆ ಅಧಿಕೃತ ಒಪ್ಪಿಗೆ ದೊರೆತಿದೆ. ಆದರೆ ರಶ್ಯವನ್ನೂ ಸೇರಿಸದೆ ತಾವೀ ಸೂಚನೆಯನ್ನು ಅಂಗೀಕರಿಸುವಂತಿಲ್ಲವೆಂದು ಸೂಚನೆತಂದವರಿಗೆ ಇಂಗ್ಲಾಂಡು ಅಮೇರಿಕಗಳು ತಿಳಿಸಿವೆ. ಮಾರ್ಶಲ್ ಸ್ಟಾಲಿನರು ಟ್ರುಮೇನ್ ಮತ್ತು ಚರ್ಚಿಲ್ಲರಿಗೆ ಕಳುಹಿಸಿರುವ ಸೂಚನೆಯೊಂದರ ಕುರಿತು ಫ್ರಿಸ್ಕೋದಲ್ಲಿ ಸ್ಟೆಟ್ಟಿನಸ್ ಮತ್ತು ಮೊಲಟವರು ಗಡಿಬಿಡಿಯಿಂದ ಒಟ್ಟಾಗಿ ಗಾಢ ಸಂಭಾಷಣೆ ನಡೆಸಿದ್ದಾರೆ. ಹಿಮ್ಲರ್ ಸೂಚನೆಯನ್ನು ತಿರಸ್ಕರಿಸುವಂತೆ ಸ್ಟಾಲಿನರು ಮಾತು ಕಳುಹಿದ್ದರೆಂದು ತಿಳಿದುಬರುತ್ತದೆ ಈ ಸಂಧಿ ಸೂಚನೆ ಮತ್ತು ತಿರಸ್ಕಾರಗಳ ಕುರಿತು ಲಂಡನಿನಿಂದ ಹೊರಟಿರುವ ಅಧಿಕೃತ ಪ್ರಕಟಣೆಯಲ್ಲಿ 'ವೈರಿಯ ಇಂದಿನ ಅಂತಿಮ ಸ್ಥಿತಿಯಲ್ಲಿ ಜರ್ಮನಿಯ ಬೇರೆ ಬೇರೆ ಕಡೆಗಳಿಂದ ಶರಣಾರ್ಥಿಯ ಸೂಚನೆ ಬರುವದು ಸಹಜವೇ. ಸದ್ಯಕ್ಕೆ ಆ ಕುರಿತು ಪ್ರಕಟಿಸುವಂತಹ ಸುದ್ದಿ ಯಾವುದೂ ಸರಕಾರದೊಡನಿಲ್ಲ. ಆದರೆ ಒಂದು ಸಂಗತಿ ಸ್ಪಷ್ಟವಿದೆ. ಮೂರು ಪ್ರಮುಖ ರಾಷ್ಟ್ರಗಳಿಗೂ ನಿಶ್ಶರ್ತ ಶರಣು ಬಂದರೇನೇ ಗಮನಕೊಡಲಾಗುವದು; ಮೂರು ರಾಷ್ಟ್ರಗಳೂ ಅತಿ ನಿಕಟ ಸಂಬಂಧವಿಟ್ಟುಕೊಂಡಿವೆ' ಎಂದಿಷ್ಟೇ ಹೇಳಲಾಗಿದೆ.

ಹಿಟ್ಲರ್ ಸಾಯುತ್ತಿದ್ದಾನೆಯೇ? ಸತ್ತಿದ್ದಾನೆಯೆ?

ಪಶ್ಚಿಮ ರಾಷ್ಟ್ರಗಳೊಡನೆ ನಿಶ್ಶರ್ತ ಶರಣು ವ್ಯವಸ್ಥೆ ಮಾಡುವ ಸ್ಥಾನದಲ್ಲೀಗ ತಾನಿದ್ದೇನೆಂದೂ, ತಾನಂತೂ ಅದಕ್ಕನುಕೂಲನೇ ಎಂದೂ ಹಿಮ್ಲರ್ ತನ್ನ ಸೂಚನೆಯಲ್ಲಂದಿದ್ದಾನಂತೆ. ಮಾತ್ರವಲ್ಲ, "ಹಿಟ್ಲರನೀಗ ಸಾಯುತಿದ್ದಾನೆ; ನಿಶ್ಶರ್ತವಾಗಿ ಶರಣು ಹೋದುದನ್ನು ಘೋಷಿಸಿದ 48 ಘಂಟೆಗಳೊಳಗೆ ಅವ ಪ್ರಾಣ ಬಿಡುವದು ಖಂಡಿತ" ಎಂದೂ ಹಿಮ್ಲರ್ ಅಮೇರಿಕಾಂಗ್ಲೋ ಸರಕಾರಗಳಿಗೆ ತಿಳಿಸಿದ್ದಾನೆ. ಈ ವಾರ್ತೆಯು ಫ್ರಿಸ್ಕೋದಲ್ಲಿರುವ ಮೂರು ರಾಷ್ಟ್ರಗಳ ವಿದೇಶ ಮಂತ್ರಿಗಳಿಗೂ ತಿಳಿಸಲ್ಪಟ್ಟಿದೆ ಹಿಟ್ಲರನೀಗ ಕಠಿಣ ಗಾಯಿಲೆಯಲ್ಲಿರಬೇಕು-ಜರ್ಮನಿ ಶರಣು ಹೋದ ವಾರ್ತೆ ಕೇಳಿದೊಡನೆ ಕಳವಳದಿಂದ ಅವನ ಪ್ರಾಣ ನಿಲ್ಲಲಾರದೆಂಬುದೇ ಹಿಮ್ಲರ್ ಸೂಚನೆಯ ಅರ್ಥವೆಂದು ಊಹಿಸಲಾಗಿದೆ. ರುಸವೆಲ್ಟರ ಅಂತಿಮ ಕಾಹಿಲೆಯೇ ಹಿಟ್ಲರನಿಗೀಗ ತಾಗಿದೆಯೆಂದೂ ಅವ ವಿಷಮಾವಸ್ಥೆಯಲ್ಲಿದ್ದಾನೆಂದೂ ಸ್ಟೋಕ್‍ಹೋಮ್ ಪತ್ರಿಕೆ ಪ್ರಕಟಿಸಿದೆ. ಮೊನ್ನೆ ತಾನೇ ಜರ್ಮನಿಯಿಂದ ಸ್ವಿಸ್ ಗಡಿಯೊಳಗೆ ಬಂದ ರಾಜನೀತಿಜ್ಞರೊಬ್ಬರು ಬಿಡುತ್ತಿರುವ ವಾರ್ತೆಯಂತೆ ಹಿಟ್ಲರ್ ಮತ್ತು ಗೋಬೆಲ್ಸರನ್ನು ಎಪ್ರಿಲ್ ತಾ. 25ರಲ್ಲೇ ಗುಂಡಿಟ್ಟು ಕೊಲ್ಲಲಾಗಿದೆಯೆಂದೂ, ಇನ್ನೊಂದು 24 ಘಂಟೆ ಹಿಟ್ಲರ್ ಬದುಕಲಾರನೆಂದು ಹಿಮ್ಲರ್ ಸೂಚಿಸಿರುವದರ ಅರ್ಥವೇ ಅದೆಂದೂ ನಂಬಲಾಗಿದೆ. ಹಿಮ್ಲರನೇ ಆತನನ್ನು ಗುಂಡಿಟ್ಟು ಕೊಲ್ಲಿಸಿ ಹಿಟ್ಲರನ ಶವದ ಮೇಲೇರಿ ಸಂಧಿಯಾಚಿಸುತಿದ್ದಾನೆಂದು ಊಹೆ.

ಫ್ರಿಸ್ಕೋದಲ್ಲಿ ಆನಂದ ಕೋಲಾಹಲ

ಅಧಿಕೃತ ಪ್ರಕಟಣೆಯಿಲ್ಲದಿದ್ದರೂ ಜರ್ಮನಿ ಶರಣ ಬಂತೆಂಬ ವಾರ್ತೆಯು ಆನಂದೋದ್ವೇಗದಿಂದ ತಾ 28ರ ಫ್ರಿಸ್ಕೋ ಸಮ್ಮೇಲನವು. ಮಧ್ಯದಲ್ಲೇ ನಿಲ್ಲಿಸಲ್ಪಟ್ಟಿತು. ಸಮ್ಮೇಲನ ಭವನದಲ್ಲಿ ಭದ್ರತಾ ಪೋಲಿಸು ಪಹರೆ ನಿಲ್ಲಿಸಲ್ಪಟ್ಟುದರಿಂದ ಈ ಸುದ್ದಿಗೆ ಇನ್ನಷ್ಟು ನಂಬಿಕೆ ದೊರೆಯಿತು. ಸಭೆಯ ಮುಂಭಾಗದ ಸಾಲಲ್ಲಿದ್ದವರೊಬ್ಬರು 'ನಾಜಿಗಳು ನಿವೃತ್ತರಾದರು'. (Nazis Quit) ಎಂದು ದೊಡ್ಡ ಅಕ್ಷರಗಳುಳ್ಳ ಪತ್ರಿಕೆಯ ತಲೆ ಬರೆಹವನ್ನು ಎತ್ತಿ ತೋರಿಸಿದಾಗ ಇಡೀ ಸಮ್ಮೇಲನವು ಜಯಘೋಷ, ಆನಂದೋದ್ಗಾರಗಳ ಕೋಲಾಹಲವೆಬ್ಬಿಸಿತು. ಹಿಂಗಡೆಯಲ್ಲಿದ್ದ ಪ್ರತಿನಿಧಿಗಳೂ ಗೆಲರಿಯಲ್ಲಿದ್ದ ಸಾರ್ವಜನಿಕರೂ ಮಧ್ಯಸ್ಥಳಕ್ಕೆ ನೆಗೆದು ಎಬ್ಬಿಸಿದ ಚಪ್ಪಾಳೆ, ಘೋಷಗಳ ಘೋಷವವು ಮಾರ್ದನಿಗೊಟ್ಟಿತು. ಕೆಮರಾಗಳ ಪ್ರಕಾಶಗಳು ಪ್ರತಿನಿಧಿಗಳ ಮೇಲೆ ಬಿದ್ದವು. ಅಧ್ಯಕ್ಷ ಗದ್ದುಗೆಯಲ್ಲಿದ್ದ ಮೊಲಟವರು ನೋಡಲಾಗುವಂತೆ ಒಂದು ಪತ್ರಿಕೆಯನ್ನೆಗೆಯಲಾಯಿತು. ಮೊಲಟವರು ನಕ್ಕರು; ಚಪ್ಪಾಳೆ ಹೊಡೆದರು; ಕೊನೆಗೆ ಸಭೆಯನ್ನು ವ್ಯವಸ್ಥೆಗೆ ತಂದು, ಏನೊಂದೂ ಮಾತಾಡದೆ ಮುಂದುವರಿಸಿ ಬಿಟ್ಟರು ಶರಣು ಸೂಚನೆ ಕಳುಹುವ ಅಧಿಕಾರ ಹಿಮ್ಲರನಿಗಿಲ್ಲ; ಜರ್ಮನ್ ಸೇನೆ ಪೂರ್ಣ ನಾಶವಾಗದೆ ಅದು ಶರಣ ಬರುವಂತಿಲ್ಲ; ಕಳದ [illegible] ಸಲ್ಲಿಯೂ ತಮ್ಮಲ್ಲಿ ಶಕ್ತಿಯುಳಿದಿದ್ದರೂ ಜರ್ಮನ್ ಪ್ರಮುಖರು ವೃಥಾ ರಾಜಿಗೆ ಹೋದರೆಂದು ದೂರುತ್ತ ನಾಜಿಗಳು ಹೀಗೆ ದೊಗ್ಗಾಲೂರುವಂತಿಲ್ಲವೆಂದ. ಸೋವಿಯೆಟ್ ಪ್ರತಿನಿಧಿಗಳ ಖಂಡಿತಾಭಿಪ್ರಾಯ ಕಲ್ಕತ್ತ ಸೈನಿಕರೂ ತಾ 29ರಲ್ಲಿ ವಿಜಯೋತ್ಸವ ನಡೆಸಿದರು.

Sri Narayan Guru Bank; Ltd.,

(Incorporated in British India, Liability of Members Limited)

Consent of the central government was obtained to the issue of Capital.

The shares have been oversubscribed, hence no further shares of the Bank are available.

Our 1945 Fixed Deposit Drive has just commenced. Several officers of the Bank have been deputed to approach investors They have been authorised to offer attaractive rates of interest, probably a little better than our usual rates. Please take advantage of the offers If our Representatives do not come to you, please enquire at our following offices:—

HAMPANKATTA, MANGALORE.
Branch at **Coimbatore.**
Branch at **Udipi.**
Branch at **Coondapoor.**

Partake in our expansion scheme Repose confidence in a Bank of your place conducted by able men. Await our announcement increasing the Authorised Capital to **Rs. 1,00,00,000** (A Crore)

You will shortly read the names of our Directors of all India fame.

M. A. Suvarna Esq., B. A., LL. B., Advocate. Organising Superintendent

Mangalore Jarappa, President & Managing Director

B. Narsoppa, *Estat Superintendent*

B Madhava Suvarna Office Manager.

James Rodrigues, Esq. *Organiser.*

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI,** (S. K.)

Authorised Capital	Rs. 25,00,000/-
Issued & Subscribed Capital	Rs 16,00,000/-
Paid up Capital	Rs 14,92,000/-
Reserves	Rs. 4,43,000/-

ಉಡುಪಿ, ಗುರುವಾರ ೩-೫-೧೯೪೫

ಅಂತ್ಯಭಾಗದ ಆತುರ.

ಯುರೋಪು ಯುದ್ಧವು ಕೊನೆಯ ಅಂಕದಲ್ಲಿದೆ; ಮುಕ್ತಾಯವಾಗುವದೊಂದೇ ಬಾಕಿಯಿದೆ. ನಾಜಿಗಳ ಅವತಾರ ಮುಗಿಯುತ್ತಾ ಬಂತು-ಮುಗಿದು ಹೋಯಿತು ಎಂಬ ವಾರ್ತೆಗಳಿಗೂ ದಾರಿದ್ರ್ಯವಿಲ್ಲ. 'ಹಿಟ್ಲರ್ ಪ್ರಾಣಾವಧಿ ಕಾಹಿಲೆಯಲ್ಲಿದ್ದಾನೆ; ಜರ್ಮನಿಯ ನಿಶ್ಶರ್ತ ಶರಣುವಾರ್ತೆಯ ಘಾತದಿಂದ ಆತನ ಪ್ರಾಣಪಕ್ಷಿ ಹಾರಿಹೋಗುವಂತೆ ಮಾಡಲು ಹಿಮ್ಲರ್ ಯೋಚಿಸುತ್ತಿದ್ದಾನೆ'. 'ಹಿಟ್ಲರನನ್ನು ಗುಂಡಿಕ್ಕಿ ಕೊಲ್ಲಿಸಿ ಆತನ ಶವವನ್ನೇರಿ ಹಿಮ್ಲರ್ ಬಿಳಿ ಬಾವುಟ ಹಾರಿಸಿದ್ದಾನೆ'--ಎಂಬ ತಹ ಮಾಯಾಜಾಲಗಳು ಹರಡಿವೆ; 'ರಶ್ಯವನ್ನು ಬಿಟ್ಟು ಆಂಗ್ಲೋ-ಅಮೆರಿಕನರಿಗೆ ಶರ್ತ ವಿನಹ ಶರಣಾಗುವೆನೆಂದು ಹಿಮ್ಲರ್ ಬೊಗಸೆಯೊಡ್ಡಿದ್ದಾನೆ'. "ಪಶ್ಚಿಮರಂಗದ ಯುದ್ಧವು ವಿಜಯ ಪರ್ಯವಸಾನವಾಯಿತು"-ಇಂತಹ ಮೋಹನಾಸ್ತ್ರಗಳ ಪ್ರಯೋಗವೂ ನಡೆದಿದೆ. ಆರಿಸಿ ತೆಗೆದ ಆಪ್ತರೇ ಸೇರಿರುವ ಫ್ರಿಸ್ಕೋ ಸಮ್ಮೇಲನ ಕೂಡ ಈ ಸಂತೋಷದ ಅಮಲಿನಿಂದೂಮ್ಮೆ ಕುಣಿದಾಡಿತೆಂದ ಮೇಲೆ ಜನಸಾಮಾನ್ಯರು ಮಂಕಾಗುವದು ತಪ್ಪಲ್ಲ. ಹಿಟ್ಲರನಿಗೆ ಮರಣವಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು; ನಾಜೀ ಪತನ ನಿಶ್ಚಯವೆಂಬುದೂ ಕೆಲಕಾಲದಿಂದ ಮುಂದಟ್ಟಾದ ದೇ. ಹಾಗಾಗುವ ಕಾಲವೀಗ ಒಂದಿದೆ ಎಂಬುದೂ ಖಂಡಿತ; ಆದರೆ ಬಿರುಗಾಳಿಯಂತೆ ಹಬ್ಬುವ ಈಗಿನ ವಾರ್ತೆಯಂತೆ ಇಷ್ಟರಲ್ಲೇ ಹಾಗಾಗಿರುವದು ನಿಜವೆ? ಸುದ್ದಿಗಳ ಪ್ರಾಮುಖ್ಯತೆ ಮತ್ತು ನಾಜಿಗಳ ಇಂದಿನ ದುಸ್ಥಿತಿಯ ಮೇಲಿಂದ ಆನಂದಕ್ಕಾಗಿಯೂ, ಮುಹೂರ್ತ ಮಾತ್ರ ಯೋಚಿಸಿ ನೋಡಿದರೂ ಜರ್ಮನ್ ಪರಾಭವದ ಎಂತಹ ಸುದ್ದಿಗಳನ್ನಾದರೂ ಪ್ರಥಮತಃ ಒಮ್ಮೆ ನಂಬಬೇಕಾಗುತ್ತದೆ. ಆದರೆ ನಂಬಿಕೆ ಹುಟ್ಟಿದರೆ ಪಾಲನ-ನಡೆದಿರಬೇಕು. ತ್ರಿರಾಷ್ಟ್ರಗಳಿಗೂ ಬಾರದೆ ದ್ವಿರಾಷ್ಟ್ರಗಳಿಗೆ ಮಾತ್ರ ಬಂದುದರಿಂದ ಜರ್ಮನಿಯ ಶರಣು ಸೂಚನೆಯನ್ನು ನಿರಾಕರಿಸಲಾಗಿದೆ ಎಂಬ ವಾರ್ತೆ ಪ್ರಕಟವಾಗಿದೆ. ಯಾವ ಕಾರಣದಿಂದಲಾದರೂ ಜರ್ಮನ್ ಯುದ್ಧವೀ ತನಕ ನಿಂತಿಲ್ಲ ಅಂದ ಮೇಲೆ ಅಗಲೇ ವಿಜಯಕೋಲಾಹಲ ಅನಗತ್ಯ; ಆನಂದದ ಈ ಅಮಲು ಸೇವನೆಯು ಮುಂಚಿನೆಯ 'ಪಾನ'ದಷ್ಟು ಅಪಾಯಕರ. ಈ ಗೊಂದಲ ನಿರ್ಮಾಣಕ್ಕೆ ಮಿತ್ರರಾಷ್ಟ್ರಾಧಿಕಾರಿಗಳು ಹೊಣೆಗಾರರಲ್ಲ; ಆ ಪಾಪವನ್ನು ಕೂಡಾ ಜರ್ಮನರ ಮೇಲೇನೇ ಹೇರೋಣ. ಆದರೂ ವೈರಿಗಳು ಹಾಕಿದ ತಾಳಕ್ಕೆ ಸರಿಯಾಗಿ ಕುಣಿಯುವ ಈ ಟೊಳ್ಳು ಮನೋವೃತ್ತಿಯೇಕೆ? ಅಗಾಗ ಜನತೆಯ ನರದೌರ್ಬಲ್ಯವನ್ನುಂಟು ಮಾಡುವ ಈ ಸುದ್ದೀ ಬೋಂಬುಗಳ ಸ್ಫೋಟವೇಕೆ? ಕಲ್ಕತ್ತದಲ್ಲಿ ಸೈನಿಕರು ಆನಂದೋತ್ಸಾಹದಿಂದ ರಸ್ತೆಯಲ್ಲೇ ಕುಣಿದರಂತೆ. ಅಧಿಕೃತ ಪ್ರಕಟಣೆ ಬರುವ ಮೊದಲೇ ಅವಸರವೇನು? ಜರ್ಮನರ ಯುದ್ಧವಿನ್ನೂ ಅಸಹನೀಯವಾಗುವಷ್ಟು ಬಿಗುವಿಡೆಯೆ? ಬರ್ಲಿನ್ ಪ್ರವೇಶ-ಸಾನ್‌ಫ್ರಾನ್ಸಿಸ್ಕೋ ಸಮ್ಮೇಲನದಂತಹ ಲೋಕ ಪ್ರಾಮುಖ್ಯ ಕಾರ್ಯನಿರತರಾಗಿರುವವರಲ್ಲಿ ಇಂತಹ ಲಘುತ್ವವಿರಬಾರದು. ನಾಳೆಯ ವಿಜಯೋತ್ಸವದ ನಿಜಸುಖವನ್ನು ಇಂದಿನ 'ಹುಲಿ ಬಂತು' ಆಟಗಳಿಂದಲೇ ನಿವಾರಿಸಿಕೊಳ್ಳಬಾರದು.

ಈ ಸುದ್ದಿಗಳಿಗೆ ಒಂದಲ್ಲೊಂದು ಆಧಾರವಿರಬಹುದು. ಮಿತ್ರಪಾಳಯದೊಳಗೆ ಮೊದಲೇ ಬಿರುಕುಬಿದ್ದಿರುವಾಗ, ಅದನ್ನು ಇಬ್ಭಾಗಿಸುವದು ಸುಲಭವೆಂಬ ಆಸೆಯಿಂದ ಹಿಮ್ಲರನು ಏನಾದರೊಂದು ಸೂಚನೆಯ ಬೋಂಬನ್ನೊಗೆದಿರಬಹುದು. ಆದರೆ 'ಹಿಮ್ಲರನು ಆ ಸ್ಥಾನದಲ್ಲಿಲ್ಲ; ಕಳೆದ ಯುದ್ಧಾಂತ್ಯದಲ್ಲಿ ಜರ್ಮನಿಯಲ್ಲಿ ಹೋರಾಟಶಕ್ತಿಯುಳಿದಿದ್ದರೂ ಜರ್ಮನ್ ಪ್ರಮುಖರು ಹೇಡಿಗಳಾಗಿ ಶರಣು ಹೋದರು ಎನ್ನುತ್ತಿರುವ ನಾಜಿಗಳಲ್ಲಿ ಇನ್ನೂ ಸೇನಾ ಶಕ್ತಿಯುಳಿದಿದೆ. ಅದು ಪೂರ್ಣ ಧ್ವಂಸವಾಗದೆ ಅವರು ಶರಣು ಬರುವಂತಿಲ್ಲ' ಎಂಬ ರಶ್ಯದ ಅಮೂಲ್ಯಾಭಿಪ್ರಾಯವನ್ನೇ ಮಿಕ್ಕವರೂ ಕಟ್ಟಿಕೊಳ್ಳಬೇಕು. 'ವಿಜಯ ಅಥವಾ ವಿನಾಶ'ದ ಹೊರತು 'ಶರಣು' ಶಬ್ದವೇ ಹಿಟ್ಲರನ ಶಬ್ದಕೋಶದಲ್ಲಿಲ್ಲವೆಂಬುದನ್ನು ಸ್ಪಷ್ಟ ತಿಳಿದಿರಬೇಕು. ಈಗಿನ ಸಂಧಿಸೂಚನೆಗಳೋ?--ಅವು ನಾಜಿಗಳು ಪ್ರಯೋಗಿಸಿರುವ ಮೋಹನಾಸ್ತ್ರಗಳಾಗಿರಬೇಕು. ಲೋಕವನ್ನೇ ಪ್ರಳಯಕ್ಕೀಡು ಮಾಡುವಷ್ಟು ಸಿದ್ಧತೆಮಾಡಿದ್ದ ನಾಜಿಗಳಲ್ಲಿ ತಮ್ಮ ಅಂತ್ಯಕಾಲದ ಉಪಯೋಗಕ್ಕಾಗುವ ಇಂತಹ ಕುಹಕಗಳಿರುವದು ಆಶ್ಚರ್ಯವಲ್ಲ. ಸದ್ಯ ನಾಜಿಗಳ ಭಾಗ್ಯ ಬರಿದಾಗಿದೆ; ಬತ್ತಳಿಕೆ ಬರಿದಾಗಿಲ್ಲ. ಅದರಲ್ಲಿ ಕೊನೆಗಾಲದ ಪ್ರಯೋಗಕ್ಕಾಗುವ 'ನೂತನಾಸ್ತ್ರ'ಗಳಂತೆ ಇಂತಹ ಮೋಹನಾಸ್ತ್ರಗಳೂ ಇವೆ. ಲೋಕವೇ ಅದಕ್ಕೆ ಬಲಿಯಾಗುತ್ತಿದೆ. ಸಾರ್ವಜನಿಕರೂ ಮಿತ್ರಪ್ರಮುಖರೂ ಅವುಗಳಿಂದ ವಂಚಿಸಲ್ಪಡದಂತೆ ಯುರೋಪು ಯುದ್ಧವು ಬೇಗನೇ ಮುಗಿಯಲೆಂದು ಹಾರೈಸುತ್ತೇವೆ.

ಫ್ರಿಸ್ಕೋದಲ್ಲಿ ಹಿಂದೀ ಪ್ರತಿನಿಧಿಗಳು

ಹಿಂದೀ ಸರಕಾರದಿಂದ ನಾಮಕರಣ ಪಡೆದು ಜಾಗತಿಕ ಸಮ್ಮೇಲನದಲ್ಲಿ ಹಾಜರಿರುವ ಹಿಂದೀ ಪ್ರತಿನಿಧಿಗಳೆಂದರೆ ಮೂವರು 'ಸರ್'ಗಳು. ರಾಮಸ್ವಾಮಿ ಮುದಲಿಯಾರ್--ಫಿರೋಜ್ ಖಾನ್‌ನೂನ್-ಕೃಷ್ಣಮಾಚಾರಿ. ಸಮ್ಮೇಲನದ 46 ರಾಷ್ಟ್ರದ ಪ್ರತಿನಿಧಿಗಳ ಪೈಕಿ ಎಲ್ಲರೂ ನಪುಂಸಕ ವರ್ಗಕ್ಕೆ ಸೇರಿಸಿರುವ ಸದಸ್ಯರೆಂದರೆ ಈ ತ್ರಿಮೂರ್ತಿಗಳೇ. ಪರಿಷತ್ತಿನ ಕಾರ್ಯಕ್ರಮಗಳಲ್ಲಲ್ಲವಾದರೂ ಹೊರಗಡೆಯಲ್ಲಿ ಇವರ ಸ್ಥಾನವಾವುದೆಂಬುದು ತರ್ಕಾಸ್ಪದ ವಿಷಯವಾಗಿಯೇ ಇದೆ. ಆದರೂ ಈ ಮಂಡಲದ ನಾಯಕ ಸರ್. ಮುದಲಿಯಾರರೊಂದು ಭಾಷಣ ಮೂಲಕ ಸಮ್ಮೇಲನದ ಚಪ್ಪಾಳೆ ಪಡೆದರು.

ಸರ್. ಮುದಲಿಯಾರರು.

ಫ್ರಿಸ್ಕೋ ಸಮ್ಮೇಲನದಲ್ಲಿತ್ತ ಭಾಷಣ ಪುನಾಶ್ಚರ್ಯದ ಮಟ್ಟಿಗೆ ಮಿಕ್ಕೆಲ್ಲಾ ಭಾಷಣಗಳಿಗೂ ಪ್ರಥಮ ಸ್ಥಾನದ್ದೆಂದು ಸರ್ವರಿಂದ ಶ್ಲಾಘಿಸಲ್ಪಟ್ಟಿದೆ. ಅಮೇರಿಕದ ಪತ್ರಿಕೆಗಳು ಮುದಲಿಯಾರರ ಅಭಿಪ್ರಾಯವನ್ನು ಸುಸ್ವಾಗತಿಸಿವೆ. ಹಿಂದುಸ್ಥಾನವು ಯುದ್ಧದಲ್ಲಿ ವಹಿಸಿದ ಭಾಗವನ್ನು ಸರ್. ಮುದಲಿಯಾರರು ಮುಂದಟ್ಟಾಗುವಂತೆ ವರ್ಣಿಸಿ, ಪ್ರಾಮುಖ್ಯತೆಯ ಮಟ್ಟಿಗೆ ಚತುರ್ರಾಷ್ಟ್ರಗಳ ನಂತರ ಹಿಂದುಸ್ಥಾನವೇ ಎಂದು ಸ್ಪಷ್ಟ ಪಡಿಸಿದ್ದಾರೆ ಸಾಮಾನ್ಯ ಮನುಷ್ಯನ ಘನತೆ, ಯುದ್ಧಕ್ಕೆ ಮೂಲ ಹೇತುವಾದ ಆರ್ಥಿಕ ಸಾಮಾಜಿಕ ಅಸ್ತವ್ಯಸ್ತತೆಗಳನ್ನೂ ಮುದಲಿಯಾರ್ ಒತ್ತಿ ಹೇಳಿದ್ದಾರೆ. ಜಗತ್ತಿನ ಪ್ರಮುಖ ವಾಗ್ಮಿಗಳಲ್ಲಿ ತಾನೊಬ್ಬನೆಂಬುದನ್ನು ಪ್ರದರ್ಶಿಸಿದ್ದಾರೆ. ಆದರೆ ಹಿಂದೀ ಸ್ವಾತಂತ್ರ್ಯದ ಚರ್ಚೆಯನ್ನೇ ಎತ್ತದೆ ಅಖಿಲ ಭಾರತವನ್ನು ನಿರಾಶೆಗೀಡುಮಾಡಿ, ಇನ್ನಷ್ಟು ತಿರಸ್ಕಾರಕ್ಕೆ ಪಾತ್ರರಾಗಿದ್ದಾರೆ.

ಜರ್ಮನಿಯು ಕ್ಷಿಪ್ರವಾಗಿ ಶರಣಾಗುವ ಸಂಭವವನ್ನು ಕಂಡು ಫ್ರಿಸ್ಕೋ ಸಮ್ಮೇಲನವನ್ನು ಬೇಗನೇ ಮುಗಿಸಬೇಕೆಂಬ ಆತುರವೆದ್ದಿದೆ. ಹೆಚ್ಚೆಂದರೆ ಒಂದು ತಿಂಗಳೊಳಗೆ ಅದು ಮುಗಿಯಬೇಕಂತೆ. ಯಾಕಂದರೆ ಈ ಕಾಲದಲ್ಲಿ ಪ್ರತಿನಿಧಿಗಳು ತಂತಮ್ಮ ಸ್ವದೇಶಗಳಲ್ಲಿ ಹಾಜರಿರುವದು ಅಗತ್ಯವಿದೆಯಂತೆ. ಪೋಲಂಡಿನ ಪ್ರಶ್ನೆಯನ್ನು ಪುನಃ ಮುಂತಂದಿದ್ದಾರೆ. ಅರ್ಜೆಂಟಿನಾ ಪ್ರತಿನಿಧಿಗಳಿಗೆ ಸ್ಥಾನ ದೊರಿಯಬೇಕಾದರೆ ಪೋಲಿಷ್ ಸರಕಾರದ ಪ್ರತಿನಿಧಿಗಳಿಗೆ ಸ್ಥಾನ ದೊರೆಯಲೇ ಬೇಕೆಂಬ ಶರ್ತವೊಡ್ಡಿದ್ದಾರೆ.

ಉಡುಪಿ

ಮೇ ದಿನಾಚರಣೆ-ಯು ಉಡುಪಿಯ ನೇಕಾರ ಸಂಘ ಮತ್ತು ಬೀಡಿ ಮಜೂರ ಸಂಘಗಳ ಪರವಾಗಿ ತಾ. 1ರಲ್ಲಿ ಜರಗಿತು. ಅಪರಾಹ್ನ ಕೆಲಸಗಾರರ ಪ್ರಚಂಡ ಮೆರವಣಿಗೆಯು ನಗರ ಸುತ್ತಾಡಿ ರಥಬೀದಿಯಲ್ಲಿ ಶ್ರೀ. ಎಮ್. ಪಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ದ. ಕ. ನೇಕಾರ ಸಂಘದ ಅಧ್ಯಕ್ಷ ಶ್ರೀ. ಎಸ್. ಸೋನ್ಸರೂ. ಶ್ರೀ. ಕೆ. ರಾಘವನರೂ, ಮೇ ದಿನದ ಮಹತ್ವವನ್ನೂ ಉಡುಪಿ ನೇಕಾರ ಮಾಲಕ ಜಗಳದ ಕುರಿತು ನಿಯೋಜಿತ ರಾಜೀ ಮಾತುಕತೆಯ ವರೆಗೆ ಕೆಲಸಗಾರರು ಕಾಯಬೇಕೆಂಬುದನ್ನೂ ಒತ್ತಿ ಹೇಳಿದರು. ಆರು ನಿರ್ಧಾರಗಳ ಅಂಗೀಕಾರವಾಗಿ ಅಧ್ಯಕ್ಷ ಭಾಷಣದೊಂದಿಗೆ ಸಭೆ ಮುಗಿಯಿತು.

ನಾಟಕ-ಬೈಲೂರು ಮಹಿಷಾಸುರ ಸಮರ್ದಿನಿ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿಗಳು ಮತ್ತು ಉತ್ಸಾಹಿ ತರುಣರು "ಪ್ರೇಮ ವಿಜಯ" ಎಂಬ ಸಾಮಾಜಿಕ ನಾಟಕವನ್ನು ಶ್ರೀಮಾನ್ ಕೆ. ಸಂಜೀವ ಭಟ್ ಯಮ್. ಎ. ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ ತಾ 23-4-45ರಲ್ಲಿ ಯಶಸ್ವಿಯಾಗಿ ಅಭಿನಯಿಸಿದರು.

ರೂರಲ್ ರಿಕ್ರಿಯೇಶನ್ ಪಂದ್ಯಾಟಗಳು-ತಾ 1ರಲ್ಲು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿದವು. ಗೆದ್ದವರಿಗೆ ಬಹುಮಾನಗಳು ಹಂಚಲಾದುವು. ಜಿಲ್ಲೆಯ ಬಡ ಮೇಜರ್ ಪಂಚಾಯತ ಬೋರ್ಡ್ ಶಾಲೆಗಳ ವಿದ್ಯಾರ್ಥಿಗಳಿಗೋಸ್ಕರ 'ಆರೂರ್ ಶಿಲ್ಡ್ ಕಪ್' ಒಂದನ್ನು ಕೊಡುವೆನಾಗಿ ಅಧ್ಯಕ್ಷರು ವಾಗ್ದಾನ ಮಾಡಿದರು.

ವಿಣಗುಡ್ಡೆ-ಇಲ್ಲಿಯ ಶ್ರೀ. ದುರ್ಗಾ ಪರಮೇಶ್ವರಿ ಪ್ರಾಥಮಿಕ ಶಾಲೆಯ ಹೆತ್ತವರ ಸಂಘದ ಮಹಾ ಸಭೆಯು ತಾ 26-4-45ರಲ್ಲಿ ವಿಜೃಂಭಣೆಯಿಂದ ಜರಗಿತು. ಉಡುಪಿ ರೇಂಜ್ ಶಾಲೆಗಳ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್, ಎಂ.ಎ.ಎಲ್.ಟಿ.ಯವರು ಅಧ್ಯಕ್ಷತೆ ವಹಿಸಿದ್ದರು. ಗತ ಸಭೆಯ ವರದಿವಾಚನಾನಂತರ ವಿವಿಧ ವಿನೋದಗಳ ಪ್ರದರ್ಶನವಿತ್ತು. ಆ ಮೇಲೆ ಸಭಿಕರ ಮತ್ತು ಅಧ್ಯಕ್ಷರ ಸಂದರ್ಭೋಚಿತ ಭಾಷಣಗಳಾದವು. ಅಧ್ಯಕ್ಷರು ಯುದ್ಧ ವಿಷಯಕವಾಗಿಯೂ ಮಾತನಾಡಿದರು. ಕಡೆಗೆ ಶಾಲಾ ಬಾಲಕರು 'ಕ್ಷೀರ ಬಂಧು'ವೆಂಬ ಚಿಕ್ಕ ಪ್ರಹಸನವನ್ನೂ ಬಾಲಕಿಯರು 'ಗೆಳೆತನ'ವೆಂಬ ಪೌರಾಣಿಕ ಸಂಗೀತ ನಾಟಕವನ್ನೂ ಜಯಶೀಲವಾಗಿ ಅಭಿನಯಿಸಿದರು. ಶಾಲಾ ಮೆನೇಜರ್ ಶ್ರೀ. ವೈ. ಸಂಜೀವಪ್ಪ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

The Canara Industrial & Banking Syndicate, Limited.
Estd: Head Office: **UDIPI,** South Kanara [1925.

Authorised Capital	Rs. ...	50,00,000
Subscribed Capital	Rs. ...	32,10,987
Paid-up Capital	Rs. ...	19,24,425
Reserves . . .	Rs. ...	4 20,000

Total working Capital exceeds TWO CRORES.

ANNOUNCEMENT

2 Branches of the BANK have been opened at
MYSORE and COCHIN
on 21-4-'45 & 27-4-'45. respectively.

ಮುಸಲನಿಯ ಕೊಲೆ; ಹಿಟ್ಲರನ ಮರಣ ವಾರ್ತೆ!

!ಮುಸಲನಿ ಮುಗಿದ!

ಇಟೆಲಿಯ ಮಿಲಾನಿನಲ್ಲಿ ಇಟೆಲಿಯ ದೇಶಾಭಿಮಾನಿ ದಳಗಳು ಸೆರೆಹಿಡಿದ ಮುಸಲನಿಯನ್ನೂ ಅವನ ಪ್ರಮುಖಾನುಯಾಯಿಗಳಾಗಿದ್ದ 17 ಮಂದಿ ಫೇಸಿಸ್ಟ್ ಮುಖಂಡರನ್ನೂ ಗುಂಡಿಟ್ಟು ಕೊಂದಿದ್ದಾರೆ. ಅವರೆಲ್ಲರ ಶವಗಳನ್ನೂ ಮಿಲಾನಿನ ಪಿಯಾಝಾ ಲೊರೆಟ್ಟೋವಿನಲ್ಲಿ ಬಹಿರಂಗ ಪ್ರದರ್ಶನಕ್ಕಿಟ್ಟಿದ್ದಾರೆ. ಇದು ಮಿಲಾನ್ ರೇಡಿಯೋದ ವಾರ್ತೆ. ಈ ಮೊದಲು ಹಲವು ಬಾರಿ ಪ್ರಚಾರಕರಿಂದ 'ಕೊಲೆ' ಮಾಡಲ್ಪಟ್ಟಿದ್ದ ಮುಸಲನಿ ಈಗ ನಿಜಕ್ಕೂ ಇಟೆಲಿ ಗೊರಿಲ್ಲಾಗಳ ಕೈಯಲ್ಲಿ ಪ್ರಾಣಕೊಟ್ಟಿದ್ದಾನೆ. ಜರ್ಮನ್ ಯೋಧನ ವೇಶದಲ್ಲಿ ಹಿಂದುಮುಂದಿನ ಹಲವು ಕಾರುಗಳ ನಡುವೆ ಒಂದು ಕಾರಿನಲ್ಲಿ ಏಕಾಕಿಯಾಗಿ ಹೋಗುತ್ತಿದ್ದ ಮುಸಲನಿಯನ್ನು ಅವರು ಹಿಡಿದಿದ್ದರು. ಇಟೆಲಿಯ ಪಬ್ಲಿಕ್ ಪ್ರೊಸಿಕ್ಯೂಟರರು ಆತನ ವಿಚಾರಣೆ ನಡೆಯಬೇಕೆಂದು ಘೋಷಿಸಿದ್ದರೂ ಗೊರಿಲ್ಲಾಗಳು ಅವನನ್ನು ಹಸಿಹಸಿಯಾಗಿಯೇ ಕೊಂದು ಮುಯ್ಯಿ ತೀರಿಸಿಕೊಂಡರು. ಇಟೆಲಿಯ ಮಾಜೀ ಡ್ಯೂಸನ ಶವವು ಪ್ರಥಮತಃ ಕೊಮೋ ನಗರದಲ್ಲಿ ಪ್ರದರ್ಶಿಸಲ್ಪಟ್ಟು ಆ ಮೇಲೆ ಮಿಲಾನಿನಲ್ಲಿ ಸಾರ್ವಜನಿಕ ದರ್ಶನಕ್ಕಿಡಲ್ಪಟ್ಟಿತು. 23 ವರುಷ ತಮ್ಮ ಸರ್ವಾಧಿಕಾರಿಯಾಗಿದ್ದ-ಕಠಿಣ ಹೋರಾಟಕ್ಕೆ ತಮ್ಮನ್ನು ಇಳಿಸಿದ್ದ-ಫೇಸಿಸ್ಟ್ ತತ್ವದ ಮೂಲ ಗುರು ಮತ್ತು ಹಿಟ್ಲರನ ಬೋಧಕ ಸ್ಥಾನದಲ್ಲಿದ್ದ ಬೆನಿಟೋ ಮುಸಲನಿಯ ಗುಂಡು ನಾಟಿದ ದೇಹವನ್ನು ಇಟೆಲಿಯಾನರು ಸಾಲುಸಾಲಾಗಿ ಹೋಗಿ ಕಂಡರು. ಅವನೊಂದಿಗೆ ಅವನ ಪತ್ನಿ ಮತ್ತು ಎಲ್ಲ ಫೇಸಿಸ್ಟ್ ಪ್ರಮುಖರೂ ಕೊಲೆಯಾಗಿದ್ದಾರೆ. ಈ ವಾರ್ತೆ ಸತ್ಯವೆಂದು ಜಾಹೀರಾಗಿದೆ.

ಹಿಟ್ಲರನ ಮರಣ ವಾರ್ತೆ

ವಿಸ್ಮಯಕರ ವಾರ್ತಾ ಪ್ರಕಟಣೆಗೆ ಜಗತ್ತಿನಲ್ಲೇ ಹೆಸರಾದ ಸ್ಟೋಕ್‌ಹೋಮಿನ ಪತ್ರಿಕೆ 'ಸ್ವೆನ್ಸ್ಕಾ ಡಾಗ್‌ಬ್ಲೇಡೆಟ್' ಬೆರ್ಲಿನಿಂದ ಬಂದ ವಾರ್ತಾನುಸಾರವಾಗಿ ಹಿಟ್ಲರ್ ತಾ. 29ನೇ ಮಧ್ಯಾಹ್ನ ಮಡಿದನೆಂದು ಪ್ರಕಟಿಸಿದೆ. ಬರ್ಲಿನಿನ ಸ್ಟೀರ್ ಗಾರ್ಟನಿನಲ್ಲಿರುವ ನಾಜಿಗಳ ಮುಖ್ಯ ಕಾರ್ಯಾಲಯದಲ್ಲಿಯೇ ಹಿಟ್ಲರ್ ಮಡಿದ. ಸಾಯುವಾಗ ಗೋಬೆಲ್ಸ್ ಹಾಜರಿದ್ದ. ನಾಜಿಗಳ ಆರ್ಥಿಕ ವಿಭಾಗದ ಮುಖ್ಯಾಧಿಕಾರಿ ಸ್ಚ್ವಾರ್ಟ್ಸ್ ಆತ್ಮಹತ್ಯೆಮಾಡಿಕೊಂಡನೆಂದೂ ವಾರ್ತೆಯಿದೆ. ಆಸ್ಟ್ರಿಯದ ಮಾಜೀ ನಾಯಕ ಶೂಸ್ನಿಗರನ್ನು ನಾಜಿಗಳು ಕೊಲೆ ಮಾಡಿದ ವಾರ್ತೆ ಆ ಮೊದಲೇ ಪ್ರಕಟಗೊಂಡಿದೆ. ಹಿಟ್ಲರನ ಮರಣ ವಾರ್ತೆಯು ಸಾಧಾರವಾದುದಲ್ಲ.

ಶರಣು ಸುದ್ದಿಯ ಕೋಲಾಹಲ

ನಾಜಿಗಳು ಇಂಗ್ಲಾಂಡು ಅಮೇರಿಕಗಳಿಗೆ ಕಳುಹಿರುವ ಶರಣು ಸೂಚನೆಯು ಅಂಗೀಕರಿಸಲ್ಪಟ್ಟಿದೆ ಎಂಬುದನ್ನು ಅಧ್ಯಕ್ಷ ಟ್ರೂಮೆನರು ಸ್ಪಷ್ಟ ವಾಣಿಯಲ್ಲಿ ಅಲ್ಲಗಳೆದಿದ್ದಾರೆ. ಅದನ್ನು ನಿರಾಕರಿಸಿದ ಜತೆ ರಾಷ್ಟ್ರಗಳ ಧೋರಣೆಯನ್ನು ಅನುಮೋದಿಸಿ, ಇದು ಮಿತ್ರಪಾಳಯದೊಳಗೆ ಒಡಕು ಹುಟ್ಟಿಸಲು ನಾಜಿಗಳು ಕೈಗೊಂಡ ಕೊನೆಯ ಕುಯುಕ್ತಿ ಮಾತ್ರವೆಂದು ಸೋವಿಯೆಟಿನ ಅಧಿಕೃತ ಪ್ರಕಟಣೆ ಹೊರಟಿದೆ.

ಈಗಲೂ ಮಾತುಕತೆ ನಡೆದಿದೆ

ಇಂಗ್ಲಾಂಡು ಅಮೇರಿಕಗಳಿಗೆ ಕೌಂಟ್ ಫೋಕ್ಕೆ ಬೆರ್ನಾಡೊಟ್ಟೆ ಎಂಬ ಮಧ್ಯಸ್ಥಗಾರನ ಮೂಲಕ ಹಿಮ್ಲರ್ ಶರಣು ಸೂಚನೆ ಕಳುಹಿದುದು ನಿಜವೆಂದೂ, ಹಿಮ್ಲರನು ಜವಾಬ್ದಾರಿಯಾಗಿಯೇ ಆ ಸೂಚನೆ ಕಳುಹಿದ್ದನೆಂದೂ, ಇದಕ್ಕೆ ಸ್ವೀಡಿಶ್ ಸರಕಾರವೇ ಮಧ್ಯವಾಹಿಯಾಗಿತ್ತೆಂದೂ ಸ್ವೀಡನಿನ ವಿದೇಶ ಖಾತೆಯ ಕಚೇರಿಯಿಂದ ಪ್ರಕಟವಾಗಿದೆ. ಕೌಂಟ್ ಬೆರ್ನಾಡೊಟ್ಟೆಯು ಪುನಃ ಹಿಮ್ಲರನ ಭೇಟಿಯಾಗಿದ್ದಾನೆ. ತ್ರಿರಾಷ್ಟ್ರಗಳಿಗೂ ಜರ್ಮನಿಯ ಶರಣು ಸೂಚನೆ ಹೋಗಬಹುದೆಂಬ ನಿರೀಕ್ಷೆಯಿದ್ದಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **2—5—1945**ರಿಂದ

ಮಹಾರಾಷ್ಟ್ರದ ಜನಪ್ರಿಯ ಸಂಗೀತರತ್ನ

ಮಾಸ್ತರ್ ಕೃಷ್ಣರಾವ್ ಫುಲಂಬ್ರಿಕರ್

ಅಭಿನೀತ

ರಾಜಕಮಲ ಕಲಾಮಂದಿರದ ಎರಡನೆಯ ಚಿತ್ರ—

ಭಕ್ತ ಶ್ರೇಷ್ಠ

ಸಾಂವತಾ ಮಾಲಿ

ದಿ ವಿಜಯ ಸ್ಟೋರ್ಸ್ ಲಿಮಿಟೆಡ್.

(1913ನೆ ಇಸವಿ ಇಂಡಿಯನ್ ಕಂಪೆನಿ ಆಕ್ಟಿನನುಸಾರವಾಗಿ ಇನ್‌ಕೊರ್ಪರೇಟ್ ಮಾಡಲಾಗಿದೆ,

ರಿಜಿಸ್ಟರ್ಡ್ ಹೆಡ್ ಆಫೀಸು.—**ಮಂಗಳೂರು**, (ದ. ಕ.)

(28-10 44ರಲ್ಲು ರಿಜಿಸ್ಟ್ರಿಯಾದುದು ಮೆಂಬರರ ಬಾಧ್ಯತೆ ಮಿತವಾದುದು).

ಅಧಿಕೃತ ಪಾಲು ಭಂಡವಳ	ರೂ.	**3,00,000**
ಕೆತ್ತ ಪಾಲು ಭಂಡವಳ	ರೂ.	**50,000**

ವಿಭಾಗಿಸಲ್ಪಟ್ಟ ವಿವರ 10 (A) ಶೇರುಗಳು ರೂ. 1000ರಂತೆ
10 (B) ಶೇರುಗಳು ರೂ 500ರಂತೆ
100 (C) ಶೇರುಗಳು ರೂ. 250ರಂತೆ
100 (D) ಶೇರುಗಳು ರೂ. 100ರಂತೆ (ಬರಾಬರಿ)

ಡಿಫೆನ್ಸ್ ಒಫ್ ಇಂಡಿಯಾ ರೂಲ್ಸ್ 94 A ರಂತೆ ಪಾಲುಗಳನ್ನು ವಿಕ್ರಯಿಸುವರೆ ಕೇಂದ್ರ ಸರಕಾರದ ಅನುಮತಿ ದೊರೆತಿದೆ. ಇಂಡಿಯಾ ಸರಕಾರವು ಈ ಅನುಮತಿಯನ್ನೀಯುವಾಗ ಸ್ಟೋರ್ಸಿನ ಆರ್ಥಿಕ ಭದ್ರತೆ ಲೆಕ್ಕ ಪತ್ರಗಳ ಸ್ಟೇಟ್‌ಮೆಂಟಿನ ಸರ್ವ ಸಮತೆ ಇತ್ಯಾದಿಯ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಕುಂದಾಪುರ ತಾಲೂಕಿನಲ್ಲಿ ಈ ಮಾದರಿಯ ನೆಲೆಯಲ್ಲಿ ಸ್ಥಾಪಿಗವಾದ ಒಂದೇ ಒಂದು ಸಂಸ್ಥೆ. ಜಿಲ್ಲೆಯ ಈ ದೊಡ್ಡ ಸ್ಟೋರ್ಸಿನ ವ್ಯವಹಾರ ವಿಸ್ತರಣೆಯ ಯೋಜನೆಯಲ್ಲಿ ಸೇರಿ ಪ್ರೋತ್ಸಾಹಿಸಿರಿ.

THE VIJAYA STORES LTD., MANGALORE.

ಯುದ್ಧಗತಿ

ಅತಿ ಕಠೋರವಾಗಿ ಸಾಗುತ್ತಿರುವ ಬರ್ಲಿನ್ ಯುದ್ಧವು ಈಗ ಕೊನೆಯ ಅಂಕದಲ್ಲಿದೆ. ಕೆಂಪುಸೇನೆಯು ಅಂತಿಮ ಮಹಾ ಧಾಳಿಯನ್ನಾರಂಭಿಸಿ ನಗರದ ಪಶ್ಚಿಮಾಂತ್ಯಕ್ಕೆ ಬಂದಿದೆ. ಪಶ್ಚಿಮರಂಗದಲ್ಲಿ ಮಿತ್ರಸೇನೆಯು ಏಕಪ್ರಕಾರ ಮುಂದೊತ್ತಿದೆ. ಪೇಟನನ ಸೇನೆ ಮ್ಯೂನಿಚ್ ನಗರ ಪ್ರವೇಶಿಸಿದ. ಬ್ರಿಟಿಷ್ ಎರಡನೇ ದಳವು ಎಲ್ಬೇ ನದಿ ದಾಟಿದೆ. ಬಾಲ್ಟಿಕ್ ಬಂದರಗಳ ಮೇಲೆಲ್ಲಾ ಕೆಂಪುಸೇನೆ ನುಗ್ಗಿಹೋಗಿದೆ. ಜರ್ಮನಿಯಲ್ಲಿ ಪೂರ್ವ ಪಶ್ಚಿಮಗಳ ರಷ್ಯನ್ ಮತ್ತು ಆಂಗ್ಲೋ ಅಮೇರಿಕನ್ ಸೇನೆಗಳು ಒಂದುಗೂಡಿ ಜರ್ಮನಿಯು ಪೂರ್ತಿ ಇಬ್ಭಾಗವಾಗಿದೆ. ಶಾಂತ ಸಮುದ್ರ ದ್ವೀಪಗಳಲ್ಲಿ 'ಸಾಯುವ ಅಥವಾ ಶರಣು ಹೋಗುವ' ಎರಡೇ ಹಾದಿ ಜಪಾನರಿಗುಳಿದಿದೆ. ಬರ್ಮದಲ್ಲಿ ರಂಗೂನಿನ ಕಡೆಗೆ ಮಿತ್ರಸೇನೆಗಳು ತೀವ್ರಗತಿಯಿಂದ ಮುನ್ನುಗ್ಗಿವೆ. ಇಟೆಲಿಯಲ್ಲಿ ಉತ್ತರಾರ್ಧದಲ್ಲಿ ನಾಜೀಸೇನೆ ಪೂರ್ಣ ಪರಾಭವಗೊಂಡು ಮಿತ್ರರೀಗ ಮಿಲಾನ್ ಪ್ರವೇಶಿಸಿದ್ದಾರೆ.

ರಾಜ್ಯ ವ್ಯವಸ್ಥೆ

ನಾಜೀ ಆಕ್ರಮಣ ಬಿಡುಗಡೆ ಹೊಂದಿದ ಆಸ್ಟ್ರಿಯಕ್ಕೆ ತಾತ್ಕಾಲಿಕ ಸರಕಾರ ಸ್ಥಾಪಿಸಬೇಕೆಂದು ಅಲ್ಲಿಯ ಫೇಸಿಸ್ಟ್ ವಿರೋಧೀ ಪ್ರಮುಖರು ಮಾಸ್ಕೋದಿಂದ ಘೋಷಿಸಿದ್ದಾರೆ. ಪೂರ್ವಗಡೆಯ ಜಪಾನೀ ಯುದ್ಧಕ್ಕೆ ಬಾಧೆಯಿದೆ ಎಂಬ ನೆವದಿಂದ ಹಿಂದೀ ಪ್ರಮುಖರ ಬಿಡುಗಡೆಗೆ ಚರ್ಚಿಲ್ಲರು ಬದ್ಧವಿರೋಧ ಸೂಚಿಸಿದ್ದಾರೆಂದೂ ವೇವೆಲರ ಪ್ರಯತ್ನ ಫಲಿಸುವಂತಿಲ್ಲವೆಂದೂ ಸುದ್ದಿ ಬಂದಿದೆ.

ಪಾರ್ಥಿವ ಸಂವತ್ಸರದ

ಉಡುಪಿ ಪಂಚಾಂಗಂ

(1945-'46)

ಸಕಲ ಶುಭಾಶುಭ-ನಿತ್ಯ ನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತ ರೀತಿಯಿಂದ ರಚಿತವಾಗಿರುವುದು.

ಬೆಲೆ ೧ರ 0—4—0

ವಿಶೇಷ ಮಾಹಿತಿಗೆ ಬರೆಯಿರಿ:-

ಅತ್ತೂರು ವಾಸುದೇವ ಉಡುಪ.

ಸಂಪಾದಕ,

ಅಂಬಾ ಭವನ ಕಾಫಿ ಕ್ಲಬ್, ಮಾತಂಗ, ಸ್ಟೋರ್, ಬೊಂಬಾಯಿ, ಇಲ್ಲಿಯೂ ಸಿಗುವುದು.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲ ಭಾಷಾಂತರ

ಪುಟ 100ಕ್ಕೂ ಮಿಕ್ಕಿವೆ.

ಬೆಲೆ: ಬರೇ 0-8-0 ಮಾತ್ರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತದೆ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1—8—0** ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ದಕ್ಷಿಣ ಕನ್ನಡದ ಆಹಾರ ಪರಿಸ್ಥಿತಿ

ಜಿಲ್ಲಾ ಆಹಾರ ಸಮಿತಿಯ ನಿರ್ಧಾರಗಳು.

(ಶ್ರೀ. ಎ. ಬಿ. ಶೆಟ್ಟರಿಂದ).

ಆಹಾರ ಸರಬರಾಯಿಯ ಮಟ್ಟಿಗೆ ಸಾಕಾಗುವಷ್ಟು ಸ್ವಾನುಕೂಲತೆಯಿರುವ ಜಿಲ್ಲೆಯೆಂದು ಸರಕಾರವು ಊಹಿಸಿದ್ದ ದಕ್ಷಿಣ ಕನ್ನಡವು ಧಾನ್ಯಾಭಾವವಿರುವ ಜಿಲ್ಲೆಯೆಂಬುದೀಗ ಖಚಿತವಾಗಿದೆ. ಈ ವರುಷ ಕಠಿಣ ರೀತಿಯಲ್ಲಿ ರೆಕ್ವಿಶಿಶನ್ ನಡೆದಿದ್ದರೂ ಈತನಕ ಕೇವಲ 12 ಲಕ್ಷ ಮುಡಿ ಅಕ್ಕಿ ಮಾತ್ರ ಸಂಗ್ರಹಿಸಲ್ಪಟ್ಟಿದೆ. ಈ 12 ಲಕ್ಷಗಳ ಪೈಕಿ ಇನ್ನು ಹಂಚಲು ಉಳಿದಿರುವದು 7 ಲಕ್ಷ ಮಾತ್ರ. ಹಸುಗೇ ಚೀಟಿದ್ದವರಿಗೆ ಹಂಚಲು ತಿಂಗಳಿಗೆಷ್ಟು ಅಕ್ಕಿ ಬೇಕಾಗುವದೆಂಬ ಸರಿಯಾದ ಲೆಕ್ಕದ ಅಂದಾಜು ಈ ತನಕ ದೊರೆತಿಲ್ಲ. ಹಳ್ಳಿಗಳಲ್ಲಿರುವ ಎಷ್ಟೋ ಜನರಿಗೆ ಇನ್ನೂ ಕಾರ್ಡು ಕೊಡಲಿಕ್ಕಿದೆ. ವಿತರಣೆಗಾಗಿ ತಿಂಗಳಿಗೆ 2 ಲಕ್ಷ ಮುಡಿ ಅಕ್ಕಿ ನಮಗೆ ಬೇಕಾಗಬಹುದು. ಈ ಪ್ರಕಾರ ನವಂಬರ್ ಅಂತ್ಯದ ವರೆಗಿನ ನಮ್ಮ ಆವಶ್ಯಕತೆಯನ್ನು ಪೂರೈಸಿಕೊಳ್ಳಬೇಕಾದರೆ 6 ಲಕ್ಷ ಮುಡಿಯನ್ನು ಹೊರಗಿನಿಂದ ಆಮದು ಪಡಿಸಿಕೊಳ್ಳಬೇಕಾಗುವದು

ಆದ್ದರಿಂದ, ಅಗತ್ಯವಿರುವಷ್ಟು ಅಕ್ಕಿಯನ್ನೂ ಅಂತೆಯೇ ರೇಶನಿನ ಕಾಲಂಶವಾಗಿ ಕೊಡಲ್ಪಡುತ್ತಿರುವ ಗೋಧಿ ಮತ್ತು ರಾಗಿಯನ್ನೂ ಈ ಜಿಲ್ಲೆಗೆ ರವಾನಿಸುವಂತೆ ತಾ. 28-4-45ರಲ್ಲಿ ಸೇರಿದ ಜಿಲ್ಲಾ ಆಹಾರ ಸಮಿತಿಯು ಸರಕಾರವನ್ನು ವಿಜ್ಞಾಪಿಸಿಕೊಂಡಿದೆ. ಈ ಜಿಲ್ಲೆಯಿಂದ ಅಮಿನ್ ದೀವಿ ದ್ವೀಪಗಳಿಗೆ ರವಾನಿಸಿದ 1000 ಟನ್ನು ಅಕ್ಕಿಯನ್ನೂ ಇಲ್ಲಿಗೆ ಆಮದು ಪಡಿಸಿಕೊಳ್ಳಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಗಿದೆ. ಅಕ್ಕಿಯ ಅಭಾವದ ದೆಸೆಯಿಂದಾಗಿ ಕಾಸರಗೋಡು ತಾಲೂಕಿನವರಿಗೆ ಇದೇ ತಾ. 1-5-45ರಿಂದ ವಾರದಲ್ಲಿ ನಾಲ್ಕೇದಿನ ಅಕ್ಕಿ ಕೊಡಬೇಕೆಂದು ಜಿಲ್ಲಾಧಿಕಾರಿಗಳು ಯೋಚಿಸಿದ್ದಾರೆ. ಇತರ ಕಡೆಗಳಲ್ಲಿಯೂ ಈಗ ಕೊಡುತ್ತಿರುವ ರೇಶನ್ ಪರಿಮಾಣವನ್ನು ತಗ್ಗಿಸಲಿದ್ದಾರೆ ಎಂದು ತಿಳಿದು ಬರುತ್ತದೆ. ಹಸುಗೇಯಿರುವ ಪಟ್ಟಣಗಳಿಗೆ ಸರಬರಾಯಿ ಮಾಡುವದಕ್ಕಾಗಿ, ಹಳ್ಳಿಗಳ ಹಸುಗೇ ಪರಿಮಾಣವನ್ನು ತಗ್ಗಿಸುವದಕ್ಕೆ ಜಿಲ್ಲಾ ಆಹಾರ ಸಮಿತಿಯು ಸ್ಪಷ್ಟವಾಗಿ ವಿರೋಧ ಸೂಚಿಸಿದೆ. ಉಡುಪಿ ತಾಲೂಕಿನವರು ಗವರ್ನರರಿಗೆ ಕಳುಹಿಸಿದ್ದ ಬಿನ್ನವತ್ತಳೆಯಲ್ಲಿ ನಮೂದಿಸಿರುವ ಸಂಕಷ್ಟಗಳನ್ನೆಲ್ಲಾ ಸಭೆಯ ಮುಂದೆ ಇಡಲಾಯಿತು. ಕೊಳಕೆ ಬೆಳೆಯ ಉತ್ಪತ್ತಿಯನ್ನು ರೆಕ್ವಿಸಿಶನ್ ಮಾಡುವದಿಲ್ಲವೆಂದೂ, ಬೇಸಾಯಗಾರರ ಆಹಾರ ಮತ್ತು ಸಾಗುವಳಿ ಖರ್ಚಿಗೆ ಸಾಕಾಗುವಷ್ಟು ಅಕ್ಕಿಯನ್ನು ಅವರ ವಶಬಿಡಲಾಗುವದೆಂದೂ ಕಲೆಕ್ಟರರು ಸಮಿತಿಗೆ ಆಶ್ವಾಸನೆಯಿತ್ತಿದ್ದಾರೆ ಅಗತ್ಯವಿರುವ ಎಲ್ಲಾ ಜನರಿಗೂ ರೇಶನ್ ಕಾರ್ಡುಗಳನ್ನು ಕೊಡಲಾಗುವದು. ಸುಗ್ಗಿ ಅಕ್ಕಿಯನ್ನು ಒಪ್ಪಿಸುವ ಅವಧಿಯನ್ನು ಇನ್ನೊಮ್ಮೆ 15 ದಿನಗಳವರೆಗೆ ಮುಂದುವರಿಸಲಾಗುವದು ಸುಗ್ಗೀ ಮುಡಿಯ ಬೆಲೆಯಲ್ಲಿ ಆಗಿದ್ದ ಒಂದು ರೂಪಾಯಿ ಕಡಿತಗಳ ಸಂಬಂಧದಲ್ಲಿ, ಅರ್ಜಿಗಳು ಹೋದರೆ ಅವುಗಳನ್ನು ವಿಚಾರಿಸಿ, ಯೋಗ್ಯವೆನ್ನಿಸಿದವುಗಳ ಕಡಿತವನ್ನು ವಾಪಾಸು ಕೊಡಲಾಗುವದು.

ನಮ್ಮ ಆಹಾರಾವಶ್ಯಕತೆಗಾಗಿ ಕಳೆದ ವರುಷ ಸರಕಾರವು 16 ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಈ ಜಿಲ್ಲೆಗೆ ಹೊರಗಿನಿಂದ ಆಮದು ಪಡಿಸಿದ್ದಿತು. ಕಳೆದ ವ್ಯವಸಾಯದ ವರ್ಷಾಂತ್ಯದಿಂದ ಈ ವರ್ಷಕ್ಕೆ ವರ್ಗಾಯಿಸಲು ಅಕ್ಕಿ ಅಂಶವೇನೂ ಉಳಿದಿರಲಿಲ್ಲ. ಹೀಗಾಗಿ ಕಳೆದ ನವಂಬರದಿಂದಲೇ ಅಕ್ಕಿ ಸಂಗ್ರಹವನ್ನಾರಂಭಿಸಬೇಕಾಗಿ ಬಂದಿದ್ದಿತು. ಈ ವರುಷವಂತೂ ನಮ್ಮ ಭತ್ತದ ಬೆಳೆಯು-ಮುಖ್ಯವಾಗಿ ಬೆಟ್ಟು ಗದ್ದೆಗಳ ಬೆಳೆಯು-ಸಾಕಷ್ಟು ಮಳೆ ಬಾರದುದರಿಂದಾಗಿ ಹಾಳಾಗಿದೆ. ಈ ವರುಷ ಅತಿ ಹೆಚ್ಚಿನ ಧಾನ್ಯಾಭಾವವುಂಟಾಗಿದೆ. ಆದ್ದರಿಂದ, ನವಂಬರ್ ಅಂತ್ಯದ ವರೆಗೆ ನಮಗೆ ಬೇಕಾಗುವ 21500 ಟನ್ನು ಅಕ್ಕಿಯನ್ನೂ, ಅದೇ ಅಂಶದಲ್ಲಿ ರೇಶನ್ ಪರಿಮಾಣಾಂಶವಾಗಿ ಅಕ್ಕಿಯೊಂದಿಗೆ ಕೊಡಲ್ಪಡುತ್ತಿರುವ ಗೋಧಿ ಮತ್ತು ರಾಗಿಯನ್ನೂ ಸರಕಾರವು ನಮ್ಮ ಜಿಲ್ಲೆಗೆ ಕಳುಹಿಕೊಡುವದೆಂದು ಆಶಿಸಲಾಗಿದೆ.

ನಮ್ಮ ಜಿಲ್ಲೆಯಲ್ಲಿ ಬೇಸಾಯ ಗಾರವರ್ಗದ ಆವಶ್ಯಕತೆಗೆ ಬೇಕಾಗುವಷ್ಟು ಅಕ್ಕಿಯನ್ನು ಅವರಲ್ಲಿ ಉಳಿಯಗೊಡದೇನೇ ಅಮೂಲಾಗ್ರವಾಗಿ ರೆಕ್ವಿಶಿಶನ್ ನಡೆಸಿರುವದು ಶೋಚನೀಯವಿದೆ. ಅತಿರೇಕ ಹುರುಪಿನ ರೆವಿನ್ಯೂ ನೌಕರರು, ತಮ್ಮ ಮೇಲಧಿಕಾರಿಗಳ ಮನವೊಲಿಸುವ ಆತುರದಿಂದ ಹಳ್ಳಿಗರಿಗೆ ಪ್ರೊಸಿಕ್ಯೂಶನಿನ ಹೆದರಿಕೆ ಹಾಕಿ, ಅವರಲ್ಲಿದ್ದ ಅಕ್ಕಿಯಲ್ಲಿ ಸಾಧ್ಯವಿದ್ದಷ್ಟನ್ನೆಲ್ಲಾ ಬಾಚಿಕೊಳ್ಳಲು ಯತ್ನಿಸುತಿದ್ದಾರೆ. ಈ ಜಿಲ್ಲೆಯಲ್ಲಿ ಸದ್ಯ ಜಾರಿಯಲ್ಲಿರುವ ಧಾನ್ಯ ಸಂಗ್ರಹದ ಧೋರಣೆಯ ಪರಿಣಾಮವಾಗಿ ಮುಂಬರುವ ಸಾಗುವಳೀ ಕೆಲಸಕ್ಕೇನೆ ಧಕ್ಕೆ ಬೀಳುವದೆಂಬ ಭಯವೆದ್ದಿದೆ. ಕಾಲಮೀರುವ ಮೊದಲೇ ಈ ಸ್ಥಿತಿಯ ಸುಧಾರಣೆಗೆ ಜಿಲ್ಲಾ ಕಲೆಕ್ಟರರು ಕೈ ಹಾಕುವರೆಂದೂ, ಮತ್ತು ನಮಗಗತ್ಯವಿರುವ ಧಾನ್ಯ ಸರಬರಾಯಿ ಮಾಡುವಂತೆ ಸರಕಾರವನ್ನು ಒತ್ತಾಯಿಸುವರೆಂದೂ ನಾವು ನಂಬುತ್ತೇವೆ.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ
ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳೆವ
ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನನೋಹಕ ಕತೆಗಳಿಗಾಗಿ-ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ಈಗಿನ ಅಭಿರುಚಿಗೊಪ್ಪುವ
ಸಲ್ಲಕ್ಷಣಗಳಿಂದೊಡಗೂಡಿದೆ
ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ಸೈ ಸೈ ಎನಿಸುವ
ವಾರದ ಭವಿಷ್ಯವೂ
ಬಿಡದೆ ಪ್ರಕಟವಾಗುತ್ತಿದೆ

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ **4-8-0.**
ಬಿಡಿ ಸಂಚಿಕೆಗೆ ... ... **0-1-6.**

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ

ಜಾಹೀರಾತು ದರಗಳಿಗೂ, ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

ANTARANGA

Best medium for advertisement.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯುಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3 |- ಕ್ಲಿಷ್ಟವಾದ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗೆ ರೂ.4|-(ವಿ.ಪಿ.12 ಆಣೆ ಅಲ್ಲದೆಯೆ) Mrs P' DEVEE, P. D. 4 (R) Tollygunge, Calcutta, ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

WANTED

(1) A qualified Drawing Master and (2) A qualified Physical Training Instructor

for

S. V. S. High School, Katapadi
(to be opened on 1-6-45)

Apply stating qualification, previous experience & minimum salary expected

to

The Secretary,
S. V. S. Vidyavardhaka Sangha,
Katapady, S. K.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.
18 Balmat Road, MANGALORE.
Approved firm by the Govt. of Mysore.
Certified by the Agent of the Govt. of India in Ceylon ESTD 1906

ದಕ್ಷಿಣ ಕನ್ನಡ

ಮಂಗಳೂರು

ಸಕ್ಕರೆಯ ಹೊಸ ದರಗಳು— ಸಕ್ಕರೆ ಮಾರಾಟ ಮಾಡುವ ಹೊಸ ದರಗಳನ್ನು ಜಿಲ್ಲಾ ಕಲೆಕ್ಟರರು ಈ ರೀತಿಯಾಗಿ ನಿಶ್ಚಯಿಸಿರುವರು. ಇದರಲ್ಲಿ ಸೇಲ್ಸ್ ಟೇಕ್ಸ್ ಕೂಡಿರುವುದಿಲ್ಲ. ಮಂಗಳೂರು ಟೌನಿನಲ್ಲಿ ಮಸ್ಕೋಲಿಯಾ ಸಕ್ಕರೆ ರಾತ್ಲಿಗೆ ೦.೩.೧೧, ಪಡ್ರೋಸಾ ೦ ೩ ೧೧, ಚಂದ್ರಾತಿಯಾ ೦ ೪ ೦, ಮೋತಿಪುರ ೦ ೪-೦, ಬಂಟ್ವಾಳ ಟೌನ್ ೦ ೪ ೧, ೦ ೪.೧ ೦ ೪ ೨, ೦ ೪ ೩ ಕಾಸರಗೋಡು ಟೌನ್ ೦.೪ ೩, ೦ ೪ ೩, ೦ ೪ ೩, ೦ ೪ ೩ ಹೊಸದುರ್ಗ ಟೌನ್ ೦ ೪ ೨, ೦ ೪ ೩, ೦ ೪.೩, ೦ ೪ ೩. ಪುತ್ತೂರು ಟೌನ್ ೦ ೪ ೨, ೦-೪ ೩, ೦ ೪.೩, ೦ ೪ ೩ ಬೆಳ್ಳಂಗಡಿ ಟೌನ್ ೦-೪-೨, ೦-೪ ೨, ೦ ೪ ೩, ೦ ೪ ೩ ಉಡುಪಿ ಟೌನ್ ೦ ೪ ೩, ೦ ೪ ೩, ೦ ೪ ೪, ೦ ೪ ೪ ಕುಂದಾಪುರ ಟೌನ್ ೦ ೪ ೪, ೦ ೪ ೪, ೦ ೪ ೫, ೦ ೪ ೫ ಕಾರ್ಕಳ ಟೌನ್ ೦ ೪ ೩, ೦.೪ ೩, ೦ ೪-೩, ೦ ೪ ೩

ಸೆಂಟ್ರಲ್ ಕೊ-ಒಪರೇಟಿವ್ ಸ್ಟೋರು—ಗಳಿಗೇನೇ ಜಿಲ್ಲೆಯ ಪ್ರತಿಯೊಬ್ಬನೂ ತನ್ನಲ್ಲಿ ಮಿಗುವ ಅಕ್ಕಿ ಭತ್ತಗಳನ್ನು ವಿಕ್ರಯಿಸತಕ್ಕದ್ದು ಎಂದು ೨೧ ೩ '೪೪ರಲ್ಲಿ ಜಿಲ್ಲಾ ಕಲೆಕ್ಟರರು ಹೊರಡಿಸಿದ ಅಜ್ಞೆಯನ್ನು ರದ್ದುಗೊಳಿಸಿ, ಮಿಗುವ ಅಕ್ಕಿ ಭತ್ತಗಳನ್ನು ಜಿಲ್ಲಾ ಕಲೆಕ್ಟರರಿಗೇನೇ ಅಥವಾ ಅವರು ನೇಮಿಸಿದ ಏಜಂಟರಿಗೇನೇ ವಿಕ್ರಯಿಸತಕ್ಕದ್ದು ಎಂಬ ಹೊಸ ಆಜ್ಞೆಯನ್ನು ಜಿಲ್ಲಾ ಕಲೆಕ್ಟರರು ಈಗ ಹೊರಡಿಸಿರುವರು. ದಾಗಿಯ ವಿಚಾರದಲ್ಲೂ ಇದೇ ರೀತಿಯ ತಿದ್ದುಪಡಿಯನ್ನು ಮಾಡಲಾಗಿದೆ.

ದ ಕ ಮತ್ತು ಮಲಬಾರು— ಗಳಲ್ಲಿ ಕಟ್ಟಡ ಇತ್ಯಾದಿಗಳನ್ನು ಕಟ್ಟಿಸುವ ಆವಶ್ಯಕತೆ ಉಳ್ಳವರು ತಮ್ಮ ಆವಶ್ಯಕತೆಗಳ ವಿವರವನ್ನು ಜಿಲ್ಲಾ ಇಂಡಸ್ಟ್ರಿಸ್ ಆಫೀಸರ್, ಇವಾನ್ಸ್ ರೋಡ್, ಕಲ್ಲಿಕೋಟೆ ಇವರಿಗೆ ಒರೆದುಕೊಳ್ಳಬೇಕೆಂದು ಸಂಬಂಧಪಟ್ಟ ಆಫೀಸರರು ತಿಳಿಸುತ್ತಾರೆ. ಕೈಗಾರಿಕೆಯ ಕಾರ್ಖಾನೆ ಮತ್ತಿತರ ಮನೆ, ಕಟ್ಟಡಗಳ ಸಂಬಂಧವಾಗಿ ಕಬ್ಬಿಣ ಮತ್ತು ಉಕ್ಕಿನ ಸರಬರಾಯಿಯ ಪರಿಶೀಲನೆ ನಡೆಸುವುದಕ್ಕಾಗಿ ಈ ಸೂಚನೆ

ಜಿಲ್ಲಾ ಹೋಟೆಲ್ ಮಾಲಕರ— ಸಂಘದ ಮಹಾ ಸಭೆಯು ತಾ. [illegible] ಶ್ರೀ ಎ ಬಿ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ ಹೊಸ ಕಾರ್ಯಕಾರಿಗಳ ಚುನಾವಣ ನಡೆಯಿತು ಮುಂದಿನ ವರ್ಷಕ್ಕೂ ಕೃಷ್ಣಭವನದ ಶ್ರೀ ವೆಂಕಟ್ರಮಣ ಬಟ್ಟರೇ ಅಧ್ಯಕ್ಷರು

ದ ಕ ಕಸ್ತೂರ ಬಾ ನಿಧಿ— ದ ಕ. ಜಿಲ್ಲಾ ಕಸ್ತೂರಿ ಬಾ ಸ್ಮಾರಕ ನಿಧಿ ಸಮಿತಿಯ ಸಭೆಯು ತಾ 27ರಲ್ಲಿ ಸಭಾಧಿಕಾರಿ ಆಫೀಸಿನಲ್ಲಿ ಶ್ರೀ ಬಿ ಎಸ್ ಕುದ್ಮುಲರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾಂತೀಯ ಪ್ರತಿನಿಧಿ ಕಾರ್ಯದರ್ಶಿಯನ್ನು ಆರಿಸುವ ಅಧಿಕಾರವನ್ನು ಶ್ರೀ ಉದಿಕಾರಿ ಮತ್ತು ಶ್ರೀಮತಿ ಲೀಲಾಬಾಯಿ ಐಕಾಂಬರರಾಯರಿಗೆ ಒಪ್ಪಿಸಲಾಯಿತು. ಶ್ರೀಮತಿ ಲೀಲಾಬಾಯಿಯವರ ಸಹಾಯಕ ಕಾರ್ಯದರ್ಶಿತ್ವದ ರಾಜೀನಾಮೆಯನ್ನು ಸ್ವೀಕರಿಸಲಾಯಿತು. [illegible]ಗಳ ಆಯುಷ್ಯದ ನಿರ್ಧಾರವನ್ನು ಮುಂದಿನ ಸಭೆಗೆ ಮುಂದುವರಿಸಲಾಗಿದೆ

ದ ಕ ಜಿಲ್ಲಾ ಪೆನ್ಶನ್‌ದಾರರ ಮನವಿ— ಮದರಾಸು ಸರಕಾರಕ್ಕೆ ಜಿಲ್ಲಾ ಗವರ್ನಮೆಂಟ್ ಪೆನ್ಶನ್‌ದಾರರು [illegible] ತಮ್ಮದೊಂದು ಮನವಿಯನ್ನು ಕಳುಹಿಸಿರುವರು ತಿಂಗಳಿಗೆ ೪೦ ರೂಪಾಯಿಗಳಿಗಿಂತ ಕಡಿಮೆ ಪೆನ್ಶನ್ ಪಡೆಯುವರಿಗೆ ಸೇಕಡಾ [illegible] ಅಧಿಕವೆಂದರೆ ೨೦೦ ರೂ ಅಥವಾ ಅದಕ್ಕಿಂತಲೂ ಮೇಲ್ಪಟ್ಟು ಪೆನ್ಶನ್ ಹೊಂದುವವರಿಗೆ ಸೇಕಡಾ [illegible] ಹೆಚ್ಚಿಗೆ ಕೊಡುವಂತಾಗಬೇಕೆಂದು [illegible] ಯಲ್ಲಿ ಕೇಳಿಕೊಂಡಿರುವರು.

ಮದ್ರಾಸ್ ವಿಶ್ವವಿದ್ಯಾಲಯದಿಂದ— ಸುರತ್ಕಲಿನ ವಿದ್ಯಾದಾಯಿನೀ ಹಾಯಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎಂ ವಾಸುದೇವರಾವ್ ಇವರ "ಪ್ರಾಚೀನ ಭಾರತದ ಮಿಸಿಜ ಸಂಪತ್ತು ಮತ್ತು ಕೈಗಾರಿಕೆಗಳು" ಎಂಬ ಇನ್ನೂ ಹಸ್ತಪ್ರತಿಯಲ್ಲಿರುವ ೬೦೦ ಪುಟದ ಕನ್ನಡ ಗ್ರಂಥಕ್ಕೆ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಪುಸ್ತಕ ಪ್ರೋತ್ಸಾಹನ ಪಾರಿತೋಷಕ ರೂ. ೭೦೦ ದೊರತಿದೆ ಎಂದು ತಿಳಿದು ಬಂದಿದೆ.

ಫಲಿಮಾರು— ತಾ 24 4 1945ನೇ ದಿನ ಸ್ಥಳೀಯ ಬೋ ಹಾ ಪ್ರಿ. ಶಾಲೆಯನ್ನು ದ. ಕ ಜಿಲ್ಲಾ ವಿದ್ಯಾಧಿಕಾರಿಗಳು ಜ್ಯೂನಿಯರ್ ಡಿ ಇ ಯವರೊಂದಿಗೆ ಆಕಸ್ಮಾತ್ತಾಗಿ ಸಂದರ್ಶಿಸಿ ಇದೊಂದು ಜಿಲ್ಲೆಯಲ್ಲಿ ಅತಿದೊಡ್ಡ ಹಾಯರ್ ಎಲಿಮೆಂಟರಿ ಶಾಲೆಯಾಗಿದೆಯೆಂದೂ, ಹೆಮ್ಮಕ್ಕಳು ಅಧಿಕ ಸಂಖ್ಯೆಯಲ್ಲಿ ಓದುತ್ತಿರುವುದು ತುಂಬಾ ಸಂತೋಷದ ಸಂಗತಿಯಾಗಿದೆಯೆಂದೂ ಮಕ್ಕಳ ಸಂಖ್ಯೆಯು ದಿನೇದಿನೇ ಹೆಚ್ಚುತ್ತಿರುವುದರಿಂದ ಶ್ರೀ [illegible]ಗಳವರ ನೇತೃತ್ವದಲ್ಲಿ [illegible] ಹೊಸ ಕಟ್ಟಡದ ಕೆಲಸಕ್ಕೆ ಪ್ರಾರಂಭಿಸಿದ್ದು ಸ್ತುತ್ಯವಾಗಿದೆಯೆಂದೂ, ಈ ಶಾಲೆಗೆ ಇನ್ನೂ ಇಬ್ಬರು ಹೆಚ್ಚಿಗೆ ಉಪಾಧ್ಯಾಯರ [illegible] ಸಾಮಗ್ರಿಗಳ ಆವಶ್ಯಕತೆಯು ತುಂಬಾ ಇರುವುದೆಂದೂ ಅಭಿಪ್ರಾಯಪಟ್ಟಿರುವರು.

ಕಡಬ [illegible] ಪೂಜ್ಯ ಸ್ವಾಮಿ ಆತ್ಮಾನಂದಜೀಯವರ ಸ್ಮಾರಕ ಸಮಾರಂಭವು ಕಳೆದ ತಾ 22ರಲ್ಲಿ ಜರಗಿತು [illegible]

ಮುಲ್ಕಿ— ತಾ 22 4 45ರಲ್ಲಿ ಗವರ್ನಮೆಂಟ್ ಫಿಶರೀಸ್ ಶಾಲೆಯ [illegible] ಸಂಚಾಲಕರು [illegible] ಅಸಿಸ್ಟಾಂಟ್ ಡೈರೆಕ್ಟರಾದ ಶ್ರೀ N D Kemtur ಇವರಿಗೆ ಮಾನಪತ್ರವನ್ನು ಸಮರ್ಪಿಸಿದರು. ಸದ್ರಿ ಶಾಲೆಯಲ್ಲಿ ತಾ 24-4-45ನೇ ಸಂಜೆ ಆ ಶಾಲೆಯ ರಜತೋತ್ಸವ ಸಮಾರಂಭವು ಮಾನ್ಯ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಗ್ರಾಸನಾಧಿಪತ್ಯದಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಅದೇ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳಿಂದ ವೀರ ಅಭಿಮನ್ಯು ಎಂಬ ಕನ್ನಡ ನಾಟಕವು ಅಭಿನಯಿಸಲ್ಪಟ್ಟಿತು.

ಉಡುಪಿ

ಮುನಿಸಿಪಲ್ ಕೌನ್ಸಿಲ್ ಮೀಟಿಂಗು— ತಾ 23ರಲ್ಲಿ ಚೆಯರ್‌ಮೆನ್ ಶ್ರೀ [illegible] ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. [illegible]

ಶ್ರೀ ರಾಮ ಭಜನ ಮಂದಿರ ಪ್ರವೇಶೋತ್ಸವ ಮತ್ತು ಭಜನ ಸಪ್ತಾಹ ಮಂಗಲ— [illegible] ಕೇಂದ್ರದಲ್ಲಿ [illegible] ಜನರ ಸಹಕಾರ, ಬೆಂಬಲದಿಂದ ಶ್ರೀ [illegible] ಕೃಷ್ಣ ಭಟ್ಟರು ಕಟ್ಟಿಸಿದ ಶಿಲಾಮಯ ಭಜನ ಮಂದಿರ ಪ್ರವೇಶೋತ್ಸವವೂ ಶ್ರೀ ಸೀತಾ ಲಕ್ಷ್ಮಣ ಹನುಮತ್ಸಮೇತನಾದ ಶ್ರೀ. ಕೋದಂಡರಾಮ ಸ್ವಾಮಿಯ ಪ್ರಾಣ ಪ್ರತಿಷ್ಠಾ ಸಮಾರಂಭವೂ ಶ್ರೀ ರಾಮನವಮಿಯಂದು ಧರ್ಮ ಶಾಸ್ತ್ರ ವಿಧಿಗಳಿಗನುಸಾರವಾಗಿ ನಡೆಯಿತು. [illegible] ಉದ್ಘಾಟನಾ ಸಮಾರಂಭವು ತಾ ಕೆ. ಎಲ್. [illegible]ರಿಂದ ನೆರವೇರಿಸಲ್ಪಟ್ಟಿತು. ಅಂದಿನಿಂದ ಏಳು ದಿನಗಳ ವರೆಗೆ ದಿನಾಲೂ ಶ್ರೀ ವಾಸು ಸೆಟ್ಟರ ನೇತೃತ್ವದಲ್ಲಿ ಭಜನೆಯೂ, ಪುರಾಣ ವಾಚನವು ಶ್ರೀ ಮುಬ್ಬ ಪ್ರಾಣ ತಂತ್ರಿಗಳಿಂದಲೂ, ಹರಿಕಥಾ ಕಾಲಕ್ಷೇಪವು ಶ್ರೀ [illegible]ರಿಂದಲೂ, ಸಂಗೀತ ಸೇವೆಯು ಕುಮಾರಿ ಜಯಲಕ್ಷ್ಮಿ ಮತ್ತು ಲೀಲಾವತಿಯರಿಂದಲೂ, ನಾಟಕಾಭಿನಯವು [illegible] ಶಾಲಾ ಮಕ್ಕಳಿಂದಲೂ ಬಹು ಯುಕ್ತಿಯಾಗಿ ಜರಗಿತು. ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಳದ [illegible] ಭಜನಾ ಪಾರ್ಟಿಯವರು ಈ ಸಮಾರಂಭದಲ್ಲಿ ಭಾಗ ವಹಿಸಿದ್ದರು. ಕೊನೆಯ ದಿನ [illegible] ಶ್ರೀ ದೇವರಿಗೆ [illegible] ಮಂಗಳ ಸ್ನಾನವಾಯಿತು ಸಂಜೆ ಶ್ರೀ ಕೃಷ್ಣ [illegible] ಶ್ರೀ ಕೋದಂಡರಾಮಸ್ವಾಮಿಯ ಭಾವ ಚಿತ್ರವನ್ನಿರಿಸಿಕೊಂಡು ಶ್ರೀ ರಾಮಪುರ ಮೆರವಣಿಗೆಯಾಯಿತು. ತದನಂತರ ವಸಂತೋತ್ಸವ, ಭಜನ ಮಂಗಲಾದಿ ಕಾರ್ಯಕ್ರಮಗಳು ನಡೆದವು. ಶಿಲಾಮಯ ಭಜನ ಮಂದಿರವನ್ನು ನಾಜೂಕಾಗಿ ಕಟ್ಟಿದ ಶ್ರೀ ನಾರಾಯಣ ಆಚಾರಿಯವರಿಗೆ ಶ್ರೀ ರಾಮಚಂದ್ರ ದೇವರ ಅಭಿವರ್ಣನ ರೂಪದ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡಲಾಯಿತು. ಏಳು ದಿನಗಳ ಕಾರ್ಯಕ್ರಮವು ಸರಾಗವಾಗಿ ನಡೆದು ಏರಲು ಸಹಕರಿಸಿದ ಸರ್ವರಿಗೂ ಶ್ರೀ [illegible] ಕೃಷ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ಎಲ್ಲಾ ವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

"Service of the Poor is the service of God".

The Badavara Bandhu Orphanage Trust.

[Formed under the Indian Trusts Act of 1882]
Registered under the Indian Registration Act, 1908

MANGALORE, (South India)

The only Orphanage of the kind in South India
Inmates entertained without distinction of Caste or Creed
Destitutes clothed fed and educated and employed by the Orphanage

Training given in various kinds of Arts, Crafts and Industries Poor homes & Dharmashalas and such other Shelters for the poor built by the Orphanage.

Goshalas will be maintained by the Orphanage.

Patronise this institution and serve your country and God

BOARD OF TRUSTEES:

1. **Sri Mangalore Jarappa,**
   Chairman & Managing Director
   The Badavara Bandhu Printing Press Ltd
   Sri Ram Narayana Guru Bank, Ltd &
   Special Magistrate, Mangalore (*Chairman*)
2. **Sri M. M. Pai,**
   Managing Agent
   Sri Ram Hand loom Textiles, Ltd Mangalore
   Proprietor
   R K B Charities Institute, Ramnagar Kanhangad
3. **Sri B. Narsappa,**
   Superintendent
   The Badavarabandhu Printing Press Ltd.,
   Estate Superintendent
   Sri Narayana Guru Bank, Ltd., Mangalore
4. **Sri K. Krishna Rao,** B A
   Branch Manager
   Sri Narayana Guru Press Mangalore

General Secretary

M. A. Suvarna, B A LL B

Advocate, Mangalore

CHAMPAE'S

Snow & Castrex

(*Sole Distributers for India.*)

Sukhananda Stores

Santhekatte. UDIPI, S. K.

ದ. ಕ. ಜಿಲ್ಲಾ ಭೂಮ್ಯಾಲಿಕರ ಸಂಘ.

ಶ್ರೀ ಕೆ. ಎಸ್. ಹೆಗ್ಡೆಯವರ ನಿವಾಸದಲ್ಲಿ ತಾ 20-4-1945ನೇ ಅಪರಾಹ್ನ 6ಕ್ಕೆ ಸೇರಿದ ದ. ಕ. ಜಿಲ್ಲಾ ಭೂಮ್ಯಾಲಿಕರ ಸಂಘದ ಕಾರ್ಯಕಾರೀ ಸಮಿತಿಯ ವರದಿ

ಹಾಜರಿದ್ದವರ.—ಶ್ರೀಗಳಾದ, ರಾವ್ ಬಹದ್ದೂರು ಕೆ. ಟಿ. ಆಳ್ವ, ಎಮ್. ವೆಂಕಟೇಶ ಶೆಟ್ಟಿ, ಕೆ. ರಘುಚಂದ್ರ ಬಲ್ಲಾಳ, ಎಸ್. ಶಂಕರ ಆಳ್ವ, ಕೆ. ಶ್ಯಾಮ ಭಟ್, ಸಿ. ಮಹಾಬಲ ಹೆಗ್ಡೆ, ಕೆ. ಪಿ. ಜನಾರ್ಧನ ಪ್ರಭು, ಕೆ. ಎಸ್. ಹೆಗ್ಡೆ

ನಿರ್ಧಾರಗಳು:

ಬೇಸಾಯದ ಮೇಲಿನ ಆದಾಯ ತೆರಿಗೆ—ಬೇಸಾಯದ ಉತ್ಪತ್ತಿಯ ಮೇಲೆ ತೆರಿಗೆ ಹೇರುವ ಪ್ರಾಂತಿಕ ಸರಕಾರದ ಯೋಜನೆಯನ್ನು ಈ ಸಂಘವು ಗಂಭೀರದಿಂದ ಆಲೋಚಿಸಿದೆ, ಈ ಕೆಳಗಿನ ಕಾರಣಗಳಿಂದಾಗಿ ಅದಕ್ಕೆ ವಿರೋಧ ಸೂಚಿಸುತ್ತದೆ —

1 ಈ ಪ್ರಾಂತ್ಯದ ಬೇಸಾಯಗಾರರ, ಅದರಲ್ಲಿ ಮುಖ್ಯವಾಗಿ ಕೃಷ್ಣಾರೀ ಪ್ರದೇಶದವರ ಮೇಲೆ ಇಷ್ಟರಲ್ಲೇ ಅತಿ ಹೆಚ್ಚಿನ ತೆರಿಗೆ ಬಿದ್ದಿದೆ.

2. ಸುಮಾರು 1942ರ ವರೆಗೂ ಬೇಸಾಯಗಾರ ವರ್ಗವು ಅತಿ ಹೆಚ್ಚಿನ ಕಷ್ಟ ನಷ್ಟಗಳನ್ನನುಭವಿಸಿದೆ ಅವರಲ್ಲಿ ಹೆಚ್ಚಿನವರು ತಮ್ಮ ಆಸ್ತಿಗಳನ್ನು ಅಡವು ಹಾಕುವಂತಾಗಿದೆ. ಹಲವು ಸಂದರ್ಭಗಳ ಭೂಕಂದಾಯಕ್ಕಾಗಿ ಆಸ್ತಿಗಳು ಮಾರಲ್ಪಟ್ಟಿವೆ.

3. ಇತ್ತೀಚೆಗೆ ಭೂ ಕಂದಾಯವು ಗಣನೀಯ ಸಂಖ್ಯೆಯಲ್ಲಿ ಏರಿದೆ.

4. ಅಡಿಕೆ, ಕಾಫಿ, ಹೊಗೆಸೊಪ್ಪು, ಮುಂತಾದ ಬೇಸಾಯೋತ್ಪತ್ತಿ ಸಾಮಗ್ರಿಗಳ ಮೇಲೆ ಇತ್ತೀಚೆಗೆ ಪ್ರತ್ಯೇಕ ತೆರಿಗೆ ಹೇರಲ್ಪಟ್ಟಿದೆ.

5. ಜೀವನ ವೆಚ್ಚವು ಹೆಚ್ಚಿದೆ,

6. 'ಅಧಿಕಾಹಾರ ಬೆಳಸಿರಿ' ಚಳವಳಿಯಿಂದ ಅತಿ ಹೆಚ್ಚಿನ ಧಕ್ಕೆ ಬೀಳುವದು.

7. ಅಕ್ರಮ ಬದ್ಧ ಆರ್ಥಿಕ ಅಡಚಣೆಗಳನ್ನು [illegible].

8. ಬಜೆಟಿನಲ್ಲಿ ಉಳಿತಾಯವಿರುವ ಈ ಕಾಲದಲ್ಲಿ ಇಂತಹ ತೆರಿಗೆ ಹೇರುವದು ಅಧಿಕಪ್ರಸಂಗ

9. ಭೂಕಂದಾಯ ಪದ್ಧತಿಯನ್ನು ಪುನರ್ವಿಮರ್ಶಿಸಿ ಸುಧಾರಣೆ ಮಾಡಬೇಕಾದುದು ಅತ್ಯಗತ್ಯ. ಅದು ಶಾಸ್ತ್ರೀಯ ಆಧಾರದಿಂದ ನ್ಯಾಯವಾಗಿರಬೇಕು. ಭೂಕಂದಾಯವು ಏರುವ ಬೆಲೆಗೆ ತಗ್ಗಿ ಬೇಕೆಂಬ ನ್ಯಾಯವು ಸಾರ್ವತ್ರಿಕವಾಗಿ ಮಂಡಿಸಲ್ಪಟ್ಟಿದೆ.

ಈ ಠರಾವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುವ ಅಧಿಕಾರವನ್ನು ಕಾರ್ಯದರ್ಶಿಗೆ ಕೊಡಲಾಗಿದೆ.

ಆಹಾರ ಪರಿಸ್ಥಿತಿ—1 ಸಂಗ್ರಹಾಜ್ಞೆಯು (Procurement order) ಕಾರ್ಯಕ್ಕೆ ಜ್ಯಾರಿಯಾಗದಿರುವದು ತೋಚುತ್ತದೆ, ಉಳಿತಾಯವನ್ನು ಸರಿಯಾಗಿ ನಿರ್ಧರಿಸುವದಿಲ್ಲ ಬೆಳೆಯ ಸರಿಯಾದ ಉತ್ಪತ್ತಿಯನ್ನಾಗಲೀ, ರೈತರ ಆವಶ್ಯಕತೆಗಳನ್ನಾಗಲೀ ಗಣಿಸದೆ ಏಕಪಕ್ಷೀಯ ರಿಕ್ವಿಸಿಶನ ಗಳಾಗಿವೆ. ದಾಖಲಾಗಿದ್ದ ಆಕ್ಷೇಪಣೆಗಳ ಕುರಿತು ಯಾವ ಪರ್ಯಾಲೋಚನೆಯೂ ನಡೆದಿಲ್ಲ.

2. ಉಳಿತಾಯವೆಷ್ಟೆಂಬುದನ್ನು ಸರಿಯಾಗಿ ನಿರ್ಧರಿಸದೇನೇ ಕೊಡಲ್ಪಟ್ಟ ರಿಕ್ವಿಸಿಶನ್ ಆಜ್ಞೆಗಳಂತೆ ವರ್ತಿಸದವರ ಮೇಲೆ, ಪ್ರೊಸಿಕ್ಯೂಶನ್ ಹೂಡುವದರಿಂದ ದೊಡ್ಡ ಕಷ್ಟವೊದಗುವುದೆಂದು ಈ ಸಂಘವು ಅಧಿಕಾರಿಗಳೊಡನೆ ಒತ್ತಿ ಹೇಳುತ್ತದೆ.

3. ಮಿತಿಮೀರಿ ರಿಕ್ವಿಶಿಶನ್ ಮಾಡಿರುವದರ ಪರಿಣಾಮವಾಗಿ ಹಳ್ಳೀ ವಲಯಗಳಲ್ಲಿ ಬಹಳವಾಗಿ ಧಾನ್ಯಾಭಾವವಿದೆ ಮಳೆಗಾಲದಲ್ಲಂತೂ ಜನರು ಉಪವಾಸ ಬೀಳುವ ಸಂಭವ ಕಾಣುತ್ತದೆ

4 ಅಕ್ಕೀ ಅಭಾವದ ದೆಸೆಯಿಂದಾಗಿ ಒಕ್ಕಲು ಬೇಸಾಯಗಾರರು ಸಾಗುವಳಿಯನ್ನೇ ಬಿಟ್ಟು, ಕೂಲಿ ಕೆಲಸ ಮಾಡಿ ದಿನ ತೆಗೆಯಲು ಪೇಟೆಗೆ ಹೋಗಬಹುದೆಂಬ ಭಯವಿದ್ದಿದೆ ಇದರಿಂದಾಗಿ ಸಾಗುವಳಿ ಭೂಮಿಗಳ ಗಣನೀಯ ಭಾಗವು ಬಂಜರು ಬೀಳುವ ಸಂಭವವಿದೆ ಇಂತಹ ಹಲವು ಘಟನೆಗಳು ಇಷ್ಟರಲ್ಲೇ ನಡೆದಿರುವದು ನಮ್ಮ ತಿಳುವಳಿಕೆಗೆ ಬಂದಿದೆ, ಅಂಥವರ ತಮ್ಮ ಬೀಜದ ಧಾನ್ಯಗಳನ್ನೂ ಉಪಯೋಗಿಸಿ, ಮುಂದಿನ ಬೆಳೆಗೆ ಅತಿ ದೊಡ್ಡ ಗಂಡಾಂತರವುಂಟುಮಾಡುವ ಸಂಭವವೂ ಇದೆ.

5. ಉಳಿತಾಯವಿಲ್ಲದ ಒಕ್ಕಲುಗಳ ಮೇಲೆ ಅವರು ತೆರಬೇಕಾದ ಗೇಣಿಯ ಅಂಶವನ್ನು ಸಲ್ಲಿಸಬೇಕೆಂಬ ಒತ್ತಾಯ ಹಾಕಬಾರದೆಂದು ವಿಜ್ಞಾಪಿಸಲಾಗುತ್ತದೆ.

6. ಮಿತಿಮೀರಿ ರಿಕ್ವಿಸಿಶನ್ ಮಾಡಿದ್ದರೂ ಅಕ್ಕಿ ದಾಸ್ತಾನು ಮುಂದಿನ ದಶಂಬರದ ವರೆಗೂ ಬೇಕಾಗುವದಕ್ಕಿಂತ ಎಷ್ಟೋ ಕಡಿಮೆಯದೆಯೆಂದು ಈ ಸಂಘವು ತಿಳಿಯುತ್ತದೆ ಆದ್ದರಿಂದ ಈ ಜಿಲ್ಲೆಗೆ ಬೇಕಾಗುವಷ್ಟು ಧಾನ್ಯವನ್ನು ಆಮದು ಮಾಡುವ ವ್ಯವಸ್ಥೆ ಮಾಡಬೇಕೆಂದು ಈ ಸಂಘವು ಸರಕಾರವನ್ನು ಒತ್ತಾಯದೊಡನೆ ಕೇಳಿಕೊಳ್ಳುತ್ತದೆ.

ಎಗ್ರಿಕಲ್ಚರಲ್ ಡೈರೆಕ್ಟರರ ಸಲಹಾಕಾರರು—ಎಗ್ರಿಕಲ್ಚರಲ್ ಡೈರೆಕ್ಟರರ ತಾ 11-4-45ರ ಪತ್ರವನ್ನೂ, ಸರ್ಕ್ಯುಲರನ್ನೂ ಓದಲಾಯಿತು. ಉತ್ತರರೂಪವಾಗಿ ಈ ಕೆಳಗಿನವರ ಸಮಿತಿಯನ್ನು ರಚಿಸಲಾಗುತ್ತದೆ. ಶ್ರೀ. ಎ. ಬಿ. ಶೆಟ್ಟಿ, ರಾವ್ ಬಹದ್ದೂರು ಕೆ. ಟಿ. ಆಳ್ವ, ಶ್ರೀ. ಕೆ. ಬಿ. ಜಿ. ಹೆಗ್ಡೆ, ಶ್ರೀ. ಎಸ್. ಶಂಕರ ಆಳ್ವ, ಶ್ರೀ ಕೆ. ಆರ್. ಕಾರಂತ, ಶ್ರೀ. ಎನ್. ರಾವ ರಾವ್, ಶ್ರೀ. ಎಮ್. ವೆಂಕಟೇಶ ಶೆಟ್ಟಿ. ಕೊನೆಯವರು ಈ ಸಮಿತಿಯ ಕನ್ವೀನರಾಗಿರತಕ್ಕದ್ದು

ಕೆ. ಎಸ್. ಹೆಗ್ಡೆ,
ಗೌ. ಕಾರ್ಯದರ್ಶಿ.

ದಕ್ಷಿಣ ಕನ್ನಡ,

ಶಿರ್ವ—ದ. ಕ ಜಿಲ್ಲಾ, ಶಿರ್ವ ಬಂಟರ ಯುವಕ ಸಾಹಸದ ವಿದ್ಯಾವರ್ಧಕ ಸಂಘ, ಶಿರ್ವ (ರಿಜಿಸ್ಟರ್ಡ್) ಇದರ ಮಹಾ ಸಭೆಯು ಸಂಘದ ಕಟ್ಟಡದಲ್ಲಿ ತಾ 22-4 45ರಲ್ಲಿ ಶ್ರೀ ಕುತ್ಯಾರು ಪಟೇಲ್ ಶ್ರೀ ಯಲ್ಲಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ನೆರವೇರಿತು 31 3 45ಕ್ಕೆ ಅಂತ್ಯವಾದ ವರುಷದ ವರದಿಯೂ ಬರುವ ವರುಷದ ಬಜೆಟೂ ಪಾಸಾಯಿತು ಬರುವ ವರುಷ ಕನಿಷ್ಟ ಪಕ್ಷ ರೂ ೩೦,೦೦೦/ ಇದರ ಸಂಘಕ್ಕೆ ಜಮಾಮಾಡಬೇಕಾಗಿ ನಿರ್ಣಯಿಸಲಾಯಿತು

ಆ ಬಳಿಕ ಸರ್ವಾನುಮತದಿಂದ ಈ ಕೆಳಗಿನ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಯಿತು

ಶ್ರೀಗಳಾದ ಕೆ ಮುದ್ದಣ್ಣ ಶೆಟ್ಟಿ ಓವರ್ಸಿಯರ್ (ಅಧ್ಯಕ್ಷ), ಕೆ ಸುಂದರ ಶೆಟ್ಟಿ ಕಳತ್ತೂರು ಪಟೇಲ್ ಉಪಾಧ್ಯಕ್ಷ ಕೆ ಯಲ್ಲಪ್ಪ ಶೆಟ್ಟಿ ಕುತ್ಯಾರು ಪಟೇಲ್ ಕೋಶಾಧಿಕಾರಿ ಯಸ್ ಮೋಹನ ಶೆಟ್ಟಿ ಕಾರ್ಯದರ್ಶಿ, ಕೆ ಸುಬ್ಬಣ್ಣ ಶೆಟ್ಟಿ ಕುತ್ಯಾರು ಬೀಡು, ಕೆ ತಿಮ್ಮಪ್ಪ ಶೆಟ್ಟಿ ಸಾಹುಕಾರ್ ಯಸ್. ಕೆ ಸಿದ್ದು ಶೆಟ್ಟಿ ಸಾಹುಕಾರ್, ಕೆ. ರಘುರಾಮ ಹೆಗ್ಡೆ ಕಂಟ್ರಾಕ್ಟರ್, ಯು ನಾರಾಯಣ ಹೆಗ್ಡೆ [illegible], [illegible] ಶೆಟ್ಟಿ [illegible], ಕೆ ನಾರಾಯಣ ಹೆಗ್ಡೆ ಕೊಡು, ಯಸ್ [illegible] ಹೆಗ್ಡೆ ಶಿರ್ವ ನಡಿಬೆಟ್ಟು, [illegible] ಹೆಗ್ಡೆ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್, ಕೆ ನಾಗಪ್ಪ ಶೆಟ್ಟಿ ಕುತ್ಯಾರು, [illegible] ಸಂಜೀವ ಶೆಟ್ಟಿ ಮುನ್ನಬೆಟ್ಟು [illegible] ಯಲ್ಲಪ್ಪ ಶೆಟ್ಟಿ [illegible] ಪಟೇಲ್ ಮುಂತಾದವರುಗಳು

ಅಧ್ಯಕ್ಷರು ಸಂದರ್ಭೋಚಿತ ಭಾಷಣಮಾಡುತ್ತಾ ಸಂಘದ ಅಭ್ಯುದಯಕ್ಕಾಗಿ ಎಲ್ಲರೂ ದುಡಿಯಬೇಕೆಂದರು. ಸಂಘದ ಅಧ್ಯಕ್ಷರಾದ ಶ್ರೀ ಕೆ ಸುಂದರ ಶೆಟ್ಟಿ [illegible] ರವರು ನಡೆದ ಬಳಿಕ, ಸಭೆಯು ವಂದನಾರ್ಪಣೆಯೊಂದಿಗೆ ಕೊನೆಗೊಂಡಿತು

ಕುಂದಾಪುರ—ತಾ 21 4 45ರಂದು ಸಾಯಂ 6 30ಕ್ಕೆ ಕುಂದಾಪುರದ ಎಡ್ವರ್ಡ್ ಮೆಮೋರಿಯಲ್ ಹಾಲಿನಲ್ಲಿ ವಕೀಲ್ ಶ್ರೀ ವೆಂಕಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತು. ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿ ಶ್ರೀ. [illegible] ಯವರು ಏಕೀಕರಣದ ಕುರಿತು [illegible] ಪ್ರತ್ಯೇಕ ಪ್ರಾಂತ [illegible] ಸರ್ವಾನುಮತದಿಂದ ಅಂಗೀಕರಿಸಿತು [illegible] ಅಖಿಲ ಕರ್ನಾಟಕ ಏಕೀಕರಣ ಸಂಘದ ಅಂಗವಾಗಿ ಈ ಕೆಳಗಣ ಒಂದು ತಾಲೂಕು ಸಮಿತಿಯು ಆರಿಸಲ್ಪಟ್ಟಿತು —

ಅಧ್ಯಕ್ಷ: ಶ್ರೀ ಕೆ ವೆಂಕಪ್ಪ ಶೆಟ್ರು. ಉಪಾಧ್ಯಕ್ಷ: ಶ್ರೀ ಕೋ. ವಿ. ಕಾರಂತರು ಜತೆ ಕಾರ್ಯದರ್ಶಿಗಳು: ಶ್ರೀಗಳಾದ ವಿ ಶ್ರೀನಿವಾಸ ಶೆಟ್ರು ಮತ್ತು ಆ ನಾರಾಯಣರಾಯರು ಕೋಶಾಧಿಕಾರಿ ಶ್ರೀ. ಜಿ ಸಂಜೀವರಾಯರು ಸದಸ್ಯರು. ಶ್ರೀಗಳಾದ ಎಮ್ ಗೋಪಾಲ ಕಾಮತ್, ಕೃಷ್ಣರಾಯ ಕೊಡ್ಗಿ, ಪಿ ಶಿವರಾಮ ಶೆಟ್ಟಿ. ವಿ ಮಹಾಬಲ ಹೊಳ್ಳ, ನಾರಾಯಣಪ್ಪ ಉರಾಳ, ಲಕ್ಷ್ಮೀನಾರಾಯಣ ಕಾಮತ್ ಕೆ ಸಿ ಅಡಿಗ, ನರಸಿಂಹ ಕಾಮತ್, ಮತ್ತು ಸ್ಯ. ಮಂಜಯ್ಯ ಶೆಟ್ಟಿ

ಮೂಲ್ಕಿ—ಜಿಲ್ಲಾ ಸಮಾಜ ಸೇವಾ ಸಂಘದ ವಿದ್ಯಾರ್ಥಿ ವೇತನ ನಿಧಿ ಸ್ಥಾಪನಾ ಕಾರ್ಯವು ಭಜನಾ ಮಂಗಲವು ಸಾಹುಕಾರ ಶ್ರೀ ವಿ ಗೋಕುಲದಾಸ ಬಿ ಎ ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಶ್ರೀ ಯಂ ಆರ್ ಪೂಂಜರವರು ವಿದ್ಯಾರ್ಥಿವೇತನ ನಿಧಿಯ ಅವಶ್ಯಕತೆಯನ್ನೂ ಕೃಷಿಕರ ಅಭಿವೃದ್ಧಿಯ ಕುರಿತು ಸರಕಾರದ ಯೋಜನೆಯನ್ನೂ ವಿವರಿಸಿದ ನಂತರ ಶ್ರೀ ಯಂ ಕ [illegible] ಮಾಸ್ತರರು ನೂತನಾದಿದ ಮೇಲಾಧ್ಯಕ್ಷರು [illegible] ಕುರಿತು ತನ್ನ ಸಲಹೆ ಮತ್ತು [illegible] ಭಾಷಣ ಮಾಡಿ ನಿಧಿ ಸ್ಥಾಪನೆಗೆ ತಾನು ರೂಪಾಯಿ 151-0-0 ದಾನ ಮಾಡಲು ನೆರೆದ ಸಭಿಕರಲ್ಲಿ ಶ್ರೀ ಯಂ ಆರ್ ಪೂಂಜರು, ನಾರಾಯಣ ಶೆಟ್ರು, [illegible] ನಾಗಪ್ಪನವರು, ಸೋಮಪ್ಪನವರು ಚೆನ್ನಪ್ಪನವರೇ ಮೊದಲಾದ ಮಹನೀಯರು ತಮ್ಮ ತಮ್ಮ ಸಹಾಯವನ್ನಿತ್ತರು

ಚಿಕ್ಕಮಗಳೂರು—ಜಿಲ್ಲೆಗೆ ಮಾದರಿಯಾಗಿ ನಮೂದಿಸಿದ ಶ್ರೀಮಂದುಪಿಯ ಶಲಿಗ್ರಾಮದ ಶ್ರೀನಿವಾಸ ದೇವರ ಶ್ರೀ ನಾಗಣ್ಣನವರ ಛತ್ರದಲ್ಲಿ ಕಳೆದ 8, 10 ದಿನಗಳಿಂದ ಶ್ರೀರಾಮೋತ್ಸವವನ್ನು ಜರಗಿಸಿ ಮಂಗಳಗೊಳಿಸಿದರು ದಿನಾಲೂ ಪೂಜಾ ಪಾರಾಯಣ ಪುರಾಣ ಉಪನ್ಯಾಸ ಹರಿಕಥೆ ಮುಂತಾದ ಭಗವತ್ಸೇವೆಗಳು ಯಥೋಚಿತವಾಗಿ ನಡೆದುವೇ [illegible] ಅನಂತ ಉಪಾಧ್ಯಾಯರ ವರ ವೇದ ವಿವರ ಉಪನ್ಯಾಸಗಳು ಬಹು ವಿಚಾರ ಪರಿಪೂರ್ಣವಾಗಿದ್ದವು ಆಸ್ಥಾನ ವಿದ್ವಾಂಸರಾದ ಲಕ್ಷ್ಮೀನಾರಾಯಣ ಆಚಾರ್ಯರ [illegible] ಶ್ರೀನಿವಾಸ ಆಚಾರ್ಯರ ಗುರುಮಂದಿರ ಶ್ರೀನಿವಾಸಾಚಾರ್ಯರು ಮತ್ತು ವೇ ಭಾ ನಾರಾಯಣ ಆಚಾರ್ಯ ಮುಂತಾದವರ ಕಾರ್ಯಕ್ರಮಗಳು ಸಮಾಜ [illegible] ರ ವರ್ತಕರಿಗೂ ಬಹು ರಸಿಕರಾಗಿ ನನ್ನ [illegible] ಸಹಜರು, ಅಧಿಕಾರಿಗಳು ಪ್ರತಿ [illegible] ಉತ್ಸವದಲ್ಲಿ ಸಮ್ಮಿಳಿತರಾಗಿದ್ದರು.

THE
VIJAYA BANK LTD.
Head Office. MANGALORE.

PROGRESS REPORT

	1940	1942	1944
Paid up capital	50,000	91 000	1,96,000
Deposits	2,67,000	5,90,000	17,70,000
Profits	6,000	12,000	30,000

correct to 1000

Branches all over the District and in Bombay city All kinds of Banking facilities available.

A branch of the Bank will be opened at BYNDOR shortly.

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ 1908)
1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮ ಶ್ರ
ಅಕ್ಷಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಧಾನ ಮುಖ್ಯ ಏಜಂಟರು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ, ವಿಶ್ವಾಸ ಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಆದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ
ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ತ್ರಿವೇಂದ್ರಂ, ಉಡುಪಿ.

ಯುದ್ಧಾಪರಾಧಿಗಳು.

೧ನೇ ಹಿಟ್ಲರ್

ಲೇಖಕ- ಡಿ. ಇ. ಮೋರಿಂಡೆ,
'ಡೀ ವ್ಹೆಲ್ಟ್‌ವೋಚ್', ಪತ್ರಿಕೆಯ ಸಹಸಂಪಾದಕ.

ಲೋಕಕ್ಕೆ [illegible] ದುರದೃಷ್ಟ [illegible] ನಾಜೀ ಕರಾಯಿ [illegible] ಯುದ್ಧಾಪರಾಧಿ [illegible] ಹಿಟ್ಲರ್, ಹಿಮ್ಲರ [illegible] ಅನುಕ್ರಮವಾಗಿ [illegible] ಸಹ ಸಂಪಾದಕರು [illegible] ತಯಾರಿಸಿದ್ದಾರೆ [illegible] 'ಫ್ರ್ಯಾಂಕ್‌ಫರ್ಟ್' [illegible] ಬೇಕು [illegible] ಕೆಂಪು ಸೇನೆಯು [illegible] ಪ್ರಕಟವಾಗಿದೆ [illegible] ಈ 'ಜಬ್‌ಮಂಡಿ' [illegible] ಅವಕಾಶ ಕೊಡದ [illegible] ಹೊರಗಾದರಲ್ಲಿ
ಸಂ. ಸ

1939ರಲ್ಲಿ ಹಿಟ್ಲರನೊಡನೆ ಪ್ರಥಮತಃ ಸಂಭಾಷಿಸಿ ಬಂದ ಒಬ್ಬ ಮನುಷ್ಯ ನನ್ನೊಡನೆ ಹೇಳಿದ: "ಒಬ್ಬ ಬರ್ಬರ ಪುಂಡನನ್ನು ಭೇಟಿಯಾಗ ವೆನೆಂಬ ನಿರೀಕ್ಷೆಯೊಡನೆ ಹೋದ ನಾನು ಯೋಗ್ಯ ನಾಗರಿಕನೊಬ್ಬನನ್ನು ಕಂಡೆ". ನಾಜೀ ಆಳ್ವಿಕೆಯ ಆದಿ ಭಾಗದಲ್ಲಿ ಈ ಮನುಷ್ಯನಂತೆಯೇ ಹಲವರು ವಂಚಿಸಲ್ಪಟ್ಟಿದ್ದರು. ತಾನು ಬಗಲಿಗೆ ಹಾಕಿಕೊಳ್ಳಬೇಕೆಂದು ಒಗೆದವರ ಮನ ಮೆಚ್ಚಿಸಬಲ್ಲ ಒಂದು ಒಲವಿನ ವರ್ತನೆಯಲ್ಲಿ ಹಿಟ್ಲರ್ ಅಜೇಯನಿದ್ದಾನೆ. ಕಪಟದ ಮುಪ್ಪಿಗೆ ಆತ ಹುಟ್ಟು ಕಲಾವಿದ

ಅವನ ಗುಣ ನಡತೆಗಳ ಕುರಿತಿದ್ದ ತಪ್ಪಭಿಪ್ರಾಯಗಳನ್ನೆಲ್ಲಾ ಯುದ್ಧವು ಚದರಿಸಿದೆ. ಇದು ಹಿಟ್ಲರನ ಯುದ್ಧವೆಂದು ಕರೆಯಲ್ಪಡುತ್ತಿದೆ—ನಿಜಕ್ಕೂ ಹಾಗೆಯೇ. 'ಸರಿ ಯಾವುದು-ಪುರಾಣದ ಆಜ್ಞೆಗಳೇ' ಎಂಬುದನ್ನು ಜರ್ಮನ್ ತತ್ವ ಮತ್ತು ಜರ್ಮನ್ ರಾಷ್ಟ್ರದ ಜೀವನ ಪಥದ ಹಿಂಭಾಗದ ಅಮೋಘ ಆಚಾರನಿಷ್ಠೆಯಾಗಿ ಕಳೆದ 12 ವರುಷಗಳಿಂದ ಬೋಧಿಸಿದವನೆಂದರೆ ಹಿಟ್ಲರ್. ಅವನಾರು? ಯಾರ ಬಯಕೆ ಮತ್ತು ಭಾವನೆಗಳೇ ಇಡೀ ಜರ್ಮನ್ ರಾಷ್ಟ್ರದ ಕಾನೂನುಗಳಾಗಿರುವವೋ ಆ ಮನುಷ್ಯ ಹಿಟ್ಲರ್ ಯಾರು? ಅವ-ಅಡೋಲ್ಫ್ ಹಿಟ್ಲರ್-ಜರ್ಮನನಲ್ಲ. ಅವನು ಸೈನ್ಯ ಶಕ್ತಿಯಿಂದ ಪ್ರಥಮಾಕ್ರಮಣ ನಡೆಸಿದ್ದ ಆಸ್ಟ್ರಿಯವೇ ಅವನ ಹುಟ್ಟು ಭೂಮಿ. ತನಗೆ ಬೇಕಾಗಿದ್ದ ವಿಜಯ ಕಂಕಣವನ್ನು ಧರಿಸಲವಕಾಶ ಕೊಡದ ತನ್ನ ಜನ್ಮ ಭೂಮಿಯ ಮೇಲೆ ಹಿಟ್ಲರನು ಮಾಡಿದ ಪ್ರತೀಕಾರವದು. ಆತ ಕೆಳ ದರ್ಜೆಯ ಒಬ್ಬ ಆಫೀಸರನ ಮಗ. ಅವನ ಹೆಸರು ಕೂಡಾ ಉಚ್ಚಾರ ವಿಕಾರತೆಯದಾದ್ದರಿಂದ ಇವನದನ್ನು ಬದಲಾಯಿಸಿದ್ದ. ಈ ಮನುಷ್ಯ ತನ್ನ ಶಾಲಾ ಪ್ರಾಯದಲ್ಲಿಯೇ ಕೃತಘ್ನ ಮತ್ತು ಅಸಾಮಾನ್ಯ ಕಠೋರನಾಗಿದ್ದ.

ತಾನೊಬ್ಬ ಹುಟ್ಟು ಚಿತ್ರಕಲಾವಿದನೆಂಬ ಅವನ ಭಾವನೆಯಿದ್ದುದರಿಂದ ವಿಯನ್ನದ ಕಲಾ ಹೈಸ್ಕೂಲಿಗೆ ಸೇರಲು ಪ್ರಯತ್ನಿಸಿದ. ಅದು ನಿರಾಕರಿಸಲ್ಪಟ್ಟಿತು. ಇವನಂತೂ ಸ್ವಭಾವತಃ ಸೋಮಾರಿ, ಹೀಗಾಗಿ, ಆಗಾಗ ಏನಾದರೂ ಹೀನ ಕೆಲಸವಮಾಡುತ್ತಾ ಹೊಟ್ಟೆ ಹೊರಕೊಳ್ಳುತ್ತಿದ್ದ. ಪ್ರಥಮ ಜಾಗತಿಕ ಯುದ್ಧಾರಂಭದ ಕೆಲವೇ ವರುಷಗಳ ಮೊದಲು ಜೀವನನಿರ್ವಹಣಕ್ಕಾಗಿ ಜರ್ಮನಿಗೆ ಬಂದ. ಮ್ಯೂನಿಚಿನಲ್ಲಿ ನೆಲೆನಿಂತು, ಕರೆದವರ ಮನೆಯ ಪೈಂಟಿಂಗ್ ಕೆಲಸ ಮತ್ತು ಎಲ್ಲಿಲ್ಲದ ನಿರರ್ಥಕ ಕರಪತ್ರಗಳನ್ನು ಮಾಡುತ್ತಾ ಜೀವಿಸಹತ್ತಿದ.

× × ×

1914ನೇ ಯುದ್ಧದಲ್ಲಿ ಜರ್ಮನ್ ಸೇನೆಗೆ ಸೇರಿದ. ಅವನ ಜೀವನ ಚರಿತ್ರೆ ಬರೆದವರು ಕಲ್ಪಿಸಿರುವ 'ಹಿಟ್ಲರನ ಅದ್ಭುತ ಯುದ್ಧ ಸಾಹಸಗಳ' ಕುರಿತು ಏನೊಂದೂ ತಿಳಿದುಬಂದಿಲ್ಲ. ಆ ಯುದ್ಧಾಂತ್ಯದಲ್ಲಿ ಆತ ಅಪಸ್ಮಾರ ರೋಗಕ್ಕೀಡಾದ. ಆಗಲೇ ಆತನಿಗೆ 'ಸರಿಯಾದ ಕಾರ್ಯಕ್ರಮ'ದ ಬೋಧೆ ಹೊಳೆಯಿತು. ಮ್ಯೂನಿಚಿನಲ್ಲಿರುವ ರಾಜಕೀಯ ಸಂಸ್ಥೆಗಳ ಮೇಲೆ ಗುಪ್ತ ಕಣ್ಣಿಡುವ 'ಸೇನೆಯ ಚಾತುರ್ಯ ವಿಭಾಗ'ದಲ್ಲೊಂದು ಉದ್ಯೋಗ ದೊರಕಿಸಿಕೊಳ್ಳುವ ಮೂಲಕ ಅವನ ಇಂದಿನ ಅವತಾರದ ಆರಂಭ. ಈ ಸ್ಥಾನಬಲದಿಂದ ಅಲ್ಲಿಯ ತಲೆ ಹೋಕರ ಸಣ್ಣ ಗುಂಪೊಂದರೊಡನೆ ಅವನ ಸಂಬಂಧ ನಿರ್ಮಾಣ. ಅಲ್ಪಾವಧಿಯಲ್ಲೇ ಅವನದರ ನಾಯಕನಾದ; ಆ ಗುಂಪು ನಾಜೀ ಪಕ್ಷವಾಗಿ ಮಾರ್ಪಟ್ಟಿತು. ಸರಿ ಬರ್ಬರ ಶಕ್ತಿಯ ಬಲದಿಂದ ಹಿಟ್ಲರನು ಮ್ಯೂನಿಚಿನಲ್ಲೆಲ್ಲಾ ಪ್ರತಿಷ್ಠಾವಂತನಾದ. ಅವನ ಬಲವೆಷ್ಟು ಹೆಚ್ಚಿತೆಂದರೆ, ಇಡೀ ಜರ್ಮನಿಯ ಅಧಿಕಾರ ಕಸಕೊಳ್ಳುವ ಇಚ್ಛೆಯಿಂದ 1923ರಲ್ಲಿ ಅವನೊಂದು ದಂಗೆಯನ್ನೆಬ್ಬಿಸಿದ. ಆ ಪ್ರಯತ್ನ ಪರಾಭವಗೊಂಡಿತು; ನಾಜೀ ಪಕ್ಷ ದಿಕ್ಕಾಪಾಲಾಯಿತು; ಹಿಟ್ಲರ್ ಕೆಲವು ತಿಂಗಳ ವರೆಗೆ ಕೋಟೆಯೊಂದರಲ್ಲಿ ಕೈದಿಯಾಗಿರಬೇಕಾಯಿತು. ಬಿಡುಗಡೆ ಹೊಂದಿದೊಡನೆ ತಡ, ಅವ ತನ್ನ ಪಕ್ಷದ ಪುನಸ್ಸಂಘಟನೆಗಾರಂಭಿಸಿದ. ಸರ್ವವಿಧದ ತಂಟೆತಕರಾರು, ಹೇಯ ವರ್ತನೆ, ಲಂಚವಂಚನೆ ಮತ್ತು ಹಿಂಸೆಯ ಬಲದಿಂದ 1928ರ ನಂತರ ಆತ ನಾಲ್ಕೈದು ಸಾಮೂಹಿಕ ಚಳವಳ ಹೂಡಲು ಸಮರ್ಥನಾದ. ಲಂಚವಂಚನೆಗಳನ್ನಾಧರಿಸಿಯೇ 1933ರಲ್ಲಿ ಅಧಿಕಾರಕ್ಕೆ ಬಂದ.

× × ×

ಅವಶ್ಯಾನುಗುಣವಾಗಿ ಜರ್ಮನಿ ಹಿಟ್ಲರನಿಂದ ರೂಪಾಂತರಗೊಂಡಿತು. ಕಾಯಿದೇ ಕ್ರಮಗಳ ಬದಲಿಗೆ ನಿರಂಕುಶಾಧಿಕಾರ ಜಬ್ಬರಿ—'ಜನತಾ ರಾಜ್ಯ' ಎಂಬ ಹೆಸರಿನಿಂದ ಕೈದಿ ಸಂಗ್ರಹ ಶಿಬಿರಗಳಿಗೆ ಜರ್ಮನಿಯ ಶಾಶ್ವತ ಸಂಸ್ಥೆಯ ಸ್ಥಾನ—ಮತ್ತು ಸರ್ವ ತರಗತಿಯ ಸಾಮಾಜಿಕರ ಮಧ್ಯದಲ್ಲೂ ಕೊಲೆಗಾರರ ಸಂಸ್ಥಾಪನೆ! ಹೀಗೆಲ್ಲಾ ಮಾನವೀಯತೆಯ ನಿರ್ನಾಮವೇತಕ್ಕಾಗಿ?—ಜರ್ಮನಿಯನ್ನು ಯುದ್ಧಕ್ಕೆ ತಯಾರಿಸಿ ಎಬ್ಬಿಸುವದಕ್ಕಾಗಿ. ಮಿಲಿಟರಿ ಆವಶ್ಯಕತೆಗಾಗಿ ಬಯಸಿದುದನ್ನು ಬಾಚಿಕೊಳ್ಳಬಲ್ಲ, ಊಹೆಗೂ ಮಿಕ್ಕಿದ ಸರ್ವಾಧಿಕಾರಿಯನ್ನಾಗಿ ಸೇನೆಯನ್ನು ಹಿಟ್ಲರ್ ಮೇಲೇರಿಸಿದ್ದಾನೆ. ಮಾನವೀಯ ಸ್ಮರಣಾಶಕ್ತಿಗೆ ನಿಲುಕುವ ಸೇನಾಶಿಬಿರಗಳ ಪೈಕಿ ನಾಜೀ ಜರ್ಮನಿಯೇ ಅತಿ ದೊಡ್ಡ ಸೈನ್ಯ ಶಿಬಿರವಾಗುವಂತೆ ಮಾರ್ಪಡಿಸಿದ್ದಾನೆ. ಇಷ್ಟು ದೊಡ್ಡ ಪರಿಮಾಣದ ತಯಾರಿಯು ಸ್ವರಕ್ಷಣೋದ್ದೇಶದಿಂದ—ಯಾರೂ ಆಕ್ರಮಿಸಲಿಚ್ಛಿಸದ ಒಂದು ದೇಶದ ರಕ್ಷಣೋದ್ದೇಶದಿಂದ—ಎಂದರೆ ನಂಬುವವರಿಲ್ಲ.

× × ×

ಪೋಲೆಂಡಾಕ್ರಮಣವಾರಂಭಿಸುವ ಒಂದು ವಾರಕ್ಕೆ ಮೊದಲು ಹಿಟ್ಲರ್ ಜರ್ಮ[illegible]ನಿಗಳನ್ನೆಲ್ಲಾ ಸೇರಿಸಿ, ನಿರ್ದಯೆಯಿಂದ ವಿಜಯ ಗಳಿಸುವ ತನ್ನ ಯೋಜನೆಗಳ ಗುಟ್ಟನ್ನೆಲ್ಲಾ ಅವರ ಮುಂದಿಟ್ಟ. ಯುದ್ಧಾಪರಾಧದ ಹೊಣೆಯನ್ನು ಯಾರಾದರೊಬ್ಬನ ಮೇಲೆ ಹಾಕಬೇಕಾದರೆ, ಅದು ಇವನ ಮೇಲೆ ಹಾಕಬೇಕಾಗಿ [illegible] ಹೊಣೆ—[illegible]—ಮುಖ್ಯವಾಗಿ ಹಿಟ್ಲರನದಾಗಿರುವಂತೆಯೇ, ಜರ್ಮನರಿಂದಾಗಿರುವ ನಾಗರಿಕರ ಸಾಮೂಹಿಕ ಕೊಲೆಗಳು, ಯುದ್ಧಾರಂಭದ ಮೊದಲೇ ದೊಡ್ಡ ನಗರಗಳ ಮೇಲೆ ಮಾಡಿರುವ ಕಠೋರ ಬಾಂಬು ಧಾಳಿಗಳ ಹೊಣೆಯೂ ಅವನದೇ. ನೋರ್ವೆ, ಡೆನ್ಮಾರ್ಕ್, ಹೊಲ್ಲೆಂಡು ಮತ್ತು ಬೆಲ್ಜಿಯಮುಗಳೊಡನಿದ್ದ ಮೈತ್ರಿ ಕರಾರುಗಳನ್ನು, ಆ ಮೊದಲಿನ ಒಪ್ಪಂದಗಳನ್ನು ಮುರಿದಂತೆಯೇ ಮುರಿದುಕೊಂಡು, ಶಾಂತಿ ಪ್ರೇಮಿ ರಾಷ್ಟ್ರಗಳನ್ನಾಕ್ರಮಿಸುವ ಹಂಚಿಕೆ ತಯಾರಿಸಿದವನು ಹಿಟ್ಲರ್. 1941ನೇ ದಶಂಬರದ ವರೆಗೆ ಸೈನ್ಯ ಚಾಲಕತ್ವ ವಹಿಸದೆ ಅವ ದೂರವಿದ್ದ. ಆದರೆ ಅನಂತರ ಮುಖ್ಯ ಸೇನಾನಿತ್ವ ವಹಿಸಿದ್ದಾನೆ; ಹಾಗಾಗಿ ಸೇನೆಯು ಮಾಡಿದ್ದಕ್ಕೆಲ್ಲಾ ಹೊಣೆಗಾರನಾಗಿದ್ದಾನೆ. ಆಕ್ರಮಿತ ರಾಷ್ಟ್ರಗಳ—ಸುಲಿಗೆ—ಬೇಕಾಬಿಟ್ಟಿ ಶೀಘ್ರವಾಗಿ ಆ ರಾಷ್ಟ್ರಗಳ [illegible] ಆದಲಿತೆಗಳ ಅಪಹಾರ—ಗುಲಾಮ ವ್ಯಾಪಾರದ ಪುನರುತ್ಥಾನ—ಹಳ್ಳಿಗಳ ಧ್ವಂಸ—ಇಡೀ ಯುರೋಪಿನ ಮಿಲಿಯಗಟ್ಟಳೆ ಮಂದಿಯನ್ನು ಯುದ್ಧ ಕೈದಿಗಳ ಗಿರೋ, ಅನಪೇಕ್ಷಿತ ಮನುಷ್ಯರ ಗಿರೋ ಬಂಧಿಸಿಟ್ಟು ಸಾಮೂಹಿಕ ಕೊಲೆ—ಇತ್ಯಾದಿ ಇತ್ಯಾದಿಗಳೆಲ್ಲಾ ಹಿಟ್ಲರನ ಹೆಸರು ಕೂಡಿದೆ. ಯಾರ ಆಜ್ಞೆಗಳು ಪೂರ್ಣಾಧಿಕಾರ ಬದ್ಧವಾಗಿವೆಯೋ ಆತ- ಯಾರು. ನಾಗರಿಕ ಮತ್ತು ಸೈನಿಕಾಧಿಕಾರಗಳನ್ನು ತನ್ನ ವ್ಯಕ್ತಿತ್ವದಲ್ಲೇ ಮೂರ್ತೀಭವಿಸಿಕೊಂಡಿರುವನೋ ಅವ—ಯಾರು 'ಜರ್ಮನ್ ದೇವರ' ಪಾತ್ರಧಾರಿಯೋ ಆ ಮನುಷ್ಯ, ತನ್ನ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲಾರ; ತಪ್ಪಿಸಕೂಡದು.



ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ. 8—10—44ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ

The Pangal Nayak Bank Limited.

(Incorporated in 1920)

Registered Office · Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well wishers

Terms of business may be had from any of our Offices.

Date 25th April 1945

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ದೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ. ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ತೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ತೊಟ್ಟು ೬ವರೆಗೆ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಓ। ಜಿ। ಆಚಾರ್ಸ್ ಫಾರ್ಮಸಿ, ಡಾ। ಕೆ। ಶೀನಗಿರಿ ಶೈ, L. I. M; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ **ಖಂಡಿತವಾಗಿ** ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು **ತಕ್ಕೊಳ್ಳ**ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ **ಔಷಧದ ಕಿಮ್ಮತ್ತು** ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಟರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು **ಹೋಗಲಾಡಿಸಿ** ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಂತಹ ಔಷಧಿ ರವಾನಿಸಲಾಗುವದು,

ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦—೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪಿತ.

ಅಂತರಂಗ
ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೩೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. [Vol. 24 No. 35

ಉಡುಪಿ • 10—5—1945 • ಮಂಗಳೂರು.

ಅಮೃತಾಂಜನ
ತಲೆನೋವು, ಶಿರೋ ವೇದನೆ, ಉಳುಕು, ಕೆಮ್ಮು, ಛಳಿ, ಹಲ್ಲು ವೇದನೆಗೆ ಗೂ ಎದೆನೋವು, ಗಾಯಗಳು ಮಾತು ...
REGD.
ಅಮೃತಾಂಜನ ಲಿಮಿಟೆಡ್,
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them" Vide Order No. 1786-ECJ 44/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required Vide Memorandum No. 4755-N/44.

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20—4—1945 and will be closed at the discretion of the Directors, not earlier than 31—5—1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act, 1913 Liability of Members is Limited)

Registered Head Office — **Hampankatta, MANGALORE.**
Bombay Office:— **26, Noble Chambers, Fort Bombay.**
Factory:— **MALPE, South Kanara**
Depots at:— **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food, Fish Manure. Fish Ghee. Shark Liver Oil. Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish, Etc.**

2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.

3. The Madras Government has been approached to subscribe for half the capital and appoint a Government Director and render technical advice to the Company.

4. A Scientific Advisory Council will be formed and Technical Experts will be appointed to carry on intense research work in the Industry.

5. Arrangements are being made to procure Military contracts.

6. The Madras Government has been requested to supply the Company all the modern equipments useful for the purpose of the Company.

7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset.

MANGALORE,
19th April, 1945.

Mangalore Jarappa,
Managing Director.

ಲೋಕದ ಕಂಟಕಾಸುರ ಕಬಂಧವಾದ!—

ಮುಸಲನಿ ಹಿಟ್ಲರ್ ಎಂಬ ಎಡ-ಬಲ ತೋಳುಗಳೆರಡೂ ಮುರಿದು ಹೋದುವು!

ಃ ಃ ಃ ಜಯ ವಿಜಯರ ನಾಲ್ಕನೇ ಅವತಾರದ ಮುಕ್ತಾಯ. ಃ ಃ ಃ

ಮುಸಲನಿ ಮುಗಿದ!

ಎಪ್ರಿಲ್ 28ನೇ ದಿನ ಪೂರ್ವಾಹ್ನ ಮಿಲಾನಿನಲ್ಲಿ ಇಟೆಲಿಯ ಕಮ್ಯೂನಿಸ್ಟರಿಂದ ಕೊಲೆಮಾಡಲ್ಪಟ್ಟನೆಂದು ಮಿಲಾನ್ ರೇಡಿಯೋ ಸಾರಿದೆ ಇಟೆಲಿಯಲ್ಲಿ ಅಳಿದುಳಿದ ಜರ್ಮನ್ ಸೇನೆ ಶರಣು ಬಂದು ಅಲ್ಲಿಯ ಯುದ್ಧ ನಿಂತಿದೆ. ಮುಸಲನಿಯೊಂದಿಗೆ ಪ್ರಮುಖ ಫೇಸಿಸ್ಟರೆಲ್ಲಾ ಕೊಲೆಮಾಡಲ್ಪಟ್ಟಿದ್ದಾರೆ ಫೇಸಿಸ್ಟ್ ಪಕ್ಷವು ನಾಮಾವಶೇಷವಾಗಿದೆ. ಹಿಂದೊಂದು ಬಾರಿ ಜೈಲಿನಲ್ಲಿದ್ದ ಮುಸಲನಿಯನ್ನು ಜರ್ಮನರು ಹಾರಿಸಿಕೊಂಡು ಹೋಗಿದ್ದರು ಈ ಬಾರಿ ಸಿಕ್ಕಿದುದು ಕಮ್ಯೂನಿಸ್ಟರ ಕೈಗಾದ್ದರಿಂದ, ಅವನ ಪ್ರಾಣಪಕ್ಷಿಯೇ ಹಾರಿತು. ಮುಸಲನಿ ಕೊಲೆಯಾದ! ಅತ್ಯಾಚಾರವಾದಿಗಳ ಅದೃಷ್ಟಸೂಚನೆಗೊಂದು ಮಾದರಿ ದೊರೆಯಿತು

ಕೆಲವು ವರುಷಗಳಿಂದ ಇಡೀ ಪ್ರಪಂಚಕ್ಕೆ ರಾಹುಪ್ರಾಯವಾಗಿದ್ದ ಫೇಸಿಸ್ಟ್ ತತ್ವದ ಜನಕನೇ ಜಗತ್ತನ್ನು ಬಿಟ್ಟ! ಒಂದು ಕಾಲದಲ್ಲಿ ಲೋಕದ ಸರ್ವ ಪ್ರಥಮ ಪ್ರಭಾವಶಾಲಿಯಾಗಿದ್ದವನ ಶೋಚನೀಯ ಅವಸ್ಥೆಯೊಂದಿಗೆ ದೇಹಾಂತ್ಯವಾಯಿತು! ಘೂಂಕಾರದೊಂದಿಗೆ ಧಾವಿಸಿದ್ದ ಜೀವನರಥವೊಂದು ಕಾಲಚಕ್ರಕ್ಕೆ ಢಿಕ್ಕಿ ಹೊಡೆದು ಅಪಘಡಗೊಂಡಿತು! ದುರೋನ್ಮತ್ತ ದುಡುಕು ದುರ್ಯೋಧನ—

ಕಮ್ಯೂನಿಸ್ಟರಿಗೆ ಬಲಿ!

ಹಿಟ್ಲರ್ ಮಡಿದ!

ಮೇ ತಾ 1ನೇ ದಿನ ಅಪರಾಹ್ನ ಬರ್ಲಿನ್ ಸೇನಾನಿತ್ವ ವಹಿಸಿ ನಿಂತಲ್ಲಿಯೇ ಮಡಿದು ಬಿದ್ದನೆಂದು ಜರ್ಮನ್ ರೇಡಿಯೋ ಸಾರಿದೆ ಜರ್ಮನ್ ನಾವೆಯ ಸರ್ವ ಸೇನಾನಿಯಾಗಿದ್ದ ಎಡ್ಮಿರಲ್ ಡೂಯಿನಿಟ್ಸ್‌ನು ಅವನ ಉತ್ತರಾಧಿಕಾರಿಯಾಗಿ ಜರ್ಮನ್ ನಾಯಕತ್ವ ವಹಿಸಿದ್ದಾನೆ "ನನ್ನ ಮೊದಲ ಕರ್ತವ್ಯವೆಂದರೆ, ಬೊಲ್ಶೆವಿಸಮಿನ ಹಾವಳಿಯಿಂದ ಜರ್ಮನ್ ಜನತೆಯನ್ನು ಪಾರು ಮಾಡುವದೇ ಕೇವಲ ಇದೊಂದೇ ಕಾರ್ಯಕ್ಕಾಗಿ ಯುದ್ಧವು ಮುಂದುವರಿಯುವದು ಬೊಲ್ಶೆವಿಕರ ವಿರುದ್ಧ ನಾನು ಹೂಡುವ ಯುದ್ಧವನ್ನು ಆಂಗ್ಲೋ ಅಮೇರಿಕಾನರು ಆತಂಕಿಸುತ್ತಿರುವರೆ ಅವರೆಗೆ ಅವರ ಮೇಲೂ ಯುದ್ಧ ನಡೆಯುವದು" ಎಂದು ಹೊಸ ಪುರಾರನ ಘೋಷಣೆ ಹಿಟ್ಲರ್ ಸತ್ತ! ಚರಿತ್ರೆಯ ಒಂದು ಅಧ್ಯಾಯ ಮುಗಿಯಿತು

ವ್ಯಕ್ತಿಗತ ಪ್ರಭಾವದಲ್ಲಿ ೧೨ ವರುಷಗಳಿಂದ ಇಡೀ ಲೋಕದಲ್ಲೇ ಅಗ್ರಸ್ಥಾನ ಪಡೆದಿದ್ದವನ ಅವತಾರ ನಿಂತಿತು! ಮಾನವ ಜನಾಂಗದ ಸರ್ವರ ನಾಲಿಗೆಯಲ್ಲೂ ದಿನಂಪ್ರತಿ ನಲಿಯುತ್ತಿದ್ದ ನಾಮವೊಂದು ಚರಿತ್ರೆಯಲ್ಲುಳಿಯಿತು! ಶುಂಠರ ಶಕಪುರುಷ ಕಳೇಬರವನ್ನು ಉಳಿದ! ಲೋಕದ ದೇದೀಪ್ಯಮಾನ ಕುಗ್ರಹವೊಂದು ಅಸ್ತಂಗತವಾಯಿತು! ಎಲ್ಲವನ್ನೂ ಬಲಿಗೊಂಡ ಅದ್ಭುತ ಬಲಶಾಲಿ —

ರಶ್ಯಕ್ಕೆ ಆಹುತಿ!

ಮುಸಲನಿಯ ದುರ್ಮರಣ!

ಇಟೆಲಿಯ ಮಾಜೀ ಸರ್ವಾಧಿಕಾರಿ ಬೆನಿಟೋ ಮುಸಲನಿಯು ಉತ್ತರ ಇಟೆಲಿಯ ಮಿಲಾನ್ ನಗರದ ಬಳಿಯಿರುವ ಕಾಮೋ ಎಂಬಲ್ಲಿ ಎಪ್ರಿಲ್ 28ನೇ ಪೂರ್ವಾಹ್ನ ೬-10ಕ್ಕೆ ಕೊಲೆಮಾಡಲ್ಪಟ್ಟ.

ಇಟೆಲಿಯ ಕಮ್ಯೂನಿಸ್ಟ್ ಪಕ್ಷದ ಗೊರಿಲ್ಲಾ ಸೈನಿಕರು ಆತನನ್ನು ಹಿಡಿದು ಬೆಂಗದೆಯಿಂದ ಗುಂಡು ಹಾರಿಸಿಕೊಂದರು. ಅವನ ಪ್ರೇಯಸಿ ಮತ್ತು ಇತರ 17 ಮಂದಿ ಫೇಸಿಸ್ಟ್ ಪ್ರಮುಖರನ್ನೂ ಅವನೊಟ್ಟಿಗೆ ಕೊಂದು ಹಾಕಿದರು

ಮುಸಲನಿಯ ಶವಕ್ಕೆ ಪ್ರತಿಕ್ರಿಯೆಯೇ ಉತ್ತರಕ್ರಿಯೆಯಾಯಿತು! ಜನರು ಅದನ್ನು ನಾಟ್ಟಹಾಸಿ, ಒದೆದು, ತುಂಡರಿಸಿ, ಪ್ರದರ್ಶಿಸಿ, ಉಗುಳಿದರು

ಸರ್ವಾಧಿಕಾರಿಯ ಕೊನೆಯ ದಿನ

ಒಂದು ಕಾಲದಲ್ಲಿ ಇಡೀ ಪ್ರಪಂಚದ ಲಕ್ಷ್ಯವನ್ನಾಕರ್ಷಿಸಿದ್ದ ಸರ್ವ ಪ್ರಥಮ ಮಹಾ ಮನುಷ್ಯನಾಗಿದ್ದ ಮುಸಲನಿಯ ಕೊನೆಯ ದಿನಗಳನ್ನು ನೆನಸಿದರೆ ನಾಲಿಗೆ ಕಚ್ಚಿಕೊಳ್ಳಬೇಕು, 'ಅಬ್ಬಾ! ಅದೃಷ್ಟದಾಟವೇ!' ಎಂದು ಹಣೆಮುಟ್ಟಿಕೊಳ್ಳಬೇಕು! ಪ್ರದರ್ಶನಾಡಂಬರವೇ ಆತನ ಆತ್ಮವಾಗಿದ್ದಿತೋ ಎಂಬಂತೆ ಕೊನೆಯ ಘಳಿಗೆಯವರೆಗೂ ಆತ ತನ್ನ ಘನತೆಯನ್ನು ಬಿಡಲಿಲ್ಲ. ಮಿಲಾನ್ ನಗರದ ಉತ್ತರ ಬದಿಯ ಕೊಮೋ ನಗರದಲ್ಲೇ ಆತನಿದ್ದ ಯುದ್ಧವು ಉತ್ತರ ಇಟೆಲಿಗೆ ಹರಿಯಿತು, ಮಿಲಾನಿಗೆ ಸಮೀಪಿಸಿತು. ಕೊಮೋದಲ್ಲಿ ಮುಸಲನಿ ತನ್ನದೇ ಆದ 'ಮಂತ್ರಿ ಮಂಡಲ'ದ ಸಭೆ ಸೇರಿಸಿದ. ಪೋ ಹೊಳೆಯ ದಕ್ಷಿಣ ಭಾಗದಲ್ಲಿರುವ ಫೇಸಿಸ್ಟರೆಲ್ಲಾ ಕೂಡಲೇ ಕೊಮೊ ಅಥವಾ ಮಿಲಾನಿಗೋಡಿ ಬರಬೇಕೆಂದು ರೇಡಿಯೋ ಮೂಲಕ ಉಜ್ವಲ ಕರೆಕೊಟ್ಟ ಮುಸಲನಿಯ ಮಾತಿಗೆ ಬೆಲೆ ಕೊಡುವವರು ಕೊನೆಯ ವರೆಗೂ ಇದ್ದರಾದ್ದರಿಂದ ವಿವಿಧ ಭಾಗಗಳ 20 ಸಾವಿರ ಫೇಸಿಸ್ಟರು ಕಾರು ಹತ್ತಿಕೊಂಡು ಕರೆಬಂದಲ್ಲಿಗೆ ಧಾವಿಸಿದರು ಮಿಲಾನ್ ಮತ್ತು ಆಸುಪಾಸಿನ ಹಳ್ಳಿಗಳಲ್ಲಿ ಜನತೆಯೊಡನೆ ಮಿಶ್ರವಾಗಿದ್ದ ಸಾವಿರಾರು ಮಂದಿ ಫೇಸಿಸ್ಟರೊಡನೆ ಬೆರೆತು ಹೋದರು. ಮುಸಲನಿಯ ವಶ ಆಗಲೂ 15 ಸಾವಿರ ಸಶಸ್ತ್ರ ಸೇನೆಯಿದ್ದಿತು. ಆ ಸೇನೆಯಿಲ್ಲಿಂದ ಹೊಂಡದಿದ್ದಲ್ಲಿ, ತಾವು ನಗರದ ಮೇಲೆ ಬೊಂಬೆಗದೇ ಸಿದ್ಧವೆಂದು ಅಲ್ಲಿಯ 'ಬಂಧ ವಿಮೋಚನಾ ಸಮಿತಿಗೆ ಮಿತ್ರ ಸೇನಾನಿಗಳ ಸೂಚನೆಬಂತು. ಆದ್ದರಿಂದ ನಗರತ್ಯಾಗ ಮಾಡುವಂತೆ ಕೊಮೋ ಸಮಿತಿಯು ಮುಸಲನಿಯನ್ನು ವಿಜ್ಞಾಪಿಸಿಕೊಂಡಿತು ತನ್ನ ಇಂಸ್ತಿಕೆಯಿಂದ ನಗರಕ್ಕೇನೇ ಅಪಾಯವಿದೆ ಎಂಬ ಈ ಬಿನ್ನಹಕ್ಕೆ ಮಾಜೀ ಡ್ಯೂಸ್ ಸಿಟ್ಟಿನ್ನದೆ ನಿಂತುಬಿಟ್ಟ ತಮ್ಮ ಕಾರ್ಯ ತಾವು ಮಾಡಿಯೇ ತೀರುವೆವೆಂಬ ಎಚ್ಚರಿಕೆಗಾಗಿ ಮಿತ್ರ ವಿಮಾನಗಳು ಕೊಮೊ ನಗರಾಕಾಶದಲ್ಲಿ ಮೇಲಿಂದ ಮೇಲೆ ಹಾರಾಡಿ ತೋರಿಸಿದುವು ಕೃತೆ ಮುಸಲನಿಯು ಎರಡು ರಾತ್ರಿ ಎರಡು ಹಗಲನ್ನು ತನ್ನ ಪ್ರಿಯತಮೆ ಕ್ಲಾರಾ ಪೆಟಾಕಿಯೊಡನೆ ಎಲ್ಲಾ ಮೆಟನೋದಲ್ಲಿಯೆ ಕಳೆದಿದ್ದ. ಸಾರ್ವತ್ರಿಕ ಒಂದಾಯಕ್ಕಾಗಿ ಬಂಧ ಆಗ ವಿಮೋಚನಾ ಸಮಿತಿಯಿಂದ ನೇಮಕಗೊಂಡ ಒಟ್ಟೆನಲ್ಲಿ ಎಂಬ ವಕೀ

ಲರೇಬ್ಬರು ನಗರ ರಕ್ಷಣಾಧಿಕಾರವನ್ನು ಕಿತ್ತುಕೊಂಡರು. ಆದರೆ ಫೇಸಿಸ್ಟ್ ಪ್ರಮುಖರು ಅವನೊಡನೆ ಸಂಧಾನ ಹೂಡಲು ನಿರಾಕರಿಸಿದರು. ಕೊನೆಗೆ ಫೇಸಿಸ್ಟ್ ಪಕ್ಷದ ಮಾಜೀ ಕಾರ್ಯದರ್ಶಿ ಪಾವೊಲಿನಿಯವರು 20 ಮಂದಿ ಸಶಸ್ತ್ರ ಹರಿಗಾರರೊಂದಿಗೆ ಬಂದು ಆ ನಗರಾಧಿಕಾರವನ್ನು ಮರಳಿ ಕಸಗೊಂಡರು. ಈ ಹೊತ್ತಿಗೆ ವಿಮೋಚನಾ ಸಮಿತಿಯು ಕೋಮೋವಿನಲ್ಲಿ ತನ್ನ 50 ಸೈನಿಕರನ್ನು ಮಾತ್ರಬಿಟ್ಟು ಮಿಕ್ಕವರನ್ನೆಲ್ಲಾ ಮಿಲಾನಿಗೆ ವರ್ಗಾಯಿಸಿದ್ದಿತು.

ಪಲಾಯನ ಮಾಡುವಾಗ ಕೈಸೆರೆ.

ಆದರೆ ಕಟ್ಟಕಡೆಗೆ ಪರಿಸ್ಥಿತಿ ಬದಲಾಯಿಸಿತು. ಮುಸಲೀನಿಯ ಆಜ್ಞೆಗಳಿಗೆ ವಿರುದ್ಧವಾಗಿ ಅಲ್ಲಿದ್ದ ಫೇಸಿಸ್ಟ್ ಸೇನೆಗಳು ತಾವಾಗಿ ಚದರ ಹತ್ತಿದವು. ಆದ್ದರಿಂದ ಅನ್ಯೋಪಾಯವಿಲ್ಲದೆ ಮುಸಲೀನಿಯೂ ಅಲ್ಲಿಂದ ಕಾಲುಕೀಳಬೇಕಾಯಿತು. ಪಲಾಯನ ಹೊರಟು ಕೋಮೋ ಸಮೀಪದ ಡೋಂಗೋ ಹಳ್ಳಿ ವರೆಗೆ ಬಂದಿದ್ದ. ಅಲ್ಲಿ ಗಿಡುಗನ ಕಣ್ಣಿಗೆ ಕೋಳೀ ಮರಿ ಬೀಳುವಂತೆ ಕಮ್ಯೂನಿಸ್ಟ್ ಗುಪ್ತಗಾಮೀ ಸೇನೆಯ 52ನೇ ದಳದ ಓರ್ವ ಕಮ್ಮೀಸರನ ದೃಷ್ಟಿಗೆ ಬಿದ್ದ. ಮುಸಲೀನಿಯ ಮಂತ್ರಿಮಂಡಲವಾಗಿದ್ದ ಫೇಸಿಸ್ಟ್ ಪ್ರಮುಖರೆಲ್ಲಾ ಆತನೊಂದಿಗೆ ಹೊರಟಿದ್ದರು. ಸಲ್ಲಟಗೊಂಡು ಜಾರುವ ಹಾದಿ ಶೋಧಿಸುತಿದ್ದಂತೆಯೇ ಅವರೆಲ್ಲರೂ ಕಮ್ಯೂನಿಸ್ಟರ ಕೈಗೆ ಸಿಕ್ಕಿದರು. ಸ್ವಿಸ್ ಗಡಿದಾಟಿಸಲು ಈ ವಜ್ರ ಕವಚವು ಸಹಾಯವಾಗುವದೆಂಬ ಆಸೆಯಿಂದ ಮುಸಲೀನಿಯು ಜರ್ಮನರ ದೊಡ್ಡ ಮಿಲಿಟರಿ ಕೋಟನ್ನು ತೊಟ್ಟುಕೊಂಡಿದ್ದ. ಮುಸಲೀನಿಯ ಬಂಧನ ವಾರ್ತೆಯು ಬಿರುಗಾಳಿಯಂತೆ ಹಬ್ಬಿ ಯುಗೊಸ್ಲೇವಿಯಾ ಮೊದಲಾದ ಹಲವು ರಾಷ್ಟ್ರಗಳಿಂದ ಆತನನ್ನು ತಮ್ಮಲ್ಲಿಗೆ ರವಾನಿಸಬೇಕೆಂಬ ಕರೆ ಬಂತು. ರೋಮ್ ಮತ್ತು ಮಿಲಾನಿನ ವಿಮೋಚನಾ ಸಮಿತಿಗಳು ವಿಚಾರಣೆಗಾಗಿ ಆತನನ್ನು ತಮ್ಮ ಕೈಗೊಪ್ಪಿಸಬೇಕೆಂದು ಕೇಳಿಕೊಂಡವು. ಫೇಸಿಸಮ್ ವಿರುದ್ಧ ಕಾರ್ಯಾಚರಣೆಗೆ ನೇಮಕಗೊಂಡಿದ್ದ ಹೈಕಮಿಶನರರೂ ಆತನನ್ನು ಅಪೇಕ್ಷಿಸಿದರು. ಮಿಲಾನಿನ 'ನ್ಯಾಯ ಸಮಿತಿ'ಯ ಡೈರೆಕ್ಟರರೂ ಆತನನ್ನು ನ್ಯಾಯಸ್ಥಾನದ ವಿಚಾರಣೆಗೊಪ್ಪಿಸಲು ಕೇಳಿಕೊಂಡರು. ಆದರೆ ಪ್ರತೀಕಾರೋನ್ಮತ್ತ ಕಮ್ಯೂನಿಸ್ಟರು ಇದಾವುದನ್ನೂ ಕಿವಿಗೆ ಹಾಕಿಕೊಳ್ಳದೆ ಹತ್ತೇ ಮಿನಿಟುಗಳ ವಿಚಾರಣೆ ನಡೆಸಿ ಕೊನೆಯ ಕಾರ್ಯ ಜ್ಯಾರಿಮಾಡಿಬಿಟ್ಟರು.

ಬೆನ್ನಿಗೆ ಗುಂಡು!

ಕೈದಿ ಮುಸಲೀನಿಯನ್ನು ಪರಿವಾರ ಸಮೇತ ಪ್ರಥಮತಃ ಕೋಮೋ ಕಾರಾಗೃಹಕ್ಕೆ ತರಲಾಯಿತು. ಆವನ ಸ್ವಾಧೀನತೆಯ ಬಗ್ಗೆ ಹುಟ್ಟಿದ ಜಗಳದಿಂದ ಕೆಲವು ಘಂಟೆಗಳನಕ ಆತ ಅಲ್ಲಿಯೇ ಉಳಿದ. ಆ ವೇಳೆ ಕಮ್ಯೂನಿಸ್ಟರು ಆವನನ್ನು ಕಿತ್ತುಕೊಂಡು ಕೋಮೋ ಸಮೀಪದ ಗ್ವಿಲಿಯಾನೋ ಮೆಜೆಗ್ರಾ ಎಂಬ ಸ್ಥಳದಲ್ಲಿ ದಶನಿಮಿಷಗಳ ವಿಚಾರಣೆಯ ಶಾಸ್ತ್ರ ತೀರಿಸಿ, ಗುಂಡಿಗಾಹುತಿ ಕೊಡಲು ಕಮ್ಯೂನಿಸ್ಟ್ ಕರ್ನಲ್ ವೋಸ್ಕಾಟೆಲ್ಲಿಯ ಕೈಕೆಳಗಿನ 15 ಮಂದಿ ಸೋಲ್ಜರಿಗೊಪ್ಪಿಸಲಾಯಿತು. ಆಫೀಸರರ ಟ್ರಾಝರ್, ಶರ್ಟು ಮತ್ತು ಜೇಕ್ ಬೂಟ್ಸುಗಳನ್ನು ಧರಿಸಿದ್ದ ಮುಸಲೀನಿಯನ್ನು ಮುಂದಿಟ್ಟುಕೊಂಡ ಸಾವು ಮೆರವಣಿಗೆ ವಧಾಗೃಹಕ್ಕೆ ಸಾಗಿತು. ತನ್ನ ವೈಭವದ ದಿನಗಳಲ್ಲಿದ್ದುದಕ್ಕಿಂತ ಆತ ಕ್ಷೀಣವಾಗಿದ್ದ; ತೇಜೋಹೀನನಾಗಿ, ದಣಿದವನಂತಿದ್ದ. ಆದರೆ ರವಷ್ಟು ಅಳುಕನ್ನು ತೋರಿಸದೆ ಎದೆಯುಬ್ಬಿಸಿಕೊಂಡು ಬಂಗಲೆಯ ಗೋಡೆ ಕಡೆಗೆ ನಡೆದ. ಹಿಂದಿನಿಂದ ಕಪ್ಪು ಮಿಶ್ರಿತ ಬೂದುಬಣ್ಣದ ಸಾದಾ ಸಿಲ್ಕಿನ ಪೋಷಾಕಿನಲ್ಲಿ ಆತನ ಪ್ರಿಯತಮೆ ಪೆಟಚ್ಚಿ ಬರುತಿದ್ದಳು. ಮರಣ ಸ್ಥಳವನ್ನೂ, ಕೆಂಪು ನೆಕ್‌ಟೈ ಕಟ್ಟಿಕೊಂಡು ಟೋಮಿ ಗನ್ನುಗಳೊಡನೆ ಸಜ್ಜಾಗಿ ನಿಂತಿದ್ದ ಕಠೋರ ಕಮ್ಯೂನಿಸ್ಟರನ್ನೂ ಕಂಡಾಗಲೊಮ್ಮೆ ಆಕೆಯ ಕಣ್ಣುಗಳು ತುಂಬಿ ಬಂದುವು. ಆದರೆ ಮರುಕ್ಷಣದಲ್ಲೇ ಆಕೆ ತನ್ನ ಮೊದಲ ಗಭೀರತೆಯಲ್ಲೇ ಮುಂದಡಿಯಿಟ್ಟಳು. ಮುಸಲೀನಿ ಆವಳ ಕಡೆಗೊಮ್ಮೆ ತಿರುಗಿ ನೋಡಿ ನಕ್ಕ. ಅವರು ಗೋಡೆಗೆ ಸಮೀಪಿಸಿದರೆನ್ನುವಾಗಲೇ 'ಫಾಯರ್' ಆಜ್ಞೆ—ಅದರೊಂದಿಗೇನೆ ಢಂ, ಢಂ! ಎರಡು ಹೆಣಗಳೂ ಹಿಂಗಡೆ ಗುರುಳಿ ಅಂಗಾತ ಬಿದ್ದವು. ಶವಗಳನ್ನು ಕಾರಿನಲ್ಲಿ ಮಿಲಾನಿಗೆ ರವಾನಿಸಲಾಯಿತು. ಮುಸಲೀನಿ ಕೊಲೆಯಲ್ಲಿ ಭಾಗವಹಿಸಿದ ಕಮ್ಯೂನಿಸ್ಟನೊಬ್ಬನ ಹೇಳಿಕೆ ಹೀಗೆ. "ನಾವು ಕೋಣೆಯೊಳಗೆ ಹೋದಾಗ ಕಣ್ಣುಗಳು ಉಬ್ಬಿಹೋದ, ಕೆಳತುಟಿ ನಡುಗುತ್ತಿದ್ದ ಮುಸಲೀನಿಯನ್ನು ಕಂಡೆವು. ಬಿಡುಗಡೆಗಾಗಿ ಬಂದಿದ್ದೇವೆಂದು ಆತನಿಗೆ ಹೇಳಲಾಯಿತು. ಸ್ವಲ್ಪ ತರ್ಕ ನಡೆದ ಮೇಲೆ ತಾನು ಮತ್ತೊಮ್ಮೆ ಬಿಡುಗಡೆ ಹೊಂದುವೆನೆಂದೇ ಆತ ನಂಬಿದಂತೆ ತೋರಿತು. ಹೊರಾಂಗಣಕ್ಕೆ ಬಂದ ಮೇಲಂತೂ ಆವನ ನಂಬಿಕೆ ಸುದೃಢವಾಗಿ ಸಂತೋಷಗೊಂಡು ಹೇಳಿದ—"ನಾನು ನಿಮಗೊಂದು ಸಾಮ್ರಾಜ್ಯವನ್ನೇ ಕೊಟ್ಟು ಬಿಡುವೆ".— ತಾನು ಹೀಗೆ ಹೇಳಿದ್ದೇ ಸುಳ್ಳು ಎಂದು ಇನ್ನು ಮುಸಲೀನಿ ಅಲ್ಲಗಳೆಯುವದುಂಟೇ?

ಶವಕ್ಕೂ ಶಾಂತಿಯಿಲ್ಲ!

ತಾ. 29ರಲ್ಲಿ ಪ್ರಥಮತಃ ಮಿಲಾನ್ ಪ್ರವೇಶಿಸಿದ ಒಂದು ಅಮೇರಿಕನ್ ದಳವು ಮೋರೆಟ್ಟೋ ಕ್ಷೇತ್ರದಲ್ಲಿ ಭಯಾನಕ ದೃಶ್ಯವೊಂದನ್ನು ಕಂಡು ದಂಗುಬಡಿದು ನಿಂತಿತು. ಅಲ್ಲಿ ಏಳು ಶವಗಳು ತಲೆಕೆಳಗಾಗಿ ತೂಗಾಡುತಿದ್ದುವು. ಪರೀಕ್ಷಿಸಿದರೆ ಮಧ್ಯದಲ್ಲಿ ಮುಸಲೀನಿ, ಆವನ ಪಕ್ಕದಲ್ಲಿ ಕ್ಲಾರಾ ಪೆಟಚ್ಚಿ ನೇತಾಡುತಿದ್ದಾರೆ. ಸ್ವಲ್ಪ ದೂರದಲ್ಲಿ ಜೇರೆ 11 ಶವಗಳು ನೇತಾಡುತ್ತಿದ್ದುವು. ಅವುಗಳಲ್ಲೊಂದು ಫೇಸಿಸ್ಟ್ ಕಾರ್ಯದರ್ಶಿ ಪವೋಲಿನಿಯದು; ಮಿಕ್ಕವರೆಲ್ಲಾ ಫೇಸಿಸ್ಟ್ ಪ್ರಮುಖರು. ಅಂದು ಮುಂಜಾನೆ ಆ ಹಾದಿಯಾಗಿ ಹೋದ ಜನರು ಕೊಟ್ಟ ಪೆಟ್ಟುಗಳಿಂದ ಮುಸಲೀನಿ ಶವವು ಚೂರು ಚೂರಾಗಿದ್ದಿತು. ಜನರೆಲ್ಲಾ ಖಾಂಕರಿಸಿ ಉಗಿದ ಎಂಜಲುಗಳಿಂದ ಅದು ಒದ್ದೆಯಾಗಿದ್ದಿತು. ಓರ್ವ ಹೆಂಗಸು ಮುಸಲೀನಿಯ ಶವಕ್ಕೆ 5 ಬಾರಿ ಗುಂಡು ಹೊಡೆದು "ಇದು ನೀನು ಕೊಲ್ಲಿಸಿದ ನನ್ನ ಐವರು ಮಕ್ಕಳ ಪರವಾಗಿ" ಎಂದಳಂತೆ. ಕೆಲವೇ ದಿವಸಗಳ ಮೊದಲು ಮುಸಲೀನಿಗೆ ಗುಂಡಿಟ್ಟ ಸ್ಥಳದಲ್ಲೇ 15 ಮಂದಿ ಕಮ್ಯೂನಿಸ್ಟರನ್ನು ಫೇಸಿಸ್ಟರು ಕೊಂದು ಹಾಕಿದ್ದರು.

ಇಟಲಿಯ ಡ್ಯೂಸ್-ಹಿಟ್ಲರನ ಮಿತ್ರನೂ ಮತ್ತು ಆದಿ ಭಾಗದ ಗುರು—ಅಬಿಸೀನಿಯಾ ಅಲ್ಬೇನಿಯಾಗಳ ವಿಜೇತ—ಜನರಲ್ ಫ್ರಾಂಕೋನ ಸ್ನೇಹಿತ—ಒಂದು ಕಾಲದ ಸಮತಾವಾದಿ, ಪತ್ರಿಕಾ ಸಂಪಾದಕ, ರೋಮ್ ವಿಜಯಯಾತ್ರೆಯ ನಾಯಕ. ಬೆನಿಟೋ ಮುಸಲೀನಿಗೆ ಅಂತ್ಯ ಈ ರೀತಿ' ಒಂದೇ ದೇಹ—ಅದಕ್ಕೊಂದು ಕಾಲದಲ್ಲಿ ಜನಕೋಟಿ ಪುಷ್ಪವೃಷ್ಟಿ. ಮತ್ತೊಮ್ಮೆ ಎಂಜಲ ಮಳೆ! ಇದು ಅದೃಷ್ಟ ಚಲವೋ ಕರ್ಮಫಲವೋ

ಹಿಟ್ಲರನ ಮರಣ ಸಮಸ್ಯೆ

ಸತ್ತು ಸ್ಮರಣೆಯಿಂದಳಿಸಿ ಹೋದವರು, ಸತ್ತು ಕೀರ್ತಿಕಾಯರಾಗಿ ಉಳಿದವರು, ಎಂಬೆರಡೇ ವರ್ಗಗಳನ್ನು ಲೋಕವೀತನಕ ತಿಳಿದಿದ್ದಿತು. ಆದರೆ ಸತ್ತೂ ಸಾಯದೆ—ಸಾಯದೇನೇ ಸತ್ತು, ಇಡೀ ಪ್ರಪಂಚವನ್ನು ಆತುರದಲ್ಲಿದ್ದಿರುವ ಏಕಮಾತ್ರ ವ್ಯಕ್ತಿಯೆಂದರೆ ಹಿಟ್ಲರ್. ತಾ. 1ರಲ್ಲಿ ಜರ್ಮನ್ ರೇಡಿಯೋ 'ಈ ದಿನ ಅಪರಾಹ್ನ ನಮ್ಮ ಫ್ಯೂರರ್, ಅಡೋಲ್ಫ್ ಹಿಟ್ಲರ್ ಬರ್ಲಿನ್ ಸೇನಾ ನಾಯಕತ್ವದಲ್ಲಿದ್ದಂತೆಯೇ ಮಡಿದು ಬಿದ್ದ' ಎಂದು ಘೋಷಿಸಿತು. ಜರ್ಮನಿಯಲ್ಲಿ [illegible] ಉತ್ತರಾಧಿಕಾರಿತ್ವದ ವ್ಯವಸ್ಥೆಯಾದುದನ್ನು ಜಗತ್ತು ಕಂಡಿತು. ಹಿಟ್ಲರನ ಸಾಧಾರ ಸಾವು ವಾರ್ತೆ ಇದೊಂದೇ. ಜರ್ಮನರು 'ದೇವ'ನಂತೆ ಕಾಣುತ್ತಿದ್ದ ಫ್ಯೂರರ್ ಮರಣಗೊಂಡಾಗ ಜರ್ಮನ್ ರಾಷ್ಟ್ರದಲ್ಲೇಳಬೇಕಾಗಿದ್ದ ಸಂತಾಪಾಗ್ನಿ ಗೋಚರಿಸುವದಿಲ್ಲ. ಹಿಟ್ಲರ್ ಕಾಣೆಯಾಗಬಲ್ಲ— ಅವನ ಶವ ಅಂತರ್ಧಾನವಾಗದು; ಅದೇನಾಯಿತೆಂಬ ಸುದ್ದಿಯಿಲ್ಲ. ನಾಜಿಗಳ ವಶ ಇನ್ನಿರುವುದು ಕೇವಲ 4000 ಚದರ ಮೈಲು ಮಾತ್ರವೆಂದು ಪ್ರಕಟವಾಗಿದೆ.—ತನ್ನ ಶವವನ್ನು ಹೂಳಲಾಗುವಷ್ಟು ಸ್ಥಳವಿರುವಾಗಲೇ ಹಿಟ್ಲರ್ ಮಡಿದಿದ್ದ! ತಮ್ಮ ಫ್ಯೂರರನಿಗೆ ಅತ್ಯಂತ ಸಂಭ್ರಮದಿಂದ—ಅಥವಾ ಆ ಸುದ್ದಿ ತಿಳಿಯುವಷ್ಟು ಗೌಜಿಯಿಂದಾದರೂ ಜರ್ಮನರು ಉತ್ತರಕ್ರಿಯೆಯಾಚರಿಸಿದ ಸುದ್ದಿಯಿಲ್ಲ. ಕೆಂಪು ಯೋಧರ ಕೈದಿಯಾದ ಗೋಬೆಲ್ಸನ ಅನುಯಾಯಿ ಡಾ. ಹಾನ್ಸ್ ಫ್ರಿಟ್ಸನು ಹಿಟ್ಲರ್ ಮತ್ತು ಗೋಬೆಲ್ಸ್ ಆತ್ಮಹತ್ಯೆ ಮಾಡಿಕೊಂಡರೆಂದಿದ್ದಾನೆ. ಮುಂದಿನ ಕೂಟಯುದ್ಧದ ವ್ಯವಸ್ಥೆಗಾಗಿ ಹಿಟ್ಲರ್, ಗೋರಿಂಗ್, ಗೋಬೆಲ್ಸ್ ಮೊದಲಾದ ನಾಜೀ ಪ್ರಮುಖರು ತಲೆತಪ್ಪಿಸಿಕೊಂಡಿದ್ದಾರಲ್ಲದೆ ಸತ್ತಿಲ್ಲ ಎಂದು ಮೋಸ್ಕೋ ರೇಡಿಯೋ ಸಾರಿದೆ. ಸೇಕಡಾ 95ರಷ್ಟು ರಶ್ಯನರು ಹಿಟ್ಲರ್ ಮೊದಲಾದವರ ಮರಣ ವಾರ್ತೆಯನ್ನು ನಂಬುವದಿಲ್ಲ. ಹಿಂದುಸ್ಥಾನದಂತಹ ದೂರ ದೇಶಗಳಲ್ಲಿಯೂ ಇದೇ ಅನುಮಾನ. ಹಿಂದುಸ್ಥಾನದಲ್ಲಿ ಬೀದಿ ನಾಯಿಯೊಂದರ ಕಾಲುಮುರಿದರೂ ಪ್ರಶ್ನೆ ಕೇಳುವ ಪಾರ್ಲಿಮೆಂಟಿನ ಮಜೂರ ಸದಸ್ಯರು ಕೂಡಾ ಏನೋ ಪೂರ್ವ ವ್ಯವಸ್ಥೆಯಿರಬೇಕೆಂಬಂತೆ ಈ ಮರಣಗಳ ಪ್ರಸ್ತಾಪನೆತ್ತಿಲ್ಲ. ಚರ್ಚಿಲ್ಲರು [illegible] 'ಹಿಟ್ಲರ್ ನಿಜಕ್ಕೂ ಸತ್ತನೇ?' ಎಂದು ಕೆಲವು ಬ್ರಿಟಿಷ್ ಪತ್ರಿಕೆಗಳೇ ಪರಲೋಕಾಧಿಕಾರಿಗಳನ್ನು ಪ್ರಶ್ನಿಸುವವೇನೋ ಎಂಬಂತೆ ಸಂದೇಹ ಸೂಚಿಸಿವೆ. ಹಿಟ್ಲರ್ ಮರಣಕ್ಕಾಗಿ ದುಃಖ ಸೂಚಿಸುವವರೂ ಮೌನ; ಸಂತೋಷ ಪ್ರದರ್ಶಿಸತಕ್ಕವರೂ ಸ್ತಬ್ಧ! ಅಂತೂ ಹಿಟ್ಲರ್ 'ಸತ್ತು' ಸಮಸ್ಯೆಯಾಗಿದ್ದಾನೆ.

ಯಾಕಾಗಿ ಸತ್ತ?

ಜರ್ಮನಿಯ ಫ್ಯೂರರ್—ತ್ರಿರಾಷ್ಟ್ರಗಳ ಮಾಡಾಮಾಡಿ ರಣದ ಪ್ರತಿನಾಯಕ, ಈಗ ಸತ್ತೆಕ್ಕೋ ಸತ್ತಿದ್ದಾನೆ. ಆದರೆ ವ್ಯಕ್ತಿ ಹಿಟ್ಲರ್ ಕೊನೆಯ ಉಸಿರನ್ನೂ ಬಿಟ್ಟನೆ, ಅಥವಾ ನಿಟ್ಟುಸಿರು ಬಿಟ್ಟು ಪರಾರಿಯಾದನೇ—ಎಂಬುದೇ ಸದ್ಯದ ಪ್ರಶ್ನೆ. ಹಿಟ್ಲರ್ ಸಬ್‌ಮೆರೀನ್ ಹತ್ತಿ ಜಪಾನಿಗೆ ಹೊರಟ. ಡೊಯಿನಿಟ್ಜ್ ಪಲಾಯನ ಪದ್ಧತಿಯಲ್ಲಿದ್ದಾನೆ ಇತ್ಯಾದಿ, ಈಗಿನ ವಾರ್ತೆಗಳು. ನಾಜೀ ಮುಖಂಡರು ಹಲವರನ್ನು ಜರ್ಮನರು ಕೆಲಕಾಲದಿಂದ ಸತ್ತವರ ಪಟ್ಟಿಗೆ ಸೇರಿಸುತ್ತ ಬಂದಿದ್ದರು. ಗೋರಿಂಗನಂಥವರನ್ನು 'ಕಾಣೆ' ಪಟ್ಟಿಗೆ ದಾಖಲ್ಮಾಡಿದ್ದರು. ಕೊನೆಯದಾಗಿ ಹಿಟ್ಲರ್, ಗೋಬೆಲ್ಸರ ಹೆಸರುಗಳೂ 'ಪಟ್ಟಿ'ಗೆ ಸೇರಿದುವು. ಇದು ವಸ್ತುಸ್ಥಿತಿಯಾಗಿದ್ದರೂ, ಕಪಟನಾದರೂ ಜರ್ಮನರ ದುರ್ಗತಿಗೆ ಹೊಂದಿಕೆಯಾಗಿಯೇ ಇದೆ; ಅಸ್ವಾಭಾವಿಕವನ್ನಿಸುವದಿಲ್ಲ. ಸಂಗ್ರಾಮ ಸಾಗಿಸಿ ವಿಜಯ ಪಡೆವಾಸೆಯಿಲ್ಲ; ಸಂಧಾನ ಹೂಡಿ ರಿಯಾಯತಿ ಪಡೆಯುವ ಆಸೆಯೂ ಇಲ್ಲ, ಎಂದಮೇಲೆ ಮುಂಭಾಗಕ್ಕೆ ಬಂದು ತನ್ನ ರಾಜಧಾನಿ ಬರ್ಲಿನಿನಲ್ಲೇ ಪ್ರಾಣ ಕೊಡುವದು ಹಿಟ್ಲರನಂತಹ ಗಂಡುಗಲಿಗೆ ಭೂಷಣವೇ. ಹಾಗಿಲ್ಲ

(೮ನೇ ಪುಟ ನೋಡಿರಿ.)

ಅಭಿವೃದ್ಧಿ ತೋರಿಸುವ ಪಟ್ಟಿ.

	1940	1942	1944
	ರೂಪಾ	ರೂಪಾ	ರೂಪಾ
ತೆತ್ತ ಭಂಡವಾಳ	3,93,000	14,96,000	26,34,000
ಕ್ಷೇಮನಿಧಿ	4,50,000	4,50,000	10,34,000
ಠೇವಣಿಗಳು	86,72,000	1,45,51,000	2,39,69,000
ಸರಕಾರೀ ಭದ್ರತೆಗಳು	11,19,000	63,17,000	1,17,93,000
ಲಾಭಾಂಶ	72,000	1,53,000	2,75,000
ಜುಮ್ಲಾ ಸಂಪತ್ತು	1,03,44,000	2,07,35,000	3,46,46,000

ಸಂಖ್ಯೆಗಳೆಲ್ಲಾ ಸಾವಿರಕ್ಕೆ ಸರಿಪಡಿಸಿದವುಗಳು.

ನಮ್ಮ ಶಾಖೆಗಳು:— ಆಲೆಪ್ಪಿ, ಎರ್ನಾಕುಲಮ್, ಕೊಚ್ಚಿನ್, ಕಲ್ಲಿಕೋಟೆ, ಕಣ್ಣಾನೂರು, ಮಂಗಳೂರು, ಬೆಂಗಳೂರು [illegible] ಧಾರವಾಡ, ಹುಬ್ಬಳ್ಳಿ, ಚಿಕ್ಕಮಗಳೂರು, ಮಧುರಾ, [illegible], ಕೊಯಮುತ್ತೂರು, ಇತ್ಯಾದಿ, ಇತ್ಯಾದಿ ಮುಂಬಯಿ ನಗರದಲ್ಲಿ 4 ಶಾಖೆಗಳು

ಮೂಲಧನ ರೂಪಾಯಿ 26 ಲಕ್ಷ **ಕೆನರಾ ಬೇಂಕ್** ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ (ESTD 1906 ಸ್ಥಾಪನೆ.)

CANARA BANK LIMITED
(Incorporated in British India liability of Members Limited.)

ಗಾಂಧಿಜೀ ಹೋಗಿ ಪಂಡಿತಜೀ ಬರಬೇಕೆ?

ನೂನ್-ಗಾಂಧೀ ವಾದ ಪ್ರತಿವಾದ.

ಅರ್ಧ ಶತಮಾನದ ಹಿಂದೆ!

ಫ್ರಿಸ್ಕೋ ಸಮ್ಮೇಳನದ ಸರಕಾರೀ ನೇಮಿತ ಹಿಂದೀ ಸದಸ್ಯರಲ್ಲೊಬ್ಬರೂ, ವೈಸರಾಯಿ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರೂ ಆಗಿರುವ ಸರ್. ಫಿರೋಜ್ ಖಾನ್ ನೂನರು ಫ್ರಿಸ್ಕೋ ಸಮ್ಮೇಳನದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಸವಾಲು, ಅಡ್ಡ ಸವಾಲುಗಳ ಸುರಿಮಳೆಗೆ ಸಿಲುಕಿದಾಗ ಹೊರಗೆಡಹಿದ ಅಭಿಪ್ರಾಯವಿದು:- "ಗಾಂಧಿಯವರ ರಾಜಕೀಯವು ಅರ್ಧಶತಮಾನಗಳ ಹಿಂದಿನದಾಗಿದ್ದು ಅವಧಿಬಾಧೆಗೀಡಾಗಿದೆ. ಅವರು ಅಪ್ರಾಗತಿಕ ಹಾಗೂ ಅಂಧಶ್ರದ್ಧೆಯ ಹಿಂದುಗಳ ಕೈಯಲ್ಲಿದ್ದಾರೆ. ತನಗಿಂತ ತರುಣನಾದವನೊಬ್ಬನಿಗೆ ಅನುಕೂಲ ಮಾಡಿಕೊಡುವದಕ್ಕಾಗಿ ಅವರು ನಿವೃತ್ತರಾದರೆ ದೇಶಕ್ಕೆ ದೊಡ್ಡ ಉಪಕಾರ ಮಾಡಿದಂತೆಯೇ ಸರಿ.

ನೆಹರು ಹೇಳಿಸಿದ ಜನ!

ಗಾಂಧಿಯವರ ಉತ್ತರಾಧಿಕಾರಿಯಾಗಿ ನೇಮಕಗೊಳ್ಳಲು ಪಂಡಿತ ನೆಹರುಗಳು ಹೇಳಿಸಿದ ಜನವೆಂದು ನನಗನ್ನಿಸುತ್ತದೆ. ನೆಹರುಗಳಿಗೆ ಮುಸಲ್ಮಾನ್ ಬೆಂಬಲಿಗರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸ್ವಮತಾಂಧತೆಯ ತುತ್ತತುದಿಯಲ್ಲಿರುವ ಗಾಂಧಿಯವರಂತೆ ನೆಹರುಗಳಿಲ್ಲ. ಪಂಡಿತ ನೆಹರುಗಳು ಮುಂಭಾಗಕ್ಕೆ ಬರುವದೊಂದೇ ಉಳಿದಿರುವ ಉಪಾಯ. ಆದರೆ ಗಾಂಧಿಯವರಮೇಲೆ ನೆಹರುಗಳಿಗೆಂತಹ ಗೌರವವಿದೆಯೆಂದರೆ, ಮೊದಲಿನವರು ಹಿಂದೆಗೆಯದೆ ಎರಡನೆಯವರು ಮುಂದೆ ಬರುವಂತಿಲ್ಲ".

ಗಾಂಧೀ ಮರ್ಜಿ

ಸರ್. ನೂನರು ನಗುತ್ತಾ ಮಾಡಿದ ಟೀಕೆಗಳಿವು:- ಗಾಂಧಿಯೆಂದರೆ ದೇವರೊಬ್ಬನಿಗೆ ಮಾತ್ರ ಅರ್ಥವಾಗಬಲ್ಲ ಓರ್ವ ಪಟ್ಟನೆಂದು ನನ್ನ ಭಾವನೆ. ತನ್ನ ಉದ್ದೇಶ ಸಾಧನೆಗಾಗಿ ಎಂತಹ ಹೇಳಿಕೆ ಹೊರಡಿಸುವದಕ್ಕಾದರೂ ಅವರು ಸ್ವತಂತ್ರರಿದ್ದಾರೆ. ಅವರೊಬ್ಬ ಮಹಾನಾಯಕನೆಂಬುದು ನಿಸ್ಸಂದೇಹ. ಸಾಮಾನ್ಯ ಮನುಷ್ಯರಿಗಾಗಲೀ ದೇವರಿಗೆ ಮಾತ್ರವಾಗಲೀ ಅರ್ಥವಾಗಬಲ್ಲ ಬೋಧನೆಗಳನ್ನವರು ಕೊಡಬಲ್ಲರು. ಜಪಾನರು ಬರ್ಮವನ್ನಾಕ್ರಮಿಸಿ ಭಾರತದ ಕಡೆಗೆ ಮುಂದೊತ್ತುತ್ತಿದ್ದಾಗ ಮಹಾತ್ಮಾ ಗಾಂಧಿಯವರ ಪಕ್ಷದವರು ೩೩೨ ರೈಲ್ವೇ ಸ್ಟೇಶನುಗಳನ್ನೂ ೯೪೫ ಪೋಸ್ಟಾಫೀಸುಗಳನ್ನೂ ಧ್ವಂಸಮಾಡಿದ್ದರು." ಎಂದು ಆರೋಪಿಸಿ "ಗಾಂಧಿಯವರು ಅಡ್ಡಗಾಲಿಡದಿರುತ್ತಿದ್ದರೆ ಕ್ರಿಪ್ಸ್ ಸಂಧಾನ ಫಲಿಸುವಂತಿತ್ತು" ಅಂದಿದ್ದಾರೆ. 'ನಾವೂ ಮಿಕ್ಕವರಷ್ಟೇ ರಾಷ್ಟ್ರಾಭಿಮಾನಿಗಳು; ಭಾರತದ ಸ್ವಾತಂತ್ರ್ಯಾಪೇಕ್ಷಿಗಳು'- ಎಂದು ಖಾನ್ ನೂನರು ಎದೆತಟ್ಟಿಕೊಳ್ಳದೆ ಬಿಡಲಿಲ್ಲ!

ಗಾಂಧಿಜಿಯ ಉತ್ತರ

ಸರ್. ಖಾನ್ ನೂನರ ಆರೋಪಗಳಿಗೆ ಗಾಂಧಿಜಿಯ ಉತ್ತರ ಬಂದಿದೆ. ತನ್ನನ್ನು ಜಪಾನೀ ಪಕ್ಷಪಾತಿಯೆಂದು ನಿರಾಧಾರವಾಗಿ ಆರೋಪಿಸಿದ್ದ ಬ್ರಿಟಿಷ್ ಸರಕಾರವು ಕೂಡಲೇ ಅದನ್ನು ಹಿಂದೆಗೆದುಕೊಂಡಿರುವಾಗ ಸರ್. ನೂನರಂಥವರು ಈ ಕಾಲದಲ್ಲಿ ಇಂತಹ ಆರೋಪ ಹೊರಿಸಿದುದು ಗಾಂಧಿಜೀಯನ್ನು ಆಶ್ಚರ್ಯಗೊಳಿಸಿದೆ. "ನಾನು ಹಿಂದೀ ಸ್ವಾತಂತ್ರ್ಯದ ಅಚಲವಾದಿ. ಆದ್ದರಿಂದ ಬ್ರಿಟಿಷರನ್ನು ಜಪಾನರಾಗಲೀ ಇನ್ನಾರೇ ಆಗಲೀ ಗೆಲ್ಲುತ್ತಾ ಬಂದಾಗಲೂ ನಾನು ನಿರುತ್ಸಾಹಗೊಳ್ಳಲಾರೆ. ಭಾರತದ ಮೇಲಿನ ಬ್ರಿಟಿಷರ ಅಥವಾ ಇನ್ನಾವುದೇ ಪರಕೀಯಾಧಿಕಾರವನ್ನು ಅಹಿಂಸಾತ್ಮಕ ಅಸಹಕಾರ ಮತ್ತು ಕಾಯಿದೇ ಭಂಗಗಳಿಂದ ಅಂತ್ಯಗೊಳಿಸುವದೇ ನನ್ನ ಧ್ಯೇಯ" ಎಂದು ಗಾಂಧಿಜೀಯು ಹೇಳಿದೆ. 1934ರಿಂದ ಕಾಂಗ್ರೆಸಿನ ಸಂಬಂಧವನ್ನು ತಾನು ಕಳಕೊಂಡಿದ್ದೇನೆಂದೂ ಆಗೋಸ್ತು ಗಲಭೆಗೆ ಕಾಂಗ್ರೆಸಾಗಲೀ ತಾನಾಗಲೀ ಹೊಣೆಯಲ್ಲವೆಂದೂ ಗಾಂಧಿಜೀ ಮತ್ತೊಮ್ಮೆ ನಿದರ್ಶನಕೊಟ್ಟು ವಾದಿಸಿದ್ದಾರೆ.

ನೆಹರು ಈಗಲೇ ನನ್ನ ಉತ್ತರಾಧಿಕಾರಿ

"ನೆಹರುಗಳನ್ನು ನನ್ನ ಉತ್ತರಾಧಿಕಾರಿಯಾಗಿ ನಾನೇ ನಾಮಕರಣ ಮಾಡಿದ್ದೇನೆಂಬುದನ್ನು ಸರ್. ನೂನರು ತಿಳಿದಿರಲಿ. ಅವರಿನ್ನು ಮುಂಭಾಗಕ್ಕೆ ಬರಬೇಕೆಂದಿಲ್ಲ; ಈಗಲೇ ಮುಂಭಾಗದಲ್ಲಿದ್ದಾರೆ. ಅವರು ಮಾಡಬೇಕಾದಷ್ಟು ಕೆಲಸವನ್ನು ಮಾಡಲು ಹಿಂದೀ ಸರಕಾರ ಬಿಟ್ಟಿಲ್ಲ. ನಾನೂ ಅವರೂ ಸ್ನೇಹಿತರು. ಆದರೆ ನಾವು ಪ್ರತಿಸ್ಪರ್ಧಿಗಳಲ್ಲ. ನಾವಿಬ್ಬರೂ ಜನತಾಸೇವಕರು. ಈ ಸೇವಾರಂಗವು ಲೋಕದಷ್ಟೇ ದೊಡ್ಡದಿದೆ. ಅದರಲ್ಲಿ ಎಂದಿಗೂ ಜನದಟ್ಟಣೆ ಹೆಚ್ಚಾಯಿತೆನ್ನುವಂತಿಲ್ಲ. ಅಲ್ಲಿ ಇನ್ನಷ್ಟು ಮಂದಿಗೆ ಸ್ಥಳಾವಕಾಶವಿದೆ. ಸ್ವಾತಂತ್ರ್ಯ ಪ್ರಶ್ನೆಯ ಮಟ್ಟಿಗಂತೂ ನಮ್ಮಿಬ್ಬರೊಳಗೆ ಭಿನ್ನಾಭಿಪ್ರಾಯವಿಲ್ಲ; ಇಬ್ಬರೂ ಆ ಹೋರಾಟದ ಶಸ್ತ್ರಧಾರೀ ಸಹೋದರರು. ನಿಸ್ಸಂದೇಹವಾಗಿ ತಾರುಣ್ಯಬಲದಿಂದ ಅವರು ನನಗೆ ಮೇಲ್ಸ್ತ್ರಯ್ಯಾಗಿದ್ದಾರೆ.

ಫಿರೋಜರಿಗೆ ಪಂಥಾಹ್ವಾನ!

ರಾಜೀನಾಮೆ ಕೊಡುವ ವೇದನೆಯೊಂದಿಗೆ, ಸರ್. ಫಿರೋಜರು ನೆಹರುಗಳನ್ನೂ ಅವರ ಅನುಯಾಯಿಗಳನ್ನೂ ಬಿಡಲೇಬೇಕೆಂದು ಸರಕಾರವನ್ನು ಕೇಳಿಕೊಳ್ಳಲಿ. ಆಗ ಅವರ ಬಯಕೆ ಫಲಿಸಲಿದೆ. ಈ ಧ್ಯೇಯಸಾಧನೆಗಾಗಿ ನಾನು ನನ್ನ ಹಾರ್ದಿಕ ಸಹಕಾರವನ್ನು ಸರ್. ಫಿರೋಜರಿಗೀಯಲಿದ್ದೇನೆ. ನನ್ನ ಸ್ವಮತ ಭ್ರಾಂತಿ ಅಥವಾ ಅಂಧಶ್ರದ್ಧೆಯಿಂದ ಅವರಾವ ಪ್ರಯೋಜನವನ್ನೂ ಪಡೆಯುವದು ಬೇಡ. ನನ್ನ ಬಾಲ್ಯಾರಭ್ಯದಿಂದ ನಾನೆಂದಿಗೂ ಸ್ವಮತಭ್ರಾಂತನಾಗಿದ್ದುದಾಗಲೀ ಅಂಧಶ್ರದ್ಧೆಯವನನ್ನಿಸಿದುದಾಗಲಿ ಇಲ್ಲವೆಂಬುದು ಅವರಿಗೆ ಗೊತ್ತಿಲ್ಲದಿರಬಹುದು. ನನ್ನ ಸಂಧಾನಾತೀತ ಅಸ್ಪೃಶ್ಯತಾ ನಿವಾರಣಾ ಘೋಷಣೆ ಮತ್ತು ಉಗ್ರ ಸಾಮಾಜಿಕ ಸುಧಾರಣೆಗಳ ದೆಸೆಯಿಂದ ಅಂಧಶ್ರದ್ಧೆಯು ನನ್ನನ್ನಂಗೀಕರಿಸುವಂತಿಲ್ಲ. ನನ್ನ ಕಾಲ ಕಳೆದಿದೆ ಎನ್ನಲು ಸರ್. ಫಿರೋಜರಿಗಾತಂಕವೇನೂ ಇಲ್ಲ. ಯಾರಿಗೆ ಮತ್ತು ಯಾವುದಕ್ಕೆ ಕಾಲಬಾಧೆ ತಾಗಿದೆ ಎಂಬುದನ್ನು ಯಾರೂ ಅರಿಯರು. ನಾನಂತೂ ಈ ವಿಷಯದಲ್ಲಿ ಅಜ್ಞಾನಿಯೆನ್ನುತ್ತೇನೆ" ಎಂದು ಮಾರ್ಮಿಕವಾಗಿ ಉತ್ತರಿಸಿದ್ದಾರೆ. ಕ್ರಿಪ್ಸ್ ಸಂಧಾನ ಮಾತುಕತೆಯಾರಂಭಕ್ಕೆ ಮೊದಲೇ ತಾನು ದಿಲ್ಲಿಯನ್ನು ಬಿಟ್ಟಿದ್ದೆನೆಂದು ಹೇಳಿ ಆ ಸಂಬಂಧದ ಸರ್. ನೂನರ ಆರೋಪಕ್ಕೆ "ಒಂದು ಸುಳ್ಳು ನಿರ್ಮಾಣಗೊಂಡರೆ ಅದು ಹೇಗೆ ಮುಂದೊತ್ತುತ್ತದೆಂಬುದಕ್ಕಾಗಿ ಕೌತುಕ ಪಡಬೇಕು" ಎಂದಿದ್ದಾರೆ.

"ತಾವು ನಿವೃತ್ತಿಗೊಳ್ಳುವದಕ್ಕೂ ಶರ್ತ ಮುಂದೊಡ್ಡುವದು ಗಾಂಧಿಯವರಂತಹ ಘನಮನುಷ್ಯರಿಗೆ ಹೇಳಿಸಿದುದಲ್ಲ" ಎಂದು ಇದಕ್ಕೆ ಸರ್. ನೂನರ ಉತ್ತರ. "ಗಾಂಧೀ ನಾಯಕತ್ವಕ್ಕಿಂತ ಜವಾಹಿರರ ನಾಯಕತ್ವವು ಬ್ರಿಟಿಷ್ ಸರಕಾರಕ್ಕನುಕೂಲವೆಂದು ಸರ್. ನೂನರು ಭಾವಿಸಿದ್ದರೆ ಅವರು ಹಗಲುಕನಸಿನಲ್ಲಿದ್ದಾರೆ" ಎಂದು ಭಾಯಿ ಪರಮಾನಂದರ ಟೀಕೆ.

(೩ನೇ ಪುಟದಿಂದ ಮುಂದರಿದುದು.)

ವಾದರೆ ಮುಂದಿನ ಗುಪ್ತ ಸಿದ್ಧತೆಗಾಗಿ ಹಿಟ್ಲರನನ್ನಡಗಿಸಿ ಇಡಲು, ಬರ್ಲಿನ್ ಧಾಳಿಯಾರಂಭವಾದೊಡನೆಯೇ 'ಫ್ಯೂರರ್ ಬರ್ಲಿನಿಗೆ ಬಂದು ಗುಂಡು ಬೀಳುವಲ್ಲಿ ನಿಂತಿದ್ದಾನೆಂಬುದನ್ನು ಜರ್ಮನಿಯೂ ಜಗತ್ತೂ ತಿಳಿದಿರಲಿ' ಎಂದು ಘೋಷಿಸಿ, ಆ ಕಥಾವಸ್ತುವಿನಲ್ಲಿ ಅಸ್ವಾಭಾವಿಕತೆ ಕಾಣದಂತೆ ಆತನನ್ನು ಈ ರೀತಿ 'ಕೊಲ್ಲುವದು' ಗೋಬೆಲ್ಸ್ ಹಿಮ್ಲರರಂತಹ ವಿಚಕ್ಷಣರಿಗೆ ಭೂಷಣವೇ. ಸತ್ತವಾರ್ತೆ ಕೊಡುವ ಮೊದಲು '48 ಘಂಟೆಗಳೊಳಗೆ ಸಾಯಲಿದ್ದಾನೆ' ಎಂದುದೂ ಈ ಕಥಾ ಪುಷ್ಟಿಗಾಗಿಯೇ. ಪ್ರತ್ಯಕ್ಷ ರಂಗದಲ್ಲಿ ಜಯಶ್ರೀಯನ್ನೊಲಿಸುವ ಸಂದರ್ಭ ತಪ್ಪಿತು, ತಾನು ಜರ್ಮನರ ಪ್ರತಿಯೊಂದು ರಕ್ತಾಣುವಿಗೂ ಸೇರಿಸಿರುವ 'ರಾಷ್ಟ್ರೀಯ ಸಮತಾವಾದಿ ಜರ್ಮನ್ ಶ್ರೇಷ್ಠತ್ವ'ವನ್ನು ಗುಪ್ತ ಹೋರಾಟಕ್ಕೆ ಉಪಯೋಗಿಸಿಕೊಳ್ಳುವದೊಂದೇ ಉಳಿದಿರುವ ಉಪಾಯ; ಈ ಅವಧಿಯೊಳಗೆ ಮಿತ್ರಪಾಳಯದೊಳಗಿರುವ ಬಿಕ್ಕಟ್ಟು ಹೋರಾಟವಾಗಿ ಪರಿಣಮಿಸಬಹುದು. ತ್ರಿರಾಷ್ಟ್ರಗಳ ಕಟುಗ್ರ ವೈರಿಯಾದ ತಾನು ಮತ್ತು ತನ್ನ ಘೋರಣೆ ಮಾಯವಾಗಿ ಎರಡೂ ರಾಷ್ಟ್ರಗಳಿಗೆ ಶರಣಾಗಿ ಒಂದು ರಾಷ್ಟ್ರವನ್ನುಮಾತ್ರ ದ್ವೇಷಿಸುವ ಅಧಿಕಾರಿ ಮತ್ತು ಧೋರಣೆಯನ್ನು ಮುಂದೊಡ್ಡಿದರೆ ಮತ್ತೆ ಆ ತ್ರಿರಾಷ್ಟ್ರಗಳು ತಮ್ಮೊಳಗೇನೇ ಹೋರಾಡಿಕೊಳ್ಳುವದು ಖಂಡಿತ—ಎಂಬ ನಿರೀಕ್ಷೆಯಿಂದ ಹಿಟ್ಲರ್ ನಾಟಕ ನಡೆದಿರಲೂ ಬಹುದು. ಅಂತೆಯೇ ಹಿಟ್ಲರನಿಗೆ ಮರಣವಿದೆ; ಹೀಗೆ ಸಾಯುವುದೇ ಚಂದ; ಲೋಕವು ಅವನಿಗೆ ಸಾವಿಲ್ಲವೆಂದು ಹೆದರಿ ಹೋಗಿದೆಯಾದ್ದರಿಂದ ಇನ್ನೂ ಸಂದೇಹದಲ್ಲಿದೆ ಎನ್ನಬಾರದೇಕೆ? ಹೇಗೂ ಇರಲಿ; ಲೋಕಕ್ಕೂ ತುಂಡು ಮೀಸೆಯು ಅರಿ ಅಳತೆಯು ಆ ಮೂರ್ತಿಗೂ ಸಂಬಂಧವಿಲ್ಲ. ಸಂಬಂಧವಿನ್ನ ಸರ್ವಾಧಿಕಾರೀ, ಲೋಕಕಂಟಕ, ನಾಜೀನಾಯಕ ಹಿಟ್ಲರನೀಗ ಸತ್ತಿರುವದು ನಿಜ. ಮರುಜನ್ಮ ಪಡೆದು ಬರಲಾರನಾದರೆ ಶಾಶ್ವತವಾಗಿ ಸತ್ತ; ಇಲ್ಲವೇ ಸದ್ಯಕ್ಕಾದರೂ ಸತ್ತ! ಆದ್ದರಿಂದ ಹಿಟ್ಲರ್ ಸತ್ತ. ಹಿಟ್ಲರ್ ಮುಸಲನಿಗಳ ಸಾವಿಗೆ ಮಧ್ಯದಲ್ಲಿ ಎರಡೇ ದಿನಗಳ ಅಂತರ. ಕೃತಯುಗದಲ್ಲಿ ಹಿರಣ್ಯಾಕ್ಷ-ಹಿರಣ್ಯಕಶಿಪು, ತ್ರೇತಾದಲ್ಲಿ ರಾವಣ-ಕುಂಭಕರ್ಣ, ದ್ವಾಪರದಲ್ಲಿ ಶಿಶುಪಾಲ-ದಂತವಕ್ತ್ರ, ಕಲಿಯುಗದಲ್ಲಿ ಹಿಟ್ಲರ್-ಮುಸಲನಿ! ಶಾಪಗ್ರಸ್ತ ಜಯ-ವಿಜಯರ ನಾಲ್ಕನೇ ಜನ್ಮ ಮುಗಿಯಿತು, ಭೂಭಾರ ತಗ್ಗಿತು! ಹಿಟ್ಲರ್ ಮುಸಲನಿಗಳ ರಕ್ತ ರಂಗು ತಾಗಿದ ಕೆಂಪು ಧ್ವಜವು ರಮ್ಯತೆಹೆಚ್ಚಿ ಜಗದಾಕಾಶದಲ್ಲಿ ಪಟಪಟಿಸಿ ಹಾರುತ್ತಿದೆ.

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ: 1908)
1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥೆಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ: 1910
ಕಳೆದ ೩೫ ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲು **53** ಲಕ್ಷ ವಿಮಾ ವ್ಯವಹಾರದ ಗಣನೀಯ ಬೆಳವಣಿಗೆ
ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

CHAMPAE'S
Snow & Castrex
(Sole Distributers for India)
Sukhananda Stores
Santhekatte, UDIPI, S. K.

ಉಡುಪಿ

ನೇಯಿಗೆ ಮಜೂರ ಮಾಲಕರ ವಿವಾದ ತೀರ್ಮಾನ ಹಾರಿಗೆರಹಾಜಿ ...ಪಕ ಮಜೂರರಿಗಾಗಿ ನೇಯಿಗೆ ಕೆಲಸಗಾರರು ...ನಡಿದ್ದ ಮತ್ತು ಮಾಲಕರವನ್ನೂ ...ದ್ದ ಕಳವಳದ ತೀರ್ಮಾನಕ್ಕಾಗಿ ಶ್ರೀ ಪಿ. ಸೀನ ಶೆಟ್ಟಿಗಾರ ಕರೆಯಲ್ಪಟ್ಟ ಪಂಚಾಯತದಾರ ಸಮಿತಿಯು ತಾ ೧ನೇ ... ...ನಸಯು ...ಪ್ರೆಸ್ ಮಾಳಿಗೆಯಲ್ಲಿ ದಾ ಕೆ ... ...ಗಳ ಅಧ್ಯಕ್ಷತೆಯಲ್ಲಿ ಸೇರಿತು. ಮಜೂರರ ಮತ್ತು ಮಾಲಕರ ಸಂಘಗಳ ಅಧಿಕಾರೀ ಪ್ರತಿನಿಧಿಗಳೂ ಇತರರೂ ಹಾಜರಿದ್ದು ಇಕ್ಕೆಡೆಯ ವಾದಗಳನ್ನೂ ಕೂಲಂಕುಷವಾಗಿ ಪರ್ಯಾಲೋಚಿಸಲಾಯಿತು. ಶ್ರೀಗಳಾದ ಡಾ। ... ಪೈ, ಸೇಟ್ ನಾರಾಯಣ್ ನಾ... ಕೆ ಎಚ್, ಶೆಟ್ಟಿ, ... ವಿ ... ನಿದ್ದ ಸಾವಜನಿಕರ ತೀರ್ಮಾನ ಸಮಿತಿಯು 40ರ ನೂಲಿಗೆ ಯಾರ್ನ 10ಸ್ಕೆಯಂ... ...ಯೂ 60ಕ್ಕ 0 1 4ಸ್ಕೆಯಂತೆಯೂ ಇದೇ ... 700ವರೆ ಮಜೂರಿಯೇರಿಸಿಕೊಡಬೇಕೆಂದು ತೀರ್ಮಾನಿಸಿ ಒಪ್ಪಂದಪತ್ರವಾಯಿತು

ಮದ್ರಾಸು ಕೇಂದ್ರ ಸಹಕಾರಿ ಭೂಮಿ ಅಡವಿನ ಬೇಂಕಿನ ಉಪಾಧ್ಯಕ್ಷ ಗೋದಾವರಿ ಜಿಲ್ಲೆಯವರಾದ, ಶ್ರೀ ವಿ ರಾಮಮೂರ್ತಿಪಂತಲು, ಬಿ. ಎ., ಬಿ ಎಲ್, ಸಹಾಯಕ ಕಾರ್ಯದರ್ಶಿಗಳಾದ ಶ್ರೀ ಕೆ ರಂಗದೇಶ ಅಯ್ಯಂಗಾರ್, ಬಿ ಎ, ಬಿ ...ಲ್ ಮತ್ತು ಕೊಯಮುತ್ತೂರಿಂದ ದಕ್ಷಿಣ ಭಾಗದ ಅಡವಿನ ಬೇಂಕುಗಳ ಡಿಪ್ಯುಟಿ ರಿಜಿಸ್ಟ್ರಾರರಾದ ಶ್ರೀ. ಸಿ ಕಣ್ಣನ್ ನಾಯರ್ ಇವರುಗಳು ಇಲ್ಲಿಗೆ ತಾ. 29-4-45ರಲ್ಲಿ ಬಂದಿದ್ದರು ಪಶ್ಚಿಮ ಕರಾವಳಿಯಲ್ಲಿರುವ ಸಹಕಾರಿ ಭೂಮಿ ಅಡವಿನ ಬೇಂಕುಗಳು ಸುವ್ಯವಸ್ಥಿತವಾಗಿ ನಡೆಯದಿರಲು ಕಾರಣಗಳನ್ನು ಪರಿಶೀಲಿಸಿ ಅದರಲ್ಲಿರುವ ತೊಡಕುಗಳನ್ನು ಬಗೆಹರಿಸುವ ಸಲುವಾಗಿ ಅದೇ ದಿನ ಸಾಯಂಕಾಲ ಘಂಟೆ ಆರಕ್ಕೆ ಸ್ಥಳೀಯ ಕೋಓಪರೇಟಿವ್ ಸ್ಟೋರ್ಸ್ಸಿನ ಆಫೀಸಿನಲ್ಲಿ ... ಲವು ಮಂದಿ ಮಹನೀಯರ ಸಭೆಯೊಂದು ಕರೆಯಲ್ಪಟ್ಟಿತ್ತು. ಶ್ರೀಗಳಾದ ಕೆ ಜೆ ಬಿ... ..., ಡಾ. ಮಾಧವ ಪೈ, ಸಿ ಪಿ ಆಚಾರ ಪಿ ಪದ್ಮನಾಭರಾವ್ ಮತ್ತು ಕಲ್ಯಾಡಿ ಗುರುರಾಜರಾವ ಇವರೇ ಮೊದಲಾದವರು ಭಾಗವಹಿಸಿದ್ದರು ಸಹಕಾರಿ ಭೂಮಿ ಅಡವಿನ ಬೇಂಕುಗಳಲ್ಲಿ ಈಗ ನಡೆಯುತ್ತಿರುವ ಬಡ್ಡಿ ದರವನ್ನು ಕಡಿಮೆ ಮಾಡುವ ಸಲುವಾಗಿ ಸುದ...ಸು ಸರಕಾರದ ಕಡೆ ಮನವಿ ಹೋಗಿರುವುದೆಂದೂ, ಮೂಲಗೇಣಿ ಒಕ್ಕಲುಗಳಿಗೆ ಮೂಲಗೇಣಿ ಹಕ್ಕಿನ ಮೇಲೆ ಸಾಲಕೊಡಲಾಗುವದೆಂದೂ, ಭೂಮಿಯನ್ನು ಸುಧಾರಿತ ರೀತಿಯಲ್ಲಿ ಕೃಷಿ ಮಾಡುವವರೇ ಯಾ ಮದ್ಯ ಪಡಿಸುವ... ...ರಿ ಹಳೇ ಸಾಲಗಳನ್ನು ತೀರಿಸುವರೇ 20 ವರ್ಷದ ಸುಲಭ ಕಂತುಗಳಿಂದ ಮರುಪಾವತಿ ಮಾಡುವ ಶರ್ತದ ಮೇಲೆ ರೂ 1500 ರವರೆಗೆ ಒಬ್ಬ ಪಟ್ಟೇದಾರನಿಗೆ ಆಸ್ತಿ ಜವಾಬುದಾರಿ ಮೇಲೆ ಸಾಲಕೊಡಲಾಗುವದೆಂಬುದಾಗಿ ಶ್ರೀ ರಾಮಮೂರ್ತಿ ಪಂತಲುಗಳು ಹೇಳಿದರು

ಈ ಪ್ರಾಂತ್ಯದ ಕೆಲವು ಭೂಮಿಗಳ ... ...ಲವನ್ನೀಯಲು ಇರುವ ಕೆಲವು ತೊಡಕುಗಳ ಪ್ರತಿ ಅವರ ... ಮಾಡಿದಾಗ ... ...ತಾ ನಿಯೋಗದ ಹೊ...ಗಾರಿಕೆಗಳನ್ನು ನಿವಾರಿಸಲು ಸರಕಾರವನ್ನು ಕೂಡಲೇ ಕೇಳಿಕೊಳ್ಳುವುದಾಗಿ ಭರವಸೆಯನ್ನು ಕೊಟ್ಟರು ಮತ್ತು ಮಂಗಳೂರು ಉಡುಪಿ ಕೇಂದ್ರದ ಬೇಂಕುಗಳ ಏಳಿಗೆಯನ್ನು ಹಾರೈಸಿ ಇನ್ನು ಮುಂದಾದರೂ ಈ ಕೇಂದ್ರಗಳಲ್ಲಿ ... ಕೆಲಸವು ಸಾಗುವಂತೆ ಮಾಡಲು ವರ್ಷಾಂತರ ಮಟ್ಟಿಗೆ ಪ್ರತಿಬೇಂಕಿಗೆ ರೂ. 800/-ನ್ನು ಕೇಂದ್ರ ಬೇಂಕಿನ ಕಡೆಯಿಂದ ಧನಸಹಾಯ ವನ್ನೀಯುವುದಾಗಿ ... ... ಉಡುಪಿ ಸಹಕಾರಿ ಭೂಮಿ ಅಡವಿನ ಬೇಂಕಿನ ಕಾರ್ಯದರ್ಶಿಗಳಾದ ಶ್ರೀ. ಕಲ್ಯಾಡಿ ಗುರುರಾಜರಾಯರು ಬಂದ ಅತಿಥಿಗಳಿಗೆ ... ...ರವನ್ನೂ ಧನ್ಯವಾದವನ್ನೂ ಅರ್ಪಿಸಿದ ಬಳಿಕ ಸಭಾಂತ್ಯವಾಯಿತು. ಶ್ರೀಯುತರು ... ಮರುದಿನ ಸಾಯಂಕಾಲ ಮಂಗಳೂರು ಮಾರ್ಗವಾಗಿ ತಲಚೇರಿಗೆ ಪಯಣಬೆಳೆಸಿದರು

DEPARTMENT OF INDUSTRIES AND CIVIL SUPPLIES

PAPER SUPPLY.

SOME IMPORTANT PROVISIONS OF THE MADRAS PAPER CONTROL (LICENSING, ECONOMY AND DISTRIBUTION) ORDER, 1945 WHICH CAME INTO FORCE ON 23rd APRIL 1945.

WHOM IT AFFECTS:—

IT AFFECTS EVERYONE WHO WANTS PAPER REGULARLY--BUT MORE PARTICULARLY

(a) PRINTERS
(b) PUBLISHERS OF BOOKS AND PERIODICALS PRINTED ON PAPER OTHER THAN NEWSPRINT
(c) BOOK-BINDERS & MANUFACTURERS OF STATIONERY

(hereafter called the QUOTA HOLDERS)

(d) PUBLIC UTILITY CONCERNS
(e) JOINT STOCK COMPANIES INCLUDING BANKS & INSURANCE COMPANIES
(f) BUSINESS HOUSES & LARGE SHOPS
(g) FACTORIES (INCLUDING BEEDI ESTABLISHMENT)

(D to G are refered to hereafter as Permit Holders)

(h) Paper Mills and M Agents
(i) IMPORTERS.
(j) WHOLESALE & RETAIL DEALERS

IMPORTANT PROVISIONS OF THE ORDER.

1. **"Quota Holders"**. They should apply to the Provincial Paper Controller, Chepauk, Madras, before the 23rd May 1945 in form IV prepared if need be in manuscript. A fee of Rs. 2-8-0 should be remitted into a treasury or a branch of the Imperial Bank of India or the Reserve Bank of India to the credit of "L. II. 3, Section (iv), Micellaneous-other Micellaneous Receipts" Those who have already submitted an application in this Form through a Paper Control Inspector need not apply again but they should remit the fee. They are also advised to remind the Provincial Paper Controller if they do not receive a Paper Issue Card before the 1st July 1945

2. **"Permit Holders"** Everyone other than quota holders who requires more than 20lbs of paper per quarter, whether he holds a permit under the Madras Paper Dealers' Licensing Order or not should apply to the Provincial Paper Controller before the 23rd May 1945 in Form VII prepared, if need be in manuscript. No fee need be remitted. Those who have already submitted an application in this Form through a Paper Control Inspector need not do so again but they are advised to remind the Provincial Paper Controller if they do not receive a Paper Issue Card before the 1st July 1945

3. **"Licencees"** D... in Paper should take out a licence from the Provincial Paper Controller. Existing licences ... to be valid until their validity ceases. In many districts printers, binders and stationery manufacturers have taken out licences instead of permits. As licences are intended for the dealers in paper only such other persons who are not dealers, but who hold a licence issued under the old order should now apply for cancellation of their licences and for issue of Paper Issue Card instead

4. **"Importers"**. Importers of paper and those who receive imported paper from outside the Province should report to the Provincial Paper Controller within three days after the release of the consignments and they should take his instructions with regard to their distribution.

5. **MILL AGENTS**. All persons who receive paper directly from the mills or from any place outside the Province should report the fact to the Provincial Paper Controller within 5 days of the receipt of paper and such paper should not be used, sold or distributed except under the instructions of the Provincial Paper Controller. All persons receiving paper from a manufacturer of paper should apply to the Provincial Paper Controller for authorisation to do so.

6. Mill Agents may sell paper to a consumer only through a dealer. They will continue to prepare distribution lists showing the allocation to consumers but the delivery should be made only through dealers

7. It is no longer necessary to get railway receipts and invoices counter-signed before taking delivery of consignments of paper.

8. **EDUCATIONAL INSTITUTIONS** Educational Institutions need not apply for a Paper Issue Card or a Permit. The Provincial Paper Controller will ascertain from the District Educational Officers the requirements of Schools and Colleges in each District and will make separate arrangements to supply paper for use in these institutions. Till arrangements are made to supply paper in accordance with consolidated list prepared by the District Educational Officers. Schools may continue to obtain the requirements of paper as hitherto. They have for this reason been exempted from the restriction regarding the maximum quantity of paper that could be purchased in retail.

[See page 7]

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI,** (S. K.)

ANNOUNCEMENT.

A branch of the Bank will be opened at CANNANORE shortly.

ಉಡುಪಿ, ಗುರುವಾರ ೧೦-೫-೧೯೪೫

ವಿಜಯ!

ಲೋಕವನ್ನು ಮುಗ್ಗರಿಸಿದ್ದ ದೊಡ್ಡ ಘೋರವೊಂದು ಇಳಿಯಿತು. ಕಳೆದ ಐದು ವರುಷ ಏಳು ತಿಂಗಳುಗಳಲ್ಲಿ ಜಗತ್ತನ್ನಾವರಿಸಿದ್ದ ಕಾರಿರುಳು ತಾ ೯-೫ 15ರಲ್ಲಿ ಮುಗಿಯಿತು! ಮುಂಜಾನೆಯ ಕುಕ್ಕುಟ ಕೂಗುತ್ತಿದ್ದಂತೆ-ಬೆಳಗಿನ ನಗಾರಿ ಹೊಡೆಯುತ್ತಿದ್ದಂತೆ-ಉದಯರಾಗ ಹಾಡಲ್ಪಡುತ್ತಿದ್ದಂತೆ ಯುರೋಪಿನಲ್ಲಿ ಶಾಂತಿರವಿ ಮೂಡಿ ಬಂದಿದ್ದಾನೆ; ವಿಜಯದುಂದುಭಿ ಮೊಳಗಿದೆ. ಯುರೋಪಿನ ಸರ್ವರಂಗಗಳಲ್ಲೂ ಜರ್ಮನರು ಶಸ್ತ್ರ ಕೆಳಗಿಟ್ಟು ಶರಣು ಬಂದರೆಂಬ ವಾರ್ತೆ ಬಂದಿದೆ. ನಾಜೀ ವಿಮಾನ, ನಾವೆ,ಸೇನೆಗಳನ್ನು ನಿಶ್ಶಸ್ತ್ರಗೊಳಿಸಿ, ಬಲಪಾಶನ್ನು ಪಡಿಸುವ-ಜರ್ಮನ್ ಸೇನಾ ರಾಕ್ಷಸನನ್ನು ಬತ್ತಲೆಗೊಳಿಸಿ ಮೂಲೆ ಸೇರಿಸುವ-ಕೊನೆಯ ಕಾರ್ಯವೀಗ ಭರದಿಂದ ಸಾಗಿದೆ. ಚರ್ಚಿಲ್ಲರ 'ಯುದ್ಧ ನಿಂತಿತು' ಘೋಷಣೆಯೊಡನೆ ತಾ. ೮ರಲ್ಲಿ ಯುರೋಪು ವಿಜಯ ಜಗಜ್ಜಾಹಿರಾಯಿತು; ಬ್ರಿಟಿಷ್ ಸಾಮ್ರಾಜ್ಯದಲ್ಲಿ ಆನಂದೋತ್ಸವಕ್ಕಾಗಿ ಎರಡು ದಿನಗಳ ರಜೆ-ಜಗತ್ತಿನ ಮೂಲೆ ಮೂಲೆಯಲ್ಲೂ ಸಂತೋಷ ಕೋಲಾಹಲ-ಪ್ರತಿಯೊಬ್ಬನ ಭಾವನೆಯಲ್ಲೂ ಒಂದು ನವಚೇತನ-ಈ ಆನಂದಾನುಭವ ವರ್ಣನಾತೀತ!

ಕಾಲಗರ್ಭದಲ್ಲೇನು ಅಡಗಿದೆ?-ರಾಷ್ಟ್ರಗಳ ಭವಿಷ್ಯದಲ್ಲೇನು ಬರೆದಿದೆ?-ಲೋಕನಾಯಕರ ಯೋಚನೆಯೆತ್ತ ಹರಿದಿದೆ? ಎಂಬ ಗುಟ್ಟು ಈ ಮೊದಲು ತಿಳಿದುದೂ ಇಲ್ಲ; ಇನ್ನು ತಿಳಿಯುವಂತೆಯೂ ಇಲ್ಲ. ಮುಂದೇನೇ ಬರಲಿ, ಅಗ್ನಿಕುಂಡದಿಂದ ಯುರೋಪು ಈ ರೀತಿ ಮೇಲೆದ್ದು ಬರುವದೆಂದು ಮೂರು ವರುಷಗಳಿಗೆ ಮೊದಲು ಯಾರು ತಾನೇ ಊಹಿಸಿದ್ದರು? ಯುರೋಪಿನ ಸರ್ವೆಡೆಗಳಲ್ಲೂ ವಿಜಯಧ್ವಜವೇರಿಸಿದ್ದ ನಾಜಿಗಳು ಬಿಳಿ ಧ್ವಜ ಹಾರಿಸುವ ದಿನವೆಂದು ತಾರೀಕು ಪಟ್ಟಿಯಲ್ಲಿ 1945ನೇ ಮೇ ಎಕ್ಕೊಂದು ಗೆರೆಯೆಳೆಯುವ ಧೈರ್ಯ ಯಾವ ಜ್ಯೋತಿಷಿಗಿದ್ದಿತು? ಆದರೆ ಕನವರಿಸದಿದ್ದುದು ಕೂಡಾ ಕಾಲಗರ್ಭದಲ್ಲಿರುತ್ತದೆ. ಅಪಜಯವೊಂದೇ ಅದೃಷ್ಟದಲ್ಲಿದ್ದ ಜರ್ಮನ್ ರಾಷ್ಟ್ರವು ೨೫ವರುಷಗಳ ಅಂತರ ಬಿಟ್ಟು ಎರಡು ಬಾರಿ ಕುಸ್ತಿ ಹಿಡಿಯಿತು; ಎರಡು ಸಲವೂ ಅಪ್ಪಳಿಸಲ್ಪಟ್ಟಿತು. ಇನ್ನು ತಲೆಯೆತ್ತುವಂತಿಲ್ಲ. ಕಳೆದ ಮಹಾಯುದ್ಧಾಂತ್ಯದಲ್ಲಿ ಜರ್ಮನಿಯನ್ನು ಬತ್ತಲೆಗೊಳಿಸಿ 'ಹೋಗು ಬಡಪಾಯಿ!' ಎಂದು ಮಿತ್ರರಾಷ್ಟ್ರಗಳು ಬಿಟ್ಟಿದ್ದುವು; ಈ ಬಾರಿ ಉಸಿರಾಡದಂತೆ ಎದೆ ಮೆಟ್ಟಿ ನಿಲ್ಲಲಿವೆ! ಆದ್ದರಿಂದ ತಾ ೮ರಲ್ಲಾದುದು ಯುರೋಪಿನ ಯುದ್ಧಾಂತ್ಯವಷ್ಟೇ ಅಲ್ಲ- ಜರ್ಮನ್ ರಾಷ್ಟ್ರೀಯತೆಯ ಆಯುಷ್ಯಾಂತ್ಯ ಕೂಡಾ! ಏನೊಂದೂ ಸಿದ್ಧತೆಯಿಲ್ಲದೆ, ತನ್ನಷ್ಟೇ ತಯಾರಿಯಿಲ್ಲದ್ದ ಫ್ರಾನ್ಸನ್ನು ಕಟ್ಟಿಕೊಂಡು ಇಂಗ್ಲಂಡು ಯುದ್ಧಕ್ಕಿಳಿದ ರೀತಿ-ಆದಿಯಲ್ಲಿ ಅಮೇರಿಕದ ಸಹಾಯ ಮತ್ತು ಕೊನೆಯಲ್ಲಿ ಸಹವ್ಯವಸಾಯಿತ್ವ ದೊರೆತ ಬಗೆ ನಾಜಿಗಳ ಸರ್ವಶಕ್ತಿಯನ್ನು ಹಿಸುಕಿ ಹಿಪ್ಪೆಮಾಡಲು ರಶ್ಯ ಮುಂದಾದ ಪ್ರಸಂಗ, ಇವುಗಳನ್ನೆಲ್ಲಾ ನೆನಸುವಾಗ ಶಹಭಾಸ್ ಕೊಡಬೇಕು- ಬ್ರಿಟಿಷ ಭಾಗ್ಯಕ್ಕೆ!

ಜರ್ಮನ್ ಯುದ್ಧ ಮುಗಿಯಿತು; ಜಪಾನ್ ಯುದ್ಧವೊಂದೇ ಉಳಿಯಿತು

ಶರಣು ಬಂದ ಜರ್ಮನಿಗಾವ ರೀತಿಯ ಸಂಭಾವನೆ ಎಂಬ ವಿವರ ತಿಳಿದುಬಂದಿಲ್ಲ ಇಂಗ್ಲಂಡು, ಅಮೇರಿಕ, ರಶ್ಯಗಳೆದಿರಲ್ಲಿ ಜರ್ಮನಿ ಶಸ್ತ್ರ ಕೆಳಗಿಟ್ಟು ದೊಗ್ಗಾಲೂರಿತು; ಅದರ ತಲೆಯ ಮೇಲೆ 15 ಪುಟಗಳ ಶಾಂತಿಕರಾರುಗಳನ್ನು ತ್ರಿರಾಷ್ಟ್ರಗಳು ಹೇರಿದುವು-ಇದು ವರೆಗಿನ ವಾರ್ತೆಯಿಷ್ಟೆ.

ಇನ್ನು ಜಪಾನ್ ಯುದ್ಧ ಆದಿನ್ನು ತಿಂಗಳು ಸಂಖ್ಯೆಯಿಂದ ಗುಣಿಸಿ ನೋಡುವ ವಿಷಯ ಹೊರತು ಗಣಿಸತಕ್ಕ ಸಂಗತಿಯಲ್ಲ. ರಶ್ಯವೂ ಧಾಳಿಯಿಟ್ಟರೆ ಜಪಾನು 1945ನ್ನು ದಾಟುವಂತಿಲ್ಲ (ಆಗ ಭಾರತವು ತನ್ನ ಅದೃಷ್ಟ ರೂಪಿಸಿಕೊಳ್ಳುವ ಸುವರ್ಣ ಸಂಧಿಯೊದಗಲೂ ಬಹುದು) ಆದ್ದರಿಂದ ಯುರೋಪು ವಿಜಯವೇ 'ವಿಜಯ!' ಇನ್ನುಳಿದುದು ಮನೆಮುರಿದ ಮೇಲೆ ಮಗ್ಗಲ ಗೋಡೆ ಕೆಡಹುವ ಕೆಲಸ ಮಾತ್ರ!

ರಶ್ಯವು ಜಪಾನಿನ ಮೇಲೆಬೀಳುವದೆ? ತಾಟಸ್ಥ್ಯ ವಹಿಸುವದೆ? ಮೈತ್ರಿ ಸಂಪಾದಿಸುವದೆ? ಮೊದಲನೆಯದೇ ಸಂಭವನೀಯ; ಎರಡನೆಯದು ಅಸಾಧ್ಯ, ರಶ್ಯಾ ಮತ್ತು ಬ್ರಿಟನ್ ಅಮೇರಿಕಗಳ ಸಂಬಂಧ ಪೂರ್ತಿ ಕಡಿಯುವ ಸ್ಥಿತಿ ಬಂದರೆ ಮೂರನೆಯದೂ ಸಾಧ್ಯ.

ನಕಾಶೆಯಲ್ಲಿ ಜರ್ಮನಿಯು ಮಾಜುತ್ತಾ ಬಂದಂತೆ, ರಶ್ಯ ಮತ್ತು ಇತರ ಮಿತ್ರರಾಷ್ಟ್ರಗಳೊಳಗಿನ ಮನೋಕಲ್ಮಶದ ಕರಿಛಾಯೆ ಬೀಳುತ್ತಾ ಬಂದಿದೆ. ಅದು ಶುದ್ಧೀಕರಿಸಲ್ಪಟ್ಟರೆ ವಿಜಯದೊಂದಿಗೆ ಶಾಂತಿಯೂ ಸಾಧ್ಯ; ಹಾಗಾಗದೆ ಹೋದರೆ ಇದು ಅಶಾಂತಿಯ ವೇಷ ಬದಲಾವಣೆ ಮಾತ್ರ!

ತ್ರಿರಾಷ್ಟ್ರಗಳೊಳಗಿನ ತಿಕ್ಕಾಟವೇ ಮುಂದಿನ ಮುಖ್ಯ ವಿಷಯ.

ಹಿಟ್ಲರನ ಸಾವು ಸಮಸ್ಯೆ!

ಹಿಟ್ಲರನು ನಿಜಕ್ಕೂ ಸತ್ತಿದ್ದಾನೆಂದು ತನಗೆ ನಂಬಲರ್ಹವಾದ ಅಧಿಕೃತ ವಾರ್ತೆ ಬಂದಿದೆ ಎಂದು ಅಮೇರಿಕಾಧ್ಯಕ್ಷ ಟ್ರೂಮೇನರ ಹೇಳಿಕೆ. ಹಿಟ್ಲರನ ಹೆಣವನ್ನು ತಾವು ಕಂಡುಹಿಡಿದೇ ಸಿದ್ಧವೆಂದು ರಶ್ಯನ್ ಯೋಧರು ಪಣತೊಟ್ಟಿದ್ದಾರೆ ಹಿಟ್ಲರ್ ಮುಖ್ಯಾಫೀಸಿನ ಕೋರ್ಟುಯಾರ್ಡಿನಲ್ಲಿ ಆತನ ಪ್ರಮುಖ ಕಾರ್ಯಕರ್ತರಾದ ಹಲವರ ಶವಗಳು ದೊರೆತಿವೆ. "ಹಿಟ್ಲರನೇನಾದನೆಂಬುದೊಂದು ಸಮಸ್ಯೆಯಾಗಿಯೇ ದೀರ್ಘಕಾಲ ಉಳಿಯುವಂತಿಲ್ಲ. ಅವ 'ವೀರಸ್ವರ್ಗ ಹತ್ತಿದನೆಂದು ಹಂಡಿರುವ ಅಪಹಾಸ್ಯಕರ ಕಟ್ಟುಕಥೆಗಳು ನಿಲ್ಲಲಿವೆ' ಎಂದು ರಶ್ಯದ ಪ್ರಾವ್ಡಾ ಭರವಸೆಯಿತ್ತಿದೆ

ಸೌ॥ ರುಸವೆಲ್ಟರ ಸಂಶಯ

"ಹಿಟ್ಲರ್ ಶವದ ಫೋಟೋವನ್ನು ಕಣ್ಣಾರೆ ನೋಡದೆ ನನ್ನ ಸಂಶಯ ನಿವಾರಣೆಯಾಗದು. ಹಿಟ್ಲರನ ಪಕ್ಷದಲ್ಲಿ ತನ್ನ ಪ್ರತಿರೂಪಿಯೊಬ್ಬನಿದ್ದನೆಂಬುದು ಸರ್ವಶ್ರುತ. ಹಿಟ್ಲರನ ಹೆಣ ನೋಡಲಿಕ್ಕೆ ಸಿಕ್ಕಿ ಅವನ ನಿಕಟಾನುಯಾಯಿಗಳಲ್ಲದವರಿಂದ ಆತನ ಶರೀರದ ಸೂಕ್ಷ್ಮ ಪರಿಚಯವಿರುವವರಿಂದ ಅದು ಪರೀಕ್ಷಿಸಲ್ಪಟ್ಟು ಖಚಿತವಾಗುವ ವರೆಗೆ, ಹಿಟ್ಲರ್ ಸಾಯದೆ ಅಡಗಿಕೊಂಡಿದ್ದಾನೆ ಎಂದು ಅನುಮಾನಪಡುವದು ತಪ್ಪಲ್ಲ'-ಎಂದು ಮಿಸೆಸ್ ರುಸವೆಲ್ಟರು ಬರೆದಿದ್ದಾರೆ.

ರುಂಡಸ್ಟೆಡ್ ಹೌದನ್ನುತ್ತಾನೆ!

ಪಶ್ಚಿಮರಂಗದಲ್ಲಿ ನಾಜೀ ಸರ್ವಸೇನಾನಿಯಾಗಿದ್ದು ಈಗ ಬ್ರಿಟಿಷ್ ಕೈದಿಯಾಗಿರುವ ಮಾರ್ಶಲ್ ವೋನ್ ರುಂಡಸ್ಟೆಡನನ್ನು ವಿಚಾರಿಸಿದಾಗ ಹೇಳಿದ: "ಫ್ಯುರರ್ ಸತ್ತನೆಂದು ನನಗೆ ಖಾತ್ರಿಯಾಗಿದೆ ಒಂದೋ ಜಖಮ್‌ಗೊಂಡು ಆ ಘಾಯದಿಂದಲೇ ಆತ ಸತ್ತಿರಬೇಕು; ಬಹುತೇಕವಾಗಿ ಹೋರಾಟ ಕೊಡುವಲ್ಲೇ ಮಡಿದಿರಬೇಕು; ಅಥವಾ ಪರಿಸ್ಥಿತಿಯ ಒತ್ತಡದ ಪರಿಣಾಮವಾಗಿ ಆರೋಗ್ಯಕೆಟ್ಟು ಸತ್ತಿರಬೇಕು. ಆತ ಆತ್ಮಹತ್ಯೆಮಾಡಿಕೊಂಡನೆಂಬುದನ್ನು ನಾನು ಸರ್ವಥಾ ನಂಬಲಾರೆ, 'ಅವನ ಸ್ವಭಾವಕ್ಕದು ವಿರುದ್ಧ". ಹಿಟ್ಲರ್ ಅಡಗಿ ಕುಳಿತಿಲ್ಲವೇ? ಎಂದು ಒತ್ತಾಯಿಸಿ ಕೇಳಿದಾಗ ರುಂಡ್‌ಸ್ಟೆಡ್ ಹೇಳಿದ: "ಸಾಧ್ಯವೇ ಇಲ್ಲ. ನನಗೆ ತಿಳಿದಮಟ್ಟಿಗೆ ಫ್ಯುರರನ ಗುಣನಡತೆಗಳಿಗದು ವಿರುದ್ಧ. ಮೇಲಾಗಿ ಅವ ಹೋಗುವವನಾದರೂ ಎಲ್ಲಿಗೆ?" ಪೋರ್ಚುಗಲ್ ಮೊದಲಾದ ಕಡೆಗಳ ಇಗರ್ಜಿಗಳಲ್ಲಿ ಜರ್ಮನರು ಕಣ್ಣೀರ ಅರ್ಘ್ಯದೊಡನೆ ಹಿಟ್ಲರನ ಆತ್ಮಶಾಂತಿಗಾಗಿ ಪ್ರಾರ್ಥಿಸಿದ್ದಾರೆ.

ನಾಜೀ ಧುರೀಣರ ಅಂತರ್ಧಾನ!

ಜರ್ಮನಿ ಶರಣು ಬರುವಾಗ ಅದರ ಮುಖ್ಯ ಪ್ರಮುಖರಾರೂ ಮುಂಗಡೆಯಲ್ಲಿ ಇಂಗ್ಲಂಡು ಅಮೇರಿಕ ಮತ್ತು ರಶ್ಯಗಳ ಕಟ್ಟನ್ನೊಡೆಯುವ ಕುಯುಕ್ತಿಯ ಶರಣಾಸೂಚನೆಯನ್ನು ಮುಂದಿಟ್ಟು ಅದಕ್ಕೆ ಬೆಲೆ ದೊರೆಯದ ಕೂಡಲೇ ಹಿಮ್ಲರನ ಸುದ್ದಿಯೂ ಇಲ್ಲ. ಜರ್ಮನಿಯೀಗ ಸಂಪೂರ್ಣ ಶರಣುಬಂದುದರಿಂದ ಬಹಿರಂಗ ಹೋರಾಟ ನಿಂತೀತಾದರೂ ಬಹುಶಃ ಬೂದಿಯೊಳಗೆ ಕೆಂಡವಿದೆ!

ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿಮಿಟೆಡ್, ಉಡುಪಿ

ತಾರೀಕು **9—5—1945**ರಿಂದ

ರಾಜಕಮಲ ವಿರಚಿತ

2ನೇ ವಾರ] ಮಾಲಿ [2ನೇ ವಾರ

ನಾಮದೇವ, ಜ್ಞಾನೇಶ್ವರ ಮೊದಲಾದ ಸಂತರಿಂದಲೂ ಪೂಜ್ಯನೆನಿಸಿಕೊಂಡ ಮಹಾ ಭಕ್ತನೊಬ್ಬನ ಕಥೆ

ಬರುವ ಚಿತ್ರ:- ಶುಕ್ರಿಯಾ.

NOTICE

Pursuant to an order dated 27—3—1945 of the District Munsif of Mangalore, the following properties will be sold by Public Auction by the under-signed at his Office on Sunday the 20th May 1945 at 11-30 A. M

1 Property situated in Nirmarga Village, Mangalore Tq. S. Nos. 167/1-2, 191/3C, Punja 8 ac. 80 cents, assessed at Rs 8—12—0, together with superstructures, trees, etc Upset Price Rs 100

2. Property situated in East Tonse Village, Udipi Taluk

S No.	S. D No	Kissam	Extent A	Extent C	Assessment Rs.	Assessment As.
1	14	Nanja		32	-1	7
1	35A	Punja		28	-	6

together with a bungalow, motor-shed, out-houses trees, etc Upset Price .... Rs 1000

Further particulars and conditions of sale may be had from

Court Road,
MANGALORE.
24—4—1945

E. Gonsalves,
B. A., B. L.,
Advocate

★ ಜರ್ಮನಿ ಶರಣು ಬಂತು! ★
ಯುರೋಪು ಯುದ್ಧ ಮುಗಿಯಿತು!

ನಾಜೀ ಪ್ರಳಯ ನಾಟಕವು ದುಃಖಾಂತಗೊಂಡಿತು. ಕೊನೆಯಂಕದಲ್ಲಿ ಮಿಂಚಿನ ವೇಗದಲ್ಲಿ ಪರದೆಗಳು ಬೀಳಹತ್ತಿದ್ದುವು. ಹಿಟ್ಲರ್ ಜೀವಿಸಿದ್ದಾಗಲೇ ಹಿಮ್ಲರನು ಮಿತ್ರರಾಷ್ಟ್ರಗಳಿಗೆ ಶರಣ ಸೂಚನೆ ಕಳುಹಿ ಭಗ್ನಮನೋರಥನಾದೊಡನೆ ಹಿಟ್ಲರ್, ಗೋಬೆಲ್ಸ್ ಮೊದಲಾದ ಪ್ರಮುಖರೆಲ್ಲಾ ಇತ್ತರೆಂದಾಗಿ ಹಿಮ್ಲರನ ಸುದ್ದಿಯೇ ಅಡ್ಮಿರಲ್ ಡೊಯಿನಿಟ್ಜ್ ಮುಂದ ಬಂದ. ಅನೇಕ ಪಶ್ಚಿಮ ರಂಗದ ಜರ್ಮನ್ ಸೈನಿಕರು ಲಕ್ಷಗಟ್ಟಲೆಯಲ್ಲಿ ಮಿತ್ರರಿಗೆ ಶರಣು ಹೊಗಲಾರಂಭ– ಮಾಂಟಗೋಮೆರಿಯೊಬ್ಬರಲ್ಲೇ 10ಲಕ್ಷ ನಾಜೀ ಸೈನಿಕರ ಜನ– ಎಲ್ಲಾ ರಂಗಗಳ ಮಿಲಿಯಾವಧಿ ಶಟ್ಟುಗ್ರನಾಜೀ ಯೋಧರು ಪಶುಗಳಷ್ಟು ಸಾದುಗೊಂಡು ಶಸ್ತ್ರ ಬಿಸಾಡಿ ಆಂಗ್ಲೋ ಅಮೆರಿಕಾನರ ಪಾಳಯ ಹೊಗಲು ಪ್ರಾರಂಭ– ಯು. ಬೋಟು ಯುದ್ಧ ಡೊಯಿನಿಟ್ಜ್ ಆಜ್ಞಾನುಸಾರವಾಗಿಯೇ ಮುಕ್ತಾಯ! ಆದರೂ ಕೊನೆಗೆ ಅನಿವಾರ್ಯವಾಗಿ ಮೂರು ರಾಷ್ಟ್ರಗಳಿಗೂ ಪೂರ್ತಿ ಶರಣು! ಅಮಿತ ನಾಜೀ ಶಕ್ತಿಯ ಅಣುಮಾತ್ರವೂ ಉಳಿಯದೆ ಸಮೂಲ ಅದೃಶ್ಯ! ಕೊನೆಯ ಪರದೆ ಬಿತ್ತು! ಡೊಯನಿಟ್ಜನ ಸಂಧಾನ ಸೂಚನೆಯೊಡನೆ ಜಪಾನ್ ತಳಮಳಗೊಳ್ಳಲಾರಂಭವಾಗಿತ್ತು. ಜರ್ಮನ್ ಪ್ರತಿಘಟನೆಪೂರ್ತಿ ನಿಂತ ನೇಲಂತರ ಅದರ ಅರ್ಧ ಪ್ರಾಣಹಾರಿರಬೇಕು. ಇನ್ನು ಆಂಗ್ಲೋ ಅಮೆರಿಕಾನರ ಪೂರ್ಣ ಒತ್ತಡ ಜಪಾನಿನ ಮೇಲೆ. ಜ ನ ನ. ಜರ್ಮನಿಯ ಅಂತ್ಯದಿಂದ ಪಾರ ಕಲಿತು ಕೂಡಲೇ ಸಂಪ್ರ ಹೊಡುವದೂ–ಅಷ್ಟು ಕಷ್ಟದೂ ದನ ಸ್ವಪ್ನ ಕಾಲವನ್ನು ದೀರ್ಘವಿಸದೋ? ಎಂಬುದು ಇನ್ನುಳಿದಿರುವ ಪ್ರಶ್ನೆ.

[continued from page 5]

9. **RETAIL SALE** No dealer can sell to any person other than heads of educational institutions and Universities more than one sheet of board or half a pound of paper at a time and not more than 6lbs per month unless such person holds a Paper Issue card or a Permit or a Licence No person who does not hold a permit or a Paper Issue Card or a Licence can possess at any time more than 20lbs or one ream of paper whichever is less or half a cwt. of board or half a gross of postcards This restriction does not apply to local authorities Universities or Educational Institutions recognized by Government, but applies to banks

10 **Imprint** Every printed copy unless it comes within the purview of printed works such as visiting cards, letterheads etc. Specified in Schedule I of the order should bear the imprint of the printer and should also state the number of copies printed and the date of printing Every printer should also keep a copy of every work printed by him except in the case of books and registers where only the first and last pages need be kept

11 All quota Holders are informed that the quarterly returns of consumption of paper under the paper Control (Economy) Order should be sent in future to the Provincial Paper Controller All those who have not yet submitted their returns for the quarter which ended on 31st March 1945 are asked to submit them without any further delay

12 Copies of all issues of periodicals printed on paper other than news-print should be sent to the Provincial Paper Controller and not to the Paper Controller, (India). Those who are not sending copies regularly are warned that action will be taken against them if they fail to do so

13. Carbon papers, papers of non standard size less than 32 square inches in area, when fully unfolded measured on one side and finished envelopes the size of which does not exceed an area of 25 square inches and newsprint are excluded from the purview of the order,

14 Copies of the Madras Paper Control (Licensing, Economy and Distribution) Order, 1945, be are available at the Government Branch Press Mount Rd Madras and with the Inspectors for sale

15. Eight Paper Control Inspectors, 3 for Madras City and 5 for mofussil have been appointed recently. The Addresses and jurisdictions of mofussil Inspectors are given below All returns from quota holders and licensees in the mofussil districts should be sent through the Paper Control Inspectors who have local jurisdiction. In the case of Chingleput, North-Arcot, Salem and Nellore districts the returns should be sent direct to the Provincial Paper Controller, Madras

No	Name	Address	Jurisdiction
1	Paper Control Inspector Southern Zone.	c o. Assistant Inspector of Civil Supplies Tallakulam, Madura	Madura Ramnad and Tirnevelly Districts
2	Paper Control Inspector, Central Zone	No 1102 Weavers Street, Tanjore	Tanjore, Trichinopoly and South Arcot Dts
3	Paper Control Inspector, West Coast Zone.	c o. The Superintendent, Government Industrial School Calicut	South Kanara, Malabar Coimbatore and the Nilgiris Districts.
4	Paper Control Inspector, Andhra Zone	c o, The Assistant Industrial Engineer, Bezwada	Vizagapatam East and West Godavari [illegible] and Guntur Dts
5	Paper Control Inspector, Rayalaseema Zone	c o The Superintendent Government Industrial School Bellary.	Karnool, Cuddapah Anantapur, Bellary and Chittoor Districts

Chepauk, Madras,
Dated the 4th May, 1945

K. P. R. Menon
DEPUTY PAPER CONTROLLER

In the High Court of Judicature at Madras.

Ordinary Original Civil Jurisdiction

O. P No 123 of 1945

In the matter of the Indian Companies Act of 1913.
and
In the matter of the Canara Industrial & Banking Syndicate Ltd., Udipi

The Canara Industrial & Banking Syndicate, Ltd , by its Board of Director Dr. T M A. Pai —*Petitioner*.

Notice is hereby given that a petition under section 153 (2) of the Indian Companies Act,1913,for sanction of a scheme for the re-organization of the share capital of the Syndicate was presented by the petitioner on the 24th day of April 1945 and that the said petition is directed to be heard before the Judge sitting in chambers on 13th day of July 1945. Any person desirous of supporting or opposing the making of an order as prayed in the petition should appear at the time of hearing by himself or by his Advocate, and a copy of the petition will be furnished to any person requiring the same by the undersigned on payment of the regulated charge for the same.

(*Sd*) **A Narayana Pai,**
Advocate for Petitioner.

1 A, Dr Thomas Road,
T. Nagar, Madras,
2 5 1945.

Note Any person who intends to appear on the hearing of the said petition must serve on or send by post to the above named notice of his intention so to do The notice must state the name and address of the person or if a firm the name and address of the firm and must be signed by the person or firm or his or their advocate and must be served or if posted must be sent by post so as to reach the above named not later than 3 o clock in the after noon of 12th July 1945

ಬೆಂಗಳೂರು—ಅಖಿಲ ಭಾರತ [illegible] ಕಾಂಗ್ರೆಸ್ ಸಮ್ಮೇಳನದ [illegible] ನಾಗರಿಕತ್ವ ಕಾಲೇಜು (Citizenship College) [illegible]

ನೋಟೀಸು

[illegible] 26 5 45 [illegible] 5 [illegible]

[illegible]

ಮಂಜಪ್ಪ ಆರ್ ಪೂಂಜ,

[illegible] 3 5 45

ದಕ್ಷಿಣ ಕನ್ನಡ,

ಮಂಗಳೂರು.

ಮದ್ರಾಸ್ ಪೃಥ್ವಿ ಇನ್ಶ್ಯೂರೆನ್ಸ್ ಕಂಪೆನಿಯ ಮಂಗಳೂರು ಶಾಖಾ ಕಛೇರಿಯು ಕಳೆದ ತಾ. 26ರಲ್ಲಿ ಜನರಲ್ ಟ್ರೇಡಿಂಗ್ ಕೊರ್ಪರೇಶನಿನ ಮಾಳಿಗೆಯಲ್ಲಿ ಶ್ರೀ. ಎಸ್. ರಾಮಮೂರ್ತಿ ಬಿ. ಎ. ಬಿ. ಎಲ್. ಅವರಿಂದ ತೆರೆಯಲ್ಪಟ್ಟಿತು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶ್ರೀ ಪಿ. ವೆಂಕಟ್ರಾಯ ಬಾಳಿಗ, ಎಡ್ವೊಕೇಟ್ ಅವರು ವಹಿಸಿದ್ದರು. ಕಥೋಲಿಕ್ ಕ್ಲಬ್ ನ ವಾರದಲ್ಲಿ ಚಹಾ ಸತ್ಕಾರ ನಡೆಯಿತು

ವಾರ್ಷಿಕೋತ್ಸವ— ಮಂಗಳೂರಿನ ಮಲೆಯಾಳಿ ಸಮಾಜದ ಸಭೆಯ ಏನೇ ವಾರ್ಷಿಕೋತ್ಸವವು ತಾ. ೬ರಂದು ಇಲ್ಲಿಯ ಗಣಪತಿ ಹೈಸ್ಕೂಲಿನ ವಠಾರದಲ್ಲಿ ಜರಗಿತು. ಕಲಿಕೋಟೆಯ ಶ್ರೀ. ಕೆ ಟಿ ಚಂದು ನಂಬಿಯಾರ್ ಎಡ್ವೊಕೇಟ್ ರವರು ಅಧ್ಯಕ್ಷರಾಗಿದ್ದರು. ಶ್ರೀ. ಸಿ. ವಿ. ವೆಂಕಟರಾಮನ್ ಅಯ್ಯರ್ ಅವರು ಸ್ವಾಗತ ಭಾಷಣ ಮಾಡಿದ ನಂತರ ಕಾರ್ಯದರ್ಶಿ ಶ್ರೀ. ಪಿ. ಗೋವಿಂದನ್ ವೈದ್ಯರು ವರದಿಯನ್ನೊಪ್ಪಿಸಿದರು. ತಿರುವಾಂಕೂರಿನ ವಿದ್ವಾಂಸರಾದ ಶ್ರೀ ನಾಗೇಂದ್ರನ್ ಫನ್ ರವರು "ಮಲೆಯಾಳಿ ಸಾಹಿತ್ಯ"ದ ಕುರಿತೂ ಶ್ರೀ ಸ್ವಾಮಿ ಬ್ರಹ್ಮವ್ರತನ್ ರವರು "ಆಧುನಿಕ ಶಾಸ್ತ್ರ ವಿಜಯ"ದ ಕುರಿತೂ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಭೆಯ ಕಾರ್ಯಕರ್ತರನ್ನು ಅಭಿನಂದಿಸಿ, "ಕೇರಳ ಸಂಸ್ಕೃತಿಯ ಶ್ರೇಷ್ಠತೆಯ" ಕುರಿತು ಮಾತನಾಡಿದರು. ಶ್ರೀ. ಸಿ. ವಿ. ವೆಂಕಟರಾಮನ್ ಐಯ್ಯರ್ ರವರು ವಂದನೆಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ದ. ಕ. ಬಂಟರ ಯಾನೆ ನಾಡವರ ಸಂಘ, ಮಂಗಳೂರು—ಸಮಾಜ ಬಂಧುಗಳ ಸಲಹೆ ಸಂಗ್ರಹಕ್ಕಾಗಿ ಮಾಡುವ ಯತ್ನದಲ್ಲಿ ಮೂಲ್ಕಿ ಕ್ಷೇತ್ರದ 5ನೇ ಸಭೆಯು ಕಿನ್ನಿಗೋಳಿ ಕಥೋಲಿಕ್ ಶಾಲೆಯಲ್ಲಿ ತಾ. 29-4-45ರಲ್ಲಿ ಕೂಡಿ ಬಂತು. ಇಂಡಿಯಾ ಸರಕಾರದವರು Imperial Council of Agricultural Reserch ಇವರ ಸೂಚನೆಗನುಸಾರವಾಗಿ ಪ್ರತಿ ಜಿಲ್ಲೆಯಲ್ಲಿ ಕೆಲವು ಗ್ರಾಮಗಳ ಒಂದು ಕ್ಷೇತ್ರವನ್ನು ನವೀನ ರೀತಿಯ ವಿಪುಲವಾದ ಕೆಲಸಗಳಿಂದ ಅಭಿವೃದ್ಧಿಗೊಳಿಸುವರೆ ಆರಿಸಿ ಕೈಕೊಳ್ಳುವ ಕೆಲಸ ಮತ್ತು ಪಿಟಿನ ಸ್ಕೀಮು ಕಳುಹಿಸಿಕೊಡುವಂತೆ ಜಿಲ್ಲಾ ಎಗ್ರಿಕಲ್ಚರ್ ಆಫೀಸರರಿಗೆ ಬರೆದಿರುತ್ತಾರೆ. ಆಫೀಸರರು ಬರೆದುಕೊಂಡ ಅಭಿಪ್ರಾಯದ ಕುರಿತು ಸಭೆಯವರು ತಮ್ಮ ಸೂಚನೆ ಕೊಡುವಂತೆ ಅನುಕೂಲ ಕೊಡಬೇಕಾಗಿ ಕೇಳಿಕೊಂಡು, ವಿಧ ವಿಧದ ಅನೇಕ ಸೂಚನೆಗಳನ್ನು ಪ್ರಥಮತ ಕೊಡಲಾಯಿತು. ಈ ಕಾರ್ಯದಲ್ಲಿ ಸಾಗುವಳಿ ಮತ್ತು ಉಪ ವೃತ್ತಿಗಳನ್ನು ವೃದ್ಧಿಗೆ ತರುವ ಪ್ರಯತ್ನ ಮಾಡುವವರಿಗೆ ತರತರದ ಬಹುಮಾನಗಳನ್ನು ಕೊಡುವಂತೆಯೂ ಸೂಚಿಸಲಾಯಿತು. ಕೃಷಿಕರ ಉಪಯೋಗಾರ್ಥವಾಗಿ ಬೀಜ ಮತ್ತು ಗೊಬ್ಬರ ಅನುಕೂಲವಾಗಿ ಸಿಕ್ಕುವಂತೆ ಕಿನ್ನಿಗೋಳಿಯಲ್ಲಿ ಡಿಪೋ ಒಂದು ತೆರೆಯೋಣವಾಯಿತು. ಇನ್ನಿತರ ಕೆಲವು ನಿರ್ಣಯಗಳಿಂದ ರೈತರು ಇವರಲ್ಲಿ ಕೂಡಿ ಕೆಲಸಮಾಡುವಂತೆ ನಿರ್ಧಾರ ಮಾಡಿಕೊಂಡದಲ್ಲದೆ ಬರುವ 6ನೇ ಸಭೆಯು ಮುಂಡ್ಕೂರು ಉಪ ಕ್ಷೇತ್ರದಲ್ಲಿ ತಾ. 13-5-45ನೇ ಆದಿತ್ಯವಾರ 3ಘಂಟೆಗೆ ಕೂಡಿ ಬರಬೇಕಾಗಿಯೂ ಮುಂಡ್ಕೂರು ಹೊಳೆಗೆ ಕಟ್ಟಕಟ್ಟುವ ವಿಷಯ ಇಲ್ಲಿ ಆಲೋಚಿಸಿ ನಂತರ ಫಲಿಮಾರು ಉಪಕ್ಷೇತ್ರದ ಸಭೆಯಲ್ಲಿ ಪುನರಾಲೋಚಿಸಿ ನಿಶ್ಚಯಿಸಬೇಕಾಗಿ ನಿರ್ಣಯಿಸಲಾಯಿತು. ಮತ್ತು ರೆವೆನ್ಯೂ ಆಫೀಸರರನ್ನು ಇದಕ್ಕೆ ಆಮಂತ್ರಿಸಬೇಕಾಗಿಯೂ ನಿರ್ಣಯಿಸಲಾಯಿತು.

ಪುತ್ತೂರು— ಕಳೆದ ತಾ. ೩ರಲ್ಲಿ ಮಡಿಕೇರಿಯಿಂದ ಮಂಗಳೂರಿಗೆ ಸಿ. ಪಿ. ಸಿ. ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಸುಮಾರು ೭೦ ವರ್ಷ ಪ್ರಾಯದ ಬ್ರಾಹ್ಮಣ ಪ್ರಯಾಣಿಕರೊಬ್ಬರು ಪುತ್ತೂರಿನ ಸಿ. ಪಿ. ಸಿ. ಗರೇಜಿನಲ್ಲಿ ಬಸ್ಸು ನಿಂತೊಡನೆಯೇ ಬಾಯಾರಿಕೆ ಬಗ್ಗೆ ಬಾವಿ ನೀರು ಕುಡಿಯುತ್ತಿದ್ದಂತೆಯೆ ಹೃತ್ಕ್ರಿಯೆ ನಿಂತು ಕೆಲವೇ ನಿಮಿಷದಲ್ಲಿ ಮರಣ ಹೊಂದಿದರು. ಸ್ಥಳೀಯ ಪೋಲಿಸ್ ಅಧಿಕಾರಿಗಳಿಗೆ ನಡೆದ ಸಂಗತಿ ತಿಳಿಸಿ, ಅನುಮತಿ ಪೊಂದಿ, ಇನ್ನಿತರ ಕೆಲವು ಬ್ರಾಹ್ಮಣ ಮಹನೀಯರ ಸಹಾಯದಿಂದ ಹೆಣವನ್ನು ದಹನ ಮಾಡಿ ಒಂದೂ ಸಂಪ್ರದಾಯ ಮಂತೆ ತಕ್ಕ ಕಾರ್ಯಕ್ರಮವನ್ನು ಕ್ರಮದಂತೆ ನೆರವೇರಿಸಲ್ಪಟ್ಟಿತೆಂದೂ ಸದರಿಯವರು ಪಡುಬಿದ್ರಿ ಸಮೀಪದ ಕಮ್ಮುಂಜೇಲು ಶ್ರೀನಿವಾಸ ಭಟ್ಟರೆಂಬವರೆಂದೂ ತಿಳಿದುಬರುತ್ತದೆ

ಹೊಸದುರ್ಗ—ಹೊಸದುರ್ಗ ಸಬ್ ತಾಲೂಕಿನಲ್ಲಿ, ಹಪ್ತೆಗೆ ನಾಲ್ಕು ದಿವಸಗಳಿಗೆ ಮಾತ್ರ ಅಕ್ಕಿಯನ್ನು ಹಂಚಬೇಕೆಂಬ ಮಾನ್ಯ ಕಲೆಕ್ಟರರ ಆಜ್ಞೆಯನ್ನು ಹಿಂತೆಗೆಯುವಂತೆ ಕೇಳಿಕೊಳ್ಳುವದಕ್ಕೂ, ಸಬ್ ತಾಲೂಕಿನಲ್ಲಿ ಅಕ್ಕಿ ಭತ್ತ ದಾಸ್ತಾನು ಮುಗಿದುದರಿಂದ ಹೊರಗಿನಿಂದ ಅಗತ್ಯ ಬೀಳುವ ಸ್ಟೋಕನ್ನು ರವಾನಿಸುವ ಏರ್ಪಾಡುಗಳನ್ನು ಮಾಡಿಸುವರೆ ರೆವಿನ್ಯೂ ಬೋರ್ಡಿನೊಡನೆ ಕೇಳಿಕೊಳ್ಳುವದಕ್ಕೂ, ಅಜಾನೂರು, ಬಲ್ಲ, ಹೊಸದುರ್ಗ, ಮಡಿಕೈ ಮೊದಲಾದ ಹಲವು ಗ್ರಾಮಗಳಲ್ಲಿ ಸಭೆಸೇರಿ ಠರಾವುಗಳನ್ನು ಪಾಸುಮಾಡಿ ರೆವಿನ್ಯೂ ಬೋರ್ಡಿಗೆ ತಂತಿಗಳನ್ನು ಕಳುಹಲಾಗಿದೆ ಎಂದು ತಿಳಿದುಬರುತ್ತದೆ.

ಬೆಳ್ಮಣ್ಣು—ಕಾರ್ಕಳ ತಾಲೂಕು ಸೋಲ್ಜರ್ಸ ಕಮಿಟಿಯವರು ಏರ್ಪಡಿಸಿದ, ಮಿಲಿಟರಿ ಸೈನ್ಯ ಪಡೆಗಳಿಗೆ ಸೇರಿದ ಕುಟುಂಬದವರ ಸಾಮಾಜಿಕ ಕೂಟವು ಕುಂದಾಪುರ ರೆವೆನ್ಯೂ ಡಿವಿಜನಲ್ ಆಫೀಸರರಾದ ಶ್ರೀ. ಎಸ್. ಚಿದಂಬರಂ ಪಿಳ್ಳೆ ಬಿ. ಎ.ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ, ಬೆಳ್ಮಣ್ಣು ಹಾ। ಎ. ಶಾಲೆಯ ವಠಾರದಲ್ಲಿ ಬಹಳ ವಿಜೃಂಭಣೆಯಿಂದ ಯಶಸ್ವಿಯಾಗಿ ಜರುಗಿತು. ಪ್ರಾರ್ಥನೆ, ಆಟ ಸ್ಪರ್ಧೆ, ಬಹುಮಾನ ವಿತರಣ ವಿವಿಧ ವಿನೋದಾವಳಿಗಳು, ಅಧ್ಯಕ್ಷರ ಆರಂಭ ಭಾಷಣ, ಸಭಿಕರ ಭಾಷಣ, ಕೆ. ಸದಾಶಿವ ರಾಯರ ಸುಮಧುರ ಗಾಯನ, ಕೃ. ರಾಮ ಕಾಮತರ ತಬ್ಲಾ ವಾದನ, ತಾಲೂಕು ತಹಶಿಲ್ದಾರ ಶ್ರೀ. ಪಿ. ಎನ್ ಹೆಗ್ಡೆ. ಬಿ. ಎ. ಕಮಿಟಿಯ ಅಧ್ಯಕ್ಷರ ಅಭಿವಂದನೆಗಳೊಂದಿಗೆ ಸಮಾರಂಭವು ಸಮಾಪ್ತಿಗೊಂಡಿತು. ಸೋಲ್ಜರ್ ಬೋರ್ಡ ಸೆಕ್ರೆಟರಿ ಶ್ರೀ ರಾಮಪ್ಪ. ಶ್ರೀಮತಿ ಪಾರ್ವತಿ ಬಾಯಿ ಮೊದಲಾದವರ ಭಾಷಣಗಳಿದ್ದುವು.

ವಿಟ್ಲ—ತಾ. 28 4-45ರಲ್ಲಿ ವಿಟ್ಲದ ಎಲ್ಲಾ ಶಾಲೆಗಳ ವರ್ಧಂತಿ ಉತ್ಸವವು ಶ್ರೀ ವಹಾಸ್ ಯಂಗ್. ರಾಮಂಗಾರ್. ಡಿಸ್ಟ್ರಿಕ್ಟ್ ಬೋರ್ಡ ಎಡ್ಯುಕೇಶನಲ್ ಆಫೀಸರರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಇಲ್ಲಿಯ ಮಕ್ಕಳಿಗೆ ಧರ್ಮಾರ್ಥವಾಗಿ ವಿದ್ಯೆಯು ದಾನವಾಗಿ ದೊರಕುವಂತೆ ಮಾಡಿದ ಶ್ರೀ. ರಾವ್ ಸಾಹೇಬ್, ರಾಜಾಲಕ್ಷ್ಮೀನಾಥ ಸ್ವಾಮಿಜಿಯವರ ತೈಲ ಚಿತ್ರ ಅನಾವರಣ ಕಾರ್ಯವೂ, ಶಾಲಾ ಕಟ್ಟೋಣಕ್ಕೆ 100 ರೂಗಳಿಗೆ ಮಿಕ್ಕಿ ಧನ ಸಹಾಯ ಮಾಡಿದ ವಿಟ್ಲ. ಶ್ರೀ ರವಿವರ್ಮ ಕೃಷ್ಣ ರಾಜರವರ ಹೆಸರನ್ನು ಬಿಳಿ ಶಿಲೆಯಲ್ಲಿ ಕೆತ್ತಿಸಿದ ಅನಾವರಣ ಕಾರ್ಯವೂ ನಡೆಯಿತು. ವಿಟ್ಲವು ಹೈಸ್ಕೂಲನ್ನು ಸ್ಥಾಪಿಸಲು ಯೋಗ್ಯವಾದ ಒಂದು ಕೇಂದ್ರ ಸ್ಥಳವಾದುದರಿಂದ, ಅದನ್ನು ಶೀಘ್ರದಲ್ಲೇ ನಿರ್ಮಿಸುವ ಒಂದು ಕಮಿಟಿಯು ಆರಿಸಲ್ಪಟ್ಟಿತು ತಾ 1 6-45ರಿಂದ ಇಲ್ಲಿ ಜಾರಿಗೆ ಬರುವ ಕಡ್ಡಾಯ ಶಿಕ್ಷಣದ ಕಟ್ಟೋಣದ ಬಗ್ಗೆ ಊರ ಮಹನೀಯರು ಸಹಾಯ ನೀಡಬೇಕೆಂದು ಮಾನ್ಯ ಪುತ್ತೂರು ರೇಂಜು ಶಾಲೆಗಳ ಡಿ. ಇನ್ಸ್ಪೆಕ್ಟರವರು ಹಾಗೂ ಅಂದಿನ ಅಧ್ಯಕ್ಷರು ಕೇಳಿಕೊಂಡ ಮೇರೆಗೆ ಶ್ರೀ ರಾವ್ ಸಾಹೇಬರುಗಳು ಒಂದು ಸಾವಿರ ರೂ.ಗಳನ್ನು ದಾನ ಮಾಡಿದರು ಬಳಿಕ ವಿನೋದಾವಳಿಗಳೂ, ರಾತ್ರಿಯಲ್ಲಿ ಶ್ರೀ ಮಂಜ. ರಾಮರಾಯರು ಬರೆದ ಪ್ರತಿಜ್ಞಾ ನಾಟಕ ಜರಗಿ, ವಂದನೋಕ್ತಿಗಳಿಂದ ಕಾರ್ಯವು ಕೊನೆಗೊಂಡಿತು.

ಕೋಟೇಶ್ವರ — ತಾ. 2 5 45ರಲ್ಲಿ ಸ್ಥಳೀಯ ಬೋರ್ಡ್ ಪ್ರೌಢ ಪ್ರಾಥಮಿಕ ಶಾಲಾ ಹಳೇ ವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಶ್ರೀ. ಕೆ. ಸುಬ್ರಾಯ ಉರಾಳ್, ಬಿ. ಎ., ಎಲ್. ಟಿ.ಯವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಅತೀ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಈ ಹಳೇ ವಿದ್ಯಾರ್ಥಿ ಸಂಘದ ಸ್ಥಾಪಕರೂ ಮಾಜಿ ಅಧ್ಯಕ್ಷರೂ ಸುಪ್ರಸಿದ್ಧ ವಿದ್ಯಾವಂತ ಮುಂದಾಳುವೂ ಆಗಿದ್ದ ದಿವಂಗತ ಎಸ್. ಆರ್. ಎವರ್ನಾಳ್ ಬಿ. ಎ. ಎಲ್. ಟಿ.ಯವರ ತೈಲಚಿತ್ರ ಅನಾವರಣ ಸಮಾರಂಭವೂ ಅಧ್ಯಕ್ಷರಿಂದ ನೆರವೇರಿಸಲ್ಪಟ್ಟಿತು. ದಿವಂಗತರಲ್ಲಿ ತನಗಿದ್ದ ಗೌರವವನ್ನು ಸಂಘವು ಈ ರೀತಿಯಲ್ಲಿ ಹೊರಗೆಡಹಿದುದು ಸ್ತುತ್ಯವೂ ಅನುಕರಣೀಯವೂ ಆಗಿದೆ.

ಶಂಕರನಾರಾಯಣ — ಶಂಕರನಾರಾಯಣ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಮತ್ತು ಹಳೆ ವಿದ್ಯಾರ್ಥಿಗಳ ದಿನಾಚರಣೆಯು ತಾ 28 4 45ರಲ್ಲಿ ಶ್ರೀ.ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಬಹುವಿಜೃಂಭಣೆಯಿಂದ ಜರಗಿತು. ಶ್ರೀ ಎ ಕೃಷ್ಣರಾಯ ಕೊಡ್ಗಿಯವರು ಉಪಹಾರವನ್ನು ಕೊಟ್ಟರು ಸ್ಥಳೀಯ ಪಂಚಾಯತ ಬೋರ್ಡ ಅಧ್ಯಕ್ಷರಾದ ಡಾಕ್ಟರ್ ಶ್ರೀ. ಯು. ವಿ. ರಾಯರು ಊಟ ಉಪಚಾರಗಳನ್ನು ಮಾಡಿಸಿದರು. ಅಕ್ಕನಕೋಡ್ಲು ಶ್ರೀಯುತ ಶೇಷಪ್ಪ ಚಾತರರು ಮಕ್ಕಳಿಗೆ ಬಾಡು ವಗ್ಗರೆ ತಿಂಡಿ ಹಂಚಿ ಸಂತೋಷಗೊಳಿಸಿದರು. ಊರ ಮತ್ತು ಪರವೂರ ಮಹನೀಯರು ಧನಸಹಾಯಮಾಡಿದರಲ್ಲದೆ ತುಂಬಾ ಪ್ರೋತ್ಸಾಹಿಸಿದರು. ಆದಿನ ರಾತ್ರಿ ವೀರಅಭಿಮನ್ಯು ಎಂಬ ಸಂಗೀತ ನಾಟಕವನ್ನು ಅಭಿನಯಿಸಿ ನೆರೆದ ಸಭಿಕರನ್ನು ಆನಂದಗೊಳಿಸಿದರು.

ಎವರ್ನಾಳು— ವಾದಿ ಪ್ರಚಾರ, ಸಾಬೂನು ತಯಾರಿ, ಹಳ್ಳಿ ಕೈಗಾರಿಕೋದ್ಧಾರ ಇತ್ಯಾದಿ ವಿಧಾಯಕ ಕಾರ್ಯಕ್ರಮಾಚರಣೆಗಾಗಿ ಸಾರ್ವಜನಿಕ ಸಭೆಯೊಂದು ಎವರ್ನಾಳ್ ಬೋ। ಹಾ ಎ. ಶಾಲೆಯಲ್ಲಿ ಶ್ರೀ ಕರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ನೆರೆಯಿತು ಶ್ರೀ. ವೈ. ಭಾಸ್ಕರ ಹೆಗ್ಡೆಯವರು ಸಭೆಯ ಉದ್ದೇಶವನ್ನು ವಿವರಿಸಿದ ಮೇಲೆ ಶ್ರೀಗಳಾದ ವೈ. ಸಂಕಪ್ಪ ಸೆಟ್ಟಿ, ಲಕ್ಷ್ಮಣ ಮತ್ತು ಎ ರಾಜು ಸೆಟ್ಟರು ಅದನ್ನು ಅನುಮೋದಿಸಿ ಭಾಷಣವಿತ್ತರು. ಶ್ರೀಗಳಾದ ಶಾಂತಿರಾಜ, ಎ ಎನ್. ಹೆಬ್ಬಾರ್ (ಜತೆ ಅಧ್ಯಕ್ಷರು) ವೈ. ಎಲ್. ಎನ್. ಜ್ಯೋತಿಷ್ಯ (ಖಜಾಂಚಿ)ರುಳ್ಳ 10 ಮಂದಿಯ ಸಲಹೆಗಾರ ಸಮಿತಿಯನ್ನೂ ಶ್ರೀಗಳಾದ ವೈ. ಲಕ್ಷ್ಮಣ, ವೈ. ರಘುಸೆಟ್ಟಿ (ಜತೆ ಅಧ್ಯಕ್ಷರು) ಎ. ನಾರಾಯಣ ಸೆಟ್ಟಿ, ಮೋನಪ್ಪ, ವೈ. ಸಂಕಪ್ಪ ಸೆಟ್ಟಿ (ಜತೆ ಕಾರ್ಯದರ್ಶಿಗಳು) ಕೂಡಿ 25 ಸದಸ್ಯರ ಕಾರ್ಯಕಾರೀ ಸಮಿತಿಯನ್ನೂ ಆರಿಸಲಾಯಿತು. ಅಧ್ಯಕ್ಷ ಭಾಷಣ, ವೈ. ರಘುಸೆಟ್ಟರ ಧನ್ಯವಾದಗಳಾಗಿ ಸಭಾಂತ್ಯವಾಯಿತು.

ತಾಳಿಪಾಡಿ— ತಾಳಿಪಾಡಿ ಪೊಂಪೈ ಹಯರ್ ಎಲಿಮೆಂಟರಿ ಶಾಲೆಗೆ ಇದೇ ಜೂನ್ ತಿಂಗಳಿಂದ I III ಫಾರ್ಮುಗಳನ್ನು ತೆರೆಯುವರೆ ವಿದ್ಯಾಧಿಕಾರಿಗಳಿಂದ ಈಗ ಖಾಸ ಅಪ್ಪಣೆ ದೊರೆತಿರುವುದು.

ಕಾಪು—ಇಲ್ಲಿಯ ಬೋರ್ಡ ಹಾ. ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ಹೆಚ್ಚು ಸಮಯದಿಂದ ಕೆಲಸಮಾಡುತ್ತಲಿದ್ದ ಶ್ರೀ ದೇಜು ಶೆಟ್ಟರು ಇದೇ ತಾ. 6ರಲ್ಲಿ ಕೆಲಸದಿಂದ ನಿವೃತ್ತರಾಗುವ ಕಾರಣ ಅವರಿಗೆ ಆ ಶಾಲೆಯ ಉಪಾಧ್ಯಾಯ ವೃಂದದವರು ಕಳೆದ ತಾ. 26ರಲ್ಲಿ ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು ತಾ 30ರಲ್ಲಿ ಶಾಲಾ ವಿದ್ಯಾರ್ಥಿಗಳು ಶ್ರೀ ಸೆಟ್ಟರಿಗ ಬೆಳ್ಳಿಯ ಕಪ್ಪನ್ನು ಕೊಟ್ಟು ಸನ್ಮಾನಿಸಿದರು, ತಾ 29ರಲ್ಲಿ ಡಾ। ಬಿ ಕೆ. ಬೇಕಲ್ ರವರು ಸತ್ಕಾರವನಿತ್ತರು. ಊರ ಮಹನೀಯರನೇಕರು ಈ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು

ಶ್ರೀ. H. ದೇಜು ಸೆಟ್ಟರು ಕಾಪು ಬೋರ್ಡ ಶಾಲೆಯಲ್ಲಿ 27 ವರ್ಷ ಎಡಬಿಡದೆ ಮುಖ್ಯೋಪಾಧ್ಯಾಯಕ ಕೆಲಸ ನಿರ್ವಹಿಸಿ ಈ ಶಾಲೆಯ ಸರ್ವತೋನ್ನತಿಗೆ ಕಾರಣರಾಗಿರುತ್ತಾರೆಂಬುದೂ ಶಾಲೆಯ ಪ್ರಗತಿಯೇ ಇವರ ಜೀವದ ಉಸಿರಾಗಿತ್ತು ಎಂಬುದೂ ತಾ 26 4 45ರಲ್ಲಿ ಸಂದರ್ಶಿಸಿ ಬರೆದ ಮಾನ್ಯ ಡಿಸ್ಟ್ರಿಕ್ಟ ಇನ್ಸ್ಪೆಕ್ಟರವರ ರಿಮಾರ್ಕಿನಿಂದ ತಿಳಿದು ಬರುತ್ತದೆ

THE

VIJAYA BANK LTD.

Head Office: **MANGALORE.**

PROGRESS REPORT

	1940	1942	1944
Paid up capitl	50,000	91,000	1,96,000
Deposits	2,67,000	5,90 000	17,70,000
Profits	6,000	12,000	30,000

correct to 1000

Branches all over tthe District and in Bombay city. All kinds of Banking facilities available.

A branch of the Bank will be opened at **BYNDOOR** shortly.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 789/32 R. E. P. 525/44

ಅರ್ಜಿದಾರ ಶೇಡ್ರು ದಿಯಸ, ಜರ್ಮಿ ದಿಯಸನ ಮಗ. ಕುಂದಾಪುರ ತಾಲ್ಲೂಕು ಗುಜ್ಜಾಡಿ ಗ್ರಾಮದ ಕಂಚುಗೋಡಲ್ಲಿರುವವ,

ಎದ್ರಿರು–1 ಜಟಲ್ ವಲು ವೇರಲು ಫೋಶಿ. 2 ಸಾಲಾಂ ದಿಯಾನ ವಿಂಗೆಲ್ ದಿಯಾಸನ ಮಗ ಕುಂದಾಪುರ ತಾಲ್ಲೂಕು ಸೇನಾಪುರ ಗ್ರಾಮದ ಗುಡ್ಡಮ್ಮಾಡಿಯಲ್ಲಿರುವವ,

2ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:-

ಸದ್ರಿ ಅಮಲ್ಜಾರಿಯಲ್ಲಿ ಯಶ್ವಹಾನಿ ಶರ್ತ ನಿರ್ಣಯಿಸುವ ಬಗ್ಗೆ ಸದ್ರಿ ಅಮಲ್ಜಾರಿಯನ್ನು ತಾ 20-6-45ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿದೆ, ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು,

Y. Manjaya Shetty,
Advocate for Petitioner

ನೆಕ್ಯಾಂ:- ಕುಂದಾಪುರ

ತಾ. 4-5-45.

ಈ ವರುಷ ದ. ಕ. ಜಿಲ್ಲೆ ಬದುಕುವುದು ಹೇಗೆ?

ಕೇಂದ್ರ ಸರಕಾರದ ಆಹಾರಾಧಿಕಾರಿಗಳಿಗೆ ಜಿಲ್ಲಾ ಪ್ರಮುಖರ ಮನವಿ

ಹಿಂದೀ ಸರಕಾರದ ಪ್ರಾದೇಶಿಕ ಆಹಾರಾಧಿಕಾರಿ (Regional Food Commissioner)ಯು ಮಂಗಳೂರಿಗೆ ಬಂದಿದ್ದಾಗ, ಜಿಲ್ಲಾ ವರ್ಗದಾರ ಸಂಘದ ಪರವಾಗಿ ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಕೆ. ಟಿ. ಆಳ್ವ, ಎನ್. ಶಿವರಾವ್, ಎ. ಬಿ. ಶೆಟ್ಟಿ, ಕೆ. ಜಿ. ಬಲ್ಲಾಳ್, ಮತ್ತು ಕೆ. ಎಸ್. ಹೆಗ್ಡೆಯವರ ಡೆಪ್ಯುಟೇಶನೊಂದು ಅವರನ್ನು ಭೇಟ್ಟಿಯಾಗಿ ದಕ್ಷಿಣ ಕನ್ನಡದಲ್ಲಿ ಕಡಿಮೆ ಬೀಳುವ ಆಹಾರ ಧಾನ್ಯದ ಕುರಿತು ಸವಿವರ ಮನವಿಯೊಂದನ್ನೊಪ್ಪಿಸಿದೆ. ಅದರ ಮತ್ತು ಶ್ರೀ. ಕೆ. ಜಿ. ಬಲ್ಲಾಳರು ಆಹಾರ ಕಮಿಶನರರಿಗೆ ಬರೆದ ಪತ್ರದ ಸಾರಾಂಶವಿದು.

ಧಾನ್ಯ ಸಂಗ್ರಹಾಜ್ಞೆಯ ಒಂದನೇ ಕಲಮಿನಲ್ಲಿ ಸ್ಪಷ್ಟೀಕರಿಸಿರುವಂತೆ ಸಾಗುವಳಿದಾರರ ಆವಶ್ಯಕತೆಯ ಧಾನ್ಯವನ್ನು ಬಿಟ್ಟೇ ಸಂಗ್ರಹಿಸಬೇಕು. 19-4-45ರ ಎಲ್ಲಾ ಗೇಣಿ ಮತ್ತು ಕೆಲವೆಡೆ ಅದಕ್ಕೂ ಹೆಚ್ಚು ರೆಕ್ವಿಶಿಶನ್ ಮಾಡಲಾಗಿದೆ. ಜಿಲ್ಲೆಯ ವಿಚಿತ್ರ ಪದ್ಧತಿಮಾನಗಳ ದೆಸೆಯಿಂದಾಗಿ 1 ಮತ್ತು 2ನೇ ಬೆಳೆಯಲ್ಲಿ ವರ್ಗದಾರರಿಗೆ ಸಲ್ಲುವ ಗೇಣಿಯನ್ನೂ ರೆಕ್ವಿಶಿಶನಿನಲ್ಲೇ ಸೇರಿಸಬೇಕೆಂದು ತಾ. 28-2-45ರ ಆಹಾರ ಸಮಿತಿಯು ನಿರ್ಧರಿಸಿದೆ. ಆ ಮೊದಲೇ ಅಧಿಕಾಧಿಕ ಸಂಖ್ಯೆಯಲ್ಲಿ ರೆಕ್ವಿಶಿಶನ್ ನೋಟೀಸುಗಳು ಜ್ಯಾರಿಯಾದುದನ್ನು ಗಮನಿಸಿ ಈ ನಿರ್ಧಾರವಾಗಿತ್ತು. ಧಾನ್ಯ ಸಂಗ್ರಹಾಜ್ಞೆಯಲ್ಲಿ ನಮೂದಿಸಿರುವ ಶರ್ತಗಳು ಕಾರ್ಯತಃ ಜ್ಯಾರಿಯಾಗಿಲ್ಲವೆಂಬ ಸತ್ಯಸ್ಥಿತಿಯು ಅಲ್ಲಗಳೆಯಲ್ಪಡಲಾರದೆಂದು ನಂಬುತ್ತೇವೆ. ಇದರ ಪರಿಣಾಮವಾಗಿ ಹಳ್ಳೀ ಬೇಸಾಯಗಾರರಿಗೆ ಜೀವನಾವಶ್ಯಕ ಧಾನ್ಯವೂ ಉಳಿಯದೆ ಅವರು ರೇಶನ್ ಕಾರ್ಡಿಗಾಗಿ ಕಾಯುತಿದ್ದಾರೆ. ಆಹಾರ ಧಾನ್ಯಗಳನ್ನು ಉತ್ಪತ್ತಿ ಮಾಡಿ ಕೊಡುವ ಇವರಿಗೆ ಪಸುಗೇ ಚೀಟಿಗಳು ದೊರೆತರೂ ಅವರು ತಾವು ಅದೇ ಧಾನ್ಯವನ್ನು ಮಾರಿದ್ದಕ್ಕಿಂತ ಮುಡಿಯೊಂದಕ್ಕೆ ಒಂದರಿಂದ ಒಂದೂವರೆ ರೂಪಾಯಿ ವರೆಗೆ ಹೆಚ್ಚಿಗೆ ಕೊಟ್ಟು ಪಡೆಕೊಳ್ಳಬೇಕಾಗುತ್ತದೆ. ಈ ಕೊರತೆಯ ನಿವಾರಣೆಗೀಗ ಕಾಲ ವಿಳಂಬವಾಗಿದೆ. ಆದರೆ ಇದೇ ಧೋರಣೆಯನ್ನು ಮುಂದೊತ್ತಿದರೆ ಹಳ್ಳೀ ವಲಯಗಳಲ್ಲಿ ಧಾನ್ಯಾಭಾವ ಮತ್ತು ಬರಗಾಲ ಫುಂಟಾಗುವದು ಖಂಡಿತ. ಆದ್ದರಿಂದ ಸಾಗುವಳೀದಾರರ ಅಥವಾ ವರ್ಗದಾರರ ಆವಶ್ಯಕತೆಯನ್ನು ನೋಡದೆ ಮಾಡಿದ ರೆಕ್ವಿಶಿಶನ್ ಆಜ್ಞೆಗಳನ್ನು ಪಾಲಿಸದವರ ಮೇಲೆ ಪ್ರಾಸಿಕ್ಯೂಶನ್ ಮಾಡಬಾರದೆನ್ನುತ್ತೇವೆ. ಧಾನ್ಯ ವಿತರಣೆಮಟ್ಟಿಗೆ ರೇಶನ್ ಜ್ಯಾರಿಯಾದ ಕ್ಷೇತ್ರಗಳಲ್ಲಿ ಲಕ್ಷ್ಯಪೂರ್ವಕ ತಲೆಗೊಂದು ಪೌಂಡು ಅಕ್ಕಿಯನ್ನು ಇಡೀ ವಾರಕ್ಕೆ ಹಂಚುವ ವ್ಯವಸ್ಥೆಯಿದೆ. ಗೋಧಿ ದೊರೆಯದಿದ್ದರೆ ಅವರಿಗೆ ಅಕ್ಕಿ ಕೊಡಲಾಗುತ್ತದೆ. ಆದರೆ ಇದನ್ನು ಪಡೆವವರ ಸಂಖ್ಯೆ ಕೇವಲ ಒಂದೂವರೆ ಲಕ್ಷ ಮಾತ್ರ. ಪಟ್ಟಣಗಳಂತಹ ಇತರ ಕ್ಷೇತ್ರಗಳ ಸುಮಾರು 3 ಲಕ್ಷ ಜನರಿಗೆ ಅನ್ನದ ಸ್ಥಳೀಯ ರೇಶನೀ [illegible] ಇವರಿಗೆ 5 ದಿನಗಳಿಗೆ ಮಾತ್ರ ಅಕ್ಕಿ ದೊರೆಯುತ್ತಿದೆ. ಸಿಕ್ಕುವ ಗೋಧಿಯನ್ನೆಲ್ಲಾ ರೇಶನ್ ವಲಯಗಳಿಗೇನೇ ಉಪಯೋಗಿಸಲ್ಪಡುತ್ತಾರೆ. 10 ಲಕ್ಷಕ್ಕೂ ಮಿಕ್ಕಿರುವ ಹಳ್ಳಿಗರ ಪಾಲಿಗೆ ಅನ್ನದ ಸ್ಥಿತಿ ರೇಶನಿನ ಅಭ್ಯಾಸದ ಮಾತ್ರ [illegible] ಸದ್ಯ ಬೇಸಾಯಗಾರರಲ್ಲದ ಹಳ್ಳಿಗರಿಗೆ ಅಕ್ಕಿ ಕೊಡುವ ವ್ಯವಸ್ಥೆ ಇಲ್ಲಿ ಅಲ್ಪ ಸ್ವಲ್ಪವಿದೆ. ಈ ತಿಂಗಳಾಂತ್ಯದೊಳಗೆ ಇಡೀ ಜಿಲ್ಲೆಯನ್ನು ಒಂದು ರೀತಿಯ ರೇಶನ್ ಜ್ಯಾರಿಗೆ ತರುವ ಆಲೋಚನೆಯನ್ನು ಜಿಲ್ಲಾ ರೇಶನಿಂಗ್ ಆಫೀಸರರಿತ್ತಿದ್ದಾರೆ. ಹಳ್ಳೀ ವಲಯಗಳಲ್ಲಿ ರೇಶನ್ ಅಂಗಡಿಗಳನ್ನು ಹೆಚ್ಚಿಸಬೇಕೆಂಬ ಬೇಡಿಕೆ ಬಹಳವಿದೆ.

ಅಡಿಕೆ, ಹುಲ್ಲು ಮೊದಲಾದ ತೋಟಗಾರರು ದಕ್ಷಿಣ ಕನ್ನಡದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಅಲ್ಲಿಯ ಕೆಲಸಗಾರರಿಗೆ ಕೊಡಲು ಅಕ್ಕಿ ಭತ್ತಗಳನ್ನದರ ಎಲ್ಲವನ್ನೂ ರೆಕ್ವಿಶಿಶನ್ ಮಾಡಲಾಗಿದೆ. ಸೀಲೋನಿನ ಕಾಫಿ ಟೀ ತೋಟಗಳ ಮಾಲಿಕರಿಗೆ ಈ ಸಂಬಂಧದಲ್ಲಿ ವಿಶೇಷ ರಿಯಾಯತಿ ದೊರೆತಿದೆ. "ಹೆಚ್ಚು ಶರೀರ ಶ್ರಮದ ಕೂಲಿಗಳು" ಎಂದು ಜಿಲ್ಲೆಯಲ್ಲಿ ಆಹಾರ ಸಚಿವರಿಂದಲೇ ಸಂಬೋಧಿಸಲ್ಪಟ್ಟ ದ. ಕ.ದ ಗದ್ದೆ ಮತ್ತು ತೋಟದ ಕೂಲಿಗಳೇ ಧಾನ್ಯೋತ್ಪತ್ತಿ ಮಾಡುವವರಾದ್ದರಿಂದ ಅವರಿಗೆ ಕಾಫಿ ಟೀ ತೋಟಗಳವರಿಗಿಂತಲೂ ಹೆಚ್ಚಿನ ರಿಯಾಯತಿ ತೋರಿಸುವದು ಅಗತ್ಯ.

ಮಳೆಯ ಅಭಾವದಿಂದ ಈ ವರುಷ ದ. ಕ.ದ ಎರಡು ಬೆಳೆಗಳೂ ಹಾಳಾಗಿವೆ. ಕಳೆದ ವರುಷ ಕಾಸರಗೋಡು ತಾಲೂಕು ಮತ್ತು ಮಂಗಳೂರು ಪಸುಗೇ ಕ್ಷೇತ್ರಕ್ಕಾಗಿ 17000ಟನ್ನು ಆಹಾರ ಧಾನ್ಯಗಳನ್ನಿಲ್ಲಿಗೆ ತರಿಸಲಾಗಿತ್ತು. ಈ ವರುಷ ಈ ತನಕ ಏನೂ ಬಂದಿಲ್ಲ. ಇಲ್ಲಿಯ ಸಂಗ್ರಹವೆಲ್ಲಾ ಬರಿದಾಗುತ್ತಿದೆ. ಕಾಸರಗೋಡಿನಲ್ಲಿ ವಾರಕ್ಕೊಬ್ಬನಿಗೆ 5 ಪೌಂಡು ಇದ್ದ ಅಕ್ಕಿಯನ್ನು ಇದೇ ತಾ. 1ರಿಂದ 4 ಪೌಂಡುಗಳಿಗಿಳಿಸಲಾಗಿದೆ. ಗೋಧಿಯಂತೂ ದೊರೆಯುವದಿಲ್ಲ.

ಸದ್ಯದ ಸರಕಾರೀ ಆಹಾರ ಧೋರಣೆಯಂತೆ ಪಸುಗೇ ಕ್ಷೇತ್ರದ ಜನರನ್ನು [illegible] ಹಳ್ಳಿಗರನ್ನೆಲ್ಲಾ ಅವರ ಪಾಲಿಗವರನ್ನು ಬಿಡುವದಾಗಿದೆ. 15 ಲಕ್ಷಕ್ಕೂ ಮಿಕ್ಕಿರುವ ಜನರ ಪೈಕಿ 1½ ಲಕ್ಷ ಮಂದಿಯ ಜವಾಬ್ದಾರಿಯನ್ನು ಮಾತ್ರ ಸರಕಾರ ಹೊತ್ತಿದೆ [illegible] 1945ನೇ ನವಂಬರಾಂತ್ಯದ ವರೆಗೆ ದಕ್ಷಿಣ ಕನ್ನಡಿಗರಿಗೆ [illegible] 22,216 ಟನ್ನು ಅಕ್ಕಿಯೂ ಬದಲ ಕಾಲಾಂತರ ಗೋಧಿ ಮತ್ತು ರಾಗಿಯೂ ಬೇಕಾಗುವದೆಂದು ಕೋಓಪರೇಟಿವ್ ಸೊಸೈಟಿಗಳ ಅಧ್ಯಕ್ಷ ಶ್ರೀ. ಎನ್. ಶಿವರಾಯರು ಸರಿಯಾಗಿ [illegible] ಈ ತನಕ [illegible] ಪೂರ್ತಿ [illegible] ಹಳ್ಳಿಗರನ್ನು ಈ ಲೆಕ್ಕಕ್ಕೆ [illegible] ಕಾರ್ಡುಗಳು [illegible] 8000 ಟನ್ನು ಅಕ್ಕಿಯೂ ಅದರ [illegible] ಗೋಧಿ ಮತ್ತು ರಾಗಿಯೂ ಬೇಕಾಗಬಹುದು. ಜಿಲ್ಲಾ ರೇಶನಿಂಗ್ ಆಫೀಸರರು [illegible] ಜಿ. ಹೆಗ್ಡೆ [illegible] ಒಂದು ಪತ್ರದಲ್ಲಿ ಶ್ರೀ ಶಿವರಾಯರ ಈ ಅಂದಾಜನ್ನು ಒಪ್ಪಿಕೊಂಡಿದ್ದಾರೆ. ಕಾಸರಗೋಡು ತಾಲೂಕು ಮತ್ತು ಮಂಗಳೂರು [illegible] ಬೇಕಾಗುವ ಅಕ್ಕಿಯನ್ನೆಲ್ಲಾ [illegible] ಜಿಲ್ಲೆಯ [illegible] ಭಾಗದ ಮಟ್ಟಿಗೆ ತನ್ನದೇ ತನಗೆ [illegible] ಕಳೆದ ವರುಷ ಸರಕಾರವು [illegible] ಮಾಡಿದ್ದಾದರೂ ಈ ವರುಷ [illegible] ಕಾಣುವದಿಲ್ಲ. ಬದಲಿಗೆ [illegible] ಹಳ್ಳೀ ವಲಯಗಳ [illegible] ಕ್ಷೇತ್ರಗಳಿಗೆ ಸಾಗಿಸಲಾಗುತ್ತಿದೆ [illegible] ತಪ್ಪು ಧೋರಣೆ [illegible] ಹಳ್ಳೀ ವಲಯಕ್ಕೆ ಅಕ್ಕಿ ಸಾಗಿಸುವದು ಕಷ್ಟವಾಗುವದು. ಮಲಬಾರಿನ ಯಾವದೇ ಭಾಗಕ್ಕಿಂತಲೂ ನಿಕೃಷ್ಟ ಸ್ಥಿತಿಯಲ್ಲಿರುವ ಕಾಸರಗೋಡು ತಾಲೂಕಿನ ನಗರ ಮಲಬಾರಿನ ಹಳ್ಳೀ ಪಸುಗೇ ಕ್ರಮವನ್ನು ವಿಸ್ತರಿಸಿ ಆ ಭಾಗಕ್ಕೆ ಧಾನ್ಯಪೂರೈಸುವ ಜವಾಬ್ದಾರಿ ಹೊರಬೇಕೆಂದು ಕಳೆದ ವರುಷ ದ. ಕ. ಜಿಲ್ಲಾ ಆಹಾರ ಸಮಿತಿ ಮಾಡಿದ ನಿರ್ಧಾರವನ್ನು ರೆವಿನ್ಯೂ ಬೋರ್ಡ್ ತಿರಸ್ಕರಿಸಿದೆ. ಜಿಲ್ಲೆಯ ಉಳಿದ 5 ತಾಲೂಕುಗಳ [illegible] ಭಾಗಕ್ಕೆ ಅಕ್ಕಿಯನ್ನು ಪೂರೈಸಿ ಕೊಡಬೇಕೆಂದು ಬೋರ್ಡ್ ಬಯಸಿತ್ತು [illegible] ಕಲ್ಲಿಕೋಟೆ [illegible] ಈ ಕ್ಷೇತ್ರಕ್ಕೆ [illegible] ಈ [illegible] ಕ್ಷೇತ್ರದ ಜನರಿಗೆ ಆಹಾರ ಪೂರೈಸುವದು [illegible] 22,216 ಟನ್ನು ಅಕ್ಕಿಯ[illegible]ನ್ನು ಅದರ ಕಾಲಾಂತರವನ್ನು ಗೋಧಿ ಮತ್ತು ರಾಗಿಯನ್ನು, ಕೂಡಲೇ ಈ ಜಿಲ್ಲೆಗೆ ರವಾನಿಸುವ ವ್ಯವಸ್ಥೆಯನ್ನು ಹಿಂದೀ ಸರಕಾರವು ತಡ ಮಾಡದೆ ಕೈಕೊಂಡು ಹಸಿವು ಬಾಧೆಯನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಮಂಗಳೂರು

ನಗರಸಭೆ ಇತ್ತೀಚೆಗೆ ಜರಗಿದ ನಗರಸಭೆಯಲ್ಲಿ ಕೇಂದ್ರ ಮೈದಾನಿನಲ್ಲಿ ಹೂತೋಟ ರಚಿಸಲು ಶ್ರೀ ವಿಠಲ್ ರಾಂ ತಾರಾಂ ಕುಳಕರ್ಣಿ ಅವರ ಕೊಡುವೆನೆಂದಿದ್ದ ೨ ಸಾವಿರ ರೂಪಾಯಿಗಳನ್ನು ನಿರಾಕರಿಸಲಾಯಿತೆಂದೂ, ರೇಡಿಯೋ ಮಂದಿರದ ಬಳಿ ಹೂದೋಟ ಒಂದನ್ನು ರಚಿಸಬೇಕೆಂಬ ಶ್ರೀ. ಪ್ರಾಂಜರ ಸೂಚನೆಯು ಸ್ವೀಕೃತವಾಯಿತೆಂದೂ ಕೇಳುತ್ತೇವೆ.

ಭಾಷಣ ಹಿಂದೂಧರ್ಮಕ್ಕೆ ಸೇರಿದ ಗ್ರೀಕ್ ಮಹಿಳೆ ಶ್ರೀಮತಿ ಸಾವಿತ್ರಿ ಮುಖರ್ಜಿ ಎಂಬವರು ಕಳೆದ ತಾ. ೧೯ರಂದು ಸ್ಥಳೀಯ ಥಿಯಾಸಾಫಿಕಲ್ ಲೋಜಿನಲ್ಲಿ 'ವಿಜ್ಞಾನ ಮತ್ತು ಧರ್ಮಗಳ ನಡುವಿನ ಪುರಾತನ ಸೇತುವೆ' ಎಂಬ ವಿಚಾರವನ್ನೆತ್ತಿಕೊಂಡು ಭಾಷಣವಿತ್ತರು.

ಮೈಸಿಂಡಿಯಾ ಪತ್ರಿಕೆಯ ಸಂಪಾದಕ ಮಿ. ಫಿಲಿಪ್ಸ್ ಸ್ಪ್ರೇಟ್ ಅವರು ಕಳೆದ ತಾ. ೨೯ರಂದು ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಸ್ವಾತಂತ್ರ್ಯ ಮತ್ತು ರಾಜ್ಯಾಂಗ ರಚನೆ ಎಂಬ ಕುರಿತು ಭಾಷಣವಿತ್ತರು. ಶ್ರೀ. ಎಮ್. ಕೃಷ್ಣ ಭಟ್ ಅವರು ಅಧ್ಯಕ್ಷರಾಗಿದ್ದರು.

ದ. ಕ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಮಿತಿಯ ಪ್ರಥಮ ವಾರ್ಷಿಕ ಸಭೆಯು ಕಳೆದ ತಾ ೧೯ರಂದು ಶ್ರೀ. ಎಂ. ಆರ್. ತಲ್ಲೇರಿಕರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಕೃಷ್ಣರಾವ್, ಡಾ. ಎಸ್. ಎಚ್. ಒಡೆಯರ್ ಮೊದಲಾದವರು ಸಂಘಟನೆಯ ಆವಶ್ಯಕತೆಯ ಕುರಿತು ನಾಲ್ಕು ಮಾತುಗಳನ್ನಾಡಿದರು. ಮುಂದಿನ ವರ್ಷದ ಕಾರ್ಯಕಾರಿಗಳ ಚುನಾವಣೆಯಾದ ಬಳಿಕ ಅಧ್ಯಕ್ಷರು ವಿಶ್ವಬ್ರಾಹ್ಮಣ ಸಮಾಜದೊಳಗೆ ಈಗಿರುವ ಬಿಕ್ಕಟ್ಟು ಮುಂದುವರಿದರೆ, ಸಮಾಜದ ಹಿತಸಾಧಿಸಲು ಸಾಧ್ಯವಿಲ್ಲವೆಂದು ನುಡಿದರು.

ಶ್ರೀ ಬಾಲಮಾರುತಿ ವ್ಯಾಯಾಮ ಮಂಡಲದವರ ಹೊಸಕಟ್ಟಡವೊಂದು ತಾರೀಖು ೨೯ರಂದು ಶ್ರೀ. [illegible] ದಾಸ ಪೈಗಳವರಿಂದ ತೆರೆಯಲ್ಪಟ್ಟಿತು. ಮಂಡಲದ ೧೩ನೆಯ ವಾರ್ಷಿಕೋತ್ಸವವು ಅಂದೇ ಶ್ರೀ. ಪಿ. [illegible] ಕುಡುವರ ಅಧ್ಯಕ್ಷತೆಯಲ್ಲಿ ನಡೆಯಿತು

ಮಿ|| ಎಂ. ಎಂ ಟಿ ಕ್ರ್ಯಾಸ್ತೋ— ನಮ್ಮ ಜಿಲ್ಲೆಯವರಾಗಿದ್ದು, ಮಲಬಾರಿನಲ್ಲಿ ಜಿಲ್ಲಾ ಜಡ್ಜರಾಗಿದ್ದ ಶ್ರೀಯುತರು [illegible]ನ ಜನರಲ್ ಹಾಸ್ಪಿಟಲಿನಲ್ಲಿ ದಿವಂಗತರಾದರೆಂದು ತಿಳಿಯುತ್ತೇವೆ

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of the School and another from any local gentleman.

UDIPI, 19-4-1945. } S. R. A. Pai, MANAGING DIRECTOR

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನಿಮ್ಮ ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಪತ್ತಾಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಫ್ರಿಸ್ಕೋದಲ್ಲಿ ಹಿಂದೀಯ ಸಮಸ್ಯೆ

ಮೊಲಟವರ ಭರವಸೆ

ಸಾನ್ ಫ್ರಾನ್ಸಿಸ್ಕೋ ಜಾಗತಿಕ ಸಮ್ಮೇಲನವನ್ನೇ ತೇಲಿಸಿ ಬಿಡುವದೆಂಬಂತೆ ಹರಿದ ಆತುರ ಪ್ರವಾಹದ ಮೂಲ ಬುಗ್ಗೆಯಾದ ರಶ್ಯನ್ ವಿದೇಶ ಮಂತ್ರಿ ಮೊಲಟವರು ಅಲ್ಲಿಯ ಪತ್ರಿಕಾ ಪ್ರತಿನಿಧಿಗಳ ಮುಂದೆ ಭಾರತದ ಭವಿಷ್ಯದ ಕುರಿತು ಹೀಗೆಂದಿದ್ದಾರೆ. "ಈ ಸಮ್ಮೇಲನದಲ್ಲಿ ಹಿಂದುಸ್ಥಾನದ ಒಂದು ಪ್ರಾತಿನಿಧ್ಯವಿದೆ ಆದರೆ ಹಿಂದ ಸ್ಥಾನವು ಸ್ವತಂತ್ರ ರಾಷ್ಟ್ರವಾಗಿಲ್ಲ ಸ್ವತಂತ್ರ ಭಾರತದ ಅಭಿಪ್ರಾಯ ಕೇಳುವ ಸಮಯ ವೂ ಬಂದಿದೆ ಎಂಬುದನ್ನು ನಾವೆಲ್ಲರೂ ಬಲ್ಲೆವು ಈ ಕಾರಣದಿಂದಾಗಿ, ಭಾರತದ ಸ್ಥಿತಿಯೀಗ ಅಶುದ್ಧವಾಗಿದ್ದರೂ, ಈ ಸಮ್ಮೇಲನದಲ್ಲಿ ಹಿಂದುಸ್ಥಾನದ ಪ್ರತಿನಿಧಿಗೊಂದು ಸ್ಥಾನ ಸಿಗಬೇಕೆಂಬ ಬ್ರಿಟಿಷ್ ಸರಕಾರದ ಅಭಿಪ್ರಾಯದೊಂದಿಗೆ ನಾವೂ ಸಹಭಾಗಿಗಳಾದೆವು."

ರಶ್ಯದ ಸಹಾನುಭೂತಿ

ರಶ್ಯಾ ಮತ್ತು ಅಮೇರಿಕಾಂಗ್ಲರೊಳಗಿನ ಭಿನ್ನಾಭಿಪ್ರಾಯಗಳ ಜತೆಯಲ್ಲೇ ಹಿಂದೀ ರಾಷ್ಟ್ರಾಭಿಮಾನದ ಕುರಿತು ರಶ್ಯಕ್ಕಿರುವ ಹಾರ್ದಿಕ ಸಹಾನುಭೂತಿಯೂ ಪ್ರಕಾಶಕ್ಕೆ ಬೀಳುತ್ತಿದೆ ರಶ್ಯದ ಪ್ರಮುಖ ಪತ್ರಿಕೆಗಳು ಸಂದರ್ಭವಶಾತ್ ಹಲವು ಸಲ ಬ್ರಿಟಿಷ್ ಸರಕಾರದ ಹಿಂದೀ ಧೋರಣೆಯನ್ನು ಟೀಕಿಸಿದ್ದುವು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೇ ಮೊದಲಾದ ರಾಷ್ಟ್ರಾಭಿಮಾನಿಗಳು ಫ್ರಿಸ್ಕೋದಲ್ಲಿ ಭಾರತ ಸ್ವಾತಂತ್ರ್ಯದ ಕುರಿತು ಜನ ಮತವನ್ನೊಲಿಸಿಕೊಳ್ಳುತಿದ್ದಾರೆ ಅವರ ಅಭಿಪ್ರಾಯಗಳಿಗೆ ದೊರೆಯುತ್ತಿರುವ ಸುಸ್ವಾಗತವನ್ನು ರಶ್ಯನ್ ಅಧಿಕಾರೀ ಪತ್ರಿಕೆ 'ಇಸ್‌ವೆಸ್ಟಿಯಾ' ವಿಶೇಷ ಬಣ್ಣದಿಂದ ವರದಿ ಮಾಡಿದ್ದಲ್ಲದೆ, ಮೋಸ್ಕೋ ರೇಡಿಯೋ ಅದನ್ನೇ ಘೋಷಿಸಿದೆ.

ಮೋಸ್ಕೋ ಘೋಷ

"ಭಾರತ ಬಂಧ ವಿಮೋಚನಾ ರಾಷ್ಟ್ರೀಯ ಸಮಿತಿಯು ದೊಡ್ಡ ದೊಡ್ಡ ಸಾರ್ವಜನಿಕ ಸಭೆಗಳನ್ನು ಸೇರಿಸಿ, ಸಮ್ಮೇಲನದ ಅಧಿಕಾರೀ ಹಿಂದೀ ಸದಸ್ಯರು ವಿಶಾಲ ಹಿಂದೀ ಸಾರ್ವಜನಿಕರ ಹಿತ ಸಂಬಂಧಗಳನ್ನಾಗಲೀ, ಅಭಿಪ್ರಾಯಗಳನ್ನಾಗಲೀ ಪ್ರತಿನಿಧಿಸುತ್ತಿಲ್ಲವೆಂದು ತೀವ್ರ ಟೀಕೆ ಮಾಡುತಿದ್ದಾರೆ 'ಭಾರತಕ್ಕೆ ಸ್ವಾತಂತ್ರ್ಯವೆಂಬ ಘೋಷಣೆಯೊಡನೆ ಸಾನ್ ಫ್ರಾನ್ಸಿಸ್ಕೋವಿನ ಅತಿ ದೊಡ್ಡ ಸಭಾಲಯಗಳಲ್ಲಿ ತುಂಬುತ್ತಿರುವ ಇಂತಹ ಸಭೆಗಳು ಅತ್ಯಂತ ಜನಪ್ರಿಯವಾಗಿವೆ. ಇಂತಹ ಸಭೆಗಳಿಗೆ ಸೇರಿದ ಒಂದು ಲಕ್ಷ್ಯಪೂರ್ವಕ ಕೇಳುವ ಜನ ಸಂದಣಿಯನ್ನು ನೋಡಿದರೆ ನಗರದ ಎಲ್ಲಾ ವರ್ಗದ ಜನರೂ ಬೆರೆಕೆಯಾಗಿದ್ದಲ್ಲದೆ, ಭಾಷಣಕಾರರು ಹಿಂದುಸ್ಥಾನವು ಕ್ಷಿಪ್ರದಲ್ಲಿಯೇ ಪೂರ್ಣ ಸ್ವತಂತ್ರವಾಗಬೇಕೆಂದೂ, ಹಿಂದುಸ್ಥಾನ ಮತ್ತು ಅಮೇರಿಕಗಳ ಸಂಬಂಧ ನಿರ್ಮಾಣವಾಗಬೇಕೆಂದೂ ಹೇಳುವಾಗ ಉತ್ಸಾಹದ ಜಯಕಾರವೆಬ್ಬಿಸುತ್ತಾರೆ."

ಶ್ರೀಮತಿ ಪಂಡಿತರ ಮನವಿ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಮೇರಿಕದ 'ಇಂಡಿಯಾಲೀಗ್' ಮತ್ತು 'ಭಾರತದ ಸ್ವತಂತ್ರ ರಾಷ್ಟ್ರೀಯ ಸಮಿತಿ'ಯ ಪರವಾಗಿ ಫ್ರಿಸ್ಕೋ ಸಮ್ಮೇಲನಕ್ಕೆ ಮನವಿಯೊಂದನ್ನೊಪ್ಪಿಸಿದ್ದಾರೆ ಇದನ್ನು ಸಮ್ಮೇಲನದ ಸರ್ವ ಪ್ರತಿನಿಧಿಗಳಿಗೂ ಹಂಚಲಾಗಿದೆ ಅದು ಸಮ್ಮೇಲನದಲ್ಲಿ ಚರ್ಚೆಗೆ ಬೀಳಬೇಕಾದರೆ ಅನಧಿಕಾರೀ ಸೂಚನೆಗಳಿಗೆ ಮೀಸಲಿಟ್ಟ ಹೊತ್ತಿನಲ್ಲಿ ಯಾವನಾದರೊಬ್ಬ ಸದಸ್ಯನೇ ಅದನ್ನು ಮುಂತರಬೇಕು 'ಹಿಂದೂಸ್ಥಾನಕ್ಕೆ ಕೂಡಲೇ ಸ್ವಾತಂತ್ರ್ಯ ದಾನವಾಡಬೇಕು, ಹಿಂದೀ ಬಿಕ್ಕಟ್ಟು ನಿವಾರಣೆಯಿಂದಲೇ ಫ್ರಿಸ್ಕೋ ಸಮ್ಮೇಲನದ ನಿಜ ಪರೀಕ್ಷೆ; ಫೇಸಿಸಮ್ ಮತ್ತು ನಾಜಿಸಮ್ ಅಂತ್ಯವಾಯಿತು. ಹಿಂದುಸ್ಥಾನವನ್ನು ಸ್ವತಂತ್ರಗೊಳಿಸಿ ಸಾಮ್ರಾಜ್ಯ ಸಾಹಿತ್ಯವೂ ನಾಶವಾಯಿತೆಂಬುದನ್ನು ತೋರಿಸದಿದ್ದರೆ ಲೋಕಶಾಂತಿಯು ಸಾಧ್ಯ ಹಿಂದೂಸ್ಥಾನವನ್ನಾಳಲು ನೈತಿಕ ಅಥವಾ ರಾಜಕೀಯ ಅಧಿಕಾರವಾವುದು ಬ್ರಿಟಿಷರಿಗಿಲ್ಲ. ಇತ್ಯಾದಿ ಸ್ಪಷ್ಟಮಾತುಗಳ ಮನವಿಯಿಂದ ಶ್ರೀಮತಿ ಪಂಡಿತರು ಸಮ್ಮೇಲನದ ಕಣ್ಣನ್ನು ತೆರೆದಿದ್ದಾರೆ.

ಕುಂದಾಪುರ— ಇಲ್ಲಿಯ ಹೊಸ ವಿದ್ಯಾರ್ಥಿ ಭವನದ ಪಂಕ್ತಿ ಸಮಾಲೋಚನ ಬಗ್ಗೆ ಕರೆಸಿದ ಕಮಿಟಿಯ ಸಭೆಯು ತಾ 20 4 45 ಮಿ॥ ಶ್ರೀ ವಿ ಶಿವರಾಮ ಶೆಟ್ಟಿ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಸೇರಿತು ಕೋರ್ಟು ರಜೆಯ ಕಾಲದಲ್ಲಿ ಸಾಧ್ಯವಾದಷ್ಟು ವಂತಿಗೆ ವಸೂಲು ಮಾಡಬೇಕಾಗಿಯೂ ಆಯಾ ಗ್ರಾಮಗಳಿಗೆ ಅವಶ್ಯವಿದ್ದವರನ್ನು ಕೂಡಿಕೊಂಡು ಬೇರೆ ಬೇರೆ ತಂಡವಾಗಿ ಹೊರಟರೆ ಹೆಚ್ಚಿನ ಕೆಲಸ ಮಾಡಬಹುದೆಂದಲೂ ಭವನದ ಬಾವಿಯ ಕೆಲಸಕ್ಕೆ ಕೂಡಲೇ ತೊಡಗಬೇಕಾಗಿಯೂ ನಿರ್ಣಯಿಸಲ್ಪಟ್ಟಿತು ವಂತಿಗೆ ವಸೂಲಿ ಕಮಿಟಿಯ ಕಾರ್ಯದರ್ಶಿಯಾಗಿ ಕೆ ಎಡರೆ ಮಂಜಯ್ಯ ಶೆಟ್ಟಿ ಎಡ್ವೊಕೇಟ್ ಇವರನ್ನು ಆರಿಸತಕ್ಕ ಬಗ್ಗೆ ತಕ್ಕ ಅಧಿಕಾರ ಕೊಡಲಾಯಿತು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟ
ವಾಗುತ್ತವೆ

ವಾರ್ಷಿಕ ಚಂದಾ
ರೂ **1—8—0** ಮಾತ್ರ
ಬೈಂಡು ಮಾಡಿದ ಸಂಪುಟಕ್ಕೆ ರೂ 2-
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಕ್ರಾನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.
18 Balmat Road, MANGALORE
Approved firm by the Govt. of Mysore
Certified by the Agent of the Govt of India in Ceylon. ESTD 1906

ಬೋರ್ಡು ಹೈಸ್ಕೂಲ್, ಕುಂದಾಪುರ.

ವಿಜ್ಞಾಪನೆ.

ಕಳೆದ ನಾಲ್ಕಾರು ವರ್ಷಗಳಿಂದ ಈ ತಾಲೂಕಿನ ಹಳ್ಳಿಗಳಿಂದ ವಿದ್ಯಾರ್ಜನೆಗಾಗಿ ಬರುವ ವಿದ್ಯಾರ್ಥಿಗಳ ನುಗ್ಗಾಟದಿಂದ ಬಹು ಮಂದಿ ವಿದ್ಯಾರ್ಥಿಗಳನ್ನು ಪ್ರತಿ ಕೋಣೆಯಲ್ಲಿ ಕುಳ್ಳಿರಿಸಬಹುದಾದ ಮಿತಿ ನಿಯಮವನ್ನು ಮೀರಿ ಸೇರಿಸಿಕೊಂಡರೂ ಅನೇಕರು ಸ್ಥಳ ಸಂಕೋಚದಿಂದ ಬೇರೆ ತಾಲೂಕಿನ ದೂರದ ಶಾಲೆಗಳನ್ನು ಸೇರುತ್ತಿರುವರು ಮಾತ್ರವಲ್ಲ, ಸೆಕೆಂಡರಿ ವಿದ್ಯಾಭ್ಯಾಸವನ್ನೇ ಮುಂದರಿಸಲಾಗದ ದೃಷ್ಟಾಂತಗಳೂ ಇವೆ ಶಾಲೆಯು ಪಾರ ಆರಂಭವಾಗುವ ವರೆಗೆ ಹುಡುಗಿಯರಿಗಾಗಿ ಪ್ರತ್ಯೇಕ ಕೋಣೆಯ ವ್ಯವಸ್ಥೆಯಿರಬೇಕೆಂಬ ಸರಕಾರದ ನಿಯಮವಿದ್ದರೂ ಅದನ್ನುಲ್ಲಂಘಿಸಿ ಆ ಕೋಣೆಯನ್ನೂ ತರಗತಿಗಾಗಿ ಉಪಯೋಗಿಸಲಾಗಿದೆ ಮೇಲಾಗಿ, ಇದು ಹಳೆಯ ಶಾಲೆಯಾದುದರಿಂದ ಹೆಚ್ಚಿನ ಕೋಣೆಗಳು ಆರೋಗ್ಯ ನಿಯಮಕ್ಕನುಗುಣವಾದ ಆಧುನಿಕ ರೀತಿಯ ವಿಶಾಲ ಕೋಣೆಗಳಾಗಿರದೆ, ಗಾಳಿ ಬೆಳಕಿನ ಸಂಚಾರ ಸರಿಯಿಲ್ಲದೆ, ಚಿಕ್ಕದಾಗಿದ್ದು ಹಿಡಿಸಲಾರದಷ್ಟು ಮಕ್ಕಳನ್ನು ತುಂಬಿಸಬೇಕಾಗಿದೆ ಅವರು ಕುಳಿತುಕೊಳ್ಳುವ ಬೆಂಚು ಡೆಸ್ಕು ಮುಂತಾದುವುಗಳು ಹಳೆಯ ಮಾದರಿಯವಾಗಿದ್ದು ವಿದ್ಯಾರ್ಥಿಗಳು ಬಹಳ ತೊಂದರೆಗೀಡಾಗಿ ಉಪಯೋಗಿಸಬೇಕಾಗಿದೆ ಇವುಗಳಲ್ಲಿ ಹೆಚ್ಚಿನವು ಉಪಯೋಗಿಸುವ ಸ್ಥಿತಿಯಲ್ಲಿಯೂ ಇಲ್ಲ ಈ ದುಸ್ಥಿತಿಯಿಂದಾಗಿ ಮಕ್ಕಳ ಆರೋಗ್ಯವು ತೃಪ್ತಿಕರವಾಗಿರಲು ಅಸ್ಪದವಿಲ್ಲದಂತಾಗಿದೆ ತಮ್ಮ ಮಕ್ಕಳಿಗೆ ಕನಿಷ್ಠ ಹೈಸ್ಕೂಲ್ ವಿದ್ಯಾಭ್ಯಾಸವನ್ನಾದರೂ ಕೊಡಿಸಬೇಕೆಂಬ ಜಾಗ್ರತಿಯು ಜನರಲ್ಲಿ ಉಂಟಾದರೂ ಅದಕ್ಕೆ ಬೇಕಾದ ಕಟ್ಟೋಣ, ಬೆಂಚು, ಡೆಸ್ಕು ಮತ್ತು ಇತರ ಯಾವುದೇ ಸೌಕರ್ಯಗಳನ್ನೊದಗಿಸಲು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸದ್ಯದ ಆರ್ಥಿಕ ಮುಗ್ಗಟ್ಟು ಅಡ್ಡ ಬಂತಿದೆ

ಈ ಹೈಸ್ಕೂಲು ಜಿಲ್ಲೆಯ ಅತಿ ಹಳೆಯ ಶಾಲೆಗಳಲ್ಲೊಂದಾಗಿದ್ದು, ಇಲ್ಲಿಂದ ನಿವೃತ್ತ ಹೈಕೋರ್ಟು ನ್ಯಾಯಾಧೀಶ ವಿ ಪಿ ರಾವ್ ಸ್ವರ್ಗಸ್ಥ ಸರ್ ಸಿ ಆರ್. ರಾವ್, ದಿವಂಗತ ಹೈಕೋರ್ಟು ನ್ಯಾಯಾಧೀಶ ಕೆ ಶಂಕರನಾರಾಯಣ ರಾವ್ ಮತ್ತು ಇತರ ಅನೇಕ ವಿದ್ವನ್ಮಣಿಗಳು ಹೊರ ಬಿದ್ದು ಈ ಶಾಲೆಯ ಕೀರ್ತಿ ಧ್ವಜವನ್ನು ಹಾರಾಡಿಸಿದರೆಂಬುದು ಯಾವನಿಗೂ ಹೆಮ್ಮೆ ಪಡತಕ್ಕ ವಿಷಯವಲ್ಲ! ಈ ಶಾಲೆಯ ಕೀರ್ತಿ ಪ್ರಭೆಯು ಆಧಿಪತ್ಯದ ಪ್ರತಿ ಸಂದುಮೂಲೆಯನ್ನೂ ಬೆಳಗಿಸಿದೆ ಎಂದರೆ ಅತಿಶಯೋಕ್ತಿಯಾಗದು

ಕೆಲವು ವರ್ಷಗಳಿಂದ ವಿದ್ಯಾಧಿಕಾರಿಗಳು ಈ ಶಾಲೆಯ ಸ್ಥಳ ಸಂಕೋಚ, ಆರೋಗ್ಯ ವಿಷಯಕವಾದ ಕುಂದುಗಳನ್ನೆತ್ತಿ ಬರೆಯುತ್ತ ಬಂದಿರುವರು ಅಲ್ಲದೆ, ಕೆಲವು ತಿಂಗಳ ಹಿಂದೆ ಸಂದರ್ಶಿಸಿದ ಡಿವಿಜನಲ್ ಇನ್ಸ್‌ಪೆಕ್ಟರರು 'ಈ ಶಾಲೆಯಲ್ಲಿ ಬೇಕಾದ ಸುಧಾರಣೆಗಳನ್ನು ಮಾಡದೆ ಇದ್ದರೆ ಮುಂದರಿವಲ್ಲಿ ಶಾಲೆಯ ಮಂಜೂರಾತಿಯನ್ನು ರಿಸ್ಟ್ರಿಕ್ಟ್ ಮಾಡಲಾಗುವುದು' ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ ಭಟ್ಕಳದಿಂದ ಕಲ್ಯಾಣಪುರದ ವರೆಗಿನ 48 ಮೈಲು ವಿಸ್ತಾರದ ಪ್ರದೇಶದಲ್ಲಿ ಇದೊಂದೇ ಹೈಸ್ಕೂಲಾದುದರಿಂದ ಮೇಲೆ ಹೇಳಿದ ಕಾರಣಗಳಿಂದ ಇದರ ಮಂಜೂರಾತಿಯು ರದ್ದಾದರೆ ವಿದ್ಯಾ ಪ್ರಚಾರವಾಗಬೇಕಾದ ಈ ಕಾಲದಲ್ಲಿ ಸೆಕೆಂಡರಿ ವಿದ್ಯಾಭ್ಯಾಸವನ್ನು ಪಡೆಯಲು ಹಾರುವುಳ್ಳ ಬಾಲಕರಿಗೆ ಎಂಥ ವಿಪತ್ತು ಬಂದೊದಗುವುದೆಂಬುದನ್ನು ವಿವರಿಸುವುದು ಸಾಧ್ಯವಲ್ಲ! ಹೆಚ್ಚೇಕೆ? ಸಾವಿರಾರು ಬಾಲಕರು ಸೆಕೆಂಡರಿ ವಿದ್ಯಾಭ್ಯಾಸವನ್ನೇ ಪಡೆಯಲಾರದೆ ಆಜನ್ಮ ಅವಿದ್ಯಾವಂತರಾಗಿಯೇ ಬಾಳಬೇಕಾಗುವುದು.

ಕುಂದಾಪುರ ಶಾಲೆಯ ಕುಂದುಗಳಿಂದುಂಟಾದ ಈ ಕರುಣಾಜನಕ ಪರಿಸ್ಥಿತಿಯನ್ನು ಹೋಗಲಾಡಿಸಲುತ್ತಮ ವ್ಯವಸ್ಥೆಯನ್ನು ಕೈಕೊಳ್ಳಬೇಕೆಂಬ ಉತ್ಕಟೇಚ್ಛೆಯಿಂದಲೂ, ಉತ್ಕಟ ಅಭಿಮಾನದಿಂದಲೂ ಸ್ಫೂರ್ತಿ ತಳೆದು ಗೌರವಾರ್ಹನೀಯರೆಲ್ಲರೂ ಪ್ರಚಂಡ ಸಭೆ ಜರುಗಿಸಿ ಈ ಕುರಿತಾಗಿ ಧನ ಸಂಗ್ರಹ ಮಾಡುವರೆ ತಾಲೂಕಿನ ಸುಮಾರು 40 ಮಂದಿ ಅಗ್ರ ಮುಖಂಡರ ಸಮಿತಿಯೊಂದನ್ನು ರಚಿಸಿರುವರು ಕಳೆದ ಒಂದೆರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಿಮೆಯೆಂದರೆ 10 ಹೈಸ್ಕೂಲುಗಳಾದರೂ ಜನ್ಮ ತಾಳಿವೆ ಕೆಲವು ಹಳ್ಳಿಗಳು ಕೂಡ ಹೈಸ್ಕೂಲಿನಿಂದ ಮೆರೆದಾಡುತ್ತಿವೆ ಇನ್ನೂ ಇನ್ನೂ ಹೊಸ ಹೈಸ್ಕೂಲುಗಳು ಸೃಷ್ಟಿಯಾಗುತ್ತಲಿವೆ ಇದಕ್ಕೆ ಜನತೆಯಲ್ಲುಂಟಾದ ವಿದ್ಯಾಭಿವೃದ್ಧಿಯ ನವಜಾಗ್ರತಿಯೇ ಕಾರಣವಾಗಿರಲು, ಇಡೀ ತಾಲೂಕಿಗೆ ಒಂದೇ ಆಧಾರವಾಗಿರುವ ಕುಂದಾಪುರ ಹೈಸ್ಕೂಲನ್ನು ಸಮರ್ಪಕಗೊಳಿಸಲಾಯಿತೆಂಬ ಅಪಕೀರ್ತಿಗೆ ಎಡೆ ಕೊಡುವುದು ಉಚಿತವಲ್ಲ ವಿದ್ಯಾರ್ಜನೆ ಮತ್ತು ಬಹು ವಿಶಾಲವಾದ ವಿಷಯ ಕ್ಷೇತ್ರವು ಈ ಶಾಲೆಯ ಮೇಲೆ ಬಿದ್ದಿದೆ ಮನಸ್ಸು ಮಾಡಿದರೆ ಇದನ್ನು ಕೋಟೆಯಾಗಿ ಮಾಡುವ ಶಕ್ತಿ ಸಾಮರ್ಥ್ಯವುಳ್ಳ ಮಹಾ ಪುರುಷರೂ, ದಾತರೂ ಈ ಶಾಲೆಯ ಶಿಷ್ಯ ಕೋಟಿಯಲ್ಲಿದ್ದಾರೆ ಇದರ ಸಮಿತಿಯವರು ಶಾಲೆಯ ಪ್ರಕೃತ ಸ್ಥಿತಿಯನ್ನು ಹೋಗಲಾಡಿಸಲು, ಇದರ ಕಟ್ಟೋಣ ಸಹಿತ ಸಾಮಗ್ರಿ ಮುಂತಾದುವುಗಳಿಗಾಗಿ ಈಗಿನ ವಿಶೇಷ ದರದಲ್ಲಿ 25000 ರೂಪಾಯಿಗಳಾದರೂ ಬೇಕಾಗಬಹುದೆಂದು ಅಂದಾಜು ಮಾಡಿರುವರು ಕಾರಣ, ವಿದ್ಯಾಭಿಮಾನಿಗಳಾದ ಹಳೆ ವಿದ್ಯಾರ್ಥಿಗಳೂ, ಹಿತ ಚಿಂತಕರೂ ಎಲ್ಲಿದ್ದರೂ ತನು ಮನ ಧನದಿಂದ ಸಹಾಯವನ್ನು ನೀಡಬೇಕೆಂದು ವಿಜ್ಞಾಪಿಸಿಕೊಳ್ಳಲಾಗಿದೆ ಈ ಶಾಲೆಯ ಇತಿಹಾಸದಲ್ಲೇ ಇಂಥ ವಿಜ್ಞಾಪನೆಯು ಪ್ರಥಮವಾದ್ದರಿಂದ ಉದಾರ ಮಹಾಶಯರೆಲ್ಲರೂ ಈ ಮಹದುದ್ದೇಶಕ್ಕಾಗಿ ಉದಾರ ಮನಸ್ಸಿನಿಂದ ತಮ್ಮ ಕೊಡುಗೆಯನ್ನು ನೀಡಬೇಕೆಂದು ಅತಿ ವಿನಯದಿಂದ ವಿನಂತಿಸಲಾಗಿದೆ

ಉಪಾಧ್ಯಾಯರಾಗಿ ಕೆಲಸಗಾರುತ್ತಿರುವ ಮಹಾ ಸೇವೆಯ ಮಾಡಿದ ಸಂದರ್ಭವನ್ನು ಸ್ಮರಿಸಿ ನೆಲಗಿರುವ ಸುಪುತ್ರರೆಲ್ಲರನ್ನು ಎಬ್ಬಿಸಿ, ಅವರ ಕರುಳನ್ನು ಹಾಲುಣಿಸಿ, ಪ್ರತಿಯೋರ್ವನೂ ಒಳ್ಳೆ ಯುವಕನೆಂದೆನಿಸಿದ ಶಾಲೆಯ ಉದ್ಧಾರದ ಕಾರ್ಯರಂಗಕ್ಕಿಳಿದು, ಮಾತೆಯ ಸೇವೆಯಲ್ಲಿ ನಿರತರಾಗಿ ಆಕೆಯ ಕೃಪಾಕಟಾಕ್ಷಕ್ಕೆ ಗುರಿಯಾಗಲೆಂದು ಆಶಿಸಲಾಗಿದೆ ಮಾತ್ರವಲ್ಲ, ಪ್ರತಿವ್ಯಕ್ತಿಯೂ ಶಾಲೆಯ ಶುಭಾಶೀರ್ವಾದವನ್ನು ಬಯಸಬೇಕೆಂದು ನಿರಂತರ ಮಾಡಿಕೊಳ್ಳಲಾಗುತ್ತದೆ ಈ ಮಹಾಕಾರ್ಯಕ್ಕಾಗಿ ಎಂಥ ಅಲ್ಪ ಧನ ಸಹಾಯವನ್ನಾದರೂ ಕೃತಜ್ಞತೆಯಿಂದ ಸ್ವೀಕರಿಸಲಾಗುವುದು ಎಂದು ಆಗ್ರಹಪೂರ್ವಕ ವಿಜ್ಞಾಪನೆ

ಈ ಕಾರ್ಯಕ್ಕಾಗಿ ರೂಪಾಯಿ 200 ಯಾ ಮೇಲ್ಪಟ್ಟು ಸಹಾಯ ಮಾಡುವ ದಾನಿಗಳ ಹೆಸರು ಚಿರಸ್ಥಾಯಿಯಾಗುವಂತೆ ಅವರ ಹೆಸರುಗಳನ್ನು ಚಂದ್ರಕಾಂತ ಶಿಲೆಯ ಹಲಗೆಯೊಂದರ ಮೇಲೆ ಬರೆದು ಕಟ್ಟಡದ ಪ್ರಮುಖ ಭಾಗದಲ್ಲಿ ಪ್ರದರ್ಶಿಸಬೇಕೆಂದು ಸಮಿತಿಯು ನಿರ್ಧರಿಸಲಾಗಿದೆ

ಬೋರ್ಡು ಹೈಸ್ಕೂಲು,
ಕುಂದಾಪುರ,
2—5—1945

B. Shamaraya Shetty,
B. A. L. T
Headmaster.

೨ನೇ ಹಿಮ್ಲರ್

ಲೇಖಕ.- ಜೆ. ಓ. ರೀಬೆನ್ ಹೋವರ್,
ಸಹಸಂಪಾದಕ: 'ಡೀ ರೆಂಟೆಂಗ್',

> ಯುದ್ಧಾಪರಾಧಿಗಳು ತಪ್ಪಿಸಿಕೊಳ್ಳ [illegible] ಅಪರಾಧಿಗಳಾಗಿ ಕಾಣ ಹತ್ತಿದಾರೆಂದು, ಈಗ ನಾಜೀ [illegible] ಅಮೇರಿಕೆಯು ಪ್ರಧಾನರೊಳಗೆ ಹಿಟ್ಲರನನ್ನು ಗುರುತಿಸ್ಸಿ ಕೊಲ್ಲಿಸಿ ಇಂಗ್ಲೆಂಡ್ ಅಮೇರಿಕಾಗಳಿಗೆ [illegible] ಸೂಚನೆ ಕಳುಹಿದೆ ನಂದು. [illegible] ಸುದ್ದಿ ಅದಲ್ಲ, ಮುಂದೆ ಯಾವುದೋ! ಹಿಟ್ಲರ್ ಸತ್ತನೋ ಇಲ್ಲವೋ [illegible]
> ಆದರೆ ಅವ ಸತ್ತ ತನ್ನ ಮೇಲಿನ [illegible] ಹೊರಗಾದರಲ್ಲ, [illegible] ಈ ಹಿಮ್ಲರನಿಗಿನ ಮುಂದಿನ [illegible] ತಿಳಿದಿರಬೇಕು. ಸಂ. ನ

ಯುದ್ಧಾಪರಾಧಿಗಳು

ಹಿಮ್ಲರನ ತಂದೆಯು ಮ್ಯೂನಿಚಿನ 'ರೋಯಲ್ ಬವೇರಿಯನ್ ವ್ಯಾಯಾಮ ಶಾಲೆ'ಯ ಡೈರೆಕ್ಟರ್ ಆಗಿದ್ದ. ಆತ ವಿದ್ಯಾರ್ಥಿಗಳನ್ನು ಗಡಗುಟ್ಟಿಸುತ್ತಿದ್ದ ಕ್ರೂರ ಅಧ್ಯಾಪಕ. ಅಂತೆಯೇ ಅವನ ಸಣ್ಣ ಕುಟುಂಬವೂ ಅವನೆಂದರೆ ಬಹಳವಾಗಿ ಹೆದರುತಿತ್ತು. ಅವನಿಗಿಬ್ಬರು ಮಕ್ಕಳು. ಹಿರಿಯವನಾದ ಹೆನ್ರಿಚನು 1900ರಲ್ಲಿ ಹುಟ್ಟಿದವ-1918ರಲ್ಲಿ ಪ್ರಾಯಕ್ಕೆ ಬಂದವನೇ ಸೇನಾ ಹುದ್ದೆಯೊಂದನ್ನು ಸಂಪಾದಿಸಿಕೊಂಡ. ಆದರೆ ಯುದ್ಧಾಂತ್ಯದ ಮೊದಲು ಕಮಿಶನ್ ಪಡೆಯುವಷ್ಟಾಗಲೀ ಪ್ರತ್ಯಕ್ಷ ಹೋರಾಟದಲ್ಲಿ ಭಾಗ ವಹಿಸುವಷ್ಟಾಗಲೀ ಪ್ರಾಯ ಸಮರ್ಥನಾಗಲಿಲ್ಲ.

ಈ ತರುಣ ಹಿಮ್ಲರನು, ಯುದ್ಧೋದ್ಯೋಗ ನಿವೃತ್ತಿ ಹೊಂದಿ ನಿರಾಶೆಗೀಡಾದ ಜರ್ಮನಿಯ ಮಹತ್ವಾಕಾಂಕ್ಷಿ ತರುಣ ಜನಾಂಗದ ಕಡುತರ ಮಾದರಿಯಾಗಿ ಪರಿಣಮಿಸಿದ. ತಮ್ಮ ಏಕ ಮಾತ್ರ ಅಭ್ಯಾಸವಾದ ಯುದ್ಧ ವಿದ್ಯೆಯನ್ನು ಪ್ರಯೋಗಕ್ಕೆ ಹಚ್ಚುವ ಅವಕಾಶವೊದಗದೆ ಧಗಧಗಿಸುತಿದ್ದ ಉರಿ ಕುಂಡಗಳವು. ಇವೆಲ್ಲಾ "ವಿಜಯೀ ಜರ್ಮನ್ ಸೇನೆಯನ್ನು ಬೆಂಗಡೆಯಿಂದ ತಿವಿದವರ" ಮತ್ತು "ಜರ್ಮನಿಯು ಅಷ್ಟರಲ್ಲೇ ಸಂಪಾದಿಸಿಯಾಗಿದ್ದ ವಿಜಯವನ್ನು ಕಸಗೊಂಡವರ" ಮೇಲೆ ದ್ವೇಷದಿಂದ ಕುದಿಯುತಿದ್ದುವು. ಹಿಮ್ಲರ್ ಮ್ಯೂನಿಚಿನಲ್ಲಿದ್ದುಕೊಂಡು ಕೋಳಿ ಮರಿ ಮತ್ತು ಮೊಲಗಳನ್ನು ಸಾಕಿ ಜೀವನ ನಿರ್ವಹಣ ಮಾಡುತ್ತಿದ್ದ. ಅದೇ ಸಮಯದಲ್ಲಿ ವ್ಯವಸಾಯಕ ರಸಾಯನ ಶಾಸ್ತ್ರವನ್ನೂ ಕಲಿಯುತಿದ್ದ. ಅಲ್ಲಿ- ಆ ಟೆಕ್ನಿಕಲ್ ಹ್ಯಾಸ್ಕೂಲಿನ ಪ್ರೊಫೆಸರರೂ ವಿದ್ಯಾರ್ಥಿಗಳೂ ತನ್ನಂತೆಯೇ ಮುಯ್ಯಿ ತೀರಿಸುವ ಮರು ಯುದ್ಧವೊಂದನ್ನೇ ಚಿಂತಿಸುತ್ತಿರುವದನ್ನು ಆತ ತಿಳಿದುಕೊಂಡ.

ಅವರ ಆಶಯ ಬಲಿಷ್ಠ ನಾಯಕ ಜನಾಂಗವಾದ ಜರ್ಮನರ ಮೇಲೆಂಬ ತತ್ವವನ್ನೂ, ಜೀವನ ಶಾಸ್ತ್ರ ಮತ್ತು ಸೇನಾಸಾಧ್ಯತೆಯ ದೃಷ್ಟಿಯಿಂದ 'ಜರ್ಮನಿಸ್ತ್ವದ ಮರು ಜನನ' ಹೇಗೆಂಬುದನ್ನೂ ಹಿಮ್ಲರ್ ಕಲಿಯಹತ್ತಿದ. ಕೆಪ್ಟನ್ ರೋಹೆಮರ ನಾಯಕತ್ವದಲ್ಲಿದ್ದ 'ರೀಖ್ ಸ್ಕ್ರಿಗ್ಸ್ ಪ್ಲೇಗ್ಗೆ' ಎಂಬ ಅಕ್ರಮ ಸ್ವತಂತ್ರ ಕೂಟವಾದ ಸೇನಾ ಸಂಘವನ್ನು ಆತ ಪ್ರವೇಶಿಸಿದ. ಮೊಲಗಳನ್ನು ಸಾಕುವದಕ್ಕಿಂತ ಭೀಕರಾಯಿಟೇ ತೀರ ರಾಜಕೀಯ ಮತ್ತು ಸೇನಾ ದರೋಡೆಗಾರನಾಗುವದೇ ಉತ್ತಮವೆಂಬುದು ಅಲ್ಪಾವಧಿಯಲ್ಲೇ ಹಿಮ್ಲರನಿಗೆ ಹೊಳೆದು ಹೋಯಿತು. ಹೊಸತಾಗಿ ಸ್ಥಾಪನೆಗೊಂಡ ನಾಜೀ ಪಕ್ಷದಲ್ಲಿ ತನಗೊಂದು ಸ್ಥಾನ ಕೊಡಬೇಕೆಂದು ಆತ ರೋಹೆಮನನ್ನು ಕೇಳಿಕೊಂಡ. ಆದರೆ ದಪ್ಪ ಕನ್ನಡಕದೊಳಗೆ ಸರ್ವದಾ ಅರೆ ಮುಚ್ಚಿಕೊಂಡೇ ಇರುವ ಕಣ್ಣುಗಳು—ಸದಾ ಬೆವರುತ್ತಿರುವ ಕೈಗಳು-ಈ ಕುರೂಪಿ, ಕುಪಿತ, ಕಿರಿ ಮನುಷ್ಯನನ್ನು ಕಂಡರೆ ನಾಜೀ ನಾಯಕರು ಕೂಡಾ ಅಸಹ್ಯ ಪಡುತ್ತಿದ್ದರು; ಅವನನ್ನಂಗೀಕರಿಸಿಕೊಳ್ಳಲು ಹಿಂಜರಿದರು. ಆದರೆ ಕೊನೆಗೆ ರೋಹೆಮನು ಮನಸ್ಸು ಮಾಡಿ ಈತನನ್ನು ತೆಗೆದುಕೊಳ್ಳುವಂತೆ ನಾಜೀ ಪಕ್ಷದ ಸಂಘಟನಾ ಕರ್ತನಾದ ಗ್ರೆಗೋರ್ ಸ್ಟ್ರಾಸರನನ್ನು ಸಮಜಾಯಿಸಿದ.

ತಾವು ಹಿಮ್ಲರನಿಗೆ ಮಾಡಿದ ಈ ಉಪಕಾರಕ್ಕೆ ಪ್ರತಿಫಲವಾಗಿ ರೋಹೆಮ್ ಮತ್ತು ಸ್ಟ್ರಾಸರ್ ಇಬ್ಬರೂ 1934ನೇ ಜೂನ್ 30ರಲ್ಲಿ ತಮ್ಮ ಪ್ರಾಣವನ್ನು ಕೊಡಬೇಕಾಯಿತು. ಸ್ಟ್ರಾಸರನ ಕಾರ್ಯದರ್ಶಿಯಾಗಿದ್ದುದರಿಂದ ಪಕ್ಷದ ಚುಕ್ಕಾಣಿಯೇ ಹಿಮ್ಲರನ ಕೈಯಲ್ಲಿತ್ತು. ಅಲ್ಲಿಂದ ಸೇನಾ ತಿರುಳು ಭಾಗದಂತಿದ್ದ 'ಬ್ಲೇಕ್ ಗಾರ್ಡ್ಸ್' ಅಥವಾ 'ಎಸ್. ಎಸ್. ಸೇನೆ'ಯೊಳಗೆ ಆತನ ಪ್ರವೇಶವಾಯಿತು. ಈ ಎಸ್. ಎಸ್. ದಳವು ಹಿಟ್ಲರ್ ಮತ್ತು ಇತರ ಪಕ್ಷಪ್ರಮುಖರ ಮೈಗಾವಲಿಗಾಗಿಯೇ ಮೂಲತಃ ಸ್ಥಾಪನೆಗೊಂಡಿದ್ದಿತು.

'ಅಮೂಲ್ಯ ಜರ್ಮನ್ ಮಾದರಿ'ಗಳವ ಈ ಸೇನಾ ವಿಭಾಗ ಪ್ರವೇಶದ ಅನಿವಾರ್ಯ ಶರ್ತವಾಗಿರುವ ದೇಹದಾರ್ಢ್ಯತೆಯು ಹಿಮ್ಲರನಲ್ಲಿರಲಿಲ್ಲ. ಆದರೆ ಈತನಲ್ಲಿರುವ ಸ್ವಮತ ಭ್ರಾಂತಿ, ಸಂಕೋಚರಹಿತ ವಿಧೇಯತೆಯನ್ನೂ, ಪುರಾತನವಾದ ತನ್ನೊಬ್ಬನನ್ನು ಬಿಟ್ಟು ಪಕ್ಷದ ಮಿಕ್ಕೆಲ್ಲರ ಮೇಲೂ ಆತನಿಗಿರುವ ಅತಿ ಸೂಕ್ಷ್ಮವಾದ ಮತ್ತು ಗಾಢವಾದ ಸಂದೇಹವನ್ನೂ ಕಂಡ ಹಿಟ್ಲರ್ ಆಸ್ಥಾನಕ್ಕೆ ಇವನನ್ನು ಆರಿಸಿಕೊಂಡ.

ಹಿಮ್ಲರನ ಮಹತ್ವಾಕಾಂಕ್ಷೆಗೆ ಮಿತಿಯಿರಲಿಲ್ಲ. ನಾಜೀ ಪಕ್ಷದ ಸಾಮಾನ್ಯ ಸದಸ್ಯರು 'ನಿಸ್ತೇಜ ಪ್ರೊಫೆಸರ ತಂಡ'ವೆಂದೂ ಎಸ್. ಎಸ್. ದಳದವರು ಅವರ ನಡುವೆ 'ಪದಕ ಪ್ರಾಯ'ರೆಂದೂ ಅವನ ಭಾವನೆಯಿದ್ದಿತು. ಆದ್ದರಿಂದ 'ಭಾವೀ ಜರ್ಮನ್ ಜಗತ್ತ'ನ್ನು ಆಳುವ ಕುಲೀನ ಅಧಿಕಾರಿಗಳಾಗುವಂತೆ ಆತನು ತನ್ನ ಸೈನಿಕರಿಗೆ ತರಬೇತಿ ಕೊಡಹತ್ತಿದ. ಮಧ್ಯ ಕಾಲೀನ ಬರ್ಗರಾಧಿಕಾರಿಗಳ ಸೇನಾ ವಿಧಾನಗಳ ಅಂಶವನ್ನೂ, ಪೋಲಿಸ ಶಾಸ್ತ್ರದ ಸ್ವಭಾವ ಬದ್ಧ ನಿಯಮಗಳ ಅಂಶವನ್ನೂ ಆಯ್ದುಕೊಂಡು ಹಿಮ್ಲರ್ ತನ್ನೀ ಧೋರಣೆಯನ್ನು ರೂಪಿಸಿಕೊಂಡಿದ್ದ. ಈ ಮಿಶ್ರಣಕ್ಕೆ ಪುರಾತನ ಮೇಲಿನ ಧಾರ್ಮಿಕ ಸಮಾನ ಅಂಧಶ್ರದ್ಧೆಯೂ ಸೇರಿ, ಅದು ಲೋಕದ ಅತ್ಯುಗ್ರ ಮಾದರಿಯ ರಾಷ್ಟ್ರಾಭಿಮಾನ, ಸೇನಾ ವಿಧಾನ ಮತ್ತು ಸ್ವಜನಾಂಗಾಭಿಮಾನವನ್ನು ಉತ್ಪಾದಿಸಿದ್ದಿತು. ಫುರಾರನ ಮತ್ತು 'ಗ್ರೇಟರ್ ಜರ್ಮಾನಿಕ್ ರೀಖ್'ನ ಆಜ್ಞೆ ಒಂದೊಡನೆ, ಯಾವನೊಬ್ಬನ ದೇಹ ಅಥವಾ ಭಾವನೆಯ ಮೇಲೆ ಎಷ್ಟೇ ದೊಡ್ಡ ಅಪರಾಧ ಮತ್ತು ಅತ್ಯಾಚಾರವನ್ನು [illegible] ಮಾಡುವಂತಹ ತರಬೇತಿಯು ದೈಹಿಕವಾಗಿಯೂ, ಮಾನಸಿಕವಾಗಿಯೂ ಹಿಮ್ಲರನ ಈ ಜನರಿಗೆ ದೊರೆತಿದ್ದಿತು.

ಹಿಮ್ಲರನು ಅಧಿಕಾರಾಗ್ರಕ್ಕೆ ಏರಹತ್ತಿದುದು 1934ನೇ ಜೂನ್ 30ರಿಂದ. ಆ ದಿನ ರೋಹೆಮ್ ಮತ್ತು ಅವನ ಅನುಯಾಯಿಗಳೂ ರೋಹೆಮನ ಬೂದಂಗಿ ಸೇನೆಯೂ, ಒಳದಂಗೆಯ ಹಂಚಿಕೆಯಲ್ಲಿದ್ದಾರೆಂಬ ಸಂದೇಹದಿಂದ ಅವರನ್ನೆಲ್ಲಾ ಬರ್ಖಾಸ್ತು ಪಡಿಸಿಬಿಡಬೇಕೆಂದು ಹಿಮ್ಲರನಿಂದ ಹಿಟ್ಲರನಿಗೆ ಶಿಫಾರಸು ಹೋಯಿತು. ಈ ಕೊಳಕು ಕೆಲಸಕ್ಕಾಗಿ ಹಿಮ್ಲರ್ ಪಡೆದ ಬಹುಮಾನ ಅತಿ ದೊಡ್ಡದು. ಒಂದನೆಯದಾಗಿ ಜರ್ಮನಿಯ ಪೋಲಿಸು ದಳಗಳನ್ನು ತನ್ನ ಯಸ್. ಯಸ್. ದಳದೊಂದಿಗೆ ಏಕೀಕರಿಸಲು ಆತ ಅಧಿಕಾರ ಪಡೆದ. ಇದರಿಂದಾಗಿ ಜರ್ಮನ್ ನಾಗರಿಕ ಜೀವನದ ಸರ್ವಾಧಿಕಾರಿತ್ವವು ಅವನ ಕೈಗೆ ಬಂತು. ಎರಡನೆಯದಾಗಿ ಸೇನಾ ಸುದ್ದಿ ಸಂಗ್ರಹ ಖಾತೆಯಂತೆಯೇ ಜರ್ಮನಿಯ ಏಕಮಾತ್ರ ಗುಪ್ತ ಸುದ್ದಿ ಶೋಧಕ ಖಾತೆಯನ್ನೂ ನಡೆಸಲು ಆತನಿಗೆ ಪರವಾನಗಿ ದೊರೆಯಿತು. ಮೂರನೆಯದಾಗಿ, ಎಸ್. ಎಸ್. ಸೇನೋದ್ಯೋಗವು ಅಂದಿನಿಂದ ಸಶಸ್ತ್ರ ಸೇನೋದ್ಯೋಗದ ಸಮಾನ ದರ್ಜೆ ಪಡೆಯಿತು. ಯುದ್ಧಾವಧಿಯಲ್ಲಿ ಎಸ್. ಎಸ್. ದಳವು 'ಸಶಸ್ತ್ರ ಎಸ್. ಎಸ್.' ಆಗಿ 'ವ್ಹಾಫೆನ್ ಚಾಟ್'ನ ಒಂದು ಸ್ವತಂತ್ರ ಭಾಗವಾಗಿ ಗಣಿಸಲ್ಪಟ್ಟಿತು.

ಈ ರೀತಿ ಈ ಮೊದಲು ಯಾರೊಬ್ಬರೂ ಪಡೆದಿರದಂತಹ ವಿಜಯವನ್ನು ಹಿಮ್ಲರ್ ಸಂಪಾದಿಸಿದ. ಒಂದು ರಾಜಕೀಯ ಪಕ್ಷದ ಸಶಸ್ತ್ರ ಸಂಗಡಿಗಳನ್ನು ಸೇನಾ ಸಮಾನ ಸಂಸ್ಥೆಯಾಗಿ ಮಾತ್ರವೇ ಅಲ್ಲ—ರಾಜ್ಯದ ಸೇನಾಂತರ್ಗತ ಸಂಸ್ಥೆಯಾಗಿಯೂ ಅಂಗೀಕರಿಸುವಂತೆ ಜರ್ಮನ್ ಪ್ರಶ್ಯನ್ ಸೈನ್ಯ ತತ್ವವನ್ನೇ ಆತ ಬದಲಾಯಿಸಿದ. ಅಂದಿನಿಂದ ಜರ್ಮನಿಯ ಸೇನೆ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನಾಗರಿಕ ಜೀವನದ ಪ್ರತಿಯೊಂದು ಶಾಖೆಯನ್ನು ಬಹುತೇಕವಾಗಿ ಹೋರಾಟವಿಲ್ಲದೇನೇ ಹಿಮ್ಲರ್ ಆಕ್ರಮಿಸಿಕೊಂಡ; ವಸ್ತುತಃ ನಾಜೀ ಜರ್ಮನಿಯ ಸರ್ವಶಕ್ತ ಅಧಿಕಾರಿಯಾದ. ಹಿಮ್ಲರನ ಮತ್ತು ಆತ ಸರ್ವ ಮರ್ಮ ಸ್ಥಾನಗಳಲ್ಲೂ ನಿಲ್ಲಿಸಿದ ಎಸ್ ಎಸ್. ನಾಯಕರ ಹತೋಟಿಗೊಳಗಾಗದ ಮಂತ್ರಿಗಳು, ಮುಖ್ಯಾಧಿಕಾರಿಗಳು, ಮಿಲಿಟರಿ ಸೇನಾನಿಗಳು, ಕೋರ್ಟು ಕಚೇರಿಗಳಾಗಲೀ, ಮುಖ್ಯ ವಿಜ್ಞಾನವಿದ್ಯಾ ಸಂಸ್ಥೆಗಳಾಗಲೀ, ಮುಖ್ಯ ಕಾರ್ಖಾನೆಗಳಾಗಲೀ ಅಲ್ಲಿ.

ಗೆಸ್ಟಪೋ ಮತ್ತು ಎಸ್. ಎಸ್. ಮುಂಜಾಗ್ರತಾ ವಿಭಾಗಗಳ ಮೂಲಕ, ಜನರೇನು ಮಾಡುತಿದ್ದಾರೆಂಬುದನ್ನಷ್ಟೇ ಅಲ್ಲ- ಅವರೇನು ಯೋಚಿಸಿದ್ದಾರೆಂಬುದನ್ನೂ ಹಿಮ್ಲರ್ ಅರಿತುಕೊಳ್ಳುತಿದ್ದ! ದೇಶದೊಳಗಡೆಯ ಮಂತ್ರಿತ್ವ ಮತ್ತು ಜರ್ಮನ್ ಗೃಹ ಸೇನೆಯ ಮುಖ್ಯ ಸೇನಾಪತಿತ್ವಗಳು ಹಿಮ್ಲರನದೇ ಆಗಿದ್ದುದರಿಂದ ಸೇನೆ ಮತ್ತು ಆಡಳಿತೆಯಲ್ಲಿ ವ್ಯಕ್ತಿಶಃ ಹಿಟ್ಲರನಿಗೆರಡನೆಯ ಅತಿ ದೊಡ್ಡ ಅಧಿಕಾರಿಯೆಂದರೆ ಹಿಮ್ಲರನೇ. ಆದ್ದರಿಂದ ಜರ್ಮನಿಯಲ್ಲೂ ಆಕ್ರಮಿತ ರಾಷ್ಟ್ರಗಳಲ್ಲೂ ಮಾನವ ವರ್ಗದ ಮೇಲೆ ನಡೆದ ಅವರ್ಣನೀಯ ಅಪರಾಧಗಳ ಪ್ರಮುಖ ಹೊಣೆಗಾರರಲ್ಲಿ ಹಿಮ್ಲರನೊಬ್ಬ. ಹಿಮ್ಲರ್ ಅಸಾಮಾನ್ಯ ಸಂಘಟನಾ ಶಕ್ತನಿದ್ದಂತೆ ಮೂಲ ಬುದ್ಧಿವಾಲನೇನೂ ಅಲ್ಲ. ಆದರೆ ತನ್ನ ಒಡೆಯನು 'ಮೀನ್ ಕೇಂಫ್'ನಲ್ಲಿ ಬರೆದಿದ್ದ ಕ್ರಮವತ್ತು ಭವಿಷ್ಯಗಳನ್ನೆಲ್ಲಾ ಅವನು ನಿಶ್ಚಲ ಸ್ವಾಮಿನಿಷ್ಠೆಯಿಂದ ಜ್ಯಾರಿಗೆ ತಂದಿದ್ದಾನೆ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ ಹಿಂದಿನರೀತಿಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3। ಕ್ಲೈಮೊರಿಜ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗೆರೂ.4।-(ವಿ ಪಿ.12 ಆಣೆ ಅಲಾಯಿದ) Mrs P. DEVEE, F. D. S (M) Tollygunge, Calcutta. ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ. 8-10-44ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯರ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಟಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವುದು ಸಾಕು—

ಬರ್ಥ ಕಂಟ್ರೋಲ

ಅಶಕ್ತ ಸ್ತ್ರೀಯರಿಗೆ — ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹಗಲೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ :—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರಮಾಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲಿಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಂತಾದ ಔಷಧಿ ರವಾನಿಸಲಾಗುವದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦-೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ— ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M 3618. VICTORY SPECIAL. Estd. 1921 ಸ್ಥಾಪಿತ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೩೬] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol 24 No. 36

Founder SRI A. B. SHETTY.

ಉಡುಪಿ • 17—5—1945 • ಮಂಗಳೂರು.

ಅಮೃತಾಂಜನ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them" Vide Order No. 1786-ECI 44 1565

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No. 4755-N/44.

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20-4-1945 and will be closed at the discretion of the Directors, not earlier than 31—5—1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under th Indian Companies Act, 1913. Liability of Members is Limited)

Registered Head Office:- **Hampankatta, MANGALORE.**
Bombay Office:- **26, Noble Chambers, Fort Bombay.**
Factory:- **MALPE, South Kanara.**
Depots at:- **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food, Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish, Etc.**
2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.
3. The Madras Government has been approached to subscribe for half the capital and appoint a Government Director and render technical advice to the Company.
4. A Scientific Advisory Council will be formed and Technical Experts will be appointed to carry on intense research work in the Industry.
5. Arrangements are being made to procure Military contracts.
6. The Madras Government has been requested to supply the Company all the modern equipments useful for the purpose of the Company.
7. The Company intends to build country craft and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset.

MANGALORE, 19th April, 1945.

Mangalore Jarappa,
Managing Director.

ಯುರೋಪು ಯುದ್ಧ

ಅನ್ಯಂತ್ಯ

'ಪೋಲೆಂಡಿನ ಹುಚ್ಚಾಟವನ್ನು ನಿಲ್ಲಿಸುವದಕ್ಕಾಗಿ ಶಕ್ತಿಯನ್ನು ಶಕ್ತಿಯಿಂದಲೇ ಇದಿರಿಸುವ ಹೊರತು ಅನ್ಯೋಪಾಯವಿಲ್ಲವೆಂದು ಜರ್ಮನ್ ಸೇನೆಗೆ ಹೆರ್ ಹಿಟ್ಲರ್ ಆಜ್ಞಾಪಿಸಿದ'—ರೂಟರ್ ತಾ. 1-9-1939

'ಹೋರಾಟ ನಿರತ ಜರ್ಮನ್ ಸೇನೆಗಳೆಲ್ಲವೂ ನಿಶ್ಶರ್ತವಾಗಿ ಶರಣು ಹೋಗುವಂತೆ ಎಡ್ಮಿರಲ್ ಡೋನಿಟ್ಜನು ಆಜ್ಞಾಪಿಸಿದನೆಂದು ಜರ್ಮನ್ ಫ್ಲೇನ್ಸ್‌ಬರ್ಗ್ ರೇಡಿಯೋ ಸಾರಿತು'—ರೂಟರ್ ತಾ 7-5-1945.

1939

ಸಪ್ಟೆಂಬರ್ 1. ಜರ್ಮನಿಯು ಪೋಲೆಂಡನ್ನಾಕ್ರಮಿಸಿತು

ಸೆ. 3. ಇಂಗ್ಲಾಂಡು ಮತ್ತು ಫ್ರಾನ್ಸು ಜರ್ಮನಿಯ ಮೇಲೆ ಯುದ್ಧ ಸಾರಿದುವು.

ಸೆ 17. ರಶ್ಯವು ಪೂರ್ವ ಪೋಲೆಂಡನ್ನಾಕ್ರಮಿಸಿತು

ಸೆ. 27. ವಾರ್ಸಾ ಜರ್ಮನ್ ಸ್ವಾಧೀನವಾಯಿತು.

ನವಂಬರ್. 30. ರಶ್ಯವು ಫಿನ್ಲೆಂಡನ್ನಾಕ್ರಮಿಸಿತು.

1940

ಮಾರ್ಚ 12 ರಶ್ಯಾ-ಫಿನ್ಲೆಂಡು ಯುದ್ಧ ಮುಗಿಯಿತು

ಎಪ್ರಿಲ್ 9. ಜರ್ಮನಿ ಡೆನ್ಮಾರ್ಕ ಮತ್ತು ನೋರ್ವೆಯನ್ನಾಕ್ರಮಿಸಿತು.

ಮೇ. 10. ಜರ್ಮನಿಯು ಕೆಳರಾಷ್ಟ್ರಗಳನ್ನಾಕ್ರಮಿಸಿತು. **ಚೇಂಬರ್ಲೇನ್ ರಾಜಿ ಕೊಟ್ಟು ಚರ್ಚಿಲ್ ಬಂದರು.**

ಮೇ. 14 ಹೊಲ್ಲೇಂಡು ಜರ್ಮನಿಗೆ ಶರಣು ಬಂತು.

ಮೇ. 28 ಬೆಲ್ಜಿಯಮ್ ಜರ್ಮನಿಗೆ ಶರಣಾಯಿತು.

ಮೇ. 29. 'ಡಂಕರ್ಕ'ನ ಅದ್ಭುತ ಪಲಾಯನ.

ಜೂನ್ 10. ಇಟೆಲಿ ಯುದ್ಧ ಪ್ರವೇಶಿಸಿತು.

ಜೂನ್ 14. ಜರ್ಮನರು ಪೇರಿಸ್ ನುಗ್ಗಿದರು

ಜೂನ್ 20. ಜರ್ಮನಿಯೊಡನೆ ಫ್ರಾನ್ಸಿನ ಶರಣು ಒಪ್ಪಂದವಾಯಿತು

ಆಗೋಸ್ತು 4 ಇಂಗ್ಲಾಂಡಿನ ಮೇಲೆ ಆಕಾಶ ಧಾಳಿಗಾರಂಭ

ಸೆಪ್ಟಂಬರ್ 27. ಜಪಾನು ಆಕ್ಸಿಸ್ ರಾಷ್ಟ್ರಗಳ ಒಪ್ಪಂದ.

ಒಕ್ಟೋಬರ್ 27. ಇಟೆಲಿಯು ಗ್ರೀಸನ್ನಾಕ್ರಮಿಸಿತು.

1941

ಮಾರ್ಚ. 11. ರೂಸವೆಲ್ಟರು ಲೆಂಡ್ ಲೀಸ್ ಮಸೂದೆಗೆ ಸಹಿ ಹಾಕಿದರು

ಎಪ್ರಿಲ್ 17. ಯುಗೋಸ್ಲೇವಿಯ ಜರ್ಮನರಿಗೆ ಶರಣು ಹೊಕ್ಕಿತು.

ಮೇ. 27. ಜರ್ಮನಿ ಅಥೆನ್ಸನ್ನು ಗೆದ್ದಿತು

ಜೂನ್. 22 ಜರ್ಮನಿ ರಶ್ಯದ ಮೇಲೆ ಯುದ್ಧ ಸಾರಿತು.

ಆಗೋಸ್ತು. 14 ಅಟ್ಲಾಂಟಿಕ್ ಘೋಷಣೆಗೆ ಸಹಿಬಿತ್ತು.

ಡಿಶಂಬರ್ 7. ಜಪಾನು ಪರ್ಲ್ ಹಾರ್ಬರನ್ನಾಕ್ರಮಿಸಿತು

1942

ಜನವರಿ. 2 ಜಪಾನರು ಮನಿಲ ಆಕ್ರಮಿಸಿದರು

ಫೆಬ್ರವರಿ. 15 ಜಪಾನರು ಸಿಂಗಾಪುರ ಗೆದ್ದರು

ಮಾರ್ಚ. 9 ರಂಗೂನು ಜಪಾನ್ ಸ್ವಾಧೀನವಾಯಿತು.

ಮೇ. 30. ಕೊಲೋನಿನ ಮೇಲೆ 1000ಕ್ಕೆ ಮಿಕ್ಕಿದ ಬ್ರಿಟಿಷ್ ವಿಮಾನಗಳ ಧಾಳಿ.

ಒಕ್ಟೋಬರ್ 23. ಎಲ್ ಎಲಾಮೀನಿನ ಕದನ.

ನವಂಬರ್ 8. ಮಿತ್ರರು ಉತ್ತರಾಫ್ರಿಕ ಆಕ್ರಮಿಸಿದರು.

1943

ಜನವರಿ 18. ರಶ್ಯಾನರು ಸ್ಟಾಲಿನ್‌ಗ್ರಾಡ್ ಮುತ್ತಿಗೆಯನ್ನೊಡೆದರು.

ಮೇ 12 ಆಫ್ರಿಕಾದ ಕೊನೆಯ ಆಕ್ಸಿಸ್ ಪ್ರತಿಭಟನೆ ಕೇಪಬೋನ್‌ನಲ್ಲಿ ನಿಂತಿತು.

ಜುಲಾಯಿ. 10. ಮಿತ್ರರು ಸಿಸಿಲಿ ಆಕ್ರಮಿಸಿದರು.

ಜುಲಾಯಿ 25. ಮುಸಲೊನಿಯ ಅಧಿಕಾರ ತ್ಯಾಗ.

ಸೆಪ್ಟಂಬರ್ 3. ಮಿತ್ರರು ಇಟೆಲಿ ಆಕ್ರಮಿಸಿದರು.

ನವಂಬರ್ 6. ಕೀವು ರಶ್ಯಾನರ ಸ್ವಾಧೀನವಾಯಿತು

ದಶಂಬರ್ 4. ತೆಹರಾನ್ ಸಮ್ಮೇಲನ.

1944.

ಜೂನ್ 4 ಮಿತ್ರರು ರೋಮನ್ನು ಗೆದ್ದರು.

ಜೂನ್ 6. ಮಿತ್ರರು ನೋರ್ಮಂಡಿಯಲ್ಲಿಳಿದರು

ಜೂನ್. 20 ಹಿಟ್ಲರನನ್ನು ಕೊಲೆ ಮಾಡುವ ಯತ್ನ ನಡೆಯಿತು.

ಆಗೋಸ್ತು 15. ದಕ್ಷಿಣ ಫ್ರಾನ್ಸನ್ನು ಮಿತ್ರರು ಆಕ್ರಮಿಸಿದರು.

ಆ 25. ಪೇರಿಸ್ ಮಿತ್ರರಿಗೆ ಪುನರಾಧೀನವಾಯಿತು

ಸೆಪ್ಟೆಂಬರ್. 11. ಅಮೆರಿಕನರು ಜರ್ಮನಿ ಪ್ರವೇಶಿಸಿದರು.

ಸೆಪ್ಟೆಂಬರ್ 24. ರಶ್ಯಾನರು ಹಂಗೇರಿ ಮತ್ತು ಜೆಕೊಸ್ಲೋವೇಕಿಯಾ ನುಗ್ಗಿದರು

ಒಕ್ಟೋಬರ್ 5. ಬ್ರಿಟಿಷರ ಗ್ರೀಸಾಕ್ರಮಣ.

ಒ. 19 ಅಮೇರಿಕನರು ಫಿಲಿಪ್ಪೈನ್ ಹೊಕ್ಕರು.

ನವಂಬರ್ 7. ರೂಸವೆಲ್ಟರು ಪುನಃ ಚುನಾಯಿಸಲ್ಪಟ್ಟರು.

ದಶಂಬರ್ 20. ಆರ್ಡೆನ್ನೆಸ್ಸಿನಲ್ಲಿ ಜರ್ಮನರ ಪ್ರತಿಧಾಳಿ

1945

ಜನವರಿ 17. ವಾರ್ಸಾ ರಶ್ಯನರ ವಶವಾಯಿತು.

ಫೆಬ್ರವರಿ 2. ಯಾಲ್ಟಾ ಸಮ್ಮೇಲನ.

ಮಾರ್ಚ 2. ಅಮೇರಿಕನರು ರ್ಹೈನ್ ಗಡಿಗೆ ಬಂದರು.

ಮಾರ್ಚ 24. ಮಿತ್ರರು ರ್ಹೈನ್ ದಾಟಿದರು.

ಮಾರ್ಚ 30. ರಶ್ಯವು ಆಸ್ಟ್ರಿಯಾಕ್ರಮಣ ಮಾಡಿತು. ಡಾನ್ಜಿಗನ್ನು ಗೆದ್ದಿತು

ಎಪ್ರಿಲ್-4. ರಶ್ಯನರು ವಿಯೆನ್ನಾ ನುಗ್ಗಿದರು.

ಎಪ್ರಿಲ್ 5. ರಶ್ಯಾ ಜಪಾನ್ ಅನಾಕ್ರಮಣ ಒಪ್ಪಂದವನ್ನು ರಶ್ಯಾ ಹರಿಯಿತು.

ಎಪ್ರಿಲ್. 12. ಅಧ್ಯಕ್ಷ ರೂಸವೆಲ್ಟರ ಮರಣ

ಎಪ್ರಿಲ್. 13 ರಶ್ಯಾನರು ವಿಯೆನ್ನಾ ಗೆದ್ದರು ಆಂಗ್ಲೋ ಅಮೆರಿಕನರು ಎಲ್ಬೇ ನದಿ ದಾಟಿದರು.

ಎಪ್ರಿಲ್ 20 ರಶ್ಯನರ ಬರ್ಲಿನ್ ಪ್ರವೇಶ

ಎಪ್ರಿಲ್. 21. ಡ್ರೆಸ್‌ಡೆನ್ ವಲಯದಲ್ಲಿ ರಶ್ಯಾ ಮತ್ತು ಆಂಗ್ಲೋ ಅಮೆರಿಕಾನ್ ಸೇನೆಗಳು ಸಂಧಿಸಿದುವು.

ಎಪ್ರಿಲ್ 23. ಹಿಟ್ಲರ್ ಬರ್ಲಿನ್ ಸೇನಾನಿಯಾಗಿ ಮುಂಭಾಗಕ್ಕೆ ಬಂದ.

ಎಪ್ರಿಲ್. 25. ಫ್ರಿಸ್ಕೋ ಸಮ್ಮೇಲನಾರಂಭ.

ಎ. 27. ಮುಸಲೊನಿಯ ಬಂಧನ ಮತ್ತು ಮರಣ.

ಎ. 28. ಆಂಗ್ಲೋ- ಅಮೆರಿಕನರಿಗೆ ಹಿಮ್ಲರನ ಶರಣು ಸೂಚನೆ.

ಎ. 29. ಹಿಟ್ಲರನ ಮರಣದ ಪ್ರಥಮ ವಾರ್ತೆ.

ಮೇ. 1. ಜರ್ಮನ್ ರೇಡಿಯೋದಲ್ಲಿ ಹಿಟ್ಲರನ ಮರಣ ಘೋಷಣೆ.

ಮೇ 2. ಬರ್ಲಿನ್ ಪತನ-ರಶ್ಯಾಧೀನ ಇಟೆಲಿ ಯುದ್ಧ ಮುಕ್ತಾಯ.

ಮೇ 4. ಪಶ್ಚಿಮ ರಂಗದ ಜರ್ಮನ್ ಸೇನೆಗಳ ಸಾಮೂಹಿಕ ಶರಣು.

ಮೇ 7. ಪೂರ್ವಾಹ್ನ 2.41 (ಫ್ರೆಂಚ್ ಘಂಟೆ)ಕ್ಕೆ ಜರ್ಮನರು ಎಲ್ಲಾ ರಂಗಗಳಲ್ಲೂ ನಿಶ್ಶರ್ತವಾಗಿ ಶರಣು ಬಂದರೆಂಬ ಘೋಷಣೆ

ಮೇ 8. ಮಂಗಳವಾರ ರಾತ್ರಿ 12 ಘಂಟೆ 1 ಮಿನಿಟಿಗೆ ಜರ್ಮನಿಯು ಸರ್ವಸ್ವವೂ ಇಂಗ್ಲಾಂಡು, ಅಮೆರಿಕ, ರಶ್ಯ, (ಫ್ರಾನ್ಸ್)ಗಳ ಸ್ವಾಧೀನ.

ಅಡಿಮೇಲು

"ರಾಷ್ಟ್ರೀಯ ಸಮತಾವಾದಿ ಜರ್ಮನಿ ಎಂದೆಂದಿಗೂ ಶರಣಾಗುವಂತಿಲ್ಲ. ಇನ್ನೆಮ್ಮೆ 1918ರ ಪುನರಾವರ್ತನೆಯಿಲ್ಲವೇ ಇಲ್ಲ."—1939ರಿಂದ 1945ರ ವರೆಗೆ ಹಲವು ಬಾರಿ ಹಿಟ್ಲರ್.

"ನಾವು ವಸ್ತುಸ್ಥಿತಿಯಂತೆ ವರ್ತಿಸಬೇಕು. ಜರ್ಮನ್ ಯೋಧರ ಪ್ರಾಣದಾನಿಯನ್ನು ತಪ್ಪಿಸಲು ಶರಣಾಗಿದ್ದೇವೆ ನಮ್ಮ ಅಸ್ತಿತ್ವವೀಗ ಮಿತ್ರ ರಾಷ್ಟ್ರಗಳ ಕೈಯಲ್ಲಿದೆ ನಮ್ಮ ಇರುವಿಕೆಗಾಗಿ ಶರಣು ಶರ್ತಗಳನ್ನು ಅಕ್ಷರಶಃ ಪಾಲಿಸಬೇಕು"—ತಾ. 8-5-1945ರಲ್ಲಿ ಡೋಯೆನಿಟ್ಜ್.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of the School and another from any local gentleman.

UDIPI, 19-4-1945.

S. R. A. Pai, MANAGING DIRECTOR.

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—**ಜೀವವಿಮೆ!**

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಜರ್ಮನ್ ಶರಣುಸಹಿಯ ಹೃದಯಸ್ಪರ್ಶೀ ದೃಶ್ಯ.

ರ್‍ಹೀಮ್ ಮತ್ತು ಬರ್ಲಿನಲ್ಲಿ ಸಮಾರಂಭ.

ಜೂನ್ ಅಂತ್ಯ ಮತ್ತು ಮೇ ಆದಿಯ ಎರಡು ವಾರಗಳು ನಾಜೀ ಜರ್ಮನಿಗೆ ನಾಶವನ್ನು ತಂದವು; ಸರ್ವಾಧಿಕಾರೀ ತತ್ವಕ್ಕೆ ಸಮಾಧಿ ಕೊಟ್ಟವು. ಭೂತ, ವರ್ತಮಾನ, ಭವಿಷತ್ಕಾಲಗಳಲ್ಲೇ ಅಪೂರ್ವವಾದ ಮಹಾ ಯುದ್ಧವನ್ನು—ನೆಲ, ಜಲ, ಆಕಾಶಗಳ ಅದ್ಭುತ ಪ್ರಳಯವನ್ನು—ಐದು ವರುಷ ಏಳು ತಿಂಗಳುಗಳ ತನಕ ಸಾಗಿಸಿ, ಪ್ರಕೃತಿಜನ್ಯ ಗಡಿ ಮೇರೆಗಳನ್ನು ಕಿತ್ತೊಗೆದು ಭೂಪಟವನ್ನೇ ಬದಲಾಯಿಸಿ, ರಕ್ತ ಶುಧಿ, ಶವದ ಮಹಾಪರ್ವತವನ್ನು ನಿರ್ಮಿಸಿ, ಇಡೀ ಜಗತ್ತಿನ ಜನ ಜೀವನ ಭಾವನೆ ಧೋರಣೆಗಳನ್ನು ಬದಲಾಯಿಸಲು ಶಕ್ಯನಾದ ಯುಗ ಪುರುಷ ಹಿಟ್ಲರ್ ತನ್ನ ನಾಜೀ ಜರ್ಮನಿಯೊಂದಿಗೆ ಸಮೆ ಬಡಿಯಲ್ಪಟ್ಟ. ಪೂರ್ವ ಗಡೆಯಿಂದ ಕೆಂಪು ಸೇನೆಯು ಬಿರುಗಾಳಿಗೆ ಬರ್ಲಿನ್ ಮುರಿದು ಬಿತ್ತು; ಪಶ್ಚಿಮ ಕಡೆಯಿಂದ ಆಂಗ್ಲೋ ಅಮೇರಿಕಾದ ಸೇನೆ ಎಲ್ಬೆ ದಾಟಿ ಮುಂದೆ ಬಂತು; ಒಂದೆರಡು ಕಡೆಗಳಲ್ಲಿ ಪೂರ್ವ ಪಶ್ಚಿಮ ಸೇನೆಗಳೂ ಒಂದುಗೂಡಿದುವು; ಇನ್ನು ಉಳಿಗಾಲವಿಲ್ಲವೆಂಬುದು ನಾಜಿಗಳಿಗೆ ಖಚಿತವಾಯಿತು. "1914ರ ಜರ್ಮನಿ ಈಗ ಇಲ್ಲ. ಅಂದಿನ ಜರ್ಮನಿಯ ತತ್ವ, ಧೋರಣೆ, ಶಕ್ತಿ, ನಾಯಕತ್ವ ಎಲ್ಲವೂ ಬೇರೆ ನಾಜೀ ಜರ್ಮನಿ ಎಂದಿಗೂ ಶರಣಾಗುವಂತಿಲ್ಲ. ಇನ್ನೊಮ್ಮೆ 1918ರ ಪುನರಾವರ್ತನೆ ಇಲ್ಲ, ಇಲ್ಲ!" ಎನ್ನುತಿದ್ದ ಹಿಟ್ಲರ್ ಮಾತ್ರ ಇಲ್ಲ! ಆತ 'ಇಲ್ಲ' ಎನ್ನುತಿದ್ದುದೆಲ್ಲವೂ ಈಗ ಇವೆ! ಪತನ ನಿಶ್ಚಯವೆಂದಾದೊಡನೆ—ಆದನ್ನಿನ್ನು ದಿನ ಮಾತ್ರ ಮುಂದೂಡುವದೂ ಅಸಾಧ್ಯವೆಂದಾದೊಡನೆ—ಹಿಟ್ಲರ್ 'ಮಡಿದ'. ಹಿಮ್ಲರ್ ಆಂಗ್ಲೋ ಅಮೇರಿಕಾನರಿಗೆ ಶರಣು ಸೂಚನೆ ಕೊಟ್ಟ; ಪಶ್ಚಿಮ ರಂಗದ ಸೇನೆಗಳೆಲ್ಲ ಶರಣು ಬಂದುವು. ಆ ಭೇದೋಪಾಯ ನಡೆಯದ ಕೂಡಲೇ ನವಾಧಿಕಾರೀ ಡೋಯಿನೆಟ್ಝ ತ್ರಿರಾಷ್ಟ್ರಗಳಿಗೂ ನಿಶ್ಶರ್ತವಾಗಿ ಶರಣಾದ. ತಾ. 8ನೇ ರಾತ್ರಿ 12 ಘಂಟೆ 1 ಮಿನಿಟಿನ ನಂತರ 'ಜರ್ಮನ್' ಎಂಬ ಸರ್ವವೂ ಮಿತ್ರರಾಷ್ಟ್ರಗಳ ಅಧಿಕಾರದೊಳಗೆ ಬಂತು. ವಿರೋಧಿಗಳು ವಿಧೇಯರಾದರು

ಶರಣು ಸಹಿ ಸಮಾರಂಭ

ಜರ್ಮನ್ ಪ್ರತಿನಿಧಿಗಳು ಶರಣೋಲೆಗೆ ಪ್ರಥಮತಃ ಸಹಿ ಹಾಕುವ ಸಮಾರಂಭವು ತಾ 7ನೇ ರಾತ್ರಿ ರ್‍ಹೀಮ್ಸಿನಲ್ಲಿದ್ದ ಜನರಲ್ ಈಸನೋವರರ ಮುಖ್ಯ ಸೇನಾ ಕಾರ್ಯಾಲಯದಲ್ಲಿ ನಡೆಯಿತು. ಕೆಂಪಿಟ್ಟಿಗೆಗಳ ಒಂದು ಸಣ್ಣ ಔದ್ಯೋಗಿಕ ಶಾಲೆಯೇ ಈ ಚರಿತ್ರಾರ್ಹ ಘಟನೆ ನಡೆದ ಗೃಹ. ಭವನದ ಗೋಡೆಗಳ ತುಂಬಾ ಯುದ್ಧ ನಕಾಶೆಗಳು ನೇತಾಡುತ್ತಿದ್ದು ಜರ್ಮನ್ ಪ್ರತಿನಿಧಿಗಳಿಗೆ ಅವರ ನಿರಾಶಾಜನಕ ಯುದ್ಧ ಸ್ಥಿತಿಯನ್ನು ಸೂಚಿಸುತಿದ್ದುವು. ಕೋಣೆಯಲ್ಲೊಂದು ವಿಶಾಲ ಮಾಲಿ ಹಸುರು ಮೇಜು; ಮೇಜಿನ ಸುತ್ತ ಕುರ್ಚಿಗಳು. ಈ ರೀತಿ ಜರ್ಮನಿಗೆ ಶ್ರಾದ್ಧ ನಡೆದ ಆ ಸ್ಥಳವೂ ಆ ಕಾರ್ಯಕ್ರಮವೆಲ್ಲವೂ ನಿರಾಡಂಬರದಲ್ಲಿದ್ದಿತು ಪ್ರಥಮತಃ ಜರ್ಮನ ಎಡ್ಮಿರಲ್ ಫ್ರೀಡ್‍ಬರ್ಗರು ಆಗಮಿಸಿ ಶರಣು ಕರಾರನ್ನು ತಯಾರಿಸಿದರು. ಜರ್ಮನ್ ಸೇನಾ ಸ್ಟಾಫಿನ ನವ ನಾಯಕ ಕರ್ನಲ್ ಜನರಲ್ ಗಸ್ಟಾವ್ ಜೋಡ್ಲರ ಮುಖವು ಶವದಂತೆ ನಿಸ್ತೇಜವಾಗಿದ್ದರೂ, ಗರ್ವದಿಂದ ಎದೆಯುಬ್ಬಿಸಿಕೊಂಡು ತನಗಾಗಿ ಕಾದಿದ್ದ ಕಾರನ್ನು ಹತ್ತಿ ಸಹಿ ಸಮಾರಂಭಕ್ಕಾಗಮಿಸಿದರು. ಅವರ ಆಗಮನಾನಂತರವೇ ಶರಣು ಪತ್ರಕ್ಕೆ ಸಹಿಯಾಯಿತು. ಪ್ರಥಮ ಕಾರ್ಯ ಮುಗಿಯುವ ವರೆಗೆ ಜನರಲ್ ಈಸನೋವರರು ಜರ್ಮನ್ ಪ್ರತಿನಿಧಿಗಳಿಗೆ ಭೇಟಿ ಕೊಟ್ಟಿರಲಿಲ್ಲ.

ಮೊದಲೇ ತಯಾರಿಸಿದ್ದ ಶರಣು ಕರಾರಿನ ನಾಲ್ಕು ಪ್ರತಿಗಳು ಮೇಜಿನ ಮೇಲೆ ಬಂದುವು. ರಿಬ್ಬನ್, ಮೊಹರು, ಅಥವಾ ಬೇರಾವ ಅಲಂಕಾರವೂ ಇಲ್ಲದೆ ಸಾದಾ ರೀತಿಯಿಂದ ಮಡಚಿ ಇಟ್ಟಿದ್ದ ಪತ್ರಗಳವು.

ಸುವರ್ಣ ಮೊನೆಯ ಫೌಂಟೆನ್ ಪೆನ್ನಿನಿಂದ ಕರಾರಿಗೆ ಸಹಿ ಬಿತ್ತು. ... ಕೆಯ ಆಕ್ರಮಣಾರಂಭದಿಂದಲೂ ಈ ಫೌಂಟನ್ ಪೆನ್ನನ್ನು, ಇದೇ ಉದ್ದೇಶಕ್ಕಾಗಿ ಜನರಲ್ ಈಸನೋವರರು ಜತನದಲ್ಲಿಟ್ಟುಕೊಂಡಿದ್ದರು. ಜನರಲ್ ಜೋಡ್ಲರು ಜರ್ಮನಿಯ ಪರವಾಗಿಯೂ, ಈಸನೋವರರ ಸ್ಟಾಫ್‍ನಾಯಕ ಜನರಲ್ ಬಿಡೆಲ್ ಸ್ಮಿತರು ಜತೆ ಮಿತ್ರ ರಾಷ್ಟ್ರಗಳ ಪರವಾಗಿಯೂ, ಸಹಿ ಹಾಕಿದರು. ರಶ್ಯದ ಪರವಾಗಿ ಜನರಲ್ ಇವಾನ್ ಸುಸ್ಲೊಪರೋಫ್ ಮತ್ತು ಫ್ರಾನ್ಸಿನ ಪರವಾಗಿ ಜನರಲ್ ಫ್ರಾಂಕೋಯಿಸ್ ಸೆವೆರ್ಸುರ ಸಹಿ ಬಿತ್ತು.

ಸಹಿ ಸಂಗ್ರಹದ ಮೊದಲು ಅನಗತ್ಯ ಪುಡಿ ಮಾತುಕತೆ ನಡೆಯಿತು. ರಶ್ಯ ಮತ್ತು ಫ್ರಾನ್ಸಿನ ಪ್ರತಿನಿಧಿಗಳು ತುಟಿ ಬಿಚ್ಚಲಿಲ್ಲ ಜರ್ಮನಿಯ ನಿರಾಶಾದಾಯಿ ಸ್ಥಿತಿಗತಿಗಳನ್ನು ಜನರಲ್ ಸ್ಮಿತ್ತರು ಜನರಲ್ ಜೋಡ್ಲೆಯವರಿಗೆ ವಿವರಿಸಿದಾಗ ಅವರು ಭೀತಿಗೊಂಡು ಭಿನ್ನವಿಸಿದರು. "ಪೂರ್ವಗಡೆಯ ಆಂಗ್ಲೋ ಅಮೆರಿಕಾನ್ ಸೇನೆಗಳಿಗೇನೆ ಶರಣು ಬರುವ ಪರವಾನಗಿ ಕೊಡಿಸಿದ್ದರೆ ಪೂರ್ವರಂಗದ ಹಲವಾರು ಜರ್ಮನ್ ಯೋಧರು ರಶ್ಯನರಿಂದ ಕೊಲ್ಲಲ್ಪಡುವ ಸಂಭವವಿದೆ". ಈ ಮಾತನ್ನು ಸ್ಮಿತ್ತರು ಕಿವಿಗೆ ಹಾಕಿಕೊಳ್ಳದೆ, "ನಾವಿಲ್ಲಿ ಎಲ್ಲಾ ಮಿತ್ರರಾಷ್ಟ್ರಗಳಿಗೂ ಶರಣು ಬರುವ ವ್ಯವಸ್ಥೆ ಮಾಡಲು ಕೂಡಿದ್ದೇವಲ್ಲದೆ ಬೇರಾವುದರ ಚರ್ಚೆಗೂ ಅಲ್ಲ" ಎಂದುಬಿಟ್ಟರು.

ತಾ. 7ನೇ ಪೂರ್ವಾಹ್ನ 2-41 ಘಂಟೆಗೆ ಸಹಿ ಬಿತ್ತು.

ಶರಣು ಸಮಾರಂಭ ಸಂಪೂರ್ಣಗೊಂಡೊಡನೆ ಸರ್ವಸೇನಾನಿ ಜನರಲ್ ಈಸನೋವರರು ಕಾಣಿಸಿಕೊಂಡರು.

ಜರ್ಮನ್ ಪ್ರತಿನಿಧಿಗಳು ನಾಜೀ ಸೆಲ್ಯೂಟ್ ಕೊಡದೆ ಸರ್ವಸಾಮಾನ್ಯ ಸೇನಾ ಸೆಲ್ಯೂಟ್ ಸಲ್ಲಿಸಿದರು.

"... ಶರ್ತಗಳನ್ನೆಲ್ಲಾ ಸರಿಯಾಗಿ ಮುಂದಟ್ಟು ಮಾಡಿಕೊಂಡಿರುವಿರಾ? ನೀವವುಗಳನ್ನು ಶಿರಸಾವಹಿಸಿ ನಡೆಯಲು ಸಿದ್ಧರಿರುವಿರಾ?" ಎಂದು ಈಸನೋವರರು ಘನ ಗಾಂಭೀರ್ಯದೊಡನೆ ಪ್ರಶ್ನಿಸಿದಾಗ ಜರ್ಮನ್ ಪ್ರತಿನಿಧಿಗಳು ಹೌದೆಂದರು. ಈಸನೋವರರು ಸಹಿಯೆಳೆದ ಪೆನ್ನನ್ನು ಬದಿಗೆ ಸರಿಸುತ್ತಿದ್ದಾಗ ಜನರಲ್ ಜೋಡ್ಲರು ಸೇನಾ ವಿಧೇಯ ಭಂಗಿಯಲ್ಲಿ ನೆಟ್ಟಗೆ ನಿಂತು ನಿವೇದಿಸಿಕೊಂಡರು: "ನನಗೊಂದು ಮಾತು ಹೇಳಲಿಕ್ಕಿದೆ". ಜೋಡ್ಲರು ಪ್ರಥಮತಃ ಇಂಗ್ಲಿಷಿನಲ್ಲಿಯೂ ಆ ಮೇಲೆ ಜರ್ಮನಿಯಲ್ಲಿಯೂ ಮಾತನಾಡಿದರು: "ಜನರಲ್, ಈ ದಸ್ತಖತಿನೊಂದಿಗೆ ಜರ್ಮನ್ ಜನತೆ ಮತ್ತು ಸಶಸ್ತ್ರ ಸೇನೆಗಳು, ಉನ್ನತಿಯೂ ಅವನತಿಗಾಗಿ ವಿಜಯಿಗಳ ಹಸ್ತಗತವಾದುವು. ಐದು ವರುಷಗಳಿಗೂ ಮಿಕ್ಕಿ ನಡೆದ ಈ ಯುದ್ಧದಲ್ಲಿ ಬಹುಶಃ ಲೋಕದ ಬೇರಾವ ಜನವೂ ಇಷ್ಟು ಭವಿಸದಂತಹ ಅನುಭೋಗ ಮತ್ತು ಅಪತ್ತಿಗೆ ಇವ್ವಡೆಯವರೂ ಒಳಗಾದ್ದರೆ ಈ ಮುಹೂರ್ತದಲ್ಲಿ ನನ್ನ ಏಕ ಮಾತ್ರ ಆಶೆಯೆಂದರೆ ವಿಜಯಿಗಳು ಅಪಜಯಿಗಳನ್ನು ಔದಾರ್ಯದಿಂದ ನಡೆಯಿಸಿಕೊಳ್ಳಬೇಕೆಂಬುದೇ." ಈ ಮಾತಿಗೆ ಉತ್ತರ ಬರಲಿಲ್ಲ

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿಜಪದವಿ—ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುತ್ತವೆ; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಹಾನಿಯಾದುದೆಂದು ತೃಪ್ತರಾಗಿದ್ದಾರೆ! ಬೆಲೆ ರೂ3! ಕೈಮೀರಿದ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗರೂ.4/.(ವಿ.ಪಿ. 12 ಆಣೆ ಅಲ್ಲಾಯಿದ)Mrs P' DEVEE, F. D. S. (N) Tollygunge, Calcutta. ಸ್ಟಾಕಿಸ್ಟ್: ಪಾ ಶಂಭನ್ನ, ವ ೧೧ರೂ.

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ರಾಜ್ಯ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಗೆ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ 1910

ಕಳೆದ 35 ವರುಷಗಳಿಂದ ಪಾಲಿಸಿದಾರರಿಗೂ ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ಧೃಢತೆ, ವಿಶ್ವಾಸ ಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವಜನ ಅದೇ ಶ್ರೇಯೋಪಾಲನೆಗೆ ಸಿದ್ಧರು.

1944ರಲ್ಲಿ 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

WANTED

WANTED, B.A.B.T's and Bsc's for the Islamia Anglo Urdu High School, Bhatkal Scale of pay for B A B T's Rs 55/- to 60/-3—125 - and for Bsc's Rs 40/- to 50/-3—125/-.

Apply stating qualification and experience to:—

The Hon Secretary,
Anjuman Hami-e-Muslim en,
BHATKAL. (N K)

NOTICE

In the matter of the Indian Company's Act

In the matter of the Canara Forest and Farms Ltd (In liquidation)

Notice to the creditors and share-holders of the Company under Sec. 209 G to attend the General Meeting:-

Please take notice that there will be a General Meeeting of the creditors and share-holders of the said Company on Sunday the 10th day of June 1945 at 11 A. M. at the office of the Liquidator at Karkal, South Kanara District, as riquired under Sec. 209 G. of the Indian Companys Act All the Creditors and share-holders of the said Company are requested to attend.

N M ADYANTHAYA,
Liquidator.
Karkal, 13-5 45.

ತಾತ್ಕಾಲಿಕ ಶರಣುಶರ್ತಗಳ ಸ್ಪಷ್ಟಾಸ್ಪಷ್ಟ ಒಕ್ಕಣೆ!

ಶರಣು ಕರಾರನ್ನು ಸ್ಪಷ್ಟೀಕರಿಸುವ ಚರಿತ್ರಾರ್ಹ ಸಮಾರಂಭವು ತಾ ೮ನೇ ಮಧ್ಯ ರಾತ್ರಿ ಬರ್ಲಿನಿನಲ್ಲಿ ನೆರೆಯಿತು. ಆ ನಂತರವೇ ಯುರೋಪು ಯುದ್ಧಾಂತ್ಯದ ವಾರ್ತೆಯು ಮೋಸ್ಕೋದಿಂದ ಅಧಿಕೃತ ಪ್ರಕಟಣೆಗೊಂಡಿತು. ಬರ್ಲಿನಿನ ಮಿಲಿಟರಿ ಟೆಕ್ನಿಕಲ್ ಕಾಲೇಜ್ ಕಟ್ಟಡವು ಈ ಮಹಾ ಘಟನೆ ಸಂಭವಿಸಿದ ಸ್ಥಳವಾಗಿ ಚಿರಸ್ಮರಣೀಯವಾಯಿತು. ರಶ್ಯ, ಅಮೇರಿಕ, ಇಂಗ್ಲೆಂಡು, ಫ್ರಾನ್ಸುಗಳ ಚತುರ್ಧ್ವಜಗಳು ಭವನವನ್ನಲಂಕರಿಸಿದ್ದುವು. ರಾತ್ರಿ ಹನ್ನೆರಡು ಹೊಡೆದಾಗಲೇ ರಶ್ಯನ್ ಪ್ರತಿನಿಧಿಗಳ ನಾಯಕ ಮಾರ್ಶಲ್ ಝುಕೋವರು, ಮಿತ್ರ ಪ್ರತಿನಿಧಿಗಳ ಮುಂದಾಳು ವಿಮಾನಬಲದ ಚೀಫ್ ಮಾರ್ಶಲ್ ಟೆಡ್ಡರರೊಂದಿಗೆ ಭವನವನ್ನು ಪ್ರವೇಶಿಸಿದರು. ಅವರನ್ನು ಅನುಸರಿಸಿ ಇತರ ಪ್ರತಿನಿಧಿಗಳೂ ಬರುತ್ತಿದ್ದರು. ಝುಕೋವ್, ಟೆಡ್ಡರ್, ಜನರಲ್ ಸ್ಪಾಟ್ಸ್, ಎಮ್. ವಿಶಿನ್ಸ್ಕಿ, ಎಡ್ಮಿರಲ್ ಬಾರೋವ್, ಜನರಲ್ ಡಿ ಲೇಟ್ರೆಯವರು ಧ್ವಜಗಳಡಿಯಲ್ಲಿ ಆಸನ ಮಂಡಿತರಾದರು. ಮಧ್ಯದ ಮೇಜಿನ ಸುತ್ತಲೂ ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳೂ, ಬರ್ಲಿನ್ ಗೆದ್ದ ಕೆಂಪು ಸೇನೆಗಳ ನಾಯಕರೂ ಕುಳಿತಿದ್ದರು. ಮಾರ್ಶಲ್ ಝುಕೋವರೆದ್ದು ಪ್ರತಿನಿಧಿ ಮಂಡಲವನ್ನು ಈ ರೀತಿ ಸಂಬೋಧಿಸಿದರು.

“ನಾವು—ಕೆಂಪು ಸೇನೆಯ ಡೆಪ್ಯುಟಿ ಪ್ರಮುಖ ಸೇನಾನಿಯಾದ ನಾನು, ಮಿತ್ರ ಸೇನೆಗಳ ಡೆಪ್ಯುಟಿ ಪ್ರಮುಖ ಸೇನಾನಿ ವಿಮಾನ ಚೀಫ್ ಮಾರ್ಶಲ್ ಟೆಡ್ಡರ್, ಹಾಗೂ ಕರ್ನಲ್ ಜನರಲ್ ಸ್ಪಾಟ್ಸ್ ಮತ್ತು ಫ್ರೆಂಚ್ ಜನರಲ್ ಡಿಲಾಟ್ರಿ ಡಿಟಾಸ್ಸಿಗ್ನಿ-ಜರ್ಮನಿಯ ಸೇನಾನಿಗಳಿಂದ ನಿಶ್ಶರ್ತ ಶರಣಾರ್ಥಿಯನ್ನು ಅಂಗೀಕರಿಸಲು ಇಲ್ಲಿ ನೆರೆದಿದ್ದೇವೆ. ನಾವೀಗ ಕಾರ್ಯವನ್ನಾರಂಭಿಸಬೇಕೆಂದೂ ಜರ್ಮನ್ ಸೇನಾನೀ ಪ್ರತಿನಿಧಿಯನ್ನು ಕರೆಯಬೇಕೆಂದೂ ಸೂಚಿಸುತ್ತೇನೆ” ಎನ್ನುತ್ತಾ ಝುಕೋವರ ಆಜ್ಞೆಯಾಯಿತು:—“ನಿಶ್ಶರ್ತ ಶರಣು ಕರಾರಿನ ಶರ್ತಗಳನ್ನು ಅಂಗೀಕರಿಸಲು ಜರ್ಮನ್ ಹೈಕಮಾಂಡಿನ ಪ್ರತಿನಿಧಿ ಬರಲಿ’.

ಆಗ ಎಡ್ಮಿರಲ್ ಫ್ರೀಡ್ ಬರ್ಗ್, ಕರ್ನಲ್ ಜನರಲ್ ಸ್ಟ್ಯುಮೋಫ್ ಮತ್ತು ತನ್ನ ‘ಎ್ಯಡೆ’ಯೊಂದಿಗೆ ಫೀಲ್ಡ್ ಮಾರ್ಶಲ್ ಕೀಟೆಲ್ ಒಳಗೆ ಪ್ರವೇಶಿಸಿದರು. ಪೂರ್ಣ ಮೌನಧಾರಿಗಳಾಗಿ ಕೀಟೆಲ್ ಮತ್ತಿತರರು ತಂತಮ್ಮಾಸನ ಸ್ವೀಕರಿಸಿದರು.

ಮಾರ್ಶಲ್ ಝುಕೋವರು ಪುನಃ ಪ್ರಶ್ನಿಸಿದರು: “ಸಭ್ಯರೇ, ನಿಶ್ಶರ್ತ ಶರಣು ಪತ್ರಕ್ಕೀಗ ಸಹಿಯಾಗಬೇಕಾಗಿದೆ ನಾನು ಜರ್ಮನ್ ಹೈಕಮಾಂಡಿನ ಪ್ರತಿನಿಧಿಗಳ ಕಡೆಗೆ ತಿರುಗಿ ಪ್ರಶ್ನಿಸುತ್ತೇನೆ: “ಈ ಕರಾರು ನಿಮಗೆ ದೊರೆತಿದೆಯೆ? ನೀವು ಅದನ್ನು ಸರಿಯಾಗಿ ಅಭ್ಯಸಿಸಿರುವಿರಾ? ಜರ್ಮನ್ ಹೈಕಮಾಂಡಿನ ಪ್ರತಿನಿಧಿಗಳು ಇದಕ್ಕೆ ಸಹಿ ಹಾಕಲು ಒಪ್ಪುವಿರಾ?”

ಇದೇ ಪ್ರಶ್ನೆಯನ್ನು ಮಿ. ಟೆಡ್ಡರರೂ ಜರ್ಮನರಿಗೆ ಕೇಳಿದರು

“ಹೌದು. ನಾನೊಪ್ಪುತ್ತೇನೆ”-ಫೀಲ್ಡ್ ಮಾರ್ಶಲ್ ಕೀಟೆಲರು ಸಣ್ಣ ಸ್ವರದಲ್ಲಿ ಹೇಳಿ ತಮಗೆ ಗ್ರೇಂಡ್ ಎಡ್ಮಿರಲ್ ಡೊಯಿನೆಟ್ಜರಿಂದ ದೊರೆತಿದ್ದ ಅಧಿಕಾರ ಪತ್ರವನ್ನು ಮಾರ್ಶಲ್ ಝುಕೋವರ ಕೈಗೆ ಕೊಟ್ಟರು. ಜರ್ಮನ್ ಸಶಸ್ತ್ರ ಕಾಲ್ಬಲದ ಹಾಗೂ ಸೇನಾಪತಿತ್ವ ವತಿಯಿಂದ ಕೀಟೆಲ್-ಜರ್ಮನ್ ನಾವೆಯ ಪರವಾಗಿ ವೋನ್ ಫ್ರೀಡ್ ಬರ್ಗ್-ವಿಮಾನ ಬಲದ ಪ್ರತಿನಿಧಿಯಾಗಿ ಜನರಲ್ ಸ್ಟ್ಯುಮೋಫರು, ರಶ್ಯದ ಸಶಸ್ತ್ರ ಸೇನಾ ಬಲದ ಮುಖ್ಯ ಸೇನಾನೀ ಮಂಡಲಕ್ಕೂ, ಮಿತ್ರ ರಾಷ್ಟ್ರೀಯ ದಂಡಯಾತ್ರೆಗಳ ನಾಯಕರಿಗೂ ಜರ್ಮನ್ ಹೈಕಮಾಂಡಿನ ಪರವಾಗಿ ನಿಶ್ಶರ್ತವಾಗಿ ಶರಣು ಹೋಗುವಂತೆ ಎಡ್ಮಿರಲ್ ಡೊಯಿನೆಟ್ಜರ ಸಹಿಯಿರುವ ಅಧಿಕಾರ ಪತ್ರವದು.

ಪರಿಶೀಲನೆ, ಪ್ರಥಮ ಕಾರ್ಯಗಳೆಲ್ಲಾ ಮುಗಿದ ಮೇಲೆ ‘ಜರ್ಮನ್ ಪ್ರತಿನಿಧಿಗಳು ಮೇಜಿನ ಮುಂಭಾಗಕ್ಕೆ ಬಂದು ಸಹಿ ಹಾಕಲಿ’ ಎಂದು ಝುಕೋವರ ಸೂಚನೆಯಾಯಿತು. ಒಬ್ಬರ ಬಳಿಕೊಬ್ಬರಂತೆ ಜರ್ಮನರು ದಸ್ತಕತು ಹಾಕಿದರು. ರಾತ್ರಿ 12 ಘಂಟೆ 45 ಮಿನಿಟಿಗೆ ಕರಾರು ಸಂಪೂರ್ಣವಾಗಿ “ಜರ್ಮನ್ ಪ್ರತಿನಿಧಿಗಳಿನ್ನು ವಿದಾಯ ಪಡೆಯಬಹುದು” ಎಂದು ಝುಕೋವರ ಅಪ್ಪಣೆಯಾಯಿತು.

ಶರಣು ಶರ್ತಗಳು

ಜರ್ಮನ್ ಸೇನೆ ಸೋತು ‘ದೇಹಿ’ ಎಂದು ಮಂಡಿಯೂರಿತೆಂಬುದೇ ಆ ಕರಾರಿನ ಧ್ವನಿ. ಜರ್ಮನಿ ಸ್ವಾಧೀನವಾದುದನ್ನು ತಪ್ಪಿಲ್ಲದ ಒಕ್ಕಣೆಯಲ್ಲಿ ಬರೆದುದರ ಹೊರತು ಸದ್ಯಕ್ಕೆ ಬೇರಾವ ವಿಶೇಷಾರ್ಥವೂ ಒಪ್ಪಂದದಲ್ಲಿಲ್ಲ. ಆ ಸೇನಾ ತಹನಾಮೆಯಲ್ಲಿರುವದಿಷ್ಟು:—

‘ಒಂದನೆಯದಾಗಿ, ಜರ್ಮನ್ ಹೈಕಮಾಂಡಿನಿಂದ ಅಧಿಕೃತರಾಗಿರುವ, ಕೆಳಗಡೆ ಸಹಿ ಮಾಡಿರುವ ನಾವು, ಮಿತ್ರರ ದಂಡ ಯಾತ್ರೆಯ ದಳ ನಾಯಕರಿಗೂ, ಅದೇ ರೀತಿ ಸೋವಿಯೆಟ್ ಮುಖ್ಯಾಧಿಕಾರಿಗಳಿಗೂ, ಈ ತಾರೀಕಿನ ವರೆಗೆ ಜರ್ಮನ್ ಸ್ವಾಧೀನದಲ್ಲಿರುವ ಎಲ್ಲಾ ನೆಲ, ಜಲ, ಆಕಾಶ ಸೇನೆಗಳನ್ನೂ ಈ ಮೂಲಕ ಶರಣು ಹೋಗಿಸುತ್ತೇವೆ.

ಎರಡನೆಯದಾಗಿ ಎಲ್ಲಾ ಜರ್ಮನ್ ಸೇನೆ, ನಾವೆ, ವಿಮಾನಗಳು ತಾ 8ರಲ್ಲಿ ಮಧ್ಯ ಯುರೋಪು ಘಂಟೆ 23-01ಕ್ಕೆ ಸರಿಯಾಗಿ ಕಾರ್ಯಾಚರಣೆಯನ್ನು ನಿಲ್ಲಿಸಿ, ಆ ಹೊತ್ತಿನಲ್ಲಿ ಎಲ್ಲಿರುವವೋ ಅಲ್ಲೇ ನಿಂತಿರುವಂತೆ ಜರ್ಮನ್ ಹೈಕಮಾಂಡು ಕೂಡಲೇ ಆಜ್ಞೆಗಳನ್ನೀಯುವದು. ಯುದ್ಧ ಹಡಗ, ನಾವೆ, ವಿಮಾನಗಳ ಧ್ವಂಸವನ್ನಾಗಲೀ, ಅವುಗಳ ಆಕಾರ, ಆಯಂತ್ರ ಉಪಕರಣಗಳಿಗೆ ಏನೊಂದೂ ಹಾನಿಯನ್ನಾಗಲೀ ಮಾಡುವಂತಿಲ್ಲ.

ಮೂರನೆಯದಾಗಿ ಮಿತ್ರ ದಂಡ ಯಾತ್ರೆಯ ದಳ ನಾಯಕರೂ, ಸೋವಿಯೆಟ್ ಹೈಕಮಾಂಡಿನವರೂ ಕೊಡಲಿರುವ ಮುಂದಿನ ಯಾವುದೇ ಆಜ್ಞೆಗಳನ್ನು ಶಿರಸಾವಹಿಸಿ ಜಾರಿಗೆ ತರುವಂತೆ ಜರ್ಮನ್ ಹೈಕಮಾಂಡ್ ತನ್ನ ಕ್ರಮ ಬದ್ಧ ಸೇನಾನಾಯಕರಿಗೆ ಆಯಾಯಾ ಕ್ಷಣದಲ್ಲೇ ಆಜ್ಞೆಗಳನ್ನೀಯುವದು.

ನಾಲ್ಕನೆಯದಾಗಿ, ಮುಂದಕ್ಕೆ ಸಂಯುಕ್ತ ರಾಷ್ಟ್ರಗಳಿಂದ ಅಥವಾ ಅವುಗಳ ಪರವಾಗಿ ಮುಂದೆ ಬರುವ **ಜರ್ಮನಿ ಮತ್ತು ಜರ್ಮನಿಯ ಸಶಸ್ತ್ರ ಸೇನೆಗಳಿಗೆ ಒಟ್ಟಿಗೆ ಲಗಾವಾಗುವ, ಯಾವುದೇ ಸಾರ್ವತ್ರಿಕ ಶರಣು ಕರಾರಿಗೆ ಈ ಸೇನಾ ಶರಣು ಕರಾರು ಬಾಧಿಸತಕ್ಕದ್ದಲ್ಲ. ಮತ್ತು ಅದರ ಇದಿರಲ್ಲಿ ಈಗಿನದು ರದ್ದಾಗತಕ್ಕದ್ದು**

ಐದನೆಯದಾಗಿ, ಜರ್ಮನ್ ಹೈಕಮಾಂಡಾಗಲೀ, ಅದರ ಸ್ವಾಧೀನವಿರುವ ಯಾವುದೇ, ಸೇನೆಯಾಗಲೀ, ಮಿತ್ರರ ದಂಡ ಯಾತ್ರೆಯ ದಳ ನಾಯಕರಿಗೂ ಸೋವಿಯೆಟ್ ಹೈಕಮಾಂಡಿಗೂ ಒಪ್ಪಿಸಿರುವ ಈ ಶರಣು ಕರಾರಿಗನುಗುಣವಾಗಿ ವರ್ತಿಸಲು ತಪ್ಪಿದರೆ, ಅವರು ಶಿಕ್ಷಾರೂಪದ ಅಥವಾ ತಮಗೆ ಸರಿಯೆಂದು ತೋರುವ ಯಾವುದೇ ವಿಧದ ಕಾರ್ಯ ಕೈಕೊಳ್ಳಬಹುದು.

ಈ ಕರಾರಿನಲ್ಲಿ ಗಮನಾರ್ಹ ಶರ್ತವೆಂದರೆ ನಾಲ್ಕನೆಯದು. ಮಿಕ್ಕ ಶರ್ತಗಳಲ್ಲಿ ಜರ್ಮನ್ ಸೇನೆಯನ್ನು ನಿರ್ವೀರ್ಯಗೊಳಿಸುವ ಏಕೋದ್ದೇಶವಿದ್ದರೆ ನಾಲ್ಕನೇ ಶರ್ತವು ಭಾವೀ ವ್ಯವಸ್ಥೆಯ ಕಡೆಗೆ ಸೀದಿ ತೋರಿಸಿದ ಬೆರಳಿನಂತಿದೆ. ಎಲ್ಲಾ ಕಡೆಗಳಲ್ಲಿ ‘ಮಿತ್ರರ ದಂಡ ಯಾತ್ರಾ ದಳ ನಾಯಕರು’ ಮತ್ತು ‘ಸೋವಿಯೆಟ್ ಹೈಕಮಾಂಡ್’ ಎಂದು ವಿಂಗಡಿಸಿ ಸ್ಪಷ್ಟೀಕರಿಸಿ ಬರೆದಿರುವಾಗ, ನಾಲ್ಕನೇ ಶರ್ತದಲ್ಲಿ ಮಾತ್ರ, ಮುಂದಿನ ಸಾಮೂಹಿಕ ಶರಣು ಕರಾರು ಹೇರುವ ‘ಸಂಯುಕ್ತ ರಾಷ್ಟ್ರಗಳು’ ಎಂದು ಎಲ್ಲರನ್ನೂ ಪಂಚಕಜ್ಜಾಯ ಮಾಡಿ ನಮೂದಿಸಲಾಗಿದೆ.

ಗೀತೆಯು ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲ ಭಾಷಾಂತರ

ಪುಟ 400ಕ್ಕೂ ಮಿಕ್ಕಿದೆ.

ಬೆಲೆ: ಬರೇ **0-8-0** ಮಾತ್ರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತದೆ.

ಚಂದ್ರಾ ಸ್ನೊ ಮತ್ತು ಟಲಕಮ್ ಪೌಡರ್

ಸೌಂದರ್ಯ ಸಾಧನಗಳು



CHANDRA

Talcum Powder

Good Evening Hair Oil

Perfumed Castor Oil

AND

Castrola

Sole Distributors—

SADANANDA STORES, UDIPI.

S. V. S. High School, Katapadi. S. K.

ಉದ್ಘಾಟನಾ ಸಮಾರಂಭ

ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲು

ತಾ 1—6—’45ನೇ ಶುಕ್ರವಾರ ಪೂರ್ವಾಹ್ನ ಘ. 10-25ಕ್ಕೆ ತೆರೆಯಲ್ಪಡುವುದು.

ರಾವ್‌ಬಹದೂರ್ ಡಾಕ್ಟರ್ ಎಮ್. ಕೇಶವ ಪೈ O. B. E., M D.

ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗಲು ಸಮ್ಮತಿಸಿರುವರು

ಪ್ರಕೃತ I ರಿಂದ IV ನೆ ಫೋರ್ಮುಗಳ ವರೆಗೆ ಪ್ರತಿ ತರಗತಿಗೆ 40ಮಕ್ಕಳಂತೆ ಮಾತ್ರ ದಾಖಲು ಮಾಡಿಕೊಳ್ಳುವ ಏರ್ಪಾಡು ಮಾಡಿರುವ ಕಾರಣ ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮುಂದಾಗಿ ಶಾಲಾಧಿಕಾರಿಗಳಿಗೆ ತಿಳಿಸುವುದು ವಿಹಿತ.

ಪಿ. ರಾಮದಾಸ ನಾಯಕ್, ಬಿ. ಎ., ಎಲ್. ಟಿ.,
ಪ್ರಧಾನಾಧ್ಯಾಪಕ ಮತ್ತು ಲೇಖಕ.

7-5-’45

ಜರ್ಮನ್ ಪ್ರಮುಖರ ಹೃದ್ರಾವಕ ಹಿತಬೋಧೆ.



ಬ್ರಿಟಿಷ್ ವಿಮಾನಗಳ ಹೊಡೆತದಿಂದ ಜಖಂಗೊಂಡ ಬರ್ಲಿನಿನ ಕಾರ್ಖಾನೆ ಕ್ಷೇತ್ರ

ಜರ್ಮನ್ ವಿದೇಶ ಮಂತ್ರಿಯ 'ದಫ್ಯಾಯ್ಮ' ಸಂದೇಶ

ಶರಣಾಗತಿಗೆ ಮೊದಲು ಸಹಿಬಿದ್ದ ಮೇ 7ರಲ್ಲಿ ಜರ್ಮನ್ ಜನತೆಗೆ ಶರಣಾಗತಿಯ ಸಂದೇಶವು ವಿದೇಶಮಂತ್ರಿ ಕ್ರೋಸಿಕರಿಂದ ಫ್ಲೆನ್ಸ್ ಬರ್ಗ್ ರೇಡಿಯೋದಲ್ಲಿ ಪ್ರಸಾರವಾಗಿ ಘೋಷಿಸಲ್ಪಟ್ಟಿತು. "ಜರ್ಮನರೇ, ಜರ್ಮನ್ ಸ್ತ್ರೀ ಪುರುಷರೇ, ಗ್ರೇಂಡ್ ಎಡ್ಮಿರಲ್ ಡಾಯಿನೆಟ್ಜರ ಆಜ್ಞಾನುಸಾರವಾಗಿ ನಮ್ಮ ಹೈಕಮಾಂಡ್ ಹೋರಾಟ ನಿರತವಾಗಿರುವ ಎಲ್ಲಾ ಜರ್ಮನ್ ಸೇನೆಗಳೂ ನಿಶ್ಶರ್ತವಾಗಿ ಶರಣುಬರಬೇಕೆಂದು ಈ ದಿನ ಸಾರಿದೆ" ಎಂದು ಸ್ಪಷ್ಟವಾಣಿಯಲ್ಲಿ ಕರೆದು ಹೇಳಿ, ಕ್ರೋಸಿಕರಿಂದಿಷ್ಟಾರೆ 'ಜರ್ಮನ್ ರಾಷ್ಟ್ರದ ಚರಿತ್ರೆಯಲ್ಲೇ ದುಃಖಮಯವಾದ ಇಂದಿನ ಸನ್ನಿವೇಶದ ಕುರಿತು ಹೇಳುವದಿಷ್ಟೇ: ಸುಮಾರು ಆರು ವರುಷಗಳ ಶೌರ್ಯಮಯ ಸಂಗ್ರಾಮದಲ್ಲಿ ತುಲನಾತೀತ ಕಷ್ಟನಷ್ಟಗಳನ್ನನುಭವಿಸಿದ ಜರ್ಮನಿಯು ಕಟ್ಟಕಡೆಗೆ ತನ್ನ ವಿರೋಧಿಗಳ ಅತಿಹೆಚ್ಚಿನ ಅನುಕೂಲತೆಗಳೆದಿರಲ್ಲಿ ಸೋಲಬೇಕಾಯಿತು. ಇನ್ನೂ ಯುದ್ಧ ಮುಂದೂಡುವದೆಂದರೆ ಅವಿವೇಕತನ, ವೃಥಾ ರಕ್ತಪಾತ ಮತ್ತು ಸರ್ವನಾಶಕ್ಕೆ ಕಾರಣ. ಭವಿಷತ್ಕಾಲದ ಹೊಣೆಗಾರಿಕೆಯ ಸ್ಮರಣೆಯಿರುವ ಸರಕಾರವು ವೈರಿಯ ಕ್ರೋಧಶಮನಕ್ಕಾಗಿ ಎಲ್ಲ ಶಕ್ತಿ ಮತ್ತು ಆಯುಧ ಪ್ರಯೋಗವನ್ನು ಅನಿವಾರ್ಯವಾಗಿ ಮುಗಿಸಬೇಕಾಯಿತು. ಈ ಕಠೋರ ವಿಷಘಳಿಗೆಯಲ್ಲಿ ನಾವು ಯುದ್ಧನ್ಯೂತರ ಮುಂದೆ ಗಾಢಗೌರವದಿಂದ ತಲೆಬಾಗುತ್ತೇವೆ. ಅವರ ಆತ್ಮಬಲಿದಾನಕ್ಕೆ ನಾವು ಅತ್ಯಂತ ಋಣಿಗಳು. ಗಾಯಗೊಂಡವರು ವಿಯೋಗ ದುಃಖಕ್ಕೀಡಾದವರು ಮತ್ತು ಯುದ್ಧಹಾನಿಗೊಳಗಾದ ಎಲ್ಲರ ಮೇಲಿನ ನಮ್ಮ ಸಹಾನುಭೂತಿ ಸರ್ವ ಪ್ರಥಮವಿದೆ. ನಮ್ಮ ವೈರಿಗಳಿಂದ ಜರ್ಮನ್ ಜನತೆಯ ಮೇಲೆ ಹೇರಲ್ಪಡುವ ಶರಣು ಶರ್ತುಗಳ ಕಠೋರತೆಯ ಕುರಿತು ಯಾರೊಬ್ಬನೂ ಭಯಬಾಸೆಯಿಂದಿರುವದು ಬೇಡ. ನಮ್ಮ ಅದೃಷ್ಟವನ್ನು ನಾವೀಗ ಪ್ರಾಮಾಣಿಕತೆಯಿಂದ, ಮರುಮಾತಿಲ್ಲದೆ ಅನುಭವಿಸಲೇ ಬೇಕು. ನಮ್ಮಲ್ಲಿ ಪ್ರತಿಯೊಬ್ಬನ ಭವಿಷ್ಯವೂ ಕಷ್ಟಮಯವಾಗಿದೆ, ಮತ್ತದು ನಮ್ಮ ಜೀವನದ ಪ್ರತಿಯೊಂದಂಶವನ್ನೂ ಆಹುತಿಗೊಳ್ಳಲಿದೆ ಎಂಬ ಕುರಿತು ಯಾರೊಬ್ಬರೂ ಏನೊಂದು ಸಂದೇಹವನ್ನೂ ಕಟ್ಟಿಕೊಳ್ಳದಿರಲಿ. ಸ ವೀಭಾರ ಹೊರಬೇಕು, ನಾವು ಒಪ್ಪಿಕೊಂಡ ಶರ್ತುಗಳನ್ನು ಶಿರಸಾವಹಿಸಿ ನಿಲ್ಲಬೇಕು. ಆದರೆ ನಾವು ನಿರಾಶರಾಗಬಾರದು. ಕಾರ್ಯಶೂನ್ಯತೆಯ ವೈರಾಗ್ಯದಲ್ಲಿ ಬೀಳಬಾರದು. ಭವಿಷ್ಯದ ಕಾರಿರುಳ ಕಂಟಕಮಯ ಹಾದಿಯನ್ನು ನಾವು ಮತ್ತೊಮ್ಮೆ ಹಾದು ಹೋಗೋಣ. ನಮ್ಮ ರಾಷ್ಟ್ರದಲ್ಲಿ ನ್ಯಾಯವೇ ಮೂಲ ಕಾನೂನು ಮತ್ತು ಮಾರ್ಗದರ್ಶಿಯಾಗಿರಬೇಕು. ರಾಷ್ಟ್ರರಾಷ್ಟ್ರಗಳೊಳಗಿನ ಸಾಹಾರ್ದ್ರತೆಯನ್ನು ನಾವು ಒಪ್ಪಿಕೊಳ್ಳಬೇಕು. ನಮ್ಮ ರಾಷ್ಟ್ರವು ಯುರೋಪಿಯನ್ ಕುಟುಂಬಕ್ಕೆ ಸೇರಿದುದೆಂಬ ಗುರಿಯಿರುವಂತೆಯೇ ಒಪ್ಪಂದಗಳನ್ನು ಗೌರವಿಸುವ ಸಭ್ಯತನಯಿಂದ ಈ ಯುದ್ಧ ಗಾಯಗಳನ್ನು ಗುಣಪಡಿಸಿಕೊಳ್ಳೋಣ. ಆಗ ಜರ್ಮನಿಯು ಮತ್ತೊಮ್ಮೆ ಕಳೆದಿರುವ ಇಡೀ ಜಗತ್ತಿನ ದ್ವೇಷ ತಿರಸ್ಕಾರಕೋಗಿ ಸಹಕಾರ ಸೌಹಾರ್ದತೆ ಮೂಡಲಿದೆ ಎಂಬ ಭರವಸೆ. ... ರಾಷ್ಟ್ರದ ಸಹನೀಯ ಬಾಳುವೆ ಮತ್ತು ಮಾನತೆಯ ಜೀವನಕ್ಕಗತ್ಯವಾಗಿರುವ ಸ್ವತಂತ್ರ್ಯವು ಆಗ ನಮಗೆ ದೊರೆಯುವದೆಂದು ಆಶಿಸೋಣ. ಲೋಕಕ್ಕೆ ಚಿರಸ್ಥಾಯಿ ಅಮೂಲ್ಯ ಕಾಣಿಕೆಗಳನ್ನು ಸಲ್ಲಿಸಿರುವ ಜರ್ಮನ್ ಸ್ಫೂರ್ತಿಯ ... ಶಕ್ತಿಗಳನ್ನು ... ಕರಣದಿಂದ ಎಷ್ಟು ... ಸುವದರಲ್ಲೇ ನಮ್ಮ ರಾಷ್ಟ್ರದ ಜಸಿಸತನ್ನು ಉಪಯೋಗಿಸೋಣ. ಈ ಪ್ರಯತ್ನದಲ್ಲಿ ದೇವರು ನಮ್ಮ ಕೈಬಿಡದಿರಲಿ. ನಮ್ಮ ಕಷ್ಟ ಕಾರ್ಯಗಳಲ್ಲಿ ಆತನ ಆಶೀರ್ವಾದವಿರಲಿ.

ಡೊಗ್ಗಾಲೂರಿಡ ಡೊಯೆನಿಟ್ಜರ ಆತ್ಮನಿವೇದನೆ

ತಾರೀಖು ...ರಲ್ಲಿ ಜರ್ಮನಿಯ ನವಾಧಿಕಾರಿ ಎಡ್ಮಿರಲ್ ಡೊಯೆನಿಟ್ಜರು ಜರ್ಮನ್ ಜನತೆಗಿತ್ತ ಆಕಾಶವಾಣಿ ಭಾಷಣದಲ್ಲಿ ಹೃದಯತಃ ಹೀಗೆಂದರು: 'ಮುಂದಿಯೂ ಜರ್ಮನ್ ಜನತೆಗೆ ಸಹಾಯಮಾಡಲು ನಾನು ಶಕ್ತನಾಗಿರುವೆನೆಂಬುದನ್ನು ಹೇಳಲಾರೆ. ಸದ್ಯ ಸ್ಥಿತಿಯ ವಿಷಮ ಗತಿಯನ್ನು ನಾವು ಇದ್ದಂತೆ ಇದಿರಿಸಿ ನಿಲ್ಲಬೇಕು. ನಾಜೀಪಕ್ಷವು ಅದೃಶ್ಯವಾಯಿತು. ರಾಷ್ಟ್ರ ಮತ್ತು ಆ ಪಕ್ಷದೊಂದಿಗೆ ಈಗ ಐಕ್ಯತೆಯುಳ್ಳ ... ಜರ್ಮನ್ ರೀಖು ಕಟ್ಟಿಹಾಕಲ್ಪಟ್ಟಿದ್ದು ... ಸ್ಥಾವರಗಳ ... ವಿಷ್ಟಾಸ ... ಜರ್ಮನಿಯು ಆಕ್ರಮಿಸಲ್ಪಟ್ಟಿರುವದರಿಂದ ಅಧಿಕಾರವೀಗ ಆಕ್ರಮಣ ಸೇನೆಗಳ ಕೈಗೆ ಹೋಗಿದೆ. ನಾನೀಗ ನೇಮಿಸಿದ ಮರೀಖ್ ಸರಕಾರವು ಕಾರ್ಯತಃ ನಿಲ್ಲಬಹುದೋ ಕೂಡದೋ ಎಂಬುದು ಅವುಗಳನ್ನೇ ಹೊಂದಿಕೊಂಡಿದೆ. ಜರ್ಮನ್ ಸೇನೆಗಳು ಅಗಣಿತ ರಂಗಗಳ ಧೀರ ನಾಯಕರು ಈಗ ರಣಾಂಗಣ ಕಠಿಣಪಥ ಹಿಡಿದಿದ್ದಾರೆ. ನಮ್ಮ ಹೆಂಗಸರು ಮಕ್ಕಳ ಪ್ರಾಣಕ್ಕಾಗಿಯೂ ಜರ್ಮನಿಯ ಭವಿಷ್ಯಕ್ಕಾಗಿಯೂ ಅವರೀ ಕೊನೆಯ ತ್ಯಾಗಮಾಡುತ್ತಿದ್ದಾರೆ. ನಾನಾರು ಬಾರಿ ಪ್ರದರ್ಶಿಸಲ್ಪಟ್ಟ ಅವರ ಧೈರ್ಯ ಶೌರ್ಯಗಳಿಗೆ ನಾವು ಗೌರವದೊಡನೆ ತಲೆವಾಗುತ್ತೇವೆ. ನ್ಯೂತರ ಮತ್ತು ಒಂದಿತರ ನೆನಪು ನಮಗಿದೆ. ಮುಂಬರುವ ಕಷ್ಟಕಾಲದಲ್ಲಿ ನಮ್ಮ ಧೀರ ಪುರುಷರು, ಹೆಂಗಸರು ಮತ್ತು ಮಕ್ಕಳಿಗೆ ಯೋಗ್ಯ ಜೀವನ ಸೌಕರ್ಯಗಳನ್ನು ನನ್ನ ಶಕ್ತಿಗೆ ಸಾಧ್ಯವಿದ್ದಷ್ಟು ಒದಗಿಸುವೆನೆಂದು ನಾನು ಆಶ್ವಾಸನಯೀಯುತ್ತೇನೆ. ಈ ದುಃಖದಲ್ಲಿ ನಿಮಗೆ ಸಹಾಯ ಮಾಡುವರೆ ನಾನೆಷ್ಟರ ವರೆಗೆ ರಕ್ಷನಾಗಿ ಉಳಿಯುವೆನೋ ಇನ್ನೂ ನಾನರಿಯೆ. ನಾವು ನಮ್ಮ ಸ್ಥಿತಿಯನ್ನು ಇದ್ದಂತೆ ಇದಿರಿಸಬೇಕಾಗಿದೆ. ನಮ್ಮಲ್ಲಿ ಪ್ರತಿಯೊಬ್ಬ ... ಕಠಿಣ ಪಥವಿದೆ ... ಯೋಗ್ಯನಾಗಿ ... ಧೈರ್ಯ, ಧೈರ್ಯ ... ಶಿಸ್ತು ಪೂರ್ವಕ ಮುಂದೊತ್ತಬೇಕು. ಏಕೆ. ವಿನಹ ನಮಗೆ ಭಾವೀ ಅಸ್ತಿತ್ವವಿಲ್ಲ"

ಮುಂದಾಲೋಚನೆ

ಶಾಂತಿಕಾಲದ ಕುರಿತು ಆಲೋಚಿಸಿ ತಕ್ಕ ಯೋಜನೆಗಳನ್ನು ಮಾಡಲು ಇದೀಗ ತಕ್ಕ ಸಮಯ. ಏಕೆಂದರೆ ಯುದ್ಧಕಾಲದ ಸಮಸ್ಯೆಗಳಿಗಿಂತ ಶಾಂತಿ ಕಾಲದವುಗಳು ಕಷ್ಟತರ.

ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರಪಾಯವಾಗಿ ಪಾರಾಗಲು ಜನರಿಗೆ ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವವು. ತಮ್ಮ ಮೂವತ್ತೊಂಬತ್ತು ವರ್ಷಗಳ ಅನುಭವದಲ್ಲಿ—ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು. ಅವರಲ್ಲಿ ನಿಮ್ಮ ವಿಶ್ವಾಸವಿಡಲು ಸಂಕೋಚಿಸದಿರಿ, ವಿಳಂಬಿಸದಿರಿ.

ಮುಂಬರುವ ಕಠಿಣ ದಿನಗಳಲ್ಲಿ ನಿಮಗೆ ಸಹಾಯ ಮಾಡಲು ಅವರು ಸನ್ನದ್ಧರು

ಮೂಲಧನ ರೂಪಾಯಿ 26 ಲಕ್ಷ ಕೆನರಾ ಬ್ಯಾಂಕ್ ಲಿಮಿಟೆಡ್

ಕ್ಷೇಮನಿಧಿ ರೂಪಾಯಿ 10 ಲಕ್ಷ (ಕ್ರಿ.ಶ. ೧೯೦೬ ಸ್ಥಾಪನೆ)

CANARA BANK LIMITED

(Incorporated in British India. Liability of Members Limited.)

ಚಂದಾದಾರರಲ್ಲಿ-

ನವಯುಗದ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ. ಸಕಾಲದಲ್ಲಿ ಚಂದಾಹಣ ಬಾರದಿದ್ದಲ್ಲಿ ಕಳುಹಿಸಲ್ಪಡುವ ವಿ. ಪಿ. ಯನ್ನು ದಯಮಾಡಿ ಸ್ವೀಕರಿಸಬೇಕಾಗಿ ಬಿನ್ನಹ.

ಮೆನೇಜರ್.

ಲಂಡನಿನಲ್ಲಿ ವಿಜಯೋತ್ಸವ

ಮೇ ತಾ. ೮ರಲ್ಲಿ ಚರ್ಚಿಲ್ಲರು ಆಕಾಶವಾಣಿ ಮೂಲಕ ವಿಜಯ ಘೋಷಣೆಮಾಡಿದರು. ಜರ್ಮನಿ ಶರಣಾಗಿ ಬಂದ ರೀತಿ ಯುರೋಪು ಯುದ್ಧ ಚರಿತ್ರೆಯನ್ನು ಸಂಕ್ಷೇಪಿಸಿ ಹೇಳಿ, ಈಗ ನಮ್ಮೆದಿರು ನೆಲಹಿಡಿದಿರುವ ಅನರ್ಥಿಯ ವಿರುದ್ಧವಾಗಿ ಇಡೀ ಜಗತ್ತೇ ಎದ್ದು ನಿಂತಿತ್ತು' ಎಂದೂ, ಮತ್ಸರ, ಕೊಲೆಗಡುಕ, ಕುತಂತ್ರಿ ಜಪಾನನ್ನು ನಿರ್ಮೂಲಿಸುವ ಕಾರ್ಯವುಳಿದಿದೆಯೆಂದೂ ತಿಳಿಸಿ, ದೇವರನ್ನೂ ಸಹವ್ಯವಸಾಯೀ ಮಿತ್ರರಾಷ್ಟ್ರಗಳನ್ನೂ ಅಭಿನಂದಿಸಿದರು. ಚಕ್ರವರ್ತಿಗಳ ವಿಜಯ ಸಂದೇಶವೂ ಸಾಮ್ರಾಜ್ಯದಲ್ಲೆಲ್ಲಾ ಪ್ರಸರಿಸಲ್ಪಟ್ಟಿತು ರಾಜ ರಾಣಿಯರು ಚರ್ಚಿಲ್ಲರನ್ನು ಮಧ್ಯದಲ್ಲಿ ನಿಲ್ಲಿಸಿಕೊಂಡು ರಾಜಕುಮಾರಿಯರೊಂದಿಗೆ ಬಕ್ಕಿಂಗ್ಹಾಮ್ ಅರಮನೆಯ ಮೇಲಂತಸ್ತಿನಲ್ಲಿ ಅಪಾರ ಜನಸಂದಣಿಗೆ ದರ್ಶನವಿತ್ತಾಗ ಹಲವು ಮಿನಿಟುಗಳ ವರೆಗೂ ಜನರು ಗಗನಭೇದಿತ ಜಯಘೋಷವೆಬ್ಬಿಸಿದರು. ಮಿ. ಚರ್ಚಿಲ್ಲರಲ್ಲಿಂದ ಶ್ವೇತಗೃಹಕ್ಕೆ ಬಂದು ವಿಜಯೋನ್ಮಾದದಿಂದ ಕುಣಿದಾಡುತ್ತಿದ್ದ ಜನ ಸಮುದ್ರಕ್ಕೆ ಸಂದೇಶವಿತ್ತರು. ಚರ್ಚಿಲ್ಲರು ಎರಡು ಬೆರಳೆತ್ತಿ ತೋರಿಸಿದ V ಸಂಜ್ಞೆಗೆ ಜನತೆಯೂ ಅತ್ಯುತ್ಸಾಹದಿಂದ ಪ್ರತಿ ಸಂಜ್ಞೆ ಮಾಡಿತು ಬಕ್ಕಿಂಗ್ಹಾಮ್ ಅರಮನೆಯ ಮುಂಭಾಗದಲ್ಲಿ ಕಾಲು ಮೈಲಿಯುದ್ದಕ್ಕೂ ವಿಸ್ತೃತ ಜನ ಶಿರದಿ ತಾಸುಗಳ ವರೆಗೂ ಕಾದು ನಿಂತು ಜಯಘೋಷಗಳೊಡನೆ ರಾಜಭಕ್ತಿ ಸಲ್ಲಿಸಿತು ಚಕ್ರವರ್ತಿ ದಂಪತಿಗಳು ಐದಾರು ಬಾರಿ ಅರಮನೆಯ ಬಾಲ್ಕೊನಿಯಲ್ಲಿ ಕಾಣಿಸಿಕೊಂಡಾಗಲೆಲ್ಲಾ ಜನರಲ್ಲೇಳುತ್ತಿದ್ದ ಆನಂದೋತ್ಸಾಹಗಳಿಂದ ಆ ಭವ್ಯ ನೋಟವು ದೇವತೆಗಳಿಗೆ ಶ್ರೀಮನ್ನಾರಾಯಣ ಪ್ರತ್ಯಕ್ಷವಾಗುವ ಸಿನೆಮಾ ದೃಶ್ಯವನ್ನು ಮೀರಿಸುತಿತ್ತು 'ಈ ರೀತಿ ಬಿಡುಗಡೆ ಪಡಿಸಿದುದಕ್ಕಾಗಿ ಭಗವಂತನಿಗೆ ಭಯಭಕ್ತಿಯ ಧನ್ಯವಾದ' ಕೊಡುವ ನಿರ್ಣಯವನ್ನು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ತಂದ ಮೇಲೆ, ಇಡಿಯ ಪಾರ್ಲಿಮೆಂಟು ಸರ್ವ ಸಂಭ್ರಮದ ಮೆರವಣಿಗೆಯಾಗಿ ಮಾರ್ಚ್ ಮಾಡಿತು. ಸುವರ್ಣ ಸರಪಣಿಯ ಅಲಂಕಾರ, ಝಗಝಗಿಸುವ ಪೋಷಾಕು, ಬೆಳ್ಳಿ ಸರಿಗೆಯ ಪಾದಭೂಷಣಗಳ ಪಹರೆಗಾರರನ್ನು ಮುಂದಿಟ್ಟುಕೊಂಡು ೬೦೦ಮಂದಿ ಎಂ ಪಿ ಗಳ ಮೆರವಣಿಗೆ ಹೊರಟು ಹಾದಿಯಲ್ಲಿ ಚರ್ಚಿಲ್ಲರನ್ನು ಕಂಡು ಜನ ಸಮುದ್ರದ ಹೃದಯತೆರೆಗಳು ಒಡೆದ ವಂದನಾ ಘೋಷಗಳನ್ನು ಸ್ವೀಕರಿಸಿ,ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿದ ದೃಶ್ಯವು ಚಿರಸ್ಮರಣೀಯವಿದ್ದಿತು

ವಿಜಯೀ ತ್ರಯ

ವಿವಿಧ ದೇಶಗಳ 'ವಿ' ಕೋಲಾಹಲ!

ಟ್ರುಮನ್ ಸ್ಟಾಲಿನರ ವಿಜಯ ಘೋಷಣೆ

ಅಮೇರಿಕಾಧ್ಯಕ್ಷ ಟ್ರುಮನರೂ ತಾ ೮ರಲ್ಲಿ ಅಮೇರಿಕಕ್ಕೆಲ್ಲಾ ಆಕಾಶವಾಣಿ ವಿಜಯ ಭಾಷಣವಿತ್ತರು 'ಈ ಸಂದರ್ಭದಲ್ಲಿ ಅಧ್ಯಕ್ಷ ರೂಸವೆಲ್ಟರಿರಬೇಕಿತ್ತು' ಎಂದು ಪ್ರಾರ್ಥಿಸಿ "ಜಪಾನೀ ಸೇನ ಮತ್ತು ನಾವೆಗಳ ಶಸ್ತ್ರ ಕೆಳಗಿಡಿಸದೆ ನಮ್ಮ ಹೋರಾಟ ಮುಗಿಯುವಂತಿಲ್ಲ" ಎಂದು ಎಚ್ಚರಿಸಿದರು ರೂಸವೆಲ್ಟರ ಸಮಾಧಿಗೆ ಆ ದಿನ ಪುಷ್ಪ ಸಮರ್ಪಣೆಯಾಯಿತು ಅಮೇರಿಕದಲ್ಲೆಲ್ಲಾ ತಾ. ೧೩ರಲ್ಲಿ ಅತಿ ಸಂಭ್ರಮದಿಂದ 'ವಿ' ದಿನಾಚರಣೆಯಾಯಿತು

ಮಾರ್ಶಲ್ ಸ್ಟಾಲಿನರು ತಾ. ೯ರಲ್ಲಿ ಇಡೀ ಸೋವಿಯಟಿಗೆ ವಿಜಯ ಘೋಷಣೆ ಮಾಡುತ್ತಾ 'ಜರ್ಮನಿಯು ಸಂಪೂರ್ಣವಾಗಿ ಧ್ವಂಸವಾಯಿತು" ಎಂದಿದ್ದಾರೆ "ಸೋವಿಯೆಟ್ ಯೂನಿಯನು ವಿಜಯಾನಂದವನ್ನನುಭವಿಸುತ್ತಿದೆ ಜರ್ಮನಿಯನ್ನು ಕತ್ತರಿಸಿ ಹಾಕುವ ಅಥವಾ ನಾಶಮಾಡುವ ಉದ್ದೇಶವದಕ್ಕಿಲ್ಲ ಇನ್ನು ಮುಂದೆ ಯುರೋಪಿನಲ್ಲಿ ಜನತಾ ಸ್ವಾತಂತ್ರ್ಯ ಮತ್ತು ಜನತಾ ಶಾಂತಿಯ ಮಹಾ ಧ್ವಜವು ಹಾರಾಡುವುದು" ಎನ್ನುತ್ತಾ ಸ್ಟಾಲಿನರು ಕೆಂಪು ಸೇನೆಯ ಸರ್ವವಿಭಾಗಗಳನ್ನೂ ಹೃತ್ಪೂರ್ವ ಅಭಿನಂದಿಸಿದ್ದಾರೆ

ಇತರ ಕಡೆಗಳಂತೆ ವಿಶೇಷ ಸಂಭ್ರಮ ಪ್ರದರ್ಶನವೇನೂ ಇಲ್ಲದೆ ಸಾಮಾನ್ಯಾನಂದಾನುಭವವೇ ಸೋವಿಯೆಟ್ ರಷ್ಯವು ಪ್ರದರ್ಶಿಸಿದ ವಿಜಯ ವೈಶಿಷ್ಟ್ಯ

ಮಿತ್ರ ರಾಷ್ಟ್ರಗಳ ನಾಯಕರು ಒಬ್ಬರಿಗೊಬ್ಬರು ವಿಜಯಾಭಿವಂದನೆಗಳನ್ನು ಕೊಟ್ಟು ಪಡೆದಿದ್ದಾರೆ

ಇಡೀ ಪ್ರಪಂಚದಲ್ಲಿ ವಿವಿಧ ರೀತಿಯಿಂದ ವಿಜಯ ದಿನಾಚರಣೆಗಳು ನಡೆದಿವೆ ಆಸ್ಟ್ರೇಲಿಯದಲ್ಲಿ ಮಾತ್ರ ಆಹಾರಾಭಾವದ ಬೇಸರದಿಂದ ಏನೊಂದೂ ಪ್ರದರ್ಶನವಿರಲಿಲ್ಲ ಅಲ್ಲಿ 'ವಿ'ಗಾಗಿ ವಿಶೇಷ ರೀತಿಯಲ್ಲಿ ವರ್ತಿಸಿದವರ ದಸ್ತಗಿರಿ ಕೂಡಾ ನಡೆದಿದೆ ಯುರೋಪಿನ ಕೆಲವು ನಗರಗಳಲ್ಲಿ ವಿಜಯಾನಂದ ಪ್ರದರ್ಶಿಸಲು ಸೈನಿಕರಿಗೆ ಸ್ವೇಚ್ಛಾವಿಹಾರ ಸ್ವಾತಂತ್ರ್ಯ ದೊರೆಯಿತು ಆನಂದೋನ್ಮತ್ತ ಸೂರೆಸುಲಿಗೆ ನಡೆಯಿತು. ಒಂದೆರಡು ಕಡೆ ವಿಶೇಷ ಸೊತ್ತುಹಾನಿಗಳಿಂದ ದೂರು ದೂಷಣೆಗಳು ಕೇಳಿ ಬರುತ್ತಿವೆ. ಐಯರ್ಲೆಂಡಿನ ರಾಜಧಾನಿ ಡಬ್ಲಿನಿನಲ್ಲಿ ತೀವ್ರಗಾಮಿ ಬ್ರಿಟಿಷ್ ದ್ವೇಷಿಗರು ದಂಗೆಯೆದ್ದು ಬ್ರಿಟಿಷ್ ರಾಯಭಾರಿ ಕಚೇರಿಗೆ ಸಣ್ಣ ಪುಟ್ಟ ಅಪಘಾತಗಳನ್ನೆಸಗಿದರೆಂದೂ, ಐಯರ್ಲೆಂಡಿನ ಎಪೇರ ಮಂತ್ರಿಗಳು ಅದಕ್ಕಾಗಿ ಆಂಗ್ಲೋ ಅಮೇರಿಕಾನರೊಡನೆ ಕ್ಷಮೆಯಾಚಿಸಿದರೆಂದೂ ತಿಳಿದು ಬರುತ್ತದೆ.

ಮುಂಬಾಯಿಯಲ್ಲಿ ಕರ್ನಾಟಕ ವಿದ್ಯಾರ್ಥಿ ಸಮಿತಿಯ-ತ್ರೈಯ [illegible]ರ್ಷಿಕೋತ್ಸವ ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ [illegible] ಶ್ರೀ [illegible] ರಾಯರು [illegible] ಕರಾವರು [illegible] ಯುಸ್ ಹೆಗ್ಡೆ, [illegible] ಕುಂಬಾರ, [illegible] ಕಲ್ಯಾಣ, [illegible] ಫೋರ್, [illegible] ತಮ್ಮ ಅಮೂಲ್ಯ [illegible] ಭಾಷಣವನ್ನಿತ್ತು, ಕನ್ನಡ ಸಭಿಕರನ್ನು ಆನಂದ [illegible]ದರು.

ಮಣಿಪುರ-ಸ್ಥಾನೀಯ [illegible] ಆರ್ದಂತ್ಯೋತ್ಸವವು [illegible] 7 5 [illegible] ಸಂಜೀವ [illegible] ಜರಗಿತು [illegible] ಶ್ರೀ M [illegible] B A B T [illegible] P [illegible] B A, L T [illegible] ಶ್ರೀ [illegible] M [illegible] ಸುವರ್ಣ [illegible] ಭಾಷಣ [illegible] ಸಂಗೀತ [illegible] ಯಿತು

ಅಪಜಯೀ ದ್ವಯ

ನಾಜಿಗಳು ನಾಶವಾಗಲಿಲ್ಲವೆ?

‘ನಾಜೀ ಪಕ್ಷದ ನಾಮಾವಶೇಷ’ ‘ಜರ್ಮನಿಯ ದುಶ್ಶಕ್ತಿಯ ಸಮೂಲ ನಾಶ’ ತಮ್ಮ ಗುರಿಯೆಂದು ಯುದ್ಧ ಮುಂದೊತ್ತಿದ ಮಿತ್ರ ಪಕ್ಷೀಯರು ವಿಜಯಿಗಳಾಗಿ ಈಗ ನಿಂತಿರುವ ಗಡಿಯು ತೀರಾ ಸಂದೇಹಾಸ್ಪದವಿದೆ. ನಾಜಿಗಳು ಪೂರ್ತಿ ನಾಶವಾಗದೆ ತಮ್ಮ ಶೇಷವುಳಿಸಿ ಕೊಂಡೇ ಶಸ್ತ್ರ ಕೆಳಗಿಟ್ಟಿದ್ದಾರೆ. ಇದರಿಂದ ಜರ್ಮನಿಯ ಸದ್ಯಸ್ಥಿತಿ ಮತ್ತು ಭಾವೀ ಭವಿಷ್ಯಗಳ ಕುರಿತು ಗಾಢ ಸಂದೇಹವೆದ್ದಿದೆ.

ಡೊಯಿನೆಟ್ಜರು ಈಗಲೂ ಫ್ಯೂರಾರ್?

ಆಕ್ರಮಿತ ಜರ್ಮನ್ ನೆಲವೀಗ ಉಳಿದುಳಿದಿರುವ ನಾಜೀ ಪ್ರಮುಖರ ವಶದಲ್ಲೇ ಇದ್ದಂತಿದೆ. ಮಾತ್ರವಲ್ಲ, ಡೊಯಿನೆಟ್ಜ್ ಮತ್ತು ಅಲ್ಲಿಯೇ ಇರುವ ಜರ್ಮನ್ ಪ್ರಮುಖ ಸೇನಾನಿ ಫೀಲ್ಡ್ ಮಾರ್ಶಲ್ ಬುಶರ ಸ್ಥಾನಮಾವುದೆಂಬ ಸಮಸ್ಯಾತ್ಮಕ ಪ್ರಶ್ನೆಯೆದ್ದಿದೆ ಅವರ ಘರ್ಜನೆಗಳನ್ನು ಲೋಕವೀಗಲೂ ಬೆರಗುಗೊಂಡು ಕೇಳುವಂತಾಗಿದೆ. ಬರ್ಲಿನ್ ಪತನಾನಂತರ ಇದುವರೆಗೂ ಜರ್ಮನ್ ಸರಕಾರದ ಬಾಯಿಯಾಗಿ ಫ್ಲೆನ್ಸ್‌ಬರ್ಗ್ ರೇಡಿಯೋ ಉಳಿದಿರುವದು, ಅದರ ಮೂಲಕ ಈಗಲೂ ಡೊಯಿನೆಟ್ಜ್ ಸರಕಾರವು ಮಾತಾಡುತ್ತಿರುವದು ಕೌತುಕವನ್ನೇ ನಿರ್ಮಿಸಿದೆ. ತಾ. 11ನೇ ರಾತ್ರಿ 10 ಘಂಟೆಗೆ ಫೀಲ್ಡ್ ಮಾರ್ಶಲ್ ಬುಶ್ ಈ ರೇಡಿಯೋದ ಮೂಲಕ ಘೋಷಿಸಿದ; ‘‘ಗ್ರೇಟ್ ಎಡ್ಮಿರಲರ ಆಜ್ಞೆ ಮತ್ತು ಬ್ರಿಟಿಷ್ ಆಕ್ರಮಣಾಧಿಕಾರಿಗಳ ಒಪ್ಪಿಗೆಯಿಂದ ಶ್ಲೆಸ್‌ವಿಗ್—ಹೋಲ್‌ಸ್ಟೀನಿನ ಸೇನಾನಿತ್ವವನ್ನು ನಾನು ವಹಿಸಿಕೊಂಡಿದ್ದೇನೆ’’. ಆ ಘರ್ತ್ ಸೋತ ಜರ್ಮನ್ ಸೇನೆಯೊಂದು ಜರ್ಮನ್ ಸೇನಾನಿಯ ವಶದಲ್ಲೇ ಇದೆ ಅವನ ‘ಕಾರಬಾರು’ ನಡೆಯುತ್ತಿದೆ. ಈ ಕುರಿತು ಲಂಡನಿನ ‘ಅಧಿಕಾರಿಗಳಿಂದ ಖಂಡನೆ ಅಥವಾ ಅನುಮೋದನೆ ಒಂದಕ್ಕೂ ಡೊಯಿನೆಟ್ಜರಿಗೆ ಇನ್ನೂ ಅಧಿಕಾರವಿದೆಯೇ ಎಂಬುದೂ ತಿಳಿದಿಲ್ಲ. ಆದರೆ ಬೇರೆ ಜರ್ಮನ್ ಸೇನೆಗಳನ್ನೂ ಈ ರೀತಿ ಬಿಡಲಾಗುವದಿಲ್ಲ. ಎಂಬ ವಾರ್ತೆ ಬಂದಿದೆ.

ಇದರ ಗುಟ್ಟೇನು?

ಜರ್ಮನರ ಶರಣಾಗತಿ ಮತ್ತು ಮಿತ್ರರು ಅವರಿಗಿತ್ತಿರುವ ಸಂಭಾವನೆ—ಎರಡೂ ವಿಲಕ್ಷಣವಾಗಿ ಕಾಣುತ್ತಿವೆ. ವಿಜಯೀ ರಾಷ್ಟ್ರಗಳು ಜರ್ಮನಿಯು ಎದುವೆಟ್ಟಿ ನಿಲ್ಲುವ ದೃಶ್ಯವನ್ನು ಕಾಣುವೆನೆಂದು ನಿರೀಕ್ಷಿಸಿದ್ದ ಪ್ರಪಂಚವಿಂದು, ಗೆದ್ದವರು ಸೋತವರ ಕೈ ಹಿಡಿದು ನಿಲ್ಲಿಸಿದುದನ್ನಷ್ಟೇ ಕಾಣುತಿದ್ದಾರೆ. ಫೀಲ್ಡ್ ಮಾರ್ಶಲ್ ಬುಶ್ಶನ ಅಧಿಕಾರಾರೋಹಣ ಧ್ವನಿಯನ್ನು ಕೇಳಿದ ಮೇಲಂತೂ ಸದ್ಯಕ್ಕೆ ಡೊಯಿನಿಟ್ಜ್ ಸರಕಾರಕ್ಕೆ ಆಂಗ್ಲೋ-ಅಮೆರಿಕಾನರ ಸಮ್ಮತಿ ದೊರಕಿದೆ ಎಂಬುದು ಸ್ಪಷ್ಟ. ಇವೆಲ್ಲಾ ಕೊನೆಯ ಭಾಗದ ಯದ್ವಾತದ್ವಾ ಘಟನೆಗಳು; ಕೊನೆಯ ವರೆಗೂ ಶರಣಾಗುವಂತಿಲ್ಲವೆಂದು ಊಹಿಸಿದ್ದ ಜರ್ಮನಿಯು ಅಕಸ್ಮಾತ್ ಶರಣು ಬಂದ ಕೌತುಕಕ್ಕೆ, ನಾಜೀ ಅಧಿಕಾರವನ್ನೊಪ್ಪಿಕೊಂಡ ಈ ವಿಸ್ಮಯವೂ ಸೇರಿ, ಒಂದು ‘ಜಾದು’ ಆಟವಾಗಿ ಬೆರಗು ನಿರ್ಮಿಸಿದೆ. ನಾಜೀ ಪ್ರಮುಖರಲ್ಲಿ ಹಲವರ ಪತ್ತೆಯಾಗದಿರುವದು-ಆ ಕುರಿತು ಆಂಗ್ಲೋ ಅಮೆರಿಕಾನರಾವ ಆತುರವನ್ನೂ ತೋರಿಸದಿರುವದು-ಡೊಯಿನೆಟ್ಜ್ ಅಧಿಕಾರಿಯಾದ ಮೇಲಾದರೂ ನಾಜೀ ಪಕ್ಷವನ್ನು ಬರ್ಖಾಸ್ತು ಪಡಿಸದೆ ಬಿಟ್ಟುದು-ಆತ ಶರಣಾದ ಮೇಲೆ ಕೂಡಾ ನಾಜಿಗಳ ಕುರಿತು ಒಂದೇ ಒಂದು ಕಠಿಣ ಶಬ್ದ ಮಾಡದೆ ‘ರಾಷ್ಟ್ರಕ್ಕೂ ಆ ಪಕ್ಷಕ್ಕೂ ಸಂಬಂಧವುಳಿದಿಲ್ಲ’ ಎಂದಿಷ್ಟೇ ಹೇಳಿದುದು-ಈಗ ಅಂಥವನೇ ಅಸ್ತಿತ್ವದಲ್ಲಿರುವದು, ಇವೆಲ್ಲಾ ಒಡೆಯಲಾಗದ ಒಗಟೆಯಾಗಿವೆ. ರಶ್ಯದಿದಿರಲ್ಲಿ ಇವರ ಕಣ್ಣುಮುಚ್ಚಾಲೆಯಾಟ ನಡೆದಿಲ್ಲವಷ್ಟೆ?

ಬ್ರಿಟಿಷ್ ಸಾಮ್ರಾಟರು.

ವಿಜಯದ ದಿನ ಬಕ್ಕಿಂಗ್‌ಹಾಮ್ ಅರಮನೆ ದೇವಾಲಯವಾಯಿತು; ‘ರಾಜಾ ಪ್ರತ್ಯಕ್ಷ ದೇವತಾ’ ಆದರು. ಕಾಲು ಮಿಲಿಯಕ್ಕೂ ಮಿಕ್ಕಿದ ಜನಸಂದಣಿ ಅವರ ಬೇಟಿ ಪಡೆದು ವಿಜಯೋತ್ಸವದೊಡನೆ ಸಾಮ್ರಾಟ ವೈಭವವೂ ನಡೆಯಿತು.

ಗೋರಿಂಗನ ವೈಭವ!

‘‘ಹಿಟ್ಲರ್ ನನಗೆ ಮರಣದಂಡನೆ ವಿಧಿಸಿದ್ದರಿಂದ ಕಳೆದ ಮಾರ್ಚ ತಿಂಗಳಿಂದಲೂ ತಲೆ ಮರೆಸಿಕೊಂಡಿದ್ದೇನೆ’’ ಎನ್ನುತ್ತಾ ಸ್ವೇಚ್ಛೆಯಿಂದ ಅಮೇರಿಕನ್ ಯೋಧರಿಗೆ ಸೆರೆ ಸಿಕ್ಕಿ ಈಗ ಲಂಡನಿಗೆ ಬಂದಿರುವ ಗೋರಿಂಗನ ವೈಭವವಂತೂ ನಂಬಲಸಾಧ್ಯವಾಗಿದೆ ಲಂಡನಿನ ಶತಮಾನಾಯುಷ್ಯಗಳ ಭವ್ಯಕಟ್ಟಡಗಳ ಮಾಡು ಹಾರಿಸಿ ಕ್ಷಾರವಮಾಡಿಸಿದವನು ನಾಜಿಗಳ ಈ ಮಾಜೀ ವಿಮಾನಾಧಿಕಾರಿ! ‘ಹಾ! ನಮ್ಮ ಚಿರತ್ರಾರ್ಹ ಸುಂದರ ನಗರ ಉರಿಯುತ್ತಿದೆ! ಕೊಲೆಗಡುಕ ನಾಜಗಳು ಜಗತ್ತಿನ ಸಂಪೂರ್ಣ ಕಲಶ ಲಂಡನನ್ನು ಲಂಕಾದಹನ ಮಾಡುತಿದ್ದಾರೆ!’ ಎಂದು ಪ್ರಧಾನಿ ಚರ್ಚಿಲ್ಲರೇ ಒಂದು ದಿನ ಬಾಯಿಬಿಡುವಂತೆ ಮಾಡಿದವನು ನಾಜಿಗಳ ಈ ಎರಡನೇ ಫ್ಯೂರಾರ್! ವಿಮಾನ ಯಂತ್ರಗಳ ಸಂದು ಜೋಡಣೆಗಾಗಿ ಮೊಳೆ ಹೊಡೆಯುವಾಗ ‘ಗೋರಿಂಗನ ಶವ ಹಲಗೆಗೆ ಮೊಳೆ ಹೊಡೆಯುತಿದ್ದೇನೆ’—ಎಂದು ಲಂಡನಿಗರಾಡುತ್ತಿದ್ದುದು ಈತನಿಗೇನೆ! ಇಂಥ ಗೋರಿಂಗನೀಗ ಲಂಡನಿನಲ್ಲಿ ರಾಜವೈಭವದಲ್ಲಿದ್ದಾನೆ: ಕ್ರಿಕೆಟ್ ಸ್ಪರ್ಧೆಯಲ್ಲಿ ಸೋತ ಇದಿರಾಳಿಯನ್ನು ಸಂಭಾವಿಸುವಂತೆ ಲಂಡನ್ ಅವನನ್ನು ಮನ್ನಿಸಿದೆ ಅವನ ಪದಕಾಲಂಕಾರಗಳ ವರ್ಣನೆ, ಫೋಟೋವಿಗೆ ನಿಲ್ಲುವಾಗ ಹೊಸ ಸೇನಾ ಪೋಷಾಕಿನಿಂದ ಬಂದ ಆತನ ಆಡಂಬರ ಶ್ಲಾಘನೆ-ಅವನ ಊಟದ ಮನೆಯ ವೈಭವ-ತನ್ನನ್ನು ಸೆರೆಹಿಡಿದವರೊಡನೆ ಆತನಾಡುತ್ತಿರುವ ಸರಸ ಸಲ್ಲಾಪ. ಇವನ್ನೆಲ್ಲಾ ಅಲ್ಲಿಯವರು ರುಚಿರುಚಿಯಾಗಿ ವರ್ಣಿಸುತಿದ್ದಾರೆ. ‘ಈ ಕೇಡಿಯನ್ನು ಕೂಡಲೇ ವಿಚಾರಿಸಿ ಗುಂಡಿಗೆ ಬಲಿಕೊಡದೆ ಸನ್ಮಾನಿಸುತ್ತಿರುವ ಆಂಗ್ಲೋ ಅಮೆರಿಕಾನರ ವರ್ತನೆಗೆ ರಶ್ಯನ್’ ಪತ್ರಿಕೆಗಳು ಗಾಢ ಜಿಗುಪ್ಸೆ ಪ್ರದರ್ಶಿಸಿವೆ. ಬ್ರಿಟಿಷ್ ಪತ್ರಿಕೆಗಳೂ ಆಶ್ಚರ್ಯ ಸೂಚಿಸಿವೆ.

ಕೀಟೆಲನ ಉದ್ಗಾರ

ಬರ್ಲಿನಿನಲ್ಲಿ ಶರಣು ಕರಾರಿಗೆ ಸಹಿ ಹಾಕುವಾಗ ನಾಜೀ ಫೀಲ್ಡ್ ಮಾರ್ಶಲ್ ಕೀಟೆಲನಲ್ಲಿ ಅಪಜಯದ ಚಿಹ್ನೆಯಾವುದೂ ಗೋಚರಿಸಲಿಲ್ಲವಂತೆ. ತನ್ನ ಪಿತೃಭೂಮಿಯನ್ನು ವಿರೋಧಿಗಳ ಕೈಗೊಪ್ಪಿಸುವ ದುರದೃಷ್ಟವು ಉಜ್ವಲ ರಾಷ್ಟ್ರಾಭಿಮಾನಿಯಾದ ತನ್ನ ಪಾಲಿಗೆ ಬಂದ ಆ ವಿಷ ಘಳಿಗೆಯಲ್ಲಿ ಕೂಡಾ ಕೀಟೆಲನಲ್ಲಿ ಏನೊಂದೂ ಬದಲಾವಣೆ ಕಂಡುಬರಲಿಲ್ಲವೆಂಬುದು ನಿಜಕ್ಕೂ ಸೋಜಿಗವೇ! ಸಹಿ ಹಾಕಿದೊಡನೆ ತನ್ನ ‘ಎಡೆ’ಯ ಕಡೆಗೆ ತಿರುಗಿ ಆತ ಹೇಳಿದನಂತೆ: ‘‘ಯುದ್ಧಾನಂತರ ‘ಕೀಟೆಲನೊಡನೆ ರಶ್ಯನ್ ಶಿಬಿರದಲ್ಲಿ’ ‘ಕೀಟೆಲ್-ಇನ್ನೂ ಪ್ರಶ್ಯನ್ ಮನುಷ್ಯ’ ಎಂಬ ಪುಸ್ತಕಗಳನ್ನು ಬರೆದು ನೀನು ಹಣ ಮಾಡಬಹುದು’’. ಈ ಮಾತಿಗೆ ಓರ್ವ ಅಮೇರಿಕನ್ ಆಫೀಸರ್ ಪ್ರತಿ ನುಡಿದನಂತೆ: ‘‘ಆತನು ಅಂತ್ಯಗೊಳ್ಳಲಿಲ್ಲ. ವಿಶ್ರಾಂತಿ ಪಡಕೊಂಡಿದ್ದಾನೆ ಮಾತ್ರ!’’

ಹಿಮ್ಲರನನ್ನು ಡೊಯಿನಿಟ್ಜ್ ಫ್ಲೆನ್ಸ್‌ಬರ್ಗಿನ ಮನೆಯೊಂದರಲ್ಲೇ ಬಂದೋಬಸ್ತಿನಲ್ಲಿಟ್ಟು ಬ್ರಿಟಿಷರಿಗೆ ಕೈದಿಯಾಗಿ ಒಪ್ಪಿಸಿದನೆಂಬ ‘ವಾರ್ತೆಯಿದ್ದರೂ ಅದು ಅಧಿಕೃತ ಒಪ್ಪಿಗೆ ಪಡೆದಿಲ್ಲ ನಾಜೀ ಪಕ್ಷದ ಮುಖ್ಯ ಸಂಘಟನಾ ಕರ್ತರು, ಗಣ್ಯ ನಾಜೀ ನಾಯಕರು, ಚತುರ ಸೇನಾನಿಗಳು ಕಾಣೆಯಾಗಿದ್ದಾರೆ. ಸೆರೆ ಸಿಕ್ಕಿದವರು ವಿಜಯಿಗಳ ಕೈಯಲ್ಲಿ ಭವ್ಯ ಜೀವನ ನಡೆಸುತಿದ್ದಾರೆ. ಆಂಗ್ಲೋ ಅಮೆರಿಕಾನರ ಯುದ್ಧ ಗುರಿಯಂತಾಗಬೇಕಾಗಿದ್ದರೆ, ನಾಜೀ ಹುಳಗಳನ್ನು ಕೂಡಾ ಬಂಧಿಸಿಟ್ಟು, ಕೂಡಲೇ ವಿಚಾರಿಸಿ, ಶಿಕ್ಷೆಗೆ ಗುರಿಮಾಡಬೇಕಿತ್ತು. ಇಡೀ ಜರ್ಮನಿಯ ಕಲ್ಲನ್ನೂ ಅಲುಗಾಡ ಬಿಡದೆ ಆಕ್ರಮಿಸಿ ಕುಳಿತುಕೊಳ್ಳಬೇಕಿದ್ದಿತು.

ಹಾಗಾಗಿಲ್ಲವೇಕೆ? ‘ನಾಜೀ ಜರ್ಮನಿ ನಾಶವಾದರೆ ಯುರೋಪು ಸೋವಿಯೆಟ್ ಬಕಾಸುರಗೆ ಬಲಿ!’ ಎಂಬ ಹಿಟ್ಲರನ ಮಾತು ಆಮೆರಿಕಾಂಗ್ಲರಿಗೆ ಮಂದಟ್ಟಾಗಿರಬಹುದೇ?

The Canara Industrial & Banking Syndicate, Limited.

(Incorporated in British India with Limited Liability)

Estd Head Office **UDIPI**, South Kanara 1925.

Authorised Capital	Rs. 56,00,000
Subscribed Capital	Rs. 32,10,987
Paid-up Capital	Rs. 19,24,425
Reserves . .	Rs. 4,20,000

Total Resources exceed TWO CRORES.

BRANCHES

1 [illegible]	18 Bagalkot	Anantapur District
North Kanara District	MYSORE STATE	34. Anantapur
2 Karwar	19 Bangalore City	35 Hindupur
3 Ankola	20 Mysore	36 Tadphtri
4 Kumta	21. Sagar	South Kanara District
5 Sirsi	22 Tumkur	37 Mangalore
6 Honavar	23 Shimoga	38. Udipi
7 Bhatka	24 Davangere	39. Udipi Car Street
Ratnagiri District	25 Arsikere	40 Coondapoor
8 Vengurla	26 Chickmagalur	41. Brahmavar
9 Malwan	COCHIN STATE	42 Karkala
10 Ratnagiri	27 Cochin	43. Kasaragod
Belgaum District	28. Secunderabad	44 Kanhangad
11 Belgaum	Sholapur District	North Malabar District
12 Nipani	29 Sholapur	45 Payyanur
Dharwar District	Cuddapah District	46 Taliparamba
13 Dharwar	30 Cuddapah	47. Cannanore
14. Hubli	31 Proddatur	Bellary District:
15. Byadgi	Kurnool District	48. Bellary
16 Gadag	32 Kurnool	49 Hospet
Bijapur District	33 Nandyal	[illegible]
17 Bijapur		

ASSOCIATE BANKS

The Southern India Apex Bank, Ltd., Udipi

Madras Coimbatore Calicut Tellicherry Badagara & Palghat

The Maharashtra Apex Bank, Ltd., Udipi.

Kolhapur, Sangli & Karad

The Canara Banking Corporation Limited.
(Incorporated in British India with limited Liability)
Estd 1906
Head Office UDIPI, (S K)

ANNOUNCEMENT
A branch of the Bank will be opened
at CANNANORE shortly



ರೋಕೆಟ್ ಪಾಡಕವ್ಯಾಂನನ್ನು ತುಂಬಿಸುತ್ತಿದ್ದಾರೆ

★ ವಿಜಯಪಥ ★

ಲೇಖಕ — ಜನರಲ್ ಜೆಗ್ರೀವ್, ಚಾರ್ಟೆರಿಸ್
ಮಂಚೆಸ್ಟರ್ ಗಾರ್ಡಿಯನ್‌ನ ಯುದ್ಧ ಬಾತ್ಮೀದಾರ

ಇಂಗ್ಲೀಯ ಯುದ್ಧ ಲೇಖಕರಲ್ಲಿ ಗ ನ ಗಿ ರ ದ ಇಂಗ ದ್ಧವರ ಗಾಲ ತಿಳಿಯಿದೆ ಲೇಖಕ ಬ್ರಿಟಿಷ್ ದ್ಧಿ ಯ ಎಂದು ಸಾಧಾರಣವಾಗಿ ಇದ ಇನೇ ಮೋಲೆಂಬುದನ್ನು ವನ್ನು ಸಂಗತಿ ರ ನನೇ ಯನ ಯುದ್ಧ ಧಿಸುವದೇ ಬ್ರಿಟಿಷ್ ವೈಶಿಷ್ಟ್ಯ ಇಂಗಿತ ವಿಜಯದ ರಣ ಕೊಟ್ಟಂತೆ ನೂತ, ಈ ಲೇಖಕರು ಎನ್ನುವರು ಸ್ಥಳ್ಳಲ್ಲೇ ನ್ನು ರಿಂದ ಅರಂಭ ಯುದ್ಧ ಗಿನ ವಿಜಯವನ್ನು ಬ್ರಿಟಿಷರು ಗೆಲ್ಲುವರು ಯುದ್ಧದಲ್ಲಿ

ಕಟ್ಟ ಕಡೆಗೆ ಸಂಯುಕ್ತ ರಾಷ್ಟ್ರಗಳ ಸೇನೆಗಳು ಜರ್ಮನಿಗೆ ಸೋಲನ್ನಿತ್ತಿದ್ದ ಹಾದಿಯೆಂದರೆ, ಅದು ಸುದೀರ್ಘವಾದ, ರಣಭೂಮಿಯ ಉಸುಬು, ಆರ್ಕಟಿಕಿನ ಹಿಮ, ರಶ್ಯದ ತಪ್ಪಲಿನ ಕಲ್ಲು ಮುಳ್ಳು ಮೆಟ್ಟಿಲು, ನಾರ್ಮಂಡಿಯ ಒಳ್ಳೆ —ಇವಿಷ್ಟು ಇದ್ದ ಹಾದಿ ಅದು

ಕಡೆಕಡೆಗೆ ಆ ಹಾದಿ ಕಡಿದಂತೆಯೂ ಅಗ್ನಿ ಕತ್ತಲ ಕಣಿವೆಯಲ್ಲಿ ಅಂತ್ಯಗೊಂಡಂತೆಯೂ ಕಾಣುತಿತ್ತು ಆದರೆ ಸುಪ್ರಸಿದ್ಧ ಚರ್ಚಿಲ್ ಗಡಿ ಸೇರಿದ ಮೇಲೆ, ಅದು ಸೂರ್ಯರಶ್ಮಿ ಬೀಳುತಿದ್ದ ಶಿಖರಾರೋಹಣ ವಾಯಿತು.

ನಾವು ಆ ದಿನಗಳನ್ನು ಮರೆಯುವಂತಿಲ್ಲ ಡಂಕರ್ಕಿನಂತಹ ಮುಹೂರ್ತಗಳನ್ನು-ಬ್ರಿಟನು ತನ್ನ ಸೇನೋಪಕರಣ ಮತ್ತು ಪರಬಲಾಯಿಗಳನ್ನು ಬಲಿಕೊಟ್ಟೇ ತನ್ನ ದಂಡ ಯಾತ್ರಾ ದಳದ ಅಳಿದುಳಿದ ಭಾಗವನ್ನು ಉಳಿಸಿಕೊಂಡು, ಏಕಾಕಿಯಾದರೂ ಮತ್ತೂ ಹೋರಾಡಿದ ಆ ಕಗ್ಗತ್ತಲ ದಿನಗಳನ್ನು—ನಾವು ಮರೆಯಕೂಡದು ಅಥವಾ ಕಡೆಯ ವಾಗದಲ್ಲಿ, ಜರ್ಮನ್ ಮತ್ತು ಇಟಲಿ ಸೇನೆಗಳು ಕೈರೋದ ಕೂಗಳತೆಯ ದೂರಕ್ಕೆ ಬಂದ ಆ ಕಾಲವನ್ನಾಗಲೀ-ಜರ್ಮನರು ರಶ್ಯದ ಅಗಾಧ ಶಕ್ತಿಯನ್ನು ರಭಸದಿಂದ ಪುಲ್ಲಾ ಬವರ್ಗೂ ಒಂದೊಮ್ಮೆತ್ತಾ ರಶ್ಯನ್ ರಾಜಧಾನಿಗೇನೇ ಒತ್ತುತ್ತಾ ಹೋದ ಆ ಕಾಲವನ್ನಾಗಲೀ-ನಾವು ಮರೆಯಕೂಡದು. ಅಲ್ಲಿಗೆ ಎಲ್ಲವೂ ಮುಕ್ತಾಯ

ವಿಜಯವಿಭಾಗ

ಜತೆ ಪ್ರಯತ್ನದಿಂದ ಸಂಪಾದಿಸಿದ ಈ ವಿಜಯದ ಯಶಸ್ಸನ್ನು ಹಂಚಿ ಹಾಕುವಾಗ ಪಕ್ಷಪಾತ ಮಾಡುವದರಲ್ಲಿ ಹೆಗ್ಗಳಿಕೆಯೂ ಇಲ್ಲ ಲಾಭವೂ ಇಲ್ಲ ಸಂಯುಕ್ತ ರಾಷ್ಟ್ರಗಳ ಪೈಕಿ ಪ್ರತಿಯೊಂದೂ ತನ್ನ ಪಾಲಿನ ಸಾರವನ್ನು ಅರ್ಪಿಸಿದೆ ಜರ್ಮನ್ ಸೇನೆಯ ಕೈಯಿಂದ ಹೆಬ್ಬಾಗಿಲನ್ನ ಬಿಡಿಸಿಕೊಂಡ ರಶ್ಯದ ಪ್ರಬಲ ಪ್ರಯತ್ನಕ್ಕೆ ಮುಕ್ತ ಹೃದಯದಿಂದ ಶ್ಲಾಘನೆಸಲ್ಲಿಸಲು ಬ್ರಿಟಿಷ್ ಪ್ರಧಾನಿ ಚರ್ಚಿಲರು ಎಳ್ಳಷ್ಟು ಸಂಕೋಚ ಪಡಲಿಲ್ಲ. ಅವರು ನಾತ್ರ ಜರ್ಮನಿಯ ಒಟ್ಟು ಸೈನ್ಯದ ಮೂರಂಶವು ರಶ್ಯನ್ ರಂಗಗಳಲ್ಲೇ ತಡೆಗಟ್ಟಲ್ಪಟ್ಟು ಸೋಲಿಸಲ್ಪಟ್ಟಿತೆಂಬುದನ್ನು ಮರೆತಿದ್ದರೂ ಮರೆಯುವಂತಿಲ್ಲ ಅದ

ತವಿಲ್ಲದೆ ಒಗ್ಗಿದ ಪ್ರಯತ್ನದ ಜಯದತ್ತಗೆ, ಬ್ರಿಟಿಷ್ ಕಾಮನ್ ವೆಲ್ತ್, ಹಾಗೂ ಅಮೇರಿಕಗಳ ಶಸ್ತ್ರಾಲಯ ಮತ್ತು ಕಾರ್ಖಾನೆಗಳಿಂದ ಹೊರಬಿದ್ದ ಅಪಾರ ಶಸ್ತ್ರಸಾಮಾಗ್ರಿಗಳೇ ಒದಮುಟ್ಟಿಗೆ ಕಾರಣವೆಂಬುದನ್ನು ರಶ್ಯದವರು ಅಲ್ಲಗಳೆಯುವಂತಿಲ್ಲ

ಸಂಯುಕ್ತ ಅಮೇರಿಕದ ವಿಶಾಲ ಹಗಲ ಮೇಲೆ ಶಾಂತ ಸಮುದ್ರ ಯುದ್ಧದ ಹಜ್ಜೆನ ಭಾಗ ಬಿದ್ದಿತ್ತು ಉತ್ತರ ಆಫ್ರಿಕ, ಇಟಲಿ, ಮತ್ತು ಫ್ರಾನ್ಸ್ ಯುದ್ಧರಂಗಗಳಲ್ಲಿ ಹೋರಾಡಲು ತನ್ನ ದೊಡ್ಡ ಸೇನೆಯನ್ನು ಸವ ಶಸ್ತ್ರೋಪಕರಣಗಳೊಡನೆ ಬೀಳ್ಕೊಡುವಾಗ ಜತೆಯಲ್ಲೇ ಅಮೇರಿಕವು ಆ ವಿಶೇಷ ಭಾರವನ್ನು ಹೊತ್ತುಕೊಂಡಿದ್ದಿತು ಪಶ್ಚಿಮ ರಂಗ ಯುದ್ಧದ ಕೊನೆಯ ಭಾಗದಲ್ಲಿ ಜರ್ಮನಿಗೆ ಆಘಾತ ದಯಾಗುವ ಕಾರ್ಯದ ಸರಿ ಅರ್ಧ ಪಾಲನ್ನು ಅಮೇರಿಕವು ಹೊತ್ತುಕೊಂಡಿದ್ದಿತ ಹಿಟ್ಲರನು ಯುರೋಪಿನೊಳಗೆ ಮುಂದ ಹೋಗಿರುವ 2 ವರುಷಗಳಿಗೆ ಮೊದಲು ಚೀನಕ್ಕೆ ಯುದ್ಧ ಹಿಡಿ ತ್ತು ದ್ದು ಅದು ಆ ಮೇಲಿನ ವರುಷಗಳಲ್ಲಿ ಕೂಡ ದೃಢವಾಗಿ ನಿಂತಿತು, ಎಂದೂ ಅಳುಕದ ಬ್ರಿಟಿಷ್ ಕಾಮನ್ ವೆಲ್ತ್ ಮತ್ತು ಸಾಮ್ರಾಜ್ಯವು ತನ್ನ ದೆಲ್ಲವನ್ನೂ ಕೊಟ್ಟಿತ

ಚರಿತ್ರೆಯೆಂಬುದು ಲೇಖನ ಮಾತ್ರವಾಗಿದೆ ನವರೆಗೆ ಇಡೀ ಜಗತ್ತಿನ ಕತ್ತಲೆ ಕವಿದ ಆ ಮಹೂರ್ತದಲ್ಲಿ ಬ್ರಿಟನು ತನು ಒರಿದಾಗಿದ್ದರೂ ಕೆಡದೆ, ಏಕಾಕಿಯಾಗಿ ಜರ್ಮನಿ ಮತ್ತ ಇಟಲಿಯ ಸಂಯುಕ್ತ ಸೇನೆಗಳನ್ನು ನಿಶ್ಚಲವಾಗಿ ಇದಿರಿಸಿ ನಿಂತುದನ್ನು ಮರೆಯುವದು ಅಸಾಧ್ಯ

ಹಾಗಾಗದಿರುತ್ತಿದ್ದರೆ

ಆ ಮುಹೂರ್ತದಲ್ಲಿ ಇಂಗ್ಲೆಂಡ ಪರಾಭವಗೊಳ್ಳುತ್ತಿದ್ದರೆ ಹೇಗಾಗುತ್ತಿತ್ತು ಎಂಬುದನ್ನು ಈಗ ಊಹಿಸುವದು ಪ್ರಯಾಸ ಅನಗತ್ಯ ರಷ್ಯವು ಸಂಪೂರ್ಣವಾಗದೆ ಇದ್ದ ರಶ್ಯ ಏಕಾಕಿಯಾಗಿ ಜರ್ಮನ್ ಸೇನಾ ಶಕ್ತಿ ಮೇಲ್ಗೈಯಾಗುವಂತಿಲ್ಲ ಅಗಣಿತ ಜನ ಮತ್ತು ಸಾಮಗ್ರಿ ಬಲವಿರುವ ಅಮೇರಿಕವು ಕೂಡಾ ಇದಿರು ಬೀಳಬೇಕಾದರೆ ತಯಾರಿಗಾಗಿ ಹಲವು ವರುಷಗಳ ಅವಧಿ ಬೇಕಾಗುತ್ತಿತ್ತು ಒಂದೊಮ್ಮೆಗೆ ರಶ್ಯ ಮತ್ತು ಅಮೇರಿಕಗಳು ಒಟ್ಟಾಗುತಿದ್ದರೂ, ಇಂಗ್ಲೆಂಡಿನ ನಾವೆ ಮತ್ತು ವಿಮಾನಗಳ ಸಹಾಯವಿಲ್ಲದ, ಅಮೇರಿಕದ ಸಾಮಾನು ಗಳ ರಶ್ಯವನ್ನು ಸೇರುವದು ಸಾಧ್ಯವಿತ್ತೇ ಎಂಬುದು ಅನುಮಾನಕರ. ಆದರೆ ಆ ಮುಹೂರ್ತದಲ್ಲಿ ಬ್ರಿಟನು ಚಲಿಸದೆ ನಿಂತುದರಿಂದ ಜಗತ್ತೂ ಪರಿಸ್ಥಿತಿಯನ್ನು ಇದಿರಿಸಿ ನಿಲ್ಲುವಂತಾಯಿತು. ಇಂತಹ ಇನ್ನೊಂದು ನಿದರ್ಶನ ಬೇಕಾದರೆ ನಾವು ಚರಿತ್ರೆಯಲ್ಲಿ ಬಹು ಹಿಂದಕ್ಕೆ ಹೋಗಿ, ನೆಪೋಲಿಯನ್‌ನ ಆಗಮನವನ್ನೂ ದಾಟಿ, 13ನೇ ಶತಮಾನದ ಆದಿಭಾಗ ನೋಡಬೇಕಾಗುತ್ತದ ಆ ಕಾಲದಲ್ಲಿ ಮತ್ತೂಬ್ಬ ಮಾನವ ಬೇಡ ಮೊಂಗೋಲ್ ಗೆಂಗಿಸ್‌ಖಾನನ ಇಡೀ ಏಶ್ಯಾವನ್ನು ಗೆದ್ದು, ದಕ್ಷಿಣಾಫ್ರಿಕದ ವರೆಗೂ ಮುಂದೊತ್ತಿ, ಬಾಲ್ಕನುಗಳನ್ನೂ ಹಂಗೇರಿಯನ್ನೂ ದ್ದಿದ್ದ, ಆದರೆ ಬ್ರಿಟನು ದೃಢವಾಗಿ ನಿಂತು ಬಿಟ್ಟಿತು

ಇಂಗ್ಲೆಂಡಿನ ಕಾದಾಟ

ಇಂಗ್ಲೆಂಡಿನ ಯುದ್ಧ—ವಿಮಾನ ಹಾಗೂ ಕಾರ್ಖಾನೆಗಳ ಕೆಲಸಗಾರರ ಚಾತುರ್ಯ ಮತ್ತು ತ್ಯಾಗವು—ದೇಶವನ್ನು ಉಳಿಸಿತು, ಪ್ರಪಂಚವನ್ನು ವಿಪಾತದಿಂದ ಪಾರುಮಾಡಿತು ಅದು ಪುನಃ ಸಂಘಟಿಸುವ ಮತ್ತು ಮತ್ತೊಮ್ಮೆ ಸಶಸ್ತ್ರವಾಗುವ ಸವಕಾಶವನ್ನೂ ದಗಿಸಿತ, ರಾಷ್ಟ್ರದ ಜನಸಂಪತ್ತನ್ನು ಕ್ಷಿಪ್ರಗತಿಯಿಂದ ಸೇನೆಗ ಸೇರಿಸುವ ಮತ್ತು ತರಬೇತಿಗೊಳಿಸುವ ಬಿಡುವು ದೊರೆಯಿತು ಬ್ರಿಟನಿಗೆ ವಸಾಹತು ಮತ್ತು ಸಾಮಂತ ರಾಜ್ಯಗಳ ಸೇನೆಗಳನ್ನು ತನ್ನ ಕರಾವಳಿಗೆ ಸ್ವಾಗತಿಸಿಕೊಳ್ಳುವ ಸಂದರ್ಭ ಸಿಕ್ಕಿತು, ಹಾಗೂ ತನ್ನ ಮಿತ್ರರಾಷ್ಟ್ರಗಳ ಪತನದಿಂದಾಗಿ ಸಮುದ್ರದಾಚೆಯಲ್ಲಿ ಉಳಿದು ಹೋದ ತನ್ನ ಸೇನೆಗಳನ್ನು ಅಂದಿನ ಅಗೋಚರ ಪರಿಸ್ಥಿತಿಗನುಗುಣವಾಗಿ ಹೊಂದಿಸಿಕೊಳ್ಳುವ ಅವಕಾಶವು ದೊರೆಯಿತು

ಬ್ರಿಟನಿನ ಅಸಾಧ್ಯ ಸಾಹಸ

ಅಲ್ಲಿ ಶಾಂತ ಮೊದಲಿನವರೂ, ಧೀರ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ತಾರೀಕು 18—5—1945 ರಿಂದ
ರಾಮೋಲಾ ಅಭಿನೀತ ತಲವಾರ್
ಚಿತ್ರಪಟ
ಶುಕ್ರಿಯಾ ಅಥವಾ
ಧನ್ಯವಾದ
ಬರುತ್ತದೆ:—ಸೈಗಲ್ ಅಭಿನಯಿಸಿದ ತಾನ್‌ಸೇನ್



ಜರ್ಮನಿಯಿಂದ ಶರಣಾಗತರು ಬರೆಯಿಸಿಕೊಂಡ ಕೆಲವರು—

ಈ ಚಿತ್ರದಲ್ಲಿ— ತೀರಾ ಬಲಗಡೆಯಲ್ಲಿರುವವರು—ಬ್ರಿಟಿಷ್ ವಿಮಾನ ದಳ ನಾಯಕ ಮಾರ್ಶಲ್ ಟೆಡ್ಡರ್ (ಬರ್ಲಿನ್ ಸಮ್ಮೇಲನದ ಪ್ರತಿನಿಧಿ) ತೀರಾ ಎಡಗಡೆಯಲ್ಲಿ—ಮಾರ್ಶಲ್ ಕೋನಿಂಗ್ಹಾಮ್. ಎಡಗಡೆಯಿಂದ 4ನೆಯವರು—ಜನರಲ್ ಅಲೆಗ್ಸಾಂಡರ್. ಮುಂಭಾಗದ ಸಾಲಿನಲ್ಲಿ ಬಲಗಡೆಯಿಂದ ಮೂರನೆಯವರು—ಜನರಲ್ ಈಸೆನೋವರ್ (ಪಶ್ಚಿಮ ರಂಗದ ಸರ್ವ ಸೇನಾನಿ ಮತ್ತು ರ್ಹೀಮ್ಸ್ ಸಮ್ಮೇಲನದ ಮುಂದಾಳು.) ಬಲಗಡೆಯಿಂದ 2ನೆಯವರು—ಎಡ್ಮಿರಲ್ ಕನ್ನಿಂಗ್ಹಾಮ್. ಉಳಿದವರು ಮೇಜರ್ ಜನರಲ್ ಸ್ಪಾಟ್ಸ್ (ಬರ್ಲಿನ್ ಸಮ್ಮೇಲನ ಪ್ರತಿನಿಧಿ.) ಮೇಜರ್ ಜನರಲ್ ವಾಲ್ಟರ್ ಬಿ. ಸ್ಮಿತ್ (ರ್ಹೀಮ್ಸ್ ಸಮ್ಮೇಲನದ ಪ್ರತಿನಿಧಿ.)

ಹೃದಯಿಗಳೂ ಇದ್ದುದು ಇಂಗ್ಲಂಡಿನ ಮತ್ತು ಲೋಕದ ಸುದೈವವೆನ್ನಬೇಕು. ಸ್ವರಾಷ್ಟ್ರದ ಒಳಗಡೆ ಯುದ್ಧ ಪ್ರಯತ್ನ ರಚನೆ-ಹೊರವಲಯಗಳಲ್ಲಿ ಯುದ್ಧ ಪೂರ್ವ ತಯಾರಿ-ಮಾಡಿ ಅಂದಿನ ಆತುರದಯೀ ಮಾಸಗಳಲ್ಲಿ ಎಲ್ಲಾ ರಂಗಗಳಲ್ಲೂ ಇಂಗ್ಲಂಡಿನ ಹೋರಾಟವನ್ನು ಅವರು ಸಾಗಿಸಿದರು. ಅದರ ನಾವೆಗಳು ಯು. ಬೋಟಿನ ಕಂಟಕವನ್ನಿದಿರಿಸಬೇಕಾಗಿದ್ದಿತ್ತು; ಅಂತಹ ಪರಿಸ್ಥಿತಿಯಲ್ಲೇ ಏಳು ಸಮುದ್ರಗಳ ಸಂಚಾರ ಮಾರ್ಗವನ್ನು ತೆರೆದಿಟ್ಟು ತನ್ನ ಸರಂಜಾಮು ಹಡಗಗಳ ನೈಗಾವಲು ನಡೆಸಬೇಕಿದ್ದಿತು. ಈ ಕಾರ್ಯದಲ್ಲಿ ಫ್ರಾನ್ಸಿನ ಸಶಕ್ತ ನಾವೆಗಳ ಸಹಾಯವದಕ್ಕಿದ್ದರೂ, ಸಮುದ್ರ ಮಾರ್ಗಗಳ ಜೋಡಣೆಗಳನ್ನು ಕಾಯ್ದುಕೊಳ್ಳದಿರುತ್ತಿದ್ದರೆ ಬ್ರಿಟನು ನಿರ್ನಾಮವಾಗಬೇಕಿದ್ದಿತು. ಆಫ್ರಿಕದಲ್ಲಿದ್ದ ಅದರ ಸೇನೆಯು ಸಂಖ್ಯೆ ಸಾಕಷ್ಟಿರದಿದ್ದರೂ, ತನಗಿಂತ ಎಷ್ಟೋ ಪಾಲು ಮೇಲ್ಮೈಯ್ಯಾಗಿದ್ದ ಇಟೆಲಿಯ ಅಗಾಧ ಸೇನೆಯನ್ನು ಕೊಲ್ಲಿಯಲ್ಲೇ ತಡೆದು ನಿಲ್ಲಿಸಬೇಕಾಗಿದ್ದಿತು. ಅದರ ವಿಮಾನ ಬಲವೋ? ಅದಕ್ಕೆ ಧಾಳಿನಡೆಸಲು ಬರುತಿದ್ದ ಲುಫ್ಟ್‌ವಾಫನ್ನು ಇದಿರಿಸುವ ಕಾರ್ಯ ಮಾತ್ರವಲ್ಲ—ಆಗಿನ ಏಕ ಮಾತ್ರ ಉಪಾಯವಾಗಿದ್ದ ವಿರೋಧಿ ನೆಲದ ಮೇಲೆ ಆಗಾಗ ಯುದ್ಧವನ್ನೊಯ್ಯುವ ಹೊಣೆಯೂ ಬಿದ್ದಿತ್ತು. ಈ ಎಲ್ಲಾ ಅಸಾಧ್ಯ ಕಾರ್ಯಗಳನ್ನು ಇಂಗ್ಲಂಡು ಎಷ್ಟೊಂದು ಸಮಂಜಸವಾಗಿ ಮಾಡಿದ್ದಿತೆಂಬುದೊಂದು ಚರಿತ್ರೆಯೇ ಆಗಿದೆ.

ಬ್ರಿಟನಿನ ಹೆಮ್ಮೆಯ ಕಾರ್ಯ

ಜರ್ಮನ್ ನಾವೆಗಳು ಸಮುದ್ರಗಳಿಂದ ಅಟ್ಟಲ್ಪಟ್ಟವು. ಬ್ರಿಟಿಷ್ ವೈಮಾನಿಕರೇ ಮೇಲೆಂಬುದು ಖಚಿತವಾಯಿತು; ಲೋರ್ಡ್ ವೇವೆಲರ ಸಮರ್ಥ ನಾಯಕತ್ವವು ಇಟೆಲಿಯನ್ ಸೇನೆಯನ್ನು ಕೊಲ್ಲಿಯಲ್ಲಿ ತಡೆದು ನಿಲ್ಲಿಸಿದುದಷ್ಟೇ ಅಲ್ಲ—ಮರುಭೂಮಿಯಲ್ಲಿ ತುದಿಯುದ್ದಕ್ಕೂ ಓಡಿಸಿಕೊಂಡು ಹೋಯಿತು. ಅದೇ ಸಮಯದಲ್ಲಿ ಮತ್ತೊಂದು ಸೇನೆಯು ಬ್ರಿಟಿಷ್ ಸೋಮಾಲಿ ಲೇಂಡ್ ಮತ್ತು ಪೂರ್ವಾಫ್ರಿಕದ ಇಟೆಲಿ ಸೇನೆಗಳನ್ನು ಹೊಡೆದಟ್ಟಿತು.

ಯುದ್ಧದ ಪ್ರಥಮ ಮಾಸಗಳಲ್ಲಿ ಕಲಿತ ಪಾಠಗಳನ್ನು ಇಂಗ್ಲಂಡು ಹೃದಯದೊಳಗೆ ಹೊಗಿಸಿಟ್ಟುಕೊಂಡು ತರಬೇತಿಯಲ್ಲಿ ತೀವ್ರ ಸುಧಾರಣೆ ಮಾಡಿಕೊಂಡಿತು. ಆ ತರಬೇತಿಗೆ ವಿಜಯವೇ ಸರಿಯಾದ ಪರೀಕ್ಷೆಯಾಯಿತಲ್ಲದೆ ಅಮೇರಿಕದ ಮಹಾ ಸೇನೆಗಳ ಯುದ್ಧ ತರಬೇತಿಗೂ ಇದೇ ನಿಜವಾದ ಅಸ್ತಿವಾರವಾಯಿತು.

1941ನೇ ದಶಂಬರದಲ್ಲಿ ಅಮೇರಿಕವು ಪ್ರತ್ಯಕ್ಷವಾಗಿ ಯುದ್ಧಕ್ಕಿಳಿಯುವದಕ್ಕಿಂತ ದೀರ್ಘ ಕಾಲ ಮೊದಲೇ, ಬ್ರಿಟನಿಗೆ ಶಸ್ತ್ರ ಮತ್ತು ಸಾಮಾಗ್ರಿಗಳನ್ನೊದಗಿಸುವದಕ್ಕಾಗಿ ಅದರ ಕಾರ್ಖಾನೆಗಳು ತೀವ್ರ ಗತಿಯಿಂದ ಕಾರ್ಯ ನಿರತವಾಗಿದ್ದುವು. ಜರ್ಮನಿಯು ಎಚ್ಚರಿಸದೆ ಆಕ್ರಮಿಸಿದ ಪರಿಣಾಮವಾಗಿ ರಶ್ಯವೂ, ಜಪಾನರು ಪರ್ಲ್‌ಹಾರ್ಬರಿನ ಮೇಲೆ ಘಾತುಕತನದ ಧಾಳಿ ನಡೆಸಿದುದರಿಂದ ಅಮೇರಿಕವೂ ಯುದ್ಧಕ್ಕಿಳಿದ ಮೇಲಂತೂ ಇಡೀ ಯುದ್ಧದ ರೂಪವೇ ಬದಲಾಯಿತು. ಆ ಮೇಲೆ ಸಂಯುಕ್ತ ಮಿತ್ರ ರಾಷ್ಟ್ರಗಳ ಶಕ್ತಿ ಭಂಡಾರವೆಷ್ಟು ಅಪಾರವಾಗಿ ತೋರಿತೆಂದರೆ, ಆಕ್ರಮಣ ಯುದ್ಧ ಹೊಡಲಿಕ್ಕಾಗಿ ಮಿತ್ರ ಸೇನೆಗಳನ್ನು ಸಶಸ್ತ್ರವಾಗಿ ಸಂಗ್ರಹಿಸಿಕೊಳ್ಳಲು ಸಮಯವೆಷ್ಟು ಬೇಕೆಂಬ ಒಂದು ಪ್ರಶ್ನೆ ಮಾತ್ರ ಉಳಿಯಿತು.

ಸಮಾನ ಬಾಧ್ಯತೆ

1940ರಲ್ಲಿ ಚರ್ಚಿಲ್ಲರ ಬಾಯಿಯಿಂದ ಬಂದ "ನಮಗೆ ಶಸ್ತ್ರೋಪಕರಣಗಳನ್ನು ಕೊಡಿ. [illegible] ತ್ತೇವೆ" ಎಂಬಂತಹ ಪ್ರಶ್ನೆ ಈಗ ಉಳಿಯಲಿಲ್ಲ. ಈಗ ಅದು, ಸರ್ವರಿಗೂ ಸಮಪಾಲಿನ-ಸರ್ವರೂ ಹಕ್ಕು ಪ್ರಕಾರ ತ್ಯಾಗ ಮಾಡಬೇಕಾದ-ಯುದ್ಧ ಕಾರ್ಯವಾಗಿ ಮಾರ್ಪಟ್ಟಿದ್ದಿತು.

ಕಳೆದ ಎರಡು ವರುಷಗಳ ಯುದ್ಧಗತಿಯು ಮುಂದಿನ ಚರಿತ್ರೆ ಲೇಖಕರಿಂದ ಬರೆಯಲ್ಪಡುವಾಗ, ಪ್ರಾಯಶಃ ಅದು ಮಿತ್ರ ರಾಷ್ಟ್ರಗಳ ಶಕ್ತಿ ಸಮ್ಮಿಲನ ಮತ್ತು ಏಕೋದ್ದೇಶಕ್ಕಾಗಿ ಅದನ್ನು ಪ್ರಯೋಗಿಸಿದ ರೀತಿಯ ಶ್ಲಾಘನೆಯಾಗಲಾಗಲಿದೆ. ಕಾರ್ಯಕ್ರಮ ತಯಾರಿ, ಮುಂಜಾಗ್ರತೆ, ಮತ್ತು ಅತ್ಯಾಳದ ಸಿದ್ಧತೆಗಳೇ ಮಿತ್ರರಾಷ್ಟ್ರೀಯರ ಪ್ರತಿಯೊಂದು ಯುದ್ಧ ಕಾರ್ಯದ ಮೂಲ ಸೂತ್ರಗಳಾಗಿದ್ದುವು. ರಶ್ಯದ ಅಗಾಧ ಜನಬಲವು ಪೂರ್ಣ ಸುಸಜ್ಜಿತವಾಗುವಂತೆ ಮಾಡಲು [illegible] ಬ್ರಿಟಿಷ್ ವಸಾಹತು ಮತ್ತು ಸಾಮ್ರಾಜ್ಯಗಳು ಸ್ವಲ್ಪವೂ ಗೊಣಗದೆ ತಮ್ಮ ಉದ್ಯಮೋತ್ಪತ್ತಿಗಳ ಸಹಾಯವನ್ನು ಸಲ್ಲಿಸಿದ್ದುವು. ರಶ್ಯದ ಪೂರ್ವಗಡೆಯಲ್ಲಿರುವ ರೈಲ್ವೆಯೊಂದಿಗೆ ಜೋಡಣೆ ಮಾಡಲು ಪರ್ಶಿಯನ್ ಅಖಾತದಿಂದ ಹೊಸ ರೈಲ್ವೇ ಲೈನು ಕಟ್ಟಲ್ಪಟ್ಟಿತು. ಅದೇ ಸಮಯದಲ್ಲಿ ಉತ್ತರ ರಶ್ಯದ ಬಂದರಗಳಿಗೆ ಸಾಲುಸಾಲಾಗಿ ಹಡಗಗಳು ಸಾಗುವಂತೆ ಬೇರೆಂಟ್ಸ್‌ನ ಸಮುದ್ರದಲ್ಲಿ ಹಾದಿ ಸಂಪಾದಿಸಿಕೊಂಡು ಅದನ್ನು ದಕ್ಕಿಸಿಕೊಳ್ಳಲಾಯಿತು. ಈ ಕಾರ್ಯವಾದರೋ ಯು. ಬೋಟುಗಳ ಅವಿಶ್ರಾಂತ ಧಾಳಿ ಮತ್ತು ಆರ್ಕ್‌ಟಿಕಿನ ಬಿರುಗಾಳಿಯನ್ನಿದಿರಿಸಿ ನಡೆಯಿತು. ಸುರಕ್ಷಿತ ರಶ್ಯವು ಆನಂತರವೇ ತನ್ನ ನೆಲದಿಂದ ಆಕ್ರಮಣಗಾರರನ್ನು ಓಡಿಸುವದು ಖಚಿತವಾಯಿತು ಅಷ್ಟಕ್ಕೆ ನಿಲ್ಲಲಿಲ್ಲ. ಪೂರ್ವಗಡೆಯಿಂದ ರಶ್ಯವು ಕೊಡುತ್ತಿರುವ ತಾಡನೆಗನುಕೂಲವಾಗಿ, ಅದೇ ಕಾಲದಲ್ಲಿ ದಕ್ಷಿಣ ಪಶ್ಚಿಮ ದಿಕ್ಕುಗಳಿಂದಲೂ ಆಕಾಶದಿಂದಲೂ ಬ್ರಿಟನ್ ಅಮೇರಿಕಗಳ ಸಂಯುಕ್ತ ಹೊಡೆತ ಬೀಳುತಿತ್ತು. ಇದಕ್ಕೆ ಹೊಂದಿಕೆಯಾಗಿ ಜರ್ಮನಿಯಿಂದ ಆಕ್ರಮಿಸಲ್ಪಟ್ಟ ರಾಷ್ಟ್ರಗಳ ಸಹಾಯವೂ ಗಣನೆಗೆ ಸಿಕ್ಕಿತು.

ಆಕ್ರಮಣಾರಂಭ

ಆಕ್ರಮಣದ ರೀತಿ ನೀತಿಗಳನ್ನು ರೂಪಿಸುವ ಅನುಭವ ಸಂಪಾದನೆಗಾಗಿ ಪರೀಕ್ಷಾರ್ಥ ದಂಡಯಾತ್ರೆಗಳನ್ನು ಮಾಡಿ ನೋಡಲಾಯಿತು. ತಯಾರಿ ಪೂರ್ಣಗೊಂಡೊಡನೆ ಚುನಾಯಿಸಿ [illegible] ಬ್ರಿಟಿಷ್ ಸೇನೆ ಮತ್ತು ಅತ್ಯುತ್ತಮ ತರಬೇತಿಯ ಅಮೇರಿಕನ್ ಸೇನೆಗಳ ಸಮಿಶ್ರ ಮಿತ್ರ ದಳವು ಜನರಲ್ ಈಸೆನೋವರರ ನಾಯಕತ್ವದಲ್ಲಿ ಉತ್ತರಾಫ್ರಿಕದ ಮಹಾಕ್ರಮಣ ಪ್ರಾರಂಭಿಸಿತು. ಇದಕ್ಕೆ ಹೊಂದಿಕೆಯಾಗಿ ಜ. ಮೋಂಟಗೋಮೆರಿಯವರ ನಾಯಕತ್ವ ಮತ್ತು ಜನರಲ್ ಅಲೆಕ್ಸಾಂಡರರ ಸರ್ವ ಸೇನಾನಿತ್ವದಲ್ಲಿ ಈಜಿಪ್ಟ್ ಮತ್ತು ಅಲ್ಜೀರಿಯಾಗಳಿಂದಲೂ ಮಿತ್ರಸೇನೆ ಲಗ್ಗೆ ಹತ್ತಿತು. ಈ ಯುದ್ಧವು ಪ್ರತಿಯೋರ್ವ ಜರ್ಮನ್ ಮತ್ತು ಇಟೆಲಿ ಯೋಧನಿಗೆ ಮರಣ ಇಲ್ಲವೇ ಬಂಧನವನ್ನೊಡ್ಡಿ ಕೇಪ್‌ಬೋನ್‌ನಲ್ಲಿ ವಿಜಯ ಪರ್ಯವಸಾನಗೊಂಡಿತು! ಈ ಅಸದೃಶ ಸೇನಾ ನಾಯಕತ್ವದಲ್ಲೇ ಪ್ರಥಮತಃ ಸಿಸಿಲಿಯ ಆಕ್ರಮಣ ನಡೆಯಿತು. ಸ್ವಲ್ಪ ಕಾಲಾನಂತರ ಇಟೆಲಿಯ ಮೂಲ ನೆಲವೂ ಆಕ್ರಮಿಸಲ್ಪಟ್ಟು ಇಟೆಲಿಯನ್ನು ಯುದ್ಧದಿಂದ ಹೊರಗಟ್ಟಲಾಯಿತು. ಪಶ್ಚಿಮ ಕಡೆಯಿಂದ ನಾಜೀ ಆಕ್ರಮಿತ ಯುರೋಪನ್ನಾಕ್ರಮಿಸುವ ಕಾಲ ಪಕ್ವವಾದುದು ಆಗ-ಆಗ ಮಾತ್ರ.

ಈ ಕಾರ್ಯಾವಶ್ಯ ಸೇನೆಗಳು ಜನರಲ್ ಈಸೆನೋವರರ ಪ್ರಮುಖ ಸೇನಾನಿತ್ವದಲ್ಲಿ ಇಂಗ್ಲಂಡಿನಲ್ಲಿ ಜಮೆಗೊಂಡವು. ಲೆಫ್ಟಿನೆಂಟ್ ಕರ್ನಲ್ ಎಫ್. ಇ. ಮೋರ್ಗನರ ಕೈಕೆಳಗಿನ ಯುದ್ಧ ಮಾರ್ಗಜ್ಞ ಮಂಡಲವು ಧಾಳೀ ಕಾರ್ಯಕ್ರಮದ ಕೊನೆಯ ಭಾಗವನ್ನೂ ತಯಾರಿಸಿ ಆಗ ತಾನೇ ಮುಗಿಸಿದ್ದಿತು. ಈ ಸಂದರ್ಭದಲ್ಲಿ ಉತ್ತರಾಫ್ರಿಕದ ಮತ್ತು ಯುರೋಪಿನ ಮಿಶ್ರ ರಾಷ್ಟ್ರೀಯ ಯುದ್ಧ ಕಾರ್ಯಕಾರೀ ಮಂಡಲದ ಕುರಿತು ಒಂದು ಮಾತು ಹೇಳುವುದು ಅಗತ್ಯ. ಮಿತ್ರ ಸೇನೆಗಳ ಚರಿತ್ರೆಯಲ್ಲೇ ಕಾಣಸಿಗದ ಅಪೂರ್ವ ಸಂಗತಿ ಇಷ್ಟೆ: ಮುಖ್ಯ ಯುದ್ಧ ಕಾರ್ಯಾಲಯದ ಇಡೀ ಕಾರ್ಯಕಾರೀ ಮಂಡಲಿ, ಮತ್ತು ಅದರ ಪ್ರತಿಯೊಂದು ವಿಭಾಗವೂ ಅಕ್ಷರಶಃ ಜತೆ ಕೂಟವಾಗಿದ್ದಿತು. ಬ್ರಿಟಿಷ್ ಮತ್ತು ಅಮೇರಿಕಾನೆಂಬ ಭೇದವಲ್ಲಿರಲಿಲ್ಲ.

ವಿರೋಧಿ ಟೇಂಕು ಮತ್ತು ಸಾಮಗ್ರಿ ಸರಬರಾಯಿ ಪದಗಳನ್ನು ಕಡಿದುಹಾಕಿದ್ದ ಬ್ರಿಟಿಷ್ ವೈಮಾನಿಕರು

ಹಿಟ್ಲರ್ ಏನಾದ?

× ಬರ್ಲಿನ್ ಸೇನಾನಿಯಾಗಿ ಮುಂಭಾಗಕ್ಕೆ ಒಂದು ನಿಂತನೆಂದು ಏಪ್ರಿಲ್ 23ರಲ್ಲಿ ಗೋಬೆಲ್ಸ್ ಘೋಷಿಸಿದ

× ಪ್ರಾಣಾಪಾಯ ಸ್ಥಿತಿಯಲ್ಲಿದ್ದು ಇನ್ನು 48 ಘಂಟೆ ಬದುಕಲಾರನೆಂದು ಏ. 29ರಲ್ಲಿ ಹಿಮ್ಲರ್ ಸೂಚಿಸಿದ

× ಹಿಮ್ಲರನು ಹಿಟ್ಲರನನ್ನು ಗುಂಡಿಟ್ಟು ಕೊಲ್ಲಿಸಿದನೆಂದು ಏ 29ರಲ್ಲಿ ವಾರ್ತೆ ಬಂತು.

× ಯುದ್ಧರಂಗದಲ್ಲೇ ಮಡಿದು ಬಿದ್ದನೆಂದು ಮೆ 1ರಲ್ಲಿ ಜರ್ಮನ್ ರೇಡಿಯೋ ಸಾರಿತು.

ಅಂದಿನಿಂದ

× ಮುಂದಿನ ಕೂಟ ಯುದ್ಧಕ್ಕಾಗಿ ತಲೆ ಮರೆಸಿಕೊಂಡಿದ್ದಾನಲ್ಲದೆ ಆತ ಸತ್ತಿಲ್ಲವೆಂದು ಮೋಸ್ಕೋ ರೇಡಿಯೋ ಘೋಷಿಸಿತು

× ಹಿಟ್ಲರ್ ಮತ್ತು ಗೋರಿಂಗರು ಬರ್ಲಿನಿನಲ್ಲಿ ಆತ್ಮಹತ್ಯೆ ಮಾಡಿಕೊಂಡರೆಂದು ಸೆರೆ ಸಿಕ್ಕಿದ ಜರ್ಮನರು ಹೇಳಿದರು

× ಆತನು ರಣರಂಗದಲ್ಲೇ ಸತ್ತು; ಅಥವಾ ಘಾಯದಿಂದ ಇಲ್ಲವೇ ರೋಗದಿಂದ ನರಳಿ ಸತ್ತ. ಹೊರತು ಆತ್ಮಹತ್ಯೆ ಮಾಡಿಕೊಳ್ಳುವುದಾಗಲೀ ಪರಾರಿಯಾಗುವುದಾಗಲೀ ಅವನ ಸ್ವಭಾವಕ್ಕೆ ವಿರುದ್ಧವೆಂದು ಕೈದಿ ರುಂಡಸ್ಟೆಡ್ ಹೇಳಿದ

× ಬರ್ಲಿನಿನ ನಾಜೀ ಮುಖ್ಯಾಧಿಕಾರಿ ಗೃಹದಡಿ ಗೋಬೆಲ್ಸ್ ಮತ್ತು ಹಿಟ್ಲರನ ನಾಲ್ವರು ಪ್ರತಿರೂಪಿಗಳ ಶವದೊರೆತರೂ ಹಿಟ್ಲರನದು ದೊರೆತಿಲ್ಲವೆಂದು ರಶ್ಯಾನರು ಸಾರಿದರು.

× ಗೋಬೆಲ್ಸನ ಕೋಣೆಯಲ್ಲಿ ಹಿಟ್ಲರನನ್ನು ಅಡಗಿಸಿಡುವ ಹಂಚಿಕೆಯ ರಿಕಾರ್ಡು ದೊರೆಯಿತೆಂದು ಕೆಂಪು ಯೋಧರು ಘೋಷಿಸಿದರು.

× ಸ್ವೀಡನಿನಿಂದ ಆಯರ್ಲೆಂಡಿಗೆ ನಾಜೀ ಗುಪ್ತ ವಿಮಾನವೊಂದರಲ್ಲಿ ಮೂವರು ಬಂದಿಳಿದರೆಂದೂ ಅದರಲ್ಲಿ ಹಿಟ್ಲರಿದ್ದಿರಬೇಕೆಂದೂ ವಾರ್ತೆ ಬಂತು.

× ಹಿಟ್ಲರ್ ನಿಜಕ್ಕೂ ಸತ್ತಿದ್ದಾನೆಂದು ತನಗೆ ಖಾತ್ರಿ ಮಾತ್ರ ಬಂದಿದೆಯೆಂದು ಅಧ್ಯಕ್ಷ ಟ್ರುಮೇನರಂದರು.

× ಹಿಟ್ಲರ್ ಸತ್ತ ಸಂಬಂಧ ಕುರಿತು ನನಗೆ ಸಂದೇಹವಿದೆ ಎಂದು ಸ್ಟಾಲಿನರು ಸತ್ತರೆ ಎಂದರು.

× ಬೇರೇನೂ ಆಗಿಲ್ಲ. ಬರ್ಲಿನಿನ ಮುಖ್ಯಾಲಯದಲ್ಲಿದ್ದಂತೆಯೇ ರಶ್ಯನರ ಫಿರಂಗಿ ಹೊಡೆತದಿಂದ ಆ ಕಟ್ಟಡದೊಂದಿಗೆ ಉರುಳಿ ಬಿದ್ದು ಆಳದ ಮಣ್ಣಿನೊಡನೆ ಮಿಶ್ರವಾಗಿ ಹೋದ ಎಂದು ರಶ್ಯಾನರಿಗೆ ಸೆರೆ ಸಿಕ್ಕಿದ ಜರ್ಮನರಂದರು

× ಟೋಕಿಯೋವಿಗೆ ಓಡಿ ಹೋಗಿರಬೇಕೆಂದು ವಾರ್ತೆಯಿದೆ

× ಬರ್ಲಿನ್ ಸಮೀಪದ ಪರ್ವತ ಬುಡದಲ್ಲಿ ಕೆಲಕಾಲಕ್ಕೆ ಮೊದಲೇ ಗವಿ ತೋಡಿ ಸಿದ್ಧತೆ ಮಾಡಿದ್ದುದರಿಂದ ಅಲ್ಲಿರಬೇಕು ಎನ್ನುವ ಸುದ್ದಿಯೂ ಬರುತ್ತಿದೆ.

ಈ ಪ್ರೇತ ಪೀಡೆ ಹೇಗೆ ಪರಿಹಾರ?

ALWAYS

For Grace & Economy

Durable & Fast Coloured

P. A. PAI SAREES,

MANIPAL TEXTILES

Sales Department —

Ramakrishna Buildings,

UDIPI. S. K.

ಈ ಶಕುನ ಫಲವೇನು?

× ರ್ಹೀಮ್ಸಿನಲ್ಲಿ ಶರಣು ಕರಾರಿಗೆ ಜರ್ಮನರು ಸಹಿಹಾಕಿದುದು ತಾ. 7ರ ಮೊದಲ ಮಧ್ಯರಾತ್ರಿಯಲ್ಲೇ.

× ಬರ್ಲಿನಿನಲ್ಲಿ ಶರಣು ಕರಾರಿನ ದೃಢೀಕರಣ ನಡೆದುದು ತಾ 8ರ ನಡುರಾತ್ರಿಯಲ್ಲೇ.

× ರ್ಹೀಮ್ಸಿನಲ್ಲಿ ಸಭೆ ಸೇರಿದುದು ಒಂದು ಸಣ್ಣ ಔದ್ಯೋಗಿಕ ಶಾಲಾ ಕಟ್ಟಡದಲ್ಲಿ.

× ಬರ್ಲಿನಿನ ಸಭೆ ಸೇರಿದುದೂ ಅಲ್ಲಿಯ ಟೆಕ್ನಿಕಲ್ ಕಾಲೇಜಿನ ಕಟ್ಟಡದಲ್ಲೇ

× ಜನರಲ್ ಐಸೆನೋವರರು ಶರಣು ಕರಾರಿಗೆ ಸಹಿಹಾಕುವ ಉದ್ದೇಶದಿಂದಲೇ ಉತ್ತರಾಫ್ರಿಕೆಯ ಯುದ್ಧಾರಂಭದಿಂದ ಸುವರ್ಣ ಮೊನೆಯ ಫೌಂಟನ್ ಪೆನ್ನೊಂದನ್ನು ತಯಾರಿಸಿಕೊಂಡಿದ್ದರು

× ರ್ಹೀಮ್ಸಿನಲ್ಲಿ ಶರಣು ಸಹಿ ಹಾಕುವ ಕಾರ್ಯ ಮುಗಿಯುವ ವರೆಗೂ ಜ. ಐಸೆನೋವರರು ಮುಂದೆ ಬರಲಿಲ್ಲ

× ಸಹಿಹಾಕಲು ಬರುವಾಗ ಜರ್ಮನ್ ಪ್ರತಿನಿಧಿ ಜನರಲ್ ಜೋಡ್ಲರು ನಿಸ್ತೇಜ ಮುಖಿಯಾಗಿದ್ದರೂ ನಡೆಯುವಾಗ ಅಹಂಕಾರ ಪ್ರದರ್ಶಿಸಿದ್ದರು

× ಶರಣು ಸಮಾರಂಭ ನಡೆಯುವಾಗ ಇಂಗ್ಲಾಂಡು ರಶ್ಯಗಳ ವಿದೇಶ ಮಂತ್ರಿಗಳು ತಂತಮ್ಮ ದೇಶಗಳಲ್ಲಿರದೆ ಸಾನ್ ಫ್ರಾನ್ಸಿಸ್ಕೋವಿನಲ್ಲಿದ್ದರು.

× ಇಂಗ್ಲಾಂಡಿನಲ್ಲಿ ವಿಜಯೋತ್ಸವ ನಡೆದಷ್ಟು ಸಂಭ್ರಮದಿಂದ ಅಮೇರಿಕ, ರಶ್ಯಗಳಲ್ಲಿ ನಡೆದಿರಲಿಲ್ಲ

× ಸೋವಿಯೆಟ್ ರಶ್ಯದಲ್ಲಂತೂ ಸ್ವೀಯ ವಿಜಯವೊಂದನ್ನು ಪಡೆದಷ್ಟೇ ಸಂಭ್ರಮ ಪ್ರದರ್ಶನವಾಯಿತು.

× ವ್ಯಕ್ತಿಶಃ ಹಿಟ್ಲರನ ಕುರಿತು ಚರ್ಚಿಲ್, ಟ್ರುಮೇನ್, ಸ್ಟಾಲಿನರು ಒಂದೇ ಒಂದು ಶಬ್ದವುಚ್ಚರಿಸಲಿಲ್ಲ

× ಡೊಮಿನಿಯನ್ನುಗಳಾಗಲೀ, ಇತರ ನಾಜೀ ಪಕ್ಷಪಾತಿಗಳಾಗಲೀ ಮೃತ ಹಿಟ್ಲರನಿಗೆ ಸಲ್ಲಿಸಬೇಕಾದಷ್ಟು ಗೌರವವನ್ನು ಸಲ್ಲಿಸಲಿಲ್ಲ

× ಹಿಟ್ಲರನ ಮರಣ, ಜರ್ಮನಿಯ ಪರಾಭವಗಳಿಗಾಗಿ ಜರ್ಮನರು ಶೋಕ ಪ್ರದರ್ಶಿಸಿದ ವಾರ್ತೆಯಿಲ್ಲ.

× ಝೆಕೊಸ್ಲೊವೇಕಿಯದ ಜರ್ಮನ್ ಸೇನಾನಾಯಕನು ಕಠೋರ ಛಲ ಹಿಡಿದು ರಶ್ಯನ್ ಸೇನೆಗಳನ್ನು ಇನ್ನೂ ಪ್ರಬಲವಾಗಿ ಪ್ರತಿಭಟಿಸುತ್ತಿದ್ದಾನೆ.

× ಎಲ್ಲರೂ ಮೌನವಾಗಿರುವಾಗ ಬ್ರಿಟಿಷ್ ಕಾಮನ್‌ವೆಲ್ತಿನೊಳಗಿದ್ದ ಆಯರ್ಲೆಂಡಿನ ಡಿವೆಲೆರರು ಮಾತ್ರ ಹಿಟ್ಲರ್ ಮರಣಕ್ಕಾಗಿ ನಿಸ್ಸಂಕೋಚದಿಂದ ದುಃಖ ಸೂಚಿಸಿದ್ದಾರೆ

× ಚರ್ಚಿಲ್ಲರು ಡಿ. ವೆಲರರನ್ನು ನೇರವಾಗಿ ಆರೋಪಿಸಿ ಕಠಿಣ ಮಾತುಗಳಿಂದ ಖಂಡಿಸಿದ್ದಾರೆ.

ಇನ್ನೂ ಲೋಕಶಾಂತಿಯಿಲ್ಲವೆ?

'ಹುಚ್ಚು ಕರ್ನಲ್' ಎಂದು ಪ್ರ...
ಕ್ರೂರಾಗ್ರಗಣ್ಯ ನಾಜೀ ಕ...
ವೋನ್ ಜಾಲೊ...
ಅಮೆರಿಕನ್ ಯೋಧರ ನಡುವೆ
ಕೈದಿಯಾಗಿ ಬರುತ್ತಿದ್ದಾನೆ.

ಫೀಲ್ಡ್ ಮಾರ್ಶಲ್ ಸರ್. ಅಲನ್ ಬ್ರೂಕೆ, ಪ್ರಧಾನಿ ಚರ್ಚಿಲ್. ಮೊಂಟಿಗೋಮರಿ. ಜನರಲ್ ಸ್ಮಟ್ಸ್



ಬ್ರಿಟಿಷರ ಹೊಸ ಮಾದರಿಯ 'ಗುರಿದರ್ಶಕ' ಯಂತ್ರ, ವಿಮಾನಗಳ ಉಪಯುಕ್ತ ಉಪಕರಣ.



ಜರ್ಮನಿಯ ಮೇಲೆ ಧಾಳಿಯಿಡಲು ಬ್ರಿಟಿಷ್ ವಿಮಾನಕ್ಕೊಳಗಡೆ ಬಾಂಬು ತುಂಬಿಸುತ್ತಿದ್ದಾರೆ.

ಬ್ರಿಟನಿನಲ್ಲಿ ತರಬೇತಿ ಪಡೆಯುತ್ತಿದ್ದ ಟರ್ಕಿಯ ವೈಮಾನಿಕರು.



೩೦ ಭಾಗಗಳುಳ್ಳ ಬ್ರಿಟಿಷರ ಅಸಾಧ್ಯ ಮೊನೋಪ್ಲೇನ್ ಆಕಾಶಯಾನ 'ಹೊರ್ಸಾ ಗ್ಲೈಡರ್'.

ದಕ್ಷಿಣ ಕನ್ನಡ

ಉಡುಪಿ

ಟೀಪಾರ್ಟಿ-ಶ್ರೀ. ಪಿ. ಪಿ ಪ್ರಭುಗಳ ಸುಪುತ್ರಿಯ ವಿವಾಹದ ಸಂಬಂಧ, ಶ್ರೀ ಕೊಟ್ಟಾರಿ ನರಸಿಂಹ ಪೈಗಳು ತಮ್ಮ ನಿವಾಸದಲ್ಲಿ ತಾ 14 5 45ನೇ ಸಂಜೆ ಸಾಯಂಕಾಲ ಸೇರಲ್ಪಟ್ಟ ಅತಿಥಿಗಳಿಗೆ ಉಪಾಹಾರದ ಸತ್ಕಾರ ನಡೆಸಿದರು. ಮೈಸೂರು ಸಂಗೀತಗಾರರಿಂದಲೂ ಸಾಂತ್ವನಗಳು ಬಂದಿದ್ದುವು

ಕೆನರಾ ಮ್ಯೂಚುವಲ್ ಫ್ರೀ ರೀಡಿಂಗ್ ರೂಮು-ತಾ 14ರಲ್ಲಿ ಕೊಲ್ಲೂರಿನ ಶ್ರೀ ಬಾಗಿಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು ಡಾ। ಮಾಧವ ಪೈಗಳು ಅಧ್ಯಕ್ಷರ ಪರಿಚಯ ಮಾಡಿಕೊಟ್ಟು ಈ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ಪ್ರಯೋಜನವನ್ನು ಪಡೆಯುವಂತೆ ಕೇಳಿಕೊಂಡ ಮೇಲೆ ಅಧ್ಯಕ್ಷರ ಭಾಷಣವಾಯಿತು ರೆ. ಫಾ. ಪಿಂಟೋರವರು ವಾಚನಾಲಯವನ್ನು ತೆರೆಸಿದರು.

ವಿಜಯ ದಿನಾಚರಣೆ ಯು ತಾ 14ರಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ನಗರದ ಬೀದಿ ಬೀದಿಗಳಲ್ಲಿ ತಳಿರು ತೋರಣಗಳು ಕಟ್ಟಲ್ಪಟ್ಟಿತು ಮಧ್ಯಾಹ್ನ ಸಾವಿರಾರು ಬಡಬಗ್ಗರಿಗೆ ತಾಲೂಕು ಕಚೇರಿಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು ಸಂಜೆ ಪ್ರಚಂಡ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ತಾಲೂಕು ಕಚೇರಿಯ ವಠಾರದಲ್ಲಿ ಮಿ। A S. ಕಾಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಬಿ ರಾಮರಾಯ ಶೆಟ್ಟಿ, ಉಸ್ಮಾನ್ ಸಾಹೇಬ್, ಕೆರೋಡಿ ನರಸಿಂಗ ರಾವ್ ಮೊದಲಾದವರು ವಿಜಯೋತ್ಸವದ ಕುರಿತು ಭಾಷಣ ಮಾಡಿದರು. ತಹಸೀಲ್ದಾರರೇ ಮೊದಲಾದ ಸರಕಾರಿ ಅಧಿಕಾರಿಗಳು ಈ ಬಗ್ಗೆ ಉತ್ಸಾಹ ಪರ ಕೆಲಸ ಮಾಡಿದ್ದರು

ಮಳೆ-ಇತ್ತೀಚೆಗೆ ವಿಶೇಷ ಸೆಖೆಯಿದ್ದು ತಾ 15ನೇ ರಾತ್ರಿ ಸಾಧಾರಣ ಮಳೆ ಬಂದುದರಿಂದ ನೀರಿನ ತುಟ್ಟಿ ಕುಸು ಕಡಿಮೆಯಾಗುವಂತಾಯಿತು

ಯುವರ್ಣಾಳು ಜೀರ್ಣೋದ್ಧಾರ ಶ್ರೀ ಜನಾರ್ದನ ದೇವರ ಗರ್ಭಗೃಹವು ಬಹಳ ಜೀರ್ಣವಾಗಿದ್ದುದನ್ನು ಕಂಡು ಇಲ್ಲಿಯ ನಿವಾಸಿಗಳಾದ ಗುತ್ತಾರ ಪೂರ್ಣಯ್ಯನವರು ಭಗವತ್ತ್ ಪ್ರೇರಣೆಯಿಂದ ತನ್ನ ತಂದೆಯವರ ಮರಗೂಡಿಗೂಂಡು ಶಿಲಾದಿಗಳಿಂದ ಉತ್ತಮ ರೀತಿಯಲ್ಲಿ ರಾಜ್ಯವಾಗಿರಲು ಅನುಕೂಲವಾಗುವಂತೆ ಅಂದಾಜು ರೂ 50000 0 0 ಐವತ್ತು ಸಾವಿರದ ಖರ್ಚಿನಿಂದ ಜೀರ್ಣೋದ್ಧಾರ ಮಾಡಿಸಿದರು. ಪೂರ್ಣಯ್ಯನವರಿಂದ ನೂತನವಾಗಿ ನಿರ್ಮಿತವಾದ ಗರ್ಭಗೃಹದಲ್ಲಿ ತಾ. 13 5 45ರಲ್ಲಿ ಉಡುಪಿ ಶ್ರೀ ಫಲಿಮಾರು ಮಠದ ಶ್ರೀ ಸುಪ್ರಸನ್ನ ತೀರ್ಥ ಶ್ರೀಪಾದಂಗಳವರು ಶ್ರೀ ಜನಾರ್ದನ ದೇವರ ಪ್ರತಿಷ್ಠಾ ಕಾರ್ಯ ನೆರವೇರಿಸಿ ಶ್ರೀ ವಾಸುದೇವ ಸಾಲಿಗ್ರಾಮ ಸ್ಥಾಪನಾ ಪೂರ್ವಕ ಪೂಜಾ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ಜೀರ್ಣೋದ್ಧಾರ ಕರ್ತೃಗಳಾದ ಪೂರ್ಣಯ್ಯ ಮತ್ತು ಸಹೋದರರ ತಥಾ ಊರವರ ಶ್ರೇಯಃ ಸಂಪ್ರಾರ್ಥನೆಯನ್ನು ಮಾಡಿ ಪೂರ್ಣಯ್ಯ ಸಹೋದರರಿಗೂ ನೆರೆದ ಊರಿನ ಭಕ್ತವರ್ಗಕ್ಕೂ ಪ್ರಸಾದವಸ್ತ್ರ ಅನುಗ್ರಹಿಸಿದರು.

ಮಂಗಳೂರು

ಜಿಲ್ಲಾ ರಾಷ್ಟ್ರೀಯ ಯುದ್ಧ ಮುಖದ ಆಶ್ರಯದಲ್ಲಿ ತಾ. 14ರಂದು ವಿಜಯ ದಿನಾಚರಣೆ ಮಂಗಳೂರಲ್ಲಿ ಆಚರಿಸಲ್ಪಟ್ಟಿತು. ಅಂದು ವೆಂಕಟ್ರಮಣ ದೇವಸ್ಥಾನ, ಗೋಕರ್ಣನಾಥ ದೇವಸ್ಥಾನ, ರಾಮಕೃಷ್ಣ ವಿದ್ಯಾರ್ಥಿಭವನ. ಮಿಲಾಗ್ರಿಸ್ ಇಗರ್ಜಿ, ಬೋಳೂರು ಮಾರಿಯಮ್ಮ ಗುಡಿ ಮೊದಲಾದ ಸ್ಥಳಗಳಲ್ಲಿ ಸುಮಾರು 10 ಸಾವಿರ ಬಡಜನರಿಗೆ ಊಟ ಹಾಕಲಾಯಿತು ಆಸ್ಪತ್ರೆ, ಅನಾಥಾಲಯ, ಜೈಲು ಮುಂತಾದ ಕಡೆಗಳಲ್ಲಿ 3 ಸಾವಿರ ಜನರಿಗೆ ಲಾಡು ಹಂಚಲಾಯಿತು ಈ ಪಂಚಮ ಕಾರ್ಯದಲ್ಲಿ ನಗರದ ಹಲವಾರು ಮಹಿಳೆಯರು ಭಾಗವಹಿಸಿದ್ದರು.

ಸಂಜೆಗೆ ನೆಹರೂ ಮೈದಾನದಲ್ಲಿ ಜಿಲ್ಲಾ ಕಲೆಕ್ಟರರ ಪಿ ರಾಮದಾಸ ಅವರ ಅಧ್ಯಕ್ಷತೆಯಲ್ಲಿ ಸಭೆಯು ಜರಗಿತು. ತಳಿರು-ತೋರಣಗಳಿಂದಲೂ, ಧ್ವಜಗಳಿಂದಲೂ ಸಭಾಮಂಟಪವು ಅಲಂಕೃತವಾಗಿತ್ತು ಅಮೇರಿಕದ ನಕ್ಷತ್ರಗಳಿಂದ ಕೂಡಿದ ಬಾವುಟ, ಇಂಗ್ಲಾಂಡಿನ ಯೂನಿಯನ್ ಜಾಕ್, ರಷ್ಯಾದ ಕೆಂಪು ಬಾವುಟಗಳು ಎತ್ತರದಲ್ಲಿ ಹಾರುತಿದ್ದುವು ವಿದ್ಯುದ್ದೀಪಗಳಿಂದ ಮಂಟಪದ ಶೋಭೆಯು ಇನ್ನಷ್ಟು ಹೆಚ್ಚಾಯಿತು

ಸಭಾರಂಭದಲ್ಲಿ ರಿಜರ್ವ ಪೋಲೀಸರ ಕವಾಯತಿನ ನಂತರ ಕಲೆಕ್ಟರರ ದರ್ಬಾರಿನಲ್ಲಿ ಶ್ರೀ ಕೃಷ್ಣಯ್ಯನವರಿಗೆ ರಾವ್ ಸಾಹೇಬ ಸನ್ನದು ಮೊದಲೂ ಕೊಡಲಾಯಿತು. ಈ ಸಮಾರಂಭದ ಮೊದಲು ಕಲೆಕ್ಟರರು ಶ್ರೀ ಕೃಷ್ಣಯ್ಯನವರ ಗುಣ ಕಥನ ಮಾಡಿದರು ಕೃಷ್ಣಯ್ಯನವರು ಅದಕ್ಕೆ ಉತ್ತರವಿತ್ತರು

ಆ ಮೇಲೆ ವಿಜಯ ದಿನಾಚರಣೆಯ ಸಮಾರಂಭದ ಮೊದಲು ಶ್ರೀ ಎಚ್ ಜಿ. ಕೆಧಿಲಾಯರು ತಾವು ಬರೆದ ಆಂಗ್ಲ ಕವಿತೆಯನ್ನು ಓದಿದರು ಆ ಮೇಲೆ ಮಂಗಳೂರಿನ ಬೋರ್ಡ್ ಬಿಷಪ್ಪರು, ಜನಾಬ್ ಅಬ್ದುಲ್ ರಹೀಮ ಅಹಮ್ಮದ್, ಸಿ ಎಲ್. ಲೋಬೋ ಕೆ ಸದಾನಂದ ಹೆಗ್ಡೆ ಮುಂತಾದವರು ಮಾತನಾಡಿದರು ಕಲೆಕ್ಟರರು ತಮ್ಮ ಅಧ್ಯಕ್ಷ ಭಾಷಣ ಮಾಡಿದ ಮೇಲೆ ಶ್ರೀ ಎಂ. ಕೆ ನಂಬಿಯಾರ್ ಅವರು ವಂದನೆಗಳನ್ನು ಅರ್ಪಿಸಿದರು

ರೇಷನಿಂಗ್ ಪ್ರಕಟಣೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಕಡೆಯಲ್ಲಾದರೂ ವ್ಯವಸಾಯದ ಭೂಮಿ ಇದ್ದು ಜಮೀನುದಾರರು ಮಂಗಳೂರು ರೇಷನ್ ಪ್ರದೇಶದಲ್ಲಿ ವಾಸಮಾಡುವ ಪಕ್ಷದಲ್ಲಿ, ಅಂಥಾ ಜಮೀನುದಾರರು ತಮ್ಮ ಸ್ವಂತ ಖರ್ಚಿಗೆ ಬೇಕಾಗುವಷ್ಟು ಅಂದರೆ ತಮ್ಮ ಊಟದ ಬಗ್ಗೆ, ಬೀಜ ಮತ್ತು ವ್ಯವಸಾಯಕ್ಕೆ ಬೇಕಾಗುವಷ್ಟು ಬೇಕಾದ ರೇಷನ್ ಪದಾರ್ಥಗಳನ್ನು ರೇಷನ್ ಕಾನೂನು ಪ್ರಕಾರ ತರುವರೆ ಆಕ್ಷೇಪವಿರುವುದಿಲ್ಲ ಆದರೆ ಅಂಥಾ ರೇಷನ್ ಪದಾರ್ಥಗಳನ್ನು ರೈಲು ಬಂಡಿಯಲ್ಲಿ ತರುವರೆ ಪರ್ಮಿಟು ದೊರೆಯಲಾರದೆಂದು ದ ಕ ಜಿಲ್ಲಾ ರೇಷನಿಂಗ್ ಆಫೀಸರರು ತಿಳಿಸುತ್ತಾರೆ

ನಿರ್ಬಂಧವಿಲ್ಲ—ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮಂಗಳೂರು ರೇಷನಿಂಗ್ ಸರಹದ್ದುಗಳ ಒಳಗೆ ರೇಷನ್ ಕಾರ್ಡು ಯಾ ಪರ್ಮಿಟುದಾರರು ಗೋಧಿಯನ್ನು ಬದ್ಧಾಯವಾಗಿ ಪಡಕೊಳ್ಳಬೇಕೆಂತ ಇಲ್ಲ ಅಕ್ಕಿಯನ್ನು ರೇಷನ್ ಮುಖ್ಯಾಲು ಅಂದರೆಷ್ಟು ಈ ಮುಂಚಿನ ಹಾಗೆಯೇ ಕೊಡಲ್ಪಡುವುದು ಗೋಧಿಯನ್ನು ಬೇಡ ಎಂತ ಬಿಟ್ಟುಕೊಡುವವರಿಗೆ ಹೆಚ್ಚಿನ ಅಕ್ಕಿಯನ್ನು ಕೊಡಲಿಕ್ಕಿಲ್ಲ

ಸಕ್ಕರೆಯ ರಖಂ ಧಾರಣೆಯಲ್ಲಿ ಬದಲಾವಣೆ— ತಾ. 27 4 45ರಲ್ಲಿ ಕಲೆಕ್ಟರರು ಹೊರಡಿಸಿದ ಪ್ರಕಟಣೆಯಲ್ಲಿ ಸೂಚಿಸಿದ ಯಾವತ್ತೂ ತರಗತಿಯ ಸಕ್ಕರೆಯ ರಖಂ ದರಗಳಲ್ಲಿ ಎಲ್ಲಾ ಪ್ರದೇಶಗಳಲ್ಲಿಯೂ ಚೀಲದ ಮೇಲೆ 0 2 1 ಪೈಯಂತೆ ಕಡಿಮೆ ಮಾಡಲಾಗಿದೆಯೆಂದು ತಿರುಗಿ ಕಲೆಕ್ಟರರು ತಾ 5 5-45ರಲ್ಲಿ ಜಾಹೀರು ಮಾಡಿದ್ದಾರೆ

ಸುಗ್ಗಿ ಬೆಳೆ ಮಿಗಿತೆಯನ್ನೊಪ್ಪಿಸುವ ಅವಧಿ—ಸುಗ್ಗಿ ಬೆಳೆಯ ಮಿಗಿತೆ ಅಕ್ಕಿಯಾ ಬತ್ತವನ್ನು ಒಪ್ಪಿಸುವ ಅವಧಿಯು ಈ ಜಿಲ್ಲೆಯಲ್ಲಿ ತಾ 31 5-45ರ ವರೆಗೆ ಮುಂದರಿಸಲ್ಪಟ್ಟಿದೆ ಆ ಅವಧಿಯೊಳಗೆ ಅದನ್ನು ಸ್ಟಾಕನ್ನು ಕೊಡುವವರಿಗೆ ಪೂರ್ತಿ ದರವು ಕೊಡಲ್ಪಡುವುದೆಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಕಾರ್ಕಳ-ದಲ್ಲಿ ವಿಜಯೋತ್ಸವ ಆಚರಣೆಯು ಅನಂತ ಶಯನದೀಪ ಪುರ ಮೆರವಣಿಗೆ ವೇದಮಾಡ್ತ ಪೋಷಗಳೊಂದಿಗೆ ಹೊರಟು ತಾಲೂಕ ಆಫೀಸಿಗೆ ಹೋಗಿ ಮುಖ್ಯವಾಗಿ ಅಲ್ಲಿ ಸ್ಪರ್ಧೆಗಳಾದ ಬಳಿಕ ಸಾರ್ವಜನಿಕರಿಗೆ ಲಘು ಉಪಹಾರ, ಡಾ ಪಿ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ, ಖಾನ ಸಾಹೇಬ ... ... ಸರ್ಕಲ್ ಇನ್ಸ್ಪೆಕ್ಟರ್ ಪ್ರಭು, ವೆಂಕಟೇಶ ಭಟ್ಟ ... ರಾಮಕೃಷ್ಣ ಆಚಾರ್ಯ, ... ಮೊದಲಾದವರ ಪ್ರಸಂಗೋಚಿತ ಭಾಷಣಗಳು, ... ಶ್ರೀ ಬಿ ಎಸ್ ಹೆಗ್ಡೆ ... ವರ ಧನ್ಯವಾದ ಸಮರ್ಪಣೆ, ಸಾಯಂಕಾಲ ಬಡಬಗ್ಗರಿಗೆ ಊಟ ನಡೆಯಿತು ಈ ಸಂದರ್ಭದಲ್ಲಿ ಶ್ರೀ ಕೆ ಪಿ ಶೇಷಗಿರಿ ಪ್ರಭು, ... ಕೆ ... ಶ್ರೀ ಬಿ ಪಿ ... S ... ಕಾಮತ, ಮತ್ತು ಸರಕಾರಿ ... ಸಿಬ್ಬಂದಿಗಳೆಲ್ಲಾ ಹಾಜರಿದ್ದು ಸಹಕರಿಸಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು ಶಿವಾಜಿ ಕಾಲಿಂ ಸಂಗಡದವರ ಬೆರಗುಗೊಳಿಸುವ ಕಾಲಿಂ ಕಸರತುಗಳಿದ್ದುವು.

ಕುಂದಾಪುರ-ಬಡ ವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ ದಿವಂಗತ ಪಿ ... ಕೃಷ್ಣಯ್ಯ ಶೆಟ್ಟಿ ನಾಗ್ರಾದವರಂತೆ ಅವರ ಆಳಿಯ ಶ್ರೀ ವಿಟ್ಠಲ ಶೆಟ್ಟಿ ಭವನಕ್ಕೆ ಬೇಕಾದ ಮರವನ್ನು ನೀಡಿಸುವ ಕೆಲಸ ನಡೆಯುತ್ತಿದ್ದು ಇವರ ಮಾದರಿಯಂತೆ ಭವನದ ಒಂದೊಂದು ಅಂಗವನ್ನು ಒಬ್ಬೊಬ್ಬ ಸ್ವಜಾತಿ ಮಹನೀಯರ ಹೆಸರಿನಿಂದ ಮಾಡಿಸಿದರೆ ಕಾರ್ಯವು ಸುಲಭದಲ್ಲಿ ನೆರವೇರಬಹುದೆಂದು ಅಭಿವಂದನೆಗೆ ಪಾತ್ರರಾಗಬಹುದು

ಕೊಡವೂರು-ಶಂಕರನಾರಾಯಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರತಿ ಸೋಮವಾರ ಮಧ್ಯಾಹ್ನ ೨ ಗಂಟೆಯಿಂದ ೩ ಗಂಟೆವರೆಗೆ ಶ್ರೀ ದುರ್ಗಾ ಪರಮೇಶ್ವರೀ ಅಮ್ಮನವರ ದರ್ಶನವಿದೆಯೆಂದು ಅಡಳ್ತಮೊಕ್ತೇಸರ ಶ್ರೀ ಕೊಡಂಕೂರು ಶೀನ ಶೆಟ್ಟಿ ತಿಳಿಸುತ್ತಾರೆ

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

ಕ್ರಮ ನಂಬ್ರ 371/1937

R I A 342/1945

ಬಿ ಪ್ರಭಾಕರ ರಾವ್ ವಾದಿ ಅರ್ಜಿದಾರ

ಮೊನು ಯಾನೆ ಹಾಂಮದ ಕೂಡಾ-ಪ್ರತಿವಾದಿರು-ಎದ್ರಿರು

ಸದ್ರಿ ಎದ್ರಿರು—1 ಮೊನು ಯಾನೆ ಹಂಮದ, 2 ಬಿ. ಪಾತುಂಮಾ, 3 ಆಸಂಮಾ-ಮಾಳ ಅಚ್ಚಬ್ಬ ಯಾನೆ ಹಸನೆ ಬ್ಯಾರಿ ಮಕ್ಕಳು ಮ್ಯಾನರ್ಸ್-ಗಾರ್ಡಿಯನ್ ತ್ಯಾ 4ನೇ ಎದ್ರಿಳು 4 ಹಪಿಸನ್ನು ಸದ್ರಿ ಅಚ್ಚಬ್ಬ ಯಾನೆ ಹಸನೆ ಬ್ಯಾರಿ ಎಡನೆ-ಪುಂಜಾಲ ಕಟ್ಟೆ.

ಸದರಿ ನಂಬರಿನಲ್ಲಿ ಅರ್ಜಿದಾರನು ತಂನ ಬಿಲ್ಲು ಕೋರ್ಟಿನಿಂದ ನ್ಯಾಯದಲ್ಲಿ ಮೊಕ್ತರು ಮಾಡಿದ ಡಿಕ್ರಿಯನ್ನು ಮತ್ತು ಕೊಟ್ಟ ಬಾಂದನ್ನು ಸಹ ರದ್ದುಪಡಿಸಬೇಕಾಗಿ ಅರ್ಜಿದಾರರು ಈ ಕೋರ್ಟಿಗೆ ಅರ್ಜಿ ಕೊಟ್ಟದು ವರದಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಅದನ್ನು ಈ 1945ನೇ ಯಿಸವಿ ಜೂನು ತಿಂಗಳು 12ನೇ ತಾರೀಕು ಹಗಲು 10 ಗಂಟೆಗೆ ಈ ಕೋರ್ಟಿನಲ್ಲಿ ನೀವು ಖುದ್ದು ನಿಂದಾಗಲೀ ವಕೀಲ ದ್ವಾರವಾಗಲೀ ಹಾಜರಾಗಿ ತಿಳ್ಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಪುತ್ತೂರು, | B Prabhakara Rao
18-4 45 | Petitioner

THE

VIJAYA BANK LTD.,

Head Office: MANGALORE.

PROGRESS REPORT

	1940	1942	1944
Paid up capitl	50,000	91,000	1,96,000
Deposits	2,67,000	5,90 000	17,70,000
Profits	6,000	12,000	30,000

correct to 1000

Branches all over tthe District and in Bombay city. All kinds of Banking facilities available.

A branch of the Bank will be opened at **BYNDOOR** shortly.

ಹವಳ್ಳಿ ಬ್ರಾಹ್ಮಣರ, ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿರುವ ಮೇಲ್ದರಗತಿಯ ಉಪಹಾರ, ಊಟ ವಸತಿಗಳ ಹೋಟೆಲ್

ರೋಯಲ್ ಕೆಫೆ

ಬಸ್ ಸ್ಟೇಶನ್, ಶಾಲೆಗಳು, ಸಿನೆಮಾ ಆಸ್ಪತ್ರೆ, ಬಜಾರ.
ದೇವಸ್ಥಾನಗಳಿಗೆಲ್ಲಾ ಸಮೀಪವಾಗಿ
ನಗರದ ಕೇಂದ್ರದಲ್ಲಿದೆ.

ಟೀಪಾರ್ಟಿ ಮೊದಲಾದ ಸಮಾರಂಭಗಳ
ಆರ್ಡರನ್ನು ಸ್ವೀಕರಿಸಲಾಗುವುದು.

ಮಹಾಜನರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗುತ್ತದೆ.

K. V. Bhat,
Proprietor.

ಕೆ. ವೆಂಕ್ರಟರಮಣ ಭಟ್,
ಮ್ಯಾನೇಜರ.

ದಕ್ಷಿಣ ಕನ್ನಡ,

ಪ್ರಭಾಕರ ಬೇಂಕ್ ಲಿಮಿಟೆಡ್,

ಮೂಡಬಿದಿರೆ-ಬೇಂಕಿನ ಸಂಕ್ಷೇಪ ಚರಿತ್ರೆ. ಈ ಬೇಂಕು ೧೦,೦೦,೦೦೦ (೧೦ ಲಕ್ಷ) ರೂಪಾಯಿಗಳ ಅಧಿಕೃತವಾದ ಪಾಲುಭಂಡವಾಳವುಳ್ಳ ಒಂದು ಸಂಸ್ಥೆಯಾಗಿದೆ. ಇದನ್ನು ಪ್ರತಿ ಶೇರಿಗೆ ೧೦೦ ರೂ.ಗಳಂತೆ ೧೦,೦೦೦ ಶೇರುಗಳಾಗಿ ಹಂಚಲಾಗಿದೆ. ಇವುಗಳಲ್ಲಿ ೫,೦೦೦ (ಐಸಾವಿರ) ಪಾಲುಗಳನ್ನು ಸಮರ್ಪಿಸಿ ಪಂತಿಗೆ ತೆರುವುದಕ್ಕಾಗಿ ಮುಂದಿರಿಸಲಾಗಿದೆ. ಪ್ರಕೃತ ತೆತ್ತು ಬಂದ ಮೂಲಧನ ರೂ. ೧,೦೯,೫೦೦. ಇನ್ನು ೧೪ ತಿಂಗಳುಗಳಲ್ಲಿ ಬೇಂಕಿನ ಮೂಲಧನ ಐದು ಲಕ್ಷ ರೂಪ್ಯಾಗಳ ಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ; ಮತ್ತು ಬೇಗನೇ ಈ ಬೇಂಕು "ರಿಜರ್ವ್ ಬೇಂಕ್ ಆಫ್ ಇಂಡಿಯಾ"ದ ಮೆಂಬರಿಕೆಯ ಅರ್ಹತೆಯನ್ನೂ ಪಡೆಯುತ್ತದೆ. ಮೂಡಬಿದಿರೆಯ ಸಾಹುಕಾರರೂ, ವರ್ತಕರೂ ಆಗಿರುವ ಶ್ರೀ. ಎ. ಬಿ. ಪ್ರಭು ಅವರು, ಡೈರೆಕ್ಟರುಗಳ ಮಂಡಲದ ಪ್ರಥಮ ಚಯರ್‌ಮ್ಯಾನರಾಗಿದ್ದಾರೆ ಮತ್ತು ಶ್ರೀ. ಕೆ. ಎಸ್. ಕಾಮತ್ ಬಿ. ಎ., ಸರ್ಟಿಫೈಡ್ ಎ. ಐ. ಐ. ಬಿ. ಅವರು ಮೆನೇಜಿಂಗ್ ಡೈರೆಕ್ಟರರಾಗಿರುತ್ತಾರೆ. ಶ್ರೀ. ಪಿ. ದಾಸ ಕಿಣಿಯವರು ಈ ಬೇಂಕಿನ ಕಾರ್ಯದರ್ಶಿಗಳು.

ಕೋಟೇಶ್ವರಕ್ಕೊಂದು ಹೈಸ್ಕೂಲು

ಸ್ಥಳೀಯ ಗ್ರಾಮಾಭ್ಯುದಯ ಸಂಘದ ವಿಶೇಷ ಮಹಾಸಭೆಯು ತಾ. ೬-೫-೪೫ರಂದು ಜರಗಿತು. ಕೋಟೇಶ್ವರವು ಸುಮಾರು ೧೦ ಹಯರ್ ಎಲಿಮೆಂಟರಿ ಶಾಲೆಗಳಿಗೆ ಕೇಂದ್ರವಾಗಿದ್ದುದಲ್ಲದೆ ಇಲ್ಲಿಯೇ ಒಂದು ಉತ್ಕೃಷ್ಟ ಹಯರ್ ಎಲಿಮೆಂಟರಿ ಶಾಲೆ ಇದೆ. ಈ ಶಾಲೆಗಳಲ್ಲಿ ೮ನೇ ತರಗತಿಯಲ್ಲಿ ಇಂಗ್ಲಿಷನ್ನು ತೆಗೆದುಕೊಂಡು ಇ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣವನ್ನು ಒದಗಿಸಲು ಇಲ್ಲಿ ಒಂದು ಹೈಸ್ಕೂಲ್ ಅತಿ ಅಗತ್ಯವಿದೆ. ಕಾರಣ ಸಮೀಪವಿರುವ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ಸ್ಥಳಾಭಾವದಿಂದಾಗಿ ೪ನೇ ಮತ್ತು ೫ನೇ ಫಾರ್ಮುಗಳಿಗೆ ಪ್ರವೇಶ ದೊರೆಯದೆ ನಾಲ್ಕಾರು ವರ್ಷಗಳಿಂದ ಎಷ್ಟೋ ವಿದ್ಯಾರ್ಥಿಗಳು ನಿರಾಶರಾಗಿ ಹಿಂದಿರುಗುತ್ತಿರುವರು. ಅದಕ್ಕಾಗಿ ಇಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಲು ಸಂಘವು ಪ್ರಯತ್ನಿಸಬೇಕಾಗಿ ನಿರ್ಧರಿಸಿ ಕಾರ್ಯರಂಗಕ್ಕಿಳಿದಿದೆಯೆಂದು ತಿಳಿಸಲು ತುಂಬಾ ಸಂತೋಷವೆನಿಸುವುದು.

ಪುತ್ತೂರು

ಚಿಮಣಿ ಎಣ್ಣೆಯ ಕಡಿತ- ಕಳೆದ ತಿಂಗಳಲ್ಲಿ ಎಣ್ಣೆಯ ೩ ಅಂಶವೂ ಈ ತಿಂಗಳಲ್ಲಿ ಅರ್ಧ ಅಂಶ ಎಣ್ಣೆಯೂ ಕೊಡಲ್ಪಟ್ಟಿರುತ್ತದೆ. ಪೇಟೆಯ ಒಳಗಿನ ಕೆಲವು ಅಂಗಡಿಗಳಲ್ಲಿ ಹೆಚ್ಚಿನ "ಕೋಟಾ" ಕೆಲವು ಕಡೆಗಳಲ್ಲಿ ಕಡಿಮೆ "ಕೋಟಾ" ಎಣ್ಣೆಯು ಕೊಡಲ್ಪಟ್ಟಿದೆಯಾಗಿ ತಿಳಿದುಬರುತ್ತದೆ. ಚಿಮಿಣಿಯೆಣ್ಣೆಯ ಹಂಚುವಿಕೆಯಲ್ಲಿ ಭೇದಮಾಡುವುದು ಸರಿಯೆ? ಅಧಿಕಾರಿಗಳು ಇತ್ತ ಕಡೆ ಗಮನಿಸಬೇಕು.

ಸುಬ್ರಹ್ಮಣ್ಯ-ಶ್ರೀಪುರದಲ್ಲಿ ವರ್ಷಂಪ್ರತಿ ನಡೆಯುವ ಶ್ರೀನರಸಿಂಹ ಜಯಂತಿ ಮಹೋತ್ಸವವು ಪಾರ್ಥಿವ ಸಂವತ್ಸರದ ವೈಶಾಖ ಶು. ೧೪ ಯು ತಾ. (೨೫-೫-೪೫) ನೇ ಶುಕ್ರವಾರ ದಿವಸ ಪ್ರಾರಂಭವಾಗಿ ಆ ದಿನಸ ಪ್ರಾತಃಕಾಲ ಶ್ರೀನರಸಿಂಹ ದೇವರಿಗೆ ಮಹಾಭಿಷೇಕ, ಸಂತರ್ಪಣೆ, ರಾತ್ರೆ ಮಹೋತ್ಸವ, ವಸಂತ ಪೂಜೆ, ಅದೇ ಶು. ೧೫ಯು (ತಾ. ೨೬-೫ '೪೫ನೇ) ಶನಿವಾರ ದಿವಸ ಪೂರ್ವಾಹ್ನ ಮಹಾ ರಥೋತ್ಸವ ವಸಂತ ಪೂಜೆ, ಅದೇ ಬ. ೧ಯು (ತಾ. ೨೭-೫ '೪೫)ನೇ ಆದಿತ್ಯವಾರ ಬೆಳಿಗ್ಗೆ (ಕುಮಾರಧಾರೆಯಲ್ಲಿ) ಅವಭೃಥೋತ್ಸವ, ವಸಂತಪೂಜೆ, ಹೀಗೆ ಮೂರು ದಿವಸಗಳಲ್ಲೂ ಶ್ರೀದೇವರ ಸನ್ನಿಧಿಯಲ್ಲಿ ಪೂಜಾ, ಉತ್ಸವ, ವಸಂತ, ಬ್ರಾಹ್ಮಣ ಸಂತರ್ಪಣಾದಿ ಸತ್ಕಾರ್ಯಗಳು ನಡೆಯುವುವು.

ಬೊಂಬಾಯಿ

ಮುಂಬಾಯಿ ಕರ್ನಾಟಕ ಸೇವಾ ಸಂಘ–ಇಲ್ಲಿಯ ಕೋಟೆಯ ಪರಿಸರದಲ್ಲಿ ವಾಸಿಸುವ ಸಕಲ ಕನ್ನಡಿಗರ ಸಾರ್ವಜನಿಕ ಸಭೆಯೊಂದು ಕಳೆದ ಎಪ್ರಿಲ್ ತಾ. ೨೯ಕ್ಕೆ ಸಾಯಂ. ಘಂಟೆ ೪ಕ್ಕೆ ಶ್ರೀ. ಕೇಶವ ಕಾಮತರ ಅಧ್ಯಕ್ಷತೆಯಲ್ಲಿ ಸೇರಿತು. ೫೦೦ ಮಂದಿ ಹಾಜರಿದ್ದರು. ಈ ಸಭೆಯಲ್ಲಿ ಕರ್ನಾಟಕ ಸೇವಾ ಸಂಘ (ಕೋಟೆ)ವು ಸ್ಥಾಪನೆಗೊಂಡಿತು. ಶ್ರೀ. ಉಮೇಶ ಚಿಕ್ಕೆರೆಮನೆಯವರು ಸಂಘದ ಧ್ಯೇಯಗಳನ್ನು ವಿವರಿಸಿದರು. ಅವರ ಘಟನಾ ಸೂತ್ರಗಳನ್ನು ಮಂಡಿಸಿದರು. ಮುಂಬಯಿಯಲ್ಲಿ ವಾಸಿಸುತ್ತಿರುವ ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ ಆರ್ಥಿಕಪ್ರಗತಿಯನ್ನು ಸಾಧಿಸುವುದು, ಸ್ವತಂತ್ರ ಕರ್ನಾಟಕ ಪ್ರಾಂತ ನಿರ್ಮಾಣಕ್ಕಾಗಿ ಪ್ರಯತ್ನಿಸುವುದು. ಇತ್ಯಾದಿ ಉದ್ದೇಶಗಳನ್ನು ವಿವರಿಸಲಾಯಿತು. ಮುಂಬಯಿಯಲ್ಲಿ ಹಲವು ಕನ್ನಡಿಗರ ಕೂಟಗಳಿವೆ. ಅವುಗಳನ್ನೆಲ್ಲ ಏಕಮಾತ್ರ ಕೂಡಿಸಿ, ಒಂದೇ ಕಾರ್ಯರಂಗದಲ್ಲಿ ಗೆಲಸಮಾಡುವುದಕ್ಕೂ, ರಾಷ್ಟ್ರೀಯ ಧುರೀಣರ ಬಿಡುಗಡೆ ರಾಷ್ಟ್ರೀಯ ಸರಕಾರ ನಿರ್ಮಾಣಕ್ಕೂ, ಸರ್ವಾಧಿಕಾರಿ ರಾಷ್ಟ್ರಗಳ ವಿರುದ್ಧವಾಗಿ ಪ್ರಜಾಪ್ರಭುತ್ವ ಹಿತವಾದಿಗಳು ಮಾಡಿದ ಸಮರದಲ್ಲಿ ಭಾಗವಹಿಸುವ ಪಕ್ಷಕ್ಕೆ ಸಂಘವು ಬದ್ಧವಾಗಿದೆ ಎಂದು ತಿಳಿಸಲಾಯಿತು.

ಅನಂತರ ಹಲವು ನಿರ್ಣಯಗಳಾದುವು. ಸೇನ್ ಫ್ರಾನ್ಸಿಸ್ಕೋ ಪರಿಷತ್ತಿಗೆ ಹೋದ ಹಿಂದೀ ಪ್ರತಿನಿಧಿಗಳನ್ನು ನಿರಾಕರಿಸುವ, ಸ್ವತಂತ್ರವಾದ ಕರ್ನಾಟಕ ಪ್ರಾಂತರಚನೆ ಅವಶ್ಯವೆನ್ನುವ, ಅಹ್ಮದನಗರದ ಕೈದಿಗಳನ್ನು ಬಿಡಬೇಕೆನ್ನುವ, ಮುಂಬಯಿಯ ಸಕಲ ಕರ್ನಾಟಕ ಸಂಘಗಳೂ ಒಂದಾಗಬೇಕೆಂದು ಪ್ರಾರ್ಥಿಸುವ, ರಷ್ಯದ ಕೆಂಪು ಪಡೆಗಳಿಗೆ ಅಭಿನಂದವನ್ನು ಕಳುಹಿಸುವ ಠರಾವುಗಳು ಅತಿ ಮುಖ್ಯವಾದುವು.

ಮಂಗಳೂರು

ಶ್ರೀ. ಕೃಷ್ಣಾಚಿಯವರಿಗೆ ಟಾಪು ಕಾಯಂ—ಮಂಗಳೂರಿನ ಮಾಜಿ ಶ್ರೀ ಕೃಷ್ಣ ಸಿನಿಮಾದ ಮಾಲಕರಾಗಿದ್ದ ಶ್ರೀ. ಎ. ಕೃಷ್ಣಾಚಿಯವರು ಕಳೆದ ವರ್ಷ ಮೈಸೂರಿನ ಮಾಪರ ಮೇಲೆ ಕೈ ಮಾಡಿದರೆಂದೂ ಅವರಲ್ಲಿ ಲಿಂಗರಾಜ ಅರಸು ಎಂಬವರು ಮರಣಹೊಂದರೆಂದೂ ಅಪಾದನೆಗೊಳಗಾಗಿ ವಿಚಾರಣೆಯಾಗಿ ಟಾಪು ಶಿಕ್ಷೆ ವಿಧಿಸಲ್ಪಟ್ಟಿತ್ತಷ್ಟೆ. ಅವರು ಹೈಕೋರ್ಟಿಗೆ ಅಪೀಲುಮಾಡಿದರಲ್ಲ, ಅಲ್ಲಿಯೂ ಟಾಪು ಶಿಕ್ಷೆ ಕಾಯಂ ಮಾಡಲ್ಪಟ್ಟಿರುವುದೆಂದು ಸುದ್ದಿ.

ANNOUNCEMENT

THE BOARD OF DIRECTORS OF

The Prabhakara Bank Limited.

beg to announce that the formal opening ceremony of their Head office at Moodabidri was held on Wednesday the 9th of May 1945

Sri A. B. Shetty, M. L. A, (MADRAS)
Ex.-Parliamentary Secretary

presided on the occasion.

K. S. Kamath, *B. A*, Cert. A.I.I B.
Managing Director,

Moodabidri, 9-5-1945

P. Dasa Kini,
Secretary.

NOTICE

Pursuant to an order dated 27—3—1945 of the District Munsif of Mangalore, the following properties will be sold by Public Auction by the under-signed at his Office on Sunday the 20th May 1945 at 11-30 A. M.

1. Property situated in Nirmarga Village, Mangalore Tq S. Nos. 167/1-2, 191 3C, *Punja 8 ac. 80 cents*, assessed at Rs. 8—12—0, together with superstructures, trees, etc. Upset Price Rs 400

2. Property situated in East Tonse Village, Udipi Taluk

S. No.	S. D. No	Kissam	Extent A C	Assessment Rs. As.
1	14	Nanja	32	1 7
1	35A	Punja	28	- 6

together with a bungalow, motor-shed, out-houses, trees, etc. Upset Price .... Rs 1000.

Further particulars and conditions of sale may be had from

Court Road, MANGALORE. 24—4—1945

E. Gonsalves,
B. A., B. L.,
Advocate.

NOTICE

ಪುತ್ತೂರು ಡಿ ಮು. ಕೋರ್ಟಿನಲ್ಲಿ

K I A. 146/1945 O S. 429/1943

ಶಂಕರನಾರಾಯಣ ಭಟ್ಟ ಸಹಾ ವಾದಿರು-ಅರ್ಜಿದಾರರು

ಶಂಕರ ಭಟ್ಟ ಸಹಾ-ಪ್ರತಿವಾದಿರು-ಎದ್ರಿರು

ಸದ್ರಿ ವ್ಯಾಜ್ಯದ 1, 3ನೇ ಪ್ರತಿವಾದಿರು ತಲಿಕ್ಕಳ ಮುತ್ತು ಯಾನೆ ನಾರಾಯಣ ಭಟ್ಟರ ಮಗ 1ನೇ ಶಂಕರ ಭಟ್ಟ, ಅಳ್ಕೆ ಗ್ರಾಮಸ್ಥ. 3ನೇ ಪ್ರತಿವಾದಿ ಬಜ್ಪೆ ಗ್ರಾಮದಲ್ಲಿರುವ ಶಂಕರ ಭಟ್ಟರ ಮಗ ರಾಮ ಭಟ್ಟ 1 ಕೂಡಾ 2 ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:-ಮೇಲ್ಕಂಡ ವ್ಯಾಜ್ಯದಲ್ಲಿ ಆದ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಕಾಣ್ಸಿ ಅರ್ಜಿದಾರ್ರು ಅರ್ಜಿಕೊಟ್ಟಿರುವುದರಿಂದ ಅದರಲ್ಲಿ ನಿಮಗೇನಾದರೂ ಉಪಹರಿಸುವದಿದ್ದರೆ ತಾರೀಕು 11-6-1945 ನೇ ದಿನ 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಆಕ್ಷೇಪ ಇಲ್ಲವಾಗಿ ಶಿಷ್ಟ ತೀರ್ಮಾನಿಸಲಾದೀತು ಯೆಂತ ಈ ಮೂಲಕ ತಿಳಿಸಿಯದೆ.

Puttur, Date 12 4-45

C. S. Shastry,
Vakil for Petr.

NOTICE

ಪುತ್ತೂರು ಡಿ ಮು ಕೋರ್ಟಿನಲ್ಲಿ

R. E P. 339/1944
Mangalore Ct. S. C. 884/1941

ತುಳಸಿ ಯಾನೆ ಪದ್ಮಾವತಿ ಅಮ್ಮ-ಅರ್ಜಿದಾರಳು-ವಾದಿಳು.

ರೋಹಿಣಿ ಯಾನೆ ರಾಧಾಬಾಯಿ-ಎದ್ರಿಳು-ಪ್ರತಿವಾದಿಳು

ಸದ್ರಿ ಅಮ್ಮಣ್ಣಾಚಾರಿಯ ಯೆದ್ರಿ ಪುತ್ತೂರು ಕಸಬೆಯಲ್ಲಿರುವ ಪ್ರಾಂಜಳ ನಾಗೇಶ ಪೈಗಳ ಹೆಂಡ್ತಿ ರೋಹಿಣಿ ಯಾನೆ ರಾಧಾಬಾಯಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ವಾದಿಳು ಪುತ್ತೂರು ಸ. ರಿ. ಆಫೀಸಿನ Iನೇ ಪುಸ್ತಕದ 233ನೇ ಸಂಚಿಕೆಯ 23-24ನೇ ಪುಟಗಳಲ್ಲಿ ನಂಬ್ರ 903/35ನೇಗೆ ತಾ. 30-11-35ರಲ್ಲು ರೂಪ್ಯಾ 100-0-0ರ ಆಡವಿನ ಅಸಲು ಬಡ್ಡಿ ವಸೂಲು ಹಕ್ಕಿನ ವಿಕ್ರಯದ ಬಗ್ಗೆ ಅರ್ಜಿ ಮಾಡಿರುತ್ತಾಳೆ. ಅದುದರಿಂದ ವಿಕ್ರಯದ ಯಿಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ 1945ನೇ ಯಿಸ್ವಿ ಜೂನ ತಿಂಗಳು 11ನೇ ತಾರೀಕಿಗೆ ಯಿಟ್ಟಿರುತ್ತದೆಂತ ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

Puttur. Date 11-4-45.

C S Shastry,
Vakil for Petr.

ನೊ ಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 407/1938

B. ವಾಸ ಶೈ — ವಾದಿ

ಪದ್ಮಯ ಹೆಗ್ಗಡೆ—ಕೂಡಾಪ್ರತಿವಾದಿರು.

4 ನುತ್ತಪ್ಪ ರೈ-ಕೊರಗಾಳ್ವರ ಅಳಿಯ. ಚಿಕ್ಕ ಮೂಡ್ನೂರು ಗ್ರಾಮದ ಹೊಸಮನೆ. 15 ಇಂತ್ರು ಸಾಹ್ಸ ಮಸ್ಪೆಲ ಮಾಡ್ತನ ಮಗ ಚಿಕ್ಕ ಮೂಡ್ನೂರು ಗ್ರಾಮದ ಶಿವ್ಯಾಳ. 19 ಅಂತಪ್ಪ ಗೌಡ-ಕರಿಯ ಗೌಡನ ಮಗ-ಚಿಕ್ಕ ಮೂಡ್ನೂರು ಗ್ರಾಮದ ಶಿವ್ಯಾಳ ಇವರಿಗೆ—

ದ. ಕ. ಸಬೋರ್ಡಿನೇಟ್ ಕೋರ್ಟಿನ A. S. 311/43ನೇ ತೀರ್ಮಾನದ ಪ್ರಕಾರ ಈ ಕೋರ್ಟಿಗೆ ರಿಮಾಂಡ್ ಆಗಿ ಬಂದ ಮೇಲ್ಕಂಡ ವ್ಯಾಜ್ಯವು ತಾರೀಕು 6-6-1945ಕ್ಕೆ ತನಿಖೆಗೆ ಯಿಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪ ಯಿದ್ದಲ್ಲಿ ಸದ್ರಿ ವ್ಯಾದಿನ ಈ ಕೋರ್ಟಿನ ಮುಂದೆ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನ ಮಾಡಲಾಗುವದೆಂತಲೂ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸಲಾಗಿದೆ.

B. Narayana Baliga,
Advocate for Plff.

Puttur, 18-4-45

ಮೈಸೂರು

ಮೈಸೂರು ಕಾಂಗ್ರೆಸ್ ಅಧಿವೇಶನ–ಮೈಸೂರು ಕಾಂಗ್ರೆಸ್ ವಿಶೇಷಾಧಿವೇಶನವು ಇದೇ ತಿಂಗಳ ೧೯, ೨೦ನೇ ತಾರೀಕುಗಳಲ್ಲಿ ಮೈಸೂರಿನಲ್ಲಿ ನಡೆಯುತ್ತದೆ.

ಕಾಂಗ್ರೆಸ್ ಕೆಲಸಗಾರರ ಸಭೆ–ಮೈಸೂರು ನಗರದಲ್ಲಿ ನಡೆಯಲಿರುವ ಕಾಂಗ್ರೆಸಿನ ವಿಶೇಷಾಧಿವೇಶನದ ವ್ಯವಸ್ಥೆಗಾಗಿ ಕಾಂಗ್ರೆಸ್ ಕೆಲಸಗಾರರ ಸಭೆಯೊಂದು ೮-೫-೪೫ನೇ ದಿನ ನಡೆದು ೨೦೦ಜನರನ್ನೊಳಗೊಂಡ ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು. ಅದಕ್ಕೆ ಶ್ರೀ. ಎಸ್. ಚನ್ನಯ್ಯನವರು ಅಧ್ಯಕ್ಷರು.

ಶ್ರೀ. ದಾಸಪ್ಪನವರ ಪತ್ರ–೨೭-೪-೪೫ರಲ್ಲಿ ನಡೆದ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ಲೋಪದೋಷಗಳಿಂದ ಕೂಡಿತ್ತೆಂದು ಹಾಗೆ ಅವಕಾಶ ಉಂಟಾದುದು ಕಾಂಗ್ರೆಸಿನ ಘನತೆಗೆ ಕುಂದೆಂದೂ ಶ್ರೀ. ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷರಿಗೆ-ಪತ್ರ ಬರೆದಿದ್ದಾರೆಂದು ತಿಳಿದುಬಂದಿದೆ.

ಅಧ್ಯಕ್ಷ ಚುನಾವಣೆ ಕ್ರಮಬದ್ಧವಾಗಿ ನಡೆದಿಲ್ಲ–ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ನ್ಯಾಯಬದ್ಧವಾಗಿ ನಡೆದಿಲ್ಲವೆಂದೂ, ಹಾಗೆ ನಡೆದಾಗ ಬೊಂಬಾಯಿಯಲ್ಲಿರುವ ಶ್ರೀ ದಾಸಪ್ಪ, ಶ್ರೀಮತಿ ಯಶೋದರಮ್ಮನವರಿಗೂ ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಪ್ರಮುಖರಿಗೂ ನಡೆದ ಕೆಲವು ಶಂತಿಕವಾಟುಗಳನ್ನೊಳಗೊಂಡ ದೀರ್ಘ ಹೇಳಿಕೆಯೊಂದನ್ನು ಕಾಂಗ್ರೆಸ್ ಪ್ರಮುಖರಾದ ಶ್ರೀ. ಎಚ್. ಎಸ್. ದೊರೆಸ್ವಾಮಿಯವರು ಪತ್ರಿಕೆಗಳಿಗೆ ಕೊಟ್ಟಿದ್ದಾರೆ.

ವಿಜಯೋತ್ಸವ–ಮಿತ್ರರಾಷ್ಟ್ರಗಳಿಗೆ ಜಯ ಲಭಿಸಿದ ಸಂತೋಷ ಸಮಾರಂಭದ ಸಲುವಾಗಿ ಇಲ್ಲಿಯ ಎಲ್ಲಾ ಕಛೇರಿಗಳಿಗೂ ೯, ೧೦ ತಾರೀಕುಗಳನ್ನು ರಜಾ ದಿನಗಳೆಂದು ಸಾರಲಾಗಿದೆ. ಮೈಸೂರು ಸರಕಾರ ಪ್ರತಿ ಒಂದು ಜಿಲ್ಲೆಗೂ ರೂ. ೨೦೦೦ಗಳನ್ನು ಸಮಾರಂಭದ ಖರ್ಚಿಗಾಗಿ ಹಂಚಿರುತ್ತಾರೆ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಕ್ರೌನ್
ರಬ್ಬರ್‌ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ F ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE.
Approved firm by the Govt. of Mysore.
Certified by the Agent of the Govt. of India in Ceylon. 01T906Es

---

ಮಂಗಳೂರು.

ಸೈಂಟ್ ಜೋನ್ಸ್ ಹಯರ್ ಎಲಿಮೆಂಟರಿ ಶಾಲೆ–ಯ ಹಳೇ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭವು ಏಪ್ರಿಲ್ ತಾ. ೨೯ರಲ್ಲಿ ಶ್ರೀ. ಎ. ಬಿ. ಶೆಟ್ಟಿ, (ಎಂ. ಎಲ್. ಎ.) ಇವರ ಅಧ್ಯಕ್ಷತೆಯಲ್ಲಿ ಶಾಲಾ ಮಂದಿರದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ ಕೆ ಲಕ್ಷ್ಮಣನವರು ಅಧ್ಯಕ್ಷರ ಪರಿಚಯವನ್ನು ಸಭೆಗೆ ಮಾಡಿಕೊಟ್ಟ ನಂತರ ಕಾರ್ಯದರ್ಶಿಗಳಾದ ಶ್ರೀ ಜಿ. ಪಿ. ಸುವರ್ಣರು ಸಂಘ ಸ್ಥಾಪನೆಯ ಉದ್ದೇಶವನ್ನೂ ಸಂಘದ ಇಷ್ಟರ ವರೆಗಿನ ಕಾರ್ಯಕಲಾಪಗಳನ್ನೂ ಓದಿಹೇಳಿದ ಮೇಲೆ ಅಧ್ಯಕ್ಷರು ಅರ್ಥಗರ್ಭಿತವಾದ ಭಾಷಣವನ್ನಿತ್ತರು. ಪ್ಲಿದ ಹಳೇ ವಿದ್ಯಾರ್ಥಿಗಳ ಪರವಾಗಿ ಶ್ರೀ ಎಚ್. ಲಕ್ಷ್ಮಣ್ ಸಾಲಿಯಾನ್, ಬಿ. ಎ., ಬಿ ಎಲ್., ಇವರೂ ಹಳೆ ಅಧ್ಯಾಪಕವರ್ಗದ ಕಡೆಯಿಂದ ಶ್ರೀ. ಎಂ. ರಮಾನಾಥ್, B A, ಇವರೂ ಮಾತನಾಡಿದ ನಂತರ ಶಾಲೆಯ ಪರವಾಗಿ ಮುಖ್ಯೋಪಾಧ್ಯಾಯ ರೆವರೆಂಡ್ ಫಾದರ್ ಪರ್ವಿನ್ ಡಿ ಸೋಜರು ಸಮರ್ಪಕವಾದ ಉತ್ತರವನ್ನಿತ್ತ ಬಳಿಕ ಉಪಕಾರ ಸ್ಮರಣೆ ಹಾಗೂ ಲಘು ಉಪಹಾರಗಳೊಡನೆ ಬಳಿಗ್ಗಿನ ಸಭೆಯು ಮುಕ್ತಾಯವಾಯಿತು. ಸಂಘದವರು ಏರ್ಪಡಿಸಿದ ಅನೇಕ ವಿಧದ ಸ್ಪರ್ಧೆ ಪಂದ್ಯಾಟಗಳು ಪ್ರೇಕ್ಷಣೀಯವಿದ್ದುವು. ಸಾಯಂಕಾಲ ಮಿಲಾಗ್ರಿಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ರೆವರೆಂಡ್ ಫಾದರ್ ಪಿಂಟೋರವರ ನೇತೃತ್ವದಲ್ಲಿ ಶಾಲಾ ಮಕ್ಕಳಿಗೂ ಸ್ಪರ್ಧೆ ಪಂದ್ಯಾಟಗಳಲ್ಲಿ ಯಶಸ್ವಿಯಾಗಿ ಬಂದವರಿಗೂ ಬಹುಮಾನ ಪಾರಿತೋಷಕಗಳನ್ನಿತ್ತ ಬಳಿಕ ವಿವಿಧ ವಿನೋದಾವಳಿ ಹಾಗೂ ಸಂಗೀತ ನಾಟಕಗಳೊಡನೆ ಉದ್ಘಾಟನಾ ಸಮಾರಂಭದ ಕಾರ್ಯಕಲಾಪಗಳು ಯಶಸ್ವಿಯಾಗಿ ಕೊನೆಗೊಂಡವು.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ
ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳವ
ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ–ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ಈಗಿನ ಅಭಿರುಚಿಗೊಪ್ಪುವ
ಸಲ್ಲಕ್ಷಣಗಳಿಂದೊಡಗೂಡಿದೆ
ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ಸೈ ಸೈ ಎನಿಸುವ
ವಾರದ ಭವಿಷ್ಯವೂ
ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.
ಬಿಡಿ ಸಂಚಿಕೆಗೆ ... ... 0-1-6.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ.

ಜಾಹೀರಾತುದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

ANTARANGA

Best medium for advertisement.

ಸಹಕಾರಿ ಹಾಲು ಸರಬರಾಯಿ ಸಂಸ್ಥೆ–ಮಂಗಳೂರಿಗಾಗಿ ಒಂದು ಸಹಕಾರಿ ಹಾಲು ಸರಬರಾಯಿ ಯೂನಿಯನಿನ ಆರಂಭೋತ್ಸವವು ನಮ್ಮ ಜಿಲ್ಲಾ ಕಲೆಕ್ಟರರಾದ ರಾವ್ ಸಾಹೇಬ್ ಪಿ. ರಾಮದಾಸ್ ಬಿ. ಎ. ಅವರಿಂದ ಈಚೆಗೆ ನೆರವೇರಿಸಲ್ಪಟ್ಟಿತು. ತಾತ್ಕಾಲಿಕ ಸಮಿತಿಯ ಅಧ್ಯಕ್ಷರಾದ ಶ್ರೀಯು. ಕಣ್ಣಪ್ಪನವರು ಈ ನಗರದ ಹಾಲಿನ ಪರಿಸ್ಥಿತಿಯ ಕುರಿತು ವಿವರಿಸಿ, ಸಹಕಾರಿ ಹಾಲು ಸರಬರಾಯಿಯ ಒಂದು ಸಂಸ್ಥೆಯ ಸ್ಥಾಪನೆಯ ಆವಶ್ಯಕತೆಯನ್ನು ಸೂಚಿಸಿದರು. ಕಲೆಕ್ಟರರು ಈ ವಿಷಯದಲ್ಲಿ ತಮ್ಮ ಸಂಪೂರ್ಣ ಬೆಂಬಲವನ್ನು ಆ ಯೂನಿಯನ್ನಿಗೆ ನೀಡುವುದಾಗಿ ಭರವಸೆ ಹೇಳಿದರು.

ಮುನ್ಸಿಪಲ್ ಕೌನ್ಸಿಲಿನ ವೈಸ್ ಚೆಯರ್ಮೇನ್ ಮಿ. ಸಿ. ಎಲ್. ಲೋಬೊ ಅವರು ಜನರಿಗೆ ಬೇಕಾದ ರೀತಿಯಲ್ಲಿ ಹಾಲು ಒದಗದಿರುವ ಕುರಿತು ಮಾತಾಡಿದರು. ಇದೇ ವಿಷಯದಲ್ಲಿ ಸಹಕಾರಿ ಸಂಘದ ಡೆ. ರೆಜಿಸ್ಟ್ರರೂ ಮಾತಾಡಿದರು ಶ್ರೀ. ಎಂ. ಕೆ. ದೇವರಾಜ ಎಡ್ವೊಕೇಟ್ ವಂದಿಸಿದರು.

ಮೇ ದಿನಾಚರಣೆ–ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ, ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆಯು ಇಲ್ಲಿ ನಡೆಯಿತು. ಶ್ರೀಗಳಾದ ಕೆ. ಕೆ. ಶೆಟ್ಟಿ, ಬಿ. ವಿ. ಕಕ್ಕಿಲ್ಲಾಯ, ಶಾಂತಾರಾಮ ಪೈ ನೊದಲಾದವರು ಮಾತಾಡಿದರು. ಮುಂದಾಳುಗಳನ್ನು ಬಿಡಬೇಕು, ಮಿತ್ರ ಮಂತ್ರಿಮಂಡಲಗಳು ಪ್ರಾಂತಗಳಲ್ಲಿ ಸ್ಥಾಪಿಸಲ್ಪಡಬೇಕು, ಎಂಬಿತ್ಯಾದಿ ಠರಾವುಗಳು ಮಂಜೂರಾಗುತ್ತ ಮಿತ್ರರೊಡನೆ ವಿಜಯವನ್ನು ಪಡೆದ ಕೆಂಪು ಸೈನ್ಯವನ್ನು ಅಭಿನಂದಿಸಲಾಯಿತು. ಶ್ರೀ ಕಕ್ಕಿಲ್ಲಾಯರು ವಂದಿಸಿದರು.

ಆಹಾರಾಧಿಕಾರಿಗಳ ಆಗಮನ–ಮಲಬಾರಿನಂತಹ ಜಿಲ್ಲೆಗಳಲ್ಲಿ ಹಸಿವೆಗೆ ಕರೆಯನ್ನು ಹೆಚ್ಚಿಸುವ ವ್ಯವಸ್ಥೆಯಾಗಿರುವಾಗ ನಮ್ಮ ಜಿಲ್ಲೆಯಲ್ಲಿ ಕಡಿಯಲಾಗುತ್ತಿದೆ ಪರಿಸ್ಥಿತಿಯನ್ನು ಅಧಿಕಾರಿಗಳು ಮುಚ್ಚಿಡುವ ಪ್ರವೃತ್ತಿ ಕಾಣುತ್ತಿದೆ. ನಿಜವೇನೆಂದು ತಿಳಿಯುವ ಉದ್ದೇಶದಿಂದ, ರೀಜನಲ್ ಫುಡ್ ಕಮಿಶನರರು ನಮ್ಮ ಜಿಲ್ಲೆಯನ್ನು ಸಂಚರಿಸಿ ಪರಿಶೀಲನೆ ಮಾಡಿದರು. ಇಲ್ಲಿಯ ಪರಿಸ್ಥಿತಿ ಎಷ್ಟು ಘೋರವಾಗಿದೆ. ಎಂಬುದನ್ನು ತಿಳಿಸಿ ವರ್ಗವಾರರ ಸಂಘದವರು ಈ ಅಧಿಕಾರಿಗಳಿಗೊಂದು ಮನವಿಯನ್ನೊಪ್ಪಿಸಿದ್ದಾರೆ.

ಬೋಳೂರು–ಇಲ್ಲಿರುವ ಮಂಜಾರ್ ಕಾರ್ ಕಂಪೆನಿಯವರ ಗೇರುಬೀಜ ಸುಡುವ ಕಾರ್ಖಾನೆಯಿಂದ ಹೊರಡುವ ಹೊಗೆಯು ಆಸುಪಾಸಿನಲ್ಲಿ ವಾಸಿಸುವ ಜನರ ಆರೋಗ್ಯಕ್ಕೆ ಹಾನಿಕರವಾಗಿದೆ. ಎಂಬ ಕಾರಣದಿಂದ ತಾ. ೭ಕ್ಕೆ ಸೇರಿದ ನಗರಸಭೆಯ ಅಧಿವೇಶನದಲ್ಲಿ ಈ ಕಾರ್ಖಾನೆಯಲ್ಲಿ ಬೇರೆಯ ಕೆಲಸ ಯಾವುದನ್ನೂ ಮಾಡಕೂಡದು ಎಂದು ಠರಾವು ಅಂಗೀಕೃತವಾಗಿದೆ. ಸಂಬಂಧಪಟ್ಟವರು ಈ ಠರಾವನ್ನು ಕಾರ್ಯರೂಪಕ್ಕೆ ಇದು ವರೆಗೆ ತರಲಿಲ್ಲ ಎಂದೊಬ್ಬ ಪತ್ರಿಕಾವರದಿಗಾರರು ತಿಳಿಸುತ್ತಾರೆ.

CHAMPAES
Snow & Castrex
(Sole Distributers for (India)
Sukhananda Stores
Santhekatte, UDIPI, S. K.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ.
: ಉಡುಪಿ :

೩ನೇ ಗೋರಿಂಗ್

ಲೇಖಕ:- ಡಿ. ಇ. ಮೋಂಡ,
ಸಹಸಂಪಾದಕ: 'ಡೀ ಝೀಟಂಗ್'

●

ಪ್ರಥಮಾರೋಪಿ ಹಿಟ್ಲರ್ 'ಸತ್ತು' ಸಂಶಯ ನಿರ್ಮಿಸಿದ್ದಾನೆ; ದ್ವಿತೀಯಾರೋಪಿ ಹಿಮ್ಲರ್ ಸಂಧಾನ ಸೂಚಿಸಿ ಕಾಣೆಯಾಗಿದ್ದಾನೆ. ಈ ತೃತೀಯಾರೋಪಿ ಹೆಂಡತಿ ಮಗಳನ್ನೂ ಮಿಲಿಯಾವಧಿ ಪೌಂಡು ಬೆಲೆಯ ಚಿನ್ನಾಭರಣಗಳನ್ನೂ ಕಟ್ಟಿಕೊಂಡು ಪರಾರಿಯಾಗಿದ್ದಾನೆ! ಮಿತ್ರರಾಷ್ಟ್ರೀಯರು ಶ್ರಮಪಟ್ಟು ತಯಾರಿಸಿದ 'ಯುದ್ಧಾಪರಾಧಿಗಳ ಪಟ್ಟಿ'ಗೆ ಹಾಜರಿ ಗುರುತು ಬೀಳುವ ಕಾಲವೆಂದಿಗೋ! ಹೇಗೂ ಇರಲಿ, ಅಪರಾಧಿಗಳು ಇಲ್ಲದೆ ಹೋದರೂ ಅವರ ಅಪರಾಧಗಳಿವೆ; ಈ 'ಚಾರ್ಜ್ ಶೀಟ್'' ಕೂಡಾ ಇರಲಿ. —ಸಂ. ನ.

ಯುದ್ಧಾಪರಾಧಿಗಳು.

1934ರಲ್ಲಿ ಬರ್ಲಿನಿನಲ್ಲಿದ್ದಾಗ ಓರ್ವ ವಿದೇಶೀ ಪತ್ರಿಕೋದ್ಯೋಗಿಯೊಡನೆ ಮಾತಾಡುವ ಸಂದರ್ಭ ನನಗೊದಗಿತು. ಹಿಟ್ಲರನ ಜರ್ಮನಿಯ ಪರಿಸ್ಥಿತಿಯ ಕುರಿತು ಆತ ನಿರಾಶೆ ಸೂಚಿಸಿದ; ಆದರೆ ಕೊನೆಗೆ ತನ್ನನ್ನು ತಾನೇ ಸಂತೈಸಿಕೊಂಡು ಹೇಳಿದ: "ಆದರೆ ಗೋರಿಂಗನೊಬ್ಬನಿದ್ದಾನೆ ಅವ ಇತರ ನಾಜೀ ಪ್ರಮುಖರಂತೆ ಐಶ್ವರ್ಯದ ಅಲ್ಪನೇನೂ ಅಲ್ಲ ಆತ ತುದಿಯ ಸಾಲಿನಲ್ಲಿರುವ ವರೆಗೆ ಆಶೆಗವಕಾಶವಿದೆ". ನಾನೀ ಹೇಳಿಕೆಯನ್ನು ವಿರೋಧಿಸಿದೆ.ನನ್ನ ವಾದವು ಅವನಿಗೆ ಒಪ್ಪಿಗೆಯಾಗದಿದ್ದರೂ, ವಸ್ತುಸ್ಥಿತಿಯಿಂದ ಆತ ಪಾಠ ಕಲಿತಿರಬೇಕೆಂದು ನಂಬುತ್ತೇನೆ.

ಗೋರಿಂಗನು ನಾಗರಿಕಾಧಿಕಾರಿಗಳ ಗೌರವಾರ್ಹ ಕುಟುಂಬವೊಂದರಲ್ಲಿ ಹುಟ್ಟಿದವನೆಂಬುದು ನಿಜ. ಮೊದಲನೇ ಲೋಕ ಯುದ್ಧದಲ್ಲಿ ಆತ ಸೇನೆಗೆ ಸೇರಿ ವಿಮಾನ ಶಾಖೆಯ ಓರ್ವ ಅಧಿಕಾರಿಯಾಗಿ ಕೆಲಸ ಮಾಡಿದ್ದ. ಜರ್ಮನಿಯ ಪರಾಭವವು ಆತನ ಸೇನಾ ಜೀವನವನ್ನು ಅಂತ್ಯಗೊಳಿಸಿತಾದರೂ ಮಹತ್ವಾಕಾಂಕ್ಷೆಯನ್ನು ನಿರ್ಮೂಲಿಸಲಿಲ್ಲ ಅಲ್ಪಾವಧಿಯಲ್ಲೇ ಮ್ಯುನಿಚಿನಲ್ಲಿದ್ದ ಹಿಟ್ಲರ್ ತಂಡವನ್ನಾತ ಸೇರಿಕೊಂಡು 'ನಾಜೀ ಬಿರುಗಾಳಿ ದಳ'ದ ನಾಯಕನಾದ ತನ್ನ ಬೂದಂಗಿಯ ಒಳಗಡೆಯಲ್ಲೊಂದು ಶಿಲ್ಕ್ ಶರ್ಟನ್ನು ತೊಟ್ಟುಕೊಳ್ಳುವ ವೈಶಿಷ್ಟ್ಯ ಗೋರಿಂಗನದು.

ಗೋರಿಂಗನೆಂದರೆ ಅಂತಹ ವಿಚಿತ್ರ ವ್ಯಕ್ತಿ. ಮುಖ್ಯವಾಗಿ ತನ್ನ ವ್ಯಕ್ತಿಗತ ಸುಖಭೋಗಾಭಿಲಾಷೆಯ ಸಿದ್ಧಿಗಾಗಿಯೇ ಆತ ನಾಜೀ ಪಕ್ಷದ ಆಶ್ರಯಗೊಂಡುದು. 1939ರ ಮೊದಲು ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲಕರ ಕೈಗೊಂಬೆಯಾಗಿ ಈ ಆಡಂಬರ ಪ್ರೇಮಿ ಗೋರಿಂಗನಿದ್ದ. ಉದ್ಯೋಗೀ ಶ್ರೀಮಂತರ ದೊಡ್ಡ ಮೊತ್ತದ ಲಂಚ ಕಾಣಿಕೆ ಪಡೆಯುವ ಏಜಂಟನಾಗಿ ನಾಜೀ ಪಕ್ಷದೊಳಗಿದ್ದ. ಆ ಕಾಲದಲ್ಲಿ ಈ ನಾಜೀ ಕೈಪ್ಟನನಿಂದ ಹಿಟ್ಲರನ ಎಷ್ಟೆಷ್ಟೋ ಕೆಲಸಗಳಾಗುತಿದ್ದುವು ಗೋರಿಂಗನೆಂದರೆ ಮೇಜಿನ ಮುಂಭಾಗ ಬಿಡದೆಯೇ ಅಧಿಕಾರ ಜಾರಿ ಮಾಡುವ ಮನುಷ್ಯ ಕ್ಲಬ್ಬುಗಳಲ್ಲಿ ಮತ್ತು ಸಾಮಾಜಿಕ ಸಭೆ ಸಮ್ಮೇಲನಗಳಲ್ಲಿ ನಾಜಿಗಳ ಪ್ರತಿನಿಧಿಯಾಗಿ ಹೋಗಬಲ್ಲವನೂ ಗೋರಿಂಗನೇ. ಗೋರಿಂಗನನ್ನು ಕಂಡು, ಇಂತಹ 'ಮಧುರ ವರ್ತನೆಯ ಮನುಷ್ಯ' ಪ್ರಮುಖ ಸದಸ್ಯನಾಗಿರುವ ನಾಜೀ ಪಕ್ಷವು ತಾವು ನೆನಸಿದಂತೆ 'ಖಿಲಾಡೀ ಕೂಟ'ವಾಗಿರಲಾರದು ಎಂದು ಜನರು ತಮ್ಮ ಭಾವನೆಯನ್ನು ತಿದ್ದಿಕೊಳ್ಳುತಿದ್ದರು.

ಆದರೆಹಿಟ್ಲರ್ ಅಧಿಕಾರಕ್ಕೆ ಬಂದೊಡನೆ ನಡೆದ ಘಟನೆಗಳ ಕಡೆಗೆ ಕಣ್ಮುಚ್ಚದವರು ಗೋರಿಂಗನ ನಿಜರೂಪವನ್ನು ಕಾಣದಿರುವದು ಅಸಾಧ್ಯ. ಅವನು ವಿಮಾನ ಮಂತ್ರಿ ಮತ್ತು ಪ್ರಶ್ಯನ್ ಗೃಹಮಂತ್ರಿಯಾಗಿ ರೀಖ್ ಸರಕಾರದಲ್ಲಿ ನೇಮಕಗೊಂಡ. ಮಹಾ ಜರ್ಮನ್ ಸಂಯುಕ್ತ ರಾಷ್ಟ್ರದ ಪೋಲಿಸು ಪಡೆಗಳ ಶಿರಸ್ಸಾಗಿರುವದೇ ಆ ಎರಡನೇ ಹುದ್ದೆಯಲ್ಲಿರುವ ಅಧಿಕಾರ. ನಾಜೀ ಗೊತ್ತುಗುರಿಗಳನ್ನು ಕಠೋರವಾಗಿ ಜಾರಿಗೆ ತರುವದಕ್ಕಾಗಿ ಪೋಲಿಸು ಪಡೆಯನ್ನಾತ ಭರದಿಂದ ಉಪಯೋಗಿಸಹತ್ತಿದ ನಾಜಿಗಳ ರಾಜಕೀಯ ವಿರೋಧಿಗಳನ್ನು ಅತ್ಯುಗ್ರ ಹಿಂಸಾ ಪ್ರಯೋಗದಿಂದ ನಿರ್ಮೂಲಿಸಬೇಕೆಂಬ ಸೂಚನೆಯು ಪೋಲಿಸರಿಗೆ ಗೋರಿಂಗನಿಂದ ಬಂತು. ಸಾಮಾನ್ಯ ಪೋಲಿಸರು ಈ ಕಾರ್ಯಕ್ಕೆ ಅಯೋಗ್ಯರೆಂದು ತೋರಿದೊಡನೆ ಆತ ಗುಪ್ತ ರಾಷ್ಟ್ರೀಯ ಪೋಲಿಸ ವಿಭಾಗವೊಂದನ್ನು ಗೆಸ್ಟಪೋಗಳ ಸಂಕೇತಾಧೀನದಲ್ಲಿ ನಿರ್ಮಿಸಿದ. ಇವರ ಕ್ರೂರತ್ವವಂತೂ ಜರ್ಮನಿಯ ಮನೆಮಾ[illegible]ದೆ. ಹೀಗಾಗಿ ನ್ಯಾಯಬದ್ಧ ಕ್ರಮಕಾಯಿದೆಗಳ [illegible] ಗೋರಿಂಗನ ಹೆಸರು ಜೋಡಣೆಗೊಂಡಿದೆ. ಅಲ್ಪಾವಧಿಯಲ್ಲೇ ಆತ ಗೆಸ್ಟಪೋ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷ ಭಾಗವಹಿಸುವದನ್ನು ಬಿಟ್ಟು ನಾಮ ಮಾತ್ರ ಅಧಿಕಾರಿಯಾಗಿ ಉಳಿದದ್ದು ನಿಜ

ಆತ ಶ್ರಮವಹಿಸಬೇಕಾದ ಮಹತ್ಕಾರ್ಯಗಳು ಬೇರೆ ಇದ್ದುವು ಜರ್ಮನಿಯನ್ನು ಯುದ್ಧಕ್ಕೆ ತಯಾರು ಮಾಡುವ ದ್ವಿವಿಧಕಾರ್ಯಭಾರವು ಅವನ ಹೆಗಲ ಮೇಲೆ ಬಿತ್ತು. ಮೊದಲನೆಯದಾಗಿ, ಹೊಸ ಸೇನಾ ಶಕ್ತಿಯುಕ್ತಿಗೆ ಆಹುತಿ ಎಂದು ಹರಸಿಬಿಟ್ಟ ರಾಷ್ಟ್ರಗಳನ್ನು ಭಯಕಂಪಕ್ಕೀಡು ಮಾಡುವ ಮಹಾ ಆಯುಧವಾಗಿ ಆತ 'ಲುಫ್ಟ್‌ವಾಫ'ನ್ನು (ನಾಜೀ ವಿಮಾನಬಲ) ಸುಸಂಘಟಿಸಿ ಬೆಳೆಸಿದ. ಎರಡನೆಯದಾಗಿ, ಆಧುನಿಕ ಯುದ್ಧ ವೆಚ್ಚವನ್ನು ತುಂಬಲು ಅನುಕೂಲವಾಗುವಂತೆ ಜರ್ಮನಿಯ ಆರ್ಥಿಕ ಜೀವನವನ್ನೇ ಸಂಘಟನಾಬಲದಿಂದ ಬದಲಾಯಿಸಿದ. ಗೋರಿಂಗ್ ಆಗಾಗ ಆಗ್ರಹದೊಡನೆ ಸೂಚಿಸುತ್ತಿದ್ದಂತೆ, ಆ ಸೇನೆ ಮತ್ತು ಈ ಲಫ್ಟ್‌ವಾಫ್ ಶಾಂತಿಸಾಧನೆಗಾಗಿಯಲ್ಲವೆಂಬ ಕುರಿತು ಸಂಶಯದ ಅಣುವೂ ಉಳಿಯದಂತೆ ಆತಮಾಡಿಬಿಟ್ಟ. ಗೋರಿಂಗನ ಆಡಂಬರ ಪ್ರೇಮ ಮತ್ತು ಆನೆಯಂತೆ ಶೃಂಗರಿಸಿಕೊಳ್ಳುವ ಕಲಾಪ್ರೇಮವೊಂದೇ ಆತನಲ್ಲಿ ಅತೃಪ್ತ ಯುದ್ಧಲಾಲಸೆಯನ್ನು ಹುಟ್ಟಿಸಿದುದಲ್ಲವಾಗಿರಬಹುದು. ಆದರೆ ಉಚ್ಚನಾಗರಿಕನಂತೆ ನಟಿಸುತಿದ್ದ ಗೋರಿಂಗನು ಜರ್ಮನಿಯ ಓರ್ವ ಕೆಳನೌಕರನ ಮನೋವೃತ್ತಿಯನ್ನೇ ಪ್ರದರ್ಶಿಸಿದ್ದಾನೆ ಸೇನಾ ಗೌರವ ಮತ್ತು ವಿಜಯದ ಚಿಂತನೆಯೊಂದೇ ಆತನ ಮೆದುಳಲ್ಲಿ ಸುಳಿಯುತಿತ್ತಲ್ಲದೆ, ಯುದ್ಧವು ಜನಸಾಮಾನ್ಯರಿಗೊದಗಿಸುವ ಸಂಕಷ್ಟ ಮತ್ತು ವಿನಾಶಗಳ ಸ್ಮರಣೆಯೇ ಆತನಿಗಿರಲಿಲ್ಲ.

1931ರಿಂದ ಜರ್ಮನಿಯಲ್ಲಿ ಕಠಿಣವಾಗಿ ಜಾರಿಗೆ ಬಂದ ಯುದ್ಧ ಮಿತವ್ಯಯ ಶಾಸನವು ಜನ ಜೀವನವನ್ನು ಕೆಳಮಟ್ಟಕ್ಕೆ ತಂದಿತಲ್ಲದೆ, ಜರ್ಮನ್ ರಾಷ್ಟ್ರವು ಸಂಕಷ್ಟಕ್ಕೀಡಾಗಲು ಪ್ರಾರಂಭವಾಯಿತು ನಿರಂಕುಶ ಪ್ರಭುತ್ವದ ನಿರ್ಬಂಧಗಳ ಬಲನಿಂದ ಗೋರಿಂಗನ ಕೊಬ್ಬು ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತು. ಅವನಂತೆಯೇ ಅವನ ಔದ್ಯೋಗಿಕ ಸಂಸ್ಥೆಯಾದ 'ಹೆರ್ಮಾನ್ ಗೋರಿಂಗ್ ವೆರ್ಕೆ'ಯೂ ಕೊಬ್ಬಿತು. ಆ ಸಂಸ್ಥೆಯು 'ರೀಖ್' ಆಡಳಿತೆಗೊಳಗಾಗಿದ್ದರೂ ಗೋರಿಂಗನಿಗದರಿಂದ ಅತಿ ಹೆಚ್ಚಿನ ಮುನಾಫೆ ದೊರೆಯುತಿತ್ತು. ಜರ್ಮನಿಯು ಯುದ್ಧಕ್ಕೆ ಜಾರುವ ವರೆಗೂ ಗೋರಿಂಗನ ನಿಜವಾದ ಕಾಲ ಬಂದಿರಲಿಲ್ಲವೆಂದೇ ಹೇಳಬಹುದು ಆ ತನಕ ಜರ್ಮನಿಯೊಳಗಡೆಯ ವಿರೋಧಿಗಳ ಮೇಲೇನೇ ಜಾರಿಯಾಗುತ್ತಿದ್ದ ಕ್ರೂರತೆಯನ್ನು ಯುದ್ಧ ಕಾಲಕತ್ತಲದಲ್ಲಿ ಪ್ರಪಂಚಕ್ಕೆ ತೋರಿಸಲು ಆತ ಸಮರ್ಥನಾದ.

ಗೋರಿಂಗ್-ಲುಫ್ಟ್‌ವಾಫಿನ ಸರ್ವಪ್ರಮುಖ ಸೇನಾನಿ-ನಾಗರಿಕರ ಮೇಲೆ ಸಾಮೂಹಿಕ ಆಕಾಶ ಧಾಳಿಯನ್ನು ಜಾರಿ ಮಾಡಿದ. ಗೋರಿಂಗ್-ಜರ್ಮನಿಯ ಅರ್ಥಕ್ಷೇತ್ರದ ಸರ್ವಾಧಿಕಾರಿ-ಆಕ್ರಮಿತ ರಾಷ್ಟ್ರಗಳ ವ್ಯಾಪಾರೋದ್ಯಮಗಳನ್ನು ಆಕ್ರಮಿಸಿಕೊಂಡು, ತನ್ನ 'ಹೆರ್ಮಾನ್ ಗೋರಿಂಗ್ ವೆರ್ಕೆ'ಯು ಯುರೋಪಿನಲ್ಲೇ ಅಸದೃಶವಾದ ಅದ್ಭುತ ಔದ್ಯೋಗಿಕ ಸಂಸ್ಥೆಯಾಗುವಂತೆ ಬೆಳೆಸಿಬಿಟ್ಟ. ಆದರೂ 'ಹಿಟ್ಲರನ ರೀಖ್' ಪತನಗೊಳ್ಳುವ ಮೊದಲೇ ಗೋರಿಂಗನ ಅದೃಷ್ಟ ತಾರೆ ಪ್ರಕಾಶಗುಂದಹತ್ತಿದ್ದಿತು. ಕಠಿಣ ಹಾಗೂ ನಿರ್ಣಯಾತ್ಮಕ ಧಾಳಿಯಿಡಲು ತಯಾರಿಸಿದ್ದ ಅವನ ಲುಫ್ಟ್‌ವಾಫ್ ಇಂಗ್ಲೆಂಡಿನ ಯುದ್ಧದಲ್ಲಿ ಪ್ರಾಣಾವಧಿ ಪರಾಭವಗೊಂಡಿತು. ಪ್ರಥಮ ಭಾಗದಲ್ಲಿ ಮಹಾ ಅನಾಹುತವನ್ನು ಉಂಟುಮಾಡಿದ್ದ ಲುಫ್ಟ್‌ವಾಫ್ ಕೊನೆಯ ಯುದ್ಧಗಳಲ್ಲಿ ಭಾಗ ವಹಿಸಲು ಚೇತರಿಸಿಕೊಳ್ಳಲಾರದಂತಹ ಪೆಟ್ಟನ್ನು ತಿಂದಿತು.

ಜರ್ಮನಿಯ ಆರ್ಥಿಕ ಪರಿಸ್ಥಿತಿಯು ದುರ್ಬಲವಾದುದೆಂಬುದು ಯುದ್ಧವು ಮುಂದೊತ್ತಿದಂತೆ ಖಚಿತವಾಗುತ್ತಾ ಬಂತು. ಅಲ್ಲಿಯ ವರೆಗೂ ಗೋರಿಂಗನೇ ಜರ್ಮನಿಯ ಕ್ರಮಬದ್ಧ ಎರಡನೇ ಅಧಿಕಾರಿಯಾಗಿದ್ದರೂ, ಇತರರು ಆತನನ್ನು ಹಿಂದೆ ಹಾಕಿದ್ದರು. ಕಳೆದೆರಡು ವರುಷಗಳಿಂದ ಪದಕಾಲಂಕಾರಗಳ ಸಮಾರಂಭಗಳ ಹೊರತು, ಬೇರೆಂದೂ ಗೋರಿಂಗನ ಹೆಸರು ಕೇಳಿ ಬಂದುದಿಲ್ಲ. ಇದರಿಂದಾಗಿ ನಾಜಿಗಳ ನಡುವಿನ ಸೌಮ್ಯ ಧೋರಣೆಯ ಪಕ್ಷಕ್ಕೆ ಆತ ಸೇರಿದ್ದಾನೆಂದೋ, ಆ ಪಕ್ಷದ ನಾಯಕನಾಗಿದ್ದಾನೆಂದೋ ವಾರ್ತೆಗಳಿದ್ದಿದ್ದುವು ಅದು ಹೇಗೂ ಇರಲಿ— ಈ ರಣಹದ್ದು ಪ್ರಶಾಂತ ಕೋಗಿಲೆಯಾಗಿ ಮತಾಂತರಗೊಳ್ಳುವದೆಂದು ಭಾವಿಸುವಷ್ಟು ದೊಡ್ಡ ತಪ್ಪಭಿಪ್ರಾಯ ಮತ್ತೊಂದಿರಲಾರದು. ಅವನು ತಾನು ಬೇರೆ ಮನುಷ್ಯನಾಗಲು ಪ್ರಯತ್ನಿಸಬಹುದು; ಆದರೆ ಮಾನವ ವರ್ಗದ ಅಗ್ರಗಣ್ಯ ಕೊಲೆಗಾರರಲ್ಲೊಬ್ಬನೆಂದು ಗೋರಿಂಗನ ಹೆಸರು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಡದೆ

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1—8—0** ಮಾತ್ರ.
ಬೈಂಡು ಮಾಡಿದ ಸಂಪುಟಕ್ಕೆ ರೂ 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ॥ **8—10—44**ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್.
ಉಡುಪಿ ಬೋರ್ಡಿಂಗ್ ಎಂಡ್ ಲಾಡ್ಜಿಂಗ್, ಮಧುರ

ಬೇಕು

'ಅಂತರಂಗ'ಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದ್ದಾರೆ ಶರ್ತಗಳಿಗೆ ಬರೆಯಿರಿ.

ಅಂತರಂಗ ಆಫೀಸು, ಉಡುಪಿ.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to : vince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ, ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" **CHANDRAMAS**

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್**

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪೦ರಿಂದ ೮ಬೊಟ್ಟು, ಸಣ್ಣ ಮಕ್ಕಳಿಗೆ ೧೦ರಿಂದ೨ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ. ದ ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಡ್ರಿನ್ನಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲಿ ಸಂಗ್ರಿ ಬರದಕ್ಕೆ ರೋಗಕ್ಕೆ ತಕ್ಕ ಔಷಧಿ ರವಾನಿಸಲಾಗುವದು, ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦-೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

. ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No M 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6 Estd 1921 ಸ್ಥಾಪನೆ.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ 0—1—6

NAVAYUGA

ವರ್ಷ ೨೪ ವಾರ ೩೭] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol 24 No 37
Founder SRI A. B. SHETTY.
ಉಡುಪಿ • 24-5-1945 • ಮಂಗಳೂರು

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಥಂಡ, ಹಲ್ಲು ವೇದನೆಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ತಿಹಾಕ ನೋವಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ
REGD
ಕಫ, ಹುಳುಕಡ್ಡಿ ಮತ್ತು ಸಣ ನವ್ಯ್ರಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them." Vide Order No 1786-ECI 14/1535

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required Vide Memorandum No 4755-N 44

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20-4-1945 and will be closed at the discretion of the Directors, not earlier than 31-5-1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 191[illegible] and [illegible] members limited)

Registered Head Office - **Hampankatta, MANGALORE**
Bombay Office - **26 Noble Chambers, Fort Bombay.**
Factory - **MALPE, South Kanara**
Depots at:- **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food. Fish Manure Fish Ghee Shark Liver Oil, Mackerel Oil, Cod Liver Oil, Sardine Oil, Smoked Fish Fish Meal, Freezed Fish, Dried Fish Etc**

2 The Company intends to grow hemp on its own lands and manufacture nets It intends to develop the Fish Industry in Malpe and in the West Coast

3. The Madras Government has been approached to subscribe for half the capital and appoint a Government Director and render technical advice to the Company

4 A Scientific Advisory Council will be formed and Technical Experts will be appointed to carry on intense research work in the Industry.

5 Arrangements are being made to procure Military contracts.

6 The Madras Government has been requested to supply the Company all the modern equipments useful for the purpose of the Company

7. The Company intends to [illegible] and develop the coastal trade

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset

MANGALORE,
19th April, 1945

Mangalore Jarappa,
Managing Director

ಯುದ್ಧಾಪರಾಧಿಗಳು.

೪ನೇ ಗೋಬೆಲ್ಸ್

ಲೇಖಕ:- ಡಿ. ಓ. ರಿಹೋನ್‌ಹೀವರ್,
ಸಹಸಂಪಾದಕ: 'ಡೀ ಝೀಟಂಗ್'

ನಾಲ್ಕನೇ ನಾಜೀ ಅಪರಾಧಿಗಳ ಪೈಕಿ ಒಬ್ಬ ಗೋರಿಂಗ್ ಮಾತ್ರ ಅಮೆರಿಕನ್ ಯೋಧರಿಗೆ ಸೆರೆಸಿಕ್ಕಿದ್ದಾನೆ. ತನ್ನನ್ನು ಹಿಡಿದ ಕೈಗೇನೇ 'ಶೇಕ್‌ಹೇಂಡ್' ಕೊಟ್ಟು ಈಗ ಲಂಡನಿನಲ್ಲಿ ಉತ್ಸವ ಮೂರ್ತಿಯಾಗಿ ಉಳಿದಿದ್ದಾನೆ. ಹಿಟ್ಲರ್ ಅಥವಾ ಅವನ ಹೆಣ ದೊರೆತಿಲ್ಲ. ಹಿಮ್ಲರನ ಮುಖ ಒಮ್ಮೆ ಕಿಟಿಕಿಯಿಂದೂ ಬ್ಬರಿಗೆ ಕಾಣಸಿಕ್ಕಂತೆ ಆ ಮೇಲೆ ಕಂಡುದಿಲ್ಲ. ಈ ನಾಲ್ಕನೇ ಅಪರಾಧಿಯ ಶವವನ್ನು ಕೆಂಪು ಯೋಧರು ಮಣ್ಣ ನಡಿಯಿಂದ ಅಗೆದು ತೆಗೆದು ಕಂಡೆವೆನ್ನುತ್ತಾರೆ. ಹಾಗಾದರೆ ಮಿತ್ರರಾಷ್ಟ್ರೀಯರ ಕೆಲಸವನ್ನು ಆತನೇ ಮಾಡಿಕೊಂಡು ಮುಗಿಸಿದನೆಂದಾಯಿತು. ಅವ ಸಾಯುವ ಮೊದಲೇ ಓದಬೇಕಾಗಿದ್ದ ಬರೆಹವಿದು. ಸತ್ತಮೇಲಾದರೂ ಓದಿಹಿ. ಸಂ. ಸ.

'ಗೋಬೆಲ್ಸ್ ಡಾಕ್ಟರ್'—ನಾಜೀ ಪಕ್ಷದ ಸದಸ್ಯರು ಆತನನ್ನು ಕರೆಯುವದೇ ಹಾಗೆ. ಅವನೆಂದೂ ಆ ಪಕ್ಷದ ಜನಪ್ರಿಯ ಸದಸ್ಯನಾಗಿರಲಿಲ್ಲ ಕರಿಕೂದಲ ಕಾಲ್ಕುಂಟನಾದ ಈತ, ಆ ನಾಯಕ ಜನಾಂಗದ ಗಾಂಭೀರ್ಯಕ್ಕನುಗುಣವಾದ ವ್ಯಕ್ತಿಯಾಗಿರಲಿಲ್ಲ ತರ್ಕ ಶಾಸ್ತ್ರದಲ್ಲಿ ಅವನಿಗಿರುವ ಹುಟ್ಟು ಪ್ರತಿಭೆಯು ಉಪಯೋಗಕರ ಆದರೆ ಅಪಾಯಕರವೆಂಬ ಭಾವನೆ ಎಲ್ಲರಲ್ಲೂ ಇದ್ದಿತು. ಪ್ರಮುಖ ನಾಜೀ ನಾಯಕರ ಪೈಕಿ ಬುದ್ಧಿಚಾತುರ್ಯದ ಪಟ್ಟಿಗೆ ಪ್ರತಿಯೊಬ್ಬನನ್ನೂ ಎಷ್ಟೋ ಪಾಲು ಮಿಕ್ಕಿರುವ ಗೋಬೆಲ್ಸನೆಂದರೆ ಎಲ್ಲರೂ ಹೆದರುತಿದ್ದರು.

ಒಂದು ದಿನ ಉಗ್ರಗಾಮೀ ಕಮ್ಯೂನಿಸ್ಟನಾಗಿ, ಧನಿಕ ವರ್ಗವನ್ನೇ ನಿರ್ಮೂಲಿಸಿ ಬಿಡಬೇಕೆಂದು ಗೋಬೆಲ್ಸ್ ಗರ್ಜಿಸುತ್ತಾನೆ; ಮಾರಣೆದಿನವೇ ಗೋಬೆಲ್ಸನ ಸ್ವರದಲ್ಲಿ ಕೆಲಸಗಾರ ವರ್ಗದ 'ಹೀನ ಬುದ್ಧಿಯ ಬರ್ಬರತೆ'ಗಾಗಿ ಜಿಗುಪ್ಸೆಯ ಖಂಡನೆಯೂ, ಸುಖಜೀವಿ ನಾಗರಿಕರ 'ವಿಧಾಯಕ ರೀತಿಯ ಮಿತಗಾಮಿತ್ವ'ಕ್ಕಾಗಿ ಮನಃಪೂರ್ವಕ ಶ್ಲಾಘನೆಯೂ ಕೂಸುತ್ತದೆ ಅವನು ಇಗರ್ಜಿಗಳ ವಿರುದ್ಧ ಬೊಬ್ಬೆಯೆಬ್ಬಿಸಿ, ಪ್ರತಿಯೊಬ್ಬ ಬಿಷೋಪನೂ ಓರ್ವ 'ದಗಾಖೋರ'. ಮತ್ತು ಪ್ರತಿಯೊಂದು ಕೋನ್ವೆಂಟೂ 'ವೇಶ್ಯಾಗೃಹ' ಎಂದು ಆರೋಪಿಸಿದ್ದ. ಆದರೆ ಸ್ವತಃ ಅವನೇ ಹಲವು ಬಾರಿ ಅಲ್ಲಿ ಭಕ್ತಿತಲ್ಲೀನತೆಯಿಂದ ಪ್ರಾರ್ಥನೆ ಸಲ್ಲಿಸಿದುದೂ ಇದೆ; ತನಗೆ ಅನುಕೂಲವೆಂದು ತೋರಿದಾಗ ಬೈಬಲಿನ ವಾಕ್ಯಗಳನ್ನೆತ್ತಿ ಉದಾಹರಿಸಿದುದೂ ಇದೆ.

× × ×

ರೈನ್ಲೇಂಡಿನ ರೈಟ್ ಎಂಬಲ್ಲಿ ಅವನ ಜನನ ಮಧ್ಯಮ ವರ್ಗದವರಾದ ಶುದ್ಧ ರೋಮನ್ ಕೆಥೋಲಿಕ್ ತಂದೆ ತಾಯಿಗಳಿಗೆ ಹುಟ್ಟಿದವ. ಅವನ ತಂದೆ ಆ ಕಾಲದ ಸುಪ್ರಸಿದ್ಧ ಹೀಡೆಲ್‌ಬರ್ಗ್ ವಿಶ್ವವಿದ್ಯಾಲಯದ ವಿದ್ಯಾಭ್ಯಾಸಕ್ಕಾಗಿ ಮಗನನ್ನು ಕಳುಹಿದ. ಅಲ್ಲಿ ಸಾಹಿತ್ಯ ಮತ್ತು ತರ್ಕ ಶಾಸ್ತ್ರದ ಪಟ್ಟಿಗೆ ಜರ್ಮನಿಯ ಅಗ್ರಗಣ್ಯ ಅಧ್ಯಾಪಕರಲ್ಲೊಬ್ಬನಾಗಿದ್ದ ಲೋಕ ಪ್ರಸಿದ್ಧ ಯೆಹೂದೀ ಪ್ರೊಫೆಸರ್ ಗುಂಡೋಲ್ಫರ ಶಿಷ್ಯವೃತ್ತಿಯಲ್ಲಿ ಗೋಬೆಲ್ಸ್ ವಿದ್ವಾಂಸನಾದ. ತನ್ನ ವಿದ್ಯಾಭ್ಯಾಸ ಮುಗಿಸಿದಾಗ ತರುಣ ಡಾ। ಜೋಸೆಫ್ ಗೋಬೆಲ್ಸನ ಭವಿಷ್ಯವು ಅಂಧಕಾರಮಯವಾಗಿ ಕಂಡಿತು.

೨೦ನೇ ಶತಮಾನದ ನಡುವಿನ ಆ ದಿನಗಳಲ್ಲಿ ಎಷ್ಟೋ ಮಂದಿ ವಿಚಕ್ಷಣರೂ ಸಾಮೂಹಿಕ ನಿರುದ್ಯೋಗತ್ವಕ್ಕೆ ಸಿಲುಕಿದ್ದರು. ಗೋಬೆಲ್ಸನಂತಹ ಹೊಲಸು, ಉದ್ರೇಕಿ, ಕಿರಿಯ ಪಿಶಾಚಿಗೆಂತೂ ಆ ದುರ್ಗತಿ ತಪ್ಪಿದ್ದಲ್ಲ. 'ತರುಣ ಕ್ರಾಂತಿಕಾರ' ಎಂದು ಕರೆಯಿಸಿಕೊಳ್ಳುವುದರಲ್ಲಿ ಹೆಗ್ಗಳಿಕೆಪಡುತ್ತಿದ್ದ ಗೋಬೆಲ್ಸನಲ್ಲಿ ಮಹತ್ವಾಕಾಂಕ್ಷೆ ತುಂಬಿದ್ದಿತು. ಸಮಾಜದ ಸದ್ಯದ ನೀತಿ ನಿಯಮಗಳ ರೀತ್ಯಾ ತಾನು ಜಯಶೀಲನಾಗುವದು ಅಸಾಧ್ಯವೆಂದಾದೊಡನೆ ಗೋಬೆಲ್ಸ್ ಅದಕ್ಕೆ ವಿರುದ್ಧ ನಿಲ್ಲುತಿದ್ದ. ತರುಣ ಚತುರ ಚಳವಳಿಗಾರರಿಗಾಗಿ ಹಾರೈಸುತಿದ್ದ ಎರಡು ಉಗ್ರ ಪಕ್ಷಗಳು ಆಗ ಅಲ್ಲಿದ್ದುವು. ಒಂದು ಕಮ್ಯೂನಿಸ್ಟರದು; ಮತ್ತೊಂದು ನಾಜಿಗಳದು ದೀರ್ಘ ಕಾಲದ ವರೆಗೂ ಇವೆರಡರಲ್ಲಿ ತಾನಾವ ಪಕ್ಷಕ್ಕೆ ಸೇರಬೇಕೆಂದು ನಿರ್ಧರಿಸಲು ಗೋಬೆಲ್ಸನೆಂದಾಗಲಿಲ್ಲ. ಕೊನೆಗೆ ನಾಜಿಗಳೇ ಆತನಿಗೆ ಹೆಚ್ಚಿನ ಧನ ಸಹಾಯದ ಆಸೆ ತೋರಿಸಿ ಗೆದ್ದರು. ಅವನು ಮ್ಯೂನಿಚಿಗೆ ಹೋಗಿ, ಪಕ್ಷದ ಪ್ರಮುಖ ಸಂಘಟನಾಕರ್ತನಾದ ಗ್ರಿಗೋರ್ ಸ್ಟ್ರಾಸರನ ಕಾರ್ಯದರ್ಶಿಯಾಗಿ ಸೇರಿಕೊಂಡ.

× × ×

1938ರಲ್ಲಿ ಉಗ್ರಗಾಮಿ ಎಡ ಪಕ್ಷದ ಪ್ರತಿನಿಧಿಯಾದ ಸ್ಟ್ರಾಸರನಿಗೂ, ದೊಡ್ಡ ದೊಡ್ಡ ವ್ಯಾಪಾರಿಗಳ ಧನದಾಶ್ರಯದಲ್ಲಿದ್ದ ಹಿಟ್ಲರನಿಗೂ ನಾಜೀಪಕ್ಷದೊಳಗೇನೇ ಪ್ರಥಮ ಜಗಳ ಮೂಡಿಕೊಂಡಿತು. ಉತ್ತರ ಜರ್ಮನಿಯಲ್ಲಿ ನಾಜೀ ಚಳವಳದ ವಿಜಯ ಸಾಧಿಸುವ ನೆವದಿಂದ ಸ್ಟ್ರಾಸರನನ್ನು ಮ್ಯೂನಿಚಿನಿಂದ ಕಳುಹಲಾಯಿತು. ಅರ್ಧಾಂಶ ಸ್ಟ್ರಾಸರನನ್ನೇ ಗೆಲ್ಲುವದಕ್ಕಾಗಿಯೂ ಅರ್ಧಾಂಶ 'ಕೆಂಪು U' ಸಮಸ್ಯಾ ನಿವಾರಣೆಗಾಗಿಯೂ ಗೋಬೆಲ್ಸನೂ ಅವನೊಂದಿಗೆ ಕಳುಹಲ್ಪಟ್ಟಿದ್ದ. ಕ್ಷಿಪ್ರದಲ್ಲೇ ರಾಜಧಾನಿ ಬರ್ಲಿನ್ ಸ್ಟ್ರಾಸರನ ಕೈಕೆಳಗೆ ಬಂತು; ಗೋಬೆಲ್ಸನು ಬರ್ಲಿನಿನ 'ನಾಜೀ ರಕ್ಷಕ'ನಾಗಿ ನೇಮಕಗೊಂಡ. ಆ ಮೇಲೆ ತನ್ನಲ್ಲಿದ್ದ ಗೊಂದಲ ಪ್ರತಿಭೆಯನ್ನಾತ ಸ್ಪಷ್ಟವಾಗಿ ಪ್ರದರ್ಶಿಸಿ ಇಡೀ ರೀಖ್‌ನ ಪ್ರಚಾರ ನಾಯಕನಾದ.

ಸ್ಟ್ರಾಸರ್ ಮತ್ತು ಹಿಟ್ಲರರೊಳಗಿನ ಅಂತಃಕಲಹವು ಘೋರರೂಪ ತಾಳಿದಾಗ ತನ್ನ ನಾಯಕನನ್ನು ಹಿಂಬಾಲಿಸುವ ಆವಶ್ಯಕತೆಯನ್ನೇ ಗೋಬೆಲ್ಸ್ ಕಾಣದಾದ. ಹೀಗಾಗಿ ಸ್ಟ್ರಾಸರನ 'ಅಪಾಯಕಾರೀ ಮಹತ್ವಾಕಾಂಕ್ಷೆಯ ಹಂಚಿಕೆ'ಗಳ ಕುರಿತು ಗೋಬೆಲ್ಸನು ಪಕ್ಷದ ಪ್ರಮುಖ ನಾಯಕರಿಗೆ ಚಾಡಿ ಹೇಳಿದ. ತದನುಗುಣವಾಗಿ 1932ರಲ್ಲಿ ಪಕ್ಷದ ಎಲ್ಲಾ ಸ್ಥಾನಗಳಿಂದಲೂ ಸ್ಟ್ರಾಸರನನ್ನು ತೆಗೆದು ಹಾಕಲಾಯಿತು ಆದರೆ ಗೋಬೆಲ್ಸ್, ಫ್ಯೂರರನ ಮೇಲಿಟ್ಟ ಸ್ವಾಮಿಭಕ್ತಿಗಾಗಿ ಬಹುಮಾನ ಪಡೆದ. ಹಿಟ್ಲರ್ ಚಾನ್ಸೆಲರ್‌ನಾದ 1933ನೇ ಜನವರಿಯಲ್ಲೇ ರೀಶ್ ಸರಕಾರದ ಸಾರ್ವಜನಿಕ ಪ್ರಕಟಣೆ ಮತ್ತು ಪ್ರಚಾರ ಮಂತ್ರಿಯಾಗಿ ಗೋಬೆಲ್ಸನ ನೇಮಕವಾಯಿತು.

ಜರ್ಮನಿಯ ಭಾಷಣ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ, ಯೋಚನಾ ಸ್ವಾತಂತ್ರ್ಯಗಳಿಗೆ ಅಂತ್ಯ ಬಿದ್ದೇ! ಅಂದಿನಿಂದ ಅಸತ್ಯ, ಅರೆಸತ್ಯ, ಕಪಟವಾಣಿ ಮತ್ತು ಹೀನಮಾತುಗಳೇ ಜರ್ಮನಿಯ ಪ್ರಚಾರ ಸೂತ್ರಗಳಾದುವು. ಮಾತ್ರವಲ್ಲ, ಮೂರನೇ ರೀಖ್‌ನ ಸಾಹಿತ್ಯ, ಕವಿತೆ, ರಂಗಭೂಮಿ, ಜೀವನ, ಸಿನೆಮೋದ್ಯೋಗ ಮತ್ತು ಸರ್ವವಿಧದ ಕಲಾವಿಭಾಗಗಳೂ, 'ಸ್ವತಂತ್ರೋದ್ಯೋಗ'ಗಳಾಗಿರುವದು ಅಂತ್ಯಗೊಂಡು, ಅವೆಲ್ಲಾ ಗೋಬೆಲ್ಸನ ಸರ್ವಶಕ್ತ ಮಂತ್ರಿತ್ವದ 'ಇಲಾಖೆ'ಗಳಾಗಿ ಮಾರ್ಪಟ್ಟವು ಶಾಲಾ ಪುಸ್ತಕಗಳ—ಮುಖ್ಯವಾಗಿ ಚರಿತ್ರೆ ಪುಸ್ತಕಗಳ – ನಿಯಮ ನಿಬಂಧನೆ ಮತ್ತು ಸಂಪಾದಕ ಕಾರ್ಯವು ಗೋಬೆಲ್ಸನ ಕೈಗೆ ಬಂದುದರಿಂದ ತರುಣ ಜನಾಂಗದ ತಲೆಯೊಳಗೆ ಅಭ್ಯಾಸ ಮೂಲಕ 'ಪ್ರತೀಕಾರಾತ್ಮಕ ಯುದ್ಧದ' ಸ್ಫೂರ್ತಿಯನ್ನು ಹುಟ್ಟಿಸಿದ ಓರ್ವ ಮುಖ್ಯ ಹೊಣೆಗಾರನೇ ಗೋಬೆಲ್ಸ್. ಈ ಸರ್ವಶಕ್ತ ಮಂತ್ರಿಯಿಂದ ಪರೀಕ್ಷಿಸಲ್ಪಟ್ಟು ರಾಜಕೀಯತಃ ಸಮಾಧಾನಕರವೆಂಬ ಶಿಫಾರಸು ಪಡೆಯದೆ ಓರ್ವ ಲೇಖಕ ಪುಸ್ತಕ ಪ್ರಕಟಿಸಲಾರ; ಒಬ್ಬ ನಾಟಕಕಾರ ತನ್ನ ಕೃತಿಯನ್ನು ರಂಗಭೂಮಿಗೆ ತರಲಾರ; ಓರ್ವ ಕಲಾವಿದ ತನ್ನ ಚಿತ್ರ ಯಾ ಶಿಲಾಕೃತಿಯನ್ನು ಪ್ರದರ್ಶಿಸಲಾರ. ಈ ಕುಂಟ ಪಿಶಾಚಿಯನ್ನು ತನ್ನ ನಟನಾಕೌಶಲ್ಯದಿಂದಾಗಲೀ ಬೇರೆ ವಿಧದಿಂದಾಗಲೀ ತೃಪ್ತಿಪಡಿಸದೆ ಓರ್ವ ನಟಿ ಯಾವುದೊಂದು ಕಂಪೆನಿಯಿಂದಲೂ ಕಂಟ್ರಾಕ್ಟ್ ಪಡೆಯಲಾರಳು. ಈ ರೀತಿ ಚರಿತ್ರೆಯಲ್ಲೇ ಅಗೋಚರವಾದ, ಕಠೋರ ಭಾವನ ಅಂಕುಶ ಪದ್ಧತಿಗೆ ಅಖಿಲ ಜರ್ಮನಿಯೊಳಗಾಯಿತು. ಆದರೆ ಗೋಬೆಲ್ಸನ ಮಹತ್ವಾಕಾಂಕ್ಷೆಯು ಇದರಿಂದ ಕೂಡಾ ಶಮನವಾಗಲಿಲ್ಲ. ಜನರ ಬುದ್ಧಿ ಮತ್ತು ಯೋಚನೆಯ ಮೇಲೆ ಪೂರ್ಣಾಧಿಕಾರ ದೊರೆತರೂ ಅವನಿಗೆ ತೃಪ್ತಿಯಾಗಲಿಲ್ಲ.

× × ×

ರಾಜಕೀಯದ ಕಾರ್ಯರಂಗದಲ್ಲೂ ತನ್ನಾಟವಾಡಬೇಕೆಂದು ಗೋಬೆಲ್ಸ್ ಬಯಸಿದ. ಇದಕ್ಕಾಧಾರವಾಗಿ 'ಬರ್ಲಿನಿನ ರಕ್ಷಕ' ಎಂಬ ಎರಡನೇ ಹುದ್ದೆ ಅವನದಾಯಿತು. ಅದೆಂದರೆ ರಾಜಧಾನಿಯ ಮತ್ತು ಪಕ್ಕದ ಜಿಲ್ಲೆಯ ಸರ್ವ ಪ್ರಥಮ ಪಕ್ಷಾಧಿಕಾರಿ ಪದವಿ ಈ ಹುದ್ದೆಯ ಬಲದಿಂದ ಬರ್ಲಿನಿನ ನಾಜೀ ಮಂತ್ರಿಗಳಲ್ಲಿ ಮತ್ತು ಪಕ್ಷಾಧಿಕಾರಿಗಳಲ್ಲಿ ಹೆಚ್ಚಿನವರ ಮೇಲ್ವಿಚಾರಣೆ ನಡೆಸುವದಕ್ಕೂ, ಅವರೊಳಗಿನ ವ್ಯಕ್ತಿಗತ ಕಲಹಗಳಿಂದ ಲಾಭಪಡೆಯುವದಕ್ಕೂ ಗೋಬೆಲ್ಸ್ ಸಮರ್ಥನಾದ. ಆವನು ಗೋರಿಂಗನ ವಿರುದ್ಧವಾಗಿ ಹಿಟ್ಲರನನ್ನು, ಹಿಟ್ಲರನ ವಿರುದ್ಧ ಗೋರಿಂಗನನ್ನು ಎತ್ತಿಕಟ್ಟಿದ. ರೋಹೆಮನ ಇದಿರಾಗಿ ಹಿಮ್ಲರನನ್ನೂ ಇವರಿಬ್ಬರಿಗೆ ವಿರುದ್ಧ ಸೇನಾನೀ ಮಂಡಲಿಯನ್ನೂ ಹುರಿದುಂಬಿಸಿದ. ಆದರೆ ಜಗಳವು ತುತ್ತ ತುದಿಗೇರಿದಾಗ ತನ್ನ ಅಸದೃಶ ಮಹಾಶಕ್ತಿಯ ಬಲದಿಂದ ಗೋಬೆಲ್ಸನು ಯಾವಾಗಲೂ ಗೆಲ್ಲುವ ಎತ್ತಿನ ಬಾಲ ಹಿಡಿಯುತಿದ್ದ. ಗೋಬೆಲ್ಸನ ಈ ವೈಶಿಷ್ಟ್ಯವು ಅದೃಷ್ಟ ನಿರ್ಣಾಯಕ ದಿನವಾದ 1934ನೇ ಜೂನ್ 30ರಲ್ಲೊಮ್ಮೆ ಬದ್ಧವನ್ನಿಸಿತು. ಅವನ ಮಾಜೀ ಮೇಲಧಿಕಾರೀ ಸ್ಟ್ರಾಸರನೂ ಪ್ರಾಣಾಪ್ತ ರೋಹೆಮನೂ ಮರಣ ದಂಡನೆಗೊಳಗಾಗಿ, ಆತನ ಬದ್ಧ ವೈರಿ ಹಿಮ್ಲರನು ಮೇಲಧಿಕಾರಕ್ಕೇರ ಹತ್ತಿದ ದಿನವದು 'ಗೆದ್ದವರ ಕಡೆ'ಸೇರುವ ಈ ಜಾಣ್ಮೆಯನ್ನು ಆತ1942ರಲ್ಲಿ ಮತ್ತೊಮ್ಮೆ ಪ್ರದರ್ಶಿಸಿದ. ಆಗ ರಶ್ಯದ ಮೇಲೆ ಯುದ್ಧಕ್ಕೇಳಲೇ ಬೇಕೆಂಬ ಹಿಟ್ಲರ್ ಮತ್ತು ಹಿಮ್ಲರರೊಂದು ಪಕ್ಷವಾಗಿಯೂ ಗೋರಿಂಗ್ ಮತ್ತು ಸೇನಾನಿಗಳು ಅದಕ್ಕೆ ವಿರುದ್ಧವಾಗಿಯೂ ನಿಂತು ದೊಡ್ಡ ರೀತಿಯ ಬಿಕ್ಕಟ್ಟು ಹುಟ್ಟಿಕೊಂಡಿತ್ತು. ಅಧಿಕಾರವೊಂದನ್ನಲ್ಲದೆ ಬೇರಾವುದನ್ನೂ ನಂಬದ ಈ ಕುಂಟುಗಾಲಿನ ನಂದ್ವೇಷಿಯು ತನ್ನ ಪ್ರಚಾರ ಯಂತ್ರವನ್ನು

ಮುಂದಾಲೋಚನೆ

ಶಾಂತಿಕಾಲದ ಕುರಿತು ಆಲೋಚಿಸಿ, ತಕ್ಕ ಯೋಜನೆಗಳನ್ನು
ಮಾಡಲು ಇದೀಗ ತಕ್ಕ ಸಮಯ. ಏಕೆಂದರೆ ಯುದ್ಧಕಾಲದ
ಸಮಸ್ಯೆಗಳಿಗಿಂತ ಶಾಂತಿ ಕಾಲದವುಗಳು ಕಷ್ಟತಮ.

ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರಪಾಯವಾಗಿ ಪಾರಾಗಲು ಜನರಿಗೆ ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವವು ತಮ್ಮ ಮೂವತ್ತೆಂಟಕ್ಕೂ ವರ್ಷಗಳ ಅನುಭವದಲ್ಲಿ—ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು. ಅವರಲ್ಲಿ ನಿಮ್ಮ ವಿಶ್ವಾಸವಿಡಲು ಸಂಕೋಚಿಸದಿರಿ; ವಿಲಂಬಿಸಬೇಡಿ

ಮುಂಬರುವ ಕಠಿಣ ದಿನಗಳಲ್ಲಿ ನಿಮಗೆ ಸಹಾಯಕರಾಗಲು ಅವರು ಸಮರ್ಥರು.

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬ್ಯಾಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED

(Incorporated in British India, liability of Members Limited.)

★ ವಿಜಯೀ ಈಸೆನೋವರ್. ★

"ಜನರಲ್ ಈಸೆನೋವರರಂತೆ, ತನ್ನನ್ನು ತಾನೇ ಅಂತರ್ರಾಷ್ಟ್ರೀಯ ಸಂಸ್ಥೆಯಾಗಿ ಮಾರ್ಪಡಿಸಿಕೊಂಡ ಪ ತ್ತೊಬ್ಬ ಸೇನಾನಿಯ-ಒಬ್ಬ ಮಾರ್ಹಬೊರೋವನ್ನುಳಿದು ಇಡೀ ಚರಿತ್ರೆಯಲ್ಲೇ ಇಲ್ಲ"-ಎಂದು 'ದಿ ಟೈಮ್ಸ್' ಪತ್ರಿಕೆ ಬರೆದಿದೆ. ಚರ್ಚಿಲ್ ರುಸವೆಲ್ಟರೊಂದಾಗಿ ದ್ವಿತೀಯ ರಂಗದ ಸೇನ ನೀ ಮಕುಟವನ್ನು ಈ ಅಜ್ಞಾತ ಅಮೆರಿಕನನ ತಲೆಯ ಮೇಲೆ ಹೇರಿದ ಆ ಮುಹೂರ್ತದಲ್ಲೇ ಹಿಟ್ಲರನ ಬಾಗ್ಯ ರೇಖೆ ಮಾಸಿಹೆನ್ನಬೇಕು ಉದ್ದ 'ಹಿಡಿ'ಯಲ್ಲಿ ನಿಲ್ಲಿಸಿರುವ 'ಭೂಗೋಲ'ವೆಂಬಂತೆ ಬಡಕಲು ದೇಹದಲ್ಲಿ ಕುಂಬಳಗಾತ್ರದ ತಲೆ!-ಆ ತಲೆಯ ಮೇಲೆ ಕಳೆದ ಮಹಾಯುದ್ಧದಲ್ಲಿ ಅಂತ್ಯ ಭಾಗದ ಸೇನಾನಿಯಾಗಿದ್ದ ಮಾರ್ಶಲ್ ಫೋಚನ ಹೆಗಲ ಮೇಲಿದ್ದುದಕ್ಕಿಂದಲೂ ಹೆಚ್ಚಿನ ಹೊಣೆಗಾರಿಕೆ-ಆ ಹೊಣೆಯನ್ನು ಪ್ರಪಂಚದ ನಿರೀಕ್ಷೆಗಿಂತ ಮೊದಲೇ ನಿರ್ವಹಿಸಿ ವಿಜಯ ಶ್ರೀಯ ಕೈಹಿಡಿದ ಅಸಾಮಾನ್ಯ ಕೀರ್ತಿ-ಇವೇ ಪಶ್ಚಿಮ ರಂಗದ ಸರ್ವ ಸೇನಾನಿ ಜನರಲ್ ಈಸೆನೋವರರೆಂದರೆ! 'ಈವ್ನಿಂಗ್ ಸ್ಟೇಂಡಾರ್ಡ್' ಪತ್ರಿಕೆಯಲ್ಲಿ ಜೋನ್ ಥೋಮ್ಸನರು ಬರೆದಿರುವ ಈ ಕೆಳಗಿನ ಲೇಖನವು ಈಸೆನೋವರರ ಯೋಗ್ಯತೆಯನ್ನು ಯಥಾರ್ಥವಾಗಿ ಪ್ರತಿಬಿಂಬಿಸುತ್ತಿವೆ. ಅದನ್ನಿಲ್ಲಿ ಕೊಡಲಾಗಿದೆ.—

ದಿನದಿನವೂ ಬೇರೊಂದಂತೆ ಬದಲಾಯಿಸಬಲ್ಲ

× × ×

ಗೋಬೆಲ್ಸನಿಂದ ನಿನ್ನೆಯ ವರೆಗೂ ಕಮ್ಯುನಿಸ್ಟ್ 'ರಾಕ್ಷಸಿತ್ವ' [ಎಂದು ಜರ್ಮನ್ ಪತ್ರಿಕೆ ಮತ್ತು ರೇಡಿಯೋಗಳಲ್ಲಿ ಸಾರಲ್ಪಡುತ್ತಿದ್ದ ಘಟನೆಗಳು ನಾಳೆಯೇ "ಜರ್ಮನ್ ಜೀವನದ ಅತಿ ಪವಿತ್ರ ಹಾಗೂ ಮೂಲಾಧಾರ ಅಡಿಗಲ್ಲುಗಳು" ಎಂಬ ಸಂಭಾವನೆ ಪಡೆಯಬಹುದು. ಗೋಬೆಲ್ಸನ ದೃಷ್ಟಿಯಲ್ಲಿ 'ಒಬ್ಬನೇನು ಹೇಳುತ್ತಾನೆ?' ಎಂಬುದು ಮುಖ್ಯವಲ್ಲ, 'ಒಬ್ಬನು ಏನನ್ನೇ ಆದರೂ ಹೇಳುತ್ತಾನೋ?' ಎಂಬುದೇ ಮುಖ್ಯ. ಮಂಕಾಗಿಸುವ ಭವಿಷದ್ವಾಣಿಗಳ, ಅಸತ್ಯ ಮತ್ತು ಎಡೆಬಿಡದ ಪ್ರಚಾರಗಳ ಪ್ರಬಲ ಪ್ರವಾಹವನ್ನು ಹರಿಯಿಸಿ, ಸಾರ್ವಜನಿಕರನ್ನು ಗೊಂದಲದಲ್ಲದ್ದಿ, ನಾಜೀ ನಾಯಕರ ಪಾಪದ ಹಂಚಿಕೆಗಳನ್ನು ಜ್ಯಾರಿಮಾಡುವದೇ ಜರ್ಮನಿಯ ಪ್ರಚಾರ ಧೋರಣೆ

ಗೋಬೆಲ್ಸನ ಹಳೇ ವೈರಿಯಾದ ಹಿಮ್ಲರ್ ಕೂಡಾ ಪಿಟ್ಟೆಂದು ಗೊಣಗದೆ, ಡಾಕ್ಟರನನ್ನು ಅಧಿಕಾರಸ್ತ್ಯಗೊಳಿಸಲು ಬಯಸದೆ, ಕಡೆಗಾಲತ್ಯದ ವರೆಗೂ ಆ ಪದವಿಯಲ್ಲಿರಗೊಟ್ಟುದರ ಕಾರಣ ಇದೇ ಈತನ ಸರ್ವವ್ಯಾಪೀ ಪ್ರಚಾರ ಯಂತ್ರದ ಸಹಾಯ ವಿನಹ ಹಿಮ್ಲರನ ಭಯೋತ್ಪಾದನೆಗಳು ಕೂಡಾ ಕಾರ್ಯಕಾರಿಯಾಗುವಂತಿರಲಿಲ್ಲ ಗೋಬೆಲ್ಸನ ಮಹಾ ವರ್ಚಸ್ಸು ಮತ್ತು ಹೊಣೆಗಾರಿಕೆಯ ಪೂರ್ಣ ಜ್ಞಾನವಿರುವ ಬ್ರಿಟಿಷ್ ಸರಕಾರವು ಆತನನ್ನು ಯುದ್ಧಾಪರಾಧಿಯೆಂದು ಸಾರಿದೆ ತನ್ನಾಧೀನದಲ್ಲಿದ್ದ ದುರ್ದೈವಿಗಳನ್ನು ವ್ಯಕ್ತಿಶಃ ಕೊಲೆ ಮಾಡಿದ ನಾಜೀ ಘಾತುಕರಿಗೆ ದೊರೆಯಲಿರುವ ಪ್ರಾಯಶ್ಚಿತ್ತವೇ ಗೋಬೆಲ್ಸನಿಗೂ ಕಾದಿದೆ.

ನಿರ್ಲಿಪ್ತ

'ಜರ್ಮನ್ ಪತನಕ್ಕಾಗಿ ಇಡೀ ಪ್ರಪಂಚವೇ ಆನಂದ ಕೋಲಾಹಲದಲ್ಲಿರುವ ಈ ಕಾಲದಲ್ಲಿ ಓರ್ವ ಮನುಷ್ಯ ಮಾತ್ರ ಶಾಂತನಾಗಿಯೇ ಇದ್ದಾನೆ-ತನ್ನ ಧಾಳಿಯನ್ನು ಸರ್ವ ಯುರೋಪು ಕೋಟೆಯು ಪ್ರತಿಭಟಿಸಿ ನಿಂತಕಾಲದಲ್ಲಿ ಹೇಗೆ ಪ್ರಶಾಂತನಾಗಿದ್ದನೋ ಹಾಗೆಯೇ ಇದ್ದಾನೆ ಪೂರ್ಣ ವಿಜಯದ ಕುರಿತು ಮುಖ್ಯ ಸೇನಾನಿ ಎಂದೂ ಸಂದೇಹಗೊಂಡುದಿಲ್ಲ ಆತನು ಆದ್ಯಂತದ ವರೆಗೂ ಗಂಭೀರ ಪ್ರಶಾಂತತೆಯಿಂದ ತಯಾರಿಸಿದ್ದ ಹಂಚಿಕೆಯು ಬಂದು ಭಾಗವಾಗಿಯೇ ಅವನ ಸೇನೆಗಳಿಗೆ ಜರ್ಮನರು ಮಿಲಿಯ ಗಟ್ಟಲೆಯಲ್ಲಿ ಶರಣಾದುದು. ಅವರು ಶರಣಾಗಲೇ ಬೇಕೆಂಬುದನ್ನು ಆತ ತಿಳಿದಿದ್ದ ಈ ಸುಮುಹೂರ್ತವನ್ನಾತ ಎಂದೋ ಊಹಿಸಿದ್ದ 1911ರಲ್ಲಿ ಜನರಲ್ ಮಾರ್ಶಲರು ತನ್ನನ್ನು ಕರೆಸಿದಾಗಲೇ ಈ ವಿಷಯವು ಆತನ ಮೆದುಳಿಗೆ ಹೊಳೆದಿದ್ದಿತು 'ನೀನು ಯುರೋಪಿಯನ್ ಸೇನೆಗಳನ್ನು ನಡೆಸುವದಕ್ಕಾಗಿ ಹೋಗವವನಿದ್ದಿ. ನಿನಗೆ ಯಾವಾಗ ಹೊರಡಲು ಸಾಧ್ಯವಿದೆ?' ಎಂದು ಜನರಲ್ ಮಾರ್ಶಲರು ಕೇಳಿದಾಗ "ನಾಳೆ ಮುಂಜಾನೆಯೇ" ಎಂಬ ಉತ್ತರ ಬಂತು ಆ ಅದೃಷ್ಟದಾಯೀ ಮುಹೂರ್ತದ ನಂತರ ಈತನ ಸರ್ವಸ್ವವೂ ಈಗ ಬಂದಿರುವ ಮುಕ್ತಾಯದ ಸಾಧನೆಗಾಗಿಯೇ ಮೀಸಲಿದ್ದಿತು.

ಐಕ್ಯಸಾಧಕ

ಈ ಮಹಾ ವಿಜಯಯ ಕುರಿತು ಚರಿತ್ರೆಯೇನನ್ನು ಒಹುದು- ಅಸಾಮಾನ್ಯ ಶಕ್ತಿಯ ಓರ್ವ ಸೇನಾನಿಯನ್ನು ಒಹುದ -ಅದು ನಿಜ ವೈರಿಗಳ ಮರ್ಮಸ್ಥಾನಗಳನ್ನು ಹಿಡಿದುಕೊಂಡಂತೆಯೇ ತನ್ನ ಅಪಾರ ಸೇನೆಯ ಹೃದಯವನ್ನೂ ಸೆರೆಹಿಡಿದ ಜನ... [illegible] ಯದ ದುರ್ದಿನಗಳಲ್ಲ ಕೂಡಾ ಅನೋಪಜಯದ ದಿನಗಳಂತೆಯೇ ಶಾಂತ ಮತ್ತು ನಿಶ್ಚಲನಾಗಿದ್ದ ... ವೂ ನಿಜ

ಆದರೆ ಚರಿತ್ರೆಯು ಮಾಡಲಿರುವ ಮತ್ತೊಂದು ವಿಮರ್ಶೆಯೆಂದ ... ವಿಜಯದ ಮೂಲ ಕಾರಣವೂ ಅದರಲ್ಲೇ ಇದೆ ಹಲವು ರಾಷ್ಟ್ರಗಳ ಮತ್ತು ಹಲವು ಜನಾಂಗಗಳ ಸೇನೆಗಳನ್ನು ಅತಿ ನಾಜೂಕಿನ ಅಜೇಯವಾದ ಏಕಾಯುಧವಾಗಿ ಪ್ರಯೋಗಿಸಿದವನು ಈ ಮನುಷ್ಯನೆಂಬುದನ್ನು ಮರೆಯಬಾರದು ಬೇರೆ ಸೇನಾನಿಗಳಾಗಿದ್ದರೆ ಈ ಕಾರ್ಯದಲ್ಲಿ ತಪ್ಪಿಬೀಳುತ್ತಿದ್ದರು ಅವಿಶ್ವಾಸ ಮತ್ತು ತಪ್ಪಭಿಪ್ರಾಯಗಳೇಳುವದು ಸಂಭವನೀಯವೆಂದು ಕಾಣುತ್ತಿತ್ತು.

ಸೇನಾ ಸಮಸ್ಯೆಯು ಬೇರಾವ ಸೇನಾನಿಯನ್ನಿದಿರಿಸಿದುದಕ್ಕಿಂತಲೂ ಅದ್ಭುತ ಪರಿಮಾಣದಲ್ಲಿ ಜನರಲ್ ಈಸೆನೋವರರನ್ನಿದಿರಿಸಿದ್ದಿತು ಮನುಷ್ಯ ಸ್ವಭಾವ ಸಹಜವಾದ ಸಮಸ್ಯೆಯೂ ಅಷ್ಟೇ ಕಠಿಣವಾಗಿ ಇದಿರಾಗಿದ್ದಿತು. ಈಸನೋವರರ ಸಾಮರ್ಥ್ಯವು ಮೊದಲನೆಯದನ್ನೂ ಅವರ ವ್ಯಕ್ತಿತ್ವವು ಎರಡನೆಯದನ್ನೂ ತೀರ್ಮಾನಿಸಿದುವು

ನಿಷ್ಪಕ್ಷಪಾತಿ

ಜನರಲ್ ಈಸನೋವರ್ ಸ್ಪಷ್ಟ ವಕ್ತಾರ, ನಿದಾಕ್ಷಿಣ್ಯವಾದಿ, ಉದಾರಿ. ಯೋಚನೆಯಲ್ಲಿ ಸ್ಪಷ್ಟತೆ, ಮಾತಿನಲ್ಲಿ ಸರಳತೆಯಿರುವ ಈ ಸೇನಾನಿಯು ಮಿತ್ರ ರಾಷ್ಟ್ರೀಯರೊಳಗಿನ ವಿಶ್ವಾಸ, ಸಹಕಾರಗಳಿಗೆ ಹಾನಿಕರವಾಗಬಲ್ಲ ಒಳಬೋಗಗಳನ್ನು ನಿವಾರಿಸಿ ಸ್ವಚ್ಛೀಕರಿಸಿದ ಜರ್ಮನ್ ಪರಾಭವದ ಸಂಪೂರ್ಣತೆಗೆ ಆತನ ಈ ಭಾಗದ ವಿಜಯವೇ ಬಹುವಟ್ಟಿಗೆ ಕಾರಣ. ಅಪನಂಬಿಕೆಯ ಬೀಜಗಳನ್ನು ಆತ ನಿದಾಕ್ಷಿಣ್ಯವಾಗಿ ಕಿತ್ತೊಗೆಯುತ್ತಿದ್ದ, ಭೇದಬುದ್ಧಿಯನ್ನು ಕಠಿಣ ಹಸ್ತದಿಂದ ದಮನಿಸುತ್ತಿದ್ದ.

ಇದಕ್ಕೆ ನಿದರ್ಶನವಾಗಿ ಒಂದು ಕಥೆ ಬಳಕೆಯಲ್ಲಿದೆ. ಒಂದು ಬಾರಿ ಓರ್ವ ಅಮೆರಿಕನ್ ಕರ್ನಲನಿಗೂ ಅವನ ಬ್ರಿಟಿಷ್ ಅನುಯಾಯಿಗೂ ಹಸಿಬಿಸಿ ಕಚ್ಚಾಟವಾಯಿತು. ಈಸನೋವರರು ಅಮೆರಿಕಾನನ್ನು ಕರಯಿಸಿಕೊಂಡರು "ಜಗಳದ ಕಾರಣಗಳು ಮತ್ತಿಗೆ ನಿನ್ನ ವರ್ತನ ನಾನಿನ್ನಿಂದ ಸಹಿಸಿಕೊಳ್ಳಲಾಗಲಿಲ್ಲ; ಅದಕ್ಕೊಂದು ಅರ್ಥವಿದೆ ನಾನಾದರೂ ಹಾಗೆಯೇ ಬ್ರಿಟಿಷ್ ಕರ್ನಲನನ್ನು ನೀನು 'ಹಾಗೆ, ಹೀಗೆ' ಬೈದಿಯಂತೆ ಅದನ್ನೂ ನಾನು ಅರ್ಥಮಾಡಿಕೊಳ್ಳಬಲ್ಲೆ. ಸೋಲ್ಜರರು ಸೋಲ್ಜರರ ಭಾಷೆಯನ್ನೇ ಆಡುತ್ತಾರೆ ಆದರೆ ನೀನವನನ್ನು 'ಬ್ರಿಟಿಷರ-ಹಾಗೆ ಹೀಗೆ' ಎಂದು ಬೈದುದನ್ನು ಮಾತ್ರ ನಾನು ಸಹಿಸಿಕೊಳ್ಳಲಾರೆ ಅದಕ್ಕಾಗಿ ನಿನ್ನನ್ನು ಮನೆಗೆ ಕಳುಹಿಸುತ್ತೇನೆ" ಅವನನ್ನು ಮನೆಗೆ ಕಳುಹಿಸಿಯೂ ಆಯಿತು

ಸಾದಾ ಮನುಷ್ಯ

ಈಸೆನೋವರರು ಖಾಸಗೀ ಜೀವನದಲ್ಲಿ ತೀರಾ ಸಾದಾ ಮನುಷ್ಯ. ಅವರು ದಯಾರ್ದ್ರಹೃದಯಿ. ಗುಣ ನಡತೆಯ ವಿಶೇಷ ರೀತಿಯದೇನೂ ಅಲ್ಲ ಅವರ ಚರಿತ್ರೆಯಲ್ಲಿ ಆತುರಜನಕ ಭಾಗವೆಂದರೆ ಸೇನಾಜೀವನ ಮಾತ್ರ ಅಮೇರಿಕನ್ ಸೇನೆಯ ಚರಿತ್ರೆಯಲ್ಲೇ ಇಲ್ಲದಷ್ಟು ಕ್ಷಿಪ್ರದಲ್ಲಿ ಅವರು ಮೇಲಂತಸ್ತಿಗೇರಿದ್ದಾರೆ ಈ ಯುದ್ಧಾರಂಭದಲ್ಲಿ ಅಮೆರಿಕನ್ ಸೇನೆಗಳ ಹಲವು ಸಾವಿರ ಕರ್ನಲರ ಪೈಕಿ ಈಸನೋವರರೂ ಒಬ್ಬರಾಗಿದ್ದರು ಸಾರ್ವಜನಕರಿಗೆ ಅವರ ವಿಷಯವಾಗಿ ಏನೊಂದೂ ತಿಳಿದಿರಲಿಲ್ಲ. ಈಗ ಅವರು ಎಲ್ಲಾ ಸೇನಾನಿಗಳಲ್ಲಿ ಸರ್ವ ಪ್ರಧಾನರಾಗಿದ್ದಾರೆ

ಆದರೆ ಪರ್ಲ್‌ಹಾರ್ಬರಿನ ಧಾಳಿಯಾಗುವ ಎಷ್ಟೋ ಕಾಲಕ್ಕೆ ಮೊದಲೇ ಅಮೇರಿಕದ ಸೇನಾ ತಜ್ಞರು ಉಜ್ವಲ ಭವಿಷ್ಯವಿರುವ ದೃಢ ಬುದ್ಧಿಯ ಈ ತರುಣ ಟೆಕ್ಸಾಸನ ಕುರಿತು ಮಾತಾಡುತ್ತಿದ್ದರು. 1911ರಲ್ಲೇ ಓರ್ವ ಸೇನಾ ತರಬೇತಿಗಾರನು 'ಹುಟ್ಟು ಸೇನಾನಿ' ಎಂದು ಈಸೆನೋವರರ ಕುರಿತು ವರದಿ ಮಾಡಿದ್ದ. ಆ ಮೇಲಿನ ವರುಷಗಳಲ್ಲಿ ಈ ಮಾತು ಸತ್ಯವಾಯಿತ ಮುಂಬರುವ ಯುದ್ಧದ ಪ್ರಯೋಗಾರ್ಥವಾಗಿ 1911ರಲ್ಲಿ ಅಮೇರಿಕನ್ ಸೇನೆಯೊಂದು ಸಾಮೂಹಿಕ ಕೃತಕ ಯುದ್ಧ ಪ್ರದರ್ಶನ ಮಾಡಿತು. ಅಲ್ಲಿ ಸಮುದ್ರ ಸೇನೆಯ ನಾಯಕನಾಗಿ ನಟಿಸಿದ ಜನರಲ್ ಈಸೆನೋವರರು ತನ್ನ ಕುರಿತಾಡಿದ್ದ ಸೇನಾತಜ್ಞರ ಭವಿಷದ್ವಾಣಿಯು ಆಗಲೇ ಫಲಿಸಿದೆ ಎಂಬುದನ್ನು ತೋರಿಸಿಕೊಟ್ಟರು.

ಹುಟ್ಟು ಯೋಧ

ಈ ಹುಟ್ಟುಯೋಧ ಬುಗ್ಗಿ ಚಪ್ಪಿದುದು ಹಳ್ಳಿಯ ಪ್ರಶಾಂತ ಕುಟುಂಬವೊಂದರಿಂದ ಈಸನೋವರರ ಐವರು ಸಹೋದರರು ವಕಾಲತು, ಇಂಜಿನಿಯರಿಂಗ್, ಪತ್ರಿಕೋದ್ಯಮ ಮೊದಲಾದ ಕಸಬು ಪ್ರವೃತ್ತರಾದರು. ಆದರೆ ಇವರು ಮಾತ್ರ ಆದಿಯಲ್ಲೇ ಸೇನೋದ್ಯೋಗವನ್ನು ಆಯಿಸಿಕೊಂಡಿದ್ದರು-ಅದಕ್ಕಾಗಿ ಎಂದೂ ಅನುತಾಪ ಪಟ್ಟುದಿಲ್ಲ ಕಳೆದ ಮಹಾಯುದ್ಧ ಮುಗಿದಿತ್ತು ಮಾತ್ರ-ಈಸೆನೋವರರಾಗ ಪೆನ್ಸಿಲ್ವೇನಿಯಾದ ಟೇಂಕು ತರಬೇತಿ ಕೇಂದ್ರದಲ್ಲಿ ಲೆಫ್ಟನೆಂಟ್ ಕರ್ನಲಾಗಿ ಕೆಲಸಮಾಡಿದ್ದರು; ಹೊಸ ಜಾಗತಿಕ ಯುದ್ಧವು ಗರ್ಭಾಂದೋಲನದಲ್ಲಿದೆ ಎಂಬದನ್ನು ಇವರರಿತುಕೊಂಡರು ಎಲ್ಲರ ಸ್ವಾಗತ ಮಾಡಬಹುದಂತಿರುವ ತನ್ನ ಮೆದುಳಿನ ಹಿಡಿಯುವಷ್ಟು ಆಧುನಿಕ ಯುದ್ಧ ವಿದ್ಯೆಗಳನ್ನೆಲ್ಲಾ ಕಲಿತುಕೊಂಡರು.

(೧೦ನೇ ಪುಟ ನೋಡಿರಿ)

S. V. S High School, Katapadi. S. K.

ಉದ್ಘಾಟನಾ ಸಮಾರಂಭ

ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲು

ತಾ **1—6—'45**ನೇ ಶುಕ್ರವಾರ ಪೂರ್ವಾಹ್ನ ಘ. **10-25**ಕ್ಕೆ ತೆರೆಯಲ್ಪಡುವುದು

ರಾವ್‌ಬಹದೂರ್ ಡಾಕ್ಟರ್ ಎಮ್. ಕೇಶವ ಪೈ O. B. E., M D

ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗಲು ಸಮ್ಮತಿಸಿರುವರು

ಪ್ರಕೃತ I ರಿಂದ IV ಫೋರ್ಮುಗಳ ವರೆಗೆ ಪ್ರತಿ ವರ್ಗಕ್ಕೆ 40 ಮಕ್ಕಳಂತೆ ಮಾತ್ರ ದಾಖಿಲು ಮಾಡಿಕೊಳ್ಳುವ ಏರ್ಪಾಡು ಮಾಡಿರುವ ಕಾರಣ ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮುಂದಾಗಿ ಹೆಡ್‌ಮಾಸ್ತರರಿಗೆ ತಿಳಿಸುವುದು ಹಿತ.

ಪಿ ರಾಮದಾಸ ನಾಯಕ್ ಬಿ. ಎ., ಎಲ್. ಟಿ.,
ಪ್ರಧಾನಾಧ್ಯಾಪಕ ಮತ್ತು ಲೇಖಕ

7-5-'45

ಬರ್ಲಿನ್ ನಗರದಲ್ಲಿ— ಅದ್ಭುತ ಪಾತಾಳ ಪುರಿ!

ಬರ್ಲಿನಡಿಯಲ್ಲಿ ಮತ್ತೊಂದು ನಗರವೇ ನಿರ್ಮಾಣಗೊಂಡಿದ್ದುದನ್ನು ಅದನ್ನಾಕ್ರಮಿಸಿಕೊಂಡ ಕೆಂಪು ಯೋಧರು ಕಂಡು ಹಿಡಿದಿದ್ದಾರೆ. ಈ ಪಾತಾಳ ನಗರದಲ್ಲಿ ವಿಸ್ತಾರ ದ್ವಾರಗಳು, ರಸ್ತೆಗಳು, ಮನೆಗಳು, ಕಾರ್ಖಾನೆಗಳು, ಸರಬರಾಯಿ ಸರಂಜಾಮುಗಳು ಎಲ್ಲವೂ ತುಂಬಿದ್ದು ಅದರ ವರ್ಣನೆಯನ್ನು ಕೇಳುವಾಗ ನಮ್ಮ ಪುರಾಣಗಳಲ್ಲಿರುವ ನಾಗಲೋಕ, ಬಲಿ ರಾಜ್ಯಗಳ ಸ್ಮರಣೆ ಬರುತ್ತಿದೆ 'ರ್ಯೂಟರ್' ವಿಶೇಷ ಬಾತ್ಮೀದಾರನಾದ ಡಂಕನ್ ಹೂಪರನು ಅಲ್ಲಿರದ 'ರೆಡ್ ಸ್ಟಾರ್' ಪತ್ರಿಕೆಗೆ ಬರೆಯುತ್ತಾ 'ದೀರ್ಘ ಕಾಲಕ್ಕೆ ಮೊದಲೇ ಯುದ್ಧವು ಬರ್ಲಿನನ್ನು ಪಾತಾಳಕ್ಕೆ ಸೇರಿಸಿದ್ದಿತು' ಎಂದಿದ್ದಾನೆ. ಈ ಕುರಿತು ನಡೆದ ಪರಿಶೀಲನೆಗಳಿಂದ, ಬರ್ಲಿನ್ ನಾಗರಿಕರಿಗೆ ಈ ನೆಲ ನಗರದ ಕೆಲವು ಮುಖ್ಯ ಭಾಗಗಳ ಪರಿಚಯವಿದ್ದುದು ಅತ್ಯಲ್ಪವೆಂದು ತಿಳಿದು ಬಂದಿದೆ ಸರಕಾರದ ಕಾಂಕ್ರೀಟ್ ರಚಿತ ಮಾರ್ಮಿಕ ಸ್ಥಾನಗಳ ಗುಟ್ಟನ್ನು ಯಾರಿಗೂ ಕೊಟ್ಟಿರಲಿಲ್ಲ ಅದಕ್ಕೆ ಬಲವಾದ ಪಹರೆಯನ್ನಿಡಲಾಗಿತ್ತು. ದ್ವಾರಪಾಲಕರು ಅವುಗಳ ದಾರಿ ಮಾತ್ರವರಿತಿದ್ದರು. ಮುಖ್ಯ ಮುಖ್ಯ ಅಧಿಕಾರಿಗಳಿಗಾದರೂ ತಮತಮಗೆ ಸಂಬಂಧಿಸಿದ ಒಂದೊಂದು ಭಾಗಗಳು ಮಾತ್ರಗೊತ್ತಿದ್ದುವಲ್ಲದೆ ಈ ಕೃತಕ ನಗರದ ಪೂರ್ಣ ಪರಿಚಯವಿರಲಿಲ್ಲ ಇಂತಹ ವಿಚಿತ್ರ ರೀತಿಯ ಅದ್ಭುತ ಗುಪ್ತ ಗೃಹಗಳನ್ನು ಶೋಧಿಸುತ್ತಾ ಪಾತಾಳ ನಗರದಲ್ಲಿದ್ದ ಗೋರಿಂಗ್ ಮತ್ತು ಗೋಬೆಲ್ಸರ ಗುಪ್ತ ವಸತಿಗಳನ್ನು ರಶ್ಯಾನರು ಪತ್ತೆ ಹಚ್ಚಿದ್ದಾರೆ.

ಗೋರಿಂಗನ ವಸತಿಯು ಕಾಂಕ್ರೀಟ್ ಮತ್ತು ಉಕ್ಕಿನಿಂದ ಕಟ್ಟಲ್ಪಟ್ಟದ್ದು ಅಭೇದ್ಯವಿದ್ದಿತು. ಇದು ವರೆಗಿನ ತಿಳುವಳಿಕೆಗೆ ಬಂದಿರುವ ಯಾವ ವರ್ಗದ ಬೋಂಬಾದರೂ ಭೇದಿಸಲಾಗದ ರೀತಿಯಲ್ಲಿ ಅದು ಕಟ್ಟಲ್ಪಟ್ಟಿದ್ದಿತು. ಯುದ್ಧಾರಂಭಕ್ಕೂ ಮೊದಲೇ ಅದನ್ನು ಕಟ್ಟಲಾಗಿತ್ತು. ಬರ್ಲಿನ್ ಯುದ್ಧದ ಕೊನೆಯಂಕದಲ್ಲಿ ಗೋಬೆಲ್ಸನು ತನ್ನ ಎಲ್ಲಾ ಕಾರ್ಯವನ್ನು ಮಾಡುತ್ತಿದ್ದುದು ತನ್ನ ಪಾತಾಳ ಕಾರ್ಯಾಲಯದಿಂದಲೇ. ನೆಲದಡಿ 60 ಅಡಿ ಆಳದ ನಿವಾಸದಲ್ಲಿ ತನ್ನ ಕುಟುಂಬ ಮತ್ತು ಸಿಬಂದಿಯೊಂದಿಗೆ ಅವನು ಸುರಕ್ಷಿತವಾಗಿ ಕಾರ್ಯ ಸಾಗಿಸುತ್ತಿದ್ದ. ಅಲ್ಲಿ ಅವನ ವಶ 'ಮೈಕ್ರೋಫೋನ್' ಇದ್ದಿತಾದ್ದರಿಂದ, ಅಲ್ಲಿಂದಲೇ ಕೊನೆಯ ಪ್ರತಿಭಟನೆಗಾಗಿ ವೀರಾವೇಶದ ಭಾಷಣಗಳನ್ನು ಕೊಡುತ್ತಿದ್ದ

ಈ ನೆಲ ನಗರದಲ್ಲಿ ಸಾಮಾನ್ಯ ಜನರಿಗಾಶ್ರಯವಾಗಿ ವಿಸ್ತಾರ ಭವನಗಳೂ ಇದ್ದುವು ಗುಹೆಯಂತಹ ದ್ವಾರಗಳಿದ್ದು ಒಳಗಡೆ ಮಸಕಾಗಿರುವ ಉದ್ದುದ ಸಾಲುಗಳನ್ನು ರಶ್ಯನರು ಕಂಡಿದ್ದಾರೆ ಜರ್ಮನ್ ಮಹಿಳೆಯರೂ ಮಕ್ಕಳೂ 1942ರಿಂದಲೂ ಇಲ್ಲಿ ವಾಸಿಸುತ್ತಿದ್ದರು.

ಈ ಅಡಿನಗರದ ಅಡಿಭಾಗದಲ್ಲಿ ಅತಿ ವಿಸ್ತಾರವಾದ ಕಾರ್ಯಾಲಯ. ಇಲ್ಲಿ ಅಧಿಕ ಪರಿಮಾಣದಲ್ಲಿ ಕೈ ಕೋವಿಗಳು ತಯಾರಾಗುತ್ತಿದ್ದುವು ಆಕಾಶ ಧಾಳಿಯ ವೇಳೆ ನೆಲನಗರ ಸೇರಿದ ಜರ್ಮನರು ಮೈಗಳ್ಳರಾಗಿ ಕುಳಿತಿರದೆ ಈ ಕಾರ್ಯಾಲಯದಲ್ಲಿ ಆಯುಧ ತಯಾರಿ ಮಾಡುತ್ತಿದ್ದರು ಒಳಗಡೆಯ ಹಾದಿಗಳಿಗೆಲ್ಲಾ ಗೆಸ್ಟಪೋ ಕಾರ್ಯಾಲಯದ ಸಮೀಪವೇ ಮೂಲ. ಆ ಒಡಲಲ್ಲಿ ಕಾಂಕ್ರೀಟ್ ಮತ್ತು ಉಕ್ಕಿನ ಅಭೇದ್ಯ ಕಟ್ಟಡಗಳಿದ್ದುವು ಅಲ್ಲಿದ್ದ ಗುಂಡು, ಕೋವಿ, ಸಿಡಿ ಮದ್ದುಗಳು ಒಂದು ಸಣ್ಣ ಯುದ್ಧವನ್ನಾರಂಭಿಸಲು ಸಾಕಾಗುವಷ್ಟಿದ್ದುವು

ಬೆಂಟಿಕ್ ದ್ವೀಪದಲ್ಲಿ— ವಿಚಿತ್ರ ಜನಜೀವನ!

ಆಸ್ಟ್ರೇಲಿಯದ ಒಂದು ಬಾಗವಾಗಿ ಯುದ್ಧ ಕ್ಷೇತ್ರದಲ್ಲೇ ಇದ್ದರೂ ಯುದ್ಧದ ಅಥವಾ ನಾಗರಿಕತೆಯ ಗಾಳಿ ಕೂಡಾ ಸೋಂಕಲು ಬಿಡದ ಬೆಂಟಿಕ್ ದ್ವೀಪದ ವಿಸ್ಮಯಕಾರೀ ಪರಿಚಯವು 'ಆಸ್ಟ್ರೇಲಿಯನ್ ನ್ಯೂಸ್ ಲೆಟರ್' ನಲ್ಲಿಪ್ರಕಟವಾಗಿದೆ. ಇದು ಕಾರ್ಪೆಂಟೇರಿಯದ ಕಂದರದಲ್ಲಿರುವ ಭೂತುಂಡು. ಒತ್ತೊತ್ತಾದ ಕಾಡುಗಳು ಮತ್ತು ಮರಳು ಮಣ್ಣು ಮಾತ್ರವಿರುವ ದ್ವೀಪ ಕೇವಲ 60 ಚದರ ಮೈಲು ವಿಸ್ತೀರ್ಣವಿದೆ. 1802ರಲ್ಲಿ ಕೆಪ್ಟನ್ ಮೇಥ್ಯೂ ಎಂಬವನಿದನ್ನು ಕಂಡು ಹಿಡಿದು, ಆಗ ಮದ್ರಾಸ್ ಗವರ್ನರರಾಗಿದ್ದ ಲೋರ್ಡ್ ವಿಲಿಯಮ್ ಬೆಂಟಿಕರ ಹೆಸರನ್ನೇ ಅದಕ್ಕಿಟ್ಟಿದ್ದ

ಇಲ್ಲಿಯ ಜನರು ಶಿಲಾಯುಗದವರು ನಾಗರಿಕತೆಯ ಗಾಳಿ ಕೂಡಾ ಸೋಂಕದಂತೆ ಅವರು ಇದುವರೆಗೂ ಪ್ರತಿಭಟಿಸುತ್ತಾ ಬಂದಿದಾರೆ. ಬಿಳಿ ಜನರೆಂದರೆ ಬಹಳವಾಗಿ ದ್ವೇಷಿಸುತ್ತಾರೆ ಮಿಕ್ಕ ಕಡೆಗಳಲ್ಲೆಲ್ಲಾ ವಿಜಯ ಯಾತ್ರೆ ನಡೆಸಿ ಬಂದ ಬಿಳಿ ಮಿಶ್ನರಿಗಳು ಈ ದ್ವೀಪ ವಾಸಿಗಳ ಸ್ನೇಹ ಸಂಪಾದನೆಗಾಗಿ ಆಗಾಗ ಹೋಗಿದ್ದರು; ಅಲ್ಲಿಯವರ ವಿರೋಧವನ್ನು ಸಹಿಸಲಾರದ ಓಡಿ ಬಂದಿದ್ದರು ಅಲ್ಲಿಯವರೆಲ್ಲಾ ನಗ್ನ ಜೀವಿಗಳು ವಸ್ತ್ರದೊಂದು ತುಂಡೂ ಆ ದ್ವೀಪದಲ್ಲಿಲ್ಲ ಮನೆ ಮಾಡುವುದು ಎಂಬುದನ್ನೇ ಅವರರಿಯರು. ಎಲ್ಲಾ ಋತುಗಳಲ್ಲೂ ನೆಲದಲ್ಲೇ ಮಲಗುತ್ತಾರೆ ಸಮುದ್ರ ಚಿಪ್ಪುಗಳ ಪಾತ್ರೆ ಮಾಡಿಕೊಂಡು ಮೀನು, ಆಮೆಗಳನ್ನು ಬೆಂಕಿಯಲ್ಲಿ ಕಾಯಿಸಿ ತಿಂದು ಬದುಕುತ್ತಾರೆ ನುಸಿಗಳ ಕಾಟ ನಿವಾರಣೆಗಾಗಿ ತಮ್ಮ ವಸತಿಯಲ್ಲಿ ಹುಲ್ಲ ಒಲೆಗಳನ್ನು ಕಟ್ಟಿಕೊಳ್ಳುವದಿದೆ ಹಾವು ನುಸಿಗಳ ರಾಜ್ಯವದು ಪರಕೀಯರಾರಾದರೂ ಬಂದೊಡನೆ ತಮ್ಮ ಹೆಂಗಸರು ಮಕ್ಕಳನ್ನು ದ್ವೀಪದ ಒಳಗಡೆಯ ಗುಪ್ತ ಸ್ಥಳಗಳಲ್ಲಿ ಅಡಗಿಸಿಟ್ಟು ಪುರುಷರು ಕ್ರೂರ ಆಯುಧಗಳೊಡನೆ ಹೊಂಚು ಹಾಕಿ ನಿಲ್ಲುತ್ತಾರೆ. ಹೀಗಾಗಿ ಆ ದ್ವೀಪದ ಮಹಿಳೆಯರನ್ನು ಕಂಡ ಬಿಳಿ ಮನುಷ್ಯನಿರುವದು ಅಸಂಭವ. ಒಂದೆರಡು ದಿನಗಳಿಗೆ ಮಿಕ್ಕಿ ಅಲ್ಲಿ ನಿಂತ ಪರಕೀಯರೂ ಇಲ್ಲ. ಅವರ ಸಮುದ್ರ ಯಾನಗಳೆಂದರೆ ಶಾಂತ ಸಮುದ್ರದಲ್ಲಿ ಬೇರೆಲ್ಲೂ ಕಾಣದ ವಿಚಿತ್ರ ರೀತಿಯ ತೆಪ್ಪಗಳು.

ಈ ಯುದ್ಧಾರಂಭದಲ್ಲಿ ಬೆಂಟಿಕನ್ನಾಕ್ರಮಿಸಿ ನಿಲ್ಲಲಿಕ್ಕೆಂದು ಸಣ್ಣ ಆಸ್ಟ್ರೇಲಿಯನ್ ದಳವೊಂದು ಹೋಯಿತು. ಅಲ್ಲಿಯ ನಿವಾಸಿಗರ ಉಪದ್ರವನ್ನು ಸಹಿಸಲಾರದೆ ಓಡಿ ಬಂತು.

ಒಂದು ಬಾರಿ ಮಿತ್ರರ ಕಾವಲು ಹಡಗವೊಂದು ಆ ಸಮುದ್ರದಲ್ಲಿ ಹೋಗುತ್ತಿತ್ತು. ತನ್ನ ತೆಪ್ಪದಲ್ಲಿ ಪ್ರಯಾಣ ಮಾಡುತ್ತಿದ್ದ ದ್ವೀಪ ವಾಸಿಯೊಬ್ಬನು ಅದನ್ನು ಕಂಡೊಡನೆ ತನ್ನ 'ಜಲ್ಲೆ'ಯನ್ನು ಬಿಸುಟು ಸಮುದ್ರಕ್ಕೆ ಧುಮುಕಿ ತೀವ್ರ ಗತಿಯಿಂದ ದ್ವೀಪಕ್ಕೀಜಾಡಿ ಹೋದ. ಆತ ಹಿಂದಿರುಗಿ ಕೂಡಾ ನೋಡಿರಲಿಲ್ಲ. ಸ್ವಲ್ಪ ಸಮಯದಲ್ಲಿಯೇ ಆ ದ್ವೀಪದ ದಡದಲ್ಲೆಲ್ಲಾ ಸಶಸ್ತ್ರ ನಿವಾಸಿಗಳ ದಂಡು ಬಂದು ನಿಂತಿತು ಹಡಗ ಕಣ್ಮರೆಯಾಗುವ ವರೆಗೂ ಅವರು ಹಾಗೇನೇ ನಿಂತಿದ್ದರು

ಈಟಿ ಪ್ರಯೋಗದಲ್ಲಿ ಅವರು ಅದ್ವಿತೀಯರು 12ಅಡಿಯ ವರೆಗೂ ಉದ್ದವಿರುವ ಭಲ್ಲೆಗಳ ಹೊರತು ಬೇರಾವ ಆಯುಧವನ್ನೂ ಅವರರಿಯರು. ಯುದ್ಧಾದಿಯಲ್ಲಿ ಆ ದ್ವೀಪಕ್ಕೊಮ್ಮೆ ಸೇನೆಯಿಳಿಸಲು ಬಯಸಿದ್ದರಷ್ಟೆ ಆಗ ಸೇನಾವಾಹಕ ಬೋಟಿನ ಮೇಲೆ, ಚಕಮುಕಿ ಕಲ್ಲಿನ ತುದಿಯುಳ್ಳ ಈಟಿಯೊಂದು ರುಂಯನೆ ಬಂದು ಬಿದ್ದ ರಭಸಕ್ಕೆ ಹಲಗೆಯೊಳಗೆ ಅರ್ಧ ಇಂಚು ಆಳಕ್ಕೆ ತೂರಿ ಹೋಗಿತ್ತು.

ಬಿಳಿ ಜನರ ಭೇಟಿಯನ್ನು ಈ ದ್ವೀಪವಾಸಿಗಳು ತಿರಸ್ಕರಿಸುತ್ತಾರೆ ಹೊಗೆಸೊಪ್ಪು, ಸಕ್ಕರೆ, ಬಿಸ್ಕೂಟು ಮುಂತಾದುವುಗಳನ್ನು ಕೆಲವು ಮಿಶನರಿಗಳೊಮ್ಮೆ ಅಲ್ಲಿ ಬಿಟ್ಟು ಬಂದಿದ್ದರೂ ಅವು ಕೊಳೆತು ಹೋದವು ಹೊರತು ಅಲ್ಲಿಯವರು ಮುಟ್ಟಲಿಲ್ಲ ಒಂದು ಬಾರಿ ಹೋದ ಮಿಶನರಿಗಳ ಪಂಗಡವು ಓಡಿ ಬರುವಾಗ ಕಂಬಳಿಗಳನ್ನು ಅಲ್ಲಿ ಬಿಟ್ಟು ಬಂತು ಅದು ಛಳಿಗಾಲವಾದ್ದರಿಂದ ಆ ಜನರು ಹೊದ್ದುಕೊಂಡು ಸುಖಿಸಿ ತಮ್ಮನ್ನು ಮೆಚ್ಚುವರೆಂದು ಮಿಶನರಿಗಳ ಭಾವನೆ ಆದರೆ ದ್ವೀಪವಾಸಿಗಳು ಅವುಗಳನ್ನೆಲ್ಲಾ ಸಮುದ್ರಕ್ಕೊಗೆದು ಬಿಟ್ಟರು ಸಮೀಪದ ಕ್ವೀನ್ಸ್‌ಲೇಂಡಿನ ಸರಕಾರವು 10 ವರುಷಗಳಿಗೆ ಮೊದಲೊಮ್ಮೆ ವಿವಿಧ ಸಾಮಗ್ರಿಗಳನ್ನು ಕಳುಹಿಸಿ ಹೀಗೆಯೇ ಪರಾಭವಗೊಂಡಿದ್ದಿತು ಅಲ್ಲಿ ಕಡಿಮೆಯೆಂದರೆ 500 ಜನರಿರಬಹುದೆಂತೆ ಕ್ವೀನ್ಸ್‌ಲೇಂಡ್ ಸರಕಾರವು ಈ ದ್ವೀಪವು ತನ್ನ ನೆರವಲಯವೆಂದೂ ತನ್ನ ಅಪ್ಪಣೆ ವಿನಹ ಅಲ್ಲಿಗೆ ಯಾರೂ ಪ್ರವೇಶಿಸಕೂಡದೆಂದೂ ವಿಧಿಸಿದೆ

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಅನ್ಯಾವಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ' ಬೆಲೆ ರೂ3|- ಕೈಮೀರಿದ ಕೇಸುಗಳಿಗೆ ರೂ 5,6 ತಿಂಗಳ ಬರ್ತ್ ಕಂಟ್ರೋಲಿಗೆರೂ 4|-(ವಿ ಪಿ 12 ಆಣೆ ಅಲಾಯಿದ) Mrs P' DEVEE, P. O. B (N) Tollygunge, Calcutta

ಸ್ಟಾಕಿಸ್ಟ್ ಸಾ ಕಂಪೆನಿ, ಮಂಗಳೂರು

THE
VIJAYA BANK LTD.
Head Office: **MANGALORE.**

PROGRESS REPORT

	1940	1942	1944
Paid up capitl	50,000	91 000	1,96,000
Deposits	2,67,000	5,90 000	17,70,000
Profits	6,000	12,000	30,000

correct to 1000

Branches all over the District and in Bombay city. All kinds of Banking facilities available.

A branch of the Bank will be opened at **BYNDOOR** shortly.

WANTED

WANTED, B.A.B.T's and Bsc's for the Islamia Anglo Urdu High School, Bhatkal Scale of pay for B A B T's Rs 55/- to 60/-3—125/- and for Bsc's Rs 40/- to 50/-3—125/-.

Apply stating qualification and experience to:—

The Hon Secretary,
Anjuman Hami e-Muslimeen,
BHATKAL (N. K.)

**ನವಯುಗಕ್ಕೆ
ಇಂದೇ ಚಂದಾದಾರರಾಗಿರಿ**

ವಿಜಯೋನ್ಮತ್ತ ಬ್ರಿಟನು ವಿಶೇಷಾಚರಣೆಗೆ ತೊಡಗಿತೆ?

ಚರ್ಚಿಲ್–ಡಿವೆಲೆರಾ ವಾಗ್ವಾದ! : : : ಅಲೆಗ್ಝಾಂಡರ್–ಟಿಟೋ ತಿಕ್ಕಾಟ!

ಚರ್ಚಿಲ್ಲರ ವಾಗ್ಬಾಣ

ಜರ್ಮನಿಯ ಪರಾಭವದಿಂದಾಗಿ ಸಾಮ್ರಾಜ್ಯವಾದಿ ಬ್ರಿಟನಿನ ತಲೆಯ ಮೇಲಿದ್ದ ಹೊರೆಯಿಳಿಯಿತು–ವಿಜಯ ಮಕುಟವೇರಿತು. ಜತೆಯಲ್ಲೇ ವಿಜಯೋನ್ಮತ್ತ ಮದಹಂಕಾರವೂ ಸೇರಿತು ಎಂಬುದರ ನಿದರ್ಶನಗಳು ಪ್ರಕಾಶಗೊಳ್ಳುತ್ತಿವೆ. ತಾ. ೧೩ರಲ್ಲಿ ಆಕಾಶವಾಣಿ ಭಾಷಣವೀಯುತ್ತಾ ವಿಜಯೀ ಚರ್ಚಿಲ್ಲರು ಆಯರ್ಲೆಂಡಿನ ಪ್ರಧಾನಿ ಮಿ. ಈಮನ್ ಡಿವೆಲರರ ವರ್ತನೆಯನ್ನು ಕಟುವಾಣಿಯಲ್ಲಿ ಖಂಡಿಸಿದ್ದಾರೆ. "ಅಟ್ಲಾಂಟಿಕಿನ ಬ್ರಿಟಿಷ್ ಸರಬರಾಯಿ ಹಡಗಗಳ ಮೇಲಾಗುತ್ತಿದ್ದ ಜರ್ಮನ್ ಧಾಳಿಯನ್ನು ಸೋಲಿಸಲಿಕ್ಕಾಗಿ ನಾವೆ ಮತ್ತು ವಿಮಾನ ನಿಲ್ದಾಣಗಳನ್ನೀಯಲು ಡಿವೆಲರಾ ತಿರಸ್ಕರಿಸಿಬಿಟ್ಟರು. ನಿಜಕ್ಕೂ ನಮ್ಮ ಜೀವನಮಾನದ ಮರಣ ಸದೃಶ ಮುಹೂರ್ತವದು. ಉತ್ತರ ಆಯರ್ಲೆಂಡಿನ ಸ್ವಾಮಿನಿಷ್ಠೆ ಮತ್ತು ಮೈತ್ರಿಯೊಂದಲ್ಲವಾದರೆ ನಾವು ನಿರುಪಾಯರಾಗಿ ಡಿವೆಲರಾರೊಡನೆ ಡಿಕ್ಕಿ ಹೊಡೆಯಬೇಕಿತ್ತು; ಅಥವಾ ಈ ಜಗತ್ತಿನಿಂದಲೇ ಅದೃಶ್ಯವಾಗಬೇಕಿತ್ತು. ಕೆಲವೊಮ್ಮೆ ಅತಿ ಸುಲಭ ಮತ್ತು ತೀರಾ ಸ್ವಾಭಾವಿಕವಾಗಿದ್ದರೂ ಚಕ್ರವರ್ತಿ ಸರಕಾರವು ಅವರ ಮೇಲೆಂದೂ ಜುಲುಮೆಯ ಕೈಮಾಡದೆ ಸಹಿಸಿಕೊಂಡಿತು. ಈ ರೀತಿ ಆತ್ಮವೇದನೆಯನ್ನು ಸಹಿಸಿಕೊಂಡು ನಿಂತ ದೃಷ್ಟಾಂತಗಳು ಚರಿತ್ರೆಯಲ್ಲೇ ಅಪರೂಪವೆಂಬ ಧೈರ್ಯ ನನಗಿದೆ. ಜರ್ಮನಿಯ ಮತ್ತು ಕೊನೆಯ ಭಾಗದಲ್ಲಿ ಜಪಾನಿನ ಪ್ರತಿನಿಧಿಗಳೊಡನೆ ಮಜಾಮಾಡಿ ತನ್ನ ಪ್ರಿಯ ಬಾಯಾರಿಕೆಯನ್ನು ನಿವಾರಿಸಿಕೊಳ್ಳಲು ನಾವು ಡಿವೆಲರಾ ಸರಕಾರವನ್ನು ಬಿಟ್ಟೆವು! ದಕ್ಷಿಣ ಆಯರ್ಲೆಂಡಿನ ಮೂರು ಮಂದಿಯಾದರೂ ಈ ಯುದ್ಧದಲ್ಲಿ 'ವಿಕ್ಟೋರಿಯಾ ಕ್ರಾಸ್' ಪಡೆದಿದ್ದಾರೆ. ಐರಿಷ್ ಜನಾಂಗದ ಮೇಲೆ ಬ್ರಿಟನಿಗಿರಬೇಕಾದ ದ್ವೇಷಾಗ್ನಿಯ ತುಣುಕೂ ನನ್ನ ಹೃದಯದಲ್ಲಿ ನಂದಿಹೋಗಿದೆ. ನಾನು ನೋಡಲಳಿಯದ ಮುಂದಿನ ವರುಷಗಳಲ್ಲಾದರೂ ಈ ಲಜ್ಜಾವಹ ಕಾರ್ಯವು ಪರಸ್ಪರ ಸೌಹಾರ್ದ್ರತೆ ಮತ್ತು ಕ್ಷಮಾಗುಣದಿಂದ ಮರವೆಯಾಗಲೆಂದು ಪ್ರಾರ್ಥಿಸುತ್ತೇನೆ."

ಡಿವೆಲರರ ಪ್ರತ್ಯಸ್ತ್ರ

ಚರ್ಚಿಲ್ಲರ ನೇರಾದ ವಾಗ್ಪ್ರಹಾರವು ಆಯರ್ಲೆಂಡಿನ ಮನಸ್ಸನ್ನು ನೋಯಿಸಿದೆ. ಜಗತ್ತಿನ ಅಗ್ರಗಣ್ಯ ಎದೆಗಾರರಲ್ಲೊಬ್ಬರಾದ ಡಿವೆಲರರಿದಕ್ಕೆ ಮರ್ಮನೋಡಿ ಪ್ರತಿತಾಡನವಿತ್ತಿದ್ದಾರೆ: ೨೫ ವರುಷಗಳ ಮೊದಲಾಗಿದ್ದರೆ ತಾನು ಕೊಡಬಹುದಾಗಿದ್ದ ಉತ್ತರಕ್ಕಿಂತ ಭಿನ್ನವಾದುದನ್ನು ಈಗ ಕೊಡುತ್ತಿದ್ದೇನೆ; ಯಾಕೆಂದರೆ ಉರಿವ ಬೆಂಕಿಗೆ ಕಟ್ಟಿಗೆಯೊಡ್ಡುವ ಇಚ್ಛೆ ತನಗಿಲ್ಲ, ಎನ್ನುತ್ತಾ ಡಿವೆಲರಾ ಅಂದಿದ್ದಾರೆ "ಕೆಲವೊಂದು ಸಂದರ್ಭಗಳಲ್ಲಿ ನಮ್ಮ ತಾಟಸ್ಥ್ಯವನ್ನು ತಾವು ಮುರಿಯಬಹುದಿತ್ತೆಂದು ಚರ್ಚಿಲ್ಲರು ಸ್ಪಷ್ಟವಾಗಿ ಸಾರಿದ್ದಾರೆ. ಹಾಗೆ ಮಾಡುವದು ಬ್ರಿಟನಿನ ಆವಶ್ಯಕತೆಯ ಮೇಲಿಂದ ನ್ಯಾಯವಾಗಿತ್ತೆಂದು ಅವರು ಸಮರ್ಥಿಸಿಕೊಳ್ಳುತ್ತಾರೆ. ಹಾಗಾಗುತ್ತಿದ್ದ ಪಕ್ಷದಲ್ಲಿ ಬ್ರಿಟನಿನ ಆವಶ್ಯಕತೆಯ ವಿನಹಾ ಬೇರೆ ನೀತಿನಿಯಮವೆಂಬುದೇ ಇಲ್ಲವೆಂದೂ ಆ ಆವಶ್ಯಕತೆಯ ದಿರದಲ್ಲಿ ಬೇರೆಯವರ ಅಧಿಕಾರವು ಅಗಣ್ಯವೆಂದೂ ಜಾಹೀರಾಗುತ್ತಿತ್ತೆಂಬುದನ್ನು ಮಿ. ಚರ್ಚಿಲ್ಲರು ಅರಿಯದಿರುವದು ವಿಲಕ್ಷಣವೇ ಸರಿ. ಇತರ ಮಹಾರಾಷ್ಟ್ರಗಳೂ ಇದೇ ನೀತಿನಿಯಮವನ್ನಾಧರಿಸಿ, ಅದಕ್ಕನುಗುಣವಾಗಿ ವರ್ತಿಸುತ್ತಿದ್ದುವೆಂಬುದು ಖಂಡಿತ. ನಾವು ಅನುಕ್ರಮವಾಗಿ ಅನಾಹುತಕಾರೀ ಯುದ್ಧಗಳನ್ನು–ಒಂದನೇ ಲೋಕ ಯುದ್ಧ, ಎರಡನೇ ಲೋಕ ಯುದ್ಧ, ಇನ್ನು ಮೂರನೇ ಲೋಕ ಯುದ್ಧವೂ ಅಗಲಿಕ್ಕಿದೆ–ಅನುಭವಿಸುತ್ತಿರುವದೆಂದರೆ, ಇದರಿಂದಾಗಿಯೇ. ನಮ್ಮ ಮೇಲಿನ ಆ ಧೋರಣೆಯೇ ಲೋಕದ ಇತರ ಕಡೆಗಳಲ್ಲೂ ಜ್ಯಾರಿಯಾಗಿ, ದೊಡ್ಡ ರಾಷ್ಟ್ರದ ನೆರೆಯಲ್ಲಿರುವ ಯಾವ ಸಣ್ಣ ರಾಷ್ಟ್ರವೂ ತನ್ನ ದಾರಿಯಲ್ಲಿ ತಾನು ನಡೆಯದಂತಾಗುವದೆಂಬುದನ್ನೂ ಚರ್ಚಿಲ್ಲರು ತಿಳಿದುಕೊಳ್ಳಬೇಕು. ಚರ್ಚಿಲ್ಲರು ಆ ರೀತಿಯ ಕಾರ್ಯ ಕೈಕೊಳ್ಳಲೇಬೇಕಾಗುವಲ್ಲಿಗೆ ಇಂಗ್ಲಾಂಡಿನ ಅಡಚಣೆ ಬಾರದಿದ್ದುದು ಸುದೈವವೆನ್ನಬೇಕು. ಸತ್ಯಕ್ಕೂ ಇತರ ಧುರೀಣರಾಗಿದ್ದರೆ ಸುಲಭದಲ್ಲಿ ಒಳಗಾಗುತ್ತಿದ್ದ ಆ ಉದ್ರೇಕವು, ಕಷ್ಟಕಾಲಗಳಲ್ಲಿ ತನ್ನಲ್ಲಿ ಹಲವು ಬಾರಿ ಹುಟ್ಟಿಕೊಂಡರೂ ಮಿ. ಚರ್ಚಿಲ್ಲರದನ್ನು ತಡೆದಿಟ್ಟುಕೊಂಡುದಕ್ಕಾಗಿ ಅವರಿಗೆ ಪೂರ್ಣ ಶ್ಲಾಘನೆ ಸಲ್ಲಬೇಕು. ಬಲಶಾಲಿಗಳಿಂದ ದುರ್ಬಲರಿಗೆ ನ್ಯಾಯ ದೊರೆಯುವದು ಕಷ್ಟ; ಆದರೆ ನ್ಯಾಯ [illegible] ಉಡುಗೊರೆಯಿದ್ದೇ ಇದೆ. ಮಿ. ಚರ್ಚಿಲ್ಲರು ತನ್ನ ಉದ್ರೇಕವನ್ನು ದಮನಿಸಿಕೊಂಡು ಇಂಗ್ಲಾಂಡು ಮತ್ತು ಈ ದೇಶದೊಳಗಿನ ಸಂಬಂಧದ ಇದು ವರೆಗಿನ ರಕ್ತರಂಜಿತ ದಾಖಲೆಗೆ ಇನ್ನೊಂದು ಭೀಕರಾಧ್ಯಾಯವು ಸೇರದಂತೆ ಮಾಡಿದ್ದಾರೆ" ಎನ್ನುತ್ತಾ ತನ್ನ ಅಲ್ಪಾವಧಿಯ ಕಷ್ಟಕಾಲದಲ್ಲಿ ಏಕಾಕಿಯಾಗಿ ನಿಂತ ಇಂಗ್ಲಾಂಡಿಗಾಗಿ ಹೆಮ್ಮೆಪಡುತ್ತಿರುವ ಚರ್ಚಿಲ್ಲರ ಹೃದಯದೊಂದು ಮೂಲೆಯಲ್ಲಾದರೂ ನೂರಾರು ವರುಷಗಳಿಂದ ಆಕ್ರಮಣ, ಸುಲಿಗೆ, ಬರಗಾಲಗಳ ಪರಂಪರೆಯನ್ನು ಏಕಾಕಿಯಾಗಿ ಇದಿರಿಸಿ ನಿಂತಿರುವ ಸಣ್ಣ ರಾಷ್ಟ್ರವೊಂದಕ್ಕೆ ಸ್ಥಾನದೊರೆಯದಿದ್ದುದು ವಿಚಿತ್ರವೆಂದು ಹೇಳಿ ಈಗಲೂ ಉತ್ತರ ಆಯರ್ಲೆಂಡನ್ನು ತನ್ನ ಸ್ವಾಧೀನವಿಟ್ಟುಕೊಂಡಿರುವ ಬ್ರಿಟನು ಅದಕ್ಕಾಗಿ ಈ ನೆವ ಹೂಡಿದೆ ಎಂದಿದ್ದಾರೆ. ಬ್ರಿಟಿಷ್ ಪತ್ರಿಕೆಗಳೀಗ ಒಂದೇ ಸವನೆ ಆಯರ್ಲೆಂಡಿನ ಮೇಲೆ ಕಿಡಿಕಾರ ಹತ್ತಿವೆ.

ಟ್ರೀಸ್ಟ ಸ್ಥಳವಿವಾದ

ನ್ಯಾಯ ಸ್ಥಾಪನೆಗಾಗಿ ಹೊರತು ಸ್ಥಳಾಕ್ರಮಣಕ್ಕಾಗಿ ತಮ್ಮ ಯುದ್ಧವಲ್ಲ, ಎಂದು ಒತ್ತಿಯೊತ್ತಿ ಸಾರಿಸುತ್ತಿದ್ದ ಪ್ರಮುಖ ವಿಜಯೀ ರಾಷ್ಟ್ರಗಳ ನಿಜರೂಪವೀಗ, ಪರಮಾವಧಿಗೆ ಮುಟ್ಟಿರುವ ಟ್ರೀಸ್ಟ ಸ್ಥಳವಿವಾದದಿಂದ ಪ್ರಕಾಶಕ್ಕೆ ಬಿದ್ದಿದೆ. ಟ್ರೀಸ್ಟೆಯು ಇಟಲಿಯ ಈಶಾನ್ಯ ಮೂಲೆಯ ಮರ್ಮಸ್ಥಾನದಲ್ಲಿ ಯುಗೋಸ್ಲೇವಿಯಾಕ್ಕೆ ತಾಗಿ ಇರುವ ನಗರ. ಜರ್ಮನರಿಂದ ಅದನ್ನು ಕಿತ್ತುಕೊಂಡುದು ಯುಗೋಸ್ಲೇವಿಯದ ಪ್ರಧಾನಿ ಮತ್ತು ಸರ್ವ ಸೇನಾನಿಯಾದ ಅನುಪಮ ಸಾಹಸಿ, ಡಿವೆಲರಾ ಸಮಾನ ಧೀರ ನಾಯಕರಾದ ಮಾರ್ಶಲ್ ಟಿಟೋನ ಸೇನೆ. ಮಿತ್ರ ರಾಷ್ಟ್ರೀಯರ ಯುದ್ಧ ಹಂಚಿಕೆಯಂತೆ ಆ ಸ್ಥಳವು ಆಂಗ್ಲೋ ಅಮೇರಿಕನ್ ಸೇನೆಗಳ ವಶವಿರಬೇಕಾಗಿದೆ. ಅದನ್ನು ತಮಗೆ ಬಿಟ್ಟುಕೊಡಬೇಕೆಂಬ ಅಮೆರಿಕಾಂಗ್ಲರ ಒತ್ತಾಯದ ಬೇಡಿಕೆಯನ್ನು ಮಾರ್ಶಲ್ ಟಿಟೋರು ಕಂಠೋಕ್ತವಾಗಿ ನಿರಾಕರಿಸಿ, ಸ್ಥಳ ವ್ಯವಸ್ಥೆಯ ಕೊನೆಯ ತೀರ್ಮಾನವಾಗುವ ವರೆಗೆ ತಮ್ಮ ಸೇನೆ ಗೆದ್ದ ಸ್ಥಳವನ್ನು ತಾವೇ ಹಿಡಿದುಕೊಳ್ಳುವ ಹಕ್ಕುದಾರರೆಂದಿದ್ದಾರೆ. 'ಸಮೀಪದ ವೆನೆಝಿಯಾ ಗ್ವಿಲಿಯಾ ಕ್ಷೇತ್ರದಲ್ಲಿ ಆಂಗ್ಲೋ ಅಮೆರಿಕಾನರು ಮಾಡಿದ ಧಾಳಿಯಿಂದಾಗಿಯೇ ಟ್ರೀಸ್ಟೆಯು ಜರ್ಮನ್ ಸೇನೆ ಶರಣಾದುದು. ಟ್ರೀಸ್ಟೆಯು ಮಧ್ಯ ಯುರೋಪಿನ ಸರಬರಾಯಿ ಕೇಂದ್ರವಾಗಿರುವುದರಿಂದಲೂ, ಮಿತ್ರರ ಯುದ್ಧ ಕಾಲದ ಯೋಜನೆಯಂತೆ ಕೊನೆಯ ತೀರ್ಮಾನವಾಗುವ ವರೆಗೆ ಆಂಗ್ಲೋ ಅಮೆರಿಕಾನರ ಕೈಯಲ್ಲಿರಬೇಕೆಂಬ ಒಪ್ಪಂದವಿರುವದರಿಂದಲೂ ಯುಗೋಸ್ಲೇವ್ ಯೋಧರು ಅಲ್ಲಿಂದ ಹಿಂದೆಗೆಯಲೇ ಬೇಕು. ಈ ಪ್ರಶ್ನೆಯನ್ನು ಸಡಿಲುಬಿಟ್ಟರೆ ತಮ್ಮ ಎಲ್ಲಾ ವ್ಯವಸ್ಥೆಗಳೂ ಅಡಿಮೇಲಾಗುವವಾದ್ದರಿಂದ ತಾವದನ್ನು ಬಿಡುವಂತಿಲ್ಲ' ಎಂದು ಆಂಗ್ಲೋ ಅಮೆರಿಕಾನರ ಜುಲುಮೆಯ ನುಡಿ. 'ಮುಂದಿನ ತೀರ್ಮಾನಕ್ಕೆ ನಾವೂ ಒಳಗಾಗುತ್ತೇವೆ. ಆ ವರೆಗೆ ಎಲ್ಲಾ ಮಿತ್ರ ಸೇನೆಗಳಿಗಿರುವಂತೆ ನಮಗೇ ಅಮಾನುಷ ಸಾಹಸದಿಂದ ಗೆದ್ದ ಸ್ಥಳವನ್ನು ಹಿಡಿದು ನಿಲ್ಲುವ ಹಕ್ಕು ನಮಗೂ ಇದೆ'–ಎಂದು ಟೀಟೋರ ನಿಷ್ಠುರ ಹಠ. ರಶ್ಯವೀ ಕುರಿತು ಮೌನ ಧರಿಸಿದೆ. ಆಂಗ್ಲೋ–ಅಮೆರಿಕಾನ ಪ್ರಮುಖರು ಮತ್ತು ಟೀಟೋರೊಳಗೆ ಪತ್ರವ್ಯವಹಾರ ನಡೆಯುತ್ತಿದ್ದು ಪರಿಸ್ಥಿತಿ ವಿಷಮತೆಯ ಪರಮಾವಧಿಗೆ ಮುಟ್ಟಿದೆ.

ಅಲೆಗ್ಝಾಂಡರರ ಬೆದರಿಕೆ

ಪ್ರಸಿದ್ಧ ಬ್ರಿಟಿಷ್ ಸೇನಾನಿ ಅಲೆಗ್ಝಾಂಡರರು ಭೂಮಧ್ಯ ಸಮುದ್ರ ವಲಯದ ತನ್ನ ಸೈನಿಕರಿಗೆ ಧಾಳಿ ಪ್ರೇರಕ ಉಪದೇಶವಿತ್ತಿದ್ದಾರೆ: "ಶಸ್ತ್ರ ಬಲದಿಂದ, ಸೇನಾಶಕ್ತಿಯಿಂದ ಸ್ಥಳಾಕ್ರಮಿಸುವ ಉದ್ದೇಶ ಮಾರ್ಶಲ್ ಟಿಟೋರದು. ಇದು ಹಿಟ್ಲರ್, ಮುಸಲಿನಿ, ಮತ್ತು ಜಪಾನರಿಗೆ ಸಮಾನವಾದ ಧೋರಣೆ. ನಾವು ಯುದ್ಧಕ್ಕಿಳಿದಿರುವದು ಇಂಥವುಗಳ ಪ್ರತಿಭಟನೆಗಾಗಿಯೇ. ಮಾರ್ಶಲ್ ಟಿಟೋ ಶಾಂತಿಯಿಂದೊಪ್ಪುವರೋ? ನಾವದನ್ನು ಶಕ್ತಿಯಿಂದಲೇ ಸಾಧಿಸಬೇಕೋ ಎಂಬುದನ್ನು ತಿಳಿಯಲು ಕಾದು ನಿಂತಿದ್ದೇವೆ" ಎಂದು ಬೆದರಿಸಿದ್ದಾರೆ. ತನ್ನನ್ನು ಜರ್ಮನಿ ಜಪಾನರೊಂದಿಗೆ ಹೋಲಿಸಿದ್ದಕ್ಕಾಗಿ ಮಾರ್ಶಲ್ ಟಿಟೋ ಕಟ್ಟುಗ್ರ ಜಿಗುಪ್ಸೆ ಪ್ರದರ್ಶಿಸಿ, 'ನಾವಿದಕ್ಕೆ ನಿಷೇಧ ಮತ್ತು ಆಶ್ಚರ್ಯ ಸೂಚನೆಯ ಹೊರತು ಬೇರೇನನ್ನೂ ಹೇಳಲಾರೆ.' ಎಂದಿದ್ದಾರೆ. "ಮಿತ್ರ ರಾಷ್ಟ್ರಗಳು ಮತ್ತವರ ಸೇನೆಗಳೊಡನೆ ಸಹಕರಿಸಲು ಯುಗೋಸ್ಲೇವಿಯಾ ಸದಾ ಸಿದ್ಧ. ಆದರೆ ತನ್ನ ಹಕ್ಕು ತ್ಯಾಗ ಮತ್ತು ದಬ್ಬಾಳಿಕೆಗೊಳಗಾಗಲು ಅದೆಂದಿಗೂ ತಯಾರಿಲ್ಲ" ಎಂದು ಟಿಟೋರ ಖಂಡತುಂಡ ಉತ್ತರ. ಪರಿಸ್ಥಿತಿ ವಿಷಮಗೊಂಡಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 23—5—1945ರಿಂದ

ಮುರಾರಿ ಪಿಕ್ಚರ್ಸ್‌ನವರ

ಮುಮ್ತಾಜ್ ಶಾಂತಿ ಮತ್ತು ತ್ರಿಲೋಕ್ ಕಪೂರ್ ನಟಿಸಿರುವ

ಬದಲ್ತಿ ದುನಿಯಾ

ಬರುವ ಚಿತ್ರ.— ದರ್ಶನ್

ಅನಂತರ:— ಅಂಜಾನ್


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18—5—1945.

ಹಿಟ್ಲರನ ಸಾವು ಸತ್ಯವೆ?

ಅಂತ್ಯಕಾಲದಲ್ಲಿ ಅರೆ ಹುಚ್ಚ!

ವಿದ್ಯುತ್ಕ್ರಾಂತಿಯ ನಾಡಿಗಳ ಉದ್ರೇಕ ಹಿಟ್ಲರನ ತಲೆಯು ಕೊನೆಯ ಪರಾಭವಗಳಿಂದ ಸಿಡಿಗುಂಡಿನಂತಾಗಿ, ಆತ ಹುಚ್ಚು ಗಟ್ಟಿ ಬರ್ಲಿನ್ ಮುಂಭಾಗಕ್ಕೋಡಿ ಪ್ರಾಣಕೊಟ್ಟು, ವೀರಸ್ವರ್ಗ ಸೂರೆಗೊಂಡಿರಬೇಕೆಂಬ ವಾದಕ್ಕೀಗ ಈಗೀಗ ಆಧಾರಗಳು ದೊರೆಯ ಹತ್ತಿವೆ. 'ರೂಟರ್' ವಿಶೇಷ ಬಾತ್ಮೀದಾರರಾದ ಆರ್ಥರ್ ಓಕೆಶೋಟರು ಬರ್ಲಿನಿನಿಂದ ಕಳುಹಿರುವ ಈ ಕೆಳಗಿನ ವಾರ್ತೆಗಳು ಚಮತ್ಕಾರಪೂರ್ಣವಿದ್ದು ಮನನೀಯವಿವೆ.—

ಹಿಟ್ಲರ್ ತನ್ನ ಆಯುಷ್ಯದ ಕೊನೆಯ ದಿನಗಳಲ್ಲಿ ರೋಗಿಯಾಗಿದ್ದ, ಅವನ ಭ್ರಮೆ ಹಿಂಗಿನಗೊಂಡಿತ್ತು. ಬರ್ಲಿನಿನಲ್ಲೇ ಇದ್ದುಕೊಂಡು ವಾತಪೀಡಿತ ಹಸ್ತ, ಕಂಪಿತ ತೋಳಿನಿಂದ ಆಗಾಗ ತೀಕ್ಷ್ಣ ಮಾತ್ರೆಗಳನ್ನು ನುಂಗುತಿದ್ದ. ಬರ್ಲಿನಿನ ಮುಖ್ಯ ಕಚೇರಿಯಡಿಯ ನೆಲಮಾಳಿಗೆಯಲ್ಲಿ ಎಪ್ರಿಲ್ 22ರ ರಾತ್ರಿ ನಾಜೀ ಸೇನಾನಿಗಳ ಕೂಟ ಕೂಡಿದ್ದಿತು. ಅಲ್ಲಿ ಹಿಟ್ಲರ್ ಕೂಗಿಕೊಂಡ: "ನಮ್ಮ ವಿಮಾನ ಮತ್ತು ಸೇನೆಯ ಮೇಲೆ ನನಗಿನ್ನು ನಂಬಿಕೆ ಇಲ್ಲ. ನಾನಿನ್ನು ಅಂತ್ಯದ ವರೆಗೂ ಬರ್ಲಿನಿನಲ್ಲೇ ನಿಲ್ಲುತ್ತೇನೆ. ಹಿಮ್ಮೆಟ್ಟುವುದಕ್ಕಾಗಿ ಎಷ್ಟೋ ಮಂದಿ ಸೇನಾನಿಗಳನ್ನು ಕೊಂದ ನಾನೇ ಹಿಂದೆ ಸರಿಯುವಂತಿಲ್ಲ. ನಾನು ಬರ್ಲಿನನ್ನು ಬಿಟ್ಟರೆ ಬರ್ಲಿನ್ ಹೋದಂತಯೇ." ಹೀಗೆ ಮಾಡಬಾರದೆಂದೂ, ದಕ್ಷಿಣ ಭಾಗಕ್ಕೆ ಹಿಂದೆಗೆದು ಒಂದಿಂಚು ಜರ್ಮನ್ ನೆಲವುಳಿವವರೆಗೂ ಹೋರಾಡಬೇಕೆಂದೂ, ಕೀಟೆಲ್, ಜೋಡ್ಲ್, ಬೋರ್ಮಾನ್, ರಿಬ್ಬೆಂಟ್ರಾಪ್ ಮತ್ತು ಗೋಬೆಲ್ಸರವನನ್ನು ಸಮಜಾಯಿಸಲು ನೋಡಿದರು; ಸಾಧ್ಯವಿದ್ದಷ್ಟು ಒದ್ದಾಡಿದರು. ಆದರೆ ಹಿಟ್ಲರ್ ಕೇಳಲಾರ. ಸಭೆ ನಡೆಯುತಿದ್ದಾಗ ಹಿಟ್ಲರ್ ಕೋಣೆಯ ಹೊರಗೂ ಒಳಗೂ ಓಡಾಡಿ ಟೆಲಿಫೋನ್ ಮಾಡುತ್ತಲೂ ವರದಿಗಳನ್ನೋದುತ್ತಲೂ ಹುಚ್ಚನಂತೆ ವರ್ತಿಸುತಿದ್ದ. ಕೆದರಿದ ಹಣ್ಣುಗೂದಲುಗಳ ಆ ಹಿಟ್ಲರ್ ಹಿಂದಿನ ಹಿಟ್ಲರನಿಗಿಂತ ತೀರಾ ಬೇರೆಯಾಗಿ ಹೋಗಿದ್ದ. ಅವನ ದೇಹ ಮತ್ತು ಮುಖ ಒಣಗಿ ಹೋಗಿದ್ದು ಎಡಗೈಯು ಎಲೆಯಂತೆ ಅಲುಗಾಡುತಿತ್ತು. ಸಭೆಯ ಮಾತುಕತೆಯು ನಡುವೆ ಹತ್ತಾರಿಂದ ಇಪ್ಪತ್ತು ಬಾರಿಯ ವರೆಗೂ "ನಾನು ಬರ್ಲಿನಿನಲ್ಲೇ ನಿಲ್ಲಲಾಶಿಸುತ್ತೇನೆ. ನಾನು ಬರ್ಲಿನ್ ಬಿಡುವಂತಿಲ್ಲ" ಎಂದು ಹಿಟ್ಲರನಾಡಿದುದಿದೆ. ಒಂದು ಬಾರಿ ಆಕಸ್ಮಾತ್ತಾಗಿ "ನಾನು ಮುಖ್ಯ ಕಚೇರಿಯ ಮುಂಭಾಗದಲ್ಲೇ ಸತ್ತು ಬೀಳಲಿದ್ದೇನೆ" ಎಂದಿದ್ದ. ದಕ್ಷಿಣಭಾಗಕ್ಕೆ ಹಿಂದೆಗೆದು ಗೋರಿಂಗನ ಕೈಕೆಳಗೆ ನೀವೊಂದು ಹೊಸ ಸರಕಾರ ರಚಿಸಿಕೊಳ್ಳಿರೆಂದು ತನ್ನ ಸೇನಾನಿಗಳಿಗೆ ಹೇಳಿ ಹಿಟ್ಲರನಂದ "ಆ ಮೇಲೆ ಗೋರಿಂಗ್ ಸಂಧಾನ ಸಾಧಿಸುತ್ತಾನೆ". ಇದು ಹಿಟ್ಲರನಾಡಿದ ವ್ಯಂಗ್ಯ ಕಟೂಕ್ತಿಯೆಂದು ಕೆಲವರು ಭಾವಿಸಿದ್ದಾರೆ. ಆದರೆ ಸೆರೆಸಿಕ್ಕಿದಾಗ ಗೋರಿಂಗನೇ ಹೇಳಿದಂತೆ, ಹಿಟ್ಲರನಾತನ ದಸ್ತಗಿರಿಯಾಜ್ಞೆ ಕೊಟ್ಟಿದ್ದು ಯಾರಿಗೂ ಗೊತ್ತಿಲ್ಲ ಕೊನೆಯಲ್ಲಿ ಹಿಟ್ಲರನು ಭವನ ಬಿಟ್ಟು ಹೊರಗೋಡಿದುದರಿಂದ ಆ ಸಭೆ ಚೆದರಿತು.

ಹಿಟ್ಲರ್ ಮತ್ತು ಸೇನಾನಿಗಳೊಳಗಿನ ಪ್ರತಿಯೊಂದು ಸಂಭಾಷಣೆಯನ್ನೂ ಹಲವು ವರುಷಗಳಿಂದ ಬರೆದುಕೊಳ್ಳುತಿದ್ದ ಅಲ್ಲಿಯ ಅಧಿಕಾರಿ 'ಶೋರ್ಟ್ ಹೇಂಡ್' ರೈಟರರ ಅಭಿಪ್ರಾಯದಂತೆ ಎಸ್. ಎಸ್ ಮುಖಂಡ ಗುಯೆಂಶ್ಯೆಯೇ ಹಿಟ್ಲರನನ್ನು ಕೊಂದಿರಬಹುದು. ಈತನು ಮುಖ್ಯ ಕಚೇರಿಯ ರಕ್ಷಣಾ ನಾಯಕನಾಗಿದ್ದ. ಹಿಟ್ಲರನು ನಿಜಕ್ಕೂ ಸಾಯುವಂತೆ ನೋಡುವ ಹೊಣೆಗಾರಿಕೆಯನ್ನು ಈ ವಾಪಿಗೆ ಕೊಡಲಾಗಿತ್ತು.

ಉಡುಪಿ, ಗುರುವಾರ ೨೪-೫-೧೯೪೫

ಮುಸುಕು ತೆರೆ!

ಜರ್ಮನಿಯ ಪರಾಭವದ ನಂತರ ಜಾಗತಿಕ ರಾಜಕೀಯ ಪರದೆಯು ಪೂರ್ಣ ಮುಸುಕಾಗಿದೆ-ಅದರ ಮೇಲೆ ಬೀಳುತ್ತಿರುವ ಛಾಯೆಗಳ ರೂಪರೇಖೆಯನ್ನು ತಿಳಿಯುವದೇ ಪ್ರಯಾಸವಾಗಿದೆ. ಏನಿಲ್ಲೆಂದರೂ ಲೋಕ ಯುದ್ಧದ ಮೂರನೇ ಎರಡಂಶ ಮುಗಿದಿರುವ ಕಾಲವಿದು, ನಾಜೀ ಜರ್ಮನಿ ಮತ್ತು ಫೇಸಿಸ್ಟ ಇಟೆಲಿಯ ಪತನವಾಗಿ ಸಾಮ್ರಾಜ್ಯಸ್ವಾರ್ಥಿ ಜಾಪಾನೊಂದೇ ಉಳಿದಿದೆ. ಮಿತ್ರಪಾಳಯದ ಪ್ರಮುಖ ತ್ರಿರಾಷ್ಟ್ರಗಳನ್ನು ಬಿಂಗಡಿಸಿ ನೋಡುವದಾದರೆ, ರಶ್ಯವು ತನ್ನ ಯುದ್ಧಗುರಿಯನ್ನು ಮುಟ್ಟಿದಂತೆಯೂ, ಬ್ರಿಟನು ಮುಕ್ಕಾಲಂಶವನ್ನೂ ಅಮೆರಿಕವು ಅರೆವಾಸಿಯನ್ನೂ ಮುಗಿಸಿಕೊಂಡಂತೆಯೂ ಕಾಣುತ್ತಿದೆ. ಆದರೆ ಕಾಲಸ್ಥಿತಿಗೆ ತಕ್ಕಂತೆ ಕಾರ್ಯರಂಗದಲ್ಲಿ ಮುಂದೊತ್ತುವ ಅಧಿಕಾರವು ಪ್ರತಿಯೊಂದು ರಾಷ್ಟ್ರಕ್ಕೂ ಇದೆಯಾದ್ದರಿಂದ ಆಸ್ಯಾದಲ್ಲೇ ಇರುವ ರಶ್ಯವು ಜಾಪಾನ್ ಸಂಬಂಧದಲ್ಲಿ ಇನ್ನೂ ತಾಟಸ್ಥ್ಯವನ್ನೇ ಮುಂದುವರಿಸುವದು ಅಸಂಭವ. ಜರ್ಮನ್ ಯುದ್ಧವಿರುವ ವರೆಗೆ ಜಾಪಾನ್ ಯುದ್ಧದ ಹೆಚ್ಚಿನ ಹೊಣೆಯನ್ನು ಅಮೇರಿಕ ಹೊತ್ತಿದ್ದರೂ, ಈಗ ಆ ಕಾರ್ಯದ ಪರಿಭಾರಕ್ಕೆ ಹೆಗಲೊಡ್ಡಲು ಇಂಗ್ಲಾಂಡು ಬಾಧ್ಯವಿದೆ. ಆದ್ದರಿಂದ ತ್ರಿರಾಷ್ಟ್ರಗಳು ಕೈತೊಳೆದು ಕುಳಿತುಕೊಳ್ಳುವ ಕಾಲ ಇದುವರೆಗೆ ಬಂದಿಲ್ಲ-ಅದರದು ಓಡಿಯೋಡಿ ಬರುತ್ತಾ ಇದೆ. ಜಾಪಾನನ್ನು ನುಂಗಲು ಕೈಚಾಚುವ ಕೆಲಸ ಮಾತ್ರ ಉಳಿದಿದೆ ಹೊರತು ಜಾಪಾನು ತಮ್ಮನ್ನು ನುಂಗದಂತೆ ಕವಚ ಧರಿಸುವ ಆವಶ್ಯಕತೆ ಮಿತ್ರರಾಷ್ಟ್ರಗಳಿಗೀಗ ಉಳಿದಿಲ್ಲ. ಆದ್ದರಿಂದ ಮಿತ್ರ ಪ್ರಮುಖರು ಈಗಲೇ ವಿಜಯಿಗಳಂತೆ ವರ್ತಿಸಿದರೆ ಅದೇನೂ ಅಧಿಕ ಪ್ರಸಂಗವಾಗದು. ಆದರೆ ಎಲ್ಲಿದೆ ಆ ವರ್ತನೆ? ಎಲ್ಲಿದೆ ಲೋಕಶಾಂತಿಯ ಸೂಚನೆ?

ಸಾನ್‌ಫ್ರಾನ್ಸಿಸ್ಕೋ ಸಮ್ಮೇಲನದಿಂದ ಕೇಳಿ ಬರುತ್ತಿರುವದು ಲೋಕಶಾಂತಿಯ ಪ್ರಸವವೇದನೆಯಲ್ಲ-ಬಂಜೆಯ ಉದರ ಶೂಲೆಯ ನರಳು ಧ್ವನಿ! ವಸಾಹತುಗಳ ಮೇಲ್ವಿಚಾರದ ಕುರಿತು ಇಂಗ್ಲಾಂಡು ಅಮೇರಿಕ ಮತ್ತು ರಶ್ಯಗಳೊಳಗೆ ಭಿನ್ನಾಭಿಪ್ರಾಯವೆದ್ದಿದೆ. ಅವುಗಳ ಮೇಲ್ವಿಚಾರವನ್ನು ಅಂತರ್ರಾಷ್ಟ್ರೀಯ 'ಟ್ರಸ್ಟ' ಮಂಡಲಕ್ಕೊಪ್ಪಿಸಬೇಕೆಂಬ ವಿಚಾರಮಂಥನವಾಗುತ್ತಿದೆ. ಆದರಿದು ಇಟೆಲಿ ಜಾಪಾನುಗಳಿಂದ ಕಸಕೊಂಡ ವಸಾಹತುಗಳಿಗೆ ಮತ್ತು ರಾಷ್ಟ್ರ ಸಂಘದ ಸೊತ್ತುಗಳೆಂದು ಮೊದಲೇ ದಾಖಲೆಯಾಗಿದ್ದ ಸ್ಥಳಗಳಿಗೆ ಮಾತ್ರ. ಹಿಂದುಸ್ಥಾನದಂತಹ ಪರಾಧೀನ ರಾಷ್ಟ್ರಗಳ ಪ್ರಶ್ನೆಯು ಫ್ರಿಸ್ಕೋ ಸಮ್ಮೇಲನದ ಕಾರ್ಯಕ್ರಮ ಪಟ್ಟಿಯಲ್ಲೇ ಇಲ್ಲ. ಜಾಪಾನ್, ಇಟೆಲಿ ಅಥವಾ ಜರ್ಮನಿಯು ಹಿಂದುಸ್ಥಾನವನ್ನಾಕ್ರಮಿಸಿಕೊಂಡಿರುತ್ತಿದ್ದರೆ, ಈ ಮುಹೂರ್ತದಲ್ಲಿ ಅದಕ್ಕೆ ಸ್ಥಾನಾಂತರ ಯೋಗವಿದ್ದೇ ಇದ್ದಿತು. ಆದರೆ ಭಾರತವಿರುವದು ಬ್ರಿಟನಿನ ಕೈಯಲ್ಲಿ! ಈಗ ಇಂಗ್ಲಾಂಡಿನ ತಲೆಗೇರಿರುವ ವಿಜಯ ಕಿರೀಟಕ್ಕಿಂತ ಎಷ್ಟೋ ಕಾಲಕ್ಕೆ ಮೊದಲೇ ಅದರ ಕೈಗೆ ಬಂದಿದ್ದ ರಾಜದಂಡವಿದು. ಇದನ್ನು ಕಸಗೊಳ್ಳುವ ಅನ್ಯಾಯವು ಯಾವ ಜಾಗತಿಕ ಸಮ್ಮೇಲನದಲ್ಲೂ ಆಗುವಂತಿಲ್ಲ! ಅದು ಬ್ರಿಟಿಷರ ಮರ್ಜಿಯನ್ನೇ ಅವಲಂಬಿಸಿರಬೇಕಾದ ವಿಷಯ. ಜಾಪಾನರಿಂದ ಬಿಡುಗಡೆಗೊಂಡ ಬರ್ಮಕ್ಕೆ ಯುದ್ಧಾದಿಯಲ್ಲಿದ್ದ ಅಧಿಕಾರಕ್ಕೂ ಅರ್ಧಚಂದ್ರ ಪ್ರಯೋಗವಾಗಲಿದೆ ಎಂದ ಮೇಲೆ ವಿಜಯೋನ್ಮತ್ತ ಬ್ರಿಟನಿನ ಧೋರಣೆಯೇನೆಂಬುದು ಸ್ಪಷ್ಟ. ಇನ್ನು ಸ್ಪಷ್ಟೀಕರಣ ಬೇಕಾದರೆ ವೆಲಿರಾ, ಟಿಟೋರಿಗೆ ದೊರೆತ ಸಂಭಾವನೆಗಳನ್ನು ನೋಡಬಹುದು. ಇಂತಹ ಪರಿಸ್ಥಿತಿಯಿರುವಾಗ 'ಸಾಮ್ರಾಜ್ಯವಾದಿಗಳು ಗೆದ್ದರು' ಹೊರತು ನ್ಯಾಯ ಗೆಲ್ಲಲಿಲ್ಲ. ಲೋಕ ಪ್ರಲಯವನ್ನು ನಿರ್ಮಿಸಿದ ಮಹಾಪರಾಧಕ್ಕಾಗಿ ಜರ್ಮನಿಗೆ ದೊರೆಯಲಿರುವ ಶಿಕ್ಷೆಯೆಂದರೆ ಗುಲಾಮಗಿರಿ! ಹಿಂದುಸ್ಥಾನವು ಎಂದು ಶತಮಾನಗಳಿಂದಲೂ ಆ ಶಿಕ್ಷೆಯನ್ನನುಭವಿಸುತ್ತಿರಲು ಮಾಡಿದ ಅಪರಾಧವೇನು? ಅಂದ ಮೇಲೆ ಲೋಕವನ್ನು ಸ್ವಚ್ಛವಾಗಿಡಬೇಕೆಂದು ಪಾಪದ ಪ್ರಾಯಶ್ಚಿತ್ತ ರೂಪವಾಗಿ ಗುಲಾಮಗಿರಿ ಹೇರಲ್ಪಡುತ್ತಿಲ್ಲ; ಅ ಮೂಲಕ ಸಾಮ್ರಾಜ್ಯ ಸ್ವಾರ್ಥವನ್ನೇ ಸಾಧಿಸಲಾಗುತ್ತಿದೆ. ಮನಸಿದ್ದವರು ಅದನ್ನೇ 'ಲೋಕಶಾಂತಿ ವ್ಯವಸ್ಥೆ' ಎಂದು ಕರೆಯಬಹುದು! ಕಠಿಣ ಹೋರಾಟ ಕಾಲದಲ್ಲಿ ಕೇಳಿ ಬರುತಿದ್ದ 'ಸಮಾನ ಸ್ವಾತಂತ್ರ್ಯ' 'ಚತುಸ್ಸ್ವಾತಂತ್ರ್ಯ'ಗಳನ್ನು ಈಗ ಉಚ್ಚರಿಸುವವರಿಲ್ಲ! 'ಬಲವೇ ನ್ಯಾಯ'ವೆನ್ನುತ್ತಿದ್ದವರನ್ನು ಸೋಲಿಸಿ 'ಗೆಲವೇ ನ್ಯಾಯ' ಎನ್ನುವವರು ಬಂದಂತಿದೆ. ಇದು ಸ್ಪಷ್ಟವಾಗಬೇಕಾದರೆ ಸದ್ಯದ ಮುಸುಕುವಾತಾವರಣ ತಿಳಿಯಾಗಿಕೊಳ್ಳಬೇಕು.

ಮಂಗಳೂರು

ಸ್ಮಶಾನ ವಿವಾದ.

ದಂಡನೆ— ನಂದಿಗುಡ್ಡೆ ಸ್ಮಶಾನದಲ್ಲಿ ಕೆಲಕಾಲದ ಹಿಂದೆ ಓರ್ವ ಹರಿಜನ ಗೃಹಸ್ಥನ ಶವದಹನ ನಡೆಸಿದುದು ಉಚ್ಚ ಹಿಂದೂಗಳ ಧಾರ್ಮಿಕ ಮನೋಭಾವನೆಯನ್ನು ನೋಯಿಸಿದೆಯೆಂದು, ಸರಕಾರದ ಕಡೆಯಿಂದ, ಐವರುಮಂದಿ ಹರಿಜನರ ಮೇಲೆ ಇಲ್ಲಿಯ ಸ್ಪೆ. ಸ. ಮೆಜಿಸ್ಟ್ರೇಟರಲ್ಲಿ ಒಂದು ಮೊಕದ್ದಮೆ ಹೂಡಲಾಗಿತ್ತು. ಮೆಜಿಸ್ಟ್ರೇಟರು, ಆ ಐವರು ಮಂದಿಯ ಪೈಕಿ ಮೂವರ ಮೇಲೆ ಚಾರ್ಜು ಹಾಕಿ ಉಳಿದ ಇಬ್ಬರು ಮಂದಿಯನ್ನು ಬಿಡುಗಡೆ ಮಾಡಿದ್ದರು. ಈ ಮೊಕದ್ದಮೆಯನ್ನು ಬೇರೊಂದು ಕೋರ್ಟಿಗೆ ವರ್ಗಾಯಿಸಬೇಕೆಂದು ಆರೋಪಿಗಳ ಪರವಾಗಿ ಎಡಿಶನಲ್ ಜಿಲ್ಲಾ ಮೆಜಿಸ್ಟ್ರೇಟರಿಗೆ ಬರಕೊಂಡಂತೆ ಅವರು ಅದನ್ನು ಇಲ್ಲಿಯ ಸಬ್ ಮೆಜಿಸ್ಟ್ರೇಟರ ಕೋರ್ಟಿನಿಂದ ಕಾಸರಗೋಡು ಸ್ಪೆ. ಸ. ಮೆಜಿಸ್ಟ್ರೇಟರಾದ ಮಿ. ಮಾಬಿನ್‌ರವರ ಕೋರ್ಟಿಗೆ ವರ್ಗಾಯಿಸುವಂತೆ ಹುಕುಂ ಕೊಟ್ಟರು. ಮಿ. ಮಾಬಿನ್‌ರವರ ಮುಂದೆ ವಿಚಾರಣೆ ನಡೆದು, ಆರೋಪಿಗಳಾದ ಶ್ರೀ ಗೋಪಾಲ ಸಾಲಿನ್ಸ (ನೆರವಲ್ ಫ್ರೊರ್ಫ್ರಂಟ್ ಪ್ರಚಾರಕ), ಶ್ರೀ ಜೆ ನಾರಾಯಣ ಮತ್ತು ಶ್ರೀ ಸೀತಾರಾಮ ಪಡಕಣ್ಣಯ್ಯ (ಜಿಲ್ಲಾ ಕೋರ್ಟು ಅಮೀನ್) ಇವರಿಗೆ ತಲಾ ರೂ 150 ದಂಡ ಜುಲ್ಮಾನೆ, ತೆರಲು ತಪ್ಪಿದರೆ ಒಂದು ತಿಂಗಳ ಸಜೆ ಹೀಗೆ ಶಿಕ್ಷೆ ವಿಧಿಸಲಾಗಿದೆ.

ಆದಿದ್ರಾವಿಡರ ಸಭೆ— ದ ಕ.ಜಿಲ್ಲಾ ಆದಿದ್ರಾವಿಡರ ಸೇವಾಸಂಘದ ಸಭೆಯೊಂದು ತಾ 14ರಲ್ಲಿ ಸೇರಿ, ನಂದಿಗುಡ್ಡೆ ಸ್ಮಶಾನದಲ್ಲಿ ಓರ್ವ ಹರಿಜನ ಗೃಹಸ್ಥನ ಶವದಹನ ಮಾಡಿದ ಅಪರಾಧಕ್ಕೆ ಶಿಕ್ಷೆಗೆ ಗುರಿಯಾದವರು ಅಪೀಲು ಮಾಡಲಿರುವುದನ್ನು ಜಿಲ್ಲಾ ಮೆಜಿಸ್ಟ್ರೇಟರು ಸ್ವತಃ ತನಿಖೆ ನಡೆಸಿ ಇದ್ಯಾಲ್ಲಾ ಜಾತಿಗಳ ಹಕ್ಕುಗಳನ್ನು ಕಾಪಾಡಬೇಕಾಗಿಯೂ 'ಮೇಲಿನ ಮೊಕದ್ದಮೆಯಲ್ಲಿ ಜುಲ್ಮಾನೆ ತೆರದೆ ಕಾರಾಗೃಹಕ್ಕೆ ಹೋಗುವೆನೆಂದು ಸಂಘಕ್ಕೆ ಬರೆದ ಪತ್ರವನ್ನೋದಿ, ಅವರು ಒಂದು ಉದಾತ್ತ ಧ್ಯೇಯಕ್ಕಾಗಿ ಜೈಲಿಗೆ ಹೋಗುವುದರಿಂದ ಜೈಲಿನಲ್ಲಿ ಅವರಿಗೆ ಆರೋಗ್ಯವೂ ಸ್ವಚ್ಛವೂ ದೊರೆಯಲೆಂದೂ ಮುಂತಾಗಿ ಕೆಲವು ಠರಾವುಗಳಾದುವು.

ಜರ್ಮನ್ ಪರಾಭವ ಕಂಡು ಜಪಾನ್ ಹೆದರಿತೆ?

ಯುರೋಪು ವಿಜಯಾನಂತರದ ವಿಶೇಷ ವಿದ್ಯಮಾನಗಳು.

ಜಪಾನಿನ ಸಂಧಿಯಾಚನೆ?

ಜಪಾನು ಆಂಗ್ಲೋ-ಅಮೇರಿಕನರಿಗೆ ರಶ್ಯದ ಮಧ್ಯಸ್ಥಿಕೆಯ ಮೂಲಕ ಸಂಧಿ ಸೂಚನೆಗಳನ್ನು ಸಾನ್ ಫ್ರಾನ್ಸಿಸ್ಕೋಕ್ಕೆ ಕಳುಹಿಕೊಟ್ಟಿದ್ದಿತೆಂದೂ 'ಅದು ಶರ್ತ ರಹಿತ ಶರಣು' ಅಲ್ಲವಾದ್ದರಿಂದ ಜತೆ ಮಿತ್ರ ರಾಷ್ಟ್ರಗಳದನ್ನು ತಿರಸ್ಕರಿಸಿದುವೆಂದೂ ಪ್ರಕಟವಾಗಿದೆ. ಆ ಸೂಚನೆ ಕಳುಹಿದವರು ಜಪಾನಿನ ಪ್ರಮುಖ್ಯ ವ್ಯಾಪಾರೀ ಪ್ರಭೃತಿಗಳು. ಜಪಾನ್ ಚಕ್ರವರ್ತಿಗಳು ಮಿಲಿಟರಿ ಸರಕಾರವನ್ನು ರದ್ದುಪಡಿಸಿ ಮಿತ್ರ ರಾಷ್ಟ್ರಗಳೊಡನೆ ಸಂಧಾನ ಮಾಡಿಕೊಳ್ಳಲು ತಯಾರಿದ್ದಾರೆ; ಜಪಾನಿನ ಆಡಳಿತ ತತ್ವವನ್ನೇ ಬದಲಾಯಿಸಿ ಚುನಾವಣಾ ಪದ್ಧತಿಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಗುವದು; ಜಪಾನಿನ ಸಾಮ್ರಾಜ್ಯ ಸೂತ್ರಗಳನ್ನು ಹಾಗೆಯೇ ಉಳಿಯಗೊಡಬೇಕು. ಅದು ಹೊಸತಾಗಿ ಗೆದ್ದುಕೊಂಡುದನ್ನೆಲ್ಲಾ ಬಿಟ್ಟು ಕೊಡುವದು, ಮಲಯಾ, ಡಚ್ ಈಸ್ಟ್ ಇಂಡೀಸ್‌ಗಳಿಂದ ಸೇನೆ ಹಿಂದೆಗೆದುಕೊಂಡು ಫ್ರೆಂಚ್ ಇಂಡೋ ಚೀನಾ ಮತ್ತು ಕಂಬೋಡಿಯವನ್ನು ಫ್ರಾನ್ಸಿಗೆ ಬಿಟ್ಟು ಕೊಡಲಾಗುವದು. ಮಂಚೂರಿಯ ಮತ್ತು ಚೀನದ ಮೂಲ ನೆಲದಲ್ಲಿ ಜಪಾನು ಗೆದ್ದ ಭಾಗಕ್ಕೆ ಭದ್ರತೆ ದೊರೆಯಬೇಕು ಶಾಂತ ಸಮುದ್ರ ದ್ವೀಪಗಳ ಆಡಳಿತ ಮಂಡಳಿಯ ಜಪಾನಿಗೆ ಸಾಮ್ರಾಗ್ರಿಗಳನ್ನು ಅಮದಾಗಲು ಬಿಡಬೇಕು-ಎಂದು ಮುಂತಾದ ಶರ್ತಗಳು ಜಪಾನ್ ಸಂಧಿ ಸೂಚನೆಯಲ್ಲಿದ್ದುವಂತೆ. ತನ್ನ ಸೇನಾಶಕ್ತಿ ಅಪಾರವಿದ್ದರೂ ರಕ್ತಪಾತದ ನಿವಾರಣೆಗಾಗಿ ಈ ಶಾಂತಿ ಸೂಚನೆಯೆಂಬ ದುರಭಿಮಾನವೂ ಅದರಲ್ಲಿದ್ದಿತಂತೆ

ಜಪಾನಿನ ನಕಾರ

ಇದೇ ರೀತಿ ಚೀನದಲ್ಲು ಜಪಾನು ಸಂಧಾನ ಸೂಚನೆಗಳನ್ನು ಕಳುಹಿದ್ದಿತೆಂದೂ ಚಿಯಾಂಗ್ ಕೈಶೇಕರದನ್ನು ಕೂಡಲೇ ತಿರಸ್ಕರಿಸಿ ಬಿಟ್ಟರೆಂದೂ ವಾರ್ತೆಯಿದೆ. ಪೂರ್ವಗಡೆಯ ವಿ.ಕ್ಕ ಸ್ಥಳಗಳ ಜಪಾನಿನ ಅಧಿಕಾರವನ್ನೊಪ್ಪಿಕೊಂಡು ಸಹಕರಿಸಿದರೆ ಚೀನದ ಆಕ್ರಮಿತ ಸ್ಥಳವನ್ನು ಬಿಟ್ಟುಕೊಟ್ಟು ಚಿಯಾಂಗರೊಡನೆ ರಾಜಿ ಹೂಡಲು ಜಪಾನು ಸಿದ್ಧವಿದೆಯೆಂದು ಅದರಲ್ಲಿ ಸೂಚಿಸಲಾಗಿದ್ದಿತು. ಹಳದಿ ಜನಾಂಗವಾದ ನಾವಿಬ್ಬರೂ ಒಂದಾಗಿ ಯುರೋಪಿಯನರನ್ನು ಇದಿರಿಸಬೇಕೆಂಬ ಪ್ರೇರಣೆ ಅದರಲ್ಲಿದ್ದಿತು. ಆದರೆ ಟೋಕಿಯೋದಿಂದ ಜಪಾನ್ ವಕ್ತಾರನು ಘೋಷಿಸಿದ್ದಾನೆ: "ಜಪಾನಿನ ಸಂಧಿಯಾಚನೆಯ ಈ ಗಾಳೀ ವಾರ್ತೆಗಳೆಲ್ಲಾ ಪ್ರಚಾರೋದ್ದೇಶದಿಂದ ಮಿತ್ರ ರಾಷ್ಟ್ರೀಯರು ಹುಟ್ಟಿಸಿರುವ ಕಟ್ಟುಕಥೆಗಳು ಯುರೋಪು ಯುದ್ಧಾವಸಾನದ ಬಳಿಕ ಜಪಾನು ಸ್ಪಷ್ಟಪಡಿಸಿಕೊಂಡಿರುವ ಏಕ ಮಾತ್ರ ಧೋರಣೆಯೆಂದರೆ, ರಶ್ಯದೊಡನೆ ಸಂಪೂರ್ಣ ಮೈತ್ರಿ ಮತ್ತು ಆಂಗ್ಲೋ ಅಮೇರಿಕನರೊಡನೆ ಸರ್ವ ವಿಧದ ಸಂಗ್ರಾಮ"

ಜಪಾನ್ ಪ್ರತಿಭಟನೆಯ ಬಿಂಕ

ಯುರೋಪು ಯುದ್ಧಾಂತ್ಯದ ಬಳಿಕ ನಿಜಕ್ಕೂ ಜಪಾನರ ಹೋರಾಟವು ಬಿಗುಗೊಂಡಿದೆ. ರಂಗೂನನ್ನು ಗೆದ್ದು, ಹೆಚ್ಚಿನ ಬರ್ಮವನ್ನು ಸ್ವಾಧೀನಪಡಿಸಿಕೊಂಡರೂ ಅಲ್ಲಿಂದ ಜಪಾನರನ್ನು ಪೂರ್ತಿ ಝಾಡಿಸಿ ತೆಗೆಯುವ ಕೊನೆಯ ಕಾರ್ಯ ಮಾತ್ರ ಕಠಿಣವಾಗಿದೆ ಬರ್ಮವೀಗ ಸರೀ ಮೂರು ಪಾಲಾಗಿ ಆ ಪೈಕಿ ಪಶ್ಚಿಮ ಮತ್ತು ಮಧ್ಯಪ್ರಾಂತ್ಯಗಳಲ್ಲಿ ಜಪಾನರನ್ನು ನಿರ್ಮೂಲಿಸುವ ಕಾರ್ಯ ಬಹುಮಟ್ಟಿಗೆ ಸುಗಮವಾಗಿದೆ ಆದರೆ ಪೂರ್ವಗಡೆಯಲ್ಲಿ ಜಪಾನೀ ಹುಡುಗಿಯರು ಕೂಡಾ ಶಸ್ತ್ರಧಾರಿಗಳಾಗಿ ಅಸಾಮಾನ್ಯ ಪ್ರತಿಭಟನೆ ಕೊಡುತ್ತಿದ್ದಾರಲ್ಲದೆ, ವೈರಿಸೇನೆಯ ದುರ್ಬಲ ಭಾಗ ಯ ವೊಡೆಯದ ಮಿತ್ರರ ಪ್ರಗತಿ ಸ್ತಬ್ಧವಾಗಿದೆ ಒಕಿನಾವ ದ್ವೀಪಗಳಲ್ಲಿಯೂ ಮಿತ್ರ ಸೇನೆಗಳಿಗೆ ಅನಿರೀಕ್ಷಿತ ಪ್ರಬಲ ಪ್ರತಿಭಟನೆ [illegible] ದ 350 ಮೈಲು ಉತ್ತರದಲ್ಲಿರುವ ಕ್ಯುಶು ದ್ವೀಪವನ್ನಾಕ್ರಮಿಸಿಕೊಳ್ಳಲು ಅಮೇರಿಕನರು ಹವಣಿಸುತ್ತಿದ್ದಾರೆ ಟೋಕಿಯೋ ಮತ್ತು ಜಪಾನಿನ ಪ್ರಮುಖ ಔದ್ಯೋಗಿಕ ನಗರಗಳ ಮೇಲೆ ಮಿತ್ರರ ಭಾರೀ ಆಕಾಶಧಾಳಿಗಳು ನಡೆದಿವೆ ಇಡೀ ಟೋಕಿಯೋ ಕರಟಿ ಹೋದಂತಿದೆ. ಕೆಲವು ಅವಶ್ಯಾಧಿಕಾರಿಗಳನ್ನು ಬಿಟ್ಟು ನಗರವನ್ನು ಖಾಲಿ ಮಾಡಲು ಜಪಾನ್ ಸರಕಾರ ನಿರ್ಧರಿಸಿದೆ ಬರ್ಮದಂತಹ ದೂರಪೂರ್ವ ರಣಾಂಗಗಳ ಹೊಣೆಯನ್ನು ಬ್ರಿಟಿಷರಿಗೆ ಬಿಟ್ಟು ಅಮೇರಿಕನರೀಗ ಬೇರೆ ರಂಗಗಳನ್ನು ವಹಿಸಿಕೊಂಡಿದ್ದಾರೆ.

ಫ್ರಿಸ್ಕೋ ಸಮ್ಮೇಳನ

ಗೆದ್ದ ವಸಾಹತುಗಳನ್ನು ಜಾಗತಿಕ ಧರ್ಮಕಾರೀ ಮಂಡಲದ ಮೇಲಾಡಳಿತೆಗೊಪ್ಪಿಸುವ ಕುರಿತು ಆಂಗ್ಲೋ [illegible] ರ ಯೋಜನೆಗಳಿಗೆ ರಶ್ಯದ ತಿದ್ದುಪಡಿ ಮುಂದಬಂದಿದೆ ಎಲ್ಲಾ ಚರ್ಚೆಗಳಲ್ಲೂ ಆಂಗ್ಲೋ ಅಮೇರಿಕನರೊಂದು ಕಡೆ, ರಶ್ಯವೊಂದು ಕಡೆಯಾಗಿವೆ. ಭದ್ರತಾ ಕೌನ್ಸಿಲಿನ ಸ್ಥಾನಮಾನಗಳ ಕುರಿತು ಅಲ್ಪ ರಾಷ್ಟ್ರಗಳ ಬೇಡಿಕೆಯನ್ನು ಪ್ರಮುಖ ರಾಷ್ಟ್ರಗಳೊಂದಾಗಿ ಮೂಲೆ ಸೇರಿಸಿದುವು ಜಾಗತಿಕ ಪ್ರಶ್ನೆಗಳೆಲ್ಲಾವುದೂ ಇದುವರೆಗೊಂದು ತೀರ್ಮಾನಕ್ಕೆ ಬಂದಿಲ್ಲ.

ಬರ್ಮಕ್ಕೆ ಪರಾಧೀನತೆ!

ಬರ್ಮದ ಮುಂದಿನ ರಾಜ್ಯಭಾರದ ಕುರಿತು ಬ್ರಿಟಿಷ್ ಸರಕಾರವು ಒಂದು 'ಶ್ವೇತ ಪತ್ರ'ವನ್ನು ಪ್ರಕಟಿಸಿದೆ. ಪುನರ್ರಚನೆಗಾಗಿ ಮುಂದಿನ ಮೂರು ವರುಷಗಳ ವರೆಗೆ ಗವರ್ನರರದೇ ಏಕಾಡಳಿತೆ. ಆ ಗವರ್ನರ್ ಸರ್ವಾಧಿಕಾರಿತ್ವ ಕೂಡಾ ಮೂರೇ ವರುಷಗಳೊಳಗ ಮುಗಿಯುವ ನಿರ್ಬಂಧವಿಲ್ಲ ಪರಿಸ್ಥಿತಿಯು ಸಮಾಧಾನಕರವೆಂದು ಕಂಡುಬಂದರೆ ಮೂರು ವರ್ಷಾನಂತರ ಜಪಾನರಾಕ್ರಮಿಸುವಾಗ ಇದ್ದ ರಾಜ್ಯಭಾರ ಪದ್ಧತಿಯನ್ನೇ ಜ್ಯಾರಿಗೆ ತರಲಾಗುವದು 1935ರ ರಾಜ್ಯಸೂತ್ರಗಳಂತೆ ಚುನಾವಣೆ ನಡೆದು ಮಂತ್ರಿಮಂಡಲ ರಚನೆಯಾಗುವದು ಆ ಮೇಲೆ ತನಗಾವ ರೀತಿಯ ರಾಜ್ಯಭಾರವಾಗಬೇಕೆಂಬುದನ್ನು ಬರ್ಮಿಯರೇ ನಿರ್ಧರಿಸಬೇಕ ದೇಶರಕ್ಷಣೆಯಂತಹ ಬ್ರಿಟಿಷ್ ಹೊಣೆಗಾರಿಕೆಗಳನ್ನು ಉಳಿಸಿಕೊಂಡು ಸಾಮಂತ ಸ್ವರಾಜ್ಯವನ್ನು ಅದಕ್ಕೀಯಲಾಗುವದು ಈ ಬದಲಾವಣೆ ಯಾವಾಗ ಎಂಬ ಕಾಲ ಮಿತಿಯಿಲ್ಲ!

ಒಳಗೊಂದಲಗಳು

ಚರ್ಚಿಲ್, ಸ್ಟಾಲಿನ್, ಟ್ರುಮೇನರ ತ್ರಿಮೂರ್ತಿ ಸಮ್ಮೇಲನವು ಸದ್ಯದಲ್ಲೇ ನೆರೆಯುವ ಸಿದ್ಧತೆ ನಡೆದಿದೆ ಈಗಿನ ಲುಬ್ಲಿನ್ ಸರಕಾರವನ್ನೇ ತಿರುಳಾಗಿ ಗಣಿಸಿ, ರಶ್ಯದೊಡನೆ ಸಹಕರಿಸಬಲ್ಲ ಸರಕಾರವು ಪೋಲೆಂಡಿನಲ್ಲಿ ಸ್ಥಾಪನೆಯಾಗಬೇಕು. ಪೋಲೆಂಡಿನಲ್ಲಿದ್ದುಕೊಂಡು ಅಲ್ಲಿಯ ಜನತೆಯೊಡನೆ ಇತ್ತೀಚೆಗೆ ಸಂಪರ್ಕವಿದ್ದವರೇ ಆ ಸರಕಾರದಲ್ಲಿರಬೇಕು. ಯಾಲ್ಟಾ ನಿರ್ಧಾರದಂತೆಯೇ ಪೋಲೆಂಡಿನ ತೀರ್ಮಾನವಾಗಬೇಕೆಂದು ಮಾರ್ಶಲ್ ಸ್ಟಾಲಿನರು ಹೇಳಿಕೆಯಿತ್ತಿದ್ದಾರೆ ಪೋಲಿಶ್ ಮುಖಂಡರ ದಸ್ತಗಿರಿಯನ್ನು ಸಮರ್ಥಿಸಿಕೊಂಡಿದ್ದಾರೆ. ಟ್ರೀಸ್ಟ ಜಗಳವಿನ್ನೂ ತೀರ್ಮಾನವಾಗಿಲ್ಲ ಆಸ್ಟ್ರಿಯಾದ ಪ್ರಾಂತ್ಯವಾದ ಕಾರಿಂತಿಯದಿಂದ ಮಾರ್ಶಲ್ ಟಿಟೋರು ತನ್ನ ಸೇನೆಯನ್ನು ಹಿಂದೆಗೆದುಕೊಂಡಿದ್ದಾರಾದರೂ ಟ್ರೀಸ್ಟೆಯನ್ನು ಬಿಟ್ಟುಕೊಟ್ಟಿಲ್ಲ. ಆದರಿದಿರಿನ ಸ್ಥಳವಾದ ಇಟಲಿಯ ರಿಮಿನಿ ಕರಾವಳಿಯಿಂದ ನಾಗರಿಕರನ್ನು ಮಿತ್ರ ಸೇನಾಧಿಕಾರಿಗಳು ಖಾಲಿಮಾಡುತ್ತಿರುವನನ್ನು ಕಂಡರೆ ಘರ್ಷಣೆಯ ಭಯವೆದ್ದಿದೆ. ಸಿರಿಯಾದ ಲೆವೆಂಟ್ ನಗರಕ್ಕೆ ಫ್ರೆಂಚ್ ಸೇನೆಗಳ ಸರಬರಾಜಿಯಾಗುತ್ತಿರುವದನ್ನು ಸಿರಿಯಾ ಮತ್ತು ಲೆಬನೀಸ್ ಸರಕಾರಗಳು ತೀವ್ರವಾಗಿ ನಿಷೇಧಿಸಿ ರಕ್ಷಣಾಸಿದ್ಧತೆಗೆ ತೊಡಗಿ ಇರಾಕು ಫ್ರಾನ್ಸಿನ ವರ್ತನೆಯನ್ನು ಖಂಡಿಸಿ ಎಲ್ಲಾ ಅರಬಿರಾಷ್ಟ್ರಗಳೂ ಏಕ ಕಂಠದಿಂದ ವಿರೋಧಿಸಬೇಕೆಂಬ ಕರೆಯಿತ್ತಿದ ಪರಿಸ್ಥಿತಿಯೀಗ ವಿಷಮವಾಗಿದೆ. "ಯುದ್ಧವಿನ್ನೂ ಮುಗಿದಿಲ್ಲ. ಪ್ರಮುಖ ರಾಷ್ಟ್ರಗಳೊಳಗಿನ ಜಗಳ ತೀರ್ಮಾನವಾಗುವ ವರೆಗೆ ಸಣ್ಣ ರಾಷ್ಟ್ರಗಳು ಕಾಯಬೇಕು. ರಕ್ಷಣಾ ಸಿದ್ಧತೆಮಾಡಿಕೊಳ್ಳಬೇಕು" ಎಂದು ಡಿವೆಲರರ ಎಚ್ಚರಿಕೆ.

ಜರ್ಮನಿಯಲ್ಲಿ.

ಡೋಯೆನಿಟ್ಜ್ ತಂಡದೊಡನೆ ಸಹಕರಿಸುವದನ್ನೂ ಗೋರಿಂಗ್ ಮೊದಲಾದ ನಾಜಿಗಳನ್ನು ಕ್ಷಮಿಸುವದನ್ನೂ ರಶ್ಯನ್ ಪತ್ರಿಕೆಗಳು ಅಸಹನೆಯಿಂದ ಖಂಡಿಸುತ್ತಿವೆ ಆಕ್ರಮಿತ ಜರ್ಮನಿಯ ಆಡಳಿತೆಯ ಕುರಿತು ತ್ರಿರಾಷ್ಟ್ರಗಳೊಳಗೆ ತೀಕ್ಷ್ಣ ಭಿನ್ನಾಭಿಪ್ರಾಯವಿರುವಂತಿದೆ ಬರ್ಲಿನನ್ನು ಕೇಂದ್ರವಾಗಿ ಇಟ್ಟುಕೊಳ್ಳಲು ಆಂಗ್ಲೋ ಅಮೇರಿಕನರು ತಯಾರಿಲ್ಲ ಜರ್ಮನಿಯನ್ನು ಮೂಲತಃ ಆಕ್ರಮಿಸಿಕೊಳ್ಳದೆ ಮೇಲಧಿಕಾರ ಮಾತ್ರ ನಡೆಸುವ ಯೋಚನೆಯಲ್ಲಿ ಬ್ರಿಟಿಷರಿದ್ದಾರೆ. ನಾಜಿಗಳ ಮೇಲೆ ಆಂಗ್ಲೋ-ಅಮೇರಿಕನರ ಧೋರಣೆ ಮೃದುಗೊಂಡಂತಿದೆ.

ಕುಂದಾಪುರದಲ್ಲಿ ಮಲಬಾರು ಡಿವಿಜನಿನ ಎಂಜಿನಿಯರರ ನೀರಾವರಿ ಯೋಜನೆಯ ಸಲುವಾಗಿ ಪ್ರವಾಸ-

ದ ಕ ಜಿಲ್ಲಾ ಬೋರ್ಡಿನ ಮಾಜಿ ಸದಸ್ಯರಾದ ಶ್ರೀ ಬೈಂದೂರು ಸುಬ್ಬಣ್ಣ ಸೆಟ್ಟರು ಕುಂದಾಪುರ ತಾಲೂಕಿನಲ್ಲಿ ಆಗಬೇಕಾದ ನೀರಾವರಿ ಯೋಜನೆಗಳ ಕುರಿತು ಮದ್ರಾಸು ಸರಕಾರಕ್ಕೆ ಮಾಡಿದ ಮನವಿಯ ಕುರಿತು ಕೂಲಂಕುಷ ತನಿಖೆ ನಡೆಸುವರೆ ಮಂಗಳೂರು ಡಿವಿಜನಿನ ಎಕ್ಸಿಕ್ಯೂಟಿವ್ ಎಂಜಿನಿಯರರು ಕುಂದಾಪುರದಲ್ಲಿ ಮೊಕ್ಕಾಂ ಮಾಡಿದರು. ತಾ. ೧೯ರಲ್ಲು ಮೊಳಹಳ್ಳಿ, ಬಸ್ರೂರು, ಕಂದಾವರ ಗ್ರಾಮಗಳನ್ನು ಸಂದರ್ಶಿಸಿ ಅಲ್ಲಿಯ ನೀರಾವರಿ ಸ್ಥಳಗಳನ್ನು ಸಂದರ್ಶಿಸಿದರು. ತಾ ೨೦ರಲ್ಲು ಬೈಂದೂರು ಕೇಂದ್ರವನ್ನು ಸಂದರ್ಶಿಸಿ ಪಡುವರಿ, ಶಿರೂರು, ಬಿಜ್ಜೂರು ಗ್ರಾಮಗಳನ್ನು ನೋಡಿದರು ಎಂಜಿನಿಯರರು ಶ್ರೀ ಸೆಟ್ಟರೊಂದಿಗೆ ಇನ್ನೂ ಕೆಲವು ಸೇಟುದುಗಳನ್ನು ಸಂದರ್ಶಿಸಿ ತಾನು ನೋಡಿದ ಸ್ಥಳಗಳಲ್ಲಿ ನೀರಾವರಿ ಯೋಜನೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಟ್ಟಲ್ಲಿ ಎರಡನೆ ಮತ್ತು ಮೂರನೆ ಬೆಳೆಗಳನ್ನು ಶಾಸ್ತ್ರೀಯವಾಗಿ ಬೆಳೆಸಲು ಸಾಧ್ಯವಿದೆಯೆಂದು ಅಭಿಪ್ರಾಯವಿತ್ತರು. ಈ ವಿಷಯದಲ್ಲಿ ಕುಂದಾಪುರ ಸಬ್ ಕಲೆಕ್ಟರರನ್ನು ಭೇಟಿಯಾದರು. ಜಿಲ್ಲೆಯ ಆಹಾರ ಸಮಸ್ಯೆಯನ್ನು ಸುಧಾರಿಸಲು ನೆರವಾಗುವ ಈ ಯೋಜನೆಗಳಿಗೆ ಜಿಲ್ಲಾ ಕಲೆಕ್ಟರರೂ ಸಂಪೂರ್ಣ ಸಹಾನುಭೂತಿ, ಸಹಕಾರವನ್ನೀಯುವರೆಂದು ಸಬ್ ಕಲೆಕ್ಟರರು ಸಹ ಹೇಳಿದರು.

ಕುಂದಾಪುರದ ವಂತಿಗೆ ವಸೂಲಿ-

ಇಲ್ಲಿಯ ಉಪ ವಿದ್ಯಾರ್ಥಿ ಭವನದ ವಂತಿಗೆ ವಸೂಲಿಯ ಕಮಿಟಿಯ ಮೆಂಬರರಲ್ಲಿ ಕೆಲವರು ತಾ 27 4 45ರಿಂದ ಸಂಚರಿಸಿ ೩ ದಿವಸದಲ್ಲಿ ಈ ಕೆಳಗಿನಂತೆ ವಂತಿಗೆಯ ವಾಗ್ದಾನ ಹಾಗೂ ವಸೂಲಿಯನ್ನು ಪಡೆಕೊಂಡಿರುತ್ತಾರೆ.

ಮೊದಲಿನ ಸಂಖ್ಯೆ ವಾಗ್ದಾನ, ಎರಡನೆ ಸಂಖ್ಯೆ ವಸೂಲಿ ಎಂತ ತಿಳಿಯತಕ್ಕದ್ದು.

[illegible]

(ಮುಂದುವರಿಯುವುದು)

It is easy to earn
But difficult to save

We can help you to create a Substantial fund by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited.
Head Office UDIPI, (S India)
T. A. PAI, B Com, (Bom) A I I B
General Manager

ರೈತರ ಬಡತನ— ಪಟ್ಟಣ ವಾಸಿಗರ ಧನ ಸಂಗ್ರಹ

ಬರೆದವರ —ಶ್ರೀ ಸಿ. ವಿ. ರಾವ್, ಬೆಂಗಳೂರು

ಹಿಂದಿನ ಕಲವು ವರ್ಷಗಳಲ್ಲಿ ರೈತನ ಬಡತನವು ಬಹಳ ಹೆಚ್ಚಾಗಿರುವುದು ತಿಳಿದಿರುವ ವಿಷಯವಾಗಿದೆ ಈಗ್ಗೆ ೩-೪ ವರ್ಷಗಳಿಂದ ಉತ್ತಮಗೊಂಡಿರುವಂತೆ ಕಂಡುಬರುತ್ತದೆ ಆದರಲ್ಲಿಯೂ ಈಗಿನ ಯುದ್ಧ ಪರಿಸ್ಥಿತಿಯಿಂದ ರೈತಜೀವನ ಕೊಂಚ ಉತ್ತಮವಾಗಿರುವುದೆಂದು ಹೇಳಬಹುದು ಆದರೆ ಇದೇ ಪರಿಸ್ಥಿತಿಯು ಯುದ್ಧಾನಂತರವೂ ಕೂಡ ಇರುವಂಥ ಏರ್ಪಾಡುಗಳು ನಮ್ಮ ಸಮಾಜದಲ್ಲಿ ಉಂಟಾಗಿ ರೈತರು ತಮ್ಮ ಆರ್ಥಿಕ ಜೀವನವನ್ನು ಉತ್ತಮ ಮಟ್ಟದಲ್ಲಿ ಇಟ್ಟುಕೊಳ್ಳುವಂತಾಗ ಬೇಕಾದರೆ ನಾವು ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಏನು? ಎಂಬ ವಿಷಯವನ್ನು ಕೊಂಚ ನೋಡೋಣ

ರೈತನ ಬಡತನ

ರೈತನ ಬಡತನಕ್ಕೆ ಅನೇಕ ಕಾರಣಗಳನ್ನು ತಿಳಿಯಬೇಕಾದರೂ ಇಲ್ಲಿ ಮುಖ್ಯವಾಗಿ ಕಲವನ್ನು ಮಾತ್ರ ಕೊಟ್ಟಿದೆ.

1 ವ್ಯವಸಾಯ ಮಾಡುವ ಕ್ರಮಗಳು ಮತ್ತು ಪಶುಪಾಲನೆಯು ನಮ್ಮ ದೇಶದಲ್ಲಿ ಶತಮಾನಗಳ ಕೆಳಗೆ ಅನುಸರಿಸುತ್ತಿರುವ ಪದ್ಧತಿಯನ್ನೇ ಅನುಸರಿಸುತ್ತಿರುವುದು. ಆಧುನಿಕ ಯಂತ್ರೋಪಕರಣಗಳನ್ನು ಸಾಕಾದಷ್ಟು ಪ್ರಮಾಣದಲ್ಲಿ ಪ್ರಯೋಜನಕ್ಕೆ ತಾರದೆ ಇರುವುದು

ಗೋಪಾಲನೆಯು ಸಹ ಇದೇ ರೀತಿಯಲ್ಲಿಯೇ ಕೇವಲ ಹೀನಸ್ಥಿತಿಯಲ್ಲಿ ಉಳಿದಿರುವುದು ಗೋ ಸಂರಕ್ಷಣವು, ಅವುಗಳ ಅಭಿವೃದ್ಧಿಯು ಸಾಕಾದಷ್ಟು ಉತ್ತಮ ರೀತಿಯಲ್ಲಿ ನಡೆಯುತ್ತಿಲ್ಲ ಇದಕ್ಕೆ ಸೇರಿದ ಹಾಗೆ ನೀರಾವರಿ ಕೆಲಸಗಳು ದೇಶದಲ್ಲಿ ಸಾಕಾದಷ್ಟು ಹೆಚ್ಚಾಗಿ ಇಲ್ಲದ ಕಾರಣ ರೈತನು ಪ್ರಕೃತಿದತ್ತವಾದ ಮಳೆಯನ್ನು ನೆಚ್ಚಿಕೊಂಡು ತನ್ನ ಕೆಲಸವನ್ನು ಮಾಡಬೇಕಾಗಿದೆಯೆಂದು ಬಹಳ ಮಟ್ಟಿಗೆ ಹೇಳಬಹುದ. ಇದರಿಂದ ಅನೇಕ ಸಮಯಗಳಲ್ಲಿ ಬಹಳ ತೊಂದರೆಗೆ ಗುರಿಯಾಗುತ್ತಾನೆ ಅಲ್ಲದ ಅವನ ವರಮಾನವೂ ಕೂಡ ಬಹಳ ಮಟ್ಟಿಗೆ ಇಳಿದು ಜೀವನವು ಸಾಗದ ಬಹಳ ತೊಂದರೆಗೆ ಗುರಿಯಾಗುತ್ತಾನ ಇನ್ನೂ ಕಠಿಣವಾಗಿ ಹೇಳಬೇಕಾದರೆ ಅವನಿಗೆ ಜಮೀನು ಬಹಳ ಮಟ್ಟಿಗೆ ಆಪಾಡಿಕೊಳ್ಳಬೇಕಾದರೆ ಅವನಿಗೆ ಬೇಕಾಗ ವಷ್ಟು ಪ್ರಮಾಣದಲ್ಲಿ ದೊರಕದೇ ಇರುವುದು ಮತ್ತು ಯಂತ್ರೋಪಕರಣಗಳಿಂದ ತಯಾರಾದ ರಾಸಾಯನಿಕ ಗೊಬ್ಬರಗಳು ಸಾಕಾದಷ್ಟು ಸಿಗದೆ ಇರುವುದು ಆದರಲ್ಲಿ ವ್ಯವಸಾಯವನ್ನೇ ಕಸಬನ್ನಾಗಿ ಇಟ್ಟುಕೊಂಡಿರುವ ರೈತರಿಗೆ ಸ್ವಂತ ಜಮೀನು ಸಾಕಷ್ಟು ಇಲ್ಲದೆ ಕೇವಲ ಗುತ್ತಿಗೆಗೋ, ವಾರಕ್ಕೋ ಮಾಡಿಕೊಂಡಿರುವ ಜಮೀನುಗಳಿಗಾಗಿ ಉತ್ಪತ್ತಿಗೆ ಸರಿಯಾದ ಪ್ರಮಾಣವಲ್ಲದ ರೀತಿಯಲ್ಲಿ ಸುಲಿಗೆ ನಡೆಯುತ್ತಿರುವುದು ಇದರಿಂದ ಭೂಮಿ ಉಳತಕ್ಕವನು ಯಾವಾಗಲೂ ಹೀನಸ್ಥಿತಿಯಲ್ಲಿಯೇ ಇದ್ದುಕೊಂಡು ಬೇಸಾಯವನ್ನು ಮಾಡುತ್ತಿರುತ್ತಾನ ಇದಕ್ಕೂ ಹೆಚ್ಚಾಗಿ ಒಂಡವಾಳದಾರನು, ವ್ಯವಸಾಯವನ್ನು ಕೂಲಿಗಳಿಂದ ಮಾಡಿಸಿ ಲಾಭ ಸಂಪಾದನೆ ಮಾಡುವ ಒಂದು ಉದ್ಯಮವನ್ನಾಗಿ ಮಾಡಿಕೊಂಡಿರುತ್ತಾನೆ ಇಂತಹ ದೊಡ್ಡ ಜಮೀನ ದಾರರೆಲ್ಲಾ ಪಟ್ಟಣದಲ್ಲಿ ಇದ್ದುಕೊಂಡು ರೈತನಿಗ ನೇರನಾಗಿ ಒತ್ತಾಸೆಯಾಗಿರುವುದಿಲ್ಲ ಅಲ್ಲದೆ ನಮ್ಮ ದೇಶದಲ್ಲಿ ಜಮೀನುಗಳು ಕುಟುಂಬದ ಆಸ್ತಿಪಾಸ್ತಿ ಆಗಿರುತ್ತವೆ ಅಲ್ಲಿ ವಿಭಾಗವಾಗುವಾಗ ಸಣ್ಣ ಸಣ್ಣ ತುಂಡುಗಳಾಗಿಬಿಟ್ಟಿವೆ ಹೀಗೆಯೆ ಇನ್ನೂ ಅನೇಕ ಕಾರಣಗಳನ್ನು ತಿಳಿಸಬಹುದು. ಇವೆಲ್ಲಕ್ಕಿಂತಲೂ ಮೂಲಭೂತವಾದ ಒಂದು ಕಾರಣವಿದೆ ಅದೇನೆಂದರೆ "ವ್ಯವಸಾಯಗಾರನ ದಿನವೊಂದರ ಸಂಪಾದನೆಗೂ, ಪಟ್ಟಣದ ಗಿರಣಿಯಲ್ಲಿನ ಸಂಪಾದನೆ ಮಾಡುವವನ ಸಂಪಾದನೆಗೂ ಹೆಚ್ಚು ವ್ಯತ್ಯಾಸವಿದೆ

ವ್ಯವಸಾಯಗಾರನ— ಕೈಗಾರಿಕೆ ಉದ್ಯಮದವನ ಕೂಲಿಗಿರುವ ವ್ಯತ್ಯಾಸ

ನಮ್ಮ ದೇಶದಲ್ಲಿ ಕೈಗಾರಿಕ ಕೆಲಸಗಳಲ್ಲಿ ಪ್ರವೃತ್ತನಾಗಿರುವ ಒಬ್ಬ ಕಲಸಗಾರನ ಸಂಪಾದನೆಯು, ಅದೇ ರೀತಿ ವ್ಯವಸಾಯದಲ್ಲಿ ತೊಡಗಿರ ವವನ ದಿನ ಒಂದರ ಸಂಪಾದನೆಯ 6ರಷ್ಟು ಆಗಿರುತ್ತದೆ ಗ್ರಾಮಾಂತರ ದೇಶದಲ್ಲಿ ವ್ಯವಸಾಯದಲ್ಲಿ ತೊಡಗಿರುವವನ ಸಂಪಾದನೆಯು ಗಂಡಾಳು ಒಂದರ (ರಷ್ಟು ಅಂದರ ಒಂದು ಆಳಿಗ ೬ ಆಣೆಯಿಂದ 8 ಆಣೆ ಮಾತ್ರವಿದ್ದು ಕೈಗಾರಿಕ ಉದ್ಯಮದಲ್ಲಿ ತೊಡಗಿರುವ ಅದೇ ದರ್ಜೆಯ ಕಲಸಗಾರನ ಸಂಪಾದನೆಯು 1 ರೂ ನಿಂದ 1-8-0 ಆಗುತ್ತದ ಕೈಗಾರಿಕೆ ಕಲಸಗಳಿಗೆ ಬರಿ ಒಂಡವಾಳನ್ನು ಸೇರಿಸಿ ಪರದೇಶದ ಯಂತ್ರೋಪಕರಣಗಳನ್ನು ತರಿಸಬೇಕು ಮತ್ತು ಈ ಬಂಡವಾಳವ ಮೇಲೆ ಹೆಚ್ಚಿನ ಲಾಭ ಬರುವಂತೆ ಆಗಬೇಕು ಇಷ್ಟಿದ್ದರೂ ಕೈಗಾರಿಕೆ ಕೆಲಸದಲ್ಲಿ ಶ್ರಮ ವಹಿಸವವನಿಗೆ ಯಾವ ರೀತಿ ವೇತನ ಸೌಲಭ್ಯಗಳು ದೊರಕುತ್ತವೆಯೋ ಅದೇ ರೀತಿಯಲ್ಲಿ ವ್ಯವಸಾಯಗಾರನಿಗೂ ದೊರಕಲು ಸಾಧ್ಯವೆಂಬುದರಲ್ಲಿ ಸಂದೇಹವಿಲ್ಲ

ಪಟ್ಟಣದ ಲೇವಾ ದೇವಿ ಮತ್ತು ಜಮೀನುದಾರನ ಧನ ಸಂಗ್ರಹ ಮಾರ್ಗಗಳು

ನಮ್ಮ ಮೈಸೂರು ದೇಶವನ್ನೇ ತೆಗೆದುಕೊಂಡು ನೋಡುವುದಾದರೆ ನಮ್ಮ ದೇಶದ ಪ್ರಜಾ ಸಂಖ್ಯೆ ಸುಮಾರು 72-73½ ಲಕ್ಷ ಇರುತ್ತದ. ಇದರಲ್ಲಿ 10ರಿಂದ 13½ ಲಕ್ಷದಷ್ಟು ಜನರು ದೊಡ್ಡ ಪಟ್ಟಣದಲ್ಲಿ ವಾಸಮಾಡುತ್ತಾರೆ. ಉಳಿದ ಜನರು ಅಂದರೆ 50–60 ಲಕ್ಷ ಜನರು ಹಳ್ಳಿಗಳಲ್ಲಿ ವಾಸ ಮಾಡುವವರಾಗಿದ್ದಾರೆ ಪಟ್ಟಣದಲ್ಲಿ ವಾಸ ಮಾಡುವ ಜನರ ಜೀವನದ ಪದ್ಧತಿಗೂ ಆರ್ಥಿಕ ಮಟ್ಟಕ್ಕೂ ಹಳ್ಳಿಯ ಜನ ಪದ್ಧತಿ ಆರ್ಥಿಕ ಮಟ್ಟಕ್ಕೂ ಬಹಳ ಮಟ್ಟಿಗೆ ಸಂಬಂಧವಿಲ್ಲದಂತೆ ಇರುವುದು ಪಟ್ಟಣಿಗರು ಅನುಸರಿಸುತ್ತಿರುವ ಜೀವನೋಪಾಯ ಮಾರ್ಗಗಳಿಗೆ ನಮ್ಮ ಸಮಾಜ ಹಾಗೂ ಸರ್ಕಾರದ ಬೆಂಬಲ ದೊರತಿರುವುದೇ ಗ್ರಾಮಾಂತರ ವಾಸಿಗಳಾದ ಜನರ ಬಡತನ ಬಹಳ ಮಟ್ಟಿನ ಕಾರಣವೆಂದು ಹೇಳಬಹುದು ಪಟ್ಟಣದಲ್ಲಿ ವಾಸವಾಗಿರುವ 13½ ಲಕ್ಷ ಜನರ ಅಂದರೆ ಪ್ರಜಾವರ್ಗದಲ್ಲಿ ಕೇವಲ 25 ಸಾವಿರ ಸಂಸಾರಗಳು ಮಾತ್ರ ಅಂದರೆ ಸುಮಾರು ಒಂದು ಲಕ್ಷ ಮಾತ್ರ ಸರಕಾರಿ ಕಲಸದಿಂದ ತಮ್ಮ ಜೀವನೋಪಾಯವನ್ನು ನಡೆಸುವರೆಂದು ಹೇಳಬಹುದು ಇದು ಅಲ್ಲದೆ ಸುಮಾರಾಗಿ 2 ಲಕ್ಷದಷ್ಟು ಜನರು ಕೈಗಾರಿಕೆ ಉದ್ಯಮದಲ್ಲಿ ತೊಡಗಿ ಪಟ್ಟಣದಲ್ಲಿ ಜೀವಿಸುತ್ತಾರೆ ಇನ್ನೂ ಬಾಕಿ ಉಳಿದವರು 10 ಲಕ್ಷ ಜನರು ಲಾಭದಾಯಕವಾದ ಇತರ ಕಸಬುಗಳು ಅಂದರೆ ಮುಖ್ಯವಾಗಿ ಲೇವಾದೇವಿ, ಕುಶಲ ಕಸಬುಗಳು ಇವುಗಳಿಂದ ತಮ್ಮ ಹೊಟ್ಟೆ ಹೊರೆಯುವರು. ಇವರುಗಳು ಅಲ್ಲದೆ ಸರಕಾರದಿಂದ ವಿಶ್ರಾಂತಿ ವೇತನವನ್ನು ಪಡದು ಇರುವವರು ಪಟ್ಟಣಗಳಲ್ಲಿ ವಾಸಮಾಡುತ್ತಲಿದ್ದಾರೆ. ಇವರ ಉತ್ತಮ ಜೀವನಕ್ಕೆ ಗ್ರಾಮಾಂತರದಲ್ಲಿ ಹಗಲಿರುಳು ಮನೆ ಮಕ್ಕಳೆಲ್ಲಾ ದುಡಿವ ಬಡ ರೈತನ ಕಡು ಬಡವರಿನ ಸಂಪಾದನೆಯೇ ಆಧಾರವಾಗಿರುವುದು ಇದು ಖಂಡಿತವಾಗಿ ಪರಿವರ್ತನೆ ಹೊಂದಬೇಕು ಈ ರೀತಿ 60ರಿಂದ 63 ಲಕ್ಷ ಜನರು ಧನ ಉತ್ಪತ್ತಿ ಮಾರ್ಗಗಳನ್ನು ನೋಡದ ಧನ ಸಂಗ್ರಹ ಮಾರ್ಗದಲ್ಲಿಯೇ ಆಸಕ್ತರಾಗಿ ಒಂದಕ್ಕೆ (ರಷ್ಟು ಧನ ಉತ್ಪತ್ತಿ ಮಾಡುವುದರಿಂದ ಆಕರ್ಷಕ ಜೀವನ ಮಾಡುವರು. ಪಟ್ಟಣಿಗರು ಧನ ಸೇರಿಸುವ ನೀತಿಯನ್ನು ಕೊಂಚ ಮಟ್ಟಿಗಾದರೂ ಕಡಿಮೆಯಾಗಿ ಗ್ರಾಮಾಂತರ ರೈತನಿಗೆ ಸಹಾಯ ವಾಗುವಂತೆ ಆಗಬೇಕು ಅಲ್ಲದ ಸರ್ಕಾರದವರು ಇದನ್ನು ತಕ್ಕ ಮಟ್ಟಿಗಾದರೂ ಆಡಗಿಸಲು ತಕ್ಕ ನಿಬಂಧನೆಯನ್ನು ತರುವುದಲ್ಲದೆ ನಿಬಂಧನೆಯ ಎರಡು ಪಂಗಡದವರಿಗೂ ಪರಸ್ಪರತೆಯಿಂದ ನಡೆದುಕೊಳ್ಳುವಂತೆ ಆಗಬೇಕು ಅಲ್ಲದೆ ಹಳ್ಳಿಯ ಜನರು ಮತ್ತು ಪಟ್ಟಣದವರು ಕೂಡ ಇದಕ್ಕೆ ಬಹಳ ಆಸಕ್ತಿಯಿಟ್ಟು ಸಹಕಾರ ಮಾಡಬೇಕು ಹೀಗ ಮಾಡುವುದರಿಂದ ಸಮಾಜವು ಮುಂದುವರಿಯುವುದಲ್ಲದ ದೇಶದ ಜನರೂ ಕೂಡ ಮುಂದುವರಿಯುವುದರಲ್ಲಿ ಸಂದೇಹವಿಲ್ಲ

ಪಟ್ಟಣವಾಸಿಗಳ ತೆರಿಗೆಗಳು

ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡತಕ್ಕ ರೈತನು ಸಾಧಾರಣವಾಗಿ ಭೂಗಂದಾಯ, ಲೋಕಲ್ ಸೆಸ್, ಇವುಗಳನ್ನು ಮಾತ್ರ ಕೊಡುತ್ತಾನೆ ಆದರೆ ಮೈಸೂರು ದೇಶದ ಇಂದಿನ ಸರಾಸರಿ ವರಮಾನ 8½ ಕೋಟಿ ರೂಪಾಯಿ ಗಳಿಗೆ ಮೇಲ್ಪಟ್ಟಿದ್ದರೂ ಭೂಗಂದಾಯವಾಗಿ ಬರತಕ್ಕ ವರಮಾನ ಸುಮಾರು 1½ ಲಕ್ಷ ಮಾತ್ರ ಆಗುತ್ತದೆಂದು ಹೇಳಬಹುದು ಆದರೆ ಪಟ್ಟಣದಲ್ಲಿ ವಾಸಮಾಡಿ ಗ್ರಾಮಾಂತರ ಪ್ರದೇಶದ ಜನರ ಜೇಬಿನಿಂದ ಬರತಕ್ಕ ಧನದ ಬಹು ಭಾಗವನ್ನು ಕೂಡಿಸುವ ವ್ಯಾಪಾರ ಲೇವಾದೇವಿ ಇತ್ಯಾದಿ ನಡೆಸತಕ್ಕವರಿಂದ ಈ ಸರ್ಕಾರದವರು ತೆರಿಗೆ, ಸೂಪರ್‌ಟ್ಯಾಕ್ಸ್, ಬಾರಿ ಮನೆಕಂದಾಯ ಇತ್ಯಾದಿ ನಾನಾ ರೂಪದಿಂದ ಧನವನ್ನು ತೆಗೆಯುತ್ತಿರುವುದು ನೋಡಬಹುದು. ಆದರೆ ಗ್ರಾಮಾಂತರ ರೈತಾಪಿ ಜನರು ಈ ಮಾರ್ಗದಲ್ಲಿ ಹೆಚ್ಚು ಹಣವನ್ನು ಬಡ್ಡಿಯ ರೀತಿಯಲ್ಲಿ ತೆರದಿರಲಿ ಎಂಬ ಸದುದ್ದೇಶದಿಂದಲೇ ಹೀಗೆ ಮಾಡಿರುವುದು ಈ ಯುದ್ಧ ಸಮಯದಲ್ಲಿ ರೈತರಿಗೆ ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು, ಅನುಕೂಲವಾಗಿದ ಅದೇ ರೈತರು ತಮಗೆ ಸಿಕ್ಕಿರುವ ಈ ಸಮಯದಲ್ಲಿ ಪಟ್ಟಣಿಗರಿಗೂ ಆದಷ್ಟು ಮಟ್ಟಿಗೆ ಸಹಕಾರ ನೀಡಿ ಮುಂದುವರಿಯಬೇಕು

ರೈತನ ಋಣ ಮತ್ತು ಸಹಕಾರ ಸಂಘಗಳು

ಅನ್ಯಾಯ ಮಾರ್ಗದಿಂದ ರೈತನ ಮೇಲೆ ಹೇರಿರುವ ಸಾಲದ ಹೊರೆಯನ್ನು ತಗ್ಗಿಸಿದ ಹೊರತು ಸಾಧ್ಯವಿಲ್ಲವೆಂಬುದನ್ನು ತಿಳಿದು ಸಾಲ ತೀರುವಳಿ ಕಾನೂನು ಮಾಡಿರುತ್ತಾರೆ ಆದರೆ ಇದು ಇನ್ನೂ ಹೆಚ್ಚಿನ ಕಾರ್ಯವನ್ನು ಕೈಗೊಂಡ ಹೊರತು ರೈತನಿಗೆ ಈಗ ಬಳೆಯುತ್ತಿರುವ ಸಾಮಾನುಗಳಿಗೆ ಹೆಚ್ಚು ಬೆಲೆ ಸಿಕ್ಕಿದರೂ ಕೂಡ ಅವನಿಗೆ ಇರುವ ಸಾಲದಿಂದ ಮುಕ್ತನಾಗಲು ಸಾಧ್ಯವಿಲ್ಲದಾಗಿದೆ ಇನ್ನು ವ್ಯವಸಾಯ ಸಣ್ಣ ಪುಟ್ಟ ಕೈಗಾರಿಕೆಗೆ ಸಿಕ್ಕಬೇಕಾದ ಹಣ ಸಹಾಯ ಒದಗಿಸುವುದು ಒಂದ ಮುಖ್ಯವಾದ ವಿಚಾರ ಇದಕ್ಕೆ ಸರಿಯಾದ ಸಹಕಾರ ಸಂಘಗಳು ಏರ್ಪಟ್ಟು ಗ್ರಾಮಾಂತರ ಕೈಗಾರಿಕೆಗಳಿಗೆ ಉತ್ತೇಜನಕೊಟ್ಟು ಸಹಾಯ ಮಾಡಿದರೆ ರೈತಾಪಿ ಜನರು ಮುಂದು ಬರುವುದಲ್ಲದೆ, ರೈತರಲ್ಲಿ ಮಿತವ್ಯಯ ಸ್ವಭಾವವು ಬರುವುದಲ್ಲ ಇದರಿಂದ ಬಂಡವಾಳಗಾರನ ಗುಲಾಮಗಿರಿಯಿಂದ ತಪ್ಪುವುದಲ್ಲದ ಅವನಿಗೆ ಸತಂತ್ರತೆಯನ್ನೂ ಕೊಡುತ್ತದೆ ಹೀಗೆ ಮಾಡಿದ ಪಕ್ಷದಲ್ಲಿ ನಮ್ಮ ದೇಶವು ಮುಂದುವರಿಯುವುದರಲ್ಲಿ ಸಂದೇಹವಿಲ್ಲ

ವ್ಯಾಪಾರ ಸಹಕಾರ ಸಂಘಗಳು

ರೈತನು ಬೆಳೆದ ದವಸವನ್ನು ಕೊಂಡು ಬೇರೆ ಕಡೆ ಸಾಗಿಸುವುದು ಮತ್ತು ಅವನ ಜೀವನಕ್ಕೆ ಬೇಕಾಗುವ ಇತರ ಸಾಮಾನುಗಳನ್ನು ಒದಗಿಸುವುದು, ಈ ಕಾರ್ಯಗಳಿಗೆ ಸಂಸ್ಥಾನದ ಪ್ರತಿಭಾಗದಲ್ಲಿ ವ್ಯಾಪಾರ ಸಂಘಗಳನ್ನು ಏರ್ಪಾಡು ಮಾಡಿ, ದಳ್ಳಾಳಿಗಳ ಮತ್ತು ಲಾಭಕ್ಕಾಗಿ ದಾಸ್ತಾನು ಮಾಡತಕ್ಕವರ ಹೊಡೆತದಿಂದ ರೈತನನ್ನು ತಪ್ಪಿಸುವುದು ಈ ರೀತಿ ನಾನಾ ಮಾರ್ಗಗಳಿಂದ ಸನ್ನಿವೇಶವನ್ನು ಒದಗಿಸಿಕೊಂಡು ಧನ ಸಂಗ್ರಹ ಮಾಡುವದರಿಂದ ರೈತರು ಪಾರಾಗುವಂತೆ ಮಾಡುವುದು ಅಲ್ಲದೆ ಯಂತ್ರೋಪಕರಣಗಳಿಂದಲೂ ಉತ್ತಮ ತರಹ ಬೇಸಾಯ ಮಾರ್ಗ ಅನುಸರಿಸುವುದರಿಂದಲೂ ಗೃಹ, ಗ್ರಾಮ ಕೈಗಾರಿಕೆಗೆ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಕೊಡುವುದು. ಇದಕ್ಕೆ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸ ಹೆಚ್ಚಿನ ಮಟ್ಟದಲ್ಲಿ ಮಾಡಬೇಕು ಹೀಗೆ ನಡೆಯಬೇಕಾದರೆ ಜನಸಹಕಾರದ ಜೊತೆಗೆ ಸರ್ಕಾರದವರ ಹೆಚ್ಚಿನ ಸಹಾಯ ಬೇಕು ಹೀಗೆ ಮಾಡಿದರೆ ದೇಶವು ಮುಂದುವರಿಯುವುದರಲ್ಲಿ ಸಂದೇಹವಿಲ್ಲ

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್

ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.

18 Balmat Road, MANGALORE

Approved firm by the Govt of Mysore.

Certified by the Agent of the Govt of India in Ceylon 01T906Es

ಉಡುಪಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಉಡ್ಪಿ.

ವಿಮಾದಾರರ ಪ್ರತಿನಿಧಿಗಳೇ ಆಡಳಿತೆ ನಡೆಸುವ ಈ ಸಂಘದ ೧೯೪೪ನೇ ದಶಂಬರ ಅಂತ್ಯದ ವರೆಗಿನ ಆಡಳಿತೆಯ ವಾರ್ಷಿಕ ವರದಿಯನ್ನೂ, ಲೆಕ್ಕಪತ್ರಗಳನ್ನೂ ಅವಲೋಕಿಸಿದಲ್ಲಿ ಸಂಘವು ಪ್ರಶಂಸನೀಯ ರೀತಿಯಲ್ಲಿ ನಡೆಸಲ್ಪಟ್ಟು ವಿಶೇಷ ಪ್ರಗತಿಯನ್ನು ಹೊಂದಿದೆಯೆಂದು ತಿಳಿಸುಬರುತ್ತದೆ. ವರದಿ ವರ್ಷದ ಹಿಂದಿನ ವರ್ಷದ ಕೊನೆಯಲ್ಲಿ ನಿಶ್ಚಯಿಸಲಿದ್ದ ಮತ್ತು ವರದಿ ವರ್ಷದ ಅವಧಿಯಲ್ಲಿ ಪಡೆದ ರೂ. ೭೦.೦೦,೩೫೦ ಮೌಲ್ಯದ ವಿಮಾ ಮನವಿಗಳ ಪೈಕಿ ರೂ. ೬೧,೫೪,೮೫೦ ಮೌಲ್ಯದ ವಿಮಾಪತ್ರಗಳು ಫಲಿಸಿದುವು. ಈ ಸಂಖ್ಯೆಯನ್ನು ಹಿಂದಿನ ವರ್ಷದ ರೂ. ೩೬,೭೦,೫೫೦ರ ಸಂಖ್ಯೆಯೊಡನೆ ಹೋಲಿಸಿದಲ್ಲಿ ವರದಿ ವರ್ಷದಲ್ಲಿನ ವಿಮಾ ವ್ಯಾಪಾರವು ಗತವರ್ಷಕ್ಕಿಂತ ಎಷ್ಟು ಚೆನ್ನಾದ ಹೆಚ್ಚುವಳಿಯನ್ನು ಪಡೆದಿದೆಯೆಂದು ಸ್ಪಷ್ಟವಾಗಿ ಕಾಣಬಹುದು. ಅಲ್ಲದೆ ಅದಕ್ಕಿಂತಲೂ ಹಿಂದಿನ ೧೯೪೧, | ೧೯೪೨ನೇ ವರ್ಷಗಳಲ್ಲಿನ ರೂ. ೧೧,೭೧,೫೦೦ ಮತ್ತು ರೂ. ೧೩,೦೪,೨೫೦ ಎಂಬ ಸಂಖ್ಯೆಗಳನ್ನೂ ಲಕ್ಷ್ಯಕ್ಕೆ ತಂದರೆ, ಕಳೆದ ೪ ವರ್ಷಗಳಲ್ಲಿ ವಿಮಾಪತ್ರಗಳ ರೂಪದಲ್ಲಿ ಫಲಿಸಿದ ವಿಮಾವ್ಯಾಪಾರವು ಎಷ್ಟು ಶೀಘ್ರವಾಗಿ ವೃದ್ಧಿಗೊಳ್ಳುತ್ತ ಬಂದಿದೆಯೆಂದು ತಿಳಿಯಬಹುದು. ವರದಿ ವರ್ಷಾಂತ್ಯದಲ್ಲಿ ವಿಮಾನಿಧಿಯು ರೂ. ೧೦,೮೦,೦೯೭-೧೨-೧ಗೆ ಏರಿದೆ ೧೯೪೧, ೧೯೪೨, ೧೯೪೩ನೇ ವರ್ಷಗಳ ಅಂತ್ಯದಲ್ಲಿದ್ದ ವಿಮಾನಿಧಿಗಳ ಸಂಖ್ಯೆಗಳಾದ ರೂ ೩,೨೪,೯೩೬-೬-೧೦, ೫,೭೪,೮೭೭-೧೦-೯ ಮತ್ತು ರೂ ೭,೪೦,೦೦೦-೫-೧೦ನ್ನು ಪರಿಶೀಲಿಸಿದರೆ ವರದಿ ವರ್ಷದ ವಿಮಾನಿಧಿಯು ಮುಂಚಿನ ವರ್ಷಕ್ಕಿಂತ ಸುಮಾರು ೩ ಲಕ್ಷ ರೂಪಾಯಿಯಷ್ಟು ಹೆಚ್ಚಿದೆಯೆಂದಲ್ಲದೆ ನಾಲ್ಕೇ ವರ್ಷಗಳಲ್ಲಿ ಅದು ನೆಗೆತದಿಂದ ಹೆಚ್ಚುತ್ತ ಬಂದಿದೆಯೆಂದೂ ವ್ಯಕ್ತವಾಗುವುದು. ವಿಮಾವ್ಯಾಪಾರವು ವಿಶೇಷವಾಗಿ ಹೆಚ್ಚಿದರೂ ಆಡಳಿತೆಯ ಮಿತವ್ಯಯದ ಸೂಚಿಯಾದ ಪ್ರವರ್ತಯ ನಿಷ್ಪತ್ತಿ (Renewal exp nse ratio)ಯು ಹಿಂದಿನ ವರ್ಷ ಸೇಕಡ ೧೦.೦೭ ಇದ್ದುದು ವರದಿ ವರ್ಷದಲ್ಲಿ ಸೇಕಡ ೩.೩೫ ರಷ್ಟು ಅಲ್ಪ ನಿಷ್ಪತ್ತಿಗೆ ಇಳಿದಿದೆಯೆಂದೂ ಹಿಂದಿನ ಮೂರು ವರ್ಷಗಳ ಸಂಖ್ಯೆಗಳಾದ ೬.೧, ೧೫.೭೪ ಮತ್ತು ೧೦.೦೭ನ್ನು ನೋಡಿದರೆ ಆಡಳಿತೆದಾರರು ವ್ಯಯದ ಹಿಡಿತವನ್ನು ಎಷ್ಟು ಬಿಗಿಯಾಗಿ ಮಾಡುತ್ತಾ ಬಂದಿರುತ್ತಾರೆಂದೂ ವ್ಯಕ್ತವಾಗುವುದು.

ಈ ಸಂಘದ ಆಸ್ತಿಗಳ ಮೌಲ್ಯವು ವರದಿ ವರ್ಷದಲ್ಲಿ ರೂ ೧೧,೬೬,೮೭೮-೪-೮ ಆಗಿತ್ತು. ಇದರಲ್ಲಿ ರೂ ೬,೩೪,೪೬೩-೭-೮ ಇಂಡಿಯ ಸರಕಾರದ ಭದ್ರತಾಪತ್ರಗಳಲ್ಲಿಯೂ, ರೂ. ೪೧,೬೯೦ ಪ್ರಾಂತೀಯ ಮತ್ತು ದೇಶೀಯ ಸರಕಾರಗಳ ಭದ್ರತಾಪತ್ರಗಳಲ್ಲಿಯೂ, ರೂ. ೨,೩೭,೯೮೮ ೧೦ ೮ ದೇಶದೊಳಗೇನೇ ಇರುವ ಸಂಸ್ಥೆಗಳ ಪ್ರಥಮ ಜವಾಬ್ದಾರಿಯುಳ್ಳ ಭಂಡವಾಳ ಹಿಸೆಗಳಲ್ಲಿಯೂ, ರೂ ೩೨,೮೦೬-೫ ೦ ದೇಶದೊಳಗೇನೇ ಇರುವ ಸಾಮಾನ್ಯ ಭಂಡವಾಳ ಹಿಸೆಗಳಲ್ಲಿಯೂ ಇವೆ. ಇತರ ಭದ್ರತೆಯ ನಿಧಿಗಳೆಂದರೆ, ಸಂಘದ ವಿಮಾಪತ್ರಗಳ ಪ್ರತ್ಯರ್ಪಣ ಮೌಲ್ಯದೊಳಗೆ ಆ ಪತ್ರಗಳ ಜವಾಬ್ದಾರಿಯ ಮೇಲೆ ಕೊಟ್ಟ ರೂ ೨೫,೪೯೧ - ೦ಯ ಸಾಲಗಳು, ಟಿಪ್ಪಾಲು ಇಲಾಖೆಯ ವಿಮಾಪತ್ರಗಳ ಪ್ರತ್ಯರ್ಪಣ ಮೌಲ್ಯದೊಳಗೆ ಆ ಪತ್ರಗಳ ಜವಾಬ್ದಾರಿಯ ಮೇಲೆ ಕೊಟ್ಟ ರೂ ೨.೪೪೩ ೧೪ ೫ಯ ಸಾಲಗಳು, ದೇಶದೊಳಗೇನೆ ಇರುವ ರೂ. ೨೧,೦೦೦ ೦ ೦ ಮೌಲ್ಯದ ಕಟ್ಟೋಣ ಮತ್ತು ಭೂಮಿ, ಮತ್ತು ಸ್ಥಿರಾಸ್ತಿಗಳ ಆಧಾರದ ಮೇಲೆ ಕೊಟ್ಟ ರೂ. ೬,೫೦೦ ಯ ಸಾಲಗಳು ಆಗಿವೆ. ಅಲ್ಲದೆ ಕೈಯ್ಯಲ್ಲಿ ಮತ್ತು ದೇಶೀಯ ಬ್ಯಾಂಕುಗಳಲ್ಲಿ ಚಾಲ್ತಿ ಠೇವಣಾತಿಗಳಲ್ಲಿ ರೂ ೮೦,೯೪೫-೦ ೭ ಮತ್ತು ದೇಶೀಯ ಬ್ಯಾಂಕುಗಳಲ್ಲಿ ಇತರ ಠೇವಣಾತಿಗಳಲ್ಲಿ ರೂ. ೨,೫೦೦ ಇವೆ. ಹೀಗೆ ಕಂಪನಿಯು ಆಸ್ತಿಗಳ ಅತ್ಯಧಿಕಾಂಶವು ಅತಿ ಸ್ಥಿರಭದ್ರತೆಗಳಲ್ಲಿಯೂ, ಅತ್ಯಲ್ಪಾಂಶವು ಇತರ ಭದ್ರತೆಗಳಲ್ಲಿಯೂ ಇರುವುದನ್ನು ನೋಡಿದರೆ ಸಂಘದ ಆಸ್ತಿಗಳು ಸುಭದ್ರವಾಗಿವೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ

ಇನ್ನು ಆಯವ್ಯಯ ಪಟ್ಟಿಯನ್ನು ಪರಿಶೀಲಿಸುವಾಗ ವ್ಯಯಭಾಗದಲ್ಲಿ ಮುಖ್ಯವಾಗಿ ಮರಣ ನಿಮಿತ್ತ ಸಂದ ನ ಸಲ್ಲಬೇಕಾದ ಹಣವು ರೂ ೩೩,೭೭೬-೭-೦ ಆಗಿದೆಯೆಂದೂ, ಆಡಳಿತೆಯ ಖರ್ಚು ರೂ. ೨,೭೭,೨೬೫ ೧೨ ೯ ಆಗಿದೆಯೆಂದೂ ಕಾಣುತ್ತದೆ. ಆಯಭಾಗದಲ್ಲಿ ಮುಖ್ಯವಾದ ವಿಮಾಕಂತಿನ ಹಣವು ರೂ. ೬,೬೩,೯೫೭ ೭-೦ ಆಗಿದೆ ಹಿಂದಿನ ವರ್ಷದ ವಿಮಾಕಂತಿನ ಹಣವು ರೂ ೪,೦೫,೪೨೨ ೯ ೦ ಆಗಿತ್ತು. ವಿಮಾನಿಧಿಯು ವರದಿಯ ವರ್ಷದ ಆದಿಯಲ್ಲಿ ರೂ ೭.೪೦,೦೦೦-೫ ೧೦ ಇದ್ದುದು ವರದಿಯ ವರ್ಷದ ಕೊನೆಯಲ್ಲಿ ರೂ. ೧೦,೮೦,೦೯೭ ೧೨ ೧ಗೆ ಏರಿದೆ ಹೀಗೆ ವರದಿ ವರ್ಷದಲ್ಲಿ ವಿಮಾಕಂತಿನ ಹಣವು ಸಾಧಾರಣ ೩ ಲಕ್ಷ ರೂಪಾಯಿಯಷ್ಟು, ವಿಮಾನಿಧಿಯು ೩೩ ಲಕ್ಷ ರೂಪಾಯಿಯಷ್ಟು ಹೆಚ್ಚಾದುದು ಅಭಿನಂದನೀಯ.

ಹೀಗಾಗಿ ಸಂಘದ ಆಸ್ತಿಗಳ ಸುವ್ಯವಸ್ಥೆಯ ಕುರಿತಾದ ವಿವರಗಳನ್ನೂ, ಸಂಘವು ವರದಿ ವರ್ಷದಲ್ಲಿ ನಡೆಸಿದ ವಿಮಾವ್ಯಾಪಾರದಲ್ಲಾದ ಸ್ಪಷ್ಟ ವೃದ್ಧಿಯನ್ನು ಈ ವೃದ್ಧಿಯ ಕಾಲದಲ್ಲಿ ಆಡಳಿತೆದಾರರು ಬಹಳವಾಗಿ ಇಳಿಸಿದ ಪುನರ್ವ್ಯಯ ನಿಷ್ಪತ್ತಿಯನ್ನೂ ಪರಿಶೀಲಿಸಿದರೆ ಸಂಘವು ಬಹಳ ಭದ್ರವಾಗಿಯೂ, ಆರ್ಥಿಕವಾಗಿಯೂ, ಮಿತವ್ಯಯಿಯಾಗಿಯೂ, ಪ್ರಗತಿಶಾಲಿಯಾಗಿಯೂ ಇದೆ ಎಂಬುದು ಮನವರಿಕೆಯಾಗುವುದಲ್ಲದೆ ವಿಮಾರ್ಥಿ ಜನರಿಗೆ ಸಂಘವು ಎಷ್ಟು ವಿಶ್ವಾಸಾರ್ಹವಾಗಿಯೂ ಪ್ರಿಯವಾಗಿಯೂ ಆಗಿದೆಯೆಂದು ವ್ಯಕ್ತವಾಗುವುದು

ವಿದಾಯ ಸತ್ಕಾರ—ಇಲ್ಲಿಂದ ಕೂನೂರಿಗೆ ವರ್ಗವಾಗಿ ಹೋಗಲಿರುವ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ H ಆನಂದ ರಾವ್, ಬಿ. ಎ. ಇವರಿಗೂ ಮಂಗಳೂರಿಗೆ ಡೆಪ್ಯುಟಿ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿ ವರ್ಗವಾಗಿರುವ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಶ್ರೀ. ಯು. ನಾಗಪ್ಪ ಬಿ ಎ ಇವರಿಗೂ ಜನರಲ್ ಸ್ಟೋರ್ಸಿನ ಪ್ರೊಪ್ರೈಟರ್ ಶ್ರೀ ಕೆ. ಆರ್ ಬಾಳಿಗರು ೧೬ನೇ ಸಂಜೆ ಡಾಕ್ಟರ್ ಪಿ ಆರ್ ನಾಯ್ಕರ ಡಿಸ್ಪೆನ್ಸರಿಯಲ್ಲಿ ಒಂದು ಸತ್ಕಾರವನ್ನಿತ್ತರು

ಇಲ್ಲಿಯ ರೇಶನ್ ಕ್ಷೇತ್ರದಲ್ಲಿಯ ಜನಸಾಮಾನ್ಯರು ತಮ್ಮ ಭೂಮಿಯ ಅಕ್ಕಿಯನ್ನೇ ರೇಶನ್ ಪರಿಮಾಣದಲ್ಲಿ ಉಪಯೋಗಿಸುತ್ತಿರುವುದು ಸರಿಯಷ್ಟೆ. ಸ್ವಲ್ಪ ಸಮಯ ಅವರು ಸ್ವಂತಕ್ಕೆ ಅಕ್ಕಿಯನ್ನು ಕೊಟ್ಟು ಗೋಧಿ ರಾಗಿ ತರಬೇಕಾಗಿತ್ತು ಅವರೆ ಈಗ ಆ ನಿಬಂಧನೆಗೆ ಪರ್ಮಿಟು ದೊರೆಯುವುದಿಲ್ಲ. ತಮ್ಮ ಸ್ವಾಧೀನದಲ್ಲಿರುವ ಅಕ್ಕಿಯನ್ನೇ ಬೇರೆ ಯವರಿಗೆ ಒರಡು ಕಾನೂನಿನಂತೆಯೂ ಎಕ್ಕನರಿಗೆ ಒಂದ ಶಾಸನಂತೆಯೂ ಎಣಿಸಿ ಖರ್ಚು ಮಾಡಬಹುದೋ ಎಂಬ ವಿಚಾರದಲ್ಲಿ ಹಸುಗೆ ಅಧಿಕಾರಿಗಳ ಜರೂರು ಸ್ಪಷ್ಟೀಕರಣ ಅಗತ್ಯವಿದೆ.

ಕಡ್ಡಾಯವಾಗಿ ಕೊಂಡು ಹೋಗಬೇಕಾಗಿಲ್ಲ—ಸೀದಾ ಕ್ಷೇತ್ರದಲ್ಲಿ ರೇಶನ್ ಕಾರ್ಡುದಾರರು ಗೋಧಿ ಮತ್ತು ರಾಗಿ ಕೊಂಡುಹೋಗಲೇಬೇಕೆಂಬ ಕಡ್ಡಾಯ ನಿಯಮ ಈಗ ಸಡಿಲಿಸಲಾಗಿದೆ. ಇಷ್ಟವಿಲ್ಲದವರು ಗೋಧಿ ರಾಗಿ ಅಂಶ ಬಿಟ್ಟು ಅಕ್ಕಿಯಂಶ ಮಾತ್ರ ಕೊಂಡುಹೋಗಬಹುದಾಗಿದೆ.

ಟಪ್ಪಾಲು ಕಟ್ಟೆಯಲ್ಲಿ—ವಿಜಯ ದಿನಾಚರಣೆಯು ಕಳೆದ ತಾ 14ರಲ್ಲು ವಿಶೇಷ ಗೌಜಿಯಿಂದ ಆಚರಿಸಲಾಯಿತು. ಡಿವಿಜನಲ್ ಪೋಸ್ಟಲ್ ಸುಪರಿಂಟೆಂಡೆಂಟರು ಕಳೆದ ವಾರ ಉಡುಪಿಗೆ ಬಂದಿದ್ದರು.

ನೊಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O ಸ. 483/1943

ಕ್ರಮ ಅಪ್ಲಿಕ್ಯಾರಿ ನಂ 92/1945

ವಾದಿ—ಗಣಪ್ಪಯ್ಯ ಕಮ್ತಿ

ಪ್ರತಿವಾದೀರು— ನಾಗಪ್ಪ ಶ್ಯಾನಭಾಗ ಕೂಡಾ.

2ನೇ ಪ್ರತಿವಾದಿ ರಾಮನ ಶ್ಯಾನಭಾಗರಿಗೆ ಸ್ವತಃ ಮತ್ತು 6ನೇ ಪ್ರತಿವಾದಿ ವ್ಯಾನರ ವೆಂಕಟ್ರಾಯನ ಗಾರ್ಡಿಯನನಾಗಿ ಮತ್ತು 3ನೇ ಪ್ರತಿವಾದಿ ಕೊಗ್ಗ ಯಾನೆ ರಾಮಕೃಷ್ಣ ಶ್ಯಾನಭಾಗರಿಗೆ ಸಹಾ.

ಸದ್ರಿ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ವಾದಿಯು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1945ನೇ ಇಸ್ವಿ ಜೂನು ತಿಂಗಳ ತಾ 18ಕ್ಕೆ ನಿಶ್ಚಯಿಸೋಣಾಗಿಯದೆಂತ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ. ಆಕ್ಷೇಪ ಇದ್ದಲ್ಲಿ ಸದ್ರಿ ತಸ್ಸಿ ದಿವ್ಸ ಕೋರ್ಟಿನವರು ಕರೆದಾಗ್ಯೆ 11 ಘಂಟೆಗೆ ಹಾಜ್ರಾಗಿ ಟ್ಯಾಕೆರ್ಡಾತಿಕೊಳ್ಳತಕ್ಕದ್ದು

K. Narayana Kamath

ವಾದಿಯ ಕಡೆ ಎಡ್ವೋಕೇಟ.

ತಾ. 16 ನೇ 1945ನೇ ಇಸ್ವಿ,
ಕುಂದಾಪುರ—

ದಿ ಮುಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ಯುನೈಟೆಡ್ ಕರ್ನಾಟಕ
ಇನ್ಸುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd., DHARWAR

ಕನ್ನಡ ನಾಡಿನ ಪ್ರಾತಿನಿಧಿಕ—

ಜೀವ ವಿಮಾ ಸಂಸ್ಥೆ!

ಕಳೆದ ೧೫ ವರುಷಗಳಿಂದ ಜೀವ ವಿಮಾ ಕಾರ್ಯವನ್ನು ಮಾಡುತ್ತ ಕನ್ನಡಿಗರ

ಆದರಾಭಿಮಾನದ ಸಂಸ್ಥೆ!

ಪ್ರಥಮ ಕಾಲ-ಮೂಲ ವಿಮರ್ಶೆ (Valuation)ಯಲ್ಲಿಯೇ ಪಾಲಿಸಿದಾರರಿಗೆ ಲಾಭ (Bonus) ಹಂಚಿದ ಸಂಸ್ಥೆ!

ಪ್ರತಿಯೊಬ್ಬ ಕನ್ನಡಿಗನೂ ಪಾಲಿಸಿಯನ್ನು ಪಡೆಯಲು ಯೋಗ್ಯವಾದ ಸಂಸ್ಥೆ!

ಇಂದೇ ಜೀವ ವಿಮೆ ಇಳಿಸಿರಿ;
ಮತ್ತು ಪ್ರಾತಿನಿಧ್ಯವನ್ನು ಪಡೆಯಿರಿ

ಹೆಚ್ಚಿನ ವಿವರಗಳಿಗೆ—

M. Goverdhan Rao,
Manager.

ವಿದ್ಯಾವಿಷಯಕ ಸಮ್ಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲ ಭಾಷಾಂತರ

ಪುಟ 400ಕ್ಕೂ ಮಿಕ್ಕಿದೆ.

ಬೆಲೆ: ಬರೇ 0-8-0 ಮಾತ್ರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತದೆ.

ದಕ್ಷಿಣ ಕನ್ನಡ.

ಪ್ರಾಣಿಹಿಂಸಾ ನಿವಾರಕ ಸಂಘ.

ಮಂಗಳೂರು—ಕಳೆದ ತಾ. ೨೯-೪-೪೫ರಲ್ಲಿ ಗವರ್ನಮೆಂಟ್ ಕಾಲೇಜ್ ಹಾಲಿನಲ್ಲಿ ದ. ಕನ್ನಡದ ಎಡಿಶನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ನೆರೆದ ಮಂಗಳೂರು ನಾಗರಿಕರ ಒಂದು ಸಭೆಯಲ್ಲಿ ಮಂಗಳೂರಿಗಾಗಿ ಪ್ರಾಣಿಹಿಂಸಾ ನಿವಾರಕ ಸಂಘವೊಂದು ಸ್ಥಾಪಿಸಲ್ಪಟ್ಟಿದ್ದು, ಆ ಸಂಘವು ಇದೇ ತಾ. ೧-೫-೪೫ರಿಂದ ತನ್ನ ಕಾರ್ಯಾರಂಭ ಮಾಡಲು ಅಧಿಕಾರ ಪಡೆದಿದೆ ಎಂದು ಈ ಮೂಲಕ ಸರ್ವ ಜನರಿಗೂ ತಿಳಿಸಲಾಗುತ್ತದೆ.

ಪ್ರಾಣಿಹಿಂಸಾ ನಿವಾರಣೆಯ ಕಾಯಿದೆ (1890ರ ಆಕ್ಟ್ XI)ಯ ಮೇರೆಗೆ ಅಪರಾಧಗಳೆಂದರೆ ಇವು: ೧. ಹೊಡೆಯುವುದು, ಕಲ್ಲಿನಿಂದ ಹೊಡೆಯುವುದು, ಮಿತಿತಪ್ಪಿ ಓಡಿಸುವುದು, ಮಿತಿತಪ್ಪಿ ಭಾರ ಹೇರಿಸುವುದು, ಮಿತಿತಪ್ಪಿ ಜನರನ್ನು ಕೂಡ್ರಿಸುವುದು, ಶ್ವಾಸ ಕಟ್ಟುವಂತೆ ಮಾಡುವುದು, ಉಪವಾಸ ಹಾಕುವುದು, ತಕ್ಕಷ್ಟು ಆಹಾರ ಕೊಡದಿರುವುದು, ಬಾಯಾರಿಕೆಗೆ ಗುರಿಮಾಡುವುದು, ಮಳೆ ಬಿಸಿಲುಗಳಲ್ಲಿ ಕಟ್ಟಿಹಾಕುವುದು ಇವೇ ಮೊದಲಾದ ರೀತಿಗಳಲ್ಲಿ ಪ್ರಾಣಿಗಳನ್ನು ಕೆಟ್ಟ ರೀತಿಗಳಲ್ಲಿ ನಡೆಸುವುದು. ೨. ಯಾವ ಪ್ರಾಣಿಯನ್ನಾದರೂ ಅನಾರೋಗ್ಯಕರವಾದ ಕೆಸರು, ಹಟ್ಟಿ, ದೊಡ್ಡಿ ಮೊದಲಾದ ಕಡೆಗಳಲ್ಲಿ ಇರಿಸುವುದು. ೩. ಕಾಯಿಲೆ ಇರುವ, ಅಂಗಹೀನವಾದ ಅಥವಾ ಇತರ ರೀತಿಗಳಿಂದ ಅಯೋಗ್ಯವೆನ್ನಿಸಿದ ಪ್ರಾಣಿಯನ್ನು ಗಾಡಿಗೆ, ನೇಗಿಲಿಗೆ ಅಥವಾ ನೇಗಿಲಿಗೆ ಅಥವಾ ಬೇರೆ ಯಾವುದಾದರೂ ಕೆಲಸಗಳಿಗೆ ಉಪಯೋಗಿಸುವುದು ಅಥವಾ ಉಪಯೋಗಿಸಲು ಅಪ್ಪಣೆಕೊಡುವುದು. ೪. ಅನಾವಶ್ಯಕವಾದ ಕ್ರೂರತನವನ್ನು ತೋರಿಸಿ, ಯಾವುದಾದರೂ ಪ್ರಾಣಿಯನ್ನು ಕೊಲ್ಲುವುದು. ೫. ಬಿಟ್ಟಿನ ವರವಿರುವ ಅಥವಾ ಮೇಲ್ವಿಚಾರಕ್ಕೆ ಒಳಪಟ್ಟಿರುವ ಕಾಯಿಲೆಯಾದ ಒಂದು ಪ್ರಾಣಿಯ ವಿಷಯದಲ್ಲಿ ತಕ್ಕ ಜಾಗ್ರತೆ ವಹಿಸದಿರುವುದು ಅಥವಾ ಅಗತ್ಯವಿರುವ ಪರಾಮರ್ಶೆ ಚಿಕಿತ್ಸೆಯನ್ನು ಕೊಡಿಸದೆ ಅಸಡ್ಡೆ ಮಾಡುವುದು, ಅಂಥ ಪ್ರಾಣಿ ಎಲ್ಲಿಯಾದರೂ ಹೋಗಲು ಇಲ್ಲವೆ ಸಾರ್ವಜನಿಕ ರಸ್ತೆ ಮುಂತಾದ ಕಡೆ ಬಿದ್ದು ಸಾಯಲು ಅದನ್ನು ಬಿಟ್ಟುಬಿಡುವುದು. ೬. ಶರೀರದಲ್ಲಿ ಗಾಯವಿರುವ, ಹೊಟ್ಟೆಗೆ ಹಾಕಲದಿರುವ, ಅಥವಾ ಕೆಟ್ಟ ರೀತಿಯಿಂದ ನಡೆಯಿಸಿರುವ ಕಾರಣದಿಂದ ನೋವನ್ನು ಅನುಭವಿಸುತ್ತಿರುವ, ಯಾವನೊಂದು ಸಜೀವ ಪ್ರಾಣಿಯನ್ನಾದರೂ ಮಾರಾಟಕ್ಕೆ ಹೊರಗೆ ಇರಿಸುವುದು ಅಥವಾ ಇಟ್ಟಿರುವುದು. ೭. ಅನಾವಶ್ಯಕವಾದ ನೋವು ಅಥವಾ ಕಷ್ಟಗಳಿಗೆ ಗುರಿಪಡಿಸುವ ರೀತಿಯಲ್ಲಿ ಅಥವಾ ಸ್ಥಿತಿಯಲ್ಲಿ ಕಟ್ಟುವುದು ಅಥವಾ ಹೊತ್ತುಕೊಂಡು ಹೋಗುವುದು. ೮. ವಧೆಯ ಪದ್ಧತಿಯ, ಅನಾಗರಿಕ ಕ್ರಮದಿಂದ ಯಾವ ಪ್ರಾಣಿಯ ಜೀವವನ್ನಾದರೂ ಬಜ್ಜ ತೆಗೆಯುವುದು, (ಅದರ ಬದಲಿಗೆ ಜಾನುವಾರು ಆಸ್ಪತ್ರೆಯ ಸರ್ಜನರ ಪದ್ಧತಿಯ 'ಬುರ್ಡಿಜ್ಜೊ' ರೀತಿಯನ್ನು ಅನುಸರಿಸಬಹುದು) ೯. ಅನಾವಶ್ಯಕವಾದ ನೋವು ಅಥವಾ ಕಷ್ಟಗಳಿಗೆ ಯಾವ ಪ್ರಾಣಿಯನ್ನಾದರೂ ಗುರಿಪಡಿಸುವಂಥಾ ಇತರ ಎಲ್ಲಾ ಕ್ರೂರ ಕಾರ್ಯಗಳು ಮತ್ತು ಅವುಗಳನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡು ಹೋಗುವ ರೀತಿಗಳು.

ಪ್ರಾಣಿಯೆಂದರೆ ಗೃಹಕೃತ್ಯಕ್ಕೆ ಸಂಬಂಧಪಟ್ಟ ಅಥವಾ ಹಿಡಿದು ತಂದ (ಪಕ್ಷಿಗಳು, ಮೃಗಗಳು ಇತ್ಯಾದಿ) ಪ್ರಾಣಿಯೆಂದರ್ಥ.

ಇಂಥ ಅಪರಾಧಗಳನ್ನು ಯಾರು ಪ್ರತ್ಯಕ್ಷವಾಗಿ ಮಾಡುತ್ತಾನೊ, ಆ ಮನುಷ್ಯನೂ ಆ ಕ್ಷಣ ಆ ಜಾನುವಾರುಗಳ ಮಾಲಕನೂ, ಯಾವುದಾದರೊಂದು ಪ್ರಾಣಿಯ ಮೇಲೆ ಅಂಥಾ ಕ್ರೂರಾಚಾರಗಳನ್ನು ಜರುಗಿಸಲೂ ಆ ಪ್ರಾಣಿಗಳನ್ನು ಕೆಟ್ಟರೀತಿಯಲ್ಲಿ ನಡೆಸಲೂ ಅಸ್ಪದ ಕೊಡುವ ಬೇರೆ ಯಾವ ಮನುಷ್ಯನೂ ಅಥವಾ ಇತರ ರೀತಿಯಿಂದ ಅಂಥಾ ಅಪರಾಧಗಳಿಗೆ ಜವಾಬ್ದಾರನಾಗುವ ಇನ್ನಿತರ ಯಾವನೂ 'ಪ್ರೊಸಿಕ್ಯೂಟ್' ಮಾಡಲ್ಪಡಲು ಅರ್ಹನಾಗುತ್ತಾನೆ.

ಯಾವ ಪ್ರಾಣಿಗಳು ಅಂಥಾ ಕ್ರೂರಾಚಾರಗಳಿಗೆ ಒಳಪಡಿಸಲ್ಪಟ್ಟಿವೆಯೋ ಅಂಥಾ ಪ್ರಾಣಿಗಳನ್ನು ಮೆಜಿಸ್ಟ್ರೇಟರ ಅಥವಾ ವೆಟರ್ನರಿ ಸರ್ಜನರ ಪರೀಕ್ಷೆಯ ಉದ್ದೇಶಕ್ಕಾಗಿ ತನ್ನ ವಶಪಡಿಸಿಕೊಳ್ಳಲಿಕ್ಕೂ, ಸೆರೆಮಕೊಳ್ಳಲಿಕ್ಕೂ ಅಂಥಾ ಕಾರ್ಯಗಳಿಗೆ ಹೊಣೆಗಾರರಾದವರನ್ನು ವಾರಂಟು ವಿನಹ ಕೈದು ಮಾಡಲಿಕ್ಕೂ ಈ ಸಂಘದ ಇನ್ಸ್ಪೆಕ್ಟರಿಗೆ ಅಧಿಕಾರವಿದೆ.

ಮಂಗಳೂರು 12 5 1945 — **ಎಮ್. ಕೆ. ದೇವರಾಜ**, ಗೌರವಾರ್ಥ ಕಾರ್ಯದರ್ಶಿ

ಕಿ. ಸೂ. ಕಣ್ಣಾನೂರಿನ ಪ್ರಾಣಿಹಿಂಸಾ ನಿವಾರಕ ಸಂಘದ ಸೀನಿಯರ್ ಇನ್ಸ್ಪೆಕ್ಟರ್ ಶ್ರೀ ಗೋವಿಂದನ್ ಕಂಪೋನ್ ಎಂಬವರು ತಾ. ೨-೪-೪೫ರಿಂದ ಮಂಗಳೂರು ಸಂಘದ ಇನ್ಸ್ಪೆಕ್ಟರರಾಗಿ ಕೆಲಸಕ್ಕೆ ಸೇರಿರುವರು.

ಸಾಹಿತ್ಯ ಪರೀಕ್ಷೆ—ಕನ್ನಡ ಸಾಹಿತ್ಯ ಪರೀಕ್ಷೆಗಳಾದ 'ಕನ್ನಡ ಕಾವ' 'ಕನ್ನಡ ಜಾಣ' ಪರೀಕ್ಷೆಗಳನ್ನು ಮುಂಬಯಿಯಲ್ಲಿ ಕನ್ನಡಿಗರೆಲ್ಲರ ಸಲುವಾಗಿ ಸೊಗಸೇರಿದ ಯುವಕ ಸಂಘದ ವತಿಯಿಂದ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು ಅನುಮತಿ ಕೊಟ್ಟು ಸಂಘವನ್ನು ಮುಂಬಯಿಯ ಪರೀಕ್ಷಾ ಕೇಂದ್ರವನ್ನಾಗಿ ಪರಿಗಣಿಸಿದೆ. ಸಾಹಿತ್ಯ ತರಗತಿಗಳು ಇದೇ ತಿಂಗಳ ೩ ನೇ ಸೋಮವಾರ ಆರಂಭವಾಗುವುವು. ತರಗತಿಗಳನ್ನು ಸೇರಿ ಅಭ್ಯಾಸಿಸಲಿಚ್ಛಿಸುವ ಮುಂಬಯಿ ಕನ್ನಡಿಗರೆಲ್ಲರೂ ಆದಷ್ಟು ಬೇಗ ಹೆಸರು ಕೊಡುವುದು ಅವಶ್ಯಕ. ಹೆಚ್ಚು ಮಾಹಿತಿ ಸಂಘದ ಕಾರ್ಯಾಲಯದಿಂದ ಪಡೆಯಬಹುದು".

ಮೈಸೂರು

ಕಾಂಗ್ರೆಸ್ ಕಛೇರಿಗಳ ಶೋಧನೆ

ತಾ. ೧೭-೫-೪೫ರಲ್ಲಿ ಬೆಂಗಳೂರಿನಲ್ಲಿರುವ ಕಾಂಗ್ರೆಸ್ಸಿನ ಕೇಂದ್ರ ಮತ್ತು ಮೈಸೂರು ನಗರದಲ್ಲಿರುವ ಕಾಂಗ್ರೆಸ್ ಕಾರ್ಯಾಲಯಗಳನ್ನು ಪೋಲೀಸರು ಜಪ್ತಿಮಾಡಿ ೧೯೪೨ನೇ ಇಸವಿ ಆಗಸ್ಟ್ ತಿಂಗಳ ನಂತರದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೇರಿದ ಕಾರ್ಯಕಲಾಪಗಳ ವರದಿ ಅಥವಾ ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳಿವೆಯೋ ಎಂಬುದನ್ನು ಜಪ್ತಿಮಾಡಿ ಕೆಲವು ಪತ್ರಗಳನ್ನು ವಶಪಡಿಸಿಕೊಂಡರು. ಅದೇ ರೀತಿ ಶಿಕಾರಿಪುರದ ಅಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರ ಮನೆಯನ್ನು ಸಹ ಶೋಧಿಸಿದರು.

ಪ್ರತಿಬಂಧಕಾಜ್ಞೆ—ಇಂಡಿಯಾ ರಕ್ಷಣಾ ಕಾನೂನು 56ನೇ ಕಲಂ ಪ್ರಕಾರ ಮೈಸೂರು ಜಿಲ್ಲಾಧಿಕಾರಿಗಳು ಒಂದು ಆಜ್ಞೆ ಹೊರಡಿಸಿ ನಗರದ ೫ ಮೈಲು ಸುತ್ತು ಇನ್ನಾರು ತಿಂಗಳ ಕಾಲ ಅಪ್ಪಣೆ ಪಡೆಯದೆ ಯಾವ ಸಭೆ, ಸಮ್ಮೇಳನಗಳನ್ನೂ ನಡೆಸಬಾರದೆಂಬ ಪ್ರತಿಬಂಧಕಾಜ್ಞೆ ಜಾರಿಮಾಡಿದ್ದಾರೆ.

ಶ್ರೀಮತಿ ಯಶೋಧರಾ ದಾಸಪ್ಪ

ಬೊಂಬಾಯಿ ಹತ್ತಿರವಿರುವ ಬೋರಿವಿಲ್ಲಿಯಲ್ಲಿ ರಚನಾತ್ಮಕ ಕಾರ್ಯದ ಶಿಕ್ಷಣ ಪಡೆಯಲು ತೆರಳಿದ್ದ ಮೈಸೂರು ಕಾಂಗ್ರೆಸ್ಸಿನ ಪ್ರಮುಖರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಶಿಕ್ಷಣ ಮುಗಿಸಿ ಹಿಂದಿರುಗಿದ್ದಾರೆ. ಅವರ ನೇತೃತ್ವದಲ್ಲಿ ಮೈಸೂರಿನ 40 ಮಹಿಳೆಯರಿಗೆ ಶಿಕ್ಷಣ ಕೊಡತಕ್ಕದ್ದೆಂದು ಕಸ್ತೂರಬಾ ಸಮಿತಿಯವರು ತೀರ್ಮಾನಿಸಿದ್ದಾರೆ.

ಅಧ್ಯಕ್ಷರುಗಳ ಆಗಮನ—ಮೈಸೂರು ಕಾಂಗ್ರೆಸ್ಸಿನ ನೂತನ ಮತ್ತು ಮಾಜಿ ಅಧ್ಯಕ್ಷರುಗಳಾದ ಶ್ರೀಗಳಾದ ಎಸ್. ನಿಜಲಿಂಗಪ್ಪ ಮತ್ತು ಟಿ. ಸುಬ್ರಹ್ಮಣ್ಯಂರವರೂ ಕಾಂಗ್ರೆಸ್ಸಿನ ಅನೇಕ ಮುಂದಾಳುಗಳೂ ಆಗಮಿಸಿದಾರೆ. 19 ಮತ್ತು 20ರಲ್ಲಿ ನಡೆಯಲಿದ್ದ ಕಾಂಗ್ರೆಸ್ಸಿನ ವಿಶೇಷಾಧಿವೇಶನದ ಪ್ರಯುಕ್ತವೇ ಆವರಲ್ಲರೂ ಆಗಮಿಸಿದ್ದಾರೆ.

ವಿಜಯೋತ್ಸವ—ಮೈಸೂರಿನ ವಿಜಯೋತ್ಸವವು ವೈಭವದಿಂದ ನಡೆಯಿತು. 14 ನೇ ತಾರೀಕು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯ್ತು; ಬಡಬಗ್ಗರಿಗೆ ಅನ್ನದಾನ ನಡೆಸ್ವಾನ ಮತ್ತು ಮಿಲಿಟರಿ ಪೆರೇಡ್ ಇತ್ಯಾದಿಗಳು ನಡೆದವು.

ಮಂತ್ರಿಗಳ ನೇಮಕ ಮುಂದುವರಿಯುವುದು—ಈಗಿನ ಸಚಿವರ ನೇಮಕವು ಎರಡು ತಿಂಗಳ ಕಾಲ ಮುಂದುವರಿಯುವುದೆಂದು ಗೊತ್ತಾಗಿದೆ. ಅಲ್ಲಿಯವರೆಗೆ ಈಗಿನ ಮಂತ್ರಿಗಳೇ ಮಂತ್ರಿಗಳಾಗಿರುವರು.

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ—ಮೈಸೂರು ಜಿಲ್ಲಾಧಿಕಾರಿಗಳು ಹೊರಡಿಸಿರುವ ಪ್ರತಿಬಂಧಕಾಜ್ಞೆಯನ್ನು ಖಂಡಿಸಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾಗಿರುವ ಶ್ರೀ. ಎಸ್. ನಿಜಲಿಂಗಪ್ಪನವರು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ.

(೩ನೇ ಪುಟದಿಂದ ಮುಂದುವರಿದುದು.)

ಈ ಯುದ್ಧದಲ್ಲಿ ಮೇಕರ್ಥರರು ಫಿಲಿಪ್ಪೈನ್ಸಿಗೆ ಹೋಗುವಾಗ ಈಸೆನೋವರರೂ ಅವರೊಂದಿಗಿದ್ದರು. ಆ ದ್ವೀಪಗಳ ರಕ್ಷಣಾ ವ್ಯವಸ್ಥೆಯಲ್ಲಿ ಮೇಕರ್ಥರರ ಮಂಡಲಿಯ ನಾಯಕನಾಗಿದ್ದ ಈಸೆನೋವರರ ಕಾರ್ಯಭಾಗ ದೊಡ್ಡದಿದ್ದಿತು. ಅದನ್ನೊಡೆಯುವ ಕಾರ್ಯವು ಜಾಪಾನರ ಪಾಲಿಗೆ ಕಬ್ಬಿಣದ ಕಡಲೆ ಜಗಿಯುವಷ್ಟು ಪ್ರಯಾಸಕರವಾಯಿತು.

ಇಂದಿನ ಅತಿದೊಡ್ಡ ವಿಜಯದ ಸಂಪಾದನೆಗಾಗಿ, ತನ್ನ ಅತಿದೊಡ್ಡ ಕಾರ್ಯಭಾರವನ್ನು ಹೊರಲು ಯುರೋಪಿಗೆ ಹೊರಡುವ ಮೊದಲು ಈಸೆನೋವರರು ತನ್ನೊಬ್ಬ ಮಿತ್ರನೊಡನಂದಿದ್ದರು— "ಈ ಯುದ್ಧ ಅತ್ಯಂತ ಕಠೋರವಾಗಿ ಸಾಗಲಿದೆ ಇದರಲ್ಲಿ ಮಿಕ್ಕೆಲ್ಲವುಗಳ ಜತೆಯಲ್ಲಿ ನಾವು ಕಾಠಿಣ್ಯವನ್ನೂ ಉಪಯೋಗಿಸಬೇಕಾಗುತ್ತದೆ" ಅಂತೆಯೇ ಇವರು ಕಾಠಿಣ್ಯವನ್ನು ಉಪಯೋಗಿಸಿದ್ದಾರೆ; ಆದರದು ರೋಮಲನ ಮಾದರಿಯದಲ್ಲ. ಇವರದು ಎಚ್ಚರಿಕೆಯ ಕಾಠಿಣ್ಯತೆ. ಮಧುರ ಮಾನುಷತ್ವದ ಮಿಲನವಿದ್ದ ಕಾಠಿಣ್ಯತೆ ಅವರು ನಾಜಿ 'ಸ್ಥಾನಬದ್ಧ ಶಿಬಿರ'ಗಳನ್ನು ಬೆಚ್ಚಿದ ಯಿಂದ ತತಖಿಮಾಡಿದ ದೃಶ್ಯವು 'ನ್ಯೂಸ್ ರೀಲ್' ಆಗಿ ಬಂದಿದೆ ಪುನರಾಕ್ರಮದಿಂದ ಬಿಡುಗಡೆ ಪಡೆದ ರಾಷ್ಟ್ರಗಳ ಹಸಿವು ಪೀಡಿತ ಜನತೆಗೆ ಸಲ್ಲಿಸಿದ ಕ್ಷಿಪ್ರ ಸಹಾಯದಿಂದಾಗಿ ಯುರೋಪಿನಲ್ಲೆಲ್ಲಾ ಈಸೆನೋವರಿಗೆ ಅತಿ ಹೆಚ್ಚಿನ ಗೌರವವನ್ನೇ. ಗೃಹರಹಿತ ಮಿಲಿಯಾಂತರ ಮಂದಿಗಳವರ ಕಾರ್ಯಕಾರೀ ಸಹಾನುಭೂತಿಯು ಕೂಡಲೇ ಜ್ಞಾಪಿಯಾಗಿದೆ. ಅಮೇರಿಕದ ಮಹಾ ನಾಗರಿಕ ಸೇನೆಯ ಯೋಗ್ಯನಾಯಕನೆಂಬುದನ್ನು ಪ್ರದರ್ಶಿಸಿದ್ದಾರೆ ಈಸೆನೋವರ್. ಎಲ್ಲಾ ಸ್ವತಂತ್ರ ಜನತೆಯ ಧನ್ಯವಾದಗಳಿಗೆ ಅವರು ಅರ್ಹರು.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of the School and another from any local gentleman.

UDIPI, 19-4-1945. — T. R. A. Pai, MANAGING DIRECTOR.

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ, ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ — ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಮಂಗಳೂರು

ಜಿಲ್ಲಾ ಬೋರ್ಡಿನ ಸಭೆ– ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ. ೧೭ರಂದು ಶ್ರೀ. ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬೋರ್ಡಿನ ಸಭಾ ಭವನದಲ್ಲಿ ಜರಗಿತು. ಸರಕಾರದ ಹುಕುಂ ಮತ್ತು ಇತರ ವರದಿಗಳನ್ನು ಓದಲಾಯಿತು. ಹಳ್ಳಿಗಳ ರಸ್ತೆಗಳ ಬಗ್ಗೆ ಬೋರ್ಡು ತಯಾರಿಸಿದ ಪಂಚ ವಾರ್ಷಿಕ ಯೋಜನೆಯನ್ನು ಒಪ್ಪಲಾಯಿತು. ಕಾಸರಗೋಡಿನ ವೈದ್ಯ ಚಿಕಿತ್ಸಕನಿಗೆ ತಿಂಗಳಿಗೆ ರೂ. ೧೨॥, ಕಂಕನಾಡಿಯ ಡೇಮಿಯನ್ ಕುಷ್ಠರೋಗಿ ಗೃಹ (ಲೆಪ್ಪರ್ ಹೌಸ್)ಕ್ಕೆ ತಿಂಗಳಿಗೆ ರೂ. ೫೦; ಮೂಡಬಿದ್ರೆಯ ಕ್ಷಯರೋಗಿ ಚಿಕಿತ್ಸಾಲಯಕ್ಕೆ ರೂ. ೫೦ ಮಂಜೂರು ಮಾಡಲ್ಪಟ್ಟಿತು.

ವ್ಯಭಿಚಾರ ಪದ್ಧತಿಯನ್ನು ನಿಲ್ಲಿಸಲು ವೇಶ್ಯೋದ್ಧಾರ ಗೃಹಗಳನ್ನು (Rescue Home) ಸ್ಥಾಪಿಸುವ ಕುರಿತು ಸರಕಾರವು ಪೂರ್ಣ ಖರ್ಚು ವಹಿಸಿ ನಡೆಸುವುದಾದರೆ ಜಿಲ್ಲಾ ಬೋರ್ಡಿನ ಆಕ್ಷೇಪವಿಲ್ಲವೆಂಬ ಠರಾವು, ಕಾರ್ಕಳ ತಾಲೂಕಿನ ರೆಂಜಾಲ್ ಎಲಿಮೆಂಟರೀ ಶಾಲೆಗಾಗಿ ಶ್ರೀ. ಬಿ. ನೇಮಿರಾಜ ಹೆಗ್ಗಡೆಯವರು ಕಟ್ಟಿಸಿಕೊಟ್ಟ ಕಟ್ಟಡವನ್ನು ಬೋರ್ಡು ಸ್ವೀಕರಿಸಿ ಅವರನ್ನು ಅಭಿನಂದಿಸುತ್ತಿದೆ ಎಂಬ ಠರಾವು, ಕೋಟೇಶ್ವರದ ಹಾಯರ್ ಎಲಿಮೆಂಟರೀ ಶಾಲೆಯನ್ನು ಮಿಡ್ಲ್ ಶಾಲೆಯಾಗಿ ಮಾರ್ಪಡಿಸಿ ಖಾಸಗಿ ಸಂಸ್ಥೆಯು ನಡಿಸುವುದಾದರೆ ಬೋರ್ಡಿನ ಆಕ್ಷೇಪವಿಲ್ಲವೆಂಬ ಠರಾವೂ ಮಂಜೂರಾದುವು.

ನಮ್ಮ ಜಿಲ್ಲಾ ಬೋರ್ಡು ಮಲಬಾರು ಬೋರ್ಡಿನೊಡನೆ ಕೂಡಿಕೊಂಡು ಕರಾವಳಿ ರಸ್ತೆಯೊಂದರ ಯೋಜನೆಯನ್ನು ಈ ಮೊದಲೇ ಒಪ್ಪಿ, ಆ ರೀತಿಯಲ್ಲಿ ನಮ್ಮ ಜಿಲ್ಲೆಯೊಳಗಿನ ರಸ್ತೆಯು ಜಿಲ್ಲೆಯ ಗಡಿಯವರೆಗೆ ಈಗಾಗಲೇ ಆಗಿದೆ. ಆದರೆ ಮಲಬಾರು ಬೋರ್ಡಿನವರು ಮಾಡಿಸುವ ರಸ್ತೆಯು ಇನ್ನೂ ಆಗಿಲ್ಲ. ಆ ರಸ್ತೆಯನ್ನು ಮಲಬಾರು ಜಿಲ್ಲಾ ಬೋರ್ಡು ಮಾಡುವಂತೆ ಸರಕಾರವು ಒತ್ತಾಯಪಡಿಸಬೇಕು; ಇಲ್ಲದಿದ್ದರೆ ಸರಕಾರದವರೇ ಮಾಡಿಸಬೇಕೆಂಬ ಶ್ರೀ. ಸಿ. ಕೆ. ರಾಘವ ನಂಬಿಯಾರ್ ತಂದ ಗೊತ್ತುವಳಿಯು ಮಾನ್ಯವಾಯಿತು.

"ಜಿಲ್ಲೆಯ ಎಲ್ಲಾ ಬಸ್ಸು ಸರ್ವಿಸ್‌ಗಳನ್ನು ಸಾಧ್ಯವಿದ್ದಷ್ಟು ಬೇಗ ಜಿಲ್ಲಾ ಬೋರ್ಡಿನವರೇ ತೆಗೆದುಕೊಳ್ಳುವಂತೆ ಆಗತ್ಯವುಳ್ಳ ಕೆಲಸ ಮಾಡಲು ಮತ್ತು ಆ ವಿಷಯದಲ್ಲಿ ವರದಿ ಒಪ್ಪಿಸಲು ಬೋರ್ಡಿನವರು ಈ ಕೆಳಗಿನ ಸಮಿತಿಯನ್ನು ನೇಮಿಸುತ್ತಾರೆ: ಡಾ. ಪಿ. ಜಿ. ಆಚಾರ್, ಶ್ರೀ. ಸಿ. ಕೆ. ರಾಘವ ನಂಬಿಯಾರ್, ಶ್ರೀ. ಎ. ಕೃಷ್ಣಶೆಟ್ಟಿ, ಎಂ. ಸಿ. ಎಲ್. ಲೋಬೋ, ಶ್ರೀ. ಕೆ. ವೆಂಕಟ್ರಮಣ ಗೌಡ, ಶ್ರೀ. ನಾಗಣ್ಣ ಹೆಗ್ಡೆ ಮತ್ತು ಶ್ರೀ. ಕೆ. ಜತ್ತಪ್ಪ ರೈ" ಡಾ॥ ಪಿ. ಜಿ. ಆಚಾರ್ ತಂದ ಈ ಠರಾವನ್ನು ಶ್ರೀ. ಎ. ಕೃಷ್ಣ ಶೆಟ್ಟಿಯವರು ಅನುಮೋದಿಸಲಾಗಿ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

ಹಸುಗೆ ಆಫೀಸರರ ಪ್ರಕಟಣೆ— ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ, ದ. ಕ. ಜಿಲ್ಲೆಯಲ್ಲಿ ಯಾವ ಕಡೆಯಲ್ಲಾದರೂ ವ್ಯವಸಾಯದ ಭೂಮಿ ಇದ್ದು ಭೂಮಾಲಿಕರು ಮಂಗಳೂರು ಹಸುಗೆ ಸರಹದ್ದಿನಲ್ಲಿ ವಾಸಮಾಡುವ ಪಕ್ಷದಲ್ಲಿ, ಅಂಥಾ ಭೂಮಾಲಿಕರು ತಮ್ಮ ಸ್ವಂತ ಖರ್ಚಿಗೆ ಬೇಕಾಗುವಷ್ಟು, ಎಂದರೆ ತಮ್ಮ ಊಟದ ಬಗ್ಗೆ ಬೀಜ ಮತ್ತು ವ್ಯವಸಾಯಕ್ಕೆ ಬೇಕಾಗುವಷ್ಟು ಹಸುಗೆ ಪದಾರ್ಥಗಳನ್ನು ಹಸುಗೆ ಸಿಬಂದಿಯ ಪರವಾನಗಿಯ ಹೊರತಾಗಿ ತರಲು ಆಕ್ಷೇಪವಿರುವುದಿಲ್ಲ. ಆದರೆ ಅಂಥಾ ರೇಶನ್ ಪದಾರ್ಥಗಳನ್ನು ಕೈಲುಬಂಡಿಯಲ್ಲಿ ತರಲು ಹುಕುಂ ದೊರೆಯಲಾರದು.

ಕಮರ್ಶಿಯಲ್ ಟೇಕ್ಸ್ ಆಫೀಸರರು— ತನ್ನೊಂದು ಹೇಳಿಕೆಯಲ್ಲಿ ಹೀಗೆ ಪ್ರಕಟಿಸುತ್ತಾರೆ—ಈ ಕೆಳಗಿನ ವಸ್ತುಗಳನ್ನು ವಿಕ್ರಯಿಸುವವರು, ಅವುಗಳ ಬಗ್ಗೆ ಇನ್ವೋಯ್ಸ್ ತಮ್ಮೊಡನೆ ಬಂದೊಡನೆಯೇ, ಅವುಗಳ ಪೂರ್ಣ ವಿವರಗಳನ್ನು ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ಬರೆದುಕೊಳ್ಳಬೇಕು — ಗ್ಲುಕೋಸ್ ಡಿ; ಹಾರ್ಲಿಕ್ಸ್, ಡೆಕ್ಸ್ ಟ್ರೋಸ್; ಇಲೆಕ್ಟ್ರಿಕ್ ಬಲ್ಬ್, ಸೈಕಲ್ ಮತ್ತು ಅದರ ಉಪಕರಣ, ಫೌಂಟೆನ್ ಮತ್ತು ನಿಬ್ಬುಗಳು, ಮೊಳೆ, ಓವಲ್ಟಿನ್, ವಾಟರ್ ಬೆರಿಸ್, ಕಂಡೆನ್ಸ್ಡ್, ರೇಜರ್, ಕೃತಕ ರೇಷ್ಮೆಯ ನೂಲು ಮತ್ತು ವಸ್ತ್ರ, ಕೊಡೆ, ರೇಜರ್ ಬ್ಲೇಡುಗಳು, ಗ್ಲೆಕ್ಸೊ, ಗಡಿಯಾರಗಳು, ಬೆಟರಿ ದೀಪಗಳು.

ಸಿಡುಬು—ನಗರದೊಳಗಿನ್ನೂ ಕಮ್ಮಿಯಾಗಲಿಲ್ಲ. ತಾ. ೧೭ಕ್ಕೆ ಅಂತ್ಯವಾದ ವಾರದ ವರದಿಯಂತೆ, ೬ ಮಂದಿಗೆ ಸಿಡುಬು ತಗಲಿದೆ. ಮರಣಗಳಾಗಲಿಲ್ಲ

ಶ್ರೀ ಶಂಕರ ಜಯಂತೀ ಉತ್ಸವ— ವು ತಾ. ೧೬ ಸೋಮವಾರದಂದು ಸಾಯಂಕಾಲ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಶ್ರೀ. ರಾವ್ ಬಹದೂರ್ ಡಾ. ಯು. ಪಿ. ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು; ಆರಂಭದಲ್ಲಿ ಮಕ್ಕಳು ದೇವತಾ ಪ್ರಾರ್ಥನೆ ಮತ್ತು ಭಗವದ್ಗೀತಾ ಶ್ಲೋಕಗಳನ್ನು ಹಾಡಿಸಿದರು. ಆ ಮೇಲೆ ಶ್ರೀ. ನಾರಾಯಣ ಸೀತಾರಾಮ ಅಯ್ಯರ್ ಅವರು ಆಂಗ್ಲ ಭಾಷೆಯಲ್ಲಿ ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ ಮತ್ತು ಅವರ ತತ್ವದ ವಿಚಾರವಾಗಿ ಭಾಷಣಮಾಡಿದರು. ಆಯುರ್ವೇದ ಭೂಷಣ ಯು. ಸಿ. ಶಾಸ್ತ್ರಿಗಳವರೂ, ಆಯುರ್ವೇದ ಭೂಷಣ ಡಾ. ಎ. ಕೆ. ಪಿ. ವರ್ಮರವರೂ ಕನ್ನಡ ಭಾಷೆಯಲ್ಲಿ ಸ್ಪಷ್ಟವಾಗಿ ತಿಳಿಯುವಂತೆ ಶ್ರೀ ಶಂಕರ ತತ್ವದ ಮರ್ಮವನ್ನು ವ್ಯಕ್ತಗೊಳಿಸಿದರು. ಇದಾದೊಡನೆ ಪುತ್ತೂರಿನ ಜಿ. ರಾಮಕೃಷ್ಣಯ್ಯನೆಂಬ ೧೪ ವರ್ಷದ ಬಾಲಕನ ಕೊಳಲು ಗಾನವು ಸಭಿಕರ ಮನಸ್ಸಿಗೆ ಆನಂದವನ್ನು ಉಂಟುಮಾಡಿತು. ಆನಂತರ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ತಾವು ದ್ವೈತ ಮತಾವಲಂಬಿಯಾದರೂ ಅದ್ವೈತದ ಧರ್ಮವನ್ನು ಜನತೆಗೆ ಅನ್ಯಪ್ಪ ಸ್ವೀಕರಿಸಿದರು. ಕೊನೆಗೆ ಶ್ರೀ. ಶ್ರೀನಿವಾಸ ಉಡುಪರ ಸಂಗೀತದೊಂದಿಗೆ ಸಮಾರಂಭವು ಸಂಪನ್ನವಾಗಿ ಕೊಂಡಿತು.

ಕಟ್ಟಿಗೆ ದಾಸ್ತಾನಿನ ವಿಚಾರ— ಬರುವ ಜೂನ್ ತಾ. ೧ರ ನಂತರದಿಂದ ಪ್ರತೀ ಮನೆಗೆ ಒಮ್ಮೆಗೆ ೩ ಮಣಕ್ಕೆ ಕಮ್ಮಿಯಾಗದಂತೆ ಕಟ್ಟಿಗೆ ಒದಗಿಸಲಾಗುವುದು. ಮಂಗಳೂರು ಪೇಟೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದು ಮಳೆಗಾಲದ ಕಟ್ಟಿಗೆ ದಾಸ್ತಾನಿಗೆ ತಕ್ಕ ವ್ಯವಸ್ಥೆ ಮಾಡಬೇಕಾಗಿ ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ.

ದ. ಕ. ಬಂಟರ ಯಾನೆ ನಾಡವರ ಸಂಘ. ಮಂಗಳೂರು— ಸಮಾಜಬಂಧುಗಳ ಸಹಾಯ ಸಂಗ್ರಹಕ್ಕಾಗಿ ಮಾಡುವ ಯತ್ನದಲ್ಲಿ ಮೂಲ್ಕಿ ಕ್ಷೇತ್ರದಿಂದ ಸಮಿತಿ ಮುಂದಾಳುಗಳ ತಾ. ೧೩-೫-೪೫ರಲ್ಲಿ ಹೈಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಕೂಡಿ ಬಂದರು. ೧೫೦ಕ್ಕೆ ಮಿಕ್ಕಿ ಸದಸ್ಯರಿದ್ದರು. ಮುಂದಾಳುಗಳು ಅಸ್ತು ಹೇಳುವಲ್ಲಿ ಮೊದಲಿಗರಾಗಿ ಮುಂದಾಳುಗಳು ಮತ್ತು ಇನ್ನು ಪಂಚಾಯತಿ ಬೋರ್ಡಿನವರು, ಜಿಲ್ಲಾ ಬೋರ್ಡಿನಿಂದ ಸಹಾಯ ಪಡೆದು ಬೇಗನೆ ಒಬ್ಬ ಸೂಲಗಿತ್ತಿಯನ್ನು ನೇಮಿಸುವ ಏರ್ಪಾಡು ಮಾಡಬೇಕಾಗಿಯೂ, ಈ ವೇಳೆಗೆ ಬೇಕಾದ ಗೊಬ್ಬರ ಮತ್ತು ಕೆಲವು ಮುಟ್ಟಿನ ಬೀಜ ಮುಂದಾಳುಗಳಲ್ಲಿಯೇ ಸಿಗುವ ಏರ್ಪಾಡು ಮಾಡುವಂತೆಯೂ ನಂತರ ಡಿಪೋ ಒಂದನ್ನು ಮುಂದಾಳುಗಳಲ್ಲಿ ತೆರೆಯುವಂತೆಯೂ ಜಿಲ್ಲಾ ನಾಗರಿಕ ಆಫೀಸರರನ್ನು ಕೇಳಿಕೊಳ್ಳಬೇಕಾಗಿಯೂ ಆ ಕುರಿತು ರುಪಾಯಿ ೨೦೦ಕ್ಕೆ ಮಿಕ್ಕಿದ ಸಹಿಗಳು ಆಗುವಂತೆ ಯತ್ನಿಸುವುದಾಗಿ ಹಲವು ಕೆಲವು ನಿರ್ಣಯಗಳಾಗಿ ಮುಂದಾಳುಗಳು ಹೊಳೆಗೆ ಮುಂದಾಳುಗಳಲ್ಲಿ ಕಟ್ಟ ಕಟ್ಟುವ ವಿಷಯ ಆಲೋಚಿಸಲಾಯಿತು. ಕಟ್ಟದ ಕೆಳಗಿನ ರಹಿತರ ಒಪ್ಪಿಗೆಯಿಂದ ಕಟ್ಟ ಕಟ್ಟುವರೆ ಆಕ್ಷೇಪವಿಲ್ಲವಾಗಿರುತ್ತಾ ಈ ವರ್ಷ ಕೆಳಗಿನ ಭಾಗದವರು ಕಟ್ಟವನ್ನು ಸರಿಯಾಗಿ ಕಟ್ಟದ ರೈತರಿಗೆ ಒದಗಿದ ನಷ್ಟ ವ ಅನಾನುಕೂಲತೆಯನ್ನು ಗ್ರಹಿಸಿ ಮುಂದಾಳುಗಳಲ್ಲಿ ಕಟ್ಟುವ ಕಟ್ಟದ ಗುಣಾವಗುಣಗಳನ್ನು ಆಲೋಚಿಸಿ ಒಂದು ಈ ಕುರಿತು ಕೆಳಗಿನವರ ಒಪ್ಪಿಗೆಯನ್ನು ಪಡೆದು ಕಟ್ಟುವ ಯತ್ನವಿಡುವ ಬಗ್ಗೆ ಮೇಲಿನ ಗ್ರಾಮಗಳ ಪರವಾಗಿ ನಾಲ್ವರನ್ನು ಆರಿಸಿ, ಅದೇ ರೀತಿ ಕೆಳಗಿನ ಗ್ರಾಮಗಳ ಪರವಾಗಿ ನಾಲ್ವರನ್ನು ಆರಿಸುವಂತೆ ಕೇಳಿಕೊಂಡು ಈ ಎಂಟು ಜನರು ಆಗತ್ಯವಾದರೆ ನಿಷ್ಪಕ್ಷಪಾತಿ ಒಬ್ಬ ಅಂಪಯರನ್ನು ಆರಿಸಿಕೊಂಡು ಅವರೊಳಗೆ ಒಮ್ಮತಕ್ಕೆ ಬರುವ ಶರ್ತಗಳಿಂದ ಕಟ್ಟವನ್ನು ಕಟ್ಟುವ ಏರ್ಪಾಡು ಮಾಡುವುದು ನ್ಯಾಯವಾಗಬಹುದೆಂಬ ನಿರ್ಣಯದಿಂದ ಮೇಲಿನ ಗ್ರಾಮಗಳ ಪರವಾಗಿ ಶ್ರೀ ಮುಂಡ್ಕೂರು ಸಣಿಗುತ್ತು ಕೃಷ್ಣ ಸೆಟ್ಟಿ (ಕನ್ವೀನರ್), ಶ್ರೀ. ...ವರ್ ಲಕ್ಷ್ಮಣ ಕಾಮತ್, ಶ್ರೀ ಪಿಂಕೆನ್ನೀಡಿ ರಾಮಯ್ಯ ಬಲ್ಲಾಳ ಮತ್ತು ಶ್ರೀ ಸಚ್ಚೆರಿಪೇಟೆ ಚಂದಯ್ಯ ಸೆಟ್ರನ್ನು ಆರಿಸಿ, ಇದೇ ಬರುವ ತಾ.27-5-45ರಲ್ಲಿ ಕೂಡಿಬರಬೇಕಾಗಿ ನಿರ್ಣಯಿಸಿದೆ. ಫಲಿಮಾರಿನ 7ನೇ ಸಭೆಯಲ್ಲಿ ಕಟ್ಟದ ಕೆಳಗಿನ ಗ್ರಾಮಗಳ ಪರವಾಗಿ ನಾಲ್ವರನ್ನು ಆರಿಸುವಂತೆ ಕೇಳಿಕೊಳ್ಳುವ ನಿರ್ಣಯವಾಗಿ ಇದನ್ನು ಜಿಲ್ಲಾ ಕಲೆಕ್ಟರರಿಗೆ ಬರೆದು ತಿಳಿಸಿ ಅವರನ್ನು, ಅಗತ್ಯ ಕಂಡರೆ ರೆವಿನ್ಯೂ ಆಫೀಸರರು ಒಬ್ಬರನ್ನು ಕಳುಹಿಸಿ ಕೊಡುವಂತೆ, ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಈ ನಿರ್ಣಯವನ್ನು ಎಲ್ಲರೂ ಚೆನ್ನಾಗಿ ಗ್ರಹಿಸಿ ಹಲವು ಗ್ರಾಮಗಳ ಉತ್ತಮ ಪ್ರಯೋಜನಾರ್ಥಕ್ಕೆಂದು ಸಾಧಿಸಲ್ಪಡುವ ಈ ಕಟ್ಟದ ಕುರಿತು ಫಲಿಮಾರಿನಲ್ಲಿ ತಾ. ೨೭-೫-೪೫ನೇ ಮಧ್ಯಾಹ್ನಕ್ಕೆ ಜರಗುವ ಸಭೆಗೆ ಬಂದು ಯುಕ್ತ ಆಲೋಚನೆಯಿಂದ ಸಹಾಯ ಮಾಡುವಂತೆ ವಿನಂತಿಸಿಕೊಳ್ಳುತ್ತೇನೆ.

ಆವಶ್ಯಕತೆಗಿಂತ ಅಧಿಕ ಸಂಗ್ರಹ ಇರಿಸಿದವರಿಗೆ ಎಚ್ಚರಿಕೆ— ಮಾನ್ಯ ಜಿಲ್ಲಾ ಕಲೆಕ್ಟರರು ತಮ್ಮ ಸಂಚಾರ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷ ಅವಲೋಕಿಸಿದಂತೆ ಹಾಗೂ ತಮ್ಮ ಕೆಳಗಿನ ಅಧಿಕಾರಿಗಳು ಕಳಿಸಿದ ವರದಿಗಳನ್ನು ಪರಿಶೀಲಿಸಿದಾಗ ಮಧ್ಯಮ ವರ್ಗದ ಭೂಮ್ಯಾಲಕರು ಹಾಗು ರೈತರು ಮಿಗಿತಾಯ ಅಕ್ಕಿ ಮತ್ತು ಭತ್ತಗಳನ್ನು ಒಪ್ಪಿಸುವ ಕ್ರಮ ಸರ್ವಸಾಮಾನ್ಯ ತೃಪ್ತಿಕರವೆಂದು ಕಂಡುಬಂದಿದೆ; ಶ್ರೀಮಂತ ವರ್ಗದ ಭೂಸ್ವಾಮಿಕರು ಪ್ರೊಕ್ಯೂರ್‌ಮೆಂಟ್ ಯೋಜನೆಯ ಸೂತ್ರಗಳನ್ನು ಕ್ರಮವಾಗಿ ಪಾಲಿಸದಿರುವುದೂ ಅವಗಾಹನೆಗೆ ಬಂದಿರುತ್ತದೆ. ಅವರ ಸ್ಟಾಕುಗಳ ಕುರಿತು ನಿಶ್ಚಿತ ಸಂಖ್ಯೆಯನ್ನೂ ಸರಿಯಾಗಿ ತಿಳಿದುದಿಲ್ಲ. ಕೆಲವು ಕಡೆಗಳಲ್ಲಿ ಅವರು ಆಜ್ಞೆಯನ್ನು ಸರಿಯಾಗಿ ಪಾಲಿಸಿದ್ದಿಲ್ಲ. ಆ ರೀತಿ ಸಂದೇಹಾಸ್ಪದವಾದ ಕಡೆಗಳಲ್ಲಿ ನಿಯಮಬದ್ಧ ಜಪ್ತಿ ನಡೆಸಲಾಗಿತು. ಆವಶ್ಯಕತೆಗಿಂತ ಅಧಿಕ ಸಂಗ್ರಹವಿರಿಸಿಕೊಂಡವರ ಹೆಚ್ಚಿನ ಸ್ಟಾಕನ್ನು ಸ್ವಾಧೀನಪಡಿಸುವುದಲ್ಲದೆ ಅವರ ಮೇಲೆ ಕಠಿಣ ಕ್ರಮವೂ ಜ್ಯಾರಿಯಾಗಬಹುದೆಂದು ಮಾನ್ಯ ಕಲೆಕ್ಟರರು ಈ ಮೂಲಕ ಎಚ್ಚರಿಸಿದ್ದಾರೆ. ಈ ವಿಷಯದಲ್ಲಿ ಸಾರ್ವಜನಿಕರು ಅಧಿಕಾರಿಗಳೊಡನೆ ಸಹಕರಿಸಿ ಹೆಚ್ಚಿಗೆ ಇರಿಸಿಕೊಂಡವರ ಪತ್ತೆಯನ್ನು ಬಹಿರಂಗ ಪಡಿಸಬೇಕಾಗಿಯೂ ಕೇಳಿಕೊಳ್ಳಲಾಗಿದೆ.

ಎರಡನೇ ಬೆಳೆಯ ಅಕ್ಕಿಯನ್ನು ಒಪ್ಪಿಸುವ ಅವಧಿ ಮೇ ಅಂತ್ಯದ ವರೆಗೆ ಮುಂದುವರಿಸಲಾಗಿದ್ದು ಜನರು ಅದರ ಸದುಪಯೋಗ ಪಡೆಯಬೇಕು.

The Bombay Life Assurance Co. Ltd.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ: 1908)
1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.
ಮದ್ರಾಸು ಶಾಖೆ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥೆಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟರು
ಕೊಚ್ಚಿ ... ಗ್ರ್ಸ್ ಲಿಮಿಟೆಡ್
ಸ್ಥಾಪನೆ: 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲಿ 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಹುಪ್ಪಡೆ
ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ॥ 8-10-44ರಿಂದ
ರಾಮ್ಮೋಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್.
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

CHAMPAE'S
Snow & Castrex
(SoleDistributers for (India.)
Sukhananda Stores
Santhekatte, UDIPI, S K.

The Pangal Nayak Bank Limited.

(Incorporated in 1920.)
Registered Office Court Road, UDIPI.
Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂಧ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:— ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ. ಸಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ**

— ಮಕ್ಕಳನ್ನು ಹಡೆಯುವುದು ಸಾಕಾ—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೪ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಹುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು **ಹೋಗಲಾಡಿಸಿ** ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧ ರವಾನಿಸಲಾಗುವುದು, ಉಡುಪಿ ಏಜಂಟರು: — ನವಭಾರತ ಬುಕ್ ಡಿಪೋ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. **Estd. 1921 ಸ್ಥಾಪಿತ.**

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

NAVAYUGA

ನವಯುಗ

ವರ್ಷ ೨೪ ವಾರ ೩೮] ಪ್ರತಿ ಗುರುವಾರ ಹೊರಡುವ ಗಾಂಧೀಯ ವಾರಪತ್ರಿಕೆ [Vol 24 No. 38
Founder **SRI A. B. SHETTY.**

ಉಡುಪಿ • **31—5—1945** • ಮಂಗಳೂರು.

ಅಮೃತಾಂಜನ
ತಲೆನೋವು, ಶಿರೋ ವೇದನೆ, ಉಳುಕು ಕತ್ತರಿಗೆ, ಘಾಯ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಚುಚ್ಚಿಕೊಂಡವು, ಚೇಳು ವಿಷ ಮುಂತಾದ ಬೇನೆ ಒಕ್ಕಮಾತ್ರ ಮೊದಲಾದ ಎಲ್ಲ ರೋಗಗಳಿಗೂ ಸಿದ್ಧ
REGD.
ಸರ್ವ ಮಳಿಗೆಗಳಲ್ಲಿ ಮಾರ್ಪ ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them " Vide Order No 1786-ECI/44/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No. 4755-N 44

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20-4-1945 and will be closed at the discretion of the Directors, not earlier than 31—5—1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 1913 Liability of Members is Limited)

Registered Head Office - **Hampankatta, MANGALORE.**
Bombay Office - **26, Noble Chambers, Fort Bombay.**
Factory - **MALPE, South Kanara**
Depots at:- **Udipi, Coondapur, Byndoor Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food. Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish Fish Meal, Freezed Fish, Dried Fish, Etc.**

2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.

3. The Madras Government has been approached to subscribe for half the capital and appoint a Government Director and render technical advice to the Company.

4. A Scientific Advisory Council will be formed and Technical Experts will be appointed to carry on intense research work in the Industry.

5. Arrangements are being made to procure Military contracts.

6. The Madras Government has been requested to supply the Company all the modern equipments useful for the purpose of the Company

7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset.

MANGALORE,
19th April, 1945

Mangalore Jarappa,
Managing Director

ವಿಜಯ ಶಿಲ್ಪಿ— ★ ★ ವಿನ್‌ಸ್ಟನ್ ಚರ್ಚಿಲ್.



ಪೀಟರ್ ಮೆಥ್ಯೂಸರ ಲೇಖನದ ಅನುವಾದ.

ಈ ಶತಮಾನದ ಆದಿ ಭಾಗದಲ್ಲಿ ರಂಜಿಸಲಾರಂಭಿಸಿದ ಬ್ರಿಟಿಷ್ ರಾಜಕಾರಣಿಗಳ ನಡುವೆ, ಮಾರ್ಲ್‌ಬೋರೋವಿನ ಡ್ಯೂಕರ ಮೊಮ್ಮಗ ಮತ್ತು ಆ ಕಾಲದ ಪ್ರಮುಖ ರಾಜಕಾರಣಿಯ ಮಗನಾದ ಓರ್ವ ವ್ಯಕ್ತಿಯು ಎತ್ತಿ ತೋರಿಸಬಲ್ಲ ಸೂತ್ರಾಗಿದ್ದನೆಂಬುದು ನಿಸ್ಸಂದೇಹ. ಆದರೆ ಅವನ ಪ್ರತಿಭೆಗೆ ಈ ಕೆಳಗಿನ ಒಂದೆರಡು ವಿದ್ಯಮಾನಗಳು ಹೇಗೆ ಕಿಚ್ಚು ಹೊಡೆದವೆಂಬುದನ್ನು ಸರಿಯಾಗಿ ಉತ್ತರಿಸಲಾಗುವದಿಲ್ಲ. ಕೈಸರನ ಜರ್ಮನಿಯೊಡನೆ ಯುದ್ಧ ಸಂಭವವು ವಿಚಕ್ಷಣ ಚಿಂತಕರ ಮೆದುಳನ್ನು ಕೊರೆಯುತ್ತಿದ್ದ ಕಾಲವಾದ 1911ನೇ ಒಕ್ಟೋಬರಿನಲ್ಲಿ, ತನ್ನ 37ನೇ ವಯಸ್ಸಿನಲ್ಲೇ, ಚರ್ಚಿಲ್ಲರು ಬ್ರಿಟಿಷ್ ನಾವೆಯ ಶಿರಸ್ಸಾಗಿದ್ದರು. ತನ್ನ ತಂದೆಯ ಪಕ್ಷ-ಡ್ಯೂಕರ ಮೊಮ್ಮಗನೊಬ್ಬನಿಗೆ ಹೇಳಿಸಿದ ಪಕ್ಷವಾದ ಕನ್ಸರ್ವೇಟಿವ್ ಪಕ್ಷವನ್ನವರು ಬಿಟ್ಟರು. 'ಸ್ವತಂತ್ರ ವ್ಯಾಪಾರ ಅಥವಾ ರಕ್ಷಣೆ' ಎಂಬ ಪ್ರಶ್ನೆಯ ಕುರಿತು ಟೋರಿ ಪ್ರಭೃತಿಗಳು ಮಾನಸಾಂತರಗೊಂಡುದೇ ಈ ರಾಜೀನಾಮೆಗೆ ಕಾರಣ. ಈ ಮಟ್ಟಿಗೆ ತನ್ನದೇ ಸರಿ ಹೊರತು ತನ್ನ ಪಕ್ಷಗಳದ್ದಲ್ಲ ಎಂದು ಚರ್ಚಿಲ್ಲರು ವಾದಿಸಬಹುದಾದರೂ, ರಾಜಕೀಯದಲ್ಲಿ ಪಕ್ಷದಿಂದ ಪಕ್ಷಕ್ಕೆ ಅಂತರ್ಲಾಗ ಹೊಡೆಯುವದಕ್ಕೆ ಬೆಲೆ ಕಡಿಮೆ. ಅಷ್ಟೇ ಅಲ್ಲ, ಲೋರ್ಡರ ಸಭೆಯ ಮೇಲೆ ಹೂಡಿದ ಕಾಳಗದಲ್ಲಿ ಡ್ಯೂಕರ ಮೊಮ್ಮಗನಾದ ಈತನೇ ಅಗ್ರ ಭಾಗ ವಹಿಸಿದ್ದ. ತತ್ಪರಿಣಾಮವಾಗಿ, 'ಹೌಸ್ ಓಫ್ ಲೋರ್ಡ್ಸ್' ಸಭೆಗಿದ್ದ 'ಹೌಸ್ ಓಫ್ ಕಾಮನ್ಸ್'ನ ನಿರ್ಧಾರಗಳನ್ನು ನಿಷ್ಫಲಗೊಳಿಸುವ ಅಧಿಕಾರ ರದ್ದಾಯಿತು

ತಾರುಣ್ಯದಲ್ಲಿ

ಚರ್ಚಿಲ್ ಅನ್ನುವಾಗ ಈ ದಿನ ಮುಖ್ಯವಾಗಿ ಓರ್ವ ಯುದ್ಧನಾಯಕನ ಸ್ಮರಣೆಯೇ ನಮಗಾಗುತ್ತಿದೆ. ನಿಜಕ್ಕೂ ಯುದ್ಧದಲ್ಲೂ ರಾಜಕೀಯದಲ್ಲೂ ಅವರೊಬ್ಬ ಹೋರಾಟಗಾರನಾಗಿಯೇ ಇದ್ದಾರೆ. ಆದರೆ 1911ರಲ್ಲಿ ಅವರು ಮೂಲತಃ ಹೆಸರು ಪಡೆದುದು 'ವ್ಯಾಪಾರೀ ಬೋರ್ಡ್' ಅಧ್ಯಕ್ಷನಾಗಿ. ನಿರುದ್ಯೋಗ ವಿಮೆಯ ಮೊದಲನೇ ಪದ್ಧತಿಯನ್ನೂ, 65ನೇ ಪ್ರಾಯದಲ್ಲಿ ಹಾಗೂ ವಿಧವೆ ಮತ್ತು ಅನಾಥ ಮಕ್ಕಳಿಗೆ ವಿರಾಮವೇತನ ಕೊಡುವ ಕ್ರಮವನ್ನೂ ಜಾರಿಗೆ ತಂದವರು ವಿ. ಚರ್ಚಿಲ್ಲರು ಮತ್ತವರ ಸಹಕಾರೀ ಲ್ಯೊಡ್ ಜೋರ್ಜರು. ಆ ಕಾಲದಲ್ಲೇ ಅವರ ರಾಜಕೀಯ ಜೀವನಕ್ಕೆ ತಡೆ ಬಿದ್ದಿತ್ತು. ಓಲ್ಡ್ ಹಾಮಿನಲ್ಲೊಮ್ಮೆ, ಈಶಾನ್ಯ ಮೆಂಚೆಸ್ಟರಿನಲ್ಲೊಮ್ಮೆ ಚುನಾವಣೆಗೆ ನಿಂತು ಅವರು ಪರಾಭವಗೊಂಡಿದ್ದರು. ಇಂತಹ ಇನ್ನಷ್ಟು ಅಪಜಯಗಳು ಅವರನ್ನು ಕಾದಿದ್ದುವು.

ಅನುಕ್ರಮವಾಗಿ ವಸಾಹತುಗಳ ಉಪಕಾರ್ಯದರ್ಶಿ, ವ್ಯಾಪಾರಿ ಬೋರ್ಡಿನ ಅಧ್ಯಕ್ಷ, ಪ್ರಧಮ ನಾವಿಕಾಧಿಕಾರಿಯ ಗೃಹಮಂತ್ರಿಯಾಗಿ ತನ್ನ 37ನೇ ವಯಸ್ಸಿನಲ್ಲೇ ಚರ್ಚಿಲ್ಲರೋರ್ವ ರಾಜಕೀಯ ಪುರುಷನನ್ನಿಸಿದ್ದರೂ, ಅವುಗಳ ಜತೆಯಲ್ಲಿ ಅವರು ಬೇರೆಷ್ಟೋ ಸಂಗತಿಗಳನ್ನು ಸಾಧಿಸಿದ್ದರು.

ಗ್ರಂಥಕರ್ತ

ಅವರು ಸೇನೆಯೊಂದರಲ್ಲಿ ಸಾಮನ್ಯೋದ್ಯೋಗಕ್ಕೆ ಸೇರಿ, ಆ ಕಾಲದಲ್ಲಿ ಕಾಳಗ ನಡೆಯುತಿದ್ದ ಏಕಮಾತ್ರ ಸ್ಥಳವಾದ ಕ್ಯೂಬಾಕ್ಕೆ ಹೋದರು. ಈಗ 'ಚರ್ಚಿಲ್ ವೈಶಿಷ್ಟ್ಯ'ವಾಗಿರುವ ಹೊಗೆಬತ್ತಿ ಸೇವನೆಯ ಅಭ್ಯಾಸಾರಂಭ ಅಲ್ಲಿಯೇ. ಅಪರಾಹ್ನ ದಾರಾಮವನ್ನೂ ಕಲಿತರು. ನಾವೆಯ ಶಿರಸ್ಸಾಗಿ ನೇಮಕಗೊಂಡ ಮೇಲೆ ನಿರವಿಡೀ ಕೆಲಸವಿದ್ದುದರಿಂದ ಮತ್ತೊಂದು ಘಂಟೆಯನ್ನು ಮಧ್ಯಾಹ್ನದೂಟಾನಂತರದ ನಿದ್ರೆಗಾಗಿ ಬಳಸಹತ್ತಿದರು. ಹಿಂದುಸ್ಥಾನದ ವಾಯುವ್ಯ ಗಡಿನಾಡಿನ ಯುದ್ಧದಲ್ಲಿ ಅವರು ಹೋರಾಡಿದ್ದರು. ಒಮ್ಮೆ ಅಲ್ಲಿಯ ಕಂದರವಾಸಿಯೊಬ್ಬನ ಗುಂಡೊಂದು ರವಷ್ಟು ತಪ್ಪಿಹೋಗಿ ಚರ್ಚಿಲ್ಲರ ಪ್ರಾಣ ವುಳಿಯಿತು. ಹೀಗೆ ತನ್ನ 37ನೇ ವಯಸ್ಸಿನಲ್ಲಿಯೇ ಚರ್ಚಿಲ್ಲರು ನಾಲ್ಕು ಪ್ರಮುಖ ಹುದ್ದೆಗೇರಿದ್ದರು; ಐದು ಹೋರಾಟಗಳಲ್ಲಿ ಭಾಗಿಯಾಗಿದ್ದರು ಅದರೂ ಗ್ರಂಥ ಲೇಖನದ ಅವಕಾಶವೊರಕಿಸಿಕೊಂಡಿದ್ದರು. ತನ್ನ ತಂದೆ, ಲೋರ್ಡ್ ರೇಂಡೋಲ್ಫ್ ಚರ್ಚಿಲ್ಲರ ಜೀವನ ಚರಿತ್ರೆಯ ಎರಡು ಭಾಗಗಳ, ಕಿಚಿನರ ಈಜಿಪ್ಟ್ ಹೋರಾಟ ಎರಡು ಭಾಗಗಳು. ವಾಯುವ್ಯ ಗಡಿ ಹೋರಾಟದೊಂದು ಪುಟ್ಟ ಗ್ರಂಥ, ಮತ್ತೊಂದು ಕಾದಂಬರಿಯನ್ನು ಚರ್ಚಿಲ್ಲರು ಬರೆದಿದ್ದರು. ತನ್ನ ಕಾದಂಬರಿಯ ಕುರಿತು "ಅದನ್ನೋದ ಬೇಡಿರೆಂದು ನಾನು ನನ್ನ ಮಿತ್ರರನ್ನು ಬಲವಂತ ಪಡಿಸಿದ್ದೇನೆ" ಎಂದು ಇತ್ತೀಚೆಗೆ ಚರ್ಚಿಲ್ಲರಂದಿದ್ದಾರೆ. 37ರ ವಯಸ್ಸಿನಲ್ಲಿ ಚರ್ಚಿಲ್ಲರು ಸಾಕಷ್ಟನ್ನು ಸಾಧಿಸಿಬಿಟ್ಟಿದ್ದರು. ಶ್ರಮವಹಿಸಿ ದುಡಿಯುವ ಸ್ವಭಾವಸಿದ್ಧ ಅಸಾಮಾನ್ಯ ಶಕ್ತಿಯೇ ಅವರ ಯಶಾಪಯಶಗಳ ಇಷ್ಟೆಲ್ಲಾ ಕೆಲಸಗಳಿಗೆ ಕಾರಣ.

ಸಶಕ್ತ ಎದೆಗಾರ

ಆದರೂ ನಾಲ್ಕು ವರುಷಗಳ ನಂತರ –1915ನೇ ನವಂಬರಿನಲ್ಲಿ–ಅವರು ಹುದ್ದೆಯಿಂದ ಹೊರ ಬಿದ್ದು, 'ಒಕ್ಸ್‌ಫೊರ್ಡ್ ಶಯರ್ ಯೂಮಾನ್ರಿ'ಯ ಮೇಜರ್ ಆಗಿ ಉಳಿದರು. ಹೆಚ್ಚಿನವರು, ಅವರ ರಾಜಕೀಯ ಜೀವನ ಮುಗಿಯಿತೆಂದೇ ಭಾವಿಸಿದರು.

ಮೊದಲನೇ ಜಾಗತಿಕ ಯುದ್ಧದ ಆದಿ ಭಾಗದ ಸಂಧಿಗ್ಧ ಕಾರಗಳವು-ಜರ್ಮನರು ಪೇರಿಸಿನ ಮುಂಭಾಗದಲ್ಲಿ ತಡೆಗಟ್ಟಲ್ಪಟ್ಟಿದ್ದರು. ಬ್ರಿಟನಿನ ಸುಸಜ್ಜಿತ ಸರ್ವ ಸೇನೆಗಳನ್ನೂ ಫ್ರಾನ್ಸಿನಲ್ಲಿ ಮುಂದೊಡ್ಡಬೇಕೆಂಬ ಎದೆಗಾರಿಕೆಯ ನಿರ್ಧಾರವನ್ನು ಚರ್ಚಿಲ್ಲರು ಸಮರ್ಥಿಸಿದರು. ಪ್ರತ್ಯಕ್ಷ ಬ್ರಿಟನಿನ ಮೇಲೇನೇ ಆಕ್ರಮಣವಾದರೆ? "ನಾವೆಯಿದೆ' ಎಂದರು ಚರ್ಚಿಲ್ "ಬ್ರಿಟನನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹಡಗ ಬಲ ಹೊರುತ್ತದೆ"-ಎಂದು ತನ್ನ ಸಹವರ್ತಿ ಮಂತ್ರಿಗಳನ್ನು ಒಪ್ಪಿಸಿದರು. ಈ ನಿರ್ಧಾರವು ಕೊನೆಗೆ ಸರಿಯೆನ್ನಿಸಿತು. ಆಂಟ್‌ವರ್ಪ್ ಬಂದರಕ್ಕೆ ವೈರಿ ಭಯ ತಟ್ಟಿದೊಡನೆಯೇ ಬಂದರನ್ನು ಹಿಡಿದು ನಿಲ್ಲಲು ಚರ್ಚಿಲ್ಲರೊಂದು ಹಡಗ ಬಲವನ್ನು ಕಳುಹಿಕೊಟ್ಟರು. ಪರಿಣಾಮವಾಗಿ ಅದೃಷ್ಟದಾಯೀ ಮೂರು ದಿನಗಳುಳಿದುಕೊಂಡುವು. ಆಗ ವಿರೋಧಿಯು ಮೂರು ದಿನ ಹಿಂದೆ ಬಿದ್ದುದರಿಂದಾಗಿಯೇ ಬ್ರಿಟಿಷ್ ಕಾಲುವೆಯ ಬಂದರಗಳುಳಿದುವೆಂಬುದನ್ನು ಚರಿತ್ರಕಾರರೊಪ್ಪುತ್ತಾರೆ.

ಬ್ರಿಟನಿನ ಹಡಗ ಬಳಗಳಿಗೆ ಆಕಾಶ ಬಲವನ್ನು ಪೋಣಿಸಿದವರು ಚರ್ಚಿಲ್ಲರು. ಮೊದಲನೇ ಲೋಕ ಯುದ್ಧಾರಂಭವಾಗುವಾಗ, ಆಕಾಶ ಮೂಲಕ ಟೋರ್ಪೆಡೋ ಧಾಳಿ ನಡೆಸುವ ಕಲೆಯನ್ನು ಮೈಗೂಡಿಸಿಕೊಂಡಿದ್ದ ಏಕ ಮಾತ್ರ ನಾವೆಯೆಂದರೆ ಬ್ರಿಟಿಷ್ ನಾವೆ. ಆ ಯುದ್ಧಾರಂಭಕ್ಕಿಂತ ಕೆಲವು ವರುಷಗಳ ಮೊದಲೇ "ಹಡಗ ಬಲ ತಯಾರಿಸಿವೆ" ಅನ್ನಿಸಿಬಿಟ್ಟ ಚರ್ಚಿಲ್ಲರ ಕಾರ್ಯೋತ್ಸಾಹವು ಅಭಿನಂದನೀಯ.

ಅದೃಷ್ಟಶಾಲಿ

ಡಾರ್ಡನೆಲ್ಸ್ ಪರಾಭವಕ್ಕೆ, ಕೆಲಸ ಜಾರಿ ಮಾಡುವವರ ಪ್ರಮಾದವೇ ಕಾರಣವಾಗಿತ್ತಲ್ಲದೆ, ಸೂತ್ರ ತಯಾರಿಕೆಯ ದೋಷವೇನೂ ಇರಲಿಲ್ಲವಾದರೂ, ನಾವೆಯ ಶಿರಸ್ಸಾಗಿದ್ದ ಚರ್ಚಿಲ್ಲರು ಆ ಹೊಣೆಗೆ ತಲೆ ಕೊಟ್ಟು, ಪದಾತಿಗ ಮಾಸೇನೆಯಲ್ಲಿ ಮೇಜರ್ ಆಗಿ ಸೇರಿಕೊಂಡರು. ಸೈನಿಕ ದಳವೊಂದರ ಅಧಿಕಾರ ವಹಿಸಿ ಫ್ರಾನ್ಸಿಗೆ ಹೋದರು. ಅಲ್ಲಿ ಸ್ವದೈವಾಶಾತ್ ಮತ್ತೊಮ್ಮೆ ಪ್ರಾಣಾಪತ್ತಿನಿಂ[illegible] ಪಾರಾದರು. ರಣರಂಗದಲ್ಲಿ ಮುಂದೆ ಹೋ[illegible]ಗಿಪ್ಪ ಮೇಲಧಿಕಾರಿಯೇಕೆ ಹಿಂದಿರುಗ[illegible]ಲ್ಲವೆಂಬುದನ್ನು ನೋಡುವದಕ್ಕಾಗಿ ತನ[illegible] ರಕ್ಷಣಾ ಕುಳಿಯಿಂದ ಚರ್ಚಿಲ್ಲರು ಮೇ[illegible] ಬಂದು ನಿಂತಿದ್ದರು ಮಾತ್ರ—ವೈರಿಯ ಗುಂಡೊಂದು ಬಿದ್ದು ಇಡೀ ರಕ್ಷಣಾ ಕುಳಿಯೆ ಧ್ವಂಸವಾಗಿ ಹೋಯಿತು! ಯುದ್ಧದ ಅ[illegible]ತ್ಯ ಭಾಗದಲ್ಲಿ ಚರ್ಚಿಲ್ಲರು ಪುನಃ ಮಂ[illegible] ಪದದಲ್ಲಿದ್ದರು. ಆದರೆ ಹಡಗ ಮಂತ್ರಿಯಾಗಿಯಲ್ಲ; ಆ ಕಾಲದಲ್ಲಿ ಪ್ರಾಮುಖ್ಯವಾ[illegible]ದ್ದರೂ, ನಾವೆಯ ಶಿರಸ್ಸಾಗಿರುವಷ್ಟು [illegible] ನತೆಯುಳ್ಳದಲ್ಲವಾದ ಮದ್ದು ಗುಂಡು [illegible] ವರ್ಧಕ ಮಂತ್ರಿಯಾಗಿದ್ದರು. ಶಾಂತಿ [illegible] ರಾರು ನಡೆಯುವಾಗ ಚರ್ಚಿಲ್ಲರ ರಾಜ[illegible]ಯ ಪ್ರಗತಿಯು, ಎಂಟು ವರುಷಗಳ ಮೊದಲಿಗಿಂತ ಕುಂಠಿತವಾಗಿತ್ತು. ಆದರೆ ಅವರು ಮಾಡಬೇಕಾದ ಪ್ರಾಮುಖ್ಯ [illegible] ಯಗಳಿದ್ದುವು. ಸೇನಾ ಬರ್ಖಾಸ್ತು [illegible] ರ್ಯವು ಸಂಕಟದಾಯೀ ಸಮಸ್ಯೆಯಾ[illegible]ದ್ದಿತು. ಆದಕ್ಕಾಗಿ ಚರ್ಚಿಲ್ಲರನ್ನು ಯುದ್ಧ ಕಾರ್ಯಾಲಯಕ್ಕೆ ವರ್ಗಾಯಿಸಲಾಯಿತು, ಕಡೆಗೆ ಅಲ್ಲಿಂದ ವಸಾಹತು ಕಾರ್ಯಾಲಯಕ್ಕೆ ಹಾಕಲಾಯಿತು. ಅಲ್ಲಿ 19[illegible]

(೧೧ನೇ ಪುಟ ನೋಡಿರಿ)

ಮುಂದಾಲೋಚನೆ

ಶಾಂತಿಕಾಲದ ಕುರಿತು ಆಲೋಚಿಸಿ. ತಕ್ಕ ಯೋಜನೆಗಳನ್ನು ಮಾಡಲು ಇದೀಗ ತಕ್ಕ ಸಮಯ. ಏಕೆಂದರೆ ಯುದ್ಧಕಾಲದ ಸಮಸ್ಯೆಗಳಿಗಿಂತ ಶಾಂತಿ ಕಾಲದವುಗಳು ಕಷ್ಟತಮ.

ಮುಂಬರುವ ದಿನಗಳು ಅನಿಶ್ಚಿತ. ಅವುಗಳಿಂದ ನಿರಪಾಯವಾಗಿ ಪಾರಾಗಲು ಜನರಿಗೆ ಅನುಭವ ಮತ್ತು ಜ್ಞಾನ ಇವುಗಳೇ ಸಹಾಯಕವಾಗುವುವು ತಮ್ಮ ಮೂವತ್ತೊಂಬತ್ತು ವರ್ಷಗಳ ಅನುಭವದಲ್ಲಿ—ಎರಡು ಜಾಗತಿಕ ಯುದ್ಧಗಳನ್ನೂ ಎರಡು ವ್ಯಾಪಾರಿ ಮುಗ್ಗಟ್ಟುಗಳನ್ನೂ ಕಂಡ ಕೆನರಾ ಬ್ಯಾಂಕಿನವರು ಆರ್ಥಿಕ ವಿಷಯಗಳಲ್ಲಿ ನಿಮಗೆ ಮಾರ್ಗದರ್ಶಕರಾಗಬಲ್ಲರು. ಅವರಲ್ಲಿ ನಿಮ್ಮ ವಿಶ್ವಾಸವಿಡಲು ಸಂಕೋಚಿಸದಿರಿ; ವಿಲಂಬಿಸಬೇಡಿ

ಮುಂಬರುವ ಕಠಿಣ ದಿನಗಳಲ್ಲಿ ನಿಮಗೆ ಸಹಾಯಕರಾಗಲು ಅವರು ಸಮರ್ಥರು.

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED
(Incorporated in British India. liability of Members Limited.)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಪೂರೈಕೆಯ ಕೊರತೆ!

ಮದ್ರಾಸು ರೆವಿನ್ಯೂ ಬೋರ್ಡಿಗೆ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರ ಪತ್ರ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಪೂರೈಕೆಯ ಕೊರತೆಯುಂಟಾಗುವ ಸಂಭವವನ್ನು ಮುಂಚಿತವಾಗಿ ಮನಗಂಡು ಅದನ್ನು ತಪ್ಪಿಸಲು ಬೇಕಾಗಿ ಈಗಲೇ ಶೀಘ್ರೋಪಾಯಗಳನ್ನು ಕೈಕೊಳ್ಳಬೇಕೆಂದು ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಎಮ್. ಎಲ್. ಎ. (ಕೇಂದ್ರ) ಇವರು ತಾ. 19-5-'45ರಲ್ಲು ಮದರಾಸು ರೆವಿನ್ಯೂ ಬೋರ್ಡಿಗೆ ಒಂದು ಪತ್ರ ಬರೆದಿರುತ್ತಾರೆ. ಅದು ಹೀಗಿದೆ.

ಮಾನ್ಯರೇ,

ಈ ತಿಂಗಳ ಪ್ರಥಮ ವಾರದಲ್ಲಿ ಕೇಂದ್ರ ಆಹಾರ ಕಮಿಷನರರು ಈ ಜಿಲ್ಲೆಯನ್ನು ಸಂದರ್ಶಿಸಿ, ಅನೇಕ ಸ್ಥಳಗಳನ್ನು ಪರೀಕ್ಷಿಸಿ, ಅನೇಕ ಅಧಿಕಾರಿ ಮತ್ತು ಅಧಿಕಾರೇತರರೊಡನೆ ಸಂಭಾಷಣೆಗೈದರು. ದ. ಕ. ಜಿಲ್ಲಾ ಕೋಅಪರೇಟಿವ್ ಹೋಲ್ ಸೇಲ್ ಸ್ಟೋರ್ಸಿನ ಅಧ್ಯಕ್ಷರು ತಾ. 28-4-'45ನೇ ದಿನದ ವರೆಗೆ ಸಂಗ್ರಹಿಸಲ್ಪಟ್ಟಿರುವ ಆಹಾರ ಪದಾರ್ಥಗಳ ವರದಿಯನ್ನು ಪರಿಶೀಲಿಸಿದರೆ, ಆಹಾರ ಸಂಗ್ರಹದ ಪರಿಸ್ಥಿತಿ ತಾನಾಗಿ ಸ್ಪಷ್ಟವಾಗುವುದು. ಜಿಲ್ಲೆಯ ಅನೇಕ ವಿಭಾಗಗಳ ಡಿಪೋಗಳಲ್ಲಿ ಆಹಾರ ಪದಾರ್ಥಗಳು ಸಂಗ್ರಹಿಸಲ್ಪಟ್ಟು ಸ್ಥಳೀಯ ಆವಶ್ಯಕತೆಗಳಿಗೆ ವಿನಿಯೋಗಿಸಲ್ಪಡುವುದು.

ಪ್ರಸ್ತುತ ಅಲ್ಪಸ್ವಲ್ಪ ಆಹಾರ ಸಂಗ್ರಹವನ್ನು ಪ್ರಧಾನ ಕಚೇರಿಗೆ ಕಳುಹಿಸಿ, ವಿತರಣೆ ಪ್ರದೇಶಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಸಣ್ಣ ಸಣ್ಣ ಗ್ರಾಮಗಳಲ್ಲಿ ಪದ್ಧತಿರಹಿತ ವಿತರಣೆ ಪ್ರದೇಶಗಳ ಪೂರೈಕೆಗೆ ಪ್ರಸ್ತುತ ದೊಡ್ಡ ಧಕ್ಕೆ ತಗಲಿರುವುದು ಈ ಜಿಲ್ಲೆಯ ಆಹಾರ ಪೂರೈಕೆ ಬಗ್ಗೆ ಅಧಿಕಾರಿ ಮತ್ತು ಅಧಿಕಾರೇತರ ವರ್ಗದ ಜನರಲ್ಲಿ ಭಿನ್ನಾಭಿಪ್ರಾಯಗಳಿರುವುದಿಲ್ಲ.

1945ನೇ ಇಸವಿ ನವಂಬರ ತಿಂಗಳ ಅಂತ್ಯದ ವರೆಗೆ ಇತರ ತಾಲೂಕು ಮತ್ತು ಕಾಸರಗೋಡು ತಾಲೂಕಿನಲ್ಲಿ ಸಪ್ಟಂಬರ ತಿಂಗಳ ವರೆಗೆ ನಮಗೆ 23,000 ಟನ್ ಅಕ್ಕಿ ಬೇಕಾಗಿದ್ದಿತು. ಇದು ಪೂರ್ಣ ಪೂರೈಕೆಯ 3/4 ಭಾಗವಾಗುವುದಲ್ಲದೆ, ಇದರಲ್ಲಿ 1/4ನೇ ಭಾಗವು ಗೋಧಿ ಮತ್ತು ರಾಗಿಯ ಮೂಲಕ ಬೇಕಾಗಿದ್ದಿತ, ಜಿಲ್ಲಾ ಆಹಾರ ಕೌನ್ಸಿಲಿನವರು ತಾ 28-1-'45ನೇ ದಿನ ಈ ಬಗ್ಗೆ ಠರಾವು ಪಾಸುಮಾಡಿದರು. ಹೆಚ್ಚಿಗೆ ಆಹಾರ ಪದಾರ್ಥ ಸಂಗ್ರಹಿಸಲು ಅವಕಾಶವಿರಲಿಲ್ಲ. ತಾ. 31-3-'45ನೇ ದಿನದ ವರೆಗೆ ಸಂಗ್ರಹಿಸಲ್ಪಡಬೇಕಾದ ಅಕ್ಕಿ ಸಂಗ್ರಹವು ನಮ್ಮ ಆವಶ್ಯಕತೆಗಿಂತ ತೀರ ಕಡಿಮೆಯಾಗಿದ್ದಿತು.

ಮಲಬಾರಿನ ಯಾವ ಭಾಗಕ್ಕಿಂತಲೂ ಕಾಸರಗೋಡು ತಾಲೂಕು ಪ್ರದೇಶವು ಆಹಾರ ಕೊರತೆಗೆ ಹೆಚ್ಚಾಗಿ ಒಳಪಟ್ಟಿದೆ. ಹಾಗೂ ಮಂಗಳೂರಿನ ಹಸುಗೆ ಪ್ರದೇಶವು ಸಣ್ಣ ಸಣ್ಣ ಹಳ್ಳಿ ಊರುಗಳ ಆಹಾರ ಸಂಗ್ರಹವನ್ನು ಹೆಚ್ಚುಮಾಡುತ್ತಿದೆ. ಸಣ್ಣ ಸಣ್ಣ ಊರುಗಳ ಹಸುಗೆ ಪ್ರದೇಶಗಳಿಗೆ ಮೋಟರ ಲೋರಿಯಲ್ಲಿ ವಿಪರೀತ ವೆಚ್ಚದಿಂದ ಆಹಾರ ಪೂರೈಕೆಗೊಳಿಸಬೇಕಾಗಬಹುದು. ಸಣ್ಣ ಸಣ್ಣ ಊರುಗಳ ಪ್ರದೇಶಗಳಲ್ಲಿ ಆಹಾರ ಪದಾರ್ಥವು ಕಡಿಮೆಯಾಗುತ್ತಿದ್ದುದರಿಂದ ಅಧಿಕಾರಿಗಳು ಪೇಚಿಗೆ ಸಿಲುಕಿ, ಹಸುಗೆ ಪ್ರಮಾಣವನ್ನು ವಯಸ್ಕರಿಗೆ ವಾರಕ್ಕೆ 4 ಪೌಂಡು ಅಕ್ಕಿ ಮತ್ತು ಬಾಲಕರಿಗೆ ಅರ್ಧಭಾಗವೆಂದು, ಪದ್ಧತಿರಹಿತ ಹಸುಗೆಯನ್ನಾರಂಭಿಸಿ, ಇದರಿಂದ ವಯಸ್ಕರಿಗೆ ದಿನಾ ಕೇವಲ 9 ಔನ್ಸ್ ಅಕ್ಕಿ ದೊರೆತಲ್ಲದೆ ಹಸುಗೆ ಪೂರ್ಣಗೊಳಿಸಲು ಗೋಧಿ, ರಾಗಿ ಪೂರೈಕೆಗೊಳಿಸಲಾಗಿ, ಈ ರೀತಿ ಅರೆಹೊಟ್ಟೆ ಉಪವಾಸ ಬಳಲುವ ದೆಸೆಯಿಂದ ಈ ಜಿಲ್ಲೆಯ ಜನ ಶಕ್ತಿಗುಂದಿ ಆರೋಗ್ಯ ಕಳೆದುಕೊಳ್ಳುತ್ತಿದ್ದಾರೆ.

ಇಂದಿನ ಪದ್ಧತಿ ರಹಿತ ವಿತರಣೆ ಎಂದರೆ ನಗರ ಜನರ ಉಪ್ಪೋಷಣೆಗಾಗಿ, ಸಣ್ಣ ಸಣ್ಣ ಊರುಗಳ ಜನರನ್ನು ಉಪವಾಸ ಬಳಲುವುದೆಂದು ಅರ್ಥವಾಗುವುದು ಪಟ್ಟಣ ಇತರ ಜನರು ಮತ್ತು ಸಂಸ್ಥಾನಗಳಿಗೆ ಉತ್ತಮ. ಆಹಾರ ಪೂರೈಕೆಯಾಗುತ್ತಿರುವಾಗ, ಈ ಜಿಲ್ಲೆಯ ಜನರು ಉಪವಾಸ ಮಾಡಲು ಕಾರಣವೇನಿರಬಹುದು? ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕರಿಗೆ ಹಸುಗೆಯನ್ನೇರ್ಪಡಿಸದೆ, ವಯಸ್ಕರ ಕಡಿಮೆ ಪ್ರಮಾಣದ ಹಸುಗೆಯಿಂದ ಬಾಲಕರ ಹಸಿವು ಮತ್ತಷ್ಟು ಘೋರವಾಗುತ್ತಿದೆ. ಮದ್ರಾಸಿನ ಶ್ರೀಮಂತ ಬಾಲಕರಿಗೆ ಸರಕಾರವು ಹಾಲನ್ನು ಹಂಚುತ್ತಿರುವಾಗ, ನಮ್ಮ ಜನರು ಇದನ್ನು ಹೇಳದೆ ತಿಳಿದುಕೊಳ್ಳುವರು ಸ್ವಾಭಾವಿಕವಾಗಿ ಅಸೂಯಾಪರರಾಗಿಲ್ಲ; ಆದರೆ ಪ್ರಾಂತದ ಎಲ್ಲಾ ಹಳ್ಳಿಗಳ ಬಾಲಕರನ್ನು ಸರಕಾರವು ಸಮಾನ ರೀತಿಯಿಂದ ಪಾಲಿಸಬೇಕು.

ಅಖಿಲ ಭಾರತ ೫ನೇ ಆಹಾರ ಪರಿಷತ್ತಿನಲ್ಲಿ ಪಾಸಾದ ಠರಾವನ್ನು ಪರಿಶೀಲಿಸುವಾಗ, ಸರಕಾರದ ಮನೋವೃತ್ತಿಯು ವಿಚಿತ್ರಕರವಾಗಿದೆ.

ಎಲ್ಲಾ ಹಸುಗೆ ಯೋಜನ ಮೇರೆಗೆ, ಬಾಲಕನನ್ನು ಹುಟ್ಟಿದಂದಿನಿಂದ ೮ ವರ್ಷ ವಯಸ್ಸಿನ ವರೆಗೆ ಪ್ರಾಪ್ತ ವಯಸ್ಕರ ಅರ್ಧ ಭಾಗದಷ್ಟು ಹಸುಗೆಯನ್ನೇರ್ಪಡಿಸಬೇಕೆಂಬ ನಿರ್ಧಾರದಲ್ಲಿ ಮದ್ರಾಸ್ ಸರಕಾರವು ಭಾಗ ವಹಿಸಿರುವುದು. ಈ ಯೋಜನೆ ಮೇರೆಗೆ, ಎರಡು ವರ್ಷಕ್ಕೆ ಮೇಲ್ಪಟ್ಟು ೧೨ ವರ್ಷ ವಯಸ್ಸಿನ ವರೆಗೆ ಬಾಲಕರನ್ನು ಪೋಷಿಸುವ ವ್ಯವಸ್ಥೆಯು ಈಗಲೂ ಅಸ್ತಿತ್ವದಲ್ಲಿರುವುದು. ಆದರೆ ಪ್ರಸ್ತುತದ ವ್ಯವಸ್ಥೆ ಮೇರೆಗೆ ಎರಡು ವರ್ಷ ವಯಸ್ಸಿನ ಬಾಲಕರು ಅಸ್ತಿತ್ವದಲ್ಲಿಲ್ಲವೆಂದೇ ತಿಳಿಯಬೇಕಾಗಿದೆ.

೫ನೇ ಆಹಾರ ಪರಿಷತ್ತಿನಲ್ಲಿ ಪಾಸಾದ ಇನ್ನೊಂದು ಠರಾವು ಹೀಗಿದೆ:—"ದಿನಾಲೂ ವಯಸ್ಕರಿಗೆ ೧ ಪೌಂಡ್ ಧಾನ್ಯಗಳನ್ನು ಕಡಿಮೆ ಬೆಳೆ ಪ್ರದೇಶಗಳಲ್ಲಿಯೂ ಒದಗಿಸುವ ವರೆಗೆ, ಹಸುಗೆ ಪರಿಮಾಣವನ್ನು ಯಾವ ಭಾಗದಲ್ಲಿಯೂ ಕಡಿಮೆಗೊಳಿಸಬಾರದು!" ಆದರೆ ಈ ಠರಾವನ್ನು ನಮ್ಮ ಸರಕಾರವು ಪೂರ್ಣವಾಗಿ ... ಇನ್ನೂ ಕಾರ್ಯರೂಪಕ್ಕೆ ತರಲಿಲ್ಲ. ಪ್ರಾಂತದ ಕೆಲ ಪ್ರದೇಶಗಳಲ್ಲಿ ಒಂದು ಪೌಂಡಿಗಿಂತಲೂ ಹೆಚ್ಚು ಆಹಾರ ಧಾನ್ಯವು ವಿತರಣೆಗೊಳಿಸಲ್ಪಡುವುದು.

ಈ ಜಿಲ್ಲೆಯಲ್ಲಿ ಪ್ರಬಲ ಮತ್ತು ವ್ಯಾಪಕವಾಗಿ ಆಹಾರ ಧಾನ್ಯವನ್ನು ಸ್ವಾಧೀನಪಡಿಸಿದ ದೆಸೆಯಿಂದ ರೈತರಲ್ಲಿ ಏನೇನೂ ಉಳಿದಿರುವುದಿಲ್ಲ. ಕೆಲವು ವಿಭಾಗಗಳಲ್ಲಿ ಜಿಲ್ಲೆಯ ವ್ಯವಸಾಯ ಕೃಷಿಯ ಕೂಲಿಕಾರರಿಗೂ, ಹಳ್ಳಿಯ ರೈತರು ಮತ್ತು ಒಕ್ಕಲಿಗರಿಗೂ ಇಂದು ಪದ್ಧತಿ ರಹಿತ ಹಸುಗೆಯನ್ನೇರ್ಪಡಿಸಬೇಕಾಗಿದೆ. ಅಧಿಕಾರಿಗಳ ಅಂದಾಜು ಮೇರೆಗೆ ಈ ರೀತಿ ೧೮೦೦೦ ಟನ್ ಅಕ್ಕಿ ಬೇಕಾಗುವುದು.

ಈ ವರ್ಷ ಮಳೆಯ ಅಭಾವದಿಂದ ಎರಡು ಬೆಳೆಗೆ ಧಕ್ಕೆಯುಂಟಾಗಿದ್ದರೂ, ಹೊರಗಿನ ವಿಭಾಗದಿಂದ ಈ ಜಿಲ್ಲೆಗೆ ಏನೇನೂ ಆಹಾರ ಧಾನ್ಯ ಒದಗಿಸಲ್ಪಡಲಿಲ್ಲ. ಜಿಲ್ಲಾ ಆಹಾರ ಕೌನ್ಸಿಲಿನವರು ಈ ವಿಷಯವನ್ನು ಬೋರ್ಡಿನ ಮುಂದೆ ಮಂಡಿಸಿರುವರು.

ಕಳೆದ ವರ್ಷ ಎಪ್ರಿಲ್ ತಿಂಗಳಿನಿಂದ ಸಪ್ಟಂಬರ ತಿಂಗಳ ವರೆಗೆ ಈ ಜಿಲ್ಲೆಗೆ ೧೬೦೦೦ ಟನ್ ಆಹಾರ ಧಾನ್ಯ ಕಳಿಸಲ್ಪಟ್ಟಿರುವುದು. ಆದರೆ ಈ ವರ್ಷ ಏನೇನೂ ಆಹಾರ ಧಾನ್ಯ ಕಳಿಸಲ್ಪಡಲಿಲ್ಲ. ಇಲ್ಲವೆ ವಿಚಾರಿಸಲ್ಪಡಲೂ ಇಲ್ಲ.

ಕ್ಷಿಪ್ರದಲ್ಲಿಯೇ ಜಿಲ್ಲೆಯ ಆಹಾರ ಪರಿಸ್ಥಿತಿಯು ನಿಯಂತ್ರಣವನ್ನು ಕಳೆದುಕೊಳ್ಳುತ್ತಿದೆ ರೈತರ ಗಂಜಿ ಪೂರೈಕೆ ಮತ್ತು ಆವಶ್ಯಕತೆಯನ್ನು ಅಲಕ್ಷಿಸಿ, ಅಕ್ಕಿ ಸ್ವಾಧೀನಪಡಿಸಿರುವುದರಿಂದ, ಇಂದು ಅವರೆಲ್ಲರೂ ಪದ್ಧತಿ ರಹಿತ ಹಸುಗೆಯನ್ನವಲಂಬಿಸಿರುವರು ಇದು ಅಯೋಗ್ಯ ಕ್ರಮವಾಗಿರುವುದಲ್ಲದೆ, ಸರಿಪಡಿಸಲು ಕಾಲ ಮೀರಿ ಹೋಗಿರುವುದು ಈ ವರ್ಷ ಅವರೆಲ್ಲರಿಗೆ ಆಹಾರ ಧಾನ್ಯ ಪೂರೈಕೆಗೊಳಿಸಿ, ಈ ಕ್ರಮವನ್ನು ತಿದ್ದಿಕೊಳ್ಳಬೇಕು. ಏಕೆಂದರೆ ಇದರಿಂದ ವಿತರಣೆ ವಿಭಾಗದವರಿಗೆ ಅಧಿಕಾರ ಭಾರ ಹೇರಿದಂತಾಗುವುದು. ಈ ಜಿಲ್ಲೆಗೆ ಆಹಾರ ಧಾನ್ಯವನ್ನು ಸರಿಯಾಗಿ ಆಮದುಗೊಳಿಸುವ ವರೆಗೆ ಈ ಜಿಲ್ಲೆಯನ್ನು ಯಾವದೂ ಉಳಿಸಲಾರದೆಂದು ನಾನು ಮತ್ತೊಮ್ಮೆ ಹೇಳ ಬಯಸುತ್ತೇನೆ. ಈ ವಿಷಯವಾಗಿ ಮೌನವ್ರತವನ್ನು ಕಂಡು ಯಾರಾದರೂ ವಿಸ್ಮಿತರಾಗಬಹುದು. ಮದ್ರಾಸಿನ ವರೆಗೆ ಕೇಳಿಸುವಂತೆ ಜನರು ಗಟ್ಟಿಯಾಗಿ ಕೂಗಿಕೊಳ್ಳದಿರುವುದೇ ಕಾರಣವಾಗಿರಬಹುದು.

ಮಾನ್ಯ ಬೋರ್ಡಿನವರು ಈ ಪರಿಸ್ಥಿತಿ ಮತ್ತು ದುರ್ದೆಸೆಯನ್ನು ಹೋಗಲಾಡಿಸುವ ನಮ್ಮ ಬಿನ್ನಹವನ್ನು ಆಲಿಸಿ, ಯತ್ನಿಸಬೇಕಾಗಿದೆ. ಜಿಲ್ಲೆಯಲ್ಲುಂಟಾಗಿರುವ ಆಹಾರ ದುರ್ದೆಸೆ ಪರಿಸ್ಥಿತಿಯು ಮುಂದುವರಿದರೆ, ಒಂದಿಲ್ಲೊಂದು ದಿನ, ಜನರೆಲ್ಲರೂ, ಉಪವಾಸದಿಂದ ಬಳಲಬೇಕಾಗುವುದು; ಹಾಗೂ ಅದಕ್ಕೆ ಮಾನವನು ಹೊಣೆಗಾರನಾಗಬಹುದು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

Unique f..ilities under Housing Scheme!
e opportunity for solve . .. ..hildren Education Problem!

THE CENTRAL
..ERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವವರಾರು — ನಿಮ್ಮ ಕಾಲಾನಂತರ ನಿಮ್ಮ ಆಶ್ರಿತರ ಸುಖ ಬಯಸುವವರಾರು —
ಒಂದೇ ಒಂದು ದಾರಿಯಿದೆ! ಯಾವುದು? ಜೀವ ವಿಮೆ!
ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಯಶಸ್ವಿತೆಯನ್ನು ಅವರು ಆನಂದದ ನೆರವೀಡನ್ನೂ ನೋಡಬಿಚ್ಛಿಸದಿರುವ ತಂದೆ ತಾಯಿಗಳಾರಿರುವರು ಅಂತಹ ಎಜ್ಯುಕೇಶನ್ ಎಂಡೋಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ ಅದ್ದರಿಂದ ಭಾವೀ ಜೀವನದಲ್ಲಿ ಬೆಳಕನ್ನು ಕಾಣಬಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

ಸೆಂಟ್ರಲ್ ಮರ್ಕೆಂಟೈಲ್

ವಿಧದ ನಿಮ್ಮ ಪವಿತ್ರೋದ್ದೇಶವನ್ನು ನೆರವೇರಿಸಲು ಒಪ್ಪಿಕೊಂಡಿರುವಾಗಿದೆ ಎಂಬುದನ್ನು ಮರೆಯಬೇಡಿರಿ
ಎಲ್ಲೆಲ್ಲೂ ಏಜೆಂಟರೂ ಓರ್ಗನೈಜರರೂ ಬೇಕಾಗಿರುವರು!

ಲೇ ಬರೆಯಿರಿ - B DIVAKARA HEGDE.
AGENCY ORGANIZER
Central Mercantile Assurance Co., Ltd.,
Patel House, Churchgate Street,
FORT, BOMBAY.

ಬ್ರಿಟನಿನಲ್ಲಿ ಮಹಾ ಚುನಾವಣೆ.

ಚರ್ಚಿಲ್ಲರ ರಾಜೀನಾಮೆ ಮತ್ತು ಮೇಲ್ತನಿಖೀ ಸರಕಾರದ ರಚನೆ.

ಬ್ರಿಟಿಷ್ ಪ್ರಧಾನಿ ಮಿ. ವಿನ್‌ಸ್ಟನ್ ಚರ್ಚಿಲ್ಲರು ಮೇ ೨೩ನೇ ಅಪರಾಹ್ನ ಚಕ್ರವರ್ತಿಗಳ ಭೇಟಿ ಪಡೆದು ತನ್ನ ಹು ದ್ದೆಗೆ ರಾಜೀನಾಮೆಯಿತ್ತರು. ಅವರ ರಾಜೀನಾಮೆಯೊಂದಿಗೆ ಯುದ್ಧಾವಧಿಯ ಸಮ್ಮಿಶ್ರ ಮಂತ್ರಿ ಮಂಡಲದಾಳ್ವಿಕೆಯು ಕೊನೆಗೊಂಡಿತು ಅರಸರು ರಾಜೀನಾಮೆಯನ್ನು ಸ್ವೀಕರಿಸಿ ಪದ್ಧತಿಯಂತೆ ಪಾರ್ಲಿಮೆಂಟಿನ ಬಹುಮತೀಯ ಪಕ್ಷದ ನಾಯಕರಾದ ಚರ್ಚಿಲ್ಲರನ್ನೇ ಪುನಃ ಮಂತ್ರಿ ಮಂಡಲ ರಚಿಸಲು ಕೇಳಿಕೊಂಡರು ಅದನ್ನಂಗೀಕರಿಸಿ, ಸದ್ಯದ ಪಾರ್ಲಿಮೆಂಟನ್ನೇ ಬರ್ಖಾಸ್ತು ಪಡಿಸಬೇಕೆಂದು ಮಿ. ಚರ್ಚಿಲ್ಲರು ಕೇಳಿಕೊಂಡಂತೆ ಜೂನ್ ತಾ 15 ಕ್ಕೆ ಪಾರ್ಲಿಮೆಂಟಿನ ಮುಕ್ತಾಯವೆಂದು ಚಕ್ರವರ್ತಿಗಳು ವಿಧಿಸಿದ್ದಾರೆ. ಜುಲಾಯಿ ತಾ 5ಕ್ಕೆ ಇಂಗ್ಲಾಂಡಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವದು. ಜುಲಾಯಿ 27ಕ್ಕೆ ಚುನಾವಣೆಯ ಫಲಿತಾಂಶ ಪ್ರಕಟವಾಗುವದು. ಪಾರ್ಲಿಮೆಂಟ್ ಬರ್ಖಾಸ್ತಾಗುವನಕದ ಅಲ್ಪಾವಧಿಗಾಗಿ, ಪರಪಕ್ಷೀಯ ಮಂತ್ರಿಗಳನ್ನು ವಿಸರ್ಜಿಸಿ, ತನ್ನ ಕನ್ಸರ್ವೇಟಿವ್ ಸದಸ್ಯರೇ ಉಳ್ಳ ಮೇಲ್ವಿಚಾರಕ ಮಂತ್ರಿ ಮಂಡಲವೊಂದನ್ನು ಪ್ರಧಾನಿ ಚರ್ಚಿಲ್ಲರೀಗ ರಚಿಸಿಕೊಂಡಿದ್ದಾರೆ. ಸದ್ಯದ ಪಾರ್ಲಿಮೆಂಟಿನ 10 ವರುಷಗಳ ಚರಿತ್ರಾಪೂರ್ವ ಆಯುಷ್ಯವೂ, 5 ವರುಷ ಪರಿಯಂತರ ಲೋಕ ಯುದ್ಧದ ಅಸಾಮಾನ್ಯ ಹೊಣೆಯನ್ನು ನಿರ್ವಹಿಸಿದ ಸರ್ವಪಕ್ಷೀಯ ಮಂತ್ರಿ ಮಂಡಲವೂ ಮುಕ್ತಾಯಗೊಂಡುದಾಯಿತು. ಇಂಗ್ಲಾಂಡಿನಲ್ಲೀಗ ಮಹಾ ಚುನಾವಣೆಯ ಕೋಲಾಹಲವೆದ್ದಿದೆ

ಪೂರ್ವ ಚರಿತ್ರೆ

ಯುರೋಪು ಯುದ್ಧಾರಂಭವಾಗುವಾಗ ಈ ಪಾರ್ಲಿಮೆಂಟು ಐದನೇ ವರುಷಕ್ಕೆ ಬಂದಿತ್ತು ಯುದ್ಧ ಸಿದ್ಧತೆಯ ಮಟ್ಟಿಗೆ ಆಲಸ್ಯವನ್ನೇ ಅಂಗೀಕರಿಸಿದ್ದ! ಬ್ಯಾಲ್ಡ್ವಿನ್ನರ ಕಣ್ಣಾಮುಚ್ಚಾಲೆ ನೀತಿಯಿಂದಾಗಿ ಪ್ರಧಾನಿತ್ವವು ಮಧ್ಯಾವಧಿಯಲ್ಲಿ ಚೇಂಬರ್ಲೇನರಿಗೆ ದೊರೆತು ಜೆಕೊಸ್ಲೋವೇಕಿಯಾವನ್ನು ಬಲಿಕೊಟ್ಟ ಪಾಪಕ್ಕೆ ಈ ಸಿರ್ದೋಷಿ ತಲೆಕೊಡಬೇಕಾಯಿತು. ಯುರೋಪು ಯುದ್ಧಾರಂಭವಾದೊಡನೆಯೇ ಸರ್ವಪಕ್ಷೀಯ ಸರಕಾರ ಸ್ಥಾಪಿಸಲು ಚೇಂಬರ್ಲೇನರು ಮುಂದಾದರೂ, ಇಂತಹ ದುರ್ಬಲರೊಡನೆ ಸಹಕರಿಸಬಲ್ಲೆವು ಹೊರತು ಸಮ್ಮಿಶ್ರ ... ನಾರೆವೆಂದು ಕೂಲಿಗಾರ ಪಕ್ಷ ಹಿಂಗೊಳ್ಳಲು ಚೇಂಬರ್ಲೇನ್ ಪತನವಾಗಿ ದೆಗೆಯಿತು ... ನೋಲಿ ಕೂಲಿಗಾರ ಪ ಚರ್ಚಿಲ್ಲರು ಬಂದ ... ನಾಗಿ ಅಧಿಕಾ ಕ್ಷವೂ ಉತ್ಸಾಹ ಪೂರ್ವಕ ... ರ್ಯವನ್ನು ರ ಭಾಗಿಯಾಗಿ ಯುದ್ಧಕಾ ... ಉಪ ಜಯಶೀಲವಾಗಿ ಮುಂದೊತ್ತಿತು ... ಉಪ ಪ್ರಧಾನಿ ಮಿ ಕ್ಲೆಮೆಂಟ್ ಅಟ್ಲಿ; ಬ್ರಿಟನ ಯುದ್ಧ ಕಾರ್ಯಾಸಕ್ತ 22 ಮಿಲಿಯ ಜನರ ಸರ್ವಾಧಿಕಾರಿಯೆಂಬಷ್ಟು ಪ್ರತಿಷ್ಠಾವಂತ ಕೂಲಿಗಾರ ಮಂತ್ರಿ ಮಿ. ಅರ್ನೆಸ್ಟ್ ಬೆವಿನ್ ಗೃಹಕಾರ್ಯದರ್ಶಿ ಮತ್ತು ಗೃಹರಕ್ಷಣಾ ಮಂತ್ರಿ ಮಿ. ಹರ್ಬರ್ಟ್ ಮೊರಿಸನ್—ಈ ತ್ರಿಮೂರ್ತಿಗಳು ಕೂಲಿಗಾರ ಪಕ್ಷೀಯರು ಆರ್ಥಿಕ ಮಂತ್ರಿ ಸರ್. ಜೋನ್ ಅಂಡರ್ಸನ್, ಯುದ್ಧ ಮಂತ್ರಿ ಸರ್ ಜೇಮ್ಸ್ ಗ್ರಿಗ್, ಪುನರ್ರಚನಾ ಮಂತ್ರಿ ಲೋರ್ಡ್ ವ್ರೂಲ್ಟನ್, ಸರಬರಾಯಿ ಮಂತ್ರಿ ಸರ್. ಎಂಡ್ರೂ ಡಂಕನ್, ಯುದ್ಧ ವಾಹಕ ಮಂತ್ರಿ ಲೋರ್ಡ್ ಲಿದರ್ಸ್—ಇವರೆಲ್ಲಾ ಸ್ವತಂತ್ರರು. ಇನ್ನು ಯುದ್ಧ ಮಂಡಲದಲ್ಲಿ ಸರ್ ಆರ್ಚಿಬಾಲ್ಡ್ ಸಿಂಕ್ಲೇರರಂತಹ ಲಿಬರಲ್ ಪಕ್ಷೀಯರೂ ಇದ್ದರು ಹೀಗೆ ಯುದ್ಧಾವಧಿಯ ಬ್ರಿಟಿಷ್ ಸರಕಾರವು ವಿಜಯ ಸಮಾರಾಧನೆಗಾಗಿ ಸರ್ವ ರುಚಿ ಸಮ್ಮಿಶ್ರ ಪಂಚಕಜ್ಜಾಯವಾಗಿತ್ತು. ಕೆಲವೊಂದು ಸಂದರ್ಭಗಳಲ್ಲಿ ಚರ್ಚಿಲ್ ಧೋರಣೆಯ ಕುರಿತು ತೀವ್ರ ಭಿನ್ನಾಭಿಪ್ರಾಯವಿದ್ದರೂ, ಏಕ ಗುರಿಯಾದ ವಿಜಯ ಸಾಧನೆಗಾಗಿ ಅನ್ಯ ಪಕ್ಷೀಯರೆಲ್ಲವನ್ನೂ ಸಹಿಸಿ ಸಹಕರಿಸಿದ್ದರು.

ಬರ್ಖಾಸ್ತಾದುದೇಕೆ?

ಯುರೋಪು ವಿಜಯ ಸಮೀಪಿಸುತ್ತಾ ಬಂದಂತೆ ಮರುಚುನಾವಣೆಯ ಹುರುಪೇಳ ಹತ್ತಿತು. ಜರ್ಮನಿ ಪತನಗೊಂಡೊಡನೆ ಯುದ್ಧಾನುಗುಣ ಸಮ್ಮಿಶ್ರ ಸರಕಾರ ರದ್ದಾಗಬೇಕೆಂದು ಪ್ರಮುಖ ವಿರುದ್ಧ ಪಕ್ಷವಾದ ಕೂಲಿಗಾರರು ಹಾರೈಸಿದರು ಜಪಾನ್ ವಿಜಯ ದೊರೆಯದೆ ಈಗಿನ ಸರಕಾರವನ್ನು ಬರ್ಖಾಸ್ತು ಪಡಿಸಬಾರದೆಂದು ಮಿ. ಚರ್ಚಿಲ್ಲರ ನಿಶ್ಚಿತಾಭಿಪ್ರಾಯವಿದ್ದಿತು ಆದರೆ ಬ್ಲೇಕ್‌ಪೂಲಿನಲ್ಲಿ ಮಿಸ್. ವಿಲ್ಕಿನ್‌ಸನರ ಅಧ್ಯಕ್ಷತೆಯಲ್ಲಿ ಕಳೆದ 23 ವರುಷಗಳ ಚರಿತ್ರೆಯಲ್ಲೇ ಅಪೂರ್ವವಾದ ಆತುರೋತ್ಸಾಹದೊಡನೆ ಸೇರಿದ 1100 ಮಂದಿ ಪ್ರತಿನಿಧಿಗಳಿದ್ದ ಕೂಲಿಗಾರ ಪಕ್ಷ ಸಮ್ಮೇಳನವು ಮಿ. ಚರ್ಚಿಲ್ಲರ ಅಪೇಕ್ಷೆಯನ್ನು ಸರ್ವ ಸಮ್ಮತಿಯಿಂದ ತಿರಸ್ಕರಿಸಿಯಿತು. ಈ ಸಮ್ಮೇಳನ ನಡೆಯುತ್ತಿರುವಾಗಲೇ ... ಚರ್ಚಿಲ್ಲರು ಮಿ. ಅಟ್ಲೆಯವರಿಗೆ ಬರೆದ ಪತ್ರದಲ್ಲಿ "ನಮ್ಮ ಇನ್ನೊಂದು ಗುರಿಯಾದ ಜಪಾನ್ ವಿಜಯವಾಗುವ ತನಕವೂ ನಾವು ಬೇರಾಗನ್ನು ಸೇರುವ ... ಸದ್ಯದ ಮಂತ್ರಿ ಬಾರದು ಅದುವರೆಗೆ ಪಾರ್ಲಿಮೆಂಟಿನ ಆಯು ಮಂಡಲ ಮತ್ತು ... ಬೇಕಾದ ಷ್ಯವನ್ನು ಮುಂದುವರಿಸಿ ... ಸಂಗ್ರಹ'ವೂ ರೆ ಈ ಕುರಿತು 'ಜನ ಮತ ... ಅಭಿಪ್ರಾಯ ಪ ದರ ಮೂಲಕ ರಾಷ್ಟ್ರದ ಅಭಿಪ್ರಾಯವಿದ್ದಿತು. ಜಿಯೋಣ' ಎಂಬ ಸೂಚನೆಯ ಕೂಡ ಹಾಗಲ್ಲವಾದರೆ ಪಾರ್ಲಿಮೆಂಟನ್ನು ಆದಿಲೇ ಬರ್ಖಾಸ್ತು ಪಡಿಸಿ ಜುಲಾಯಿಯಲ್ಲಿ ಚುನಾವಣೆ ನಡಿಸಬೇಕೆಂಬುವ ಚರ್ಚಿಲ್ಲರ ಹಠ ಇದನ್ನು ಮಿ ಅಟ್ಲೆಯವರು ಪ್ರತಿಭಟಿಸುತ್ತಾ "ಜನ ಮತ ಸಂಗ್ರಹವೆಂಬುದು ನಾಜಿಗಳು ಮತ್ತು ಫ್ಯಾಸಿಸ್ಟರು ಅನುಸರಿಸಿದ್ದ ಪಾಶವೀಯ ಹಂತ್ರ ನಮ್ಮ ರಾಷ್ಟ್ರಕ್ಕದು ಅಸಂಗತ"ವೆಂದು ತಿರಸ್ಕರಿಸಿದ್ದಾರೆ ಜುಲಾಯಿಯಲ್ಲೇ ಚುನಾವಣೆ ನಡೆಸಿದರೆ ಸೇನೋದ್ಯೋಗದಲ್ಲಿರುವ ಮತದಾರರಿಗನಾನುಕೂಲವಾಗುವದೆಂದೂ, ಆ ಅನ್ಯಾಯಕ್ಕೆ ಚರ್ಚಿಲ್ಲರೇ ಹೊಣೆಗಾರರಾಗುವರೆಂದೂ ಎಚ್ಚರಿಸಿದ್ದಾರೆ. ಚರ್ಚಿಲ್ಲರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಅಪ್ರಗತಿಕ (ಕನ್ಸರ್ವೇಟಿವ್) ಪಕ್ಷವು ತನ್ನ ಸ್ವಂತೋದ್ದೇಶಗಳಿಗಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದೆಯೆಂದು ಮಿ ಅಟ್ಲೆಯವರು ಆರೋಪಿಸಿ ಚರ್ಚಿಲ್ಲರ ಒಯಕೆಯನ್ನು ತಿರಸ್ಕರಿಸಿದ್ದಾರೆ. ಚುನಾವಣೆಯ ಅನುಕೂಲ ವಾತಾವರಣವುಂಟಾಗುವಂತೆ ಮಳೆಗಾಲ ದಾಟುವವರೆಗೆ ಮಾತ್ರ ತಾವು ಮಂತ್ರಿಮಂಡಲದಲ್ಲಿರಬಲ್ಲೆವು ಒಕ್ಟೋಬರಿನಲ್ಲೇ ಮರುಚುನಾವಣೆ ನಡೆಯಲೇಬೇಕೆಂದು ಕೂಲಿಗಾರ (ಲೇಬರ್) ಪಕ್ಷದ ಛಲ. ಆದರೆ ಇದಕ್ಕೆ 'ನಾವು ಒಟ್ಟಾಗಿ ಕಾರ್ಯಸಾಗಿಸಲಾಗುವಂತಹ ಹಸಹನೆಯ ಪರಿಸ್ಥಿತಿಯೀಗ ಉಳಿದಿಲ್ಲ' ಎಂಬ ದೃಢ ನಿರ್ಧಾರದ ಉತ್ತರವನ್ನು ಅಟ್ಲೆಯವರಿಗಿತ್ತು, ಮಿ. ಚರ್ಚಿಲ್ಲರು ತಮ್ಮ ರಾಜೀನಾಮೆಯೊಪ್ಪಿಸಿ, ತನ್ನ ಹಠಕ್ಕನುಸಾರವಾಗಿ ಪಾರ್ಲಿಮೆಂಟನ್ನು ಬರ್ಖಾಸ್ತು ಪಡಿಸಿ ಅವಸರದ ಚುನಾವಣೆಗಿಳಿಸಿದ್ದಾರೆ. ಯುರೋಪು ವಿಜಯದ ಬೆನ್ನಲ್ಲೇ ಚುನಾವಣೆ ನಡೆದರೆ ಈ ವಿಜಯ ಶಿಲ್ಪಿಗನುಕೂಲವೆಂಬ ಆಸೆಯೂ, ಒಕ್ಟೋಬರಿನ ವರೆಗೆ ಹಿಂತಳ್ಳಿದರೆ ಟೋರಿಗಳ ಟೊಳ್ಳು ಹೊರಬೀಳಬಹುದೆಂಬ ಭಯವೂ ಈ ಅವಸರಕ್ಕೆ ಕಾರಣ ಪಾರ್ಲಿಮೆಂಟ್ ಆಯುಷ್ಯ ಅಭಿವೃದ್ಧಿಗೊಳ್ಳಬೇಕೆಂಬ ಮಿ ಚರ್ಚಿಲ್ಲರ ಪತ್ರಗಳು ಮುಖ್ಯ ಉದಾರ (ಲಿಬರಲ್) ಪಕ್ಷದ ನಾಯಕ ಸರ್ ಸಿಂಕ್ಲೇರರಿಗೂ ಅದಕ್ಕಿಂತ ಬೇರೆಯಾದ ಮತ್ತೊಂದು ದಾರ ಪಕ್ಷದ ನಾಯಕ ಮಿ ಅರ್ನೆಸ್ಟ್ ಬ್ರೌನರಿಗೂ ಹೋಗಿದ್ದವು 'ಜನಮತ ಸಂಗ್ರಹ'ದ ಕುರಿತು ಸಿಂಕ್ಲೇರರೂ ಕೂಡ ವಿರುದ್ಧವೆಂದು ಪ್ರತಿಭಟಿಸಿದ್ದಾರೆ ಉಳಿದ ಮಿಕ್ಕ ಸೂಚನೆಗಳಿಗೆ ಆವೆರಡು ಪಕ್ಷಗಳ ಒಪ್ಪಿಗೆಯೂ ಇದ್ದಂತಿದೆ

ಚುನಾವಣೆಯ ಆತುರೋದ್ವೇಗ

ಇಂಗ್ಲಾಂಡಿನಲ್ಲೀಗ ಚುನಾವಣೆಯ ರುಗಾಳಿಯೆದ್ದಿದೆ ಕೂಲಿಗಾರ ಪಕ್ಷೀಯರು ಎಲ್ಲರಿಗಿಂತ ಮುಂದಾಗಿ ಪ್ರಚಾರ...

(೯ನೇ ಪುಟ ನೋಡಿರಿ.)

It is easy to earn But difficult to save

We can help you to create a substantial fund by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S India)
T A PAI, B Com (Bom) A I I B
General Manager

The Bombay Life Assurance Co Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ 1908)
1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಂತೆ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟರು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲಿ 53 ಲಕ್ಷ ವಿಮಾ ವ್ಯವಹಾರದ ಗಣನೀಯ ಬ್ಯುಸಿನೆಸ್ ಮಾಡಿದೆ
ಕಾರ್ಯಾಲಯಗಳು.—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ತ್ರಿವೇಂಡ್ರಂ, ಉಡುಪಿ

WANTED

1 An experienced ... as Head Master.
2 Another ... Assistant
3 Two Sec Grade Trained Teachers.
4. A qualified Drawing Master
5 A Y M. C. A. trained Physical Instructor.
All the above for the Saraswati Vidyalaya High School Ganguli to be opened June 20, 1945. Knowledge of Kannada essential in all cases
Apply stating qualifications, age, minimum expected etc to—
The Manager
Saraswati Vidyalaya High School
GANGULI

ಲೇಬರ್ ಪಕ್ಷ ಚುನಾವಣೆ ಗೆದ್ದರೆ—

ಭಾರತ ಕಚೇರಿ ಬರ್ಖಾಸ್ತಾಗುವದು ! ಸರದಿ ಪ್ರಕಾರ ಸ್ವಾತಂತ್ರ್ಯ ಸಿಗುವುದು !

ಇಡೀ ಬ್ರಿಟನಿನಲ್ಲಿ ಚುನಾವಣೆಯು ಕಾವೇರಿಸಿರುವ ಬ್ಲೇಕ್‌ಪೂಲಿನ ಕೂಲಿಗಾರ ಪಕ್ಷೀಯ ಸಮ್ಮೇಳನವು ಲೇಬರ್ ಸರಕಾರದ ಧೋರಣೆಯನ್ನು ನಿರ್ಧರಿಸಿದೆ. ಜಾಪಾನ್ ಪರಾಭವಕ್ಕಾಗಿ ಪೂರ್ಣ ಸಹಕಾರ-ಪ್ರಮುಖ ಪಂಚ ರಾಷ್ಟ್ರಗಳ ನಿಕಟ ಸಂಬಂಧ—ಜಾಗತಿಕ ಸಂಸ್ಥೆಯೊಂದರ ಮೂಲಕ ಸಾಮೂಹಿಕ ಭದ್ರತೆ ಮತ್ತು ಅದಕ್ಕೆ ಸಶಸ್ತ್ರ ಬೆಂಬಲ—ಅಂತರ್ರಾಷ್ಟ್ರೀಯ ಆರ್ಥಿಕ ಸಹಕಾರ—ಸ್ವಾರ್ಥಸಾಧಕ ಅಂತರ್ರಾಷ್ಟ್ರೀಯ ಆರ್ಥಿಕ ಸಂಘಗಳಿಗೆ ಪೂರ್ಣ ವಿರೋಧ—ಕೃಷಿಕರ ಉತ್ಪತ್ತಿಗೆ ಯೋಗ್ಯ ಧಾರಣೆ—ಅಂತರ್ರಾಷ್ಟ್ರೀಯ ವಿಮಾನ ಪಥತಯಾರಿ-ಜರ್ಮನಿಗೆ ಇನ್ನೆಂದೂ ಯುದ್ಧೋದ್ಯೋಗಿಯಾಗದಂತಹ ತಡೆ—ಆದರೆ ಅವರಿಗೆ ಜೀವನಾವಶ್ಯ ಕಾರ್ಯ ... ಸ್ವಾತಂತ್ರ್ಯ-ಪ್ರತಿ ವರ್ಷವೂ ಭಾರತ[ಕ್ಕೆ] ಹೆಚ್ಚೆಚ್ಚಿನ ಅಧಿಕಾರದಾನ ಮತ್ತು [ಭಾ]ರತ ಕಚೇರಿಯನ್ನು ಕೂಡಲೇ ರದ್ದು[ಗೊ]ಳಿಸಿ ಅದರಕಾರ್ಯವನ್ನು ವಸಾಹತು ಕಚೇ[ರಿಗೆ] ವರ್ಗ—ಸ್ವದೇಶದಲ್ಲಿ ಹೊಸಯಾಂತ್ರಿ[ಕ ಉ]ದ್ಯಮ—ಅಧಿಕೋತ್ಪತ್ತಿ ಮತ್ತು ಆ[ರ್ಥಿ]ಕ ರಾಷ್ಟ್ರೀಕರಣ—ಪ್ರಾಮುಖ್ಯ ಉ[ದ್ಯ]ಮ, ವಾಹನ, ಸರಬರಾಯಿಗಳ ರಾಷ್ಟ್ರೀ[ಯ] ಅಧಿಕಾರ—ಸರ್ವರಿಗೂ ಉದ್ಯೋಗ [ವ್ಯ]ವಸ್ಥೆ-ಮನೆ ಸಮಸ್ಯೆಯ ನಿವಾರಣೆಗಾ[ಗಿ] ಭೂಮಿಯ ನಿಯಂತ್ರಣ—ಇತ್ಯಾದಿ [ಆ]ಕರ್ಷಣೀಯ ಗುರಿಗಳನ್ನಿಟ್ಟುಕೊಂಡು [ಕೂ]ಲಿಗಾರ ಪಕ್ಷ ಚುನಾವಣಾ ಕಾದಾಟ [ನ]ಡೆದಿದೆ.

ಕೂಲಿಗಾರರಿಂದ ಉದ್ಧಾರ?

"ಲೇಬರ್ ಪಕ್ಷವು ಅಧಿಕಾರಕ್ಕೆ ಬಂ[ದ]ರೆ ಅದು ಕೂಡಲೇ ಕಾಂಗ್ರೆಸ್ ಪ್ರಮು[ಖ]ರ ಬಿಡುಗಡೆಮಾಡಿ ಅವರೊಡನೆ ಸಂಧಾ[ನ] ಹೂಡಿ ಸದ್ಯದ ಬಿಕ್ಕಟ್ಟನ್ನು ಬಿಡಿಸಲಿ[ದೆ]"-ಎಂದು ಲೋರ್ಡ್ ಸ್ಟ್ಯಾಬೋಲ್ಗಿಯಂ[ದಿ]ದ್ದಾರೆ ಲೋರ್ಡ್ ವೇವೆಲರು ಪ್ರಗತಿ[ಪರ] ನಾಗರಿಕರೆಂದೂ ಆದರೆ ಸದ್ಯದ ಬಾ[ರತ] ಕಚೇರಿ ಮತ್ತು ಚರ್ಚಿಲ್ಲರ ಮೇಲಧಿ[ಕಾರ]ದಿಂದ ಅವರು ನಿರುಪಾಯರಾಗಿದ್ದಾ[ರೆಂ]ದೂ ಲೇಬರ್ ಸರಕಾರವು ಅವರನ್ನು [ಸ]ಮರ್ಥಿಸಲಿರುವದೆಂದೂ ಈ ಲೋರ್ಡರ [ಅಭಿ]ಪ್ರಾಯ. ಭಾರತದ ಉಪಕಾರ್ಯದರ್ಶಿ[ಯಾ]ಗಿದ್ದು ಸಮ್ಮಿಶ್ರ ಮಂತ್ರಿ ಮಂಡಲದ [ಪತ]ನದೊಂದಿಗೆ ಪದಚ್ಯುತರಾದರೂ ಇ[ನ್ನೂ] ಭಾರತ ಕಚೇರಿಯ ಕೆಲಸ ನಿರ್ವಹಿ[ಸು]ತ್ತಿರುವ ಲೋರ್ಡ್ ಲಿಸ್ಟೋವೆಲರು, [ಬ್ರಿ]ಟನಿನ ಸಾಮ್ರಾಜ್ಯ ಸಂಬಂಧದ ಜ[ವಾ]ಬ್ದಾರಿಗಳ ಪೈಕಿ ಹಿಂದುಸ್ಥಾನವೇ ಅತಿ [ಮ]ಹತ್ವದ್ದೆಂದಿದ್ದಾರೆ. 'ಕೂಡಲೇ ಕೇಂದ್ರ[ದ]ಲ್ಲೂ ಪ್ರಾಂತ್ಯಗಳಲ್ಲೂ ಹಿಂದೀಯರಿಗೆ [ಹೆ]ಚ್ಚಿನ ಅಧಿಕಾರ ಕೊಡಬೇಕು. ಕೂಲಿ[ಗಾ]ರ ಸರಕಾರವು ಒಮ್ಮೆಗೇ ಹಿಂದೀಯರಿ[ಗೆ ಸ]ಂಪೂರ್ಣ ರಾಜಕೀಯಾಧಿಕಾರ [ದಾ]ನಮಾಡಲು ಬದ್ಧವಿದೆ'—ಎಂದು ಮಾ[ಡಿ]ದ್ದಾರೆ ಬ್ರಿಟಿಷ್ ರಾಜಕೀಯಾರ್ಥಿಕ[ರ]ೂ ಕೂಲಿಗಾರ ಪಕ್ಷದ ನಿಪುಣರೂ ಆದ ಪ್ರೊಫೆಸರ್ ಹೆರೋಲ್ಡ್ [ಲಾಸ್ಕಿ]ಯವರು ಸರಕಾರದ ಸದ್ಯದ ಹಿಂದೀ [ಧೋ]ರಣೆಯನ್ನು ಕಟುವಾಗಿ ಖಂಡಿಸಿ [ಹಿಂದೀ]ಯರು ಸಹಕಾರ ಅಥವಾ ಕ್ರಾಂತಿಯಿಂದ ಸ್ವಾತಂತ್ರ್ಯ ಸಾಧಿಸಿಯೇ ತೀರುವರು' ಎಂದಿದ್ದಾರೆ "ಭಾರತವನ್ನು ಗೊಲಸುಗೇರಿಯಿಂದ ಹೊರತಂದು, ತನ್ನಿಚ್ಛೆಯಂತೆ ಬ್ರಿಟಿಷ್ ಸಾಮ್ರಾಜ್ಯದಲ್ಲೇ ಇರುವ ಅಥವಾ ಬಿಟ್ಟು ಹೋಗುವ ಸ್ವತಂತ್ರ ಸಮಾಜವಾಗಿ ಮಾರ್ಪಡಿಸಲಿದ್ದೇವೆ" ಎಂದು ಲಾಸ್ಕಿಯವರ ಉಜ್ವಲ ವಾಣಿ.

ಬೆವಿನರ ವ್ಯಾಖ್ಯಾನ

ಬ್ರಿಟನಿನ 22 ಎ.ಲಿಯ ಯುದ್ಧ ಕಾರ್ಖಾನೆ ಕಸಬುದಾರರನ್ನು ಅಂಗೈಯಲ್ಲಿಟ್ಟುಕೊಂಡಂತಿದ್ದ ಅನುಪಮ ಮಿ. ಅರ್ನೆಸ್ಟ್ ಬೆವಿನರು ಬ್ಲೇಕ್‌ಪೂಲ್ ಸಮ್ಮೇಳನದಲ್ಲಾಡಿದ ಗಮನಾರ್ಹ ವಚನಗಳಿವು: "ಹಲವು ಜನಾಂಗಗಳಿರುವ ಉಪಖಂಡ ಭಾರತವು ನಮಗೊಂದು ಮಹಾತುರವಾಗಿದೆ. ನಾವೂ ಪಾಲುಗಾರರಾಗಿದ್ದ ಕ್ರಿಪ್ಸ್ ಸೂಚನೆಯ ಅಂಗೀಕಾರಕ್ಕಾಗಿ ನಾವೆಷ್ಟೋ ಒದ್ದಾಡಿದ್ದೆವು. ಅದನ್ನಂಗೀಕರಿಸಿಕೊಳ್ಳದುದಕ್ಕಾಗಿ ಭಾರತವೀಗ ವ್ಯಸನಪಡುತ್ತದೆಂದು ನನ್ನ ನಂಬಿಕೆ. ಆದರೆ ಚೆಲ್ಲಿಹೋದ ಹಾಲಿಗಾಗಿ ಅತ್ತು ಫಲವಿಲ್ಲ. ನಾವು ಹಿಂದುಸ್ಥಾನದೊಡನೊಂದು ಒಪ್ಪಂದಕ್ಕೆ ಬರಲೇಬೇಕು. ನಮ್ಮ ಹಿಂದೀ ಮಿತ್ರರೊಡನೆ ನಾನು ಕೇಳಿಕೊಳ್ಳುವದಿಷ್ಟೆ: ಕೂಲಿಗಾರ ಸರಕಾರವಾದರೆ, ಇತರ ಪಕ್ಷೀಯರ ಮೇಲೆ ನೀವು ಹಾಕಿದುದಕ್ಕಿಂತ ಹೆಚ್ಚಿನ ಒತ್ತಾಯವನ್ನು ನಮ್ಮ ಮೇಲೆ ಹಾಕಬೇಡಿ. ಈ ಸಮಸ್ಯಾನಿವಾರಣೆಗೆ ನಾವು ಸಂತೋಷಪೂರ್ವಕ ಸಿದ್ಧರಿದ್ದೇವೆ. ಬರೆಹ ರೂಪದ ರಚನೆಯೊಂದರ ಮೂಲಕವೇ ಹಿಂದುಸ್ಥಾನವು ತನ್ನ ಹೊಣೆ ಸಂಪಾದಿಸಬೇಕೆಂದು ನನ್ನ ಅಭಿಪ್ರಾಯ ... ದುಸ್ಥಾನದ ಕಾನೂನಿನ ಪ್ರಾಬಲ್ಯದಿಂದಾಗಿ, ರಾಜ್ಯ ರಚನೆಯೊಂದನ್ನು ಬರೆಯಲು ಕುಳಿತವರು ಒಪ್ಪಂದಕ್ಕೆಂದೂ ಬರುವಂತಿಲ್ಲ. ಏನಾದರೊಂದು ತಪ್ಪು ಗೋಚರಿಸುತ್ತಲೇ ಹೋಗುತ್ತದೆ ಶಬ್ದಗಳ ಅರ್ಥವೇ ಒಂದಕ್ಕೊಂದಾಗಿ ಜಗಳ ಹೇತುವಾಗುತ್ತದೆ ನನ್ನ ಸಹವರ್ತಿಗಳೊಪ್ಪುವರೆಂಬ ನಂಬುಗೆಯೊಡನೆ ನನ್ನ ಮಟ್ಟಿಗೆ ಹಿಂದೀಯರಿಗೆ ಅವರ ಸರಕಾರ ರಚನೆಗಾಗಿ ಸರದಿ ಪ್ರಕಾರ ಅಧಿಕಾಧಿಕ ಜವಾಬ್ದಾರಿಯನ್ನು ಕೊಡುತ್ತಾ ಹೋಗುವೆನು" ಎನ್ನುತ್ತಾ ಭಾರತವನ್ನು ಯಂತ್ರಿಕೋದ್ಯಮ ಸಂಪನ್ನ ರಾಷ್ಟ್ರವಾಗಿ ಮಾರ್ಪಡಿಸುವ ಅವಶ್ಯಕತೆಯನ್ನು ಮನಗಾಣಿಸಿ, ಕ್ರಿಪ್ಸರೂ ಅವಸರ ಮಾಡಿದ್ದರೆಂದು ಸೂಚಿಸಿ, ಪ್ರಶ್ನಬದ್ಧ ಭಾರತವು ಶಾಂತಿಗಪಾಯಕರವೆಂಬುದನ್ನು ಬೆವಿನರು ಒತ್ತಿ ಹೇಳಿದ್ದಾರೆ. "ಲೇಬರ್ ಪಕ್ಷ ಗೆದ್ದು ಬಂದರೆ ನಾವು ಭಾರತ ಕಚೇರಿಯ ಬಾಗಿಲು ಮುಚ್ಚುವೆವು. ಭಾರತ ಸಂಬಂಧದ ಕಾರ್ಯಕಲಾಪಗಳನ್ನು ವಸಾಹತು ಕಚೇರಿಗೆ ವರ್ಗಾಯಿಸುವೆವು. ಹಿಂದೀಯರಲ್ಲಿ ತಾವು ಶ್ವೇತ ಭವನದಿಂದ ಆಳಲ್ಪಡುತ್ತಿಲ್ಲವೆಂಬ ವಿಶ್ವಾಸವನ್ನು ಈ ಬದಲಾವಣೆಯು ನಿರ್ಮಿಸಬಲ್ಲದೆಂದು ನಾನೆಣಿಸುತ್ತೇನೆ"—ಎಂದು ಸಾರುತ್ತಿದ್ದಾರೆ ಬೆವಿನ್

ಧುರೀಣರ ಅಭಿಪ್ರಾಯ

ಬೆವಿನ್ ಜಾಹೀರುನಾಮೆಯು ಭಾರತ ಮತ್ತು ಬ್ರಿಟನುಗಳ ಧುರೀಣರ ಹೃದಯ ತಂತಿಯನ್ನು ಮೀಂಟಿದಂತಿದೆ. ಈ ಕುರಿತು ವಿವಿಧಾಭಿಪ್ರಾಯಗಳು ಪ್ರಕಟವಾಗಿವೆ—

'ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಒತ್ತಡದಿಂದಾಗಿ ಹಿಂದೀ-ಬ್ರಿಟನ್ ಸಂಬಂಧ ಸುಧಾರಿಸುವದೆಂದು ನಾನು ಹೇಳುತ್ತಾ ಬಂದಿದ್ದೇನೆ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡದ ಇಂಗ್ಲಾಂಡಿಗೆ ಪೋಲೆಂಡು, ಅ[ಲ್ಬೇ]ನಿಯಾ, ಯುಗೊಸ್ಲಾವೇಕಿಯಗಳ ಕುರಿತು ಮಾತಾಡುವ ಯೋಗ್ಯತೆ ಬರುವದಿಲ್ಲ"- ಪ್ರಫುಲ್ಲ ಚಂದ್ರ ಘೋಷ್ (?) ... ಪೀಲ್.

'ಹೀಗಾಗಬೇಕೆಂದು ನಾನೂ ಹೇಳುತ್ತಿದ್ದೆ ಆದರೆ ದೂಷಿತ ವಸಾಹತು ಕಚೇರಿ ಕೂಡಾ ಶ್ವೇತಭವನದಂತೆಯೇ ಇರುವದರಿಂದ ಸ್ಥಿತಿ ಸುಧಾರಣೆಯಾಗದು"-ಲೋರ್ಡ್ ಹೈಲಿ.

"ಬೆವಿನರ ಹೇಳಿಕೆಯು ಹಿಂದುಸ್ಥಾನಕ್ಕೆ ಮಹಾ ತೃಪ್ತಿಯನ್ನು ಕೊಡಬಹುದು"—ಸರ್. ಜಫರುಲ್ಲಾ ಖಾನ್.

"ಬೆವಿನರ ಆಶ್ವಾಸನೆಯು ಅನ್ವೇಷವಾಗಿ ಕಾಣುತ್ತಿದೆ. ಆದರೆ ಪ್ರಥಮತಃ ಲೇಬರ್ ಪಕ್ಷ ಅಧಿಕಾರಕ್ಕೆ ಬಂದು ಕೊಳ್ಳಲಿ"—ಶ್ರೀ. ಜಿ. ಡಿ. ಬಿರ್ಲಾ.

"ಇದರಲ್ಲಿ ವಿಶೇಷವೇನೂ ಇಲ್ಲ ಭಾರತ ಕಚೇರಿ ಮುಚ್ಚುತ್ತೇನೆನ್ನುವದೂ ಒಂದು ಬೀದಿಯನ್ನು ಮುಚ್ಚುತ್ತೇನೆನ್ನುವದೂ ಒಂದೇ—ವಸ್ತುತಃ ಅದಕ್ಕರ್ಥವಿಲ್ಲ. ಮುಖ್ಯ ವಿಷಯವನ್ನು ಗಮನಿಸದಿದ್ದಲ್ಲಿ ರಾಜಕೀಯದಲ್ಲೇನಿದೆ? ತಮ್ಮ ಎಳೇ ಪ್ರಾಯದಲ್ಲ ದುರ್ಮರಣಕ್ಕೊಳಗಾಗುತ್ತಿರುವ ಒಂದು ಜನರಾಷ್ಟ್ರದಲ್ಲಿ ರಾಜಕೀಯಗಳಿಂದೇನು ಫಲ? ಭಾರತದ ಕಡೆಗೆ ನೋಡುವ ಬದಲಿಗೆ ನಮಗೆಲ್ಲ ಈ ದ್ವೀಪಗಳಲ್ಲೇ ಸಾಕಾದಷ್ಟು ಕೆಲಸವಿದೆ. ತಮಗಾವ ರೀತಿಯ ಸರಕಾರಬೇಕೆಂಬುದನ್ನು ಭಾರತೀಯರೇ ನಿರ್ಧರಿಸಬೇಕು"—ಜಾರ್ಜ್ ಬರ್ನಾರ್ಡ್ ಶಾ.

"ಪ್ರತಿ ಕ್ರಿಯೆಗಳ ಕೇಂದ್ರವಾದ ಭಾರತ ಕಚೇರಿ ರದ್ದಾಗುವದು ಸಂತೋಷವೇ. ಆದರೆ ಅದು ಸಾಕಾಗದು. ಸ್ವಾತಂತ್ರ್ಯ ಸಾಧನೆಗಣಿಯಾಗಿರುವ ಹಿಂದೀಯರು ಇದಕ್ಕೆ ವಿಶೇಷ ಬೆಲೆ ಕೊಡುವರೆಂದು ಬ್ರಿಟಿಷ್ ಜನತೆ ತಪ್ಪಿ ಬೀಳಬಾರದು"— ವಿಜಯ ಲಕ್ಷ್ಮಿ ಪಂಡಿತ್

"ಬೆವಿನರ ಸೂಚನೆಯು ಗಾಳೀ ಮಾತಾಗಿರದೆ ಸ್ಪಷ್ಟ ಹೆಜ್ಜೆಯಾಗಿರುವದರಿಂದ ಆಶಾದಾಯಿಯಿದೆ"—ಶ್ರೀಧರಾಣಿ.

"ಹಿಂದುಸ್ಥಾನವನ್ನು ವಸಾಹತಾಗಿ ಗಣಿಸುವ ಸೂಚನೆಯು ಆಕರ್ಷಣೀಯವಲ್ಲ ತನ್ನ ಭವಿಷ್ಯವನ್ನು ನಿರ್ಧರಿಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯವೇ ಭಾರತಕ್ಕೆ ಬೇಕು"—ಜೆ. ಜೆ. ಸಿಂಗ್.

"ವರುಷ ಪರ್ಯಾಯವಾಗಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವ ಬೆವಿನರ ಮಾತು ನನಗೆ ಅತಿರೇಕವಾಗಿ ಕಾಣುತ್ತದೆ. ಅದು ಮೊಂಟೆಗ್ಯೂರವರ 1917ರ ಜಾಹೀರುನಾಮೆಯಂತಿದೆ"—ಜಯಕರ್.

"ಭಾರತದ ಕುರಿತು ಚರ್ಚಿಲ್ ಸಂಗಡ ಮತ್ತು ಕೂಲಿಗಾರ ಸಂಗಡದ ವಾದಗಳಲ್ಲಿ ಶಬ್ದ ವ್ಯತ್ಯಾಸ ಬಹಳವಿದೆಯಾದರೂ ಒಳಗಿನ ಸಾರಾಂಶ ಅಷ್ಟಷ್ಟೇ"— ಸಾವರ್ಕರ್.

"ಇಂತಹದನ್ನು ಬಹಳ ಬಾರಿ ಕೇಳಿಯಾಗಿದೆಯೆಂಬುದರಿಂದ ಬೆವಿನರ ಮಾತನ್ನು ತಾತ್ಸಾರ ಮಾಡಬಾರದು. ಕೂಲಿಗಾರ ಪಕ್ಷವು ವಿಜಯಿಯಾದರೆ ಬ್ರಿಟಿಷ್ ಸರಕಾರದ ಹಿಂದೀ ಧೋರಣೆಯಲ್ಲಿ ಸ್ವೀಕಾರ ಯೋಗ್ಯ ಬದಲಾವಣೆಯಾಗುವದೆಂದು ನನ್ನ ನಂಬಿಕೆ"—ರಾಜಾಜಿ

(ಆನೇ ಪುಟ ನೋಡಿರಿ)

THE

VIJAYA BANK LTD.

Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES :-

Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

The Canara Banking Corporation Limited.

(Incorporated in British India, with limited Liability)

Estd: 1906

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18—5—1945.

ಉಡುಪಿ, ಗುರುವಾರ ೩೧-೫-೧೯೪೫

ಬ್ರಿಟಿಷ್ ಮಾದರಿ.

ಯುರೋಪು ಯುದ್ಧವನ್ನು ವಿಜಯದ ಗುರಿ ಸೇರಿಸಿದ ಬ್ರಿಟನಿನ ಸಮ್ಮಿಶ್ರ ಮಂತ್ರಿ ಮಂಡಲವು ಐದು ವರುಷಗಳ ಆಳ್ವಿಕೆಯ ನಂತರ ಕೂಲಿಗಾರ ಪಕ್ಷದ ತತ್ವಪ್ರೇಮಕ್ಕೆ ಬಲಿಯಾಯಿತು; ಆಲಸ್ಯ, ಆತುರ, ಆನಂದ–ಇವು ಮೂರರ ಪರಮಾವಧಿಯನ್ನೂ ಅನುಭವಿಸಿದ ಪಾರ್ಲಿಮೆಂಟಿನ ಹತ್ತು ವರುಷದ ಬಾಳುವೆಯು ಚರ್ಚಿಲ್ಲರ ಹಠಮಾರಿತನಕ್ಕೆ ಶೀಘ್ರಾಹುತಿಯಾಯಿತು. ತತ್ಪರಿಣಾಮವಾಗಿ ಬ್ರಿಟನಿನಲ್ಲೀಗ ಚುನಾವಣೆಯ ಸುಂಟರಗಾಳಿಯೆದ್ದಿದೆ. ಇನ್ನೊಂದು ತಿಂಗಳೊಳಗೆ ಸರಕಾರ ಯಾರದಾಗುವದು? ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷದ್ದೋ—ಅಟ್ಲಿ, ಬೆವಿನ್, ಮೊರಿಸನರ ಲೇಬರ್ ಪಕ್ಷದ್ದೋ ಎಂಬ ಪ್ರಶ್ನೆಯೀಗ ಲೋಕದ ರಾಜಕಾರಣಿಗಳೆಲ್ಲರ ತಲೆಯೊಳಗೂ ಸುಳಿದಾಡುತ್ತಿದೆ. ಅಧಿಕಾರ ಯಾರ ಕೈಗೆ ಹೋದರೇನಂತೆ? ಹೋಗುವದು 'ಬ್ರಿಟಿಷ್ ಕೈಗೆ'! ಗ್ರೇಟ್ ಬ್ರಿಟನಿನ ವೈಶಿಷ್ಟ್ಯ, ಸಂಸ್ಕೃತಿ, ಸ್ವಾರ್ಥ, ಅಧಿಕಾರಗಳನ್ನು ಉಳಿಸಿಕೊಳ್ಳುವದಕ್ಕಾಗಿಯೇ ಅಲ್ಲಿಯ ಪಕ್ಷಗಳೊಳಗೆ ಸ್ಪರ್ಧೆ ಹೊರತು ಪರೋಪಕಾರಕ್ಕಲ್ಲ. ಈ ದೃಷ್ಟಿಯಿಂದ ಚುನಾವಣೆಯ ಜಯಾಪಜಯಗಳನ್ನು ಬ್ರಿಟಿಷೇತರರು ವಿಶೇಷತಃ ಗಣಿಸಬೇಕಂದಿಲ್ಲ. ಚುನಾವಣೆಗಿಳಿದಿರುವ ಕೂಲಿಗಾರ ಪಕ್ಷ ಪ್ರಮುಖರು ಭಾರತ ಸ್ವಾತಂತ್ರ್ಯದ ಕುರಿತು ಮಧುರಾಶ್ವಾಸನೆಗಳನ್ನಿತ್ತಿದ್ದಾರೆ. ಹಿಂದೀ ಪ್ರಶ್ನೆಯು ಬ್ರಿಟಿಷ್ ಮತದಾರರನ್ನೊಲಿಸುವ ಮೋಹನಾಸ್ತ್ರವಲ್ಲವಾದ್ದರಿಂದ ಆ ಮಾತುಗಳಲ್ಲಿ ಪ್ರಾಮಾಣಿಕತೆ ಮತ್ತು ಸದುದ್ದೇಶವಿದೆಯೆನ್ನಬೇಕು. ಟೋರಿ, ಲಿಬರಲ್ ಪ್ರಭೃತಿಗಳಂತೆ ಭಾರತವನ್ನು ಹೊಗೆ ಮುಖದಿಂದ ಕಾಣದೆ ನಗು ಮೊಗದಿಂದ ನೋಡಲು ಲೇಬರ್ ಮುಖಂಡರು ಕಲಿತಿದ್ದಾರೆ. ಆದರೆ ಕೂಲಿಗಾರ ಪಕ್ಷದ ಕೈಯಲ್ಲಿ, ಹಿಂದೀ ಸ್ವಾತಂತ್ರ್ಯದ ಕುರಿತು ಉಪಚಾರವಾಡಿದ ದಾಖಲೆಯಿದೆ ಹೊರತು ಉದ್ಯೋಗ ಮಾಡಿದುದೇನೂ ಇಲ್ಲ. ಹಿಂದೀ ಸ್ವಾತಂತ್ರ್ಯ ಬೊಬ್ಬೆ ಹುಟ್ಟಿಕೊಂಡ ನಂತರವೂ ಒಂದೆರಡು ಬಾರಿ ಲೇಬರ್ ಪಕ್ಷ ಗದ್ದುಗೆಗೇರಿದುದಿದೆ. ಆಗ, ಅಧಿಕಾರಿ–ಅನಧಿಕಾರಿಗಳೊಳಗೆ ವ್ಯತ್ಯಾಸವಿದೆ ಹೊರತು ಆ ಪಕ್ಷ-ಈ ಪಕ್ಷಗಳೊಳಗೆ ತಾರತಮ್ಯವೇ ಇಲ್ಲವೆಂಬ ಅನುಭವ ಹಿಂದೀಯರಿಗಾಗಿದ್ದಿತು ಕಾಲ ಚಕ್ರವುರುಳುತ್ತಾ ಹೋದಂತೆ ಬ್ರಿಟಿಷ್—ಭಾರತ ಸಂಬಂಧದ ಮಟ್ಟಿಗೆ ಕಂಡದ್ದೇ ಮತ್ತು ಮತ್ತೂ ಕಾಣಿಸಿಕೊಳ್ಳುವ ಸಂಪ್ರದಾಯ. ಆದ್ದರಿಂದ ಈ ಬಾರಿಯೂ ಹಳೇ ಘಟನೆಗಳ ಪುನರಾವರ್ತನೆಯಾಗುವದೆಂದು ನಿರೀಕ್ಷಿಸುವದು ಕ್ಷೇಮಕರ; ಯಾವ ಪಕ್ಷ ಗೆದ್ದರೂ ಭಾರತೀಯರ ಪಾಲಿಗೆ 'ರಾಗಿ ಬೀಸುವದು' ತಪ್ಪಲಾರದೆಂಬ ಅನುಭವವೇ ಅಮೂಲ್ಯ. ಆದರೆ "ಹಾಗೆ ತಾತ್ಸಾರಮಾಡಬೇಡಿ. ಒಂದೇ ರೀತಿಯ ವಾಗ್ದಾನ ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯಿಂದ ಫಲಿಸಬಲ್ಲದು" ಎಂದು ರಾಜಾಜಿಯಂತಹ ಚಾಣಾಕ್ಯರನ್ನುತ್ತಾರೆ. ಒಬ್ಬನೇ ವ್ಯಕ್ತಿ ವಿವಿಧ ಸಂದರ್ಭಗಳಲ್ಲಿ ವಿವಿಧಾವತಾರ ತಾಳಬಲ್ಲನೆಂಬುದನ್ನು ನಾವು ರಾಜಾಜಿಯಿಂದ ಕಲಿತಂತೆಯೇ ಬ್ರಿಟಿಷ್ ಕೂಲಿಗಾರ ಪ್ರಮುಖರಿಂದಲೂ ಕಲಿಯುವಂತಾದರೆ ಸಂತೋಷ. ಆದರೆ ಈ ಸಂತೋಷಾನುಭವಕ್ಕಾದರೂ ನಾವು 'ರೆ' ಒಂದನ್ನು ದಾಟಿಕೊಳ್ಳಬೇಕು ಲೇಬರ್ ಪಕ್ಷ ಚುನಾವಣೆಯಲ್ಲಿ ಗೆದ್ದರೆ.... ಹಾಗೆ! ಆ ಮೇಲಾದರೂ ನಮಗೆ ಸ್ವಾತಂತ್ರ್ಯ ವಹಿಸಿಕೊಳ್ಳುವ ಕೆಲಸ ಮಾತ್ರವಲ್ಲ—ಸಹಿಸಿ ನಿಲ್ಲುವ ಕೆಲಸವಿದೆ. ಕೂಲಿಗಾರ ಸರಕಾರವು ಸ್ವಾತಂತ್ರ್ಯ ಸಾಲವನ್ನು ವರುಷ ಕಂತಿನಲ್ಲಿ ಸಲ್ಲಾಯಿಸಲಿದೆ. ಈ ರೀತಿ ಜಾಗತಿಕ ರಂಗದಲ್ಲಿ ಮತ್ತು ಬ್ರಿಟಿಷ್ ರಾಜಕೀಯ ಕ್ಷೇತ್ರದಲ್ಲಿ ಎಂತಹ ಬದಲಾವಣೆಗಳಾದರೂ ಹಿಂದೀ ಸ್ವಾತಂತ್ರ್ಯವು ಸಮೀಪಿಸುವುದೆಂಬುದೇ ಇಲ್ಲ. ಕೆಲವು ಬ್ರಿಟಿಷರ ಸಿಹಿ ಮಾತುಗಳು ಕೇಳಿ ಬರುತ್ತಿರುವ ಈ ಕಾಲದಲ್ಲಿಯೂ ಅದು ಎಟಕಲಾರದಷ್ಟು ಎತ್ತರದ 'ಆದರೆ ಹೋದರೆ......'ಗಳಲ್ಲೇ ನೇತಾಡುತ್ತಿದೆ!

ಆದ್ದರಿಂದ ಬ್ರಿಟಿಷ್ ಚುನಾವಣೆಯ ಫಲಿತಾಂಶವನ್ನು ನಾವು ಅಲಕ್ಷ್ಯಿಸಬಹುದು; ಆದರೆ ಅದರ ಪಾಠವನ್ನು ಕಲಿತುಕೊಳ್ಳಲಿಕ್ಕಿದೆ. ಚರ್ಚಿಲ್ಲರಿಗೆ ಬ್ರಿಟನು ಚಿರಋಣಿಯಾಗಿರಬೇಕು; ಪ್ರಾಣಾಪತ್ತಿನಲ್ಲಿರುವಾಗ ಕೈಗೊಟ್ಟ ಚರ್ಚಿಲ್ಲರು ವಿಜಯಪೀಠದ ವರೆಗೂ ಇಂಗ್ಲೆಂಡನ್ನೆತ್ತಿದ್ದಾರೆ. ಇಂಥವರ ಕೈಯಿಂದ ಬಿಡಿಸಿಕೊಳ್ಳಲಿಚ್ಛಿಸುವ ಬ್ರಿಟಿಷ್ ಮತದಾರರಿಂದ, ಹಿಂದೀಯರು ರಾಷ್ಟ್ರೀಯ ಕರ್ತವ್ಯವೆಂದರೇನೆಂಬುದನ್ನು ತಿಳಿಯಬೇಕು. ಒಮ್ಮೆ ಮಹಾತ್ಮರನ್ನಿಸಿಕೊಂಡವರು ಆಮೇಲೆ ನೂರಾರು ಪ್ರಮಾದಗಳನ್ನು ಮಾಡಿದರೂ ವಂಶಪರಂಪರೆಯಾಗಿ ಅವರ ಅಂಧಾನುಕರಣೆಮಾಡುವ ಹಿಂದೀಯರು ಬ್ರಿಟನಿನ ಈ ಉಜ್ವಲ ಉದಾಹರಣೆಯಿಂದ ಕಣ್ತೆರೆಯಬೇಕು.

ನಾಜಿಗಳ ನಾಮಾವಶೇಷವೇ?

ಹಿಮ್ಲರನ ಆತ್ಮಹತ್ಯೆ.

ಸೋವಿಯೆಟ್ ಜರ್ಮನ್ ಗಡಿಯ ದಟ್ಟಾರಣ್ಯಗಳಲ್ಲಿ ಅಡಗಿಕೊಂಡಿರುವ ನಾಜೀ 'ಆತ್ಮಹತ್ಯಾ ಸಂಗಡ'ಗಳು ಅಲ್ಲಲ್ಲಿ ಗೂರಿಲ್ಲಾ ಹೋರಾಟ ಕೊಡುಹತ್ತಿವೆಯೆಂದೂ, ವಿವಿಧ ಪೋಷಾಕುಗಳಿಂದ ಅವರು ಹಳ್ಳೀಮಲಯುಗಳಲ್ಲಿದ್ದಾರೆಂದೂ ರಶ್ಯದ 'ರೆಡ್ ಸ್ಟಾರ್'ನಲ್ಲಿ ಪ್ರಕಟವಾಗಿದೆ. ಜರ್ಮನಿಯನ್ನು ಆಳುವದು ಹೇಗೆಂಬುದು ಮಿತ್ರ ರಾಷ್ಟ್ರೀಯ ಮಿಲಿಟರಿ ಸರಕಾರಗಳಿಗೆ ಮಹಾ ಸಮಸ್ಯೆಯಾಗಿದೆ. ಪ್ರಜಾಪ್ರಭುತ್ವವಾದಿ ಸಂಘ ಸಂಸ್ಥೆಗಳನ್ನು ನಿರ್ಮಿಸಿಕೊಂಡಲ್ಲಿ ಅವುಗಳನ್ನು ನಾಜಿಗಳಾಕ್ರಮಿಸಿಕೊಳ್ಳುವ ಸಂಭವವಿದೆ. ಪ್ರಕೃತ ನಾಜಿಗಳು ಪೂರ್ಣ ಪತನಗೊಂಡರೂ ಆ ಪಕ್ಷದ ಎಲುಬು ಗೂಡು ಉಳಿದಿದೆ. ಎರಡು ಮೂರು ವರುಷಗಳೊಳಗೆ ಅದು ಮೈ ತುಂಬಿ ಸಜೀವವಾಗಿ ಮುಂಭಾಗಕ್ಕೆ ಬರುವ ಅಪಾಯವಿದೆ ಎಂದು ಮಿತ್ರ ಪಕ್ಷವಾ ಜರ್ಮನರು ಭಯಕಂಪಿತರಾಗಿದ್ದಾರೆ.

ಹಿಮ್ಲರನ ಆತ್ಮಹತ್ಯೆ.

ನಿರಂಕುಶಾಡಳಿತೆಯ ಮಟ್ಟಿಗೆ ಇಡೀ ಪ್ರಪಂಚದಲ್ಲೇ ಅದ್ವಿತೀಯನಾಗಿದ್ದ ನಾಜೀ ಜರ್ಮನಿಯ ಯಮದಂಡು ಸದೃಶ ಗೆಸ್ಟೆಪೋಗಳ ನಾಯಕನಾಗಿದ್ದ ಹೆನ್ರಿಚ್ ಹಿಮ್ಲರನು ಮೇ 23ರಲ್ಲಿ ಬ್ರೆಮರ್‌ವೊರ್ಡೆ ಎಂಬಲ್ಲಿಯ ಬ್ರಿಟಿಷ್ 2ನೇ ಸೇನಾ ಕಚೇರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ವಾರ್ತೆ ಪ್ರಕಟವಾಗಿದೆ. ಹಿಮ್ಲರನು ಹಿಟ್ಸಿಂಗರ್ ಎಂಬ ಹೆಸರಿಟ್ಟುಕೊಂಡು ಬಲ ಕಣ್ಣಿನಲ್ಲಿ ಕೃತಕ ಕಪ್ಪು ಮುಚ್ಚಿಯೊಂದನ್ನು ನಿರ್ಮಿಸಿಕೊಂಡು ಮೀಸೆ ಬೋಳಿಸಿದ್ದನಾದರೂ ಕನ್ನಡಕ ತೆಗೆದಿರಲಿಲ್ಲ. ಆತ ತನ್ನಿಬ್ಬರು ಅನುಯಾಯಿಗಳೊಂದಿಗೆ ಅಲ್ಲಿಯ ಸೇತುವೆ ದಾಟುತ್ತಿದ್ದಾಗ ಕಾವಲಿನ ಪೋಲಿಸರಿಗವನ ಗುರುತು ಹತ್ತಲಿಲ್ಲ. ಪದ್ಧತಿಯಂತೆ ಪ್ರಶ್ನಿಸಿದರು. ಸಮಾಧಾನಕರ ಉತ್ತರ ಬರಲಿಲ್ಲ. ದಸ್ತಗಿರಿಮಾಡಿ 2ನೇ ಸೇನಾ ಕಚೇರಿಗೆ ತಂದರು. 'ನನಗೆ ಕ್ಯಾಂಪ್ ಕಮಾಂಡರನ ಭೇಟಿಯಾಗಬೇಕು' ಎಂದು ಹಿಮ್ಲರನೇ ಕೇಳಿಕೊಂಡ. ಕಮಾಂಡರ್ ಬಂದಾಗ 'ನಾನೇ ಹಿಮ್ಲರ್'ಎಂದು ಅವನೇ ಪರಿಚಯ ಕೊಟ್ಟ. ಬುದ್ಧಿವಂತರಿಂದ ಪರೀಕ್ಷೆ ನಡೆದು ಹಿಮ್ಲರನೆಂಬುದು ಖಚಿತವಾಯಿತು. ಡಾಕ್ಟರರು ಅವನ ದೇಹ ಪರೀಕ್ಷೆ ನಡೆಸಿದರು. ದ್ವಿತೀಯ ಬಾರಿ ಪ್ರತಿಯೊಂದು ಅಂಗಾಂಗವನ್ನೂ ಪರೀಕ್ಷಿಸುತ್ತಾ ಡಾಕ್ಟರರು ಬಾಯಿಗೆ ಕೈ ಹಾಕಲಿದ್ದಾಗ ಹಿಮ್ಲರ್ ತನ್ನ ತಲೆಯನ್ನು ತುಸು ಕೊಡಹಿ ಬಾಯಿಯಲ್ಲಿ ಅಡಗಿಸಿಟ್ಟುಕೊಂಡಿದ್ದ ಗ್ಲಾಸು ನಳಿಗೆಯೊಂದನ್ನು ಕಚ್ಚಿಕೊಂಡ. ಅದು ಪೊಟೇಸಿಯಮ್ ಸಿಯಾನೈಡ್ ಇದ್ದ ನಳಿಗೆ. ಕೂಡಲೇ ಉದರ ಶುದ್ಧಿ ನಡೆಸಿದರೂ ಫಲ ಬಾರದೆ 15 ಮಿನಿಟಿನಲ್ಲಿ ಮರಣಗೊಂಡ. ಸೋಲ್ಜರರು ಅವನ ಕಂಬಳಿ ಹೊದೆದ ಶವವನ್ನು ಅನಾಮಧೇಯ ಗುಪ್ತ ಸ್ಥಳದೊಂದು ಕಣಿಗೆ ಹಾಕಿ ಮಣ್ಣು ಮುಚ್ಚಿದರು. ಸೇನಾ ಚಾಪ್ಲಿನರು ಅಂತ್ಯಕ್ರಿಯೆ ನೆರವೇರಿಸಿದರು. ಗುರುತಕ್ಕಾಗಿ ಶವದ ಮುಖಮುದ್ರೆ ಅಳತೆಗಳನ್ನೆಲ್ಲಾ ತೆಗೆದಿಡಲಾಗಿದೆ. ಆಸ್ಟ್ರಿಯದ ಗೇಸ್ಟೈಗ್ ಎಂಬಲ್ಲಿ ಮಣ್ಣಡಿಯಲ್ಲಿ ಹಿಮ್ಲರನ ಮುದ್ರೆ ಹಾಕಿಟ್ಟಿದ್ದ 2000000 ಪೌಂಡು ಬೆಲೆಯ ಹಣವು ಅಮೇರಿಕನರಿಗೆ ದೊರೆತಿದೆ. 5 ಮಿಲಿಯ ಮಂದಿಯನ್ನು ಕೊಂದ ಹಿಮ್ಲರ್ ಕೊನೆಗೆ **ತನ್ನನ್ನೇ ತಾನು ಕೊಲೆ ಮಾಡಿಕೊಂಡ!**

ನಾಜಿಗಳ ನಾಶ

ಕಳೆದ ಎಪ್ರಿಲ್ ತಿಂಗಳಲ್ಲಿ ಗೋರಿಂಗನ ಬದಲಿಗೆ ನಾಜೀ ವಿಮಾನಾಧಿಕಾರಿಯಾಗಿ ನೇಮಕಗೊಂಡಿದ್ದ ಫೀಲ್ಡ್ ಮಾರ್ಶಲ್ ವೋನ್ ಗ್ರೀಮನು ಮಿತ್ರ ಕೈದಿಯಾಗಿ ಆಸ್ಪತ್ರೆಯಲ್ಲಿದ್ದವನು ಹಿಮ್ಲರನಂತೆಯೇ ಪೊಟೇಸಿಯಮ್ ತಿಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹಿಮ್ಲರನ ತಮ್ಮ, ಯುಬೋಟು ಕೇಪ್ಟನ್, ಡಾನ್ಸಿಗಿನ ನಾಜೀ ಅಧಿಕಾರಿ ಮುಂತಾದ ನಾಜೀ ಪ್ರಮುಖರೆಲ್ಲಾ ಸೆರೆ ಸಿಕ್ಕಿದ್ದಾರೆ. ಎಸ್. ಎಸ್. ಬಾಲ್ಡ್ವಿನ್, ಡಾ. ಹಿಲ್ಟರ್, ಡ್ಯೂನರ್ ಮೇನ್, ಮೊದಲಾದ ಅಳಿದುಳಿದ ಎಲ್ಲಾ ಜರ್ಮನ್ ಸೇನಾನಿಗಳೂ ಈಗ ಕೈದಿಗಳಾಗಿದ್ದಾರೆ. ಹಿಟ್ಲರನ ಇಬ್ಬರು ವಿವಾಹಿತ ಸಹೋದರಿಯರಾದ ಅಂಗೇಲಾ ಹಮ್ಮಿಟ್ಜ್ ಮತ್ತು ಪೌಲಾ ವೋಲ್ಫರು ಸೆರೆ ಸಿಕ್ಕಿದ್ದಾರೆ. ತನ್ನ ಅಣ್ಣ ಶಿಲ್ಪಿಕಲಾ ಕಸಬನ್ನೇ ಮಾಡಬೇಕಿತ್ತು ಹೊರತು ರಾಜಕೀಯದ ಗೊಂದಲಕ್ಕೆಳೆಯಬಾರದಿದ್ದಿತೆಂದು ಪೌಲಾನ ಹೇಳಿಕೆ. ಬರ್ಲಿನಿನಲ್ಲಿದ್ದ ಹಿಟ್ಲರನ ಅಭ್ಯಾಸ ನಿಲಯದಲ್ಲಿ ಸ್ವತಃ ಹಿಟ್ಲರನಿಂದ ಬರೆಯಲ್ಪಟ್ಟಿದ್ದ ಹಲವು ಚಿತ್ರಗಳನ್ನು ರಶ್ಯನ್ ಪತ್ರಿಕೋದ್ಯಮಿಗಳು ಕಂಡು ಅವನೊಬ್ಬ ಕಲಾವಿದ ಎಂದಿದ್ದಾರೆ. ಹಿಟ್ಲರನೂ, ಗೋರಿಂಗನೂ ಮರಣಗೊಂಡುದು ಸತ್ಯವೆಂದು ಜರ್ಮನ್ ಜನತೆಗೀಗ ಖಾತ್ರಿಯಾಗಿದೆಯಂತೆ. ನಾಜೀ ಪ್ರಮುಖರಲ್ಲಿ ಸಾಯದೆ ಅಥವಾ ಸಿಕ್ಕದೆ ಉಳಿದಿರುವವನೆಂದರೆ ವಿದೇಶ ಮಂತ್ರಿಯಾಗಿದ್ದ ವೋನ್ ರಿಬ್ಬೆಂಟ್ರಾಪನೊಬ್ಬನೇ

ಮಂಗಳೂರು

ಸಿಡಿಲ್ಮಿಂಚು– ತಾ. ೨೮ನೇ ಬೆಳಗೆ ಮಂಗಳೂರಲ್ಲಿ ಭಯಂಕರ ಸಿಡಿಲ್ಮಿಂಚು ವಿಶೇಷ ಮಳೆ ಇತ್ತು. ಬಿಕ್ಕರನಕಟ್ಟೆ ಪದವಿನ ಹತ್ತಿರ ಸಿಡಿಲು ಬಡಿದು ಒಬ್ಬಳು ತೀರಿ ಹೋಗಿರುವಳೆಂದೂ ಇಬ್ಬರಿಗೆ ಪೆಟ್ಟಾಗಿರುವುದೆಂದೂ ತಿಳಿದು ಬರುತ್ತದೆ.

ಬಸ್ ಪ್ರಯಾಣದ ತೊಂದರೆ– ಯಾವ ಲೈನಿಗೂ ಬಸ್ ಟಿಕೇಟುಗಳು ಸಕಾಲದಲ್ಲಿ ದೊರೆಯದೆ (ಕೆಲವು ವೇಳೆ ವಾರಗಟ್ಟಲೆ ದೊರೆಯುವುದೂ ಇಲ್ಲ.) ಪ್ರಯಾಣಿಕರು ತುಂಬಾ ಸಂಕಷ್ಟಗೀಡಾಗಿದ್ದಾರೆ. ಈ ಕುರಿತು ಈಗಿನ ಕಲೆಕ್ಟರರು ತಕ್ಕ ವ್ಯವಸ್ಥೆ ಮಾಡಿದರೆ ತುಂಬಾ ಉಪಕಾರವಾದೀತು ಎಂಬಾತ್ತಿ.

ನಿಧನ– ಪ್ರಸಿದ್ಧ ನ್ಯಾಯಾಧೀಶರೂ ಸಾಹಿತಿಗಳೂ ಕವಿತಾ ಪ್ರೇಮಿಗಳೂ ಜನಪ್ರಿಯರೂ ಆಗಿದ್ದ ನಿವೃತ್ತ ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ. ಮೂಲ್ಕಿ ನರಸಿಂಗರಾಯರು ತಾ. ೨೫ರಲ್ಲಿ ತಮ್ಮ ಸ್ವಂತ ನಿವಾಸದಲ್ಲಿ ಪರಲೋಕವಾಸಿಗಳಾದರೆಂಬುದನ್ನು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಬರ್ಮಾ ಶಾಂತ ಸಮುದ್ರದಲ್ಲಿ ಜಾಪಾನರ ಪ್ರತಿಭಟನೆ.

ಬರ್ಮಾ ಹೋರಾಟ

ಮಂಡಲೆ ರಂಗೂನ್ ರೈಲ್ವೆಯ ಪಶ್ಚಿಮ ರಂಗ ಮತ್ತಿತರ ಕಡೆಗಳಲ್ಲಿ ಜಾಪಾನರು ಪ್ರಬಲ ಪ್ರತಿಭಟನೆ ಕೊಡುತ್ತಿದ್ದಾರೆ. ಮೀಟ್ಕಿಲಾ, ಟುವಾಂಗ್, ಮತ್ತು ಪೇಗೂಗಳಲ್ಲಿ ಸುತ್ತುಗಟ್ಟಲ್ಪಟ್ಟಿರುವ ಜಾಪಾನೀ ದಳಗಳೂ ಹಿಂದೆಗೆದು ಹೋಗಲು ತೀವ್ರವಾಗಿ ಹೋರಾಡುತ್ತಿವೆ. ಒಟ್ಟಿನ ಮೇಲೆ ಬರ್ಮಾದಲ್ಲಿ ಈಗ ಉಳಿದಿರುವ ಜಾಪಾನೀ ಸೇನೆಯು ಈ ಮೊದಲಿನಂತೆ ಹಿಂದೆಗೆಯುವದೊಂದನ್ನೇ ಗುರಿಯಾಗಿಟ್ಟುಕೊಳ್ಳದೆ ಮಿತ್ರರಿಗೆ ಕೈತೋರಿಸಿಯೇ ಹೋಗಬೇಕೆಂಬ ಛಲ ತೊಟ್ಟಂತಿದೆ. ಸಾಕಷ್ಟು ಹೊಸ ಸರಬರಾಯಿಗಳನ್ನು ಮಾಡಿಕೊಂಡು ಜಾಪಾನರು ದೃಢವಾಗಿ ಹೋರಾಟ ಕೊಡುತ್ತಾ ಹಂಚಿಕೆಗನುಸಾರವಾಗಿ ಹಿಂದೆಗೆಯುತ್ತಿದ್ದಾರೆ. ಆದರೆ ಪರಿಸ್ಥಿತಿಯು ಮಿತ್ರ ಸೇನೆಗಳಿಗನುಕೂಲವಿರುವದರಿಂದ ಬರ್ಮಾದ ಜಾಪಾನೀ ಸೇನೆಗಳನ್ನು ನಾಶ ಮಾಡುವ ಇಲ್ಲವೇ ಸೆರೆ ಹಿಡಿಯುವ ಕಾರ್ಯವು ಸಮಾಧಾನಕರವಾಗಿ ಸಾಗುತ್ತಿದೆ

ಜಾಪಾನರ ನೌಕಾ ದೌರ್ಬಲ್ಯ

ಬರ್ಮಾದ ಪಶ್ಚಿಮ ಕರಾವಳಿಗಳಲ್ಲಿ ಜಾಪಾನರು ಪಡೆದಿರುವ ಪರಾಭವವಂತೂ ಸೊಡ್ಡದನ್ನಬೇಕು. ಬಂಗಾಳಾ ಕೊಲ್ಲಿಯಲ್ಲಿ ಮಿತ್ರರನ್ನಿದಿರಿಸುವಷ್ಟು ನೌಕಾಬಲವಿಲ್ಲದೆ ಚಾಕ್ಸೀನ್, ಗ್ವಾ, ಅಕ್ಯಾಬ್ ಮೊದಲಾದ ಕರಾವಳಿ ನಗರಗಳನ್ನವರು ಬಿಟ್ಟೋಡಿದ್ದಾರೆ. ಇದೇ ಕಾರಣದಿಂದಾಗಿ ಮಲಯಾ, ಬೋರ್ನಿಯೋ, ಮತ್ತು ಡಚ್ ಈಸ್ಟ್ ಇಂಡೀಸ್‌ಗಳನ್ನು ಜಾಪಾನರು ಬಿಟ್ಟು ಕೊಡುವ ಸಂಭವ ಕಾಣುತ್ತದೆ. ಅಂತೂ ಹಿಂದುಸ್ಥಾನದ ಈ ಕಡೆಯಿಂದ ಆಸ್ಟ್ರೇಲಿಯಾದ ಆ ತುದಿ ವರೆಗಿನ 2400 ಮೈಲುಗಳ ಜಾಪಾನೀ ಕರಾವಳಿ ಲೈನನ್ನು ಮಿತ್ರರೀಗ ಭೇದಿಸಿರುವದರಿಂದ ಸಮುದ್ರ ಮಾರ್ಗದ ಜಾಪಾನೀ ಸರಬರಾಯಿಗಳಿಗೆ ತಡೆ ಬಿದ್ದಿದೆ. ಸದ್ಯ ಕಲ್ಕತ್ತ–ರಂಗೂನು ವಿಮಾನ ಮಾರ್ಗ ತೆರೆಯಲ್ಪಟ್ಟಿದೆಯಲ್ಲದೆ ಇನ್ನು ಅಲ್ಪಾವಧಿಯೊಳಗೆ ಬರ್ಮಾದ ಅಕ್ಕಿಯು ಭಾರತದ ಬಂದರಗಳಿಗೆ ಬರುವ ಸಂಭವವಿದೆ

ಶಾಂತ ಸಮುದ್ರದಲ್ಲಿ

ಓಕಿನಾವಾ ದ್ವೀಪದಲ್ಲಿ ಅಮೆರಿಕಾನರು ಜಾಪಾನರ ಅಸಹನೀಯ ಪ್ರತಿ ಹೊಡೆತಗಳನ್ನು ತಿನ್ನಬೇಕಾಗಿ ಬಂದಿದೆ. ವೈರಿಯ ನಾವೆ ಮತ್ತು ಆಕಾಶ ಹೊಡೆತಗಳ ಬಿಗುವೇರಿದೆ. ಜಾಪಾನರ 'ಕಾಮಿಕಾಝೆ' ವೈಮಾನಿಕರು ಅಮೇರಿಕದ ಹಡಗ ಮತ್ತು ವಿಮಾನ ನಿಲ್ದಾಣಗಳ ಮೇಲೆ ಜಯಶೀಲ ಧಾಳಿ ನಡೆಸುತ್ತಿದ್ದಾರೆ ಅಮೆರಿಕಾನರಿಗೆ ಅತೀವ ಹಾನಿಯಾಗಿದೆಯೆಂದು ತಿಳಿದುಬರುತ್ತದೆ. ಒಕಿನಾವಾವು ಮಿತ್ರ ಸ್ವಾಧೀನವಾದರೆ ಜಾಪಾನಿನ ಫೋರ್ಮೋಸಾ, ಚೀನಾ ಕರಾವಳಿ ಮತ್ತು ಜಾಪಾನ್ ಮೂಲ ನೆಲದ ಮೇಲೆಯೂ ಸಮೀಪದಿಂದ ವಿಮಾನ ಧಾಳಿ ನಡೆಸಲನುಕೂಲವಾಗುವದೆಂಬುದರಿಂದಲೇ ಇಲ್ಲಿ ಇಂತಹ ಉಗ್ರ ಪ್ರತಿಭಟನೆ.

ಆಕಾಶ ಹೊಡೆತ

ಅಮೇರಿಕನ್ ಕೊತ್ತಳ ವಿಮಾನಗಳು ಟೋಕಿಯೋ, ನಾಗೋಯಾ, ಒಸಾಕಾ, ಕೋಬೆ ಮೊದಲಾದ ಜಾಪಾನೀ ಪ್ರಧಾನ ನಗರಗಳ ಮೇಲೆ ಸದಾ ಪ್ರಕಾಶದ ಸುರಿಸುತ್ತಿರುವ ಅಗ್ನಿ ವರ್ಷವು ಜಾಪ್ ಪ್ರಜೆಗಳ ಹೃದಯ ಕದಡಿದಂತಿದೆ. ಟೋಕಿಯೋ ಧಾಳಿಯಿಂದ ಚಕ್ರವರ್ತಿಗಳ ಅರಮನೆಗೆ ಮಹಾ ಜಖಮವಾಗಿದೆ ಇಡೀ ರಾಜಧಾನಿಯೇ ಉರಿದು ಹೋದಂತಿದೆ ಇದಕ್ಕಾಗಿ ಜಾಪಾನ್ ಪ್ರಧಾನಿಗಳು ಚಕ್ರವರ್ತಿಗಳೊಡನೆ ಅತಿ ವಿನಯದ ಕ್ಷಮೆಯಾಚಿಸಿ, ಪ್ರತೀಕಾರಕ್ಕಾಗಿ ಪ್ರಜೆಗಳೀಗ ಸಿದ್ಧರಾಗಿದ್ದಾರೆಂದು ಬಿನ್ನವಿಸಿಕೊಂಡಿದ್ದಾರೆ. ಈ ಆಕಾಶ ಹೊಡೆತದ ಮುಯ್ಯನ್ನು ಒಂದಲ್ಲೊಂದು ವಿಧದಿಂದ ತೀರಿಸಿಯೇ ಸಿದ್ಧವೆಂದು ಜಾಪಾನ್ ರೇಡಿಯೋ ಘೋಷಿಸಿದೆ. ಅಮೇರಿಕದ ಕೆಲವು ಕಡೆಗಳಲ್ಲಿ ಜಾಪಾನಿನ ಬೆಲೂನ್ ಬಾಂಬುಗಳು ಬಿದ್ದಿವೆ. ಕಾಡಿಗೆ ಬೆಂಕಿ ಹಚ್ಚುವ ಉದ್ದೇಶದಿಂದ ಅವುಗಳನ್ನಿಳಿಸಿರಬೇಕೆಂದು ಅಮೇರಿಕನ್ ಪ್ರಕಟಣೆ.

ಚೀನದಲ್ಲಿ

ಕೇಂಟೋನ್ ಮತ್ತು ಹೋಂಗ್ ಕೋಂಗಿನಿಂದ ಜಾಪಾನರು ಸೇನೆ ಹಿಂದೆಗೆದಿದ್ದಾರೆ. ಕ್ವಾಂಗ್ಸಿ, ಫೂಕಿನ್, ಹೂನಾನ್, ಹೊನಾನ್, ಚೆಕಿಯಾಂಗ್ ಪ್ರಾಂತ್ಯಗಳನ್ನು ಬಿಟ್ಟು ಹೋಗುತ್ತಿದ್ದಾರೆ. ಕ್ವಾಂಗ್ಸಿ ಪ್ರಾಂತ್ಯದ ರಾಜಧಾನಿಯಾದ ನಾನ್ನಿಂಗನ್ನು ಚೀನೀ ಸೇನೆ ವಶಪಡಿಸಿಕೊಂಡು ಜಾಪಾನರನ್ನು ಇಂಡೋ ಚೀನದ ಗಡಿ ವರೆಗೂ ಓಡಿಸಿಕೊಂಡು ಹೋಗಿದೆ. ಸಿಂಕಿಯಾಂಗಿನಲ್ಲಿ ಸರಕಾರೀ ಮತ್ತು ಕಮ್ಯೂನಿಸ್ಟರೊಳಗೆ ದೊಡ್ಡ ಗಲಭೆಯೆದ್ದಿದೆ. "ನಾಲ್ವರು ಲೋಕ ಪ್ರಮುಖರೂ [illegible]ನನ್ನು ಕಾದು ನೋಡುತ್ತಿದ್ದಾರೆ. ಈ ದಂಗೆಯು [illegible] ದೊಡ್ಡದು. ಇದರಲ್ಲಿ ರಷ್ಯಾದ್ದೊಂದು ಕಡೆ, ನಾವೊಂದು ಕಡೆ ಸೇರಬಹುದು" ಎಂದು ಅಮೇರಿಕನ್ ಲೇಖಕನು ಡ್ರ್ಯೂ ಪಿಯರ್ಸನರು ಬರೆದಿದ್ದಾರೆ

ರಶ್ಯಾ—ಜಾಪಾನ್ ಯುದ್ಧ?

ರಶ್ಯವೂ ಜಾಪಾನಿನ ಮೇಲೆ ಬೀಳಲಿದೆ ಎಂದೂ, ಸಿಂಕಿಯಾಂಗ್ ಮತ್ತು ಮಂಗೋಲಿಯಾಗಳ ವಿಸ್ತಾರ ಸರಹದ್ದನ್ನು ವಶಪಡಿಸಿಕೊಂಡು ಚೀನದ ಕಮ್ಯೂನಿಸ್ಟರನ್ನು ಉಪಕರಣವಾಗಿ ಮಾಡಿಕೊಂಡು ಅಲ್ಲಿಯ ಅಧಿಕಾರವನ್ನು ತನ್ನ ಅಂಕೆಗೆ ತರುವದೇ ಯುದ್ಧೋದ್ದೇಶವೆಂದೂ ಬಲವಾದ ಊಹೆ ಅಧ್ಯಕ್ಷ ಟ್ರೂಮೇನರ ಪ್ರತಿನಿಧಿ ಹೋಪ್‌ಕಿನ್ಸರು ಸ್ಟಾಲಿನರ ಭೇಟಿ ಪಡೆದಿದ್ದಾರೆ. "ರಶ್ಯವು ಜಾಪಾನಿನ ಮೇಲೆ ಯುದ್ಧ ಸಾರುವದನ್ನು ಆಂಗ್ಲೋ ಅಮೆರಿಕಾನರೇ [illegible] ರಶ್ಯದ ಮೂಲಕ ಜಾಪಾನು ಸಂಧಿ ಸೂಚನೆ ಕಳುಹಿದೆ, ಎನ್ನುವದು ಆಧಾರರಹಿತ ಪ್ರಲಾಪವಲ್ಲವೇ?" ಎಂದು ಜಾಪಾನೀ ವಕ್ತಾರನು ಪ್ರಶ್ನಿಸಿದ್ದಾನೆ

ಜಪಾನರ ಬಲಾಬಲ

ಜನವರಿಯಲ್ಲಿಯೇ ಜರ್ಮನಿಯು ನಾ[illegible]ತನಾಪ್ತ [illegible] ಯಂತ್ರಗಳೂ ತಜ್ಞರೂ ಸಬ್ ಮೆರಿನ್ ಮೂಲಕ ಜಾಪಾನಿಗೆ ಹೋಗಿರುವನೆಂದು ತಿಳಿದುಬರುತ್ತದೆ. ಜರ್ಮನ್ ಯು. ಬೋಟುಗಳಲ್ಲಿ ಹೆಚ್ಚಿನವು ಜಾಪಾನರನ್ನು ಸೇರಿರಬೇಕೆಂಬ ಊಹೆಯಿದೆ. ಜಾಪಾನ್ ಹೋರಾಟವು ಅಮೇರಿಕದ ಮುಂದಿರುವ ಅದ್ಭುತ ಸಾಧನೆಯೆಂದು ಟ್ರೂಮೇನರು ಕಾಂಗ್ರೆಸಿಗೆ ವರದಿಮಾಡಿದ್ದಾರೆ. ಜಾಪಾನಿನ 'ಅಂತರ್ಭಾಗ'ದಲ್ಲಿ ದೀರ್ಘ ಯುದ್ಧಕ್ಕೆ ಸಾಕಾಗುವಷ್ಟು ಸಾಮಗ್ರಿ ಉತ್ಪತ್ತಿ ಮಾಡುವ ಕಾರ್ಖಾನೆಗಳೂ ಕಚ್ಚಾಮಾಲುಗಳೂ ಧಾರಾಳವಿವೆಯೆಂದು ಅಮೆರಿಕದ ವಿದೇಶಾಧಿಕಾರಿ ಮಿ. ಗ್ರೂ ಎಚ್ಚರಿಸಿದ್ದಾರೆ. ಈ ಅಂತರ್ಭಾಗವೆಂದರೆ ಜಾಪಾನ್, ಫೋರ್ಮೋಸಾ ದ್ವೀಪ, ಕೊರಿಯನ್ ಭೂಸಂಧಿಯ ಭಾಗ ಮಂಚೂರಿಯಾ, ಮತ್ತು ಉತ್ತರ ಚೀನದ ಅಂಶ. ಜಾಪಾನರಿದು ವರೆಗೆ ಹಲವು ಬಾರಿ ಪರಾಭವಗೊಂಡರೂ 1941ರಲ್ಲಿ ಅವರು ಗೆದ್ದ ಈಸ್ಟ್ ಇಂಡೀಸ್, ಮಲಯಾ, ಫಿಲಿಪೈನ್ಸ್‌ಗಳ [illegible] 7[illegible] ಕಡಿಮೆ [illegible] ಕಳಕೊಂಡಿದ್ದಾರೆ. [illegible] ಎಣ್ಣೆ, ಲೋಹಗಳು, ರಬ್ಬರ್, ಅಕ್ಕಿ ಇತ್ಯಾದಿ ಎಲ್ಲವೂ ಧಾರಾಳವಿವೆ, ಬಾಂಬು ಹಾನಿಗೊಳಗಾಗದಂತೆ ಅವರ ಕಾರ್ಖಾನೆಗಳು ಹಳ್ಳಿ ಬಯಲುಗಳಲ್ಲಿ ಚದರಿಯೂ ನೆಲದಡಿಯಲ್ಲಿಯೂ ಇವೆ ಎಂದು ಈ ಅಮೆರಿಕಾಧಿಕಾರಿ ವರ್ಣಿಸಿದ್ದಾರೆ

ಉಡುಪಿ

ಸತ್ಕಾರ—ಇಲ್ಲಿಂದ ಮಂಗಳೂರಿಗೆ ಜಿಲ್ಲಾ [illegible] ಶ್ರೀ. [illegible] 27ರಲ್ಲಿ [illegible]

ವರ್ಗ— ಶ್ರೀ [illegible]

ಪ್ರಯಾಣಿಕರ ಗೋಳು—[illegible] 23 [illegible]

ಫ್ರಿಸ್ಕೋ ಸಮ್ಮೇಲನ

ಫ್ರಿಸ್ಕೋ ಸಮ್ಮೇಲನದಲ್ಲಿ ಮುಖ್ಯಚತು ರಾಷ್ಟ್ರಗಳೊಳಗಿನ ತೀವ್ರ ತಿಕ್ಕಾಟದ ವಿಷಯವಾಗಿದ್ದ ರಕ್ಷಣಾ ಸಮಸ್ಯೆಗಳ ಕುರಿತು ಈಗ ನಾಲ್ಕು ರಾಷ್ಟ್ರಗಳು ಒಮ್ಮತಕ್ಕೆ ಬಂದಿವೆ. ಹೊಸತಾಗಿ ಬಿಡುಗಡೆಹೊಂದಿದ ಆಶ್ರಿತ ಭೂಮಿಗಳ ಕುರಿತು ಹುಟ್ಟಿ ವಿವಾದಗಳ ಮೇಲೆ ಭದ್ರತಾ ಕೌನ್ಸಿಲಿನ ತೀರ್ಮಾನವನ್ನು ವಜಾಪಡಿಸುವ ವಿಶೇಷಾಧಿಕಾರ ಸಂಬಂಧ ಪಟ್ಟ ಆಯಾಯಾ ಪ್ರಮುಖ ರಾಷ್ಟ್ರಗಳಿಗಿರಬೇಕೆಂಬ ಸೂಚನೆಯ ಕುರಿತು ಬ್ರಿಟನ್, ಅಮೇರಿಕಾ, ಮತ್ತು ರಶ್ಯಗಳೊಳಗೆ ತೀವ್ರ ವಿವಾದವೆದ್ದಿತ್ತು; ಕೊನೆಗೆ ರಶ್ಯನ್ ವಾದವೇ ಗೆದ್ದಿದೆ.

ಮುನ್ಸಿಪಲ್ ಸಭೆ—ತಾ. [illegible] ಉಡುಪಿ ಮುನಿಸಿಪಲ್ ಕೌನ್ಸಿಲ್ [illegible] ಸಭೆಗೆ ಶ್ರೀ. ಆರ್. ಆರ್. [illegible] ಶ್ರೀ. ಕೆ. [illegible] [illegible]

ಮುನಿಸಿಪಲ್ [illegible] ಹುಡುಗಿಯರ ಶಾಲಾ ಕಟ್ಟಡದ ಸಹಾಯಾರ್ಥವಾಗಿ—ತಾ. [illegible] ಕನ್ನಡ ನಾಟಕವನ್ನು [illegible] ಶ್ರೀಗಳಾದ ಎ. ಲಕ್ಷ್ಮೀನಾರಾಯಣ ರಾವ್ ಮತ್ತು ನರಸಿಂಹ [illegible]

ನಗರ ವ್ಯವಹಾರ ಸ್ವಚ್ಛತೆಯ ಕಡೆಗೆ [illegible] (Gong Coolies) [illegible] ಶ್ರೀ. ಯು. ಎಸ್. [illegible] ಬರೆಯುತ್ತಾರೆ.

ಚಂದಾದಾರರಲ್ಲಿ—

ನವಯುಗದ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ. ಸಕಾಲದಲ್ಲಿ ಚಂದಾ ಹಣ ಬಾರದಿದ್ದಲ್ಲಿ ಕಳುಹಿಸಲ್ಪಡುವ ವಿ. ಪಿ. ಯನ್ನು ದಯಮಾಡಿ ಸ್ವೀಕರಿಸಬೇಕಾಗಿ ಬಿನ್ನಹ.

ಮೆನೇಜರ್.

ಈ ಸಂಬಂಧ ಸಮಸ್ಯೆಗಳು

ಅಮೇರಿಕನ್ ಯೋಧರು—

ಚೀನೀ ಮಹಿಳೆಯರೊಡನೆ.

ಚೀನದ ಶಾಂಘಾಯಿಯಿಂದ ಅಮೇರಿಕನ್ ಸ್ವಾಮ್ಯಲಕತ್ವದಲ್ಲಿ ಹೊರಡುತ್ತಿರುವ 'ಶಾಂಘಾಯಿ ಈವ್ನಿಂಗ್ ಪೋಸ್ಟ್ & ಮೆರ್ಕರಿ' ಪತ್ರಿಕೆಯ ಅಗ್ರ ಲೇಖನದಲ್ಲಿ ಬಂದಿರುವ ಟೀಕೆಯೊಂದು ಚೀನದಲ್ಲಿರುವ ಅಮೇರಿಕನ್ ಯೋಧರ ವರ್ತನೆಯ ಮೇಲೆ ಬೆಳಕಾಗಿ ಬಿದ್ದಿದೆ. ಅದರ ಸಾರಾಂಶ: 'ಯುನಿಫೋರ್ಮ್ ತೊಟ್ಟ ಪ್ರತಿಯೊಬ್ಬ ಅಮೇರಿಕಾನನೂ ವ್ಯಭಿಚಾರಿಯೆಂದೂ, ಅವನೊಡನೆ ಸಾರ್ವಜನಿಕ ಸ್ಥಳದಲ್ಲಿ ತಿರುಗುವ ಪ್ರತಿಯೊರ್ವ ಚೀನೀ ಮಹಿಳೆಯೂ ಸೂಳೆಯೆಂದೂ ಚಾಡಿಖೋರರು ಚೈನೀಯರ ಕಿವಿಯೂದುತ್ತಿರುವಂತೆ ಕಾಣುತ್ತದೆ. ಇಂತಹ ಬಣ್ಣಬಣ್ಣದ ಕಟ್ಟುಕಥೆಗಳಿಂದಾಗಿ ಚೀನೀಯರ ಮತ್ತು ಅಮೇರಿಕಾನರ ನಡುವೆ ದ್ವೇಷದ ಅಡ್ಡಗೋಡೆಯು ತೀವ್ರವಾಗಿ ಏಳುತ್ತಾ ಇದೆ; ಇದನ್ನಿನ್ನು ಕೆಡಹಲು ಹಲವು ವರುಷಗಳು ಬೇಕಾಗಬಹುದು. ಹೇಗಾಗಿ ಅಮೇರಿಕನ್ ಅಧಿಕಾರಿ ಅಥವಾ ಯೋಧನು ಗೌರವಾರ್ಹ ಚೀನೀ ಮಹಿಳೆಯೊಡನೆ ಬಹಿರಂಗ ಸ್ಥಳದಲ್ಲಿ ಸಂಚರಿಸುವದು ಪ್ರಕೃತ ಕ್ಷೇಮಕರವಲ್ಲ. ರಸ್ತೆಯಲ್ಲಿ ಅವರೊಟ್ಟಿಗಿರುವದನ್ನು ಕಂಡರೆ ನೂರು-ಸಂತಪ್ತ ಜನ ತಂಡವು ಅರ್ಭಟ, ಚೀರಾಟಗಳೊಂದಿಗೆ ಸುತ್ತುಗಟ್ಟಿ ಮಹಾ ಗೊಂದಲವೆಬ್ಬಿಸಿ, ಆ ಹುಡುಗಿಯ ಮುಖಕ್ಕೆ ಹೊಡೆದು, ಕೇಶವನ್ನು ಹರಿದು, ಏನೇನೋ ಮಾಡಿಬಿಡುತ್ತಾರೆ ಇವರು ಬಹು ತೀಕವಾಗಿ ತಮ್ಮವಳಾದ ಅಸ್ತ್ರೀಯ ಮೇಲೇನೇ ಪ್ರತೀಕಾರ ಸಾಧಿಸುತ್ತಾರೆ. ಆದರೆ ಒಮ್ಮೊಮ್ಮೆ ಅಮೇರಿಕಾನರು ತಮ್ಮ ಜತೆಗಾತಿಯರ ಮಾನವುಳಿಸಲು ಪ್ರಯತ್ನಿಸುವಾಗ ಅವರೊಳಗೆ ಹೋರಾಟವಾಗುವದಿದೆ. ಇಂತಹ ಪರಿಸ್ಥಿತಿಯು ಎರಡು ಮಿತ್ರ ರಾಷ್ಟ್ರಗಳನ್ನು ಇಬ್ಭಾಗಿಸಬಹುದಾದ್ದರಿಂದ ಜಾಪಾನು ಹರ್ಷಗೊಂಡಿದೆ. ಈಸಂಗತಿಯು ಚೀನಮತ್ತು ಅಮೇರಿಕದ ಮುಖ್ಯಾಧಿಕಾರಿಗಳ ಲಕ್ಷ್ಯಕ್ಕೇಗ ಹೋಗಿದೆ. ಅಮೇರಿಕನ್ ಯೋಧರಿಂದಾಗಿ ಹೆಸರು ಹೊಂದಿದ ಒಂದು ರೆಸ್ಟೋರೆಂಟನ್ನು ಆ ಸ್ಥಳದಿಂದ ವರ್ಗಾಯಿಸಬೇಕಾಯಿತು. ಅಮೇರಿಕನ್ ಯೋಧರೊಡನೆ ಸಂಚಾರಕ್ಕೆ ಹೋದ ಚೀನೀ ಮಹಿಳೆಯರನ್ನು ಹೊರಗಡೆ ಸೇರಿದ ಜನಸಂದಣಿ ಮುತ್ತಿಗೆ ಹಾಕಿ ಅವಮಾನಿಸಿದುದೇ ಇದಕ್ಕೆ ಕಾರಣ".

ಬ್ರಿಟನ್ ಅಮೇರಿಕಗಳು—

ಸೋವಿಯೆಟ್ ರಶ್ಯದೊಡನೆ.

'ಸ್ಟಾಲ್ಲಿನರಿಗೆ ಬೇಕಾದುದನ್ನೆಲ್ಲಾ ಆವರೀ ಬಾರಿ ಸಂಪಾದಿಸಿಯೇ ತೀರುವರು ಅವರ ಬೇಡಿಕೆಗಳು ನ್ಯಾಯವೆಂಬುದರಿಂದಲೇ ಅಲ್ಲ—ಅವನ್ನು ಮನ್ನಿಸದೆ ಉಪಾಯವಿಲ್ಲವೆಂಬುದರಿಂದ' ಎಂದು ಯುರೋಪಿನ ಚಿಂತಕರು ಅಭಿಪ್ರಾಯ ಪಡುತ್ತಿದ್ದಾರೆ. ಯುರೋಪು ಯುದ್ಧದ ಆದಿಗಲ್ಲಾಗಿದ್ದ ಪೋಲೆಂಡು ಈಗಲೂ ಮಿತ್ರ ಪಾಳಯದೊಳಗಿನ ಕಾಳಗದ ಕಲ್ಲಾಗಿದೆ. ಟ್ರೀಸ್ಟೆ ಸ್ಥಳ ವಿವಾದದಲ್ಲಿ ರಶ್ಯ ಮೌನಧಾರಣೆ ವಹಿಸಿದೆಯಾದರೂ ಅದರ ಸಹಾನುಭೂತಿಯು ಮಾರ್ಶಲ್ ಟಿಟೋರಕಡೆಗಿದೆ. ಆಸ್ಟ್ರಿಯಾದ ಬಹ್ವಂಶವನ್ನು ಆಕ್ರಮಿಸಿಕೊಂಡು ಅಲ್ಲಿ ತಾತ್ಕಾಲಿಕ ಆಸ್ಟ್ರಿಯಾ ಸರಕಾರವನ್ನು ರಶ್ಯವು ಸ್ಥಾಪಿಸಿದೆಯಾದರೂ ಬ್ರಿಟನಿನ ಪರವಾಗಿ ಅಲ್ಲಿಯೊಂದು ಅಧಿಕಾರವಿದೆ ಎಂಬ ಪ್ರಕಟಣೆ ಹೊರಡುತ್ತಿದೆ. ಜನರಲ್ ಅಲೆಗ್ಝಾಂಡರರು ಈ ಕುರಿತು ತನ್ನೊಂದು ಹೇಳಿಕೆಯಲ್ಲಿ ರಶ್ಯವನ್ನು ಅಲಕ್ಷಿಸಿ, ಬ್ರಿಟಿಷರ ಗೊಂಬೆಸರಕಾರವೇ ಆಸ್ಟ್ರಿಯದ ಅಧಿಕಾರಿಯೆಂಬಂತೆ ಮಾತಾಡಿದ್ದಾರೆ. ಫ್ರಾನ್ಸಿನ ಡಿಗೋಲೆ ಸರಕಾರಕ್ಕೆ ರಶ್ಯದ ಮಂಜೂರಾತಿ ದೊರೆತಿದೆ; ಆಂಗ್ಲೋ ಅಮೇರಿಕಾನರೊಪ್ಪಿಕೊಂಡಿಲ್ಲ ಸ್ಪೈಯಿನಿನ ಫ್ರಾಂಕೋ ಸರಕಾರದ ಮೇಲೆ ರಶ್ಯಾ ಮತ್ತು ಫ್ರಾನ್ಸುಗಳಿಗೆ ತೀವ್ರ ದ್ವೇಷವಿರುವಾಗ ಚರ್ಚಿಲ್ ಸರಕಾರಕ್ಕೆ ಸಹಾನುಭೂತಿಯಿದೆ ಫ್ರಾನ್ಸಿಗೆ ದ್ರೋಹ ಮಾಡಿ ನಾಜಿಗಳೊಡನೆ ಸಹಕರಿಸಿದ್ದ ಲಾವಾಲ್ ಈಗ ಸ್ಪೈಯಿನಿಗೋಡಿ ಆಶ್ರಯ ಪಡೆದಿದ್ದಾನೆ ಅವನನ್ನು ಬಂದ ವಿಮಾನ ಹೊರಟ ಸ್ಥಳಕ್ಕೇನೇ ಕಂದಿಳಿಸತಕ್ಕದ್ದೆಂದು ಡಿಗೋಲೆ ಸರಕಾರವು ಫ್ರಾಂಕೋ ಸರಕಾರವನ್ನು ಎರಡೆರಡು ಬಾರಿ ಕೇಳಿಕೊಂಡರೂ ಉತ್ತರ ಬಂದಿಲ್ಲ. ಸ್ಪೈಯಿನಿನ ಕಮ್ಯೂನಿಸ್ಟರನ್ನು ರಶ್ಯ ಮತ್ತು ಫ್ರಾನ್ಸುಗಳು ಸಮರ್ಥಿಸುತ್ತಿವೆ. ಅಮೇರಿಕನರು ತಮ್ಮ ಸ್ಥಳವೆಂದು ಹೇಳಿದರೂ ಕೇಳದೆ ಡಿಗೋಲೆಯ ಸೇನೆಯು ಜರ್ಮನಿಯ ಸ್ಟಟ್‌ಗರ್ಟ್‌ನಂತಹ ಬಂದರವನ್ನು ಗಟ್ಟಿ ಹಿಡಿದಿದೆಯಲ್ಲದೆ ಇಟಲಿಯ ಕೆಲವೆಡೆಗಳಲ್ಲೂ ಇಂತಹ ಮೇಲಾಟ ನಡೆದಂತಿದೆ. ಈ ಕುರಿತು ಪ್ರಥಮತ: ಎದ್ದಿದ್ದ ಕ್ಷೋಭೆಯು ಈಗ ತನ್ನಂತೆ ತಣ್ಣಗಾಗಿದೆ. ಜಪಾನ್ ಯುದ್ಧದಲ್ಲಿ ರಶ್ಯ ಮಾಡುವ ಆಟವಾವುದೆಂಬುದು ಅಮೇರಿಕಾಂಗ್ಲರಲ್ಲಿ ಒಳಗುದಿಯುಂಟು ಮಾಡಿರುವ ಸಮಸ್ಯೆ. ಬೋಲ್ಶೆವಿಕರನ್ನು ತಡೆಗಟ್ಟಲು ಮಿತ್ರ ಸೇನೆಗಳನ್ನು ಕಳುಹಿದ್ದ—ಅಮೇರಿಕವು ಲೇಂಡ್‌ಲೀಸಿನನ್ವಯ ರಶ್ಯಕ್ಕೆ ಕಳುಹಿದ್ದ ವಿಮಾನ ಸರಬರಾಯಿ ಹಡಗನ್ನು ಸ್ಕೋಟ್ಲೆಂಡಿನಲ್ಲಿ ನಿಲ್ಲಿಸಿ ತಾನೇ ಉಪಯೋಗಿಸಿಕೊಂಡ ಚರ್ಚಿಲ್ಲರ ಮೇಲೆ ಸ್ಟಾಲಿನರಿಗೆ ಅಪನಂಬಿಕೆಯಿದೆ ಎಂಬುದನ್ನು ಅಮೇರಿಕದ ಪ್ರಸಿದ್ಧ ಲೇಖಕ ಪಿಯರ್ಸನರು ಬಹಿರಂಗ ಪಡಿಸಿದ್ದಾರೆ. ಯಾಲ್ಟಾದಲ್ಲಿ ಚರ್ಚಿಲ್ಲರ ಬಲೆಯೊಳಗೆ ರೂಸವೆಲ್ಟರು ಅನಿವಾರ್ಯವಾಗಿ ಬಿದ್ದುದೂ, ಬ್ರಿಟಿಷರು ಭೂಮಧ್ಯ ಸಮುದ್ರ ರಾಷ್ಟ್ರಗಳಲ್ಲಿ ಕುಹಕ ಸ್ವಾರ್ಥ ಸಾಧಿಸಿದುದೂ ಸ್ಟಾಲಿನರಲ್ಲಿ ಜಿಗುಪ್ಸೆಯನ್ನು ನಿರ್ಮಿಸಿದೆಯೆಂದು ಅವರನ್ನುತ್ತಾರೆ. ಈ ಬಾರಿಯ ತ್ರಿಮೂರ್ತಿ ಸಮ್ಮೇಳನಕ್ಕೆ ಟ್ರುಮೇನ್, ಚರ್ಚಿಲ್ಲನು ಆತುರಗೊಂಡಿದ್ದರೂ ಸ್ಟಾಲಿನರು ತಯಾರಿರಲಿಲ್ಲ

ಫ್ರೆಂಚ್ ಯೋಧರು—

ಸಿರಿಯಾ ಲೆಬನಾನಿನಲ್ಲಿ.

ಬ್ರಿಟನ್, ಅಮೇರಿಕಾ ಮತ್ತು ಯುಗೋಸ್ಲೋವಿಯಗಳೊಳಗೆ ಪ್ರಾರಂಭವಾದ ಟ್ರೀಸ್ಟೆ ಸ್ಥಳವಿವಾದವೀ ತನಕ ತೀರ್ಮಾನ ಹೊಂದಿಲ್ಲ. ಜನರಲ್ ಅಲೆಗ್ಝಾಂಡರರು ಆ ಕಡೆಗೆ ಸೇನೆ ಸಾಗಿಸಿದ ಸುದ್ದಿಯಿದೆ. ಮಾರ್ಶಲ್ ಟಿಟೋ ಕೂಡ ಅಲ್ಲಿಯ ಸೇನಾ ಬಲವನ್ನು ಹೆಚ್ಚಿಸಿಕೊಂಡ ವಾರ್ತೆ ಬಂದಿದೆ. ಈಗ ಅಲ್ಲಿಯ ಪ್ರಶ್ನೆ ಸದ್ಯಕ್ಕೆ ನನೆಗುದಿಗೆ ಬಿದ್ದಂತಿದೆ. ಆದರೆ ಪುಟ್ಟ ಅರಬ ದೇಶಗಳಾದ ಲೆಬನಾನ್ ಮತ್ತು ಸಿರಿಯಾಗಳಲ್ಲಿ ಫ್ರಾನ್ಸಿನ ವಿರುದ್ಧ ದೊಡ್ಡ ಗೊಂದಲವೆದ್ದಿದೆ. ಸಿರಿಯಾ, ಲೆಬನಾನುಗಳ ಮೇಲೆ ಫ್ರಾನ್ಸಿಗೆ ಸಾಮ್ರಾಜ್ಯ ರಿಯಾಯತಿಗಳಿವೆ ಅವುಗಳನ್ನು ಒತ್ತಾಯದಿಂದ ಹೇರಲಿಕ್ಕಾಗಿ ಫ್ರೆಂಚ್ ಸೇನೆಗಳ ಸರಬರಾಯಿ ಸಾಗಹತ್ತಿದುದೇ ಈ ಗೊಂದಲಕ್ಕೆ ಕಾರಣ. ಅಲ್ಲಿಯ ಅರಬರು ಮುಷ್ಕರ ಪ್ರದರ್ಶನಗಳನ್ನಾರಂಭಿಸಿದ್ದಾರೆ. ಫ್ರೆಂಚ್ ಸೇನೆಗಳ ನಿರ್ದಾಕ್ಷಿಣ್ಯ ಹೊಡೆತದಿಂದ 6000ಕ್ಕೂ ಮಿಕ್ಕಿ ಅರಬರು ಮಡಿದರೆಂದು ತಿಳಿದುಬರುತ್ತದೆ ಆ ಭಾಗದ ಅರಬಿ ದೇಶಗಳೆಲ್ಲಾ ಪರಸ್ಪರ ಸಹಕರಿಸಿ ವರ್ತಿಸುವದಕ್ಕಾಗಿ 'ಅರಬರ ರಾಷ್ಟ್ರ ಸಂಘ'ವೊಂದು ಇತ್ತೀಚೆಗೆ ಸ್ಥಾಪನೆಗೊಂಡಿದೆ ಈಜಿಪ್ಟ, ಯೆಮಾನ್, ಟ್ರಾನ್ಸ್‌ಜೋರ್ಡನ್, ಇರಾಕ್, ಸಾವುದೀ ಅರೇಬಿಯಾ ಸಿರಿಯಾ, ಲೆಬನಾನ್ ರಾಷ್ಟ್ರಗಳು ಈ ಸಂಘದ ಸದಸ್ಯರಾಗಿವೆ. ಆದ್ದರಿಂದ ಫ್ರೆಂಚ್ ಆಕ್ರಮಣದ ವಿರುದ್ಧವಾಗಿ ಅವೆಲ್ಲಾ ರಾಷ್ಟ್ರಗಳೂ ಉರಿದು ಬಿದ್ದಿವೆಯಲ್ಲದೆ ಫ್ರೆಂಚರು ಹೆಜ್ಜೆ ಹಿಂದಿಡದಿದ್ದಲ್ಲಿ ಎಲ್ಲಾ ಅರಬ ರಾಷ್ಟ್ರಗಳೂ ಒಟ್ಟಾಗಿ ಪ್ರತಿ ಕ್ರಿಯೆಗಾರಂಭಿಸುವ ಅಪಾಯವಿದೆ. ಈಗ ಸಿರಿಯಾ ಲೆಬನಾನ್ ಮತ್ತು ಫ್ರಾನ್ಸ್ ಸರಕಾರಗಳೊಳಗೆ ಸಂಧಾನ ಮಾತುಕತೆ ನಡೆದಿದೆ ಭೂಮಧ್ಯ ಸಮುದ್ರದ ಬ್ರಿಟಿಷ್ ಸೇನಾ ಸಿರಿಯಾದ ಪ್ರಧಾನಿಗಳೊಡನೆ ಮಾತುಕತೆ ನಡೆಸಿದ್ದಾರೆ. ಆ ಭಾಗದ ಫ್ರಾನ್ಸ್ ಮುಖ್ಯಾಧಿಕಾರಿಯಾದ ಜನರಲ್ ಬೆಯ್ನೆಟರು ಮುಂದಿನ ಸೂಚನೆ ಇದಿರುಗಡೆಯಿಂದಲೇ ಬರಬೇಕೆಂದಿದ್ದಾರೆ. ಸಿರಿಯಾ ಮುಷ್ಕರವೂ, ಫ್ರೆಂಚ್ ಸೇನೆಗಳ ಧಾಳಿಯೂ ಯಥಾ ಪ್ರಕಾರ ಸಾಗಿದೆ ಪರಿಸ್ಥಿತಿ ವಿಷಮವಾಗಿದೆ.

(೫ನೇ ಪುಟದಿಂದ ಮುಂದುವರಿದುದು.)

"ಚುನಾವಣಾ ಬಿರುಗಾಳಿ ನಿಂತುಕೊಳ್ಳಲಿ—ಆಗ ಭವಿಷ್ಯ ಹೇಗೆಂಬುದನ್ನು ತೀರ್ಮಾನಿಸಬೇಕಲ್ಲದೆ ಇಂತಹ ಸಂದರ್ಭ ಸಾಧಕ ವಾಗ್ದಾನಗಳೇ ಸರ್ವಸ್ವವೆನ್ನಬಾರದು" —ಎನ್. ಟಿ. ಮಾಸ್ಟರ್.

"ನನಗೆ ಬಹಳ ಸಂತೋಷವಾಗಿದೆ. ಉತ್ತಮೋಪಾಯವೆಂದರೆ ಭಾರತದ ಸ್ವಾತಂತ್ರ್ಯವನ್ನು ಜಾಹೀರು ಮಾಡುವದೊಂದೇ"-ಮೂಂಜೆ

"ಬೆವಿನರ ಆಶ್ವಾಸನೆಗೆ ನನ್ನ ಸುಸ್ವಾಗತ"-ಸರ್. ನರಂಗ್.

"ಮುಸಲ್ಮಾನರ ಬಹುಮತವಿರುವ ಪ್ರಾಂತ್ಯಗಳಿಗೆ ಪ್ರತ್ಯೇಕ ರಾಷ್ಟ್ರವಾಗುವ ಸ್ವಾತಂತ್ರ್ಯ ದೊರೆತರೆ ಈ ಹೇಳಿಕೆಯನ್ನು ಸ್ವಾಗತಿಸಬಹುದು"—ಫರ್ಝ್ಲ್ಯಾರ್ ಅಲಿ

"ಬ್ರಿಟನಿನ ಯಾವ ಪಕ್ಷವನ್ನು ಆಧರಿಸಿರುವದೂ ವ್ಯರ್ಥವೆಂಬುದು ನಮ್ಮ ಹಿಂದಿನ ಅನುಭವಗಳಿಂದ ಸ್ಪಷ್ಟ ಆದರೆ 'ಎಲ್ಲ ಅಥವಾ ಏನೂ ಬೇಡ' ಎಂಬ ನಮ್ಮ ಧೋರಣೆಯನ್ನು ಬಿಟ್ಟು ಪರಿಸ್ಥಿತಿಗನುಸಾರವಾಗಿ ನಾವು ವರ್ತಿಸಬೇಕು"— ಶ್ರೀಪ್ರಕಾಶ,

ಲೇಬರ್ ಪಕ್ಷದ ಧೋರಣೆಗೆ ಮಿಜಿನ್ನರು ವಿರೋಧವಿದ್ದಾರೆಂದು ಪ್ರಕಟವಾಗಿದೆ.

ಇವೆಲ್ಲಾ ಚುನಾವಣಾ ಕಾಲದ ಮೋಹನಾಸ್ತ್ರಗಳೆಂಬ ಅಭಿಪ್ರಾಯದಿಂದ ಗಾಂಧೀಜೀ ಮೌನ ವಹಿಸಿದ್ದಾರೆ.

ESTD. 1926
CROWN RUBBER STAMP Co.
MFRS OF
RUBBER STAMPS & ENGRAVERS
BALMATTA ROAD MANGALORE S.K.

Approved firm by the Govt. of Mysore, Certified by the Agent of the Govt. of India in Ceylon.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 29—5—1945ರಿಂದ

ಪ್ರಕಾಶ ಪಿಕ್ಚರ್ಸನವರ

ಪ್ರೇಮ ಅದಿಬ್ ಮತ್ತು ಜ್ಯೋತಿ ನಟಿಸಿರುವ

ದರ್ಶನ್

ಬರುವುದು:— ಅಂಜಾನ್

ಅನಂತರ: ರಣಜಿತ್ ಚಿತ್ರ-ಸೈಗಲ್ ಖುರ್ಶಿದ್ ನಟಿಸಿರುವ

ತಾನ್‌ಸೇನ್

ಬೇಕು

'ಅಂತರಂಗ'ಕ್ಕೆ ಏಜಂಟರಿಲ್ಲದ್ದಲ್ಲಿ ಏಜಂಟರು ಬೇಕಾಗಿದ್ದಾರೆ ಶರ್ತಗಳಿಗೆ ಬರೆಯಿರಿ.

ಅಂತರಂಗ ಆಫೀಸು, ಉಡುಪಿ.

ಮೈಸೂರು ಪತ್ರ

ವಿಶೇಷಾಧಿವೇಶನ ಮುಂದುವರಿಸಿತು—ಮೈಸೂರು ಜಿಲ್ಲಾಧಿಕಾರಿಗಳು ಮೈಸೂರು ನಗರದ ಸುತ್ತಮುತ್ತಲು ಭಾಗದಲ್ಲಿ ಎಲ್ಲಿಯೂ ಸಭೆ, ಸಮ್ಮೇಳನ, ಮೆರವಣಿಗೆ ನಡೆಸಬಾರದೆಂದು ಹಾಕಿದ ಪ್ರತಿಬಂಧಕಾಜ್ಞೆಯು ಮೀರಿ ಮೈಸೂರು ನಗರದಲ್ಲಿ ೯ ಮತ್ತು ೧೦ನೇ ತಾರೀಕುಗಳಲ್ಲಿ ನಡೆಯಬೇಕಾಗಿದ್ದ ವಿಶೇಷಾಧಿವೇಶನ ಮುಂದೂಡಲ್ಪಟ್ಟಿತು.

ನ್ಯಾಯಾಂಗ ಸಚಿವರ ಭೇಟಿ—ಮೈಸೂರು ಜಿಲ್ಲಾಧಿಕಾರಿಗಳ ಆಜ್ಞೆಯ ವಿಚಾರವಾಗಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರೂ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರೂ ೧೯ನೇ ತಾರೀಕಿನ ದಿನ ಸಚಿವರ ಭೇಟಿ ಮಾಡಿದ್ದರು.

ನಾಯಕರ ಸಮಾಲೋಚನೆ—ಮೈಸೂರು ಕಾಂಗ್ರೆಸ್ಸಿನ ನಾಯಕರು ಜಿಲ್ಲಾಧಿಕಾರಿಗಳ ಆಜ್ಞೆ ಮತ್ತು ನ್ಯಾಯಾಂಗ ಸಚಿವರ ಭೇಟಿ ಇವುಗಳನ್ನು ದೀರ್ಘವಾಗಿ ಚರ್ಚಿಸಿ ಅಧಿವೇಶನವನ್ನು ಸದ್ಯಕ್ಕೆ ಮುಲ್ತವಿಸಿದರು. ಮುಂದಿನ ತಿಂಗಳು ತುಮಕೂರಿನಲ್ಲಿ ನಡೆಸುವುದೆಂದು ಗೊತ್ತಾಗಿದೆ.

ರಾಜಿನಾಮೆ—ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಪಾರ್ಲಿಮೆಂಟರಿ ಸಮಿತಿ ಸದಸ್ಯರಾದ ಶ್ರೀ ಎಸ್. ಸಿ. ತಿಮ್ಮಾರೆಡ್ಡಿಯವರು ತಮ್ಮ ಎರಡೂ ಅಧಿಕಾರ ಸ್ಥಾನಗಳಿಗೆ ರಾಜಿನಾಮೆಯಿತ್ತಿರುವರು.

ಜಿಲ್ಲಾ ಸಮ್ಮೇಳನ—ಮೈಸೂರು ಜಿಲ್ಲಾ ಸಮ್ಮೇಳನವು ೨೧ ಮತ್ತು ೨೨ನೇ ತಾರೀಕುಗಳಲ್ಲಿ ನ್ಯಾಯಾಂಗ ಸಚಿವರಾದ ಶ್ರೀ ... ಪುಲ್ಲಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿ ಹಲವು ವಿಷಯಗಳನ್ನು ಚರ್ಚಿಸಿತು.

ಜಿಲ್ಲಾ ಬೋರ್ಡು ಸಭೆ—ಮೈಸೂರ ಜಿಲ್ಲಾ ಸಂಸ್ಥೆಯ ಸಾಧಾರಣ ಸಭೆಯು ೨೩ನೇ ತಾರೀಕು ಜಿಲ್ಲಾ ಬೋರ್ಡು ಭವನದಲ್ಲಿ ಅಧ್ಯಕ್ಷರಾದ ಶ್ರೀ ಕೆ. ಸಿ. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಜಿಲ್ಲಾ ಆಯವ್ಯಯವನ್ನು ನಿರ್ಧರಿಸಿತು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O P No 36, 1945.

ಜಾನಕಿ-ಮ್ಯಾನೇಜರ್ ರಾಮಕೃಷ್ಣ ಭಟ್ರ ಮಗಳು ವ ವೆಂಕಟ್ರಮಣ ತಂತ್ರಿಯ ವಿಧವೆ ... ಚಿಂತಕ-ತಂದೆ ಸಹಿ ರಾಮಕೃಷ್ಣ ಭಟ್ರು ವಾಸು ಭಟ್ರ ಮಗ ಉಡುಪಿ ತಾಲ್ಲೂಕು ... ಗ್ರಾಮ ಅರ್ಜಿದಾರಳು

ಮತ್ತು

(1) ಸುಬ್ರಾಯ ತಂತ್ರಿ ... ತಂತ್ರಿಗಳ ಮಗಾ ವ ಶ್ರೀನಿವಾಸ ತಂತ್ರಿಗಳ ದತ್ತ ಮಗ (2) ನಾರಾಯಣ ತಂತ್ರಿ (3) ಗೋಪಾಲ ತಂತ್ರಿ (4) ವಿಠಲ ತಂತ್ರಿ (5) ಶ್ರೀನಿವಾಸ ತಂತ್ರಿ 1ನೇಯವನ ಮಕ್ಕಳು (6) ಲಕ್ಷ್ಮಿ ಅಮ್ಮ 1ನೇಯವನ ಹೆಂಡತಿ ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದ ಮಠಂಬು ಎದ್ರಿರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದ್ರೆ

ಅರ್ಜಿದಾರಳ ಗಂಡ ಮೃತ ವೆಂಕಟ್ರಮಣ ತಂತ್ರಿಯವರ ಬಾಬ್ತು Travencore State Life Insurance Company ಯಲ್ಲಿರುವ ರೂಪಾಯಿ 1000 ದ ನಂಬ್ರ 6002 ನೇ ಪೋಲಿಸಿ ಹಣವನ್ನು ಬೋನಸ್ ಸಮೇತ ವಸೂಲು ಮಾಡುವರೆ ತನ್ನ ಹೆಸರಲ್ಲಿ ವಂಶಪಾರಂಪರ್ಯ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 7-6 45ಕ್ಕೆ ಮುಟ್ಟಿದೆ ಈ ಕುರಿತು ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟು ಮುಂದೆ ಪೂರ್ವಾಹ್ನ 11 ಗಂಟೆಗೆ ಹಾಜರಾಗಿ ಆಕ್ಷೇಪ ಮಾಡಿಕೊಳ್ಳಬಹುದು

K Ramakrishna Rao.
Vakil for Petitioner.

Udipi
Dated 28-5-1945

ದಕ್ಷಿಣ ಕನ್ನಡಕ್ಕೆ ಧಾನ್ಯ ಸರಬರಾಯಿ ಮಾಡುವ ಕುರಿತು

ಸಿವಿಲ್ ಸಪ್ಲೈಸ್ ಕಮಿಶನರರ ಆಶ್ವಾಸನೆ.

ನಮ್ಮ ವಿಜ್ಞಾಪನೆಯನ್ನು ಮನ್ನಿಸಿ ಇಲ್ಲಿಯ ಆಹಾರ ಪರಿಸ್ಥಿತಿಯ ಪ್ರತ್ಯಕ್ಷ ಪರಿಶೀಲನೆ ನಡೆಸಲು ಬಂದಿದ್ದ ನಾಗರಿಕ ಸರಬರಾಯಿ ಕಮಿಶನರಾದ ಮಿ ಡಿಕ್ಸನ್ನರೊಡನೆ ಶ್ರೀಗಳಾದ ಎಮ್ ತಿಮ್ಮಪ್ಪ, ರಾವ್ ಸಾಹೇಬ್ ರಂಗನಾಥ ಪೂಂಜ, ಕೆ ಬಿ. ಜಿನರಾಜ ಹೆಗ್ಡೆ ಮತ್ತು ನಾನು ನಿನ್ನೆ ಸಂಭಾಷಣೆ ನಡೆಸಿದೆವು ಇಲ್ಲೀಗ ಮುಂದಿನ ಮೂರು ತಿಂಗಳುಗಳಿಗೆ ಸಾಕಾಗುವಷ್ಟು ಅಕ್ಕಿಯಿದೆ ಪ್ರಾಯಸ್ಥರಿಗೆ ದಿನಕ್ಕೊಂದೂವರೆ ಪಾವು ಅಕ್ಕಿ ಮತ್ತು ಅರ್ಧ ಪಾವು ಗೋಧಿ ಮತ್ತು ರಾಗಿಯಂತೆಯೂ, ಮಕ್ಕಳಿಗೆ ಅವುಗಳ ಅರ್ಧಾಂಶಿಯಂತೆಯೂ ಹಂಚಲು ಬೇಕಾಗುವಷ್ಟು ಅಕ್ಕಿ, ಗೋಧಿ, ರಾಗಿಯನ್ನು ಸರಕಾರವು ಸರಬರಾಯಿ ಮಾಡುವದೆಂದು ಕಮಿಶನರರು ನಮಗೆ ಆಶ್ವಾಸನೆ ಕೊಟ್ಟರು. ಕಾಸರಗೋಡಿನಲ್ಲಿ ಕಡಿಮೆ ಮಾಡಲ್ಪಟ್ಟ ರೇಶನ್ ಪ್ರಮಾಣವನ್ನು ಮೇಲಿನ ಮಟ್ಟಕ್ಕನುಸರವಾಗಿ ಕೂಡಲೇ ಪರಿಷ್ಕರಿಸಬೇಕೆಂದು ಅವರು ಆಜ್ಞಾಪಿಸಿದ್ದಾರೆ ಮಲಬಾರಿನಲ್ಲಿ ಉತ್ಪತ್ತಿಯ ಶೇಕಡಾ 33ರಷ್ಟು ಅಕ್ಕಿ ಸಂಗ್ರಹವಾಗಿರುವಾಗ ಈ ಜಿಲ್ಲೆಯಲ್ಲಿ ಇದುವರೆಗೆ, ಅಂದಾಜು ಕಟ್ಟಿದ ಒಟ್ಟು ಉತ್ಪತ್ತಿಯ ಶೇಕಡಾ 2ರಷ್ಟು ಅಕ್ಕಿ ಮಾತ್ರ ಸಂಗ್ರಹಿಸಲ್ಪಟ್ಟಿದೆಯೆಂದು ಕಮಿಶನರರ ಅಂಬೋಣ ಕೆಲವು ಜಮೀನ್ದಾರರು ತಮ್ಮ ಉಳಿತಾಯದ ಅಕ್ಕಿಯನ್ನೆಲ್ಲಾ ಸ್ಟೋರುಗಳಿಗೆ ಒಪ್ಪಿಸಿಲ್ಲವೆಂಬ ಆರೋಪವಿದೆಯಾದ್ದರಿಂದ ಅವರೆಲ್ಲರೂ ತಾವು ಉಳಿಸಬಲ್ಲ ಎಲ್ಲಾ ಅಕ್ಕಿಯನ್ನೂ ಸ್ವಯಂಪ್ರೇರಣೆಯಿಂದ ತಂದೊಪ್ಪಿಸಬೇಕೆಂದು ಕಮಿಶನರರಂದಿದ್ದಾರೆ.

ತಾ 26-5-45 —ಎ ಬಿ ಶೆಟ್ಟಿ

ಕುಂದಾಪುರ—ಇಲ್ಲಿಯ ... ಕಮಿಟಿಯ ಸದಸ್ಯರ ... ತಾ 27-5-45ರಲ್ಲಿ ಜರಗಿದ ... ಜನತೆಯ ... ಜನತೆಯ ಸಹಾಯಾರ್ಥ ... ರೂ 1400 0 0 ... ರೂ 600 0 0 ... ವಸೂಲು ಪಡೆದಿರುತ್ತಾರೆ

ಬ್ರಿಟನಿನ ಮಹಾ ಚುನಾವಣೆ.

(೪ನೇ ಪುಟದಿಂದ ಮುಂದುವರಿದುದು)

ಜಾರಕ್ಕೆ ಳಿದಿದ್ದಾರೆ. ಅವರ ಪಕ್ಷ ಸಮ್ಮೇಲನದಲ್ಲಿ ಪೂರ್ಣ ವಿಜಯದ ಅಚಲ ಭರವಸ ವ್ಯಕ್ತವಾಗಿದೆ ಪರಾವಲಂಬನೆಯ ಆವಶ್ಯಕತೆ ಬೀಳದಷ್ಟು ಪ್ರಬಲ ಬಹುಮತ ದೊರೆಯುವದೆಂಬ ಅಭೇದ್ಯ ಆತ್ಮ ವಿಶ್ವಾಸದಲ್ಲಿ ಕೂಲಿಗಾರ ಪಕ್ಷ ಪ್ರಮುಖರಿದ್ದಾರೆ 640 ಸ್ಥಾನಗಳಲ್ಲಿ ವಿವಿಧ ಪಕ್ಷೀಯರು 2000 ಉಮೇದ್ವಾರಿಗಳು ಮುಂದೆ ಬಂದಿದ್ದಾರೆ ಕನ್ಸರ್ವೇಟಿವ್ ಮತ್ತು ಲೇಬರ್ ಪಕ್ಷದ ಐನೂರೈನೂರು ಉಮೇದ್ವಾರಿಗಳಿದ್ದಾರೆ. ಮೂರು ಪ್ರಬಲ ಪಕ್ಷಗಳ ಪೈಕಿ ಏನೂ ಚುನಾವಣಾಸಿದ್ಧತೆಯಲ್ಲಿರದ ಪಕ್ಷವೆಂದರೆ ಲಿಬರಲ್. ಟೋರಿ ಉಮೇದ್ವಾರಿಗಳ ಪೈಕಿ ಅರೆವಾಸಿಯಷ್ಟು ಸೇನೋದ್ಯೋಗಿಗಳು. ಲೇಬರ್ ಪಕ್ಷದಲ್ಲೂ ಯೋಧವೃತ್ತಿಯವರು ಸಾಕಷ್ಟು ಸಂಖ್ಯೆಯಲ್ಲಿದ್ದಾರಾದರೂ, ಮಿಕ್ಕ ಪಕ್ಷೀಯರಿಗಿಂತ ಅಧಿಕ ಸಂಖ್ಯೆಯಲ್ಲಿ ಸ್ತ್ರೀ ಉಮೇದ್ವಾರಿಗಳನ್ನದು ಆರಿಸಿಕೊಂಡಿದೆ ಉಮೇದ್ವಾರಿಗಳ ಸರಾಸರಿ ಪ್ರಾಯ 55 6 ವರುಷಗಳೆಂದು ಊಹಿಸಲಾಗಿದೆ ಮೂರು ಪ್ರಬಲ ಪಕ್ಷಗಳ ಸೂತ್ರಧಾರಿಗಳಾಗಿ ಮುಂದಿನ ಪ್ರಧಾನಿಗಳಾಗಬಲ್ಲ ಮೂವರು ಪ್ರಮುಖರಿದ್ದಾರೆ. ಅವರೆಂದರೆ ಟೋರಿ ಪಕ್ಷದ ನಾಯಕ ಯುದ್ಧವೀರ, ಮತ್ತು ಸಭಾ ಚರ್ಚೆಗಳಲ್ಲಿ ಅಗ್ರೇಸರ ಹಾಗೂ ಅನುಭವ ವಾಗ್ಮಿಯೆನ್ನಿಸಿರುವ ಪ್ರಾಯ 70 ರ ಚರ್ಚಿಲ್, ಪ್ರದರ್ಶನವಿಮುಖ, ಶಾಲಾಧ್ಯಾಪಕನ ಮನಸ್ಥಿತಿ ಮತ್ತು ಬೋಳು ತಲೆಯ 63 ಪ್ರಾಯದ ಕೂಲಿಗಾರ ಪಕ್ಷ ಪ್ರಮುಖ ಆಟ್ಲೀ, ವಿನಯ ಬುದ್ಧಿಯ ಸುರೂಪಿ, ಪ್ರಾಯ 54ರ ಮೂಲ ಲಿಬರಲ್ ಪಕ್ಷ ಮುಖಂಡ ಸರ್ ಎ ಸಿಂಕ್ಲೇರ್. ಚರ್ಚಿಲ್ಲರು ತಾತ್ಕಾಲಿಕ ಸರಕಾರೀ ರಚನ ಮತ್ತು ಮತದಾನ ವ್ಯವಸ್ಥೆಯ ಮಹತ್ಕಾರ್ಯಗಳನ್ನು ಮುಗಿಸಿ ಚುನಾವಣೆಗೆ ಣಿಯಾಗಿದ್ದಾರೆ ಅವರು ಅಲ್ಪಾವಧಿಗಾಗಿ ತಯಾರಿಸಿಕೊಂಡ ಈ 'ಮೇಲ್ಮನೆ' ಮಂತ್ರಿಮಂಡಲವು ದೃಢವಾಗಿದ್ದು ರಾಷ್ಟ್ರಕ್ಕಾಗಿ ಕಾರ್ಯನಿರ್ವಹಿಸುವ ದೂರದೃಷ್ಟಿಯಿಂದಲೇ ರಚನೆಗೊಂಡಿತೆಂದು ಪತ್ರಿಕೆಗಳ ಅಭಿಪ್ರಾಯ. ಕೂಲಿಗಾರ ಮಂತ್ರಿಗಳು ತಂತಮ್ಮ ಮೊಹರುಗಳನ್ನು ರಾಜರಿಗೊಪ್ಪಿಸಿ, ಚರ್ಚಿಲ್ಲರಿಂದ ವಿದಾಯ ಪಡೆದಿದ್ದಾರೆ ಈ ಬಾರಿಯ ಚುನಾವಣೆಯು ಚರಿತ್ರಾಪೂರ್ವ ಮಹಾ ಹೋರಾಟವಾಗಲಿದೆ.

ಉಡುಪಿ.

ಉಡುಪಿಯ ಬಿಲ್ಲವರ ಸೇವಾಸಂಘ

ದ ಶ್ರೀಗುರುನಾರಾಯಣ ಭಜನಾಮಂದಿರದಲ್ಲಿ, ಈ ಸಂಘಕ್ಕೆ ಶ್ರೀ ಯುತ್ ಕಾಳಪ್ಪನವರು ದಾನವಾಗಿ ಕೊಟ್ಟ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಭಾವಚಿತ್ರದ ಅನಾವರಣ ಸಮಾರಂಭವು ತಾ ೨೭ ೫ ೪೫ರಲ್ಲಿ ಶ್ರೀ ಯು ವೆಂಕಟ್ರಾವ್, B A L T. ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಅಲ್ಲದೆ ನಂತರ ಗುರುಸ್ವಾಮಿಯವರ ಚಿತ್ರದ ಮೆರವಣಿಗೆಯೂ ಬಹು ವಿಜೃಂಭಣೆಯಿಂದ ಜರಗಿತು

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R I. A 1584/44 os 250/43.

ಧರ್ಣಪ್ಪ ಕೊಟ್ಟಾರಿ-ವಾದಿ ಅರ್ಜಿದಾರ.
ಹೊನ್ನಪ್ಪ ಕುಡಾ ಪ್ರತಿವಾದಿರು ಎದ್ರಿರು.
2ನೇ ಎದ್ರಿ ಬಾಚ ಗೌಡ, ದುಂಗಣ ಗೌಡನ ಮಗ, ಬಜತ್ತೂರು ಗ್ರಾಮ
6ನೇ ಎದ್ರಿ ಬಾಬು ಗೌಡ ಶೇಷಪ್ಪ ಗೌಡನ ಮಗ ಸುಬ್ರಹ್ಮಣ್ಯ ಗ್ರಾಮ
7ನೇ ಎದ್ರಿ ರಾಮಣ್ಣ, 8ನೇ ಎದ್ರಿ ಧರ್ಣಪ್ಪ ಪಕೀರ ಗೌಡನ ಮಕ್ಕಳು, ಬಜತ್ತೂರು ಗ್ರಾಮ

ಇವರಿಗೆ

ಮೇಲೆ ಕಾಣಿಸಿದ ವ್ಯವಹಾರದಲ್ಲಿ ಫೈಸ ... ದಿಕ್ರಿ ಕೊಡಬೇಕೆಂತ ಮತ್ತೆ ಅರ್ಜಿದಾರನು ಮಾಡಿದ ಅರ್ಜಿಯು ತಾರೀಕು 6 6 45ಕ್ಕೆ ಈ ಕೋರ್ಟಿನಲ್ಲಿ ಇರುವುದರಿಂದ ನಿಮಗೇನಾದ್ರೂ ಆಕ್ಷೇಪವಿದ್ದರೆ ನೀವು ಸ್ವತಹಾ ಯಾ ವಕೀಲ್ ದ್ವಾರ ಆ ದಿನ್ನ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಉಪಸ್ಥಿತರಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವದು

(*sd*) **B Chidananda Rau,**
Pleader for Petitioner

Puttur
Date 12 5 45

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ 1—8—0 ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

		ಯೂ. ಆ. ಮೂರು ಪ್ರಹಸನಗಳು	0 14	ಹಣಭೂಮಿ	0 2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0-3	ವಕ್ಷಲಾ	0 8
ಯುವಕರಿಗ ಮತ್ತು ವಯಸ್ಕರಿಗೆ		ಪುರುಷವಧು	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ಮಗುಳು	0 3
		ನಗೆಸೋಟಗಳು	0 14	ಶ್ರೀಮುಖ	1 0
				ಪುರಂದರದಾಸರ ಕೀರ್ತನೆ	1 0
● ನಾಟಕಗಳು		ಅಣ್ಣದೇವರು			
ಪ್ರೇಮವಿಜಯ	0 12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ (ಮೂಲ-	
ದೇಶಭಕ್ತ	0-14	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	1-4
ವ್ಯಭಿಚಾರಿಣೆ ಎಂ	0 12	ನಂದಾದೀಪ	0 10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0-3	ಮುಂದಿನ ದೇವರು	0 3
ಸಂಶಯ ಪಿಶಾಚಿ	0-5	ಕಂಡೂಕಾಣದ ನೋಟಗಳು	0 8	[illegible] ಇತಿಹಾಸ	2-8
ರಂಗಭೂಮಿ	0-5	ನಾರೀಹೃದಯ	0 14	ಬಾಲವಾಙ್ಮಯ	0 3
ಪ್ರಕಾರ	2 0	[illegible] ಕತೆಗಳು	0-10	ಮಿತಕಂಠ	0-5
ಧರ್ಮಸಂಕಟ	0 4	ಪ್ರೇಮಪ್ರಮಾದ	0 6	ಶಕ್ತಿಯ ಜ್ಞಾನ	0-8
ಆರೋಗ್ಯ ಪ್ರಕಾಶ	0 12	ಆಹ ಇತ್ಯಾದಿ ಕತೆಗಳು	0 12	ಶಿವಪುರಾಣ ಪದ್ಯಗಳು	1-8
ಸಂಚಾರಿ	2 0	ಬೇಲಾಮುಖ	0-5	ಗಗನ	0 6
ಪ್ರತೀಕಾರ	0 6	● ಕಾದಂಬರಿಗಳು			
ಸೇವಾಪಥ	0 5	ಕನ್ಯೆಯ ಸೋಗಿನಲ್ಲಿ	0 8	ಗೀತೆಯ ಕೈಗನ್ನಡಿ	0-8

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3 ! ಕೈಮೀರಿದ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗೆ ರೂ 4/-(ವಿ.ಪಿ.12 ಆಣೆ ಅಲಾಯಿದ)Mrs P. DEVEE, T. D. S. (N) Tollygunge, Calcutta
ಸ್ಟಾಕಿಸ್ಟ್: ... ಕಂಪೆನಿ, ಮಂಗಳೂರು

ಮಂಗಳೂರು

ನಿಧನ ಒಂದೆ ಕೆನರಾ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದು, ಅವಿಶ್ರಾಂತ ಸೇವೆ ಸಲ್ಲಿಸಿ ಜನಪ್ರೀತರಾಗಿದ್ದ ಶ್ರೀ ಪಿ. ನಾರಾಯಣ ಪ್ರಭು, ಬಿ. ಎ. ಎಲ್. ಟಿ ಯವರು ತಾ ೨೯ನೇ ರಾತ್ರಿ ೧೦ ಘಂಟೆಗೆ ತಮ್ಮ ಸ್ವಗೃಹದಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ತಮ್ಮ ವಿನಯ, ಸೌಜನ್ಯಾದಿ ಗುಣಗಳಿಂದ ಪ್ರತಿಯೊಬ್ಬರ ಪ್ರೀತಿಗೆ ಪಾತ್ರರಾಗಿದ್ದರು. ಕೆನರಾ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದಾಗ ಶಾಲೆಯ ಅಭಿವೃದ್ಧಿಗೆ ಬಹುಮಟ್ಟಿಗೆ ಕಾರಣರಾಗಿದ್ದರು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಕಾಲ ಶಾಂತಿಯೀಯಲೆಂದೂ ಅವರ ಬಂಧುಮಿತ್ರರಿಗೆ ದುಃಖ ಸಮಾಧಾನ ಕರುಣಿಸಲೆಂದೂ ಕೋರುತ್ತೇವೆ.

ಆರೋಗ್ಯ ವರದಿ- ತಾ ... ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯೊಳಗೆ ... ಮಂದಿಗೆ ಸಿಡುಬು ತಗಲಿರುವುದು, ಸಿಡುಬಿನಿಂದ ಎರಡು ಮರಣಗಳುಂಟಾಗಿವೆ.

ಆಲೋಸಿಯುಸ್ ಕಾಲೇಜಿನಿಂದ- ಈ ವರ್ಷ ಬಿ. ಎ. ಪರೀಕ್ಷೆಗೆ ಕುಳಿತ ... ಮಂದಿಯಲ್ಲಿ ೪... ಮಂದಿ ಎಲ್ಲ ವಿಭಾಗಗಳಲ್ಲಿಯೂ ತೇರ್ಗಡೆ ಹೊಂದಿದ್ದಾರೆ. ಇಂಟರ್ ಪರೀಕ್ಷೆಗೆ ಕುಳಿತ ೧... ಮಂದಿಯಲ್ಲಿ ... ಮಂದಿ ಎಲ್ಲ ಭಾಗಗಳಲ್ಲಿಯೂ ತೇರ್ಗಡೆ ಹೊಂದಿದ್ದಾರೆ.

ರೆವಿನ್ಯೂ ಬೋರ್ಡ್- ಮೆಂಬರರ ... ರಾದ ಮಿ. ಎ. ಎಸ್. ಡಬ್ಲ್ಯು. ಡಿಕ್ಸ್ ಸಾಹೇಬರು ಮಂಗಳೂರಿಗೆ ಆಗಮಿಸಿದ್ದು ಈ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ.

ಸಾರ್ವಜನಿಕ ಆರೋಗ್ಯ ಖಾತೆ
... ಅಸಿಸ್ಟಂಟ್ ಡೈರೆಕ್ಟರರು ಇಲ್ಲಿಗೆ ಬಂದಿದ್ದು, ... ರಿನಲ್ಲಿರುವ ಮಿಜಾರ್ ... ಗೇರುಬೀಜ ಕಾರ್ಖಾನೆಯ ಪ್ರದೇಶವನ್ನು ಸಂದರ್ಶಿಸಿ, ಈ ಕಾರ್ಖಾನೆಯಿಂದ ಹೊರಡುವ ಹೊಗೆಯ ... ಬಾಧಕಗಳ ವಿಚಾರವಾಗಿ ಸ್ಥಳೀಯ ... ವಾಸಿಗಳೊಡನೆ ವಿಚಾರವಿನಿಮಯ ನಡೆಸಿದರು.

ಸಹಕಾರಿ ಶಿಕ್ಷಣ- ತರಗತಿ ... ನ್ನು ಕಳೆದ ತಾ ... ರಂದು ಕೆನರಾ ಹೈಸ್ಕೂಲಿನ ವರಾಂಡದಲ್ಲಿ ತೆರೆಯಲಾಗಿದೆ. ಇದರ ಉದ್ಘಾಟನಾ ಸಮಾರಂಭವು ಸಹಕಾರಿ ಸಂಘಗಳ ಡೆ. ರೆಜಿಸ್ಟ್ರಾರರಾದ ಶ್ರೀ ... ಸಪ್ರೋ ... ಮರಾಯರಿಂದ ನೆರವೇರಿತು. ಶಿಕ್ಷಣವು ... ದಿನಗಳಲ್ಲಿ ಕೊನೆಗೊಳ್ಳುವುದು ... ಮುಖ್ಯವಿರುವ ಸಹಕಾರಿ ... ಯವರು ಶಿಕ್ಷಣ ಕೊಡುವರು.

ಜಿಲ್ಲಾ ಲೇಬರ್ ಸಲಹೆ- ಸಮಿತಿಯು ತಾ ... ರಂದು ಜಿ. ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿ, ಲೇಬರ್ ರಿಗೆ ... ಸೌಕರ್ಯದ ಕುರಿತು ಚರ್ಚಿಸಿತು.

ಪ್ರಾಂತೀಯ ಕಾಗದ- ... ಅಧಿಕಾರಿಗಳು ಇತ್ತೀಚೆಗೆ ಮಂಗಳೂರಿಗೆ ಬಂದಿದ್ದು ನಗರದ ಪ್ರಮುಖ ಕಾಗದ ವ್ಯಾಪಾರಿಗಳನ್ನು ಕೆನರಾ ವಾಣಿಜ್ಯ ಸಂಘದ ಕಾರ್ಯಾಲಯದಲ್ಲಿ ಭೇಟಿಯಾದರು. ಅಧಿಕಾರಿಗಳು ನಿಯಂತ್ರಣಾಜ್ಞೆಯನ್ನು ವಿವರಿಸುತ್ತ, ಇಂದಿನಂತಹ ಕಠಿಣ ಕಾಲದಲ್ಲಿಯೂ ಕಾಗದವು ಎಲ್ಲರಿಗೂ ಸಿಗುವಂತೆ ಮಾಡುವುದೇ ಈ ನಿಯಂತ್ರಣಾಜ್ಞೆಯ ಉದ್ದೇಶವೆಂದರು. ಅನಂತರ ಬಿಳಿ ಬಿಳಿ ಕಾಗದಗಳನ್ನು ಕರಿಸುವ, ಸಣ್ಣ ವ್ಯಾಪಾರಿಗಳಿಗೆ ಅದನ್ನು ಹಂಚುವ, ಪುಸ್ತಕ ತಯಾರಕರಿಗೆ ಮಾರುವ ಇತ್ಯಾದಿ ಈ ಕಾಲದಲ್ಲಿ ಅನುಸರಿಸತಕ್ಕ ನಿಬಂಧನೆಗಳನ್ನು ವಿವರಿಸಿದರು. ಪುನಲೂರ್ ಅಥವಾ ಆಂಧ್ರ ಮಿಲ್ಲುಗಳಲ್ಲಿ ತಯಾರಾಗುವ ಉಪಯೋಗಿಸುವ ಕಾಗದಗಳ ಮೇಲಣ ಹಂಚಿಕೆಯ ನಿರ್ಬಂಧಗಳನ್ನು ತೆಗೆದುಹಾಕಲಾಗಿದೆ. ಎಲ್ಲಾ ಜನರಿಗೂ, ಉಪಯೋಗಿಸುವ ಕಾಗದ ಬೇಕಾದಷ್ಟು ಸಿಗುವ ವ್ಯವಸ್ಥೆ ಮಾಡಲಾಗಿದೆ.

ಪ್ರಾಂತೀಯ ಸಿವಿಲ್ ಸಪ್ಲೈ ಕಮಿಶನರರನ್ನು ಶ್ರೀ ... ಶಿವರಾವ, ... ಬಿ. ಶೆಟ್ಟಿ, ಜಿನರಾಜ ಹೆಗ್ಡೆ ಮತ್ತು ಪಿ. ಆರ್. ಆರ್. ಪೂಂಜ ಇವರು ತಾ ... ರಂದು ಭೇಟಿಯಾಗಿ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ... ತಿಂಗಳ ಮಟ್ಟಿಗೆ ಬೇಕಾದ ಸಂಗ್ರಹ ಈಗ ನಮ್ಮಲ್ಲಿರುವುದರಿಂದ ಈಗಲೇ ಹೊರಗಿಂದ ಅಕ್ಕಿ ಕಳುಹಿಸುವ ಅಗತ್ಯವಿಲ್ಲವೆಂದು ಕಮಿಶನರರು ಅಭಿಪ್ರಾಯಪಟ್ಟರು. ಜಿಲ್ಲೆಯ ಎಲ್ಲಾ ಸ್ಟೋರುಗಳಲ್ಲೂ ಮೂರು ತಿಂಗಳಿಗಾಗುವಷ್ಟಿಲ್ಲ. ಮಳೆ ಆರಂಭವಾಗುವ ಮೊದಲು ಅಲ್ಲಿಗೆ ಹೋಗಬೇಕು ಎಂದು ಶ್ರೀ ಶಿವರಾಯರು ನಿವೇದಿಸಿದರು. ನಿಮ್ಮ ಜಿಲ್ಲೆಯ ವಿಚಾರದಲ್ಲಿ ಸರಕಾರವು ಲಕ್ಷ್ಯ ಮಾಡುತ್ತಿದೆ ಎಂದು ... ರಿಂದ ಹೊರಗಿನಿಂದ ಅಕ್ಕಿ ಗೋಧಿಗಳನ್ನು ಕಳುಹಿಸಲಾಗುವುದು. ... ಜಿಲ್ಲೆಯ ... ಹಸುಗೆ ಹಂಚಿಕೆ ಎಂದು ... ಹಳ್ಳಿಗಳೊಳಗೆ ಭೇದಮಾಡಲಾಗುವುದಿಲ್ಲ ಎಂದರು.

ಇಂಗ್ಲೆಂಡಿನಲ್ಲಿ ಬಾಕಿ- ಇರುವ ಭಾರತದ ಹಣದ ಕುರಿತು ಸ್ಥಳೀಯ ಕೆಥೋಲಿಕ್ ಕ್ಲಬ್ಬಿನಲ್ಲಿ ಪ್ರೊ. ... ಸಲಾ ... ರು ಭಾಷಣವಿತ್ತರು.

ಕುಂದಾಪುರ

ಕುಂದಾಪುರದ ವಂತಿಗೆ ವಸೂಲಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮೊದಲ ಸಂಖ್ಯೆಯು ನಾಗಪ್ಪನವರು ... ಕೊಟ್ಟ ಮೊತ್ತ ಸಂಖ್ಯೆ ವಸೂಲಿಯೂ ಆಗಿರುತ್ತದೆ.

ಶ್ರೀ ... ದ ಸಾಸ್ತಾನ ... ಅಂತಯ್ಯ ಶೆಟ್ಟಿ ... ಸಾಸ್ತಾನ ೧೫೦೦ ಸಬ್ಲಾಡಿ ವೆಂಕಪ್ಪ ಶೆಟ್ಟಿ ... ಗಾರರು (ಇವರ ಮಾವ ದಿವಂಗತ ಸಬ್ಲಾಡಿ ಕೃಷ್ಣಪ್ಪ ಶೆಟ್ಟಿ ಕೊಟ್ಟ ೩೨೦ ಕೂಡಿ) ಸಾಸ್ತಾನ ೧೦೦೫. ... ಸೌಕೂರು ರಾಮಣ್ಣ ಶೆಟ್ಟಿ ಮತ್ತು ಲಕ್ಷ್ಮಣ ಶೆಟ್ಟಿ ಕೂಡಾ (ಮೊದಲು ಕೊಟ್ಟ ರೂ ೨೦೫ ಕೂಡಿ) ೧೦೦೦... ಮೂಡಲಕಟ್ಟೆ ದೊಡ್ಡಮನೆ ವೆಂಕಪ್ಪ ಶೆಟ್ಟಿ, ಸೋಮಪ್ಪ ಹೆಗ್ಡೆರು ಮತ್ತು ಮಹಾಬಲ ಶೆಟ್ಟಿ ಕೂಡಾ (ದಿವಂಗತ ಮಂಜಯ್ಯ ಶೆಟ್ಟಿ ಕೊಟ್ಟ ೧೮೫ ಕೂಡಿ) ೧೦೦೦, ೫೦ ಬಿ. ಶಿವರಾಮ ಶೆಟ್ಟಿ ವಕೀಲ ಮೊದಲು ಕೊಟ್ಟ ... ಕೂಡಿ ೫೦೬, ೩೦ ಗುಲ್ವಾಡಿ ಹೆಗ್ಗುಂಜೆ ಮನೆ ಕೇಶವ ಶೆಟ್ಟಿ ೫೦೫ ಬಸರೂರು ಶೀನಪ್ಪ ಶೆಟ್ಟಿ ೫೦೫. ... ಬಸರೂರು ಮುತ್ತಯ್ಯ ಶೆಟ್ಟಿ ೫೦೦. ೫೦ ಗುಲ್ವಾಡಿ ನಾಗಯ್ಯ ಶೆಟ್ಟಿ ಮಗ ಮಂಜಯ್ಯ ಶೆಟ್ಟಿ ... ಕರ್ಕಿಮೊಳ್ಳನೆ ದುಗ್ಗಪ್ಪ ಶೆಟ್ಟಿ ... ಮೂಡಲಕಟ್ಟೆ ಹಡುಮನೆ ಮುತ್ತಕ್ಕ ಹಡ್ತಿರು (ಮೊದಲು ದಿವಂಗತ ಸಂಧ್ಯಪ್ಪ ಶೆಟ್ಟಿಯಿಂದ ಬಂದ ರೂ ... ಕೂಡಿ) ... ಕೆ. ಸೂರಪ್ಪ ಶೆಟ್ಟಿ ವಕೀಲ್ ೧೨೫. ಕೊಳ್ಕೆಬೈಲು ಸಂಜೀವ ಶೆಟ್ಟಿ ವಕೀಲ್ ೧೦೬, ೩೦ ಕೊಳ್ಕೆಬೈಲು ಸೂರಪ್ಪ ಶೆಟ್ಟಿ ವಕೀಲ್ ೧೦೬ ಎಡ್ತರೆ ಮಂಜಯ್ಯ ಶೆಟ್ಟಿ ವಕೀಲ್ ೧೦೬, ೩೦ ಸೌಕೂರು ನಾಗಪ್ಪ ಶೆಟ್ಟಿ ೧೦೬, ... ಸೌಕೂರು ಮಹಾಬಲ ಶೆಟ್ಟಿ ಬಿ. ಬೋ. ಕಂಟ್ರಾಕ್ಟರ್ ಇವರು ಮೊದಲು ಕೊಟ್ಟ ರೂ ... ಕೂಡಿ ೧೦೬ ... ಗುಲ್ವಾಡಿ ದೊಡ್ಡಮನೆ ಸಂಧ್ಯಪ್ಪ ಶೆಟ್ಟಿ ಮೊದಲು ಕೊಟ್ಟ ರೂ ... ಕೂಡಿ ೧೦೬, ... ಬಾರಂದಾಡಿ ಸುಬ್ಬಯ್ಯ ಶೆಟ್ಟಿ ೧೦೦, ೧೦೦ ಮಾಣಿಬೈಲು ದುಗ್ಗಪ್ಪ ಶೆಟ್ಟಿ ಮತ್ತು ಬ್ರಹ್ಮ ... ಗುಲ್ವಾಡಿ ದೊಡ್ಡಮನೆ ... ರಿಯಣ್ಣ ಶೆಟ್ಟಿ ಮೊದಲು ಕೊಟ್ಟ ರೂ ೧೦ ಕೂಡಿ ... ೧೦ ಕೊಳ್ಕೆಬೈಲು ಮಹಾಬಲ ಶೆಟ್ಟಿ ..., ... ಹಂದೆಕುಂದೆ ... ಶೆಟ್ಟಿ ..., ... ಹಂದೆಕುಂದೆ ಸುಬ್ಬಣ್ಣ ಶೆಟ್ಟಿ ... ಹಂದೆಕುಂದೆ ಪಟೇಲ್ ನಾಗಯ್ಯ ಶೆಟ್ಟಿ ... ಗುಲ್ವಾಡಿ ತೇಜಪ್ಪ ಹೆಗ್ಡೆರು ... ಕೆಂಚನೂರು ರಘುನಾಥ ಶೆಟ್ಟಿ ... ಕರ್ಕಿ ದೊಡ್ಡಮನೆ ಮಂಜಯ್ಯ ಶೆಟ್ಟಿ ..., ... ಗುಲ್ವಾಡಿ ನಾರಾಯಣ ಶೆಟ್ಟಿ ... ರಾಮಣ್ಣ ಶೆಟ್ಟಿ ... ೧೦ ಕೆಂಚನೂರು ಶಂಕರ ಶೆಟ್ಟಿ (ಸನ್ ಲೈಫ್ ಇನ್ಸೂರೆನ್ಸ್ ಕಂಪೆನಿಯ ಏಜಂಟರು) ೧೦೬ ... ಕಂದಾವರ ಮಹಾ... ಶೆಟ್ಟಿ ... ಕಂದಾವರ ಕೆ. ಎಲ್. ಮಂಜಯ್ಯ ಶೆಟ್ಟಿ ... ಕಂದಾವರ ಸಂಜೀವ ಹೆಗ್ಡೆರು ... ಬಸರೂರು ಕೃಷ್ಣಪ್ಪ ಶೆಟ್ಟಿ ..., ... ಹೊಸಮನೆ ಮಂಜಯ್ಯ ಶೆಟ್ಟಿ ..., ... ಬಿಜ್ಜ ... ವಿಂಗ ಶೆಟ್ಟಿ ..., ೧೦ ನಾಕರಬೆಟ್ಟು ... ಮನೆ ಕೃಷ್ಣಪ್ಪ ಶೆಟ್ಟಿ ೧೦ ೧೦

... ಮೂ ... ರೀತಿ ಮೇಲಿನ ಮಾ... ಯನ್ನು ಅನುಸರಿಸಿ ಮುಂದಿನ ಕೆಲಸದಲ್ಲಿ ಎಲ್ಲಾ ಸಜ್ಜನರ ಪ್ರೋತ್ಸಾಹ ಅಪೇಕ್ಷಿತ. ವಂತಿಗೆ ಕೊಡುವವರ ಸಂಬಂಧಿಗಳೂ ... ಬಾಂಧವರು ಉದಾರ ದಾನಮಾಡಿ ಈ ಸತ್ಕಾರ್ಯವು ಶೀಘ್ರದಲ್ಲಿ ನೆರವೇರುವಂತೆ ತಮ್ಮ ಕೊಡುಗೈಯನ್ನು ನೀಡಿ ಸಂಘದ ಅಭಿವೃದ್ಧಿಗೆ ಪಾತ್ರರಾಗಬೇಕೆಂದು ವಿನಂತಿ.

ನಾಗಾ... ವರ ಮೊಬಲಗಿನ ಸಂಖ್ಯೆ ಮೋ... ಕ್ರಮವಾಗಿ ಬರೆದಿದೆ.

ಗಂಗೊಳ್ಳಿ- ಇಲ್ಲಿಯ ಸರಸ್ವತಿ ವಿದ್ಯಾಲಯ ಸಂಘದವರಿಗೆ ಇದೇ ಬರುವ ಜೂನಿನಲ್ಲಿ ಹೊಸತಾಗಿ ಹೈಸ್ಕೂಲಿನ I, II, III ನೇ ಫಾರ್ಮುಗಳನ್ನು ತೆರೆಯಲು ಸರಕಾರದ ಅನುಮತಿ ದೊರೆತಿದೆಯೆಂದು ತಿಳಿಸಲು ಸಂತೋಷವಾಗುತ್ತದೆ. ತರಗತಿಗಳು ಜೂನ್ ... ನೇ ಗುರುವಾರ ತೆರೆಯಲ್ಪಡುವುವು. ಶಾಲಾ ವಿದ್ಯಾರ್ಥಿಗಳಿಗೆ ಅವರ ವೆಚ್ಚದಲ್ಲೇ ಮಧ್ಯಾಹ್ನ ಊಟದ ವ್ಯವಸ್ಥೆ ಹಾಗೂ ಕಾಯಂ ನಿವಾಸಕ್ಕೂ ಏರ್ಪಾಡಿದೆಯೆಂಬುದಾಗಿ ತಿಳಿದುಬರುತ್ತದೆ.

ಬೈಂದೂರು ವಿಜಯಾ ಬ್ಯಾಂಕಿನ ... ಶಾಖೆಯೊಂದು ತಾ ... ರಲ್ಲಿ ಮಾರ್ಕೆಟು ಬಳಿ ಇರುವ ನಾರಾಯಣ ಬಿಲ್ಡಿಂಗಿನಲ್ಲಿ ಶ್ರೀ ... ಮುಡಿಮಾರ್ ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿರುವುದು.

ಮಹದೇವಿ ಬೋರ್ಡಿಂಗ್ ಹೋಂ

... ಪೇಟೆ, ಬೆಂಗಳೂರು ಸಿಟಿ. ಎಲ್ಲೆಲ್ಲಿಯೂ ಗಂಡು ಹುಡುಗರಿಗೆ ವಿದ್ಯಾರ್ಥಿ ನಿಲಯಗಳೂ ಊಟದ ವಸತಿಗಳೂ ಇವೆಯೇ ವಿನಹ ವಿದ್ಯಾರ್ಥಿನಿಯರಿಗೆ ಅವರಲ್ಲೂ ವೀರಶೈವ ವಿದ್ಯಾರ್ಥಿನಿಯರಿಗೆ ಎಲ್ಲಿಯೂ ವಸತಿಯು ಇಲ್ಲದಿರುವ ಕೊರತೆಯನ್ನು ಸಾಧ್ಯವಾದ ಮಟ್ಟಿಗೆ ನಿವಾರಣೆ ಮಾಡಲು ಈ ನೋಟ್ಟಂದ ಸಂಸ್ಥೆಯನ್ನು ಏರ್ಪಡಿಸಿರುತ್ತೆ. ಈಗಾಗಲೇ ಕಾಲೇಜು, ಹೈಸ್ಕೂಲು, ಮೆಡಿಕಲ್ ಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿನಿಯರು ಮತ್ತು ಸಣ್ಣ ಹೆಣ್ಣು ಮಕ್ಕಳು ಇರುತ್ತಾರೆ. ಇವರಿಗೆ ಇರುವುದಕ್ಕೆ ಸ್ಥಳ ಊಟ ಮುಂತಾದ ಸೌಕರ್ಯಗಳನ್ನು ಉಚಿತವಾಗಿ ಏರ್ಪಡಿಸಲ್ಪಟ್ಟಿದೆ. ... ನ್ನು ಮುಂದೆ ಇಲ್ಲಿ ಬಂದು ವ್ಯಾಸಂಗ ಮಾಡ... ವಿದ್ಯಾರ್ಥಿನಿಯರು ಕೂಡಲೇ ಅರ್ಜಿಗಳನ್ನು ಕಳುಹಿಸಿಕೊಡಬೇಕು. ಕಾಲೇಜು, ಹೈಸ್ಕೂಲ್, ಟ್ರೈನಿಂಗ್ ಸ್ಕೂಲ್, ಮೆಡಿಕಲ್ ಸ್ಕೂಲ್ ಗಳಲ್ಲಿ ಓದತಕ್ಕ ವಿದ್ಯಾರ್ಥಿನಿಯರುಗಳಿಗೆ ಮತ್ತು ಮಿಡ್‌ವೈಫರಿ, ನರ್ಸಿಂಗ್, ಹ್ಯಾಂಡ್ ವೀವಿಂಗ್, ಟೈಲರಿಂಗ್, ಎಂಬ್ರಾಯಿಡರಿ ... ಅಂಡ್ ಕಂಪೋಸಿಂಗ್ ಮುಂತಾದ ಕೈಗಾರಿಕೆಗಳನ್ನು ಕಲಿಯಲು ಇಷ್ಟಪಡುವ ... ಮಹಿಳೆಯರನ್ನು ... ಸರ್ಕಾರ ... ಲಾಗುವುದು. ... ಕೂಡಲೆ ಅರ್ಜಿಗಳನ್ನು ಬರೆದುಕೊಳ್ಳತಕ್ಕದ್ದು ... ಕಾರ್ಯದರ್ಶಿಗಳು ... ಸುದ್ದಿ.

The Sweetest Law.

" I am beginning to suspect
That all the world are partners
whatever their creed or sect,
That life is a kind of pilgrimage
- a sort of Jericho road
And kindness to one's fellows the
sweetest law in the code "

Insuring one's life is not only entering into partnership with other insured lives in the journey of life but also showing kindness to one's fellows

The Canara Mutual Assurance Co. Ltd.,
UDIPI. (S. India).

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಸಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

(೨ನೇ ಪುಟದಿಂದ ಮುಂದುವರಿದುದು.)
ದಲ್ಲಿ ಉಪ ಕಾರ್ಯದರ್ಶಿಯಾಗಿ ಅವರು ಅನೋಘ ಕಾರ್ಯ ಸಾಧಿಸಿದರು.

ತನ್ನದೇ ತನಗೆ

ಆದರೆ ಹಿಂದಾಗಲೀ ಇಂದಾಗಲೀ ಚರ್ಚಿಲ್ಲರು 'ಪಕ್ಷ ಪ್ರೇಮಿ' ವ್ಯಕ್ತಿಯಲ್ಲವೇ ಅಲ್ಲ. ಅವರು ಸ್ವನಿರ್ಧಾರ ಪ್ರೇಮಿ; ಅನ್ಯರ ಪೂರ್ವತಯಾರಿ ಅಭಿಪ್ರಾಯಗಳನ್ನು ಶಿರಸಾವಹಿಸುವದರಲ್ಲಿ ತೀರಾ ಹಿಂದೆ. ಲಿಬರಲ್ ಪಕ್ಷದ ಮೇಲಿನ ಅವರ ಸಹಾನುಭೂತಿ ಕುಗ್ಗುತ್ತಾ ಹೋಯಿತು. ಆ ಪಕ್ಷವಾದರೋ, ಯುದ್ಧ ಗದ್ದ ಸಮ್ಮಿಶ್ರ ಮಂತ್ರಿ ಮಂಡಲವು ಒಡೆದು ಹೋಗಿ, 1924ರ ಮಹಾ ಚುನಾವಣೆಯಲ್ಲಿ ಲೇಬರ್ ಪಕ್ಷವು ಜಯಶೀಲವಾದೊಡನೆ ಸಮತಾ ವಾದಿಗಳಿಗೆ ಬೆಂಬಲ ಕೊಡುವ ಹುಪ್ಪಾಯಿಕೆಳ್ಳುಳಗಾಗಿದ್ದಿತು. ಇಂತಹ ಲಿಬರಲರ ಘೋರತೆಗಿಂತ ದೂರವಾಗಿ ಚರ್ಚಿಲ್ಲರು ಕನ್ಸರ್ವೇಟಿವ್ ಪಕ್ಷದ ಹಾದಿಯನ್ನೇ ಹೆಚ್ಚೆಚ್ಚಾಗಿ ತುಳಿಯ ಹತ್ತಿದರು. ಪಾರ್ಲಿಮೆಂಟಿನಲ್ಲಿ ಸ್ವಲ್ಪ ಸಮಯ ಸ್ವತಂತ್ರ ಸದಸ್ಯನಾಗಿ ಇದ್ದುಕೊಂಡು–ಮತ್ತೆರಡು ಮತದಾರ ಸಂಘಗಳಿಂದ ಚುನಾವಣೆಗೆ ನಿಂತು ಸೋಲಿಗೀಡಾಗಿ—ಕೊನೆಗವರು ಕನ್ಸರ್ವೇಟಿವ್ ಪಕ್ಷ ಸದಸ್ಯರಾದರು ಹಾಗೆಯೇ ಮಂತ್ರಿ ಮಂಡಲಕ್ಕೂ ಏರಿ ತನ್ನ ತಂದೆಯ ಸ್ಥಾನವಾಗಿದ್ದ ಅರ್ಥ ಮಂತ್ರಿ ಹುದ್ದೆಯನ್ನೂ ಪಡೆದರು. ತನ್ನ ತಂದೆಯಂತೆಯೇ ರಾಜಕೀಯಾಧಿಕಾರ ಏಣಿಯ ತುದೀ ಮೆಟ್ಟಲಿನ ಒತ್ತು ಹಜ್ಜೆಗೆ ಒಂದರು. ಅರ್ಥಿಕ ಮಂತ್ರಿಯಾಗಿದ್ದವನು ಅಧಿಕಾರದಿಂದಿಳಿದ ಮೇಲೆ ಮುಖ್ಯಮಂತ್ರಿತ್ವಕ್ಕೇರುವ ಸಂಭವವೇ ಹೆಚ್ಚಾಗಿ. ಆದರೆ ತಂದೆ ಲೋರ್ಡ್ ರೇಂಡೊಲ್ಫರಂತೆಯೇ ಮಗವಿನ್ ಸ್ಟನರಿಂತಲೂ ತುದಿಗೆ ಮಾತ್ರ ಹತ್ತಲಾಗಲಿಲ್ಲ. 1929ರ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷವು ಸೋಲಿಸಲ್ಪಟ್ಟು ಕೂಲಿಗಾರ ಪಕ್ಷ ಅಧಿಕಾರಕ್ಕೆ ಬಂತು. ಸರ್ಕಾರ ಆ ಮಂಡಲವೂ ಉರುಳಿ ಬಿದ್ದು ಹೊಸ ಸಮ್ಮಿಶ್ರ ಮಂತ್ರಿ ಮಂಡಲ ರಾಜ್ಯಭಾರವಹಿಸಿತು. ಆದರೆ ಚರ್ಚಿಲ್ಲರಿಗದರಲ್ಲಿ ಸ್ಥಾನವಿರಲಿಲ್ಲ ಹಲವು ವಿಷಯಗಳಲ್ಲಿ ಆ ಸರಕಾರದೊಡನೆ ಚರ್ಚಿಲ್ಲರಿಗೆ ಭಿನ್ನಾಭಿಪ್ರಾಯವಿದ್ದಿತು.

ಭವಿಷ್ಯೋಕ್ತಿ ಪಟೇಶಿ

ಮನೇ ಶಸ್ತ್ರ ಸಜ್ಜಿತವಾಗುತಿದ್ದ ನಾಜೀ ಜರ್ಮನಿಯಿಂದ ಇಂಗ್ಲಾಂಡಿಗೆ, ಯುರೋಪಿಗೆ ಹಾಗೂ ಇಡೀ ಪ್ರಪಂಚಕ್ಕಿರುವ ಅಪಾಯವನ್ನು ಪ್ರಥಮತಃ ಕಂಡುಕೊಂಡ

ವಿಜಯ ಶಿಲ್ಪಿ–ವಿನ್‌ಸ್ಟನ್ ಚರ್ಚಿಲ್.

ವರಲ್ಲಿ ಅವರೊಬ್ಬರು ಹಿಟ್ಲರ್ ಮತ್ತು ಗೋರಿಂಗರು ಅತಿ ಪ್ರಬಲ ವಿಮಾನಬಲ ಕಟ್ಟುತಿದ್ದಾರೆಂದ, ಅವರಿಗೆ ಗೊತ್ತು: ಈ ಅಪಾಯವನ್ನೆದುರಿಸುವಷ್ಟು ದೊಡ್ಡ ಪರಿಮಾಣದಲ್ಲಿ ಬ್ರಿಟನಿನ ಆರ್. ಎ ಎಫ್. ತಯಾರಾಗುತ್ತಿಲ್ಲವೆಂಬುದನ್ನೂ ಅವರು ಬಲ್ಲರು. ಬ್ರಿಟನು ಬಲಗೊಂಡು, ಜರ್ಮನಿಯ ಬೆದರಿಕೆಗೊಳಗಾಗಿರುವ ಎಲ್ಲಾ ರಾಷ್ಟ್ರಗಳೂ ಅಭೇದ್ಯ ಮಿತ್ರ ಮಂಡಲವಾಗಿ ಒಂದು ಗೂಡಿದರೇನೇ ಶಾಂತಿಯುಳಿಯಲು ಸಾಧ್ಯ ಎಂದು ಚರ್ಚಿಲ್ಲರಿತರು. ಹಿಟ್ಲರನ 'ಓಂದರ ಬಳಿಕ ವೊಂದು' ಪ್ರಶ್ನೆಗೆ ತಮ್ಮ 'ಸಾಮೂಹಿಕ ಭದ್ರತೆ'ಯೇ ಯೋಗ್ಯ ಉತ್ತರವೆಂದು ಚರ್ಚಿಲ್ಲರ ಅಭಿಪ್ರಾಯ. 1935ರಲ್ಲಿ ಮುಸಲಿನಿಯು ಅಬಿಸೀನಿಯಕ್ಕೆ ಸೇನೆ ಹೊಗಿಸಿದಾಗ 'ಆತ ಅದೃಷ್ಟವನ್ನು ಅಡವಿಡುತಿದ್ದಾನೆ' ಎಂದು ಇಟಲಿ ಸರ್ವಾಧಿಕಾರಿಯನ್ನು ಚರ್ಚಿಲ್ಲರು ಎಚ್ಚರಿಸಿದ್ದರು. 1940–41ರಲ್ಲಿ ಸಾವಿರ ಸಂಖ್ಯೆಯ ಇಟಲೀ ಯೋಧರು ಇಂಗ್ಲಾಂಡಿನ ಕೈದಿ ಗೂಡುಗಳನ್ನು ಹೊಕ್ಕಾಗ ಚರ್ಚಿಲ್ಲರ ಆ ಮಾತು ಸತ್ಯವನ್ನಿಸಿತು. ಜರ್ಮನಿಯಿಂದ ಬರಲಿರುವ ಅಪಾಯದ ಕುರಿತು ಎಚ್ಚರಿಸಿದ ಸ್ಪಷ್ಟವಕ್ತಾರರ ಧುರೀಣನೆಂದರೆ ಚರ್ಚಿಲ್. ಸರಿ. ಅವರ ಭವಿಷ್ಯದಂತೆ 1939ನೇ ಸೆಪ್ಟಂಬರ 3ರಲ್ಲಿ ಯುದ್ಧಸ್ಫೋಟವಾಯಿತು. ಅವರು ತನ್ನ ಹಳೆಯ ಹುದ್ದೆಯಾದ ಹಡಗ ದಳದ ಮಂತ್ರಿಯಾದರು. ಒಂದು ತಿಂಗಳ ನಂತರ ಕೊಟ್ಟ ತನ್ನ ಪ್ರಥಮ ಆಕಾಶವಾಣಿ ಯುದ್ಧ ಭಾಷಣದಲ್ಲಿ ಚರ್ಚಿಲ್ಲರು ಭವಿಷ್ಯವಾಡಿದ್ದರು: "ಸದ್ಯದ ಗಡಿಬಿಡಿ, ಅಯಥಾರ್ಥತೆಗಳ ಮಬ್ಬಿನಲ್ಲಾದರೂ, ಇಂಗ್ಲಾಂಡು, ಫ್ರಾನ್ಸು, ರಷ್ಯಗಳ ಹಿತಸಂಬಂ . . . ಎಂದಾಗ ಸಕ್ಷದ ಹಣೆದುಕೊಂಡಿರುವದನ್ನು ಸ್ಪಷ್ಟವಾಗಿ ಕಾಣಬಹುದು . ಹದಿನೇಟು ತಿಂಗಳು ಕಳೆಯುವದರೊಳಗೆ ಅವರ ಮಾತು ಮತ್ತೊಮ್ಮೆ ಸತ್ಯವಾಯಿತು

ರಕ್ತದಾತ ಪ್ರಧಾನಿ

ಜರ್ಮನಿಯು ನೋರ್ವೆಯನ್ನಾಕ್ರಮಿಸಿತು. ಸಾಕಷ್ಟು ವಿಮಾನ ತಯಾರಿಯಿಲ್ಲದ ದೆಸೆಯಿಂದಾಗಿ ಆಕಾಶ ಬೆಂಬಲವಿಲ್ಲದೆ ಬ್ರಿಟಿಷ್ ನಾವೆಯಿಂದ ಅದನ್ನು ತಡೆಗಟ್ಟಲಾಗಲಿಲ್ಲ. ಬಿರುಗಾಳಿಯಂತಹ ಬಹಿರಂಗ ಟೀಕೆಯೆದ್ದಿತು; ದೇಶವನ್ನು ನಡಿಸಬಲ್ಲ ನಾಯಕನೆಂದರೆ ಚರ್ಚಿಲ್ ಒಬ್ಬನೇ ಸರಿ ಎಂಬುದು ಸ್ಪಷ್ಟವಾಯಿತು. ಜರ್ಮನಿಯು ಬೆಲ್ಜಿಯಮ್, ಹೊಲೆಂಡು ಮತ್ತು ಫ್ರಾನ್ಸನ್ನಾಕ್ರಮಿಸಿದ ವಾರ್ತೆಯನ್ನು ಪ್ರಪಂಚವು ಮೇ 10ನೇ ಅಪರಾಹ್ನದಲ್ಲಿ ಕೇಳಿದರೆ ಆ ಮುಂಜಾನೆಯೇ ಚರ್ಚಿಲ್ಲರು ಮಂತ್ರಿಮಂಡಲ ರಚಿಸಿಕೊಂಡ ವಾರ್ತೆ ಬಂತು. "ನಾನು ನಿಮಗೆ ಕೊಡಲಿರುವದೆಂದರೆ ರಕ್ತ, ಬೆವರು, ಕಣ್ಣೀರು ಮತ್ತು ಶ್ರಮ ಹೊರತು ಬೇರೇನೂ ಇಲ್ಲ". ಎಂಬುದೇ ಈ ಪ್ರಧಾನಾಧಿಕಾರಿಯ ಮುನ್ನುಡಿ. ಕಠಿಣ ಪದಗಳಿವು; ಬೇರೆಯವರ ಬಾಯಿಯಿಂದ ಬ್ರಿಟಿಷ್ ಜನತೆ ಕೇಳಿದ್ದ ಮಧುರಾಶ್ವಾಸನೆಗಿಂತ ಭಿನ್ನವಾದ ಕಠಿಣ ಶಬ್ದಗಳು! ಫ್ರಾನ್ಸಿನಲ್ಲಿ ಮೂಲ ಫ್ರೆಂಚ್ ಸೇನೆಯಿಂದ ಬೇರ್ಪಡಿಸಲ್ಪಟ್ಟ ಬ್ರಿಟಿಷ್ ದಂಡ ಯಾತ್ರಾ, ಸೇನೆಯು ಡಂಕರ್ಕಿನಿಂದ ಹಿಂದೋಡಿ ಬರಬೇಕಾಯಿತು. ಚರ್ಚಿಲ್ಲರು ಉದ್ವೇಗಗೊಂಡು ಲೋಕಕ್ಕೆ ಕೂಗಿ ಹೇಳಿದರು: "ನಾವು ಫ್ರಾನ್ಸಿನಲ್ಲಿ ಹೋರಾಡುವೆವು; ನಾವು ಸಮುದ್ರದಲ್ಲೂ ಜಲರಾಶಿಗಳಲ್ಲೂ ಕಾದಾಡುವೆವು; ನಾವು ವಿಶ್ವಾಸವರ್ಧನೆಮತ್ತು ಬಲವರ್ಧನೆಗೊಂಡು ಆಕಾಶದಲ್ಲಿ ಹೋರಾಡುವೆವು; ಎಷ್ಟೇ ಬೆಲೆ ತೆತ್ತಾದರೂ ನಾವು ನಮ್ಮ ದ್ವೀಪವನ್ನು ಕಾಪಾಡುವೆವು; ನಾವು ಕರಾವಳಿಗಳಲ್ಲಿ ಕಾದಾಡುವೆವು; ನಾವು ಸೇನೆ ತಳ ವೂರುವಲ್ಲಿ ಹೊಡೆದಾಡುವೆವು; ನಾವು ರಂಗದಲ್ಲೂ ರಸ್ತೆಯಲ್ಲೂ ಬಡಿದಾಡುವೆವು; ನಾವು ಗುಡ್ಡಗಾಡುಗಳಲ್ಲಿ ಹೋರಾಡುವೆವು; ನಾವೆಂದೂ ಶರಣಾಗತರಾಗೆವು".

ಅಸಹಾಯ ಶೂರ

ಫ್ರಾನ್ಸ್ ಶರಣವಾಯಿತು; ಇಂಗ್ಲಾಂಡು ಏಕಾಕಿಯಾಯಿತು. ಆವಾಗ ಚರ್ಚಿಲ್ಲರಿಗೆ ಫ್ರಾನ್ಸಿನ ಸೋಲಾಗಲೀ, ಏಕಾಕಿ ಹೋರಾಟವನ್ನು ಗೆಲ್ಲಬಲ್ಲ ಬ್ರಿಟನಿನ ಶಕ್ತಿಯ ಮೇಲಾಗಲೀ ನಂಬಿಕೆ ಕುಂದಲಿಲ್ಲ. "ಇದರಿಂದ ನಾವೀಗ ನಮ್ಮ ಕಾರ್ಯ ತನ್ಮಯರಾಗೋಣ. ಜನರಾಡುವಂತೆ ಬ್ರಿಟಿಷ್ ಸಾಮ್ರಾಜ್ಯ ಮತ್ತು ಅದರ ವಸಾಹತುಗಳು ಇನ್ನೊಂದು ಸಾವಿರ ವರುಷ ಬಾಳಬೇಕಾದರೆ 'ಇದೀಗ ನಮ್ಮ ಅಮೋಘ ಸಂಧಿ' ಎಂಬುದು ನೆನಪಿರಲಿ" ಎಂದು ಕರೆಕೊಟ್ಟರು ಚರ್ಚಿಲ್. ವರ್ಷವೊಂದರ ವರೆಗೂ ಬ್ರಿಟನ್ ಮತ್ತದರ ವಸಾಹತು ಚರ್ಚಿಲ್ಲರ ಕೈಕೆಳಗೆ ಏಕಾಂಗಿಯಾಗಿ ಹೋರಾಡಿತು. ಆ ವೇಳೆ ಹಿಟ್ಲರ್ ರಷ್ಯದ ಮೇಲೆ ನೆಗೆದ; ಜಪಾನ್ ಪರ್ಲ್‌ಹಾರ್ಬರಿನ ಮೇಲೆ ಬಿತ್ತು. ಬ್ರಿಟನು ಈ ಮಹಾ ಸಂಯುಕ್ತ ಮಂಡಲಿಯ ಕೇಂದ್ರವಾಯಿತು ತಾನು ಯಾವ ಮಿತ್ರ ಮಂಡಲಿಯ ಸ್ವಪ್ನವನ್ನು ಕಟ್ಟಿದ್ದರೋ— ಯಾವ ಮಿತ್ರ ಮಂಡಲಿ ಸಕಾಲದಲ್ಲಿ ನಿರ್ಮಾಣಗೊಳ್ಳುತಿದ್ದರೆ ಶಾಂತಿ ಭಂಗವಾಗುತ್ತಿರಲಿಲ್ಲವೋ–ಆ ಮಿತ್ರ ಮಂಡಲಿಯ ಕಾರ್ಯರಚನೆಗಾಗಿ ಚರ್ಚಿಲ್ಲರು ಪ್ರವಾಸಗಳನ್ನು ಕೈಕೊಂಡರು ಮಿತ್ರ ರಾಷ್ಟ್ರಗಳು ತಡೆದ ಯುದ್ಧದ ಬದಲಿಗೆ ಹೊಡೆದ ಯುದ್ಧಕ್ಕಿಳಿದುವು. 1944ನೇ ನವೆಂಬರ್ 11ರಲ್ಲಿ–ತನ್ನ ಎಪ್ಪತ್ತನೇ ಪ್ರಾಯದಲ್ಲಿ–ವಿಜಯ ಘೋಷಣೆ ಮಾಡುತ್ತಾ ಚರ್ಚಿಲ್ಲರು ಪೇರಿಸಿನಲ್ಲಿದ್ದರು

ಸರಸ್ವತಿ ವಿದ್ಯಾಲಯ ಹೈಸ್ಕೂಲು, ಗಂಗೊಳ್ಳಿ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹೈಸ್ಕೂಲಿನ I, II, III ನೇ ಫಾರ್ಮ್‌ಗಳು ಇದೇ ಬರುವ ಜೂನ್ 20ನೇ ಬುಧವಾರ ಹೊಸತಾಗಿ ತೆರೆಯಲ್ಪಡುವುದು.

ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ 1ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಕಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯ ವ್ಯವಸ್ಥೆ ಮಾಡಲಾಗಿದೆ.

ದಾಖಲಾತಿಯ ಅರ್ಜಿ ಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ—

ಸೆಕ್ರೆಟರಿ,
ಸರಸ್ವತಿ ವಿದ್ಯಾಲಯ ಹೈಸ್ಕೂಲ್,
ಗಂಗೊಳ್ಳಿ . ದ. ಕ.

WANTED

WANTED, B.A.B.T's and Bsc's for the Islamia Anglo Urdu High School, Bhatkal. Scale of pay for B.A.B.T's Rs. 55/- to 60/-3—125/- and for Bsc's Rs. 40/- to 50/-3—125/-.

Apply stating qualification and experience to:—

The Hon Secretary,
Anjuman Hami-e-Muslimeen,
BHATKAL. (N. K.)

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ ಧರ್ಮ ಛತ್ರ

ಇದೇ ತಾ॥ ೮–೧೦ 44ರಿಂದ
ರಾಮ್ಭೋಜರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್
ಉಡುಪಿ ಬೋರ್ಡಿಂಗ್ ಎಂಡ್ ಲಾಡ್ಜಿಂಗ್, ಮಧುರಾ.



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಚಾರ್ಯ,
ರಥಬೀದಿ, ಉಡುಪಿ.

CHAMPAE'S

Snow & Castrex

Sole Distributors for (India.)

Sukhananda Stores
Santhekatte, UDIPI, S. K.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ,. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪ರಿಂದ ೬ಬೊಟ್ಟು, ಸಣ್ಣ ಮಕ್ಕಳಿಗೆ ೧ರಿಂದ೨ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ ೩ ಸರ್ತಿ ಯುಕ್ತ ಕಂಡರೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ. ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಸಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ಬಾಟ್ಲಿಗಳು ಹುತ್ತು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದುನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರಮಾಡಿ ಸ್ಟೋರ್ಸ. ದಾವಣಗೇರಿ;—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ **ಬೆಲೆ ೦ ೧೪—೦**

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ - ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS UDIPI. S, INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. **Estd. 1921 ಸ್ಥಾಪನೆ.**

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ವರ್ಷ ೨೪ ವಾರ ೩೯] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24 No. 39

Founder **SRI A. B. SHETTY.**

ಉಡುಪಿ • **7-6-1945** • ಮಂಗಳೂರು.

ಅಮೃತಾಂಜನ ತಲೆವೇದನೆ, ಶೀತ, ನೆಗಡಿ, ಉಳುಕು, ಕುತ್ತಿಗೆ, ಛಳಿ, ಹಲ್ಲು ವೇದನೆಗಳೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು ವಿಷ ಮುಂತಾದ ಚೇಳಿ ಸರ್ಪ ಮಾತ್ರ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ. ಸರ್ವ ಔಷಧ ಅಂಗಡಿಗಳಲ್ಲಿ ಸಿಕ್ಕುತ್ತದೆ.

PFGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them." Vide Order No. 1786-ECI 44/1835.

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No. 4758-N/44.

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20-4-1945 and will be closed at the discretion of the Directors, not earlier than 31-5-1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 1913. Liability of Members is Limited)

Registered Head Office – **Rampankatta, MANGALORE.**
Bombay Office.– **26 Noble Chambers, Fort Bombay**
Factory.– **MALPE, South Kanara**
Depots at:– **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food, Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish Etc.**
2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.
3. The Madras Government has been approached to subscribe for half the capital and appoint a Government Director and render technical advice to the Company.
4. A Scientific Advisory Council will be formed and Technical Experts will be appointed to carry on intense research work in the Industry.
5. Arrangements are being made to procure Military contracts.
6. The Madras Government has been requested to supply the Company all the modern equipments useful for the purpose of the Company.
7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset.

MANGALORE,
19th April, 1945.

Mangalore Jarappa,
Managing Director.

ಸಣ್ಣ ಕಥೆ.

ಎರಡು ಅವಘಡಗಳು

ಎತ್ತಿನ ಗಾಡಿಯೊಂದು ಯಜಮಾನನ ಮನೇ ಮುಂಭಾಗಕ್ಕೆ ಬಂದು ನಿಂತಾಗ ಫಾತಿಮಾ ಎರಡು ಬಾರಿ ಬೊಗಳಿತು. ಆ ಮೇಲೆ ವಾಡಿಕೆಯಂತೆ ರೈಲ್ವೇ ಕಂಬಿಯಡಿಯ ಎರಡು ದಿಂಬುಗಳ ನಡುವೆ ಬಿದ್ದುಕೊಂಡಿತು.

ಸೆಕೆಗಾಲ; ಫಾತಿಮಾ ನೆಮ್ಮದಿಯಲ್ಲಿರಲಿಲ್ಲ ಪ್ರಾಯಬಲದಿಂದ ಹಾಗಾಗಿರಲೂ ಬಹುದು; ಅವಳದಿದು 14ನೇ ಬೇಸಿಗೆ. ಅಥವಾ ಒಂಟಿ ಜೀವನದಿಂದಾಗಿ ಹಾಗಾಗಿರಬಹುದು. ಅವಳು ಸಂಸಾರರಹಿತಳಾಗಿರಲಿಲ್ಲ. ಅರ್ಧರ್ಧ ಡಜನು ಸದಸ್ಯರಿದ್ದ ಒಂಭತ್ತು ಕುಟುಂಬಗಳ ನಡುವೆ ಫಾತಿಮಾ ಹುಟ್ಟಿದ್ದಳು. ಅವೂ ಈಗ ಮಾತಾಪಿತೃ ಸ್ಥಾನಕ್ಕೇರಿರಬೇಕು. ಅವೆಲ್ಲಾ ಅಗಲಿ ಬೇರೆ ಬೇರೆ ಕಡೆಗೆ ಹೋಗಿದ್ದವು

ಫಾತಿಮನ ಬಣ್ಣ ಬೂದು; ಪುಷ್ಟಿಯಾಗಿದ್ದು ದೊಡ್ಡ ಜೋಲು ಹೊಟ್ಟೆ, ಗಿಡ್ಡ ಕಾಲುಗಳಿಂದ ಕುರೂಪಿಯಾಗಿದ್ದಳು. ಆದರೆ ಅವಳ ಹೊಳಪುಳ್ಳ ಬೂದು ಕಣ್ಣುಗಳಾಗಲೀ, ಚುರುಕಾದ ಕಿವಿಗಳಾಗಲೀ ತಮ್ಮ ತಾರುಣ್ಯದ ಸೌಂದರ್ಯ ಕಳಕೊಂಡಿರಲಿಲ್ಲ. ಆಯಾಸಗೊಂಡು ಮರದ ದಿಂಬೊಂದಕ್ಕೆ ತಲೆಯಿಟ್ಟು ಮಲಗಿಕೊಂಡ ಫಾತಿಮನಿಗೆ ಜೀವನವೊಂದು ಹೊರೆಯಾಗಿದ್ದಂತೆ ಕಂಡುಬಂತು. ಆದರಲ್ಲೂ ಆವಳ ಹಲ್ಲುಗಳಲ್ಲಿ ಸರಿಯರ್ಧ ಕಳೆದು ಹೋಗಿವೆ. ರೈಲ್ವೇ ಲೈನು ತಿರುಗಣೆಯ ಕಾವಲುಗಾರನಾದ ಆ ಮುದುಕನಿಗೆ ಅವಳ ಮೇಲೆ ಮಮತೆ ಬಹಳ; ಅವಳಿಗಾವ ಆಹಾರ ಬೇಕೆಂಬುದನ್ನು ಚೆನ್ನಾಯಿಸಿಯೇ ಅವ ಹಾಕುತ್ತಿದ್ದನೆ. ಆದರೆ —ಆ ಸ್ವಚ್ಛ ಸಿಹೀ ಎಲುಬನ್ನು ಕಡಿಯುವ ಯೋಚನೆ; ಇನ್ನೆಂದೂ ಕೈಗೂಡದ ಆ ಯೋಚನೆಯು ಅಸಹನೀಯವೇ ಸರಿ.

ಅವಳು ಕಣ್ಣು ಮುಚ್ಚಿಕೊಂಡು ಮೇಲಿಂದ ಮೇಲೆ ಉಬ್ಬಸ ಬಿಡುತ್ತಿದ್ದಳು. ದಿನಂಪ್ರತಿ ಸಂಜೇ ಹೊತ್ತಿಗೆ ಈ ರೀತಿ ಮಲಗುವದು—ಸೂರ್ಯ ಕಂತುವಾಗ ಮೈಲು ಬಂಡಿ ಘುಡು ಘುಡಿಸುತ್ತಾ ಬಂದು ಆಕೆಯನ್ನೆಬ್ಬಿಸುವದು—ಈ ಪದ್ಧತಿ ಫಾತಿಮನ ಮೈಗೂಡಿಕೊಂಡಿತ್ತು. ಆರು ವರುಷಗಳಿಂದ ಪರಿಚಯವಿದ್ದುದರಿಂದಾಗಿ ಟ್ರೈನುಗಳೆಂದರೆ ಆಕೆಗೆ ಹೆದರಿಕೆಯಿರಲಿಲ್ಲ. ಈ ಆರು ವರುಷಗಳಲ್ಲಿ ಆಕೆ ತನ್ನ ಅರ್ಧ ಬಾಲವನ್ನೊಮ್ಮೆ ರೈಲಾಹುತಿ ಕೊಟ್ಟಿದ್ದಳು. ತತ್ಪರಿಣಾಮವಾಗಿ ಅಗ್ನಿ ಹೊಗೆ ಕಾರುತ್ತಾ ಘುಡು ಘುಡಿಸಿಕೊಂಡು ಸರದಿಯನ್ವಯ ಬರುವ ಈ ಖಿಲಾಡೀ ಭೇತಾಳ ಯಂತ್ರಗಳ ಕುರಿತು ಫಾತಿಮನ ಅಂತರ್ಭಾವ ಮತ್ತು ಜ್ಞಾನ ಇನ್ನಷ್ಟು ಚುರುಕುಗೊಂಡಿತ್ತು.

ಸುತ್ತಲಿನ ಪ್ರಶಾಂತ ವಾತಾವರಣ ಮತ್ತು ಗುಡಿಸಲಿನಿಂದ ಕೇಳಿ ಬರುವ ಮಾತುಗಳು ಆಕೆಯ ಕಿವಿಯಲ್ಲಿ ಜೋಗುಳ ಹಾಡಿದಂತಾಗಿ ಫಾತಿಮನಿಗಲ್ಲಿಯೇ ಝೊಂಪು ಹತ್ತಿತು.

× × ×

ಬೊಂಬಾಯಿ ಮೈಲಿನ ಮೊದಲನೇ ತರಗತಿಯ ಕೋಣೆಯೊಂದರಲ್ಲಿದ್ದ ಸುಂದರಿ ತನ್ನ ಪುಸ್ತಕವನ್ನು ಮತ್ತೊಮ್ಮೆ ಕೆಳಗಿಟ್ಟು, ಆ ಸೀಟಿನ ಮೂಲೆಯಲ್ಲಿ ಕುಳಿತುಕೊಂಡು ಓದುತ್ತಿದ್ದ ತರುಣ ಅಧಿಕಾರಿಯ ಅಂಗ ಸೌಂದರ್ಯವನ್ನು ಪುನಃ ಕಣ್ಣುಂಬಿಸಿಕೊಂಡಳು. ಕಲ್ಕತ್ತ ಬಿಟ್ಟ ನಂತರ ಇದು ಇಪ್ಪತ್ತನೇ ಬಾರಿ.

ಇವಳಿದ್ದ ಬಂಡಿಯನ್ನು ಹತ್ತಿದಾಗ ಆತ ಬಹಳ ನಮ್ರತೆಯಿಂದ ಕ್ಷಮೆಯಾಚಿಸಿದ್ದ. ತನ್ನ ಸೇನಾದಳವನ್ನು ಸಮಯಕ್ಕೆ ಸರಿಯಾಗಿ ಸೇರಬೇಕಾದ್ದರಿಂದ ಉಪಾಯವಿಲ್ಲ ಎಂದು ಆಕೆಯೊಡನೆ ಅಂಗಲಾಚಿದ್ದ. "ಓ. ಇಷ್ಟೆಲ್ಲಾ ಯಾಕೆ? ಇದೇನೂ ಹೆಂಗಸರ ಕೋಣೆಯಲ್ಲ—ಜನರಲ್ ಕಂಪಾರ್ಟ್ಮೆಂಟು"—ಎಂದು ಜೋಯಿ ಮೆಲ್ವಿಲ್ಲೆಯು ನಗುಮೊಗದಿಂದ ಆತನನ್ನು ಸಮಜಾಯಿಸಿದ್ದಳು.

ಗುಟ್ಟೆಂದರೆ ಅಂತರ್ಯತಃ ಆಕೆ ಅವನ ಸಹವಾಸವನ್ನು ಬಯಸಿದ್ದಳು. ಜೇಕ್ ಕೆಲ್ವಿನನಿಂದ ಪ್ರಣಯ ಭಂಗಗೊಂಡಿದ್ದ ಆಕೆಯಲ್ಲಿ-ಇನ್ನೆಂದೂ ಆತನನ್ನು ನೋಡುವದಾಗಲೀ ನೋಡಲಿಚ್ಛಿಸುವದಾಗಲೀ ಅಸಾಧ್ಯವೆಂದು ತಿಳಿದಿದ್ದ ಅವಳಲ್ಲಿ-ಜೀವನ ಜಿಗುಪ್ಸೆ ಹುಟ್ಟಿಕೊಂಡಿತ್ತು. ಜೇಕನಿಗೆ ಆಕೆಯ ಮೇಲೆ ಅನುರಾಗವಿರಲಿಲ್ಲವೆಂಬುದು ಸ್ಪಷ್ಟ. ತನ್ನೆರಡು ವರುಷಗಳು ವ್ಯರ್ಥವಾದುದಕ್ಕಾಗಿ ಆಕೆ ಪಶ್ಚಾತ್ತಾಪಗೊಂಡಿದ್ದಳು.

ತರುಣ ಅಧಿಕಾರಿ ವಿಶಾಲ ಲಜ್ಜಿತಾಕ್ಷಿಗಳಿಂದ ಆಕರ್ಷಣೀಯವಾಗಿದ್ದ. ಈ ಪ್ರಯಾಣದ ಕೆಲವು ಘಂಟೆಗಳ ಅವಧಿಯಲ್ಲಿ ಈತನ ಬಾಲಮುಖ ಮುದ್ರೆಯೊಡನೆ, ಜೇಕನ ಮೆಳ್ಳಗಣ್ಣೋಟ, ನರಳುನಗೆಯನ್ನು ಹೋಲಿಸುತ್ತಾ ಜೋಯಿಯು ಮಂಕಾಗಿ ಹೋಗಿದ್ದಳು ಹೊಸತಾಗಿ ಪ್ರೇಮಿಸುವದು ಇಷ್ಟೊಂದು ಸುಲಭವೇನು? ಯಾಕಾಗಬಾರದು—ಅದರಲ್ಲೂ ಎರಡು ವರುಷಗಳ ಎದೆ ನೋವು ಮತ್ತು ಸಂತಾಪವನನುಭವಿಸಿರುವ ವ್ಯಕ್ತಿಗೆ. ಅಂದರೆ ಇದೇನೂ ಪುನರುತ್ಥಾನವಲ್ಲ—ಸ್ವಾಭಾವಿಕ.

ಅವಳು ಆಕಸ್ಮಾತ್ ತನ್ನೊಳಗೇನೇ ಮೃದುವಾಗಿ ನಕ್ಕಳು. ತಾನೆಂತಹ ಹುಚ್ಚಿ. ಇಲ್ಲಿ ಆಗಿರುವದು ಸಂದರ್ಭವಶಾತಾದ ಪರಿಚಯ; ಅವನೊಬ್ಬ ಜತೆ ಪ್ರಯಾಣಿಕ ಮಾತ್ರ. ಆ ಮನುಷ್ಯರೋ—ಲಜ್ಜೆಯಿಂದಾಗಿ ಹವಾಮಾನದ ಕುರಿತು ಮಾತೆತ್ತುವಷ್ಟು ಎದೆಗಾರಿಕೆ ಕೂಡಾ ಇಲ್ಲದವ. ಅವಳು ತನ್ನ ಪುಸ್ತಕವನ್ನೆತ್ತಿಕೊಂಡಳು. ಮತ್ತದನ್ನು ಅಸಹನೆಯಿಂದ ಕೆಳಗಿಟ್ಟಳು. ಒಂದು ಪ್ರತಿಭಟನೆಯ ಭಾವನೆಯು ಅವಳಲ್ಲಿ ಪ್ರವಹಿಸುತಿತ್ತು—ಅದೊಂದು ಪದ್ಧತಿಯೆದಿರ ಪ್ರತಿಭಟನೆ.

"ನೀವು ಮೌನ ಪ್ರೇಮಿಯೆಂದು ಕಾಣುತ್ತದೆ"—ಎಂದು ಕೇಳಿ ಬಿಟ್ಟಳು ಜೋಯಿ. ಇಷ್ಟೇ ಮಾತಿನಿಂದ ಅವಳ ಶ್ವಾಸಕಟ್ಟಿದಂತಾಯಿತು ಹುಡುಗ ಆಕೆಯನ್ನೊಮ್ಮೆ ತಲೆಯೆತ್ತಿ ನೋಡಿದ; ಅರೆ ನಗೆಬೀರಿದ. ಆ ಮೇಲೆ ಪುನಃ ತಾನೋದುತ್ತಿದ್ದ ಚಿತ್ರಮಯ ಸಂಚಿಕೆಯನ್ನೇ ನೋಡ ಹತ್ತಿದ.

ಜೋಯಿಗೆ ಆತ ಮಧುರ ನೋಟ ಬೀರಿದಂತೆ ತೋರಿದ್ದರಿಂದ ಧೈರ್ಯಗೊಂಡಳು. "ನಿನಗೆ ಹುಡುಗಿಯರೆಂದರಾಗುವದಿಲ್ಲವೆ?" -ಎಂದು ಬಿಟ್ಟಳು. ಅವನ ಮುಖ ವಿವರ್ಣವಾಯಿತು. ಸಂಚಿಕೆಯನ್ನು ಕೆಳಗಿಟ್ಟು, ಬಹಳ ಗೊಂದಲಗೊಂಡು ಸಿಗರೇಟ್ ಕೇಸನ್ನು ಹುಡುಕಹತ್ತಿದ.

"ಒಂದು ಸಿಗರೇಟೆಳೆಯಿರಿ" ಎನ್ನುವಾಗ ಸೆಕೆಂಡ ಮಾತ್ರ ಆಕೆಯ ಕಣ್ಣುಗಳನ್ನು ಸಂಧಿಸಿದ್ದ. ಥಕ್ಕನೆ ಲಜ್ಜಾಪಸ್ಮಾರಕ್ಕೊಳಗಾಗಿ ಕಿಟಕಿಯಿಂದ ಹೊರಗೆ ನೋಡ ಹತ್ತಿದ

'ಥೇಂಕ್ಸ್' ಎನ್ನುತ್ತಾ ಜೋಯಿ ಸಿಗರೇಟನ್ನು ತೆಗೆದಾಗ ಆವನದಕ್ಕೆ ಬೆಂಕಿ ಹಚ್ಚಿದ. "ನಾನು ಕೇಳುತ್ತೇನೆ-ನೀವು ಹುಡುಗಿಯರನ್ನು ಮೆಚ್ಚುವದಿಲ್ಲವೆ?"

"ಅಲ್ಲ....ಅಲ್ಲ. ಅಂತಹದೇನೂ ಇಲ್ಲ ಇವನೆಂತಹ ಗೊಂಬೆಯಪ್ಪಾ ಎಂದು ನೀವು ಆಶ್ಚರ್ಯಪಟ್ಟಿರಬಹುದು. ನಾನಿಲ್ಲಿ ಇದ್ದುದರಿಂದ ನಿಮಗೆ ಅನಾನುಕೂಲವಾಯಿತೇನೋ ಎಂದು ನನ್ನ ಭಾವನೆ. ಏನಾದರೂ ಮಾತಾಡಿದರೆ ನಿಮಗೊಂದು ಉಪದ್ರವವಾಗುವೆನೆಂದು ನಾನು ಊಹಿಸಿದ್ದೆ".

ಆಕೆ ನಗಾಡಿದಳು.

"ತಾವು ಉಪದ್ರವಾಗುತ್ತೇವೆಂದು ಹೆಚ್ಚಿನ ಗಂಡಸರ ತಲೆಗೆ ಬರುವದಿಲ್ಲ. ಸತ್ಯಸ್ಥಿತಿಯೆಂದರೆ ನಾವು ಬೊಂಬಾಯಿಯಲ್ಲಿಳಿದೊಡನೆಯೇ ನನ್ನನ್ನು ನರ್ತನಕ್ಕೆ ಕರೆದೊಯ್ಯಬೇಕೆಂದು ಈಗೆಷ್ಟೋ ಮಂದಿ ಗಂಡಸರು ತರ್ಕಿಸುತ್ತಿದ್ದಾರೆಂದು ನಾನು ಪಂಥ ಹಾಕಬಲ್ಲೆ".

ಅವನು ಅಸಹನೆಯಿಂದ ಸಿಗರೇಟನ್ನು 'ಫುಸ್' ಎಂದ ಅವನ ದೃಷ್ಟಿಯಲ್ಲಿ ಮೂಡಿದ ಹೊಸ ಹೊಳಪನ್ನು ಕಂಡು ಆಕೆ ಅಂತರ್ಯತಃ ಆನಂದಗೊಂಡಳು.

"ನಿಜ" ಎಂದವನೇ ಆತ ಹೇಳಿದ. "ನಾನಾ ವರ್ಗವನ್ನು ಬಲ್ಲೆ. ಅವರು ಆ ನರ್ತನದ ವೇಳೆ ತೆರೆದ ವೈನ್ ಬಾಟ್ಲಿಯನ್ನೂ ಸುತ್ತು ಸುತ್ತು ತೆಗೆಯಿಸುವರು. ನರ್ತನ ಮುಗಿಯುವ ವೇಳೆ ನೀವು ಕೂಡಾ ಹಾಗೆಯೇ ಸುತ್ತುವಿರಿ. ಆ ಮೇಲೆ ಅವರ ನಿಮ್ಮನ್ನು ಮನೆಗೆ ಎತ್ತಿಕೊಂಡು ಹೋ

(೧೦ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

[illegible] ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ [illegible]ಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಕನ್ನಡ ನಾಡಿನ ಪ್ರಾತನಿಧಿಕ ವಿಮಾ ಸಂಸ್ಥೆ!



...ಮಗನು ಪದವೀಧರನಾಗಬೇಕೇ?
...ಹಾಗಾದರೆ ಇಂದೇ
ವಿದ್ಯಾವಿಮೆಯ ಪಾಲಿಸಿ ಪಡೆಯಿರಿ.
ಕಾಲೇಜು ಶಿಕ್ಷಣಕ್ಕೆ ಖಂಡಿತ ಕೊರತೆಯಾಗದು.

ಯುನೈಟೆಡ್ ಕರ್ನಾಟಕ
ಇನ್ಸುರೆನ್ಸ್ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd. DHARWAR

The Representative Insurance Concern of
KARNATAK.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

∴ ಆದರ್ಶ ನಾರಿ ವಿಜಯಲಕ್ಷ್ಮಿ ∴

ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್—ಮೋತಿಲಾಲರ ಸುಕುಮಾರಿ—ಜವಾಹಿರಲಾಲರಹಿರಿಯ ತಂಗಿ—1937ರ ಮಂತ್ರಿ—1942ರ ಕೈದಿ—ಈಗ ಫ್ರಿಸ್ಕೋದಲ್ಲಿದ್ದಾರೆ. ಉಜ್ವಲ ಹಿಂದೀ ರಾಷ್ಟ್ರೀಯತೆಯೊಂದಿದೆ ಎಂಬುದನ್ನು ತನ್ನ ಖಂಡ ತುಂಡ ವಾಣಿಗಳಿಂದ ಜಗಜ್ಜಾಹೀರು ಮಾಡುತಿದ್ದಾರೆ. ಹಿಂದೀ ಸರಕಾರವು ಹೆಸರುಪಟ್ಟಿ ಕಟ್ಟಿಬಿಟ್ಟ ಸರ್. ಮುದಲಿಯಾರ್ ಮತ್ತು ಸರ್ ನೂನರು ಬ್ರಿಟಿಷ್ ಸಾಮ್ರಾಜ್ಯಶಾಹಿಯು ಸಾಕಲು ಜಂತುಗಳೆಂಬ ಗುಟ್ಟನ್ನು ಸ್ವಾತಂತ್ರ್ಯೋದ್ಯಾನದ ಈ ಕೋಗಿಲೆಯ ಸ್ವರವನ್ನು ಪ್ರತ್ಯಕ್ಷ ಕೇಳಿಯೇ ಫ್ರಿಸ್ಕೋದಲ್ಲಿ ನೆರೆದಿರುವ ಜಾಗತಿಕ ಪ್ರತಿನಿಧಿಗಳರಿಯುವಂತಾಯಿತು. ಹಿಂದುಸ್ಥಾನದ ಪ್ರತಿನಿಧಿಗಳೆಂದರೆ ಗಾಂಧೀ ನೆಹರುಗಳು, ಹೊರತು ನೂನ್ ಮುದಲಿಯಾರರಲ್ಲ ಎಂದು ಸಾರಿದವರು ಬಹಳ ಮಂದಿ; ಆದರೆ ಮಿಕ್ಕವರೆಲ್ಲಾ ಆ ಪ್ರತಿನಿಧಿ ಕುಗ್ರಹಗಳ ಪೀಡೆ ನಿವಾರಣೆಗಾಗಿ 'ಶಾಂತಿ' ಹೋಮವಾಚರಿಸಿದ್ದರೆ ಶ್ರೀಮತಿ ಪಂಡಿತರು ಫ್ರಿಸ್ಕೋದಲ್ಲಿ ಮೂಡಿ ತನ್ನ ಪ್ರಭೆಯ ಬಲದಿಂದ ಆವುಗಳ ಹೊಳಪನ್ನೇ ಅಡಗಿಸಿಬಿಟ್ಟಿದ್ದಾರೆ, ಭಾರತಾಕಾಶವನ್ನು ಬೆಳಗಿದ್ದಾರೆ.

ಪುರುಷ ಪ್ರಭಾವದ ನಡುವೆ

ಪ್ರಚಾರ ವೇದಕ್ಕೆ ಕಟ್ಟು ಬಿದ್ದಿರುವ ಅಮೇರಿಕದಲ್ಲಿ ಭಾರತೀಯರ ಸ್ವಾಭಿಮಾನ ಪ್ರಸಾರಮಾಡಿದ ವೀರ ನಾರಿಯರಲ್ಲಿ ವಿಜಯಲಕ್ಷ್ಮಿ ಪಂಡಿತರು ಮೂರನೆಯವರು ಮಹಿಳೆಯರನ್ನು ಮಾನಿಸುವದರಲ್ಲಿ ಅಮೇರಿಕವು ಹಿಂದಿದೆ ಎಂದರೆ ಹೆಚ್ಚಿನವರು ಕೌತುಕ ಪಡಬಹುದು. ಚಲಚ್ಚಿತ್ರ ತಾರೆಯರ ಹೊರತು ಬೇರೆ ಸ್ತ್ರೀಯರು ಸಂಯುಕ್ತ ಸಂಸ್ಥಾನಗಳಲ್ಲಿ ಕೀರ್ತಿ ಹೊಂದಿದುದಿಲ್ಲ. ಅಮೇರಿಕನ್ ರಿಪಬ್ಲಿಕ್ ಸ್ಥಾಪನೆಯಾದಂದಿನಿಂದ ಅಲ್ಲಿಯ ಮಂತ್ರಿಮಂಡಲದಲ್ಲಿ ಸ್ಥಾನಪಡೆದ ಮಹಿಳೆ ಒಬ್ಬಳೇ—ಕಾಲಿಗಾರ ಸದಸ್ಯೆಯಾದ ಫ್ರಾನ್ಸೆಸ್‌ಪೆರ್ಕಿನ್ಸ್ ಅಲ್ಲಿಯ ರಾಜಕೀಯ ಪಕ್ಷಗಳಲ್ಲಿ ಹೆಣ್ಣು ಮುಂದಾಳನ್ನು ಪಡೆದಿರುವ ಪಂಗಡವೊಂದಿಲ್ಲ. ಏಳು ವರುಷಗಳ ಹಿಂದಿನ ಮಾತು. ನ್ಯೂಯೋರ್ಕಿನ ಬಳಿಯ ನಗರವೊಂದರಲ್ಲಿದ್ದಾಗ ಒಬ್ಬ ಬಾತ್ಮೀದಾರ ಸತೀ ರೂಸವೆಲ್ಟರನ್ನು ಪ್ರಶ್ನಿಸಿದ್ದ—"ಓರ್ವ ಮಹಿಳೆ ಅಮೇರಿಕಾಧ್ಯಕ್ಷೆಯಾಗುವ ಸಂದರ್ಭವೆಂದಾದರೂ ಇದೆಯೇ?" ಈ ಪ್ರಶ್ನೆಗೆ ಜಿಗುಪ್ಸೆಯೇ ಉತ್ತರವಾಯಿತು. ಇದೊಂದು ಕ್ಷುದ್ರ ಮನೋವೃತ್ತಿಯ ತಮಾಷೆಯೆಂಬ ಅಭಿಪ್ರಾಯದಿಂದ ಸತಿ ರೂಸವೆಲ್ಟರು ಅವಮಾನಿತನಾದೆನೆಂದು ಕುದಿದು ಹೋಗಿದ್ದರು. ಇಂತಹ ರಾಷ್ಟ್ರದಲ್ಲಿ ವಿಜಯಲಕ್ಷ್ಮಿಯವರೊಂದು ವಿಚಿತ್ರವಾದ ರೀತಿಯನ್ನು ವಿಜಯಗಳಿಸಿದ್ದಾರೆ. ಅಮೇರಿಕನರ ಪಾಲಿಗೆ ಈಕೆ ಮೋಹಿನಿ ಸ್ತ್ರೀ; ಪ್ರಥಮ ವರ್ಗದ ರಾಜಕೀಯ ಪುಢಾರಿ; ಮಹಾ ವಾಗ್ಮಿ; ಒಂದು ಕಾಲದ ಮಂತ್ರಿ; ಆದ್ದರಿಂದ ಅನುಪಮೆ!

ತೃತೀಯ ಮಹಿಳೆ

ದೂರದ ಅಮೇರಿಕಕ್ಕೆ ಹಿಂದೀ ಸ್ವಾತಂತ್ರ್ಯ ಸಂದೇಶವನ್ನೊಯ್ದ ಮಹಿಳಾ ಮಣಿಗಳಲ್ಲಿ ಶ್ರೀಮತಿ ಪಂಡಿತರು ಮೂರನೆಯವರು. ದಶ ವರುಷಗಳ ಹಿಂದೊಮ್ಮೆ ಶ್ರೀಮತಿ ಸರೋಜಿನಿ ದೇವಿ ಅಲ್ಲಗೆ ವಿಜಯಯಾತ್ರೆ ಬೆಳೆಸಿದ್ದರು. ಅಮೇರಿಕದಲ್ಲಿ ಹರಡಿದ್ದ ಮಿಸ್. ಕೆಥರಿನ್ ಮೇಯೋಳ ಹೊಲಸು ವೇದ 'ಮದರ್ ಇಂಡಿಯಾ'ದ ಮರ್ಯಾದೆಯನ್ನು ತನ್ನ ವಾಕ್ಸುಮವೃಷ್ಟಿಯಿಂದ ನಿವಾರಿಸಿ ಬಂದಿದ್ದರು. ಯುರೋಪು ಯುದ್ಧಾರಂಭದ ವೇಳೆ ಶ್ರೀಮತಿ ಕಮಲಾ ದೇವಿಯವರು ಅಮೇರಿಕಾ ಪ್ರವಾಸ ಕೈಗೊಂಡು, [illegible] ಕಾಂಗ್ರೆಸ್ ಮತ್ತು ಭಾರತ ಸ್ವಾತಂತ್ರ್ಯದ ಮೇಲೆ ಬಿದ್ದಿದ್ದ ಕೆಸರನ್ನೆಲ್ಲಾ ತನ್ನ ವಾಗ್ಪ್ರವಾಹದಿಂದ ತೊಳೆದು ಬಂದಿದ್ದರು. ಸರೋಜಿನಿಯಿಂದ ಮೇಯೋ ದುರ್ಗಂಧ ತೊಲಗಿದಂತೆ ಕಮಲಾದೇವಿಯ ಬ್ರಿಟಿಷ್ ರಾಯಭಾರಿ ಡಫ್ ಕೂಪರ್ ನಿರ್ಮಿತ ದುರ್ಭಾಷಣೆ ದೂರವಾಯಿತು. ಆದರೆ ಆವರಿಬ್ಬರಿಗೂ ಶ್ರೀಮತಿ ಪಂಡಿತರಿಗೆ ದೊರೆತಂತಹ ಸುವರ್ಣಸಂಧಿ ಸಿಕ್ಕಿರಲಿಲ್ಲ. ಫ್ರಿಸ್ಕೋ ಸಮ್ಮೇಲನ ನೆರೆಯುವಕಾಲ—ವಿಜಯಲಕ್ಷ್ಮಿ ಮೆರೆಯುವ ಕಾಲ. ಈ ಅಪೂರ್ವ ಸಮ್ಮೇಲನದ ಪ್ರತಿಯೊಂದು ಕ್ಷಣವನ್ನು—ಪ್ರತಿಯೊಬ್ಬನ ಮನವನ್ನು—ಈ ಮಹಿಳೆಗೆ ಮಾತ್ರ ಸಾಧ್ಯವೆಂಬಂತಹ ರೀತಿಯಲ್ಲಿ ಶ್ರೀಮತಿ ಪಂಡಿತರು ಸೂರೆಗೊಂಡಿದ್ದಾರೆ. ಹಿಂದೂ ಸ್ತ್ರೀತ್ವದ ಪ್ರತಿಬಿಂಬವಾಗಿರುವ ಈ ಮೋಹಿನಿಯು ಭಾರತ ಸ್ವಾತಂತ್ರ್ಯದ ಕುರಿತಾಡುತ್ತಿರುವ ಒಂದೊಂದು ಮಾತು ಅಮೇರಿಕಾನರ ಮನಸ್ಸಿನಲ್ಲಿ ಒಂದೊಂದು ನಾಟಕದಂತಹ ಪರಿಣಾಮವೀಯುತ್ತಿದೆ. ಅಮೇರಿಕಾನರ ತಲೆಯಲ್ಲಿ ಹಿಂದೀ ಸ್ತ್ರೀಯಾಗಿ ತುಂಬಿದ್ದ ಮದರ್ ಇಂಡಿಯಾ ಪುಸ್ತಕದ ದೇವದಾಸಿಯರು, ಮತ್ತು ಬೋಳು ತಲೆಯ ವಿಧವೆಯರನ್ನು ಓಡಿಸಿ, ಈ ಸೀರೆಯನಾರಿ ಸ್ಥಾಪನೆಗೊಂಡಿದ್ದಾಳೆ.

ನೆಹರು ರಕ್ತ

ಅಮೇರಿಕವು ಕಂಡ ಸರಸ್ವತಿ, ಪಾರ್ವತಿ, ಲಕ್ಷ್ಮಿಯೆನ್ನಬಹುದಾದ ಹಿಂದೀ ನಾಯಕಿಯರ ಪೈಕಿ, ಸರೋಜಿನಿ, ಕಮಲಾದೇವಿಯರಿಗಿರದ ಕುಟುಂಬ ವರ್ಚಸ್ಸೊಂದು ವಿಜಯ ಲಕ್ಷ್ಮಿಯವರ ಬೆಂಬಲಕ್ಕಿದೆ. ಜವಾಹಿರಲಾಲರಂತಹ ಲೋಕ ಪ್ರಸಿದ್ಧನ ಬೆನ್ನಲ್ಲಿ ಮೋತಿಲಾಲರಂತಹ ತಂದೆಗೆ ಹುಟ್ಟಿದ ಆಜನ್ಮ ಯಶೋವಂತೆ ವಿಜಯಲಕ್ಷ್ಮಿ. ನೆಹರು ಕುಟುಂಬಿಕರಲ್ಲಿ ಕುಟುಂಬ ಸಂಬಂಧವೆಂಬುದು ಇತರ ದೊಡ್ಡ ಕುಟುಂಬಗಳಲ್ಲಿರುವದಕ್ಕಿಂತ ಎಷ್ಟೋ ಬಿಗಿಯಾಗಿದೆ. ಈ ಕೊಂಡಿಯಿಂದಾಗಿಯೇ ಒಬ್ಬ ಜವಾಹಿರನಿಗೆ ಇಡೀ ಕುಟುಂಬವನ್ನೇ ರಾಷ್ಟ್ರೀಯ ಯಜ್ಞ ಕುಂಡಕ್ಕಿಳಿಸಲು ಸಾಧ್ಯವಾಯಿತು. ನೆಹರುಗಳು ಜೋರಾಟದ ರಕ್ತ; ಕೋಲ್ಮಿಂಚಿನಂತಹ ಸ್ವಭಾವ; ಕ್ಷಿಪ್ರಚಾತುರ್ಯ ಮತ್ತು ಸಾಕಾನಗತ್ಯತಯಾರಿ ರಹಿತ ದೃಢತೆಯೇ ಅದರ ತಿರುಳು. ಕೆಲವರು ಇದನ್ನು 'ನೆಹರೂ ಉದ್ರೇಕ' ಎಂದು ತಪ್ಪಾಗಿ ಕರೆಯುವದಿದೆ. ಈ ನೆಹರೂ ವೈಶಿಷ್ಟ್ಯವು ಶ್ರೀಮತಿ ಪಂಡಿತರಲ್ಲಿ ಪೂರ್ಣ ರೂಪದಲ್ಲಿದೆ. ಇಡೀ ಪ್ರಪಂಚವನ್ನು ಇದಿರಿಸಲು ಅಥವಾ ಒಲಿಸಲು ಸಾಕಾಗುವಂತಹ ಸಾಮರ್ಥ್ಯವಿದು. ಇದಿದ್ದ ಮೇಲೆ, ಕೀರ್ತಿ ಸಂಪಾದಿಸಿಕೊಡಲು ಜವಾಹಿರರ ಸೋದರಿಯಾಗಬೇಕೆಂದೂ ಇಲ್ಲ; ಮೋತಿಲಾಲರ ಪುತ್ರಿಯಾಗುವದೂ ಅನಗತ್ಯ ಆದರೆ ಶ್ರೀಮತಿಯವರಿಗೆ ಈ ಸಂಬಂಧ ಸೌಕರ್ಯವೂ ಇದೆ; ಮೋಹಕ ರೂಪವೂ ಇದೆ ಅವರು ಗೆಲ್ಲುವುದರಲ್ಲೇನಾಶ್ಚರ್ಯ?

ಅವರ ಸ್ತ್ರೀತ್ವ

ವಿಜಯಲಕ್ಷ್ಮಿ ಸುರೂಪಿ; ಆದರೆ ರೂಪ ಸೌಂದರ್ಯಕ್ಕಿಂತಲೂ ಅವರಲ್ಲೊಂದು ವರ್ಣನಾತೀತ ತೇಜವಿದೆ; ನಿರ್ವಾಜ್ಯ ಆಕರ್ಷಣೆಯ ಹಾವಭಾವವಿದೆ; ಉಚ್ಚ ವರ್ಗದ ಹಿಂದೂ ಸ್ತ್ರೀತ್ವವೊಂದಿದೆ. ಲೋಕ ಪ್ರಸಿದ್ಧ ಚೀನೀ ಬರೆಹಗಾರ ಲಿನ್‌ಯುಟಂಗರು ಶ್ರೀಮತಿಯವರ ಅತಿಥಿಯಾಗಿ ಒಮ್ಮೆ ಆನಂದಭವನಕ್ಕೆ ಬಂದಿದ್ದರು. ಅಲ್ಲಿಂದ ಮರಳುವಾಗ ತನ್ನ ಜತೆಗಾರನಾಗಿದ್ದ ಓರ್ವ ಹಿಂದೀ ಲೇಖಕರ ಮುಖನೋಡಿ "ಹಾದಯ್ಯಾ, ವಿಜಯಲಕ್ಷ್ಮಿ ಪಂಡಿತರು ಹಿಂದುಸ್ಥಾನದಲ್ಲಿ ಸುಂದರಿಯೆಂದು ಗಣಿಸಲ್ಪಟ್ಟಿರುವರೋ ಹೇಗೆ?" ಎಂದು ಕೇಳಿದರು. "ಏನಿಲ್ಲ!" ಎಂದು ಆ ಸ್ನೇಹಿತರೆಂದಾಗ ಲಿನ್‌ಯುಟಂಗರೆಂದರು: "ಅವರು ಲೋಕದ ಯಾವ ಭಾಗದಲ್ಲಾದರೂ ಸುಂದರಿಯೆನ್ನಿಸಬಲ್ಲರು. ಆದರೆ ಅವರು ಸುಂದರಿಯಾಗಿರುವದಕ್ಕಿಂತಲೂ ಹೆಚ್ಚಾಗಿ ಮನೋಹರೆ" ರಾಜಕೀಯ ರಂಗದ ಗಂಡುಗಲಿತನವಾಗಲೀ, ಮಂತ್ರಿತ್ವದ ಅಧಿಕಾರ ದರ್ಪವಾಗಲೀ ಅವರಸ್ತ್ರೀತ್ವವನ್ನು ನಾಶಮಾಡಲಸಮರ್ಥವಾಗಿದೆ. ಸಂಯುಕ್ತ ಪ್ರಾಂತ್ಯದ ಮಂತ್ರಿಯಾಗಿ ಆಫೀಸಿಗೆ ಬಂದ ಪ್ರಥಮ ದಿನವೇ, ತನ್ನ ಮೇಜಿನ ಮೇಲೆ ಗುಲಾಬೀ ಗೊಂಚಲಪಾತ್ರೆ ತಂದಿಡಬೇಕೆಂದು ಸೂಚಿಸಿದಾಗ ಕಾರ್ಯದರ್ಶಿಗಳು ಮುಖ ಮುಖ ನೋಡಿದ್ದರು. ಅರ್ಜಿ ಹಿಡಿದುಕೊಂಡು ಅಥವಾ ಸಂಭಾಷಣೆಗಾಗಿ

WANTED

WANTED, B.A.B.T's and Bsc's for the Islamia Anglo Urdu High School, Bhatkal. Scale of pay for B.A.B.T's Rs. 55/- to 60-3—125/- and for Bsc's Rs. 40/- to 50/-3—125/-.

Apply stating qualification and experience to:—

The Hon Secretary,
Anjuman Hami-e-Muslimeen,
BHATKAL, (N. K.)

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್ ಮಂಗಳೂರು ಚಿಕ್ಕಮಗಳೂರು
ಅಳ್ಳಿಪ್ಪಿ ಬೆಳಗಾಂವಿ ಬೆಂಗಳೂರು
ಕೊಚ್ಚಿ ಧಾರವಾಡ ಈರೋಡ್
ಕಲ್ಲಿಕೋಟೆ ಹುಬ್ಬಳ್ಳಿ ಮಧುರೆ
ಕಣ್ಣಾನೂರು ದಾವಣಗೆರೆ ಸೇಲಂ
ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸಹಕಾರವನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ (ESTD 1906 ಸ್ಥಾಪನ.)

CANARA BANK LIMITED
(Incorporated in British India, liability of Members Limited.)

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited.
Head Office UDIPI, (S. India)
T. A PAI, B Com, (Bom) A. I. I. B.
General Manager.

ಮನೆಗೆ ಹೋದವರು 'ಮಾನ್ಯ ಮಂತ್ರಿ'ಗಳು ವರಾಂಡದಲ್ಲಿ ಕುಳಿತುಕೊಂಡು ಹೊಲಿಯುತ್ತಿರುವುದನ್ನೋ, ಹೂದೋಟದಲ್ಲಿ ಕತ್ತರಿ ಹಿಡಿದುಕೊಂಡು ಕತ್ತರಿಸುವುದನ್ನೋ ಕಾಣುತ್ತಿದ್ದರು. 1937ರಲ್ಲಿ ಮಂತ್ರಿ—1942ರಲ್ಲಿ ಕೈದಿ—ಆದರೆ ಸದಾ ಕಾಲದಲ್ಲೂ ಸ್ತ್ರೀ! ಜೈಲಿನಲ್ಲಿರುವಾಗ ಶ್ರೀಮತಿಯವರು ಸ್ವತಃ ಅಡಿಗೆ ಮಾಡುತ್ತಿದ್ದರಲ್ಲದೆ ಹೂ ಮತ್ತು ಕಾಯಿಪಲ್ಯಗಳ ಒಂದು ಸಣ್ಣ ತೋಟವನ್ನೇ ನಿರ್ಮಿಸಿದ್ದರು

'ತಾಯಿ–ತಂಗಿ'

'ನಾನು ಮಂತ್ರಿಯಾದೆ' ಮತ್ತು 'ಜೈಲು ದಿನಗಳು' ಎಂಬ ಎರಡು ಪುಸ್ತಕಗಳಲ್ಲಿ ಶ್ರೀಮತಿಯವರು ತನ್ನ ಅನುಭವಗಳನ್ನು ಬರೆದಿದ್ದಾರೆ ಮೊದಲನೇ ಗ್ರಂಥದೊಂದು ಪುಟದಲ್ಲಿ ಇದೊಂದು ಘಟನೆಯು ಉಲ್ಲೇಖವಿದೆ:—ಅದು ಚುನಾವಣೆಯ ಕಾಲ. ಪ್ರಚಾರ ಪ್ರವಾಸಕ್ಕಾಗಿ ಶ್ರೀಮತಿಯವರು ರೈಲು ಕಂಪಾರ್ಟ್‌ಮೆಂಟೊಂದನ್ನು ಹತ್ತಿದರು ಅದರೊಳಗೆ ಓರ್ವ ಭಾರತೀಯ ವಿದ್ಯಾರ್ಥಿ, ಮತ್ತೊಬ್ಬ ಅಮೇರಿಕನ್ ಪ್ರವಾಸಿಕನು ಮೊದಲೇ ಇದ್ದರು. ಇವರು ಪ್ರವೇಶಿಸುವಾಗ ಚುನಾವಣೆಯ ಕುರಿತೇ ಅವರೊಳಗೆ ಮಾತುಕತೆಯಾಗುತ್ತಿತ್ತು. ಬಂದ ಮಹಿಳೆಯಾರೆಂಬ ಪರಿಚಯವಿಲ್ಲದ ಅವರಿಬ್ಬರೂ ಮಾತಾಡುತ್ತಾ ವಿಜಯಲಕ್ಷ್ಮಿಯವರು ನಿಂತ ಸ್ಥಾನದ ಸ್ಪರ್ಧೆಯ ವಿಷಯಕ್ಕೇನೇ ಬಂದರು ಹಿಂದೀ ವಿದ್ಯಾರ್ಥಿಯು ಆಕೆಯನ್ನು ಅತಿಯಾಗಿ ಶ್ಲಾಘಿಸುತ್ತಿದ್ದುದರಿಂದ ಅಮೆರಿಕಾನನಿಗೆ ರೇಗಿತು "ಅಷ್ಟೆಲ್ಲಾ ಹೊಗಳಲು ಆಕೆ ಮಾಡಿರುವ ಮಹತ್ವದೂ ಏನು" ಎಂದಾತ ಕೆಣಕಿ ಕೇಳಿದ "ಮಾಡಿರುವ ಮಹತ್ವೇ?' ಎನ್ನುತ್ತಾ ಹಿಂದೀ ಹುಡುಗ ಅರ್ಭಟಿಸಿಯೇ ಬಿಟ್ಟ- "ಅವರು ಏನೂ ಮಾಡುವದು ಬೇಡ. ಅವರು ನಮ್ಮ ತಾಯಿ ಮತ್ತು ಸಹೋದರಿ, ಅವರು ಗೆಲ್ಲುತ್ತಾರೆ".

ಅಮೇರಿಕದಲ್ಲಿ

ಸ್ಟೇಟ್‌ಓಫ್ ಕೆಲಿಫ್ರೋರ್ನಿಯಾದ ನ್ಯಾಯ ವಿಧಾಯಕ ಸಭೆಯಲ್ಲಿ ಭಾಷಣಕೊಟ್ಟ ಏಕ ಮಾತ್ರ ಮಹಿಳೆಯೆಂದರೆ ವಿಜಯ ಲಕ್ಷ್ಮಿ ಪಂಡಿತ್. ಅತಿಥಿಗಳಾಗಿ ಬಂದು ಅಲ್ಲಿ ಭಾಷಣವಿತ್ತ ಭಾಗ್ಯಶಾಲಿಗಳು ಪುರುಷರಲ್ಲಿ ಇಬ್ಬರೇ- ಫಿಲಿಪ್ಪೈನ್ಸಿನ ರೋಮುಲೋ ಮತ್ತು ಬ್ರಿಟಿಷ್ ರಾಯಭಾರಿ ಲೋರ್ಡ್ ಹೆಲಿಫೇಕ್ಸ್ ಫ್ರಿಸ್ಕೋಗೆ ಹೋದಮೇಲಿನ ಶ್ರೀಮತಿಯವರ ಕಾರ್ಯಕಲಾಪಗಳಗಂತೂ ಹಿಂದುಸ್ಥಾನವು ಚಿರಋಣಿಯಾಗಿರಬೇಕು ಭಾರತ ಸ್ವಾತಂತ್ರ್ಯಾಂದೋಲನಗಳದೊಂದು ಗ್ರಂಥವಾಗುವದಾದರೆ ಅದರ ಮುಖಪತ್ರದಲ್ಲಿ ಶ್ರೀಮತಿಯವರ ಫ್ರಿಸ್ಕೋ ಉದ್ಗಾರವು ಛಾಪಿಸಲ್ಪಡಬಹುದು ಫ್ರಿಸ್ಕೋ ಸಮ್ಮೇಲನದಲ್ಲಿ ಹಿಂದೀ ಸ್ವಾತಂತ್ರ್ಯಕ್ಕೆ ಜಾಗತಿಕ ಪ್ರಶ್ನೆಯ ಸ್ಥಾನಕೊಡಿಸಿದ ಪೂರ್ಣ ಕೀರ್ತಿ ಶ್ರೀಮತಿ ಪಂಡಿತರಿಗೆ ಸಲ್ಲಬೇಕು ಈ ಪೂರ್ಣ ಚಂದ್ರನಿದಿರಲ್ಲಿ ಸರ್ ರಾಮಸ್ವಾಮಿ ಮುದಲಿಯಾರ್, ಸರ್ ಖಾನ್‌ನೂನರಂತಹ ನಕ್ಷತ್ರಗಳು ಪ್ರಕಾಶಿಸಲಾರದೆ ಹೋದುವು. ಅವರ ಬ್ರಿಟಿಷ್ ಯಜಮಾನರ ಮುಖಕ್ಕೆ ಮಂಗಳಾರತಿಯಾಯಿತು. ತಮಗಾದ ತೇಜೋವಧೆಯ ಪ್ರತೀಕಾರಕ್ಕಾಗಿ ಈ ಗುಲಾಮ ಪ್ರತಿನಿಧಿಗಳು ತಮ್ಮ ಸ್ನೇಹಗ್ರೇಸರನಾದ ಗಡ್ವಾಲ ಕುರ್ಶಿದನನ್ನು ಕಳುಹಿಸಿ ಶ್ರೀಮತಿಯವರ ಪತ್ರಿಕಾ ಪರಿಷತ್ತಿನಲ್ಲಿ ಪಿಕಲಾಟ ಮಾಡಿಸಿದ್ದರು ಆದರೆ ಹೆಜ್ಜೆಯ ಶಬ್ದ ಕೇಳಿ ಸಂಗೀತ ಕಚೇರಿ ನಿಲ್ಲುವಂತಿದೆಯೆ? ಕಂಡ ಕಂಡವರೆಲ್ಲ ಈ ಕುರ್ಶಿದನನ್ನು 'ಬ್ರಿಟಿಷ್ ಗೊಂಚಲು ಬಾಲ' ಎಂದು ಕರೆಯ ಹತ್ತಿದ್ದರಿಂದ ಈಗ ಗಡ್ಡ ಬೋಳಿಸಿಕೊಂಡಿದ್ದಾನಂತೆ!

ವಿಜಯ

ಅಮೇರಿಕದ ಹಿಂದೀ ಲೀಗಿನ ಅಧ್ಯಕ್ಷರಾದ ಸರ್ದಾರ್ ಜೆ. ಜೆ. ಸಿಂಗರು 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಗೆ ಅಲ್ಲಿಂದ ಒಂದು ಸ್ವಾರಸ್ಯವಾದ ಕಥೆ ಕಳುಹಿದ್ದಾರೆ ಕೆಪ್ಟನ್‌ಬ್ರೌನ್ಸ್‌ಡನರು ಫ್ರಿಸ್ಕೋದ ಹಿಂದೀ ಗುಲಾಮ ಪ್ರತಿನಿಧಿಗಳ ಕಾರ್ಯದರ್ಶಿ. ಈ ಉಗ್ರಮನೋವೃತ್ತಿಯ ಬ್ರಿಟಿಷರವನು ಫ್ರಿಸ್ಕೋದಲ್ಲಿ ಜೆ ಜೆ ಸಿಂಗರೊಡನೆ ದೂರಿದ. "ಎಲ್ಲಾ ಜನರೂ ವಿಜಯಲಕ್ಷ್ಮಿಯವರ ವಿಳಾಸವೇನೆಂಬುದನ್ನು ನನ್ನೊಡನೆ ವಿಚಾರಿಸುತ್ತಾರೆ ಈ ಫೋನ್ ಕರೆಗಳು ನನಗೆ ಅಸಹ್ಯ 'ಕರಕರೆ'ಯಾಗಿವೆ. ಹಿಂದೀ ಪ್ರಾತಿನಿಧ್ಯಕ್ಕೂ ವಿಜಯಲಕ್ಷ್ಮಿಯವರಿಗೂ ಸಂಬಂಧವಿಲ್ಲವೆಂಬ ವಿಷಯವನ್ನು ನೀವೇಕೆ ಜನತೆಗೆ ತಿಳಿಸಬಾರದು?" ಸರದಾರ್ ಸಿಂಗರಿದಕ್ಕೆ ಕೆನ್ನೆತಾಡನದಂತಹ ಉತ್ತರಕೊಟ್ಟರು. "ಹೌದೇನು! ಈ 'ಹಿಂದೀ ಪ್ರಾತಿನಿಧ್ಯ'ದೊಡನೆ ತನಗೆ ಸಂಬಂಧವಿರಬೇಕೆಂದು ಜನರು ನೆನಸಿದ್ದಾರೆಂಬುದನ್ನು ಕೇಳಿದರೆ ವಿಜಯ ಲಕ್ಷ್ಮಿಯವರು ಲಜ್ಜೆಯಿಂದ ತಲೆಬಾಗುವದು ಖಂಡಿತ." ಬ್ರೌನ್‌ಸ್ಟೆಡರಿಗೆ ಮೊಣಗು ಮುರಿದಂತಾಯಿತು. ಆದರೆ ಮಾತಾಡಲಿಲ್ಲ. ಮತ್ತೊಮ್ಮೆ ಜೆ. ಜೆ. ಸಿಂಗರ ಮಿತ್ರರಾದ ಅಮೆರಿಕಾನೊಬ್ಬರು ಬ್ರೌನ್‌ಸ್ಟೆಡನ ಆಫೀಸಿನಲ್ಲಿದ್ದರು. ಆಗ ಟೆಲಿಫೋನ್ ಬಾರಿಸಲ್ಪಟ್ಟಿತು; ಯಾರೋ ಒಬ್ಬರು ವಿಜಯ ಲಕ್ಷ್ಮಿಯವರ ವಿಳಾಸವಾವುದೆಂದು ಕೇಳಿದರು ಬ್ರೌನ್‌ಸ್ಟೆಡರು ಜಿಗುಪ್ಸೆಯಿಂದ ಗಟ್ಟಿಯಾಗಿ "ಇಲ್ಲ ನಮಗೆ ಶ್ರೀಮತಿ ಪಂಡಿತರ ಕುರಿತು ಏನೊಂದೂ ಗೊತ್ತಿಲ್ಲ" ಎಂದುಬಿಟ್ಟರು. ಫೋನನ್ನು ಹಾಗೆಯೇ ಕೆಳಗಿಟ್ಟು ಅಮೇರಿಕನ್ ಗೃಹಸ್ಥನ ಮುಖ ನೋಡುತ್ತಾ ಹೇಳಿದರು "ಇದೊಂದು! ಈಸೆನೋವರರ ಕಾರ್ಯಾಲಯಕ್ಕೆ ಫೋನ್ ಮಾಡಿ ಹಿಟ್ಲರನನ್ನು ವಿಚಾರಿಸಿದ ಹಾಗೆ!"

ಆಗಲಿ! ವಿಜಯಲಕ್ಷ್ಮಿ ಅಥವಾ ಯಾವದೇ ಹಿಂದೀಯನನ್ನಾಗಲೀ, ಯಾವದೇ ಹಿಂದೀ ವಿಷಯವನ್ನಾಗಲೀ ಬ್ರಿಟಿಷರಿಂದ ನಿಷೇಧಿಸುವ ಚೇಷ್ಟೆ ಇನ್ನಾದರೂ ತಪ್ಪಲಿ!

Notice

ಕಾರ್ಕಳ ಡಿ ಮು ಕೋರ್ಟಿನಲ್ಲಿ

O P No. 26/1945

ವರದಯ್ಯ ಶೆಟ್ಟಿ ಬೊಮ್ಮು ಶೆಟ್ಟಿ ಮಗ ಕಾರ್ಕಳ ತಾಲ್ಲೂಕು ನಾರಾವಿ ಗ್ರಾಮದ ಮೂಡಬೆಟ್ಟು ಅರ್ಜಿದಾರ

ಮತ್ತು

1 ಚಂದಯ್ಯ ಶೆಟ್ಟಿ, 2 ನೇಮಿರಾಜ ಶೆಟ್ಟಿ, 3 ಅಮೃತಮತಿ, 4 ಪದ್ಮಾವತಿ, 5 ಲಕ್ಷ್ಮೀ ದೇವಿ ಬೊಮ್ಮು ಶೆಟ್ಟಿಮಕ್ಕಳು ಎದುರು

1 2, 5ನೇಯವರು ಕಾರ್ಕಳ ತಾಲ್ಲೂಕು ನಾರಾವಿ ಗ್ರಾಮದ ಮೂಡಬೆಟ್ಟು ಪೇಟೆಯಲ್ಲಿಯೂ 3-4ನೇ ಯವರು ಪುತ್ತೂರು ತಾಲ್ಲೂಕು ತೆಕ್ಕಾರು ಗ್ರಾಮದ ಬಜಕಲ್ಲು, ಬಸ್ತಿ ಬಳಿಯಲ್ಲಿಯೂ ಇರುವವರು

ಸದ್ರಿ ಎದುರಿಗೆ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ

ಅರ್ಜಿದಾರನ ಎದುರ ತಂದೆ ಹಾಲಿ ಮೃತಪಟ್ಟ ಬೊಮ್ಮು ಶೆಟ್ರು ಕಳೆದ ತಾರೀಕು 3 11 1942ರಲ್ಲು ಬರದಿಟ್ಟ ವೀಲನಾಮೆ ಮೇರೆಗೆ ಅತಗೆ ಸಲ್ಲತಕ್ಕ ನೇಮಿರಾಜ ಶೆಟ್ರಿಂದ ಕಾರ್ಕಳ ಡಿ. ಮು ಕೋರ್ಟು O S. 352/1942ನೇ ಡಿಕ್ರಿ ಪ್ರಕಾರ ಬರಬೇಕಾದ ಹಣವನ್ನು ವಸೂಲು ಮಾಡುವರೆ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ತಾ 14-6 1945ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಡೋಣಾಗಿಯದೆ ಅದ್ದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು ತಪ್ಪಿದರೆ ಸದ್ರಿ ಅರ್ಜಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು

ಕಾರ್ಕಳ | (Sd.) K Venkatesha Pai
ತಾ. 2-6-45 | ಅರ್ಜಿದಾರನ ಕಡೆವಕೀಲ

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 41/4

ಐತಪ್ಪ ಭಂಡಾರಿ—ವಾದಿ
ಮತ್ತು ಭಂಡಾರಿ ಕೂಡಾ—ಪ್ರತಿವಾದಿರು.

1ನೆ ಪ್ರತಿವಾದಿ-ಮುತ್ತು ಭಂಡಾರಿ-ಕಿಂಞಣ ಭಂಡಾರಿಯ ಮೊಮ್ಮಗ-ಪದೇರಪ್ಪ ಹೆಂಗ್ಸಿನ ಮಗ-ಹಾಲಿ-ಕುಚಿಪಳ್ಳದಲ್ಲಿ ರಾಮ ಪಂಡಿತರಲ್ಲಿ-ವ ಚಾಯೂರು ಗ್ರಾಮದ ಪೆರುವಡಿಯಲ್ಲಿಯೂ ಇರುತ್ತಾನೆ

ದಾವಾ ಅಡಳ್ತೆ ಹಕ್ಕು ಖುಲಾಸ ಪತ್ರದಿಂದ ದಾವಾ ಆಸ್ತಿ ಸ್ವಾಧೀನತೆಗೂ ಅಡಳ್ತೆ ನಡಿಸುವರೆ ಕೂಡಾ ಮೇಲಿನ ದಾವಾ ಮಾಡಿ ಅದರ ನೋಟೀಸಿನ ತನ್ಖ್ವಾದೆ ತಾ 13 6 1945ಕ್ಕೆ ಇಟ್ಟಿರುವದ್ರಿಂದ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ವ್ಯಾದೆಗೆ 11ಗಂಟೆಗೆ ಈ ಕೋರ್ಟು ಮುಂದೆ ತಪ್ಪದೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ಬಿಟ್ಟಾಯಿ ಎಂದ ಮಾಡಿ ಈ ದಾವೆಯು ಮುಂದಿನ ತನ್ಖ್ವೆಯಿಂದ ತೀರ್ಮಾನಿಸಲಾದೀತು ಎಂತ ಈ ಕೋರ್ಟಿನವರ ಹುಕುಂ ಮೇರೆಗೆ ಈ ನೋಟೀಸು ಮಾಡಿಸಿಯದೆ

ಮೊಕ್ಕಾಂ ಪುತ್ತೂರು |
ತಾರೀಕು 31 5 1945 |

(Sd) B Ramachandra Rao
Pleader for plaintiff

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ. 1908)
1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ
ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತ
ಆಶ್ರಿತ ಸಂಸ್ಥಾಪಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟ್
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ. 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ
ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸ
ಗಳಿಂದ ಜನಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ
ಅದೇ ಧ್ಯೇಯ-ಪಾಲನೆಗೆ ಸಿದ್ಧರು.
1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬೆಳವಣಿಗೆ
ಕಾರ್ಯಾಲಯಗಳು.—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು,
ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ 8—10—44ರಿಂದ
ರಾಮ್ನೇಶರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ್
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಬೈಂಡು ಮಾಡಿದ ಸಂಪುಟಕ್ಕೆ ರೂ 2
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
ಉಡುಪಿ

ಪಾಳೆಯದೊಳಗಿನ ಕಚ್ಚಾಟ : ಪರದೆಯೊಳಗಿನ ಪಿಕಲಾಟ.

ಸಿರಿಯಾದ ಗಲಭೆ

ಸಿರಿಯಾ ಲೆಬನಾನಿನಲ್ಲಿ ಫ್ರಾನ್ಸಿಗಿರು ವ ಮೇಲಧಿಕಾರ ಸಂಬಂಧದ ಹಕ್ಕುಬಾ ಧ್ಯತೆಗಳ ರಕ್ಷಣೆಗಾಗಿ ಫ್ರೆಂಚ್ ಸೇನೆಯು ಪ್ರವೇಶಿಸಿದ್ದರಿಂದ ಮುಷ್ಕರ, ಘರ್ಷಣೆಗ ಳು ನಡೆದು ಕೊನೆಗೆ ಸಿರಿಯದ ರಾಜಧಾ ನಿ ಡಾಮಾಸ್ಕಸಿನ ಮೇಲೆ ನಾಲ್ಕೈದು ದಿ ನಗಳ ವರೆಗೆ ಫ್ರೆಂಚರು ಭೀಕರ ಆಕಾಶ ದಾಳಿ ನಡೆಸಿ ಸೇನಾ ಧಾಳಿಯನ್ನೇ ಕಠಿಣ ರೀತಿಯಿಂದ ಕೈಕೊಂಡಿದ್ದರು. ತತ್ಪರಿಣಾ ಮವಾಗಿ ಸುಮಾರು 1000ದ ವರೆಗೆ ಸಿರಿ ಯಾನರು ಮಡಿದರಲ್ಲದೆ ಮಿತ್ರಪಾಳೆಯ ದೊಳಗಿನ ಈ ಕೋಲಾಹಲವು ಇಡೀ ಪ್ರ ಪಂಚದ ಕಣ್ಣನ್ನು ತೆರೆಯಿಸಿದ್ದಿತು. ಇರಾ ಕ್, ಇರಾನ್, ಇಜಿಪ್ಟ್ ಮೊದಲಾದ ನೆ ರೆಯ ಮಹಮ್ಮದೀ ರಾಷ್ಟ್ರಗಳು ಉದ್ರೇಕ ಗೊಂಡು ಅರಬ್ ರಾಷ್ಟ್ರ ಸಂಘದ ನಿಯ ಮಾನುಸಾರವಾಗಿ ಫ್ರೆಂಚರನ್ನು ವಿರೋಧಿ ಸಲಣಿಯಾಗಿದ್ದುವು.

ಚರ್ಚಿಲ್ಲರಿಂದ ಆಕಸ್ಮಿಕ ತಡೆ

ಅದು ವರೆಗೂ ಮಧ್ಯಸ್ಥಿಕೆ ವಹಿಸಿದ್ದ ಬ್ರಿಟಿಷರು ಪರಿಸ್ಥಿತಿಯು ವಿಷಮಾವಸ್ಥೆಗೆ ಮುಟ್ಟಿದೊಡನೆ ಫ್ರೆಂಚ್ ಸೇನೆಗೆ ಥಟ್ಟನೆ 'ಬ್ರೇಕ್' ಹಾಕಿದ್ದಾರೆ. ಜೂನ್ ತಾ. 1ರ ಲ್ಲಿ ಸಿರಿಯಾದೊಳಗೆ ಪ್ರವೇಶಿಸತಕ್ಕದ್ದೆಂ ದು ಮಧ್ಯ ಪೂರ್ವದ ಸೇನಾನಿ ಸರ್ ಬೆ ರ್ನಾರ್ಡ್ ಪಾಗೆಟರಿಗೆ ಚರ್ಚಿಲ್ಲರು ಆಜ್ಞಾ ಪಿಸಿ, ಈ ಸಂಗತಿಯನ್ನು ಜನರಲ್ ಡಿ ಗೋಲೆಯವರಿಗೆ ತಿಳಿಸಿ, ಫ್ರೆಂಚ್ ಸೇನೆ ತನ್ನ ರಾಣಗೆ ಹಿಂದೆಗೆಯತಕ್ಕದ್ದೆಂದು ಸೂಚಿಸಿದ್ದಾರೆ ಈ ತಡೆಗೆ ಅಮೇರಿಕವು ತನ್ನ ಸಂಪೂರ್ಣ ಸಮ್ಮತಿಯಿತ್ತಿದೆ. ತದ ನುಗುಣವಾಗಿ ಜನರಲ್ ಡಿಗೋಲೆಯವರ ಆಜ್ಞಾನುಸಾರ ಡಮಾಸ್ಕಸಿನ ಫ್ರೆಂಚ್ ಸೇ ನಾನಿ ಕೂಡಲೇ ಗುಂಡೆಸೆತವನ್ನು ನಿಲ್ಲಿಸಿ ದ್ದಾರೆ ಬ್ರಿಟಿಷ್ ಸೇನೆ ಡಮಾಸ್ಕಸನ್ನು ಪ್ರವೇಶಿಸಿ ಪಹರೆ ನಡೆಸುತ್ತಿದೆ. ಈ ಕುರಿ ತು ಕೂಡಲೇ ನ್ಯಾಯವಾದ ತೀರ್ಮಾನ ಮಾಡಬೇಕೆಂದು ರಶ್ಯದ ಸರಕಾರವು ಬ್ರಿ ಟನ್, ಫ್ರಾನ್ಸ್, ಅಮೇರಿಕ ಮತ್ತು ಸಿರಿ ಯಾ, ಲೆಬನಾನ್ ಸರಕಾರಗಳನ್ನು ಕೇಳಿ ಕೊಂಡಿದೆ. ಡಮಾಸ್ಕಸ್ ಈಗ ಶಾಂತವಾ ಗಿರುವದಾದರೂ ಪರಸ್ಪರರೊಳಗಿನ ತೀ ವ್ರ ದ್ವೇಷದ ದೆಸೆಯಿಂದಾಗಿ ಅಲ್ಲಲ್ಲಿ ಘ ರ್ಷಣೆ, ಕೊಲೆಗಳಾದ ವಾರ್ತೆ ಬರುತ್ತಿದೆ.

ಬ್ರಿಟನಿನ ಮೇಲೆ ಡಿಗೋಲೆಯ ಆರೋಪ

ಫ್ರೆಂಚ್ ನಾಯಕ ಜನರಲ್ ಡಿಗೋ ಲೆಯವರು ಬ್ರಿಟನಿನ ಮೇಲೆ ಪ್ರಬಲಾ ರೋಪ ಹೊರಿಸಿದ್ದಾರೆ "ಲೆವೆಂಟಿನಲ್ಲಿ ಹ ಲವು ಮಂದಿ ಬ್ರಿಟಿಷ್ ಏಜಂಟರಿದ್ದು ಅ ವರು ಫ್ರೆಂಚರ ವಿರುದ್ಧವಾಗಿ ಅರಬರನ್ನು ಎತ್ತಿ ಕಟ್ಟುತ್ತಿದ್ದಾರೆ. ಸಿರಿಯದ ಪೋಲೀ ಸರು ಬ್ರಿಟಿಷ್ ಆಯುಧಧಾರಿಗಳಾಗಿ ಫ್ರೆಂ ಚ್ ಕಾವಲು ಠಾಣ್ಯಗಳ ಮೇಲೆ ಬಿದ್ದಿ ದ್ದಾರೆ. ಫ್ರೆಂಚರು ತಮ್ಮ ಸೇನೆಗಳನ್ನೆ ಲ್ಲಾ ಪಶ್ಚಿಮ ಕಡೆಗೆ ಸಾಗಿಸಿ ಕೇವಲ 5000 ಮಂದಿಯನ್ನು ಲೆವೆಂಟಿನಲ್ಲಿ ಬಿಟ್ಟಿ ರುವಾಗ ಬ್ರಿಟಿಷರ 600,000 ಸೇನೆಗಳು ಅಲ್ಲಿವೆ. ಚರ್ಚಿಲ್ಲರ ಸಂದೇಶ ಬರುವ ಮೊದಲ ದಿನವೇ ಹೋರಾಟ ನಿಲ್ಲಿಸಲು ಫ್ರೆಂಚರಿಗಾಜ್ಞೆ ಕೊಡಲಾಗಿತ್ತು. ಚರ್ಚಿಲ್ಲ ರ ಸಂದೇಶದಿಂದಾಗಿ ನಮ್ಮ ಧೋರಣೆ ಬ ದಲಾಗಿಲ್ಲ; ಬದಲಾಗುವಂತಿಲ್ಲ. ನಾವು ಸ ಹಕಾರಕ್ಕೆ ಸಿದ್ಧರಿದ್ದೇವೆ ಹೊರತು ಬ್ರಿಟಿ ಷರ ಅಧಿಕಾರವನ್ನು ಶಿರಸಾವಹಿಸಲು ತಯಾರಿಲ್ಲ"–ಎಂದು ಡಿಗೋಲೆಯವರ ಸ್ಪಷ್ಟವಾಣಿ. ಅರಬರು ಆಂಗ್ಲೋ–ಅಮೆರಿ ಕಾನರ ವರ್ತನೆಯಿಂದ ಹಿರಿಹಿಗ್ಗಿದ್ದಾರೆ. ರಶ್ಯವು ಈ ಕುರಿತು ಮಹಸತ್ತ್ವದಿಂದ ಮುಂದಾಗಿರುವದು ವಿಶೇಷ. ಸಿರಿಯಾದ ಸ್ಥಳೀಯ ಪ್ರಶ್ನೆಗಿಂತ ಭಿನ್ನವಾದ ದೊಡ್ಡ ಧ್ಯೇಯವು ಈ ಘರ್ಷಣೆಯಲ್ಲಿದೆಯೆಂದೂ ಡಿಗೋಲೆಯವರ ಸ್ವತಂತ್ರ ಫ್ರೆಂಚ್ ಪ ಕ್ಷವು ರಶ್ಯದ ಪಕ್ಷಪಾತಿಯಾಗಿದ್ದು, ಆಂ ಗ್ಲೋ ಅಮೇರಿಕಾನರೊಡನೆ ಹಲವು ಬಾ ರಿ ಘರ್ಷಿಸಿರುವದಕ್ಕಾಗಿ ಚರ್ಚಿಲ್ಲರು ಉ ದ್ದೇಶಪೂರ್ವಕ ಪೀಡಿಸಿ ಸೈನಿಕಾಚರಣೆ ಗಿಳಿದರೆಂದೂ ಊಹೆಯಿದೆ.

ಆಸ್ಟ್ರಿಯಾ ಮತ್ತು ಟ್ರೀಸ್ಟೆಯಲ್ಲಿ

ಆಸ್ಟ್ರಿಯಾವನ್ನು ವಶಪಡಿಸಿಕೊಂಡು ರಶ್ಯದಲ್ಲಿ ಸ್ಥಾಪಿಸಿರುವ ರೆನ್ನರ್ ಸರಕಾರ ವನ್ನು ಇಂಗ್ಲಾಂಡಾಗಲೀ ಅಮೇರಿಕವಾಗ ಲೀ ಒಪ್ಪಿಕೊಂಡಿಲ್ಲ. ಮಾತ್ರವಲ್ಲ, ಬ್ರಿಟಿ ಷರು ತಮ್ಮದೇ ಆದ ಕಂಟ್ರೋಲ್ ಕಮಿಶ ನೊಂದನ್ನು ಅದರೊಳಗೆ ತುರುಕಿಸಲು ಪ್ರ ಯತ್ನಿಸುತ್ತಿದ್ದಾರೆ ಟ್ರೀಸ್ಟೆಯನ್ನು ಬಿಟ್ಟು ಕೊಡಲೊಪ್ಪದ ಯುಗೋಸ್ಲೇವಿಯದ ಮಾರ್ಶಲ್ ಟಿಟೋರಿಗೆ ಬ್ರಿಟಿಷ್ ಸೇ ನಾನಿ ಅಲೆಗ್ಸಾಂಡರರು ಪದರಿಸಿ, ... ಪಾಶಿನ ಸ್ಥಳವನ್ನು ಖಾಲಿಮಾಡಿಸಿ ಆಕ್ರ ಮಣ ಸಿದ್ಧತೆ ನಡೆಸಿದ್ದರೂ ಈ ತನಕ

ಇಜಿಪ್ಟಿನಲ್ಲಿ ಬ್ರಿಟಿಷರ ಪಿಸ್ತೂಲು ಹಸ್ತ.

1942ನೇ ಫೆಬ್ರುವರಿ ತಾ. 4ರಲ್ಲಿ ಬ್ರಿಟಿ ಷರು ಇಜಿಪ್ಟ್ ಸರಕಾರವನ್ನು ಬಲಾತ್ಕಾ ರಿಸಿ ಹೇಗೆ ಬದಲಾವಣೆ ಮಾಡಿಸಿಕೊಂಡ ರೆಂಬ ಗುಟ್ಟು ಈಗ ಪ್ರಕಟವಾಗಿದೆ. ಆ ಕಾಲದಲ್ಲಿದ್ದ ವಾರ್ತಾಕತ್ತರಿ ಪ್ರಯೋಗ ದಿಂದಾಗಿ ಈ ವಾರ್ತೆ ಪ್ರಕಟವಾಗಿರಲಿಲ್ಲ. ರಾಜಾ ಫರೂಕರು ಅಲಿ ಮಾಹೆರ್ ಪಾಶರ ನ್ನು ಪ್ರಧಾನ ಮಂತ್ರಿಯಾಗಿ ಆರಿಸಿಕೊಂ ಡೊಡನೆ ಬ್ರಿಟಿಷರು ರೇಗಿಬಿದ್ದರು. ಮಾ ಹೆಲ್ ಪಾಶರು ಬ್ರಿಟಿಷ್ ವಿರೋಧಿಯಾದ ರಿಂದ ಅವರನ್ನು ರದ್ದುಗೊಳಿಸಿ ನಾಹಾಸ್ ಪಾಶರನ್ನು ಗದ್ದುಗೆ ಗೇರಿಸಬೇಕೆಂದು ಇ ಜಿಪ್ಟಿನಲ್ಲಿ ಬ್ರಿಟಿಷ್ ರಾಯಭಾರಿಯಾಗಿದ್ದ ಲೋರ್ಡ್ ಕಿಲ್ಲರ್ನರು ರಾಜಾಫರೂಕರ ನ್ನು ಒತ್ತಾಯಿಸಿದರು ಇದು ಕೈಗೂಡದೆ ಹೋದಾಗ ಬ್ರಿಟಿಷರ ಟ್ಯಾಂಕ್ ಪಡೆಯು ಫರೂಕರ ಅರಮನೆಯ ಗೇಟಿನ ವರೆಗೂ ನುಗ್ಗಿ ಹೋಗಿ. ಪಹರೆ ದಳವನ್ನು ಸೋಲಿ ಸಿದ್ದರಿಂದ ಕೊನೆಗೆ ಫರೂಕರು ಈ ಬಲಾ ತ್ಕಾರಕ್ಕೆ ಬಗ್ಗ ಬೇಕಾಯಿತು.

ಇರಾನಿನಲ್ಲಿ ವಿದೇಶೀ ಸೇನೆ

1942ನೇ ಜನವರಿಯಲ್ಲಿ ಇರಾನಿನಿಂದ ನಾಜಿಗಳನ್ನೋಡಿಸಿದ ಬ್ರಿಟಿಷ್, ಅಮೆರಿಕ, ಮತ್ತು ರಶ್ಯದ ಸೇನೆಗಳು ಈಗಲೂ ಅಲ್ಲಿ ವೆ. ಆಗ ಈ ತ್ರಿರಾಷ್ಟ್ರ ಮತ್ತು ಇರಾನ್ ಸರಕಾರಗಳೊಳಗಾದ ತಹನಾಮೆಯಂತೆ ಜರ್ಮನ್ ಯುದ್ಧ ಮುಗಿದ ಆರು ತಿಂಗಳು ಗಳೊಳಗೆ ಈ ಸೇನೆಗಳನ್ನೆಲ್ಲಾ ಹಿಂದೆಗೆ ಯಬೇಕೆಂದಿದೆ. ಈಗ ಇರಾನ್ ಸರಕಾರ ವು ಸೇನೆ ಹಿಂದೆಗೆದುಕೊಳ್ಳಿರೆಂದು ಪ್ರಮು ಖ ತ್ರಿರಾಷ್ಟ್ರಗಳನ್ನೂ ಆಗ್ರಹ ಪೂರ್ವಕ ಕೇಳಿಕೊಂಡಿದೆ. ಆದರೆ ಲಂಡನಿನಿಂದ ಬ ರುತ್ತಿರುವ ವಾರ್ತೆಯಂತೆ ಮಿತ್ರ ರಾಷ್ಟ್ರಗ ಳು ಅದಕ್ಕೆ ತಯಾರಿರುವಂತೆ ಕಾಣುವದಿ ಲ್ಲ. ರಶ್ಯದ ಸೇನೆಯಿರುವ ಉತ್ತರ ಇರಾ ನ್ ಭಾಗವು ಮಿಕ್ಕ ಕಡೆಗಳಿಗಿಂತ ಸುರಕ್ಷಿ ತವಾಗಿದೆ. ಇರಾನಿನ ಎಣ್ಣೆಯ ಕುರಿತು ಪ್ರಮುಖ ರಾಷ್ಟ್ರಗಳಲ್ಲಿರುವ ಮೇಲಾಟವಂ ತೂ ಇದ್ದೇ ಇದೆಯಾದರೂ ವಿದೇಶೀ ಸೇ ನೆಗಳು ಕಾಲ್ದೆಗೆಯದೆ ಆ ಪ್ರಶ್ನೆಯನ್ನು ಚರ್ಚಿಸಲು ಇರಾನು ಸಿದ್ಧವಿಲ್ಲ ಆಂಗ್ಲೋ ಅಮೆರಿಕಾನರು ಬಲವಾದ ನೆವನ ಹೇಳು ತಿದ್ದಾರೆ. ಇರಾನಿನ ಜೀವನ ವೆಚ್ಚವು ಯುದ್ಧ ಪೂರ್ವಕ್ಕಿಂತ ಸೇಕಡಾ 800ರ ಷ್ಟು ಹೆಚ್ಚಾಗಿದೆ. ಈಗ ತಮ್ಮ ಸೇನೆಗಳಿ ರುವದರಿಂದಾಗಿ 50 ಸಾವಿರ ಇರಾನಿಗಳಿ ಗೆ ಕೆಲಸ ದೊರೆಯುತ್ತದೆಯಲ್ಲದೆ ಉತ್ಪ ತ್ತಿಯ ಬೇರೆಷ್ಟೋ ಮಾರ್ಗಗಳಿವೆ. ಸೇನೆ ಹಿಂದೆಗೆದರೆ ಇರಾನಿನಲ್ಲಿ ಆರ್ಥಿಕ ಅನಾಹುತ ವೇ ಉಂಟಾದೀತೆಂದು ಮಿತ್ರರ ಅಂಬೋ ಣ. ತ್ರಿಮೂರ್ತಿಗಳ ಸಮ್ಮೇಳನವು ಈ ವಿ ಷಯವನ್ನು ನಿರ್ಧರಿಸಲಿದೆ ಎಂದು ತಿಳಿದು ಬರುತ್ತದೆ

ದುಡುಕಿಲ್ಲ ಈಗ ಆಂಗ್ಲೋ ಅಮೆರಿಕಾನ ರ ಕಟ್ಟಕಡೆಯ ಸೂಚನೆಗಳು ಮಾರ್ಶಲ್ ಟಿಟೋರಿಗೆ ಹೋಗಿದ್ದು ಉತ್ತರ ನಿರೀಕ್ಷೆ ಯಿಂದ ಎಲ್ಲವೂ ಸ್ತಬ್ಧವಾದಂತಿದೆ ಜ ರ್ಮನ್ ಗೆಸ್ಟೆಪೋ ಪ್ರಮುಖರಾದ ಬುಸ್ಸ ಚಿನ್ ಮತ್ತು ನಡಿಚರನ್ನು ಬ್ರಿಟಿಷ್ ಆಕ್ರ ಮಣಾಧಿಕಾರಿಗಳು ಕಾರಿಂಥಿನಾದಲ್ಲಿ ಉ ದ್ಯೋಗದಲ್ಲಿಟ್ಟುಕೊಂಡು ಪೀಡೆಕೊಡಿಸು ತ್ತಿರುವರೆಂದೂ ಅದರಿಂದ ರಕ್ಷಣೆಯಾಗ ಬೇಕೆಂದೂ ಯುಗೋಸ್ಲೇವಿಯದ ರಾಷ್ಟ್ರ ಸ್ವಾತಂತ್ರ್ಯ ಸಮಿತಿ ಕೇಳಿಕೊಂಡಿದೆ.

ಆಕ್ರಮಿತ ಜರ್ಮನಿಯಲ್ಲಿ

ರಶ್ಯದ ವಶವಿರುವ ಭಾಗಗಳಲ್ಲಾಗು ತ್ತಿರುವ ಪ್ರಗತಿಯು ಆಂಗ್ಲೋ ಅಮೆರಿ ಕಾನರನ್ನು ತಬ್ಬಿಬ್ಬಾಗಿಸಿದೆ. ನಾಜೀ ತ ತ್ವ ಮತ್ತು ಅನುಯಾಯಿಗಳನ್ನು ರಶ್ಯಾನ ರು ನಿರ್ದಾಕ್ಷಿಣ್ಯವಾಗಿ ನಿರ್ಮೂಲಿಸುತಿ ದ್ದಾರಾದರೂ ಜರ್ಮನ್ ಜನತೆಗೆ ಸರ್ವಾ ನುಕೂಲತೆಯೊದಗಿಸಿದ್ದಾರೆ ಬರ್ಲಿನ್ ರೇಡಿಯೋದಲ್ಲಿ ಸ್ಟಾಲಿನರಿಗೆ ಜರ್ಮನರ ಮೇಲಿರುವ ಸಹಾನುಭೂತಿಯ ಘೋಷ ಣೆಗಳಾಗುತ್ತಿವೆ ವಿನೋದ, ವಿಹಾರ, ವಿ ಚಾರ ಸ್ವಾತಂತ್ರ್ಯಗಳು ಜರ್ಮನರಿಗೆ ದೊ ರೆತಿವೆ ರಶ್ಯನ್ ಸಿನೆಮಾಗಳು ಬರ್ಲಿನ್ ಥಿ ಯೇಟರುಗಳಲ್ಲಿ ಪ್ರದರ್ಶಿಸಲ್ಪಡುತ್ತಿವೆ. ರಶ್ಯ ನ್ ಮಿಲಿಟರಿ ಸರಕಾರವು ನಾಜಿಗಳನ್ನೂ ಶ್ರೀಮಂತರನ್ನೂ ಅಪರಾಧಿಗಳೆಂದು ಗಣಿ ಸಿ, ಜನ ಸಾಮಾನ್ಯರನ್ನು ಸರ್ವ ವಿಧದಿಂ ದಲೂ ತನ್ನವರಂತೆ ಕಾಣುತ್ತಿದೆ. ಜೀವ ನಪದ್ಧ ಸುಗಮವಾಗಿದೆ. ಆಂಗ್ಲೋ

(ಎನೇ ಪುಟ ನೋಡಿರಿ.)

Navabharat Book Depot Udipi South India   Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ರೂ. ಆ.		ಮೂರು ಪ್ರಹಸನಗಳು	0-14	ವೀರಭೂಮಿ	0-2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0-8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0-4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
ಸಹಾಯವಿಲ್ಲದೆ ಕಲಿಸುವ ಇಂಗ್ಲಿ		● ಕತೆಗಳು		ಮುಗುಳು	0-3
ಷ್ ಸ್ವಯಂಬೋಧಿನಿ		ನಗೆನೋಟಗಳು	0-14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0	ಭಗವದ್ಗೀತಾ (ಮೂಲ	
ದೇಶಭಕ್ತ	0-14	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0-10	● ಇತರ ಪುಸ್ತಕಗಳು	
ಏಕಲವ್ಯ	0-5	ನಾಡಕತೆಗಳು	0-3	ಮುಂದಿನ ದೇವರು	0-3
ಸಂಶಯ ಪಿಶಾಚಿ	0-8	ಕಂದನಾಡಿನ ನೋಟಗಳು	0-8	ರಾಷ್ಟ್ರಸಭೆಯ ಇತಿಹಾಸ	2-8
ರಂಗಭೂಮಿ	0-6	ನಾರೀಹೃದಯ	0-14	ಬಾಲಮಾಣ್ಯ	0-3
ಪ್ರಕಾಶ	2-0	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪುಷ್ಪ...	0-6	ಸಿಪ್ಲಯುದ್ಧಾನ	0-8
ಆರೋಗ್ಯ ಪ್ರಕಾಶ	0-12	ಆಹುತಿ ಇತ್ಯಾದಿ ಕತೆಗಳು	0-12	ಅಪಪೂರಿತ ಪಟ್ಟಣಗಳು	1-8
ಪಂಚವಟಿ	3-5	ಲೋಪಾಮುದ್ರೆ	0-6	ಬಾಗವು	0-6
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಕನ್ಯಾಸಿಯ ಸೆರೆಗಳಲ್ಲಿ	0-8	ಗೀತೆಯ ವೈಗನ್ನಡಿ	0-8

ನವಭಾರತ ಪುಸ್ತಕ ಭಂಡಾರ, ಬುಕ್ಸೆಲ್ಲರ್ಸ್ ಪಬ್ಲಿಶರ್ಸ್, ಉಡುಪಿ. ದ. ಕ.

WANTED

A Secondary Grade Trained Lady Teacher for the St. Antony's' Girls' Higher Elementary School, Airody, Sastan Post (S. K.)

SASTAN 1-6-45   MANAGER.



Approved firm by the Govt. of Mysore' Certified by the Agent of the Govt. of India in Ceylon.

The Canara Banking Corporation Limited.

(Incorporated in British India with limited Liability)

Estd 1906

Head Office UDIPI, (S. K)

ANNOUNCEMENT

A branch of the Bank has been opened at Camp Bazaar, CANNANORE, on 18—5—1945.

ನವಯುಗ

ಉಡುಪಿ, ಗುರುವಾರ ೭-೬-೧೯೪೫

ಸಿರಿಯದ ಪಾಠ.

'ಔಷಧವರೆಯುವಾಗಲೇ ಕೈ ಉಳುಕಿ ಬಿತ್ತು' ಎಂಬಂತೆ ಫ್ರಿಸ್ಕೋ ಸಮ್ಮೇಲನ ನೆರೆದಿರುವಾಗಲೇ ಸಿರಿಯಾ ಗಲಬೆ ನಡೆಯಿತು! ಶಾಶ್ವತ ಲೋಕ ಶಾಂತಿಯ ಸ್ಥಾಪನೆಗಾಗಿ, ರಾಷ್ಟ್ರ ರಾಷ್ಟ್ರಗಳೊಳಗಿನ ವಿವಾದಗಳ ತೀರ್ಮಾನ ವ್ಯವಸ್ಥೆಮಾಡಲು ಫ್ರಿಸ್ಕೋ ಸಮ್ಮೇಲನ ಕೆಲವು ವಾರಗಳಿಂದ ಚರ್ಚಿಸುತ್ತಿದೆ, ಇದೇ ಅವಧಿಯೊಳಗಿನ ಕೆಲವು ದಿನಗಳು ಲೆವಂಟ್‌ಗೊಂದಲವನ್ನು ನಿರ್ಮಿಸಿರುವದನ್ನು ಕಂಡು 'ಇವರೇನು ಶಾಂತಿ ಸ್ಥಾಪಕರು?' ಎಂದು ಪ್ರಶ್ನಿಸದೆ ನಿರ್ವಾಹವಿಲ್ಲ. ಮೇಲ್ಪಂಕ್ತಿ ಬರೆಯುತ್ತಿರುವ ಉಪಾಧ್ಯಾಯನ ಸಮ್ಮುಖದಲ್ಲಿಂ ಕಚ್ಚಾಡಿಕೊಂಡ ಮಕ್ಕಳು ಆವನ ಗೈರುಹಾಜರಿಯಲ್ಲಿ ಸುಮ್ಮಗಿರಲು ಸಾಧ್ಯವೇ? ಶಾಂತಿ ಸಮ್ಮೇಲನ ನೆರೆದಿರುವಾಗಲೇ ಹೋರಾಡಿಕೊಳ್ಳುವ ರಾಷ್ಟ್ರಗಳು, ಮುಂದೆ ಶಾಶ್ವತವಾಗಿ ಶಾಂತಿಯಿಂದಿರುವದು ನಿಜವೇ? ಫ್ರಾನ್ಸ್ ಮತ್ತು ಸಿರಿಯ, ಇವೆರಡೂ ಫ್ರಿಸ್ಕೋ ಸಮ್ಮೇಲನದಲ್ಲಿ ಪ್ರಾತಿನಿಧ್ಯ ಪಡೆದಿರುವ ರಾಷ್ಟ್ರಗಳು ಮನೆಯಲ್ಲಿ ಬೈದಾಟ-ಸಭೆಯಲ್ಲಿ ಭಾಷಣವೆಂಬಂತೆ ಏಕಕಾಲದಲ್ಲಿ ಸಿರಿಯದಲ್ಲಿ ಗಲಬೆ--ಫ್ರಿಸ್ಕೋದಲ್ಲಿ ಶಾಂತಿ ಮಂತ್ರ ಪಠನೆಯಾಗಿದೆ ಒಂದೋ ಫ್ರಿಸ್ಕೋ ಸಮ್ಮೇಲನ ಜವಾಬ್ದಾರಿಯಿಲ್ಲದ ತರ್ಕ ಸಭ ಮಾತ್ರವಾಗಿರಬೇಕು, ಹಾಗಲ್ಲವಾದರೆ ಭವಿಷತ್ತಿಗಾಗಿ ಅದು ಸ್ಥಾಪಿಸಲಿರುವ ಶಾಂತಿಯ ಒಂದು ಮಾದರಿಯೆಂದು ಲೆವಂಟ್‌ಗಲಭೆಯನ್ನು ಗಣಿಸಬೇಕು ಫ್ರಿಸ್ಕೋದಲ್ಲಿದುವರೆಗೆಯೂ ಸ್ಪಷ್ಟ ನಿರ್ಧಾರವೂ ಆಗಿಲ್ಲವಾದ್ದರಿಂದ, ಇಂದಿನ ಲೆವಂಟ್ ಹತ್ಯಾಕಾಂಡದಿಂದ ಮುಂದಿನ ಶಾಂತಿ ಸೂತ್ರಗಳು ಅವಮಾನಿಸಲ್ಪಡುವದಿಲ್ಲ ಎನ್ನುವವರಿರಬಹುದು ಆದರೆ ಕಾರ್ಯತಃ ಚ್ಯಿಂಗ ಬಲಾತ್ಕಾರದ ನಿರ್ಧಾರಗಳಿಗೆ, ಕಾಗದದ ಬೆಲೆಮಾತ್ರ, ಸಂಬಂಧಪಟ್ಟವರ ಮನೋವೃತ್ತಿಗೊಗ್ಗದ ತೀರ್ಮಾನವು ಕಾರ್ಯತಃ ಫಲಿಸುವದು ಕಷ್ಟ ಅಂದ ಮೇಲೆ ಶಾಂತಿ ಸಮ್ಮೇಲದ ತೀರ್ಪಿನ ಜಯಶೀಲತೆಯು ಆದರ ಪ್ರತಿನಿಧಿ ರಾಷ್ಟ್ರಗಳ ಮನೋಧರ್ಮವನ್ನಾಧರಿಸಿಕೊಂಡಿದೆ ಎಂಬುದು ಸ್ಪಷ್ಟ. ಸಿರಿಯದ ಹತ್ಯಾಕಾಂಡದ ಆದ್ಯಂತ್ಯದ ವರೆಗಿನ ಘಟನೆಗಳಲ್ಲಿ ಭಾಗಿಯಾದ ಯಾವದೊಂದು ರಾಷ್ಟ್ರವೂ ಅಂತಹ ಅನುಕೂಲ ಮನೋವೃತ್ತಿಯಲ್ಲಿರಲಿಲ್ಲ. ಇಷ್ಟನ್ನು ಕಂಡ ಮೇಲೂ ಶಾಂತಿ ಸಮ್ಮೇಲನದ ತೀರ್ಮಾನದ ಭವಿಷ್ಯವನ್ನು ಕಂಡೇ ಮಾತಾಡಬೇಕೆಂದೇನು? ಊಹಿಸಿ ಹೇಳುವದು ಅಸಾಧ್ಯವೇ?

ಸ್ಪಷ್ಟೀಕರಣಕ್ಕಾಗಿ ಸಿರಿಯಾದ ಸಮಸ್ಯೆಯೇನೆಂಬುದನ್ನು ಅವಲೋಕಿಸೋಣ ಫ್ರೆಂಚರ ಹಕ್ಕಾಗಿರುವ ದೇಶ ರಕ್ಷಣೆಯೊಂದನ್ನು ಬಿಟ್ಟರೆ ಮಿಕ್ಕಲ್ಲ ಸ್ವಾತಂತ್ರ್ಯಗಳು ಲೆವಂಟ್ ರಾಷ್ಟ್ರಗಳಿಗಿವೆ ಸಿರಿಯಾ ಲೆಬನಾನ್‌ಗಳಲ್ಲಿ ಫ್ರೆಂಚರಿಗಿದ್ದಂತಹ ಅಧಿಕಾರವೇ ಇರಾಕ್ ಇಜಿಪ್ಟ್‌ಗಳಲ್ಲಿ ಬ್ರಿಟನಿಗಿದೆ ತಮ್ಮ ಸ್ವಂತ ರಾಷ್ಟ್ರೀಯ ಸೇನೆಯ ನಿರ್ಮಾಣವಾಗಬೇಕೆಂಬ ಸಿರಿಯನರ ಬಯಕೆಯೂ, ಸರಿಯಾದಲ್ಲ ಸೇನಾಧಿಕಾರ ಸ್ಥಾನವನ್ನೂ ಆರ್ಥಿಕ ಸಾಂಸ್ಕೃತಿಕ ಹಿತಸಂಬಂಧಗಳನ್ನೂ ಉಳಿಸಿಕೊಳ್ಳಬೇಕೆಂಬ ಫ್ರೆಂಚ್ ಅಭಿಲಾಷೆಯೂ ಢಿಕ್ಕಿ ಹೊಡೆದದ್ದೆ ಗಲಬೆಯಿದು "ಇತರ ಕಡೆಗಳಲ್ಲಿ ಬ್ರಿಟನ್ ಮತ್ತು ಅಮೆರಿಕಗಳು ದಕ್ಕಿಸಿಕೊಂಡಷ್ಟನ್ನೇ ನಾವೂ ಸಿರಿಯಾದಲ್ಲಿ ಕೇಳುತ್ತಿದ್ದೇವೆ" ಎಂದು ಜನರಲ್ ಡಿಗೋಲೆಯವರ ಮಾತು. ಆದರೆ ತಾನು ಮಾಡಿದುದನ್ನೇ ಡಿಗೋಲೆ ಮಾಡಬಾರದೆಂದು ಚರ್ಚಿಲ್ಲರಿಂದ ತಡೆ ಬಂದಿದೆ ಅಲ್ಪ ರಾಷ್ಟ್ರವಾದ ಸಿರಿಯವನ್ನು ಫ್ರೆಂಚರು ತಡೆಯಬಲ್ಲರು, ಆ ಕಡೆಯ ಭೂಮಧ್ಯ ಸಮುದ್ರ ಮಧ್ಯ ಮತ್ತು ಸಮೀಪ ಪೂರ್ವವನ್ನೆಲ್ಲಾ ತಮ್ಮ ಸ್ವಾಧೀನವಿಟ್ಟುಕೊಂಡಿರುವ ಬ್ರಿಟಿಷರು ಫ್ರೆಂಚರನ್ನು ತಡೆಯಬಲ್ಲರು. ಈ ರೀತಿ ಸಿರಿಯದ ಗಲಭೆಯ ಆದಿ ಮತ್ತು ಅಂತ್ಯ, ಎರಡರಲ್ಲಿರುವದೂ ದುರ್ಬಲರ ಮೇಲೆ ಪ್ರಬಲರು ಕೈಮಾಡಬಹುದೆಂಬ ತತ್ವವೊಂದೇ ಫ್ರಿಸ್ಕೋ ಸಮ್ಮೇಲನ ಈ ರಾಕ್ಷಸೀತತ್ವದ ಬುಡಕ್ಕೆ ಕೊಡಲಿಯೆತ್ತಿದ ನಿದರ್ಶನವೆಲ್ಲಿದೆ? ಒಂದು ರಾಷ್ಟ್ರದೊಡನೆನ್ನೊಂದು ರಾಷ್ಟ್ರಕ್ಕೆ ಮೈತ್ರಿ ಸಹಕಾರಗಳ ಹೊರತು ಅಧಿಕಾರ, ಹಕ್ಕು ಬಾಧ್ಯತೆಗಳಿರಲೇ ಬಾರದೆಂಬುದನ್ನು ಮೂಲನಿರ್ಧಾರವಾಗಿ ಇಟ್ಟುಕೊಂಡು ಆದರ ವಿವರಗಳನ್ನೇ ಜಾಗತಿಕ ಸಮ್ಮೇಲನ ಚರ್ಚಿಸಲಿ ಅದು ಹೊರತು ಲೋಕ ಶಾಂತಿ ಕನಸಿನಲ್ಲೂ ಅಸಾಧ್ಯ. ಲೆವಾಂಟ್‌ಗೊಂದಲವೊಂದು ಎಚ್ಚರಿಕೆಯೆನ್ನಬೇಕು. ಬಲವಂತರ ಸ್ವಾರ್ಥಾಧಿಕಾರವೊಂದನ್ನು ಮುಟ್ಟದೆ, ಮಿಕ್ಕೆಲ್ಲವನ್ನೂ ಚರ್ವಿತ ಚರ್ವಣ ಮಾಡುತ್ತಿರುವ ಜಾಗತಿಕ ಸಮ್ಮೇಲನದ ಬೆನ್ನಿಗೆಳೆದ ಬರೆಯೆಂದು ಭಾವಿಸಬೇಕು!

ಜಾಪಾನರ ಉಭಯಸಂಕಟ!

ಜಾಪಾನರ ಸಮ್ಮುಖದಲ್ಲೀಗ ದುರದೃಷ್ಟವೊಂದೆಡೆಯಿಂದ- ಪರಾಭವವಿನ್ನೊಂದೆಡೆಯಿಂದ ಬಾಯ್ದೆರೆದು ನಿಂತಂತಿದೆ ನಿರೀಕ್ಷಿತ ರಶ್ಯನ್ ಧಾಳಿಯಾರಂಭವಾದರೆ ಜಾಪಾನಿನ ಅದೃಷ್ಟಕ್ಕೆ ಅಡ್ಡಗೆರೆ ಬಿದ್ದಂತೆಯೇ, ಒಕಿನಾವಾ ದ್ವೀಪ ಕೈಬಿಟ್ಟರೆ ಅದು ಪತನಗೊಂಡಂತೆಯೇ ಇವೆರಡನ್ನು ತಪ್ಪಿಸುವದೇ ಜಾಪಾನೀ ಸೇನಾ ಪ್ರಭುಗಳ ಸದ್ಯದ ಗುರಿ

ರಶ್ಯದ ಭೀತಿ

ಜರ್ಮನಿ ಯುದ್ಧ ಮುಗಿದೊಡನೆ 16 ವರುಷಕ್ಕ ಮೇಲ್ಪಟ್ಟವರೆಲ್ಲಾ ಸೇನಾ ತರಬೇತಿ ಹೊಂದಬೇಕೆಂದು ತನ್ನ ಪ್ರಜೆಗಳನ್ನು ಸೋವಿಯಟ್ ರಶ್ಯಾ ಕರೆದಿದೆ 'ನಮ್ಮ ರಕ್ಷಣೆಗಾಗಿ ಇಂತಹ ಸಿದ್ಧತೆ ಅಗತ್ಯವೆಂಬ ಅನುಭವ ನಮಗಾಗಿದೆ' ಎಂಬು ಈ ಸಂಬಂಧದ ಸೋವಿಯೆಟ್ ಪ್ರಕಟಣೆ ಎನ್ನುತ್ತಿದೆ "ರಶ್ಯದ ಸೈಬೇರಿಯಾ ಸೇನೆಯು ಬೇಸಿಗೆ ವ್ಯೂಹ ರಚನೆಗಾಗಿ ಜೂನ್ ಆದಿಯಲ್ಲೇ ಶಿಬಿರಗಳನ್ನು ಪ್ರವೇಶಿಸುವದು" ಎಂಬ ಮೋಸ್ಕೋ ಪ್ರಕಟಣೆಯಿಂದ ಜಾಪಾನು ಕಳವಳಗೊಂಡಿದೆ ಯುದ್ಧ ಪೂರ್ವದಲ್ಲಿ ರಶ್ಯಾ-ಜಾಪಾನು ಗಡಿಹೋರಾಟಗಳಾಗುತ್ತಿದ್ದುದು. ಬೇಸಿಗೆಯಲ್ಲೇ ಜಾಪಾನ್-ರಶ್ಯ ಸರಹದ್ದಾದ ಮಂಚೂರಿಯಕ್ಕೆ ಚೀನಾ ರಂಗಗಳಿಂದ ಹೆಚ್ಚಿನ ಸೇನೆಗಳ ಸರಬರಾಯಿಯಾಗಿದೆ ಅಲ್ಲಿ ಸದಾಕಾಲ ಕಣ್ಣಿಗೆ ಎಣ್ಣೆಯಿಟ್ಟು ಕಾಯುತ್ತಿದ್ದ 26 ಡಿವಿಜನು ಜಾಪಾನೀ ಸೇನೆಯೀಗ ಇನ್ನಷ್ಟು ಹೆಚ್ಚಿರಬೇಕು ಚೀನದ ಅತಿ ಮುಖ್ಯ ಕೇಂದ್ರವಾದ ನನ್ನಿಂಗ್ ನಗರವನ್ನು ಹೋರಾಟ ಕಾಡದೇನೇ ಜಾಪಾನರು ಬಿಟ್ಟು ಕೊಡಲು ಕಾರಣ ಇದೇ

ರಶ್ಯವನ್ನು ಸಮಜಾಯಿಸಲು—

ಪ್ರಕೃತ ಎಂತಹ ತ್ಯಾಗಕ್ಕಾದರೂ ಜಾಪಾನು ಸಿದ್ಧವಿದೆ ದಕ್ಷಿಣ ಸಖಾಲಿನ್ ಮತ್ತು ಕುರೈಲ್ ದ್ವೀಪಗಳನ್ನು ಬಿಟ್ಟು ಕೊಟ್ಟಾದರೂ ಸೋವಿಯೆಟನ್ನು ಸಂತೈಸಲು ಜಾಪಾನೀ ಮುತ್ಸದ್ದಿಗಳು ಆತುರಗೊಂಡಿದ್ದಾರೆ ಸ್ವತಃ ಈ ಕ್ಷೇತ್ರಗಳು ರಶ್ಯ ಅಥವಾ ಜಾಪಾನಿಗೆ ಪ್ರಾಮುಖ್ಯವಾದವುಗಳೇನೂ ಅಲ್ಲ ಆದರೆ ರಶ್ಯಕ್ಕವುಗಳ ಸಂಬಂಧ ಮಾತ್ರ ಅಮೂಲ್ಯವಾದುದು. ಕಾಮುಚಟದಲ್ಲಿರುವ ರಶ್ಯದ ಮುಖ್ಯ ನಾವೆ ನಿಲ್ದಾಣವಾದ ಪೆಟ್ರೋಪಾವ್ಲೋವ್ಸ್ಕಗೂ, ಹಿಮಾವರಿತ ಬಿಕ್ಕಟ್ಟಿನ ನಲಯಾದ ರಶ್ಯದ ಪೂರ್ವ ಕರಾವಳಿಗೂ ಈ ದ್ವೀಪಗಳ ಮೂಲಕ ಸಂಪರ್ಕ ರಚಿಸಿಕೊಳ್ಳಲನುಕೂಲವಿದೆ ಹಾಗಾದಲ್ಲಿ ಹಿಮರಹಿತ, ಅತ್ಯುತ್ತಮ ಬಂದರಾದ ಪೆಟ್ರೋಪಾವ್ಲೋವ್ಸ್ಕ್ ಉತ್ತರ ಶಾಂತ ಸಮುದ್ರದಲ್ಲಿ ರಶ್ಯದ ಅಮೋಘ ಮರ್ಮಸ್ಥಾನವಾಗಿ ರಾಜಿಸಬಹುದು

ಒಕಿನಾವಾ ಕಾಳಗ

ಜಾಪಾನ್ ಮೂಲನೆಲಕ್ಕೆ ಒತ್ತು ಸಂಬಂಧವಿದ್ದು ಅತಿ ಪ್ರಾಮುಖ್ಯವಾಗಿರುವ ಒಕಿನಾವಾದ ಅಮೆರಿಕಾಕ್ರಮಣಾರಂಭವಾದುದು ಎಪ್ರಿಲ್ ತಾ 1ರಲ್ಲಿ ಎರಡು ತಿಂಗಳು ಒಂದು ವಾರದ ಅತಿ ಭೀಕರ ಹೋರಾಟವಲ್ಲಿ ನಡೆದರೂ ಇನ್ನೂ ಜಾಪಾನರದಕ್ಕೆ ಜಿಗಳೆಯಂತೆ ಅಂಟಿಕೊಂಡಿದ್ದಾರೆ. "ಜಾಪಾನಿನ ಮತ್ತವರ ಜನತೆಯ ಅದೃಷ್ಟವು ಒಕಿನಾವಾ ಕಾಳಗದ ಪರಿಣಾಮವನ್ನವಲಂಬಿಸಿದೆ" ಎಂದು ಜಾಪ್ ಪ್ರಧಾನಿ ಎಡ್ಮಿರಲ್ ಸುಝುಕಿಯವರೇ ಹೇಳಿದ್ದಾರೆ. ತದನುಗುಣವಾಗಿ ಅಲ್ಲಿಯ ಜಾಪಾನರ ಪ್ರತಿಭಟನೆ ಅತ್ಯಂತ ಕಠೋರವಿದೆ. ಜಾಪಾನ್ ತನ್ನ ನಾವಿಕಾಧಿಕಾರಿ ಮಂಡಲದಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಪರಿಣಾಮಕಾರೀ ಸಮುದ್ರ ಯುದ್ಧ ಕೊಡುತ್ತಿದೆ ತತ್ಪರಿಣಾಮವಾಗಿ ಶಾಂತ ಸಮುದ್ರದಲ್ಲಿ ಅಮೆರಿಕಾನರಿಗೆ ಅತಿ ಹೆಚ್ಚಿನ ಹಡಗ ನಷ್ಟಗಳಾಗಿವೆ ಹಡಗ ದುರಸ್ತಿಗೆ ಕೆಲಸಗಾರರ ಸಂಖ್ಯೆ ಸಾಕಾಗುವದಿಲ್ಲವೆಂದು ಅಮೇರಿಕದಲ್ಲಿ ಆತುರವೆದ್ದಿದೆ ತಮಗೆ ಅತಿ ಹೆಚ್ಚಿನ ಹಡಗ ನಷ್ಟಗಳಾಗಿವೆಯೆಂದು ಅಮೇರಿಕದ ನಾವೆ ಕಾರ್ಯದರ್ಶಿಯೇ ಒಪ್ಪಿದ್ದಾರೆ.

ಆತ್ಮಹತ್ಯಾಸ್ತ್ರಗಳು

ಜಾಪಾನರ ಅಸಾಮಾನ್ಯ ಆಯುಧವಾದ ಮಾನವ ಟೋರ್ಪೆಡೋಗಳ ಹೊಡೆತವೇ ಈ ಸ್ಥಿತ್ಯಂತರಕ್ಕೆ ಕಾರಣ ಜಾಪಾನೀ ಸೇನೆಯ ಪ್ರತಿಯೊಂದು ವಿಭಾಗದಲ್ಲೂ ಈ ಆತ್ಮಹತ್ಯಾಯುಧಗಳ ವ್ಯವಸ್ಥೆಯಾಗಿದ ನೆಲ, ಜಲ, ಆಕಾಶಗಳ ಸಜೀವ ಬೋಂಬುಗಳ ಮಹಾ ಸಿದ್ಧತೆಯನ್ನು ಜಾಪಾನರು ನಡೆಸಿದ್ದಾರೆ ಇಂತಹ ಮಾನವಾಯುಧಗಳು ಪ್ರಪಂಚದ ಚರಿತ್ರೆಯಲ್ಲೇ ಬೇರಿಲ್ಲವೆನ್ನಬಹುದು ಅಮೇರಿಕದ ಮೇಲೆ ಬೆಲೂನು ಬೋಂಬುಗಳನ್ನೊಗೆಯುವ ಪ್ರತೀಕಾರವೂ ನಡೆದಿದೆ, "ಜಾಪಾನರು ಜರ್ಮನರಷ್ಟೇ ಗಂಡುಗಲಿಗಳು ಅವರಿಗಿಂತ ಕ್ರೂರರು ಮತ್ತು ಕುಯುಕ್ತಿವಾಲರು ಜಾಪಾನೀ ಮೂಲನೆಲಾಕ್ರಮಣವು ಜರ್ಮನಿಯಾಕ್ರಮಣದಷ್ಟು ಸುಲಭವಲ್ಲ, ಅಷ್ಟು ಸುಲಭದಲ್ಲಿ ಜಾಪಾನೀ ದುರ್ಗವನ್ನು ಭೇದಿಸುವದಸಾಧ್ಯ ಬರುವ ವರುಷದ ಜೂನಿನೊಳಗೆ ಜಾಪಾನು ಸೋಲುತ್ತದೆನ್ನುವದು ಮೂರ್ಖತನ" ಎಂದು ಜಾಪಾನಿನಲ್ಲಿ ಬ್ರಿಟಿಷ್ ರಾಯಭಾರಿಯಾಗಿದ್ದ ಪಿ. ಕ್ರೈಗಿಯವರು ಎಚ್ಚರಿಸಿದ್ದಾರೆ ಜರ್ಮನ್ ಪತನದ ಮೊದಲು ಸೋವಿಯೆಟ್ ಘೋಷಣೆಯನ್ನು ಖಂಡಿಸಲು ಹಿಂದೆಗೆಯುತ್ತಿದ್ದ ಜಾಪಾನೀ ಪತ್ರಿಕೆಗಳೀಗ ಸ್ಟಾಲಿನರನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಿವೆ ಆದರೆ ರಶ್ಯವು ಬಾಳೆಯಿಡುವದು ಖಂಡಿತವೆಂದಾದರೆ ಜಾಪಾನೇ ಮುಂದಾಗಿ ತಡನೆ ಕೊಡಬಹುದು

ಚಂದಾದಾರರಲ್ಲಿ-

ನವಯುಗದ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ. ಸಕಾಲದಲ್ಲಿ ಚಂದಾ ಹಣ ಬಾರದಿದ್ದಲ್ಲಿ ಕಳುಹಿಸಲ್ಪಡುವ ವಿ ಪಿ ಯನ್ನು ದಯಮಾಡಿ ಸ್ವೀಕರಿಸಬೇಕಾಗಿ ಬಿನ್ನಹ

ಮೆನೇಜರ್

ಜಾಪಾನರ ಮಾನವ ಟೋರ್ಪೆಡೋ ಧಾಳಿ!

ಫ್ರಿಸ್ಕೋ ಸಮ್ಮೇಲನದಲ್ಲಿ ಬಿಡಿಸಲಾಗದ ಬಿಕ್ಕಟ್ಟು.

ಒಕಿನಾವಾ ಕಾಳಗ

ಜಾಪಾನ್ ಭವಿಷ್ಯದ ಒರೆಗಲ್ಲೆಂದು ಅಲ್ಲಿಯ ಪ್ರಧಾನಿಗಳಿಂದಲೇ ಸಾರಲ್ಪಟ್ಟಿರುವ ಒಕಿನಾವಾ ದ್ವೀಪ ಕಾಳಗವು ಅತಿ ಭೀಕರವಾಗಿ ಸಾಗುತ್ತಿದ್ದು, ಅಂತಿಮಾವಸ್ಥೆಗೆ ಬಂದಿದೆ ಎಂಬುದನ್ನು ಜಾಪಾನರೇ ಒಪ್ಪುತ್ತಾರೆ. ಅಮೇರಿಕನ್ ಸೇನೆಯು ಹೆಜ್ಜೆ ಹೆಜ್ಜೆಯ ಪ್ರತಿಭಟನೆಗಳನ್ನು ಎದುರಿಸಿ ಜಯಶೀಲವಾಗಿ ಮುಂದೊತ್ತಿದೆ. ಅದರ ದಕ್ಷಿಣ ಭಾಗದ ಚಿನೆನ್ ದ್ವೀಪ ತುಂಡನ್ನೀಗ ಅಮೇರಿಕನರು ಪೂರ್ತಿ ವಿಂಗಡಿಸಿ ಹಾಕಿದ್ದಾರೆ. ಇದರಿಂದಾಗಿ ವಿಮಾನ ನಿಲ್ದಾಣಗಳ ಸರಬರಾಯಿಯ ಪ್ರಮುಖ್ಯ ನಲೆಯಾದ ನಾಗಾಗುಸುಕು ಕೊಲ್ಲಿಯ ದ್ವಾರವು ಅಮೇರಿಕಾನರಿಗೆ ತೆರೆಯಲ್ಪಟ್ಟಿದೆ. ಜಾಪಾನರು ಕಳವಳಗೊಂಡಿದ್ದಾರೆ.

ಜಾಪಾನರ ಸಜೀವಾಯುಧ ಧಾಳಿ

ಯಿಂದಾಗಿ ಜಾಪಾನ್ ಯುದ್ಧಾಂತ್ಯವು 'ಅಪಾಯಕರ ರೀತಿಯಿಂದ ಹಿಂದ ಬೀಳಬಹುದು' ಎಂದು ಅಮೇರಿಕದ ಜನಬಲದ ನಾಯಕ ಮೆಕ್‌ನಟ್ಟರು ಅಮೇರಿಕಾನರನ್ನು ಎಚ್ಚರಿಸಿದ್ದಾರೆ. ಅಮೇರಿಕನ್ ಯುದ್ಧ ಹಡಗಗಳ ಮೇಲಾಗುತ್ತಿರುವ ಜಾಪಾನೀ ಸಜೀವ ಟೋರ್ಪೆಡೋಗಳ ಹಾವಳಿಯಷ್ಟು ಆದ್ದು ತವಾಗಿದೆಯೆಂದರೆ ಅಲ್ಲಿಯ ಯುದ್ಧ ರೀತಿಯನ್ನೇ ಬದಲಾಯಿಸಬೇಕಾದ ಸಂದರ್ಭವೊದಗಿದೆಯಂತೆ. 1942ರ ಜರ್ಮನಿ ಸಬ್‌ಮೆರಿನ್ ಹಾವಳಿಯಷ್ಟೇ ಈ ಹಾವಳಿ ಅಗಾಧವಿದೆಯೆಂದು ಮಿತ್ರರ ನಾವಿಕ ತಜ್ಞರನ್ನುತ್ತಾರೆ.

ಇತರ ರಂಗಗಳಲ್ಲಿ

ಬರ್ಮದಲ್ಲಿ ಬ್ರಿಟಿಷ್ ಸೇನೆಗಳು ಪ್ರಗತಿ ಪಡೆಯುತ್ತಲೇ ಇವೆ. ಬರ್ಮ ನಾಡದ ಪೂರ್ವಾಗ್ನೇಯ ಪಟ್ಟಣಗಳ ಪೂರ್ಣ ಹೊಣೆಗಾರಿಕೆಯನ್ನು ಬ್ರಿಟಿಷರಿಗೆ ಬಿಟ್ಟು ಅಮೇರಿಕನರು ಶಾಂತ ಸಮುದ್ರ ಮತ್ತು ಚೀನಾ ರಂಗಗಳ ಯುದ್ಧ ಹೊಣೆಯನ್ನು ಹೊತ್ತಿದ್ದಾರೆ. ಚೀನದಲ್ಲಿ ಕೆಲವು ಜಾಪಾನೀ ಸೇನ ವಿಭಾಗಗಳು ರಶ್ಯಾನ್ ಗಡಿಯತ್ತ ಸರಿದುದರಿಂದ ಚೈನೀಯರು ಕೆಲವೆಡೆಗಳಲ್ಲಿ ರಭಸದಿಂದ ಮುಂದೊತ್ತಿದರೂ ಈಗ ವಿಶೇಷ ವಾರ್ತೆಬರುವದಿಲ್ಲ. ರಂಗೂನು ಮತ್ತು ಅದರ ಸುತ್ತುವಲಯದ ಯುದ್ಧೋಪಕರಣಗಳ 30 ಅತಿ ದೊಡ್ಡ ಉಗ್ರಾಣಗಳನ್ನೂ ಕಾರ್ಖಾನೆಗಳನ್ನೂ ಬ್ರಿಟಿಷರು ವಶಪಡಿಸಿಕೊಂಡಿದ್ದಾರೆ.

ಕೊತ್ತಳ ವಿಮಾನ ಧಾಳಿಯ ವೆಚ್ಚ.

ಜಾಪಾನಿನ ಮೇಲೆ ಅಮೇರಿಕದ ಕೊತ್ತಳ ವಿಮಾನಗಳು ಮೇಲಿಂದ ಮೇಲೆ ಧಾಳಿ ಮಾಡುತ್ತಿರುವ ಸಾಹಸಮಯ ವರ್ಣನೆಗಳು ಬರುತ್ತಿವೆ. ಆದರೆ ಜಪಾನಿನ ಟೋಕಿಯೋ, ಒಸಾಕಾ, ಅಥವಾ ನಾಗೋಯಾದಂತಹ ಮುಖ್ಯ ನಗರಗಳ ಮೇಲೆ ನಡೆಸುವ ಪ್ರತಿಯೊಂದು ಆಕಾಶಧಾಳಿಗೂ 330 ಮಿಲಿಯ ಡೋಲರು ಅಥವಾ 110 ಕೋಟಿ ರೂಪಾಯಿಗಳ ವೆಚ್ಚ ತಾಗುತ್ತಿದೆ. ಶಾಂತ ಸಮುದ್ರ ದ್ವೀಪಗಳ ನಿಲ್ದಾಣಗಳಿಂದ 2000ಕ್ಕೂ ಮೇಲ್ಪಟ್ಟ ಕೊತ್ತಳ ವಿಮಾನಗಳು ಹಾರಿಲ್ಲಿ ಜಾಪಾನಿನ ಮೇಲೆ ದಾಳಿಟ್ಟಲ್ಲಿ ಈ ಧಾಳಿಗಾಗಿ ಅಮೆರಿಕಾದ ಪ್ರಜೆಗಳ 1200 ಮಿಲಿಯ ಡೋಲರು, ವ 100 ಕೋಟಿ ರೂ ವೆಚ್ಚವಾಯಿತು.

ಕೋಟಿವಿಮಾನಗಳಿಗೆ ಕೋಟಿಗಟ್ಟಿ!

ಬ್ರಿಟನಿನ ನಿಲ್ದಾಣಗಳಲ್ಲಿದ್ದ ಎಂಟನೇ ವಿಮಾನ ಪಡೆಯೂ ಈಗ ಶಾಂತ ಸಮುದ್ರ ರಂಗಗಳಿಗೆ ವರ್ಗಾಯಿಸಲ್ಪಟ್ಟಿರುವುದರಿಂದ ಅದರ ಕೊತ್ತಳ ವಿಮಾನಗಳಲ್ಲಿ ಪ್ರತಿಯೊಂದಕ್ಕೂ 20 ಲಕ್ಷ ರೂ.ಗಳ ವೆಚ್ಚವಿದ್ದ ನೆಲ ತಯಾರಿ, ಕಟ್ಟಿಗೆ, ತರಬೇತಿ, ಮದ್ದು ಗುಂಡು ಇತ್ಯಾದಿಗಳನ್ನೂ ಸೇರಿಸಿದರೆ ಅಮೇರಿಕವು ಈ ಮಹಾ ವಿಮಾನಗಳಿಗಾಗಿ ವರುಷವೊಂದಕ್ಕೆ 100 ಮಿಲಿಯ ಡೋಲರ ಅಥವಾ 13.3 ಕೋಟಿ ರೂಪಾಯಿಗಳನ್ನು ವ್ಯಯಿಸುತ್ತಿದೆ. ಒಂದು ಮಹಾ ವಿಮಾನಕ್ಕೆ 1200 ಡೋಲರು ಬೆಲೆಯ ಪೆಟ್ರೋಲು ಬೇಕಾಗುತ್ತದೆ. ಇಂತಹ ಅಪಾರ ನಷ್ಟವನ್ನನುಭವಿಸಿಯೇ ಜಾಪಾನರ ಅಲ್ಪ ವ್ಯಯದ ಗುಡಿಸಲುಗಳನ್ನು ನಾಶ ಮಾಡಲಾಗುತ್ತಿದೆ.

ಫ್ರಿಸ್ಕೋ ಸಮ್ಮೇಲನದಲ್ಲಿ

ವಸಾಹತುಗಳ ಕುರಿತು ಜಾಗತಿಕ ಭದ್ರತಾ ಕೌನ್ಸಿಲು ಕೊಡುವ ತೀರ್ಮಾನಗಳನ್ನು ನಿಷೇಧಿಸುವ ಅಧಿಕಾರ ಅವುಗಳ ಮೇಲಧಿಕಾರೀ ದೊಡ್ಡ ರಾಷ್ಟ್ರಗಳಿಗಿರಬೇಕೆಂಬ ಅಮೇರಿಕಾಂಗ್ಲರ ಸೂಚನೆಯನ್ನು ರಶ್ಯವು ಕಠೋರವಾಗಿ ವಿರೋಧಿಸಿ ಬಿರುಕು ದೊಡ್ಡದಾಗುತ್ತಾ ಬಂದಿದೆ. ಕೊನೆಗೆ ಒಂದು ಗೂಢುವ ಲಕ್ಷಣ ಕಾಣುವದಿಲ್ಲ. ಫ್ರಿಸ್ಕೋ ಸಮ್ಮೇಲನದ ಮುಖ್ಯ ಸೋವಿಯೆಟ್ ಪ್ರತಿನಿಧಿಗಳಲ್ಲೊಬ್ಬರಾದ ಮೊಲೋಟೋವರನ್ನು ರಶ್ಯನ್ ಸರಕಾರವು ಹಿಂದಕರೆದಿದ. ಇದರಿಂದಾಗಿ ಫ್ರಿಸ್ಕೋ ಸಮ್ಮೇಲನವಲ್ಲೇ ಅನಿವಾರ್ಯ ಬಿಕ್ಕಟ್ಟಿದ್ದು ರಶ್ಯದ ಗಾಲಿಯ ಸಂದೀನತೆಗೆ ಪೂರ್ಣ ವಿರಾಧಿಯಿಂದು ಸೋವಿಯೆಟ್ ತಜ್ಞರ ಘೋಷಣೆ.

ಸಿರಿಯ-ಫ್ರಾನ್ಸ್ ವೈಷಮ್ಯದ

ದೆಸೆಯಿಂದ ಫ್ರಾನ್ಸ್—ಬ್ರಿಟನ್ ಸಂಬಂಧವು ತೀರ ಕೆಟ್ಟು ಹೋಗಿ ಪರಸ್ಪರ ದ್ವೇಷಾಸೂಯೆ ತೋರುತ್ತಿದೆ. ಸಿರಿಯವು ಫ್ರಾನ್ಸಿಗೆ ವಿಧೇಯವಿಲ್ಲದುತ್ತಿದೆಯೆಂದೂ ಅದರೊಡನಿರುವ ಎಲ್ಲಾ ಸಂಬಂಧಗಳೂ ಕಡಿದು ಹೋದವೆಂದೂ ಸಿರಿಯದ ವಿದೇಶ ಮಂತ್ರಿಯಿಂದಿದ್ದಾರೆ. ಸಿರಿಯದಲ್ಲಿರುವ ಫ್ರೆಂಚ್ ಸೇನೆಗಳನ್ನೂ ಫ್ರೆಂಚ್ ನಾಗರಿಕರನ್ನೂ ಬ್ರಿಟಿಷ್ ಸೇನೆಗಳು ಬಂಧಿಸಿ ತಾವೇ ಆಕ್ರಮಿಸಿಕೊಂಡು ಸಿರಿಯಾ ಲೆಬನಾನ್ ಮತ್ತು ಮಧ್ಯ ಪ್ರಾಚ್ಯದ ಫ್ರೆಂಚರ ಸ್ಥಾನಮಾನಗಳನ್ನು ಬ್ರಿಟನು ಆಕ್ರಮಿಸಿಕೊಳ್ಳುತ್ತಿದೆ ಎಂದು ಫ್ರೆಂಚರು ಕಳವಳಗೊಂಡಿದ್ದಾರೆ.

ಲೋರ್ಡ್ ವೇವೆಲರು

ಲಂಡನ್ನಿನಿಂದ ಹಿಂದುಸ್ಥಾನಕ್ಕೆ ಹೊರಟಿದ್ದಾರೆ. ಅವರು ಯಾವ ತೀರ್ಮಾನವನ್ನು ತರುತ್ತಾರೆಂಬ ಕುರಿತು ಪತ್ರಿಕೆಗಳೂ ಪ್ರಮುಖರೂ ಅನೇಕ ಅಭಿಪ್ರಾಯಗಳನ್ನು ಪ್ರಕಟಿಸುತ್ತಾರೆ. ಕಾಂಗ್ರೆಸ್ಸಿಗರೇ ಮುಸ್ಲಿಂ ಲೀಗಿಗರೇ ಕೂಡಲೇ ಸಮ್ಮತಿಸುವ ಸುಧಾರಣೆಗಳನ್ನು ಅವರು ಸೂಚಿಸುವಂತಿಲ್ಲವೆಂಬ ಕುರಿತು ಏಕಾಭಿಪ್ರಾಯವಿದೆ. ಕಾಂಗ್ರೆಸ್ ಪ್ರಮುಖರ ಬಿಡುಗಡೆಯಾಗುವದೊಂದು ಖಂಡಿತವಂತೆ. ಕ್ರಿಪ್ಸ್ ಸೂಚನೆಗಳನ್ನೇ ಬೇರೆ ವಿಧಾನದಿಂದ ಮುಂದೊತ್ತುವರೆಂದೂ ದಿಲ್ಲಿಗೆ ಬಂದೊಡನೆ ಕಾರ್ಯಕಾರೀ ಸಮಿತಿಯ ಸಭೆ ಕರೆದು ಆ ಮೇಲೆ ಏಕ ಕಾಲದಲ್ಲಿ ಡಿಲ್ಲಿಯಲ್ಲಿಯೂ ಲಂಡನಿನಲ್ಲಿಯೂ ಈ ಸಂಬಂಧದ ಪ್ರಕಟಣೆ ಹೊರಡುವದೆಂದೂ ತಿಳಿದುಬರುತ್ತದೆ. ಬ್ರಿಟನಿನ ಎಲ್ಲಾ ಪಕ್ಷಗಳೂ ಈಗ ಚುನಾವಣಾ ಪ್ರಚಾರದಲ್ಲಿ ನಿರತವಾಗಿವೆ.

ಉಡುಪಿ

ಹಗಲುಹುಲಿ!—ಜೂನ್ ತಾ 5ನೇ ಶಾಕ್ ... ಕಕ್ಕುಂಜೆ ಮತ್ತು ಸಂತೆಕಟ್ಟೆಯ ನಡುವೆ ... ಕಸ್ತೂರ ವರ್ಗದ ಚಿಟ್ಟೆ ಹುಲಿಯೊಂದು ಹೊಕ್ಕು, ದಾರಿಯಲ್ಲಿ ಕಟ್ಟಿಹಾಕಲ್ಪಟ್ಟಿದ್ದ ಕರುವನ್ನು ಮುಸುಡು ಕಂಬಾ ಸರಳ ಎದೆ ಕಚ್ಚಿ ಗಾಯ ಮಾಡಿದ್ದಿತು. ಮತ್ತೊಂದು ಕುದುರೆಯ ಬಲವಾದ ಹಿಂಗಾಲೊದೆತದಿಂದ ಬಿಡಿಸಿಕೊಳ್ಳಬೇಕಾಗಿದ್ದ ಹುಲಿಯನ್ನು ಅವಸರದ ಕರೆ ಹೋಗಿ ಬಂದಿದ್ದ ಮಿ. ಅಬ್ದುಲ್ ವಾಜೀದ್ ಸೇಟ್ ಸಾಹೇಬರು ಗುಂಡಿಟ್ಟು ಕೊಂದರು. ಪ್ರಾತಃ ಕಾಲ 8ರ ಸುಮಾರಿಗೆ ಒಳ ಪ್ರವೇಶಿಸಿದ್ದ ಹುಲಿಯು ಒಂದು ಘಂಟೆಯ ನಂತರ ತನ್ನ ಜೀವನವನ್ನನುಭವಿಸಿದ್ದಿತು. ಆ ನಡುವೆ ಅದನ್ನು ಕಾಣಲು ಕುತೂಹಲದಿಂದ ಸಾಗಿದ ದಿಂದಿಣಿಯವರೊಬ್ಬರ ಮೇಲೆ ನೆಗೆದು ಅತನ ಪಕ್ಕ ತುಸು ಉಗುರು ಗಾಯಮಾಡಿದ. ಈ ವಾರ್ತೆಯು ಹಬ್ಬುವಾಗಲೆಂದೆ ಹಟ್ಟಿ ಪಟ್ಟಣಿಗರು ತಂಡತಂಡವಾಗಿ ಬಂದು ಹುಲಿಯ ಕಳೇಬರವನ್ನು ಕಂಡರು. ಹುಲಿಯು ಸುಮಾರು 10 ಅಡಿ ಗಾತ್ರವಿದ್ದಿತು.

ಕಟಪಾಡಿ

ಹೈಸ್ಕೂಲು ಉದ್ಘಾಟನೆ—ಕಟಪಾಡಿ ಎಸ್ ವಿ ಎಸ್ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ತಾ 1 6 45ನೇ ಘನವಾಗಿ ನೆರವೇರಿತು. ಹಲವು ವಿದ್ಯಾಭಿಮಾನಿಗಳ ಉಪಸ್ಥಿತಿಯಲ್ಲಿ ಪ್ರಿನ್ಸಿಪಾಲರಾದ ಶ್ರೀಮಾನ್ ... ಅಧ್ಯಕ್ಷತೆಯಲ್ಲಿ ಪ್ರಾರ್ಥನೆ, ಸ್ವಾಗತಭಾಷಣವಾಗಿ ಅಧ್ಯಕ್ಷರು ಹೈಸ್ಕೂಲನ್ನು ತೆರೆಯುವ ಸಮಾರಂಭ ಜರಗಿಸಿದ ಮೇಲೆ ಸಭಿಕರ ಪರವಾಗಿ ಶ್ರೀ ... ಬಿ ಎ ಎಲ್ ಟಿ, ಮತ್ತು ... ಭಾಷಣವಿತ್ತರು. ಅಧ್ಯಕ್ಷರ ... ಭಾಷಣವಾಗಿ ಅನೇಕ ... ಬಂದ ಶುಭಕೋರಿಕೆಗಳ ... ಮುಖ್ಯೋಪಾಧ್ಯಾಯರಾದ ಶ್ರೀ ... ನಾಯಕ್ ಬಿ ಎ ಎಲ್ ಟಿ. ವಂದನ ಸಮರ್ಪಣೆ, ಸಭಾ ಸಂತರ್ಪಣೆ ... ಸಮಾರಂಭ ಮುಕ್ತಾಯಗೊಂಡಿತು.

ಮಂಗಳೂರು

ಜಿಲ್ಲಾ ಕಾಂಗ್ರೆಸಿಗರ ಸಭೆ—ದಕ್ಷಿಣ ಕನ್ನಡದ ಕಾಂಗ್ರೆಸಿಗರ ಸಭೆಯೊಂದು ತಾ. ... ರಂದು ಶ್ರೀ ಕೆ ಆರ್ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ... ಸಭೆ ಕರೆದ ಉದ್ದೇಶವನ್ನು ವಿವರಿಸಿದ ... ಸೂಚಿಸಿದ ಪ್ರಮುಖ ... ಸಂತಾಪ ಸೂಚಕ ಠರಾವು ಮಂಜೂರಾಯಿತು. ಮಹ... ಸತ್ಯಮೂರ್ತಿ, ... ಜ್ಯೋತಿ ನಾರಾಯಣ ... ಕಸ್ತೂರಬಾ ಗಾಂಧಿ ... ಸಭೆಗೆ ಹಾಜರಾದವರೆಲ್ಲ ... ಎದ್ದು ನಿಂತು ಸಂತಾಪ ವ್ಯಕ್ತಪಡಿಸಲಾಯಿತು.

ರಚನಾತ್ಮಕ ಕಾರ್ಯಕ್ರಮ ಮತ್ತು ಇನ್ನಿತರ ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳನ್ನು ಮುಂದೊತ್ತುವರೆ ಜಿಲ್ಲೆಗೊಂದು ಕಾಂಗ್ರೆಸ್ ಕೆಲಸಗಾರರ ಸಮಿತಿ ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ಈ ಸಮಿತಿಯಲ್ಲಿ ಸದಸ್ಯರ ಸಂಖ್ಯೆಯನ್ನು ... ಆರಿಸುವ ಅವಕಾಶ ... ಕಾಂಗ್ರೆಸಿಗರನ್ನು (ಹಿಂದೂ ಮಹಾ ಸಭೆ ಇಲ್ಲವೆ ಮುಸ್ಲಿಂ ಲೀಗ್ ಇತ್ಯಾದಿ ಕೋಮುವಾರು ಸಂಸ್ಥೆಗಳಿಗೆ ಇಲ್ಲವೆ ರೆಡಿಕಲ್ ಡೆಮೊಕ್ರೆಟಿಕ್ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿಗಳಂತಹ ರಾಜಕೀಯ ಸಂಸ್ಥೆಗಳಿಗೆ ಸಂಬಂಧ ಪಡದ ಕಾಂಗ್ರೆಸಿಗರನ್ನು ಮಾತ್ರ) ... ಬೇಕೆಂದೂ ತೀರ್ಮಾನವಾಯಿತು. ಈ ಸಮಿತಿಗಳು ಸಾಧ್ಯವಿದ್ದಲ್ಲೆಲ್ಲಾ ಇತರ ಸಂಸ್ಥೆಗಳೊಡನೆ ಸಹಕಾರ ಪೂರ್ವಕ ಕಾರ್ಯ ಮುಂದೊತ್ತಬಹುದು. ಮೇಲಿನ ಸಮಿತಿಗಳೊಡನೆ ಸಹಕರಿಸಲು ಅಧಿಕಾರ ಕೊಟ್ಟು ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ದಿವಂಗತ ಶ್ರೀ ಪಂಡಿತ ತಾರಾನಾಥರ

ಪ್ರೇಮ ವಿದ್ಯಾಪೀಠದಲ್ಲಿ

ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್ ರವರಿಗೆ ಬರೆಯಬೇಕು

ಶ್ರೀ. ಸುಮತಿ ತಾರಾನಾಥ,
ಪ್ರಿನ್ಸಿಪಾಲ್.

ನಾಶಗೊಂಡ ರಂಗೂನಿನ ಜೀರ್ಣೋದ್ಧಾರ.

ರಂಗೂನಿನಲ್ಲಿ ಬಿದ್ದು ಹೋದ ಮನೆಗಳನ್ನು ಜೀರ್ಣೋದ್ಧಾರ ಮಾಡುವ ದೊಡ್ಡ ಕೆಲಸವನ್ನು ಸೈನ್ಯ ಖಾತೆಯ ಎಂಜನಿಯರುಗಳು ಹುರುಪಿನಿಂದ ಪ್ರಾರಂಭಿಸಿದ್ದಾರೆ. ಚಾವಣಿ ನಕ್ಷೆಗಳು ತಯಾರಾಗುತ್ತಿವೆ. ಚಾವಣಿ ತಯಾರಿಸುವ ದೊಡ್ಡ ಯಂತ್ರವೊಂದನ್ನು ಜೋಡಿಸಲಾಗಿದೆ. ಹ್ಲೈಂಗ್ ನದಿಯ ತುಂಬಾ ಪ್ರವಾಹದಲ್ಲಿ ದೊಡ್ಡ ದೊಡ್ಡ ತೇಗದ ದಿಮ್ಮಿಗಳು ಬರ್ಮಾದ ಕಾಡುಗಳಿಂದ ರಂಗೂನಿನ ಪಶ್ಚಿಮ ತೀರಕ್ಕೆ 30ಮೈಲಿ ದೂರದಿಂದ ತೇಲಿಕೊಂಡು ಬರುತ್ತಿವೆ. ಇನ್ನೆರಡು ವಾರದೊಳಗಾಗಿ 30 ಅಡಿ ಉದ್ದ, 3 ಅಡಿ ಅಡ್ಡಳತೆಯ ಸಾವಿರಾರು ದಿಮ್ಮಿಗಳು, ಬೊಂಬು, ಗಣೆಗಳು ಹೀಗೆ ಸಾಗಿ ಬರುತ್ತವೆ 130,000 ಮರಗಳನ್ನು ಕಡಿದು ನದಿಯ ದಡದ ಕೋರಿಯಲ್ಲಿ ಸೇರಿಸಿದೆ. ಮರದ ಸಾಮಾನುಗಳು ಲಕ್ಷಗಟ್ಟಲೆ ಸಿದ್ಧವಾಗುತ್ತಿವೆ. ಮರಕೊಯ್ಯುವ ಮೂರು ಯಂತ್ರಗಳು ಸದಾ ಕೆಲಸಮಾಡುವಂತೆ ಗರಗಸದ ಅಲಗುಗಳನ್ನು ಹವಣಿಸಲಾಗಿದೆ.

ಹಿಂದೆ ಜಾಪಾನೀಯರು ಕಲ್ಲಿದ್ದಲಿಲ್ಲದೆ ಮರಗಳನ್ನೆಲ್ಲ ಸುಟ್ಟುಬಿಟ್ಟರು ತಮ್ಮ ಯಂತ್ರಗಳಿಗೆ ಅಕ್ಕಿ ಸುರಿಯುತ್ತಿದ್ದರಂತೆ. ನಮ್ಮ ವಶವಾದ ಮೇಲೆ ಆ ಸ್ಥಳದಲ್ಲಿ ಮೂರು ಅಕ್ಕಿ ಗಡಂಗುಗಳು ಸಿಕ್ಕಿದುವು. ಈಗ 10ಲಕ್ಷ ಮಂಚ 40,000 ಬೆಂಚು 20,000 ಮೇಜು, 5000 ಕುರ್ಚಿಗಳನ್ನು ಮೊದಲು ತಯಾರಿಸಬೇಕಾಗಿದೆ. ರಸ್ತೆ ರಿಪೇರಿಗಾಗಿ ರಂಗೂನಿನ ಉತ್ತರಕ್ಕೆ 10 ಮೈಲ ದೂರದಲ್ಲಿ ಎಂಜಿನಿಯರುಗಳು ದಿನಕ್ಕೆ 1000 ಟನ್ ಕಟ್ಟುಕಲ್ಲು ಸಿಕ್ಕುವ ಕಲ್ಲಿನ ಗಣಿಗಳನ್ನು ತೋಡುತ್ತಿದ್ದಾರೆ.

ಭಾರತೀಯ ಸೈನ್ಯದಲ್ಲಿ ಖಾಯಂ ಕಮಿಷನ್‌ಗಳು.

ಯುದ್ಧಾನಂತರದ ಭಾರತೀ ಸೈನ್ಯಖಾತೆಯಲ್ಲಿ ನಿಯಮಿತ ಅಧಿಕಾರಿಗಳಿಗೆ ಸದ್ಯದಲ್ಲಿ ಖಾಯಂ ಕಮಿಶನ್‌ಗಳನ್ನು ಮಂಜೂರು ಮಾಡಲು ನಿರ್ಧರಿಸಿದೆ. ಸದ್ಯಕ್ಕೆ ನೌಕಾಪಡೆ, ಸೈನ್ಯ ಮತ್ತು ವಿಮಾನ ಶಾಖೆಗಳಿಗೆ 60,450 ಮತ್ತು 90 ಸ್ಥಾನಗಳು ಮಾತ್ರ ದೊರಕುತ್ತವೆ ಯುದ್ಧಾನಂತರದಲ್ಲಿ ಉಳಿಯುವ ಈ ಪಡೆಗಳ ಒಟ್ಟು ಅಧಿಕಾರಿಗಳ ಸಂಖ್ಯೆ ಮತ್ತು ಈಗಿರುವ ಖಾಯಂ ಅಧಿಕಾರಿಗಳ ಸಂಖ್ಯೆಗಳ ಆಧಾರದ ಮೇಲೆ ಈ ಪ್ರಮಾಣವನ್ನು ಗೊತ್ತುಮಾಡಿದೆ. ಈ ಸಂಖ್ಯೆಗಳು ಯುದ್ಧ ಮುಗಿದ ಮೇಲೆ ಹಿಂದೂ ಸೈನ್ಯಾಧಿಕಾರಿಗಳಿಗೆ ಕೊಡಬಹುದಾದ ಖಾಯಂ ಕಮಿಶನ್ ಸಂಖ್ಯೆಯೆಂದು ಹೇಳಲಾಗುವುದಿಲ್ಲ. ಈ ಸ್ಥಾನಗಳಿಗೆ ಅಧಿಕಾರಿಗಳ ಚುನಾವಣೆ ಈಗಲೇ ಪ್ರಾರಂಭವಾಗಿ ಮುಂದುವರಿಯುತ್ತದೆ. ಭಾರತೀ ನೌಕಾದಳ, ಸೈನ್ಯದಳಗಳಿಗೆ ಬ್ರಿಟಿಷ್ ಅಧಿಕಾರಿಗಳನ್ನು ಸೇರಿಸುವ ರೀತಿ ಮತ್ತು ವಿಮಾನ ಪಡೆಗೆ ಬ್ರಿಟಿಷ್ ವೈಮಾನಿಕ ಅಧಿಕಾರಿಗಳನ್ನು ಸೇರಿಸುವ ಸಂಖ್ಯೆ-ಇವನ್ನು ನಿರ್ಧರಿಸಲು ಆಲೋಚನೆ ನಡೆಯುತ್ತಿದೆ.

ಈ ಮೂರು ಶಾಖೆಗಳಲ್ಲಿಯೂ ಹಿಂದೂ ಯುವಕ ಅಧಿಕಾರಿಗಳು ಹಲವರಿದ್ದಾರೆ ಅವರು ಸೈನ್ಯ ಸೇವೆಯೇ ತಮ್ಮ ಜೀವಿತದ ಗುರಿಯೆಂದು ನಂಬಿದ್ದಾರೆ. ಈ ಅಂಶಗಳು ಇಂಡಿಯಾ ಸರಕಾರಕ್ಕೆ ಗೊತ್ತಿವೆ. ಈಗಿನ ಪ್ರಕಟಣೆಯ ಪ್ರಕಾರ ಅಧಿಕಾರಿಗಳು ಖಾಯಂ ಕಮಿಷನ್ ಸ್ಥಾನಗಳಿಗಾಗಿ ಅರ್ಜಿ ಹಾಕಿಕೊಳ್ಳುತ್ತಾರೆಂದು ನಂಬಿದೆ. ಯುದ್ಧಕಾಲದಲ್ಲಿ ಗಳಿಸಿದ ಅನುಭವವುಳ್ಳ ಅಧಿಕಾರಿಗಳನ್ನು ಚುನಾಯಿಸಿಕೊಳ್ಳುವುದರಿಂದ ಯುದ್ಧಾನಂತರದ ಭಾರತೀಯ ಸೈನ್ಯಕ್ಕೆ ಹೆಚ್ಚಿನ ಲಾಭವುಂಟೆಂಬುದು ಇಂಡಿಯಾ ಸರ್ಕಾರಕ್ಕೆ ಮನವಟ್ಟಾಗಿದೆ

ನಾಯಕ್ ಗ್ಯಾನ್ ಸಿಂಗರಿಗೆ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ

ನಾಯಕ್ ಗ್ಯಾನ್ ಸಿಂಗರಿಗೆ ಹಿಂದೂ ಸೈನ್ಯ ಶಾಖೆಯ ಅಳಿಯ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ ಬಂತೆಂಬ ತಂತಿಯ ಸುದ್ದಿ ತಲಪಿದೊಡನೆ ಸಹಬ್ಪುರದ ಜನ ಹಿಗ್ಗುತ್ತ ಸಿಂಗರ ಮನೆಯ ಸುತ್ತ ಮುತ್ತಿಕೊಂಡರು. ಸಿಂಗರು ಮಾತ್ರ ಮೌನವಾಗಿದ್ದು ಊರಿನ ಹಿರಿಯರ ಹರಕೆಗಳನ್ನು ಸ್ವೀಕರಿಸಿದರು. ಮಕ್ಕಳು ಜಯಕಾರಮಾಡಿದರು. ಈ ಪ್ರಶಸ್ತಿ ಬರಲು ಅವರು ಮಾಡಿದ ಮಹತ್ಕಾರ್ಯಗಳೇನೆಂಬುದನ್ನು ಕೇಳಲು ಜನ ಮುತ್ತಿಕೊಂಡರು.

(ಭಾರತ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧಖಾತೆಯ ಪ್ರಕಟಣೆ)

ಪರದೆಯೊಳಗಿನ ಪಿಕಲಾಟ.

(೧ನೇ ಪುಟದಿಂದ ಮುಂದುವರಿದುದು.)

ಅಮೆರಿಕನರ ವಶವಿರುವ ಜರ್ಮನಿಯಲ್ಲಿ ಮಾತ್ರ ಇವೆಲ್ಲಕ್ಕೂ ಕಠಿಣ ಬರಗಾಲ ಬಡಿದಿರುವದರಿಂದ ಈ ತಾರತಮ್ಯವು ತಮಗಪಾಯಕಾರಿಯೆಂದು ಬ್ರಿಟಿಷ್-ಅಮೆರಿಕಾನರ ಭಯ

ರಶ್ಯದ ಮೇಲೆ ಆರೋಪ

"ರಶ್ಯನ್ ಸೈನಿಕರು ಜರ್ಮನರೊಂದಿಗೆ ಸೇರಿಕೊಂಡು ಹೋರಾಡಿದರು" ಎಂದು ಅಮೆರಿಕನ್ ಲೇಖಿಕೆಯೊಬ್ಬಳು ಭಯಂಕರ ಆರೋಪ ಮಾಡಿದ್ದಾಳೆ. ಅಮೇರಿಕದ ರಿಪಬ್ಲಿಕನ್ ಪ್ರತಿನಿಧಿಯಾಗಿರುವ ಮಿಸೆಸ್. ಕ್ಲಾರೆ ಭೂತ್ ಲೂಸಳು "ಹಿಂದೀ ಸ್ವಾತಂತ್ರ್ಯದ ಕುರಿತು ಬ್ರಿಟನು ಅಮೆರಿಕವು ಸ್ಪಷ್ಟವಾಗಿ ತಾರೀಕೊಂದನ್ನು ಹಾಕಿ ಕಾರ್ಯಕ್ಕಿಳಿಯದಿದ್ದಲ್ಲಿ ಮುಂದಿನ ದಶಮಾನದಲ್ಲೇ ಹಿಂದುಸ್ಥಾನವು ಸೋವಿಯೆಟ್ ಯೂನಿಯನಿನೊಡನೆ ಬೆರೆತು ಹೋಗುವದು" ಎಂದು ಬೆದರಿಕೆ ಹಾಕಿದ್ದಾಳೆ. "ರಶ್ಯವು ಹಿಂದೀ ಕ್ರಾಂತಿಕಾರರಿಗೆ ಸಹಾಯಮಾಡುತ್ತಿದೆ ಎಂಬುದು ಜನಜನಿತ. ಎಲ್ಲಾ ಸೋವಿಯೆಟ್ ಪ್ರಕಟಣೆಗಳಲ್ಲೂ ಆ ಅಂಶವಿದೆ. ಬ್ರಿಟಿಷರ ಭಾಷಣ ಸ್ವಾತಂತ್ರ್ಯದ ಆಶ್ರಯದಲ್ಲಿ ರಶ್ಯದ ಕ್ರಾಂತಿ ಕರೆಯ ಕಮ್ಯೂನಿಸ್ಟ್ ಪತ್ರಿಕೆ 'ಪೀಪ್ಲ್ಸ್ ವಾರ್'ನಲ್ಲಿ ದಿನಂಪ್ರತಿ ಬರುತ್ತಿದೆ ಹಿಂದುಸ್ಥಾನವನ್ನು ಕಮ್ಯೂನಿಸ್ಟಾಗಿ ಮಾರ್ಪಡಿಸಲು ರಶ್ಯದ ತಾಷ್ಕೆಂಟಿನಲ್ಲಿ ಪ್ರಚಾರಕರ ತರಬೇತಿ ಶಾಲೆಯೊಂದಿದೆ ಅಲ್ಲಿ ತೇರ್ಗಡೆ ಹೊಂದಿದ 4000 ಮಂದಿ ಏಜೆಂಟರೀಗ ಹಿಂದುಸ್ಥಾನ್. ಅರೇಬಿಯಾ, ಇರಾಕ್ ಇರಾನ್ ಮತ್ತಿತರ ಕಡೆಗಳಲ್ಲಿ ಪ್ರಚಾರ ನಿರತರಾಗಿದ್ದಾರೆ. ನಾವು ಕಣ್ತೆರೆಯಬೇಕು ಕಮ್ಯೂನಿಸಮ್ ನೆರೆಯ ತೀವ್ರಗತಿಯಂದೇರುತ್ತಿದೆ ಮೋಸ್ಕೋದ ಸಂಚಾರೀ ಏಜಂಟರ ಗಿಲ್ಟಿನ ಸಾಮಾನುಗಳ ಬದಲಿಗೆ ನಾವು ನಿಜ ಸ್ವಾತಂತ್ರ್ಯವನ್ನಿತ್ತಲ್ಲಿ ಈಗಲೂ ಅವನ್ನು ಗೆಲ್ಲಬಹುದು. ಆದರೆ ಕಾಲವೋಡುತ್ತಿದೆ" ಎನ್ನುತ್ತಾಳೆ ಕ್ಲಾರೆ ಬೂತ್. ಈ ಆರೋಪವನ್ನು ಹಿಂದೀ ಕಮ್ಯೂನಿಸ್ಟ್ ಪ್ರಮುಖರಾದ ಶ್ರೀ. ಪಿ. ಸಿ ಜೋಶಿ ಮತ್ತು ಶ್ರೀ. ಜಿ. ಅಧಿಕಾರಿಯವರು. ಖಂಡಿಸುತ್ತಾ "ಇದೆಲ್ಲಾ ಸುಳ್ಳು. ಅಪ್ರಾಗತಿಕ ಅಮೆರಿಕಾನರ ಚಾಡಿಮಾತು. ಗುಟ್ಟೆಂದರೆ 19ನೇ ಶತಮಾನದಲ್ಲಿ ಬ್ರಿಟನ್ ಆಳಿದಂತೆ 20ನೇ ಶತಮಾನದಲ್ಲಿ ಅಮೆರಿಕವು ಜಗತ್ತನ್ನಾಳಬೇಕೆಂದು ಈ ಅಮೆರಿಕಾನರ ಮರಾತೆ. ಹಿಂದೀ ಶ್ರೀಮಂತರಿಗೆ ಅಲ್ಪ ಸ್ವಲ್ಪ ರಿಯಾಯತಿ ತೋರಿಸಿ ಹಿಂದುಸ್ಥಾನವನ್ನು ಜತೆಯಾಗಿ ಸೂರೆಮಾಡುವ ಕುಯುಕ್ತಿಯ ವಾದವಿದು" ಎಂದು ಉತ್ತರಿಸಿದ್ದಾರೆ. "ಬೊಲ್ಶೆವಿಕ್ ಭೂತದ ಭಯಭೀರಿ ಮಿತ್ರರೊಳಗಿನ ಮೈತ್ರಿ ಭಂಗ ಮಾಡುವದೇ ಇಂತಹ ಆರೋಪಗಳ ಉದ್ದೇಶ"-ಎನ್ನುತ್ತಿವೆ ರಶ್ಯನ್ ಪತ್ರಿಕೆಗಳು.

ಮಂಗಳೂರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ—ಯೊಂದು ತಾ. ೩ನೇ ಆದಿತ್ಯವಾರ ಬೆಳಿಗ್ಗೆ ೧೦. ೩೦ ಗಂಟೆಗೆ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಗೆ ಸದಸ್ಯರನ್ನು ಚುನಾಯಿಸುವ ಮತ್ತು ಸೇರಿಸಿಕೊಳ್ಳುವ ಅಧಿಕಾರ ಒಂದು ಕಮಿಟಿಗೆ ಬಿಟ್ಟುಕೊಡಲಾಯಿತು, ಸದಸ್ಯತನದ ಪುಟ್ಟಿಗೆ ಕಮಿಟಿಯ ನಿರ್ಧಾರವೇ ಕೊನೆಯದು. ಈ ಕಮಿಟಿಯಲ್ಲಿ ಗ. ಕೆ ಆರ್. ಕಾರಂತ(ಕನ್ವೀನರರು) ... ಎಮ್. ಡಿ. ಅಧಿಕಾರಿ ... ಡಾ ... ಪಿ ಮಲ್ಯ ಳ. ಕಾಂತಪ್ಪ ಸೆಟ್ಟಿ, ... ಕೆ ಈಶ್ವರ ... ಮಂದಿ ಇರುವರು. ... ಪರ್ಷಕ್ಕೆ ಸದಸ್ಯತನದ ... ರೂಪಾಯಿ ... ಕಮಿಟಿಯು ... ಸಮಿತಿಯ ಕಾರ್ಯಾಂಗದ ಕುರಿತು ಸಿದ್ಧಪಡಿಸುವ ... ನ್ನು ತಯಾರಿಸುವುದು. ಅದನ್ನು ಮುಂದಿನ ಜನರಲ್ ಬೋಡಿ ಸಭೆಯ ಮಂಜೂರಾತಿಗಾಗಿ ಮುಂದಿರಿಸಲಾಗುವುದು. ... ತನಕ ಜಿಲ್ಲೆಯ ಬೇರೆ ಬೇರೆ ಭಾಗ... ಸದಸ್ಯರನ್ನು ಕೂಡಿಸುವ ಕಾರ್ಯ... ನಡೆಸುವುದು.

... ಸಮಿತಿಯು ಕೈಕೊಳ್ಳಲಿರುವ ... ರಚನಾತ್ಮಕ ಕಾರ್ಯದ ಕುರಿತು ವಿಚಾರವಿನಿಮಯ ನಡೆದು ಬೇರೆ ಕೆಲಸಗಳಿಗೆ ಬೇರೆ ಉಪಸಮಿತಿಗಳನ್ನು ರಚಿಸಲಾಯಿತು.

ಸಮಿತಿಯ ಜನರಲ್ ಬೋಡಿ ಸಭೆಯು ಜುಲೈ ತಾ. ೭ನೇ ಶನಿವಾರ ಉಡುಪಿ ತಾಲೂಕಿನ ಕಟಪಾಡಿಯಲ್ಲಿ ಸಂಜೆ ೩ ಗಂಟೆಗೆ ನಡೆಯಲಿದೆ ಈ ಸಭೆಯ ಏರ್ಪಾಡನ್ನು ನಡೆಸಲು ಕಾರ್ಯಕಾರಿ ಶ್ರೀ ಸಿ. ಲಕ್ಷ್ಮೀನಾರಾಯಣ ನಾಯ್ಕರಿಗೆ ಬಿಟ್ಟುಕೊಡಲಾಗಿದೆ.

ಶ್ರೀ ಕೆ ಆರ್. ಕಾರಂತರನ್ನು ಸಮಿತಿಯ ಜನರಲ್ ಕನ್ವೀನರರನ್ನಾಗಿ ನೇಮಿಸಲಾಯಿತು. ಅಲ್ಲಿಗೆ ಸಭೆಯು ಅಂತ್ಯವಾಯಿತು.

ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್, ಗಂಗೊಳ್ಳಿ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲಿನ 1, 11, 111ನೇ ಫಾರ್ಮುಗಳು ಇದೇ ಬರುವ ಜೂನ್ 20ನೇ ಬುಧವಾರ ಹೊಸತಾಗಿ ತೆರೆಯಲ್ಪಡುವುದು.

ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ 10ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ ಖಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯ ವ್ಯವಸ್ಥೆ ಮಾಡಲಾಗಿದೆ.

ದಾಖಲಾತಿಯ ಅರ್ಜಿ ಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ—

ಮೆನೇಜರ್,
ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲ್,
ಗಂಗೊಳ್ಳಿ, ದ. ಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **8—6—1945**ರಿಂದ

ರಣಜಿತ್‌ನವರ
ಸೈಗಲ್ ಮತ್ತು ಖುರ್ಶಿದ್
ನಟಿಸಿರುವ

ತಾನ್‌ಸೇನ್

ನಿರೀಕ್ಷಿಸಿರಿ:—

ರಣಜಿತ್‌ನವರ
ಪೃಥ್ವಿರಾಜ್, ಶಾಮಿಮ್,
ರೋನಿಕಾ ದೇಸಾಯಿ
ನಟಿಸಿರುವ

ಗೌರಿ.

ಕನ್ನಡ ಯಾತ್ರೆ

ಕ್ರಯ ರೂ. ೧-೮-೦

ಸುಪ್ರಸಿದ್ಧ ಸಾಹಿತಿಗಳಾದ
ಮಾನ್ವಿ ನರಸಿಂಗ ರಾವ್,
ಎಂ.ಎ., ಪಿ.ಪಿ.ಎಲ್. ಇವರು ಬರೆದದ್ದು

ಉಡುಪಿ ನವಭಾರತ ಬುಕ್ ಡಿಪೋ
ದಲ್ಲಿ ದೊರೆಯುವದು.

ಬಿ ಜಿ. ಚಿಮ್ಮಲಗಿ
ಕರ್ನಾಟಕ ಬುಕ್ ಡಿಪೋ,
ಗವಳಿಗೂಡಾ ಹೈದರಾಬಾದ್.

ಜಿಲ್ಲಾ ಆಹಾರ ಪರಿಸ್ಥಿತಿಯ ಕುರಿತು ವಿಚಾರ ವಿನಿಮಯ

ಮಂಗಳೂರಿಗೆ ಆಗಮಿಸಿದ್ದ ಮದ್ರಾಸಿನ ನಾಗರಿಕ ಪೂರೈಕೆ ಖಾತೆಯ ಕಮಿಷನರರನ್ನು ಕಳೆದ ತಾ. 25-5-1945ರಂದು ಶ್ರೀಗಳಾದ ಮೊಳಹಳ್ಳಿ ಶಿವರಾವ್, ಕೆ ಬಿ ಜಿನರಾಜ ಹೆಗ್ಗಡೆ, ಎ. ಬಿ. ಶೆಟ್ಟಿ, ಡಾ. ಸಾ. ಪಿ ಆರ್. ಆರ್. ಪೂಂಜ ಅವರು ಭೇಟಿಮಾಡಿ, ಅವರೊಡನೆ ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ವಿಚಾರ ವಿನಿಮಯ ನಡೆಸಿದರು ಈ ಜಿಲ್ಲೆಯಲ್ಲಿ ಪ್ರಕೃತ ಇರುವ ಆಹಾರಸಾಧನಗಳ ಸಂಗ್ರಹ ಜಿಲ್ಲೆಯ ಆವಶ್ಯಕತೆಯನ್ನು ಪೂರೈಸಲು ಸಾಲದು ಎಂಬೀ ವಿಷಯದಲ್ಲಿ ಅವರುತಕ್ಕ ಅಂಕೆಸಂಖ್ಯೆಗಳೊಡನೆ ಕಮಿಷನರರಿಗೆ ವಿವರಿಸಿಹೇಳಿದರು

ಅವರ ಹೇಳಿಕೆಯನ್ನು ಟೀಕಿಸುತ್ತಾ ಕಮಿಷನರರು, "ನೀವು ಅಂಕೆಸಂಖ್ಯೆಗಳನ್ನು ಬಹಳ ದೊಡ್ಡದು ಮಾಡಿತೋರಿಸುತ್ತಿದ್ದೀರಿ. ಅವಕ್ಕೆ ಉತ್ಪ್ರೇಕ್ಷಾರ ಹಚ್ಚಿ ಹೇಳುತ್ತಿದ್ದೀರಿ' ಎನ್ನುತ್ತಾ, ಅಕ್ಕಿಭತ್ತಗಳ ಸಂಗ್ರಹಕಾರ್ಯ ಇನ್ನೂ ನಡೆಯುತ್ತಿದ್ದು, ರೇಷನ್ ಅಂಗಡಿಗಳಲ್ಲಿ ಈಗ ಇರುವ ಸರಿಯಾದ ಶಿಲ್ಕಿನ ಲೆಖ್ಖಾಚಾರ ತಿಳಿಯದೆ ಇರುವುದರಿಂದ, ಈ ಸ್ಥಿತಿಯಲ್ಲಿ ನಿಜವಾದ ಕೊರತೆ ಎಷ್ಟು ಎಂದು ತಾನು ಹೇಳಲಾರೆನೆಂದೂ ಕೂಡಲೇ ಈ ಜಿಲ್ಲೆಗೆ ಹೊರಪ್ರದೇಶಗಳಿಂದ ಆಹಾರಸಾಮಗ್ರಿಗಳನ್ನು ಕಳುಹಿಸಿಕೊಡುವ ಅಗತ್ಯವಿಲ್ಲವೆಂದೂ ಇಲ್ಲಿನ ಈಗಿನ ಸಂಗ್ರಹ ವಿಚಾರಗಿ, ಸರಿಯಾದ ಜಮಾಖರ್ಚಿನ ವಿವರ ತಿಳಿದುಬರುವಾಗ ಆ ವಿಷಯದಲ್ಲಿ ಆಲೋಚಿಸಲಾದೀತೆಂದೂ ಹೇಳಿದರು

ಇನ್ನು 15 ದಿವಸಗಳೊಳಗೆ ಮಳೆ ಪ್ರಾರಂಭವಾಗುವುದಿದ್ದು, ಹಲವು ಡಿಪೋಗಳ ವಹಿವಾಟನ್ನು ನಿಲ್ಲಿಸಬೇಕಾಗುತ್ತದೆಯಾಗಿ, ಈ ಜಿಲ್ಲೆಯ ಡಿಪೋಗಳಿಂದ ಮೂರು ತಿಂಗಳ ಸರಬರಾಯಿ ಖಾಲಿಮಾಡಿ ಸಾಗಿಸಿ ತರುವುದು ಅಸಾಧ್ಯವೆಂದೂ ಮಳೆಗಾಲದಲ್ಲಿ ದಾಸ್ತಾನಿರುವ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಆಗುವುದಿಲ್ಲವೆಂದೂ ಶ್ರೀ ಮೊಳಹಳ್ಳಿ ಶಿವರಾಯರು ಕಮಿಷನರರೊಡನೆ ವಿವರಿಸಿದರು. ಅದಕ್ಕೆ ಕಮಿಷನರರು, ಸುಲಭಸಾಧ್ಯವಾದ ಸ್ಟೋರುಗಳಿಂದ ಸದ್ಯಕ್ಕೆ ಒಂದು ಸಾವಿರ ಟನ್ ಅಕ್ಕಿಯನ್ನು ಕಾಸರಗೋಡಿಗೆ ಮಾತ್ರ ಸಾಗಿಸಬೇಕೆಂದು ಶ್ರೀ ಶಿವರಾಯರಿಗೆ ಸೂಚಿಸಿದರಲ್ಲದೆ, ಕಾಸರಗೋಡಿನಲ್ಲಿ ಆ ಸ್ಟೋರ್ ಮುಗಿಯುವ ಮೊದಲು, ತಾವು ಬೇರೆ ಜಿಲ್ಲೆಗಳಿಂದ ಕಾಸರಗೋಡಿಗೆ ಆಹಾರ ಧಾನ್ಯಗಳನ್ನು ಕಳುಹಿಸುತ್ತೇನೆ ಯಾಗಿಯೂ ವಾಗ್ದಾನವಿತ್ತರು.

ಅಕ್ಕಿ ಭತ್ತಗಳನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಸಾಗಿಸುವ ಆವಶ್ಯಕತೆಯ ಬಗ್ಗೆ ಸ್ಟೋರುಗಳಿಗೆ ಮೋಟಾರ್ ಲಾರಿಗಳಿಗೆ ಪೆಟ್ರೋಲ್ ಕೂಪನ್‌ಗಳ ಕೊರತೆಯಿದೆ ಅಲ್ಲದೆ ಮಂಗಳೂರಲ್ಲಿ ರೈಲ್ವೇ ವ್ಯಾಗನ್‌ಗಳು ದೊರೆಯುವುದಕ್ಕೂ ಕಷ್ಟವಿದೆ ಕಮಿಷನರರು ತಿಳಿಸಿಬಿಟ್ಟಿದ್ದಾರೆ. ತಾವು ಈ ಪರಿಸ್ಥಿತಿಯಲ್ಲಿ ಕಾದು ನೋಡುತ್ತೇನೆ; ಅಗತ್ಯ ಬಿದ್ದರೆ ಈಗಿರುವ ದಾಸ್ತಾನು ಖರ್ಚಾಗುವ ಮೊದಲು ಆ ಸ್ಟೋರ್‌ಗಳಿಗೆ ಕೂಡಿಸಿ ಕೊಡುತ್ತೇನೆ ಎಂದು ಕಮಿಷನರರು ತಿಳಿಸಿರುವರು.

ಈಗಿರುವ ರೇಷನ್ ಪದ್ಧತಿಯೂ ಇದೇ ರೀತಿ ತೃಪ್ತಿಕರವಾಗಿ ನಡೆಯುವಂತೆಯೂ ಕಾಸರಗೋಡು ತಾಲೂಕಿನಲ್ಲಿ ರೇಷನನ್ನು ತಿರಿಗಿ ಮೊದಲಿನಂತೆ ಜಾರಿಗೆ ತರುವಂತೆ ಏರ್ಪಾಡು ಮಾಡಲಾಗುವುದೆಂದೂ ಈ ವಿಷಯದಲ್ಲಿ ಸಾರ್ವಜನಿಕರು ಸ್ವಲ್ಪವೂ ಭಯ ಪಡಲಾಗದೆಂದೂ ಕಮಿಷನರರು ಅಭಯ ಕೊಟ್ಟಿರುತ್ತಾರೆ. ಮುಖ್ಯವಾಗಿ ಪದ್ಧತಿ ರಹಿತ ರೇಷನ್ ಪ್ರದೇಶದೊಡನೆ ದಕ್ಷಿಣ ಕನ್ನಡದಲ್ಲಿ ೫ ಔನ್ಸ್ ಅಕ್ಕಿ ಮತ್ತು ೪ ಔನ್ಸ್ ರಾಗಿ ಅಥವಾ ಗೋಧಿ ಇವಿಷ್ಟನ್ನು ಇದೇ ವರ್ಷದಲ್ಲಿ ಪಡೆಯುವ ಹಾಗೆ ಸರಕಾರವು ವ್ಯವಸ್ಥೆ ಮಾಡುವುದೆಂದೂ ಈ ಜಿಲ್ಲೆಯಲ್ಲಿರುವ ದಾಸ್ತಾನಿನ ದೃಷ್ಟಿಯಿಂದಲೂ ದೇಶದಲ್ಲಿನ ಅಕ್ಕಿಯ ಪರಿಸ್ಥಿತಿಯ ದೃಷ್ಟಿಯಿಂದಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಭಯಭೀತಿಗೂ ಆಸ್ಪದ ಕಾರಣವಿಲ್ಲವೆಂದೂ ಕಮಿಷನರರು ತಿಳಿಯಪಡಿಸಿದರು.

ಈ ಜಿಲ್ಲೆಯ ಆಸಕ್ತಿಗಳನ್ನು ಗುರುತಿಸುವುದೆಂದು ತಮ್ಮಲ್ಲಿಗೆ ಬಂದ ಈ ಶಿಷ್ಟ ಮಂಡಲದ ಎಂದಿಗೂ ಊಹಿಸಬಾರದೆಂದು ಕಮಿಷನರರು ಅವರಲ್ಲಿ ವಿನಂತಿಸಿಕೊಂಡರಲ್ಲದೆ ಇದೇ ಜಿಲ್ಲೆಯಲ್ಲಿ ರೇಷನ್ ಪದ್ಧತಿ ಜಾರಿಗೆ ಬಂದಿರುವಂತೆ ಸರಕಾರವು ತಿಳಿದು ಸರ್ಕಾರ ನಡೆಸುವುದೆಂದು ಎಲ್ಲರೂ ತಿಳಿಯಬೇಕೆಂದೂ ಪಟ್ಟಣಗಳು, ಹಳ್ಳಿಗಳು ಮತ್ತು ರೇಷನ್ ಇರುವ ನಗರಗಳು ಹೀಗೆಂದು ಇವುಗಳಲ್ಲಿ ಯಾವ ವ್ಯತ್ಯಾಸವನ್ನೂ ಸರಕಾರವು ಮಾಡುವುದಿಲ್ಲವೆಂದೂ, ಕಮಿಷನರರು ಹೇಳಿದರು.

ಈ ಜಿಲ್ಲೆಯಲ್ಲಿ ಅಕ್ಕಿ ಭತ್ತ ಬೆಳೆಸುವವರು ಇನ್ನು ಗುಟ್ಟಿನಲ್ಲಿ ದಾಸ್ತಾನಿರಿಸಿದ್ದಾರೆಂದು ತಮಗೆ ಸಂಶಯ ಬಂದಿರುವುದಾಗಿ ಕಮಿಷನರರು ಸೂಚಿಸಿ, ಬರಬೇಕಾದಷ್ಟು ಅಕ್ಕಿ ಭತ್ತ ಹೊರ ಬಂದಿಲ್ಲವೆಂದರು. ಇದಕ್ಕೆ ಉತ್ತರ ಕೊಡುತ್ತಾ ಶ್ರೀ. ಜಿನರಾಜ ಹೆಗ್ಗಡೆಯವರು, "ಮಾಲಜಾರಿಯಂತೆ ಒಂದು ನಾರದೆ ಎಲ್ಲಾ ದಿವಸಗಳಲ್ಲಿಯೂ, ತಕ್ಕಷ್ಟು ಪ್ರಮಾಣದಲ್ಲಿ ರೇಷನ್ ದೊರೆಯುತ್ತದೆ ಎಂದು ಜನರಿಗೆ ಖಚಿತ ಪಡಿಸಿದ ವಿನಹ ತಮ್ಮಲ್ಲಿ ಒಂದಿಷ್ಟು ಉಳಿಸಿಕೊಳ್ಳಬೇಕೆಂಬ ಪ್ರೇರೇಪಣೆಯಿಂದ ಗುಟ್ಟಿನಲ್ಲಿ ದಾಸ್ತಾನಿರಿಸುವುದು ತಪ್ಪೆಂದು ಈಗ ಕಮಿಷನರರು ಕೊಟ್ಟಿರುವ ಈ ಆಶ್ವಾಸನದ ವಿಚಾರದಲ್ಲಿ ಸರಿಯಾದ ಪ್ರಚಾರ ಕಾರ್ಯ ನಡೆಸಿ ಯಾ ತಗ್ಗಿಸದೆ ರೇಷನ್ ಪ್ರಮಾಣವನ್ನು ಹೆಚ್ಚಿಸಿ ನೀಡುವ ಪಕ್ಷದಲ್ಲಿ ದಾಸ್ತಾನಿಟ್ಟಿರುವವರು ತಮ್ಮ ಶೇಖರವನ್ನು ತಾವಾಗಿ ಹೊರ ಹಾಕುವಂತೆ ಇದರಿಂದ ಅವರಿಗೆ ಉತ್ತೇಜನ ದೊರಕಬಹುದು" ಎಂದರು. ಈ ಮಾತಿಗೆ ಕಮಿಷನರು ಒಪ್ಪಿ, ತಾವು ಕೊಟ್ಟ ಈ ಆಶ್ವಾಸನವು ಎಲ್ಲರಿಗೂ ತಿಳಿಯುವ ಹಾಗೆ, ಪತ್ರಿಕೆಯ ಪ್ರಕಟಿಸಬೇಕೆಂದೇ ತಮ್ಮ ಅಪೇಕ್ಷೆ ಮತ್ತು ಈ ದೃಷ್ಟಿಯಿಂದ ... ನಲ್ಲಿ ಸಂಪೂರ್ಣ ರೇಷನಿನ ಪ್ರಮಾಣವನ್ನು ಪುನಃ ಕೊಡಿಸಿದ್ದೇವೆ ಎಂದರು.

ಪ್ರೊಕ್ಯೂರ್‌ಮೆಂಟ್ ದೋರಣೆಯ ಕುರಿತು ಶ್ರೀ ಹೆಗ್ಗಡೆಯವರು ಪ್ರಸ್ತಾಪಿಸುತ್ತಾ "ಒಬ್ಬ ಕೃಷಿಕನ ಆವಶ್ಯಕತೆ ಏನು ಎಂದು ನೋಡಿಕೊಳ್ಳದೆ, ಆತನಿಂದ ಇದೇ ಗೇಣಿಯನ್ನು ತೆಗೆದುಕೊಂಡು ಹೋಗಿ ಅವನಿಗೆ ರೇಶನ್ ಕಾರ್ಡು ಕೊಡುವುದು ಪ್ರೊಕ್ಯೂರ್‌ಮೆಂಟ್ ಆರ್ಡರಿಗೂ ಆ ಕಾರ್ಯನೀತಿಗೂ ವಿಹಿತವಾದುದಲ್ಲ. ಆ ಕಾರ್ಡಿನ ಪೆಸೆಯಿಂದ ಅವನಿಗೆ ಬಹಳ ಕಷ್ಟಗಳುಂಟಾಗುವವು. ಈಗಿನ ಪ್ರೊಕ್ಯೂರ್‌ಮೆಂಟ್ ಕ್ರಮದಂತೆ ಆತನು ತಾನು ಕೊಟ್ಟ ಅಕ್ಕಿಗೆ ತಾನೇ ಹೆಚ್ಚಿನ ಕ್ರಯ ಕೊಟ್ಟು ಕೊಳ್ಳಬೇಕಾಗುವುದು. ... ಬೊಬ್ಬಸಿದರೂ ಎಷ್ಟೆಷ್ಟು ಬೇಕೆಂದು ವ್ಯಯಕ್ತಿಕವಾಗಿ ತನಿಖೆ ನಡೆಸಲು ಸಾಕಷ್ಟು ಸಿಬಂದಿ ಇಲ್ಲದಿರುವುದು ಇಷ್ಟೊಂದು ಸಂಕಷ್ಟಕ್ಕೆ ಕಾರಣವಾಗಿದೆ" ಎಂದರು.

ಸ್ವಲ್ಪ ಚರ್ಚೆಯ ನಂತರ ಮುಂದಿನ ಪ್ರೊಕ್ಯೂರ್‌ಮೆಂಟ್ ಸಮಯಕ್ಕೆ ಮೊದಲಾಗಿಯೇ ಆ ಕುರಿತು ಸಿಫಾರಿಸುತ್ತೇನಾಗಿ ಕಮಿಷನರರು ಒಪ್ಪಿಕೊಂಡರು. ಈಗಿನ ಧೋರಣೆಯ ಕುರಿತು ಅಗತ್ಯವಾದ ತಿದ್ದುಪಡಿಗಳ ಕುರಿತು, ತಮಗೆ ಬರೆಯಬಹುದೆಂದು ತಿಳಿಸಿದರು. ಸ್ಟೋರುಗಳನ್ನು ಹೆಚ್ಚಿಸಿ ಕೊಡುವ ಬಗ್ಗೆಯಾಗಿ ಮತ್ತು ದೇಶದಿಂದ ಕಡಿತವನ್ನು ... ಕೊಟ್ಟದ್ದಕ್ಕಾಗಿ ಕಮಿಷನರರನ್ನು ಈ ಶಿಷ್ಟ ಮಂಡಲದವರು ವಂದಿಸಿದರು. ಮೇಲಿನ ವಿಚಾರ ವಿನಿಮಯ ನಡೆಯುವ ಕಾಲಕ್ಕೆ ಜಿಲ್ಲಾ ಕಲೆಕ್ಟರರಾದ ಶ್ರೀ. ಪಿ. ರಾಮದಾಸರು ಹಾಜರಿದ್ದರು.

ದಕ್ಷಿಣ ಕನ್ನಡ

ಕಾರ್ಕಳ—ಪಂಚಾಯ್ತ ಬೋರ್ಡಿನ ಆಸ್ತಿಯಡಲ್ಲಿರುವ ರಸ್ತೆಗಳಿಗೆ 'ಇಲೆಕ್ಟ್ರಿಕ್ ದೀಪ'ಗಳನ್ನು ಬೆಳಗಿಸುವ ಸಮಾರಂಭವು ಶ್ರೀ. ಕೆ. ಪಿ. ಶೇಷಗಿರಿ ಪ್ರಭುಗಳವರ ದಿವ್ಯ ಹಸ್ತಗಳಿಂದ ನೆರವೇರಿಸಲ್ಪಟ್ಟಿತು. ಶ್ರೀ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಇಲೆಕ್ಟ್ರಿಕ್ ಮನೆಯ ಹೌಸಿನ ಪರಾಠದಲ್ಲಿ ಜರುಗಿ, ಪಂಚಾಯ್ತ ಬೋರ್ಡಿನ ಮೆಂಬರ ಶ್ರೀ. ಕೆ. ಅಚ್ಯುತ ಪೈ, ಪ್ರೆಸಿಡೆಂಟ ಶ್ರೀ. ಬಿ ವೆಂಕಟೇಶ ಭಟ್ಟ ವಕೀಲ, ಬಿ. ಬಾಲಕೃಷ್ಣ ಶೆಟ್ಟಿ ವಕೀಲ, ಮೊದಲಾದವರ ಸಂದರ್ಭೋಚಿತ ಭಾಷಣಗಳಾದ ಬಳಿಕ ಅಧ್ಯಕ್ಷರ ದಿವ್ಯ ಹಸ್ತಗಳಿಂದ ದೀಪಗಳನ್ನು ಬೆಳಗಿಸಲಾಯಿತು. ಅಂತೂ ಪುಸ್ತಕ ಭಂಡಾರಗಳನ್ನೂ, ರಸ್ತೆಗಳಿಗೆ ಇಲೆಕ್ಟ್ರಿಕ್ ದೀಪಗಳ ವ್ಯವಸ್ಥೆಯನ್ನೂ ಧರ್ಮಾರ್ಥ ವಾಚನಾಲಯವನ್ನೂ ತೆರೆಯುವ ಕೆಲಸ ಕಾರ್ಯಗಳನ್ನು ಪಂಚಾಯ್ತ ಬೋರ್ಡ ಮಾಡಿದ್ದು ಸ್ತುತ್ಯಾರ್ಹವಿದೆ.

ಬೈಲೂರು ಮಿಷನ್ ಶಾಲಾ ಹೆ. ಮಾ. ಟಿ. ಡಿ ಅಸ್ವಾಲರು ತಾ 19-5-45ರಲ್ಲಿ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಬಾಲಕರನ್ನು ಕೂಡಿಕೊಂಡ, ಮೂಡಬಿದ್ರಿಯ ಪ್ರಾಚೀನ ಇತಿಹಾಸಗಳನ್ನು ತೋರಿಸುವದಕ್ಕೆ ನಡಕೊಂಡು ಹೋಗುವಾಗ ಈ ಕೆಳಗಿನ ವಿಷಾದಕರ ಸಂಗತಿಯನ್ನು ತಿಳಿದರು. ಬೆಳುವಾಯಿ ಮರದ ಬಳಿ ಇರುವ ಒಂದು ಬಿಲ್ಲವ ಕುಟುಂಬದ ಎರಡು ವರ್ಷದ ಗಂಡು ಮಗುವನ್ನು ಅದೇ ದಿನ ಮುಂಜಾನೆ ಕೋಳಿ ಕೂಗುವ ಸಮಯದಲ್ಲಿ ತಾಯಿಯು ಮುಗ್ಗಲಿನಿಂದಲೇ ಹುಲಿಯು ಎತ್ತಿಕೊಂಡು ಹೋಗಿ ಸಮೀಪದ ಹಾದಿಯಲ್ಲಿ ತೋಳು ಹೊಟ್ಟೆ ಮತ್ತು ತೊಡೆ ಇತ್ಯಾದಿಯನ್ನು ತಿಂದು ಹೋಗಿತ್ತು. ಎದೆಗೂಡಿಗೆ ಮತ್ತು ಶ್ವಾಸಕೋಶ ಪಕ್ಕೆಲುಬಿನ ಕೆಳಗೆ ನೇತಾಡುತಿತ್ತು. ಉಳಿದ ಶವವನ್ನು ಮೂಡಬಿದ್ರಿಯ ಪೋಲೀಸಿನವರು ತನಿಖೆ ಮಾಡಿದ ಬಳಿಕ ದಹನ ಮಾಡಲಾಯಿತು. ಹಿಂದಿನ ದಿನ ಆದರ ನೆರೆಮನೆಯಿಂದ ಒಂದು ದನದ ಕರುವನ್ನೂ ತೆಗೆದುಕೊಂಡು ಹೋಗಿದೆಯೆಂದು ತಿಳಿದು ಬಂತು.

ಈ ಹಿಂದೆ ಶಿರ್ವ ಕಟ್ಟಿಂಗೇರಿ ಅತ್ತಕಡೆ ಹಾವಳಿ ಮಾಡುತಿದ್ದ ನರ ಭಕ್ಷಕನೇ ಈ ಕಡೆ ಬಂತೋ ಯಾ ತಿನ್ನಲಿಕ್ಕೇನೂ ಸಿಕ್ಕದ್ದರಿಂದ ಹೀಗೆ ಮಾಡಿತೋ ತಿಳಿಯುವದಿಲ್ಲ. ಅಂತೂ ಒಮ್ಮೆ ಮನುಷ್ಯನ ರಕ್ತ ಮಾಂಸದ ರುಚಿ ಹಿಡಿದ ಬಳಿಕ ಮನುಷ್ಯನನ್ನೇ ಭಕ್ಷಿಸುವದರಿಂದ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲೇ ಇತ್ತ ಕಡೆ ಗಮನವೀಯುವರೆಂದು ಹಾರೈಸಲಾಗಿದೆ.

ಕಟಪಾಡಿ—ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯಿಂದ ಚಾಲ್ತಿ ವರುಷದಲ್ಲಿ ವಿದ್ಯಾರ್ಥಿವೇತನ, ಯಾ, ಇತರ ಸಹಾಯಗಳನ್ನು ಪಡೆಯಲಿಕ್ಕೆ ಅಪೇಕ್ಷಿಸುವ ಪ್ರಾಥಮಿಕ ತರಗತಿಗಳಲ್ಲಿ ಕಲಿಯುವ ಬಿಲ್ಲವ ಜಾತಿಯ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ತಾ 30 6-45ರ ಒಳಗೆ ಗೌ. ಕಾರ್ಯದರ್ಶಿಯವರಿಗೆ ತಲುಪುವಂತೆ ಕಳುಹಿಸತಕ್ಕದ್ದು ಸಮಿತಿಯ ಮುಂಬಯಿಯ ಪ್ರತಿನಿಧಿ ಕಮಿಟಿಯವರು ದೇವಸ್ಥಾನದ ಕಟ್ಟೋಣಗಳ ಬಗ್ಗೆ ಸಾರ್ವಜನಿಕ ಧನ ಸಹಾಯಗಳನ್ನು ಸಂಗ್ರಹಿಸಿ ಸಮಿತಿಯ ಆದಳಿತೆ ಕಮಿಟಿಯವರಿಗೆ ಈ ವರೆಗೆ ಮಾಡಿದ ಸಹಾಯವು ಶ್ಲಾಘನೀಯವಾಗಿದೆ ವರದಿಯನ್ನು ತಕ್ಕ ಸಮಯದಲ್ಲಿ ಪ್ರಕಟಿಸಲಾಗುವದು. ಮುಂಬಯಿಯ ಉದಾರಶೀಲರಾದ ಮಹನೀಯರು ಸಮಿತಿಯ ಪ್ರತಿನಿಧಿ ಕಮಿಟಿಯವರಿಗೆ ಇನ್ನೂ ಶಕ್ತ್ಯಾನುಸಾರ ಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ಗೌರವಕಾರ್ಯದರ್ಶಿ, ಶ್ರೀ. ಕೆ. ರಂಗನವರು ಮನವಿ ಮಾಡುತ್ತಾರೆ.

ವರಂಗ—ತಾ 30 5 45ರಲ್ಲಿ ವರಂಗ ಸರಸ್ವತಿ ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವವು ಎಡ್ವೋಕೇಟ್ ಶ್ರೀ. ಕೆ. ವಾಸುದೇವ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ ಎಸ್ ಪದ್ಮನಾಭಾಚಾರ್ಯರಿಂದ ರಚಿತವಾದ "ಮಹಾಕವಿ ಭಾರವಿ" ಎಂಬ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಮುಂಬಾಯಿ—ದಿ ಕೆನರಾ ಕ್ರಿಶ್ಚಿಯನ್ ಯೂನಿಯನ್ ಈ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವವು ತಾ. 20 5-45ರಲ್ಲಿ ಶ್ರೀ ... ಸಿ. ಫುರ್ತಾಡೊರವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಸಭೆಯಲ್ಲಿ ಶ್ರೀ. ಜೆ. ಪಿ ಅಸ್ವಾಲರು "ಕ್ರೈಸ್ತರಲ್ಲಿ ಕನ್ನಡದ ಮುನ್ನಡೆ" ಎಂಬೀ ವಿಷಯದ ಮೇಲೆ ಸುರಸವಾದ ಭಾಷಣ ಕೊಟ್ಟ ಬಳಿಕ, ಅಧ್ಯಕ್ಷರ ಸಮಯೋಚಿತ ಭಾಷಣವಾದ ಮೇಲೆ ಲಘು ಉಪಾಹಾರವಾಗಿ ಸಭೆಯು ಸಮಾಪ್ತಿಯಾಯಿತು.

THE
VIJAYA BANK LTD.,
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—
Coondapoor, ... [illegible], Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

WANTED

a trained teacher of the secondary grade, Apply sharp.

The Manager,
Modern H. E. School,
Udipi, S. K.
UDIPI 3-6-45

ಮಂಗಳೂರು.

ಬಂಟರ ಯಾನೆ ನಾಡವರ ಸಂಘ, ಮಂಗಳೂರು-ಸಮಾಜ ಬಂಧುಗಳ ಕಲಶೆ ಸಂಗ್ರಹಕ್ಕಾಗಿ ಮಾಡುವ ಯತ್ನದಲ್ಲಿ ಮೂಲ್ಕಿ ಕ್ಷೇತ್ರದ 7ನೇ ಸಭೆಯು ಹಲಿಮಾರು ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 27-5-45ರಲ್ಲಿ ಸೇರಿ ಬಂದು ಕೆಲವು ನಿರ್ಣಯಗಳೊಡನೆ ಮುಂಡ್ಕೂರು ಹೋಳಿಗೆ ಮುಂಡ್ಕೂರಲ್ಲಿ ಕಟ್ಟ ಹಾಕುವ ಕುರಿತು ತಾ 13-5-45ರಲ್ಲಿ ಮುಂಡ್ಕೂರು ಸಭೆಯಲ್ಲಾದ 6ನೇ ನಿರ್ಣಯವನ್ನು ಚರ್ಚಿಸಲಾಗಿ ಕಟ್ಟದ ಕೆಳ ಗ್ರಾಮಗಳ ರಹಿತರು ಇನ್ನಷ್ಟು ತಿಳಿದು ಚರ್ಚಿಸಿಕೊಳ್ಳುವುದು ಅಗತ್ಯವೆಂಬ ಅಭಿಪ್ರಾಯವಾಗಿ 8ನೇ ಸಭೆ ಕೂಡಾ ತಾ. 10 6 45 ನೇ ಆದಿತ್ಯವಾರ ಮಧ್ಯಾಹ್ನ 3 ಘಂಟೆಗೆ ಹಲಿಮಾರಿನಲ್ಲಿಯೇ ಸೇರಿ ಬರಬೇಕೆಂದೂ, ಸಭೆಯಲ್ಲಿ ಕೂಡಿ ಬಂದ ರಹಿತರು ಹೆಚ್ಚಾದ ಉಮೇದಿನಿಂದ ಬಾರದ ರಹಿತರಲ್ಲಿ ಸಾಧ್ಯವಿದ್ದಷ್ಟು ಮುಂದಿಗೆ ತಿಳಿಸಿ 8ನೇ ಸಭೆಗೆ ಬಹುಮಂದಿಯಿಂದ ಬರಬೇಕಾಗಿ ನಿಶ್ಚಯಿಸಲಾಯಿತು. ಕಾರಣ 10-6 45ರ 8ನೇ ಸಭೆಗೆ ಅನೇಕರು ಹಾಜರಿದ್ದು ಯುಕ್ತ ಆಲೋಚನೆಯಿಂದ ಊರ ಹಿತ ಕಾರ್ಯಗಳಲ್ಲಿ ಭಾಗವಹಿಸಲು ಪ್ರಯತ್ನಿಸುವರೆಂದು ನಂಬಲಾಗಿದೆ.

ತಾರೀಕು 30-5-45ರಲ್ಲಿ ಜರಗಿದ ದ. ಕ. ಜಿಲ್ಲಾ ಭೂಮಾಲಿಕರ ಸಂಘದ ಸಭೆಯಲ್ಲಿ ಪಾಸಾದ ಠರಾವುಗಳು-೧ ರೈತವಾರಿ ಸರಹದ್ದಿನೊಳಗಣ ಅಕ್ಕಿ ಭತ್ತ ಉತ್ಪತ್ತಿಯ ಮೇಲಣ ಮತ್ತು ಮುನಿಸಿಪಾಲಿಟಿಯೊಳಗಣ ಭೂಮಿಯ ಮೇಲಣ ತೆರಿಗೆಯು ನಿಕ್ಕಿ ಹುಟ್ಟುವಳಿಯ ಸೇಕಡಾ ೫೦ಕ್ಕೆ ಮಿಕ್ಕಿ ಈ ಜಿಲ್ಲೆಯಲ್ಲಿರುವುದರಿಂದಲೂ; ೨ ಭೂಮಿ ಹುಟ್ಟುವಳಿಯ ಸೇಕಡಾ ೭ರಷ್ಟು ಲೋಕಲ್ ಬೋರ್ಡ್ ಸೆಸ್ ತೆರಿಗೆ ಇರುವುದರಿಂದಲೂ, ೩. ಜಾಗ್ಯಾತು ಸ್ಥಳದ ಆದಿಕ ಉತ್ಪತ್ತಿಯ ನಿಕ್ಕಿ ಹುಟ್ಟುವಳಿಯ ಮೇಲೆ ಸೇಕಡಾ ೭೫ರಷ್ಟು ಸುಂಕ-ತೆರಿಗೆ ಇರುವುದರಿಂದಲೂ, ದ ಕ ಜಿಲ್ಲೆಯ ರೈತರು ಈಗ ಜಾರಿಗೆ ತರಲು ನಿರ್ಣಯಿಸಿದ ವ್ಯವಸಾಯೋತ್ಪತ್ತಿಯ ಮೇಲಣ ತೆರಿಗೆಯ ಮಸೂದೆಯನ್ನು ಲೆಜಿಸ್ಲೇಟಿವ್ ಅಸೆಂಬ್ಲಿಯು ಪುನಃ ಸೇರಿ ಮಸೂದೆಯ ಮುಖ್ಯ ವಿಚಾರಗಳು ಎಲ್ಲರಿಗೂ ಸರಿಯಾಗಿ ತಿಳಿಯುವ ತನಕವೂ ಅಥವಾ ಈಗ ಜಾರಿಯಿರುವ ಹಲವು ತೆರಿಗೆಗಳ ಮೇಲೆ ಪುನಃ ಹೆಚ್ಚಾಗಿ ಹೇರಿಸಲ್ಪಡುವ ಈ ತೆರಿಗೆಯು ನ್ಯಾಯ ಸಮ್ಮತವೋ ಎಂಬುದನ್ನು ವಿಚಾರಿಸಲು ಲೆಜಿಸ್ಲೇಟಿವ್ ಮೆಂಬರರ ಒಂದು ಶಿಷ್ಟ ಮಂಡಲವನ್ನು ರಚಿಸಿ, ಅವರ ವಿಚಾರಣೆಯ ಅಭಿಪ್ರಾಯವನ್ನು ಕೇಳುವ ತನಕವೂ ಈ ಮಸೂದೆಯನ್ನು ಹಾಗೆಯೇ ಬಾಕಿಯಾಗಿ ಇರಗೊಡಿಸುವಂತೆ ಸರಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತದೆ

ಒಂದು ವೇಳೆ ಇದೇ ಮದ್ರಾಸ್ ಪ್ರಾಂತ್ಯದ ಆಕ್ಷೇಪಗಳನ್ನು ಅಲಕ್ಷಿಸಿ ಈ ಮಸೂದೆಯನ್ನು ಜಾರಿಗೆ ತರಲು ಸರಕಾರವು ನಿಶ್ಚಯಿಸಿದರೆ, ಅಂತಹ ಸಂದರ್ಭದಲ್ಲಿ ಕುಟುಂಬದ ಪ್ರತಿಯೊಬ್ಬ ವಿಭಕ್ತ ಯಾ ಅವಿಭಕ್ತ ಮೆಂಬರನನ್ನು ಒಂದು 'ಯೂನಿಯನ್' ಎಂಬದಾಗಿ ಪರಿಗಣಿಸತಕ್ಕದ್ದು; ಮತ್ತು ೫ ಸಾವಿರ ರೂಪಾಯಿಯೊಳಗಣ ಮೇಲಿನ ತೆರಿಗೆಯನ್ನು ಎಲ್ಲಾ ಅವಿಭಕ್ತ ಮತ್ತು ಅಳಿಯ ಸಂತಾನ ಅವಿಭಕ್ತ ಕುಟುಂಬದ ಪ್ರತಿಯೊಬ್ಬ ಮೆಂಬರನಿಗೂ ಅನ್ವಯಿಸುವಂತೆ ವಿನಾಯತಿಗೊಳಿಸತಕ್ಕದ್ದು

ಇಂಡಿಯಾ ಮತ್ತು ಮದ್ರಾಸ್ ಸರಕಾರಗಳು ಹೈಡ್ರೋ ಇಲೆಕ್ಟ್ರಿಕ್ ಸರಬರಾಯಿಯನ್ನು ಕನ್ನಾನೂರಿನಿಂದ ಮಂಗಳೂರಿಗೂ ಅಥವಾ ಗೆರಸೊಪ್ಪೆಯಿಂದ ಮಂಗಳೂರು ಮತ್ತು ಕಾಸರಗೋಡಿಗೂ; ದ. ಕನ್ನಡದವರಲ್ಲಿಯೂ ಮಂಗಳೂರಿನ ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕೆಗೆ ಮತ್ತು ವಿವಿಧ ಗ್ರಾಮ ಕೈಗಾರಿಕೆಗೆ ಹಾಗೂ ವ್ಯವಸಾಯಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಕೂಡಲೇ ಜರಗಿಸುವಂತೆ ಸರಕಾರಗಳನ್ನು ವಿನಂತಿಸಿಕೊಳ್ಳಬೇಕು.

ಶ್ರೀ ಟಿ. ಮಂಜಯ್ಯ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಕಾರ್ಯದರ್ಶಿ ಶ್ರೀ. ಕೆ ಬಿ. ಜಿನರಾಜ ಹೆಗಡೆಯವರು ಮಸೂದೆಯ ಮುಖ್ಯಾಂಶಗಳನ್ನು ವಿವರಿಸಿದರು ಮೇಲಿನ ಎರಡು ಠರಾವುಗಳನ್ನು ಅಧ್ಯಕ್ಷರು ಮಂಡಿಸಿ, ಅವು ಸರ್ವಾನುಮತದಿಂದ ಪಾಸಾದುವು ಶ್ರೀ ನಾಗರಾಜ ಎ. ವಿ. ಶೆಟ್ಟರು. ರಾವ್ ಬಹದೂರ್, ಕೆ ಟಿ ಆಳ್ವ, ರಾವ್ ಸಾಹೇಬ್. ಶ್ರೀ.ಪಿ ರಂಗನಾಥ ಪೂಂಜ ಶ್ರೀ ಕೆ ಆರ್ ಬಲ್ಲಾಳರು, ಎಸ್ ನಾಗರಾಜಯ್ಯನವರು, ಶ್ರೀ. ತಿಮ್ಮಪ್ಪ ಹೆಗಡೆಯವರೇ ಮೊದಲಾದವರು ಸಭೆಯಲ್ಲಿ ಹಾಜರಿದ್ದರು

ಚಿಮಿಣಿ ಎಣ್ಣೆಯಲ್ಲಿ ಕಡಿತ-ಇದೇ ಜೂನ್ ತಾ ೫ರಿಂದ, ಮಂಗಳೂರು ಮುನಿಸಿಪಾಲಿಟಿ ಮತ್ತವರ ಸರಹದ್ದುಗಳಲ್ಲಿ ಪಡಿಸುಗೆಯ ಪ್ರಕಾರ ಈ ತನಕ ಸಿಗುತ್ತಿದ್ದ ಚಿಮಿಣಿ ಎಣ್ಣೆಯಲ್ಲಿ ಈ ಕೆಳಗಿನ ಕಡಿತ ಮಾಡಲಾಗುವುದು: ಪಕ್ಷಕ್ಕೆ ೧ ಬಾಟ್ಲಿಗೆ ಮೇಲ್ಪಟ್ಟು ೨ ಬಾಟ್ಲಿಗಳ ವರೆಗೆ ಸಿಗುತ್ತಿದ್ದವರಿಗೆ ತಿಂಗಳಿಗೆ ½ ಬಾಟ್ಲಿ ಕಡಿತ, ಪಕ್ಷಕ್ಕೆ ೨ರಿಂದ ೩ ಬಾಟ್ಲಿ ಸಿಗುತ್ತಿದ್ದವರಿಗೆ ತಿಂಗಳಿಗೆ ೧ ಬಾಟ್ಲಿ ಕಡಿತ, ಪಕ್ಷಕ್ಕೆ ೩ರಿಂದ ೬ ಬಾಟ್ಲಿ ಸಿಗುತ್ತಿದ್ದವರಿಗೆ ತಿಂಗಳಿಗೊಂದು ಬಾಟ್ಲಿಯ ಕಡಿತ, ಪಕ್ಷಕ್ಕೆ ೬ರಿಂದ ೮ ಬಾಟ್ಲಿಯ ವರೆಗೆ ೨½ ಬಾಟ್ಲಿ ಕಡಿತ ಪಕ್ಷಕ್ಕೆ ೮ಕ್ಕೆ ಮೇಲ್ಪಟ್ಟು ೧೦ರ ವರೆಗೆ ೩ ಬಾಟ್ಲಿ ಕಡಿತ ಪಕ್ಷಕ್ಕೆ ೧೦ ಬಾಟ್ಲಿಗೂ ಮಿಕ್ಕಿ ಸಿಗುತ್ತಿದ್ದವರಿಗೆ ೪ ಬಾಟ್ಲಿ ಕಡಿತವು

ಕೇಶ್ ಮೆಮೊ ಬೇಡ-ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರು ಪ್ರಕಟಣೆಯೊಂದನ್ನು ಹೊರಡಿಸುತ್ತ, ಆಹಾರ ನಿಯಂತ್ರಣಾಜ್ಞೆಯನ್ವಯ, ಔಪಚಾರಿಕ ಪಡಿಸುಗೆ ಹರಡಿದ ದ. ಕ. ಜಿಲ್ಲೆಯಲ್ಲಿ ಲೈಸೆನ್ಸ್ ಹೊಂದಿದ ಕೋಪರೇಟಿವ್ ಸ್ಟೋರ್ಸ್ ಮತ್ತು ಪಡಿಸುಗೆ ಆಹಾರ ಧಾನ್ಯಗಳನ್ನು ವಿಕ್ರಯಿಸುವ ವ್ಯಾಪಾರಿಗಳು, ಪಡಿಸುಗೆ ಚೀಟು ಅಥವಾ ಗುರುತು ಚೀಟುಗಳ ಮೂಲಕ ಪಡಿಸುಗೆ ಧಾನ್ಯ ವಿಕ್ರಯಿಸುವಾಗ ಆ ಬಗ್ಗೆ ನಗದಿ ಚೀಟು (ಕೇಶ್ ಮೆಮೊ)ಗಳನ್ನು ಕೊಡಬೇಕಾಗಿಲ್ಲ ಕಾರ್ಡಿನ ಪ್ರಕಾರ ಅಕ್ಕಿ (ಅಥವಾ ರಾಗಿ ಗೋಧಿ) ವಿಕ್ರಯಿಸಿದ ಬಗ್ಗೆ, ಪಡಕೊಂಡವನ ಹೆಸರು ಮತ್ತು ವಿಳಾಸ, ಧಾನ್ಯದ ಹೆಸರು ಮತ್ತು ಪ್ರಮಾಣ. ದರ, ಒಟ್ಟು ಮೌಲ್ಯ ಇತ್ಯಾದಿಗಳನ್ನು ಸೇಲ್ಸ್ ರಿಜಿಸ್ಟರ್ ಎಂಬ ಪುಸ್ತಕದಲ್ಲೇ ಬರೆದಿಟ್ಟುಕೊಂಡರೆ ಸಾಕು ಆದರೆ, ಪಡಿಸುಗೆ ಚೀಟುಗಳಲ್ಲಿ ಕಾಣಿಸಿದ ಇತರ ಆಹಾರ ಧಾನ್ಯಗಳನ್ನು ವಿಕ್ರಯಿಸುವಾಗ ನಗದಿ ಚೀಟು ಕೊಡಲೇಬೇಕು

ದಕ್ಷಿಣ ಕನ್ನಡ,

ಸುಬ್ರಹ್ಮಣ್ಯ-ಕಳೆದ ಮೂರು ವರ್ಷಗಳ ಹಿಂದೆ ಇಲ್ಲಿಂದ ಸಂಚಾರಾರ್ಥವಾಗಿ ಹೊರಟಿದ್ದ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ಮದ್ವಿದ್ವಜ್ಞತೀರ್ಥ ಶ್ರೀ ಶ್ರೀ ಪಾದಂಗಳವರು ಕೋಶಿನಾಡ ಮುಂತಾದ ಸ್ಥಳಗಳಲ್ಲಿ ಸಂಚಾರವನ್ನು ಮಾಡಿಕೊಂಡು ಕಳೆದ ವೈಶಾಖ ಶುದ್ಧ ತ್ರಯೋದಶೀ ಗುರುವಾರ (ತಾ 24 5 45) ಶ್ರೀ ನರಸಿಂಹ ಜಯಂತೀ ಮಹೋತ್ಸವಕ್ಕೆ ಸರಿಯಾಗಿ ಸುಬ್ರಹ್ಮಣ್ಯಕ್ಕೆ ದಯಮಾಡಿಸಿರುತ್ತಾರೆ. ನರಸಿಂಹ ಜಯಂತೀ ಮಹೋತ್ಸವವು ವೈಶಾಖ ಶುದ್ಧ ೧೪ಯು ಶುಕ್ರವಾರ ಆಗ್ಯಾತು ಮೂರು ದಿನಗಳಲ್ಲಿ ಅನೇಕ ಭಜಕ ಮಂಡಲಿಯ ಕೂಡುವಿಕೆಯಿಂದ ವಿಜೃಂಭಣೆಯಿಂದ ಜರಗಿತು

ಪುತ್ತೂರು ಇಲ್ಲಿಯ ಬೋರ್ಡು ಹೈಸ್ಕೂಲಿನ ಹೊಸ ಕಟ್ಟೋಣದ ಬಗ್ಗೆ ರೂ. ೩,೫೦೦ ಯಾ ಅದಕ್ಕೆ ಮಿಕ್ಕಿದ ಹಣವನ್ನು ದಾನಮಾಡುವವರ ಹೆಸರನ್ನು ಶಾಶ್ವತಗೊಳಿಸುವ ಬಗ್ಗೆ ಒಂದು ಕೋಣೆಗೆ ಅಂತಹವರ ಯಾ ಅವರು ಸೂಚಿಸಿದವರ ಹೆಸರು ಹಾಕುವುದೆಂತಲೂ. ಅಂತಹವರ ಹೆಸರನ್ನು ಆ ಕೋಣೆಯ ಪ್ರವೇಶ ದ್ವಾರದಲ್ಲಿ ಚಂದ್ರಕಾಂತ ಶಿಲೆಯಲ್ಲಿ ಕೆತ್ತಿಸಿ ಇರಗೊಳಿಸುವುದೆಂತಲೂ, ರೂ ೧,೫೦೦ಕ್ಕೆ ಮೇಲ್ಪಟ್ಟು ದಾನಮಾಡುವವರ ತೈಲಚಿತ್ರವನ್ನು ಅವರೇ ಒದಗಿಸಿದರೆ ತಯಾರಿಸಿ ಕಟ್ಟೋಣದ ಸಭಾಮಂದಿರದಲ್ಲಿ ತೂಗಾಡಿಸುವುದೆಂತಲೂ, ರೂ ೫೦೦ ಯಾ ಅದಕ್ಕಿಂತ ಮೇಲ್ಪಟ್ಟು ಹಣವನ್ನು ದಾನಮಾಡುವವರ ಹೆಸರುಗಳನ್ನು ಚಂದ್ರಕಾಂತ ಶಿಲೆಯಲ್ಲಿ ಕೆತ್ತಿಸಿ ಸಭಾ ಮಂದಿರದ ಪ್ರಮುಖ ಸ್ಥಳದಲ್ಲಿ ಇರಗೊಳಿಸುವುದೆಂತಲೂ ಹಾಲಾ ಕಟ್ಟೋಣ ಸಮಿತಿಯವರು ನಿರ್ಣಯಿಸಿರುತ್ತಾರೆ

ಈ ಶಾಲೆಯ ಮೇಲೆ ಅಭಿಮಾನವಿರುವ ಎಲ್ಲಾ ಮಾನ್ಯ ಸದ್ಗೃಹಸ್ಥರೂ, ಶಾಲೆಯ ಹಳೆ ವಿದ್ಯಾರ್ಥಿಗಳೂ ಮೇಲಿನ ನಿರ್ಣಯಗಳನ್ನು ಪರಾಂಬರಿಸಿ ಇನ್ನಷ್ಟು ಉದಾರ ಹಸ್ತದಿಂದ ಧನ ಸಹಾಯಮಾಡಿ ಆದಷ್ಟು ಮೇಲಿನ ತರಗತಿಯಲ್ಲಿ ತಮ್ಮ ಯಾ ತಮಗೆ ಇಷ್ಟವುಳ್ಳವರ ಹೆಸರುಗಳನ್ನು ಶಾಶ್ವತಗೊಳಿಸಬೇಕಾಗಿ ಪುತ್ತೂರು ಬೋರ್ಡು ಹೈಸ್ಕೂಲಿನ ಹೊಸ ಕಟ್ಟೋಣದ ಸಮಿತಿಯ ಅಧ್ಯಕ್ಷ ಶ್ರೀ ಬಿ ಮಂಗೇಶ ರಾಯರು ವಿನಂತಿಸುತ್ತಾರೆ.

ಇಲ್ಲಿಯ ಹೆಲ್ತ್ ಇನ್ಸ್‌ಪೆಕ್ಟರರಾದ ಶ್ರೀ ಲಕ್ಷ್ಮಣನವರ ಸ್ಥಾನಕ್ಕೆ ಶ್ರೀ ಗೋಪಾಲಕೃಷ್ಣ ಅಯ್ಯರಿಗೆ ಇಲ್ಲಿಗೆ ವರ್ಗವಾಗಿದೆ ಇಲ್ಲಿ ಲೋಕಲ್ ಫಂಡ್ ಓವರ್ಸಿಯರ್ ಶ್ರೀ ವಾಸುದೇವ ಕಾಮತ್‌ರವರಿಗೆ ಉಡುಪಿಗೆ ವರ್ಗವಾಗಿ ತಾ.೩೧ರಂದು ಇಲ್ಲಿಂದ ತೆರಳಿರುತ್ತಾರೆ. ಸ್ಥಳೀಯ ಬೋರ್ಡು ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ರಾಮನ್ ನಂಬಿಯಾರರು ನಿವೃತ್ತರಾದ ನಿಮಿತ್ತ ಇಲ್ಲಿಯ ಅಸಿಸ್ಟಾಂಟ್ ಹೆಡ್ಮಾಸ್ಟರರಾದ ಶ್ರೀ ರಾಮಕೃಷ್ಣರಾವ್ ಅವರೇ ಹೆಡ್ಮಾಸ್ಟರರಾಗಿ ನೇಮಕ ಹೊಂದಿರುತ್ತಾರೆ.

ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಮಹಾ ಸಭೆ-ಈ ಸಂಘದ ಮಹಾ ಸಭೆಯು ಇದೇ ಮೇ ತಿಂಗಳ ತಾ 27ರಲ್ಲು ಶ್ರೀ ಯಂ. ರಾಮಪ್ಪ, ಬಿ ಎ (ನಿವೃತ್ತ ಜಿಲ್ಲಾ ರಿಜಿಸ್ಟ್ರಾರ್) ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಶ್ರೀ ದೇವತಾ ಪ್ರಾರ್ಥನೆಯಾದ ನಂತರ ಸಭಾ ಕಾರ್ಯಗಳು ಆರಂಭವಾದುವು. ಸಂಘದ ಗೌ। ಕಾರ್ಯದರ್ಶಿಯವರಾದ ಯಂ. ಕೆ ಎಲ್ಲಪ್ಪನವರು 1944ನೇ ಎಪ್ರಿಲ್ ತಾ 1ರಿಂದ 1945ನೇ ಮಾರ್ಚ ತಾ 31ರ ವರೆಗಿನ ಅಂತ್ಯದ ವರೆಗಿನ ಜಮಾ ಖರ್ಚಿನ ತಖ್ತೆಯನ್ನೊಳಗೊಂಡ ವರದಿಯನ್ನು ಓದಿದರು ವರದಿಯು ಸರ್ವಾನುಮತದಿಂದ ಮಂಜೂರ ಮಾಡಲ್ಪಟ್ಟಿತು ಆ ಮೇಲೆ ಬೇರೆ ಬೇರೆ ಕಡೆಯಿಂದ ಬಂದ ಸಂದೇಶಗಳನ್ನು ಓದಿದ ನಂತರ ಶ್ರೀ ಕೃಷ್ಣಪ್ಪ ಡಿ ಮೂಲ್ಕಿಯವರು ಸಂಘದ ಕಾರ್ಯಗಳನ್ನು ಶ್ಲಾಘಿಸಿ ಸಂಘವು ಕೈಕೊಂಡಿರುವ ವಿದ್ಯಾರ್ಥಿ ನಿಧಿಗೆ ತಾನು ಮುಂಬಾಯಿಯಲ್ಲಿ ತುಂಬಾ ನೆರವಾಗುವೆನೆಂದು ಆಶ್ವಾಸನೆ ಇತ್ತರು ನಂತರ ಶ್ರೀ ಕೆ ಎಲ್ಲಪ್ಪನವರೂ ಯಂ. ಕೆ. ಎಲ್ಲಪ್ಪನವರೂ ಭಾಷಣಗಳನ್ನು ಮಾಡಿದರು. ಬಡವಾ ವಿದ್ಯಾರ್ಥಿಯವರಿಗೆ ಪಾರಿತೋಷಕವಾಗಿ ಮೆಡಲುಗಳನ್ನಿತ್ತ ತರುವಾಯ ಕಾರ್ಯಕಾರಿ ಮಂಡಳಿಗೆ ಸದಸ್ಯರನ್ನಾರಿಸಿದ ಮೇಲೆ ಅಧ್ಯಕ್ಷರು ಸಂಘವು ಮಾಡಿದ ಕಾರ್ಯ ಕಲಾಪಗಳನ್ನು ಪ್ರಶಂಸಿಸಿ ಮುಂದಿನ ಕಾರ್ಯಗಳನ್ನು ಸೂಚಿಸುವ ದಿವ್ಯ ಭಾಷಣವಿತ್ತ ನಂತರ ಸಭಾಧ್ಯಕ್ಷರಿಗೂ ನೆರೆದ ಸಭಿಕರಿಗೂ ಧನ್ಯವಾದಾರ್ಪಣವಾಗಲು ಫಲಹಾರದೊಂದಿಗೆ ಸಭೆಯು ಕೊನೆಗೊಂಡಿತು

The Sweetest Law.

"I am beginning to suspect
That all the world are partners
whatever their creed or sect;
That life is a kind of pilgrimage
- a sort of Jericho road
And kindness to one's fellows the
sweetest law in the code"

Insuring one's life is not only entering into partnership with other insured lives in the journey of life, but also showing kindness to one's fellows.

The Canara Mutual Assurance Co. Ltd.,
UDIPI, (S. India.)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ, ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೇ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೇ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ,ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಎರಡು ಅವಘಡಗಳು

(೬ನೇ ಪುಟದಿಂದ ಮುಂದುವರಿದುದು.)

ಗುವರು, ಆಲೋಚನೆ ಒಳ್ಳೆಯದೇ. ಯುದ್ಧದಿಂದಾಗಿ ಸ್ಥಿತಿ ಕೆಟ್ಟಿದೆ".

"ಹಾಗಾದರೆ ನೀವದಕ್ಕೆ ಒಪ್ಪುವದಿಲ್ಲವೆ?"-ಎಂದಳು ಜೋಯಿ

"ಓ, ನಾನೇನೂ ಸಂಕುಚಿತ ಮನೋವೃತ್ತಿಯವನಲ್ಲ. ಯುದ್ಧ ಕಾಲದ ಕಷ್ಟ ನನಗೆ ಗೊತ್ತಿದೆ. ಹೆಂಗಸು, ಸಮಾಜ, ಸಂತೋಷಗಳಿಂದ ದೂರವಿರುವದು ಕಷ್ಟ. ಆದರೆ ನನ್ನ ಮಟ್ಟಿಗೆ...." ಅವನ ಕಣ್ಣುಗಳಲ್ಲೊಂದು ಮಬ್ಬು ಆ ಮುಹೂರ್ತದಲ್ಲಿ ಕವಿದಂತಿತ್ತು.—"ನನ್ನ ಮಟ್ಟಿಗೆ ಯುದ್ಧ ಕಾಲದಲ್ಲಿ ಕೂಡಾ, ಪ್ರೇಮಿಸುವ ಪ್ರತಿಯೊಂದು ಬಾರಿಯೂ ಪ್ರೇಮವೆಂಬುದು ಹೊಚ್ಚ ಹೊಸ ನಾಜೂಕಾಗಿರಬೇಕೆಂದು ಅನ್ನಿಸುತ್ತದೆ. ವಾಡಿಕೆಯಂತೆ ಅದು ತೀರಾ ಲಗು ಮತ್ತು ಏಕತವಾಗಿದೆ. ಕೆಣಕು ನೋಟಗಳು, ಮಧುರ ಮಾತುಗಳು ಮತ್ತು ಪ್ರೇಮೋದ್ದೀಪನ ವರ್ತನೆಗಳಿಂದಲೇ ಲಗು ಬುದ್ಧಿಯ ಹುಡುಗಿಯರು ಕರಗಿ ನೀರಾಗಿ ಹೋಗುತ್ತಾರೆ ಹುಡುಗಿಯರೇನೇ ಭಾವಿಸಿಕೊಳ್ಳಲಿ, ಇದು ಬೆಂಕಿಯೊಡನಾಟವೆಂದು ನಾನನ್ನುತ್ತೇನೆ. ಇಲ್ಲವಾದರೆ, ಇದಕ್ಕೇನರ್ಥವೆಂದು ಒಮ್ಮೆಯೂ ಗಾಢಯೋಚನೆ ಮಾಡದೆ ಒಂದು ಕ್ಷಣದ ಸುಖಕ್ಕಾಗಿ ನಿರ್ಮಲೆಯರೆಲ್ಲಾ ಆ ರೀತಿ ಬೆಳಕಿಗೆ ಬೀಳುತ್ತಿರಲಿಲ್ಲ. ಅಂತೂ ಇದಕ್ಕಾಗಿಯೇ ನೀಚವಾಗಿ ಒಂದು ವರ್ಗದ ಮರುಳಿಯರಿರುವದು ನಿಜ. ಇಂಥವರೊಡನೆ ಯಾವನಾದರೂ ಕೃತಕ ಸುಖವನುಭವಿಸಬಹುದು. ಮರುಕ್ಷಣದಲ್ಲೇ ಏನೊಂದೂ ವ್ಯಸನವಿಲ್ಲದೆ ಇಕ್ಕಡೆಯವರೂ ಪರಸ್ಪರ ಮರೆತು ಬಿಡಬಹುದು".

ಆಕೆ ನೆಗಾಡಿದಳು; ನಗುತ್ತಲೇ ಹೇಳಿದಳು: "ಅತ್ಯಂತ ಗೂಢ ಸಮಸ್ಯೆಯಾಗಿರುವ ಈ ವಿಷಯದ ಕುರಿತು ಇಷ್ಟೊಂದು ಸಡಿಲಾಗಿ ಮಾತಾಡುವಷ್ಟು ಪ್ರಾಯ ನಿಮಗಾದಂತೆ ತೋರುವದಿಲ್ಲ".

"ಪ್ರಾಯವಾಗಲಿಲ್ಲ? ಈ ಯುದ್ಧಕಾಲದಲ್ಲಿಯೂ ಅಪ್ರಾಯಸ್ಥರಿದ್ದಾರೇನು? ನಾನು ನಿಮಗೆ ತಪ್ಪಿ ಮಾತಾಡಿದೆನಾದರೆ ಅದಕ್ಕಾಗಿ ಪಶ್ಚಾತ್ತಾಪ ಪಡುತ್ತೇನೆ" ಎನ್ನುತ್ತಾ ಆತ ತನ್ನ ಸಂಚಿಕೆಯನ್ನು ಪುನಃ ಎತ್ತಿಕೊಂಡ. ಆದರೆ ಆಕೆ ಕೂಡಲೇ ಮಾತೆತ್ತಿದ್ದಳು: "ನೀವೇನೂ ತಪ್ಪಿ ಮಾತಾಡಿಲ್ಲ. ನಿಮ್ಮ ಅಭಿಪ್ರಾಯಗಳು ಉಚ್ಚವಿವೆ".

"ಹೌದೇನು?" ಎನ್ನುವಾಗ ಅವನ ದೃಷ್ಟಿಯಲ್ಲಿದ್ದ ಒಂದು ತೀಕ್ಷ್ಣತೆ ಮತ್ತು ಕೆಣಕಾಟವು ಆ ಸೆಕುಂಡದಲ್ಲಿ ಆಕೆಯನ್ನು ತಬ್ಬಿಬ್ಬಾಗಿಸಿತು. ಮರುಕ್ಷಣದಲ್ಲೇ ಆತ ತನ್ನ ಪುಸ್ತಕದ ಕಡೆಗೆ ತಿರುಗಿದ್ದ. ವಾಡಿಕೆಯ ಘೋಷಣೆಯನುಸರಿಸಿ ಸುಮ್ಮನಿದ್ದರೂ ಸಂಗತಿ ಸಮೀಪಿಸಿದಂತೆ ಆಕೆಗನ್ನಿಸುತ್ತಿತ್ತು. ಆಕೆ ಅಂತರ್ಯತಃ ಆತನನ್ನು ಆರಾಧಿಸ ಹತ್ತಿದಳು. ಕೆಲವು ನಿಮಿಷದ ಮೌನ ತಾನೀ ಸ್ತಬ್ಧತೆಯನ್ನು ಭೇದಿಸಬೇಕೆಂದು ಆವಳು ಚಡಪಡಿಸುತ್ತಿದ್ದಳು. ರೈಲುಗಾಡಿಯ ಪ್ರತಿಯೊಂದು ಗಡಬಡವೂ ಅವರನ್ನು ಅಗಲುವಿಕೆಯತ್ತ ಒಯ್ಯುತ್ತಿದೆ, ಜತೆ ಪ್ರವಾಸಿಗರು ಪ್ರಯಾಣಾಂತ್ಯದಲ್ಲಿ ಕೊಡುವ 'ಗುಡ್ ಬೈ'ಯ ಕಾಲ ಸಮೀಪಿಸುತ್ತಿದೆ; ಮತ್ತದು ಸದಾ ಕಾಲದ 'ಗುಡ್ ಬೈ' ಆಗಲಿದೆ. ಆದ್ದರಿಂದ—

"ನಾವೊಂದು ವಿಷಯದ ಚರ್ಚೆಗಾರಂಭಿಸಿಯಾಯಿತು. ಅದನ್ನೇ ಮುಂದುವರಿಸಿ ನಮ್ಮ ಅಭಿಪ್ರಾಯವನ್ನು ಪಡೆದುಕೊಳ್ಳಬಾರದೇಕೆ?" ಎಂದಳಾಕೆ ನಗುತ್ತಾ- "ಪ್ರಥಮ ದರ್ಶನದಲ್ಲೇ ಪ್ರೇಮ ಮೂಡುವದನ್ನು ನೀವು ನಂಬುವಿರಾ?

ಅವನು ತನ್ನ ಪುಸ್ತಕವನ್ನು ಕೆಳಗಿಟ್ಟ. ನಿಶ್ಶಂಕೆಯಿಂದ ಉತ್ತರಿಸಿದ: "ಹೌದು, ನಾನು ನಂಬುತ್ತೇನೆ. ಪ್ರತಿಯೊಂದು ಜೀವಾತ್ಮವೂ ಒಂದೊಂದು ವರ್ಗದ ಕಿರಣವನ್ನು ಸೂಸುತ್ತದೆ ಅದನ್ನು ವೈಜ್ಞಾನಿಕರು ಮಾತ್ರ ತಿಳಿಯಬಲ್ಲರು. ಆ ಪೈಕಿ ಕೆಲವೊಂದು ಜೀವಗಳ ಕಿರಣವು ಮತ್ತೊಂದು ವರ್ಗದ ಕಿರಣದೊಡನೆ ವಿಶೇಷತಃ ಹೊಂದಿಕೊಳ್ಳುತ್ತದೆ; ಇನ್ನು ಕೆಲವಕ್ಕೆ ಒಗ್ಗುವುದಿಲ್ಲ. ಈ ಕಿರಣ ಸಾಮ್ಯತೆಯಿಲ್ಲದಿರುವದನ್ನೇ ಪ್ರೇಮ ಶೂನ್ಯತೆ, ಹೃದಯ ವೈಷಮ್ಯವೆನ್ನುವದು. ಪ್ರಥಮ ಪರಿಚಯದಲ್ಲಿಯೇ ಪ್ರಣಯ ಬಿದ್ದವರು ಆ ಮೇಲೆ ಅತಿ ಸುಲಭವಾಗಿ ಪರಸ್ಪರ ಸಾಮರಸ್ಯಗೊಳ್ಳುತ್ತಾರೆ".

"ನೀವೆಂದಾದರೂ ಪ್ರಥಮ ಭೇಟಿಯಲ್ಲಿಯೇ ಪ್ರಣಯ ಪ್ರೇರಿತರಾದುದಿದೆಯೇ?'

ಅವನ ಮುಖ ಮತ್ತೊಮ್ಮೆ ವಿವರ್ಣವಾಯಿತು. "ಹೌದು" ಎಂದ.

"ಯಾವಾಗ, ಹೇಳಿ".

ಆತ ನೆಗಾಡಿದ. "ನೀವು ಅತ್ಯಂತ ಚಿಡಗುಗಾತಿ ಇರುವಂತೆ ಕಾಣುತ್ತದೆ. ಆದರೆ ನನಗೆ ಬಹಳ ಮಾತಾಡುವದು ಒಗ್ಗುವದಿಲ್ಲ ನಾನು... ....."

ಆಕೆ ಸೀಟಿನಲ್ಲಿ ಸರಿಯುತ್ತಾ, ಬಂದು ಆತನನ್ನೊತ್ತಿ ಕುಳಿತಳು. ತನ್ನ ತೋಳನ್ನು ಅವನ ಭುಜದ ಮೇಲೆ ಹೇರಿ ಹೇಳಿದಳು. "ಕ್ಷಮಿಸಿರಿ. ನಿಮಗೆ ಒಗ್ಗದುದನ್ನು ಮಾಡಲು ನಾನು ತಯಾರಿಲ್ಲ".

"ಅದು ಸಂಪೂರ್ಣ ಸರಿ; ಅಂತಹದನ್ನು ನೀವು ಮಾಡಿದ್ದೂ ಇಲ್ಲ; ಮಾಡುವಂತೆಯೂ ಇಲ್ಲ" ಎನ್ನುತ್ತಾ ಅವ ಪುನಃ ಪುಸ್ತಕವೆತ್ತಿಕೊಂಡ.

ಆತನ ಹೃದಯವನ್ನು ಯಾರೋ ಒಬ್ಬಾಕೆ ನೋಯಿಸಿರುವುದರಿಂದಲೇ ಹೀಗೆ, ಎಂದು ಆಕೆ ಊಹಿಸಿಕೊಂಡಳು. ತಾವಗಲುವ ಬೊಂಬಾಯಿ ಸ್ಟೇಶನು ಸಮೀಪಿಸುತ್ತಿದೆ. ತಾನು ಆತನಿಂದ ನಿರೀಕ್ಷಿಸಿದ್ದ ವರ್ತನೆ ಕೈಗೊಳ್ಳುವ ಮನುಷ್ಯ ಅವನಲ್ಲ. ಸ್ತ್ರೀ ಎಂದರೆ ಅಗ್ಗದ ವಸ್ತು ಎಂಬ ಭಾವನೆ ಅವನ ತಲೆಯಲ್ಲಿದೆ ಎಂಬುದು ಖಂಡಿತ. ಆಕೆ ತುಸು ನಿರಾಸೆಯೊಡನೆ ಕೇಳಿದಳು. "ನನಗೆ ಒಂದು ಪುಸ್ತಕ ಎರವಿಗೆ ಕೊಡುವಿರಾ?" ಅವ ಕೂಡಲೇ ಎದ್ದ. ಸೀಟಿನಡಿಯಲ್ಲಿದ್ದ ತನ್ನ ಕೈಪೆಟ್ಟಿಗೆಯನ್ನೆಳೆದು ಬಾಗಿಲು ತೆರೆದ ಅವ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ನೆಟ್ಟಗಾಗಿದ್ದಾನೆ ಮಾತ್ರ—ಅಕಸ್ಮಾತ್ ಬ್ರೇಕ್ ಬಿದ್ದುದನ್ನು ಪ್ರತಿಭಟಿಸುವವೋ ಎಂಬಂತೆ ಟ್ರೈನಿನ ಗಾಲಿಗಳು ಒಮ್ಮೆಗೆ ಆರ್ಭಟಿಸಿದವು. ಆ ದಡಬಡಾಟದ ರಭಸಕ್ಕೆ ಅವನ ಹ್ಯಾಟು ಹಾರಿ ಬಿತ್ತು, ಭಯಭರಿತ ಚೀರಾಟಗಳು ಬಂಡಿಯೊಳಗಿಂದ ಕೇಳಿಬಂದುವು.

ಈ ಗಡಿಬಿಡಿಯ ನಡುವೆ ಹುಡುಗ ತನ್ನ ಮೇಲೆ ಕವಚಿ ಬೀಳುತ್ತಿರುವದು ಜೋಯಿಯ ಕಣ್ಣಿಗೆ ಬಿತ್ತು. ಹೇಗೋ ಅವರ ಕಣ್ಣುಗಳೊಂದುಗೂಡಿದುವು; ಅದು ಹೇಗೋ ಅವರ ತೋಳುಗಳು ಪರಸ್ಪರ ಸುತ್ತು ಬಳಸಿದುವು; ಮತ್ತು ಅದೆಂತೋ-ಅವರ ತುಟಿಗಳು ಒಂದನ್ನೊಂದು ಜಗಿಯುತಿದ್ದುವು.

× × ×

ಹೊರಗಡೆಯಲ್ಲಿ ರಕ್ತಗೆಂಪಿನ ಸೂರ್ಯ ದಿಗಂತದ ಪಶ್ಚಿಮ ಮೂಲೆ ಹಿಡಿದಿದ್ದ. ಕ್ರೋಧೋನ್ಮತ್ತ ಎಂಜಿನ್ ಡ್ರೈವರನು ಫಯರ್‌ಮೇನನೊಡನೆ ಘರ್ಜಿಸುತ್ತಿದ್ದ. "ದೇವರೇ, ನಾನು ಪ್ರಥಮತಃ ಅದಾರೋ ಮನುಷ್ಯನಿರಬೇಕೆಂದು ನೆನಸಿದ್ದೆ. ಲೈನನ್ನು ಹಾದು ಹೋಗುತ್ತಿರುವ ಭಿಕ್ಷುಕರ ಮಗುವೆಂಬಂತೆ ತೋರುತಿತ್ತು, ಹೊರತು ನಾಯಿಯ ಹಾಗೆ ತೋರಲಿಲ್ಲ. ಆ ಪಾಪದ ಜಂತು ಬಹುಶಃ ಸಾಯಲಿದೆ; ಅದರ ಹಿಂದಿನ ಕಾಲುಗಳೆರಡೂ ನಜ್ಜುಗುಜ್ಜಾಗಿರಬೇಕು."

ಆದರೆ ಫಾತಿಮಾ ಮಾಲುತ್ತಾ ತನ್ನ ಯಜಮಾನನ ಗುಡಿಸಲಿನೊಳಗೆ ಧಾವಿಸಿ ಬಿದ್ದುಕೊಂಡು ತನ್ನ ಜೀವನದ ದ್ವಿತೀಯ ಮೂಲಪಾಠವನ್ನು ನೆನೆ ನೆನೆದು ತತ್ತರಿಸುತಿದ್ದಳು—ಅವಳ ಅಳಿದುಳಿದ ಬಾಲದ ತುಂಡೂ ಕಳೆದು ಹೋಗಿತ್ತು.

ಟ್ರೈನು ಪುನಃ ಗಡಬಡಿಸುತ್ತಾ ಓಡಹತ್ತಿತು. ತನ್ನ ಬಾಲದ ಮೂಲವನ್ನು ನೆಕ್ಕುತ್ತಿದ್ದಂತೆ, ರೈಲು ಕಂಡಿಗಳಿಂದಿಣುಕುತ್ತಿರುವ ಜನ ತಂಡವನ್ನು ಫಾತಿಮಾ ನೋಡಿದಳು. ತನಗೀಗ ರೈಲ್ವೇ ಕಂಬಿ ಪಕ್ಕದಲ್ಲಿ ಮಲಗುವ ಪ್ರಾಯ ಕಳೆಯಿತು ಎಂದಾಕೆಗೆ ಹೊಳೆಯಿತು. ತನ್ನ ಬಾಲದ ಬುಡವನ್ನು ಕಂಡಾಗಲೊಮ್ಮೆ ಅವಳ ಬೂದುಗಣ್ಣುಗಳಲ್ಲಿ ದುಃಖ ಛಾಯೆ ಕವಿದು ಕೊಂಡಿತು

(ಅನುವಾದ.)

WANTED

1 An experienced B. A., L. T. as Head Master.

2. Another B. A., L. T. as Assistant.

3 Two Sec. Grade Trained Teachers.

4. A qualified Drawing Master.

5. A Y. M. C. A. trained Physical Instructor.

All the above for the Saraswati Vidyalaya High School, Ganguli to be opened on June 20, 1945. Knowledge of Kannada essential in all cases

Apply stating qualifications, age, minimum salary expected' etc. to—

The Manager,
Saraswati Vidyalaya High School,
GANGULI, S. K

CHAMPAE'S
Snow & Castrex
Sole Distributers for (India)
Sukhananda Stores
Santhekatte, UDIPI, S. K.

Unique facilities under Housing Scheme!
Rare opportunity for solve the Children Education Problem!

THE CENTRAL
MERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವವರಾರು?
— ನಿಮ್ಮ ಕಾಲಾನಂತರ ನಿಮ್ಮ ಆಶ್ರಿತರ ಸುಖ ಬಯಸುವಿರಾದರೆ —
ಒಂದೇ ಒಂದು ದಾರಿಯಿದೆ! ಯಾವುದು? **ಜೀವ ವಿಮೆ!**

ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಯಶಸ್ವಿತೆಯನ್ನೂ ಅವರು ಆನಂದದ ನಲೆವೀಡನ್ನೂ ನೋಡಲಿಚ್ಛಿಸದಿರುವ ತಂದೆ ತಾಯಿಗಳಾರಿರುವರು. ಅಂತಹ ಎಜ್ಯುಕೇಶನ್ ಎಂಡೋವ್‌ಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ. ಆದ್ದರಿಂದ ಭಾವೀ ಜೀವನದಲ್ಲಿ ಬೆಳಕನ್ನು ಕಾಣಲಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

'ಸೆಂಟ್ರಲ್ ಮರ್ಕೆಂಟೈಲ್'

ಈ ವಿಧದ ನಿಮ್ಮ ಪವಿತ್ರೋದ್ದೇಶವನ್ನು ಈಡೇರಿಸಲು ಬದ್ಧಕಂಕಣವಾಗಿದೆ ಎಂಬುದನ್ನು ಮರೆಯಬೇಡಿರಿ!

ಎಲ್ಲೆಲ್ಲೂ ಏಜೆಂಟರೂ ಆರ್ಗನೈಜರರೂ ಬೇಕಾಗಿರುವರು!

ಕೂಡಲೇ ಬರೆಯಿರಿ:-

B. DIVAKARA HEGDE.
AGENCY ORGANIZER,
Central Mercantile Assurance Co., Ltd.,
Patel House, Churchgate Street,
FORT, BOMBAY.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3|- ಕ್ಲಿಷ್ಟಕರ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗೆ ರೂ.4|-(ವಿ.ಪಿ.12 ಆಣೆ ಅಧಿಕ)Mrs P. DEVEE, F. D. S. (N) Tollygunge, Calcutta, ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ನ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ. ಆರ್. ಎಸ್. ಶೆಣೈ, ರಥಬೀದಿ: ಡಾ. ಟಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೮ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ; ನಂ.5 ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ, ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷದಿ ರವಾನ್ಸಿಲಾಗುವ, ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ – ೧೪ — ೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನಲಿತಪ್ಪುತ್ತದೆ— ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೪೦ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol 24 No 40
Founder SRI A. B. SHETTY.
ಉಡುಪಿ • 14—6—1945 • ಮಂಗಳೂರು.

ಅಮೃತಾಂಜನ
REGD
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them" Vide Order No 1786-ECI/44/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required Vide Memorandum No 4755 N/44

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20—4—1945 and will be closed at the discretion of the Directors, not earlier than 31—5—1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 1913 Liability of Members is Limited)

Registered Head Office – **Hampankatta, MANGALORE.**
Bombay Office – **26 Noble Chambers, Fort Bombay.**
Factory – **MALPE, South Kanara**
Depots at:– **Udipi, Coondapur, Byndoor, Hangarkatta & Bhatkal.**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PROGRAMME OF MANUFACTURE

1. **Canned Food, Fried Food, Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish, Etc**

2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.

3. The Madras Government has been approached to subscribe for half the capital and appoint a Government Director and render technical advice to the Company.

4. A Scientific Advisory Council will be formed and Technical Experts will be appointed to carry on intense research work in the Industry.

5. Arrangements are being made to procure Military contracts.

6. The Madras Government has been requested to supply the Company all the modern equipments useful for the purpose of the Company

7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the [illegible] monopoly of the fish trade, Shares in this Company will be a great asset

MANGALORE
19th April, 1945.

Mangalore Jarappa,
Managing Director.

ಇವರ ನಂತರ= =ಏನಾಗಬಹುದು?

ಲೇಖಕ:- **ಪೋತೆನ್ ಜೋಸೆಫ್.**

[ಭಾರತೀಯ ಪತ್ರಿಕಾ ಗಗನದಲ್ಲಿ ಪೋತೆನ್ ಜೋಸೆಫ್ ಉಜ್ವಲ ತಾರೆ; ಇಲ್ಲಿಯ ಇಂಗ್ಲಿಷ್ ವ್ಯಂಗ್ಯ ಲೇಖಕರಲ್ಲಿ ಅಗ್ರಗಣ್ಯರೆಂದರೂ ಸರಿಯೇ. ಮುಸ್ಲಿಂ ಲೀಗಿನ ಬಾಯಿಬೂದ 'ಡಾನ್' ಪತ್ರಿಕೆಯ ಸಂಪಾದಕರಿವರು. ತಂತಮ್ಮ ಭವಿಷ್ಯವು ಭದ್ರವಿದೆ ಎಂಬ ಆತ್ಮ ವಿಶ್ವಾಸವು ಪ್ರತಿಯೊಬ್ಬನಿಗೂ ಬೇಕು—ಅದಕ್ಕಾಗಿ ಪೋತೆನ್ ಜೋಸೆಫರು ಇಂತಹ ಶೋಧವನ್ನೇ ಮಾಡಬೇಕು! ಈ ಲೇಖನವನ್ನೋದಿದ ಗಾಂಧೀ ಭಕ್ತರು "....ಅಪ್ಪರಿಂದ ಜಿನ್ನರು ಹೋದರೂ ಪರವಾ ಇಲ್ಲ; ಗಾಂಧಿಜೀ ಸಾಯುವದು ಅಪಾಯಕರ" ಎಂದು ಜೋಸೆಫರೊಡನೆ ಸಮ್ಮತಿಸಬಹುದು!! —ಸಂ.]

ಗಾಂಧಿಜೀಯ ಕಾಲಾನಂತರ ಏನಾಗಬಹುದು? ಮಿ. ಜಿನ್ನರು ಹೊರಟು ಹೋದ ಮೇಲೆ ಮುಸಲ್ಮಾನರ ರಾಜಕೀಯವೆಂತಹದಾಗಬಹುದು? ಎಲ್ಲರೂ ಹೋಗತಕ್ಕವರೇ; ರಕ್ತಮಾಂಸಗಳ ಶರೀರವೆಲ್ಲಕ್ಕೂ ಆ ಹಾದಿಯಿದೆ. ನಮ್ಮಲ್ಲಿ ಕೆಲವರು ಅವರಿಗಿಂತ ಮುಂದಾಗಿ ನಡೆಯಬಹುದು. ಉಳಿದವರೂ ಅಗೋಚರ ಭವಿಷತ್ಕಾಲದಲ್ಲಿ, ಈ ಜೀವನ ಕೊರಡಿಯಿಂದ ಹೊರಬಿದ್ದು ಯಾವುದರ ಗಡಿಯಿಂದ ಯಾವನೂ ಬೃಪ್ರಯಾಣಿಕನೂ ಹಿಂದಿರುಗಲಾರನೋ ಆ ಅಪರಿಚಿತ ಪ್ರಪಂಚದ ಹಾದಿ ಹಿಡಿಯಬಹುದು. ವಿಮಾ ಏಜೆಂಟರ ಆ ಸಂಕುಚಿತ ಹಾಗೂ ಕುತ್ಸಿತ ವರ್ಣನೆಯೊಂದನ್ನು ಬಿಟ್ಟರೆ ಇವರಿಬ್ಬರು ಸತ್ತ ಮೇಲೇನಾಗಬಹುದೆಂಬುದನ್ನು ಊಹಿಸುವದು ಜನರ ಪಾಲಿಗೆ ಪ್ರಯಾಸವೇ ಸರಿ. ಅದರಲ್ಲೂ ಜನರು-ಹೆಚ್ಚಾಗಿ ರಾಜಕೀಯ ರಂಗದವರು-ಇವರ ಮರಣ ಕಾಲವನ್ನಾಗಲೀ, ಇವರ ಬದಲಿಗೆ ಬೇರೆಯವರು ಬರುವದನ್ನಾಗಲೀ ನೆನೆಸುವದಕ್ಕೆ ಹೇಸುತ್ತಾರೆ. ಅತ್ತೆ ಮುದಿಗೂಬೆಯಾಗಿರಬಹುದು; ಮಹಾ ಸಿಡುಕಿನವಳಾಗಿರಬಹುದು. ಆದರೆ ಬುದ್ಧಿವಂತಳಾದ ಸೊಸೆಯು, ಅದುಗೆಗೆಮ್ಮ ಅಕ್ಕಿ ಹಾಕಬೇಕೆಂದು ಕಣ್ಣುಕಟ್ಟಿಗಾಗಿ, ಅರೆಮನಸ್ಸಿನಿಂದಾದರೂ ಅವಳ ಅನುಮತಿ ಕೇಳುವದಿದೆ. ಬ್ರಿಟಿಷರು 'ಸುವ್ಯವಸ್ಥೆಯಿಂದ' ಅಧಿಕಾರವನ್ನು ಎತ್ತಿಕೊಡಬೇಕೆಂದು ಗಾಂಧಿಜೀ ಕೇಳುತ್ತಾರೆ. ಆದರೆ ಅಧಿಕಾರವೆಂಬುದು ವಾತಪೀಡಿತ ಹಸ್ತದಿಂದ ಉದುರಿಯೇ ಬೀಳುವ ಸಂಪ್ರದಾಯ; ಮಾತ್ರವಲ್ಲ, ಆ ಅಧಿಕಾರವನ್ನು ಕಸಗೊಳ್ಳಲು ಅವ್ಯವಸ್ಥೆಯ ಎಷ್ಟು ಕೈಗಳು ಮುಂದಾಗಬಹುದೆಂಬ ಪ್ರಸ್ತಾಪವೇ ಇಲ್ಲ. ಗಾಂಧಿಜೀ ಮತ್ತು ಮಿ. ಜಿನ್ನರು ರಂಗದಿಂದ ಮರೆಯಾದ ನಂತರ ಏನು ಸಂಭವಿಸಬಹುದು? ಕಾಯಿದೇ ಕೋರ್ಟು ಅಥವಾ ನ್ಯಾಯವಿಧಾಯಕ ಸಭೆಯಲ್ಲಾದರೆ ಇಂತಹ ಅನುಮಾನಕರ ಪ್ರಶ್ನೆಗಳನ್ನು ಉತ್ತರಿಸಲು ಯಾರೊಬ್ಬರೂ ಬಾಧ್ಯರಾಗುವದಿಲ್ಲ. ಆದರೆ ಪತ್ರಿಕೋದ್ಯೋಗಿಯಾದವನಿಗೆ ಅಂತಹ ನಿರ್ಬಂಧವೇನೂ ಇಲ್ಲ.

೦೦ ೦೦

ಗಾಂಧಿಜೀಯ ಕಾಲಾನಂತರ ಕಾಂಗ್ರೆಸ್ ಅಧಿಕಾರವು ಕೇಂದ್ರದಿಂದ ದೂರವಾಗಿ ಸಮತಟ್ಟಿನಲ್ಲಿ ಚೆದರಿ ಬೀಳಲಿದೆ. ಆದರೆ ಜಿನ್ನರ ಅಗಲುವಿಕೆಯಿಂದಾಗಿ, ಈಗ ನೆಟ್ಟಗಿರುವ ಮುಸ್ಲಿಂ ಲೀಗ್ ನಾಯಕತ್ವವು ಒಂದೆಡೆ ಮಾಲಬಹುದೇ ಹೊರತು, ಕಾಂಗ್ರೆಸ್ ಸಂಬಂಧದಲ್ಲಿ ನಾನೂಹಿಸಿರುವಂತಹ ಚಲ್ಲಾಪಿಲ್ಲಿ ಇದರ ಪಾಲಿಗಿಲ್ಲ. ಸದ್ಯ ಪ್ರಾಂತಿಕ ಭಿನ್ನತೆಗಳಲ್ಲಿ ಹೆಚ್ಚಿನಂಶವು ಗಾಂಧಿಜೀಯ ಹತೋಟಿಯಿಂದ ಒತ್ತಿಡಲ್ಪಟ್ಟಿದೆ. ಅವರು ರಾಜಕೀಯದಲ್ಲಿ (ಭಾವನಾತ್ಮಕವಾಗಿ) ಎಲ್ಲರ ಮೇಲೂ ಪ್ರಭಾವ ಬೀರಿರುವ ಹಿರಿಯ ಮೊಗಲನಂತಿದ್ದಾರೆ. ಮೊಗಲ್ ಸಾಮ್ರಾಜ್ಯದ ಪತನವಾದಾಗ ಅದು ನುಚ್ಚುನುರಿ ಹರಿಹಂಚಾಗಿ ಹೋದುದನ್ನೂ, ಒಮ್ಮೆ ಕೇಂದ್ರಾಧಿಕಾರದ ಹೆಗ್ಗುರುತಿದ್ದ ಸ್ಥಾನದಲ್ಲಿ ರಾಜಾನುಯಾಯಿಗಳ ಮಹತ್ವಾಕಾಂಕ್ಷೆಯ ಸ್ಪರ್ಧೆಯಿಂದಾಗಿ ಅನಾಯಕತ್ವವುಂಟಾದುದನ್ನೂ ನಾವು ಮರೆಯಬಾರದು. ನಮ್ಮ ದೇಶದ ಸಾರ್ವಜನಿಕ ಜೀವನವೆಂದರೆ ಆ ದಳಿತ ಪೀಠಗಳಿಗಿಂತ ಅತಿದೂರವಿರುವ ಅನಧಿಕಾರೀ ಬಾಳುವೆ; ಇದರಿಂದಾಗಿ ಇಲ್ಲಿಯ ಮುಖಂಡತ್ವವು ವಿಶೇಷತಃ ಭಾವನೆಯನ್ನೇ ಅಧರಿಸಿಕೊಂಡಿದೆ. ಎಲ್ಲವನ್ನೂ ಗಚ್ಚುಮುಚ್ಚುವ ಗಾಂಧಿಜೀ ಇಲ್ಲದೆ ಹೋದಾಗ ಸರ್ದಾರ್ ವಲ್ಲಭಾಯಿ ಪಟೇಲರು ಗುಜರಾಥಿನ ಪ್ರಾಂತ್ಯೀಯ ನಾಯಕರಾಗಿ ಮೂಲೆ ಸೇರಲೇಬೇಕಾಗುವದು. "ವಲ್ಲಭಾಭಾಯಿಯೂ-ಕಾಂಗ್ರೆಸ್ ಆಳ್ವಿಕೆಯ ಕಾಲದ ರಾಜ ನಿರ್ಮಾಪಕನಿಗೆ ಗಾಂಧಿಜೀಯ ಹೆಗಲ ಮೇಲೆ ನಿಲ್ಲುವ ಪರವಾನಗಿ ದೊರೆತಿರುವದರಿಂದಲೇ ಅವರು ಅಷ್ಟೊಂದು ಎತ್ತರವಾಗಿ ತೋರುತ್ತಾರೆ"--ಎಂದೊಮ್ಮೆ ದಿವಂಗತ ಲಕ್ಷ್ಮಿದಾಸ್ ಥಕರ್ಸೆಯವರು ಬಹಿರಂಗವಾಗಿ ಹೇಳಿದ್ದರು. ಅತ ಒಬ್ಬನೇ ಅದಾಗ, ವಾಲ್‌ಚಂದ್ ಹೀರಾಚಂದರ ಸ್ಕಿಂದಿಯಾ ಗೃಹದಿಂದ ಹೊರಡಿಸಿದರೂ ಅವರ ರಾಯಸಗಳು ಮಹಾರಾಷ್ಟ್ರವನ್ನು ದಾಟ್ಟವಂತಿಲ್ಲ. ಆದರೆ ಇದುವರೆಗೆ ಮಾತ್ರ, ಖರೆ ದುರಂತದಿಂದ ಖಚಿತವಾದಂತೆ ಅವರ ಮಾತುಗಳು ಮಧ್ಯಪ್ರಾಂತ್ಯದ ವರೆಗೂ ಕಾನೂನುಗಳೇ ಆಗಿವೆ. ಹಾಗಾದರೆ ಜವಾಹಿರಲಾಲರು ಹೇಗೆ? ಸಂಯುಕ್ತ ಪ್ರಾಂತ್ಯದಲ್ಲಿ ಅವರ ಮಾತು ಕೇಳುವವರಿರಬಹುದು; ಆದರೆ ಪಂಜಾಬಿನಲ್ಲಿ ಅವರು ಮುಖವಿದಿರು 'ಬ್ರೇಕ್‌ಔಟ್' ಖಂಡಿತ. ಪಟ್ನಾದ ಪೂರ್ವ ಭಾಗದಲ್ಲಿ ಬಲ್ಲ ಜನತಾಭಾವನೆಯ ಮೇಲಿನ ಅವರ ಹಿಡಿತ ಸಡಿಲಾಗುತ್ತಿದೆಯಲ್ಲದೆ, ಅಂಶತಃ ಬೋಸ್ ಭಾವನೆಯವಾಗಿರುವ ಬಂಗಾಳವು ಓರ್ವ ಹಿಂದೀ ನಾಯಕನೆಂದು ಜವಾಹಿರರನ್ನೊಪ್ಪುವುದಿಲ್ಲವೆಂಬುದನ್ನು ನಾನು ಬಲ್ಲೆ. ಬೆಂಗಡೆಯಲ್ಲಿ ಉಜ್ವಲಾಗದ ಪ್ರಾಂತಿಕ ಮೋಹರಿನ ಕಲೆಯಿರುವ ಬಂಗಾಳವು ಕಾಂಗ್ರೆಸ್ ನಕಾಶೆಯಲ್ಲಿ ಸೇರಿಕೊಂಡಿರಲು ಕಾರಣವೆಂದರೆ ಮಹಾತ್ಮಾ ಗಾಂಧಿಯವರ ಅಸಾಮಾನ್ಯ ವರ್ಚಸ್ಸೊಂದೇ. ಜವಾಹಿರಲಾಲರ ಥಳಕಿನಿಂದ ಮದ್ರಾಸಿನ ಕಾಂಗ್ರೆಸಿಗರು ಆಕರ್ಷಿಸಲ್ಪಡಬಹುದು. ಆದರೆ ವಿಂಧ್ಯದ ದಕ್ಷಿಣ ಭಾಗದವರಿಂದ ಉತ್ತರ ಹಿಂದೂಸ್ಥಾನದವರು ಸಂಭಾವನೆಗಿಂತ ಹೆಚ್ಚಿನದೇನನ್ನೂ ಪಡೆಯುವಂತಿಲ್ಲ. ಸಂಯುಕ್ತ ಪ್ರಾಂತ್ಯವಾದರೇನು? ಅಲ್ಲಿಯ ಕಮ್ಯೂನಿಸ್ಟರು ಮತ್ತು ರೋಯಿಸ್ಟರು ಪಂಡಿತ ಜವಾಹಿರಲಾಲ ನೆಹರುಗಳ ಸ್ವಚ್ಛ, ತಿಳಿ ಚರ್ಮಕ್ಕೆ ಕಾಡುನೊಣಗಳಾಗಿ ಪರಿಣಮಿಸಬಹುದು.

೦೦ ೦೦

ಸಿ ಆರ್. ಹೇಗೆ? ಹೋ--ಅವರೇನೂ ಕಾಯಿದೆ ಒಪ್ಪ ವಾರಿಸ್ದಾರರಲ್ಲ. ಬಾಯ್ದರೆ ಉಯಿಲಿನನ್ವಯ, ಪಂಡಿತ ಜವಾಹಿರಲಾಲರೇ ಹಕ್ಕುದಾರರು. ರಾಜಗೋಪಾಲಾಚಾರಿಗಳ ವರ್ಚಸ್ಸಿನ ಬಲ ಮತ್ತು ದಾರವೆಷ್ಟಿರಬಹುದು? ಎಷ್ಟೆಂದರೂ ಅವ್ರು ಐದಿಯ ಮದ್ರಾಸಿಗಳ ಪ್ರಭಾವವು ಉತ್ತರ ಭಾಗಕ್ಕೆ [illegible] ಉತ್ತರ, ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಕಲ್ಲೋಲವನ್ನನುಭವಿಸುತ್ತಿರುವಂತಹ ಎರಡು ಸಂಘಟನೆಗಳೂ ಇವರ ಪಾಲಿಗಿಲ್ಲ. [illegible] ಪ್ರವಾದಿಯಾಗಿ ಸಿ. ಆರ್. ಗಣಿಸಲ್ಪಡುವದಾಗಲೀ ಗೌರವಿಸಲ್ಪಡುವದಾಗಲೀ ಅಸಾಧ್ಯ. 1926ರ [illegible] ಚುನಾವಣೆಯಲ್ಲಿ ದಿವಂಗತ ಸಿ. ವೈ. ಚಿಂತಾಮಣಿಯವರು ಉಮೇದ್ವಾರಿಯಾಗಿ ನಿಂತಾಗ ಮೋತಿಲಾಲರು ಗರ್ಜಿಸಿ ಹಾಕಿದ್ದ ಪ್ರಶ್ನೆಯೊಂದು ನನಗೆ ನೆನಪಿದೆ:-"ಆದರೆ ಯಾರಿವ, ಈ ಮದ್ರಾಸಿ?"

ಆಭಾರ ಮನ್ನಣೆ

ನಮ್ಮ ಮಕ್ಕಳ ಜಿ. ಮುಕುಂದ ರಾವ್ ಮತ್ತು ದಾಮೋದರ ರಾವ್‌ಯವರ ವಿವಾಹ ಮಹೋತ್ಸವದ ನಿಮಿತ್ತವಾಗಿ ಉಡುಗೊರೆ, ಆಶೀರ್ವಾದಗಳನ್ನು ಕಳುಹಿಸಿದ ಸರ್ವರಿಗೂ ನಾವು ಈ ಸಂದರ್ಭದಲ್ಲಿ ನಮ್ಮ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸುತ್ತೇವೆ.

ಜೇಚರ್ ವಿ. ಅವಿನಾಶ್,
ದಂತ ವೈದ್ಯ, ಸಂತೆಕಟ್ಟೆ, ಪಡುಬಿದ್ರಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED
(Incorporated in British India, liability of Members Limited.)

ಇದನ್ನು ಕೇಳಿದೊಡನೆ ಇಂಗ್ಲಾಂಡಿನ ಪಾರ್ಲಿಮೆಂಟ್ ಚುನಾವಣೆಗಾಗಿ ಕೇಂದ್ರ ಫಿನ್ಸ್‌ಬರಿಯ ಉಮೇದ್ವಾರಿಯಾಗಿ ದಾದಾಭಾಯಿ ನೌರೋಜಿಗಳು ನಿಂತಾಗಿನ ಘಟನೆಯೊಂದು ನನ್ನ ತಲೆಯೊಳಗೆ ಹೊಳೆಯಿತು. "ಹೌಸ್ ಓಫ್ ಕಾಮನ್ಸಿನಲ್ಲಿ ನಿಮ್ಮ ಪರವಾಗಿ ಮಾತಾಡಲು ಒಬ್ಬ 'ಕರಿ ಮನುಷ್ಯ'ನನ್ನು ಕಳುಹಿಸಲಿಚ್ಛಿಸುವಿರಾ?"-ಎಂದು ಲೋರ್ಡ್ ಸೇಲಿಸ್ಬರಿಯವರು ಅಲ್ಲಿಯ ಮತದಾರರನ್ನು ಧಿಕ್ಕರಿಸಿ ಕೇಳಿದ್ದರು. ನನ್ನ ಅಂದಾಜಿನಂತೆ ಗಾಂಧಿಜೀಯಿಲ್ಲದ ಸಿ. ಆರ್. ಒಂದು ಸಾಲ ಹೊರತು ಆಸ್ತಿಯಲ್ಲ. ಆದರೂ ಒಮ್ಮೊಮ್ಮೆ ನನಗನ್ನಿಸುತ್ತದೆ---ಸಿ. ಆರ್. ಗಾಂಧಿತ್ವದ ಋಣಮುಕ್ತರಾಗಿ, ಸ್ವತಂತ್ರವಾಗಿ ಕಾರ್ಯಸಾಧನೆಗಿಳಿದರೆ, ದಿವಾಳಿ ಅರ್ಜಿ ಕೊಡುವ ಸ್ಥಿತಿಗೆ ತೀರಾ ಸಮೀಪಿಸಿರುವ ಆ ಸಂಸ್ಥೆಯನ್ನು ಉಳಿಸಬಲ್ಲರು.

○○ ○○

ಇನ್ನು ತಮಗೆ ನೆರಳಾಶ್ರಯವಿತ್ತಿರುವ ಗಾಂಧಿತ್ವದ ಮಹಾಛತ್ರಿಯು ತೊಲಗಿದೊಡನೆ ಬಾಬು ರಾಜೇಂದ್ರ ಪ್ರಸಾದ್, ಗೋವಿಂದ ವಲ್ಲಭ ಪಂತ್, ಪಟ್ಟಾಭಿ ಸೀತಾರಾಮಯ್ಯ, ಟಿ. ಪ್ರಕಾಶಮ್, ನರೇಂದ್ರ ದೇವ್, ಕೃಪಾಲನಿ, ಮತ್ತುಳಿದವರು ಪ್ರಾಂತಿಕ ಬೆಂಕಿ ನಾಣ್ಯಗಳ ಪೈಕಿ ಅಗ್ಗದ ಸ್ಥಳೀಯ ನಾಣ್ಯಗಳಾಗಲಿದ್ದಾರೆ. ಪೆಟಿಲ್ ದಿ ಹೆಮಿಂಟನ ರಾಜಕೀಯ ಪ್ರತಿಭಾಗವಾಗಿ ಸಾವರ್ಕರ್ ಉಳಿಯಬಹುದು; ಆದರೆ ಅವರ ಪುನರುತ್ಥಾನ ಧೋರಣೆಯು ಅಖಿಲ ಭಾರತ ಸ್ವರೂಪ ಪಡೆಯುವಂತಿಲ್ಲ. ಕುರುಬನಿಲ್ಲದೆ ಹೋದಾಗ ಕುರಿಮಂದೆ ಚಲ್ಲಾಪಿಲ್ಲಿಯಾಗುವದೆಂದು ಒಮ್ಮೆ ಜೇಸಸ್ ಕ್ರೈಸ್ತರಂದಿದ್ದರು. ಇದಕ್ಕೆ ಪ್ರತಿಯಾಗಿ ಜಿನ್ನರಿಲ್ಲದಿರುವಾಗ ಲೀಗು ಹೇಗಾದೀತು? ಕ್ರಮಬದ್ಧ ಅಸ್ತಿವಾರದಲ್ಲಿ ಅಂತಹ ಅಡಿಮೇಲೇನೂ ಆಗದೆ, ನಾಯಕತ್ವವು ಮಾತ್ರ ನಿಸ್ತೇಜಗೊಳ್ಳಬಹುದೆಂದು ನನಗನ್ನಿಸುತ್ತದೆ. ಮೊದಲನೆಯದಾಗಿ ಏಕ ನಾಯಕತ್ವದ ತತ್ವ ಮತ್ತು ಸಂಪ್ರದಾಯದ ಮೇಲೇನೇ ಇಸ್ಲಾಮಿನ ನಂಬಿಕೆ; ಅವರು ನಾಸ್ತಿಕವಾದಗಳನ್ನು ಸಹಿಸುವವರಲ್ಲ. ಎರಡನೆಯದಾಗಿ ರಾಷ್ಟ್ರೀಯತೆ ಮತ್ತು ಸ್ವಪ್ರಾಂತೀಯತೆಯೆರಡರಲ್ಲಿಯೂ ಮುಸಲ್ಮಾನರ ದೃಷ್ಟಿಕೋನವು ಎಂತಹ ವಿಚಿತ್ರ ರೀತಿಯದಾಗಿದೆಯೆಂದರೆ, ಪಾಕಿಸ್ತಾನವೆಂಬುದು ಫೆಡರೇಶನಿನಲ್ಲಿ ಹೆಚ್ಚಿನ ಸೀಟುಗಳನ್ನು ಸಂಪಾದಿಸಿಕೊಳ್ಳಲು ಹೂಡಿರುವ ಆಟವೆಂದು ನೆನೆಸುವವರು ಅದನ್ನರ್ಥ ಮಾಡಿಕೊಳ್ಳುವದೇ ಅಸಾಧ್ಯ. ಇದು ಮುಸಲ್ಮಾನರಲ್ಲಿ ಜನಜನಿತ, ತಯಾರಿ ಮತ್ತು ಕೇಂದ್ರದ ಪತೋದ್ಯೋಗಿಗಳಾಗುವ ಪ್ರೇರಕವಾಗಿ ನಿಂತಿದೆ. ಸಿ. ಆರ್. ತನ್ನ [illegible] ಕರಪತ್ರವಾದ 'ಹೊರ ಹಾದಿ'ಯಲ್ಲಿ ತರುಣ ಮುಸಲ್ಮಾನರು ದಂಗೆಯೇಳಬಹುದೆಂದು ಸೂಚಿಸಿದ್ದಾರೆ. ಆದರೆ ನಾನು ತಿಳಿದಮಟ್ಟಿಗೆ ಅವರೆಲ್ಲಾ ಪಾಕಿಸ್ತಾನಿಗಳು. ಹಿಂದು ಯುವಕರು-ಅವರು ಕಮ್ಯೂನಿಸ್ಟರಿರಲಿ, ರೋಯಿಸ್ಟರಿರಲಿ--ಮೃದು ಮನಸ್ಸಿನವರಾಗಿದ್ದು ಮುಸಲ್ಮಾನರಿಗೊಂದು ಉದಾತ್ತ ರಿಯಾಯತಿಯಾಗಿ ಪಾಕಿಸ್ತಾನವನ್ನೂ, ಅವರ ನಾಯಕರಾಗಿ ವ್ಯಕ್ತಿಶಃ ಜಿನ್ನರನ್ನೂ ಅಂಗೀಕರಿಸಿಕೊಳ್ಳಲು ತಯಾರಿದ್ದಾರೆ. ಶಾಹಜಹಾನನ ಮಕ್ಕಳೊಳಗೆ ನಡೆದಂತೆ, ಅಲ್ಪಾವಧಿವರೆಗೆ ಭ್ರಾತೃ ದ್ರೋಹಾತ್ಮಕ ಸ್ಪರ್ಧೆಯೇಳಬಹುದು, ಆದರೆ ಕೊನೆಯಲ್ಲಿ, ಗೆದ್ದು ರಾಜದಂಡ ಧರಿಸುವವನಾರೋ ಅವನನ್ನೇ ಮುಸಲ್ಮಾನರೊಪ್ಪಿಕೊಳ್ಳುತ್ತಾರೆ. ಜಿನ್ನರ ಹಿರುಮಳ ಇಂದಿನ ನಾಯಕತ್ವದ ಪ್ರಕಾಶದೊಡನೆ ಹೋಲಿಸಿದರೆ ಅಂದಿನ ಮುಸ್ಲಿಂ ಲೀಗಿನಲ್ಲಿ ಹೊಳಪಿನ ಅಭಾವ ಕಾಣಬಹುದು. ಆದರೆ, ಭವಿಷತ್ಕಾಲದ ವಿದ್ಯಮಾನಗಳನ್ನೂ ಹಿಸಿ. ನಾನು ಆದಿಯಲ್ಲೇ ಭಯ ಸೂಚಿಸಿರುವಂತೆ ಕಾಂಗ್ರೆಸ್ ಅಧಿಕಾರವು ಚಲ್ಲಾಪಿಲ್ಲಿಯಾಗುವಾಗ ಲೀಗ್ ನಾಯಕತ್ವವು ತುಸು ತಗ್ಗಬಹುದು, ಅಷ್ಟೆ.

ಒಡಾಯಿಯ ಬಲದಿಂದ ಇಂಗ್ಲಾಂಡು ಉಳಿಯಿತು!

ಗಾಳಿ ಸುದ್ದಿಯೊಂದು ಗಂಡಾಂತರವನ್ನು ಹಾರಿಸಿತು.

●

1940ನೇ ಬೇಸಿಗೆಯಲ್ಲಿ ನಿಸ್ಸಹಾಯಕ, ದುರ್ಬಲ, ಏಕಾಕಿ ಇಂಗ್ಲಾಂಡನ್ನು ಉಳಿಸಿದುದು ಆದರ ಸುದುಕೆಯೊಂದೇ. ಫ್ರಾನ್ಸ್ ಪತನಗೊಂಡಿತ್ತು; ಜರ್ಮನಿಯು ಯುರೋಪಿನ ಸಣ್ಣ ರಾಷ್ಟ್ರಗಳೆಲ್ಲವನ್ನೂ ನುಂಗಿ ಬ್ರಿಟಿಷ್ ಕಾಲುವೆಬದಿಯಲ್ಲಿ ಬಾಯ್ದೆರೆದು ನಿಂತಿತ್ತು; ಆಗ ತನ್ನಲ್ಲಿದ್ದ ಗಣ್ಯ ಸೇನೆಯನ್ನೂ, ಆಧುನಿಕ ಯುದ್ಧೋಪಕರಣಗಳನ್ನೂ ಫ್ರಾನ್ಸ್ ರಂಗದಲ್ಲಿ ನಿರರ್ಥಕವಾಗಿ ಬಲಿಕೊಟ್ಟು ಡಂಕರ್ಕ್ ಪಲಾಯನದ ಮೂಲಕ ತನ್ನ ಸೇನೆಯ ಜೀವ ಮಾತ್ರ ಉಳಿಸಿಕೊಂಡಿದ್ದ ಬ್ರಿಟನು ಬಹುತೇಕವಾಗಿ ಬತ್ತಲೆಯಾಗಿತ್ತು; ಆ ಕಾಲದಲ್ಲಿ ಹಿಟ್ಲರ್ ಇಂಗ್ಲಾಂಡಿನ ಮೇಲೆ ಧಾಳಿಯಿಡುತ್ತಿದ್ದರೆ- ಆದರೆ ಆತ ಬ್ರಿಟಿಷ್ ಕಾಲುವೆ ದಾಟಲು ಹೆದರಿದ. ಆ ಕಾಲುವೆ ಅಗ್ನಿ ಕುಂಡವಾಗಿದೆಯೆಂದು ಕನವರಿಸಿದ; ಇದಕ್ಕೆ ಕಾರಣ ಆಗ ಹರಡಿದ್ದ ಒಂದು ಕಲ್ಪನಾಕಥೆ. ಗೋಬೆಲ್ಸನನ್ನೂ ಹಿಂದಿಕ್ಕುವ ಅಸತ್ಯ-ಅತಿಶಯ-ಅದ್ಭುತ ವಾರ್ತೆಯೊಂದು ಇಡೀ ಯುರೋಪಿನಲ್ಲಿ ಹರಡಿತ್ತು. 1940ರಲ್ಲಿ ಹುಟ್ಟಿದ್ದ ಆ ಗಾಳಿ ಸುದ್ದಿಯು ಗುಟ್ಟು 1945ನೇ ಜೂನ್ 4ರ ವರೆಗಿನ ಸುಮಾರು 5 ವರುಷಗಳ ವರೆಗೂ ಹೊರಬೀಳಲಿಲ್ಲ. ಮೊನ್ನೆ ತಾನೇ ಬ್ರಿಟಿಷ್ ಸದ್ದಿ ಖಾತೆಯ ಮಂತ್ರಿಯು ಒಗಟನ್ನೊಡೆದು ಲೋಕವನ್ನು ಚಕಿತಗೊಳಿಸಿದ್ದಾನೆ.

ಊಹಿಸಿದ್ದುದೇನು?

ಸುಮಾರು ಐದು ವರ್ಷಗಳ ವರೆಗೆ ಜರ್ಮನರು, ಬ್ರಿಟಿಷ್ ಪ್ರಜೆಗಳು ಮತ್ತು ಅಖಿಲ ಯುರೋಪು ನಂಬಿಕೊಂಡಿದ್ದುದೆಂದರೆ ಬ್ರಿಟಿಷ್ ಕಾಲುವೆಯನ್ನೇ ಅಗ್ನಿ ಪ್ರವಾಹವಾಗಿ ಮಾರ್ಪಡಿಸಲು ಬ್ರಿಟಿಷ್ ಯುದ್ಧ ಯಂತ್ರಕ್ಕೆ ಸಾಧ್ಯವಿದೆ ಎಂಬ ಅದ್ಭುತವನ್ನು. 1940ನೇ ಬೇಸಿಗೆಯಲ್ಲಿ ಜರ್ಮನರೊಮ್ಮೆ ಇಂಗ್ಲಾಂಡಿನ ಆಕ್ರಮಣಕ್ಕಾಗಿ ಯತ್ನಿಸಿದರು; ಕಾಲುವೆ ಕಾಲಾಗ್ನಿಯಾಗಿ ಅವರನ್ನಾಹುತಿಗೊಂಡಿತು; ಬ್ರಿಟನಿನ ಕರಾವಳಿಯುದ್ದಿಯಲ್ಲಿ ಗುಪ್ತ ಎಣ್ಣೆ ಸರಂಜಾಮುಗಳಿವೆ; ಕಾಲುವೆ ನೀರೊಳಗಡೆಯಲ್ಲೆಲ್ಲಾ ಪೈಪ್‌ಗಳಿವೆ; ಒಂದು ಗುಂಡಿಯೊತ್ತಿದೊಡನೆ ಆ ಪಾಯ್ಪುಗಳ ಎಣ್ಣೆಯು ಆ ನಳಿಗೆಗಳ ಮೂಲಕ ನೀರಮೇಲ್ಗಡೆಗೆ ಒಂದು ಭುಗ್ಗನೆ ಉರಿದುಕೊಳ್ಳುತ್ತದೆ ಎಂದೇ ಸರ್ವರ ನಂಬಿಕೆ. ಅದ್ಭುತ ನಿರ್ಮಾಪಕ ಮೆದುಳಿನ ನಾಜಿಗಳಿಗೂ ಇದು ಅಸಾಧ್ಯವೆಂದು ತೋರಲಿಲ್ಲ. ಈ ಬೆಂಕಿಯೊಳಗಡೆಯಿಂದ ಹೋಗಲಾಗುವಂತೆ ಸೋಲ್ಜರಿಗೆ ತೊಡಿಸಲು ಲಕ್ಷಗಟ್ಲೆಯಲ್ಲಿ ಕಲ್ನಾರು ಕವಚಗಳನ್ನು ಜರ್ಮನರು ತಯಾರಿಸ ಹತ್ತಿದರು. ಪ್ಯಾರಿಸಿನ ಒಂದೇ ಒಂದು ಕಂಪೆನಿಯಿಂದ 100000 ಕಲ್ನಾರು ಅಂಗಿಗಳನ್ನು ಅವರು ಆಮದುಪಡಿಸಿಕೊಂಡಿದ್ದರು. ಈ ಅಂಗಿಗಳ ಪರೀಕ್ಷಾರ್ಥ ಪ್ರಯೋಗ ನಡೆಯಿತು. ಆದರೆ ಹೊಸಾನುಭವ ಅಂಗಿಗಳ ಶಿರೋಭಾಗದಲ್ಲೇನೋ ದೋಷವಿದ್ದುದರಿಂದಾಗಿ ಎಷ್ಟೋ ಜರ್ಮನ್ ಯೋಧರು ಸುಟ್ಟು ಹೋದರು. ಹೀಗೆ ತಮ್ಮಿಂದ ತಾವೇ ಕೈಸುಡಿಸಿಕೊಂಡ ನಾಜಿಗಳು ಆ ಮೇಲೆ ಈ ಕಾರ್ಯಕ್ಕೆಗೊಳ್ಳಲಿಲ್ಲ. ಈ ಪ್ರಮಾದವೇ ಯುದ್ಧಾದ್ಯಂತ ಪ್ರಚಾರಗೊಂಡಿತು. ಬ್ರಿಟಿಷ್ ಕಾಲುವೆ ಬೇಕಾದಾಗ ಅಗ್ನಿ ಪ್ರವಾಹವಾಗಬಲ್ಲುದು; ಜರ್ಮನರು ಬ್ರಿಟನಿನಾಕ್ರಮಣಕ್ಕೆ ಪ್ರಯತ್ನಿಸಿ ಸುಟ್ಟು ಹೋದರು-ಎಂದು ಜನಜನಿತವಾಯಿತು.

ಬ್ರಿಟಿಷರ ಪುಷ್ಟೀಕರಣ

ಇಂಗ್ಲಿಷ್ ತಜ್ಞರು ಒಳಗೊಳಗೆ ನಗೆಯಾಡಿದರು; ತಮ್ಮ ಸುದೈವಕ್ಕಾಗಿ ಹಿರಿಹಿಗ್ಗಿದರು. ಬ್ರಿಟನಿನಲ್ಲಿ ಕೂಡಾ ಈ ಗಾಳೀ ಸುದ್ದಿಯಿಂದಾಗಿ ಕೃತಕ ವಿಶ್ವಾಸ ನಿರ್ಮಾಣಗೊಂಡಿದೆ ಎಂದವರಿಗೆ ಗೊತ್ತು; ಅದರ ನಿವಾರಣೆಗಾಗಿ ಯತ್ನಿಸಲಿಲ್ಲ; ಮಾತ್ರವಲ್ಲ, ಕೃತಕ ಗಾಂಭೀರ್ಯದೊಡನೆ ಅದಕ್ಕೆ ಅಪ್ರತ್ಯಕ್ಷ ಅನುಮೋದನೆಯಿತ್ತರು. [illegible] ರಾಷ್ಟ್ರಗಳ ರೇಡಿಯೋ ಮತ್ತು ಪತ್ರಿಕೆಗಳು ಈ ಕುರಿತು ಹಲವು ವಿಧದ ಅದ್ಭುತ ವಾರ್ತೆಗಳನ್ನು ಪ್ರಕಟಿಸುತ್ತಿದ್ದುವು. ಯಾವುದನ್ನೂ ಅಲ್ಲಗಳೆದವರಿಲ್ಲ. ಬ್ರಿಟನಿನ ಪಕ್ಷಿಗೆ ಆ ಕಾಲದಲ್ಲಿ ಇದಕ್ಕಿಂತ ಹೆಚ್ಚಿನ ರಕ್ಷಣಾ ವಿಶ್ವಾಸವಿತ್ತಿಲ್ಲ. ಅದ್ದರಿಂದ ಪ್ರಪಂಚದ ಮನೋಧೈರ್ಯಕ್ಕಾಗಿ ಈ ಗೋಪನಾಕ್ರಿಯೆಯಬೇಕೇ

([illegible]ನೇ ಪುಟ ನೋಡಿರಿ)

WANTED

1. An experienced B. A., L. T. as Head Master.
2. Another B. A., L. T. as Assistant.
3. Two Sec. Grade Trained Teachers.
4. A qualified Drawing Master.
5. A Y. M. C. A. trained Physical Instructor.

All the above for the Saraswati Vidyalaya High School, Ganguli to be opened on June 20, 1945. Knowledge of Kannada essential in all cases

Apply stating qualifications, age, minimum salary expected' etc to—

The Manager,
Saraswati Vidyalaya High School,
GANGULI, S. K.

Unique facilities under Housing Scheme!
Rare opportunity for solve the Children Education Problem!

THE CENTRAL
MERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವಿರಾ?
— ನಿಮ್ಮ ಕಾಲಾನಂತರ ನಿಮ್ಮ ಆಪ್ತರ ಸುಖ ಬಯಸುವಿರಾದರೆ —
ಒಂದೇ ಒಂದು ದಾರಿಯಿದೆ! ಯಾವುದು? **ಜೀವ ವಿಮೆ!**

ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಸುಸ್ಥಿತಿಯನ್ನೂ ಅವರು ಆನಂದದ ನೆಲೆವೀಡನ್ನೂ ನೋಡಲಿಚ್ಛಿಸದಿರುವ ತಂದೆ ತಾಯಿಗಳಾರಿರುವರು. ಅಂತಹ ಎಜ್ಯುಕೇಶನ್ ಎಂಡೋಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ. ಆದ್ದರಿಂದ ಭಾವೀ ಜೀವನದಲ್ಲಿ ಬೆಳಕನ್ನು ಕಾಣಲಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

'ಸೆಂಟ್ರಲ್ ಮರ್ಕೆಂಟೈಲ್'

ಈ ವಿಧದ ನಿಮ್ಮ ಪವಿತ್ರೋದ್ದೇಶವನ್ನು ಈಡೇರಿಸಲು ಬದ್ಧಕಂಕಣವಾಗಿದೆ ಎಂಬುದನ್ನು ಮರೆಯಬೇಡಿರಿ!

ಎಲ್ಲೆಲ್ಲೂ ಏಜೆಂಟರೂ ಓರ್ಗನೈಜರರೂ ಬೇಕಾಗಿರುವರು!

ಕೂಡಲೇ ಬರೆಯಿರಿ.-

B. DIVAKARA HEGDE.
AGENCY ORGANIZER,
Central Mercantile Assurance Co., Ltd.,
Patel House, Churchgate Street,
FORT, BOMBAY.

ವೇವೆಲ್ ಸುಧಾರಣೆಗಳಾವುವು?

ಹಿಂದೀ ರಾಜಕೀಯ ಗಭಾರ್ಂದೋಲನ!

ಬ್ರಿಟಿಷ್ ಸರಕಾರದ ಆಮಂತ್ರಣದಂತೆ ಮಾರ್ಚ ತಾ. 21ರಲ್ಲಿ ಹಿಂದುಸ್ಥಾನದಿಂದ ಲಂಡನಿಗೆ ಹೋಗಿದ್ದ ವೈಸರಾಯಿ ಲೋರ್ಡ್ ವೇವೆಲರು ಪತ್ನಿ ಪರಿವಾರ ಸಮೇತ ಇದೇ ಜೂನ್ ತಾ. 5ನೇ ಅಪರಾಹ್ನ 1–35ಕ್ಕೆ ಸರಿಯಾಗಿ ನವದಿಲ್ಲಿಯಲ್ಲಿ ವಿಮಾನದಿಂದಿಳಿದರು. ಲೇಡಿ ವೇವೆಲ್, ಖಾಸಗೀ ಕಾರ್ಯದರ್ಶಿ ಸರ್. ಎವಾನ್ ಜೆಂಕಿನ್ಸ್ ಮತ್ತು ಸುಧಾರಣಾ ಕಮಿಶನರ್ ರಾವ್ ಬಹದೂರ್ ವಿ. ಪಿ. ಮೆನನರು ನಿರ್ಗಮನ ಆಗಮನಗಳಲ್ಲಿ ಅವರೊಂದಿಗೇನೇ ಇದ್ದರು. ವಿಮಾನ ನಿಲ್ದಾಣದಲ್ಲಿ ತಾತ್ಕಾಲಿಕ ವೈಸರಾಯಿ ಸರ್. ಜೋನ್ ಕೋಲ್‌ವಿಲ್ಲೆ, ತಾತ್ಕಾಲಿಕ ಕಮಾಂಡರ್-ಇನ್-ಚೀಫ್ ಸರ್. ಜೋನ್ ಸ್ವೈನೆ, ಸರ್. ಸುಲ್ತಾನ್ ಆಹಮ್ಮದ್ ಮೊದಲಾದವರಿಂದ ಸ್ವಾಗತ ಪಡೆದು ವೈಸರಾಯಿ ಭವನ ಪ್ರವೇಶಿಸಿದವರೇ ಮರಳಿ ಅಧಿಕಾರ ವಹಿಸಿಕೊಂಡಿದ್ದಾರೆ.

ವೇವೆಲ್ ತಂದಿರುವದೇನು?

ಹೆಚ್ಚೆಂದರೆ ನಾಲ್ಕು ವಾರಗಳ ಅವಧಿಯಿಟ್ಟಿದ್ದ ವೇವೆಲರ ಲಂಡನ್‌ವಾಸವು 10 ವಾರಗಳ ವರೆಗೂ ಬೆಳೆಯಿತು. ಯುರೋಪು ಯುದ್ಧದ ಮುಕ್ತಾಯ, ಬ್ರಿಟಿಷ್ ಸಂಯುಕ್ತ ಮಂತ್ರಿ ಮಂಡಲದ ಬರ್ಖಾಸ್ತಾದುದು ಈ ಅವಧಿಯಲ್ಲಿಯೇ. ಹಿಂದೀ ಬಿಕ್ಕಟ್ಟನ್ನು ಬಿಡಿಸಬೇಕೆಂಬ ಲೋರ್ಡ್ ವೇವೆಲರ ಸಹಾನುಭೂತಿಪರ ಧೋರಣೆಗೆ ಚರ್ಚಿಲ್, ಅಮೆರಿಯವರ ತಡೆ ಬಂದು ಅಲ್ಲಿಯೂ ಬಿಕ್ಕಟ್ಟುಂಟಾದ ವಾರ್ತೆ ಬಂದಿತ್ತು. ವೈಸರಾಯರು ಬ್ರಿಟಿಷ್ ಮಂತ್ರಿಮಂಡಲದೊಡನೆಯೂ ಸರ್. ಕ್ರಿಪ್ಸ್ ಮುಂತಾದ ಪ್ರಮುಖರೊಡನೆಯೂ ಚರ್ಚಿಸಿದ್ದರು. ಅಪ್ರಾಗತಿಕ ಮೇಲಧಿಕಾರಿಗಳ ಪ್ರತಿಭಟನೆ-ಯುದ್ಧ ಮುಕ್ತಾಯದಂತಹ ವಿಶೇಷ ಘಟನೆ–ಬ್ರಿಟನಿನ ಅಧಿಕಾರ ಬದಲಾವಣೆಯಾಗುವ ಸಂಭವದ ಹೊಸ ಯೋಚನೆ-ಇವೆಲ್ಲವುಗಳ ಪರಿಣಾಮದಿಂದಾಗಿ ವೇವೆಲರೀಗ ತಂದಿರುವ ಸೂಚನೆಗಳೇನೆಂಬುದು ಸ್ಪಷ್ಟವಾಗಿ ಪ್ರಕಟಗೊಂಡಿಲ್ಲ. ಇದೇ ತಾ. 13ರಲ್ಲಿ ನವದಿಲ್ಲಿಯಲ್ಲೂ, ಲಂಡನಿನಲ್ಲೂ ಆ ಆತುರದಾಯೀ ಜಾಹೀರು ನಾಮೆ ಹೊರಡಲಿದೆ; ಪಾರ್ಲಿಮೆಂಟಿನಲ್ಲಿ ಆ ಕುರಿತು ಚರ್ಚೆ ನಡೆಯಲಿಕ್ಕಿದೆ. ಅಭಿಪ್ರಾಯ ಹಾಗೂ ಸಹಕಾರವೀಯಲು ಹಿಂದೀ ಮುಖಂಡರು ಆಮಂತ್ರಿಸಲ್ಪಡಲಿದ್ದಾರೆ.

ಸುಧಾರಣೆಯ ಸ್ವರೂಪ.

ಕಳೆದ ಎರಡೂವರೆ ತಿಂಗಳುಗಳಿಂದ ವೇವೆಲರೆಲ್ಲವನ್ನೂ ಮುಷ್ಟಿಯೊಳಗಿಟ್ಟುಕೊಂಡು ತುಟಿಬಿಚ್ಚಿಲ್ಲವಾದರೂ–ಆ ಕುರಿತು ಒಂದೇ ಒಂದು ಅಧಿಕೃತ ಶಬ್ದವೀತನಕ ಹೊರಬಿದ್ದಿಲ್ಲವಾದರೂ ಅವರು ತಂದಿರುವ ಸುಧಾರಣೆಯ ಸ್ವರೂಪಕ್ಕೀಗ ಸ್ಪಷ್ಟ ಪ್ರಕಾಶ ಬಿದ್ದಿದೆ. ಅದರ ರೂಪರೇಖೆಯಿದು:—ಈ ಸುಧಾರಣೆಗಳು ಯುದ್ಧಾವಧಿಯ ಆಡಳಿತೆಯ ವರೆಗೆ ಮಾತ್ರ ಮಾನ್ಯ; ಜಪಾನ್ ಯುದ್ಧ ಮುಗಿಯುವ ವರೆಗೆ ಪೂರ್ಣಾಧಿಕಾರ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ವೈಸರಾಯರ ವಿಶೇಷಾಧಿಕಾರವು ಈ ಆಡಳಿತೆಯಲ್ಲೂ ಇದ್ದಂತೇ ಇರುವದು. ಬಹುಶಃ ಹೊರ ಸಂಬಂಧ ಮತ್ತು ದೇಶ ರಕ್ಷಣಾ ಖಾತೆಗಳನ್ನು ಬಿಟ್ಟು ಮಿಕ್ಕ ಎಲ್ಲಾ ಕೇಂದ್ರಾಧಿಕಾರಗಳನ್ನೂ ಹಿಂದೀ ಪ್ರತಿನಿಧಿಗಳಿಗೇ ನೀಡಲಾಗುವದು; ಅರ್ಥಾತ್ ವೈಸರಾಯಿ ಕಾರ್ಯಕಾರೀ ಸಮಿತಿಯ ಹಿಂದೀಕರಣವಾಗುವದು. ಈ ಕೌನ್ಸಿಲಿನ ಮೆಂಬರರನ್ನು ಆರಿಸಿಕೊಳ್ಳುವ ಅಧಿಕಾರ ವೈಸರಾಯರದೇ. ಆದರೆ ಅದು ಪ್ರಜಾ ಜವಾಬ್ದಾರಿಯದಾಗಿರುವಂತೆ, ಗಾಂಧಿ, ಜಿನ್ನ ಮತ್ತು 11 ಪ್ರಾಂತ್ಯಗಳ ಪ್ರಧಾನ ಮಂತ್ರಿಗಳನ್ನೂ, ಕೇಂದ್ರ ಎಸೆಂಬ್ಲಿಯ ಪಕ್ಷಪ್ರಮುಖರನ್ನೂ ಒಂದು 'ಎಡ್‌ಹೋಕ್' ಸಮಿತಿಯಾಗಿ ಸೇರಿಸಿ ಅವರು ಸೂಚಿಸುವವರನ್ನೇ ವೈಸರಾಯರು ನೇಮಿಸಿಕೊಳ್ಳುವರು. ದೇಸಾಯಿ ಲಿಯಾಖತ್ ಒಪ್ಪಂದದಲ್ಲಿದ್ದಂತೆ ವೈಸರಾಯಿ ಸಮಿತಿಯಲ್ಲಿ ಹಿಂದೂ-ಮುಸಲ್ಮಾನರಿಗೆ ಸಮಾನವಾಗಿ ಐದೈದು ಸ್ಥಾನಗಳು ದೊರೆಯುವವು. ಉಳಿದ ಪಕ್ಷಗಳಿಗೆ ಮೂರು ಸ್ಥಾನಗಳನ್ನಿಡಲಾಗುವದು. ಯುದ್ಧಾಂತ್ಯದ ಮೊದಲೇ ನ್ಯಾಯ ವಿಧಾಯಕ ಸಭೆಗಳ ಚುನಾವಣೆ ನಡೆಯಲೂಬಹುದು. ಈ ಸೂಚನೆಗಳು ಪ್ರಮುಖ ಹಿಂದೀ ಪಕ್ಷಗಳಿಂದ ಅಂಗೀಕೃತವಾದಲ್ಲಿ ರಾಜಕೀಯ ಪ್ರಮುಖರ ಬಿಡುಗಡೆ ಮತ್ತು ಸರ್ವ ಪ್ರಾಂತ್ಯಗಳಲ್ಲೂ ಪುನಃ ಜನಪ್ರತಿನಿಧಿ ಮಂತ್ರಿ ಮಂಡಲಗಳ ಸ್ಥಾಪನೆಯಾಗುವದು.

ವೈಸರಾಯಿ ಕೌನ್ಸಿಲ್ ಚರ್ಚೆ

ಲೋರ್ಡ್ ವೇವೆಲರು ಪುನಃ ರಾಜ್ಯಸೂತ್ರ ಧರಿಸಿದ ಐದೇ ಘಂಟೆಗಳಲ್ಲಿ ತನ್ನ ಕಾರ್ಯಕಾರೀ ಸಮಿತಿಯ ಸಭೆ ಕರೆದು ತನ್ನೀ ಸೂಚನೆಗಳನ್ನು ಮುಂದಿಟ್ಟರು. ಸಮಿತಿಯು ಎರಡು ಮೂರು ಸಲ ಸೇರಿ ತೀವ್ರ ಚರ್ಚೆ ನಡೆಯಿತೆಂದೂ ಹಿಂದೀ ಸದಸ್ಯರೆಲ್ಲಾ ಒಮ್ಮತದಿಂದ ಈ ಸೂಚನೆಗಳನ್ನು ವಿರೋಧಿಸಿದ್ದಾರೆಂದೂ ವಾರ್ತೆಯಿದೆ. ಕೆಲವರು ರಾಜೀನಾಮೆಕೊಡುವ ಬೆದರಿಕೆ ಬೀರಿರುವರು. ಅವರು ಮುಂದೊಡ್ಡುತ್ತಿರುವ ಕಾರಣವೇನಿದ್ದರೂ, ಜನಪ್ರತಿನಿಧಿಗಳಿಗೆ ತಮ್ಮ ಪೀಠ ಬಿಟ್ಟು ಕೊಡುವ ಅಪಮಾನವು ಅವರಿಗಸಹ್ಯವಾಗಿರುವದೇ ಈ ವಿರೋಧದ ಗುಟ್ಟೆಂದು ಹೆಚ್ಚಿನವರ ಅಂಬೋಣ. ಆದರೆ ಕೌನ್ಸಿಲಿನ ಅಭಿಪ್ರಾಯವು ಮೂಲ ಸೂಚನೆಗಳ ವಿಧದಿಂದಲೂ ಧಕ್ಕೆ ಕೊಡುವಂತಿಲ್ಲವೆಂಬುದು ಸ್ಪಷ್ಟವಿದೆ. ಶಿರಸಾವಹಿಸಿಕೊಳ್ಳುವ ಕ್ರಮಬದ್ಧ ಆಚರಣೆಗಾಗಿ ವೈಸರಾಯರವುಗಳನ್ನು ಕೌನ್ಸಿಲಿನ ಮುಂದಿಟ್ಟರಲ್ಲದೆ, ವಿಮರ್ಶಿಸಿ ತಿದ್ದುಪಡಿಮಾಡಲಿಕ್ಕಲ್ಲವೆಂದೂ, ಬಹುಪ್ರಯಾಸಪಟ್ಟು ಒದ್ದಾಡಿ ತ್ರಿಕಾಲೀನ ಪರ್ಯಾಲೋಚನೆಯೊಡನೆ ಬ್ರಿಟಿಷ್ ಅಧಿಕಾರಿಗಳ ಮೊಹರೊತ್ತಿಸಿ ತಂದಿರುವ ಈ ಸುಧಾರಣೆಯಲ್ಲಿ ಒಂದೇ ಒಂದು 'ಕೊಮ' ಬದಲಾವಣೆಗೆ ಕೂಡಾ ವೇವೆಲರು ತಯಾರಿಲ್ಲವೆಂದು ತಿಳಿದುಬರುತ್ತದೆ. ಕ್ರಿಪ್ಸ್ ಸೂಚನೆಯ ಒಂದಂಶ ಮಾತ್ರವಾಗಿರುವ ಈ ಸುಧಾರಣೆಯ ಕುರಿತು ವೇವೆಲರೂ ಕ್ರಿಪ್ಸರಂತೆ-'ಅಂಗೀಕರಿಸಿ, ಇಲ್ಲವೇ ನಿರಾಕರಿಸಿ' ಎಂದು ಅಧಿಕಾರ ವಾಣಿಯಿಂದಾಡಲಿದ್ದಾರೆ ಹೊರತು ಸಮಜಾಯಿಸಲು ತಯಾರಿಲ್ಲ.

ಪರದೆಯೊಳಗೆ—

ವಿಶೇಷ ಚಟುವಟಿಕೆ ನಡೆದಿದೆ. ವೈಸರಾಯರ ಜಾಹೀರ ನಾಮೆಯ ಪ್ರತಿಮತ್ತು ಪ್ರಾಂತಿಕ ಪ್ರಧಾನಿಗಳು, ಮಾಜೀ ಪ್ರಧಾನಿಗಳು, ಕೇಂದ್ರ ಎಸೆಂಬ್ಲಿಯ ಪಕ್ಷಪ್ರಮುಖರು, ಹಾಗೂ ಗಾಂಧಿ ಜಿನ್ನರಿಗೆ ಆಮಂತ್ರಣಗಳನ್ನು ಒಟ್ಟೊಟ್ಟಿಗೆ ಕಳುಹಲಾಗುವುದು. ಎಲ್ಲವನ್ನೂ ಪ್ರಾಂತಿಕ ಗವರ್ನರರ ಅವಗಾಹನೆಗೆ ತರಲಾಗುವದು. ಆಮಂತ್ರಣ ಮತ್ತು ಜಾಹೀರುನಾಮೆಯ ಪ್ರತಿಗಳು ಅವರ ಮೂಲಕವೇ ಸಂಬಂಧಪಟ್ಟವರಿಗೆ ಹೋಗಲಿವೆ. ಈ ರೀತಿ ವೈಸರಾಯ ಕಾರ್ಯಕಾರೀ ಸಮಿತಿಗೆ ಹೆಸರು ಸೂಚಿಸುವ 'ಎಡ್‌ಹೋಕ್' ಸಮಿತಿಯಲ್ಲಿ ಗಾಂಧಿ, ಜಿನ್ನಾ, ಹಿಂದಿನ ಮತ್ತು ಇಂದಿನ 11 ಪ್ರಾಂತಿಕ ಪ್ರಧಾನ ಸಚಿವರು, ಕೇಂದ್ರ ಎಸೆಂಬ್ಲಿ ಮತ್ತು ಕೌನ್ಸಿಲ್ ಓಫ್ ಸ್ಟೇಟ್ ಪಕ್ಷ ಪ್ರಮುಖರಾದ ಭುಲಾಭಾಯಿ ದೇಸಾಯಿ, ನವಾಬ್ ಝಾದಾ ಲಿಯಾಖತ್ ಅಲೀಖಾನ್, ಪಿ. ಎನ್. ಬೆನರ್ಜಿ, ಸರ್. ಹೆನ್ರಿ ರಿಚಾರ್ಡ್‌ಸನ್, ಜಿ. ಎಸ್. ಮೋತಿಲಾಲ್ ಮತ್ತು ಹುಸ್ಸೇನ್ ಇಮಾಮ್ ಅಕಾಲಿಗಳ ಪರವಾಗಿ ಮಾಸ್ಟರ್ ತಾರಾಸಿಂಗ್, ದಳಿತ ವರ್ಗದ ಪರವಾಗಿ ಡಾ| ಅಂಬೇಡ್ಕರ್, ಸದ್ಯದ ವೈಸರಾಯಿ ಕೌನ್ಸಿಲ್ ಪರವಾಗಿ ಇಬ್ಬರು— ಹೀಗೆ 23 ಸದಸ್ಯರಾಗುವರು. ಈ ಸಮಿತಿಗೆ ವೈಸರಾಯಿ ಸಮಿತಿ ಸದಸ್ಯರನ್ನಾರಿಸುವ ಅಧಿಕಾರ ಹೊರತು ವೈಸರಾಯಿ ಸೂಚನೆಗಳನ್ನು ತಿದ್ದುವ ಹಕ್ಕಿಲ್ಲ. ಕಾರ್ಯಕಾರಿ ಸಮಿತಿಯಲ್ಲಿ 5 ಕಾಂಗ್ರೆಸ್, 5 ಮುಸ್ಲಿಂ ಲೀಗ್, 1 ಸಿಖ್, 1 ದಳಿತ ವರ್ಗ, 1 ಮಿಕ್ಕುಳಿದ ಅಲ್ಪಸಂಖ್ಯಾಕರೆಂದು ಮಾಡಿರುವ ಪಾಲುಪಟ್ಟಿಯ ಕುರಿತು ಮುಸಲ್ಮಾನರು ತೃಪ್ತರಾಗಬಹುದು; ಕಾಂಗ್ರೆಸು ಆಕ್ಷೇಪಿಸದಿರಬಹುದು; ಆದರೆ ಮಿಕ್ಕವರೆಲ್ಲರೂ, ಮುಖ್ಯವಾಗಿ ಹಿಂದೂ ಸಭೆಯು ತೀವ್ರವಾಗಿ ಪ್ರತಿಭಟಿಸುವ ಸಂಭವವಿದೆ

ಜನತಾಭಿಪ್ರಾಯವೇನು ?

ಸದ್ಯ ಮಹಾತ್ಮಾ ಗಾಂಧಿಯವರಿರುವ ಪಾಂಚಗನಿಯಲ್ಲಿ ವೇವೆಲ್ ಸುಧಾರಣೆಗಳ ಕುರಿತು ನಿರಾಸಕ್ತಿ ಹರಡಿದೆ ಮುಂದಾಗಿ ಕಾಂಗ್ರೆಸ್ ಪ್ರಮುಖರನ್ನು ಬಿಟ್ಟು ಗಾಂಧಿಜೀಯವರೊಡನೆ ಸಂಭಾಷಿಸಲನುಕೂಲ ಮಾಡಿಕೊಡದಿದ್ದರೆ ಕಾಂಗ್ರೆಸು ತನ್ನ ಅಭಿಪ್ರಾಯ ಸೂಚಿಸುವಂತಿಲ್ಲ. ಆದರೂ

(ಆನೇ ಪುಟ ನೋಡಿರಿ.)

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs. 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S. India.)
T. A. PAI, B. Com. (Bom) A. I. I. B.
General Manager.

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
(ಸ್ಥಾಪನೆ: 1908)
1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥೆಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟರು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ: 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬೆಳವಣಿಗೆ
ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ.

WANTED

WANTED, B.A.B.T's and Bsc's for the Islamia Anglo Urdu High School, Bhatkal. Scale of pay for B.A.B.T's Rs. 55/- to 60/-3—125/- and for Bsc's Rs. 40/- to 50/-3—125/-.

Apply stating qualification and experience to:—

The Hon. Secretary,
Anjuman Hami-e-Muslimeen,
BHATKAL. (N. K.)

ಗಣ್ಯ ಘಟನೆಗಳು

ಜರ್ಮನಿಯ ಆಕ್ರಮಣ ವ್ಯವಸ್ಥೆ

ಬ್ರಿಟನ್, ಅಮೇರಿಕಾ, ರಶ್ಯಾ, ಫ್ರಾನ್ಸುಗಳ ಪರವಾಗಿ ಮೊಂಟೊಗೋಮೆರಿ, ಐಸೆನೋವರ್, ಝುಕೋವ್, ಡಿಲಾಟ್ರೆಯವರು ಬರ್ಲಿನಿನಲ್ಲಿ ಸೇರಿ ಜೂನ್ ತಾ. 4ರಲ್ಲಿ ಜರ್ಮನಿಯ ಆಕ್ರಮಣ ದಸ್ತಾವೇಜಿಗೆ ಸಹಿ ಹಾಕಿರುವರು. ಈ ರಿಕಾರ್ಡಿನ ಪ್ರಕಾರ ತಾ. ೮ನೇ ಅಪರಾಹ್ನ 2 ಘಂಟೆಯಿಂದ 'ಜರ್ಮನ್ ಸೋವರೇನ್ಟಿ' ಎಂಬುದಿಲ್ಲ. ಆಸ್ಟ್ರಿಯಾ ಮತ್ತು ಸುಡೆಟನ್ ಲೇಂಡನ್ನು ಜರ್ಮನಿಯಿಂದ ಕತ್ತರಿಸಿ ತೆಗೆಯಲಾಗಿದೆ. ಉಳಿದ ಮೂಲ ನೆಲವು ಚತುರ್ರಾಷ್ಟ್ರಗಳ ಆಕ್ರಮಣ ವಿಭಾಗವಾಗಿ ನಾಲ್ಕು ಪಾಲಾಗಿದೆ. ವಾಯುವ್ಯ ಭಾಗವು ಬ್ರಿಟನಿನ-ಪೂರ್ವ ಭಾಗವು ರಶ್ಯದ-ನೈಋತ್ಯ ಭಾಗವು ಅಮೇರಿಕದ-ಪಶ್ಚಿಮ ಭಾಗವು ಫ್ರಾನ್ಸಿನ ಸೇನಾಡಳಿತೆಯೊಳಗಿರುವದು ಎಲ್ಲಾ ಜರ್ಮನ್ ಸೇನೆಯನ್ನು ನಿಶ್ಶಸ್ತ್ರಗೊಳಿಸಿ, ಆಯಾ ಭಾಗದ ಜನ, ಉತ್ಪತ್ತಿ, ಸಂಸ್ಕೃತಿ, ಸಂಪತ್ತು, ಹಾಗೂ ಸರ್ವಸ್ವವನ್ನೂ ಸಂಬಂಧಪಟ್ಟ ಮಿತ್ರ ರಾಷ್ಟ್ರಗಳು ತಮ್ಮ ಅಂಕೆಯಲ್ಲಿಟ್ಟುಕೊಂಡು ಅಧಿಕಾರ ನಡೆಸುವವು.

ಬರ್ಲಿನ್ ಕೇಂದ್ರ

ಬರ್ಲಿನ್ ಯಾವುದಾದರೊಂದು ರಾಷ್ಟ್ರದ ಸೊತ್ತಲ್ಲ; ಅದು ಮೇಲಿನ ನಾಲ್ವರು ಮಿತ್ರ ಸೇನಾನಿಗಳ 'ಕಂಟ್ರೋಲ್ ಕೌನ್ಸಿಲ್'ನ ಆಡಳಿತೆಗೊಳಪಟ್ಟಿದೆ. ಅಖಿಲ ಜರ್ಮನಿಯ ಮೇಲ್ವಿಚಾರವನ್ನು ಈ ಕಂಟ್ರೋಲ್ ಕೌನ್ಸಿಲು ತನ್ನ ಸಲಹೆಗಾರರ ಅನುಮತಿಯಂತೆ ನಡೆಯಿಸತಕ್ಕದ್ದು. ಇದು ಜರ್ಮನಿಯ ಎಲ್ಲಾ ಯುದ್ಧಬೇರುಗಳನ್ನೂ ಕೀಳುವದಕ್ಕಾಗಿ ಕೈಕೊಂಡ ವ್ಯವಸ್ಥೆ ಹೊರತು ಜರ್ಮನಿಯನ್ನೇ ತಮ್ಮದನ್ನಾಗಿ ಮಾಡಿಕೊಳ್ಳುವ ಇಚ್ಛೆ ಮಿತ್ರರಾಷ್ಟ್ರೀಯರದಲ್ಲ ಎಂಬ ಘೋಷಣೆಯಾಗಿದೆ ಚತುರ್ರಾಷ್ಟ್ರಗಳ ಗಡಿ ನಿರ್ಣಯ ಸ್ಪಷ್ಟವಾಗಿಲ್ಲ. ಸದ್ಯ ಅಮೇರಿಕನ್ ಸೇನೆಯ ಹಸ್ತವಿರುವ ಲೀಪ್‌ಝಿಗ್ ಹಲ್ಲೆ ಚೆಮ್ನಿಟ್ಸ್, ವೀಮರ್, ಮೇಗ್ಡೆಬರ್ಗ ಮೊದಲಾದ ಊರುಗಳು ಹಿಂದಿನ ಒಪ್ಪಂದ ಪ್ರಕಾರ ರಶ್ಯಕ್ಕೆ ಸೇರತಕ್ಕವಿವೆ

ಗಡಿ ಸಮಸ್ಯೆ

ಮೇಲಿನ ಕರಾರು ನಿರ್ಮಾಣವಾದೊಡನೆ ಸೇರಿದ 'ಕಂಟ್ರೋಲ್ ಕೌನ್ಸಿಲ್'ನ ಪ್ರಥಮ ಸಭೆಯು ಅರ್ಧದಲ್ಲೇ ಅವಸಾನಗೊಳ್ಳಬೇಕಾಯಿತು. ರಶ್ಯದ ಪಾಲಿಗೆ ಬಂದಿರುವ ಸ್ಥಳಗಳನ್ನು ಅಮೇರಿಕಾನರು ಬಿಟ್ಟುಕೊಡದೆ ಬೇರೆ ಚರ್ಚೆನಡೆಸಲು ಮಾರ್ಶಲ್ ಝುಕೋವರು ನಿರಾಕರಿಸಿ ಬಿಟ್ಟರು ಇದರ ಕೊನೆಯ ತೀರ್ಮಾನವಿನ್ನೂ ಆಗಿಲ್ಲ. ಮಾತ್ರವಲ್ಲದೆ ರಶ್ಯವು ತನ್ನಾಧೀನವಿರುವ ಜರ್ಮನ್ ಜನಸಾಮಾನ್ಯರನ್ನು ಅತ್ಯಂತ ಸಮಾನತೆಯಿಂದ ಕಾಣುತ್ತಿದ್ದು ಸಮತಾವಾದದ ಸವಿಫಲಗಳನ್ನುಣ್ಣಿಸ ಹತ್ತಿರುವದರಿಂದ ಇಷ್ಟರಲ್ಲೇ ರಶ್ಯನ್ ಮತ್ತು ಆಂಗ್ಲೋ-ಅಮೇರಿಕಾನರ ಭಾಗಗಳೊಳಗೆ ಅಜಗಜಾಂತರವುಂಟಾಗಿದೆ. ಜರ್ಮನಿಯ ಅಂಗವಿಚ್ಛೇದನೆ ಮಾಡುವ ಸೂಚನೆಗೆ ಸ್ಟಾಲಿನರು ಬದ್ಧ ವಿರೋಧವಿದ್ದಾರೆಂದು ಮೋಸ್ಕೋ ರೇಡಿಯೋ ಘೋಷಿಸಿದೆ. 19ನೇ ಶತಮಾನದ ಮಧ್ಯ ಭಾಗದವರೆಗೂ ಜರ್ಮನಿ ತುಂಡ ತುಂಡಾಗಿದ್ದುದನ್ನು ಜ್ಞಾಪಿಸಿ, 'ಮುಳ್ಳನ್ನು ಮತ್ತೊಮ್ಮೆ ಹಿಂದಕಟ್ಟಿ ಜರ್ಮನ್ ಜನತೆಯನ್ನು ಗಂಡಾಂತರಕ್ಕೀಡುಮಾಡುವುದು ಅಪಹಾಸ್ಯಕಾರ ಮತ್ತು ಹೀನಕೃತ್ಯ ಎಂದು ರಶ್ಯನ್ ರೇಡಿಯೋ ಎಚ್ಚರಿಸಿದೆ

ಫ್ರಿಸ್ಕೋದಲ್ಲಿ ವಿಶೇಷಾಧಿಕಾರ ತೀರ್ಮಾನ

ಜಾಗತಿಕ ಭದ್ರತಾ ಕೌನ್ಸಿಲಿನ ತೀರ್ಮಾನದ ಮೇಲೆ ದೊಡ್ಡ ರಾಷ್ಟ್ರಗಳಿಗಿರಬೇಕಾದ ರದ್ದತಿ ಅಧಿಕಾರದ ಕುರಿತು ರಶ್ಯ ಮತ್ತು ಇತರ ಪ್ರಮುಖ ರಾಷ್ಟ್ರಗಳ ಗುಂಟಾಗಿದ್ದ ತೀವ್ರ ಭಿನ್ನಾಭಿಪ್ರಾಯವು ಫ್ರಿಸ್ಕೋ ಸಮ್ಮೇಳನದಲ್ಲಿ ಬಿಕ್ಕಟ್ಟನ್ನು ನಿರ್ಮಿಸಿ ಅದು ಒಡೆದುಹೋಗುವ ಅಪಾಯವುಂಟಾಗಿದ್ದಿತು. ಈಗ ಪಂಚ ಮಹಾ ರಾಷ್ಟ್ರಗಳು-ರಶ್ಯಾ, ಅಮೇರಿಕ, ಇಂಗ್ಲಾಂಡು, ಫ್ರಾನ್ಸು, ಚೀನಾ-ಆ ಕುರಿತು ಒಮ್ಮತದ ತೀರ್ಮಾನಕ್ಕೆ ಬಂದಿವೆ- ಹೊಸ ರಾಷ್ಟ್ರ ಸಂಘಸ್ಥಾಪನೆಗಾಗ ಅನುಕೂಲ ವಾತಾವರಣ ನಿರ್ಮಾಣಗೊಂಡಿದೆ ಇನ್ನುಳಿದ ಕಾರ್ಯಗಳು ಸುಲಭವಿರುವದರಿಂದ ಫ್ರಿಸ್ಕೋ ಸಮ್ಮೇಳನವನ್ನು ಬೇಗನೇ ಮುಗಿಸಬೇಕೆಂಬ ಆತುರದಲ್ಲಿ ಅಲ್ಲಿಯ ಪ್ರತಿನಿಧಿಗಳಿದ್ದಾರೆ ಪಂಚ ಮಹಾ ರಾಷ್ಟ್ರಗಳ ಸರ್ವಾನುಮತಿ ದೊರೆತ ವಿನಹ ಯಾವುದೊಂದು ರಾಷ್ಟ್ರದ ಮೇಲೂ ವಿಶೇಷಾಚರಣೆ ಕೈಕೊಳ್ಳಬಾರದೆಂಬುದೇ ಆ ರಾಜೀ ತೀರ್ಮಾನ

ಆ ವಿಶೇಷಾಧಿಕಾರ ಎಂದರೇನು?

ಲೋಕ ವ್ಯವಸ್ಥೆಗಾಗಿ ಸ್ಥಾಪಿಸಲ್ಪಡಲಿರುವ 'ರಾಷ್ಟ್ರಸಂಘ'ದಲ್ಲಿ ಎರಡು ಸಂಸ್ಥೆಗಳಿವೆ. ಮೊದಲನೆಯದು ಎಲ್ಲಾ ಸದಸ್ಯ ರಾಷ್ಟ್ರಗಳಿಗೂ ಸ್ಥಾನವಿರುವ ಸ್ಥೂಲ ರೂಪದ ಜನರಲ್ ಎಸೆಂಬ್ಲಿ, ಎರಡನೆಯದು ಈ ಎಸೆಂಬ್ಲಿಯ ಕಾರ್ಯಕಾರಿ ಸಮಿತಿಯಾದ ಭದ್ರತಾ ಕೌನ್ಸಿಲ್ ಈ ಭದ್ರತಾ ಕೌನ್ಸಿಲಿನಲ್ಲಿ ಪಂಚ ಮಹಾ ರಾಷ್ಟ್ರಗಳು ಶಾಶ್ವತ ಸದಸ್ಯರಾಗಿವೆ; ಅವುಗಳೊಂದಿಗೆ ಸಣ್ಣ ರಾಷ್ಟ್ರಗಳಿಗಾಗಿ 6 ಸ್ಥಾನಗಳಿವೆ; ಸಣ್ಣ ರಾಷ್ಟ್ರಗಳ ಸ್ಥಾನಗಳು ಅವುಗಳೊಳಗೆ ಆಗಾಗ ಬದಲಾಯಿಸಲ್ಪಡುವವು ಹೀಗೆ 11 ಸದಸ್ಯರುಳ್ಳ ಕಾರ್ಯಕಾರೀ ಸಮಿತಿಯೇ ರಾಷ್ಟ್ರ ಸಂಘದ ಜೀವಾಳವಾಗಿದ್ದು ಮುಂದಿನ ಕಾರ್ಯಾಚರಣೆಗಳೆಲ್ಲವನ್ನೂ ಕೈಕೊಳ್ಳುವ ಹೊಣೆ ಹೊರುತ್ತದೆ. ತಮಗೆ ವಿರೋಧವಾದ ಯಾವುದೊಂದು ನಿರ್ಧಾರವನ್ನೂ ಕಾರ್ಯಕಾರೀ ಸಮಿತಿಯು ಬಹುಮತದಿಂದ ಮಂಜೂರುಮಾಡದಂತಾಗಬೇಕೆಂಬ ಅಭಿಲಾಷೆ ಪ್ರತಿಯೊಂದು ಸದಸ್ಯ ರಾಷ್ಟ್ರಕ್ಕೂ ಇದ್ದೇ ಇದೆ.

ರಶ್ಯದ ಛಲ

ಭಂಡವಾಳಶಾಹೀ ಮಿಕ್ಕ ರಾಷ್ಟ್ರಗಳ ಮೇಲೆ ಸೋವಿಯೆಟ್ ರಶ್ಯಕ್ಕಿರುವ ಅಪನಂಬಿಕೆ ಸಹಜವಾದುದೇ. ಭದ್ರತಾ ಕೌನ್ಸಿಲಿನ ಶಾಶ್ವತ ಸದಸ್ಯರಲ್ಲಿ ಸರ್ವರ ಒಮ್ಮತದೊಪ್ಪಿಗೆ ವಿನಹ ಯಾವುದೊಂದು ರಾಷ್ಟ್ರದ ಮೇಲೆ 'ಪ್ರತಿಕ್ರಿಯೆ' ಕೈಗೊಳ್ಳುವ ನಿರ್ಧಾರವೆಂದೂ ಆಗಬಾರದು; ಒಂದು ಶಾಶ್ವತ ಸದಸ್ಯ ರಾಷ್ಟ್ರದ ವಿರೋಧವಿದ್ದರೆ ಅದು ಭದ್ರತಾ ಕೌನ್ಸಿಲಿನಲ್ಲಿ ಚರ್ಚೆ ಮತ್ತು ತೀರ್ಮಾನಕ್ಕೂ ಒದಗಕೂಡದು ಎಂದು ರಶ್ಯದ ವಾದ. ಈ ಕುರಿತು ಘರ್ಷಣೆ ಬೆಳೆಯುತ್ತಾ ಹೋಗಿ ಕೊನೆಗೆ ಪಡೆದಿರುವ ಸರ್ವಾನುಮತಿಯ ಒಪ್ಪಂದದಂತೆ, ಯಾವುದಾದರೊಂದು ಕ್ರಿಯಾತ್ಮಕ ತೀರ್ಮಾನಕ್ಕೆ ಶಾಶ್ವತ ಸದಸ್ಯರಾದ ಪಂಚ ಮಹಾರಾಷ್ಟ್ರಗಳೆಲ್ಲ ಪ್ರತಿಯೊಂದರ ಒಪ್ಪಿಗೆಯೂ ಇರಬೇಕು; ಆದರೆ ಒಂದು ವಿಷಯವನ್ನು ಪರ್ಯಾಲೋಚಿಸಿ ತನ್ನ ಅಭಿಪ್ರಾಯ ಸೂಚಿಸುವ ಅಧಿಕಾರ ಕೌನ್ಸಿಲಿನ ಬಹುಮತಕ್ಕಿದೆ ಎಂದಾಗಿದೆ.

ಸ್ವಾತಂತ್ರ್ಯಕ್ಕೆ ರಶ್ಯದ ಬೆಂಬಲ

ಲೋಕದ ಎಲ್ಲಾ ವಸಾಹತುಗಳಿಗೂ ಅತಿ ಬೇಗನೇ ಸ್ವಾತಂತ್ರ್ಯವೀಯಲಾಗುವಂತೆ ಅಂತರ್ರಾಷ್ಟ್ರೀಯ ಯಂತ್ರವೊಂದನ್ನು ರಚಿಸಬೇಕೆಂಬ ಅಮೇರಿಕದ ಯೋಜನೆಯನ್ನು 1943ರಲ್ಲಿ ಸೇರಿದ್ದ ಮೋಸ್ಕೋ ಸಮ್ಮೇಳನದಲ್ಲಿ ಬ್ರಿಟನು ವಿರೋಧಿಸಿತೆಂದು ಸೋವಿಯೆಟ್ ಸರಕಾರದ ಮುಖಪತ್ರದಂತಿರುವ 'ಪ್ರಾವ್ಡಾ' ಪತ್ರಿಕೆ ಪ್ರಕಟಿಸಿದೆ ಮುಖ್ಯವಾಗಿ ಹಿಂದುಸ್ಥಾನದ ಪ್ರಶ್ನೆಯಿಂದಲೇ ಅಮೇರಿಕವು ಆ ಕೆಲಸಕ್ಕೆ ಮುಂದಾಗಿದ್ದಿತು. "ವಸಾಹತು ಮತ್ತು ಪಾರತಂತ್ರ್ಯ ರಾಷ್ಟ್ರಗಳ ಕಡೆಗಿನ ಸೋವಿಯೆಟ್ ರಶ್ಯದ ಧೋರಣೆ ಅತ್ಯಂತ ಸ್ಪಷ್ಟವಿದೆ. ನಮ್ಮ ರಾಷ್ಟ್ರವನುಸರಿಸುತ್ತಿರುವ ಲೆನಿನ್ ಮತ್ತು ಸ್ಟಾಲಿನರ ಮೂಲಭೂತ ತತ್ವಗಳೆಂದರೆ ಪ್ರತಿಯೊಂದು ರಾಷ್ಟ್ರಕ್ಕೂ ಸ್ವಾಧಿಕಾರವಿರಬೇಕು; ಪ್ರತಿಯೊಂದು ರಾಷ್ಟ್ರವೂ ಸಂಪೂರ್ಣ ರಾಷ್ಟ್ರಾಧಿಕಾರ ಪಡೆಯಬೇಕಲ್ಲದೆ, ದೊಡ್ಡ ಸಣ್ಣ ಎಲ್ಲಾ ರಾಷ್ಟ್ರಗಳ ಜನತೆಯ ಸ್ವಾತಂತ್ರ್ಯ ಮತ್ತು ಹಕ್ಕು ಬಾಧ್ಯತೆಗಳನ್ನು ಗೌರವಿಸಬೇಕು"—ಎಂದು ಪ್ರಾವ್ಡಾದ ಸ್ಪಷ್ಟವಾಣಿ.

ಸಿರಿಯಾ, ಲೆಬನಾನ್ ಗೊಂದಲ

ಫ್ರೆಂಚ್ ಸೇನಾ ಕೃತ್ಯದಿಂದಾಗಿ ಲೆವಾಂಟಿನಲ್ಲೆದ್ದ ಗೊಂದಲ ಮತ್ತು ಬ್ರಿಟಿಷರು ಹಾಕಿದ ತಡೆಯ ಕುರಿತು ಇನ್ನೂ ತೀರ್ಮಾನವಾಗಿಲ್ಲ. ಇಂಗ್ಲಾಂಡು, ಅಮೇರಿಕ, ರಶ್ಯ, ಫ್ರಾನ್ಸು, ಚೀನಾಗಳ ಸಮ್ಮೇಳನವು ಈ ಪ್ರಶ್ನೆಯನ್ನು ತೀರ್ಮಾನಿಸಬೇಕೆಂಬ ಫ್ರೆಂಚ್ ಸೂಚನೆಗೆ ಇಂಗ್ಲಾಂಡು ಅಮೇರಿಕಗಳು ಬದ್ಧ ವಿರೋಧವಿವೆ ರಶ್ಯಕ್ಕೂ ಇಲ್ಲಿ ಸ್ಥಾನಕೊಡಬೇಕೆಂಬ ಮಾತು ಕೇಳಿ ಚರ್ಚಿಲ್ಲರು ಗುಟ್ಟಾಗಿ ಉರಿದೆದ್ದಿದ್ದಾರೆ. ಅರಬ್ ರಾಷ್ಟ್ರ ಸಂಘದ ಸಭೆ ಕೈರೋದಲ್ಲಿ ಸೇರಿ, ಸಿರಿಯಾ ಲೆಬನಾನುಗಳಿಂದ ಫ್ರೆಂಚ್ ಸೇನೆ ಹಿಂದೆಗೆಯಬೇಕೆಂದು ಠರಾಯಿಸಿದೆ ಫ್ರೆಂಚ್ ಆಕ್ರಮಣವನ್ನು ಪ್ರತಿಭಟಿಸುವೆವೆಂದು ಆ ಸಂಘ ಘೋಷಣೆ ಮಾಡಿದೆ "ಡಮಾಸ್ಕಸಿನಲ್ಲಿ ಒಂದೇ ಒಂದು ಫ್ರೆಂಚ್ ಮುಖ ನೋಡುವದೂ ನನಗಸಹ್ಯವಾಗಿದೆ" ಎಂದು ಸಿರಿಯದ ಅಧ್ಯಕ್ಷರ ಬಹಿರಂಗ ಘೋಷಣೆ. ಸಿರಿಯದಲ್ಲಿ ಸರ್ವ ವಿಭಾಗಗಳ ಫ್ರೆಂಚ್ ಅಧಿಕಾರಿಗಳು, ನೌಕರರು, ಕಲಾವಿದರು, ಪತ್ರಿಕೆಗಳು, ಜನರು ಬಹಿಷ್ಕೃತರಾಗುತ್ತಿದ್ದಾರೆ; ಹೊರಹಾಕಲ್ಪಡುತ್ತಿದ್ದಾರೆ.

ಮೂಲ ಪ್ರಶ್ನೆಯಾವುದು?

ಲೆವೆಂಟ್ ಗೊಂದಲದಿಂದಾಗಿ ಬ್ರಿಟಿಷ್-ಫ್ರೆಂಚ್‌ರೊಳಗಿನ ವೈಮನಸ್ಸು ತುತ್ತ ತುದಿಗೆ ಮುಟ್ಟಿದೆ ಗುಟ್ಟೆಂದರೆ ಮಧ್ಯಪೂರ್ವದ ಎಣ್ಣೆ ಮತ್ತು ವ್ಯಾಪಾರ ಸೌಕರ್ಯಗಳ ಕುರಿತು ಪ್ರಮುಖ ರಾಷ್ಟ್ರಗಳೊಳಗಿರುವ ಸ್ಪರ್ಧೆಯೇ ಇದರ ಮೂಲ ಹೊರತು ಸ್ಥಳೀಯ ಫ್ರೆಂಚ್-ಅರಬರ ಜಗಳವಲ್ಲ ಇರಾಕ್, ಇರಾನುಗಳ ಎಣ್ಣೆಗಾಗಿಯೂ, ವ್ಯಾಪಾರಕ್ಕಾಗಿಯೂ ಮಧ್ಯ ಪೂರ್ವದ ಮುಖ್ಯಾಧಿಕಾರಿಯಾಗಿರುವ ಬ್ರಿಟನು ಅರಬರ ಮನಸ್ಸೊಲಿಸುತ್ತಾ ಬಂದಿದೆ. ಹಿಂದೆ ಯೆಹೂದಿಗಳ ವಿರುದ್ಧವಾಗಿಯೂ ಈಗ ಫ್ರೆಂಚರ ವಿರುದ್ಧವಾಗಿಯೂ ಬ್ರಿಟಿಷರು ಕಾರ್ಯಕೈಗೊಂಡುದು ಇದಕ್ಕಾಗಿಯೇ. ಫ್ರೆಂಚರನ್ನು ನಿಸ್ತೇಜಗೊಳಿಸಿ ಶಾಂತಿ ನೆವದಿಂದ ಪ್ರತಿಯೊಂದು ಸ್ಥಾನವನ್ನೂ ಬ್ರಿಟನಾಕ್ರಮಿಸಿಕೊಳ್ಳುತ್ತಿದ್ದಾರೆ. ರಶ್ಯಕ್ಕವಕಾಶಕೊಡದಿರುವದೂ ಇದಕ್ಕಾಗಿಯೇ. ಸಿರಿಯದ ಪ್ರಶ್ನೆ ತೀರ್ಮಾನ ಹೊಂದದಿದ್ದರೆ ಈ ಎಣ್ಣೆ ವಲಯದಲ್ಲಿ ಬೆಂಕಿ ಹತ್ತಿಕೊಳ್ಳುವ ಸಂಭವವಿದೆ!

THE
CANARA INDUSTRIAL & BANKING SYNDICATE, Ltd.
Head Office:- UDIPI (S India.)

NOTICE

Is hereby given that 10 five % Cumulative Preference shares Nos PC 41543 to PC 41552 in the Syndicate each Re 1 paid, will be sold by public auction at the Registered Office of the Syndicate "Mukund Nivas," Udipi, on Tuesday the 26th June, 1945 at 3 P. M. in order to recover the debt due by the concerned shareholder.

Intending bidders are requested to be present at the time of auction.

UDIPI, 11-6-1945 K. V Shenoy, Secretary.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

The Canara Banking Corporation Limited.

(Incorporated in British India with limited Liability.)

Estd. 1906.

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18—5—1945.

ಉಡುಪಿ, ಗುರುವಾರ ೧೪-೬-೧೯೪೫

ಸ್ವಾರ್ಥಾಂದೋಲನ

ಜರ್ಮನ್ ಪರಾಭವದ ನಂತರ, ಪಾರಿದ ಮುಖ್ಯ ವಿಷಯವಾಗಿ ಪ್ರಮುಖ ರಾಷ್ಟ್ರಗಳ ಒಂದಲ್ಲೊಂದು ಸ್ವಾರ್ಥಸಾಧನೆಯನ್ನೇ ಎತ್ತಿಕೊಳ್ಳಬೇಕಾದ ಸಂದರ್ಭವು ಸರದಿ ತಪ್ಪದೆ ಸಮಗೊದಗಿದೆ. ಪೋಲೆಂಡ್ ಸಮಸ್ಯೆ–ಫ್ರಾಸ್ಕೋ ಟಿಕ್ಕಟ್ಟು–ಟ್ರೀಸ್ಟೆ ಸ್ಥಳವಿವಾದ–ಬರ್ಮದ ಶ್ವೇತಪತ್ರ ಲೆಬನಾನ್ ಗೊಂದಲ–ಹೀಗೆ ಸಾಮ್ರಾಜ್ಯವಾದಿಗಳ ಸ್ವಾರ್ಥಸರಪಣಿ ಗೊಣಸುಗೂಡುತ್ತಾ ಬೆಳೆದಿದೆ. ಲೆಬನಾನ್ ಗೊಂದಲವು ಇಡೀ ಪ್ರಪಂಚದ ಮೂಲೆಮೂಲೆಗಳಲ್ಲಿ ಒಂದು ವಿಧದಿಂದ ಮಾರ್ದನಿಗೊಟ್ಟಿದ್ದರೆ ಹಿಂದೀ ಮುಖಂಡರ ಹೃದಯದಲ್ಲಿ ಮತ್ತೊಂದು ರೀತಿಯಿಂದ ಪ್ರತಿಧ್ವನಿಸಿದೆ. ಸಿರಿಯದಲ್ಲಿ ಫ್ರೆಂಚರ ಗುಂಡಿಗೆದೆ ಕೊಟ್ಟವರು ಅರಬರು-ಮುಸಲ್ಮಾನ್ ಜನತೆ-ಆದ್ದರಿಂದ ಮಿ. ಜಿನ್ನರು ಉದ್ರೇಕಗೊಂಡು 'ಪಾಶವಿಕ ಅತ್ಯಾಚಾರ!' ಎಂದು ಆರ್ಭಟಿಸಿದ್ದಾರೆ. ಈ ದುರಂತಕ್ಕಾಗಿ 'ಎಲ್ಲರಿಗಿಂತ ಹೆಚ್ಚಿನ ಸಂತಾಪ'ಗೊಂಡಿರುವ ಗಾಂಧಿಜೀ 'ಸಿರಿಯದ ಪ್ರಶ್ನೆಯು ಜಾತೀಯ ಪ್ರಶ್ನೆಯಲ್ಲ; ರಾಷ್ಟ್ರೀಯ ಸಮಸ್ಯೆಯಾದ್ದರಿಂದ ಹಿಂದುಸ್ಥಾನವಪಸ್ನೊಂದು ವರ್ಗ ಪ್ರಶ್ನೆಯಾಗಿ ಗಣಿಸದೆ ಇಂದಿನ 'ಖಿಲಾಪತ್' ಆಗಿ ಅಂಗೀಕರಿಸಿಕೊಳ್ಳಬೇಕು.' ಎಂದು ಪ್ರತ್ಯಕ್ಷವಾಗಿ ಫ್ರೆಂಚ್ ಧೋರಣೆಯನ್ನೂ ಅಪ್ರತ್ಯಕ್ಷವಾಗಿ ಜಿನ್ನರ ಧೋರಣೆಯನ್ನೂ ಖಂಡಿಸಿದ್ದಾರೆ. ಗುಟ್ಟನ್ನರಿತವರ ದೃಷ್ಟಿಯಲ್ಲಿ ಇವರಿಬ್ಬರೂ ಕನಿಕರಕ್ಕರ್ಹರು; ಆಧುನಿಕ ರಾಜಕೀಯ ತಜ್ಞರಿಂದ ಹಿಂದೀ ಮುಖಂಡರ ಈ ೧೯ನೇ ಶತಮಾನದ ಧೋರಣೆಯು ಪರಿಹಾಸ್ಯಕ್ಕೀಡಾಗಬಹುದು. ಚರ್ಚಿಲ್ಲರ ಮಹನತಿನಿಂದಾಗಿ, ಅರಬರ ಮೇಲೆ ಫ್ರೆಂಚ್ ಗುಂಡು ಬೀಳದಂತೆ ಈಗ ಬ್ರಿಟಿಷ್ ಸೇನೆ ಮೈಗಾವಲಿಗೆ ಬಂದಿದೆ. ಇಂತಹ ಪರಿಣಾಮ ಹೊಂದುವ ದಕ್ಕಾಗಿಯೇ ಆ ಪರಿಸ್ಥಿತಿಯ ನಿರ್ಮಾಣವಾಗಿದ್ದಿತು. ಇದು ಹಿಂದೀ ಮುಖಂಡರಿಗಾಗಲೀ ಸ್ವಾತಂತ್ರ್ಯ ಪ್ರೇಮಿ ಜಗತ್ತಿಗಾಗಲೀ ಸಮಾಧಾನಕರವೆ? ಗುಂಡು ಹಾರಾಟವೊಂದನ್ನೇ ಕಾಣುವ ಚರ್ಮ ದೃಷ್ಟಿಯಿದ್ದರೆ ಸಾಲದು-ಗುಂಡಿಗೇ ಹಾರಾಟ ಹೇಗಿದೆ ಎಂಬುದನ್ನು ಪರೀಕ್ಷಿಸುವ ಚಿಕಿತ್ಸಕ ಬುದ್ಧಿಯೂ ಬೇಕು! ಹಿಂದುಸ್ಥಾನದಂತಹ ರಾಷ್ಟ್ರಗಳಲ್ಲಿ ಅದರ ಅಭಾವವಿರುವದರಿಂದಲೇ ಅವುಗಳ ಗುಲಾಮಗಿರಿ ಶಾಶ್ವತವಾಗಿದೆ!

ಜನರಲ್ ಡಿಗೋಲೆಯವರ ದರ್ಬಲ, ದುಡುಕು ಧೋರಣೆಯನ್ನು ಅನುಮೋದಿಸುವವರಿರಲಾರರು. ಅದು ಅವಸರ, ಅಜ್ಞಾನ, ಸ್ವಾರ್ಥ, ಸಂಕುಚಿತ ಬುದ್ಧಿ, ಜನಾಂಗದ್ವೇಷ, ದರ್ಪ–ಇವೆಲ್ಲವುಗಳ ಸಮ್ಮಿಶ್ರಣ. ಇಂತಹ ಸ್ವಾರ್ಥ ಸಾಧಕರಲ್ಲಿ ಸಹಜವಾಗಿ ಇರತಕ್ಕ ಕಾರ್ಯಾವಶ್ಯ ಚಾತುರ್ಯ ಮತ್ತು ದೂರದೃಷ್ಟಿ ಕೂಡಾ ಫ್ರೆಂಚ್ ಸರಕಾರಕ್ಕಿರಲಿಲ್ಲ. ತನ್ನನ್ನು ಫ್ರೆಂಚ್ ನಾಯಕನೆಂದು ಮಿತ್ರರಾಷ್ಟ್ರೀಯರೊಪ್ಪಿಕೊಂಡಾಗಿನ ಸಂತೋಷ ಸಮಾರಂಭವೊಂದರಲ್ಲಿ, ಬಿಳಿ ಅಧಿಕಾರಿಗಳಿಗೆ ಹಸ್ತಲಾಘವ ಕೊಡುತ್ತಾ ಬಂದು, ಅದೇ ಸಾಲಿನಲ್ಲಿದ್ದ ಕರಿ ಸೇನಾನಿಗಳಿಗೆ ಮುಖ ತಿರುಗಿಸಿದ್ದ ಕಟ್ಟುಗ್ರ ಜನಾಂಗ ದ್ವೇಷಿ ಡಿಗೋಲೆ! ಇಂಥವನ ಈ ಅತ್ಯಾಚಾರವನ್ನು ಸ್ವಾತಂತ್ರ್ಯಾಭಿಮಾನಿಗಳಾರೂ ಕ್ಷಮಿಸುವಂತಿಲ್ಲ. ಆದರೆ ಈ ರೋಗಕ್ಕಾಗಿರುವ ಇಂದಿನ ಚಿಕಿತ್ಸೆಯೊಂದು ಮಹಾವ್ಯಾಧಿಯನ್ನೇ ನಿರ್ಮಿಸಿದೆ. ಗೊಂದಲದ ನಿಜವಾದ ಹೇತು ಫ್ರಾನ್ಸ್-ಸಿರಿಯಾಗಳೊಳಗಿನ ಹಕ್ಕು ಬಾಧ್ಯತೆಗಳ ಘರ್ಷಣೆಯಲ್ಲ; ಮಧ್ಯ ಪೂರ್ವದಲ್ಲಿ ಬ್ರಿಟನ್, ಫ್ರಾನ್ಸ್, ಅಮೇರಿಕ, ರಶ್ಯಗಳಿಗಿರುವ ಸ್ವಾರ್ಥದ ಪರಸ್ಪರ ತಿಕ್ಕಾಟ. ಎಣ್ಣೆ ಕೇಂದ್ರ ಮತ್ತು ವ್ಯಾಪಾರದ ಕೇಂದ್ರವಾಗಿರುವ ಮಧ್ಯಪೂರ್ವದ ಅರಬ ರಾಷ್ಟ್ರಗಳಲ್ಲಿ ಪಾಶ್ಚಿಮಾತ್ಯ ಪ್ರಮುಖ ರಾಷ್ಟ್ರಗಳ ಮೇಲಾಟವು ಕೆಲಕಾಲದಿಂದ ನಡೆಯುತ್ತಾ ಬಂದಿದೆ. ಫ್ರೆಂಚರ ಅಧಿಕಾರವಿದ್ದ ಸಿರಿಯಾ, ಲೆಬನಾನುಗಳನ್ನುಳಿದು ಇತರ ಎಲ್ಲಾ ಅರಬಿ ದೇಶಗಳ ಮೇಲೂ 1939 ವರೆಗೂ ಬ್ರಿಟನಿನ ಹತೋಟಿಯಿದ್ದಿತು. ಯುದ್ಧ ದೆಸೆಯಿಂದಾಗಿ 1940ರಲ್ಲಿ ಫ್ರೆಂಚರ ವರ್ಚಸ್ಸುಕುಂದಿದರೂ, ರಶ್ಯಾ ಮತ್ತು ಅಮೇರಿಕಗಳು ಅಲ್ಲಿ ಮೀಸೆ ತೂರಿಸುವಂತಾಯಿತು. ತನ್ನ ಹೊರತು ಬೇರಾರ ಆಟವೂ ಮಧ್ಯ ಪೂರ್ವದಲ್ಲಿ ನಡೆಯಬಾರದೆಂದು ಬ್ರಿಟನಿನ ಉತ್ಕಟೇಚ್ಛೆ; ಅದಕ್ಕಾಗಿ ಅದು ಕಾಲಾನುಗುಣ ಸೌಜನ್ಯವಹಿಸಿ, ಅತ್ಯಾಧುನಿಕ ರಾಜಕೀಯ ಯುಕ್ತಿಯನುಸರಿಸಿ ಅರಬರ ಪಕ್ಷ ವಹಿಸುತ್ತಾ ಬಂದಿದೆ. ಯೆಹೂದಿಗಳ ಪೆಲೆಸ್ಟೈನ್ ಪ್ರವೇಶಕ್ಕೆ ನಿರ್ಬಂಧ ಹಾಕಿದುದು ಅರಬರ ಮೈತ್ರಿ ಸಾಧನೆಗಾಗಿಯೇ. ಮಧ್ಯ ಪೂರ್ವದ ಎಲ್ಲಾ ಅರಬ ರಾಷ್ಟ್ರಗಳ 'ಸಂಘ' ಸ್ಥಾಪನೆಗೊಂಡುದು ಈಡೆನರ ಬೆಂಬಲದಿಂದಲೇ; ಫ್ರೆಂಚರನ್ನೋಡಿಸಲು ಈಗ ಸಿರಿಯಾ ಲೆಬನಾನುಗಳಿಗೆ ಬ್ರಿಟಿಷ್ ಸೇನೆ ಬಂದಿರುವುದರ ಗುಟ್ಟೂ ಅದೇ. ಫಲಿತಾಂಶವಾಗಿ ಸಿರಿಯಾ ಲೆಬನಾನುಗಳ ಮೇಲಧಿಕಾರವು ಫ್ರೆಂಚರ ಕೈಯಿಂದ ಬ್ರಿಟಿಷರ ಕೈಗೆ ಹೋಗುತ್ತಿದೆ, ಹೊರತು ಅರಬರ ಸೊತ್ತು ಅರಬರದಾಗಿಲ್ಲ. ಎಲ್ಲಾ ಪ್ರಮುಖ ರಾಷ್ಟ್ರಗಳ ಕಣ್ಣೂ ತಮ್ಮ ಮೇಲಿರುವಾಗ, ಅವುಗಳ ಪೈಕಿ ಯಾವುದಾದರೊಂದನ್ನು ಆಶ್ರಯಿಸದ ಅರಬ ರಾಷ್ಟ್ರಗಳಿಗೆ ವಿಧಿಯಿಲ್ಲವಾದ್ದರಿಂದ ಅವು ಬ್ರಿಟನನ್ನು ಆಶ್ರಯಿಸಿ ಸ್ವಾಯತ್ತೆ ಕಳಕೊಂಡಿವೆ. ಇದೀಗ 'ಸರ್ವರಿಗೂ ಸಮಾನ ಸ್ವಾತಂತ್ರ್ಯ'ವೆನ್ನುವವರ ನಿಜರೂಪ! ಲೋಕದ ದುರ್ಬಲ ರಾಷ್ಟ್ರಗಳ ಪಾಲಿಗೆ ಬರೆದಿಟ್ಟ ಭವಿಷ್ಯ! ಇಂತಹ ಪರಿಸ್ಥಿತಿಯಲ್ಲಿ ಲೋಕಶಾಂತಿ ಸಾಧ್ಯವೆ? ಪ್ರಮುಖ ರಾಷ್ಟ್ರಗಳೊಳಗಿನ ಮೈತ್ರಿ ಶಾಶ್ವತವೆ?

ಬರ್ಲಿನ್ ಹೇಗಿದೆ?

ಹಿಟ್ಲರನ ಮರಣವೋ ಮದುವೆಯೋ?

ಬರ್ಲಿನ್ ನಗರವು ಚತುರ್ರಾಷ್ಟ್ರಗಳ ಸೊತ್ತೆಂದು ಗಣಿಸಲ್ಪಟ್ಟಿದೆ. ಬ್ರಿಟನ್, ಅಮೇರಿಕ, ಫ್ರಾನ್ಸ್, ರಶ್ಯಗಳ ನಾಲ್ವರು ಸೇನಾ ನಾಯಕರ 'ಕಂಟ್ರೋಲ್ ಕೌನ್ಸಿಲು' ಅದನ್ನಾಳಲಿದೆ. ಈ ನಾಲ್ವರಲ್ಲಿ ಪತ್ರಿಯೊಬ್ಬನೂ ಪರ್ಯಾಯ ಪ್ರಕಾರ ಮುಖ್ಯಾಧಿಕಾರಿಯಾಗಲಿದ್ದಾನೆ. ಆದರೆ ಬರ್ಲಿನಿನ ಒಳಾಡಳಿತೆಯು ಇದು ವರೆಗೆ ರಶ್ಯನರದಾಗಿದೆ. ಬರ್ಲಿನ್ ನಗರದ ಅಧಿಕಾರವು ರಶ್ಯನ್ ದಳನಾಯಕ ಜನರಲ್ ಬೆರ್ಝಾರಿನನ ಕೈಯಲ್ಲಿದೆ. ಹುಟ್ಟು ಜರ್ಮನನಾದ ಆರ್ಥರ್ ಚೆರ್ನರನು ಮೇಯರನಾಗಿ, ಸ್ವತಂತ್ರ ಜರ್ಮನರ ಸಮಿತಿಯೊಂದಕ್ಕೆ ಬರ್ಲಿನ್ ನಗರದ ಒಳಾಡಳಿತೆಯನ್ನೀಯಲಾಗಿದೆ.

ಪ್ರಗತಿ–ಪ್ರತೀಕಾರವಲ್ಲ

ಬರ್ಲಿನ್ ಮತ್ತು ತಮ್ಮ ಪಾಲಿನ ಜರ್ಮನ್ ಭಾಗದಲ್ಲಿ ರಶ್ಯನರು ಪೂರ್ಣ ಪ್ರಗತಿ ಧೋರಣೆ ವಹಿಸಿದ್ದಾರೆ ಹೊರತು ಪ್ರತೀಕಾರ ಮನೋವೃತ್ತಿಯಲ್ಲಿಲ್ಲ. 'ಜರ್ಮನನೊಬ್ಬ ಶರಣು ಬಂದರೆ ಮುಖ್ಯ ಕಾರ್ಯಾಲಯಕ್ಕೆ ತನ್ನಿ; ಬಗ್ಗಿದವನಿಗೆ ಗುದ್ದ ಬೇಡಿ' ಎಂಬ ದೊಡ್ಡ ನೋಟೀಸುಗಳು ರಶ್ಯದ ಸೈನಿಕರಿಗಾಗಿ ಬರ್ಲಿನಿನ ಕಟ್ಟಡಗಳಿಗೆ ಅಂಟಿಸಲ್ಪಟ್ಟಿವೆ. 'ಜರ್ಮನರ ಸಮೇತ ಯಾವುದೊಂದು ಜನಾಂಗವನ್ನೂ ದ್ವೇಷಿಸದಿರುವದೇ ಕೆಂಪು ಸೇನೆಯ ಮೂಲ ಶಕ್ತಿ' 'ಹಿಟ್ಲರರು ಬರಬಹುದು, ಹೋಗಬಹುದು; ಆದರೆ ಜರ್ಮನ್ ಜನತೆಯುಳಿಯುವದು'-ಮುಂತಾದ ಸ್ಟಾಲಿನ್ ಭಾಷಣದ ವಾಕ್ಯಗಳು ಬರ್ಲಿನಿನ ಲ್ಲೆಲ್ಲ ಅಂಟಿಸಲ್ಪಟ್ಟಿವೆ. ಪುನರುತ್ಥಾನಗೊಂಡ ಬರ್ಲಿನ್ ರಾತ್ರಿ ಕ್ಲಬ್ಬುಗಳಲ್ಲಿ ಜರ್ಮನ್ ತಾರೆ ಬ್ರಿಗೆಟ್ಟಿ ಮಿರಾನಂಥವರು 'ಬರ್ಲಿನ್ ಮತ್ತೊಮ್ಮೆ ಏಳಲಿದೆ' ಎಂಬಂತಹ ರಾಷ್ಟ್ರಾಭಿಮಾನಪೂರಿತ ಹಾಡಗಳನ್ನು ರಶ್ಯನ್ ಅಧಿಕಾರಿಗಳ ಸಮ್ಮುಖದಲ್ಲೇ ಹಾಡಿ ರೋಮಾಂಚಗೊಳಿಸುತ್ತಾರೆ; ಪ್ರಬಲ ಕರತಾಡನೆಗಳನ್ನು ಪಡೆಯುತ್ತಾರೆ. ಬರ್ಲಿನ್ ಪ್ರಜೆಗಳ ಹಸುಗೇ ಪರಿಮಾಣವು ಹಿಟ್ಲರನ ಆಳ್ವಿಕೆಗಿಂತ ಹೆಚ್ಚಿದೆ; ಬರ್ಲಿನರು ನೆಮ್ಮದಿಯಿಂದಿದ್ದು, ಕೆಲವು ಉಗ್ರ ನಾಜಿಗಳ ಪತ್ತೆಮಾಡುವುದರಲ್ಲಿ ರಶ್ಯನರಿಗೆ ನೆರವಾಗುತ್ತಿದ್ದಾರೆ.

ಪುನರ್ನಿರ್ಮಾಣ

ಇಡೀ ಬರ್ಲಿನಿನ ಪುನರುತ್ಥಾನ ಕಾರ್ಯವನ್ನು ರಶ್ಯನರು ಭರದಿಂದ ಕೈಕೊಂಡಿದ್ದಾರೆ. ಪ್ರಥಮ ವಾರದೊಳಗೆ ಅಲ್ಲಿಯ 27000 ಕಟ್ಟಡಗಳಿಗೂ 2000 ರಸ್ತೆಬದಿಗಳಿಗೂ ವಿದ್ಯುಚ್ಛಕ್ತಿ ದೀಪದೇರ್ಪಾಡಾಗಿದೆ. 17 ನೀರ ಸರಬರಾಯಿಗಳು, 4 ಗ್ಯಾಸ್ ಸರಬರಾಯಿ ಕೇಂದ್ರಗಳು, 37 ಟ್ಯೂಬ್ ಸ್ಟೇಶನುಗಳು, 500 ಮೈಲು ಟೆಲಿಫೋನ್ ತಂತಿಗಳು ಪುನರ್ನಿರ್ಮಾಣಗೊಂಡಿವೆ. 3000 ಆಹಾರದಂಗಡಿಗಳೂ ಎಲ್ಲಾ ಸಿನೆಮಾ ನಾಟಕ ಗೃಹಗಳೂ ಪುನಃ ತೆರೆಯಲ್ಪಟ್ಟಿವೆ. ಹೊಸ ಟೆಕ್ಸ್ಟ ಪುಸ್ತಕಗಳು ತಯಾರಾಗುತಿದ್ದು ಮಳೆಗಾಲದಲ್ಲಿ ಶಾಲೆಗಳೆಲ್ಲವನ್ನೂ ತೆರೆಯಲಾಗುವುದು. ಪತ್ರಿಕೆಗಳು, ರೇಡಿಯೋ ಮತ್ತು ಇತರ ಪ್ರಚಾರ ಕೇಂದ್ರಗಳು ಹೊಸ ಧೋರಣೆಯೊಡನೆ ನಿರಾತಂಕವಾಗಿ, ಹೊಸ ಸೌಕರ್ಯಗಳೊಡನೆ ಕಾರ್ಯಸಾಗಿಸುತ್ತಿವೆ. ರಶ್ಯದ ಹತೋಟಿಯಲ್ಲಿರುವ ಜರ್ಮನ್ ಭೂತುಂಡಿಗೆ ಹೊಸ ಚೇತನ, ನವಭಾವನೆ, ಆಧುನಿಕಾನುಕೂಲತೆಗಳಿಂದಾಗಿ ಹೊಸ ಜೀವ ಬಂದಿದೆ.

ಹಿಟ್ಲರನ ಪ್ರೇತಪೀಡೆ!

ಆದರೆ ಹಿಟ್ಲರನು ಸತ್ತಿಲ್ಲವೆಂಬ ಅನುಮಾನ ಇನ್ನೂ ತೊಲಗಿಲ್ಲ. ಕೆಲವು ದಿನಗಳ ಹಿಂದೆ ಹಿಟ್ಲರನ ಶವ ದೊರೆತಿದೆಯೆಂದೂ, ಹಲ್ಲುಗಳ ಪರೀಕ್ಷೆಯಿಂದ ಖಾತ್ರಿಯಾಗಿದೆಯೆಂದೂ ವಾರ್ತೆ ಬಂದಿತ್ತು. ಆದರೆ ಜರ್ಮನ್ ವಿಭಾಗದ ರಶ್ಯನ್ ಸೇನಾಡಳಿತೆಯ ಶಿರಸ್ಥನಾಗಿರುವ ಮಾರ್ಶಲ್ ಝುಕೋವರಂದಿದ್ದಾರೆ: "ಅದೊಂದು ದೊಡ್ಡ ಸಮಸ್ಯೆ. ಅವನ ಅದೃಷ್ಟದ ಕುರಿತು ಸ್ಪಷ್ಟವಾಗಿ ನಾನೇನನ್ನೂ ಹೇಳಲಾರೆ. ಹಿಟ್ಲರನದೆಂದು ಖಂಡಿತವಾಗಿರುವ ಯಾವ ಶವವೂ ನಮಗೆ ದೊರೆತಿಲ್ಲ. ಕೊನೆಯ ಕ್ಷಣದ ವರೆಗೂ ವಿಮಾನ ನಿಲ್ದಾಣವು ಅವನ ವಶವಿದ್ದುದರಿಂದ ಅವನನ್ನು ಆ ಘಳಿಗೆಯಲ್ಲಿ ಸಾಗಿಸಲಿಕ್ಕೂ

MATRIMONIAL.

Mogaveera youth-25, medium built, Matriculate, working in an European Firm in Bombay desires to marry a girl of about 15, slim, studied upto atleast III Form, from the same or near communities. Please apply with full particulars to C/o. "Navayuga", Udipi.

ಜಾಪಾನರ ಮೇಲೆ ಮೂರು ಕಡೆಯ ಒತ್ತಡ!

ಬರ್ಮಾದಲ್ಲಿ

ಜಾಪಾನರು ತಮ್ಮ ಸೇನೆಗಳನ್ನು ಹಿಂದೆಗೆದುಕೊಳ್ಳುವದಕ್ಕಾಗಿ ಹೋರಾಡುತ್ತಿದ್ದಾರೆ. ಇರ್ರವಾಡಿ ವಲಯದ ಎಲ್ಲಾ ಜಾಪಾನೀ ಸೇನೆಯೂ ಈಗ ಹೊರಟುಹೋದಂತಿದೆ. ಸದ್ಯ ಪೂರ್ವ ಬರ್ಮಾ ಮತ್ತು ಪೇಗೂ ಯೋಮಾಸ್ ಕ್ಷೇತ್ರದಲ್ಲಿ ಮಾತ್ರ ಹೋರಾಟ ಸಾಗಿದೆ. ಪೆಗುಯೋಮಾಸ್‌ಗಳಲ್ಲಿ 1,30,000 ಜಾಪಾನೀ ಸೇನೆಯಿನ್ನೂ ಇದೆ. ಹಿಂದೆಗೆಯಲು ಅನುಕೂಲವಾಗುವಂತೆ ಬೇಕಾದಷ್ಟು ಸೇನಾಸರಂಜಾಮು ಮಾಡಿಕೊಂಡು, ಅಸಹನೀಯ ಪ್ರತಿಭಟನೆ ಕೊಡುತ್ತಾ ಜಾಪಾನೀ ಸೇನೆ ಹೊರಟುಹೋಗುತ್ತಿದೆ.

ಬೋರ್ನಿಯೋ ಆಕ್ರಮಣ

ಸಿಂಗಾಪುರದಿಂದ 800 ಮೈಲು ದೂರದ ಎಣ್ಣೆ ಕೇಂದ್ರವಾದ ಬ್ರಿಟಿಷ್ ದ್ವೀಪ ಉತ್ತರ ಬೋರ್ನಿಯೋದಲ್ಲಿ ಆಸ್ಟ್ರೇಲಿಯದ 9ನೇ ಸೇನೆ ಕಾಲೂರಿದೆ. 100 ಆರ್ಮಡ ಮತ್ತು ಯುದ್ಧ ಹಡಗಗಳೂ ಕ್ರ್ಯೂಸರ್‌ಗಳೂ ಬೋರ್ನಿಯೋ ಕರಾವಳಿಯ ಲೇಬುವೇನ್ ದ್ವೀಪದಲ್ಲಿ ಸೇನೆ ಇಳಿಸಿವೆಯೆಂದು ಜಾಪಾನರು ಘೋಷಿಸಿದ್ದಾರೆ. ಜಾಪಾನಿಗೆ 350 ಮೈಲು ದೂರದ, ಜಾಪಾನ್ ಧೈರ್ಯ ಸ್ಥೈರ್ಯಗಳ ಪ್ರದರ್ಶನಾಲಯವಾಗಿ ಪರಿಣಮಿಸಿದ್ದ ಒಕಿನಾವಾದಲ್ಲಿಯೂ ಫಿಲಿಪೈನ್ಸಿನಲ್ಲಿಯೂ ಅಮೇರಿಕನ್ ಸೇನೆಗಳು ಪ್ರಗತಿ ಪಡೆದಿವೆ.

ಚೀನೀಯರ ಮುಂದೋಟ

ಕ್ವಾಂಗ್ಸಿ ಪ್ರಾಂತ್ಯದ ರಾಜಧಾನಿ ನನ್ನಿಂಗನ್ನು ವಶಪಡಿಸಿಕೊಂಡ ಸುಸಂಘಟಿತ ಚೀನೀ ಸೇನೆಯು ರಭಸದಿಂದ ನೈಋತ್ಯಕ್ಕೆ ಮುನ್ನುಗ್ಗಿ ಇಂಡೋ ಚೀನಾದ ಗಡಿಗೆ ಬಂದಿದೆ. ಅಲ್ಲಿಯ ವಿಮಾನ ಕೇಂದ್ರ ಲುಂಗ್‌ಚೋವು ಅದರ ಹಸ್ತಗತವಾಗಿದೆ. ಈ ವಿಜಯೀ ಸೇನೆಗೆ 100 ಮೈಲು ಪೂರ್ವಕ್ಕೆ ಬರ್ಮಾದ ಯುನ್ನಾನ್ ಪರ್ವತ ವಲಯದಲ್ಲಿಯ ಮಿತ್ರ ಸೇನೆಗಳಿರುವದರಿಂದ ಇಕ್ಕಡೆಯ ಕತ್ತರೀ ಧಾಳಿಗೆ ಸಿಕ್ಕಿ, ಇಂಡೋ ಚೀನಾ, ಸಯಾಮ್, ಮಲಯಗಳ ಜಾಪಾನೀ ಸೇನೆಗಳು ನುಚ್ಚುನುರಿಯಾಗುವ ಸಂದರ್ಭ ಬಂದಿದೆ. ಶಾಂಘಾಯ್ ಕ್ಷೇತ್ರದಲ್ಲಿ ಚೀನೀ ಕಮ್ಯೂನಿಸ್ಟ ಸೇನೆಯ ವಿಶೇಷ ಚಟುವಟಿಕೆ ಕಂಡು ಬರುತ್ತಿದ್ದು ಆಸ್ಥಾನವನ್ನದು ಆಕ್ರಮಿಸಿ ನಿಲ್ಲುವ ಸಂಭವವಿದೆ.

ಜಾಪಾನರ ಅಚಲ ವಿಶ್ವಾಸ

"ಪರಿಸ್ಥಿತಿ [illegible] ಇದ್ದು [illegible] ವಿರೋಧಿಗಳು ಜಾಪಾನ್ ದ್ವೀಪಗಳನ್ನೆಲ್ಲ ಒಂದೊಮ್ಮೆಗೆ ಮುತ್ತಿಗೆ ಹಾಕಿದರೂ ಜಪಾನ್ ದ್ವೀಪಮೂಲಗಳ ಹತ್ತಿರಕ್ಕೆ ನುಗ್ಗಿ ಬಂದಲ್ಲಿ ನಾವೇ ಮೇಲ್ಗೈಯಾಗಿರ್ದ್ದೇವೆ. ಭೌಗೋಲಿಕ ಹಾಗೂ ಇತರ ಅಭೇದ್ಯ ಅನುಕೂಲತೆಗಳು ನಮಗಿವೆ. ಹೋರಾಡಿ ವಿಜಯ ದೊರಕಿಸಿಕೊಳ್ಳುವದು ಖಂಡಿತ" ಎಂದು ಜಾಪಾನೀ ಪ್ರಧಾನಿಗಳು ಘೋಷಿಸಿದ್ದಾರೆ. ಯುದ್ಧಾವಶ್ಯಕತೆಗಾಗಿ ಜಾಪಾನ್ ಪಾರ್ಲಿಮೆಂಟಿನ 'ಡಯಟ್'ನ ಅಭಿಪ್ರಾಯ ಕೇಳದೇನೇ ರಾಜಾಜ್ಞೆಯ ಮೂಲಕ ವಿಶೇಷಾಜ್ಞೆಗಳನ್ನು ಹೊರಡಿಸುವ ಅಧಿಕಾರವನ್ನು ಜಾಪಾನ್ ಸರಕಾರ ಪಡೆಕೊಂಡಿದೆ. ಬೇಕಾದ ಅಧಿಕಾರ ಬದಲಾವಣೆಗಳನ್ನು ಮಾಡಿಕೊಂಡು ರಾಷ್ಟ್ರದ ಸರ್ವಶಕ್ತಿಯನ್ನೂ ಯುದ್ಧಕ್ಕಾಗಿ ಜಾಪಾನರು ಜಮಾಯಿಸಿಕೊಳ್ಳುತ್ತಿದ್ದಾರೆ.

ಜಾಪಾನರ ಶಕ್ತಿ ಕುಂದಿಲ್ಲ

ಅಮೇರಿಕನರ ಕೊತ್ತಳ ವಿಮಾನಗಳ ಧಾಳಿಯು ಜಾಪಾನ್ ನಗರಗಳ ಮೇಲೆ ಆಗಾಗ ನಡೆದಿದೆ. ಆದರೆ ಜಾಪಾನರ ಭಂಡವಾಳ ಒಡೆದುಹೋಗುವಂತಿಲ್ಲವೆಂದೂ, ಕೊನೆಯ ವರೆಗೂ ಕಠಿಣವಾಗಿ ಹೋರಾಡುವ ಮನೋದಾರ್ಢ್ಯ ಮತ್ತು ಸಾಮಗ್ರಿಗಳ ಅನುಕೂಲತೆಯು ಅವರಿಗಿದೆಯೆಂದೂ ಮಿಗ್ರೀನರಂತಹ ಬ್ರಿಟಿಷ್ ಲೇಖಕರೂ ಮಿತ್ರ ತಜ್ಞರೂ ನೇರಿಂದ ಮೇಲೆ ಎಚ್ಚರಿಸುತ್ತಿದ್ದಾರೆ. "ಅಮೇರಿಕವು ನಿರಂತರವಾಗಿ ಶರಣು ಬರುವವರೆಗೆ; ಅಮೇರಿಕದ ಯಂತ್ರಾಧಿಪತಿಗಳ ಸರಕಾರದ ಸೂತ್ರಧಾರರು ಹಾಗೂ ಅಮೇರಿಕನ್ ಜನತೆಯನ್ನು ಧ್ವಂಸಮಾಡುವ ಇಚ್ಛೆ ನಮಗಿಲ್ಲ" ಎಂದು ಜಾಪಾನ್ ರೇಡಿಯೋ ಮಿತ್ರ ಪ್ರಚಾರಕರು ತಮಗಾಡುವ ಮಾತುಗಳನ್ನೇ ಅಣಕಿಸಿದೆ.

ಟ್ರೀಸ್ಟೆ ತೀರ್ಮಾನ

ಮಾರ್ಷಲ್ ಟಿಟೋ ಮತ್ತು ಆಂಗ್ಲೋ ಅಮೇರಿಕನರೊಳಗಿದ್ದ ಟ್ರೀಸ್ಟೆ ಕಲಹವು ಈಗ ರಾಜಿಯಾಗಿದೆ. ಆ ತೀರ್ಮಾನದಂತೆ ಟ್ರೀಸ್ಟೆಯಿಂದ ಯುಗೋಸ್ಲೇವಿಯಾ ಸೇನೆ ಹಿಂದೆಗೆದು ಮಿತ್ರರ ಸೈನಿಕ ಸರಕಾರವು ಅದನ್ನು ಸ್ವಾಧೀನಪಡಿಸಿಕೊಂಡಿದೆ. ಸೋವಿಯೆಟ್ ಅಧಿಕಾರಿಗಳು ದಸ್ತಗಿರಿಮಾಡಿಟ್ಟುಕೊಂಡಿದ್ದ 17ಮಂದಿ ರಶ್ಯನ್ ವಿರೋಧಿ ಪೋಲೆಂಡ್ ಪ್ರಮುಖರ ಪೈಕಿ 16ಮಂದಿಯನ್ನು ಹೋಪ್‌ಕಿನರ ಮಧ್ಯಸ್ಥಿಕೆಯಿಂದಾಗಿ ಬಿಟ್ಟಿದ್ದಾರೆ. ಆದರೆ ಲುಬ್ಲಿನ್ ಸರಕಾರದ ಪ್ರೆಸ್ ಪ್ರತಿನಿಧಿಯೋರ್ವನನ್ನು ಲಂಡನಿನ ಪೋಲೆಂಡ್ ಸರಕಾರದ ಬಯಕೆಗನುಸಾರವಾಗಿ ಬ್ರಿಟಿಷ್ ಪೋಲಿಸರು ದಸ್ತಗಿರಿಮಾಡಿರುವದರಿಂದ ವೈಮನಸ್ಸು ಬಲಗೊಂಡಿದೆ. 'ಪ್ರಾವ್ದಾ' ಪತ್ರಿಕೆ ಅದಕ್ಕಾಗಿ ಜಗಳವೆಬ್ಬಿಸಿದೆ.

ರಶ್ಯಾ-ಬ್ರಿಟನ್ ವಿವಾದ

ಬ್ರಿಟಿಷರ ಹಸ್ತವಿರುವ ರಶ್ಯನ್ ಪ್ರಜೆಗಳನ್ನು ಕೆಟ್ಟ ರೀತಿಯಿಂದ ನಡೆಸಿಕೊಳ್ಳುತ್ತಿದ್ದಾರೆಂದು ರಶ್ಯನ್ ಕರ್ನಲ್ ಜನರಲ್ ಫೇದೂರ್ ಗೊಲಿಕೋಬ್ ದೂರಿದ್ದಾನೆ. ಬ್ರಿಟಿಷ್ ವಿದೇಶ ಸಂಬಂಧ ಕಚೇರಿಯು ಇದನ್ನಲ್ಲಗಳೆದು ಬಿಡುಗಡೆ ಹೊಂದಿದ ಬ್ರಿಟಿಷ್ ಯುದ್ಧ ಕೈದಿಗಳನ್ನು ರಶ್ಯನರು ಕೆಟ್ಟ ರೀತಿಯಿಂದ ನಡೆಯಿಸಿದ್ದಾರೆಂದು ಪ್ರತ್ಯಾರೋಪ ಹೊರಿಸಿದೆ.

ಬ್ರಿಟನಿನಲ್ಲಿ ಚುನಾವಣಾ ಗೊಂದಲ

ಚರ್ಚಿಲ್ಲರು ತನ್ನ ಚುನಾವಣಾ ಭಾಷಣದಲ್ಲಿ ಸ್ವಾತಂತ್ರ್ಯಪ್ರಚಾರ ಮತ್ತು ಸರ್ವಾಧಿಕಾರವೇ ಸಮತಾವಾದಿಗಳ ಪರಕ್ಷರವೆಂದ ಗಸ್ಟೆಪೋಗಳಿಲ್ಲದೆ ಅವರ ಆಡಳಿತೆ ನಡೆಯದೆಂದೂ ಕಠಿಣವಾಗಿ ಟೀಕಿಸಿದ್ದಾರೆ. ಅವಕಾಶವಾದಿಯಾಗಿ ಚರ್ಚಿಲ್ಲರ ಮತ್ತು ಟೋರಿ ಪಕ್ಷದ ಸ್ವಾರ್ಥಾಂಧತೆಯನ್ನು ಅಟ್ಲಿ ಮೊದಲಾದ ಲೇಬರ್ ಪ್ರಮುಖರು ಬಹಿರಂಗ ಪಡಿಸಿದ್ದಾರೆ. ಚರ್ಚಿಲ್ಲರು ಮತದಾರರಿಗಾಗಿ ಹೊರಡಿಸಿದ ಚುನಾವಣಾ ಘೋಷಣೆಯಲ್ಲಿ, ಬ್ರಿಟಿಷ್ ಸಾಮ್ರಾಜ್ಯದ ಹಕ್ಕು ಬಾಧ್ಯತೆಗಳನ್ನು ಕುರಿತ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿ ಹಿಂದೂಸ್ಥಾನವು ಸಾಮಂತ ಸ್ವರಾಜ್ಯ ಪಡೆಯುವಂತೆ ಪೂರ್ಣಾವಕಾಶಪೂರ್ವಕವಾಗಿ ಬೇಕೆಂದೂ, ಆದರೆ ಸಂಸ್ಥಾನಗಳು ಮತ್ತು ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಬೇಕೆಂದೂ ಸಾರಿದ್ದಾರೆ.

'125 ವರುಷ'

ತಾನು ಬಾಳಬೇಕೆಂದು ಬಯಸಿರುವದು ತನ್ನ ಗುರಿಯಾದ ರಾಮರಾಜ್ಯ ಸಂಪಾದನೆಗಾಗಿ: ರಾಮ ರಾಜ್ಯದಲ್ಲಿ ರಾಷ್ಟ್ರ ಆಸ್ತಿ ಎಲ್ಲವೂ ಜನತೆಯದು; ಧನಿಕ-ದರಿದ್ರ, ವರ್ಣ, ವರ್ಗ, ಜಾತಿ, ಲಿಂಗ ಭೇದಗಳಿಲ್ಲದ ಪರಿಶುದ್ಧ ಪ್ರಜಾಸತ್ತೆಯೇ ರಾಮರಾಜ್ಯ' ಎಂದು ಗಾಂಧಿಜೀ ಪತ್ರಿಕಾ ಪ್ರತಿನಿಧಿಯೊಬ್ಬನ ಪ್ರಶ್ನೆಗೆ ಸ್ಪಷ್ಟ ಉತ್ತರವಿತ್ತಿದ್ದಾರೆ.

ಸಾಧ್ಯವಿದ್ದಿತು. ಬರ್ಲಿನ್ ಪತನವಾಗುವ ಎರಡು ದಿನಗಳ ಮೊದಲು ಹಿಟ್ಲರ್ ಸಿನೆಮಾತಾರೆ ಎವಾ ಬ್ರೌನ್‌ಳನ್ನು ವಿವಾಹವಾಗಿದ್ದನೆಂಬುದು ನಮಗೆ ಸೆರೆಸಿಕ್ಕಿದ ಜರ್ಮನ್ ಸೇನಾನಿಗಳ ಕೈದಿಗಳಿಂದ ತಿಳಿದು ಬಂದಿದೆ". ಬರ್ಲಿನ್ ನುಗ್ಗಿದ ದಳನಾಯಕ ಮತ್ತು ಈಗಿನ ಅಧಿಪತಿ ಜನರಲ್ ಜೆಘೂಕೋವರ ಅಭಿಪ್ರಾಯವೂ ಅದೇ: "ಹಿಟ್ಲರನದಾಗಿರಬಹುದಾದ ಹಲವು ಶವಗಳು ನಮಗೆ ದೊರೆತಿವೆ. ಆದರೂ ಅವ ಸತ್ತಿದ್ದಾನೆಂದು ಹೇಳಲು ಸಾಧ್ಯವಿಲ್ಲ. ನನ್ನ ಅಭಿಪ್ರಾಯವೆಂದರೆ ಅವ ಅಡಗಿಕುಳಿತಿದ್ದಾನೆ. ಯುರೋಪಿನ ಒಂದೆಡೆಯಲ್ಲೇ-ಬಹುಶಃ ಜನರಲ್ ಫ್ರಾಂಕೋನೊಟ್ಟಿಗಿದ್ದಾನೆ".

ಮರಣವೋ ಮದುವೆಯೊ?

ಪೂರ್ಣ ಪರಾಭವದ ಎರಡೇ ದಿನಗಳಿಗೆ ಮೊದಲು ಹಿಟ್ಲರ್ ಕೈಹಿಡಿದನೆಂದಿರುವ ಎವಾಬ್ರೌನಳಿಗೆ ಪುರಾರನೊಡನೆ 1932ರಿಂದಲೂ ಸಖ್ಯವಿತ್ತು. 1938ರಲ್ಲೊಮ್ಮೆ ಅವರೊಳಗೆ ಮದುವೆ ನಿಶ್ಚಯವಾಯಿತೆಂದೋ, ಮದುವೆಯಾಯಿತೆಂದೋ ವಾರ್ತೆ ಬಂದಿತ್ತು. ಜರ್ಮನಿಯಿಂದ ಬರುತ್ತಿದ್ದ ವರದಿಗಳಾಧಾರದಿಂದ ನಾಜೀ ಅಧಿಕಾರಿಗಳೆಲ್ಲಾ ಆಕೆಯನ್ನು 'ಫ್ಯೂರರನ ಸಹಧರ್ಮಿಣಿ'ಯೆಂಬಂತೆ ಕಾಣುತ್ತಿದ್ದುದು ಸ್ಪಷ್ಟವಿದೆ. ಇದುವರೆಗಿದ್ದ ನಂಬಿಕೆಯೆಂದರೆ ಹಿಟ್ಲರನೊಡನೆ ಎವಾಬ್ರೌನಳೂ ಜರ್ಮನ್ ಚಾನ್ಸೆಲರಿಯಲ್ಲಿ ಮರಣಗೊಂಡಳೆಂದೇ. ಹಿಟ್ಲರನ ಸೈನ್ಯಾಗ್ರೇಸರನಾದ ಹೆರ್ಮನ್ಸೆಲನು ಆತನನ್ನು ಅದೇ ಕೊನೆಯ ಬಾರಿ ಎಪ್ರಿಲ್ 22ರಲ್ಲಿ ಭೇಟಿಯಾದಾಗ ಹಿಟ್ಲರನೊಂದಿಗೆ ಎವಾಬ್ರೌನಳು ಚಾನ್ಸೆಲರಿ ಕಟ್ಟಡದಡಿಯ 'ಶೆಲ್ಟರ್'ನಲ್ಲಿದ್ದಳು. ಈ ವಾರ್ತೆಗಳಲ್ಲಿ ಸಂಶಯಾಂಶವೆಷ್ಟೊ? ಸತ್ತೂ ನಮ್ಮನ್ನು ಕಾಡುವ ಹಿಟ್ಲರನೆಂಬುದೊಂದು ಸತ್ಯ!



Approved firm by the Govt. of Mysore
Certified by the Agent of the Govt. of India in Ceylon

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ದಿವಂಗತ ಶ್ರೀ ಪಂಡಿತ ತಾರಾನಾಥರ ಪ್ರೇಮ ವಿದ್ಯಾಪೀಠದಲ್ಲಿ

ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು.

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್‌ರವರಿಗೆ ಬರೆಯಬೇಕು.

ಬಿ. ನುಮಂತ ತಾರಾನಾಥ್,
ಪ್ರಿನ್ಸಿಪಾಲ್.

ಮುಟ್ಟುಗುಳಿಗೆ

ಹಲತಿಂಗಳಿಂದ ನಿಂತ್ಹೋಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ಯಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ಗುಣಪ್ರದ—ಹಿಂಡಿನಾತೆಯೇ, ಅಪ್ಪಾಯಕರವಾಗಿ, ಕೆಲವೇ ಗಂಟೆಗಳಲ್ಲಿ ಮುಟ್ಟುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುತ್ತವೆ; ಸಾವಿರಾರು ಮಂದಿ ತೃಪ್ತರಾಗಿದ್ದಾರೆ. ಬೆಲೆ ರೂ3 l- ಕ್ಲಿಷ್ಟವಾದ ಕೇಸುಗಳಿಗೆ ರೂ. 5,6 ತಿಂಗಳ ಒಳಗಿನ ಕಂಟ್ರೋಲಿಗೆ ರೂ 4 -(ವಿ.ಪಿ.12 ಆಣೆ ಅಂಚೆ ಖರ್ಚು) Mrs P. DEVEE, 1, D. 8. (N) Tolygunge, Calcutta
ಏಜೆಂಟ್ಸ್: ಶ್ರೀ [illegible] ಕಂಪೆನಿ, ಮಂಗಳೂರು

ಬರ್ಮಾದ ಜಲಮಾರ್ಗಗಳ ಪುನರ್ರಚನೆ.

ಎಚ್. ಕ್ಯು. ೧೪ನೇ ದಳ:-ಮುಚ್ಚಿ ಹೋಗಿದ್ದ ಇರವಾಡಿ ಮತ್ತು ಚಿಂಡ್ವಿನ್ ಜಲಮಾರ್ಗಗಳನ್ನು ಪುನಃ ತೆರೆಯಲಾಗಿದೆ. ಇಂಡಿಯಾದಿಂದ ಭಾರತೀ ಸೈನಿಕರು ೧೪ನೇ ಸೇನೆಗೆ ಸಕಲ ಯುದ್ಧ ಸಾಮಗ್ರಿಗಳನ್ನೂ ರವಾನಿಸುತ್ತಿದ್ದಾರೆ. ಚಿಂಡ್ವಿನ್ ದಡದಲ್ಲಿ ಆಶ್ಚರ್ಯಕರವಾದ ದೊಡ್ಡದೊಂದು ಹಡಗಿನ ಕಾರ್ಖಾನೆ ತಲೆಯೆತ್ತಿಕೊಂಡಿದೆ. ಜಪಾನೀಯರು ಬಿಟ್ಟೋಡಿದ ಎಣ್ಣೆ ಪೀಪಾಯಿ, ಮರಮುಟ್ಟು, ತೆಪ್ಪ ಮುಂತಾದುವನ್ನು ಮಣಿಪುರದ ಮಾರ್ಗವಾಗಿ ತಂದು ಉಪಯೋಗಿಸಲಾಗಿದೆ ೨೦೦೦ ಅಡಿ ಉದ್ದದ ವರೆಗೆ ಸಲಕರಣೆಗಳನ್ನು ಜಮಾಯಿಸಲಾಗಿದೆ. ನಿತ್ಯವೂ ಸಾವಿರಾರು ಜನ ಕಮ್ಮಾರರು, ಬಡಗಿಗಳು ಹುರುಪಿನಿಂದ ಕೆಲಸ ಮಾಡುತ್ತಿದ್ದಾರೆ. ಫೆಬ್ರುವರಿಯಿಂದೀಚೆಗೆ ದಿನಕ್ಕೆ ೧೦೦೦ ಟನ್ ಕಬ್ಬಿಣದ ಸಾಮಾನಾಗುತ್ತಿದೆ. ಬರ್ಮಾದ ಜಲಮಾರ್ಗಗಳನ್ನು ಪುನರ್ರಚಿಸಲು ಕಿರಪಿಲ್ಲದೆ ಕೆಲಸ ನಡೆಯುತ್ತಿದೆ.

ಯುದ್ಧದ ಜಹಜುಗಳು ಹುರುಪಿನಿಂದ ತಯಾರಾಗುತ್ತಿವೆ.

ಕಲ್ಕತ್ತಾ, ಜೂನ್, ೪—ಇಂದು ಭಾರತೀ ಸೈನ್ಯವು ಹಡಗು ನಡೆಸುವುದೊಂದೇ ಅಲ್ಲ, ಜಹಜುಗಳನ್ನೂ ಕಟ್ಟುತ್ತಿದೆ. ಸಾವಿರಾರು ಟನ್ ಯುದ್ಧ ಸಾಮಗ್ರಿಗಳನ್ನೂ ಪೂರ್ವ ಜಲಮಾರ್ಗವಾಗಿ ಭಾರತೀಯ ಎಂಜನಿಯರುಗಳು ಅರಕಾನ್ ಮತ್ತು ಬರ್ಮಾಗಳಲ್ಲಿ ಕಾದಾಡುತ್ತಿರುವ ಸೈನಿಕರಿಗೆ ಒದಗಿಸುತ್ತಿದ್ದಾರೆ. ೧೪ನೇ ಪಡೆ ಮುಂದುವರಿದಂತೆಲ್ಲ ಇರವಾಡಿ, ಚಿಂಡ್ವಿನ್ ನದಿಗಳು ಸರಬರಾಜಿನ ಜಲಮಾರ್ಗಗಳಾದುವು ಸೈನ್ಯ ಸಲಕರಣೆ ಒದಗಿಸಲು ಬೇಕಾದ ಜಹಜುಗಳನ್ನು ಭಾ. ಎಂಜನಿಯರುಗಳು ತಯಾರಿಸಿದರು. ಹುಗ್ಲಿ ನದಿಯ ತೀರದಿಂದ ಶತ್ರುಗಳು ಬಿಟ್ಟೋಡಿದ ಗೋಣಿ ನಾರಿನ ಕಾರ್ಖಾನೆ ಹಡಗು ಕಟ್ಟುವ ಕಾರ್ಖಾನೆಯಾಯಿತು. ಭಾ. ಸೈನಿಕರು ಬೆಸಿಕೆ, ರೇಕು ಕಟ್ಟುವುದು, ಮೊಳೆ ಮಡಾಯಿಸುವುದು, ಮರಗೆಲಸ ಮುಂತಾದುವನ್ನು ಬೇಗನೆ ಕಲಿತರು ೨೫೦ ಟನ್ನಿನ ಜಹಜುಗಳು ತಯಾರಾದುವು. ಈಚೆಗೆ ಹೊಸ ಬಂದರೊಂದು ಸಿದ್ಧವಾಗಿದೆ ನೂರಾರು ಮಂದಿ ಭಾರತೀಯ ಕೂಲಿಯಾಳುಗಳ ಮತ್ತು ಯಂತ್ರಗಳ ಸಹಾಯದಿಂದ ಇಕ್ಕಟ್ಟಾಗಿದ್ದ ಕೊಲ್ಲಿಯೊಂದನ್ನು ಆಳವಾಗಿ ಮತ್ತು ಅಗಲವಾಗಿ ಮಾಡಿ ಭರ್ತಿ ಜಹಜುಗಳು ಬಂದು ನಿಲ್ಲುವಂತೆ ಮಾಡಿದೆ. ವಿವಿಧ ಯಂತ್ರೋಪಕರಣಗಳನ್ನು ಇಳಿಸಿಕೊಂಡು ಕೆಲಸಗಾರರಿಗೆ ಒದಗಿಸುತ್ತಿರಲಾಗಿದೆ.

ಭಾರತೀಯ ಸೇನೆಗೆ ಅಮೇರಿಕದ ಅಭಿನಂದನೆ

''೫೫ನೇ ಅಮೆರಿಕನ್ ಪದಾತಿ ದಳಕ್ಕೆ ಇಟಲಿಯಲ್ಲಿ ನಿಮ್ಮ ಬಿ. ಇಂಡಿಯನ್ ಪ್ಯಾಕ್ ಟ್ರಾನ್ಸ್‌ಪೋರ್ಟ್ ಗ್ರೂಪಿನವರು ಮಾಡಿರುವ ಸಹಾಯ ಪ್ರಶಂಸನೀಯವಾಗಿದೆ. ಈಗ್ಗೆ ಎರಡು ವರ್ಷಗಳಿಂದ ಸಾಧಿಸಬೇಕೆಂದಿರುವ ಸಹಕಾರ, ಐಕಮತ್ಯಗಳಿಗೆ ಇದೊಂದೇ ನಿದರ್ಶನ ಸಾಕು ೫೫ನೇ ಅಮೆರಿಕನ್ ದಳಕ್ಕೆ ಸಹಾಯಮಾಡಲು ಅಲ್ಲಿದ್ದ ಮಿತ್ರ ಸೇನೆ ಕಾರಣಾಂತರದಿಂದ ಇತರ ದಳಗಳಿಗೆ ನೆರವಾಯಿತು. ನಮ್ಮ ಸೇನೆಗೆ ನಿಮ್ಮ ದಳದ ಸಹಾಯ ಚಿರಸ್ಮರಣೀಯವಾಗಿದೆ" ಎಂದಿದೆ ಯು. ಎಸ್. ೫ನೇ ಕೇಂದ್ರ ಸೇನಾ ಶಿಬಿರ

"ಈ ಉತ್ಕೃತ್ತಮವಾದ ಪ್ರಶಂಸೆಯಿಂದ ನಾನು ಬಹಳ ಸಂತೋಷಪಟ್ಟಿದ್ದೇನೆ" ಎಂದಿದ್ದಾರೆ ಭಾರತದ ಮುಖ್ಯ ದಂಡನಾಯಕರು,

ಬರ್ಮಾ ರಂಗದಿಂದ-

ಡ್ಯಾಗರ್ ಪಡೆಯ ನಾಯಕ್ ಥಾನಿರಾಮ್‌ಗೆ ಬಡ್ತಿ.

ಎಚ್. ಕ್ಯು. ೧೪ನೇ ಪಡೆ—ದೇವಾಗ್ರಾಮದ, ೧೯ನೇ "ಡ್ಯಾಗರ್" ಪಡೆಯ ನಾಯಕ್ ಥಾನಿರಾಮ್ ಎಂದರೆ ಹೆಮ್ಮೆ ಪಡಬೇಕಾಗಿದೆ. ಇವರು ಸ್ವಲ್ಪವೂ ಸೋವಾಗದಂತೆ ತಮ್ಮ ದಳಗಳನ್ನು ಗುರಿಗೆ ಸೇರಿಸಿದರು. "ಕ್ರ್ಯಾಕರ್ ಫೋರ್ಸ್"ದಳಪತಿ ಅವರನ್ನು ಹವಾಲ್ದಾರರನ್ನಾಗಿ ಬಡ್ತಿ ಮಾಡಿದರು.

"ಕ್ರ್ಯಾಕರ್ ಫೋರ್ಸ್" ದಳವು ಟೌಂಗೂ—ಮಾಚ್ಚಿ ಮಾರ್ಗವಾಗಿ ಶತ್ರು ಪಡೆಗೆ ನಡೆಯುತ್ತಿದ್ದ ಸರಬರಾಜನ್ನು ತಪ್ಪಿಸಲು ಹೊರಟು ೧೦೦ ಜಪಾನಿಗಳನ್ನು ಕೊಂದು ತಮ್ಮ ಮುಖ್ಯ ಸೇನಾ ಶಿಬಿರಕ್ಕೆ ತಲಪಲು ಯತ್ನಿಸಿತು. ಥಾನಿರಾಮನ್ನು ತಕ್ಕ ದಾರಿ ಹುಡುಕಲು ದಳದ ಬ್ರಿಗೇಡಿಯರರು ಕಳಿಸಿಕೊಟ್ಟರು. ಥಾನಿರಾಮ್ ಹೋದ ಕಡೆಯಲ್ಲೆಲ್ಲಾ ಶತ್ರುಗಳೇ. ಒಂದು ಸಾರಿ ಆನೆಗೆ ಸಿಕ್ಕಿ ಕಾಡಿನಲ್ಲಿ ದಾರಿತಪ್ಪಿ ಅಲೆದಾಡಿದರು. ಕಡೆಗೆ 1½ ಮೈಲಿಯ ಹತ್ತಿರದ ದಾರಿ ಹುಡುಕಿದರು. ಇಬ್ಬರು ಅಧಿಕಾರಿಗಳು ಆ ದಾರಿಯನ್ನು ಒಪ್ಪಲಿಲ್ಲ. ಆದರೂ ನಾಯಕ ಥಾನಿರಾಮ್‌ರವರು ತಮ್ಮ ದಳವನ್ನೆಲ್ಲ ಆ ಮಾರ್ಗವಾಗಿಯೇ ಸುರಕ್ಷಿತವಾದ ಸ್ಥಳಕ್ಕೆ ಸೇರಿಸಿ ಹವಾಲ್ದಾರ್ ಪದವಿಗೇರಿದರು.

ದಳಗಳಿಗೆ ಸುಖ ಸಂತೋಷದ ಏರ್ಪಾಡು

ಬೊಂಬಾಯಿ, ಜೂನ್ ೧೧—ಬೊಂಬಾಯಿಯಲ್ಲಿ ಪ್ರತಿತಿಂಗಳೂ ಸೈನಿಕರಿಗೆ ಅಮೆನಿಟೀಸ್ ಶಾಖೆಯವರು ೬೦-೭೫ ಸಾವಿರ ಪುಸ್ತಕಗಳನ್ನು ಬಿಕರಿಮಾಡುತ್ತಿದ್ದಾರೆ. ಮೂರು ವಾರಕ್ಕೊಂದು ಸಾರಿ ೪೦೦,೦೦೦ ಪತ್ರಿಕೆಗಳನ್ನು ಕಳಿಸಿಕೊಡಲಾಗುತ್ತಿದೆ. ಇಂಗ್ಲೆಂಡಿನಿಂದ ವಿಶೇಷ ರೀತಿಯಲ್ಲಿ ಮುದ್ರಿಸಿದ ಪುಸ್ತಕಗಳನ್ನು ಬಹಳ ಕಡಿಮೆ ಬೆಲೆಗೆ ಮಾರುತ್ತಿದ್ದಾರೆ.

ಈ ಸಂಸ್ಥೆ ೧೯೪೧ರಲ್ಲಿ ಸ್ಥಾಪಿತವಾಗಿ ಹುರುಪಿನಿಂದ ಕೆಲಸಮಾಡುತ್ತಿದೆ. ಭಾರತೀ ಸೈನ್ಯದಲ್ಲಿ ನಾನಾ ಭಾಷೆಯ ಜಾತಿಯ ಜನರಿರುವುದರಿಂದ ೧೯೪೪ರಿಂದೀಚೆಗೆ ದೇಶಭಾಷಾ ಪುಸ್ತಕ ಭಂಡಾರಗಳನ್ನೂ ತೆರೆಯಲಾಗಿದೆ. ಬೊಂಬಾಯಿ ಶಾಖೆಯ ಪುಸ್ತಕಾಲಯವೊಂದರಲ್ಲಿಯೇ ೫೦೦೦ ದೇಶಭಾಷೆಯ ಪುಸ್ತಕಗಳಿವೆ

ಈ ಸಂಸ್ಥೆ ಸೈನ್ಯಕ್ಕೆ ಬೇಕಾದ ಚಿಡು ಕುರ್ಚಿ, ತಟ್ಟೆಬಟ್ಟಲು ಮುಂತಾದ ಸಕಲ ಸಲಕರಣೆಗಳನ್ನೂ ಒದಗಿಸಲಾಗುತ್ತಿದೆ. ವಿವಿಧ ಭಾಷೆಯ ಸಾವಿರಾರು ಗ್ರಾಮೊಫೋನ್ ರೆಕಾರ್ಡುಗಳನ್ನೂ ೧೦,೦೦೦ ರೇಡಿಯೋ ಸೆಟ್ಟುಗಳನ್ನೂ ಕಳಿಸಿಕೊಟ್ಟಿದೆ.

(ಭಾರತೀಯ ಪಾಕ್ಷಿಮಾತ್ಯ ಸೇನೆಯ ಸಾರ್ವಜನಿಕ ಸಂಬಂಧ ಖಾತೆ)

(೪ನೇ ಪುಟದಿಂದ ಮುಂದುವರಿದುದು.)

ವೈಸರಾಯರು ಕೂಡಲೇ ಕಾಂಗ್ರೆಸ್ ಮುಖಂಡರ ಬಿಡುಗಡೆಗೆ ತಯಾರಿರುವಂತಿದೆ ಆದರೆ ಸುಧಾರಣೆಯ ಸ್ವರೂಪವು ಹಿಂದೀಯರನ್ನೂ ತೃಪ್ತಿಪಡಿಸುವಂತಿಲ್ಲ. ವೈಸರಾಯರ ವಿಶೇಷಾಧಿಕಾರ ಹಾಗೆಯೇ—ಬ್ರಿಟಿಷರ ವ್ಯಾಪಾರೋದ್ಯೋಗಗಳ ರಕ್ಷಣೆ ಮೊದಲಿನಂತೆಯೇ! ಸಾರ್ವಜನಿಕ-ಚುನಾವಣೆಯ ಅವಧಿ ನಿಶ್ಚಯವಿಲ್ಲ--ಜಪಾನ್ ಯುದ್ಧ ಮುಗಿದೊಡನೆ ವಸಾಹತು ಸ್ವರಾಜ್ಯವೀವ ಪ್ರಸ್ತಾಪವೇ ಈ ಯೋಜನೆಯಲ್ಲಿಲ್ಲ-ಒಟ್ಟಿನಲ್ಲಿ ಸರ್ವ ಭಾರತೀಯ ಪಕ್ಷಗಳೂ ತಿರಸ್ಕರಿಸಿದ್ದ ಕ್ರಿಪ್ಸ್ ಸೂಚನೆಗಿಂತಲೂ ಈ ಸುಧಾರಣೆಗಳು ಬಹಳ ಹಿಂದಿನವೆಯಾದ್ದರಿಂದ ಯಾರೂ ವಿಶ್ವಾಸಂದಗೊಂಡಿಲ್ಲ. ಇಷ್ಟಕ್ಕೂ ಜಪಾನ್ ಯುದ್ಧ ಕಾರ್ಯದಲ್ಲಿ ಪೂರ್ಣ ಸಹಕಾರವೀಯಬೇಕೆಂಬ ಮೊದಲ ಶರ್ತವಿದೆ. ಮಹಾತ್ಮರು ಮೌನ ವಹಿಸಿದ್ದಾರೆ. ಅಧಿಕೃತ ಪ್ರಕಟಣೆಯನ್ನು ಅಕ್ಷರಶಃ ಪರಿಶೀಲಿಸಿಕೊಳ್ಳಬೇಕಲ್ಲದೆ ಪತ್ರಿಕಾ ಊಹೆಗಳ ಮೇಲಿಂದ ಅಭಿಪ್ರಾಯ ಪ್ರಕಟಿಸಲಾರೆವೆಂದು ಕಾಂಗ್ರೆಸ್ ಪ್ರಮುಖರೆಲ್ಲಾ ಮೌನವಾಗಿದ್ದಾರೆ. ಭುಲಾಭಾಯಿಗಳು ಈ ಸಂಬಂಧವಾಗಿಯೇ ಪಾಂಚ್‌ಗನಿಗೆ ಬಂದು ಗಾಂಧಿಜೀಯೊಡನಿದ್ದಾರೆ. ಜಿನ್ನರು ಈ ತನಕ ಬಾಯಿಬಿಟ್ಟಿಲ್ಲ. ಈ ಸಂಚಿಕೆಯೂ ವೈಸರಾಯೀ ಜಾಹೀರುನಾಮೆಯೂ ಏಕಕಾಲದಲ್ಲಿ ಹೊರಡಲಿವೆ. ಮುಖ್ಯಾಂಶ ಮುಂದಿದೆ.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ 'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳೆವ ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ— ಮನಮೋಹಕ ಕತೆಗಳಿಗಾಗಿ- ಚುಟುಕು ಸುದ್ದಿಗಳಿಗಾಗಿ- ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ

ಈಗಿನ ಅಭಿರುಚಿಗೊಪ್ಪುವ ಸಲ್ಲಕ್ಷಣಗಳಿಂದೊಡಗೂಡಿದೆ

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ಸೈ ಸೈ ಎನಿಸುವ ವಾರದ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.
ಬಿಡಿ ಸಂಚಿಕೆಗೆ ... ... 0-1-6.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

ANTARANGA

Best medium for advertisement.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ—೧೯೪೫ನೇ ಮಾರ್ಚ ತಿಂಗಳಲ್ಲಿ ನಡೆದ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಮೊಗವೀರ ವಿದ್ಯಾರ್ಥಿನಿಗೆ ಅಥವಾ ಎಲ್ಲರಿಗಿಂತಲೂ ಹೆಚ್ಚಿಗೆ ಮಾರ್ಕು ಪಡೆದ ಮೊಗವೀರ ವಿದ್ಯಾರ್ಥಿಗೆ ‹ದಿವಂಗತ ಕೈಪ್ಪುಜಾಲು ಚೆನ್ನಪ್ಪ ಸಾಹುಕಾರ ಸ್ಮಾರಕ ಚಿನ್ನದ ಪದಕ›ವನ್ನು ಕೊಡಲಿಕ್ಕಿರುವುದರಿಂದ, ಸದರೀ ಪರೀಕ್ಷೆಯಲ್ಲಿ ಪಾಸಾದ ಮೊಗವೀರ ವಿದ್ಯಾರ್ಥಿನಿಗಳೂ ವಿದ್ಯಾರ್ಥಿಗಳೂ ತಮ್ಮ ಸಂಪೂರ್ಣ ಹೆಸರು ಮತ್ತು ಅವರು ಪಡೆದ ಮಾರ್ಕುಗಳನ್ನು ಅವರವರ ಶಾಲಾ ಹೆಡ್ ಮಾಸ್ತರರ ದಸ್ಕತು ಸಹಿತವಾಗಿ ತಾ ೩೧-೭-೧೯೪೫ರೊಳಗೆ ಈ ಕೆಳಗಿನ ನಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ. ಕಾರ್ಯದರ್ಶಿಗಳು, ಮೊಗವೀರ ವ್ಯವಸ್ಥಾಪಕ ಮಂಡಳಿ, 8 ನಾನಾಭಾಯಿ ಲೇನ್, ಕೋಟೆ, ಮುಂಬಯಿ.

ದಿ ಬಿಲ್ಲವರ ಎಸೋಸಿಯೇಶನ್ ಮುಂಬಯಿ—ಈ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಿಂಗಳ ತಾರೀಕು 8-7 1945 ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳ ಉತ್ತರ ಸಮೇತ ಈ ಕೆಳಗಿನ ನಿಳಾಸಕ್ಕೆ ಬರಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡುಬಂದವರಿಗೆ ವೇತನಕೊಡಲಾಗುವುದು. ಸದ್ಯಕ್ಕೆ ಕೊಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ. (೧) ವಿದ್ಯಾರ್ಥಿಯ ಸಂಪೂರ್ಣ ಹೆಸರು (೨) ತಂದೆ ಯಾ ರಕ್ಷಕನ ಹೆಸರು, ವಿಳಾಸ, ವೃತ್ತಿ ಮತ್ತು ವರ್ಷಾವಧಿ ಉತ್ಪತ್ತಿ (೩) ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ (೪) ಕಲಿಯತಕ್ಕ ದರ್ಜೆ ಮತ್ತು ಶಾಲೆಯ ಹೆಸರು (೫) ಕಳೆದ ಪರೀಕ್ಷೆಯ ಮಾರ್ಕುಪಟ್ಟಿ (೬) ಶಾಲಾ ಸಂಬಳ (೭) ವಿದ್ಯಾರ್ಥಿಯ ಗುಣ ನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ (೮) ವೇತನವನ್ನು ಪಡೆಯಲು ಅರ್ಹನೆಂಬುವದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರ ಪತ್ರ.

ಗೌರವ ಕಾರ್ಯದರ್ಶಿ,
ದಿ ಬಿಲ್ಲವರ ಎಸೋಸಿಯೇಶನ್,
17 Raghunath Dadaji St
4th Floor, Fort BOMBAY

PUBLICATION

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No 41 1945

ನಾರಾಯಣ (ಮೈನರ) ಕ್ಷೇಮಪಾಲಕ ಶ್ರೀನಿವಾಸ ಮೂರ್ತಿ ಉಡುಪಿ ಕಸಬಾ ಅರ್ಜಿದಾರ.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ಮೈನರ ಅರ್ಜಿದಾರನ ತಂದೆ 19-8-42ಲ್ಲಿ ಸ್ವರ್ಗಸ್ಥರಾದ M A ಸುಬ್ರಮಣ್ಯ ಭಟ್ಟರ ಪಕ್ಕಿನ ಬಾಬ್ತು ಸದರಿ ಅರ್ಜಿಯಲ್ಲಿ ವಿವರ್ಸಿದ ಇನ್ಸೂರೆನ್ಸ, ಬ್ಯಾಂಕ್ ಡಿಪೊಜಿಟ್, ವಗೈರೆ ಹಣಗಳನ್ನು ವಸೂಲುಮಾಡುವರೆ ಅವರ ವಾರ್ಸುದಾರನಾದ ತನಗೆ ಸಕ್ಸೆಸನ್ ಸರ್ಟಿಫಿಕೇಟ್ ಕೊಡ್ಬೇಕಾಗಿ ಅರ್ಜಿದಾರನು ದಾಖಲ್ಮಾಡಿದ ಮೇಲ್ಕಂಡ ಅರ್ಜಿಯು ತಾ. 5-7-1945ಕ್ಕೆ ಸದ್ರಿ ಕೋರ್ಟಿನಲ್ಲಿ ಮುಕ್ಕಡೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಪ್ರಕಟಿಸಲಾಗಿಯದೆ.

(By order of the Court)
Narashimha Vittal Kamath,
Counsel for Petitioner
ಉಡ್ಪಿ, ತಾ. 12-6-1945

ಉಡುಪಿ.

ನೇಕಾರ ಸಂಘದ ವಾರ್ಷಿಕ ಮಹಾಸಭೆಯು: ಶ್ರೀ ಕೆ ರಾಘವನರ ಅಧ್ಯಕ್ಷತೆಯಲ್ಲಿ ತಾ ೧೦ನೇ ಆದಿತ್ಯವಾರ ಸಂಘದ ಕಾರ್ಯಾಲಯದಲ್ಲಿ ನೆರೆಯಿತು. ವರದಿ ವಾಚನ, ಲೆಕ್ಕಪತ್ರಗಳ ಮಂಜೂರಾತಿಯಾದ ನೇಕಾರ ಮಂಗಳೂರಿನ ಪಿಜಾರ್ಕಾಲ್ ಸೀರು ಜೀಜ ಕಾರ್ಖಾನೆಯನ್ನು ತಕ್ಕ ಆರೋಗ್ಯ ವ್ಯವಸ್ಥೆಯೊಡನೆ ಕೂಡಲೇ ತೆರೆಯಬೇಕೆಂದೀಕೊಂಡು ಮದ್ರಾಸು ಸರಕಾರದ ಆರೋಗ್ಯಾಧಿಕಾರಿ ಮತ್ತು ಸಂಬಂಧಪಟ್ಟ ಇತರರಿಗೆ ತಂತಿ ಬಿಡುವ ನಿರ್ಧಾರವಾಯಿತು. ಹೊಸ ವರುಷಕ್ಕೆ ಶ್ರೀಗಳಾದ ಕೆ ರಾಘವನ್, ಅಧ್ಯಕ್ಷ, ಕೆ. ಎಸ್ ಮಹಮ್ಮದ್, ಉಪಾಧ್ಯಕ್ಷ, ವಿ. ಕೃಷ್ಣಪ್ಪ ಶೆಟ್ಟಿಗಾರ, ಕಾರ್ಯದರ್ಶಿ, ದೇಜು ಪೂಜಾರಿ, ಮೋಲ್ವಿಲ್ ಕೋಟ್ಯಾನ್, ಜತೆಕಾರ್ಯದರ್ಶಿಗಳು, ಲೋರೆನ್ ಸೋನ್ಸ್, ಕೋಶಾಧಿಕಾರಿ ಮತ್ತು ೨೫ ಸದಸ್ಯರುಳ್ಳ ಕಾರ್ಯಕಾರೀ ಸಮಿತಿಯನ್ನು ಆರಿಸಲಾಯಿತು.

ಗೋಧಿಗೆ ಜಾಸ್ತಿ ಕ್ರಯ—ಕಳೆದ ವಾರದಿಂದ ಗೋಧಿಯ ಕ್ರಯವು ಸೇರಿಗೆ [illegible] ಏರಿಸಲ್ಪಟ್ಟಿದ್ದರಿಂದ ಬಡಬಗ್ಗರು ಗೋಳ ಡತೊಡಗಿದ್ದಾರೆ.

ಬಡವರ ಗೋಳು—ಇತ್ತೀಚೆಗೆ ಮಿಲ್ಲುಗಳ ಸಪ್ಲಾಯಿಕರು ಸಜ್ಜಿಗೆಯ ಒಟ್ಟಿಗೆ ಗೋಧಿಯನ್ನು ಕೊಡುವುದರಿಂದ ಮುಂಚಿನಂತೆ ಸಜ್ಜಿಗೆ ಮತ್ತು ಒಟ್ಟನ್ನು ಪ್ರತ್ಯೇಕಿಸಿ ಕೊಡುವುದಿಲ್ಲವೆಂಬ ದೂರಿದೆ.

ವರ್ಗಾವರ್ಗಿ—ಉಡುಪಿ ತಾಲೂಕು ತಹಶಿಲ್ದಾರ್ ಮಿ. ಜೆ [illegible] ಉಡುಪಿ ಗ್ರೈನ್ ಪರ್ಚೇಸಿಂಗ್ ತಹಸಿಲ್ದಾರರಾಗಿ ನೇಮಕಹೊಂದಿದ್ದರಿಂದ ಅವರ ಸ್ಥಾನದಲ್ಲಿ ಶ್ರೀ [illegible] ಸದಾನಂದ [illegible] ಡೆಪುಟಿ ತಹಶಿಲ್ದಾರರಾಗಿ ಚಾರ್ಜು ವಹಿಸಿರುವರು.

ಸ್ಥಳೀಯ ಸರಕಾರಿ ಆಸ್ಪತ್ರೆಯ ಅಸಿಸ್ಟಂಟ್ ಸರ್ಜನ್ ಡಾ. ಓ ಕೆ ನಾರಾಯಣನ್ ಅವರು ಕುಂದಾಪುರ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು. ಬಳ್ಳಾರಿಯ ಡಾ [illegible] ರವರು ಇಲ್ಲಿಯ ಆ ಸರ್ಜನರಾಗಿ ನೇಮಕಹೊಂದಿರುವರು.

ಬಿ ಇ ಪರೀಕ್ಷೆ—ಶ್ರೀ ಕೆ [illegible] ಹೆಗ್ಡೆಯವರು (ಸ್ಥಳೀಯ ವಕೀಲ್ ಶ್ರೀ ಕೆ ವೆಂಕಪ್ಪ ಹೆಗ್ಡೆಯವರ ಪುತ್ರ) [illegible] ಪರೀಕ್ಷೆಯಲ್ಲಿ ಪ್ರಥಮ [illegible] ಕಮಿಶನ್' ಆಫೀಸರರಾಗಿ [illegible] ಬೆಂಗಳೂರಿನ [illegible] ತೆರಳಿದ್ದಾರೆ.

ಬಡಾಯಿಯ ಬಿಸಿಲ್ಗುದುರೆ ಇಂಗ್ಲಾಂಡು ಉಳಿಯಿತು

(೪ನೇ ಪುಟದಿಂದ ಮುಂದುವರಿದುದು.)

ಬೇಕೆಂದು ಅವರದನ್ನು ಚೆದರಿಸಲಿಲ್ಲ' ಜರ್ಮನಿಯಲ್ಲಿ ಇದರಿಂದಾಗಿಯೇ ಸ್ಥಿರತೆ ಮೊಳೆತದ್ದಿತು, ಬ್ರಿಟನಿನ ಮೂಲ ದ್ವೀಪ ಅಜೇಯವೆಂಬ ಭಾವನೆಯುಂಟಾಗಹತ್ತಿದ್ದಿತು ಇಕ್ಕಡೆಯ ಇವೆರಡು ನಂಬಿಕೆಗಳನ್ನೂ ಅಲುಗೊಳಿಸುವದಕ್ಕಾಗಿ ಬ್ರಿಟನ್ ನಿಪುಣರು ಜರ್ಮನಿಯೊಳಗೆ ಆಕಾಶ ಮೂಲಕ ಕರಪತ್ರಗಳನ್ನು ಚೆಲ್ಲುತಿದ್ದರು.-"ಧಾಳಿ ನಡೆಸಲು ಬರುವವರನ್ನು ಬಿಸಿ ಸ್ವಾಗತ ಕಾದಿದೆ!" ಎಂದು ಆ ಕರಪತ್ರಗಳು ಎಚ್ಚರಿಸುತಿದ್ದುವು. ಈ ರೀತಿ ಯುದ್ಧ ಕಾಲದ ಅತಿ ದೊಡ್ಡ ಗಾಳೀ ಸುದ್ದಿಯೊಂದರ ದೆಸೆಯಿಂದ—ಅಸಾಮಾನ್ಯ ಬಿಸಿಲ್ಗುದುರೆಯೊಂದರಿಂದಾಗಿ— ಇಂಗ್ಲಾಂಡು ಉಳಿಯಿತು!

ಗುಟ್ಟೇನು?

ಈಗ ಬ್ರಿಟಿಷ್ ಸುದ್ದಿ ಖಾತೆಯ ಮಂತ್ರಿಯಾಗಿದ್ದು ಈ ಗುಟ್ಟನ್ನೆಲ್ಲಾ ಬಹಿರಂಗ ಪಡಿಸಿರುವ ಬ್ರೇಕ್ಕೆನ್ ಲ್ಯೊಡರು ಆಗ ಪೆಟ್ರೋಲಿಯಮ್ ಯುದ್ಧ ಖಾತೆಯ ಅಧಿಕಾರಿಯಾಗಿದ್ದರು. ಅವರು ಮತ್ತಿತರ ತಜ್ಞರ ಮೆಹನತ್ತಿನಿಂದಾಗಿ ಇಂಗ್ಲಾಂಡಿನ ರಕ್ಷಣೆಗಾಗಿ ಮೂರು ಅಗ್ನಿ ಬೇಲಿಗಳ ಏರ್ಪಾಡಾಗಿದ್ದುದೇನೋ ನಿಜ. ಮೊದಲನೇ ಅಗ್ನಿ ಪಂಗಾರವು ಸಮುದ್ರಾಭಿಮುಖಿಯಾಗಿಯೇ ಇದ್ದಿತು ವೈರಿಯ ಹಡಗ ಮೊದಲಾದವುಗಳನ್ನು ಕರಾವಳಿ ಸೇರುವ ಮೊದಲೇ ಸುಡುವ ಏರ್ಪಾಡಿದ್ದು. ಎರಡನೆಯದು ಬದಿಯಲ್ಲಿ ಕರಾವಳಿ, ರಸ್ತೆ, ಮತ್ತು ಪ್ರವೇಶ ದ್ವಾರಗಳಲ್ಲಿ ತಡೆ [illegible] ಇನ್ನಷ್ಟು ಬಲವಾದ ಅಗ್ನಿ ಕೋಟೆ, ಆದಕ್ಕೂ ಒಳಗಡೆಯಲ್ಲಿ ಮೂರನೇ ಅಗ್ನಿ ಗೋಡೆಯು ಗುಡ್ಡಗಾಡು, ಬಯಲು ಮಾದಲುಗಳಲ್ಲಿ ವಿಮಾನ ಮತ್ತು ಗಾಳಿ ಕೊಡೆಯವರನ್ನು ಧ್ವಂಸಮಾಡುವದಕ್ಕಾಗಿ ಏರ್ಪಾಡಾಗಿದ್ದಿತು ಈ ಬೆಂಕಿಗೋಡೆಯು. ಅಗತ್ಯ ಬಿದ್ದಾಗ, ಮೇಲ್ಗಡೆಗೂ ಪಕ್ಕಕ್ಕೂ ಜ್ವಲಿಸಿ ವೈರಿ ಯೋಧರನ್ನು ಸುಡುವಂತೆ ಅದ್ಭುತ ವ್ಯವಸ್ಥೆ ನಡೆದಿದ್ದಿತು-ಎಂದೂ ಕಾಲುವೆಯನ್ನು ದಾಟುವ ಕಥೆಯು. ಇದು ಕಲ್ಪನೆಯೇ ಸರಿ. ಆದರೆ ಬ್ರಿಟನಿನ ಮುಖ್ಯಪಡೆಂದ ಜರ್ಮನರು ಇಂಗ್ಲಾಂಡಿನಲ್ಲಿಲ್ಲದುದನ್ನೂ ಉಂಟೆಂದು ಊಹಿಸಿ ಹಿಂಜರಿದರು.

THE VIJAYA BANK LTD.,
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT —
Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

Notice

ಉಡುಪಿ ಡಿ ಮು ಕೋರ್ಟಿನಲ್ಲಿ.

O. P. No. 40/1945.

1. [illegible] ಪತ್ನಿ, ಬೆಂಕಮ್ಮ ಶೆಡ್ತಿ [illegible] 2. ಶೀನ ಶೆಟ್ಟಿ, 3. ಕೃಷ್ಣ ಶೆಟ್ಟಿ, 1ನೇ ಅರ್ಜಿದಾರರ ಮಕ್ಕಳು. ಉಡುಪಿ ತಾಲೂಕು ಹಿರೆಬೆಟ್ಟು ಗ್ರಾಮದ ಮಟ್ಟಿಲ್ಪೋಡಿಯಲ್ಲಿ ಇರುವವರು ಅರ್ಜಿದಾರರು.

ಮೇಲ್ಕಂಡ ಅರ್ಜಿ ವ್ಯವಹರಣೆಯ 1ನೇ ಅರ್ಜಿದಾರಳ ಮಗ ನ 2 3ನೇ ಅರ್ಜಿದಾರರ ಸಹೋದರ ಮೃತ ಶೀನಪ್ಪ ಶೆಟ್ಟಿಯ ಮೇಲ್ಕಂಡ The Warden Insurance Co, Ltd, Bombayಯ Policy No 25352ನೇ ಬರಕ್ಕ [illegible] ಬೀಮು ರೂಪಾಯಿ 750 0 0 ವಸೂಲು ಪಡೆಯುವರೇ ಅರ್ಜಿದಾರರ ಬಗ್ಗೆ 3ನೇ ಅರ್ಜಿದಾರಗೆ Succession Certificate ಕೊಡಿಸಬೇಕಾಗಿ [illegible] ಕೇಳಿ ದಾಖಲ್ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 30 6 45ಕ್ಕೆ ತನ್ನಿಗೆ ಇರೋದಾಗಿಯದೆ ಆ ಕುರಿತು ಆಕ್ಷೇಪ ಉಳ್ಳವರು ಮೇಲ್ಕಂಡ ತಾರೀಕಿಗೆ ಬೆಳ್ಗೆ 11 ಗಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದೆಂತ ಈ ಮೂಲಕ ತಿಳಿಸಲಾಗಿಯದೆ.

UDIPI, 9-6-1945. **K. J. Ballal,** Vakil for Petitioners.

NOTICE

ಕುಂದಾಪುರ ಡಿ ಮು ಕೋರ್ಟಿನಲ್ಲಿ

O.S 403 1931 Subcour A S 61/33
R L P 112/1945

ಅರ್ಜಿದಾರರು 1 [illegible] ಕಾಮತ, 2 [illegible]

ಎದ್ರಿ 1 ನಾರಾಯಣ ಕಾಮತ, 2 [illegible] ಕಾಮತ, 3 [illegible] 4 [illegible] ಕಾಮತ, 5 ಶೀನಪ್ಪಯ್ಯ [illegible], 6 [illegible], 7 [illegible], 8 ಕೃಷ್ಣ ಅಡಿಗ, 9 [illegible], 10 [illegible] ಕಾಮತ, 12 [illegible] ಭಟ್ಟ, 13 ನಾಗಪ್ಪಯ್ಯ, 14 [illegible] ಪುಪ್ಪಯ್ಯ ಮಯ್ಯ

1ರಿಂದ 4ನೇ ವರೆಗಿನ ಎದ್ರಿಗೆ ತಿಳಿಸುವದೇನೆಂದರೆ

1ನೇ ಎದ್ರಿ ನಾರಾಯಣ ಕಾಮತ, 2ನೇ ಎದ್ರಿ [illegible] ಕೃಷ್ಣಪ್ಪ ಕಾಮತ, 3ನೇ ಎದ್ರಿ ರಾಮಪ್ಪ ಕಾಮತ, 4ನೇ ಎದ್ರಿ [illegible] ಕಾಮತರ [illegible] ಕುಂದಾಪುರ ತಾಲ್ಲೂಕು [illegible]

1931ನೆ ಇಸವಿ ಕ್ರಮ ನಂಬ್ರ 403/1931ನೆ [illegible] ಅಪೀಲ್ [illegible] ಅರ್ಜಿದಾರರು ಮೇಲ್ಕಂಡ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದಾರೆ. ಆದುದರಿಂದ ಅಮಲ್‌ಜಾರಿಯು ಯಾಕೆ ನಡಿಸಕೂಡದೆಂಬದಕ್ಕೆ ಸಬಬು ಕೋರಿಸಲಿಕ್ಕೆ 1945 ನೆ ಇಸವಿ ಜುಲಾಯಿ ತಾರೀಕು 3ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರಾಗಬೇಕೆಂತ ಈ ಮೂಲಕ ನೋಟೀಸು ಕೊಡಲಾಗುತ್ತದೆ

B Mahabala Holla,
Advocate for petitioners
ತಾರೀಕು 10 6 1945,
ಮೊಕ್ಕಾಂ ಕುಂದಾಪುರ.

ಚಂದಾದಾರರಲ್ಲಿ-

ನವಯುಗದ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ಆದಷ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ. ಸಕಾಲದಲ್ಲಿ ಚಂದಾ ಹಣ ಬಾರದಿದ್ದಲ್ಲಿ ಕಳುಹಿಸಲ್ಪಡುವ ವಿ. ಪಿ ಯನ್ನು ದಯವಿಟ್ಟು ಸ್ವೀಕರಿಸಬೇಕಾಗಿ ಬಿನ್ನಹ.

ಮೆನೇಜರ್.

ದಕ್ಷಿಣ ಕನ್ನಡ.

ಮಂಗಳೂರು.

ನಗರ ಸಭೆಯು–ತಾ. ೩೧ರಂದು ಜರಗಿದಾಗ ಮಂಗಳೂರಿಗೆ ನೀರಿನ ಸರಬರಾಯಿಯನ್ನು ಒದಗಿಸುವ ಯೋಜನೆಯ ಪರಿಶೋಧನೆಗಾಗಿ ಬಂದಿದ್ದ ಶ್ರೀ ಲಕ್ಷ್ಮಣ ಅಯ್ಯರ ಪರಿಚಯವನ್ನು ನಗರ ಸಭಾ ಸದಸ್ಯರಿಗೆ ಮಾಡಿ ಕೊಡಲಾಯಿತು. ಶ್ರೀ ಅಯ್ಯರರು ಮಾತನಾಡುತ್ತ 'ಗುರು ಪುರದಿಂದ ಇಲ್ಲಿಗೆ ನೀರೊದಗಿಸುವ ಯೋಜನೆಯೊಂದು ಸಿದ್ಧವಾಗಿ ಇಷ್ಟರಲ್ಲೇ ಪರಿಶೋಧನೆಯ ಕಾರ್ಯವು ಆರಂಭಿಸಲ್ಪಡುವುದು' ಎಂದರು. ಈ ಯೋಜನೆಗೆ ೩೦ ಲಕ್ಷ ರೂ. ಬೇಕಾದೀತಂತೆ. ಇದರ ಅರ್ಧಾಂಶ ಹಣವನ್ನು ಸರಕಾರವು ಕೊಡುವುದು. ಉಳಿದ ಅರ್ಧಾಂಶವನ್ನು ಸಾಲದ ರೂಪದಲ್ಲಿ ಕೊಡಲು ಸಿದ್ಧವಿದೆ. ಈ ಸಾಲವನ್ನು ನಗರ ಸಭೆಯು ೩೦ ಕಂತುಗಳಲ್ಲಿ ಮರುಪಾವತಿ ಮಾಡಬಹುದು.

ಹೊಯಿಗೆ ಬಜಾರಿನ ಮಾರ್ಕೆಟಿಗೆ ಹೊಸ ಸ್ಥಳ ಆಗತ್ಯವಿಲ್ಲವೆಂದು ನಿರ್ಧರಿಸಲಾಯಿತು. ಇನ್ನು ಮುಂದೆ ಕೊಳೂರಿನ ನಿರ್ಜನ ಪ್ರದೇಶದಲ್ಲಿ ಮೀನು ಹುಗಿಯುವ ನಿರ್ಣಯವಾಗಿದೆ. ಈಗ ಹೊಸತಾಗಿ ಮುನಿಸಿಪಾಲಿಟಿಗೆ ಸೇರಿದ ಪ್ರದೇಶಗಳ ಜನರ ಸೌಕರ್ಯಕ್ಕಾಗಿ ಹೊಸ ಸಿಬ್ಬಂದಿಗಳನ್ನು ನೇಮಿಸುವ ನಿರ್ಧಾರವಾಯಿತು. ನಗರವನ್ನು ಮಳೆಗಾಲ ತೋಟಿಗಳಿಂದ ಶುದ್ಧಗೊಳಿಸುವುದಕ್ಕಾಗಿ ೨೦ ಮಂದಿ ಕೂಲಿಗಳನ್ನೂ ಒಬ್ಬ ಮೇಲ್ವಿಚಾರಕನನ್ನೂ ನೇಮಿಸುವ ನಿರ್ಧಾರವಾಯಿತು.

ಮಿಜಾರ್‌ಕಾರರ ಗೇರುಬೀಜದ ಹೊಗೆಯಿಂದ ಆ ಪ್ರದೇಶದ ನಾಗರಿಕರಿಗಾಗುವ ತೊಂದರೆಯ ಕುರಿತು, ನಗರ ಸಭೆಗೆ ವಕೀಲರ ಮುಖಾಂತರ ಶ್ರೀ. ಜೂರಪ್ಪ ನಂಬರು ಕಳುಹಿಸಿದ ನೋಟೀಸಿನ ವಿಚಾರ ಸಭೆಯ ಮುಂದೆ ಬಂದಾಗ, ಶ್ರೀ. ಸಿ. ಎಲ್. ಲೋಬೊ ಅವರು ಎದ್ದು ನಿಂತು ಈ ವಿಚಾರದಲ್ಲಿ ಕೌನ್ಸಿಲು ಬಹುಮತದಿಂದ ಮಾಡಿದ ನಿರ್ಣಯದ ಗತಿ ಏನಾಯಿತೆಂದು ಗೊತ್ತಾಗುವುದಿಲ್ಲ; ಈ ಸಂಬಂಧವಾಗಿ ಬರಬಹುದಾದ ವ್ಯವಹರಣೆಗೆ ಅಧಿಕಾರಿಗಳೇ ಜವಾಬ್ದಾರರು ಎಂದರು.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜಿಲ್ಲಾ ಪಿರಿಯಾಡಿಕಲ್–ಪರಿಷತ್ತು ಇತ್ತೀಚೆಗೆ ಜರಗಿದಾಗ, ಕಾಸರಗೋಡು ತಾಲೂಕಿನ ಕೊಳ್ಳಿ, ಹಳ್ಳಕೊಂಡು ಸೇತುವೆ ಕಟ್ಟುವ ವಿಚಾರ ನಡೆಸಬೇಕೆಂದು ನಿರ್ಧಾರವಾಯಿತು. ಜಿ ಕಲೆಕ್ಟರರೇ ಈ ಪರಿಷತ್ತಿನ ಅಧ್ಯಕ್ಷರು.

ಎಡಿಶನಲ್ I ಕ್ಲಾಸ್ ಮೆಜಿಸ್ಟ್ರೇಟರು–ಇದೇ ಜೂನ್ ೧ತಾ. ೧೧ರಿಂದ ಮಂಗಳೂರು ತಾಲೂಕು (ನಗರವನ್ನು ಬಿಟ್ಟು) ಕಾಸರಗೋಡು ತಾಲೂಕು ಮತ್ತು ಉಡುಪಿ ತಾಲೂಕಿನ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರು ವ್ಯವಹರಿಸಬಹುದಾದ ಎಲ್ಲ ಕ್ರಿಮಿನಲ್ ವ್ಯವಹರಣಗಳನ್ನೂ ವ್ಯವಹರಿಸುವರೆಂದೂ ಇವರ ಮುಖ್ಯ ಠಾಣೆಯು ಮಂಗಳೂರೆಂದೂ ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಪೆಟ್ರೋಲ್ ನಿಬಂಧನೆ–ಯನ್ನು ಉಲ್ಲಂಘಿಸಿದ ಆರೋಪಣೆಗೆ ಒಳಗಾದವರೊಬ್ಬರ ವಿಚಾರಣೆ ನಡೆದು, ರೂ. ೧೫೦೦ ಜುಲುಮಾನೆ ವಿಧಿಸಲಾಯಿತು.

ಬೀಡಿ ಕೆಲಸಗಾರರ–ಕಾರ್ಯಕಾರಿ ಸಮಿತಿಯು ತಾ. ೭ರಂದು ಸೇರಿ ಯೂನಿಯನಿನ ಅಧ್ಯಕ್ಷರಾಗಿದ್ದು ಮುಜೂರರ ಸಲ್ಲಿಗಾಗಿ ದುಡಿದಿದ್ದ ಅಹಮ್ಮದ್ ಬಾವಾ ಅವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು. ಈಗ ಮುಚ್ಚಲ್ಪಟ್ಟ ಮಿಜಾರ್‌ಕಾರರ ಗೇರುಬೀಜ ಕಾರ್ಖಾನೆಯನ್ನು ಪುನಃ ತೆರೆಯಬೇಕೆಂದೂ ಈಗ ವಿಧಿ ವಿಪರೀತ ಏರಿರುವ ಹಾಲಿನ ಬೆಲೆಯನ್ನು ನಿಯಂತ್ರಿಸಬೇಕೆಂದೂ ನಿರ್ಣಯಗಳಾದುವು.

ಮಿಜಾರ್‌ಕಾರರ ಗೇರುಬೀಜ–ಕಾರಖಾನೆಯನ್ನು ನ. ಮಿ ಮೆಜಿಸ್ಟ್ರೇಟರ ಹುಕುಮಿನ ಮೇರೆಗೆ ಇದೇ ತಾ ೧೦ರಿಂದ ಮುಚ್ಚಲಾಗಿದೆ. ಸಾರ್ವಜನಿಕ ಆರೋಗ್ಯಕ್ಕೆ ಭಂಗ ತರುತ್ತಿದೆ ಎಂದು ಈ ಕಾರ್ಖಾನೆಯನ್ನು ಮುಚ್ಚಿದುದರಿಂದ ಸಾವಿರಾರು ಮಂದಿ ಗೇರುಬೀಜ ಮಜೂರರು ನಿರುದ್ಯೋಗಿಗಳಾಗುವಂತಾಗಿದೆ. ಆಗತ್ಯವುಳ್ಳ ಅನುಕೂಲತೆಗಳಿಂದ ಕಾರ್ಖಾನೆಯನ್ನು ಪುನಃ ತೆರೆಯಬೇಕೆಂದೂ, ನಿರುದ್ಯೋಗ ವೇತನ ಕೊಡಿಸಬೇಕೆಂದೂ, ಗೇರುಬೀಜ ಮಜೂರರ ಸಂಘವು ಲೇಬರ್ ಕಮಿಶನರ್ ಸಾರ್ವಜನಿಕ ಆರೋಗ್ಯ ಖಾತೆಯ ಡೈರೆಕ್ಟರ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮೊದಲಾದವರಿಗೆ ತಂತಿ ಬಿಟ್ಟಿದೆ.

ಭಯಂಕರ ಕೊಲೆ ಕಳೆದ ತಾ ೩೧ರ ನಡುರಾತ್ರಿ ಉಪ್ಪಿನಂಗಡಿಯ ಹೊಗೆ ಮನೆಯಲ್ಲಿ ಪೂಜಾರಿಯೋರ್ವನ ಕೊಲೆಯಾಗಿದ್ದು ಮರುದಿನ ಪ್ರಾತಃಕಾಲ ರುಂಡವಿಲ್ಲದ ಶವ ನೋಡಲು ಸಿಕ್ಕಿರುತ್ತವಾಗಿ ವರ್ತಮಾನ

ಅತ್ಯಾಚಾರ–ಕಳೆದ ತಿಂಗಳ ಕೊನೆಯ ವಾರದಲ್ಲಿ ನೆಲ್ಯಾಡಿಯತ್ತ ಕಡೆ ಓರ್ವ ಗರ್ಭಿಣಿ ಸ್ತ್ರೀಯ ಮೇಲೆ ಅತ್ಯಾಚಾರ ನಡೆದ ಸರಿಸಾಮಾನವಾಗಿ ಮಿಲಿಟರಿಯವರ ಮತ್ತಿತರ ಕೆಲವರ ಬಂಧನವಾಗಿ ಬೆಳ್ತಂಗಡಿಗೆ ಕೊಂಡು ಹೋಗಿರುತ್ತಾರಾಗಿ ವರ್ತಮಾನ.

ಬೆಂಕಿ ಅನಾಹುತ–ತಾ. ೩ರಂದು ಮಧ್ಯರಾತ್ರಿಗೆ ಸಾಲೆತ್ತೂರು ಗ್ರಾಮದ ಮಲಾರು ಎಂಬ ಅಳಿಯ ಕಟ್ಟು ಆಚರಿಸುವ ಬಂಟರ ಜಾತಿಯ ಮನೆಗೆ ಬೆಂಕಿಬಿದ್ದು ಇಡೀ ಮನೆಯೇ ಸುಟ್ಟು ಅಗ್ನಿಗಾಹುತಿಯಾಗಿರುತ್ತದೆ. ದೊಡ್ಡ ಕುಟುಂಬದ ಮನೆಯಿದು. ಇಡೀ ಮಳೆಗಾಲದ ಸಾಮಾನು ಮತ್ತು ಗದ್ದೆ ಸಾಗುವಳಿ ಮಾಡುವ ಸಾಮಾನುಗಳು, ಓಟಿದ ಕೋಣಗಳೆರಡು ಸಹ ಹಟ್ಟಿಯಲ್ಲಿಯೇ ಸುಟ್ಟುಹೋಗಿರುತ್ತವೆ. ಈಗಿನದು ರೇಶನ್ ಕಾರ್ಡು ಸಮಯವಾದ್ದರಿಂದ ಸಂಬಂಧಪಟ್ಟ ಆಫೀಸರರು ಇತ್ತ ಗಮನಕೊಡಬೇಕಾಗಿ ಅಪೇಕ್ಷಿಸಲಾಗಿದೆ.

ಜಿಲ್ಲಾ ಇಂಡಸ್ಟ್ರೀಸ್ ಆಫೀಸರರ ಪ್ರಕಟಣೆ–ಹಿಂದೂದೇಶದ ಕೈಗಾರಿಕೆಗಳು ಪರಿಸ್ಥಿತಿಯಲ್ಲಿ ಪ್ರಚಾರವಾಗಲನುಕೂಲವಾಗುವಂತೆ ಇಂಡಿಯಾ ಸರಕಾರದವರು ತೆರದಿರುವ ... ಕಾನದಲ್ಲಿ ಒಂದು "ಶೋರೂಮ್" ನ್ನು ತೆರೆದಿರುವರು. ತಮ್ಮ ಕೈಗಾರಿಕೆಗಳ ಸ್ಯಾಂಪಲುಗಳನ್ನು (ಕ್ರಯ ಸಹಿತ) ಕಳುಹಿಸುವವರು 'ಡೈರೆಕ್ಟರ್ ಓಫ್ ಕಮರ್ಶಿಯಲ್ ಇಂಟೆಲಿಜೆನ್ಸ್, ನಂಬ್ರ I, ಕೌನ್ಸಿಲ್ ಹೌಸ್ ಸ್ಟ್ರೀಟ್, ಕಲ್ಕತ್ತಾ' ಈ ವಿಳಾಸಕ್ಕೆ ಕಳುಹಿಸಬೇಕು. ಸಾಧ್ಯವಾದರೆ ಸಂಸ್ಥೆಯ ಅಥವಾ ಸರಕಿನ ಸಂಕ್ಷಿಪ್ತ ಮಾಹಿತಿಯನ್ನು ಜತೆಯಲ್ಲಿ ಕಳುಹಿಸಬಹುದು. ಸ್ಯಾಂಪಲುಗಳನ್ನು ಕಳುಹಿಸಿದ ಬಗ್ಗೆ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಆಫೀಸರ್, ಕಲ್ಲಿಕೋಟೆ ಇವರಿಗೆ ತಿಳಿಸಬೇಕಾಗಿ ಸೂಚನೆ.

ಮೂಲ್ಕಿ–ಯೂನಿಯನ್ ಕ್ಲಬ್ಬಿನ ಹದಿಮೂರನೆ ವರ್ಧಂತಿ ಹಾಗೂ ಕೀರ್ತಿಶೇಷ ಡಾ. ಬೋಳ ಶ್ಯಾಮರಾಯರ ಹುಟ್ಟಿದಬ್ಬ ದಿನಾಚರಣೆ ಸಮಾರಂಭಗಳು ಕ್ಲಬ್ಬಿನ ಸಭಾಂಗಣದಲ್ಲಿ ತಾ ೧೬ನೇ ಶನಿವಾರ ಸಂಜೆ ೫-೩೦ಕ್ಕೆ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಬಂಟ್ವಾಳ–ಇಲ್ಲಿಗೆ ಕೆಲವೇ ಮೈಲು ದೂರದಲ್ಲಿರುವ ಪಾಣೆಮಂಗಳೂರಿನಲ್ಲಿ ಬಳಿ ತಾ. ೫ರಂದು ಸಾಯಂಕಾಲ ಸುಮಾರಿಗೆ ಒಂದು ಮೋಟಾರು ಅಪಘಾತವಾಯಿತು. ಮಂಗಳೂರಿನಿಂದ ಕಡೂರಿಗೆ ಹೋಗುವ ಒಂದು ಬಸ್ಸಿಗೆ ಎದುರಿನಿಂದ ಬರುತ್ತಿರುವ ಒಂದು ಲೋರಿ ಘರ್ಷಣೆಯಾಗಿ ಬಸ್ಸಿನ ಎಡ ಬದಿಯಲ್ಲಿ ಕೂತ ನಾಲ್ವರು ಮಂದಿ ಪ್ರಯಾಣಿಕರಿಗೆ ವಿಪರೀತ ಗಾಯಗಳಾದುವು. ಬಸ್ಸು ಲೋರಿಗಳಿಗೂ ಪೆಟ್ಟು ತಗಲಿದೆ. ಆಸ್ಪತ್ರೆಗೆ ಸಾಗಿಸಲ್ಪಟ್ಟ ನಾಲ್ವರು ಮಂದಿಗಳ ಪೈಕಿ ಒಬ್ಬನು ಆಗಲೇ ಮೃತಪಟ್ಟಿರುವನೆಂದೂ, ಅಪಘಾತದ ಕಾರಣದ ಕುರಿತು ಪೋಲೀಸ್ ತನಿಖೆ ನಡೆಯುತ್ತಿದೆಯೆಂದೂ ಮೃತಪಟ್ಟ ಬಿ.ನಾರಾಯಣ ಎಂಬ ತರುಣನು ಮಿಲಿಟ್ರಿಯಲ್ಲಿ ಕಾರಕೂನ ಕೆಲಸದಲ್ಲಿದ್ದನೆಂದೂ ತಿಳಿದುಬರುತ್ತದೆ

ಹೊಸದುರ್ಗದಲ್ಲಿ ಓಲೆಬೆಲ್ಲದ ಸಮಸ್ಯೆ–ತುರುತ್ತಿ; ಚರ್ವತ್ತೂರು ಗ್ರಾಮದ ಒಂದು ಭಾಗ. ಸುಮಾರು ೧೫೦೦ ಮನೆಗಳಿವೆ. ಓಲೆಬೆಲ್ಲವನ್ನು ತಯಾರಿಸಿ ಮಾರಾಟ ಮಾಡಿ ಅಲ್ಲಿನವರ ಜೀವನವು ಸಾಗುತ್ತಿತ್ತು. ನೀಲೇಶ್ವರ ಮತ್ತು ಚರ್ವತ್ತೂರಿನಲ್ಲಿ ಇದನ್ನು ಪಡೆದು ಮಲಬಾರಿಗೆ ರವಾನಿಸುವ ಏಜಂಟರಿದ್ದಾರೆ. ಕೆಲವು ತಿಂಗಳುಗಳ ಮೊದಲು, ಮಲಬಾರಿಗೆ ಈ ಬೆಲ್ಲವನ್ನು ರಫ್ತು ಮಾಡಬಾರದೆಂಬ ಸರಕಾರದ ಆಜ್ಞೆ ಹೊರಟಿತು. ಖಂಡಿಗಟ್ಲೆ ಬೆಲ್ಲವು ಗಾಮದಲ್ಲೇ ಉಳಿಯಿತು. ಜನರು ಕಾಸಿಲ್ಲದೆ ಬಳಲತೊಡಗಿದರು. ತಾಲೂಕು ಕಿಸಾನ್ ಸಂಘದ ಪ್ರಯತ್ನದಿಂದಾಗಿ ಒಂದು ತಿಂಗಳ ಬಳಿಕ ಆ ಆಜ್ಞೆಯನ್ನು ಸರಕಾರವು ಹಿಂತೆಗೆಯಿತು. ಈಗ ಪುನಃ ಅದೇ ಆಜ್ಞೆಯು ಬಂದಿದೆ. ನೀಲೇಶ್ವರ ಮತ್ತು ಚರ್ವತ್ತೂರಿನಿಂದ, ವ್ಯಾಪಾರಿಯವರು ಓಲೆಬೆಲ್ಲವನ್ನು "ಬುಕ್" ಮಾಡಲು ಸಾಧ್ಯವಿಲ್ಲವೆನ್ನುತಿದ್ದಾರೆ. ಬೆಲ್ಲವನ್ನು ಪಡಕೊಳ್ಳಲು ಗಿರಾಕಿಗಳೇ ಇಲ್ಲ ಈಗ. ಮೊನ್ನೆ ತುರುತ್ತಿಯ ಜನರು ಒಂದು ಮಹಾಸಭೆಯನ್ನು ಸೇರಿ ಮದ್ರಾಸ್ ಸರಕಾರಕ್ಕೆ ತಂತಿಯ ಮುಖಾಂತರ ದೂರನ್ನು ಕಳುಹಿಸಿರುವರು. ಕಲೆಕ್ಟರರನ್ನು ಕಂಡು ತಮ್ಮ ಸಂಕಷ್ಟವನ್ನು ನಿವೇದಿಸಿಕೊಳ್ಳಲು ಒಂದು ಸಮಿತಿಯನ್ನು ರಚಿಸಿರುವರು.

ಸರಸ್ವತಿ ವಿದ್ಯಾಲಯ ಹ್ಯಾಯಸ್ಕೂಲ್, ಗಂಗೊಳ್ಳಿ.

ಗಂಗೊಳ್ಳಿಯಲ್ಲಿ ಸರಸ್ವತಿ ವಿದ್ಯಾಲಯ ಹ್ಯಾಯಸ್ಕೂಲಿನ I, II, IIIನೇ ಫಾರ್ಮುಗಳು ಇದೇ ಬರುವ ಜೂನ್ 20ನೇ ಬುಧವಾರ ಹೊಸತಾಗಿ ತೆರೆಯಲ್ಪಡುವುದು.

ದಾಖಲಾಗಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಆ ಬಗ್ಗೆ ಅರ್ಜಿಗಳನ್ನು ಇದೇ ಜೂನ್ 10ರಿಂದ ಸ್ವೀಕರಿಸಲಾಗುವುದು.

ಶಾಲಾ ವಿದ್ಯಾರ್ಥಿಗಳಿಗೆ ಅವರ ಖರ್ಚಿನಲ್ಲೇ ಮಧ್ಯಾಹ್ನ ಊಟದ ಬಗ್ಗೆ ಹಾಗೂ ಆಗತ್ಯವಿದ್ದಲ್ಲಿ ಕಾಯಂ ಊಟ, ವಸತಿಗಳ ಬಗ್ಗೆ ಶಾಲಾ ಕಮಿಟಿಯ ಮೇಲ್ವಿಚಾರದಲ್ಲಿ ಯೋಗ್ಯ ವ್ಯವಸ್ಥೆ ಮಾಡಲಾಗಿದೆ.

ದಾಖಲಾತಿಯ ಅರ್ಜಿ ಫಾರ್ಮುಗಳಿಗೆ ಮತ್ತು ವಿಶೇಷ ಮಾಹಿತಿಗೆ—

ಮೆನೇಜರ್,
ಸರಸ್ವತಿ ವಿದ್ಯಾಲಯ ಹ್ಯಾಯಸ್ಕೂಲ್,
ಗಂಗೊಳ್ಳಿ, ದ. ಕ.

No Substitute Yet.

'This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,
UDIPI, (S. India.)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಸಣ್ಣ ಕಥೆ.

★ ಆ ಬಲಾಢ್ಯ ★

ಮೂಲ ಲೇಖಕ:- ಆರ್. ಕೆ. ನಾರಾಯಣನ್.

'ದಿ ಗ್ರೇಂಡ್ ವೆಸ್ಟರ್ನ್ ಸರ್ಕಸ್'ನ ಆಟಗಾರರೆಂದರೆ ಪ್ರೊಪ್ರೈಟರ್ ಶಂಕರ ರಾವ್, ಅವನ ಮೂವರು ತಮ್ಮಂದಿರು, ನಾಲ್ವರು ಸೋಸೆಯರು; ಇವರೊಂದಿಗೆ ಹಗಲಿಡೀ ಪಂಜರದೊಳಗಿರುವ ಒಂದು ಹುಲಿ. ಕಾಲವೊಂದಿತ್ತು; ಆಗ ಮದ್ರಾಸ್ ನಗರದ ಕೇಂದ್ರದಲ್ಲಿ 'ಗ್ರೇಂಡ್ ವೆಸ್ಟರ್ನ್' ಬೇಂಡು ಬಾರಿಸುತ್ತಿತ್ತು. ಆದರೆ ಈಗ ಹಾದೀ ಪಕ್ಕದ ಹಳ್ಳಿಗಳಲ್ಲೇ ಅದು ಡೇರೆ ಹೊಡೆಯುತ್ತಿದೆ. ಜನರು ಒಂದೇ ಡಾಣೆ ತೆತ್ತು ಅದನ್ನು ನೋಡಿ ಹೋಗುತ್ತಿದ್ದಾರೆ.

೦೦ ೦೦ ೦೦

ಆಟ ನಡೆದಿತ್ತು. ತನ್ನ ಚಿಕ್ಕ ಕೋಣೆಯಲ್ಲಿ ಕುಳಿತುಕೊಂಡು ಶಂಕರರಾವ್ ಹಣ ಲೆಕ್ಕ ಹಾಕುತಿದ್ದ. ಅರ್ಧ ಘಂಟೆಗೆ ಮೊದಲು ಬಂದಿದ್ದ ಆಗಂತುಕನು ಇದಿರುಗಡೆಯೊಂದು ಸ್ಟೂಲಿನಲ್ಲಿ ಹೊರಗೆ ಕುಳಿತುಕೊಂಡು ಅವನನ್ನೇ ನೋಡುತಿದ್ದ. "ನಾನು ಬಹಳ ತಡಮಾಡುತಿದ್ದೇನೆಂದು ಕಾಣುತ್ತದೆ" ಶಂಕರರಾವ್ ಅವನೊಡನೆ ಕ್ಷಮೆಯಾಚಿಸುತ್ತಾ ಒಂದು ಕಾಗದವನ್ನು ಹರಿದು ಬರೆಯಹತ್ತಿದ. "ಅದೇನು ನೀವು ಬರೆಯುವದು?" ಎಂದು ಸಂದರ್ಶಕನ ಪ್ರಶ್ನೆ. "ಇದ್ದದ್ದೇ-ಪದ್ಧತಿಯ ಕೆಲವು ಸೂಚನೆಗಳು" ಎಂದ ರಾವ್. ಅರ್ಧ ಬರೆದವನೇ ಆ ಕಾಗದವನ್ನು ಆಗಂತುಕನ ಕಡೆಗೆ ಚಾಚಿದಾಗ ಬಂದ ಮನುಷ್ಯ ಆ ಪಂಕ್ತಿಗಳ ಮೇಲೆ ದೃಷ್ಟಿಯೋಡಿಸಿದ-"ಈ ಕೆಳಗಿನಂತೆ ವಾರಾಂತ್ಯದೊಳಗೆ ಹಣ ಸಂದಾಯವಾಗಬೇಕು—ಬೇಂಡಿನವರಿಗೆ ರೂ. 50; ಚಿಮಿಣಿ ಎಣ್ಣೆ ಡಿಪ್ಪೋಟಿಗೆ ರೂ. 15; ಹುಲಿಯ ಮಾಂಸಕ್ಕಾಗಿ ರೂ. 7..........." ಶಂಕರರಾವ್ ಕಾಗದವನ್ನು ಹಿಂದಕ್ಕೆಳೆದುಕೊಳ್ಳುತ್ತಾ "ನಾನಿದನ್ನೊಂದೇ ಕ್ಷಣದಲ್ಲಿ ಮುಗಿಸಿ ಬಿಡುತ್ತೇನೆ. ವಿವರವಾದ ಸೂಚನೆಗಳನ್ನು ಬರೆದಿಡದಿದ್ದರೆ ಎಲ್ಲಾ ಗಡಿಬಿಡಿಯಾಗಿ ಹೋಗುತ್ತದೆ" ಎಂದ. ಐದೇ ಮಿನಿಟುಗಳಲ್ಲಿ ಬರೆದು ಮುಗಿಸಿ, ಒಂದು ಕವರಿನೊಳಗೆ ತುಂಬಿಸಿ, "ಈಗ ನಾನು ತಯಾರು" ಎಂದ. ಅವರಿಬ್ಬರೂ ಎದ್ದು ಆಟದ ಡೇರೆಯೊಳಗೆ ನಡೆದರು. ರಂಗದಲ್ಲಿ ಗುಲಾಬಿ ಮತ್ತು ಹಸುರು ವರ್ಣದ ಪೋಷಾಕಿನ ಇಬ್ಬರು ಹುಡುಗಿಯರ ಸೈಕಲ್ ಸರ್ಕಸ್ ನಡೆಯುತ್ತಿತ್ತು; ಮ್ಯಾನೇಜರ ತನ್ನ ಅತಿಥಿಗೆ ಮುಂಭಾಗದ ಕಬ್ಬಿಣದ ಕುರ್ಚಿ ಕೊಟ್ಟ; ತಾನೂ ಪಕ್ಕದಲ್ಲಿ ಕುಳಿತುಕೊಂಡ. ಸೈಕಲ್ ಸರ್ಕಸ್ ಆಕರ್ಷಣೀಯವಿದ್ದುದರಿಂದ ಪ್ರೇಕ್ಷಕನ ಮನಸ್ಸು ಅದರಲ್ಲೇ ನೆಟ್ಟಿದ್ದಿತು. ಆದರೆ ಪ್ರಕಾಶ ಸಾಲದು. ಗಡಗಡೆಯೊಂದಕ್ಕೆ ನೇತಾಡಿಸಿದ್ದ ಒಂದೇ ಒಂದು ಪೆಟ್ರೋಲ್ ಲೇಂಪು ಕೂಡಾ ಅಲ್ಲಿಯೇ ಕಂದುತ್ತಲೂ ಜ್ವಲಿಸುತ್ತಲೂ ಇದ್ದಿತು. ಆ ಪ್ರಕಾಶದಲ್ಲಿ ಆಟಗಾತಿಯರು ಛಾಯೆಯಂತೆ ಕಾಣುತಿದ್ದರು. ಶಂಕರರಾವ್ ಎದ್ದು ಲೇಂಪನ್ನು ತಗ್ಗಿಸಿ ಅದು ಸ್ಥಿರವಾಗಿ ಪ್ರಜ್ವಲಿಸುವ ವರೆಗೂ 'ಪಂಪ್' ಹಾಕಿದ. "ಕೆಲವೊಮ್ಮೆ ಆಟದ ನಡುವೆಯೂ ವೇಷಹಾಕಿಕೊಂಡಿದ್ದಂತೆಯೇ ಈ ಕೆಲಸಮಾಡಬೇಕಾಗುತ್ತದೆ"—ಎನ್ನುತ್ತಾ ರಾವ್ ಹಲ್ಲು ಬಿಟ್ಟ. ಸೈಕಲ್ ಸವಾರರು ಆಟಮುಗಿಸಿ ಕಣ್ಮರೆಯಾದರು. "ಈಗ ನನ್ನ ಸರದಿ" ಎಂದು ಕಿವಿಯಲ್ಲಿ ಹೇಳಿ ಶಂಕರರಾವ್ ಎದ್ದಾಗ ಆ ಅತಿಥಿ ಆತನನ್ನು ಹಿಂಬಾಲಿಸಿದ್ದ. ಅವರಿಬ್ಬರೂ ಪರದೆ ಹಾಕಿದ್ದ ಸಣ್ಣದೊಂದು ಕೊಠಡಿ ಪ್ರವೇಶಿಸಿದರು. ಅದರೊಳಗೆ ಒಂದಷ್ಟು ಟ್ರಂಕು ಗಳು, ಹರಡಿಬಿದ್ದ ವಸ್ತುಗಳು ಮತ್ತು ತುಂಬಾ ಜನರು "ಇದು ನಮ್ಮ ಡ್ರೆಸ್ಸಿಂಗ್ ರೂಮು. ಕಾಲವೊಂದಿತ್ತು. ಆಗ ನಮ್ಮ ಪೋಷಾಕು ಕೋಣೆಯಲ್ಲಿ ದೊಡ್ಡ ಮೇಜುಗಳು, ಕನ್ನಡಿಗಳು ಮತ್ತು ಪ್ರೇಕ್ಷಕರಾಸೀನರಾಗುವಷ್ಟು ವಿಶಾಲ ಸ್ಥಳ ಕೂಡಾ ಇತ್ತು. ಆದರೆ ಈಗ......" ಅವ ತನ್ನ ಭುಜ ಹಾರಿಸಿದ. ತನ್ನ ಕೋಟನ್ನು ತೆಗೆದು ಚಂದವಾಗಿ ಮಡಚಿ ಜಾಗ್ರತೆಯಿಂದ ಒಂದು ಒದಿಗಿಟ್ಟ. ಜಟ್ಟಿಯ ಎದೆಯಂಗಿ ಮತ್ತು ಚಲ್ಲಣ ತೊಟ್ಟುಕೊಂಡ. ಆ ತುದಿಯಿಂದ ಈ ತುದಿಯ ವರೆಗೂ ಮೆಡಲುಗಳನ್ನು ಪೋಣಿಸಿದ್ದ ಚಿಂತೇ ಚರ್ಮವು ಭುಜಕ್ಕಡ್ಡವಾಗಿ ಅಲಂಕರಿಸಿತು. ಗಂಟೆ ಬಾರಿಸಲ್ಪಟ್ಟಿತು; ಶಂಕರ ರಾವ್ ತನ್ನ ಹಿಂಬಾಲಿಕನೊಡನೆ "ನೀವು ಈ ಪರದೇ ಪಕ್ಕದಿಂದ ನನ್ನನ್ನು ನೋಡುತ್ತಾ ಇರಬಹುದು." ಎಂದವನೇ ರಂಗಸ್ಥಳ ಪ್ರವೇಶಿಸಿದ. ಆ ಮೇಲಿನ ಅರ್ಧ ಘಂಟೆಯ ವರೆಗೆ ಪ್ರೇಕ್ಷಕರು ಮೂಗರಾದರು; ಶಂಕರರಾಯನ ಅದ್ಭುತ ಶಕ್ತಿಯ ಪ್ರದರ್ಶನವಾಯಿತು. ಅತಿಭಾರದ ಕಬ್ಬಿಣದ ಗುಂಡುಗಳನ್ನಾತ ಮೇಲಕ್ಕೆ ಹಾರಿಸಿ ಹಿಡಿದ; ಉಕ್ಕಿನ ಸರಪಣಿಯನ್ನು ಎಳೆದು ಕಡಿಮಾಡಿದ; ಕಲ್ಲುಶಿಲೆಯ ಮುಷ್ಟಿಯಿಂದ ಗುದ್ದಿ ಪುಡಿಪುಡಿ ಮಾಡಿದ—ಪ್ರೇಕ್ಷಕರ ಕೈ ಚಪ್ಪಾಳೆಯೇ ಚಪ್ಪಾಳೆ. "ಇವನೊಡನೆ ಉರುಳಾಡುವ ಪ್ರಸಂಗವೊದಗದ್ದರಿಂದ ನಾನು ಬಚಾವಾದೆ" ಎಂದ. ಬಂದಿದ್ದ ಮನುಷ್ಯ ತನ್ನೊಳಗೇನೇ ಅಂದುಕೊಂಡ. ಶಂಕರ ರಾವ್ ಮುಹೂರ್ತಮಾತ್ರಕ್ಕಾಗಿ ಡ್ರೆಸ್ಸಿಂಗ್ ರೂಮಿಗೆ ಮರಳಿ ಬಂದು, ಕರವಸ್ತ್ರದಿಂದ ತನ್ನ ಮುಖವನ್ನೊರಸಿಕೊಂಡ; ಚಲ್ಲಣವನ್ನು ಬಿಗಿಮಾಡಿ ಪುನಃ ಹೊರಟ. ತನ್ನ ಅತಿಥಿಯನ್ನು ಹಾದುಹೋಗುವಾಗ "ಇದು ನನ್ನ ಕೊನೆಯ ಆಟ; ಆ ಮೇಲೆ ನನಗೆ ಬಿಡುಗಡೆ" ಎಂದು ಹೆಜ್ಜೆ ಮುಂದಿಟ್ಟ. ಒಬ್ಬ ಕಾವಲುಗಾರ ನೆನಪು ಮಾಡಿದ: "ನಿಮಗೆ ಮರೆತು ಹೋಗಿದೆ ಸರ್. ನೀವು ಈ ಆಟದ ವೇಳೆ ಆ ಮೆಡಲುಗಳನ್ನಿಟ್ಟುಕೊಳ್ಳುವ ಕ್ರಮವಿಲ್ಲ" ರಾವ್ ತಲೆತಗ್ಗಿಸಿ ತನ್ನೆದೆಯನ್ನು ನೋಡಿಕೊಂಡ-"ಚಿಂತಿಲ್ಲ ಬದಲಾವಣೆ ಬೇಕೆಂಬುದಕ್ಕಾಗಿ ನಾನವುಗಳನ್ನಿಟ್ಟುಕೊಂಡಿದ್ದೇನೆ."

ಬೇಂಡು ಬಲವಾಗಿ ಬಡಿಯಿತು; ಇಬ್ಬರು ಕೆಲಸಗಾರರು ಉರಿಕೊಳ್ಳಿಯ ಉರುಟು ಸುತ್ತುಗಳನ್ನು ಹಿಡಿದು ನಿಂತಿದ್ದರು. ಆ ಬೆಂಕಿಯೊಳಗಿನ ಇಕ್ಕಟ್ಟಾದ ಸ್ಥಳದೊಳಗೆ ರಂಕರರಾವ್ ಹಾರಿ ನುಸುಳಿದ; ಈ ಆಟವನ್ನು ಹಲವು ಬಗೆಯಿಂದಾಡಿದಾಗ ಪ್ರೇಕ್ಷಕರ ಬೊಬ್ಬೆಯೆದ್ದಿತು. ಈಗ ಮತ್ತೊಂದು ಆಟ. ಆ ಉರುಟು ಸುತ್ತಿಗೆಲ್ಲಾ ಚೂಪಾದ ಕಠಾರಿಗಳನ್ನು ಸಿಕ್ಕಿಸಲಾಯಿತು; ಎಲ್ಲಾ ಕಠಾರಿಯ ಮೊನೆಗಳೂ ಒಳ ಕೇಂದ್ರಕ್ಕೆ ನೀಡಿವೆ; ಸುತ್ತಲೂ ಎಣ್ಣೆ ವಸ್ತ್ರ ಸುತ್ತಿ ಬೆಂಕಿಕೊಡಲಾಯಿತು. ಕಠಾರಿ ಬೆಂಕಿಯ ಆ ಉಂಗುರವನ್ನು ಒಂದಾಳೆತ್ತರಕ್ಕೆ ಎರಡು ಕಂಭಗಳ ನಡುವೆ ನಿಲ್ಲಿಸಲಾಯಿತು. ಪ್ರೇಕ್ಷಕರ ಆತುರವೇರುವಂತೆ ಬೇಂಡಿನ ಹೊಡೆತ ಏರುತ್ತೇರುತ್ತಾ ಹೋಯಿತು. ಹಾರಾಟಕ್ಕಾಗಿ ಶಂಕರರಾವ ತುಸು ದೂರ ಹೋಗಿ ನಿಂತಾಗ ಬೇಂಡು ನಿಧಾನಗೊಳ್ಳುತ್ತಾ ಬಂದು ಪೂರ್ತಿ ನಿಂತಿತು. ನಗಾರಿಯನ ಒಂದೇ ಸಲ ಹೊಡೆಯುವದಕ್ಕಾಗಿ ಕೋಲನ್ನೆತ್ತಿ ಹಿಡಿದು ನಿಂತ; ವಿಜಯ ಸಾಧನ ತೋರಿಸಲನುಕೂಲವಾಗುವಂತೆ ದೊಡ್ಡ ಬೇಂಡನ್ನು ತುಸು ಏರಿಸಿ ನಿಲ್ಲಿಸಲಾಯಿತು. ಈ ಬದಿಯಿಂದ ಹಾರಿ ... ಕಠಾರಿ ಬೆಂಕಿಗಳ ಕೇಂದ್ರದೊಂದು ಸಣ್ಣ ಗ...ಯಿಂದ ನು ಸುಳಿ ಆ ಬದಿಗೆ ಬೀಳುವಾಗ ಒಮ್ಮೆಗೇ ವಿಜಯ ಸಾರುವುದಕ್ಕಾಗಿ ಈ ತಯಾರಿಕೆ ಸಿದ್ಧತೆ.

ಆದರೆ ಆ ವಿಜಯ ಸಾಧನ ಬೀಳಲೇ ಇಲ್ಲ. ಶಂಕರ ರಾವ್ ನಿಂತಲ್ಲಿಂದ ಓಡಿದವ ಉಂಗುರ ಸಮೀಪದಲ್ಲಿ ಆಕಾಶಕ್ಕೆ ನೆಗೆದು ...ದು ಕಾಣಿಸಿತು-ಅಗಲೇ ಆತ ಕರಾಗಿ ಮತ್ತು ಬೆಂಕಿಗೆ ಹೋಗಿ ಬಡಿದಿದ್ದ. ಆದುದೇನೆಂಬುದನ್ನು ನೋಡುವ ಮೊದಲೇ ಆ ಹರಿತಾಯುಧಗಳು ದೇಹವನ್ನು ಐದಾರು ಕಡೆ ತುಂಡರಿಸಿ ಹಾಕಿದ್ದವು. ಧಗಧಗಿಸುತ್ತಿದ್ದ ಜ್ವಾಲೆಗಳವನ ಮುಖವನ್ನು ನಾಲಿಗೆ ಚಾಚಿ ನೆಕ್ಕಿದ್ದವು: ಆ ಮೆಡಲುಗಳು ಕೂಡಾ ಕೆಂಪು ಕೆಂಡವಾಗಿ ಹೋಗಿದ್ದುವು!

೦೦ ೦೦ ೦೦

ಜನರೆಲ್ಲಾ ಚದರಿ ... ಶೀಲಿಸಿ ... ಶಂಕರರಾಯನ ... ಅಂದಿನ ಆ ಅತಿಥಿ ಪೋಲಿಸ್ ಅಧಿಕಾರಿಯೊಡನೆ ಹೇಳಿದ "ತಪ್ಪು ನನ್ನದು, ನಾನು ಒಪ್ಪಬಾರದಿತ್ತು. ನಾನವನ ಮೇಲೆ ವಾರಂಟ್ ಜ್ಯಾರಿಮಾಡಿದಾಗ ತನ್ನನ್ನು ಕೊನೆಯ ಆಟವಾಡಲು ಬಿಡಬೇಕೆಂದು ಆತ ಬೇಡಿಕೊಂಡ. ನನ್ನಿಂದ ತಿರಸ್ಕರಿಸಲಾಗಲಿಲ್ಲ. ಯಾರನ್ನಾದರೂ 'ಅರೆಸ್ಟ್' ಮಾಡಲಿಕ್ಕೇನೇ ಹೋಗುವದಾದರೂ ಎಷ್ಟೆಂದರೂ ನಾವೂ ಮನುಷ್ಯರೇ"

ರಂಗದ ಹೊಯಿಗೆಯಲ್ಲಿ ಆ ಅದ್ಭುತ ಮನುಷ್ಯನನ್ನು ಅಂಗಾತ ಮಲಗಿಸಿದ್ದರು. ಎದೆ ವರೆಗೆ ವಸ್ತ್ರ ಎಳೆದಿದ್ದರು. ಹುಡುಗಿಯರು ಗುಲಾಬಿ ಹಸುರು ಪೋಷಾಕಿನಲ್ಲಿ-ವಿದೂಷಕ ಕೆಂಪುಮೂಗನ್ನು ಮುಂತಾದವರೊಂದಿಗೆ ತನ್ನ ಗುಚ್ಛ ಮುಚ್ಚಿದಲ್ಲಿ-ಸುತ್ತುವರಿದು ಮೂಕರಾಗಿ ನಿಂತು ಸ್ಮಶಾನ ಶಾಂತಿಯನ್ನು ನಿರ್ಮಿಸಿದ್ದರು. ನಿಸ್ಸಹಾಯಕರಾಗಿ ನಿಂತಿದ್ದ ಬೇಂಡುವಾಲರಿಗೆ ತಾವಿದ್ದಲ್ಲೇ ಲೋಕ ಸುತ್ತುತ್ತಿರುವ ಅನುಭವವಾಗುತಿತ್ತು; ಪಂಜರದೊಳಗಿನ ಹುಲಿ ಕಾಲಿನಿಂದ ತಳವನ್ನು ಕೆರೆಯುತಿತ್ತು, ಇಡೀ ವಾತಾವರಣವು ಧಗಧಗಿಸುತಿತ್ತು. "ಸ್ವಲ್ಪ ಸಮಯದ ಮೊದಲು ಆತ ಬರೆದಿದ್ದ ಆ ಕಾಗದವೇನೆಂಬುದನ್ನು ನೋಡೋಣ"-ಎಂದ. ಆ ಸಂದರ್ಶಕನೇ ಆಗಿನ ಮೃತ್ಯು ಮೌನವನ್ನು ಭೇದಿಸಿದ. ಅವನ ಕೋಟಿನ ಕಿಸೆಯಲ್ಲಿ ಆ ಕಾಗದ ದೊರೆಯಿತು. ಕವರನ್ನು ಹರಿದು, ದೀಪದ ಬೆಳಕಿಗೆ ಹಿಡಿದು ಓದುವಾಗ "ಹುಲಿಯ ಮಾಂಸಕ್ಕಾಗಿ ರೂ. 7 ...... ಎಂದಿದ್ದುದರ ನಂತರ ... ಕೆಳಗಿನಂತೆ ಬರೆದಿತ್ತು — "ಅಧಿಕಾರಿ, ನಿಮ್ಮನ್ನು ಮೋಸಗೊಳಿಸುತ್ತೇನೆ, ನಾನೀದಿನ ಮೋಟಾರು ಸುಮಾರು ಹತ್ತು ವರುಷಗಳಿಗೆ ಮೊದಲು, ಕೇವಲ ನನ್ನ ... ದಾಕ್ಕಾಗಿ ನಾನೊಬ್ಬನನ್ನು ಕಡಿದು ನಾಲ್ಕು ತುಂಡುಮಾಡಿದ್ದೆ. ಅದಕ್ಕಾಗಿ ನಾನು ಈಗ ಕೂಡಾ ಪಶ್ಚಾತ್ತಾಪ ಪಡುವದಿಲ್ಲ. ನಾನು ನನ್ನ ಅಪರಾಧವನ್ನೊಪ್ಪಿಕೊಳ್ಳುತ್ತೇನೆ. ಇಷ್ಟು ಸಮಯಾನಂತರ ಈ ದಿನ ಕಾನೂನು ನನ್ನ ಬೆನ್ನು ಹಿಡಿದಿದೆ. ಆದರೆ ನಾನು ಫಾಶಿಗೆ ಹೊಡುವವನ ಕೈಯಲ್ಲಿ ಪ್ರಾಣಕೊಡಲಾರೆ. ನಾನೆಂದರೆ ಜೀವನ ನಿರ್ವಹಣಕ್ಕಾಗಿ ಸಾವಿಗೆ ತೀರಾ ಸಮೀಪದ ಕಾರ್ಯಗಳನ್ನೇ ದಿನಂಪ್ರತಿ ಮಾಡುತ್ತಿರುವ ಮನುಷ್ಯ. ಅಂದ ಮೇಲೆ ಈ ಕರ್ತವ್ಯವನ್ನು ಸ್ವತಃ ನಾನೇ ಪೂರೈಸಿಕೊಳ್ಳದಿದ್ದರೆ ಅದು ಅಸಹಾಸ್ಯಕರವೇ ಸರಿ. ಬೀಳ್ಕೊಂಡೆ."

—HINDU

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ॥ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಥುರ.

CHAMPAES

Snow & Lastrex

(SoleDistributers for (India.)

Sukhananda Stores

Santhekatte, UDIPI, S. K.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಟಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಪೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಾದ ಔಷದಿ ರವಾನ್ಸಿಬಹುದ. ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೫ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ **ಬೆಲೆ ೦ ೧೪—೦**

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ— ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. **ಬೆಲೆ. ೧—೮—೦**

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA

ವರ್ಷ ೨೪ ವಾರ ೪೧] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24 No 41]

Founder **SRI A. B. SHETTY.**

ಉಡುಪಿ • **21—6—1945** • ಮಂಗಳೂರು.

ಅಮೃತಾಂಜನ
ತಲೆನೋವು, ಶೀತ, ನೆಗಡಿ, ಉಳುಕು ... ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾವು ಕೀಲ್ನೋವು, ಚೇಳು ವಿಷ ಮುಂತಾದ ಬೇನೆ ತಕ್ಷಣ ಗುಣ ... ಮೊದಲಾದ ಎಲ್ಲಾ ರೋಗಗಳಿಗೂ ...

REGD

ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them." Vide Order No 1756-ECI 41/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No 4755-N 44

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20—4-1945 and will be closed at the discretion of the Directors, not earlier than 31—5—1945

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 1913 ... liability of Members is Limited)

Registered Head Office – **Hampankatta, MANGALORE.**
Bombay Office – **20 Noble Chambers, Fort Bombay**
Factory – **MALPE, South Kanara**
Depots at – **Udipi, Coondapur, Byndoor Hangarkatta & Bhatkal**

Authorised Capital Rs. 5,00,000
Issued Capital Rs. 2,00,000

Rs 100 per share (to be fully paid up.)

Board consists of influential Gentlemen.

PROGRAMME OF MANUFACTURE.

1. **Canned Food, Fried Food, Fish Manure, Fish Ghee, Shark Liver Oil Mackerel Oil, Cod Liver Oil, Sardine Oil, Smoked Fish Fish Meal, Freezed Fish, Dried Fish, Etc.**

2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.

3. The Madras Government has been approached to subscribe for half the capital and appoint a Government Director and render technical advice to the Company

4. A Scientific Advisory Council will be formed and Technical Experts will be appointed to carry on intense research work in the Industry.

5. Arrangements are being made to procure Military contracts.

6. The Madras Government has been requested to supply the Company all the modern equipments useful for the purpose of the Company

7. The Company intends to build country crafts and develop the coastal trade.

Since this is the first Company of the kind in the South Kanara District and in the West Coast aiming at the entire monopoly of the fish trade, Shares in this Company will be a great asset

MANGALORE,
10th April, 1945.

Mangalore Jarappa,
Managing Director.

★ ಪರದೆಯೊಳಗಿನ ನಾಟಕಗಳು ★

ಪೋಪರು ನಾಜೀ ಪಕ್ಷಪಾತಿಯಿದ್ದರೆ?

'ನಾಜಿಗಳು ಅಧಿಕಾರಾರೂಢರಾಗುವ ಕಾಲದಲ್ಲಿ ಜಗದ್ಗುರು ಪೋಪರು ಬರ್ಲಿನಿನಲ್ಲಿ ಪಾಪಾಲ್ ನನ್ಸಿಯೋ ಆಗಿದ್ದರು. ಆಗ ರಾಷ್ಟ್ರೀಯ ಸಮತಾವಾದಿಗಳೂ ಕೆಥೋಲಿಕರೂ ಒಟ್ಟಾಗಿ ಸಮ್ಮಿಶ್ರ ಸರಕಾರ ಸ್ಥಾಪಿಸಬೇಕೆಂಬ ಅಭಿಪ್ರಾಯವನ್ನಿವರು ಮುಂದೊಡ್ಡಿದ್ದರು. ಕಳೆದ ಜುಲಾಯಿಯಲ್ಲಿ ನಡೆದ ಪ್ರಾಣಾಪಹರಣ ಯತ್ನದಿಂದ ಪಾರಾದುದಕ್ಕಾಗಿ ಹಿಟ್ಲರನಿಗೆ ಪೋಪ್ ಗುರುಗಳು ಅಭಿನಂದನೆ ಕಳುಹಿದ್ದರು". ಎಂದು ರೋಮಿನ ಜಗದ್ಗುರು ಪೋಪರನ್ನು ಮೋಸ್ಕೋ ರೇಡಿಯೋ ಆರೋಪಿಸಿದೆ. ಪೋಪರ ಪತ್ರಿಕೆಯಾದ 'ಒಸ್ಸರ್ವಾಟೋರ್ ರೋಮನೋ' ಇವೆಲ್ಲಾ ಆರೋಪಗಳನ್ನು ಅಲ್ಲಗಳೆದು ರಶ್ಯಾ-ಜರ್ಮನ್ ಒಪ್ಪಂದ ಕಾಲದ ರಶ್ಯನ್ ವರ್ತನೆಯ ಕುರಿತು ವ್ಯಂಗ್ಯ ಟೀಕೆ ಮಾಡಿದೆ ಹೊರತು ಹಿಟ್ಲರನಿಗೆ ಪೋಪರ ಸಂದೇಶ ಹೋದ ಸಂಬಂಧದ ಪ್ರಸ್ತಾಪವನ್ನೇ ಎತ್ತಿಲ್ಲ!

ಜಾಪಾನ್ ಧಾಳಿ ಹಿಟ್ಲರನಿಗೆ ತಿಳಿದಿರಲಿಲ್ಲ

ಜಾಪಾನರು ಪರ್ಲ್ ಹಾರ್ಬರಿನ ಮೇಲೆ ಬೀಳುವರೆಂಬ ಸಂಗತಿಯು ಹಿಟ್ಲರನಿಗೆ ಮುಂದಾಗಿ ತಿಳಿದಿರಲಿಲ್ಲ. ಆ ವಾರ್ತೆ ಬಂದೊಡನೆ ಹಿಟ್ಲರ್ ಚಕಿತನಾದ. ತಾನೇನು ಮಾಡಬೇಕೆಂಬ ನಿರ್ಧಾರವನ್ನು ಕೆಲವು ದಿನಗಳ ವರೆಗೂ ಆತನಿಂದ ಮಾಡಲಾಗಲಿಲ್ಲ. ಪರ್ಲ್ ಹಾರ್ಬರಿನ ಮೇಲೆ ಜಾಪಾನೀ ಗುಂಡು ಪ್ರಥಮತಃ ಹಾರಿದುದು 1941ನೇ ದಶಂಬರ್ 7ರಲ್ಲಿ. ಆಗ ಹಿಟ್ಲರ್ ಬರ್ಚೆಸ್ ಗಾಡನಿನಲ್ಲಿದ್ದ. ಆ ರಾತ್ರಿ ಅಲ್ಲಿಗೆ ವಾರ್ತೆ ಬಂತು. ಮರುದಿನ ಮುಂಜಾನೆ ಖಾಸಗೀ ವಿಮಾನ ಹತ್ತಿ ಅವ ಬರ್ಲಿನಿಗೆ ಹಾರಿದ. ಜರ್ಮನರ ಪಾಲಿಗೆ ಅದೆಂತಹ ಆಕಸ್ಮಿಕವಾಗಿದ್ದಿತೆಂದರೆ ಈ ಕುರಿತು ಕೆಲವು ದಿನಗಳ ವರೆಗೆ ಪತ್ರಿಕೆಗಳಿಗೆ ಸೂಚನೆ ಕೂಡಾ ಕೊಡಲಾಗಲಿಲ್ಲ. ಹಿಟ್ಲರ್ ಬರ್ಲಿನಿಗೆ ಬಂದವನೇ ಜಾಪಾನ್ ರಾಯಭಾರಿ ಒಶಿಮನೊಡನೆ ಸಂಭಾಷಿಸಿದ. ಮರುದಿನ ಜಾಪಾನರು ಸಿಂಗಾಪುರದಲ್ಲಿ 'ಪ್ರಿನ್ಸ್ ಓಫ್ ವೇಲ್ಸ್' ಮತ್ತು 'ರಿಪಲ್ಸ್'ನ್ನು ಮುಳುಗಿಸಿದ ವಾರ್ತೆ ಬಂತು. ಒಶಿಮಾದೊಡನೆ ನಡೆದ ಮೂರನೇ ಭೇಟಿಯಲ್ಲಿ ಆತನ ಒತ್ತಾಯಕ್ಕೊಳಗಾಗಿ ಹಿಟ್ಲರ್ ರೀಖ್‌ಸ್ಟಾಗಿನ ಸಭೆ ಕರೆದು ಅಮೇರಿಕದ ಮೇಲೆ ಯುದ್ಧ ಜಾಹೀರು ಮಾಡಿದ

ಜರ್ಮನಿ-ಜಾಪಾನು ಏಕ ಯೋಜನೆಯಿರಲಿಲ್ಲ

ಜರ್ಮನಿ ಮತ್ತು ಜಾಪಾನುಗಳ ಯುದ್ಧ ಯಂತ್ರಗಳೊಳ ಸಂದರ್ಭಾನುಸಾರವಾದ ತಾತ್ಕಾಲಿಕ ಜತೆಗಮನ ಹೊರತು ಏಕ ಯೋಜನೆ, ಏಕ ಧೋರಣೆಗಳಿರಲಿಲ್ಲ. ಹಲವರ ಊಹೆಯಿದ್ದಂತೆ ಜಗತ್ತನ್ನು ಜತೆಯಲ್ಲಾಕ್ರಮಿಸಿಕೊಳ್ಳುವ ಒಂದು ಹಂಚಿಕೆಯನ್ನು ಇವೆರಡು ರಾಷ್ಟ್ರಗಳು ಹಾಕಿಕೊಂಡುದಿಲ್ಲ. ಕೆಲವು ಮುಖ್ಯ ಯುದ್ಧ ಸಾಮಾಗ್ರಿಗಳು; ವಾರ್ತೆಗಳು ಮತ್ತು ಯಾಂತ್ರಿಕ ತಜ್ಞರ ಆಮದು ರಫ್ತುಗಳು ಇವೆರಡು ದೇಶಗಳೊಳಗೆ ನಡೆಯುತ್ತಿದ್ದುವು. 1941ರಲ್ಲಿ ಜರ್ಮನ್—ಜಾಪಾನ್ ಮೈತ್ರಿಕರಾರಿಗೆ ಸಹಿ ನಡೆಯುವಾಗಲೇ ಹಿಟ್ಲರನು ರಶ್ಯಾಕ್ರಮಣದ ಯೋಚನೆಯಲ್ಲಿದ್ದ. ಈ ಒಪ್ಪಂದಕ್ಕೆ ಸಹಿಹಾಕಿ ಹೊರಟ ಜಾಪಾನೀ ವಿದೇಶ ಮಂತ್ರಿ ಮಟ್ಸುವಾಕನು ಹಾದಿಯಲ್ಲೇ ಮೋಸ್ಕೋದಲ್ಲಿಳಿದು ರಶ್ಯದೊಡನೆ ಅನಾಕ್ರಮಣ ಒಪ್ಪಂದಕ್ಕೆ ಸಹಿಹಾಕಿ ಹೋಗುವನೆಂದು ಜರ್ಮನಿಗೆ ತಿಳಿದಿರಲಿಲ್ಲ. ಇವೆಲ್ಲಾ ಗುಟ್ಟುಗಳು ಮಿತ್ರರಿಗೆ ಸೆರೆಸಿಕ್ಕಿದ ಜರ್ಮನ್ ಸೇನಾನಿಗಳಿಂದಲೂ ರಿಕಾರ್ಡುಗಳಿಂದಲೂ ತಿಳಿದು ಬಂದಿವೆ.

ಚರ್ಚಿಲ್ಲರು ಮಗುವಿನಂತೆ ಅತ್ತುದು!

1940ನೇ ಜೂನಿನಲ್ಲೊಮ್ಮೆ ಚರ್ಚಿಲ್ಲರು ಸಣ್ಣ ಮಗುವಿನಂತೆ ಅತ್ತು ಬಿಟ್ಟ ವಾರ್ತೆಯೊಂದನ್ನು ಫ್ರಾನ್ಸಿನ ಮಾಜೀ ಪ್ರಧಾನ ಮಂತ್ರಿ ಎಡ್ವರ್ಡ್ ಹೆರಿಯಟ್ಟರೀಗ ಬಹಿರಂಗ ಪಡಿಸಿದ್ದಾರೆ. ಹೆರಿಯಟರು ನಾಜೀ ಬಂಧನದಿಂದ ಇತ್ತೀಚೆಗೆ ಬಿಡುಗಡೆಗೊಂಡವರು. ಫ್ರಾನ್ಸಿನ ಸರ್ವ ಬಲವೂ ನಾಜಿಗಳ ಯುದ್ಧ ಯಂತ್ರದಡಿಯಲ್ಲಿ ನುಚ್ಚುನುರಿಯಾಗಿದ್ದಿತು. ಫ್ರಾನ್ಸಿನಲ್ಲಿ ಗೊಬ್ಬೆಯೆದ್ದಿತ್ತು; ಒಂದರ ಬಳಿಕೊಂದರಂತೆ ಮಂತ್ರಿಮಂಡಲಗಳುರುಳುತಿದ್ದುವು. ಫ್ರಾನ್ಸ್ ಶರಣಾಗತವಾಗದಂತೆ ನೋಡುವ ಕೊನೆಯ ಪ್ರಯತ್ನಕ್ಕಾಗಿ ಆಗ ತಾನೇ ಪ್ರಧಾನ ಪಟ್ಟಕ್ಕೇರಿದ್ದ ಚರ್ಚಿಲ್ಲರು ಫ್ರಾನ್ಸಿಗೆ ಹಾರಿದರು. ಫಲಬಾರದ್ದನ್ನು ಕಂಡು 'ಗೋಳೋ' ಎಂದು ಅತ್ತು ಬಿಟ್ಟರು. "ಆ ಕಾಲದಲ್ಲಿ ಅವರು ಕೂಡಾ ನಿರಾಶರಾಗುತ್ತಿದ್ದರೆ ಈ ದಿನ ನಾವಿಲ್ಲಿ ಮಿತ್ರರಂತೆ ಇರುತಿದ್ದಿಲ್ಲ. ಬದಲಿಗೆ ಗೆಸ್ಟೆಪೋಗಳಿರುವಂತಾಗುತಿತ್ತು" ಎಂದು ಹೆರ್ರಿಯಟರಂದಿದ್ದಾರೆ.

ಜೋನ್ ಅಮೆರಿ ಕಾಣೆಯಾಗಿದ್ದಾನೆ

ಭಾರತ ಕಾರ್ಯದರ್ಶಿ ಮಿ. ಎಲ್. ಎಸ್. ಅಮೆರಿಂಗಳ ಪುತ್ರ ಜೋನ್ ಅಮೆರಿ. ಈ ಯುದ್ಧಾರಂಭದಿಂದಲೂ ಬರ್ಲಿನಿನಲ್ಲಿದ್ದುಕೊಂಡು ಬ್ರಿಟಿಷ್ ವಿರುದ್ಧವಾಗಿ ಆಕಾಶ ವಾಣಿ ಭಾಷಣವೀಯುತಿದ್ದ. ಕೊಡಲೀ ಕಾವಿನಂತಹ ಮತ್ತೊಬ್ಬ ದ್ರೋಹಿ ಆಂಗ್ಲೇಯಂದರೆ ವಿಲ್ಲಿಯಮ್, ಜೋಯ್ಸ್. ನಾಜೀ ಪ್ರಚಾರಕನಾದ ಇವನನ್ನು ಬ್ರಿಟಿಷರು 'ಹಾ ಹಾ' ಎಂಬ ಸಂಜಿನ ನಾಮದಿಂದ ಕರೆಯುವ ವಾಡಿಕೆ. 'ಹಾ ಹಾ' ಯುದ್ಧದಲ್ಲಿ ಘಾಯಗೊಂಡು ಬ್ರಿಟಿಷರಿಗೆ ಸೆರೆಸಿಕ್ಕಿ ಜರ್ಮನಿಯಲ್ಲಿ ಆಸ್ಪತ್ರೆಯೊಂದರಲ್ಲಿದ್ದಾನೆ. ಅಲ್ಲಿಂದ ಇಂಗ್ಲಾಂಡಿಗೆ ತಂದು ಅವನ ವಿಚಾರಣೆ ನಡೆಸಲಿದ್ದಾರೆ. ಜೋನ್ ಅಮೇರಿಯೂ ಉತ್ತರ ಇಟೆಲಿಯಲ್ಲಿ ಸುಮಾರು ಎರಡೂವರೆ ತಿಂಗಳಿಗೆ ಮೊದಲು ಬ್ರಿಟಿಷರಿಗೆ ಸೆರೆಸಿಕ್ಕಿದ್ದ. ಆದರೆ ಬಂಧನ ಗೃಹದಿಂದ ಪರಾರಿಯಾಗಿ ಇದು ವರೆಗೂ ಪತ್ತೆಯಿಲ್ಲ. 'ಹಾ ಹಾ'ನನ್ನು ಅಸೌಖ್ಯದ ನೆವ ಹೇಳಿ ಲಂಡನಿಗೆ ತಾರದಿರುವದೂ, ಜೋನ್ ಅಮೆರಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಬಿಟ್ಟುದೂ ಹಲವರಲ್ಲಿ ಸಂದೇಹವನ್ನು ನಿರ್ಮಿಸಿದೆ. 'ಹಾ ಹಾ' ಆಕಾಶವಾಣಿ ಪ್ರಚಾರ ಮಾತ್ರ ಮಾಡಿದ್ದರೆ ಜೋನ್ ಅಮೇರಿ ಆಕ್ರಮಿತ ರಾಷ್ಟ್ರಗಳ ನಗರಗಳಿಗೆ ತೆರಳಿ ಬ್ರಿಟಿಷ್ ವಿರುದ್ಧ ಭಾಷಣ ಪ್ರಚಾರವನ್ನೂ ಮಾಡಿದ್ದ

ಜಾಪಾನರು ನರಭಕ್ಷಕರೆ?

ವೈರಿಗಳ ಮೇಲೆಸೆಯುವ ಪ್ರಚಾರ ಬಾಣಗಳ ಪೈಕಿ ಬ್ರಹ್ಮಾಸ್ತ್ರದಂತಹ ಭಯಂಕರ ಬಾಣವೊಂದನ್ನು ಜಾಪಾನರ ಮೇಲೆ ಬಿಡಲಾಗಿದೆ. ಜಾಪಾನರ ಯುದ್ಧ ಕೈದಿಗಳಾಗಿದ್ದು ಬಿಡುಗಡೆ ಹೊಂದಿ ಸಿಲೋನಿನ ಸೇನಾಲಯಕ್ಕೆ ಸಾಗಿರುವ ಕೆಲವು ಹಿಂದೀಯರು ಜಾಪಾನರು ನರಭಕ್ಷಕರೆಂಬುದನ್ನು ತಾವು ಪ್ರತ್ಯಕ್ಷ ಕಂಡಿರುವೆವೆಂದು ಬ್ರಿಟಿಷ್ ಸೇನಾನಾಯಕರಿಗೆ ವರದಿಮಾಡಿದ್ದಾರಂತೆ. ಈ ವಾರ್ತೆಯನ್ನು ಪರಿಶೀಲನೆಗಾಗಿ ಲಂಡನಿನ ಯುದ್ಧ ಕಾರ್ಯಾಲಯದ ಅವಗಾಹನೆಗೆ ತರಲಾಗಿದೆಯಂತೆ. ಜಾಪಾನರು ಜಾಪಾನರನ್ನೇ ತಿಂದುದಿದೆಯೆಂದು ಈ ಹಿಂದೀಯರ ಹೇಳಿಕೆಯಿದೆ. ಮಿತ್ರ ಸೇನಾ ಮುತ್ತಿಗೆಗೊಳಗಾಗಿ ಆಹಾರಾಭಾವಕ್ಕೆ ಸಿಲುಕಿದಾಗ ಜಾಪಾನರು ನರಭಕ್ಷಕರಾದುದೆಂದು ಹೇಳಲಾಗಿದೆ. ಆದರೆ ಅವರು ಹೆಣವನ್ನು ತಿಂದುದಿರಬಹುದೇ ಹೊರತು ಆಹಾರಕ್ಕಾಗಿ ಮನುಷ್ಯವಧೆ ಮಾಡಿದ ನಿದರ್ಶನವಿಲ್ಲವೆಂದೂ, ಯುದ್ಧ ಕೈದಿಗಳಲ್ಲಾರನ್ನೂ ಅವರು ನುಂಗಲಿಲ್ಲವೆಂದೂ ಸಮಾಧಾನ ಹೇಳಲಾಗಿದೆ. ಜಾಪಾನರು ಮನುಷ್ಯಾಹಾರಿಗಳೆಂಬ ನಂಬಿಕೆಯು ಕೆಲವರಲ್ಲಿದೆ ಎಂಬುದನ್ನು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತನ್ನ 'ಜೈಲು ಅನುಭವ'ದಲ್ಲಿಯೂ ಬರೆದಿದ್ದಾರೆ. ಜಾಪಾನೀ ಶಿಬಿರಗಳಲ್ಲಿರುವ ಮಿತ್ರ ರಾಷ್ಟ್ರೀಯ ಯುದ್ಧಕೈದಿಗಳೆಲ್ಲಾ ಸುಕ್ಷೇಮದಲ್ಲಿದ್ದಾರೆಂದೂ, ಯಾವ ದೂರು ದೂಷಣೆಗಳನ್ನೂ ಹೇಳುವದಿಲ್ಲವೆಂದೂ ಪ್ರತ್ಯಕ್ಷ ಪರಿಶೀಲನೆ ನಡೆಸಿರುವ ಅಂತರ್‌ರಾಷ್ಟ್ರೀಯ ರೆಡ್‌ಕ್ರೋಸ್‌ನವರ ಹೇಳಿಕೆಯಿದೆ.

'ಫೇರಿಸ್' ಕುದುರೆಯ ಬಿಡುಗಡೆ

'ಫೇರಿಸ್' ಎಂಬುದು ಕಳೆದ 50 ವರುಷಗಳಿಂದ ಯುರೋಪಿನಲ್ಲೆಲ್ಲಾ ಹೆಸರಾಂತಿದ್ದ ಪಂದ್ಯಾಶ್ವ. ತನ್ನನ್ನಾದರೂ ಸೆರೆಯಲ್ಲಿಟ್ಟು ತನ್ನ 'ಫೇರಿಸ್'ನ್ನು ಬಿಡಬೇಕೆಂದು ಅದರ ಯಜಮಾನ ಬೋಸಾಕನು ಜರ್ಮನರೊಡನೆ ಬೇಡಿಕೊಂಡರೂ ಕೇಳದೆ ನಾಜಿಗಳದನ್ನು ಅಪಹರಿಸಿದ್ದರು. ಅಮೇರಿಕನ್ ಸೇನೆ ಜರ್ಮನಿ ಪ್ರವೇಶಿಸಿದೊಡನೆ ಮುಂದಾಗಿ ಎಲ್ಬ್ಯನ್ ಫೀಲ್ಡ್ ಎಂಬಲ್ಲಿರುವ ತನ್ನ ಕುದುರೆಯನ್ನು ಬಿಡಿಸಿಕೊಡಬೇಕೆಂದು ಬೋಸಾಕ್ ವಿಜ್ಞಾಪನೆ ಕಳುಹಿದ್ದ. ಈಗ ಜನರಲ್ ಪೇಟನರದನ್ನು ಸರಿ ಬಿಡಿಸಿಕೊಟ್ಟಿದ್ದಾರೆ. 1939ರಲ್ಲಿ 'ಫೇರಿಸ್' ಮೂರು ದೊಡ್ಡ ರೇಸ್‌ಗಳನ್ನು ಗೆದ್ದಿದ್ದಿತು. ಬ್ರಿಟಿಷರ ಸುಪ್ರಸಿದ್ಧ ರೇಸ್ ಕುದುರೆ 'ಬ್ಲೂ ಪೆಟರ್'ನ್ನು ಡೋನ್‌ಕೆಸ್ಟರ್ ಎಂಬಲ್ಲಿ ಏರ್ಪಾಡಾಗಿದ್ದ ಮರುಪಂದ್ಯದಲ್ಲಿ ಗೆಲ್ಲುವ ನಿರೀಕ್ಷೆಯಿದ್ದಿತು. ಆದರೆ ಯುದ್ಧ ದೆಸೆಯಿಂದ ಆ ರೇಸ್ ನಡೆಯಲಿಲ್ಲ. ಜರ್ಮನಿಗೆ ಬೀಜದ ಕುದುರೆಯಾಗಿ ಕೊಡಬೇಕೆಂದು ಪ್ರಥಮತಃ ಜರ್ಮನರು ಕೇಳಿದಾಗ "ಪ್ರಾಣ ಹೋದರೂ ಮಾರಲಾರೆ. ಮಾರುವದಾದರೆ ಫೇರಿಸ್ ಅರ್ಧ ಮಿಲಿಯ ಡೋಲರ್ ಬೆಲೆಬಾಳುತ್ತಾನೆ. ಆದರೆ ನೀವು ಬಲಾತ್ಕಾರದಿಂದಲ್ಲದೆ ನನ್ನ ಒಪ್ಪಿಗೆಯಿಂದದನ್ನು ಕೊಂಡು ಹೋಗಲಾರಿರಿ' ಎಂದು ಬೋಸಾಕ್ ನಿರಾಕರಿಸಿದ್ದ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ANNOUNCEMENT.

A BRANCH OF THE BANK HAS BEEN OPENED AT NO. 10, WAKANI BUILDING ELPHINSTONE ROAD, PAREL, BOMBAY 12, ON THE 11TH OF JUNE 1945

●

All kinds of Banking business transacted.

THE PRABHAKARA BANK, LIMITED.
(Incorporated in British India with limited liability.)


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ವೇವೆಲ್ ಯೋಜನೆಯ ಸುರೂಪ.

ಯುದ್ಧ ಖಾತೆಯ ವಿನಹ ಸರ್ವ ಖಾತೆಗಳೂ ಹಿಂದೀ ಸದಸ್ಯರಿಗೆ.

ಸಿಮ್ಲಾದಲ್ಲಿ ಪ್ರಮುಖರ ಸಮ್ಮೇಲನ : : : ಪ್ರಾಂತ್ಯಗಳಲ್ಲಿ ಪ್ರತಿನಿಧಿ ಸರಕಾರ.

ಭಾರತ ವೈಸರಾಯಿ, ಎರ್ಲ್. ಡ ಫೀಲ್ಡ್ ಮಾರ್ಶಲ್ ವಿಸ್ಕೌಂಟ್ ವೇವೆಲರು ಜೂನ್ ತಾ. ೧೪ರಲ್ಲಿ ನವದಿಲ್ಲಿಯಿಂದ ಮಾಡಿದ ಆಕಾಶವಾಣಿ ಘೋಷಣೆಯ ತಿರುಳು:—

● ಪ್ರಚಲಿತ ರಾಜ್ಯ ಶಾಸನಾನುಸಾರವಾಗಿಯೇ ಕೇಂದ್ರದಲ್ಲಿ ಬದಲಾವಣೆ ಮಾಡಿ, ವೈಸರಾಯಿ ಮತ್ತು ಸರ್ವ ಸೇನಾನಿಯಿಬ್ಬರನ್ನುಳಿದು ಕಾರ್ಯಕಾರೀ ಸಮಿತಿಯನ್ನು ಪೂರ್ಣ ಹಿಂದೀಕರಣ ಮಾಡಲಾಗುವದು

● ಭಾರತದ ಕಮಾಂಡರ್ ಇನ್ ಚೀಫ್ರ ಖಾತೆಯಾಗಿರುವ ದೇಶ ರಕ್ಷಣಾಧಿಕಾರವೊಂದನ್ನು ಬಿಟ್ಟು ಇದುವರೆಗೆ ಬ್ರಿಟಿಷರವಾಗಿದ್ದ ಗೃಹ ಖಾತೆ, ಆರ್ಥಿಕ ಖಾತೆಗಳನ್ನೂ ಈ ತನಕ ಸ್ವತಃ ವೈಸರಾಯರದಾಗಿದ್ದ ಹೊರ ದೇಶ ಸಂಬಂಧ ಖಾತೆಯನ್ನೂ ಹಿಂದೀ ಸದಸ್ಯರಿಗೇನೇ ಒಪ್ಪಿಸಲಾಗುವದು.

● ಕಾರ್ಯಕಾರೀ ಸಮಿತಿಯಲ್ಲಿ ಜಾತಿ ಹಿಂದುಗಳಿಗೂ ಮುಸಲ್ಮಾನರಿಗೂ ಸಮಾನ ಸ್ಥಾನಗಳನ್ನೀಯಲಾಗುವದು.

● ವೈಸರಾಯನದಾಗಿ ಕಾದಿಟ್ಟಿರುವ ವಿಶೇಷಾಧಿಕಾರವು ಅನಿರ್ಬಂಧವಾಗಿರುವಾದರೂ ಅದನ್ನು ನಿಷ್ಕಾರಣ ಉಪಯೋಗಿಸುವಂತಿಲ್ಲ.

● ಇತರ ವಸಾಹತುಗಳಲ್ಲಿರುವಂತೆ ಬ್ರಿಟಿಷಿನ ವ್ಯಾಪಾರ ಮತ್ತು ಇತರ ಹಿತ ಸಂಬಂಧಗಳ ಪ್ರತಿನಿಧಿಯಾಗಿ ಓರ್ವ ಹ್ಯಾಕಮಿಶನರರನ್ನು ನೇಮಿಸಲಾಗುವದು

● ಪ್ರಾಂತಿಕ ಪ್ರಧಾನಿಗಳು ಮತ್ತು ಈಗ ೯೩ನೇ ಕಲಮಿನಾಳ್ವಿಕೆಯಿರುವ ಪ್ರಾಂತ್ಯಗಳ ಮಾಜಿ ಪ್ರಧಾನಿಗಳು, ಕೇಂದ್ರ ಎಸೆಂಬ್ಲಿ ಮತ್ತು ಕೌನ್ಸಿಲ್ ಓಫ್ ಸ್ಟೇಟುಗಳ ಕಾಂಗ್ರೆಸ್ ಹಾಗೂ ಲೀಗ್ ಪಕ್ಷಗಳ ಪ್ರಮುಖರು ಅಂತೆಯೇ ಅವುಗಳ ರಾಷ್ಟ್ರೀಯ ಪಕ್ಷ ಮತ್ತು ಯುರೋಪಿಯನ್ ಪಕ್ಷಗಳ ನಾಯಕರು ಗಾಂಧಿ ಮತ್ತು ಜಿನ್ನಾ ದಲಿತ ವರ್ಗ ಮತ್ತು ಸಿಖ್ಖರ ಪ್ರತಿನಿಧಿಗಳಾಗಿ ರಾವ್ ಬಹದೂರ್ ಎನ್. ಶಿವರಾಜ್, ಮತ್ತು ತಾರಸಿಂಗರು ಇವರ 21 ಮಂದಿಯ ಒಂದು ಸಮ್ಮೇಲನವನ್ನು ಇದೇ ತಾ. 25ಕ್ಕೆ ಸಿಮ್ಲಾದಲ್ಲಿ ಕರೆಯಲಾಗುವದು.

● ಕಾರ್ಯಕಾರೀ ಸಮಿತೀ ಸದಸ್ಯರ ಆಯ್ಕೆ—ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಯ ದಿನ ನಿಶ್ಚಯ ಈ ಸಮ್ಮೇಲನದ ತೀರ್ಮಾನದಂತೆ.

● ಸೂಚನೆಗಳು ಅಂಗೀಕರಿಸಲ್ಪಟ್ಟಲ್ಲಿ ೯೩ನೇ ಕಲಮಿನಾಳ್ವಿಕೆಯಿರುವ ಪ್ರಾಂತ್ಯಗಳಲ್ಲೆಲ್ಲಾ ಜನ ಪ್ರತಿನಿಧಿ ಸರಕಾರಗಳ ಪುನಃಸ್ಥಾಪನವಾಗುವದು; ಅಲ್ಲಿ ಸಮ್ಮಿಶ್ರ ಮಂತ್ರಿಮಂಡಲಗಳ ರಚನೆಯಾಗಬೇಕು.

● ಕೇಂದ್ರ ಕಾರ್ಯಕಾರೀ ಸಮಿತಿಯು ನ್ಯಾಯ ವಿಧಾಯಕ ಸಭೆಗೆ ಜವಾಬ್ದಾರಿಯಾಗಿರದಿದ್ದರೂ ಸಿಮ್ಲಾ ಸಮ್ಮೇಲನದ ಅಭಿಪ್ರಾಯದಂತೆ ಆರಿಸಲ್ಪಡುವದು.

● ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರನ್ನು ಕೂಡಲೇ ಬಿಡಲಾಗುವದು. ಉಳಿದ ರಾಜಕೀಯ ಕೈದಿಗಳ ಬಿಡುಗಡೆಯು ಸಿಮ್ಲಾ ಸಮ್ಮೇಲನದ ನಿರ್ಧಾರ ಮತ್ತು ಮುಂದಿನ ಪ್ರಾಂತಿಕ ಸರಕಾರಗಳನ್ನು ಹೊಂದಿಕೊಂಡಿವೆ.

● ಈ ಬದಲಾವಣೆಗಳು ಬ್ರಿಟಿಷ್ ಭಾರತಕ್ಕೆ ಮಾತ್ರವಲ್ಲದೆ ಆಶ್ರಿತ ರಾಜ್ಯಗಳಿಗೆ ಅನ್ವಯವಾಗುವದಿಲ್ಲ.

● ಹೊಸ ಕಾರ್ಯಕಾರೀ ಸಮಿತಿಯ ಜವಾಬ್ದಾರಿಗಳೆಂದರೆ 1. ಜಪಾನ ವಿರುದ್ಧ ಯುದ್ಧವನ್ನು ಸರ್ವ ಶಕ್ತಿಯಿಂದ ಸಾಗಿಸುವದು. 2. ಶಾಶ್ವತವಾದ ರಾಜ್ಯ ರಚನಾ ವ್ಯವಸ್ಥೆ ತಯಾರಾಗುವ ವರೆಗೆ ಯುದ್ಧೋತ್ತರ ಪುನರ್‍ರಚನೆಗಳನ್ನು ಮಾಡುವದು. 3. ಸರ್ವ ಸಮ್ಮತಿಯದಾಗುವ ಶಾಶ್ವತವಾದ ಒಂದು ರಾಜ್ಯರಚನಾ ವ್ಯವಸ್ಥೆಯನ್ನು ತಯಾರಿಸುವದು.

ವೇವೆಲರ ಭಾಷಣ.

ಈ ಸುಧಾರಣೆಗಳನ್ನೊಳಗೊಂಡ ತನ್ನ ಭಾಷಣದಲ್ಲಿ ಲೋರ್ಡ್ ವೇವೆಲರಂದಿದ್ದಾರೆ. "ಹಿಂದುಸ್ಥಾನವು ತನ್ನ ಪೂರ್ಣ ಸ್ವಾಧಿಕಾರದ ಗುರಿಯತ್ತ ಮುಂದೊತ್ತಲಾಗುವಂತೆಯೂ ಸದ್ಯದ ರಾಜಕೀಯ ಸ್ಥಿತಿಯ ಸುಧಾರಣೆಗಾಗಿಯೂ ಈ ಸೂಚನೆಗಳನ್ನು ಮುಂದಿಡಲು ಬ್ರಿಟಿಷ ಸರಕಾರವು ನನಗಧಿಕಾರವಿತ್ತಿದೆ. ಮಿ. ಅಮೆರಿಯವರು ಇದೇ ಹೊತ್ತಿನಲ್ಲಿ ಪಾರ್ಲಿಮೆಂಟಿಗದನ್ನು ಮುಂದಿಟ್ಟು ಪಡಿಸುತಿದ್ದಾರೆ. ಇದೊಂದು ರಾಜ್ಯಾಂಗರಚನೆಯ ತೀರ್ಮಾನವೇನೂ ಅಲ್ಲ. ಮುಖ್ಯ ತೊಡಕಾಗಿರುವ ಜಾತೀಯ ಪ್ರಶ್ನೆಯನ್ನು ಹಿಂದೀ ಮುಖಂಡರು ತಮ್ಮೊಳಗೆ ತೀರ್ಮಾನಿಸಿಕೊಳ್ಳುವರೆಂಬ ಆಸೆ ಸರಕಾರಕ್ಕಿದ್ದಿತು. ಆದರೆ ನಿರಾಶೆ ಮಾಯಿತು ಈಗ ಹಿಂದುಸ್ಥಾನದ ಮುಂದೆ ಮಹಾ ಸಂದರ್ಭಗಳೊದಗಿವೆ; ಮಹಾ ಸಮಸ್ಯೆಗಳನ್ನದು ತೀರ್ಮಾನಿಸಬೇಕಾಗಿದೆ. ಆದ್ದರಿಂದ ಚಕ್ರವರ್ತಿ ಸರಕಾರದ ಪೂರ್ಣಾನುಮೋದನೆಯೊಡನೆ ನಾನೀಗ ಕೇಂದ್ರ ಮತ್ತು ಪ್ರಾಂತಿಕ ಹಿಂದೀ ರಾಜಕೀಯ ಪ್ರಮುಖರನ್ನು ಆಮಂತ್ರಿಸಲಿದ್ದೇನೆ ಸಂಘಟಿತ ರಾಜಕೀಯಾಭಿಪ್ರಾಯಗಳ ವಿಶೇಷ ಪ್ರಾತಿನಿಧ್ಯವುಳ್ಳ ಹೊಸ ಕಾರ್ಯಕಾರೀ ಸಮಿತಿಯ ರಚನೆಗಾಗಿ ಅವರು ನನಗೆ ನೆರವಾಗಬೇಕಾಗಿದೆ ನಿಯೋಜಿತ ಕಾರ್ಯಕಾರೀ ಮಂಡಲಿಯು ಮುಖ್ಯ ಜಾತಿಗಳ ಪ್ರಾತಿನಿಧ್ಯವುಳ್ಳದ್ದಿದೆ; ಜಾತಿ ಹಿಂದುಗಳಿಗೂ ಮುಸಲ್ಮಾನರಿಗೂ ಅದರಲ್ಲಿ ಸಮಾನ ಸ್ಥಾನಗಳಿವೆ ಅದು ಸದ್ಯದ ರಾಜ್ಯಭಾರ ಪದ್ಧತಿಗೊಳಗಾಗಿಯೇ ಕಾರ್ಯ ಸಾಗಿಸಬೇಕು. ಆದರೆ, ವೈಸರಾಯಿ, ಮತ್ತು ಯುದ್ಧ ಮಂತ್ರಿಯಾಗಿರುವ ಸರ್ವಸೇನಾನಿ, ಇಬ್ಬರನ್ನು ಬಿಟ್ಟು ಅದು ಪೂರ್ಣ ಹಿಂದೀ ಸಮಿತಿ. ಇದು ವರೆಗೆ ವೈಸರಾಯಿಯ ಅಧಿಕಾರವಾಗಿದ್ದ ಹೊರ ದೇಶ ಸಂಬಂಧಖಾತೆ ಕೂಡಾ ಬ್ರಿಟಿಷ್ ಇಂಡಿಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಓರ್ವ ಹಿಂದೀ ಸದಸ್ಯನ ಕೈಗೊಪ್ಪಿಸಲ್ಪಡಲಿದೆ. ಸಾಮಂತ ರಾಜ್ಯಗಳಲ್ಲಿರುವಂತೆ ಬ್ರಿಟಿಷ್ ವ್ಯಾಪಾರೋದ್ಯಾದಿಗಳ ರಕ್ಷಣೆಗಾಗಿ ಓರ್ವ ಬ್ರಿಟಿಷ್ ಹ್ಯಾಕಮಿಶನರರ ನೇಮಕವಾಗುವದು. ಇಂತಹ ಹೊಸ ಕಮಿಟಿ ರಚನೆಯು ಭಾರತದ ಸ್ವತಂತ್ರ ಸರಕಾರದ ಕಡೆಗಿಟ್ಟ ಸ್ಪಷ್ಟ ಹೆಜ್ಜೆಯೆಂಬುದನ್ನು ನೀವು ತಿಳಿಯುವಿರಿ. ಅದು ಬಹುತೇಕವಾಗಿ ಭಾರತೀಯವಾಗಿದೆ; ಅರ್ಥಖಾತೆ, ಗೃಹಖಾತೆ ಮತ್ತು ಹೊರ ಸಂಬಂಧ ಖಾತೆಗಳು ಇದೀಗ ಮೊದಲನೇ ಬಾರಿ ಹಿಂದೀಯರ ಕೈಗೆ ಬರಲಿವೆ ಕಾರ್ಯಕಾರೀ ಸಮಿತಿಯು ಸೇವಕವ ಚಕ್ರವರ್ತಿಗಳ ಮಂಜೂರಾತಿಗೊಳಪಟ್ಟಿದ್ದರೂ ವೈಸರಾಯಿಗಳು ರಾಜಕೀಯ ಪ್ರಮುಖರ ಅಭಿಮತ ಕೇಳಿಯೇ ಚುನಾಯಿಸಿಕೊಳ್ಳುವರು.

ಕಾದಿಟ್ಟ ಅಧಿಕಾರದ ಅಕ್ರಮ ಪ್ರಯೋಗವಿಲ್ಲ.

ಎಗ್ಝಿಕ್ಯೂಟಿವ್ ಕೌನ್ಸಿಲು ಸದ್ಯದ ರಾಜ್ಯಶಾಸನದ ಗಡಿಯೊಳಗೆ ಕಾರ್ಯಮಾಡಬೇಕಾಗಿದೆ. ಇದರ ಮೇಲಿನ ಹತೋಟಿಯು. ಗವರ್ನರ್ ಜನರಲರದಾಗಿದ್ದು ತನ್ನ ಕ್ರಮಬದ್ಧ ಅಧಿಕಾರವ ದ ಅದನ್ನು ಉಪಯೋಗಿಸಲಾರೆನೆಂಬುದಕ್ಕೆ ಅಪರೂಪ್ಪವ ಪ್ರಶ್ನೆಯೇ ಇಲ್ಲ. ಆದರೆ ಆ ವಿಶೇಷಾಧಿಕಾರವು ನಿಜಕ್ಕೂ ಕಾರಣ ವಿನಹ ಉಪಯೋಗಿಸಲ್ಪಡುವಂತಿಲ್ಲ. ಮುಂದಿನ ಕೊನೆಯ ರಾಜ್ಯರಚನಾ ಒಪ್ಪಂದಕ್ಕೆ ಈ ತಾತ್ಕಾಲಿಕ ಸರಕಾರಿ ವ್ಯವಸ್ಥೆಯಿಂದ ಯಾವ ತೊಡಕೂ ಇಲ್ಲವೆಂದು ನಾನು ಸ್ಪಷ್ಟಪಡಿಸಬೇಕಾಗಿದೆ" ಎನ್ನುತ್ತಾ ಲೋರ್ಡ್ ವೇವೆಲರು ಹೊಸಕೊಡುಗೆಯ ರೂಪರೇಷೆ, ಉದ್ದೇಶ, ಇಲ್ಲಿಗಿಂತ ತಂಪಾದ ಸಿಮ್ಲಾದಲ್ಲಿ ಸೇರಲಿರುವ ಸರ್ವಪಕ್ಷೀಯ ಸಮ್ಮೇಲನದ ಕಾರ್ಯಭಾರಗಳನ್ನು ನಿರೂಪಿಸಿದ್ದಾರೆ "ದುರ್ದೈವವಶಾತ್ ಸಿಮ್ಲಾ ಸಮ್ಮೇಲನವು ಅಪಜಯಗೊಂಡರೆ ಎಲ್ಲಾ ಪಕ್ಷಗಳೊಟ್ಟಾಗುವ ವರೆಗೂ ನಾವು ಈಗಿನ ವ್ಯವಸ್ಥೆಯನ್ನೇ ಮುಂದುವರಿಸುವವು. ಒಪ್ಪಂದವಾಗದಿದ್ದಲ್ಲಿ, ಭಾರತ ಕ್ಕಿದುವರೆಗೆ ಅಮೂಲ್ಯ ಸೇವೆ ಸಲ್ಲಿಸಿರುವ ಸದ್ಯದ ಕಾರ್ಯಕಾರೀ ಸಮಿತಿಯೇ ಕಾರ್ಯ ಸಾಗಿಸುವದು" ಎಂದು ಹೇಳಿ "ಆದರೆ ನನಗೆ ಮಹದಾಶೆಯಿದೆ. ಪಕ್ಷಪ್ರಮುಖರೀ ಸಮಸ್ಯೆಯನ್ನು ಯಥಾರ್ಥ ಬುದ್ಧಿಯಿಂದ ಅವಲೋಕಿಸಿ ನನ್ನೊಡನೆಯೂ, ತಮ್ಮೊಳಗೆಯೂ ಒಂದುಗೂಡಿ ವರ್ತಿಸಲು ಸಿದ್ಧರಾದರೆ ಸರಿ. ಈ ಸೂಚನೆಗೆ ಅಖಿಲ ಬ್ರಿಟನಿನ ಬೆಂಬಲವಿದೆ. ನಮ್ಮ ಕೈಗೀಗ ಅಮೂಲ್ಯ ಸೊತ್ತುಗಳು ಬಂದಿವೆ; ಚಾತುರ್ಯದಿಂದ ವಿನಿಯೋಗಿಸಲು ನಮಗೆ ಗೊತ್ತಿದ್ದರಾಯಿತು. ಆದರದು ಸುಲಭವಿಲ್ಲ; ಅವಸರದಿಂದಾಗುವಂತಹದೂ ಅಲ್ಲ. ಬಹಳವನ್ನು ಸಾಧಿಸಲಿಕ್ಕಿದೆ; ಅವಘಡಗಳು ಮತ್ತು ಅಪಾಯಗಳಿರಬಹುದು; ಎಲ್ಲ ಕಡೆಗಳವರೂ ಮರೆಯುವಂತಹ ಮತ್ತು ಕ್ಷಮಿಸುವಂತಹ ವಿಷಯಗಳಿವೆ. ಭಾರತದ ಭವಿಷ್ಯದ ಮೇಲೂ, ನನ್ನಿಂದಾಗುವನಕ ಅದರ ಘನತೆ ಬೆಳೆಯುವದೆಂಬ ಕುರಿತೂ ನನಗೆ ವಿಶ್ವಾಸವಿದೆ. ನಾನು ನಿಮ್ಮೆಲ್ಲರ ಸಹಕಾರ ಮತ್ತು ಸದಾಶಯ ಕೋರುತ್ತೇನೆ" ಎಂದು ಲೋರ್ಡ್ ವೇವೆಲರ ಆಗ್ರಹದ ವಿನಂತಿ.

ಪರದೇಶಗಳ ಅಭಿಪ್ರಾಯ

'ಇದು ವೇವೆಲ್ ಸೂಚನೆಯನ್ನಯ ಬ್ರಿಟನಿನ ರಾಷ್ಟ್ರೀಯ ಸರಕಾರದ ಕೃತಿ. ಈ ಹೊಣೆಗಾರಿಕೆಯಲ್ಲಿ ನನ್ನ ಪಾಲಿದೆ. ಇದು ಅಂಗೀಕಾರ ಹೊಂದಿ ಪರಸ್ಪರ ಸೌಹಾರ್ದ್ರತೆ ಮೊಳೆಯುವದೆಂದು ನಂಬುತ್ತೇನೆ'—ಎಂದು ಸರ್. ಕ್ರಿಪ್ಸರಂದಿದ್ದಾರೆ 'ಮೆಂಚೆಸ್ಟರ್ ಗಾರ್ಡಿಯನ್' 'ಟೈಮ್ಸ್' ಮೊದಲಾದ ಎಲ್ಲಾ ಬ್ರಿಟಿಷ್ ಪತ್ರಿಕೆಗಳೂ ಸವಕೊಡುಗೆಗೆ ಬೆಂಬಲ ಕೊಟ್ಟು, ಅದನ್ನು ಶಿರಸಾವಹಿಸಿಕೊಳ್ಳುವಂತೆ ಹಿಂದೀಯರನ್ನು ಕೇಳಿಕೊಂಡಿವೆ. ಅಲೆಕ್ಸಾಂಡರ್, ಲೋರ್ಡ್ ಸ್ಯಾಬೋಲ್ಟಿ, ಫೆನ್ನರ್ ಬ್ರೋಕ್ವೆ, ಡಾಮ ರೋಯ್ಡೆನ್ ಮೊದಲಾದ ಬ್ರಿಟಿಷ್ ಲೇಬರ್ ಪ್ರಮುಖರೂ 'ಚುನಾವಣೆಯ ದೆಸೆಯಿಂದ ಒತ್ತಾಯಕ್ಕೊಳಗಾದ ಅಪ್ರಾಗತಿಕರ ಈ ದಾನ'ವನ್ನು ಅನುಮೋದಿಸಿದ್ದಾರೆ. 'ತಡವಾಗಿ ಬಂದರೂ, ಆರಂಭ ಮಾತ್ರವಾದರೂ ಇದು ದೊಡ್ಡ ಹೆಜ್ಜೆ' ಎಂದು ಅಮೆರಿಯ ಪ್ರತಿಸ್ಪರ್ಧಿಯಾಗಿ ನಿಂತಿರುವ ಪಾಮೆದತ್ತರಂದಿದ್ದಾರೆ. ಲೋರ್ಡ್ ಹೆಲಿಫೇಕ್ಸರು ಪೂರ್ಣ ಸಮರ್ಥನೆಯಿತ್ತಿದ್ದಾರೆ. ಸಾನ್‍ಫ್ರಾನ್ಸಿಸ್ಕೋವಿನಲ್ಲಿ ಈ ಕುರಿತು ಅತು

(ಆರನೇ ಪುಟ ನೋಡಿರಿ.)

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ಶಾಖಾ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ ೩೫ ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯಿತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ.

ಕಾಂಗ್ರೆಸ್ ಮುಖಂಡರ ಬಿಡುಗಡೆ.

ಅಜಾದ್, ನೆಹರು, ಪಟೇಲ್, ಪ್ರಸಾದ್, ಕೃಪಾಲನಿ, ಪಟ್ಟಾಭಿ, ದೇವ್ರೋದ್ವಯ ಹೊರ ಬಂದರು.



ಅಧ್ಯಕ್ಷ

ಲಾರ್ಡ್ ವೇವೆಲರ ಘೋಷಣೆಯೊಂದಿಗೆ ಹಿಂದುಸ್ಥಾನದ ಸರ್ವ ಪ್ರಾಂತಿಕ ಸರಕಾರಗಳೂ ಅ ಭಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೇಲೆ ಹಾಕಿರುವ ಬಹಿಷ್ಕಾರವನ್ನು ಹಿಂದೆಗೆದಿವೆ ಆದರೆ ಸ್ಥಳೀಯ ಕಮಿಟಿಗಳ ಬಹಿಷ್ಕಾರ ನಿವಾರಣೆಯೂ ಇತರ ರಾಜಕೀಯ ಕೈದಿಗಳ ಬಿಡುಗಡೆಯೂ, ಸಿಮ್ಲಾ ಸಮ್ಮೇಲನದ ನಿರ್ಧಾರವನ್ನಾಧರಿಸಿ ಮುಂದಿನ ಪ್ರಾಂತಿಕ ಸರಕಾರಗಳ ಹೊಣೆಯಾಗಿ ಬಾಕಿಯಿದೆ ತಾ.14ನೇ ಅಪರಾಹ್ನ ವೈಸರಾಯಿ ಘೋಷಣೆಯಾಗಿದ್ದರೆ ತಾ 15ನೇ ಪೂರ್ವಾಹ್ನ 6 ಘಂಟೆಯಿಂದ 9 ಘಂಟೆಯೊಳಗೆ ಬೇರೆಬೇರೆ ಜೈಲುಗಳಲ್ಲಿದ್ದ ಕಾಂಗ್ರೆಸ್ ಕಾರ್ಯಕಾರೀ ಸದಸ್ಯರು—ಪೂರ್ತಿ 1041 ದಿನಗಳ ಬಂಧನವನುಭವಿಸಿದ ರಾಷ್ಟ್ರ ಪ್ರಮುಖರು—ಬಿಡುಗಡೆ ಹೊಂದಿದ್ದಾರೆ

ಅಧ್ಯಕ್ಷ ಅಜಾದ್

ಬಂಕುರದ 'ರಾಮನಿವಾಸ' ಗೃಹದಲ್ಲಿ ನಿರ್ಬಂಧದಲ್ಲಿದ್ದ ಮೌಲಾನಾ ಅಜಾದರಿದ್ದಲ್ಲಿಗೆ ಜಿಲ್ಲಾ ಮೆಜಿಸ್ಟ್ರೇಟರು ಇತರ ಅಧಿಕಾರಿಗಳೊಂದಿಗೆ ತಾ. 15ನೇ ಮುಂಜಾನೆ 6 ಘಂಟೆಗೆ ತೆರಳಿ ಅವರ ಬಿಡುಗಡೆಯನ್ನು ಬಹಿರಂಗವಾಗಿ ಸೂಚಿಸಿದಾಗ ಮೌಲಾನರು ನಗುತ್ತಾ ಅದನ್ನು ಸ್ವೀಕರಿಸಿದರು ಅಂದು ರಾತ್ರಿ 11 ಘಂಟೆಗೆ ಕಲ್ಕತ್ತೆಗೆ ಹೊರಡುವ ವ್ಯವಸ್ಥೆಯಾಗಬೇಕಾದ್ದರಿಂದ ಮೌಲಾನರ ವಿಜ್ಞಾಪನೆಯಂತೆ ಆ ತನಕ ಸ್ವತಂತ್ರ ವ್ಯಕ್ತಿಯಾಗಿ ಅವರು ಅಲ್ಲೇ ನಿಂತರು

ನೆಹರು, ನರೇಂದ್ರದೇವರು

ಅಲ್ಮೋರಾ ಜಿಲ್ಲಾ ಜೈಲಿನಲ್ಲಿದ್ದ ಜವಾಹಿರಲಾಲ್ ನೆಹರು ಮತ್ತು ಆಚಾರ್ಯ ನರೇಂದದೇವರ ಮೇಲೆ ಸ್ವತಃ ಪೋಲಿಸು ಸುಪರಿಂಟೆಂಡೆಂಟರೇ ಆದಿನ ಮುಂಜಾನೆ ಬಂದು ಬಿಡುಗಡೆಯ ನೋಟೀಸು ಜ್ಯಾರಿ ಮಾಡಿದಾಗ ಗಂಟು ಮೂಟೆ ಕಟ್ಟಿ ಹೊರಡಲು 100 ಮಿನಿಟು ತಡವಾಯಿತು. ಆ ಮೇಲೆ ತೀರಾ ಸೌಹಾರ್ದ್ರತೆಯಿಂದ ಜೈಲು ಸುಪರಿಂಟೆಂಡೆಂಟರ ಮತ್ತು ಜೈಲರರ ಕೈ ಕುಲುಕಿ ನೆಹರು, ದೇವ್ರೋ ಹೊರ ಬಂದು, ಗೇಟನಲ್ಲಿ ಕಾದು ನಿಂತಿದ್ದ ಕಾಂಗ್ರೆಸ್ ಪ್ರಮುಖರ ಆನಂದಭಾಷ್ಪ, ಮಹಿಳೆಯರ ಆರತಿ ಮಾಲೆಗಳನ್ನು ಸ್ವೀಕರಿಸಿ ಮೆರವಣಿಗೆಯಿಂದೊಯ್ಯಲ್ಪಟ್ಟರು. ಗೇಟನಲ್ಲಿ, ತನ್ನ ಪುತ್ರಿ ಶ್ರೀಮತಿ ಇಂದಿರಾ ಗಾಂಧಿಯು ಶ್ರೀ ನಗರದಿಂದ ಬಿಟ್ಟ ಈ ಕೆಳಗಿನ ತಂತಿಯು ಜವಾಹಿರರಿಗೆ ದೊರೆಯಿತು 'ಮನೆಗೆ ಸುಸ್ವಾಗತ, ತಂದೆಯೇ ನೀನಿಲ್ಲದೆ ಲೋಕ ಕಗ್ಗತ್ತಲಾಗಿದೆ ನಾನು ಅಲಹಾಬಾದಿಗೆ ಹೊರಡಲಿದ್ದೇನೆ ಮುಟ್ಟುವ ಸಮಯಕ್ಕೆ ತಂತಿಬಿಡುತ್ತೇನೆ—ಇಂದಿರಾ'. ಇಬ್ಬರು ಪ್ರಮುಖರೂ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಜಮೀನು ಆದ 'ಖಾಲಿ'ಗೆ ಹೋಗಿದ್ದಾರೆ. 'ಅಭಿನಂದನೆಗಳು. ಅಂತರ್ರಾಷ್ಟ್ರೀಯ ಸಮತಾವಾದ ಮತ್ತು ಭಾರತಸ್ವಾತಂತ್ರ್ಯಕ್ಕೆ ಪೂರ್ಣ ಬೆಂಬಲವೀವ ವಾಗ್ದಾನ ನಮ್ಮದು' ಎಂದು ಲಂಡನಿನ ಸ್ವತಂತ್ರ ಲೇಬರ್ ಪಕ್ಷೀಯರು ನೆಹರುಗಳಿಗೆ ತ ತಿಕೊಟ್ಟಿದ್ದಾರೆ

ಪಟೇಲ್, ಶಂಕರರಾವ್ ದೇವ್ರೊ—

ಅದೇ ದಿನ ಮುಂಜಾನೆ 7–30ಕ್ಕೆ ಎರವಾಡಾ ಜೈಲಿನಿಂದ ಹೊರಬಂದರು ಜೈಲು ಗೇಟಿನಲ್ಲಿ ಕಾದು ನಿಂತಿದ್ದ ಕಾಂಗ್ರೆಸಿಗರಿಂದ ಪುಷ್ಪಹಾರಾಲಂಕೃತರಾಗಿ ಇಬ್ಬರು ಪ್ರಮುಖರೂ ಮಹಾ ರಾಷ್ಟ್ರದ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಗಡ್ಗಿಲರ ನಿವಾಸಕ್ಕೊಯ್ಯಲ್ಪಟ್ಟು ತುಸು ವಿಶ್ರಾಂತಿ ಪಡೆದು, ಖಾನು ಗಾಂಧಿಯವರನ್ನು ಕೂಡಿಕೊಂಡು ಪಾಂಚ್ ಗನಿಗೆ ಹೊರಟು ಹೋದರು. ಗಾಂಧಿಜೀಯಿಂದ ಕಾಗದ ಹಿಡಿದುಕೊಂಡು ಖಾನು ಗಾಂಧಿಯವರು ಸರ್ದಾರರ ಸ್ವಾಗತಕ್ಕಾಗಿ ಪೂನೆಗೆ ಬಂದಿದ್ದರು. ಮೂರು ವರುಷಗಳ ಬಳಿಕ ಪಾಂಚ್ ಗನಿಯಲ್ಲಿ ಗಾಂಧಿ–ಸರ್ದಾರರು ತಾ 15ರಲ್ಲಿ ಪುನಃ ಒಟ್ಟಾದರು

ಪ್ರಸಾದ್, ಪಟ್ಟಾಭಿ, ಕೃಪಾಲನಿ

ಬಂಕಿಪೋರ್ ಜೈಲು ದ್ವಾರವು ಅದೇ ದಿನ ಮುಂಜಾನೆ 7–30ಕ್ಕೆ ತೆರೆಯಲ್ಪಟ್ಟು ಬಾಬು ರಾಜೇಂದ್ರ ಪ್ರಸಾದರು ಹೊರ ಬಂದರು. ಅಷ್ಟೇ ಹೊತ್ತಿಗೆ ವೆಲ್ಲೂರು ಕೇಂದ್ರ ಕಾರಾಗೃಹದಿಂದ ಪಟ್ಟಾಭಿ ಸೀತಾರಾಮಯ್ಯನವರು ಬಿಡುಗಡೆಗೊಂಡರು. ಪಟ್ಟಾಭಿಯವರು ತನಗಾಗಿ ಕಾದು ನಿಂತಿದ್ದು, ಪ್ರಶ್ನೆಗಳನ್ನು ಕೇಳ ಹತ್ತಿದ ಪತ್ರಿಕಾಪ್ರತಿನಿಧಿಗಳೊಡನೆ ವಿನೋದವಾಡು



ಕಾರ್ಯದರ್ಶಿ.

ತ್ತಾ, ವೈಸರಾಯಿ ಸೂಚನೆಗಳ ಕೂಲಂಕುಷ ವಿಮರ್ಶೆ ನಡಿಸದೆ, ಈಗ ಏನನ್ನು ಹೇಳುವದೂ ಅಸಾಧ್ಯವೆಂದರು. ಅವರು ಮದ್ರಾಸ್ ಸೇರಿದ್ದಾರೆ. ಕರಾಚಿ ಜೈಲಿನಿಂದ ಆ ಮುಂಜಾನೆಯಲ್ಲೇ ಆಚಾರ್ಯ ಕೃಪಲಾನಿಯವರ ಬಿಡುಗಡೆಯಾಗಿದೆ ತಾನು ಅಹಮ್ಮದ್ ನಗರದಿಂದ ಕೊಂಡು ಹೋಗಿದ್ದ ರಾಷ್ಟ್ರಧ್ವಜವೊಂದು ಕೈಯಲ್ಲಿದ್ದಂತೆಯೇ ಕೃಪಲಾನಿಯವರು ಜೈಲು ಗೇಟು ದಾಟಿ ಬರುತ್ತಿರುವದು ಕಾಣಿಸಿತು. ದ್ವಾರದಲ್ಲಿ ಸಂಭ್ರಮದಿಂದ ಸ್ವಾಗತಿಸಲ್ಪಟ್ಟು ಕರಾಚಿಯ ತನ್ನ ಸಹೋದರನ ಮನೆಯಲ್ಲಿ ಒಂದೆರಡು ದಿನನಿಂತು ಬೊಂಬಾಯಿಗೆ ಹೋಗಲಿದ್ದಾರೆ. ಮಧ್ಯ ಪ್ರಾಂತ್ಯದ ಮಾಜೀ ಪ್ರಧಾನಿ ರವಿಶಂಕರ ಶುಕ್ಲ, ಬೊಂಬಾಯಿ ಕೌನ್ಸಿಲಿನ ಅಧ್ಯಕ್ಷ ಮಾವಳಂಕರ್, ಮೊದಲಾದ ಇತರ ಪ್ರಮುಖರೂ ಬಿಡುಗಡೆ ಹೊಂದಿದ್ದಾರೆ.

ಉತ್ಸಾಹದಲ್ಲಿದ್ದಾರೆ

ಎಲ್ಲಾ ಪ್ರಮುಖರೂ ದೇಹದ ಕೆಲವಂಶ ತೂಕ ಕಳಕೊಂಡಿದ್ದಾರೆ. ಜ್ವರ, ಉಬ್ಬಸ, ಹಲ್ಲು ನೋವು ಇತ್ಯಾದಿ ಒಂದಲ್ಲೊಂದು ಸೌಮ್ಯ ಅನಾರೋಗ್ಯ ಈ ಪ್ರಮುಖ ಮಂಡಲಿಯು ಬಿಟ್ಟಿಲ್ಲ ರಾಜೇಂದ್ರ ಪ್ರಸಾದರ ಉಬ್ಬಸವು 'ಪೆನಿಸಿಲಿನ್' ಚಿಕಿತ್ಸೆಯಿಂದಾಗಿ ಬಹುಮಟ್ಟಿಗೆ ಗುಣವಾಗಿದೆಯಂತೆ. ಎಲ್ಲಾ ಪ್ರಮುಖರೂ ಅತ್ಯುತ್ಸಾಹದಲ್ಲಿದ್ದಾರೆ. "ಜೈಲು ಕೋಣೆಯೊಂದರಲ್ಲಿ ವಾಸಿಸಲು ಬಿಡುವದನ್ನೇ ಶಿಕ್ಷೆಯೆಂದು ಯಾಕೆ ಭಾವಿಸುತ್ತಾರೋ ನನಗರಿಯದು" ಎಂದು ಬಿಡುಗಡೆಗೊಂಡ ಮೌಲಾನಾ ಅಜಾದರು ಬಾತ್ಮೀದಾರರೊಡನೆ ತಮಾಷೆಯಾಡಿದಂತೆ ಯಾರ ಹೃದಯವನ್ನೂ ಜೈಲುವಾಸ ಕದಡಿಲ್ಲ. ವರ್ಕಿಂಗ್ ಕಮಿಟಿಯು ಸಭೆ ಸೇರಿ ಪರ್ಯಾಲೋಚನೆ ನಡೆಯುವ ಮೊದಲು ವೇವೆಲ್ ಸುಧಾರಣೆಗಳ ಕುರಿತು ಸ್ಪಷ್ಟಾಭಿಪ್ರಾಯ ಸೂಚಿಸಲು ಅವರಾರೂ ಸಿದ್ಧರಿಲ್ಲ.

Unique facilities under Housing Scheme!
Rare opportunity for solve the Children Education Problem!

THE CENTRAL
MERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವರಾರು—
— ನಿಮ್ಮ ಕಾಲಾನಂತರ ನಿಮ್ಮ ಆಶ್ರಿತರ ಸುಖ ಬಯಸುವಿರಾದರೆ —
ಒಂದೇ ಒಂದು ದಾರಿಯಿದೆ! ಯಾವುದು? **ಜೀವ ವಿಮೆ!**
ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಯಶಸ್ವಿತೆಯನ್ನೂ ಅವರು ಆನಂದದ ನೆಲೆವೀಡನ್ನೂ ನೋಡಲಿಚ್ಛಿಸದಿರುವ ತಂದೆ ತಾಯಿಗಳಾರಿರುವರು. ಅಂತಹ ಎಜ್ಯುಕೇಶನ್ ಎಂಡೋವ್ಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ. ಆದ್ದರಿಂದ ಭಾವೀ ಜೀವನದಲ್ಲಿ ಬೆಳಕನ್ನು ಕಾಣಲಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

'ಸೆಂಟ್ರಲ್ ಮರ್ಕೆಂಟೈಲ್'

ಈ ವಿಧದ ನಿಮ್ಮ ಪವಿತ್ರೋದ್ದೇಶವನ್ನು ಈಡೇರಿಸಲು ಬದ್ಧಕಂಕಣವಾಗಿದೆ ಎಂಬುದನ್ನು ಮರೆಯಬೇಡಿರಿ'

ಎಲ್ಲೆಲ್ಲೂ ಏಜೆಂಟರೂ ಓರ್ಗನೈಜರರೂ ಬೇಕಾಗಿರುವರು!

ಕೂಡಲೇ ಬರೆಯಿರಿ.— **B. DIVAKARA HEGDE,**
AGENCY ORGANIZER,
Central Mercantile Assurance Co., Ltd.,
Patel House, Churchgate Street,
FORT, BOMBAY.

ವಿದ್ಯಾವಿಷಯಕ ಸಮ್ಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ **1—8—0** ಮಾತ್ರ.
ಬೈಂಡು ಮಾಡಿದ ಸಂಪುಟಕ್ಕೆ ರೂ 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

(೩ನೇ ಪುಟದಿಂದ ಮುಂದುವರಿದುದು.)

ರವೆದ್ದಿದೆ, ಅನುಮೋದನೆ ದೊರೆತಿದೆ. "ಹಿಂದುಸ್ಥಾನವು ನನ್ನ ಉದ್ಯೋಗವನ್ನಿ ಕಾಂಗ್ರೆಸ್ ಪ್ರಮುಖರನ್ನು ಬಂಧಿಸಬಾರದಿತ್ತೆಂದು 1942ರಲ್ಲೇ ನಾನು ಹೇಳಿದ್ದೆನೆ. ಈಗ ಅವರು ಬಿಡುಗಡೆ ಹೊಂದಿದ್ದಾರೆ. ಹೆಚ್ಚಿಗೆ ಹೇಳತಕ್ಕವನು ನಾನಲ್ಲ" ಎಂದು ಬರ್ನಾರ್ಡ್ ಶಾ ಅಂದಿದ್ದಾರೆ ಈ ಬಿಡುಗಡೆಯ ಮೇಲೆ ಬಹುತೇಕವಾಗಿ ದೇಶೀಯರೆಲ್ಲರಿಗೂ ಸದಭಿಪ್ರಾಯವಿದೆ

ವೇವೆಲ್ ನಿರೂಪಣೆಯ ಕುರಿತು ಗಾಂಧಿಜೀಯ ಅಭಿಪ್ರಾಯ.

ಕರ್ಣ ಕಠೋರ 'ಸವರ್ಣಹಿಂದು' ಶಬ್ದದ ಅರ್ಥವೇನು?

ಗಾಂಧೀ ವೇವೆಲ್ ತಂತೀ ವ್ಯವಹಾರ.

ವೇವೆಲರ ಆಕಾಶವಾಣಿ ಘೋಷಣೆಯಾಗುತ್ತಿದ್ದಾಗಲೇ ಪಾಂಚಗನಿಯಲ್ಲಿದ್ದ ಪತ್ರಿಕಾ ಪ್ರತಿನಿಧಿಗಳು 'ಶೋರ್ಟ್‌ಹೇಂಡ್'ನಲ್ಲಿ ಅದನ್ನು ಬರೆಕೊಂಡು ಮಹಾತ್ಮಾ ಗಾಂಧಿಯವರಿಗೋದಿ ಹೇಳಿದರು. ಪ್ರಧಾನ ಕಾರ್ಯದರ್ಶಿ ಪ್ಯಾರೇಲಾಲರಿಂದದು ಮಹಾತ್ಮರ ಸಮಕ್ಷಮ ವಾಚಿಸಲ್ಪಟ್ಟಿತು. ಕೆಲವು ವಿಷಯಗಳ ಸ್ಪಷ್ಟೀಕರಣಕ್ಕಾಗಿ ಮಧ್ಯೆ ಮಧ್ಯೆ ಆ ವಾಚನವನ್ನು ನಿಲ್ಲಿಸಿ ಕೇಳುತ್ತಾ ಮಹಾತ್ಮಾ ಗಾಂಧಿಯವರು ಎಲ್ಲವನ್ನೂ ಮುಂದಿಟ್ಟುಮಾಡಿಕೊಂಡು ಈ ಕೆಳಗಿನ ಹೇಳಿಕೆಯಿತ್ತಿದ್ದಾರೆ —

'ನಾನಲ್ಲ'

"ವೈಸರಾಯೀ ಘೋಷಣೆಯಲ್ಲಿರುವ ಶುದ್ಧ ರಾಜಕೀಯಾಂಶದ ಕುರಿತು ನಾನೇನನ್ನೂ ಹೇಳುವಂತಿಲ್ಲ. ಈಗ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರು ಸ್ವತಂತ್ರರಾಗಿದ್ದಾರೆ. ನಾನವರಿಗೆ ನನ್ನ ಸಲಹೆ ಮಾತ್ರ ಕೊಡಬಲ್ಲೆ. ಕಾಂಗ್ರೆಸ್ ಧೋರಣೆಯನ್ನು ರೂಪಿಸಬಲ್ಲವರು, ಅಧಿಕಾರಬದ್ಧವಾಗಿ ಆಡಬಲ್ಲವರು ಹಾಗೂ ಮಾಡಬಲ್ಲವರು ಅವರೇ. ಆ ಘೋಷಣೆಯನ್ನೋದಿದೊಡನೆಯೇ ನಾನು ವೈಸರಾಯರಿಗೊಂದು ತಂತಿಬಿಟ್ಟು 'ಕಾಂಗ್ರೆಸಿನ ಕ್ರಮಬದ್ಧ ಪ್ರತಿನಿಧಿಯಾಗಿ' ನನಗಾವ ಸ್ಥಾನವೂ ಇಲ್ಲವೆಂಬ ಸಂಗತಿಯ ಕಡೆಗೆ ಅವರ ಲಕ್ಷ್ಯವನ್ನೆಳೆದಿದ್ದೇನೆ. ಆ ಸ್ಥಾನವು ಕಾಂಗ್ರೆಸಿನ ಅಧ್ಯಕ್ಷರದು. ಅಥವಾ ಪ್ರತ್ಯೇಕ ಸಂದರ್ಭಕ್ಕಾಗಿ ಪ್ರತಿನಿಧಿಯಾಗಿ ಆರಿಸಲ್ಪಡುವವರದು. ಹಲವು ವರುಷಗಳಿಂದಲೂ ಆಗತ್ಯಬಿದ್ದಾಗಲೆಲ್ಲಾ ನಾನು ಕಾಂಗ್ರೆಸಿನ ಅನಧಿಕಾರೀ ಸಲಹೆಗಾರನಾಗಿ ವರ್ತಿಸಿದ್ದೇನೆ. ಇಂತಹ ಪ್ರಾತಿನಿಧ್ಯರಹಿತ ಸ್ಥಿತಿಯಲ್ಲೇ ನಾನು ಕ್ವಯದ್-ಇ-ಅಜ್ಞಾಮ್ ಜಿನ್ನರೊಡನೆ ಸಂಭಾಷಿಸಲು ಹೋಗಿದ್ದೆನೆಂಬುದನ್ನು ಸಾರ್ವಜನಿಕರು ಜ್ಞಾಪಿಸಬಹುದು. ಬ್ರಿಟಿಷ್ ಸರಕಾರವನ್ನು ಪ್ರತಿನಿಧಿಸುತ್ತಿರುವ ವೈಸರಾಯರೊಡನೆ ವರ್ತಿಸುವಾಗ ಕೂಡಾ ನಾನು ಅದಕ್ಕಿಂತ ಭಿನ್ನ ಸ್ಥಾನವನ್ನು ಅಂಗೀಕರಿಸಲಾರೆ.

'ಸವರ್ಣ ಹಿಂದೂ' ಶಬ್ದ ಕರ್ಣ ಕಠೋರ!

ವೈಸರಾಯೀ ಘೋಷಣೆಯಲ್ಲಿರುವ ಒಂದು ಸೂಚನೆ ಮಾತ್ರ ನಿಜಕ್ಕೂ ನನ್ನ ಕರ್ಣ ಕುಹರವನ್ನು ಭೇದಿಸುತ್ತಿದೆ; ಅದು ರಾಜಕೀಯ ಬುದ್ಧಿಯ ಪ್ರತಿಯೊಬ್ಬ ಹಿಂದುವಿಗೂ ಕಠೋರವಾಗುವದೆಂದು ನಾನು ಆಶಿಸುತ್ತೇನೆ. 'ಜಾತಿ ಹಿಂದುಗಳು' (Caste Hindus) ಎಂಬ ಸೂಚನೆಯ ಕಡೆಗೆ ನನ್ನೀ ಮಾತು. ಅಖಿಲ ಭಾರತದ ಪ್ರಾತಿನಿಧ್ಯ ವಹಿಸಲಿಚ್ಛಿಸುವ—ಭಾರತದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ—ಕಾಂಗ್ರೆಸಿನ ಮಾತು ಹಾಗಿರಲಿ, ರಾಜಕೀಯತಃ 'ಸವರ್ಣ ಹಿಂದು' ಎಂದು ಹೇಳಿಸಿಕೊಳ್ಳುವವರೇ ಇಲ್ಲವೆಂದು ನಾನು ಸರಿ ಹೇಳಬಲ್ಲೆ. ಹಿಂದೂ ಮಹಾಸಭೆಯ ವೀರ ಸಾವರ್ಕರರಾಗಲೀ, ಡಾ। ಶ್ಯಾಮ ಪ್ರಸಾದ್ ಮುಖರ್ಜಿ, ಡಾ। ಮೂಂಜೆಯವರಾಗಲೀ ಸವರ್ಣ ಹಿಂದುಗಳ ಪ್ರತಿನಿಧಿಗಳಾಗಿರುವರೆ? ಅವರು ಜಾತಿ ಭೇದವಿಲ್ಲದ ಎಲ್ಲಾ ಹಿಂದುಗಳ ಪ್ರತಿನಿಧಿಗಳೂ ಆಗಿಲ್ಲವೆ? ಅವರು ಅಸ್ಪೃಶ್ಯರೆನ್ನಿಸುವವರನ್ನೂ ಒಳಗೊಂಡಿಲ್ಲವೆ? ತಾವು ಸವರ್ಣ ಹಿಂದುಗಳೆಂದು ಅವರು ತಾವಾಗಿ ಹೇಳಿಕೊಳ್ಳುವರೆ? ಇಲ್ಲ, ಎಂದು ನಾನು ನಂಬುತ್ತೇನೆ. ರಾಜಕೀಯ ಮನೋವೃತ್ತಿಯ ಎಲ್ಲಾ ಹಿಂದುಗಳೂ ಹಾಗೇನೇ. ಪೂಜ್ಯ ಪಂಡಿತ ಮಾಲವೀಯಜೀಯವರು ಸವರ್ಣಾವರ್ಣ ಭಿನ್ನತೆಯುಳ್ಳವರಾಗಿದ್ದರೂ ಇತರ ಹಿಂದುಗಳಿಂದ ಬೇರೆಯಾಗಿ 'ಸವರ್ಣ ಹಿಂದು' ಎಂದು ಕರೆಯಿಸಿಕೊಳ್ಳಲು ಅವರು ಕೂಡಾ ತಿರಸ್ಕರಿಸುವರೆಂಬುದನ್ನು ನಾನು ಬಲ್ಲೆ.

ಆಧುನಿಕ ಹಿಂದುತ್ವ

ಎಲ್ಲಾ ಜಾತಿ ಭೇದಗಳ ನಿವಾರಣೆಯೇ ಹಿಂದುತ್ವದ ಆಧುನಿಕ ಅಂತರ್ಭಾಗ. ಹಿಂದೂ ಸಮಾಜದ ಆಸ್ಪ್ರಾಗತಿಕರ ಆಂದೋಲನದ ಅರಿವು ನನಗಿದ್ದರೂ ನಾನಿದನ್ನೇ ಅಳವಡಿಸಿಕೊಂಡಿದ್ದೇನೆ. ಆದ್ದರಿಂದ ಲೀಗಿನ ಅಸದೃಗೋಳಗಾಗಿ ವೈಸರಾಯರು ಆ ರೀತಿ ಸೂಚಿಸಿಬಿಟ್ಟರೆಂದು ನಂಬುತ್ತೇನೆ. ನನಗೆ ಗೊತ್ತಿದ್ದಂತೆ ಹಿಂದೂ ಸಮಾಜಕ್ಕೆ ಆ ರೀತಿ ಮನೋಭೇದವನ್ನು ನಿರ್ಮಿಸಿರುವವನ್ನು ಅಥವಾ ಅವನ್ನು ನಿರ್ಮಿಸಿರುವುದನ್ನು ವೈಸರಾಯರ ಗಮನಕ್ಕೆ ತರುತ್ತೇನೆ. ಇದು ಹಿಂದುಗಳ ರಾಜಕೀಯ ಮನೋವೃತ್ತಿಯ ಸೂಕ್ಷ್ಮ ಸ್ವಭಾವನ್ನೇ ಘಾತಿಸಿ ರಾಜಕೀಯ ಪ್ರತಿಕ್ರಿಯೆಗಳನ್ನು ನಿರ್ಮಿಸುವಂತಹದಲ್ಲವಾಗಿದ್ದರೆ ಈ ವಿಷಯದ ಪ್ರಸ್ತಾಪಕ್ಕೆ ನಾನು ಹೋಗುತ್ತಿರಲಿಲ್ಲ.

ನಿಯೋಜಿತ ಸಮ್ಮೇಲನ

ಸರಿಯಾದ ರಾಜಕೀಯ ನಿದಾನವನ್ನನುಸರಿಸಿ ಮತ್ತು ಬಿರುಕುದಾಯೀ ರೂಪೋದ್ದೇಶಗಳಿಲ್ಲದೆ ಕೂಡಿ ಬರುವದಾದರೆ ನಿಯೋಜಿತ ಸಮ್ಮೇಲನವು ಹೆಚ್ಚಿನ ಸತ್ಕಾರ್ಯಮಾಡಬಲ್ಲುದು. ಆಮಂತ್ರಿತರೆಲ್ಲರೂ ಜತೆ ಭಾರತೀಯರಂತೆ ಹಾಜರಾಗಿ ಭಾರತದ ಸಹಜಗುರಿಯತ್ತ ಸಾಗುವವರಿರಬೇಕಲ್ಲದೆ, ಭಾರತೀಯ ಸಮಾಜದ ವಿವಿಧ ಶಾಖೆಗಳ ಪ್ರತಿನಿಧಿ ವ್ಯಕ್ತಿಗಳಾಗಿರಕೂಡದೆಂಬುದು ನಿಸ್ಸಂದೇಹ. ಮುಂಬರುವ ವೈಸರಾಯೀ ಸಮ್ಮೇಲನದ ಮೂಲವೆಂದು ನಾಣಿಸುವ ಭುಲಾಭಾಯಿ-ಲಿಯಾಖತ್ ಒಪ್ಪಂದದ ಕುರಿತು ನನ್ನ ಅಭಿಪ್ರಾಯವಿದ್ದುದು ಹೀಗೆಯೇ. ವೈಸರಾಯೀ ಘೋಷಣೆಯಲ್ಲಿ ಕಂಡುಬರುವ ಒಪ್ಪಂದದ ಭುಲಾಭಾಯಿ ಸೂಚನೆಗಳಲ್ಲಿರಲಿಲ್ಲ. ತನ್ನ ಸೂಚನೆಯ ಕುರಿತು ಭುಲಾಭಾಯಿಗಳು ನನ್ನ ಅಭಿಪ್ರಾಯ ಕೇಳಿದಾಗ ಅವರ ಸಲಹೆಗಾರನಾಗಿ ವರ್ತಿಸಿದ್ದಕ್ಕಾಗಿ ನಾನೇನೂ ನಾಚುವದಿಲ್ಲ.

ರಾಷ್ಟ್ರ ದೃಷ್ಟಿ

ಭುಲಾಭಾಯೀ ದೇಸಾಯಿಗಳ ಸೂಚನೆಗಳು, ನಾನು ಅರ್ಥ ಮಾಡಿಕೊಂಡಂತೆ ಜಾತೀಯ ಬಿಕ್ಕಟ್ಟು ನಿವಾರಣೆಗೆ ಸುಗಮವೆಂಬುದರಿಂದ ನನ್ನ ಒಪ್ಪಿಗೆಯಿದ್ದಿತು. ವರ್ಕಿಂಗ್ ಕಮಿಟಿ ಸದಸ್ಯರ ಮೇಲಿರುವ ನಿಷ್ಠಾ ವರ್ತನೆಯನ್ನು ಉಪಯೋಗಿಸುವನೆಂದೂ, ಸೂಚನೆಯು ಅಂಗೀಕಾರಾರ್ಹವೆಂಬುದಕ್ಕೆ ಕಾರಣಗಳನ್ನು ಕೊಡುವೆನೆಂದೂ ಭುಲಾಭಾಯಿಗಳಿಗೆ ಮಾತು ಕೊಟ್ಟಿದ್ದೆ. ಆ ಸೂಚನೆಯ ಕುರಿತು ಈಗಲೂ ನನಗೆ ಅನುಮಾನವಿಲ್ಲ. ಎರಡು ಪಕ್ಷಗಳೂ ತಂತಮ್ಮ ಕ್ಷೇತ್ರಗಳ ಸರಿಯಾದ ಪ್ರಾತಿನಿಧ್ಯ ವಹಿಸಿ, ಭಾರತ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೂಂಡಾಪುರ, ಪುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು

ಮೂಲಧನ ರೂಪಾಯಿ 26 ಲಕ್ಷ
ಕ್ಷೇಮನಿಧಿ ರೂಪಾಯಿ 10 ಲಕ್ಷ

ಕೆನರಾ ಬೇಂಕ್ ಲಿಮಿಟೆಡ್.
(ESTD 1906 ಸ್ಥಾಪನ)

CANARA BANK LIMITED
(Incorporated in British India, liability of Members Limited)

ಸ್ವಾತಂತ್ರ್ಯ ಗುರಿಯ ಅಂಗೀಕಾರ.

ಸ್ವಾತಂತ್ರ್ಯವನ್ನೇ ಸಮಾನ ಗುರಿಯಾಗಿ ಇಟ್ಟುಕೊಂಡಲ್ಲಿ ಒಳ್ಳೆತೇ ಸಂಭವಿಸಬಹುದು. ಇಷ್ಟು ಹೇಳಿ ನಾನು ಮುಗಿಸಬೇಕಾಗಿದೆ, ವರ್ಕಿಂಗ್ ಕಮಿಟಿಯು ಸೂತ್ರವನ್ನು ಕೈಗೆ ತಗೆದುಕೊಳ್ಳಲಿಕ್ಕಿದೆ. ಬಾಕಿಯಿರುವ ಪ್ರಶ್ನೆಗಳ ಕುರಿತು ಕಾಂಗ್ರೆಸಿನ ಅಭಿಪ್ರಾಯ ಪ್ರಕಟಿಸುವ ಬಾಧ್ಯತೆಯು ಅದರ ಸದಸ್ಯರದಾಗಿದೆ.

ವೇವೆಲ್—ಗಾಂಧೀ ತಂತೀ ವ್ಯವಹಾರ

ಜೂನ್ 14 ವೈಸರಾಯಿಂದ ಗಾಂಧಿಜೀಗೆ

"ನೀವು ನನ್ನ ಘೋಷಣೆಯನ್ನು ಕೇಳಿರಬಹುದು. ಅದರ ಪ್ರತಿ ಹಾಗೂ ಪೇಂಟಿನ ಕಾಗದಗಳ ಹೇಳಿಕೆಯ ವಿವರಗಳು ನಾಳೆ ಪತ್ರಿಕೆಗಳಲ್ಲಿ ಬರಲಿವೆ. ಸಮ್ಮೇಲನಕ್ಕೆ ಹಾಜರಾಗಲು ನೀವು ಸಮ್ಮತಿಸುವಿರೆಂದು ನಂಬಿದೆ. ಪ್ರಥಮ ಸಭೆಗೆ ಜೂನ್ 25, ಪೂರ್ವಾಹ್ನ 11ಘಂ, ವೈಸರಾಯಿ ಭವನ, ಸಿಮ್ಲಾವನ್ನು ಸೂಚಿಸಿದ್ದೇನೆ. ಸಮ್ಮೇಲನಾರಂಭದ ಮೊದಲೇ ನಿಮ್ಮೊಡನೆ ಸಂಭಾಷಿಸಬೇಕೆಂಬುದನ್ನು ನಾನು ಸ್ವಾಗತಿಸುತ್ತೇನೆ. ನಿಮ್ಮ ಅನುಕೂಲತೆಗೊಳಪಟ್ಟು ನನ್ನ ಸೂಚನೆ—ಜೂನ್ 24, ಅಪರಾಹ್ನ 5ಘಂ, ವೈಸರಾಯಿ ಭವನ, ಸಿಮ್ಲಾ. [illegible] ಅಂಗೀಕರಿಸುವಿರೆಂಬ ಆಸೆಯಿಂದ 'ಆರ್ನ್ಸ್‌ಕ್ಲಿಫ್' ಎಂಬ ಬಂಗ್ಲೆಯನ್ನು ನಿಮಗಾಗಿ ವ್ಯವಸ್ಥೆ ಮಾಡಿಸಿದ್ದೇನೆ."

ಜೂನ್ 14 ಗಾಂಧಿಜೀಯಿಂದ ವೈಸರಾಯಿಗೆ

"ವೈಸರಾಯೀ ಘೋಷಣೆಯನ್ನು ಓದಿದ್ದೇನೆ. ಓರ್ವ ಆಮಂತ್ರಿತನಾಗಿ ನನ್ನ ಹೆಸರೂ ನಮೂದಿಸಲ್ಪಟ್ಟಿದೆ. ನಾನು ಯಾವುದೊಂದು ಸಂಸ್ಥೆಯ ಪ್ರತಿನಿಧಿಯೂ ಅಲ್ಲವೆಂದು ಸಾರಿಹೇಳಿ ಸ್ಪಷ್ಟಪಡಿಸಿದ್ದೇನೆ. ಆದ್ದರಿಂದ ಕಾಂಗ್ರೆಸಿನ ಪ್ರತಿನಿಧಿಯಾಗಿ ನಾನು ಹಾಜರಾಗಲಾರೆ. ಆ ಸ್ಥಾನವು ಕಾಂಗ್ರೆಸಿನ ಅಧ್ಯಕ್ಷರದು ಅಥವಾ ಅವರಿಂದ ನೇಮಕ ಹೊಂದುವವರದಾಗಿದೆ. ತಪ್ಪಭಿಪ್ರಾಯ ಅಥವಾ ದುರ್ಭಾವನೆ ಹುಟ್ಟದಂತೆ ನಾನು ಮುಂದಾಗಿ ಸೂಚನೆ ಕಳುಹಿದ್ದೇನೆ."

ಜೂನ್ 15. ವೈಸರಾಯಿಯಿಂದ ಗಾಂಧಿಜೀಗೆ

"ನಿಮ್ಮ ತಂತಿಗಾಗಿ ಧನ್ಯವಾದ. ನಿಯಮಬದ್ಧ ಸ್ಥಾನಮಾನ ಹೇಗೂ ಇರಲಿ, ನಿಮ್ಮ ಸಹಾಯವು ನನಗೆ ಅಮೂಲ್ಯವಿದೆ.

(ಒನೇ ಪುಟ ನೋಡಿರಿ)

The Canara Banking Corporation Limited.

(Incorporated in British India, with limited Liability.)

Estd. 1906

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18—5—1945.

ಉಡುಪಿ, ಗುರುವಾರ ೨೧-೬-೧೯೪೫

ವೇವೆಲ್ ಕೊಡುಗೆ

ಭಾರತದ ರಾಜಕೀಯ ಜಾಡ್ಯ ನಿವಾರಣೆಗಾಗಿ ಲೋರ್ಡ್ ವೇವೆಲರು ಲಂಡನಿನಲ್ಲಿ ತಯಾರಿಸಿ ತಂದಿರುವ 'ಅರಿಷ್ಟ'ವೊಂದು ನಮ್ಮ ಮುಂದಿದೆ. ಒಂದು ಮೇಜಿನ ಮುಂಭಾಗದಲ್ಲಿ ಕುಳಿತು ಅದರ ಪಾಲು ಪಡೆಕೊಂಡು ಹೋಗಿರೆಂದು ವೈಸರಾಯಿಗಳು ಹಿಂದೀ ಧುರೀಣರನ್ನು ಸಿಮ್ಲಕ್ಕೆ ಕರೆದಿದ್ದಾರೆ. ಅದು ಬ್ರಿಟಿಷರ ಕೈವಾಡ-ಬಿಳಿಜನರ ಅಮಲು ಮಿಶ್ರಿತ ಪಾಕ-ಆದ್ದರಿಂದ ಸಹಜವಾಗಿ ಹಿಂದೀ ಅಭಿರುಚಿಗೊಗ್ಗದ ದುರ್ವಾಸನೆ ಒಡೆಯುತ್ತಿದೆ. ಆದರೂ 'ಇದು ಒಂದು ಚಿಕಿತ್ಸೆ' ಎಂದು ಒಪ್ಪಿಕೊಳ್ಳದೆ ನಿರ್ವಾಹವಿಲ್ಲ. ಕಾಂಗ್ರೆಸ್ ಪ್ರಮುಖರ ಬಿಡುಗಡೆಯಾಗಿದೆ. ಶುಭ್ರ ವಾತಾವರಣ ನಿರ್ಮಾಣಗೊಂಡಿದೆ ಮಿ ಅಮೆರಿಯಂಥವರ ಬಾಯಿಯಿಂದ ಇದೀಗ ಮೊದಲ ಬಾರಿ ಮಧುರ ಮಾತುಗಳು ಬಂದಿವೆ. 1942ನೇ ಆಗೋಸ್ತು 9ರಲ್ಲಿ ಪ್ರದರ್ಶಿಸಿದ್ದ ಮದೋನ್ಮತ್ತತೆಗೆ ವಿರುದ್ಧವಾಗಿ 1945ನೇ ಜೂನ್ 14ರಲ್ಲಿ ಮಾಧುರ್ಯ ಸುರಿದಿದೆ. ಅಂದು ಅಗ್ನಿ ಹೊತ್ತಿಸಿದವರು ಇಂದು ನೀರು ಹೊಯ್ದಿದ್ದಾರೆ. ಏನಿಲ್ಲೆಂದರೂ ಇಷ್ಟೊಂದು ಬದಲಾವಣೆಯಾಗಿರುವದು ಸತ್ಯ.

ವೇವಲ್ ನಿರೂಪಣೆಯು ಅಂಗೀಕಾರಾರ್ಹವೇ ಎಂಬುದು ಈಗಿನ ಪ್ರಶ್ನೆ. ಈ ಕೊಡುಗೆಯ ಆಕಾರವನ್ನು ನೋಡಿದಾಗ ಹಿಂದು ಮುಂದಿನ ವಿಚಾರ ಮಾಡಿದಾಗ-ದೇಶಾಭಿಮಾನಿಗಳು ನಿಟ್ಟುಸಿರನ್ನೇ ಬಿಡಬೇಕಾಗುವದು. ಸರ್ವ ಸೇನಾನಿಯ ಹಕ್ಕಿನಡಿಯ ದೇಶರಕ್ಷಣಾ ಖಾತೆಯೊಂದನ್ನು ಬಿಟ್ಟು ಉಳಿದ ಎಲ್ಲಾ ವಿಭಾಗಗಳೂ ಹಿಂದೀ ಸದಸ್ಯರ ಆದಳಿತೆಗೊಳಪಡುವವೆಂಬುದೇ ನಮಗೆ ದೊರೆಯುವ ಹೆಚ್ಚಿನ ಅಧಿಕಾರ. ಆದರೆ ಯಾವುದನ್ನಾದರೂ ನಾಮಂಜೂರು ಮಾಡಬಲ್ಲ ವೈಸರಾಯರ ವಿಶೇಷಾಧಿಕಾರವು ಎಲ್ಲಾ ಬಣ್ಣಗಳನ್ನು ನುಂಗುವ ಮಸಿಯಾಗಿ ಇದ್ದಲ್ಲಿಯೇ ಇದೆ. ಅರ್ಥ ಖಾತೆ, ಹೊರದೇಶಗಳ ಖಾತೆ, ಗೃಹ ಖಾತೆಯು ಭಾರತೀಯರದಾಗುವಾಗ, ಬ್ರಿಟಿಷರೇನನ್ನೂ ಕಳಕೊಳ್ಳದಂತೆ ಹ್ಯಾಕಮಿಶನರರೊಬ್ಬರು ಬರುತ್ತಾರೆ-'ಬ್ರಿಟಿಷ್ ಖಾತೆ'ಯೊಂದು ಹೊಸತಾಗಿ ನಿರ್ಮಾಣಗೊಳ್ಳುತ್ತದೆ. ಮರ್ಮಸ್ಥಾನದಲ್ಲಿ ಅಂಕುಶಧಾರಿಯಾಗಿ ವೈಸರಾಯರು ಕುಳಿತಿರುವಲ್ಲಿಗೆ ಹ್ಯಾಕಮಿಶನರರು ಬರುವದಕ್ಕೂ ಸಾಮಂತ ರಾಜ್ಯಭಾಗವೊಂದರಲ್ಲಿ ಅಂತಹ ನೇಮಕವಾಗುವದಕ್ಕೂ ಅಜಗಜಾಂತರವಿದೆ. ನಿಯೋಜಿತ ಹೊಸಾಡಳಿತೆಯ ಶಿರಸ್ಸಾಗಿ ವೈಸರಾಯಿ—ಬಲಭುಜವಾಗಿ ಸರ್ವ ಸೇನಾನಿ—ಅನ್ನ ಕೋಶವಾಗಿ ಹ್ಯಾಕಮಿಶನರರಿದ್ದು ಅದು ಬ್ರಿಟಿಷ್ ರಾಜ್ಯಾಂಗವಾಗಿಯೇ ಉಳಿಯುವದೆಂಬುದು ಸ್ಪಷ್ಟ. ಒಳಗಡೆಯಿಂದ ಹಿಂದೂದೇಶದ ಒತ್ತಡ ಬೀಳದಂತೆ ಬ್ರಿಟಿಷ್ ಪಾಗಾರವಾಗಿ ವೈಸರಾಯಿಯಿದ್ದಾರೆ, ಹೊರಗಿನ ಒತ್ತಡವನ್ನಿದಿರಿಸುವ ಬ್ರಿಟಿಷ್ ಕೋಟೆಯಾಗಿ ಸರ್ವ ಸೇನಾನಿಯಿದ್ದಾರೆ; ಇಂಗ್ಲಂಡಿನ ವ್ಯಾಪಾರೋದ್ಯಮಗಳಿಗಾಗಿ ಹೊಸದಾಗಿ ತೆರೆಯಲ್ಪಟ್ಟ ಹೆಬ್ಬಾಗಿಲು-ಹ್ಯಾಕಮಿಶನರ್. ಈ ಮುತ್ತಿಗೆಯೊಳಗಿದ್ದುಕೊಂಡು ತನ್ನಿಚ್ಛೆಯಂತೆ ಒದ್ದಾಡುವ ಸ್ವಾತಂತ್ರ್ಯವು ಹಿಂದುಸ್ಥಾನಕ್ಕೀಗ ಬಂದಿದೆ—ವೇವೆಲ್ ನಿರೂಪಣೆಯಲ್ಲಡಕವಾಗಿರುವ ಅಧಿಕಾರವಿಷ್ಟೆ.

ಅಧಿಕಾರದ ಮಾತು ಹಾಗಿರಲಿ; ಆಕಾರವೊ? ಇದು ವರೆಗಿನ ತಮ್ಮ ಯಾವ 'ಓರ್ಡಿನೆನ್ಸ್'ಗಳಿಂದಲೂ ಹತ್ತಿಕ್ಕಲಾಗದ ಭಾರತದ ರಾಜಕೀಯ ಭಾವನೆಯ ಮೇಲೆ ಈ ಕೊಡುಗೆಯನ್ನು ಕೊಡಲಿಯಾಗಿ ಪ್ರಯೋಗಿಸಿ ಬ್ರಿಟಿಷರು ಗೆದ್ದಿದ್ದಾರೆ ಎನ್ನಬೇಕು! ಕಾಂಗ್ರೆಸಿನ ಖಂಡಾಖಂಡಿ ರಾಷ್ಟ್ರೀಯ ಸಮರಾರಂಭವಾಗಿ ಕಾಲು ಶತಮಾನ ಕಳೆದಿದೆ. ಜೀನಾ ಯುದ್ಧಾವಧಿಯ ನಾಲ್ಮಡಿಯಿದು. ಈ ಅವಧಿಯಲ್ಲಿ ತನ್ನ ಗುರಿ ಮುಟ್ಟಲು ಕಾಂಗ್ರೆಸಿನಿಂದಾಗಿಲ್ಲವೆಂಬುದು ನಿಜ; ಆದರೆ ಇಡೀ ರಾಷ್ಟ್ರದಲ್ಲಿ ರಾಜಕೀಯ ಮನೋವೃತ್ತಿಯನ್ನದು ನಿರ್ಮಿಸಿದೆ ಎಂಬುದನ್ನು ಚರ್ಚಿಲ್ಲರೂ ಅಲ್ಲಗಳೆಯಲಾರರು. ರಾಷ್ಟ್ರಕ್ಕೆ ರಾಜಕೀಯ ಅಧಿಕಾರವನ್ನದು ಸಂಪಾದಿಸಿಕೊಡಲಿಲ್ಲವಾದರೂ ರಾಜಕೀಯ ಜ್ಞಾನ ದಾನಮಾಡಿದೆ. ದೇಶವು ಕಾಂಗ್ರೆಸಿನಿಂದ ಆ ಶಿಕ್ಷಣವನ್ನು ಪಡೆಯದಂತೆ ಮಾಡಲು ಸರಕಾರದಿಂದ ಇದುವರೆಗಾಗಿರಲಿಲ್ಲ; ಆದರೆ ಇಂದಿನ ಕೊಡುಗೆಯ ಮೂಲಕ ಆದನ್ನಲ್ಲಗಳೆಯಲು ಬ್ರಿಟಿಷ್ ಸರಕಾರಕ್ಕೆ ಸಾಧ್ಯವಾಯಿತೆಂಬುದು ಶೋಚನೀಯ. ಜಾತಿ ಜಗಳಗಳ ಹೊರತು ರಾಜಕೀಯ ಗಂಧವನ್ನೇ ಅರಿಯದ ರಾಷ್ಟ್ರ ಹಿಂದೂದೇಶವೆಂಬಂತೆ ವೇವೆಲ್ ಕೊಡುಗೆಯು ಜಾತೀವಾರು ಪ್ರಾತಿನಿಧ್ಯಗಳನ್ನೇ ಕೊಟ್ಟಿವೆ. ನ್ಯಾಯ ಪಕ್ಷಪಾತಿಗಳ ಹೃದಯವನ್ನು ಸಹಜವಾಗಿ ಕೊರೆಯುವಂತಹ ಹಿಂದೂ-ಮುಸಲ್ಮಾನ್ ಸಮಾನ ಪ್ರಾತಿನಿಧ್ಯದ ಮಾತು ಹಾಗಿರಲಿ; ಗಾಂಧಿಜೀಯನ್ನು ಕೆರಳಿಸಿರುವ 'ಸವರ್ಣಹಿಂದು' ಪದ ಪ್ರಯೋಗದ ಮೇಲಿನ ಜಗಳವೂ ಒತ್ತಟ್ಟಿಗಿರಲಿ; ಆದರೆ ಜಾತಿಜಾತಿಗಳಿಗೆ ಪ್ರಾತಿನಿಧ್ಯ—ರಾಜಕೀಯ ಪಕ್ಷಗಳಿಗೆ ಆಮಂತ್ರಣವೆಂದರ್ಥವೇನು? ಅವರ ಹಕ್ಕನ್ನು ಇವರು ನಿರ್ವಹಿಸಬೇಕೆ? ಮುಸಲ್ಮಾನರ ಸ್ಥಾನಗಳನ್ನು ಮುಸ್ಲಿಂ ಲೀಗು ಅಲಂಕರಿಸಲು ಬಾಧ್ಯವಿದೆ; ಹಿಂದುಗಳ ಸ್ಥಾನವನ್ನು ಕಾಂಗ್ರೆಸು ತುಂಬಿಸಿಕೊಡಬಲ್ಲುದೆ? ಇದು ನಿಜಕ್ಕೂ ಮಿ. ಜಿನ್ನರ ವಿಜಯ. 'ಕಾಂಗ್ರೆಸು ಹಿಂದೂ ಸಂಸ್ಥೆ' ಎಂಬುದು ಆಂದಿನಿಂದಲೂ ಅವರ ಆರೋಪ-ಚರ್ಚಿಲ್, ಅಮೆರಿ, ವೇವೆಲರು ಅದನ್ನೇ ಶಿರಸಾವಹಿಸಿ ಶಾಸನದ ರೂಪಕೊಟ್ಟಿದ್ದಾರೆ. ಭಾವೀ ಪಾಕಿಸ್ತಾನ ನಿರ್ಮಾಣಕ್ಕೆ ತೊದಲಾಗದಂತೆ ಈ ನವ ಯೋಜನೆಯಲ್ಲಿ ಆದಿಯಿಂದ ಅಂತ್ಯದ ವರೆಗೂ ಮುಂಜಾಗ್ರತೆ ವಹಿಸಲಾಗಿದೆ. ಇದೀಗ ವಿಭಾಗಿಸಿ ಆಳುವ ಧೋರಣೆ!

ಕಾಂಗ್ರೆಸಿನ ಪರೀಕ್ಷಾಕಾಲವಿದು; ಆದರ ವರ್ಚಸ್ಸನ್ನು ಕುಂದಿಸುವ ಪ್ರಯತ್ನ ನಡೆದಿದೆ; ಆದರ ಅಸ್ತಿತ್ವವನ್ನು ಅಲ್ಲಗಳೆಯುವ ಅಪಮಾನವಾಗಿದೆ; ಎಲ್ಲಕ್ಕಿಂತ ಹೆಚ್ಚಾಗಿ ಜಾತೀಯ ಬಣ್ಣ ಬಳಿದು ಅದರ ರೂಪವನ್ನೇ ಕೆಡಿಸುವ ಅನ್ಯಾಯವಾಗಿದೆ. ಅದರಿದನ್ನು ಇದಿರಿಸಿ ಗೆಲ್ಲುವುದರಲ್ಲೇ ಕಾಂಗ್ರೆಸಿಗರ ಪೌರುಷವಿದೆ. ಕೇಂದ್ರಾಧಿಕಾರದ ಬದಲಾವಣೆಯ ಮಟ್ಟಿಗೆ—ರಾಜಾಜಿ ಭುಲಾಭಾಯಿಗಳಂಥವರಿರುವಾಗ-ಒಳಹೊಕ್ಕು ಹೋರಾಡುವ ಸಂದರ್ಭವೀಗ ಕಾಂಗ್ರೆಸಿಗೆ ಬಂದಿದೆ; ಆ ಜಾತೀಯ ವಿಷಮಾತ್ರ ಆದರ ಕರುಳನ್ನು ಸುಡುತ್ತಿದೆ. ಆದರೆ ನಿರ್ವಾಹವಿಲ್ಲ. 'ಅಧಿಕಾರವು ಬ್ರಿಟಿಷರ ಕೈಯಿಂದೊಮ್ಮೆ ತಪ್ಪಲಿ, ಅದು ಬೇಕಾದರೆ ಸಂಪೂರ್ಣವಾಗಿ ಜಿನ್ನರ ಮುಷ್ಟಿಯೊಳಗೇನೇ ಬರಲಿ'—ಎನ್ನುತ್ತಿದ್ದ ಕಾಂಗ್ರೆಸಿಗರನ್ನು 'ಅದೋ, ಹಾಗೆಯೇ ಮಾಡುತ್ತಿದ್ದೇವೆ' ಎಂದು ಬ್ರಿಟಿಷರೀಗ ಅಣಕಿಸುತ್ತಿರುವಂತಿದೆ 'ಸರಿ, ಸಿದ್ಧರಿದ್ದೇವೆ' ಎಂದು ಈ ಯುದ್ಧಾಹ್ವಾನವನ್ನು ಸ್ವೀಕರಿಸಬೇಕು. ಕೇಳಿದ ಅಧಿಕಾರ ಬಂದಿಲ್ಲ—ಆದರದನ್ನು ಕಸಗೊಳ್ಳುವ ಉಪಾಯವೂ ಇಲ್ಲವಾದ್ದರಿಂದ ನಾಚಿಕೆಯೊಡನೆ ಬಂದುದಕ್ಕೊಮ್ಮೆ ಸೈಯೆನ್ನಬೇಕು. ಆದರೆ ತಾನು 'ರಾಷ್ಟ್ರ ಸಭೆ'ಯೆಂಬ ಅಸ್ತಿತ್ವ ಪಾಲನೆಗಾಗಿ ಜಾತೀವಾರು ಪ್ರಾತಿನಿಧ್ಯಗಳೆಲ್ಲವನ್ನೂ ಜಾತೀವಾಲರಿಗೇನೇ ಬಿಡಬೇಕು. ಪಾಕಿಸ್ತಾನವನ್ನು ಕೇಳುವ ಮಿ. ಜಿನ್ನರ ಕೈಗೊಮ್ಮೆ ಇಡೀ ಹಿಂದುಸ್ಥಾನವನ್ನೇ ಕೊಟ್ಟು ನೋಡಬಾರದೇಕೆ? ಮಿ. ಜಿನ್ನರಾಗಲೀ ಬ್ರಿಟಿಷರಾಗಲೀ ಅಂತಹ ದಾನವನ್ನಂಗೀಕರಿಸಲಾರರಾದರೆ ಹಿಂದುಗಳ ಪ್ರಾತಿನಿಧ್ಯವು ಹಿಂದೂ ಮಹಾಸಭೆಗೆ ಸಲ್ಲಲಿ ಆಗಾದರೆ ಕಾಂಗ್ರೆಸಿನ ಅಸಹಕಾರವೇ? ಅಲ್ಲ-ಅದು ಬೆಂಬಲವಾಗಿ ನಿಲ್ಲಲಿದೆ. ಜಾತೀವಾರು ಅಧಿಕಾರ ಪೀಠದಲ್ಲಿ ಜಾತಿ ಪ್ರಮುಖರಿರಲಿ-ರಾಜಕೀಯ ಸಂಸ್ಥೆ ಕಾಂಗ್ರೆಸು ರಾಜಕೀಯ ರಂಗದಲ್ಲೇ ಇದ್ದು ಅವರಿಗೆ ನೆರವಾಗಲಿ. ಕೆಲಸಮಯ ಈ ಪ್ರಯೋಗ ನಡೆಯಲಿ. ಆಗ ಆ ಅಧಿಕಾರಿಗಳ ಜತೆಗೇನೇ ಈ ಅನಧಿಕಾರಿಗಳು ಮತಾಂತರಗೊಳ್ಳುವರೋ, ಅಥವಾ ಇವರ ರಾಜಕೀಯ ರೂಪವೇ ಅವರಿಗೂ ಬರಬಹುದೋ ಎಂಬುದನ್ನು ನೋಡೋಣ. ಸದ್ಯಸ್ಥಿತಿಯಲ್ಲಿ ಕಾಂಗ್ರೆಸು ಇಂತಹ ಪರೀಕ್ಷೆಗೆ ನಿಲ್ಲಬೇಕು ಹೊರತು ವೈಸರಾಯಿ ಸೂಚನೆಗಳ ಪೂರ್ಣಾಂಗೀಕಾರವಾಗಲೀ ಪೂರ್ಣ ಧಿಕ್ಕಾರವಾಗಲೀ ದೇಶದ ಹಿತದೃಷ್ಟಿಯಿಂದ ಸಲ್ಲದೆಂದು ನಮಗನ್ನಿಸುತ್ತದೆ.

ಶ್ರೀ ಅಥಮಾರು ಮಠದ ಶ್ರೀ ವಿಬುಧಮಾನ್ಯತೀರ್ಥ ಶ್ರೀ ಶ್ರೀಪಾದಂಗಳವರ ಶೋಚನೀಯ ಪರಂಧಾಮ ಪ್ರವೇಶ.



ಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮದ ಎಳೇ ವಯಸ್ಸಿನಲ್ಲಿ ಸನ್ಯಾಸ ಧರ್ಮವನ್ನು ಪರಿಗ್ರಹಿಸಿ ವೇದಾಂತಾದಿ ಉದ್ಗ್ರಂಥಗಳನ್ನು ಉತ್ತಮ ರೀತಿಯಲ್ಲಿ ಅಭ್ಯಸಿಸಿ ತಮ್ಮ ಹಿರಿಯ ಶ್ರೀಗುರುವರರಿಂದ ಸುಧಾಪಾಠಗಳನ್ನು ಮಾಡಿಕೊಂಡಿರುವ ಶ್ರೀ ಕಾಣಿಯೂರು ಮಠದ ಶ್ರೀಪಾದಂಗಳವರ ಸುಧಾಮಂಗಳವನ್ನು ತಮ್ಮ ಪರ್ಯಾಯ ಕಾಲದಲ್ಲಿ ಮಹಾವೈಭವದಿಂದ ಜರಗಿಸಿ ಶ್ರೀ ಕೃಷ್ಣ ಪೂಜಾದಿ ಪರ್ಯಾಯದ ಕಾರ್ಯಕ್ರಮಗಳನ್ನು ಅತ್ಯುತ್ತಮ ರೀತಿಯಲ್ಲಿ ಪೂರೈಸಿಕೊಂಡು ತೀರ್ಥಯಾತ್ರಾಕ್ರಮದಿಂದ ದಿಗ್ವಿಜಯಮಾಡಿದವರು ಸಂಕಲ್ಪಿತ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ದೇಹಾಲಸ್ಯ ತಲೆದೋರಿ ಮರಳಿಂದ ಹಿಂತಿರುಗಿದವರು ಬರುತ್ತಾ ತಮ್ಮ ಸನ್ಯಾಸಧರ್ಮ ಸ್ವೀಕಾರದ ೧೬ನೇ ವರ್ಷದಲ್ಲಿ ಪರಂಧಾಮವನ್ನೈದಿದರು.

ಶ್ರೀ ಶ್ರೀಪಾದಂಗಳವರ ವೃಂದಾವನ ಪ್ರವೇಶ ಸಮಾರಂಭವನ್ನು ಅಥಮಾರಿನ ಶ್ರೀಮಠದಲ್ಲಿ ಆಸ್ಥಾನ ವಿದ್ವಾಂಸರುಗಳ ಕೂಡುವಿಕೆಯಿಂದ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರೂ, ಶ್ರೀ ಅಥಮಾರು ಮಠದ ಆದಳ್ತೆ ಕಾರ್ಯಕರ್ತರಾದ ಶ್ರೀ M. ವೆಂಕೋಬಾಚಾರ್ಯರೂ ಶಾಸ್ತ್ರೋಕ್ತ ರೀತಿಯಿಂದ ಇದೇ ಜ್ಯೇಷ್ಠ ಶುದ್ಧ ೧೦ ದಶಮೀ ಬುಧವಾರ ಪ್ರಾತಃಕಾಲದಲ್ಲಿ ಜರಗಿಸಿದರು. ಸ್ವಾಮಿಗಳವರ ಶೋಚನೀಯ ನಿಧನದ ಕುರಿತು ಉಡುಪಿಯಲ್ಲಿ ಹರತಾಳಾಚರಿಸಲ್ಪಟ್ಟಿತು. ಸಂಸ್ಕೃತ ಕಾಲೇಜಿಗೆ ರಜಾ ಕೊಡಲಾಗಿತ್ತು. ಮಾತ್ರವಲ್ಲದೆ ದುಃಖಸೂಚಕ ಸಭೆಯು ಶ್ರೀ ಎಮ್. ರಾಮಚಂದ್ರರಾವ್, ಪ್ರಿನ್ಸಿಪಾಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಶ್ರೀನಿವಾಸ ಭಟ್ಟರು ಕೀರ್ತಿಶೇಷರ ಗುಣಗಾನ ಮಾಡಿದರು. ಶ್ರೀಗಳವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಸಭೆಯು ಮುಕ್ತಾಯವಾಯಿತು

ಜಪಾನ್ ಹೋರಾಟ ಮಂದಗತಿಯಲ್ಲಿದೆ!

ಬೊಂಬಾಯಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಸಮಿತಿ ಸಭೆ ಸೇರಿದೆ.

ಜಾಪಾನ್ ಯುದ್ಧ

ಬರ್ಮಾ ರಂಗದಿಂದಾಗಲೀ ಶಾಂತ ಸಮುದ್ರ ವಲಯದಿಂದಾಗಲೀ ಗಣನೀಯ ಯುದ್ಧ ವಾರ್ತೆಯಿಲ್ಲ. ಮಧ್ಯ ಶಾಂತ ಸಮುದ್ರದ ಟ್ರುಕ್ ನೆಲ್ದಾಣದ ಮೇಲೆ ಬ್ರಿಟಿಷ್ ಹಡಗಗಳು ಎರಡು ರಾತ್ರಿ ಹಗಲು ಬೋಂಬುಗರೆದಿವೆ. ಫಿಲಿಪ್ಪೈಯನುಗಳಲ್ಲಿ ಮಿತ್ರ ಸೇನೆ ಪ್ರಗತಿ ಪಡೆದಿದೆ. ಒಕಿನಾವಾ ದ್ವೀಪದ ಕೊನೆಯ ಕಾಳಗ ಕಠೋರವಾಗಿ ಸಾಗಿದೆ. ಬರ್ಮಾದಲ್ಲಿ ವಿಶೇಷ ಪ್ರಗತಿಯಿಲ್ಲ. ಒಕಿನಾವಾ ಯುದ್ಧ ಚಾಲಕತ್ವದ ದೌರ್ಬಲ್ಯಗಳನ್ನು ಎತ್ತಿ ಹೇಳಿದ ಡೇವಿಡ್ ಲಾರೆನ್ಸರನ್ನು ಶಾಂತ ಸಮುದ್ರದ ನಾವಿಕಾಧಿಪತಿ ಎಡ್ಮಿರಲ್ ನಿಮಿಟ್ಸರು ಕಟುವಾಗಿ ಟೀಕಿಸಿದ್ದಾರೆ.

ಯುರೋಪು ರಾಜಕೀಯ ರಂಗ

ಇಂಗ್ಲಾಂಡಿನಲ್ಲಿ ಚುನಾವಣಾ ಪ್ರಚಾರ ಬಿರುಸಾಗಿ ಸಾಗಿದೆ. ವೇವೆಲ್ ಸೂಚನೆಗಳಿಗೆ ಲೇಬರ್ ಪಕ್ಷವು ಕಟ್ಟುಬಿದ್ದಿಲ್ಲವೆಂದೂ ಚುನಾವಣಾನಂತರ ಅದು ಹೊಸ ಹಾದಿ ಹಿಡಿಯಬಹುದೆಂದೂ ಮೋರಿಸ್ಸನ್ ಹೇಳಿದ್ದಾರೆ. ರಾಜಾ ಲಿಯೊಪೋಲ್ಡರು ಬೆಲ್ಜಿಯಮಿಗೆ ಮರಳಲು ನಿರ್ಧರಿಸಿದ್ದರಿಂದ ಅಲ್ಲಿಯ ಮಂತ್ರಿಮಂಡಲ ರಾಜೀನಾಮೆಕೊಟ್ಟು ಬಿಕ್ಕಟ್ಟುಂಟಾಗಿದೆ. ಜಾಗತಿಕ ಎಸೆಂಬ್ಲಿಯ ಅಧಿಕಾರಗಳನ್ನು ಪುನಃ ಪರಿಷ್ಕರಿಸಬೇಕೆಂಬ ರಶ್ಯದ ಹೊಸ ಸೂಚನೆ ಮುಂದೆ ಬಂದು ಫ್ರಿಸ್ಕೋ ಸಮ್ಮೇಲನದಲ್ಲಿ ಭಿನ್ನಾಭಿಪ್ರಾಯವುಂಟಾಗಿದೆ.

ರಿಬ್ಬೆಂಟ್ರಪನು

ಬ್ರಿಟಿಷರಿಗೆ ತಾನಾಗಿ ಸೆರೆ ಸಿಕ್ಕಿದ್ದಾನೆ. ಜರ್ಮನಿಯ ಈ ಮಾಜೀ ವಿದೇಶ ಮಂತ್ರಿಯು ಮೃತ ಹಿಟ್ಲರನ ಕೊನೆಯ ಪತ್ರವೊಂದನ್ನು ಚರ್ಚಿಲ್ಲರಿಗೊಪ್ಪಿಸಲು ಹೊರಟವನಂತೆ. ತ್ರಿಮೂರ್ತಿ ಸಮ್ಮೇಲನವು ಸದ್ಯದಲ್ಲೇ ಬರ್ಲಿನಿನಲ್ಲಿ ನಡೆಯಲಿರುವದೆಂದು ತಿಳಿದು ಬರುತ್ತದೆ. ಯುರೋಪಿನಲ್ಲಿ ಆಹಾರಾಭಾವವುಂಟಾಗುವ ಸಂಭವವಿದೆಯೆಂದೂ, ಇಂಗ್ಲೆಂಡು, ಅಮೇರಿಗಳ ಆರ್ಥಿಕ ಧೋರಣೆಯೇ ಇದಕ್ಕೆ ಹೇತುವೆಂದೂ ಕೂಗೆದ್ದಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ

ಅವಸರದ ಸಭೆಯನ್ನು ಇದೇ ತಾ. 21 ಕ್ಕೆ ಬೊಂಬಾಯಿಯಲ್ಲಿ ಅಧ್ಯಕ್ಷ ಅಜಾದರು ಕರೆದಿದ್ದಾರೆ. ವರ್ಕಿಂಗ್ ಕಮಿಟಿಯು ಗಾಂಧಿಜೀಗೆ ಸರ್ವಾಧಿಕಾರವನ್ನಿತ್ತು ವೈಸರಾಯೀ ಸಮ್ಮೇಲನಕ್ಕೆ ಕಳುಹುವದೆಂದು ತಿಳಿದುಬರುತ್ತದೆ. ಈಗ ಅಧ್ಯಕ್ಷ ಆಜಾದರಿಗೂ ವೈಸರಾಯರ ಆಮಂತ್ರಣ ಬಂದಿದೆ. ವೈಸರಾಯ ಘೋಷಣೆಯ ಕೆಲವು ಸಂಗತಿಗಳನ್ನು ಸ್ಪಷ್ಟಪಡಿಸುವಂತೆ ದೀರ್ಘ ಪತ್ರವೊಂದನ್ನು ಕೊಟ್ಟು ಒರ್ವನನ್ನು ವಿಮಾನ ಮೂಲಕ ಗಾಂಧೀಜೀ ವೈಸರಾಯರಲ್ಲಿ ಗಟ್ಟಿದ್ದಾರೆ. ಇದರಿಂದ ಗಾಂಧೀ ವೈಸರಾಯರ ಹೃದಯೈಕ್ಯಗೊಳ್ಳುವ ಸಂಭವವಿದೆಯೆಂದು ನವದಿಲ್ಲಿಯಲ್ಲಿ ಆನಂದವೆದ್ದಿದೆ. ಕಾಂಗ್ರೆಸ್ ಧೋರಣೆಯು ವೈಸರಾಯಿಗಳು ಈ ಕಾಗದಕ್ಕೆ ಕೊಡುವ ಉತ್ತರವನ್ನಾಧರಿಸಿದೆ.

ಪಂಡಿತ ನಹರುಗಳು

ಯುರೋಪಿಗೆ ಬರಬೇಕೆಂದು ಕೇಂಬ್ರಿಜ್ ವಿಶ್ವವಿದ್ಯಾಲಯದ ಮಜ್ಲಿಸ್ ಸಂಘದ ಪರವಾಗಿ ಆಮಂತ್ರಣ ಬಂದಿದೆ. ಹಲವು ಪಾರ್ಲಿಮೆಂಟ್ ಸದಸ್ಯರು ಅಭಿನಂದನೆಗಳನ್ನು ಕಳುಹಿದ್ದಾರೆ. 'ಕೊನೆಯ ಪಕ್ಷ ವಿಶಾಲವಾಗಿಯಾದರೂ ಇರುವ ಸೆರಮನೆಗೆ ಸುಸ್ವಾಗತ' ಎಂದು ಮಿ ಫೆನ್ನರ್ ಬ್ರೊಕ್‌ವೇ ಎಂ. ಪಿ. ಯವರು ನೆಹರುಗಳಿಗೆ ಸ್ವಾಗತ ತಂತಿ ಕಳುಹಿದ್ದಾರೆ.

ಕಾಂಗ್ರೆಸ್ ಪ್ರಮುಖರು

ವೇವೆಲ್ ಸೂಚನೆಯ ಕುರಿತು ಧಿಕ್ಕಾರ ಮನೋವೃತ್ತಿಯಲ್ಲಿದ್ದಾರೆ. "ಜಾತಿ ಹಿಂದು ಮತ್ತು ಮುಸಲ್ಮಾನರಿಗೆ ಪ್ರಾತಿನಿಧ್ಯವೆಂಬ ಶರ್ತವಿರುವಾಗ ಸಿಮ್ಲಾ ಸಮ್ಮೇಲನದಲ್ಲಿ ಕಾಂಗ್ರೆಸಿಗೆ ಸ್ಥಾನವಿಲ್ಲ" ಎಂದು ಸರ್ದಾರ್ ಪಟೇಲರಂದಿದ್ದಾರೆ. "ಬ್ರಿಟಿಷರ ಕೈಯಲ್ಲಿ ಏನಾದರೂ ಅಧಿಕಾರವುಳಿಯುವ ವರೆಗೆ ರಾಷ್ಟ್ರದ ಮತ್ತು ಬಡವರ ಸೇವೆಮಾಡುವ ಅನುಕೂಲತೆಯಿರದು" ಎಂದು ಖಾನ್ ಅಬ್ದುಲ್ ಗಫರ್ ಖಾನರಂದಿದ್ದಾರೆ.

ದಿನ ಮುಂದುವರಿಯುದು

ಜಿನ್ನರ ಬಯಕೆಯಂತೆ ಸಿಮ್ಲಾ ಸಮ್ಮೇಲನವನ್ನು ವೇವೆಲರು ಮುಂದುವರಿಸದೆ ಲೀಗ್ ಕಮಿಟಿ ಸದಸ್ಯರ ಪ್ರಯಾಣಕ್ಕೆ ಸಾಧ್ಯವಿದ್ದ ಅನುಕೂಲತೆಯ ಏರ್ಪಾಡು ಮಾಡುವೆನೆಂದೂ ಜೂನ್ ಅಂತ್ಯಕ್ಕೆ ಲೀಗ್ ಕಮಿಟಿಯ ಸಭೆ ಕರೆದು ಸಮ್ಮೇಲನದ ವಿಚಾರಗಳನ್ನು ಅದರ ಮುಂದಿಡಬಹುದೆಂದೂ ವೈಸರಾಯರು ಜಿನ್ನರಿಗೆ ತಿಳಿಸಿದ್ದಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 20—6—1945 ರಿಂದ

ಎರೋಲ್ ಪ್ಲೈನ್ ಮತ್ತು ಎನ್ ಶೆರಿಡನ್

ನಟಿಸಿರುವ

ಎಜ್ಜ್ ಆಫ್ ಡಾರ್ಕ್‌ನೆಸ್

ಅನಂತರ — ವೇನಸ್ಸು ಚಿತ್ರಪಟ—

ಲಲಿತಾ ಪವಾರ್ ಮತ್ತು ಪೃಥ್ವಿರಾಜ್ ನಟಿಸಿರುವ "ಕ್ಷಿತ್ರಿ".

ಮುಂದಿನ ಚಿತ್ರ ರಣಜಿತ್‌ನವರ "ಗೌರಿ".

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ದಿವಂಗತ ಶ್ರೀ ಪಂಡಿತ ತಾರಾನಾಥರ

ಪ್ರೇಮ ವಿದ್ಯಾಪೀಠದಲ್ಲಿ

ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು.

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್‌ರವರಿಗೆ ಬರೆಯಬೇಕು.

ಜಿ. ಸುಮತಿ ತಾರಾನಾಥ,

ಪ್ರಿನ್ಸಿಪಾಲ್.

WANTED

A Secondary Grade Trained Teacher for the Adi-Udipi Higher Elementary School. Please apply sharp to the Manager.



Approved firm by the Govt. of Mysore. Certified by the Agent of the Govt. of India in Ceylon.

ಮಂಗಳೂರು.

ನಿಧನ— ಮಂಗಳೂರಿನ ಸುಪ್ರಸಿದ್ಧ ವ್ಯಾಪಾರಿಗಳಲ್ಲೊಬ್ಬರಾದ ಶ್ರೀ ಮಂಜೇಲ ಅಣ್ಣಪ್ಪ ನಾಯ್ಕರು ಇತ್ತೀಚೆಗೆ ಸಿಡಿ ಮೂತ್ರ ಕಾಯಿಲೆಗೆ ತುತ್ತಾಗಿ, ಇದೇ ತಾ. 17ರಲ್ಲಿ ಪರಲೋಕವಾಸಿಗಳಾದರೆಂಬುದನ್ನು ತಿಳಿಯಲು ವಿಷಾದಿಸುತ್ತೇವೆ. ವ್ಯಾಪಾರೀ ಸಂಸ್ಥೆಯಲ್ಲಿ ಗಣನೀಯ ಸ್ಥಾನವನ್ನು ಪಡೆದ ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು. ಮಂಗಳೂರ ಪ್ರಮುಖ ವ್ಯಾಪಾರಿಗಳು ತಾ. 19 ರಲ್ಲಿ ಹರತಾಳವನ್ನು ಆಚರಿಸಿದರೆಂದು ತಿಳಿಯುತ್ತೇವೆ.

ನಂದಿಗುಡ್ಡೆ ಸ್ಮಶಾನ ಮೊಕದ್ದಮೆಯು ಬಿಟ್ಟುಹೋಯಿತು— [illegible] ಸ್ಮಶಾನದಲ್ಲಿ ಹರಿಜನ ಶವ [illegible] ಮಾಡಿದ ಅಪಾದನೆಯ ಮೇಲೆ [illegible] ದಂಡನೆ ವಿಧಿಸಲ್ಪಟ್ಟ [illegible] ಜಿಲ್ಲಾ ಮೆಜಿಸ್ಟ್ರೇಟರ ಮುಂದೆ [illegible] ಜಿಲ್ಲಾ ಮೆಜಿಸ್ಟ್ರೇಟರು ತಮ್ಮ [illegible] ತೆಗೆದುಕೊಂಡಂತ [illegible] ನಡೆಸಿದರು.

ಉಡುಪಿ

ಭಾಷಣ [illegible] ಕರ್ನಾಟಕ [illegible] ತಿರುಪತಿ ಸಂಸ್ಕೃತ [illegible] ಶ್ರೀ [illegible] ಕೃಷ್ಣಮೂರ್ತಿ [illegible] ತಾ. 16ರಲ್ಲಿ [illegible] ವ್ಯಕ್ತಿತ್ವ [illegible].

ವಿವಾಹ ಸಮಾರಂಭ— [illegible] ಶ್ರೀ ಕೃಷ್ಣಯ ಹೆಗ್ಡೆ [illegible] ಪುತ್ರಿ [illegible] ಶ್ರೀ ಕೃಷ್ಣಯ್ಯ ಹೆಗ್ಡೆಯವರ ಪುತ್ರ ಶ್ರೀ [illegible] ಹೆಗ್ಡೆಯವರ [illegible] ವಿವಾಹ [illegible] ಬಂದ.

ತಾಲೂಕು ವಾರ್ ಕಮಿಟಿ ಸಭೆ— [illegible] ತಾ. 18ರಲ್ಲಿ [illegible] ತಾಲೂಕು [illegible] ಅಧ್ಯಕ್ಷತೆಯಲ್ಲಿ ಜರಗಿತು.

ಬಿಲ್ಲವರ ಸೇವಾ ಸಂಘ, ಉಡುಪಿ

[illegible] 1 ಫಾರ್ಮ್ [illegible] VI ಫೋರ್ಮಿನ ವರೆಗೆ ಕಲಿಯುತ್ತಿರುವ ವಿದ್ಯಾರ್ಥಿ ವೇತನವನ್ನು ಅಪೇಕ್ಷಿಸುವ [illegible] ತಾ. 5 7 45ರ ಒಳಗೆ [illegible] ಕಾರ್ಯದರ್ಶಿ, ಬಿಲ್ಲವರ ಸೇವಾ ಸಂಘ, ಉಡುಪಿ [illegible] ಅರ್ಜಿಗಳನ್ನು ಬರೆದುಕೊಳ್ಳತಕ್ಕದ್ದು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿವಾರಕವು—ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಣಾಮ [illegible] ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3 |- ಕೈಮೀರಿದ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲ್ ಗೆ ರೂ.4|-(ವಿ.ಪಿ.12 ಅಣೆ ಅಧಿಕವು)Mrs P: DEVEE, P. D. S. (V) Tollygunge, Calcutta, ಸ್ಟಾಕಿಸ್ಟ್: ನಾ ಕಂಪೆನಿ, ಮಂಗಳೂರು

(೫ನೇ ಪುಟದಿಂದ ಮುಂದುವರಿದುದು.)

ಕಳೆದ ರಾತ್ರಿಯ ತಂತೀ ಆಮಂತ್ರಣವನ್ನು ನೀವಂಗೀಕರಿಸುವಿರೆಂದು ಆಶಿಸುತ್ತೇನೆ. ಪುನರಾಲೋಚಿಸಿ, ನಿಮಗಗತ್ಯವೆಂದು ತೋರುವವರೊಡನೆ ಸಂಭಾಷಿಸಿ, ಕಾಂಗ್ರೆಸ್ ಪ್ರಾತಿನಿಧ್ಯದ ಕುರಿತು ನಿಮ್ಮ ಕೊನೆಯ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ನನಗೆ ತಿಳಿಸೋಣಾಗಲಿ. ನಾನೀಗ ಕೈಕೊಂಡಿರುವ ಕಾರ್ಯದಲ್ಲಿರುವ ಪ್ರಾಮುಖ್ಯತೆ ಮತ್ತು ಕಷ್ಟಗಳನ್ನು ನೀವು ಒಪ್ಪುವಿರೆಂದೂ, ನಿಮ್ಮಿಂದ ಸಾಧ್ಯವಿರುವ ಸಹಾಯವನ್ನೀಯುವಿರೆಂದೂ ನನಗೆ ಗೊತ್ತಿದೆ"

ಜೂನ್, 15. ಗಾಂಧಿಜೀಯಿಂದ ವೈಸರಾಯಿಗೆ

"ಪ್ರೇಮ ಪೂರಿತ ಆಮಂತ್ರಣ ತಂತಿ ತಲಪಿತು. ನಾನು ಕಳೆದ ರಾತ್ರಿ ಕೊಟ್ಟ ತಂತಿಯಲ್ಲಿ ನಮೂದಿಸಿರುವ ಕಾರಣಗಳಿಂದಾಗಿ ನಿಮ್ಮ ಸಮ್ಮೇಲನದಲ್ಲಿ ನನಗೆ ಸ್ಥಾನವಿಲ್ಲ. ಓರ್ವ ವ್ಯಕ್ತಿಯಾಗಿ ನಾನು ಸಲಹೆ ಮಾತ್ರ ಕೊಡಬಲ್ಲೆ. ಹಾಗಾದರಿಲ್ಲಿ ಜಾತಿ ಹಿಂದುಗಳು ಮತ್ತು ಜಾತಿಯಿಲ್ಲದ ಹಿಂದುಗಳೆಂಬವರಿರದೆ ಎಲ್ಲರೂ ರಾಜಕೀಯ ಮನೋವೃತ್ತಿಯವರೇ ಎಂದು ನಾನು ಹೇಳಲೆ? ಆದ್ದರಿಂದ ಆ ಶಬ್ದವು ಅಸತ್ಯ ಮತ್ತು ಅಸಂಬಂಧಿಯಾಗಿ ಧ್ವನಿಸುತ್ತಿದೆ. ನಿಮ್ಮ ಮೇಜಿನ ಮುಂದೆ ಅವರ ಪ್ರತಿನಿಧಿಗಳಾಗಿ ಬರುವವರಾದರೂ ಯಾರು? ಕಾಂಗ್ರೆಸಲ್ಲ; ಯಾಕಂದರೆ ಅದು ಯಾವ ಭೇದವನ್ನೂ ಗಣಿಸದೆ ಸ್ವಾತಂತ್ರ್ಯೇಚ್ಛೆಯಿಂದ ಕೆಲಸಮಾಡುವ ಅಖಿಲ ಭಾರತೀಯರ ಪ್ರತಿನಿಧಿಯಾಗಲಿಚ್ಛಿಸುತ್ತದೆ ಆದ್ದರಿಂದಲೇ ಹಿಂದುಗಳ ಪ್ರತಿನಿಧಿಯೆಂದು ಸಾರುತ್ತಾ ಹಿಂದೂ ಮಹಾಸಭೆಯಿದೆ. ಆ ಸಂಸ್ಥೆ ಕೂಡಾ 'ಸುವರ್ಣ ಹಿಂದು'ಗಳ ಪ್ರತಿನಿಧಿಯೆನ್ನಿಸಲು ಅಲ್ಲಗಳೆಯುವದೆಂದು ನನ್ನ ಶಂಕೆ. ಘೋಷಣೆಯು ದೃಢ ನಿರ್ಧಾರ ಪೂರ್ವಕ ಸ್ವಾತಂತ್ರ್ಯ ಶಬ್ದದ ಉಚ್ಚಾರವನ್ನೇ ಬಿಟ್ಟಂತಿದೆ. ಆದ್ದರಿಂದ ಆಧುನಿಕ ಭಾರತದ ಮನೋವೃತ್ತಿಗನುಗುಣವಾದ ಸಾಲು ಹಿಡಿಯುವಂತೆ ಅದನ್ನು ಪರಿಷ್ಕರಿಸಿರೆಂದು ನನ್ನ ಒತ್ತಾಯವಿದೆ. ನಮ್ಮ ತಂತಿಗಳ ಪ್ರಕಟಣೆಯನ್ನು ಸೂಚಿಸುತ್ತೇನೆ"

ಜೂನ್ 16. ವೈಸರಾಯಿಯಿಂದ ಗಾಂಧಿಜೀಗೆ

"ನಿಮ್ಮ ತಾ. 15ರ ತಂತಿಗಾಗಿ ಹಲವು ಧನ್ಯವಾದಗಳು. ಈ ದಿನದ ಪತ್ರಿಕೆಗಳಲ್ಲಿ ನಿಮ್ಮ ಹೇಳಿಕೆಯನ್ನು ಕೂಡಾ ನೋಡಿದ್ದೇನೆ. ಸಮ್ಮೇಲನಕ್ಕೆ ನೀವು ಹಾಜರಾಗುವ ಕುರಿತು ಈಗ ತಾನೇ ದೊರೆತ ತಾ. 16ರ ನಿಮ್ಮ ತಂತಿಯಲ್ಲಿ ನಮೂದಿಸಲ್ಪಟ್ಟಿರುವ ಪತ್ರದ ನಿರೀಕ್ಷೆಯಲ್ಲಿದ್ದೇನೆ. 'ಸವರ್ಣ ಹಿಂದುಗಳು' ಎಂಬ ಶಬ್ದವು ದುರುದ್ದೇಶದಿಂದ ಪ್ರಯೋಗಿಸಲ್ಪಟ್ಟಿಲ್ಲವೆಂದು ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ. ದಳಿತ ವರ್ಗದವರನ್ನು ಬಿಟ್ಟೇ ಹಿಂದೂ ಮತ್ತು ಮುಸಲ್ಮಾನರ ಸ್ಥಾನಗಳೊಳಗೆ ಸಮಾನತೆಯಿರಬೇಕೆಂಬುದೇ ಅದರ ಅರ್ಥ. ಈ ಶರ್ತಕ್ಕೊಳಪಟ್ಟು ಕೌನ್ಸಿಲಿನ ಎಲ್ಲಾ ರಚನೆಯನ್ನೂ ಸಮ್ಮೇಲನದಲ್ಲಿ ಚರ್ಚಿಸಿಯೇ ನಿರ್ಧರಿಸಬೇಕಾಗಿದೆ. ಸ್ವಾತಂತ್ರ್ಯ ಪ್ರಶ್ನೆಯ ಕುರಿತು ತಾ. 14ರ ಹಿಂದೀ ಪತ್ರಿಕೆಗಳಲ್ಲಿ ಪ್ರಕಟವಾಗಿರುವ, ಭಾರತ ಕಾರ್ಯದರ್ಶಿಯ ಪಾರ್ಲಿಮೆಂಟ್ ಭಾಷಣದ ಕಡೆಗೆ ನಿಮ್ಮ ಲಕ್ಷ್ಯವನ್ನೆಳೆಯುತ್ತೇನೆ. ಸಂಬಂಧಪಟ್ಟ ಭಾಗವಿಲ್ಲಿದೆ:—"1942ನೇ ಮಾರ್ಚಿಯ ಕೊಡುಗೆಯು ನಿಜರೂಪದಿಂದ ನಿಂತಿದೆ. ಆ ಕೊಡುಗೆಗೆ ಎರಡು ಮುಖ್ಯ ತತ್ವಗಳೇ ಆಸ್ಪದ. ಪ್ರಥಮತಃ ಹಿಂದುಸ್ಥಾನವು ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಿಕೊಳ್ಳುವ ಕುರಿತು ನಿರ್ಬಂಧವೇನೂ ಇಲ್ಲ. ಕಾಮನ್‌ವೆಲ್ತಿನ ಸ್ವತಂತ್ರ ಪಾಲುಗಾರನಾಗಿ ಇರಬಹುದು; ಅಥವಾ ಅದನ್ನು ಬಿಟ್ಟೂ ಇರಬಹುದು. ಎರಡನೆಯದಾಗಿ ಈ ಗುರಿಯು ಮುಖ್ಯ ಪಕ್ಷಗಳ ಸಮ್ಮತಿಯಿಂದ ಭಾರತೀಯರೇ ತಯಾರಿಸುವ ರಾಜ್ಯ ರಚನಾ ಯೋಜನೆಯಿಂದ ಅಥವಾ ಯೋಜನೆಗಳಿಂದಲೇ ಕೈಗೂಡಬೇಕು". ನನ್ನ ಘೋಷಣೆಯ ಶರ್ತಗಳನ್ನು ತಿದ್ದುವದು ವ್ಯವಹಾರ್ಯವಲ್ಲ. ಅದು ಚಕ್ರವರ್ತಿ ಸರಕಾರದ ಅನುಮೋದನೆ ದೊರೆತಿರುವ ಸೂಚನೆಗಳ ಒಂದು ಲಗು ಹೇಳಿಕೆ ಮಾತ್ರ. ಸ್ಪಷ್ಟೀಕರಣದ ಅಗತ್ಯವಿರುವ ಯಾವ ಸಂಗತಿಯನ್ನಾದರೂ ಸಮ್ಮೇಲನದಲ್ಲಿ ಪರ್ಯಾಲೋಚಿಸಬೇಕೆಂದು ನನ್ನ ಬಯಕೆ. ಪಕ್ಷ ದ್ವೇಷವಿಲ್ಲದೆ ಸ್ನೇಹ ಪೂರಿತ ವಾತಾವರಣದಲ್ಲಿ ನೆರೆಯುವದೆಂದು ನಿಮ್ಮಂತೆಯೇ ನಾನೂ ಆಶಿಸುತ್ತಿರುವ ಆ ಸಮ್ಮೇಲನದ ಮೊದಲೇ ಸವಿವರವಾಗಿ ಚರ್ಚಿಸಿಕೊಳ್ಳುವದು ಒಳ್ಳಿತೆಂದು ನನಗನ್ನಿಸುವದಿಲ್ಲ. ನಿಮ್ಮ ಸೂಚನೆಯಂತೆ ನಮ್ಮ ತಂತಿಗಳನ್ನು ಪತ್ರಿಕೆಗಳಿಗೆ ಪ್ರಕಟಣೆಗಿತ್ತಿದ್ದೇನೆ".

ವೇವೆಲ್-ಜಿನ್ನಾ ತಂತೀ ಸಂಭಾಷಣೆ

ಗಾಂಧಿಜೀಯಂತೆಯೇ ಕ್ವಯದ್-ಈ-ಆಝಾಮರಿಗೂ ವೈಸರಾಯರು ತಂತೀ ಮೂಲಕ ಸಮ್ಮೇಲನಕ್ಕೂ ಅದರ ಮೊದಲು ತಾ. 24ನೇ ಅಪರಾಹ್ನ 5ಕ್ಕೆ ವೈಸರಾಯಿ ಭವನದ ಖಾಸಗೀ ಸಂಭಾಷಣೆಗೂ ಆಮಂತ್ರಣವಿತ್ತಿದ್ದರು. ಸೆಸಿಲ್ ಹೊಟೆಲಿನಲ್ಲಿ ಜಿನ್ನರಿಗೆ ಉಳಕೊಳ್ಳುವ ವ್ಯವಸ್ಥೆಯನ್ನೂ ಮಾಡಿಸಿದ್ದರು. ಮಿ. ಜಿನ್ನರು ಈ ಕುರಿತು ಅನುಕೂಲ ಮನೋವೃತ್ತಿ ಪ್ರದರ್ಶಿಸಿ ಖಾಸಗೀ ಸಂಭಾಷಣೆಗೆ ಸೈಗುಟ್ಟಿದ್ದಾರೆ ಆದರೆ ಮುಸ್ಲಿಂ ಲೀಗಿನ ಕಾರ್ಯಕಾರೀ ಸಮಿತಿಯನ್ನು ಕೂಡಿಸಲು ಸಮಯ ಸಾಲದ್ದರಿಂದ ಸಮ್ಮೇಲನವನ್ನು 15 ದಿನಗಳ ವರೆಗೆ ಮುಂದುವರಿಸಬೇಕೆಂದು ವಿಜ್ಞಾಪಿಸಿಕೊಂಡಿದ್ದಾರೆ. ಇದುವರೆಗೆ ವೈ

ನೆಹರು ಅಜಾದರ ವೀರವಾಣಿ.

ನೆಹರುಗಳ ಹೇಳಿಕೆ.

"ಸುಮಾರು ಮೂರು ವರುಷಗಳಿಂದ ಬಂಗಡಿಸಿಡಲ್ಪಟ್ಟಿದ್ದ ನಾನು ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ವಿಷಯಗಳ ಕುರಿತು ಅಭಿಪ್ರಾಯ ಪ್ರಕಟಿಸುವದು ಸತ್ಯಕ್ಕೂ ಪ್ರಯಾಸ. ಈ ಅವಧಿಯಲ್ಲಿ ಲೋಕದಲ್ಲೂ ಭಾರತದಲ್ಲೂ ಕ್ರಾಂತಿಕಾರೀ ಬದಲಾವಣೆಗಳಾಗಿವೆ ದೀರ್ಘಕಾಲ ಈ ಭಾವನೆಗಳಿಗಿಂತ ನಾನು ದೂರವಿದ್ದು ಬಂದವ. ಆದರೆ ಇಷ್ಟನ್ನು ಹೇಳಬಲ್ಲೆ, ಹೊರ-ಒಳ ಬದಲಾವಣೆಗಳೇನೇ ಆಗಿದ್ದರೂ ಮೂಲ ಭೂತ ಗುರಿ ಮತ್ತು ಧ್ಯೇಯಗಳು ಶಾಶ್ವತವಿವೆ"—ಎಂದು ಜೈಲಿನಿಂದ ಹೊರಬಂದೊಡನೆ ನೆಹರುಗಳಿತ್ತ ಸಂದೇಶ.

ಬಂಗಾಲದ ಬರಗಾಲ

ಬಂಗಾಲದ ಅನ್ನಾನ್ನಗತಿಕರ ನೊರೆಯು ಈಗಲೂ ನೆಹರುಗಳ ಹೃದಯದಲ್ಲಿ ಪ್ರತಿಧ್ವನಿಸುತ್ತಿದೆ. "ಪ್ರತಿಯೊಂದು ದೇಶದಲ್ಲಿರುವಂತೆ ನಮ್ಮಲ್ಲಿಯೂ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯಗಳು ಜತೆಯಾಗಿ ಬೆಳೆದುಕೊಂಡಿವೆ. ಈ ಯುದ್ಧದ ಯಾವುದೇ ಘಟನೆಯು ಸ್ಮರಣೀಯವಾಗಿರುವ ಭಯಂಕರ ದುರಂತವಾದ ಬಂಗಾಳದ ಬರಗಾಲವು-ಭಾರತದಲ್ಲಿರುವ ಬ್ರಿಟಿಷ್ ಆಳ್ವಿಕೆಯ ಮೇಲಿನ ಕೊನೆಯ ತೀರ್ಮಾನವಾಗಿದೆ; ಮಾತ್ರವಲ್ಲ, ಇಂತಹ ದುರಂತಗಳನ್ನು ನಿರ್ಮಿಸುತ್ತಿರುವ ಸದ್ಯದ ಆರ್ಥಿಕ ಸ್ಥಿತಿಯ ಮೇಲಿನ ಮರಣ ಚೀಟಿಯಾಗಿಯೂ ಇದೆ ಗತಕಾಲದಲ್ಲಿ, ಮುಖ್ಯವಾಗಿ ಕಳೆದ ಮೂರು ವರುಷಗಳಲ್ಲಿ ನಮ್ಮ ಜನರನುಭವಿಸಿದ ಸಂಕಷ್ಟಗಳನ್ನು ನಾವೆಂದೂ ಮರೆಯುವಂತಿಲ್ಲ, ಆದರೆ ಇದೇ ಸಮಯದಲ್ಲಿ, ನಮ್ಮ ಉದ್ರೇಕೀ ಭಾವನೆಗಳು ಮುಗಿಲಾಗಿ ಭವಿಷ್ಯವನ್ನು ಕವಿಯದಂತೆ ನೋಡಬೇಕು. "ಲೋಕಶಕ್ತಿಗಳು ರಕ್ತಗೆಂಪಾಗಿ ಕಾಣುತ್ತಿವೆಯಾದರೂ ನಾವು ಶಾಂತರಾಗಿದ್ದು ಸ್ವಚ್ಛ ದೃಷ್ಟಿಯಿಂದ ಕಾಣಬೇಕು"- ಎಂದು 1942ನೇ ಅಗೋಸ್ತು 8ರ ಆ ಅದೃಷ್ಟದಾಯೀ ಸಾಯಂಕಾಲ ಗಾಂಧಿಜೀಯಾಡಿದ್ದ ಮಾತು ನನಗೀಗಲೂ ನೆನಪಿದೆ" ಎಂದಿದ್ದಾರೆ ಪಂಡಿತ ನೆಹರು. ಆಲ್ಮೋರದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣವೀಯುತ್ತಾ ರಾಷ್ಟ್ರೀಯ ಸ್ವಾತಂತ್ರ್ಯ ಯುದ್ಧದಲ್ಲಿ ಆತ್ಮಾರ್ಪಣೆಮಾಡಿದವರನ್ನು ತ್ಯಾಗ, ಕಷ್ಟ ನಷ್ಟಕ್ಕೊಳಗಾದವರನ್ನೂ ಗದ್ಗದ ಕಂಠದಿಂದ ಹೊಗಳಿ "ಭಾರತ ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದವರಿಗೆ ನನ್ನ ಹೃದಯದಲ್ಲಿ ಸದಾಕಾಲ ಅತ್ಯುನ್ನತ ಸ್ಥಾನವಿದೆ. ಪ್ರತಿಯೊಬ್ಬ ಯೋಗ್ಯದೇಶಸೇವಕನಿಗೂ ನನ್ನ 'ಆನಂದ ಭವನ'ದಲ್ಲಿ ಆಶ್ರಯವೀಯಲು ನಾನು ತಯಾರಿದ್ದೇನೆ' ಎಂದು ಜವಾಹಿರಲಾಲರ ಘೋಷಣೆ.

ಅಜಾದರ ಆಹ್ವಾನ

ಬಂಕುರದ ಕಾಂಗ್ರೆಸಿಗರ ಸಭೆಯಲ್ಲಿ ಭಾಷಣವೀಯುತ್ತಾ "ಕಾಂಗ್ರೆಸನ್ನು ಸಂಘಟನೆಗೊಳಿಸಿರಿ; ಎಲ್ಲಾ ದೌರ್ಬಲ್ಯಗಳನ್ನೂ ಅದು ಝಾಡಿಸಿಕೊಳ್ಳುವಂತೆ ಬಲಗೊಳಿಸಿರಿ. ಈಗ ಕಾಂಗ್ರೆಸಿಗರ ಮುಂದಿರುವ ಮುಖ್ಯ ಹಾಗೂ ಮೊದಲ ಕೆಲಸವೆಂದರೆ ಅದೇ" ಎಂದು ಅಧ್ಯಕ್ಷ ಅಜಾದರು ಸ್ಫೂರ್ತಿಯ ಕರೆಯಿತ್ತು, ಕಳೆದ ಮೂರು ವರುಷಗಳಿಂದ ಕಾಂಗ್ರೆಸ್ ಯಂತ್ರವು ನಿಧಾನವಾಗುತ್ತಾ ಬಂದು ಸಡಿಲಾಗಿದೆ ಎಂದಿದ್ದಾರೆ. ಅಲ್ಲಿಂದ ಕಲ್ಕತ್ತೆಗೆ ತೆರಳಿ ಸಂಭ್ರಮದ ಸ್ವಾಗತ ಪಡೆದು ಮೌಲಾನರು ತನ್ನ ಸಹಧರ್ಮಿಣಿಯ ಸಮಾಧಿ ಸ್ಥಳವನ್ನು ಸಂದರ್ಶಿಸಿದರು. ನಿಜವಾದ ರಾಷ್ಟ್ರೀಯ ಹೋರಾಟ ಇನ್ನು ಮುಂದಿದೆ ಎಂದು ಕೃಪಲಾನಿಯ ಸಂದೇಶ.

ವರ್ಕಿಂಗ್ ಕಮಿಟಿ ಸಭೆಯು

ಸರಾಯರದಕ್ಕೊಪ್ಪುವ ಸಂಭವ ಕಾಣುವದಿಲ್ಲ. ನೆಹರು, ಅಜಾದರಿಗೆ ಸಮ್ಮೇಲನದಲ್ಲಿ ಸ್ಥಾನವೀಯಬೇಕೆಂದು ದೇಶವಿದೇಶಗಳಿಂದ ವೈಸರಾಯಿ, ಅಮೆರಿಗಳಿಗೆ ವಿಜ್ಞಾಪನೆಗಳು ಹೋಗಿವೆ. ಮಹಾತ್ಮಾ ಗಾಂಧಿಯವರು ಓರ್ವ ವ್ಯಕ್ತಿಯಂತೆ ವೈಸರಾಯರ ಆಮಂತ್ರಣ ಸ್ವೀಕರಿಸಲು ಸಿದ್ಧರಿದ್ದಾರೆ. ಅವರ ಅಭಿಪ್ರಾಯಾನುಸಾರವಾಗಿ ಕಾಂಗ್ರೆಸ್ ಪ್ರತಿನಿಧಿಯಾಗಿ ವೈಸರಾಯರೀಗ ಮೌಲಾನಾ ಅಜಾದರನ್ನೂ ಪರಿಷತ್ತಿಗಾಮಂತ್ರಿಸಿದ್ದಾರೆ.

ಕೆಲವೇ ದಿನಗಳೊಳಗೆ ಬಹುಶಃ ಬೊಂಬಾಯಿಯಲ್ಲಿ ನೆರೆಯಲಿದೆ. ಸಭೆಕರೆಯುವಂತೆ ಗಾಂಧಿಜೀ ಅಧ್ಯಕ್ಷ ಅಜಾದರನ್ನು ಕೇಳಿಕೊಂಡಿದ್ದಾರೆ. ಕಾರ್ಯದರ್ಶಿ ಕೃಪಾಲಿನಿಯವರು ಅಧ್ಯಕ್ಷರಿಂದ ಸೂಚನೆಗಳನ್ನು ಕೇಳಿದ್ದಾರೆ. ಬಿಡುಗಡೆಗೊಂಡ ಪ್ರಮುಖರು ಪಾಂಚ್‌ಗನಿಯಲ್ಲಿರುವ ಗಾಂಧಿಜೀಯೊಡನೆ ರಾಜಕೀಯ ವ್ಯವಹಾರ ಬೆಳೆಸಿದ್ದಾರೆ. ಮಿ. ಜಿನ್ನರ ಬಯಕೆಯಂತೆ ಸಮ್ಮೇಲನದ ದಿನ ಹಿಂದೆ ಬೀಳಬಹುದೆ? ಹಾಗಾಗದಿದ್ದಲ್ಲಿ ಮುಸ್ಲಿಂಲೀಗ್ ಪ್ರತಿನಿಧಿಗಳು ಭಾಗವಹಿಸುವರೇ ಇಲ್ಲವೇ? ವೈಸರಾಯೀ ಸೂಚನೆಯ ಕುರಿತು ಮಿ. ಜಿನ್ನರ ಅಭಿಪ್ರಾಯವೇನು? ಹಿಂದೂ ಮಹಾಸಭೆಯವರೇನೆನ್ನುವರು? ಮೊದಲಾದ ಪ್ರಶ್ನೆಗಳಿಗುತ್ತರ ದೊರೆತಿಲ್ಲ. ಒಟ್ಟಿನ ಮೇಲೆ ವಾತಾವರಣವು ಬಹುತೇಕವಾಗಿ ಶುಭ್ರವಾಗಿದೆ ಈ ಬಾರಿ ಒಂದು ತೀರ್ಮಾನಕ್ಕೆ ಬರುವ ಮನೋವೃತ್ತಿ ಒಡೆದು ಕಾಣುತ್ತಿದೆ. ತೋರುವಿಕೆಯನ್ನೇ ಅಳೆದು ನೋಡುವದಾದರೆ ವೈಸರಾಯೀ ಸೂಚನೆಗೆ ಸೇಕಡಾ 60ರಷ್ಟು ಅನುಕೂಲ, 40ರಷ್ಟು ಪ್ರತಿಕೂಲವಿದೆಯೆನ್ನಬಹುದು

THE
VIJAYA BANK LTD.,
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—
Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಭಾರತ ಬರ್ಮಾ ರಂಗದಿಂದ-

ರಂಗೂನಿಗೆ ಭಾರತೀಯ ಎಂಜಿನಿಯರುಗಳ ಸರಬರಾಜು

ರಂಗೂನ್—ನೌಕಾಶಾಲೆಯ ಎಂಜಿನಿಯರುಗಳು ತೆರಪಿಲ್ಲದೆ ದುಡಿದು ನಿಷ್ಕಂಟಕವಾದ ರಂಗೂನಿಗೆ ಇಂದು ಕಾನ್‌ವಾಯ್‌ಗಳು ಬೇಗಬೇಗನೆ ಬರುವಂತೆ ಏರ್ಪಡಿಸಿದ್ದಾರೆ; ಮತ್ತು ನಗರದ ಪುನರ್ನಿರ್ಮಾಣ ಕಾರ್ಯದಲ್ಲಿಯೂ ಅವರೇ ಮುಖ್ಯ ಪಾತ್ರ ವಹಿಸುತಿದ್ದಾರೆ. ಒಂದು ಶಾಖೆಯವರು ರಾತ್ರಿಯೆಲ್ಲ ಪ್ರಯಾಣಮಾಡಿ ಮಾರನೆಯ ಬೆಳಗ್ಗೆ ೧೭೧ ಸೈನ್ಯದ ಗಾಡಿ ಮತ್ತು ಫಿರಂಗಿಗಳನ್ನು ರಂಗೂನಿಗೆ ಸಾಗಿಸಿದ್ದಾರೆ. ಒಂದೇ ದಿನ ೫೦೦ಟನ್ ಪೆಟ್ರೋಲನ್ನು ಹುಷಾರಾಗಿ ಜಹಜಿನಿಂದ ಇಳಿಸಿಕೊಂಡಿದ್ದಾರೆ. ಇವರಲ್ಲಿ ಹಲವರಿಗೆ ಸೈನ್ಯಕ್ಕೆ ಸೇರುವುದಕ್ಕೆ ಮುಂಚೆ ಜಹಜೆಂದರೇನು, ಸಮುದ್ರವೆಂದರೇನು ಎಂಬುದು ಗೊತ್ತಿರಲಿಲ್ಲ. ಆದರೆ ಈಗ ಇವರು ನೌಕಾಕಾರ್ಯದಲ್ಲಿ ಪ್ರವೀಣರಾಗಿದ್ದಾರೆ”ಎಂದು ನೌಕಾ ಪ್ರವೀಣರೊಬ್ಬರು ಪ್ರಶಂಸೆ ಮಾಡಿದ್ದಾರೆ.

ಇಂದು ಜಹಜಿನ ಸಾಮಾನುಗಳನ್ನು ಎತ್ತಿಡುವುದು ಮುಂತಾದುವು ಭಾರತೀಯ ಜಮಾದಾರರ ಕೈಯಲ್ಲಿದೆ. ಅವರು ಆರೇ ವಾರಗಳಲ್ಲಿ ಶಿಕ್ಷಣ ಪಡೆದು ಈ ಕೆಲಸಗಳೆಲ್ಲವನ್ನೂ ತೂಗಿಸುತ್ತಿದ್ದಾರೆ.

ಆರ್. ಎ ಎಫ್. ವಿಮಾನಗಳ ಅದ್ಭುತ ಶಕ್ತಿ

ಆರ್. ಎ. ಎಫ್. ವಿಮಾನವೊಂದು ಮಧ್ಯೆ ಕೈರೋದಲ್ಲಿ ಎಣ್ಣೆ ತೇಬಿಂಸಿಕೊಳ್ಳಲು ೪೦ ನಿಮಿಷಕಾಲ ನಿಂತೂ, ಇಂಗ್ಲೆಂಡಿನಿಂದ ಇಂಡಿಯಾಕ್ಕೆ ೧೨ ಗಂಟೆ 25ನಿಮಿಷಗಳಲ್ಲಿ ಬಂದು ತಲಪಿತು ಗಂಟೆಗೆ ೪೦೦ಮೈಲಿ ಪ್ರಕಾರ ಒಟ್ಟು ೪,೬೦೦ ಮೈಲಿ ದೂರ ಹಾರಿ ಕರಾಚಿಗೆ ಮಧ್ಯಾಹ್ನ ೩-೩೯ಕ್ಕೆ ಬಂದು ಸೇರಿತು

ಯುದ್ಧಾನಂತರದ ಭಾರತೀಯ ವೈಮಾನಿಕ ಪಡೆ. ಕನಿಷ್ಠ ಪಕ್ಷ 10 ತಂಡಗಳಾದರೂ ಇರಬೇಕು.

ಯುದ್ಧಾನಂತರದ ಭಾರತೀಯ ವೈಮಾನಿಕ ಪಡೆ ಎಷ್ಟಿರಬೇಕೆಂಬ ಅಂಶವನ್ನು ಮೊದಲೇ ತಿಳಿಯ ಪಡಿಸಿದರೆ ಈ ಪಡೆಯಲ್ಲಿ ಈಗಿರುವ ಅಧಿಕಾರಿಗಳಿಗ ತಮ್ಮ ಸ್ಥಾನ ಭದ್ರತೆ ಗೊತ್ತಾಗುವುದಲ್ಲದೆ ಈ ನಾಡಿನ ಯುವಕರಿಗೆ ಎಂಥ ಭವಿಷ್ಯವಿದೆಯೆಂಬುದು ವಿದಿತವಾಗಿ ಅವರು ಈ ಪಡೆಗೆ ಹೆಚ್ಚುಹೆಚ್ಚಾಗಿ ಸೇರಲು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಇಂಡಿಯಾ ಸರ್ಕಾರಕ್ಕೆ ಅರಿಕೆ ಮಾಡಲಾಗಿದೆ. ಸರ್ಕಾರದವರು ಈ ಅಂಶವನ್ನು ಚೆನ್ನಾಗಿ ಪರ್ಯಾಲೋಚಿಸಿ, ಈ ಬಗ್ಗೆ ಪ್ರಕಟನೆಯೊಂದನ್ನು ಹೊರಡಿಸಲು ನಿಶ್ಚಯಿಸಿದ್ದಾರೆ

ಯುದ್ಧಕ್ಕೆ ಮುಂಚೆ ಆರ್. ಐ. ಎ ಎಫ್. ಪಡೆಯಲ್ಲಿ ಒಂದೇ ದಳವಿತ್ತು; ಈ ಯುದ್ಧ ಕಾಲದಲ್ಲಿ ಈ ಪಡೆ ಬಳೆಯುತ್ತ ಬಂತು. ಜಪಾನಿನೊಡನೆ ಯುದ್ಧ ಮುಗಿದ ಮೇಲೆ ಭಾರತೀ ವೈಮಾನಿಕ ಪಡೆಯಲ್ಲಿ ಕನಿಷ್ಠ ಪಕ್ಷ 10 ತಂಡಗಳಾದರೂ ಇರತಕ್ಕದ್ದು; ಪಡೆ ಸ್ವಸಂಪೂರ್ಣವಾಗಿದ್ದು, ಎಲ್ಲ ಶಾಖೆಗಳ ಖಾಯಂ ಅಧಿಕಾರಿಗಳ ಏಳಿಗೆಗೆ ಅವಕಾಶವಿರುವಂತೆ ಏರ್ಪಡಿಸಲು, ಇವರ ಜೊತೆಗೆ ಶಿಕ್ಷಣ ಕೊಡುವ ಮತ್ತು ಇತರ ಉಪ ಶಾಖೆಗಳನ್ನೂ ಸೇರಿಸತಕ್ಕದ್ದು. ಎಂದು ಇಂಡಿಯಾ ಸರ್ಕಾರವು ಪ್ರಕಟ ಪಡಿಸಿದೆ. ಅಲ್ಲದೆ, ಈ ಪಡೆಯ ಪ್ರಮಾಣ ಇಷ್ಟೇ ಇರುವುದಿಲ್ಲ. ಪರಿಸ್ಥಿತಿ ಅನುಕೂಲಿಸಿದಂತೆಲ್ಲ, ಜನ ಸಿಕ್ಕಿದಂತೆಲ್ಲ ಇದು ದೊಡ್ಡದಾಗಿ ಬೆಳೆಯುತ್ತದೆಂದು ಸರ್ಕಾರವು ಒತ್ತಿ ಹೇಳುತ್ತಿದೆ. ಇನ್ನು ಮುಂದೆ ಆರ್. ಐ. ಎ. ಎಫ್. ಪಡೆಗೆ ಸೇರಲು ಅರ್ಹರಾದ ಭಾರತೀಯ ಯುವಕರು ಬಹು ಸಂಖ್ಯೆಯಲ್ಲಿ ಮುಂದೆ ಬರುತ್ತಾರೆಂದು ನಂಬಲಾಗಿದೆ.

ಈ ಸಂದರ್ಭದಲ್ಲಿ, ರಾಯಲ್ ಇಂಡಿಯನ್ ಏರ್ ಫೋರ್ಸಿಗೆ ಜನರನ್ನು ಸೇರಿಸಲು ನೆರವಾಗಬೇಕೆಂದು ನಾಡಿನ ವಿದ್ಯಾಲಯಗಳಿಗೆ, ಭಾರತೀಯ ಯುವಕರಿಗೆ, ಮತ್ತು ಮಹಾಜನಕ್ಕೆ ಇಂಡಿಯಾ ಸರ್ಕಾರವು ಬಿನ್ನೈಸಿಕೊಳ್ಳುತ್ತದೆ; ಮತ್ತು ಸಾರ್ವಜನಿಕ ಸಹಕಾರದಿಂದ ಬೇಕಾಗಿರುವಷ್ಟು ಮಂದಿ ಭಾರತೀಯ ಯುವಕರು ಈ ಪಡೆಗೆ ಸೇರಲು ದೊರೆಯುತ್ತಾರೆಂದೂ ನಂಬಲಾಗಿದೆ.

ವೈಸ್ರಾಯ್‌ರವರಿಗೆ ೧೪ನೇ ದಳದ ಕಾಣಿಕೆ

ನವದೆಹಲಿ, ಜೂನ್ ೧೭—ರಂಗೂನಿನ ಪತನಕ್ಕೆ ಮುಂಚೆ ಜಪಾನೀ ದಳಪತಿಯೊಬ್ಬನೊಡನೆ ಕೈಜಗಳ ಮಾಡುತ್ತಿದ್ದಾಗ ಮಿತ್ರಪಡೆಯವರು ಸೆಳೆದುಕೊಂಡ ಕತ್ತಿಯನ್ನು ಇಂದು ವೈಸ್ರಾಯ್ ಭವನದಲ್ಲಿ ಕಾಣಬಹುದು. ಇದು ಜಪಾನೀಯರಿಗೆ ಪುರಾತನ ಕಾಲದಿಂದ ಸಾಗಿ ಬಂದ ಕುಲಧನವಂತೆ ಗುಂಡಿನಪೆಟ್ಟು ಬಿದ್ದು ಸ್ವಲ್ಪ ತಗ್ಗಿರುವ ಒರೆಯಲ್ಲಿ ಈ ಕತ್ತಿಯನ್ನಿಟ್ಟಿದೆ. ೧೯೪೧-೪೩ರ ವರೆಗೆ ಲಾರ್ಡ್ ವೇವೆಲ್‌ರು ಬರ್ಮಾ ಯುದ್ಧದಲ್ಲಿ ಮುಖ್ಯ ಸೈನ್ಯಾಧಿಪತಿಯಾಗಿದ್ದುದರ ಮತ್ತು ಬರ್ಮಾವನ್ನು ಪುನಃ ಜಯಿಸುವುದರಲ್ಲಿ ಭಾರತವೂ ಭಾರತೀದಳವೂ ವಹಿಸಿದ ಮುಖ್ಯ ಪಾತ್ರದ ನೆನಪಿಗಾಗಿ ಈಚೆಗೆ ೧೪ನೇ ದಳದ ಸೇನಾಪತಿಯಾದ ಲೆ. ಜ. ಸರ್ ವಿಲಿಯಂ ಜೆ. ಸ್ಲಿಮ್‌ರವರು ವೈಸ್ರಾಯ್ ಭವನದಲ್ಲಿ ಲಾರ್ಡ್ ವೇವಲರಿಗೆ ಈ ಕತ್ತಿಯನ್ನು ಸಮರ್ಪಿಸಿದರು.

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧ ಖಾತೆ)

ಲೇಖಕರಲ್ಲಿ ಮತ್ತು ಪ್ರಕಟನಕಾರರಲ್ಲಿ ವಿನಂತಿ.

ಮೈಸೂರು ಅಕ್ಷರ ಪ್ರಚಾರ ಸಮಿತಿಯು ಒಂದು ಕೇಂದ್ರ ಪುಸ್ತಕ ಭಂಡಾರವನ್ನು ತೆರೆದಿದೆ. ಕನ್ನಡ ಪುಸ್ತಕಗಳನ್ನು ಒಂದೆಡೆ ಶೇಖರಿಸಿ, ಗ್ರಾಮಗಳಲ್ಲಿ ನಡೆಯುತ್ತಿರುವ ಪುಸ್ತಕಭಂಡಾರಗಳಿಗೆ ಕಾಲಕಾಲಕ್ಕೆ ಹಂಚುವ ಯೋಜನೆ ಮಾಡಿದೆ. ಕೇಂದ್ರ ಪುಸ್ತಕಭಂಡಾರದಲ್ಲಿ ಕನ್ನಡ ಭಾಷೆಯಲ್ಲಿ ಅಚ್ಚಾದ ಎಲ್ಲಾ ಪುಸ್ತಕಗಳ ಒಂದು ಪ್ರತಿಯಾದರೂ ಇರಬೇಕೆಂಬ ಉದ್ದೇಶದಿಂದ ಈ ವಿನಂತಿಯನ್ನು ಹೊರಗೆಡಹಲಾಗಿದೆ. ಆದುದರಿಂದ ಕನ್ನಡ ಲೇಖಕರೂ, ಪ್ರಕಾಶಕರೂ, ಕನ್ನಡ ಪುಸ್ತಕವೊಂದು ಹೊರಬಿದ್ದ ಒಡನೆಯೇ ಆ ಪುಸ್ತಕದ ಬಗ್ಗೆ ಅಕ್ಷರ ಪ್ರಚಾರ ಸಮಿತಿಯ ಕಚೇರಿಗೆ ತಿಳಿಸಬೇಕಾಗಿ ಕೋರಿಕೆ

ಎಂ ಎ. ಕೃಷ್ಣಸ್ವಾಮಿ,
ಕಾರ್ಯದರ್ಶಿ
ಪುಸ್ತಕ ಭಂಡಾರದ ಶಾಖೆ.

ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘ, ಮುಂಬಯಿ— ಈ ಸಂಘದ ಚತುರ್ಥ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ. ೧೦-೬-೪೫ನೇ ರವಿವಾರ ಕೋಟೆಯೊಳಗಿನ ಬಜಾರ ಗೇಟ್ ಹ್ಯಾಸ್ಕೂಲಿನ ಮೂರನೇ ಮಾಳಿಗೆಯಲ್ಲಿ ಶ್ರೀ ಬಿ. ಎಮ್. ಕೋಡಿಕಲ್, T. S. L C. (Secondary) ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲಾಯಿತು. ಅತಿಥಿಗಳಾಗಿ ಬಂದಿರುವ ರಾ।ಗಳಾದ ವೈ। ಬಿ। ಕುಂದೆರ, ದಾಮೋದರ ಟಿ. ಕಾಂಚನ್, ರಾಮ ಆರ್। ಸಾಲಿಯಾನ್ ಮತ್ತು ಸದಸ್ಯರಲ್ಲಿ ಹಲವರು ಸಂಘದ ಮುಂದಿನಾಭಿವೃದ್ಧಿಯ ಕುರಿತು ತಂತಮ್ಮ ಸುರಸವಾದ ಭಾಷಣಗಳನ್ನಿತ್ತಿರುವರಲ್ಲದೆ ಸಂಘವು ಮುಂದಕ್ಕೆ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶೀರ್ವದಿಸಿದರು.

ವಿದ್ಯಾದಾಯಿನಿ ಸಭೆ—ಬಿಲ್ಲವ ಸಮಾಜದ ಬಾಲಬಾಲಕಿಯರ ತಿಳುವಳಿಕೆಯ ಬಗ್ಗೆ: ಸ್ಥಾಪಿಸಿದ ವಿದ್ಯಾದಾಯಿನಿ ಸಭೆಯಿಂದ ಬಿಲ್ಲವ ಸಮಾಜದ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ಕೊಡಲಾಗುವುದು. ಅರ್ಜಿ ಪತ್ರಗಳು ಇದೇ ಜೂನ್ ತಿಂಗಳ ೩೦ನೇ ತಾರೀಕಿನ ಒಳಗೆ ಕೆಳಗಿನ ವಿಳಾಸಕ್ಕೆ ಮುಟ್ಟತಕ್ಕದ್ದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

31 ರಘುನಾಥ್ ದಾದಾಜಿ ಸ್ಟ್ರೀಟ್,
ಫೋರ್ಟ್, ಮುಂಬಯಿ

ವಿದ್ಯಾರ್ಥಿ ವೇತನ—ನಮ್ಮ ಅಪೇಕ್ಷಿಸುವ IV, V, VI ಫೋರ್ಮುಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಆಯಾ ಶಾಲೆ ಮುಖ್ಯೋಪಾಧ್ಯಾಯರ ಶಿಫಾರಸಿರುವ ಮಾರ್ಕುಪಟ್ಟಿಯನ್ನು [illegible] ಪ್ರಮುಖರಲ್ಲೊಬ್ಬರ ಶಿಫಾರಸಿನ ಪತ್ರವನ್ನು (ಬಡತನದ ಬಗ್ಗೆ) ಒಳಗೊಂಡಿರುವ ಅರ್ಜಿಗಳನ್ನು ಜುಲೈ [illegible]ರೊಳಗೆ ಕಳುಹಿಸಿ ಕೊಡಬಹುದು. [illegible] ಬಂದ ಅರ್ಜಿಗಳಿಗೆ ಸಿಗಾ ಕೊಡಲಿಕ್ಕಿಲ್ಲ.

M. K. Yellappa,
Hon. Secretary,
Billava Samaja Seva Sangha,
Mulky S. K

ಪಡು ಆಲೆವೂರು ಶಾಲೆ—ಇಲ್ಲಿಯ ಮೆನೇಜರ್ [illegible] ಶೆಟ್ಟರು ಶಾಲಾ ಪ್ರೋತ್ಸಾಹಕ ಸಭೆಯೊಂದನ್ನು 13 6-45 ರಲ್ಲಿ [illegible], ಸಭೆಗಳಲ್ಲಿ ಶಾಲೆಗೆ ಧನಸಹಾಯವನ್ನಿತ್ತ ವಿದ್ಯಾಭಿಮಾನಿಗಳೆಲ್ಲರ, ಮುಖ್ಯವಾಗಿ ಶ್ರೀಗಳಾದ ವಿಠಲ [illegible] ಜಪ್ಪ ಶೆಟ್ಟಿ, ಕೆ. ತಿಮ್ಮಪ್ಪ ಶೆಟ್ಟಿ, ಯಸ್। ಕೆ। ಸುವರ್ಣ, ಎ। ಮಾಧವ ಗೋಪಾಲ ಪ್ರಭು, ಎ। ಅಪ್ಪಣ್ಣ ಶೆಟ್ಟಿ, ಯನ್। ಯಸ್। ಸರಳಾಯ ಮೊದಲಾದವರ ಪರಿಚಯವನ್ನಿತ್ತು ಅವರೆಲ್ಲರ ಉಪಕಾರ ಸ್ಮರಣೆಯನ್ನು ಮಾಡಿದರು.

ಕರ್ನಾಟಕದ
ವಿಮಾ ಪ್ರಪಂಚದ ನಭೋಮಂಡಲದಲ್ಲಿ
ಬೆಳಗುವ ತಾರೆ

ಯುನೈಟೆಡ್ ಕರ್ನಾಟಕ
ಇನ್ಶೂರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd. DHARWAR

The Representative Insurance Concern of
KARNATAK.

**It is easy to earn
But difficult to save.**

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited.
Head Office UDIPI, (S. India.)
T. A. PAI, B. Com. (Bom) A. I. I. B.
General Manager.

ದಕ್ಷಿಣ ಕನ್ನಡ.

ಮಂಗಳೂರು.

ಮಳೆಗಾಲದಲ್ಲಿ ಕಟ್ಟಿಗೆ ಬೇಕಾದವರು–ತಮ್ಮ ಹೆಸರನ್ನು ಹೊಸಲೆ ಜಿಲ್ಲರೆ ಕಟ್ಟಿಗೆ ವ್ಯಾಪಾರಿಗಳಲ್ಲಿ ದಾಖಲುಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳದವರಿಗೆ ಕಟ್ಟಿಗೆ ದೊರೆಯಲಾರದು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸುತ್ತಾರೆ.

ಶಾಲಾ ಮಕ್ಕಳ–ಸ್ಲೇಟು, ಸ್ಲೇಟುಕಡ್ಡಿ, ಪೆನ್ಸಿಲು, ರಬ್ಬರು ಇತ್ಯಾದಿಗಳನ್ನು ಸಂಗ್ರಹಿಸುವ ವಿಚಾರದಲ್ಲಿ ಶಾಲಾ ಹೆಡ್ಮಾಸ್ತರರಿಗೆ ತೊಂದರೆಗಳೇನಾದರೂ ಇದ್ದರೆ, ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ತಿಳಿಸಬೇಕೆಂದು ಪ್ರಕಟಿಸಲಾಗಿದೆ.

ಜಿಲ್ಲಾ ಜಡ್ಜರಾದ–ಶ್ರೀ. ಎಂ. ಸಿ. ಬಿ. ಕೋಮನ್ ಅವರ ಸ್ಥಾನದಲ್ಲಿ ಶ್ರೀ. ಕೆ. ಶ್ರೀನಿವಾಸನ್ ಅವರು ಜಿಲ್ಲಾ ಜಡ್ಜರಾಗಿ ಬಂದಿದ್ದಾರೆ. ಪ್ರಿನ್ಸಿಪಲ್ ಸಬ್‌ಜಡ್ಜರಾಗಿದ್ದು ಈಗ ನಿವೃತ್ತರಾದ ಶ್ರೀ. ಪರಮೇಶ್ವರ ಅಯ್ಯರರ ಸ್ಥಾನಕ್ಕೆ ಎಲ್ಲೂರು ಜಿಲ್ಲಾ ಮುನ್ಸಿಫರಾದ ಶ್ರೀ. ಎಸ್. ನರಸಿಂಹಲು, ಅವರು ನೇಮಿಸಲ್ಪಟ್ಟಿದ್ದಾರೆ ಕುಂದಾಪುರದ ಪ್ರಿನ್ಸಿಪಲ್ ಜಿ. ಮುನ್ಸಿಫರಾಗಿದ್ದ ಶ್ರೀ. ಕೃಷ್ಣಮೂರ್ತಿ ಅವರು ಎಡಿಶನಲ್ ಸಬ್ ಜಡ್ಜರಾಗಿಯೂ, ಶ್ರೀ. ಯು. ನಾರಾಯಣರಾಯರು (ಈಗ ಕುಂದಾಪುರದಲ್ಲಿ ಎಡಿಶನಲ್ ಮುನ್ಸಿಫರಾಗಿದ್ದವರು) ಕುಂದಾಪುರದ ಪ್ರಿನ್ಸಿಪಲ್ ಮುನ್ಸಿಫರಾಗಿಯೂ, ಜನಾಬ್ ಅಬ್ದುಲ್ ರಹೀಮರು ಅಲ್ಲಿಯ ಎಡಿಶನಲ್ ಮುನ್ಸಿಫರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಮಂಗಳೂರು ಸಹಕಾರಿ ಸಂಘ–ಗಳ ಪಂಚಾಯತುದಾರರ ಮತ್ತು ಸದಸ್ಯರ ತರಬೇತಿಯ ತರಗತಿಯೊಂದು ಕಳೆದ ಮೇ ತಾ. ೩೧ರಲ್ಲಿ ಆರಂಭವಾಗಿ ಜೂನ್ ತಾ. ೪ ರಂದು ಕೊನೆಗೊಂಡಿತು.

ಗೀತಾ ಪ್ರಬಂಧ–'ಆಧುನಿಕ ಸಾಮಾಜಿಕ ಹಾಗೂ ನೈತಿಕ ಜೀವನದಲ್ಲಿ ಭಗವದ್ಗೀತೆಯ ಮಾರ್ಗದರ್ಶಕತ್ವ' ಎಂಬ ವಿಷಯದಲ್ಲಿ ಇಂಗ್ಲಿಷ್, ಸಂಸ್ಕೃತ, ತಮಿಳು, ತೆಲುಗು, ಕನ್ನಡ, ಮಲಯಾಳ, ಇವುಗಳಲ್ಲಿ ಯಾವುದಾದರೊಂದು ಭಾಷೆಯಲ್ಲಿ ಪ್ರಬಂಧವನ್ನು ಬರೆದು ಕಾರ್ಯದರ್ಶಿ, ಗೀತಾ ಸಮಿತಿ, ಸಂಸ್ಕೃತ ಕೋಲೇಜು, ಮೈಲಾಪುರ ಇವರಿಗೆ ತಾ. ೩೧-೭-೪೫ರೊಳಗೆ ತಲುಪುವಂತೆ ಕಳುಹಿಸಬೇಕೆಂದು ಪ್ರಕಟಿಸಿದ್ದಾರೆ. ಪ್ರಬಂಧವು ಮೂರು ಸಾವಿರ ಶಬ್ದಗಳಿಗೆ ಮೀರಬಾರದು ಪ್ರತಿಯೊಂದು ಭಾಷೆಯಲ್ಲಿನ ಉತ್ಕೃಷ್ಟ ಪ್ರಬಂಧಕ್ಕೆ ರೂ. ೭೫ ಬಹುಮಾನ ಕೊಡಲಾಗುವುದಂತೆ.

ಲಡ್ಡು ಭಾವಾಜಿ ಭಜನಾ ಮಂಡಳಿ–ಮಂಗಳೂರು ನಗರದ ಕೆಲವು ತರುಣರು ಶ್ರೀ. ಬಿ. ಎಲ್. ಕರ್ಕೇರರವರ ಮುಂದಾಳುತ್ವದಲ್ಲಿ ಪುರಜನರ ಸಹಾಯವನ್ನು ಪಡೆದು ಶ್ರೀ ಪರಮಹಂಸ ಲಡ್ಡು ಭಾವಜಿ ಸೇವಾ ಭಜನೆ ಮಂಡಳಿಯು ಅನಾಥ ಹಿಂದೂ ಶವ ಸಂಸ್ಕಾರದ ಬಗ್ಗೆ ಶವಸಂಸ್ಕಾರದ ಗಾಡಿಯನ್ನು ಮತ್ತು ಭಜನೆಯ ಬಗ್ಗೆ ಪಂಚಮುಖದ ಕಾಲುದೀಪ ಒಂದನ್ನು ಸಹ ಬಹು ವಿಜೃಂಭಣೆಯಿಂದ ಮೆರವಣಿಗೆಯಲ್ಲಿ ತಂದು ಸಂಘದ ಕಡೆಯಿಂದ ಶ್ರೀ ವೆಂಕಟರಮಣ ದೇವಸ್ಥಾನದ ಮುಂದುಗಡೆಯಿಂದ ಸ್ವಾಗತಿಸಿ ಶ್ರೀ ಪರಮಹಂಸರ ಸಮಾಧಿಯ ಛತ್ರಕ್ಕೆ ಬಂದು ಶ್ರೀಮಾನ್ ಬಿ. ರಾಮಪ್ಪ ಕರ್ಕೇರರ ಅಧ್ಯಕ್ಷತೆಯಲ್ಲಿ ಸಂಘಕ್ಕೆ ಒಪ್ಪಿಸಿದರು. ಅದೇ ಸಮಯದಲ್ಲಿ ಶ್ರೀಮಾನ್ ಎಡ್ವೊಕೇಟ್ ಕೆ. ವೈ. ಪೂಜಾರಿಗಳವರೂ ಮತ್ತು ಶ್ರೀ. ಬಿ. ನರಸಪ್ಪನವರೂ, ಶ್ರೀ ವಿದ್ವಾನ್ ಬೇಲೆಗದ್ದೆ ಅಪ್ಪಯ್ಯ ಮಾಸ್ತರರೂ ಸಂಘದ ಕಾರ್ಯದರ್ಶಿ ಎಸ್. ಕೇಶವ ನಾಯ್ತರೂ ಭಾಷಣವನ್ನಿತ್ತು ಸಂಘಕ್ಕೆ ಪ್ರೋತ್ಸಾಹಕೊಡಬೇಕಾಗಿ ಕೇಳಿಕೊಂಡರು.

ಜಿಲ್ಲಾ ಮುಸ್ಲಿಂ ಲೀಗ್–ಸಭೆಯ ವಾರ್ಷಿಕಾಧಿವೇಶನವು ತಾ. ೧೦ರಂದು ನಗರದ ಲೀಗ್ ಆಫೀಸಿನಲ್ಲಿ ಖಾನ್ ಸಾಹೇಬ್ ಹಾಜಿ ಮಹಿಮದ್ ಶಮ್ಯಾಡ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿತು. ಮುಸ್ಲಿಂ ಮುಖಂಡರು ಪಲವರು ಮಾತನಾಡುತ್ತ ಲೀಗಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತಜ್ಜಲು ನಿಧಿಯೊಂದು ಅಗತ್ಯವೆಂದರು. ೨೫ ಮಂದಿಯನ್ನೊಳಗೊಂಡ ಕಾರ್ಯಕಾರಿ ಸಮಿತಿಯೊಂದರ ನೇಮಕವಾಯಿತು.

ಚೇಂಬರ್ ಅಫ್ ಕಮ್ಮರ್ಸ್ ಅಧಿವೇಶನ–ಇದೇ ತಾ. ೧೮ರಂದು 'ದಿ ಕೆನರಾ ಚೇಂಬರ್ ಅಫ್ ಕಮ್ಮರ್ಸ್' ಸಂಸ್ಥೆಯ ವಾರ್ಷಿಕ ವರ್ಷಾವಧಿ ಸಭೆಯು ಸಂಘದ ಕಾರ್ಯಾಲಯದಲ್ಲಿ ಅಪರಾಹ್ನ ೪ ಗಂಟೆಗೆ ಜರಗಿತು. "ರಾಷ್ಟ್ರೀಯ ಯುದ್ಧ ಮುಖ"ದ ಜಿಲ್ಲಾ ಓರ್ಗನೈಸರರಾದ ಖಾನ್ ಸಾಹೇಬ್ ಎಚ್. ಎಸ್. ಹುಸೇನ್, ಬಿ.ಎ., ಬಿ.ಎಲ್., ಎಮ್. ಎಲ್. ಎ. ಅವರು 'ಸೆಕ್ಯೂರಿಟಿ ಎಜ್ಯುಕೇಶನ್' ಎಂಬ ವಿಷಯದಲ್ಲಿ ಭಾಷಣವಿತ್ತರು.

ದಿ ಕರ್ನಾಟಕ ಕೊಲೇಜ್ ಅಫ್ ಕಮ್ಮರ್ಸ್–ಸಧ್ಯದಲ್ಲಿ ತೆರೆಯಲ್ಪಡಲಿರುವ ಈ ಕಲಾ ಶಾಲೆಯು ಅಖಿಲ ಕರ್ನಾಟಕ ಪ್ರಾಂತದಲ್ಲೇ ಇದೀಗ ಮೊತ್ತಮೊದಲನೆಯದಾಗಿದ್ದು, ಬೊಂಬಾಯಿಯಿಂದ ದಕ್ಷಿಣಕ್ಕೆ ಇಂಡಿಯದ ಪಶ್ಚಿಮ ಕರಾವಳಿಯಲ್ಲಿ ಪ್ರಾಧಾನ್ಯತೆಯನ್ನು ಪಡೆಯುವುದೆಂದು ಕೇಳುತ್ತೇವೆ. ಮೆಟ್ರಿಕ್ಯುಲೇಶನ್ ವರೆಗೆ ಅಥವಾ ಕಡಿಮೆ ಕಲಿತವರೂ, ಅದಕ್ಕಿಂತ ಹೆಚ್ಚು ವಿದ್ಯಾಭ್ಯಾಸವಾದರೂ ಈ ಕೋಲೇಜಿಗೆ ಸೇರಿ ಡಿಪ್ಲೋಮಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬೇಂಕ್ ಇಲ್ಲವೇ ಇತರ ಕಮ್ಮರ್ಶಿಯಲ್ ಸಂಸ್ಥೆಗಳಲ್ಲಿ ಸ್ಥಾನ ಗಳಿಸಿಕೊಳ್ಳಬಹುದಾಗಿರುವುದು ಸಂತೋಷಕರ ವಾರ್ತೆ!

ನಗರ ಸಭೆ–ಯ. ತಾ.೧೧ರಂದು ಸೇರಿದಾಗ ನಗರದ ಪ್ರತಿಯೊಬ್ಬ ನಿವಾಸಿಕನಿಗೂ ದಿನಕ್ಕೆ ೧೫ ಗೆಲನುಗಳಂತೆ ನಳಿಗೆ ನೀರನ್ನೊದಗಿಸಬಲ್ಲ ನೀರಿನ ಸರಬರಾಯಿಯ ಯೋಜನೆಯೊಂದು ಮಂಜೂರಾಯಿತು. ಕೊಳಕು ನೀರು ಸರಿಯಾಗಿ ಹರಿದುಹೋಗುವ ಚರಂಡಿಗಳ ವ್ಯವಸ್ಥೆಯ ಯೋಜನೆಯೊಂದನ್ನೂ ಈ ನಗರಕ್ಕಾಗಿ ಪೂರೈಸಿಕೊಡಬೇಕಾಗಿ ಸರಕಾರವನ್ನು ವಿನಂತಿಸಿಕೊಳ್ಳುವ ಒಂದು ಠರಾವು ಮಾನ್ಯವಾಯಿತು. ಈ ನಗರ ಸಭೆಗೆ ಬೇರೆ ಇಂಜಿನಿಯರರನ್ನು ನೇಮಿಸಿ ಇಲ್ಲಿಯವರನ್ನು ಕೊಯಮುತ್ತೂರಿಗೆ ವರ್ಗಾಯಿಸಿದುದನ್ನು ನಿಷೇಧಿಸಿ, ರಸ್ತೆ ಮತ್ತಿತರ ಕಾಮಗಾರಿಗಳು ಧಾರಾಳವಿರುತ್ತ ಇಲ್ಲಿಗೊಬ್ಬ ಇಂಜಿನಿಯರರು ಅಗತ್ಯವೆಂದು ಅಭಿಪ್ರಾಯಪಟ್ಟಿತು. ಈ ಬಗ್ಗೆ ಠರಾವೊಂದನ್ನು ಮುಂದಿನ ಸಭೆಯಲ್ಲಿ ಕೈಕೊಳ್ಳುವುದೆಂದು ನಿರ್ಧರಿಸಿ ಅಧಿಕಾರಿಗಳಿಗೆ ಕಳುಹಿಸುವುದೆಂದಾಯಿತು.

ನಗರ ಸಭೆಯು ಜರಗುತ್ತಿದ್ದಾಗ ಸದಸ್ಯರು ಬೀಡಿ ಸಿಗರೇಟುಗಳನ್ನು ಸೇದಬಾರದೆಂಬ ನಿಬಂಧನೆಯನ್ನು ವಿಧಿಸಲಾಯಿತು.

ಮೈದಾನಿನಲ್ಲಿರುವ ರೇಡಿಯೋ ಮಂದಿರದಲ್ಲೊಂದು ಹೆಚ್ಚು ಬೆಳಕಿನ ಇಲೆಕ್ಟ್ರಿಕ್ ದೀಪವಿರಿಸುವುದಕ್ಕಾಗಿ ರೂ. ೨೦೦ ಮಂಜೂರಾಯಿತು. ಇನ್ನೂ ಕೆಲವು ಕಡೆಗಳಲ್ಲಿ ಅಂತಹದೇ ದೀಪವಿರಿಸುವುದಕ್ಕಾಗಿ ರೂ. ೨೦೦ ಮಂಜೂರಾಯಿತು. ಕಂಕನಾಡಿಯ ಸೈಂಟ್ ಜೋಸೆಫ್ ಕುಷ್ಠರೋಗಿಗಳ ಆಸ್ಪತ್ರೆ ಧನ ಸಹಾಯಕ್ಕಾಗಿ ರೂ. ೬೦೦ ಮಂಜೂರಾಯಿತು. ಮುನ್ಸಿಪಲ್ ಉದ್ಯೋಗಸ್ಥರಿಗೆ ಏರಿದ ತುಟ್ಟಿ ಭತ್ತೆಯನ್ನು ಕೊಡಲೊಪ್ಪಿತು. ವಿದ್ಯುಚ್ಛಕ್ತಿಯನ್ನು ನಗರದ ದೀಪಗಳಿಗೂ ಇತರ ಕೈಗಾರಿಕಾ ಕಾರ್ಖಾನೆಗಳಿಗೂ ಅಗ್ಗವಾಗಿ ಗೊರಪ್ಪ ಅಥವಾ ಇತರ ಕಡೆಗಳಿಂದ ಒದಗಿಸುವ ಕುರಿತು ವಿವೇಚಿಸಲು ನೇಮಕವಾಗಿದ್ದ ಸಮಿತಿಯ ವರದಿ ಮಂಜೂರಾಯಿತು.

ಚಿಮಿಣಿ ಎಣ್ಣೆ–ಯ ರಮಿ ದರವನ್ನು ಬಂದುಮಾಡಿದ ಡಬ್ಬಿಯೊಂದಕ್ಕೆ ೦-೦ ಒಪ್ಪೈಯಂತೆ ಜಿಲ್ಲೆಯ ಎಲ್ಲ ಪ್ರದೇಶಗಳಲ್ಲೂ ಇಳಿಸಲಾಗಿದೆ. ಈ ದರವು ಎಲ್ಲಾ ಜಾತಿಯ ಚಿಮಿಣಿ ಎಣ್ಣೆಗಳಿಗೂ ಅನ್ವಯಿಸುವುದು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸುತ್ತಾರೆ.

ಆಹಾರ ಸಮಿತಿಯ ಸಭೆ–ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮಿತಿಯು ರಚಿಸಿದ ಆಹಾರ ಸಮಿತಿಯ ಸಭೆಯು ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಶ್ರೀಗಳಾದ ಎ. ಬಿ. ಶೆಟ್ಟಿ, ಯು. ಪಿ. ಮಲ್ಯ, ಪಿ. ಲಕ್ಷ್ಮೀನಾರಾಯಣ ನಾಯಕ್, ದೇವಪ್ಪ ಆಳ್ವ, ಕೆ. ಕೆ. ಶೆಟ್ಟಿ, ಕೆ. ಈಶ್ವರ, ಎನ್. ಉಪೇಂದ್ರ ನಾಯಕ್ ಮೊದಲಾದವರು ಹಾಜರಿದ್ದರು. ಸರ್ವಾನುಮತದಿಂದ ಈ ಕೆಳಗಿನ ನಿರ್ಣಯವು ಸ್ವೀಕರಿಸಲ್ಪಟ್ಟಿತು. "ಜಿಲ್ಲೆಯಲ್ಲಿ ಬೇರೆಬೇರೆ ಸಂಘಗಳೂ ವ್ಯಕ್ತಿಗಳೂ ಬೇರೆಬೇರೆಯಾಗಿ, ಆಹಾರದ ವಿಚಾರವಾಗಿ, ಅಧಿಕಾರಿಗಳಾಗಿ ಬರೆಯುತ್ತಿರುವರಾದರೂ ಒಮ್ಮತವಿಲ್ಲದ್ದರಿಂದ ಆಶಿತ ಪ್ರಯೋಜನಗಳಾಗುತ್ತಿಲ್ಲ. ಜಿಲ್ಲೆಯ ವಿವಿಧ ಸಂಘಗಳ ಕಾರ್ಯವನ್ನು ಒಂದುಗೂಡಿಸಿ, ಒಮ್ಮತದ ಸೂಚನೆಗಳನ್ನು ಅಧಿಕಾರಿಗಳ ಮುಂದಿಡುವುದಕ್ಕಾಗಿ ಈ ಕೆಳಗಿನ ಜಿಲ್ಲೆಯ ಸಂಘಗಳು ತಮ್ಮ ಪ್ರತಿನಿಧಿಗಳನ್ನು ಆಹಾರ ಸಮಿತಿಗೆ ಕಳುಹಿಸಬೇಕೆಂದು, ಅವುಗಳನ್ನು ಕೇಳಿಕೊಳ್ಳಲಾಯಿತು. (೧) ಕಾಸರಗೋಡಿನ ಆಹಾರ ಸಮಿತಿ. (೨) ಜಿಲ್ಲಾ ಭೂಮ್ಯಾಲಿಕರ ಸಂಘ. (೩) ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ತೋಟಸ್ಥರ ಸಂಘ".

"ಜಿಲ್ಲೆಯ ವಿವಿಧ ಭಾಗದ ಈ ಕೆಳಗಿನ ಮಹನೀಯರನ್ನೂ ಸಮಿತಿಗೆ ಸೇರಿಸಲಾಯಿತು. ಶ್ರೀಯುತರುಗಳಾದ ಕೆ. ಬಿ. ಜಿನರಾಜ ಹೆಗ್ಗಡೆ, ಬಿ. ಪಿ. ಕಕ್ಕಿಲ್ಲಾಯ, ಇಲಂತೋಡು ಕೃಷ್ಣಭಟ್ಟ, ಕೆ. ಬಾಬು ಶೆಟ್ಟಿ, ಬಿ. ನಾರಾಯಣ ಶೆಟ್ಟಿ, ಕೆ. ಎಸ್. ಕಾರಂತ, ಕೆ. ವೆಂಕಟೇಶ ಪ್ರಭು". ಈ ಸಮಿತಿಯ ಪೂರ್ಣ ಸಮಿತಿ ಸಭೆಯು ಇದೇ ತಿಂಗಳ ತಾ. ೨೪ ರಂದು ಸಂಜೆ ೪ ಗಂಟೆಗೆ ಇಲ್ಲಿನ ಥಿಯೊಸೊಫಿಕಲ್ ಲೋಜ್‌ನಲ್ಲಿ ಜರಗುವುದು. ಅಂದು ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಚರ್ಚಿಸಲಾಗುವುದು. ಇದಕ್ಕೆ ಸೂಚನೆಗಳನ್ನೀಯುವವರು ತಮ್ಮ ಸೂಚನೆಯನ್ನು ಸಭೆ ಕರೆಯುವವರಾದ ಶ್ರೀ. ಕೆ. ಆರ್. ಕಾರಂತರಿಗೆ ತಾ. ೨೨ರೊಳಗೆ ತಲಪುವಂತೆ ಕಳುಹಿಸಿಕೊಡಬೇಕು.

ನಂದಿಗುಡ್ಡೆ ಸ್ಮಶಾನ ಮೊಕದ್ದಮೆ–ಈ ಮೇಲಿನ ಮೊಕದ್ದಮೆಯ ಅಪ್ಪೀಲು ಕಳೆದ ತಾರೀಕು ೧೧-೬-೪೫ನೇ ದಿನ ಜಿಲ್ಲಾ ಮೆಜಿಸ್ಟ್ರೇಟರಿಂದ ತಸ್ಕಿಮಾಡಲಾಯ್ತು. ಶ್ರೀ. ಜಿ. ಸೋಮಶೇಖರ ರಾಯರು, ರಂಗರಾಯರು ಮತ್ತು ರಂಗರಾವ್ ತಲಚೇರಿಕರರು ಡಿಫೆನ್ಸ್ ವಕೀಲರಾಗಿ ಅಪ್ಪೀಲನ್ನು ವಾದಿಸಿ ಈ ವ್ಯಾಜ್ಯವು ಕೇವಲ ಸಿವಿಲ್ ಸಮ್ಮಂಧವಾದುದರಿಂದ ಕ್ರಿಮಿನಲ್ ತಕ್ಷೀರಾಗಲು ಸಾಧ್ಯವಿಲ್ಲವೆಂದೂ ಮುನ್ಸಿಪಾಲ್ ಪಬ್ಲಿಕ್ ಸ್ಮಶಾನವಾದುದರಿಂದ ಕಮಿಶನರರ ಹುಕುಂ (Permission) ಪಡೆದು ಶವ ದಹನ ಮಾಡಿದ್ದರಿಂದ ಟ್ರೆಸ್‌ಪಾಸ್ (Trespass) ಎಂದು ಹೇಳಲಿಕ್ಕೇ ಸಾಧ್ಯವಿಲ್ಲವೆಂತಲೂ ಹೇಳಿದ್ದರು ಜಿಲ್ಲಾ ಮೆಜಿಸ್ಟ್ರೇಟರು ತೀರ್ಪನ್ನು ಮುಂದರಿಸಿಟ್ಟರು.

CHAMPAE'S

Snow & Castrex

(Sole Distributers for India.)

Sukhananda Stores

Santhekatte, UDIPI, S. K.

No Substitute Yet.

This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,

UDIPI, (S. India.)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ '**ಜುಪಿಟರ್**' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ವೇವೆಲ್ ಕೊಡುಗೆಗೆ ಪಾರ್ಲಿಮೆಂಟಿನ ಸಮರ್ಥನೆ.

ಅಮೆರಿ ವಾಗ್ಝರಿ.

ಲಂಡನಿನಿಂದಲೂ, ನವದಿಲ್ಲಿಯಿಂದಲೂ ಏಕಕಾಲದಲ್ಲಿ ಘೋಷಿಸಬೇಕೆಂಬ ನಿಶ್ಚಯದಂತೆ ಹತ್ತು ವರುಷ ಬಾಳಿದ ಸದ್ಯದ ಪಾರ್ಲಿಮೆಂಟು ಬರ್ಖಾಸ್ತಾಗುವ ದಿನ-ಪ್ರಾಂತದಲ್ಲಿ ವೈಸರಾಯರು ಬ್ರಿಟಿಷ್ ಸರಕಾರದ ಹೊಸ ದಾನವನ್ನು ಘೋಷಿಸಿದ ದಿನ-ಜುಲಾಯಿ ತಾ 14ರಲ್ಲಿ ಭಾರತ ಕಾರ್ಯದರ್ಶಿ ಮಿ. ಅಮೆರಿಯವರು ಪಾರ್ಲಿಮೆಂಟಿನ ಕಾಮನ್ಸ್ ಅಧಿವೇಶನದ ಮುಂದೆ ಭಾರತದ ಶ್ವೇತ ಪತ್ರವನ್ನು ಮಂಡಿಸಿದರು. ಸಮ್ಮಿಶ್ರಮಂತ್ರಿ ಮಂಡಲವು ಬರ್ಖಾಸ್ತಾಗಿ ಬ್ರಿಟನಿನಲ್ಲಿ ಚುನಾವಣೆಯ ಕಿಡಿ ಹತ್ತಿದಂದಿನಿಂದ ಟೋರಿ-ಲೇಬರ್, ಚರ್ಚಿಲ್-ಬೆವಿನ್ ವಾಗ್ಯುದ್ಧಗಳಿಂದ ಆಗಾಗ ಬಿಸಿಗೊಳ್ಳುತ್ತಿದ್ದ ಕಾಮನ್ಸ್ ಸಭೆಯಲ್ಲಿ ಈ ದಿನವೂ ತೀವ್ರ ವಾಕ್ಕಲಹ ನಡೆದುದರ ಪರಿಣಾಮವಾಗಿ ಶ್ವೇತಪತ್ರದ ಚರ್ಚೆ ಒಂದು ಘಂಟೆ ವಿಳಂಬವಾಯಿತು. ಚರ್ಚಿಲ್ಲರು ಸಿಡುಕು ಮೋರೆಯಿಂದ ಹೊರಟುಹೋದರು ಮಿ. ಅಮೆರಿ ಇಡೀ ಸಭೆಯ ಲಕ್ಷ್ಯದ ಕೇಂದ್ರವಾದರು. ಪ್ರೇಕ್ಷಕರ ಗೆಲರಿಯು ಹಿಂದೀಯರಿಂದಲೂ ಇತರ ಪ್ರತಿಷ್ಠಾವಂತರಿಂದಲೂ ತುಂಬಿದ್ದಿತು. ಭಾರತ ಕಾರ್ಯದರ್ಶಿಯು, ಶ್ವೇತ ಪತ್ರವನ್ನೇ ಮುಂದಾಗಿ ಓದಹತ್ತಿದಾಗ ಸಭಾನಿಯಮದ ಹೆಸರಿನಿಂದ ಕೆಲವರದಕ್ಕೂ ಆಕ್ಷೇಪವೆತ್ತಿದರು. ನಗುಮೊಗದಿಂದ ಎಲ್ಲವನ್ನೂ ಸಹಿಸಿಕೊಂಡು ನಿಂತ ಮಿ. ಅಮೆರಿಯವರಿಗೆ ಇತರ ಸದಸ್ಯರ ಪ್ರೋತ್ಸಾಹ ದೊರೆಯಿತು ಅವರು ಕೊಡುಗೆಯ ರೂಪರೇಷೆಗಳನ್ನು ಮುಂದಾಗಿ ಓದಿ ತಿಳಿಸಿ, ಅದನ್ನು ಸಮರ್ಥಿಸಿ ಭಾಷಣವನ್ನೂ ಕೊಟ್ಟು 'ಅಮೆರಿಯು ತನ್ನ ಅಧಿಕಾರಾವಧಿಯಲ್ಲಿ ಮಾಡಿದ ಒಂದೇ ಒಂದು ಮಹತ್ಕಾರ್ಯವೆಂದರೆ ಇದು!' ಎಂದು ಸರ್ವರ ಶ್ಲಾಘನೆ ಪಡೆದರು. ಈ ದಾನಕ್ಕೆ ಎಲ್ಲಾ ಪಕ್ಷೀಯರ ಅನುಮೋದನೆ ದೊರೆಯಿತು. ಅವರ ಭಾಷಣಾಂಶವಿದು:-

ಪೂರ್ಣ ಸ್ವಾತಂತ್ರ್ಯಗುರಿ

"1942ನೇ ಮಾರ್ಚಿಯ ಕೊಡುಗೆಯು ಈಗಲೂ ಇದ್ದಂತೆ ಇದೆ. ಆ ಕೊಡುಗೆಯ ಅಸ್ತಿವಾರವಾಗಿ ಎರಡು ಮೂಲತತ್ವಗಳಿವೆ. ಮೊದಲನೆಯದಾಗಿ ಹಿಂದುಸ್ಥಾನವು ತನ್ನ ಭವಿಷ್ಯವನ್ನು ಹೇಗೆಯೇ ನಿರ್ಧರಿಸಿಕೊಳ್ಳಬೇಕೆಂಬ ಯಾವ ಮಿತಿಯನ್ನೂ ಹಾಕಿಲ್ಲ ಅದು ಕಾಮನ್‌ವೆಲ್ತಿನ ಸ್ವತಂತ್ರ ಪಾಲುಗಾರನಾಗಿರಬಹುದು-ಬೇಕಾದರೆ ಅದನ್ನೂ ಬಿಟ್ಟಿರಬಹುದು. ಎರಡನೆಯದಾಗಿ ಈ ಗುರಿಯನ್ನು ಸೇರುವದು ಹಿಂದೀಯರಿಂದಲೇ ತಯಾರಿಸಲ್ಪಡುವ ರಾಜ್ಯರಚನಾ ವಿಧಾನ ಅಥವಾ ವಿಧಾನಗಳಿಂದ ಮಾತ್ರ ಆ ರಾಜ್ಯ ರಚನೆಗೆ ಎಲ್ಲಾ ಮುಖ್ಯ ಪಕ್ಷಗಳ ಒಪ್ಪಿಗೆಯಿರಬೇಕು. ಪ್ರಧಾನ ಮಂತ್ರಿಗಳ ಮಾತಿನಿಂದಲೇ ಹೇಳುವದಾದರೆ 'ಈ ಸೂಚನೆಗಳೀಗಲೂ ಅಭೇದ್ಯವಾಗಿ ಪೂರ್ಣಾವಕಾಶದೊಡನೆ ಉಳಿದಿವೆ' ಇವುಗಳಿಗೆ ಏನನ್ನಾದರೂ ಸೇರಿಸುವದಾಗಲೀ, ಇವುಗಳಿಂದೇನನ್ನಾದರೂ ತೆಗೆಯುವದಾಗಲೀ ಯಾರೊಬ್ಬನಿಂದಲೂ ಸಾಧ್ಯವಿಲ್ಲ. ಇದೊಂದು ದೃಢನಿರ್ಧಾರ ಇದಕ್ಕೆ ನಮ್ಮ ಮಹದಿಚ್ಛೆ ಮಾತ್ರವಲ್ಲ—ಭಾರತ ಪರಿಸ್ಥಿತಿಯ ಅನಿವಾರ್ಯ ಸಂಗತಿಗಳೂ ಆಧಾರವಾಗಿವೆ. ನಾವಿತ್ತುದನ್ನು ವಿನಿಯೋಗಿಸಬಲ್ಲ ಸರಕಾರ ಅಥವಾ ಸರಕಾರಗಳ ಕೈಗೆ ಮಾತ್ರವೇ ನಮ್ಮ ಭಾರತಾಧಿಕಾರವನ್ನು ನಾವು ವರ್ಗಾಯಿಸ ಬಲ್ಲೆವು. ಅರಾಜಕತೆ ಅಥವಾ ಅಂತರ್ಯುದ್ಧಕ್ಕೆ ನಾವು ಹಿಂದುಸ್ಥಾನವನ್ನೀಯಲಾರೆವು ಭಾರತದ ಜನತೆ ಮತ್ತು ಲೋಕಶಾಂತಿಯ ಕುರಿತು ನಮ್ಮ ಮೇಲಿರುವ ಹೊಣೆಯು ಹಾಗೆ ಮಾಡದಂತೆ ಪ್ರತಿಬಂಧಿಸುತ್ತದೆ. ಅಂತೆಯೇ, ಅದನ್ನು ಕಾಪಾಡುವ ನಮ್ಮ ಅಧಿಕಾರವಿಲ್ಲದಿದ್ದಲ್ಲಿ ನಾವು ಕೊಟ್ಟ ಕ್ಷಣದಲ್ಲೇ ಒಡೆದುಹೋಗುವಂತಹ ಒಂದು ರಾಜ್ಯರಚನೆಯನ್ನು ನಾವು ಕೊಡುವಂತಿಲ್ಲ

ಸದ್ಯಕ್ಕಿಷ್ಟೇ ಸಾಧ್ಯ.

ಇದು ವರೆಗೆ ಈ ಹಾದಿಯಲ್ಲಿ ಯಾವ ಪ್ರಗತಿಯೂ ನಡೆದಿಲ್ಲ. ಆಂತರಿಕ ಬಿಕ್ಕಟ್ಟು-ಮುಖ್ಯವಾಗಿ ಹಿಂದೂ ಭಾರತ ಮತ್ತು ಮುಸ್ಲಿಂ ಭಾರತಗಳೊಳಗಿನ ಬಿಕ್ಕಟ್ಟು-ತೀರ್ಮಾನಗೊಂಡಿಲ್ಲ ಒಮ್ಮತಕ್ಕೆ ಬಾರದ ಹಿಂದೀ ನಾಯಕರ ಮುಖಂಡರ ವರ್ತನೆಗಾಗಿ ನಾವು ಅಸಹನೆಗೊಳ್ಳುವದು ತಪ್ಪು ಜಗಳದ ಕಾರಣಗಳು ದೊಡ್ಡವಿವೆ, ಸಮಸ್ಯಾ ನಿವಾರಣೆಯ ವಿಧಾನದ ಕುರಿತಿರುವ ಭಿನ್ನಾಭಿಪ್ರಾಯಗಳ ಆಧಾರವಾಗಿ ಯಥಾರ್ಥ ಹಾಗೂ ಪ್ರಬಲ ಭಾವನೆಗಳಿವೆ ಆದರೆ ಈ ಅವಧಿಯಲ್ಲಿ ಹಿಂದುಸ್ಥಾನವು ಇದ್ದಂತೆ ಇರುವದು ಅಸಾಧ್ಯ. ಎಲ್ಲಕ್ಕಿಂತ ಮುಖ್ಯವಾಗಿ ಜಪಾನ್ ವಿರುದ್ಧ ಯುದ್ಧಕ್ಕೆ ಇನ್ನೂ ಪ್ರಯತ್ನ ಬೇಕಾಗಿದೆ ರಾಜಕೀಯ ಸಮಜಾಯಿಸುವಿಕೆಯ ವರೆಗೆ ಕಾಯಲಾರದ, ಆದರೆ ಭಾರತದ ಎಲ್ಲಾ ಜಾತಿ ಮತ್ತು ವರ್ಗಗಳ ಹೃತ್ಪೂರ್ವಕ ಸಹಕಾರ ಬೇಕಾದ ಮಹತ್ತ್ವದ ಪುನರ್ರಚನಾ ಕಾರ್ಯ ಕಾದಿದೆ. ಇದು ರಾಜಕೀಯ ರಂಗದಲ್ಲಿ ಸಹಜಾಭಿವೃದ್ಧಿ ವಿನಹ ನಡೆಯದು ಸರಕಾರದೊಡನೆ ಭಾರತದ ಸಂಘಟಿತ ರಾಜಕೀಯ ಶಕ್ತಿಗಳ ನಿಕಟ ಮತ್ತು ಪರಿಣಾಮಕಾರಿ ಸಹಕಾರವಿಲ್ಲದೆ ಆಗದು. ಸದ್ಯ ಈ ಕುರಿತು ಮಧ್ಯಾವಧಿಯ ತಾತ್ಕಾಲಿಕ ವ್ಯವಸ್ಥೆ ಮಾತ್ರ ಸಾಧ್ಯ ಮುಂದಿನ ರಾಜ್ಯರಚನಾ ತೀರ್ಮಾನಕ್ಕೆ ಈ ತಾತ್ಕಾಲಿಕ ವ್ಯವಸ್ಥೆ ತೊಡಕಾಗಬಾರದು. ಸದಾಕಾಲ ನಮ್ಮದಾಗಿದ್ದ ಗುರಿಯೆಂದರೆ, ಆಶ್ರಿತ ರಾಜ್ಯಗಳೂ ಸಂಪೂರ್ಣವಾಗಿ ತಮ್ಮಾಟವಾಡಬಲ್ಲಂತಹ ಅಖಿಲ ಭಾರತದ ಸಂಯುಕ್ತಾಡಳಿತೆ ಇದೇ ಕಾಲದಲ್ಲಿ ಹಿಂದೂ ಮುಸಲ್ಮಾನರೂ ಯಾವ ರೀತಿಯಿಂದಾದರೂ ಒಟ್ಟಾಗಿ ಭಾರತದೊಗ್ಗಟ್ಟನ್ನು ಸಾಧಿಸುವದು ಅಸಂಭವವೆಂಬದೂ ನಮಗೆ ಮನವರಿಕೆಯಾಗಿದೆ ಆದ್ದರಿಂದ ಇಂದಿನ ತಾತ್ಕಾಲಿಕ ವ್ಯವಸ್ಥೆಯಲ್ಲಿ, ಸಂಯುಕ್ತ ಭಾರತವೋ ವಿಭಾಗಿತ ಭಾರತವೋ ಎಂಬ ಕುರಿತು ಪೂರ್ವ ನಿರ್ಧಾರವಿರಕೂಡದು. ಸದ್ಯ ಸ್ಥಿತಿ ಅಥವಾ ರಾಷ್ಟ್ರದ ಮುಂದಿನ ತೀರ್ಮಾನವನ್ನು ಇದು ಬಾಧಿಸಕೂಡದು ಅರ್ಥಾತ್ ಪ್ರಚಲಿತ ರಾಜ್ಯಾಂಗ ಶಾಸನದೊಳಗೇನೇ ಈ ಬದಲಾವಣೆಗಳಿರಬೇಕು".

ಭಾರತೀಯರ ಹೊಣೆ

ಕಾರ್ಯಕಾರೀ ಸಮಿತಿಯನ್ನು ನ್ಯಾಯವಿಧಾಯಕ ಸಭೆಗೆ ಜವಾಬ್ದಾರಿಯಾಗಿ ಮಾಡಿದರೆ, ಬಹುಮತೀಯರಾದ ಹಿಂದುಗಳ ಪಕ್ಷಪಾತಿಯಾಗುವದೆಂದು, ಮುಸಲ್ಮಾನರಾಕ್ಷೇಪಿಸಬಹುದೆಂಬುದಕ್ಕಾಗಿ ಹಾಗೆ ಮಾಡಿಲ್ಲವೆಂದೂ, ಬ್ರಿಟನಿನ ಹೊಣೆ ಮತ್ತು ಅಲ್ಪಸಂಖ್ಯಾತರ ಹಿತರಕ್ಷೆ-ವೈಸರಾಯರ ವಿಶೇಷಾಧಿಕಾರವು ಶಾಶ್ವತವಿದೆಯೆಂದೂ ಮಿ ಅಮೆರಿ ವಿವರಿಸಿದ್ದಾರೆ ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರ ಮತ್ತಿತರ ಹಿತಸಂಬಂಧಗಳ ರಕ್ಷಣೆಗಾಗಿ, ಸಮಾನತೆಯಿಂದ ಚರ್ಚಿಸಿ ಒಪ್ಪಂದ ಮಾಡಿಕೊಳ್ಳಲಿ.' ಇತರ ವಸಾಹತುಗಳಂತೆಯೇ ಭಾರತದಲ್ಲಿಯೂ ಬ್ರಿಟಿಷ್ ಹೈಕ

ಸರ್ವರ ಬೆಂಬಲ.

ಮಿಶನರ ನೇಮಕವಾಗುವದೆಂದು ಹೇಳಿ, ಸದ್ಯದ ವೈಸರಾಯೀ ಕೌನ್ಸಿಲು ಮೆಂಬರರನ್ನು ಮುಕ್ತ ಕಂಠದಿಂದ ಹೊಗಳಿ, ಅವರಿಗೆ ರಾಜಕೀಯ ಬೆಂಬಲವಿಲ್ಲದುದೊಂದೇ ಕೊರತೆಯೆಂದು ಮಿ ಅಮೆರಿ ಸ್ಪಷ್ಟಪಡಿಸಿದ್ದಾರೆ ಸರ್ವರ ಸಮಾಧಾನಕ್ಕಾಗಿ ಕೇಂದ್ರದಲ್ಲಿ ಜಾತೀವಾರು ಪ್ರಾತಿನಿಧ್ಯವೀಯಬೇಕಾಯಿತೆಂದು ಅನರಿ ಅಂಬೋಣ. ಹಿಂದುಸ್ಥಾನದ ಮೇಲೆ ಗಾಢ ಸಹಾನುಭೂತಿ, ಮತ್ತು ಅದರ ಅಭಿವೃದ್ಧಿಯ ಕುರಿತು ಅಚಲ ನಂಬಿಕೆಯಿರುವ ಲಾರ್ಡ್ ವೇವೆಲರೇ ಈ ಸೂಚನೆಗಳ ಮೂಲ ಕರ್ತನಾದರೂ ಬ್ರಿಟನಿನ ಸರ್ವ ಪಕ್ಷೀಯ ಮಂತ್ರಿ ಮಂಡಲವದಕ್ಕೆ ಕೊನೆಯ ಆಕಾರ ಕೊಟ್ಟಿತೆಂದೂ, ಇದು ಇಡೀ ಇಂಗ್ಲಂಡಿನ ಕೊಡುಗೆಯೆಂದೂ ಹೇಳಿ "ನಾವು ಹಿಂದುಸ್ಥಾನದ ಶ್ರೇಷ್ಠ ಭವಿಷ್ಯವನ್ನು ಹಿಂದೀಯರ ಕೈಯಲ್ಲಿಡುತ್ತಿದ್ದೇವೆ. ಅದನ್ನು ಕೈಗೊಂಡು ರೂಪಿಸಿಕೊಳ್ಳುವದು ಹಿಂದೀಯರನ್ನವಲಂಬಿಸಿದೆ" ಎಂದರು ಮಿ. ಅಮೆರಿ.

ಸರ್ವಪಕ್ಷೀಯರ ಸಮ್ಮತಿ

ಬ್ರಿಟಿಷ್ ಲೇಬರ್ ಪಕ್ಷದ ನಾಯಕರಾದ ಮಿ. ಅಟ್ಲಿಯವರು ಈ ಕೊಡುಗೆ ನಿರೂಪಣೆಯಲ್ಲಿ ತಾವು ಪಾಲುಗಾರರೆಂಬುದನ್ನೊಪ್ಪಿ "ನಮ್ಮ ಹಿಂದೀ ಮಿತ್ರರು ಈ ಸುಸಂದರ್ಭದ ಸದುಪಯೋಗಮಾಡಿಕೊಳ್ಳಲಿ" ಎಂದು ಆಗ್ರಹದಿಂದ ವಿಜ್ಞಾಪಿಸಿಕೊಂಡಿದ್ದಾರೆ ಸರ್. ಪಾಡ್ರ್ಮಿಲ್ಸ್, ಮಿ ಮೋರಿಸನ್, ಮಿ ಗ್ರಾಹಾಮ್ ವ್ಹೈಟ್, ಸರ್ ಫೆಡರಿಕ್ ಸೈಕ್ಸ್, ಮಿ. ಟಿ ಹಾರ್ವೆ, ಡಾ। ಹೇಡೆನ್ ಗೆಸ್ಟ್, ಮಿ. ಎ ಕೋಲೆಗೇಟ್ ಪ್ರೊ ಎ. ವಿ. ಹಿಲ್. ಮಿ. ವಿಲ್ಲಿಯಮ್ ಕೊವೆ, ಅರ್ಲ್ ವಿಂಟರ್ಟನ್ ಮೊದಲಾದ ಸರ್ವ ಪಕ್ಷೀಯ ಸದಸ್ಯರೂ ಹೊಸ ಕೊಡುಗೆಗೆ ಬೆಂಬಲವಿತ್ತಿ[illegible] ಸಭೆಯಲ್ಲಿ ಈ ಸೂಚನೆಯ ಮಂಡನೆ ಒಂದಾಗ ವಿಸ್ಕೌಂಟ್ ಸಾಮುವೇಲರು "ಇದರಿಂದಾಗಿ ಭಾರತವು ಧಾರ್ಮಿಕ ಭಿನ್ನತೆಗಳನ್ನು ಧರಿಸಿ ಹರಿಹಂಚಾಗುವ ಅಪಾಯವುಂಟಾಗಿದೆ" ಎಂದು ಸೂಚಿಸಿದ್ದಾರೆ ಅರ್ಲ ಲಿಸ್ಟೋವೆಲ್, ಲೋರ್ಡ್ ಹೈಲಿ ಮೊದಲಾದವರಿಂದ ನವ ಸುಧಾರಣೆಯು ಸ್ವಾಗತಿಸಲ್ಪಟ್ಟಿದೆ. ಭಾರತದ ಶ್ವೇತಪತ್ರವೇ ದಶವರುಷಾಯುಷ್ಯದ ಈ ಪಾರ್ಲಿಮೆಂಟಿನ ಕೊನೆಯ ದಿನದ ಕೊನೆಯ ಕಾರ್ಯಕ್ರಮವಾಗಿದ್ದುದರಿಂದ, ಚಕ್ರವರ್ತಿಗಳ ಮುಕ್ತಾಯ ಭಾಷಣದೊಂದಿಗೆ ಅದು ವಿಸರ್ಜಿಸಲ್ಪಟ್ಟಿದೆ. "ಆಡಳಿತೆಯಲ್ಲಿ ಭಾಗವಹಿಸಿ, ಜಪಾನ್ ವಿರುದ್ಧ ಹೋರಾಟ ಮತ್ತು ಯುದ್ಧೋತ್ತರ ಪುನರ್ರಚನೆಗಳಲ್ಲಿ ಹಿಂದೀ ಸಾರ್ವಜನಿಕಾಭಿಪ್ರಾಯಗಳ ಪೂರ್ಣ ಸಹಕಾರ ದೊರೆಯುವಂತೆ ಹಿಂದೀ ರಾಜಕೀಯ ಮುಖಂಡರು ಈ ಆಮಂತ್ರಣಗಳನ್ನು ಅಂಗೀಕರಿಸುವರೆಂದು ನಾನು ಆಶಿಸುತ್ತೇನೆ" ಎಂದು ಚಕ್ರವರ್ತಿಗಳು ತನ್ನ ಭಾಷಣದಲ್ಲಿಂದಿದ್ದಾರೆ.

WANTED

WANTED, B A B.T's and Bsc's for the Islamia Anglo Urdu High School, Bhatkal. Scale of pay for B.A B.T's Rs 55/- to 60/-3—125/- and for Bsc's Rs 40/- to 50/-3—125/-.

Apply stating qualification and experience to:—

The Hon Secretary,
Anjuman Hami-e-Mushmeen,
BHATKAL. (N. K.)

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ॥ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್ ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರಾ.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉದುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಡಿ, ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣ್ಯೆ, ರಥಬೀದಿ; ಡಾ. ಓ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘ**ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ಬಾಟ್ಲಿಗೆ ೧॥ ಹೆಚ್ಚು ಕಡಿಮೆ ಉಪಯೋಗಿಸುವವರಿಗೆ ಬರುವವು. ಅಂಚೆ ಕೂಲಿ ೮ ರೂಪಾಯಿಗಳಿಗೆ. ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಖ್ಯಾತಿ ಸಂಗ್ರಹಿ ಬರದಲ್ಲಿ ರೋಗಕ್ಕೆ ತಕ್ಕ ಬಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ ಎಂಬುದನ್ನು ಚಿತ್ರಿಸುವ ನಾಟಕ.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತಕನದ ರೋಗದಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd No. M 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. **Estd. 1921** ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA

ವರ್ಷ ೨೪ ವಾರ ೪೨ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. *Founder* **SRI A. B. SHETTY.** | Vol 24 No. 42

ಉಡುಪಿ • **28-6-1945** • ಮಂಗಳೂರು.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಉಳುಕು, ಗಂಟಲು, ಧುಡಿ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಗಳಿಗೂ ಮೇಲಾದ ಔಷಧ

REGD

ಔಷಧ, ಜುರುಕಿದ್ದಿ ಮದ್ದು ಸಹ ಸಮ್ಮಳಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

"Consent of the Central Government has been obtained to this issue under Defence of India Rule 94 A. It must be distinctly understood that in giving this consent the Government of India do not take any responsibility for the financial soundness of any scheme or for the correctness of any of the statement made or opinion expressed with regard to them" Vide Order No 1786-ECI 44/1835

The Madras Government has been pleased to assure consideration of technical and financial assistance to the Company after the Company comes into existence and on receipt of specific information as to the nature of the technical assistance and the extent of financial assistance required. Vide Memorandum No 4755-N,44

The whole issue of shares has been underwritten by

Sri Narayan Guru Bank, Ltd., Mangalore.

The Share list will be open for public subscription from 20-4-1945 and will be closed at the discretion of the Directors, not earlier than 31-5-1945.

This is not a prospectus but an announcement only!

THE SOUTH KANARA FISH INDUSTRIES LIMITED.

(Incorporated under the Indian Companies Act 1913 [illegible] Limited)

Registered Head Office - **Hampankatta, MANGALORE.**
Bombay Office - **26, Noble Chambers, Fort Bombay.**
Factory:- **MALPE, South Kanara**
Depots at - **Udipi, Coondapur, Byndoor Hangarkatta & Bhatkal**

Authorised Capital Rs. 5,00,000
Issued Capital Rs. 2,00,000

Rs. 100 per share (to be fully paid up.)

Board consists of influential Gentlemen.

PRGORAMME OF MANUFACTURE.

1. **Canned Food, Fried Food, Fish Manure, Fish Ghee, Shark Liver Oil, Mackerel Oil, Cod Liver Oil, Sardine Oil, Smoked Fish, Fish Meal, Freezed Fish, Dried Fish, Etc.**
2. The Company intends to grow hemp on its own lands and manufacture nets. It intends to develop the Fish Industry in Malpe and in the West Coast.
3. The Madras Government has been approached to subscribe for half the capital and appoint a Government Director and render technical advice to the Company
4. A Scientific Advisory Council will be formed and Technical Experts will be appointed to carry on intense research work in the Industry.
5. Arrangements are being made to procure Military contracts.
6. The Madras Government has been requested to supply the Company all the modern equipments useful for the purpose of the Company.
7. The Company intends to build country crafts and develop the coastal trade.

Since this is the first Company of this kind in the South Kanara District and in the West Coast aiming at the entire monopoly of the fish trade, Shares in this Company will be a great asset.

Mangalore Jarappa,
Managing Director

MANGALORE,
19th April, 1945.

ಸಣ್ಣ ಕತೆ.

ಒಡೆದ ಕನ್ನಡಿ

ಮೂಲ ಲೇಖಿಕೆ:-
ಕೆ. ಎಸ್. ರಾಧಾ.

ಆ ಶಬ್ದ ಕೇಳಿದೊಡನೆ ಶೈಲೆಯ ನರನಾಡಿಗಳಲ್ಲಿ ಹಿಮ ಪ್ರವಾಹ ಹರಿದಂತಾಯಿತು. ಅಂದು ಅವಳ ಮನಸ್ಸು ನೆಮ್ಮದಿಯಲ್ಲಿರಲಿಲ್ಲ. ರಮೇಶನು ಹೇಗೆ ಕೈಹಿಂದೆಳೆದುಕೊಳ್ಳುವನೋ ಆಕೆಗರಿಯದು. ಮದುವೇ ನಿಶ್ಚಯವು ಇಂದಿನಿಂದಲೇ ಜಾಹೀರಾಗಬೇಕೆಂದು ಕಂಠೋಕ್ತವಾಗಿ ಆತನಿಗೆ ತಿಳಿಸಬಿಡಬೇಕೆಂದು ಅವಳ ಮನಸ್ಸು. ಅಂತಹ ಭೇಟಿಯ ಕಷ್ಟವನ್ನು ನೆನಸಿ ಅವಳು ತನ್ನಲ್ಲೇ ಕುಗ್ಗಿ ಹೋಗಿದ್ದಳು. ತನ್ನ ಉಡುಗೆ ಮತ್ತು ದೇಹವನ್ನು ಶೃಂಗರಿಸಿಕೊಳ್ಳುವುದರಲ್ಲಿ ಈ ದಿನ ಶೈಲೆ ವಿಶೇಷ ಮಹತ್ತು ವಹಿಸಿದ್ದಳು—ಸ್ವಾಭಾವಿಕ.

ಆಗಲೇ ಆ ಶಬ್ದ! ಅದೇನೆಂದು ನೋಡಲು ಮುಖ ತಿರುಗಿಸಿದಳು ಆಕೆ ಕಂಡುದಲ್ಲ— ಕಣ್ಣೊಳಗೊಂದು ಭಯವನ್ನೇ ತುಂಬಿಸಿಕೊಂಡುದು. ಅವಳು ಗೊಂಬೆಯಂತೆ ನಿಂತು ಬಿಟ್ಟಳು. ರಮೇಶನು ಕೊಟ್ಟಿದ್ದ ಆ ಹೃದಯಾಕಾರದ ಕನ್ನಡಿ ಚೂರುಚೂರಾಗಿ ನೆಲದಲ್ಲಿ ಬಿದ್ದಿದೆ. ಆಕೆ ಸಯನ್ಸ್ ಪರೀಕ್ಷೆ ಕೊಟ್ಟವಳಾದರೂ ಅಂಥ ವಿಶ್ವಾಸ ಬಿಟ್ಟವಳಲ್ಲ. ಶೈಲೆಗೆ ಕನ್ನಡಿಯೊಡೆದುದು ಅಪಶಕುನವಾಗಿ ಕಂಡಿತು. ಆಕೆ ತನ್ನ ಮತೆಯಿಂದ ಆ ಚೂರುಗಳನ್ನು ನೋಡುತ್ತಾ ನಿಂತು ಬಿಟ್ಟಳು.

ಒಮ್ಮೊಮ್ಮೆ ದುಃಖವು ತನಗಾಹುತಿಯಾದವರಲ್ಲಿ ತನ್ನದೇ ಆದೊಂದು ವೈಭವವನ್ನು ತುಡುಕಿಸುವದಿದೆ. ಶೈಲೆಗೂ ಹಾಗೇ ಆಯಿತು. ಮಸಕು ದರ್ಪಣದಷ್ಟೇ ಎದೆಯನ್ನು ಮರೆಮಾಡಿರುವ ತೆಳು ರವಕೆಯಲ್ಲಿ ಕವಿಯಾದವನಿಗೊಂದು ಕಾವ್ಯವಸ್ತುವಾಗಿ ಆಕೆ ನಿಂತಿದ್ದಳು. ಗಂಡಸರ ಎದೆಯಷ್ಟು ಎತ್ತರದ ಯುವತಿ—ಅವಳ ತಾರುಣ್ಯಕ್ಕೂ ಉಡುಗೆಗೂ ನಿಕಟ ಸಂಬಂಧ. ಒಡೆದ ಕನ್ನಡಿ ಅವಳ ತೇಜೋವಧೆ ಮಾಡಿದಂತಿತ್ತು; ಆದರೆ ಆ ನಿಸ್ತೇಜತೆಯಲ್ಲಿ ನವಸೌಂದರ್ಯ ಮೂಡಿದ್ದಿತು. ಜಾಕೇಟಿನೊಳಗಿಂದ ಎದ್ದು ಹೋಗಿ ಕಿವಿಗಳಲ್ಲಿ ನೇತಾಡುವಾಭರಣಗಳ ಮರೆಯಲ್ಲಿ ಮುಗಿದ ಆ ಕುತ್ತಿಗೆ—ಆ ಉರುಟು ಮುಖ—ಕರಿ ಹುಬ್ಬುಗಳಡಿಯ ವಿಶಾಲಾಕ್ಷಿಗಳು-ಸಣ್ಣ ಸಾಕಾರ ನಾಸಿಕ-ಇವುಗಳನ್ನು ಕಾಣುವಾಗ ಪ್ರಕೃತಿಯು ತನ್ನೀ ಸುಕುಮಾರಿಯನ್ನು ವಿಶೇಷ ಜಾಗ್ರತೆ ವಹಿಸಿ ರೂಪಿಸಿದಂತಿತ್ತು; ಗಂಡು ದೃಷ್ಟಿಯೊಂದು ಸಿಕ್ಕಿಬಿದ್ದು ದೀರ್ಘಕಾಲ ಒದ್ದಾಡಬೇಕಾದ ನೆಲೆಯಿದು ಆದರೊಂದು ವಿಚಿತ್ರ—ಅವಳ ಸೌಂದರ್ಯವು ಗಂಡಸರಲ್ಲಿ ವಿಕಾರ ಹುಟ್ಟಿಸುವಂತಹದಲ್ಲ; ಹೆಣ್ಣು ಗಂಡು ಸಂಬಂಧದೊಳಗಿನ ಒಂದು ಶುದ್ಧ ಸ್ಫೂರ್ತಿಯನ್ನು ಕೆರಳಿಸುವಂತಹದು.

oo oo oo

ಆದರೆ ರಮೇಶನಲ್ಲಿ ಮಾತ್ರ ಶೈಲೆಯ ಸೌಂದರ್ಯವು ಅಂತಹ ಪರಿಣಾಮವನ್ನೇ ಮಾಡಿ ಮುಗಿಸಲಿಲ್ಲ. ಕಾಲೇಜಿನ ತರ್ಕಸಂಘದ ಸಭೆಯಲ್ಲಿ ಆಕೆಯನ್ನು ಕಂಡ ಆ ಹೊತ್ತಿನಲ್ಲೇ ರಮೇಶ ಶೈಲೆಯ ಗುಲಾಮನಾಗಿ ಹೋಗಿದ್ದ. ಅವಳ ದರ್ಶನವೊಂದೇ, ಆತನ ನರನಾಡಿಗಳ ರಕ್ತ ಪ್ರವಾಹಕ್ಕೆ ಸೆಳೆತವಾಗಿ ಹೋಯಿತು. ಅವನಾದರೋ ನೋಡಲಾಗದಂತಹ ಮೂರ್ತಿಯಾಗಿರಲಿಲ್ಲ. ತೆಳು, ಉದ್ದ ಮನುಷ್ಯ; 'ಲೋಕಕ್ಕೆ ಭೂತ ಬಡಿಯಲಿ' ಎಂಬಂತಿರುವ ನಿರ್ಲಕ್ಷ್ಯ ಮುಖ ಮುದ್ರೆಯವನಾದರೂ ಹೆಂಗಳ ನೋಟದ ಮೇಲೂ ಅನಾಸಕ್ತಿ ಅವನಲ್ಲಿರಲಿಲ್ಲ. ಶೈಲೆಯ ದೃಷ್ಟಿಯೂ ಅವನ ಕಡೆಗೆ ಬಿದ್ದಿತ್ತು; ಅವನ ಅರ್ಥಪೂರ್ಣ ನೋಟದೊಡನೆ ಮುಹೂರ್ತ ಮಾತ್ರ ಹೆಣೆದುಕೊಂಡಿತ್ತು; ಅವಳಲ್ಲೊಂದು ವಿಧದ ಭೀತಿ ಮತ್ತು ಆದರ ಒಳವೈಯ್ಯಾಗಿ ಆತನ ಮೇಲೆ ಆಕರ್ಷಣೆ ಹುಟ್ಟಿಕೊಂಡಿತ್ತು.

ರಮೇಶ ಸಮಯ ತೆಗೆಯಲಿಲ್ಲ. ಅವನು ಯಾವುದರಲ್ಲಾದರೂ ಕಾಲಹರಣ ಮಾಡುವ ಮನುಷ್ಯನೇ ಅಲ್ಲ. ರಮೇಶನ ತಂದೆ. ಜಮೀನ್ದಾರನು ಆತನನ್ನು ಹಾಗೆ ಬೆಳೆಸಿ ತಂದಿದ್ದ. ಓರ್ವನೇ ಮಗನಾದ ರಮೇಶನ ಲಗು ಚಾಪಲ್ಯ ಕೂಡಾ ಕಾನೂನಾಗಿ ಪಾಲಿಸಲ್ಪಡುತಿತ್ತು; ಆತ ಬೆಳೆದು ಯುವಕನಾದಂತೆ, ಬಯಸಿದುದನ್ನು ಬರ ಮಾಡಿಸಿಕೊಂಡೇ ತೀರುವ ಅವನ ಬುದ್ಧಿಯೂ ಬೆಳೆದು ಬಲಿತಿತ್ತು.

ಸರಿ, ಈಗ ಶೈಲೆಯನ್ನು ಬಯಸಿದ್ದಾನೆ ತನ್ನ ತಾರುಣ್ಯದ ಚಾಪಲ್ಯಕ್ಕಾಗಿ ದೃಢತೆಯೇನೂ ಇಲ್ಲದ ಲಾಲಸೆಗಾಗಿ—ಆತನಿಗೆ ಶೈಲೆ ಬೇಕಾಗಿದೆ. ಅವಳನ್ನು ಅನುಭೋಗಿಸುವ ಯಶಸ್ಸೊಂದೇ ಆತನ ಬಯಕೆ. ದೃಷ್ಟಿ ಬಿದ್ದ ಆ ದಿನದಿಂದಲೇ ಶೈಲೆಯ ಮೇಲೆ ರಮೇಶನ ಮುತ್ತಿಗೆಗಾರಂಭ. ಅವನು ಮುಂದಾಗಿ ಹೋಗಿ ತನ್ನ ಪರಿಚಯವನ್ನಾಕೆಗೆ ಮಾಡಿಕೊಟ್ಟ; ಆ ಮೇಲೆ ಅನುಕ್ರಮವಾಗಿ ಸಿನೆಮಾ, ಸಂಜೆಯ ತಿರುಗಾಟ, ಚಹಾಕೂಟಗಳ ಏರ್ಪಾಡಿನಿಂದ ಸಂಬಂಧ ಬೆಳೆಯಿತು. ಈ ಇಳಿಜಾರಿನಲ್ಲಿ ಶೈಲೆ ಕಾಲುಜಾರಿ ಬಹುದೂರ ಹೋಗಿದ್ದಳು. ಇಂತಹ 'ಮಜಾ' ಕಲಿತ ಹುಡುಗಿ ಆಕೆ ಅಲ್ಲ. ಆದರೆ ಅಪಕ್ವ, ಅನಿಶ್ಚಿತ ಬುದ್ಧಿಯಿಂದ ಅವ ಮಾಡುತ್ತಾ ಬಂದುದಕ್ಕೆಲ್ಲಾ ಈಕೆ ಒಳಗಾಗುತ್ತಾ ಬಂದಳು ಅವಳು ಕಲಿತವಳಾದರೂ ರೈತರ ಹುಡುಗಿ; ರೈತ್ವಾರಿ ಕಾನೂನಿನನ್ವಯ ರಮೇಶನು ಕೈಕೊಂಡಿರುವ ಧೋರಣೆಯು ಕೈ ಹಿಡಿಯುವ ಗಂಡನದಾಗಿದೆ. ರಮೇಶನ ಹೆಂಡತಿಯಾಗುವದು ಆಕೆಗೆ ಬೇಡವಾಗಿರಲಿಲ್ಲ. ಆದ್ದರಿಂದ ಆತನನ್ನು ತನ್ನ ಸೊತ್ತೆಂದು ಆಕೆ ಭಾವಿಸಹತ್ತಿದಳು.

ಅಂದು ಅಪರಾಹ್ನ. ರಮೇಶ ಶೈಲೆಯನ್ನು ಕರಕೊಂಡು ತಿರುಗಾಟಕ್ಕೆ ಹೊರಟಿದ್ದ; ಉದ್ದಕ್ಕೂ ಮುಂದೆ ಮುಂದೆ ಹೋದ. ಒಂದು ಬಯಲಿಗೆ ಬರುವಾಗ ಕತ್ತಲಾಗುತ್ತಾ ಬಂತು. ಅವರು ಗದ್ದೆಯಲ್ಲಿ ಕುಳಿತುಕೊಂಡರು. ಕೆಲಸಗಾರರೆಲ್ಲಾ ಆ ಮೊದಲೇ ಹೊಲಬಿಟ್ಟು ಹೋಗಿದ್ದರು. ತಮ್ಮಂತೆಯೇ ಮಾಡು, ಎಂದು ಶೈಲೆಗೆ ಬುದ್ಧಿ ಹೇಳುತ್ತಿರುವವೇನೋ ಎಂಬಂತೆ ಕಾಗೆಗಳು 'ಕಾ ಕಾ' ಎನ್ನುತ್ತಾ ಗೂಡಿನ ಕಡೆಗೆ ಹಾರುತ್ತಿದ್ದುವು. ಆದರೂ ಶೈಲೆ ಏಳದಿರುವದನ್ನು ರಮೇಶ ಕಂಡ. ತುಸು ಹೊತ್ತಿನಲ್ಲೇ ಆ ಬಯಲು ಮತ್ತು ಆಸುಪಾಸಿನ ಹಾದಿಗಳು ನಿರ್ಜನವಾದುವು. ರಮೇಶ ಸುತ್ತಲೂ ಒಮ್ಮೆ ದೃಷ್ಟಿಯೋಡಿಸಿದ; ಮನುಷ್ಯರ ಸುಳಿವಿಲ್ಲವೆಂಬುದನ್ನು ಖಚಿತಮಾಡಿಕೊಂಡ. ಆಗಲೇ ಶೈಲೆಯೊಡನೆ ಆತನದೊಂದು ಬೇಡಿಕೆ! ಅನಿಶ್ಚಿತ ಲಗು ಬುದ್ಧಿಯ ಆಕೆ ಹೆದರಿದಳು. ಇಲ್ಲ, ಆಕೆ ಕೇಳಲಿಲ್ಲ. ಆದರೆ 'ಊಹೂಂ' ಎಂದೊಡನೆ ಸುಮ್ಮನಾಗುವ ಮನುಷ್ಯ ರಮೇಶನಲ್ಲ. ಅದರಲ್ಲೂ ಇಂತಹ ಅನುಕೂಲ ಪರಿಸ್ಥಿತಿಯಲ್ಲಿ ಬಿಟ್ಟಾನೆ? ಅವನು ಹೃದಯವನ್ನೇ ಬಾಯಿಗೆ ತಂದು ಬೇಡಿಕೊಂಡ; ಬಿಗಿಹಿಡಿದು ಮುತ್ತಿಟ್ಟ; ನಡನಡುವೆ ಮಧುರ ಮಾತುಗಳಿಂದ ಪುಸಲಾಯಿಸಿದ; ಸಾಲದುದಕ್ಕೆ ಆ ಪಾಪದ ಹುಡುಗಿಯ ಮೇಲೆ ಬೆದರಿಕೆ ಬೀರಿದ. ಇವೆಲ್ಲವುಗಳ ಪರಿಣಾಮವಾಗಿ ಕೊನೆಯಲ್ಲಿ ಆಕೆಯಿಂದ ತನ್ನ ಹೃದಯ ಹಾಗೂ ಕಾಯದ ಬೇಗೆಯನ್ನು ತಣಿಸಿಕೊಂಡ. ಅವರು ಸಂಜೆಯ ಕೊನೆಯ ಘಳಿಗೆಯಲ್ಲಿ ಹೊಸ್ತಿಲಿನಕಡೆಗೆ ಹೊರಟರು. ರಮೇಶ ಆತ್ಮಾನಂದದೊಂದು ಅಮಲಿನಿಂದ ಹಿಗ್ಗುತ್ತಾ ಹೋದ; ಶೈಲೆ ಉದಾಸೀನ ಭಾವದಿಂದ ತನ್ನ ಅಮೂಲ್ಯ ವಸ್ತುವೊಂದನ್ನು ಕಳಕೊಂಡವಳಂತೆ, ನೆನಪು ಮತ್ತು ಧ್ಯಾನಮಾಡಿದಂತೆಲ್ಲಾ ಅಂತರಿಕ ವೇದನೆಯನುಭವಿಸುತ್ತಾ ಬಂದಳು.

oo oo oo

ಶೈಲೆಯ ಕಡೆಗಿದ್ದ ರಮೇಶನ ಉದ್ವೇಗ ಆ ದಿನದಿಂದ ತಣಿಯಿತು. ಒಂದು ಕಾರಣ ಬೇರೆಯೂ ಇತ್ತು; ಬರುವ ಎಪ್ರಿಲಿನಲ್ಲೇ ಕಲೆಕ್ಟರರ ಮಗಳೊಂದಿಗೆ ಅವನ ಮದುವೆ ಎಂಬುದು ನಿಶ್ಚಯವಾಗಿದೆ ಎಂದು ಜಮೀನ್ದಾರ್ ಮಗನಿಗೆ ಕಾಗದ ಹಾಕಿದ್ದ. ಒಮ್ಮೆ ಅದನ್ನು ಧಿಕ್ಕರಿಸಿ ಶೈಲೆಯನ್ನೇ ಮದುವೆಯಾಗುವೆನೆಂದು ಬಗೆದ. ಆದರೆ ತಂದೆಯ ಪ್ರತೀಕಾರ, ಹಣಕಾಸಿನ ತೊಂದರೆಗಳ ಸ್ಮರಣೆಗೆ ಆ ಯೋಚನೆ ಬಲಿಯಾಯಿತು. ರಮೇಶನ ಉತ್ಸಾಹ ಕುಗ್ಗಿರುವದು ಶೈಲೆಗೆ ಗೊತ್ತಾಗದೆ ಹೋಗಲಿಲ್ಲ. ಅವನ ಔದಾಸೀನ್ಯವು ಅವಳ ಹೃದಯವನ್ನಿರಿಯಿತು. ತಾನು ವಿನಾಕಾರಣ ತನ್ನನ್ನು ಮಾರಿಕೊಂಡೆನೆಂದು ಆ ಹೆಣ್ಣು ಹೃದಯ ತಪಿಸಹತ್ತಿತು. ಆ ಎಳೇ ತರುಣಿಯ ರೈತಹೃದಯವು ತೀರಾ ನಿರ್ಗತಿಕಳಂತೆ ಸದಾಕಾಲ ಗೋಳಾಡಹತ್ತಿತು. ಆದರೆ ಅವಳು ಮಾಡಿದ್ದ ಅಪರಾಧಕ್ಕೆ ಸಂಬಂಧಿಸಿದ ಸಮಯ ಸ್ಥಾನ ಮತ್ತು ಸಂಗತಿಯಂತಹದಾದರಿಂದ ಪ್ರಕೃತಿಯ ಅವಳ ಮೇಲೆ ಪಾಪದ ಹೊರೆ ಹೊರಿಸದೆ, ಆ ನೊಂದ ಹೃದಯಕ್ಕೆ ಲೇಪ ಹಚ್ಚುತಿತ್ತು. ಅದರ ಪ್ರೋತ್ಸಾಹ ಬಲದಿಂದ, ರಮೇಶನೊಡನೆ ಮಾತಾಡಿಯೇ ನಿರ್ಧರಿಸಬೇಕೆಂದು ಈಗ ಆಕೆ ಎದ್ದಿದ್ದಾಳೆ. ಆಗಲೇ ಕನ್ನಡಿಯೊಡೆದು ಅಪಶಕುನ. ಆ ಆಚಾರನಿಷ್ಠೆಯ ಪಾಲಿಗೆ, ಹೊರಟ ಕಾರ್ಯವಿಜಯಯಾಗುವವೆಂಬ ಆಸೆಯೂ ಅದರೊಂದಿಗೇನೇ ಒಡೆಯಿತು. ಅವಳು ಹೃದಯಾಂತರಾಳದಿಂದ ದೈವವನ್ನು ಶಪಿಸಿದಳು. ದುರದೃಷ್ಟಗಳು ಬರುವದು ಸಾಲುಸಾಲಾಗಿಯೇ-ಆದರೆ ಹಿಡಿಯುವದು ನಿರ್ಮಲ ಬುದ್ಧಿಯ ದುರ್ಬಲೆ, ಕೋಮಲೆ ಏಕಾಕಿಯನ್ನೇ-ಎಂದಾಕೆಗೆ ಹೊಳೆಯಿತು. ಕೊನೆಗವಳು ಸುಧಾರಿಸಿಕೊಂಡು. ನಿಲುವುಗನ್ನಡಿಯ ಮುಂದೆ ನಿಂತಳು. ತನ್ನ ಮನೋಹರ ಮೂರ್ತಿಯನ್ನದರಲ್ಲಿ ನೋಡಿಕೊಂಡು ಒಮ್ಮೆ ವಿಕಾರವಾಗಿ ನಕ್ಕಳು. ಆ ಮೇಲೆ ಕೈಯೆತ್ತಿ ತನ್ನ ಛಾಯೆಗೆ ವಿದಾಯ ಹೇಳಿ ಹೊರಬಿದ್ದಳು.

ಅಂದು ಯಾವ ಸ್ಥಳದಲ್ಲಿ ಆಕೆ ತನ್ನ ಕೌಮಾರ್ಯವನ್ನು ನೀಗಿದ್ದಳೋ, ಇಂದು ಅದೇ ಸ್ಥಳದಲ್ಲಿ ರಮೇಶನ ಭೇಟಿಯಾಗಬೇಕು.

ಅಲ್ಲಿ ರಮೇಶ ತನ್ನ ಕರವಸ್ತ್ರವನ್ನು ಹಾಸಿ ಕುಳಿತಿದ್ದ. ಅವಳು ಅವನ ಪಕ್ಕದಲ್ಲೇ-ಆದರೆ ಸಾಕಷ್ಟು ದೂರದಲ್ಲಿ-ಕುಳಿತುಕೊಂಡಳು.

ಅವನು ಠೇಂಕಾರ ಪೂರ್ವಕ ಕಾಲಿನಿಂದ ತಲೆಯ ವರೆಗೂ ನೋಡಿ ಹೇಳಿದ. "ಶೈಲ. ನೀನು ನನ್ನನ್ನು ಕೊಲ್ಲುವವಳಂತೆ ಶೃಂಗಾರವಾಗಿದ್ದೀ. ಕಾಲಯೋಗ್ಯ ಮರ್ಜಿಕೂಡಾ!

ಅವಳು ದೂರದ ದಿಗಂತವನ್ನು ನೋಡುತ್ತಿದ್ದಳು ಆಗ ಅವಳ ದೃಷ್ಟಿ ಪಥದಲ್ಲಿದ್ದುದು ತನ್ನ ತಂದೆಯ ಪ್ರೇಮ ಹಾಗೂ ತಾಯಿಯ ಮಮತೆಗಳು ಮಾತ್ರ. ಸ್ಪಷ್ಟ

(೧೧ನೇ ಪುಟ ನೋಡಿರಿ)

ಪ್ರತಿಯೊಂದು ವಿಧದ ಬೇಂಕಿಂಗ್
ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ.
ಕ್ಷೇಮನಿಧಿ ರೂಪಾಯಿ 10 ಲಕ್ಷ.

ಕೆನರಾ ಬೇಂಕ್ ಲಿಮಿಟೆಡ್.
(ESTD. 1906 ಸ್ಥಾಪನೆ.)

CANARA BANK LIMITED
(Incorporated in British India. liability of Members Limited.)

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರ.

'ಸಿಮ್ಲಾ ಸಮ್ಮೇಲನದಲ್ಲಿ ಭಾಗವಹಿಸಿ ಪ್ರಶ್ನಿಸಬೇಕು'.

ಅಖಿಲ ಭಾರತ ರಾಷ್ಟ್ರೀಯ ಸಭೆಯ ಕಾರ್ಯಕಾರೀ ಸಮಿತಿಯು—1942ನೇ ಆಗೋಸ್ತು 9ರ ಸೂರ್ಯೋದಯದ ಮೊದಲು ಬೊಂಬಾಯಿಯಲ್ಲಿ ಆಕಸ್ಮಾತ್ ಅಂತರ್ಧಾನವಾಗಿದ್ದ ರಾಷ್ಟ್ರ ಪ್ರಮುಖ ಮಂಡಲಿಯು—ಮೂರು ವರುಷಾನಂತರ ಬೊಂಬಾಯಿಯ ಬಿರ್ಲಾಭವನದಲ್ಲಿ ಇದೇ ಜೂನ್ ತಾ. 21ನೇ ಅಪರಾಹ್ನ 2-30ಕ್ಕೆ ಪ್ರಥಮ ಬಾರಿ ಕೂಡಿಬಂದು, 13 ತಾಸು ಚರ್ಚಿಸಿ ತಾ. 22ನೇ ಅಪರಾಹ್ನ 6-30ಕ್ಕೆ ಮುಕ್ತಾಯಗೊಂಡಿತು. ವೈಸರಾಯಿ ಆಮಂತ್ರಿತ ಸಿಮ್ಲಾ ಸಮ್ಮೇಲನದಲ್ಲಿ ಭಾಗವಹಿಸುವ ನಿರ್ಧಾರವು ಸಮಿತಿಯಲ್ಲಾಗಿದೆ, ಸಮಿತಿಯ ಆಜ್ಞೆಯಂತೆ ಅಧ್ಯಕ್ಷ ಆಜಾದ್ ಮತ್ತು ಗಾಂಧಿಜೀ ಈಗ ಸಿಮ್ಲಾದಲ್ಲಿದ್ದಾರೆ. ಅಧ್ಯಕ್ಷರ ಸೂಚನೆಯಂತೆ ಮಾಜೀ ಕಾಂಗ್ರೆಸ್ ಪ್ರಾಂತಿಕ ಪ್ರಧಾನಿಗಳೂ, ಇತರ ಆಮಂತ್ರಿತ ಕಾಂಗ್ರೆಸ್ ಪ್ರತಿನಿಧಿಗಳೂ ಸಮ್ಮೇಲನಕ್ಕೆ ಹಾಜರಾಗಿದ್ದಾರೆ. ಕಾಂಗ್ರೆಸಿನ ಹಾಗೂ ರಾಷ್ಟ್ರದ ಚರಿತ್ರೆಯಲ್ಲಿ ಇದೀಗ ಹೊಸಾಧ್ಯಾಯ ಆರಂಭವಾಗಿದೆ.

ಕಾಂಗ್ರೆಸ್ ಹೇಳಿಕೆ

ಬೊಂಬಾಯಿ ಅಧಿವೇಶನ ಬರ್ಖಾಸ್ತಾದೊಡನೆ ಈ ಕೆಳಗಿನ ಕಾಂಗ್ರೆಸ್ ಹೇಳಿಕೆ ಜಾಹೀರಾಗಿದೆ:-"ಸುಮಾರು 3 ವರುಷಗಳ ನಂತರ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯವಾದ ಹಲವು ಪ್ರಾಮುಖ್ಯ ಸಮಸ್ಯೆಗಳ ಪರ್ಯಾಲೋಚನೆ ನಡೆಸಬೇಕಾಗಿದ್ದಿತು. ಕಾರ್ಯಕಾರೀ ಸಮಿತಿಯ ಸದಸ್ಯರು ಈಗ ತಾನೇ ಜೈಲಿನಿಂದ ಬಿಡುಗಡೆಗೊಂಡವರಾದ್ದರಿಂದ, ನಮ್ಮ ಜನತೆಯ ಸಂಪರ್ಕ ಪಡೆಯುವ ಸಂದರ್ಭವಾಗಲೀ, ಕಳೆದ ಮೂರು ವರುಷಗಳ ಅದೃಷ್ಟದಾಯೀ ಅವಧಿಯ ಆಗುಹೋಗುಗಳ ಪರಿಚಯ ಪಡೆಯುವ ಸಂದರ್ಭವಾಗಲೀ ಅವರಿಗೆ ದೊರೆತಿಲ್ಲ. ಹಾಗಿದ್ದರೂ, ಸದ್ಯಸ್ಥಿತಿಗನುಸಾರವಾಗಿ ಜೂನ್ 25ಕ್ಕೆ ನಿಶ್ಚಯವಾಗಿರುವ ಸಿಮ್ಲಾ ಸಮ್ಮೇಲನಕ್ಕೆ ಸಂಬಂಧಪಟ್ಟ ವೈಸರಾಯೀ ಸೂಚನೆಗಳನ್ನು ಈ ಸಮಿತಿಯು ಪರ್ಯಾಲೋಚಿಸಿದೆ. ಅಧ್ಯಕ್ಷರಿಗೂ ಆಮಂತ್ರಿತರಾಗಿರುವ ಇತರ ಪ್ರತಿನಿಧಿ ಕಾಂಗ್ರೆಸಿಗರಿಗೂ ಸಮ್ಮೇಲನಕ್ಕೆ ಹಾಜರಾಗುವ ಅಧಿಕಾರವನ್ನೀಯಲು ಸಮಿತಿ ನಿರ್ಧರಿಸಿದೆ. ಈ ಸಂಬಂಧವಾಗಿ ಕೆಲವು ಮೇಲ್ಪಂಕ್ತಿಗಳನ್ನು ಅವರಿಗೆ ಹಾಕಿಕೊಡಲಾಗಿದೆಯಲ್ಲದೆ, ಇನ್ನೂ ಸ್ಪಷ್ಟೀಕರಣ ಬೇಕಾಗಿರುವ 'ಹಲವು ವಿಷಯಗಳ ಕುರಿತು ವಿಶದೀಕರಣವನ್ನು ಅಪೇಕ್ಷಿಸುವಂತೆ ತಿಳಿಸಿದೆ. ಇವುಗಳ ಮತ್ತು ಇತರ ವಿಷಯುಗಳ ಪರ್ಯಾಲೋಚನೆಗಾಗಿ ಸಮಿತಿಯು ಪುನಃ ಸದ್ಯದಲ್ಲೇ ಸೇರುವ ಸಂಭವವಿದೆ".

ಸರ್ವ ರಾಷ್ಟ್ರಗಳಿಗೆ ಸ್ವಾತಂತ್ರ್ಯ-

ಇರಬೇಕೆಂಬುದನ್ನು ತನ್ನೊಂದು ಠರಾವಿನ ಮೂಲಕ ಕಾಂಗ್ರೆಸ್ ಸಮಿತಿ ಸ್ಪಷ್ಟಪಡಿಸಿದೆ. ಜಾಗತಿಕ ನವವ್ಯವಸ್ಥೆಯ ನಿರ್ಮಾಣಕ್ಕಾಗಿ ನಡೆಯುತ್ತಿರುವ ಪ್ರಯತ್ನವನ್ನು ಕಾಂಗ್ರೆಸ್ ಒಪ್ಪಿಕೊಳ್ಳುತ್ತದಾದರೂ ಮಹಾರಾಷ್ಟ್ರಗಳ ಮಹತ್ವಾಕಾಂಕ್ಷೆ ಮತ್ತು ಅಪನಂಬಿಕೆಗಳು ಆ ಪ್ರಯತ್ನದ ಪಥದಲ್ಲಿ ಕಂಟಕಗಳಾಗಿರುವುದು ಶೋಚನೀಯ. ದೊಡ್ಡ ರಾಷ್ಟ್ರಗಳು ತಮ್ಮ ವಸಾಹತು ಮತ್ತು ಆಶ್ರಿತ ರಾಜ್ಯಗಳನ್ನು ಳಿಸಿಕೊಳ್ಳುವದಕ್ಕಾಗಿಯೇ ಅವುಗಳ ಸ್ವಾತಂತ್ರ್ಯವನ್ನು ವಿಳಂಬಿಸುತ್ತಲೂ ಆತಂಕಿಸುತ್ತಲೂ ಇವೆ. ಇವೆಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯವನ್ನೊಪ್ಪಿಕೊಳ್ಳುವದನ್ನೂ ಸಾಮ್ರಾಜ್ಯ ಹತೋಟಿಯು ಪೂರ್ಣಾಂಶ ನಿವಾರಣೆಗೊಳ್ಳುವದನ್ನೂ ಆಧರಿಸಿಯೇ ಅಂತರ್ರಾಷ್ಟ್ರೀಯ ಶಾಂತಿ ಸಾಧ್ಯವೆಂಬುದು ಈ ಸಮಿತಿಗೆ ಮಂದಟ್ಟಾಗಿದೆ. ಈ ಸಂಬಂಧವಾಗಿ 1942ನೇ ಆಗೋಸ್ತು 8ರ ಎ. ಐ. ಸಿ. ಸಿ.ಯ ಠರಾವಿನಲ್ಲಿ ನಮೂದಿಸಿದುವ ತನ್ನ ಘೋಷಣೆಯನ್ನು ಸಮಿತಿಯು ಮತ್ತೊಮ್ಮೆ ಸಾರಿ ಹೇಳುತ್ತದೆ, ಎಂದು ಠರಾಯಿಸಿದೆ. ಸಿರಿಯಾ ಲೆಬನಾನುಗಳ ಸ್ವಾತಂತ್ರ್ಯಾಪಹಾರದ ಇತ್ತೀಚೆಗಿನ ಧಾಳಿಗಾಗಿ ದುಃಖ ಮತ್ತು ನಿಷೇಧ ಪ್ರದರ್ಶಿಸಿ, ಅದು ಅಲ್ಲಿಯ ಜನತೆಗಿತ್ತಿರುವ ಆಶ್ವಾಸನೆಗಳಿಗೂ, ಸಂಯುಕ್ತ ರಾಷ್ಟ್ರಗಳು ಘೋಷಿಸಿರುವ ಧೋರಣೆಗೂ ವಿರುದ್ಧವೆಂದು ಸಾರಿದೆ.

ಅಜಾದರ ತಂತಿ

ಸಿಮ್ಲಾ ಸಮ್ಮೇಲನಕ್ಕೆ ಹಾಜರಾಗಲು ಕಾಂಗ್ರೆಸ್ ಸಮಿತಿಯ ಅನುಮತಿ ದೊರೆತೊಡನೆಯೇ ಅಧ್ಯಕ್ಷ ಆಜಾದರು ವೈಸರಾಯರಿಗೆ ತಂತಿ ಕಳುಹಿದರು:-"ಜೂನ್ 25ರ ಸಿಮ್ಲಾ ಸಮ್ಮೇಲನಕ್ಕೆ ಹಾಜರಾಗಬೇಕೆಂಬ ನಿಮ್ಮ ಆಮಂತ್ರಣವನ್ನು ಅಂಗೀಕರಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನನಗಧಿಕಾರವಿತ್ತಿದೆ. ಜೂನ್ 21ಕ್ಕೆ ಸಿಮ್ಲಾ ಸೇರುವೆನೆಂಬ ನಿರೀಕ್ಷೆ. ಸಮ್ಮೇಲನಕ್ಕೆ ಮೊದಲೇ ನಿಮ್ಮನ್ನು ಕಾಣುವ ಅವಕಾಶ ಸಿಕ್ಕುವಂತೆಯಾದರೆ ಕೃತಜ್ಞನಿಸ್ಸೇನೆ. ಅಲ್ಲಿ ನನಗಾಗಿ ಮಾಡಿರುವ ವ್ಯವಸ್ಥೆಯ ಸೂಚನೆಯನ್ನು ಧನ್ಯವಾದದೊಡನೆ ಅಂಗೀಕರಿಸುತ್ತೇನೆ" ಅದರೊಂದಿಗೇನೇ ಮೌಲಾನರು ಎಲ್ಲಾ ಮಾಜೀ ಕಾಂಗ್ರೆಸ್ ಪ್ರಧಾನಿಗಳಿಗೂ ಸಮ್ಮೇಲನಾಮಂತ್ರಣ ಪಡೆದ ಇತರ ಕಾಂಗ್ರೆಸಿಗರಿಗೂ ಈ ಕೆಳಗಿನ ತಂತಿ ಬಿಟ್ಟಿದ್ದಾರೆ "ದಯವಿಟ್ಟು ತಾ. 25ರ ಸಿಮ್ಲಾ ಸಮ್ಮೇಲನಕ್ಕೆ ಹಾಜರಾಗಿರಿ. ಸಾಧ್ಯವಿದ್ದರೆ ಮುಂದಿನ ಸೂಚನೆಗಳಿಗಾಗಿ ತಾ. 24ರಲ್ಲಿ ಅಲ್ಲಿಯೇ ನನಗೆ ಭೇಟಿಯಾಗಿರಿ" ತಾ. 25ರ ಸಮ್ಮೇಲನಕ್ಕೂ ತಾ. 24ರ ವೈಸರಾಯೀ ಭೇಟಿಗೂ ತಾನು ಹಾಜರಾಗುವೆನೆಂದು ಗಾಂಧಿಜೀ ಲೋರ್ಡ್ ವೇವೆಲರಿಗೆ ತಂತಿ ಕೊಟ್ಟಿದ್ದಾರೆ.

ಧುರೀಣರ ಆಗಮನೋತ್ಸವ

ವೇವೆಲ್ ಯೋಜನೆಯು ಸದ್ಯದ ಏಕಮಾತ್ರ ಸತ್ಫಲವಾದ ರಾಷ್ಟ್ರ ಪ್ರಮುಖರ ಬಿಡುಗಡೆಯಿಂದ ಅಖಿಲ ಹಿಂದುಸ್ಥಾನವು ಆನಂದಗೊಂಡಿದ್ದರೆ, ಜೂನ್ ತಾ. 20ರಿಂದ ಮೂರು ದಿನಗಳ ವರೆಗೆ ಅಪರಿಮಿತ ಜನಮೆಯಿಂದಾಗಿ ಬೊಂಬಾಯಿ ನಗರವೇ ಕುಣಿದಾಡಿತೆನ್ನಬೇಕು. ತಾ. 20 ಬೊಂಬಾಯಿಯ ಪಾಲಿಗೆ 'ಸ್ವಾಗತ ದಿನ'ವಾಗಿತ್ತು ಮೂರು ವರುಷ ಮರೆಯಾಗಿದ್ದ ಧುರೀಣರ ದರ್ಶನಕ್ಕಾಗಿ ನಗರದ ಜನಸಂದಣಿ 'ವಿಕ್ಟೋರಿಯಾ ಟರ್ಮಿನಸ್'ನಲ್ಲಿ ಜಮೆಗೊಂಡು ನೋಡಿ ಮುಗಿಸುವಷ್ಟು ಗಣಿಸದೆ ಕಾದು ನಿಂತಿದ್ದಿತು. "ಸಂಬಂಧಪಟ್ಟ ಯಾವನೇ ವ್ಯಕ್ತಿ ಅಥವಾ ಪಕ್ಷವು ಈಗಲೇ ನನ್ನ ಸೂಚನೆಗಳ ಅಂಗೀಕಾರ ಅಥವಾ ತಿರಸ್ಕಾರ ಮಾಡುವಂತಿಲ್ಲವೆಂದು ಹಾರೈಸುತ್ತೇನೆ. ಸದ್ಯದ ಏಕಮಾತ್ರ ಪ್ರಶ್ನೆಯೆಂದರೆ ಸೂಚನೆಗಳು ಸಮ್ಮೇಲನದಲ್ಲಿ ಚರ್ಚಿಸಲ್ಪಡಲು ಅರ್ಹವಾಗಿರುವವೋ ಇಲ್ಲವೋ ಎಂಬುದೇ. ಆ ಪ್ರಶ್ನೆಗೊಂದು ಉತ್ತರ ದೊರೆತರೆ ಬಹಳ ಸಹಾಯವಾಗುವುದು" ಎಂದು ವೇವೆಲರು ತನ್ನೊಂದು ತಂತಿಯಲ್ಲಿ ಗಾಂಧಿಜೀಗೆ ತಿಳಿಸಿದ್ದರು. "ಇದು ವರೆಗೆ ಸೇರಿದ್ದ ಇಂತಹ ಸಮ್ಮೇಲನಗಳಿಗಿಂತ ಈ ಬಾರಿಯ ಸಮ್ಮೇಲನವು ಬಹಳ ಮುಂದುವರಿದಿದೆ. ಹಿಂದಿನ ಸ್ಥಿತಿಯೆಂದು ಸಮ್ಮೇಲನದ ಪ್ರತಿನಿಧಿಗಳು ಸರಕಾರದಿಂದ ನಾಮಕರಣ ಪಡೆದೇ ಹೋಗಿದ್ದರು. ಈ ಬಾರಿಯ ಸಮ್ಮೇಲನ [illegible] ಹಂಗಿಲ್ಲ; ಕೇವಲ ಸರಕಾರದ ಮನ ಮೆಚ್ಚುಗೆಗಾಗಿ ಅವರು ಮತಕೊಡುವ ಅಥವಾ ಮಾತಾಡುವ ಅಗತ್ಯವಿಲ್ಲ" ಎಂದು ಗಾಂಧಿಜೀ ಅಂದಿದ್ದರು. ಹೀಗಾಗಿ ಸಿಮ್ಲಾ ಸಮ್ಮೇಲನದಲ್ಲಿ ಭಾಗವಹಿಸಿ, ರಾಜಕೀಯ ನವ ಮನ್ವಂತರವೊಂದನ್ನು ನಿರ್ಮಿಸಲಿರುವ ಕಾಂಗ್ರೆಸ್ ಪ್ರಮುಖರನ್ನು, ಆ ಚರಿತ್ರಾರ್ಹ ಆಗೋಸ್ತು 9ರಲ್ಲಿ ಮಾಡಿದಂತೆ ಈ ಬಾರಿಯೂ ಕಾರಾಗೃಹಕ್ಕೆ ಕಳುಹಿಕೊಡಲಾರಿಸಿದ ವೃಥಾ ವಿರ್ಧ್ವಸದೊಡನೆ ಬೊಂಬಾಯಿ ನಗರವು ಅಭೂತಪೂರ್ವ ಸ್ವಾಗತವಿತ್ತಿತು.

ಗಾಂಧಿಜೀಯ ಪ್ರಯಾಣ.

ತಾ. 1?ರಲ್ಲಿ ಬೊಂಬಾಯಿಗಾಗಿ—ಅಲ್ಲಿಂದ ಸಿಮ್ಲಾಕ್ಕೆ—ಮಹಾತ್ಮಾ ಗಾಂಧಿಯವರು ಸರ್ದಾರ್ ಪಟೇಲ್, ಆಚಾರ್ಯ ಕೃಪಾಲಿನಿ, ಡಾ! ಸಯ್ಯದ್ ಮಹಮುದ್, ಮತ್ತು ಜೈರಾಮದಾಸ ದೌಲತ್ ರಾಮರೊಂದಿಗೆ ಶೃಂಗರಿತ ಕಾರೊಂದನ್ನು ಹತ್ತಿ ಪಾಂಚಗನಿಯಿಂದ ಹೊರಡುವಾಗ ಮಹಿಳೆಯೊಬ್ಬಳು 'ಹಳದಿ ಹತ್ತಿ ತೆಂಗಿನ ಕಾಯಿಯೊಂದನ್ನು ಸಮರ್ಪಿಸಿ ಸನಾತನೀ ಸಂಪ್ರದಾಯದಿಂದ ಬೀಳ್ಕೊಂಡಳು. ದಾರಿಯುದ್ದಕ್ಕೂ ಜನಸಂದಣಿಯು ಮುಂಭಾಗದಲ್ಲಿ [illegible] ಸೇವಕರು ರಾಷ್ಟ್ರಧ್ವಜದೊಡನೆ ಸಾಲುಗಟ್ಟಿ ನಿಂತು ಜೈಕಾರನೆಬ್ಬಿಸುತ್ತಿದ್ದರು. ಈ ಮೆರವಣಿಗೆಯು ಅರ್ಧ ಮೈಲಿನ ವರೆಗೂ ಗಾಂಧಿಜೀಯ ಕಾರನ್ನು ಹಿಂಬಾಲಿಸಿ ಹೋಗಿ ಬೀಳ್ಕೊಂಡಿತು. ಪೂನೆಯಲ್ಲಿ ಗಾಂಧಿಜೀ ಪಂಗಡವನ್ನು ಡೆಕ್ಕನ್ ದೇವ್ನೋ! ಕೂಡಿಕೊಂಡರು. 'ಡೆಕ್ಕನ್ ಮೈಲ್'ಗೆ ಜೋಡಿಸಲ್ಪಟ್ಟಿದ್ದ ಮೂರನೇ ತರಗತಿಯ ಸ್ಪೆಶ್ಯಲ್ ಡಬ್ಬಿಯ

CHAMPAE'S

Snow & Castrex

(SoleDistributers for (India.)

Sukhananda Stores

Santhekatte, UDIPI, S. K.

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್

(ಸ್ಥಾಪನೆ: 1908

1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ

ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸು ರಾಜ್ಯ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೋಷಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಜನ ಸೇವೆಗೆ ಸಿದ್ಧರು.

1944ರಲ್ಲಿ 53 ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೇಂಡ್ರಂ, ಉಡುಪಿ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ. [illegible] ಕ್ಕೆ ಮೀರಿದ ಕೇಸುಗಳಿಗೆ ರೂ. 5,6 ತಿಂಗಳ ಒಳಗಿನ ಕೇಸುಗಳಿಗೆ ರೂ.4/-(ವಿ.ಪಿ.12 ಆಣೆ ಅಲಾಯಿದ)Mrs P: DEVEE, P. D. 5 (N) Tollygunge, Calcutta. ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

ಧುರೀಣರ ಅಪರೂಪ ದರ್ಶನದ ಆನಂದೋದ್ವೇಗ!

ಬೊಂಬಾಯಿಯ ಹೃದಯಸ್ಪರ್ಶೀ ಸನ್ನಿವೇಶಗಳು.

ಜನಪ್ರತಿನಿಧಿಗಳಾರೆಂಬುದನ್ನು ಜನತೆಯೇ ಸಾರಿತು.

ಜನನಾಯಕರು ಬೊಂಬಾಯಿ ಸಭೆ ಮುಗಿಸಿ ಸಿಮ್ಲಾ ಸೇರಿದರು.

ನ್ನು ಹತ್ತುವಾಗ ಪೂನೆಯ ನಿಲ್ದಾಣದಲ್ಲಿ ಉತ್ಸಾಹೀ ಜನತಂಡವೂ ಕಾಂಗ್ರೆಸ್ ಪ್ರಮುಖರೂ ಸಂಭ್ರಮದ ವಿದಾಯವಿತ್ತರು. ಜನತಂಡದ ಗದ್ದಲವನ್ನು ತಪ್ಪಿಸುವುದಕ್ಕಾಗಿ ಮಹಾತ್ಮರು ದಾದರಿನಲ್ಲಿಯೇ ರೈಲಿನಲ್ಲಿಳಿದು ಕಾರು ಹತ್ತಿ ನೆಟ್ಟಗೆ ಬಿರ್ಲಾ ಭವನ ಸೇರಿದರು. ಉಳಿದ ಪ್ರಮುಖರು ವಿಕ್ಟೋರಿಯಾ ಟರ್ಮಿನಸಿನ ಸ್ಪೆಶ್ಯಲ್ ಪ್ಲೇಟ್‌ಫೋರ್ಮಿನಲ್ಲಿ (ಆಶ್ಚರ್ಯವೆಂದರೆ 1942ನೇ ಆಗೋಸ್ತಿನಲ್ಲಿಳಿದಿದ್ದ ಪ್ಲೆಟ್‌ಫೋರ್ಮೇ ಅದಾಗಿತ್ತು.) ಳಿಯುವಾಗ ಜಡಿಮಳೆಯಲ್ಲಿ ಒದ್ದೆಯಾಗಿ ಕಾದು ನಿಂತಿದ್ದ ಜನಸಂದಣಿಯು ಉನ್ಮಾದಗೊಂಡು ಪ್ರಚಂಡ ಜಯಕಾರ,ಹಾರ ತುರಾಯಿಗಳ ಸಮರ್ಪಣೆಯೊಂದಿಗೆ ಅವರನ್ನು ಸ್ವಾಗತಿಸಿತು. 6000 ಸ್ವಯಂಸೇವಕರು ಜನರ ನುಗ್ಗಾಟವನ್ನು ಹತೋಟಿಗೆ ತರಲಾರದೆ ಹೋದರು.

ಅಧ್ಯಕ್ಷರ ಆಗಮನ

ಮೌಲಾನಾ ಅಬುಲ್ ಕಲಮ್ ಆಜಾದರು ಬೊಂಬಾಯಿಗಾಗಿ ಕಲ್ಕತ್ತದಲ್ಲಿ ಹತ್ತಿದ ಟ್ರೈನು 1942ನೇ ಆಗೋಸ್ತಿನ ಬೊಂಬಾಯಿ ಅ. ಭಾ. ಕಾಂ. ಸಮಿತಿಯ ಅಧ್ಯಕ್ಷತೆ ವಹಿಸಲು ಹೊರಟಿದ್ದ ಬಂಡಿಯೇ ಆಗಿತ್ತು. ನಿಲ್ದಾಣದಲ್ಲವರು ಅತಿ ಸಂಭ್ರಮದಿಂದ ಬೀಳ್ಕೊಳ್ಳುವಾಗ 'ನೀವು ಬೇಗನೇ ಮರಳುವಿರಾ?' ಎಂದು 'ಎಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿ ಪ್ರಶ್ನೆ ಹಾಕಿದ "ಕಳದ ಬಾರಿ ನಾನು ಬೊಂಬಾಯಿಗೆ ಹೊರಟಾಗಲೂ ಬೇಗನೇ ಹಿಂದಿರುಗಬೇಕೆಂದು ಬಯಸಿದ್ದೆ ಆದರೆ ಮರಳಿ ಬರಲು ಸಾಧ್ಯವಾದುದು ಮೂರು ವರುಷಗಳ ನಂತರವೇ" ಎಂದು ಮೌಲಾನರು ತಮಾಷೆಯಾಡಿದರು. "ಈ ಬಾರಿ ಹಾಗಾಗುವ ಸಂದರ್ಭವಿಲ್ಲ" ಎಂಬ ಮಾತು ಬಂದಾಗ "ಹಾಗನ್ನಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಅಧ್ಯಕ್ಷರ ಉತ್ತರ. ಮೌಲಾನರಿಗೆ ಮಾಲವೀಯ, ವಿಜಯಲಕ್ಷ್ಮಿ ಪಂಡಿತ್ ಮೊದಲಾದವರಿಂದ ಹಾರ್ದಿಕ ಅಭಿನಂದನೆಗಳು ಬಂದಿವೆ. ಮಧ್ಯ ಸ್ಟೇಶನುಗಳಲ್ಲಿಯೂ ಹಾದಿಯುದ್ದಕ್ಕೂ ಪ್ರಚಂಡ ಜನಸಂದಣಿ ನೆರೆದು ಆನಂದೋನ್ಮಾದದಿಂದ ಎಬ್ಬಿಸುತ್ತಿದ್ದ ಜಯಕಾರಗಳಿಂದಾಗಿ ರೈಲಿನಲ್ಲಿದ್ದ ಎರಡು ರಾತ್ರಿಗಳಲ್ಲಿ ಒಟ್ಟಿಗೆ ಮೂರೇ ತಾಸು ನಿದ್ರಿಸಲು ಮೌಲಾನರಿಗೆ ಸಾಧ್ಯವಾಯಿತು. ಇನ್ನೂ ದೇಹ ದೌರ್ಬಲ್ಯವಿರುವ ಕಾಂಗ್ರೆಸ್ ಅಧ್ಯಕ್ಷರು ವಿಕ್ಟೋರಿಯ ಟರ್ಮಿನಸಿನಲ್ಲಿ ತನ್ನ ಸ್ವಾಗತಕ್ಕಾಗಿ ಜನ ಸಮುದ್ರವೇ ನೆರೆದಿರುವುದನ್ನರಿತು ಬೈಕುಲ್ಲಾ ಸ್ಟೇಶನಿನಲ್ಲಿಳಿದು ಧುರೀಣರಿಂದ ಸ್ವಾಗತಿಸಲ್ಪಟ್ಟು ನೇರಾಗಿ ಜಿನ್ನಾ ಹಾಲಿನಲ್ಲಿ ಏರ್ಪಡಿಸಿದ್ದ ಸ್ವಾಗತ ಸಭೆಗೇನೇ ತೆರಳಿದರು. ಅಧ್ಯಕ್ಷರಿಗಾಗಿ ಏರ್ಪಾಡಾಗಿದ್ದ ಸಾರ್ವಜನಿಕ ಮೆರವಣಿಗೆ, ಸ್ವಾಗತಗಳನ್ನೆಲ್ಲಾ ರದ್ದು ಪಡಿಸಬೇಕಾಯಿತು.

ನೆಹರು ಪ್ರಯಾಣ

ನೈನಿತಾಲಿನಿಂದ ಬಿಡುಗಡೆ ಹೊಂದಿ ಲಕ್ನೋ ಮಾರ್ಗವಾಗಿ ಅಲಹಾಬಾದಿಗೆ ಹೋದಾಗ ಹಾದಿಯುದ್ದಕ್ಕೂ ಪಂಡಿತ ನೆಹರುಗಳಿಗೆ ದೊರೆತಿದ್ದ ಸ್ವಾಗತವು ಅಭೂತ ಪೂರ್ವವಿದ್ದಿತು. ಅಲಹಾಬಾದಿನಲ್ಲಿ ಹಲವು ಸಾವಿರ ಜನರು ತಮ್ಮ ರಾಷ್ಟ್ರೀಯ ಪ್ರಮುಖ ಹಾಗೂ ಸ್ಥಳೀಯ ನಾಯಕನನ್ನು ಸ್ವಾಗತಿಸಿದರು. ನಿಲ್ದಾಣದಿಂದ ನೆಹರುಗಳ ನಿವಾಸದ ವರೆಗಿನ ರಸ್ತೆಯಲ್ಲಿ ನೆಹರುಗಳ ಪ್ರಾಯವನ್ನು ಸೂಚಿಸುವ 54 ಕಮಾನುಗಳು ಕಟ್ಟಲ್ಪಟ್ಟಿದ್ದುವು. ಕಾಂಗ್ರೆಸ್ ಸಮಿತಿ ಸಭೆಗಾಗಿ ಅಲಹಾಬಾದಿನಿಂದ ಬೊಂಬಾಯಿಗೆ ಹೊರಟು ಹಾದಿಯುದ್ದಕ್ಕೂ ಜನತೆಯ ಆನಂದೋನ್ಮತ್ತ ಪ್ರದರ್ಶನಗಳನ್ನು ಸ್ವೀಕರಿಸಿ ಬೊಂಬಾಯಿಗೆ ಬಂದಿಳಿಯುವಾಗ ಅಲ್ಲಿ 60 ಸಾವಿರಕ್ಕೂ ಮಿಕ್ಕಿದ ಜನ ಸಂದಣಿ ಜಡಿಮಳೆಯನ್ನೂ ಗಣಿಸದೆ ಕಾದುನಿಂತಿತ್ತು; ನೆಹರುಗಳಿಳಿಯುವಾಗ ಈ ಜನ ಸಮುದ್ರದಲ್ಲಿದ್ದ ಅಭಿಮಾನದ ತೆರೆಯು ಅವರ್ಣನೀಯವಿದ್ದಿತು. ಜನರು ಒಂದೇ ಸವನೆ ನುಗ್ಗಿ ಬಂದು ಪುಷ್ಪವೃಷ್ಟಿ ಸುರಿಯುತ್ತಿದೆಯೇನೋ ಎಂಬಂತೆ ಹೂಹಾರಗಳನ್ನೆಸೆದರು. ಅಲ್ಲಿಂದ ಅವರನ್ನು ನಗರದ ರಸ್ತೆಗಳಲ್ಲಿ ಮೆರವಣಿಗೆಯಲ್ಲೊಯ್ದು ಜಿನ್ನಾ ಹಾಲಿನಲ್ಲಿ ಏರ್ಪಾಡಾಗಿದ್ದ ಸಭೆಗೆ ತಂದು ಮುಟ್ಟಿಸಿದರು

ಜಿನ್ನಾಹಾಲಿನ ದೃಶ್ಯ

ಅಧ್ಯಕ್ಷರ ಸ್ವಾಗತಕ್ಕಾಗಿ ಜಿನ್ನಾಹಾಲ್ ಮತ್ತು ಆಸುಪಾಸಿನ ರಸ್ತೆಗಳೆಲ್ಲಾ ಕಾಂಗ್ರೆಸ್ ಧ್ವಜಮಯವಾಗಿದ್ದುವು. ಬೈಕುಲ್ಲಾದಲ್ಲಿಳಿದ ಮೌಲಾನಾ ಆಜಾದರು ಈ ಸಭೆಗೆ ಬರುವಾಗ ದಾರಿಯುದ್ದಕ್ಕೂ ಜನಸಂದಣಿ ಎಂಟು ದೆಸೆಗಳು ಮಾರ್ದನಿಗೊಡುವಂತಹ ಜಯಕಾರವೆಬ್ಬಿಸುತಿತ್ತು. ಅಧ್ಯಕ್ಷರು ಸಭಾಪೀಠವೇರಿದಾಗ ಒಂದು ಅತ್ಯಂತ ಹೃದಯಸ್ಪರ್ಶೀ ಘಟನೆ ನಡೆಯಿತು. ಮೌಲಾನರನ್ನು ಕೂಡಿಕೊಳ್ಳಲು ಪಂಡಿತ ನೆಹರು ಪೀಠದ ಮೇಲೆ ಧಾವಿಸಿ, ಒಮ್ಮೆಗೇ ಇಬ್ಬರೂ ಗಾಢಾಲಿಂಗನ ಬಂಧಿತರಾದರು. ಪ್ರೇಮೋನ್ಮಾದದಿಂದ ಇಬ್ಬರು ಪ್ರಮುಖರೂ ಅಗಲಲಾರದೆ ತುಸು ಹೊತ್ತು ಆಲಿಂಗಿಸಿಕೊಂಡೇ ನಿಂತಾಗ ಈ ಸಾಹಾರ್ದ್ರತೆಯ ಮುಂಕು ಒಡೆದ ಪ್ರಚಂಡ ಜನಸಂದಣಿ ಆನಂದರವವೆಬ್ಬಿಸಿತು; ಮತ್ತೂ ಮತ್ತೂ ಗಟ್ಟಿಯಾಗಿ ಕೂಗಿಕೊಂಡಿತು. ಮೌಲಾನರಿಗೆ ಹಲವು ಸಂಘ ಸಂಸ್ಥೆಗಳ ಮಾನಪತ್ರಗಳು ಸಮರ್ಪಿಸಲ್ಪಟ್ಟುವು

ತಂಗಿಯ ಮನೆಯಲ್ಲಿ ನೆಹರು

ನಿಲ್ದಾಣದಿಂದ ಸಾವಿರಾರು ಜನರ ಮೆರವಣಿಗೆಯಿಂದೊಯ್ಯಲ್ಪಟ್ಟದ್ದ ನೆಹರುಗಳು ಜಿನ್ನಾಹಾಲಿನ ಸಮಾರಂಭಕ್ಕಾಗಮಿಸುವ ಮೊದಲು ತನ್ನ ತಂಗಿ ಶ್ರೀಮತಿ ಕೃಷ್ಣಾ ಹತೀ ಸಿಂಗರ ಭವನದಲ್ಲಿಳಿದಿದ್ದರು ಮೆರವಣಿಗೆಯ ಗದ್ದಲವನ್ನು ವರ್ಣಿಸುವದಸಾಧ್ಯ; ನೆಹರು ಕುತ್ತಿಗೆಯು ಕ್ಷಣಕ್ಕೊಮ್ಮೆ ಪುಷ್ಪಹಾರಗಳ ಭಾರದಿಂದ ಕುಸಿಯುತಿತ್ತು; ಅವರು ಆಗಾಗ ಆ ಹೊರೆಯನ್ನಿಳಿಸಿಕೊಳ್ಳಬೇಕಾಗುತಿತ್ತು. ಮಳೆಯ ದೆಸೆಯಿಂದ ಹೂವಿನೆಸಳುಗಳ ಕೆಸರ ಲೇಪವು ಮೈತುಂಬಾಮೆತ್ತಿದ್ದ ಪಂಡಿತರು ಶ್ರೀಮತಿ ಹತೀ ಸಿಂಗರ ಭವನಕ್ಕೆ 'ಲಿಫ್ಟ್' ನಿಂದೆತ್ತಲ್ಪಟ್ಟೊಡನೆ ಒಮ್ಮೆ ಸುತ್ತಲೂ ದೃಷ್ಟಿ ಬೀರಿದರು. ಅಲಹಾಬಾದಿನಿಂದ ತನ್ನೊಂದಿಗೇನೇ ಬಂದಿದ್ದ ಪುತ್ರಿ ಶ್ರೀಮತಿ ಇಂದಿರಾಳಿಗೆ ಸನ್ನೆ ಮಾಡಿ, ಕಾದುನಿಂತಿದ್ದ ಶ್ರೀಮತಿ ಸರೋಜಿನಿ ದೇವಿಯ ಕಡೆಗೆ ಧಾವಿಸಿದರು. 1942ನೇ ಆಗೋಸ್ತಿನಲ್ಲಿ ದಸ್ತಗಿರಿಯಾಗಿ ಬೇರೆ ಬೇರೆ ಶಿಬಿರ ಪ್ರವೇಶಿಸಿದಂದಿನಿಂದ ಇವರಿಬ್ಬರೂ ಪರಸ್ಪರ ಮುಖಾವಲೋಕನ ಮಾಡಿದುದಿಲ್ಲ ಮುಂದಾಗಿ ಬಂದಿದ್ದ ಶ್ರೀಮತಿ ನಾಯಡುಗಳು ಹತೀಸಿಂಗ್ ಭವನಕ್ಕೆ ಬಂದು ಜವಾಹಿರಲಾಲರನ್ನು ಕಾಯುತಿದ್ದರು. ನೆಹರು ಮತ್ತು ಸರೋಜಿನಿ ಉಕ್ಕುವಾತ್ಸದಿಂದ ಗಾಢವಾಗಿ ಆಲಂಗಿಸಿಕೊಂಡರು. ಆ ಮೇಲೆ ಪಂಡಿತಜೀ ಒದ್ದೆ ವಸ್ತ್ರದಲ್ಲಿಯೇ ಒಂದೆಡೆ ಕುಳಿತುಕೊಂಡು ಪತ್ರಿಕಾಪ್ರತಿನಿಧಿಗಳಿಗ ತನ್ನ ಹೇಳಿಕೆಯಿತ್ತರು. ನೆಹರುಗಳು ತನ್ನ ಅಂಗೀ ಕಿಸೆಗೆ ಕೈಹಾಕಿ ತೆಗೆದಾಗ ತರೆಹವಾರಿಖಾದೀ ತುಂಡುಗಳು, ಹೂವಿನೆಸಳುಗಳು, ಮೆರವಣಿಗೆಯ ವೇಳೆ ಓರ್ವ ಉತ್ಸಾಹೀ ಭಕ್ತನು ತುರುಕಿಸಿದ್ದ ನೂರು ರೂಪಾಯೀ ನೋಟುಗಳ ಒಂದು ಮುದ್ದೆ ಹೊರಬಿದ್ದುವು.

ಇತರ ಧುರೀಣರು

ಶ್ರೀಮತಿ ಸರೋಜಿನಿ ಮದ್ರಾಸ್ ಎಕ್ಸ್‌ಪ್ರೆಸ್‌ನಲ್ಲಿ ಹೈದರಾಬಾದಿನಿಂದ ಬಂದಿದ್ದರು. ರಾಜಾಜಿ ಮದ್ರಾಸಿನಿಂದಲೂ ಮಿ. ಆಸಫ್ ಆಲಿಯವರು ನವಡಿಲ್ಲಿಯಿಂದಲೂ ವಿಮಾನ ಹತ್ತಿ ಬೊಂಬಾಯಿಯಲ್ಲಿಳಿದಿದ್ದರು. ಇವರು ಮೂವರಿಗೂ ಭುಲಾಭಾಯಿದೇಸಾಯಿಗಳ ಮನೆಯಲ್ಲಿಯೇ ವಸತಿ. ಪಂಡಿತ ಗೋವಿಂದ ವಲ್ಲಭ ಪಂತರೂ ಡಿಲ್ಲಿಯಿಂದ ಬೊಂಬಾಯಿ ವರೆಗೆ ಆಕಾಶಯಾನದಲ್ಲಿಯೇ ಹಾರಾಡಿದ್ದರು. ಮುಸಲಿಪಟಾಮಿನಿಂದ ಪಟ್ಟಾಭಿ ಸೀತಾರಾಮಯ್ಯನವರು ಮದ್ರಾಸ್ ಮೈಲ್ ಹತ್ತಿ ಬಂದರು. ಬಾಬು ರಾಜೇಂದ್ರ ಪ್ರಸಾದರು ಕಲ್ಕತ್ತ ಮೈಲಿನಲ್ಲಿ ಬಂದಿದ್ದರು ಗಡಿನಾಡಿನ ಗಾಂಧಿ ಹಾಗೂ ಅವರಣ್ಣ ಖಾನ್ ಸಾಹೇಬರು ಬೊಂಬಾಯಿಗೆ ಬರಲಿಲ್ಲ. ಕಾಂಗ್ರೆಸ್ ಸಮಿತಿಯ ನಿರ್ಧಾರಗಳನ್ನು ಅವರಿಗೆ ತಂತೀಮೂಲಕ ತಿಳಿಸಲಾಗಿದೆ. ಇತರ ಹಲವು ಪ್ರಮುಖರು ದೇಶದ ವಿವಿಧ ಭಾಗಗಳಿಂದ ಬೊಂಬಾಯಿಗೆ ಬಂದಿದ್ದಾರೆ. ಎಲ್ಲಾ ಧುರೀಣರಿಗೂ ಬೊಂಬಾಯಿಯಲ್ಲಿ ಅಭೂತಪೂರ್ವ ಸ್ವಾಗತ ದೊರೆತಿದೆ. ಪ್ರಮುಖರಾಗಮನದ ಸಂತೋಷಾರ್ಥವಾಗಿ ತಾ. 20ರಲ್ಲಿ ಬೊಂಬಾಯಿಯ ಹಲವು ಸಂಘ ಸಂಸ್ಥೆಗಳು ರಜೆಯನ್ನಾಚರಿಸಿದ್ದುವು.

ಸಭಾ ವೃತ್ತಾಂತ

ಸಮಿತಿ ಸದಸ್ಯರು ಬೊಂಬಾಯಿಗೆ ಮುಟ್ಟಿದೊಡನೆ ಸ್ವಲ್ಪವೂ ವಿಳಂಬಿಸದೆ ಬಿರ್ಲಾ ಭವನಕ್ಕೆ ಧಾವಿಸಿ ಗಾಂಧಿಜೀಯೊಡನೆ ಖಾಸಗೀ ಮಾತುಕತೆ ನಡೆಸಿದರು. ನೆಹರು-ಗಾಂಧಿ, ಆಜಾದ್-ಗಾಂಧಿ, ಆಜಾದ್-ನೆಹರು-ಗಾಂಧಿ, ಪ್ರಸಾದ್-ಕೃಪಾಲಿನಿ-ಗಾಂಧಿ, ವಲ್ಲಭಾಯಿ-ಪ್ರಸಾದ್-ಕೃಪಾಲಿನಿ-ಆಜಾದ್, ರಾಜಾಜಿ-ಭುಲಾಭಾಯಿ-ಗಾಂಧಿ, ಹೀಗೆ ಜತೆಸಂಭಾಷಣೆಗಳೂ ಸಾಮೂಹಿಕ ಚರ್ಚೆಗಳೂ ಅವಿರಾಮವಾಗಿ ನಡೆದುವು. ವೇವೆಲ್ ಯೋಜನೆಯ ಬಿ ಮೂಲ್ಯತೆಯನ್ನು ಪ್ರತಿಯೊಬ್ಬ ಪ್ರಮುಖನಿಗೂ ಮುಂದಟ್ಟು ಮಾಡಿಕೊಡುವರೆ ರಾಜಾಜೀ ಭುಲಾಭಾಯಿಗಳು ಹಲವು ಚರ್ಚೆಗಳಲ್ಲಿ ಭಾಗವಹಿಸಿ ಅವಿಶ್ರಾಂತವಾಗಿ ದುಡಿದಿದ್ದರು. ತಾ. 21ನೇ ಅಪರಾಹ್ನ ಸಮಿತಿಯ ಕ್ರಮಬದ್ಧ ಅಧಿವೇಶನವು ಮೌ. ಆಜಾದರ ಅಧ್ಯಕ್ಷತೆಯಲ್ಲಿ ಸೇರಿ



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

Earn Rs. 5,000 per month.

Rare opportunities. Become a manufacturer. Learn how manufacture, Toilet articles, Pharmaceutical Products, Pain Balm, Fountainpen Ink, Pergative Lotion, Boot Polish etc. of 150 lines.

Apply at once with 1½ annas' stamps to—

B. D HEGDE BROS,
309, A. Rameshwar Sampa Boarding House,
Hararwala Bldg., Delisle Road,
BOMBAY, 11.

‘ಈ ಬಾರಿಯ ಸಮ್ಮೇಲನಕ್ಕೆ ಕರೆಯಲ್ಪಟ್ಟವರು ಜನಪ್ರತಿನಿಧಿಗಳು ಹೊರತು ಸರಕಾರೀ ಹಂಗಿನವರಲ್ಲ. ಸ್ವಾತಂತ್ರ್ಯ ಗುರಿಯಿಟ್ಟುಕೊಂಡು ವರ್ತಿಸಿದರೆ ಉಪಯೋಗಕರ ಕಾರ್ಯ ಮಾಡಬಹುದು’.
ಗಾಂಧಿಜೀ.

‘ಸಿಮ್ಲಾ ಪ್ರತಿನಿಧಿಗಳೆಲ್ಲರ ಒಪ್ಪಿಗೆ ಸಂಪಾದಿಸಿ, ಕೇಂದ್ರ ಸಮಿತಿಗೆ ಸಮರ್ಥ ಮಂಗಡವನ್ನೇ ಆರಿಸಬೇಕೆಂದಿದ್ದೇನೆ’
-ಅಜಾದ್.

‘ಈ ತಾತ್ಕಾಲಿಕ ವ್ಯವಸ್ಥೆಯು ನನ್ನನ್ನು ಸ್ವಾತಂತ್ರ್ಯಗುರಿ ಮುಟ್ಟಿಸಲು ಹಲವು ವಿಧದಿಂದ ನೆರವಾಗಬಲ್ಲುದಾದರೆ ನಾನದನ್ನಂಗೀಕರಿಸುತ್ತೇನೆ’. ನೆಹರು

‘ನಾವು ಸಿಮ್ಲಕ್ಕೆ ಹೊರಡುವ ಮೊದಲಿದ್ದ ಸ್ಥಿತಿಯಲ್ಲೇ ದೇಶವನ್ನಿರಗೊಡಿಸಲು ನಾವು ಸತ್ಯಕ್ಕೂ ತಯಾರಿಲ್ಲ’. ಜಂಕಿನ್.

‘ಸಿಮ್ಲದಲ್ಲಿ ಹೊಸ ಕೂಸಿನ ಜನನವಾಗುವದೆಂದು ನಿರೀಕ್ಷಿಸುವಿರಾ? ಆಗಲಿ, ಆದಕ್ಕೆ ಹಲವು ತಂದೆಯಂದಿರುವಾಗ ನಾನೂ ಹಾಗನ್ನಿಸಿಕೊಳ್ಳಲಾರೆ. ಶುಭ ಜನನವಾಗಲಿ ಎಂದು ನನ್ನಮೂ ಹಾರೈಕೆ.
ಲಿಯಾಖತ್ ಅಲೀಖಾನ್.

‘ಅಭಿವೃದ್ಧಿ ಪಥದಲ್ಲಾಗಿರುವ ಸ್ಪಷ್ಟ ಪ್ರಗತಿಯಿದು. ಸಂಬಂಧಪಟ್ಟವರಾರೂ ಈ ಸುಸಂಧಿಯನ್ನು ಕಳಕೊಳ್ಳದಿರಲಿ’
ಸಪ್ರು.

ಸಿಮ್ಲಾ ಸಮ್ಮೇಲನ ವಿಜಯಿಯಾಗುವದೆ?

★

ದಾಗ ವಿಶೇಷಾಮಂತ್ರಣ ಪಡೆದು ಬಂದಿದ್ದ ಗಾಂಧಿಜೀ ಹಾಜರಿದ್ದರು. ರಾಜಾಜೀ ಮತ್ತು ಇತರ ಹಲವು ಕಾಂಗ್ರೆಸ್ ಪ್ರಮುಖರೂ ಆಮಂತ್ರಿಸಲ್ಪಟ್ಟು ನೆರೆದಿದ್ದರು. ಹಾಜರಿದ್ದ ಸದಸ್ಯರೆಂದರೆ ಸರ್ದಾರ್ ವಲ್ಲಭಭಾಯಿ, ಬಾಬು ರಾಜೇಂದ್ರ ಪ್ರಸಾದ್, ಪಂಡಿತ ನೆಹರು, ಶ್ರೀಮತಿ ನಾಯಿಡು, ಆಚಾರ್ಯ ಕೃಪಾಲನಿ, ಡಾ। ಪಟ್ಟಾಭಿ, ಶಂಕರ ರಾವ್ ದೇವ್, ಮಿ. ಆಸಫ್ ಅಲಿ ಡಾ। ಪ್ರಫುಲ್ಲಚಂದ್ರಘೋಷ್, ಪಂಡಿತ ಗೋವಿಂದ ವಲ್ಲಭ ಪಂತ್. ಅಧ್ಯಕ್ಷರು ಸ್ಥಿತಿಗತಿಗಳನ್ನು ವಿವರಿಸಿ ವೇವೆಲ್ ಸೂಚನೆಗಳ ಕುರಿತು ಪ್ರತಿಯೊಬ್ಬ ಸದಸ್ಯನ ವ್ಯಕ್ತಿಗತ ಅಭಿಪ್ರಾಯ ಕೇಳಿದರು. ಅಭಿಪ್ರಾಯಗಳು ಮೂರು ಮುಖವಾಗಿ ಕವಲೊಡೆದಿದ್ದುವೆಂದು ತಿಳಿದುಬರುತ್ತದೆ. ‘ಸವರ್ಣ ಹಿಂದು’ ಶಬ್ದವನ್ನು ಅತಿಯಾಗಿ ದ್ವೇಷಿಸುತ್ತಿರುವ ಗಾಂಧೀ ವಲ್ಲಭಾಯಿಗಳ ಪಕ್ಷ ಮೊದಲನೆಯದು. ಸೂಚನೆಗಳಿಂದ ಹಿಂದೀಯರಿಗೆ ಸಾಕಷ್ಟು ಅಧಿಕಾರ ಬಂದಿಲ್ಲವಾದರೂ, ಈ ತಾತ್ಕಾಲಿಕ ವ್ಯವಸ್ಥೆಯನ್ನು ಪರೀಕ್ಷಿಸಿಗೊಮ್ಮೆ ಹಚ್ಚಬೇಕೆಂಬ ನೆಹರು, ಅಜಾದ್ ಮತ್ತು ಬೇರೊಬ್ಬಿಬ್ಬರ ಮಾಧ್ಯಮಿಕ ಪಕ್ಷ ಎರಡನೆಯದು. ‘ಸವರ್ಣ ಹಿಂದು’ ಪದವು ಈ ಮಂಗಡಕ್ಕೂ ಅಸಮ್ಮತವಾದರೂ ಅದೇ ಮಹತ್ತಲ್ಲ. ವೈಸರಾಯೀ ಯೋಜನೆಯಲ್ಲಿ ಸಕಲ ಗುಣ ಸಂಪನ್ನತೆಯಿ ದೆಯಾದ್ದರಿಂದ ಅದರಲ್ಲಿರುವ ಬಿರುಕುಗಳನ್ನು ಪರೀಕ್ಷಿಸಲಿಕ್ಕೇನೇ ಹೋಗದೆ, ವ್ಯವಹಾರಜ್ಞರಂತೆ ಶರ್ತ ವಿನಹ ಅಂಗೀಕರಿಸಿಕೊಳ್ಳಬೇಕೆಂಬ ರಾಜಾಜೀ ಭುಲಾಭಾಯಿಗಳ ಪಕ್ಷ ಮೂರನೆಯದು. ಎರಡು ದಿನಗಳಲ್ಲಿ 13 ತಾಸು ಪರ್ಯಾಲೋಚನೆ ನಡೆಯಿತು. ಕೊನೆಗೆ ಸಮಿತಿಯು ಈ ಲೇಖದಲ್ಲಿ ಪ್ರಥಮತಃ ನಮೂದಿಸಿರುವ ನಿರ್ಧಾರಗಳನ್ನು ಮಾಡಿತು.

ಧುರೀಣರ ನಿರ್ಗಮನೋತ್ಸಾಹ

ಸಿಮ್ಲಕ್ಕೆ ಹೊರಡುವದಕ್ಕಾಗಿ ತಾ. 22ನೇ ಅಪರಾಹ್ನ ಕಾಂಗ್ರೆಸ್ ಸಮಿತಿಯ ಸಭಾ ಕೋಣೆಯ ಮೆಟ್ಟಿಳಿದು ಬರುವಾಗ ಗಾಂಧಿಜೀ ಅತ್ಯುತ್ಸಾಹದಲ್ಲಿದ್ದರು; ಆ ಸುಪ್ರಸಿದ್ಧ ಗಾಂಧಿ-ಇರ್ವಿನ್ ಒಪ್ಪಂದಕ್ಕಾಗಿ 1931 ಹೊರಡುವಾಗ ಅವರ ಮುಖದಲ್ಲಿದ್ದ ಆಶೆಯ ಹೊಳಪು ಇದೀಗ ಎರಡನೇಬಾರಿ ಕಾಣಿಸುತಿತ್ತು. ಸಮಿತಿ ಸದಸ್ಯರು ಅವರೊಂದಿಗೆ ಹೊರಬಂದು ವಿಜಯದಹಾರೈಕೆ ಸೂಚಿಸಿ ಬೀಳ್ಕೊಟ್ಟರು. ಶ್ರೀಮತಿ ಬಿರ್ಲಾರವರು ಗಾಂಧಿಜೀಯ ಹಣೆಗೆ ಕುಂಕುಮ ಹಚ್ಚಿ, ದೇವರು ಸಿಮ್ಲದಲ್ಲಿ ಅವರಿಗೆ ನೆರವಾಗಲಿ ಎಂದು ಪ್ರಾರ್ಥಿಸಿದರು. ಅಂದೇ ರಾತ್ರಿ ರಾಜಾಜೀ, ಖೇರ್ ಮೊದಲಾದವರೊಂದಿಗೆ ಗಾಂಧಿಯವರು ‘ಫ್ರೊಂಟಿಯರ್ ಮೈಲ್’ ಹತ್ತಿದರು. ತಾ. 23ನೇ ಪೂರ್ವಾಹ್ನ ಮೌಲಾನಾ ಅಜಾದರೂ ಭುಲಾಭಾಯಿ ದೇಸಾಯಿಗಳೂ ತಮಗಾಗಿ ಬಂದಿದ್ದ ಸ್ಪೆಶ್ಯಲ್ ಆರ್. ಎ. ಎಫ್ ವಿಮಾನವೊಂದರಲ್ಲಿಯೂ ಪಂಡಿತ ಗೋವಿಂದ ವಲ್ಲಭ ಪಂತ ಮತ್ತು ಆಚಾರ್ಯ ಕೃಪಲಾನಿಯವರು ಬೇರೊಂದು ಸ್ಪೆಶ್ಯಲ್ ವಿಮಾನದಲ್ಲಿಯೂ ನವದಿಲ್ಲಿಗೆ ಹಾರಿ, ಅಲ್ಲಿ ಎಲ್ಲರೊಂದಾಗಿ ಮತ್ತೊಂದು ವಿಮಾನದಲ್ಲಿ ಕುಳಿತು ಅಂಬಾಲಕ್ಕೆ ಹಾರಿ, ಅಲ್ಲಿಂದ ಕಾರು ಹತ್ತಿ ಸಿಮ್ಲಾ ಸೇರಿದರು. ಮಿಕ್ಕ ಆಮಂತ್ರಿತರೂ ಬೇರೆ ಬೇರೆ ಹಾದಿಯಿಂದ ಸಿಮ್ಲಕ್ಕೆ ಬಂದು ಸೇರಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಸಮಿತಿ ಸದಸ್ಯರೆಲ್ಲಾ ಸಿಮ್ಲಾ ಪರಿಷತ್ತಿನ ಕುರಿತು ಆಸೆಕಟ್ಟಿಕೊಂಡಿದ್ದಾರಲ್ಲದೆ ಇಡೀ ವಾತಾವರಣದಲ್ಲಿ ಒಂದೇ ಒಂದು ನಿರಾಶೋದ್ಗಾರ ಕೇಳಿ ಬರುತ್ತಿಲ್ಲ "ನಾವೆಲ್ಲಾ ಉತ್ಸಾಹ ಪೂರ್ವಕ ಅಗಲುತಿದ್ದೇವೆ" "ವಸ್ತುಸ್ಥಿತಿಯನ್ನು ಅಲಕ್ಷ್ಯಸಿದವರು ಈಗ ಅದನ್ನು ನೋಡ ಹತ್ತಿದ್ದಾರೆ" "ನಮ್ಮ ಪಥದ ತುದಿಯ ವರೆಗೂ ಒಟ್ಟಾಗಿ ಮುಂದೊತ್ತಲು ಬಾಧ್ಯರಿದ್ದೇವೆ"—ಇತ್ಯಾದಿ ಉದ್ಗಾರಗಳು ಬೊಂಬಾಯಿಯಿಂದ ಹೊರಡುವಾಗ ಧುರೀಣರ ಬಾಯಿಗಳಿಂದ ಬಂದಿವೆ ಕಾಂಗ್ರೆಸ್ ಅಧ್ಯಕ್ಷರಿಗೂ ಗಾಂಧಿಜೀಗೂ ಅವಶ್ಯ ಬಿದ್ದಾಗ ಸಲಹೆ ಕೊಡುವದಕ್ಕಾಗಿ, ನೆಹರು, ವಲ್ಲಭಾಯಿ, ಪ್ರಸಾದ್, ಕೃಪಲಾನಿಯವರುಳ್ಳ ಉಪಸದನ್ನು ಸಿಮ್ಲಕ್ಕೆ ಕಳುಹುವ ಯೋಚನೆಯಿ ಮಿತಿಯೊಂದ್ದರೂ ಕೊನೆಗವನ್ನು ಬಿಟ್ಟು ಬಿಡಲಾಗಿದೆ. ಇಡಿಯ ಕಾರ್ಯಕಾರೀ ಸಮಿತಿಯು ಸದ್ಯದಲ್ಲಿ— ಅವಶ್ಯ ಬಿದ್ದರೆ ಸಿಮ್ಲಾದಲ್ಲೇ— ನೆರೆಯಲಿಕ್ಕಿದೆಯಾದ್ದರಿಂದ ಬೊಂಬಾಯಿಯಿಂದ ತಂತಮ್ಮ ಊರುಗಳಿಗೆ ಹೊರಟಿರುವ ಪ್ರಮುಖರು ಯಾವ ಮುಹೂರ್ತಕ್ಕಾದರೂ ಹಿಂದಿರುಗುವ ಸಿದ್ಧತೆಯಲ್ಲಿದ್ದಾರೆ.

ಮಿ. ಜಿನ್ನರ ಪಯಣ

ಬೊಂಬಾಯಿಯಿಂದ ರೈಲು ಹತ್ತಿ ತಾ. 21ರಲ್ಲಿಯೇ ಹೊರಟಿದ್ದ ಮಿ. ಜಿನ್ನರು ತಾ. 23ನೇ ಪೂರ್ವಾಹ್ನ ಸಿಮ್ಲಾ ಸೇರಿದ್ದಾರೆ. ಅವರ ಜೊತೆಯಲ್ಲೇ ಲೀಗಿನ ದ್ವಿತೀಯ ನಾಯಕ ಹಾಗೂ ಕಾರ್ಯದರ್ಶಿ ನವಾಬಜಾದಾ ಲಿಯಾಖತ್ ಅಲೀ ಖಾನ್, ಬಂಗಾಳದ ಮಾಜೀ ಲೀಗ್ ಪ್ರಧಾನಿ ಸರ್. ನಾಜಿಮುದ್ದೀನ್, ಮತ್ತಿತರರು ಸಿಮ್ಲಕ್ಕೆ ಬಂದಿದ್ದಾರೆ. ಸಿಮ್ಲದಲ್ಲಿ ಲೀಗು ಧ್ವಜ ಮತ್ತು ಪಾಕಿಸ್ತಾನದ ಚಕ್ರಧಾರಿಗಳಾದ ಪ್ರಬಲ ಜನಸಂದಣಿಯು ಮಿ. ಜಿನ್ನರಿಗೆ ಅತಿಸಂಭ್ರಮದ ಸ್ವಾಗತವಿತ್ತಿತು. ಲೀಗ್ ಜಯಕಾರಗಳು ನಾಲ್ದೆಸೆಗಳಿಂದ ಪ್ರತಿಧ್ವನಿಸುತಿದ್ದುವು. ‘ಯುನಿಫೋರ್ಮ’ಧಾರಿಗಳಾದ ಲೀಗ್ ಸ್ವಯಂ ಸೇವಕರ ಮೆರವಣಿಗೆಯ ಯೋಚನೆಯನ್ನು ಸಿಮ್ಲದ ಅಧಿಕಾರಿಗಳು ಹಾಕಿದ ಬಹಿಷ್ಕಾರದ ದೆಸೆಯಿಂದಾಗಿ ಬಿಟ್ಟು ಬಿಡಲಾಯಿತು. ‘ನೇಶನಲ್ ಗಾರ್ಡನವರು’ ಕ್ವಯದ್-ಇ-ಆಝಾಮರಿಗೆ ‘ಗಾರ್ಡ್ ಓಫ್ ಹೋನರ್’ ಸಲ್ಲಿಸಿದರು. ಮೌಲಾನರನೂ ಮಹಾತ್ಮರನ್ನೂ ಪ್ರಚಂಡ ಜನಜಂಗುಳಿಯ ಜೈಕಾರಗಳಿದಿರುಗೊಂಡವು. ಮೌಲಾನರಿಳಿದ ಸಿಸಿಲ್ ಹೊಟೆಲಿನ ಮುಂಭಾಗದಲ್ಲೂ, ಮಹಾತ್ಮರಿಳಿದ ರಾಜಕುಮಾರಿ ಅಮೃತ ಕೌರರ ಭವನದಿದಿರಲ್ಲೂ ಅಗಣಿತ ಜನಸಂದಣಿ ನೆರೆದು ಬಂದು ದರ್ಶನ ಪಡೆಯಿತು. ಜನಗೊಂದಲ ತಡೆಯುವದಕ್ಕಾಗಿ ಕೌರರ ಮನೇ ಮುಂಭಾಗದಲ್ಲಿ ಹಾಕಿದ್ದ ಬೇಲಿ ಒತ್ತಡದಿಂದ ಭೇದಿಸಲ್ಪಟ್ಟಿತು. ಸಮ್ಮೇಲನಕ್ಕಾಮಂತ್ರಿಸಲ್ಪಟ್ಟಿರುವ ಎಲ್ಲಾ ಪಕ್ಷ ಪ್ರಮುಖರೂ ಸಿಮ್ಲಕ್ಕೆ ಬಂದಿದ್ದಾರೆ. ತನ್ನ ಕಾರ್ಯದರ್ಶಿ ಸರ್. ಇವಾನ್ ಜೆಂಕಿನ್ನರೊಂದಿಗೆ ವೈಸರಾಯಿಗಳು ತಾ. 22ರಲ್ಲೇ ಸಿಮ್ಲಾ ಸೇರಿದ್ದಾರೆ. ಸಮ್ಮೇಲನದ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಸುಧಾರಣಾ ಕಮಿಶನರ್ ಶ್ರೀ. ಎ. ಪಿ. ಮೆನನರಿಂದ ಎಲ್ಲಾ ವ್ಯವಸ್ಥೆಗಳಾಗಿವೆ. ಒಂದು ಮಹಾ ರಾಷ್ಟ್ರದ ಅದೃಷ್ಟದಾತರನ್ನು ಕೂಡಹಾಕಿ, ಇಡೀ ಪ್ರಪಂಚದ ದೃಷ್ಟಿ ಕೇಂದ್ರವಾಗಿರುವ ಸಿಮ್ಲಕ್ಕೀಗ ಜೀವಕಳೆ ಬಂದಿದೆ

ಹಿಂದೂ ಮಹಾ ಸಭೆಯ ಕಂಠೋಕ್ತ ಖಂಡನೆ

ಅಖಿಲ ಭಾರತ ಹಿಂದೂ ಮ. ಹಾ. ಸಭೆಯ ಕಾರ್ಯಕಾರೀ ಸಮಿತಿಯು ತಾ 24ರಲ್ಲಿ ಡಾ ಶ್ಯಾಮ ಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಪೂನದಲ್ಲಿ ನೆರೆಯಿತು. ವೇವೆಲ್ ಸೂಚನೆಗಳನ್ನದು ಅಮೂಲಾಗ್ರವಾಗಿ ಖಂಡಿಸಿದೆ "ಭಾರತದ ಮೇಲಿನ ಬ್ರಿಟಿಷ್ ಆಳ್ವಿಕೆಯನ್ನು ಚಿರಸ್ಥಾಯೀಗೊಳಿಸಲು ಉದ್ದೇಶಪೂರ್ವಕ ಕೈಗೊಂಡ ಕುಯುಕ್ತಿ—ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ಮರೆಮಾಡುವ ಹಂಚಿಕೆ—ಭಾರತ ಭೂಮಿಯ ಏಕತ್ವವನ್ನು ಭೇದಿಸಲು ಕೊಟ್ಟಿರುವ ತಾಡನೆ—ಸವರ್ಣ ಹಿಂದೂ ಮತ್ತು ಮುಸಲ್ಮಾನರೊಳಗೆ ಸಾಮ್ಯತೆಯನ್ನೂ ಮುಸಲ್ಮಾನ್ ಮತ್ತು ದಳಿತ ವರ್ಗಗಳೊಳಗೆ ಅಸಾಮ್ಯತೆಯನ್ನೂ ತೋರಿಸಿ ಹಿಂದೂದೇಶದ ಜನಸಂಖ್ಯೆಯಲ್ಲಿ ಶೇಕಡಾ 75ರಷ್ಟಿರುವ ಹಿಂದುಗಳನ್ನು ಅಲ್ಪ ಸಂಖ್ಯೆಗಿಳಿಸುವ ಹಾಗೂ ‘ಜಾತಿ ಹಿಂದುಗಳು’ ಮತ್ತು ‘ದಳಿತ ಜಾತಿಗಳು’ ಎಂಬ ಭೇದ ಮಾಡಿ ರಾಜಕೀಯ ಬುದ್ಧಿಯ ಹಿಂದುಗಳನ್ನು ವಿಭಾಗಿಸುವ ದುರ್ಬುದ್ಧಿಯದು" ಎಂದು ತೀವ್ರ ನಿಷೇಧಿಸಿದೆ ಹಿಂದುಗಳ [illegible] ಲ್ಲವೆ ಕಾಂಗ್ರೆಸ್ಸಿನವೆಂದು ಸಾರಿದೆ. ವೇವೆಲ್ ಸೂಚನೆಗಳ ಖಂಡನಾರ್ಥವಾಗಿ ಜುಲಾಯಿ 1ರಿಂದ 7ರ ವರೆಗೆ ಎಲ್ಲಾ ಹಿಂದುಗಳೂ ‘ನಿಷೇಧವಾಗಿ’ ಆಚರಿಸಬೇಕು; ತಾ. [illegible]ಲ್ಲಿ ದೇಶದಲ್ಲೆಲ್ಲಾ ಹರತಾಳವಾಚರಿಸಬೇಕೆಂಬ ಕರೆಯುತ್ತಿದೆ. ಜುಲಾಯಿಯೊಳಗೆ ಅ. ಭಾ. ಸಮಿತಿಯ ಸಭೆ ಸೇರಲಿದೆ. ಪೂನಾ ಸಭೆಯಲ್ಲಿ ವೀರ ಸಾವರ್ಕರ್, ಡಾ। ಮೂಂಜೆ, ಶ್ರೀ ಗಣಪತ ಘೋಷ್ಟ್ರ್, ಆರ. ಕೋಲಾಟಕರ; ಮನೋರಂಜನ ಚೌಧರಿ, ದೇಶಪಾಂಡೆ, ಕರಂದೀಕರ್, ಮೇಜರ್ ಬಾದರ್ಣ್, ಶಿವಾನಂದ್, ಶ್ರೀಮತಿ ಜಾನಕೀಬಾಯಿ ಜೋಶಿ, ರಾಮ್ ಪ್ರಸಾದ್, ರಾಂಚನಾಧನ್, ರಾಮಕೃಷ್ಣ ಪಾಂಡ್ಯೆ, ಥಾನ್ಲ್ಲಿರೆ ಮೊದಲಾದ ಸದಸ್ಯರೂ ಶ್ರೀ. ಕೇಳ್ಕರರಂತಹ ಆಮಂತ್ರಿತರೂ ಭಾಗವಹಿಸಿದ್ದರು.

ಇತರ ಪಕ್ಷಗಳ ಅಭಿಪ್ರಾಯ

ಅಮೃತಸಾರಿನಲ್ಲಿ ನೆರೆದ ಸಿಖ್ಖರ ಶಿರೋಮಣಿ ಅಕಾಲಿದಲದ ಕಾರ್ಯಕಾರೀ ಸಮಿತಿಯೂ ವೇವೆಲ್ ಯೋಜನೆಗಳಿಗೆ

(ಅನೇ ಪುಟ ನೋಡಿರಿ.)

THE
WIJAYA BANK LTD.
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—
Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

The Canara Banking Corporation Limited.
(Incorporated in British India, with limited Liability.)
Estd: 1906.
Head Office: **UDIPI**, (S. K.)

ANNOUNCEMENT.
A branch of the Bank has been opened at Camp Bazaar, CANNANORE, on 18—5—1945.

ನವಯುಗ

ಉಡುಪಿ, ಗುರುವಾರ ೨೮-೬-೧೯೪೫

ಜಪಾನ್ ಹೋರಾಟ

ಒಕಿನಾವಾ ದ್ವೀಪದ ಹೋರಾಟವನ್ನು ಅಮೇರಿಕನ್ ಸೇನೆ ಗೆದ್ದಿದೆ. 'ಜಾಪಾನ್ ಭವಿಷ್ಯವು ಒಕಿನಾವಾ ಕಾಳಗವನ್ನವಲಂಬಿಸಿದೆ' ಎಂದ ಜಾಪಾನೀ ಪ್ರಧಾನಿಯ ಮಾತಿನ ಮೇಲಿಂದ ಇಂದು ಆ ಕುಳ್ಳ ಜನಾಂಗವೆಂತಹ ದುರ್ದಶೆಗೀಡಾಗಿದೆ ಎಂಬುದನ್ನು ಊಹಿಸಬಹುದು. ಒಕಿನಾವಾದ ಪ್ರಾಮುಖ್ಯತೆಯಂತಹದು. ಅದು ಟೋಕಿಯೋ, ಒಸಾಕಾ ಮತ್ತು ಕೋಬೆಗಳಂತಹ ಜಾಪಾನಿನ ಮಾರ್ಮಿಕ ಕೇಂದ್ರಗಳಿಗೆ ಕೇವಲ 400ಮೈಲು ದಕ್ಷಿಣದಲ್ಲಿದೆ. ಜಾಪಾನಿನ ಮೇಲೆ ಸಾಮೂಹಿಕ ಆಕಾಶ ಧಾಳಿ ಮತ್ತು ಆಕ್ರಮಣ ನಡಿಸಲು ಇದು ಹೇಳಿಸಿದ ನೆಲ್ದಾಣ. ವೈರಿಯ ಮೂಲ ನೆಲದ ಪಾಲಿಗೆ, ಒಕಿನಾವಾ ಪತನದೊಂದಿಗೆ ಪ್ರಕೃತಿಜನ್ಯ ರಕ್ಷಣಾನುಕೂಲತೆಗಳೆಲ್ಲಾ ಕಳೆದು ಹೋದುವು. ಆದ್ದರಿಂದಲೇ ಅಲ್ಲಿ ಜಾಪಾನರು ಪ್ರಾಣವನ್ನು ಪಂಥಕ್ಕಿಟ್ಟು ಹೋರಾಡಿದ್ದರು. ಆ ಸಣ್ಣ ದ್ವೀಪದಲ್ಲಿ 82 ದಿನಗಳ ಕಠಿಣ ಕಾಳಗ ನಡೆದಿದ್ದಿತು. ವೈರಿಯ ಆತ್ಮಹತ್ಯಾದಳಗಳಿಂದಾಗಿ ಅಮೇರಿಕವು ಅಸಹನೀಯ ಕಷ್ಟನಷ್ಟವನುಭವಿಸಿದ್ದಿತು; ಇಬ್ಬರು ಅಮೇರಿಕನ್ ಸೇನಾನಿಗಳು ಮಡಿದುದಲ್ಲದೆ, ತಮ್ಮ 31 ಹಡಗುಗಳು ಮುಳುಗಿಸಲ್ಪಟ್ಟು 54 ಜಖಂಗೊಂಡವೆಂದು ಅಮೇರಿಕಾನರೇ ಅಂಕೆ ಕೊಟ್ಟಿದ್ದಾರೆ. ಸುಮಾರು ಒಂದು ಲಕ್ಷ ಜಾಪಾನ್ ಯೋಧರನ್ನಲ್ಲಿ ನಿರ್ನಾಮಮಾಡಿವೆನೆಂದೂ, ವೈರಿಗಳ ಹತ್ತಕ್ಕೊಬ್ಬನಂತೆ ಮಾತ್ರ ತಮ್ಮವರು ಮಡಿದರೆಂದೂ ಅಮೇರಿಕಾನರ ಅಂಬೋಣ. ಸತ್ಯಸ್ಥಿತಿ ಹೇಗೂ ಇರಲಿ, ಒಕಿನಾವಾದಲ್ಲಿ 'ಸರಿಯಾಗಿ ಹೋರಾಡಿದೆವು' ಎಂದು ಜಾಪಾನರು ಆತ್ಮತೃಪ್ತಿಯಲ್ಲಿರುವಂತೆ ಅಮೇರಿಕಾನರಿಲ್ಲವೆಂಬುದಕ್ಕೆ ಈ ಕುರಿತು ಅಮೇರಿಕೆಯಿಂದ ಕೇಳಿ ಬರುತ್ತಿರುವ ಟೀಕೆಯೇ ದೃಷ್ಟಾಂತ. ಎಂತಹ ನಷ್ಟಕ್ಕೀಡಾದರೂ ಕೊನೆಯ ವಿಜಯ ಪದ್ಧತಿಯಂತೆ ಮಿತ್ರರಿಗೇನೇ ದೊರೆತಿದೆ. ಕಳೆದ ವರುಷ ಇದೇ ಸಮಯದಲ್ಲಿ ನೋರ್ಮಂಡಿಯಾಕ್ರಮಣ ನಡೆದು ಜರ್ಮನಿಯ ಅದೃಷ್ಟವಲುಗಾಡುತ್ತಿತ್ತು; ಈ ಬಾರಿ ಅದೇ ದುಃಸ್ಥಿತಿ ಜಾಪಾನಿಗೆ ಬಂದಿದೆ. ಒಕಿನಾವಾದ ಗತಿ ಹಾಗಾದರೆ ಬರ್ಮದಲ್ಲಿ ಜಾಪಾನರು ದುರಂತಕ್ಕೀಡಾಗಿದ್ದಾರೆ; ಬೋರ್ನಿಯೋ ಆಕ್ರಮಿಸಲ್ಪಟ್ಟಿದೆ; ಚೀನೀಯರು ಉತ್ತರದಲ್ಲಿ ಶಾಂಘಾಯಿಗೂ ದಕ್ಷಿಣದಲ್ಲಿ ಇಂಡೋ ಚೈನಕ್ಕೂ ಮುಂದೊತ್ತಿದ್ದಾರೆ. ಇಟಲಿ, ಜರ್ಮನಿಗಳನ್ನು ನುಂಗಿದ ಅಪಜಯ ಮೃತ್ಯುವೀಗ ಜಾಪಾನಿನ ಕಡೆಗೆ ಬಾಯ್ದೆರೆದು ಬರುತ್ತಿರುವದು ಸ್ಪಷ್ಟವಾಗಿ ಕಾಣಿಸುತ್ತಿದೆ. ಜಾಪಾನ್ ಮಾಡಿದ ಪ್ರಮಾದವೇನು?

ಒಳಿತು–ಕೆಡುಕು, ಲಾಭ–ನಷ್ಟ, ಸರಿ–ತಪ್ಪುಗಳನ್ನು ಪರಿಣಾಮವನ್ನು ಕಂಡೇ ತಿಳಿಯಬೇಕಲ್ಲದೆ ಮಧ್ಯಾವಧಿಯಲ್ಲಲ್ಲ "ಅಮರುಳ ಹಿಟ್ಲರ್ ರಶ್ಯದ ಮೇಲೆ ನೆಗೆದು ಕೆಲಸ ಕೆಡಿಸಿದ. ಜಿಬ್ರಾಲ್ಟರನ್ನು ವಶಪಡಿಸಿಕೊಂಡು ಬ್ರಿಟಿಷ್ ದ್ವೀಪಗಳನ್ನಾಕ್ರಮಿಸಿಕೊಳ್ಳದೆ ಬಿಟ್ಟುದೇ ಆತನಿಂದಾದ ಪ್ರಮಾದ"—ಎಂದು ಈಗ ಕೈದಿಯಾಗಿರುವ ಹರ್ಮಾನ್ ಗೋರಿಂಗನಂದಿದ್ದಾನೆ. ಈ ವಿಮರ್ಶೆಯನ್ನು ಕೇಳಿ 'ನಿಜ; ನಿಜ!' ಎಂದು ಸೈಗುಟ್ಟುವವರಿರಬಹುದು. ಆದರೆ ಪೂರ್ವ ಗಡಿಯಲ್ಲಿ ನೊಂಚು ಹಾಕುತ್ತಿದ್ದ ಅತಿಪ್ರಬಲ ಕೆಂಪು ಸೇನೆಯು, ಹಿಟ್ಲರನು ಪಶ್ಚಿಮ ಭಾಗದ ಕಾರ್ಯ ಮುಗಿಸಿ ಭೇತಾಳನಾಗಿ ಬೆಳೆದು ತನ್ನತ್ತ ತಿರುಗುವ ವರೆಗೂ ಕೈಕಟ್ಟಿ ಸುಮ್ಮಗೆ ನಿಲ್ಲುವದು ಸಂಭವನೀಯವಿತ್ತೇ? ಸೋತವರನ್ನು ಹೆಡ್ಡರೆಂದು ರುಜುಪಡಿಸುವ ಇಂತಹ ವಾದಗಳು ನಿರರ್ಥಕವೇ ಸರಿ. ಇದೇ ಮಾದರಿಯ ಸುಲಭ ಚಾತುರ್ಯವೊಂದನ್ನು ಜನರಲ್ ಡಿ- ಗೋಲೆಯವರೂ ಪ್ರದರ್ಶಿಸಿದ್ದಾರೆ. ಮಾರ್ಶಲ್ ಪಿಟೇನರು ಜರ್ಮನರಿಗೆ ಶರಣು ಹೋದುದು ಅಚಾತುರ್ಯ; ಫ್ರಾನ್ಸಿನಲ್ಲಿ ಪರಾಭವವಾದರೂ ಫ್ರೆಂಚ್ ಸೇನೆಗಳನ್ನು ಉತ್ತರಾಫ್ರಿಕಕ್ಕೆ ಸಾಗಿಸಿ ಹೋರಾಟ ಮುಂದೊತ್ತಲು ಸಾಧ್ಯವಿತ್ತು ಎಂದು ಡಿ. ಗೋಲೆಯವರ ವಾದ. ಆದರೆ ಫ್ರಾನ್ಸಿನಲ್ಲಿದ್ದ ಅರ್ಧ ಮಿಲಿಯ ಸೇನೆಯನ್ನು ಉತ್ತರಾಫ್ರಿಕಕ್ಕೆ ಹೊರಡಿಸುವ ಹೆಬ್ಬಾಗಿಲುಗಳಾಗಿದ್ದ ಮಾರ್ಸೇಲ್ಸ್ ಮತ್ತು ಟುಲೋನುಗಳಿಗೆ ನಾಜೀ ಸೇನೆಗಳು ವಾಯುವೇಗದಿಂದ ಬಂದು ಮುಟ್ಟಿದ್ದುವೆಂಬುದನ್ನೂ, ಈ ಸೇನೆಗಳನ್ನೊಯ್ಯಲು ಫ್ರೆಂಚ್ ಬಂದರಗಳಿಗೆ ಹಡಗಗಳನ್ನು ಕಳುಹುವ ಎದೆಗಾರಿಕೆ ಮಿ. ಚರ್ಚಿಲ್ಲರಿಗೆ ಕೂಡಾ ಇರಲಿಲ್ಲವೆಂಬುದನ್ನೂ ಡಿ. ಗೋಲೆ ಹೇಳುವದಿಲ್ಲ—ಅನ್ಯರನ್ನು ಅಪರಾಧಿಗಳಾಗಿ ಮಾಡಿಯೇ ತಾವು ನ್ಯಾಯವಾದಿಗಳೆನ್ನಿಸಬೇಕಾದವರಿಗೆ ಸತ್ಯ ಮಾತಾಡಲಾಗುವದಿಲ್ಲ!

ಅದೇ ರೀತಿ ಜಾಪಾನರು ಮಾಡಿದ ತಪ್ಪನ್ನೂ ಹೇಳುವ ಕಾಲ ಬರಬಹುದು. ಬ್ರಿಟಿಷ್-ಹಿಂದೀ ಸೇನೆಗಳು ಬರ್ಮಾ ಬಿಟ್ಟು ಓಡಿಬಂದಾಗ, ಜಪಾನರು ಹಿಂದೂದೇಶದ ದಕ್ಷಿಣ ತುದಿವರೆಗೂ ಓಡಿಸಿಕೊಂಡು ಬಾರದೆ ಪ್ರಮಾದ ಮಾಡಿದರೆನ್ನಬಹುದು; ಅಥವ- ಬರ್ಮಾ, ಮಲಯಗಳ ವರೆಗೂ ಕಾಲುನೀಡಿ, ತಮ್ಮ ಶಕ್ತಿಯನ್ನು ವಿಸ್ತಾರಕ್ಕೆ ಚದರಿಸಿ ತಪ್ಪಿಬಿದ್ದರೆನ್ನಬಹುದು. ಆದರೆ 'ಆದುದೆಲ್ಲಾ ಆಗುವಂತಹದೇ' ಎಂಬುದೊಂದೇ ಸರಿಯಾದ ವಾದ. ತಾವಾಕ್ರಮಿಸಿಕೊಂಡುದಾವುದೂ ತಮ್ಮ ಪಾಲಿನ ಸ್ಥಿರಾಸ್ತಿಗಳಲ್ಲವೆಂಬುದನ್ನು ದೂರದರ್ಶಿಗಳಾದ ಜಾಪಾನರು ಆಗಲೇ ಊಹಿಸಿರಬೇಕು. ಹಿಂದುಸ್ಥಾನದ ಆಕ್ರಮಣವು ಬರ್ಮಾಕ್ರಮಣಕ್ಕಿಂತ ಪ್ರಯಾಸವಿದ್ದಂತೆಯೇ, ಸಂದರ್ಭ ಬಂದಾಗ ಇಲ್ಲಿಂದ ಹಿಂದೆಗೆಯುವದೂ ಕಷ್ಟವೆಂಬುದರಿಂದಲೇ ಜಾಪಾನರಾದಿನ ಗಡಿ ದಾಟಲು ಹಿಂಜರಿದಿರಬಹುದು. ಈಗ ಆ ಸಗತ್ಯ ನಷ್ಟಕ್ಕೀಡಾಗದೆಯೇ ಬರ್ಮದಿಂದ ಆರಂಭಿಸಿ ಸಿಂಗಾಪುರದ ವರೆಗೂ ಹಿಂದೆಗೆಯುವ ಸಿದ್ಧತೆಯಲ್ಲಿದ್ದಾರೆ. ಇದುವರೆಗೆ ಈ ಸ್ಥಳಗಳನ್ನಾಕ್ರಮಿಸಿ ಕುಳಿತುದರಿಂದ ಜಾಪಾನರಿಗೆ ಅತ್ಯುಪಯೋಗಿ ಸಾಮಾಗ್ರಿಗಳು ದೊರೆತಿವೆ. ಇವೆಲ್ಲಾ ಅನುಕೂಲತೆಗಳ ಬಲದಿಂದ ಮೂಲನೆಲ ಅಥವಾ ಅನುಕೂಲ ನೆಲೆಯಲ್ಲಿ ನಿಂತು ಜಾಪಾನರು ಕೊನೆಯ ವರೆಗೆ ಹೋರಾಡಲಿದ್ದಾರೆ. ಆದ್ದರಿಂದ ಜಾಪಾನರಂತಹ ಕಟ್ಟುಗ್ರ ಯೋಧರು ಮುಂದೊಮ್ಮೆ-ಹಿಂದೊಮ್ಮೆ ಹೆಜ್ಜೆಯಿಟ್ಟಲ್ಲಿ ಅದು ಕೇವಲ ಭರತ-ಇಳಿತಗಳೆಂದು ತಿಳಿಯಬೇಕು; ಅವರ ಸಮುದ್ರ ಸಮಾನ ಶಕ್ತಿಯು ಈ ಏರಿಳಿತಗಳಿಂದತುಂಬದೆ-ಬಣಗದೆ ಇದ್ದಂತೆ ಇದೆಯೆಂದೂ, ಹಿಂದೀಯರ ಮನವೊಲಿಸಲು ಬ್ರಿಟಿಷ್ ಸರಕಾರವೀಗ ಮುಂದಾಗಿರುವುದಕ್ಕೆ ಇದೂ ಒಂದು ಕಾರಣವೆಂದೂ ತಿಳಿದಿರಬೇಕು.

ವೈಸರಾಯೀ ವೇವೆಲರೊಡನೆ ಅಜಾದ್, ಗಾಂಧೀ, ಜಿನ್ನರ ಭೇಟಿ

ಅಜಾದರು—

ಪೂರ್ವ ನಿಶ್ಚಯದಂತೆ ತಾ. 24ರಲ್ಲಿ ಮೌಲಾನಾ ಅಜಾದ್, ಗಾಂಧಿಜೀ, ಮಿ. ಜಿನ್ನರು ವೈಸರಾಯೀ ವೇವೆಲರೊಡನೆ ಖಾಸಗೀ ಸಂಭಾಷಣೆ ನಡೆಸಿದ್ದಾರೆ. ಮೌ ಅಜಾದರು ಪೂರ್ವಾಹ್ನ 10-30ಕ್ಕೆ ವೈಸರಾಯಿ ಭವನದಲ್ಲಿ ವೇವೆಲರೊಡನೆ 1½ ಘಂಟೆ ಸಂಭಾಷಿಸಿದರು. ಪಂಡಿತ ಗೋವಿಂದವಲ್ಲಭ ಪಂತರು ಅವರ ನಡುವೆ ಭಾಷಾಂತರಕಾರರಾಗಿದ್ದರು. ಮರಳಿ ಬಂದೊಡನೆ "ನೀವು ಸುರಕ್ಷಿತವಾಗಿ ಮರಳಿದಿರಾ?" ಎಂದು ಪ್ರಶ್ನಿಸಲ್ಪಟ್ಟಾಗ "ನಾನು ಯಾವಾಗಲೂ ಸುರಕ್ಷಿತನಾಗಿಯೇ ಮರಳುತ್ತೇನೆ" ಎಂದು ಮೌಲಾನರುತ್ತರಕೊಟ್ಟರಲ್ಲದೆ ಬೇರಾವ ಗುಟ್ಟನ್ನೂ ಬಿಡಲಿಲ್ಲ. ಪಂಡಿತ ಪಂತರು ಕೂಡಲೇ ಮಹಾತ್ಮರನ್ನು ಸಂಧಿಸಿ ಸಂಭಾಷಣೆಯ ಸಾರ ತಿಳಿಸಿದರು.

ಗಾಂಧಿಜೀ—

ಮಹಾತ್ಮರು ರಿಕ್ಷಾ ಹತ್ತಿ ಅಪರಾಹ್ನ 2-45ಕ್ಕೆ ವೈಸರಾಯಿ ಭವನ ಹೊಕ್ಕರು. ಮತ್ತೊಂದು ರಿಕ್ಷದಲ್ಲಿ ಕಾರ್ಯದರ್ಶಿ ಪ್ಯಾರೇಲಾಲರು ಬಂದಿದ್ದರು. ಎರಡು ಘಂಟೆಗಳ ವರೆಗೆ ಗಾಂಧೀ—ವೇವೆಲ್ ಸಂಭಾಷಣೆ ನಡೆಯಿತು. ಬಳಿಕ ಲೇಡಿ ವೇವೆಲರಿಂದ ಕರೆಬಂದುದರಿಂದ ಗಾಂಧಿಜೀ ಅವರೊಂದಿಗೆ ಅರ್ಧ ಘಂಟೆ ಸಂಭಾಷಿಸಿದರು. ವೈಸರಾಯೀ ಭವನದಿಂದ ಹೊರಟಾಗ ದ್ವಾರದಲ್ಲಿ ದರ್ಶನಾಪೇಕ್ಷಿ ಜನತಂಡವು ಕೊಟ್ಟ ಪೀಡೆಯನ್ನು ಸಹಿಸಲಾರದೆ "ನನ್ನ ಕೆಲಸ ನಾನು ಮಾಡಬೇಕೆಂಬ ಮನಸ್ಸು ನಿಮಗಿದ್ದರೆ ನನ್ನನ್ನು ಹೋಗಬಿಡಿ" ಎಂದು ಬಿರುಸಾಗಿ ನುಡಿದರು. ಸಂಪಣಿ ಕೂಡಲೇ ವೈದೆಗೆದು ಹಾದಿಮಾಡಿ ಕೊಟ್ಟಿತಾದರೂ, ಪುನಃ ಪೀಲ್ವಾಯ್ದು ಬಂದುದರಿಂದ ಎಲ್ಲರೂ ಕುಳಿತುಕೊಂಡ ವಿನಹ ಹೆಜ್ಜೆ ಮುಂದಿಡಲಾರೆ' ಎಂದು ಮಹಾತ್ಮರು ಮುಷ್ಕರ ಹಿಡಿದು ನಿಂತುಬಿಟ್ಟರು. ಜನರೆಲ್ಲಾ ಕೂಡಲೇ ಕುಳಿತುಕೊಂಡರು.

ಜಿನ್ನರು—

ಗಾಂಧಿಜೀ ಹೊರಬರುವ ಕೆಲವು ಮಿನಿಟುಗಳಿಗೆ ಮೊದಲೇ-ಸರೀ 5 ಘಂಟೆಗೆ- ಮಿ. ಜಿನ್ನರು ವೈಸರಾಯೀ ಭವನ ಹೊಕ್ಕು 1 ಘಂಟೆ 40 ಮಿನಿಟು ವೇವೆಲ್-ಜಿನ್ನಾ ಮಾತುಕತೆ ನಡೆಯಿತು. ಅವರುಳಿದ್ದ ಸಿಸಿಲ್ ಹೊಟೆಲಿನಿಂದ ಹೊರಡುವಾಗಲೂ ಮರಳುವಾಗಲೂ ಜಯಕಾರ ವೆಬ್ಬಿಸುತ್ತಾ ದೊಡ್ಡ ಜನತಂಡವು ಅವರ ಬೆನ್ನು ಹಿಡಿದಿದ್ದಿತು. ಹಿಂದಿರುಗಿದ ಕೂಡಲೇ ಅಲ್ಲಿ ಬಂದಿದ್ದ ಇತರ ಲೀಗ್ ಪ್ರಮುಖರೊಡನೆ ಮಿ. ಜಿನ್ನರು ಗಾಢ ಪರ್ಯಾಲೋಚನೆಗೆ ತೊಡಗಿದರು.

ಗಾಂಧೀ-ಅಜಾದ್

ವೈಸರಾಯರ ಭವನದಿಂದ ಮರಳಿದ ಗಾಂಧಿಜೀಯೊಡನೆ ಮಾತಾಡುವದಕ್ಕಾಗಿ ಮೌಲಾನಾ ಅಜಾದರು ಅಮೃತ ಕೌರರ 'ಮಾನೋರ್ ವಿಲ್ಲೆ' ಭವನಕ್ಕೆ ಬಂದು ಕಾದಿದ್ದರು. ಆದರೆ ಗಾಂಧಿಜೀಯ ಆಗಮನವು ನಿರೀಕ್ಷೆಗಿಂತ ತಡವಾಯಿತು. ಮೌಲಾನರು ರಿಕ್ಷಾ ಹತ್ತಿ ಹಿಂದಿರುಗುವಾಗ ಹಾದಿಯಲ್ಲಿ ಗಾಂಧಿಜೀ ಬರುತ್ತಿರುವುದನ್ನು ಕಂಡು ಅತ್ತ ಧಾವಿಸಿದರು. ಇಬ್ಬರೂ ಮಾತಾಡಿಕೊಂಡು ಮೌಲಾನರೂ ಗಾಂಧಿಯವರೊಂದಿಗೆ ಪುನಃ 'ಮನೋರ್ ವಿಲ್ಲೆ'ಗೆ ಬಂದು 25 ಮಿನಿಟು ಗಾಂಧೀ-ಅಜಾದ್ ಪರ್ಯಾಲೋಚನೆ ನಡೆಯಿತು.

ಏನು ನಡೆಯಿತು?—

ಯಾರಿಗೂ ತಿಳಿಯದು. ಭುಲಾಭಾಯಿ, ರಾಜಾಜೀ ಮತ್ತಿತರ ಕಾಂಗ್ರೆಸ್ ಪ್ರಮುಖರೊಂದಿಗೆ ಗಾಂಧೀ ಅಜಾದರು ಮಾತುಕತೆ ನಡೆಸುತಿದ್ದಾರೆ. ಮೌಲಾನರು ಮರುದಿನ ಮುಂಜಾನೆ ಮತ್ತೊಮ್ಮೆ ವೈಸರಾಯರನ್ನು ಭೇಟಿಯಾಗಿ ಬಂದಿದ್ದಾರೆ. ಎಲ್ಲವೂ ಅತ್ಯಂತ ಗುಪ್ತವಾಗಿ ನಡೆದಿದೆ. ವೈಸರಾಯ ವೇವೆಲರು ಮೂವರೊಡನೆಯೂ ಅತ್ಯಂತ ಹಾರ್ದಿಕವಾಗಿ ಮಾತಾಡಿದರೆಂದು ತಿಳಿದುಬರುತ್ತದೆ. ವೈಸರಾಯೀ ಭವನದಿಂದ ಮರಳುವಾಗ ತ್ರಿಮೂರ್ತಿಗಳೂ ಉಲ್ಲಸಿತರಾಗಿದ್ದರು. ಪತ್ರಿಕಾ ಪ್ರತಿನಿಧಿಗಳು ಬಾಯಿಬಿಡಿಸಲು ಹೆಣಗಾಡಿದರೂ ಫಲ ಬರಲಿಲ್ಲ.

★ ಸಿಮ್ಲಾ ಸಮ್ಮೇಲನಾರಂಭ! ★

ಗಾಂಧಿಜೀಯನ್ನುಳಿದು ಮಿಕ್ಕವರೆಲ್ಲರೂ ಹಾಜರಿ.

ಸಭಾಸ್ಥಳ ಸಿಮ್ಲಾ

ಸದ್ಯ ಅಖಿಲ ಭಾರತದ ಹೃದಯವೂ ಇಡೀ ಜಗತ್ತಿನ ದೃಷ್ಟಿಯೂ ಸೆರೆಸಿಕ್ಕಿರುವ ಸಿಮ್ಲಾದ ವೈಸರಾಯೀ ಭವನದಲ್ಲಿ ಇದೇ ತಾ. 25-6-45ನೇ ಸೋಮವಾರ ಪೂರ್ವಾಹ್ನ 11-30ಕ್ಕೆ ಭಾರತೀಯ ಧುರೀಣರ ಸಮ್ಮೇಲನ ಆರಂಭವಾಗಿದೆ. ಸಿಮ್ಲಾವು ಹಿಮಾಲಯದ ತಪ್ಪಲಲ್ಲಿರುವ 7000 ಅಡಿ ಎತ್ತರದ ಪ್ರಕೃತಿ ಸೌಂದರ್ಯ ಶೋಭಿತ ಶಿಲ್ಪಸ್ಥಾನ. ಹಿಂದೀ ನ್ಯಾಯ ವಿಧಾಯಕ ಸಭಾ ಸಂಬಂಧದ ಹಲವು ಚರಿತ್ರಾರ್ಹ ದಾಖಲೆಗಳನ್ನು ನಿರ್ಮಿಸಿರುವ ನೆಲೆ ಅಲ್ಲಿಯ ಒಂದು ಗುಡ್ಡ ಭಾಗದಲ್ಲಿದ್ದು ಪರ್ವತ ಶಿಖರಗಳ ರಮ್ಯ ನೋಟಕ್ಕೆದಿರಾಗಿ ನಿಂತಿರುವ ವೈಸರಾಯಿ ಭವನವೇ ಈ ಚರಿತ್ರಾರ್ಹ ಚಕ್ರಗೋಷ್ಠಿಯ ಸಭಾಂಗಣ. ಶಾಂತಿ ಕಾಲದಲ್ಲಿ ಕೇಂದ್ರ ಸರಕಾರವು ಬೇಸಿಗೆಗೆ ಯಾವಾಗಲೂ ಸಿಮ್ಲಾಕ್ಕೆ ವರ್ಗಾಯಿಸಲ್ಪಡುವ ಸಂಪ್ರದಾಯವಿದ್ದಿತು. ಆದರೆ ಯುದ್ಧಾರಂಭದಿಂದ ಅಪಾಯ ನಿರೀಕ್ಷೆಯಿಂದಾಗಿ ಆ ಕ್ರಮವನ್ನು ಬಿಟ್ಟಿದ್ದಿತು. ಈ ವರುಷ ನವದಿಲ್ಲಿ ಮುಂತಾದ ಮುಖ್ಯ ನಗರಗಳಲ್ಲಿರುವ ಸೆಖೆಯ ದೆಸೆಯಿಂದಾಗಿ ವೈಸರಾಯರು ಈ ತಂಪು ನೆಲೆಯನ್ನೇ ಸಮ್ಮೇಲನಕ್ಕಾಗಿ ಆರಿಸಿಕೊಂಡಿದ್ದರು.

ಪ್ರತಿನಿಧಿಗಳ ಆಗಮನ

ತಾ. 25ನೇ ಮುಂಜಾನೆಯಿಂದಲೂ ವೈಸರಾಯೀ ಭವನದ ಹೊರದ್ವಾರದಲ್ಲಿ ಎಲ್ಲಾ ಜಾತಿ, ಮತ, ಅಭಿಪ್ರಾಯಗಳ ಜನರು ತಂಡ ತಂಡವಾಗಿ ನೆರೆದು ಧುರೀಣರಾಗಮನವನ್ನು ಹಾರೈಸುತಿದ್ದರು. ಪ್ರತಿನಿಧಿಗಳು ಬಂದೊಡನೆ ಈ ಜನತಂಡದಿಂದ ಜೈಕಾರವೇಳುತಿತ್ತು. ಪ್ರಥಮಾಗಮನವೆಂದರೆ ಕೇಂದ್ರ ಎಸೆಂಬ್ಲಿಯ ಯುರೋಪಿಯನ್ ಪಕ್ಷ ಪ್ರಮುಖರಾದ ಸರ್ ಹೆನ್ರಿ ರಿಚಾರ್ಡ್‌ಸನವರದು. ಅವರ ಬೆನ್ನಲ್ಲೇ ಪಂಜಾಬಿನ ಪ್ರಧಾನಿ ಮಾಲಿಕ್ ಕಿಝೂರ್ ಹಯಾತ್ ಖಾನ್‌ತಿವಾನಾ ಬಂದರು. ತಿವಾನರು ಮಿಕ್ಕ ಪ್ರತಿನಿಧಿಗಳಂತೆಬಾರದೆ ಕಾರು ಹತ್ತಿಕೊಂಡು ಬಂದರು. ಶ್ರೀ ಭುಲಾಭಾಯಿ ದೇಸಾಯಿಗಳು ಒಳಹೊಕ್ಕವರಲ್ಲಿ ನಾಲ್ಕನೆಯವರು. ಅವರು ಬಂದೊಡನೆ ಜನಸಂದಣಿಯ ಜಯರವ ವಿಶೇಷವಾಯಿತು. ದೇಸಾಯಿಗಳನ್ನು ಕಂಡು ಘೋಷಿಸುವದರಲ್ಲೇ ಇದ್ದ ಜನತೆಗೆ ಆ ಗದ್ದಲದಲ್ಲಿ ಕಿರಿಮೂರ್ತಿ ರಾಜಾಜಿಯು ಮೆಲ್ಲಗೆ ಒಳಗೆ ನುಸುಳಿದುದು ಲಕ್ಷ್ಯಕ್ಕೆ ಬರಲೇ ಇಲ್ಲ. ಗಡಿನಾಡಿನ ಪ್ರಧಾನಿ ಡಾ| ಖಾನ್‌ಸಾಹೇಬರು ಬರುತಿದ್ದಾಗ, ಈ ಪಠಾಣ ಪ್ರಮುಖನಿಂದ ಸಂದಣಿಯು ವಿಶೇಷವಾಗಿ ಆಕರ್ಷಿಸಲ್ಪಟ್ಟು ಜಯನಾದವೆಬ್ಬಿಸಿತು.

ಸಂಭ್ರಮದ ಸವಾರಿಗಳು

ಆ ಮೇಲೆ ಕೇಂದ್ರ ಎಸೆಂಬ್ಲಿಯ ರಾಷ್ಟ್ರೀಯ ಪಕ್ಷದ ನಾಯಕ ಶ್ರೀ. ಪಿ. ಎನ್. ಬೆನರ್ಜಿಯವರ ಆಗಮನ. ಸಿಖ್ ನಾಯಕ ಮಾಸ್ಟರ್ ತಾರಾಸಿಂಗರು ಒರ್ವ ಸೇನಾನಿಯ ವೈಭವದೊಡನೆ ಬಂದಿದ್ದರು. ಸಮವಸ್ತ್ರಧಾರಿಗಳಾದ, ತಮ್ಮ 'ಕಿರ್ಪಾನ' ಮತ್ತು ಸಿಖ್ ಧ್ವಜವನ್ನು ಧರಿಸಿಕೊಂಡಿದ್ದ, ಸಿಖ್ ಸ್ವಯಂಸೇವಕ ದಳವೊಂದು ಅವರನ್ನು ಮೆರವಣಿಗೆಯಲ್ಲಿ ತಂದು ಮುಟ್ಟಿಸಿತು. ತಾರಾ ಸಿಂಗರಿಗಾಗಿ ಎಬ್ಬಿಸುತಿದ್ದ ಜೈಕಾರಗಳು ನಿಲ್ಲುತ್ತವೆನ್ನುವಾಗಲೇ ಕಾಂಗ್ರೆಸ್ ಪ್ರತಿನಿಧಿಗಳ ಸವಾರಿ ಚಿತ್ತೈಸಿತು. ಮುಂಬಾಗದಲ್ಲಿ ಮೌಲಾನಾ ಆಜಾದರು, ಅವರನ್ನನುಸರಿಸಿ ರವಿಶಂಕರಶುಕ್ಲ, ಪಂಡಿತ ಗೋವಿಂದ ವಲ್ಲಭ ಪಂತ್, ಬಿ. ಜಿ. ಖೇರ್, ರಾಜಬಹದೂರ್ ಗೋವಿಂದ ಲಾಲ್ ಶಿವಲಾಲ್ ಮೋತಿಲಾಲ್, ಶ್ರೀ ಕೃಷ್ಣ ಸಿಂಹ ಬರುತ್ತಿದ್ದರು. ಈ ಕಾಂಗ್ರೆಸ್ ಸಾಲನ್ನು ಕಂಡೊಡನೆ ಜನತಂಡವು ಅತಿಗದ್ದಲದ ಜಯನಾದವೆಬ್ಬಿಸಿತು.

ಸರ್ವರೂ ಹಾಜರಿ

ಅನಂತರ ಬಂದುದು ಮುಸ್ಲಿಂ ಲೀಗ್ ಪ್ರತಿನಿಧಿಗಳು. ಮುಂಭಾಗದಲ್ಲಿ ಮಿ. ಜಿನ್ನಾ; ಹಿಂಗಡೆಯಲ್ಲಿ ಅನುಕ್ರಮವಾಗಿ ನವಾಬಝಾದಾ ಲಿಯಾಖತ್ ಅಲೀ ಖಾನ್, ಮಿ. ಹುಸ್ಸೇನ್ ಇಮಾಮ್, ಸರ್ ಮುಹಮ್ಮದ್ ಸಾದುಲ್ಲಾ, ಸರ್ ಗುಲಾಮ್ ಹುಸ್ಸೇನ್ ಹಿದಯತುಲ್ಲಾ ಮತ್ತು ಸರ್ ನಾಜಿಮುದ್ದೀನ್. ಸಿಸಿಲ್ ಹೋಟೆಲಿನಿಂದ ಅಲ್ಲಿ ವರೆಗೂ ಲೀಗ್ ಸ್ವಯಂಸೇವಕರು ಮಿ. ಜಿನ್ನರನ್ನು ಮೆರವಣಿಗೆಯಿಂದ ತಂದಿದ್ದರು. ಇವರು ವೈಸರಾಯೀ ಭವನದ ದ್ವಾರಕ್ಕೆ ಬಂದಾಗ ಪ್ರೇಕ್ಷಕ ತಂಡದ ಅತಿದೊಡ್ಡ ಜಯರವವೆದ್ದಿತು. ಸಭೆಗಾಗಮಿಸುವ ಮೊದಲು ಕಾಂಗ್ರೆಸ್ ಪ್ರತಿನಿಧಿಗಳು ಅಧ್ಯಕ್ಷರ ಸನ್ನಿಧಿಯಲ್ಲಿ ಕೂಡಿ ಪರ್ಯಾಲೋಚನೆ ನಡೆಸಿದ್ದರು. ಲೀಗ್ ಪ್ರತಿನಿಧಿಗಳೂ ಮಿ. ಜಿನ್ನರೊಡನೆ ಯೋಚಿಸಿ ಸಲಹೆ ಪಡೆದಿದ್ದರು. 'ಸಮ್ಮೇಲನ ಸೋಲಬಾರದು' ಎಂಬುದೇ ಎಲ್ಲರ ಶಪಥವಿರುವಂತೆ ಕಾಣುತ್ತಿತ್ತು.

ಸಮ್ಮೇಲನಾರಂಭ

11-30 ಘಂಟೆಗೆ ಸರಿಯಾಗಿ ಸಮ್ಮೇಲನಾರಂಭವಾಯಿತು. ಗಾಂಧಿಜೀಯೊಬ್ಬರನ್ನುಳಿದು ಮಿಕ್ಕ ಎಲ್ಲಾ ಪ್ರತಿನಿಧಿಗಳೂ ಹಾಜರಿದ್ದರು. ಸಮ್ಮೇಲನ ಕರೆದವರೂ, ಸಮ್ಮೇಲನಾಧ್ಯಕ್ಷರೂ ಆದ ವೈಸರಾಯ್ ಲೋರ್ಡ್ ವೇವೆಲರು ಸರದಿ ಪ್ರಕಾರ ಪ್ರತಿಯೊಬ್ಬ ಸದಸ್ಯರಿಗೂ ಹಸ್ತಲಾಘವ ಕೊಟ್ಟು ಕುಶಲ ಸಂಭಾಷಣೆ ನಡೆಸುತ್ತಾ ಬಂದು, ನೇರಾಗಿ ಸಭಾಂಗಣದ ಮುಂಭಾಗದ ಹಸುರು ನೆಲವನ್ನು ದಾಟಿ ಪತ್ರಿಕಾ ಪ್ರತಿನಿಧಿಗಳ ದೊಡ್ಡ ಗುಂಪು ಕುಳಿತಲ್ಲಿಗೆ ಹೋಗಿ, ಸುದ್ದಿಯ ವೇಗಕ್ಕೆ ಕಡಿವಾಣ ಹಾಕಿಕೊಳ್ಳಬೇಕೆಂದು ಒತ್ತಿ ಹೇಳಿದರು. ಪ್ರತಿನಿಧಿಗಳೆಲ್ಲರನ್ನೂ ಸ್ವಾಗತಿಸಿ ಲೋರ್ಡ್ ವೇವೆಲರಿತ್ತ ಪ್ರಾರಂಭ ಭಾಷಣವು ಹಿಂದೂದೇಶದ ಮೇಲೆ ಅವರಿಗಿರುವ ಅಭಿಮಾನ ಮತ್ತು ಹಿಂದೀ ಮುಖಂಡರ ಮೇಲಿರುವ ಗೆಳೆತನಗಳ ದ್ಯೋತಕವಾಗಿತ್ತು. ಎಲ್ಲರೂ ಒಗ್ಗಟ್ಟಾಗಿ ತನಗೆ ಸಹಕಾರವೀಯಬೇಕೆಂದೂ, ತಾನವರಿಗೆ ಮಾರ್ಗದರ್ಶಿಯಾಗಿ ರಾಷ್ಟ್ರಾಭ್ಯುದಯದ ಗುರಿಮುಟ್ಟಿಸುವೆನೆಂದೂ ವೇವೆಲರು ಆಗ್ರಹದೊಡನೆ ಎಚ್ಚರಿಸಿಕೊಂಡರು.

ಆ ಮೇಲೆ—

ಸಮ್ಮೇಲನದ ಪ್ರಥಮ ಸಭೆ ಘಂಟೆ 1ಕ್ಕೆ ಮುಗಿದು, ಅಪರಾಹ್ನ 2-30ಕ್ಕೆ ಮತ್ತೆ ಸೇರಿತು. ಪ್ರಾಮುಖ್ಯ ವಿಷಯಗಳ ಪರ್ಯಾಲೋಚನೆಯೇನೂ ನಡೆಯಲಿಲ್ಲ. ಕಾಂಗ್ರೆಸ್-ಲೀಗ್ ಪ್ರಮುಖರೊಡನೆ ಮೊದಲ ದಿನ ನಡೆಸಿದ್ದ ಖಾಸಗೀ ಸಂಭಾಷಣೆಗಳು ಅಪೂರ್ಣವಿದ್ದುದರಿಂದ ಅವುಗಳ ಸ್ಪಷ್ಟೀಕರಣಕ್ಕಾಗಿ ಸಮ್ಮೇಲನವನ್ನು ಬುಧವಾರಕ್ಕೆ ಮುಂದೂಡಲಾಯಿತು. ತಾ 26ರಲ್ಲಿ ಪಂಡಿತ ಗೋವಿಂದ ವಲ್ಲಭ ಪಂತರು ಮಿ. ಜಿನ್ನರೊಡನೆ ಮುಕ್ಕಾಲು ಘಂಟೆ ಸಂಭಾಷಿಸಿ, ಅದರ ಸಾರಾಂಶವನ್ನು ಮಹಾತ್ಮ, ಮೌಲಾನರಿಗೆ ತಿಳಿಸಿದ್ದಾರೆ. ಚರ್ಚಾಸ್ಪದ ವಿಷಯಗಳನ್ನು ಸಮ್ಮೇಲನದಲ್ಲೇ ಮುಂದಿಟ್ಟು ನಿರ್ಧರಿಸಿಕೊಳ್ಳಬೇಕೆಂದು ವೇವೆಲರ ಸೂಚನೆಯಿರುವಂತಿದೆ. ಎಲ್ಲಾ ಮಾತುಕತೆಗಳನ್ನೂ ಗುಪ್ತವಾಗಿಡಬೇಕೆಂದು ವೈಸರಾಯೀ ಬಯಕೆಗೆ ಪ್ರತಿನಿಧಿಗಳೂ ಸಮ್ಮತಿಸಿದ್ದಾರೆ. ಆದ್ದರಿಂದ ಸಮ್ಮೇಲನಕ್ಕೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶ ದೊರೆಯಲಾರದೆಂಬ ಭಯವೆದ್ದಿದೆ.

ಗಾಂಧಿಜಿಯೇಕೆ ಗೈರುಹಾಜರಿ?

ಸಮ್ಮೇಲನಕ್ಕೆ ತಾನು ಹಾಜರಾಗುವದಿಲ್ಲವೆಂದೇ ಗಾಂಧಿಯವರು ನಿರ್ಧರಿಸಿದ್ದಾರೆ. ತನಗೆ ಯಾವುದೊಂದು ಸಂಸ್ಥೆಯ ಪ್ರಾತಿನಿಧ್ಯವೂ ಇಲ್ಲವಾದ್ದರಿಂದ ತಾನು ಕಾಂಗ್ರೆಸ್ ಅಧ್ಯಕ್ಷರ ಹೆಸರನ್ನು ಶಿಫಾರಸು ಮಾಡಿದ್ದೆ, ಈಗ ಅವರಿಗೆ ಸ್ಥಾನ ದೊರೆತಿರುವದರಿಂದ ತಾನು ಹಾಜರಾಗಲಾರೆನೆಂದೂ ಅವಶ್ಯ ಬಿದ್ದಾಗಲೆಲ್ಲಾ ವೈಸರಾಯರಿಗಾಗಲೀ, ಕಾಂಗ್ರೆಸಿಗರಿಗಾಗಲೀ, ಇತರ ಪಕ್ಷೀಯರಿಗಾಗಲೀ ಸಲಹೆ ಕೊಡಲು ಸಿಗುವೆನೆಂದೂ ಸಂಭಾಷಣೆಯ ವೇಳೆ ಲೋರ್ಡ್ ವೇವೆಲರಿಗವರು ತಿಳಿಸಿದ್ದರು. ವೈಸರಾಯರು ಪತ್ರ ಬರೆದ ಮೂಲಕ ಸಮ್ಮತಿಸಿ, ಸಮ್ಮೇಲನ ಮುಗಿಯುವ ವರೆಗೂ ಸಿಮ್ಲಾದಲ್ಲೇ ನಿಲ್ಲಬೇಕೆಂದು ಸೂಚಿಸಿದ್ದಾರೆ.

ವಿದೇಶ ವಾರ್ತೆಗಳು

ಇಂಗ್ಲೆಂಡಿನಲ್ಲಿ ಚುನಾವಣೆಯ ಹೋರಾಟ ಅತಿ ಬಿರುಸಾಗಿ ಸಾಗುತ್ತಿದೆ. ಅಮೇರಿಯವರ ವಿರುದ್ಧವಾಗಿ ನಿಂತಿರುವ ಶ್ರೀ ದತ್ತರ ಪರವಾಗಿ ಆ ಕ್ಷೇತ್ರದ ತನ್ನ ಉಮೇದ್ವಾರಿಕೆಯನ್ನು ಹಿಂದೆಗೆಯಲು ಲೇಬರ್ ಪಕ್ಷ ನಿರಾಕರಿಸಿದೆ. ಕನ್ಸರ್ವೇಟಿವ್ ಮತ್ತು ಲೇಬರ್ ಪಕ್ಷ ಪ್ರಮುಖರ ಪರಸ್ಪರ ಖಂಡನಾತ್ಮಕ ಪ್ರಚಾರ ಭಾಷಣಗಳಾಗುತ್ತಿವೆ. ಸಮತಾವಾದ ಪದ್ಧತಿಯನ್ನು ಕಟುವಾಗಿ ಖಂಡಿಸಿ, ಮಿ. ಚರ್ಚಿಲರು ಮತ್ತೊಂದು ರಾಷ್ಟ್ರವ್ಯಾಪೀ ಭಾಷಣವಿತ್ತಿದ್ದಾರೆ. ಅಂತರಾಷ್ಟ್ರೀಯ ಎಸೆಂಬ್ಲಿಯ ಹಕ್ಕುಬದ್ಧತೆಗಳ ಕುರಿತು ರಶ್ಯವು ಮುಂತಂದಿರುವ ಸೂಚನೆಯ ಮೇಲೆ ಫ್ರಿಸ್ಕೋ ಸಮ್ಮೇಲನದಲ್ಲಿ ತೀವ್ರ ಚರ್ಚೆಗಳಾಗುತ್ತಿವೆ. ಬೆಲ್ಜಿಯಮಿನ ಜನಮತಕ್ಕೆ ವಿರುದ್ಧವಾಗಿ ಅಲ್ಲಿಯ ರಾಜಾ ಲಿಯೊಪೋಲ್ಡರು ಬ್ರುಸೆಲ್ಸಿಗೆ ಮರಳುವ ನಿರ್ಧಾರ ಮಾಡಿದ್ದರಿಂದ ಗಲಭೆಯೆದ್ದಿದೆ. ಲಿಯೊಪೋಲ್ಡರಿಗೆ ಹಿಂದಿನಿಂದ ಚರ್ಚಿಲರ ಬೆಂಬಲವಿರಬೇಕೆಂಬ ಊಹೆಯಿದೆ. ಪೋಲೆಂಡಿನ ಸರಕಾರವನ್ನು ರಶ್ಯದ ಧೋರಣೆಗನುಸಾರವಾಗಿ ಸುಧಾರಿಸಲಾಗಿದೆ. ಜಾಪಾನ್ ಯುದ್ಧರಂಗಗಳಿಂದ ವಿಶೇಷ ವಾರ್ತೆಗಳಿಲ್ಲ.

ಕಟಪಾಡಿ ... ಪ್ರತ್ರೀನಾರಾಯಣ ಗುರುಸ್ವಾಮಿ ... [illegible] ... ಸಂಘ[illegible] ... ಮಂದಿರದ ಸಂಸ್ಥಾಪನ ಸಭೆಯು ತಾ ೦೫-೦೬-೪೫ನೇ ರವಿವಾರ ಅಪರಾಹ್ನ ಗಂಟೆ ೩ಕ್ಕೆ ಸಮಿತಿಯ ಭವನದಲ್ಲಿ ಡಾಕ್ಟರ್ ಕೆ ಎಸ್ ಕುಮಾರ್ ಉಡುಪಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕೊಯಮುತ್ತೂರು ಕರ್ನಾಟಕ ಸಂಘ—ದ ಸಾಮಾನ್ಯ ಕೂಟ ದಿನಾಚರಣೆಯು ತಾ ... ನೇ ಆದಿತ್ಯವಾರ ಶ್ರೀ ಬಿ. ಎಸ್. ಶೆಟ್ಟಿ, ಬಿ. ಇ. ಎಕ್ಸಿಕ್ಯೂಟಿವ್ ಇಂ[illegible] ... ಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 24—6—1945ರಿಂದ

ರಣಜಿತ್‌ನವರ

ಪೃಥ್ವಿರಾಜ್, ಮೋನಿಕಾ ದೇಸಾಯಿ, ರಾಮಿಶುಕ್

ಇವರೆಲ್ಲರೂ ನಟಿಸಿರುವ

ಗೌರಿ

ನಂತರ—

ಈಶ್ವರ್ ಪಿಕ್ಚರ್ಸ್‌ನವರ "ಬಾದಲ್"

ಜಹೂರ್ ರಾಜಾ ಮತ್ತು ಪ್ರಮಿಳಾ

NAVAYUGA

The Leading Kannada weekly

Published every Thursday

The best medium for advertisement of every kind

For advt. rates.—

The advt Manager

Navayuga Udipi.

ಬರ್ಮಾ ರಂಗದಿಂದ–

ಭಾರತೀ ಶಿಕ್ಷಣಾಲಯಕ್ಕೆ ಸುಡಾನ್ ಸರಕಾರದ ದ್ರವ್ಯ ಸಹಾಯ

ನವದೆಹಲಿ—ಲಾರ್ಡ್ ವೇವೆಲ್‌ರು ೧೯೪೦ರಲ್ಲಿ ಮಧ್ಯಪ್ರಾಚ್ಯದ ಮುಖ್ಯ ಸೇನಾನಾಯಕರಾಗಿ ಪೂರ್ವ ಆಫ್ರಿಕಾದಲ್ಲಿ ಇಟಲಿ ಚಕ್ರಾಧಿಪತ್ಯದ ಮೇಲೆ ಧಾಳಿಯಿಟ್ಟಾಗ ಸುಡಾನಿನ ರಕ್ಷಣೆಗಾಗಿ ಭಾರತೀಯ ಪಡೆಯವರು ಬಹಳವಾಗಿ ಶ್ರಮಿಸಿದ್ದರು. ಕಡೆಗೆ ಅವರಿಗೆ ಕೆರೆನ್ ಮತ್ತು ಎರಿಟ್ರಿಯಾಗಳಲ್ಲಿ ಸಂಪೂರ್ಣ ಜಯವಾಯಿತು. ಈ ಸಹಾಯದ ನೆನಪಿಗಾಗಿ ಸುಡಾನ್ ಸರಕಾರವು ೧೯೪೧ರಲ್ಲಿ ೧೦೦,೦೦೦ ಪೌಂಡುಗಳನ್ನು ವೈಸ್ರಾಯರ ವಶಕ್ಕೊಪ್ಪಿಸಿತು. ಈಗ ಭಾರತದಲ್ಲಿ ಮಿಲಿಟರಿ ಅಕ್ಯಾಡೆಮಿಯೊಂದನ್ನು ಅಮೇರಿಕಾದ ವೆಸ್ಟ್ ಪಾಯಿಂಟಿನಲ್ಲಿರುವ ವಿದ್ಯಾಲಯದ ಮಾದರಿಯಲ್ಲಿ ಸ್ಥಾಪಿಸಲು ಈ ಹಣವನ್ನು ವಿನಿಯೋಗಿಸಲಾಗುತ್ತದೆಂದು ಕಳೆದ ತಿಂಗಳು ಪ್ರಕಟಿಸಲಾಯಿತು. ಈ ವಿದ್ಯಾಲಯದಲ್ಲಿ ಭಾರತೀಯ ಸೈನ್ಯ, ನೌಕಾ ಮತ್ತು ವಿಮಾನ ಶಾಖೆಗಳಲ್ಲಿ ಅಧಿಕಾರಿಗಳಾಗತಕ್ಕವರಿಗೆ ತಕ್ಕ ಶಿಕ್ಷಣ ಕೊಡತಕ್ಕದ್ದೆಂದು ನಿರ್ಧರಿಸಿದೆ ಈ ಸಂದರ್ಭದಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಬೇಕೆಂದು ಒಂದು ಸಮಿತಿ ಏರ್ಪಟ್ಟಿದೆ. ಇದಕ್ಕೆ ಭಾರತದ ಮುಖ್ಯ ದಂಡ ನಾಯಕರೇ ಅಧ್ಯಕ್ಷರು. ಜನರಲ್ ಸ್ಟಾಫ್ ಮುಖ್ಯಾಧಿಕಾರಿಗಳು, ನೌಕಾ ದಳದ ಫ್ಲಾಗ್ ಆಫೀಸರ್ ಕಮಾಂಡಿಂಗ್, ಏರ್ ಆಫೀಸರ್ ಕಮಾಂಡಿಂಗ್, (ಇಂಡಿಯಾ) ಸೈನ್ಯ ಶಾಖೆಯ ಕಾರ್ಯದರ್ಶಿ, ಇಂಡಿಯಾ ಸರಕಾರದ ವಿದ್ಯಾ ಮಂತ್ರಿ ಮತ್ತು ಸಂಸ್ಥಾನಗಳಿಂದ ಚುನಾಯಿಸಿದ ಇಬ್ಬರು ಸದಸ್ಯರು, ನಾಲ್ವರು ಶಿಕ್ಷಣ ಪ್ರವೀಣರು ಈ ಸಮಿತಿಯಲ್ಲಿರತಕ್ಕದ್ದು.

ಗೆಳೆಯನ ಸಾವಿಗಾಗಿ ಸೇಡು

ಖಂಗರ್ ಸಿಂಗರ ಮಗ ಲಾಲ್ ಸಿಂಗ್ ಮತ್ತು ಲಕ್ಷ್ಮಣ ಸಿಂಗರ ಮಗ ಲಾಲ್ ಸಿಂಗ್-ಇಬ್ಬರೂ ಬಾಲ್ಯ ಸ್ನೇಹಿತರು; ಜೋಧಪುರದಲ್ಲಿ ಒಂದೇ ಹಳ್ಳಿಯವರು. ೧ನೇ ಪಂಜಾಬಿ ದಳಕ್ಕೆ ಏಕ ಕಾಲದಲ್ಲಿ ಸೇರಿದರು. ರಂಗೂನಿಗೆ ೪೦ ಮೈಲಿ ದೂರದಲ್ಲಿ ಜೂನ್ ತಾ. ೨೦ರಲ್ಲಿ ಘೋರ ಯುದ್ಧ ನಡೆಯುತ್ತಿದ್ದಾಗ ಶತ್ರುಗಳ ಗುಂಡಿನ ಸುರಿ ಮಳೆಯಲ್ಲಿ ಇವರಿಬ್ಬರೂ ಲಂಗಜ ಮುನ್ನುಗ್ಗಿದರು. ಲಕ್ಷ್ಮಣ ಸಿಂಗರ ಮಗ ಲಾಲ್ ಸಿಂಗ್ ಮುಂದಕ್ಕೆ ನೆಗೆದು ಶತ್ರುಸೇನೆಗೆ ೧೦ ಗಜ ದೂರದಲ್ಲಿ ತಾವೂ ಸತ್ತು ಬಿದ್ದರು. ಗೆಳೆಯನ ಸಾವನ್ನು ಕಂಡ ಖಂಗರ್ ಸಿಂಗರ ಮಗ ಲಾಲ್ ಸಿಂಗ್ ತಮ್ಮ ದಳಪತಿಯ ಸಮೀಪಕ್ಕೆ ಬಂದು "ನನ್ನ ಸಹೋದರ ಅಲ್ಲಿ ಹತನಾಗಿದ್ದಾನೆ. ನಾನು ಶತ್ರುವಿನ ಮೇಲೆ ಸೇಡು ತೀರಿಸಿಕೊಳ್ಳಲೇ ಬೇಕು" ಎಂದು ಕೂಗುತ್ತ ನುಗ್ಗಿದರು. ದಳಪತಿ ಬೇಡವೆನ್ನುವುದರೊಳಗಾಗಿ ಲಾಲ್ ಸಿಂಗ್ ಗೆಳೆಯನ ಶವದ ಪಕ್ಕದಲ್ಲಿ ನಿಂತು ಅಲ್ಲಿ ಬಿದ್ದಿದ್ದ ಬಂದೂಕನ್ನು ಸೆಳೆದುಕೊಂಡು ಶತ್ರುಸೇನೆಯ ಮೇಲೆ ಗುಂಡಿನ ಮಳೆ ಸುರಿಸಿದರು. ಹಲವಾರು ಜಪಾನಿಗಳು ನಿರ್ನಾಮವಾದರು. ಕಡೆಗೆ ಲಾಲ್ ಸಿಂಗರೂ ಗುಂಡಿನೇಟಿಗೆ ಸಿಕ್ಕಿ ಹತರಾದರು.

ಫೌಜಿ ದಿಲ್‌ಖುಶ್ ಸಭೆಗಳು

ಫೌಜಿ ದಿಲ್‌ಖುಷ್ ಸಭೆ ಒಂದು ವರ್ಷದ ಹಿಂದೆ ಸ್ಥಾಪಿತವಾಗಿ 2 ಖಂಡಗಳಲ್ಲಿ ೧೫ ದೇಶಗಳಲ್ಲಿ ಭಾರತೀ ಸೇನೆಗೆ ಮನರಂಜನೆಗೆ ಅನುಕೂಲವಾಗಿದೆ. ಈ ಸಭೆಯ ಏರ್ಪಾಟು ಎಲ್ಲ ದಳಗಳ ಮೆಚ್ಚನ್ನೂ ಸಂಪಾದಿಸಿದೆ ಈಗ ಇಟಲಿಯಲ್ಲಿ 2 ಗುಂಪುಗಳು ಸಂಚಾರ ಮಾಡುತ್ತಿವೆ. ಗ್ರೀಸಿನಲ್ಲಿ ೧, ಮಧ್ಯ ಪ್ರಾಚ್ಯದಲ್ಲಿ ೩ ಇರಾಕ್, ಇರಾನ್‌ಗಳಲ್ಲಿ ೩, ಸಿಲೋನಿನಲ್ಲಿ ೧ ಹೀಗೆ ಕೆಲಸಮಾಡುತ್ತಿವೆ. ಈ ತಂಡಗಳು ಹೋಗಿ ಬರುವುದನ್ನು ಏಡನಿನಲ್ಲಿ ಭಾರತೀ ದಳದವರು ಕಂಡು ಸಂತೋಷಿಸುತ್ತಿದ್ದಾರೆ.

ಈ ತಂಡಗಳು ಯುದ್ಧದ ಕೈದಿಗಳಿಗೆ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ, ಸೇನಾ ಶಿಬಿರವಾಸಿಗಳಿಗೆ, ಬರ್ಮಾ ರಂಗೂನ್ ಮುಂತಾದ ಯುದ್ಧ ರಂಗಗಳಿಂದ ಹಿಂದಿರುಗಿದವರಿಗೆ ಮನರಂಜನೆಯುಂಟುಮಾಡುತ್ತಿವೆ ಪ್ರತಿ ತಂಡದಲ್ಲಿಯೂ ಭಾರತದ ನಾನಾ ಪ್ರಾಂತಗಳವರು ಸೇರಿರುವುದರಿಂದ ಭಾಷಾ ಪರಿಚಯದ ಅನುಕೂಲತೆ ಇದೆ. ಪಶ್ಚಿಮ ಆಫ್ರಿಕದ ದಳದವರಿಗೆ ಭಾರತೀ ಸಂಗೀತ ಗೊತ್ತಾಗದಿದ್ದರೂ ದಿಲ್‌ಖುಷ್ ಸಭೆಯವರ "ಜು-ಜು" ವಿನೋದವನ್ನು ಕಂಡು ಮೆಚ್ಚಿದರು.

ಈ ಮನರಂಜನೆ ತಂಡಗಳು ಭೂ ಸೈನ್ಯವೊಂದಕ್ಕೇ ಅಲ್ಲ, ನೌಕಾಪಡೆಗೂ, ವಿಮಾನ ಪಡೆಗೂ ಮನರಂಜನೆಯುಂಟು ಮಾಡುತ್ತಿವೆ. ಈ ತಂಡಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಿ, ಸ್ಪರ್ಧೆಯಲ್ಲಿ ಗೆದ್ದ ತಂಡಕ್ಕೆ ಮೂರು ತಿಂಗಳಿಗೊಂದು ಸಾರಿ "ಕಂಟ್ರೋಲರ್ ಕಪ್" ಬಹುಮಾನ ಕೊಡಲಾಗುವುದು. ಕಳೆದ ಸಾರಿ ಬಹುಮಾನ ಪಡೆದ ತಂಡದವರು ದಕ್ಷಿಣ ಸೇನಾ ಶಾಖೆಯಲ್ಲಿ ಸೈನಿಕರಿಗೆ ಈಗ ಮನರಂಜನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಬರ್ಮಾ ರಣರಂಗದಲ್ಲಿ ಕೂಚಾ ಬಿಹಾರಿನ ಮಹಾರಾಜರವರು

ಬರ್ಮಾ ಸಮರ ಮುಖದಲ್ಲಿ ಕೂಚ್ ಬಿಹಾರಿನ ಮಹಾರಾಜರಾದ ಕ್ಯಾಪ್ಟನ್ ಸರ್ ಜಗದ್ದೀಪೇಂದ್ರ ನಾರಾಯಣ್, ಕೆ. ಸಿ. ಐ. ಇ ಅವರು ೭ನೇ ಅಶ್ವದಳಕ್ಕೆ ದಂಡನಾಯಕರಾಗಿದ್ದಾರೆ ಅಲ್ಲದೆ ಬರ್ಮಾದ ಅಡ್ವಾನ್ಸ್ಡ್ ಹೆಡ್ ಕ್ವಾರ್ಟರಿನಲ್ಲಿ ಲಿಯಸನ್ ಆಫೀಸರರಾಗಿಯೂ ಕೆಲಸಮಾಡುತ್ತಿದ್ದಾರೆ. ಅವರಿಗೆ ಇನ್ನೂ ೨೯ ವರ್ಷ ವಯಸ್ಸು.

ಹ್ಯಾರೋ ಮತ್ತು ಕೇಂಬ್ರಿಜ್ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದು ತಮ್ಮ ತಂದೆಯ ಮರಣಾನಂತರ ೧೯೨೨ರಲ್ಲಿ ಪಟ್ಟಕ್ಕೆ ಬಂದರು. ಭಾರತದಲ್ಲಿ ಕ್ರಿಕೆಟ್ ಆಟದಲ್ಲಿ ಹೆಸರೆತ್ತಿ ೧೯೪೪-೪೫ರಲ್ಲಿ ರಾಂಜಿ ಟ್ರೋಫಿಯಲ್ಲಿ ಬೆಂಗಾಲ್ ಟೀಮಿಗೆ ಕ್ಯಾಪ್ಟನ್ ಆಗಿದ್ದರು. ಪೋಲೊ ಮತ್ತು ಟೆನ್ನಿಸ್ ಆಟಗಳೆಂದರೆ ಅವರಿಗೆ ಬಹು ಪ್ರೀತಿ.

ಅವರು ಭಾರತೀ ಸೇನೆಗೆ ೧೯೩೮ರಲ್ಲಿ ಸೇರಿದರು. ಅಂದಿನಿಂದ ೭ನೇ ಅಶ್ವದಳದಲ್ಲಿ ಶಿಕ್ಷಣಪಡೆಯುತ್ತಿದ್ದಾರೆ. ೧ನೇ ಕೂಚ್ ಬಿಹಾರಿನ ಪಡೆಗೆ ಮುಖ್ಯ ದಳಪತಿಯಾಗಿದ್ದಾರೆ. ಅವರ ತಮ್ಮ ರಾಜಕುಮಾರ ಇಂದ್ರಜಿತ್ ನಾರಾಯಣ್‌ರವರೂ ಈ ಸಮರ ಮುಖದಲ್ಲಿಯೇ ಕೆಲಸ ಮಾಡುತ್ತಿದ್ದಾರೆ.

(ಭಾರತೀಯ ಪಾಶ್ಚಿಮಾತ್ಯ ಸೇನೆಯ ಸಾರ್ವಜನಿಕ ಸಂಬಂಧಖಾತೆ)

(೫ನೇ ಪುಟದಿಂದ ಮುಂದುವರಿದುದು.)

ಸುಸ್ವಾಗತವಿತ್ತಿದೆ. ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯನ್ನಪೇಕ್ಷಿಸಿದೆ. ತಮ್ಮ ಸಮಾಜಕ್ಕೆ ಸಿಮ್ಲಾ ಸಮ್ಮೇಲನದಲ್ಲಿ ಪ್ರತಿನಿಧ್ಯವೀಯದುದಕ್ಕಾಗಿ ಆಂಗ್ಲೋ ಇಂಡಿಯನರ ನಾಯಕ ಮಿ. ಫ್ರೇಂಕ್ ಅಂತೋನಿ ಎಂ. ಎಲ್. ಎ. ಯವರು ದುಃಖಾಶ್ಚರ್ಯ ಸೂಚಿಸಿದ್ದಾರೆ. ವೈಸರಾಯೀ ಕೌನ್ಸಿಲಿನಲ್ಲಿ ತಮಗೆ ಒಂದೇ ಪ್ರಾತಿನಿಧ್ಯವೀಯುವದನ್ನು ದಳಿತ ವರ್ಗದ ಪ್ರಮುಖರು ನಿಷೇಧಿಸಿದ್ದಾರೆ. "ದೇಶಕ್ಕಾಗಿ ಏನೊಂದೂ ತ್ಯಾಗಮಾಡದ ಲೀಗಿಗೆ ಕಾಂಗ್ರೆಸಿನೊಡನೆ ಸಾಮ್ಯತೆಯೆಂದರೇನು? ಅದರ ಯೋಗ್ಯತೆಗೆ ಮೀರಿದ ಪಾಲು ದೊರೆತಿದೆ. ದೇಶವೀದಿನ ನಿರುಪಾಯವಾಗಿದ. ಮುಸ್ಲಿಂ ಲೀಗು ಈ ರೀತಿ ದರೋಡೆಯಿಂದ ಲಂಚ ಪಡೆಯಲು ನಾಚುವದಿಲ್ಲ" ಎಂದು ಅಖಿಲ ಭಾರತ ಮುಸ್ಲಿಂ ಮಜ್ಲೀಸ್‌ನ ಅಧ್ಯಕ್ಷ ಮಿ. ಎ. ಎಮ್. ಕ್ವಾಜಾ ಟೀಕಿಸಿದ್ದಾರೆ 'ರಾಷ್ಟ್ರೀಯ ಮುಸಲ್ಮಾನರ ಹಿತಸಂಬಂಧಗಳು ಅಲಕ್ಷ್ಯಿಸಲ್ಪಟ್ಟಿವೆ. ಮುಸಲ್ಮಾನರೊಳಗೇನೇ ಅಲ್ಪ ಸಂಖ್ಯಾಕರ ಸಂಸ್ಥೆಯಾಗಿರುವ ಲೀಗು ಸರ್ವಸ್ವವೆಂದು ಗಣಿಸಲ್ಪಟ್ಟಿದೆ" ಎಂದು ಶಾಮಹಮ್ಮದ್ ಉಮಾರ್ ಎಂ. ಎಲ್. ಸಿ. ಗಳಂತಹ ರಾಷ್ಟ್ರೀಯ ಮುಸಲ್ಮಾನರು ದೂರಿದ್ದಾರೆ. ಯುದ್ಧ ಕಾರ್ಯದಲ್ಲಿ ವಿಶೇಷ ಸಹಕಾರವಿತ್ತಿದ್ದ ಪಂಜಾಬಿಗೆ ಪ್ರತ್ಯೇಕ ಪ್ರಾತಿನಿಧ್ಯವೀಯಬೇಕೆಂದು ಪಂಜಾಬಿ ಪ್ರಧಾನಿಗಳ ಬೇಡಿಕೆಯಿದ್ದು, ಅವರು ಸಿಮ್ಲಾದಲ್ಲಿ ಎಲ್ಲರಿಗಿಂತ ಮೊದಲೇ ವೈಸರಾಯರ ಭೇಟಿ ಪಡೆದಿದ್ದಾರೆ ವೈಸರಾಯಿ ಕೌನ್ಸಿಲಿನಲ್ಲಿ ಮುಸಲ್ಮಾನರಿಗಿರುವ ೬ ಸ್ಥಾನಗಳಿಗೂ ಮುಸ್ಲಿಂ ಲೀಗಿನ ಸೂಚೀ ಪತ್ರದಲ್ಲಿರುವ ಹೆಸರುಗಳನ್ನೇ ಆರಿಸಬೇಕೆಂದು ಜಿನ್ನರ ಹಠವಿರುವಂತಿದೆ. ಆದರೆ ವೈಸರಾಯರು ಲೀಗಿಗೆ ಮೂರು ಸ್ಥಾನಗಳನ್ನೀಯಲು ಮಾತ್ರ ಸಿದ್ಧರಿದ್ದಾರಂತೆ. ಜಿನ್ನರ ಈ ಛಲವಾದಿತನದಿಂದ ಸಮ್ಮೇಲನವು ಒಡೆದುಹೋಗುವ ಅಪಾಯವಿದೆ—ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸ್ಪಷ್ಟೀಕರಣ ಕೇಳಿರುವ 13 ವಿಷಯಗಳಲ್ಲಿ ಅಂತಹ ಕಂಟಕವಿಲ್ಲವೆಂದು ತಿಳಿದುಬರುತ್ತದೆ.

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S. India.)
T. A. PAI, B. Com (Bom) A. I. B.
General Manager.

Unique facilities under Housing Scheme!
Rare opportunity for solve the Children Education Problem!

THE CENTRAL MERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವವರಾರು — ನಿಮ್ಮ ಕಾಲಾನಂತರ ನಿಮ್ಮ ಆಶ್ರಿತರ ಸುಖ ಬಯಸುವಿರಾದರೆ — ಒಂದೇ ಒಂದು ದಾರಿಯಿದೆ! ಯಾವುದು? **ಜೀವ ವಿಮೆ!**

ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಯಶಸ್ವಿತೆಯನ್ನೂ ಅವರ ಆನಂದದ ನೆಲೆವೀಡನ್ನೂ ನೋಡಲಿಚ್ಛಿಸದಿರುವ ತಂದೆ ತಾಯಿಗಳಾರಿರುವರು. ಅಂತಹ ಎಜ್ಯುಕೇಶನ್ ಎಂಡೋವ್‌ಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ. ಆದ್ದರಿಂದ ಭಾವೀ ಜೀವನದಲ್ಲಿ ಬೆಳಕನ್ನು ಕಾಣಲಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

'ಸೆಂಟ್ರಲ್ ಮರ್ಕೆಂಟೈಲ್'

ಈ ವಿಧದ ನಿಮ್ಮ ಪವಿತ್ರೋದ್ದೇಶವನ್ನು ಈಡೇರಿಸಲು ಬದ್ಧಕಂಕಣವಾಗಿದೆ ಎಂಬುದನ್ನು ಮರೆಯಬೇಡಿರಿ!

ಎಲ್ಲೆಲ್ಲೂ ಏಜೆಂಟರೂ ಓರ್ಗನೈಜರರೂ ಬೇಕಾಗಿರುವರು!

ಕೂಡಲೇ ಬರೆಯಿರಿ:-

B. DIVAKARA HEGDE,
AGENCY ORGANIZER,
Central Mercantile Assurance Co., Ltd.,
Patel House, Churchgate Street,
FORT, BOMBAY.



Approved firm by the Govt. of Mysore
Certified by the Agent of the Govt of India in Ceylon.

ಮಂಗಳೂರು.

ಕ್ಯಾಶ್ ಮೆಮೊ ಕೊಡಲೇಬೇಕು- ಕೆಲವು ವ್ಯಾಪಾರಿಗಳು ಸಾಮಾನು ಪಡಕೊಂಡವರಿಗೆ ಕ್ಯಾಶ್‌ಮೆಮೊಗಳನ್ನು ಕೊಡುವುದಿಲ್ಲ; ಮತ್ತೆ ಕೆಲವರು ಕೊಡುವ ಮೆಮೊಗಳಲ್ಲಿ ವಿವರಗಳೇ ಇರುವುದಿಲ್ಲವಾಗಿ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಅವಗಾಹನೆ ಬಂದಿರುವುದು. ಕ್ಯಾಶ್‌ಮೆಮೊಗಳನ್ನು ಕ್ರಮವಾಗಿ ಬರೆದುಕೊಡದವರ ಮೇಲೆ ಲಾಭಖೋರತನ ಮತ್ತು ಗುಪ್ತ ಸಂಗ್ರಹ ನಿವಾರಣಾ ಆರ್ಡಿನೆನ್ಸು ಪ್ರಕಾರ ತಪ್ಪಿತಸ್ಥರು ಹೂಡಲ್ಪಟ್ಟು ತಕ್ಕ ಶಿಕ್ಷೆ ವಿಧಿಸಲಾಗುವುದು ಎಂದು ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಜಾಹೀರು ಪ್ರಕಟಣೆ ಸಂಬಂಧಪಟ್ಟವರಿಗೆಲ್ಲಾ ಮುಂಜಾಗ್ರತೆಯನ್ನಿತ್ತಿರುವುದು.

ಜಿಲ್ಲಾ ಆಹಾರ ಪರಿಸ್ಥಿತಿಯಲ್ಲಿ ಸುಧಾರಣೆ- ಯ ಸಲುವಾಗಿ ಕೇಂದ್ರ ಸರಕಾರದ ಆಹಾರ ಖಾತೆಯಿಂದ ದ. ಕ ಜಿಲ್ಲೆಯ ಪರವಾಗಿ ಮದ್ರಾಸ ಸರಕಾರಕ್ಕೆ ಇನ್ನಷ್ಟು ಸಹಾಯವನ್ನೀಯುವರೆ ಆಲೋಚಿಸಲಾಗುತ್ತಿದೆಯೆಂದು ಕೇಂದ್ರ ಸರಕಾರದಿಂದ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರಿಗೆ ಪತ್ರ ಬಂದಿರುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಚಂದ್ರಮ್ಮಾ ಸ್ಮಾರಕ ಮಂದಿರ- ಶ್ರೀ. ಆರ್. ಆರ್. ಕರ್ಕೇರರು ಮಂಗಳೂರಿನ ಸೂಟರ್ ವಿದ್ಯಾರ್ಥಿ ಭವನಕ್ಕೆ ತನ್ನ ದಿವಂಗತ ಪತ್ನಿ ಚಂದ್ರಮ್ಮನವರ ಸ್ಮಾರಕವಾಗಿ ಕಟ್ಟಿಸಿದ ಮಂದಿರದ ಉದ್ಘಾಟನೆಯು ರಾವ್ ಸಾಹೇಬ್ ಪಿ. ವಾಸುದಾಸ್, ಜಿಲ್ಲಾ ಕಲೆಕ್ಟರ್ ಇವರ ಅಧ್ಯಕ್ಷತೆಯಲ್ಲಿ ತಾ ೨೩ರಲ್ಲಿ ಜರಗಿತು ರಾವ್ ಬಹದ್ದೂರ್ ಯು. ಗಿರಿಯಪ್ಪನವರ ಸ್ವಾಗತ ಭಾಷಣವಾದ ಮೇಲೆ ಶ್ರೀಗಳಾದ ಪಿ. ಆರ್. ಆರ್ ಪ್ರಾಂಜ, ಬಿ ಸೋಮಶೇಖರ ರಾವ್, ಬಿ. ವೈಕುಂಠ ಬಾಳಿಗ, ಅಪ್ಪಾಜಿ ಸುವರ್ಣ, ಪಿ. ಅಪ್ಪಯ್ಯ ಮೊದಲಾದವರ ಭಾಷಣಗಳಾದುವು.

ಕೆನರಾ ವಣಿಜ ಸಂಘ-ದ ವಾರ್ಷಿಕೋತ್ಸವವು ತಾ. ೨೩ರಲ್ಲಿ ಸಂಘದ ಅಧ್ಯಕ್ಷ ಶ್ರೀ. ಪಿರಲಜಿ ಪುರುಷೋತ್ತಮ ಶೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ವರದಿ ವಾಚನವಾದ ಮೇಲೆ ಹೊಸ ವರ್ಷಕ್ಕೆ ಕಾರ್ಯಕಾರಿ ಮಂಡಳಿಯ ರಚನೆಯಾಯಿತು ಹೊಸ ವರ್ಷಕ್ಕೆ ಶ್ರೀ. ಬಿ. ವೈಕುಂಠ ಬಾಳಿಗರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಉಡುಪಿ.

ಸಂತಾಪ ಸೂಚಕ ಸಭೆ- ತಾ ೨೦-೬-೪೫ನೇ ದಿನ ಕಲಾಮಂದಿರದಲ್ಲಿ ಪಂಡಿತ ವೆಂಕಟರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ವೃಂದದ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣರಾದ ಶ್ರೀ ಶ್ರೀ ವಿಬುಧಮಾನ್ಯತೀರ್ಥರು ಅಕಾಲದಲ್ಲಿ ಕಣ್ಮರೆಯಾದುದಕ್ಕಾಗಿ, ಸಂತಾಪ ಸೂಚಕ ಸಭೆಯು ಜರಗಿತು. ಆದಿಯಲ್ಲಿ ಶ್ರೀ ಸುಬ್ರಾಯ ಪುರಾಣಿಕ, ಶಿರೋಮಣಿ ಅವರು ಮತ್ತು ಶ್ರೀ ಕೆ. ಶಂಕರನಾರಾಯಣ ಉಪಾಧ್ಯಾಯರು ಗತಿಸಿದ ಶ್ರೀಗಳವರ ಧೈರ್ಯ, ಔದಾರ್ಯ, ಸಾಹಿತ್ಯ ತತ್ಪರತೆ ಮೊದಲಾದ ಆಸ್ಪಾದ್ಯರ ಗುಣಗಳನ್ನು ಗಾನಮಾಡಿದ ನಂತರ ಅಧ್ಯಕ್ಷರು ಅವರ ಉಜ್ವಲ ಜೀವನವನ್ನು ತಮ್ಮ ಗಾಂಭೀರ್ಯದಿಂದ ಕೂಡಿದ ವಾಕ್ಸರಣಿಗಳಿಂದ ವಿವರಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯು ಒದಗುವಂತೆ ಒಂದರೆಕ್ಷಣ ಮೌನದಿಂದ ದೇವರನ್ನು ಪ್ರಾರ್ಥಿಸುವುದೇ ನಮ್ಮ ಕರ್ತವ್ಯವೆಂದು ಹೇಳಿ, ಆ ಕಾರ್ಯವನ್ನು ಪೂರೈಸಿಗೊಳಿಸಿದರು. ಕೊನೆಗೆ ಕಾರ್ಯದರ್ಶಿಗಳು ಶ್ರೀಗಳವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಸರ್ವಾನುಮತಿಯಿಂದ ಸ್ವೀಕರಿಸಲ್ಪಟ್ಟ ಠರಾವನ್ನು ಓದಿ, ಧನ್ಯವಾದ ಪುರಸ್ಸರ ಸಭೆಯನ್ನು ಮುಕ್ತಾಯಗೊಳಿಸಿದರು.

ಮುನಿಸಿಪಲ್ ಕೌನ್ಸಿಲು ಮೀಟಿಂಗು ತಾ. ೨೦ರಲ್ಲಿ ಚೆಯರ್‌ಮೆನ್ ಶ್ರೀ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಕೌನ್ಸಿಲಿನ ಇತರರಿದ್ದ ಅದೇಕ ದರದಿ ಮಂಜೂರು ಮಾಡಲಾಯಿತು. ಈ ಸಂದರ್ಭದಲ್ಲಿ ಚೆಯರ್‌ಮೆನ್, ಕೌನ್ಸಿಲರ್ಸ್, ಕಮಿಶನರ್ ಇವರೊಳಗೆ ಸತ್ಸಹಕಾರವಿತ್ತೆಂಬುದನ್ನು ದಾಖಲೆ ರಿಕಾರ್ಡು ಮಾಡಲಾಯಿತು. ಬಿಲ್ ಕಲೆಕ್ಟರರ ಎರಡು ಹುದ್ದೆಗಳು ಖಾಯಮಾಗಿ ಸೆಂಕ್ಷನ್ ಮಾಡಲಾಯಿತು. ಹಾಜಿ ಅಬ್ದುಲ್ಲಾ ಜುಮ್ಮೋಜಿಯವರ ಸೂಪರಿಂಟೆಂಡೆಂಟರಿಗೆ ಗೌರವಾರ್ಥ ಪ್ರತಿಫಲ ರೂಪವಾಗಿ ಎಪ್ಪತ್ತು ಸೆಂಕ್ಷನ್ ಮಾಡಲಾಯಿತು. ಫಯರ್ ಸರ್ವಿಸಿನವರಿಗೆ ಪ್ರೊಫೆಶನಲ್ ಟೇಕ್ಸ್ ರಿಯಾಯಿತಿ ಬಿಡಲು ಸಾಧ್ಯವಿಲ್ಲವೆಂದು ಸೂಚಿಸಲಾಯಿತು. ಶ್ರೀ ಅಧಮಾರು ಮಠದ ಶ್ರೀ ವಿಬುಧಮಾನ್ಯತೀರ್ಥ ಸ್ವಾಮಿಜಿಯವರ ಅಕಾಲನಿಧನದ ಸಲುವಾಗಿ ಸಂತಾಪ ಸೂಚಕ ನಿರ್ಣಯವನ್ನು ಶ್ರೀ ಆರ್ ಎರ್ ಕುಂಜಿರಾಮ್ ಅವರು ಸಭಾರಂಭದಲ್ಲಿ ತಂದುದನ್ನು ಪಾಸುಮಾಡಲು ಎಲ್ಲಾ ಮೆಂಬರರು ಎದ್ದು ನಿಂತಿರುವಷ್ಟರಲ್ಲಿ ಅಗತ್ಯವೆ ತಡವಾಗಿ ಬಂದ ಶ್ರೀ ಕೆ ಗುರುರಾಜ ರಾಯರು, ಬಂದೆ ಶೀಘ್ರವೇ ಶ್ರೀ ಸೋದೆಸ್ವಾಮಿಗಳವರ ಬಗ್ಗೆ ಠರಾವು ಮಾಡಲಿಲ್ಲವೆಂದು ಕಾರಣದಿಂದ ಆಕ್ಷೇಪಿಸಿದರು. ಒಬ್ಬರ ಆಕ್ಷೇಪದಿಂದಾಗಿ ನಿರ್ಣಯವು ಬಿದ್ದು ಹೋಯಿತು.

ಬೆಳ್ತಿಗೆ ಸುಗ್ಗಿ ಅಕ್ಕಿ- ರೇಶನ್ ಅಂಗಡಿಗಳಲ್ಲಿ ಕೊಡಲಾರಂಭವಾಗಿಯದ ಇನ್ನು ಎರಡು ತಿಂಗಳ ನಂತರ ಅದರ ವಿತರಣೆಯಾದರೆ ಜನರ ಆರೋಗ್ಯದೃಷ್ಟಿಯಿಂದ ಒಳ್ಳೆಯದು. ಕಾರ್ತಿ ಬೆಳ್ತಿಗೆಯನ್ನು ಮಳಗಿಸಿಡುವ ಉದ್ದೇಶ್ಯವಾದರೂ ಏನು?

ಕಾಫಿ ಪುಡಿ- ಜನರಿಗೆ ಸರಾಗವಾಗಿ ಸಾಕಷ್ಟು ಕಾಫಿ ಪುಡಿ ದೊರೆಯುವುದಿಲ್ಲ ಕಾಫಿ ಪುಡಿ ಸ್ಟಾಕಿಸ್ಟರಿಗೆ ಕಾಫಿ ಬೀಜದ ಸರಬರಾಯಿ ಅತ್ಯಲ್ಪ ಪ್ರಮಾಣದಲ್ಲಿ ಆಗುತ್ತಿರುವುದೇ ಕಾರಣವಂತೆ

ಶ್ರೀ. ಭಟ್ಟ ಯುವರ ಆಕಸ್ಮಿಕ ಮರಣ- ಇದೇ ತಾ 26ನೇ ಅಪರಾಹ್ನ 3 ಘಂಟೆಗೆ, ಮುನ್ಸಿಪಲ್ ಆಫೀಸಿಗೆ ಕಾರ್ಯಾರ್ಥವಾಗಿ ಹೋಗಿ ಮರಳುತ್ತಿದ್ದ ಶ್ರೀ ಕೆ. ಬಿ ಕೃಷ್ಣ ಭಟ್ಟ ಯವರು ಸರಕಾರೀ ಆಸ್ಪತ್ರೆಯ ಮುಂಭಾಗದ ರಸ್ತೆಯಲ್ಲಿ ಬರುತ್ತಿದ್ದಂತೆಯೇ ಹೃದಯ ಸ್ತಂಭನಗೊಂಡು ಮೃತರಾದುದು ಶೋಚನೀಯವಿದೆ ನಡೆಯುತ್ತಿರುವಾಗ ಶ್ರೀಯುತರೊಮ್ಮೆ ಮುಗ್ಗರಿಸಿ ಬಿದ್ದು ಮುಖಕ್ಕೆ ಘಾಯವಾಗಿ ತನ್ನ ದಕ್ಷಿಣ ಹಸ್ತ ವನ್ನು ಸ್ವತಃ ಚೇತರಿಸಿಕೊಂಡೆದ್ದು ಕರವಸ್ತ್ರದಿಂದ ಮುಖವೊರಸಿಕೊಂಡರು. ನೆರೆದವರು ಡಾಕ್ಟರರಲ್ಲಿಗೆ ಹೋಗುವ ಸಲಹೆ ಕೊಟ್ಟರು. ಆದರೆ ಶ್ರೀಯುತರು ತನ್ನ ಮನೆಗೇನೇ ಹೋಗುವ ಎಂದು ಪ್ರೊ ... ಡ್ರೈವರಿಂದ ಜಟಕಕ್ಕೆ ಹೇಳಿ ಕಳುಹಿಸಲಾಯಿತು. ಆಸ್ಪತ್ರೆಗೆ ಇಬ್ಬರ ಕೈಯನ್ನಾಧರಿಸಿಕೊಂಡು ಒಂದೆರಡು ಹೆಜ್ಜೆ ಮುಂದಿಟ್ಟವರು ಅಲ್ಲಿಯೇ ಕುಸಿದು ಕುಳಿತು ಕೂಡಲೇ ಮರಣಗೊಂಡರು. ಶ್ರೀಯುತರು ಪ್ರಾಥಮಿಕ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರರಾಗಿದ್ದು, ಕೆಲವು ವರುಷಗಳಿಂದ ವಿರಾಮವೇತನ ಪಡೆಯುತ್ತಿದ್ದರು. ಅವರು ಸಹೃದಯಿ, ಉದಾರಿ, ನಿಷ್ಪಕ್ಷಪಾತಿ ಮತ್ತು ತೂಕದ ಮನುಷ್ಯನೆಂದು ಶಾಲಾಧಿಕಾರಿಯಾಗಿರುವಾಗಲೂ ಆ ಮೇಲೂ ಗೌರವ ಸಂಪಾದಿಸಿದ್ದರು. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಹಿಂದೂ ಶವಸಂಸ್ಕಾರ ಸಮಿತಿ-ಯ ಎಕ್ಸ್‌ಟ್ರಾರ್ಡಿನರಿ ಜನರಲ್ ಮೀಟಿಂಗನ್ನು ಅದರ ಕೆಲವು ಮುಖ್ಯವಾದ ನಿಯಮಗಳನ್ನು ತಿದ್ದುಪಡಿಸುವ ಕುರಿತು ಇದೇ ಇಸವಿ ಬರುವ ಜುಲೈ ತಾ ೧ಕ್ಕೆ ಆದಿತ್ಯವಾರ ೫ ಗಂಟೆಗೆ ಬುದ್ಧಿ ಪ್ರಭಾಕರ ಪ್ರೆಸ್ಸಿನ ಮಹಡಿಯಲ್ಲಿ ಕರೆಯಲ್ಪಟ್ಟಿದೆ ಎಲ್ಲಾ ಮೆಂಬರರು ಆ ದಿನ ಸಕಾಲಕ್ಕೆ ಹಾಜರಾಗಬೇಕಾಗಿ ಸದರಿ ಸಮಿತಿಯ ಸೆಕ್ರೆಟರಿ ತಿಳಿಸುತ್ತಾರೆ

ಶಿರ್ವ- ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ಆಡಳಿತೆಯಲ್ಲಿರುವ 'ಹಿಂದೂ ಶಾಲೆ'ಯಲ್ಲಿ ಹಯರ್ ಎಲಿಮೆಂಟರಿ ತರಗತಿಗಳನ್ನು ತೆರೆಯುವ ಸಮಾರಂಭವು, ಶ್ರೀ ಪಿ. ಉಪೇಂದ್ರ ಶ್ರೀನಿವಾಸ ಸಾಮ್ಯರ ಅಧ್ಯಕ್ಷತೆಯಲ್ಲಿ ತಾ 4 7 45ನೇ ಮಧ್ಯಾಹ್ನ ಜರಗಲಿರುವದು, ಶಾಲಾ ಕಟ್ಟಡವನ್ನು ದಾನವಿತ್ತಿದ್ದ ದಿವಂಗತ ಎಮ್. ಕೃಷ್ಣ ಶೈಗಳ ಭಾವ ಚಿತ್ರ ಅನಾವರಣ ಇತ್ಯಾದಿ ಕಾರ್ಯಕ್ರಮಗಳಿರುವವು; ಸರ್ವರಿಗೂ ಆಮಂತ್ರಣವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂದಾಪುರ- ಇಲ್ಲಿಯ ಎಸ್. ಆರ್. ಎಸ್ ಹೋಸ್ಟೆಲ್ ಬಿಲ್ಡಿಂಗ್ ಕಮಿಟಿಯ ಸಭೆಯು ತಾ. ೧೭-೬-೪೫ರಂದು ವಿದ್ಯಾರ್ಥಿನಿಲಯದಲ್ಲಿ ಶ್ರೀ. ಸಾಹುಕಾರ ಅಂತಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಉಪ ವಿದ್ಯಾರ್ಥಿ ಭವನದ ಕಟ್ಟೋಣದ ಸಲುವಾಗಿ ಈ ವರೆಗೆ ವಹಿಸಿದ ವಾಗ್ದಾನ, ವಸೂಲಿ ಮತ್ತು ಆವಶ್ಯವುಳ್ಳ ಖರ್ಚಿನ ಪರಿಶೀಲನೆ, ಸೆಕ್ರೆಟರಿ ಸ್ವಾಧೀನ ಹಾಲಿ ಇರುವ ಶಿಲ್ಕಿನ ವ್ಯವಸ್ಥೆ, ಭವನದ ಸ್ಥಳದಲ್ಲಿ ನಡೆದ ಅಕ್ರಮಣದ ಬಾಬಿನ ನಿವೃತ್ತಿಯ ವಿಚಾರ, ಕಟ್ಟೋಣದ ಪ್ಲೇನು ತಯಾರಿಸುವ ಏರ್ಪಾಡು, ಕಮಿಟಿಯವರು ಭವನದ ಕಟ್ಟೋಣದ ಬಗ್ಗೆ ಆವಶ್ಯವುಳ್ಳ ವಂತಿಗೆಯ ವಾಗ್ದಾನ ವಸೂಲಿ, ಹಾಗೂ ಆಗತ್ಯವುಳ್ಳ ಖರ್ಚು ಮಾಡುವ ಬಗ್ಗೆ ದ ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಪರವಾನಗಿಯನ್ನು ಪಡೆಯುವುದು, ಮತ್ತು ಕಟ್ಟಡದ ಕೆಲಸದ ಮೇಲ್ವಿಚಾರ ಹಾಗೂ ವಂತಿಗೆ, ವಸೂಲಿ, ಖರ್ಚು ಮುಂತಾದ ಲೆಕ್ಕಪತ್ರ ... ಕುರಿತು ಸಮಿತಿಯ ಸದಸ್ಯರೆಲ್ಲರ ... ಇತ್ಯಾದಿಗಳಲ್ಲಿ ಅವಶ್ಯ ಕಾಣುವ ನಿರ್ಣಯಗಳು ಮಂಜೂರಾದ ನಂತರ ಸಭೆಯು ಮುಗಿದಿತು.

NOTICE

ಪುತ್ತೂರು ಡಿ. ಮು ಕೋರ್ಟಿನಲ್ಲಿ

R. I. A 257/1945

O. S. 443/1943

ಭಾವಿ ಉಪೇಂದ್ರ ಶೆಣೈ-ಅರ್ಜಿದಾರ.

೧ ಮಹಮ್ಮದ್ ಬ್ಯಾರಿ ೨ ಅಬ್ಬು ಬ್ಯಾರಿ ೩ ಇಬ್ರಾಯಿ ಬ್ಯಾರಿ ೪ ಬಿ. ಪಾತುಮ್ಮ ೫ ಸಲಿಮ ಬ್ಯಾರ್ತಿ ೬ ಇಬ್ರಾಹಿಮಾನ್ ಬ್ಯಾರಿ ೭ ಸುಬ್ಬಮ್ಮ ೮ H. ಶ್ರೀನಿವಾಸ ರಾವ್ ೯ ಅಬ್ದುಲ್ಲ ಬ್ಯಾರಿ ೧೦ ಹಮ್ಮಬ್ಬ ಬ್ಯಾರಿ ೧೧ ಹಸನಾರೆ ಬ್ಯಾರಿ ೧೨ ಅಲಿಮಮ್ಮ ೧೩ ಅಮದೆ ಬ್ಯಾರಿ—ಎದ್ರಿರು.

ಸದ್ರಿ ೯ನೇ ಎದ್ರಿ ಅಬ್ದುಲ್ಲ ಬ್ಯಾರಿ, ೧೦ನೇ ಎದ್ರಿ ಹಮ್ಮಬ್ಬ ಬ್ಯಾರಿ ೧೧ನೇ ಎದ್ರಿ ಹಸನಾರೆ ಬ್ಯಾರಿಗೆ ಕೂಡಾ ಈ ಮೂಲಕ ತಿಳಿಸುವದೇನೆಂದ್ರೆ:

ಮೇಲ್ಕಂಡ ವ್ಯಾಜ್ಯದಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ಪ್ರಕಾರದ ಹಣವನ್ನು ಅರ್ಜಿದಾರನು ಕೋರ್ಟಿಗೆ ಟೆಂಡರು ಮಾಡಿ ಅಡವಾರು ಹಿಂಬಾಸಿನಿಂದ ಆಸ್ತಿ ಸ್ವಾಧೀನತೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ಅರ್ಜಿ ಕೊಟ್ಟಿರುವದರಿಂದ ಸದ್ರಿ ಅರ್ಜಿ ಕುರಿತು ನಿಮಗೇನಾದರೂ ಆಕ್ಷೇಪವಿರುವದಾದರೆ ನಿಮ್ಮ ಆಕ್ಷೇಪಣೆಯನ್ನು ತಾರೀಕು ೪ ೭ ೧೯೪೫ನೇ ದಿನ ಹಗಲು ಘಂಟೆ ೧೧ಕ್ಕೆ ಕೋರ್ಟು ಮುಂದೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತಲೂ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು, 17-6-45 } *B Shivarama Holla* Advocate for petitioner

---

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

No Substitute Yet.

This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,
UDIPI, (S. India.)

ಬರ್ಮಾ ರಂಗದಿಂದ—

ಭಾರತೀ ಶಿಕ್ಷಣಾಲಯಕ್ಕೆ ಸುಡಾನ್ ಸರಕಾರದ ದ್ರವ್ಯ ಸಹಾಯ

ನವದೆಹಲಿ—ಲಾರ್ಡ್ ವೇವೆಲ್‌ರು ೧೯೪೦ರಲ್ಲಿ ಮಧ್ಯಪ್ರಾಚ್ಯದ ಮುಖ್ಯ ಸೇನಾನಾಯಕರಾಗಿ ಪೂರ್ವ ಆಫ್ರಿಕಾದಲ್ಲಿ ಇಟಲಿ ಚಕ್ರಾಧಿಪತ್ಯದ ಮೇಲೆ ಧಾಳಿಯಿಟ್ಟಾಗ ಸುಡಾನಿನ ರಕ್ಷಣೆಗಾಗಿ ಭಾರತೀಯ ಪಡೆಯವರು ಬಹಳವಾಗಿ ಶ್ರಮಿಸಿದ್ದರು. ಕಡೆಗೆ ಅವರಿಗೆ ಕೆರೆನ್ ಮತ್ತು ಎರಿಟ್ರಿಯಾಗಳಲ್ಲಿ ಸಂಪೂರ್ಣ ಜಯವಾಯಿತು. ಈ ಸಹಾಯದ ನೆನಪಿಗಾಗಿ ಸುಡಾನ್ ಸರಕಾರವು ೧೯೪೪ರಲ್ಲಿ ೧೦೦,೦೦೦ ಪೌಂಡುಗಳನ್ನು ವೈಸ್ರಾಯರ ವಶಕ್ಕೊಪ್ಪಿಸಿತು ಈಗ ಭಾರತದಲ್ಲಿ ಮಿಲಿಟರಿ ಅಕ್ಯಾಡೆಮಿಯೊಂದನ್ನು ಅಮೇರಿಕಾದ ವೆಸ್ಟ್ ಪಾಯಿಂಟನಲ್ಲಿರುವ ವಿದ್ಯಾಲಯದ ಮಾದರಿಯಲ್ಲಿ ಸ್ಥಾಪಿಸಲು ಈ ಹಣವನ್ನು ವಿನಿಯೋಗಿಸಲಾಗುತ್ತದೆಂದು ಕಳೆದ ತಿಂಗಳು ಪ್ರಕಟಿಸಲಾಯಿತು. ಈ ವಿದ್ಯಾಲಯದಲ್ಲಿ ಭಾರತೀಯ ಸೈನ್ಯ, ನೌಕಾ ಮತ್ತು ವಿಮಾನ ಶಾಖೆಗಳಲ್ಲಿ ಅಧಿಕಾರಿಗಳಾಗತಕ್ಕವರಿಗೆ ತಕ್ಕ ಶಿಕ್ಷಣ ಕೊಡತಕ್ಕದ್ದೆಂದು ನಿರ್ಧರಿಸಿದೆ ಈ ಸಂದರ್ಭದಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಬೇಕೆಂದು ಒಂದು ಸಮಿತಿ ಏರ್ಪಟ್ಟಿದೆ. ಇದಕ್ಕೆ ಭಾರತದ ಮುಖ್ಯ ದಂಡ ನಾಯಕರೇ ಅಧ್ಯಕ್ಷರು. ಜನರಲ್ ಸ್ಟಾಫ್ ಮುಖ್ಯಾಧಿಕಾರಿಗಳು, ನೌಕಾ ದಳದ ಫ್ಲಾಗ್ ಆಫೀಸರ್ ಕಮಾಂಡಿಂಗ್, ಏರ್ ಆಫೀಸರ್ ಕಮಾಂಡಿಂಗ್, (ಇಂಡಿಯಾ) ಸೈನ್ಯ ಶಾಖೆಯ ಕಾರ್ಯದರ್ಶಿ, ಇಂಡಿಯಾ ಸರಕಾರದ ವಿದ್ಯಾ ಮಂತ್ರಿ ಮತ್ತು ಸಂಸ್ಥಾನಗಳಿಂದ ಚುನಾಯಿಸಿದ ಇಬ್ಬರು ಸದಸ್ಯರು, ನಾಲ್ವರು ಶಿಕ್ಷಣ ಪ್ರವೀಣರು ಈ ಸಮಿತಿಯಲ್ಲಿರತಕ್ಕದ್ದು.

ಗೆಳೆಯನ ಸಾವಿಗಾಗಿ ಸೇಡು

ಖಂಗಲ್ ಸಿಂಗರ ಮಗ ಲಾಲ್ ಸಿಂಗ್ ಮತ್ತು ಲಕ್ಷ್ಮಣ ಸಿಂಗರ ಮಗ ಲಾಲ್ ಸಿಂಗ್—ಇಬ್ಬರೂ ಬಾಲ್ಯ ಸ್ನೇಹಿತರು, ಜೋಧಪುರದಲ್ಲಿ ಒಂದೇ ಹಳ್ಳಿಯವರು. ೧ನೇ ಪಂಜಾಬಿ ದಳಕ್ಕೆ ಏಕ ಕಾಲದಲ್ಲಿ ಸೇರಿದರು. ರಂಗೂನಿಗೆ ೪೦ ಮೈಲಿ ದೂರದಲ್ಲಿ ಜೂನ್ ತಾ ೨೦ರಲ್ಲಿ ಘೋರ ಯುದ್ಧ ನಡೆಯುತ್ತಿದ್ದಾಗ ಶತ್ರುಗಳ ಗುಂಡಿನ ಸುರಿ ಮಳೆಯಲ್ಲಿ ಇವರಿಬ್ಬರೂ ಒಂದಾಗಿ ಮುನ್ನುಗ್ಗಿದರು. ಲಕ್ಷ್ಮಣ ಸಿಂಗರ ಮಗ ಲಾಲ್ ಸಿಂಗ್ ಮುಂದಕ್ಕೆ ನೆಗೆದು ಶತ್ರು ಸೇನೆಗೆ ೧೦ ಗಜ ದೂರದಲ್ಲಿ ತಾವೂ ಸತ್ತು ಬಿದ್ದರು ಗೆಳೆಯನ ಸಾವನ್ನು ಕಂಡ ಖಂಗಲ್ ಸಿಂಗರ ಮಗ ಲಾಲ್ ಸಿಂಗ್ ತಮ್ಮ ದಳಪತಿಯ ಸಮೀಪಕ್ಕೆ ಬಂದು "ನನ್ನ ಸಹೋದರ ಅಲ್ಲಿ ಹತನಾಗಿದ್ದಾನೆ. ನಾನು ಶತ್ರುವಿನ ಮೇಲೆ ಸೇಡು ತೀರಿಸಿಕೊಳ್ಳಲೇಬೇಕು" ಎಂದು ಕೂಗುತ್ತ ನುಗ್ಗಿದರು. ದಳಪತಿ ಬೇಡವೆನ್ನುವುದರೊಳಗಾಗಿ ಲಾಲ್ ಸಿಂಗ್ ಗೆಳೆಯನ ಶವದ ಪಕ್ಕದಲ್ಲಿ ನಿಂತು ಅಲ್ಲಿ ಬಿದ್ದಿದ್ದ ಬಂದೂಕನ್ನು ಸೆಳೆದುಕೊಂಡು ಶತ್ರುಸೇನೆಯ ಮೇಲೆ ಗುಂಡಿನ ಮಳೆ ಸುರಿಸಿದರು. ಹಲವಾರು ಜಪಾನಿಗಳು ನಿರ್ನಾಮವಾದರು. ಕಡೆಗೆ ಲಾಲ್ ಸಿಂಗರೂ ಗುಂಡಿನೇಟಿಗೆ ಸಿಕ್ಕಿ ಹತರಾದರು

ಫೌಜಿ ದಿಲ್ ಖುಷ್ ಸಭೆಗಳು

ಫೌಜಿ ದಿಲ್‌ಖುಷ್ ಸಭೆ ಒಂದು ವರ್ಷದ ಹಿಂದೆ ಸ್ಥಾಪಿತವಾಗಿ 2 ಖಂಡಗಳಲ್ಲಿ ೧೫ ದೇಶಗಳಲ್ಲಿ ಭಾರತೀ ಸೇನೆಗೆ ಮನರಂಜನೆಗೆ ಅನುಕೂಲವಾಗಿದೆ ಈ ಸಭೆಯ ಏರ್ಪಾಟು ಎಲ್ಲ ದಳಗಳ ಮೆಚ್ಚನ್ನೂ ಸಂಪಾದಿಸಿದೆ ಈಗ ಇಟಲಿಯಲ್ಲಿ 2 ಗುಂಪುಗಳು ಸಂಚಾರ ಮಾಡುತ್ತಿವೆ ಗ್ರೀಸಿನಲ್ಲಿ ೧, ಮಧ್ಯ ಪ್ರಾಚ್ಯದಲ್ಲಿ ೩ ಇರಾಕ್, ಇರಾನ್‌ಗಳಲ್ಲಿ ೩, ಸಿಲೋನಿನಲ್ಲಿ ೧ ಹೀಗೆ ಕೆಲಸಮಾಡುತ್ತಿವೆ. ಈ ತಂಡಗಳು ಹೋಗಿ ಬರುವುದನ್ನು ಏಷಿಯಾದಲ್ಲಿ ಭಾರತೀ ದಳದವರು ಕಂಡು ಸಂತೋಷಿಸುತ್ತಿದ್ದಾರೆ.

ಈ ತಂಡಗಳು ಯುದ್ಧದ ಕೈದಿಗಳಿಗೆ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ, ಸೇನಾ ಶಿಬಿರವಾಸಿಗಳಿಗೆ, ಬರ್ಮಾ ರಂಗೂನ್ ಮುಂತಾದ ಯುದ್ಧ ರಂಗಗಳಿಂದ ಹಿಂದಿರುಗಿದವರಿಗೆ ಮನರಂಜನೆಯುಂಟುಮಾಡುತ್ತಿವೆ ಪ್ರತಿ ತಂಡದಲ್ಲಿಯೂ ಭಾರತದ ನಾನಾ ಪ್ರಾಂತಗಳವರು ಸೇರಿರುವುದರಿಂದ ಭಾಷಾ ಪರಿಚಯದ ಅನುಕೂಲತೆ ಇದೆ. ಪಶ್ಚಿಮ ಆಫ್ರಿಕದ ದಳದವರಿಗೆ ಭಾರತೀ ಸಂಗೀತ ಗೊತ್ತಾಗದಿದ್ದರೂ ದಿಲ್‌ಖುಷ್ ಸಭೆಯವರ "ಜು-ಜು" ವಿನೋದವನ್ನು ಕಂಡು ಮೆಚ್ಚಿದರು.

ಈ ಮನರಂಜನ ತಂಡಗಳು ಭೂ ಸೈನ್ಯವೊಂದಕ್ಕೇ ಅಲ್ಲ, ನೌಕಾಪಡೆಗೂ, ವಿಮಾನ ಪಡೆಗೂ ಮನರಂಜನೆಯುಂಟುಮಾಡುತ್ತಿವೆ ಈ ತಂಡಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಿ, ಸ್ಪರ್ಧೆಯಲ್ಲಿ ಗೆದ್ದ ತಂಡಕ್ಕೆ ಮೂರು ತಿಂಗಳಿಗೊಂದು ಸಾರಿ "ಕಂಟ್ರೋಲರ್ ಕಪ್" ಬಹುಮಾನ ಕೊಡಲಾಗುವುದು. ಕಳೆದ ಸಾರಿ ಬಹುಮಾನ ಪಡೆದ ತಂಡದವರು ದಕ್ಷಿಣ ಸೇನಾ ಶಾಖೆಯಲ್ಲಿ ಸೈನಿಕರಿಗೆ ಈಗ ಮನರಂಜನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಬರ್ಮಾ ರಣರಂಗದಲ್ಲಿ ಕೂಚಾ ಬಿಹಾರಿನ ಮಹಾರಾಜರವರು

ಬರ್ಮಾ ಸಮರ ಮುಖದಲ್ಲಿ ಕೂಚ್ ಬಿಹಾರಿನ ಮಹಾರಾಜರಾದ ಕ್ಯಾಪ್ಟನ್ ಸರ್ ಜಗದ್ದೀಪೇಂದ್ರ ನಾರಾಯಣ್, ಕೆ. ಸಿ ಎ ಇ ಅವರು ೭ನೇ ಅಶ್ವದಳಕ್ಕೆ ದಂಡನಾಯಕರಾಗಿದ್ದಾರೆ ಅಲ್ಲದೆ ಬರ್ಮಾದ ಅಡ್ವಾನ್ಸ್‌ಡ್ ಹೆಡ್ ಕ್ವಾರ್ಟರಿನಲ್ಲಿ ಅಯಸನ್ ಆಫೀಸರರಾಗಿಯೂ ಕೆಲಸಮಾಡುತ್ತಿದ್ದಾರೆ ಅವರಿಗೆ ಇನ್ನೂ ೨೯ ವರ್ಷ ವಯಸ್ಸು

ಹ್ಯಾರೋ ಮತ್ತು ಕೇಂಬ್ರಿಜ್ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದು ತಮ್ಮ ತಂದೆಯ ಮರಣಾನಂತರ ೧೯೨೨ರಲ್ಲಿ ಪಟ್ಟಕ್ಕೆ ಬಂದರು. ಭಾರತದಲ್ಲಿ ಕ್ರಿಕೆಟ್ ಆಟದಲ್ಲಿ ಹೆಸರೆತ್ತಿ ೧೯೪೪-೪೫ರಲ್ಲಿ ರಾಂಜಿ ಟ್ರೋಫಿಯಲ್ಲಿ ಬೆಂಗಾಲ್ ಟೀಮಿಗೆ ಕ್ಯಾಪ್ಟನ್ ಆಗಿದ್ದರು. ಪೋಲೊ ಮತ್ತು ಟೆನ್ನಿಸ್ ಆಟಗಳೆಂದರೆ ಅವರಿಗೆ ಬಹು ಪ್ರೀತಿ

ಅವರು ಭಾರತೀ ಸೇನೆಗೆ ೧೯೩೮ರಲ್ಲಿ ಸೇರಿದರು. ಅಂದಿನಿಂದ ೭ನೇ ಅಶ್ವದಳದಲ್ಲಿ ಶಿಕ್ಷಣಪಡೆಯುತ್ತಿದ್ದಾರೆ ೧ನೇ ಕೂಚ್ ಬಿಹಾರಿನ ಪಡೆಗೆ ಮುಖ್ಯ ದಳಪತಿಯಾಗಿದ್ದಾರೆ ಅವರ ತಮ್ಮ ರಾಜಕುಮಾರ ಇಂದ್ರಜಿತ್ ನಾರಾಯಣ್‌ರವರೂ ಈ ಸಮರ ಮುಖದಲ್ಲಿಯೇ ಕೆಲಸ ಮಾಡುತ್ತಿದ್ದಾರೆ

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧಖಾತೆ)

(೫ನೇ ಪುಟದಿಂದ ಮುಂದುವರಿದುದು.)

ಸುಸ್ವಾಗತವಿತ್ತಿದೆ. ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯನ್ನಪೇಕ್ಷಿಸಿದೆ. ತಮ್ಮ ಸಮಾಜಕ್ಕೆ ಸಿಮ್ಲಾ ಸಮ್ಮೇಲನದಲ್ಲಿ ಪ್ರತಿನಿಧ್ಯವೀಯದುದಕ್ಕಾಗಿ ಆಂಗ್ಲೋ ಇಂಡಿಯನರ ನಾಯಕ ಮಿ. ಫ್ರೇಂಕ್ ಅಂತೋನಿ ಎಂ. ಎಲ್. ಎ,ಯವರು ದುಃಖಾಶ್ಚರ್ಯ ಸೂಚಿಸಿದ್ದಾರೆ ವೈಸರಾಯೀ ಕೌನ್ಸಿಲಿನಲ್ಲಿ ತಮಗೆ ಒಂದು ಪ್ರಾತಿನಿಧ್ಯವೀಯುವದನ್ನು ದಳಿತ ವರ್ಗದ ಪ್ರಮುಖರು ನಿಷೇಧಿಸಿದ್ದಾರೆ. "ದೇಶಕ್ಕಾಗಿ ಏನೊಂದೂ ತ್ಯಾಗಮಾಡದೆ ಲೀಗಿಗೆ ಕಾಂಗ್ರೆಸಿನೊಡನೆ ಸಾಮ್ಯತೆಯೆಂದರೇನು? ಅದರ ಯೋಗ್ಯತೆಗೆ ಮೀರಿದ ಪಾಲು ದೊರೆತಿದೆ. ದೇಶವೀದಿನ ನಿರುಪಾಯವಾಗದ ಮುಸ್ಲಿಂ ಲೀಗು ಈ ರೀತಿ ದರೋಡೆಯಿಂದ ಲಂಚ ಪಡೆಯಲು ನಾಚುವದಿಲ್ಲ" ಎಂದು ಅಖಿಲ ಭಾರತ ಮುಸ್ಲಿಂ ಮಜ್ಲೀಸ್‌ನ ಅಧ್ಯಕ್ಷ ಮಿ. ಎ ಎಮ್. ಖ್ವಾಜಾ ಟೀಕಿಸಿದ್ದಾರೆ 'ರಾಷ್ಟ್ರೀಯ ಮುಸಲ್ಮಾನರ ಹಿತಸಂಬಂಧಗಳು ಅಲಕ್ಷ್ಯಿಸಲ್ಪಟ್ಟಿವೆ ಮುಸಲ್ಮಾನರೊಳಗೇನೇ ಅಲ್ಪ ಸಂಖ್ಯಾಕರ ಸಂಸ್ಥೆಯಾಗಿರುವ ಲೀಗು ಸರ್ವಸ್ವವೆಂದು ಗಣಿಸಲ್ಪಟ್ಟಿದೆ" ಎಂದು ಶಾಮಹಮ್ಮದ್ ಉಮಾರ್ ಎಂ ಎಲ್. ಸಿ.ಗಳಂತಹ ರಾಷ್ಟ್ರೀಯ ಮುಸಲ್ಮಾನರು ದೂರಿದ್ದಾರೆ. ಯುದ್ಧ ಕಾರ್ಯದಲ್ಲಿ ವಿಶೇಷ ಸಹಕಾರವಿತ್ತದ್ದ ಪಂಜಾಬಿಗೆ ಪ್ರತ್ಯೇಕ ಪ್ರಾತಿನಿಧ್ಯವೀಯಬೇಕೆಂದು ಪಂಜಾಬಿ ಪ್ರಧಾನಿಗಳ ಬೇಡಿಕೆಯಿದ್ದು, ಅವರು ಸಿಮ್ಲಾದಲ್ಲಿ ಎಲ್ಲರಿಗಿಂತ ಮೊದಲೇ ವೈಸರಾಯರ ಭೇಟಿ ಪಡೆದಿದ್ದಾರೆ ವೈಸರಾಯಿ ಕೌನ್ಸಿಲಿನಲ್ಲಿ ಮುಸಲ್ಮಾನರಿಗಿರುವ ೫ ಸ್ಥಾನಗಳಿಗೂ ಮುಸ್ಲಿಂ ಲೀಗಿನ ಸೂಚೀ ಪತ್ರದಲ್ಲಿರುವ ಹೆಸರುಗಳನ್ನೇ ಆರಿಸಬೇಕೆಂದು ಜಿನ್ನರ ಹಠವಿರುವಂತಿದೆ. ಅವರ ವೈಸರಾಯರು ಲೀಗಿಗೆ ಮೂರು ಸ್ಥಾನಗಳನ್ನೀಯಲು ಮಾತ್ರ ಸಿದ್ಧರಿದ್ದಾರಂತೆ ಜಿನ್ನರ ಈ ಛಲವಾದಿತನದಿಂದ ಸಮ್ಮೇಲನವು ಒಡೆದುಹೋಗುವ ಅಪಾಯವಿದೆ—ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸ್ಪಷ್ಟೀಕರಣ ಕೇಳಿರುವ ೧೩ ವಿಷಯಗಳಲ್ಲಿ ಅಂತಹ ಕಂಟಕವಿಲ್ಲವೆಂದು ತಿಳಿದುಬರುತ್ತದೆ.

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency They are issued at present at the prices of Rs 8/4, 82/8 412/8 & 825/ and repayable on maturity as Rs. 10, 100 500 & 1000 respectively

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI (S India)
T. A PAI B Com. (Hom) A I I B
General Manager

Unique facilities under Housing Scheme!
Rare opportunity for solve the Children Education Problem!

THE CENTRAL
MERCANTILE ASSURANCE CO., LTD.

ನಿಮ್ಮ ಮರಣಾನಂತರ ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡುವವರಾರು
— ನಿಮ್ಮ ಕಾಲಾನಂತರ ನಿಮ್ಮ ಆಶ್ರಿತರ ಸುಖ ಬಯಸುವಿರಾದರೆ —
ಒಂದೇ ಒಂದು ದಾರಿಯಿದೆ! ಯಾವುದು? **ಜೀವ ವಿಮೆ!**

ತಮ್ಮ ಮಕ್ಕಳ ವಿದ್ಯಾಭ್ಯಾಸವು ಏನೊಂದೂ ಎಡರು ತೊಡರುಗಳಿಲ್ಲದೆ ನಡೆದು ತಾವಿರುವಾಗಲೇ ಅವರು ಜೀವನದಲ್ಲಿ ಯಶಸ್ವಿತೆಯನ್ನು ಅವರು ಆನಂದದ ನೆಲೆವೀಡನ್ನು ನೋಡಬಲಿಚ್ಛಿಸದಿರುವ ತಂದೆ ತಾಯಿಗಳಾರಿರುವರು ಅಂತಹ ಎಜ್ಯುಕೇಶನ್ ಎಂಡೋವ್‌ಮೆಂಟ್ ಎಂಬ ಹೊಸ ಕ್ರಮದಿಂದ ಈ ಸತ್ಕಾರ್ಯದಲ್ಲಿ ಸರ್ವ ವಿಧದ ಸೌಕರ್ಯಗಳನ್ನು ಒದಗಿಸಿಕೊಡಲು ಸಿದ್ಧವಿದೆ. ಆದ್ದರಿಂದ ಭಾವೀ ಜೀವನದಲ್ಲಿ ಬೇಕನ್ನು ಕಾಣಲಿಚ್ಛಿಸುವಿರಾದರೆ ಭಾರತದ ಅಗ್ರಗಣ್ಯ ವಿಮಾ ಕಂಪೆನಿಗಳಲ್ಲೊಂದಾದ

'ಸೆಂಟ್ರಲ್ ಮರ್ಕೆಂಟೈಲ್'

ಈ ವಿಧದ ನಿಮ್ಮ ಪವಿತ್ರೋದ್ದೇಶವನ್ನು ಈಡೇರಿಸಲು ಬದ್ಧಕಂಕಣವಾಗಿದೆ ಎಂಬುದನ್ನು ಮರೆಯಬೇಡಿರಿ!

ಎಲ್ಲೆಲ್ಲೂ ಏಜೆಂಟರೂ ಓರ್ಗನೈಜರರೂ ಬೇಕಾಗಿರುವರು!

ಕೂಡಲೆ ಬರೆಯಿರಿ.—

B. DIVAKARA HEGDE,
AGENCY ORGANIZER,
Central Mercantile Assurance Co., Ltd.,
Patel House, Churchgate Street,
FORT, BOMBAY.



BALMATTA ROAD MANGALORE S.K.

Approved firm by the Govt. of Mysore
Certified by the Agent of the Govt of India in Ceylon.

ಮಂಗಳೂರು.

ಕ್ಯಾಶ್‌ಮೆಮೊ ಕೊಡಲೇಬೇಕು

ಕೆಲವು ವ್ಯಾಪಾರಿಗಳು ಸಾಮಾನು ಪಡೆಕೊಂಡವರಿಗೆ ಕ್ಯಾಶ್‌ಮೆಮೊಗಳನ್ನು ಕೊಡುವುದಿಲ್ಲ; ಮತ್ತೆ ಕೆಲವರು ಕೊಡುವ ಮೆಮೊಗಳಲ್ಲಿ ವಿವರಗಳೇ ಇರುವುದಿಲ್ಲವಾಗಿ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಆಪಾದನ ಬಂದಿರುವುದು. ಕ್ಯಾಶ್‌ಮೆಮೊಗಳನ್ನು ಕ್ರಮವಾಗಿ ಬರೆದುಕೊಡದವರ ಮೇಲೆ 'ಲಾಭಕೋರತನ ಮತ್ತು ಗುಪ್ತ ಸಂಗ್ರಹ ನಿವಾರಣಾ' ಆರ್ಡಿನೆನ್ಸ್ ಪ್ರಕಾರ ತಕ್ಷೀರು ಹೂಡಲ್ಪಟ್ಟು ತಕ್ಕ ಶಿಕ್ಷೆ ವಿಧಿಸಲಾಗುವುದು ಎಂದು ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಜಾಹೀರು ಪ್ರಕಟಣೆ ಸಂಬಂಧಪಟ್ಟವರಿಗೆಲ್ಲಾ ಮುಂಜಾಗ್ರತೆಯನ್ನಿತ್ತಿರುವುದು.

ಜಿಲ್ಲಾ ಆಹಾರ ಪರಿಸ್ಥಿತಿಯಲ್ಲಿ ಸುಧಾರಣೆ-ಯ ಸಲುವಾಗಿ ಕೇಂದ್ರ ಸರಕಾರದ ಆಹಾರ ರಾಯಭಾರಿ ದ. ಕ. ಜಿಲ್ಲೆಯ ಪರವಾಗಿ ಮುದ್ರಾಸ ಸರಕಾರಕ್ಕೆ ಇನ್ನಷ್ಟು ಸಹಾಯವನ್ನೀಯುವರ ಆಲೋಚಿಸಲಾಗುತ್ತಿದೆಯೆಂದು ಕೇಂದ್ರ ಸರಕಾರದಿಂದ ಶ್ರೀ. ಕೆ ಬಿ. ಜಿನರಾಜ ಹೆಗ್ಡೆಯವರಿಗೆ ಪತ್ರ ಬಂದಿರುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ

NOTICE

ಪುತ್ತೂರು ಡಿ ಮು ಕೋರ್ಟಿನಲ್ಲಿ

R. I A 257/1945

O S. 443/194

ಭಾಮಿ ಉಪೇಂದ್ರ ಶಣ್ಯ ಅರ್ಜಿದಾರ

೧ ಹಮ್ಮದ್ ಬ್ಯಾರಿ ೨ ಅಬ್ಬು ಬ್ಯಾರಿ ೩ ಇಬ್ರಾಯಿ ಬ್ಯಾರಿ ೪ ಬಿ. ಪಾತುಮ್ಮ ೫ ಸಲಿಮ ಬ್ಯಾತಿ ೬ ಇಬ್ರಾಹಿಮಾನ್ ಬ್ಯಾರಿ ೭ ಸುಬ್ಬಮ್ಮ ೮ H. ಶ್ರೀನಿವಾಸ ರಾವ್ ೯ ಅಬ್ದುಲ್ಲ ಬ್ಯಾರಿ ೧೦ ಮಮ್ಮಬ್ಬ ಬ್ಯಾರಿ ೧೧ ಹಸನಾರೆ ಬ್ಯಾರಿ ೧೨ ಅಲಿಮಮ್ಮ ೧೩ ಅಮದ ಬ್ಯಾರಿ—ಎದ್ರಿರು

ಸದ್ರಿ ೯ನೇ ಎದ್ರಿ ಅಬ್ದುಲ್ಲ ಬ್ಯಾರಿ, ೧೦ನೇ ಎದ್ರಿ ಹಮ್ಮಬ್ಬ ಬ್ಯಾರಿ ೧೧ನೇ ಎದ್ರಿ ಹಸನಾರೆ ಬ್ಯಾರಿಗೆ ಕೂಡಾ ಈ ಮೂಲಕ ತಿಳಿಸುವದೇನೆಂದ್ರೆ

ಮೇಲ್ಕಂಡ ವ್ಯಾಜ್ಯದಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ಪ್ರಕಾರದ ಹಣವನ್ನು ಅರ್ಜಿದಾರನು ಕೋರ್ಟಿಗೆ ಟೆಂಡರು ಮಾಡಿ ಆವ್ಯಾರು ಖುಲಾಸಿನಿಂದ ಆಸ್ತಿ ಸ್ವಾಧೀನತೆಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ಅರ್ಜಿ ಕೊಟ್ಟಿರುವದರಿಂದ ಸದ್ರಿ ಅರ್ಜಿ ಕುರಿತು ನಿಮಗೇನಾದರೂ ಆಕ್ಷೇಪವಿರುವದಾದರೆ ನಿಮ್ಮ ಆಕ್ಷೇಪಣೆಯನ್ನು ತಾರೀಕು ೪-೭-೧೯೪೫ನೇ ದಿನ ಹಗಲು ಘಂಟೆ ೧೧ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು; ಅಂತಲೂ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆಂದೂ ಈ ಮೂಲಕ ತಿಳಿಸಲಾಗಿಯದೆ

ಪುತ್ತೂರು, 17-6-45 } *B Shivarama Holla* Advocate for petitioner

ಚಂದ್ರಮ್ಮಾ ಸ್ಮಾರಕ ಮಂದಿರ-ಶ್ರೀ ಆರ್ ಆರ್ ಕರ್ಕೇರರು ಮಂಗಳೂರಿನ ಸೂಟರ್ ವಿದ್ಯಾರ್ಥಿ ಭವನಕ್ಕೆ ತಮ್ಮ ದಿವಂಗತ ಪತ್ನಿ ಚಂದ್ರಮ್ಮನವರ ಸ್ಮಾರಕವಾಗಿ ಕಟ್ಟಿಸಿದ ಮಂದಿರದ ಉದ್ಘಾಟನೆಯು ರಾವ್ ಸಾಹೇಬ್ ಪಿ. ರಾಮದಾಸ್, ಜಿಲ್ಲಾ ಕಲೆಕ್ಟರ್ ಇವರ ಅಧ್ಯಕ್ಷತೆಯಲ್ಲಿ ತಾ ೨೩ರಲ್ಲಿ ಜರಗಿತು. ರಾವ್ ಬಹದ್ದೂರ್ ಯಂ ಗಿರಿಯಪ್ಪನವರ ಸ್ವಾಗತ ಭಾಷಣವಾದ ಮೇಲೆ ಶ್ರೀಗಳಾದ ಪಿ ಆರ್ ಆರ್ ಪ್ರಾಂಜ್, ಜಿ ಸೋಮಶೇಖರ ರಾವ್, ಬಿ ವೈಕುಂಠ ಬಾಳಿಗ, ಉಪ್ಪಾಜಿ ಸುವರ್ಣ, ಜಿ ಅಪ್ಪಯ್ಯ ಮೊದಲಾದವರ ಭಾಷಣಗಳಾದುವು

ಕೆನರಾ ವಣಿಜ ಸಂಘ-ದ ವಾರ್ಷಿಕೋತ್ಸವವು ತಾ ೨೪ರಲ್ಲಿ ಸಂಘದ ಅಧ್ಯಕ್ಷ ಶ್ರೀ ನಿರಲಜೆ ಪುರುಷೋತ್ತಮ ಶೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನವಾದ ಮೇಲೆ ಹೊಸ ವರ್ಷಕ್ಕೆ ಕಾರ್ಯಕಾರಿ ಮಂಡಳಿಯು ರಚಿಸಿಯಾಯಿತು. ಹೊಸ ವರ್ಷಕ್ಕೆ ಶ್ರೀ ಪಿ ವೈಕುಂಠ ಬಾಳಿಗರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ

ಉಡುಪಿ

ಸಂತಾಪ ಸೂಚಕ ಸಭೆ-ತಾ ೨[illegible]ನೇ ದಿನ ಕಲಾವೃಂದದಲ್ಲಿ ಪಂಡಿತ ವೆಂಕಟರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ವೃಂದದ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣರಾದ ಶ್ರೀ ಶ್ರೀ ವಿಬುಧಮಾನ್ಯ ತೀರ್ಥರು ಅಕಾಲದಲ್ಲಿ ಕಣ್ಮರೆಯಾದುದಕ್ಕಾಗಿ, ಸಂತಾಪ ಸೂಚಕ ಸಭೆಯು ಜರಗಿತು. ಆದಿಯಲ್ಲಿ ಶ್ರೀ ಸುಬ್ರಾಯ ಪುರಾಣಿಕ, ತಿರೂಮಣಿ ಅವರು ಮತ್ತು ಶ್ರೀ ಕೆ ಶಂಕರನಾರಾಯಣ ಉಪಾಧ್ಯಾಯರು ಗತಿಸಿದ ಶ್ರೀಗಳವರ ಧೈರ್ಯ, ಔದಾರ್ಯ, ಸಾಹಿತ್ಯ ತತ್ಪರತೆ ಮೊದಲಾದ ಉತ್ಕೃಷ್ಟ ಗುಣಗಳನ್ನು ಗಾನಮಾಡಿದ ನಂತರ ಅಧ್ಯಕ್ಷರು ಅವರ ಉಜ್ವಲ ಜೀವನವನ್ನು ತಮ್ಮ ಗಾಂಭೀರ್ಯದಿಂದ ಕೂಡಿದ ವಾಕ್ಸರಣಿಗಳಿಂದ ವಿವರಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯು ದೊರಕುವಂತೆ ಒಂದು ನಿಮಿಷ ಮೌನದಿಂದ ದೇವರನ್ನು ಪ್ರಾರ್ಥಿಸುವುದೇ ನಮ್ಮ ಕರ್ತವ್ಯವೆಂದು ಹೇಳಿ, ಆ ಕಾರ್ಯವನ್ನು ಪೂರ್ತಿಗೊಳಿಸಿದರು. ಕೊನೆಗೆ ಕಾರ್ಯದರ್ಶಿಗಳು ದಿವಂಗತರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಸರ್ವಾನುಮತಿಯನ್ನೊಳಗೊಂಡ ಠರಾವನ್ನು ಪಠಿಸಿ, ಧನ್ಯವಾದ ಪುರಸ್ಸರ ಸಭೆಯನ್ನು ಮುಕ್ತಾಯಗೊಳಿಸಿದರು.

ಮುನಿಸಿಪಲ್ ಕೌನ್ಸಿಲು ಮೀಟಿಂಗು ತಾ [illegible]ರಲ್ಲಿ ಚೆಯರ್‌ಮೆನ್ ಶ್ರೀ [illegible] ಲಕ್ಷ್ಮೀನಾರಾಯಣ[illegible]ಯರ ಅಧ್ಯಕ್ಷತೆಯಲ್ಲಿ ಜರಗಿ ಕೌನ್ಸಿಲಿನ ಗವರ್ನಮೆಂಟ್ ಆಡಿಟ ವರದಿ ಮಂಜೂರುಮಾಡಲಾಯಿತು. ಈ ಸಂದರ್ಭದಲ್ಲಿ ಚೆಯರ್‌ಮೆನ್, ಕೌನ್ಸಿಲರ್ಸ್, ಕಮಿಶನರ್ ಇವರೊಳಗೆ ಸತ್ಸಹಕಾರವಿತ್ತೆಂಬುದನ್ನು ಸಹ ರಿಕಾರ್ಡುಮಾಡಲಾಯಿತು. ಬಿಲ್ ಕಲೆಕ್ಟರರ ಎರಡು ಹುದ್ದೆಗಳು ಖಾಯಮಾಗಿ ಸೆಂಕ್ಷನ್ ಮಾಡಲಾದುವು. ಹಾಜಿ ಅಬ್ದುಲ್ಲಾ ಜುಬ್ಲೀ ಜಿಯಮಿನ ಸೂಪರಿಂಟೆಂಡಂಟರಿಗೆ ಗೌರವಾರ್ಥ ಪ್ರತಿಮಂ ರೂಪಾಯಿ ಎಪ್ಪತ್ತು ಸೆಂಕ್ಷನ್ ಮಾಡಲಾಯಿತು. ಥಿಯೇಟರ್ ನಡೆಸುವವರಿಗೆ ಸ್ಕೇಲ್ ಟೇಕ್ಸ್ ರಿಯಾಯತಿ ಬಿಡಲು ಸಾಧ್ಯವಿಲ್ಲವೆಂದು ನಿರ್ಧರಿಸಲಾಯಿತು. ಶ್ರೀ ಅದಮಾರು ಮಠದ ಶ್ರೀ ವಿಬುಧಮಾನ್ಯತೀರ್ಥ ಸ್ವಾಮಿಜಿಯವರ ಅಕಾಲನಿಧನದ ಸಲುವಾಗಿ ಸಂತಾಪ ಸೂಚಕ ನಿರ್ಣಯವನ್ನು ಶ್ರೀ ಆರ್ ಆರ್ ಕುಂಜೂರ್ ಅವರು ಸಭಾರಂಭದಲ್ಲಿ ತಂದುದನ್ನು ಪಾಸುಮಾಡಲು ಎಲ್ಲಾ ಮೆಂಬರರು ಎದ್ದು ನಿಂತಿರುವಷ್ಟರಲ್ಲಿ ಆಗತಾನೆ ತಡವಾಗಿ ಬಂದ ಶ್ರೀ ಕೆ. ಗುರುರಾಜ ರಾಯರು, ಹಿಂದೆ ಕೀರ್ತಿಶೇಷ ಶ್ರೀ ಸೋದೆಸ್ವಾಮಿಗಳವರ ಬಗ್ಗೆ ಠರಾವು ಮಾಡಲಿಲ್ಲವೆಂಬ ಕಾರಣದಿಂದ ಆಕ್ಷೇಪಿಸಿದರು. ಇವರ ಆಕ್ಷೇಪದಿಂದಾಗಿ ನಿರ್ಣಯವು ಬಿದ್ದು ಹೋಯಿತು.

ಬೆಳ್ತಿಗೆ ಸುಗ್ಗಿ ಅಕ್ಕಿ-ರೇಶನ್ ಅಂಗಡಿಗಳಲ್ಲಿ ಕೊಡಲಾರಂಭವಾಗಿಯದೆ. ಇನ್ನು ಎರಡು ತಿಂಗಳ ನಂತರ ಅದರ ವಿತರಣೆಯಾದರೆ ಜನರ ಆರೋಗ್ಯದೃಷ್ಟಿಯಿಂದ ಒಳ್ಳೆಯದು. ಕಾರ್ತಿ ಬೆಳ್ತಿಗೆಯನ್ನು ಬಳಸಿಡುವ ಉದ್ದೇಶ್ಯವಾದರೂ ಏನು?

ಕಾಫಿ ಪುಡಿ-ಜನರಿಗೆ ಸರಾಗವಾಗಿ ಸಾಕಷ್ಟು ಕಾಫಿ ಪುಡಿ ದೊರೆಯುವುದಿಲ್ಲ. ಕಾಫಿ ಪುಡಿ ವ್ಯಾಪಾರಿಗಳಿಗೆ ಕಾಫಿ ಬೀಜದ ಸರಬರಾಯಿ ಅತ್ಯಲ್ಪ ಪ್ರಮಾಣದಲ್ಲಿ ಆಗುತ್ತಿರುವುದೇ ಕಾರಣವಂತೆ

ಶ್ರೀ ಭಟ್ಟಯವರ ಆಕಸ್ಮಿಕ ಮರಣ-ಇದೇ ತಾ 26ನೇ ಅಪರಾಹ್ನ 3 ಘಂಟೆಗೆ, ಮುನ್ಸಿಪಲ್ ಆಫೀಸಿಗೆ ಕಾರ್ಯಾರ್ಥವಾಗಿ ಹೋಗಿ ಮರಳುತ್ತಿದ್ದ ಶ್ರೀ ಕೆ ಲಕ್ಷ್ಮಣ ಭಟ್ಟಯವರು ಸರಕಾರೀ ಆಸ್ಪತ್ರೆಯ ಮುಂಭಾಗದ ರಸ್ತೆಯಲ್ಲಿ ಬರುತ್ತಿದ್ದಂತೆಯೇ ಹೃದಯ ಸ್ತಂಭನಗೊಂಡು ಮೃತರಾದುದು ಶೋಚನೀಯವಿದೆ. ನಡೆಯುತ್ತಿರುವಾಗ ಶ್ರೀಯುತರೊಮ್ಮೆ ಮುಗ್ಗರಿಸಿ ಬಿದ್ದು ಮುಖಕ್ಕೆ ಸಾಮಾನ್ಯವಾಗಿ ಕಣ್ಣಡಕವೊಡೆಯಿತಾದರೂ ಸ್ವತಃ ಚೇತರಿಸಿಕೊಂಡೆದ್ದು ಕರವಸ್ತ್ರದಿಂದ ಮುಖವೊರಸಿಕೊಂಡರು. ನೆರೆದವರು ಡಾಕ್ಟರರಲ್ಲಿಗೆ ಹೋಗುವ ಸಲಹೆ ಕೊಟ್ಟರು. ಆದರೆ ಶ್ರೀ[illegible] ಹೋಗುವ ಬಯಕೆ ಪ್ರದರ್ಶಿಸಿದ್ದರಿಂದ ಜಟಕಕ್ಕೆ ಹೇಳಿ ಕಳುಹಿಸಲಾಯಿತು. ಆಸ್ಪತ್ರೆಗೆ ಇಬ್ಬರ ಕೈಯನ್ನಾಧರಿಸಿಕೊಂಡು ಒಂದೆರಡು ಹೆಜ್ಜೆ ಮುಂದಿಟ್ಟವರು ಅಲ್ಲಿಯೇ ಕುಸಿದು ಕುಳಿತು ಕೂಡಲೇ ಮರಣಗೊಂಡರು. ಶ್ರೀಯುತರು ಪ್ರಾಥಮಿಕ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರರಾಗಿದ್ದು, ಕೆಲವು ವರುಷಗಳಿಂದ ವಿರಾಮವೇತನ ಪಡೆಯುತ್ತಿದ್ದರು. ಅವರು ಸಹೃದಯಿ, ಉದಾರಿ, ನಿಷ್ಪಕ್ಷಪಾತಿ ಮತ್ತು ತೂಕದ ಮನುಷ್ಯನೆಂದು ಶಾಲಾಧಿಕಾರಿಯಾಗಿರುವಾಗಲೂ ಆ ಮೇಲೂ ಗೌರವ ಸಂಪಾದಿಸಿದ್ದರು. ಮೃತರ ಆತ್ಮಕ್ಕೆ ಶಾಂತಿಯಿರಲಿ.

ಹಿಂದೂ ಶವಸಂಸ್ಕಾರ ಸಮಿತಿ-ಯ ಎಕ್ಸ್‌ಟ್ರಾರ್ಡಿನರಿ ಜನರಲ್ ಮೀಟಿಂಗನ್ನು ಆದರ ಕೆಲವು ಮುಖ್ಯವಾದ ನಿಯಮಗಳನ್ನು ತಿದ್ದುಪಡಿಸುವ ಕುರಿತು ಇದೇ [illegible] ಬರುವ ಜುಲೈ ತಾ. ೧ಕ್ಕೆ ಆದಿತ್ಯವಾರ ೫ ಗಂಟೆಗೆ ಉಡುಪಿ ಪ್ರಭಾಕರ ಪ್ರೆಸ್ಸಿನ [illegible]ರದಲ್ಲಿ ಕರೆಯಲ್ಪಟ್ಟಿದೆ. ಎಲ್ಲಾ ಮೆಂಬರರು ಆ ದಿನ ಸಕಾಲಕ್ಕೆ ಹಾಜರಾಗಬೇಕಾಗಿ ಸದರಿ ಸಮಿತಿಯ ಪ್ರೆಸಿಡೆಂಟರು ತಿಳಿಸುತ್ತಾರೆ.

ಶಿರ್ವ-ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ಆಡಳಿತೆಯಲ್ಲಿರುವ 'ಹಿಂದೂ ಹಾಯಿ'ಯಲ್ಲಿ ಹಯರ್ ಎಲಿಮೆಂಟರಿ ತರಗತಿಗಳನ್ನು ತೆರೆಯುವ ಸಮಾರಂಭವು, ಶ್ರೀ ಸಿ ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ತಾ. 4-7 45ನೇ ಮಧ್ಯಾಹ್ನ ಜರಗಲಿರುವದು, ಶಾಲಾ ಕಟ್ಟಡವನ್ನು ದಾನವಿತ್ತಿದ್ದ ದಿವಂಗತ ಎನ್ ಕೃಷ್ಣ ಪೈಗಳ ಭಾವ ಚಿತ್ರ ಅನಾವರಣ ಇತ್ಯಾದಿ ಕಾರ್ಯಕ್ರಮಗಳಿರುವವು; ಸರ್ವರಿಗೂ ಆಮಂತ್ರಣವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂದಾಪುರ-ಇಲ್ಲಿಯ ಎಸ್ ಆರ್. ಎಸ್ ಹೋವರ್ ಬಿಲ್ಡಿಂಗ್ ಕಮಿಟಿಯ ಸಭೆಯು ತಾ ೧೭-೬-೪೫ರಂದು ವಿದ್ಯಾರ್ಥಿ ನಿಲಯದಲ್ಲಿ ಶ್ರೀ ಸೌಕೂರು ಅಂತಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಉಕ್ತ ವಿದ್ಯಾರ್ಥಿ ಭವನದ ಕಟ್ಟೋಣದ ಸಲುವಾಗಿ ಈ ವರೆಗೆ ನಡೆದ ವಾಗ್ದಾನ, ವಸೂಲಿ ಮತ್ತು ಅವಶ್ಯವುಳ್ಳ ಖರ್ಚಿನ ಪರಿಶೀಲನೆ, ಸೆಕ್ರೆಟರಿ ಸ್ವಾಧೀನ ಹಾಲಿ ಇರುವ ಶಿಲ್ಕಿನ ವ್ಯವಸ್ಥೆ, ಭವನದ ಸ್ಥಳದಲ್ಲಿ ನಡೆದ ಆಕ್ರಮಣದ ಬಾಬಿನ ನಿವೃತ್ತಿಯ ವಿಚಾರ, ಕಟ್ಟೋಣದ ಪ್ಲೇನು ತಯಾರಿಸುವ ಏರ್ಪಾಡು, ಕಮಿಟಿಯವರು ಭವನದ ಕಟ್ಟೋಣದ ಬಗ್ಗೆ ಅವಶ್ಯವುಳ್ಳ ವಂತಿಗೆಯ ವಾಗ್ದಾನ ವಸೂಲಿ, ಹಾಗೂ ಆಗತ್ಯವುಳ್ಳ ಖರ್ಚು ಮಾಡುವ ಬಗ್ಗೆ ದ ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಪರವಾನಗಿಯನ್ನು ಪಡೆಯುವುದು, ಮತ್ತು ಕಟ್ಟಡದ ಕೆಲಸದ ಮೇಲ್ವಿಚಾರ ಹಾಗೂ ವಂತಿಗೆ, ವಸೂಲಿ, ಖರ್ಚು [illegible] ಲೆಕ್ಕಪತ್ರಗಳ ವ್ಯವಸ್ಥೆಯ ಕುರಿತು ಕಮಿಟಿಯ ಸದಸ್ಯರಲ್ಲೊಬ್ಬರ ನೇಮಕ ಇತ್ಯಾದಿಗಳಲ್ಲಿ ಉಪಯುಕ್ತ ಕಾಣುವ ನಿರ್ಣಯಗಳು ಮಂಜೂರಾದ ನಂತರ ಸಭೆಯು ಚದರಿತು.

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ, ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು' ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರುರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯು, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್

No Substitute Yet.

This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,
UDIPI, (S. India)

ದಕ್ಷಿಣ ಕನ್ನಡ.

ಮಂಗಳೂರು

ಹರತಾಳ- ಮಂಗಳೂರಿನ ಸುಪ್ರಸಿದ್ಧ ಸಾಹುಕಾರರಾಗಿದ್ದ ಶ್ರೀ ಮಂಜೇಲ್ ಅಣ್ಣಪ್ಪ ನಾಯ್ಕರವರು ತಾ. ೧೭ರಲ್ಲಿ ಮುಂಬಯಿಸಲ್ಲಿ ನಿಧನ ಹೊಂದಿದ ದುಃಖವಾರ್ತೆ ತಲುಪುತ್ತಲೇ, ಮರುದಿನ ಮಂಗಳೂರಿನ ಸಾಹುಕಾರರು, ಜಾತಿಮತ ಭೇದವಿಲ್ಲದೆ ಎಲ್ಲರೂ, ತಂತಮ್ಮ ಅಂಗಡಿಗಳನ್ನು ಸಂತಾಪ ಸೂಚಕಾರ್ಥ ಮುಚ್ಚಿ, ತನ್ಮೂಲಕ ಮೃತರಿಗೆ ಗೌರವ ಸಲ್ಲಿಸಿದರು. ಅಂದೇ ಸೇರಲಿದ್ದ ಕೆನರಾ ಚೇಂಬರ್ ಓಫ್ ಕೊಮರ್ಸ್ ವಾರ್ಷಿಕ ಸಭೆಯು ಮೃತರ ಸ್ಮರಣಾರ್ಥ ಅಂದು ಸಂತಾಪ ಸೂಚಿಸಿ ಠರಾವು ಮಾಡಿ ತಾ ೨೩ನೇ ಶನಿವಾರಕ್ಕೆ ಮುಂದುವರಿಸಲ್ಪಟ್ಟಿತು

ನಗರ ಸಭೆ-ಯು ಕಳೆದ ಸೋಮವಾರ ಜರಗಿದಾಗ ನಗರದ ಆರೋಗ್ಯ ಇಲಾಖೆ ಸಿಬ್ಬಂದಿಗಳ ಮೇಲೆ ಕೆಲವು ಆರೋಪಗಳನ್ನು ಹೊರಿಸಿ ಇವರ ತನಿಖೆ ಬಗ್ಗೆ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಸೂಚಿಸಿದ ಶ್ರೀ ಲೋಬೋರವರ ಸೂಚನೆ ಮಾನ್ಯವಾಯಿತು. ಈ ಆರೋಪಗಳು ಕೌನ್ಸಿಲಿನ ಗುಪ್ತ ಸಭೆಯಲ್ಲಿ ಚರ್ಚಿಸಲ್ಪಡಬೇಕೆಂಬ ಸೂಚನೆ ಬಂದು ಠರಾವಿನ ಇತ್ಯರ್ಥವು ಮುಂದುವರಿಯಲ್ಪಟ್ಟಿತು.

ಜಿಲ್ಲಾ ಕಲೆಕ್ಟರ್—ರಾ ಸಾ. ಪಿ ರಾಮದಾಸರಿಗೆ ಅರಸರ ಜನ್ಮದಿನದಂದು 'ರಾವ್ ಬಹದ್ದೂರ್' ಎಂಬ ಬಿರುದು ಸಿಕ್ಕಿದೆ.

ಸ್ಥಳೀಯ ಕಮ್ಯೂನಿಸ್ಟ್-ಪಾರ್ಟಿಯ ಸಭೆಯೊಂದು ಶ್ರೀ ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಸೇರಿತು. ಪರದಿಯನ್ನೋದಿ ಪ್ರಚಲಿತ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದ ಬಳಿಕ, ಸಂಯುಕ್ತ ಪ್ರಾಂತದ ಸರಕಾರವು ಹಾಕಿದ ನೀಶಲ್ ಹಾರ್ ಮತ್ತು ಇತರ ಪಾರ್ಟಿಯ ದೇಶೀ ಭಾಷಾ ಪತ್ರಿಕೆಗಳ ಮೇಲಿನ ನಿರ್ಬಂಧವನ್ನು ನಿಷೇಧಿಸಲಾಯಿತು

ನಗರದ ಕೊ-ಒಪರೇಟಿವ್-ಸ್ಟೋರುಗಳ ವಾರ್ಷಿಕ ಸಭೆಯು ತಾ ೧೭ರಂದು ಸಂಘದ ಅಧ್ಯಕ್ಷ ಶ್ರೀ ಪಿ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಗತವರ್ಷದ ವರದಿ, ಲೆಕ್ಕಪತ್ರಗಳನ್ನು ಸ್ವೀಕರಿಸಲಾಯಿತು. ಈ ಸ್ಟೋರುಗಳ ಸಂಘದಲ್ಲಿ ೧೪೪೩ ಮಂದಿ 'ಎ' ಕ್ಲಾಸ್ ಸದಸ್ಯರೂ, ೩೧ ಮಂದಿ 'ಬಿ' ಕ್ಲಾಸ್ ಸದಸ್ಯರೂ ವರ್ಷಾದಿಯಲ್ಲಿದ್ದು ಇವರ ಒಟ್ಟು ಪಾಲು ಭಂಡವಾಲವು ರೂ ೬೫೬೬ ಆಗಿತ್ತು. ವರ್ಷಾಂತ್ಯದಲ್ಲಿ ಈ ಸಂಖ್ಯೆಗಳು ಅನುಕ್ರಮವಾಗಿ ೩೬೩೧, ೫೦ ಮತ್ತು ರೂ ೧೧,೮೩೦ ೬ ೦ ಆಗಿರುತ್ತದೆ ವರ್ಷದಲ್ಲಿ ೧೪ ಲಕ್ಷ ರೂಗಳ ಸಾಮಾನುಗಳನ್ನು ಕೊಂಡು ಕೊಂಡು ರೂ ೧೫ ಲಕ್ಷದಷ್ಟು ಸಾಮಾನು ವಿಕ್ರಯಿಸಿದೆ. ರೂ. ೩॥ ಸಾವಿರ ಲಾಭವಿದೆ ಹೊಸ ವರ್ಷಕ್ಕೆ ಶ್ರೀ ಪಿ ವ್ಯಾಸರಾಯರು ಅಧ್ಯಕ್ಷರಾಗಿಯೂ, ಶ್ರೀ ಎಸ್ ನರಸಪ್ಪಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಬಸ್ ಸ್ಟೇಂಡ್– ಉಡುಪಿಯಲ್ಲಿರುವಂತೆ ಹಂಪನಕಟ್ಟೆಯಲ್ಲಿ ಒಂದು ಯೋಗ್ಯ ಬಸ್ ಸ್ಟೇಂಡನ್ನು ಕಟ್ಟಿಸಲು ಮಂಗಳೂರು ಮುನಿಸಿಪಾಲಿಟಿಯಿಂದ ರೂಪಾಯಿ ೪೬,೦೦೦ ಮಂಜೂರು ಮಾಡಲಾಗಿದೆ

ನಳ್ಳಿ ನೀರು– ಮಂಗಳೂರು ನಗರಕ್ಕೆ ನಳ್ಳಿ ನೀರಿನ ಸರಬರಾಯಿ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತಿಯೊಬ್ಬನಿಗೆ ದಿನವೊಂದಕ್ಕೆ ೧೫ ಗೇಲನುಗಳಿಗೆ ಕಡಿಮೆಯಾಗದಷ್ಟು ನೀರ ನ್ನೊದಗಿಸುವ ಯೋಜನೆಯು ನಗರ ಸಭೆಯಿಂದ ಮಂಜೂರಾಗಿದೆ

ಕಾಂಗ್ರೆಸ್-ಲೀಗ್ ನೇವಲ್ಲ ಯೋಜನೆ– ತಾ ೧೭ರಲ್ಲು ಸೇರಿದ ಮಂಗಳೂರಿನ ಎಲ್ಲಾ ಟ್ರೇಡ್ ಯೂನಿಯನ್ನುಗಳ ಸಂಯುಕ್ತ ಸಭೆಯಲ್ಲಿ, ದೇಶದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು, ವೇವಲ ಯೋಜನೆಯನ್ನು ಕಾಂಗ್ರೆಸ್ ಲೀಗ್ ಮುಂದಾಳುಗಳು ಸ್ವೀಕರಿಸಬೇಕೆಂಬ ಠರಾವು ಪಾಸಾಯಿತು. ಶ್ರೀ ಬಿ ವಿ ಕಕ್ಕಿಲ್ಲಾಯರು ಅಧ್ಯಕ್ಷತೆ ವಹಿಸಿದ್ದರು

ಪುತ್ತೂರು ಸಹಕಾರಿ ಕಟ್ಟಡದಲ್ಲಿ- ಇದೇ ತಿಂಗಳ ತಾ ೬ರಿಂದ ಸರಕಾರಿ ಶಿಕ್ಷಣದ ಕ್ಲಾಸುಗಳು ೧೫ ದಿವಸಗಳ ಪರ್ಯಂತ ನಡೆಯಲಿರುವುವು. ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಬಾಲಕೃಷ್ಣ ಮೆನನ್, ಸಹಕಾರಿ ಟ್ರೇನಿಂಗ್ ಕಚೇರಿಯಿಂದ ಶ್ರೀ ಸಿ ಮಂಸ್ಸರಂಜರು, ಇವರುಗಳಿಂದ ಕ್ಲಾಸು ಜರಗಿಸಲ್ಪಡುತ್ತಿದೆ. ಇದೇ ಕ್ಲಾಸಿನ ಕೆಳಗೆ ತಾ ೧೪ರಲ್ಲಿ ವಕೀಲ್ ಶ್ರೀ ಎಚ್ ಪುಂಡರೀಕ ಭಟ್ಟರ ಅಧ್ಯಕ್ಷತೆಯಲ್ಲಿ ಆರೋಗ್ಯದ ವಿಚಾರ ಈ ರೇಂಜಿನ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಗೋಪಾಲಕೃಷ್ಣ ಅಯ್ಯರು ಭಾಷಣ ಮಾಡಿದರು. ಮಾಯಿಲಾಂಪ ದೇವಾವೆಯೂ ತೋರಿಸಲ್ಪಟ್ಟಿತು

ಸಿಡುಬು ರೋಗ–ವು ಇಲ್ಲಿಯ ಪರ್ಲಡ್ಕದಲ್ಲಿ ಪಿರ್ಣ ಆಚಾರಿ ಹೆಂಗಸಿಗೆ ಕಳೆದ ವಾರ ಕಾಣಿಸಿಕೊಂಡು ಮೃತಪಟ್ಟಿರುತ್ತಾಳೆಂದು ತಿಳಿದುಬರುತ್ತದೆ. ಇದಲ್ಲದೆ ಬಾಳೆಪ್ಪಾಡಿಯಲ್ಲಿ ಇಬ್ಬರಿಗೆ ತಗಲಿದಯಾದ್ದರಿಂದ ಸ್ಥಳೀಯ ಹೆಲ್ತ್ ಇನ್ಸ್‌ಪೆಕ್ಟರರು ಆ ಸ್ಥಳಗಳಿಗೆ ಸಂದರ್ಶಿಸಬೇಕಾದ ವ್ಯವಸ್ಥೆ ಕೈಕೊಂಡಿರುತ್ತಾರೆ. ನಗರ ಭಜನೆ ಮಂದಳಿಯವರು ಕಳೆದ ರವಿವಾರದಿಂದ ನಗರ ಭಜನೆಯನ್ನೂ ಆರಂಭಿಸಿರುತ್ತಾರೆ.

ಶ್ರೀ ಕೆ ಎಲ್. ಕುಡ್ವರ ನಿಧನ- ಕಾರ್ಕಳದ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬರೂ, ಸುಪ್ರಸಿದ್ಧ ವಕೀಲರೂ ಆಗಿದ್ದ ಶ್ರೀ ಕೆ ಲಕ್ಷ್ಮಣ ಕುಡ್ವ, ಬಿ. ಎ., ಬಿ ಎಲ್ ಇವರು ಕೆಲಕಾಲದಿಂದ ಅಸ್ವಸ್ಥರಿದ್ದು, ಚಿಕಿತ್ಸೆಗಾಗಿ ಮಂಗಳೂರಿನ ಸರಕಾರೀ ಆಸ್ಪತ್ರೆಗೆ ತೆರಳ್ಪಟ್ಟು, ಕಳೆದ ತಾ ೧೯ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುವೆವು. ಶ್ರೀ ಕುಡ್ವರು ಸೌಮ್ಯ ಸ್ವಭಾವದವರಾಗಿದ್ದರು. ವಿನಯಶೀಲರು. ರಾಜಕೀಯ, ಔದ್ಯೋಗಿಕ ತಾತ್ವಿಕ ಗ್ರಂಥ ವಾಚನಗಳನ್ನು ಬಹಳವಾಗಿ ಓದಿ ಅನುಭವವಿದ್ದವರು. ಕೆಲ ವರ್ಷಗಳ ಹಿಂದೆ ಕಾರ್ಕಳ ತಾಲೂಕು ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅನೇಕ ವರ್ಷ ಜಿಲ್ಲಾ ಕೊಂಗ್ರೆಸ್ ಕಾರ್ಯಕಾರಿ ಕಮಿಟಿಯ ಸದಸ್ಯರಾಗಿದ್ದರು. ಸತತ ಖಾದಿಧಾರಿಗಳು. ಹಿಂದೊಮ್ಮೆ ಕಾರ್ಕಳ ಕೋಅಪರೇಟಿವ್ ಸ್ಟೋರಿನ ಅಧ್ಯಕ್ಷರಾಗಿಯೂ ಇದ್ದರು. ಮೃತರ ವಯಸ್ಸು ಸುಮಾರು ೬೦. ಮೃತರ ಆತ್ಮಕ್ಕೆ ಚಿರಶಾಂತಿಯನ್ನೂ, ದುಃಖಿತ ಕುಟುಂಬಕ್ಕೆ ಸಮಾಧಾನವನ್ನೂ ಭಗವಂತನು ಪಾಲಿಸಲೆಂದು ಪ್ರಾರ್ಥನೆ

ಮೈಸೂರು ಪತ್ರ

ಕಾಂಗ್ರೆಸ್ ವಿಶೇಷಾಧಿವೇಶನ— ಮೈಸೂರು ಕಾಂಗ್ರೆಸ್ಸಿನ ವಿಶೇಷಾಧಿವೇಶನವು ತುಮಕೂರಿನಲ್ಲಿ ೧೬, ೧೭ನೇ ತಾರೀಕುಗಳಲ್ಲಿ ನಡೆಯಿತು. ಸಂಸ್ಥಾನದ ನಾನಾ ಕಡೆಗಳಿಂದ ಸುಮಾರು ೩೦೦ಕ್ಕೆ ಮೇಲ್ಪಟ್ಟು ಪ್ರತಿನಿಧಿಗಳು ಆಗಮಿಸಿದ್ದರು

ತುಮಕೂರು ಜಿಲ್ಲಾ ಅಧಿಕಾರಿಗಳು ತುಮಕೂರು ಟೌನಿನಲ್ಲಿ ಮೆರವಣಿಗೆ ನಡೆಯಬಾರದೆಂದು ಪ್ರತಿಬಂಧಕಾಜ್ಞೆ ಜಾರಿಮಾಡಿದ್ದರಿಂದ ಅಧ್ಯಕ್ಷರ ಮೆರವಣಿಗೆ ನಡೆಯಲಿಲ್ಲ

೧೫ನೇ ತಾರೀಕು ಸಾಯಂಕಾಲ ನೂತನ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರಿಗೆ ತುಮಕೂರು ವರ್ತಕ ಮಂಡಲಿ ಮತ್ತು ಪುರನಿವಾಸಿಗಳ ಪರವಾಗಿ ಬಿನ್ನವತ್ತಳೆ ಅರ್ಪಿಸಲಾಯಿತು. ಅದಕ್ಕೆ ಅವರು ಸೂಕ್ತ ರೀತಿ ಉತ್ತರವಿತ್ತರು

೧೬ನೇ ತಾರೀಕು ಬೆಳಿಗ್ಗೆ ೮ ಗಂಟೆಗೆ ಸರಿಯಾಗಿ ಶ್ರೀ ನಿಜಲಿಂಗಪ್ಪನವರು ರಾಷ್ಟ್ರೀಯ ಧ್ವಜವನ್ನೂ, ಶ್ರೀ. ಟಿ ಸುಬ್ರಹ್ಮಣ್ಯಂರವರು ಮೈಸೂರು ಧ್ವಜವನ್ನೂ ಆರೋಹಣ ಮಾಡಿ ಧ್ವಜದ ಮಹತ್ವವನ್ನು ವಿವರಿಸಿದರು.

ಮಧ್ಯಾಹ್ನ ೨ ಗಂಟೆಗೆ ಪ್ರತಿನಿಧಿಗಳಿಂದ ಚುನಾಯಿತರಾದ ಸದಸ್ಯರಿಂದ ಸೇರಿದ ವಿಷಯ ನಿರ್ಧಾರಕ ಸಮಿತಿಯ ಸಭೆಯು ನೂತನ ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪನವರ ಅಧ್ಯಕ್ಷತೆ ಸೇರಿತು. ಪ್ರಾರಂಭದಲ್ಲಿ ನಿವೃತ್ತರಾಗಲಿರುವ ಶ್ರೀ ಟಿ. ಸುಬ್ರಹ್ಮಣ್ಯಂರವರು ಪುಟ್ಟ ಭಾಷಣ ಮಾಡಿ ನೂತನ ಅಧ್ಯಕ್ಷರಿಗೆ ಅಧಿಕಾರ ವಹಿಸಿಕೊಟ್ಟರು. ನಂತರ ನಿರ್ಣಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಪ್ರತಿಬಂಧಕಾಜ್ಞೆಗಳನ್ನು ಹಿಂದಕ್ಕೆ ಪಡೆಯುವುದು, ಮೃತರಾದವರಿಗೆ ಅನುತಾಪ ವ್ಯಕ್ತಪಡಿಸುವದು, ಕಷ್ಟನಷ್ಟಗಳಿಗೆ ಗುರಿಯಾದವರಿಗೆ ಸಹಾನುಭೂತಿ ವ್ಯಕ್ತಪಡಿಸುವುದು, ರಚನಾತ್ಮಕ ಕಾರ್ಯಕ್ರಮ ಕೈಕೊಳ್ಳುವುದು, ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಒತ್ತಾಯಪಡಿಸುವುದು ಇವೇ ಮೊದಲಾದ ನಿರ್ಣಯಗಳು ಅಂಗೀಕೃತವಾದವು

ಸಾಯಂಕಾಲ ೭ ಗಂಟೆಗೆ ಬಹಿರಂಗ ಅಧಿವೇಶನ ಸೇರಿತು. ಸ್ವಾಗತಾಧ್ಯಕ್ಷ ಶ್ರೀ. ಮಾಲಿ ಮರಿಯಪ್ಪನವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಬಿ. ಸಿ ನಂಜುಂಡಯ್ಯನವರು ಮುಖಂಡರುಗಳಿಂದ ಸಂದೇಶಗಳನ್ನು ಓದಿದರು. ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣವನ್ನು ಓದಿದರು. ನಂತರ ವಿಷಯ ನಿರ್ಧಾರಕ ಸಮಿತಿಯಲ್ಲಿ ಅಂಗೀಕೃತವಾದ ನಿರ್ಣಯಗಳು ಮುಂದಿಡಲ್ಪಟ್ಟು ಅಂಗೀಕರಿಸಲ್ಪಟ್ಟವು. ೧೭ನೇ ತಾರೀಕು ಬೆಳಿಗ್ಗೆ ಸಾಯಂಕಾಲ ವಿಷಯ ನಿರ್ಧಾರಕ ಸಮಿತಿಯು ಸೇರಿ ಅನೇಕ ನಿರ್ಣಯಗಳನ್ನು ಅಂಗೀಕರಿಸಿದರು

ಅಧ್ಯಕ್ಷರು ಮುಕ್ತಾಯ ಭಾಷಣವನ್ನು ಬಹಿರಂಗ ಅಧಿವೇಶನದಲ್ಲಿ ಮಾಡಿದ ನಂತರ ಸ್ವಾಗತ ಕಾರ್ಯದರ್ಶಿ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದ ನಂತರ ಸಭೆ ಬರಖಾಸ್ತಾಯಿತು

ಸ್ವಾಗತ ಸಮಿತಿಯವರು ಎಲ್ಲಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಿದ್ದರು. ಅಧಿವೇಶನದ ಅಂಗವಾಗಿ ಒಂದು ಸ್ವದೇಶಿ ವಸ್ತು ಪ್ರದರ್ಶನ ಸಹ ಏರ್ಪಡಿಸಲಾಗಿತ್ತು.

ಖಾಸಗಿ ಮಂತ್ರಿಗಳ ನೇಮಕ— ಶ್ರೀಗಳಾದ ಟಿ ಸಿ ಎಂ ರಾಯನ್, ಎಚ್ ಎಸ್ ಷರೀಫ್ ಮತ್ತು ಎಲ್ ಸಿದ್ದಪ್ಪನವರನ್ನು ಖಾಸಗಿ ಮಂತ್ರಿಗಳಾಗಿ ನೇಮಿಸಿದ ಸರ್ಕಾರಿ ಪ್ರಕಟಣೆಯು ೧೬ನೇ ತಾರೀಕಿನ ದಿನ ಹೊರಬಿತ್ತು. ೧೮ನೇ ತಾರೀಕು ಅವರುಗಳು ಅಧಿಕಾರಸೂತ್ರ ವಹಿಸಿಕೊಂಡರು

ಡಾ। ರಾಯನ್‌ರವರು ಸ್ಥಳೀಯ ಸಂಸ್ಥೆಗಳ ಮತ್ತು ಆರೋಗ್ಯ ಸಚಿವರು. ಶ್ರೀ. ಎಚ್ ಎಸ್ ಷರೀಫರವರು ಮುಜರಾಯಿ ಮತ್ತು ಕೈಗಾರಿಕಾ ಸಚಿವರು, ಶ್ರೀ. ಎಲ್ ಸಿದ್ದಪ್ಪನವರು ಹಣಕಾಸಿನ ಮತ್ತು ಯುದ್ಧಾನಂತರದ ಅಭಿವೃದ್ಧಿ ಸಚಿವರಾಗಿರುವರು

ಮುಖಂಡರ ಹೇಳಿಕೆಗಳು– ನೂತನ ಮಂತ್ರಿಗಳ ನೇಮಕವು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾಗಿದೆಯೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ, ಮಾಜಿ ಅಧ್ಯಕ್ಷ ಶ್ರೀ ಕೆ ಟಿ ಭಾಷ್ಯಂ, ಪ್ರಜಾಪ್ರತಿನಿಧಿ ಸಭೆ ಕಾರ್ಯದರ್ಶಿ ಶ್ರೀ ಹನುಮಂತಯ್ಯ ಮೊದಲಾದವರು ಹೇಳಿಕೆಗಳನ್ನು ಇತ್ತಿದ್ದಾರೆ

NOTICE

ಕುಂದಾಪುರ ಡಿ ಮು ಕೋರ್ಟಿನಲ್ಲಿ

O S 186 1945

ವಾದಿರು ಭಾಗೀರಥಿ ಅಮ್ಮ ಕೂಡಾ

ಪ್ರತಿವಾದಿರು ೨ ಅಂತೋನಿ ಲೂಯಿಸ್ ಕೂಡಾ

ಪ್ರತಿವಾದಿರು ೧ ಅಂತೋನಿ ಲೂಯಿಸ್ ಪೇದ್ರು ಲುವಿಸರ ಮಗ ಉಡುಪಿ ತಾಲೂಕು ಐರೋಡಿ ಗ್ರಾಮ

೨ ಕೃಷ್ಣ ನಾಮದ, ೩ ಕಾಶಿ ನ್ನಾಮದ ವೆಂಕಟ್ರಮಣ ನಾಮದರ ಮಕ್ಕಳು ಉಡುಪಿ ತಾಲೂಕು ಕೋಡಿ ಗ್ರಾಮದ ಕನ್ನಾನದಲ್ಲಿರುವವರು

ವಾದಿರು ಪ್ರತಿವಾದಿರ ಮೇಲೆ ಆಸ್ತಿ ಸ್ವಾಧೀನತೆ ವ ಮುಟ್ಟುವಳಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾರೆ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದರೆ ತಾ ೧೦-೭-೧೯೪೫ನೇ ದಿವಸ, ಹಗಲು ೧೧ ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ತ್ವಾಹಿರುಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಎಕ್ಸ್‌ಪಾರ್ಟಿಯಲ್ಲಿ ಮುಂದಿನ ಕ್ರಮ ನಡೆಯಲಾಗುವದೆಂಬ ಸಂಗತಿಯನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ

Coondapoor 19 6 1945 — K Raghunath Shenai, ವಾದಿರ ಕಡೆ ವಕೀಲರು

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ದಿವಂಗತ ಶ್ರೀ ಪಂಡಿತ ತಾರಾನಾಥರ

ಪ್ರೇಮ ವಿದ್ಯಾಪೀಠದಲ್ಲಿ

ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್ ರವರಿಗೆ ಬರೆಯಬೇಕು

ಜಿ. ಸುಮತಿ ತಾರಾನಾಥ,

ಪ್ರಿನ್ಸಿಪಾಲ್.

ಪ್ರಕಟಣೆ

ಸೋಮಯ್ಯ ನಾಯ್ಕನ ಮಗ ಹಿರಿಯಡ್ಕ ಗ್ರಾಮದ ಶೀನ ನಾಯ್ಕನಾದ ನಾನು ಈ ವರೆಗೆ ಎಚ್. ಶೀನ ನಾಯ್ಕ ಎಂತ ಪಸ್ತು ಹಾಕುತ್ತಿದ್ದೆನನ್ನು ಇದೇ ಜನವರಿ ಪ್ರಾರಂಭದಿಂದ ಎಚ್ ಶ್ರೀನಿವಾಸ ರಾವ್ ಎಂತ ಬದಲಾಯಿಸಿರುತ್ತೇನೆ. ಇನ್ನು ಮುಂದೆ ನನ್ನ ಪ್ರತಿಯೊಂದು ಸಹಿಯೂ ಎಚ್ ಶ್ರೀನಿವಾಸ ರಾವ್ ಎಂತಲೇ ಇರುವುದು. ಮೇಲಿನ ತಾರೀಕಿನಿಂದ ನನ್ನ ಎಲ್ಲಾ ವಹಿವಾಟುಗಳೂ ಎಚ್. ಶ್ರೀನಿವಾಸ ರಾವ್ ಎಂಬ ಹೆಸರಿನಲ್ಲೇ ನಡೆಯುತ್ತವೆ ಎಂಬ ವಿಷಯವನ್ನು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿಯದೆ.

H Srinivas Rao

ಒಡೆದ ಕನ್ನಡಿ

(೨ನೇ ಪುಟದಿಂದ ಮುಂದುವರಿದುದು)

ದಲ್ಲಿ ಕೇಳಿದಂತೆ ಅವನ ಮಾತುಗಳು ಕಿವಿಗೆ ಬಿದ್ದೊಡನೆ ಖಂಡತುಂಡ ಉತ್ತರಕೊಟ್ಟಳು: "ಗೆಲ್ಲುವದಕ್ಕಾಗಿ ಪೋಷಾಕು ಬಿಟ್ಟವರ ಮೇಲೆ ನಿನ್ನ ಗಮನವಿರುವಂತೆ ಕೊಲ್ಲುವದಕ್ಕಾಗಿ ಪೋಷಾಕು ಮಾಡಿದವರ ಮೇಲಿಲ್ಲವಲ್ಲಾ! ಇನ್ನು ಕಾಲಾನುಗುಣ ವರ್ತನೆಯ ಮಾತು. ಅದಕ್ಕೆ ನಾವು ಯಾವಾಗಲೂ ಅದೃಷ್ಟ ಮತ್ತು ಜಮೀನ್ದಾರರ ಸಂಬಂಧದಲ್ಲಿರುವದೇ ಕಾರಣ".

ಈ ಮಾತು ರಮೇಶನಿಗೆ ನಾಟಿದಂತೆ ತೋರಿತು-ಅವನು ಶಂಕಿಸುತ್ತಾ ಕೇಳಿದ: "ಶೈಲಾ, ಹೀಗೆ ಮಾತಾಡುವದು ಯೋಗ್ಯತೆಯಲ್ಲ. ಏನಿದು, ಇದೊಂದು ಪ್ರದರ್ಶನ ವೈಯ್ಯಾರವೋ ಹೇಗೆ?"

ಮತ್ತೊಮ್ಮೆ ಕಟು ಉತ್ತರವೇ ಅವಳಿಂದ ಬಂತು; ಅದು ಕೆರಳಿದಾತ್ಮವು ಸಂದರ್ಭಾನುಸಾರವಾಗಿ ಕೊಡುವ ಧ್ವನಿಯಾಗಿತ್ತು. "ನಮ್ಮ ಯೋಗ್ಯತೆಯ ವರ್ಗಗಳೊಳಗೆ ಬಹಳ ಅಭ್ಯಂತರವಿದೆ ನಿಮಗೆ ತೆಗೆದುಕೊಳ್ಳುವದೊಂದೇ ಗೊತ್ತು; ನಮಗೆ ಕೊಡುವದೊಂದೇ ಗೊತ್ತು. ನೀವು ಬೇಡಿದ್ದನ್ನು ನಾವು ಕೊಡುವದು ಸಾಧ್ಯವೋ ಎಂಬ ಕುರಿತು ಬೇಡುವಾಗ ನೀವು ಎರಡುಬಾರಿ ಯೋಚಿಸಿಕೊಳ್ಳುವದೇ ಇಲ್ಲ ನಿಮ್ಮ ಇಚ್ಛಾಪೂರ್ತಿಗಾಗಿ ನಾವು ನಮ್ಮ ಆತ್ಯಾವಶ್ಯಕತೆಗಳನ್ನೂ ಅರ್ಪಿಸಿ ಬಿಡುತ್ತೇವೆ. ಕೆಲವೊಮ್ಮೆ ನಾವೇನನ್ನು ಕೊಡುತ್ತಿದ್ದೇವೆಂಬುದೇ ನಮಗೆ ಗೊತ್ತಿರುವದಿಲ್ಲ; ಕೆಲವೊಮ್ಮೆ ಅಗತ್ಯಕ್ಕಿಂತ ಮಿಕ್ಕಿದ್ದನ್ನೂ ಕೊಟ್ಟು ಬಿಡುತ್ತೇವೆ. ಅಂತೆಯೇ ನೀವು ನಿಮ್ಮಿಂದ ಕೊಡಲಸಾಧ್ಯವಿರುವದಕ್ಕಿಂತ ಹೆಚ್ಚಿನದನ್ನು ಪಡಕೊಂಡು ಬಿಡುತ್ತೀರಿ. ನಿಮ್ಮ ಹಣವು ಯಾವುದನ್ನು ಪಡಕೊಳ್ಳಲಾರದೋ, ಯಾವುದನ್ನು ಮರು ಪಾವತಿ ಮಾಡಲಾರದೋ ಅದನ್ನೂ ಅಪಹರಿಸಿಕೊಳ್ಳುತ್ತೀರಿ". ಅವಳ ಕಂಠವು ವಿಕ ಪ್ರಕಾರ ಧ್ವನಿಸುತ್ತಿತ್ತು. ಮುಂದುವರಿಸಿದಳು:- "ನೀನೇನು ಪ್ರದರ್ಶನ ವೈಯ್ಯಾರವೆಂದಿಯಾ? ಅದೆಂದರೇನೆಂಬುದೇ ನನಗೆ ಗೊತ್ತಿಲ್ಲ. ನಾನೊಬ್ಬ ರೈತರ ಹುಡುಗಿ; ಮಂಕುಗೊಳಿಸುವ ವಿದ್ಯೆ ಕಲಿತವಳಲ್ಲ. ನನಗೆ ಗೊತ್ತಿರುವದಿಷ್ಟೆ: ಒಂದು ಕಾಲದಲ್ಲಿ ಎಳೇ ಹುಡುಗಿಯೊಬ್ಬಳಿದ್ದಳು. ಸುಂದರಿಯೆಂದೇ ಹೇಳೋಣ ಅವಳ ಹೆಸರು ಶೈಲ. ಅವಳೊಬ್ಬನನ್ನು ಭೇಟಿಯಾದಳು. ಆತ ಆಕೆಯೊಡನೆ ಚೆಲ್ಲಾಟವಾಡಿದ. ಈಗ ಆಕೆ ಎಳೆ ಹುಡುಗಿಯಾಗಿಲ್ಲ. ಇಲ್ಲಿದೆ ಸಮಸ್ಯೆಯಾಗಿರುವ ಒಂದು ದುರಂತ"

ಅವಳ ಕಣ್ಣೆಗಳಿಂದ ಬೊಟ್ಟು ಬೊಟ್ಟು ಕಣ್ಣೀರುಗಳು ನಿಧಾನವಾಗಿ ಇಳಿಯುತಿದ್ದುವು. ಅವು ಬೇಡಿಕೆಯ ಅಥವಾ ನಾಚಿಕೆಯ ಕಂಬನಿಗಳಲ್ಲ. ತಮ್ಮದೇ ಆದ ಒಂದು ಘನತೆಯನ್ನೊಳಗೊಂಡಿದ್ದ ತುಂತುರುಗಳವು. ರಮೇಶ ಮೂಕನಾಗಿ ತನ್ನ ಬೂಟಿನ ತುದಿಯನ್ನು ನೋಡುತ್ತಾ ಕುಳಿತಿದ್ದ; ಚಾಬೂಕು ಹೊಡೆತ ತಿಂದವನಂತಿದ್ದ. ಶೈಲೆಗೇನು ಹೇಳಬೇಕೆಂಬುದೇ ಆತನಿಗೆ ತಿಳಿಯದು ಪ್ರಥಮತಃ ಸಿಡಿಲು ಮಿಂಚುಗಳನ್ನು ಕಂಡ ಮಗುವಿನಂತೆ ಆತ ಹೆದರಿ ಹೋಗಿದ್ದ. ಆಕೆಯ ಶಾಂತ ವೇದನೆಯಲ್ಲಿ ಒಂದಂಶ ಸಹಜತೆ, ಮತ್ತೊಂದಂಶ ಹೇಯತೆಯಿದ್ದಂತೆ ಕಾಣುತಿತ್ತು. ಶೈಲೆಯ ಮಾತು ಪುನಃ ಆತನನ್ನು ಬಡಿಯಿತು—"ನಿನ್ನ ಮದುವೆಗೆ ನನ್ನನ್ನಾಮಂತ್ರಿಸಿ ತಮಾಷೆ ಮಾಡುವ ಮನಸ್ಸಿದ್ದರೆ, ದಯವಿಟ್ಟು 'ಜ್ಯೋತಿ' ಎಂಬ ಹೆಸರಿಗೆ ಆಶ್ರಮದ ವಿಳಾಸಕ್ಕೊಂದು ಕಾರ್ಡು ಹಾಕಿಬಿಡು. ನಾನು ಸಮಾಜೋದ್ಧಾರ ಕಾರ್ಯ ಕೈಕೊಳ್ಳುತ್ತೇನೆ'.

ರಮೇಶ ತೊದಲುತ್ತಾ ಕೇಳಿದ—"ಅಂದರೆ ನೀನಿನ್ನು ಮದುವೆಯಾಗುವದೇ ಇಲ್ಲವೆ?"—ಈ ಪ್ರಶ್ನೆ ಕೇಳಲು ತನ್ನನ್ನು ಪ್ರೇರೇಪಿಸಿದುದಾವುದೆಂಬುದನ್ನು ಅವನರಿಯ.

ಈ ಸಂಭಾಷಣೆಯಲ್ಲಿ ಇದೀಗ ಮೊದಲಬಾರಿ ಸುಶೀಲೆಯ ದೃಷ್ಟಿ ತನ್ನ ಮೇಲೆ ಬಿದ್ದುದನ್ನು ರಮೇಶ ಕಂಡ. ಅವು ತನ್ನ ಆತ್ಮದ ಆಳವನ್ನೇ ಇಣಿಕುತ್ತಿರುವಂತೆ ತೋರಿದುದರಿಂದ ಅವ ಕಂಪಿಸಿದ. ಶೈಲೆ ಹೇಳಿದಳು: "ಹೌದು. ನಾನು ಮದುವೆಯಾಗಲೂ ಬಹುದು. ಯಾರಿಗಾದರೂ ನಾನು ಬೇಕೇ ಬೇಕೆಂದು ತೋರಿದರೆ— ತನ್ನ ಹೃದಯಾಂತರಾಳದಲ್ಲಿರುವ ಆ ಬಯಕೆಯನ್ನವ ನನ್ನೊಡನಾಡಿ ತೋರಿಸಿದರೆ—ನಾನವನ ಕೈ ಹಿಡಿಯುವೆ ಎಳೇ ಹುಡುಗಿ ಶೈಲ 'ಜ್ಯೋತಿ' ಹೆಂಗುಸು ಹೇಗಾದಳೆಂಬ ಕಥೆಯನ್ನೆಲ್ಲಾ ನಾನವನಿಗೆ ಹೇಳಲಿದ್ದೇನೆ. ಆ ಮೇಲೂ ಅವನಿಗೆ ನಾನು ಬೇಕಾದರೆ ನಾನವನನ್ನು ಮದುವೆಯಾಗಿ ಸುಖಿಯನ್ನಾಗಿ ಮಾಡುವೆ". ಈ ಮಾತಿನ ಬೆನ್ನಲ್ಲಿ ಆಕಸ್ಮಿಕ ಮೌನವೊಂದು ಆವರಿಸಿಕೊಂಡಿತು. ಆಜ್ಞೆಯೊಂದನ್ನು ಕಾಯುತ್ತಾ ನಿಂತ ಆಳುಮಗನಂತಿದ್ದ ರಮೇಶ. ಅದು ಬಂತು:—"ನೀನು ಹೋಗಬಹುದು" ಎಂದಳು ಶೈಲೆ ಆತನನ್ನು ಡಿಸ್‌ಮಿಸ್ ಮಾಡಿದಳೆಂಬಂತೆ "ನಿರಪರಾಧಿ, ನಿಷ್ಕಲ್ಮಷೆ, ವಿಶ್ವಾಸೀ ಎಳೇ ಶೈಲೆಯನ್ನು ಅರಿತಿದ್ದ ಈ ಸ್ಥಳಕ್ಕೆ ವಿದಾಯ ನೀಯಬೇಕಾಗಿದೆ. ಆ ವಿದಾಯೋತ್ಸವವನ್ನು ಕಳ್ಳ ಕಣ್ಣುಗಳು ನೋಡುವದನ್ನು ನಾನು ಸಹಿಸುವದಿಲ್ಲ" ಎಂದಳು ಶೈಲೆ.

ರಮೇಶನು ಮೆಲ್ಲನೆದ್ದು ಶಂಕಿಸುತ್ತಾ ಹೊರಟ. ಶೈಲೆಯ ಪ್ರೇತ ಬಂದು ಹಿಂದಿನಿಂದ ಹಿಡಿದುಕೊಳ್ಳುವ ಭಯವುಂಟೇನೋ ಎಂಬಂತೆ ರಮೇಶ ಹಿಂದೆ ಹಿಂದೆ ನೋಡುತ್ತಾ ನಡೆದ.

ಂಂ ಂಂ ಂಂ

ಅಸ್ತಮಿತ ಸೂರ್ಯನು ತುಂಬಿದ ಅಕ್ಷಿಗಳಿಂದ ತನ್ನನ್ನೇ ನೋಡುತ್ತಿದ್ದ ಯುವತಿಯ ಮೇಲೆ ಸುವರ್ಣ ರಶ್ಮಿಗಳನ್ನು ಚೆಲ್ಲುತ್ತಿದ್ದ. ಆ ಕಿರಣ ಬಿದ್ದ ಕಣ್ಣೀರ ಹನಿಗಳು ಒಡೆದ ಕನ್ನಡಿ ಚೂರುಗಳಂತೆ ಪ್ರಕಾಶಿಸುತಿದ್ದುವು. ಕನ್ನಡಿಯೊಡೆದರೆ ಕೂಡಿಬರಲಾರದು; ಆದರೆ ಆತ್ಮ ಹೊಂದಿಕೊಳ್ಳಬಲ್ಲದು ಅವಳು ಮನೆಯತ್ತ ಮುಖ ಮಾಡಿ ಏಳುವಾಗ. ಅಸ್ತಮಿತ ಸೂರ್ಯನ ಕೊನೆಯ ಕಿರಣಗಳು 'ಜ್ಯೋತಿ'ಯನ್ನೇ ಸ್ಪರ್ಶಿಸಿದುವು. ಈಗಿನ ಅವಳ ಕಣ್ಣ ಹೊಳಪನ್ನೂ ನಡೆವ ಗಾಂಭೀರ್ಯವನ್ನೂ ಕಂಡರೆ ಶೈಲೆಯ ಒಡೆದ ಆತ್ಮವು 'ಜ್ಯೋತಿ'ಯಲ್ಲಿ ಒಂದುಗೂಡಿದುದನ್ನು ತಿಳಿಯಲಾಗುತಿತ್ತು. (Orient).

ದ. ಕ. ಜಿಲ್ಲಾ ಆಹಾರ ಸಮಿತಿ.

ತಾ. 18—6—1945ರ ಸಭೆಯಲ್ಲಾದ ಪರ್ಯಾಲೋಚನೆ

ಜಿಲ್ಲೆಯ ಆಹಾರ ಪರಿಸ್ಥಿತಿ— ಈ ಸಭೆಯಲ್ಲಿ ಜಿಲ್ಲಾ ಕಲೆಕ್ಟರರು ಸದಸ್ಯರಿಗೆ ತಿಳಿಸಿದಂತೆ ಜಿಲ್ಲೆಯಲ್ಲಿ ಕಳದ ವರುಷದ ಬೆಳೆಗಳಿಂದ ಸಂಗ್ರಹವಾದ ಒಟ್ಟು ಅಕ್ಕಿಯ ಪರಿಮಾಣ—48278 ಟನ್ನುಗಳು ಅಥವಾ ಸುಮಾರು 12½ ಲಕ್ಷ ಮುಡಿಗಳು.

ಈ ಜಮೆಯು ಸರಕಾರವು ಅಂದಾಜು ಕಟ್ಟಿದ್ದ ಒಟ್ಟು ಉತ್ಪತ್ತಿಯ ಹೆಚ್ಚು ಕಡಿಮೆ ನೇಕಡಾ 25ರಷ್ಟು ಆಗುತ್ತದೆ. ಮಳೆಯ ಪ್ರತಿಕೂಲ ಇತ್ಯಾದಿ ವಿಷಮ ಸ್ಥಿತಿಗಳ ಮೂಲಕ ಸರ್ವಸಾಮಾನ್ಯ ಕಾಲದ 85%ರಷ್ಟೇ ಈ ವರುಷದ ಉತ್ಪನ್ನವೆಂದು ಗಣಿಸಲಾಗಿದೆ.

9-6-45ರಲ್ಲಿ ಸಂಗ್ರಹದಲ್ಲಿರುವ ಅಕ್ಕೀ ಮುಡಿಗಳು 635000.

ಈ ಅಕ್ಕಿಯು ಇಡೀ ಜಿಲ್ಲೆಯಲ್ಲಿ ಹಸುಗೇ ಕಾರ್ಡು ಕೊಡಲ್ಪಟ್ಟಿರುವವರಿಗೆ 3 ತಿಂಗಳ ಪೂರೈಕೆಗೆ ಸಾಕಾಗಬಹುದೆಂಬ ನಿರೀಕ್ಷೆಯಿದೆ.

ಕಾಸರಗೋಡು ತಾಲೂಕಿಗೆ ಬೆಂಗಳೂರಿನಿಂದ ತರುವದಕ್ಕಾಗಲೀ ಮಲಬಾರಿನಿಂದ ಆಮದು ಪಡಿಸಲಿಕ್ಕಾಗಲೀ ಇದುವರೆಗೂ ರೈಲು ಬಂಡಿಗಳ ಅನುಕೂಲತೆ ದೊರೆತಿಲ್ಲ. ಇದಕ್ಕಾಗಿ ಟೆಲಿಗ್ರಾಮುಗಳನ್ನು ಕೊಡಲಾಗಿದೆ

ಗೋಧಿ ಮತ್ತು ರಾಗಿ—ಸದ್ಯ ಸ್ಥಿತಿಯಲ್ಲಿ ಸಾಕಾಗುವಷ್ಟು ದಾಸ್ತಾನಿದೆ.

ಗೋಧಿಯ ಧಾರಣೆ—ಗೋಧಿಯ ಬೆಲೆಯನ್ನು ಅನ್ಯಾಯಧಾರಣೆಯಷ್ಟು ತಗ್ಗಿಸಬೇಕೆಂದು ಆಹಾರ ಸಮಿತಿ ನಿರ್ಣೈಸಿದೆ. (ಸೇರಿಗೆ 0-3-1ಪೈ ಇದ್ದ ಗೋಧಿಯ ಬೆಲೆಯೀಗ 0-5-3ಪೈಯಷ್ಟು ಏರಿಸಲ್ಪಟ್ಟಿದೆ).

ಕೊಳಕೆ ಬೆಳೆ—ಕಲೆಕ್ಟರರು ಈ ಮೊದಲೇ ಆಶ್ವಾಸನೆ ಕೊಟ್ಟಿರುವಂತೆ ಕೊಳಕೆ ಅಕ್ಕಿಯನ್ನು 'ರೆಕ್ವಿಶಿಶನ' ಮಾಡಬಾರದೆಂದು ಸಮಿತಿಯು ಅವರನ್ನು ವಿಜ್ಞಾಪಿಸಿಕೊಂಡಿತು. ಯೆನೆಲ್ ಮತ್ತು ಸುಗ್ಗಿ ಅಕ್ಕಿಯನ್ನು ಸ್ಟೋರುಗಳಿಗೊಪ್ಪಿಸಲು ಉದ್ದೇಶ ಪೂರ್ವಕವಾಗಿ ತಪ್ಪಿದವರ ವಿನಹ ಇತರರ ಕೊಳಕೇ ಅಕ್ಕಿಯನ್ನು ಕೇಳುವದಿಲ್ಲವೆಂದು ಜಿಲ್ಲಾ ಕಲೆಕ್ಟರರಂದಿದ್ದಾರೆ

ಮುಂಬರುವ ಬೆಳೆಯ ಸಂಗ್ರಹ. ಈ ಕುರಿತು ಸದ್ಯ ಜಾರಿಯಲ್ಲಿರುವ ಧಾನ್ಯ ಸಂಗ್ರಹ ಪದ್ಧತಿಯಲ್ಲಿ ಈ ಕೆಳಗಿನ ಸುಧಾರಣೆಗಳನ್ನು ಮಾಡತಕ್ಕದ್ದೆಂದು ಸಮಿತಿಯು ನಿರ್ಧರಿಸಿದೆ—(1) ಉತ್ಪತ್ತಿಯ ಪ್ರಥಮ ಉಪಯೋಗವಾಗಿ ಸಾಗುವಳೀದಾರರ ಬೀಜದ ಅವಶ್ಯಕತೆಯನ್ನು ಗಣಿಸತಕ್ಕದ್ದು (2) ಎರಡನೆಯದಾಗಿ ಸಾಗುವಳೀದಾರರ ಖರ್ಚು ವೆಚ್ಚಗಳನ್ನು ನೋಡತಕ್ಕದ್ದು. (3) ಆ ಮೇಲಿನ ಅವಶ್ಯಕತೆಯಾಗಿ ವರ್ಗದಾರರಿಗೆ ಸಲ್ಲತಕ್ಕ ಗೇಣಿಯನ್ನು ಗಣಿಸ[illegible] ದ ಈ ಮೂರು ಭಾಗಗಳನ್ನು ವಿಂಗಡಿಸಿಟ್ಟ ಮೇಲೆ ಒಕ್ಕಲುಗಳ ಮನೆಯ ಉಪಯೋಗದ ಅಂಶವನ್ನು ಇರಗೊಡಿಸಿ, ಮತ್ತೂ ಉಳಿಯುವ ಅಂಶವನ್ನು ಮಾತ್ರ ಉಳಿತಾಯವೆಂದು ಗಣಿಸಿ ಸಂಗ್ರಹಿಸತಕ್ಕದ್ದು—ಉತ್ಪತ್ತಿಯು ಕಡಿಮೆಯೆಂದು ಕಂಡುಬಂದಲ್ಲಿ ಒಕ್ಕಲುಗಳಿಗೆ ರೇಶನ್ ಕಾರ್ಡುಗಳನ್ನು ಕೊಡತಕ್ಕದ್ದು".

—ಎ. ಬಿ ಶೆಟ್ಟಿ.

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ. 8—10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಥುರ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ [illegible] ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG.

The best preventive in epidemics of CHOLERA

"BHUVANENDRA" CHANDRAMAS — Also a sovereign remedy for diarrhoea, Stomachache, Vomiting and Neusea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಡಿ, ದ. ಕ.

ಉಡುಪಿ ಸ್ಟಾಕಿಸ್ಟರು.—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್. ಎಸ್. ಶೆಟ್ಟಿ ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೧೮ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೪ಆಣೆ.

ಮಾಲಕರು:— ಹಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಸ್ಥಾಲೆ ಸಂಗ್ರ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ — ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೂಳಿಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ — ಬೆಲೆ ೦-೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ನೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ— ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೦—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. — ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS. UDIPI S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6 Estd. 1921 ಸ್ಥಾಪನೆ.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೪ ವಾರ ೪೩] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. [Vol. 24 No. 43

ಉಡುಪಿ ● 5—7—1945 ● ಮಂಗಳೂರು.

ಅಮೃತಾಂಜನ
ತಲೆವೇದನೆ, ಶೀತ, ನೆಗಡಿ, ಉಳುಕು ಕತ್ತಿಗೆ, ಥುಡ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು, ವಿಷ ಮುಂತಾದ ಜೀವಿ ಕಚ್ಚವಾಕ ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD
ಪಥ್ಯ, ಹುಳುಕಟ್ಟು ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತ.

No Substitute Yet.

This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,
UDIPI, (S India)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ, ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ 1908)
1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟರ
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ
ಕಾರ್ಯಾಲಯಗಳು.—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ತಿಲ್ಲಿಚ್ಚಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕುಂದಾಪುರ ಮುಂತಾದು ಇತ್ಯಾದಿ.
ನಿಮ್ಮ ಸದಾಶ್ರಯ ಕೇಳಿಕೊಳ್ಳುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವವು.
ಮೂಲಧನ ರೂಪಾಯಿ 26 ಲಕ್ಷ
ಕ್ಷೇಮನಿಧಿ ರೂಪಾಯಿ 10 ಲಕ್ಷ
ಕೆನರಾ ಬೇಂಕ್ ಲಿಮಿಟೆಡ್.
(ESTD 1906 ಸ್ಥಾಪನೆ)

CANARA BANK LIMITED
(Incorporated in British India, liability of Members Limited.)

THE
VIJAYA BANK LTD.
Head Office MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—
Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ 8—10—44 ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್ ನರಸಿಂಗ ರಾವ್, ಪ್ರೊಪ್ರೈಟರ್,
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಬ್ರಿಟನಿನ ಮಹಾ ಚುನಾವಣೆ.

ಬ್ರಿಟಿಷ್ ಪಾರ್ಲಿಮೆಂಟಿನ ಸಾರ್ವತ್ರಿಕ ಚುನಾವಣೆಯು ಇದೇ ಜುಲಾಯಿ ತಾ 5ಕ್ಕೆ ನಡೆಯಲಿದೆ; ಜುಲಾಯಿ ತಾ. 26 ಕ್ಕೆ ಮತಗಣನೆ ಮುಗಿದು ಪರಿಣಾಮವು ಪ್ರಕಟಿಸಲ್ಪಡುವದು ಜೂನ್ ತಾ. 21 ರಲ್ಲಿ ಉಮೇದ್ವಾರಿಗಳ ನಾಮಕರಣ ಪತ್ರಗಳು ದಾಖಲಾಗಿವೆ

ಪಕ್ಷಗಳು

ಇಂಗ್ಲಾಂಡಿನಲ್ಲಿ 10 ವರುಷಗಳ ಬಳಿಕ ನಡೆಯುವ ಮಹಾ ಚುನಾವಣೆಯಿದು. ರಾಷ್ಟ್ರೀಯ ಕನ್ಸರ್ವೇಟಿವ್, ಲೇಬರ್, ಲಿಬರಲ್, ಲಿಬರಲ್ ನೇಶನಲ್ಸ್, ಕಾಮನ್‌ವೆಲ್ತ್, ಕಮ್ಯೂನಿಸ್ಟ್ ಮುಂತಾದ ಹಲವು ಪಕ್ಷಗಳು ಚುನಾವಣಾರಂಗಕ್ಕಿಳಿದಿವೆ, ಉಮೇದ್ವಾರಿಗಳನ್ನು ಇದಿರೊಡ್ಡಿವೆ. ಮಂತ್ರಿ ಮಂಡಲ ರಚಿಸುವಷ್ಟು ಪ್ರಬಲ ಬಹುಮತ ಪಡೆದು ಗೆದ್ದು ಬರುವ ನಿರೀಕ್ಷೆಯಲ್ಲಿರುವ ಪಕ್ಷಗಳೆರಡೇ-ಚರ್ಚಿಲ್ಲರ ನಾಯಕತ್ವದಲ್ಲಿರುವ ರಾಷ್ಟ್ರೀಯ ಕನ್ಸರ್ವೇಟಿವ್ ಮತ್ತು ಅಟ್ಲಿಯವರು ನಾಯಕರಾಗಿರುವ ಲೇಬರ್.

ಉಮೇದ್ವಾರಿಗಳು

ಹೊಸ ಪಾರ್ಲಿಮೆಂಟಿನಲ್ಲಿರುವ ಸದಸ್ಯತ್ವ 642 ಆ ಪೈಕಿ ನಾಮಕರಣದ ದಿನ ೪ ಮಂದಿ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿದ್ದಾರೆ. ಉಳಿದ ಎಲ್ಲಾ ಸ್ಥಾನಗಳಿಗೂ ಮೇಲಾಟವಿದೆ ಒಟ್ಟಿಗೆ 1672 ಉಮೇದ್ವಾರಿಗಳು ಚುನಾವಣಾ ಹೋರಾಟಕ್ಕಿಳಿದಿದ್ದಾರೆ ಲೇಬರ್ ಪಕ್ಷೀಯರು 600, (ಅಧಿಕ ಸಂಖ್ಯಾಕರು ಇವರೇ) ಕನ್ಸರ್ವೇಟಿವ್ ಪಕ್ಷೀಯರು 555, ಲಿಬರಲ್ 300 ವಿ.ಕ್ಕೆ, ಲಿಬರಲ್ ನೇಶನಲ್ ಪಾರ್ಟಿ 50, ಕಾಮನ್‌ವೆಲ್ತ್ 25, ಕಮ್ಯೂನಿಸ್ಟ್ 21 ಇವರಲ್ಲದೆ ಇದುವರೆಗೆಂದೂ ತಲೆಯೆತ್ತದಿದ್ದ ಹೊಸ ಪಕ್ಷಗಳೂ ಈ ಬಾರಿ ಮುಂದೆ ಬಂದಿವೆ ಇಂಡಿಪೆಂಡೆಂಟ್ ಮೆಡಿಕಲ್, ಇಂಡಿಪೆಂಡೆಂಟ್ ಸ್ಪೋರ್ಟ್ಸ್‌ಮೇನ್, ನೇಶನಲ್‌ಪ್ರೊಟೆಸ್ಟೆಂಟ್, ಡೆಮೊಕ್ರೆಟಿಕ್ ಯೂನಿಯನಿಸ್ಟ್ ಫಾರ್ಮರ್ಸ್ ಎಂಡ್ ಇಂಡಸ್ಟ್ರೀಸ್, ಪ್ರೊಟೆಸ್ಟೆಂಟ್-ಇತ್ಯಾದಿ, ಇತ್ಯಾದಿ 'ಶಾಂತಿ ವಾದಿ' ಬಿಲ್ಲೆ ತೊಟ್ಟುಕೊಂಡು ಒಬ್ಬ ಉಮೇದ್ವಾರಿಯಿದ್ದಾನೆ!

ಒಂದು ಪ್ರಗತಿ

ಈ ಬಾರಿಯ ಬ್ರಿಟಿಷ್ ಚುನಾವಣೆಯಲ್ಲಿ ಧ್ಯೇಯದ ಪ್ರಗತಿಯಾಗಿಲ್ಲ, ಮನೋವೃತ್ತಿ ಸುಧಾರಿಸಿದುದೂ ಇಲ್ಲ, ಬೇರಾವುದರಲ್ಲಿಲ್ಲದಿದ್ದರೂ ಮಹಿಳಾ ಉಮೇದ್ವಾರಿಗಳ ಸಂಖ್ಯೆಯಲ್ಲಿ ಅಭಿವೃದ್ಧಿಯಾಗಿದೆ 1918ರ ಚುನಾವಣೆಗೆ ನಿಂತುದು 16 ಮಂದಿ ಮಹಿಳೆಯರು ಮಾತ್ರ, ಕಳೆದ ಬಾರಿಯ 1935ರಲ್ಲಿ 66 ಮಂದಿ ಉಮೇದ್ವಾರಿಗಳಿದ್ದರು ಈ ಬಾರಿ 88 ಸ್ತ್ರೀವದನಗಳು ಮುಂದೆ ಬಂದಿವೆ ಇಂಗ್ಲಾಂಡಿನ ಚುನಾವಣಾ ಕ್ಷೇತ್ರಗಳಲ್ಲಿ 88 ಕೋಕಿಲ ಕಂಠಗಳ ರವ ಕೇಳಿಬರುತ್ತಿದೆ ಈ ಪೈಕಿ ಅರೆವಾಸಿಗೂ ಮಿಕ್ಕಿ ಲೇಬರ್‌ಪಕ್ಷೀಯರೇ.

ಪ್ರತಿ ಸ್ಪರ್ಧಿಗಳಿಲ್ಲದೆ ಆರಿಸಿ ಬಂದವರು ಸರ್ ವಿಲ್ಲಿಯಮ್ ಅಲೆನ್ (ಕನ್ಸರ್ವೇಟಿವ್) ವಿಲಿಯಮ್ ಜೋನ್ (ಲೇಬರ್) ಡಾವಿಡ್ ಗಿಲ್ಬರ್ಟ್ (ಲೇಬರ್). ಹೊಸ ಪಾರ್ಲಿಮೆಂಟಿಗೆ ಮುಂದಾಗಿ ಬಂದು ಮುಟ್ಟಿದವರಿವರೇ.

ಚರ್ಚಿಲ್-ಹೇಂಕೋಕ್

ಗಡದ್ದಿನ ಚುನಾವಣೆಯೆಂದರೆ ವುಡ್‌ಫೋರ್ಡ್ ಕ್ಷೇತ್ರದ್ದು ಇಲ್ಲಿಯ ಕನ್ಸರ್ವೇಟಿವ್ ಉಮೇದ್ವಾರಿ ಬೇರಾರೂ ಅಲ್ಲ—ಚರ್ಚಿಲ್ಲರೇ ತನಗೆ ಇದಿರಿಲ್ಲ' ಎಂದು ಲೋಕದ ಯಾರೊಬ್ಬನೂ ಹೆಮ್ಮೆ ಪಡದಂತೆ ಚರ್ಚಿಲ್ಲರನ್ನೂ ಒಬ್ಬ ಇದಿರಿಸಿ ನಿಂತಿದ್ದಾನೆ-ಅಲೆಕ್ಸಾಂಡರ್ ಹೇಂಕೋಕ್ ನಾಮಕರಣ ಪತ್ರದಲ್ಲಿ ತಾನು 'ರೈತ'ನೆಂದು ಈತ ಬರೆದುಕೊಟ್ಟಿದ್ದಾನೆ ಆ ದಿನ ಚರ್ಚಿಲ್ಲರ 'ನೋಮಿನೇಶನ್' ಪತ್ರ ದಾಖಲಾದ ಮೇಲೆ ಸಂಜೆ ಮುಗಿಯುತ್ತಾ ಬರುವ ವರೆಗೂ ಯಾರೂ ಮುಂದೆ ಬರಲಿಲ್ಲ ವುಡ್‌ಫೋರ್ಡಿನಲ್ಲಿ ಚರ್ಚಿಲ್ಲರ ವರ್ಚಸ್ಸು ಅಸ್ತಿರುವದರಿಂದ ಯಾವ ಪಕ್ಷವೂ ಇದಿರಾಳಿಯನ್ನೊಡ್ಡಲಿಲ್ಲ ಯುದ್ಧನಾಯಕ ಚರ್ಚಿಲ್ಲರು ಅವಿರೋಧವಾಗಿ ಆರಿಸಲ್ಪಡುವರೆಂದೇ ಎಲ್ಲರ ನಿರೀಕ್ಷೆಯಿತ್ತು ರಿಟರ್ನಿಂಗ್ ಆಫೀಸರರು ಅವಧಿ ಮುಗಿಯುವದನ್ನು ಆತುರದಿಂದ ನಿರೀಕ್ಷಿಸುತ್ತಿರುವಾಗ "ಸಂಘಟಿತ ದಬ್ಬಾಳಿಕೆಯ ಇದಿರಾಗಿ ಸಾಮಾನ್ಯ ಜನತೆಯ ಪರವಾಗಿ ನಾನು ನಿಲ್ಲಲಿದ್ದೇನೆ" ಎನ್ನುತ್ತಾ ಮಿ ಹೇಂಕೋಕ್ ಒಳಗೆ ಬಂದೇ ಬಿಟ್ಟ

ಇವನಾರು?

ಈ ಹೇಂಕೋಕ್ 'ಆರೆ ಮರುಳು' ಎಂದು ಸಾಮಾನ್ಯರಿಂದ ಕರೆಯಿಸಿಕೊಳ್ಳುವ ಅಡೋಲು ವರ್ಗಕ್ಕಾ ಸೇರಿದ ಮನುಷ್ಯ, ಮಾನವ ರೂಪೀ ಸಮಸ್ಯೆ ರಾಜಕೀಯ ಸಂಬಂಧವಿಟ್ಟುಕೊಂಡವನೇ ಅಲ್ಲ "ನನ್ನಲ್ಲಿ ಪಕ್ಷಾಭಿರುಚಿಯೇ ಇಲ್ಲ ನಾನು ದ್ರೋಹಿಯಲ್ಲ. ಕೆಲಸಗಾರರಿಗೆ ಸರಿಯಾದ ಸ್ಥಾನ ಸಂಪಾದಿಸಿ ಕೊಡುವದೇ ನನ್ನ ಗುರಿ" ಎಂದು ಅವನೆನ್ನುತ್ತಾನೆ ಗಾಂಧಿಯವರ ಮೇಲೆ, ಓರ್ವ ಯುರೋಪಿಯಾನನಿಗೆ ಸಾಧ್ಯವಾಗುವಷ್ಟು ಗೌರವವನ್ನವ ಹೊತ್ತಿದ್ದಾನೆ, ಅವರ ಅಹಿಂಸೆಯನ್ನು ಬಹಳ ಮೆಚ್ಚುತ್ತಾನ ತಾನು ಗತ ಜೋರ್ಜ್ ಲೇನ್ಸ್‌ಬರಿಯ ಶಿಷ್ಯನೆನ್ನುತ್ತಾನ ಚರ್ಚಿಲ್ಲರ ವಿರುದ್ಧ ನಿಂತ ತನಗೆ ಮಹಾತ್ಮಾಗಾಂಧಿಯವರ ಆಶೀರ್ವಾದ ಬರುವದನ್ನು ನಿರೀಕ್ಷಿಸುತಿದ್ದಾನೆ.

ಬರಿಯ ಆಟ

ಈ ಉಮೇದ್ವಾರಿ (ಪಾರ್ಲಿಮೆಂಟಿಗೂ ಮಜಾಯಿಲ್ಲಿಯೂ!) ಹೇಂಕೋಕ್ ಚರ್ಚಿಲ್ಲರ ಪಟ್ಟಿಗೆ ನಿರಪಾಯಕಾರೀ ವ್ಯಕ್ತಿ ಬ್ರಿಟಿಷ್ ಪ್ರಧಾನಿಗಳು 'ಜನೆಯನ್ನು ತಂದು ಅಡ್ಡ ಹಾಕಿದರೂ' ವುಡ್‌ಫೋರ್ಡಿನಿಂದ ಆರಿಸಿಬರುವದು ಖಂಡಿತ ಸಮಯ ಮತ್ತು ಸಂದರ್ಭಗಳಂತಹವು, ಅದರಲ್ಲೂ ಈ ಮತದಾರ ಕ್ಷೇತ್ರವೆಂದರೆ ಚರ್ಚಿಲ್ಲರ ಶವಕ್ಕೂ ಮಿಕ್ಕು ಜೀವಂತ ವ್ಯಕ್ತಿಗಳಿಗಿಂತ ಹೆಚ್ಚಿನ ಯೋಗ್ಯತೆಯಿದೆ ಎಂದು ಭಾವಿಸುವವರನ್ನೇ ತುಂಬಿಸಿಕೊಂಡಿರುವ ಗಡ ಆದರೆ ಹೇಂಕೋಕ್ ಒಂದನ್ನು ಸಾಧಿಸಿದ್ದಾನೆ ಕಳೆದ 40 ವರುಷಗಳಿಂದ ಚರ್ಚಿಲ್ಲರು ಪಾರ್ಲಿಮೆಂಟರೀ ಕ್ಷೇತ್ರದಲ್ಲಿದ್ದಾರೆ, ಒಂದೇ ಒಂದು ಚುನಾವಣೆಯಲ್ಲಾದರೂ ಅವರಿಗೆ ಇದಿರಾಳಿಯಿಲ್ಲದೆ ಹೋದುದಿಲ್ಲ ಹೇಂಕೋಕ್ ಒಬ್ಬನಿಲ್ಲವಾದರೆ ಈ ಬಾರಿ ತನ್ನ ಜೀವಮಾನದಲ್ಲೊಂದು ಹೊಸತನ್ನು ಕಾಣುವ ಆಸೆ ಚರ್ಚಿಲ್ಲರಿಗಿತ್ತು, ಆದು ನಿರಾಶೆಯಾಯಿತು ಯಾರಿಗೂ ಇಲ್ಲದ ಧೈರ್ಯ ಈ ರೈತನಿಗೆ ಒಂತು ಇನ್ನವನನ್ನು ಏಕಾಕಿಯಾಗಿ ಅಲ್ಲಿಯ ಪ್ರಗತಿಶೀಲರು ಬಿಡುವಂತಿಲ್ಲ. ವುಡ್‌ಫೋರ್ಡಿನ ಚರ್ಚಿಲ್ ವಿರೋಧಿಗಳಿಗೆ ತಾವೂ ಚರ್ಚಿಲ್ಲರನ್ನು ಅನುಮೋದಿಸಿದಂತಾಗುವದೇ ಎಂಬ ಶಂಕೆ ಮೊನ್ನೆ ವರೆಗಿತ್ತು, ಈ ಹೇಂಕೋಕ್ ಆದನ್ನು ನಿವಾರಿಸಿದ ಅವರೆಲ್ಲರ ಹೃತ್ಪೂರ್ವಕ ಬೆಂಬಲ ಆತನಿಗೆ ದೊರಕಲಿದೆ ಲಂಡನಿನ ಹಿಂದೀ ಸಂಗಡವೂ ಆತನಿಗೆ ಸಾಧ್ಯವಿದ್ದ ಸಹಾಯವೀಯಲಿದೆ

ರೈತ ಹೇಂಕೋಕ್

ಅವನ ಪತ್ನಿಯ ಮಾತು ಕೇಳಿದರೆ ಮತದಾರರೂ ಆತನನ್ನು ಆಕೆಯಂತೆ ಅಪ್ಪಿಕೊಳ್ಳಬೇಕು! "ಆ ಉದ್ಯೋಗಕ್ಕೆ ದೊರೆಯಬಲ್ಲವರ ಪೈಕಿ ಇವನೇ ಯೋಗ್ಯ ಮನುಷ್ಯ, ಅವನಿಗಿಂತ ಉತ್ತಮನಾದವನು ಇನ್ನೊಬ್ಬನಿಲ್ಲ ಯಥಾರ್ಥವೆಂದರೆ ಯಾವ ಕೆಲಸ ದೊರೆತರೂ ಆತ ಮಾಡಬಲ್ಲ. ಅಗತ್ಯಬಿದ್ದರೆ ದೇಶವನ್ನಾತ ಮುನ್ನಡೆಸಲೂ ಬಲ್ಲ"-ಎನ್ನುತ್ತಾಳಾಕೆ ಅಲೆಕ್ಸಾಂಡರ್ ಹೇಂಕೋಕ್ ಸ್ವತಂತ್ರ ಉಮೇದ್ವಾರಿಯಾಗಿದ್ದಾನೆ. ಆದಿಯಲ್ಲಿ ನೋರ್ತಂಪ್ಟನಿನ ಪಾದೂಸ್ ಕಾರ್ಖಾನೆಯೊಂದರಲ್ಲಿ ಕೆಲಸಕ್ಕಿದ್ದ ಕೊನೆಗಾ ಕಾರ್ಖಾನೆಯ ಪಾಲುಗಾರನಾದ ಯುದ್ಧಾರಂಭದಲ್ಲಿ ಅವನ ಪಾದೂಸು ಕಾರ್ಖಾನೆಯು ದೊಡ್ಡ ಕಂಪೆನಿಗಳೊಂದಿಗೆ ವಿಲೀನಗೊಂಡಿತು ಹೇಂಕೋಕ್ ತನ್ನ ಪಾಲನ್ನು ನೋರ್ತಂಪ್ಟನಿನ ಮೇಯರರಿಗೆ ಮಾರಿ ಸವಿದೂಪ ಸಾಗುವಲ್ಲಿ ಕ್ಷೇತ್ರವನ್ನು ಪಡಕೊಂಡ ಈಗ ಚರ್ಚಿಲ್ಲರ ಕೈಯಿಂದ ಪಾರ್ಲಿಮೆಂಟ್ ಸೀಟೊಂದನ್ನು ಕಿತ್ತುಕೊಳ್ಳಬೇಕೆಂದು ನಿಂತಿದ್ದಾನೆ, ಭೀಕರ ಸರ್ಕಸ್ಸಿನಲ್ಲೊಬ್ಬ ವಿನೋದಪಟು ಇರುವಂತೆ ಬ್ರಿಟನಿನ ಮಹಾಮಾಡಿ ಚುನಾವಣೆಗಳಲ್ಲಿ ಇದೊಂದು ತಮಾಷೆ!

ಅಮೆರಿ-ಶರ್ಮರ್-ದತ್

ಚರ್ಚಿಲ್, ಅಮೆರಿಯಂತಹ ಹಿಂದೀ ಸ್ವಾತಂತ್ರ್ಯ ವಿರೋಧಿಗಳು ಬೀಳುವರೋ, ಏಳುವರೋ ಎಂಬುದಕ್ಕಿಂತ ಹೆಚ್ಚಿನ ಆತುರದಾಯೀ ವಿಷಯಗಳಾವುವೂ ಈ ಚುನಾವಣೆಯಲ್ಲಿ ಹಿಂದೀಯರ ಪಾಲಿಗಿಲ್ಲ ಮಿ. ಚರ್ಚಿಲ್ಲರಿನ್ನೊಮ್ಮೆ ಬರುವದು ಖಂಡಿತವಾದರೆ, ಮಿ ಅಮೆರಿ ಪುನಃ ಚುನಾಯಿಸಲ್ಪಡುವದೂ ನಿಜ ಹಿಂದೀ ಪ್ರಶ್ನೆಯು ಬ್ರಿಟಿಷ್ ಮತದಾರರ ಮನಮುಟ್ಟಿರುವ ವಿಷಯವಾಗಿದ್ದಲ್ಲಿ ಅಮೆರಿಯವರನ್ನು ಸೋಲಿಸಲು ಬೇರೆ ಉಮೇದ್ವಾರಿಗಳಾರೂ ಬರಬೇಕೆಂದಿರಲಿಲ್ಲ; ಬಂಗಾಳದ ಬರಗಾಲ ದೇಶಪ್ರಮುಖರ ಬಂಧನಗಳೇ ಅವರನ್ನು ನೆಲಹಿಡಿಸುತಿದ್ದುವು. ಆದರಿದು ಕರಿಜನರ ಹಿಂದೂಸ್ಥಾನ ಅದು ಬಿಳಿ ದೇವತೆಗಳ ಹಿರಿಯ ಸ್ಥಾನ ಇಲ್ಲಿ ಮುಖ್ಯವಾಗಿರುವದು ಪುವದೂ 6000 ಮೈಲು ದೂರದ ಅಲ್ಲಿಗೆ ಮುಟ್ಟಲಿಲ್ಲವಾದ್ದರಿಂದ ಅಮೆರಿಗೆ ಸೋಲಿನ ಭಯವಿಲ್ಲ. ಇದಿರಾಳಿಗಳೇನೋ ಇದ್ದಾರೆ. ಒಬ್ಬರು ಲೇಬರ್ ಪಕ್ಷದವರು ಲ್‌ಮೇನ್ ಪರ್ಸಿ ಶರ್ಮರ್, ಮತ್ತೊಬ್ಬರು ಕಮ್ಯೂನಿಸ್ಟ್ ಪಕ್ಷದವರು-ಈ ಬಾರಿಯ ಪಾರ್ಲಿಮೆಂಟ್ ಚುನಾವಣೆಗೆ ನಿಂತ ಏಕ ಮಾತ್ರ ಹಿಂದೀಯ-ಶ್ರೀ ಆರ್. ಪಿ. ದತ್ತರು 'ಸ್ಪಾರ್ಕ್ ಬ್ರೂಕಿನ ರಹಸ್ಯಾತ್ಮಕ ವ್ಯಾಪಾರಿ' ಎಂದು ಹೆಸರಾಂತ ಮಹಿಳೆಯೊಬ್ಬರು ಅಮೆರಿ ವಿರುದ್ಧ ಪಕ್ಷಗಳೆರಡೂ ಒಂದಾಗಬೇಕೆಂಬ ಶರ್ತಹಾಕಿ 'ತಪ್ಪಿದರೆ ನಾನೇ ಉಮೇದ್ವಾರಿಯಾಗಿ ನಿಲ್ಲುವೆ' ಎಂದು ಬೆದರಿಕೆ ಹಾಕಿದ್ದರು. ಅವರ ಶರ್ತ ಪಾಲಿಸಲ್ಪಡಲಿಲ್ಲ; ಆದರೂ ಅವರು ನಿಲ್ಲುವದಿಲ್ಲ. "ಲೇಬರ್ ಮತ್ತು ಕಮ್ಯೂನಿಸ್ಟರಿಬ್ಬರೂ ಶುದ್ಧ ಹುಚ್ಚರೆನ್ನುತ್ತೇನೆ ಅಮೆರಿ ಖಂಡಿತವಾಗಿ ಆರಿಸಿಬರುವಂತೆ ಅವರು ಮಾಡಿದ್ದಾರೆ ಎಡಪಕ್ಷದ ಈಗಿನ ಒಲವನ್ನೂ ಕಡಿಮೆಮಾಡಲು ನನಗಿಷ್ಟವಿಲ್ಲವಾದ್ದರಿಂದ ನಾನು ನಿಲ್ಲುವದಿಲ್ಲ" ಎಂದವರು ನಿರಾಶೋದ್ಗಾರ ತೆಗೆದಿದ್ದಾರೆ

ಶ್ರೀ ಪಾಮೆದತ್

ಅಮೆರಿ ಪ್ರತಿಸ್ಪರ್ಧಿ ಶ್ರೀ ಪಾಮೆದತ್ತರು ಹಿಂದೀಯರಾದರೂ ಇಂಗ್ಲಾಂಡಿನಲ್ಲೇ ಹುಟ್ಟಿದವರು, ಪತ್ರಿಕೋದ್ಯೋಗಿ ಸ್ಪಾರ್ಕ್‌ಬ್ರೂಕ್ ಮತದಾರ ಕ್ಷೇತ್ರದಲ್ಲೇ ಅಮೆರಿ ತನ್ನ ಪಾಪದ ಫಲವನ್ನುಣ್ಣುವಂತಾಗಬೇಕೆಂದು ಲೇಬರ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಉತ್ಕಟೇಚ್ಛೆ, ಹಾಗಾಗಬೇಕಾದರೆ ಇವರಡು ಪಕ್ಷಗಳ ಬೆಂಬಲವು ಓರ್ವನಿಗೆ ದೊರೆತರೇನೆ ಸಾಧ್ಯ ಆದರೆ ತಮ್ಮ ಉಮೇದ್ವಾರಿಯನ್ನು ಹಿಂದೆಗೆದುಕೊಳ್ಳಲು ಯಾವ ಪಕ್ಷವೂ ತಯಾರಿಲ್ಲ. ಒಪ್ಪಂದ ಪ್ರಯತ್ನ ವಿಫಲವಾಗಿದೆ ಶ್ರೀ. ದತ್ತರನ್ನು ಸಮರ್ಥಿಸಿ ಗಾಂಧೀ ನೆಹರುಗಳು ಸಂದೇಶವಿತ್ತಿದ್ದಾರೆ ಹಿಂದೂಸ್ಥಾನದ ಉದಾರಬುದ್ಧಿಯ ಕುಬೇರ ಶ್ರೀ ಬಿರ್ಲಾರೀಗ ಲಂಡನಿನಲ್ಲಿದ್ದು ಶ್ರೀ. ದತ್ತರಿಗೆ ಹಣ ಸಹಾಯವಿತ್ತಿದ್ದಾರೆಂಬ ವಾರ್ತೆಯಿದ್ದರೂ ಬಿರ್ಲಾ, ದತ್ತರಿಬ್ಬರೂ ಅದು ಸುಳ್ಳೆಂದಿದ್ದಾರೆ ಅಮೆರಿಯವರನ್ನು ಸೋ

(೧೧ನೇ ಪುಟ ನೋಡಿರಿ)

ಸಿಮ್ಲಾ ಸಮ್ಮೇಲನ ಜುಲಾಯಿ ೧೪ಕ್ಕೆ ಮುಂದುವರಿಯಿತು.

ವೈಸರಾಯಿ ವೇವೆಲರಿಂದ ಕರೆಯಲ್ಪಟ್ಟ ಭಾರತೀಯ ಧುರೀಣರ ಸಮ್ಮೇಲನವು ಜೂನ್ ತಾ. 25ನೇ ಸೋಮವಾರದಿಂದ ತಾ. 29ನೇ ಶುಕ್ರವಾರದ ವರೆಗೆ—ಮಧ್ಯದ ಗುರುವಾರವೊಂದನ್ನು ಬಿಟ್ಟು—ಸಿಮ್ಲಾದ ವೈಸರಾಯೀ ಭವನದಲ್ಲಿ ದಿನಂಪ್ರತಿ—ಒಟ್ಟಿಗೆ 10 ಘಂಟೆ 15 ಮಿನಿಟು—ನೆರೆದು ಜುಲಾಯಿ ತಾ 14ಕ್ಕೆ ಮುಂದುವರಿಸಿಡಲ್ಪಟ್ಟಿದೆ.

ನಿಯೋಜಿತ ಕೇಂದ್ರ ಕಾರ್ಯಕಾರೀ ಮಂಡಲಿಗೆ ಒಮ್ಮತದ ಹೆಸರು ಪಟ್ಟಿಯೊಂದನ್ನೊಪ್ಪಿಸಬೇಕೆಂದು ಪ್ರಮುಖ ಪಕ್ಷಗಳಾದ ಕಾಂಗ್ರೆಸು ಮತ್ತು ಲೀಗುಗಳೊಳಗೆ ನಡೆದ ಸಂಧಾನ ಮಾತುಕತೆ ನಿರರ್ಥಕವಾದುದೇ ಸಮ್ಮೇಲನ ಮುಂದ ಬೀಳಲು ಕಾರಣ.

ಇನ್ನು ಪ್ರತಿಯೊಂದು ಪಂಗಡವೂ ತನ್ನ ಹೆಸರು ಪಟ್ಟಿಯನ್ನು ಪ್ರತ್ಯೇಕವಾಗಿ ಒಪ್ಪಿಸಬೇಕೆಂದು ಲೋರ್ಡ್ ವೇವೆಲರು ಕೇಳಿದ್ದರಿಂದ ತಂತಮ್ಮ ಕಾರ್ಯಕಾರೀ ಸಮಿತಿಗಳೊಡನೆ ಪರ್ಯಾಲೋಚಿಸಲು ಲೀಗ್ ಮತ್ತು ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಅವಧಿ ಬೇಕಾಯಿತು, ತದನುಗುಣವಾಗಿ ಸಮ್ಮೇಲನವನ್ನು ಮುಂದುವರಿಸಲಾಯಿತು. ಜುಲಾಯಿ ೩ರಲ್ಲಿ ಕಾಂಗ್ರೆಸ್—೬ರಲ್ಲಿ ಲೀಗ್ ಕಾರ್ಯಕಾರೀ ಸಮಿತಿಗಳು ಸಿಮ್ಲಾದಲ್ಲಿ ಸೇರಲಿವೆ.

ಯಾರ ಪಟ್ಟಿಯನ್ನೂ ಪೂರ್ಣಾಂಗೀಕಾರ ಮಾಡುವ ಆಶ್ವಾಸನೆ ಕೊಡಲಾರೆ—ಕಾರ್ಯಕಾರೀ ಮಂಡಲಿಯ ಸಂಖ್ಯೆಯಿಷ್ಟೇ ಎಂದು ಈಗ ಹೇಳಲಾರೆ—ತನ್ನ ಘೋಷಣೆಯಲ್ಲಿ ಸೂಚಿಸಿದ ಜಾತೀವಾರು ಪ್ರಾತಿನಿಧ್ಯವನ್ನಾಧರಿಸಿ, ಸಮ್ಮೇಲನದಲ್ಲಿ ಹಾಜರಿಲ್ಲದ ಪಕ್ಷಗಳಿಗೂ ಗಮನಕೊಟ್ಟು, ಕಾರ್ಯಕಾರೀ ಸಮಿತಿಯನ್ನು ಆರಿಸಿಕೊಳ್ಳುವ ಪೂರ್ಣಾಧಿಕಾರ ತನ್ನದೇ ಎಂದು ಲೋರ್ಡ್ ವೇವೆಲ್ ಕಂಠೋಕ್ತವಾಗಿ ಹೇಳಿದ್ದಾರೆ.

ಇದು ವರೆಗಿನ ಸಮ್ಮೇಲನದ ಸಭಾ ಚರ್ಚೆಗಳಿಗಿಂತ ಖಾಸಗೀ ಸಂಭಾಷಣೆಗಳೇ ಪ್ರಾಮುಖ್ಯವಾಗಿದ್ದುವು; ಈಗ ಕೂಡ ಕಾಂಗ್ರೆಸ್-ಲೀಗ್ ಒಪ್ಪಂದದ ಆಸೆ ಪೂರ್ತಿ ಮುಗಿದಿಲ್ಲವಾದರೂ, ಬಹುತೇಕವಾಗಿ ಮುರಿದಂತೆಯೇ.

ಇನ್ನು ಎಲ್ಲವೂ ಲೋರ್ಡ್ ವೇವೆಲರ ತೀರ್ಮಾನವನ್ನು ಅವಲಂಬಿಸಿಕೊಂಡಿದೆ.

ವೈಸರಾಯೀ ಸೂತ್ರಗಳಿಗನುಸಾರವಾಗಿ ಮುಸ್ಲಿಂ ಲೀಗು ಹೆಸರು ಸೂಚಿಸದೆ ಮುಸಲ್ಮಾನರಿಗೆ ಐದು ಸ್ಥಾನಗಳೆಂದರೆ ಐದೇ ಹೆಸರುಗಳನ್ನು ಸೂಚಿಸಬಹುದು, ಅದರಲ್ಲೂ ವೈಸರಾಯರು ಅದಲುಬದಲು ಮಾಡಿದಲ್ಲಿ ಅವರ ತೀರ್ಮಾನಕ್ಕೊಪ್ಪದೆ ಅಸಹಕರಿಸಬಹುದು. ಆಗ? ಯಾವುದಾದರೊಂದು ಪಕ್ಷ ಬಹಿಷ್ಕರಿಸಿದ ಮಾತ್ರಕ್ಕೆ ವೈಸರಾಯರು ಇಡೀ ಯೋಜನೆಯನ್ನೇ ಬಿಟ್ಟು ಬಿಡುವರೋ? ಮಿಕ್ಕವರನ್ನಾಧರಿಸಿ ಕೆಲಸ ಮುಂದೊತ್ತುವರೋ?—ಎಂಬುದನ್ನು ನೋಡಲಿಕ್ಕಿದೆ.

ಕಾಂಗ್ರೆಸು ತನ್ನ ರಾಷ್ಟ್ರೀಯ ರೂಪಕ್ಕನುಸಾರವಾಗಿ ತಾನು ತಯಾರಿಸುವ ಹೆಸರು ಸೂಚೀ ಪತ್ರದಲ್ಲಿ ಹಿಂದೂ, ಮುಸಲ್ಮಾನ್, ಪಾರ್ಸಿ, ಕ್ರೈಸ್ತ ಇತ್ಯಾದಿ ಎಲ್ಲಾ ಜಾತಿಗಳವರ ಹೆಸರನ್ನೂ ಸೇರಿಸಿಕೊಡಲಿದೆ.

ಸಭಾ ವಿವರ

ಸಮ್ಮೇಲನಾಲಯ

ತಾ. 25ನೇ ಪೂರ್ವಾಹ್ನ ಅನುಕ್ರಮವಾಗಿ ಆಗಮಿಸಿ ವೈಸರಾಯ ಭವನದಲ್ಲಿ ಜಮೆಯಾಗಿದ್ದ ಪ್ರತಿನಿಧಿಗಳೊಡನೆ ಸಶಕ್ತೀಕರಾದ ಲೋರ್ಡ್ ವೇವೆಲರ ಹಸ್ತಲಾಘವ, ಕುಶಲ ಪ್ರಶ್ನೋತ್ತರಗಳಾದುವು. ಅಲ್ಲಿಂದ ವೈಸರಾಯರು ಪತ್ರಿಕಾ ಪ್ರತಿನಿಧಿಗಳ ದೊಡ್ಡ ತಂಡ ನೆರೆದಲ್ಲಿಗೆ ಧಾವಿಸಿ ಸುದ್ದಿ ಸೂಚನೆಗಳಿಗೆ ನಿಯಂತ್ರಣ ಹಾಕಿಕೊಳ್ಳಬೇಕೆಂದು ನಾಲ್ಕು ಮಾತುಗಳನ್ನಾಡಿ ಬಂದರು. ಆ ಮೇಲೆ ಎಲ್ಲಾ ಪ್ರತಿನಿಧಿಗಳೂ ಅಧ್ಯಕ್ಷ ವೈಸರಾಯರೊಂದಿಗೆ ಸಮ್ಮೇಲನದ ಭವನ ಪ್ರವೇಶಿಸಿದರು. ಅಂದು ಹಿಂದೆ ಇಂಪೀರಿಯಲ್ ಲೆಜಿಸ್ಲೇಟಿವ್‌ಕೌನ್ಸಿಲ್‌ನ ಲೈಬ್ರೆರಿಯಿದ್ದ ಭವನ ಆ ಮೇಲೆ ಸಮ್ಮೇಲನಾರಂಭಕ್ಕೆ ಎರಡು ದಿನವಿರುವ ವರೆಗೂ ಅಲ್ಲಿ ಸೇನೆಗಳ ಸಾಮಾನು ಸಂಗ್ರಹವೇ ಇತ್ತಂತೆ. ಅದನ್ನು ಸಮ್ಮೇಲನಾಲಯವಾಗಿ ಅವಸರದಿಂದ ಮಾರ್ಪಡಿಸಿದ್ದರೆಂಬ ಚಿಹ್ನೆಗಳು ಕಾಣುತಿದ್ದುವು. ಕೆಂಪು ಜಮಖಾನೆಗಳನ್ನು ಹೊದಿಸಿದ ಖಾಲಿ ಗೋಡೆಗಳ ವಿಶಾಲ ಕೋಣೆ, ಅದರ ನಡುವೆ ಆ ತುದಿಯಿಂದ ಈ ತುದಿವರೆಗೂ ವ್ಯಾಪಿಸಿರುವ ದೊಡ್ಡದೊಂದು ಮೇಜು—ಮರದ ಖಾಲಿ ಮೇಜು. ಅದರ ಇಕ್ಕಡೆ ಮತ್ತು ಎರಡು ತುದಿಬದಿಗಳಲ್ಲೂ ಪ್ರತಿನಿಧಿಗಳ ಮತ್ತು ವೈಸರಾಯರ 22+1 ಕುರ್ಚಿಗಳು. ಇದೇ ಚರಿತ್ರಾರ್ಹ—ಜಗತ್ಪ್ರಸಿದ್ಧ—ಸಿಮ್ಲಾ ಸಮ್ಮೇಲನ ರಂಗ. ಒಂದು ಪಕ್ಕದ ಸಾಲಿನ ಮಧ್ಯದಲ್ಲಿ ವೈಸರಾಯರ ಆಸನವಿದೆ. ಆ ಬದಿಯ ಗೋಡೆ ತುಂಬಾ ಕಿಟಕಿಗಳೇ. ವೈಸರಾಯರೊಂದು ಕಿಟಕಿಗೆ ಬೆನ್ನು ಹಾಕಿ ಕುಳಿತುಕೊಳ್ಳುತ್ತಾರೆ. 3000 ಅಡಿ ಆಳದೊಂದು ಕಣಿವೆ ಅಡಕಡ್ಡವಾಗಿರುವ ವೃಕ್ಷಾವರಿತ ಗುಡ್ಡಗಳ ಸಾಲು—ಇವೆಲ್ಲಾ ಮಳೆಗಾಲದ ಮುಂಜಿನಲ್ಲಿ ಆ ಕಿಟಕಿಯಿಂದ ಕಾಣಲಾಗುವ ಮಸುಕು ದೃಶ್ಯಗಳು. ಪ್ರತಿನಿಧಿಗಳ ಆಸನ ವ್ಯವಸ್ಥೆಯು ಒಂದು ರಾಜಕೀಯ ಧರ್ಮವನ್ನಾಧರಿಸಿ ನಡೆದಂತಿದೆ. ವೈಸರಾಯರ ಎಡಬದಿಯೆತ್ತಿಗೆ ಮೌಲಾನಾ ಅಜಾದರ ಆಸನ. ಆ ಮೇಲೆ ಅನುಕ್ರಮವಾಗಿ ಪಂತ್, ದೇಸಾಯಿ ಮತ್ತು ಇತರ ಕಾಂಗ್ರೆಸಿಗ ನೇತಾರರು. ವೈಸರಾಯರ ಬಲಗಡೆಯಲ್ಲೇ ಮಿ. ಜಿನ್ನರ ಕುರ್ಚಿ—ಆ ಮೇಲೆ ಅನುಕ್ರಮವಾಗಿ ಲಿಯಾಕತ್ ಅಲೀಖಾನ್, ಹೊಸೈನ್ ಇಮಾಮ್ ಮೊದಲಾದ ಲೀಗ್ ಪ್ರತಿನಿಧಿಗಳಾಸನಗಳು. ಮೇಜಿನ ಬಲಬದಿಯ ಸಾಲಿನಲ್ಲಿ ಯುರೋಪಿಯನ್ ಪ್ರಮುಖ ಹೆನ್ರಿ ರಿಚಾರ್ಡ್‌ಸನರ ಆಸನವಿದ್ದರೆ, ಸರಿ ಮುಂಭಾಗದ ಎಡಸಾಲಿನಲ್ಲಿ ರಾಜಾಜಿ, ಸರ್. ಹಿದಯತುಲ್ಲರ ಕುರ್ಚಿಗಳಿವೆ.

ಕೂಟ-ಊಟದ ಭವನಗಳು

ಸಮ್ಮೇಲನ ಭವನದ ಮೇಲಂತಸ್ತಿನ ಕೋಣೆಗಳನ್ನು ಪ್ರತಿನಿಧಿಗಳೊಳಗಿನ ಗುಪ್ತ ಸಂಭಾಷಣೆ ಮತ್ತು ಸಮಿತಿ ಸಭೆಗಳಿಗಾಗಿ ಮೀಸಲಿಟ್ಟಿದೆ. ಎಲ್ಲಕ್ಕಿಂತ ವೈಭವಪೂರ್ಣವಾದ ಕೋಣೆಯೆಂದರೆ ಊಟದ ಮನೆ. ಅದು ಮೂಲತಃ ವೈಸರಾಯೀ ಭವನದ ನರ್ತನ ಶಾಲೆಯಾಗಿಯೇ ಕಟ್ಟಲ್ಪಟ್ಟಿತ್ತು. ಇತ್ತೀಚೆಗಿನ ಕೆಲವು ವರುಷಗಳಲ್ಲಿ ಅದರ ಉಪಯೋಗವಾಗಿರಲಿಲ್ಲ. ಚಕ್ರವರ್ತಿ, ಚಕ್ರವರ್ತಿನಿ ಮತ್ತು ಹಿಂದುಸ್ಥಾನದ ರಾಜ ಮಹಾರಾಜರೇ ಮೊದಲಾದ 'ಮಹಾ ಮನುಷ್ಯ'ರ ಭಾವಚಿತ್ರಗಳಿದ್ದು ಅತಿ ಸಾಜೋಕಾಗಿ ಅಲಂಕರಿಸಲ್ಪಟ್ಟಿರುವ ನಿಲಯವಿದು. ಇಲ್ಲಿಯೇ ಲೋರ್ಡ್ ಡಾಲ್‌ಹೌಸಿಯ ಕಾಲದಲ್ಲಿ 1858ರಲ್ಲಿ ಮಾಡಲ್ಪಟ್ಟ 'ಚಾರಿತ್ರಿಕ ಹೌದಾಹ್'ಇದೆ. ಲೋರ್ಡ್ ಹಾರ್ಡಿಂಜೆಯವರು ನಡೆಸಿದ ಡಿಲ್ಲಿ ದರ್ಬಾರಿನಲ್ಲಿ ಉಪಯೋಗಿಸಲ್ಪಟ್ಟಿದ್ದ 'ಹೌದಾಹ್'ಇದು. ಹಾರ್ಡಿಂಜರ ಮೇಲೆ ಬಾಂಬೆಸೆಯಲ್ಪಟ್ಟಾಗ ಈ ರಜತ ನಿರ್ಮಿತ 'ಹೌದಾಹ್' ಜಖಮ್‌ಗೊಂಡಿತು. ಹಲವು 'ದರ್ಬಾರ್' ಮತ್ತು ಮಹೋತ್ಸವಗಳ ಸಂದರ್ಭಗಳಲ್ಲಿ ಅದನ್ನು ಉಪಯೋಗಿಸಲಾಗಿತ್ತು. ಸಮ್ಮೇಲನದ ಪ್ರತಿನಿಧಿಗಳಲ್ಲಿ ಶುದ್ಧ ಸಸ್ಯಾಹಾರಿಗಳೂ ಇರುವುದರಿಂದ ಅದಕ್ಕನುಗುಣವಾದ ಸುವ್ಯವಸ್ಥೆಗಳಿದ್ದುವು.

ಪ್ರಥಮ ಸಭೆ

ತಾ 25ನೇ ಪೂರ್ವಾಹ್ನ 11-20ಕ್ಕೆ ವೈಸರಾಯರು ಸಮ್ಮೇಲನದ ಉದ್ಘಾಟನಾ ಭಾಷಣವೀಯುತ್ತಾ 'ದೇಶದ ಸಾರ್ವತ್ರಿಕ ಹಿತಸಾಧನೆಗಾಗಿ ಪಕ್ಷಾಭಿಮಾನ ಹಳೇ ಅಪನಂಬಿಕೆಗಳ ಮಟ್ಟಬಿಟ್ಟು ಮೇಲಂತಸ್ತಿಗೇರಿರಿ. ನಿಮ್ಮೊಳಗಿನ ಒಪ್ಪಂದದ ಮೂಲಕ ರಾಜ್ಯರಚನೆ ಒದಗುವ ವರೆಗೆ ನನ್ನ ನಾಯಕತ್ವವನ್ನು ಅಂಗೀಕರಿಸಿರಿ. ಭಾರತದ ಹಿತಾನುಸಾರವಾಗಿ ಸಮ್ಮೇಲನ ಚರ್ಚೆಗಳನ್ನು ಮುನ್ನಡೆಸುತ್ತೇನೆ. ಹಿಂದೀಯರ ಯಥಾರ್ಥ ಸ್ನೇಹಿತನೆಂದು ನನ್ನನ್ನು ನಂಬಿರಿ' ಎಂದು ಆಗ್ರಹಪೂರ್ವಕ ಕೇಳಿಕೊಂಡರು. ಪ್ರತಿನಿಧಿಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರದೇ ಪ್ರಥಮ ಭಾಷಣ. ಕಾಂಗ್ರೆಸಿನ ರಾಷ್ಟ್ರೀಯ ಸ್ವರೂಪ-ರಾಷ್ಟ್ರೀಯ ಭಾವನೆಯು ಪ್ರತಿನಿಧಿಯನ್ನಿಸಲು ಅಡ್ಡಮಾಡುವ ಪ್ರಯತ್ನಗಳೆಲ್ಲವನ್ನೂ ಅಧ್ಯಕ್ಷ ಆಜಾದರು ನಿರೂಪಿಸಿದರು. ಮೌಲಾನರ ಉರ್ದು ಭಾಷಣದ ಇಂಗ್ಲಿಷ್ ಭಾಷಾಂತರವು ವೈಸರಾಯರಿಗೆ ದೊರೆತಿತ್ತು. ಅಧ್ಯಕ್ಷರನ್ನು ಸಮರ್ಥಿಸಿ ಹಲವು ಕಾಂಗ್ರೆಸ್ ಪ್ರಧಾನಿಗಳೂ ಭಾಷಣವಿತ್ತರೆಂದು ತಿಳಿದು ಬರುತ್ತದೆ. ಮಿ. ಜಿನ್ನರ ಭಾಷಣದಲ್ಲಿ ಪದ್ಧತಿಯಂತೆ ಟೀಕೆಯೇ ತಿರುಳಾಗಿದ್ದಿತು. ಸಹಕಾರ ಕೊಡಲು ಲೀಗು ಸಿದ್ಧವಾಗಿದ್ದರೂ ಸರಕಾರವನ್ನು ನಿರಾಕರಿಸಿತೆಂದು ದೂಷಿ, ಕಾಂಗ್ರೆಸು ಹಿಂದೂ ಸಂಸ್ಥೆಯೆಂದು ಮಿ.

ಕನ್ನಡ ನಾಡಿನ

ಜೀವ ವಿಮಾ ಸಂಸ್ಥೆ!

ಕಳೆದ ೧೫ ವರುಷಗಳಿಂದ ಜೀವ ವಿಮಾ ಕಾರ್ಯವನ್ನು ಮಾಡುತ್ತ ಕನ್ನಡಿಗರ

ಆದರಾಭಿಮಾನದ ಸಂಸ್ಥೆ!

ಪ್ರಥಮ ಕಾಲ-ಮೂಲ ವಿಮರ್ಶೆ **(Valuation)**ಯಲ್ಲಿಯೇ ಪಾಲಿಸಿದಾರರಿಗೆ ಲಾಭ **(Bonus)** ಹಂಚಿದ ಸಂಸ್ಥೆ!

ಪ್ರತಿಯೊಬ್ಬ ಕನ್ನಡಿಗನೂ ಪಾಲಿಸಿಯನ್ನು ಪಡೆಯಲು ಯೋಗ್ಯವಾದ ಸಂಸ್ಥೆ!

ಇಂದೇ ಜೀವ ವಿಮೆ ಇಳಿಸಿರಿ, ಮತ್ತು ಪ್ರಾತಿನಿಧ್ಯವನ್ನು ಪಡೆಯಿರಿ

— ಹೆಚ್ಚಿನ ವಿವರಗಳಿಗೆ —

B. M. A. Kini, *Special Organisor,* Camp Ajjarkad, UDIPI. OR **A. S. Kini,** *Managing Director.*

ಯುನೈಟೆಡ್ ಕರ್ನಾಟಕ ಇನ್ಸುರೆನ್ಸ ಕಂಪನಿ ಲಿಮಿಟೆಡ್ ಧಾರವಾಡ

THE UNITED KARNATAK INSURANCE Co. Ltd. DHARWAR

ಸಮ್ಮೇಲನದ ಭವಿಷ್ಯ ವೈಸರಾಯರ ಕೈಯಲ್ಲಿದೆ!

ಲೋರ್ಡ್ ವೇವೆಲರೇನು ಮಾಡುವರು?

ಜಿನ್ನರ ನೆವ ಹೇಳಿ ಹೆಜ್ಜೆ ಹಿಂದಿಟ್ಟರೆ ಹೋಯಿತು!

ಜಿನ್ನರು ಆಗ್ರೋಷಿಸ ಹತ್ತಿದರು. ಗಡಿನಾಡಿನ ಕಾಂಗ್ರೆಸ್ ಪ್ರಧಾನಿ ಡಾ। ಖಾನ್ ಸಾಹೇಬರಿಗಿದನ್ನು ಸಹಿಸಲಾಗಲಿಲ್ಲ; ಅವರು ಆಗಲೇ ಪ್ರತಿಭಟಿಸಿದಾಗ ವೈಸರಾಯರು ಮಧ್ಯೆ ಬಾಯಿ ಹಾಕಿ ಈ ವಾಕ್ಕಲಹವನ್ನು ನಿಲ್ಲಿಸಿದರೆಂದು ತಿಳಿದು ಬರುತ್ತದೆ. ಹಿಂದೀ ಸೇನೆ, ವ ಶ್ತ್ರದರ ಭಾವೀ ಸಂಘಟನೆ ಹಾಗೂ ಹತೋಟಿಯ ಕುರಿತು ಕಾಂಗ್ರೆಸ್ ಅಧ್ಯಕ್ಷರೆತ್ತಿದ ಪ್ರಶ್ನೆಯನ್ನು ವೈಸರಾಯರು ಸಹಾನುಭೂತಿಪೂರ್ವಕ ಕೇಳಿದರು; ಆದರೆ ಸೇನೆಗೆ ರಾಜಕೀಯ ಸಂಬಂಧವಿರಬಾರದೆಂಬ ಉತ್ತರ ದೊರೆಯಿತು. ಸರ್ವರೊಪ್ಪಿಗೆಯ ಮುಂದಿನ ಶಾಶ್ವತ ವ್ಯವಸ್ಥೆಗಾಗಿಯೇ ಇಂದಿನ ತಾತ್ಕಾಲಿಕ ಸರಕಾರಕ್ಕೆ ತಮ್ಮ ಒಪ್ಪಿಗೆಯೆಂದು ಕಾಂಗ್ರೆಸು ಅಧ್ಯಕ್ಷರು ಮುಂದಟ್ಟು ಮಾಡಿದರಲ್ಲದೆ ವೈಸರಾಯರೂ ಹಾಗೆಂದೇ ವಾದಿಸಿದರು. ದಳಿತವರ್ಗಕ್ಕಿತ್ತ ಪ್ರಾತಿನಿಧ್ಯ ಸಾಲದೆಂದು ಶ್ರೀ ಶಿವರಾಜರ ವಾದ. ಇತರ ಹಲವು ಪ್ರತಿನಿಧಿಗಳೂ ತಂತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು ವೈಸರಾಯೀ ಸೂಚನೆಗಳ ಮೇಲೆ ಸ್ಥೂಲ ರೂಪೀ ಚರ್ಚೆ ನಡೆದು ಘಂ. 5ಕ್ಕೆ ಅಂದಿನ ಅಧಿವೇಶನ ಮುಗಿಯಿತು.

ತಾ. 26ರಲ್ಲಿ

ತಾ. 26ರಲ್ಲಿ 11ಘಂಟೆಗೆ ಸೇರಿದ ಸಮ್ಮೇಲನವು 1ಘಂಟೆಗೆ ಮುಗಿಯಿತು. ಜಪಾನ್ ವಿರುದ್ಧ ಯುದ್ಧಕ್ಕೆ ಸರ್ವಸಹಾಯವೀಯುವದೇ ಮೊದಲಾದ ಹೊಸ ಕೇಂದ್ರ ಮಂಡಲಿಯ ಕಾರ್ಯಭಾರ ಮತ್ತು ಹಿಂದೂ ಮುಸ್ಲೀಮ್ ಪ್ರಾತಿನಿಧ್ಯ ಸಾಮ್ಯತೆ ಇತ್ಯಾದಿ ವೈಸರಾಯೀ ನಿರೂಪಣೆಯ ರೂಪರೇಖೆಗಳನ್ನು—ಮೊದಲ ಭಾಗವನ್ನು—ಸಮ್ಮೇಲನವು ಸರ್ವ ಸಮ್ಮತಿಯಿಂದ ಅಂಗೀಕರಿಸಿತು. ಸಮ್ಮೇಲನದ ಚರ್ಚೆಗಳ ಪ್ರತ್ಯಕ್ಷಾವಲೋಕನೆಯ ಅನುಕೂಲತೆ ಪತ್ರಿಕಾ ಪ್ರತಿನಿಧಿಗಳಿಗಿರಲಿಲ್ಲ. ತಾ. 26ನೇ ಮುಂಜಾನೆ ಅಖಿಲ ಭಾರತ ಮತ್ತು ವಿದೇಶೀ ವಾರ್ತಾದಾರರಿಗೆ ವೈಸರಾಯರಕಾರ್ಯದರ್ಶಿಗಳು ಸಭಾಭವನವನ್ನು ಸಾದ್ಯಂತವಾಗಿ ತೋರಿಸಿ ಪರಿಚಯ ಮಾಡಿಕೊಟ್ಟರು. ಪ್ರತಿನಿಧಿಗಳೊಳಗಿನ ಖಾಸಗೀ ಸಂಭಾಷಣೆಗಾಗಿ ಅಪರಾಹ್ನ ಸಭಾಕಾರ್ಯವನ್ನು ನಿಲ್ಲಿಸಲಾಗಿತ್ತು. ಎಲ್ಲರ ಲಕ್ಷ್ಯವನ್ನೆಳೆದ ಮಾತುಕತೆಯೆಂದರೆ ಪಂತ್-ಜಿನ್ನಾ ಸಂಭಾಷಣೆ. ಅಂದೇ ಮಿ. ಜಿನ್ನರು ಲೀಗ್ ಪ್ರತಿನಿಧಿಗಳನ್ನು ಸೇರಿಸಿ ಚರ್ಚಿಸಿದರು. ಇತ್ತ ಕಾಂಗ್ರೆಸ್ ಪಾಳಯದೊಳಗೂ ಆಜಾದ್-ಗಾಂಧಿ, ಆಜಾದ್ ಮತ್ತು ಅನುಯಾಯಿ ಪ್ರತಿನಿಧಿಗಳು, ರಾಜಾಜೀ-ಭುಲಾಭಾಯಿ, ರಾಜಾಜಿ-ಗಾಂಧಿ ಸಂಭಾಷಣೆಗಳು ನಡೆದಿದ್ದುವು. ತಾ. 26ನೇ ಸಮ್ಮೇಲನದಲ್ಲಿ ವೈಸರಾಯೀ ನಿರೂಪಣೆಯ ಪೂರ್ವಾರ್ಧವು ಅಂಗೀಕರಿಸಲ್ಪಟ್ಟು, ಕೇಂದ್ರ ಮಂಡಲಿಯ ಆರಿಸುವಿಕೆ, ಪ್ರಾಂತಿಕ ಸರಕಾರಗಳ ಪುನರುತ್ಥಾನ, ಚುನಾವಣೆಯ ದಿನ ನಿಶ್ಚಯ ಮೊದಲಾದ ಉತ್ತರಾರ್ಧಗಳು ಬಾಕಿಯಿದ್ದುದರಿಂದ ಸಮ್ಮೇಲನ ಪಥದಲ್ಲಿ ಜಿಡುಪು ಅಡ್ಡಬಂದಂತಾಗಿತ್ತು; ಅದನ್ನು ಖಾಸಗಿಯಾಗಿ ಚರ್ಚಿಸಿ ಒಪ್ಪಂದಕ್ಕೆ ಬರಲಾಗುವಂತೆ ವಿಷಯವು ಅಧಿವೇಶನದಿಂದ ಆಂತರಿಕ ಸಂಭಾಷಣೆಗಳಿಗೆ ವರ್ಗಾಯಿಸಲ್ಪಟ್ಟಿದ್ದಿತ. ಮಿ. ಜಿನ್ನರಿಂದ ಸಂಯುಕ್ತ ಪ್ರಾಂತ್ಯದ ಮಾಜೀ ಕಾಂಗ್ರೆಸ್ ಪ್ರಧಾನಿ ಪಂಡಿತ ಗೋವಿಂದ ವಲ್ಲಭ ಪಂತರಿಗೆ ಆಮಂತ್ರಣ ಬಂದು ಅವರಿಬ್ಬರೊಂದಾಗಿ ತಾಸುಗಟ್ಟಲೆ ಗೂಢ ಮಾತುಕತೆ ನಡಿಸಿದರು. ವಾರ್ತಾದಾರರು ಪಂಡಿತ ಪಂತರನ್ನು ಮುತ್ತಿದಾಗ 'ನನಗೆ ಹೇಳಲಿಕ್ಕೇನೂ ಇಲ್ಲ' ಎಂಬ ಉತ್ತರ ಬಂತು. 'ಇನ್ನೊಮ್ಮೆ ಜಿನ್ನರ ಭೇಟಿಗೆ ಹೋಗುವಿರಾ?' ಎಂದು ಕೇಳಿದಾಗ 'ಹೋದಾಗಲೇ ತಿಳಿದುಕೊಳ್ಳಿ' ಎಂದುಬಿಟ್ಟರು. ಮಿ ಜಿನ್ನರಂತೂ ಪತ್ರಿಕಾ ಪ್ರತಿನಿಧಿಗಳ ಮುಖ ಕಂಡೊಡನೆ 'ದಯವಿಟ್ಟು ಸವಾಲು ಹಾಕಬೇಡಿ' ಎಂದು ಸಕಾಲದಲ್ಲೇ ಹೇಳಿಬಿಟ್ಟರು.

ತಾ. 27ರಲ್ಲಿ

11 ಘಂಟೆಗೆ ಸೇರಿದ ಪ್ರತಿನಿಧಿಗಳು ಒಂದೇ ಘಂಟೆ ಪೀಠಾರೂಢರಾಗಿ ಕಾಂಗ್ರೆಸ್—ಲೀಗ್ ಖಾಸಗೀ ಮಾತುಕತೆಗಳಿಗಾಗಿ ಸಮ್ಮೇಲನವನ್ನು ತಾ. 29ಕ್ಕೆ ಮುಂದುವರಿಸಿಟ್ಟು ಚದರಿದರು. ಅಂದು ಪುನಃ ಪಂತ್-ಜಿನ್ನಾ ಸಂಭಾಷಣೆ—ದೀರ್ಘ ಮಾತುಕತೆ-ನಡೆಯಿತು. ಅನಿರೀಕ್ಷಿತವಾಗಿ ಮಿ. ಜಿನ್ನರು ವೈಸರಾಯರ ಸ್ಪೆಶ್ಯಲ್ ರಿಕ್ಷಾಹತ್ತಿ ವೈಸರಾಯಿ ಭವನ ಪ್ರವೇಶಿಸಿದುದು ಎಲ್ಲರಿಗೂ ಕೌತುಕವನ್ನುಂಟು ಮಾಡಿತು. ಸುಮಾರು 2½ತಾಸು ಲೋರ್ಡ್ ವೇವಲರೊಡನೆ ಸಂಭಾಷಿಸಿ ಮಿ. ಜಿನ್ನರು ಹೊರಬಂದರು. ಪತ್ರಿಕಾ ಪ್ರತಿನಿಧಿಗಳಡಿರಿಸಿದಾಗ ವಾರ್ತೆಯ ಗಾಳಿ ಕೂಡಾ ಸೂಸದಂತೆ ಬಾಯಿ ಮುಚ್ಚಿಕೊಂಡರು. ಗಾಂಧಿಜೀ ಸಮ್ಮೇಲನಕ್ಕೆ ಹಾಜರಾಗದ ಕುರಿತು ಲೀಗ್ ಪ್ರತಿನಿಧಿಗಳಲ್ಲಿದ್ದ ಅತೃಪ್ತಿ ಒಡೆದು ಕಾಣುತ್ತಿತ್ತು; 'ಸಂಗತಿ ಸರಳವಾಯಿಯಾಗಬೇಕು ಗಾಂಧಿಜಿನ್ನರಿಬ್ಬರಿಂದಲೇ' ಎಂದು ಆ ಪಾಳಯದ ಅಭಿಪ್ರಾಯ. ಮಿ. ಜಿನ್ನರ ಸನ್ನಿಧಿಗೆ ಮಹಾತ್ಮಾ ಗಾಂಧಿಯವರು ಹಲವು ಬಾರಿ ಬಂದಿದ್ದರಾದ್ದರಿಂದ ಈ ಬಾರಿ ಜಿನ್ನರೇ ಗಾಂಧಿಯವರ ಭೇಟಿಯಾಚಿಸಬೇಕು ಎಂದು ಕೆಲವು ಪ್ರಗತಿಶೀಲ ಮುಸಲ್ಮಾನರ ಬಯಕೆಯಿದ್ದಿತು. ಅದಕ್ಕೆ ಪ್ರತಿಯಾಗಿ ಮಿ. ಜಿನ್ನಾ ಮತ್ತು ಮೌಲಾನಾ ಆಜಾದರ ಮಾತುಕತೆ ನಡೆಯಲೆಂದು ಕಾಂಗ್ರೆಸಿನವರ ಹಾರೈಕೆಯಿದ್ದಿತು. ಆದರೆ ಮೌಲಾನರ ಮುಖಾವಲೋಕನವನ್ನೂ ಮಿ. ಜಿನ್ನರು ಸಹಿಸುವದಿಲ್ಲವೆಂಬುದಕ್ಕೆ ಹಿಂದೊಮ್ಮೆ ನಿದರ್ಶನ ದೊರೆತಿದೆ. ಗಾಂಧಿಜೀಯ ಭೇಟಿಯನ್ನೂ ಯಾಚಿಸಲಿಲ್ಲ.

ತಾ. 28ರಲ್ಲಿ

ಒಪ್ಪಂದದ ಖಾಸಗೀ ಪ್ರಯತ್ನಕ್ಕಾಗಿ ಮೀಸಲಿಟ್ಟ ತಾ. 28ರಲ್ಲಿ ನಿರಾಶೆಯ ಕಾರ್ಮೋಡಕವಿದಿತ್ತು; ಜಿನ್ನಾ-ಪಂತ್ ಮಾತುಕತೆಗಳು ನಿಂತು ಅತ್ತ ಲೀಗ್ ಪ್ರತಿನಿಧಿಗಳೂ ಇತ್ತ ಕಾಂಗ್ರೆಸ್ ಪ್ರತಿನಿಧಿಗಳೂ ತಂತಮ್ಮ ಅಧ್ಯಕ್ಷರ ಸಮಕ್ಷಮದಲ್ಲಿ ಗೂಢ ಸಂಭಾಷಣೆ ನಡೆಸುತಿದ್ದರು. ಹಿಂದಿನೆರಡು ದಿನಗಳಲ್ಲಿ ಆಗಾಗ ಅತುರೋತ್ಸಾಹ; ಊಹಾಪೋಹೆಗಳನ್ನೆಬ್ಬಿಸುತಿದ್ದ ರಿಕ್ಷಾವಾಹಕ ಧುರೀಣರಚಲನವಲನೆಗಳೂ ಕಡಿಮೆಯಾಗಿದ್ದುವು. ಪಾಳಯದೊಳಗಿನ ಪರ್ಯಾಲೋಚನೆ ಮಾತ್ರ ಬಿರುಸಾಗಿ ನಡೆದಿದ್ದಿತು. 'ಆರಂಭದಲ್ಲಿದ್ದ ಸ್ಥಿತಿಯಲ್ಲೇ ಈಗಲೂ ಇದ್ದೇವೆ' 'ಇನ್ನೆಲ್ಲವೂ ವೇವೆಲರನ್ನೇ ಅವಲಂಬಿಸಿದೆ' 'ಎಲ್ಲರೂ ಒಪ್ಪಂದದಾತುರವಿದ್ದವರೇ-ಆದರೆ ತಂತಮ್ಮ ಹಾದಿಯಿಂದ ಎಳ್ಳಷ್ಟೂ ಕದಲದೆ'-ಇತ್ಯಾದಿ ಉದ್ಗಾರಗಳು ಪ್ರತಿನಿಧಿಗಳ ಬಾಯಿಯಿಂದ ಬರುತಿದ್ದುವು.

ತಾ 29ರಲ್ಲಿ

ಪದ್ಧತಿಯಂತೆ 11 ಘಂಟೆಗೆ ಸಮ್ಮೇಲನ ಸೇರಿತು. ಹೊರಗೆ ನಡೆದ ಸಂಧಾನ ಮಾತುಕತೆ ಫಲಿಸದುದರಿಂದ ಸಮ್ಮೇಲನದ ದಿನ ಮುಂದೆ ಬೀಳುವದನ್ನೆಲ್ಲರೂ ನಿರೀಕ್ಷಿಸಿದ್ದರು. ಪರಸ್ಪರರ ಜೇಬಿನೊಳಗೇನುಂಟೆಂಬ ಪರೀಕ್ಷೆ ನಡೆಸುವದಕ್ಕಾಗಿ ವೇವೆಲ್-ಜಿನ್ನರೊಳಗೆ ಚತುರೋಕ್ತಿಗಳ ಜಟಾಪಟಿ ನಡೆಯಿತು. ಪಂಡಿತ ಗೋವಿಂದವಲ್ಲಭ ಪಂತರೊಂದಿಗೆ ನಡೆಸಿದ ಮಾತುಕತೆಯಿಂದ ಪರಿಣಾಮವೇನೂ ಆಗಲಿಲ್ಲ ಎಂದು ಜಿನ್ನರು ವರದಿಯೊಪ್ಪಿಸಿದರು. ಹಾಗಾದರೆ ನಿಮ್ಮ ಪ್ರತ್ಯಪ್ರತ್ಯೇಕ ಹೆಸರು ಸೂಚಿಗಳು ತಯಾರಿವೆಯೇ? ಅದನ್ನೊಪ್ಪಿಸುವಿರಾ? ಎಂದು ವೈಸರಾಯಿಗಳು ಕೇಳಿದಾಗ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಅಭಿಪ್ರಾಯ ಪಡೆದು ಐದಾರು ದಿನಗಳಲ್ಲಿ ಒಪ್ಪಿಸಬಲ್ಲೆನೆಂದು ಮೌಲಾನರಂದರು. ಹೆಸರು ಸೂಚಿಸುವ ಕುರಿತು ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯನ್ನು ಸೇರಿಸಿ ಅದರ ತೀರ್ಮಾನ ತಿಳಿಸಲು ತನಗೆ ಕಡಿಮೆಯೆಂದರೆ ಎರಡು ವಾರಗಳಾದರೂ ಬೇಕೆಂದು ಮಿ. ಜಿನ್ನರ ಹೇಳಿಕೆಯಾಯಿತು. ಹೊಸ ಕಾರ್ಯಕಾರೀ ಸಮಿತಿಯ ಸದಸ್ಯರ ಸಂಖ್ಯೆಯೆಷ್ಟು ಎಂದು ಜಿನ್ನರು ಪ್ರಶ್ನಿಸಿದಾಗ ಈ ಸಂದರ್ಭದಲ್ಲಿ ಅದನ್ನು ತಿಳಿಸಲು ಸಾಧ್ಯವಿಲ್ಲ ಎಂದು ವೈಸರಾಯರಂದರು. 'ಸೂಚಿಸಲ್ಪಟ್ಟ ಹೆಸರುಗಳನ್ನು ತಬ್ದೀಲುವಿನಹಾ ಅಂಗೀಕರಿಸಿಕೊಳ್ಳಲಾಗುವದೆ?' ಎಂದು ಜಿನ್ನರ ಮರುಸವಾಲು. ಆ ಕುರಿತು ಪೂರ್ಣಾಧಿಕಾರ ತನ್ನದೇ ಆಗಿದೆ-ಅದು ಪ್ರಶ್ನಾತೀತವಿದೆ ಎಂಬುದು ಮೂಲ ಘೋಷಣೆಯಲ್ಲೇ ಬಂದಿದೆ ಎಂದು ಲೋರ್ಡ್ ವೇವೆಲರು ನೆನಪು ಕೊಟ್ಟರು. "ಯಾವುದಾದರೊಂದು ಪಕ್ಷ ತನ್ನ ಸೂಚೀಪತ್ರವನ್ನು ಒಪ್ಪಿಸದಿದ್ದಲ್ಲಿ ಮುಂದೇನಾಗುವದು?" ಎಂದು ಆಗ ಜಿನ್ನರ ಪ್ರಶ್ನೆ. 'ಪ್ರಕೃತ ಆ ಕುರಿತು ಏನನ್ನೂ ಹೇಳುವಂತಿಲ್ಲ' ಎಂದು ವೈಸರಾಯರ ಉತ್ತರ. ಸಮ್ಮೇಲನವನ್ನು ಎರಡುವಾರ- ಜುಲಾಯಿ ತಾ. 14ಕ್ಕೆ—ಮುಂದುವರಿಸಿಟ್ಟು ವೈಸರಾಯರ ನಿರೂಪಣೆ:- ಕಾಂಗ್ರೆಸು ಮತ್ತು ಲೀಗು— 8ರಿಂದ 12ರ ವರೆಗೆ ತಂತಮ್ಮ ಪಕ್ಷೀಯರ ಹೆಸರುಗಳನ್ನು ಸೂಚಿಸಬೇಕು; ಇದಕ್ಕೆ ಪುರವಣಿಯಾಗಿ ಅನ್ಯಪಕ್ಷೀಯರ ಹೆಸರುಗಳನ್ನೂ ಸೂಚಿಸಬಹುದು. ದಳಿತ ವರ್ಗದವರ 4 ಹೆಸರುಗಳನ್ನು ಶಿವರಾಜರೂ, ಸಿಖ್ಖರ 3 ಹೆಸರುಗಳನ್ನು ತಾರಾಸಿಂಗರೂ ಸೂಚಿಸಬಹುದೆಂದಾಯಿತು ಇತರ ಪಕ್ಷ ಪ್ರಮುಖರಾದ ಡಾ। ಬೆನರ್ಜಿ, ಸರ್. ಹೆನ್ರಿ ರಿಚಾರ್ಡ್‌ಸನ್, ಮಾಲಿಕ್ ಕಿಝರ್‌ಖಾನ್ ಹಯಾತ್‌ಖಾನ್, ಪಾರ್ಲಿಕಿಮೆಡಿಯ ಮಹಾರಾಜರಲ್ಲಿ ಪ್ರತಿಯೊಬ್ಬರಿಗೂ ನೂರು ಮೂರು ಹೆಸರುಗಳನ್ನು ಸೂಚಿಸುವ ಅಧಿಕಾರವಿದೆ. ಜತೆಯಲ್ಲೇ ಬೇರೆ ಪಕ್ಷೀಯರ ಒಂದೊಂದು ಹೆಸರನ್ನವರು ಸೂಚಿಸಬಹುದು ಇವೆಲ್ಲಾ ಪಟ್ಟಿಗಳಿಂದ ಬೇಕಾದವರನ್ನು ಹೆಕ್ಕಿಕೊಳ್ಳುವ ಅಧಿಕಾರ ವೈಸರಾಯರದು.

ಮಿಕ್ಕವರ ಬೆಂಬಲದಿಂದ ಮುಂದೊತ್ತಿ ದರಾಯಿತು!

ಮುಂದೇನು?

ಅಧ್ಯಕ್ಷ ಆಜಾದರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಅವಸರದ ಸಭೆಯನ್ನು ಸಿಮ್ಲಾಕ್ಕೆ ಕರೆದಿದ್ದಾರೆ ಹೊಟ್ಟೆ ನೋವಿಗೆ ಚಿಕಿತ್ಸೆ ಮಾಡಲು ಬೊಂಬಾಯಿಯಲ್ಲಿ ನಿಂತಿದ್ದ ಸರ್ದಾರ್ ವಲ್ಲಭಾಯಿ

(೫ನೇ ಪುಟ ನೋಡಿರಿ.)

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಮುಸಲ್ಮಾನರ ಹೆಸರೆತ್ತಬೇಕು ಲೀಗು ಮಾತ್ರ—ಜಿನ್ನಾ.
ಕಾಂಗ್ರೆಸ್ ಸರ್ವರ ಪ್ರಾತಿನಿಧ್ಯ ವಹಿಸಿದೆ—ಗಾಂಧಿ

ಜಿನ್ನರ ಆಕ್ಷೇಪವೇನು?

ಧುರೀಣರ ಸಮ್ಮೇಲನ ಮುಂದುವರಿದೊಡನೆ ಅದರ ಕಾರಣಪುರುಷ-ಪಾದಾಕ್ರಾಂತ ಮನುಷ್ಯ-ಮಿ ಜಿನ್ನರು ತನ್ನನ್ನು ಬಳಸಿ ನಿಂತ ಸುಮಾರು 10ಮಂದಿ ಪತ್ರಿಕಾ ಪ್ರತಿನಿಧಿಗಳಿದಿರು ಲೀಗ್ ಘೋಷಣೆಯನ್ನು ಈ ರೀತಿ ವಿವರಿಸಿದ್ದಾರೆ

ಕಾಂಗ್ರೆಸಿನ ಬಹುಮತ

ಪಾಕಿಸ್ಥಾನವನ್ನೊಪ್ಪಿ, ಸಮಾನ ಪ್ರಾತಿನಿಧ್ಯವಿತ್ತರೆ ತಾತ್ಕಾಲಿಕ ವ್ಯವಸ್ಥೆಗಳಲ್ಲಿ ತಾನು ಭಾಗವಹಿಸುವೆನೆಂದು ಲೀಗ್ 1943ರಲ್ಲಿ ಮಾಡಿದ್ದ ನಿರ್ಧಾರದೊಂದಿಗೆ ವೇವೆಲ್ ಸೂಚನೆಗಳನ್ನು ತೂಗಿ ತೋರಿಸುತ್ತಾ ಮಿ ಜಿನ್ನರೆಂದರು "ದಳಿತ ವರ್ಗದವರನ್ನು ಬಿಟ್ಟು ಹಿಂದುಗಳಿಗೂ ಮುಸಲ್ಮಾನರಿಗೂ ವೇವೆಲ್ ಸೂಚನೆಗಳಲ್ಲಿ ಸಮಾನ ಸ್ಥಾನಗಳೇನೋ ದೊರೆತಿವೆ. ನಾವೀ ಸಾಮ್ಯತೆಯ ಕುರಿತು ಭ್ರಾಂತಿಗೊಂಡಿಲ್ಲ ಕಾರಣ, ನಿಯೋಜಿತ ಕಾರ್ಯಕಾರೀ ಮಂಡಲಿಯಲ್ಲಿ ಮುಸಲ್ಮಾನ ಪಾಲು ⅓ಕ್ಕಿಂತ ಹೆಚ್ಚಿಗಿಲ್ಲ ನಾವು ಮೂರರಲ್ಲೊಂದಂಶದ ಅಲ್ಪ ಸಂಖ್ಯಾಕರಾಗುತ್ತೇವೆ. ಮುಸಲ್ಮಾನರ ಸರೀ ಸ್ಥಾನಗಳು ಹಿಂದುಗಳಿಗಿರುವಾಗ ದಳಿತ ವರ್ಗಕ್ಕೂ ಸಿಖ್ಖರಿಗೂ ಪ್ರತ್ಯೇಕ ಪ್ರಾತಿನಿಧ್ಯಗಳಿವೆ ಉಳಿದ ಯಾವ ಜಾತಿಗೆ ಅದವಾ ಜಾತಿಗಳಿಗೆ ಪ್ರಾತಿನಿಧ್ಯ ದೊರೆಯುವದೋ ನಮಗರಿಯದು ಯಾಕೆಂದರೆ ಕಾರ್ಯಕಾರೀ ಸಮಿತಿಯ ಸಂಖ್ಯೆಯೆಷ್ಟೆಂಬುದು ಇನ್ನು ತಾನೇ ನಿಶ್ಚಯವಾಗಬೇಕು

ಅವರೆಲ್ಲಾ ಒಂದೇ!

ದಳಿತ ವರ್ಗಕ್ಕಿರುವ ನಿಜವಾದ ವಿಪತ್ತುಗಳೆಂದರೆ ಸಾಮಾಜಿಕ ದಬ್ಬಾಳಿಕೆ ಮತ್ತು ಆರ್ಥಿಕಾವನತಿ ಮಾತ್ರ ರಾಜಕೀಯತೆ ಅದರ ಗುರಿಯೂ ಬಹುಮಟ್ಟಿಗ ಮಿಕ್ಕವರದೇ ನಮಗವರ ಮೇಲೆ ಪೂರ್ಣ ಸಹಾನುಭೂತಿಯಿದ್ದು ಅವರ ಸಾಮಾಜಿಕ ಆರ್ಥಿಕಾಭಿವೃದ್ಧಿಗೆ ನೆರವಾಗಲು ನಾವು ಸದಾ ಸಿದ್ಧರೇ ಆದರೂ ನಮ್ಮೊಂದಿಗವರ ನಿಕಟ ಸಂಬಂಧವಿಲ್ಲ. ಆದ್ದರಿಂದ ಹಲವು ಮುಖ್ಯ ವಿಷಯಗಳಲ್ಲಿ ಈ ವರ್ಗದ ವೋಟು ಕಾಂಗ್ರೆಸಿನ ಪಾಲಿಗೆ ಕಟ್ಟಿಟ್ಟಂತೆ ಇನ್ನು ಸಿಖ್ಖರ ಪ್ರಾತಿನಿಧ್ಯದ ಮಾತು ಅವರು ಭಾರತದ ವಿಭಾಗವನ್ನು ಇಷ್ಟರಲ್ಲೇ ವಿರೋಧಿಸಿದ್ದಾರೆ ಅವರ ರಾಜಕೀಯ ಕಾರ್ಯ ಮತ್ತು ಗುರಿ ಕಾಂಗ್ರೆಸಿನದೇ ಆಗಿದೆ. ಆದ್ದರಿಂದ ಅವರು ನಮ್ಮೊಡನೆ ಮಿಲನಗೊಳ್ಳುವದು ಅಸಂಭವ ಉಳಿದ ಜಾತಿಗಳ ಪ್ರಾತಿನಿಧ್ಯದ ಕುರಿತು ನನಗಿದುವರೆಗೇನೂ ತಿಳಿದಿಲ್ಲ ಇನ್ನುಳಿದ ಇಬ್ಬರು ಬ್ರಿಟಿಷ್ ಸದಸ್ಯರಿದ್ದಾರೆ—ವೈಸರಾಯಿ ಮತ್ತು ಕಮಾಂಡರ್-ಇನ್-ಚೀಫ್. ಈ ರೀತಿ ನಿಯೋಜಿತ ಕಾರ್ಯಕಾರೀ ಸಮಿತಿಯಲ್ಲಿ ಕಾಂಗ್ರೆಸಿನ ಬಹುಮತವು ನಿರ್ಬಾಧಿತವಾಗಿರುವಂತೆ ರೂಪಿಸಲ್ಪಟ್ಟಿದೆ

ವೈಸರಾಯೀ ವಿಶೇಷಾಧಿಕಾರ

ವೈಸರಾಯರ ವಿಶೇಷಾಧಿಕಾರವುಳಿದಿದೆ ಎಂದು ನನಗೆ ಗೊತ್ತಿದೆ, ಅಲ್ಪ ಸಂಖ್ಯಾಕರ ಹಕ್ಕು ರಕ್ಷಣೆಗಾಗಿಯೇ ಈ ಅಧಿಕಾರದ ವಿನಿಯೋಗವೆಂದು ಮಿ. ಅಮೆರಿ ಹೇಳಿರುವದನ್ನೂ ನಾನು ಬಲ್ಲೆ. ಆದರೆ ಮೇಲಿಂದ ಮೇಲೆ ಹಾಗೂ ನಿತ್ಯಕರ್ಮವಾಗಿ ಈ ವಿಶೇಷಾಧಿಕಾರವನ್ನು ಉಪಯೋಗಿಸಬೇಕಾಗಿ ಬಂದರೆ ಗವರ್ನರ್ ಜನರಲರು ಕೀಳಾ ಅಪಮಾನಕರ ಸ್ಥಿತಿಗಿಳಿಯಬೇಕಾಗುತ್ತದೆಂಬುದೂ ನನಗೆ ಗೊತ್ತಿದೆ ದೇಶದ ಪುನರ್ರಚನೆ, ಕೈಗಾರಿಕೆ, ಜೇನ ಯ, ಆರೋಗ್ಯ ವಿದೇಶಗಳಲ್ಲಿ ಪ್ರಾತಿನಿಧ್ಯ, ಇತ್ಯಾದಿ ಸರ್ವ ವಿಭಾಗಗಳನ್ನು ತನ್ನಿಚ್ಛೆಯಂತೆ ಈ ಕಾರ್ಯಕಾರಿ ಸಮಿತಿಯು ರೂಪಿಸಿಕೊಳ್ಳಬಹುದೆಂದು ಮಿ ಅಮೆರಿ ಹೇಳಿದ್ದಾರೆ. ಆದ್ದರಿಂದ ಬಹುಮತದ ಬಲದಿಂದ ಕಾಂಗ್ರೆಸು ತನ್ನ ನಿರ್ಧಾರಗಳನ್ನು ಮುಸ್ಲಿಂ ಪಂಗಡದ ವಿರುದ್ಧವಾಗಿ ಮುಂದೊತ್ತಲು ಯಾವ ಆತಂಕವೂ ಇಲ್ಲ.

ಎಂದಿಗೂ ಒಪ್ಪಲಾಗದ ವಿಷಯ

ನ್ಯಾಯ ಹಾಗೂ ವ್ಯವಹಾರ್ಯವಾದ ಒಂದು ಒಪ್ಪಂದಕ್ಕೆ ನಮ್ಮ ಪೂರ್ಣ ಬೆಂಬಲವಿದೆ. ಮುಸ್ಲೀಂ ಪಂಗಡದಿಂದ ಸದಸ್ಯರನ್ನಾರಿಸುವ ಹಕ್ಕು ತನಗಿದೆ ಎಂದು ಕಾಂಗ್ರೆಸು ಸಾರಿದ ಬೇರೆ ಪಕ್ಷಗಳೂ ತಮಗೆ ಆ ಅಧಿಕಾರವಿದೆಯೆನ್ನಬಹುದು. ಒಂದು ತೀರ್ಮಾನ, ಒಂದು ಒಪ್ಪಂದಕ್ಕೆ ನಾವು ಸದಾ ಸಿದ್ಧರೇ ಆದರೂ ಕಾಂಗ್ರೆಸಿಗಾಗಲೀ ಇತರ ಪಕ್ಷಕ್ಕಾಗಲೀ ಮುಸಲ್ಮಾನರನ್ನಾರಿಸುವ ಇದೊಂದು ಅಧಿಕಾರವನ್ನೀಯಲು ತತ್ವತಃ ಮತ್ತು ಕಾರ್ಯತಃ ನಾವೆಂದಿಗೂ ತಯಾರಿಲ್ಲ. ಮುಸಲ್ಮಾನರಿಗೊಪ್ಪಂದ ಬೇಕು, ವಸ್ತುಸ್ಥಿತಿಯೊಡನಾಟವಾಡುವ ಬಯಕೆ ಅವರಿಗಿಲ್ಲ ಭಾರತದ ಮುಸಲ್ಮಾನರಲ್ಲಿ 100ಕ್ಕೆ 99 ಮಂದಿ ಲೀಗಿನೊಡನಿದ್ದಾರೆ ಎಂಬುದನ್ನಾರೂ ಪ್ರಾಯಶಃ ಅಲ್ಲಗಳೆಯಲಾರರೆಂದು ನನ್ನ ನಂಬಿಕೆ. 70 ಉಪಚುನಾವಣೆಗಳ ಪೈಕಿ 1937ರ ಅನಂತರದಲ್ಲಿ ನಡೆದಿದ್ದ ಚುನಾವಣೆಯಲ್ಲಿ ನಹ, ಬೇರೊಂದೇ ಒಂದರಲ್ಲಾದರೂ ನಾವು ಸೋತುದಿಲ್ಲ. ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳಲ್ಲಿ ಒಟ್ಟಿಗಿರುವ ಮುಸ್ಲಿಂ ಸದಸ್ಯರ ಸಂಖ್ಯೆ ಸುಮಾರು 500 (ಇವಲ್ಲಿರ ಲೀಗ್ ಟಿಕೇಟಿನಿಂದಾರಿಸಲ್ಪಟ್ಟವರು 420 ಎಂದು ತಿಳಿದು ಬಂದಿದೆ) ಈ ಪೈಕಿ ಕಾಂಗ್ರೆಸಿಗರಿರುವದೆಂದರೆ ಕೇವಲ 30ರಷ್ಟು ಅದು ಕೂಡಾ ಒಂದೋ ಎರಡೋ ಎಸೆಂಬ್ಲಿಗಳಲ್ಲಿ ಮಾತ್ರ.

ನಾವಲ್ಲದೆ ಯಾರು?

ಇನ್ನು ಕೇಂದ್ರ ಎಸೆಂಬ್ಲಿಯಲ್ಲಿ ಮುಸಲ್ಮಾನ್ ಮತದಾರ ಕ್ಷೇತ್ರದಿಂದ ಕಾಂಗ್ರೆಸಿನಿಂದಾರಿಸಿ ಬಂದ ಒಬ್ಬ ಮುಸಲ್ಮಾನನೂ ಇಲ್ಲವೆಂದು ನಾನು ಕೇಳಿದೆ ಮಿಶ್ರ ಮತದಾನದಿಂದಾರಿಸಲ್ಪಟ್ಟ ಇಬ್ಬರೇನೋ ಇದ್ದಾರೆ. ಆದ್ದರಿಂದ ಎಲ್ಲ ಮುಸಲ್ಮಾನರ ಸ್ಥಾನಗಳಿಗಾಗಿ ವೈಸರಾಯರಿಗೆ ಹೆಸರು ಸೂಚಿಸುವ ಅಧಿಕಾರವು ಮುಸ್ಲಿಂ ಲೀಗಿಗೆ ಮಾತ್ರ ಹೊರತು ಬೇರಾರಿಗೂ ಇಲ್ಲವೆನ್ನುವ ಹಕ್ಕು ನಮಗಿದೆ. ಈ ಪ್ರಪಂಚದಲ್ಲಿ ಸರ್ವರ ಐಕ್ಯತೆಯಿರುವದ ಸಾಧ್ಯ. ಲೋಕದ ಯಾವ ಕಡೆಯಿಂದಾದರೂ ಸರ್ವಸಮ್ಮತಿಯೆಂದನ್ನು ತೋರಿಸಿ ಕೊಡಲು ನಿಮ್ಮಿಂದಾದೀತೆಂದು ನಾನು ನಂಬುವದಿಲ್ಲ ಕೈ ಬೆರಳೆಣಿಕೆಯ ಕೆಲವು ಮುಸಲ್ಮಾನರು ಲೀಗಿನಿಂದ ಹೊರಗಿದ್ದಾರೆ ಕಾಂಗ್ರೆಸಿನಲ್ಲಿ ಮುಸಲ್ಮಾನರಿದ್ದಾರೆ, ಆದರೆ ಎಷ್ಟು ಮಂದಿ? ಹೆಚ್ಚೆಂದರೆ ಕೆಲವು ನೂರು ಮಂದಿ ಮಾತ್ರವೆಂದು ಧೈರ್ಯವಾಗಿ ಹೇಳಬಲ್ಲೆ"

ಮಹಾತ್ಮರು ವೈಸರಾಯಿಯಾದರೆ?

ತಾ. 13ರಲ್ಲ ಸಿಮ್ಲಾದ ತನ್ನ ಬಿಡಾರದಲ್ಲಿ ಸಾಗಾ ಜಾಡೆಯೊಂದರಲ್ಲಿ ಕುಳಿತುಕೊಂಡು ಹಿಮಾನರ ಹೊದೆದಿದ್ದ ಹಿಮಾಲಯ ಶಿಖರ-ಕಂದರಗಳ ದೃಶ್ಯ ಸುಖದಲ್ಲಿ ತಲ್ಲೀನರಾಗಿದ್ದ ಗಾಂಧೀಜಿಯನ್ನು ಎಸೋಸಿಯೇಟೆಡ್ ಪ್ರೆಸ್ಸಿನ ವಿಶೇಷ ಬಾತ್ಮೀದಾರನು ಸಂಧಿಸಿ 'ನಿಮ್ಮಿಚ್ಛೆಯಂತೆ ನಡೆಯಬಿಟ್ಟರೆ ನೀವು ರೂಪಿಸಿಕೊಳ್ಳುವ ತಾತ್ಕಾಲಿಕ ಸರಕಾರದ ನಮೂನೆಯಾವುದು?' ಎಂದು ಪ್ರಶ್ನಿಸಿದಾಗ ಮಹಾತ್ಮರು ಬಾಯ್ತುಂಬಾ ನಗುತ್ತಾ ವಿನೋದಪೂರ್ವಕ ಕೊಟ್ಟ ಉತ್ತರವಿದು —

ನಾನಾಗುತ್ತಿದ್ದರೆ—

"ನನ್ನ ತಾತ್ಕಾಲಿಕ ಸರಕಾರವು ಜಾತಿ, ವರ್ಗ, ವರ್ಣ ಭೇದವಿಲ್ಲದೆ ಅಗ್ರಗಣ್ಯ ಮನುಷ್ಯರನ್ನೊಳಗೊಳ್ಳುವದು ನಾನು ಹಿಂದುಸ್ಥಾನದ ವೈಸರಾಯನಾಗುತ್ತಿದ್ದರೆ, ನನ್ನ ಹೆಸರು ಸೃಷ್ಟಿಯಿಂದ ಲೋಕವನ್ನೇ ಚಕಿತಗೊಳಿಸುತ್ತಿದ್ದೆನಾದರೂ ಅದು ಅಂಗೀಕರಿಸಲ್ಪಡುವಂತೆ ಮಾಡುತಿದ್ದೆ ಆದರೆ ನನ್ನನ್ನು ವೈಸರಾಯಿಯಾಗಿ ನೇಮಿಸುವ ತೊಂದರೆ ವಹಿಸುವರಾರೂ ಇಲ್ಲವಾದರು ಅಷ್ಟೇಕೆ? ಕಾಂಗ್ರೆಸಿನ ನಾಲ್ಕಾಣೆ ಸದಸ್ಯನೂ ಆಗದ ನನಗೆ ಕಾಂಗ್ರೆಸ್ ಅಧ್ಯಕ್ಷತೆಯನ್ನು ಕೂಡಾ ಕೊಡುವವರಿಲ್ಲ" ಎಂದು ತಮಾಷೆ ಮಾಡುತ್ತಾ, "ಸಾಧ್ಯವಿದ್ದಷ್ಟು ಬೇಗನೇ ಭಾರತದ ಪೂರ್ಣ ಸ್ವಾತಂತ್ರ್ಯವನ್ನು ದಗಿಸಬಲ್ಲ ಸದಸ್ಯರು ಹೊರಗಿನಿಂದ ದೊರೆತರೆ ಅವರ ಬದಲಿಗೆ ಕಾಂಗ್ರೆಸಿಗರನ್ನು ಬಿಟ್ಟು ಬಿಡಲಿಕ್ಕೂ ನಾನು ತಯಾರಿದ್ದೇನೆ" ಎಂದಿದ್ದಾರೆ.

ವೈಸರಾಯರ ತಪ್ಪಿಲ್ಲ

ಜಾತಿಮತ ಅಥವಾ ತನ್ನ ಸದಸ್ಯರಲ್ಲನೆಂಬುದನ್ನು ನೋಡದೆ ದೇಶದ ಸಮರ್ಥರನ್ನು ಕೇಂದ್ರ ಸಮಿತಿಗಾರಿಸಿ, ಸ್ವಾತಂತ್ರ್ಯ ಪಥದಲ್ಲಿ ಮುಂದೊತ್ತುವಂತೆ ಮಾಡುವದೇ ಕಾಂಗ್ರೆಸಿನ ಘೋಷಣೆಯೆಂದು ಅಧ್ಯಕ್ಷರಂತೆ ಗಾಂಧೀಜಿಯೂ ಸ್ಪಷ್ಟಪಡಿಸಿದ್ದಾರೆ. 'ತಾನು ಹೆಸರನ್ನಾರಿಸಿಕೊಂಡು ಕೊನೆಯ ತೀರ್ಮಾನ ಕೊಡುವ ಮೊದಲು ಪರಿಷತ್ತಿನ ಮುಂದಿಟ್ಟು ಅಭಿಮತ ಪಡೆಯುವ ವೈಸರಾಯರ ಮರ್ಜಿ ನಿಮಗೆ ಮಾನ್ಯವೇ" ಎಂಬ ಪ್ರಶ್ನೆ ಬಂದಾಗ ಗಾಂಧೀಜೀ ಮಾರ್ಮಿಕವಾಗಿ ನುಡಿದರು "ಸಮ್ಮೇಲನದ ಮೇಲೆ ತನ್ನ ಅಭಿಪ್ರಾಯದ ಮೊಹರು ಬೀಳದಂತೆ ನೋಡುವ ವೈಸರಾಯರ ಧೋರಣೆ ತಪ್ಪಲ್ಲ ತನ್ನನ್ನು ನಾಯಕನಾಗಿ ಅಂಗೀಕರಿಸಿಕೊಳ್ಳಿರೆಂದು ಲೋಡ್ ವೇವೆಲ್ ಸಮ್ಮೇಲನಾರಂಭದಲ್ಲಿ ನುಡಿದಿದ್ದಾರೆ ಇದು ಉತ್ತಮ ಮತ್ತು ಘನ ಸೂಚನೆ ಅಂದ ಮೇಲೆ ಅವರು ಸಮ್ಮೇಲನದ ನಾಯಕನಾಗಿ ಕಾರ್ಯ ಸಾಗಿಸುತ್ತಾರೆ ಹೊರತು ಶ್ವೇತ ಭವನದ ಏಜಂಟನಾಗಿ ಅಲ್ಲ ಬಾತ್ಮೀದಾರ ಮತ್ತೊಂದು ರಹಸ್ಯಾತ್ಮಕ ಪ್ರಶ್ನೆಯಿಂದ ಗಾಂಧೀಜೀಯ ಅಂತರ್ಯವನ್ನು ಕೆಣಕಿ ಕೇಳಿದ. 'ನೀವು ಜಾತೀವಾರು ಹಿಂದೂ ಮುಸ್ಲಿಂ ಸಮಾನ ಪ್ರಾತಿನಿಧ್ಯವನ್ನೂ 'ಸವರ್ಣ ಹಿಂದೂ'ಶಬ್ದವನ್ನೂ ಕಠೋರಕ್ಕವಾಗಿ ಖಂಡಿಸಿ ಇಂತಹ ಸಾಮ್ಯತೆಯಿರುವಾಗ ಸಮ್ಮೇಲನದಲ್ಲಿ ಕಾಂಗ್ರೆಸಿಗೆ ಸ್ಥಾನವಿಲ್ಲ ಎಂದು ಹೇಳಿದ್ದೀರಷ್ಟೇ ಈಗ ಕಾಂಗ್ರೆಸ್ ಪ್ರತಿನಿಧಿಗಳು ಸಮ್ಮೇಲನದಲ್ಲಿ ಈ ಸಾಮ್ಯತೆಯನ್ನು ಒಪ್ಪಿರುವ ಕುರಿತು ಏನನ್ನುವಿರಿ?" ಇದನ್ನು ಕೇಳಿ ... ಮಹಾತ್ಮರು ತಸಃ ಯೋಚನೆಗೀಡಾದರು ಕೊನೆಗೆ "ಕಾಂಗ್ರೆಸಿಗರ ಒಪ್ಪಿಗೆಗೆ ನೀವು ಊಹಿಸಿದ ಅರ್ಥವಾಗುವದಿಲ್ಲ ರಾಷ್ಟ್ರೀಯ ಮಂತ್ರಿಮಂಡಲದಲ್ಲಿ ಯಾವ ಜಾತಿಯೂ ಮತ್ತೊಂದು ಜಾತಿಗಿಂತ ಹೆಚ್ಚಿನ ಸ್ಥಾನಗಳನ್ನು ಕೇಳಬಾರದೆಂಬುದೇ ವೈಸರಾಯೀ ಘೋಷಣೆಯ ತಿರುಳೆಂದು ನಾನರ್ಥ ಕಟ್ಟಿದ್ದೇನೆ ಈಗ ದಳಿತವರ್ಗವನ್ನು ಬಿಟ್ಟು ಹಿಂದುಗಳಿಗೆ ಮನಸಿದ್ದರೆ ಅವರು ನಿಶ್ಚಯಕ್ಕಿಂತ ಕಡಿಮೆ ಸ್ಥಾನಗಳನ್ನು ಪಡೆಯಬಹುದು ಹೊರತು ಹೆಚ್ಚಿಗೆ ಪಡೆಯುವಂತಿಲ್ಲ" ಎಂದರು



Approved firm by the Govt. of Mysore
Certified by the Agent of the Govt of India in Ceylon.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಖಾಯಾಗ್ಗಿ ಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Banking Corporation Limited.

((Incorporated in British India with limited Liability.)

Estd 1906.

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18—5—1945.

ಉಡುಪಿ, ಗುರುವಾರ ೫-೭-೧೯೪೫

ಶಾಂತಿ ವ್ಯವಸ್ಥೆ?

ಸಾನ್‌ಫ್ರಾನ್ಸಿಸ್ಕೋ ಸಮ್ಮೇಲನವು ಕೊನೆಗೊಂದು ಜಾಗತಿಕ ಭದ್ರತಾ ಯೋಜನೆಯನ್ನು ಜಾಹೀರುಮಾಡಿದೆ. ಐದು ವರುಷಗಳ ಬಿರುಸು ಯುದ್ಧದ ಸಾಣೆಗೆ ಹಚ್ಚಲ್ಪಟ್ಟ ಲೋಕದ 50 ರಾಷ್ಟ್ರಗಳ ಅತಿನಾಜೂಕಿನ ವೈದುಳುಗಳು ಫ್ರಿಸ್ಕೋದಲ್ಲಿ ಎರಡು ತಿಂಗಳು (?) ಮಂಥನವಾಗಿ ಕಟ್ಟಕಡೆಗೆ ಮಾಡಿರುವ ಈ ನಿರ್ಧಾರವನ್ನು ಕಾಣುವಾಗ ಒಂದೋ 'ಪರ್ವತ ಪ್ರಸವ'ದ ನೆನಪಾಗಬೇಕು ಇಲ್ಲವೇ ಕಳೆದ ಯುದ್ಧಾನಂತರ ಸ್ಥಾಪನೆಗೊಂಡ 'ರಾಷ್ಟ್ರ ಸಂಘ'ದ ಸ್ಮರಣೆ ಬರಬೇಕು. 'ಈ ಭದ್ರತಾ ವ್ಯವಸ್ಥಾಪಕರ ಬಾಯಿಯಿಂದ ತಪ್ಪಿ ನನ್ನ ಬಾಳುವೆ ಉಳಿಯಲಿ' 'ಈ ರಕ್ಷಕರ ಕೈಯಿಂದ ನನ್ನನ್ನು ರಕ್ಷಿಸುವವರು ಬರಲಿ' ಎಂದು ಶಾಂತಿ ಪ್ರೇಮಿ ಜಗತ್ತು ಮೊರೆಯಿಡುವ ದುಸ್ಥಿತಿ ಬಂದಿದೆ. ದೃಷ್ಟಾಂತಕ್ಕಾಗಿ ಹೊಸ ರಾಷ್ಟ್ರ ಸಂಘದ ರೂಪರೇಷೆಗಳನ್ನು ಕಾಣಬಹುದು. ಎಲ್ಲಾ 'ಶಾಂತಿ ಪ್ರೇಮಿ ರಾಷ್ಟ್ರ'ಗಳಿಗೂ ಅದರ ಸದಸ್ಯರಾಗುವ ಹಕ್ಕಿದೆ; ಸದಸ್ಯರೊಳಗಿನ ಹಕ್ಕು ಬಾಧ್ಯತೆಯಲ್ಲಿ ತಾರತಮ್ಯವೇನೂ ಇಲ್ಲ ಇದು ಭದ್ರತಾ ಸಂಘಕ್ಕೆ ಕೊಟ್ಟಿರುವ ರಮ್ಯ ಒಪ್ಪ ಮಾತ್ರ. ಸಂಘದ ಸದಸ್ಯತ್ವ ಪಡೆಯಬೇಕಾದರೆ ಒಂದು ರಾಷ್ಟ್ರದ ಸ್ಥಾನಮಾನವಾವುದಿರಬೇಕೆಂಬ ಕುರಿತು ಸ್ಪಷ್ಟ ನಿಯಮಗಳಿಲ್ಲ. ಸ್ವತಂತ್ರ ರಾಷ್ಟ್ರಗಳಿಗೆ ಹೊರತು ಸ್ವಾತಂತ್ರ್ಯ ಕೇಳುತ್ತಿರುವ ರಾಷ್ಟ್ರಗಳಿಗೂ ಈ ಸಂಘದಲ್ಲಿ ಸಮಾನಾಧಿಕಾರವಿಲ್ಲವೆಂಬುದನ್ನು, ಅದರ ಸೂತ್ರಗಳಲ್ಲಿ ಸೇರಿಸಿದಂತಿದೆ. ಪರಿಣಾಮವಾಗಿ ಅಧಿಕಾರೀ ರಾಷ್ಟ್ರಗಳ ಬೇರೆ ಬೇರೆ ಪಾಳೆಯಗಳೇ ಜಾಗತಿಕ ಸಂಘದಲ್ಲೇರ್ಪಡಲಿವೆ. ಆಶ್ರಿತ ರಾಷ್ಟ್ರಗಳಿಗೆ ತಮ್ಮ ಮೇಲಧಿಕಾರೀ ರಾಷ್ಟ್ರದ ಅನುಯಾಯಿಗಳ ಸ್ಥಾನ ಮಾತ್ರ; ನಿದರ್ಶನಕ್ಕಾಗಿ ಹಿಂದುಸ್ಥಾನಕ್ಕಲ್ಲಿ ಸದಸ್ಯತ್ವ ದೊರೆತರೆ ಅದು ಬ್ರಿಟಿಷರ ವಿರುದ್ಧ ಹೋಗಲೆಡೆಯಿಲ್ಲ. ಹಿರಿಯ ಸಂಘದ ನಿಜರೂಪಹೀಗಿದ್ದರೆ ಜಗತ್ತಿನ ಪ್ರಮುಖ ರಾಷ್ಟ್ರಗಳ ಬಹುಮತವಿರುವ ಅದರ ಕಾರ್ಯಕಾರೀ ಮಂಡಲಿಯ ಕಿರಿ ಸಮಿತಿಯ ಕೈಯಲ್ಲೇ ಸರ್ವಾಧಿಕಾರವಿದೆ. ಪ್ರಮುಖ ರಾಷ್ಟ್ರಗಳದು ಕಾರ್ಯಚಾಲಕ ಸಮಿತಿ-ಎಲ್ಲಾ ರಾಷ್ಟ್ರಗಳದು ಚರ್ಚಾಕೂಟಮಾತ್ರ. ಈ ಕಾರ್ಯಕಾರೀ ಸಮಿತಿಯ ಕಾರ್ಯಕ್ಷೇತ್ರವಂತೂ ಅತ್ಯಂತ ಬಿಕ್ಕಟ್ಟಿನದು. ಪಂಚ ಮಹಾ ರಾಷ್ಟ್ರಗಳು ಅದರ ಶಾಶ್ವತ ಸದಸ್ಯರು; ಉಳಿದ ಸಣ್ಣ ರಾಷ್ಟ್ರಗಳಿಗಿತ್ತಿರುವ ಸ್ಥಾನಗಳು ಆಗಾಗ ಬದಲಾವಣೆಗೊಳ್ಳಲಿವೆ. ಆ ಶಾಶ್ವತ ರಾಷ್ಟ್ರಗಳಲ್ಲೊಂದು ಅನ್ಯಾಯಮಾಡಿತೆಂದು ತೋರಿದರೆ, ಆ ಅನ್ಯಾಯೀ ರಾಷ್ಟ್ರದ ಒಪ್ಪಿಗೆವಿನಹ ಯಾವುದೊಂದು ಕಾರ್ಯ ಕೈಕೊಳ್ಳುವ ಅಧಿಕಾರವೂ ಸಮಿತಿಗಿಲ್ಲ; ಅದು ತನ್ನ ಅಭಿಪ್ರಾಯವನ್ನು ಮಾತ್ರ ಸೂಚಿಸಬಹುದು. ಅರ್ಥಾತ್ ಲೋಕ ಶಾಂತಿ ವ್ಯವಸ್ಥೆಯ ರೂಪರೇಷೆಯ ಸಾರವೆಂದರಿಷ್ಟೇ:-ಅಧಿಕಾರೀ ರಾಷ್ಟ್ರಗಳ ಸಂಗಡವಾರಾಗಿ ಇರುವ ರಾಷ್ಟ್ರ ಕೂಟವು ತನ್ನ ಕಾರ್ಯಕಾರೀ ಸಮಿತಿಯ ಸೂಚನೆಗಳನ್ನು ಚರ್ಚಿಸಬಹುದು; ಕಾರ್ಯಕಾರೀ ಸಮಿತಿಯು ತನ್ನ ಶಾಶ್ವತ ಸದಸ್ಯರಾದ ಪ್ರಮುಖ ರಾಷ್ಟ್ರಗಳ ವರ್ತನೆಯ ಕುರಿತು ವಿಮರ್ಶಿಸಬಹುದು. ಅಂತೂ ಬುಡದಿಂದ ತುದಿಯ ವರೆಗೂ ವಿಚಾರ ಸರಪಣಿಯ ಜೋಡಣೆಯಿದೆ ಹೊರತು, ದೊಡ್ಡ ರಾಷ್ಟ್ರಗಳು ತಪ್ಪು ಮಾಡಿದರೆ ಅದನ್ನು ಶಿಕ್ಷಿಸುವ ಅಧಿಕಾರ ಎಲ್ಲಿಯೂ ಇಲ್ಲ; ಪರಾಧೀನ ರಾಷ್ಟ್ರಗಳಿಗೆ ಅಲ್ಲಿಯೂ ಪ್ರತ್ಯೇಕ ಅಸ್ತಿತ್ವವಿಲ್ಲ; ಸ್ವತಂತ್ರ ಸಣ್ಣ ರಾಷ್ಟ್ರಗಳೇನಾದರೂ ದುಡುಕಿದಲ್ಲಿ ಈ ರಾಷ್ಟ್ರ ಕೂಟ ಶಿಕ್ಷಿಸಬಲ್ಲುದೇನೋ! ಇದೀಗ ಲೋಕ ಶಾಂತಿ ವ್ಯವಸ್ಥೆ! ಯುದ್ಧಾರಂಭದಿಂದ ಇದುವರೆಗೂ ಕೇಳುತ್ತಿದ್ದ ಶಾಂತಿ ವಾಗ್ದಾನಗಳು ಕಾರ್ಯರೂಪಕ್ಕಿಳಿದ ದೃಶ್ಯ!

ಅಂತೂ ಲೋಕವ್ಯವಸ್ಥೆಯು 1939 ರಲ್ಲಿದ್ದಂತಿದೆ; ಈ ಅವಧಿಯೊಳಗೆ ಸುಧಾರಣೆಗಾಗಿ ಮಾನಸಿಕಾಂದೋಲನ ನಡೆದಿತ್ತೆಂಬುದನ್ನು ಒಪ್ಪಬೇಕು. ಆದರೆ ಕಾರ್ಯತಃ ಯಾವ ಬದಲಾವಣೆಯೂ ಆಗಿಲ್ಲ; ಹಾಗಾಗಲು ಕಾರಣ—ಪ್ರಮುಖ ರಾಷ್ಟ್ರಗಳ ಧೋರಣೆ ಬದಲಾಗಿಲ್ಲ. ಇದಕ್ಕೆ ಕಾರಣ ಆ ರಾಷ್ಟ್ರಗಳಲ್ಲೆಲ್ಲಾ ಭಂಡವಾಳಗಾರರ ಸಾಮ್ರಾಜ್ಯಾಭಿಲಾಷಿಗಳ ಸರಕಾರವೇ ಇದೆ. ಅದು ಯುದ್ಧ ವಿಜಯಿಗಳ ಸಮ್ಮೇಲನ; ರಾಜಕೀಯವಾಗಿ ಏನನ್ನೂ ಕಳಕೊಳ್ಳದವರ ಕೂಟ ಆದರೆ ಯುದ್ಧಾಪಾಯವನ್ನು ಮರೆತುಬಿಡಬಹುದೆ? ಯುದ್ಧ ಹಾನಿಗೊಳಗಾದವರು ಸಾಮಾನ್ಯರು ಹೊರತು ಭಂಡವಾಳಗಾರರಲ್ಲ ಇಂದಿನ ಈ 'ಲೋಕ ವ್ಯವಸ್ಥೆ' ತಯಾರಿಸಿದವರಿಂದ-ಯುದ್ಧ ಲಾಭ ಪಡೆದವರಿಂದ-ಇನ್ನೊಂದು ಯುದ್ಧದ ಬೀಜಬೀಳದಂತಹ ಕಾರ್ಯವಾಗದು. ಪ್ರತಿಯೊಂದು ರಾಷ್ಟ್ರದಲ್ಲಿಯೂ ಜನತಾ ಸರಕಾರ ಸ್ಥಾಪಿಸಲ್ಪಡದ ಲೋಕ ದುರಂತ ನಿವಾರಣೆಯಾಗದೆಂಬ ಪಾಠವನ್ನು ಕಲಿಸಿದೆ.-ಫ್ರಿಸ್ಕೋ ನಿರ್ಧಾರ. ಇದೊಂದು ಸದ್ಬೋಧೆ ಬಂತು ಹೊರತು ಸತ್ಕಾರ್ಯವಾವುದೂ ನಡೆಯಲಿಲ್ಲ.

ಸಿಮ್ಲಾದಲ್ಲಿ ನೆಹರು.

ಪಂಡಿತ ಜವಾಹಿರಲಾಲರು ತಾ. 1 ನೇ ಪೂರ್ವಾಹ್ನ ಸಿಮ್ಲಾಕ್ಕೆ ಬಂದು ಮುಟ್ಟಿದಾಗಲನಂದನ ಅಮಲಿನಿಂದ ಹುಚ್ಚುಗಟ್ಟಿದ ಜನತಂಡ ಕೂಗುತ್ತಾ, ಕುಣಿಯುತ್ತಾ ಸ್ವಾಗತಿಸಿದ ದೃಶ್ಯ ಅಪೂರ್ವವಿದ್ದಿತು. ಪೋಲಿಸರಿಗೂ ಸ್ವಯಂಸೇವಕರಿಗೂ ಈ ಕೋಲಾಹಲವನ್ನು ಹತೋಟಿಗೆ ತರಲು ಸಾಕುಸಾಕಾಗಿ ಹೋಯಿತು. ಅವರನ್ನೊಯ್ಯಲು ಎರಡು ಕುದುರೆಗಳು ಬಂದಿದ್ದುವಾದರೂ ಜನತಂಡದ ಒತ್ತಾಟದಿಂದ ಕಾರಿನಿಂದಿಳಿಯಲಾಗದೆ ಕೊನೆಗೆ ನೆಹರು ಅದರ ಮಾಡಿಗೆ ನೆಗೆದು ನಿಂತುಕೊಳ್ಳಬೇಕಾಯಿತು. ಅಲ್ಲಿ ಜನತೆಯ ಹೂಹಾರಗಳ ರಾಶಿಯಲ್ಲಿ ಹುಗಿದು ಹೋದರು. ಮೌಲಾನಾ ಅಜಾದರ ಬಿಡಾರ 'ಅರ್ಮ್ಸ್‌ಡೆಲ್' ಗೆ ಬಂದು ಮುಟ್ಟಿದಾಗ ಅಲ್ಲಿ ನೆರೆದ ಜನಸಮುದ್ರ ನೆಹರುಗಳ ಸಂದೇಶ ದೊರೆಯದೆ ಚದರಲೊಪ್ಪಲಿಲ್ಲ ಕೊನೆಗೆ ಮೇಲಂತಸ್ತಿನಲ್ಲಿ ನಿಂತು ಭಾಷಣವಿತ್ತರು. ಸಿಮ್ಲಾದ ಇದುವರೆಗಿನ ಸ್ವಾಗತ ದಾಖಲೆಗಳನ್ನೆಲ್ಲಾ ನೆಹರುಗಳು ಮುರಿದಿದ್ದಾರೆ.

ಮೌಲಾನರು ಸಿಮ್ಲಾ ಚಟುವಟಿಕೆಗಳನ್ನೆಲ್ಲಾ ಸವಿವರವಾಗಿ ಪಂಡಿತರಿಗೆ ತಿಳಿಸಿದ ಮೇಲೆ ಇಬ್ಬರು ಪ್ರಮುಖರೂ ಗಾಂಧಿಜೀಯ ಭೇಟಿ ಪಡೆದು ಗಾಢಸಂಭಾಷಣೆ ನಡೆಸಿದರು. ತಾ. 2ರಲ್ಲಿ ವೈಸರಾಯರಿಂದ ಕರೆಬಂದು ಅವರೊಡನೆ ಸಂಭಾಷಿಸಿ ಚಹಾ ಸತ್ಕಾರ ಪಡೆದರು.

'ಹೊಸ ಕಾರ್ಯಕಾರೀ ಸಮಿತಿಗೆ ನಿಮ್ಮನ್ನು ಸೇರಿಸಿಕೊಂಡರೆ ಸಂತೋಷದಿಂದೊಪ್ಪುವಿರಾ?' ಎಂದು ಪ್ರಶ್ನಿಸಲ್ಪಟ್ಟಾಗ "ನನ್ನನ್ನಾರಿಸುವವರಾರು-ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೋ ವೈಸರಾಯರೋ? ಕಾಂಗ್ರೆಸಿನಿಂದಾರಿಸಲ್ಪಟ್ಟರೆ 'ಬೇಕು' ಅಥವಾ 'ಬೇಡ' ಎಂದು ಈಗ ಹೇಳಲಾರೆ. ನಾನು ಶಿಸ್ತು ಪ್ರೇಮಿ ಆದರೆ ನನ್ನ ನಿರ್ಧಾರವು ಆಗಿನ ಪರಿಸ್ಥಿತಿ ಮತ್ತು ನನ್ನ ಮನೋಸ್ಥಿತಿಯನ್ನವಲಂಬಿಸಿದೆ" ಎಂದು ನೆಹರುಗಳ ಉತ್ತರ.

"ಸುಭಾಸಚಂದ್ರ ಬೋಸರ ಕುರಿತು ನಿಮ್ಮ ಧೋರಣೆಯೇನು?" ಎಂದೊಬ್ಬರು ಪ್ರಶ್ನಿಸಿದರು. "ಸುಭಾಸರು ಜಾಪಾನರ ಆಶ್ರಯದಲ್ಲಿ ಹಿಂದುಸ್ಥಾನಕ್ಕೆ ಬರುವದಾದರೆ, ಅವರು ಭಾರತದ ಭವಿಷ್ಯಕ್ಕೆ ಅಪಾಯಕಾರಿಯಾದ್ದರಿಂದ ನಾನವರೊಡನೆ ಹೋರಾಡುವೆ. ಆದರೆ ಜಾಪಾನ್ ಯುದ್ಧಾನಂತರ ಸುಭಾಸರು ಭಾರತಕ್ಕಾಗಮಿಸ ವದಾದರೆ ಅವರ ವಿರುದ್ಧ ಧೋರಣೆ ವಹಿಸುವದು ತಪ್ಪು. ಹಾಗೋ, ಹೀಗೋ ಎಂಬುದು ಅವರು ಹಿಂದಿರುಗುವ ಪರಿಸ್ಥಿತಿಯನ್ನವಲಂಬಿಸಿದೆ"-ಎಂದರು ಪಂಡಿತಜೀ. ತುಸು ಯೋಚಿಸಿ ಪಂಡಿತರು ಮೃದು ಸ್ವರದಲ್ಲಿ ನುಡಿದರು "ಒಬ್ಬ ಭಾರತ ಪ್ರಮುಖನು ಇನ್ನೊಬ್ಬ ಭಾರತ ಪ್ರಮುಖನ ಮೂಲೋದ್ದೇಶವನ್ನು ಅಲಕ್ಷಿಸಲಾರ. ಸುಭಾಸ್ ಬೋಸರ ಮಟ್ಟಿಗೆ ಭಾರತ ಸ್ವಾತಂತ್ರ್ಯವೇ ಅವರ ಮುಖ್ಯೋದ್ದೇಶವೆಂಬ ಕುರಿತು ನನಗನುಮಾನವಿಲ್ಲ"

ಕಾಂಗ್ರೆಸ್ ಕಾರ್ಯಕಾರೀ ಸದಸ್ಯರಾಗಮನದಿಂದ ಸಿಮ್ಲಾ ಚುಟುವಟಿಕೆಗಳಿಗೀಗ ಹೊಸ ಜೀವಬಂದಿದೆ.

ವಿದೇಶಗಳ ಅಭಿಪ್ರಾಯ.

ವೇವೆಲ್ ಕೊಡುಗೆ, ಸಿಮ್ಲಾ ಸಮ್ಮೇಲನ ಮತ್ತು ಅದಕ್ಕೆ ಬಂದಿರುವ ತಾತ್ಕಾಲಿಕ ವಿಘ್ನಗಳ ಕುರಿತು ವಿದೇಶಗಳಲ್ಲಿ ವಿವಿಧಾಭಿಪ್ರಾಯ ಪ್ರಕಟವಾಗಿವೆ ಜಾತೀಯ ಬಿಕ್ಕಟ್ಟು ಅನಿರೀಕ್ಷಿತವಲ್ಲವಾದ್ದರಿಂದ ಯಾರೂ ನಿರಾಶೆ ಪ್ರದರ್ಶಿಸುವದಿಲ್ಲ 'ಟೈಮ್ಸ್'ನಂತಹ ಬ್ರಿಟಿಷ್ ಪತ್ರಿಕೆಗಳು ಅತಿಗಾಢಾರವಿದೆ ಎನ್ನುತ್ತಿವೆ. ಲೋರ್ಡ್ ವೇವೆಲರು ಸಮ್ಮೇಲನವನ್ನು ಮುನ್ನಡೆಸಿದ ವಿಧಾನವು-ಅವರ ಚಾತುರ್ಯ, ಪ್ರಸಂಗಾವಧಾನತೆಗಳು-ದೇಶ ವಿದೇಶಗಳಲ್ಲಿ ಶ್ಲಾಘಿಸಲ್ಪಡುತ್ತಿವೆ. ಸಮ್ಮತಿಸುವ ಪಕ್ಷಗಳಿಂದ ಹೆಸರನ್ನಾರಿಸಿಕೊಂಡು ವೈಸರಾಯರು ಕಾರ್ಯ, ಮುಂದೊತ್ತಬೇಕೆಂದೇ ಹೆಚ್ಚಿನವರ ಅಭಿಪ್ರಾಯ. "ತನ್ನ ಸರ್ವಾಧಿಕಾರಿತ್ವವುಳಿಸಿಕೊಳ್ಳಲಿಚ್ಛಿಸುವ ಮಿ. ಜಿನ್ನರಿಂದಾಗಿ ಮಾತುಕತೆಗಳ ಭವಿಷ್ಯ ಹೀಗಾಗುವದು ಸಹಜ. ಲೋರ್ಡ್ ವೇವೆಲರು ಸೋಲನ್ನೊಪ್ಪಿಕೊಂಡಿಲ್ಲವೆಂಬುದೊಂದು ಸಂತೋಷ- ಅಖಿಲ ಭಾರತ ಮಂತ್ರಿಮಂಡಲ ರಚನೆಮಾಡುವದು ನಮ್ಮ ಆದ್ಯ ಕರ್ತವ್ಯ. ಜಿನ್ನರಿಗೆ ಸಮ್ಮತಿಯಿಲ್ಲವಾದರೆ ಅವರು ಹೊರಗೆ ನಡೆಯಲಿ"-ಎಂದು ಲೋರ್ಡ್ ಸ್ಟ್ರಾಬೋಲ್ಗಿಯಂದಿದ್ದಾರೆ. 'ಭಾರತಕ್ಕೆ ಅಂತರ್ರಾಷ್ಟ್ರೀಯ ಸ್ಥಾನದೊರಕಿಸಿಕೊಳ್ಳುವ ಸಂದರ್ಭ ಕಳಕೊಳ್ಳಬೇಡಿ. ಧರ್ಮಾಂಧತೆಗೆ ಭಾರತದ ರಾಜಕೀಯ ಪ್ರಗತಿಯನ್ನು ಬಲಿಕೊಡಬೇಡಿ"-ಎಂದು ಶ್ರೀಮತಿ ವಿಜಯಲಕ್ಷ್ಮಿಯವರ ಸಂದೇಶ ಲಂಡನಿನ ರಾಜಕೀಯ ತಂಡವು ತಾ. 14ರೊಳಗೆ ಏನಾದರೊಂದು ತೀರ್ಮಾನವಾಗುವದೆಂದು ಆಶಿಸುತ್ತಿದೆ. ಒಂದು ಹೊರ ಲೇಪ-ಕೇವಲ ನೆವ"— ಎಂದು ಅಮೇರಿಕದ ರಿಪಬ್ಲಿಕನ್ ಪಕ್ಷೀಯರು ವೇವೆಲ್ ಕೊಡುಗೆಯನ್ನು ಟೀಕಿಸಿದ್ದಾರೆ. ಹೆಚ್ಚಿನ ಅಮೇರಿಕನ್ ಪತ್ರಿಕೆಗಳು ಈ ಪ್ರಯತ್ನವನ್ನು ಶ್ಲಾಘಿಸುತ್ತಿವೆ. ಚೀನೀ ಪತ್ರಿಕೆಗಳು ಈ ಸುಸಂದರ್ಭವು ಹಾಳಾಗಬಾರದೆಂದು ಹಾರೈಸುತ್ತಿವೆ. 'ಕೇವಲ ಕಪಟ ನಾಟಕ; ಜಾಪಾನೀ ವಿರುದ್ಧ ಹೂಡಿರುವ ಆಟ; ಸ್ವಾತಂತ್ರ್ಯದ ಛಾಯೆ ಕೂಡಾ ಅದರಲ್ಲಿಲ್ಲ' ಎಂದು ಜಾಪಾನೀ ಪತ್ರಿಕೆಗಳ ಎಚ್ಚರಿಕೆ. 'ಈ ಬಲೆಯೊಳಗೆ ಬೀಳಬೇಡಿ, ಇದು ಸ್ವಾತಂತ್ರ್ಯವಲ್ಲ, ಮಾಯಾಜಾಲ" ಎಂದು ಸುಭಾಸರು ಆಕಾಶವಾಣಿ ಘೋಷಣೆಮಾಡಿದ್ದಾರೆ. ಸಿಂಗಾಪುರದಿಂದ ಬರುತ್ತಿರುವ ವಾರ್ತೆಯಂತೆ 10ಸಾವಿರ ಹಿಂದೀಯರ ಸಭೆಯೊಂದರಲ್ಲಿ ಭಾಷಣವೀಯುತ್ತಾ "ಭಾರತ ಸ್ವಾತಂತ್ರ್ಯಕ್ಕಾಗಿ ನಾವು ಸಾರಿರುವ ಯುದ್ಧವು ಭಾರತವು ಪೂರ್ಣ ಸ್ವತಂತ್ರವಾಗುವ ವರೆಗೂ ಮುಂದೊತ್ತುವದು. ಇದಕ್ಕಾಗಿ ಪೂರ್ವ ಏಷ್ಯದ ಎಲ್ಲಾ ಭಾರತೀಯರು ಧ್ವಂಸವಾಗಬೇಕಾಗಿ ಬಂದರೂ ಸರಿಯೇ!" ಎಂದು ಸುಭಾಸರಂದಿದ್ದಾರೆ.

ಜಾಪಾನ್ ಮೇಲೆ ಬೋಂಬು ಧಾಳಿ ಪರಿಣಾಮ!

ಜಾಪಾನ್ ಯುದ್ಧ

ಬರ್ಮಾದ ಸಿಟ್ಟಾಂಗ್ ಹೊಳೆ ವಲಯದಲ್ಲಿ ಇನ್ನೂ ಜಾಪಾನರ ಪ್ರತಿಭಟನೆಯಿದೆ; ಜಾಪಾನರು ಆ ಹೊಳೆ ದಾಟಿ ಬರಲು ಪ್ರಯತ್ನಿಸುತ್ತಿದ್ದಾರೆ. ಈಗ ಬ್ರಿಟಿಷರಿಗೆ ಹೆಚ್ಚಿನ ಸೇನಾ ಸರಬರಾಯಿಯಾಗಿರುವದರಿಂದ ಮುಂದಿನ ಕಾರ್ಯ ಸುಗಮವಾಗುವಂತಿದೆ. ಒಕಿನಾವಾ ಸ್ವಾಧೀನ ಪಡಿಸಿಕೊಂಡ ಮಿತ್ರಸೇನೆಯೀಗ ಬಾಲಿಕ್ ವೇಪನ್ ಜಲಸಂಧಿಯನ್ನಾಕ್ರಮಿಸಿದೆ ಎಂದು ಜಾಪಾನ್ ರೇಡಿಯೋ ಸಾರಿದೆ.

ಮಂಚೂರಿಯಕ್ಕೆ

ರಶ್ಯದ ಗಡಿಯಲ್ಲಿರುವ ಆಕ್ರಮಿತ ಚೀನದ ಮಂಚೂರಿಯಕ್ಕೆ ಪ್ರಾಮುಖ್ಯ ಕಾರ್ಖಾನೆಗಳನ್ನೆಲ್ಲಾ ಜಾಪಾನ್ಯ ಸರಕಾರವು ವರ್ಗಾಯಿಸಿದೆ. ಜಾಪಾನು ಮೂಲ ನೆಲದಮೇಲೆ ಮಿತ್ರರು ನಡಿಸಿದ ಬೋಂಬು ಧಾಳಿಯೇ ಈ ಸ್ಥಳಾಂತರಕ್ಕೆ ಕಾರಣ. ಜಾಪಾನಿನ ಕಾರ್ಖಾನೆಗಳು ಸಣ್ಣ ಪರಿಮಾಣದಲ್ಲಿ ಹರಡಿರುವದರಿಂದಲೂ ಉತ್ತಮ ರೀತಿಯ ವಿಮಾನ ನಿರೋಧಕ ಸಿದ್ಧತೆಯಿಲ್ಲದುದರಿಂದಲೂ ಅಮೇರಿಕನ್ ವಿಮಾನಗಳ ಹೊಡೆತದಿಂದ ಜಾಪಾನು ಕಾರ್ಖಾನೆಗಳು ಅಡಿಮೇಲಾಗಿವೆ ಎಂಬುದು ಖಂಡಿತ. ಜಾಪಾನಿನ 'ಡಯಟ್' ಸಭೆಯಲ್ಲಿಯೂ ಚಕ್ರವರ್ತಿಗಳೊಡನೆಯೂ ಮಂತ್ರಿಗಳು ಇದಕ್ಕಾಗಿ ಆಗಾಗ ಕ್ಷಮೆ ಕೇಳಬೇಕಾಗಿ ಬಂದಿದೆ.

ಮಂಚೂರಿಯದಲ್ಲಿ ಹೇಗೆ?

ಜಾಪಾನ್ ಮೂಲ ನೆಲವು ಮಿತ್ರವಿಮಾನ ನಿಲ್ದಾಣಗಳಿಗೆ ಸಮೀಪವಿರುವಂತೆ ಮಂಚೂರಿಯವಿಲ್ಲ. ಆದರೆ ಅಲ್ಲಿಗೂ ಧಾಳಿಯಿಡಲು ಅಮೇರಿಕನ್ ವಿಮಾನಗಳು ಪ್ರಯತ್ನಿಸುವ ಸಂಭವವಿದೆ. ಮೇಲಾಗಿ ರಶ್ಯವು ಯುದ್ಧ ಸಾರಿದರಂತೂ ಆ ಭಾಗಕ್ಕೆ ಕ್ಷಿಪ್ರಾಭಿಪ್ರಾಯವಿದೆ. ಮಂಚೂರಿಯವು ಮೂಲತಃ ಚೀನದ ನೆಲೆ. ಅದನ್ನು ಚೀನಕ್ಕೆ ತೆಗಿಸಿಕೊಡುವ ಆಶ್ವಾಸನೆ ಮಿತ್ರ ರಾಷ್ಟ್ರಗಳದ್ದು. ಆದರೆ ತನ್ನ ಒತ್ತುಭಾಗವಾಗ ಅದರ ಮೇಲೆ ರಶ್ಯಕ್ಕೆ ಕಣ್ಣಿದೆ. ಈಗ ಅದು ಜಾಪಾನರ ಕೈಯಲ್ಲಿದ್ದು ಅತಿಮುಖ್ಯ ಕಾರ್ಖಾನೆ ಕೇಂದ್ರವಾಗಿದೆ. ರಶ್ಯವು ಮುಂದೊತ್ತಿದೆ ಆ ಭಾಗಕ್ಕೆ ಅಪಾಯ ಕಡಿಮೆ. ಆದರೆ ಜಾಪಾನಿನ ವಶವಿರುವದೆಂದು ಊಹಿಸಲ್ಪಟ್ಟಿರುವ 4 ಮಿಲಿಯ ಸೇನೆಗಳ ಮುಖ್ಯ ಭಾಗವನ್ನು ಮಿತ್ರ ಸೇನೆಗಳು ಪಾಡಾಮಾಡಿಯಾಗಿ ಇದಿರಿಸದೆ ರಶ್ಯ ದುಡುಕುವಂತಿಲ್ಲ.

ರಶ್ಯ-ಚೀನಾ

ಈಗ ಚೀನದ ಪ್ರಧಾನ ಮಂತ್ರಿ ಡಾ। ಸೂಂಗರು ಮೋಸ್ಕೋವಿಗೆ ತೆರಳಿ ಸ್ಟಾಲಿನರೊಡನೆ ಗಾಢ ಸಂಭಾಷಣೆ ನಡೆಸುತಿದ್ದಾರೆ. ಚಿಯಾಂಗ್ ಕೈಶೇಕರಿಗೂ ಚೀನದ ಕಮ್ಯೂನಿಸ್ಟ್ ಸೇನೆಗೂ ಜಗಳವಿದೆ. ಕಮ್ಯೂನಿಸ್ಟ್ ಮುಖ್ಯ ಸೇನೆಯು ಮಂಚೂರಿಯಕ್ಕೆ ಸಮೀಪದ ಉತ್ತರ ಚೀನದಲ್ಲೇ ಇದೆ. ಚೀನೀಯರ ಅಂತಃಕಲಹ ನಿವಾರಣೆಯಾಗದಿದ್ದಲ್ಲಿ ರಶ್ಯವು ಮುಂದೊತ್ತಿ ಕಮ್ಯೂನಿಸ್ಟ್ ಸೇನೆಯನ್ನು ಕೂಡಿಕೊಂಡರೆ ಚೀನಾ ಸರಕಾರಕ್ಕೆ ಅಪಾಯವಿದೆ. ಸೂಂಗರ ಮಾತುಕತೆಯು ಪರಿಣಾಮವಾಗಿ ಚೀನೀಯರೊಳಗೊಪ್ಪಂದವಾಗುವದೆಂದೂ ರಶ್ಯವು ಒಮ್ಮತದ ರಾಷ್ಟ್ರೀಯ ಚೀನಕ್ಕೆ ಸಹಾಯ ಸಲ್ಲಿಸುವಂತಾಗುವದೆಂದೂ ಆಶೆಯಿದೆ.

ಡಾರ್ಡನೆಲ್ಸ್ ವಿವಾದ

ರಶ್ಯಕ್ಕೆ ಸಂಬಂಧಿಸಿದ ಮಧ್ಯಪ್ರಾಚ್ಯದಲ್ಲಿ ಟರ್ಕಿಯ ಸ್ವಾಧೀನವಿರುವ ಡಾರ್ಡನೆಲ್ಸ್‌ನೇ ಜಲ ಸಂಧಿ ಪಥ ಮತ್ತು ಅದಕ್ಕೆ ಸಂಬಂಧ ಪಟ್ಟ ದ್ವೀಪ ಸ್ಥಳಗಳ ಕುರಿತು ರಶ್ಯವು ಟರ್ಕಿಗೊಂದು ಸೂಚನೆಯಿತ್ತಿದೆ. ಅದನ್ನು ಟರ್ಕಿಯು ಅಲ್ಲಗಳೆಯಿತೆಂದು ಮೊದಲ ವಾರ್ತೆಯಿದ್ದರೂ ಈಗ ರಶ್ಯ ಮತ್ತು ಟರ್ಕಿ ಪ್ರತಿನಿಧಿಗಳೊಳಗೆ ಮಾತುಕತೆ ನಡೆಯುತಿದ್ದು ಒಂದು ಒಪ್ಪಂದವಾಗುವ ಸಂಭವವಿದೆ. ಈ ಸ್ಥಳಗಳ ಕುರಿತು ರಶ್ಯ, ಇಂಗ್ಲಾಂಡು, ಫ್ರಾನ್ಸು ಮೊದಲಾದ ರಾಷ್ಟ್ರಗಳೊಳಗೆ ಮೊದಲೇ ಒಂದು ತಹಾ ನಾಮೆಯಿವೆಯಾದ್ದರಿಂದ ಇಂಗ್ಲಾಂಡು ಅಮೆರಿಕಗಳೂ ಇದರಲ್ಲಿ ಕೈಹಾಕಲು ಹವಣಿಸುತ್ತಿವೆ

ಪೋಲೆಂಡಿಗೆ ಹೊಸ ಸರಕಾರ

ಪೋಲೆಂಡಿನ ತಾತ್ಕಾಲಿಕ ಲುಬ್ಲಿನ್ ಸರಕಾರ ರದ್ದಾಗಿ ಮೋಸ್ಕೋ ನಿರ್ಧಾರದಂತೆ ವಿಸ್ತೃತ ಮಂತ್ರಿ ಮಂಡಲ ಸ್ಥಾಪನೆಗೊಂಡಿದೆ. ಆದರೆ ಲಂಡನಿನಲ್ಲಿರುವ ಪೋಲೆಂಡ್ ಸರಕಾರವು ಈ ವ್ಯವಸ್ಥೆಗೆ ವಿರೋಧ ಸೂಚಿಸಿದೆ. ಸದ್ಯದಲ್ಲೇ ಚುನಾವಣೆ ನಡೆಸುವ ಶರ್ತದಿಂದ ಇಂಗ್ಲಾಂಡು ಅಮೇರಿಕಗಳೂ ರಶ್ಯದ ಈ ತಾತ್ಕಾಲಿಕ ರಚನೆಗೊಪ್ಪುವಂತೆ ಕಾಣುತ್ತಿದೆ

ಬ್ರಿಟನಿನ ಚುನಾವಣೆಯು

ಇದೇ ದಿನ (ತಾ೫) ನಡೆಯುತ್ತಿದೆ ಎಲ್ಲಾ ಕಡೆಯವರು ಪ್ರಬಲ ಪ್ರಚಾರ ಮಾಡಿದ್ದಾರೆ ಲೇಬರ್ ಮತ್ತು ಕನ್ಸರ್ವೇಟಿವರಿಗೆ ಸಮಾನ ಬೆಂಬಲವಿರುವಂತಿದೆ 'ಚರ್ಚಿಲ್ಲರಿಲ್ಲದಿದ್ದರೂ ಇಂಗ್ಲಾಂಡಿನಾಡಳಿತೆ ಸಾಗುವದು. ಇಂಗ್ಲಾಂಡಿಗೆ ಎಂದೂ ಒಬ್ಬನೇ ಆಧಾರವಾದುದಿಲ್ಲ'– ಎಂದು ಮಿ. ಅಟ್ಲಿಯವರು ತನ್ನ ಕೊನೆಯ ಭಾಷಣದಲ್ಲಂದಿದ್ದಾರೆ.

ಬೆಂಗಳೂರಿನ ಬಳಿ ವಿಮಾನಾವಘಡದ ಅನಾಹುತ.

ಬೆಂಗಳೂರಿನ ಬಳಿ ವಿಮಾನ ಅವಘಡ

ಜೂನ್ ತಾ. 29ರಲ್ಲಿ ಬೆಂಗಳೂರಿನ ಬಳಿಯ ಹಳ್ಳಿಯೊಂದರಲ್ಲಿ ವಿಮಾನವೊಂದು ಮುರಿದು ಬಿದ್ದು ಮನೆ ಮತ್ತು ಜನ ಹಾನಿ ವಿಶೇಷವಾಗಿದೆ ಎಂಬ ವಾರ್ತೆ ಬಂದಿದೆ ತಾ. 1ರ ವರೆಗೆ ಲೆಕ್ಕ ದೊರೆತಂತೆ 38 ಮಂದಿ ಮಡಿದು 20 ಮಂದಿ ಜಖಂಗೊಂಡಿದ್ದಾರೆ; ಮಣ್ಣಡಿಗೆ ಬಿದ್ದ ಶವಗಳ ಪತ್ತೆ ಇನ್ನೂ ಆಗಲಿದೆ. ಹಲವು ಮನೆಗಳು ಕೂಡಾ ಮುರಿದು ಬಿದ್ದಿವೆ ಬೆಂಗಳೂರಿನಿಂದ ಹತ್ತು ಮೈಲು ದೂರದ ಬಳ್ಳಾರಿಗೆ ಹೋಗುವ ರಸ್ತೆಯೊಂದರ ಪಕ್ಕದ ಗ್ರಾಮವದು. ಅಲ್ಲಿಯ ದೇವಳದ ಜಾತ್ರೆ ನಡೆಯುತಿತ್ತು. ಆ ಮಾರ್ಗವಾಗಿ ಬರುತ್ತಿದ್ದ ವಿಮಾನಕ್ಕೇನೋ ಸಂಭವಿಸಿ ಅದು ಮುರಿದು ಬಿತ್ತು; ಆ ಭಯಂಕರ ಶಬ್ದ ಕೇಳಿದ ಜನರು ಅದೇನೆಂದು ನೋಡುವಾತುರದಿಂದ ಅಲ್ಲಿಗೇನೇ ಧಾವಿಸಿ ಬಂದರು. ವಿಮಾನವು ಬಿದ್ದ ರಭಸಕ್ಕೆ ಕೆಳಭಾಗದ ಜನ-ಮನೆಗಳೆಲ್ಲ ಪುಡಿಪುಡಿಯಾದುದಲ್ಲದೆ, ಅದರ ಚೂರುಗಳು ಫರ್ಲಾಂಗು ದೂರದ ವರೆಗೂ ವ್ಯಾಪಿಸಿದ್ದುವೆಂದು ತಿಳಿದು ಬರುತ್ತದೆ. ದೂರದಲ್ಲಿದ್ದ ಹಲವರಿಗೆ ಬೆಂಕಿ ಚೂರುಗಳು ಬಂದು ಬಿದ್ದು ಜಖಮಾಗಿದೆ. ವಿಮಾನದ ಸಾರಥಿ ವಾರಂಟಾಫೀಸರ್ ಲೋವ್ ಲೋಕರೂ, ಫ್ಲೈಟ್ ಸಾರ್ಜಂಟ್ ವಿಲ್ಕಿಸರೂ ಮರಣಗೊಂಡಿದ್ದಾರೆ. ಮೈಸೂರಿನ ರಿಜರ್ವ್ ಮತ್ತು ಸಾಮಾನ್ಯ ಪೋಲಿಸು ದಳಗಳೂ ಇತರರೂ ಆ ಸ್ಥಳಕ್ಕೆ ಅಗ್ನಿಶಾಮಕ ಯಂತ್ರಗಳೊಂದಿಗೆ ಧಾವಿಸಿ ಒದ್ದಾಡಿದರು. 11 ಮನೆಗಳೂ ಹಲವು ದನಕರುಗಳೂ ನಾಶವಾದುವೆಂದು ತಿಳಿದು [illegible] ಲಾದವರು ಸ್ಥಳ ಸಂದರ್ಶನೆ ಮಾಡಿದರು. ಜನ, ಮನೆ, ಸೊತ್ತು ಹಾನಿಗೊಳಗಾದವರಿಗೆ ಪರಿಹಾರ ಕೊಡಲು ಮೈಸೂರು ಸರಕಾರವು ನಿರ್ಧರಿಸಿದೆ. ಅವಘಡದ ಕಾರಣದ ತನಿಖೆ ನಡೆಸಲಿದ್ದಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು **5—7—1945**ರಿಂದ

ಈಸ್ಟರ್ನ್ ಪಿಕ್ಚರ್ಸ್‌ನವರ

ಅತ್ಯಾಧುನಿಕ ಹೃದಯಂಗಮ ಸಾಮಾಜಿಕ ಚಿತ್ರ

ಜಹೂರು ರಾಜಾ, ರಾಧಾರಾಣಿ, ಊರ್ಮಿಳಾ ಇವರೆಲ್ಲರೂ ನಟಿಸಿರುವ

"ಬಾದಲ್"

[ಮೋಡ]

ನಂತರ:—

ನೇಶನಲ್ಸ್‌ನವರು—

'ನಯಿ ರೋಶನಿ'

ಹರಿಶ್ ಮತ್ತು ಹುಸ್ನಭಾನು.

ಅನಂತರ:—

ಪ್ಯೈ ಸ್ಟ್ರೈಕರ್.

ಉಡುಪಿ.

ಕಟ್ಟಿಗೆ ಮುಹೂರ್ತ–ಶ್ರೀಕೃಷ್ಣ ಸನ್ನಿಧಾನದ ಮುಂದಿನ ಪರ್ಯಾಯ ಪೀಠವನ್ನೇರಲಿರುವ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವದ ಪೂರ್ವಸಿದ್ಧತೆಯ ಅಂಗಗಳಲ್ಲೊಂದಾದ ಕಟ್ಟಿಗೆಯ ಮುಹೂರ್ತ ಸಮಾರಂಭವು ಕಳೆದ ಶುಕ್ರವಾರ ಬಹು ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಪ್ರಕೃತ ಪರ್ಯಾಯ ಪುತ್ತಿಗೆ ಮಠದ ಕಡೆಯಿಂದ ಬಿರುದಾವಳಿಗಳು ಸಿಗದಿದ್ದರೂ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ತಮ್ಮ ಮಠದ ಯಾವತ್ತೂ ಬಿರುದಾವಳಿಗಳನ್ನು ಕೊಟ್ಟು ಸಮಾರಂಭವು ಲೋಪ ದೋಷಗಳಿಲ್ಲದೆ ಜರಗುವಂತೆ ಸತ್ಸಹಕಾರವನ್ನಿತ್ತಿದ್ದರು.

(೫ನೇ ಪುಟದಿಂದ ಮುಂದುವರಿದುದು.)

ಆದರೆ ಅದರದನ್ನು ನಿರಾಕರಿಸಿದ್ದಾರೆ. ಕಾಂಗ್ರೆಸಿನ ಕ್ರಿಯಾಬದ್ಧ ಪ್ರತಿನಿಧಿಗಳಿದ್ದಾರಾದ್ದರಿಂದ ತನಗದರಲ್ಲಿ ಸ್ಥಾನವಿಲ್ಲವೆನ್ನುತಿದ್ದಾರೆ. ತನಗಲ್ಲಿ ಸ್ಥಾನವಿಲ್ಲವೆಂದು ಅವರೇ ಹೇಳುತ್ತಿರುವಾಗ ನಾನವರನ್ನು ಕರೆದೊಯ್ಯುವದಾದರೂ ಹೇಗೆ? ಗಾಂಧಿಯವರ ಒಪ್ಪಿಗೆಯಿಲ್ಲದ ಒಂದು ಒಪ್ಪಂದವು ಬಹುಶೀಘ್ರವಾಗಿ ಹಾಳಾಗುತ್ತದೆಂಬುದನ್ನು ನಾನು ಸಂಪೂರ್ಣ ಒಪ್ಪುತ್ತೇನೆ. ಕಾಂಗ್ರೆಸಿನ ವರ್ಕಿಂಗ್ ಅವರ ಸಲಹೆಯೆಂದರೆ ಅದೊಂದು ಆಜ್ಞೆಯೆಂದು ನನಗೆ ಗೊತ್ತಿದೆ. ಆದರೆ ಈಗ ಅವರು ವೈಸರಾಯರಿಗೂ ಆ ಮೂಲಕ ಬ್ರಿಟಿಷ್ ಜನತೆಗೂ ತಾನು ಸಲಹೆಗಾರನೆನ್ನುತಿದ್ದಾರೆ. ಮುಸ್ಲಿಂ ಲೀಗು ಸಂಪೂರ್ಣವಾಗಿ ಪ್ರಜಾಸತ್ತಾತ್ಮಕ ಸಂಸ್ಥೆ; ಅದರಲ್ಲೊಬ್ಬ ಸಲಹೆಗಾರನಿಗೆ ಸ್ಥಾನವಿಲ್ಲ.

ವೇವೆಲ್ ನಿರೂಪಣೆ ಹಿತಕರವೆ?

ವೇವೆಲ್ ನಿರೂಪಣೆಯಲ್ಲಡಕವಾಗಿರುವ ತಾತ್ಕಾಲಿಕ ವ್ಯವಸ್ಥೆಯು ನಮ್ಮೊಳಗೊಂದು ಶಾಶ್ವತ ಒಪ್ಪಂದದ ಮೂಲಕ ದೊಡ್ಡ ಪ್ರಶ್ನೆ ತೀರ್ಮಾನಿಸಲ್ಪಡುವ ವರೆಗೆ ಮುಂದೊತ್ತಬಲ್ಲದೆಂದು ಗಾಂಧಿಯವರ ನಂಬಿಕೆಯಿರಬಹುದೇ ಎಂದು ನನಗಾಶ್ಚರ್ಯವಾಗುತ್ತಿದೆ. ಇದನ್ನಾಧರಿಸಿ ವಿಭಾಗಿತ ಭಾರತ ಅಥವಾ ಸಂಯುಕ್ತ ಭಾರತದ ಒಪ್ಪಂದವಾಗಬಲ್ಲದೇ? ರಾಜ್ಯಘಟನೆ ಅಥವಾ ರಾಜ್ಯಘಟನೆಗಳ ನಿರ್ಮಾಣವಾಗಬಲ್ಲುದೆ? ಆದ್ದರಿಂದ ಮೊದಲ ಕಾರ್ಯವಾದ ಪಾಕಿಸ್ತಾನ ಪ್ರಶ್ನೆಯ ತೀರ್ಮಾನ ಪ್ರಥಮತಃ ಆಗಬೇಕು. ಅದು ಎಷ್ಟು ಬೇಗನೇ ಆಗುತ್ತದೋ ಸಂಬಂಧಪಟ್ಟವರಿಗದಷ್ಟು ಕ್ಷೇಮಕರ'.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ಪರಿಹಾರವು—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ಮೂರು ಕೈಮೀರಿದ ಕೇಸುಗಳಿಗೆ ರೂ. 5,6 ತಿಂಗಳ ಬರ್ತ್ ಕಂಟ್ರೋಲಿಗೆ ರೂ 4-(ವಿ.ಪಿ. 12 ಆಣೆ ಅಲಾಯಿದ) Mrs P. DEVEE, F. D. 5, (k) Tollygunge, Calcutta, ಸ್ಟಾಕಿಸ್ಟ್: ಪೈ ಕಂಪೆನಿ, ಮಂಗಳೂರು

★ಗಾಂಧೀ-ಜಿನ್ನರ ಎಳೆದಾಟ!★

ಗಾಂಧಿಜೀಯ ಹೇಳಿಕೆ

“ಈ ವಿಚಿತ್ರ ಪ್ರತಿಷ್ಠಾವಂತ ಕಿರಿಮನುಷ್ಯನ ಸಂಭಾಷಣೆಯೆಂದರೆ ಯಾವಾಗಲೂ ಹಾಗೆಯೇ-ತುಂಬ ಹರಟೆ, ತಮಾಷೆ. ಅವರು ತನ್ನ ಸ್ನೇಹಿತೆ ಅಮೃತ ಕೌರರ ಮನೆಯ ನೆಲದಲ್ಲೊಂದು ಚಾಪೆಯಲ್ಲಿ ಕುಳಿತಿದ್ದರು-ನನಗೊಂದು ಕುರ್ಚಿಕೊಟ್ಟರು. ಮೂರು ವರುಷಗಳಿಗೆ ಮೊದಲು ದಸ್ತಗಿರಿಯಾಗುವ ಕಾಲದಲ್ಲಿ ನಾನವರ ಭೇಟಿಯಾಗಿದ್ದಾಗ ಇದ್ದ ವ್ಯವಸ್ಥೆಯೇ ಈಗ ಕೂಡಾ” ಎನ್ನುತ್ತಾ ಅಮೇರಿಕದ ಎಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿ ಪ್ರೆಸ್ಟನ್‌ಗ್ರೋವರ್ ಸಿಮ್ಲಾ ಸಮ್ಮೇಲನದ ಕುರಿತು ಅದು ಮುಂದುವರಿದ ತಾ 29ರಲ್ಲೇ ಗಾಂಧೀಜೀಯಿತ್ತ ಹೇಳಿಕೆಯನ್ನು ಪ್ರಕಟಿಸಿದ್ದಾನೆ ಈ ಮನುಷ್ಯ ಮರುದಿನವೇ ಮಿ. ಜಿನ್ನರ ಭೇಟಿ ಪಡೆದು ಅವರ ಉತ್ತರವನ್ನೂ ಪ್ರಕಟಿಸಿದ್ದಾನೆ. ಎರಡರ ಸಾರಾಂಶವನ್ನೂ ಇಲ್ಲಿ ಕೊಡಲಾಗಿದೆ.

ಕಾಂಗ್ರೆಸಿನ ಸ್ಥಾನ

ಗಾಂಧಿಜೀ ಕಾಂಗ್ರೆಸಿನ ಸ್ಥಾನ ನಿರೂಪಣೆ ಮಾಡುತ್ತಾ ಕಂಠೋಕ್ತವಾಗಿ ಹೇಳಿದರು: “ಕಾಂಗ್ರೆಸು ಜಾತೀಯ ಸಂಸ್ಥೆಯಲ್ಲ ಅದೆಂದಿಗೂ ಒಂದು ಪಂಗಡದ ಸಂಸ್ಥೆಯಾಗುವಂತಿಲ್ಲ. ಇಡೀ ರಾಷ್ಟ್ರದ ಪರವಾಗಿ ಚಿಂತಿಸುವದಕ್ಕೂ ವರ್ತಿಸುವದಕ್ಕೂ ಪ್ರಯತ್ನಿಸಿದ ಏಕ ಮಾತ್ರ ಸಂಸ್ಥೆಯೆಂದರೆ ಕಾಂಗ್ರೆಸ್ ಪೂರ್ಣಸ್ವಾತಂತ್ರ್ಯದ ಕಡೆಗಿಡುವ ಮೊದಲ ಹೆಜ್ಜೆಯೆಂಬ ಆಸೆಯಿಂದ ಕಾಂಗ್ರೆಸು ಇಂದಿನ ಸಂಧಾನವಾತುಕತೆಗಿಳಿದಿದೆ.

ಕಾಂಗ್ರೆಸಿನಲ್ಲಿ ನನ್ನ ಸ್ಥಾನ

ನಾನು ಕಾಂಗ್ರೆಸಿನ ಸಲಹೆಗಾರ ಮಾತ್ರ. ಈಗ ನಾನು ಕಾಂಗ್ರೆಸಿನಂತೆಯೇ ವೈಸರಾಯರ ಮತ್ತು ಅವರ ಮೂಲಕ ಬ್ರಿಟಿಷ್ ಜನತೆಯ ಸಲಹೆಗಾರನಾಗಿದ್ದೇನೆ. ಇದರಿಂದಾಗಿ ನನ್ನ ಸ್ಥಾನವು ಅತ್ಯಂತ ಸೂಕ್ಷ್ಮತರದ್ದಾಗಿದೆ. ನನ್ನ ಅನುಯಾಯಿಗಳು ಮುಟ್ಟಿಸುತ್ತಿರುವ ಸುದ್ದಿಯಷ್ಟೇ ನನಗೆ ಗೊತ್ತು. ಯಥಾರ್ಥವಾದರೆ ಈ ದಿನ ಸಮ್ಮೇಲನವಾವ ಸ್ಥಿತಿಯಲ್ಲಿದೆ ಎಂಬುದನ್ನೇ ನಾನರಿಯೆ. ಆತುರಗೊಂಡು ಕೂಗುವ ಅಭ್ಯಾಸ ನನಗಿಲ್ಲ

ಬಯಕೆ ಮತ್ತು ಪ್ರಾರ್ಥನೆ

ಕೊನೆಗೇನಾಗುವದೋ ನಾನರಿಯೆ. ಸಂಗತಿಗಳೆಲ್ಲಾ ಸಗಮವಾಗಿದ್ದರೆ ವೈಸರಾಯರಾಗಲೀ ಕಾಂಗ್ರೆಸಿಗರಾಗಲೀ ಆಗಾಗ ನನ್ನ ಅಭಿಪ್ರಾಯ ಕೇಳಬೇಕೆಂದಿಲ್ಲ. ಕಟ್ಟಕಡೆಗೆ ಹಿಂದುಸ್ಥಾನ ಮತ್ತು ಇಂಗ್ಲಾಂಡು ಎರಡರ ಹಿತವೂ ಸಂಭವಿಸಲೆಂದು ನನ್ನ ಬಯಕೆ ಮತ್ತು ಪ್ರಾರ್ಥನೆ. ನಾನು ಎರಡು ದೇಶಗಳನ್ನೂ ಉಲ್ಲೇಖಿಸಿದ್ದೇನೆ. ಯಾಕೆಂದರೆ ಒಂದೊಮ್ಮೆಗೆ ತೀರ್ಮಾನವಾದ ಪಕ್ಷದಲ್ಲೂ ಅದು ಸರಿದಾರಿ ಹಿಡಿಯುವದೆಂದು ನಾನು ಹೇಳಲಾರೆ

ನೆಹರು ನನ್ನ ವಾರೀಸ್ದಾರ

ಆದರೆ ನಾನು ನಿಮಗೊಂದು ಮೊನೆಯನ್ನು ಸೂಚಿಸುತ್ತೇನೆ. ಪಂಡಿತ ಜವಾಹಿರಲಾಲರು ನನ್ನ ವಾರೀಸ್ದಾರನೆಂದು ಕೆಲ ಕಾಲಕ್ಕೆ ಹಿಂದೆ ಸರ್. ಫಿರೋಜ್ ಖಾನ್ ನೂನರಿಗೆ ನಾನು ಉತ್ತರ ಕೊಟ್ಟದು ತಮಾಷೆಗಾಗಿ ಅಲ್ಲ ಅವರು ಸಶಕ್ತರು; ತಿಳುವಳಿಕೆಯುದ್ದವರು ಮತ್ತು ಇಲ್ಲಿಯ ಜನತೆಯ ನಿಕಟ ಸಂಪರ್ಕವಿಟ್ಟುಕೊಂಡವರು ಭಾರತದ ಭಾವನೆಯನ್ನವರು ಭಾಷಾಂತರಿಸಿ ತೋರಿಸಬಲ್ಲರು. ನಾವು ಲೊರ್ಡ್ ಲಿನ್‌ಲಿತ್ ಗೋರವರಿಗೆ ಬರೆದಿದ್ದಂತೆ ಅಂತರ್‌ರಾಷ್ಟ್ರೀಯ ವಿಷಯಗಳಲ್ಲಿ ಪಂಡಿತ ನೆಹರುಗಳನ್ನೇ ನನ್ನ ಮಾರ್ಗದರ್ಶಕನಾಗಿ ಇಟ್ಟುಕೊಂಡಿದ್ದೇನೆ. ಬೇರಾರಿಂದಲೂ ಅಸಾಧ್ಯವಾಗುವ ರೀತಿಯಲ್ಲಿ ಭಾರತದ ಭಾವನೆಯನ್ನವರು ಹೊರಗಿನವರಿಗ ಅನುವಾದ ಮಾಡಿಕೊಡಬಲ್ಲರು.

ಸಮ್ಮೇಲನದ ರಾಜಕೀಯ ಚಹರೆ

ಇಷ್ಟೊಂದು ನಾನು ಹೇಳಬಲ್ಲೆ-ಕಾಂಗ್ರೆಸ್ ಎಂದಿಗೂ ಜಾತೀವಾರು ಕಾರ್ಯಕೈಕೊಳ್ಳುವಂತಿಲ್ಲ. ಅದರೊಳಗೆ ಜಾತೀಯ ಭಾವನೆಯವರಿಲ್ಲವೆಂದಲ್ಲ-ಅದು ಜಾತೀಯವಾಗಿ ಎಂದೂ ವರ್ತಿಸುವಂತಿಲ್ಲ. ಆದ್ದರಿಂದಲೇ ಜಾತೀಸಾಮ್ಯತೆಯ ತತ್ವವು ಪ್ರತಿಯೊಬ್ಬರಲ್ಲೂ ಜಿಗುಪ್ಸೆಯನ್ನು ಹುಟ್ಟಿಸಿದೆ. ಸದ್ಯದ ಸಮ್ಮೇಲನಕ್ಕೆ ರಾಜಕೀಯ ಬಣ್ಣವಿದೆ. ಜಾತೀವಾರಾಗಿ ವರ್ತಿಸುವದಾದರೆ ಅವರು ಹಿಂದೂ ಮಹಾಸಭೆಯನ್ನು ಆಮಂತ್ರಿಸಬೇಕಿತ್ತು ಹೊರತು ಕಾಂಗ್ರೆಸನ್ನಲ್ಲ.

ನನ್ನನ್ನು ಜಿನ್ನರೊಯ್ಯಬಲ್ಲರು

ನಾನು ಸಮ್ಮೇಲನಕ್ಕೆ ಹಾಜರಾಗದುದರಿಂದ ಮಿ. ಜಿನ್ನರು ಕೆರಳಿದ್ದಾರೆಂಬ ವಾರ್ತೆಯಿದೆ. ಅವರಿಗೆ ನಾನಲ್ಲಿರಬೇಕೆಂದು ಅನ್ನಿಸಿದರೆ ನನ್ನನ್ನವರು ಕರೆದೊಯ್ಯಬಲ್ಲರು. ನಾವಿಬ್ಬರೂ ಕೈ ಕೈ ಹಿಡಿದುಕೊಂಡು ಸಾಗಬಲ್ಲೆವು. ಶಿಖರದ ವರೆಗೂ ಹತ್ತುವಂತೆ ನನಗವರು ಸಹಾಯಮಾಡಿ ನನ್ನ ಹೃದಯಯಾತನೆಯನ್ನು ನಿವಾರಿಸಬಲ್ಲರು. ಅವರಿಂದ ಕರೆದೊಯ್ಯಲ್ಪಡುವದಾದರೆ ನಾನು ಸಂತೋಷಪೂರ್ವಕ ತಯಾರಿದ್ದೇನೆ ಎಂದು ನೀವವರಿಗೆ ಹೇಳಬಹುದು ಸಮ್ಮೇಲನದಲ್ಲಿ ಕಾನೂನು ಬದ್ಧ ಪ್ರತಿನಿಧಿಗಳಿಗೇನೇ ಸ್ಥಾನವಾದ್ದರಿಂದ ನನಗೆ ಎಡಯಿಲ್ಲ. ಕಾಂಗ್ರೆಸು ನನ್ನ ಮಾತಿನ ಹತೋಟಿಯೊಳಗಿದೆ ಎಂಬುದು ಕೂಡಾ ನಿಜವಲ್ಲ. ಅವರೆಂದಿಗಾದರೂ ನನ್ನನ್ನು ಬದಿಗೆ ತಳ್ಳಬಲ್ಲರು; ನನ್ನ ಸಲಹೆಗಳನ್ನು ಒಂದೆಡೆಗೆ ಝಾಡಿಸಿಬಿಡಬಲ್ಲರು. ನಾನವರ ಮೇಲೆ ಸವಾರಿಮಾಡಲಿಚ್ಛಿಸಿದರೆ ಒಂದು ಬಾರಿಗೇನೋ ವಿಜಯಿಯಾಗಬಲ್ಲೆ. ಆದರೆ ಅಧಿಕಾರಕ್ಕೇರಲು ಪ್ರಯತ್ನಿಸಿದ ಆ ಕ್ಷಣದಲ್ಲೇ ಉರುಳಿಬಿದ್ದವ ಮತ್ತೆಂದಿಗೂ ತಲೆಯೆತ್ತದಂತೆ ಆದೀತು; ಹಾಗೆ ಮಾಡುವದು ನನ್ನ ಸ್ವಭಾವವಲ್ಲ.”

ಜಿನ್ನರ. ಉತ್ತರ

ಬಾತ್ಮಿದಾರ ಪ್ರೆಸ್ಟನ್ ಗ್ರೋವರನು ಮರುದಿನವೇ ಜಿನ್ನರ ಭೇಟಿ ಪಡೆದು ಗಾಂಧಿಜೀ ಹೇಳಿಕೆಯ ಸಂಬಂಧವಾಗಿ ಪ್ರಶ್ನೆಗಳನ್ನು ಕೇಳಿದಾಗ ಲೀಗ್ ಅಧ್ಯಕ್ಷರಿತ್ತ ಉತ್ತರ —

ಪಾಕಿಸ್ಥಾನವನ್ನು ಒಪ್ಪಲಿ

‘‘ಗಾಂಧಿಯವರು ಪಾಕಿಸ್ತಾನದ ಅಸ್ತಿವಾರವನ್ನು ಒಪ್ಪುತ್ತಾರಾದರೆ ನಾವೀ ಸಮ್ಮೇಲನದಲ್ಲಿ ಒದ್ದಾಡಬೇಕೆಂದಿಲ್ಲ. ನಮ್ಮದೇ ಆದ ಮತ್ತೊಂದು ಸಮ್ಮೇಲನವಾಗುವದು. ಆಗ ಕಾಂಗ್ರೆಸು ಮತ್ತು ಮುಸ್ಲಿಂ ಲೀಗು ಭುಜಕ್ಕೆ ಭುಜಕೊಟ್ಟು ಭಾರತದ ಎಲ್ಲಾ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡುವಂತಾಗುವದು. ಗಾಂಧಿಯವರು ಸ್ವಾತಂತ್ರ್ಯ ಪ್ರೇಮಿ ನಾನೂ ಹಾಗೆಯೇ. ಈ ಉಪಖಂಡದ ಎಲ್ಲಾ ಜನರಿಗೂ ಸ್ವಾತಂತ್ರ್ಯ ಸಿಗದೆ ಪಾಕಿಸ್ಥಾನವಾಗಲಾರದೆಂದು ನಾನು ಸ್ಪಷ್ಟಪಡಿಸಿದ್ದೇನೆ. ಆದ್ದರಿಂದ ನಾವು ಪಾಕಿಸ್ತಾನಕ್ಕಾಗಿ ಹೋರಾಡುವಾಗ ಅಖಿಲ ಭಾರತೀಯರ ಸ್ವಾತಂತ್ರ್ಯಕ್ಕಾಗಿಯೂ ಹೋರಾಡುತಿದ್ದೇವೆ.

ನಾನವರನ್ನು ಹೇಗೆ ಕರೆದೊಯ್ಯಲಿ

ಎರಡು ಮುಖ್ಯ ರಾಜಕೀಯ ಪಕ್ಷಗಳಲ್ಲೊಂದರ ನಾಯಕನೆಂದು ವೈಸರಾಯರು ಗಾಂಧಿಯವರನ್ನಾಮಂತ್ರಿಸಿದ್ದರು.

(೭ನೇ ಪುಟ ನೋಡಿರಿ)

ಪ್ರೇಮ ವಿದ್ಯಾಪೀಠ
ತುಂಗಭದ್ರಾ, (ಬಳ್ಳಾರಿ ಜಿಲ್ಲಾ.)
ದಿವಂಗತ ಶ್ರೀ ಪಂಡಿತ ತಾರಾನಾಥರ
ಪ್ರೇಮ ವಿದ್ಯಾಪೀಠದಲ್ಲಿ
ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ
ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು.

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್‌ರವರಿಗೆ ಬರೆಯಬೇಕು.

ಜಿ. ಸುಮತಿ ತಾರಾನಾಥ,
ಪ್ರಿನ್ಸಿಪಾಲ್.

ಸಮ್ಮೇಲನದ ಭವಿಷ್ಯ ವೈಸರಾಯರ ಕೈಯಲ್ಲಿದೆ.

(೧ನೇ ಪುಟದಿಂದ ಮುಂದುವರಿದುದು.)

ಯವರೇ ಆದಿಯಾಗಿ ಎಲ್ಲಾ ಸದಸ್ಯರೂ ಸಿಮ್ಲಾಕ್ಕೆ ಧಾವಿಸಿದ್ದಾರೆ. ಸಮ್ಮೇಲನ ಮುಗಿದೊಡನೆಯೇ ಮೌ. ಅಜಾದರಿಂದ ತಂತೀ ಟೆಲಿಫೋನುಗಳ ಅತ್ಯವಸರದ ಕರೆ ಬಂದುದರಿಂದ ಪಂಡಿತ ನೆಹರುಗಳು ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಮಿಕ್ಕವರಿಗಿಂತ ಮೊದಲೇ ಸಿಮ್ಲಾ ಹತ್ತಬೇಕಾಯಿತು. ತಾ. ೨ರಲ್ಲಿ ಅಲ್ಲಿಗೆ ಮುಟ್ಟಿದೊಡನೆ ಲೋರ್ಡ್ ವೇವೆಲರಿಂದ ಚಹಕ್ಕಾಮಂತ್ರಣ ಬಂದು ಅರ್ಧಘಂಟೆ ವೇವೆಲ್-ನೆಹರು ಮಾತುಕತೆ ನಡೆಯಿತು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಾ. ೩ನೇ ಅಪರಾಹ್ನ 2ಕ್ಕೆ ಕೂಡಿಬಂತು. ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ತಾ. ೫ರಲ್ಲಿ ನೆರೆಯಲಿದೆ. ಎರಡು ಸಮಿತಿಗಳ ಸದಸ್ಯರಿಗೂ ವೈಸರಾಯರಿಂದ ಹೊಟೆಲು ವ್ಯವಸ್ಥೆ ನಡೆದಿದೆ; ಎರಡು ಬಂಗಲೆಗಳನ್ನು ಅವರಿಗಾಗಿ ರಿಜರ್ವ್‌ಮಾಡಿ ಇಡಲಾಗಿದೆ.

ಸಂಧಾನದ ಕದ ಮುಚ್ಚಿತು

ಮುಸಲ್ಮಾನರ ಪಾಲಿನ ಒಂದೇ ಒಂದು ಸ್ಥಾನವನ್ನಾದರೂ ಲೀಗೇತರರಿಗೆ ಕೊಡಲು ಮಿ. ಜಿನ್ನರೆಷ್ಟಕ್ಕೂ ಸಿದ್ಧರಿಲ್ಲವಾದ್ದರಿಂದ ಇನ್ನು ಸಂಧಾನದ ಆಶೆ ಮುಗಿದಂತೆಯೇ ಕಾಂಗ್ರೆಸಧ್ಯಕ್ಷ ಮತ್ತು ಲೀಗ್ ಅಧ್ಯಕ್ಷರು ಸಲಹೆಗಾರರಾಗಿ ವೈಸರಾಯರಿಂದ ಆರಿಸುವಿಕೆಯ ಕೆಲಸಮಾಡಿಸಬೇಕೆಂಬ ರಾಜೀ ಸೂಚನೆಗೆ ಮೌಲಾನರು ತಯಾರಿದ್ದರೂ, ಪಂತರೊಡನೆ ಮಾತಾಡುವ ನೆಪ ಹೇಳಿ ಮಿ. ಜಿನ್ನರು ತಪ್ಪಿಸಿಕೊಂಡಿದ್ದರು. ಅಲ್ಪ ಸಂಖ್ಯಾಕರಲ್ಲಿ ಹೆಚ್ಚಿನ ಪ್ರತಿನಿಧಿಗಳಿಂದ ಮೌಲಾನಾ ಅಜಾದರಿಗೆ ಬೆಂಬಲದ ಆಶ್ವಾಸನೆ ದೊರೆತಿದೆ. ಕಾರ್ಯಕಾರೀ ಸದಸ್ಯರ ಸಂಖ್ಯೆಯೆಷ್ಟೆಂಬುದು ಮುಂದಾಗಿ ತಿಳಿಯದೆ, ಮುಸಲ್ಮಾನರ ಸ್ಥಾನಗಳಿದ್ದಷ್ಟೇ ಹೆಸರನ್ನು ಸೂಚಿಸಿ, ವೇವೆಲರನ್ನು ಸಮಸ್ಯೆಗೊಡ್ಡುವದು ಜಿನ್ನರಿಗೆ ಅಸಾಧ್ಯವಾಗಿದೆ ಎಲ್ಲರ ಹೆಸರು ಪಟ್ಟಿಗಳೂ ಜುಲಾಯಿ ತಾ. 6ರೊಳಗೆ ತನ್ನ ಕೈಸೇರಬೇಕೆಂದು ವೇವೆಲರಂದಿದ್ದಾರೆ. ತಾ 14ರ ಅಧಿವೇಶನದಲ್ಲಿ ಚುನಾಯಿತ ಸದಸ್ಯರ ಹೆಸರು ಪಟ್ಟಿಯು ವೈಸರಾಯರಿಂದ ಮುಂದೆ ಬರುವದೆಂದೂ ಆ ಕುರಿತು ಸಮ್ಮೇಲನದ ಅಭಿಪ್ರಾಯವನ್ನವರು ಕೇಳುವರೆಂದೂ ತಿಳಿದುಬರುತ್ತದೆ. ಏನಾದರೊಂದು ಅದ್ಭುತವು ನಡೆಯದಿದ್ದಲ್ಲಿ ಮಿ. ಜಿನ್ನರು ಅಸಹಕರಿಸುವ ಸಂಭವವೇ ಹೆಚ್ಚೆನ್ನಬಹುದು. ಲೀಗ್ ಸದಸ್ಯರೊಳಗೆ ಭಿನ್ನಾಭಿಪ್ರಾಯವೆದ್ದಿದೆ ಎಂಬುದನ್ನು ನವಾಬಜಾದಾ ಲಿಯಾಖತ್ ಅಲೀಖಾನರು ಅಲ್ಲಗಳೆದಿದ್ದಾರೆ. ಹಿಂದೂ ಮಹಾಸಭೆಯ ಸ್ವಯಂ ಸೇವಕರೊಂದಿಗೆ ಸಿಮ್ಲಾಕ್ಕೆ ಹೋಗಿ ವೈಸರಾಯೀ ಭವನದೆದಿರು ಕರಿಪತಾಕೆ ತೋರಿಸಿ ನಿಷೇಧ ಪ್ರದರ್ಶಿಸಿದ ಶ್ರೀ ಭಟ್ಟಿಯವರ ದಸ್ತಗಿರಿಯಾಗಿದೆ. ಕಳೆದ ಬಾರಿ ಬೊಂಬಾಯಿಯಲ್ಲಿ ಗಾಂಧಿಜೀ ಜಿನ್ನರ ಭೇಟಿಗೆ ಹೋದಾಗಲೂ ಇವರೇ ಭಟ್ಟಿಯವರು ‘ಪಿಕೆಟ್’ ಮಾಡಿ ಬಂಧಿಸಲ್ಪಟ್ಟಿದ್ದರು.

ದಕ್ಷಿಣ ಕನ್ನಡ.

ಗಂಗೊಳ್ಳಿ ಸರಸ್ವತಿ ವಿದ್ಯಾಲಯ ಹ್ಯಾಸ್ಕೂಲಿನ ಉದ್ಘಾಟನೆ–ಸದ್ರಿ ಶಾಲೆಯ ಉದ್ಘಾಟನಾ ಸಮಾರಂಭವು ತಾರೀಕು ೩೦-೬-೪೫ನೇ ಬುಧವಾರ ದಿವಸ ಪೂರ್ವಾಹ್ನ ಘಂಟೆ ೧೨-೩೦ಕ್ಕೆ ಶ್ರೀ ಚಿತ್ರಾಪುರ ಮಠಾಧೀಶರಾದ ಶ್ರೀಮದಾನಂದಾಶ್ರಮ ತೀರ್ಥ ಸ್ವಾಮಿಯವರಿಂದ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಶಾಲಾ ವಿದ್ಯಾರ್ಥಿನಿಯವರ ಸ್ವಾಗತ ಗೀತೆಯೂ, ಸ್ವಾಗತಾಧ್ಯಕ್ಷರಾದ ಶ್ರೀ. ಎಚ್. ಲಕ್ಷ್ಮೀನಾರಾಯಣ ಕಾಮತರ ಸ್ವಾಗತ ಭಾಷಣವೂ ನಡೆಯಿತು. ಶ್ರೀಯುತ ಕಾಮತರು ಶ್ರೀಪಾದಂಗಳವರಿಗೆ ಸ್ವಾಗತವೀಯುತ್ತಾ ಸ್ಥಳೀಯ ವಿದ್ಯಾಮಾನಗಳನ್ನು ವಿವರಿಸಿ ಇಲ್ಲೊಂದು ಹ್ಯಾಸ್ಕೂಲು ಅತ್ಯಗತ್ಯವೆಂಬುದನ್ನು ಸ್ಪಷ್ಟೀಕರಿಸಿದರು.

ಸಭೆಯು ಜನಸಂದಣಿಯಿಂದ ಕಿಕ್ಕಿರಿದಿತ್ತು. ಕಾರ್ಯಕ್ರಮದಂತೆ ಪ್ರಾರಂಭದಲ್ಲಿ ಶಾಲಾ ಮೆನೇಜರರಾದ ಶ್ರೀ. ಜಿ. ಸುರೇಂದ್ರ ನಾಯಕ್ ಇವರು ಶಾಲಾ ವರದಿ ವಾಚನವನ್ನು ಮಾಡಿದರು. ಅನಂತರ ಸಭಿಕರ ಭಾಷಣಗಳಿಗಾರಂಭವಾಯಿತು. ಈ ಕೆಳಗೆ ಹೆಸರು ಕೊಟ್ಟ ಮಹನೀಯರು ಗಂಗೊಳ್ಳಿಯಲ್ಲಿ ಒಂದು ಹ್ಯಾಸ್ಕೂಲಿನ ಕುರಿತು ಮಾತನಾಡಿದುದಲ್ಲದೆ, ಸದ್ರಿ ಹ್ಯಾಸ್ಕೂಲು ಯೋಜನೆಯನ್ನು ಕೈಗೊಂಡು ಅವಿಶ್ರಾಂತ ಶ್ರಮದಿಂದ ದುಡಿದು, ಸಫಲ ಪ್ರಯತ್ನರಾದ ಸರಸ್ವತಿ ವಿದ್ಯಾಲಯ ಶಾಲಾ ಸಂಘದವರ ಸ್ವಾರ್ಥತ್ಯಾಗ, ವಿದ್ಯಾಪ್ರೇಮ, ಜನತಾಸೇವೆಯಲ್ಲಿರುವ ಆದರಾದಿಗಳನ್ನು ಶ್ಲಾಘಿಸಿ ಭಾಷಣವಿತ್ತರು. ಕುಂದಾಪುರ ತಹಶಿಲ್ದಾರರಾದ ಶ್ರೀ ಬಿ. ಗಣೇಶ ಬಿ. ಎ., ಶ್ರೀ. ಎಚ್. ಸರ್ವೋತ್ತಮ ಶೆಟ್ಟಿ, ಶ್ರೀ. ಕೆ. ಎಲ್. ಭಂಡಾರಿ, ಬಿ. ಎ., ಬಿ. ಎಲ್., ಬಿ. ಬಿ. ಪುರಾಣಿಕ, ಬಿ. ಎ. ಎಲ್.ಟಿ., ಶ್ರೀ. ಜಿ. ಆರ್. ಶೆಣೈ ಯಂ. ಎ. ಎಲ್. ಟಿ., ಹೊಸದಾಗಿ ತೆರೆಯಲ್ಪಟ್ಟ ಹ್ಯಾಸ್ಕೂಲ್ ಹೆಡ್ಮಾಸ್ಟರ್ ಶ್ರೀ. ಶಿವರಾಮ ಗೌಡ, ಡಿ. ಐ. ಕುಂದಾಪುರ, ಶ್ರೀ. ಎಚ್. ಆನಂದರಾವ್, ಪೋಸ್ಟಲ್ ಇನ್ಸ್‌ಪೆಕ್ಟರ್.

ಶ್ರೀ ಸ್ವಾಮಿಜಿಯವರು ಹ್ಯಾಸ್ಕೂಲಿನ ಉದ್ಘಾಟನಾ ಕಾರ್ಯವನ್ನು ಮಾಡುತ್ತಾ ತಮ್ಮ ದಿವ್ಯವಾಣಿಯಿಂದ ಆಧುನಿಕ ವಿದ್ಯೆಯು ಹೇಗೆ ನಮ್ಮ ಪ್ರಾಚೀನ ಸಂಸ್ಕೃತಿಯ ಪೂರಕವಾಗಬಹುದೆಂಬುದನ್ನು ವಿವರಿಸಿದರು. ಕೊನೆಯದಾಗಿ ಈ ಹ್ಯಾಸ್ಕೂಲಿನ ಪುರೋಭಿವೃದ್ಧಿಯನ್ನು ಕೋರಿ, ಇಲ್ಲಿಂದ ಹೊರಬೀಳುವ ವಿದ್ಯಾರ್ಥಿಗಳು ವಿದ್ವನ್ಮಣಿಗಳೂ ದೇಶಕ್ಕೆ ಭೂಷಣಪ್ರಾಯರೂ ಆಗಲೆಂದು ಆಶೀರ್ವದಿಸಿದರು. ಶ್ರೀ. ಬೈಲೂರು ರಾಮರಾಯರು (ಶಾಲಾ ಕರೆಸ್ಪೊಂಡೆಂಟ್) ಶಾಲಾ ಸಂಘದ ಪರವಾಗಿ ಧನ್ಯವಾದಗಳನ್ನರ್ಪಿಸಿದ ತರುವಾಯ ಪ್ರಸಾದ ಪಂಚೋಪಚಾರಾನಂತರ ಸಭೆಯು ಮುಕ್ತಾಯವಾಯಿತು.

Notice

ಪುತ್ತೂರು ಡಿ. ಮು ಕೋರ್ಟಿನಲ್ಲಿ

O. S 64 1945

ಉಂಮಂಗಿಲ ಯಾನೆ ಅಬ್ದುಲ್ ರಹಿಮಾನ್ ಬ್ಯಾರಿ—ವಾದಿ.

ವೆಂಕಟ್ರಮಣಯ್ಯ ಪ್ರತಿವಾದಿ.

ವೆಂಕಟ್ರಮಣಯ್ಯ ಕಂಜರ್ಪಣೆ ವೆಂಕಟ್ರಮಣಯ್ಯನವರ ಮಗ ಪುತ್ತೂರು ತಾಲ್ಲೂಕು ಪಂಜೆತ್ತಡಿ ಗ್ರಾಮದಲ್ಲಿರುವವರು. ಯಿಮಗೆ ವಾದಿಯು ನಿಮ್ಮ ಮೇಲೆ ಗೇಣಿ ಬಾಕಿ ರೂಪಾಯಿ ೪೫೦-೭-೧೧ಕ್ಕೆ ಮಾಡಿದ ಮೋಲಿನ ನಂಬ್ರವು ತಾರೀಕು ೧೦-೭ ೪೫ಕ್ಕೆ ಯಿಟ್ಟಿರುತ್ತದೆ. ಆ ದಿನ ೧೦ ಗಂಟೆಗೆ ನೀವು ಸ್ವತಹವಾಗಲೀ ವಕೀಲರ ದ್ವಾರವಾಗಲೀ ಹಾಜರಾಗದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು. ಯಂತ ಈ ಮೂಲಕ ತಿಳಿಯಪಡಿಸಿದೆ.

By order of the Court

ಪುತ್ತೂರು, } Sd. B.Chidananda Rau
ತಾ 18-6-45 } Pleader for Pltf.

ಉಡುಪಿ

ದಿನಾಚರಣೆ–ಉಡುಪಿ ಬೀಡಿ ಕೆಲಸಗಾರರ ಸಂಘ ಮತ್ತು ಹೋಟೆಲ್ ಕೆಲಸಗಾರರ ಸಂಘಗಳ ಸಮ್ಮಿಶ್ರ ಸಭೆಯೊಂದು ಇದೇ ತಾ. ೧ ೭ ೪೫ರಲ್ಲಿ ಕುತ್ಪಾಡಿ ಶಾಲೆಯಲ್ಲಿ ಶ್ರೀ. ಕೆ. ರಾಘವನವರ ಅಧ್ಯಕ್ಷತೆಯಲ್ಲಿ ಸೇರಿ ಕೇರಳ ಟ್ರೇಡ್ ಯೂನಿಯನ್ ದಿನವನ್ನಾಚರಿಸಿತು.

ಕೃತಜ್ಞತಾ ಸಮರ್ಪಣೆ–ಉಡುಪಿ ಶ್ರೀ ಅದಮಾರು ಮಠಾಧೀಶರಾದ ಶ್ರೀ ವಿಬುಧಮಾನ್ಯತೀರ್ಥ ಶ್ರೀಪಾದಂಗಳವರ ಅಕಾಲ ನಿರ್ಯಾಣದ ಕುರಿತು ವಿಷಾದ ಸೂಚಕವಾಗಿ ಹಲವು ಮಹನೀಯರುಗಳ ಪತ್ರಗಳು, ತಂತಿಗಳು ನಮಗೆ ಬಂದಿರುತ್ತವೆ. ಅವುಗಳಿಗೆಲ್ಲಾ ಪ್ರತ್ಯಪ್ರತ್ಯೇಕವಾಗಿ ಉತ್ತರಕೊಡುವದು ಪ್ರಕೃತ ಪರಿಸ್ಥಿತಿಯಲ್ಲಿ ಅಶಕ್ಯವಾದುದರಿಂದ ಯೀ ಮೂಲಕ ಮಹನೀಯರೆಲ್ಲರಿಗೂ ಕೇವಲ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಎಮ್. ವೆಂಕೋಬಾಚಾರ್ಯ,
ಜನರಲ್ ಏಜೆಂಟ್,
ಶ್ರೀ ಅದಮಾರು ಮಠ, ಉಡುಪಿ.

ಸನ್ಯಾಸಾಶ್ರಮ–ಶ್ರೀ ಅದಮಾರು ಮಠಾಧೀಶರಾದ ಶ್ರೀ ವಿಬುಧಮಾನ್ಯತೀರ್ಥ ಶ್ರೀ ಶ್ರೀಪಾದಂಗಳವರು ತೀರ್ಥಯಾತ್ರಾದಿಗಳನ್ನು ಮಾಡಿಕೊಂಡು ಬರುತ್ತಾ ಮಿರಾಜಿನಲ್ಲಿ ತಾ. ೧೭ ೬-೧೯೪೫ರಲ್ಲಿ ಪರಂಧಾಮವನ್ನೈದಲು ಕಳೇಬರವು ತರಲ್ಪಟ್ಟನಂತರ ಸದ್ರಿ ಮಠದ ದ್ವಂದ್ವಾಧಿಕಾರಿಗಳಾದ ಶ್ರೀ ಫಲಿಮಾರು ಮಠಾಧೀಶರಾದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು ಸ್ವತಃ ವಿಜಯ ಮಾಡಿ ಸದ್ರಿ ಮಠದ ಕೇಂದ್ರಸ್ಥಾನವಾದ ಅದಮಾರಿನಲ್ಲಿ ಶ್ರೀ ವಾಸುದೇವರ ಸನ್ನಿಧಿಯಲ್ಲಿ ಪೂರ್ವಗುರು ವೃಂದಾವನದ ಬಳಿಯಲ್ಲಿಯೇ ಮಠದ ಪಾರುಪತ್ತೆದಾರ್ ಶ್ರೀ. ವೆಂಕೋಬಾಚಾರ್ಯರವರ ಕೂಡುವಿಕೆಯಿಂದ ವಿಧಿಪೂರ್ವಕ ವೃಂದಾವನ ಮಾಡಿಸಿ ಆರಾಧನಾದಿಗಳನ್ನು ಮಾಡಿಸುತ್ತಾ ಅಲ್ಲಿಯೇ ಉಳಿದು ಮಹಾಜನ ಸಮ್ಮತಿಯಿಂದ ಪಾವಂಜೆ ಭೋಜರಾಯರ ಕುಮಾರ ರಮೇಶ ರಾವ್ ಎಂಬ ಯೋಗ್ಯ ವಟುವನ್ನಾರಿಸಿ ಅತನಿಗೆ ಸನ್ಯಾಸಾಶ್ರಮದೊಡನೆ ಪಟ್ಟಾಧಿಕಾರವನ್ನಿತ್ತು ಶ್ರೀ ವಿಬುಧೇಶತೀರ್ಥರೆಂಬ ಶುಭ ನಾಮಧೇಯವನ್ನು ತಾ. ೨೮ ೬ ೪೫ನೇ ದಿನ ದಯಪಾಲಿಸಿದರು. ಅಲ್ಪವಯಸ್ಕರಾದ ನೂತನ ಶ್ರೀಗಳವರ ರಕ್ಷಕರನ್ನಾಗಿ ಬಹುಕಾಲದಿಂದ ಸದ್ರಿ ಮಠದ ಆಡಳ್ತೆದಾರರಾಗಿ ಅನುಭವ ಪಡೆದಿದ್ದ ಶ್ರೀ ಎಮ್. ವೆಂಕೋಬಾಚಾರ್ಯರನ್ನೇ ನೇಮಿಸಿ ಮಠದ ಆಡಳ್ತೆಯ ಅಧಿಕಾರಪತ್ರವನ್ನು ಕೊಟ್ಟು ಸುವ್ಯವಸ್ಥೆ ಮಾಡಿದರು. ಶ್ರೀ ಶ್ರೀಗಳವರ ಸರ್ವಾಪೇಕ್ಷಣೀಯವಾದ ನಿರಪೇಕ್ಷ ಪ್ರವೃತ್ತಿಯು ಪರಮ ಸ್ತುತ್ಯವೆಂದೊಬ್ಬ ಪಾತ್ರಿದಾರರು ಬರೆಯುತ್ತಾರೆ.

ಶ್ರೀ. ಇನ್ನಾಂಜೆ ವಿಟ್ಠಲ ಶೆಟ್ಟರ ಅಕಾಲ ಮರಣ–ಉಡುಪಿ ತಾಲೂಕಿನ ಜನಪ್ರಿಯ ತರುಣರಲ್ಲೊಬ್ಬರೂ, ಪ್ರಸಿದ್ಧ ಪಂಚಾಯತದಾರರೂ ಆಗಿದ್ದ ಶ್ರೀ. ಇನ್ನಾಂಜೆ ವಿಟ್ಠಲ ಶೆಟ್ಟರು ತಾ. ೩೦ನೇ ಶನಿವಾರ ರಾತ್ರಿ ಮಂಗಳೂರು ನೆಕ್ಸ್‌ಲೋಕ್ ಆಸ್ಪತ್ರೆಯಲ್ಲಿ ಮೃತರಾದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರಿಗೆ ೩-೪ ದಿವಸಗಳ ಮೊದಲು ಅಕಸ್ಮಾತ್ತಾಗಿ ಉದರವೇದನೆಯೊಂದು ತಲೆದೋರಲು ಮಂಗಳೂರಿಗೆ ಒಯ್ಯಲ್ಪಟ್ಟು, ತಾ. ೩೦ನೇ ಬೆಳಿಗ್ಗೆ ಶಸ್ತ್ರ ಚಿಕಿತ್ಸೆ ನಡೆಸಲಾಯಿತು. ಅದು ಫಲಕಾರಿಯಾಗದು ತೋರಿಬರಲಿಲ್ಲವೆಂದು ತಿಳಿದುಬರುತ್ತದೆ. ಶ್ರೀ. ಶೆಟ್ಟರು ಅಗಲೇ ನಿಲ್ದಾಣ ಮಾಡಿ ರಾತ್ರಿ ಮೃತರಾದರು. ಕಳೇಬರವನ್ನು ಕುಂಜಾಲಿಗೆ ತಂದು ದಹನ ಮಾಡಲಾಯಿತು. ಈ ಸಂದರ್ಭದಲ್ಲಿ ಸಾವಿರಾರು ಜನರು ನೆರೆದಿದ್ದರೆಂದು ತಿಳಿದುಬರುತ್ತದೆ. ಮೃತರು ಗತ ಒಂದು ಕಾಲದಲ್ಲಿ ದೊಡ್ಡ ಕಂಟ್ರಾಕ್ಟದಾರರೂ ಆಗಿದ್ದರು.

ಕಲಾವೃಂದದ ವಾರ್ಷಿಕೋತ್ಸವವು ಇದೇ ತಾ. ೧೪ ಮತ್ತು ೧೫ ಈ ದಿನಗಳಲ್ಲಿ ಶ್ರೀ. ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಲಿದೆ ಶ್ರೀ. ಕಟೀಲು ಗಣಪತಿ ಶರ್ಮ ಮೊದಲಾದವರ ಭಾಷಣಗಳೂ ನಡಿಯಲಿವೆ ಅದೇ ಸಂದರ್ಭದಲ್ಲಿ ಶ್ರೀ. ಕೆ ಶಂಕರನಾರಾಯಣ ಉಪಾಧ್ಯಾಯರ ನೇತೃತ್ವದಲ್ಲಿ ಒಂದು ಯಕ್ಷಗಾನವೂ ಜರಗಲಿದೆ. ಇನ್ನಿತರ ವಿನೋದಾವಳಿಗಳೂ ಇರುವುವು.

ಬಂಟರ ಯಾನೆ ನಾಡವರ ಸಂಘ, ಮುಂಬಯಿ–ಈ ಸಂಘದ ವಾರ್ಷಿಕ ಸಮ್ಮೇಲನವು ಇದೇ ಜುಲಾಯಿ ತಾ. ೮ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಕೋಟೆಯೊಳಗಿನ ಸರ್ ಕಾವಸ್ಜೀ ಜಹಾಂಗೀರ ಹಾಲಿನಲ್ಲಿ, ಸ್ಮೋಲ್ ಕೋಸ್ ಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ಶ್ರೀಯುತ ಎಮ್. ಎಸ್. ನೊರೋನ್ಹಾ ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಮೊಗವೀರ ಶಾಲಾ ವಿದ್ಯಾರ್ಥಿಗಳಿಂದ ''ನಾಟಕ ಪ್ರದರ್ಶನ''—ಮುಂಬಾಯಿಯಲ್ಲಿ ಬಡ ಕನ್ನಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಮೊಗವೀರ ವ್ಯವಸ್ಥಾಪಕ ಮಂಡಲಿಯವರು ತಮ್ಮ ತನು, ಮನ, ಧನಗಳನ್ನು ಸವೆಯಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ. ಅಂತೆಯೇ ಅವರ ಶಾಲೆಯಲ್ಲಿ ಅಭ್ಯಾಸಗೈಯುತ್ತಿರುವ ವಿದ್ಯಾರ್ಥಿಗಳು 'ಗುರುವಿನಂತೆ ಶಿಷ್ಯ'ನೆಂಬಂತೆ ತಮ್ಮ ವಿರಾಮದಿನಗಳನ್ನು ಹಾಳುಮಾಡದೆ ನಾಟಕವೊಂದನ್ನು ಅಭ್ಯಸಿಸಿ ಅದೇ ಶಾಲೆಯ ಸಹಾಯಾರ್ಥ ಭಾಂಗವಾಡಿ ಥಿಯೇಟರಿನಲ್ಲಿ ತಾ. ೬.೬.೪೫ರಂದು ಅಭಿನಯಿಸಿದರು. ನಾಟಕದ ಕಥೆಯು ಸ್ವಾಮಿನಿಷ್ಠೆ, ನೇವಿಕೆ ಎನ್ನುವುದು. ಅದನ್ನವರು "ಮೇವಾಡ ಕೇಸರಿ" ಎಂದು ಮಾರ್ಪಡಿಸಿರುವರು. ಈ ಕಥೆಯು ಸರ್ವ ರಂಗಭೂಮಿಯಲ್ಲಿ ಮೆರೆದು ಈಗ ಚಿತ್ರಭೂಮಿಗೆ ಇಳಿದು ಮುಂಬಾಯಿಯಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಇಂತಹ ಸರ್ವಶ್ರೇಷ್ಠ ನಾಟಕವನ್ನು ಅನುಭವವಿಲ್ಲದ ಶಾಲೆಯ ಹುಡುಗರು ಅದರೊಳಗೂ ಪರಕೀಯರ ರಂಗಭೂಮಿಯ ಮೇಲೆ ಕೇವಲ ಎರಡು ತಿಂಗಳ ಅಲ್ಪಾವಕಾಶದಲ್ಲಿ ಅಭ್ಯಸಿಸಿ ಇಷ್ಟೊಂದು ಶ್ಲಾಘ್ಯ ರೀತಿಯಲ್ಲಿ ಅಭಿನಯಿಸಿದುದಕ್ಕಾಗಿ ಮೊಗವೀರ ಶಾಲೆಯ ವಿದ್ಯಾರ್ಥಿಗಳು ಅಭಿನಂದನೀಯರೇ ಸರಿ. ಇವರೆಲ್ಲರಲ್ಲಿಯೂ ನಟರಿಗೆ ಬೇಕಾಗಿರುವ ನೈಸರ್ಗಿಕ ಸಂಪತ್ತು ಅಂದರೆ ಸುಂದರವಾದ ರೂಪ, ಸುದೃಢವಾದ ಶರೀರ, ಸುಮಧುರವಾದ ಧ್ವನಿ ಅಲ್ಲದೆ ಸ್ವಭಾವಜನ್ಯವಾದ ನಟನಾ ಕೌಶಲ ಅಡಕವಾಗಿದೆ. ಇವರಿಗೆ ಸರಿಯಾದ ಬೆಂಬಲ, ಶಿಕ್ಷಣ ದೊರೆತರೆ ಭವಿಷ್ಯದಲ್ಲಿ ಇವರು ಉತ್ತಮ ನಟರಾಗುವುದರಲ್ಲಿ ಅನುಮಾನವಿಲ್ಲ.

'ಕಲಾಭಿಮಾನಿ'

ವರದಿ ಸ್ವೀಕಾರ.

ಬಿಲ್ಲವರ ಎಸೋಸಿಯೇಶನ್, ಬೊಂಬಾಯಿ—1944ರ 13ನೇ ವಾರ್ಷಿಕ ವರದಿ ನಮ್ಮ ಕೈ ಸೇರಿದೆ. ವಿದ್ಯಾರ್ಥಿವೇತನಗಳನ್ನಿತ್ತು, ಸರ್ವಸಾಧಾರಣ ಸಹಾಯಗಳನ್ನು ಸಲ್ಲಿಸಿ ಈ ಸಂಘವು ಕಳೆದ 13 ವರುಷಗಳಲ್ಲಿ ಮಾಡಿರುವ ಸಮಾಜ ಸೇವೆಯು ಸ್ತುತ್ಯವಿದೆ. ಪುಸ್ತಕ ಭಂಡಾರ ಮತ್ತು ವಾಚನಾಲಯ, ಭಜನಾ ಸಮಿತಿ, ಸ್ವಯಂ ಸೇವಕ ದಳ ಇತ್ಯಾದಿಗಳ ಮೂಲಕವೂ ಸಭೆ, ಸತ್ಕಾರಕೂಟಗಳನ್ನೇರ್ಪಡಿಸಿಯೂ ಸಂಘವು ತನ್ನ ಚಟುವಟಿಕೆಗಳನ್ನು ಕಾಲಾನುಗುಣವಾಗಿ ವರ್ಧಿಸುತ್ತಾ ಬಂದಿದೆ. ಒಂದು ಧರ್ಮಾರ್ಥ ದವಾಖಾನೆ ಮತ್ತೊಂದು ಧರ್ಮಾರ್ಥ ರಾತ್ರಿ ಶಾಲೆ ತೆರೆಯುವ ಸ್ತುತ್ಯ ಕಾರ್ಯಗಳಿಗಾಗಿ ಸಂಘಕ್ಕೀಗ ಧನಸಹಾಯದ ಆವಶ್ಯಕತೆಯಿದೆ. ಅದು ಯಾಚಿಸುತ್ತಿರುವ ಸಹಾಯ ದೊರೆತು ಸಂಘವು ಇನ್ನಷ್ಟು ಅಭಿವೃದ್ಧಿಗೊಳ್ಳಲೆಂದು ಹಾರೈಸುತ್ತೇವೆ.

ಗಾಣಿಗ ಯಾನೆ ಸಫಲಿಗ ಸಂಘ, ಮುಂಬಯಿ—೧೯೪೦ರಲ್ಲಿ ಸ್ಥಾಪನೆಗೊಂಡಿದ್ದ ಈ ಸಂಘದ ಚತುರ್ಥ (1944) ವರದಿಯಲ್ಲಿ ಅದರ ಚಟುವಟಿಕೆಗಳ ಪರಿಚಯ ಬಂದಿದೆ. ಸಂಘದ ಅಂಗವಾಗಿ ಸ್ವಯಂಸೇವಾದಳವನ್ನು ನಿರ್ಮಿಸಿಕೊಂಡು ಬೊಂಬಾಯಿಯಲ್ಲಿ ತೊಂದರೆಗೀಡಾಗುವ ಸ್ವಜಾತಿಯರಿಗೆಲ್ಲಾ ಅಗತ್ಯವುಳ್ಳ ಸಹಾಯ, ಉಪಕಾರಗಳನ್ನು ಸಲ್ಲಿಸುತ್ತಿದೆ. ಅಭಿವೃದ್ಧಿಯ ಚಿಹ್ನೆ ತೋರಿಸುತ್ತಿರುವ ಈ ಎಳೆಯ ಸಂಸ್ಥೆಯು ಬಹುಮುಖೀ ಸಮಾಜಸೇವೆಯೊಂದಿಗೆ ಮುಂದೆ ಸಾಗಲೆಂದು ಹಾರೈಸುತ್ತೇವೆ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ—1927ರಲ್ಲಿ ಸ್ಥಾಪನೆಯಾಗಿ 1934ರಲ್ಲಿ ರಿಜಿಸ್ಟ್ರಿಯಾಗಿದೆ. 1945ನೇ ಜುಲಾಯಿ 8ರ ವಾರ್ಷಿಕೋತ್ಸವಕ್ಕೆ ಸಂಬಂಧಿಸಿದ ವರದಿಯಲ್ಲಿ ಸಂಘದ ಸರ್ವತೋಮುಖ ಪ್ರಗತಿ ಕಾಣುತ್ತಿದೆ. 2000ದ ವರೆಗೆ ಸದಸ್ಯರಿದ್ದು ಧರ್ಮಾರ್ಥ ವಾಚನಾಲಯ ಮತ್ತೊಂದು ಪುಸ್ತಕ ಭಂಡಾರವನ್ನದು ನಡೆಸುತ್ತಿದೆ. 'ಕರ್ನಾಟಕ ಧರ್ಮಾರ್ಥ ರಾತ್ರಿ ಶಾಲೆ'ಯೊಂದನ್ನು ಆದರ್ಶ ರೀತಿಯಿಂದ ನಡೆಸುತ್ತಿದೆ. ಸಂಘದ ಅಭಿವೃದ್ಧಿಯನ್ನು ಕೋರುತ್ತೇವೆ.

ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘ, ಮುಂಬಯಿ—ನಮ್ಮ ಕೈ ಸೇರಿರುವ ವರದಿ ಸಂಘದ ಚತುರ್ಥ ವರುಷದ್ದು 1944ರದ್ದು. ಸ್ವಜಾತಿ ಬಾಂಧವರಿಗೆ ಆರ್ಥಿಕ, ಸಾಮಾಜಿಕ, ವಿದ್ಯಾ ಸಹಾಯಗಳನ್ನು ಸಲ್ಲಿಸುವ ಗುರಿಯಿಟ್ಟುಕೊಂಡು ಸ್ವಯಂಸೇವಾದಳವೊಂದನ್ನು ರಚಿಸಿ ಮೊದಲಿನಿಂದ ಕಾರ್ಯ ಸಾಗಿಸುತ್ತಿರುವ ಸಂಸ್ಥೆ. ಸತ್ಕಾರಕೂಟ, ಸಭೆ, ಭಾಷಣಗಳ ಮೂಲಕ ಸ್ತುತ್ಯ ಸಾರ್ವಜನಿಕ ಸೇವೆ ಸಲ್ಲಿಸುತ್ತಿದೆ. ಸಂಘವು ದಿನದಿಂದ ದಿನಕ್ಕೆ ಅಭಿವೃದ್ಧಿಗೊಳ್ಳುತ್ತಾ ಬಂದಿದೆ. ಇನ್ನಷ್ಟು ವೃದ್ಧಿಹೊಂದಲೆಂದು ನಮ್ಮ ಶುಭಕೋರಿಕೆ.

ಬೊಂಬಾಯಿಯಲ್ಲಿರುವ ದಕ್ಷಿಣ ಕನ್ನಡಿಗರ ಸಮಾಜವಾರು ಸಂಘ ಸಂಸ್ಥೆಗಳೇರ್ಪಟ್ಟು, ಸಹಾಯಯೀ ಮೇಲಾಟದಿಂದ ಅಭಿವೃದ್ಧಿಗೊಳ್ಳುತ್ತಿರುವದನ್ನು ಕಂಡು ಆನಂದಿಸುತ್ತೇವೆ. ವಿಧಾಯಕ ಕಾರ್ಯಕ್ರಮಗಳಿಂದ ಬಲಗೊಳ್ಳುತ್ತಿರುವ ಈ ಜಾತೀವಾರು ಸಂಸ್ಥೆಗಳಿಂದ ಶೀಘ್ರವಾಗಿ ಇಲಾಖೆಗಳ ಮಾದರಿಯಲ್ಲಿ ಅಖಿಲ ಜನಾಂಗದ ಹಿತವೇ ಸಾಧಿಸಲ್ಪಟ್ಟು, ಪರಸ್ಪರ ಸಂಬಂಧ ಬಿಗ್ಗಿಟ್ಟು ಕೂಡಿ ಬಂದು ಒಟ್ಟಿನಲ್ಲಿ ಅಖಿಲ ಕನ್ನಡಿಗರ ಹಿತಸಾಧನೆಗಾಗಿ, ರಾಷ್ಟ್ರವ್ಯಾಪೀ ಸೇವೆಯಲ್ಲಿ ಮಿಲನಗೊಳ್ಳಲೆಂದು ಹಾರೈಸುತ್ತೇವೆ.

ಬೇಕಾಗಿದ್ದಾರೆ!

ಕನ್ನಡ ವಾಕ್ಚಿತ್ರದಲ್ಲಿ ಅಭಿನಯಿಸಲು ಇಚ್ಛೆಯುಳ್ಳ ವಿದ್ಯಾವಂತರಾದ ನಟ ನಟಿಯರು, ತಮ್ಮ ಭಾವಚಿತ್ರಗಳೊಡನೆ ಎತ್ತರ, ವಯಸ್ಸು, ಸಂಗೀತ ಪರಿಶ್ರಮ, ವಿದ್ಯಾಭ್ಯಾಸಂಗ ಎಲ್ಲಿಯ ವರೆಗೆ, ಮುಂತಾದ ವಿವರಗಳೊಡನೆ ಜುಲೈ ತಿಂಗಳು 10ನೇ ತಾರೀಖಿನೊಳಗೆ ತಲಪುವಂತೆ ಬರೆದುಕೊಳ್ಳ ತಕ್ಕದ್ದು. ವಿಳಾಸ ಇಂಗ್ಲೀಷಿನಲ್ಲೇ ಬರೆಯಿರಿ.

ಎಂ. ಸಿ. ಚೆನ್ನವೀರಯ್ಯ,
ಮ್ಯಾನೇಜಿಂಗ್ ಪಾರ್ಟನರ್,
ಶ್ರೀ ವಿಜಯಾ ಫಿಲಿಂಸ್,
ನಂ. 1. ಕೃಷ್ಣರಾವ್ ರೋಡ್,
ತ್ಯಾಗರಾಯ ನಗರ್, ಮದ್ರಾಸು.

ದಕ್ಷಿಣ ಕನ್ನಡ.

ಮಂಗಳೂರು.

ಆಹಾರ ಸಮಿತಿ-ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮಿತಿಯ ಆಶ್ರಯದಲ್ಲಿ ಸ್ಥಾಪಿತವಾಗಿರುತ್ತಿರುವ ವಿಸ್ತೃತವಾದ ಆಹಾರ ಸಮಿತಿಯು ತಾ. ೩೪ರಂದು ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಪ್ರಕೃತದ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿವರಿಸಿ, ಈ ಕುರಿತು ಕೇಂದ್ರ ಸರಕಾರದಿಂದ ತಮಗೆ ಬಂದಿದ್ದ ಆಶ್ವಾಸನಾ ಪತ್ರದ ವಿಚಾರವನ್ನು ತಿಳಿಸಿದರು. ಭತ್ತ ಮತ್ತು ಅಕ್ಕಿಗಳ ಸಂಗ್ರಹಣ ಹಾಗೂ ವಿತರಣ ಕಾರ್ಯಕ್ರಮಗಳು ದೋಷರಹಿತವಾಗಿ ಆಗುವಂತೆ ಮಾಡುವುದಕ್ಕಾಗಿ ತಾಲೂಕು ಸಮಿತಿಗಳನ್ನು ರಚಿಸುವ ತೀರ್ಮಾನವಾಯಿತು. ಗೋಧಿಯ ಕ್ರಯವನ್ನು ಇಳಿಸಬೇಕು ಅಥವಾ ಹಸುಗೆಯ ಪೂರ್ಣ ಪಡಿಯನ್ನು ಅಕ್ಕಿಯ ರೂಪದಲ್ಲಿ ಕೊಡಿಸಬೇಕು, ಎಂದು ಮದ್ರಾಸ್ ಸರಕಾರದೊಡನೆ ವಿನಂತಿಸಿಕೊಳ್ಳುವ ನಿರ್ಣಯವನ್ನು ಕೈಕೊಂಡು ಇದರ ಮುಂದಿನ ಕಾರ್ಯಕ್ಕಾಗಿ ಪ್ರಾಂತೀಯ ಆಹಾರ ಸಮಿತಿಯ ಸದಸ್ಯರಾದ ಶ್ರೀ ಎ. ಬಿ. ಶೆಟ್ಟರಿಗೊಪ್ಪಿಸಲಾಯಿತು. ಸಂಗ್ರಹಣ ವಿಧಾನದಲ್ಲಿ ತಿದ್ದುಪಡಿಗಳಾಗಬೇಕು, ಪೋಲೀಸರದಾಳಿ ಇತ್ಯಾದಿಗಳ ಬಗೆಗೂ ನಿರ್ಣಯಗಳಾದುವು

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ-ಸಮಿತಿಯ ಎಲ್ಲಾ ಸದಸ್ಯರ ಸಾಧಾರಣ ಸಭೆಯು ತಾರೀಕು ೮ ೭ ೪೫ಕ್ಕೆ ಕಟಪ್ಪಾಡಿಯಲ್ಲಿ ಜರಗಿಸಬೇಕೆಂದು ನಿರ್ಣಯಿಸಿದ್ದರೂ ಕಾರಣಾಂತರದಿಂದ ಮುಂದರಿಸ ಬೇಕಾದುದರಿಂದ ಸಭೆಯು ತಾ ೨೯ ೭ ೪೫ಕ್ಕೆ ಅಪರಾಹ್ನ ೨ ಘಂಟೆಗೆ ಮಂಗಳೂರು ಕೊಡಿಯಾಲ್ಬೈಲಲ್ಲಿರುವ ಥಿಯೋಸೋಫಿಕಲ್ ಕಟ್ಟೋಣದಲ್ಲಿ ಜರಗುವದು ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ ಅದೇ ದಿನ ೫ ಘಂಟೆಗೆ ಅಲ್ಲಿಯೇ ಕಳೆದ ತಾರೀಕು ೩೪ರಲ್ಲಿ ಮುಂದರಿಸಿದ ಆಹಾರ ಕಮಿಟಿಯ ಸಭೆಯೂ ಜರಗಲಿರುವುದು ಎಂದು ಕನ್ವೀನರ್ ಶ್ರೀ ಕೋಟ ರಾಮಕೃಷ್ಣ ಕಾರಂತರು ತಿಳಿಸುತ್ತಾರೆ

ಅ. ಭಾ. ಚರಖಾ ಸಂಘದ-ನವ ಯೋಜನೆಯ ನಿಯಮಾನುಸಾರವಾಗಿ ಖಾದಿ ಕೊಂಡುಕೊಳ್ಳುವ ಎಲ್ಲಾ ಗ್ರಾಹಕರು ಇದೇ ಜುಲಾಯಿ ಒಂದರಿಂದ ಖಾದಿ ಬೆಲೆ ರೂಪಾಯಿ ಒಂದಕ್ಕೆ ಆರ್ಧಾಣೆಯ ಕೈನೂಲನ್ನಾದರೂ ಕೊಡತಕ್ಕದ್ದು. ಹೀಗೆ ನೂಲು ತಾರದೆ ವಿನಾ ಖಾದಿ ಸಿಗಲಾರದು. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ಮಂಗಳೂರು ರಥಬೀದಿಯಲ್ಲಿರುವ ಚರಖಾ ಸಂಘದ ಅಧಿಕೃತ ಖಾದಿ ಅಂಗಡಿಯಾದ ಸ್ವದೇಶೀ ಸ್ಟೋರ್ಸ್ ವ್ಯವಸ್ಥಾಪಕರಿಂದ ತಿಳಿದುಕೊಳ್ಳಬಹುದು

ಸ್ವಾತಂತ್ರ್ಯ ದಿನದಂದು-ಬಂಧಿತರಾಗಿದ್ದ ಸ್ಥಳೀಯ ಬೀಡಿ ಲೆಬರ್ ಯೂನಿಯನಿನ ಕಾರ್ಯದರ್ಶಿ ಶ್ರೀ ಲಿಂಗಪ್ಪ ಸುವರ್ಣ ಮತ್ತು ಅಧ್ಯಕ್ಷ ಮಂಜು ಅವರು ೬ ತಿಂಗಳ ಶಿಕ್ಷೆಯನ್ನನುಭವಿಸಿ ಇದೀಗ ಹೊರಬಂದಿದ್ದಾರೆ.

ಕಜೆ ಅಕ್ಕಿಯಲ್ಲಿಯೇ-ಸಾರವು ಹೆಚ್ಚಿರುವುದರಿಂದ ಅದರ ಉಪಯೋಗವನ್ನೆ ಸರಕಾರವು ಪ್ರೋತ್ಸಾಹಿಸುವುದಾದರೂ, ಹಲವರ ಅಪೇಕ್ಷೆ ಮೇರೆಗೆ ಹಸುಗೆಯಿಂದ ಪಡೆದ ಅಕ್ಕಿಯನ್ನು ಮಿಲ್ಲಿಗೆ ಕೊಟ್ಟು ಶುಭ್ರಗೊಳಿಸಲು ಮದ್ರಾಸ್ ಸರಕಾರವು ಅನುಮತಿ ಇತ್ತಿದೆ. ಆದರೆ, ಅತಿಯಾಗಿ ಶುಭ್ರಗೊಳಿಸುವುದನ್ನು ಬಿಡಲಾರದು, ಹಳ್ಳಿ ಪ್ರದೇಶದ ಜನಸಾಮಾನ್ಯರೂ ಪರ್ಮಿಟು ಮೂಲಕ ತಮ್ಮ ಭತ್ತವನ್ನು ಮಿಲ್ಲಿಗೆ ಕಳಿಸಿ ಅಕ್ಕಿ ಮಾಡಿಸಿಕೊಳ್ಳಬಹುದು ಎಂದು ಹಸುಗೆ ಆಫೀಸರರು ಪ್ರಕಟಿಸುತ್ತಾರೆ.

ಜಿಲ್ಲಾ ಟ್ರೇಡ್ ಯೂನಿಯನ್-ಸಭೆಯು ತಾ. ೨೫ರಂದು ಶ್ರೀ ಕೆ. ಕೆ. ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ, ಬಂಟ್ವಾಳ, ಕಾಸರಗೋಡು ಮೊದಲಾದೆಡೆಗಳಿಂದಲೂ ಪ್ರತಿನಿಧಿಗಳು ಬಂದಿದ್ದರು. ಕಾರ್ಯಕರ್ತರ ಬಿಡುಗಡೆಗಾಗಿ ಸಭೆಯು ಸಂತೋಷವನ್ನು ವ್ಯಕ್ತಪಡಿಸುತ್ತ ವೇವೆಲ್ಲರ ಯೋಜನೆಯು ಸ್ವೀಕರಿಸಲ್ಪಡಲಿ ಎಂದು ಆಶಿಸುವ ಠರಾವನ್ನು ಕೈಕೊಳ್ಳಲಾಯಿತು

ಮಂಗಳೂರು ಕಾಲೇಜುಗಳಲ್ಲಿ-ಸೀಟು ಸಿಕ್ಕದೆ, ಈ ವರ್ಷ ವಿದ್ಯಾರ್ಥಿಗಳು ಗೋಳಿಡುವಂತಾಗಿದೆ. ಈ ಬಗ್ಗೆ ಶ್ರೀಗಳಾದ ಜಿನರಾಜ ಹೆಗ್ಡೆ, ಕೆ. ಆರ್ ಕಾರಂತ, ಎ ಬಿ. ಶೆಟ್ಟಿ, ಬಿ. ವೆಂಕಟ್ರಾಯ ಬಾಳಿಗ, ಬಿ ವೈಕುಂಠ ಬಾಳಿಗ, ಡಾ ಬೋ ಅಧ್ಯಕ್ಷರಾದ ಅರೂರ್ ಲಕ್ಷ್ಮೀನಾರಾಯಣ ರಾವ್, ಸೆನೆಟ್ ಮೆಂಬರರೂ, ಮಾಜಿ ಡಿ ಒ ಅವರೂ ಆದ ಯು. ಕಣ್ಣಪ್ಪ, ಕೆನರ, ಗಣಪತಿ ಮತ್ತು ಮಿಶನ್ ಹೈಸ್ಕೂಲುಗಳ ಅಧಿಕಾರಿಗಳೂ ಒಟ್ಟು ಸೇರಿ ಚಾನ್ಸಲರ್, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್ ಮತ್ತು ಗವರ್ನರರ ಬೋಧಕರಿಗೆ ತಂತಿಗಳನ್ನು ಕಳುಹಿಸುತ್ತ ೩೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಮಂಗಳೂರಿನ ಕಾಲೇಜುಗಳಲ್ಲಿ ಸೀಟು ನಿರಾಕರಿಸಲ್ಪಟ್ಟಿದೆ. ಸೇ ೫೦ ಮಾರ್ಕು ಪಡೆದ ವಿದ್ಯಾರ್ಥಿಯು ನಿರಾಶನಾಗಬೇಕಾಗಿದೆ. ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಅನುಕೂಲತೆ ಇಲ್ಲದುದರಿಂದ ಈ ವಿದ್ಯಾರ್ಥಿಗಳು ತುಂಬ ತೊಂದರೆಗೀಡಾಗಿದ್ದಾರೆ ಎರಡೂ ಕಾಲೇಜುಗಳಲ್ಲಿ ೬೦ ೬೦ರಷ್ಟಾದರೂ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ವ್ಯವಸ್ಥೆಯಾಗಬೇಕು ನಿಮ್ಮ ನಿರ್ಧಾರವನ್ನು ಸಂಬಂಧಪಟ್ಟ ಕಾಲೇಜು ಪ್ರಿನ್ಸಿಪಾಲರುಗಳಿಗೆ ತಂತಿ ಮೂಲಕ ತಿಳಿಸಿರಿ ಎಂದಿರುವರು

ವಾರ್ಷಿಕೋತ್ಸವ-ಶ್ರೀ ಶಾರದಾ ಸಂಗೀತ ಸಭಾ ಇವರ ದ್ವಿತೀಯ ವರ್ಷೋತ್ಸವವು ಕಳೆದ ತಾ ೨೯ನೇ ರವಿವಾರ ಸಂಜೆ ಶ್ರೀ ಕೆ. ಬಾಲಕೃಷ್ಣರಾವ್ ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ನಿಧನ-ಮಂಗಳೂರಿನ ಸುಪ್ರಸಿದ್ಧ ಬಂಗಾರದ ವ್ಯಾಪಾರಿಗಳೂ ವಿಶ್ವಕರ್ಮ ಬ್ರಾಹ್ಮಣ ಸಮಾಜದ ಪ್ರಮುಖರಲ್ಲೊಬ್ಬರೂ ಆಗಿದ್ದ ಶ್ರೀ ಅಡ್ಯಾರು ನಾರಾಯಣಾಚಾರ್ಯರವರು ಕಳೆದ ತಾ. ೨೮ನೇ ಗುರುವಾರ ಬೆಳಿಗ್ಗೆ ಹೃದಯಸ್ತಂಭನವಾಗಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅಂದು ಮೃತರ ಸ್ಮರಣಾರ್ಥ ಮಂಗಳೂರಿನ ಸರಾಫರೆಲ್ಲ ಜಾತಿಮತ ಭೇದವಿಲ್ಲದೆ ತಮ್ಮ ಅಂಗಡಿಗಳನ್ನು ಮುಚ್ಚಿ ದುಃಖಪ್ರದರ್ಶನ ಮಾಡಿದರು. ವಿಶ್ವಕರ್ಮ ಬ್ರಾಹ್ಮಣ ಸಮಾಜದವರೆಲ್ಲ ಸೇರಿ, ಮೃತರಿಗೆ ಕೊನೆಯ ಗೌರವ ಸಲಿಸಿದರು

ಮೋಟಾರ್ ಕೆಲಸಗಾರರ ಸಭೆ-ದಕ್ಷಿಣ ಕನ್ನಡ ಜಿಲ್ಲಾ ಮೋಟಾರ್ ಕೆಲಸಗಾರರ ಸಭೆಯು ಮೊನ್ನೆ (ತಾ ೧ ೭ ೪೫) ಶ್ರೀ ನಾರಾಯಣ ಗುರು ಬೇಂಕ್, ಲಿಮಿಟೆಡ್ ಇದರ ಆಫೀಸಿನಲ್ಲಿ ಜರಗಿತು.

ಜುಲ್ಮಾನೆ-ಬೆಲ್ಲವನ್ನು ನಿಯಮಿತ ಧಾರಣೆಗಿಂತ ಹೆಚ್ಚಿಗೆ ಪರಕ್ಕೆ (ರೂ. ೬ಕ್ಕೆ) ಮಾರಲೊಪ್ಪಿದುದಕ್ಕೂ, ರೂ ೫॥ಯಂತೆ ಮಾರಿದುದಕ್ಕೂ, ಸುಳ್ಳು ದಾಖಲೆಯನ್ನಿಟ್ಟುದ್ದಕ್ಕೂ ಬಂದರದ ಶ್ರೀ ಕೆ ಮಾಧವ ನಾಯ್ಕರವರಿಗೆ ೨ ಡಿ ಮೆಜಿಸ್ಟ್ರೇಟರವರು ಒಟ್ಟಿಗೆ ರೂ ೨೦೦೦ ಜುಲ್ಮಾನೆ ವಿಧಿಸಿರುವರು. ಕಾರ್ಕಳ ತಾಲೂಕು ಮಿಯಾರು ಗ್ರಾಮದ ಮಿ ಕೆಸ್ತಲಿನೋ ಎಂಬವರು ರಿಕ್ವಿಶಿಶನ್ ಅಕ್ಕಿ ಒಪ್ಪಿಸಲಿಲ್ಲವೆಂದು ಎ. I ಕ್ಲಾಸ್ ಮೆಜಿಸ್ಟ್ರೇಟರು ಅವರಿಗೆ (ಕಾರ್ಕಳ ಕೇಂಪಿನಲ್ಲಿ) ರೂ ೫೦ ಜುಲ್ಮಾನೆ ವಿಧಿಸಿರುವರು.

ಮಳೆ-ಒಂದೂವರೆ ತಿಂಗಳಲ್ಲಿ ಈ ವರ್ಷ ಬಿದ್ದ ಮಳೆಯಲ್ಲಿ ಮಂಗಳೂರಿನದೇ ಹೆಚ್ಚು ತಾ ೧೫ರ ವರೆಗೆ ಸುಮಾರು ೫೩ ಇಂಚು. (ಕೊಚ್ಚಿಯಲ್ಲಿ ೪೦ ಇಂಚು, ಮುಂಬಾಯಿಯಲ್ಲಿ ೨೫ ಇಂಚು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ೪೯ ಇಂಚು ಹೀಗೆ ಮಳೆಯಾಗಿದೆ.)

ಪುತ್ತೂರು-ಆಹಾರ ಸಮಿತಿಯ ಸಭೆಯು ಕಳೆದ ತಾ ೨೩ರಲ್ಲಿ ಸ್ಥಳೀಯ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಅಪ್ಪುಸ್ವಾಮಿ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ ಇಲ್ಲಿಗೆ ಹೆಚ್ಚು ಗೋಧಿ ಮತ್ತು ರಾಗಿಯನ್ನು ಕಳುಹಿಸುವಂತೆ ಮಾನ್ಯ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಕಳೆದ ೨೪ರಂದು ಮಧ್ಯಾಹ್ನ ಇಲ್ಲಿ ಬೊಳುವಾರಿನ ತಮ್ಮ ಮನೆಯಲ್ಲಿ ನಿವೃತ್ತ ಸಬ್ ಅಸಿಸ್ಟೆಂಟ್ ಸರ್ಜನರಾಗಿದ್ದ ಡಾ. ಕೆ. ವೆಂಕಟ್ರಾಯರು ಸುಮಾರು ೭೦ ವಯಸ್ಸಿನಲ್ಲಿ ವಿಶೇಷ ತರದ ಕಾಹಿಲೆ ಇಲ್ಲದಿದ್ದು ದೈವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ

ನವೋಲ್ಲಾಸಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ
ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳವ
ಬೇರೆ ಬೇರೆ ಮುಖಪತ್ರ.
ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ-ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.
ಈಗಿನ ಅಭಿರುಚಿಗೊಪ್ಪುವ
ಸಲ್ಲಕ್ಷಣಗಳಿಂದೊಡಗೂಡಿದೆ
ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ಸೈ ಸೈ ಎನಿಸುವ
ವಾರದ ಭವಿಷ್ಯವೂ
ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.
ಬಿಡಿ ಸಂಚಿಕೆಗೆ ... ... 0-1-6.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲೆಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ.
ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—
ಮೆನೇಜರ್, ಅಂತರಂಗ, ಉಡುಪಿ.

ANTARANGA
Best medium for advertisement.

It is easy to earn
But difficult to save

We can help you to create a substantial funds by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S India)
T. A. PAI, B Com. (Bom) A I I B.
General Manager.

ಬ್ರಿಟನಿನ ಮಹಾ ಚುನಾವಣೆ.

(೨ನೇ ಪುಟದಿಂದ ಮುಂದುವರಿದುದು.)

ಲಿಸದಂತೆ ಶರ್ಮರ್ ಅಡ್ಡಬಂದಿದ್ದಾರೆಂದು ದತ್ತರ ಆರೋಪ; 'ಅಮೇರಿಯ ಒಂದೇ ಒಂದು ವೋಟನ್ನು ಕಿತ್ತುಕೊಳ್ಳಲು ದತ್ತರಿಂದ ಸಾಧ್ಯವಿಲ್ಲ; ನಮಗೆ ದೊರೆಯಲಿರುವ ಮತಗಳಿಂದಲೇ ಪಾಲು ಪಡೆಯಲು ಅವರು ಮುಂದಾಗಿದ್ದಾರೆ; ಪರಿಣಾಮವಾಗಿ ದತ್ತರು ಡಿಪೋಸಿಟ್ ಹಣ ಕಳಕೊಳ್ಳುವದು ಖಂಡಿತ" ಎಂದು ಶರ್ಮರ್‌ರ ದೂರು. ಅಂತೂ 'ಇಬ್ಬರ ನ್ಯಾಯ ಮೂರನೆಯವನಿಗಾದಾಯ'.

ಅಮೆರಿ ಪ್ರಚಾರ

ತಾನು 'ಸದ್ಗೃಹಸ್ಥ'ನೆಂಬುದನ್ನು ಮತದಾರರಿಗೆ ಮುಂದಿಟ್ಟುಮಾಡಲು ಮಿ. ಅಮೆರಿಯವರು ವೇವೆಲ್ ಯೋಜನೆ ಮತ್ತು ಸಿಮ್ಲಾ ಸಮ್ಮೇಲನಗಳ ಪಠನೆ ಮಾಡುತಿದ್ದಾರೆ. 'ನನ್ನ ಸ್ಟೇಟ್ ಸೆಕ್ರೆಟರಿಯಂದರೆ ನಾನು ಕಂಡವರ ಪೈಕಿ ಅತಿ ಹೆಚ್ಚಿನ ವಿಶಾಲಬುದ್ಧಿ ಮತ್ತು ಧೈರ್ಯವಿರುವ ಮನುಷ್ಯ' ಎಂದು ಲೋರ್ಡ್ ವೇವೆಲರು ಲಂಡನಿನಿಂದ ಹೊರಡುವಾಗ ಕೊಟ್ಟಿದ್ದ ಶಿಫಾರಸನ್ನು ಎತ್ತಿ ಹೇಳುತಿದ್ದಾರೆ. "ಕಾಂಗ್ರೆಸ್ ಪ್ರಮುಖರ ದಸ್ತಗಿರಿ ಮಾಡಿಸಿದವನು ನಾನಲ್ಲ. ಇಬ್ಬರು ಮಾತ್ರ ಯುರೋಪಿಯನರಿದ್ದು ಮಿಕ್ಕ ಎಲ್ಲಾ ಸದಸ್ಯರೂ ಹಿಂದೀಯರೇ ಆಗಿದ್ದ ವೈಸರಾಯರ ಕಾರ್ಯಕಾರೀ ಸಮಿತಿ ಆ ನಿರ್ಧಾರವಮಾಡಿತು. ಕೆಲವರನ್ನು ಪ್ರಾಂತಿಕ ಸರಕಾರಗಳು ದಸ್ತಗಿರಿ ಮಾಡಿದ್ದವು. ಅಲ್ಲಿಗೆ ಒಂದೇ ಒಂದು ಆಜ್ಞೆ ಕಳುಹಿಸಿದವನು ನಾನಲ್ಲ. ಈ ರಾಜಕೀಯ ಕೈದಿಗಳಿಗೆ ಹಿಂದೂದೇಶದ ಬಂಧನಗಳಲ್ಲಿ ದೊರೆತಂತಹ ಸೌಕರ್ಯ ಪ್ರಪಂಚದ ಬೇರಾವ ಭಾಗದಲ್ಲೂ ಅಂಥವರಿಗೆ ದೊರೆಯುವಂತಿಲ್ಲ. ಇಂಗ್ಲೆಂಡಿನ ನಾಜೀ ಪಕ್ಷಪಾತಿ ಸರ್. ಓಸ್ವಾಲ್ಡ್ ಮೋಸ್ಲೆಯನ್ನು ಬಂಧಿಸಿದಂತೆಯೇ ಈ ಕಾಂಗ್ರೆಸ್ ಪ್ರಮುಖರನ್ನು ಬಂಧಿಸಬೇಕಾಯಿತು"-ಎಂದೆಲ್ಲಾ ಅಮೆರಿ ಮತದಾರರಿದಿರು ತನ್ನ ಸೌಜನ್ಯ ಪ್ರದರ್ಶಿಸಿದ್ದರು. ಆದರೆ ಬಾಬು ರಾಜೇಂದ್ರ ಪ್ರಸಾದರು ಈ ಕಪಟವಾಣಿಯ ಕಲ್ಮಷವನ್ನೆಲ್ಲಾ ತನ್ನೊಂದು ಖಂಡನೆಯ ಮೂಲಕ ತೊಳೆದಿದ್ದಾರೆ.

ಅಮೆರಿ ರಿಕಾರ್ಡು

ಇದಿರಾಳಿ ಉಮೇದ್ವಾರಿಗಳು ಅಮೆರಿಯವರ ಮೇಲೆ ಮಾಡುತ್ತಿರುವ ಆರೋಪಗಳೆಂದರೆ, ಹಿಂದೀಯರ ಸಹಕಾರ ಪಡೆಯ ಜಪಾನಿ ಯುದ್ಧವನ್ನು ಅನವಶ್ಯ ಮುಂದುವರಿಸಿದರೆಂಬುದೊಂದು; ಕಳೆದ ಮೂರು ವರುಷಗಳಲ್ಲಿ ಹಿಂದುದೇಶದಲ್ಲಿ ನಡೆಸಿದ ದಬ್ಬಾಳಿಕೆ ಮತ್ತು ಬಿಕ್ಕಟ್ಟು ಮತ್ತೊಂದು. ಎಲ್ಲಕ್ಕಿಂತ ಬಲವಾದ ಆರೋಪವೆಂದರೆ ಬಂಗಾಲದ ಬರಗಾಲಕ್ಕೆ ಹೊಣೆಗಾರರಾದ ಅವರ ತಲೆಯ ಮೇಲೆ ಮಿಲಿಯ ಮಂದಿಯ ಕೊಲೆಪಾತಕವಿದೆ ಎಂಬುದು. ಶ್ರೀ. ದತ್ತರು ಇವೆಲ್ಲವನ್ನೊಳಗೊಂಡ 'ಅಮೆರಿ ದಾಖಲೆ' ಎಂಬ ಕರಪತ್ರವೊಂದನ್ನು ಹೊರಡಿಸಿ ಮತದಾರರಿದಿರು ಅಮೆರಿಯವರನ್ನು 'ಅಸ್ಪೃಶ್ಯ'ನೆಂಬಂತೆ ಚಿತ್ರಿಸಿದ್ದಾರೆ.

ಶ್ರೀ ವಾಸ್ತವರ ಪತ್ರ

ಆದರೆ ಭಾರತ ಕಾರ್ಯದರ್ಶಿ ನಿಸ್ಸಹಾಯಕನಾಗಿಲ್ಲ 'ಒಂದು ಹೊಲಸ ದಾಖಲೆ' ಎಂದು ದತ್ತರ ಕರಪತ್ರವನ್ನು ಕರೆಯುತ್ತಾ ಮಿ. ಅಮೆರಿಯವರು ತನ್ನನ್ನೊಬ್ಬ ಹಿಂದೀಯನ ಅಭಿಪ್ರಾಯ ಮೂಲಕವೇ ಸಮರ್ಥಿಸಿಕೊಂಡಿದ್ದಾರೆ. ಅಮೇರಿಯ ಪಾಪವನ್ನು ತೊಳೆದ ಆ ಪುಣ್ಯಾತ್ಮ ಹಿಂದೀಯನೆಂದರೆ ವೈಸರಾಯರ ಈಗಿನ ಎಗ್ಸಿಕ್ಯೂಟಿವ್ ಸಮಿತಿಯಲ್ಲಿ ಆಹಾರ ಸದಸ್ಯರಾಗಿರುವ ಸರ್. ಜೆ. ಪಿ. ಶ್ರೀ. ವಾಸ್ತವರು. ಅವರು ವೈಸರಾಯರ ಖಾಸಗೀ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಹೀಗಂದಿದ್ದರು: "ಬಂಗಾಳದ ಬರಗಾಲಕ್ಕೆ ಮಿ. ಅಮೆರಿಯವರೇ ಹೊಣೆಗಾರರೆಂದೂ ಅನ್ನಾನ್ನಗತಿಕರಿಗೆ ಅವರು ಯಾವ ಸಹಾಯವನ್ನೂ ಸಲ್ಲಿಸಲಿಲ್ಲವೆಂದೂ ಶ್ರೀ. ಪಾರ್ಮೇ ದತ್ತರು ಪ್ರಚಾರಮಾಡುತಿದ್ದಾರೆಂದು ನಾನು ವರ್ತಮಾನ ಪತ್ರಿಕೆಗಳಲ್ಲಿ ಕಂಡಿದ್ದೇನೆ. ಇದು ಅತಿ ಕ್ರೂರ ಅಸತ್ಯ; ಭಾರತದ ಆಹಾರ ಸಚಿವನಾದ ನಾನಿದನ್ನು ಕಠೋರವಾಗಿ ಖಂಡಿಸುತ್ತೇನೆ. ನಾನು ಆಹಾರ ಖಾತೆಯ ಅಧಿಕಾರಿಯಾದಂದಿನಿಂದ ಮಿ. ಅಮೆರಿಗಳು ನನಗೆ ಸರ್ವ ಸಹಾಯವನ್ನಿತ್ತಿದ್ದಾರೆ. ಆಹಾರಾಮದಿನ ವ್ಯವಸ್ಥೆಯನ್ನು ಮಿ. ಅಮೆರಿಗಳು ಮಾಡದಿರುತಿದ್ದರೆ ಬರಗಾಲವು ಮತ್ತಷ್ಟು ಭಯಂಕರವಾಗುತಿತ್ತು". ಇಲ್ಲಿದೆ ಲೋಕವನ್ನೇ ರಸಾತಳಕ್ಕೊತ್ತಬಲ್ಲ ಗುಲಾಮ ಮನೋವೃತ್ತಿ! ಮತದಾರರಿಗೆ ಆ ಇಂಗ್ಲೆಂಡು ವಾಸಿ ಹಿಂದೀಯನ ಮಾತಿಗಿಂತಲೂ ಈ ಆಹಾರಾಧಿಕಾರಿ ಶ್ರೀವಾಸ್ತವರ ಮಾತೇ ವಾಸ್ತವವಾಗಿ ತೋರುವದು ಸಹಜವಲ್ಲವೇ? ಮೇಲಾಗಿ ಅಮೆರಿಗಳ ವರ್ಚಸ್ಸು ಸ್ಪಾರ್ಕ್‌ಬ್ರೂಕ್ ಕ್ಷೇತ್ರ ತುಂಬಾ ಇದೆ. ಅಲ್ಲಿಯ ಮಹಿಳೆಯರಿಗಂತೂ ಮಿಸೆಸ್ ಅಮೆರಿಯೆಂದರೆ ಪ್ರಾಣ. ಒಂದು ಸಭೆಯಲ್ಲಿ ಓರ್ವ ತರುಣನೆದ್ದು 'ಮಿ. ಅಮೆರಿ ಮುದುಕರಾಗಿದ್ದಾರಾದ್ದರಿಂದ ಅವರು ನಮಗೆ ಬೇಡ' ಎಂದು ಮುಗಿಸುತ್ತಾ ಇಬಿಟ್ಟ. 'ಛ! ನನ್ನ ಗಂಡ ಮುದುಕನೇ!' ಎಂದದನ್ನು ಕೂಡಲೇ ಪ್ರತಿಭಟಿಸಿ ಮಿಸೆಸ್ ಅಮೆರಿ ಇಡೀ ಸಭೆಯನ್ನು ನಗಿಯಲ್ಲದ್ದಿದ್ದರು. ಅಮೆರಿ ಮತ್ತೊಮ್ಮೆ ಪಾರ್ಲಿಮೆಂಟಿಗೆ ಬರುವದು ಖಂಡಿತ ಸ್ಥಿತಿಗತಿ ನೋಡುವಾಗ, ನಮ್ಮ ದತ್ತರು ಡಿಪೋಸಿಟ್ ಇಟ್ಟ ರೂ. 2000 ಮರಳಿ ದೊರೆತರೆ ಅವರು ಗೆದ್ದಂತೆಯೇ!

ಭಾರತ ಹಿತೈಷಿಗಳು

ಎಲ್ಲರೂ ಪ್ರಬಲ ವಿರೋಧಕ್ಕೀಡಾಗಿದ್ದಾರೆ. 'ಇಂಡಿಯಾ ಲೀಗ್'ಗೆ ಸೇರಿರುವ ಹಿಂದಿನ ಪಾರ್ಲಿಮೆಂಟ್ ಸದಸ್ಯರಿಗೆ-ಲೇಬರ್ ಪಕ್ಷೀಯರಿಗೆ-ಅದಮ್ಯ ಪ್ರತಿಭಟನೆಯೆದ್ದಿದೆ. ಮಿ. ರೆಜಿನಾಲ್ಡ್ ಸೋರೆನ್‌ಸನ್—ಹಿಂದೀ ಸಂಬಂಧದ ಪ್ರಶ್ನೆಗಳನ್ನು ಚಿಡಾಯಿಸಿ ಅಮೆರಿಯನ್ನು ಮೇಲೆಕೆಳಗೆ ಮಾಡುತಿದ್ದ ಸಮರ್ಥ— ಲೇಟನ್ ಮತದಾರ ಕ್ಷೇತ್ರದಲ್ಲಿ ಇಬ್ಬರನ್ನಿದಿರಿಸಬೇಕಾಗಿದೆ ಒಬ್ಬ ಕನ್ಸರ್ವೇಟಿವ್, ಆರ್. ಎ. ಎಫ್. ಆಫೀಸರ್. ಮತ್ತೊಬ್ಬ ಲಿಬರಲ್ ಡಾಕ್ಟರ್. ಮಿ. ಡಬ್ಲ್ಯೂ. ಡೋಬಿಯವರನ್ನು—ಇವರೂ ಭಾರತ ಸ್ವಾತಂತ್ರ್ಯ ಸಮರ್ಥಕರು-ಒಬ್ಬ ರಾಷ್ಟ್ರೀಯ ಲಿಬರಲ್ ಸ್ಪರ್ಧಿಸುತಿದ್ದಾನೆ. ಮತ್ತೊಬ್ಬ ಗಣ್ಯ ಭಾರತ ಹಿತೈಷಿ ಮಿ. ಕೋವೆಯವರಿಗೆ ಕೇಪ್ಟನ್ ಲ್ಲೆವೆಲ್ಲಿನ್ ಎಂಬ ಕನ್ಸರ್ವೇಟಿವ್ ಇದಿರಾಳಿ. ಮಿ. ಇಮ್ಮಾನುವೇಲ್ ಶಿನ್‌ವೆಲ್ಲರು ಮಾತುಮಲ್ಲರಲ್ಲವಾದರೂ ಕಾರ್ಯತಃ ಭಾರತ ರಾಜಕೀಯಾಭಿವೃದ್ಧಿಗಾಗಿ ಹಣಗಾಡುತಿದ್ದವರ; 1935ರ ಚುನಾವಣೆಯಲ್ಲಿ ಗಳಿಸಿದ ಪ್ರಧಾನಮಂತ್ರಿ ಮೆಕ್ಡೊನಾಲ್ಡರನ್ನು ಸೋಲಿಸಿದವರು. ಅವರನ್ನೀಗ ಬಾರಿ ಕನ್ಸರ್ವೇಟಿವ್ ಕೆಪ್ಟನ್ ಮೇಕ್‌ಮಿಲ್ಲನರಿದಿರಿಸಿ ನಿಂತಿದ್ದಾರೆ ಭಾರತೀಯ ಸಮಸ್ಯೆಗಳ ಕುರಿತು ಆತ್ಯಾತುರ ಪ್ರದರ್ಶಿಸುತಿದ್ದ ಮಿ. ರೈಸ್ ಡೇವಿಸರಿಗೆ ಕನ್ಸರ್ವೇಟಿವ್ ಕರ್ನಲ್ ಎಸ್. ಬೆಲ್ ಇದಿರಾಳಿ. ಪಾರ್ಲಿಮೆಂಟಿನ ಪ್ರಮುಖ ಸದಸ್ಯರಲ್ಲೊಬ್ಬರೂ, ಭಾರತ ರಾಷ್ಟ್ರೀಯ ಚಳವಳಿಯ ಸಮರ್ಥಕರೂ ಆದ ಮಿ. ಪೆಥಿಕ್ ಲೋರೆನ್ಸರಿಗಿದಿರಾಗಿ ಕನ್ಸರ್ವೇಟಿವ್ ಲೆಪ್ಟಿನೆಂಟ್ 'ಕರ್ನಲ್' ಸಿಂಕ್ಲೇರ್ ಮತ್ತು ಸ್ಕಾಟಿಷ್ ರಾಷ್ಟ್ರವಾದಿ ಮಿ. ಯಿೀ ನೇನ್ ಚುನಾವಣೆಗಿಳಿದಿದ್ದಾರೆ

ಲೇಬರ್ ಪ್ರಮುಖರ

ಪಾರ್ಲಿಮೆಂಟ್ ಪಥ ನಿರ್ನೇನೂ ಸುಗಮವಾಗಿಲ್ಲ ಪಕ್ಷ ನಾಯಕ ಅಟ್ಲೆಯವರು ಪೂರ್ವ ಲಂಡನ್ ಕ್ಷೇತ್ರದಲ್ಲಿ ಕನ್ಸರ್ವೇಟಿವ್ ಮಿ. ಫ್ರಿಡ್‌ಲಾಂಡರೊಡನೆ ಸ್ಪರ್ಧೆಗೀಡಾಗಿದ್ದಾರೆ. ಬ್ರಿಟನಿನ ಮಾನವಶಕ್ತಿಯ ಮಹಾಬಲೇಶ್ವರ ಮಿ. ಅರ್ನೆಸ್ಟ್ ಬೆವಿನರಿಗಿದಿರಾಗಿ ಕನ್ಸರ್ವೇಟಿವ್, ವಿಕ್ಟೋರಿಯಾ ಕ್ರಾಸ್ ವಿಜಯಿ, ಬ್ರಿಗೇಡಿಯರ್ ಜೆ. ಜಿ. ಸ್ಮಿತ್ತರಿದ್ದಿದ್ದಾರೆ. ಲೇಬರ್ ತ್ರಿಮೂರ್ತಿಗಳಲ್ಲೊಬ್ಬರಾದ ಹರ್ಬರ್ಟ್ ಮೋರಿಸನರು ತನ್ನ ಸುರಕ್ಷಿತ ಮತದಾರ ಕ್ಷೇತ್ರವನ್ನು ಬಿಟ್ಟು ಕನ್ಸರ್ವೇಟಿವರ ವರ್ಚಸ್ಸೇ ಅಧಿಕವಿರುವ ಲಂಡನ್ ಸರಹದ್ದಿನ ಪೂರ್ವ ಲ್ಯೂಶಾಮ್ ರಂಗಕ್ಕೆ ನೆಗೆದಿದ್ದಾರೆ. ಅಲ್ಲಿ ಇಬ್ಬರು ವಿರೋಧಿಗಳನ್ನಿದಿರಿಸಬೇಕಾಗಿದೆ-ಒಬ್ಬ ಕನ್ಸರ್ವೇಟಿವ್ ಸರ್. ಪೌನ್‌ವೆಲ್, ಮತ್ತೊಬ್ಬ ಸ್ವತಂತ್ರ ಉಮೇದ್ವಾರಿ ಕೆಪ್ಟನ್ ಫ್ರೆಡರಿಕ್ ರಸ್ಸೆಲ್. ಸರ್. ಸ್ಟಾಫೋರ್ಡ್ ಕ್ರಿಪ್ಸರು ಬ್ರಿಸ್ಟೋಲ್ ಕ್ಷೇತ್ರದ ಹುರಿಯಾಳ.— ಅವರ ಪ್ರತಿವಾದಿ ಕನ್ಸರ್ವೇಟಿವ್ ಕರ್ನಲ್ ಟಿ. ಡಿ. ಕೋರ್ವೆ.

ಮಂತ್ರಿಗಳಿಗೆ ವಿರೋಧ

ಚರ್ಚಿಲ್ ಸರಕಾರದ ಪ್ರತಿಯೊಬ್ಬ ಮಂತ್ರಿಗೂ ಪ್ರಬಲ ವಿರೋಧ ಬಿದ್ದಿದೆ; ಕೆಲ ಕಾಲದಿಂದ ಅನಾರೋಗ್ಯದಲ್ಲಿರುವ ವಿದೇಶ ಮಂತ್ರಿ ಮಿ. ಅಂತೋನಿ ಈಡೆನ್ನರಿಗೂ ಆ ಯೋಗ ತಪ್ಪಿಲ್ಲ. ಹಿಂದಿನ ಪಾರ್ಲಿಮೆಂಟಿನ ಅಧಿಕಾರಿಯಾಗಲೀ ಸದಸ್ಯನಾಗಲೀ ಜೀವರಿಳಿಸಿ ದುಡಿದು, ಎದೆಯೊಣಗುವಷ್ಟು ಕೂಗಿಯೇ ಮುಂದಿನ ಪಾರ್ಲಿಮೆಂಟ್ ದ್ವಾರ ಪ್ರವೇಶಿಸಲು ಸಾಧ್ಯ. ಈ ದುರ್ದೆಶೆ ನಾಯಕರಂತೆ ಅವರ ಸಂತಾನಗಳಿಗೂ ತಾಗಿದೆ ಚರ್ಚಿಲ್ ಪುತ್ರ ರೇಂಡೋಲ್ಫ್ ಚರ್ಚಿಲ್, ಅಮೆರಿ ಪುತ್ರ ಕೇಪ್ಟನ್ ಜೂಲಿಯನ್ ಅಮೆರಿ, ತಂತಮ್ಮ ಪ್ರತಿಸ್ಪರ್ಧಿಗಳನ್ನು ಗೆದ್ದು ಬರುವದು 'ಮತದಾರ ದೇವ'ನ ಕೈಯಲ್ಲಿದೆ. ಚುನಾವಣಾ ಪ್ರಚಾರ ಭರದಿಂದ ನಡೆಯುತ್ತಿದೆ. ಮಿ. ಚರ್ಚಿಲ್ಲರು ನಾಲ್ಕು ದಿನ 1000 ಮೈಲು ಸಂಚರಿಸಿ ಪ್ರಚಾರ ಭಾಷಣವಿತ್ತಿದ್ದಾರೆ. ಕೂಲಿಗಾರ ಪಕ್ಷದ 'ಸಮತಾ ವಾದಿ' ತತ್ವಗಳ ಮೇಲೆ ಚರ್ಚಿಲ್ಲರು ಕಾಲರುದ್ರನಂತೆ ಎರಡು ಬಾರಿ ನಿಟಿಲಾಕ್ಷಿ ತೆರೆದು ಉರಿಕಾರಿದ್ದಾರೆ. ಖಾಸಗೀ ಸಂಪತ್ತನ್ನು ವೃದ್ಧಿಸಿ ಜನ ಹಿತಘಾತವನ್ನು ಮಾಡುವರೆಂದು ಕನ್ಸರ್ವೇಟರ ಮೇಲೆ ಕೂಲಿಗಾರ ಪಕ್ಷದ ಪ್ರ[illegible] ಕಾರ್ಯಕಾರೀ ಮಂಡಲದ ಅಧ್ಯಕ್ಷ ಲಸ್ಕಿ ಮತ್ತು ಪಕ್ಷ ಪ್ರಮುಖ ಅಟ್ಲೆಯವರೊಳಗಿರುವ ಮತ ಭೇದವನ್ನು ಟೋರಿಗಳು ಭೂತಗನ್ನಡಿಯಲ್ಲಿಟ್ಟು ತೋರಿಸ ತಿದ್ದಾರೆ. ಕನ್ಸರ್ವೇಟಿವ್ ಪಕ್ಷಕ್ಕೆ ಸರ್ವ ಪ್ರಮುಖ ಶ್ರೀಮಂತ ವ್ಯಾಪಾರಿ ಬೀವರ್ ಬ್ರೂಕರೂ, ಲೇಬರ್ ಪಕ್ಷಕ್ಕೆ ಸಂಘಟನಾಬ್ರಹ್ಮ ಬೆವಿನರೂ ಬೆಂಗೋಲಾಗಿದ್ದರೆನ್ನ ಬಹುದು. ಈಗಾಗಲೇ ಪರಿಣಾಮವನ್ನೂಹಿಸುವದು ಕಷ್ಟ. ಎರಡು ಪಕ್ಷಗಳಿಗೂ ಸರಿ ಸರಿ ಸ್ಥಾನಗಳು-ಕನ್ಸರ್ವೇಟಿವರಿಗೆ ಅಲ್ಪ ಬಹುಮತ-ದೊರೆಯಬಹುದೆಂಬ ಊಹೆ. ಪ್ರಬಲ ಬಹುಮತ ದೊರೆಯದೆ ಕಾರ್ಯ ಸಾಧಿಸಲಾರೆ ಎಂದು ಚರ್ಚಿಲ್ಲರ ಪ್ರಚಾರವಿದೆ.

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

		ದೊ. ಆ. ಮೂರು ಪ್ರಹಸನಗಳು	0-14	[illegible]	0-2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0-8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
ಸಹಾಯವಿಲ್ಲದೆ ಕಲಿಸುವ ಇಂಗ್ಲಿ		● ಕತೆಗಳು		ಮುಗುಳು	0 3
ಷ್ ಸ್ವಯಂಬೋಧಿನಿ		ನಗೆನೋಟಗಳು	0-14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-10
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0	ಭಗವದ್ಗೀತಾ (ಮೂಲ-	
ದೇಶಭಕ್ತ	0-14	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	1-4
ವ್ಯಭಿಚಾರಿಣೀ ಯಾರು	0 12	ನಂದಾದೀಪ	0-10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0-3	ಮುಂದಿನ ದೇವರು	0-3
ಸಂಶಯ ಪಿಶಾಚಿ	0-8	ಕಂದುಕಾಣದ ನೋಟಗಳು	0 8	ರಾಷ್ಟ್ರಸಭೆಯ ಇತಿಹಾಸ	2-8
ರಂಗಭೂಮಿ	0-8	ನಾರೀಹೃದಯ	0-14	ಬಾಲವಾಙ್ಮಯ	0-13
ಪ್ರಕಾಶ	2 0	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0-6	[illegible]	0-8
ಆರೋಗ್ಯ ಪ್ರತಾಪ	0 12	ಆಹುತಿ ಇತ್ಯಾದಿ ಕಥೆಗಳು	0-12	ಪ ಪೂರಿತ ಪದ್ಯಗಳು	1-8
ಪಂಚಾರತಿ	0-6	ಲೋಪಾಮುದ್ರೆ	0-6	ಚಿಗುರು	0-6
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	ಗೀತೆಯ ಕೈಗನ್ನಡಿ	0-8

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಶರ್ಸ್, ಉಡುಪಿ. ದ. ಕ.

CHAMPAE'S
Snow & Costrex
(Sole Distributers for (India.)
Sukhananda Stores
Santhekatte, UDIPI, S. K.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟಿ ಕುಟುಮ ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಗೆ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೆರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ಂದ 8ಬೊಟ್ಟು, ಸಣ್ಣ ಮಕ್ಕಳಿಗೆ 10ಂದ2ಬೊಟ್ಟು ಅವರ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪ್ಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ಬಾಟ್ಲಿಗಳು ಹತ್ತುಕಡೆಯ ಅಂಗಡಿಗಳಲ್ಲಿ ಬರುವವು. ಅಂದರೆ ಕೇವಲ ೮ ರೂಪಾಯಿಗಳಿಗೆ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲಿದಾಸ, ಕೆಮಿಸ್ಟ್ರ, ಹಾವೇರಿ, ಬ್ಯಾಡಿಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟೆಲಾಗ್ಗಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು! ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು. ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBD H. SH BY K. UPENDRA SETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

NAVAYUGA
ನವಯುಗ

ವರ್ಷ ೨೪ ವಾರ ೪೪ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. | Vol. 24 No. 44

ಉಡುಪಿ ● 12—7—1945 ● ಮಂಗಳೂರು.

ಅಮೃತಾಂಜನ
ತಲೆವೇದನೆ, ಶಿರೋ, ವೇದನೆ, ಉಳುಕು, ಸಂತ್ರಿಗೆ, ಛುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಚಾತು ಕೋರ್ಯವುದು, ಚೇಳು ವಿಷಮುಂತಾದ ಚೀನೆ ಪಿಳ್ಳವಾತ, ನೋವಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
PEGD
ಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

No Substitute Yet.

This war has brought in its wake substitutes almost for everything, but none for Insurance. Instead, Insurance has gathered so much strength that to-day every one finds it indispensable.

The Canara Mutual Assurance Co. Ltd.,
UDIPI, (S India.)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಪ್ತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಸಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್
(ಸ್ಥಾಪನೆ 1908)
1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು
ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ. 1910
ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ಹೀನ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸನ್ನದ್ಧ ಅದೇ ಧ್ಯೇಯಪಾಲನೆಗೆ ಸಿದ್ಧರು.
1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ
ಕಾರ್ಯಾಲಯಗಳು.—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ

ನಿಮ್ಮ ಸಹಾಶ್ರಯ ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ
ಕ್ಷೇಮನಿಧಿ ರೂಪಾಯಿ 10 ಲಕ್ಷ
ಕೆನರಾ ಬೇಂಕ್ ಲಿಮಿಟೆಡ್
(ESTD 1906 ಸ್ಥಾಪನೆ)

CANARA BANK LIMITED

(Incorporated in British India, liability of Members Limited)

THE
VIJAYA BANK LTD.
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—
Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ 8—10—44ರಿಂದ
ರಾಮೇಶ್ವರ ದೇವಸ್ಥಾನದ 'ಎಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ರಾಜಕೀಯ ಒಳನೋಟ

ಯಾವುದು ಸರಿ—
ಗಾಂಧಿ ವಾದವೋ ವೇವೆಲ್ ಯೋಜನೆಯೊ?

('ದುರ್ಬೀನುಧಾರಿ'ಯಿಂದ)

ಆಕಾಶವಾಣಿಯಲ್ಲಿ ವೇವೆಲ್ ಘೋಷಣೆ ಬಂದ ಬೆನ್ನಲ್ಲಿಯೇ ಪಾಂಚ್‌ಗನಿಯಲ್ಲಿದ್ದ ಗಾಂಧಿಜೀ ಆ ಕುರಿತು ತನ್ನ ಅಭಿಪ್ರಾಯ ಪ್ರಕಟಿಸಿದ್ದರು, ಬ್ರಿಟಿಷ್ ಕೊಡುಗೆಯ ಅಧಿಕೃತ ಆಕಾರ ಮತ್ತು ಗಾಂಧಿಜೀಯ ಅಭಿಪ್ರಾಯವು ಒಂದೇ ದಿನದ ಪತ್ರಿಕೆಗಳಲ್ಲಿ ಬರುವಂತಾಯಿತು. ಮಹಾತ್ಮರು ಅಷ್ಟು ಅವಸರಮಾಡುವರೆಂದು ಬಹುಶಃ ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಸೇವಾಗ್ರಾಮದ ಸನ್ಯಾಸಿಗೆ ಹಾಗೆ ಮಾಡದ ನಿರ್ವಾಹವಿರಲಿಲ್ಲ ವೇವೆಲ್ ಕೊಡುಗೆಯು ಅಧಿಕಾರಬದ್ಧವಾಗಿ ಹೊರಬೀಳುವ ಮೊದಲೇ ಭಾರತದ ಪತ್ರಿಕೆಗಳದರ ರೂಪರೇಷೆಯನ್ನು ಪ್ರಕಟಿಸಿದ್ದುವು ಅದು 'ಪತ್ರಿಕಾ ಪ್ರಪಂಚ'ದ ಊಹೆ ಮಾತ್ರವಲ್ಲ—ಆಧಾರಬದ್ಧ ವಾರ್ತೆಯೆಂಬುದು ಗಾಂಧಿಜೀಗೆ ತಿಳಿದಿತ್ತು. ರಾಜಕೀಯದಲ್ಲೇ ಇರುವವರಿಗೆ ಇಂತಹ ಹೊಸ ಸುದ್ದಿಗಳ ಸುಳ್ಳು-ಸತ್ಯಗಳನ್ನು ವಿಂಗಡಿಸಿ ತಿಳಿಯುವದೇನೂ ಕಷ್ಟದ ಕೆಲಸವಲ್ಲ ಹೀಗಾಗಿ ಗಾಂಧಿಜೀಗೆ ವೇವೆಲ್ ಕೊಡುಗೆಯನ್ನು ಜೀರ್ಣಿಸಿಕೊಳ್ಳುವ ಸಮಯ ಆ ಮೊದಲೇ ದೊರೆತಿತ್ತು ಯಾವುದೂ ಸುಳ್ಳಾಗಲಿಲ್ಲ ವೇವೆಲರ ಬಾಯಿಯಿಂದ ಬಂದುದಕ್ಕೂ ಆ ಮೊದಲೇ ಅನಧಿಕೃತವಾಗಿ ಪ್ರಕಟವಾದುದಕ್ಕೂ ಇದ್ದ ವ್ಯತ್ಯಾಸ ಅತ್ಯಲ್ಪ

ಗಾಂಧಿಜೀಯ ಆಕ್ಷೇಪ

ಆದರೆ ಮಹಾತ್ಮರ ಮನಸ್ಸು ಈ ಅಲ್ಪ ವ್ಯತ್ಯಾಸದಿಂದಲೇ ರೇಗಿತು ಘೋಷಣೆಯಲ್ಲಿ 'ಸವರ್ಣ ಹಿಂದು' ಶಬ್ದ ಬರಬಹುದೆಂಬುದನ್ನು ಅವರು ನಿರೀಕ್ಷಿಸಿರಲಿಲ್ಲ, ಕೇಂದ್ರ ಕಾರ್ಯಕಾರೀ ಸಮಿತಿಯ ಎಲ್ಲ ಸ್ಥಾನಗಳೂ ಜಾತೀವಾರಾಗಿ ವಿಂಗಡಿಸಲ್ಪಡುವವೆಂಬುದನ್ನೂ ಅವರು ಊಹಿಸಿರಲಿಲ್ಲ ಅವರ ದೃಷ್ಟಿಪಥದಲ್ಲಿದ್ದುದು ಭುಲಾಭಾಯಿ-ಲಿಯಾಕತ್ ಒಪ್ಪಂದ ಮಾತ್ರ. ಆ ಒಪ್ಪಂದದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳಿಗೆ ಸಮಾನ ಸ್ಥಾನಗಳನ್ನು ಕೊಡಲಾಗಿತ್ತಲ್ಲದೆ ಹಿಂದೂ ಮುಸ್ಲಿಮರಿಗಲ್ಲ, ಬ್ರಿಟಿಷರು ಕಾಂಗ್ರೆಸನ್ನು ಹಿಂದು—ಲೀಗನ್ನು ಮುಸ್ಲಿಮಾಗಿ ಗಣಿಸಿದರೆ ಗಾಂಧಿಜೀ ಕೆರಳದಿರುವರೇ ಅಷ್ಟು ಮಾತ್ರವಲ್ಲ ಕಾಂಗ್ರೆಸನ್ನು (ಅಥವಾ ಯಾವುದನ್ನೇ ಆದರೂ) ಎಲ್ಲಾ ಹಿಂದುಗಳದೆಂದು ಕೂಡಾ ಗಣಿಸಿಲ್ಲ—'ಸವರ್ಣ' ಹಿಂದುಗಳದ್ದೆಂದು ಹೆಸರು ಹಾಕಿದ್ದಾರೆ! ಹೀಗೆ ಕಾಂಗ್ರೆಸಿಗೆ 'ಒಳ್ಳೇ ವರ್ಣ' ಬಂತೆಂದು ಗಾಂಧಿಜೀ ರೇಗಿದುದಲ್ಲ. 'ಹರಿಜನ'ರನ್ನು ಮಿಕ್ಕ ಹಿಂದುಗಳಿಂದ ವಿಂಗಡಿಸಿ ಹಾಕಿದುದೇ ಕ್ರೋಧಕ್ಕೆ ಕಾರಣ ಮೆಕ್ಡೊನಾಲ್ಡರ ಕಾಲದಲ್ಲಿ ಹರಿಜನರಿಗೆ ಪ್ರತ್ಯೇಕ ಪ್ರಾತಿನಿಧ್ಯವಿತ್ತುದಕ್ಕಾಗಿ ಆಮರಣಾಂತ ಉಪವಾಸ ಕೈಕೊಂಡಿದ್ದ ಗಾಂಧಿಜಿ ಈ ಬಾರಿ ಇಷ್ಟರಲ್ಲೆ ನಿಂತುದೇ ವಿಶೇಷವೆನ್ನಬೇಕು!

ಸಮಾಧಾನಕರ

ಹೀಗೆ ವೇವೆಲ್ ಕೊಡುಗೆಯಲ್ಲಿ ಅಪ್ರಿಯಾಂಶ ಸೇರಿಕೊಂಡಿರುವದನ್ನು ಕಂಡೊಡನೆ, ಅದನ್ನೆಲ್ಲರಿಗೂ ತೋರಿಸಿಕೊಡಲು

ಖಾನ್‌ಸಾಹೇಬ್

ಗಾಂಧಿಜೀ ಅವಸರಗೊಂಡರು ಅತ್ತ ದೇಶದ ಬೇರೆಬೇರೆ ಕಡೆಯ ಜೈಲುಗಳಿಂದ ವೇವೆಲ್ ಕೊಡುಗೆಯ ಒಂದೊಂದು ಪ್ರತಿ ಹಿಡಿದುಕೊಂಡು ಕಾಂಗ್ರೆಸ್ ವರ್ಕಿಂಗ್ ಸಮಿತಿ ಸದಸ್ಯರು ಹೊರಬರುತ್ತಾರೆ, ಅವರನ್ನು ದ್ವಾರದಲ್ಲೇ ಮುತ್ತಿಗೆ ಹಾಕಿ ಪತ್ರಿಕಾ ಪ್ರತಿನಿಧಿಗಳು ಬಾಯಿಬಿಡಿಸುತ್ತಾರೆ, ಅವರ ಬಾಯಿಯಿಂದೇನಾದರೂ ಬರುವ ಮೊದಲೇ 'ನನ್ನ ಅಭಿಪ್ರಾಯ ಹೀಗಿದೆ' ಎಂಬುದನ್ನವರು ತಿಳಿದುಕೊಳ್ಳಲಿ, ಕಾಂಗ್ರೆಸಿಗರ ಧೋರಣೆ ಸಾವಿರಮುಖಿಯಾಗುವದು ತಪ್ಪಲಿ—ಎಂದೇ ಆ ಮುದುಕನ ಹೇಳ್ಪಂಗ್ತಿ ಆದರೆ ಗಾಂಧಿಜೀಯ ಆಕ್ಷೇಪವು ಅವರ ಮಟ್ಟಿಗೆ 'ಪರಬ್ರಹ್ಮ'ವಾಯಿತೆಂದು ಬೇರಾವ ರಾಜಕಾರಣಿಯೂ ಅಂತಹ ಮಹತ್ವವನ್ನದಕ್ಕೆ ಕೊಡುವಂತಿಲ್ಲ ಆದ್ದರಿಂದಲೇ ಸಿಮ್ಲಾ ಸಮ್ಮೇಲನದಲ್ಲಿ ಹಿಂದೂ ಮುಸ್ಲೀಮ್ ಸ್ಥಾನ ಸಾಮ್ಯತೆ ಮತ್ತು ದಳಿತವರ್ಗದ ಪ್ರತ್ಯೇಕ ಪ್ರಾತಿನಿಧ್ಯವನ್ನು ಕಾಂಗ್ರೆಸ್ ಪ್ರತಿನಿಧಿಗಳೂ ಒಪ್ಪಿಕೊಂಡರು, ಗಾಂಧಿಜೀಯ ಒಪ್ಪಿಗೆಯಿಂದಲೇ ಎಂಬುದು ನಿಜವಾದರೂ, ಇಲ್ಲಿ ಅಜಾದ್ ನೆಹರುಗಳು ಗಾಂಧಿಜೀಯನ್ನಾಳಿದರು ಹೊರತು ಗಾಂಧಿಜೀಯಿಂದ ಅವರನ್ನಾಳಿಯಲಾಗಲಿಲ್ಲ—ಇದು ಸಮಾಧಾನಕರ

ಗಾಂಧಿವಾದದಂತಾಗುತಿದ್ದರೆ—

ಸಿಮ್ಲಾ ಸಮ್ಮೇಲನವಿಷ್ಟರಲ್ಲೇ ಮುಗಿಯುತಿತ್ತು, ಮಿ ಜಿನ್ನಾರು ಬೇಡಿದುದನ್ನೆಲ್ಲಾ (ಹೆಚ್ಚುಚ್ಚು ಬೇಡುವದೊಂದೇ ಜಿನ್ನರ ಧೋರಣೆಯಲ್ಲವಾದರೆ) ಪಡೆಯುತಿದ್ದರು ಕಾಂಗ್ರೆಸ್ ಮತ್ತು ಲೀಗುಗಳೊಳಗೆ ಸಾಮ್ಯತೆ ಹೊರತು ಹಿಂದೂ—ಮುಸ್ಲಿಮರೊಳಗಲ್ಲ ಎಂಬ ಗಾಂಧಿಜೀಯ ವಾದಾನುಸಾರವಾಗಿ ಮುಸಲ್ಮಾನರ ಸ್ಥಾನಗಳೆಲ್ಲಾ ಮುಸ್ಲಿಂ ಲೀಗಿನಿಂದಲೇ ತುಂಬಬೇಕಷ್ಟೆ? ಆ ಕುರಿತು ಆಕ್ಷೇಪಿಸಲೆಡೆಯುಂಟೆ



ಅಜಾದ್

ದ್ದಿಲ್ಲ ಮಿ. ಜಿನ್ನರಿಂದು ಕೇಳುತ್ತಿರುವುದದನ್ನೆ. ಆದರೆ ವೇವೆಲರು ಸಮಾನತೆ ಕೊಟ್ಟುದು ಮುಸಲ್ಮಾನರಿಗೆ ಹೊರತು ಲೀಗಿಗಲ್ಲ, ಆದ್ದರಿಂದಲೇ ರಾಷ್ಟ್ರೀಯ ಮುಸಲ್ಮಾನರಿಗೆ 'ನಮಗೂ ಸ್ಥಾನಬೇಕು' ಎಂದು ಹಠ ಹಿಡಿಯುವ ಸಂದರ್ಭ ದೊರಕಿತು ಅವರು ಲೀಗಿನವರಲ್ಲವಾದರೂ ಮುಸಲ್ಮಾನರು ಹೌದು! ಗಾಂಧೀವಾದದಂತಾಗುತಿದ್ದರೂ ರಾಷ್ಟ್ರೀಯ ಮುಸಲ್ಮಾನರಿಗೆ ಸ್ಥಾನಗಳೇನೋ ದೊರಕುತಿದ್ದುವು—ಕಾಂಗ್ರೆಸಿಗೆ ದೊರೆತ ಪಾಲಿನಿಂದಲೇ ಆಗ ಹೇಗಾಗುತಿತ್ತೆಂಬ ಚಿತ್ರವನ್ನು ಊಹಿಸಿಕೊಳ್ಳೋಣ ಕೇಂದ್ರ ಕಾರ್ಯಕಾರೀ ಮಂಡಲಿಯ ಸಂಖ್ಯೆ 15 (ಇಂತಿಷ್ಟೇ ಎಂಬುದೀವರೆಗೆ ತಿಳಿದುಬಂದಿಲ್ಲ) ಎಂದಿಟ್ಟುಕೊಂಡರೆ ಅಧ್ಯಕ್ಷ ವೈಸರಾಯರ ಮತ್ತು ಕಮಾಂಡರ್-ಇನ್-ಚೀಫರ ಎರಡು ಸ್ಥಾನಗಳನ್ನು ತೆಗೆದು ಉಳಿಯುವ 13 ಕುರ್ಚಿಗಳ ಪೈಕಿ ಮೂರರಲ್ಲಿ ಇತರ ಅಲ್ಪಸಂಖ್ಯಾಕರು ಕುಳಿತುಕೊಳ್ಳಲಿ ಮತ್ತೂ ಉಳಿಯುವ 10 ಸ್ಥಾನಗಳಲ್ಲಿ ಕಾಂಗ್ರೆಸಿಗೆ 5, ಲೀಗಿಗೆ 5 ತಾನೆ? ಲೀಗಿನ 5 ಸ್ಥಾನಗಳಿಗೂ ಮುಸಲ್ಮಾನರೇ ಕಾಂಗ್ರೆಸಿನ 5 ಸ್ಥಾನಗಳಲ್ಲಿ ಎರಡನ್ನಾದರೂ ರಾಷ್ಟ್ರೀಯ ಮುಸಲ್ಮಾನರಿಗೀಯುವದು ಬೇಡವೆ? ಆಗ, ಜಾತೀಯ ದೃಷ್ಟಿಯಿಂದ ನೋಡಿದರೆ 7 ಮುಸಲ್ಮಾನರೂ 3 ಹಿಂದುಗಳೂ ಅಲ್ಲಿದ್ದಂತಾಗುತಿತ್ತು, ರಾಜಕೀಯ ದೃಷ್ಟಿಯಿಂದ ನೋಡಿದರೆ 5 ಕಾಂಗ್ರೆಸಿಗರೂ 5 ಲೀಗಿನವರೂ ಇದ್ದಂತೆ! ಗಾಂಧೀವಾದದಂತಾಗುತಿದ್ದರೆ ರಾಷ್ಟ್ರೀಯ ಮುಸಲ್ಮಾನರಿಗೆ ಕಾಂಗ್ರೆಸಿನಿಂದ ಹೋಗುತಿದ್ದ ಸ್ಥಾನಗಳು ಹೀಗಾದುದರಿಂದಾಗಿ ಲೀಗಿನಿಂದಲೇ ಹೋಗುವಂತಾಗಿದೆ ರಾಜಕೀಯ ರೂಪದ ಬದಲಿಗೆ ಜಾತಿಸ್ವರೂಪ ಬಂತಲ್ಲಾ, ಎಂಬುದೊಂದೇ ಈಗಿನ ಪಶ್ಚಾತ್ತಾಪ. ಆದರೆ ನಿರ್ವಾಹವಿಲ್ಲ ಕಾಂಗ್ರೆಸೊಂದನ್ನು ಬಿಟ್ಟರೆ ವೈಸರಾಯರಿಂದಾಮಂತ್ರಿಸಲ್ಪಟ್ಟವುಗಳಲ್ಲಿ ರಾಜಕೀಯ ಸಂಸ್ಥೆ ಯಾವುದಿದೆ? ಲೀಗು ರಾಜಕೀಯ ಸಂಸ್ಥೆಯೆ? ಪಾಕಿಸ್ಥಾನದ ಪ್ರಶ್ನೆ ರಾಜಕೀಯಕ್ಕೆ ಸಂಬಂಧಪಟ್ಟದೇನೋ ನಿಜ. ಆದರೆ ಪಾಕಿಸ್ತಾನವಾಗಬೇಕೆನ್ನುವ ರಾಜಾಜಿಯನ್ನು ಲೀಗು ತನ್ನ ಸದಸ್ಯನಾಗಿ ಅಂಗೀಕರಿಸಿಕೊಳ್ಳುತ್ತದೆಯೆ? ಲೀಗಿನ ಧ್ಯೇಯ ಧೋರಣೆಗಳನ್ನೊಪ್ಪಿಕೊಳ್ಳುವ ಅನ್ಯ ಜಾತೀಯರಿಗೆ ಲೀಗಿನೊಳಗೆ ಪ್ರವೇಶವಿದೆಯೆ? ಯಾಕಿಲ್ಲ? ಅವರು ಮುಸಲ್ಮಾನರಲ್ಲವಾದ್ದರಿಂದ ಅಂದಮೇಲೆ ಅದು ಜಾತಿ ಹಿತಸಾಧಕ ಸಂಸ್ಥೆ ಮಾತ್ರವಲ್ಲ ಜಾತೀಯ ಸಂಸ್ಥೆ ಆದ್ದರಿಂದ ಕಾಂಗ್ರೆಸಿಗೂ ಲೀಗಿಗೂ ಸಮಾನತೆ ದೊರೆಯುತಿದ್ದರೆ ಎರಡು ರಾಜಕೀಯ ಸಂಸ್ಥೆಗಳಿಗೆ ದೊರೆತಂತಾಗುತಿತ್ತೆಂಬ ಗಾಂಧೀವಾದ ಪೊಳ್ಳು, ಆಗಲೂ ಒಂದು ಜಾತೀಯ ಸಂಸ್ಥೆಯೊಡನೆ ಸೊಗಕ್ಕೆ ಹೆಗಲೊಡ್ಡುವ ಕಾಂಗ್ರೆಸೂ ಸಹಜವಾಗಿ ಜಾತೀಯವಾಗುತಿತ್ತು ಈಗಿನ ಹಿಂದೂ-ಮುಸ್ಲಿಂ ಸಾಮ್ಯತೆಯಿಂದಾಗಿ 90 ಮಿಲಿಯ ಮುಸಲ್ಮಾನರಷ್ಟೇ ಸ್ಥಾನಗಳು 200 ಮಿಲಿಯ ಹಿಂದುಗಳಿಗೆ ದೊರೆತಿವೆ, ಕಾಂಗ್ರೆಸ್-ಲೀಗ್ ಸಾಮ್ಯತೆಯಾಗುತಿದ್ದರೆ ಆ 80 ಮಿಲಿಯಕ್ಕೆ ದೊರೆತುದರ ಅರವಾಸಿಗೂ ಕಡಿಮೆ ಪಾಲು ಈ 200 ಮಿಲಿಯಕ್ಕೆ ದೊರಕುತಿತ್ತು, ಹೀಗಾದುದೇ ಅನ್ಯಾಯ—ಹಾಗಾಗಬೇಕಿತ್ತೆ?

ದಳಿತ ವರ್ಗದವರ ಸ್ಥಾನ

ಇನ್ನು 'ಸವರ್ಣ ಹಿಂದು'ಗಳಿಂದ ಹರಿಜನರನ್ನು ಬೇರ್ಪಡಿಸಿದ ಮಾತೊಂದಿದೆ ಸಂಖ್ಯೆಯಲ್ಲಿ ಹರಿಜನರು ಮುಸಲ್ಮಾನ

(೧೧ ಪುಟ ನೋಡಿರಿ)

ಭುಲಾಭಾಯಿ.



ರಾಜಾಜಿ

ಕಾಂಗ್ರೆಸ್ ಹೆಸರು ಸೂಚೀಪತ್ರ ಒಪ್ಪಿಸಿತು.

ಅಗ್ರಗಣ್ಯರನ್ನೇ ಅಧಿಕಾರಕ್ಕಾರಿಸಿದೆ!



ಇದು ವರೆಗೆ 'ಸರ್ದಾರ್ ಪಟೇಲ್' ಇನ್ನುಮುಂದೆ 'ಭಾರತ ಗೃಹಖಾತೆಯ ಮಂತ್ರಿ'?

ಇದೇ ತಾ. ೩ರಿಂದ ತಾ. ೭ರ ಪೂರ್ವಾಹ್ನದ ವರೆಗೆ ಪ್ರತಿ ಸಂಜೆ ಮುಂಜಾನೆ ಒಟ್ಟಿಗೆ ಸುಮಾರು 25 ಘಂಟೆ ಚರ್ಚೆ ನಡಿಸಿ, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು, ಕಟ್ಟಕಡೆಗೆ ತನ್ನ ಪಾಲಿನ ಹೆಸರು ಪಟ್ಟಿಯನ್ನು ತಯಾರಿಸಿಕೊಟ್ಟಿತು, ತಾ 7 ನೇ ಅಪರಾಹ್ನ ಅಜಾದರದನ್ನು ವೈಸರಾಯರಿಗೊಪ್ಪಿಸಿದ್ದರು

ಪಟ್ಟಿಯ ಹೆಸರುಗಳೆಲ್ಲಾ ಅತ್ಯಂತ ಗುಪ್ತವಾಗಿಡಲ್ಪಟ್ಟಿವೆ; ವೈಸರಾಯರು ಚುನಾಯಿಸಿಕೊಳ್ಳುವ ಮೊದಲು ಅದು ಪ್ರಕಟವಾಗುವ ಸಂಭವವಿಲ್ಲ. ಅದರಲ್ಲಿ 15 ಹೆಸರುಗಳಿವೆ-೫ ಸವರ್ಣ ಹಿಂದು, ೫ ಮುಸ್ಲಿಂ, 2 ದಳಿತ ವರ್ಗ, 1 ಕ್ರಿಶ್ಚಿಯನ್, 1 ಪಾರ್ಶಿ, 1 ಸಿಖ್.

ಕಾಂಗ್ರೆಸ್ ಪಟ್ಟಿಯಲ್ಲಿ ನಮೂದಿಸಲ್ಪಟ್ಟವುಗಳಲ್ಲಿ ದೇಶತೂಕದ ಕೆಲವು ಹೆಸರುಗಳಿವೆ. ಮೌಲಾನಾ ಅಬ್ದುಲ್ ಕಲಮ್ ಅಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ॥ ರಾಜೇಂದ್ರ ಪ್ರಸಾದ್, ಪಂಡಿತ ಜವಾಹಿರಲಾಲ್ ನೆಹರು, ಮಿ. ಆಸಫ್ ಅಲಿ, ಮಿ ಎಮ್. ಎ. ಜಿನ್ನಾ, ನವಾಬಝಾಡಾ ಲಿಯಾಖತ್ ಅಲೀಖಾನ್, ನವಾಬ್ ಮಹಮ್ಮದ್ ಇಸ್ಮಾಯಿಲ್ ಖಾನ್, ಡಾ॥ ಶ್ಯಾಮಪ್ರಸಾದ ಮುಖರ್ಜಿ, ಶ್ರೀ. ರಾಧಾನಾಥ ದಾಸ್, ರಾಜಕುಮಾರಿ ಅಮೃತ ಕೌರ್, ಸರ್. ಅರ್ದೇಶಿರ್ ದಲಾಲ್, ಮಾಸ್ಟರ್ ತಾರಾಸಿಂಗ್, ಶ್ರೀ ಮುನಿಸ್ವಾಮಿ ಪಿಳ್ಳೆ ಮತ್ತೊಬ್ಬ ದಳಿತ ವರ್ಗದ ಪ್ರತಿನಿಧಿ-ತಾನು ಅಖಿಲ ಭಾರತ ಪ್ರತಿನಿಧಿಯೆಂಬ ಕಾಂಗ್ರೆಸ್ ವಾದವು ಈ ಪಟ್ಟಿಯ ಮೂಲಕ ದಾಖಲೆಯ ರೂಪತಾಳಿದೆ!

ತನ್ನೀಯಾದಿಯು ತಿದ್ದೀಲುಗೊಳಿಸದಷ್ಟು ಅಮೂಲ್ಯವಿದೆಯೆಂಬುದನ್ನು ಸೂಚಿಸಿ, ಚುನಾಯಿಸಿಕೊಳ್ಳುವ ವೈಸರಾಯರ ಅಧಿಕಾರವನ್ನೊಪ್ಪಿ, ಪೂರ್ಣ ಸಹಕಾರದ ಸಹಾನುಭೂತಿಪರ ಗುಪ್ತಪತ್ರವೊಂದನ್ನೂ ಮೌಲಾನರು ಹೆಸರುಪಟ್ಟಿಯೊಂದಿಗೆ ವೈಸರಾಯರಿಗೆ ಕಳುಹಿದ್ದಾರೆ

ಮುಂದಿನ ಪರ್ಯಾಲೋಚನೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗಳು ಯಥಾಪ್ರಕಾರ ಜರಗುತ್ತಿವೆ.

ಈ ಬಾರಿಯ ಕಠಿಣ ಪರೀಕ್ಷೆ

ಲೋಕಾಕರ್ಷಕ ಪ್ರಾಮುಖ್ಯ ನಿರ್ಧಾರಗಳನ್ನು ಮಾಡಿ ಅಭ್ಯಾಸವಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಹಿಂದೆಂದೂ ಈ ಬಾರಿಯ ಸಿಮ್ಲಾ ಸಮ್ಮೇಲನದಲ್ಲಿ ಅನುಭವಿಸಿದಂತಹ ಪ್ರಸವ ವೇದನೆಯನ್ನು ಅನುಭವಿಸಿರಲಿಲ್ಲವೆನ್ನಬಹುದು. ತಾ. ೨ರಲ್ಲಿ ಸಿಮ್ಲಾಕ್ಕಾಗಮಿಸಿದ ನೆಹರುಗಳಿಗೆ ಅಂದೇ ವೈಸರಾಯರಿಂದ ಕರೆಬಂದು ೩॥ ಘಂಟೆಯ ವರೆಗೂ ನೆಹರು-ವೇವೆಲ್ ಸಂಭಾಷಣೆ ನಡೆದಿತ್ತು; ಲೇಡಿ ವೇವೆಲರು ಪಂಡಿತರನ್ನು ತನ್ನ ಅಭ್ಯಾಸ ಗೃಹಕ್ಕೆ ಕರದೊಯ್ದು ಚಹಾ ಸತ್ಕಾರಮಾಡಿ ಬೀಳ್ಕೊಟ್ಟಿದ್ದರು. ತಾ ೩ನೇ ಪೂರ್ವಾಹ್ನ ಮಹಾತ್ಮ ಗಾಂಧಿಯ ಬಿಡಾರ ಶ್ರೀಮತಿ ಕೌರರ 'ಮನೋರ್ ವಿಲ್ಲೆ'ಯಲ್ಲಿ ವರ್ಕಿಂಗ್ ಸಮಿತಿ ಸಭೆ ಸೇರಲಾರಂಭ. ಹೊಟ್ಟೆನೋವಿನ ಚಿಕಿತ್ಸೆಗೆ ಬೊಂಬಾಯಿಯಲ್ಲಿ ನಿಂತಿದ್ದ ಪಟೇಲ್ ಮತ್ತು ಹಾಸಿಗೆ ಬಿಡಲಾಗದ ಅಸ್ವಸ್ಥತೆಗೀಡಾಗಿರುವ ಮಿ. ಆಸಫ್ ಅಲಿಗಳು ಕೂಡಾ ವಿಮಾನ ಹತ್ತಿ ಸಿಮ್ಲಾಕ್ಕೆ ಬಂದಿದ್ದರು ಹಾಜರಿದ್ದವರು—ಅಧ್ಯಕ್ಷ ಅಜಾದ್, ಪಂಡಿತ ಜವಾಹಿರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಶ್ರೀಮತಿ ಸರೋಜಿನಿ ನಾಯಿಡು, ಡಾ॥ ರಾಜೇಂದ್ರ ಪ್ರಸಾದ್. ಆಚಾರ್ಯ ಕೃಪಾಲನಿ, ಮಿ. ಆಸಫ್ ಅಲಿ, ಪಂಡಿತ ಗೋವಿಂದವಲ್ಲಭ ಪಂತ್, ಡಾ॥ ಪಟ್ಟಾಭಿ ಸೀತಾರಾಮಯ್ಯ, ಶ್ರೀ. ಶಂಕರರಾವ್ ದೇವೊ, ಡಾ॥ ಪ್ರಫುಲ್ಲಚಂದ್ರ ಘೋಷ್. ಗೈರುಹಾಜರಿಯೆಂದರೆ ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಶ್ರೀ ನರೇಂದ್ರ ದೇವೊ. ಸರ್ತಿಬಿಡದೆ ಪ್ರತಿದಿನವೂ ಪೂರ್ವಾಹ್ನ-ಅಪರಾಹ್ನ ಸಭೆಗಳು ನಡೆದಿದ್ದುವು. ಒಮ್ಮೆ ಗಾಂಧೀ ಸಮಕ್ಷಮದ 'ಮನೋರ್ ವಿಲ್ಲೆ' ಮತ್ತೊಮ್ಮೆ ಅಜಾದ್ ನಿವಾಸ 'ಆರ್ಮ್ಸ್‌ಡೆಲ್' ಸಭಾಭವನವಾಗಿದ್ದುವು. ಡಾಕ್ಟರ್ ಖಾನ್ ಸಾಹೇಬರೂ ಕಾಂಗ್ರೆಸಿನ ಮಾಜೀ ಪ್ರಧಾನಮಂತ್ರಿಗಳೂ ಚರ್ಚೆಯ ವೇಳೆ ಹಾಜರಿರಲು ವಿಶೇಷಾಮಂತ್ರಣ ಪಡೆದಿದ್ದರು. ಹೆಸರುಪಟ್ಟಿ ತಯಾರಿಯ ಕುರಿತು ಅವರೆಲ್ಲರ ಅಭಿಮತವನ್ನೂ ಪಡೆಯಲಾಗಿತ್ತು.

ಸಮಿತಿಯ ಮುಂದಿದ್ದ ಪ್ರಶ್ನೆಗಳು.

ತನ್ನ ಪಾಲಿಗೆ ಬಂದ ಸ್ಥಾನಗಳಿದ್ದಷ್ಟೇ ಹೆಸರುಗಳನ್ನು ಸೂಚಿಸಿ, ಆ ಪಟ್ಟಿಯನ್ನು ತಿದ್ದೀಲು ವಿನಹ ಅಂಗೀಕರಿಸಿಕೊಳ್ಳುವಂತೆ ವೈಸರಾಯರನ್ನು ಒತ್ತಾಯಿಸಬೇಕೋ? ಹೆಚ್ಚು ಹೆಸರುಗಳನ್ನು ಕೊಟ್ಟು, ಆ ಪಟ್ಟಿಯಿಂದ ಬೇಕಾದವರನ್ನಾರಿಸಿಕೊಳ್ಳುವ ವೈಸರಾಯೀ ಅಧಿಕಾರವನ್ನು ಮಾನ್ಯಮಾಡಬೇಕೋ? ಮುಸ್ಲಿಂ ಲೀಗು ತನ್ನ ಪಟ್ಟಿಯನ್ನೊಪ್ಪಿಸದೆ ಅಸಹಕಾರ ಮಾಡಿದರೆ ಹೇಗೆ? ಜಿನ್ನರ ಅಪೇಕ್ಷೆಯಂತೆ ಅವರೊಡನೆ ಪುನಃ ಸಂಧಾನಾರಂಭಿಸಬೇಕೋ ಬೇಡವೋ? ಕಾಂಗ್ರೆಸಿನ ಅಗ್ರಗಣ್ಯರನ್ನು ವೈಸರಾಯೀ ಕೌನ್ಸಿಲಿಗಾರಿಸಬೇಕೋ ಬೇಡವೋ? ಕಾಂಗ್ರೆಸ್ ಪ್ರಮುಖರು ಅಧಿಕಾರ ವಹಿಸಿದ ಮೇಲೆ ಕಾಂಗ್ರೆಸ್ ಬೇಕೋ ಬರ್ಖಾಸ್ತಾಗಬೇಕೋ? ಹಿಂದೆ ಪ್ರಾಂತಿಕಾಧಿಕಾರ ವಹಿಸಿಕೊಂಡಾಗ ನಿರ್ಮಿಸಿದ್ದ ಪಾರ್ಲಿಮೆಂಟರೀ ಬೋರ್ಡಿನಂತಹ ಮೇಲ್ವಿಚಾರಣಾ ಸಮಿತಿಯೊಂದು ಈ ಬಾರಿ ಬೇಕೋ ಬೇಡವೋ? ಬೇಡವಾದರೆ ಕೇಂದ್ರ ಸದಸ್ಯರು ಮತ್ತು ಪ್ರಾಂತಿಕ ಸರಕಾರಗಳೊಳಗೆ ಸಂಬಂಧ ನಿರ್ಮಿಸುವ ಮತ್ತು ಎಲ್ಲವನ್ನೂ ಒಂದು ಅಂಕೆಯಲ್ಲಿಟ್ಟುಕೊಳ್ಳುವ ಏರ್ಪಾಡಾವುದು?— ಇತ್ಯಾದಿ ಸಮಸ್ಯಾತ್ಮಕ ಪ್ರಶ್ನೆಗಳನ್ನು ಉತ್ತರಿಸುವ ಕಠಿಣ ಪರೀಕ್ಷೆಗೆ ಕಾಂಗ್ರೆಸ್ ಸಮಿತಿ ನಿಂತಿದ್ದಿತು ಇವುಗಳಲ್ಲಿ ಪ್ರತಿಯೊಂದು ಪ್ರಶ್ನೆಗೂ ರಾಷ್ಟ್ರ ಪ್ರಾಮುಖ್ಯತೆ ಇದ್ದು, ಕಾಂಗ್ರೆಸ್ ಯೋಗ್ಯತೆಯನ್ನು ಪರೀಕ್ಷಿಸುವ ಒರೆಗಲ್ಲಾಗಿಯೇ ಇದ್ದಿತು

ಚರಿತ್ರಾರ್ಹ ನಿರ್ಧಾರಗಳು.

ಮಿತ ಸಂಖ್ಯೆಯಲ್ಲಿ ಹೆಸರುಗಳನ್ನು ಸೂಚಿಸಿ, ಅವುಗಳನ್ನು ಅಡ್ಡಿ ವಿನಹಾ ಅಂಗೀಕರಿಸಬೇಕೆಂದು ವೈಸರಾಯರನ್ನು ಒತ್ತಾಯಿಸಿದರೆ ಲೀಗಿನ ಧೋರಣೆಯನ್ನೇ ಕಾಂಗ್ರೆಸ್ ಅನುಕರಿಸಿದಂತಾಗುವದೆಂದೂ ಬಿಕ್ಕಟ್ಟು ನಿರ್ಮಾಣ ಖಂಡಿತವೆಂದೂ ಹೆಚ್ಚಿನ ಸದಸ್ಯರ ಅಭಿಪ್ರಾಯಪಟ್ಟರು. ಮಿ. ಜಿನ್ನರೊಡನೆ ಪುನಃ ಸಂಧಾನ ನಡೆಸುವದು ಕಾಲಹರಣಕ್ಕೊಂದು ದಾರಿ ಹಿಡಿದು ಸತ್ಪರಿಣಾಮವಾಗದು, ಎಂದೊಬ್ಬಿಬ್ಬರ ವಿನಹ ಎಲ್ಲರ ಅಭಿಪ್ರಾಯ ಹಿಂದಿನ ಸಂಭಾಷಣೆಯಲ್ಲಿ ಗಾಂಧಿಜೀ ಯಾವುದನ್ನೂ ಬಾಕಿ ಬಿಟ್ಟಿಲ್ಲ. ಆದರೂ ಗಾಂಧಿಜೀಯೊಡನೆ ಸಂಭಾಷಣೆಗೆ ಮಿ. ಜಿನ್ನರು ಪುನಃ ಬಂದರೆ ಸುಸ್ವಾಗತ, ಕಾಂಗ್ರೆಸಿನ ಅಧಿಕಾರಬದ್ಧ ಪ್ರತಿನಿಧಿಯೇ ಆಗಬೇಕಾದರೆ ಮೌ॥ ಅಜಾದರನ್ನು ಕೇಳಲಿ. ಆದರೆ ತಾ. 1। ರೊಳಗೆ ಮಾತುಕತೆ ಮುಗಿಯಬೇಕಲ್ಲದೆ ಸಮ್ಮೇಲದ ದಿನವನ್ನು ಎಷ್ಟಕ್ಕೂ ಮುಂದುವರಿಸಲು ಸಾಧ್ಯವಿಲ್ಲವೆಂದೇ ಸಮಿತಿಯ ನಿರ್ಧಾರ ಕಾಂಗ್ರೆಸು ವೇವೆಲ್ ಯೋಜನೆಯ ಪ್ರಕಾರ ಹೊಣೆಹೊರಲು ಪೂರ್ಣ ತಯಾರಿ; ಲೀಗು ಒಪ್ಪದಿದ್ದರೆ ಮುಂದೇನು ಎಂಬುದನ್ನು ನಿರ್ಧರಿಸುವದು ಲೋರ್ಡ್ ವೇವೆಲರ ಕರ್ತವ್ಯ. ಸಮರ್ಥರ, ಅಗ್ರಗಣ್ಯರ ಕೈಗೆ ಅಧಿಕಾರ ಕೊಡಬೇಕೆಂಬ ನ್ಯಾಯಾನುಸಾರ ಪ್ರಥಮ ಪಂಕ್ತಿಯ ಕೆಲವು ಪ್ರಮುಖರನ್ನಾದರೂ ಆರಿಸಬೇಕೆಂದಾಯಿತು

ಮುಂದಿನ ವ್ಯವಸ್ಥೆ

ಸದ್ಯದ ತಾತ್ಕಾಲಿಕ ವ್ಯವಸ್ಥೆಯನ್ನು ಕಾಂಗ್ರೆಸು ಅಂಗೀಕರಿಸಿದ ಮೇಲೂ ಕಾಂಗ್ರೆಸ್ ಸಂಸ್ಥೆಯು ಸ್ವಾತಂತ್ರ್ಯ ಸಾಧಕೋಪಕರಣವಾಗಿ ಉಳಿಯಬೇಕು, ಕಳೆದ ಮೂರು ವರುಷಗಳಿಂದ ಜಾಲ್ತಾಗದಿರುವ ಅದರ ಉಪಾಂಗಗಳನ್ನು ಪುನರ್ಘಟಿಸಬೇಕು. ಎಂಬ ನಿರ್ಧಾರವೂ ಆಗಿದೆ. ಈ ಬಾರಿ 'ಪಾರ್ಲಿಮೆಂಟರಿ ಬೋರ್ಡ್' ನಂತಹ ಪ್ರತ್ಯೇಕ ಮೇಲ್ವಿಚಾರಕ ಸಮಿತಿಯ ಅವಶ್ಯಕತೆಯಿಲ್ಲ ಕೇಂದ್ರಾಧಿಕಾರೀ ಮಂಡಲಿಗಾರಿಸಲ್ಪಟ್ಟ ಪ್ರಮುಖರೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರೂ ಆಗಿರುವದರಿಂದ ಕಾಂಗ್ರೆಸ್ ಮತ್ತು ಕೇಂದ್ರ ಸರಕಾರಗಳೊಳಗಿನ ವಹಿವಾಟೆಲ್ಲಾ ಇವರ ಮೂಲಕವೇ. ಇಂಗ್ಲಾಂಡಿನಲ್ಲಿ ಲೇಬರ್ ಮಂತ್ರಿಗಳೇ ಲೇಬರ್ ಪಕ್ಷದ ಕಾರ್ಯಕಾರೀ ಸದಸ್ಯರಾಗಿರುವ ಮಾದರಿಯಿರುವದರಿಂದ ಇದೇನೂ ಅಸಂಗತವಲ್ಲ. 1939ರ ವರೆಗೆ ಪಾರ್ಲಿಮೆಂಟರಿ ಬೋರ್ಡಿನ ಆಜ್ಞಾನುಸಾರ ವರ್ತಿಸುತ್ತಿದ್ದ ಪ್ರಾಂತಿಕ ಸರಕಾರಗಳಿಗೆ ಇನ್ನು ಮುಂದೆ ಕೇಂದ್ರಾಧಿಕಾರದಲ್ಲಿರುವ ಕಾಂಗ್ರೆಸ್ ಪಂಗಡವೇ [illegible] ವಾಗಿರಬೇಕು—ಎಂದು ನಿಶ್ಚಯವಾಗಿದೆ. ಕ್ರಮಬದ್ಧವಾಗಿ ಕಾರ್ಯಕಾರೀ ಸಮಿತಿಯ ನಿರ್ಧಾರಗಳು ಅ. ಭಾ. ಕಾಂ. ಸಮಿತಿಯ ಮಂಜೂರಾತಿ ಪಡೆಯಬೇಕಾದ್ದರಿಂದ ಅಧ್ಯಕ್ಷ ಅಜಾದರು ಸದ್ಯದಲ್ಲೇ-ಬಹುಶಃ ಶೀಘ್ರವಾಗಿ ಬೊಂಬಾಯಿಯಲ್ಲಿ—ಅದರ ಸಭೆ ಕರೆಯಲಿದ್ದಾರೆ.

ಅತ್ಯಾತುರ—ನಿರಾಶೆಗಡೆಯಿಲ್ಲ

ಮಿ. ಜಿನ್ನರ ಧೋರಣೆಯಿಂದಾಗಿ ವೈಸರಾಯರ ನಿರ್ಧಾರವೊಂದರಲ್ಲೇ ಮುಂದಿನ ಭವಿಷ್ಯ ನಿಂತುಕೊಂಡಿದೆ; ಕಾಂಗ್ರೆಸ್ ಮತ್ತು ಲೀಗುಗಳ ಮುಂದಿನ ಸಂಧಾನದಲ್ಲಿ ಕತ್ತಲು ಕವಿದಂತಿದೆ, ಲೀಗನ್ನು ಕಡೆಗಣಿಸಿ ಮುಂದೊತ್ತುವ ಹುರುಪಿನಲ್ಲಿ ವೈಸರಾಯರಿರುವರೆಂಬ ಬಯಲಾಸೆ ಬೇಡ. ಡಿಲ್ಲಿಯಲ್ಲಿಯೂ ಲಂಡನಿನಲ್ಲಿಯೂ ವರ್ಚಸ್ವಿಗಳು ಹಲವು ಪ್ರತಿಗಾಮಿಗಳು ಲೀಗಿಗಿದ್ದಾರೆ, ಎಂದು ಕಾಂಗ್ರೆಸ್ ಪ್ರಮುಖರ ಎಚ್ಚರಿಕೆಯಿದೆ ಬ್ರಿಟಿಷ್ ಜನ ಮನೆಗೂ ಈ ಉದಾರ ಬುದ್ಧಿಗೂ ವಿಶೇಷ ಸಂಬಂಧವಿಲ್ಲ ಭಾರತ ಧೋರಣೆಯಿಂದಾಗಿ ಬ್ರಿಟಿಷರು ಲೋಕದ ದೃಷ್ಟಿಯಲ್ಲಿ ಅಪರಾಧಿಗಳಾಗಿ ಕಂಡುದರಿಂದಲೇ ಅವರು ಗಟ್ಟಿ ಮನಸ್ಸು ಮಾಡಿ

(೫ನೇ ಪುಟ ನೋಡಿರಿ.)



ಇದು ವರೆಗೆ 'ಪ್ರಸಾದ್ ಬಾಬು' ನಾಳೆಯಿಂದ 'ಭಾರತ ಆಹಾರ ಸಚಿವ'?

ಲೀಗ್ ಹೆಸರು ಸೂಚಿಸಲು ನಿರಾಕರಿಸಿತು!

ವೈಸರಾಯರಿಂದ ಉದಾಹರಣೆ ಕೇಳಿದೆ.



ಮಿ ಜಿನ್ನರ ಹೆಸರು ಕಾಂಗ್ರೆಸ್ ಪಟ್ಟಿಯಲ್ಲಿದೆ! ಗಾಂಧಿಯವರ ಹೆಸರನ್ನು ಲೀಗ್ ಪಟ್ಟಿಯಲ್ಲಿ ಸೇರಿಸಿ ಪ್ರತೀಕಾರ ಮಾಡಲವಕಾಶವಿಲ್ಲ'
ಕ ಯುಪ್-ಇ ಆಯಜಾಮರು 'ಮಾನ್ಯ ಕಾಯಿದೇ ಸದಸ್ಯ'ರಾಗುವರೇ?

ಲೀಗ್ ಕಾರ್ಯಕಾರೀ ಸಮಿತಿಯು ತಾ ೧ನೇ ಪೂರ್ವಾಹ್ನ-ಅಪರಾಹ್ನ ಮತ್ತು ತಾ 7ನೇ ಪೂರ್ವಾಹ್ನ ಸಿಮ್ಲಾದ ಸೆಸಿಲ್ ಹೊಟೆಲಿನಲ್ಲಿ ಸುಮಾರು 7ಘಂಟೆ ಚರ್ಚಿಸಿ ಕೊನೆಗೆ ಸರ್ವಾನುಮತಿಯ ನಿರ್ಧಾರವೊಂದಕ್ಕೆ ಬಂದಿದೆ

ಸಮಿತಿಯ ನಿರ್ಧಾರವನ್ನೊಳಗೊಂಡ ಮೊಹರುಸಿಸಿ ಗೂಢ ಪತ್ರವೊಂದನ್ನು ಮಿ ಜಿನ್ನರ ಕಾರ್ಯದರ್ಶಿ ತಾ 7ನೇ ಅಪರಾಹ್ನ ವೈಸರಾಯರಿಗೊಪ್ಪಿಸಿದ್ದಾರೆ.

ಕೇಂದ್ರಾಧಿಕಾರೀ ಸಮಿತಿಯ ಸಂಖ್ಯೆ ಮತ್ತು ಮುಸಲ್ಮಾನರ ಸ್ಥಾನಗಳೆಷ್ಟೆಂಬುದನ್ನು ತಿಳಿಸಬೇಕು; ಮುಸ್ಲೀಂ ಸ್ಥಾನಗಳೆಷ್ಟೋ ಅಷ್ಟೇ ಹೆಸರುಗಳನ್ನು ಲೀಗು ಸೂಚಿಸಲಿರುವರಿಂದ ಅದನ್ನು ತಬ್ದೀಲು ವಿನಹಾ ಒಪ್ಪಿಕೊಳ್ಳಬೇಕ ; ಅದರಲ್ಲಾವುದಾದರೂ ಹೆಸರುಗಳು ವೈಸರಾಯಿಗಳಿಗೆ ಮಾನ್ಯವಾಗದದ್ದಲ್ಲಿ ಬದಲಿ ಹೆಸರುಗಳನ್ನು ಮಿ. ಜಿನ್ನರೇ ಸೂಚಿಸಲಿದ್ದಾರೆ— ಈ ಕುರಿತು ಸ್ಪಷ್ಟ ಆಶ್ವಾಸನೆ ದೊರೆಯದೆ ತಮಗೆ ಹೆಸರುಪಟ್ಟಿಯೊಪ್ಪಿಸಲು ಸಾಧ್ಯವಿಲ್ಲವೆಂದೇ ಆ ಪತ್ರದಲ್ಲಿ ಬರೆಯಲಾಗಿದೆ ಎಂದು ತಿಳಿದುಬರುತ್ತದ

ತಾ. ೭ರಲ್ಲಿ ವೈಸರಾಯರು ಜಿನ್ನರನ್ನು ಕರೆಯಿಸಿ ಮಾತಾಡಿದ್ದಾರೆ

ಮಿ ಜಿನ್ನರು ಮಾತಾಡಿ ಬಂದೊಡನೆಯೇ ಮೌ. ಅಜಾದರಿಗೆ ವೈಸರಾಯೀ ಕರೆ ಬಂದು ಅವರೂ ಸಂಭಾಷಿಸಿ ಬಂದಿದ್ದಾರೆ.

ಮುಂದಿನ ಪರ್ಯಾಲೋಚನೆಗಾಗಿ ಲೀಗ್ ಕಾರ್ಯಕಾರೀ ಸಮಿತಿಯ ಸಭೆ ಯಥಾ ಪ್ರಕಾರ ಜರಗುತ್ತಿದೆ

ಲೀಗಿನ ಅದೃಷ್ಟ ನಿರ್ಮಾಪಕ ನಿರ್ಧಾರ

ತನ್ನ ಜೀವಮಾನದಲ್ಲಿ ಇದು ವರೆಗೂ ಕಾಂಗ್ರೆಸ್ ವಿರೋಧ ನಿರ್ಧಾರಗಳನ್ನಷ್ಟೇ ಮಾಡಿ ಅಭ್ಯಾಸವಿದ್ದ ಲೀಗ್ ಕಾರ್ಯಕಾರೀ ಸಮಿತಿಯು ಈ ಬಾರಿ ಕಠಿಣ ಸನ್ನಿವೇಶ-ಅಭೇದ್ಯ ಪ್ರತಿಭಟನೆ-ಗೂಢ ಯಾತನೆಗೊಳಗಾಗಿ, ತಾ 6ನೇ ಮುಂಜಾನೆ ಸಿಮ್ಲಾದ ಸಿಸಿಲ್ ಹೊಟೆಲಿನಲ್ಲಿ ಮಿ. ಜಿನ್ನರ ಸಮಕ್ಷಮ ಪ್ರಥಮ ಬಾರಿ ಕೂಡಿ ಬಂತು. ೨೨ಸದಸ್ಯರ ಪೈಕಿ ಒಬ್ಬನ ವಿನಹ ಮಿಕ್ಕೆಲ್ಲರೂ ಹಾಜರಿದ್ದರು. ಅಧ್ಯಕ್ಷ ಜಿನ್ನಾ, ನವಾಬಜಾದಾ ಲಿಯಾಖತ್ ಅಲೀಖಾನ್, ಮಹಮ್ಮದಾಬಾದಿನ ರಾಜ, ನವಾಬ್ ಮಹಮ್ಮದ್ ಇಸ್ಮಾಯಿಲ್, ಚೌಧರಿ ಖಲಿಕುಝಮಾನ್, ಮಾಮ್ಡೋತಿನ ನವಾಬ್ ಇಫ್ತಿಕಾರ್ ಹುಸ್ಸೇನ್, ಮಿಯಾನ್ ಬಶೀರ್ ಅಹಮ್ಮದ್, ರಾವ್ ಬಹದೂರು ಕರ್ಮತ್ ಅಲಿ, ಸರ್ದಾರ್ ಔರಂಗಜೇಬ್ ಖಾನ್, ಸರ್ದಾರ್ ಅಬ್ದುರ್ ರಾಬ್ ನಿಶ್ತಾರ್, ಖಾಜೀ ಮಹಮ್ಮದ್ ಇಸಾ, ಮಿ. ಜಿ. ಯುಸುಫ್ ಸಯ್ಯದ್, ಸರ್ ಕೆ. ನಾಜಿಮುದ್ದೀನ್, ಮಿ. ಹಸ್ಸನ್ ಇಸ್ಫಹಾನಿ, ಮಿ. ಹುಸ್ಸೇನ್ ಇಮಾಮ್, ಹಾಜಿ ಅಬ್ದುಲ್ ಸತ್ತಾರ್ ಇಸ್ಹಾಕ್ ಸೇಟ್, ಮಿ ಅಬ್ದುಲ್ ಮಾತಿನ್ ಚೌಧರಿ, ಮಿ. ಇಸ್ಮಾಯಿಲ್ ಚುಂದ್ರಿಗಾರ್, ಮಿ ಲಾಟಿಫುರ್ ರಹಿಮಾನ್, ಸಯ್ಯದ್ ಅಬ್ದುರ್ ರಾವೂಫ್ ಶಾ ಬೇಗಮ್ ಮಹಮ್ಮದಾಲಿ-ಕೂಡಿ ಬಂದಿದ್ದರು. ವಿಶೇಷಾಮಂತ್ರಣ ಪಡೆದ ಅಸ್ಸಾಮ್ ಮತ್ತು ಸಿಂಧಿನ ಲೀಗ್ ಪ್ರಧಾನ ಮಂತ್ರಿಗಳಾದ, ಸರ್. ಮಹಮ್ಮದ್ ಸಾದುಲ್ಲಾ ಮತ್ತು ಸರ್ ಗುಲಾಮ್ ಹುಸ್ಸೇನ್ ಹಿದಯತುಲ್ಲರು ಹಾಜರಿದ್ದರು ಸಮಿತಿ ಸಭೆಯು ಸರ್ತಿಬಿಡದೆ ನಡೆದಿದೆ.

ಲೀಗಿನ ಮುಂದಿದ್ದ ಸಮಸ್ಯೆಗಳು

ಇದುವರೆಗೆ ಎಲ್ಲಾ ದೇಶಾಭಿಮಾನಿಗಳಿಗೂ ಉದರಶೂಲೆ ನಿರ್ಮಿಸುವದರಿಂದಲೇ ತೃಪ್ತಿಪಡುತಿದ್ದ ಮಿ. ಜಿನ್ನರು ಸಿಮ್ಲಾದ ವರೆಗೆ ಹಿಗ್ಗುತ್ತಾ ಹೋಗಿದ್ದರಾದರೂ ಅಲ್ಲಿ ಸಿಕ್ಕಿಬಿದ್ದಂತಾಗಿದ್ದರು ಆದ್ದರಿಂದ ಲೀಗ್ ಕಾರ್ಯಕಾರೀ ಸಮಿತಿಯ ಕಣ್ಮುಂದೆ ತ್ರಿಕಾಲಗಳೂ ಸುತ್ತುತಿದ್ದುವು. ಮುಸಲ್ಮಾನರ ಸ್ಥಾನಗಳ ಅಧಿಕಾರವೆಲ್ಲಾ ಲೀಗಿಗೆಂಬ ಆಶ್ವಾಸನೆ ದೊರೆಯದೆ ವೈಸರಾಯರು ಅಪೇಕ್ಷಿಸಿದ ಹೆಸರುಯಾದಿಗಳನ್ನೊಪ್ಪಿಸಬೇಕೋ ಬೇಡವೋ ಅಂತಹ ಆಶ್ವಾಸನೆ ದೊರೆಯದಿದ್ದಲ್ಲಿ ಹೆಸರು ಸೂಚಿಸದೇನೇ ಅಸಹಕರಿಸಬೇಕೋ—ಹೆಸರು ಪಟ್ಟಿಯೊಪ್ಪಿಸಿ ಸಮ್ಮೇಲನದಲ್ಲಿ ಹೋರಾಡಬೇಕೋ? ಲೀಗು ಮುಸ್ಲೀಮರ ಏಕಮಾತ್ರ ಪ್ರತಿನಿಧಿಯೆಂಬುದನ್ನು ವೈಸರಾಯರೆಷ್ಟಕ್ಕೂ ಒಪ್ಪದಿದ್ದರೆ ಮುಂದೇನ? ಕಾಂಗ್ರೆಸ್ ಮತ್ತು ಇತರ ಎಲ್ಲಾ ಅಲ್ಪಸಂಖ್ಯಾಕರೂ ಸಹಕಾರಕ್ಕೆ ಸಿದ್ಧರಿರುವಾಗ ವೈಸರಾಯರು ಲೀಗನ್ನು ಅಲಕ್ಷಿಸಿ ತನ್ನ ಯೋಜನೆಯನ್ನು ಮುಂದೊತ್ತಿದರೇನು ಗತಿ! ಕಾಂಗ್ರೆಸ್ ಮತ್ತಿತರರು ಅಧಿಕಾರ ವಹಿಸಿದರೆ ಅವರಾಡಳಿತೆಯನ್ನು ಆತಂಕಿಸುವ ಶಕ್ತಿ ಲೀಗಿಗಿದೆಯೆ?—ಮುಂತಾದ ಕಠಿಣ ಪ್ರಶ್ನೆಗಳು-ಅಭಿಮಾನವುಳಿಸಿಕೊಳ್ಳಬೇಕೋ ಅಸ್ತಿತ್ವವುಳಿಸಿಕೊಳ್ಳಬೇಕೋ ಎಂಬಂತಹ ಒತ್ತು ಸವಾಲುಗಳು-ಲೀಗಿನ ಮುಂದೆ ಎದ್ದಿದ್ದುವು

ಜಿನ್ನರ ಮುಷ್ಕರ ಧೋರಣೆ

ಎಲ್ಲಕ್ಕುತ್ತರವಾಗಿ ಮಿ. ಜಿನ್ನರ ಹಠಮಾರಿತನವೇ ಮಂಜೂರಾಯಿತೆನ್ನಬೇಕು. ನವಾಬರು, ನವಾಬ ಪುತ್ರರು, 'ಸರ್'ಗಳು ಮತ್ತು ಶ್ರೀಮಂತರಿಂದಲೇ ತುಂಬಿರುವ ಲೀಗ್ ಸಮಿತಿಯಲ್ಲಿ ರಾಜಕೀಯ ಕಳಕಳಿಯುಳ್ಳವರೆಂದರೆ ಮಿ ಜಿನ್ನರೊಬ್ಬರು—ಅವರ ಛಾಯೆಯಂತಿರುವ ಕಾರ್ಯದರ್ಶಿ ನವಾಬಜಾದಾ ಲಿಯಾಖತ್ ಖಾನರೊಬ್ಬರು. ಆದ್ದರಿಂದ 'ವೈಸರಾಯರಿಂದ ಸಮಾಧಾನಕರ ಸ್ಪಷ್ಟೀಕರಣ ದೊರೆಯದಿದ್ದರೆ ಹೆಸರುಪಟ್ಟಿಯೊಪ್ಪಿಸದೇನೇ ಅಸಹಕರಿಸಬೇಕು' ಎಂಬ ಜಿನ್ನರ ಹಠಮಾರಿತನವೇ ಮಾನ್ಯವಾಯಿತು. ಮಿ. ಜಿನ್ನರ ಸೂಚನೆಗಳನ್ವಯ ಮೂವರ ಉಪಸಮಿತಿಯೊಂದು ವೈಸರಾಯರಿಗೊಪ್ಪಿಸುವ ಉತ್ತರ ತಯಾರಿಸಿತು. ಲೀಗ್ ಸಮಿತಿಯಲ್ಲಿ ತೀವ್ರ ಚರ್ಚೆ ನಡೆದಿತ್ತೆಂದೂ ಸರ್. ಗುಲಾಮ್ ಹುಸ್ಸೇನ್ ಹಿದಯತುಲ್ಲರಂಥವರು ಹೆಸರುಯಾದಿಯೊಪ್ಪಿಸಬೇಕೆಂದು ವಾದಿಸಿದ್ದರೆಂದೂ ವಾರ್ತೆಯಿದೆ ಮಿ ಜಿನ್ನರ ಧುರೀಣತ್ವದಲ್ಲಿ ಪೂರ್ಣ ವಿಶ್ವಾಸ ವ್ಯಕ್ತಪಡಿಸಿ, ಅಖಿಲ ಭಾರತದ ಮೂಲೆಮೂಲೆಗಳಿಂದ ಮುಸಲ್ಮಾನ್ ಸಂಘಸಂಸ್ಥೆಗಳು, ಸಾರ್ವಜನಿಕ ಸಭೆಗಳು, ಮತ್ತು ಗುರುಗಳು ಜಿನ್ನರಿಗೆ ಕಳುಹಿರುವ ತಂತೀವಾರ್ತೆಗಳು 500ಕ್ಕೂ ಮಿಕ್ಕಿವೆ. ಮಜ್ಲೀ, ಮೊಮಿನ್, ಶಿಯಾ, ಇತ್ಯಾದಿ ಲೀಗೇತರ ಮುಸಲ್ಮಾನರೆಲ್ಲಾ ಅಜಾದರಿಗೂ ಕಾಂಗ್ರೆಸಿಗೂ ಬೆಂಬಲವಾಗಿ ನಿಂತಿದ್ದಾರೆ. ಬ್ರಿಟಿಷ್ ಯೋಜನೆಯಲ್ಲಿ ಲೀಗ್ ಮಾತ್ರ ಅಸಹಕರಿಸಿ ಪ್ರಾಂತ್ಯಗಳೆಲ್ಲಾ ಕಾಂಗ್ರೆಸು ಅಧಿಕಾರ ವಹಿಸಲು ಮುಂದಾದರೆ ಪ್ರಕೃತ ಲೀಗ್ ಮಂತ್ರಿಮಂಡಲವಿರುವ ಅಸ್ಸಾಮ್ ಮತ್ತು ಸಿಂಧ್ ಸರಕಾರಗಳ ಭವಿಷ್ಯಕ್ಕೂ ಭದ್ರತೆಯಿಲ್ಲವೆಂದು ಮುಸ್ಲಿಂ ಪ್ರಮುಖರಲ್ಲಿ ಭಯವೆದ್ದಿದೆ. ತಮ್ಮ ನಿಸ್ಸಹಾಯಕತೆಯನ್ನು ಮನಗಂಡ ಕೆಲವು ಲೀಗ್‌ಪ್ರಮುಖರು ಕಾಂಗ್ರೆಸಿನೊಡನೆ ಸಂಧಾನ ಹೂಡಬೇಕೆಂಬ ಆತುರದಲ್ಲಿದ್ದಾರೆ. ವೈಸರಾಯಿಗಳೊಡನೆ ವ್ಯವಹರಿಸಿ ಗೆಲ್ಲುವ ಆಶೆಯಿಲ್ಲವೆಂಬ ಗೂಢ ವ್ಯಸನಕ್ಕೆ ಮಿ. ಜಿನ್ನರೀಡಾಗಿದ್ದಾರೆಂಬುದಕ್ಕೂ ನಿದರ್ಶನ ದೊರೆತಿದೆ. ಗಾಂಧೀ ಸಂಭಾಷಣೆಯಲ್ಲಿ ಕಾಲಕಳೆದು

ವಿಧವೆಯ ವಿಲಾಪ!

ಗಂಡ ಗಳಿಸುವಾಗ ಉಳಿಸಲಿಲ್ಲ— ವಿಮೆ ಇಳಿಸಲಿಲ್ಲ!
ಇದ್ದಾಗ ಸುಖದ ಸುಗ್ಗಿ ಕಂಡೆ ಆದರೆ ಈಗ?

ನಿರಾಧಾರ—ನಿಟ್ಟುಸಿರು—ನಿರಾಶೆ!

ಇಂದೇ ಜೀವ ವಿಮೆ ಇಳಿಸಿರಿ.

ವಿಮೆ ಇಳಿಸಿದ್ದರೆ
ಈ ಕಷ್ಟಕಾಲದಲ್ಲಿ ಅದೇ
ಕಾಪಾಡುತ್ತಿತ್ತು!

ದಿ ಯುನೈಟೆಡ್ ಕರ್ನಾಟಕ
ಇನ್ಸುರೆನ್ಸ್ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co LTD DHARWAR

The Representative Insurance Concern of KARNATAK.

ಕನ್ನಡ ನಾಡಿನ ಪ್ರಾತಿನಿಧಿಕ ಜೀವವಿಮಾ ಸಂಸ್ಥೆ.

★ ಇಂಗ್ಲಾಂಡಿನಲ್ಲಾದ ಮಹಾ ಚುನಾವಣೆ. ★

ಕೆಲವು ಸ್ವಾರಸ್ಯ ಘಟನೆಗಳು.

ಜುಲಾಯಿ ತಾ. 5; ಗ್ರೇಟ್ ಬ್ರಿಟನಿನ 25,000,000 ಮತದಾರರು ತಮ್ಮ ಅಧಿಕಾರ ಪ್ರದರ್ಶಿಸಿದ ದಿನ. ಪಾರ್ಲಿಮೆಂಟಿಗೆ 640 ಮಂದಿಯನ್ನು ಆರಿಸಿ ಕಳುಹ ಬೇಕಿತ್ತು. ತಾ 5ರ ಚುನಾವಣೆಯು ವಿಶೇಷ ಗೊಂದಲವಾವುದೂ ಇಲ್ಲದೆ ಸುಗಮವಾಗಿ ನಡೆದು ಹೋಯಿತು. ಪೋಲಿಂಗ್ ಸ್ಟೇಶನುಗಳು ಸುವ್ಯವಸ್ಥೆಯ ಮಾದರಿ ಮಟ್ಟದಲ್ಲಿದ್ದುವು ಮತದಾನವು ಪೂರ್ವಾಹ್ನ ಮಂದಗತಿಯಲ್ಲಿದ್ದರೂ ಅಪರಾಹ್ನ ಅತ್ಯೌತ್ಸುಕವಿದ್ದಿತು, ಅಧಿಕ ಸಂಖ್ಯಾಕರ ಮತದಾನ ನಡೆದಿದೆ

ಜುಲಾಯಿ 26ಕ್ಕೆ ಪರಿಣಾಮ ಪ್ರಕಟಣೆ

ಮತಗಣನೆ ತಾ. 26ಕ್ಕೆ ನಡೆದು ಫಲಿತಾಂಶವು ಪ್ರಕಟಿಸಲ್ಪಡಲಿದೆ, ಬ್ರಿಟನಿನ ಮತ್ತು ಪ್ರಪಂಚದ ಎಲ್ಲಾ ಯುದ್ಧ ರಂಗದಳಲ್ಲಿರುವ ಸೋಲ್ಜರರೇ ಮೊದಲಾದವರ ವೋಟಿನ ಪೆಟ್ಟಿಗೆಗಳು ವಿಮಾನ ಮೂಲಕ ಬರಹತ್ತಿವೆ, ಅವುಗಳನ್ನು ಆಯಾಯಾ ಸ್ಥಳಗಳ ಪೆಟ್ಟಿಗೆಗಳೊಳಗೆ ತುಂಬಿಸಿ ಪುನಃ ಮೊಹರೊತ್ತಿ ತಾ. 26ರ ವರೆಗೆ ಭದ್ರತೆಯಲ್ಲಿ ಇಡಲಾಗುವದು. ಸ್ಕಾಟ್ಲೆಂಡಿನ ಕೆಲವೆಡೆಗಳಲ್ಲಿ ರಜೆಯ ನಿಮಿತ್ತ ಇನ್ನೂ ಚುನಾವಣೆ ನಡೆಯುತ್ತಿದೆ

ಗತ ಪಾರ್ಲಿಮೆಂಟು

ಹತ್ತು ವರುಷ ಬಾಳಿದ-ಅತಿದೊಡ್ಡ ಹೊಣೆ ನಿರ್ವಹಿಸಿದ್ದ-ಹಿಂದಿನ ಪಾರ್ಲಿಮೆಂಟು ಬರ್ಖಾಸ್ತಾಗಿ ನವ ಪಾರ್ಲಿಮೆಂಟಿನ ಜನನ ದಿನ ನಿರೀಕ್ಷೆಯಲ್ಲಿದೆ. ಕಳೆದ ಪಾರ್ಲಿಮೆಂಟು ಅನುಕ್ರಮವಾಗಿ ನಾಲ್ಕು ಮಂತ್ರಿಮಂಡಲಗಳನ್ನು ನಿರ್ಮಿಸಿದ್ದಿತು ಪ್ರಥಮತಃ ಸ್ಟ್ಯಾನ್ಲೆ ಬಾಲ್ಡ್ವಿನ್ ಸರಕಾರ, ಆ ಮೇಲೆ ನೆವಿಲ್ಲ ಚೇಂಬರ್ಲೀನ್ ಮಂತ್ರಿಮಂಡಲ, ಮೂರನೆಯದು ವಿನ್‌ಸ್ಟನ್ ಚರ್ಚಿಲ್ಲರ ಸಮ್ಮಿಶ್ರ ಯುದ್ಧ ಮಂಡಲ ನಾಲ್ಕನೆಯದೆಂದರೆ ಚರ್ಚಿಲ್ಲರು ಇತ್ತೀಚೆಗೆ ಸ್ಥಾಪಿಸಿಕೊಂಡ ಟೋರಿ—ರಾಷ್ಟ್ರೀಯ ಲಿಬರಲ್ ಮಿಶ್ರಿತ 'ಕೇರ್‌ಟೇಕರ್' ಮಂತ್ರಿಮಂಡಲ. ಕಳೆದ ಪಾರ್ಲಿಮೆಂಟಿನಲ್ಲಿದ್ದ ಒಟ್ಟು 615 ಸ್ಥಾನಗಳಲ್ಲಿ ಕನ್ಸರ್ವೇಟಿವರಿಗೆ ಅವರ ಬೆಂಬಲಿಗರಾದ ರಾಷ್ಟ್ರೀಯ ಲಿಬರಲ್ ಮತ್ತು ರಾಷ್ಟ್ರೀಯ ಲೇಬರರ ಸಮೇತ 431 ಸ್ಥಾನಗಳಿದ್ದುವು ಪ್ರಮುಖ ವಿರುದ್ಧ ಪಕ್ಷವಾದ ಲೇಬರ್ ಪಾರ್ಟಿಗಿದ್ದುದು 161, ಮತ್ತವರ ಹಿಂಬಾಲಕರಾದ ಸನಾತನೀ ಲಿಬರಲರಿಗೆ 21 ಸ್ಥಾನಗಳು

ಈ ಬಾರಿ ಹೇಗೆ?

ಈ ಬಾರಿ ಕೂಲಿಗಾರ ಪಕ್ಷಕ್ಕೆ ಕಳೆದ ಬಾರಿಗಿಂತ ಹೆಚ್ಚು ಸ್ಥಾನಗಳು ದೊರಕುವದು ನಿಸ್ಸಂದೇಹ. ಆದರದು ಸರ್ವ ಪ್ರಥಮವಾಗಿ ಜಯಿಸಿ ಬರುವದೆಂಬುದರಲ್ಲಿ ಅನುಮಾನವಿದೆ ಚರ್ಚಿಲ್ಲರಿಗೆ ಕಡಿಮೆಯೆಂದರೆ 70 ಸ್ಥಾನಗಳ ಒಹುಮತ ತಪ್ಪಿದರೂ ದೂರ ಕಾಣುದೆಂದ ಅವರ ಅನುಯಾಯಿಗಳ ಊಹೆ ಆದರ ಚುನಾವಣೆಯ ನಂತರ ಲೇಬರ್ ಪಕ್ಷೀಯರ ವಿಜಯ ಬರವಸೆ ಇಮ್ಮಡಿಯಾದಂತಿದೆ. 'ನಮಗೆ ಒದಗುತ್ತಿರುವ ವರದಿಗಳ ಆಧಾರದಿಂದ ಹೇಳುವದಾದರೆ ಈ ಬಾರಿ ಗೆದ್ದು ಬರುವ ಟೋರಿ ಒಬ್ಬನೇ-ವಿನ್‌ಸ್ಟನ್ ಚರ್ಚಿಲ್'-ಎಂದೊಬ್ಬ ಕೂಲಿಗಾರ ಪಕ್ಷೀಯರೆಂದಿದ್ದಾರೆ. ಕಡಿಮೆಯೆಂದರೆ ಹಿಂದಿಗಿಂತ 100 ಸ್ಥಾನಗಳ ಲಾಭವಾದರೂ ತಮಗೀಬಾರಿ ಇದೆ ಎಂದು ಆ ಪಕ್ಷದ ಭರವಸ ಲೇಬರ್ ಮತ್ತು ಲಿಬರಲ್ ಪಕ್ಷೀಯರು ಪಾರ್ಲಿಮೆಂಟಿನಲ್ಲಿ ಒಂದುಗೂಡುವ ಸಂಭವವಿದೆ

ಮಾಜೀ ಮಂತ್ರಿಗಳ ಸಂದೇಹಾತ್ಮಕ ಸ್ಥಿತಿ

ಪ್ರಧಾನ ಮಂತ್ರಿ ಚರ್ಚಿಲ್ ಮತ್ತು ಕೂಲಿಗಾರ ಪಕ್ಷ ಪ್ರಮುಖ ಆಟ್ಲಿಯವರ ಪ್ರಬಲ ಒಹುಮತ ಪಡೆದಿರುವದು ಖಂಡಿತ. ಆದರೆ ಚರ್ಚಿಲ್ಲರ ಕೊನೆಯ ಸರಕಾರದಲ್ಲಿ ಸುದ್ದಿ ಖಾತೆ ಮತ್ತು ಮಾಹಿತಿಯ ಶಿರಸ್ಥಾನಿಗಳಿದ್ದ ಬ್ರೆಂಡನ್ ಬ್ರೇಕನರ ಮರಳಿ ಬರುವದು ಸಂದೇಹಕರ ಲೇಬರ್ ತ್ರಿಮೂರ್ತಿಗಳಲ್ಲಿಬ್ಬರಾದ ಮೊರಿಸನ್ ಮತ್ತು ಬೆವಿನರು ಗೆಲ್ಲುತ್ತಾರಾದರೆ ಅಲ್ಪ ಒಹುಮತದಿಂದಲೇ. ಮಿಕ್ಕ ಪ್ರಮುಖ ಉಮೇದ್ವಾರಿಗಳೂ ವಿಜಯದ ಕುರಿತು ಗೊಂದಲ ಮನೋವೃತ್ತಿಗೀಡಾಗಿದ್ದಾರೆ. ಕಳೆದ ಬಾರಿ 18 ಮಂದಿ ಮಾತ್ರವಿದ್ದ ಸರ್. ಸಿಂಕ್ಲೇರರ ಲಿಬರಲ್ ಪಕ್ಷವೂ ಈ ಬಾರಿ ತನಗೆ 80ರಿಂದ 100ರ ವರೆಗೆ ಸ್ಥಾನಗಳು ದೊರಕುವವೆಂದು ಆಶಿಸುತ್ತಿದೆ ಮುಂದೆ ನಡೆಯಲಿರುವ ಫ್ರಾನ್ಸ್, ಬೆಲ್ಜಿಯಮ್, ಹಾಲೆಂಡ್ ಮೊದಲಾದ ಯುರೋಪಿನ ಎಲ್ಲಾ ರಾಷ್ಟ್ರಗಳ ಚುನಾವಣೆಗಳಲ್ಲಿಯೂ ಬ್ರಿಟಿಷ್ ಚುನಾವಣೆಯ ಪರಿಣಾಮ ಬೀಳಬಹುದಾದ್ದರಿಂದ ಎಲ್ಲರೂ ಪರಿಣಾಮವನ್ನು ಆತುರದಿಂದ ನಿರೀಕ್ಷಿಸುತ್ತಿದ್ದಾರೆ.

ಸ್ಪಾರ್ಕ್‌ಬ್ರೂಕ್ ಸ್ಪರ್ಧೆ

ಅಮೆರಿ—ಶರ್ಮಾರ್—ದತ್ತರ ಸ್ಪರ್ಧೆಯಿದ್ದ ಸ್ಪಾರ್ಕ್ ಬ್ರೂಕಿನ ಮತದಾರರು ಮುಂಕರಂಬಂತೆ ಹೆಚ್ಚಿನವರು ಮತದಾನ ಮಾಡಿರಲಿಲ್ಲ ಮಿ. ಅಮೆರಿ ಗೆಲ್ಲುವದು ನಿಶ್ಚಯ ಶರ್ಮಾರ್ ತ 26ರ ವರೆಗೂ ಅ ನ ಕಟ್ಟಿಕೊಳ್ಳಬೇಕಾದ ಶ್ರೀ ದತ್ತರ ಡಿಪೋಸಿಟ್ ಹಣ ಮರಳಿ ದೊರೆಯುವದಂತೆ ಬರವಸೆಯಿದ ಪ್ರಚಾರದ ಪಟ್ಟಿಗೆ ಪ್ರಥಮ ಸ್ಥಾನ ಶ್ರೀ ದತ್ತರಿಗೇನೇ ಲೇಬರ್ ಮತ್ತು ಕಮ್ಯೂನಿಸ್ಟ್ ಪಕ್ಷೀಯರ ಕಟು ವಿಮರ್ಶೆಗಳಿಂದಾಗಿ ಅ ಅಮೇರಿಗಳು ಆತ್ಮಾವಲೋಕನೆ ಮಾಡಿಕೊಳ್ಳ ಬೇಕಾ ದೀನರಾಗಿ ಹೋಗಿದ್ದರು

ಮತದಾರ ಪಟ್ಟಿಯ ದೋಷ

ನಾದುರಸ್ತಿಯ ಮತದಾರ ಪಟ್ಟಿಗಳಿಂದಾಗಿ ಪ್ರತಿಯೊಂದು ಪೋಲಿಂಗ್ ಸ್ಟೇಶನಿನ ಹೊರಗಡೆಯಲ್ಲೂ ಮತದಾನದ ದಿನ ಪ್ರೇಕ್ಷಕರ ಸಮೂಹ ನೆರೆದು ನಿಷೇಧ ಪ್ರದರ್ಶಿಸುತ್ತಿದ್ದರು ಮಿ. ಚರ್ಚಿಲ್ಲರ ಹೆಸರೇ ಮತದಾರ ಪಟ್ಟಿಯಲ್ಲಿಲ್ಲವೆಂಬುದೊಂದು ಸ್ವಾರಸ್ಯ. ಹಳ್ಳಿ ಮತ್ತು ಯುಗಳ ಮತಗಳು ಹೆಚ್ಚಾಗಿ ಕೂಲಿಗಾರ ಪಕ್ಷಕ್ಕೆ ದೊರಕಲಿವೆ ಕೂಲಿಗಾರ ಹುರುಪಿನಿಂದಾಗಿ ಚುನಾವಣೆಯ ಸಮೀಪದ ದಿನಗಳಲ್ಲಿ ಮಿ. ಅಮೆರಿಯವರಿಗ ಸಭಾ ಸಮಯಗಳಲ್ಲಿ ಪೋಲಿಸು ಸಹಾಯ ಬೇಕಾಗಿತ್ತು

ವಿಶೇಷ ಘಟನೆಗಳು

ಚುನಾವಣೆಯ ದಿನ ಸಮೀಪಿಸಿದಾಗ ಚರ್ಚಿಲ್ಲರು ಸ್ವತಃ ವಿಶೇಷ ಹುರುಪಿನಿಂದ ಪ್ರಚಾರಕ್ಕೆ ಹೊರಟಿದ್ದರು ಅವರನ್ನು ಹೆಚ್ಚಿನ ಕಡೆಗಳಲ್ಲಿ ಜನ ಸಮೂಹವೇ ನೆರೆದು ಸ್ವಾಗತಿಸಿ, [illegible] ಹರ್ಷಿಸುತ್ತಿದ್ದರೂ ಕೆಲವೆಡೆ [illegible] ರನ್ನು ಮಾತಾಡಲಿಕ್ಕೇನೇ ಬಿಡಲಿಲ್ಲ ರಸ್ತೆ ತುಂಬಾ ಕೂಡಿ ಬಂದು ಚರ್ಚಿಲ್ಲರ ಕಾರನ್ನು 'ಹೂ'ಗರೆದು ಎಬ್ಬಿಸಿದುದೂ ಇದೆ ಬಂದಡೆ [illegible] ಎಕ್ಕೇ ತರುಣನು ಚರ್ಚಿಲ್ಲರು ಪ್ರಚಾರಕ್ಕಾಗಿ ತೆರೆದ ಬಯಿಗೇನೇ ಗುರಿಯಿಟ್ಟು ಕಪ್ಪು [illegible] ಕೋಟೆಗೆಸೆಯಲ್ಪಟ್ಟಿದ್ದಾನೆ ಮತ್ತೊಂದು ಕಡೆ ಎರಡು ಕತ್ತೆಗಳು ಪ್ರಧಾನಿಗಳನ್ನು ಸ್ವಾಗತಿಸಿದವು 'ನಾನು ಟೋರಿಗಳಿಗೆ ವೋಟು ಕೊಡುತ್ತೇನೆ' 'ನನಗೆ ಟೋರಿಗಳ ಪಾರ್ಲಿಮೆಂಟಿನ ಮೇಲೆ ತುಂಬಾ ವಿಶ್ವಾಸ ಎಂದೆರಡು ಪಟ್ಟಿಗಳನ್ನು ಅವೆರಡಕ್ಕೆ ಹತ್ತಲಾಗಿತ್ತು ಹಾಳುಬಿದ್ದ ಮನೆಗಳಲ್ಲಿ 'ಇದು ಟೋರಿಗಳ ರಚನೆ' ಎಂಬ ಬೋರ್ಡುಗಳಿದ್ದುವು. ಒಂದು ಸಭೆಯಲ್ಲಿ ಮಿ ಅಮೆರಿಯವರಿಗೆ, ಅವರ ಪುತ್ರ ನಾಜೀ ಪ್ರಚಾರಕ ಜೋನ್ ಅಮೆರಿ [illegible] ಒಂಥದ ಪ್ರಶ್ನೆಗಳು ಬಂದುದರಿಂದ ಭಾರತ ಕಾರ್ಯದರ್ಶಿಯು ಗದ್ದಲ ಕೆಂಪೇರಿ 'ತಮ್ಮ ನುದ್ದೇಶಿಯ ಪ್ರಶ್ನೆ ಕೋರ್ಟಿಗೆ ಸಂಬಂಧಪಟ್ಟದ್ದು' ಎಂದಾಗ ಜನರು ರೇಗಿ ಅವರ ಮೈಮೇಲೇರಿ ಹೋಗಿದ್ದರು.

ಮುಂದೇನು?

ಚುನಾವಣೆಯ ಫಲಿತಾಂಶ ಪ್ರಕಟಣೆಗೆ ಮೊದಲೇ ಬರ್ಲಿನಿನಲ್ಲಿ ತ್ರಿಮೂರ್ತಿ ಸಮ್ಮೇಲನ ಸೇರಲಿದೆ ವಿರುದ್ಧ ಪಕ್ಷದ ನಾಯಕ ಮಿ ಆಟ್ಲಿಯವರು ಜರ್ಮನ್ ಪ್ರಯಾಣಕ್ಕಾಗತ್ಯವಿರುವ ಪಾಸು ಹಾಕಿಸಿಕೊಂಡು ತಯಾರಾಗಿದ್ದಾರೆ 'ಆಟ್ಲಿಯವರು ಕೇವಲ ನಿರೀಕ್ಷಕರಾಗಿ ಹೋಗುತ್ತಾರಲ್ಲದೆ ಅಧಿಕೃತರಾಗಿ ಅಲ್ಲ' ಎಂದು [illegible] ರ್ [illegible] ಕಾರ್ಯಕಾರೀ ಸಮಿತಿ ಅಧ್ಯಕ್ಷ ಪ್ರೊ. ಲಾಸ್ಕಿಯವರು ಹೇಳಿದ [illegible] ಟೋರಿಗಳು ಈ ಚುನಾವಣೆಯಲ್ಲಿ ಪರಿಸ್ಥಿತಿಗಳಿಗೆ ಪ್ರಚಾರ ಮಾಡಿದ್ದರು. ಆಟ್ಲಿಯವರನ್ನು ರದ್ದು ಪಡಿಸೆಂದು ಚರ್ಚಿಲ್ಲರು ಮಿ ಆಟ್ಲಿಗೆ ಒದಗಿದ [illegible] ಆಟ್ಲಿಯವರು ಎಲ್ಲವನ್ನೂ ಧಿಕ್ಕರಿಸಿದ್ದರು ಈ ಜಗತ್ಪ್ರಸಿದ್ಧ ತ್ರಿಮೂರ್ತಿ ಸಮ್ಮೇಲನಕ್ಕೆ ಆಟ್ಲಿಯವರನ್ನು ಮಿ. ಚರ್ಚಿಲ್ಲರು ಕರೆದೊಯ್ಯುತ್ತಿದ್ದೆಂಬ [illegible] ತ್ರಿಮೂರ್ತಿ ಸಮ್ಮೇಲನ ಬರ್ಲಿನಿನಲ್ಲಿ ನಡೆದು ಪಾರ್ಲಿಮೆಂಟ್ ಚುನಾವಣೆಯ ಫಲಿತಾಂಶ ತಿಳಿದು ಬರಲಿದೆಯಾದ ರಿಂದ ಚರ್ಚಿಲ್ಲರಿಗ ಬಹುಮತ ದೊರೆಯದಿದ್ದಲ್ಲಿ, ಮಧ್ಯದಿಂದಲೇ ಅವರು ಹಿಂದೆ ಬರಲಿದ್ದಾರೆ

ಹಿಂದೆ ಮಾತಾಡಿದ ಎಂಪೈರ್ [illegible] ಮನೆಯ ಬಲ್ಲಿಯವರೊಡನೆ [illegible] ಮಾತಿನಿಂದ ಸ್ಪಾರ್ಕ್‌ಬ್ರೂಕಿನಲ್ಲಿ ಗೋಡೆಗಳಿಗೆ ಕರಪತ್ರ, ಹಚ್ಚಿದರೆಂದು ಕಾನೂನ್ ಉಲ್ಲಂಘನೆಗಾಗಿ ಮಿ. ಅಮೆರಿಯವರೂ ದಂಡು ಕೋರ್ಟಿಗೆಳೆಯಲ್ಪಡುವ ಸಂಭವವಿದೆ ಸ್ವಾರಸ್ಯವೆಂದರೆ ಅವರ ಪ್ರತಿಸ್ಪರ್ಧಿ ಮಿ ಶರ್ಮಾರ್ ಆ ದಂಡು ಕೋರ್ಟಿನ ಪೂರ್ವ ಸದಸ್ಯ

([illegible])

ಹೆಚ್ಚಿ ಮುಂದಿಟ್ಟ ಬೇಕು ಹೊರತು ಕಪಟ ನಾಟಕವಿದಲ್ಲ, ರಷ್ಯದ ಘೋಷಣೆ-ಸಾರ್ವತ್ರಿಕ ಕಮ್ಯೂನಿಸ್ಟರಿಗಳ ಒಳಿತಾಗಿ ಪಕ್ಷನಾಗಿರಬೇಕು ವಿನಹ. ಈ ಬಾರಿ ಹೆಳನಾರು ಬುದ್ಧಿ ಪ್ರದರ್ಶಿಸಿಲ್ಲ ಎಂದು ಪ್ರಮುಖರ ಅಭಿಮತ. ಹಿನ್ನೆಲೆ ಹೇಗಿದ್ದರೂ ಸಿದ್ಧದ ಕೊಡುಗೆಯು ಯಥಾರ್ಥ ಒಡಿಯ ಉಡುಗೊರೆಯಾದ್ದರಿಂದ, ಅದನ್ನಂಗೀಕರಿಸಿ ಭಾರತ 'ರಾಷ್ಟ್ರೀಯ ರಾಜ್ಯ ರಚನ ಸಭೆ' ಯನ್ನು ತಯಾರಿಸಿಕೊಳ್ಳ ಅನುಕೂಲವಿದೆ, ಆದ್ದರಿಂದ ಈ ಸಂದರ್ಭವನ್ನು ಕಳಕೊಳ್ಳಬಾರದೆಂದು ಕಾಂಗ್ರೆಸ್ ನಾಯಕರ ಅಭಿಪ್ರಾಯ. ಚುನಾವಣೆ ನಡಿಸಿ ನೇಕದ [illegible] ರಷ್ಟು ಮುಸಿಲ್ಮಾನ ಲೀಗಿನ ಹಿಂಬಾಲಕರಲ್ಲವೇ ಎಂಬೊದನ್ನ ತಿಳಿಯಬೇಕ್ ಎಂಬ ಮಿ. ಜಿನ್ನರ ಯುದ್ಧಾಹ್ವಾನವನ್ನು ಅಂಗೀಕರಿಸಿ, ಚುನಾವಣೆ ಸಮಿತಿ ವರೆಗೆ ಹೊಸ ಸರಕಾರ ರಚನೆಯನ್ನು ಬಾಯಿಮುಚ್ಚುವದು ಅಸಂಗತ, ಅನ್ಯಮಾರ್ಗ ಲೀಗಿನ ಜಗಳ ವ್ಯವಸ್ಥೆಯಾಗುವ ವರೆಗೆ ಅದರ ಪಾಲನ್ನು ಅನುನಯಿಸಿ, ಸಮ್ಮಿಶ್ರ ಪಕ್ಷದವರನ್ನಾಧರಿಸಿ ಯೋಜನೆಯನ್ನು ಕಾಲದಲ್ಲಿ ಜ್ಯಾರಿಗೆ ತರುವದು ವಿಹಿತವೆಂದು ರಾಷ್ಟ್ರಪ್ರಮುಖರ ಅಭಿಮತ

([illegible])

THE WORLD FAMOUS CURE
FOR
Epilepsy-Hysteria &
Asthma-Relieve
will be given on dated 25 7 45 (full moon) Those who w[illegible] to benifit by this rare opport[illegible] should apply at once
Kr. BADRI NATH SINGH,
Shubh Chintak Karyalaya,
CHITRAKOT, Dist Banda)

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, (S. K.)

ANNOUNCEMENT.

A branch of the Bank has been opened at Camp Bazaar, CANNANORE, on 18--5--1945.

ವೇವೆಲ್ ತಕ್ಕಡಿಯಲ್ಲಿ ಮುಸಲ್ಮಾನರು.

ಕಾಂಗ್ರೆಸ್—

'ಅಲ್ಪ ಸಂಖ್ಯಾಕ ಮುಸಲ್ಮಾನ್ ಸಮಾಜಕ್ಕಿಂತ ಮೂರು ಪಾಲಷ್ಟಿರುವ ಬಹು ಸಂಖ್ಯಾಕ ಹಿಂದೂ ಸಮಾಜವು ನಿಯೋಜಿತ ಕಾರ್ಯಕಾರೀ ಸಮಿತಿಯಲ್ಲಿ ೩ನೇ ಅಂಶ ಪಡೆದು ತಾನ್ನೇ ಅಲ್ಪ ಸಂಖ್ಯೆಯನ್ನಿಸಿದೆ. ಇಂತಹದೊಂದು ದಾಖಲೆ ಪ್ರಪಂಚದಲ್ಲಿ ಬೇರೆಲ್ಲಿಯೂ ಇಲ್ಲ. ಮಿ ಜಿನ್ನರಿಗೆ ಇದೂ ಸಾಲದಾದರೆ ಇನ್ನೇನು ಬೇಕೋ ನನಗರಿಯದು.' —ಪಂತ್.

'ಜಮಾಯತ್-ಉಲ್-ಉಲೇಮಾ ಮತ್ತು ಇತರ ಮಿಲಿಯಾವಧಿ ಮುಸಲ್ಮಾನರ ಒಂದು ತಲೆಮಾರಿನಿಂದ ದೇಶ ಸ್ವಾತಂತ್ರ್ಯಕ್ಕಾಗಿ ಸರ್ವ ತ್ಯಾಗಮಾಡಿರುವಾಗ ಸೇಕಡಾ 99ರಷ್ಟು ಮುಸಲ್ಮಾನರು ಲೀಗಿನಲ್ಲಿದ್ದಾರೆಂಬುದು ಶುದ್ಧ ಸುಳ್ಳು'

—ಜಮಾಯತ್ ಉಪಾಧ್ಯಕ್ಷ ಮೌಲಾನಾ ಘಜ್ನಾವಿ.

'5 ಕೋಟಿ ಮೋಮಿನ್ನರು ಲೀಗಿನ ಧೋರಣೆಯನ್ನೊಪ್ಪುವದಿಲ್ಲ. ನಮಗೆ ಪ್ರತ್ಯೇಕ ಪ್ರತಿನಿಧ್ಯ ಕೊಡಿರಿ'

ಬಂಗಾಳ ಮೋಮಿನ್ಸ್ ಪರಿಷತ್ತಿನ ಕಾರ್ಯದರ್ಶಿ ಮಿ. ಕಾಲೀಲ್ ಉಲ್ ರಹಿಮಾನ್.

'ಮೌಲಾನಾ ಆಜಾದರೇ, ನಿಮ್ಮ ಮೇಲೇನೇ ನಮ್ಮ ಪೂರ್ಣ ನಂಬಿಕೆ. ರಾಷ್ಟ್ರೀಯ ಮುಸಲ್ಮಾನರನ್ನು ಅಪ್ರಾಗತಿಕ ಲೀಗಿನ ತೆಕ್ಕೆಗೆ ತಳ್ಳಬೇಡಿ"

—ಮಿ. ಅಹಮ್ಮದ್ ಆಲಿ, ಸಂಪಾದಕ, ನವಯುಗ್.

"ಸುನ್ನಿಗಳ ಸಂಸ್ಥೆಯಾಗಿರುವ ಮುಸ್ಲಿಂ ಲೀಗಿನ ಪ್ರತಿನಿಧ್ಯವನ್ನು ಪ್ರಾಮುಖ್ಯ ಅಲ್ಪ ಸಂಖ್ಯಾಕರಾಗಿರುವ ಶಿಯಾರೊಪ್ಪುವದಿಲ್ಲ"

—ಅ. ಭಾ. ಶಿಯಾ ಸಮ್ಮೇಲನದ ಕಾರ್ಯದರ್ಶಿ ಸಿಯ್ಯಾರ್ ಯಜಾಫರ್ ಹುಸ್ಸೇನ್

"ಕಳೆದ ಮಹಾಚುನಾವಣೆಯಲ್ಲಿ ಮುಸಲ್ಮಾನ್ ಮತಗಳ ಸೇಕಡಾ ೧೭ನ್ನನ್ನು ಮಾತ್ರ ಪಡದಿರುವ ಮುಸ್ಲಿಂ ಲೀಗು ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿಯೆಂಬುದು ಅಸಂಬದ್ಧ"

—ಅಜಾದರ ಕಾರ್ಯದರ್ಶಿ ಪ್ರೊ. ಹುಮಾಯೂನ್ ಕಬೀರ್.

'1936-37ರ ಚುನಾವಣೆಯಲ್ಲಿ ಗಡಿನಾಡು, ಮಧ್ಯಪ್ರಾಂತ್ಯ, ಒರಿಸ್ಸಾ, ಬಿಹಾರ್, ಅಸ್ಸಾಮ್ ಮತ್ತು ಮದ್ರಾಸುಗಳಲ್ಲಿ ಲೀಗಿಗೆ ಒಬ್ಬನೇ ಒಬ್ಬ ಉಮೇದ್ವಾರಿ ದೊರೆತಿಲ್ಲ'—

ಅ. ಭಾ ಮುಸ್ಲಿಂ ಮಜ್ಲಿಸಿನ ಜತೆಕಾರ್ಯದರ್ಶಿ ಮಿ. ಅಬ್ದುಲ್ಲಾ ಮಿಶ್ರಿ.

"ಮುಸಲ್ಮಾನರಲ್ಲಿ ಸೇಕಡಾ 99ಮಂದಿ ಲೀಗ್ ಸದಸ್ಯರೆಂಬ ಜಿನ್ನರ ಮಾತು ವಸ್ತುಸ್ಥಿತಿಗೆ ಬದ್ಧವಿರುದ್ಧ. ಯಾವುದಾದರೊಂದು ಪಂಗಡ ಹಿಂತೆಗೆದರೂ ವೈಸರಾಯರು ತನ್ನ ಯೋಜನೆಯನ್ನು ಮುಂದೊತ್ತಬೇಕೆಂದು ಪ್ರಾರ್ಥನೆ'—ಪಜಲುಲ್ ಹಕ್.

"45 ಮಿಲಿಯ ಮೋಮಿನರ ಪ್ರತಿನಿಧಿತ್ವವನ್ನು ಮುಸ್ಲಿಂ ಲೀಗು ಪಡೆಯಿಲ್ಲ"

—ಅ. ಭಾ. ಮೋಮಿನ್ ವಿದ್ಯಾ ಬೋರ್ಡಿನ ಅಧ್ಯಕ್ಷ ಡಾ। ಅಹಮ್ಮದ್.

ಲೀಗು—

"ಕ್ವಯದ್-ಇ-ಅಝಮರೇ. ನಿಮ್ಮ ನಾಯಕತ್ವದಲ್ಲಿಯೂ ನೀವೀಗ ಕೈಗೊಂಡ ಧೋರಣೆಯಲ್ಲಿಯೂ ನಮಗೆ ಪೂರ್ಣ ವಿಶ್ವಾಸವಿದೆ"

ಮುಸ್ಲಿಂ ಸಂಘ, ಸಂಸ್ಥೆಗಳಿಂದ ಜಿನ್ನರಿಗೆ ಸುಮಾರು 500 ತಂತಿಗಳು.

"ಸರ್ವಮುಸಲ್ಮಾನರ ಏಕಮಾತ್ರ ಪ್ರತಿನಿಧಿಯಾಗಿರುವ ಲೀಗು ತನ್ನ ಧೋರಣೆ ಬದಲಾಯಿಸುವ ಪ್ರಶ್ನೆಯೇ ಇಲ್ಲ ಲೀಗನ್ನು ಬಿಟ್ಟೇ ಮುಂದೊತ್ತಲು ವೈಸರಾಯರಿಂದಾಗದು ಒಂದೊಮ್ಮೆ ಹಾಗೆ ಮಾಡುತ್ತಾರಾದರೆ ಬ್ರಿಟಿಷ್ ಮತ್ತು ಹಿಂದುಗಳ ಆ ಅಪವಿತ್ರ ಸಂಬಂಧದಿದಿರಲ್ಲಿ ರಾಷ್ಟ್ರವ್ಯಾಪೀ ಪ್ರತಿಭಟನೆಕೊಡಲು ಮುಸಲ್ಮಾನರಿಗನುಕೂಲವಾಗುವದರಿಂದ ನಾವದನ್ನು ಸ್ವಾಗತಿಸುತ್ತೇವೆ"

—ಲೀಗ್ ಕಾ. ಸದಸ್ಯ ನವಾ. ಮಹಮ್ಮದ್ ಅಕ್ರಮ್ ಖಾನ್.

"ಮುಸ್ಲೀಂ ಪ್ರತಿನಿಧಿಗಳಲ್ಲದ ಮುಸಲ್ಮಾನರು ಕೇಂದ್ರ ಸಮಿತಿಗಾರಿಸಲ್ಪಡಲು ಲೀಗ್ ಎಂದಿಗೂ ಅವಕಾಶಕೊಡುವಂತಿಲ್ಲ"

—ಬೊಂಬಾಯಿ ಪ್ರಾಂ. ಲೀಗ್ ಅಧ್ಯಕ್ಷ ಮಿ. ಚುಂದ್ರಿಗಾರ್.

"ಎಲ್ಲಾ ಮುಸಲ್ಮಾನರ ಪರವಾಗಿ ಮಾತಾಡಬಲ್ಲ ಏಕಮಾತ್ರ ಸಂಸ್ಥೆಯೆಂದರೆ ಮುಸ್ಲಿಂ ಲೀಗ್"

ಬೊಂಬಾಯಿ ಮುಸ್ಲಿಂ ಚೇಂಬರಿನ ಅಧ್ಯಕ್ಷ ಮಿ. ಹಬೀಬ್ ಇಬ್ರಾಹಿಮ್ ರಹಿಮ್ ತುಲ್ಲಾ.

"ಮೋಮಿನರು ಜಿನ್ನರಿಗೆ ವಿರುದ್ಧವಿದ್ದಾರೆಂಬ ವಾದವು ನಿರಾಧಾರೀ ಕುಹಕೋಕ್ತಿ. ಮೋಮಿನರು ಲೀಗಿನ ಬೆಂಬಲಕ್ಕಿದ್ದಾರೆ"

ಅ. ಭಾ. ಮೋಮಿನ್ ಸಮ್ಮೇಲನಾಧ್ಯಕ್ಷ ಮಿ. ಲಾಟಿಫರ್ ರಹಮಾನ.

'ಜಿನ್ನರಿಟ್ಟ ಹೆಜ್ಜೆಗೆ ನಮ್ಮೆಲ್ಲರ ಬೆಂಬಲವಿದೆ'

ಬೊಹ್ರಾ ಸಂಸ್ಥೆಯ ಅಧ್ಯಕ್ಷ ಮಿ. ಅಮಿರುದ್ದೀನ್ ತಯಾಬ್ಜಿ

"ಮಿ ಜಿನ್ನರು ಕೈಗೊಂಡ ಧೋರಣೆಯನ್ನು ಲೀಗನ್ನೂ ನಾವು ಸಂಪೂರ್ಣವಾಗಿ ಸಮರ್ಥಿಸುತ್ತೇವೆ"

ಮಿ. ಎಮ್. ರಮ್ಜಾಡ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿದ ಶಾಸಕರ ಗೋಷ್ಠಿನ ಸಭೆ.

"ಜಿನ್ನರು ವಿಜಯಿಗಳಾಗಲಿ; ಮತ್ತವರಿಗೆ ಆಯುರಾರೋಗ್ಯ ದೊರಕಲಿ"

ಪೂನಾ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ.

"ಮಿ. ಜಿನ್ನರ ಧೋರಣೆಗೆ ಅ. ಭಾರತದ ಮುಸ್ಲಿಂ ವಿದ್ಯಾರ್ಥಿಗಳ ಸಂಪೂರ್ಣ ಬೆಂಬಲವಿದೆ"

—ಎಲ್ಲಾ ಕಡೆಯ ಮುಸ್ಲಿಂ ವಿದ್ಯಾರ್ಥಿ ಫೆಡರೇಶನುಗಳು.

"10 ಕೋಟಿ ಮುಸಲ್ಮಾನರನ್ನು ಸರಿದಾರಿಯಲ್ಲಿ ನಡೆಯಿಸುವ ಏಕ ಮಾತ್ರ ನಾಯಕನೆಂದರೆ ಮಿ. ಜಿನ್ನರ ಹೊರತು ಇನ್ನೊಬ್ಬನಿಲ್ಲ"

—ಫ್ರೆಂಚ್ ಇಂಡಿಯಾ ಮುಸ್ಲಿಂ ಲೀಗ್.

ನವಯುಗ

ಉಡುಪಿ, ಗುರುವಾರ ೧೨-೭-೧೯೪೫

ಚೀನಾ—ರಶ್ಯಾ

ಇದೇ ಜುಲಾಯಿ ತಾ. 7ರಿಂದ ಚೀನಾ ಯುದ್ಧದ 8ನೇ ವರ್ಷಾರಂಭವಾಗಿದೆ. ರಾಕ್ಷಸನ ಶಕ್ತಿ ಮತ್ತು ಅದನ್ನು ರಾಕ್ಷಸನಂತೆಯೇ ಉಪಯೋಗಿಸುವ ಬುದ್ಧಿಯಿರುವ ಜಾಪಾನರನ್ನು ಏಳು ವರುಷ ಇದಿರಿಸಿ ನಿಂತ ಚೀನೀಯರ ಮನೋಧಾರ್ಢ್ಯವನ್ನು ಎಷ್ಟು ಹೊಗಳಿದರೂ ಕಡಿಮೆಯೆ! ಆದಿಭಾಗದಲ್ಲಿ ಜಾಪಾನರ ವೈಮನಸ್ಸಿಗಂಜಿ, ಬರ್ಮಾ ರಸ್ತೆಯನ್ನು ಮುಚ್ಚುವಂತಹ ಚೀನಾ ದ್ರೋಹವನ್ನು ಸಾಧಿಸಿದ್ದ ಬ್ರಿಟನು ಮತ್ತು ಅಮೇರಿಕಗಳನ್ನು ಚೀನದ ಮಿತ್ರರಾಷ್ಟ್ರಗಳಾಗಿ ಮಾರ್ಪಡಿಸಿದುದು ಜಾಪಾನೇ ಎನ್ನಬೇಕು ಜಾಪಾನ್ ಶತ್ರು ರಾಷ್ಟ್ರವಾದ ಮೇಲೇನೇ ಚೀನವು ಅಮೆರಿಕಾಂಗ್ಲರ ಮಿತ್ರರಾಷ್ಟ್ರವಾಯಿತು. ಜಾಪಾನ್ ಹೊಡೆತದ ರುಚಿಯನ್ನರಿತುದರಿಂದಲೇ ಮಿತ್ರರಾಷ್ಟ್ರಗಳಿಗೆ ಚೀನದ ಕಷ್ಟಸಹನೆಯ ತಿಳುವಳಿಕೆ ಬಂತು ಪ್ರತಿಫಲವಾಗಿ ಬ್ರಿಟಿಷ್ ಮತ್ತು ಅಮೆರಿಕಾನರಿಂದ ಚೀನೀಯರಿಗೆ ದೊರೆತ ಮುಖ್ಯ ಸಹಾಯವೆಂದರೆ ಕಂಠೋಕ್ತ ಶ್ಲಾಘನೆ! ಕಾರ್ಯತಃ ಸಾಕಷ್ಟು ಸಹಾಯವೀಯುವ ಅಸ್ಪದವು ಅಮೆರಿಕಾಂಗ್ಲರಿಗಿರಲಿಲ್ಲ. ಬ್ರಿಟನ್ ಅಮೇರಿಕಗಳು ಜಾಪಾನಿನೊಡನೆ ಯುದ್ಧಕ್ಕಿಳಿದುದರಿಂದಾಗಿ ಇದುವರೆಗಾವ ವಿಶೇಷ ಪರಿಣಾಮವೂ ಚೀನಾರಂಗದ ಮೇಲಾದುದಿಲ್ಲ. ಆದರೆ ರಶ್ಯವು ಚೀನದೊಡನೆ ಸಹಕರಿಸುತ್ತಿದ್ದರೆ ಅದೃಷ್ಟ ಬೇರೆಯೇ ಆಗುತಿತ್ತು. ಆ ಮೂಲಕ ಅಸ್ಯಾಖಂಡದ ಸುಭಿಕ್ಷೆಯೂ ಬಹುಮಟ್ಟಿಗೆ ಸಾಧಿಸಲ್ಪಡುತಿತ್ತು. ಆಂಗ್ಲೋಅಮೆರಿಕಾನರ ಇದಿರಾಳಿಯಾಗಿ ಜಾಪಾನೊಂದೇ ಉಳಿದಿರುವ ಈ ಕಾಲದಲ್ಲಾದರೂ, ಚೀನ ಮತ್ತು ಅಸ್ಯಾವನ್ನು ರಾಹು ಮುಕ್ತ ಮಾಡುವ ಆಧ್ಯತೆ ಮತ್ತು ಅನುಕೂಲತೆ, ರಶ್ಯಕ್ಕಿರುವಷ್ಟು ಮಿಕ್ಕ ರಾಷ್ಟ್ರಗಳಿಗಿಲ್ಲ. ಆದ್ದರಿಂದ ರಾಷ್ಟ್ರೀಯ ಚೀನದ ಪ್ರಧಾನಿ ಟಿ. ವಿ ಸೂಂಗರೀಗ ಮೋಸ್ಕೋದಲ್ಲಿ ನಡೆಸುತ್ತಿರುವ ಸಂಧಾನ ಪ್ರಯತ್ನಕ್ಕೆ ಅಖಿಲ ಅಸ್ಯದ ಅನುಮೋದನೆಯಿದೆ. ಆ ಮಾತುಕತೆ ವಿಜಯಿಯಾಗಲೆಂದು ಲೋಕದ ಪೂರ್ವ ಭಾಗವೇ ಹಾರೈಸುತ್ತಿದೆ.

ಆಧುನಿಕ ಯುದ್ಧದಲ್ಲಿ ಪ್ರಥಮ ಹೊಡೆತಕ್ಕೇನೇ ಪ್ರಾಮುಖ್ಯತೆ; ಜಾಪಾನ್ ನುಗ್ಗಿ ಬಂದಾಗ ಚೀನದ ಬೆನ್ನೆಲುಬು ಮುರಿಯದಂತೆ ಆಧರಿಸಿನಿಂತ ಏಕಮಾತ್ರ ರಾಷ್ಟ್ರವೆಂದರೆ ರಶ್ಯ. ಸಿಂಕಿಯಾಂಗಿನ ಮೂಲಕ ಸರ್ವ ಸಹಾಯವನ್ನು ಚೀನಕ್ಕೆ ಸಲ್ಲಿಸಿ ಜಾಪಾನಿನ ಪ್ರಥಮ ಹೊಡೆತಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಸರಬರಾಯಿಮಾಡಿ—ಚೀನಾ ಯುದ್ಧವು ನೆನೆಗುದಿಗೆ ಬೀಳುವಂತೆ ಮಾಡಿದ ಕೀರ್ತಿ ಸೋವಿಯೆಟ್ ರಶ್ಯಕ್ಕೆ ಸಲ್ಲಬೇಕು. ಆದರೆ 1939ರಲ್ಲಿ ಎರಡು ಕಾರಣಗಳಿಂದಾಗಿ ರಶ್ಯದ ಸಹಾಯದ್ವಾರ ಮುಚ್ಚಿತು. ಜರ್ಮನಿಯ ಹೋರಾಟಕ್ಕಣಿಯಾಗಬೇಕಾದ ಸಂದರ್ಭ ಸೋವಿಯೆಟಿಗೊದಗಿದುದೊಂದು—ಚಿಯಾಂಗ್ ಕೈಶೇಕ್ ಸರಕಾರದ ಮೇಲೆ ಜಿಗುಪ್ಸೆ ಮೊಳೆತುದಿನ್ನೊಂದು. ಕಮ್ಯೂನಿಷ್ಟರ ಮೇಲಿದ್ದ ವೈರವನ್ನು ಬಿಟ್ಟು ಚಿಯಾಂಗ್ ಕೈಶೇಕರು ಅವರನ್ನೊಡಗೂಡಿ ಜಾಪಾನನ್ನಿದಿರಿಸಹತ್ತಿದ 1936ರಿಂದ ರಶ್ಯದ ಸಹಾಯವವರಿಗೆ ದೊರೆಯಹತ್ತಿತು; ಕಮ್ಯೂನಿಷ್ಟರನ್ನು ಪುನಃ ಕಟ್ಟುಗ್ರವಾಗಿ ದ್ವೇಷಿಸಹತ್ತಿದ 1938ರಿಂದ ರಶ್ಯವು ತನ್ನ ಕೊಡುಗೈಯನ್ನು ಹಿಂದೆಳೆದುಕೊಳ್ಳ ಹತ್ತಿತು. ಇಂದಾದರೂ ಚೀನದ ಕಮ್ಯೂನಿಷ್ಟರ ಮೇಲೆ ಕೈಶೇಕ್ ಸರಕಾರಕ್ಕಿರುವ ಅಪನಂಬಿಕೆಯನ್ನು ರಶ್ಯವು ಸಹಿಸುವಂತಿಲ್ಲ. ನಿರೀಕ್ಷೆಯಂತೆ ಕೆಂಪು ಸೇನೆ ಜಪಾನಿನ ಮೇಲೆ ಬೀಳುವದಾದರೆ ಅದು ಪ್ರಥಮತಃ ಮಂಚೂರಿಯದೊಳಗೆ ನುಗ್ಗಿ ಸಮೀಪದಲ್ಲೇ ಪಹರೆಗೊಳಗಾಗಿರ ಪ ಕಮ್ಯೂನಿಸ್ಟ್ ಸೇನೆಯನ್ನು ಕೂಡಿಕೊಂಡು, ಜಾಪಾನಿನೊಂದಿಗೆ ಕೈಶೇಕ್ ಸರಕಾರದ ಪತನವನ್ನೂ ಸಾಧಿಸುವದೆಂಬುದು ನಿಸ್ಸಂದೇಹ. ಈ ಅಪಾಯ ನಿರೀಕ್ಷೆಯಿಂದಲೇ ಚೀನೀ ಪ್ರಧಾನ ಮಂತ್ರಿ ಸೂಂಗರು ಸಕಾಲದಲ್ಲಿ ಮೋಸ್ಕೋ ಸೇರಿ ಸಂಧಾನ ಹೂಡಿದ್ದಾರೆನ್ನಬೇಕು. ಆದರೆ ಚೀನಕ್ಕೆ ರಶ್ಯದ ಬೆಂಬಲವು ಪುಕ್ಕಟೆಯಾಗಿ ದೊರೆಯದು. ಸಂದರ್ಭ ದೊರೆಯದೆ- ಸ್ವಕಾರ್ಯಸಾಧನೆಯಾಗದೆ ರಶ್ಯವು ಜಾಪಾನಿನ ವಿರುದ್ಧ ಏಳುವಂತಿಲ್ಲ. ಅಂದು ಜರ್ಮನಿಯ ಸರ್ವ ಸೇನಾಶಕ್ತಿ ಗೆದೆಯೊಡ್ಡಲ. ರಶ್ಯವೊಂದನ್ನೇ ಬಿಟ್ಟಿದ್ದ ಮಿತ್ರರಾಷ್ಟ್ರಗಳು ಇಂದು ಜಾಪಾನಿನ ಸೇನಾಬಲದ ಮುಂಭಾಗಕ್ಕೂ ರಶ್ಯವೇ ಹೋಗಲೆಂದು ಹಾರೈಸುತ್ತಿರಬಹುದು. ಆದರೆ ಜಾಪಾನ್ ಮೂಲ ನೆಲ ಮತ್ತು ಮಲಯದೊಳಗೆ ಮಿತ್ರಸೇನೆ ನುಗ್ಗಿ, ಇನ್ನೂ ಅತಿ ಪ್ರಬಲವಿರುವ ಜಾಪಾನೀ ದಳಗಳ ಬಹು ಭಾಗವನ್ನು ಇದಿರಿಸಿದ ವಿನಹ, ರಶ್ಯಾ ಮತ್ತೊಂದೆಡೆಯಿಂದ ಮುನ್ನುಗ್ಗದು.

ರಶ್ಯವು ಟರ್ಕಿಯ ಗಡಿ ನುಗ್ಗುವದೆ?

ಜಾಪಾನ್ ಯುದ್ಧ

ಜಾಪಾನಿನ ಮೂಲನೆಲಕ್ಕೇನೇ ಯುದ್ಧವೀಗ ಸಮೀಪಿಸುತ್ತಾ ಬಂದಿದೆ. ಜಾಪಾನರೀ ಕುರಿತು ಅತ್ಯಂತ ಎಚ್ಚರಿಕೆವಹಿಸಿ ಸರ್ವ ಸಿದ್ಧತೆಗಳನ್ನು ಮಾಡುತಿದ್ದಾರೆ. ಜಾಪಾನ್ ಚಕ್ರವರ್ತಿಗಳ ಕೊಲೆಯತ್ನ ನಡೆಯಿತೆಂದು ವಾರ್ತೆಯಿದ್ದರೂ ಅದ ಕ್ಕಾಧಾರ ದೊರೆತಿಲ್ಲ. ಪ್ರಜಾ ಪ್ರಭುತ್ವ ವಾದಿಗಳೇ ಆ ಯತ್ನ ನಡಸಿರಬೇಕೆಂದು ಮಿತ್ರರೂ ಚಕ್ರವರ್ತಿಗಳು ಸಂಧಾನಾತುರರಿರುವದರಿಂದ ಯುದ್ಧ ಪ್ರೇಮಿಗಳೇ ಹಾಗೆ ಮಾಡುಕಿರಬೇಕೆಂದು ವಿದೇಶಿಗಳಲ್ಲಿರುವ ಜಾಪಾನಿಗಳೂ ಊಹಿಸುತ್ತಾರೆ.

ಮಲಯ, ಸಿಂಗಾಪುರಧಾಳಿ?

ಸಿಂಗಾಪುರ, ಮಲಯಗಳನ್ನಾಕ್ರಮಿಸಿಕೊಳ್ಳುವದಕ್ಕಾಗಿ ಆ ಭಾಗದ ಸಮುದ್ರಗಳ 'ಮೈನ್'ಗಳನ್ನು ಮಿತ್ರ ಹಡಗಗಳು ಗುಡಿಸುತ್ತಿವೆ,ಎಂದು ಟೋಕಿಯೋ ಘೋಷಿಸಿದೆ. ಮಲಯದಲ್ಲಿ ನಾಗರಿಕರನ್ನು ಜಾಪಾನರು ಖಾಲಿಮಾಡುತಿದ್ದಾರೆ. ಜಾಪಾನ್ ಮೂಲ ನೆಲದ ಪ್ರಮುಖ್ಯ ಕೇಂದ್ರಗಳ ಮೇಲೂ ಕರಾವಳಿಗಳ ಮೇಲೂ ಮಿತ್ರರ ಆಕಾಶ ಧಾಳಿಗಳ ಸರದಿ ಹೆಚ್ಚಾಗಹತ್ತಿದೆ.

ಶಾಂತ ಸಮುದ್ರದಲ್ಲಿ

ಬೋರ್ನಿಯೋದ ಪೂರ್ವ ಕರಾವಳಿಯ ಬಾಲಿಕ್ ಪೇಪನಿನಲ್ಲಿಳಿದ ಆಸ್ಟ್ರೇಲಿಯನ್ ಸೇನೆಗಳು ಪ್ರಗತಿ ಪಡೆಯುತ್ತಿವೆ. ಆಸ್ಟ್ರೇಲಿಯದ ಕರಾವಳಿಗಳಲ್ಲಿ ಜಾಪಾನರ ಚಟುವಟಿಕೆಗಳು ಕಾಣಿಸಹತ್ತಿದ್ದರಿಂದ ಅಲ್ಲಿಯ ಸಿಡ್ನಿ ಬಂದರದ ಹಡಗ ಚಲಾವಣೆಗಳನ್ನು ನಿಲ್ಲಿಸಲಾಗಿದೆ. ಜಾಪಾನ್ ಮೂಲ ನೆಲದ ಮುಖ್ಯ ದ್ವೀಪವಾದ ಹೊನ್ಶ್ಯುವಿನ ಆಕ್ರಮಣ ಸಿದ್ಧತೆಯಲ್ಲಿ ಮಿತ್ರರಿದ್ದಾರೆಂದೂ ತಮ್ಮ ಕಠಿಣ ಕಾಳಗವಲ್ಲಿ ನಡೆಯುವದೆಂದೂ ಜಾಪಾನರ ಘೋಷಣೆ.

ಬರ್ಮದಲ್ಲಿ

ಬೋರ್ನಿಯೋ, ನ್ಯೂಗಿನಿಯಾ, ಬಿಸ್ಮಾರ್ಕ್ ದ್ವೀಪತಂಡ, ಸೋಲೋಮಾನ್ಸ್ ಮೊದಲಾದ ಎಲ್ಲಾ ನೆಲೆಗಳ ಮೇಲೂ ಮಿತ್ರರು ಪ್ರಬಲ ವಿಮಾನ ಧಾಳಿ ನಡಿಸಿದ್ದಾರೆ. ಬರ್ಮದಲ್ಲಿ ಪೆಗು ನಗರದ ಪೂರ್ವಗಡೆಯ ಸಿಟ್ಟಾಂಗ್ ಹೊಳೆ ವಲಯದಲ್ಲಿ ಜಪಾನರು ಮೇಲಿಂದ ಮೇಲೆ ಧಾಳಿ ಹೂಡಿ ಪ್ರಥಮ ವಿಜಯ ಪಡೆದಿದ್ದರಾದರೂ ಬ್ರಿಟಿಷ್ ಸೇನೆ ಅವರನ್ನು ತಡೆಗಟ್ಟಿದೆ. ರಂಗೂನಿಗೆ 85 ಮೈಲು ದೂರದ ಈ ಭಾಗದಲ್ಲಿ ಇದು ವರೆಗೆ ನಡೆಸುತ್ತಿದ್ದುದಕ್ಕಿಂತ ಸುಸಂಘಟಿತವಾದ ಧಾಳಿಗಳನ್ನೀಗ ಜಾಪಾನರು ನಡೆಸ ಹತ್ತಿದ್ದಾರೆ

ತ್ರಿಮೂರ್ತಿ ಸಮ್ಮೇಲನ

ಟ್ರುಮೇನ್, ಚರ್ಚಿಲ್, ಸ್ಟಾಲಿನರ ಸಮ್ಮೇಲನವು ಸದ್ಯದಲ್ಲೇ ಬರ್ಲಿನಿನಲ್ಲಿ ನೆರೆಯಲಿದೆ ಅಧ್ಯಕ್ಷ ಟ್ರುಮೇನರು ಪರಿವಾರ ಸಮೇತ ಇಷ್ಟರಲ್ಲೇ ಹೊರಟಿದ್ದಾರೆ. ರಶ್ಯವು ಜಾಪಾನಿನ ಮೇಲೆ ಯುದ್ಧಕ್ಕಿಳಿಯುವ ಸ್ಪಷ್ಟ ನಿರ್ಧಾರವು ಅಲ್ಲಿ ನಡೆಯಲಿರುವರೆಂದು ತಿಳಿದು ಬರುತ್ತದೆ.

ಟರ್ಕಿಯ ಮೇಲೆ ರಶ್ಯದ ಧಾಳಿ?

ತನಗೆ ಸಂಬಂಧಿಸಿದ ಟರ್ಕಿಯ ಪೂರ್ವ ಪ್ರಾಂತ್ಯಗಳನ್ನು ಬಿಟ್ಟು ಕೊಡಬೇಕು, ಅಲ್ಲವಾದರೆ ತಾನದನ್ನು ಜುಲುಮೆಯಿಂದ ಪಡಕೊಳ್ಳುವೆನೆಂದು ರಶ್ಯವು ಟರ್ಕಿಗೆ ಬೆದರಿಕೆ ಹಾಕಿದೆ ಎಂದು ವಾರ್ತೆ. ತದನುಗುಣವಾಗಿ ಬಲ್ಗೇರಿಯಾ–ಟರ್ಕಿ ಗಡಿ ಪ್ರದೇಶದಲ್ಲಿ ಕೆಂಪು ಸೈನ್ಯ ಸಂಚಾರವಾಗ ಹತ್ತಿದೆಯೆಂದು ಪೇರಿಸ್ ರೇಡಿಯೋ ಸಾರಿದುದನ್ನು ಟರ್ಕಿ ಪತ್ರಿಕೆಗಳು ಘೋಷಿಸುತ್ತಿವೆ ಬಲ್ಗೇರಿಯದ ಸೇನಾಪಿಗಳು ಮೋಸ್ಕೋದಲ್ಲಿ ಮಾತುಕತೆ ನಡಸಿದ್ದಾರೆಂದೂ ರಶ್ಯದ 21 ಡಿವಿಜನ್ ಸೇನೆಗಳು ಅಲ್ಲಿ ಸಂಗ್ರಹಿಸಲ್ಪಟ್ಟಿವೆಯೆಂದೂ ವಾರ್ತೆ. ಬಲ್ಗೇರಿಯವು ತನ್ನ ಗಡಿ ಕೋಟೆಗಳನ್ನು ಭದ್ರಗೊಳಿಸುತ್ತಿದೆ. ಟರ್ಕಿ ಸರಕಾರವು ಈ ತನಕ ಪೂರ್ಣ ಮೌನವಹಿಸಿ ತ್ರಿಮೂರ್ತಿ ಸಮ್ಮೇಲನವನ್ನು ಕಾಯುತ್ತಿದೆ ಅಲ್ಲಿ ತನಗೆ ಆಂಗ್ಲೋ ಅಮೇರಿಕಾನರ ಬೆಂಬಲ ದೊರೆಯುವದೆಂದು ಟರ್ಕಿಯ ನಿರೀಕ್ಷೆಯಿದೆ

ವೈಸರಾಯರು ಲೀಗನ್ನು ಸಂತೃಪ್ತಿಸಬಹುದು!

ಅಲ್ಲಲ್ಲಿಯ ಗೊಂದಲ

ಆಲ್ಜೀರಿಯದಲ್ಲಾದ ಗೊಂದಲದಲ್ಲಿ ಫ್ರಂಚರು 1500 ಮಂದಿ ಮುಸಲ್ಮಾನರನ್ನು ಕೊಂದಿದ್ದರೆಂದೂ 50000 ಮಂದಿ ಮುಸ್ಲಿಮರು ಭಾಗವಹಿಸಿದ್ದರೆಂದೂ ಈಗ ಪ್ರಕಟವಾಗಿದೆ. ತಾವೆಷ್ಟೇ ತಾಳ್ಮೆವಹಿಸಿದರೂ ಗ್ರೀಕ್ ಸೈನಿಕರು ತಮ್ಮ ಗಡಿಯಲ್ಲಿ ಫಿರಂಗಿ ಪ್ರಯೋಗ ನಡೆಯಿಸಿ ವಿನಾಕಾರಣ ಕೆರಳಿಸುತ್ತಿರುವರೆಂದು ಯುಗೋಸ್ಲೇವಿಯದ ಮಾರ್ಶಲ್ ಟೀಟೋ ಸಾರಿದ್ದಾರೆ ಬರ್ಲಿನಿನ ಅಧಿಕಾರವು ತ್ರಿರಾಷ್ಟ್ರಗಳ ಕೈಯಲ್ಲಿರಬೇಕೆಂಬ ತಹಾನಾಮೆಯಂತೆ ಬ್ರಿಟಿಷ್ ಸೇನಾಡಳಿತವು ಈ ತನಕ ಸ್ಥಾಪನೆಗೊಂಡಿಲ್ಲ ಬ್ರಿಟಿಷರ ಪಾಲಿನ ಭಾಗಕ್ಕೆ ಬ್ರಿಟಿಷರೇ ಆಹಾರ ಸರಬರಾಯಿ ಮಾಡಬೇಕೆಂಬ ರಶ್ಯದ ಶರ್ತವೇ ಈ ವಿಳಂಬಕ್ಕೆ ಕಾರಣವೆಂದು ತಿಳಿದು ಬರುತ್ತದೆ ಬರ್ಲಿನ್ ಈ ತನಕ ರಶ್ಯದ ಕೈಯಲ್ಲಿಯೇ ಇದೆ

ಕರ್ಟಿನರ ನಿಧನ

ಆಸ್ಟ್ರೇಲಿಯದ ಪ್ರಧಾನ ಮಂತ್ರಿಯಾಗಿದ್ದು ಈ ಯುದ್ಧಾವಧಿಯಲ್ಲಿ ಹಲವು ವೇಳೆ ಬ್ರಿಟಿಷ್ ಮಂತ್ರಿ ಮಂಡಲದೊಡನೆ ಪ್ರತಿವಾದ ಹೂಡಿ, ಆಸ್ಟ್ರೇಲಿಯದ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿದ್ದ ಮಿ ಕರ್ಟಿನರು ನಿಧನಗೊಂಡರು. ಅವರು ಕೂಲಿಗಾರ ಪಕ್ಷ ಪ್ರಮುಖರಿದ್ದು ವಿಚಕ್ಷಣ ಆಡಳಿತಗಾರರಿದ್ದರು ಬರ್ಲಿನಿನಲ್ಲಿ ಗೋಬೆಲ್ಸನ ನಿಜ ಶವವು ದೊರೆತಿದೆಯೆಂದೂ ಅದನ್ನು ಚಲಚ್ಚಿತ್ರದಲ್ಲಿ ಜರ್ಮನಿಗೆ ಪ್ರದರ್ಶಿಸಲಾಗುವದೆಂದೂ ತಿಳಿದು ಬಂದಿದೆ. ಬ್ರಿಟಿಷ್ ಆಕ್ರಮಿತ ಜರ್ಮನಿಯಲ್ಲಿ ನಾಜೀ ಪಕ್ಷಪಾತಿಗಳ ಗುಪ್ತ ಚಟುವಟಿಕೆ ಹೆಚ್ಚುತ್ತಿದೆ ಎಂಬ ವಾರ್ತೆಯಿದೆ

ಸಿಮ್ಲಾದಲ್ಲೇನು?

ಲೀಗ್ ಕಾರ್ಯಕಾರೀ ಸಮಿತಿಯ ಮೊಹರು ನಿಶಿಪತ್ರವು ಹೋದೊಡನೆ ವೈಸರಾಯರಿಂದ ಜಿನ್ನರಿಗೆ ಕರೆಬಂದು ಅವರೊಳಗೆ 1½ ಘಂಟೆ ಗುಪ್ತ ಸಂಭಾಷಣೆ ನಡೆದಿದೆ ಹಿಂತಿರುಗಿ ಬರುವಾಗ ಜಿನ್ನರು ಹಸನ್ಮುಖಿಯಾಗಿಯೂ ದೃಢ ವಿಶ್ವಾಸದಲ್ಲೂ ಇದ್ದರು ಈ ಮಾತುಕತೆಯ ಫಲಿತಾಂಶವು ಸಮಾಧಾನಕರವಿದೆ ಎಂದು ಲೀಗ್ ಪುಂಗಡಿಗರು ಉತ್ಸಾಹ ಪ್ರದರ್ಶಿಸಿದ್ದಾರೆ. ಆ ಮೇಲೆ ವೈಸರಾಯರಿಂದ ಪತ್ರರೂಪಿ ಉತ್ತರವು ಲೀಗ್ ಸಮಿತಿಗೆ ಬಂದಿತ್ತು; ಅದಕ್ಕೆ ಮರುತ್ತರವನ್ನೂ ಲೀಗ್ ಕಾರ್ಯಕಾರೀ ಮಂಡಲಿ ರಚಿಸಿದೆ. ಇದನ್ನು ಕಳುಹುವ ಮೊದಲು ಮಿ ಜಿನ್ನರು ಆಸ್ಸಾಮ್ ಮತ್ತು ಸಿಂಧಿನ ಪ್ರಧಾನಿಗಳೊಡನೆ ಗೂಢ ಪರ್ಯಾಲೋಚನೆ ನಡೆಸಿದ್ದಾರೆ

ವೈಸರಾಯಿ ಲೀಗನ್ನು ಸಂತೃಪ್ತಿಸುವರೆ?

ಲೀಗ್ ಮಂಡಲದೊಳಗೆ ಕಟ್ಟಕಡೆಗೆ ಪೊಳೆತಿರುವ ಆಸೆಯನ್ನು ಕಾಣುವಾಗ ಲೋರ್ಡ್ ವೇವೆಲರು ಯಾವುದಾದರೊಂದು ವಿಧಾನದಿಂದ ಮಿ. ಜಿನ್ನರನ್ನು ಸಂತೃಪ್ತಿಸುವರೆಂಬ ಚಿಹ್ನೆಯಿದೆ. ಈಗ ಲೀಗೇತರ ಮುಸಲ್ಮಾನರನ್ನಾರಿಸಿಕೊಂಡರೂ ಮುಂದಕ್ಕವರು ಲೀಗ್ ಧೋರಣೆಯನ್ನನುವರ್ತಿಸಲು ಬದ್ಧರಿರಬೇಕೆಂಬ ಲೀಗ್ ನಾಯಕರ ಧೋರಣೆಯನ್ನು ವೇವೆಲರು ಅನುಮೋದಿಸಬಹುದೆಂದು ಕೆಲವರ ಊಹೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈಗ ಸಿಮ್ಲಾ ಸಂಬಂಧದ ಕೆಲಸಗಳನ್ನು ಮುಗಿಸಿಕೊಂಡಿರುವದರಿಂದ ಕಾಂಗ್ರೆಸಿನ ಪುನರ್ಘಟನೆ, ಅ ಭಾ ರಾ. ಸಮಿತಿಯು ಸಭೆ ಸೇರಿಸುವ ಹಂಚಿಕೆ, ಮುಂದಿನ ಸಾರ್ವತ್ರಿಕ ಚುನಾವಣೆ, ಇತ್ಯಾದಿಗಳ ಪರ್ಯಾಲೋಚನೆಗಿಳಿದಿದೆ.

ಮಂಗಳೂರು

ಸಭೆ:ತಾ 8ರಲ್ಲಿ ಇಲ್ಲಿಯ ಬೇರೆ ಬೇರೆ ಮಜೂರ ಸಂಘಗಳ ಕಾರ್ಯಕಾರಿ ಮಂಡಳಿಗಳ ಸಂಯುಕ್ತ ಸಭೆಯು, ಪ್ರೆಸ್ ವರ್ಕರ್ಸ್ ಯೂನಿಯನ್ ಆಫೀಸಿನಲ್ಲಿ ಶ್ರೀ ಶಿವಶಂಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಕಾಶ ಕೂಟದ-ಮಹಾ ಸಭೆಯು ತಾ 8ರಲ್ಲಿ ರಥಬೀದಿ ಸ್ಮಾರಕ ಮಂದಿರದಲ್ಲಿ ಶ್ರೀ . . ರೆ ನಾರಾಯಣರ ಅಧ್ಯಕ್ಷತೆಯಲ್ಲಿ ಜರಗಿತು.

ನೋಟೀಸು.

No. L. 110ನೇ ಮುಲ್ಕಿ ಕೊ-ಓಪರೇಟೀವ್ ಸ್ಟೋರ್ಸ್, ಲಿಮಿಟೆಡಿನ ಜನರಲ್ ಬೋಡಿ ಮೀಟಿಂಗ್ ತಾ 29-7-45 ನೇ ಆದಿತ್ಯವಾರ ಸಾಯಂಕಾಲ ಘಂಟೆ 3ಕ್ಕೆ ಮುಲ್ಕಿ ಕಡವಿನ ಬಳಿ ಕೊಸಮ್ಮ ಕಟ್ಟಡದ ಮಾಳಿಗೆಯಲ್ಲಿ ಜರಗಲಿಕ್ಕಿರುವುದರಿಂದ ಎಲ್ಲಾ ಮೆಂಬರರಿಗೆ ಈ ಮೂಲಕ ತಿಳಿಸುವುದಲ್ಲದೆ, ಎಲ್ಲವರೂ ಬರುವಂತೆ ಈ ಮೂಲಕ ವಿನಂತಿಸುತ್ತೇವೆ

ಮುಲ್ಕಿ,
9-7-1945 } Manager

ಮಗ್ಗಿ ಪುಸ್ತಕಗಳು

ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಗಳು, ದಾಖಲು ಫಾರ್ಮಗಳು, ರಿಕಾರ್ಡ ಶೀಟುಗಳು ದೊರೆಯುತ್ತವೆ.

ಮಗ್ಗಿ ಪುಸ್ತಕ 1ಕ್ಕೆ 0—1—0
,, ,, 50ಕ್ಕೆ 2—9—0
,, ,, 100ಕ್ಕೆ 5—0—0

Navabharat Book Depot,
UDIPI.

ಶ್ರೀ ರಾಮಕೃಷ್ಣ ಥಿಯೇಟರ ಲಿಮಿಟೆಡ್, ಉಡುಪಿ.

ತಾರೀಕು **8—7—1945**ರಿಂದ

ನೇರನಲ್ಸನವರ—
ಹರೀಶ್, ಹುಸ್ನಭಾನು, ಬುಧು ಅದ್ವಾನಿ
ನಟಿಸಿರುವ

"ನಯಿ ರೋಶ್ನಿ"

ನಂತರ —

?

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— "ಕುಮಾರಿ ಮಾತ್ರೆಗಳು" ನಿಶ್ಚಿತ ನಿರುಪದ್ರವಿ –ಹಿಂದಿನಂತೆಯೇ, ಅಪ್ರಯಾಸಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ3 ! ಕ್ಲಿಷ್ಟವಾದ ಕೇಸುಗಳಿಗೆ ರೂ. 5,6 ತಿಂಗಳ ಬರ್ಥ ಕಂಟ್ರೋಲಿಗೆ ರೂ 4.(ವಿ ಪಿ 12 ಆಣೆ ಅಲಾಯಿದ)Mrs P. DEVEE, F. D. S. (S) Tollygunge, Calcutta
ಸ್ಟಾಕಿಸ್ಟ್: ನಾ ಕಂಪೆನಿ, ಮಂಗಳೂರು



ನಾನಾವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಿ ಕಾರ್ಯ,
ರಥಬೀದಿ, ಉಡುಪಿ.

ಸೇನಾರಂಗದಿಂದ—

ಭಾರತೀಯ ಸೈನ್ಯಾಧಿಕಾರಿಗಳ ಅವಳಿ ಜೀವನ

ಸಿಕಂದರಾಬಾದಿನ ದಂಡಿನ ಆಸ್ಪತ್ರೆಯೊಂದರಲ್ಲಿ ಇಬ್ಬರು ಅಧಿಕಾರಿಗಳು ಕೆಲಸಮಾಡುತ್ತಿದ್ದಾರೆ. ಇಬ್ಬರದೂ ಒಂದೇ ರೀತಿಯ ಜೀವನ ಒಬ್ಬರು ತಿರುವಾಂಕೂರು ಸಂಸ್ಥಾನದ ಲೆ| ಕ| ಪಿ. ಟಿ| ಜೋಸೆಫ್; ಇನ್ನೊಬ್ಬರು ಪಂಜಾಬಿನ ಲೆ| ಕ| ಎಂ ಸರ್ವಾರ್. ಇಬ್ಬರೂ ಹುಟ್ಟಿದ್ದು ೧೯೦೯ನೇ ಜುಲೈ ೭ನೇ ತಾರೀಖು ವೈದ್ಯಕೀಯ ಪದವಿಗಳನ್ನು ಏಕಕಾಲದಲ್ಲಿ ಸಂಪಾದಿಸಿದರು. ಒಬ್ಬರು ಮದರಾಸು ವಿಶ್ವವಿದ್ಯಾನಿಲಯದವರು, ಮತ್ತೊಬ್ಬರು ಪಂಜಾಬ್ ವಿಶ್ವವಿದ್ಯಾನಿಲಯದವರು. ೧೯೩೭ರಲ್ಲಿ ಇಬ್ಬರೂ ಇಂಗ್ಲಂಡಿಗೆ ಹೋದರು ಲೆ| ಕ| ಜೋಸೆಫರು ಎಫ್ ಆರ್. ಸಿ. ಎಸ್ ಪದವಿ ಪಡೆದರು, ಲೆ| ಕ| ಸರ್ವಾರರಿಗೆ ಎಂ ಆರ್. ಸಿ ಪಿ. ಪ್ರಶಸ್ತಿ ಬಂತು.

ಇಂಡಿಯಾಕ್ಕೆ ಹಿಂದಿರುಗಿದ ಮೇಲೆ ಪರಸ್ಪರ ಪರಿಚಯವಿಲ್ಲದಿದ್ದರೂ ಇಬ್ಬರೂ ಒಂದೇ ದಿನ ೧೯೩೯ರಲ್ಲಿ ಸೈನ್ಯಕ್ಕೆ ಸೇರಿದರು ಅವರಿಗೆ ಕೊಟ್ಟ ನಂಬರುಗಳೂ ಪಕ್ಕಪಕ್ಕದವೇ ಆ ಮೇಲೆ ಮಧ್ಯಪ್ರಾಚ್ಯಕ್ಕೆ ತೆರಳಿದರು ಸರ್ವಾರರು ಈಜಿಪ್ಟಿನ ದಂಡಿನ ಆಸ್ಪತ್ರೆಗೆ ಅಧಿಕಾರಿಯಾದರು ಜೋಸಫರು ಪ್ಯಾಲೆಸ್ಟೈನಿನಲ್ಲಿ ವೈದ್ಯಾಧಿಕಾರಿಯಾದರು ಇಬ್ಬರ ಸೇವೆಯನ್ನೂ ಲಂಡನ್ ಗೆಜೆಟ್ಟಿನ ಒಂದೇ ಸಂಚಿಕೆಯಲ್ಲಿ ಪ್ರಶಂಸಿಸಲಾಯಿತು ಈಗ್ಗೆ ೧೮ ತಿಂಗಳ ಹಿಂದೆ ಇಂಡಿಯಕ್ಕೆ ಬಂದ ಮೇಲೆ ಒಬ್ಬರನ್ನೊಬ್ಬರು ಸಂಧಿಸಿದರು. ಇಬ್ಬರನ್ನೂ ಸಿಕಂದರಾಬಾದಿನ ಮಿಲಿಟರಿ ಆಸ್ಪತ್ರೆಯಲ್ಲಿ ನೇಮಿಸಲಾಯಿತು ಈ ಬಗೆಯ ಹೊಂದಿಕೆ ಇನ್ನೆಷ್ಟು ಕಾಲ ತಮ್ಮ ಜೀವನದಲ್ಲಿ ಸಾಗಿಬರುತ್ತದೆಯೋ ಎಂದು ಮಿತ್ರರಿಬ್ಬರೂ ಆಶ್ಚರ್ಯಪಡುತ್ತಿದ್ದಾರೆ

ಭಾರತೀ ಅಶ್ವದಳದ ಅಸಹಾಯ ಶೌರ್ಯ

ಕೊಹಿಮಾದಿಂದ ರಂಗೂನಿನ ಕದನದವರೆಗೆ ಒಂದೇ ಸಮನಾಗಿ ಜರ್ಮನ್, ಇಟಾಲಿಯನ್, ಜಪಾನೀ ಸೇನೆಗಳನ್ನು ಪ್ರತಿಭಟಿಸಿದ್ದೆಂದರೆ ೧೭ನೇ ಭಾರತೀ ಅಶ್ವದಳ, ಸುಸಜ್ಜಿತವಾದ ಯುದ್ಧದ ಗಾಡಿಯಂತೆ ಇದು ಚಲಿಸುತ್ತದೆ ತನ್ನ ಧೈರ್ಯಸಾಹಸಗಳಿಂದ ಹೆಸರೆತ್ತಿದೆ ಯಾವಾಗಲೂ ಮುನ್ನುಗ್ಗಿ ಶತ್ರುಗಳನ್ನು ಪ್ರತಿಭಟಿಸುತ್ತದೆ.

ಕಳೆದ ಜನವರಿಯಿಂದ ಐರಾವತಿ ಕದನದಲ್ಲಿ ಮತ್ತು ರಂಗೂನಿನ ಆಕ್ರಮಣದಲ್ಲಿ ಈ ದಳವು ಬಹು ಮುಖ್ಯ ಪಾತ್ರವಹಿಸಿದೆ ಸ್ವಲ್ಪಕಾಲ ಇದು ೪ನೇ ಮತ್ತು ೩೩ನೇ ದಳ ಮುಖಗಳಲ್ಲಿ ಸೈನ್ಯ ನಡೆಸಿತು ಐರಾವತಿಯನ್ನು ದಾಟಿದ ಮೇಲೆ ಇನ್ನೊಂದು ಮಿತ್ರಪಡೆಗೆ ನೆರವಾಗಿ ಜಪಾನೀ ದಳಗಳಿಗೆ ನಷ್ಟವುಂಟುಮಾಡಿ ಕೊಳ್ಳೆ ಹೊಡೆಯಿತು, ಅನಂತರ ಮಿಕ್‌ಟಿಲಾದಿಂದ ಪ್ರೋಮಿನ ವರೆಗೆ ೨೦ನೇ ದಳವನ್ನು ನಡಸಿ ದಾರಿಯಲ್ಲಿ 200 ಜಪಾನಿಗಳನ್ನು ನಾಶಮಾಡಿ ೧೨ ಫಿರಂಗಿಗಳನ್ನು ವಶಪಡಿಸಿಕೊಂಡಿತು.

ಪೆಟ್ರೋಲ್ ಕಳ್ಳನ ಪತ್ತೆ

ಯು. ಎಸ್ ಆರ್ಮಿಟ್ರಕ್ಕಿನ ಸಬ್ ಡಿವಿಜನ್ ಆಫೀಸರ್ ಜೆ. ಸಿ. ಚತ್ತರ್ಜಿ, ಅವರ ಡ್ರೈವರ್, ಇಬ್ಬರು ಕೂಲಿಗಳು ಮತ್ತು ಕಂಟ್ರಾಕ್ಟರ್ ಬಿ ಸೇನ್, ಕಲ್ಕತ್ತದಲ್ಲಿರುವ ಅಸೋಸಿಯೇಟೆಡ್ ಎಂಜಿನಿಯರಿಂಗ್ ಇಂಡಸ್ಟ್ರೀಸ್ ಸಂಸ್ಥೆಯ ಮೆನೇಜರ್-ಇವರನ್ನು ಮಿಲಿಟರಿ ಪೆಟ್ರೋಲನ್ನು ಕಳ್ಳತನದಿಂದ ಮಾರಿದರೆಂದು ಆಪಾದಿಸಲಾಗಿದೆ. ಅಲಿಪುರದ ದ್ವಿತೀಯ ಪೋಲೀಸ್ ನ್ಯಾಯಾಧೀಶರು ಆಪಾದಿತರಿಗೆ ತಲ 2 ತಿಂಗಳು ಕಠಿಣ ಸಜಾ ವಿಧಿಸಿದರು. ಡ್ರೈವರಿಗೆ ಮಾತ್ರ ನಂಬಿಕೆ ದ್ರೋಹದ ಆಪಾದನೆ ಮೇಲೆ ಇನ್ನೂ 2 ತಿಂಗಳ ಕಠಿಣ ಶಿಕ್ಷೆ ಕೊಟ್ಟಿದೆ

ಸಮಾಚಾರ ಬಂದೊಡನೆ ಕಲ್ಕತ್ತಾದ ಸ್ಪೆಷಲ್ ಪೋಲೀಸಿನವರು ಕಳ್ಳತನ ನಡೆಯುತ್ತಿದ್ದ ಸ್ಥಳಕ್ಕೆ ಹೋಗಿ ಆಪಾದಿತರನ್ನೆಲ್ಲ ದಸ್ತರಿಗಿಮಾಡಿದರು ಡ್ರೈವರ್ ಮತ್ತು ಕೂಲಿಗಳು ಟ್ರಕ್ಕಿನಿಂದ ಉದ್ದನೆಯ ರಬ್ಬರ್ ಕೊಳವೆಯ ಮೂಲಕ ಪೆಟ್ರೋಲನ್ನು ಒಸಿದುಕೊಳ್ಳುತ್ತಿದ್ದರು ಎಸ್ ಡಿ. ಒ ಅವರು ನೋಡುತ್ತ ನಿಂತಿದ್ದರು ಕಂಟ್ರಾಕ್ಟರು ಮತ್ತು ಮೆನೇಜರು ಪೆಟ್ರೋಲನ್ನು ತೆಗೆದುಕೊಳ್ಳುತ್ತಿದ್ದರು ಒಟ್ಟಿನಲ್ಲಿ ಸುಮಾರು ೮ ಗ್ಯಾಲನ್ ಪೆಟ್ರೋಲನ್ನು ಕಂಟ್ರಾಕ್ಟರಿಂದ ವಸೂಲುಮಾಡಲಾಯಿತು

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧ ಖಾತೆ)

ಮೈಸೂರು ಪತ್ರ

ಸಿಮ್ಲಾಕ್ಕೆ ಕಾಂಗ್ರೆಸ್ ಮುಖಂಡರು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪ, ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಟಿ ಬಾಷ್ಯಂ, ಪಾರ್ಲಿಮೆಂಟರಿ ಸಮಿತಿ ಸದಸ್ಯರಾದ ಶ್ರೀ ಎಸ್ ಚನ್ನಯ್ಯನವರು ವೇವೆಲ್ ಯೋಜನೆಯಲ್ಲಿ ಸಂಸ್ಥಾನಗಳ ವಿಚಾರವು ಪ್ರಸ್ತಾಪಿಸದಿರುವುದನ್ನು ಕಾಂಗ್ರೆಸ್ ಪ್ರಮುಖರೊಡನೆ ಚರ್ಚಿಸುವುದಕ್ಕೆ ಸಿಮ್ಲಾಕ್ಕೆ ಪ್ರಯಾಣ ಮಾಡಿದರು

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಈ ಕೆಳಗಿನಂತೆ ಪಾರ್ಲಿಮೆಂಟರಿ ಸಮಿತಿಯನ್ನು ರಚಿಸಿದ್ದಾರೆ ಶ್ರೀ ಕೆ ಟಿ ಭಾಷ್ಯಂ (ಅಧ್ಯಕ್ಷರು) ಶ್ರೀ ಹೆಚ್ ಕೆ ವೀರಣ್ಣ ಗೌಡ (ಕಾರ್ಯದರ್ಶಿ) ಶ್ರೀಗಳಾದ ಎಸ್ ಚನ್ನಯ್ಯ ಮತ್ತು ಹೆಚ್ ಸಿದ್ದಯ್ಯ, ಸದಸ್ಯರು

ಹೋಟೇಲ್ ರೇಷನಿಂಗ್ ಇಲಾಖೆ ತಿಕ್ಕಾಟ

ಮೈಸೂರು ನಗರದಲ್ಲಿರುವ ಹೋಟೇಲುಗಳಿಗೆ ಸರಿಯಾಗಿ ರೇಷನ್ ಪದಾರ್ಥಗಳು ಸಿಗುತ್ತಿಲ್ಲವೆಂದು ಸಾಮಾನು ಸಿಗದೆ ಹೋಟೇಲು ನಡೆಸುವುದೂ ಸುಲಭವಲ್ಲವೆಂದೂ ಸರಿಯಾಗಿ ಸಾಮಾನು ಸಿಗದಿದ್ದರೆ ಜುಲೈ 1 ನೇ ತಾರೀಖಿನಿಂದ ಎಲ್ಲಾ ಹೋಟೇಲುಗಳಿಗೆ ಬಾಗಿಲು ಹಾಕತಕ್ಕದೆಂದೂ ಹೋಟೇಲ್ ಮಾಲೀಕರ ಸಂಘದವರು ತೀರ್ಮಾನಿಸಿದ್ದರು ಆದರೆ ರೇಷನಿಂಗ್ ಅಧಿಕಾರಿಗಳ ಕೆಲವು ಭರವಸೆ ಮೇಲೆ ಆ ತೀರ್ಮಾನವು 6ನೇ ತಾರೀಖಿಗೆ ಮುಂದುವರಿಯಿತು ಆದರೆ 5ನೇ ತಾರೀಖು ವರಿಗೆ ಅಧಿಕಾರಿಗಳು ತಮ್ಮ ಭರವಸೆಯನ್ನು ಪೂರೈಸದ ಕಾರಣ ಪುನಃ ಮುಚ್ಚಬೇಕೆಂದು ತೀರ್ಮಾನಿಸಿದರು ಆದರೆ ಆ ದಿನ ರಾತ್ರಿ ಪುನಃ ರೇಷನಿಂಗ್ ಅಧಿಕಾರಿಗಳು ಬಂದು ಭರವಸೆಯಿತ್ತ ಮೇಲೆ ಅವರು ತಮ್ಮ ತೀರ್ಮಾನವನ್ನು ರದ್ದುಗೊಳಿಸಿದರು ಈಗ ಹೋಟೇಲುಗಳು ಮಾಮೂಲಿನಂತೆ ನಡೆಯುತ್ತಿವೆ

ಪ್ಯಾರಿಸಿಗೆ ಶ್ರೀ. ಕೆ ಸಿ ರೆಡ್ಡಿ

ನ್ಯಾಯ ವಿಧಾಯಕ ಸಭೆಯ ಕಾರ್ಯಪಕ್ಷದ ನಾಯಕರೂ, ಕಾಂಗ್ರೆಸ್ಸಿನ ಮುಂದಾಳುಗಳೂ, ಚಿನ್ನದಗಣಿ ಕೆಲಸಗಾರರ ಸಂಘಗಳ ಸಂಯುಕ್ತ ಮಂಡಳಿಯ ಅಧ್ಯಕ್ಷರೂ ಆದ ಶ್ರೀ ಕೆ ಚಂಗಲರಾಯ ರೆಡ್ಡಿಯವರು ಪ್ಯಾರಿಸ್ ನಗರದಲ್ಲಿ ನಡೆಯಲಿರುವ ಅಂತರ್ರಾಷ್ಟ್ರೀಯ ಗಣಿ ಕೆಲಸಗಾರರ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಪ್ರತಿನಿಧಿಯಾಗಿ ಹೋಗಲಿರುವರೆಂದು ಗೊತ್ತಾದ ಕೋಲಾರದ ಚಿನ್ನದ ಗಣಿಯ ಕೆಲಸಗಾರರು ಅವರನ್ನು ಅಭಿನಂದಿಸಿದ್ದಾರೆ

ಶಾಸನ ಸಭಾಧಿವೇಶನ

ಕಳೆದ ತಿಂಗಳ 20ನೇ ತಾರೀಖು ಪ್ರಾರಂಭವಾದ ಮೈಸೂರು ನ್ಯಾಯವಿಧಾಯಕ ಸಭಾಧಿವೇಶನ 16 ದಿನ ನಡೆಸಿ ಮುಕ್ತಾಯವಾಯಿತು ಸಭೆಯಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟ ಹಲವು ಸೂಚನೆಗಳು ಚರ್ಚೆಗೆ ಬಂದು ಅಂಗೀಕರಿಸಲ್ಪಟ್ಟವು ಕತ್ತರಿ ಪ್ರಯೋಗ ನಿರ್ಣಯಗಳಲ್ಲಿ ಸರ್ಕಾರಕ್ಕೆ ಸೋಲುಗಳು ಉಂಟಾದುವು

(೫ನೇ ಪುಟದಿಂದ ಮುಂದುವರಿದುದು)

ಕಾಂಗ್ರೆಸಿನ ನಿಶ್ಚಿಂತೆ!

ಸಿಮ್ಲಾ ಸಮ್ಮೇಲನದ ಭವಿಷ್ಯ ಹೇಗಾದರೂ ಕಾಂಗ್ರೆಸ್ ತನ್ನ ಕಾರ್ಯವನ್ನು ಮುಗಿಸಿಕೊಂಡು ನಿಶ್ಚಿಂತೆಯಲ್ಲಿದೆ; ಎಲ್ಲವನ್ನೂ ಸ್ವಚ್ಛವಾಗಿ ತೊಳೆದುಕೊಂಡು ನಿರ್ಮಲತೆಯಿಂದ ನಿಂತಿದೆ; ಕ್ರಾಂತಿಕಾರರು ಶಾಂತಿಪಥದಲ್ಲಿ ಹೆಜ್ಜೆ ಮುಂದಿಟ್ಟು ಲೋಕದ ಶ್ಲಾಘನೆ ಪಡೆದಿದ್ದಾರೆ. ತಮ್ಮ ಹಾದಿಯೆದಿರ ಜಿಡುಪನ್ನು ಎಳೆಯೆಳೆಯಾಗಿ ಬಿಡಿಸಿ, ಕೆಲಸ ಪೂರೈಸಿದ ಆತ್ಮತೃಪ್ತಿಯಿಂದೆದ್ದು ನಿಂತು, ಲೋರ್ಡ್ ವೇವೆಲ್ ಮತ್ತು ಮಿ ಜಿನ್ನರು ತಂತಮ್ಮ ಪಾಲಿನ ಕಗ್ಗಂಟನ್ನು ಹೇಗೆ ಬಿಡಿಸಿಕೊಳ್ಳುವರೆಂಬುದನ್ನು ನೋಡುತ್ತಿದ್ದಾರೆ ಬ್ರಿಟಿಷರಲ್ಲಿ ಎದೆಗಾರಿಕೆಯಿದ್ದರೆ, ಯಥಾರ್ಥತೆಯಿದ್ದರೆ, ಅವರು ತಮ್ಮ ಯೋಜನೆಗನುಸಾರವಾಗಿ ಮುಂದೊತ್ತಲಿ, ಅಧಿಕಾರ ಸ್ವೀಕರಿಸಿ 'ಕಾಂಗ್ರೆಸ್ ಆಳಬಲ್ಲುದು' ಎಂದು ಜಗತ್ತೇ ಬೆಟ್ಟು ಕಚ್ಚುವಂತೆ ಮಾಡುವೆವು, ಅಲ್ಲವಾದರೆ, ಎಲ್ಲವನ್ನೂ ಕಡಿಸಿದ ಪಾಪದ ಬಂಡಿಯ ನೊಗಕ್ಕೆ ಮಿ ಜಿನ್ನರೊಂದಿಗೆ ಸರಕಾರವೂ ಹೆಗಲೊಡ್ಡಲಿ ಎಂಬಂತೆ ಕಾಂಗ್ರೆಸ್ ಸದ್ದುಮಾಡದೆ ನಿಂತಿದೆ ಲೋರ್ಡ್ ವೇವೆಲರೇನು ಮಾಡುವರು-ಇಂತಹ ಪರಿಸ್ಥಿತಿಯಲ್ಲಿ ಇಚ್ಛಾನುಸಾರ ವರ್ತಿಸುವ ಅಧಿಕಾರವನ್ನು ಪಡಕೊಂಡೇ ಅವರು ಲಂಡನಿನಿಂದ ಮರಳಿದ್ದರೆಂಬ ವಾರ್ತೆಯಿದೆ

ಬ್ರಿಟನಿನ ಉದ್ದೇಶವೇನು?

ಬ್ರಿಟಷರನ್ನು ಅಪವಾದ ಮುಕ್ತರನ್ನಾಗಿ ಮಾಡಬೇಕೆಂಬ ಏಕಮಾತ್ರ ಉದ್ದೇಶವು ಅವರದಾದರೆ, ತಪ್ಪಿಸಿಕೊಳ್ಳುವ ಕಿರುಹಾದಿಯೊಂದು ಮಿ ಜಿನ್ನರ ಕೃಪೆಯಿಂದ ವೇವೆಲರಿಗೆ ದೊರೆತಿದೆ. "ಏಕ ರಾಷ್ಟ್ರವೋ ದ್ವಿರಾಷ್ಟ್ರಗಳೋ ಎಂಬುದನ್ನು ಅವರೇ ನಿರ್ಧರಿಸಿಕೊಂಡು ಶಾಶ್ವತ ರಾಜ್ಯಾಂಗವನ್ನು ಅಥವಾ ರಾಜ್ಯಾಂಗಗಳನ್ನು ಸ್ಥಾಪಿಸಿಕೊಳ್ಳಲೆಂಬ ಉದ್ದೇಶದಿಂದಲೇ ನಾವೀ ತಾತ್ಕಾಲಿಕ ವ್ಯವಸ್ಥೆಯನ್ನು ಸೂಚಿಸಿದ್ದೆವು, ಈಗ ಅದಕ್ಕೆ ಸಂಬಂಧಪಟ್ಟ ಎರಡು ಪ್ರಮುಖ ಪಕ್ಷಗಳಲ್ಲೊಂದು ಅಸಹಕರಿಸಿರುವದರಿಂದ ನಾವೀ ಯೋಜನೆಯನ್ನೇ ಸದ್ಯಕ್ಕೆ ಬಿಟ್ಟುಬಿಡಬೇಕಾಗುವವೆನ್ನಲು ವಿಷಾದಿಸುತ್ತೇವೆ' ಎಂಬ ಆ ಪುಟ್ಟ ಗುಣವನ್ನೇ ಮತ್ತೊಮ್ಮೆ ಪ್ರದರ್ಶಿಸಿ ಬ್ರಿಟಿಷ ಪ್ರತಿನಿಧಿ ಹೆಜ್ಜೆ ಹಿಂದಿಡಬಹುದು ಭಾರತದ ಬಿಕ್ಕಟ್ಟು ನಿವಾರಣೆಯಾಗಿ ಇಂಗ್ಲಂಡಿನ ಪಾಪ ನಿಜಕ್ಕೂ ಪರಿಹಾರವಾಗಬೇಕೆಂಬ ಸದುದ್ದೇಶ ವೈಸರಾಯರದಾಗಿದ್ದರೆ, ಅದಕ್ಕಂತೂ ರಾಜಮಾರ್ಗವೇ ತೆರೆದಿದೆ. "ಸಮ್ಮತವೇ ಆದ ಈ ಹೊಸ ವ್ಯವಸ್ಥೆಗೆ ಒಂದು ಪಕ್ಷದ ವಿನಹಾ ಮಿಕ್ಕೆಲ್ಲರ ಹಾರ್ದಿಕ ಬೆಂಬಲ ದೊರೆತಿರುವಾಗ ನಾವದನ್ನು ಜಾರಿಗೆ ತರಲು ಬದ್ಧರಿದ್ದೇವೆ' ಎಂದು ವೈಸರಾಯಿ ಹೆಜ್ಜೆ ಮುಂದಿಡಬಹುದು. ಲೋರ್ಡ್ ವೇವೆಲರ ಮನೋತಕ್ಕಡಿ ಹೇಗೆ ನಿಂತಿದೆ? ತಾ. 14ಕ್ಕದು ತಿಳಿಯಬೇಕು ಬ್ರಿಟಿಷರ ನಿಜವಾದ ಪರೀಕ್ಷಾಕಾಲಬಂದಿದೆ ಇನ್ನೇನೇ ಆಗಲಿ, 'ಜಪಾನೀ ಪಕ್ಷಪಾತಿ' 'ದರೋಡೆಗಾರರ ಕೂಟ' ಎಂಬ ಅಪವಾದ ಕೇಳಿದ್ದ ಕಾಂಗ್ರೆಸಿನ ನಿಜರೂಪವಾವುದೆಂಬುದನ್ನು ಜಗತ್ತಿಗೆ ಪ್ರದರ್ಶಿಸಿದ ಕಾಂಗ್ರೆಸ್ ನಾಯಕರ ವ್ಯವಹಾರ ಜಾಣ್ಮೆ, ಪ್ರಸಂಗಾವಧಾನತೆಗಳನ್ನು ಕೊಂಡಾಡಬೇಕು.

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/ and repayable on maturity as Rs. 10 100 500 & 1000 respectively

Let us intimate and guide you in the saving habit Money saved is the money earned.

The Canara Industrial & Banking Syndicate, Limited
Head Office UDIPI, (S India)
T. A PAI B Com, (Bom) A I I B.
General Manager

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,
ಕಂಟ್ರಾಕ್ಟರ್ಸ್, ಉಡುಪಿ.

ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ರಖಂ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು

ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ

ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ ಪತ್ರ ಬರೆಯಬಹುದು

Managing Director,
Homes & Estates Ltd., Udipi.

ಉಡುಪಿ.

ನಗರ ಸಭೆಯು ಗತ ವರ್ಷದ ಆಡಳಿತ ವರದಿ ವಿಮರ್ಶೆ–ಸೌದುತ್ತಾ ಜಿಲ್ಲಾ ಕಲೆಕ್ಟರ್ ರಾವ್ ಬಹದೂರ್ ಎಂ. ರಾಮದಾಸರು ಈ ರೀತಿ ಬರೆಯುತ್ತಾರೆ "ರಸ್ತೆ, ಓಣಿಗಳಲ್ಲಿ ಸುಧಾರಣೆಯೇನೂ ಆಗದಿಲ್ಲವಾದರೂ ತಕ್ಕಷ್ಟು ತೃಪ್ತಿಕರವಾಗಿವೆ. ರಸ್ತೆಗಳಲ್ಲಿ ಧೂಳು ಹಾರದಂತೆ ಮಾಡುವ ಯೋಜನೆಯನ್ನು ಕೈಕೊಳ್ಳಬೇಕಾಗಿದೆ. ಪ್ರಯಾಣಿಕರ ಬಂಗ್ಲೆಯು ಸೌಕರ್ಯ ಸಮಾಧಾನಕರವಿದೆ. ಪಬ್ಲಿಕ್ ಪಾಯಿಖಾನೆಗಳ ಸಂಖ್ಯೆ ಜಾಸ್ತಿಯಾಗಲಿಲ್ಲ. ಖಾಸಗಿ ಮನೆಗಳಿಗೂ ಪ್ರತ್ಯೇಕ ಪ್ರತ್ಯೇಕ ಪಾಯಿಖಾನೆಗಳಿರುವಂತೆ ನೋಡಬೇಕಾಗಿದೆ. ರಾತ್ರಿ ಹೊಲಸನ್ನು ಕೊಂಡುಹೋಗುವ ಸುಧಾರಿತ ಕ್ರಮವನ್ನು ಕೈಕೊಳ್ಳಬೇಕು. ಪ್ರಾಥಮಿಕ ಶಾಲೆಗಳಲ್ಲಿ ಧರ್ಮಾರ್ಥ ಶಿಕ್ಷಣ ಕೊಡಲಾಗುತ್ತಿದೆ. ಮಕ್ಕಳ ಹಾಜರಿ ತೃಪ್ತಿಕರವಿದ್ದಾಗ್ಯೂ ಹಿಂದುಳಿದ ಜಾತಿಯವರ ಮಕ್ಕಳ ಸಂಖ್ಯೆಯು ಜಾಸ್ತಿಯಾಗುವಂತೆ ಪ್ರಯತ್ನಿಸಬೇಕಾಗಿದೆ. ಟೌನ್ ಪ್ಲಾನಿಂಗ್ ಕ್ರಮಗಳಿಗನುಸಾರವಾಗಿ ಯುದ್ಧ ಮುಗಿದ ನಂತರ ಟೌನ್ ಸರ್ವೆ ಮಾಡಬಹುದು. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವಸೂಲಿ ಕೆಲಸವು ಒಳ್ಳೆಯದಾಗಿದೆ. ಪಬ್ಲಿಕ್ ಲೈಬ್ರರಿ, ರೀಡಿಂಗ್ ರೂಮು, ರೇಡಿಯೊ, ಜಿಮ್ನೇಸ್ಟಿಯಮ್ ಮೊದಲಾದ ಸೌಕರ್ಯಗಳು ಟೌನಿನ ಒಂದು ಭಾಗದವರಿಗೆ ಮಾತ್ರ ದೊರೆಯುತ್ತಿವೆ. ಸಾಧ್ಯವಿದ್ದ ಇತರ ಸ್ಥಳಗಳ ಜನರಿಗೂ ಅಂತಹ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ಚೇಯರ್‌ಮೆನ್, ಕೌನ್ಸಿಲು, ಮತ್ತು ಕಮಿಶನರ್ ಇವರೊಳಗೆ ಸೌಹಾರ್ದವಿದೆ. ನಗರಾಡಳಿತದಲ್ಲಿ ಸಾರ್ವಜನಿಕರಿಗೆ ವಿಶ್ವಾಸವಿದೆ. ನಗರಾಡಳಿತ ಸರ್ವಸಾಧಾರಣ ಸಮಾಧಾನಕರವಿದೆ.

ವಿಷಾದಕರ ಮರಣ–ತಾ ೫ರಲ್ಲಿ ದಿ ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್, ಇದರ ಕ್ಯಾಶಿಯರ್ ಆಗಿದ್ದ ಶ್ರೀ ಎ. ರಾಘವೇಂದ್ರ ಕಾಮತರ ಮತ್ತು ಅವರ ಹೆಂಡತಿಯ ಶವಗಳು ಮಣಿಪಾಲದ ಕೆರೆಯಲ್ಲಿ ತೇಲಾಡುತ್ತಿದ್ದುವು. ತಾ ೬ರಲ್ಲಿ ಹೆಣಗಳನ್ನು ಉಡುಪಿಗೆ ತಂದು ಪೋಸ್ಟ್ ಮಾರ್ಟಂ ಮಾಡಲಾಯಿತು. ಆತ್ಮಹತ್ಯೆಯೆಂದು ಸುದ್ದಿ. ಇದಕ್ಕೆ ಕ್ಯಾಷ್ ಬೆಲೆನ್ಸ್ ಕಡಮೆಯಾದುದೇ ಕಾರಣವಂತೆ.

ಬಿಲ್ಲವ ಎಸೋಸಿಯೇಶನ್ ಮುಂಬಾಯಿ–೧೯೪೫ನೇ ಇಸವಿಗೆ ಈ ಕೆಳಗಿನ ಮೆಂಬರರುಗಳನ್ನು ಸಮಿತಿಯ ಮೇಲಧಿಕಾರಿಗಳನ್ನಾಗಿ ಆರಿಸಲಾಗಿದೆ. ಶ್ರೀಯುತರುಗಳಾದ, ಬಿ ಯಸ್ ಅಮೀನ್, ಅಧ್ಯಕ್ಷ, ಕೆ. ಡಿ ಮುಲ್ಕಿ, ಉಪಾಧ್ಯಕ್ಷ, ಮ್ಯೆ. ಜಿ ಬಂಗೇರ ಮಾ. ಜ. ಕಾರ್ಯದರ್ಶಿ, ಡಿ ವಿ ಕರ್ಕೆರ ಉಪಕಾರ್ಯದರ್ಶಿ, ಎ ಯಸ್ ಮುಲ್ಕಿ ಮತ್ತು ಕೆ ಕೆ ಸುವರ್ಣ, ಜೊತೆ ಕೋಶಾಧಿಕಾರಿಗಳು, ಪಿ ಕೆ ಕೋಟಿಯಾನ್ ಮತ್ತು ಟಿ ಯಸ್ ಕೋಟಿಯಾನ್, ಪುಸ್ತಕಾಲಯದ ಅಧಿಕಾರಿಗಳು, ಮತ್ತು ವಿ ಕೆ. ಸಾಲಿಯಾನ್ ಸ್ವಯಂ ಸೇವಕರ ಜಿ. ಸಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ರಜಕ ಬಂಧುಗಳಲ್ಲಿ ಮುಂಬಾಯಿ ಶ್ರೀ ರಜಕ ಸಂಘದ ವಿನಂತಿ:– ನಮ್ಮ ಬಡ ಜಾತಿಯು, ವಿದ್ಯೆಯಲ್ಲಿ ಹಿಂದುಳಿದಿರುವುದೆಂದು ಎಲ್ಲರೂ ಅರಿತ ವಿಷಯವಾಗಿದೆ. ಇತರ ಜಾತಿಗಳಂತೆ ನಮ್ಮ ಅವಿದ್ಯೆಯ ದೆಸೆಯಿಂದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ಹೊಂದಲು ನಮಗೆ ಅಸಾಧ್ಯವಾಗಿರುವುದಕ್ಕೆ ನಮ್ಮಲ್ಲಿ ಬಲವಾಗಿ ಬೇರೂರಿರುವ ಈ ಅವಿದ್ಯೆಯೇ ಕಾರಣ. ಇದನ್ನು ಸಂಪೂರ್ಣ ಹೋಗಲಾಡಿಸುವುದು ನಮ್ಮ ಮೊದಲನೆಯ ಕರ್ತವ್ಯವಾಗಿರುತ್ತದೆ. ಆ ಮುದೆರಿಂದ ದ ಕ ಜಿಲ್ಲೆಯ ಪ್ರತಿಯೊಬ್ಬ ಅಗಸ ವ್ಯಕ್ತಿಯೂ ತಮ್ಮ ಬಾಲಕ ಬಾಲಕಿಯರನ್ನೆಲ್ಲಾ ಹತ್ತಿರದ ಶಾಲೆಗಳಿಗೆ ಕಳುಹಿಸಿ ಕೈಲಾದಷ್ಟು ವಿದ್ಯೆಯನ್ನು ಕಲಿಸುವಂತೆ ಪ್ರಯತ್ನಿಸಬೇಕೆಂದು, ನಾವು ಬಹಳವಾಗಿ ಅಪೇಕ್ಷಿಸುತ್ತೇವೆ.

ಬಡ ಬಂಧುಗಳಿಗೆ ತಮ್ಮ ಮಕ್ಕಳನ್ನು ಶಾಲೆಗೆ ಹಾಕಲು ಆರ್ಥಿಕ ಕಷ್ಟದಿಂದ ಅಸಾಧ್ಯವಾದರೆ ದಯ ಮಾಡಿ ನಮ್ಮ ಸಂಘದ ಈ ಕೆಳಗಿನ ವಿಳಾಸಕ್ಕೆ ಎಂಟನೇ ಕ್ಲಾಸಿನ ವರಗ ವಿದ್ಯಾರ್ಥಿ ವೇತನಕ್ಕೆ ಮತ್ತು ಪುಸ್ತಕ ವಗೈರೆಗೆ ತಕ್ಕ ಧನ ಸಹಾಯವನ್ನು ಕೋರಿ, ತಾ [illegible] ಆಗಸ್ಟರ ವಳಗೆ ವಿದ್ಯಾರ್ಥಿಗಳು ಯಾ, ವಿದ್ಯಾರ್ಥಿಗಳ ರಕ್ಷಕರು ಬರೆಕೊಳ್ಳಬೇಕಾಗಿ ವಿನಂತಿ. ಅಂತಹ ಕೋರಿಕೆಗಳನ್ನು ಪರಿಶೀಲಿಸಿ ಕೈಲಾದಷ್ಟು ಧನ ಸಹಾಯವನ್ನೀಯುವದೆ, ಸಂಘವು ತುಂಬಾ ಸಂತೋಷಪಡುತ್ತದೆ ಎಂದು ಮೂಡಬಿದ್ರಿ ಡಿ ಕುದ್ರೋಳಿ, [illegible] ಕಾರ್ಯದರ್ಶಿ [illegible], ಬೋರಾ ಬಜಾರ್ ಸ್ಟ್ರೀಟ್, ೪ನೇ ಮಾಳಿಗೆ, ಕೋಟೆ ಮುಂಬಾಯಿ, ಇವರು ತಿಳಿಯಪಡಿಸುತ್ತಾರೆ.

ಮೊಗವೀರ ವ್ಯವಸ್ಥಾಪಕ ಮಂಡಳಿ. ಮುಂಬಯಿ–ಇದರ ೧೫ನೇ ವಾರ್ಷಿಕೋತ್ಸವವು, ಮೊಗವೀರ ಪ್ರೆಸ್ಸಿನ [illegible] ಪಾರಿತೋಷಕ ವಿತರಣೆಯೂ ಶೇಟ ರಾಮನಾಥ್ ಆನಂದಿಲಾಲ್ ಪೊದ್ದಾರ್, ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಸರ್ ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಮಂದಿರದಲ್ಲಿ ತಾ ೧ ೭ ೪೫ರಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸಭಾ ಮಂದಿರವು ಗಣ್ಯ ಗೃಹಸ್ಥರಿಂದ ತುಂಬಿತ್ತು.

ಶ್ರೀ ಯು ರಾಮರಾಯರು ಅಧ್ಯಕ್ಷರನ್ನು ಸ್ವಾಗತೀಕರಿಸುತ್ತಾ ಸ್ವಾಗತ ಭಾಷಣ ಮಾಡಿದ ಮೇಲೆ ಸಂದೇಶಗಳನ್ನು ಶ್ರೀ ಯು. ಟಿ. ಶ್ರೀ ಪುತ್ರನರು ಓದಿ ಹೇಳಿದರು. ಶ್ರೀ [illegible] ಪಡುಬಿದ್ರಿ ಯವರು ಮಂಡಳಿಯ ಸಂಕ್ಷಿಪ್ತ ಚರಿತ್ರೆಯನ್ನು ವಾಚನ ಮಾಡಿದರು. ಅನಂತರ ಶಾಲಾ ಮಕ್ಕಳಿಗೂ ಮಂಡಳಿಯ ಕಾರ್ಯಕಾರರಿಗೂ ಪಾರಿತೋಷಕಗಳನ್ನು ಹಂಚಲಾಯಿತು.

ಅತಿಥಿಗಳ ಪೈಕಿ ಶ್ರೀಗಳಾದ ಮಾನೆಕ್ ಲಾಲ್ ಯಚ್. ವಕೀಲ್. ಯಂ ಸುಬ್ಬರಾವ್, ಜೆ ಯಸ್ ಅಯ್ಯರ್, ಮುಂತಾದ ಮಹನೀಯರು ಮಂಡಳಿಯ ಕಾರ್ಯ ಕಲಾಪಗಳನ್ನು ಪ್ರಶಂಸಿಸಿ ಸಂದರ್ಭೋಚಿತ ಭಾಷಣಗಳನ್ನಿತ್ತರು.

ಅಧ್ಯಕ್ಷರಾದ ಶೇಟ್ ರಾಮನಾಥ ಜೀಯವರು ತಮ್ಮ ಭಾಷಣದಲ್ಲಿ "ಸ್ವಜಾತಿ ಪರ ಜಾತಿಯ, ದುಡಿದು ಜೀವಿಸುವ, ಅಧಃಪತನದಲ್ಲಿರುವವರನ್ನು ಮೇಲ್ದರಗತಿಗೆ ತಂದು ಕಲ್ಯಾಣದ ಸೋಪಾನಕ್ಕೆ ಏರಿಸಬೇಕೆಂದು ಹಗಲು ರಾತ್ರಿ ಪ್ರಯತ್ನಿಸುವ ಮಂಡಳಿಯ ಕಾರ್ಯಕರ್ತರ ಶ್ರಮೆಯು ಪ್ರಶಂಸನೀಯವಿದೆ. ಮಂಡಳಿಯು ತನ್ನ ನಿಸ್ವಾರ್ಥ ಸೇವೆಯಿಂದಾಗಿ ಎಲ್ಲಾ ವಿದ್ಯಾ ಸಂಸ್ಥೆಗಳಿಗೆ ಮಾದರಿಯಾಗಿದೆ. ಜಾತಿ ಮತ ಭೇದವಿಲ್ಲದೆ ಧರ್ಮಾರ್ಥವಾಗಿ 650 ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿದ್ಯೆಯನ್ನು ಕೊಡುತ್ತಲಿದೆ. ಸರಕಾರದ ಮಂಜೂರಾತಿಯನ್ನು ಹೊಂದಿ ಇಂಥಾ ಶುಭಕೆಲಸವನ್ನು ಮಾಡಿ ಉಚ್ಚ ಶ್ರೇಣಿಯಲ್ಲಿರುವ ಒಂದಾದರೂ ಬ್ರಿಟಿಷ್ ಇಂಡಿಯಾದಲ್ಲಿಯೋ ಎಂದು ಕೇಳಲು ಸಂಕೋಚಪಡುತ್ತಿರುವೆನು. ಇದರ ಸಂಚಾಲಕರು ಧನಿಕರಲ್ಲವಾದರೂ ಬಡವರಾಗಿ ಹುಟ್ಟಿ ಹಗಲು ಶಾಲೆಗಳಲ್ಲಿ ವಿದ್ಯಾರ್ಜನೆಯನ್ನು ಮಾಡಲಸಾಧ್ಯವಾದ ಮಕ್ಕಳಿಗೋಸ್ಕರ ಇಡೀ ಹಗಲು ಕಾಯ ಕಷ್ಟ ಶ್ರಮ ಪಟ್ಟು ರಾತ್ರಿಯಲ್ಲಾದರೂ ತಮ್ಮ ಭಾಗ್ಯವನ್ನು ಅಭಿವೃದ್ಧಿಗೊಳಿಸಬೇಕೆಂಬ ಕುತೂಹಲವುಳ್ಳ ವಿದ್ಯಾರ್ಥಿಗಳಿಗೆ ರಾತ್ರಿ ಪಾಠಶಾಲೆಯನ್ನು ತೆರೆದು ಪ್ರತ್ಯಕ್ಷವಾಗಿ ವಿದ್ಯೆ ಕೊಡುತ್ತಿದ್ದಾರೆ. ಬಡವರಾಗಿ ಹುಟ್ಟಿದ ಮಾತ್ರಕ್ಕೆ ಅವರ ಚಟುವಟಿಕೆ, ವಿದ್ಯಾ ಪ್ರೇಮ, ಕಡಿಮೆ ಇರಬೇಕೆಂದಿಲ್ಲ. ಅವರ ಬದಲಿಗೆ ನಾವು ಅವರಿಗ ಬರಬೇಕೆಂಬ [illegible] ಆಸೆಯು ಅವರನ್ನು [illegible] ತಗ್ಗುಗಳನ್ನೂ, ಕಷ್ಟ ಶ್ರಮೆಗಳನ್ನೂ ಅಲಕ್ಷಿಸಿ ಮುಂದುವರಿಯುವಂತೆ ಮಾಡುತ್ತದೆ. [illegible] ಸುವ ವಿದ್ಯಾರ್ಥಿಗಳಿಗೆ ಈ ಶಾಲೆಯು ತುಂಬಾ ಅನುಕೂಲತೆಗಳನ್ನು ಒದಗಿಸಿಕೊಡುತ್ತದೆ. ಹೀಗೆ ಕಷ್ಟಪಟ್ಟು ತಮ್ಮ ಪಾಡನ್ನು ಸುಧಾರಿಸಬೇಕೆಂದು ಹವಣಿಸುತ್ತಿರುವ ಮಕ್ಕಳಿಗ ಲಂಡನ್, ಅಮೇರಿಕಾ ಮೊದಲಾದ ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿಯೂ ರಾತ್ರಿ ಕಾಲೇಜುಗಳನ್ನು ಒದಗಿಸಿಕೊಡುವುದು ಪ್ರಾಮುಖ್ಯ ಸಂಗತಿಯಾಗಿದೆ. ಈ ಕಡೆಗೆ ವಿದ್ಯಾಭಿಮಾನಿಗಳು ಗಮನಕೊಡದಿರುವುದು ಪಶ್ಚಾತ್ತಾಪದ ವಿಷಯವಾಗಿದೆ. ನಮ್ಮ ಬಾಲಬಾಲಕಿಯರಿಗೆ ಸ್ತ್ರೀ ತರಗತಿಗಳಿಂದಲೇ ಕೈಗಾರಿ[illegible] ಸುವಂತೆ ಎಲ್ಲಾ ವಿದ್ಯಾಸಂಸ್ಥೆಗಳು ಪ್ರಯತ್ನಮಾಡಬೇಕೆಂದು ನನ್ನ ವಿನಂತಿ. ಈ ರೀತಿಯ ಕೈಗಾರಿಕೆಯ ಶಿಕ್ಷಣದಿಂದ ನಮ್ಮಲ್ಲಿ ನೆಲೆ ಮಾಡಿರುವ ನಿರುದ್ಯೋಗ, ಬಡತನ, ಕ್ಷಾಮಗಳನ್ನು ಎದುರಿಸಬಹುದು. ಈ ಪ್ರಯುಕ್ತ ಬರೇ ಸಾಹಿತ್ಯ ಜ್ಞಾನವನ್ನು ಮಕ್ಕಳಿಗೆ ಕೊಡದೆ, ಲೋಕ ವ್ಯವಹಾರ, ವ್ಯವಸಾಯ, ವ್ಯಾಪಾರ, ಕೈಗಾರಿಕೆ, ಕಲೆಗಳ ಬೆಲೆಯನ್ನು ತಿಳಿದು ಅವಶ್ಯಕಾದ ಕಲಿಸಲು ಆರಂಭಮಾಡಿದರೆ ನಮ್ಮ ದೇಶವು ಅತೀ ಶೀಘ್ರದಲ್ಲೇ ನೆರೆಕರೆಯ ಜನಾಂಗಗಳನ್ನು ಹಿಂದಕ್ಕೆತಳ್ಳಿ, ಉನ್ನತಿಯ ತುತ್ತತುದಿಗೆ ಕ್ಷಿಪ್ರದಲ್ಲಿಯೇ ತಲ್ಪುವುದು ಎಂದು ಹೇಳಲು ನಾನು ಎಳ್ಳಷ್ಟೂ ಹಿಂಜರಿಯುವುದಿಲ್ಲ. ನಿಮ್ಮ ಅವಗಾಹನೆಗೆ ತಂದ ಶಿಕ್ಷಣ ವಿಚಾರವನ್ನು ರಾಷ್ಟ್ರದ ಧುರೀಣರು ತಿಳಿದು ಇದಕ್ಕೆ ಯೋಗ್ಯ ಗಮನ ಕೊಡುವರೆಂದು ಭರವಸಯುಳ್ಳವನಾಗಿದ್ದೇನೆ. ಈ ರೀತಿಯ ಸಮಾಜ ಸೇವೆಯನ್ನು ಮಾಡಿ ಮಂಡಳಿಯ ಕೆಲಸಗಾರರು ಕೃತಕೃತ್ಯರಾಗುವಂತೆ ದೇವರು ಅವರನ್ನು ಆಶೀರ್ವದಿಸಬೇಕೆಂದು ಕೋರಿದರು.

ಮಂಡಳಿಯ ರಾತ್ರಿ ಶಾಲೆಯ [illegible] ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಕೆ ಯಸ್ ಗಾಯ್ತೊಂಡೆಯವರು ಶೇಟ್ ರಾಮನಾಥ್ ಆನಂದಿಲಾಲ್ ಪೊದ್ದಾರ್‌ರವರಿಗೂ, ನ್ಯಾಯಮೂರ್ತಿ, ಎನ್ ಯಸ್ ಲೋಕೂರ್ ವರರಿಗೂ, ಭಾಷಣಕರ್ತರಿಗೂ, ಸಭಿಕರಿಗೂ, ಅಜೀವಸದಸ್ಯರಿಗೂ, ಸಂದೇಶಗಳನ್ನು ಕಳುಹಿಸಿ ಪ್ರೋತ್ಸಾಹಿಸಿದವರಿಗೂ, ಇನ್ನಿತರ ವಿಧಗಳಲ್ಲಿ ಸಹಕರಿಸಿದ ಸರ್ವ ಮಹನೀಯರಿಗೂ ವಂದನೆಗಳನ್ನು ಅರ್ಪಿಸಿದರು.

ಕೊನೆಯದಾಗಿ ಶಾಲಾ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಅಭಿನಯಿಸಿದ "ರಾಯರ ಸೊಸೆ" ಎಂಬ ನಾಟಕ ಪ್ರದರ್ಶಿಸಲ್ಪಟ್ಟ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶೇಟ್ ರಾಮನಾಥ ಜೀಯವರು ಮಂಡಳಿಯ ವಿದ್ಯಾ ನಿಧಿಗೆ ೧೧೦೧ ರೂಪಾಯಿ (ಒಂದು ಸಾವಿರದ ಒಂದು ನೂರೊಂದು ರೂಪಾಯಿ) ದಾನ ಕೊಟ್ಟಿರುವರೆಂದು ಸಭಿಕರಿಗೆ ತಿಳಿಸಲಾಯಿತು.

ನೋಟೀಸ್.

ಮಂಗ್ಳೂರು ದಿ ಮು ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 63/1945

ಲಿಯೊ ಲಾಸ್ರಾದೋ — ವಾದಿ

ಮತ್ತು

ಪೆಸ್ರಗೋ ಪಿಯಾಸ್ — ಪ್ರತಿವಾದಿ

ಪ್ರತಿವಾದಿ ಪುತ್ತೂರು ತಾಲ್ಲೂಕು [illegible] ಕ್ಷೇತ್ರಯಲ್ಲಿರುವ ಕಾಪಿ ಎಸ್ಟೇಟ್ ರೈಟರ್ ಪೆಸ್ರಗೋ ನೋವಿಯಾಸ್‌ರಿಗೆ

ಸದ್ರಿ ಪ್ರತಿವಾದಿಯ ಮಗ ಮೃತಪಟ್ಟ ಆಲೆಗ್ಸಾಂಡರ್ ಗೋನ್ಸಾಲ್ವಿಸ್ ಎಂಬವನು ವಾದಿಗ ತಾರೀಕು 13 4 1942ಲ್ಲು ರೂಪಾಯಿ 225 ಕ್ಕೆ ಬರೆಕೊಟ್ಟ ಡಿಮ್ಯಾಂಡ್ ನೋಟಿನ ಅಸಲು ಬಡ್ಡಿ ಅನುವಜು ಕೂಡಾ ರೂಪಾಯಿ 282-10 0ನ್ನು ಬರಮಾಡಿಕೊಳ್ಳುವದ ವಾಕ್ಲಿ ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ವ್ಯಾಜ್ಯದ ಸಮ್ಮನ್ಸನ್ನು ಸಬ್‌ಸ್ಟಿಟ್ಯೂಟೆಡ್ ಸರ್ವೀಸ್ ಮೋಡಿಗೆ ಪತ್ರಿ ಜ್ಯಾರಿ ಮಾಡಬೇಕಾಗಿ ಆದ ಕೋರ್ಟು ಹುಕುಂ ಪ್ರಕಾರ ಸದ್ರಿ ವ್ಯಾಜ್ಯವು ತಾರೀಕು 24 7-1945ಕ್ಕೆ ತನಿಖೆ ಇಟ್ಟಿರುವದೆಂದೂ ಸದ್ರಿ ದಿವಸ ಪ್ರತಿವಾದಿಯು ಹಾಜರಾಗದಿದ್ದರೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲ್ಪಡುವದೆಂದೂ ಈ ಮೂಲಕ ತಿಳಿಸಲಾಗುತ್ತದೆ.

By order of the court

P. D. Souza B.A.B.L.

L. C Pai B.A.B.L.

Vakils for Plaintiff

Mangalore }
30 6 1945 }

ಪ್ರೇಮ ವಿದ್ಯಾಪೀಠ
ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ದಿವಂಗತ ಶ್ರೀ ಪಂಡಿತ ತಾರಾನಾಥರ

ಪ್ರೇಮ ವಿದ್ಯಾಪೀಠದಲ್ಲಿ

ಆಯುರ್ವೇದ ವೈದ್ಯಕ ಶಿಕ್ಷಣವು ಯಥಾಪ್ರಕಾರ ಇದೇ ಜುಲೈ 15ನೇ ತಾರೀಕಿಗೆ ಪ್ರಾರಂಭವಾಗುವದು

ಸ್ವಾತಂತ್ರ್ಯ ಜೀವನಕ್ಕೂ, ಪರೋಪಕಾರಕ್ಕೂ ಸಾಧನವಾದ ಆಯುರ್ವೇದ ವೈದ್ಯಕ ಶಿಕ್ಷಣವನ್ನು ಪಡೆಯಲು ಅಪೇಕ್ಷಿಸುವವರು ವಿದ್ಯಾಪೀಠದ ಆರಂಭದ ತಾರೀಕಿನ ಒಳಗೇ ಪ್ರಿನ್ಸಿಪಾಲ್ ರವರಿಗೆ ಬರೆಯಬೇಕು.

ಬಿ. ಸುಮತಿ ತಾರಾನಾಥ,
ಪ್ರಿನ್ಸಿಪಾಲ್.

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ದಕ್ಷಿಣ ಕನ್ನಡ.

ಮಂಗಳೂರು

ಶಿವರವನ್ನು ಲೈಸನ್ಸ್–ಇಲ್ಲದೆ ಷಡೆ ಬಿನ್ನರೆಂಬ ಆರೋಪದ ಮೇಲೆ ಬಂಧರದ ವ್ಯಾಪಾರಿ ಸಂಸ್ಥೆಯೊಂದರ ಪಾಲುದಾರರಿಗೆ ಲ್ಲ ಬೇರೆ ಬೇರೆಯಾಗಿ ಒಟ್ಟು ರೂಪಾಯಿ 4000 ಜುಲುಮಾನೆ ವಿಧಿಸಿರುವರು ಗ್ಲ ಕೋಸ್ 'ಡಿ'ಯನ್ನೂ ಅದೇ ಸಂಸ್ಥೆಯವರು ಅಧಿಕ ಬೆಲೆಗೆ ಮಾರಿದರೆಂಬ ಆಪಾದನೆಯ ಮೇರೆಗೆ ರೂ ೨೦೦೦ ಜುಲುಮಾನೆ ವಿಧಿಸಿರುವರು

ಸೆಶ್ಶನ್ಸ್ ಕೋರ್ಟಿನಲ್ಲಿ–ಪುತ್ತೂರು ತಾಲೂಕಿನ ಶಾಂತಪ್ಪ ಗೌಡನೆಂಬವನ ಕೊಲೆಯ ಮೊಕದ್ದಮೆಯಲ್ಲಿ ಆಪಾದನೆಗೊಳಗಾದ ನರಸಿಂಗ ಪೂಜಾರಿ, ಬಾಬು ಪೂಜಾರಿ, ಕಾಂತು ಗೌಡ ಮತ್ತು ಜಿನ್ನಪ್ಪ ಗೌಡ ಎಂಬವರ ವಿಚಾರಣೆ ಜಿಲ್ಲಾ ಸೆಷನ್ಸ್ ಜಡ್ಜ್ ಕೆ. ಶ್ರೀನಿವಾಸನ್ ಅವರ ಮುಂದೆ ನಡೆದು, ಆರೋಪಿಗಳಲ್ಲಿ ಮೊದಲಿನವನನ್ನು ಫಾಸಿ ಶಿಕ್ಷೆಗೂ, ಎರಡನೆಯವನನ್ನು ೬ ವರ್ಷಗಳ ಕಠಿಣ ಸಜೆಗೂ ಗುರಿಪಡಿಸಿರುವರು.

ಇದೇ ಪುತ್ತೂರು ತಾಲೂಕಿನ ಪೂಕ್ಕಳ ಗೌಡ ಎಂಬಾತನ ಕೊಲೆಯ ಪ್ರಕರಣದಲ್ಲಿ ದೂಮಣ್ಣ ಗೌಡ ಎಂಬಾತನಿಗೆ ಫಾಸಿ ಶಿಕ್ಷೆ ವಿಧಿಸಲಾಗಿದೆ

ಕಾಸರಗೋಡಿನ ಶೇಕಾಲಿ ಎಂಬಾತನ ಕೊಲೆಯ ನಿಮಿತ್ತ ಅಂಪ್ರುಮಾನೆ ಎಂಬಾತನಿಗೆ ೩ ವರ್ಷಗಳ ಕಠಿಣ ಸಜೆ ವಿಧಿಸಲಾಗಿದೆ

ಬೋಳೂರು ಉರ್ವ–ತಾ ೧ ೭.೪೫ ನೇ ಆದಿತ್ಯವಾರ ೫ ಗಂಟೆಗೆ ಗೇರು ಬೀಜ ಕಾರ್ಖಾನೆಯ ಮಜೂರರ ಮಹಾಸಭೆಯೂ ೬ ಗಂಟೆಗೆಮ। ಜೋನ್ ಶಿಕೇರ, ಚೂಡಪ್ಪ ಮತ್ತು ಬದ್ರುದ್ದೀನ್ ಇವರಿಂದ ಹೊರಟ ವಿಜ್ಞಾಪನೆಯನ್ನು ಮನ್ನಿಸಿದ ಮದ್ರಾಸು ಗವರ್ನರರಿಗೆ ಕೃತಜ್ಞತೆಯನ್ನು ಅರ್ಪಿಸಲು ಒಂದು ಮಹಾ ಸಭೆಯೂ ಮಾಜಿ ಎಮ್. ಎಲ್ ಸಿ.ಗಳಾದ ಮಿ. ಜೆರೋಮ್ ಸಾಲ್ಡಾನರವರ ಅಧ್ಯಕ್ಷತಯಲ್ಲಿ ಜರಗಿ, ಮಾನ್ಯ ಮದ್ರಾಸು ಗವರ್ನರರ ಆಜ್ಞೆಗೆ ಕೃತಜ್ಞತೆ ಸಲ್ಲಿಸುವ, ಗೇರು ಬೀಜ ಮಜೂರಿಗೆ ಕೆಲಸವಿಲ್ಲದ ಕಾಲದ ಸಂಬಳ ಸಿಗಬೇಕೆನ್ನುವ, ಕಾರ್ಖಾನೆಯನ್ನು ಬೇಗನೆ ತೆರೆಯಬೇಕು ಎನ್ನುವ ಮತ್ತು ಕೆಲಸದಿಂದ ನಿಷ್ಕಾರಣವಾಗಿ ತೆಗೆದು ಹಾಕಿದ ೧೩ ಮಂದಿಯನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆನ್ನುವ ಠರಾವುಗಳು ಮಾನ್ಯವಾದುವು ಬಳಿಕ, ಶ್ರೀ। ಸಿ ಎಲ್. ಲೋಬೊ ಅವರ ಭಾಷಣವಾಗಿ, ಸಭೆಯು ಜಯಘೋಷದೊಡನೆ ಮುಕ್ತಾಯಗೊಳಿಸಲಾಯಿತು

ಶ್ರೀ। ಪಿ. ರಾಮಕೃಷ್ಣಯ್ಯ–ನಿವೃತ್ತ ಜಿಲ್ಲಾ ರಿಜಿಸ್ಟ್ರಾರ್ ಇವರು ಕಳೆದ ತಾ ೫ರಂದು ತಮ್ಮ ೬೫ನೆಯ ವಯಸ್ಸಿನಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಆಯುರ್ವೇದ ವೈದ್ಯ ಶಾಸ್ತ್ರವನ್ನು ಅಭ್ಯಸಿಸಿ, 'ಆಯುರ್ವೇದ ಸಾರ' ಎಂಬ ಅಮೂಲ್ಯ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಕನ್ನಡದಲ್ಲಿ ಬರೆದು ಪ್ರಕಟಿಸಿ ದೊಡ್ಡ ಸೇವೆ ಸಲ್ಲಿಸಿದ್ದಾರೆ. ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವುದಲ್ಲದೆ, ಅವರ ಬಂಧುಗಳ ಸಂತಾಪದಲ್ಲಿಯೂ ಭಾಗಿಗಳಾಗುತ್ತೇವೆ.

ದ ಕ. ಜಿಲ್ಲಾ ಟೀಚರ್ಸ್–ಗಿಲ್ಡಿನ ಕೌನ್ಸಿಲ್ ಸಭೆಯು ತಾ ೧೮ರಂದು ಗಣಪತಿ ಹೈಸ್ಕೂಲಿನಲ್ಲಿ ಉಪಾಧ್ಯಕ್ಷ ಮಿಸ್ ಎ ಡಿ' ಡಿಸೋಜರ ಅಧ್ಯಕ್ಷತೆಯಲ್ಲಿ ಜರಗಿ, ಮುಂದಿನ ವರ್ಷಕ್ಕೂ ಶ್ರೀ. ಎಸ್.ಎ ಕಾರಟ್ ಅವರನ್ನೇ ಅಧ್ಯಕ್ಷತೆಗೆ ಚುನಾಯಿಸಲಾಯಿತು

ಕರ್ನಾಟಕ ವಾಣಿಜ್ಯ–ಕಲಾ ಶಾಲೆಯು ಕಳೆದ ೨೫ರಂದು ಶ್ರೀ ಎಂ ಮಾಧವ ರಾಯರಿಂದ ತೆರೆಯಲ್ಪಟ್ಟು ಅಂದಿನಿಂದ ಪ್ರತಿದಿನವೂ ಜರಗುತ್ತಿದೆ

ಕಾಲೇಜುಗಳಲ್ಲಿ ಸ್ಥಳಾಭಾವ– ದ. ಕ. ಜಿಲ್ಲೆಯಲ್ಲಿ ಮಾತ್ರವಲ್ಲ, ಮದ್ರಾಸ್ ನಗರದಲ್ಲೂ, ಪ್ರಾಂತದ ಇತರ ಕಾಲೇಜುಗಳಲ್ಲಿಯೂ ಪ್ರೌಢ ವಿದ್ಯಾಭ್ಯಾಸಕ್ಕೆ ಅರ್ಜಿಗಳು ಹೆಚ್ಚಿನ ಆದರೆ, ಕಾಲೇಜುಗಳಲ್ಲಿ ತಕ್ಕಷ್ಟು ಸ್ಥಳಾನುಕೂಲವಿಲ್ಲದೆ ಸಾವಿರಾರು ಮಂದಿ ವಿದ್ಯಾರ್ಥಿಗಳು ನಿರಾಶರಾಗಬೇಕಾಗಿದೆ ಈ ವಿಚಾರದಲ್ಲಿ ಇತ್ತೀಚೆಗೆ ಸಿಂಡಿಕೇಟಿನ ಸಭೆ ಸೇರಿ, ಪ್ರತಿಯೊಂದು ಕಾಲೇಜುಗಳಿಗೂ ಆದಷ್ಟು ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲನುಕೂಲವಾಗುವಂತೆ ವಿಶ್ವವಿದ್ಯಾಲಯದ ನಿಬಂಧನೆಗಳಲ್ಲಿ ವ್ಯತ್ಯಾಸಗಳನ್ನು ಮಾಡಲಾಗಿದೆ

ಕುಂಜಾಲು–ಕುಂಜಾಲು ಪಂಚಾಯತ ಬೋರ್ಡಿನ ಪ್ರೆಸಿಡೆಂಟರಾಗಿದ್ದ ಶ್ರೀ ಇರ್ಮಾಡಿ ವಿಟ್ಠಲ ಸೆಟ್ಟರು ಉದರ ರೋಗದಿಂದ, ತಾ. ೩೦ ೬ ೪೫ರಲ್ಲು ದೈವಾಧೀನರಾದ ದುಃಖ ಸೂಚನಾರ್ಥವಾಗಿ ಕುಂಜಾಲಿನಲ್ಲಿ ತಾ ೧.೭.೪೫ರಲ್ಲು ಹರತಾಳವಾಚರಿಸಲ್ಪಟ್ಟಿತು ಮೃತರು ಗೌರವಸ್ಥರೂ, ತೇಜೋಭರಿತರೂ, ಕರ್ತವ್ಯ ನಿಷ್ಠರೂ ಪರೋಪಕಾರಿಗಳೂ ಆಗಿದ್ದರು

ಮುದ್ರಾಡಿ–ತಾ. ೬–೭–೪೫ರಲ್ಲು ಮುದ್ರಾಡಿ ಕಸ್ತೂರಬಾ ಸ್ಮಾರಕ ವಿದ್ಯಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ರಾಷ್ಟ್ರಭಾಷಾ ಪ್ರಚಾರ ಉಪ ಸಮಿತಿಯ ಸಭೆಯು ಶ್ರೀ ಎಂ ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿ 'ಜಿಲ್ಲೆಯಲ್ಲಿ ಹಿಂದಿ ಪ್ರಚಾರವು ವ್ಯಾಪಕವಾಗಿಯೂ ಮತ್ತು ವ್ಯವಸ್ಥಿತ ರೀತಿಯಿಂದಲೂ ಜರಗುವಂತೆ ಯುಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದೂ ಈ ಕಾರ್ಯವು ಕರ್ನಾಟಕ ಹಿಂದಿ ಪ್ರಚಾರ ಸಭೆಯ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಯುವುದು ಕಾರ್ಯದ ದೃಷ್ಟಿಯಿಂದ ಉತ್ತಮವೆಂದೂ ಈ ಸಮಿತಿಯು ಅಭಿಪ್ರಾಯ ಪಡುತ್ತದೆ ಎಂದು ನಿರ್ಧರಿಸಿತು ಮೇಲಿನ ನಿರ್ಣಯಕ್ಕನುಸಾರವಾಗಿ ಕೂಡಲೇ ಪ್ರಾಂತೀಯ ಸಮಿತಿಯವರೊಡನೆ ಪತ್ರ ವ್ಯವಹಾರ ಮಾಡಿ ಮುಂದಿನ ಸಭೆಯನ್ನು ಇದೇ ತಿಂಗಳಲ್ಲಿ ಮೂಡನೇ ವಾರದಲ್ಲಿ ಕರೆಯಬೇಕೆಂದೂ ನಿರ್ಧರಿಸಲಾಯಿತು.

ಕೊಯಮುತ್ತೂರು ಕರ್ನಾಟಕ ಸಂಘದ ವಾರ್ಷಿಕೋತ್ಸವವು–ಇದೇ ತಾರೀಕು ೧ರಲ್ಲು ಗವರ್ನಮೆಂಟ್ ಕಾಲೇಜು ವಠಾರದಲ್ಲಿ ಶ್ರೀ ಬಿ. ಎಸ್. ಶೆಣೈ ಎಕ್ಸಿಕ್ಯೂಟಿವ್ ಎಂಜಿನಿಯರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು ಇನ್ನೂರಕ್ಕೆ ಮಿಕ್ಕಿದ ಸದಸ್ಯರು ಈ ಸಮಾರಂಭಕ್ಕೆ ದಯಮಾಡಿಸಿದ್ದರು. ಉಪಹಾರ ಕೂಟವಾದ ಬಳಿಕ ಸಂಘದ ಅಧ್ಯಕ್ಷರಾದ ಶ್ರೀ. ಬಿ. ಆರ್. ಭಟ್, ಬಿ.ಎ.ಬಿ.ಎಲ್. ಅವರು ಪ್ರಸ್ತಾವಿಕ ಭಾಷಣ ಮಾಡುತ್ತ ಸಂಘಕ್ಕೆ ಸ್ವತಂತ್ರ ಕಟ್ಟಡದ ಆವಶ್ಯಕತೆಯನ್ನು ಸೂಚಿಸಿದರು. ಶ್ರೀಗಳಾದ ಸಿ. ಆರ್ ಕೃಷ್ಣರಾವ್, ನರೇಂದ್ರನಾಥ್ ಮೊದಲಾದವರ ಸಂದರ್ಭೋಚಿತ ಮಾತುಗಳಾದ ಬಳಿಕ ಅಧ್ಯಕ್ಷರ ಭಾಷಣವಾಯಿತು. ವಿವಿಧ ವಿನೋದಾವಳಿಗಳಾದ ನಂತರ ಡಾಕ್ಟರ್ ರಾಮರಾಜ್ ಅವರು ಧನ್ಯವಾದಗಳನ್ನರ್ಪಿಸುತ್ತ ಸಂಘದ ಕಾರ್ಯದರ್ಶಿ ಯು. ವೆಂಕಟ್ರಾಯರು ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು.

ಬೆಳ್ಳೆ–ಯೂನಿಯನ್ ಕ್ಲಬ್ಬಿನ ಉದ್ಘಾಟನಾ ಸಮಾರಂಭವು ತಾ ೮ ೭–೪೫ರ ಆದಿತ್ಯವಾರ ಪಿ. ಫಾ ಜ ಪಿಂಟೋರವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಕೆ ಜ ಬಲ್ಲಾಳರು ಕ್ಲಬ್ಬಿನ ಉದ್ದೇಶಗಳನ್ನು ವಿವರಿಸಿದ ಬಳಿಕ ಸಭಿಕರ ಪೈಕಿ ಹಲವರು ಕ್ಲಬ್ಬಿಗೆ ಶ್ರೇಯಸ್ಸನ್ನು ಕೋರಿ ಭಾಷಣವಿತ್ತರು ಅಧ್ಯಕ್ಷರು ತಮ್ಮ ದಿವ್ಯ ವಾಣಿಯಿಂದ ಯೂನಿಯನ್ನನ್ನು ಹರಸಿದ್ದಲ್ಲದೆ ಪ್ರೋತ್ಸಾಹಿಸಿ ವೃದ್ಧಿಯನ್ನೂ ಬಯಸಿ ಮಾತಾಡಿದರು. ಕೊನೆಗೆ ಟೀಪಾರ್ಟಿ ಸತ್ಕಾರಗಳೊಂದಿಗೆ ಸಭಾಂತ್ಯವಾಯಿತು.

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ. ಕ. (ರಿಜಿಸ್ಟರ್ಡ್.)

ತಾರೀಕು 31—3—1945ಕ್ಕೆ ಅಂತ್ಯವಾಗುವ ವರ್ಷದ ಆಯ ವ್ಯಯಗಳ ಲೆಕ್ಕ.

ಆಯ.

ತಾ 31 3 1944ರಲ್ಲು ಉಳಿದ ಶಿಲ್ಕು		106	13	8
ಊರಿನ ಸದಸ್ಯರಿಂದ ಪ್ರವೇಶ ಹಾಸಲು ಮತ್ತು ವರ್ಗಣಿ	127 8 0			
ಸಮಿತಿಯ ರಾಜ ಬೊಂಬಾಯಿಯಿಂದ ಬಂದ ಪ್ರವೇಶ ಹಾಸಲು ಮತ್ತು ವರ್ಗಣಿ	680 0 0	807	8	0
ಊರಲ್ಲಿ ಸಂಗ್ರಹಿಸಿದ ಸಹಾಯ ಧನ	310 0 0			
ಸಮಿತಿಯ ಪ್ರತಿನಿಧಿ ಕಮಿಟಿ ಬೊಂಬಾಯಿಯವರು ಸಂಗ್ರಹಿಸಿದ ಮೇರೆಗೆ ಬಂದ ಸಹಾಯ ಧನ	2000 0 0	2310	0	0
ಮುಹೂರ್ತವಾರದ ಕಾಣಿಕೆ		230	8	0
ಪೂಜಾದಿಗಳಿಂದ ಬಂದದು		77	12	0
ದಕ್ಷಿಣೆ ಮತ್ತು ಹರಿವಾಣ ಕಾಣಿಕೆಗಳಿಂದ ಬಂದದ್ದು		131	8	0
ಕಲಶ ಸ್ನಾನದ ಕಾಣಿಕೆ		5	0	0
ವೈದೀಕ ವಿವಾಹಗಳಿಂದ ಬಂದದ್ದು		679	12	0
ಗುರು ಸ್ಮಾರಕ ನಿಧಿ		18	8	0
ಮುಷ್ಟಿ ಅಕ್ಕಿ ಫಂಡಿನಿಂದ ನಗದಿ ಬಂದದ್ದು		7	0	0
ಇತರ ಉತ್ಪತ್ತಿ		3	0	0
ಜಾಲ್ತಿ ಠೇವಣಾತಿ ಮೇಲಣ ಬಡ್ಡಿ		10	0	0
		4387	5	8

ವ್ಯಯ

ಕಟ್ಟೋಣಗಳ ಬಗ್ಗೆ ಖರ್ಚು	1435	6	6
ಪೂಜಾದಿ ವಿನಿಯೋಗಗಳ ಬಗ್ಗೆ ಖರ್ಚು	169	7	1
ಶಾಂತಿಯವರಿಗೆ ಸಂದ ಮೇರೆಗೆ ಖರ್ಚು	125	2	8
ಮುದ್ರಣ ಮತ್ತು ಬರವಣಿಗೆ ಸಾಹಿತ್ಯಗಳ ಬಗ್ಗೆ	56	3	6
ಟಪ್ಪಾಲು ಖರ್ಚು	6	10	3
ಕ್ರಯಕ್ಕೆ ಪಡೆದ ಚರಸೊತ್ತುಗಳ ಮೌಲ್ಯ ಮತ್ತು ದುರಸ್ತಿ ಖರ್ಚು	111	7	4
ವೈದೀಕ ವಿವಾಹಗಳ ಬಗ್ಗೆ ಖರ್ಚು	481	7	11
ಕಲಶಸ್ನಾನ ಪೂಜೆಗಳ ಬಗ್ಗೆ ಖರ್ಚು	1	10	6
ತೀರ್ಥ ವಸ್ತ್ರದ ಜಮಾನು ಬಾಬ್ತು ಖರ್ಚು	7	2	0
ಮುಹೂರ್ತವಾರದ ಸಭೆಯ ಬಗ್ಗೆ ಖರ್ಚು	1	7	0
ಸಭಾ ಸತ್ಕಾರಗಳ ಬಗ್ಗೆ ಖರ್ಚು	1	8	0
ಮಂಗಳೂರು ಶ್ರೀ. ಗೋ ಕ್ಷೇತ್ರದ ಶಿವರಾತ್ರಿ ಉತ್ಸವಕ್ಕೆ ಕಳುಹಿಸಿದ ಒಂದು ಗಾಡಿ ಹೊರೆಗಳ ಬಗ್ಗೆ ದಮಾರ್ಥ ಸಂಗ್ರಹಿಸಿದ್ದು ಹೊರತು ಸಮಿತಿಯ ಲೆಕ್ಕದ ಖರ್ಚು ವಗೈರ ಸಹಾಯಗಳು	16	10	0
ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟ ಸಹಾಯಗಳು	7	6	0
ಇತರ ಖರ್ಚುಗಳು ..	118	6	0
ತಾ 31 3 45ಕ್ಕೆ ಖರ್ಚು ಕಳೆದು ಉಳಿದ ಶಿಲ್ಕು	1617	6	11
	4387	5	8

ಸಮಿತಿಯ ರಾಜ ಬೊಂಬಾಯಿ; ಇದರ ತಾ 1-1-1944ರಿಂದ 31-12-44ರ ವರೇಗಿನ ಆಯ ಮತ್ತು ವ್ಯಯ--

ತಾ 1 1 1944ರಿಂದ 31 12 44ರ ವರೇಗೆ ಸದಸ್ಯರಿಂದ ವಸೂಲ್ ಬಂದ ಪ್ರವೇಶ ಹಾಸಲು ಮತ್ತು ವರ್ಗಣಿ	560	4	0
	560	4	0

ಸೇವಾ ಸಮಿತಿ ಕಟಪಾಡಿಗೆ ನಗದಿಯಾಗಿ ಕಳುಹಿಸಿದ ಮೇರೆಗೆ .. .	530	0	0
ಮುದ್ರಣ ಮತ್ತು ಬರವಣಿಗೆ ಸಾಹಿತ್ಯಗಳ ಬಗ್ಗೆ .	6	8	0
ಟಪ್ಪಾಲು ಖರ್ಚು	4	4	0
ಬ್ಯಾಂಕು ಕಮಿಷನ್	1	0	0
ತಾ. 31 12 44ರಲ್ಲು ಕೈಯಲ್ಲಿ ಉಳಿದ ಶಿಲ್ಕು	18	8	0
	560	4	0

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ ಕ. ಇದರ ಲೆಕ್ಕ ಪುಸ್ತಕ ಮತ್ತು ರಶೀದಿಗಳನ್ನು ಪರಿಶೋಧಿಸಿದಲ್ಲಿ ಲೆಕ್ಕಗಳು ಸರಿ ಉಂಟು ಎಂದು ತಿಳಿಸುವರೇ ಸಂತೋಷಪಡುತ್ತೇನೆ

Katapadi,
3-7-1945

(ಸಹಿ) **Dr. K. N. Suvarna.**
Udipi, 30-6-1945

(ಸಹಿ) ಯು. ಯಸ್. ಗಿರಿಯಪ್ಪ, ಅಧ್ಯಕ್ಷ, ಗುಡ್ಡೆ ಮೊಣ್ಣ ಪೂಜಾರಿ, ಉಪಾಧ್ಯಕ್ಷ, ಕೆ. ರಂಗ, ಗೌರವ ಕಾರ್ಯದರ್ಶಿ, ಯು. ವಾದು, ಗೌರವ ಉಪಕಾರ್ಯದರ್ಶಿ, ಕೆ ಬೂದ, ಗೌರವ ಕೋಶಾಧಿಕಾರಿ, ಕೆ. ಮೈಂದ, ಕೆ. ದೇಜು, ಪೈ. ವೆಂಕಪ್ಪ.



Approved firm by the Govt of Mysore' Certified by the Agent of the Govt. of India in Ceylon.

(೨ನೇ ಪುಟದಿಂದ ಮುಂದುವರಿದುದು.)

ರಷ್ಟೇ ಇದ್ದಾರೆ. ಆದರೆ ಮುಸಲ್ಮಾನರಿಗೈದು ಸ್ಥಾನಗಳಿರುವಾಗ ಇವರಿಗೆ ದೊರಿತುದು ಒಂದೇ. ಅರ್ಥಾತ್ ಮುಸಲ್ಮಾನರೊಂದಿಗೆ ಹೋಲಿಸುವಾಗ ಹರಿಜನರನ್ನೂ ಹಿಂದುಗಳಂತೆಯೇ ಗಣಿಸಿದ್ದಾರೆ! ಮಿಕ್ಕ ಹಿಂದುಗಳಿಗಿಂತ ಭಿನ್ನ ರೀತಿಯಲ್ಲಿ ಕಂಡಿದ್ದಾರೆಂದು ಗಾಂಧಿಜೀ ಬೇಸರಿಸುವಂತಿಲ್ಲ! 'ಸವರ್ಣ ಹಿಂದೂ ಶಬ್ದದ ಅರ್ಥವೇನು?' ಎಂದು ಗಾಂಧಿಜೀ ಕೇಳಿದುದಲ್ಲ-'ಹಿಂದುಗಳೆಲ್ಲರೂ ಒಂದೇ' ಎಂದು ಹೇಳಿದುದು. ಹರಿಜನರಿಗೆ ಪ್ರತ್ಯೇಕ ಸ್ಥಾನ ಕೊಡಬಾರದಿದ್ದಿತು—ಅದನ್ನು ನಾವೇ ಕೊಡುತಿದ್ದೆವು ಎಂದು ಆದರ ಅರ್ಥ. ಗಾಂಧಿಜೀ ಎಲ್ಲಿಂದ ಕೊಡುತಿಬ್ಬರು? ಮುಸ್ಲಿಂ ಲೀಗಿನಿಂದ ಪಡೆದು ಕೊಡುತಿದ್ದರೆ? ಜಿನ್ನರು ಕೊಡುವಂತಿಲ್ಲ; ಅವರಿಂದದನ್ನು ಪಡಕೊಂಡರೆ ಹರಿಜನರನ್ನು ಲೀಗಿಗೆ ಸೇರಿಸಿದಂತಾದೀತೆಂದು ಹೆದರಿ ಗಾಂಧಿಜೀ ಕೇಳುವಂತೆಯೂ ಇರಲಿಲ್ಲ. ಹರಿಜನರಿಗೂ ಕಾಂಗ್ರೆಸಿಗೆ ದೊರೆತ ಪಾಲಿನಿಂದಲೇ ಕೊಡುತಿದ್ದರು. ಆ ರೀತಿ ಕಾಂಗ್ರೆಸಿಗೆ ದೊರೆತ 5 ಸ್ಥಾನಗಳ ಪೈಕಿ ರಾಷ್ಟ್ರೀಯ ಮುಸಲ್ಮಾನರಿಗೆರಡು ಕಳೆದುಳಿದುದರಲ್ಲಿ ಹರಿಜನರಿಗೊಂದು ಹೋಗುತಿತ್ತು; ಅದನ್ನೂ ಕಳೆದುಳಿದುದರಲ್ಲಿ......ಕಾಂಗ್ರೆಸ್ ಧೋರಣೆಯನ್ವಯ ಯಾರಾರಿಗೆಷ್ಟೆಷ್ಟು ಹೋಗಬೇಕಾಗುತಿತ್ತೋ! ಹೀಗೆ ಉದಾರ ಬುದ್ಧಿಯಿಂದ ಎಲ್ಲರಿಗೂ ತಾವೇ ಕೊಡುತ್ತೇವೆನ್ನುವವರು ಯಾರವರು—ಕಾಂಗ್ರೆಸಿಗರೋ, ಹಿಂದುಗಳೋ? ಹಿಂದುಗಳಿಂದಾಗುತಿದ್ದರೆ ತಪ್ಪಿಲ್ಲ; ತಮಗಾವುದೂ ಬೇಡವೆಂದು ತಮ್ಮದಾಗಿರುವವೆಲ್ಲವನ್ನೂ ದಾನಮಾಡಿ ಹರಿಶ್ಚಂದ್ರಾವತಾರ ಧರಿಸುವ ಹಕ್ಕು ಅವರಿಗಿದೆ. ಆದರೆ ಗಾಂಧಿಜೀ ಹಾಗನ್ನುವದಿಲ್ಲವಲ್ಲ? ಕಾಂಗ್ರೆಸು ರಾಷ್ಟ್ರೀಯ ಸಂಸ್ಥೆಯೆನ್ನುತಿದ್ದಾರೆ; ಜಾತಿಮತ ಭೇದವಿಲ್ಲದ ರಾಷ್ಟ್ರೀಯ ಸಂಸ್ಥೆಯು ಎಲ್ಲಾ ಜಾತಿಮತಗಳಿಗೂ ಅವವುಗಳ ನ್ಯಾಯವಾದ ಪಾಲನ್ನು ಸಲ್ಲಿಸುವದು ಬೇಡವೆ? 'ಹಿಂದು'ಗಳಲ್ಲದವರಿಗೆ 'ಹಿಂದುಗಳಿಗೆ ಕಡಿಮೆ ಬಿದ್ದರೂ ಪರವಾಇಲ್ಲ' ಎನ್ನುವ ಅಧಿಕಾರವೇನಿದೆ? ಅಂತೂ ಗಾಂಧಿಜೀಯ ವಾದದಂತಾಗುತಿದ್ದರೆ, ಒಂದು ಕವರಾದ ಲೀಗಿಗೆ ಸರಿಪಾಲು ಸಂದಾಯ—ಉಳಿದ ಅರೆವಾಸಿಯಲ್ಲಿ ನಾಲ್ಕೈದು ಕವರುಗಳೊಳಗೆ ಪಾಲಾಗಬೇಕಿತ್ತು. ಎಲ್ಲರೂ ಅವಿಭಕ್ತ ಕುಟುಂಬವಾಗಿ ಉಳಿಯುವದಾದರೆ ಸಂತೋಷ—ಪಾಲಾಗುವದೆಂದು ನಿಶ್ಚಯವಾದ ಮೇಲೆ ಪ್ರತಿಕವರಿಗೂ ಹಕ್ಕಿನ ಭಾಗ ದೊರೆಯಬೇಕಷ್ಟೆ?

ಭುಲಾಭಾಯಿ ಮಾಡಿದುದೇನು?

ಆದರೆ ಲೀಗ್-ಕಾಂಗ್ರೆಸ್ ಸಮಾನತೆಯ ಜನಕ ಗಾಂಧಿಜೀಯಲ್ಲ, ಭುಲಾಭಾಯಿ ದೇಸಾಯಿ ಅದರ ಅನುಮೋದಕನ ಸ್ಥಾನ ಮಹಾತ್ಮನಿಗಾದರೆ, ಬಣ್ಣ ಬದಲಾಯಿಸಿ ದೋಷ ಕಡಿಮೆಮಾಡಿದ ಪುಣ್ಯ ವೇವೆಲರಿಗೆ. ಭುಲಾಭಾಯಿ-ಲಿಯಾಖತ್ ಒಪ್ಪಂದವೇ ಇಂದಿನ ಸಾಮ್ಯತೆಯ ಮೂಲ. ಶ್ರೀ. ಭುಲಾಭಾಯಿ ದೇಸಾಯಿ ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕರು; ನವಾಬಜ್ಹಾದಾ ಲಿಯಾಖತ್ ಅಲೀಖಾನ್ ಅಲ್ಲಿಯ ಲೀಗ್ ಪಕ್ಷದ ಉಪನಾಯಕರು; ಮಿ. ಜಿನ್ನರ ಗೈರುಹಾಜರಿಯಲ್ಲಿ ಆ ಪಕ್ಷದ ಸೂತ್ರಧಾರಿ ಅವರೇ. ಕಳೆದ ಬಾರಿಯ ಕೇಂದ್ರ ಎಸೆಂಬ್ಲಿಯಲ್ಲಿ ಇವರಿಬ್ಬರ ನಾಯಕತ್ವದಲ್ಲಿ ಅವೆರಡು ಪಕ್ಷಗಳೊಂದಾಗಿ ಸರಕಾರಕ್ಕೆ ಮೇಲಿಂದ ಮೇಲೆ ಸೋಲನ್ನೊಡ್ಡಿದ್ದುವು. ಇದು ಭುಲಾಭಾಯಿಗಳನ್ನು ಉಬ್ಬಿಸಿತು. ಭಾರತ ಸ್ವಾತಂತ್ರ್ಯವು ಎಸೆಂಬ್ಲಿ ಭವನದೊಳಗಿದೆ ಹೊರತು ಜೈಲು ಕೋಣೆಯಲ್ಲಿಲ್ಲ ಎಂಬ ಕಾಂಗ್ರೆಸಿಗರ ವರ್ಗದ ಶಿರಸ್ಸು ಈ ಭುಲಾಭಾಯಿ. ಹಣದ ರಾಶಿಯಲ್ಲಿರುವ ಮನುಷ್ಯ, ದೊಡ್ಡ ವಕೀಲ. ಅಗತ್ಯ ಬೀಳುತ್ತಿದ್ದರೆ ಒಂದು ವಿಮಾನ ಪಡಕೊಂಡು ಕಾಂಗ್ರೆಸ್ ಪ್ರಮುಖರನ್ನೆಲ್ಲಾ ಸಿಮ್ಲಾಕ್ಕೆ ಸಾಗಿಸಲು ತಯಾರಿದ್ದ ಜನ. ದೇಸಾಯಿಗಳು ಈಬಾರಿ ಸಿಮ್ಲಾಕ್ಕೆ ಹೋಗುವ ಬದಲು ಕೋರ್ಟಿಗೆ ಹೋಗುತಿದ್ದರೆ ರೂಪಾಯಿ 75000ರುಸುಮನ್ನು ಜೇಬಿನೊಳಗೆ ಸುರಿದುಕೊಳ್ಳುತಿದ್ದರು. ಸಿಂಧಿನಲ್ಲಿ ದೇಶಾಭಿಮಾನಿ ಪ್ರಧಾನ ಮಂತ್ರಿಯಾಗಿದ್ದ ಅಲ್ಲಾಭಕ್ಷರ ಕೊಲೆಯಲ್ಲಿ ಒಬ್ಬ ಆರೋಪಿಯಾದ ಮಿ. ಕುರ್ರೋ (ಮಾಜೀ ಮಂತ್ರಿ ಮತ್ತು ಮತ್ತು ಲೀಗ್ ಕಾರ್ಯಕಾರೀ ಸಮಿತಿಯ ಓರ್ವ ಸದಸ್ಯ) ಇವರ ಪರವಾಗಿ 75 ಸಾವಿರ ರೂಪಾಯಿ ರುಸುಮಿನ ಕಂಟ್ರಾಕ್ಟಾಗಿ ಆ ಪೈಕಿ 10 ಸಾವಿರ ರೂ. ಮುಂಗಡ ಬಂದಿತ್ತು. ಆದರೆ ಮೊಕದ್ದಮೆಯನ್ನು ಜಡ್ಜರು ಮುಂದುವರಿಸಲು ಕೇಳದೆ ಸಿಮ್ಲಾ ಸಮ್ಮೇಳನದ ಕಾಲದಲ್ಲಿಯೇ ಅದರ ತನಿಖೆಯೂ ನಡೆದು ಹೋದುದರಿಂದ ಭುಲಾಭಾಯಿಯ ವಕಾಲತ್ ತಪ್ಪಿಹೋಯಿತು. ಈ ರೀತಿ ಕಾನೂನೇ ಕಾರ್ಯವಾಗಿರುವ ವಕೀಲ-ಒಬ್ಬರ ಹಕ್ಕನ್ನು ಇನ್ನೊಬ್ಬರದೆಂದು ಸಾಧಿಸಿ ಅಭ್ಯಾಸವಿರುವ ಮನುಷ್ಯ-ಲಿಯಾಖತ್ ಖಾನರೊಂದಿಗೆ ಇಂತಹ ಒಡಂಬಡಿಕೆ ಮಾಡಿಕೊಂಡುದು ವಿಶೇಷವಲ್ಲ; ಹಿಂದೂ ಮುಸ್ಲೀಮರು ಅಲ್ಲಿಯಾದರೂ ಒಟ್ಟಿಗೆ ಆಳುವಂತಾಗಿ, ದೇಶ ವಿಭಾಗದ ಪ್ರಶ್ನೆಗೆ ಚಿತ್ತು ಬೀಳಬಹುದೆಂಬ ಆಸೆಯಿಂದ ಗಾಂಧಿಜೀ ಒಪ್ಪಿದುದೂ ವಿಶೇಷವಲ್ಲ. ಕಾಂಗ್ರೆಸ್ ಮತ್ತು ಲೀಗ್, ಎರಡೇ ಇರುವಲ್ಲಿವೆ. ಅಖಿಲ ಭಾರತವೇದರೆ ಅಷ್ಟೇ ಅಲ್ಲ; ಆದರೆ ಅವೆರಡು ಪಕ್ಷಗಳ ಜಗಳದ ಮಟ್ಟಿಗೆ ಇತ್ಯಂಡದ ಒಪ್ಪಿಗೆಯ ಒಂದು ತೀರ್ಮಾನ ಇಲ್ಲಿದೆ—ಎರಡಕ್ಕೂ ಸಮಾನ ಸ್ಥಾನ ಕೊಟ್ಟರಾಯಿತು. ಆ ಸಾಮ್ಯತೆಯನ್ನು ಅಸ್ತಿವಾರವಾಗಿ ಮಾಡಿ, ಸರ್ವರನ್ನೂ ಒಳಗೊಳ್ಳಲಾಗುವಂತೆ 'ಕಾಂಗ್ರೆಸ್-ಲೀಗ್' ಎಂದಿದ್ದ ಬಣ್ಣವನ್ನು ವೈಸರಾಯಿ ಹಿಂದೂ-ಮುಸ್ಲೀಮ್ ಆಗಿ ಬದಲಾಯಿಸಿದರು. ದಳಿತ ವರ್ಗ, ಸಿಖ್, ಇತ್ಯಾದಿಗಳನ್ನು ಕಂಡಂತೆ ಎಲ್ಲರನ್ನೂ ಜಾತಿವಾರಾಗಿಯೇ ಕಂಡರು. ಇದರಿಂದಾಗಿ ದಳಿತ ವರ್ಗಕ್ಕಿಟ್ಟ ಸ್ಥಾನವೊಂದು ಹಿಂದುಗಳಿಗೆ ಹೆಚ್ಚಿಗೆ ದೊರೆಯಿತು; ಮುಸಲ್ಮಾನರಾರೂ ಕಾಂಗ್ರೆಸಿನ ಹೆಸರಿನಿಂದ ಹಿಂದುಗಳ ಸ್ಥಾನಕ್ಕೆ ಬಾರದಂತಾಯಿತು-ಒಟ್ಟಿನ ಮೇಲೆ, ಬಹುಸಂಖ್ಯಾಕ ಹಿಂದುಗಳಿಗೂ ಅಲ್ಪಸಂಖ್ಯಾಕ ಮುಸಲ್ಮಾನರಿಗೆ ದೊರೆತಷ್ಟೇ ಸ್ಥಾನ ಸಿಕ್ಕಿದ ಮೂಲದೋಷವೊಂದನ್ನು ಬಿಟ್ಟರೆ ಬೇರಾವ ಅಪರಾಧವೂ ಹಿಂದುಗಳಿಗಾಗದಂತಾಯಿತು. ಆದ್ದರಿಂದ ಈ ಮಟ್ಟಿಗೆ ಲೋರ್ಡ್ ವೇವೆಲ್ ಸರಿ-ಮಹಾತ್ಮ ಗಾಂಧಿ ತಪ್ಪು.

ಅಕ್ರಮದೊಳಗೊಂದು ಕ್ರಮ!

ಈ ಜಾತೀಯ ಪಾಲುಪಟ್ಟಿಯನ್ನು ಕಂಡು ಭಾರತೀಯನೊಬ್ಬನು ಹೊಂಕರಿಸಿಯಾನು ಹೊರತು ಹೂಂಗುಟ್ಟಲಾರ. 'ನಾನು ಭಾರತೀಯ' ಎನ್ನುವ ಬದಲಿಗೆ 'ನಾನು ...ಜಾತಿಯವ' ಎನ್ನುವಂತಾದುದು ನಿಜಕ್ಕೂ ಕರುಳು ಕತ್ತರಿಸುವ ವಿಷಯ 'ಉಪನಯನ' 'ಮುಂಜಿ' ಮಾಡಿಸುವ ಹೊಣೆಗಾರಿಕೆ ಕೇಂದ್ರ ಸರಕಾರಕ್ಕಿರುತಿದ್ದರೆ ಅಲ್ಲಿಗೆ ಈ ಜಾತಿ ಸದಸ್ಯರೇ ಹೋಗುವದು ನ್ಯಾಯವಿತ್ತು; ಆದರೆ ಅಲ್ಲಿರುವದು ವಿದ್ಯಾಖಾತೆ, ಅರ್ಥಖಾತೆ, ಆರೋಗ್ಯ ಖಾತೆ, ಇತ್ಯಾದಿಗಳು. ಮುಸ್ಲಿಂ ನಾಣ್ಯ-ಹಿಂದೂ ನಾಣ್ಯಗಳಿಲ್ಲವಾದ್ದರಿಂದ ಅರ್ಥಖಾತೆಗೇರಿದ ಮೇಲೆ ಆತ 'ಹಣಕಾಸಿನ ಮಂತ್ರಿ' ಹೊರತು ಮುಸಲ್ಮಾನನೂ ಅಲ್ಲ, ಹಿಂದುವೂ ಅಲ್ಲ. ಎಲ್ಲಾ ವಿಭಾಗಗಳೂ ಹಾಗೆಯೇ. ಕೇಂದ್ರಾಡಳಿತೆಯಲ್ಲಿದ್ದುಕೊಂಡು ಭೇದ ಮಾಡಲಾಗುವದೆಂದರೆ ಹಳೇ ರೀತಿ—ಹೊಸ ಮಾದರಿ, ... ದರಿದ್ರ, ಪ್ಪಾಲಕ-ಕೆಲಸಗಾರ, ವಿದೇಶ-ಸ್ವದೇಶ, ಆ ಪ್ರಾಂತ್ಯ—ಈ ಪ್ರಾಂತ್ಯ-ಇವುಗಳೊಳಗೆ ಮಾತ್ರ: ಸ್ವತಂತ್ರ ರಾಷ್ಟ್ರವೊಂದರಲ್ಲಿ ಪಕ್ಷಗಳ ನಿರ್ಮಾಣವಾಗುವದು ಇಂತಹ ಹಿತಸಂಬಂಧಗಳಲ್ಲಿ ತಮ್ಮದೊಂದೊಂದು ಮಾದರಿಯನ್ನು ಮುಂದಿಟ್ಟುಕೊಂಡೇ. ಆದರೆ ನಮ್ಮದು ದಾಸ್ಯರಾಷ್ಟ್ರ! ಇಲ್ಲಿ 'ಸ್ವಾತಂತ್ರ್ಯಸಾಧನೆ'ಯ ಧ್ಯೇಯವಿರುವ ಕಾಂಗ್ರೆಸಿನಂತಹ ಸಂಸ್ಥೆ ಹುಟ್ಟುವದು ಸಹಜ. ದುರ್ದೈವವಶಾತ್ ಜಾತಿ ಸ್ವಾರ್ಥದ ಸಂಸ್ಥೆಗಳೂ ಹುಟ್ಟಿದುವು; ಅವುಗಳಿಗೆ ಅಲ್ಲಸಲ್ಲದ ಪ್ರಾಮುಖ್ಯತೆ ದೊರೆತುದರಿಂದ ವಾತಾವರಣವೇ ಜಾತಿಮಯವಾಗಿ ಹೋಯಿತು; ಅದೇ ದೇಶದ ಭಾವನೆಯೆಂಬ ಪ್ರಮಾಣಪತ್ರ ಆಳರಸರಿಂದ ದೊರೆಯಿತು; ಜಾತೀವಾರು ಪ್ರಾತಿನಿಧ್ಯವಾಗಿ ಪರಿಣಮಿಸಿತು! ಈ ರೀತಿ ಕಲ್ಮಷವೇ ಕಲ್ಲಾಗಿ ಗಟ್ಟಿ ಕಟ್ಟಿ, ಅಸ್ತಿವಾರವಾಗಿ ಹೋಯಿತು. ಇನ್ನು ಪರ ಮೇಲೆ ರಾಷ್ಟ್ರೀಯ ಪುನರ್ರಚನೆಯು ಅಖಿಲ ಭಾರತಾಕಾರದ-ಭವ್ಯ ಭವನ ಕಟ್ಟುತ ಕಲ್ಲನ್ನು ಪುಡಿಚ್ಚುವದೊಂದೇ ಕರ್ತವ್ಯ. ಅದಕ್ಕಾಗಿ ಕೇಂದ್ರ ಮಂಡಲಿಯಲ್ಲಿ ರಾಷ್ಟ್ರೀಯ ದೃಷ್ಟಿಯವರ ಬಹುಮತವಾಗುವಂತೆ ನೋಡುವದರಲ್ಲಿದೆ ವ್ಯವಹಾರ ಜಾಣ್ಮೆ. ಇದಕ್ಕೆ ಇಂದಿನ ವೇವೆಲ್ ಸೂಚನೆಗಳಲ್ಲಿರುವ ಅನುಕೂಲತೆಯು, ಗಾಂಧೀ ಅನುಮೋದಿತ ಭುಲಾಭಾಯಿ--ಲಿಯಾಖತ್ ದಾಖಲೆಯಲ್ಲಿರಲಿಲ್ಲ. ಆದ್ದರಿಂದ ಕಾಂಗ್ರೆಸಿಗರ ಇಂದಿನ ಸಿಮ್ಲಾ ಧೋರಣೆ ಸಂಪೂರ್ಣ ಸರಿ. ಹಿಂದಿನ ಗಾಂಧೀ ವಾದ ತಪ್ಪು—ವೇವೆಲ್ ಯೋಜನೆ ಸರಿ.

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲಾರುಗಳೂ ಪ್ರಕಟ
ವಾಗುತ್ತವೆ.

ವಾರ್ಷಿಕ ಚಂದಾ
ರೂ. **1—8—0** ಮಾತ್ರ.
ಬೈಂಡು ಮಾಡಿದ ಸಂಪುಟಕ್ಕೆ ರೂ **2/-**
... ... ಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ವೇದವು ಸಾರುತ್ತಿದೆ:

"ಏಳಿ; ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು.
ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡ ಬೇಕಾದ್ದಿಲ್ಲ. ತಿಳಿದವ, ಹಿರಿಯನೆಂದು
ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀಕೃಷ್ಣನ ಪ್ರತಿನಿಧಿ—ಗೀತೆ. ಶ್ರೀಕೃಷ್ಣನು ತನ್ನ ಉಪ
ದೇಶದ ಜೀವಕಲೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆಮಾಡಿದ್ದಾನೆ. ಕನ್ನಡನಾಡಿನ ಪ್ರತಿಯೊಬ್ಬರೂ—
ಹುಡುಗರು, ಹೆಂಗಸರು ಕೂಡ ತಮ್ಮ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ
ಹೊಸಕೆರೆ ಚಿದಂಬರಯ್ಯನವರು ಬರೆದ ಗೀತೆಯ ಸಮೂಲ ಭಾಷಾಂತರವು"ಗೀತೆಯ ಕೈಗನ್ನಡಿ"

ಗೀತೆಯ ಕೈಗನ್ನಡಿ

ಯಾಗಿ ಪ್ರಕಟವಾಗಿದೆ. ಅದನ್ನು ಎಲ್ಲರೂ
ಓದಬೇಕಾಗಿದೆ.
—'ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು
ಚೆನ್ನಾಗಿ ಓದಬೇಕು' ಎಂದು ವರಾಹ ಪುರಾಣವೂ ಸಾರುತ್ತಿದೆ.
ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ
400ಕ್ಕೂ ಮಿಕ್ಕಿದ ಪುಟಗಳುಳ್ಳ ಈ ಪುಸ್ತಕದ ಬೆಲೆ
ಬರೇ ಎಂಟಾಣೆಯಾಗಿದೆ.
ಹನ್ನೆರಡಾಣೆ ಸ್ಟಾಂಪು ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡಲಿಕ್ಕೆ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು —ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಬಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿನ್ನೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರಮಾಡಿ ಸ್ಟೋರ್ಸ. ದಾವಣಗೇರಿ—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಂತಾದ ಔಷಧಿ ರವಾನ್ನಿಸಬಹುದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು,! ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನಲೆತಪ್ಪುತ್ತದೆ-- ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. **ಬೆಲೆ. ೧—೮—೦**

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೪೫] ಪ್ರತಿ ಗುರುವಾರ ಹೊರಬರುವ ರಾಷ್ಟ್ರೀಯ ವಾರಪತ್ರಿಕೆ. [Vol. 24 No. 45

Founder SRI A. B. SHETTY.

ಉಡುಪಿ ● 19-7-1945 ● ಮಂಗಳೂರು.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಚೇಳು ಕಡಿತ, ಮೈಕೈನೋವು, ಉಳುಕು, ಉಬ್ಬಸ, ಎದೆನೋವು, ಗಾಯಗಳು, ಬಾತು ಕೊಳ್ಳುವುದು, ವಾತ, ಮುಂತಾದ ರೋಗಗಳಿಗೆ ಅದ್ವಿತೀಯ ಔಷಧ.

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

CALL IT A MARVELL
OR
WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED THE, RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,
Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ— ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ವಿನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ಶಾಖಾ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಏಜಂಟರು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲಿ 53 ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಆಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD 1906 ಸ್ಥಾಪನೆ.)

CANARA BANK LIMITED

(Incorporated in British India, liability of Members limited.)

THE
VIJAYA BANK LTD.

Head Office: **MANGALORE.**

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT :-

Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಹೀಗಾಗದೆ ಹಾಗಾಗುತ್ತಿದ್ದರೆ—

ಕಾರ್ಯಕಾರೀ ಸಮಿತಿ.

[Executive Council]

(‘ದುರ್ಬೀನುಧಾರಿ’ಯಿಂದ.)

ಅದ್ಭುತವೊಂದು ನಡೆದುಹೋಯಿತು; ಕೇಂದ್ರ ಮುಸ್ಲಿಂ ಲೀಗು ಕಾರ್ಯಕಾರೀ ಸಮಿತಿಯ ತನ್ನ ಪಾಲನ್ನು ಸ್ವೀಕರಿಸಿತು. ಲೋರ್ಡ್ ವೇವೆಲರು ಊಹಿಸಿದಂತೆ ಎಲ್ಲವೂ ನಡೆದುಹೋಯಿತು. ಈಗ ಅವರ ವ್ಯಸನವೆಂದರೆ ಮಹಾತ್ಮಾ ಗಾಂಧಿ ತನ್ನ ಕೌನ್ಸಿಲಿನೋರ್ವ ಸದಸ್ಯನಾಗಿ ಬರಲಿಲ್ಲವಲ್ಲಾ ಎಂಬುದೊಂದೇ. ಭಾರತದ ರಾಜಕೀಯ ಪಕ್ಷ ಪ್ರಮುಖರೆಲ್ಲರನ್ನೂ ತನ್ನ ಒಡ್ಡೋಲಗದಲ್ಲಿ ಒಟ್ಟುಗೂಡಿಸಲು ಲೋರ್ಡ್ ವೇವೆಲರು ಸಮರ್ಥರಾಗಿದ್ದಾರೆ; ಓಲಗದಲ್ಲಿ ಈ ತುದಿಯಿಂದೋಡಿಸಿದ ದೃಷ್ಟಿಯನ್ನು ಆ ತುದಿಗೆ ಮುಟ್ಟಿಸುವಾಗ ಜಿನ್ನರ ಸಿಡುಕು ನೋರೆ, ಅಜಾದರ ಗಡ್ಡ, ನೆಹರುಗಳ ಟೋಪಿ, ವಲ್ಲಭಾಯಿಗಳ ಬೋಳು ತಲೆ-ಎಲ್ಲವೂ ಒಮ್ಮೆ ಕಣ್ತುಂಬಿಕೊಳ್ಳುತ್ತವೆ; ಆದರೆ ಬೈರಾಸೋಂಪರ ಅಭಾವ-ಗಾಂಧಿ ಅಲ್ಲಿಲ್ಲ. ಆದರೆ ನಿರ್ವಾಹವಿಲ್ಲ. ಆತ ಕೇವಲ ಸದಸ್ಯನಾಗುವ ಮನುಷ್ಯನಲ್ಲ. “ನಾನು ವೈಸರಾಯಿಯಾಗುತಿದ್ದರೆ, ಅಗ್ರಗಣ್ಯರನ್ನೇ ಕೇಂದ್ರ ಸಮಿತಿಗಾರಿಸಿಕೊಳ್ಳುತಿದ್ದೆ”-ಎಂದು ವೈಸರಾಯಿಯಾಗುವ ಆಸೆ ಹಿಡಿದಿದ್ದಾನೆ ಹೊರತು ಸದಸ್ಯನಾಗುವ ಬಯಕೆಯಲ್ಲಿಲ್ಲ ದುರ್ದೈವಿ. ಯಾವ ಹಾದಿ ಹಿಡಿದಾದರೂ ಭಾರತಭೂಮಿಗಾಗಿ ಬಹಳ ವರುಷಗಳಿಂದ ಒದ್ದಾಡಿದ್ದಾನೆ. ಅವನನ್ನು ವೈಸರಾಯೀ ಗದ್ದುಗೆಗೇರಿಸಲಾಗದಿದ್ದರೂ, ಕಾರ್ಯದ ಮಟ್ಟಿಗೆ ಆತ ವೈಸರಾಯಿಯಾದಂತೆನೇ ಆಗಿದೆ—ಅಗ್ರಗಣ್ಯರೇ ಕಾರ್ಯಕಾರೀ ಸಮಿತಿಗಾರಿಸಲ್ಪಟ್ಟಿದ್ದಾರೆ. ಆದ್ದರಿಂದ ಸದ್ಯ ಗಾಂಧಿ ಸಮೇತ ಸರ್ವರಿಗೂ ಸಮಾಧಾನ- ಹಿಂದೂ ಮಹಾಸಭೆಯೊಂದನ್ನು ಬಿಟ್ಟು.

‘ಲೋಕದ ಅತಿದೊಡ್ಡ ವಿಜಯಿ’ ಎಂಬ ಬಿರುದು ಬ್ರಿಟಿಷ್ ಪತ್ರಿಕೆಗಳಿಂದ ಲೋರ್ಡ್ ವೇವೆಲರಿಗೆ. “ಬ್ರಿಟನಿನ 2½ ಕೋಟಿ ಮತದಾರರು 640 ಪ್ರತಿನಿಧಿಗಳನ್ನಾರಿಸಿಕೊಳ್ಳುವಾಗ ಲೋರ್ಡ್ ವೇವೆಲರೊಬ್ಬರೇ 15 ಮಂದಿಯನ್ನಾರಿಸಿಕೊಂಡರು-ಹೆಚ್ಚುಕಡಿಮೆ 10 ಸಾವಿರ ಜನರ ತೂಕವಿರುವ ಮನುಷ್ಯ!”— ಎಂದು ಪತ್ರಿಕೆಗಳು ಲಂಡನಿನ ವೋಟರರೊಡನೆ ವೇವೆಲರನ್ನು ತುಲನೆ ಮಾಡಿ ಬರೆದುವು “ಇನ್ನು ಚರ್ಚಿಲ್ಲರು ಬ್ರಿಟಿಷ್ ಆಡಳಿತೆಯ ಖಾತೆಗಳನ್ನು ಹಂಚಿ ಹಾಕುವ ಮೊದಲೇ ವೇವೆಲರು ಹಿಂದೀ ಖಾತೆಗಳನ್ನು ತನ್ನ ಸದಸ್ಯರೊಳಗೆ ವಿತರಣೆಮಾಡಿಕೊಂಡರೆ, ಆಗ ತೂಕದಂತೆಯೇ ವೇಗದಲ್ಲೂ ವೇವೆಲರು ಮಂದಿದ್ದಾರೆಂದಾಗುವದು”-ಎಂದು ಎಲ್ಲಾ ಪತ್ರಿಕೆಗೂ ಹುರಿದುಂಬಿಸಹತ್ತಿದುವು. ಲಂಡನ್ ಮಾರ್ಕೆಟುಗಳಲ್ಲಿ ‘ಲಂಡನ್ ಮೊದಲೋ ಢಿಲ್ಲಿ ಮೊದಲೋ?’ ಒಂದು ಕುರಿತು ಪಣವಿಡಹತ್ತಿದರು. ಸಾಮ್ರಾಜ್ಯವಾದಿ ಚರ್ಚಿಲ್ಲರನ್ನು ಸೋಲ್ಜರ್ ವೈಸರಾಯಿ ಹಿಂದೆಹಾಕಿದರು. ಲಂಡನಿನಲ್ಲಿ ‘ಫೋರ್ಟ್‌ಫೋಲಿಯೋ’ಗಳ ವಿತರಣೆಯಾಗುವ ಮೊದಲೇ ನವಢಿಲ್ಲಿಯಿಂದ ಪ್ರಕಟಣೆ ಹೊರಟಿತು:—

“ಎಚ್. ಇ. ವೈಸರಾಯಿಗಳು ಸಾಮ್ರಾಜ್ಯ ಸರಕಾರದ ಅನುಮತಿ ಪಡೆದು ಈ ಕೆಳಗಡೆ ನಮೂದಿಸಿರುವಂತೆ ಇಂಡಿಯಾ ಸರಕಾರದ ಖಾತೆಗಳನ್ನು ಹಂಚಿಹಾಕಲು ಸಂತೋಷ ಪಡುತ್ತಾರೆ:-ಮಿ. ಮಹಮ್ಮದಾಲಿ ಜಿನ್ನಾ-ಕಾನೂನು ಖಾತೆ. ಪಂಡಿತ ಜವಾಹಿರಲಾಲ್ ನೆಹರು-ವಿದೇಶ ಸಂಬಂಧ ಖಾತೆ, ಸರ್ದಾರ್ ವಲ್ಲಭಾಯಿ ಪಟೇಲ್-ಗೃಹ ಖಾತೆ, ಬಾಬು ರಾಜೇಂದ್ರ ಪ್ರಸಾದ್-ಆರೋಗ್ಯ ಖಾತೆ, ಮೌಲಾನಾ ಅಬುಲ್ ಕಲಮ್ ಅಜಾದ್-ವಿದ್ಯಾ ಖಾತೆ, ಮಿ ಅಸಫ್ ಅಲಿ, ಪೋಲೀಸು ಮತ್ತು ಜೈಲು ಖಾತೆ, ನವಾಬಝಾದಾ ಲಿಯಾಖತ್ ಆಲೀಖಾನ್-ರೆವಿನ್ಯೂ ಖಾತೆ, ಜಿ. ಎಲ್. ಮೆಹತಾ-ಅರ್ಥ ಖಾತೆ,.... ಎಚ್. ಇ. ವೈಸರಾಯರು ಕಾರ್ಯಕಾರೀ ಸಮಿತಿಯೊಡನೆ ಪರ್ಯಾಲೋಚಿಸಿ ಈ ನೇಮಕಗಳನ್ನು ಮಾಡಿಕೊಂಡಿದ್ದಾರೆನ್ನಲು ಹರ್ಷವಾಗುತ್ತದೆ.

93ನೇ ಸೆಕ್ಷನಿನಾಳ್ವಿಕೆಯಿರುವ ಎಲ್ಲಾ ಪ್ರಾಂತ್ಯಗಳಲ್ಲೂ ಪುನಃ ಪ್ರಜಾಪ್ರತಿನಿಧಿ ಆಡಳಿತೆಯಾರಂಭವಾಗುವದು. ಆ ಸಂಬಂಧದ ಎಲ್ಲಾ ವ್ಯವಸ್ಥೆಯನ್ನು ಕೈಗೊಳ್ಳುವರೆ ಆಯಾ ಪ್ರಾಂತಿಕ ಗವರ್ನರರುಗಳಿಗೆ ಸೂಚನೆಗಳನ್ನು ಕಳುಹಲಾಗಿದೆ. ಕೇಂದ್ರ ಎಸೆಂಬ್ಲಿ ಮತ್ತು ಪ್ರಾಂತಿಕ ಎಸೆಂಬ್ಲಿಗಳ ಸಾರ್ವತ್ರಿಕ ಚುನಾವಣೆಯನ್ನು ಬರುವ ನವಂಬರ್ ತಾ. 28ಕ್ಕೆ ನಡೆಸುವ ನಿರ್ಧಾರವಾಗಿದೆ. ಡಿಸೆಂಬರದಲ್ಲಿ ಕೂಡಿಬರುವ ಕೇಂದ್ರ ಎಸೆಂಬ್ಲಿಯ ಪ್ರಥಮ ಸಭೆಯಲ್ಲಿ ಹೊಸ ಕಾರ್ಯಕಾರೀ ಸಮಿತಿಯ ಕಾರ್ಯಕ್ರಮಗಳನ್ನು ಮುಂದಿಡಲಾಗುವದು”.

‘ಲೋರ್ಡ್ ವೇವೆಲ್ ಜನ ನೋಡಿ ಸ್ಥಾನ ಕೊಟ್ಟರು’ ‘ಸೋಲ್ಜರ್ ವೈಸರಾಯಿಗಳ ಸೋಲಿಲ್ಲದ ಕಾರ್ಯಭಾರ’ ‘ಭಾರತದಲ್ಲಿ ಮೊಗಲಾಡಳಿತೆ ಸ್ಥಾಪಿಸಿದವ ನರಕವನ್ನು ಸ್ವರ್ಗ ಮಾಡಲಾರನೆ?’ ‘ಕಠಿಣ ಕಗ್ಗಂಟನ್ನು ಕಡಿದೊಗೆದ ಕಲಿ-ವೇವೆಲ್!’-ಪತ್ರಿಕಾ ತಲೆ ಬರೆಹಗಳ ಕೆಲವು ಮಾದರಿಗಳು. ಕಾರ್ಯಕಾರೀ ಸಮಿತಿಗೆ ಸದಸ್ಯರನ್ನಾರಿಸಿಕೊಳ್ಳುವ ಕಾರ್ಯ ಕಲ್ಲಿನಿಂದ ರಸ ಹಿಂಡುವಷ್ಟು ಕಠಿಣವಿದ್ದರೆ, ಹಿಂದೀ ಸದಸ್ಯರೊಳಗೆ ಅಧಿಕಾರ ಹಂಚಿಹಾಕುವ ಕೆಲಸ ತಂಟೆಕೋರ ಮಕ್ಕಳಿಗೆ ತಂಬಿಟ್ಟು ಹಂಚುವಷ್ಟು ಕಷ್ಟದ್ದೆಂದೂ, ಲೋರ್ಡ್ ವೇವೆಲರು ಅದ್ಭುತವನ್ನೇ ಸಾಧಿಸಿದ್ದಾರೆಂದೂ ಪತ್ರಿಕೆಗಳು ಘೋಷಿಸಹತ್ತಿದುವು. ವೈಸರಾಯಿತ್ವದ ಅವಧಿ ಮುಗಿದು ಲೋರ್ಡ್ ವೇವೆಲರು ಲಂಡನಿಗೆ ಮರಳುವಾಗ ಚರ್ಚಿಲ್ಲರು ಪ್ರಧಾನಿ ಪಟ್ಟವನ್ನು ಅವರಿಗೆ ಬಿಟ್ಟುಕೊಡುವದು ವಿಹಿತವೆಂಬ ಅಪ್ರತ್ಯಕ್ಷ ಸೂಚನೆಯೂ ಪತ್ರಿಕೆಗಳಲ್ಲಿ ಬರಹತ್ತಿತು; ಆ ಸಂದರ್ಭದಲ್ಲೇ ಚರ್ಚಿಲ್ ಸರಕಾರದ ಮೇಲೆ ಅವಿಶ್ವಾಸ ಸೂಚನೆ ತರಲು ಕೂಲಿಗಾರ ಪಕ್ಷ ‘ನವಶೋಧನಾ ಸಮಿತಿ’ಯೊಂದನ್ನು ಸ್ಥಾಪಿಸಿ, ಠರಾವು ರಚನೆಯ ಹೊಣೆಯನ್ನದಕ್ಕೊಪ್ಪಿಸಿತು. ಟರ್ಕಿ, ಪೆಲೆಸ್ತೈನ್, ಸಿರಿಯಾ, ಅರಬಸ್ತಾನ್, ಇರಾಕ್, ಇರಾನ್‌ಗಳಿಗೆ ಪ್ರತ್ಯೇಕ ವಿದೇಶಖಾತೆಯೊಂದನ್ನು ನೇಮಿಸಿ ಲೀಗ್ ಸದಸ್ಯರೊಬ್ಬರಿಗದನ್ನು ಕೊಡಬೇಕೆಂದೂ, ಅಥವಾ ಆ ದೇಶಗಳ ಸಂಬಂಧಾಧಿಕಾರವನ್ನು ಕಾನೂನುಖಾತೆ ಇಲ್ಲವೇ ರೆವಿನ್ಯೂಖಾತೆಗೆ ವರ್ಗಾಯಿಸಬೇಕೆಂದೂ ಮಿ. ಜಿನ್ನರು ಕೌನ್ಸಿಲಿನಲ್ಲಿ ವಾದಿಸಲೆದಾಗಲೇ ಅದು ನಿಯಮಬಾಹಿರವೆಂದು ಲೋರ್ಡ್ ವೇವೆಲರು ಕಿತ್ತೊಗೆದರೆಂಬ ವಾರ್ತೆಯಿದೆ. ಈ ಕುರಿತು ಪತ್ರಿಕಾ ಪ್ರತಿನಿಧಿಗಳು ಪ್ರಶ್ನೆ ಹಾಕಿದಾಗ ಮಾನ್ಯ ಕಾನೂನು ಸದಸ್ಯರು ಔಡುಗಚ್ಚಿ ನಿಂತಿದುದರಿಂದ, “ತನಗಪ್ರಿಯವಾದುದು ನಡೆದುದನ್ನು ಬಹುಮಾನಪಟ್ಟ ಕಾನೂನು ಸದಸ್ಯರು ಕಚ್ಚಿ ನುಂಗಿದರು, ಅರ್ಥಾತ್ ಸಹಿಸಿಕೊಂಡರು” ಎಂದು ಪತ್ರಿಕೆಗಳಲ್ಲೆಲ್ಲಾ ಬಂತು.

ಸರಕಾರಿ ಖಾತೆಗಳ ವಿತರಣೆಯ ಕುರಿತು ಲಂಡನಿನ ‘ಟೈಮ್ಸ್’ ಪತ್ರಿಕೆಯಲ್ಲಿ ಬಂದ ಸಂಪಾದಕೀಯದ ಯಥಾಪ್ರತಿ:—

“ಈ ಅಸಾಮಾನ್ಯ ಸೋಲ್ಜರ್ ವೈಸರಾಯಿಯ ಪರಿಶ್ರಮ, ಜಾಣ್ಮೆ, ಸಹನೆ, ತುಲನಾತ್ಮಕಬುದ್ಧಿ, ವಿಶಾಲಹೃದಯ,ಸದುದ್ದೇಶಗಳನ್ನು ಎಗ್ಸಿಕ್ಯೂಟಿವ್ ಕಮಿಟಿಯ ಚುನಾವಣೆಯಲ್ಲೇ ಲೋಕ ಕಾಣುವಂತಾಯಿತು. ಜನಪರೀಕ್ಷೆಯಲ್ಲಿ ಅವರಿಗಿರುವ ಪ್ರತಿಭೆಯೆಂತಹದೆಂಬುದಕ್ಕೆ, ಆಡಳಿತೆಯ ವಿಭಾಗಗಳನ್ನು ಹಂಚಿಹಾಕಿದುದರಲ್ಲಿರುವ ಜನ-ಸ್ಥಾನ ಸಾಮ್ಯತೆಯೇ ನಿದರ್ಶನ. ಈ ಮೂಲಕ ಇಂಗ್ಲಾಂಡಿನ ಹಿತವನ್ನವರು ಅಲಕ್ಷ್ಯಿಸಿಲ್ಲವೆನ್ನಲು ಸಂತೋಷಿಸುತ್ತೇವೆ ತನ್ನ ಮಾತೇ ಕಾನೂನು ಎಂದು ಸಾಧಿಸುವದರಲ್ಲಿ ಹಿಟ್ಲರನನ್ನು ಹಿಮ್ಮೆಟ್ಟಿಸಿದ ಮಿ. ಜಿನ್ನರನ್ನೇ ಅವರು ಕಾನೂನುಮಂತ್ರಿಯಾಗಿ ನೇಮಿಸಿದ್ದಾರೆ. ಕಾನೂನು ಉಲ್ಲಂಘನೆಯ ಅನುಭವ ಮಾತ್ರ ಇರುವ ಕಾಂಗ್ರೆಸ್ ಸದಸ್ಯರೆಲ್ಲರಿಗೂ ಈ ಯೋಗ್ಯತೆಯಿಲ್ಲವಾದ್ದರಿಂದ ಈ ಕುರಿತು ಟೀಕೆಗೆಡೆಯಿಲ್ಲ; ಬ್ರಿಟಿಷ್ ವಿರುದ್ಧ ಕಾನೂನಾಗುವ ಭಯವೂ ಇಲ್ಲ. ಅಬುಲ್ ಕಲಮ್ ಅಜಾದರು ವಿದ್ಯಾ ಮಂತ್ರಿಯಾದುದರಿಂದ ಇಂಗ್ಲಿಷ್ ವಿದ್ಯಾ ಪ್ರಚಾರವು ಭರದಿಂದ ಮುಂದೊತ್ತುವದೆಂದು ಭರವಸೆ ಪಡಬಹುದು. ಇಂಗ್ಲಿಷಿನ ಆವಶ್ಯಕತೆಯನ್ನು ಅರಿತವನನ್ನೇ ವಿದ್ಯಾಖಾತೆಗಾರಿಸಿಕೊಳ್ಳಬೇಕೆಂಬ ಬಯಕೆಯುಳ್ಳವರಾದ ವೇವೆಲರು ತನ್ನೊಡನೆ ಸಂಭಾಷಿಸಲು ಭಾಷಾಂತರಕಾರನೊಬ್ಬನನ್ನು ಕೂಡಿಕೊಂಡು ಬಂದ ಅಜಾದರನ್ನು ಕಂಡೊಡನೆಯೇ ‘ಆ ಸ್ಥಾನ ಇವರಿಗೆ’ ಎಂದು ಮನಸ್ಸಿನಲ್ಲೇ ನಿರ್ಧರಿಸಿರಬೇಕು. ಜಾಪಾನಿನೊಡನೆ ಹೋರಾಟ, ರಶ್ಯದೊಡನೆ ಕಿರಿಕ್ಕಿರಿ(?) ಇರುವ ಈ ಕಾಲದಲ್ಲಿ ವಿದೇಶಖಾತೆಯು ದೃಢ ಹಸ್ತ ಸೇರಬೇಕಾದುದು ಅತಿ ಮುಖ್ಯ. ಚಿಯಾಂಗ್ ಕೈಶೇಕರ ಪ್ರಾಣಸ್ನೇಹಿತರಾಗಿರುವ ಪಂಡಿತ ನೆಹರುಗಳು ಜಪಾನರ ನಿರ್ನಾಮವನ್ನು ಸಾಧಿಸುವದರಲ್ಲಿ ಸರ್ವ ಪ್ರಥಮರೆಂಬುದು ನಿಸ್ಸಂದೇಹ. ಆದರೆ ರಶ್ಯದೊಡನವರಿಗಿರುವ ಸಹಾನುಭೂತಿಯಿಂದಾಗಿ ವೈಸರಾಯರು ಇದೊಂದು ಬಾಬಿಯ ಮಟ್ಟಿಗೆ ತನ್ನ ವಿಶೇಷಾಧಿಕಾರ ಉಪಯೋಗಿಸುವ ಸಂದರ್ಭ ಬರಬಹುದೆಂದು ಭಯ ಪಡುವವರಿದ್ದಾರೆ. ಆದರೆ ರಶ್ಯಾ ಮತ್ತು ಟರ್ಕಿಗಳೊಳಗೆದ್ದಿರುವ ವೈಮನಸ್ಸನ್ನು ಕಂಡರೆ ಈ ಹೆದರಿಕೆ ನಿರಾಧಾರವಾದುದೇ ಸರಿ. ಕಾನೂನು ಸದಸ್ಯರಾಗಿ ಮಿ. ಜಿನ್ನರಿರುವಾಗ ರಶ್ಯದ ಮೇಲಿನ ಸಹಾನುಭೂತಿಗೆ ಕಾಯಿದೇಬದ್ಧ ನಿರ್ಬಂಧ ಬೀಳುವ ಸಂಭವವಿದೆಯೆಂಬುದನ್ನೂ, ಕಾನೂನನ್ನು ಪಾಲಿಸಲು ಸಾಮಾನ್ಯನಂತೆ ಮಂತ್ರಿಯೂ ಬದ್ಧನೆಂಬುದನ್ನೂ ಗ್ರಹಿಸಿಕೊಂಡರೆ ವೇವೆಲರು ಎಷ್ಟೊಂದು ಜಾಣ್ಮೆಯಿಂದ ಈ ಮಂತ್ರಿಮಂಡಲವನ್ನು ಪೋಣಿಸಿದ್ದಾರೆಂಬುದನ್ನು ಊಹಿಸಬಹುದು. ಇನ್ನು ಸದಾ ಉಬ್ಬಸ ಪೀಡಿತರಾಗಿ ರೋಗಾನುಭವವಿರುವ ರಾಜೇಂದ್ರ ಪ್ರಸಾದರೇ ಆರೋಗ್ಯ ಮಂತ್ರಿ-ವಿಶೇಷ ಹುಟ್ಟುವಳಿ ಸಂಗ್ರಹದ ಅನುಭವವಿರುವ ನವಾಬ ಪುತ್ರ ಲಿಯಾಖತ್ ಆಲಿಖಾನರೇ ರೆವಿನ್ಯೂ ಮಂತ್ರಿ-ಜೈಲಿನಿಂದ ತಲೆ ತಪ್ಪಿಸಿಕೊಂಡು ಪೋಲಿಸರಿಗಿದುವರೆಗೂ ಸಿಕ್ಕದ ಪತ್ನಿಯಿರುವ ಅಸಫ್ ಆಲಿಗಳ ಕೈಯಲ್ಲೇ ಜೈಲು ಮತ್ತು ಪೋಲಿಸು ಖಾತೆ-ಈ ರೀತಿ ಜನಕ್ಕನುಗುಣವಾಗಿ ಸ್ಥಾನ ಕೊಟ್ಟ ಲೋರ್ಡ್ ವೇವೆಲರಿಗೆ ಪ್ರಜಾಪ್ರಭುತ್ವವಾದಿಗಳ ಶ್ಲಾಘನೆ ಸಲ್ಲಬೇಕು. ಬ್ರಿಟಿಷ್ ಮಂತ್ರಿ ಮಂಡಲವನ್ನಾರಿಸಿಕೊಳ್ಳುವಾಗ ಮಿ. ಚರ್ಚಿಲ್ಲರು ತನ್ನ ವೈಸರಾಯಿಯನ್ನೇ ಮಾದರಿಯಾಗಿ ಇಟ್ಟುಕೊಳ್ಳುವರೆಂದು ನಂಬುತ್ತೇವೆ”.

× × ×

ರಾಷ್ಟ್ರೀಯ ಕಾರ್ಯಕಾರೀ ಸಮಿತಿಯ ಆಳ್ವಿಕೆಗಾರಂಭವಾಗಿದೆ.

ಸಿಕ್ಕಿದ ‘ಸ್ವರಾಜ್ಯ’ವನ್ನು ದಕ್ಕಿಸಿಕೊಳ್ಳಬೇಕೆಂದು ನವ ಸರಕಾರದ ಬೋಧನೆಯಂತೆ ಇಡೀ ರಾಷ್ಟ್ರವು ಜಾಪಾನ್ ವಿರುದ್ಧ ಯುದ್ಧಕ್ಕೆದ್ದಿದೆ.

(೧೧ನೇ ಪುಟ ನೋಡಿರಿ.)

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,

ಕಂಟ್ರಾಕ್ಟರ್ಸ್, ಉಡುಪಿ.

ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ಖಖಿ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ. ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು.

ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ.

ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ ಪತ್ರ ಬರೆಯಬಹುದು.

Managing Director,

Homes & Estates Ltd., Udipi.

ಸಿಮ್ಲಾ ಸಮ್ಮೇಲನ ಸೊನ್ನೆ ಸುತ್ತಿತು!

ಜಿನ್ನರ ದರ್ಪದಿದಿರು ವೇವೆಲರ ದೈನ್ಯತೆ.

ಭಾರತದ ತಾತ್ಕಾಲಿಕ ರಾಜ್ಯ ವ್ಯವಸ್ಥೆಗಾಗಿ ವೈಸರಾಯೀ ಲೋರ್ಡ್ ವೇವೆಲರಿಂದ ಶಿಮ್ಲಾದಲ್ಲಿ ಕರೆಯಲ್ಪಟ್ಟಿದ್ದ ಹಿಂದೀ ಧುರೀಣರ ಸಮ್ಮೇಲನವು ಜುಲಾಯಿ ತಾ. 14 ನೇ ಶನಿವಾರ ಅಪರಾಹ್ನ 12-30ಕ್ಕೆ ಅಪಜಯಗೊಂಡು ಮುಗಿಯಿತು.

ಜೂನ್ ತಾ. 24ರಿಂದಾರಂಭಿಸಿ 20 ದಿನಗಳ ವರೆಗೆ ಅಖಿಲ ಭಾರತದ ನಾಯಕರನ್ನು ಸಿಮ್ಲಾದಲ್ಲಿ ಒಟ್ಟುಗೂಡಿಸಿ, ವೈಸರಾಯರು ವಿಚಾರ ವಿನಿಮಯ ನಡಿಸಿದ ಚರಿತ್ರಾರ್ಹ ಘಟನೆ—ದೇಶದಲ್ಲೆಲ್ಲಾ ಆಸೆ, ಆನಂದಾಂಕುರಗಳನ್ನೆಬ್ಬಿಸಿದ್ದ ಸತ್ಕ್ರಿಯೆ—ಕೇವಲ ನಾಟಕವಾಗಿ ಪರಿಣಮಿಸಿ, ದುಃಖ ಪರ್ಯವಸಾನಗೊಂಡಿತು; ಪರ್ವತ ಪ್ರಸವವಾಯಿತು!

ಮುಸಲ್ಮಾನರ ಪಾಲಿನ ಎಲ್ಲಾ ಸ್ಥಾನಗಳ ಪೂರ್ಣ ಹಕ್ಕು ಮುಸ್ಲಿಂ ಲೀಗಿನದೇ ಆಗಬೇಕೆಂಬ ತನ್ನ ಹಠವನ್ನು ಮಿ. ಜಿನ್ನರು ಕೊನೆಯ ವರೆಗೂ ಬಿಡಲಿಲ್ಲ; ಜಿನ್ನರನ್ನು ಕಡೆಗಣಿಸಿ ಕಾರ್ಯ ಮುಂದೊತ್ತಲು ವೈಸರಾಯರು ತಯಾರಿರಲಿಲ್ಲ—ಪರಿಣಾಮವಾಗಿ ಎಲ್ಲವೂ ನೀರಮೇಲಿನ ಹೋಮವಾಯಿತು!

ಇದೇ ತಾ 14ನೇ ಪೂರ್ವಾಹ್ನ 11 ಘಂಟೆಗೆ ಕೊನೆಯ ಬಾರಿ ಸಮ್ಮೇಲನ ಕೂಡಿ ಬಂತು. ಪರಿಷತ್ತಿನ ಪರಾಭವಕ್ಕಾಗಿ ವೈಸರಾಯರು ಗಾಢ ವ್ಯಸನ ಪ್ರದರ್ಶಿಸಿದರು; ಯುರೋಪಿಯನ್ ಪಕ್ಷ ಮತ್ತು ಲೀಗು ಹೆಸರು ಪಟ್ಟಿಯೊಪ್ಪಿಸದುದನ್ನು ತಿಳಿಸಿದರು. 'ಸೋಲಿನ ಜವಾಬ್ದಾರಿ ನನ್ನದು; ಆದ್ದರಿಂದ ಪಕ್ಷ ಪಂಗಡಗಳು ಪರಸ್ಪರ ಆರೋಪಿಸಿಕೊಳ್ಳದೆ ತಾಳ್ಮೆ ವಹಿಸಬೇಕು' ಎಂದು ವಿನಂತಿಸಿಕೊಂಡರು.

ಮೌಲಾನಾ ಅಜಾದರು ಪರಿಷತ್ತಿನ ನಿಷ್ಫಲತೆಗೆ ಲೀಗಿನ ಅಸಾಧ್ಯ ಧೋರಣೆಯೇ ಕಾರಣವಲ್ಲದೆ ವೇವೆಲರಲ್ಲವೆಂಬುದನ್ನು ತೋರಿಸಿಕೊಟ್ಟರು. "ಎಲ್ಲಾ ಮುಸಲ್ಮಾನರ ಪ್ರತಿನಿಧಿ ತಾನೆಂಬ ಲೀಗಿನ ವಾದವು ಸಮರ್ಥನೆಗಯೋಗ್ಯವಾದುದು; ನಿರಾಧಾರವಾದುದು. ಕಾಂಗ್ರೆಸು ಇದನ್ನೆಂದಿಗೂ ಒಪ್ಪುವಂತಿಲ್ಲ. ಅದು ತನ್ನ 50 ವರುಷಗಳ ಚರಿತ್ರೆಯನ್ನು ಉಜ್ಜಿಕೊಳ್ಳುವಂತಿಲ್ಲ. ಕಾಂಗ್ರೆಸು ಪೂರ್ಣ ಹಿಂದೂ ಸಂಸ್ಥೆಯಾಗುವದನ್ನು ನಾನು-ಓರ್ವ ಮುಸಲ್ಮಾನ್-ಎಂದಿಗೂ ಸಹಿಸಲಾರೆ. ಮುಸಲ್ಮಾನರ ಶುಭ ಚಿಂತನೆ ಮತ್ತು ಜವಾಬ್ದಾರಿಯಲ್ಲೊಂದು ಪಾಲು ಕೇಳುವ ಹಕ್ಕು ಕಾಂಗ್ರೆಸಿಗಿದೆ" ಎಂದರು

"ವೈಸರಾಯರು ನ್ಯಾಯ ಮತ್ತು ಯಥಾರ್ಥತೆಯನ್ನಾಧರಿಸಿ ದೃಢ ಧೋರಣೆ ವಹಿಸಿಯೇ ಜಾತೀಯ ಸಮಸ್ಯೆಯನ್ನು ತೀರ್ಮಾನಿಸಬೇಕಿತ್ತು. ವೈಸರಾಯರ ಸದ್ಯದ ಚಾಂಚಲ್ಯ ಮತ್ತು ಅನಿಶ್ಚಿತ ಧೋರಣೆ ಸರಿಯಾದುದಲ್ಲ, ಸಹಾಯಕವಾದದೂ ಅಲ್ಲ. ಸಂದೇಹ ಮತ್ತು ದೌರ್ಬಲ್ಯದಿಂದ ಒಂದು ತೀರ್ಮಾನ ಹೊಂದಲಾಗುವದಿಲ್ಲ" ಎಂದು ಮೌಲಾನರ ಖಂಡತುಂಡ ಮಾತು.

'ನಾನಿನ್ನೂ ಆಶಾವಾದಿಯಾಗಿದ್ದೇನೆ ಹೊರತು ನಿರಾಶೆಗೊಂಡಿಲ್ಲ' ಎನ್ನುತ್ತಾ ಮೌಲಾನರು ಸಮ್ಮೇಲನದ ಸಮಯದಲ್ಲಿ ಕಾಂಗ್ರೆಸ್ ನೀಡಿದ ಸಹಕಾರವನ್ನು ಇನ್ನು ಮುಂದಕ್ಕೂ ಕೊಡುವದೆಂದು ವೈಸರಾಯರಿಗಾಶ್ವಾಸನೆಯಿತ್ತರು.

ಲೋರ್ಡ್ ವೇವೆಲರೀ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಅಭಿಪ್ರಾಯವನ್ನು ಶ್ಲಾಘಿಸುತ್ತಾ ತಾನು ಇನ್ನೂ ಸಂಧಾನ ಮತ್ತು ಸಮಜಾಯಿಸುವಿಕೆಯ ಪ್ರಯತ್ನ ಮಾಡಲಿದ್ದೇನೆ, ಎಂದರು.

ಒಂದು ಪಕ್ಷದ ಧಿಕ್ಕಾರ ಮಾತ್ರಕ್ಕಾಗಿ ವೇವೆಲ್ ಯೋಜನಾನುಗುಣವಾದ ತಾತ್ಕಾಲಿಕ ಸರಕಾರ ರಚನೆಯು ರದ್ದಾಗಬಾರದೆಂದು ಶ್ರೀ ರಾಜಗೋಪಾಲಾಚಾರ್ಯರು ವಾದಿಸಿದರು.

"ಪರಿಷತ್ತಿನ ಪರಾಭವದ ಹೊಣೆಗಾರಿಕೆಯ ತಗಾದೆ ಬೇರೆಯವರಾಡಿದುದನ್ನು ಉತ್ತರಿಸುವ ಅಗತ್ಯ ನನಗಿಲ್ಲ" ಎನ್ನುತ್ತಾ ಮಿ. ಜಿನ್ನರು "ಪಾಕಿಸ್ಥಾನದ ಭರವಸೆಯೊಡನೆ ಮಿಕ್ಕೆಲ್ಲಾ ಪಕ್ಷಗಳ ಸಮಾನ ಸ್ಥಾನಗಳನ್ನು ಮುಸಲ್ಮಾನರಿಗೀಯುವದಾದರೆ ತಾತ್ಕಾಲಿಕ ಸರಕಾರದಲ್ಲಿ ಭಾಗವಹಿಸಲು ಲೀಗು ತಯಾರಿದೆ" ಎಂದರು.

ಇತರ ಪಕ್ಷೀಯರ ಅಭಿಪ್ರಾಯ ನಿವೇದನೆಯಾದ ಮೇಲೆ ಘಂಟೆ 12-30ಕ್ಕೆ ಮೌಲಾನಾ ಆಜಾದರೂ, ಅವರ ಬೆನ್ನಲ್ಲೇ ಇತರರೂ ವೈಸರಾಯೀ ಭವನದಿಂದ ಹೊರಟು ಬಂದರು. ಅಲ್ಲಿಗೆ 'ಇತಿ ಶ್ರೀ'!

ಕಾಂಗ್ರೆಸು ತನ್ನ ಇಂದಿನ ಸಹಕಾರವನ್ನೇ ಮುಂದುವರಿಸಬೇಕೆಂದು ವೈಸರಾಯರು ಮೊದಲ ದಿನವೇ ಗಾಂಧಿಜೀ ಮತ್ತು ಮೌಲಾನರನ್ನು ವಿಜ್ಞಾಪಿಸಿಕೊಂಡಿದ್ದರು; ಇಬ್ಬರೂ ಆ ಕುರಿತು ಆಶ್ವಾಸನೆ ಕೊಟ್ಟು ಬಂದಿದ್ದಾರೆ.

ಸಮ್ಮೇಲನದ ಕೊನೆಯ ಅಂಕ

ಸಿಮ್ಲಾದಲ್ಲಿ ಪರಿಷತ್ತಿನ ಸಂಬಂಧವಾಗಿ ನಡೆದ ಚಟುವಟಿಕೆಗಳ ಪೈಕಿ ಸಮ್ಮೇಲನ ಮತ್ತು ಸಮಿತಿ ಸಭೆಗಳು ಸೇರಿದ ಕಾಲಸ್ಥಳ, ಧುರೀಣರ ಆಗಮನ ನಿರ್ಗಮನ, ಸಮ್ಮೇಲನದ ಅಪಜಯ, ಇತ್ಯಾದಿಗಳನ್ನು ಬಿಟ್ಟರೆ ಮಿಕ್ಕೆಲ್ಲಾ ವಾರ್ತೆಗಳಿಗೂ ಇದು ವರೆಗೆ ಊಹೆಯೇ ಆಧಾರವೆಂಬುದನ್ನು ಮರೆಯಬಾರದು. ಅವು ಸಾಧಾರ ವಾರ್ತೆಗಳಾದರೂ ಅಧಿಕೃತ ಪ್ರಕಟಣೆಗಳಲ್ಲ. ಲೀಗ್ ಕಾರ್ಯಕಾರೀ ಸಮಿತಿಯು ವೈಸರಾಯರಿಂದ ಉದಾಹರಣೆ ಕೇಳುವ ನಿರ್ಧಾರ ಮಾಡಿ ಮೊಹರು ನಿತಿ ಪತ್ರವೊಂದನ್ನು ವೈಸರಾಯೀ ಗೃಹಕ್ಕೆ ರವಾನಿಸಿದಂದಿನಿಂದ ಲೋರ್ಡ್ ವೇವೆಲರು ಬೇರೆ ಮನುಷ್ಯರೇ ಆದರೆನ್ನಬಹುದು. ಈ ಅವಧಿಯಲ್ಲಿ ಲಂಡನಿನ 'ಶ್ವೇತ ಭವನ' ಮತ್ತು ಲೋರ್ಡ್ ವೇವೆಲರೊಳಗೆ ಅಭಿಪ್ರಾಯ ವಿನಿಮಯ ನಡೆದೇ ಇತ್ತು; ವೇವೆಲರು ಅಲ್ಲಿಗೆ ಅನುಕ್ರಮವಾಗಿ ವರದಿ ರವಾನಿಸಿ ಸಲಹೆ ಪಡೆಯುತಿದ್ದರು.

ಲೀಗ್ ಕೇಳಿದುದೇನು?

1. ಕಾರ್ಯಕಾರೀ ಸಮಿತಿಗೆ ಮುಸಲ್ಮಾನರ ಸ್ಥಾನಗಳನ್ನು ತುಂಬಿಸಿಕೊಡುವ ಪೂರ್ಣಾಧಿಕಾರವು ಲೀಗಿನದೆಂಬುವನ್ನು ಒಪ್ಪಬೇಕು. 2. ಹೊಸ ಕಾರ್ಯಕಾರೀ ಸಮಿತಿಯ ಸಂಖ್ಯೆ ಮತ್ತು ಸ್ಥಾನ ವಿಭಾಗಗಳನ್ನು ಸ್ಪಷ್ಟವಾಗಿ ತಿಳಿಸಬೇಕು. 3. ಮುಸಲ್ಮಾನ್ ಸಮಾಜಕ್ಕೆ ಸಂಬಂಧಿಸಿದ ಪ್ರಶ್ನೆಗಳ ಕುರಿತು ಮುಸ್ಲಿಂ ಸದಸ್ಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ಕಾರ್ಯಕಾರೀ ಸಮಿತಿಯು ಬಹುಮತದಿಂದ ಮಾಡುವ ತೀರ್ಮಾನಗಳನ್ನು ತಾನು ರದ್ದುಪಡಿಸುವೆನೆಂಬ ಆಶ್ವಾಸನೆಯನ್ನು ವೈಸರಾಯರೀಯಬೇಕು—ಎಂದು ತನ್ನ ಪತ್ರದಲ್ಲಿ ಮುಸ್ಲಿಂ ಲೀಗು ಲೋರ್ಡ್ ವೇವೆಲರನ್ನು ಕೇಳಿಕೊಂಡಿದ್ದಿತು. ಅಂತಹ ಆಶ್ವಾಸನೆಗಳನ್ನೀಯುವುದು ತನ್ನ ಮೂಲ ಘೋಷಣೆಗೆ ವಿರುದ್ಧವೆಂಬ ಕಾರಣಕೊಟ್ಟು ಲೋರ್ಡ್ ವೇವೆಲರದನ್ನು ತಿರಸ್ಕರಿಸಿ ಉತ್ತರ ಕೊಟ್ಟರು. ಈ ಉತ್ತರವು ಲೀಗ್ ಸಮಿತಿಯಲ್ಲಿ ಚರ್ಚಿಸಲ್ಪಟ್ಟು, ಕಾರ್ಯಕಾರೀ ಸಮಿತಿಗೆ ಹೆಸರು ಪಟ್ಟಿಯೊಪ್ಪಿಸಬಾರದೆಂಬ ನಿರ್ಧಾರವಾಯಿತು; ಅದನ್ನು ಲೋರ್ಡ್ ವೇವೆಲರಿಗೆ ತಿಳಿಸಲಾಯಿತು.

ಜಿನ್ನರೊಡನೆ ವೈಸರಾಯರು

ಲೀಗಿನ ಸ್ಪಷ್ಟ ನಿರಾಕರಣೆ ಬಂದೊಡನೆ ಖಾಸಗೀ ಸಂಭಾಷಣೆಗಾಗಿ ಮಿ. ಜಿನ್ನರಿಗೆ ವೈಸರಾಯರ ಕರೆ ಬಂತು. ತಾ 11 ನೇ ಅಪರಾಹ್ನ 3 ಘಂಟೆಗೆ ಹೊರಟ ಜಿನ್ನರು ಅರ್ಧ ಘಂಟೆಯೊಳಗೆ ಮರಳಿ ಬಂದರು. ಈ ಬಾರಿ ವೇವೆಲ್-ಜಿನ್ನಾ ಸಂಭಾಷಣೆ ಹದಿನೈದೇ ಮಿನಿಟು ನಡೆದಿತ್ತು. ವೈಸರಾಯರು ತಾನಾರಿಸಿಕೊಂಡ ಹೆಸರು ಪಟ್ಟಿಯನ್ನು ಲೀಗ್ ನಾಯಕನಿಗೆ ತೋರಿಸಿದರೆಂದೂ, ಅದು ಲೀಗ್ ಬೇಡಿಕೆಯಂತಿಲ್ಲವಾದ್ದರಿಂದ ಒಪ್ಪಲಾರೆನೆಂದು ಮಿ. ಜಿನ್ನರು ಹೇಳಿ ಬಂದರೆಂದೂ ತಿಳಿದುಬರುತ್ತದೆ. ವೈಸರಾಯರ ಪಟ್ಟಿಯಲ್ಲಿ ಲೀಗ್ ಮುಸಲ್ಮಾನರಿಗೆ 4, ಯೂನಿಯನಿಸ್ಟ್ ಮುಸಲ್ಮಾನರಿಗೆ 1, ಕಾಂಗ್ರೆಸ್ ಹಿಂದುಗಳಿಗೆ 4, ಕಾಂಗ್ರೆಸೇತರ ಹಿಂದುಗಳಿಗೆ 1, ದಳಿತ ವರ್ಗ, ಸಿಖ್, ಹಿಂದೀ ಕ್ರಿಶ್ಚಿಯನ್ನರಿಗೆ ಒಂದೊಂದು ಸ್ಥಾನಗಳಿದ್ದುವೆಂದು ತಿಳಿದು ಬರುತ್ತದೆ. ಕಾಂಗ್ರೆಸ್ ಮುಸಲ್ಮಾನರ ಹೆಸರೇ ಅದರಲ್ಲಿರಲಿಲ್ಲ. ಆದರೂ ಮಿ. ಜಿನ್ನರೊಪ್ಪದೆ ಹೊರಟು ಬಂದೊಡನೆ ವೈಸರಾಯಿಗಳ ಕಾರು ಮಹಾತ್ಮಾ ಗಾಂಧಿಯವರನ್ನೊಯ್ಯಲು 'ಮಾನೋರ್ ವಿಲ್ಲೆ'ಗೆ ಬಂತು.

ಗಾಂಧಿಜೀಯೊಡನೆ ವೈಸರಾಯರು

ನೂಲುತ್ತಾ ಕುಳಿತಿದ್ದ ಗಾಂಧಿಜೀ ಒಡನೆಯೇ ಕಾರ್ಯದರ್ಶಿ ಪ್ಯಾರೇಲಾಲರೊಂದಿಗೆ ಕಾರು ಹತ್ತಿದರು. ಆಚಾರ್ಯ ಕೃಪಲಾನಿಯವರು 'ಗೆಲವಾಗಲಿ' ಎಂಬ ಹಾರೈಕೆಯೊಡನೆ ಬೀಳ್ಕೊಟ್ಟರು. ವೈಸರಾಯೀ ಭವನದಲ್ಲಿ ಗಾಂಧೀ-ವೇವೆಲರೊಳಗೆ ಒಂದು ಘಂಟೆ ಮಾತುಕತೆ ನಡೆಯಿತು. ಆದರೆ ಹೆಬ್ಬಾಗಿಲಿನಿಂದ ಪ್ರವೇಶಿಸಿದ್ದ ಗಾಂಧಿಜೀ ಅಲ್ಲಿ ಕಾಯುತ್ತಿದ್ದ ಬಾತ್ಮೀದಾರರು ಮತ್ತು ಫೋಟೋಗ್ರಾಫರರಿಂದ ತಲೆಮರೆಸಿಕೊಳ್ಳುವದಕ್ಕಾಗಿ ಪಕ್ಕದ ದ್ವಾರದಿಂದ ಹೊರ ನುಸುಳಿ ಹೋಗಿಬಿಟ್ಟರು. ಒಂದು ಘಂಟೆಯ ಸಂಭಾಷಣೆಯ ನಡುವೆ ವೈಸರಾಯರು ತಾನೊಂದು ಹೆಸರುಪಟ್ಟಿ ತಯಾರಿಸಿದ್ದೆನೆಂಬ ಪ್ರಸ್ತಾಪಕ್ಕೆ ಬಂದು ಗಾಂಧಿಜೀಯ ಅಭಿಪ್ರಾಯ ಕೇಳಬಯಸಿದಾಗ 'ಆ ವಿಷಯವನ್ನು ಕಾಂಗ್ರೆಸ್ ಅಧ್ಯಕ್ಷರೊಡನೆ ಚರ್ಚಿಸತಕ್ಕದ್ದೆಂದು ಮಹಾತ್ಮರು ನೆನಪು ಕೊಟ್ಟರು. ಸ್ವಾರಸ್ಯವೆಂದರೆ ಮಿ. ಜಿನ್ನರಿಗೆ ಆ ಹೆಸರು ಪಟ್ಟಿಯನ್ನು ವೈಸರಾಯರು ತೋರಿಸಿದ್ದರಾದರೂ ಗಾಂಧಿಜೀಯಿದಿರು ಅದರ ಪ್ರಸ್ತಾಪವನ್ನಷ್ಟೇ ಎತ್ತಿದರು ಹೊರತು ಪಟ್ಟಿಯನ್ನು ತೋರಿಸಲಿಲ್ಲ. ಮರಳಿ ಬಂದೊಡನೆ ಮಹಾತ್ಮಾ ಗಾಂಧಿಯವರು ವಲ್ಲಭಾಯಿ, ಕೃಪಾಲಿನಿಗಳೊಡನೆ ಯೋಚನಾಮಗ್ನರಾದರು; ಮೌಲಾನಾ ಆಜಾದರಿಗೆ ಟೆಲಿಫೋನಿನಿಂದ ತಿಳಿಸಿದರು. ಆಜಾದ್, ನೆಹರು, ಪಂತ್, ಖಾನ್ ಸಾಹೇಬರು ಕೂಡಿ ಬಂದು ಗೂಢ ಸಂಭಾಷಣೆ ನಡೆಯಿತು. ರಾಜಾಜೀ, ಖೇರ್ ಮೊದಲಾದವರೊಡನೆ ವಿಚಾರ ವಿನಿಮಯವಾಯಿತು; ಪರಿಸ್ಥಿತಿ ಗಂಭೀರವಾಯಿತು.



Approved firm by the Govt. of Mysore' Certified by the Agent of the Govt. of India in Ceylon.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗರನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd., Moolky, S. K.

✶ ಸಿಮ್ಲಾ ನಾಟಕದ ಕೊನೆಯ ಅಂಕ— ✶

ವೇವೆಲರ ದುರ್ಬಲ ನಟನೆ!

ವೇವೆಲ್ ಜೋರೆಂಬು

ಬಿಡುಗಡೆಗೊಂಡ ಮುಹೂರ್ತದಿಂದ ತಾ. 11ನೇ ಅಪರಾಹ್ನ 5-30ರ ವರೆಗೂ ಕಾಂಗ್ರೆಸ್ ಧುರೀಣರಲ್ಲಿದ್ದ ಆಶೆ, ಭರವಸೆಗಳು ಗಾಂಧೀಜೀ ವೈಸರಾಯರೊಡನೆ ಮಾತಾಡಿ ಬಂದೊಡನೆಯೇ ಮಾಯವಾಗಿದ್ದುವು; ಮುಖಂಡರ ಮುಖಗಳಲ್ಲಿ ನಿರಾಶೆಯ ಛಾಯೆ ಕವಿದಿತ್ತು. ತದ್ವಿರುದ್ಧವಾಗಿ ಗಾಂಧೀಜೀಗಿಂತ ಮುಂದಾಗಿ ವೈಸರಾಯರೊಡನೆ ಕಾಲುಘಂಟೆಯ ಸಂಭಾಷಣೆ ನಡಿಸಿ ಬಂದಾಗಿನ ಜಿನ್ನರ ವದನ ಭರವಸೆಯ ಹೊಳಪನ್ನು ಬೀರುತ್ತಿತ್ತು; ಲೀಗ್ ಸಮಿತಿಯ ಸದಸ್ಯರಲ್ಲೆಲ್ಲಾ ಹುರುಪೇರಿದುದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ದೇಶಹಿತ ದೃಷ್ಟಿಯಿಂದ ತಮ್ಮ ಕ್ರಾಂತಿಕಾರೀ ಭಾವನೆಗಳನ್ನು ತಾತ್ಕಾಲಿಕವಾಗಿ ಬದಿಗೆ ತಳ್ಳಿ, ಸರಕಾರದೊಡನೆ ಹಸ್ತಲಾಘವ ಕೊಡಲು ಮುಂದಾಗಿದ್ದ ರಾಷ್ಟ್ರ ಪ್ರಮುಖರು ಮಾತ್ರ ತಮ್ಮ ಅಮೂಲ್ಯ ತ್ಯಾಗವು ಅಲಕ್ಷಿಸಲ್ಪಡುತ್ತಿರುವ ಯಾತನೆಯನುಭವಿಸುತ್ತಿದ್ದರು. 'ಮಾನ್ಜಿಲ್ ಅಭಿ ದೂರ್ ಹೈ' (ಗುರಿ ಇನ್ನೂ ದೂರವಿದೆ) ಎಂದಿಷ್ಟೇ ಉದ್ಗರಿಸಿ ಮೌಲಾನರು ಆ ದಿನ ಬೇಗನೇ ಅಂತಃಗೃಹ ಸೇರಿದರು. ನೆಹರುಗಳು ಅಂದು ಏರ್ಪಾಡಾಗಿದ್ದ ಔತಣ ಸತ್ಕಾರವನ್ನು ರದ್ದು ಪಡಿಸಿಕೊಂಡರು. ಸಿಮ್ಲಾದ ಆಸೆ ಅಂದೇ ಮುಗಿದಿತ್ತು.

ಆಜಾದರೊಡನೆ ವೈಸರಾಯರು

ಗಾಂಧೀಜೀ ಮಾತಾಡಿ ಬಂದ ಮೇಲೆ ವೈಸರಾಯರಿಂದ ಕರೆ ಬಂದಂತೆ ಮೌಲಾನಾ ಆಜಾದರು ಮರುದಿನ ಸಂಭಾಷಣೆಗೆ ಹೋಗಿದ್ದರು. ತಾನೊಂದು 'ಹೆಸರು ಯಾದಿ'ಯನ್ನು ತಯಾರಿಸಿರುವೆನೆಂದು ವೈಸರಾಯರು ಸೂಚಿಸಿದರು ಹೊರತು ಮೌಲಾನರಿಗೂ ಅದನ್ನು ತೋರಿಸಲಿಲ್ಲ. ಜಿನ್ನರಿಗದನ್ನು ತೋರಿಸಿ ಅವರ ಅಭಿಪ್ರಾಯವನ್ನು ತಿಳಿದಂತೆಯೇ, ಆಜಾದರಿಗೂ ತೋರಿಸಿ, ಅವರ ಮನೋಗತವನ್ನರಿಯುವದು ಲೋರ್ಡ್ ವೇವೆಲರ ಕರ್ತವ್ಯವಿತ್ತು. ಆದರೆ ಗಾಂಧೀಜೀಯೊಡನೆ ಮಾಡಿದಂತೆ ಆಜಾದರೊಡನೆಯೂ 'ತನ್ನ ಪಟ್ಟಿಯೊಂದು ತಯಾರಾಗಿದೆ' ಎಂಬುದಕ್ಕಿಂತ ಹೆಚ್ಚಿಗೆ ತಿಳಿಸುವ ಎದೆಗಾರಿಕೆ ವೈಸರಾಯರಿಗಿರಲಿಲ್ಲ ಗಾಂಧೀಜೀಯನ್ನು ಕಳೆಯಿಸಿಕೊಂಡುದು ಪ್ರಾಯಶಃ ಆ ಯಾದಿಯನ್ನು ತೋರಿಸಬೇಕೆಂಬ ಉದ್ದೇಶದಿಂದಲೇ. ಆದರೆ ತಾನು ಹೆಕ್ಕುದಾರನಲ್ಲವೆಂದು ಗಾಂಧೀಜೀಯೇ ಆಜಾದರನ್ನು ಮುಂದೆ ಮಾಡಿದ್ದರು. ಆಜಾದರೇ ಪಟ್ಟಿಗೊಪ್ಪಿಗೆ ಕೊಡಲಾರರೆಂಬ ಭಯ ಲೋರ್ಡ್ ವೇವೆಲರ ಮನಸ್ಸನ್ನು ತಿನ್ನುತಿತ್ತು. ಅವರ ಮನಸ್ಸಾಕ್ಷಿಯೇ ಅವರನ್ನು ಮರುಗಿಸುತಿತ್ತು. ಜಿನ್ನರನ್ನು ಹೇಗಾದರೂ ಮೆಚ್ಚಿಸಬೇಕೆಂಬ ಏಕೋದ್ದೇಶದಿಂದ, ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ರಾಷ್ಟ್ರೀಯ ಮುಸಲ್ಮಾನರಿಗೆ ಸ್ಥಾನವನ್ನೇ ಇಡದಿದ್ದ ಲೋರ್ಡ್ ವೇವೆಲರು ಈ ಪಕ್ಷಪಾತ ಮಾಡಿಯೂ ಜಿನ್ನರನ್ನು ಒಲಿಸಲಾರದೆ ಹೋಗಿದ್ದರು. ಉಡುಗೊರೆ ಪಡೆದವನೇ ತಿರಸ್ಕರಿಸಿ ಹೋಗಿರುವಾಗ, ಸೂರೆಗೊಳಗಾದವ ಮೆಚ್ಚುವಂತಿದೆಯೇ? ಸೊತ್ತಿನ ಮಾಲಕನಿದಿರು, ಕಳ್ಳಸೊತ್ತನ್ನು ಅಡಗಿಸಿಡಲು ನೋಡುವವರಂತೆ, ಆಜಾದರ ಸಮ್ಮುಖದಲ್ಲಿ ವೇವೆಲರು ಆ ಪಟ್ಟಿಯನ್ನು ಗುಟ್ಟಿನಲ್ಲಿಡಬೇಕಾಯಿತು!

ಮಂಗಳಾರತಿ!

ವೈಸರಾಯರ ಭಾವವನ್ನರಿತ ಮೌಲಾನರು ಆ ಕುರಿತು ಒತ್ತಾಯಿಸಲಿಲ್ಲ. ಸಮ್ಮೇಲನ ಸಫಲವಾಗಲಿಲ್ಲವೆಂಬ ಸಂತಾಪವನ್ನು ವೈಸರಾಯರು ಆ ದೀರ್ಘ ಸಂಭಾಷಣೆಯ ನಡುವೆ ಸೂಚಿಸಿದಾಗ, ಕಾಂಗ್ರೆಸ್ಸು ಈ ಬಾರಿ ವಹಿಸಿದ ಉದಾರ ಧೋರಣೆ, ನೀಡಿದ ಸಹಕಾರಗಳನ್ನೆಲ್ಲಾ ಮೌಲಾನರು ವೇವೆಲರ ಮನಶ್ಚಕ್ಷುವಿನಿದಿರು ತಂದು ನಿಲ್ಲಿಸಿದರು; ಲೀಗಿನ ಹುಟ್ಟುಗುಣವಾದ ವಿರುದ್ಧ ಧೋರಣೆಯ ಸ್ಪಷ್ಟ ತಿಳುವಳಿಕೆಯಿದ್ದೂ ವೈಸರಾಯರಿಷ್ಟೊಂದು ಕಾಲಹರಣ ಮಾಡುವ ಅಗತ್ಯವೇನಿತ್ತು? ಎಂಬುದನ್ನೂ ಪ್ರಶ್ನಿಸಿದರು. ಆದರೆ ವೇವೆಲರಾಗ ದೀನನಾಗಿದ್ದರು ಹೊರತು ಧೈರ್ಯದಿಂದ ಮುಂದೊತ್ತುವ ಸ್ಥಿತಿಯಲ್ಲಿರಲಿಲ್ಲ. ಅಲ್ಲಿಂದ ಮರಳಿ ಬಂದ ಕಾಂಗ್ರೆಸ್ ಅಧ್ಯಕ್ಷರು ಎಲ್ಲವನ್ನೂ ಕಾರ್ಯಕಾರೀ ಸಮಿತಿಯ ಮುಂದಿಟ್ಟರು. ಕಾಂಗ್ರೆಸ್ ಕಮಿಟಿಯು ಗಾಢ ಪರ್ಯಾಲೋಚನೆ ನಡಿಸಿ, ವೈಸರಾಯರ ಅಳುಕುಬುದ್ಧಿಗಾಗಿ ಕನಿಕರಗೊಂಡಿತು. ವೈಸರಾಯರು ತಯಾರಿಸಿದ ಹೆಸರುಯಾದಿಯನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸಬೇಕೆಂದೂ, ಆ ವಿಷಯವನ್ನೇ ಗುಟ್ಟಿನಲ್ಲಿಟ್ಟು ಕಾಂಗ್ರೆಸ್ಸು ಸಹಕರಿಸಲಾರದೆಂದು ತಮ್ಮ ಪಕ್ಷೆ ತಾವೇ ಹೆದರಿಕೊಳ್ಳುವದು ಸರಿಯಲ್ಲವೆಂದೂ ಲೋರ್ಡ್ ವೇವೆಲರಿಗೊಂದು ಪತ್ರ ಬರೆಯಿತು. ಆದರೆ ಆ ಪತ್ರಕ್ಕೆ ಉತ್ತರ ಬರಲಿಲ್ಲವೆಂದು ತಿಳಿದುಬರುತ್ತದೆ.

ವೇವೆಲ್ ದೌರ್ಬಲ್ಯ

ಅಂತೂ ಸಿಮ್ಲಾ ನಾಟಕದ ಕೊನೆಯ ಅಂಕದಲ್ಲಿ ಲೋರ್ಡ್ ವೇವೆಲರ ಪಾತ್ರ ತೀರಾ ದುರ್ಬಲವಾಗಿತ್ತು; ಸೋಲ್ಜರ್ ವೈಸರಾಯಿಯ ಹೃದಯವು ಭಯ, ಸಂದೇಹಗಳ ಗೂಡಾಗಿ ಹೋಗಿತ್ತು. ಎಂತಹ ರಿಯಾಯಿತಿ ಇತ್ತರೂ ಜಿನ್ನರೊಪ್ಪಲಿಲ್ಲ; ಇದು ವೇವೆಲರ ಪಾಲಿಗೆ ಆಕಾಶವೇ ಕಳಚಿ ಬಿದ್ದಂತಹ ಅನಾಹುತ! ಲೀಗಿನ ಮೇಲೆ ಹೆಸರು ಚುನಾವಣೆಯಲ್ಲಿ ಕಾಂಗ್ರೆಸಿಗೆ ತಾನು ಅನ್ಯಾಯ ಮಾಡಿದ್ದೇನೆಂಬುದನ್ನರಿತಿದ್ದ ವೇವೆಲರು ಆ ಕುರಿತು ಕಾಂಗ್ರೆಸಿನ ಅಭಿಪ್ರಾಯ ಕೇಳುವದಕ್ಕೂ ಹೆದರಿ ಹೋದರು. ಗಾಂಧೀ ಆಜಾದರ ಮುಖದಿದಿರು ತನಗೆ ತಾನೇ ಅಪರಾಧಿಯಾಗಿ ಕಂಡರು. ಆಜಾದರೊಡನೆ ಸಂಭಾಷಿಸಿದ ಮರುದಿನ ಬಾಬು ರಾಜೇಂದ್ರ ಪ್ರಸಾದ್ ಮತ್ತು ಡಾ। ಖಾನ್ ಸಾಹೇಬರೂ ವೈಸರಾಯರೊಡನೆ ಸಂಭಾಷಿಸಿದ್ದರು. ಆದರೆ ರಾಜೇಂದ್ರರ ಸಂಭಾಷಣೆ 1942ರ ರಾಜಕೀಯ ಗೊಂದಲದಲ್ಲಿ ಘಾತಿ ಶಿಕ್ಷೆಗೊಳಗಾಗಿದ್ದ ಕೆಲವರ ಕುರಿತಾಗಿ ಖಾನ್ ಸಾಹೇಬರ ಮಾತುಕತೆ ಗಡಿನಾಡಿನ ಕಂದರ ವಲಯಗಳ ಅಧಿಕಾರವನ್ನು ಗಡಿನಾಡಿನ ಪ್ರಾಂತಿಕ ಸರಕಾರಕ್ಕೆ ಒಪ್ಪಿಸುವ ಸಂಬಂಧವಾಗಿ—ನಡೆದಿತ್ತೆಂದು ತಿಳಿದುಬರುತ್ತದೆ. ಮಾತುಕತೆಯ ನಡುವೆ 'ಸಮ್ಮೇಲನ ನಿರರ್ಥಕವಾಯಿತು' ಎಂದು ವೇವೆಲರು ಪ್ರಸ್ತಾಪಿಸಿದ್ದಿದೆ. 'ಆದರೆ ಅದಕ್ಕೆ ಹೊಣೆ ಕಾಂಗ್ರೆಸ್ಸಲ್ಲ' ಎಂಬ ಉತ್ತರ ಕೊಟ್ಟು ಧುರೀಣರು ಹೊರಟು ಬಂದುದಿದೆ. ಕಾಂಗ್ರೆಸಿನ ಸಹಕಾರಕ್ಕಾಗಿ ವೈಸರಾಯರು ಎಲ್ಲರೊಡನೆಯೂ ಕಂಠೋಕ್ತ ಶ್ಲಾಘನೆ ಸಲ್ಲಿಸಿದುದಿದೆ ಬೇರಾವ ಪರಿಣಾಮವೂ ಆಗಲಿಲ್ಲ. ತಾ 14ರಲ್ಲಿ 'ಮಂಗಳ ಗೀತೆ' ಹಾಡಲು ಸಮ್ಮೇಲನ ಸೇರಿದಾಗ ನಿರೀಕ್ಷಿಸಿದಂತೆ ವೈಸರಾಯರ ಹೆಸರು ಪಟ್ಟಿ ಸಮ್ಮೇಲನದ ಮುಂದೆ ಬರಲೇ ಇಲ್ಲ. ಸಮ್ಮೇಲನಾರಂಭದ ದಿನದಂತೆಯೇ ಅಂತ್ಯದ ದಿನವೂ ಜನ ಸಂದಣಿ ನೆರೆದು ಧುರೀಣರಾಗಮನದ ವೇಳೆ ಜಯಕಾರವೆಬ್ಬಿಸುತ್ತಿತ್ತು; ಕೊನೆಯ ದಿನದ ಜಯಕಾರಗಳಲ್ಲಿ ಕೂಡಾ ಸ್ಪಷ್ಟ ಪಕ್ಷಪಾತವಿದ್ದಿತು.

ಅಂತ್ಯಕ್ರಿಯೆ

ಸಮ್ಮೇಲನಕ್ಕೆ ಕೊನೆಯ ನೀರು ಬಿಡುತ್ತಾ ತಾನಾರಿಸಿಕೊಂಡ ಹೆಸರುಗಳು ಅತಿ ಯೋಗ್ಯವಿದ್ದುವೆಂದೂ ಮಿ. ಜಿನ್ನರಿಗಾ ಪಟ್ಟಿಯನ್ನು ತಾನು ಪೂರ್ತಿ ತೋರಿಸಿರಲಿಲ್ಲವೆಂದೂ ಲೋರ್ಡ್ ವೇವೆಲರಂದಿದ್ದರು. ಇಂದಿನ ತೊಂದರೆಗಳು ನಿವಾರಣೆಯಾಗಲಿವೆಯೆಂದೂ ಭರವಸೆ ಸೂಚಿಸಿದ್ದರು. ಪರಾಭವ ಹೇತು ಮಿ. ಜಿನ್ನರಾಡಿದ ಮಾತುಗಳಲ್ಲಿ ಪಾಕಿಸ್ತಾನಕ್ಕೆ ಪೂರ್ವಸಮ್ಮತಿ ದೊರೆಯದ ಯಾವ ತಾತ್ಕಾಲಿಕ ವ್ಯವಸ್ಥೆಯಲ್ಲಿಯೂ ಇನ್ನು ಮುಂದೆ ಲೀಗು ಭಾಗವಹಿಸುವಂತಿಲ್ಲವೆಂಬ ಸ್ಪಷ್ಟಾಭಿಪ್ರಾಯವಿದ್ದಿತು. 'ಹಿಂದುಗಳೊಡನೆ ಸಮಾನತೆ' ಎಂಬ ಬದಲಿಗೆ ಎಲ್ಲಾ ಪಕ್ಷಗಳ ಸಮಾನ ಸ್ಥಾನಗಳು ಲೀಗಿಗೆ ಕಾರ್ಯಕಾರೀ ಸಮಿತಿಯಲ್ಲಿ ದೊರೆಯಬೇಕೆಂದು ಮತ್ತೊಂದು ಹೆಜ್ಜೆ ಮುಂದೆಯೇ ಹೋಗಿದ್ದರು. ಈ ಮುಂದೋಟದ ಗುರಿಯಾಗಿ 'ಎಲ್ಲಾ ಸ್ಥಾನಗಳೂ ಲೀಗಿಗೇನೇ ದೊರೆಯಬೇಕು' ಎಂಬ ಮಾತು ಇನ್ನೊಮ್ಮೆ ಮಿ. ಜಿನ್ನರು ಬಾಯಿ ಬಿಡುವಾಗ ಬಂದರೂ ಬರಬಹುದು! 'ಒಂಟಿ ಪಕ್ಷವೊಂದಕ್ಕೆ ಸಮ್ಮೇಲನದ ಪ್ರಗತಿಯನ್ನು ತಡೆಗಟ್ಟಲು ಸಾಧ್ಯವಾದುದು ಶೋಚನೀಯ' ಎಂದು ಎಸೆಂಬ್ಲಿಯ ರಾಷ್ಟ್ರೀಯಪಕ್ಷದ ನಾಯಕ ಡಾ। ಬೆನರ್ಜಿ—ವೈಸರಾಯರಿಗೆ ಬೆಂಬಲವಾಗುತ್ತೇವೆಂದು ಯುರೋಪಿಯನ್ ಪಕ್ಷ ಪ್ರಮುಖ ಸರ್. ರಿಚಾರ್ಡ್ ಸನ್,-'ಲೀಗೊಂದೇ ಮುಸಲ್ಮಾನ್ ಪ್ರತಿನಿಧಿಯೆಂಬುದು ಅಸಂಗತ' ಎಂದು ಪಂಜಾಬಿನ ಪ್ರಧಾನಿ ಕಿಝರ್ ಹಯತ್ ಖಾನ್—'ಅಲ್ಪ ವಿಷಯಕ್ಕಾಗಿ ಸಮ್ಮೇಲನ ಅಡಿಮೇಲಾದುದು ಶೋಚನೀಯ' ಎಂದು ಪರ್ಲಕಿಮಿಡಿಯ ಮಹರಾಜ—'ಪಾಕಿಸ್ತಾನವಾಗುವದಾದರೆ ಸಿಖ್‌ಸ್ತಾನವಾಗಲೇ ಬೇಕು' ಎಂದು ಮಾಸ್ಟರ್ ತಾರಾಸಿಂಗ್—'ಮುಸಲ್ಮಾನರು 80ಮಿಲಿಯವಿದ್ದರೆ ದಲಿತ ವರ್ಗ 60 ಮಿಲಿಯವಿದೆ' ಎಂದು ಶ್ರೀ ಶಿವರಾಜ—ಭಾಷಣಗಳನ್ನಿತ್ತರು. ಲೋಕಾಕರ್ಷಕ, ಚರಿತ್ರಾರ್ಹ ಸಿಮ್ಲಾ ಪ್ರದರ್ಶನವೊಂದು ಈ ರೀತಿ ಮುಗಿಯಿತು. ಲಂಡನಿನ ಭಾರತ ಕಚೇರಿಯು ಅದಕ್ಕಾಗಿ ದುಃಖ ಪ್ರದರ್ಶನಮಾಡಿದೆ. "ನೀವೀ ಸಂದರ್ಭದಲ್ಲಿ ತೋರಿಸಿದ ತಾಳ್ಮೆ ಮತ್ತು ಚಾತುರ್ಯಕ್ಕಾಗಿ ಚಕ್ರವರ್ತಿ ಸರಕಾರದ ಪರವಾಗಿ ಶ್ಲಾಘನೆ ಸಲ್ಲಿಸುತ್ತೇನೆ."—ಎಂದು ವೇವೆಲರನ್ನು ಅಮೆರಿ ಸಂಭಾವಿಸಿದ್ದಾರೆ.

ಒಳಗುಟ್ಟೇನು?

ಸಿಮ್ಲಾ ಸಮ್ಮೇಲನದ 'ಪರಾಭವವೊಂದು ಪಾಪವಾದರೆ, ಪಾಕಿಸ್ತಾನ ಕೇಳುತ್ತಿರುವ ಜಿನ್ನರಿಗೇನೇ ಆ ಪಾಪಿಸ್ತಾನವೆಂಬುದು ನಿರ್ವಿವಾದ. ಆದರೆ ಜೂನ್ ತಾ 29 ರಲ್ಲಿ ಸಮ್ಮೇಲನವನ್ನು ಮುಂದುವರಿಸಿದ ಬೇಕಾಗಿ ಬಂದಾಗಲೇ ಪ್ರಮುಖ ಪಕ್ಷಗಳೊಳಗೆ ಒಪ್ಪಂದವಾಗುವ ಆಸೆ ಮುಗಿದಿತ್ತಾದರೂ ಲೋರ್ಡ್ ವೇವೆಲರು ನಿರಾಶೆಗವಕಾಶ ಕೊಟ್ಟಿರಲಿಲ್ಲ. ಕೊನೆಯ ದಿನಗಳಲ್ಲಿ ಮಾತ್ರ ಅವರು ಪ್ರತ್ಯೇಕ ವ್ಯಕ್ತಿಯಾಗಿ ಹೋಗಿದ್ದರು. ಸಂಭವದ ಪೂರ್ಣ ಹೊಣೆಯನ್ನು ವೇವೆಲರು ತನ್ನ ತಲೆಯ ಮೇಲೇರಿಸಿಕೊಂಡುದು ಕೇವಲ ಸೌಜನ್ಯಕ್ಕಾಗಿ-ಆದರೆ ಅದರ ಸರಿ ಅರ್ಧಪಾಲಿಗೆ ಅವರು ಹೊಣೆಗಾರರೆಂಬುದು ವಸ್ತುತಃ ಸತ್ಯ. ಹೀಗೇಕಾಯಿತು? ಧೀರ ಸೇನಾನಿಯಂತೆ ವರ್ತಿಸಿದ್ದ ವೈಸರಾಯರು ಕೊನೆಯ ದಿನಗಳಲ್ಲಿ ಅಷ್ಟೊಂದು ದೀನರಾದುದೇಕೆ? ತಾನೀ ಯೋಜನೆಯನ್ನು ಒಂದೆರಡು ತಿಂಗಳೊಳಗೆ ಪುನಃ ಎತ್ತಿಕೊಳ್ಳುವೆನೆಂದು ವೇವೆಲರು ಸಮ್ಮೇಲನದ ಓರ್ವ ಪ್ರಮುಖ ಸದಸ್ಯರೊಡನೆ ಹೇಳಿರುವರೆಂಬ ವಾರ್ತೆಯಿದೆ. ಅದು ನಿಜವಾದರೆ ಅವರು ಬ್ರಿಟನಿನ ಚುನಾವಣೆಯ ಫಲಿತಾಂಶವನ್ನು ನಿರೀಕ್ಷಿಸುತ್ತಿದ್ದಾರೆನ್ನಬಹುದು. ಭಾರತ ಕಚೇರಿಯಲ್ಲಿ ಬದಲಾವಣೆಯಾಗುವ ಸಂದರ್ಭವನ್ನು ಕಾಯುತಿದ್ದಾರೆಂದು ಊಹಿಸಬಹುದು. ಸರ್ವ ಸಮ್ಮತಿ ವಿನಹ ಯೋಜನೆಯನ್ನು ಮುಂದೊತ್ತಬಾರದೆಂಬ ಸೂಚನೆ ಲಂಡನಿನಿಂದ ಬಂದುದರಿಂದಲೇ ಕೊನೆಯ ಭಾಗದಲ್ಲಿ ವೇವೆಲರು ಬಣ್ಣ ಬದಲಾಯಿಸಿದರೆಂದು ನಂಬಲೆಡೆಯಿದೆ. ಈ ರೀತಿ ಬೆಂಗಡೆಯಿಂದಲೂ ಮುಂಗಡೆಯಿಂದಲೂ ಪ್ರತಿಕೂಲಗಳು ಬಂದುದರಿಂದ, ವೇವೆಲರಿಗಾಧರಿಸಿನಿಲ್ಲಲಾಗದೆ ಅವರೀ ಕತ್ತರಿಯ ಮಧ್ಯದಿಂದ ತಪ್ಪಿಸಿಕೊಂಡು ಹೋಗಿರಬೇಕು. ಹೇಗಿದ್ದರೂ ಪ್ರತ್ಯಕ್ಷ ತೀರ್ಮಾನವನ್ನು ಸಮೀಪಿಸಿದ್ದ ಭಾರತ ವ್ಯವಸ್ಥೆ ತಡಿಮೆ ತಾಗಿ ಮುರಿದು ಬಿದ್ದಂತಾಯಿತು!

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕ್ಲಿಷ್ಟ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|. (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
F. D. S. (A. L.) Tollygunge, Calcutta,
ಸ್ಟಾಕಿಸ್ಟ್: ಪಾ ಕಂಪೆನಿ ಮಂಗಳೂರು

ಸಿಮ್ಲಾ ಪರಾಭವ---ಅವರೇನನ್ನುತ್ತಾರೆ?

'ವೇವೆಲ್ ಯೋಜನೆ, ನಮಗೊಂದು ಉರುಲು' -ಜಿನ್ನ.

'ಬಹುಸಂಖ್ಯಾಕರ ಹೆದರಿಕೆ ಅಪಹಾಸ್ಯಕರ' -ನೆಹರು.

'ಪ್ರಗತಿ ವಿರೋಧಕರಿಗೆ ಪ್ರಾಮುಖ್ಯತೆ ಕೊಟ್ಟರು' -ಅಜಾದ್.

'ಶಾಶ್ವತ ವ್ಯವಸ್ಥೆಗೆ ಪ್ರಯತ್ನಿಸಲಿ' -ಕ್ರಿಪ್ಸ್.

ಜಿನ್ನರ ಹೇಳಿಕೆ

"ನಾವು ವೇವೆಲ್ ಯೋಜನೆಯ ಪೂರ್ಣ ಪರಿಕ್ಷೆ ಮತ್ತು ಮುಂದಾಲೋಚನೆ ನಡೆಸಿದಾಗ, ಅದೊಂದು ಉರುಲು ಎಂಬುದು ಖಚಿತವಾಯಿತು. ಏಕ ಭಾರತದ ಹಿಂದೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಇರುವ ಗಾಂಧೀ ಹಿಂದೂ ಕಾಂಗ್ರೆಸ್ ಮತ್ತು ಭೌಗೋಲಿಕ ಐಕ್ಯತೆಯ ಇತ್ತೀಚಿಗಿನ ಪ್ರವಾದಿ ಲೋರ್ಡ್ ವೇವೆಲ್ ಹಾಗೂ ಪಂಜಾಬಿನ ಮುಸಲ್ಮಾನರೊಳಗೆ ಗೊಂದಲ ನಿರ್ಮಿಸುವದರಲ್ಲೇ ನಿರತರಾಗಿರುವ ಗ್ಲೇನ್ಸಿ-ಕಿಝ್ರಾರರ ಒಂದು ಸಮ್ಮಿಶ್ರ ಕೂಟ ಅಲ್ಲಿತ್ತು. ಈ ವ್ಯವಸ್ಥೆಯೊಳಗೆ ನಮ್ಮನ್ನು ದಬ್ಬಬೇಕೆಂದು ಹಾರೈಸಲಾಗಿತ್ತು. ಲೋರ್ಡ್ ವೇವೆಲರ ಸೂಚನೆಯಂತೆ ಅದಕ್ಕೊಪ್ಪಿಗೆ ಕೊಡುತ್ತಿದ್ದರೆ ನಾವು ನಮ್ಮ ಮರಣ ಚೀಟಿಗೆ ಸಹಿಹಾಕಿದಂತಾಗುತ್ತಿತ್ತು" ಎಂದು ಸಮ್ಮೇಲನ ಬರ್ಖಾಸ್ತಾದ ತಾ. 14ರಲ್ಲಿ ಪತ್ರಿಕಾ ಪ್ರತಿನಿಧಿಗಳ ಮುಂದೆ ಮಿ. ಜಿನ್ನರಂದಿದ್ದಾರೆ "ನಿಯೋಜಿತ ಕಾರ್ಯಕಾರೀ ಸಮಿತಿಯಲ್ಲಿ ಮುಸಲ್ಮಾನರಿಗಿದ್ದುದು ಮೂರನೇ ಒಂದಂಶ ಸ್ಥಾನ ಮಾತ್ರ; ಉಳಿದ ಅಲ್ಪ ಸಂಖ್ಯಾಕರಾದ ದಳಿತ ವರ್ಗ, ಸಿಖ್ ಮತ್ತು ಕ್ರಿಶ್ಚಿಯನರ ಗುರಿ, ಮತ್ತು ಸಂಸ್ಕೃತಿ ಕಾಂಗ್ರೆಸಿನದೇ. ಕಾರ್ಯಕಾರೀ ಸಮಿತಿಯ ಬಹುಮತದ ನಿರ್ಣಯವೇ ಮಾನ್ಯ. ಅಂದಮೇಲೆ ಪಾಕಿಸ್ತಾನದ ಪ್ರಶ್ನೆಯನ್ನು ಮೂಲೆಪಾಲು ಮಾಡುವದೇ ಅವರ ಉದ್ದೇಶ. ಹೀಗಿದ್ದರೂ ಮುಸಲ್ಮಾನರ 5 ಸ್ಥಾನಗಳನ್ನೂ ಲೀಗಿಗೆ ಕೊಡುವ ಬದಲಿಗೆ ಒಂದನ್ನು ಪಂಜಾಬಿನ ಕಿಝರ್ ಹಯಾತ್ ಖಾನರ ಪಕ್ಷಕ್ಕೆ ಕೊಟ್ಟರು. ಇಂತಹ ಬಲೆಯೊಳಗೆ ಬೀಳುತಿದ್ದರೆ, ನಮ್ಮ ತತ್ವಗಳಿಗೆ ತಿಲಾಂಜಲಿಕೊಟ್ಟಂತಾಗುತಿತ್ತು; ನಮ್ಮ ಜನರಿಗೆ ನಾವು ದ್ರೋಹಮಾಡಿದಂತಾಗುತಿತ್ತು; ಮತ್ತದು ಮುಸ್ಲಿಂ ಲೀಗಿನ ಸಮಾಧಿಯಾಗುತಿತ್ತು"-ಎಂದಿದ್ದಾರೆ ಮಿ. ಜಿನ್ನ.

ಅಜಾದರ ಅಂಬೋಣ

ಸಮ್ಮೇಲನ ಪರಾಭವಗೊಂಡ ಕುರಿತು ಕಾಂಗ್ರೆಸಿನ ಪ್ರತಿಭಾವನೆ ಹೇಗಿದೆಯೆಂಬುದನ್ನು ವಿವರಿಸಿ ಅಧ್ಯಕ್ಷ ಅಜಾದರು ತಾ. 14ರ ಪತ್ರಿಕಾ ಪ್ರತಿನಿಧಿಗಳ ಸಮ್ಮೇಲನದಲ್ಲಿ ಘನ ಹೇಳಿಕೆಯಿತ್ತಿದ್ದಾರೆ. "ವೇವೆಲ್ ಯೋಜನೆಯನ್ವಯ ನಾವು ಗುರಿಗೆ ತೀರಾ ಸಮೀಪಿಸಿದ್ದೆವು 1. ಹೊರ ದೇಶ ಖಾತೆಯ ಅಧಿಕಾರ, 2. ಸೇನೆ ಮತ್ತು ರಾಷ್ಟ್ರೀಯ ಸರಕಾರಗಳೊಳಗೆ ಸಂಬಂಧ ನಿರ್ಮಾಣ, 3. ಸದ್ಯದ ಯುದ್ಧಾನಂತರ ಸಾಮ್ರಾಜ್ಯದಾಹದಿಂದ ಕೈಕೊಳ್ಳುವ ದಕ್ಷಿಣ ಏಸ್ಯದ ಯಾವ ರಾಷ್ಟ್ರದ ಸ್ವಾತಂತ್ರ್ಯಾಪಹಾರ ಧೋರಣೆಗೂ ಪೂರ್ಣ ಅಸಮ್ಮತಿ ಮತ್ತು ಅಸಹಕಾರ, 4. ವ್ಯಾಪಾರ, ಉದ್ಯೋಗ ಮತ್ತು ಶ್ರಮ ಜೀವಿಗಳ ಸಂಬಂಧವಾಗಿ ಆಶ್ರಿತ ರಾಜ್ಯಗಳಿಗೂ ರಾಷ್ಟ್ರೀಯ ಸರಕಾರಕ್ಕೂ ಇರಬೇಕಾದ ಸಂಬಂಧ-ಇತ್ಯಾದಿಗಳ ಕುರಿತು ನಾವು ವೈಸರಾಯರಿಂದ ಉದಾಹರಣೆ ಕೇಳಿ ಸಮಾಧಾನಕರ ಆಶ್ವಾಸನೆ ಪಡೆದಿದ್ದೆವು"-ಎಂದು ಆಜಾದರ ಹೇಳಿಕೆ. "ಒಂದು ತೀರ್ಮಾನ ಹೊಂದಬೇಕೆಂಬ ಯಥಾರ್ಥ ಬಯಕೆ ಬ್ರಿಟಿಷ್ ಸರಕಾರಕ್ಕಿರುತಿದ್ದರೆ ಜಾತಿ ಸಮಸ್ಯೆ ಮತ್ತು ಇತರ ತೊಡಕುಗಳನ್ನದು ಮೊದಲೇ ಊಹಿಸಿ ಅದನ್ನಿದಿರಿಸಲು ತಯಾರಿರಬೇಕಿತ್ತು; ಹೊರತು ದೇಶಾಭ್ಯುದಯವನ್ನು ತಡೆಗಟ್ಟುವ ವಿಶೇಷಾಧಿಕಾರವನ್ನು ಯಾವುದಾದರೊಂದು ಪಕ್ಷಕ್ಕೆ ಕೊಟ್ಟುಬಿಡುವದಲ್ಲ. ಮುಂದೊತ್ತಲು ಯಾರು ಸಿದ್ಧರೋ ಅವರನ್ನು ಮುಂದುವರಿಯಲು ಬಿಟ್ಟು, ದೂರ ನಿಲ್ಲಲಿಚ್ಛಿಸುವವರನ್ನು ದೂರದಲ್ಲೇ ಬಿಡಬೇಕಿತ್ತು" ಎನ್ನುತ್ತಾ ಭವಿಷತ್ಕಾಲಕ್ಕೂ ಲಗಾವಾಗುವಂತೆ ಮೌಲಾನರು ಕಂಠೋಕ್ತವಾಗಿ ಹೇಳಿದ್ದಾರೆ: "ಯಾವ ತಾತ್ಕಾಲಿಕ ವ್ಯವಸ್ಥೆಯೇ ಇರಲಿ-ಕಾಂಗ್ರೆಸಿನ ರಾಷ್ಟ್ರರೂಪವನ್ನ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಕೆಡಿಸಿ, ರಾಷ್ಟ್ರೀಯತೆಯ ಅಭಿವೃದ್ಧಿಗೆ ಹಾನಿಕರವಿದ್ದರೆ ಕಾಂಗ್ರೆಸೆಂದಿಗೂ ಒಪ್ಪಲಾರದೆಂಬುದನ್ನು ನಾನೀ ಸಂದರ್ಭದಲ್ಲಿ ಸುಸ್ಪಷ್ಟಗೊಳಿಸುತ್ತೇನೆ. ಹೊಸ ವ್ಯವಸ್ಥೆ ಗೆಲುತ್ತಿದ್ದರೆ ಜಾಪಾನ್ ಹೋರಾಟವು 'ಜಾಪಾನ್ ವಿರುದ್ಧ ಬ್ರಿಟಿಷ್ ಯುದ್ಧ'ವಾಗಿ ಉಳಿಯದೆ 'ಜಾಪಾನ್ ವಿರುದ್ಧ ಭಾರತ ಯುದ್ಧ'ವಾಗುತಿತ್ತು" ಎಂದಿದ್ದಾರೆ. ಜಿನ್ನರ ಸ್ವನಿರ್ಮಿತ ಮುಸಲ್ಮಾನ್ ಏಕ ನಾಯಕತ್ವಕ್ಕೆ ಮೌಲಾನರ ಉತ್ತರ: "ಮುಸಲ್ಮಾನರು ಬಹು ಸಂಖ್ಯಾಕರಾಗಿರುವ ಪ್ರಾಂತ್ಯಗಳಲ್ಲಿ ಲೀಗ್ ಮಂತ್ರಿ ಮಂಡಲಗಳಿಲ್ಲ. ಗಡಿನಾಡಿನಲ್ಲಿ ಕಾಂಗ್ರೆಸ್ ಸರಕಾರ-ಪಂಜಾಬಿನಲ್ಲಿ ಯೂನಿಯನಿಸ್ಟ ಮಂತ್ರಿಮಂಡಲಗಳವೆ ಸಿಂಧ್ ಮತ್ತು ಅಸ್ಸಾಮಿನ ಲೀಗ್ ಸರಕಾರಗಳು ಕಾಂಗ್ರೆಸ್ ಪಕ್ಷವನ್ನಾಧರಿಸಿ ಬದುಕಿವೆ. ಅಂದ ಮೇಲೆ ಲೀಗ್ ಎಲ್ಲಾ ಮುಸಲ್ಮಾನರ ಪ್ರತಿನಿಧಿಯೆನ್ನಿಸದು".

ನೆಹರುಗಳ ಹೇಳಿಕೆ

ಪಂಡಿತ ನೆಹರುಗಳು ಸಮ್ಮೇಲನ ಸಮಾಪ್ತಿಯ ದಿನವೇ ಪತ್ರಿಕಾಪ್ರತಿನಿಧಿಗಳಿಗಿತ್ತ ಹೇಳಿಕೆಯಲ್ಲಿ ಜಾತೀವಾರು ಪ್ರಾತಿನಿಧ್ಯ ಕ್ರಮವನ್ನು ಸಮೂಲಾಗ್ರವಾಗಿ ಟೀಕಿಸಿದ್ದಾರೆ. "ನಿಜವಾಗಿ ನಿರಾಶೆಗೊಂಡುದು ಸಮ್ಮೇಲನದ ಪರಿಣಾಮವನ್ನು ಕಂಡಲ್ಲ- ಆದರ ಹಿನ್ನೆಲೆಯನ್ನು ನೋಡಿ ಹಳೆಯವಾದ ಜಾತೀಯ ಭಾವನೆ ಮತ್ತು ಆಧುನಿಕ ಮನೋವೃತ್ತಿಗಳೊಳಗಿನ ಘರ್ಷಣೆಯಿದು. ಜಾತೀವಾರಾಗಿ ಪ್ರತ್ಯೇಕ ಪ್ರಾತಿನಿಧ್ಯವಿರುವದೇ ಉಪದ್ರವಕಾರಿ. ಅಮೇರಿಕದಲ್ಲಿ ಕಥೋಲಿಕ್, ಮೆಥೋಡಿಸ್ಟರು, ಯೆಹೂದಿ ಮತ್ತು ಇತರ ವರ್ಗದ ಕ್ರಿಶ್ಚಿಯಾನರಿಗೆ ಪ್ರತ್ಯೇಕ ಮತದಾನಕ್ಷೇತ್ರನಾಗುತಿದ್ದರೆ ಹೇಗಾಗುತಿತ್ತೆಂಬುದನ್ನು ಊಹಿಸಿರಿ. ಈ ಪದ್ಧತಿಯನ್ನಾಧರಿಸಿ ಪ್ರಜಾಪ್ರಭುತ್ವ ಸ್ಥಾಪನೆಯಾಗುವದು ಊಹನಾತೀತ. ಪರಿಸ್ಥಿತಿಗನುಸಾರವಾಗಿ ಒಂದು ಪ್ರತ್ಯೇಕ ಭಾಗವಲ್ಲ; ಅಂಥವುಗಳ ತಂಡವೇ ನಿರ್ಮಾಣಗೊಳ್ಳಬಹುದೆಂಬುದನ್ನು ಒಪ್ಪುತ್ತೇನೆ. ಲೋಕದ ಮಹಾರಾಷ್ಟ್ರಗಳೆಲ್ಲಾ ವಿವಿಧ ರಾಷ್ಟ್ರಗಳೊಂದುಗೂಡಿ ಅಸ್ತಿತ್ವದಲ್ಲಿವೆ. ತಾನೊಬ್ಬ ಪ್ರತ್ಯೇಕ ರಾಷ್ಟ್ರದವನೆಂದು ಹೇಳಿಕೊಳ್ಳುವದರಲ್ಲೇ ಜಿನ್ನರಿಗಾನಂದವಾದರೆ ಸಂಗತಿಯಲ್ಲಿಗೆ ಮುಗಿಯಿತು. ಅವರು ತನಗಾ ಹೆಸರಿಟ್ಟುಕೊಳ್ಳಬಹುದು ಆದರದು ಯಾವ ಸಮಸ್ಯೆಯನ್ನೂ ತೀರ್ಮಾನಿಸುವಂತಿಲ್ಲ. ಹಿಂದುಸ್ಥಾನದಲ್ಲಿ ಎರಡು ಅಥವಾ ಮೂರೈದು ರಾಷ್ಟ್ರಗಳವೆಯೆಂದು ಭಾವಿಸಿಕೊಂಡರೆ, ಆಗಲೂ ಅವು ಒಟ್ಟಾಗಿವರ್ತಿಸುವದು ಹೇಗೆಂಬುದೇ ಸಮಸ್ಯೆ. ಭಯವನ್ನು ಬತ್ತಲೆಗೊಳಿಸುವೆನೆಂದರಾಗದು ಅದೊಂದು ಮನೋರೋಗ; ಅದಕ್ಕೆ ಭಾವನಾ ಚಿಕಿತ್ಸೆಯೇ ಬೇಕು. ಮಿ. ಜಿನ್ನರಲ್ಲವಾದರೂ ಮುಸ್ಲಿಂ ಲೀಗಿನ ಪ್ರಮುಖ ಸದಸ್ಯರು, ಮುಸಲ್ಮಾನರು ಮಿಕ್ಕವರಿಗಿಂತ ಎಷ್ಟೋ ಬಲಾಢ್ಯರು ಮತ್ತು ಅಧಿಕಾರ ಬದ್ಧರೆಂದು ಹೇಳಿದುದಿದೆ. ಬ್ರಿಟಿಷ್ ಸರಕಾರವಿಲ್ಲದಿರುತಿದ್ದರೆ ತಾವು ಮಿಕ್ಕವರನ್ನಾಳುತಿದ್ದೆವೆಂದು ಅವರಂದಿದ್ದರು ಅದಕ್ಕೆ ಬದಲಾಗಿ ಅವರೀಗ ಬಹು ಸಂಖ್ಯಾಕರಿಂದಾಳಲ್ಪಡುವ ಭಯ ಪ್ರದರ್ಶಿಸುತಿದ್ದಾರೆ 80 ಅಥವಾ 90 ಮಿಲಿಯ ಜನರನ್ನು ಯಾರಾದರೂ ಆಳಬಲ್ಲರೆನ್ನುವದು ಅಪಹಾಸ್ಯಕರ. ಇದೆಲ್ಲಾ ಕೇವಲ ಕಲ್ಪನೆ. ನನ್ನ ಯೋಚನಾಗತಿ ಮಿ. ಜಿನ್ನರ ರೀತಿಗಿಂತ ಭಿನ್ನವಾದುದು. ನನ್ನದೇ ಕೆಳ ದರ್ಜೆಯಾಗಿರಬಹುದು-ಆದರೆ ಅದು ಬೇರೆ." ಎನ್ನುತ್ತಾ ಪಂಡಿತ ನೆಹರು... ಕೊನೆಗೆ ನುಡಿದರು:"ಮೂರನೇ ಪಕ್ಷವು ರಂಗದಿಂದ ಅಂತರ್ಧಾನವಾಗುವದೇ ತೀರ್ಮಾನಕ್ಕೆ ಉಪಾಯ"

ಲಂಡನಿನ ಪ್ರತಿಕ್ರಿಯೆ

ಸಿಮ್ಲಾದ ಪರಾಭವವು ಲಂಡನಿನ ರಾಜಕೀಯ ರಂಗದಲ್ಲಿ ತೀವ್ರಾನುತಾಪ ನಿರ್ಮಿಸಿದೆ. ವೇವೆಲರು ಮತ್ತೊಂದು ವಿಧದಿಂದ ಹೆಜ್ಜೆ ಮುಂದಿಡಬೇಕೆಂದು ಹೆಚ್ಚಿನವರು ನಿರೀಕ್ಷಿಸುತಿದ್ದಾರೆ. ಲೀಗ್ ಧೋರಣೆಯ ಕುರಿತು ಕೂಲಿಗಾರ ಪಕ್ಷೀಯರಲ್ಲಿ ಜಿಗುಪ್ಸೆ ಮೊಳೆತಿದೆ. "ಬ್ರಿಟನ್ನಿನ ಎಡ ಪಕ್ಷೀಯರಲ್ಲಿ ಸಿಮ್ಲಾ ಮಾತುಕತೆಯ ವಿಫಲತೆ ತೀವ್ರ ನಿರಾಶೆಯನ್ನು ನಿರ್ಮಿಸಿದೆ. ಇದಕ್ಕೆ ಮುಖ್ಯ ಹೊಣೆಗಾರರು ಮಹಮ್ಮದೀಯ ಪ್ರತಿನಿಧಿಗಳಾದರೆ. ನಿಜಕ್ಕೂ ಇದು ವಿಷಮ ನಿರ್ಧಾರ. ಮಹಮ್ಮದೀಯ ಬೇಡಿಕೆಗಳ ಕುರಿತು ಹಲವು ಸಮತಾವಾದಿಗಳಲ್ಲಿದ್ದ ಸಹಾನುಭೂತಿಯನ್ನು ಈ ಘಟನೆ ನಿಜಕ್ಕೂ ಕರಟಿಸಿ ಬಿಟ್ಟಿದೆ'-ಎಂದು ಲೇಬರ್ ಪಕ್ಷದ ಉಗ್ರಗಾಮೀ ನಾಯಕ ಬೆವಾನರಂದಿದ್ದಾರೆ.

"ಯುದ್ಧಾನಂತರದ ಭಾರತದ ಸ್ಥಾನಕ್ಕಿದು ಮಹಾ ಗಂಡಾಂತರವನ್ನೊಡ್ಡಬಹುದು. ಜಾಪಾನ್ ಯುದ್ಧಾವಧಿಯಲ್ಲೇ ಶಾಶ್ವತ ಒಪ್ಪಂದವಾಗದೆ ಹೋದರೆ ಯುದ್ಧಾನಂತರ ವಿವಿಧ ಪಕ್ಷೀಯರ ಗಾಢ ಘರ್ಷಣೆಯೇಳುವ ಅಪಾಯವಿದೆ"-ಭಾರತದ ಉಪಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್.

"ಪಾಕಿಸ್ತಾನದ ಕುರಿತು ಇನ್ನೂ ಒಪ್ಪಂದವಾಗದಿರುವಾಗ, ಮುಸಲ್ಮಾನರ ಏಕಮಾತ್ರ ಪ್ರತಿನಿಧಿಯೆಂಬ ಲೀಗಿನ ವಾದಾನುಸಾರವಾಗಿ ಒಂದು ಒಪ್ಪಂದವಾಗುವದು ಅಸಾಧ್ಯವೇ ಸರಿ. ಇಂತಹ ಪರಿಸ್ಥಿತಿಯಲ್ಲಿ ತಾತ್ಕಾಲಿಕ ವ್ಯವಸ್ಥೆಗಾಗಿ ವೃಥಾ ಕಾಲಹರಣಮಾಡದೆ ಶಾಶ್ವತ ತೀರ್ಮಾನಕ್ಕಾಗಿ ಪ್ರಯತ್ನಿಸುವದೇ ಉತ್ತಮ"—ಸರ್. ಕ್ರಿಪ್ಸ್.

"ನಾನು ಮುಸ್ಲಿಂ ವಾದವನ್ನೇ ಸದಾ ಸಮರ್ಥಿಸುತ್ತಾ ಬಂದ ಮನುಷ್ಯ. ಆದರೆ ಕೂಡಿ ವರ್ತಿಸುವ ಹುರುಪೇ ಇಲ್ಲದ ಮುಸ್ಲಿಂ ಲೀಗಿನ ಇಂದಿನ ವರ್ತನೆಯನ್ನು ಅನುಮೋದಿಸುವದು ಕಷ್ಟ"—ಲೋರ್ಡ್ ಹೈಲಿ.

"ನಮ್ಮಲ್ಲಿ ಹಿಂದೀಯರ ಮೇಲೆ ಸಹಾನುಭೂತಿಯಿರುವ ಸರಕಾರವು ಸ್ಥಾಪನೆಯಾಗಲಿರುವ ಈ ಸಂದರ್ಭದಲ್ಲೇ ಕಾಂಗ್ರೆಸ್ ಮತ್ತು ಲೀಗುಗಳು ಒಂದುಗೂಡದೆ ಹೋದುದು ಮಹಾ ದುರಂತವೇ ಸರಿ"—ಜಗತ್ಪ್ರಸಿದ್ಧ ಗ್ರಂಥಕರ್ತ ಮಿ. ಪ್ರೀಸ್ಲೆ.

"ಈ ಅಸುಖೀ ಪರಿಣಾಮಕ್ಕಾಗಿ ಗಾಢ ವ್ಯಸನಪಡುತ್ತೇನೆ. ಬ್ರಿಟನ್ನಿನ ಎರಡು ಕೊಡುಗೆಗಳನ್ನು ತಿರಸ್ಕರಿಸಿದ ಹಿಂದೀಯರೇ, ಅವುಗಳಿಗಿಂತ ಪ್ರಗತಿಪರವಾದ ಹೊಸತೊಂದನ್ನೀಗ ಮುಂದಿಡಬೇಕು ಆದರೆ ಮೂರನೇ ಬಾರಿ ಪ್ರಯತ್ನಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲೂ ಇದೆ"—ಕೂಲಿಕಾರ ಸದಸ್ಯ ಪೆಥಿಕ್ ಲೋರೆನ್ಸ್

"ಲೋರ್ಡ್ ವೇವೆಲರು ಉಪಾಯಗಳ ಹೊಣೆಯನ್ನು ಸ್ವತಃ ಹೊತ್ತುಕೊಂಡುದು ಅವರ ಘನತೆ ಮತ್ತು ಯಥಾರ್ಥತೆಗೊಂದು ದ್ಯೋತಕ. ಆದರೆ ಹೊಣೆಗಾರಿಕೆ ಬೇರೆಯವರದೆಂಬುದು ಸಾರ್ವಜನಿಕರಿಗೆ ಗೊತ್ತಿದೆ. ವೇವೆಲರ ಬೆಂಬಲಕ್ಕೆ ಜನತಾಭಿಪ್ರಾಯ ಬಂದರೆ ಇನ್ನಾದರೂ ಅಭಿವೃದ್ಧಿ ಸಾಧ್ಯ"— ಈಸ್ಟ ಇಂಡಿಯಾ ಎಸೋಸಿಯೇಶನ್ ಕಾರ್ಯದರ್ಶಿ ಸರ್. ಬ್ರೌನ್.

"ಯಾವುದಾದರೊಂದು ದೇಶದ ಮುಖ್ಯ ಪಕ್ಷಗಳು ಒಂದುಗೂಡದಿದ್ದ ಮಾತ್ರಕ್ಕೆ ತಾಳ್ಮೆ ತಪ್ಪುವ ಸ್ಥಿತಿಯಲ್ಲಿ ನಾವಿಲ್ಲ. ಆದರೆ ವೇವೆಲ್ ಕೊಡುಗೆ ಮುರಿದುದರಲ್ಲಿರುವ ಹಾನಿಯೆಷ್ಟೆಂದರೆ 'ಮುಸ್ಲಿಂ ವಿಶೇಷಾಧಿಕಾರ'ವನ್ನು ಇನ್ನೂ ಏರಗೊಡಿಸಬೇಕೇ ಎಂದು ಕೇಳಬೇಕಾಗಿದೆ. ಮುಸ್ಲಿಂ ಲೀಗಿನೊಡನೆ ಪೂರ್ಣ ಸಹಾನುಭೂತಿಯಿದ್ದಂತೆಯೇ ಈ ವಿಶೇಷಾಧಿಕಾರವನ್ನು ಇತ್ಯರ್ಥಿಸುವದ. ಅತ್ಯಗತ್ಯವೆನ್ನಿಸಿದೆ"—'ಮೆಂಚೆಸ್ಟರ್ ಗಾರ್ಡಿಯನ್'

The Canara Banking Corporation Limited.

(Incorporated in British India, with limited Liability.)

Estd: 1906

Head Office: UDIPI, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital	Rs. 15,17,000
Reserves	Rs. 4,44,000

ನವಯುಗ

ಉಡುಪಿ, ಗುರುವಾರ ೧೯-೭-೧೯೪೫

ಪರ್ವತ ಪ್ರಸವ

ಸಿಮ್ಲಾ ಸಮ್ಮೇಲನ ಅಪಜಯಗೊಂಡಿತು. ಹೆಚ್ಚಿನವರ ನಿರೀಕ್ಷೆ ಸುಳ್ಳಾಯಿತು. ಆಗಬಾರದುದು ಆಗಿಹೋಯಿತು.

ಭುಲಾಭಾಯಿ-ಲಿಯಾಖತ್ ಕರಾರನ್ನು ಹಿಡಿದುಕೊಂಡು ಲಂಡನಿಗೆ ಹೊರಟಂದಿನಿಂದ ಮೊನ್ನೆಯ ವರೆಗೂ ಲೋರ್ಡ್ ವೇವೆಲರು ಭಾರತೀಯರ ಆಸೆ-ನಿರೀಕ್ಷೆಯನ್ನು ಮೇಲಕ್ಕೇರಿಸುತ್ತಾ ಹೋಗಿ ಆಕಾಶಕ್ಕೆ ಮುಟ್ಟಿಸಿದ್ದರು. ಮೊನ್ನೆ ಒಂದೇ ಬಾರಿ ಅದನ್ನು ನೆಲಕ್ಕಪ್ಪಳಿಸಿದರು. ಹೀಗೆ ಮೇಲಕ್ಕೆತ್ತಿ ನೆಲಕ್ಕೊಗೆದ ನೋವು ಹಿಂದೀ ಹೃದಯದಿಂದ ಥಕ್ಕನೇ ಮಾಸುವಂತಿಲ್ಲ "ಎಲ್ಲವೂ ಹಿಂದೆ ಇದ್ದಂತೆಯೇ ಇರುವದು"-ಎಂದು ಸಮ್ಮೇಲನವನ್ನು ವಿಸರ್ಜಿಸುತ್ತಾ ಲೋರ್ಡ್ ವೇವೆಲರಂದಿದ್ದಾರೆ; ಇದು ಸುಳ್ಳು ರಾಷ್ಟ್ರದ ಭಾವನೆಯಿನ್ನು ಹಿಂದಿನ ಮಟ್ಟದಲ್ಲೇ ನಿಲ್ಲುವಂತಿಲ್ಲ. ಅದೊಮ್ಮೆ ತಲೆಯ ವರೆಗೇರಿ ಕಾಲಡಿಗೆ ಬಿದ್ದೂ ಹಿಂದಿನಂತೆಯೇ ಉಳಿದೀತೆಂದು ವೈಸರಾಯರು ನಿರೀಕ್ಷಿಸುವದು ತಪ್ಪು. ವೈಸರಾಯೀ ಕೌನ್ಸಿಲ್-ದೇಶದ ದೀನ ಸ್ಥಿತಿ-ರಾಜಕೀಯ ಬಿಕ್ಕಟ್ಟು-ಆಹಾರಾಭಾವ-ಆರ್ಥಿಕ ಅವ್ಯವಸ್ಥೆ, ಇವು ಮಾತ್ರ ಹಿಂದಿನಂತೆಯೇ ಉಳಿಯಲಿವೆ.

'ತಪ್ಪು ನನ್ನದು' ಎಂದು ವೈಸರಾಯರಂದಿದ್ದಾರೆ ನಿಜಕ್ಕೂ ಅವರದೇ. "ಇದು ಲೋರ್ಡ್ ವೇವೆಲರ ಘನತೆ ಮತ್ತು ವಿನಯ ಬುದ್ಧಿಯನ್ನು ಸೂಚಿಸುತ್ತದಲ್ಲದೆ-ಬೇರೇನೂ ಅಲ್ಲ-ತಪ್ಪುಗಾರರು ಪ್ರತ್ಯೇಕ" ಎಂದು ಬ್ರಿಟಿಷರನ್ನುತಿದ್ದಾರೆ ನಿಜಾಪರಾಧಿ ತಲೆತಪ್ಪಿಸಿಕೊಂಡಿಲ್ಲ. ಅಧ್ಯಕ್ಷ ಆಜಾದರೇ ಮೊದಲಾದವರು ಅವನನ್ನು ತೋರಿಸಿಯೂ ಕೊಟ್ಟಿದ್ದಾರೆ. ಆದರೆ ಮಿ. ಜಿನ್ನರು ತಪ್ಪು ಮಾಡಿದುದು ಜುಲಾಯಿ ತಾ. 14 ರಲ್ಲಲ್ಲ; ಆ ದಿನದ ಅಪರಾಧಿ ಲೋರ್ಡ್ ವೇವೆಲರೇ. ಸಿಮ್ಲಾ ಸಮ್ಮೇಲನವನ್ನು ಮುಂದುವರಿಸಿಡಬೇಕಾಗಿ ಬಂದ ಜೂನ್ ತಾ 29ರಲ್ಲೇ ಮುಸ್ಲಿಂ ಲೀಗಿನ ಧೋರಣೆಯೇನೆಂಬುದು ಸ್ಪಷ್ಟವಾಗಿತ್ತು. ಜಿನ್ನರು ಒಲಿಯಬಹುದೆಂಬ ಆಸೆ ಅಂದೇ ಮುಗಿದಿತ್ತು. ಆದರೆ ಸಮ್ಮೇಲನ ನಿಷ್ಫಲವಾಗಬಹುದೆಂಬ ನಿರಾಶೆ ಮಾತ್ರ ಮೂಡಲಿಲ್ಲ. ವೈಸರಾಯರು ಅದಕ್ಕಾಸ್ಪದ ಕೊಡಲಿಲ್ಲ. ಲೋರ್ಡ್ ವೇವೆಲರೊಬ್ಬರ ಮೇಲಿನ ಭರವಸೆಯಿಂದಲೇ ಸಮ್ಮೇಲನ ಜುಲಾಯಿ 14ರ ವರೆಗೂ ಬಾಳಿತು; ಅವರು ಮಾತ್ರ ಕೊನೆಯ ಘಳಿಗೆಯಲ್ಲಿ ದಗೆ ಕೊಟ್ಟರು.. ಇಂದಿನ ಅಪರಾಧಿ ಅವರೇ!

ಸಮ್ಮೇಲನವು ಎಷ್ಟೊಂದು ವಿಲಕ್ಷಣ ರೀತಿಯಿಂದ ಮುಗಿದು ಹೋಯಿತು! ಒಂದು ರಾಷ್ಟ್ರದ ಅದೃಷ್ಟ ನಿರ್ಮಾಣ ಕಾರ್ಯವೆಂದು ಭಾವಿಸಿದ್ದುದು, ಪರಿಣಾಮದ ಮೇಲಿಂದ 'ಎಲ್ಲವೂ ಕಪಟ ನಾಟಕ'ವೆನ್ನುವಂತಾಯಿತು. ಬ್ರಿಟಿಷ್ ಅಧಿಕಾರಿಗಳು ಲೋಕದ ಕಣ್ಣಿಗೆ ಮಣ್ಣೆರಚುವದಕ್ಕಾಗಿ-ಬ್ರಿಟಿಷ್ ಚುನಾವಣೆಯನ್ನು ಜಯಿಸುವದಕ್ಕಾಗಿ-ಕೇವಲ ಪ್ರದರ್ಶನಕ್ಕಾಗಿ-ಈ ನಾಟಕವಾಡಿದುದಲ್ಲವೇ? ಇದನ್ನನುಮೋದಿಸುವ ಪೂರ್ವ ವ್ಯವಸ್ಥೆಯನ್ನು ಮಿ. ಜಿನ್ನರೊಡನೆ ಬ್ರಿಟಿಷರು ಮಾಡಿಕೊಂಡಿರಲಿಲ್ಲವೇ? ಎಂದು ಪ್ರಶ್ನಿಸುವವರಿದ್ದಾರೆ. ಸಮ್ಮೇಲನ ಮುರಿದುದು ಸಕಾರಣವಾಗಿ ಅಲ್ಲ; ಆದ್ದರಿಂದ ಇಂತಹ ಅಪ್ರಬುದ್ಧ ವಾದಗಳಿಗೂ ಅಸ್ತಿತ್ವದೊರೆತಿದೆ. ಪ್ರಮುಖ ವರ್ಗಗಳ ಸಮ್ಮತಿವಿನಹ ಹೊಸ ವ್ಯವಸ್ಥೆ ಜ್ಯಾರಿಯಾಗುವಂತಿಲ್ಲ ಎಂದು ಬ್ರಿಟಿಷರ ಪ್ರಥಮ ಘೋಷಣೆಯಲ್ಲಿಯೇ ಇದ್ದಿತು; ತನ್ನ ವಿರೋಧ ಬೆಲೆ ಬಾಳುತ್ತದೆ ಎಂದು ತಿಳಿದ ಮೇಲೆ, ಜಿನ್ನರಿಗೆ ಧೈರ್ಯ ಸ್ವಾಭಾವಿಕವಾಗಿ ಬಂತು. ಇದನ್ನೇ ಒಂದು ನಟನೆಯೆನ್ನಬೇಕು ಹೊರತು, ಇದಕ್ಕಿಂತ ಭಿನ್ನವಾದ ದುರುದ್ದೇಶವಾಗಲೀ, ಒಳ ಸಂಚಾಗಲೀ ವೇವೆಲ್ ಯೋಜನೆಯಲ್ಲಿರಲಿಲ್ಲವೆಂಬುದು ನಿಜ.

ಆದರೆ ಸರಕಾರಕ್ಕೆ ಮನಸಿದ್ದರೆ ಮಾರ್ಗವಿತ್ತು; ಲೋರ್ಡ್ ವೇವೆಲರಲ್ಲಿ ಆ ಮನಸ್ಸಿದೆ ಎಂಬ ಸೂಚನೆಯೂ ದೊರೆತಿತ್ತು; ವೇವೆಲ್ ಯೋಜನೆಯನ್ವಯ 'ಪ್ರಮುಖ ವರ್ಗ'ಗಳೆಂದರೆ ಮುಸ್ಲಿಂ ಲೀಗು ಮತ್ತು ಕಾಂಗ್ರೆಸ್ ಅಲ್ಲ; ಅವುಗಳಿಗಾಗಿ ಕಾರ್ಯಕಾರೀ ಸಮಿತಿಯಲ್ಲಿ ಸ್ಥಾನಗಳಿರಲಿಲ್ಲ. ಮುಸ್ಲಿಂ ಮತ್ತು ಹಿಂದುಗಳಿಗಾಗಿ ಇದ್ದಿತು; ಸಿಖ್, ಕ್ರಿಶ್ಚಿಯನ್, ದಳಿತ ವರ್ಗಗಳಿತ್ತು ಹೊರತು ತಾರಾಸಿಂಗರ ಪಕ್ಷ, ಅಂಬೇಡ್ಕರ್ ಸಂಘಟಗಳಿಗಿರಲಿಲ್ಲ ಅಂದ ಮೇಲೆ, ಮುಸಲ್ಮಾನರ ಒಂದು ಭಾಗ ಸಮೇತ ಎಲ್ಲರೂ ಒಪ್ಪಿಗೆ ಕೊಡುವಾಗ, ಒಂದು ಜಾತಿಯೊಳಗಿನ ಒಂದು ಪಂಗಡವನ್ನೇ 'ಪ್ರಮುಖ ಪಕ್ಷ'ವೆಂದು ಗಣಿಸಿದುದು ಸಮ್ಮೇಲನವನ್ನು ಮುಗಿಸಲು ಸಾಕಾಗಿದ್ದ ಕಾರಣವಲ್ಲ; ಕೇವಲ ನೆವ! ಈ ರೀತಿ ತಪ್ಪಿಸಿಕೊಂಡುದರಿಂದ ಬ್ರಿಟಿಷರ ಮೇಲೆ ಇನ್ನೆಂದಿಗೂ ಭರವಸೆಯಿಡದಂತಾಯಿತು; ಮಿ. ಜಿನ್ನರೊಡನಿನ್ನು 'ಶರಣು ಅಥವಾ ಸಮರ' ಹೊರತು ಮಧ್ಯ ಮಾರ್ಗವಿಲ್ಲ ಎಂಬುದೂ ಸ್ಪಷ್ಟವಾಯಿತು

ಆದ್ದರಿಂದ ಇನ್ನು ಕಾಂಗ್ರೆಸಿನ ಮುಂದಿರುವ ಹಾದಿಯೊಂದೇ— ಲೀಗಿನೊಡನೆ ಹೋರಾಟ. ಈ ಯುದ್ಧಕ್ಕೆ ರಾಷ್ಟ್ರೀಯ ಮುಸ್ಲೀಂ ಮುಖಂಡರನ್ನೇ ಇಳಿಸಿ ಮುಸಲ್ಮಾನ ಜನತೆಯನ್ನು ಸರಿ ಹಾದಿಗೆ ತಂದು ಜಿನ್ನರನ್ನು ಮೂಲೆಪಾಲು ಮಾಡಿಸುವದು ವಿಹಿತ; ಅದು ಅಸಾಧ್ಯವಾದರೆ ಲೀಗಿನ ಅಪ್ರಾಗತಿಕ, ದೇಶ ಘಾತುಕ ಧೋರಣೆಯನ್ನು ಜಜ್ಜಿ ನೆಲಸಮಮಾಡಲು ಕಾಂಗ್ರೆಸ್ ಯಂತ್ರವನ್ನು ಪೂರ್ಣ ರಭಸದಿಂದ ಆ ಕಡೆಗೆ ತಿರುಗಿಸದೆ ನಿರ್ವಾಹವಿಲ್ಲ. ಇದೂ ಆಗದಾದರೆ ದೇಶವನ್ನು ತುಂಡರಿಸಿ ಪಾಕಿಸ್ತಾನ ಕೊಟ್ಟು ಸಲಾಂ ಸಲ್ಲಿಸದೆ ಬೇರೆ ಮಾತಾಡಿ ಫಲವಿಲ್ಲ.

ವಿಶೇಷ ವಿದ್ಯಮಾನಗಳು

ದೊಡ್ಡ ಅಪಮಾನ!

ತನ್ನನ್ನು ರಸ್ತೆಯಲ್ಲಿ 'ಚೋಕ್ರಿ' (ಹುಡುಗಿ) ಎಂದು ಕರೆದುದುದಕ್ಕಾಗಿ ಬೊಂಬಾಯಿಯಲ್ಲಿ ಒಬ್ಬ ಪಠಾಣನು ಇಬ್ಬರಿಗೆ ಚೂರಿ ಹಾಕಿ ಕೊಂದನೆಂಬ ವಾರ್ತೆ ಬಂದಿದೆ. ಪುರುಷ ಜೀವಿಗೆ 'ಹೆಣ್ಣು' ಎಂದು ಕರೆಯಿಸಿಕೊಳ್ಳುವಾಗ ಎಂಥಹ ಅಪಮಾನವಾಗುತ್ತದೆಂಬುದಕ್ಕೆ ಅಮೇರಿಕದಲ್ಲಿಯೂ ಒಂದು ಅಪಾಯರಹಿತ ನಿದರ್ಶನ ದೊರೆತಿದೆ ಅಲ್ಲಿಯ ಒಂದೆಡೆ ಓರ್ವ ಸಣ್ಣ ಹುಡುಗ, ಸ್ನಾನ ಗೃಹದೊಳಗೆ ಹೊಕ್ಕು ಚಿಲುಕ ಹಾಕಿ ಕುಳಿತುಕೊಂಡ. ಆತನ ತಾಯಿ ಏನೇನೋ ಮಾಡಿದರೂ ಹುಡುಗ ಹೊರಡಲೊಪ್ಪಲಿಲ್ಲ. ತಾಯಿ ತನ್ನ ಸ್ನೇಹಿತೆಯೊಬ್ಬಳ ಸಹಾಯ ಯಾಚಿಸಿದಳು; ಈಕೆ ಸ್ವಭಾವ ಶಾಸ್ತ್ರಜ್ಞೆ. ಬಾಗಿಲ ಪಕ್ಕದಲ್ಲಿ ನಿಂತುಕೊಂಡು "ಹೊರ ಹೊರಡು-ಹುಡುಗಿ!" ಎಂದು ಬಿಟ್ಟಳು. ತನ್ನ ಗಂಡುಸುತನಕ್ಕಾಗುವ ಅಪಮಾನವನ್ನು ಸಹಿಸಲಾರದೆ ಆ ಹುಡುಗ ಒಡನೆಯೇ ಹೊರಗೆ ಧಾವಿಸಿ ಬಂದ. ನೂರಾರು ನಾಜಿಗಳನ್ನು ಏಕಾಕಿಯಾಗಿ ವಧಿಸಿದ ರಶ್ಯನ್ ಹುಡುಗಿ ಲ್ಯೂಡ್‌ಮಿಲ್ಲ ಪಾವ್ಲಿಚೆಂಕೋರಂಥವರಿರುವ ಈ ಯುಗದಲ್ಲೂ ಹೆಣ್ಣೆಂದರೆ ಎಷ್ಟೊಂದು ಅವಮಾನ!

ನಾಜಿಗಳ ಗುಪ್ತ ಧನ

ಅಮೇರಿಕದ ವಿದೇಶ ನಿಧಿ ನಿಯಂತ್ರಕರಾದ ಮಿ. ಓರ್ವಿಸರು ಅಮೆರಿಕನ್ ಭಂಡಾರ ಖಾತೆಗೊಪ್ಪಿಸಿದ ವರದಿಯಲ್ಲಿ ಹೀಗೆಂದಿದ್ದಾರೆ. "ಹಿಟ್ಲರನಿಗೆ ಹಣ ಸಹಾಯಮಾಡಿ ನಾಜೀ ಯುದ್ಧಯಂತ್ರವನ್ನು ನಿರ್ಮಿಸಿದ್ದ ಜರ್ಮನ್ ಕಾರ್ಖಾನೆಗಳ ಮಾಲಿಕರು, ಅನ್ಯದೇಶದ ತಮ್ಮಂತಹ ವ್ಯಾಪಾರಿಗಳೊಡನೆ ಮುಂಜಾಗ್ರತೆಯ ಒಪ್ಪಂದ ಮಾಡಿಕೊಂಡು ಜರ್ಮನಿಯ ಆರ್ಥಿಕ ಭದ್ರತೆಯನ್ನು ಸಾಧಿಸಿದ್ದಾರೆ. ಸ್ವಿಜರ್ಲೆಂಡಿನಲ್ಲಿ ಅವರ ಡಿಪೋಸಿಟು 1941 ರಲ್ಲಿ 7000 ಮಿಲಿಯ ಫ್ರಾಂಕುಗಳಷ್ಟಿತ್ತು 1942ರಲ್ಲದು 16000 ಮಿಲಿಯವಾಯಿತು. ಅಂತೆಯೇ ಪ್ರತಿವರುಷವೂ ಏರುತ್ತಾ ಹೋಗಿದೆ ಸ್ವಿಸ್ ಮೂಲಕ ಜರ್ಮನ್ ಭಂಡವಾಳವು ಇಡೀ ಪ್ರಪಂಚದಲ್ಲೀಗ ವ್ಯವಹಾರದಲ್ಲಿದೆ. ಅದು ಲೋಕದ ಆರ್ಥಿಕ ವಹಿವಾಟುಗಳೊಳಗೆ ಗುರುತಿಸಲಾರದ ರೀತಿಯಲ್ಲಿ ಮಿಶ್ರವಾಗಿ ಹೋಗಿದೆ. ಈ ಅಪಾರ ಭಂಡವಾಳವನ್ನು ಅಪಹರಿಸದೆ ಬಿಟ್ಟರೆ ಲೋಕ ಕಂಟಕ ಜರ್ಮನಿ ಮತ್ತೊಮ್ಮೆ ತಲೆಯೆತ್ತಬಹುದು. 3ನೇ ಲೋಕಯುದ್ಧವಾಗಬಹುದು. ಗುರುತಿಸಲಾಗದ ರೀತಿಯಲ್ಲಿರುವ ನಾಜಿಗಳಿಂದ ಮುಂದೆ ಮಹಾಗಂಡಾಂತರವಿದೆ"—ಇದು ನಿಜವೆ? ಅಥವಾ ಹಣಕಂಡರೆ ಹೆಣ ಬಾಯಿಬಿಡುತ್ತದೆಂಬ ಅಮೇರಿಕನ್ ಖಜಾನೆಗೇನಾದರೂ ಆಸೆ ಮೊಳೆಯಿತೆ?

ಸಂ. ಪ್ರಾಂತಿಕ ಸರಕಾರದ ದೂರದೃಷ್ಟಿ

ಸಿಮ್ಲಾದ ಮಾತುಕತೆ ಬೆಳೆಯಹತ್ತಿದ ಕೂಡಲೇ ಸಂಯುಕ್ತ ಪ್ರಾಂತ್ಯದ ಮೂಲ ಕಚೇರಿಯಲ್ಲಿ ಕೆಲವು ಕ್ಲಾರ್ಕರನ್ನು ಹೆಚ್ಚಾಗಿ ನೇಮಿಸಿಕೊಳ್ಳಲಾಯಿತಂತೆ. ಸಿಮ್ಲಾ ಮಾತುಕತೆ ಜಯಶೀಲವಾಗಿ ಪ್ರಾಂತ್ಯಗಳಲ್ಲಿ ಪ್ರಜಾ ಪ್ರಭುತ್ವದ ಸ್ಥಾಪನೆಯಾಗುವದು; ಕಾಂಗ್ರೆಸ್ ಮಂತ್ರಿಗಳು ಪುನ: ಬರುವರೆಂಬ ನಿರೀಕ್ಷೆಯಿಂದಲೇ ಈ ಹೊಸ ನೇಮಕ. ಹೊಸಬರ ಕೆಲಸವೆಂದರೆ ಕಾಂಗ್ರೆಸಿಗರ ಕೈಗೆ ಹೋಗಬಾರದಂತಹ ಪತ್ರಗಳನ್ನೂ, ರಿಕಾರ್ಡುಗಳನ್ನೂ ಹುಡುಕಿ ತೆಗೆದು ನಾಶ ಮಾಡುವದೊಂದೇ. ಸಿಮ್ಲಾ ಸಮ್ಮೇಲನ ಪರಾಭವಗೊಂಡಿತು; ಆದ್ದರಿಂದ ಈ ಕ್ಲಾರ್ಕರ ಕೆಲಸದ ಅವಧಿ ಬೆಳೆಯಬಹುದು ಯಾಕೆಂದರೆ ನಾಶ ಮಾಡಿದ ಆ ರಿಕಾರ್ಡುಗಳನ್ನೆಲ್ಲಾ ಪುನ: ತಯಾರಿಸುವದು ಬೇಡವೆ? ವೈಸರಾಯೀ ಕಾರ್ಯಕಾರೀ ಸಮಿತಿಯ ಏಳು ಮಂದಿ ಹಿಂದೀ ಸದಸ್ಯರೂ ಜೂನ್ ತಾ 14ರಲ್ಲೇ ರಾಜೀನಾಮೆ ಕೊಟ್ಟು ಈ ರಿಕಾರ್ಡುಗಳಂತೆಯೇ ಆದರೆಂಬ ವಾರ್ತೆಯಿತ್ತು. ಆದರದು ನಿರಾಧಾರವಾದುದೆಂದು ಪ್ರಕಟವಾಗಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 17—7—1945ರಿಂದ

ಎಂ. ಪಿ. ಪ್ರೊಡಕ್ಷನ್‌ನವರ

ರಬಿನ್ ಮಜುಮ್ದಾರ್, ಕಾನನ್ ದೇವಿ, ಚೌಧುರಿ,

ನಟಿಸಿರುವ

"ಹೊಸ್ಪಿಟಲ್"

ಬರುವ ಚಿತ್ರ—

ರಣಜಿತನವರ

ಮೋತಿಲಾಲ್, ಮಾಧುರಿ, ರಾಮಶುಕ್ಲ—ನಟಿಸಿರುವ

"ಇಕ್‌ರಾರ್"

ಜಪಾನರು ಆಕ್ರಮಿತ ಸ್ಥಳಗಳನ್ನು ಪೂರ್ತಿ ಬಿಡುತ್ತಿದ್ದಾರೆ?

ರಶ್ಯಾ-ಚೀನಾ ಒಪ್ಪಂದವಾಗಲಿಲ್ಲ.

ಅಗ್ನಿ ವರ್ಷ.

ಅಮೇರಿಕದ ಶಾಂತ ಸಮುದ್ರ ನೌಕಾ ದಳದ ವಿಮಾನವಾಹಕ ಹಡಗಗಳು ಇದೇ ತಾ 14ರಿಂದ ದಿನ ಬಿಡದೆ ಸಾವಿರ ಸಂಖ್ಯೆಯಲ್ಲಿ ವಿಮಾನಗಳನ್ನು ಕಳುಹಿಸಿ ಜಾಪಾನಿನ ಮೇಲೆ ಅಗ್ನಿ ವರ್ಷವನ್ನೇ ಸುರಿಸುತ್ತಿವೆ. ಇವುಗಳನ್ನು ಗಣ್ಯ ಪ್ರತಿಭಟನೆಯಿದಿರಿಸಿದುದಿಲ್ಲ. ಹೀಗಾಗಿ ಜಾಪಾನ್ ಮೂಲ ಭೂಮಿಯ ಎಲ್ಲಾ ಪ್ರಮುಖ್ಯ ಕೇಂದ್ರಗಳೂ ಅಗ್ನಿ ಪ್ರಳಯಕ್ಕೀಡಾಗಿವೆ. ಸುಮಾತ್ರಾ, ಅಂಡಮಾನ್ ಮೊದಲಾದ ಜಾಪಾನಾಕ್ರಮಿತ ದ್ವೀಪಗಳ ಮೇಲೂ ಭೀಕರ ಬೋಂಬು ಧಾಳಿ ನಡೆದಿದೆ

ದಕ್ಷಿಣ ಆಶ್ಯವನ್ನು ಪೂರ್ತಿ ಬಿಡುವರೆ?

ಮಿತ್ರರನ್ನು ವಿಳಂಬಿಸುವದಕ್ಕಾಗಿ ತಮ್ಮ 'ಆತ್ಮ ಹತ್ಯಾ' ದಳಗಳನ್ನು ಮಾತ್ರ ಅಲ್ಲಲ್ಲಿ ಇಟ್ಟುಗೊಡಿಸಿ, ಸುಮಾತ್ರಾ ಜಾವಾ, ಬೋರ್ನಿಯೋ, ಸಿಂಗಾಪುರ, ಮಲಯ, ಮತ್ತು ಇಂಡೋ ಚೀನಾ ಮೊದಲಾದ ದಕ್ಷಿಣ ಆಸ್ಯಾ ವಲಯದ ತಮ್ಮೆಲ್ಲಾ ಸ್ಥಳಗಳನ್ನೂ ಖಾಲಿ ಪಡಿಸಿ ಜಾಪಾನರು ಹಿಂದೆಗೆಯುವ ಹಂಚಿಕೆ ಹೂಡಿದ್ದಾರೆಂದು ತಿಳಿದು ಬರುತ್ತದೆ. ಬರ್ಮದಲ್ಲೂ ಹಾಗೆಯೇ. ಒಂದು ಕಾಲದಲ್ಲಿ 2,00,000 ಜಾಪಾನೀ ಯೋಧರಿದ್ದು ಕಠಿಣ ಕಾಳಗ ನಡೆಯುತಿದ್ದ ಬರ್ಮದಲ್ಲಿ ಈಗ ಕೇವಲ 60 ಸಾವಿರ ಜಾಪ್ ಸೈನಿಕರುಳಿದಿದ್ದಾರೆಂದು ತಿಳಿದುಬರುತ್ತದೆ. ಈಗಲೂ ಜಾಪಾನರು ಅಲ್ಲಲ್ಲಿ ಬರ್ಮಾ ಯುದ್ಧ ನಡೆಸುತ್ತಿರುವದು ಸಿಕ್ಕಿಬಿದ್ದ ತನ್ನ ಸೇನಾ ತುಕಡಿಗಳನ್ನು ಬಿಡಿಸಿಕೊಂಡು ವ್ಯವಸ್ಥೆಯಿಂದ ಹಿಂದೆಗೆಯುವದಕ್ಕಾಗಿ ಮಾತ್ರ.

ಸಿಟ್ಟಾಂಗ್ ಸಮರ

ಆದರೆ ಬರ್ಮದ ಸಿಟ್ಟಾಂಗ್ ಹೊಳೆ ದಡದಲ್ಲಿ ಮಾತ್ರ ಒಂದೆರಡು ವಾರಗಳಿಂದ ಜಾಪಾನರ ಧಾಳಿ ಅತಿ ಪ್ರಬಲವಿದೆ. ರಂಗೂನ್-ಮಂಡಲೆ ಸುತ್ತು ವಲಯವನ್ನು ಭೇದಿಸಿಕೊಂಡು ಒಳನುಗ್ಗುವದಕ್ಕಾಗಿಯೇ ಜಾಪಾನರೀ ಧಾಳಿ ಕೈಕೊಂಡಿರುವರೆಂದು ಮಿತ್ರರೂಹಿಸಿದ್ದಾರೆ. ಇದು ವರೆಗೆ ಅಲ್ಲಿ ವೈರಿಯ ಪ್ರಗತಿಗೆ ಪ್ರತಿಬಂಧ ಬಿದ್ದಿಲ್ಲ. ಆ ವಲಯದಲ್ಲಿ ಸಿಕ್ಕಿಬಿದ್ದಿರುವ ತಮ್ಮ 10 ಸಾವಿರ ಯೋಧರನ್ನು ಕೂಡಿಕೊಳ್ಳ-

ಬೇಕೆಂದು ಜಪಾನರು ಮುಂದೊತ್ತುತ್ತಿದ್ದಾರೆ ಶಾಂತ ಸಮುದ್ರದಲ್ಲಿ ಒಕಿನಾವಾ ಗುಂಪಿನ ಮತ್ತೆರಡು ದ್ವೀಪಗಳನ್ನು ಅಮೇರಿಕಾನರು ಆಕ್ರಮಿಸಿಕೊಂಡಿದ್ದಾರಲ್ಲದೆ ಕೊರಿಯಾ ಕರಾವಳಿಯ ಮೇಲೆ ಬೋಂಬೊಗೆಯುತಿದ್ದಾರೆ.

ಜಾಪಾನಿನೊಳಗೆ ಬಂಡಾಯ ಚಿಹ್ನೆ

30 ಸಾವಿರ ಮೈಲು ಸಂಚರಿಸಿಬಂದಿದ್ದ ಅಮೇರಿಕನ್ ಕಾಂಗ್ರೆಸ್ ಮೆಂಬರರಿಬ್ಬರು ಜಾಪಾನಿನೊಳಗಡೆ ದೊಡ್ಡ ಬಂಡಾಯವೇಳಲಿದೆ ಎಂದು ಭವಿಷ್ಯವಾಡಿದ್ದಾರೆ. "ಅದು ಸ್ಫೋಟಗೊಂಡಾಗ ಅದರಿದಿರು ಫ್ರೆಂಚ್ ಕ್ರಾಂತಿಯೆಂಬುದು ಒಂದು ಟೀಪಾರ್ಟಿಯಂತೆ ಕಾಣಬಹುದು"ಎಂದವರ ಹೇಳಿಕೆ. ಜಾಪಾನ್ ಯುದ್ಧನಾಯಕರೊಳಗೂ ಔದ್ಯೋಗಿಕಪ್ರಭುಗಳೊಳಗೂ ಘರ್ಷಣೆಯೆದ್ದಿದೆಯೆಂದೂ, ಅದಕ್ಕೆ ಸಂದರ್ಭ ದೊರೆತರೆ ಯುದ್ಧವು ಬೇಗನೇ ಮುಗಿಯಬಹುದೆಂದೂ ಅವರ ಅಭಿಪ್ರಾಯ.

ರಶ್ಯಾ-ಚೀನಾ ಮಾತುಕತೆ ಹಿಂದೆ ಬಿತ್ತು

ಮೋಸ್ಕೋವಿಗೆ ಹೋಗಿ ಸಂಧಾನ ಮಾತುಕತೆ ನಡೆಸುತಿದ್ದ ಚೀನದ ಪ್ರಧಾನಿ ಡಾ। ಸೂಂಗರು ಯಾವುದೊಂದು ಒಪ್ಪಂದವೂ ಆಗದೆ ಚುಂಕಿಂಗಿಗೆ ಮರಳಿದ್ದಾರೆ. ಪ್ರಥಮತಃ ಇಕ್ಕಡೆಗೂ ಸಮ್ಮತವಾಗುವ ಒಂದು ಒಪ್ಪಂದಕ್ಕೆ ಡಾ। ಸೂಂಗರು ಬಂದಿದ್ದರೆಂದೂ ಆದರೆ ಕೊನೆಗೆ ಚಿಯಾಂಗ್ ಸರಕಾರದ ಸೇನಾ ಕೇಂದ್ರದ ಕಠಿಣಧೋರಣೆಯಿಂದಾಗಿ ಅದು ಹಿಂದೆಬಿತ್ತೆಂದೂ ತಿಳಿದುಬರುತ್ತದೆ ಬರ್ಲಿನಿನ ತ್ರಿಮೂರ್ತಿ ಸಮ್ಮೇಲನಕ್ಕೆ ಹೋಗುವ ಮೊದಲೇ ಈ ಸಂಧಾನ ಕಾರ್ಯ ಮುಗಿಸಿಬಿಡಬೇಕೆಂದು ಸ್ಟಾಲಿನರು ಬಹಳ ಪ್ರಯತ್ನಿಸಿದ್ದರು. ಮಂಚೂರಿಯ, ಹೊರ ಮಂಗೋಲಿಯ, ಮತ್ತು ಕೊರಿಯಗಳ ಭಾವೀ ಅಧಿಕಾರದ ಕುರಿತು ಬಿನ್ನಾಭಿಪ್ರಾಯ ಬಂದಂತಿದೆ. ರಶ್ಯವು ಬಯಸುತ್ತಿರುವ ಮಂಚೂರಿಯವನ್ನೊಳಗೊಂಡ ಉತ್ತರ ಪ್ರಾಂತ್ಯಗಳನ್ನು ಜಾಪಾನರಿಂದ ಕಸಗೊಳ್ಳಲು ಚೀನವು ತಯಾರಾಗುತ್ತಿದೆಯೆಂದೂ ಅದು ಯುದ್ಧಾನಂತರದ ಚೀನದ್ದಾಗಿಯೇ ಉಳಿಯುವದೆಂದೂ ಈ ಸಂದರ್ಭದಲ್ಲೇ ಚುಂಕಿಂಗ್ ಮಂತ್ರಿಯೊಬ್ಬರಂದಿದ್ದಾರೆ. ಚೀನದೊಡನೆ ಒಪ್ಪಂದವಾಗದೆ ರಶ್ಯವು ಜಾಪಾನ್ ಯುದ್ಧಕ್ಕಿಳಿಯುವ ಸಂಭವವಿಲ್ಲ. ಆದರೆ ಡಾ। ಸೂಂಗರು ಚಿಯಾಂಗರನ್ನು ಒತ್ತಾಯಿಸಿ ಒಪ್ಪಿಗೆ ಪಡೆದು, ಸ್ಟಾಲಿನರು ಬರ್ಲಿನಿನಿಂದ ಹಿಂದಿರುಗುವಾಗ ಪುನಃ ಮೋಸ್ಕೋವಿಗೆ ಬರುವರೆಂಬ ನಿರೀಕ್ಷೆಯಿದೆ.

ತ್ರಿಮೂರ್ತಿ ಸಮ್ಮೇಲನ

ಟ್ರುಮೇನ್, ಚರ್ಚಿಲ್, ಸ್ಟಾಲಿನರ ಸಮ್ಮೇಲನವು ಬರ್ಲಿನಿಗೆ 16 ಮೈಲು ದೂರದ ಪೋಟ್ಸ್‌ಡಾಮ್‌ನಲ್ಲಿ ಆರಂಭವಾಗಿದೆ. ಇದು ಮೂರನೇ ತ್ರಿಮೂರ್ತಿ ಸಮ್ಮೇಲನ; ಜರ್ಮನಿಯ ಹೃದಯ ಪ್ರದೇಶದಲ್ಲಿ ಪ್ರಥಮತಃ ಸೇರಿದ ಮಿತ್ರಪ್ರಮುಖರ ಸಭೆ ಪರಿಷತ್ತಿನ ಸ್ಥಳದ ಸುತ್ತಲೂ ಅತಿ ಭದ್ರವಾದ ಕಾವಲಿದೆ ಸಮ್ಮೇಲನ ಸ್ಥಳ ಮತ್ತು ಹೊರಪ್ರಪಂಚದ ಸಂಬಂಧವು ರಶ್ಯನ್ ಕಾವಲು ಯೋಧರಿಂದ ಪೂರ್ತಿ ಕಡಿದು ಹೋಗಿದೆ ಆ ವಲಯದಲ್ಲೆಲ್ಲಾ 'ಕರ್ಫ್ಯೂ' ಆಜ್ಞೆ ಜ್ಯಾರಿಮಾಡಲಾಗಿದೆ ಟ್ರುಮೇನ್, ಚರ್ಚಿಲ್ಲರು ಅತ್ಯಂತ ಗುಟ್ಟಾಗಿ ಆಗಮಿಸಿದ್ದರಲ್ಲದೆ ಸ್ಟಾಲಿನರು ಅಲ್ಲಿಹೋಗಿ ಮುಟ್ಟಿದುದನ್ನು ಕಂಡವರೇ ಇಲ್ಲ. ಚರ್ಚಿಲ್ಲರೊಂದಿಗೆ ಅಟ್ಲಿಯವರೂ, ವಿದೇಶ ಮಂತ್ರಿ ಈಡೆನರೂ ಹೋಗಿದ್ದಾರೆ; ಆಗತ್ಯವುಳ್ಳ ಸಲಹೆಗಾರರು ಮತ್ತು ಸಿಬಂದಿಯನ್ನು ಕೂಡಿಕೊಂಡೇ ಮೂವರೂ ಬಂದಿದ್ದಾರೆ

ಆಲೋಚನೆಯೇನು?

ತ್ರಿಮೂರ್ತಿ ಸಮ್ಮೇಲನಕ್ಕೆ ಕಾಲ ಅಥವಾ ಕಾರ್ಯಕ್ರಮಗಳ ಮಿತಿಯನ್ನು ಹಾಕಿಕೊಂಡಿಲ್ಲ. ಎಲ್ಲಾ ಮುಖ್ಯ ವಿಷಯಗಳಲ್ಲೂ ಆಗತ್ಯವಿರುವಷ್ಟು ಕಾಲ ವಿಚಾರ ವಿನಿಮಯ ನಡೆಯಲಿದೆ. ಜರ್ಮನಿಯ ಭಾವೀ ಭದ್ರತೆ, ಯುರೋಪಿನಲ್ಲಿರುವ ಗಡಿ ಜಗಳಗಳ ತೀರ್ಮಾನ, ಭೂಮಧ್ಯ ಸಮುದ್ರದಲ್ಲಿ ರಶ್ಯಕ್ಕಿರಬೇಕಾದ ಸ್ಥಾನ, ಟರ್ಕಿ-ರಶ್ಯಾ ವಿವಾದ, ಸ್ಪೈನಿನ ಸ್ಥಾನ ನಿರ್ಣಯ-ಇತ್ಯಾದಿಗಳ ಕುರಿತು ನಿರ್ಧಾರಗಳಾಗಲಿವೆ. ತನ್ನನ್ನು ಕರೆಯದುದಕ್ಕಾಗಿ ಫ್ರಾನ್ಸು ನಿರಾಶೆ ಸೂಚಿಸಿದೆ.

ಸಿಮ್ಲಾದಲ್ಲಿ--

ತಾ 15ರಲ್ಲಿ ಸೇರಿದ ಕಾಂಗ್ರೆಸ್ ಸಮಿತಿಯು ಕ್ರಿಪ್ಸ್ ರಿ ನಿರ್ಧಾರವನ್ನು ಟೀಕಿಸಿ ಎಲ್ಲಾ ವಸಾಹತುಗಳಿಗೂ ಸ್ವಾತಂತ್ರ್ಯ ವೀಯತಕ್ಕದ್ದೆಂದು ಠರಾಯಿಸಿದೆ. ಸಾರ್ವತ್ರಿಕ ಚುನಾವಣೆ ನಡಿಸಬೇಕೆಂಬ ಲೀಗ್ ಸಮಿತಿಯ ನಿರ್ಧಾರವನ್ನು ಕಾಂಗ್ರೆಸ್ ಸಮಿತಿಯೂ ಅನುಮೋದಿಸಿದೆ. ವೇವೆಲ್-ಜಿನ್ನಾ ಪತ್ರ ವ್ಯವಹಾರಗಳನ್ನು ಜಿನ್ನರು ಪ್ರಕಟಣೆಗೆ ಕೊಟ್ಟಿದ್ದಾರೆ. ಕಾಂಗ್ರೆಸ್ ಸಮಿತಿಗಳ ಮೇಲಿನ ಬಹಿಷ್ಕಾರವು ಸದ್ಯದಲ್ಲೇ ರದ್ದಾಗುವದೆಂದೂ, ರಾಜಕೀಯ ಕೈದಿಗಳೆಲ್ಲರ ಬಿಡುಗಡೆಯಾಗುವದೆಂದೂ ಧುರೀಣರ ನಿರೀಕ್ಷೆಯಿದೆ. ಈಗ ಎಲ್ಲರೂ ಸಿಮ್ಲಾದಿಂದ ಹೋಟಿದ್ದಾರೆ.

ಉಡುಪಿ.

ಅಜ್ಞಾತ ರಿಕ್ರೂಟಿಂಗ್?—ಇಲ್ಲಿ ಇತ್ತೀಚಿಗೆ ಮೊಕ್ಕಾಂ ಮಾಡಿದ ರಿಕ್ರೂಟಿಂಗ್ ಏಜಂಟರೊಬ್ಬರು ಅಪ್ರಾಯಸ್ಥ ಹುಡುಗರನ್ನು ಪುಸಲಾಯಿಸಿಯೂ ಕೆಲವು ಕಡೆ ನಿರ್ಬಂಧಿಸಿಯೂ ಹಿರಿಯರಿಗೆ ತಿಳಿಯದಂತೆ ಕೂಡ ರಿಕ್ರೂಟ್ ಮಾಡಿ ಕಳುಹಿಸುತ್ತಿರುವರೆಂದು ದೂರಲಾಗಿದೆ. ಈ ರೀತಿ ಮಾಡುವುದು ರಿಕ್ರೂಟಿಂಗ್ ತತ್ವಗಳಿಗೆ ಸರಿಯಾದುದೋ ಎಂಬುದು ತಿಳಿಯಬೇಕಾಗಿದೆ.

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs 8/4, 82/8, 412/8 & 825/ and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S India)
T. A. PAI, B. Com. (Bom) A. I. I. B.
General Manager.

The Canara Banking Corporation Ltd.,
ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್ ಉಡುಪಿ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದೆ ಇರುವದರಿಂದ, ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು, ಅವರು ಮೃತಪಟ್ಟಿರುತ್ತಾರೆಂತ ವಾಪಾಸು ಬಂದ ಪ್ರಯುಕ್ತ, ಸದ್ರಿ ಮೃತಪಟ್ಟವರ ವಾರೀಸುದಾರರು ತಮ್ಮ ಹಕ್ಕುಗಳನ್ನು ಬೇಂಕಿಗೆ ಶ್ರುತಪಡಿಸಿ ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ಐವೇಜುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ಬರುವ ತಾರೀಕು 4-8-1945ನೇ ಶನಿವಾರದೊಳಗೆ ಬೇಂಕಿಗೆ ಪಾವತಿ ಮಾಡಿ ಸದ್ರಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದರೀ ನಗಗಳನ್ನು ಇದೇ ತಾರೀಕು 11-8-1945ನೇ ಶನಿವಾರ ದಿವಸ ಅಪರಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವದು. ಅಗತ್ಯ ಬಿದ್ದಲ್ಲಿ ಏಲಮಿನ ತಾರೀಕನ್ನು ಮುಂದರಿಸುವ ಹಕ್ಕು ಬೇಂಕಿಗೆ ಇದೆ. ತಿಳಿದಿರುವದು.

ಜಂಜಾ ನಂಬ್ರ	ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
1	143/42	J. S. A Budan Sahib	Rs. 30—0—0
2	31 44	J. S. A Budan Saheb S/o Sheik Moidin Saheb Teacher, Board Hindustani School, Tonse West. Kemmannu Post.	Rs. 70 0—0

ಬೇಂಕಿನ ಆಫೀಸು ಉಡುಪಿ, ತಾ 18 7 45 } (ಸ) K Nagesha Kamath AGENT

ಮಗ್ಗಿ ಪುಸ್ತಕಗಳು

ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ತ್ರಿಗಳು, ದಾಖಲು ಮತ್ತು ಮಂತ್ಲಿ ರಿಟರ್ನ್ ಫಾರ್ಮುಗಳು, ರಿಕಾರ್ಡು ಶೀಟುಗಳು ದೊರೆಯುತ್ತವೆ

ಮಗ್ಗಿ ಪುಸ್ತಕ 1ಕ್ಕೆ 0—1—0
" " 50ಕ್ಕೆ 2—9—0
" " 100ಕ್ಕೆ 5—0—0

Navabharat Book Depot, UDIPI.

ಸೇನಾರಂಗದಿಂದ—

ಕೂಲಿಗಳ ತುಟ್ಟಿಭತ್ತ್ಯದ ದುರುಪಯೋಗ

ಲಾಹೋರ್ ದಂಡಿನ ಮಿಲಿಟರಿ ಎಂಜಿನಿಯರಿಂಗ್ ಶಾಖೆಯ ಎಸ್. ಡಿ. ಒ. ಬಿ. ಡಿ. ಆನಂದ್ ಮತ್ತು ಓವರ್ಸಿಯರ್ ದಿವಾನ್‌ಸಿಂಗ್-ಇವರ ಮೇಲೆ ಕೂಲಿಗಳಿಗೆ ಮಂಜೂರಾದ ತುಟ್ಟಿ ಭತ್ತ್ಯದ ದುರುಪಯೋಗದ ಅಪಾದನೆಯ ಮೇಲೆ ಲಾಹೋರಿನ ಪ್ರಥಮ ನ್ಯಾಯಾಧೀಶರಾದ ಶ್ರೀ ಕಣ್ವರ್ ಸಿಂಗರು ಶಿಕ್ಷೆಗೆ ಗುರಿಮಾಡಿದರು. ಅಪಾದಿತ ಸಬ್ ಡಿವಿಜನ್ ಆಫೀಸರರಿಗೆ ೬ ತಿಂಗಳ ಕಠಿಣ ಸಜಾ ಮತ್ತು ೧೦೦ ರೂ. ದಂಡ ಅಥವಾ ದಂಡ ತೆರಲು ತಪ್ಪಿದರೆ ಇನ್ನೂ ೧ ತಿಂಗಳು ಕಠಿಣ ಸಜಾ ವಿಧಿಸಲಾಯಿತು. ಓವರ್ಸಿಯರಿಗೆ ೪ ತಿಂಗಳ ಕಠಿಣ ಸಜಾ ಮತ್ತು ೫೦ ರೂ. ದಂಡ, ಅಥವಾ ದಂಡತೆರಲು ತಪ್ಪಿದಲ್ಲಿ ಇನ್ನೊಂದು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಕೂಲಿಗಳಿಗೆ ಪಾವತಿಮಾಡದೆ ಎಸ್. ಡಿ. ಒ. ಮತ್ತು ಓವರ್ಸಿಯರು ಒಂದಾಗಿ ತುಟ್ಟಿಭತ್ಯವನ್ನು ದುರುಪಯೋಗಪಡಿಸಿದರೆಂಬುದೇ ಅಪಾದನೆ.

ಸರ್ಕಾರಿ ಕ್ಯಾನ್‌ವಾಸ್ ಬಟ್ಟೆಯ ಕಳ್ಳಮಾರಿಗೆಗೆ ಶಿಕ್ಷೆ.

ಅಮೃತಸರದ ಸರಕಾರಿ ಕಂಟ್ರಾಕ್ಟರ ಸಹಭಾಗಿ ಮಸೂದ್ ಅಹಮದ್ ಅತ್ತಾರನ್ನು ಲಾಹೋರಿನ ಕೋರ್ಟಿನಲ್ಲಿ ಐ. ಪಿ. ಸಿ. ೪೦೬ನೇ ಸೆಕ್ಷನ್ ಪ್ರಕಾರ ಯುದ್ಧ ಸಾಮಗ್ರಿ ದುರುಪಯೋಗದ ಅಪಾದನೆಯ ಮೇಲೆ ೧ ವರ್ಷ ಕಠಿಣ ಸಜಾ, ಮತ್ತು ೧೦೦೦ರೂ. ದಂಡ, ಅಥವಾ ದಂಡತೆರಲು ತಪ್ಪಿದಲ್ಲಿ ಇನ್ನೂ ೩ ತಿಂಗಳ ಕಠಿಣ ಸಜಾಕ್ಕೆ ಗುರಿಮಾಡಿದೆ. ಮೆನೇಜರ್ ಹಾದಿ ಹಸನ್‌ಗೆ ಅಪಾದಿತರೊಂದಿಗೆ ಸಹಕರಿಸಿದ್ದಕ್ಕಾಗಿ ಸೆಕ್ಷನ್ ೪೦೯/ ಐ. ಪಿ. ಸಿ. ಪ್ರಕಾರ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಸರ್ಕಾರದವರು ಸೈನ್ಯದ ಚೀಲಗಳಿಗಾಗಿ ಒದಗಿಸಿದ ಕ್ಯಾನ್‌ವಾಸ್ ಬಟ್ಟೆಯನ್ನು ಮಿಗಿಸಿಕೊಂಡು ಮಾಸೂದ್ ಅಹಮದ್ ಅತ್ತಾರ್ ಸರಕನ್ನು ಕಳ್ಳಮಾರಾಟಕ್ಕಾಗಿ ಬೊಂಬಾಯಿಗೆ ಕಳಿಸಿಕೊಟ್ಟರೆಂಬುದೇ ಅಪಾದನೆ.

ಲಂಚಕೋರತನಕ್ಕೆ ಶಿಕ್ಷೆ.

ಬೊಂಬಾಯಿಯ ಆರ್ಡ್‌ನೆನ್ಸ್ ಡಿಪೊ ಕ್ಯಾಂಪ್ ಗ್ರೂಪಿನಲ್ಲಿ ಎಕ್ಸಾಮಿನರಾದ ನಂದಲಾಲ್ ಭಗವಾನ್‌ದಾಸ್ ಬಕ್ಷಿಯವರಿಗೆ ಲಂಚತೆಗೆದುಕೊಂಡರೆಂಬ ಅಪಾದನೆಯ ಮೇಲೆ ಐ. ಪಿ. ಸಿ. ೧೬೧ನೇ ಸೆಕ್ಷನ್ ಪ್ರಕಾರ ೧೮ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂ. ದಂಡ ವಿಧಿಸಲಾಗಿದೆ. ದಂಡ ತೆರಲು ತಪ್ಪಿದಲ್ಲಿ ಇನ್ನೂ ೬ ತಿಂಗಳು ಕಠಿಣ ಸಜಾ ಅನುಭವಿಸತಕ್ಕದ್ದು.

ದೇಶಾ ಬಟ್ಟೆಯನ್ನು ಕೊಂಡು, ಅದನ್ನು ಸರಿಯಾಗಿದೆಯೆಂದು ಒಪ್ಪಲು ತಮಗೆ ೫೫೦ ರೂ. ಗಳನ್ನೂ, ಸ್ವಲ್ಪ ಬಟ್ಟೆಯನ್ನೂ ಲಂಚವಾಗಿ ಕೊಡಬೇಕೆಂದು ಸರ್ಕಾರಿ ಕಂಟ್ರಾಕ್ಟರಾದ ಬರೊಡ್ವಾಲಾರವರ ಶಿಬ್ಬಂದಿಯೊಬ್ಬರನ್ನು ಅಪಾದಿತರು ಕೇಳಿದರು. ಬರೊಡ್ವಾಲಾರು ಅಪಾದಿತರ ಮನೆಗೆ ಗುರುತುಮಾಡಿದ ನೋಟುಗಳನ್ನೂ, ಒಟ್ಟೆಯನ್ನೂ ಕಳಿಸಿಕೊಟ್ಟು, ಇತ್ತ ಪೋಲೀಸಿಗೆ ವರ್ತಮಾನಕೊಟ್ಟರು. ಪೋಲಿಸಿನವರು ಅಪಾದಿತರ ಮನೆಗೆ ಹೋಗಿ, ಅಲ್ಲಿ ಆಪಾದಿತರ ತಲೆದಿಂಬಿನ ಕೆಳಗೆ ಗುರ್ತುಮಾಡಿದ ನೋಟುಗಳನ್ನೂ ಅಡಿಗೆ ಮನೆಯಲ್ಲಿದ್ದ ಬಟ್ಟೆಯನ್ನೂ ಪತ್ತೆಮಾಡಿದರು. ಕಂಟ್ರಾಕ್ಟರ ನೌಕರನು ಹಣವನ್ನು ಒಲವಂತದಿಂದ ತಮಗೆ ಕೊಟ್ಟನೆಂದೂ, ಬಣ್ಣ ಹಾಕಿಸುವುದಕ್ಕಾಗಿ ಬಟ್ಟೆಯನ್ನು ತಂದುಕೊಟ್ಟದ್ದನೆಂದೂ ಆಪಾದಿತರು ಹೇಳಿಕೆಯಿತ್ತರು.

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧ ಖಾತೆ)

ಉಡುಪಿ

ಕುಂಜಿಬೆಟ್ಟು ಸ್ಮಶಾನದ ಕುರಿತು ಇನ್ನೂ ಅಲಕ್ಷ್ಯವೇ?–ಕುಂಜಿಬೆಟ್ಟು ಸ್ಮಶಾನವು ಐದು ವರುಷಗಳ ಹಿಂದಿನ ಸ್ಥಿತಿಯಲ್ಲಿಯೇ ಇದೆ ಸಾಲ್ಕು ಆವರಣ ಗೋಡೆಗಳೇನೋ ಇವೆ ಶವ ದಹನ ಮಾಡಲು ಮತ್ತು ಅದಕ್ಕೆ ಬೇಕಾಗುವ ಕಟ್ಟಿಗೆ ಸಂಗ್ರಹದ ಏರ್ಪಾಡುಗಳೇನೂ ಇಲ್ಲ. ಈ ಬಾರ್ಡಿನ ಉಪಾರಿ ಜನರು ಸಾಕಷ್ಟು ಹಣವನ್ನು ಸಂಗ್ರಹಿಸಿರುವರು ಈಗಾಗಲೇ ಏಳುನೂರಕ್ಕೆ ಮಿಕ್ಕಿದ ಹಣ ಜಮೆಯಾಗಿರುವುದು. ಬೀಡಿನ ಗುಡ್ಡೆಯ ಸ್ಥಾನದಂತೆ ಕುಂಜಿಬೆಟ್ಟು ಸ್ಮಶಾನವನ್ನು ರೂಪಗೊಳಿಸಿ ತೆರಿಗೆದಾರ ಜನರಿಗೆ ಅತ್ಯಗತ್ಯವಿರುವ ಈ ಸೌಕರ್ಯವನ್ನು ಒದಗಿಸಿಕೊಡುವರೆ ನಗರಸಭೆಯು ಇನ್ನೂ ಅಲಕ್ಷ್ಯವನ್ನು ತೋರಿಸುವುದರ ಅಂತರಂಗವೇನೋ ತಿಳಿಯದಾಗಿದೆ. ದಾನ ಕೊಡುತ್ತೇನೆನ್ನುವಾಗ ಅದನ್ನು ಪರಿಗ್ರಹಿಸಲು ನಗರಾಧಿಕಾರಿಗಳು ಕಾಲವಿಳಂಬಮಾಡುವುದೇಕೆಂದು ಶ್ರೀ ಯು ಎಸ್ ಭಟ್ಟರು ಪ್ರಶ್ನಿಸುತ್ತಾರೆ.

ಸರ್ವಸಮ ಬೆಳಕಿನ ಅವಶ್ಯಕತೆ–ಕೃಷ್ಣಪಕ್ಷ, ಶುಕ್ಲಪಕ್ಷ ಎಂಬ ಭೇದವಿಲ್ಲದೆ ನಗರದ ಪೇಟೆಗಳಲ್ಲಿ ವಿದ್ಯುದ್ದೀಪಗಳ ಸೌಕರ್ಯ ಸಾಕಷ್ಟು ಇದೆ. ಆದರೆ ಚಿಮಿಣಿ ದೀಪಗಳಿರುವಲ್ಲಿ ನಿಯಮಿತದಿನಗಳಲ್ಲಿ ಮತ್ತು ನಿಯಮಿತ ವೇಳೆಯಲ್ಲಿ ಮಾತ್ರ! ಪೇಟೆಯ ತೆರಿಗೆದಾರನೂ ಹಳ್ಳಿಯ ತೆರಿಗೆದಾರನೂ ಮುನಿಸಿಪಾಲಿಟಿಗೆ ಕೊಡುವ ತೆರಿಗೆ ಒಂದೇಯಾದುದರಿಂದ ಹಳ್ಳಿಯವರಿಗೂ ಪೇಟೆಯವರಿಗೂ ಸರ್ವಸಮ ಬೆಳಕಿನ ಅವಶ್ಯಕತೆ ಸಹಜವಷ್ಟೆ?

ಕಡಿತ ಹೋಗಬೇಕು– ಮಂಗಳೂರು ನಗರ ಕ್ಷೇತ್ರದಲ್ಲಿ ಚಿಮಿಣಿ ಎಣ್ಣೆ ಕಡಿತ ಹೋದಂತೆ ಉಡುಪಿಯಲ್ಲೂ ಕಡಿತ ಹೋಗಬೇಕಾದುದು ಅತ್ಯಾವಶ್ಯಕವಲ್ಲವೆ?

'ಕಲಾವೃಂದ'ದ ಪ್ರಥಮ ವಾರ್ಷಿಕೋತ್ಸವ–ವು ತಾ ೧೪-೧೫ ಈ ಎರಡು ದಿನಗಳಲ್ಲಿ ಕನ್ನಡನಾಡ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರು ಮತ್ತು ಶ್ರೀ. ಕರೀಲು ಗಣಪತಿಶರ್ಮರು ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ತಾ. ೧೪.೭.೪೫ರಲ್ಲಿ ಶ್ರೀ. ಕರೀಲು ಗಣಪತಿ ಶರ್ಮರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳವರದಿವಾಚನಾನಂತರ ಶ್ರೀ.ಪಾಮೂರು ವಾಸುದೇವ ಉಪಾಧ್ಯಾಯರು ಮತ್ತು ಶ್ರೀ ಬಿ ಶ್ರೀನಿವಾಸಭಟ್ಟ ಮೊದಲಾದ ಸಭಿಕರ ಭಾಷಣವಾದ ಬಳಿಕ ಅಧ್ಯಕ್ಷರುಗಳ ಮತ್ತು ಸಾಹಿತ್ಯ'ದ ಕುರಿತು ವಿಚಾರಪೂರ್ಣ ಭಾಷಣ ಮಾಡಿದರು. ಬಳಿಕ ಎಂ. ರಾಜಗೋಪಾಲಾಚಾರ್ಯರ ಸಂಗೀತದೊಡನೆ ಕಾರ್ಯಕ್ರಮವು ಕೊನೆಗೊಂಡಿತು. ರಾತ್ರಿ ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು ಮೊದಲಾದವರಿಂದ 'ಭೀಷ್ಮಾರ್ಜುನ ಕಾಳಗ' ಎಂಬ ಯಕ್ಷಗಾನವು ಜರಗಿತು.

ತಾ ೧೫.೭.೪೫ರಲ್ಲಿ ಶ್ರೀ. ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಶ್ರೀ. ಕೆ ಶಂಕರನಾರಾಯಣ ಉಪಾಧ್ಯಾಯರು ವೃಂದದ ಶ್ರೇಯಃಪ್ರಾರ್ಥನೆಯನ್ನು ಮಾಡಿದ ಬಳಿಕ, ಪಂಡಿತ ಶ್ರೀ. ವೆಂಕಟರಾಮಾಚಾರ್ಯರು ಮತ್ತು ಎಂ ಸುಬ್ರಾಯ ಆಚಾರ್ಯರು ಮೊದಲಾದವರು ವೃಂದವು ಜರಗಿಸಿದ ಕಾರ್ಯಕಲಾಪ ಪ್ರಶಂಸಾಪೂರ್ವಕ ಭಾವೀ ಶ್ರೇಯಸ್ಸನ್ನು ಕೋರಿದರು. ನಂತರ ಅಧ್ಯಕ್ಷರುಗಳೆ, ಜೀವನ' ಎಂಬ ವಿಷಯವನ್ನೆತ್ತಿ ಉದಾತ್ತ ಹಾಗೂ ವಿನೋದಪರ ಭಾಷಣ ಮಾಡಿದರು. ಬಳಿಕ ಕಾರ್ಯದರ್ಶಿಗಳು ಧನ್ಯವಾದವನ್ನಿತ್ತರು ಶ್ರೀ.ಕೆ.ಎಸ್.ಪದ್ಮನಾಭಾಚಾರ್ಯರ ವಿನೋದಗಳೊಡನೆ ಕಾರ್ಯಕ್ರಮವು ಕೊನೆಗೊಂಡಿತು. ಎರಡೂ ದಿನ ಶ್ರೀ. ಯು. ಲಕ್ಷ್ಮೀನಾರಾಯಣಾಚಾರ್ಯರು ಬೇಂದ್ರೆಯವರ "ಅನ್ನಾವತಾರ", "ಭಾವಗೀತೆ" ಮೊದಲಾದ ಕಾವ್ಯ ವಾಚನ ಮಾಡಿದುದಲ್ಲದೆ ಪ್ರಥಮ ದಿನ ಶ್ರೀ. ಕೋಟ ಶಿವರಾಮ ಕಾರಂತರು ನಾಟಕ ವಾಚನವನ್ನು ಸರಾಗವಾಗಿ ಜನಮನೋರಂಜನೆಯಾಗುವಂತೆ ಮಾಡಿದರು.

"ಆಯುರ್ವೇದ ಪ್ರಥಮ ಸಹಾಯ"ಕ್ಕೆ ಬಹುಮಾನ

ಶುದ್ಧಾಯುರ್ವೇದ ಚಿಕಿತ್ಸಾ ಕ್ರಮದಿಂದ ಕನ್ನಡದಲ್ಲಿ 'ಪ್ರಥಮ ಸಹಾಯ' ಪುಸ್ತಕವನ್ನು ಬರೆದವರಿಗೆ ತಕ್ಕ ಬಹುಮಾನವನ್ನು ಕೊಡಲಾಗುವುದು. ಪುಸ್ತಕದ ವಿಮರ್ಶೆಗಾಗಿ ವೈದ್ಯರ ಸಮಿತಿಯನ್ನು ರಚಿಸಲಾಗಿದೆ. ಪುಸ್ತಕವನ್ನು ೩೦ ೯ ೪೫ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡಬೇಕು. ಉತ್ತಮವೆಂದು ತೀರ್ಮಾನವಾದ ಪುಸ್ತಕದ ಲೇಖಕರಿಗೆ ಬಹುಮಾನ ಕೊಡಲಾಗುವುದು.

ವಿಳಾಸ.- **ಪಂಡಿತ ಕೆ. ವಿ ಪುರಾಣಿಕ,**
ಕಾರ್ಯದರ್ಶಿ,
ನಿಖಿಲ ಕರ್ನಾಟಕ ಆಯುರ್ವೇದ ಮಂಡಳ,
ಮೈಸೂರು

The Vijaya Stores, Ltd.

NOTICE

Mr. A S. Vittal Shetty of Coondapur is not in our service Whosoever deals with him will do so at his own risk and responsibility

For The Vijaya Stores, Ltd.,
Mangalore Jarappa,
Chairman

14-7-45.

ನೋಟೀಸು

ಶ್ರೀ. ಎ ಎಸ್. ವಿಠ್ಠಲ್ ಶೆಟ್ಟಿ, ಕುಂದಾಪುರ ಇವರು ನಮ್ಮ ಕಂಪೆನಿಯ ಕೆಲಸದಲ್ಲಿಲ್ಲ. ಅವರ ವಶ ಕಂಪೆನಿಯ ಯಾವ ಹಣವನ್ನಾದರೂ ಯಾರೂ ಕೊಡಬಾರದು ಕೊಟ್ಟರೆ ನಾವು ಜವಾಬ್ದಾರರಲ್ಲ.

ಮಂಗಳೂರು ಜಾರಪ್ಪ,
ಚೆಯರ್‌ಮೆನ್,
ವಿಜಯಾ ಸ್ಟೋರ್ಸ್, ಲಿಮಿಟೆಡ್.

14 7-45

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ 'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳವ
ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ-ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ

ವಾರ ಭವಿಷ್ಯವೂ
ಬಿಡದೆ ಪ್ರಕಟವಾಗುತ್ತಿದೆ

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ	4-8-0.
ಬಿಡಿ ಸಂಚಿಕೆಗೆ	0-1-6

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

NAVAYUGA
The Leading Kannada weekly
Published every Thursday
The best medium for advertisement of every kind
For advt rates.-
The advt Manager
Navayuga Udipi.

ದಕ್ಷಿಣ ಕನ್ನಡ.

೧೯೪೫—೪೬ನೆ ಇಸವಿಯ ಹೊಸ ಬೆಳೆ ಒಪ್ಪಿಸುವ ಕುರಿತು ಮದ್ರಾಸು ಸರಕಾರದ ಪ್ರಕಟಣೆ

ಡಿಫೆನ್ಸ್ ಒಫ್ ಇಂಡಿಯಾ ರೂಲಿನ ...ನೇ ಉಪನಿಯಮನುಸರಿಸಿ ಮದ್ರಾಸು ಗವರ್ನರರು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿರುವರು ೧. ದ. ಕ. (ಇತರ ೭ ಜಿಲ್ಲೆಗಳಲ್ಲಿಯೂ) ಜಿಲ್ಲೆಯ ಭೂಮಾಲಿಕ ಯಾ ಬೆಳೆ ಬೆಳೆಸುವ ಯಾವನೊಬ್ಬನು ೧೯೪೫ನೇ ಫಸ್ಲಿಯಲ್ಲಿ ಬೆಳೆಸುವ ಭತ್ತದಲ್ಲಿ ತನಗೆ ಯಾವ ರೀತಿಯಿಂದಾದರೂ ದೊರಕುವ ಭತ್ತದ ಅಧಿಕಾಂಶವನ್ನು ಜಿಲ್ಲಾ ಕಲೆಕ್ಟರರಿಗೆ ಯಾ ಅವರಿಂದ ನಿಯಮಿತ ಜನ ಯಾ ಸಂಸ್ಥೆಗಳಿಗೆ ಮಾತ್ರ ಒಪ್ಪಿಸಬೇಕು ಅಧಿಕಾಂಶದ ರೀತಿಯು ನಿರ್ಣಯಿಸಲ್ಪಡುವಾಗ ಇವುಗಳನ್ನು ಗಮನಿಸಲಾಗುವುದು—(a) ಆತನ ಮತ್ತು ಆತನ ಮನೆವಾರ್ತೆಗೆ ಬೇಕಾಗುವ ಸಂಗ್ರಹ (b) ಗೇಣಿ, ಬಡ್ಡಿ ವ ಸಾಲ ಪಾವತಿ ಭತ್ತದ ರೂಪದಲ್ಲಿ, (c) ಬೆಳೆಯ ಖರ್ಚಿಗೆ ಒಕ್ಕಲಿಗ ಕೊಡುವ ಮುಂಗಡ ಭತ್ತ. (d) ಬೀಜ ಮತ್ತು ಕೂಲಿಗಳಿಗೆ ಬೇಕಾಗುವ ಭತ್ತ, (e) ಇತರ ಹಳ್ಳಿ ಕೆಲಸಗಾರರಿಗೆ ಸಲತಕ್ಕ ಮಾಮೂಲು. ೨. ಮೇಲ್ಕಾಣುವ ಅಧಿಕಾಂಶ ಭತ್ತವನ್ನು ಕಲೆಕ್ಟರರಿಂದ ನಿಯಮಿತ ಹಳ್ಳಿಗೆ ಅತೀ ಸಮೀಪದ ಡಿಪ್ಪೋಗಳಲ್ಲಿ ನಿಶ್ಚಿತ ತಾರೀಕು ಮತ್ತು ಬೆಲೆಗಳಲ್ಲಿ ಒಪ್ಪಿಸಬೇಕು ೩. ಯಾವನೊಬ್ಬನೂ ಮೇಲಿನ ೧ನೇ ಪರಿಚ್ಛೇದದ ೩ಯಿಂದ ೬ ವರೆಗಿನ ಉದ್ದೇಶಗಳಿಂದಾಗಿ ಮಿಕ್ಕುಳಿಸ ಯಾವುದೊಂದಂಶವನ್ನೂ ಕಲೆಕ್ಟರರಿಗೆ ಯಾ ಅವರಿಂದ ನೇಮಿಸಲ್ಪಟ್ಟವರಿಗಲ್ಲದೆ ಇತರರಿಗೆ ಮಾರಕೂಡದು ೪ ಬೆಳೆ ಕಟಾವಿನ ೧೪ ದಿನಗಳೊಳಗೆ ಪ್ರತಿಯೊಬ್ಬನೂ ಆ ಸಮಯದಲ್ಲಿ ತನ್ನಲ್ಲಿ ಯಾ ತನ್ನ ಸ್ವಾಧೀನತೆಯಲ್ಲಿದ್ದ ಭತ್ತ ಮತ್ತು ಅಕ್ಕಿಯ ಸಂಗ್ರಹವನ್ನು ಸಮ್ಮಂಧಪಟ್ಟ ತಹಸಿಲ್ದಾರರಿಗೆ ತಿಳಿಸಬೇಕಾಗಿಪ್ಪು, ಅನಂತರ ಅವರ ಬರಹ ಮೂಲಕ ಅನುಮತಿಯಿಲ್ಲದೆ ಅದನ್ನು ವಠಾಚಾರ ಯಾ ವಿಕ್ರಯ ಮಾಡಬಾರದು ೫ ಮೇಲಿನ ನಿಯಮವನ್ನುಲ್ಲಂಘಿಸಿ ನಡೆದಲ್ಲಿ ಮುಂದಾಗಬಹುದಾದ ಇತರ ಯಾವ ಶಿಕ್ಷೆಗಳಿಗೂ ಬಾಧೆಯಿಲ್ಲದೆ [illegible] ತಕ್ಷೀರನ್ನು ತೀರ್ಮಾನಿಸುವ ಕೋರ್ಟಿನವರು ಸಂಮ್ಮಂಧಪಟ್ಟ ಇಡೀ ಸಂಗ್ರಹ ಯಾ ಕೋರ್ಟಿಗೆ ನ್ಯಾಯತೋರಿದ ಅದರ ಯಾವದೊಂದು ಅಂಶವನ್ನು ಸರಕಾರಕ್ಕೆ ಜಮಾಗೊಳಿಸುವಂತೆ ತೀರ್ಮಾನಕೊಡಬಹುದು ಸಂ ೨ನೇ ಪ್ರಕಟಿತ ವಾರಗ ಮೇಲಿನ ಎಲ್ಲಾ ನಿಯಮಗಳನ್ನೂ ರಾಗಿ ಬೆಳೆಗೆ ಅನ್ವಯಿಸಲಾಗಿದೆ

ಪುತ್ತೂರು-ಬೋರ್ಡು ಹ್ಯಾಸ್ಕೂಲಿನ ಹೊಸ ಕಟ್ಟಡದ ಬಗ್ಗೆ ೧೯೪೪ ೪೫ರ ವರೆಗೆ ದಾನ ನೀಡಿದ ರೂ ೨೪೫೭೦ ೭ ೦ ಹೊರತು ಅಂದಿನಿಂದ ತಾ. ೩೦ ೬ ೪೫ರ ವರೆಗೆ ದಾನವಾದ ರೂ. ೧೯೩೪ ಕೂಡಾ ಜುಮಲಾ ರೂ. ೨೬೫೦೪ ೭ ೦ ದಾನ ನೀಡಿರುತ್ತದೆಂದು ತಿಳಿಸಲು ಸಂತೋಷಪಡುತ್ತೇನೆ ಆ ಪೈಕಿ ರೂ. ೧೦೦ಕ್ಕೆ ಕಡಿಮೆಯಾಗದಷ್ಟು ದಾನ ನೀಡಿದವರ ಹೆಸರುಗಳು—ಶ್ರೀಗಳಾದ ಕೆ. ಗೋಪಾಲ ಬಾಳಿಗ, ಮರ್ಚಂಟ್, ಮಂಗಳೂರು ರೂ. ೨೫೦, ಬಿ ಡಿ. ಶಿರೂರ್, ಮುಂಬಯಿ ರೂ ೧೫೦ ಸಿಸ್ಟ್ಲೆ ಪಾಂಡೇಲ್ ಪದ್ಮನಾಭಯ್ಯ, ರೂ.೧೧೧, ಸಿಸ್ಟ್ಲೆ ಕೋಮಟಿ ಸಿತ್ತು ವೆಂಕ್ರಮಣ ಯಾನ ಲಕ್ಷ್ಮೀನಾರಾಯಣಯ್ಯ, ಬಿ ಸರ್ಪೋತ್ತಮ ಕೇಣ್ಯಾ, ಮರ್ಗೋಳಿ, ಬೆಳ್ಳಿ ಗೋಪಾಲಕೃಷ್ಣ ರಾವ್, ಮಂಗಳೂರು, ಬಿದುನಳ್ಳಿ ಅನಂತರಾಜ ಆರಿಗ ಪುತ್ತೂರು (ಪ್ರಥಮ ಕಂತು), ಆರ್ ಬಿ ಪಂಡಿತ್ ಮುಂಬಯಿ, ಪಟೇಲ್ ಪದ್ಮನಾಭ ಉಪಾಧ್ಯಾಯ ರೂ ೧೦೧ರಂತೆ

ಹಣವು ಅತ್ಯಗತ್ಯವಾಗಿ ಬಂದಿರುವುದರಿಂದ ದಾನ ನೀಡಿದವರ ಪೈಕಿ ವಸೂಲು ಕೊಡಲು ಬಾಕಿ ಮಾಡಿದ ಮಹನೀಯರೆಲ್ಲರೂ ತಮ್ಮ ದಾನದ ಪೈಕಿ ಕೊಡಲಿರುವ ಹಣವನ್ನು ಆದಷ್ಟು ಬೇಗನೆ ರವಾನಿಸಿದಲ್ಲಿ ಬಹಳ ಉಪಕಾರವಾದೀತು ಎಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ

ಶಿರ್ವ—ಇಲ್ಲಿಯ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ಉದ್ಘಾಟನಾ ಸಮಾರಂಭವು ತಾ ೪ರಲ್ಲು ಶ್ರೀ ಯು ಶಿವರಾವ್, ಬಿ ಎ ಅವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಈ ಸಂದರ್ಭದಲ್ಲಿ ಕುತ್ಯಾರು ಅರಮನೆಯ ಶ್ರೀ. ಕೃಷ್ಣ ಅರಸು ಕುಂದ ಹೆಗ್ಗಡೆಯವರು ದಿವಂಗತ ಶ್ರೀ ಕೃಷ್ಣ ಸ್ವಗಳ ತೈಲಚಿತ್ರವನ್ನು ಅನಾವರಣ ಮಾಡಿದರು ಸ್ಥಳೀಯ ಬಂಟರ ಯಾನ ಸಂಘದ ವಿದ್ಯಾವರ್ಧಕ ಸಂಘದವರು ವಿದ್ಯಾ ಪ್ರಸಾರಕ್ಕಾಗಿ ಮಾಡುತ್ತಿರುವ ಪ್ರಯತ್ನವು ಸ್ತುತ್ಯ ಶಾಲೆಯ ಏಳಿಕೆಗಾದ ಶ್ರೀ ಕೆ ಮುಡು ಶೆಟ್ಟರ ಉತ್ಸಾಹವು ಅಭಿನಂದನೀಯ

ಕಟಪಾಡಿ-ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ಇದರ ಹನ್ನೊಂದನೇ ವಾರ್ಷಿಕ ಮಹಾಸಭೆಯು ತಾ. ೧೫ ೭ ೧೯೪೫ರಲ್ಲಿ ಡಾಕ್ಟರ್ ಕೆ ಯಸ್. ಸುವರ್ಣ ಉಡುಪಿ ಇವರ ಅಧ್ಯಕ್ಷತೆಯಿಂದ ಯಶಸ್ವಿಯಾಗಿ ಸಮಿತಿಯ ಭವನದಲ್ಲಿ ಜರಗಿತು ಗತವರ್ಷದ ಕಾರ್ಯಕಲಾಪಗಳ ವರದಿ ಮತ್ತು ಆಯವ್ಯಯಗಳ ಲೆಕ್ಕದ ಪಟ್ಟಿಯು ಸಭೆಯಲ್ಲಿ ಮಂಜೂರಾದ ಬಳಿಕ ಕಳೆದ ವರ್ಷದ ಆಡಳಿತೆ ಸಭೆಯು ಉದ್ಯೋಗಸ್ಥರು ಮತ್ತು ಸದಸ್ಯರೇ ಬಾಲ್ತಿ ವರ್ಷದ ಆಡಳಿತೆ ಸಭೆಗೆ ಸದಸ್ಯರಾಗಿ ಸ್ವತೋಷಪೂರ್ವಕವಾದ ಸರ್ವಸಮ್ಮತಿಯನ್ನು ಪಡೆದು ಆರಿಸಲ್ಪಟ್ಟರು. ಬಾಲ್ತಿ ವರ್ಷಕ್ಕೂ ಹೊಸದಾಗಿ ಲೆಕ್ಕ ಪರಿಶೋಧಕರನ್ನೇ ಆರಿಸಿಕೊಂಡ ಬಳಿಕ ಅನೇಕ ಸಭಿಕರ ಹಿತವಾದ ಗನಾಗಿ, ಶ್ರೀಗಳಾದ ಮೂಳೂರು ಕುಡ್ವ ಪೂಜಾರಿಯವರನ್ನೇ ಮುಖ್ಯವಾಗಿಟ್ಟುಕೊಂಡು ಶ್ರೀ ಗುರು ಸ್ಮಾರಕನಿಧಿಗೆ ಅನೇಕ ಸಭಿಕರು ಧನ ಸಹಾಯ ಮಾಡಿರುವರು. ಸಭಾಧ್ಯಕ್ಷರ ಅನುಭವಯುಕ್ತವಾದ ಸುರಸ ಭಾಷಣವು ಸಮಾಜದ ಹಾಗೂ ಸಮಿತಿಯ ಶ್ರೇಯಸ್ಸನ್ನು ಬಯಸಿತ್ತು ಗುರುಪೂಜಾನಂತರ ತೀರ್ಥಪ್ರಸಾದವನ್ನು ಸ್ವೀಕರಿಸಿ ಸಭೆಯು ಅಂತ್ಯವಾಯಿತು

ಬಳ್ಳಾರಿ—ತಾ ೯ ೭ ೪೫ನೇ ರಾತ್ರಿ ಬಳ್ಳಾರಿಯಲ್ಲಿ ಭಯಂಕರ ನೆರೆಬಂದು, ೬೧೦ ಮನೆಗಳು ನೀರುಪಾಲಾದವು ಕೆಲವು ವರ್ತಕರ ಭೂಮಿಗಳಿಗೆ ಹೂಳು ನೀರು ತುಂಬಿ, ಪೈರು ನಾಶವಾದಲ್ಲದ್ದೇ ಕೆಲವು ವರ್ಗದಾರರ ಭೂಮಿಗಳು ಹೊಳೆಯಾಗಿ ಮಾರ್ಪಟ್ಟು ಹೊಂಗೆ ತುಂಬಿವೆ ಬಳ್ಳಾರಿಯ ಒಂದು ಗ್ರಾಮದಲ್ಲಿ ಕನಿಷ್ಠ ಸುಮಾರು ೨೦ ೨೫ ಸಾವಿರ ರೂಪಾಯಿ ನಷ್ಟವಾಗಬಹುದು ಇದೇ ರೀತಿ, ಆಸುಪಾಸಿನ ಗ್ರಾಮಗಳಲ್ಲಿಯೂ ನಷ್ಟ ಸಂಭವಿಸಿಯದೆಂತ ವರ್ತಮಾನಗಳು ಬರುತ್ತಿವೆ.

ಅಖಿಲ ಕರ್ನಾಟಕ ಏಕೀಕರಣ ಸಂಘ, ಧಾರವಾಡ, ರಾಷ್ಟ್ರೀಯ ಪುನರ್ರಚನೆಯಲ್ಲಿ ಕರ್ನಾಟಕದ ಸ್ಥಾನ ಪ್ರಶ್ನಾವಳಿ— (1) ಕರ್ನಾಟಕವು ಬೇರೆಬೇರೆ ಆಡಳಿತಗಳಲ್ಲಿ ಹಂಚಿಹೋದದ್ದರಿಂದ ಅನೇಕ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಅದರಿಂದ ಉಂಟಾಗುತ್ತಿರುವ ಅನೇಕ ಕಷ್ಟನಷ್ಟಗಳ ವಿವರಗಳನ್ನು ಸ್ಪಷ್ಟಪಡಿಸಿರಿ ಈ ವಿವರಗಳನ್ನು ಸಿದ್ಧಪಡಿಸಲಿಕ್ಕೆ ಉದಾಹರಣೆಗಳನ್ನೂ ಕೊಡಿರಿ. (2) ಪ್ರಾಂತಗಳನ್ನು ಭಾಷಾನ್ವಯವಾಗಿ ವಿಂಗಡಿಸುವ ತತ್ವಕ್ಕೆ ನೀವು ಅನುಕೂಲರಿರುವಿರಾ? ಇದಕ್ಕೆ ಕಾರಣ ಕೊಡಿರಿ. (3) ಭಾವೀ ಕರ್ನಾಟಕ ಪ್ರಾಂತದಲ್ಲಿ ಸಂಸ್ಥಾನಗಳನ್ನು ಸಮಾವೇಶಮಾಡಬೇಕೆಂದು ನಿಮ್ಮ ಅಭಿಪ್ರಾಯವಿದೆಯೋ? ನಿಮ್ಮ ಮತವು ಇದಕ್ಕೆ ಅನುಕೂಲವಿದ್ದರೆ ಯಾವ ರೀತಿಯಿಂದ ಈ ಸಮಾವೇಶವು ಸಾಧ್ಯವಿದೆಯೆಂಬ ಬಗ್ಗೆ ನಿಮ್ಮ ಪ್ರತ್ಯಕ್ಷ ಸೂಚನೆಗಳನ್ನು ದಯವಿಟ್ಟು ವಿವರಿಸಿರಿ ನೀವು ಈ ತತ್ವದ ವಿರುದ್ಧವಿದ್ದರೆ ಅದಕ್ಕೆ ಕಾರಣಗಳನ್ನು ಕೊಡಿರಿ (4) ಭಾವೀ ಕರ್ನಾಟಕ ಪ್ರಾಂತದಲ್ಲಿ ಯಾವಯಾವ ಜಿಲ್ಲೆ ಅಥವಾ ಜಿಲ್ಲೆಯ ಭಾಗ ಸೇರ್ಪಡೆಯಾಗಬೇಕೆಂದು ನಿಮ್ಮ ಅಭಿಪ್ರಾಯವಿದೆಯೋ ಅದರ ಕ್ಷೇತ್ರ ಮತ್ತು ಜನಸಂಖ್ಯೆಗಳನ್ನು ಕೊಡಿರಿ (5) ಭಾವೀ ಕರ್ನಾಟಕ ಪ್ರಾಂತವು ಆರ್ಥಿಕ ದೆಸೆಯಲ್ಲಿ ಸ್ವಾವಲಂಬಿಯಾಗುವದೆಂದು ನಿಮ್ಮ ಅಭಿಪ್ರಾಯವೋ? ಅಂಕಿಸಂಖ್ಯೆಗಳನ್ನು ಉದಹರಿಸಿ, ನಿಮ್ಮ ಅಭಿಪ್ರಾಯವನ್ನು ಬಲಪಡಿಸಿರಿ (6) ಕರ್ನಾಟಕದಲ್ಲಿ ಗ್ರಾಮೋದ್ಯೋಗಗಳನ್ನೂ ದೊಡ್ಡ ದೊಡ್ಡ ಕಾರಖಾನೆಗಳನ್ನೂ ಹಾಕಲಿಕ್ಕೆ ಏನೇನು ಅನುಕೂಲತೆಗಳಿವೆ? ಪ್ರತ್ಯೇಕವಾದ ಪ್ರಾಂತ ನಿರ್ಮಾಣಮಾಡುವದರಿಂದ ಉದ್ಯೋಗಾಭಿವೃದ್ಧಿಗೆ ಬಲಬರುವದೆಂದು ನಿಮ್ಮ ಅಭಿಪ್ರಾಯವಿದೆಯೋ? ದೃಷ್ಟಾಂತಗಳಿಂದ ನಿಮ್ಮ [illegible] ಸಿದ್ಧಪಡಿಸಿರಿ (7) ವ್ಯಾಪಾರೋದ್ಯೋಗಗಳಲ್ಲಿ [illegible] ಆಗಿದ್ದ ಪ್ರತಿಕೂಲಗಳೇನು? ಪ್ರತ್ಯೇಕ ಪ್ರಾಂತ ನಿರ್ಮಾಣದಿಂದ ಈ ಪರಿಸ್ಥಿತಿಯು ಯಾವ ರೀತಿಯಿಂದ ಸುಧಾರಿಸುವದು? (8) ಕೆಳಗೆ ತೋರಿಸಿದ ವಿಶಿಷ್ಟಗಳೊಳಗೆ ಸಾರಿಗೆ ವಾಹನಗಳ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಆಗಿದ್ದ ಪ್ರತಿಕೂಲ ಪರಿಸ್ಥಿತಿಯ ಬಗ್ಗೆ ಸೂಕ್ಷ್ಮರೀತಿಯಿಂದ ವಿವೇಚನೆಯನ್ನು ಮಾಡಿರಿ ಮತ್ತು ಅವುಗಳ ಸುಧಾರಣೆಯ ಬಗ್ಗೆ ನಿಮ್ಮ ಸೂಚನೆಗಳನ್ನೂ ಕೊಡಿರಿ (೧) ಹೆದ್ದಾರಿ. (೨) ರೇಲ್ವೆ. (೩) ವಿಮಾನ ಮಾರ್ಗ (೪) ಜಲ ಮಾರ್ಗ (೫) ಪೋಸ್ಟ್, ತಂತಿ, ಮತ್ತು ಟೆಲಿಫೋನುಗಳ ಸೌಕರ್ಯ. (9) ಕರ್ನಾಟಕ ಪ್ರಾಂತದಲ್ಲಿಯ ಶಿಕ್ಷಣದ ಇಂದಿನ ಅವನತ ಪರಿಸ್ಥಿತಿಯನ್ನು ವಿವರಿಸಿ ಯಾವ ದೆಸೆಯಲ್ಲಿ ಸುಧಾರಣೆಯಾಗತಕ್ಕದ್ದೆಂಬುದನ್ನು ಸೂಚಿಸಿರಿ. ಎಲ್ಲೆಲ್ಲಿ ಆಡಕಟ್ಟು, ಕೆಸ್ತು, ಕಾಲುವೆಗಳ ಪಕ್ಕತ ಇದೆಯೋ ಅದನ್ನೆಲ್ಲ ದಯವಿಟ್ಟು [illegible] ವಿವರವಾಗಿ ವಿವೇಚಿಸಿರಿ (10) ಇವಾ ವಿಷಯದಲ್ಲಿ ಕರ್ನಾಟಕಕ್ಕೆ ಪ್ರತಿಕೂಲವಾದ ಸಂಕಷ್ಟಗಳು ಏನೇನು? ಕೆಳಗೆ ಕಾಣಿಸಿದ ಕ್ಷೇತ್ರಗಳಲ್ಲಿ ಸುಧಾರಣೆಗಾಗಿ ನಿಮ್ಮ ಸೂಚನೆಗಳನ್ನು ದಯವಿಟ್ಟು ಕೊಡಿರಿ (೧) ಪ್ರಾಥಮಿಕ ಶಿಕ್ಷಣ (೨) ಮಾಧ್ಯಮಿಕ ಶಿಕ್ಷಣ (೩) ವಿಶ್ವವಿದ್ಯಾಲಯ ಶಿಕ್ಷಣ. (೪) ಸ್ತ್ರೀಯರಿಗಾಗಿ ಸಾಕ್ಷರತೆ (೫) ಸ್ತ್ರೀ ಹಾಗೂ ಔದ್ಯೋಗಿಕ ಶಿಕ್ಷಣ (11) ವಯಸ್ಕರ ಮತದಾನ ಪದ್ಧತಿಗೆ ನೀವು ಅನುಕೂಲರಿರುವಿರಾ? (12) ಭಾವೀ ಕರ್ನಾಟಕ ಪ್ರಾಂತದ ಸಾಮಾನ್ಯ ಆಡಳಿತೆಯು ಯಾವ ಸ್ವರೂಪದ್ದಿರಬೇಕು? (13) ನಮ್ಮ ಪ್ರಾಂತದ ಭಾವೀ ರಾಜಧಾನಿಯು ಯಾವುದಾಗಬೇಕು? ನೀವು ಸೂಚಿಸಿದ ಸ್ಥಳವನ್ನೇ ಕರ್ನಾಟಕ ಪ್ರಾಂತದ ಜನತೆಯು ಒಪ್ಪುವಂತಹ ಕಾರಣಗಳೇನು? (14) ರಾಷ್ಟ್ರೀಯ ಸಂರಕ್ಷಣೆಯಲ್ಲಿ ಕರ್ನಾಟಕವು ತನ್ನ ಯೋಗ್ಯವಾದ ಸ್ಥಾನವನ್ನು ಪಡೆಯಲು ಯಾವ ದೆಸೆಯಲ್ಲಿ ಪ್ರಯತ್ನಿಸಬೇಕು? ಉತ್ತರವನ್ನು ದಯವಿಟ್ಟು ಕೆಳಗೆ ಕಾಣಿಸಿದ ಮೂರು ವಿಧ ಕ್ಷೇತ್ರಗಳ ಕೆಳಗೆ ಕೊಡಿರಿ (೧) ಭೂದಳ (೨) ನೌಕಾದಳ (೩) ವಾಯುದಳ (15) ಮೇಲಿನ 14 ಪ್ರಶ್ನೆಗಳಲ್ಲಿ ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಸಂಬಂಧಪಟ್ಟ ಯಾವದಾದರೂ ಸಂಗತಿಯು ಬಂದಿಲ್ಲವೆಂದು ನಿಮ್ಮ ಅಭಿಪ್ರಾಯವಿದ್ದರೆ ಅದರ ಬಗ್ಗೆ ದಯವಿಟ್ಟು ಬರೆಯಿರಿ ಮತ್ತು ಆ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿರಿ

ಸೂಚನೆ:—ಪ್ರಶ್ನಾವಳಿಗಳಿಗೆ ಉತ್ತರವನ್ನು ಕೆಳಗಿನ ವಿಳಾಸಕ್ಕೆ ೧೯೪೫ ಜುಲೈ ೩೧ ತಾರೀಖಿನೊಳಗಾಗಿ ಮುಟ್ಟುವಂತೆ ಕಳಿಸತಕ್ಕದ್ದು ಶ್ರೀ ದಿವಾಕರ ದೇಸಾಯಿ ಇವರಿಗೆ, ಅಧ್ಯಕ್ಷರು, ಕರ್ನಾಟಕ ಪ್ರಾಂತ ನಿರ್ಮಾಣ ವರದಿಯ ಕಮಿಟಿ, C/o, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸಾಯಿಟಿ, ಗಿರಿಗಾಂವ, ಮುಂಬಯಿ

NOTICE

ಉಡುಪಿ ಡಿ ಮು. ಕೋರ್ಟಿನಲ್ಲಿ

O. P No. 44/1945

1 ಲಾಜರಸ್ ಮೊನಿಸ್, 2 ಡಾವಿಡ್ ಮೊನಿಸ್, 3 ಮೂಡ್ಲಿನ್ ಮೊನಿಸ್ ಬ್ಯಾ, 4 ಆಂದ್ರು ಮೊನಿಸ್, 5 ಆಂಜಲಿನ್ ಮೊನಿಸ್ ಬ್ಯಾ 6 ಮಾಗ್ದಲಿನ್ ಮೊನಿಸ್ ಬ್ಯಾ ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ

ಮೇಲ್ಕಂಡ O P No 44 45ನೇ ಅರ್ಜಿಯ ಅರ್ಜಿದಾರರ ಸಹೋದರ ಹಾಲಿ ಮೃತಪಟ್ಟ ನಿಕೊಲಸ್ ಮೊನಿಸನು The Bombay Life Assurance Co, Ltd., ಈ ಕಂಪೆನಿಯಿಂದ ಪಡೆದ ನಂಬ್ರ I02451ನೇ ಪೊಲಿಸಿ ಬಾಬ್ತು ಬರುವ ಹಣವನ್ನು ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನು ಪಡೆಯುವಂತೆ ಆತನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾ 30 7-1945ಕ್ಕೆ ಇಟ್ಟಿದೆ ಆಕ್ಷೇಪ ಹೇಳುವವರು ಸದ್ರಿ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಮೇಲೆ ನಮೂದಿಸಿದ ಕೋರ್ಟು ಮುಂದೆ ಮೇಲ್ಕಂಡ ಅರ್ಜಿಯಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು

ಉಡುಪಿ, ತಾ.12-7-1945 | Gratian C Rego, Vakil for Petitioners.

NOTICE

ಪುತ್ತೂರು ಡಿ ಮು. ಕೋರ್ಟಿನಲ್ಲಿ

S C No 60/1945

ದೇವು ಪೂಜಾರಿ ವಾದಿ

ತಿಂಮಪ್ಪ ಗೌಡ ಪ್ರತಿವಾದಿ

ಮೇಲಿನ ವ್ಯಾಜ್ಯದ ಪ್ರತಿವಾದಿ ಬೊಳ್ವಾರು ಸುಬ್ಬಪ್ಪ ಗೌಡ್ರ ಮಗ ತಿಂಮಪ್ಪ ಗೌಡರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ತಾರೀಕು 22 3 1941ರಲ್ಲು ವಾದಿಗೆ ರೂಪಾಯಿ 100 0 0ಕ್ಕೆ ಬರೆಕೊಟ್ಟ ಡಿ ಪ್ರೋ ನೋಟಿನ ಅಸ್ಲು ಬಡ್ಡಿ ವಸೂಲಿ ಕುರಿತು ವಾದಿಯು ಹೂಡಿದ ಮೇಲ್ಕಂಡ ದಾವೆಯು ತಾರೀಕು 31 7 1945ಕ್ಕೆ ಇಟ್ಟಿರುತ್ತದೆ. ಇದಕ್ಕೆ ನಿಂಮದೇನಾದರೂ ಆಕ್ಷೇಪಣೆಯಿದ್ದರೆ ಆ ದಿನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಉಪಸ್ಥಿತಿಕೊಳ್ಳತಕ್ಕದ್ದು ತಪ್ಪಿದ್ರೆ ನಿಂಮ ಆಕ್ಷೇಪಣೆಗಳ ಉಜ್ರು ವಿನಾ ಏಕಪಾರ್ಟಿ ವಿಚಾರಣೆಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(ಕೋರ್ಟು ದ್ಕುಂ ಪ್ರಕಾರ)

Puttur. 3-7-1945 | (Sd.) C. S. Shastry, Vakil for Plaintiff.

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ದಕ್ಷಿಣ ಕನ್ನಡ.

ಮಂಗಳೂರು.

ಚಿಮಿಣಿ ಎಣ್ಣೆ–ಯಲ್ಲಿ ಮಂಗಳೂರು ನಗರದೊಳಗೆ ಕಡಿತಮಾಡಲಾಗಿತ್ತಷ್ಟೆ. ಆ ಕಡಿತವನ್ನು ಜಿ. ಕಲೆಕ್ಟರರೀಗ ತೆಗೆದುಹಾಕಿದ್ದಾರೆ.

ಶ್ರೀ ಸುಬ್ರಹ್ಮಣ್ಯ ಮಠದ ಯತಿವರ್ಯರ ಆಗಮನ–ಶ್ರೀ ಸುಬ್ರಹ್ಮಣ್ಯ ಮಠದ ಹಿರಿಯ ಪಟ್ಟದ ಪೂಜ್ಯ ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳವರು ಕಳೆದ ಮೂರು ವರ್ಷಗಳಿಂದ ಮದ್ರಾಸು, ಕೃಷ್ಣಾ ಗೋದಾವರೀ ತೀರಗಳಲ್ಲಿ ತೀರ್ಥಾಟನ ಮಾಡುತ್ತ ಕಾಕಿನಾಡಕ್ಕೆ ತಲುಪಲು, ಅಲ್ಲಿಯ ಹವೆಯು ಸರಿಬೀಳದೆ ಅನಾರೋಗ್ಯವು ತಲೆದೋರಿದುದರಿಂದ ಪ್ರಯಾಣವನ್ನು ಮುಂದುವರಿಸದೆ ಕಳೆದ ಶ್ರೀನರಸಿಂಹ ಜಯಂತ್ಯುತ್ಸವಕ್ಕೆ ಸರಿಯಾಗಿ ಶ್ರೀ ಸುಬ್ರಹ್ಮಣ್ಯಕ್ಕೆ ಬಂದರು. ಅನಂತರ ಚಿಕಿತ್ಸೆಗಾಗಿ ಮಂಗಳೂರಿಗೆ ಹೊರಟವರು ತಾ ೮ ೭ ೪೫ರಂದು ನಗರಕ್ಕೆ ಬಿಜಯಮಾಡಿಸಿದ್ದಾರೆ. ತಮ್ಮ ಪೂರ್ವಾಶ್ರಮದ ಬಂಧುಗಳಾದ ಡಾ. ಕೆ. ಎ. ವಿಠಲ್‌ರವರ (ಬೆಂದೂರು ಟ್ರೇವ್ಲರ್ಸ್ ಬಂಗಲೆಯ ಬಳಿ) ‘ಗೀತಾ’ ಮಂದಿರದಲ್ಲಿ ಪರಿವಾರ ಸಮೇತರಾಗಿ ಮೊಕ್ಕಾಂ ಮಾಡಿರುತ್ತಾರೆ.

ರಿಕ್ವಿಸಿಶನ್ ಮಾಡಿದುದಲ್ಲದೆ— ಬೇರೆ ಮಿಗುವ ಅಕ್ಕಿಯನ್ನೂ ಹಲವು ಮಂಡಿ ಜಮೀನ್ದಾರರು, ಡಿಪೋಗಳಿಗೆ ಒಪ್ಪಿಸಲು ಸಿದ್ಧರಾಗಿರುವುದರಿಂದಲೂ, ಅಕ್ಕಿಯ ಸಂಗ್ರಹಣವು ಇನ್ನೂ ಆಗಬೇಕಾಗಿರುವುದರಿಂದಲೂ, ಹಾಗೆ ಮಿಗುವ ಅಕ್ಕಿಯನ್ನು ತಂದೊಪ್ಪಿಸುವಾಗ, ಈಗ ಜಾರಿಯಲ್ಲಿರುವ ಮುಡಿಗೆ ರೂ. ೧೮ ಕಡಿತವನ್ನು ಮಾಡಬಾರದಾಗಿ ಜಿ. ಕಲೆಕ್ಟರರು ಸೂಚಿಸಿದ್ದಾರೆ.

ಕಾಫಿ ವ್ಯಾಪಾರಿಗಳು-ಕಳ್ಳಸಂತೆಯ ವರದಲ್ಲಿ ಹೊರ ಜಿಲ್ಲೆಯ ರಖಂ ವ್ಯಾಪಾರಿಗಳಿಗೆ ಕಾಫಿಯನ್ನು ಕಳುಹಿಸಿ, ನಮ್ಮ ಜಿಲ್ಲೆಯ ಚಿಲ್ಲರೆ ವ್ಯಾಪಾರಿಗಳಿಗೆ ಕಾಫಿ ವಿಕ್ರಯಕ್ಕೆ ದೊರೆಯದಂತೆ ಕೃತ್ರಿಮವಾದ ಅಭಾವವೊಂದನ್ನು ಕಲ್ಪಿಸುವುದು ತಮ್ಮ ಗಮನಕ್ಕೆ ಬಂದಿದೆ ಎಂದೂ ಆ ರಖಂ ವ್ಯಾಪಾರಿಗಳು ಮುಂದೆಯೂ ಇಂತಹ ಕೆಟ್ಟ ಕ್ರಮವನ್ನು ಮುಂದುವರಿಸಿದರೆ, ಅವರ ಕಾಫಿಬೀಜ ವಿಕ್ರಯದ ಲೈಸನ್ಸನ್ನು ರದ್ದುಗೊಳಿಸುವುದಲ್ಲದೆ, ಲಾಭಖೋರತನಕ್ಕಾಗಿ ಶಿಕ್ಷೆಯನ್ನೂ ಅನುಭವಿಸಬೇಕಾಗುವುದೆಂದೂ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರು ಎಚ್ಚರಿಸಿದ್ದಾರೆ.

ಹಾರೆ-ಗಳನ್ನು ಅಧಿಕ ಬೆಲೆಗೆ ಮಾರಿದರೆಂಬ ಆರೋಪಕ್ಕೊಳಗಾಗಿದ್ದ ಬಂದರದ ಮಹೇಲ್ದಾರ್ ಸಂಸ್ಥೆಯ ಇಬ್ಬರು ಪಾಲುದಾರರಿಗೂ ನೌಕರರಿಗೂ ಒಟ್ಟು ರೂ. ೧೪ ಸಾವಿರ ಜುರುಮಾನೆ ವಿಧಿಸಲಾಗಿದೆ.

ಜಿಲ್ಲೆಯಲ್ಲಿ ಮಳೆ–ಕಳೆದ ತಾ.೯, ೧೦ರಲ್ಲಿ ಜಿಲ್ಲೆಯ ಹೆಚ್ಚಿನ ವಿಭಾಗದಲ್ಲಿ ಎಡೆಬಿಡದೆ ಗಾಳಿಮಳೆ ಸುರಿದು ನೇತ್ರಾವತಿ ಮತ್ತು ಗುರುಪುರ ಹೊಳೆಗಳಲ್ಲಿ ನೀರೇರಿತ್ತು. ಮಂಗಳೂರಿನಿಂದ ಬಂಟವಾಳ-ಪುತ್ತೂರು ಮುಡಿಕೇರಿಗಳಿಗೆ ಹೋಗಿಬರುವ ಬಸ್ಸುಗಳ ಚಲಾವಣೆಯು ತಾ. ೯, ೧೦ರಲ್ಲಿ ಇರಲಿಲ್ಲ. ನೆರೆನೀರು ಬಹಳನಾಗಿ ಏರಿದ್ದು, ಇಲ್ಲಿಯ ಬೆಂಗರೆ ಮತ್ತು ಕೂಳೂರಿನಲ್ಲಿ ಅಲ್ಪಸ್ವಲ್ಪ ನಷ್ಟಗಳೂ ಸಂಭವಿಸಿದ ವಾರ್ತೆ ಕೇಳಿಬರುತ್ತದೆ. ಮುಖ್ಯವಾಗಿ ಪುತ್ತೂರು ತಾಲೂಕಿನಲ್ಲಿ ನೇತ್ರಾವತಿ ಹಾಗೂ ಕುಮಾರಧಾರೆಗಳಲ್ಲಿ ಬಹಳವಾಗಿ ನೆರೆ ಏರಿದೆ ಎಂದು ತಿಳಿದುಬಂದಿದೆ. ಮಂಗಳೂರಿನಿಂದ ೫.೬ ಮೈಲು ದೂರದಲ್ಲಿರುವ ಅಡ್ಯಾರಿನಲ್ಲಿ ನೇತ್ರಾವತಿ ಹೊಳೆಯ ನೀರು ಮಾರ್ಗದ ಮೇಲೆಯೂ ಏರಿದುದರಿಂದ ಮಂಗಳೂರು-ಪುತ್ತೂರು ಬಸ್ ಚಲಾವಣೆ ನಿಲ್ಲಬೇಕಾಯಿತು. ಇಲ್ಲಿ ಕೆಲವು ಫರ್ಲಾಂಗುಗಳ ವರೆಗೂ ನೀರು ಎರಡು ದಿನಗಳ ವರೆಗೆ ಮಾರ್ಗದ ಮೇಲೇರಿತ್ತು. ಇಲ್ಲಿ ಹಲವು ಮನೆಗಳೂ ನೀರ ಪಾಲಾಗಿವೆಯಂತೆ. ೧೯೨೩ರ ಮಹಾ ಪ್ರವಾಹದ ಬಳಿಕ, ಇಷ್ಟು ದೊಡ್ಡ ನೆರೆ ಬರಲಿಲ್ಲ ಎಂದು ಹೇಳಲಾಗಿದೆ. ಪುತ್ತೂರು ತಾಲೂಕಿನ ಚೊಕ್ಕಾಡಿ ಮೊದಲಾದ ಮೂಡು ಪ್ರಾಂತಗಳಲ್ಲಿಯೂ ನೆರೆಯು ಬಹಳವಾಗಿ ಏರಿದೆ. ಗುರುಪುರ ಸಂಕದ ಬಳಿಯಲ್ಲೂ ಕೆಲವು ಮನೆಗಳು ಮುಳುಗಿವೆಯಂತೆ.

ಕುಂದಾಪುರ–ಕಳೆದ ತಾ. ೨ರಂದು ಕುಂದಾಪುರ ತಾಲೂಕಿನ ಆಹಾರ ಸಮಿತಿಯವರು ಈ ವರ್ಷ ಇಡೀ ತಾಲೂಕಿಗೆ ೩೫ ಸಾವಿರ ಮುಡಿ ಅಕ್ಕಿ ಕಡಿಮೆ ಬೀಳುತ್ತದೆಂದೂ ಅವುಗಳನ್ನು ಕಳಿಸುವ ವ್ಯವಸ್ಥೆ ಮಾಡಬೇಕೆಂದೂ ಜಿಲ್ಲಾ ಕಲೆಕ್ಟರವರೊಡನೆ ಮನವಿಮಾಡಿಕೊಂಡಿದ್ದಾರೆ. ಮೂರು ತಿಂಗಳಿಂದ ಕುಂದಾಪುರ ತಾಲೂಕಿಗೆ ಗೋಧಿಯ ಸರಬರಾಯಿ ಇಲ್ಲ. ಈಗ ಮಾತ್ರ ಪುನಃ ಪಂಚಲಾಗುತ್ತಿದೆ.

ಈ ತಾಲೂಕಿನ ಹೆಂಗ್ವಳ್ಳಿ ಎಂಬ ಗ್ರಾಮದ ರೆವಿನ್ಯೂ ಕಾಡಿನಿಂದ ೨ ಸಾವಿರ ಘನಅಡಿ ಮರವನ್ನು ಅಕ್ರಮವಾಗಿ ಕಡಿಸಿರುವುದನ್ನು ಮಾನ್ಯ ತಹಶಿಲ್ದಾರರು ಸ್ವತಃ ಹೋಗಿ ವಶಪಡಿಸಿಕೊಂಡಿದ್ದಾರೆ. ಕಡಿಸಿದ ಆಪಾದಿತರನ್ನು ತಪಾಸಣೆ ಮಾಡುತ್ತಿದ್ದಾರೆ.

ಬೈಂದೂರು–ಇಲ್ಲಿ ಈಗ ಇರುವ ಅಕ್ಕಿಯ ಸಂಗ್ರಹವು ಜುಲಾಯಿ ತಿಂಗಳ ಅಂತ್ಯದ ವರೆಗೆ ಮಾತ್ರ ಸಾಕಾಗಬಹುದೆಂದೂ, ಮುಂದೆ, ನವಂಬರ ೧೫ರ ವರೆಗೆ ೪॥ ಸಾವಿರ ಮುಡಿಗಳಾದರೂ ಇಲ್ಲಿಗೆ ಹೊರಗಿನಿಂದ ಬರಲೇಬೇಕೆಂದೂ ಕೇಳಿಕೊಳ್ಳುವ ಮನವಿಯೊಂದನ್ನು ಸ್ಥಳೀಯ ಪಂಚಾಯತ್ ಬೋರ್ಡ್ ಡಿ. ಕಲೆಕ್ಟರರ ಬಳಿಗೆ ಕಳುಹಿಸಿದೆ.

ದಕ್ಷಿಣ ಕನ್ನಡ ಕೃಷಿಕರ ಭಂಡಸಾಲೆಯ ಸಹಕಾರ ಸಂಘ, ಪುತ್ತೂರು.

ನೋಟೀಸು.

1945ನೇ ಜುಲ್ಯಾ ತಾರೀಕು 26ನೇ ಗುರುವಾರ ಮಧ್ಯಾಹ್ನ ಗಂಟೆ 2ಕ್ಕೆ ಪುತ್ತೂರು ಹೆಡ್ ಆಫೀಸಿನಲ್ಲಿ ಸಂಘದ ಮಹಾಸಭೆಯು ಈ ಕೆಳಗಿನ ವಿಷಯಸೂಚಿಯಲ್ಲಿ ಕಾಣಿಸಿದ ವಿಷಯಗಳ ತೀರ್ಮಾನದ ಬಗ್ಗೆ ಜರಗಿಸಲ್ಪಡುತ್ತದೆ. ಎಲ್ಲಾ ಮೆಂಬರರೂ ಬರಬೇಕಾಗಿ ವಿನಂತಿ.

ಪುತ್ತೂರು, 9-7 45. } ಬಿ. ಪ್ರಭಾಕರ ರಾವ್, ಅಧ್ಯಕ್ಷ.

ವಿಷಯಸೂಚಿ

1 1943-44ನೇ ವರ್ಷದ ಬಗ್ಗೆ ಆಡಿಟು ಸರ್ಟಿಫಿಕೇಟು ಮತ್ತು ಆಡಳಿತೆ ವರದಿಯ ಪರಿಶೀಲನ.

2 1944 45ನೇ ವರ್ಷದ ಬಗ್ಗೆ ತಿದ್ದುಪಡಿ ಮಾಡಲ್ಪಟ್ಟ ಅಂದಾಜು ಆಯವ್ಯಯ ತಖ್ತೆ ಮತ್ತು 1945–46ನೇ ವರ್ಷದ ಬಗ್ಗೆ ಅಂದಾಜು ಆಯವ್ಯಯ ತಖ್ತೆ.

3 ಈ ಕೆಳಗಿನ ಐಟೆಮನ್ನು ಲೆಕ್ಕದಿಂದ ವಜಾ ಮಾಡಿಸಲು ಮಂಜೂರಾತಿ:

(1) ಹೆಡ್ ಆಫೀಸಿಗೆ ಬರತಕ್ಕ ಕೋರ್ಟು ಖರ್ಚು ರೂ 24 5-0.

4 ಉಪನಿಬಂಧನೆ 31ನೇ ಕೂಡಿಸುವುದು. “ನೋಟೀಸು ಕೊಡುವುದರಲ್ಲಿ ಏನಾದರೂ ಹೆಚ್ಚುಕಡಿಮೆಯಾದರೂ ಸಭೆಯ ತೀರ್ಮಾನಗಳು ಆ ಬಗ್ಗೆ ರದ್ದಾಗಕೂಡದು ಡೈರೆಕ್ಟರರ ಬೋರ್ಡಿನ ನಿರ್ಣಯಮಾಡಿ ಮಹಾಸಭೆಯನ್ನು ಕರೆಯತಕ್ಕದ್ದು”.

5 ಡೈರೆಕ್ಟರರ ಚುನಾವಣೆ.

ಸೂಚನೆ: ಸಂಘ ಮೆಂಬರುಗಳ ಪ್ರತಿನಿಧಿಗಳಾಗಿ ಬರುವವರು ಇವರನ್ನು ಆರಿಸಿದ ನಿರ್ಣಯದ ಸರ್ಟಿಫ್ಯಾಡ್ ಪ್ರತಿಗಳನ್ನು ಸಂಘದ ಮೊಹರುಹಾಕಿ ಅವರೊಡನೆ ತರತಕ್ಕದ್ದು.

ಅಂದಾಜು ಆಯವ್ಯಯ ತಖ್ತೆಗಳ ಪ್ರತಿಗಳನ್ನು ಸಂಘದ ಹೆಡ್ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ಮೆಂಬರರ ಅವಗಾಹನೆ ಬಗ್ಗೆ ಇಡಲಾಗುತ್ತದೆ.

ಸ್ಥಾಪನೆ] ‘ಕಿರಿಯರ ಪ್ರಪಂಚ’ದ [1930

ನೋಡಿದರೆ ಬಿಡದಿರುವ ಪುಸ್ತಕಗಳು

● ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಂದ—

ಅನ್ನದೇವರು ಮತ್ತು ಇತರ ಕಥೆಗಳು
ವಿಚಾರಕ್ರಾಂತಿಯನ್ನುಂಟುಮಾಡುವ ೧೪ ಸಣ್ಣ ಕತೆಗಳ ಸಂಗ್ರಹ. ಬೆಲೆ ೧-೦-೦

● ಶ್ರೀ. ಕೆ. ವಿ. ಶೆಣೈ, ಬಿ. ಎ., ಎಲ್. ಟಿ. ಯವರಿಂದ—

ನಗೆನೋಟಗಳು ಬೆಲೆ ೦-೧೪-೦
ದಣಿದ ಮನವನ್ನು ತಣಿಸಿ ವಿನೋದದೊಡನೆ ವಿವೇಕವನ್ನೂ ಉಂಟು ಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ.

● ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರಿಂದ —

ಮೂರು ಪ್ರಹಸನಗಳು ಬೆಲೆ ೦-೧೪-೦
ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ನಗದವರನ್ನೂ ನಗಿಸುವ ಮೂರು ಪ್ರಹಸನಗಳ ಸಂಗ್ರಹ.

ಭಾರತೀಯ ಕತೆಗಳು ಬೆಲೆ ೦-೧೪-೦
ಶ್ರೀ. ಎ. ಎಸ್. ಪಿ. ಐಯ್ಯರ್, ಎಂ. ಎ., ಐ. ಸಿ. ಯಸ್., ಇವರ Tales of Ind ಕಥಾವಳಿಯ ಅನುವಾದ.

ನಂದಾದೀಪ ಬೆಲೆ ೦-೧೦-೦
ಬೋಧಪ್ರದವಾದ ೧೧ ಸಾಮಾಜಿಕ ಕಥೆಗಳ ಸಂಗ್ರಹ. ಸರಳ ಶೈಲಿ

● ಶ್ರೀ. ಕೆ. ಕೆ. ಶೆಟ್ಟರಿಂದ—

ಪ್ರೇಮವಿಜಯ ಬೆಲೆ ೦-೧೨-೦
ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ.

ದೇಶಭಕ್ತ ಬೆಲೆ ೧-೪-೦
ರಾಜಕೀಯ ಸಾಮಾಜಿಕ ನಾಟಕ. ಹೊಸ ಪ್ರಯೋಗ.

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦
ವೇಶ್ಯಾಪುತ್ರಿಯ ಜೀವನ ಚಿತ್ರವನ್ನೂ ಸನ್ಯಾಸಿಯ ಗುಟ್ಟನ್ನೂ ನಿದಾಕ್ಷಿಣ್ಯವಾಗಿ ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ

ಪುರುಷ ವಧು ಬೆಲೆ ೦-೪-೦
ಮುದುಕನ ಮದುವೆಯ ಭ್ರಾಂತಿನಿರಸನಗೊಳಿಸುವ ಪ್ರಹಸನ.

ಹೆಂಡ್ತಿ ಗಂಡನಾದರೆ? ಬೆಲೆ ೦-೪-೦
ಮಾರ್ಮಿಕವಾಗಿ ಸ್ತ್ರೀಸ್ವಾತಂತ್ರ್ಯ ಪ್ರತಿಪಾದಿಸುವ ಪ್ರಹಸನ.

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦
ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ಸಾಮಾಜಿಕ ನಾಟಕ.

ಮುಂದಿನ ದೇವರು ಬೆಲೆ ೦-೩-೦
ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ.

ಕುಶಲವ ಬೆಲೆ ೦-೩-೦
ಶಿಕ್ಷಣ ಕ್ರಮದಲ್ಲಿ ಸುಧಾರಣೆ ಸೂಚಿಸುವ ನವ ಪೌರಾಣಿಕ ನಾಟಕ.

ಸಂಶಯ ಪಿಶಾಚಿ ಬೆಲೆ ೦-೮-೦
ಅಳಿಯಕಟ್ಟಿನ ಸದ್ಯದ ನಡವಳಿಕೆಯ ದುಷ್ಪರಿಣಾಮವನ್ನು ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ.

● ಶ್ರೀ ಕೆ. ಹೊನ್ನಯ್ಯ ಶೆಟ್ಟರಿಂದ—

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦
ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪ್ರಹಸನ.

ನಾಡಕತೆಗಳು (ವಿವಿಧ ಕತೆಗಾರರಿಂದ) ಬೆಲೆ ೦-೩-೦
ಸಮಾಜದ ನೈಜಚಿತ್ರಗಳನ್ನೊಳಗೊಂಡ ಕತಾಸಂಗ್ರಹ.

ಕಾವ್ಯ ಸಾಮ್ರಾಜ್ಯ (ವಿವಿಧ ಕವಿಗಳಿಂದ) ಬೆಲೆ ೦-೧೨-೦
ಕನ್ನಡ ಸಾಹಿತ್ಯಕ್ಕೆ ರತ್ನ ಪ್ರಾಯವಾದ ಆಧುನಿಕ ಕವಿತೆಗಳ ಸಂಗ್ರಹ

● ಶ್ರೀ. ಎಸ್. ವೆಂಕಟರಾಜರಿಂದ—

ರಂಗಭೂಮಿ ಬೆಲೆ ೦-೮-೦
ಅಪಾತ್ರರು ‘ರಂಗಭೂಮಿ’ಯ ಸೇವೆಗೆ ಹೊರಟರೆ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

● ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರಿಂದ—

ಸೇವಾಪಥ ಬೆಲೆ ೦-೮-೦
ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ. ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದ ಸಾಮಾಜಿಕ ನಾಟಕ.

ನಾರೀ ಹೃದಯ (ಕಥಾ ಸಂಗ್ರಹ) ಬೆಲೆ ೦-೧೪-೦
ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯರ ನಾರೀ ಹೃದಯವನ್ನು ಸೂಚಿಸುವ ಹಿಂದೀ ಕತೆಗಳ ಅನುವಾದ

● ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ—

ಪ್ರಕಾಶ (ಅನುವಾದ) ಬೆಲೆ ೧-೧೨-೦
ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕನಾಟಕ.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು ಸಿಗುವ ಕೆಲವು ಸ್ಥಳಗಳು

1. ಸ್ವತಂತ್ರ ಭಾರತ ಬುಕ್ ಡಿಪೊ, ಮುಂಬಾಯಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ, ಪುತ್ತೂರು. 4. ಭಕ್ತಾ ಬ್ರದರ್ಸ್, ಕಾಸರಗೋಡು, 5. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 6. ಮನೋಹರ ಗ್ರಂಥ ಭಂಡಾರ, ಧಾರವಾಡ. 7. ಐ. ಬಾಲಯ್ಯ, ಬುಕ್ ಸೆಲ್ಲರ್, ತುಂಗಭದ್ರಾ. 8. ವೆಂಕಟೇಶಯ್ಯ ಬ್ರದರ್ಸ್ ಶಿವಮೊಗ್ಗಾ. 9. ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು. ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾಂ.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

(೨ನೇ ಪುಟದಿಂದ ಮುಂದುವರಿದುದು.)

ಗಾಳ ಹಾಕುವದು-ಗಾಳಿ ತಿನ್ನುವದು-ವೈಸರಾಯೀ ಕಾರ್ಯಕ್ರಮಗಳಾಗಿವೆ; ಎಲ್ಲಾ ಹೊಣೆಯನ್ನೂ ಅವರು ಕಾರ್ಯಕಾರೀ ಸಮಿತಿಗೆ ಬಿಟ್ಟು ನಿರ್ಲಿಪ್ತರಂತಿದ್ದಾರೆ. ಅವರೀ ಅವಧಿಯಲ್ಲಿ ಮಾಡಿದ ಏಕೆ ಮಾತ್ರ ರಾಜಕೀಯ ಕಾರ್ಯವೆಂದರೆ ಕಾರ್ಯಕಾರೀ ಸಭೆಯ ಅಧ್ಯಕ್ಷತೆ ವಹಿಸಿದುದು.

ಒಂದು, ಎರಡು, ಮೂರು ಮಾಸಗಳು ಸಂದುವು. ಈ ಅವಧಿಯಲ್ಲಿ 6 ಬಾರಿ ನವ ಕಾರ್ಯಕಾರೀ ಸಮಿತಿಯ ಸಭೆ ಸೇರಿದ್ದಿತು. ಎಲ್ಲವೂ ಗುಪ್ತಸಭೆಗಳೇ ಆಗಿದ್ದುದರಿಂದ ಪ್ರಕಟಣಾಧಿಕಾರಿ ತಿಳಿಸಿದಂತೆ 'ಸಾಂಗವಾಗಿ ನೆರವೇರಿತು' 'ಒಮ್ಮತದ ನಿರ್ಧಾರಗಳಾದುವು' 'ಪ್ರತಿಯೊಂದು ಕಾರ್ಯವೂ ತೂಕ ತಪ್ಪದೆ ಜರುಗಿತು'-ಎಂದಿಷ್ಟೇ ವಾರ್ತೆಗಳು ಪ್ರಕಟವಾದುವು

ಅಮೇರಿಕನ್ ಬಾತ್ಮೀದಾರನೊಬ್ಬನು ಲೇಡಿ ವೇವೆಲರ ಭೇಟಿ ಪಡೆದು ಪ್ರಕಟಿಸಿದ ಈ ಕೆಳಗಿನ ಹೊಸ ವಾರ್ತೆಯಿಂದ ಭಾರತವೊಮ್ಮೆ ಚಕಿತವಾಯಿತು "ಈ ೩ ತಿಂಗಳಲ್ಲಿ ನೆರೆದ 6 ಕಾರ್ಯಕಾರೀ ಸಮಿತಿ ಸಭೆಯಲ್ಲಿ ಗವರ್ನರ್ ಜನರಲರು 12 ಬಾರಿ ತನ್ನ ವಿಶೇಷಾಧಿಕಾರವನ್ನು ಉಪಯೋಗಿಸುವ ಸಂದರ್ಭವೊದಗಿದ್ದಿತು. ಪರದೇಶ ಖಾತೆಯ ಸದಸ್ಯರು ಸೋವಿಯೆಟ್ ರಶ್ಯಕ್ಕೆ ರಾಯಭಾರಿಯಾಗಿ ಜೈಪ್ರಕಾಶ್ ನಾರಾಯಣರನ್ನು ನೇಮಿಸಿದಾಗಲೊಮ್ಮೆ-ರೆವಿನ್ಯೂ ಖಾತೆಯ ಮಂತ್ರಿಗಳು ಇದೀ ದೇಶದ ಲೆಕ್ಕ ಕೊಡುವ ಬದಲಿಗೆ ಪಾಕಿಸ್ತಾನ್ ಕಂದಾಯ, ಹಿಂದುಸ್ತಾನ್ ಕಂದಾಯ ಎಂದು ವಿಂಗಡಿಸಿ ಕೊಡಿಸಿದಾಗಲೊಮ್ಮೆ-ಕಾನೂನು ಖಾತೆಯ ಮೆಂಬರರು ಬೊಂಬಾಯಿಯಿಂದ ಉತ್ತರಗಡೆಗಾರೂ ಹೋಗದಂತೆ 'ಹಿಂದೂ ಲಾ'ದಲ್ಲಿ ತಿದ್ದುಪಡಿಮಾಡಲು ಮುಂದಾದಾಗಲೊಮ್ಮೆ-ಗೃಹಖಾತೆಯ ಸದಸ್ಯರು ತನ್ನ ಸ್ಥಾನಮಾನಗಳನ್ನು ಮರೆತು ಸೇವಾ ಗ್ರಾಮದಲ್ಲಿದ್ದೇನೆಂಬಂತೆ ಎಗ್ಜಿಕ್ಯೂಟಿವ್ ಸಭೆಯಲ್ಲಿಯೇ ಗಾಂಧಿಯವರನ್ನು 'ಬಾಪೂಜೀ' ಎಂದಾಗಲೊಮ್ಮೆ-ಹೀಗೆ 12 ಬಾರಿ 12 ಸದಸ್ಯರ ಮೇಲೆ ವೈಸರಾಯರ ವಿಶೇಷಾಧಿಕಾರ ಜ್ಯಾರಿಯಾಗಿತ್ತು; ಆದರೆ ಪ್ರತಿಯೊಂದು ಸಂದರ್ಭದಲ್ಲೂ ಮಿ. ಅಮೀರಿಯವರಿತ್ತಿದ್ದ ಸಾಗ್ಹಾನದಂತೆ ಹಿಂದುಸ್ಥಾನದ ಹಿತಕ್ಕಾಗಿಯೇ ವಿನಿಯೋಗಿಸಲಾಯಿತಲ್ಲದೆ, ಎಲ್ಲಾ ಪಕ್ಷದ ಸದಸ್ಯರ ಮೇಲೂ ಸರ್ತಿಪ್ರಕಾರ ಅದು ಬಿದ್ದುದರಿಂದ, ತೂಕ ಸರಿಯಾದಂತಾಗಿ ಯಾರೂ ಆ ಕುರಿತು ಬೇಸರಪಡದೆ ಸರಕಾರೀ ರಥ ಸುಗಮವಾಗಿ ಸಾಗುತ್ತಿದೆ ಎಂಬುದು ಸಂತೋಷಕರ"-ಆ ಬಾತ್ಮೀದಾರ ತನ್ನ ಭೇಟಿಯ ಮೂಲವನ್ನು ಈ ರೀತಿ ವರ್ಣಿಸಿದ್ದಾನೆ: "ನಾನು ಲೋರ್ಡ್ ವೇವೆಲರ ಭೇಟಿಗಾಗಿ ವೈಸರಾಯ ಭವನಕ್ಕೆ ಹೋದಾಗ ಅಲ್ಲಿ ಲೇಡಿ ವೇವೆಲ್ ಮಾತ್ರ ಇದ್ದರು. ಕೊನೆಗೆ ಅವರನ್ನೇ ಬಾಯಿ ಬಿಡಿಸಿದೆ:- "ಲೋರ್ಡ್ ವೇವೆಲರಿಗ ರಾಜಕೀಯ ಹೊಣೆಯೇನೂ ಇಲ್ಲದೆ ಸದಾಕಾಲ ತಮ್ಮೊಡನಿರುವಂತಾದುದಕ್ಕಾಗಿ ಸಂತೋಷಿಸುತ್ತೇನೆ". ನನ್ನೀ ಉಪಕಾರೋಕ್ತಿಗೆ ಲೇಡಿ ವೇವೆಲರು ಧನ್ಯವಾದ ಕೊಡುವ ಬದಲು, "ನಿಮ್ಮ ಅಭಿಪ್ರಾಯ ತಪ್ಪು. ಅವರು ಮೊದಲಿಗಿಂತಲೂ ಹೆಚ್ಚಿನ ಚಿಂತನೆಗೀಡಾಗಿದ್ದಾರೆ" ಎನ್ನುತ್ತಾ ವೈಸರಾಯಿನಿ ಮೇಲ್ಗಡೆ ನಮೂದಿಸಿದ ಹೇಳಿಕೆಯಿತ್ತರು".

ವಿ. ಪೆಂಟೀಸ್ ಡ್ರೂವರನ ಈ ವರದಿಯು ಪ್ರಪಂಚದ ವಿವಿಧ ಮೂಲೆಗಳಲ್ಲಿ ವಿವಿಧಾಭಿಪ್ರಾಯಕ್ಕೆಡೆಗೊಟ್ಟಿತು. 'ಪ್ರಾವ್ಡ'ದ ದೀರ್ಘ ಬರೆಹದಲ್ಲಿದ್ದ "ಯುರೋಪಿನಲ್ಲಿ ಅಳಿದ ಫೇಸಿಸ್ಟ್ ಪದ್ಧತಿ ಹಿಂದುಸ್ತಾನದಲ್ಲಿ ತಲೆಯೆತ್ತಿದಂತಿದೆ" ಎಂಬ ಒಂದೇ ವಾಕ್ಯದಿಂದ ರಶ್ಯದ ಅಭಿಪ್ರಾಯದ ತೀಕ್ಷ್ಣತೆಯರಿಯಬಹುದು "ಅಧಿಕಾರ ಬಂತೆಂಬ ಉಭ್ರಮೆಯಿಂದ ತಮ್ಮ ತರುಣರನ್ನು ಲಕ್ಷಗಟ್ಟಲೆಯಲ್ಲಿ ಯುದ್ಧಾಹುತಿ ಕೊಡುತ್ತಿರುವ ಭಾರತೀಯರು ತಾವು ಪಡೆದ ಅಧಿಕಾರವೆಂತಹದೆಂಬುದನ್ನರಿಯುವಂತಾದುದು ಸಂತೋಷ" ಎಂದು ಜಪಾನೀ ಪತ್ರಿಕೆಗಳು ಗಹಗಹಿಸಿ ನಕ್ಕವು. ಬ್ರಿಟಿಷ್ ಪತ್ರಿಕೆಗಳು ಲೋರ್ಡ್ ವೇವೆಲರ ಮುಂಡಾಸಿಗೆ ಮತ್ತೊಂದು ಗರಿಯನ್ನು ಸಿಕ್ಕಿಸಿದುವು. ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿಯೇ ಬಹಿರಂಗವಾದ ಈ ಗುಟ್ಟನ್ನಾಧರಿಸಿ ಹಿಂದೂ ಮಹಾ ಸಭೆಯ ಪತ್ರಿಕೆಗಳಂತೂ ಮಹಾರಂಪಾಟವನ್ನೆಬ್ಬಿಸಿಬಿಟ್ಟುವು 'ಮುಸ್ಲಿಂ ಸದಸ್ಯರ ಕೈಯಲ್ಲಿ ಹಿಂದುಗಳ ಭವಿಷ್ಯ' 'ಔರಂಗಜೇಬನಾಳ್ವಿಕೆಯ ಪುನರುತ್ಥಾನ' 'ಹಿಂದುತ್ವದ ಬುಡಕ್ಕೆಲ್ಲ ಕೊಡಲಿ ಬೀಳುತ್ತಿದೆ'-ಹಿಂದೂ ಮತದಾರರು ಕಣ್ತೆರೆಯಲಿ'-ಒಂದೇ ಸವನೆ ರಣ ದುಂದುಭಿ ಬಾರಿಸಹತ್ತಿತು. ತತ್ಪರಿಣಾಮವಾಗಿ ಕೇಂದ್ರ ಎಸೆಂಬ್ಲಿಗೆ ಹಿಂದೂ ಸಭಾ ಪಕ್ಷವು ಅಧಿಕ ಸಂಖ್ಯೆಯಿಂದಾರಿಸಲ್ಪಟ್ಟಿತು. ಜಿನ್ನಾ, ಆಜಾದರನ್ನೆದುರಿಸಲು ಸಾವರ್ಕರ್, ಮೂಂಜೆ, ಮುಖರ್ಜಿಯವರೂ ಚುನಾವಣೆಗೆ ನಿಂತು ಗೆದ್ದು ಬಂದರು.

× × ×

1945ನೇ ದಶಂಬರ್ ಮೂರನೇ ತಾ. ರ. ಹೊಸ ಕೇಂದ್ರ ಎಸೆಂಬ್ಲಿಯ ಪ್ರಥಮ ಸಭೆ ಸೇರಿದೆ. ಪೂರ್ವ ವಿಧಿಗಳೆಲ್ಲಾ ಮುಗಿದು ಪ್ರಶ್ನೋತ್ತರಗಳ ಸರದಿ ಬಂದೊಡನೆ ವೀರ ಸಾವರ್ಕರರೆದ್ದು ಪ್ರಶ್ನಿಸಿದರು:- "ಪೆಂಟೀಸ್ ಡ್ರೂವರನ ವರದಿಯಿಂದ ತಿಳಿದು ಬರುವಂತೆ ಬೊಂಬಾಯಿಯುತ್ತರ ಭಾಗದಲ್ಲೆಲ್ಲಾ ಕೇವಲ ಮುಸಲ್ಮಾನರನ್ನೇ ಇರಗೊಡಿಸಿ ಪಾಕಿಸ್ತಾನ ಮಾಡಲು ಮಾನ್ಯ ಕಾನೂನು ಸದಸ್ಯರು 'ಹಿಂದೂ ಕಾನೂನಿ'ನಲ್ಲೇ ಬದಲಾವಣೆ ಮಾಡಲು ಬಯಸಿದುದು ನಿಜವೇ?"

ಜಿನ್ನಾ—"ನಾನು ಅಧಿಕಾರಕ್ಕೆ ಬರುವಾಗ ಪಾಕಿಸ್ತಾನಕ್ಕಾಗಿಯೇ........"

ಅಧ್ಯಕ್ಷರು ನಡುವೆ ಬಾಯಿ ಹಾಕಿ-"ಪ್ರಶ್ನೆಯು ಗವರ್ನರ್ ಜನರಲರ ಅಧಿಕಾರಕ್ಕೆ ಸಂಬಂಧಪಟ್ಟದ್ದಿರುವುದರಿಂದ ನಿಯಮ ಬಾಹಿರವಿದೆ".

ಸಾವರ್ಕರ್-"ಪಾಕಿಸ್ತಾನವೆಂದು ಕೆಲವರ ಮನಸ್ಸಿನಲ್ಲಿರುವ ಪ್ರದೇಶದ ಒಟ್ಟು ಕಂದಾಯವೆಷ್ಟು?"

ಲಿಯಾಖತ್—"ಪಾಕಿಸ್ತಾನದ' ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳದ ಯಾವ ಪ್ರಶ್ನೆಯನ್ನೂ ನಾವು ಉತ್ತರಿಸಲು ಬಾಧ್ಯರಲ್ಲ"-ಮುಸ್ಲಿಂ ಸದಸ್ಯರ ಕರತಾಳ; ಹಿಂದೂ ಮೆಂಬರರ 'ಶೇಮ್ ಶೇಮ್' ಬೊಬ್ಬೆ

ಅಧ್ಯಕ್ಷರು--(ಗಂಭೀರವಾಗಿ) "ಸದ್ಯ ಅಧಿಕಾರ ಸ್ಥಾನದಲ್ಲಿರುವವರೂ, ವಿರುದ್ಧ ಪಕ್ಷದ ನಾಯಕರಾಗಿ ನಿಂತಿರುವವರೂ ಆಯಾಯಾ ಸ್ಥಾನಗಳಿಗೆ ಹೊಸಬರೆಂಬುದು ನಿಜವಾದರೂ, ಅಂಥವರ ಮೇಲಿನ ರಿಯಾಯತಿಗಾಗಿ ಸಭಾ ನಿಯಮಗಳನ್ನು ಮೀರಲಾಗುವುದಿಲ್ಲವೆಂದು ಕಂಠೋಕ್ತವಾಗಿ ಹೇಳಲಿಚ್ಛಿಸುತ್ತೇನೆ. ಇದು 'ಪಾಕಿಸ್ತಾನ್' ಎಸೆಂಬ್ಲಿಯಲ್ಲವೆಂಬುದು ಸದಸ್ಯರಿಗೆ ಗೊತ್ತಿದ್ದೂ ಇಂಡಿಯದ ಎಸೆಂಬ್ಲಿಯಲ್ಲಿ ಆ ಸಂಬಂಧದ ಪ್ರಶ್ನೋತ್ತರಗಳನ್ನು ನಡೆಸುವದು ವಿಲಕ್ಷಣವಿದೆ"

ಸಭೆಯೊಮ್ಮೆ ಶಾಂತವಾಯಿತೆನ್ನುವಾಗಲೇ ತಮ್ಮಲ್ಲಿರುವ ಕ್ರಮಬದ್ಧ ಸವಾಲುಗಳನ್ನೇ ಛಡಾಯಿಸಲು ಒಂದೆಡೆಯಿಂದ ಡಾ| ಮೂಂಜೆ, ಮತ್ತೊಂದೆಡೆಯಿಂದ ಡಾ. ಶ್ಯಾಮ ಪ್ರಸಾದ ಮುಖರ್ಜಿಯವರೆದ್ದಿದ್ದರು ಸಾವರ್ಕರರೂ ಕುಳಿತುಕೊಂಡಿರಲಿಲ್ಲ.

ಮುಸಲ್ಮಾನ್ ಗುಂಪಿನಿಂದ, ನಾಯಿ, ನರಿಗಳ ಕೂಗು ಈ ತ್ರಿಮೂರ್ತಿಗಳನ್ನು ಸ್ವಾಗತಿಸಿತು; ಅದರ ಬೆನ್ನಲ್ಲೇ ಮೂವರ ಬಾಯಿಯಿಂದ ಮೂರು ಸವಾಲುಗಳು ಒಂದೇ ಬಾರಿ ಹೊರಟುದರಿಂದ ಶಬ್ದಗಳ ಜಡಿ ಹಿಡಿದಂತಾಗಿ ಅವುಗಳ ಒಟ್ಟರ್ಥ ಯಾರಿಗೂ ಆಗಲಿಲ್ಲ; ಸರಕಾರೀ ಸ್ಥಾನದವರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಮೂವರು ಮಂತ್ರಿಗಳು ಒಂದೇ ಬಾರಿ ಉತ್ತರಿಸಿದರಾಗುತ್ತಿತ್ತಾದರೂ ಅಧಿಕಾರೀ ಸದಸ್ಯರೊಳಗೆ ಅಂತಹ ಏಕಕಂಠವಿರಲಿಲ್ಲ. ಆ ಮೇಲೆ ಡಾ| ಮುಖರ್ಜಿಯೊಬ್ಬರೇ ಕೇಳಿದರು:-"ಭಾರತ ಸ್ವಾತಂತ್ರ್ಯಕ್ಕಾಗಿ ದೊರೆತ ಪಕ್ಷ ಪ್ರಮುಖರ ಸರಕಾರವೀಗ ಸ್ಥಾಪಿಸಲ್ಪಟ್ಟಿರುವುದರಿಂದ 'ರಾಷ್ಟ್ರಧ್ವಜವಾವುದೆಂಬುದನ್ನು ಎಗ್ಸಿಕ್ಯೂಟಿವ್ ಕೌನ್ಸಿಲ್ ನಿರ್ಧರಿಸಿರುವದೇ?"

ಜಿನ್ನಾ—ಸ್ವತಃ ಸಿದ್ಧವಾಗಿರುವ ಅದನ್ನು ಕೌನ್ಸಿಲು ನಿರ್ಧರಿಸಬೇಕೆಂದಿಲ್ಲ ಬೊಂಬಾಯಿಯಿಂದ ದಕ್ಷಿಣ ಭಾಗಕ್ಕೆ ತ್ರಿವರ್ಣ ಧ್ವಜವೂ ಉತ್ತರ ಭಾಗಕ್ಕೆ ಲೀಗ್ ಧ್ವಜ.....

ತನ್ನ ಹೊಟ್ಟೆ ನೋವು ಗುಣವಾಗದ ದೆಸೆಯಿಂದ ಉತ್ತರಿಸಲು ಹಿಂದಾಗಿದ್ದ ಗೃಹ ಸದಸ್ಯ ಪಟೇಲರು ಜಿನ್ನರ ಕಡೆಗ ತಿರುಗಿ--"ಅದು ನನ್ನ ಖಾತೆಗೆ ಸಂಬಂಧ ಪಟ್ಟ ಪ್ರಶ್ನೆ."

ಜಿನ್ನಾ—"ಅಲ್ಲ; ತತ್ಕ್ಷಣ ಮತ್ತು ಕಾನೂನುಬದ್ಧವಾಗಿ ಅದನ್ನು ಉತ್ತರಿಸುವ ಅಧಿಕಾರ ನನ್ನದೇ"

ಪ್ರಸಾದ್—"ಅಲ್ಲವೇ ಅಲ್ಲ; ಅದು ಒಳ ರಾಷ್ಟ್ರದ ಪ್ರಶ್ನೆ, ಗೃಹಖಾತೆಗೇ ಸೇರಿದುದು."

ತಾರಾಸಿಂಗ್—"ಬಹು ಸಂಖ್ಯಾತರ ಧ್ವಜದಡಿಯಲ್ಲಿ ಸೇರಲು ಅಲ್ಪ ಸಂಖ್ಯಾತರು ಸಿದ್ಧರಿಲ್ಲದಿರಬಹುದು. ಅದ್ದರಿಂದ ಅಲ್ಪ ಸಂಖ್ಯಾತರ ಹಕ್ಕು ಬಾಧ್ಯತೆಗಳ ಅಂಶ ಅದರಲ್ಲಿ ಸೇರಿದಂತಿದೆ. ಇದು ವೈಸರಾಯರಿಗೆ ಸಂಬಂಧಪಟ್ಟ ಪ್ರಶ್ನೆ"

ಅಧ್ಯಕ್ಷ—"ನಾನು ಈ ವಾದವನ್ನೇ ಎತ್ತಿ ಹಿಡಿಯುತ್ತೇನೆ"

ಎಲ್ಲರೂ ಸ್ತಬ್ಧರಾದರು. ನೆಹರುಗಳ ಕಣ್ಣಲ್ಲಿ ನೀರಿಳಿಯಿತು. ಸರ್ದಾರರ ಹೊಟ್ಟೆನೋವು ಪ್ರಜ್ವಲಿಸಿತು. ರಾಜೇಂದ್ರರ ಉಬ್ಬಸ ಇಮ್ಮಡಿಸಿತು.

ರಾಷ್ಟ್ರಧ್ವಜದ ಅಧಿಕಾರವೂ ವೈಸರಾಯರಿಗೇ ಹೋಗಿದ್ದಿತು!

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

ವೇದವು ಸಾರುತ್ತಿದೆ:

"ಏಳಿ; ಎಚ್ಚರಗೊಳ್ಳಿ; ತಿಳಿದವರ ಕಾಲಿಗೆ ಬಿದ್ದು ತಿಳಿದುಕೊಳ್ಳಿ" ಎಂದು.

ತಿಳಿದವರನ್ನೆಲ್ಲಿ ಹುಡುಕೋಣವೆಂದು ನೀವು ಗೊಣಗಾಡ ಬೇಕಾದ್ದಿಲ್ಲ. ತಿಳಿದವ, ಹಿರಿಯನೆಂದು ಎಲ್ಲರಿಂದಲೂ ಮನ್ನಣೆಗೊಂಡಿರುವ ಶ್ರೀಕೃಷ್ಣನ ಪ್ರತಿನಿಧಿ—ಗೀತೆ. ಶ್ರೀಕೃಷ್ಣನು ತನ್ನ ಉಪದೇಶದ ಜೀವಕಳೆಗಳನ್ನೆಲ್ಲ ಗೀತೆಯಲ್ಲಿ ಪ್ರತಿಷ್ಠೆಮಾಡಿದ್ದಾನೆ. ಕನ್ನಡನಾಡಿನ ಪ್ರತಿಯೊಬ್ಬರೂ—ಹುಡುಗರು, ಹೆಂಗಸರು ಕೂಡ ತಪ್ಪದೆ ಮನುಷ್ಯತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ

ಹೊಸಕೆರೆ ಚಿದಂಬರಯ್ಯನವರು ಬರೆದ ಗೀತೆಯ ಸಮೂಲ ಭಾಷಾಂತರವು "ಗೀತೆಯ ಕೈಗನ್ನಡಿ"

ಗೀತೆಯ ಕೈಗನ್ನಡಿ

ಯಾಗಿ ಪ್ರಕಟವಾಗಿದೆ. ಅದನ್ನು ಎಲ್ಲರೂ ಓದಬೇಕಾಗಿದೆ.

—'ಬೇರೆ ರಾಷ್ಟ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು' ಎಂದು ವರಾಹ ಪುರಾಣವೂ ಸಾರುತ್ತಿದೆ.

ಸರ್ವರಿಗೂ ಕೊಳ್ಳಲು ಅನುಕೂಲವಾಗುವಂತೆ 400ಕ್ಕೂ ಮಿಕ್ಕಿದ ಪುಟಗಳುಳ್ಳ ಈ ಪುಸ್ತಕದ ಬೆಲೆ

ಬರೇ ಎಂಟಾಣೆಯಾಗಿದೆ.

ಹನ್ನೆರಡಾಣೆ ಸ್ಟ್ಯಾಂಪು ಕಳುಹಿಸಿದರೆ ಒಂದು ಪ್ರತಿಯನ್ನು ಕಳುಹಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟದೆ.)



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ. ಕ**

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ, ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನ್ನಿಸಲಾಗುವುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ - ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. ?. SHETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24
ವಾರ ೪೬] Founder SRI A. B. SHETTY. [No. 46

ಉಡುಪಿ • 26—7—1945 • ಮಂಗಳೂರು.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಗಂಟಲು ಕೆರೆತಗೆ, ಧುಳ, ಹಲ್ಲು ನೋವುಗಳಿಗೂ ಎದೆನೋವು, ಛಾಯೆಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಪುರುಳಕ್ಕಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

CALL IT A MARVELL OR WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,
Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ— ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲಿ **53** ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸಹಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ಅಪೇಕ್ಷಿಸುವೆವು.

ಮೂಲಧನ ರೂಪಾಯಿ **26** ಲಕ್ಷ. **ಕೆನರಾ ಬೇಂಕ್ ಲಿಮಿಟೆಡ್.**
ಕ್ಷೇಮನಿಧಿ ರೂಪಾಯಿ **10** ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED

(Incorporated in British India, liability of Members Limited.)

THE
VIJAYA BANK LTD.,

Head Office: **MANGALORE.**

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—

Coondapoor, Brahmavar. Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ ಧರ್ಮ ಛತ್ರ

ಇದೇ ತಾ. 8—10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,
ಉಡುಪಿ ಬೋರ್ಡಿಂಗ್ ಎಂಡ್ ಲಾಡ್ಜಿಂಗ್, ಮಧುರ.

ಛಾಯಾ ವಿನೋದದಲ್ಲಿ

ಸಿಮ್ಲದಲ್ಲಿ ಮೂರು ವಾರ

'ದುರ್ಬೀನುಧಾರಿ'ಯಿಂದ.

ಸಿಮ್ಲಾ ಸಮ್ಮೇಲನ ವಿಜಯಿಯಾಗುತಿದ್ದರೆ ಒಂದೇ ಬದಿಯಲ್ಲಿ ಮೀಸೆಯಿರುವ ವಿಚಿತ್ರ ಪ್ರಾಣಿಗಳನ್ನೀಗ ಕಾಣಲಾಗುತಿತ್ತು; "ಗ್ರಹಣದ ದಿನವೇ ಆರಂಭಿಸಿದ್ದಾರೆ; ಈ ಕಾರ್ಯ ಗೆದ್ದರೆ ನಾನೊಂದು ಬದಿಯ ಮೀಸೆ ಬೋಳಿಸಿಕೊಳ್ಳುತ್ತೇನೆ"—ಎಂದು ಮೀಸೆಯ ಮೇಲೆ ಕೈಯಾಡಿಸಿ ಪಂಥ ಹಾಕಿದವರೆಷ್ಟೋ ಮಂದಿ. "ಇದು ಸಂವತ್ಸರ ಯಾವುದು ನೆನಪಿದೆಯೇ?—ಪಾರ್ಥಿವ. ಪಂಥವೇ ಮುಖ್ಯ. ಈ ವರುಷದಲ್ಲಿ ಹಠವೇ ಗೆಲ್ಲಬೇಕು ಹೊರತು ಕಾರ್ಯವಲ್ಲ" ಎಂದು ಸಮ್ಮೇಲನಾಂತ್ಯವನ್ನು ಕಂಡ ಮೇಲೆ ಕೆಲವರಂದಿದ್ದಾರೆ. ಮುಂದಿನ ಸಂವತ್ಸರ ವ್ಯಯ—ಆಗ ಲೋರ್ಡ್ ವೇವೆಲರು ಮಾಡಿದ್ದೆಲ್ಲಾ ವ್ಯಯವಾಗಿ ಉಳಿತಾಯ ಸೊನ್ನೆಯಾದೀತು. ಆ ಮೇಲಿನದು ಸರ್ವಜಿತು. ಆ ವರುಷ ಲೋರ್ಡ್ ವೇವೆಲರು ಎಲ್ಲರನ್ನೂ—ಈ ಬಾರಿ ಗೆಲ್ಲಲಾಗದ ಜಿನ್ನರನ್ನೂ ಕೂಡಾ-ಜಯಿಸುವ ಸಂಭವವಿದೆ. ಅಥವಾ ಸಂವತ್ಸರವೇ ಸರ್ವಜಿತುವಾಗಿ, ಈಗಿನ ಎಲ್ಲಾ ಧುರೀಣರನ್ನು ಮುಗಿಸಿಬಿಡಲೂ ಬಹುದು-ಒಂದೊಮ್ಮೆಗೆ ಹಾಗಾದರೂ ಬೇರೆಯವರಿಂದ ಕೆಲಸವಾಗಬಹುದೇನೋ. ಆದರೆ..........ಭಾರತವು ವೈಭವ ಸಂಪಾದಿಸಬೇಕಾದರೆ ಸ್ವಸ್ತಿ ಶ್ರೀ ವಿಭವನಾಮ ಸಂವತ್ಸರವೇ ಬರಬೇಕಾದೀತು. ಇಂದಿನ ಆಹಾರಾಭಾವ 'ಬಹುಧಾನ್ಯ' ಬರುವ ವರೆಗೂ ಉಳಿದೀತು. ಆಹಾರವಿಲ್ಲದೆ ಸತ್ತ ಮಿಲಿಯ ಮಂದಿಯ ಸಂಖ್ಯೆ ಪುನಃ ತುಂಬಬೇಕಾದರೆ 'ಪ್ರಜೋತ್ಪತ್ತಿ'ಯೇ ಬರಬೇಕು. ಆದರೊಂದು ಮಾತು. ಈ ಸ್ವಸ್ತಿ ಶ್ರೀ ಶುಭನಾಮ ಸಂವತ್ಸರಗಳೇ ನಮ್ಮ ಪಾಲಿಗಿರುವದಲ್ಲ—ಅವುಗಳಿಗಿಂತ ಮುಂದಾಗಿ ರುಧಿರೋದ್ಗಾರಿ, ರಕ್ತಾಕ್ಷಿ, ಕ್ರೋಧನ, ಕ್ಷಯ, ಇತ್ಯಾದಿಗಳೂ ಬರುವಾಗ ಕ್ರಾಂತಿ, ವೈಮನಸ್ಸು, ರಕ್ತಪಾತ, ಸರ್ವನಾಶವಾಗದೆ ಉಳಿದರೆ ತಾನೇ ಮಿಕ್ಕ ಮಾತು? ಸಿಮ್ಲಾ ಸಮ್ಮೇಲನದ ಅಪಜಯದ ಪಾಪವೀಗ ಚೆಂಡಾಡಲ್ಪಡುತ್ತಿದೆ. ಆಜಾದರು ಜಿನ್ನರೆಡೆಗದನ್ನು ಬಿಸಾಡಿದರೆ, ಜಿನ್ನರದನ್ನು 'ಗಾಂಧಿ ಹಿಂದೂ ಕಾಂಗ್ರೆಸ್'ನ ಕಡೆಗೆ ತುಳಿದು ಹಾರಿಸಿದ್ದಾರೆ; ಹೇವಿಳಂಬಿ, ವಿಳಂಬಿ, ವಿರೋಧಿ-ಇತ್ಯಾದಿ ಸಂವತ್ಸರನಾಮಗಳೇ ಬಿರುದುಗಳಾಗಿ ಒಬ್ಬರಿಂದೊಬ್ಬರಿಗೆ ದೊರೆಯುತ್ತಿವೆ. ಅಂದ ಮೇಲೆ ಕೆಲಸ ಕೆಡಿಸಿದುದು ಮತ್ಸರ ಹೊರತು ಸಂವತ್ಸರವಲ್ಲ-ದೋಷ ಗ್ರಹಣವಲ್ಲದೆ ಚಂದ್ರಗ್ರಹಣವಲ್ಲ. ಹಿಟ್ಲರ್ ಯುಗ, ಜಿನ್ನಾ ಯುಗಗಳ ಹೊರತು ಬೇರೆ ಕಾಲ ಭೇದಗಳೇನು ಮಾಡಬಲ್ಲುವು?

೦೦ ೦೦

ಅಥವಾ ಸಮ್ಮೇಲನ ನಿಷ್ಫಲವಾಯಿತೆನ್ನುವದೇಕೆ? ಸಮ್ಮೇಲನದ ಖರ್ಚೆಲ್ಲಾ ಸರಕಾರದ್ದೇ. ಅದರ ಲೆಕ್ಕಪತ್ರವನ್ನು ಹಿಂದೀ ಸರಕಾರವು ಪ್ರಕಟಿಸುವದೆಂಬ ನಿರೀಕ್ಷೆಯಿದೆ. ಇಲ್ಲವಾದರೆ, ಅದೆಷ್ಟು ಎಂಬ ಪ್ರಶ್ನೆ ಎಸೆಂಬ್ಲಿಯಲ್ಲಿ ಬರುವದಂತೂ ಖಂಡಿತ. ವಿಮಾನ—ಕಾರು-ರಿಕ್ಷಾ-ಕುದುರೆ—ಬಾಡಿಗೆ, ಸಿಸಿಲ್ ಹೊಟೆಲಿನ ಬಿಲ್ಲು, ಕ್ಷೌರಿಕ-ಮಡಿವಾಳ-ಸೇವಕರ ಕೂಲಿ, ಇತ್ಯಾದಿ ಇತ್ಯಾದಿ ಎಲ್ಲಾ ವಿವರಗಳೂ ಆ ಪಟ್ಟಿಯಲ್ಲಿ ಬರಬಹುದು. ಆದರದು ಕೇವಲ ವ್ಯಯದ ಪಟ್ಟಿಯೇ ಆಗುವಂತಿಲ್ಲ—ಆಯವ್ಯಯ ಪಟ್ಟಿಯನ್ನಿಸೀತು. 'ನಷ್ಟ ಪರಿಹಾರ' ಕೊಡುವ ಸಂಪ್ರದಾಯವಿಲ್ಲವಾದರೆ ಸಮ್ಮೇಲವದ ವೆಚ್ಚವೆಲ್ಲಾ ತಂತೀ ಇಲಾಖೆಯಿಂದ ಸರಕಾರಕ್ಕೆ ಉತ್ಪನ್ನವಾದೀತೆಂದು ನಮ್ಮ ಅಂದಾಜು. ಮಾನನಷ್ಟ, ಧನನಷ್ಟ ಕೊಡಲು ಸರಕಾರವು ಬಾಧ್ಯವಿದೆಯಾದರೆ, ಅಲ್ಲಾಭಕ್ಸ್ ಕೊಲೆ ವ್ಯವಹರಣೆಯ ವಕಾಲತ್ ಫೀ ತಪ್ಪಿದ ಭುಲಾಭಾಯಿಗಳಿಗೊಂದು 75 ಸಾವಿರವನ್ನು ಮೊದಲು ತೆಗೆದಿಡಬೇಕು. ಇನ್ನು ಮೂರು ವಾರ ಉದ್ಯೋಗ ಬಿಟ್ಟಿದ್ದ ಯಾರಾರಿಗೆ ಎಷ್ಟೆಷ್ಟು ನಷ್ಟವಾಗಿರಬಹುದೋ! ಮಾನನಷ್ಟಕ್ಕಾಗಿ ದೊಡ್ಡದೊಂದು ಮೊತ್ತವನ್ನು ಮಿ. ಜಿನ್ನರಿಗೆ ಕೊಡಬೇಕು. 'ಅಪಜಯಕ್ಕೆ ಅವರೇ ಹೊಣೆ' ಎಂದು ನಿಂದಿಸಿ ಅವರ ಮಾನಭಂಗವಾಗಿದೆ. ಮಾನನಷ್ಟ ಕೇಳಲು ಕಾಂಗ್ರೆಸಿಗರಿಗೆ ಹಾದಿಯಿರುವಂತೆಯೇ ಅದನ್ನು ನಿರಾಕರಿಸುವ ಉಪಾಯ ಸರಕಾರಕ್ಕೂ ಇದೆ "ನಿಮ್ಮನ್ನು ಬಯಲು ವಲಯದ ಜೈಲುಗಳಿಂದ ಸಿಮ್ಲಾ ಗುಡ್ಡಕ್ಕೆ ಸರಕಾರವು ವರ್ಗಾಯಿಸಿತೆಂದು ತಿಳಿದುಕೊಳ್ಳಬೇಕು; ನಿಮ್ಮೆಲ್ಲರ ಆಗಿನ ವೆಚ್ಚದಂತೆಯೇ ಈಗಿನ ವೆಚ್ಚವೂ ಸರಕಾರದ್ದೇ ಆದ್ದರಿಂದ, ವೈಸರಾಯರಿಗೆ ಬಗ್ಗಿ ನಡೆದು ಅವಮಾನಿತರಾದುದಕ್ಕಾಗಿ ಪರಿಹಾರ ಕೊಡುವಂತಿಲ್ಲ" ಎಂದು ಕಾಂಗ್ರೆಸಿಗರಿಗಂದರಾಯಿತು. ಸಿಮ್ಲದಲ್ಲಿ ಜಿನ್ನರು ಅವಮಾನಿಸಲ್ಪಟ್ಟರೋ, ಜಿನ್ನರಿಂದ ವೇವೆಲರು ಅವಮಾನಿತರಾದರೋ ಎಂಬುದರ ತೀರ್ಮಾನವನ್ನು ಪ್ರಿವ್ಹಿಕೌನ್ಸಿಲಿಗೊಪ್ಪಿಸಿದರೆ ಹಿಂದೀ ಸರಕಾರವೇ ಗೆಲ್ಲಬಹುದೆಂಬ ನಂಬಿಕೆಯಿದೆ. ಆದ್ದರಿಂದ ಮಾನನಷ್ಟ, ಧನನಷ್ಟ ಪರಿಹಾರಗಳ ಬಾಬನ್ನು ಒತ್ತಟ್ಟಿಗಿಟ್ಟರೆ ಸಿಮ್ಲಾ ಸಮ್ಮೇಲನದ ಆಯ—ವ್ಯಯವು ಸರಿನಿಂತೀತು. ಅದರಲ್ಲೂ ಲೀಗ್ ಕಾರ್ಯಕಾರೀ ಸಮಿತಿಯು ತನ್ನ ವೆಚ್ಚವನ್ನೆಲ್ಲಾ ತಾನೇ ವಹಿಸುವೆನೆಂದು ಲೋರ್ಡ್ ವೇವೆಲರಿಗೆ ಬರೆದು ಸಿಸಿಲ್ ಹೋಟೆಲಿನ ಬಿಲ್ಲನ್ನು ನವಾಬರುಗಳ ಜೇಬಿನಿಂದಲೇ ಸಂದಾಯಮಾಡಿದಂತಿದೆ. ಅದನ್ನು ವಜಾ ಮಾಡಿಕೊಂಡರೆ ಸಿಮ್ಲಾ ವ್ಯಾಪಾರದಿಂದ ಸರಕಾರಕ್ಕೆ ಲಾಭಾಂಶ ವುಳಿಯಬಹುದು. ಮತ್ತೆ ನಷ್ಟವಾರಿಗೆ? ಮೂರುಮೂರು ವರುಷ ಜೈಲಲ್ಲಿ ಕೊಳೆಯುತಿದ್ದವರನ್ನು ವಿಮಾನ ಹತ್ತಿಸಿ ಹಾರಾಡಿಸಿದುದು-ಸೆರೆಜೊಕ್ಕೆ ಬಿದ್ದು ಬೇಯುತಿದ್ದವರನ್ನು ಸಿಮ್ಲದ ತಂಪುಗಾಳಿ ತಿನ್ನಲು ಬಿಟ್ಟುದು-ಅಪಕಾರವಾಯಿತೆ? ಆ ಮೂರು ವರುಷದ ಬೇಗೆಗೆ ಈ ಮೂರೇ ವಾರದ ತಂಪು ಸಾಕು. ಯಾರೇಕೆ ಮರುಗಬೇಕು? ಆದರೂ ಲೋರ್ಡ್ ವೇವೆಲರು ಅತೀವ ನಿರಾಶೆಯಿಂದ ಕೊರಗುತಿದ್ದಾರೆಂದು ವೇವೆಲ ದಂಪತಿಗಳ ಅತಿಥಿಯಾಗಿದ್ದ ಪ್ರಸಿದ್ಧ ಬ್ರಿಟಿಷ್ ಲೇಖಕಿ ಮಿಸ್. ಸ್ಟಾರ್ಕ್ ನುಡಿದಿದ್ದಾಳೆ. ಅವರಾದರೂ ಯಾಕೆ ನಿರಾಶರಾಗಬೇಕು? ಹಿಂದಿನ ವೈಸರಾಯಿಗಳಂತೆ ಸಿಮ್ಲದಲ್ಲಿ ಸೆಸೆಕಾಲ ದೂಡುವ ಯೋಗ ಲೋರ್ಡ್ ವೇವೆಲರಿಗೊದಗಿದುದು ಈ ಬಾರಿಯೇ. ಯುದ್ಧಾರಂಭವಾದಂದಿನಿಂದ-ಪ್ರಾಯಶಃ ಆಕಾಶ ಧಾಳಿಯ ಭೀತಿಯಿಂದಾಗಿ-ಹಿಂದೀ ಸರಕಾರದ ಮೂಲ ಕಚೇರಿ ಸಿಮ್ಲಾ ಹತ್ತಿದುದಿಲ್ಲ. ಈ ಬಾರಿ ಸುಖವಾಗಿ ಹತ್ತಿ, ಎಲ್ಲರೊಂದಿಗೆ ಮೂರು ವಾರ ಮಝಾ ಮಾಡಿ ಕಳೆಗಳೆದುದಾಗಲಿಲ್ಲವೆ? ಎಲ್ಲರಿಗೂ ಶಾಂತಿಃ ಶಾಂತಿಃ ಶಾಂತಿಃ! ಸಿಮ್ಲಾ ಸಮ್ಮೇಲನದ ಕಹಿ ಸ್ಮರಣೆಯನ್ನು ಬದಿಗಿಟ್ಟು, ಮಧುರ ಸ್ಮರಣೆಯನ್ನೇ ಮಾಡೋಣ. ಅದನ್ನಷ್ಟೇ ಈ ಲೇಖನದಲ್ಲಿಯೂ ಜ್ಞಾಪಿಸೋಣ.

೦೦ ೦೦

ಭಾರತದಲ್ಲಿ 'ಉನ್ನತ'ವಾದುದೆಲ್ಲವೂ ಬ್ರಿಟಿಷರ ಪಾಲಿನವು; ಹುದ್ದೆಗಳಿಂದ ಹಿಡಿದು ಭೂಭಾಗಗಳ ವರೆಗೂ ಹಾಗೇನೇ—ಸಿಮ್ಲವು ವೈಸರಾಯೀ ಕಚೇರಿಯ ಬೇಸಿಗೆ ನಿಲ್ದಾಣ—ಮದ್ರಾಸ್ ಸರಕಾರಕ್ಕೆ ಉಟಿಕಮಂಡ್ ಇದ್ದಂತೆ. ಇಂದಿನ ಬೋಂಬುಯುಗದಲ್ಲಿ ಸಿಮ್ಲದ ತಂಪು ಹವೆಯನ್ನು ವೈಸರಾಯಿಗಳು ಅಪೇಕ್ಷಿಸದಂತಾಗಿತ್ತು; ಆದರೆ ಹಿಂದೀ ರಾಜಕೀಯದ ಉರಿ ನಿವಾರಣೆಗಾಗಿ ಲೋರ್ಡ್ ವೇವೆಲರು ಅದರ ಆಶ್ರಯವನ್ನೇ ಪಡೆಯಬೇಕಾಯಿತು. ಸರಿ, ಎಲ್ಲರೂ ಸಿಮ್ಲಾ ಹತ್ತಿದರು. ಆ ನಾಲ್ಕು ಸಾವಿರ ಅಡಿ ಎತ್ತರದ ಹಿಮಾಲಯದ ತಪ್ಪಲಲ್ಲಿ—ಕಣಿವೆ ಪರ್ವತ ಸಾಲುಗಳ ಅತಿ ಮನೋಹರ ಭೂಪರದೆಯ ಪಕ್ಕದಲ್ಲಿ—ಮೂರು ವಾರ ಕಳೆದರು. ಈ ಅವಧಿಯಲ್ಲಿ ಸಿಮ್ಲದ ಹೆಸರು ಇಡೀ ಲೋಕದಲ್ಲಿ ಪರಿಸಲ್ಪಟ್ಟಿತು; ಭಾರತದಲ್ಲಂತೂ 'ಗೋವಿಂದಾ' ಹಾಕುವವನಿಗೂ 'ಅಲ್ಲಾ'ಎನ್ನುವವನಿಗೂ ಸಿಮ್ಲಾ ನಾಮಸ್ಮರಣೆಯೇ ಗತಿಯಾಯಿತು. 'ಹತ್ತಿಕ್ಕಿದ ಶಕ್ತಿ ಹತ್ತು ಪಾಲೇರುವದು' ಎಂಬ ಗಾದೆ ನಿಜವಾಯಿತು. ಹಲವು ವರುಷಗಳಿಂದ ತನ್ನ ಪ್ರಾಮುಖ್ಯತೆ ಕಳಕೊಂಡಿದ್ದ ಸಿಮ್ಲವೊಂದೇ ಬಾರಿ ಲೋಕ ಪ್ರಾಮುಖ್ಯತೆ ಪಡೆಯಿತು. ಅದರಲ್ಲೂ ಅವುಗಳನ್ನು ಕಟ್ಟಿದ ಶಿಲ್ಪಿಗಳ ಕೈಗುಣವೇನೋ ಎಂಬಂತೆ ಅಲ್ಲಿಯ ಕೆಲವು ಕಟ್ಟಡಗಳ ಹೆಸರುಗಳು ಜನಜನಿತವಾಗಿ ಹೋದುವು. ವೈಸರಾಯೀ ಭವನ, ಮಾನೋರ್ ವಿಲ್ಲೆ, ಸಿಸಿಲ್ ಹೊಟೆಲ್, ಆಮ್ಸ್‌ಡೆಲ್, ಇವುಗಳಲ್ಲಿ ಮುಖ್ಯವಾದುವು 'ಅದಕ್ಕೆ ಗರ್ಭದಾನ ಮಾಡಿದವ ನಾನಲ್ಲ; ಆದರೆ ಸಮ್ಮೇಲನವು ಸತ್ಸಂತಾನವನ್ನು ಹೆರಲಿ, ಶುಭ ಜನನವಾಗಲಿ' ಎಂದ ನವಾಬಝಾದಾ ಲಿಯಾಖತರ ಭಾಷೆಯಲ್ಲಿ ಹೇಳುವದಾದರೆ ವೈಸರಾಯೀ ಭವನವೇ ಆ ಪ್ರಸೂತಿಗೃಹ. ಸಮ್ಮೇಲನ ಸೇರಿದುದು ಅಲ್ಲಿಯೇ—ವೈಸರಾಯರು ಪತ್ನಿ ಪರಿವಾರ ಸಮೇತ ಇರುವದೂ ಅಲ್ಲಿಯೇ. ವೈಭವದ ಮಟ್ಟಿಗೆ ಅದಕ್ಕೆರಡನೆಯದು ಸಿಸಿಲ್ ಹೊಟೆಲ್. ಮಿ. ಜಿನ್ನರಿಂದಾರಂಭಿಸಿ ಮುಸ್ಲಿಂ ಲೀಗಿನ ಎಲ್ಲಾ ರಾಜ ತೀವಿಯವರೂ, ಖಾನ್ ಸಾಹೇಬರಂತಹ ಕೆಲವು ಕಾಂಗ್ರೆಸ್ ಪ್ರಮುಖರೂ ಬಿಡಾರವಿದ್ದುದು ಅಲ್ಲಿಯೇ. ಮೂರನೆಯದು 'ಆಮ್ಸ್‌ಡೆಲ್' ಇಲ್ಲಿದ್ದವರು ವೈಭವ ಜೀವನದ ಮಟ್ಟಿಗೆ ಮಧ್ಯಮ ವರ್ಗದವರು—ಮೌಲಾನಾ ಅಜಾದ್, ಪಂಡಿತ ನೆಹರು, ಪಂಡಿತ ಪಂತ್ ಮೊದಲಾದವರು; ಅಂದೊಂದು ಬಂಗಲೆ. ನಾಲ್ಕನೆಯದಾದ ಮನೋರ್ ವಿಲ್ಲೆ ಆಶ್ರಮ ಜೀವಿಗಳದು. ಗಾಂಧಿಜೀಯ ನಿವಾಸ ಇಲ್ಲಿಯೇ. ಮನೆಯೇನೋ ರಾಜ ಕುಮಾರಿ ಅಮೃತ ಕೌರಳದು. ಆದರೆ ಮೂರು ವಾರದಲ್ಲಿ ಅದರ ಸರ್ವಾಧಿಕಾರಿ ಈ ಸನ್ಯಾಸಿಯದಾಗಿ ಹೋಗಿತ್ತು; ರಾಜೇಂದ್ರ ಪ್ರಸಾದ್, ವಲ್ಲಭಾಯಿ, ಕೃಪಲಾನಿಗಳು ಯಾವಾಗ ನೋಡಿದರೂ ಅಲ್ಲೇ ಇರುತಿದ್ದರು. ಆಮ್ಸ್‌ಡೆಲ್‌ಗೂ, ಮನೋರ್‌ವಿಲ್ಲೆಗೂ ಸುಮಾರು ಎರಡು ಮೈಲು ದೂರ. ಆದರೆ ಅಲ್ಲಿದ್ದವರಿಗೂ ಇಲ್ಲಿದ್ದವರಿಗೂ ಇದ್ದ ಸಂಬಂಧದಿಂದಾಗಿ, 'ಅಮೃತ ಕೌರಳಲ್ಲಿ ಅಡುಗೆಯಾದರೆ ಆಮ್ಸ್‌ಡೆಲ್‌ನಲ್ಲಿ ಹೊಗೆಯೇಳುತಿತ್ತು'!

೦೦ ೦೦

ಸಿಮ್ಲವು ತನ್ನೊಂದು ಸ್ಥಳ ಪಾವಿತ್ರ್ಯವನ್ನು ಕಾದುಕೊಂಡಂತಿದೆ. ಅದರ ಗಡಿಯೊಳಗೆ ಕಾರು ಚಲಾವಣೆಯೆಂದರೆ ಬಹುಶಃ ವೈಸರಾಯಿಯೊಬ್ಬನದೇ. ನಗರದ ಹೆಬ್ಬಾಗಿಲಲ್ಲೇ ವಾಹನ ಚಲಾವಣೆಗಳನ್ನು ನಿಲ್ಲಿಸಲಾಗುತ್ತದೆ. ಒಳಗಿನ ಚಲನೆವಲನೆಗಳೆಲ್ಲಾ ರಿಕ್ಷಾ ಮೂಲಕ; ಒಬ್ಬ ಮನುಷ್ಯನೆಳೆಯುವ ಬಂಡಿಯಲ್ಲಿ ಬೇರೊಬ್ಬ ಹತ್ತಬೇಕು. ಮಹಾನುಭಾವನೊಬ್ಬ ಕುರ್ಚಿಗೊರಗಿ ಕುಳಿತಂತೆ ಒಳಗಡೆ ಕಾಲು ನೀಡಿ ಕುಳಿತಿರುತ್ತಾನೆ—ಮನುಷ್ಯ ಮೃಗವೊಂದು ಅದನ್ನೆಳೆಯುತ್ತಾ ಹೋಗುತ್ತದೆ. ಗಾಂಧೀ, ಅಜಾದ್, ನೆಹರು, ಪಂತ್, ಪ್ರಸಾದ್-ಇವರೆಲ್ಲರನ್ನು ಹೊತ್ತ ರಿಕ್ಷದ ಭಾವಚಿತ್ರಗಳು ಬಂದಿವೆ. ಆದರೆ ಖಾನ್ ಸಾಹೇಬರೊಬ್ಬರು ಅದನ್ನು ಹತ್ತಿದುದಿಲ್ಲ "ಛೇ, ಮನುಷ್ಯನಿಂದೆಳೆಯಲ್ಪಡಲು ನಾನೂ ಮನುಷ್ಯನೇ-ದೇವನಲ್ಲ"—ಎಂದು. ಖಾನ್ ಸಾಹೇಬರಿಗೆ ರಿಕ್ಷವೆಂದರೆ ಭಾರೀ ಜಿಗುಪ್ಸೆ. ಗಟ್ಟಿ ದೇಹದ ಪಠಾಣ ಆ ಗಡಿನಾಡಿನ ನಾಯಕ-ಅವರನ್ನು ರಿಕ್ಷದಲ್ಲಿ ತುಂಬಿಸಿ ಎಳೆದವನ ತೋಳ ನರನಾಡಿಗಳೂ ಎಳೆಯುತಿದ್ದುವೇನೋ! ಆಜಾದ್ ಮತ್ತು ಪಂತರ ರಿಕ್ಷವೆಳೆದವರು ಹೆಚ್ಚು ಬಾಡಿಗೆ ಕೇಳಿರಬಹುದು. ಆ ಕೃತ್ಯ ಮಾಡಿದ್ದರಿಂದ ಜಿನ್ನರ ಆಯುಷ್ಯ ಕಡಿಮೆಯಾಗದಂತೆ ಅವರ ಆಯುರಾರೋಗ್ಯವರ್ಧನೆಗಾಗಿ ಪ್ರಾರ್ಥಿಸಲು ಒಂದು ಮಸೀದಿಯೂ ಅಲ್ಲಿದೆ ಹಿಂದೂ ಮಹಾಸಭೆಯವರು ಅಲ್ಲಿಗೆ ಹೋಗಿರಲಿಲ್ಲವಾದ್ದರಿಂದ ದೇವಸ್ಥಾನವೊಂದು ಅಲ್ಲಿ ಉಂಟೋ ಇಲ್ಲವೋ ಗೊತ್ತಿಲ್ಲ. ಸಮ ವಸ್ತ್ರಧಾರೀ ಸ್ವಯಂಸೇವಕರು ಸಾಲುಗಟ್ಟಿ ಅಲ್ಲಿ ಸಂಚರಿಸಬಾರದೆಂಬ ನಿರ್ಬಂಧವಿದೆ. ಈ ಗುಟ್ಟು ಗೊತ್ತಾದುದು ಜಿನ್ನರ ಸ್ವಾಗತಕ್ಕೆ ಲೀಗಿನವರು ಮಾಡಿದ್ದ ಮೆರವಣಿಗೆಗೆ ಪ್ರತಿಬಂಧ ಬಿದ್ದಾಗಲೇ. ಗುಡ್ಡದೆತ್ತರ ಸಾಕಾಗದೆ ಅಲ್ಲಿಯೂ ಕುದುರೆ ಹತ್ತಿದ ಪ್ರಮುಖರೊಬ್ಬರಿದ್ದಾರೆ-ಪಂಡಿತ ನೆಹರು. ಆದರೆ ಅವರು ಏರಿ ಕುಳಿತಂತೆ, ತಗ್ಗಿಗೂ ಇಳಿದಿದ್ದರು. ಅಲ್ಲಿಯ ಹೊಲಸು ಪ್ರದೇಶವಾದ ತೋಟಿಗಳ ಕೇರಿಯ ಸ್ಥಳ ತನಿಖೆ ನಡೆಸಿ ಬಂದಿದ್ದರು. 'ನಾವು ದೊಡ್ಡದೊಡ್ಡ ಬಂಗಲೆಗಳಲ್ಲಿರುವಾಗ ನಮ್ಮಂತಹ ಮನುಷ್ಯರೇ ಅತ್ಯಸಹ್ಯವಾದ ಕೊಳಕು ಕತ್ತಲೆ

(೧೧ನೇ ಪುಟ ನೋಡಿರಿ.)

ಸಿಮ್ಲಾ ಪರಾಭವದ ಪ್ರತಿಧ್ವನಿ.

ಯಾರ ಅಭಿಪ್ರಾಯ ಹೇಗಿದೆ?

ರಾಷ್ಟ್ರೀಯ ಭಾವ

"ಸಿಮ್ಲಾ ಸಮ್ಮೇಲನವು ಕಿಟಕಿಯೊಂದನ್ನು ತೆರೆದಿತ್ತು. ನಮಗದರ ಮೂಲಕ ಮುಂದಿನ ಹಾದಿ ಮಾತ್ರ ಕಂಡು ಬಂದಿತ್ತು; ಅದು ಗೆಲ್ಲುತಿದ್ದರೆ ಪರಿಸ್ಥಿತಿ ಬೇರೆಯೇ ಆಗುತಿತ್ತಾದರೂ ಸೋತುದಕ್ಕಾಗಿ ಚಿಂತಿಸಬೇಡಿ".

—ನೆಹರು.

"ಹೇಗಾಗುತ್ತಿದ್ದರೂ ಸಿಮ್ಲಾ ಸಮ್ಮೇಲನದ ಅದೃಷ್ಟದಲ್ಲಿ ಅಪಜಯವು ಕಟ್ಟಿಟ್ಟದೆಂದು ಸಧೈರ್ಯವಾಗಿ ಹೇಳುತ್ತೇವೆ. ಆದರ ಇಂದಿನ ಪರಾಭವಕ್ಕಾಗಿ ದುಃಖ ಅಥವಾ ನಿರಾಶೆಗೊಳ್ಳುವ ಆಗತ್ಯವಿಲ್ಲ ಕಾಂಗ್ರೆಸು ಪಾಕಿಸ್ತಾನ ಮತ್ತು ಸಮಾನ ಸ್ಥಾನಗಳ ವಿರುದ್ಧ ಎದ್ದೇಳಲಿ"

—ಹಿಂದೂ ಸಭಾಧ್ಯಕ್ಷ ಡಾ। ಮುಖರ್ಜಿ.

"ಮಿ. ಜಿನ್ನರಿಗೆ ಅನಗತ್ಯ ಪ್ರಾಮುಖ್ಯತೆ ಕೊಟ್ಟು ಸಮ್ಮೇಲನವನ್ನು ವಿಸರ್ಜಿಸಿ ಬಿಟ್ಟ ಲೋರ್ಡ್ ವೇವೆಲರ ಸ್ಥಿತಿಗಾಗಿ ಸಾವಿರ ಸಾವಿರ ಕನಿಕರ ಪಡಬೇಕು"

—ಖೋಜಾ ನಾಯಕ ಮಹಮ್ಮದ್ ಭೋಯಿ

"ಮಿ. ಜಿನ್ನರ ಧೋರಣೆ ಅವ್ಯವಹಾರ್ಯವಷ್ಟೇ ಅಲ್ಲ; ಶೋಚನೀಯ. ಅದೊಂದೇ ಕಾರಣಕ್ಕಾಗಿ ಸಮ್ಮೇಲನವನ್ನು ವಿಸರ್ಜಿಸಿದ ಲೋರ್ಡ್ ವೇವೆಲರ ವರ್ತನೆ ಅತ್ಯಂತ ಶೋಚನೀಯ"

—ಸಿ. ಎಸ್. ಸಪ್ರು.

"ಕೇಂದ್ರ ಮತ್ತು ಪ್ರಾಂತ್ಯಾಧಿಕಾರಗಳನ್ನೆಲ್ಲಾ ಮುಸ್ಲಿಂ ಲೀಗಿಗೆ ಬಿಟ್ಟು ಕೊಡುವದೊಂದೇ ಉಪಾಯ. ಮಿ. ಜಿನ್ನರಿಗೆ ಹಿಂದುಗಳ ಮೇಲೆ ಅಂತಹ ವೈಮನಸ್ಸೇನೂ ಇಲ್ಲ "ನನ್ನ ಖಾಸಗೀ ಸ್ನೇಹಿತರೆಲ್ಲಾ ಹಿಂದುಗಳೇ" ಎಂದೊಮ್ಮೆ ಜಿನ್ನರು ನನ್ನೊಡನೆಂದಿದ್ದರು. ಬಹು ಸಂಖ್ಯಾಕರು ಅಲ್ಪ ಸಂಖ್ಯಾಕ ಸ್ಥಾನ ಸೇರುತ್ತಾರೆಂದು ದೂರುವವರಿಗೆ ನಾನನ್ನುವದಿಷ್ಟೆ—ನಾವೀಗ ತೀರಾ ಅಲ್ಪ ಸಂಖ್ಯಾಕ ವಿದೇಶೀಯರ ಆಳ್ವಿಕೆಯಲ್ಲಿದ್ದೇವೆ. ಅವರ ಬದಲಿಗೆ ಇಡೀ ಲೋಕದ ಬ್ರಿಟಿಷರಿಗಿಂತ ಅಧಿಕ ಸಂಖ್ಯಾಕರಾದ ನಮ್ಮ ಸಹೋದರರಿಂದಲೇ ನಾವೇಕೆ ಆಳಲ್ಪಡಬಾರದು?"

—ಶ್ರೀ ಪ್ರಕಾಶ.

"ಸಿಮ್ಲಾ ಪರಾಭವವು ಈ ಮಹಾ ರಾಷ್ಟ್ರಕ್ಕೆ ದೊರೆತ ಯುದ್ಧಾಹ್ವಾನ. ಕ್ಷಿಪ್ರಾವಧಿಯಲ್ಲಿ ಸ್ವಾತಂತ್ರ್ಯ ದೊರೆಯುವ ಸರ್ವ ಪ್ರಯತ್ನಗಳನ್ನೂ ಈಗ ಕೈಕೊಳ್ಳಬೇಕು"

—ಕೊಂಡ ವೆಂಕಟಪ್ಪಯ್ಯ.

"ಐದು ಸ್ಥಾನಗಳನ್ನೂ ಲೀಗಿಗೆ ಕೊಡುತಿದರೆ ದೇಶ ಅಡಿಮೇಲಾಗುತಿರಲಿಲ್ಲ; ಜಿನ್ನರೊಪ್ಪಿಗೆ ಕೊಡುತ್ತಿದ್ದ ಮಾತ್ರಕ್ಕೆ ಪಾಕಿಸ್ತಾನವೂ ಮಾಯವಾಗುತಿದ್ದಿಲ್ಲ; ಈಗ ವೇವೆಲ್ ರಾಜ್ಯದಲ್ಲಿ ಪಾಕಿಸ್ತಾನ ಹುಗಿದು ಹೋಯಿತು"

—ಕಮ್ಯೂನಿಸ್ಟ್ ನಾಯಕ ಪಿ. ಸಿ. ಜೋಶಿ.

"ನನಗೆ ಸಮ್ಮೇಲನಗಳಿಂದ ಸ್ವಾತಂತ್ರ್ಯ ಬರುವದೆಂಬ ವಿಶ್ವಾಸವೇ ಇಲ್ಲ. ಸಿಮ್ಲಾ ಸಮ್ಮೇಲನದ ಪರಾಭವಕ್ಕೆ ಜಿನ್ನರ ದುರಾಗ್ರಹವೇ ಕಾರಣ"

—ಖಾನ್ ಸಾಹೇಬ್.

"ಜಿನ್ನರು ಎರಡು ತಲೆಮಾರಿನ ಮುಸಲ್ಮಾನರಿಗೆ ಅತಿ ದೊಡ್ಡ ಹಾನಿ ಮಾಡಿ ಹಾಕಿದರು. ಅವರು ಮುಸಲ್ಮಾನರಲ್ಲಿ ಹೆದರಿಕೆ ಮತ್ತು ನಿಕೃಷ್ಟತಾ ಭಾವನೆಯನ್ನು ನಿರ್ಮಿಸಿದ್ದಾರೆ"

—ನವಾಬ್ ಸಯ್ಯದ್ ಯಾರ್‌ಯಂಗ್ ಬಹದೂರ್.

"ಬ್ರಿಟಿಷ್ ರಾಜ್ಯದ ಬದಲು ಲೀಗ್ ಅಧಿಕಾರ ಬರಲಿದ್ದ ಈ ಯೋಜನೆ ನಿಷ್ಫಲವಾದುದಕ್ಕಾಗಿ ಚಿಂತೆ ಬೇಡ"

—ಸರ್. ವಿಜಯ.

"ಪಾಕಿಸ್ತಾನಕ್ಕೆ ಸಿಖ್ಖರ ಮೂಲಭೂತ ವಿರೋಧವಿದೆ. ಪಾಕಿಸ್ತಾನವು ಕಾಂಗ್ರೆಸ್-ಲೀಗ್ ಪ್ರಶ್ನೆಯಲ್ಲ. ಅದು ಮುಖ್ಯವಾಗಿ ಸಿಖ್ಖರಿಗೆ ಸಂಬಂಧಿಸಿರುವದರಿಂದ ಸಿಖ್-ಮುಸ್ಲಿಂ ಪ್ರಶ್ನೆ. ಮುಸಲ್ಮಾನರು ಹಿಂದುಗಳ ಆಳ್ವಿಕೆಗೊಪ್ಪಲಾರರಾದರೆ ಹಾಗೆಯೇ ಸಿಖ್ಖರು ಮುಸಲ್ಮಾನರ ಆಳ್ವಿಕೆಯನ್ನೂ ಒಪ್ಪಲಾರರು. ಸಿಖ್ಖರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಿಕ್ಕವರು ಪಾಕಿಸ್ತಾನವೀಯುತ್ತಾರಾದರೆ ಅದರೊಳಗೊಂದು ಸಿಖ್‌ಸ್ತಾನವನ್ನು ನಾವು ಕೇಳುತ್ತೇವೆ"

—ಮಾಸ್ಟರ್ ತಾರಾಸಿಂಗ್.

"ಎಲ್ಲಾ ಅಲ್ಪ ಸಂಖ್ಯಾಕರ ಮತ, ಭಾಷೆ, ಸಂಸ್ಕೃತಿಗಳಿಗೆ ರಕ್ಷಣೆ ದೊರೆಯಲಿ. ಆದರೆ ರಾಜಕೀಯಾಧಿಕಾರವು ಜಾತೀವಾರಾಗಿ ಹೋಗದಂತೆ ನೋಡುವ ಪಾಠವನ್ನು ಸಿಮ್ಲಾ ಸಮ್ಮೇಲನ ಹಿಂದುಗಳಿಗೆ ಕಲಿಸಿದೆ"—ಡಾ. ಖರೆ

"ಸಮ್ಮೇಲನದ ಜಯಾಪಜಯಗಳು ಜಿನ್ನರೊಬ್ಬರನ್ನೇ ಆಧರಿಸಿವೆ ಎಂಬುದು ತಿಳಿದಿದ್ದರೆ ಕಾಂಗ್ರೆಸ್ ನಾಯಕರದರಲ್ಲಿ ಭಾಗವಹಿಸುತ್ತಿರಲಿಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಲೀಗಿಗೆ ಮುಸಲ್ಮಾನರ ಏಕ ಪ್ರಾತಿನಿಧ್ಯ ಪಡೆಯುವ ಹಕ್ಕೂ ಇಲ್ಲ"—

—ರಾಫಿ ಕಿದ್ವಾಯಿ.

"ಒಮ್ಮೆ ಮುಸ್ಲಿಂ ಲೀಗನ್ನು ಅಲಕ್ಷಿಸಿಬಿಟ್ಟರೆ ಅದರ ಪ್ರಾಮುಖ್ಯತೆಯೆಲ್ಲಾ ಹೋಗಿಬಿಡುತ್ತದೆ"—

-ಶಿಯಾ ಸಮ್ಮೇಲನಾಧ್ಯಕ್ಷ ಅಲಿಝಹೀರ್

"ಚಳವಾಗಿ ನೋಡಿದರೆ ಈ ಅಪ್ರಾಗತಿಕ ಲೀಗಿಗೆ ಸರ್ವ ಮುಸಲ್ಮಾನರ ಪ್ರಾತಿನಿಧ್ಯವಿಲ್ಲವೆಂಬುದು ತಿಳಿದೀತು"—

—ಮಜ್ಲೀಸ್ ನಾಯಕ ಖಾನ್ ಬಹದೂರ್ ಶೇಖ್ ಮಹಮ್ಮದ್

"ಜಿನ್ನರನ್ನು ಮತಾಂತರಿಸುವ ಶಕ್ತಿ ವೇವೆಲರಲ್ಲಿಲ್ಲದುದರಿಂದ ತಪ್ಪು ವೇವೆಲರದೇ. ತನ್ನವಾದ ಯೋಗ್ಯವಾನುದೆಂದು ನಂಬಿರುವ ಆ ಮನುಷ್ಯನ ತಪ್ಪಿಲ್ಲ-ಅವನನ್ನು ಸಮಜಾಯಿಸಲಾಗದವನದೇ ತಪ್ಪು. ವೇವೆಲರಂಗಲೀ ಬ್ರಿಟಿಷ್ ಸರಕಾರವಾಗಲೀ ಜಿನ್ನರ ವಾದವನ್ನು ಎಲ್ಲಿಗೆದಿಲ್ಲ-ಅಂಗೀಕರಿಸಿದ್ದಾರೆ"

—ರಾಜಾಜಿ

"ಸಿಮ್ಲಾ ಸಮ್ಮೇಲನದ ಪರಾಭವದಿಂದಾಗಿ ಎದೆಗೆಡಕೂಡದು ನಿರಾಶರಾಗಬಾರದು. ವಿಧಾಯಕ ಕಾರ್ಯ ಮತ್ತು ಇತರ ರಾಷ್ಟ್ರೀಯ ಚಟುವಟಿಕೆಗಳನ್ನು ರಭಸದಿಂದ ಮುಂದೊತ್ತಿ ಕಾರ್ಯಸಾಧಿಸಬಹುದು"

—ಗಾಂಧಿಜಿ.

ಲೀಗ್ ಅಭಿಪ್ರಾಯ.

"ಕಾಂಗ್ರೆಸು ತನ್ನ 'ಕ್ವಿಟ್ ಇಂಡಿಯಾ' ನಿರ್ಧಾರವನ್ನು ಮೂಲೆಪಾಲು ಮಾಡಿ ಲೋರ್ಡ್ ವೇವೆಲರ ಪಾದದಡಿಯಲ್ಲಿ ಹೊರಳಾಡಿದುದು ನಾಚಿಕೆಗೇಡು"—

—ಲೀಗ್ ಕಾರ್ಯದರ್ಶಿ ಲಿಯಾಖತ್ ಅಲೀಖಾನ್.

"ಲೀಗಿನ ಸಿಮ್ಲಾ ಧೋರಣೆಯ ಕುರಿತು ನಾನೇನನ್ನೂ ಹೇಳಲಾರೆ. ಸಿಮ್ಲಾ ಮಾತುಕತೆಗಳನ್ನು ಪುನಃ ಮುಂದುವರಿಸಿ ವೈಸರಾಯರು ಮತ್ತೊಮ್ಮೆ ಪ್ರಯತ್ನಿಸುವರೆಂದು ಆಶಿಸುತ್ತೇನೆ"—

—ಸಿಂಧಿನ ಲೀಗ್ ಪ್ರಧಾನ ಮಂತ್ರಿ ಸರ್. ಹಿದಾಯತುಲ್ಲಾ.

"ಸಮ್ಮೇಲನವು ಮಿ. ಜಿನ್ನರ ಅಸಮ್ಮತಿಯಿಂದಾಗಿ ಮುರಿದು ಹೋದಂತೆ ತೋರಿದರೂ ಕಾಂಗ್ರೆಸಿನ ಪ್ರಾತಿನಿಧ್ಯ ಸಂಬಂಧದ ಮೂಲಭೂತ ಭಿನ್ನಾಭಿಪ್ರಾಯವೇ ಅದಕ್ಕೆ ನಿಜವಾದ ಕಾರಣ"—

—ಬಂಗಾಳದ ಮಾಜೀ ಪ್ರಧಾನಿ ಸರ್. ನಾಜಿಮುದ್ದೀನ್.

"ಸಮ್ಮೇಲನಾಪಜಯಕ್ಕೆ ಲೀಗ್ ಧೋರಣೆಯೇ ಕಾರಣವೆಂಬ ಕಾಂಗ್ರೆಸಿಗರ ವಾದ ಖಂಡನೀಯ. ದೇಸಾಯಿ-ಆಲೀಖಾನ್ ಯೋಜನೆಯಂತೆ ವೈಸರಾಯರು ಸ್ಥಾನ ಸಾಮ್ಯತೆಯೀಡದಿದ್ದುದೇ ತಪ್ಪಾಯಿತು"

-ಶೇಕ್ ಅಬ್ದುಲ್ ಮಜೀದ್.

ವಿದೇಶೀಯರ ವಿಮರ್ಶೆ

"ಸಿಮ್ಲಾ ಪರಾಭವದಿಂದಾಗಿ, ಕಾಂಗ್ರೆಸು ಶುದ್ಧ ಪ್ರಜಾಸತ್ತೆಗಾಗಿ ದೃಢತೆ ಮತ್ತು ಯಥಾರ್ಥತೆಯಿಂದ ಮುಂದೆ ಬಂದಿದೆ ಎಂಬುದು ಅಮೇರಿಕನರಿಗೆ ಸ್ಪಷ್ಟವಾಯಿತು; ಅಂತೆಯೇ ಮುಸ್ಲಿಂ ಲೀಗು ಪ್ರಜಾಸತ್ತೆಯ ಮೂಲಭೂತ ತತ್ವಕ್ಕೇನೇ ವಿರುದ್ಧವೆಂಬುದೂ ಖಚಿತವಾಯಿತು"

— ಅಮೇರಿಕನ್ ಪ್ರತಿನಿಧಿ ಸದಸ್ಯೆ ಮಿಸೆಸ್. ಕ್ಲಾರೆ ಬೂತ್.

"ಮುಸ್ಲಿಂ ಲೀಗಿನ ವಿಲಕ್ಷಣ ವಾದದಿಂದಾಗಿ ವೇವೆಲ್ ಯೋಜನೆ ಮುರಿದುಬಿತ್ತು. ತಾನು ಸೇಕಡಾ 90ರಷ್ಟು ಮುಸಲ್ಮಾನರ ಪ್ರತಿನಿಧಿಯೆಂಬ ಲೀಗಿನ ವಾದ ಬುದ್ಧಿ ಶೂನ್ಯತೆಯದು. ಕಾಂಗ್ರೆಸು ಈ ಯೋಜನೆಯ ಸ್ವೀಕಾರಕ್ಕೆ ಮುಂದಾದರೂ ಸ್ವಾತಂತ್ರ್ಯ ಗುರಿಯನ್ನು ಬಿಟ್ಟಿಲ್ಲ. 'ಕ್ವಿಟ್ ಇಂಡಿಯಾ' ಠರಾವಿನಲ್ಲಿ ಉಜ್ಜುವ ಅಥವಾ ತಿದ್ದುವ ಒಂದೇ ಒಂದು ಶಬ್ದವಿಲ್ಲವೆಂದು ಸರ್ದಾರ್ ಪಟೇಲರಂದಿದ್ದಾರೆ. ಇನ್ನು ಮುಂದಿನ ಹೆಜ್ಜೆ 'ಕ್ವಿಟ್ ಏಸ್ಯಾ' ಆಗಬಹುದು"

—ಲಂಡನಿನ ಮಿಸ್. ಮಾರ್ಗರೆಟ್ ಪೋಪ್.

"ವೇವೆಲ್ ಯೋಜನೆ ಮಿ. ಜಿನ್ನರ ಅಥವಾ ಯಾರಾದರೊಬ್ಬರ ಅಕೃತ್ಯದಿಂದಾಗಿ ನಿಷ್ಫಲವಾಯಿತೆಂಬುದು ಊಹಾತೀತ. ಮಿ. ಜಿನ್ನರು ತನ್ನಾಟವಾಡಲು ತಿರಸ್ಕರಿಸಿದರೆ ಲೀಗೇತರ ಮುಸಲ್ಮಾನರಿಂದ ಸ್ಥಾನಭರ್ತಿಮಾಡಿಕೊಂಡು ಲೋರ್ಡ್ ವೇವೆಲರು ಮುಂದೊತ್ತುವದು ನ್ಯಾಯಸಮ್ಮತ"

—ಲಂಡನಿನ 'ಟ್ರಿಬ್ಯೂನ್'.

"ಲೀಗಿನ ಧೋರಣೆಯಿಂದಾಗಿ ಸಮ್ಮೇಲನ ಮುರಿಯಿತೆಂಬುದು ನಿಜ. ಆದರೆ ಹಾಗೆ ಮಾಡುವ ಆಗತ್ಯ ಬ್ರಿಟನಿಗಿರಲಿಲ್ಲ. ಆದ್ದರಿಂದ ಲೋರ್ಡ್‌ವೇವೆಲರೊಪ್ಪಿಕೊಂಡಂತೆ ಪರಾಭವದ ಹೊಣೆಗಾರಿಕೆ ಬ್ರಿಟಿಷರದಾಗಿದೆ"—

—ಲಂಡನ್ 'ಡೈಲಿ ವರ್ಕರ್'.

"ಬಹು ಸಂಖ್ಯಾಕರ ಮೇಲೆ ಅಲ್ಪ ಸಂಖ್ಯಾಕರಿಗೆ ಭಯವಿದೆ ಎಂಬ ನೆಪದಿಂದ ಧುರೀಣರ ವ್ಯಕ್ತಿಗತ ಪ್ರತಿಷ್ಠೆಯೇ ಮುಂದೆ ಬಂತಲ್ಲದೆ ಜನತಾಹಿತವನ್ನು ನೋಡಲಿಲ್ಲ'—

—ಸಿರಿಯದ ಪತ್ರಿಕೆ 'ಅಲೆಫ್ ಬಾ'

"ಕಾಂಗ್ರೆಸು ಸರ್ವ ಜಾತಿಮತಗಳವರ ಸಂಸ್ಥೆಯೆಂಬುದು ಸರ್ವವಿದಿತ. ಜಿನ್ನರ ಅಥವಾ ಬೇರಾವುದೇ ಅಲ್ಪ ಸಂಖ್ಯಾಕರ ವಿಶೇಷಾಧಿಕಾರವನ್ನು ತೆರೆಯುವ ಬೀಗದ ಕೈ ಇಲ್ಲಿ-ಶ್ವೇತ ಭವನದಲ್ಲಿ ಇದೆ ಹೊರತು ಸಿಮ್ಲಾದಲ್ಲಿಲ್ಲ"—

ಬ್ರಿಟನಿನ ಭಾರತೀಯ ಸಮಿತಿ.

'ಮಿ. ಜಿನ್ನರ ಛಲವೊಂದಲ್ಲವಾದರೆ ಪರಿಸ್ಥಿತಿ ಬೇರಾಗುತಿತ್ತು. ಕಾಂಗ್ರೆಸು ಈ ಬಾರಿ ಯೋಗ್ಯತೆ ಮತ್ತು ಗೌರವದೊಡನೆ ಹೊರಬೀಳುವಂತಾಯಿತು. ಸಿಮ್ಲಾ ಸಮ್ಮೇಲನದಿಂದಾಗಿ ಹಿಂದೀ ಪ್ರಶ್ನೆಯ ಕಡೆಗೆ ಲೋಕದ ಮತ್ತು ಬ್ರಿಟನರ ಕಣ್ಣು ಇನ್ನಷ್ಟು ತೆರೆಯಿತು.'—

-ಮಾಜಿ ಎಂ. ಪಿ. ಸೋರೆನ್ಸನ್

"ಭಾರತದ ಪ್ರಗತಿಗೆ ಮುಖ್ಯ ತಡೆಯೆಂದರೆ ಮುಸಲ್ಮಾನರಿಗೆ ಅಧಿಕ ಸಂಖ್ಯಾಕರಲ್ಲಿರುವ ಅವಿಶ್ವಾಸವೆಂಬುದು ಸಿಮ್ಲಾ ಸಮ್ಮೇಲನದಿಂದ ಖಚಿತವಾಯಿತು. ಅದು ಅಲ್ಲಿಯೇ ತೀರ್ಮಾನ ಹೊಂದಬೇಕಾದ ಪ್ರಶ್ನೆಯಾದರೂ ನಾವು ಮಾಡತಕ್ಕ ಕೆಲಸವಿದೆ"—

—'ಟೈಮ್ಸ್'.

"ಹಿಂದಿನಂತೆಯೇ ಆ ಹಳೆಯ ಹಿಂದೂ ಮುಸ್ಲಿಂ ವೈಷಮ್ಯವೇ ಈ ಬಾರಿಯೂ ಮುಂದೆ ಬಂತು. ಈ ಸಂಕುಚಿತ [illegible]ಗೆ ಭಾರತವು ವಸಾಹತು ರಾಜ್ಯಭಾರ ಹೊಂದುವಂತಿಲ್ಲ"

'ಡೈಲಿ ಟೆಲಿಗ್ರಾಫ್'.

"ಬೇರಾರೂ ಅಲ್ಲ, ಜಿನ್ನರು—ಅವರೊಬ್ಬರೇ-ಸಿಮ್ಲಾ ಪರಾಭವಕ್ಕೆ ಕಾರಣ ಭೌಗೋಲಿಕವಾಗಿ ಮತ್ತು ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದ ಪಾಕಿಸ್ತಾನಕ್ಕೆ ಅಸ್ತಿತ್ವವೇ ಇಲ್ಲ"

—'ನ್ಯೂಸ್ ಕ್ರಾನಿಕಲ್'.

"ಕ್ರಿಪ್ಸ್ ಸೂಚನೆಗಳನ್ನು ಗಾಂಧಿಯವರು ಕೆಡಿಸಿದರು; ಸಿಮ್ಲಾದಲ್ಲಿ ಜಿನ್ನರ ಸರದಿ. ಹಿಂದೀ ರಾಜಕಾರಣಗಳ ಹೇಯ ಮನೋಭಾವವು ಲೋಕದೆದಿರು ಪ್ರದರ್ಶನವಾಯಿತು"

—'ಡೈಲಿ ಸ್ಕೆಚ್'.

CHAMPAE'S
Snow & Castrex
(Sole Distributers for India.)
Sukhananda Stores
Santhekatte, UDIPI, S. K.

ಪ್ರಮುಖರಿಬ್ಬರ ವೀರಘೋಷಣೆ!

★

'೧೯೪೨ರ ಆಂಧ್ರ ಸರ್ಕ್ಯುಲರಿನ ಲೇಖಕ ಮತ್ತು ಹೊಣೆಗಾರ ನಾನೇ' —ಪಟ್ಟಾಭಿ

'೧೯೪೨ರ ಆಂದೋಲನಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ' —ನೆಹರು.

1942ನೇ ಜುಲಾಯಿ ತಾ 23ರಷ್ಟು ಆಗೋಸ್ತು ಗಲಭೆಯು ಮೊದಲೇ ಆಂಧ್ರದಲ್ಲಿ ಪ್ರಕಟವಾಗಿದ್ದ 'ಆಂಧ್ರ ಕಾಂಗ್ರೆಸ್ ಸರ್ಕ್ಯುಲರ್' ಲಂಡನ್ ಮತ್ತು ಹಿಂದುಸ್ಥಾನದಲ್ಲಿ ಬಹಳ ಚರ್ಚೆಗೊಳಗಾಗಿದ್ದ ದಾಖಲೆ. ಕಾಂಗ್ರೆಸ್ ಕಾರ್ಯಕ್ರಮವೇನೆಂಬುದು ಹಿಂದೀಯರಿಗೇನೇ ತಿಳಿಯದಿದ್ದ ಆ ಕಿರಿದಿನಗಳಲ್ಲಿ ಲಂಡನಿನಿಂದ ಮಿ. ಅಮೆರಿಯವರಿಂದ ಈ ಸರ್ಕ್ಯುಲರಿನ ವಾಚನ ನಡೆದು ಚಳವಳಿಗಾರರ ಮಾರ್ಗದರ್ಶಿತ್ವವನ್ನು ಅವರಿಗೆ ದೊರಕಿಸಿಕೊಟ್ಟಿದ್ದಿತು. ಹಿಂದೀ ಸರಕಾರವು ಪ್ರಕಟಿಸಿದ 'ಗೊಂದಲಗಳಿಗೆ ಕಾಂಗ್ರೆಸ್ ಹೊಣೆ' ಎಂಬ ಪುಸ್ತಕದಲ್ಲಿ ಈ ಕರಪತ್ರವನ್ನೇ ಮುಖ್ಯಾಧಾರವಾಗಿ ನಮೂದಿಸಲಾಗಿತ್ತು. ಪಾರ್ಲಿಮೆಂಟ್ ಮತ್ತು ಹಿಂದೀಯ ಕೇಂದ್ರ ಎಸೆಂಬ್ಲಿಯಲ್ಲಿ ಈ ಸಂಬಂಧದ ಪ್ರಶ್ನೋತ್ತರಗಳು ನಡೆದಿದ್ದರೂ ಅದರ ಜನಕನ ಹೆಸರು ಮೊನ್ನೆಯವರೆಗೂ ಖಚಿತವಾಗಿಲ್ಲ. ಅದು ತಮ್ಮ ಪಾಳಯಕ್ಕೆ ಸಂಬಂಧಿಸಿದ್ದೆಂಬ ಹೊಣೆಗಾರಿಕೆಯನ್ನು ಕೂಡಾ ಕಾಂಗ್ರೆಸ್ ಪ್ರಮುಖರು ಜಾರಿಸಿಕೊಂಡಿದ್ದರು. ಅದು ಅನಾಥಶಿಶುವಿನಂತಿದ್ದು, ಸರಕಾರೀ ಸಂಚುಗಾರರೇ ಅದರ ಜನಕರಿರಬಹುದೆಂಬ ಊಹೆಗೂ ಅವಕಾಶವಿತ್ತೆಂಬುದನ್ನು ಮರೆಯಬಾರದು. 'ಅದು ನನ್ನದು—ಗಾಂಧೀ ಆಶೀರ್ವಾದ ಪಡೆದೇ ಹುಟ್ಟಿದುದು' ಎಂದು ಸಿಮ್ಲಾದಿಂದ ಮರಳಿದೊಡನೆ ಶ್ರೀ ಪಟ್ಟಾಭಿ ಸೀತಾರಾಮಯ್ಯನವರು ಬೆಜವಾಡದ ಸಾರ್ವಜನಿಕ ಸಭೆಯೊಂದರಲ್ಲಿ ಘಂಟಾಘೋಷವಾಗಿ ಹೇಳಿದ್ದಾರೆ. ಆ ಭಾಗವನ್ನಿಲ್ಲಿ ಕೊಡಲಾಗಿದೆ.

'ನಾನೇ ಅದನ್ನು ಬರೆದೆ'

'ಆ ಸರ್ಕ್ಯುಲರಿಗೆ ಬೇರಾರೂ ಜವಾಬ್ದಾರರಲ್ಲ. ನಾನೇ ಅದನ್ನು ಬರೆದವ. ಮಹಾತ್ಮಾ ಗಾಂಧಿಯವರೊಡನೆ ಸಂಪೂರ್ಣ ಪರ್ಯಾಲೋಚನೆ ನಡೆಸಿಯೇ ಆ ಸೂಚನೆಗಳನ್ನು ನಾನು ಪಡೆದಿದ್ದೆ. ಜುಲಾಯಿ ತಾ 14ರ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆಯಿಂದ ಮರಳಿದ ಕೂಡಲೇ ನಾನು ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆ ಕರೆದೆ. ಆ ಸಭೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರನ್ನೂ ಕಾರ್ಯದರ್ಶಿಗಳನ್ನೂ ಆಮಂತ್ರಿಸಿದ್ದೆ. ಸಭೆಯು ಮಸಲಿಪಟ್ಟಣದ ನನ್ನ ಮನೆಯಲ್ಲಿಯೇ ನಡೆಯಿತು. ಆಂಧ್ರದ ಎಲ್ಲಾ ಕಡೆಯ 28 ಮಂದಿ ಕಾಂಗ್ರೆಸಿಗರು ಅಲ್ಲಿ ಹಾಜರಿದ್ದರು. ಬೊಂಬಾಯಿಯ ಎ. ಐ. ಸಿ. ಸಿ ಸಭೆಯ ಕೊನೆಯ ಆಜ್ಞೆ ಬಂದ ಮೇಲೆಯೇ ಜಾರಿಗೆ ತರಬೇಕಾಗಿದ್ದ ಆ ಸೂಚನೆಗಳನ್ನು ನಾನು ಅವರ ಮುಂದಿಟ್ಟೆ. ಅವರಲ್ಲಿ ಮುನಿಸಿಪಲ್ ಕರನಿರಾಕರಣೆ, ತಾಳಿವೃಕ್ಷ ಮತ್ತು ಇತರ ಹೆಂಡದ ಮರಗಳನ್ನು ಕಡಿಯುವದು ಮತ್ತು ತಂತೀ ಕಡಿಯುವ ಕಾರ್ಯಕ್ರಮಗಳಿದ್ದುವು. ಗಾಂಧಿಜೀಯ ಅಭಿಪ್ರಾಯ ಪ್ರಕಾರ ಕೊನೆಯ ವಿಷಯವು (ತಂತಿ ಕಡಿಯುವದು) 'ನಿಷೇಧನೀಯವಲ್ಲ; ಆದರೆ ಶಿಫಾರಸು ಮಾಡುವಂತಹದಲ್ಲ". ಅದು ಬಹಿರಂಗ ಸಭೆಯಾಗಿತ್ತು. ಮತ್ತು ಈ ಸೂಚನೆಗಳನ್ನು ಸರಕಾರೀ ಪೋಸ್ಟಾಫೀಸಿನಲ್ಲಿಯೇ ಹಾಕಲಾಗಿತ್ತು. ಅವುಗಳ ಕುರಿತು ಏನೊಂದೂ ಗುಟ್ಟುಮಾಡಿದ್ದಿಲ್ಲ. ಗಾಂಧಿಜೀ ಬಯಸಿದ್ದ 'ಬಹಿರಂಗ ಬಂಡಾಯ'ವು ಆ ಸರ್ಕ್ಯುಲರಿನ ಎಲ್ಲಾ ಕಾರ್ಯಕ್ರಮಗಳನ್ನೂ ಒಳಗೊಂಡಿದ್ದಿತು. ಆದರೆ ಎಲ್ಲಾ ರೈಲ್ವೇ ಕಂಬಿಗಳನ್ನು ಕೀಳುವುದಕ್ಕೂ ರೈಲ್ವೇ ಬಂಡಿ ಅಥವಾ ಕಂಪಾರ್ಟ್ಮೆಂಟುಗಳಿಗೆ ಬೆಂಕಿ ಕೊಡುವದಕ್ಕೂ ಕಠಿಣ ನಿಷೇಧ ಹಾಕಲಾಗಿತ್ತು. ಅ. ಭಾ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯನಾದ ನಾನೇ ಅದರ ಏಕಮಾತ್ರ ಹೊಣೆಗಾರನಲ್ಲದೆ, ಅದಕ್ಕೆ ಸಹಿ ಹಾಕಿದ ಅಧ್ಯಕ್ಷ ಶ್ರೀ. ಟಿ ಪ್ರಕಾಶಮರಾಗಲೀ, ಕಾರ್ಯದರ್ಶಿ ಶ್ರೀ ಕಾಳೆ ವೆಂಕಟರಾಯರಾಗಲೀ ಜವಾಬ್ದಾರರಲ್ಲ. ಸರಕಾರವು ಅದರ ಮೂಲಲೇಖಕನನ್ನೂ, ಅಧ್ಯಕ್ಷನನ್ನೂ ಬಿಡುಗಡೆಮಾಡಿ, ನಿಜಕ್ಕೂ ನಿರಪರಾಧಿಯಾದ ಕಾರ್ಯದರ್ಶಿಯನ್ನು ಬಿಡಲು ಮಾತ್ರ ಇಷ್ಟೇಕೆ ಹಿಂಜರಿಯುತ್ತಿದೆಯೋ ನನಗರಿಯದು"!

1942ರ ಆಗೋಸ್ತು ಗಲಭೆಯಲ್ಲಿ ಭಾಗವಹಿಸಿದ ಜನತೆಯನ್ನು ಎಲ್ಲರೂ—ಪ್ರಮುಖ ಕಾಂಗ್ರೆಸ್ ನಾಯಕರು ಕೂಡಾ—ಹೀಗಳೆದು ಆ ಗೊಂದಲದೊಡನೆ ಪೂರ್ತಿ ಅಸ್ಪೃಶ್ಯತಾ ಧರ್ಮವನ್ನು ಪಾಲಿಸುತ್ತಿರುವಾಗ ಪಂಡಿತ ಜವಾಹರಲಾಲರು ಆ ನಿಸ್ಸಹಾಯಕ ರಾಷ್ಟ್ರಪ್ರೇಮೀ ಜನತೆಯನ್ನು ತುಂಬು ಹೃದಯದಿಂದ ಕಂಠೋಕ್ತವಾಗಿ ಶ್ಲಾಘಿಸಿದ್ದಾರೆ. ಸಿಮ್ಲಾದಿಂದ ಕಾಶ್ಮೀರಕ್ಕೆ ಹೊರಟು, ದಾರಿಯಲ್ಲಿ ಲಾಹೋರಿನ ರೈಲ್ವೇ ಸ್ಟೇಶನಿನಲ್ಲಿ ನೆರೆದಿದ್ದ ಅಪಾರ ಜನಸಮೂಹದಿದಿರು ಪಂಡಿತರಾಡಿದ ಮಾತುಗಳಿವು.—

'ನಾನು ಹೆಮ್ಮೆ ಪಡುತ್ತೇನೆ'

"1942ರಲ್ಲಿ ನಡೆದ ಮಹಾ ಘಟನೆಗಳಿಗೆ ಸಮಾನವಾದ ಇನ್ನೊಂದು ದೊರೆಯಬೇಕಾದರೆ 88 ವರುಷಗಳ ಹಿಂದೆ ಹೋಗಬೇಕು; 1857ರಲ್ಲಿ ನಡೆದ ಆ ಚರಿತ್ರಾರ್ಹ ಹಿಂದೀ ಸಿಪಾಯಿ ದಂಗೆಯೊಂದೇ ಇದೆ. 1942ರ ಸಂಭವಗಳಿಗಾಗಿ ನಾನು ಅತ್ಯಂತ ಹೆಮ್ಮೆ ಪಡುತ್ತೇನೆ. ಆ ಸಂದರ್ಭದಲ್ಲಿ ಜನತೆಯು ಪಳಗಿಸಿದ ಪ್ರಾಣಿಗಳಂತೆ ಬ್ರಿಟಿಷ್ ಸರಕಾರದಿದಿರು ದೊಗ್ಗಾಲೂರುತ್ತಿದ್ದರೆ ನಿಜಕ್ಕೂ ನಾನು ಅತ್ಯಂತ ದುಃಖಿಯಾಗುತಿದ್ದೆ. ಅದು ಹೇಡಿತನದ ಲಕ್ಷಣವಾಗುತಿತ್ತು; ನಮ್ಮ ತಲಾಂತರಗಳ ಸಾಧನೆಯನ್ನು ಹುಸಿಗೊಳಿಸುತಿತ್ತು. ಒಬ್ಬನೇ ಒಬ್ಬ ನಾಯಕ—ಯಾವುದೇ ವಿಧದ ಸಂಘಟನೆ—ಏನೊಂದೂ ಸಿದ್ಧತೆ ಅಥವಾ ಶಸ್ತ್ರಗಳಿಲ್ಲದೆ ನಿಸ್ಸಹಾಯಕ ಜನತೆಯೊಂದು ಆತ್ಮಸಂತೋಷದಿಂದ ಹೋರಾಟಕ್ಕಿಳಿದ್ದ ಆ ದೃಶ್ಯವು ರೋಮಾಂಚಕಾರೀ ಮಹಾದ್ಭುತವೇ ಸರಿ. ಅವರು ಎದೆಗಾರಿಕೆಯಿಂದ ಕಷ್ಟಗಳನ್ನನುಭವಿಸಿದರು; ಸಹಿಸಿದರು; ತಮ್ಮ ಹಲವು ಸಂಗತಿಗಳನ್ನು ಬಲಿಕೊಟ್ಟರು. ಅಧಿಕಾರೀ ವರ್ಗದಿಂದ ತಮಗಾದ ತೇಜೋವಧೆ ಮತ್ತು ದುರ್ಗತಿಯನ್ನು ಸಹಿಸಿಕೊಳ್ಳುವದು ಅವರಿಗಸಾಧ್ಯವಾಯಿತು. ಆ ಗೊಂದಲದಲ್ಲಿ ಅಪರಾಧವನ್ನು ಕಾಣುವದು ಆರಾಮ ಕುರ್ಚಿಯ ವಿಮರ್ಶಕರಿಗೇನೂ ಸುಲಭವಿದೆ. ಅನುಮೋದಿಸಲಾಗದ, ಅನ್ಯಾಯವಾದ ಹಲವು ಸಂಗತಿಗಳು ಆಗ ನಡೆದಿರಬಹುದು. ಆದರೆ ಆ ಘಟನೆಗಳನ್ನು ಟೀಕಿಸಿದವರೂ ಜನತೆಯನ್ನು ತಪ್ಪು ಹಾದಿಗೆಳೆಯಲು ಪ್ರಯತ್ನಿಸಿದವರೂ ಹೇಡಿಗಳು. ಸ್ಪಷ್ಟವಾಗಿ ಹೇಳುತ್ತೇನೆ—1942ರ ಚಳವಳದಲ್ಲಿ ಭಾಗವಹಿಸಿದವರನ್ನು ನಾನು ಖಂಡಿಸುವಂತಿಲ್ಲ. ಸ್ವಾತಂತ್ರ್ಯೇಚ್ಛೆಯಿಂದ ಹೃದಯವುಕ್ಕಿ ಬಂದ ಪಾಪದ ರೈತರು ಪೋಲೀಸರಿಂದ ಮತ್ತು ಸೈನಿಕರಿಂದ ದಬಾಯಿಸಲ್ಪಟ್ಟರು; ಧ್ವಂಸಮಾಡಲ್ಪಟ್ಟರು. ನೂರಾರು ಹಳ್ಳಿಗಳು, ಧ್ವಂಸವಾದುದು ಸುಡಲ್ಪಟ್ಟುದು ಮಾತ್ರವಲ್ಲ, ಅವುಗಳ ಧಾರಣಾದ ಉತ್ತ ಹೊಲಗದ್ದೆಗಳೂ ಅಡಿಮೇಲಾದುವು."

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅಸರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪ್ರತಿಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಧುರೀಣರ ದೂರು—
ಸಹಿಸಲಾಗದಷ್ಟು ಸನ್ಮಾನ!

ನಾಯಕರಲ್ಲಿ ದೇವತ್ವವನ್ನು ಕಾಣುವ ಸಾಮಾನ್ಯ ಜನರ ಮನೋವೃತ್ತಿಗೆ ಕಳದೊಂದು ತಿಂಗಳಲ್ಲಿ ಸಾಕಷ್ಟು ನಿದರ್ಶನಗಳು ದೊರೆತಿವೆ. ವೇವೆಲ್ ಘೋಷಣೆಯನ್ವಯ ಬಿಡುಗಡೆಗೊಂಡ ಕಾಂಗ್ರೆಸ್ ಪ್ರಮುಖರು, ಸಮಿತಿ ಸಭೆಗಾಗಿ ಬೊಂಬಾಯಿಗೂ ಅಲ್ಲಿಂದ ಸಮ್ಮೇಲನಕ್ಕಾಗಿ ಸಿಮ್ಲಕ್ಕೂ ಹೋಗಿ ಮರಳುವ ಹಾದಿಗಳಲ್ಲೆಲ್ಲಾ ಜನತಾ ನೆರೆಯೇ ಬಂದಿತ್ತೆನ್ನಬೇಕು. ತಮಗಾಗಿ ಸರ್ವ ತ್ಯಾಗಮಾಡಿದ ದೇಶನಾಯಕರ ಅಪರೂಪ ದರ್ಶನಕ್ಕಾಗಿ ಜನತೆಯು ಭಕ್ತಿ ಗೌರವ ಆತುರೋದ್ವೇಗಳಿಂದ ಹುಚ್ಚುಗಟ್ಟುವದು ಸ್ವಾಭಾವಿಕ. ಆದರೆ ಈ ಹುರುಪು ಪ್ರತಿಕೂಲ ಪರಿಣಾಮಗಳನ್ನು ನಿರ್ಮಿಸಿದುದಿದೆ. 'ಹಲವು ರಾತ್ರೆಗಳ ನಮ್ಮ ನಿದ್ರೆಯನ್ನು ಕೆಡಿಸಿದರು' 'ನಮ್ಮ ನೆಮ್ಮದಿ ಭಂಗಮಾಡಿದರು' 'ಈ ಪ್ರಾಯದಲ್ಲಿಯೂ ನಮ್ಮನ್ನು ಗೋಳಾಡಿಸಿದರು'—ಎಂದು ಗಾಂಧಿ, ಅಜಾದ್, ನೆಹರುಗಳ ದೂರು ಕೇಳಿ ಬರುತ್ತದೆ.

ಕಳ್ಳ ಪಯಣ

ಜನರ ಗೊಂದಲ ತಪ್ಪಿಸುವದಕ್ಕಾಗಿಯೇ ಮೌಲಾನಾ ಅಜಾದರು ಬೊಂಬಾಯಿಗೆ ಮಧ್ಯ ಸ್ಟೇಶನಿನಲ್ಲಿಳಿದು ಬಂದಿದ್ದರು, ಬೊಂಬಾಯಿಯಿಂದ ಸಿಮ್ಲಕ್ಕೆ ವಿಮಾನ ಹತ್ತಿ ಹಾರಿದ್ದರು. ಗಾಂಧಿಯವರ ಪ್ರಯಾಣ ಸದಾ ಕಳ್ಳ ಮಾರ್ಗದಲ್ಲಿಯೇ ಜನತೆಯ ಹುರುಪಿನಿದಿರು ಇಮ್ಮಡಿ ಹುರುಪಿನಿಂದ ಎದೆಕೊಟ್ಟು ನಿಲ್ಲಬಲ್ಲ ಏಕಮಾತ್ರ ಧುರೀಣ ನೆಹರುಗಳು ಕೂಡಾ ಈ ಬಾರಿ ಸೋತು ಹೋಗಿದ್ದರು. ಸಿಮ್ಲಕ್ಕೆ ಬಂದಾಗ, ಅವರಿಗಾಗಿ ಕುದುರೆಗಳು ಬಂದಿದ್ದರೂ ಕಾರಿನಿಂದಿಳಿಯಲು ಜನರ ನುಗ್ಗಾಟದಿಂದಾಗದೆ ಹೋಯಿತು. "ನಾನು ಆ ಸಂದರ್ಭದಲ್ಲಿ ಚುರುಕಾಗಿ ವರ್ತಿಸದಿರುತ್ತಿದ್ದರೆ ಸಿಮ್ಲದಲ್ಲಿ ಭಕ್ತಿಯಿಂದ ಪಾದಮುಟ್ಟಲೋಡಿ ಬಂದ ಒಬ್ಬನ ಕೃತ್ಯದಿಂದ ಉರುಳಿ ಕಣಿವೆಗೆ ಬಿದ್ದು ಸಾಯುತ್ತಿದ್ದೆ. ಪಾದ ಮುಟ್ಟುವ ನಿಕೃಷ್ಟತಾ ಭಾವನೆ ಬಿಟ್ಟುಬಿಡಿ"—ಎಂದು ನೆಹರುಗಳು ಲಾಹೋರಿನ ಸಭೆಯಲ್ಲಂದಿದ್ದಾರೆ. "ಸಿಮ್ಲದಿಂದ ಮರಳುವಾಗ ಕಾಲ್ಕಾದಿಂದ ವಾರ್ಧಾದವರೆಗೂ ನಾನು ಕಳ್ಳನಂತೆ ಬರಬೇಕಾಯಿತು. ಜನತೆಯ ಗೌರವ ಪ್ರದರ್ಶನವನ್ನು ಧಿಕ್ಕರಿಸುವವನು ನಾನಲ್ಲ ಆದರೆ ಇಂತಹ ಒತ್ತಡಗಳನ್ನು ಸಹಿಸುವ ಪ್ರಾಯ ವರುಷಂಪ್ರತಿ ಕಳೆಯುತ್ತಾ ಬಂದಿದೆ. ಸ್ವಾತಂತ್ರ್ಯ ಸಾಧಕ ಜನತೆ ಸೋಲ್ಜರರಿಗಿಂತ ಹೆಚ್ಚಿನ ಶಿಸ್ತಿನಲ್ಲಿರಬೇಕು" ಎಂದು ಗಾಂಧಿಜೀ ಉಪದೇಶಿಸಿದ್ದಾರೆ. ತಮ್ಮ ದರ್ಶನಾತುರದಿಂದ, ಆವರಣ, ಬೇಲಿ, ನಿಯಮ ನೀತಿಗಳನ್ನು ಮುರಿದು ಮದ್ದಾನೆಗಳ ಹಿಂಡಿನಂತೆ ನುಗ್ಗಿ ಬಂದ ಜನತಂಡವನ್ನು ಗಾಂಧಿ ನೆಹರುಗಳು ಕಟೂಕ್ತಿಯಿಂದ ಜರೆದುದೂ ಇದೆ. ಮಿಕ್ಕ ಪ್ರಮುಖರ ಆಗಮನ ನಿರ್ಗಮನಗಳಲ್ಲೂ ಇದೇ ಹಾಡು!

ಜಿನ್ನರ ಅಂತರ್ಗಾಮಿತ್ವ

ಬೊಂಬಾಯಿ ತುಂಬಾ ಕಾಂಗ್ರೆಸ್ ಪ್ರಮುಖರ ಗದ್ದಲ ನಡೆದಿರುವಾಗ ಬ್ಯಾರಿಷ್ಟರ್ ಜಿನ್ನರು ಸದ್ದಿಲ್ಲದೆ ರೈಲು ಹತ್ತಿ ಸಿಮ್ಲಕ್ಕೆ ಸೇರಿದ್ದರು, ಆದರೆ ಸಿಮ್ಲಾ ಸಮೀಪಿಸಿದಂತೆ ಅವರಿಗೆ ಅಲ್ಲಲ್ಲಿ ದೊರೆತ ಸ್ವಾಗತ ವೈಭವ ದೊಡ್ಡದಾಗುತ್ತಾ ಹೋಯಿತು. ಸಿಮ್ಲದಿಂದ ಮರಳುವಾಗ ಅವರ ಭೀತಿ ದ್ವಿಗುಣವಾಗಿತ್ತೆನ್ನಬೇಕು — ಮರ್ಯಾದೆ ಮತ್ತು ಮರ್ದನ, ಎರಡನ್ನೂ ಅವರು ಸಹಜವಾಗಿ ನಿರೀಕ್ಷಿಸಿರಬೇಕು! ಆದ್ದರಿಂದ ಸಿಮ್ಲದಿಂದ ತಾನು ಹೊರಡುವ ದಿನವನ್ನು ಅವರು ಬಹಿರಂಗಪಡಿಸಿರಲಿಲ್ಲ ಆದರೂ ಅವರ ಎದೆಗಾರಿಕೆಯನ್ನಳೆದು ತೋರಿಸುವಂತಹ ಒಂದು ಸ್ವಾರಸ್ಯದ ವಾರ್ತೆ ಸಿಮ್ಲದಿಂದ ವರದಿಯಾಗಿದೆ. ಮಿ. ಜಿನ್ನರು ಬೊಂಬಾಯಿಗೆ ಹೊರಡಲು ಸಿಮ್ಲದ ಮೋಟಾರು ನಿಲ್ದಾಣಕ್ಕೆ ಬಂದಾಗ ಅವರು ಹತ್ತಬೇಕಾದ ಬಂಡಿಯ ಡ್ರೈವರ್ ಸಿಖ್ಖನೆಂಬುದನ್ನು ಕಂಡು ಅಲ್ಲಿಯೇ ಜಗ್ಗಿ ನಿಂತರಂತೆ. "ನನಗೆ ಭಯವಾಗುತ್ತದೆ ಮುಸಲ್ಮಾನ್ ಡ್ರೈವರನೇ ಬೇಕು" ಎಂದರಂತೆ. ಕಂಪನಿಯವರಿಗೆ ಆಗಿಂದಾಗಲೇ ಮುಸ್ಲಿಂ ಡ್ರೈವರನೊಬ್ಬನನ್ನು ಹುಡುಕಿ ತರಲು ಸಾಕು ಸಾಕಾಯಿತಂತೆ. ಮಿ. ಜಿನ್ನರು ಬರುವಾಗ ಡಿಲ್ಲಿ ಸ್ಟೇಶನಿನಲ್ಲಿ ಅವರನ್ನು ಸ್ವಾಗತಿಸಲು ಬಹುಮಂದಿ ನೆರೆದಿದ್ದರು; ಅಂತೆಯೇ ಕರಿಧ್ವಜಧಾರಿಗಳೂ ಧಿಕ್ಕಾರೋದ್ಗಾರವೆಬ್ಬಿಸುತ್ತಾ ತಯಾರಿದ್ದರು. ನಿಷೇಧ ಪ್ರದರ್ಶಕರನ್ನು ಪೋಲಿಸರು ಹಿಂದೂಡಬೇಕಾಯಿತೆಂದು ತಿಳಿದು ಬರುತ್ತದೆ. ಬೊಂಬಾಯಿಯಲ್ಲೂ ಅಡ್ಡ ಹಾದಿಯಿಂದಲೇ ಅವರು ತನ್ನ ಮನೆ ಮುಟ್ಟಬೇಕಾಯಿತು.

ಅಜಾದರ ಆಯಾಸ

ಪ್ರಮುಖರ ಪೈಕಿ ವಿಶೇಷ ಮರುಕಗೊಳಿಸುವ ಸ್ಥಿತಿ ಮೌಲಾನರದು. ಕಾಂಗ್ರೆಸ್ ಅಧ್ಯಕ್ಷರಿಗಾದ ಪೀಡೆ ಅತಿ ಹೆಚ್ಚಿನದು. ಸಿಮ್ಲದಲ್ಲಿ ಅವರಷ್ಟು ಪರಿಶ್ರಮಿಸಿದವರೂ ಬೇರಿಲ್ಲ. "ಕಳೆದ 25 ವರುಷಗಳಲ್ಲಿ ಮೌಲಾನರ ದೇಹ ಪರೀಕ್ಷೆ ಮಾಡುವ ಸುಯೋಗ ನನಗೆ ದೊರೆತಿದ್ದಿತು. ಆದರೆ ಇಂದಿನಷ್ಟು ಅರೋಗ್ಯಾಭಾವದಲ್ಲಿ ಅವರಿದ್ದುದನ್ನು ನಾನೆಂದೂ ಕಂಡಿಲ್ಲ. ದೋಷವೇನೂ ಕಾಣುವದಿಲ್ಲವಾಗಿದರೂ ಈ ಪ್ರಾಯದಲ್ಲಿ ೩೫ ಪೌಂಡು ತೂಕ ಕಳಕೊಂಡಿರುವದನ್ನು ಕಡೆಗಣಿಸಲಾಗುವುದಿಲ್ಲ"—ಎಂದು ಸಿಮ್ಲದಲ್ಲಿ ಅವರ ದೇಹ ಪರೀಕ್ಷೆ ಮಾಡಿದ ಡಾ। ಬಿ. ಸಿ. ರೋಯಿಯವರೆಂದಿದ್ದಾರೆ. ಮಿ. ಜಿನ್ನರಂತೆ ಮೌಲಾನರಿಗೂ ಡಿಲ್ಲಿ ಸ್ಟೇಶನು ಉಪಚಾರ ಅಪಚಾರವೆರಡನ್ನೂ ಮಾಡಿ ಕಳುಹಿದೆ. ಕಾಂಗ್ರೆಸಧ್ಯಕ್ಷರು ಬರುವಾಗ ಡಿಲ್ಲಿ ಸ್ಟೇಶನಿನಲ್ಲಿ ಅಪಾರ ಜನ ಸಮೂಹದ ಜೈಕಾರವೇಳುತ್ತಿತ್ತು; ಮಿ. ಜಿನ್ನರೂ ಅದೇ ರೈಲಿನಲ್ಲಿದ್ದಾರೆಂದು ಭಾವಿಸಿ ಸ್ಟೇಶನಿಗೆ ಬಂದಿದ್ದ ಲೀಗ್ ಮುಸಲ್ಮಾನರು ಅಸಹನೆಯಿಂದ ವಿರುದ್ಧ ಘೋಷವೆಬ್ಬಿಸಹತ್ತಿದರು. ಅಹ್ರಾರ್ ಸ್ವಯಂ ಸೇವಕರು 'ನಿಮ್ಮ ಹಾದಿ ಹಿಡಿದು ಹೋಗಿ'ರೆಂದು ಲೀಗಿನವರಿಗೆ ಸಾರಿ ಸಾರಿ ಹೇಳಿದರೂ ನಿಷ್ಫಲವಾದುದರಿಂದ ಅವರನ್ನೆಲ್ಲಾ ಬಲಾತ್ಕಾರದಿಂದ ದೂಡಲಾಯಿತು ಹಾಗೆ ಹೋದವರು ಸುಮ್ಮಗಿರದೆ ಇನ್ನೂ ಹೆಚ್ಚಿನವರನ್ನು ಕೂಡಿಕೊಂಡು ಬಂದು ಅಹ್ರಾರರಿಗೆ ಯುದ್ಧಾಹ್ವಾನ ಕೊಟ್ಟಾಗ ಇತ್ತಂಡದೊಳಗೆ ಜಗಳವಾಗಿ ಪೋಲಿಸರು ಬೆತ್ತ ಪ್ರಹರಮಾಡಿ ಚದರಿಸಬೇಕಾಯಿತು

ಮೌಲಾನಾ ಅಜಾದರೀಗ ಕಲ್ಕತ್ತದಲ್ಲಿದ್ದಾರೆ; ಗುಡ್ಡವಲಯವೊಂದರಲ್ಲಿ ಕೊನೆಯ ಪಕ್ಷ ಮೂರು ನಾಲ್ಕು ವಾರವಾದರೂ ಅವರು ವಿಶ್ರಾಂತಿ ಪಡೆಯಲೇ ಬೇಕಾಗಿದೆ. ಪಂಡಿತ ನೆಹರುಗಳು ವಿಶ್ರಾಂತಿಗಾಗಿ ಕಾಶ್ಮೀರಕ್ಕೆ ಹೋಗಿದ್ದಾರೆ. ಗಾಂಧಿಜೀಯನ್ನು ಸೇವಾಗ್ರಾಮದ ಹವೆಯೇ ತಣಿಸುತ್ತಿದೆ. ಸಿಮ್ಲಾ ಪಯಣದಿಂದಾಗಿ ಅರ್ಧದಲ್ಲೇ ನಿಲ್ಲಿಸಿದ್ದ ತನ್ನ ಹೊಟ್ಟೆನೋವಿನ ಚಿಕಿತ್ಸೆಯನ್ನು ಸರ್ದಾರ್ ಪಟೇಲರು ಬೊಂಬಾಯಿಯಲ್ಲಿ ಪುನಃ ಪ್ರಾರಂಭಿಸಿದ್ದಾರೆ. ವಿಶೇಷ ದುರ್ಬಲತೆಯ ಮಿ. ಅಸಫ್ ಆಲಿಯೊಬ್ಬರು ಆರೋಗ್ಯ ಸಾಧನೆಗಾಗಿ ಸಿಮ್ಲದಲ್ಲೇ ಕೆಲಸಮಯ ನಿಲ್ಲಲಿದ್ದಾರೆ ಪಂತ್, ಪ್ರಸಾದ್ ಮೊದಲಾದ ಎಲ್ಲಾ ಜೈಲುವಾಸಿ ಪ್ರಮುಖರೂ ತೂಕದಲ್ಲಿ ಬಹಳ ಇಳಿದಿದ್ದಾರೆ. ಸಿಮ್ಲಾ ಹವಾಮಾನವು ಅವರೆಲ್ಲರ ಪ್ರಕೃತಿಯನ್ನು ತುಸು ಸುಧಾರಿಸಿದ್ದರೂ ಅಲ್ಲಿಯ ಪರಿಶ್ರಮವು ಬಹಳವಾಗಿ ದಣಿಸಿಯಾದ್ದರಿಂದ ಎಲ್ಲರೂ ಕೆಲಕಾಲ ವಿರಾಮ ಸುಖವನುಭವಿಸಲಿದ್ದಾರೆ.

ತ್ರಿಮೂರ್ತಿ ಸಮ್ಮೇಲನ

ಬರ್ಲಿನ್ ಬಳಿಯ ಪೋಟ್ಸ್‌ಡಾಮಿನಲ್ಲಿ ಚರ್ಚಿಲ್, ಟ್ರುಮೇನ್, ಸ್ಟಾಲಿನ್ ಸಮ್ಮೇಲನವು ಅತ್ಯಂತ ಗುಪ್ತತೆ—ಅತೀವ ಮುಂಜಾಗ್ರತೆ-ಅಭೇದ್ಯ ಪಹರೆಯಿಂದ ನಡೆಯುತ್ತಿದೆ. ಜರ್ಮನಿಯನ್ನು ನಾಲ್ಕು ಪಾಲಾಗಿ ವಿಭಾಗಿಸಲು ಚರ್ಚಿಲ್, ಟ್ರುಮೇನರ ಆತುರವೂ ಅದಕ್ಕೆ ಸ್ಟಾಲಿನರ ಪ್ರಬಲಾಕ್ಷೇಪವೂ ಇದೆಯೆಂದು ತಿಳಿದ ಬಂತ್ತದೆ. ಸ್ಟಾಲಿನರು ಸಮ್ಮೇಲನಕ್ಕೆ ಹೊರಡುವ ಮೊದಲು ಮೋಸ್ಕೋದಲ್ಲಿದ್ದ ಜಾಪಾನೀ ರಾಯಭಾರಿಯು ಮೊಲಟೊವರೊಡನೆ ಸಂಭಾಷಿಸಿದ್ದ. ಜಾಪಾನರ ಸಂಧಾನ ಶರ್ತಗಳ ಸಮೇತ ಸ್ಟಾಲಿನರು ಸಮ್ಮೇಲಕ್ಕೆ ಬಂದಿದ್ದಾರೆಂಬ ವಾರ್ತೆಯಿತ್ತು; ಅದು ನಿರಾಕರಣೆ ಹೊಂದಿದೆ. ಜಾಪಾನಿನೊಡನೆ ಹೋರಾಟಕ್ಕಿಳಿಯುವದಾದರೆ ಬಿಲ್ಲಿಯಗಟ್ಟಲೆ ಡೋಲರುಗಳ ಸಹಾಯವನ್ನು ರಶ್ಯಕ್ಕೀಯುವೆನೆಂದು ಟ್ರುಮೇನರ ಒತ್ತಾಯವಿದೆಯಂತೆ. ಟರ್ಕಿಯೊಡನೆ ವಿವಾದವಿರುವ ಡಾರ್ಡನೆಲ್ಸ್ ಅಡಳಿತೆಯು ಬೇಡಿಕೆಯನ್ನು ಸ್ಟಾಲಿನರು ಮುಂದೊಡ್ಡಿದ್ದಾರೆಂದು ತಿಳಿದುಬರುತ್ತದೆ. ಮಾತುಕತೆಗಳೀಗ ಬಿಕ್ಕಟ್ಟಿನ ಸ್ಥಿತಿಗೆ ಬಂದಂತಿದೆ. ಜರ್ಮನಿಯ ರಾಜ್ಯ ವ್ಯವಸ್ಥೆ; ಆದರಿಂದ ಪಡೆಯಬೇಕಾದ ಯುದ್ಧ ನಷ್ಟದ ವ್ಯವಸ್ಥೆ-ಇತ್ಯಾದಿಗಳ ಕುರಿತು ತೀವ್ರಭಿನ್ನಾಭಿಪ್ರಾಯವೆದ್ದಂತಿದೆ. ಯುರೋಪಿನಲ್ಲಿರುವ ಗಡಿ ಜಗಳಗಳ ತೀರ್ಮಾನವೂ ಸುಲಭ ಸಾಧ್ಯವಿಲ್ಲ.

ಚರ್ಚಿಲ್-ಟ್ರುಮೇನರೊಳಗೂ ಅಮೇರಿಕ-ಇಂಗ್ಲಂಡುಗಳ ವಿದೇಶ ಮಂತ್ರಿಗಳೊಳಗೂ ಪ್ರತ್ಯೇಕ ಮಾತುಕತೆಗಳು ನಡೆದಿದ್ದುವು; ಚರ್ಚಿಲ್-ಸ್ಟಾಲಿನರು ತಮ್ಮ ಭಾಷಾಂತರಕಾರರನ್ನು ಕೂಡಾ ಕರೆಯದೆ ಮೂರು ಘಂಟೆ ಅತಿಗೂಢ ಸಂಭಾಷಣೆ ನಡೆಸಿದ್ದರು. ಚರ್ಚಿಲ್ಲರು ಹಿಟ್ಲರನ ಸ್ವಗೃಹಕ್ಕೆ ಭೇಟಿಕೊಟ್ಟರೂ ಅಲ್ಲಿ ತಮ್ಮ 'ಫೋಟೊ'ವೆತ್ತಲು ಬಿಡಲಿಲ್ಲ. ಬರ್ಲಿನಿನಲ್ಲಿ ನುಸಿಗಳ ಕಾಟ ಅಸಹನೀಯವಿದೆ; ಪೋಟ್ಸ್‌ಡಾಮನ್ನೆಲ್ಲಾ ನುಸಿ ಬಲೆ ಆವರಿಸಿದೆ. ಇದೇ ತಾ. 26ನೇ ಗುರುವಾರ [illegible] ಚುನಾವಣೆಯ ಫಲಿತಾಂಶ ಹೊರಬೀಳಲಿಕ್ಕಿರುವದರಿಂದ ಮಿ. ಚರ್ಚಿಲ್ ಮತ್ತು ಮಿ. ಅಟ್ಲೀಯವರು ಆ ದಿನ ಲಂಡನಿಗೆ ಮರಳುವರೆಂದು ತಿಳಿದು ಬರುತ್ತದೆ. ಅದಕ್ಕಾಗಿ ಕೆಲವು ದಿನ ತ್ರಿಮೂರ್ತಿ ಸಮ್ಮೇಲನ ನಿಲ್ಲಬಹುದು. ಬವೇರಿಯಾ ಮತ್ತು ಆಸ್ಟ್ರಿಯದ ಆಂಗ್ಲೋ-ಅಮೆರಿಕಾನರ ಸ್ಥಳಗಳ ಜನರು ತೀವ್ರ ನಿರಾಶೆಗೀಡಾಗಿ, ತ್ರಿಮೂರ್ತಿ ಸಮ್ಮೇಲನದ ಕುರಿತು ಜಿಗುಪ್ಸೆ ಪ್ರದರ್ಶಿಸುತಿದ್ದಾರೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಣಾಮಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕ್ಲಿಷ್ಟ ಕೇಸುಗಳಿಗೆ ರೂ. 5. 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

P. D. S. (A. E.) Tollygunge, Calcutta.

ಸ್ಟಾಕಿಸ್ಟ್: ಸಾ ಕಂಪೆನಿ, ಮಂಗಳೂರು

TO LET.

A decent spacious house behind Victory Club. **Enquiries:—**

Grand Hotel, Udipi.

NAVAYUGA

The Leading Kannada weekly

Published every Thursday

The best medium for advertisement of every kind

For advt rates:-

The advt Manager

Navayuga Udipi.



Approved firm by the Govt. of Mysore. Certified by the Agent of the Govt. of India in Ceylon.

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI**, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital	Rs. 15,17,000
Reserves	Rs. 4,41,000

ಉಡುಪಿ, ಗುರುವಾರ ೨೬-೭-೧೯೪೫

ಖಾಸಗಿ ಶಾಲೆಗಳು

‘ಈ ಯುದ್ಧದ ಕೊನೆಯ ಅಂಕದಲ್ಲಿ ಶಾಂತ ಸಮುದ್ರ-ಶಾಂತ ಹೃದಯ ಕದಡಲಿದೆ’—ಎಂದೊಬ್ಬ ತಜ್ಞರಂದಿದ್ದರು ಸದ್ಯ ಹಾಗಾಗಿದೆ. ಹೃದಯಮಾಪಕ ಯಂತ್ರವೊಂದಿರುತಿದ್ದರೆ ಮನೋರೋಗವೆಂಬುದೀಗ ಯುದ್ಧ ಪೂರ್ವ ಸ್ಥಿತಿಯ ನಾಲ್ಮಡಿಯಷ್ಟೇರಿದೆ ಎಂಬುದನ್ನದು ತೋರಿಸುತಿತ್ತು. ಸದ್ಯ ಆತುರೋದ್ವೇಗಗಳು ಸಹಜ ಸ್ವಭಾವವನ್ನಿಸಿವೆ. ಕಾಲವಂತಹದು. ಹಿಂದುಸ್ಥಾನದಲ್ಲಿ ರಾಜಕೀಯ ಬಿಕ್ಕಟ್ಟು, ಆಹಾರಾಭಾವ, ಇತ್ಯಾದಿ ಇತ್ಯಾದಿ ಕೊರತೆಗಳೇ ತುಂಬಿ ಹೋಗಿವೆ ಮಾನುಷತ್ವ ಮತ್ತು ನಿತ್ಯ ಜೀವನ ವಿಧಾನಗಳಿಗೇನೇ ಧಕ್ಕೆ ಬೀಳುವಾಗ ಹೃದಯಶಾಂತಿ ಅಸಾಧ್ಯ. ಮಾತ್ರವಲ್ಲ, ಇಂತಹ ಅಭಾವಗಳು ಮರಿಯಿಡುತ್ತವೇನೋ ಎಂಬಂತೆ, ಅವುಗಳಿಂದ ಎಷ್ಟೋ ವಿಧದ ಸಂಕಟ, ಸಂಕೋಚಗಳೂ ಹುಟ್ಟಿಕೊಂಡಿವೆ ಇವಕ್ಕೆಲ್ಲಾ ಜನತೆಯಂತೆಯೇ, ಜನಮತದ ರಾಯಭಾರಿಗಳಾಗಿರುವ ಪತ್ರಿಕೆಗಳೂ ಬಲಿ ಬೀಳಬೇಕಾದುದು ಸಹಜ ಒಂದು ನಿದರ್ಶನ-ಕಾಗದ ನಿಯಂತ್ರಣವಿರುವ ಈ ಕಾಲದಲ್ಲಿ ಪತ್ರಿಕೆಗಳಿಗೆ ಪ್ರಕಟಣಾರ್ಹ ದೂರುಗಳು ಬರುವದೂ ವಿಶೇಷ. ತಮ್ಮಿಂದ ಅಸಾಧ್ಯವಾದುದನ್ನು ಮಾಡಲು ಯಾರೂ ಬಾಧ್ಯರಲ್ಲ; ಸ್ಥಳಾಭಾವವಿರುವಾಗ, ಪತ್ರಿಕೆಗಳೇನು ಮಾಡಲು ಸಾಧ್ಯವೆಂಬುದರಿಂದ ಕ್ಷಮೆಯೇನೋ ಇದೆ; ಆದರೆ ಈ ಆತ್ಮದ ಮನದಲ್ಲಿ ನೋವಿದೆ; ಜನಮತ ಪ್ರಕಟಣೆಗಾಗಿಯೇ ಇರುವ ಪತ್ರಿಕೆಗಳು ತಾವು ಕರ್ತವ್ಯ ಬಾಹಿರರಾದೆವೆಂಬ ಯಾತನೆಯನುಭವಿಸುವಂತಾಗಿದೆ; ಆದರೆ ಉಪಾಯವಿಲ್ಲ. ನಮ್ಮ ಬಳಿಗೆ ಪ್ರಕಟಣೆಗಾಗಿ ಬಂದ ಎಷ್ಟೋ ದೂರುಗಳ ಕಟ್ಟು, ನಮ್ಮ ಕಣ್ಣ ಮುಂದೆ ಮಾತ್ರ ಉಳಿಯಬೇಕಾಗಿ ಬಂದುದರಿಂದ ಈ ದೈನ್ಯೋದ್ಗಾರವೆತ್ತಬೇಕಾಯಿತು ತರಗತಿವಾರಾಗಿ ಹೇಳುವದಾದರೆ ನಮಗೆ ಬಂದ ದೂರುಗಳಲ್ಲಿ ಸಂಖ್ಯೆ ಮತ್ತು ಪ್ರಾಮುಖ್ಯತೆಯಲ್ಲಿ ಮೊದಲನೆಯದಾಗಿ ಹಳ್ಳಿಗಳಲ್ಲಿ ಪ್ರಚಲಿತವಾಗಿರುವ ದೋಷ ಪೂರ್ಣ ಆಹಾರ ವ್ಯವಸ್ಥೆ ಬಂದಿದೆ. ಎರಡನೆಯ ಸ್ಥಾನ ಐಡೆಡ್ ಶಾಲೆಗಳ ಅಧ್ಯಾಪಕರ ಗೋಳಿಗೆ.

ನಿಜಕ್ಕೂ ಮದ್ರಾಸ್ ಪ್ರಾಂತದ ಖಾಸಗೀ ಶಾಲೆಗಳ ಅಧ್ಯಾಪಕರು ಆರ್ಥಿಕ ದೃಷ್ಟಿಯಲ್ಲಿ ಪತಿತ ವರ್ಗಕ್ಕೆ ಸೇರುತ್ತಾರೆ ಸರಕಾರವು ಐಡೆಡ್ ಶಾಲೆಗಳನ್ನು ಕಡೆಗಣಿಸಿರುವ ರೀತಿ ಕ್ಷಮಾರ್ಹವಾದುದಲ್ಲ. ಪ್ರಾಂತ್ಯದ ವಿದ್ಯಾರ್ಥಿಗಳಲ್ಲಿ ಸುಮಾರು ಅರೆವಾಸಿ ಸಂಖ್ಯೆಯಿರುವದು ಖಾಸಗೀ ಶಾಲೆಗಳಲ್ಲಿಯೇ. ಅಲ್ಲಿಯ ಅಭ್ಯಾಸ ತೃಪ್ತಿಕರವಾಗಿಲ್ಲ—ಪ್ರೋತ್ಸಾಹದ ಅಭಾವದಿಂದ ಕ್ಷಯಿಸಿ ಸಾಯುವ ಶಿಕ್ಷೆ ಹೊಂದುವಂತಹ ತಪ್ಪನ್ನವು ಮಾಡುತ್ತಿವೆ, ಎನ್ನೋಣವೆ? ಸರಕಾರೀ ವಿಮರ್ಶೆಗಳೇ ಹಾಗನ್ನುವದಿಲ್ಲ .ಸರಕಾರೀ ಅಥವಾ ಮುನ್ಸಿಪಲ್ ಶಾಲೆಗಳಿಗಿಂತ ಖಾಸಗೀ ಶಾಲೆಗಳ ಅಭ್ಯಾಸ ಪರಿಣಾಮವೇ ಉತ್ತಮವಾದುದೆಂದು ಸ್ವತಃ ಸರಕಾರವೇ ಹಲವು ಬಾರಿ ಶ್ಲಾಘಿಸಿದುದಿದೆ. ಆದರೂ ಅವುಗಳಿಗೆ ಸಾಕಷ್ಟು ಸಹಾಯ ದೊರೆಯುತ್ತಿಲ್ಲ; ಲಾಭೋದ್ದೇಶದಿಂದ ನಡೆಯುವ ಖಾಸಗೀ ವ್ಯಾಪಾರಗಳಿಗೆ ಕೊಡುವಂತಹ ಸಂಭಾವನೆಯನ್ನೇ ಸರಕಾರವು ಈ ಖಾಸಗೀ ಶಾಲೆಗಳಿಗೂ ಕೊಡುತ್ತಿದೆ ಸದ್ಯದ ಜೀವನ ವೆಚ್ಚದ ದೃಷ್ಟಿಯಿಂದ ಸರಕಾರವೀಗ ಐಡೆಡ್ ಶಾಲೆಗಳಿಗೆ ಕೊಡುತ್ತಿರುವ ‘ಗ್ರಾಂಟು’ ಅತ್ಯಲ್ಪ; ಅದೊಂದು ‘ಪ್ರಸಾದ’! ಸರಕಾರೀ ಸ್ಕೂಲಿನಲ್ಲಿ ಹಯರ್ ಗ್ರೇಡ್ ಟ್ರೈನ್ಡ್ ಉಪಾಧ್ಯಾಯನೊಬ್ಬನಿಗೆ ತಿಂಗಳಿಗೆ ರೂ. 12 ದೊರೆಯುತ್ತದೆ; ಸಸ್ಯಾಹಾರಿ ಪ್ರಾಣಿಯೊಂದರ ಸಾಕಣೆಗೂ ಅಷ್ಟು ಹಣ ಸಾಕಾಗದ ಕಾಲವಿದು; ಬೇರೆ ಕ್ಷೇತ್ರದಲ್ಲಿ ದಿನಕ್ಕೊಂದು ಘಂಟೆ ದುಡಿದರೂ ಸಂಪಾದಿಸಲಾಗುವ ಸಂಬಳವಿದು. ಆದ್ದರಿಂದ ಅಷ್ಟು ಸಂಬಳಕ್ಕೋರ್ವ ಅಧ್ಯಾಪಕನು ದೊರೆಯಲಾರನಾದರೆ ಆಡಳಿತೆಯವರು ಕೈಯಿಂದ ಹಣಹಾಕಲು ತಯಾರಿರಬೇಕು. ಇದು ಸಾಧ್ಯವೆ? ಈಗ ಪ್ರತಿಯೊಂದು ವಿಭಾಗದ ಕೆಲಸಗಾರರಿಗೂ ತುಟ್ಟಿ ಭತ್ತೆ ದೊರೆಯುವಾಗ, ಖಾಸಗೀ ಶಾಲಾಧ್ಯಾಪಕರ ತುಟ್ಟಿಗೆ ಕೆಲವೇ ಶಾಲೆಗಳಲ್ಲಿ ಆಕ್ರಮವಿದೆ. ಅದು ಕೂಡಾ ರೂ. 3ರಿಂದ ರೂ. 6ರ ವರೆಗೆ ಮಾತ್ರ. ಆದರೆ ಸರಕಾರೀ ಶಾಲೆಗಳ ಅಧ್ಯಾಪಕರಿಗೆ ರೂ 16ರಿಂದ 18ರ ವರೆಗೆ ತುಟ್ಟಿ ಭತ್ತೆ ದೊರೆಯುತ್ತದೆನ್ನುವಾಗ, ಈ ವ್ಯತ್ಯಾಸವು ನಿಜಕ್ಕೂ ಶೋಚನೀಯ. ಸರಕಾರದ ಈ ಅನ್ಯಾಯ ಅಸಡ್ಡೆ, ಸರ್ವಥಾ ನ್ಯಾಯವಲ್ಲ. ಪ್ರಾಂತಿಕ ಸರಕಾರದ ಉತ್ಪತ್ತಿ ಹೆಚ್ಚಿರುವ ಈ ಕಾಲದಲ್ಲಿ ಸರಕಾರವು ಈ ಭಾಗದ ಕೊರತೆಯನ್ನು ಅವಶ್ಯವಾಗಿ ನಿವಾರಿಸಿ ವಿದ್ಯಾಭಿವೃದ್ಧಿಗೆ ನೆರವಾಗುವದೆಂದು ಹಾರೈಸುತ್ತೇವೆ. ಸರಕಾರದ ಲಕ್ಷ್ಯವನ್ನೀಕಡೆಗೆಳೆಯಲು ಪ್ರಮುಖರು ಪ್ರಯತ್ನಿಸುವರೆಂದೂ ನಿರೀಕ್ಷಿಸುತ್ತೇವೆ.

ಮುಂದೇನು?

ವೈಸರಾಯರ ಮುಂದಿನ ಹೆಜ್ಜೆ.

ಸಿಮ್ಲಾ ಸಮ್ಮೇಲನದಿಂದ ಲೋರ್ಡ್ ವೇವೆಲರು ಅತ್ಯಂತ ನಿರಾಶೆಗೀಡಾಗಿದ್ದಾರೆ. ಆದರಿನ್ನೂ ಅವರ ‘ಮೆದುಳು ಚೀಲ’ ಖಾಲಿಯಾಗಿಲ್ಲ ಈ ಸೋಲ್ಜರ್ ವೈಸರಾಯಿಯ ಯಥಾರ್ಥತೆಯು ಸರ್ವತ್ರ—ಮುಖ್ಯವಾಗಿ ಬ್ರಿಟನಿನಲ್ಲಿ—ಮುಕ್ತ ಕಂಠದಿಂದ ಶ್ಲಾಘನೆ ಪಡೆದಿದೆ. ಲೋರ್ಡ್ ವೇವೆಲರು ಲೀಗನ್ನು ಕಡೆಗಣಿಸಿ ಕಾರ್ಯ ಮುಂದೊತ್ತಬೇಕಿತ್ತೆಂದು ಲೋಕಮತ ಪ್ರಕಟವಾಗಿದೆ. ವೈಸರಾಯರೀಗ ಎಲ್ಲಾ ಪ್ರಾಂತಿಕ ಗವರ್ನರರ ಸಭೆಯೊಂದನ್ನು ಆಗೋಸ್ತು ತಾ.1-2ಕ್ಕೆ ನವದಿಲ್ಲಿಯಲ್ಲಿ ಕರೆದಿದ್ದಾರೆ. ವೇವೆಲ್ ವೈಸರಾಯಿಯಾದ ಮೇಲೆ, ಇದೀಗ ಮೂರನೇ ಬಾರಿ ಗವರ್ನರರೆಲ್ಲಾ ಕೂಡಿ ಬರಲಿದ್ದಾರೆ ಸಿಮ್ಲಾ ಸಮ್ಮೇಲನದ ವರದಿಯನ್ನೂ ಆ ಸಂಬಂಧವಾಗಿ ತನ್ನ ಯೋಚನೆಯಲ್ಲಿರುವ ಮುಂದಿನ ಮಾರ್ಗವನ್ನೂ ವೈಸರಾಯರೀ ಸಭೆಯಲ್ಲಿ ಮುಂದಿಡಲಿದ್ದಾರೆ. ಬ್ರಿಟಿಷ್ ಚುನಾವಣೆಯ ಫಲಿತಾಂಶವು ಆ ಮೊದಲೇ ಪ್ರಕಟವಾಗಲಿದೆ. ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳ ಸಾರ್ವತ್ರಿಕ ಚುನಾವಣೆ, ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ, ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಬಹಿಷ್ಕಾರ ರದ್ದತಿ ಮೊದಲಾದ ದೇಶ ಪ್ರಾಮುಖ್ಯ ವಿಷಯಗಳು ವೈಸರಾಯೀ ಕಾರ್ಯಕ್ರಮ ಪಟ್ಟಿಯಲ್ಲಿವೆ. 93ನೇ ಸೆಕ್ಷನಿನಾಳ್ವಿಕೆಯ ಪ್ರಾಂತ್ಯಗಳಲ್ಲೆಲ್ಲಾ ಪುನಃ ಪ್ರಜಾ ಜವಾಬ್ದಾರಿ ಮಂತ್ರಿಮಂಡಲ ಸ್ಥಾಪಿಸಲು ವೈಸರಾಯರು ತಯಾರಾದಂತಿದೆ ವೇವೆಲ್ ಯೋಜನೆಯೊಂದು ಭಾಗವಾದ ಬ್ರಿಟಿಷ್ ಹೈ ಕಮಿಶನರರ ನೇಮಕದ ಯೋಚನೆಯೂ ನಡೆಯಲಿದೆಯಂತೆ. ಸಿಮ್ಲಾ ಪರಾಭವವು ತಾತ್ಕಾಲಿಕ ದುರಂತ ಮಾತ್ರವೆಂದೂ, ವೇವೆಲ್ಲರು ಒಂದಲ್ಲೊಂದು ಹಾದಿಯಿಂದ ಬಿಕ್ಕಟ್ಟು ನಿವಾರಣೆಗೆ ಪ್ರಯತ್ನಿಸಿ ಗೆಲ್ಲುವರೆಂದೂ ಆಶೆಯಿದ್ದಿದೆ.

ಕಾಂಗ್ರೆಸ್ ಮುಂದೇನು?

ಕೇಂದ್ರದಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿಸಲ್ಪಡದೆ ಪ್ರಾಂತ್ಯಗಳಲ್ಲಿ ಪುನಃ ಮಂತ್ರಿ ಮಂಡಲ ರಚಿಸಿಕೊಳ್ಳುವದು ಅಸಾಧ್ಯವೆಂದು ಅಧ್ಯಕ್ಷ ಅಜಾದರೂ ಇತರ ಪ್ರಮುಖರೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಗಳ ಮತ್ತು ಸಭೆ ಭಾಷಣಗಳ ನಿರ್ಬಂಧವನ್ನು ತೆಗೆದು ಹಾಕಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆಸುವದಾದರೆ ಕಾಂಗ್ರೆಸದಕ್ಕೆ ತಯಾರಿದೆ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ ಮತ್ತು ಅ. ಭಾ. ಕಾಂ. ಸಮಿತಿ ಹಾಗೂ ಇತರ ಶಾಖಾ ಸಮಿತಿಗಳ ಮೇಲಿನ ಬಹಿಷ್ಕಾರ ರದ್ದತಿಗಾಗಿಯೂ, ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಗಾಗಿಯೂ ಮೌಲಾನರು ವೈಸರಾಯರಿಗೆ ಬರೆದುಕೊಂಡು ಸತ್ಪರಿಣಾಮದ ನಿರೀಕ್ಷೆಯಲ್ಲಿದ್ದಾರೆ. ಇನ್ನೊಂದೆರಡು ತಿಂಗಳುಗಳೊಳಗೆ ಬೊಂಬಾಯಿಯಲ್ಲಿ ಅ. ಭಾ. ಕಾಂ. ಸಮಿತಿ ಸಭೆ ಸೇರಲು ಸಾಧ್ಯವಾಗಬಹುದೆಂಬ ಆಶೆಯಿದೆ. ರಾಮಘರಿನ 1940ರ ಅಧಿವೇಶನದ ನಂತರ ಇದು ವರೆಗೂ ಸೇರದಿದ್ದ ಕಾಂಗ್ರೆಸ್ ಮಹಾಧಿವೇಶನವನ್ನು ಬರುವ ದಶಂಬರ್ ಅಥವಾ ಮಾರ್ಚಿಯೊಳಗೆ ಸೇರಿಸುವ ಆಲೋಚನೆಯೂ ನಡೆದಿದೆ. ಪ್ರಕೃತ ಕಾಂಗ್ರೆಸ್ ಸಂಸ್ಥೆಯನ್ನು ಸರ್ವವಿಧದಿಂದ ಬಲಗೊಳಿಸುವ ಆತುರದಲ್ಲಿ ಧುರೀಣರಿದ್ದಾರೆ ಕಾಂಗ್ರೆಸ್ ಸದಸ್ಯರಾಗಿರುವ ಕಮ್ಯೂನಿಸ್ಟರು ಆಗೋಸ್ತು ಗಲಭೆಯ ಕಾಲದಲ್ಲಿ ಕಾಂಗ್ರೆಸ್ ಶಿಸ್ತಿಗೆ ವಿರುದ್ಧ ವರ್ತಿಸಿದ್ದರೆಂಬ ಕುರಿತು ಕಠಿಣಾರೋಪಗಳು ಬಂದಿರುವುದರಿಂದ ಮುಂದಿನ ಅ. ಭಾ. ಸಮಿತಿ ಸಭೆಯಲ್ಲಿ ಅವುಗಳ ವಿಚಾರಣೆಯೂ ನಡೆಯಬಹುದು. ಅಸ್ಸಾಮಿನಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲದಿಂದಲೇ ಇದುವರೆಗೆ ಮುಸ್ಲಿಂ ಲೀಗ್ ಮಂತ್ರಿ ಮಂಡಲ ಬದುಕಿದೆ. ಲೀಗ್ ಮಂತ್ರಿ ಮಂಡಲವು ತಮ್ಮೊಡನೆ ಮಾಡಿಕೊಂಡ ಒಪ್ಪಂದಾನುಸಾರ ವರ್ತಿಸಿಲ್ಲ; ಹಲವು ರಾಜಕೀಯ ನಿರ್ಬಂಧಿತರನ್ನು ಇನ್ನೂ ಬಿಡುಗಡೆ ಮಾಡಿಲ್ಲವೆಂಬ ಕಾರಣ ಕೊಟ್ಟು, ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಬಾರ್ಡೋಲಾಯಿಯವರು ,ತಮ್ಮ ಬೆಂಬಲವನ್ನು ಹಿಂದೆಗೆದುಕೊಳ್ಳುವೆವೆಂದು ಲೀಗ್ ಪ್ರಧಾನಿ ಸರ್. ಸಾದುಲ್ಲಾರಿಗೆ ತಿಳಿಸಿದ್ದಾರೆ. ಸ್ಥಳೀಯ ವಿಧ್ಯಮಾನಗಳಿಗನುಸಾರವಾಗಿ ವರ್ತಿಸುವ ಪೂರ್ಣಾಧಿಕಾರವನ್ನು ಕಾಂಗ್ರೆಸ್ ಪ್ರಮುಖ ಮಂಡಳಿಯು ಬಾರ್ಡೋಲಾಯಿಯವರಿಗೆ ಕೊಟ್ಟಿದೆ. ಕಾಂಗ್ರೆಸ್ ಸಂಸ್ಥೆಯನ್ನು ಸುಸಂಘಟಿಸುವದೊಂದೇ ಸದ್ಯ ಕಾಂಗ್ರೆಸಿನ ಮುಖ್ಯ ಧೋರಣೆ.

ಲೀಗ್ ಏನು ಮಾಡುವುದು?

“ಹೌದು. ಸದ್ಯದಲ್ಲೇ ಎಲ್ಲವನ್ನೊಳಗೊಂಡ ಹೇಳಿಕೆಯೊಂದನ್ನು ನಾನೀಯಲಿದ್ದೇನೆ. ಆದರೆ ಲೋರ್ಡ್ ವೇವೆಲ್ ಮತ್ತು ಕಾಂಗ್ರೆಸ್ ಅಧ್ಯಕ್ಷರೊಳಗೆ ನಡೆದ ಪತ್ರವ್ಯವಹಾರಗಳ ಪ್ರಕಟಣೆಯನ್ನು ಕಾಯುತಿದ್ದೇನೆ. ಸಮ್ಮೇಲನದ ಪರಾಭವಕ್ಕೆ ಕಾರಣರಾರು ಎಂಬ ಕುರಿತು ಅದರಿಂದ ಸಾಕಷ್ಟು ಬೆಳಕು ಬೀಳುವದೆಂದು ನನ್ನ ನಿರೀಕ್ಷೆಯಿದೆ” ಎಂದು ಮಿ. ಜಿನ್ನರಂದಿದ್ದಾರೆ. ಆದರೆ, ತಾನು ವೈಸರಾಯಿಯೊಡನೆ ನಡೆಸಿದ ಪತ್ರವ್ಯವಹಾರ ಪ್ರಕಟಿಸಲು ಜಿನ್ನರಾತುರಗೊಂಡಂತೆ ಕಾಂಗ್ರೆಸಿಗರು ಅವಸರಿಸುವಂತಿಲ್ಲ ಲೋರ್ಡ್ ವೇವೆಲರಲ್ಲಿ ದೌರ್ಬಲ್ಯವನ್ನಲ್ಲದೆ ದುರ್ಬುದ್ಧಿಯನ್ನು ಕಾಂಗ್ರೆಸಿಗರು ಕಂಡಿಲ್ಲ. ಸಿಮ್ಲಾದಲ್ಲಿ ವೈಸರಾಯ ಮತ್ತು ಪ್ರಮುಖರೊಳಗೆ ಕೂಡಿಬಂದ ಮೈತ್ರಿ ಅಮೂಲ್ಯವಿದೆ. ಅಂತಹ ಸ್ನೇಹ ವಾತಾವರಣವನ್ನು ಕೆಡಿಸುವ ಮಾತು ಕೃತಿಗಳು ಕಾಂಗ್ರೆಸ್ ಪ್ರಮುಖರಿಂದಾಗಬಾರದೆಂದು ಗಾಂಧಿಜೀಯ ಹಿತೋಪದೇಶವಿದೆ. “ಸಾರ್ವತ್ರಿಕ ಚುನಾವಣೆಗಳು ಹೆಚ್ಚಿನವರ ನಿರೀಕ್ಷೆಗೆ ಮೊದಲೇ ನಡೆಯಲಿವೆ. ದೇಶದ 11ಪ್ರಾಂತ್ಯಗಳ ಪ್ರತಿ ಜಿಲ್ಲೆ ತಾಲೂಕುಗಳಲ್ಲಿ ಲೀಗ್ ಚುನಾವಣಾ ಸಮಿತಿಗಳ ರಚನೆಯಾಗಬೇಕು; ಭರದಿಂದ ಹಣ ಸಂಗ್ರಹವಾಗಬೇಕು. ಲೋಕದಿದಿರು ನಮ್ಮ ಪರೀಕ್ಷೆ ಆಗ ನಡೆಯಲಿದೆ”—ಎಂದು ಜಿನ್ನರು ಆಗ್ರಹದಿಂದ ಹಾಜ್ಞಾಪಿಸಿಕೊಂಡಿದ್ದಾರೆ. ಸಿಮ್ಲಾದಲ್ಲಿ ಗಾಂಧಿಜೀ ಪ್ರತ್ಯಕ್ಷ ಭಾಗವಹಿಸದೆ ಕೆಲಸ ಕೆಡಿಸಿದರೆಂದು ಕೆಲವು ಲೀಗ್ ಪ್ರಮುಖರ ವಾದ.

ಜಪಾನಿಗೆ ಶರಣುಶರ್ತ ಕಳುಹಲು ಸ್ಟಾಲಿನರ ಒಪ್ಪಿಗೆ?

ಬರ್ಮದಲ್ಲಿ ಜಪಾನರ ಪ್ರತಿಧಾಳಿ ಪ್ರಾರಂಭ!

ಬರ್ಮಾ ಯುದ್ಧ

ಇಡೀ ಬರ್ಮಾ ಯುದ್ಧದ ಪ್ರಥಮ ಖಾಡಾಖಾಡಿ ಹೋರಾಟವೊಂದು ಇಷ್ಟರಲ್ಲೇ ನಡೆಯಲಿರುವ ವಾರ್ತೆ ಬಂದಿದೆ. ಬರ್ಮದಲ್ಲಿ ಇದು ವರೆಗೂ ಮುಖಾಮುಖಿ ಹೋರಾಟಕ್ಕೆ ನಿಲ್ಲದೆ ವ್ಯವಸ್ಥೆಯಿಂದ ಹಿಂಜರಿದಿದ್ದ ಜಾಪಾನರು ರಂಗೂನಿನ 140 ಮೈಲು ಉತ್ತರದ ಝಾಹಾ ರೈಲ್ವೇ ಸ್ಟೇಶನ್ ವಲಯದಲ್ಲಿ ಕಠಿಣ ಹೋರಾಟಕ್ಕಣಿಯಾಗಿದ್ದಾರೆ. ಸಿಟ್ಟಾಂಗ್ ಹೊಳೆ ವಲಯ ಮತ್ತು ಗುಡ್ಡಗಾಡುಗಳಲ್ಲಿ ಜಾಪಾನರ ಸೇನಾತುಕಡಿಗಳು ಸಂಘಟಿತವಾಗಿ, ಸರಬರಾಯಿ ಮಾಡಿಕೊಂಡು ಅಣಿಯಾಗುತ್ತಿರುವ ವಾರ್ತೆ ಬಂದಿದೆ ಒಂದೆರಡು ವಾರಗಳಿಂದ ಆ ಭಾಗದಲ್ಲಿ ಮಿತ್ರರೇನೂ ಪ್ರಗತಿ ಪಡೆಯದೆ ಜಾಪಾನರ ಪ್ರಬಲ ಧಾಳಿಯ ನಿರೀಕ್ಷೆಯಲ್ಲಿದ್ದಾರೆ.

ಬರ್ಮದಲ್ಲೇನು?

ರಂಗೂನು ಸ್ವಾಧೀನವಾಗಿ ಹೆಚ್ಚಿನ ಭಾಗವು ಮಿತ್ರರ ವಶವಾಗಿದ್ದರೂ ಬರ್ಮದಲ್ಲಿ ಸುಗಮ ವ್ಯವಸ್ಥೆ ಸ್ಥಾಪನೆಯಾಗಿಲ್ಲ ಅಲ್ಲಿಯ ಮಿಲಿಟರಿ ಅಧಿಕಾರಿಗಳ ಸಮ್ಮತಿ ವಿನಹ ನಾಗರಿಕರಿಗೆ ಬರ್ಮಾ ಪ್ರವೇಶ ದೊರೆಯುವದಿಲ್ಲ ಜಾಪಾನರಿಂದಾಕ್ರಮಿಸಲ್ಪಟ್ಟ ನಂತರ ಬರ್ಮದ ಅಕ್ಕಿಯ ಪ್ರಾಮುಖ್ಯತೆಯಳಿದು ಹೋಗಿತ್ತು; ಬೇಸಾಯ ಕೆಲಸಗಾರರು ದಿಕ್ಕಾಪಾಲಾಗಿದ್ದರಲ್ಲದೆ, ಸಾಗುವಳಿ ಸರಿಯಾಗಿ ನಡೆದಿರಲಿಲ್ಲ; ವ್ಯವಸಾಯ ಕ್ಷೇತ್ರಗಳು ಹಾಳುಬಿದ್ದಿವೆ. ಜಾಪಾನರಿಗೆ ಅಕ್ಕಿಯ ಅವಶ್ಯಕತೆಯಿಲ್ಲದ್ದರಿಂದ ಹಿಂದಿನ ಪರಿಮಾಣದಲ್ಲಿ ಬೇಸಾಯಕ್ಕೆ ಪ್ರೋತ್ಸಾಹವೂ ಇರಲಿಲ್ಲ ಅಕ್ಕಿಯ ಧಾರಣೆ ಇಳಿದು ಹೋಗಿತ್ತು ಇವೆಲ್ಲಾ ಪರಿಸ್ಥಿತಿಯನ್ನು ಸುಧಾರಿಸಿ, ಹಿಂದುಸ್ಥಾನಕ್ಕೆ ಹಿಂದಿನಂತೆಯೇ ಬರ್ಮಾದ ಅಕ್ಕಿ ಬರಬೇಕಾದರೆ ಸುಮಾರು 1947ನೇ ಎಪ್ರಿಲ್ ತಿಂಗಳಿಗೆ ಮಾತ್ರ ಸಾಧ್ಯವೆಂದು ತಿಳಿದು ಬರುತ್ತದೆ.

ಜಾಪಾನರ ಆಕ್ರಮಣ ಭೀತಿ

ಜಾಪಾನ್ ಮೂಲ ನೆಲಾಕ್ರಮಣದ ಪೂರ್ವ ಪೀಠಿಕೆಯಾಗಿ ಮಿತ್ರರ ಸಾವಿರ ಸಂಖ್ಯೆಯ ವಿಮಾನಧಾಳಿಗಳು ನಡೆಯುತ್ತಿರುವುದರಿಂದಲೂ ಅಮೇರಿಕನ್ ಸೇನೆಗಳು ಅಕ್ಕಪಕ್ಕಗಳಲ್ಲೇ ಸಿದ್ಧತೆಯಲ್ಲಿರುವದರಿಂದಲೂ ಜಾಪಾನರಲ್ಲಿ ಆಕ್ರಮಣ ಭಯ ಹೆಚ್ಚಿ ಹೋಗಿವೆ. ಇದೇ ಸಮಯದಲ್ಲಿ 'ಈಗಲೇ ಶರಣಾಗಿರಿ, ಇಲ್ಲವೇ ಸರ್ವನಾಶವಾಗುವದು' ಎಂದು ಮೇಲಿಂದ ಮೇಲೆ ಅಮೇರಿಕವು ಆಕಾಶ ವಾಣಿ ಎಚ್ಚರಿಕೆಯೀಯ ಹತ್ತಿದೆ ಜನತೆಯ ಮನೋದಾರ್ಢ್ಯವುಳಿಸುವದಕ್ಕಾಗಿ ಜಾಪಾನ್ ಅಧಿಕಾರಿಗಳೂ ಜರ್ಮನಿಯ ಕೊನೆಯ ಮಾದರಿಯನ್ನೇ ಅನುಕರಿಸಿದಂತಿದೆ. "ನಮ್ಮ ಅಭೇದ್ಯ 'ಜಾಪಾನ್ ಕೋಟೆ'ಗಳ ಮೇಲೂ ಆಕ್ರಮಣ ವಿರೋಧಿ ಗುಪ್ತಾಸ್ತ್ರಗಳ ಮೇಲೂ ವಿಶ್ವಾಸವಿಡಿರಿ" ಎಂದು ಜಾಪಾನ್ ಪ್ರಮುಖಾಧಿಕಾರಿಗಳು ರಾಷ್ಟ್ರಕ್ಕಾಶ್ವಾಸನೆಯೀಯುತಿದ್ದಾರೆ. ತಮ್ಮಲ್ಲಿ ನಾವಿಕ ಗುಪ್ತಾಸ್ತ್ರಗಳಿವೆ; ಶಾಂತಸಮುದ್ರವು ಆಕ್ರಮಣಗಾರರಿಗೆ ಸಮಾಧಿಯಾಗುವದು, ಎಂದು ಜಾಪಾನರು ಭರವಸೆಯಿಂದಾಡುತಿದ್ದಾರೆ.

ಅಯರ್ಲೆಂಡಿನ ಸ್ಥಾನ

ಅಯರ್ಲೆಂಡಿನ ಡಯಲ್ ಸಭೆಯಲ್ಲಿ ಪ್ರಶ್ನೆಯೊಂದನ್ನು ಉತ್ತರಿಸುತ್ತಾ ಅಯರ್ಲೆಂಡು 'ರಿಪಬ್ಲಿಕ್' ಎಂದು ಅಲ್ಲಿಯ ಪ್ರಧಾನ ಮಂತ್ರಿ ಡಿವೆಲರರಂದಿದ್ದಾರೆ. ಈ ಕುರಿತು ಬ್ರಿಟನ್ನಿನಲ್ಲಿ ಕಟು ವಿಮರ್ಶೆಯೂ ಅಯರ್ಲೆಂಡಿನಲ್ಲಿ ತರ್ಕವಿತರ್ಕಗಳೂ ಎದ್ದಿವೆ. "ರಿಪಬ್ಲಿಕ್ ಎಂದರೆ ನನ್ನ ಅಭಿಪ್ರಾಯದಲ್ಲಿ ಐರಿಶ್ ಜನರ ಸ್ವಾತಂತ್ರ್ಯ. ಸರಕಾರೀ ರೂಪರೇಖೆಯು ಮುಖ್ಯವಲ್ಲ. ಸಾಮ್ರಾಜ್ಯಾಧಿಕಾರದ ವಿರುದ್ಧವಾಗಿಯೇ ಹೋರಾಟ ನಡೆಯಬೇಕಾಗಿತ್ತಾದ್ದರಿಂದ ಅದನ್ನೊಪ್ಪಿಕೊಂಡಿದ್ದರೆ ಐರಿಶ್ ಸ್ವಾತಂತ್ರ್ಯವೆಂದಿಗೂ ಪರಿಣಮಕಾರಿಯಾಗುತ್ತಿರಲಿಲ್ಲ. ಸ್ವತಂತ್ರವಾಗಿದ್ದುಕೊಂಡು ಬ್ರಿಟಿಷ್ ಕಾಮನ್‌ವೆಲ್ತಿನೊಡನೆ ಸಹಕರಿಸುವದೇ ನಮ್ಮ ಧ್ಯೇಯ. ಆದರೆ ಐರಿಷ್ ಸ್ವಾತಂತ್ರ್ಯೇಚ್ಛೆಗೆ ಪ್ರತಿಬಂಧ ಬಂದರೆ ನಾನದನ್ನು ಜನತೆಯ ಮುಂದಿಡುತ್ತೇನೆ. ನಾನು ಬ್ರಿಟನ್ನಿನ ಮೇಲೆ ವೈರವಿರುವ ವ್ಯಕ್ತಿಗನೆಂದು ಹೇಳಲಾಗುತ್ತಿದೆ ಇದು ನಿಜವಲ್ಲ. ಬ್ರಿಟನ್ನಿನ ಬದಲಿಗೆ ಬೇರೊಂದು ರಾಷ್ಟ್ರವು ನಮ್ಮ ನೆರೆಯಲ್ಲಿರುತ್ತಿದ್ದರೂ ನಮ್ಮ ಸ್ಥಿತಿ ಈಗಿನಂತೆ. ಅಥವಾ ಇದಕ್ಕಿಂತಲೂ ಕಳತೆಯದಾಗುತ್ತಿತ್ತೆಂದು ನಾನು ಹಲವು ಬಾರಿ ಹೇಳಿದ್ದೇನೆ." ಎಂದು ಡಿವೆಲರಾ ನುಡಿದಿದ್ದಾರೆ.

ಜಾಪಾನರ ಸಶಕ್ತ ಪ್ರತಿಧಾಳಿ!

ರಂಗೂನ್-ಮಂಡಲೆ ರೈಲ್ವೆಯ ಪಶ್ಚಿಮಗಡೆಯಲ್ಲಿ ಸಿಕ್ಕಿಬಿದ್ದಿದ್ದ ಹಲವು ಸಾವಿರ ಜಾಪಾನೀ ಸೇನೆಗಳು ತಾ. 22ರಲ್ಲಿ ಪ್ರಬಲ ಪ್ರತಿಧಾಳಿಯಾರಂಭಿಸಿ ಮಿತ್ರರ ಸೇನಾ ಕೋಟೆಯನ್ನೊಡೆದು ಪೂರ್ವಾಭಿಮುಖವಾಗಿ ಧಾವಿಸುತ್ತಿವೆಯೆಂದು ತಿಳಿದು ಬರುತ್ತದೆ ಪೆಂಗೂ ಯೋಮಾಸ್ ಎಂಬಲ್ಲಿ ಸುತ್ತುಗಟ್ಟಲ್ಪಟ್ಟಿದ್ದ ಜಾಪಾನೀ ಸೇನೆಗಳು ಸಾಮೂಹಿಕ ಧಾಳಿಯಾರಂಭಿಸಿ 77 ಮೈಲು ವಿಸ್ತೀರ್ಣದಲ್ಲಿ ಟೋಂಗೂವಿನ ದಕ್ಷಿಣಕ್ಕೆ ಒತ್ತುತ್ತಿವೆ ಕೆಳ ಬರ್ಮದಲ್ಲಿ ಸಿಟ್ಟಾಂಗ್ ಹೊಳೆಯ ಪಶ್ಚಿಮ ದಡದಿಂದ ಜಾಪಾನರು ಪ್ರತಿಧಾಳಿಯಾರಂಭಿಸಿ ನ್ಯೂಪುಂಕ್‌ಶಲೆ, ಮೀಜಾಂಗ್ ಮತ್ತು ಲಾಡ್ಯಾಗಳನ್ನು ಪುನರಾಕ್ರಮಿಸಿಕೊಂಡರೆಂದೂ ಸುಮಾರು 1600 ಬ್ರಿಟಿಷ್ ಯೋಧರು ಸಾವು ನೋವಿಗೀಡಾದರೆಂದೂ ವಾರ್ತೆ ಬಂದಿದೆ

ಫ್ರಾಂಕೋನ ಸ್ಥಾನ

ಸ್ಪೈನಿನ ಸರ್ವಾಧಿಕಾರಿ ಜನರಲ್ ಫ್ರಾಂಕೋನ ಮೇಲೆ ಸೋವಿಯಟ್ ರಶ್ಯದ ತೀಕ್ಷ್ಣ ದೃಷ್ಟಿ ಬಿದ್ದಿದೆ. ಸ್ಪೈಯಿನಿನ ರಿಪಬ್ಲಿಕನರನ್ನು ಹಿಟ್ಲರ್ ಮುಸಲಿನಿಗಳ ಸಹಾಯದಿಂದ ಧ್ವಂಸಮಾಡಿ ಅಧಿಕಾರಕ್ಕೆ ಬಂದಿದ್ದ ಫ್ರಾಂಕೋನನ್ನು ಉರುಳಿಸದೆ ಫೇಸಿಸಮಿನ ಅಂತ್ಯವಾಗದೆಂದು ರಶ್ಯದ ಅಭಿಪ್ರಾಯವಿದೆ ಆದರೆ ಯುದ್ಧ ಕಾಲದಲ್ಲಿ ಸುಯೇಜು ಕಾಲುವೆಗಪಾಯ ಪೊಡ್ಡದ ಫ್ರಾಂಕೋನಿಗಾಗಿ ಒಮ್ಮೆ ಕೃತಜ್ಞತೆ ಸೂಚಿಸಿದ್ದ ಮಿ. ಚರ್ಚಿಲ್ಲರು ಫ್ರಾಂಕೋ ಪತನವನ್ನು ಹಾರೈಸುವಂತಿಲ್ಲ. ಸ್ಪೈನಿನಲ್ಲಿ ರಿಪಬ್ಲಿಕ್‌ಸರಕಾರವಾಗಿ, ಮತ್ತೊಂದು ರಾಷ್ಟ್ರವು ರಶ್ಯದ ಅನುಯಾಯಿಯಾಗುವದನ್ನವರು ಸಹಿಸುವಂತಿಲ್ಲ ಆದರೂ ದೂರ ದೃಷ್ಟಿಯ ಫ್ರಾಂಕೋ ಸ್ಪೈಯಿನಿನಲ್ಲಿ ಪುನಃ ರಾಜನೊಬ್ಬನನ್ನು ಪ್ರತಿಷ್ಠಿಸಿ ತನ್ನ ಸ್ಥಾನವನ್ನು ರಕ್ಷಿಸಿಕೊಳ್ಳಲು ಹವಣಿಸಿದ್ದಾನೆ. ಅಲ್ಲಿಯ ಪ್ರಮುಖ ಪ್ರಜಾಸತ್ತಾವಾದಿಗಳು ಪ್ರಾಣಭಯದಿಂದ ಹೊರದೇಶಗಳಲ್ಲಿದ್ದಾರೆ ಆದರೂ ನಿಯೋಜಿತ ರಾಜನಾದ ಡೋನ್ ಜುವಾನನಾಗಲೀ ರಿಪಬ್ಲಿಕನರಾಗಲೀ ಫ್ರಾಂಕೋನ ಈ ಬಲೆಗೆ ಬಿದ್ದಿಲ್ಲ. ಫ್ರಾಂಕೋನ ಆಡಳಿತೆಯನ್ನು ಅಡಿಮೇಲು ಮಾಡುವ ಹಂಚಿಕೆ ನಡೆದಿದೆ.

ಜಾಪಾನಿಗೆ ತ್ರಿಮೂರ್ತಿಗಳ ಶರಣು ಶರ್ತ?

ಇಂಗ್ಲಾಂಡು, ಅಮೇರಿಕಗಳೊಡನೆ ರಶ್ಯವೂ ಜಾಪಾನ್ ವಿರುದ್ಧ ಯುದ್ಧಕ್ಕಿಳಿವ ನಿರ್ಧಾರವು ತ್ರಿಮೂರ್ತಿ ಸಮ್ಮೇಲನದಲ್ಲಾಗಿದೆಯೆಂಬ ಅನಧಿಕೃತ ವಾರ್ತೆಗಳು ಪತ್ರಿಕೆಗಳಲ್ಲಿ ಪ್ರಾಮುಖ್ಯ ಪ್ರಕಟಣೆ ಪಡೆದಿವೆ. ತ್ರಿಮೂರ್ತಿಗಳು ಆ ಕುರಿತು ಹೇಳಿಕೆಯೊಂದನ್ನು ಕೊಡಲಿದ್ದಾರೆ. ಮೂವರೊಟ್ಟಾಗಿ ಜಾಪಾನರಿಗೆ ಶರಣು ಶರ್ತ ತಯಾರಿಸಿದ್ದಾರೆಂದೂ, ಅಮೇರಿಕನ್ ಜನತೆಯ ಒತ್ತಾಯದಿಂದ ಟ್ರೂಮೇನರು ಅದನ್ನು ಮೃದುಗೊಳಿಸಿದ್ದಾರೆಂದೂ ವಾರ್ತೆ. ಯುದ್ಧ ಜಾಪಾನಿಗಾಗಿ ಜರ್ಮ[illegible]ಯ ಪರಿಹಾರ ದ್ರವ್ಯದಲ್ಲಿ ರಶ್ಯಕ್ಕೆ ಶೇಕಡಾ 56, ಇಂಗ್ಲಾಂಡಿಗೆ 22, ಅಮೇರಿಕಕ್ಕೆ 22 ರಂತೆ ಸಂದಾಯವೆಂಬ ನಿರ್ಧಾರವಾಗಿದೆಯಂತೆ ರಶ್ಯನ್ ಪತ್ರಿಕೆಗಳು ಈ ಕಲ್ಪನಾ ಕಥೆಗಳನ್ನು ಖಂಡಿಸುತ್ತಿವೆ.

ಲೋರ್ಡ್ ವೇವೆಲ್ ಪುನಃ ಲಂಡನಿಗೆ ಹೋಗುವರೆ?

ಈ ದಿನ (26-7-45)ನೇ ಪ್ರಕಟವಾಗಲಿರುವ ಬ್ರಿಟಿಷ್ ಚುನಾವಣೆಯ ಫಲಿತಾಂಶವಾಗಿ ಬ್ರಿಟನ್ನಿನಲ್ಲಿ ಅಧಿಕಾರ ಬದಲಾವಣೆಯಾದರೆ ಹಿಂದೀ ಪ್ರಶ್ನೆಯ ಕುರಿತು ಚರ್ಚಿಸಲು ಲೋರ್ಡ್ ವೇವೆಲರು ಪುನಃ ಲಂಡನಿಗೆ ಹೋಗಲಿದ್ದಾರೆಂದು ನವದಿಲ್ಲಿಯ ವಾರ್ತೆ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಭಾರತ ಪುಸ್ತಕ ಭಂಡಾರ,

: ಉಡುಪಿ :

ದಕ್ಷಿಣ ಕನ್ನಡ.

ಮಂಗಳೂರು.

ಹೊಸ ಕೌನ್ಸಿಲರು—ಜನಾಬ್ ಹಾಜಿ ಸಾಹೇಬ್, ಬಿ. ಎ. ಎಲ್ ಎಲ್. ಬಿ. ಯವರು ರಾಜೀನಾಮೆಯಿತ್ತ ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಸದಸ್ಯತನದ ಸ್ಥಾನಕ್ಕೆ ಜನಾಬ್ ಅಬ್ದುಲ್ ಸತ್ತಾರ್ ಸೇಟರನ್ನು ಸರಕಾರವು ನೇಮಕ ಮಾಡಿದೆ.

ರಸ್ತೆ ದುರಸ್ತಿಯಾಗಬೇಕು— ಪುತ್ತೂರು ಬೆಳ್ಳಾರೆ ಮಾರ್ಗ, ಪುತ್ತೂರು ಕಾಸರಗೋಡು ಮಾರ್ಗ ಅಲ್ಲಲ್ಲಿ ಹೊಂದ ಬಿದ್ದು ಪ್ರಯಾಣಕ್ಕೂ ಬಸ್ ಚಲಾವಣೆಗೂ ತೊಂದರೆಯಾಗಿರುವುದಾಗಿ ತಿಳಿದು ಬಂದಿದೆ. ಜಿಲ್ಲಾ ಬೋರ್ಡಿನ ಅಧಿಕಾರಿಗಳು ಕೂಡಲೇ ಈ ಕಡೆಗೆ ಗಮನ ಕೊಡುವರೆಂದು ನಿರೀಕ್ಷಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮಿತಿ— ಇದರ ಮಹಾ ಸಭೆಯು ಇದೇ ಬರುವ ಆಗೋಸ್ತು ತಾ 2ನೇ ಗುರುವಾರ ದಿನ ಅಪರಾಹ್ನ ಘಂಟೆ 4ಕ್ಕೆ ಮಂಗಳೂರಿನ ಕೊಡಿಯಾಲ ಬೈಲಲ್ಲಿರುವ ಥಿಯೋಸೋಫಿಕಲ್ ಕಟ್ಟಡದಲ್ಲಿ ಜರಗುವುದು ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ

ವಿಷಯಗಳು—1. ಸಮಿತಿಯ ನಿಯಮಗಳ ಮಂಜೂರಾತಿ 2 ಸಮಿತಿಯ ಈ ವರೇಗಿನ ಕೆಲಸ ವ ಲೆಕ್ಕದ ರಿಪೋರ್ಟು 3 ಕಾರ್ಯಕಾರಿ ಮಂಡಳಿಯ ಚುನಾವಣೆ 4 ಈಗಿನ ರಾಜಕೀಯ ವ ಜಿಲ್ಲೆಯ ಪರಿಸ್ಥಿತಿ 5 ಸದಸ್ಯರು ಮುಂಚೆ ಕಳುಹಿಸಿದ ಠರಾವುಗಳು 6 ಸಭೆಯ ಸಮ್ಮತಿಯಿಂದ ಬರಬಹುದಾದ ಇತರ ವಿಷಯಗಳು ಇದ್ದರೆ ಅವುಗಳು

ಸೂಚನೆ—1 ಸದಸ್ಯರು ಸದರಿ ಸಭೆಯ ಮುಂದೆ ಠರಾವುಗಳನ್ನು ಇಡಬೇಕೆಂತ ಇದ್ದರೆ ಅವುಗಳನ್ನು ತಾ 1-8 1945ರ ಮುಂಚೆ ನನಗ ಕಳುಹಿಸಬೇಕಾಗಿ ವಿನಂತಿ 2. ಚುನಾಯಿಸಿದ ಕಾರ್ಯಕಾರಿ ಮಂಡಳಿಯ ಪ್ರಥಮ ಸಭೆಯು ಕೂಡಲೇ ಅದೇ ಸ್ಥಳದಲ್ಲಿ ಜರಗುವುದು. 3 ಅದೇ ದಿನ ಅದೇ ಸ್ಥಳದಲ್ಲಿ ಘಂಟೆ 6ಕ್ಕೆ ಆಹಾರ ಕಮಿಟಿಯ ಸಭೆ ಕೂಡಾ ನಡೆಯಲಿಕ್ಕಿದೆ ಎಂದು ಕನ್‌ವೀನರ್ ಶ್ರೀ ಕೋಟ ರಾಮಕೃಷ್ಣ ಕಾರಂತರು ಅಪೇಕ್ಷಿಸುತ್ತಾರೆ

ಮೂಲ್ಕಿ—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಬಿ ಸದಾಶಿವರಾಯರು 2 ತಿಂಗಳ ರಜೆ ತೆಗೆದುಕೊಂಡಿರುವುದರಿಂದ ಅವರ ಸ್ಥಾನದಲ್ಲಿ ಶ್ರೀ. ಕೆ. ಸಂ[illegible] ಶೆಟ್ಟರು ಅಫಿಶಿಯೇಟಿಂಗ್ ಹೆಡ್ಮಾಸ್ಟರರಾಗಿ ನೇಮಕಹೊಂದಿರುವರು

ಬಾರಕೂರು—ಸ್ಥಳೀಯ ನಾಗರಿಕರ ಸಭೆಯೊಂದು ತಾ 22ರಲ್ಲು ಬೋ ಹಾ ಎ ಯುಡುಗರ ಶಾಲೆಯಲ್ಲಿ ಶ್ರೀ. ತೆಂಕವನೆ ರಾಮಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ಡಾ. ಬಿ ಕೃಷ್ಣಭಟ್ಟ, ಶ್ರೀ ಬಿ ವಿ. ಕಾಮತ್, ಶ್ರೀ. ಬಿ ಕೋಪಾಲ ರಾವ್ ಶ್ರೀ. ರಾಮಚಂದ್ರ ಉಡುಪ ಮೊದಲಾದವರು ಹೈಸ್ಕೂಲು ತೆರೆಯುವ ಸಾಧ್ಯಾಸಾಧ್ಯತೆಗಳ ಕುರಿತೂ, ಪ್ರಯೋಜನಗಳ ಕುರಿತೂ, 'ಮುಂದಿನ ವ್ಯವಸ್ಥೆ ಮತ್ತು ಆಗು ಹೋಗುಗಳ ಕುರಿತೂ, ಸಭಿಕರಿಗ ಮನದಟ್ಟಾಗುವ ರೀತಿಯಲ್ಲಿ ವಿವರಿಸಿ ಭಾಷಣವಿತ್ತ ಬಳಿಕ, ಸರ್ವಾನುಮತಿಯಿಂದ ಹೈಸ್ಕೂಲು ತೆರೆಯುವರೆ ಸಭೆಯು [illegible] ಕೊಂಡು, 25 ಜನರುಳ್ಳ ಹಂಗಾಮಿ ಕಮಿಟಿಯೊಂದನ್ನು ಆಗಲೇ ನಿಯಮಿಸಿ ಸಭೆಯಲ್ಲಿ ಹೈಸ್ಕೂಲು ಬಗ್ಗೆ ಸಹಾಯ ನಿಧಿಯೆತ್ತಲ್ಪಟ್ಟು 7 ಸಾವಿರ ರೂಪಾಯಿಗಳ ವಾಗ್ದಾನಗಳು ಆಗಲೇ ಸಿಕ್ಕಿದುವು ತಮ್ಮ ಗುರಿಯಂತೆ [illegible] ಒಟ್ಟಿಗೆ 15 ಸಾವಿರ ರೂಪಾಯಿಗಳ ವಾಗ್ದಾನಗಳು ಬಂದೊಡನೆಯೇ ಕಮಿಟಿಯನ್ನು ರಿಜಿಸ್ಟರ್ ಗೊಳಿಸುವುದಾಗಿ ನಿಶ್ಚಯಿಸಲಾಯಿತು. ಅಧ್ಯಕ್ಷರ ಉಪಸಂಹಾರ ಭಾಷಣದ ಬಳಿಕ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು

ಸೇನಾರಂಗದಿಂದ—

ರಂಗೂನಿನಲ್ಲಿ ದೀಪ ವ್ಯವಸ್ಥೆ

ಈಗ ರಂಗೂನಿನಲ್ಲಿ ದೀಪಗಳ ವ್ಯವಸ್ಥೆ ಚೆನ್ನಾಗಿರವುದರಿಂದ ಲಾಂದ್ರಗಳು ಕಣ್ಮರೆಯಾಗುತ್ತಿವೆ ಬಂದರಿನಲ್ಲಿ ವಿದ್ಯುದ್ದೀಪಗಳು ಬೆಳಗುತ್ತಿರುವುದರಿಂದ 24 ಗಂಟೆಯೂ ಕೆಲಸ ನಡೆಯುತ್ತಿದೆ. ಆಸ್ಪತ್ರೆ, ಕೇಂದ್ರ ಕಚೇರಿ, ಸೇನಾ ಶಿಬಿರದ ಕ್ರೀಡಾ ಮಂದಿರಗಳಲ್ಲಿ ವಿದ್ಯುದ್ದೀಪಗಳನ್ನು ಮತ್ತೆ ಹವಣಿಸಲಾಗಿದೆ. ಈ ದೀಪದ ವ್ಯವಸ್ಥೆ ಮಾಡಿದವರು ಭಾರತೀ ಎಂಜಿನಿಯರುಗಳು ಮತ್ತು ರಾಯಲ್ ಎಂಜಿನಿಯರುಗಳು; ಮುಖ್ಯವಾಗಿ ಇಂಡಿಯನ್ ಎಲೆಕ್ಟ್ರಿಕಲ್ ಮತ್ತು ಮೆಕೆನಿಕಲ್ ಎಂಜಿನಿಯರುಗಳು. ನಗರವು ನಮ್ಮ ವಶದಲ್ಲಿರುವುದರಿಂದ ಇವರು ಅತ್ಯಲ್ಪ ಕಾಲದಲ್ಲಿಯೇ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದ್ದಾರೆ.

ಊರು ಬಿಟ್ಟು ತೊಲಗುವುದಕ್ಕೆ ಮುಂಚೆ ಜಪಾನಿಗಳು ನಗರದ ವಿದ್ಯುದ್ಯಂತ್ರಾಲಯರನ್ನು ನಾಶ ಮಾಡಿದರು. ಯಂತ್ರಗಳನ್ನೆಲ್ಲ ಹಾಳುಗೆಡಿಸಿದರು. ಆದರೆ ಹಳೆಯದೊಂದು ಯಂತ್ರಾಲಯ ಮಾತ್ರ ಉಳಿದು ಕೊಂಡಿತ್ತು. ನೆಲದಲ್ಲಿ ಹೂತ ಕೇಬಲುಗಳನ್ನೆಲ್ಲ ಶತ್ರುಗಳು ಕಿತ್ತು ಹಾಕಿದ್ದರು. ಮಿತ್ರ ಸೇನೆಯ ಬಾಂಬುಗಳಿಂದಲೂ ಬಹು ಮಟ್ಟಿಗೆ ನಷ್ಟವಾಗಿತ್ತು. ದಿನಕ್ಕೆ 18 ಗಂಟೆ ದುಡಿದು ಭಾರತೀ ಮತ್ತು ರಾಯಲ್ ಎಂಜಿನಿಯರುಗಳು ಇದನ್ನೆಲ್ಲಾ ಮತ್ತೆ ಸರಿಪಡಿಸಿದರು.

ಈಗ ನಗರದ ದೀಪದ ವ್ಯವಸ್ಥೆ ಸಂಪೂರ್ಣವಾಗಿ ಸೈನ್ಯ ಶಾಖೆಯ ಕೈಯಲ್ಲಿದೆ ಇಲ್ಲದಿದ್ದರೆ, ನಗರ ನಿವಾಸಿಗಳಿಗೆ ಸಣ್ಣ ಉತ್ಪತ್ತಿ ಯಂತ್ರವೊಂದನ್ನಿಟ್ಟು ಕೊಂಡು ವಿದ್ಯುಚ್ಛಕ್ತಿಯೊದಗಿಸುವುದು ಕಷ್ಟ ಇತರ ಉತ್ಪತ್ತಿ ಯಂತ್ರಗಳು ರಿಪೇರಿಯಾದ ಮೇಲೆ ಅವನ್ನೂ ಬಳಸಿಕೊಳ್ಳಲಾಗುವುದು. ರಂಗೂನ್ ನಗರ ಮೊದಲಿನಂತೆ ದೀಪಮಾಲೆಯಿಂದ ಬೆಳಗ ಬೇಕಾದರೆ ಇನ್ನು ಸ್ವಲ್ಪ ಕಾಲ ಹಿಡಿಯುತ್ತದೆ

ರಂಗೂನಿನಲ್ಲಿ ಟೆಲಿಫೋನಿನ ಪುನರ್ರಚನೆ.

ರಂಗೂನಿನ ಟೆಲಿಫೋನು ಬೇಗನೆ ಸರಿಯಾಗುವುದರಲ್ಲಿದೆ. ಪಟ್ಟಣದ ಹಲವು ಭಾಗಗಳಲ್ಲಿ ಟೆಲಿಫೋನ್ ತಂತಿಗಳನ್ನು ಭಾರತೀ ಮತ್ತು ರಾಯಲ್ ಸಂಜ್ಞಾ ಶಾಖೆಯವರು ಮುಂಗಾರಿನ ಹೊಡೆತವನ್ನೂ ಲೆಕ್ಕಿಸದೆ ಪುನರ್ರಚಿಸುತ್ತಿದ್ದಾರೆ ಸಾಧ್ಯವಾದೆಡೆಗಳಲ್ಲಿ ಹಳೆಯ ತಂತಿಗಳನ್ನೇ ಬಳಸಿ ಮಿಕ್ಕಕಡೆ ಹೊಸ ತಂತಿಗಳನ್ನು ಹಾಕುತ್ತಿದ್ದಾರೆ. ಈಗಾಗಲೇ 500 ಮೈಲು ತಂತಿ ಹಾಕಿದ್ದಾರೆ.

1942ರಲ್ಲಿ ರಂಗೂನನ್ನು ತ್ಯಜಿಸುವುದಕ್ಕೆ ಮುಂಚೆ ಟೆಲಿಫೋನ್ ಮುಂತಾದ ಏರ್ಪಾಡುಗಳೆಲ್ಲವನ್ನೂ ನಾಶ ಪಡಿಸಲಾಗಿತ್ತು. ಶತ್ರುಗಳಿಗೆ ಅವು ಉಪಯೋಗವಾಗದಿರಲೆಂದು ಮೇಲೆ ಕಾಣುವ ತಂತಿ, ನೆಲದಲ್ಲಿ ಹೂತ ಕೇಬಲ್‌ಗಳನ್ನು ಕಿತ್ತು ಹಾಕಲಾಗಿತ್ತು. ಕಳೆದ ತಿಂಗಳು ಭಾರತೀ ಮತ್ತು ಬ್ರಿಟಿಷ್ ಸೇನೆಗಳು ರಂಗೂನನ್ನು ಶತ್ರು ವಶದಿಂದ ಬಿಡುಗಡೆ ಮಾಡಿದಾಗ ಜಪಾನಿಗಳು ಹೆಚ್ಚಿನ ನಷ್ಟವುಂಟುಮಾಡಲು ಅವಕಾಶವಾಗಲಿಲ್ಲ. ಆದರೆ ಮಿತ್ರ ಪಡೆಯ ವಿಮಾನ ಧಾಳಿಯಿಂದ ನಷ್ಟವಾಯಿತು

ರಂಗೂನಿನಲ್ಲಿ ಮೊತ್ತ ಮೊದಲು ಸೇನಾ ಶಿಬಿರದಲ್ಲಿ ಮತ್ತು ಪೋರ್ಟ್ ಕಮಾಂಡರ ಕಚೇರಿಯಲ್ಲಿ ಟೆಲಿಫೋನ್ ಹಾಕಲಾಯಿತು. ಸದ್ಯದಲ್ಲಿ ಈ ಕೆಲಸ ಮುಖ್ಯವಾಗಿ ಸೈನ್ಯಕ್ಕೋಸ್ಕರವಾದರೂ ನಗರ ನಿವಾಸಿಗಳ ಬಳಕೆಗೆ ಅನುಕೂಲವಾಗುತ್ತದೆ. ನೆಲದಲ್ಲಿ ಹೂತ ಕೇಬಲುಗಳನ್ನು ಪರೀಕ್ಷಿಸಿ ಸರಿಪಡಿಸಲಾಗುತ್ತಿದೆ.

ಭಾರತಕ್ಕೆ ಒಟ್ಟು ೩೦ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ.

ಈ ಯುದ್ಧದಲ್ಲಿ ದೊರೆತ ಒಟ್ಟು ೧೫೦ ವಿಕ್ಟೋರಿಯಾ ಕ್ರಾಸ್‌ಗಳ ಪೈಕಿ ಭಾರತಕ್ಕೇ ೩೦ ಪ್ರಶಸ್ತಿಗಳು ಇದು ವರೆಗೆ ದೊರೆತಿವೆ ಈಗ ೧೩ನೇ ಗಡಿನಾಡಿನ ತುಪಾಕಿ ದಳದ ಶಿಪಾಯಿ ಆಲಿಹೈದರ್‌ಗೆ ೩೦ನೇ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ ಕೊಡಲಾಯಿತು. ಈಗಿನ ಯುದ್ಧದಲ್ಲಿ ಪ್ರಶಸ್ತಿಯ ದೃಷ್ಟಿಯಿಂದ ನೋಡಿದರೆ ಭಾರತವು ಇಂಗ್ಲೆಂಡಿಗೆ ಎರಡನೆಯದಾಗಿದೆ. ಕಳೆದ ಯುದ್ಧದಲ್ಲಿ ಕೊಟ್ಟ ೬೩೪ ವಿ. ಸಿ.ಗಳಲ್ಲಿ ಭಾರತಕ್ಕೆ ದೊರೆತದ್ದು ೧೧ ಮಾತ್ರ.

ವಿಮಾನ ದಳದ ಅಧಿಕಾರಿ ಪ್ರಬಂಧ ರಚನಾ ಸ್ಪರ್ಧೆಯಲ್ಲಿ ಗೆದ್ದರು.

'ಭಾರತೀ ಸೈನ್ಯಕ್ಕೆ ಅಧಿಕಾರಿಗಳನ್ನು ಸೇರಿಸಿಕೊಳ್ಳುವ ವಿಧಾನ' ಎಂಬ ವಿಷಯವಾಗಿ ಪ್ರಬಂಧ ರಚಿಸಿ ಸ್ಪರ್ಧೆಯಲ್ಲಿ ಗೆದ್ದುದಕ್ಕಾಗಿ ಫ್ಲೈಟ್ ಲೆಫ್ಟನೆಂಟ್ ಎನ್. ಭಗವಾನ್‌ದಾಸರಿಗೆ ಮದರಾಸ್ ಪ್ರೊವಿನ್ಸಿಯಲ್ ರಿಕ್ರೂಟ್‌ಮೆಂಟ್ ಸಬ್ ಕಮಿಟಿಯವರು ೫೦೦ ರೂಪಾಯಿಗಳನ್ನು ಪ್ರಥಮ ಬಹುಮಾನವಾಗಿ ಕೊಟ್ಟರು ೩೦೦ ರೂಪಾಯಿ —ಎರಡನೇ ಬಹುಮಾನ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ಮಿ- ಎ. ಎಚ್. ಸೇಲರಿಗೂ ೨೦೦ ರೂಪಾಯಿನ ೩ನೇ ಬಹುಮಾನ ಪ್ರೆಸಿಡೆನ್ಸಿ ಕಾಲೇಜಿನ ಹಳೆಯ ವಿದ್ಯಾರ್ಥಿನಿ ಮಿಸ್. ಎಸ್. ಇಸಬೆಲ್ ಜೂಲಿಯಾನರಿಗೂ ದೊರಕಿದುವು.

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧಖಾತೆ)

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C 266/45

ವಾದಿ–ಅಂಣಪ್ಪ ಸೆಟ್ಟಿ–ಸಂಕಪ್ಪ ಸೆಟ್ಟೀರ ಮಗ ಕುಂದಾಪುರ ತಾಲ್ಲೂಕು ಕನ್ಯಾನ ಗ್ರಾಮದ ಬಂಡ್ರಾಡಿ ಬೀಡಿನ ನಡಿಮನೆಯಲ್ಲಿರುವವ

ಪ್ರತಿವಾದಿ–ಕೆ. ಶೀನಪ್ಪ ಸೆಟ್ಟಿ–ಕುಂಜ್ಞಾಡಿ ಮನೆ ಲಕ್ಷ್ಮಿ ಸೆಡ್ತಿೀರ ಮಗ. ಕುಂದಾಪುರ ತಾಲ್ಲೂಕು ನಂಬ್ರ 63ನೇ ಬಳ್ಕೂರು ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ —

ವಾದಿಗೆ ಪ್ರತಿವಾದಿ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಬರತಕ್ಕ ರೂಪಾಯಿ 87 14-1ನ್ನು ಬರಮಾಡಿಕೊಳ್ಳುವರೇ ದಾಕ್ಲು ಮಾಡಿದ ಮೇಲ್ಕಾಣಿಸಿದ ದಾವೆಯು ತಾರೀಕು 6–8–45ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

Y. Manjaya Shetty,
Advocate for Plaintiff

ಮೊಕ್ಕಾಂ: ಕುಂದಾಪುರ,
ತಾರೀಕು 20–7–45

ಸ್ವೀಕಾರ–ವಿಮರ್ಶೆ.

ಶ್ರೀ ವಾಮನಾವತಾರ–ಕನ್ನಡ ಪದ್ಯ ಕಾವ್ಯ ನವ ನವ ಕಾಳಿದಾಸ ಕುಮಾರ ಮಾಧವ ಪೌರಾಣಿಕ ಸಾಲಿಗ್ರಾಮ ಶ್ರೀ ಕಂಠ ಶಾಸ್ತ್ರೀ ವಿರಚಿತ ಮೈಸೂರು ಶ್ರೀ ಶಂಕರ ವಿಜಯ ಕಾರ್ಯಾಲಯದ ಪ್ರಕಟಣೆ. ಬೆಲೆ 0 12 0

ಪಂಚಮಾವತಾರವೆಂದು ಪುರಾಣ ಪ್ರಸಿದ್ಧವಾಗಿರುವ ವಾಮನಾವತಾರವು ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಮೈಸೂರು ಮಹಾ ರಾಜರ ಮೆಚ್ಚುಗೆ ಮತ್ತು ಸಹಾಯ ಪಡೆದ ಗ್ರಂಥವೆಂದು ಲೇಖಕರಂದಿದ್ದಾರೆ. ಪುರಾಣಗಳ ಮಾದರಿಯಲ್ಲಿ ಗ್ರಂಥ ರಚನೆಯಾಗುವ ಕಾಲ ಪೂರ್ತಿ ಕಳೆದಿಲ್ಲವೆಂಬುದಕ್ಕೆ ಈ ಕೃತಿಯೊಂದು ನಿದರ್ಶನ ಹಿಂದಿನ ಯುಗಗಳ ಮಹಾ ಪುರುಷರ ಚರಿತ್ರೆಯನ್ನು ಹಾಡಿ, ಕೇಳಿ ಆನಂದಿಸಲ್ಲವರಿಗೆ ಇದೊಂದು ಹೊಸ ಕಾಣಿಕೆ

ದಿ. ಯುನೈಟೆಡ್ ಕರ್ನಾಟಕ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್, ಧಾರವಾಡ–ಇದರ 1944ನೇ ದಶಂಬರಾಂತ್ಯಕ್ಕೆ ಮುಗಿಯುವ 14ನೇ ವರುಷದ ವರದಿ ಮತ್ತು ಜಮಾ ಖರ್ಚಿನ ಪಟ್ಟಿ ನಮ್ಮ ಹಸ್ತಗತವಾಗಿದೆ. ವರದಿಯ ವರುಷದಲ್ಲಿ ಈ ವಿಮಾ ಸಂಸ್ಥೆ ಶ್ಲಾಘನೀಯ ಪ್ರಗತಿ ಪಡೆದುದು ಕಂಡು ಬರುತ್ತದೆ. ಪುನರ್ವಿಮೆಯ ಕಂತುಗಳನ್ನು ಕಳೆದು ವಿಮಾ ಕಂತುಗಳ ಮೂಲಕ ರೂ 53,982–7–11 ವರಮಾನ ದೊರೆತಿದೆ ಬಡ್ಡಿಯ ಮೂಲಕ ರೂ. 5996 11 4 ಆದಾಯ ಬಂದಿದೆ ಏಜೆಂಟರ ಪ್ರತಿಫಲ ಸಮೇತ ಆಡಳಿತ ವೆಚ್ಚ ರೂ 19701–11–8 ಮಾತ್ರ. ವರದಿಯ ವರುಷದಲ್ಲಿ ಮಾರಾಟ ಕ್ಕಿಟ್ಟ 24 24 ಪಾಲುಗಳೆಲ್ಲವೂ ಮಾರಾಟವಾದುವು. ಸಂಸ್ಥೆಯು ಎಲ್ಲಾ ವಿಭಾಗಗಳಲ್ಲೂ ಪ್ರಗತಿ ಪಡೆದಿದೆ ರಾವ್‌ಬಹದೂರ್ ಬಿ. ಎಸ್. ಸಾವ್‌ಕಾರರು ಇದರ ಅಧ್ಯಕ್ಷರು ಉಡುಪಿಯ ಶ್ರೀ. ಎ. ಎಸ್. ಕಿಣಿಯವರು ಈಗ ಮೆನೇಜಿಂಗ್ ಡೈರೆಕ್ಟರರಾಗಿ ಆರಿಸಲ್ಪಟ್ಟಿದ್ದಾರಲ್ಲದೆ ಶ್ರೀ ಹಾಂಗಾಳ ವೆಂಕಟೇಶ ನಾಯಕ್, ಶ್ರೀ ಅರೂರು ವೆಂಕಟರಾಯರಂತಹ ಉಡುಪಿಯ ಅಧ್ಯ ಗೃಹಸ್ಥರೂ ಡೈರೆಕ್ಟರ್ ಮಂಡಳಿಯಲ್ಲಿದ್ದಾರೆ. ಸಂಯುಕ್ತ ಕರ್ನಾಟಕ ನಾಮಾಂಕಿತ, ಈ ಜೀವ ವಿಮಾ ಸಂಸ್ಥೆಗೆ ಕನ್ನಡಿಗರೆಲ್ಲರ ಬೆಂಬಲ ದೊರೆತು, ಇನ್ನಷ್ಟು ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ

ಗೋಪಾಲ ಭೇಷಜಾಶ್ರಮ, ಕದ್ರಿ, ಮಂಗಳೂರು–ಆಯುರ್ವೇದ ಭೂಷಣ ಶ್ರೀ ಎಮ್ ವಿ ಶಾಸ್ತ್ರಿಗಳ ಈ ಆರೋಗ್ಯ ಧಾಮದ 32 33 34ನೇ ವರುಷಗಳ ಸಂಗ್ರಹಿತ ವರದಿ ಕೈ ಸೇರಿದೆ ಶಾಸ್ತ್ರಿಗಳು ಆಯುರ್ವೇದ ಚಿಕಿತ್ಸೆಯಲ್ಲಿ ಹೆಸರಾದವರು; ಗಾಢ ಜ್ಞಾನ ಮತ್ತು ದೀರ್ಘಾನುಭವವಿದ್ದವರು. ಕಾರ್ಯ ಬಾಹುಳ್ಯದಿಂದಾಗಿ ಮಂಗಳೂರಿನ ಜೇಡಿಗುಡ್ಡೆಯಲ್ಲಿ ಈ ಆಶ್ರಮದೊಂದು ಶಾಖೆಯೂ ನಿರ್ಮಾಣಗೊಂಡಿದೆ. ಆಶ್ರಮಕ್ಕೀಗ 35ನೇ ಪ್ರಾಯ ವಯಸ್ಸು ಕಳೆದ ಮೂರು ವರುಷಗಳಲ್ಲಿ ಎಲ್ಲಾ ವಿಧದ ರೋಗಗಳಿಗಾಗಿ ಇಲ್ಲಿ ಚಿಕಿತ್ಸೆ ಹೊಂದಿದವರ ಸಂಖ್ಯೆಯನ್ನು ಕಾಣುವಾಗ ಗೋಪಾಲ ಭೇಷಜಾಶ್ರಮವು ಪ್ರಾಣದಾನದ ಪುಣ್ಯಾಲಯವೂ ಹೌದೆನ್ನಬೇಕು ಈ ಜನೋಪಯೋಗೀ ಚಿಕಿತ್ಸಾಶ್ರಮದ ಯಶಸ್ಸಾಧನೆ ಮುಂದೊತ್ತಲೆಂದು ಹಾರೈಸುತ್ತೇವೆ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ–1944ರ ನಲ್ವತ್ತೆರಡನೇ ವಾರ್ಷಿಕ ವರದಿಯಲ್ಲಿ, ಮಂಡಳಿಯ ಅಭಿವೃದ್ಧಿ ಒಡೆದು ಕಾಣುತ್ತದೆ. ಮಂಡಳಿಯು ಧರ್ಮಾರ್ಥ ರಾತ್ರಿ ಹೈಸ್ಕೂಲೊಂದನ್ನು ನಡೆಸುತ್ತಿದೆ; 'ಮೊಗವೀರ' ತ್ರೈಮಾಸಿಕವೊಂದನ್ನು ಹೊಂದಿಸುತ್ತಿದೆ, ಸ್ವಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನೂ ಸಲ್ಲಿಸುತ್ತಿದೆ, ವಾಚನಾಲಯ, ಉತ್ಸವಾಚರಣೆ, ಸಭೆ ಭಾಷಣಗಳ ಮೂಲಕ ಜನ ಜಾಗ್ರತಿಯನ್ನು ನಿರ್ಮಿಸುತ್ತಿದೆಯಲ್ಲದೆ, ಮೀನು ವ್ಯವಸಾಯಾಭಿವೃದ್ಧಿ, ಮೊಗವೀರ ಜನ ಗಣನೆ–ಇತ್ಯಾದಿ ಕ್ಷೇತ್ರಗಳಲ್ಲಿಯೂ ಪರಿಣಾಮಕಾರೀ ಕಾರ್ಯ ಮಾಡಿದೆ ಸ್ವಂತ ಕಟ್ಟಡಗಳು ಮತ್ತು ಸ್ವಂತ ಬೇಂಕೊಂದನ್ನು ರಚಿಸಿಕೊಳ್ಳುವ ಮಹತ್ವಾಕಾಂಕ್ಷೆಯು, ದೀರ್ಘಾನುಭವ, ಅಧ್ಯರ ಬೆಂಬಲ, ಉತ್ಸಾಹೀ ಕೆಲಸಗಾರ ವಳದ ನೆರವುಳ್ಳ ಈ ಮಂಡಳಿಗಿದೆ ಸರ್ವರ ಬೆಂಬಲ ದೊರೆತು ಅದರ ಸದಿಚ್ಛೆ ಈಡೇರಲಿ ಎಂದು ಕೋರುತ್ತೇವೆ

ಗಂಗಯ ಸ್ಮಾರಕ ಫಂಡು, ಮುಂಬಯಿ–ಬೊಂಬಾಯಿಯ ಮಿತ್ರ ಪಟ್ಣ ಮೊಗವೀರ ಸಭೆಯು 1942ರಲ್ಲಿ ಸ್ಥಾಪಿಸಿದ್ದ ದಿವಂಗತ ಗಂಗಯ ಕರ್ಕೇರರ ಸ್ಮಾರಕ ನಿಧಿಯ ಪ್ರಥಮ ಮತ್ತು ದ್ವಿತೀಯ ವಾರ್ಷಿಕ ವರದಿ ನಮಗೆ ದೊರೆತಿದೆ ಮೊಗವೀರ ವಿದ್ಯಾವಂತ ಯುವಕರಿಗೆ ಆದರ್ಶಪ್ರಾಯರಾಗಿದ್ದು ಅಕಾಲ ನಿಧನಗೊಂಡ ಗಂಗಯ ಕರ್ಕೇರರ ಯೋಗ್ಯ ಸ್ಮಾರಕವಿದು. ಈ ನಿಧಿಯ ಆಶ್ರಯದಿಂದ ಶ್ರಮಜೀವಿ ಬಾಲ ಬಾಲಕಿಯರಿಗನುಕೂಲವಾಗುವಂತೆ ರಾತ್ರಿ ಶಾಲೆಯೊಂದನ್ನು ತೆರೆದಿದ್ದಾರಲ್ಲದೆ ಒಂದು ವಾಚನಾಲಯವನ್ನೂ 'ರಾಮ ಭಜನಾ ಮಂಡಳಿ'ಯನ್ನೂ ನಡೆಸುತ್ತಿದ್ದಾರೆ ನಿಧಿಗೆ ಜಮೆಯಾಗಿರುವ ರೂ 1187-6 7 ಅದರ ಧ್ಯೇಯ ಸಾಧನೆಯಲ್ಲಿ ವಿನಿಯೋಗಿಸಲ್ಪಟ್ಟಿದೆ ಸರ್ವ ವಿಧದಿಂದ ಆ ನಿಧಿಯನ್ನೂ ಅ ಮೂಲಕ ಅದರ ಸತ್ಕಾರ್ಯಗಳನ್ನೂ ಬೆಳೆಯಿಸುವದು ಮಹಾಜನರ ಕರ್ತವ್ಯವಿದೆ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು **25—7—1945**ರಿಂದ

ಮೋತಿಲಾಲ್, ಶೋಭನಾಸಮರ್ಥ್

ನಟಿಸಿರುವ

★ ಸವೇರಾ ★

ಅನಂತರ—

"ಸುನಾಬಾಯಿ"

ಬರುತ್ತದೆ—

ಮುಜ್ರಿಮ್, ಮೀನಾಕ್ಷಿ, ಮುಹಬತ್ ಇತ್ಯಾದಿ.

ಬೇಕಾಗಿದ್ದಾರೆ

ಮಾರ್ಗರೇಟರ

ಫಿಟ್ಸ್ ಕ್ಯೂರ್

ಮಕ್ಕಳ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸಿಬಿಡುತ್ತದೆ

ಬೆಲೆ ರೂ. 1—8—0

ಹೆಚ್ಚಿನ ಮಾಹಿತಿಗೆ ಮತ್ತು ಏಜೆನ್ಸಿ ಬಗ್ಗೆ ನಮಗೆ ಬರೆಯಿರಿ.

Brightstar Agencies,
Hospital Road, UDIPI.

ಮೈಸೂರುಪತ್ರ-

ನೂತನಮಂತ್ರಿಗಳಿಗೆ ಮಾನಪತ್ರ ನೂತನ ಖಾಸಗಿ ಮಂತ್ರಿಗಳಾದ ಡಾ। ರಾಯನ್ ಮತ್ತು ಶ್ರಿ. ಟಿ. ಎಸ್. ಎನ್. ಷರೀಫ್ ರವರಿಗೆ ಮಾನಪತ್ರಗಳನ್ನು ಅರ್ಪಿಸಬೇಕೆಂಬ ನಿರ್ಣಯವು ಬೆಂಗಳೂರು ಪೌರಸಭೆಯ ಮುಂದೆ ಬಂದು ೧೪-೧೨ ಓಟುಗಳಿಂದ ಅಂಗೀಕೃತವಾಯ್ತು. ಕಾಂಗ್ರೆಸ್ ಸದಸ್ಯರು ತತ್ಪತಃ ಆ ನಿರ್ಣಯವನ್ನು ವಿರೋಧಿಸಿದರು. ನಿರ್ಣಯ ಪಾಸಾದರೂ ಕಾನೂನು ಪ್ರಕಾರ ಅರ್ಧಕ್ಕಿಂತ ಕಡಿಮೆಜನ ಓಟುಮಾಡಿರುವುದರಿಂದ ಜಾರಿಗೆ ತರಲು ಅವಕಾಶವಿಲ್ಲವಾಗಿದೆ.

ಕೆಲಸಗಾರರ ಸಂಘದ ವಾರ್ಷಿಕ ಸಭೆ:—ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಕೆಲಸಗಾರರ ಸಂಘದ ವಾರ್ಷಿಕಸಭೆಯು 14 7 45ರಲ್ಲಿ ಸಂಘದ ಅಧ್ಯಕ್ಷರಾದ ಶ್ರಿ. ವೀರಣ್ಣ ಗೌಡರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ನಿರ್ಣಯಗಳನ್ನು ಅಂಗೀಕರಿಸಿತು. ಸಭೆಯಲ್ಲಿ ವಿಶೇಷ ಆಹ್ವಾನಿತರಾದ ಲೇಬರ್ ಅಸಿಸ್ಟೆಂಟ್ ಕಮಿಷನರವರಾದ ಶ್ರೀ ಜ ಎನ್ ಸುಬ್ಬಣ್ಣನವರು ಹಾಜರಿದ್ದು ಕೆಲಸಗಾರರಿಗೆ ಹಿತೋಕ್ತಿಗಳನ್ನಿತ್ತರು. ಸಕ್ಕರೆ ಕಾರ್ಖಾನೆ ವಾರ್ಷಿಕ ಸಭೆಯಲ್ಲಿ ಅಂಗೀಕೃತವಾದ ನಿರ್ಣಯಗಳ ಮತ್ತು ವಿಚಾರಗಳ ಕುರಿತು ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರಿ ಹೆಚ್. ಕೆ. ವೀರಣ್ಣ ಗೌಡರೂ, ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರೂ ಸಕ್ಕರೆ ಕಾರ್ಖಾನೆಯ ಜನರಲ್ ಮ್ಯಾನೇಜರನ್ನು ಭೇಟಿಮಾಡಿ ಸುಮಾರು ಎರಡು ಗಂಟೆ ಕಾಲ ಚರ್ಚಿಸಿದರು

ಸೂತ್ರಯಜ್ಞ:- ಗಾಂಧೀಜಿಯವರ 77ನೇ ವರ್ಧಂತಿ ಉತ್ಸವದ ಕಾರ್ಯಕ್ರಮವು ಇಲ್ಲಿ ಈಗಾಗಲೇ ಪ್ರಾರಂಭವಾಗಿದೆ. I8 7 45ನೇ ದಿನದಿಂದ 2 I0 45ರ ವರೇಗ ಪ್ರತಿದಿನವೂ ಸುಮಾರು 125 ಸುತ್ತುಗಳಷ್ಟು ನೂಲನ್ನು ತೆಗೆಯಬೇಕೆಂದು ಹಾಗೆ ತೆಗೆದ ದಾರವನ್ನು ಶೇಖರಿಸಿ ಗಾಂಧಿಜೀಯವರಿಗೆ ಒಪ್ಪಿಸಬೇಕೆಂದೂ ಇಲ್ಲಿಯ ಗಾಂಧಿ ಸೇವಾ ಸಂಘದವರು ನಿರ್ಧರಿಸಿದ್ದಾರೆ ಅದರಂತೆ ನಗರದ ಅನೇಕ ಕಡೆಗಳಲ್ಲಿ ಕಾರ್ಯಕ್ರಮವು ನಡೆಯುತ್ತಿದೆ. ಗಾಂಧಿಜೀಯವರ ಮೊಮ್ಮಕ್ಕಳಾದ ಶ್ರಿ ಕಾಂತಿಲಾಲ್ ಗಾಂಧಿಯವರೇ ಇದರ ವ್ಯವಸ್ಥಾಪಕರಾಗಿದ್ದಾರೆ

ಅಂಚೆ ನೌಕರರ ಸಭೆ.—ಮೈಸೂರು ನಗರದ ಅಂಚೆ ನೌಕರರು ಮೊನ್ನೆದಿನ ಸಭೆ ಸೇರಿ ತಮ್ಮ ಕೆಲಸ ಕಾರ್ಯಗಳಿಗೆ ಸಮ್ಬಂಧಪಟ್ಟ ಹಲವಾರು ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಿದರೆಂದು ಗೊತ್ತಾಗಿದೆ

ವರ್ಧಂತಿ:—ಮಹಾಪ್ರಭುಗಳ ವರ್ಧಂತಿಯು ಇದೇ ತಿಂಗಳ 20ನೇ ತಾರೀಖು ನಡೆಯುವುದು ಮಾಮೂಲಿನಂತೆ ನಾಡಿನಾದ್ಯಂತ ನಡೆಯುತ್ತದೆ

ಬಂಟರಯಾನೆ ನಾಡವರ ಸಂಘ ಬೊಂಬಾಯಿ—ಈ ಸಂಸ್ಥೆಯ ಹಾಗೂ ಕರ್ನಾಟಕ ಕ್ರಿಶ್ಚಿಯನ್ ಅಸೋಸಿಯೇಷನ್ ಸಾಮಾಜಿಕ ಸಂತೋಷಕೂಟವು ಇದೇ ತಾ 8ರಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ಮಿ। ಎಸ್. ಎಸ್. ಸೂರ್‍ಯನ್ಸ್ [illegible] ಎಲ್. ಎಲ್. ಬಿ ಜೆ ಪಿ ಚೀಫ್ ಜಸ್ಟಿಸ್ ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ [illegible] ಎಲ್ಲರನ್ನೂ ಸ್ವಾಗತಿಸಿದರು ತದನಂತರ ಸಂಘವು ಸಮಾಜದ ಏಳಿಗೆಯ ಕುರಿತು 1927ರಿಂದ ಮಾಡಿದ ಸೇವೆ [illegible] ಸಮಾಜ ಬಂಧುಗಳ ಸರ್ವವಿಧದ [illegible] ಹಲವು ಸ್ಥಾನಮಾನಗಳನ್ನು [illegible]

ದುರ್ಗ—ಇಲ್ಲಿಯ ಶ್ರೀ ಮುದ್ದಣ ಹೆಗ್ಡೆಯವರು ಕಳೆದ ವಾರ ಸಂಚಾರಾರ್ಥ ಬೊಂಬಾಯಿಗೆ ಹೋದಲ್ಲಿ, ಅಕಸ್ಮಾತ್ ನಿಧನ ಹೊಂದಿದರೆಂದು ತಿಳಿಯುತ್ತದೆ ಹೆಗ್ಡೆಯವರು ಕಾರ್ಕಳ ತಾಲೂಕಿನಲ್ಲಿ ಜನ ಪ್ರೀತರೂ, ಪರೋಪಕಾರಿಯೂ, ಧಾರ್ಮಿಕರೂ ಸಾರ್ವಜನಿಕ ಸೇವಾಸಕ್ತರೂ ಆಗಿದ್ದರು. ಇಂತಹ ಉಪಕಾರಿ ಮುಂದಾಳೊಬ್ಬರು ತನ್ನ ನಡು ವಯಸ್ಸಿನಲ್ಲೇ ಇಹ ಲೋಕ ಯಾತ್ರೆ ಮುಗಿಸಿದುದು ಅತ್ಯಂತ ಶೋಚನೀಯ ಮೃತರ ಆತ್ಮಕ್ಕೆ ಶಾಂತಿ ಸಿಗಲಿ

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ತಾ 21ರಲ್ಲಿ ಪ್ರೆಸಿಡೆಂಟ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ವಾಟರ್ ವರ್ಕ್ಸ್ ಇದ್ದುದಕ್ಕೆ ಪ್ರಾಂತಿಕ ಸರಕಾರದಿಂದ ಬಾಕಿಯಿದ್ದ ರೂಪಾ 15,000। ದಿಂದ ವಾಟರ್ ಲೋರಿಯೊಂದನ್ನು ಕೊಡಲು ಕ್ರಯಕ್ಕೆ ಪಡೆಯಬೇಕಾಗಿ ನಿರ್ಣಯಿಸಲಾಯಿತು [illegible] ರೂ 290, [illegible] ಹಾಗೂ [illegible] ಸಭೆಯ ಸದಸ್ಯರು [illegible] ಪಡೆಯಲು ಸಂಘವು ಪ್ರಯತ್ನಿಸುತ್ತಿರುವುದು ಅಭಿನಂದನೀಯವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಅಧ್ಯಕ್ಷರ ಇಂಗ್ಲೀಷ್ ಭಾಷಣವನ್ನು ಶ್ರೀ ಟಿ ಎಸ್. ಹೆಗ್ಡೆ ಬಿ. ಎ, ಎಲ್ ಎಲ್ ಬಿ ಅವರು ಕನ್ನಡಿಸಿದರು ಶ್ರೀ ಕೆ ಕೆ ಶೆಟ್ಟಿ ಅವರ ವಂದನಾರ್ಪಣೆಯ ನಂತರ ಹಾಗೂ ಹೈಸ್ಕೂಲ್ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳಿಂದ ಸಮಾರಂಭವು ಕೊನೆಗೊಂಡಿತು.

[illegible] ಜಿಲ್ಲೆಯ ಹಣಸಂಗ್ರಹಿಸಿ ಸಹಾಯ ಮಾಡಲು ಸಿದ್ಧರಿರುವರೆಂದು ತಿಳಿದು ಬಂದುದರಿಂದ ಪ್ರಕೃತ ಶ್ರೀ ರಾಮರಾಯರು ಎಡ್ವಾನ್ಸ್ ಹಣವನು ಕಾರ್ಯ ಮುಂದೊತ್ತಲು ಕೊಡಲೊಪ್ಪಿದುದನ್ನು ಮನ್ನಿಸಲಾಯಿತು ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರರ ಆಫೀಸಿನ ಸಮೀಪ ಒಂದು ಜುಮ್ಮೀಜಯನ್ನು ಮತ್ತು ನೂದೋಟವನ್ನು ಮಾಡುವರೆ ಜಿಲ್ಲಾ ಕಲೆಕ್ಟರರಿಂದ ಸ್ಥಳ ಸ್ವಾಧೀನತೆಗೆ ಬರೆಕೊಳ್ಳಬೇಕೆಂದಾಯಿತು.

ರೇಶನಿಂಗ್ ಎಡ್ವೈಜರಿ ಕಮಿಟಿಯ ಸಭೆಯು ತಾ 23ರಲ್ಲಿ ರೇಶನಿಂಗ್ ಆಫೀಸರ್ ಶ್ರೀ ಮುದ್ದಕೆಯವರ ಅಧ್ಯಕ್ಷತೆಯಲ್ಲಿ ಜರಗಿ ಈಗ ಮಿರುವ ಅಕ್ಕಿ ರೇಶನ್ ಕುರಿತು ಯೋಚಿಸಲಾಯಿತು ಈ ತಾಲೂಕಿನಲ್ಲಿರುವ 3149 ಮುಡಿ ಅಕ್ಕಿ ಸರ್ಕಾರಕ್ಕೆ [illegible] ಬೆಳೆ [illegible] ಜಿಲ್ಲಾ ಕಲೆಕ್ಟರರನ್ನು [illegible] ಸಿವಿಲ್ ಸಪ್ಲೈ ಕಮಿಶನರವರಿಗೂ ಈ ಬಗ್ಗೆ ಬರೆಕೊಳ್ಳಬೇಕೆಂದಾಯಿತು.

ಕಲಾಮಂಟಪದ ಪ್ರಥಮ ವಾರ್ಷಿಕ ಹಸ್ತ ಲಿಖಿತಪರದಿ [illegible] ಕಲಾಮಂಟಪವು ಉಡುಪಿಯ ಸಂಸ್ಕೃತ ಕಾಲೇಜಿನ [illegible] ಕನ್ನಡದ [illegible] ಹೊರಡುತ್ತಿದೆ [illegible] ಜಿಲ್ಲೆ [illegible] 13 7 44ರಲ್ಲಿ [illegible]

NOTICE

In the Court of the District Munsif of Karkal

O S. No. 208 of 1945.
R I- A 706/45

Lingayya Hegde - Plaintiff
Versus
1 Monti Hegadthi, 2 Sooryanna Hegde, 3 Subriya Naika --Defendants

The plaintiff above named has filed the above suit both on his own behalf and on behalf of the body of creditors of defendants 1 and 2 under O I R 8 of the Code of Civil Procedure Code, for a declaration that the usufructuary mortgage executed by defendants 1 and 2 in favour of 3rd defendant on 25-10-1944 is not valid and binding on the plaintiff and the body of creditors of defendants 1 and 2 and for other reliefs The suit is posted to 3 8 1945 for the appearance of the defendants The plaintiff's petition R I. A. 706/1945 for permission to sue is also posted to the same date All persons interested in the said suit and petition are hereby informed that they may appear either in person or by vakil on 3 8-1945 before the said Court and oppose the suit or the petition or both.

(Published by Order of Court).

K. Gopalkrishna Rao
Vakil for plaintiff.

Karkal. 19 7-1945

ದಿ ಯುನೈಟೆಡ್ ಕರ್ನಾಟಕ ಇನ್ಸೂರನ್ಸ್ ಕಂಪನಿ ಲಿಮಿಟೆಡ್ ಧಾರವಾಡ

THE UNITED KARNATAK INSURANCE Co. Ltd. DHARWAR

ಕನ್ನಡ ನಾಡಿನ ಪ್ರಾತಿನಿಧಿಕ
ವಿಮಾ ಸಂಸ್ಥೆ.

ಕಳೆದ ೧೫ ವರುಷಗಳಿಂದ
ಜೀವವಿಮಾ ಕಾರ್‍ಯವನ್ನು ಮಾಡುತ್ತಲಿರುವ
ಕನ್ನಡಿಗರ ಆದರಾಭಿಮಾನದ ಸಂಸ್ಥೆ.

ಸಾಮಾನ್ಯ ಏಜನ್ಸಿಗಳಿಗೂ ವಿಶೇಷ ಏಜೆನ್ಸಿಗಳಿಗೂ ಆರ್ಗನೈಜರ್ಸ್ ಹುದ್ದೆಗಳಿಗೂ ಉಮೇದ್ವಾರರು ಬೇಕಾಗಿದ್ದಾರೆ.

ಸವಿವರ ಮಾಹಿತಿಗೆ ಬರೆಯಿರಿ—

B M. A. Kini,
Special Organiser
Camp:- Ajjarkad, UDIPI

A. S. Kini,
Managing Director.

The United Karnatak Insurance Co., Ltd.

The Representative Insurance Concern of

KARNATAK.

ಪ್ರಕಟಣೆ

[illegible] ವಿದ್ಯಾರ್ಥಿ [illegible] ಜೆಂತು [illegible]

ನನ್ನ ಗಂಡ [illegible] ನಿವಾಸಿ [illegible] 2 ನೆ 3 [illegible] ಕೆಲಸಗಳನ್ನು [illegible] ಕಾಲ ಮುಂದುವರಿಸಲು [illegible] ನನ್ನ ಗಂಡನ ಹೆಸರಲ್ಲಿರುವ [illegible] ನನ್ನ ಹೆಸರಲ್ಲಿ [illegible] ಮಾಡಿಕೊಳ್ಳಬಾರದಾಗಿಯೂ [illegible] ನಿತ್ಯ [illegible] ಸಂಬಂಧ ಇಲ್ಲವೆಂದು [illegible] ಪ್ರಕಟಿಸಲಾಗಿದೆ

[illegible] ಹೆಂಡತಿ [illegible]
ಉಡುಪಿ
ತಾರೀಕು 20 7 45

ದಕ್ಷಿಣ ಕನ್ನಡ.

ಮಂಗಳೂರು.

ಮುಂದಿನ ಬೆಳೆಯ ವಿಚಾರವಾಗಿ ಕಲೆಕ್ಟರರ ಪ್ರಕಟಣೆ–ದ. ಕ. ಜಿಲ್ಲೆಯಲ್ಲಿ ವಾಸವಾಗಿದ್ದು ಒಂದಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ಬೇಸಾಯದ ಆಸ್ತಿ ಇರುವವನು ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮಗಳಿಂದ ಗೇಣಿಯ ಮೂಲಕ ಅಕ್ಕಿ ಭತ್ತಗಳನ್ನು ಪಡೆಯುವ ಪ್ರತಿಯೊಬ್ಬನೂ (ನಮ್ಮ ಜಿಲ್ಲೆಯಲ್ಲಿದ್ದು ಮದ್ರಾಸ್ ಪ್ರಾಂತದ ಹೊರ ಜಿಲ್ಲೆಗಳಿಂದ ಅಕ್ಕಿ ಭತ್ತ ಪಡೆಯುವವನು ಕೂಡ) ಈ ಕೆಳಗಿನ ತಪಸೀಲಿನಲ್ಲಿ ತೋರುವ ದೃಢ ಪತ್ರಿಕೆಯನ್ನು ಏಣೆಲ್ ಬೆಳೆಯ ಬಗ್ಗೆ ತಾ. 30-9-45ರೊಳಗೂ, ಸುಗ್ಗಿಯ ಬೆಳೆಯ ಬಗ್ಗೆ ತಾ. 28-2-46ರೊಳಗೂ ತಾನು ವಾಸವಾಗಿರುವ ತಾಲೂಕಿನ ತಾಲೂಕು ಆಫೀಸಿನಲ್ಲಿ ಒಪ್ಪಿಸತಕ್ಕದ್ದು. ದೃಢ ಪತ್ರಿಕೆಯಲ್ಲಿರತಕ್ಕ ವಿವರ:–ಆಸ್ತಿಗಳಿರುವ ತಾಲೂಕು ಹಾಗೂ ಗ್ರಾಮ; ಪ್ರತಿಯೊಂದು ಗ್ರಾಮದಲ್ಲಿಯೂ ಇರುವ ಆಸ್ತಿಯ ವಿಸ್ತೀರ್ಣ; ಮನೆ ಬೇಸಾಯವಾದರೆ ಎಷ್ಟು ವಿಸ್ತೀರ್ಣದಲ್ಲಿ ಮತ್ತು ಉತ್ಪತ್ತಿಯ ವಿವರ; ಗೇಣಿಗೆ ಕೊಟ್ಟಿದ್ದಾದರೆ ಒಕ್ಕಲುಗಳ ಹೆಸರು; ಯಾವ ಗ್ರಾಮದ ಆಸ್ತಿಯಿಂದ ಸ್ವಂತ ಉಪಯೋಗದ ಅಕ್ಕಿಯನ್ನು ತರಿಸಿಕೊಳ್ಳಲಾಗುವುದು.–ಎಂಬುದನ್ನೂ ಸೂಚಿಸಬೇಕು.

ರಿಕ್ವಿಸಿಶನ್ ಅಧಿಕಾರಿಗಳು– ರೆವಿನ್ಯೂ ಡಿವಿಜನಲ್ ಆಫೀಸರ್ಸ್, ಜಿಲ್ಲಾ ಸಪ್ಲೈ ಆಫೀಸರ್, ತಹಶೀಲ್ದಾರರು, ತಾಲೂಕು ಸಪ್ಲೈ ಆಫೀಸರರು; ಡಿ. ತಹಶೀಲ್ದಾರ್, ಎ. ಸಿ. ತಾಲೂಕು ಸಪ್ಲೈ ಆಫೀಸರ್ ಮತ್ತು ತಾಲೂಕು ಕೇಂದ್ರದಲ್ಲಿರುವ ಡಿ. ತಹಶೀಲ್ದಾರರು ಮಿಗಿತಾಯವನ್ನು ನಿರ್ಧರಿಸುವ ಅಧಿಕಾರಿಗಳು. ದ.ಕ.ಜಿಲ್ಲಾ ಕೋಅಪರೇಟಿವ್ ಸ್ಟೋರ್ಸ್ ಮತ್ತು ಅದರ ಶಾಖೆಗಳು ಅಕ್ಕಿಯನ್ನುಕೊಂಡುಕೊಂಡು ಹಂಚುವವರು.

ಮುಂದಿನ ಬೆಳೆಯ, ದರವನ್ನು ಹೀಗೆ ನಿರ್ಧರಿಸಲಾಗಿದೆ:–42 ಸೇರಿನ ಮುಡಿಗೆ ಸುಗ್ಗಿ, ರಾಶಿ ರೂ. 10-0-0; ಗುಡ್ಡು, ಕೊಳಕೆ ರೂ. 10-8-0; ಮಸ್ಕತಿ 11-0-0; ಕಜೆ ಕುಚ್ಚಿಗೆ 9-8-0; ಜಿರಾ, ಗಂದಸಾಲೆ, ಸಣ್ಣಕ್ಕಿ–ಇತ್ಯಾದಿ ಬೆಳ್ತಿಗೆ ರೂ. 13-0-0; ಸಾಮಾನ್ಯ ಬೆಳ್ತಿಗೆ ರೂ. 12-0-0, ರಾಗಿ 6-5-0 ಸಕಾಲದಲ್ಲಿ ಸ್ಟೋರುಗಳಿಗೆ ತಂದೊಪ್ಪಿಸಿದರೆ ಕೊಡಲಾಗುವ ದರವಿದು.

ಕೇಶ್ ಮೆಮೋ–ಸಕ್ರಮ ಅಥವಾ ಸಾಮಾನ್ಯ ಪಸುಗೆ ಹರಡಿದ ಜಿಲ್ಲೆಯ ಎಲ್ಲೆಡೆಗಳಲ್ಲೂ ಇರುವ ಲೈಸನ್ಸ್ ಹೊಂದಿದ ವಿಕ್ರಯದಾರರು, ಒಂದು ರೂಪಾಯಿಗಿಂತ ಮೇಲ್ಪಟ್ಟ, ಪಸುಗೆಯ ನಿಬಂಧನೆಗೊಳಪಡದ ಆಹಾರ ಧಾನ್ಯವನ್ನು ವಿಕ್ರಯಿಸುವಾಗ ಆ ಬಗ್ಗೆ ಕೇಶ್ ಮೆಮೋ ಕೊಡಲೇ ಬೇಕು. ಆದರೆ, ಪಸುಗೆಯ ಪದಾರ್ಥವನ್ನು ವಿಕ್ರಯಿಸುವಾಗ ಕೇಶ್‌ಮೆಮೊ ಕೊಡಬೇಕಾಗಿಲ್ಲ.

ಅದರ ಬದಲು, ವಿಕ್ರಯಿಸಿದ ತಾರೀಕು, ಪಡಕೊಂಡವನ ಹೆಸರು, ವಿಳಾಸ ಪ್ರಮಾಣ ದರ ಮತ್ತು ಒಟ್ಟು ಮೌಲ್ಯವನ್ನು ಕಾಣಿಸುವ ರಿಜಿಸ್ಟರೊಂದನ್ನು ಸರಿಯಾಗಿ ಇಟ್ಟುಕೊಳ್ಳಬೇಕು–ಎಂದು ಜಿ. ಕಮರ್ಶಿಯಲ್ ಟೇಕ್ಸ್ ಆಫೀಸರರು ಪ್ರಕಟಿಸುತ್ತಾರೆ.

ದ. ಕ. ಸೆಂಟ್ರಲ್ ಸಹಕಾರಿ–ರಖಂ ಸ್ಟೋರ್ಸಿನ ಡೈರೆಕ್ಟರ್ ಮಂಡಳಿಯ ಸಭೆಯು ತಾ. 15ರಂದು ಸೇರಿತು. ಶ್ರೀ. ಎಂ. ಶಿವರಾಯರು ಮಂಡಳಿಯ ಅಧ್ಯಕ್ಷರಾಗಿಯೂ, ರಾ. ಬ. ಕೆ. ಟಿ. ಆಳ್ವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಮುಸ್ಲಿಂ ವಿದ್ಯಾರ್ಥಿ– ಫೆಡರೇಶನಿನ ಪ್ರಾಂತೀಯ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಜನಾಬ್ ಎಂ. ಎ. ಮುಕದ್ದಮ್ ಅವರು ಮಂಗಳೂರಿಗೆ ಆಗಮಿಸಿದ್ದಾಗ ಸ್ಥಳೀಯ ಮುಸ್ಲಿಂ ವಿದ್ಯಾರ್ಥಿ ಫೆಡರೇಶನಿನವರು ಸತ್ಕಾರ ಕೂಟ ಒಂದನ್ನು ಏರ್ಪಡಿಸಿದ್ದರು, ಫೆಡರೇಶನಿನ ಉದ್ದೇಶಗಳನ್ನು ವಿವರಿಸಿ ಮಿ। ಜಿನ್ನರು ಮಾತ್ರ ಮುಸ್ಲಿಮರ ನಾಯಕರಾಗಬಲ್ಲರು–ಎಂದರು ಅತಿಥಿಗಳು.

ಶ್ರೀ। ಬೆನಗಲ್ ಸಂಜೀವರಾಯರು– ತಾ. ೧೮ರಂದು ಸ್ಥಳೀಯ ಥಿಯಾಸಾಫಿಕಲ್ ಭವನದಲ್ಲಿ ಭಾರತ ಹಾಗೂ ಐರೋಪ್ಯ ಸಂಸ್ಕೃತಿಗಳಿಗಿರುವ ಸಂಬಂಧದ ವಿಚಾರವಾಗಿ ಭಾಷಣವಿತ್ತರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮಿತಿ–ಈ ಸಮಿತಿಯ ಎಲ್ಲಾ ಸದಸ್ಯರ ಸಾಧಾರಣ ಸಭೆಯು ಇದೇ ತಾ. 29ಕ್ಕೆ ಸೇರುವುದು ಎಂದು ಈ ಮುಂಚೆ ಸೂಚಿಸಿದ್ದರೂ ಕೆಲವು ತೊಂದರೆಗಳಿಂದ ಅದನ್ನು ಬರುವ ಆಗೋಸ್ತು ತಾ. ೨ನೇ ಗುರುವಾರ ಮಧ್ಯಾಹ್ನ 4 ಗಂಟೆಗೆ ಮುಂದರಿಸಿಡಬೇಕಾಗಿದೆ. ಸ್ಥಳ: ಮಂಗಳೂರಿನ ಕೊಡಿಯಾಲ ಬೈಲಲ್ಲಿರುವ ಥಿಯೋಸೋಫಿಕಲ್ ಲೋಜ್ ಕಟ್ಟೋಣ. ಅದೇ ದಿನ ಅದೇ ಸ್ಥಳದಲ್ಲಿ 6 ಗಂಟೆಗೆ ಆಹಾರ ಕಮಿಟಿಯ ಸಭೆಯೂ ಜರಗುವುದು. ಆ ದಿವಸ ಎರಡೂ ಸಭೆಗಳು ಖಂಡಿತವಾಗಿ ಜರಗುವುವೆಂತ ಈ ಮೂಲಕ ತಿಳಿಸಿಯದೆ. ತಾ. ೩–೬–೧೯೪೫ರಲ್ಲ ನಡೆದ ಕಮಿಟಿ ಸಭೆಯ ಠರಾವಿನಂತೆ ಮೆಂಬರರನ್ನು ಸೇರಿಸಲು ಕೆಳಗಿನ ಮಹನೀಯರು ಒಪ್ಪಿಕೊಂಡಿರುವರು. ಅವರ ಕೈಯಲ್ಲಿ ಸದಸ್ಯತನದ ಅರ್ಜಿಗಳು ಇರುತ್ತವೆ. ಆದ್ದರಿಂದ ಆಯಾಯಾ ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರು ಮುಂಬರುವ ಸಭೆಯ ಮುಂಚೆಯೇ ಸಂಬಂಧಪಟ್ಟ ಮಹನೀಯರಿಂದ ಫೋರ್ಮ್ ಪಡೆದು ಸದಸ್ಯರಾಗಿ ಸೇರಬೇಕಾಗಿ ವಿನಂತಿ. ಉಡುಪಿ ಶ್ರೀ. ಪಿ. ಲಕ್ಷ್ಮೀನಾರಾಯಣ ನ್ಯಾಕ್; ಕಾರ್ಕಳ:–ಶ್ರೀ. ಕೆ. ವೆಂಕಟೇಶ ಪ್ರಭು, ಪುತ್ತೂರು ಶ್ರೀ. ಎಸ್. ಉಪೇಂದ್ರ ನ್ಯಾಕ್, ಕುಂದಾಪುರ:.ಶ್ರೀ. ರಾಮಕೃಷ್ಣ ನಾಡವ:.ಕಾಸರಗೋಡು: ಶ್ರೀ. ಬಿ. ದೇವಪ್ಪಾಳ್ವ, ಮಂಗಳೂರು:–ಶ್ರೀ. ಕೆ. ಈಶ್ವರ, ಸದಸ್ಯರನ್ನು ಸೇರಿಸುವ ಬಗ್ಗೆ ಶ್ರೀ. ಬಿ. ದೇವಪ್ಪಾಳ್ವರು ಮಂಗಳೂರು; ಪುತ್ತೂರು, ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಇದೇ ತಿಂಗಳಲ್ಲಿ ಸಂಚಾರ ಮಾಡುವರು. ಅವರಿಂದ ಫೋರ್ಮ್ ಪಡೆದು ಸೇರಬಹುದು, ಎಂದು ಕನ್ವೀನರಾದ ಶ್ರೀ. ಕೋಟ ರಾಮಕೃಷ್ಣ ಕಾರಂತರು ತಿಳಿಸುತ್ತಾರೆ.

ಜಿಲ್ಲಾ ಬೋರ್ಡಿನ–ಸಾಮಾನ್ಯ ಸಭೆಯು ತಾ. ೧೬ರಂದು ಜರಗಿದಾಗ ಬೋರ್ಡಿನ ಆಡಳಿತೆಯ ವರದಿಯು ಸ್ವೀಕರಿಸಲ್ಪಟ್ಟಿತು. ಜಾನುವಾರು ಜಾತ್ರೆಗಳಲ್ಲಿ ವಿಕ್ರಯಕ್ಕಾಗಿ ಬರುತ್ತಿರುವ ಜಾನುವಾರುಗಳ ಮೇಲಿನ ತೆರಿಗೆಯನ್ನು ಏರಿಸುವ ವಿಚಾರದಲ್ಲಿ ಸ್ಥಳೀಯ ಸಂಸ್ಥೆಗಳ ಇನ್ಸ್‌ಪೆಕ್ಟರರಿಂದ ಬಂದ ಪತ್ರಕ್ಕೆ 'ಜಿಲ್ಲೆಯಲ್ಲಿ ಇಂದು ತಲೆದೋರಿರುವ ಜಾನುವಾರುಗಳ ತೀಕ್ಷ್ಣ ಕೊರತೆಯಿಂದಾಗಿ ತೆರಿಗೆಯನ್ನು ಏರಿಸಲಾಗುವದಿಲ್ಲ' ಎಂಬ ತೀರ್ಮಾನವನ್ನು ಕೈಕೊಂಡಿತು. ಬಸ್ ಸರ್ವಿಸನ್ನು ಜಿಲ್ಲಾ ಬೋರ್ಡ್ ತೆಗೆದುಕೊಳ್ಳುವ ವಿಚಾರದಲ್ಲಿ ಅನುಮತಿ ಕೊಡಬೇಕೆಂದು ಸರಕಾರಕ್ಕೆ ಬರೆಯಲು ನಿರ್ಧಾರವಾಯಿತು. ಜಿಲ್ಲೆಯಲ್ಲೊಂದು ಕ್ಷಯ ರೋಗದ ಚಿಕಿತ್ಸಾಗೃಹವನ್ನು ತೆರೆಯುವ ವಿಚಾರವನ್ನು ಬೋರ್ಡ್ ಮಾಡಬೇಕೆಂದು ಡಾ. ಆಡಪ ಅವರು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಬರೆದ ಪತ್ರವನ್ನು ಓದಲಾಯಿತು. ಈ ಬಗ್ಗೆ ಹಣ ಸಂಗ್ರಹಕ್ಕಾಗಿ, ಡಿ. ಬೊ. ಅಧ್ಯಕ್ಷ, ಡಾ.ಆಡಪ, ಡಾ। ಮಾಧವ ಪೈ, ಡಾ। ಕೇಶವ ಪೈ, ಎ. ಬಿ. ಶೆಟ್ಟಿ ಮೊದಲಾದವರನ್ನೊಳಗೊಂಡ ಸಮಿತಿಯನ್ನು ರಚಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು.

ಮೂಲ್ಕಿ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಶ್ರೀ। ಬಿ. ರಾಮರಾವ್, ಇವರಿಗೆ ಪುತ್ತೂರು ಹೈಸ್ಕೂಲಿಗೆ ವರ್ಗವಾದ ನಿಮಿತ್ತ ವಿದ್ಯಾರ್ಥಿಗಳ ವಿದಾಯ ಸತ್ಕಾರವು ಇದೇ ತಾ. ೧೧ರಂದು ಮುಖ್ಯೋಪಾಧ್ಯಾಯರಾದ ಶ್ರೀ। ಬಿ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿ ವಿದ್ಯಾರ್ಥಿನಿಯರನೇಕರು ಅಗಲಲಿರುವ ಆ ಉಪಾಧ್ಯಾಯರ ಗುಣವರ್ಣನೆಯನ್ನು ಮಾಡಿ ಅವರಲ್ಲಿ ತನಗಿದ್ದ ಭಕ್ತಿಗೌರವಗಳನ್ನು ಪ್ರಕಾಶಪಡಿಸಿದರು. ಸಭಿಕರಲ್ಲಿ ಶ್ರೀ। ವಿದ್ವಾನ್ ಸುರತ್ಕಲ್ ಸುಬ್ಬರಾಯರೂ ಶ್ರೀಗಳಾದ ಕೆ. ಸಂಜೀವ ಸೆಟ್ಟರೂ, ಎಮ್. ಗೋಪಾಲ ಶೆಣೈಗಳೂ ಶ್ರೀ। ಬಿ. ರಾಮರಾಯರ ಮುಂದಿನ ಶ್ರೇಯೋಭಿವೃದ್ಧಿಯನ್ನು ಕೋರಿ ಭಾಷಣ ಮಾಡಿದರು. ಶ್ರೀ। ರಾಮರಾಯರು ಸಮಯೋಚಿತ ಸದುತ್ತರಗಳನ್ನಿತ್ತ ಬಳಿಕ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀಯುತರ ಶಿಕ್ಷಣ ಚಾತುರ್ಯಗಳನ್ನು ಕೊಂಡಾಡಿದರು. ಉಪಾಹಾರದೊಂದಿಗೆ ಸಮಾರಂಭವು ಅಂತ್ಯವಾಯಿತು.

ಕಬ್ಬಿಣ ಸಾಮಾನುಗಳ ಪೂರೈಕೆ ಹೊಸವರುಷದಲ್ಲಿ ಅಂದರೆ 1946ನೆ ಎಪ್ರಿಲ್ 1ರಿಂದ ಅದೇ ಜೂನ್ 30ರ ವರೆಗೆ ಉಪಯೋಗಕ್ಕೆ ಬೇಕಾಗಬಹುದಾದ ಕಬ್ಬಿಣ ಮತ್ತು ಉಕ್ಕಿನ ಸಾಮಾನುಗಳು ಪೂರೈಯಬೇಕಾದರೆ, ದಕ್ಷಿಣಕನ್ನಡ ಮತ್ತು ಮಲಬಾರು ಜಿಲ್ಲೆಗಳ ಜನರು ತಮಗೆ ಅಗತ್ಯ ಬಿದ್ದ ವಸ್ತುಗಳ ಹೆಸರು, ಪ್ರಮಾಣ ಮತ್ತು ಉಪಯೋಗಗಳನ್ನು ಸ್ಪಷ್ಟೀಕರಿಸಿ ಇದೇ ತಾ 29 ರೊಳಗಾಗಿ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಆಫೀಸರ್ ಅವರಿಗೆ ಬರೆದುಕೊಳ್ಳಬೇಕಾಗಿ ತಿಳಿಸುತ್ತಾರೆ.

ಅಖಿಲ ಭಾರತ ಆಯುರ್ವೇದೀಯ ಕಾಂಗ್ರೆಸ್ 34ನೇ ಅಧಿವೇಶನ ಈಸಂಸ್ಥೆಯ ಸ್ವಾಗತ ಸಮಿತಿಯ ಸಭೆಯನ್ನು ಇದೇ ತಾ 29ನೇ ಆದಿತ್ಯವಾರ ಸಾಯಂಕಾಲ ಘಂಟೆ 4ಕ್ಕೆ ಜಪ್ಪಿನಲ್ಲಿರುವ ವೈದ್ಯಗುರು ಯಂ ಆರ್. ಭಟ್ಟರ ಮನೆಯಲ್ಲಿ ಕರೆಯುವುದಾಗಿ ನಿಶ್ಚೈಸಿರುತ್ತದೆ. ಎಲ್ಲರೂ ಹಾಜರಿರಬೇಕಾಗಿ ಜನರಲ್ ಸೆಕ್ರೆಟರಿಯವರಾದ ಯಂ. ಆರ್ ಭಟ್ಟರು ವಿನಂತಿಮಾಡಿಕೊಳ್ಳುತ್ತಾರೆ. ಈ ಸಭೆಯಲ್ಲಿ ಅನೇಕ ಉಪಸಮಿತಿಗಳ ರಚನೆಯು ನಡೆಯಲ್ಪಡುವುದು.

THE
Canara Mutual Assurance Co., Limited.

NOTICE

Is hereby given that the Policy No. 10489 on the life of Mr. Balkunje Vaman Shenoy, S/O Late Mr. B. Ganapathy Shenoy, Jeweller, Hampankatta, Mangalore (S. K.) having been lost a duplicate Policy will be issued unless objection is lodged with us within one month from this date.

UDIPI, 17-7-1945 } T. R. A. Pai.
MANAGING DIRECTOR.

THE
CANARA INDUSTRIAL & BANKING SYNDICATE, Ltd.
(Incorporated in British India)
UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸ್ಥಾಪನೆ:] **ಸಿಂಡಿಕೇಟ್ ಲಿಮಿಟೆಡ್, ಉಡುಪಿ.** [1925

ಅಧಿಕೃತ ಭಂಡವಳ	....	56,00,000
ಚಂದಾ ಎತ್ತಿದ ಭಂಡವಳ	....	32,10,987
ತೆತ್ತ ಭಂಡವಳ	....	19,30,000
ಕ್ಷೇಮ ನಿಧಿ	....	4,20,000

ವಿಶ್ವಾಸಾರ್ಹತೆಗೆ ತಕ್ಕುದಾದ ಗಣನೀಯ ಸಂಖ್ಯೆಗಳು

ಚಿಂತೆ ಮತ್ತು ವ್ಯಥೆಯಿಂದ ಪಾರಾಗಿ ಸ್ವತಂತ್ರರಾಗಿರಬೇಕಾದರೆ ಸಂಪೂರ್ಣ ತೃಪ್ತಿಯೇ ಅತ್ಯಾವಶ್ಯಕ. ಬೇಂಕಿನ ವ್ಯವಹಾರಗಳ ಕುರಿತು ಚಿಂತಾಮಗ್ನರಾಗಿದ್ದವರಿಗೆ ಯಾವಾಗಲೂ ಉತ್ಸಾಹವಿರಲಾರದು. ಸಿಂಡಿಕೇಟು ಬೇಂಕು ನಿಮಗೆ ನಂಬಿಕೆಯನ್ನೂ ತನ್ಮೂಲಕ ಮನಃತೃಪ್ತಿಯನ್ನೂ ಕೊಡುವುದರಿಂದ ಅದರೊಡನೆಯೇ ನಿಮ್ಮ ಯಾವತ್ತೂ ಬೇಂಕಿನ ವ್ಯವಹಾರವನ್ನು ಗಳಿಸಿರಿ. ಕಳೆದ ಹತ್ತೊಂಭತ್ತು ವರುಷಗಳಿಂದ ಸಿಂಡಿಕೇಟು ಸಾವಿರಾರು ಮಂದಿ ಗ್ರಾಹಕರ ಸರ್ವಾದರಣೀಯ ಸಂಸ್ಥೆಯಾಗಿ ಪರಿಣಮಿಸಿಯದೆ. ಆದುದರಿಂದಲೇ ನಿಮ್ಮ ಬೇಂಕಿನ ವ್ಯವಹಾರಗಳನ್ನು ಸಿಂಡಿಕೇಟಿಗೆ ಒಪ್ಪಿಸಿ ನಿಶ್ಚಿಂತರಾಗಿರಿ.

T. A. Pai, B. Com (Bom) A. I. I. B.
General Manager.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 46/1945

1 ಲಿರೇಸಿಯಾ ಮೆಂಡೋಸಾ ಬ್ಯಾ; 2 ಲುವಿಸ್ ಮೆಂಡೋಸಾ, 3 ಆಲ್ಬರ್ಟ ಮೆಂಡೋಸಾ–ಮ್ಯಾನರ್ರು-ಗಾರ್ಡಿಯನ್ ತಾಯಿ 1ನೇ ಅರ್ಜಿದಾರಳು—ಅರ್ಜಿದಾರರು.

ಈ ಮೂಲಕ ತಿಳಿಯಪಡಿಸುವದೇನಂದರೆ. ಮೇಲ್ಕಂಡ O. P. No. 46/1945ನೇ ಅರ್ಜಿಯ 1ನೇ ಅರ್ಜಿದಾರಳ ಗಂಡ ಪ ಮ್ಯಾನರ್ 2, 3ನೇ ಅರ್ಜಿದಾರರ ತಂದೆ ಹಾಲಿ ಮೃತಪಟ್ಟ ವಿನ್‌ಸೆಂಟ್ ಮೆಂಡೋಸನು United India Life Assurance Co., Ltd. ಈ ಕಂಪೆನಿಯಿಂದ ಪಡೆದ ನಂಬ್ರ 38301ನೇ ಪೋಲಿಸಿ ಬಾಬ್ತು ಬಹಾ ಆ್ಯವಜನ್ನು ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳು ಸ್ವತಹಾ ವ 2, 3ನೇ ಅರ್ಜಿದಾರರ ಗಾರ್ಡಿಯನಳಾಗಿ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಸರನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 11-8-1945ಕ್ಕೆ ಇಟ್ಟದೆ. ಆಕ್ಷೇಪ ಹೇಳುವವರು ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಮೇಲೆ ನಮೂದಿಸಿದ ಕೋರ್ಟು ಮುಂದೆ ಮೇಲಿನ ಅರ್ಜಿಯಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

Gratian C. Rego,
Vakil for Petitioners

ಉಡುಪಿ, ತಾರೀಕು 20-7-1945.

ವಿದ್ಯಾವಿಷಯಕ ಸಮ್ಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1–8–0** ಮಾತ್ರ.

ಬೈಂಡು ಮಾಡಿದ ಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸಿಮ್ಲಾದಲ್ಲಿ ಮೂರು ವಾರ.

(೨ನೇ ಪುಟದಿಂದ ಮುಂದುವರಿದುದು.)

ತುಂಬಿರುವ, ಈ ಕೊಳಕು ಗುಡಿಸಲುಗಳಲ್ಲಿದ್ದಾರೆಂಬುದನ್ನು ತಿಳಿದು ನಾಚಿಕೆಪಡಬೇಕು. ಈ ನಾಚಿಕೆಯಲ್ಲಿ ಸಿಮ್ಲಾದ ಮುನಿಸಿಪಾಲಿಟಿಯಷ್ಟೇ ನಮಗೂ ಪಾಲಿದೆ'' ಎಂದಿದ್ದಾರೆ. ಹೀಗೆ ಅಲ್ಲಿಯೂ ಬೇರೆ ಪ್ರಮುಖರು ಮಾಡದುದನ್ನು ಮಾಡಿದ ಅಧಿಕಪ್ರಸಂಗಿಯೆಂದರೆ ನೆಹರು. ಸಿಮ್ಲಾಕ್ಕೆ ಬಂದ ದಿನದಿಂದ ಅವರನ್ನೊಂದೇ ಒಂದು ಕ್ಷಣ ಜನತಂಡ ಬಿಟ್ಟುದಿಲ್ಲ. ಅವರುಂಡುದಕ್ಕೆ, ಓದಿದುದಕ್ಕೆ, ಬರೆದುದಕ್ಕೆ, ಮಲಗಿದುದಕ್ಕೆ-ಪ್ರತಿಯೊಂದಕ್ಕೂ ಸಾವಿರಾರು ಜನರು ಸಾಕ್ಷಿ! ಆದರೂ ಬಂದ ದಿನವೇ ತನ್ನ ನಿವಾಸಬಿಟ್ಟು ಸಿಸಿಲ್ ಹೋಟೆಲಿಗೆ ಹೋಗಿದ್ದರು. ಹೋದುದು ಖಾನ್ ಸಾಹೇಬರೊಂದಿಗೆ. ಆದರೆ ಖಾನ್‌ಸಾಹೇಬ್, ಕಮಲಾ ದೇವಿಯವರನ್ನು ಕೂಡಿಕೊಂಡು ಸೀದಾ ಜಿನ್ನಾರ ಕೋಣೆಗೂ ಹೋದರು. ಜಿನ್ನರಾಗ ವಿಶ್ರಾಂತಿ ಪಡೆಯುತಿದ್ದರು. ಏಕಾಗ್ರತೆಯ ಪ್ರಭಾವವೋ, ಆಕಸ್ಮಾತ್ ನೆಹರುಗಳು ಬಂದುದರಿಂದಾದ ಗಡಿಬಿಡಿಯೋ-ಅಂತೂ ಉದ್ಧಟತನವಲ್ಲ-ಜಿನ್ನರು ತುಳಿತಲ್ಪಿಂದ ಏಳಲಿಲ್ಲ. ನೆಹರುಗಳೇ ಮುಂದೆಹೋಗಿ ಹಸ್ತಲಾಘವ ಕೊಟ್ಟು ಅವರ ಒತ್ತಿನಲ್ಲೇ ಕುಳಿತುಕೊಂಡು ಐದು ಮಿನಿಟು ಮಾತಾಡಿ ಹೊರಟುಬಂದರು. ಕ್ಷಯದೀ ಅದ್ಭೂಮರೊಡನೆ ಇಂತಹ ಸಲುಗೆ ಪ್ರದರ್ಶಿಸಿದವರು ಬೇರೊಬ್ಬರಿಲ್ಲ.

ಸಿಮ್ಲಾದಲ್ಲಿ ಎಲ್ಲರ ಸಂಬಂಧವೂ ಇದ್ದವರು-ಎಲ್ಲರಿಗಿಂತ ಹೆಚ್ಚಿನ ಚಟುವಟಿಕೆ ಪ್ರದರ್ಶಿಸಿದವರು-ಬೇರಾರೂ ಅಲ್ಲ, ಪತ್ರಿಕಾ ಪ್ರತಿನಿಧಿಗಳು. ಅಲ್ಲಿದ್ದ ಅವರ ಸಂಖ್ಯೆ ಸುಮಾರು 150 ಎಂದು ಆದಿಯ ಲೆಕ್ಕ ಆ ಮೇಲೆ ಅದು ಹೆಚ್ಚಾಗಿರಬೇಕು. ಇವರಲ್ಲಿ ಹಿಂದೂದೇಶದವರು ಮಾತ್ರವಲ್ಲ, ವಿದೇಶೀ ಬಾತ್ಮೀದಾರರೂ ಇದ್ದರು. 'ಬರ್ಜ್' ಭವನವನ್ನು ಇವರ ಸರಕೊಪ್ಪಿಸಿ 'ಮನ ಬಂದಂತೆ ಇದ್ದುಕೊಳ್ಳಿ' ಎಂದು ಸರಕಾರವು ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಿತು. ಅಲ್ಲಿ ಮೂರು ವಾರಗಳನ್ನಿವರು 'ಸುಖಿ ಕುಟುಂಬವೆಂಬಂತೆ ನಕ್ಕುನಲಿದು ಕಳೆದಿದ್ದರು. ಬರ್ಜ್-ಅದೊಂದು ಜೇನುಕಟ್ಟೆಯಂತಿತ್ತು; ಅಲ್ಲಿಂದ ಹೊರಟ ಈ ನೊಣಗಳು ಸಿಮ್ಲಾದ ವೈಸರಾಯಿ ಭವನ, ಸಿಸಿಲ್ ಹೊಟೆಲ್, ಆರ್ಮ್ಸ್‌ಡೆಲ್, ಮನೋರ್ ವಿಲ್ಲೆ, ಮೈದಾನ, ರಸ್ತೆ, ರಿಕ್ಷಾ ಪಕ್ಷವೆಂಬ ಭೇದವಿಡದೆ ಪ್ರತಿಯೊಂದು ಕಡೆಗೂ ಮಧು ಸಂಗ್ರಹಕ್ಕಾಗಿ ಹಾರಾಡುತ್ತಿದ್ದವು. ಪರಿಷತ್ತಿನ ಪ್ರತಿಯೊಬ್ಬ ಪ್ರತಿನಿಧಿಯ ಬಾಯಿ ಬೀಗ ಕೀಳಲು ಪ್ರಯತ್ನಿಸಿದ್ದುವು-ಆದರೆ ಆ ಮಟ್ಟಿಗೆ ಪೂರ್ಣ ಸೋಲಿಗೀಡಾಗಿದ್ದುವು. ಸಿಮ್ಲಾದಲ್ಲಾದಂಥ ಕಟು ಅನುಭವವನ್ನು ತಾವು ಜನ್ಮದಲ್ಲೇ ಅನುಭವಿಸಿಲ್ಲವೆಂದು ಸುದ್ದಿ ಬೇಟೆಯ ರಜತೋತ್ಸವ, ಸುವರ್ಣೋತ್ಸವಗಳ ಗಡಿದಾಟಿದ್ದ ಹಿರಿಯ ಬಾತ್ಮೀದಾರರೂ ಹೇಳುತಿದ್ದಾರೆ. ಇವರನ್ನು ಕಂಡೊಡನೆ ಧುರೀಣರೆಲ್ಲರೂ ಮೂಕರಾಗಿ ಬಿಡುತಿದ್ದರು-ನಡು ರಸ್ತೆಯಲ್ಲಿ ಚೇಷ್ಟೆಗೆ ಬಂದ ಪ್ರಾಣಿಯಿಯು ಕಂಡ ಮುಗ್ಧೆಯಂತೆ. ಅಲ್ಲಿದ್ದ ವರದಿಗಾರರು ಸಾಮಾನ್ಯರಾಗಿದ್ದಿಲ್ಲ. ಕೇವಲ ಮುಖ ನೋಡಿ ಎಂಟು ಪುಟಗಳಷ್ಟು ವಾರ್ತೆಯನ್ನು ಆಯ್ದುಕೊಳ್ಳಬಲ್ಲ ಅಪ್ರತಿಮರು ಅವರಲ್ಲಿದ್ದರು. ಇಕ್ಕುಳದಿಂದ ಕೀಳಲಾಗದುದನ್ನೂ ಹೇಗೋ ಕಿತ್ತು ಸಂಗ್ರಹಿಸಿಕೊಳ್ಳಬಲ್ಲ ಸುದ್ದಿ ಗೆಸ್ಟಪೋಗಳಿದ್ದರು. ಆದರೆ ಇವರೆಲ್ಲಾ ಸಿಮ್ಲಾದಲ್ಲಿ ಹೊಸಾನುಭವವನ್ನೇ ಪಡೆದರು. ಕೆಲವು ಧುರೀಣರ ಬಾಯಿಯಿಂದ ಕಟುವಾಣಿಗಳನ್ನೂ ಕೇಳಿದ್ದರು. ಜಿನ್ನರೊಡನೆ ಮಾತಾಡಿ ಬಂದ ಪಂಡಿತ ಪಂತರಿದಿರು ಹೋದಾಗ ''ಹೇಳಲಿಕ್ಕೇನೂ ಇಲ್ಲ'' ಎಂಬ ಉತ್ತರ ಬಂತು. ಆದು ಪತ್ರಿಕಾ ಪ್ರತಿನಿಧಿಗಳಿಗೆ ಮೊದಲೇ ಗೊತ್ತಿದ್ದುದರಿಂದ ''ನೀವು ಇನ್ನೊಮ್ಮೆ ಮಿ. ಜಿನ್ನರ ಭೇಟಿಗೆ ಹೋಗಲಿರುವಿರಾ?'' ಎಂದು ಮರು ಸವಾಲು. ''ಹೋದಾಗಲೇ ತಿಳಿದುಕೊಳ್ಳಿ''-ಎಂದು ಪಂತರ ಉತ್ತರ. 'ಹೋಗುವದಿಲ್ಲ' ಎಂದು ಪಂತರಾಡುತಿದ್ದರೆ ಮರುದಿನದ ಪತ್ರಿಕೆಗಳಲ್ಲಿ 'ಜಿನ್ನಾ-ಪಂತ್ ಮಾತುಕತೆ ಮುರಿಯಿತು' ಎಂಬ ತಲೆ ಬರಹದಡಿ ಒಂದು ಪ್ರಬಂಧವೇ ಬರುತಿತ್ತು; 'ಹೋಗಲಿದ್ದೇನೆ' ಎನ್ನುತ್ತಿದ್ದರೆ 'ಸಂಧಾನ ಸಫಲವಾಗುವ ಲಕ್ಷಣವಿದೆ' ಎನ್ನುತ್ತಾ ಪಂಡಿತ ಪಂತರ ಭಾವಚಿತ್ರ, ಮತ್ತು ಅವರ ಸಂಧಾನ ಯೋಗ್ಯ ಗುಣಗಳ ವರ್ಣನೆ ಬರುತಿತ್ತು. ಆದರೆ ಪಂತರಿಂದ ಬಂದುದು ನಿಷ್ಠುರ ಉತ್ತರ. ಅಲ್ಲಿಂದ ಸಿಸಿಲ್ ಹೋಟೆಲಿಗೆ ಹೋಗಿ ವೈಸರಾಯರೊಡನೆ ಮಾತಾಡಿ ಬಂದ ಜಿನ್ನರ ಮುಖದಿದಿರು ತಮ್ಮ ನೆರಳು ಹಾಯುತ್ತದೆನ್ನುವಾಗಲೇ ''ಜಂಟ್ಲ್‌ಮೆನ್--ಹೇಳುವದಕ್ಕೇನೂ ಇಲ್ಲ'' ಎನ್ನುತ್ತಾ ಅವರು ಬೆನ್ನು ತಿರುಗಿಸಿಯಾಯಿತು. ಹೋಗಲಿ, ಅವರು ತಪ್ಪಿಸಿಕೊಂಡರೂ ಲಿಯಾಖತ್ ಆಲಿಖಾನರಿದ್ದಾರೆ, ಎಂದವರನ್ನು ಮುತ್ತಿಗೆ ಹಾಕಿ ''ಜಿನ್ನರೇನಾದರೂ ನಿಮ್ಮೊಡನೆ ಹೇಳಿದರೇ?'' ಎಂದು ಪ್ರಶ್ನಿಸಿದರೆ, ''ಮತ್ತೇನು, ಅವರು ನಮಗೆ ಮುಖ ತೋರಿಸಿ ಹೋಗುವದಕ್ಕಾಗಿ ಬಂದಿದ್ದಾರೆಂದು ಭಾವಿಸಿದಿರಾ?'' ಎಂದು ಇವರಿಗೇನೇ ಮರುಸವಾಲು. ಮಗನ ಉಪನಯನಕ್ಕಾಗಿ ಪಂತಿಗೆ ಕೇಳಲು ಬಂದವನಿಗಾದರೂ ಈ ರೀತಿ ಚುಚ್ಚಿ ಮಾತಾಡುವಂತಿಲ್ಲ. ಒಮ್ಮೊಮ್ಮೆ ಮಳೆ-ಮಳೆಯಿಲ್ಲದಾಗ ಹಿಮಗಾಳಿ ಸಿಮ್ಲಾದಲ್ಲಿ ತಪ್ಪಿದ್ದಿಲ್ಲ. ಇಂತಹ [illegible] ಸುದ್ದಿಸಂಗ್ರಹಕ್ಕಾಗಿ ಬಾತ್ಮೀದಾರರು [illegible] ಗಟ್ಟಲೆ ಕಾದು ನಿಲ್ಲಬೇಕಾಗುತ್ತದೆ. 'ಈ ಮೊದಲೆಂದೂ ನಮಗೆ ಹೀಗಾದುದಿಲ್ಲ-ನಮ್ಮ ತಾಳ್ಮೆ ಈ ರೀತಿ ಬರಿದಾದ ಅನುಭವ ನಮಗಿಲ್ಲ'-ಎಂದು ಸಿಮ್ಲಾದಲ್ಲಿದ್ದ ಹಿರಿಯ ಬಾತ್ಮೀದಾರರಂದಿದ್ದಾರೆ. ಅವರು ಸಿಮ್ಲಾದಲ್ಲಿ ಅಂದಾಜು ತಪ್ಪಿದಂತೆ ಹಿಂದೆಂದೂ ತಪ್ಪಿಲ್ಲವಂತೆ. ಮುಖ ನೋಡಿ ಅರ್ಥ ಕಟ್ಟುವದರಲ್ಲಿ ೧ನೇ ನಂಬರ್ ಪಡೆದಿದ್ದವರೆಲ್ಲಾ ಸಿಮ್ಲಾದಲ್ಲಿ 'ನಿಷ್ಫಲ ಮನುಷ್ಯ'ರಾಗಿ ಹೋಗಿದ್ದರು. ಈ ಬಾರಿ ಧುರೀಣರಲ್ಲಿ ಕೆಲವರು ಒಂದು ಹೊಸ ಕಲೆ[illegible] ಕಲಿತು ಬಂದಿದ್ದರಂತೆ. ಬಾತ್ಮೀದಾರರನ್ನು ಬೆದರಿಸುವ ಉದ್ದೇಶದಿಂದ ಬೇಕೆಂದೇ ಹುಬ್ಬು ಗಂಟಿಕ್ಕಿಕೊಳ್ಳುವದು-----ಭಗ್ನ ಮನೋರಥರಾಗಿ ಮರಳುವವರೂ ಹುಸಿನಗೆಯನ್ನು ಮಿಂಚಿಸಿ ಪತ್ರಿಕೋದ್ಯಮಿಗಳನ್ನು ವಂಚಿಸುವದು-ಇನ್ನು ಕೆಲವರಂತೂ ವರದಿಗಾರರಿದಿರು ಹಾಜರುಪಡಿಸಲು ಬೇರೊಂದು ಮುಖವನ್ನೇ ಬಾಡಿಗೆಗೆ ತಂದಿದ್ದಾರೇನೋ ಎಂಬಂತೆ ಎಂತಹ ಏರುತಗ್ಗುಗಳಿದ್ದರೂ ಇವರ ಸಮ್ಮುಖದಲ್ಲಿ ಒಂದೇ ರೀತಿ- ಇಂತಹ ಘಟನೆಗಳೆಲ್ಲಾ ನಡೆದಿದ್ದುವು. ಮುಖಭಾವ ಪರೀಕ್ಷೆಯಿದ್ದರೆ ಸಾಲದು ಕುತ್ತಿಗೆಯ ನರ ನೋಡಿ ತಿಳಿಯುವ ನಾಡಿ ಶಾಸ್ತ್ರಜ್ಞತೆಯೂ ಬೇಕು ಎಂಬ ಹೊಸಾನುಭವ ಪತ್ರಿಕೋದ್ಯಮಿಗಳಿಗಾಯಿತು.

೦೦ ೦೦

ಆದರೆ ಸರಕಾರದ ಸುದ್ದಿ ಖಾತೆಯ ಬಾತ್ಮೀದಾರರಿಗೆ ಸರ್ವ ಅನುಕೂಲತೆಯನ್ನೊದಗಿಸಿದ್ದಿತು. ಟಪ್ಪಾಲು ಖಾತೆಯ ಉಪಕಾರವನ್ನಂತೂ ಅವರು ಅತಿಯಾಗಿ ಶ್ಲಾಘಿಸುತಿದ್ದಾರೆ. ಟೆಲಿಗ್ರಾಮ್, ಟೆಲಿಫೋನ್ ಮತ್ತು ವೈರ್‌ಲೆಸ್ ವಿತರಣೆಯ ಕುರಿತು ಸಿಮ್ಲಾದ ಟಪ್ಪಾಲಾಫೀಸು ಬಾತ್ಮೀದಾರರಿಗೆ ಸರ್ವ ರಿಯಾಯತಿಗಳನ್ನಿತ್ತಿದ್ದಿತು ರಾತ್ರಿ ನಾಲ್ಕೈದು ಘಂಟೆಗೂ ತಂತಿಬಿಡಲು ಬಾತ್ಮೀದಾರರು ಹೋಗುತಿದ್ದರು. ಟಪ್ಪಾಲು ಸುಪರಿಂಟೆಂಡೆಂಟರು ಅವರಿಗೆಲ್ಲಾ ಮಲಗುವವ್ಯವಸ್ಥೆಯನ್ನು ಅಲ್ಲೇ ಮಾಡಿಸಿದ್ದರು; ಮಾತ್ರವಲ್ಲ, ತಮ್ಮ ಪತ್ರಿಕೆಗಳಿಗೆ ತಂತಿ ಬಿಡುವ ಕೆಲಸದಲ್ಲಿ ಅಲ್ಲಿಯೇ ಬಹಳ ರಾತ್ರಿಯವರೆಗುಳಿದ ಬಾತ್ಮೀದಾರರಿಗೆ ಚಹಾ ಕೂಡಾ ಬರುತಿತ್ತು. ಟಪ್ಪಾಲಾಫೀಸು ಈ ಕಲಿ ಕಾಲದ ನಾರದರನ್ನು ತನ್ನ ಮಾನ್ಯ ಅತಿಥಿಗಳೆಂಬಂತೆ ಉಪಚರಿಸಿದ್ದಿತು. ಸಮ್ಮೇಲನಾರಂಭದ ಜೂನ್ 24ರಿಂದ, ಅದು ಮುಗಿದ ಜುಲಾಯಿ 14ರ ವರೆಗೆ 12 ಲಕ್ಷ ಶಬ್ದಗಳನ್ನು ಸಿಮ್ಲಾದ ಆಫೀಸು ದೇಶದ ವಿವಿಧ ಭಾಗದ ಪತ್ರಿಕೆಗಳ ವಿಳಾಸಕ್ಕೆ ಟೆಲಿಗ್ರಾಮ್ ಕೊಡೆದಿದ್ದಿತು. ಆ ಪೈಕಿ ಸುಮಾರು ಐನೂರಕ್ಕೆ ಮಿಕ್ಕಿದ ವರದಿಗಳು ವಿದೇಶಗಳಿಗೆ ಹೋಗಿದ್ದುವು. ಸುಮಾರು 2000 ವಾರ್ತಾ ಸಂದೇಶಗಳು ಟೆಲಿಫೋನಿನಿಂದ ಹೋಗಿದ್ದುವು. ಆ ಪೈಕಿ ಬರ್ಜ್‌ನಿಂದಲೇ ಕೊಟ್ಟ ಟೆಲಿಫೋನ್ ಸಂದೇಶ 600. ಈ ವರದಿಗಾರರಿಲ್ಲದೆ ಹೋಗುತ್ತಿದ್ದರೆ ಸಿಮ್ಲಾಕ್ಕೂ ಪ್ರಪಂಚಕ್ಕೂ ಸಂಬಂಧವೇನಿತ್ತು? ನಮ್ಮೂರ ಬಸ್ ಹೊರಡುವ ಘಂಟೆಯೂ ತಿಳಿಯದ ನಮಗೆ ಸಿಮ್ಲಾದ ರಿಕ್ಷಾ ಚಲನೆಯ ವಾರ್ತೆ ಹೇಗೆ ತಿಳಿಯುತಿತ್ತು? ಬರ್ಜ್ ಭವನದ 'ನೋಟ್‌ಬುಕ್' ಮತ್ತು ಪೆನ್ಸಿಲುಗಳಿಂದಾಗಿ ಸಿಮ್ಲಾ ನಾವಿದ್ದಲ್ಲಿಯೇ ಇತ್ತು.

೦೦ ೦೦

ಸಿಮ್ಲಾದಲ್ಲಿ ಒಂದು ಅಭಾವ ಕಾಣುತಿತ್ತು-ಮಹಿಳೆಯರ ಸಂಖ್ಯೆ ಸಾಕಷ್ಟಿರಲಿಲ್ಲ. ಇಬ್ಬರು ಮಹಿಳೆಯರ ಹೆಸರೇನೋ ಕೇಳಬಂದಿತ್ತು-ಲೇಡಿ ವೇವೆಲ್ ಮತ್ತು ರಾಜಕುಮಾರಿ ಅಮೃತ ಕೌರ್. ಆದರೆ ಅವರಿಬ್ಬರೂ ತಂತಮ್ಮ ಬಂಗಲೆ ಬಿಟ್ಟು ಹೊರಟವರಲ್ಲ. ಮತ್ತೊಬ್ಬರು ಸರೋಜಿನಿ ದೇವಿ-ದಪ್ಪ ವೈಯ್ಯ ಮುದುಕಿ. ಸಿಸಿಲ್ ಹೊಟೆಲಿನ ಜಿನ್ನರ ಕೋಣೆಯ ಬಳಿ ಇಬ್ಬರು ಐ. ಸಿ. ಎಸ್. ಆಫೀಸರರ ಮುಸ್ಲಿಂ ಮಹಿಳೆಯರಿದ್ದರಂತೆ. ನೆಹರುಗಳು ಸಿಮ್ಲಾಕ್ಕೆ ಹೋದಮೇಲೆ ಶ್ರೀಮತಿ ಕಮಲಾ ದೇವಿಯರೂ ಅಲ್ಲಿರುವ ಸುದ್ದಿ ಸುಳಿಯಹತ್ತಿತು; ಬಹುಶಃ ಬಹಳ ತಿರುಗಾಡಿದ ಮಹಿಳೆ ಇವರೊಬ್ಬರೇ.

ಈಗ ಎಲ್ಲರೂ ಗುಡ್ಡವಿಳಿದಿದ್ದಾರೆ. ಇನ್ನು ಅಲ್ಲಿ ಬಹುಶಃ ಕೆಲವು ರಿಪೇರಿಯಾಗಲಿಕ್ಕಿದೆ ಗಾಂಧೀ ದರ್ಶನಾಪೇಕ್ಷಿ ಜನರಿಂದ ಮುರಿದು ಹೋದ 'ಮನೋರ್ ವಿಲ್ಲೆ'ಯ ಹೊರ ಪಾಗಾರವನ್ನು ಅಮೃತ ಕೌರ್ ಪುನಃ ಕಟ್ಟಿಸಬೇಕಾದೀತು. ವೈಸರಾಯಿ ಭವನದಿಂದ ಹೊರಡುವಾಗ 'ಫೋಟೋ' ತೆಗೆಯಲು ನಿಂತಿದ್ದ ಸಿಖ್ಖನೊಬ್ಬನ ಕೆಮರವನ್ನು ಗಾಂಧಿಜೀ ಕಸಗೊಂಡು ಅದನ್ನು ಮುರಿದುಹಾಕಲು ನೋಡಿದ್ದರಲ್ಲದೆ, ತನ್ನ ಕಾರ್ಯದರ್ಶಿ ಪ್ಯಾರೇಲಾಲರ ಕೈಗೆ ಕೊಟ್ಟು ಕಳುಹಿದ್ದರು; ಅದು ವಾಪಾಸು ದೊರೆತಿದೆಯೋ ಗೊತ್ತಿಲ್ಲ ಗಾಂಧಿಜೀ ಸಂಜೆಯ ಪ್ರಾರ್ಥನೆ ನಡೆಸುತ್ತಿದ್ದ ಟೆನ್ನಿಸ್ ಕೋರ್ಟೆಲ್ಲಾ ಜನರ ನೂಕಾಟದಿಂದ ಹಾಳಾಗಿದೆಯಂತೆ; ಆರ್ಮ್ಸ್‌ಡೆಲ್ಲಿನ ಗೋಡೆ, ನೆಲಗಳಿಗೆ ಸಾರಣೆ ತೆಗೆಯಬೇಕಾದೀತು. ಸಿಸಿಲ್ ಹೊಟೆಲಿನಲ್ಲಿದ್ದವರಿಗೆ ಅತ್ಯೈರಿ ದಿನಗಳಲ್ಲಿ ಆಹಾರ ಸೇರದುದರಿಂದ ತಿಂಡಿಗಳೆಲ್ಲಾ ಕೊಳೆತಿರಬೇಕು; ವೈಸರಾಯಿ ಭವನದಲ್ಲಿ ಹರಿದ 'ಹೆಸರು ಪಟ್ಟಿ'ಗಳ ಕಸ ತುಂಬಿದೆಯೋ ನೋ! ಸಮ್ಮೇಲನದ ಕೊನೆಯ ದಿನ ಜಿನ್ನಾ ಅಜಾದರು ಬಡಿದ ಪೆಟ್ಟಿನಿಂದ ಆ ದೊಡ್ಡ ಮೇಜು ಬಿರುಕು ಬಿಟ್ಟಿರಬೇಕು-ಇನ್ನೊಮ್ಮೆ ಸಮ್ಮೇಲನ ಕರೆಯುವ ಯೋಚನೆ ವೇವೆಲರಿಗಿದ್ದರೆ ಮೊದಲು ಅದರ ದುರಸ್ತಿಯಾಗಬೇಕು.

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,

ಕಂಟ್ರಾಕ್ಟರ್ಸ್, ಉಡುಪಿ.

ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ
ತರದ ಸುಣ್ಣವು ರಖಂ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ.
ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು.
ಉಡುಪಿಯಲ್ಲೇ [illegible] ಇರುತ್ತವೆ.
ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ
ಪತ್ರ ಬರೆಯಬಹುದು.

Managing Director,

Homes & Estates Ltd., Udipi.

It is easy to earn
But difficult to save.

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited.
Head Office UDIPI, (S. India.)
T. A. PAI, B. Com, (Bom) A. I. I. B.
General Manager.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ್ರ ಘಾಯುವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ. ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಪಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್. ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಪ್ಪಲ್; ನವಭಾರತ ಬುಕ್ ಡಿಪೊ.



ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ಪಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲೆಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦—೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳೆತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ— ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBD H. ... BY K. ... SETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24
ವಾರ ೪೭] Founder SRI A. B. SHETTY. [No. 47

ಉಡುಪಿ • 2-8-1945 • ಮಂಗಳೂರು.

ಅಮೃತಾಂಜನ
ತಲೆವೇದನೆ, ಶಿರೋ, ವೇದನೆ, ಉಳುಕು, ಶೀತ, ಕ್ರಿಗ, ಥುಡ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೀಲ್ನೋವು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ
REGD.
ಶಥಹುಳುಶಕ್ತಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

CALL IT A MARVELL
OR
WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,
Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ— ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
(ಸ್ಥಾಪನೆ: 1908)

1944ನೆ ಇಸವಿಯಲ್ಲಿ **2½** ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸು ರಾಜ್ಯ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ. 1910

ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲು **53**ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವೈಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ **26** ಲಕ್ಷ
ಕ್ಷೇಮನಿಧಿ ರೂಪಾಯಿ **10** ಲಕ್ಷ

ಕೆನರಾ ಬೇಂಕ್ ಲಿಮಿಟೆಡ್
(ESTD 1906 ಸ್ಥಾಪನೆ.)

CANARA BANK LIMITED
(Incorporated in British India, liability of Members Limited)

THE
VIJAYA BANK LTD.
Head Office: **MANGALORE.**

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—

Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ. 8—10—44ರಿಂದ
ರಾಮೇಶ್ವರ ದೇವಸ್ಥಾನದ ಬದಿಗೆ ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

★ ಪ್ರಸಿದ್ಧ ವಜ್ರಗಳು ★

ಅಪೂರ್ವತೆ, ಬಾಳಿಕೆ, ಸೌಂದರ್ಯ— ಇವು ಮೂರು 'ಕಲ್ಲು'ಗಳಲ್ಲಿರಬೇಕಾದ ಮುಖ್ಯ ಗುಣ. ಈ ಒರೆಗಲ್ಲಿಗೆ ಹಚ್ಚಿದರೆ ಎಲ್ಲಾ ವರ್ಗದ ಕಲ್ಲುಗಳ ಪೈಕಿ ವಜ್ರಗಳಿಗೇನೇ ಅಗ್ರಗಣ್ಯ ಸ್ಥಾನ ದೊರೆಯುತ್ತದೆ. ವಿವಿಧ ಬಣ್ಣಗಳಲ್ಲಿ ಉಜ್ವಲ ಪ್ರಕಾಶ ಬೀರಬಲ್ಲ ಯೋಗ್ಯತೆಯಿರುವದು ನವರತ್ನಗಳಲ್ಲಿ ವಜ್ರಕ್ಕೆ ಮಾತ್ರ. ಇದಕ್ಕೆರಡನೆಯದೆಂದರೆ ಕಪ್ಪು-ಹಸರು-ನೀಲಿ ಮಿಶ್ರ ಛಾಯೆಯಿರುವ 'ಝಿರ್ಕೋನ'.

ವರ್ಣ ರತ್ನಗಳ ಪೈಕಿ ಕಪೋತ ರಕ್ತ ವರ್ಣದ ಮಾಣಿಕ್ಯ, ಹುಲ್ಲು ಹಸುರು ಬಣ್ಣದ ಮರಕತ, ಅಚ್ಚ ನೀಲಿ ಛಾಯೆಯ ಇಂದ್ರ ನೀಲಮಣಿ— ಇವು ಅತ್ಯಂತ ಪ್ರಿಯವಾಗಿವೆ. ಆಧುನಿಕ ನಾಗರಿಕತೆಯ ಪರಿಣಾಮವಾಗಿ ಮಾನವ ವರ್ಗವು ಸೌಂದರ್ಯವನ್ನು ಮಾತ್ರ ನೋಡಿ ಆರಿಸಿಕೊಳ್ಳುವದು ಅಪರೂಪವಾಗಿದೆ ಎಂಬುದೊಂದು ವಿಚಿತ್ರವೇ ಸರಿ. ಹೀಗಾಗಿ, ಕಡಿಮೆ ಬೆಲೆಯಲ್ಲಿ 'ಆರ್ಟಿಫಿಶಲ್' ವಜ್ರಗಳು ತಯಾರಾಗುತ್ತಿರುವವಾದರೆ, ಅವೆಲ್ಲಾ ಹಲ್ಕಾ ಆಭರಣಗಳಾಗಿ ಮಾತ್ರ ಉಪಯೋಗಿಸಲ್ಪಡುತ್ತಿವೆ; ಶ್ರೀಮಂತರು ಅಥವಾ ಮೇಲ್ದರ್ಜೆಯವರು ಅವುಗಳನ್ನು ಧರಿಸಿಕೊಳ್ಳುವಂತಿಲ್ಲ.

'ಕ್ಯಾರೆಟ್' (ರತಿ) ಎಂಬ ಅಂತರರಾಷ್ಟ್ರೀಯ ತೂಕವೊಂದರ ಮೂಲಕ ನವರತ್ನಗಳ ಕೊಡಕೊಂಡ ನಡೆಯುತ್ತಿದೆ. ಕ್ಯಾರೆಟ್ ಸುಮಾರು ನಾಲ್ಕು ಕಾಳಿನ ತೂಕ. ಈ ಯುದ್ಧಕ್ಕೆ ಮೊದಲು ಉತ್ತಮ ವರ್ಗದ ವಜ್ರಗಳಿಗೆ ಕ್ಯಾರೆಟ್‌ಗೆ ಸರಾಸರಿ 35 ಪೌಂಡು ಬೆಲೆಯಿದ್ದಿತು. ವಜ್ರದ ಆಕಾರ ದೊಡ್ಡದಿದ್ದಂತೆ ಅದರ ಕ್ಯಾರೆಟ್, ಹಾಗೂ ಆ ಪ್ರಮಾಣದಲ್ಲಿಯೇ ಬೆಲೆಯೂ ಏರುವ ಕ್ರಮ. ಎರಡು ಕ್ಯಾರೆಟ್‌ನ ಒಂದು ವಜ್ರದ ಬೆಲೆ 70 ಪೌಂಡಾಗಬಹುದು. ಆದರೆ ಅಷ್ಟೇ ತೂಕದ ಒಂದು ಪಚ್ಚೆಯ ಬೆಲೆ 100 ಪೌಂಡಾಗುವದಿದೆ.

ಕೊಹಿನೂರು—

ವಜ್ರಗಳ ಪೈಕಿ ಅತ್ಯಂತ ಪ್ರಸಿದ್ಧವೆಂದರೆ ಕೊಹಿನೂರು-ಅಥವಾ 'ಪ್ರಕಾಶ ಪರ್ವತ'. ಅದರ ಭಾರ 108 ಕ್ಯಾರೆಟ್‌ಗಳು. 4000 ವರುಷಗಳ ಮೊದಲು ಗೋದಾವರಿ ಹೊಳೆ ದಡದಲ್ಲಿ ಅದು ಸಿಕ್ಕಿತೆಂಬ ಪ್ರತೀತಿಯಿದೆ. ಆದರೆ ಅದರ ಅಧಿಕೃತ ಚರಿತ್ರೆಯ ಆರಂಭ 1304ನೇ ಇಸವಿಯಿಂದ. 1739ರಲ್ಲಿ ಪರ್ಷಿಯದ ನಾದಿರ್ ಶಹನು ದಿಲ್ಲಿಯನ್ನಾಕ್ರಮಿಸಿಕೊಂಡು ಕೊಹಿನೂರನ್ನು ವಶಪಡಿಸಿಕೊಳ್ಳುವ ವರೆಗೂ, ಅದು ಮೊಗಲ ಚಕ್ರವರ್ತಿಗಳಲ್ಲಿ ಮೇಲಿಂದ ಮೇಲೆ ಕೈ ಬದಲಾವಣೆಗೊಳ್ಳುತಿತ್ತು. ಈ ವಜ್ರ ದೊರೆತ 8ನೇ ವರುಷದಲ್ಲೇ-1747ರಲ್ಲಿ-ನಾದಿರ್ ಶಹನು ಕೊಲೆ ಮಾಡಲ್ಪಟ್ಟ; ಅವನೊಂದಿಗೆ ಪರ್ಷಿಯನ್ ಸಾಮ್ರಾಜ್ಯ ಒಡೆದು ಹೋಯಿತು. ಒಂದು ಲಕ್ಷಣವೆಂದರೆ ಅನುಕ್ರಮವಾಗಿ ಕೊಹಿನೂರು ಧಾರಿಗಳಾಗಿದ್ದ 30 ಮಂದಿಯಲ್ಲಿ ಒಬ್ಬನಾದರೂ ನೆಮ್ಮದಿಯಿಂದ ಪ್ರಾಣ ಬಿಟ್ಟದ್ದಿಲ್ಲ. ಅವರಲ್ಲಿ ಹೆಚ್ಚಿನವರು ಕೊಲೆಗಾರರ ಕೈಯಲ್ಲಿಯೇ ಪ್ರಾಣ ಕೊಟ್ಟರು.

1849ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಲಾಹೋರನ್ನು ಸ್ವಾಧೀನ ಪಡಿಸಿಕೊಂಡಾಗ ಕೊಹಿನೂರು ಬ್ರಿಟಿಷರ ಕೈ ಸೇರಿತು. ಅವರದನ್ನು ವಿಕ್ಟೋರಿಯಾ ರಾಣಿಗೆ ಕಾಣಿಕೆಯಾಗಿ ಸಲ್ಲಿಸಿದರು. ಕೊಹಿನೂರೀಗ ಇಂಗ್ಲಾಂಡಿನ ರಾಜಕಿರೀಟದಲ್ಲಿ ರಾಜಿಸುತ್ತಿದೆ.

ಪಿಟ್ ಅಥವಾ ರೀಜೆಂಟ್—

ಕೊಲ್ಕೊಂಡದಿಂದ 150 ಮೈಲು ದೂರದ ಕೃಷ್ಣಾ ಹೊಳೆಯ ಪೋರ್ಟಿಯಲ್ ಗನಿಯಲ್ಲಿ 1701ರಲ್ಲಿ ದೊರೆತಿದ್ದ ವಜ್ರವಿದು. ಆ ಕಾಲದಲ್ಲಿ ಕೊಲ್ಕೊಂಡವು ಗನಿ ಉದ್ಯೋಗಕ್ಕೂ ಮುತ್ತುರತ್ನಗಳ ರೂಪ ನಿರ್ಮಾಣಕ್ಕೂ ಬಹಳ ಪ್ರಸಿದ್ಧಿ ಪಡೆದಿತ್ತು. ಮದ್ರಾಸ್, ಫೋರ್ಟ್ ಸೈಂಟ್ ಜೋರ್ಜ್‌ನ ಗವರ್ನರ್ ವಾಲ್ಟರ್ ಪಿಟ್ ಇದನ್ನು ಪಾರ್ಸೀ ಸಾಹುಕಾರನೊಬ್ಬನಿಂದ ಕೊಂಡ ವಜ್ರಕೀ ಹೆಸರು ಬೀಳಲು ಅದೇ ಕಾರಣ. 20400 ಪೌಂಡು ಬೆಲೆ ಕೊಟ್ಟು ತಾನು ಪಡಕೊಂಡಿದ್ದ ಈ ವಜ್ರವನ್ನು ಗವರ್ನರ್ ಪಿಟ್ 135000 ಪೌಂಡಿಗೆ ಡಕ್ ಡಿ' ಒರ್ಲೀನ್ಸನಿಗೆ 1717ರಲ್ಲಿ ಮಾರಿದ. ಈ ಮಹಾ ಯುದ್ಧ ಪೂರ್ವದಲ್ಲಿ ರೀಜೆಂಟ್ ವಜ್ರವು ಫ್ರಾನ್ಸಿನ ಸರಕಾರೀ ಆಭರಣ ಭಂಡಾರದಲ್ಲಿತ್ತು. ಇದರ ತೂಕ 136 ಕ್ಯಾರೆಟ್‌ಗಳು.

ಒಲೋರ್‌ವ್—

ಇದು ಕೂಡಾ ಯಜಮಾನನ ನಾಮಧಾರೀ ವಜ್ರ. ಇದು ತನ್ನ ಮೂಲಹಿಂದೀ ಕಡಿತದಾಕಾರದಲ್ಲಿಯೇ ಈಗಲೂ ಇದ್ದು ಅತ್ಯಂತ ರಮ್ಯವಾಗಿದೆ. ಪ್ರಥಮತಃ ಅದು ಹೆಸರಿಗೆ ಬಂದುದು ಶಾಜಹಾನನ ವಶದಲ್ಲಿದ್ದಾಗ. ಒಲೋರ್‌ವ್‌ನ ಚರಿತ್ರೆ ದೊಡ್ಡದಿದೆ. ಅದೊಂದು ಕಾಲದಲ್ಲಿ ತಿರುಚಿನಾಪಳ್ಳಿ ಬಳಿಯ ಮಹಾ ದೇವಾಲಯ ಶ್ರೀರಂಗನಾಥನ ಸೊತ್ತಾಗಿದ್ದಿತಂತೆ. ಅಲ್ಲಿಂದದು ಕಳವಾಗಿ ಹೋಯಿತು. ಮತ್ತದು ಕಾಣಿಸಿಕೊಂಡುದು ಲಂಡನ್ನಿನ ಒಬ್ಬ ಯೆಹೂದೀ ಸಾಹುಕಾರನ ವಶದಲ್ಲಿ. ಪ್ರಿನ್ಸ್ ಒರ್ಲೋರ್‌ವ್ 90,000 ಪೌಂಡು ಕೊಟ್ಟು ಸಾಹುಕಾರನಿಂದ ಪಡಕೊಂಡು, ರಶ್ಯದ ಚಕ್ರವರ್ತಿನಿ ಕೆಥರಿನ್ IIಗೆ ಉಡುಗೊರೆ ಕೊಟ್ಟ. ಈ ವಜ್ರವೀಗ ರಶ್ಯ ಮೋಸ್ಕೋದಲ್ಲಿವೆ; ರಶ್ಯನ್ ಸರಕಾರದ ಖಜಾನೆಯನ್ನಲಂಕರಿಸಿದೆ; ಅದರ ಭಾರ 200 ಕ್ಯಾರೆಟ್.

ಸಾಂಸ್ಸಿ—

ಪಾಶ್ಚಿಮಾತ್ಯ ಶ್ರೀಮಂತರು ಚರಿತ್ರಾರ್ಹ ವಜ್ರಗಳಿಗೆ ತಮ್ಮ ಸಹಧರ್ಮಿಣಿಯರ ಸ್ಥಾನಮಾನಗಳನ್ನೇ ಕೊಟ್ಟಂತಿದೆ; ತದನುಗುಣವಾಗಿ ಹೆಚ್ಚಿನ ವಜ್ರಗಳಿಗೆ ಒಂದು ಕಾಲದ ಯಜಮಾನರ ಹೆಸರೇ ಬಿದ್ದಿದೆ. ಸಾನ್ಸಿಯು ಆ ವರ್ಗದ್ದು. ಇದರ ಚರಿತ್ರೆ ಬಹಳವಿದೆಯಂತೆ. ಆದರೆ ಸ್ಪಷ್ಟವಾಗಿ ತಿಳಿದುಬರುವದಿಷ್ಟೆ:-1570ರಲ್ಲಿ ಕಾನ್‌ಸ್ಟೆಂಟಿನೋಪ್‌ಲ್‌ನ ಫ್ರೆಂಚ್ ರಾಯಭಾರಿ ಸಿಗ್ನೋರ್ ಡಿ ಸಾನ್ಸಿಯ ವಶದಲ್ಲಿತ್ತು. ಅದನ್ನಾತ ಎಲಿಜಬೆತ್ ರಾಣಿಗೆ ಮಾರಾಟಮಾಡಿದ. ಎರಡನೇ ಜೇಮ್ಸ್‌ನದನ್ನು 25,000 ಪೌಂಡುಗಳಿಗೆ ಲುಯಿಸ್ XIVಗೆ ಮಾರಿಬಿಟ್ಟ. ಸದ್ಯ, ಅದು ನಮ್ಮ ಭಾರತೀಯ ರಾಜರೊಬ್ಬರ ವಶವಿದೆ ಎಂಬ ಸುದ್ದಿಯಿದೆ. ಸಾನ್ಸಿಯ ಭಾರ 55ಕ್ಯಾರೆಟ್‌ಗಳು.

ಶಾ—

ಇದು ದಕ್ಷಿಣ ಭಾರತದಲ್ಲಿ ದೊರೆತಿತ್ತು. ನಸು ಹಳದಿ ಛಾಯೆಯ ಅಮೂಲ್ಯ ಕಲ್ಲು ಈಗ ಮೋಸ್ಕೋದಲ್ಲಿದೆ. ತೂಕ 88ಕ್ಯಾರೆಟ್‌ಗಳು.

ಅಕ್ಬರ್ ಶಾ—

ಮೂಲತಃ ಮೊಗಲ್ ಸಾಮ್ರಾಟ ಅಕ್ಬರನಾದುದರಿಂದಲೇ ಈ ಹೆಸರು ಉಳಿದಿದೆ. ಅದು ಶುದ್ಧೀಕರಣ ಹೊಂದಿ ಈಗ ಬರೋಡದ ಗಾಯಕವಾಡರ ಸ್ವಾಧೀನದಲ್ಲಿದೆ ತೂಕ 74 ಕ್ಯಾರೆಟ್‌ಗಳು.

ನಸ್ಸಾಕ್—

ಬ್ರಿಟಿಷ್ ಚಕ್ರವರ್ತಿ ಸಹೋದರ ವೆಸ್ಟ್ ಮಿನಿಸ್ಟರಿನ ಡ್ಯೂಕರ ವಶದಲ್ಲಿದೆ. ಆದಿಯಲ್ಲಿ ಮಹಾರಾಷ್ಟ್ರದ ಓರ್ವ ರಾಜನದಾಗಿತ್ತು. 1818ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ದೊರೆಯಿತು ನಸ್ಸಾಕ್ 80 ಕ್ಯಾರೆಟ್ ತೂಕವಿದೆ.

ತಾಜಿಮಾ—

ಅರ್ಥಾತ್ 'ಚಂದ್ರನ ಮುಕುಟ'. ದಕ್ಷಿಣ ಹಿಂದುಸ್ಥಾನದ ಕೃಷ್ಣಾ ಹೊಳೆಯ ವಜ್ರಗನಿಗಳಲ್ಲಿ ಸಿಕ್ಕಿತು ಸದ್ಯ ಪರ್ಷಿಯದ ಶಾರವರ ವಶದಲ್ಲಿದೆ. 146 ಕ್ಯಾರೆಟ್ ಭಾರದ ವಜ್ರ.

ಯೂಗೆನೆ—

ಈ ವಜ್ರದ ಮೊದಲ ಅಧಿಕಾರಿಣಿ ರಶ್ಯದ ಮಹಾರಾಣಿ IIನೇ ಕೆಥರಿನ್. ಈಗ ಇದೂ ಬರೋಡದ ಗಾಯಕವಾಡರಲ್ಲಿದೆ. ತೂಕ 51ಕ್ಯಾರೆಟ್‌ಗಳು.

ಹೋಪ್—

ಕಡುನೀಲಿ ಬಣ್ಣದ ಉಜ್ವಲ ಪ್ರಭೆ ಬೀರುವ ಪ್ರಸಿದ್ಧ ವಜ್ರ. ಈಗ ಓರ್ವ ಬ್ರಿಟಿಷರವ ಎಡ್ವಾರ್ಡ್ ಮೇಕ್ಲೀನರ ವಶದಲ್ಲಿದೆ. ತನ್ನ ಹೆಸರಿಗೆ ವಿರುದ್ಧವಾಗಿ ದುರದೃಷ್ಟದಾಯೀ ಕಲ್ಲೆಂದು ಗಣಿಸಲ್ಪಟ್ಟಿದೆ. ಅಪಶಕುನದ ಮಟ್ಟಿಗೆ ಕೊಹಿನೂರಿನಂತಿದೆ. 44ಕ್ಯಾರೆಟ್ ತೂಕದ ವಜ್ರ.

ನಿಜಾಮ್—

ಹೈದರಾಬಾದಿನ ನಿಜಾಮರದ್ದು. 277 ಕ್ಯಾರೆಟ್ ತೂಕದ ಮಹಾವಜ್ರ.

ಬ್ರೆಝಿಲ್—

ಇದಕ್ಕೆ 'ದಕ್ಷಿಣ ತಾರೆ' ಎಂದೂ ಹೆಸರಿದೆ. ಪ್ರಸಿದ್ಧ ವಜ್ರ ಭಂಡಾರಿ ಎಂದು ಹೆಸರಾದ ಬರೋಡದ ಗಾಯಕವಾಡರೇ 10000 ಪೌಂಡಿಗಿದನ್ನು ಪಡಕೊಂಡಿದ್ದರು. 128 ಕ್ಯಾರೆಟ್ ಭಾರವಿದೆ.

ಕುಲ್ಲಿನಾನ್—

ಕಂಡುಹಿಡಿಯಲ್ಪಟ್ಟವುಗಳ ಪೈಕಿ ಅತಿದೊಡ್ಡ ವಜ್ರವೆಂದರೆ ಕುಲ್ಲಿನನ್. ಇದರ ಭಾರ 3106 ಕ್ಯಾರೆಟ್‌ಗಳು. ದಕ್ಷಿಣಾಫ್ರಿಕದ ಮುಖ್ಯ ವಜ್ರಗನಿಯಿಂದ ಇದನ್ನೆತ್ತಲಾಯಿತು. 150000ಪೌಂಡು ಬೆಲೆಕಟ್ಟಲ್ಪಟ್ಟಿದೆ ಆದು ಏಳನೇ ಎಡ್ವಾರ್ಡರಿಗೆ ಕಾಣಿಕೆಯಾಗಿ ಬಂದಿತ್ತು. ದರಗು ರೂಪದಲ್ಲಿದ್ದ ಅದನ್ನಲ್ಲಿ ಎರಡು ಕಡಿಮಾಡಲಾಯಿತು. 530 ಕ್ಯಾರೆಟ್ ತೂಕದ ದೊಡ್ಡ ತುಂಡೇ ಲೋಕದ ಅತಿದೊಡ್ಡ ವಜ್ರ. ಈ ಮಹಾಕಲ್ಲನ್ನು ಬ್ರಿಟಿಷ್ ಚಕ್ರವರ್ತಿಗಳ ರಾಜದಂಡದ ತುದಿಯಲ್ಲಿ ನಿಲ್ಲಿಸಿದ್ದಾಗಿದೆ. ಎರಡನೇ ತುಂಡಿನ ಭಾರ 317ಕ್ಯಾರೆಟ್. ಅದನ್ನು ಚಕ್ರವರ್ತಿಗಳ ಸಾಮ್ರಾಜ್ಯ ಕಿರೀಟಕ್ಕೆ ಕತ್ತಿದ್ದಾರೆ

ಎಕ್ಸೆಲ್ಸಿಯರ್—

ದಕ್ಷಿಣಾಫ್ರಿಕದ ಮಹಾ ವಜ್ರಗಳಲ್ಲಿ ಇದೊಂದು. 1893ರಲ್ಲಿ ಇದು ದೊರೆತಿತ್ತು. ಮೂಲತಃ 995ಕ್ಯಾರೆಟ್ ಭಾರವಿತ್ತು, ಅದನ್ನು 21ಕಡಿ ಮಾಡಲಾಯಿತು ದೊಡ್ಡ ಹರಳು 70 ಕ್ಯಾರೆಟ್‌ಗಳ ಭಾರವಿದೆ.

ಇಂಪೀರಿಯಲ್—

157 ಕ್ಯಾರೆಟ್ ಭಾರವಿದ್ದ ಕಲ್ಲು. ಇದರಿಂದೊಂದು ಹರಳನ್ನು ಕಡಿಮಾಡಿ ತೆಗೆದಿದ್ದರು ಆದರ ಭಾರ 180 ಕ್ಯಾರೆಟ್; ಈ ಹರಳು ಈಗ ಹೈದರಾಬಾದಿನ ನಿಜಾಮರಲ್ಲಿದೆ

ಜೋಂಕರ್—

ಪ್ರಪಂಚದಲ್ಲೇ ಅತ್ಯಂತ ನಾಜೂಕಿನ ವಜ್ರವೆಂದರೆ ಜೋಂಕರ್ ತೂಕ 726 ಕ್ಯಾರೆಟ್‌ಗಳು. ಓರ್ವ ಅಮೆರಿಕಾನನು 75000 ಪೌಂಡಿಗದನ್ನು ಪಡಕೊಂಡಿದ್ದ.

ವರ್ಣ ಕಲ್ಲುಗಳು

'ಬ್ಲೇಕ್ ಪ್ರಿನ್ಸೆಸ್ ರುಬಿ' ಎಂಬುದು ದೊಡ್ಡ ಮಾಣಿಕ್ಯ. ಸದ್ಯ ಇದು ಬ್ರಿಟಿಷ್ ಸಾಮ್ರಾಟರ ಕಿರೀಟದಲ್ಲಿದೆ. ಇದರ ಉದ್ದ ಸುಮಾರು ಎರಡಿಂಚು. ಮತ್ತೊಂದು ನೀಲವು ಚಕ್ರವರ್ತಿ ಕಿರೀಟದಲ್ಲಿದೆ— 'ಚಾರ್ಲೆಸ್ II' ಎಂಬುದು. ಇದು ಸುಮಾರು 1½ ಇಂಚು ಉದ್ದವಿದೆ 'ಡೆವೋನ್ ಶಯರ್' ಎಂಬ ಮರಕತದ ಭಾರ 1383 ಕ್ಯಾರೆಟ್ ಅಂದರೆ ಸುಮಾರು 10 ಔನ್ಸುಗಳಷ್ಟು. ಇದೂ ಬ್ರಿಟಿಷ್ ರಾಜಕುಟುಂಬದ ಡಿವೋನ್ ಶಯರಿನ ಡ್ಯೂಕರ ವಶವಿದೆ. ಆದರ ಪ್ರಕಾಶ ಕಣ್ಣು ಕುಕ್ಕುತ್ತದೆ. ಅತಿ ನಾಜೂಕಿನ ಮಾಣಿಕ್ಯಗಳ ಜನ್ಮ ಹೆಚ್ಚಾಗಿ ಮಂಡಲೆಗೆ 90 ಮೈಲು ಈಶಾನ್ಯಕ್ಕಿರುವ ಮೋಗೋಕ್ ಗನಿಯಲ್ಲಿಯೇ. ಉಚ್ಚ ಮರಕತ ಕಲ್ಲುಗಳು ದೊರೆತುದೂ ಇಲ್ಲಿಯೇ. ಆದರೆ ಅದಾವ ಕಾರಣದಿಂದಲೋ, ಒಳ್ಳೇ ಮರಕತಗಳ ಜನ್ಮ ಸಿಲೋನಿನಲ್ಲೆಂಬ ಭಾವನೆ ಜನರ ತಲೆಯಲ್ಲಿ ಬೇರೂರಿದೆ. ಹೀಗಾಗಿ ಬರ್ಮಾದ ಕಲ್ಲುಗಳೆಲ್ಲಾ ಕೊಲೊಂಬೋದ ರತ್ನ ವ್ಯಾಪಾರಿಗಳ ಕಡೆಗೆ ಹಾದಿ ಹಿಡಿದಿದ್ದುವು.

—(ಮೇಜರ್ ಡಬ್ಲ್ಯು. ಆರ್. ಲಾರೆನ್ಸ್‌ರ (Hindu) ಲೇಖದ ಆಧಾರದಿಂದ).

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,

ಕಂಟ್ರಾಕ್ಟರ್ಸ್, ಉಡುಪಿ.

ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ರಖಂ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ. ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು.

ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ.

ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ ಪತ್ರ ಬರೆಯಬಹುದು.

Managing Director,

Homes & Estates Ltd., Udipi.

ಬ್ರಿಟಿಷ್ ಕೂಲಿಗಾರ ಪಕ್ಷದ ಪ್ರಚಂಡ ವಿಜಯ!

ಆಮೆರಿ ಅಡಿಗೆ ಬಿದ್ದರು!

ಟೋರಿ ಸರಕಾರದ ಸಮಾಧಿ; ಕೂಲಿಗಾರ ಸರಕಾರದ ಸ್ಥಾಪನೆ.

ಚರ್ಚಿಲ್ ಆಡಳಿತೆಗವಸಾನ; ಆಟ್ಲಿ ಆಳ್ವಿಕೆಗಾರಂಭ.

ಬ್ರಿಟನಿನ ಮಹಾ ಚುನಾವಣೆಯ ಫಲಿತಾಂಶವಾಗಿ ಚರ್ಚಿಲ್ ನಾಯಕತ್ವದ ಟೋರಿ ಸರಕಾರ ಉರುಳಿಬಿದ್ದು ಆಟ್ಲಿ ಧುರೀಣತ್ವದ ಕೂಲಿಗಾರ ಸರಕಾರ ಸ್ಥಾಪನೆಯಾಯಿತು.

ಭಾರತ ಕಾರ್ಯದರ್ಶಿ ಮಿ. ಅಮೆರಿಯವರು ಚುನಾವಣೆಯಲ್ಲೇ ಅಡಿಗೆ ಬಿದ್ದು ಪಾರ್ಲಿಮೆಂಟ್ ಸ್ಥಾನ ಕಳಕೊಂಡರು.

ಸರಕಾರೀ ಪಕ್ಷ (ಟೋರಿ, ಲಿಬರಲ್ ನೇಶನಲ್ಸ್, ನೇಶನಲ್)ಕ್ಕೆ ಒಟ್ಟಿಗೆ210 ಸ್ಥಾನಗಳೂ ವಿರುದ್ಧ ಪಕ್ಷ (ಲೇಬರ್, ಲಿಬರಲ್, ಇಂಡಿಪೆಂಡೆಂಟ್ಸ್, ಇಂಡಿಪೆಂಡೆಂಟ್ ಲೇಬರ್ ಪಾರ್ಟಿ, ಕಮ್ಯೂನಿಸ್ಟ್, ಕಾಮನ್‌ವೆಲ್ತ್)ಕ್ಕೆ ಜುಮ್ಲಾ 417 ಸ್ಥಾನಗಳೂ ದೊರೆತಿವೆ.

ಲೇಬರ್ ಪಕ್ಷಕ್ಕೆ ಮಿಕ್ಕೆಲ್ಲಾ ಪಕ್ಷಗಳ ಒಟ್ಟು ಸ್ಥಾನಗಳಿಗಿಂತಲೂ ಹೆಚ್ಚಿನ ಬಹುಮತ ದೊರೆತಿದೆ.

ಗಣನೆಯಾಗಲು ಉಳಿದಿರುವ 13 ಸ್ಥಾನಗಳನ್ನು ಬಿಟ್ಟರೆ, ಆರಿಸಿ ಬಂದಿರುವ ವಿವಿಧ ಪಕ್ಷಗಳ ಸದಸ್ಯರ ಸಂಖ್ಯೆ:--ಲೇಬರ್ 390, ಕನ್ಸರ್ವೇಟಿವ್ 195, ಲಿಬರಲ್ ನೇಶನಲ್ 14, ಲಿಬರಲ್ 11 ಇಂಡಿಪೆಂಡೆಂಟ್ಸ್ 10, ಇಂಡಿಪೆಂಡೆಂಟ್ ಲೇಬರ್ 3, ಕಮ್ಯೂನಿಸ್ಟ 2, ಕಾಮನ್‌ವೆಲ್ತ್ 1, ನೇಶನಲ್ 1.

ಚರ್ಚಿಲ್ಲರು ಮತ್ತು ಕೆಲವರ ವಿನಹ ಎಲ್ಲಾ ಚರ್ಚಿಲ್ ಮಂಡಲದ ಮಂತ್ರಿಗಳೂ ಚುನಾವಣೆಯಲ್ಲಿ ಪರಾಭವಗೊಂಡರು; ಲೇಬರ್ ಪಕ್ಷದ ಸರ್ವ ಪ್ರಮುಖರೂ ಗೆದ್ದು ಬಂದಿದ್ದಾರೆ

ಚುನಾವಣೆ ಫಲಿತಾಂಶ ಪ್ರಕಟವಾದ ತಾ. 26ನೇ ರಾತ್ರಿಯಲ್ಲೇ ಮಿ. ಚರ್ಚಿಲ್ಲರು ತನ್ನ ಸರಕಾರಕ್ಕೆ ರಾಜೀನಾಮೆಕೊಟ್ಟು ಮಿ. ಆಟ್ಲಿಯವರ ಹೊಸ ಸರಕಾರ ರಚನೆಯಾಗಿದೆ.

ಕೂಲಿಗಾರ ಪಕ್ಷದ ಸಮೇತ ಇಡೀ ಪ್ರಪಂಚದ ನಿರೀಕ್ಷೆಯನ್ನು ಮೀರಿ ಬ್ರಿಟಿಷ್ ಮತದಾರರು ಕೂಲಿಗಾರ ಪಕ್ಷಕ್ಕೊಲಿದು ಒಂದು ಕ್ರಾಂತಿಯನ್ನೇ ನಿರ್ಮಿಸಿದ್ದಾರೆ; ಲೋಕವನ್ನು ದಂಗು ಬಡಿಸಿದ್ದಾರೆ; ಬ್ರಿಟನಿನ ಮತ್ತು ಕೂಲಿಗಾರ ಪಕ್ಷದ ಚರಿತ್ರೆಯಲ್ಲೇ ಇದು ಹೊಸ ದಾಖಲೆ.

ನವ ಸರಕಾರದಲ್ಲಿ ಮಿ. ಸಿ. ಆರ್. ಆಟ್ಲಿ, ಪ್ರಧಾನ ಮಂತ್ರಿ ಮಿ. ಆರ್ನೆಸ್ಟ್ ಬೆವಿನ್ ವಿದೇಶ ಮಂತ್ರಿ, ಡಾ| ಹ್ಯೂಜ್ ಡಾಲ್ಟನ್ ಹಣಕಾಸಿನ ಮಂತ್ರಿ, ಸರ್. ಸ್ಟಾಫೋರ್ಡ್ ಕ್ರಿಪ್ಸ್ ವ್ಯಾಪಾರ ಬೋರ್ಡಿನ ಅಧ್ಯಕ್ಷ, ಮಿ. ಹರ್ಬರ್ಟ್ ಮೋರಿಸನ್ ಕೌನ್ಸಿಲಿನ ಲೋರ್ಡ್ ಪ್ರೆಸಿಡೆಂಟ್ ಮತ್ತು ಕಾಮನ್ಸ್ ನಾಯಕ, ಸರ್. ವಿಲ್ಲಿಯಮ್ ಜೋವಿಟ್ ಲೋರ್ಡ್ ಚಾನ್ಸೆಲರ್, ಮಿ. ಆರ್ಥರ್ ಗ್ರೀನ್‌ವುಡ್ ಲೋರ್ಡ್ ಪ್ರಿವಿಸೀಲ್-ಪೀಠವೇರಿದ್ದಾರೆ

ಬ್ರಿಟನಿನಲ್ಲಿ-ತದನುಸಾರ ಬ್ರಿಟನಿನ ಅಧಿಕಾರ ಮತ್ತು ವರ್ಚಸ್ಸಿರುವ ಎಲ್ಲಾ ಕ್ಷೇತ್ರಗಳಲ್ಲಿ—ಹೊಸ ಯುಗ ಪ್ರಾರಂಭವಾಗಿದೆ. ಹಳೆಯದನ್ನು ಎಳೆದು ಹಾಕಿ ಹೊಸತು ಏರಿ ಕುಳಿತಿದೆ; ಸಂಪನ್ನ ಪಕ್ಷಪಾತಿಗಳನ್ನು ಮೂಲೆಗೆ ತಳ್ಳಿ ಸಮಷ್ಟಿ ಚಿಂತಕರು ಮುಂದೆ ಬಂದಿದ್ದಾರೆ; ಸಾಮ್ರಾಜ್ಯ ಬರ್ಖಾಸ್ತು ಮಾಡಲಾರೆನೆಂದವನೂ ಸಮಾನತೆ ಸಾಧಿಸುವೆನೆನ್ನುವನೂ ಅಡಿ ಮೇಲಾಗಿದ್ದಾರೆ.

ಪ್ರತಿ ಪಕ್ಷಗಳ ರಿಕಾರ್ಡು, ವಾಗ್ಮೂಲಗಳನ್ನು ನೋಡಿ ಮತದಾರ ಜಡ್ಜನಿತ್ತ ಅಪೀಲು ರಹಿತ ತೀರ್ಮಾನ...

ಬಲಾಬಲ ತಕ್ಕಡಿ

ಲಾಭ-ನಷ್ಟ

ಸರಕಾರೀ ಪಕ್ಷಗಳು, ತಮ್ಮ ಹಿಂದಿನ 199 ಸ್ಥಾನಗಳನ್ನು ಈ ಬಾರಿ ಕಳಕೊಂಡು 8 ಹೊಸ ಸ್ಥಾನಗಳನ್ನು ಸಂಪಾದಿಸಿವೆ. ಆ ಪೈಕಿ ಕನ್ಸರ್ವೇಟಿವ್ 182, ಲಿಬರಲ್ ನೇಶನಲ್ 16, ನೇಶನಲ್ 1 ಸ್ಥಾನಗಳಿಗೆ ಸೊನ್ನೆ ಬಿತ್ತು. ವಿರುದ್ಧ ಪಕ್ಷಗಳು ಈ ಬಾರಿ 29 ಹಳೇ ಸ್ಥಾನಗಳಿಂದ ಹೊರ ಬಿದ್ದರೂ 220 ಹೊಸ ಸದಸ್ಯರನ್ನು ಸಂಪಾದಿಸಿವೆ. ಆ ಪೈಕಿ ಲೇಬರ್ ಪಕ್ಷವೊಂದೇ 214 ಹೊಸ ಸ್ಥಾನಗಳನ್ನು ಪಡೆದಿದೆ; ಹಿಂದಿನ 4ನ್ನು ಮಾತ್ರ ಕಳಕೊಂಡಿದೆ.

ಮಹಿಳೆಯರು

ಆರಿಸಿ ಬಂದ ಮಹಿಳೆಯರ ಸಂಖ್ಯೆ 23 ಆ ಪೈಕಿ 22 ಕೂಲಿಗಾರ ಪಕ್ಷೀಯರು; ಒಬ್ಬಳೇ ಒಬ್ಬಳು ಟೋರಿ ಸದಸ್ಯೆ.

ಹಳೇ ಪಾರ್ಲಿಮೆಂಟು

ಬರ್ಖಾಸ್ತಾದ ಪಾರ್ಲಿಮೆಂಟಿನಲ್ಲಿ ಕೊನೆಗಾಲದಲ್ಲಿ ಸರಕಾರೀ ಪಕ್ಷದಲ್ಲಿ 414 ಸದಸ್ಯರಿದ್ದರು ಅವರಲ್ಲಿ 358 ಟೋರಿಗಳು, 27, ಲಿಬರಲ್ ನೇಶನಲ್‌ಗಳು. ಆಗ ವಿರುದ್ಧ ಪಕ್ಷೀಯರ ಒಟ್ಟು ಸಂಖ್ಯೆ 194 ಮಾತ್ರ ಆ ಪೈಕಿ ಕೂಲಿಗಾರರು 163, ಲಿಬರಲ್ 19, ಇಂಡಿಪೆಂಡೆಂಟ್ ಲೇಬರ್ 6. ಕಾಮನ್‌ವೆಲ್ತ್ 3. ಐರಿಷ್ ರಾಷ್ಟ್ರೀಯರು 3. ಕಮ್ಯೂನಿಸ್ಟ 1. ಏಳು ಸ್ಥಾನಗಳು ಖಾಲಿಯಿದ್ದುವು.

ಹೊಸ ಪಾರ್ಲಿಮೆಂಟು

ಹೊಸ ಪಾರ್ಲಿಮೆಂಟಿನಲ್ಲಿ 25 ಸ್ಥಾನಗಳು ಹೆಚ್ಚಿಸಲಾಗಿದೆ. ನವ ಸಭೆಯ ಜುಮ್ಲಾ ಸಂಖ್ಯೆ 640. ಆ ಪೈಕಿ ಇನ್ನೂ ಲೆಕ್ಕ ಬಾಕಿಯಿರುವ 13 ಸ್ಥಾನಗಳನ್ನು ವಿರುದ್ಧ ಪಕ್ಷೀಯರ ಸಾಲಿಗೆ ಸೇರಿಸಿದರೂ ನವಕೂಲಿಗಾರ-ಸರಕಾರಕ್ಕೆ 390 ಮಂದಿಯ ಬೆಂಬಲವಿದೆ. ಉಳಿದೆಲ್ಲರನ್ನೂ ವಿರುದ್ಧ ಪಕ್ಷೀಯರೆಂದು ಕಟ್ಟಿಕೊಂಡರೂ ಕೂಲಿಗಾರ ಪಕ್ಷವೊಂದೇ 140 ಬಹುಮತದಿಂದ ನಿರಾತಂಕವಾಗಿ ಅಸಹಾಯ ವೀರನಾಗಿ ತನ್ನ ಕಾರ್ಯಕ್ರಮಗಳನ್ನು ಮುಂನೊತ್ತಬಲ್ಲುದು

ಉಪಚುನಾವಣೆ

ಉಮೇದಾರಗಳಲ್ಲಿ ಮೂವರ ಮರಣದಿಂದ ಆ 3 ಸ್ಥಾನಗಳಿಗೆ ಉಪಚುನಾವಣೆ ನಡೆಯಲು ಉಳಿದಿತ್ತು. ಬರ್ಮಿಂಗ್ಹಾಮಿನ ಒಂದು ಡಿವಿಜನಿನಿಂದ ಗೆದ್ದು ಬಂದ ದಿನವೇ ಮೋಟಾರು ಅವಘಡದಿಂದ ಕೂಲಿಗಾರ ಸದಸ್ಯ ಆಲ್ಫ್ರೆಡ್ ಜೇಮ್ಸ್ ಡೋಬ್ಬರು ಮರಣಗೊಂಡಿದ್ದಾರೆ. ಅದರಿಂದ ಇನ್ನು 4 ಸ್ಥಾನಗಳಿಗೆ ಉಪಚುನಾವಣೆ ನಡೆಯಲಿಕ್ಕಿದೆ.

ಹಿಂದೊಮ್ಮೆ

ಲೇಬರ್ ಪಕ್ಷದ ಸ್ಥಾಪನಾನಂತರ 1929ರಲ್ಲೊಮ್ಮೆ ಅದು ಮೊದಲಬಾರಿ ಚುನಾವಣೆಯಲ್ಲಿ ಬಹುಮತ ಪಡೆದಿದ್ದಿತ್ತು. ಆದರದು ನಾಮಮಾತ್ರವಾಗಿದ್ದಿತು. ಆಗ ಲೇಬರ್ 287. ಕನ್ಸರ್ವೇಟಿವ್ 254; ಲಿಬರಲ್ 57; ಇಂಡಿಪೆಂಡೆಂಟ್ 8 ಸ್ಥಾನಗಳನ್ನಾಕ್ರಮಿಸಿದ್ದುವು. ಪರರ ಹಂಗಿಲ್ಲದೆ ಕಾರ್ಯ ಮುಂದೊತ್ತುವ ಅನುಕೂಲತೆ ಕೂಲಿಗಾರ ಪಕ್ಷಕ್ಕಿರಲಿಲ್ಲ. ಇಂದಿನಂತೆ ಮನಸೇಚ್ಛೆ ವರ್ತಿಸಲಾಗುವ ಬಹುಮತವನ್ನು ಲೇಬರ್ ಪಕ್ಷವೆಂದೂ ಇದು ವರೆಗೆ ಪಡೆದುದಿಲ್ಲ; ಬೇರೆ ಪಕ್ಷಗಳೂ ಇಷ್ಟು ಬಹುಮತದಿಂದ ಗೆದ್ದ ದಾಖಲೆ ಇಲ್ಲ. ಯುದ್ಧಾವಧಿಯ ಅದ್ಭುತಗಳಲ್ಲಿ ಇದೂ ಒಂದು.

ಗಣನೆ

ಜುಲಾಯಿ ತಾ. 5ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಸುಮಾರು 25ಮಿಲಿಯ-ಒಟ್ಟು ಸಂಖ್ಯೆಯ ಶೇ. 80ರಷ್ಟು-ಮತದಾರರು ಮತದಾನ ಮಾಡಿದ್ದಾರೆಂದು ತಿಳಿದುಬರುತ್ತದೆ. ಇಷ್ಟನ್ನೂ ಅಂದಿನಿಂದ ಸುಮಾರು 18 ಸಾವಿರ 'ಬೆಲ್ಲೋಟ್ ಬೋಕ್ಸ್'ಗಳಲ್ಲಿ ಮೊಹರು ಹಾಕಿ ಭದ್ರವಾಗಿ ಇಡಲಾಗಿತ್ತು. ಜುಲಾಯಿ ತಾ. 26ನೇ ಮುಂಜಾನೆಯಿಂದ ಸುಮಾರು 9000 ಗಣಕರು ಅವನ್ನು ಲೆಕ್ಕಿಸಹತ್ತಿದರು. ಇಡೀ ಪ್ರಪಂಚವೇ ಪಾಠಶಾಲೆಯಾಗಿ ಈ ಗಣಿತ ಪಾಠದ ಪರಿಣಾಮವನ್ನು ನಿರೀಕ್ಷಿಸಿತ ; ರಾಜಕಾರಣಿಗಳು ತುದಿಗಾಲಲ್ಲಿ ನಿಂತರು; ಒಂದೊಂದು ಮತ ಪೆಟ್ಟಿಗೆಯುಲ್ಲೂ ಒಂದೊಂದು ಆಶ್ಚರ್ಯ, ಅಥವಾ ಅಪ್ರಾಗತಿಕ ಪಾಲಿನ ಒಂದೊಂದು ಸಿಡಿಗುಂಡೇ ತುಂಬಿದ್ದಿತು. ಬೆಲ್ಲೋಟ್ ಬೋಕ್ಸ್ ಸ್ಫೋಟದಿಂದ ಅಪ್ರಾಗತಿಕ ಟೋರಿ ಪಕ್ಷ ನಿರ್ನಾಮವಾಯಿತು.

ಯಾರಾರಿಗೆ ಎಷ್ಟೆಷ್ಟು?

ಒಟ್ಟಾಗೆಲೇಬರ್‌ಪಕ್ಷಕ್ಕೆ 11,941,501, ಟೋರಿ ಪಕ್ಷಕ್ಕೆ 9,056,672, ಲಿಬರಲ್ ಪಕ್ಷಕ್ಕೆ 2,221,145, ಲಿಬರಲ್ ನೇಶನಲ್ ಪಕ್ಷಕ್ಕೆ 779,781, ಇಂಡಿಪೆಂಡೆಂಟ್ ಪಕ್ಷಕ್ಕೆ 539,228, ನೇಶನಲ್ (ಪಕ್ಷ ರಹಿತ) ಪಕ್ಷಕ್ಕೆ 137,718, ಕಾಮನ್‌ವೆಲ್ತ್ ಪಕ್ಷಕ್ಕೆ 124,730, ಕಮ್ಯೂನಿಸ್ಟರಿಗೆ 102,780, ಇಂಡಿಪೆಂಡೆಂಟ್ ಲೇಬರ್ ಪಕ್ಷಕ್ಕೆ 46,673 ಜುಮ್ಲಾ ಮತಗಳು ಬಿದ್ದುವೆಂದು ಅಂದಾಜು ಮಾಡಲಾಗಿದೆ.

Industrial & Prudential Assurance Co., Ltd., Fort, Bombay.

NOTICE.

Intimation having been received of the loss of Policy No 64512 issued to Mr. Bhujanga Shetty, Kolkebail a duplicate Policy will be issued to the assured unless objection is lodged with the Industrial & Prudential Assurance Co, Ltd. at its head office in Industrial Assurance Building, Fort, Bombay, within thirty days of this notice

(*Sd.*) **V. C. Setalvad,**
General Manager.

Place:- BOMBAY.
Date 30-7-45.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ [illegible] ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

ಬ್ರಿಟಿಷ್ ಮತದಾರರಿಂದಾದ ಮೌನ ಕ್ರಾಂತಿ!

'ಸಾಮ್ರಾಜ್ಯ ಬರ್ಖಾಸ್ತು ಮಾಡಲಾರೆ' ಎಂದವನಿಗೆ ವಿದಾಯ!

ಅನಿರೀಕ್ಷಿತ ಅಡಿಮೇಲುಗಳು

ಕೆಲವರು ಮಾತ್ರ!

ಚರ್ಚಿಲ್ ಸರಕಾರದಲ್ಲಿ ಮಂತ್ರಿಗಳಾಗಿದ್ದ ಸುಮಾರು 12 ಮಂದಿ ಪ್ರಮುಖ ಟೋರಿಗಳು ಪಾರ್ಲಿಮೆಂಟನ್ನೇ ಪ್ರವೇಶಿಸಲಾರದೆ ಹೋದರು ಪ್ರಧಾನಮಂತ್ರಿ ಮಿ ಚರ್ಚಿಲ್, ವಿದೇಶ ಮಂತ್ರಿ ಮಿ. ಅಂತೋನಿ ಈಡೆನ್, ವಸಾಹತು ಮಂತ್ರಿ ಮಿ ಒಲಿವರ್ ಸ್ಟಾನ್ಲೆ ಮಾತ್ರ ಆರಿಸಿಬಂದಿದ್ದಾರೆ. ಚರ್ಚಿಲ್ಲರಿಗೆ ಅವರ ಕ್ಷೇತ್ರದಲ್ಲಿ 17000 ಬಹುಮತಗಳು ದೊರೆತಿವೆ ಅದು ವಿಶೇಷವಲ್ಲ ಯಾವ ಪಕ್ಷದ ಬೆಂಬಲವೂ ಇಲ್ಲದೆ, 'ಅರೆ ಮರುಳ'ನೆಂದು ಗಣಿಸಲ್ಪಟ್ಟದ್ದ ಅವರ ಪ್ರತಿಸ್ಪರ್ಧಿ ಅಜ್ಞಾತ ವ್ಯತ ಹೇಂಕೋಕನಿಗೆ 10 ಸಾವಿರ ವೋಟುಗಳು ಬಿದ್ದುದೇ ಆಶ್ಚರ್ಯ ಎಲ್ಲರೂ ನಿರೀಕ್ಷಿಸುತಿದ್ದುದು ಅವ ಡಿಪೋಸಿಟ್ ಹಣ ಕಳಕೊಳ್ಳುವನೆಂದೇ! ಮಿ ಅಂತೋನಿ ಈಡೆನ್ನರು ಕಾಹಿಲೆಯ ದೆಸೆಯಿಂದ ತನ್ನ ಮತದಾರರಿಗೊಮ್ಮೆಯೂ ಮುಖ ತೋರಿಸಿರಲಿಲ್ಲವಾದರೂ ಪ್ರತಿಸ್ಪರ್ಧಿ ಕೂಲಿಗಾರ ಪಕ್ಷೀಯನಿಗಿಂತ 17000 ಅಧಿಕ ಮತಗಳು ಅವರಿಗೆ ಬಿದ್ದಿವೆ ಚರ್ಚಿಲ್ಲರ ಕೊನೆಯ ಕಾಪಲು ಸರಕಾರದಲ್ಲಿದ್ದ ಬಟ್ಲರ್, ಹಡ್ಸನ್, ಲಿಟ್ಲ್‌ಟನ್ ಮೊದಲಾದವರು ಆರಿಸಿಬಂದಿದ್ದಾರೆ

ಅಮೆರಿ ಪರಾಭವ

ಎಪ್ಪತ್ತು ವರುಷಗಳ ನಂತರ ಇದೀಗ ಪಾರ್ಲಿಮೆಂಟಿನ ರೂಪರೇಖೆ ಪೂರ್ಣ ಬದಲಾಗಿದೆಯೆನ್ನಬಹುದು ತಾವು ಪ್ರಾಯಕ್ಕೆ ಬಂದಾರಂಭದಿಂದ ಮೊನ್ನೆಯ ವರೆಗೂ ಪಾರ್ಲಿಮೆಂಟ್ ಸ್ಥಾನಗಳಿಗ ಅಂಟಿಕೊಂಡಿದ್ದು, ಇನ್ನು ಸಾಯುವ ವರೆಗೂ ಕದಲಲಾರರೆಂದಿದ್ದ ಟೋರಿ ಸದಸ್ಯರೆಲ್ಲಾ ಈ ಬಾರಿ ಉರುಳಿ ಬಿದ್ದಿದ್ದಾರೆ. ಪಾರ್ಲಿಮೆಂಟ್ ಭವನದ ಭಾಗ ಬೋಂಬಿನಿಂದ ಜರಿದಂತೆಯೇ ಅದರ ಶಾಶ್ವತಸ್ತಂಭಗಳಂತಿದ್ದ ಸದಸ್ಯರೂ ಜಾರಿದ್ದಾರೆ. ನಮ್ಮ ಅಮೆರಿ—34 ವರುಷಗಳಿಂದ ಕಾಮನ್ಸ್ ಸದಸ್ಯನಾಗಿದ್ದ ಮನುಷ್ಯ-ಇನ್ನಿಲ್ಲ! ಅವರ ಪ್ರತಿಸ್ಪರ್ಧಿ ಮಿ ಶರ್ಮರ್ 14,065 ಮತಗಳನ್ನು ಪಡೆಯುವಾಗ ಅಮೆರಿಗೆ ದೊರೆತುದು 8431 ಮಾತ್ರ ಮತ್ತೊಬ್ಬ ಇದಿರಾಳಿ, ಕಮ್ಯೂನಿಸ್ಟ್ ಪ್ರತಿನಿಧಿ, ಭಾರತೀಯ ಶ್ರೀ ಸಿ. ಆರ್. ದತ್ತರಿಗೆ 1853 ಮತಗಳು ಬಿದ್ದುವರಿಂದ ಅವರು ಪಾರ್ಲಿಮೆಂಟಿಗೆ ಹೋಗದಿದ್ದರೂ ಅವರು ಕಟ್ಟಿದ ಡಿಪೋಸಿಟ್ ಅಲ್ಲೇ ಇರುವಂತಾಯಿತು! 'ಅಮೆರಿ ಸೋತುದರಿಂದ ನನ್ನ ಮುಖ್ಯ ಉದ್ದೇಶ ಈಡೇರಿದಂತಾಯಿತು' ಎಂದು ದತ್ತರು ಸಮಾಧಾನಗೊಂಡಿದ್ದಾರೆ ವಿಜಯೀ ಶರ್ಮರ್ ತನ್ನ ಹೆಗ್ಗಳಿಕೆಯನ್ನು ಹಿಡಿತದಲ್ಲಿಟ್ಟುಕೊಂಡು "31 ವರುಷಗಳಿಂದಿದ್ದ ಆ ಸದ್ಗೃಹಸ್ಥನನ್ನು ಸ್ಥಾನ ಬಿಡಿಸಿದ ನನ್ನ ಜವಾಬ್ದಾರಿಯೆಂತಹದೆಂಬುದನ್ನು ನಾನು ಬಲ್ಲೆ. ನನ್ನ ಜೀವಮಾನವನ್ನು ಕೂಲಿಗಾರ ಹಿತಕ್ಕಾಗಿ ಮೀಸಲಿಟ್ಟು ಅವರ ಸೇವೆಗಾಗಿ ಶಕ್ತಿಮೀರಿ ದುಡಿಯುತ್ತೇನ ರಾಜಕೀಯ ಕಣ್ಣು ಮುಚ್ಚಾಲೆಗಳಿಂದ ಮತದಾರರೀಬಾರಿ ಗೊಂದಲಕ್ಕೀಡಾಗಲಿಲ್ಲ" ಎಂದು ತೂಕದ ಮಾತಾಡಿದ್ದಾರೆ

ಅಮೆರಿ ಅಂಬೋಣ

ಅಮೆರಿಯ ಅಂಬೋಣವೇನೆಂಬುದನ್ನು ಹಿಂದೀಯರು ಕೊನೆಯ ಬಾರಿಗೊಮ್ಮೆ ಕೇಳಿ ಮನಸ್ಸನ್ನು ತೊಳೆದುಕೊಂಡು ಕುಳಿತರೆ ಮತ್ತೆ ಆ ಭಾಗದಲ್ಲಿ ಸದಾಕಾಲ ಮಡಿಯಲ್ಲೇ ಇರಬಹುದು! "ಕಳೆದ ಕಲವು ವರುಷಗಳಲ್ಲಿ ಸ್ಪಾರ್ಕ್‌ಬ್ರೂಕ್ ಮತದಾರ ಕ್ಷೇತ್ರದ ಪರಿಸ್ಥಿತಿಯಲ್ಲಿ ದೊಡ್ಡ ಬದಲಾವಣೆಗಳಾಗಿವೆ ಇಂದಿನ ಈ ಪರಿಣಾಮಕ್ಕೆ ಅವೇ ಕಾರಣವೆಂಬುದು ನಿಸ್ಸಂದೇಹ. ನನ್ನ ಜವಾಬ್ದಾರಿಯಾಗಿದ್ದ ಭಾರತದ ಪ್ರಶ್ನೆಯ ಮಟ್ಟಿಗೆ ಲೇಬರ್ ಪಕ್ಷಕ್ಕೂ ನಮಗೂ ವ್ಯತ್ಯಾಸವೇನೂ ಇಲ್ಲವಾದ್ದರಿಂದ ಸೋಲಿಗದು ಕಾರಣವೆಂಬ ಪ್ರಶ್ನೆಯೇ ಇಲ್ಲ. ನನ್ನ ಭಾರತ ಧೋರಣೆಯ ಮೇಲೆ ಕಮ್ಯೂನಿಸ್ಟ್ ಉಮೇದ್ವಾರಿ ಮಾಡಿದ ಆರೋಪಗಳಿಂದ ಏನೊಂದೂ ಪರಿಣಾಮವಾದುದಿಲ್ಲ"—ಎಂದು ಫಲಿತಾಂಶ ಕೇಳಿದೊಡನೆ ಮಿ. ಅಮೆರಿ ಅಂದಿದ್ದಾರೆ ಮಾಜೀ ಕಾರ್ಯದರ್ಶಿಯ ಅಚಲ ಮನೋದಾರ್ಢ್ಯತೆಯೊಂದು ಆ ಅಪಜಯಿಗೂ ಅಭಿನಂದನೆಗಳನ್ನು ದೊರಕಿಸಿದೆ ತಂತಮ್ಮ ಪರಾಭವದ ವಾರ್ತೆ ಸಿಡಿಲು ಬಡಿದಾಗ ಎಲ್ಲಾ ಟೋರಿ ಪ್ರಭೃತಿಗಳೂ (ಮಿ ಚರ್ಚಿಲ್ಲರು ಕೂಡಾ) ಆ ಮುಹೂರ್ತದಲ್ಲೊಮ್ಮೆ ಕಂಪಿಸಿದ್ದರು ಆದರೆ ಮಿ ಅಮೆರಿಯೊಬ್ಬರು, ಬಂಗಾಲದ ಅನ್ನಾನ್ನಗತಿಕರ ಸಂಬಂಧದ ಸವಾಲುಗಳೆದಿರು ಹೇಗೆ ನಿರ್ಲಿಪ್ತರಾಗಿದ್ದರೋ ಹಾಗೆಯೇ ಈ ಪರಾಭವವನ್ನೂ ಶಾಂತ ಗಂಭೀರತೆಯಿಂದ ಅಂಗೀಕರಿಸಿಕೊಂಡರು

ಅಮೆರಿಗೆ ಬಿದ್ದುದು ಹಿಟ್ಲರನ ಪೆಟ್ಟೇ?

ಅಮೆರಿಯವರನ್ನು ಸೋಲಿಸಿದವ ಹಿಟ್ಲರನೆಂದರೆ ಆಶ್ಚರ್ಯವಾಗಬಹುದು ಆದರದು ಕೆಲಮಟ್ಟಿಗೆ ಸತ್ಯ. ಈ ಮೂರು ಮುಖದ ಚುನಾವಣಾ ಯುದ್ಧ ನಡೆದ ಸ್ಪಾರ್ಕ್‌ಬ್ರೂಕ್ ಕ್ಷೇತ್ರವು ಕಾರ್ಖಾನೆವಲಯ 1941ರಲ್ಲಿ ಅದರ ಮೇಲೆ ಹಿಟ್ಲರ್ ಬೋಂಬಿನ ಮಳೆಯೇ ಸುರಿದಿತ್ತು ಅವು ವ್ಯಾಪಾರ ಕೇಂದ್ರ, ಶ್ರೀಮಂತರ ವಸತಿಗಳನ್ನೆಲ್ಲಾ ನೆಲಸಮಮಾಡಿದ್ದುವು. ತತ್ಫಲವಾಗಿ ಅಲ್ಲಿಯ ಶ್ರೀಮಂತರೆಲ್ಲಾ ಊರು ಬಿಟ್ಟಿದ್ದರು ಈ ರೀತಿ ಪರಾರಿಯಾದ ಮತದಾರರ ಸಂಖ್ಯೆಯೆಂದರೆ ಸುಮಾರು 10 ಸಾವಿರ, ಈ ಬೋಂಬು ನಿರ್ಮಿತ ಸ್ಮಶಾನ ಸ್ಥಳದಲ್ಲಿ ಕೆಲಸಗಾರರು ಬಿಡಾರಬಿಟ್ಟಿದ್ದರು ಅಮೆರಿ ಹಿಂಬಾಲಕರಾದ ಶ್ರೀಮಂತ ಮತದಾರರನ್ನು ಓಡಿಸಿಬಿಟ್ಟು, ಶರ್ಮರ್ ಪಕ್ಷಪಾತಿ ಬಡವರನ್ನು ತುಂಬಿಸಿಟ್ಟು ಪರಿಸ್ಥಿತಿಯು ಕೂಲಿಗಾರ ವಿಜಯಕ್ಕೆ ಪೂರ್ವಸಿದ್ಧತೆ ನಡೆಸಿದ್ದಿತ ಈ ಅಡಿಮೇಲಿಗೆ ಇದಕ್ಕಿಂತಲೂ ಮುಖ್ಯವಾದ 'ಕಾರಣವೆಂದರೆ ಲೇಬರ್ ಉಮೇದ್ವಾರಿಯ ಜನಪ್ರಿಯತೆ ಎಲ್ಡರ್‌ಮೇನ್ ಶರ್ಮರ್ 37 ವರುಷಗಳಿಂದ ಅಲ್ಲಿ ವಾಸಿಸುತ್ತಿದ್ದಾರಲ್ಲದೆ ಯಾವ ಪಕ್ಷದಿಂದ ನಿಂತರೂ ಗೆದ್ದೇ ಬರುವಷ್ಟು ಜನಪ್ರಿಯತೆಯನ್ನು ಸಂಪಾದಿಸಿದ್ದರು ಹಿಂದೀಯನಾದ ಶ್ರೀ ದತ್ತರ ಸೋಲಿನಿಂದ, ಹಿಂದೀ ಪ್ರಶ್ನೆಯನ್ನು ಮತದಾರರು ಅಲಕ್ಷಿಸಿದ್ದರೆಂಬ ಅರ್ಥವಾಗುವುದಿಲ್ಲ, ಆ ಮಟ್ಟಿಗೆ ಶರ್ಮರ್-ದತ್ತರಲ್ಲಿ ಭೇದವಿಲ್ಲ. ಅಲ್ಲಿ ಮುಖ್ಯ ಪ್ರಶ್ನೆಯಾಗಿ ಮತದಾರರ ಮುಂದಿದ್ದುದು ಗೃಹಸಮಸ್ಯೆಗಳೇ ಎಂದು ಪ್ರಕಟವಾಗಿದೆ

ಗಣ್ಯ ಸೋಲುಗಳು!

ಟೋರಿ ಸರಕಾರದ ಯುದ್ಧಮಂತ್ರಿ ಸರ್ ಜೇಮ್ಸ್ ಗ್ರಿಗ್, ನಾವೆಯ ಮಂತ್ರಿ ಬ್ರೆಂಡನ್ ಬ್ರೇಕೆನ್, ರಾಷ್ಟ್ರೀಯ ವಿಮಾ ಮಂತ್ರಿ ಹೋರ್ ಬೆಲಿಷಿಯಾ, ಆಕಾಶಖಾತೆಯ ಕಾರ್ಯದರ್ಶಿ ಹೆರೋಲ್ಡ್ ಮೇಕ್‌ಮಿಲ್ಲನ್, ಸುದ್ದಿಖಾತೆಯ ಮಂತ್ರಿ ಜ್ಯೋಫ್ರೆ ಲ್ಲೋಯ್ಡ್, ಪೆನ್ಶನ್ ಖಾತೆಯ ಮಂತ್ರಿ ಸರ್ ವಾಲ್ಟರ್ ವೋಮೆರ್ಸ್ಲಿ, ಮಾಜಿ ಸಿರಿಯಾ ಲೆಬನಾನ್ ಸಚಿವ ಸರ್. ಎಡ್ವರ್ಡ್ ಸ್ಪಿಯರ್ಸ್, ಚರ್ಚಿಲ್ ಪುತ್ರ ರಾಂಡೋಲ್ಫ್ ಚರ್ಚಿಲ್, ಅಮೆರಿ ಪುತ್ರ ಜೂಲಿಯನ್ ಅಮೆರಿ-ಇನ್ನೂ ಬೇಕಾದರೆ ಚರ್ಚಿಲ್ ಅಳಿಯ, ಅವರ ದೂರದ ಸಂಬಂಧಿಕ, ಅವರ ಹಿಂಬಾಲಕ, ಇತ್ಯಾದಿಇತ್ಯಾದಿ ಅಪ್ರಾಗ್ರಿಕ ಪ್ರಮುಖರೆಲ್ಲಾ ಪರಾಭವಕ್ಕೀಡಾಗಿದ್ದಾರೆ ಈ ರೀತಿ ಬ್ರಿಟಿಷ್ ಮತದಾರರು ಚರ್ಚಿಲ್ಲರ ಪ್ರಜೆ ಪರಿವಾರಗಳನ್ನೆಲ್ಲಾ ತಡೆದು ನಿಲ್ಲಿಸಿ, ಏಕಾಕಿ ಅವರನ್ನು ಮಾತ್ರ ಜೈಲಿಗೆ ಕಳುಹುವಂತೆ ಪಾರ್ಲಿಮೆಂಟಿಗೆ ಕಳುಹಿದ್ದಾರೆ. ಕಾಮನ್‌ವೆಲ್ತ್ ಪಕ್ಷದ ನಾಯಕ ಲಿಕ್ಲಂಡರೇ ಅಪಜಯಗೊಂಡಿದ್ದಾರೆ

ಮತದಾರರ ಮೌನ ಕ್ರಾಂತಿ

ಚರ್ಚಿಲ್ ಅಧಿಕಾರಾಂತ್ಯ

ತಾ 26ರಲ್ಲಿ ಸರ್ವತ್ರ ಮತಗಣನೆ ನಡಯುತ್ತಿರುವಾಗ ಮಿ ಚರ್ಚಿಲ್ಲರು ಲಂಡನಿನ ಡೌನಿಂಗ್ ಸ್ಟ್ರೀಟ್ 10.ರ ತನ್ನ ಕಾರ್ಯಾಲಯದ ಟೆಲೆಪ್ರಿಂಟರಿನ ಮೇಲೆ ಬೀಳುತ್ತಿರುವ ಸಂಖ್ಯೆಗಳ ನೋಟದಲ್ಲೇ ತಲ್ಲೀನರಾಗಿದ್ದರು. ಒಬ್ಬರ ಬಳಿಕೊಬ್ಬರಂತೆ ತನ್ನ ಅನುಯಾಯಿಗಳುರುಳುವ ದೃಶ್ಯದಿಂದ ದಂಗುಬಡಿದು ಹೋಗಿ ಚಹಾ ಮತ್ತು ಊಟಕ್ಕೆ ಕೂಡಾ ಏಳಲಿಲ್ಲ ತಿಂಡಿಪಾನೀಯಗಳನ್ನು ಕುಳಿತಲ್ಲಿಗೇ ಸರಬರಾಯಿ ಮಾಡಬೇಕಾಯಿತು. ಹೊರಗೆ ರಸ್ತೆಯಲ್ಲಿ ತುಂಬಿದ್ದ ಟೋರಿ ಪಕ್ಷಪಾತಿ ಜನಸಂದಣಿಯು ಚುನಾವಣಾ ಫಲಿತಾಂಶಗಳಿಂದ ಅವೇಗಗೊಂಡಿತ್ತು ಮತ್ತೊಂದೆಡೆ-ಲೇಬರ್ ಚಟುವಟಿಕೆಗಳ ಕೇಂದ್ರ ನಿಲಯವಾದ ಟ್ರಾನ್ಸ್‌ಪೋರ್ಟ್ ಭವನದ ಸ್ಥಿತಿಯೇ ಬೇರೆ ಅದು ಆನಂದ ಮಂದಿರವಾಗಿ ಧುಮುಧುಮಿಸುತಿತ್ತು, ಸುತ್ತಲೂ ಹರುಷದ ಹವಾಮಾನ ಹರಡಿತ್ತು. ಪರಿಣಾಮ ತಿಳಿದುಬಂದ ಪ್ರತಿಬಾರಿಯೂ ಆನಂದದ ಅಮಲಿನ ಜಯೋದ್ಗಾರಗಳೇಳುತ್ತಿದ್ದುವು

ಅಂದೇ ಮಿ ಚರ್ಚಿಲ್ಲರು ಚಕ್ರವರ್ತಿಗಳಿಗೆ ರಾಜೀನಾಮೆಯೊಪ್ಪಿಸಿದರು, ಮಿ. ಅಟ್ಲಿಯವರು ರಾಜರಿಂದಾಮಂತ್ರಿಸಲ್ಪಟ್ಟು ಮಂತ್ರಿ ಮಂಡಲ ರಚಿಸಲೊಪ್ಪಿದರು. ತಾ 26ನೇ ರಾತ್ರಿ ಬಕ್ಕಿಂಗ್ಹಾಮ್ ಅರಮನೆಯ ಕಬ್ಬಿಣದ ಗೇಟುಗಳು ತೆರೆಯಲ್ಪಟ್ಟು ಚರ್ಚಿಲ್ಲರನ್ನು ಹೊತ್ತ ಒಂದು ದೊಡ್ಡ ಕಾರು ಹೊರಬಂತು, ಅಟ್ಲಿಯಯವರಿದ್ದ ಸಣ್ಣ ಕಾರೊಂದು ಒಳಹೊಕ್ಕಿತು. ಈ ಅಮದು ರಪ್ಪೇ ಚರ್ಚಿಲ್ಲರ ಐದು ವರುಷದಾಡಳಿತೆಯ ಮುಕ್ತಾಯ ಮುಹೂರ್ತ ಮತ್ತು ಅಟ್ಲಿಯವರ ಕೂಲಿಗಾರ ಸರಕಾರದ ಸೀರಿಕೆ

(೯ನೇ ಪುಟ ನೋಡಿರಿ)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,
Moolky, S K.

ವಿದ್ಯಾವಿಷಯಕ ಸಚಿತ್ರ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ
ರೂ 1—8—0 ಮಾತ್ರ.
ಬೈಂಡು ಮಾಡಿದ ಸಂಪುಟಕ್ಕೆ ರೂ 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

★ ಎಲ್ಲೆಲ್ಲಿ-ಏನೇನು? ★

ಪಿಟೇನರ ವಿಚಾರಣೆ

ಹಿಟ್ಲರ್ ಆಕ್ರಮಿತ ಫ್ರಾನ್ಸಿನಲ್ಲಿ ವಿಚಿ ಸರಕಾರದ ಪ್ರಧಾನಾಧಿಕಾರಿಯಾಗಿದ್ದ, ಹಿಂದಿನ ಲೋಕ ಯುದ್ಧದಲ್ಲಿ 'ವೆರ್ಡನ್ ವೀರ' ಎಂದು ಹೆಸರು ಪಡೆದಿದ್ದ ಮಾರ್ಶಲ್ ಪಿಟೇನರ ವಿಚಾರಣೆಯು ಪೇರಿಸಿನ ಚರಿತ್ರಾರ್ಹ ನ್ಯಾಯಸ್ಥಾನ 'ಪೇಲೇಸ್ ಡಿ ಜಸ್ಟೀಸ್'ನಲ್ಲಿ ಪ್ರಾರಂಭವಾಗಿದೆ. ಲೋಕ ಪ್ರಾಮುಖ್ಯ ಮೊಕದ್ದಮೆಯಿದು. ನಾಜೀ ಆಕ್ರಮಣವಾದಂದಿನಿಂದ ಮಿತ್ರರಾಷ್ಟ್ರೀಯರಿಂದ ವಿಮೋಚನೆ ಹೊಂದುವ ವರೆಗೂ ಫ್ರಾನ್ಸನ್ನಾಳಿದವರು 89 ವರುಷದ ಮುದುಕ ಈ ಪಿಟೇನರೇ. ಅವರ ಮೇಲೆ ಫ್ರಾನ್ಸಿನ ಆಂತರಿಕ ಭದ್ರತೆಯ ವಿರುದ್ಧ ಸಂಚು ಮತ್ತು ವೈರಿಯೊಡನೆ ಸಂಬಂಧ ಬೆಳೆಸಿದ ಆರೋಪಗಳಿವೆ. ಮಾರ್ಶಲರು 'ಈ ಕೋರ್ಟು ಫ್ರೆಂಚ್ ಜನತೆಯ ಪ್ರತಿನಿಧಿಯಲ್ಲ. ಆದ್ದರಿಂದ ನಾನಿಲ್ಲಿ ಪ್ರಶ್ನೆಗಳಿಗುತ್ತರ ಕೊಡಲಾರೆ'ಎಂದು ತಿರಸ್ಕರಿಸಿದ್ದಾರೆ. ಸಿನೇಟ್ ಸಭೆಗಲ್ಲದೆ ಕೋರ್ಟಿಗೆ ಈ ಮೊಕದ್ದಮೆಯನ್ನು ವಿಚಾರಿಸುವ ಅಧಿಕಾರವಿಲ್ಲವೆಂಬ ಪಿಟೇನ್ ವಕೀಲರ ವಾದಕ್ಕೆ ನಕಾರ ದೊರೆಯಿತು. 'ನಾನು ಜರ್ಮನಿಯೊಡನೆ ಶಾಂತಿ ಕರಾರು ಕೇಳಿ ಸಿಶ್ಚಿತರಕ್ಷಣಾ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತಂದೆ. ಸಾಮ್ರಾಜ್ಯ ಸ್ವಾತಂತ್ರ್ಯವನ್ನುಳಿಸಿದೆ. ಫ್ರೆಂಚ್ ಜನತೆಯ ರಕ್ಷಣೆಗಾಗಿ ನನ್ನ ಅಧಿಕಾರವನ್ನು ಉಪಯೋಗಿಸಿದೆ; ಜನರಲ್ ಡಿಗೋಲೆಯವರು ಯುದ್ಧ ಮುಂದೊತ್ತುತಿದ್ದಾಗ ನಾನಿಲ್ಲಿ ಸ್ವಾತಂತ್ರ ಸಿದ್ಧತೆ ಮಾಡುತಿದ್ದೆ. ನನ್ನ ಅಧಿಕಾರವನ್ನು ಆಡ್ಡಾಗುರಾಣಿಯಾಗಿ ಉಪಯೋಗಿಸಿ ಫ್ರೆಂಚ್ ಜನತೆಯನ್ನು ರಕ್ಷಿಸಿದೆ' ಎಂದು ಪಿಟೇನರ ವಾಗ್ಮೂಲ.

ಆತುರದಾಯೀ ಮೊಕದ್ದಮೆ

ಪಿಟೇನರ ವಿರುದ್ಧವಾಗಿ ಫ್ರಾನ್ಸಿನ ಮಾಜೀ ಅಧ್ಯಕ್ಷ ಲೆಬ್ರುನ್, ಮಾಜೀ ಪ್ರಧಾನ ಮಂತ್ರಿಗಳಾದ ದಲಾಡಿಯರ್, ರೈನಾಡ್ ಮೊದಲಾದ ಎಲ್ಲಾ ಮಾಜೀ ಅಧಿಕಾರಿಗಳೂ ಸಾಕ್ಷ್ಯವಿತ್ತಿದ್ದಾರೆ. ಲೆಬ್ರುನರು ಸಾಕ್ಷ್ಯ ಕೊಡಲು ನಿಂತಾಗ ಕದಡು ಹೃದಯದಿಂದ ಕಂಠ ಬಿಗಿದುಬಂದು ಪಿಟೇನರ ಇಂದಿನ ದುಸ್ಥಿತಿಗಾಗಿ ದುಃಖಿಸಿದ್ದರು. ಸಾವಿರಾರು ಸಶಸ್ತ್ರ ಪೋಲೀಸು ಮತ್ತು ಸೈನಿಕರ ಪಹರೆಯಿಂದ ವಿಚಾರಣೆ ಸಾಗುತ್ತಿದೆ ಕೋರ್ಟಿನಲ್ಲಿದ್ದ ಜನರು ಒಂದು ಸಂದರ್ಭದಲ್ಲಿ ಪ್ರಾಸಿಕ್ಯೂಟರ ವಿರುದ್ಧಭಾವ ಪ್ರದರ್ಶಿಸಿದಾಗ ಪ್ರಾಸಿಕ್ಯೂಟರ್ ಮೋರ್ನೆಟರು "ಈ ಕೋರ್ಟಿನಲ್ಲಿ ಬಹುಮಂದಿ ಜರ್ಮನರಿದ್ದಾರೆ" ಎಂದೊದರಿಬಿಟ್ಟರು. ಇದು ನೆರೆದಿದ್ದವರನ್ನೂ ಪಿಟೇನ್ ವಕೀಲರನ್ನೂ ಕೆರಳಿಸಿದುದರಿಂದ ಗೊಂದಲವೆದ್ದು ವಿಚಾರಣೆಯನ್ನೇ ಮುಂದುವರಿಸಬೇಕಾಯಿತು. ಪಿಟೇನರಿಂದ ಉತ್ತರ ಪಡೆಯಬೇಕೆಂದು ಜಡ್ಜರೂ ಜ್ಯೂರಿಗಳೂ ಎಷ್ಟೇ ಕಿಣಕಿದರೂ ಮುದಿ ಮಾರ್ಶಲರು ಬಾಯಿಬಿಡಲೊಪ್ಪಲಿಲ್ಲ! ಒಂದುಬಾರಿ 'ಮಾರ್ಶಲರ ಮಾನಕ್ಕೆ ಧಕ್ಕೆ ಬೀಳಲಿದೆ' ಎಂದೊಬ್ಬ ಜ್ಯೂರಿ ಘರ್ಜಿಸಿ ಹೇಳಿದರು. 'ಎದ್ದು ನಿಲ್ಲಿ' ಎಂದು ಜಡ್ಜರು ಒಂದೆರಡು ಬಾರಿ ಆರ್ಭಟಿಸಿ ಹೇಳಿ ಕೊನೆಗೆ ಕಾವಲುಗಾರನೊಬ್ಬನಿಗೆ ಎಬ್ಬಿಸಿ ನಿಲ್ಲಿಸುವ ಆಜ್ಞೆ ಕೊಟ್ಟಾಗ, ವಕೀಲರ ಸೂಚನೆಯಂತೆ ಮಾರ್ಶಲರೆದ್ದು ನಿಂತು 'ನಾನು ಈ ಕೋರ್ಟಿನ ಮುಂದೆ ಏನನ್ನೂ ಹೇಳಲಾರೆನೆಂದು ಹೇಳಿಯಾಗಿದೆ' ಎಂದು ಕುಳಿತುಕೊಂಡರು. ವಿಚಾರಣೆಯ ಫಲಿತಾಂಶವೇನೆಂದು ಲೋಕವೇ ಇದಿರು ನೋಡುತ್ತಿದೆ.

ರಾಜ್ಯ ದ್ರೋಹಿಗಳು

ಪಿಟೇನರಂತೆಯೇ ವಿಚಿ ಸರಕಾರದ ಹಲವು ಅಧಿಕಾರಿಗಳೀಗ ಫ್ರಾನ್ಸಿಗೆ ದ್ರೋಹ ಮಾಡಿದ ಆರೋಪಕ್ಕೊಳಗಾಗಿ ಬಂಧನದಲ್ಲಿದ್ದಾರೆ ಪೇರಿಸಿನಬಳಿಯ ಶಿಬಿರವೊಂದರಲ್ಲಿ ಇಂತಹ ಸುಮಾರು 3000 ಗಂಡಸರೂ 500 ಮಹಿಳೆಯರೂ ಕೈದಿಗಳಾಗಿದ್ದಾರೆ. ಇವರಲ್ಲಿ ಕೆಲವರು ಇಷ್ಟರಲ್ಲೇ ಅಪರಾಧಿಗಳೆಂದು ತೀರ್ಮಾನ ಪಡೆದವರು; ಉಳಿದವರು [illegible] ನಿರೀಕ್ಷಿಸುತ್ತಿರುವವರು. 8 ಮಂದಿ ಮರಣ ಶಿಕ್ಷೆಗೊಳಗಾಗಿದ್ದು ಆದಿನದ ನಿರೀಕ್ಷೆಯಲ್ಲಿದ್ದಾರೆ ಇವರಲ್ಲಿ ಹಿರಿಯರ ಮಾಜೀ ಫ್ರೆಂಚ್ ಹೈಕಮಿಶನರ್ ಜನರಲ್ ಹೆನ್ರಿ ಡೆಂಟ್ಸ್, ಮಾಜೀ ಪೋಲಿಸ್ ಕಮಿಶನರ್ ಆಂಡ್ರೆಗ್ವಾಂಟೆರಿ, ಮತ್ತು 'ಸ್ಟಟ್‌ಗಾರ್ಟ್ ದಗಾಖೋರ' ಎಂದು ಹೆಸರಾಗಿದ್ದು ಜರ್ಮನಿಯಿಂದ ಆಕಾಶವಾಣಿ ಘೋಷಣೆ ಮಾಡುತ್ತಿದ್ದ ಪಾಲ್ ಫೆಡೋನೆಟರು ಇದ್ದಾರೆ. ಭದ್ರವಾದ ಕೋಟೆಯೊಳಗಿದ್ದರೂ ಹೊರಗಡೆ 300 ಮಂದಿ ಸಶಸ್ತ್ರ ಸೇನೆಯ ಕಾವಲಿದೆ. ಆದರೂ ಅಲ್ಲಿಂದ ಕೆಲವರು ತಲೆತಪ್ಪಿಸಿಕೊಂಡರು. ಈ ಆರೋಪಿತರ ಸುಮಾರು 200 ಮಂದಿ ವಕೀಲರು ಅಲ್ಲಿಗೆ ದಿನಂಪ್ರತಿ ಹೋಗಿ ಬರುತಿದ್ದಾರೆ. ವಾರಕ್ಕೆರಡಾವರ್ತಿ ಭೇಟಿಯ ಅವಕಾಶವಿರುವುದರಿಂದ ಆ ದಿನಗಳಲ್ಲಿ ಕಡಿಮೆಯೆಂದರೆ 2000 ಮಂದಿಯಾದರೂ ಒಳಗೆ ನುಗ್ಗಿ ಹೊರಡುತಿದ್ದಾರೆ. ಜರ್ಮನ್ ವಿದ್ರೋಹಿಗಳಿಗಿಂತ ಮೊದಲೇ ಫ್ರಾನ್ಸ್ ಸಂಚುಗಾರರ ಸಾಮೂಹಿಕ ವಿಚಾರಣೆಗಳಾರಂಭವಾಗಿದೆ. ಇನ್ನು ಮುಂದಿನದು ಮೊಕದ್ದಮೆಗಳ ಕಾಲವೇನೊ!

ಜಾಪಾನಿಗೆ ಮಿತ್ರರ ಶರಣು ಶರ್ತ.

ಪ್ರಧಾನಿ ಚರ್ಚಿಲ್, ಅಧ್ಯಕ್ಷ ಟ್ರುಮೇನ್, ಜನರಲಿಸಮೋ ಚಿಯಾಂಗ್ ಕೈಶೇಕರ ಸಹಿಯುಳ್ಳ 'ಶರಣಾಗಿರಿ ಅಥವಾ ಸಮೂಲ ನಾಶವಾಗುವಿರಿ' ಯುದ್ಧ ಶರ್ತವೊಂದು ಜಾಪಾನಿಗಾಗಿ ತಾ 26ನೇ ರಾತ್ರಿ ಪೋಟ್ಸ್‌ಡಾಮಿನಿಂದ ಪ್ರಕಟಿಸಲ್ಪಟ್ಟಿದೆ. ಜಾಪಾನಿಗೆ ಸ್ಪಷ್ಟ ಶರ್ತಗಳ ಪ್ರಕಟಣೆಯಾದುದು ಇದೇ ಮೊದಲು. ಈ ಶರ್ತಗಳನ್ನು ಅಧ್ಯಕ್ಷ ಟ್ರುಮೇನರು ಪೋಟ್ಸ್‌ಡಾಮ್ ಸಮ್ಮೇಲನಕ್ಕೆ ಹೊರಡುವಾಗ ತಯಾರಿಸಿಕೊಂಡೇ ಹೋಗಿದ್ದರಂತೆ ಅಲ್ಲಿ ಟ್ರುಮೇನ್ ಚರ್ಚಿಲ್ ಪರ್ಯಾಲೋಚನೆ ನಡೆದು ಚಿಯಾಂಗ್ ಕೈಶೇಕರಿಗೂ ರವಾನಿಸಿ ಸಹಿ ಪಡಕೊಂಡು ಜಾಹೀರು ಮಾಡಿದರು. ಈ ಶರ್ತವನ್ನು ಕೂಡಲೇ ಅಂಗೀಕರಿಸಿಕೊಳ್ಳದಿದ್ದಲ್ಲಿ ತಮ್ಮ ಸೇನಾಶಕ್ತಿಯನ್ನು ಜಾಪಾನಿನ ಮೇಲೆ ಒಮ್ಮೆಗೇ ಪ್ರಯೋಗಿಸುವೆವೆಂದು ಎಚ್ಚರಿಸಲಾಗಿದೆ. ಜರ್ಮನರಿಗೆ ಕೊನೆಗಾದ ಅವಸ್ಥೆಯ ನೆನಪು ಮಾಡಿಕೊಟ್ಟು ಅಂದಿಗಿಂತಲೂ ಬಲವಾದ ಮಿತ್ರರ ಆಕಾಶ, ನೆಲ, ಜಲ ಧಾಳಿಗಳನ್ನು ಜಾಪಾನರಿಂದಿದಿರಿಸಲಾದೀತೆಂಬ ಭಾವನೆ ಹಗಲುಗನಸೆಂದೂ, ನಿರ್ವಾಹವಿಲ್ಲದೆ ಜಾಪಾನ್ ಜನತೆ ಮತ್ತು ವ್ಯಾಪಾರೋದ್ಯಮಗಳೂ ಧ್ವಂಸವಾಗಬೇಕಾಗುವದೆಂದೂ ಬೆದರಿಕೆ ಹಾಕಲಾಗಿದೆ.

ಶರಣು ಶರ್ತಗಳು

1 ಜಾಪಾನ್ ಜನತೆಯನ್ನು ವಂಚಿಸಿ, ಲೋಕ ವಿಜಯದ ದುರಾಕಾಂಕ್ಷೆಯಿಂದ ಯುದ್ಧ ಹೂಡಿರುವ ಜಾಪಾನ್ ಪ್ರಮುಖರ ಅಧಿಕಾರ ಮತ್ತು ವರ್ಚಸ್ಸನ್ನು ಚಿರನಿರ್ನಾಮಮಾಡಬೇಕು. ಅಂಥವರನ್ನೆಲ್ಲಾ ಯೋಗ್ಯ ವಿಚಾರಣೆಗೆ ಗುರಿಪಡಿಸಬೇಕು 2 ಹೊಸ ವ್ಯವಸ್ಥೆ ಜಾರಿಯಾಗಿ ಜಾಪಾನರ ಯುದ್ಧ ನಿರ್ಮಾಪಕ ದುಶ್ಯಕ್ತಿಗಳು ಸಂಪೂರ್ಣ ನಾಶವಾದುವೆಂದು ನಮಗೆ ಖಚಿತವಾಗುವ ವರೆಗೆ, ಮಿತ್ರರಾಷ್ಟ್ರೀಯರು ಸೂಚಿಸುವಂತಹ ಜಾಪಾನ್ ಭೂಮಿಯ ಭಾಗಗಳನ್ನು ಈ ಉದ್ದೇಶ ಸಾಧನೆಯಾಗುವಂತೆ ನೋಡಲು ಮಿತ್ರಸೇನೆಗಳಾಕ್ರಮಿಸಿ ನಿಲ್ಲುವವು. 3 ಕೈರೋ ಘೋಷಣೆ (ರುಜವೆಲ್ಟ್, ಚರ್ಚಿಲ್, ಚಿಯಾಂಗರು ಕೈರೋದಲ್ಲಿ ಕೂಡಿ ಬಂದು ಜಾಪಾನರು ಆಕ್ರಮಿತ ಸ್ಥಳಗಳ

(೬ನೇ ಪುಟ ನೋಡಿರಿ)

ಪ್ರಕಟಣೆ

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. P No 58/1945

1. ಮೆಣ್ಣ ಶೆಟ್ಟಿ. 2. ದೊಡ್ಡಕ್ಕ ಶೆಡ್ತಿ. ರುಕ್ಕ ಶೆಟ್ಟಿ ಮಕ್ಕಳು. ಉಡ್ಪಿ ತಾಲ್ಲೂಕ ಪಿಲಾರು ಗ್ರಾಮದ ಮಿತ್ತಬೆಟ್ಟು. ಅರ್ಜಿದಾರ್ರು

ಮತ್ತು

ದೇಜು ಶೆಟ್ಟಿ,ರುಕ್ಕ ಶೆಟ್ಟಿ ಮಗ ಕೂಡಾ ಎದ್ರಿ.

ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

ಉಡ್ಪಿ ತಾಲ್ಲೂಕ ಪಿಲಾರು ಗ್ರಾಮದಲ್ಲಿದ್ದು ಮೃತವಾದ ಕಕ್ಷಿಗಾರರ ಅಣ್ಣ ಅಚ್ಚಣ್ಣ ಶೆಟ್ರಿಗೆ ಬರಬೇಕಾದ ಸೊತ್ತುಗಳ ವಸೂಲಿ ಬಗ್ಗೆ 2ನೆ ಅರ್ಜಿದಾರಳಿಗೆ ಸಾಕ್ಸೆಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರ್ರು ಕೊಟ್ಟ ಮೇಲ್ಕಂಡ ಅರ್ಜಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 25 8 1945ಕ್ಕೆ ಇಟ್ಟಿದೆ. ಆಕ್ಷೇಪ ಉಳ್ಳವರು ಸದ್ರಿ ದಿನ ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜುರು ಸತಕ್ಕದ್ದು.

N. M. Adyanthaya.
Advocate for petitioners

ಮೊಕ್ಕಾಂ. ಕಾರ್ಕಳ
ತಾರೀಕು 30 7-1945

ನೋಟಿಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 369/1944.

ಕೊರಗಪ್ಪ ಯಾನೆ ವೆಂಕಪ್ಪ ರೈ, ಬೆಳ್ಳಿಪಾಡಿ ಕುಂಞಣ್ಣ ರೈಗಳ ಅಳಿಯ,ಭಾಗದ ಯಜಮಾನ ಮ ಆಡಳ್ತೆದಾರ,ಪುತ್ತೂರು ತಾಲೂಕು ಬದಗನ್ನೂರು ಗ್ರಾಮ. ವಾದಿ.

ಮುಕ್ಕಯ ಗೌಡ ಕೂಡಾ ಹತ್ತು ಜನರು ಪ್ರತಿವಾದಿರು.

ಪುತ್ತೂರು ತಾಲೂಕು ಬೆಳ್ಳಿಪಾಡಿ ಗ್ರಾಮದ ಸೊಲ್ಲ್ಯ ಎಂಬಲ್ಲಿರುವವರು, ಸದ್ರಿ ವ್ಯಾಜ್ಯದ ಪ್ರತಿವಾದಿರು 6ನೇ ಬಾಬು ಗೌಡ, ಸೀದಪ್ಪ ಗೌಡನ ಮಗ 7ನೇ ಮ್ಯಾಲ ಗೌಡ. ಬಾಬು ಗೌಡನ ಮಗ. 8ನೇ ರಾಮು ಹೆಂಗ್ಸು, ಕುಕ್ಕ ಗೌಡನ ವಿಧವೆ 9ನೇ ಬಾಬು, 10ನೇ ಸಾಂತಪ್ಪ ಬಾಬು ಗೌಡನ ಮ್ಯಾನರ ಮಕ್ಕಳು,ರಕ್ಷಕ ತಂದೆ 6ನೇ ಬಾಬು ಗೌಡ. ಇಂವರಿಗೆ.

ಪ್ರತಿವಾದಿರ ಪೂರ್ವಾಧಿಕಾರಿ ತಿಮ್ಮಯ ಗೌಡನು ವಾದಿಯ ತಾಯಿ ಮೃತಪಟ್ಟದೆಯ್ಯಕ್ಕು ಹೆಂಗ್ಸಿಗೆ ಕಳೆದ ತಾ 20 12 1929ರಲ್ಲಿ ರಿಜಿಸ್ತ್ರಿ ಬರಕೊಟ್ಟ ಸ್ಥಿರ ಜಸ್ತಿ ಆಡವಿನ ಅಸ್ಲು ಬಡ್ಡಿಯ ವಸೂಲಿ ಬಗ್ಗೆ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ಬರುವ ತಾ 14-8-1945ಕ್ಕೆ ಯೀ ಕೋರ್ಟಿನಲ್ಲಿ ತನಿಖೆಗೆ ಯಿಟ್ಟಿದೆ. ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿರು ಉಜುರುಮಾಡುವದಿದ್ದರೆ ಆ ವ್ಯಾದೆಯ ದಿವ್ಸ ಹಗಲು 10 ಘಂಟೆಗೆ ಯೀ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉಜುರು ಸತಕ್ಕದ್ದು. ತಪ್ಪಿದ್ದಲ್ಲಿ ಯೇಕ ಪಕ್ಷ ವಿಚಾರಣೆಯಿಂದ ವ್ಯಾಜ್ಯವು ತೀರ್ಮಾನಿಸಲ್ಪಡುವದು.

H. Sanjeeva shetty.
Advocate for Plaintiff.

ಪುತ್ತೂರು, [illegible]

ಆ ದಾಖಲೆ.......

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 1925ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಅಂದಿನಿಂದಲೇ ಸಿಂಡಿಕೇಟು ಬದ್ಧಕಂಕಣವಾಗಿದೆ. ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟಿನಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ—ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಆಕ್ಷರಶಃ ಪಾಲಿಸಲಾಗುವುದು.

ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್

ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಟಿ ಎ. ಪೈ, ಬಿ. ಕೋಮ್, ಎ. ಐ. ಐ. ಬಿ.,
ಜನರಲ್ ಮೆನೇಜರ್.

The Canara Industrial & Banking Syndicate Limited.

(Incorporated in British India)

The Canara Banking Corporation Limited.
(Incorporated in British India, with limited Liability.)
Estd 1906.
Head Office: **UDIPI**, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital	Rs. 15,17,000
Reserves	Rs. 4,44,000

ನವಯುಗ

ಉಡುಪಿ, ಗುರುವಾರ ೨-೮-೧೯೪೫

ಮುಂದೇನು?

'ಇದೀಗ ಪ್ರಜಾಪ್ರಭುತ್ವ' ಎಂದು ಪ್ರಪಂಚವೇ ಅಭಿನಂದಿಸುವ ರೀತಿಯಲ್ಲಿ ಬ್ರಿಟನಿನ ಮತದಾರರು ತಮ್ಮ ಹಕ್ಕನ್ನು ಜಾರಿಮಾಡಿದ್ದಾರೆ; ಒಂದು ಆಶ್ಚರ್ಯವನ್ನೇ ನಿರ್ಮಿಸಿದ್ದಾರೆ. ಯುದ್ಧ ನಾಯಕ ಚರ್ಚಿಲ್ಲರ ಕೈಯಿಂದ ಅಧಿಕಾರ ಕಸಗೊಂಡು ಕೂಲಿಗಾರ ಪಕ್ಷಕ್ಕೆತ್ತಿದ್ದಾರೆ. ಭಾರತೀಯರ ಅಳತೆಯಲ್ಲಿ ವ್ಯಕ್ತಿ ಗೌರವ, ಮಹಾತ್ಮರಾದವರಿಗೆ ವಿಧೇಯತೆ, ಕೃತಜ್ಞತೆ-ಇತ್ಯಾದಿಗಳಿಗೆ ಸರಿದೂಗಬಲ್ಲ ಸದ್ಗುಣಗಳು ಬೇರಿಲ್ಲ. ಈ ದೃಷ್ಟಿಯಲ್ಲಿ ಬ್ರಿಟಿಷ್ ಜನತೆ ಅಕ್ಷಮ್ಯ ಅಪರಾಧ ಮಾಡಿದೆ! ವಿಷಮಾವಸ್ಥೆಯಲ್ಲಿದ್ದ ಬ್ರಿಟನನ್ನು ವಿಜಯದ ಹಾದಿಯಲ್ಲಿ ನಡೆಯಿಸಿದ ಚರ್ಚಿಲ್ಲರ ಮುಖಕ್ಕೆ ಮಂಗಳಾರತಿಯೆತ್ತಿದೆ; ಕೃತಘ್ನತೆ ತೋರಿಸಿದೆ. ಆದರೆ ಬ್ರಿಟಿಷ್ ಮತದಾರರಿಗಿರುವದು ಹೃದಯ ಮಾತ್ರವಲ್ಲ—ತಲೆಯೂ ಇದೆ! ಅವರು ಪೂರ್ವಾಪರ ವಿಚಾರಮಾಡಿದರು; ಗುಣದೋಷಗಳ ವಿಮರ್ಶೆ ನಡಿಸಿದರು; ವ್ಯಕ್ತಿ ಗೌರವಕ್ಕಿಂತ ಕಾರ್ಯ ಗೌರವ ಮೇಲೆಂಬುದನ್ನು ತಿಳಿದೇ ತೀರ್ಮಾನಿಸಿದರು. ಈ ಮತದಾರರಿದಿರಲ್ಲಿ ಚರ್ಚಿಲ್-ಅಟ್ಲಿಗಳು ನ್ಯಾಯಾಧೀಶರಿದಿರು ವಾದಿಸುವ ವಕೀಲರಂತಿದ್ದರು; ಬದಲಿಗೆ ಕಕ್ಷಿಗಾರರಿಗನುಭವ ಕೊಡುವ ವಕೀಲರಂತಾಗೋಣವೆಂದರೆ ಬ್ರಿಟಿಷ್ ಜನತೆಯ ರಾಜಕೀಯ ಜ್ಞಾನ ಹಿಂದೀಯರಷ್ಟೇ ಅಲ್ಲ! ಬ್ರಿಟಿಷ್ ಮತದಾರರ ತೀರ್ಮಾನವು ಸ್ವತಃ ಅವರದೇ-ವಾದಿ ಪ್ರತಿವಾದಿಗಳಲ್ಲಿ ಯಾರೂ ನಿರೀಕ್ಷಿಸಿರದ 'ಜಜ್‌ಮೆಂಟ್' ಇದು! ಭಾರತೀಯರು ತಮ್ಮ ಕಣ್ಣೆದಿರು ಈ ಆದರ್ಶವನ್ನಿಟ್ಟುಕೊಳ್ಳಬೇಕು; ಏನಾದರೊಂದು ಕಾರಣದಿಂದ ಒಮ್ಮೆ ನಾಯಕತ್ವ ಪಡೆದವನನ್ನು ಜೀವಾವಧಿ ಅಂಧಾನುಕರಣೆ ಮಾಡುವದನ್ನು ಬಿಡಬೇಕು; ಅನುಯಾಯಿ ಸ್ಥಾನದಿಂದ ಆಜ್ಞಾಪಿಸುವವನ ಸ್ಥಾನಕ್ಕೇರಬೇಕು.

ಈ ಅಧಿಕಾರ ಬದಲಾವಣೆಯಿಂದ ಏನೇನನ್ನು ಹಾರೈಸಬಹುದು? ಬ್ರಿಟನಿನ 'ಕೂಲಿಗಾರ ಪಕ್ಷ' 'ಸಮತಾವಾದಿ ಧೋರಣೆ'—ಎಂದೊಡನೆ ತೀವ್ರ ಬದಲಾವಣೆ ಯಾವುದನ್ನೂ ನಿರೀಕ್ಷಿಸಲಾಗುವದಿಲ್ಲ. ಬ್ರಿಟಿಷ್ ಲೇಬರ್ ಪಕ್ಷವು ಸಮತಾವಾದದ ನಿಕೃಷ್ಟಾಂಶಗಳನ್ನು ಮಾತ್ರ ಅಂಗೀಕರಿಸಿಕೊಂಡಿದೆ. ಅಪ್ರಾಗತಿಕ ಟೋರಿ ಪಕ್ಷಕ್ಕಿಂತ ಪ್ರಗತಿ ಶೀಲವಾದ ಧೋರಣೆ ಕೂಲಿಗಾರರದೇನೋ ನಿಜ. ಆದರೆ ಸಮತಾವಾದಿಗಳು ಸಮಾಧಾನ ಪಡುವಂತಹ ಸ್ಥಿತಿ ಅಲ್ಲಿಲ್ಲ. ವಿದೇಶಗಳ ಸಂಬಂಧ ಮತ್ತು ಹಿಂದೀ ಪ್ರಶ್ನೆಯ ಕುರಿತು ಟೋರಿಗಳಿಗೂ ಕೂಲಿಗಾರರಿಗೂ ಮೂಲ ಭೂತ ಭಿನ್ನಾಭಿಪ್ರಾಯವಿಲ್ಲ, ಬಣ್ಣ ವ್ಯತ್ಯಾಸ ಮಾತ್ರವಿದೆ. ಆದರೆ ಇಂಗ್ಲಾಂಡಿನ ಒಳಾಡಳಿತೆಯಲ್ಲಿ ಕೆಲವು ಗಣ್ಯ ಬದಲಾವಣೆಗಳನ್ನು ನಿರೀಕ್ಷಿಸಬಹುದು. ಉದ್ಯೋಗ, ಸಂಬಳ, ಧಾರಣೆ, ಮನೆ ವ್ಯವಸ್ಥೆ ಮತ್ತು ಸಮಾಜ ರಚನೆಗಳಲ್ಲಿ ಜನ ಸಾಮಾನ್ಯರ ಹಿತವೇ ಸಾಧಿಸಲ್ಪಡಬಹುದು. ಕೆಲವು ಮುಖ್ಯ ಉತ್ಪತ್ತಿಗಳ ರಾಷ್ಟ್ರೀಕರಣವಾಗಿ ವ್ಯಕ್ತಿಗತ ಲಾಭಗಳಿಗೆ ಧಕ್ಕೆ ಬೀಳಬಹುದು. ಪಾರ್ಲಿಮೆಂಟಿನ ಶ್ರೀಮಂತರ ಸಭೆ (House of Lords)ಯ ಅಧಿಕಾರವನ್ನು ತಗ್ಗಿಸುವಂತಹ ಸಣ್ಣ ಪುಟ್ಟ ರಾಜಕೀಯ ಬದಲಾವಣೆಗಳೂ ನಡೆದಾವು. ಅಂತೂ ಸಾಮಾನ್ಯರ ಸಂತುಷ್ಟಿಗವಕಾಶವಿದೆ.

ಪ್ರಪಂಚದ ಮೇಲಾಗುವ ಪರಿಣಾಮವೇನು? ಇಂಗ್ಲಾಂಡು-ರಶ್ಯಾ ಸಂಬಂಧವು ರಾಜಕೀಯ ಮತ್ತು ವ್ಯವಹಾರ ರಂಗಗಳಲ್ಲಿ ಸುಧಾರಿಸಲ್ಪಡುವ ಸಂಭವವಿದೆ; ಇದು ವರೆಗೂ ರಶ್ಯಾ-ಇಂಗ್ಲಾಂಡುಗಳೊಳಗಿನ ಉದರಶೂಲೆಗಳಾಗಿರುವ ಜರ್ಮನಿಯ ಆಡಳಿತೆ—ಯುರೋಪಿನ ಗಡಿ ವ್ಯವಸ್ಥೆ ಇತ್ಯಾದಿಗಳಿಗೆ ಚಿಕಿತ್ಸೆ ನಡೆಯಲು ಸಾಧ್ಯವಿದೆ. ಫೇಸಿಸ್ಟ್ ಶೇಷಾಂಶವಾಗಿರುವ ಸ್ಪೈಯಿನಿನ ಫ್ರಾಂಕೋ, ಬೆಲ್ಜಿಯಮಿನ ರಾಜಾ ಲಿಯೊಪೋಲ್ಡ್ ಮೊದಲಾದ ಹಳೇ ವಿಷವೃಕ್ಷಗಳು ಪ್ರೋತ್ಸಾಹದ ಅಭಾವದಿಂದ ಒಣಗಿ ಹೋಗಬಹುದು. ಸದ್ಯದಲ್ಲೇ ಚುನಾವಣೆ ನಡೆಯಲಿರುವ ಫ್ರಾನ್ಸ್, ಗ್ರೀಸ್ ಮೊದಲಾದ ಹೆಚ್ಚಿನ ಯುರೋಪು ರಾಷ್ಟ್ರಗಳಲ್ಲಿ ಎಡ ಪಕ್ಷೀಯರೇ ಗೆಲ್ಲುವಂತಾಗಬಹುದು. ಪರದೇಶಗಳಲ್ಲಿ ಪ್ರತಿನಿಧಿಗಳಾಗಿರುವ ಲೋರ್ಡ್ ಹೆಲಿಫೇಕ್ಸರಂತಹ ಅಪ್ರಾಗತಿಕ ರಾಯಭಾರಿಗಳು ಬಿಡಾರ ಕಿತ್ತು ಪ್ರಗತಿಶೀಲರ ನೇಮಕವಾಗಬಹುದು. ಒಟ್ಟಿನ ಮೇಲೆ ಯುರೋಪು ರಾಜಕೀಯದ ಅಸ್ತಿವಾರ ಅಲುಗಾಡದಿದ್ದರೂ ಆಕಾರ ಬದಲಾವಣೆಯಾಗುವ ಸಂಭವವಿದೆ.

ಆದರೆ ಹಿಂದುಸ್ಥಾನಕ್ಕೇನು? ಸ್ವಾತಂತ್ರ್ಯ ಶೀ ಅದು ಪಡೆಯಲಿರುವ ಲಾಭಗಳ ಪೈಕಿ ಚರ್ಚಿಲ್ ಅಮೆರಿಗಳಂಥವರ ಬಾಯಿಯಿಂದ—ರಾಹು ಗ್ರಾಸದಿಂದ—ತಪ್ಪಿಸಿಕೊಂಡುದರಿಂದಾದ ನಷ್ಟಭರ್ತಿಯೇ ದೊ

★ ಸುದ್ದಿ—ಸೂಚನೆ ★

ಅಮೇರಿಕದ ಹಡಗ ಬಲ ಮತ್ತು ಭೂ ಸೈನ್ಯಗಳಿಗಾಗಿ ಅತ್ಯಂತ ಗುಪ್ತವಾದ ಆಯುಧೋಪಕರಣಗಳನ್ನು ತಯಾರಿಸುತ್ತಿದ್ದ ಬ್ರೂಕ್‌ಲಿನ್ ಯುದ್ಧ ಕಾರ್ಖಾನೆಯ ಕೆಲಸಗಾರರೆಲ್ಲಾ ಅಕಸ್ಮಾತ್ ಕಾಯಿಲೆ ಬಿದ್ದುದರ ಕಾರಣವನ್ನು ಶೋಧಿಸಲಾಯಿತು. ಕಾರ್ಖಾನೆಯ ನೀರಿಗೆ ಜಾಪಾನರು ವಿಷ ಹಾಕಿದುದೇ ಹೇತುವೆಂದು ತಿಳಿದುಬಂದು ಆ ಸಂಬಂಧವಾಗಿ ಓರ್ವ ಜಾಪಾನನ್ನು ಕೈದುಮಾಡಲಾಯಿತೆಂದು ನ್ಯೂಯೋರ್ಕ್ ರೇಡಿಯೋ ಘೋಷಿಸಿದೆ.

ಅಪಪ್ರಚಾರ ಮೂಲಕ ವೈರಿ ರಾಷ್ಟ್ರೀಯರ ಆರೋಗ್ಯ ಕೆಡಿಸುವ ಮಿತ್ರರಾಷ್ಟ್ರೀಯರಿಗೆ ಜಾಪಾನರು ಮಾಡುವ ಪ್ರತೀಕಾರ ಇದೇ ಆಗಿರಬಹುದೆ?

೦೦ ೦೦

'ಮಿ. ಚರ್ಚಿಲ್ಲರು ಶಾಂತಿಕಾಲದ ದುರ್ಬಲ ರಾಜಕೀಯ ಮನುಷ್ಯ. ಚುನಾವಣೆಯ ಕಾಲ ಅವರು ಲಂಡನ್ ಮೊದಲಾದ ಕಡೆಗಳಲ್ಲಿ ಪ್ರಚಾರ ಸಂಚಾರ ಮಾಡಿದುದೇ ಮಹಾಪರಾಧವಾಯಿತು. ಲಂಡನ್ ಎಂಬುದು ಚರ್ಚಿಲ್ಲರ ಸ್ವಂತದ್ದೇನೂ ಅಲ್ಲ'-ಲಂಡನಿನಲ್ಲಿ ತಾ 27ರಲ್ಲಿ ನೆರೆದ ಕೂಲಿಗಾರ ವಿಜಯೋತ್ಸವ ಸಭೆಯಲ್ಲಿ ಮಿ. ಮೋರಿಸನರ ವಾಗ್ಬಾಣ.

ಲಂಡನೇ ಚರ್ಚಿಲ್ಲರದಲ್ಲವೆಂದಾದ ಮೇಲೆ ಬರ್ಲಿನ್?

೦೦ ೦೦

"ಇಂದಿನದು ಮಿ. ಚರ್ಚಿಲ್ಲರ ಪಾಲಿಗೆ ನಿದ್ರೆಯಿಲ್ಲದ ರಾತ್ರಿ. ಆದರೆ ಅದನ್ನು ನಿರ್ಮಿಸಿದವರು ನಾವಲ್ಲ—ಬ್ರಿಟಿಷ್ ಜನತೆ"-ಕೂಲಿಗಾರ ಕೂಟಾಧ್ಯಕ್ಷ ಪ್ರೊ. ಲಸ್ಕಿಯವರ ಮಾತು.

ಪಾಪ! ಚರ್ಚಿಲ್ಲರಿಗೆ ಕಡಿಮೆ ಬಿದ್ದ 'ವೋಟು'ಗಳ ಭರ್ತಿಗಾಗಿ ಇಂತಹ ಏಟುಗಳೆ?

೦೦ ೦೦

ವೆಸ್ಟ್ ಇಂಡೀಸಿನಲ್ಲಿರುವ ಸ್ಪೈಯಿನ್ ದ್ವೀಪವಾದ ಕ್ಯುಬಾದಲ್ಲಿ ಫ್ರಾಂಕೋ ವಿರೋಧಿ ಜನತಂಡವು ತಾ. 29ರಲ್ಲಿ ದಂಗೆಯೆದ್ದು ಹವಾನಾದಲ್ಲಿರುವ ಸ್ಪೇನಿಶ್ ರಾಯಭಾರಿ ಕಚೇರಿಯ ಮೇಲೆ ಧಾಳಿಯಿಟ್ಟಿತು.

ಕೂಲಿಗಾರರು ಅಧಿಕಾರಕ್ಕೆ ಬಂದರೆ ಗೊಂದಲ, ಅಶಾಂತಿ, ಗೆಸ್ಟೆಪೋ ಆಳ್ವಿಕೆ ಗಾರಂಭವಾಗುವದೆಂದು ಚರ್ಚಿಲ್ಲರು ಮೊದಲೇ ಹೇಳಿಲ್ಲವೆ?

೦೦ ೦೦

'ಜಾಪಾನಿಗೆ ಸಂಧಿ ಶರ್ತಗಳನ್ನು ಕಳುಹುವಾಗ ಆಸ್ಟ್ರೇಲಿಯದ ಅಭಿಪ್ರಾಯ ಕೇಳಿರಲಿಲ್ಲ. ಯುರೋಪು ಮತ್ತು ಶಾಂತ ಸಮುದ್ರ ಸಂಬಂಧದ ಶಾಂತಿ ವ್ಯವಸ್ಥೆಯಲ್ಲಿ ಮುಖ್ಯ ಪಕ್ಷವಾಗಿ ಭಾಗವಹಿಸುವ ಪೂರ್ಣಾಧಿಕಾರ ಆಸ್ಟ್ರೇಲಿಯಕ್ಕಿರುವುದರಿಂದ ಈ ಕೃತ್ಯವು ಖಂಡನೀಯವಿದೆ'-ಆಸ್ಟ್ರೇಲಿಯದ ವಿದೇಶ ಖಾತೆಯ ಸಚಿವ ಡಾ| ಎಚ್. ವಿ. ಎವಾಟರ ನಿಷೇಧ.

ತಾನ ಸಮಾಧಾನಿಸಬಾರದೇಕೆ? ಈ ಬಾರಿ ಜಾಪಾನಿನ ಅಭಿಪ್ರಾಯ ಕೇಳಿದ್ದಾರೆ; ಇನ್ನೊಂದು ಸಲ ಆಸ್ಟ್ರೇಲಿಯದ ಅಭಿಪ್ರಾಯ ಕೇಳಬಹುದು!

೦೦ ೦೦

"ಹೊಸ ಸರಕಾರವನ್ನು ಪ್ರಥಮತಃ ಸ್ಥಾಪಿಸಿ, ಆಮೇಲೆ ಕಾಂಗ್ರೆಸ್ ಪ್ರಮುಖರ ಬಿಡುಗಡೆ ಮಾಡಿದರಾಯಿತು ಎಂಬುದೇ ಭುಲಾಭಾಯಿ ದೇಸಾಯಿಗಳು ಲಿಯಾಖತ್ ಅಲೀ ಖಾನರೊಡನೆ ಮಾಡಿಕೊಂಡ ಒಪ್ಪಂದದ ಅರ್ಥ"-ಎಂದು ಡಾ| ಪಟ್ಟಾಭಿಯಂದಿದ್ದಾರೆ. ದೇಸಾಯಿ—ಲಿಯಾಖತ್ ಒಪ್ಪಂದವನ್ನು ಅನುಮೋದಿಸಿರುವ ನೀವು ಈ ಕುರಿತೇನನ್ನುವಿರಿ?" ಎಂದು ಪ್ರಶ್ನಿಸಿದಾಗ ಗಾಂಧಿಯವರ ಉತ್ತರ: "ಎಡ್ವೊಕೇಟ್ ಭುಲಾಭಾಯಿಗಳ ಮಟ್ಟಿಗೆ ನಾನಿಷ್ಟೇ ಹೇಳಬಲ್ಲೆ. ಅವರಲ್ಲಿದ್ದ ಏಕ ಮಾತ್ರ ಉದ್ದೇಶವೆಂದರೆ ಹಿಂದೀ ಬಿಕ್ಕಟ್ಟನ್ನು ನಿವಾರಿಸುವ ಮೂಲಕ ಕಾಂಗ್ರೆಸ್ ಸೇವೆ ಮಾಡಬೇಕೆಂಬುವೇ"

ನಿಜ. ನೆಹರು, ಆಜಾದರಂಥವರು, ಮುಂದಾಗಿ ಹೊರಬಂದರೆ ದೇಸಾಯಿಗಳ 'ಕಾಂಗ್ರೆಸ್ ಸೇವೆ'ಯ ಆವಶ್ಯಕತೆ ಕಡಿಮೆಯೆಂಬುದು ಆ ನಂತರ ದೊರೆತ ಪ್ರತ್ಯಕ್ಷಾನುಭವ.

ವೈಸರಾಯರಿಗೆ ಆಟ್ಲಿ ಸರಕಾರದ ಹೊಸ ಸೂಚನೆ ಬರಲಿದೆ!

ಜಾಪಾನನ್ನು ಸುತ್ತುಗಟ್ಟಿ ಹೊಡೆತ!

ಜಾಪಾನಿನ ಪರಿಸ್ಥಿತಿಯೀಗ ನಿಜಕ್ಕೂ ಚಿಂತಾಜನಕವಿದೆ. ಟೋಕಿಯೋ ಸಮೇತ ಮೂಲ ನೆಲದ ಎಲ್ಲಾ ಕೇಂದ್ರ ನಗರಗಳ ಮೇಲೂ ಸಾವಿರ-ಎರಡು ಸಾವಿರ ಸಂಖ್ಯೆಯಲ್ಲಿ ಮಿತ್ರರ ವಿಮಾನ ಧಾಳಿಗಳು ನಡೆಯುತ್ತಲೇ ಇವೆ. ಜಾಪಾನಿನ ಜಲಮಾರ್ಗಗಳನ್ನೆಲ್ಲಾ ದಿಗ್ಬಂಧಿಸಿ, ಆಹಾರ ಮತ್ತು ವ್ಯಾಪಾರ ವಸ್ತುಗಳ ಆಮದು ರಫ್ತು ನಿಂತಿದೆ. ಕುರೆ ಮತ್ತು ಕುಬೆ ಎಂಬೆರಡು ಜಾಪಾನ್ ನಾವೆಗಳ ಗುಪ್ತಾಶ್ರಯಸ್ಥಾನಗಳ ಮೇಲೆ ಆಂಗ್ಲೋ ಅಮೇರಿಕಾನ ವಿಮಾನಗಳು ಪ್ರಚಂಡ ಧಾಳಿ ನಡೆಸಿ ಪರ್ಲ್ ಹಾರ್ಬರ್ ದುರಂತಕ್ಕೆ ಪ್ರತೀಕಾರಮಾಡಿವೆ. ಜಪಾನ್ ನಾವೆಗೆ ಸುಧಾರಿಸಲಾಗದ ನಾಶ ಜಖಮುಗಳಾಗಿ ಅದರ ಬೆನ್ನೆಲುಬೇ ಮುರಿದು ಹೋಗಿದೆ.

ಅಗ್ನಿ ವರ್ಷ

ಅಂತೂ ಮುಂದಿನ ಆಕ್ರಮಣದ ಕ್ಷೇತ್ರ ತಯಾರಿಗಾಗಿ ಮಿತ್ರರಾಷ್ಟ್ರೀಯರು ಜಾಪಾನಿನ ಮೇಲೆ ನಡೆಸುತ್ತಿರುವ ಆಕಾಶ ಧಾಳಿಗಳು ಇದುವರೆಗಿನ ಯುದ್ಧ ಚರಿತ್ರೆಯಲ್ಲೇ ಅಪೂರ್ವವಿದ್ದು ಕಠಿಣ ಜಾಪಾನರನ್ನೂ ಕಂಗಾಲುಮಾಡಿವೆ. ಜಾಪಾನಿನ ಹನ್ನೊಂದು 'ಕಾದಿಟ್ಟ' ನಗರಗಳ ಪೈಕಿ ಆರು ನಗರಗಳ ಮೇಲೆ ಒಂದೇ ಬಾರಿ ವಿಮಾನ ಧಾಳಿ ನಡೆಸಲಾಯಿತು.

ಮಿಕ್ಕ ರಂಗಗಳಲ್ಲಿ

ಮಂಡಾಲೆ-ರಂಗೂನ್ ರಸ್ತೆಯಲ್ಲಿಯೂ ಸಿಟ್ಟಾಂಗ್ ಹೊಳೆ ವಲಯದಲ್ಲೂ ಮುಂದೊತ್ತಿ ಬಂದ ಜಾಪಾನ್ ಸೇನೆಗೂ ಮಿತ್ರ ಸೇನೆಗೂ ಕಠೋರ ಕಾಳಗ ನಡೆಯುತ್ತಿದೆ. ಈ ಹೊಸ ಧಾಳಿಯಾರಂಭಿಸಿದ ಒಂದು ವಾರದೊಳಗೆ 5000 ಜಾಪಾನರು ಹತರಾದರೆಂದು ತಿಳಿದುಬರುತ್ತದೆ. ವಿರೋಧಿಗಳು ಬರ್ಮದಲ್ಲಿ ಹೊಸತಾಗಿ ಚಟುವಟಿಕೆಯಾರಂಭಿಸಿದ ಎಲ್ಲಾ ರಂಗಗಳಲ್ಲೂ ಮಿತ್ರ ಸೇನೆಗಳವರನ್ನು ತಡೆದಿವೆ. ಮುಖ್ಯವಾಗಿ ವಿಮಾನಗಳೇ ಈ ಕಾರ್ಯವನ್ನು ಸಾಧಿಸಿದುವೆನ್ನಬಹುದು. ಶಾಂತ ಸಮುದ್ರದ ಒಕಿನಾವಾ ದ್ವೀಪವು ಪೂರ್ಣ ವಶವಾಯಿತೆಂದು ಮಿತ್ರರು ಜಾಹೀರುಮಾಡಿದ ಐದು ವಾರಗಳ ನಂತರ ಅಲ್ಲಿ ಅಳಿದುಳಿದ ಜಾಪಾನೀ ಸೇನೆಗಳು ಪ್ರತಿಭಟನೆ ಕೊಡುತ್ತಿರುವ ವಾರ್ತೆ ಈಗ ತಾನೇ ಬರಹತ್ತಿದೆ.

ರಶ್ಯದ ಧೋರಣೆಯೇನು?

ಜಾಪಾನಿಗೆ ಕೊಡುವ ಶರಣು ಸೂಚನೆಗಳಿಗೆ ಸ್ಟಾಲಿನರೂ ಸಹಿ ಹಾಕುವರೆಂಬ ನಿರೀಕ್ಷೆ ಸುಳ್ಳಾಗಿದೆ. ಮುಂದಿನ ಎಪ್ರಿಲಿನ ವರೆಗೆ ನೈತಿಕ ಬೆಂಬಲದ ಹೊರತು ಜಾಪಾನ್ ಯುದ್ಧದಲ್ಲಿ ಬೇರಾವ ಸಹಾಯವನ್ನೂ ರಶ್ಯಾ ಕೊಡುವಂತಿಲ್ಲವೆಂದು ತಜ್ಞರ ಅಭಿಪ್ರಾಯ. ತ್ರಿಮೂರ್ತಿ ಸಮ್ಮೇಲನವು ಬೇಗನೇ ಮುಗಿದು ಈ ವರುಷಾಂತ್ಯಕ್ಕೆ ಪುನಃ ಒಟ್ಟಾಗುವ ಸಂಭವವಿದೆ. ಬ್ರಿಟನಿನ ಹೊಸ ಪಾರ್ಲಿಮೆಂಟು ಅಗೋಸ್ತು ತಾ 15ಕ್ಕೆ ಪ್ರಾರಂಭವಾಗಲಿದೆ. ಆ ಅವಧಿಯೊಳಗೆ ಮಿ ಆಟ್ಲಿಯವರು ತನ್ನ ಮಂತ್ರಿಮಂಡಲದ ಎಲ್ಲಾ ಸ್ಥಾನಗಳನ್ನೂ ಆರಿಸಿಕೊಂಡು ಅಣಿಯಾಗುವರು. ಮಂತ್ರಿಮಂಡಲದಲ್ಲಿ ಖಾಲಿಯಿರುವ ಸ್ಥಾನಗಳಿಗೆ ಯುವಕರನ್ನೇ ಮಿ. ಆಟ್ಲಿ ಆರಿಸಿಕೊಳ್ಳಲಿದ್ದಾರೆಂದೂ ಹಳೇ ನಾಯಕರಿಗೆ ನಿರಾಶೆಯಾಗಲಿದೆಯೆಂದೂ ವಾರ್ತೆಯಿದೆ.

ಹಿಂದೀ ಪ್ರಶ್ನೆ ಬಿಡಿಸಲ್ಪಡುವದೆ?

ಲೇಬರ್ ಮಂತ್ರಿಮಂಡಲ ರಚನೆ ಪೂರ್ಣವಾದೊಡನೆ, ಅದರಿಂದೊಂದು 'ಇಂಡಿಯಾ - ... ...' ನೇಮಿಸಲಾಗುವದು ಈ ಕಮಿಟಿಯ ಸಭ್ಯರಾಗಿ ಪ್ರಧಾನಿ ಆಟ್ಲಿ, ಭಾರತ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿ, ಮತ್ತು ಸರ್. ಸ್ಟಾಫೋರ್ಡ್ ಕ್ರಿಪ್ಸ್ ಇರುವರು. ಕಮಿಟಿಯು ಹೊಸ ಸೂಚನೆಗಳನ್ನು ತಯಾರಿಸಿ ವೈಸರಾಯರಿಗೀಯುವದು. ಮಂತ್ರಿಮಂಡಲ ಮತ್ತು ವೈಸರಾಯರೊಳಗೆ ಈ ಕುರಿತು ಭಿನ್ನಾಭಿಪ್ರಾಯ ಹುಟ್ಟಿದಿದ್ದರೆ ಲೋರ್ಡ್ ವೇವೆಲರು ಮತ್ತೊಮ್ಮೆ ಲಂಡನಿಗೆ ಹೋಗುವ ಆವಶ್ಯಕತೆಯಿಲ್ಲ.

ಮುಂದೆ ಯಾರು?

ಇಂಡಿಯಾ ಆಫೀಸನ್ನು ವಸಾಹತು ಕಚೇರಿಗೆ ವರ್ಗಾಯಿಸುವ ಸವಿವರ ಹಂಚಿಕೆಯನ್ನೂ ಈ ಕಮಿಟಿಯು ತಯಾರಿಸುವದು. ವೇವೆಲ್ ಯೋಜನೆಯಲ್ಲಿದ್ದಂತೆ ಹಿಂದುಸ್ಥಾನಕ್ಕೊಬ್ಬ ಬ್ರಿಟಿಷ್ ಹೈಕಮಿಶನರನ ನೇಮಕ ವಂತೂ ಖಂಡಿತ. ತರುಣ ಕೂಲಿಗಾರ ಸದಸ್ಯ ಮತ್ತು ಅರ್ಥ ಶಾಸ್ತ್ರಜ್ಞನೆಂದು ಹೆಸರಾದ ಮಿ ಫಿಲಿಪ್ ನೋವೆಲರು ಪ್ರಥಮ ಹೈಕಮಿಶನರರಾಗಿ ಒರುವರೆಂದು ತಿಳಿದು ಬರುತ್ತದೆ. ಮುಂದಿನ ಭಾರತ ಕಾರ್ಯದರ್ಶಿಯ ಸ್ಥಾನವು ಲೋರ್ಡ್ ಲಿಸ್ಟೋವೆಲರಾಗಬಹುದು. ಲೋರ್ಡ್ ಲಿಸ್ಟೋವೆಲರು ಭಾರತ ಉಪಕಾರ್ಯದರ್ಶಿಯಾಗಿ ಇದ್ದವರು. ಹಿಂದೀ ಪ್ರಶ್ನೆಯನ್ನು ತೀರ್ಮಾನಿಸುವ ಆತುರವನ್ನವರು ಆಗಲೂ ಪ್ರದರ್ಶಿಸಿದ್ದರು. ಸರ್. ಕ್ರಿಪ್ಸರು ಬರಬಹುದೆಂಬ ಊಹೆ ಮೊದಲಿದ್ದರೂ ಈಗ ಅವರು ವ್ಯಾಪಾರಿ ಬೋರ್ಡಿನ ಅಧ್ಯಕ್ಷರಾಗಿದ್ದಾರೆ.

ಗಡಿನಾಡಿನ ಗಾಂಧಿಯ ತಡೆ—ಬಿಡುಗಡೆ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರು ಕಳೆದ ತಾ. 25ರಲ್ಲಿ ಪಂಜಾಬ್ ಗಡಿಯೊಳಗೆ ದಸ್ತಗಿರಿ ಮಾಡಲ್ಪಟ್ಟು ಅಂದೇ ಬಿಡಲ್ಪಟ್ಟಿದ್ದಾರೆ. ಅವರು ಮಿತ್ರ ಭೇಟಿಗಾಗಿ ಪಂಜಾಬಿನ ಅಟ್ಟಾಕ್ ಜಿಲ್ಲೆಗೆ ಪ್ರವೇಶಿಸಲಿದ್ದಾಗ ಜಿಲ್ಲಾ ಮೆಜಿಸ್ಟ್ರೇಟರ ಪ್ರವೇಶ ನಿರ್ಬಂಧಾಜ್ಞೆಯು ಅಟ್ಟಾಕ್ ಸಂಕದ ಆ ಬದಿಯಲ್ಲಿ ಜ್ಯಾರಿಯಾಯಿತು. ಅದರದಕ್ಕೆ ಸಹಿ ಹಾಕಿ, ತಾನು ಸಾರ್ವಜನಿಕ ಭಾಷಣ ಮಾಡಲಿಚ್ಛಿಸುವದಿಲ್ಲವೆಂದೂ, ಆದರೆ ನಾಗರಿಕ ಹಕ್ಕಿನ ನಿರಾಕರಣೆಯನ್ನೊಪ್ಪಲಾರೆನೆಂದೂ ಉತ್ತರಕೊಟ್ಟರು. ಸಂಕದ ಈ ಒದಿಗೆ ಬಂದಾಗ ಪೋಲಿಸ್ ಆಫೀಸರರು ಕೊಂಡು ಗಫರ್ ಖಾನರ ಕಾರನ್ನು ತಡೆದು ನಿಲ್ಲಿಸಿ, ಮುಂದೊತ್ತಿದರೆ ಡ್ರೈವರನನ್ನು ಕೈದುಮಾಡುವದಾಗಿ ಬೆದರಿಸಿ ಪ್ರತಿಬಂಧಕಾಜ್ಞೆಯನ್ನು ತೋರಿಸಿದರು. ಗಡಿನಾಡ ಗಾಂಧಿ ಕಾರಿನಿಂದಿಳಿದು ನಡೆದು ಮುಂದೆ ಹೋಗಹತ್ತಿದಾಗ ಪೋಲಿಸರವರನ್ನು ತಡೆದರು. ಅವರು ಅಲ್ಲಿಯೇ ಒಂದು ಮಂದರಿ ಬೆಡ್ಡಿಂಗ್ ಬಿಡಿಸಿ ಮಲಗಿಬಿಟ್ಟರು. ಕೊನೆಗಾ ದಿನನೇ ಅವರ ಬಿಡುಗಡೆಯಾಯಿತು. ಇದಕ್ಕೆ ಅಟ್ಟಕ್ ಜಿಲ್ಲಾ ಮೆಜಿಸ್ಟ್ರೇಟರೇ ಹೊಣೆ ಹೊರತು ಅಲ್ಲಿಯ ಸರಕಾರವಲ್ಲವಂತೆ. ಪಂಜಾಬ್ ಸರಕಾರವು ಕಲೆಕ್ಟರಿಂದ ವಿವರಗಳನ್ನು ಕೇಳಿದೆ. ಆ ಕುರಿತು ಸರಕಾರೀ ಪ್ರಕಟಣೆ ಹೊರಡಲಿದೆ

ಅಗೋಸ್ತು ತಾ. ೯ರಿಂದ

ಒಂದು ವಾರವನ್ನು 'ಹುತಾತ್ಮರ ದಿನ'ವಾಗಿ ಆಚರಿಸಿ, ರಾಷ್ಟ್ರೀಯ ಹೋರಾಟದಲ್ಲಿ ಆತ್ಮಾರ್ಪಣೆಮಾಡಿದವರ ಸ್ಮರಣೆಮಾಡಬೇಕೆಂದು ಅಧ್ಯಕ್ಷ ಆಜಾದರ ನಿರೂಪಣೆಯಿದೆ ವಿಧಾಯಕ ಕಾರ್ಯಕ್ರಮಗಳಿಗೀ ವಾರವನ್ನು ಮೀಸಲಿಡಬೇಕು. ಬಹಿಷ್ಕಾರವಿಲ್ಲದ ಕಡೆ ತಾ. ೯ರಲ್ಲಿ ಸಭೆ ಸೇರಿ ಅಧ್ಯಕ್ಷರು ಮಾತ್ರ ಭಾಷಣಮಾಡಬೇಕು— ಎಂದವರ ವಿನಂತಿ.

ಮಂಗಳೂರು.

ರಮ್ಜಾನ್ ಬಗ್ಗೆ ಹೆಚ್ಚಿಗೆ ಸಕ್ಕರೆ

ಅಗೋಸ್ತು ತಿಂಗಳಲ್ಲಿ ರಮ್ಜಾನ್ ಹಬ್ಬವಿರುವುದರಿಂದ ದ. ಕ. ಜಿಲ್ಲೆಯ ಮುಸ್ಲಿಮರಿಗೆ ಮಾತ್ರ ಹೆಚ್ಚಿಗೆ ಸಕ್ಕರೆಕೊಡುವ ವ್ಯವಸ್ಥೆಯನ್ನು ಜಿಲ್ಲಾ ಕಲೆಕ್ಟರರು ತಹಸೀಲ್ದಾರ್ ಮತ್ತು ಡಿಪ್ಯುಟಿತಹಸೀಲ್ದಾರರ ಮೂಲಕ ಮಾಡಿರುತ್ತಾರೆ. ಮಂಗಳೂರು ರೇಶನ್ ಕ್ಷೇತ್ರದೊಳಗಿನ ಮುಸ್ಲೀಮರಿಗೆ ಈಗಿರುವ ಪಾಲಿನ ಇಮ್ಮಡಿ ಸಕ್ಕರೆಯು ಈ ತಿಂಗಳಲ್ಲಿ ಮಾತ್ರ ಕೊಡಲ್ಪಡುವುದು.

Notice.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 531/44

ವಾದಿ. ವೈ. ಕೃಷ್ಣಪ್ಪ ಸೆಟ್ಟಿ ಯವರ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್. ವೈ. ಸೂರ್ಯನಾರಾಯಣ ಸೆಟ್ಟಿ. ರಾವ್ ಬಹದ್ದೂರ್ ಯಡ್ತರೆ ಅಣ್ಣಪ್ಪ ಸೆಟ್ಟಿ ಅಳಿಯ. ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದ ಕ್ಲಿಪುಸ್

ಪ್ರತಿವಾದಿರು. ಕೊಚ್ಚ್ಯ. ಪ್ಯೋತಿ ಹಾದಾ ಯವರೊಳಗೆ

5 ಮತ್ತು 7ನೇ ಪ್ರತಿವಾದಿರಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ.

5. ಮಾವಡ ಹಸನ್ ಸಾಹೇಬ. ಮಾವಡ ಮಹಮ್ಮದ್ ಸಾಹೇಬರ ಮಗ ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದ ಮುಸಲ್ಮಾನ ಕೇರಿ.

7. ಬಾಮ ಯಿಸ್ಮಾಯಿಲ್ ಸಾಹೇಬ. ಮೈದಿನ್ ಸಾಹೇಬ. ರುಕ್ನುದ್ದೀನ್ ಸಕ್ಕೆ ಯವರ ಮಗ. ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲ್ಲೂಕು ಭಟ್ಕಳ ಪೇಟಾ ಸೂಸಗಡಿ ಗ್ರಾಮದ ನವ್ವಾಯತ ಕೇರಿ.

ವಾದಿಯು ಸದ್ರಿ ಪ್ರತಿವಾದಿರಿಂದ ಬರ ಮೂಲ ಗೇಣಿ ಬಾಕಿ ಬೈವೇಜು ರೂಪಾಯಿ 300-14-9ನ್ನು ಬರಮಾಡಿಕೊಳ್ಳುವರೇ ಮೇಲ್ಕಾಣ್ಸಿದ ದಾವಾ ದಾಖಲು ಮಾಡಿರುತ್ತಾನೆ ಸದ್ರಿ ದಾವೆಯು ತಾ. 13 8-45ಕ್ಕೆ ತನಿಖೆಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮ ಉಜ್ರ ಆಗರಿದ್ದಲ್ಲಿ ಸದ್ರಿ ದಿವಸ ಬೆಳಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. Manjaya shetty.
Advocate for Plaintiff.

ಮೊಕ್ಕಾಂ:—ಕುಂದಾಪುರ
ತಾರೀಕು. 24-7-45

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು **3—8 -1945**ರಿಂದ

ಯುನಿಟಿ ಪಿಕ್ಚರ್ಸ್‌ನವರ

ಭೂಮಿ ಭಾರಾ

ಭಾರತ್ ಭೂಷಣ್, ವೀನಾ.

ಅನಂತರ:—

ಡಾಯಮಂಡ್ ಫ್ರಂಟಿಯರ್.

ಪ್ರಕಟಣೆ

ಉಡುಪಿ ಡಿ ಮು. ಕೋರ್ಟಿನಲ್ಲಿ.

O. P. No 48/1945.

ಲಕ್ಷ್ಮೀಬಾಯಿ A. ಶ್ಯಾಮರಾಯ ಯಾನೆ ಅಣ್ಣಪ್ಪ ಕಾಮತರ ವಿಧವೆ ಉಡ್ಪಿ ತಾಲೂಕು ಮೂಡಬೆಟ್ಟು ಅರ್ಜಿದಾರಳು.

ಸೋಲ್ಜಂಡ ಅರ್ಜಿದಾರಳ ಮಗ ಮತ್ತು ಶೋಸೆ (ಮಗನ ಹೆಂಡ್ತಿ) ಸಂತ್ರ ಸ್ವರ್ಗಸ್ಥರಾದ A. ರಾಘವೇಂದ್ರ ಕಾಮತ ಮ ಸೀತಾಬಾಯಿ ಕಾಮತ ಕೂಡಾ ಯಿವರಿಗೆ ಬರತಕ್ಕ ಅರ್ಜಿಯಲ್ಲಿ ವಿವರಿಸಿದ ಕೆನರಾ ಮ್ಯುಚುವೆಲ್ ಮತ್ತು ಬೊಂಬ್ಯಾ ಲ್ಯಾಫ್ ಯಿನ್ಶೂರೆನ್ಸ್ ಕಂಪ್ನಿಗಳ ಯಿನ್ಶೂರೆನ್ಸಗಳ ಆದಾಯವನ್ನು ವಸೂಲು ಮಾಡುವದೆ ಮತ್ತು ಕೆನರಾ ಬ್ಯಾಂಕ್ ಡಿಪಾಸಿಟ್, ರಾಮಕೃಷ್ಣ ಥಿಯೇಟರ್, ಮತ್ತು ಮಹಾರಾಷ್ಟ್ರ ಎಕ್ಸ್ ಬ್ಯಾಂಕ್ ಸಹಾಯಿಪ್ರಗಳ ಶ್ಯಾರ್ಸಗಳು ಟ್ರಾನ್ಸಫರ ಮಾಡಿಕೊಳ್ಳುವದೆ ಸದಾ ವಾರ್ಸಿದಾರಳು ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲ್ಲು ಮಾಡಿದ ಸೋಲ್ಜಂಡ ಅರ್ಜಿಯು ತಾ. 21 8-44ಕ್ಕೆ ದಸ್ತು ಬಗ್ಗೆ ಮುಕರರಾಗಿದೆ ಯಿಂತಲ್ಲಿ ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ 11 ಗಂಟೆಗೆ ಸೋಲ್ಜಂಡ ಕೋರ್ಟಿ ಮುಂದೆ ಸ್ವತಹಾ ಯಾ ಪ್ಲೀಡರ ಮೂಲಕ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯಿಂದ ಸದಾ ಮೀ ಮೂಲಕ ತಿಳಿಸೋಣವಾಗಿದೆ.

By order of the Court
Narasimha Vittal Kamath.
Advocate for Petitioner.

ಉಡ್ಪಿ
31-7-45



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು. ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಉಡುಪಿ

ರವಿನ್ಯೂ ಅಧಿಕಾರಿಗಳ ದಸ್ತಗಿರಿ- ಕಾಪು ಸರ್ಕಲಿನ ಮಣಿಗಾರರೂ ಆ ಸರ್ಕಲಿಗೆ ಸಂಬಂಧಪಟ್ಟ ಓರ್ವ ಶ್ಯಾನುಭೋಗರೂ, ಇಬ್ಬರು ತಳಿಯಾರಿಗಳೂ, ಒಬ್ಬ ರಿಜರ್ವ್ ಪೋಲಿಸ್ ಜವಾನನೂ ಲಂಚಕೋರತನದ ಆರೋಪಣೆಯಿಂದಾಗಿ ದಸ್ತಗಿರಿ ಮಾಡಲ್ಪಟ್ಟಿರುವರು. ಕಾಪು ಸರ್ಕಲಿನ ಜನರು ಇವರ ಉಪಟಳದ ಕುರಿತು ಜಿಲ್ಲಾ ಕಲೆಕ್ಟರರಿಗೆ ಮಾಡಿದ ಅರ್ಜಿ ತನಿಖೆಯ ಫಲಿತಾಂಶವಿದು. ಗ್ರಾಮ ಉದ್ಯೋಗಸ್ಥರು ಚೆನ್ನಾಗಿ ಕಣ್ತೆರೆಯಬೇಕಾಗಿದೆ

ತಾಲೂಕು ಕ್ಷೇತ್ರದಲ್ಲಿ- ಮಳೆಗಾಲ ಮುಗಿಯುವ ತನಕ ೫೦,೦೦೦ ಮುಡಿ ಅಕ್ಕಿ ಕಡಿಮೆ ಬೀಳಬಹುದಾಗಿ ಅಂದಾಜು ಮಾಡಲಾಗಿದೆ ಈ ಬಗ್ಗೆ ಮೇಲಧಿಕಾರಿಗಳಿಗೆ ಮನವಿ ಕಳುಹಿಸಲಾಗುವುದಂತೆ.

ಯಕ್ಷಗಾನ ಸಂಘ- ದ ಪರವಾಗಿ ಶ್ರೀಮದನಂತೇಶ್ವರ ದೇವಳದ ಹೊರ ಚಾವಡಿಯಲ್ಲಿ ಜುಲಾಯಿ ತಾ 29ನೇ ರಾತ್ರಿ ಒಂದು ಮೇಲ್ತರಗತಿಯ ಯಕ್ಷಗಾನ ಸೇವೆ ನಡೆಯಿತು ಪ್ರಸಂಗ-'ಕೃಷ್ಣ ಸಂಧಾನ'. ಶ್ರೀ ಶೇಷಗಿರಿ ಭಾಗವತರ ಹಾಡುವಿಕೆ. ಶ್ರೀ. ಎಮ್. ಗೋವರ್ಧನರಾಯರ ಮೃದಂಗ. ಪ್ರಸಿದ್ಧರಾದ ಶ್ರೀಗಳಾದ ಮಲ್ಪೆ ಶಂಕರನಾರಾಯಣ ಸಾಮಗ (ಕೃಷ್ಣ) ಪೊಲ್ಯ ದೇಜು ಸೆಟ್ಟಿ (ಕೌರವ) ಕೆ. ಕೆ. ತಂತ್ರಿ (ದ್ರೌಪದಿ) ಎ. ಹಿರಿಯಣ್ಣ ಸೆಟ್ಟಿ, (ಧರ್ಮರಾಯ) ಎಮ್. ಸುಬ್ರಾವ್ (ಭೀಮ) ಮೊದಲಾದವರು ಅರ್ಥಧಾರಿಗಳಾಗಿದ್ದರು. ಪ್ರಥಮತಃ ಎಲ್ಲವೂ ಸುಗಮವಾಗಿ ಸುಶ್ರಾವ್ಯವಾಗಿ ನಡೆದುವು ಕೊನೆಯ ಭಾಗದಲ್ಲಿ ಕೃಷ್ಣ ಕೌರವರೊಳಗಿನ ವ್ಯಕ್ತಿಗತ ಮಾತಾಗಿ ಮಾರ್ಪಟ್ಟಿತು ಅದು ಹಾಗೆಯೇ ಬೆಳೆದು ಅನುಕ್ರಮವಾಗಿ ವಾಗ್ಯುದ್ಧ, ಕುತರ್ಕ, ಅವಹೇಳನ, ಮತ್ತು ಕೊನೆಗೆ ಬೈವಾಟವಾಗಿ ಪರಿಣಮಿಸಿತು. ಅರ್ಥಧಾರಿಗಳು ತಮ್ಮಲ್ಲಿ ಆವಾಹನೆ ಮಾಡಿಕೊಂಡ ಆಯಾಗ ಪುರುಷರ ಸ್ಥಾನ ಮಾನಗಳ ಮತ್ತು ಸಭಾ ಲಕ್ಷಣಗಳ ಗಡಿ ಮೀರಿ ಮುಂದೊತ್ತಿದರು. ಪರಿಣಾಮವಾಗಿ ಸಭೆಯು ಅತೃಪ್ತಿ ಮತ್ತು ಉದ್ವೇಗದಿಂದ ಚದರುವಂತಾಯಿತು. ಇಂತಹ ಕಲಾ ಕೂಟಗಳು ಕಲಹ ಕೂಟಗಳಾಗದಂತೆ, ನಿಯಮ ಪಾಲನೆಗಾಗಿ ಓರ್ವ ಅಧ್ಯಕ್ಷನಿರಬೇಕಾದುದು ಅಗತ್ಯವಲ್ಲವೆ?

ಕಾರ್ಕಳ- ಪಂಚಾಯತ ಬೋರ್ಡು ಕಡೆಯಿಂದ ಸ್ಥಳೀಯ ತಾಲೂಕು ಆಫೀಸಿನ ಬಳಿ, ಹೊಸತೊಂದು ಮಾರ್ಕೆಟು ಸಾರ್ವಜನಿಕರ ಸೌಕರ್ಯದ ಬಗ್ಗೆ ತೆರೆಯಲ್ಪಡುವದು. ಒಳ್ಳೇ ಬೆಲ್ಲವೇ ಸಿಗುವುದಿಲ್ಲ. ಬಡ ಜನರ ಹಿತ ದೃಷ್ಟಿಯಿಂದ ಸಮ್ಬಂಧಪಟ್ಟ ಅಧಿಕಾರಿಗಳು ಬೆಲ್ಲದ ಅಭಾವವನ್ನು ಹೋಗಲಾಡಿಸುವರಾಗಿ ನಂಬಲಾಗಿದೆ.

ಮಂಗಳೂರು.

ಸಕ್ಕರೆ ದರಗಳಲ್ಲಿ ತಿದ್ದುಪಡಿ ಕಲೆಕ್ಟರರ ಪ್ರಕಟಣೆ- ಡಿಫೆನ್ಸ ಕಾನೂನು ಮೇರೆಗೆ ಅಧಿಕಾರ ಹೊಂದಿದ ನಮ್ಮ ಜಿಲ್ಲಾ ಕಲೆಕ್ಟರರು ತಮ್ಮ ತಾ. 23 7-45ರ ಪ್ರಕಟನೆಯಲ್ಲಿ ಸಕ್ಕರೆಯ ರಖಂ ವ ಚಿಲ್ಲರೆ ದರಗಳನ್ನು ನಿರ್ಣಯಿಸಿದ್ದ ಮೇರೆಗೆ, ಆಯಾ ಸ್ಥಳಗಳಲ್ಲಿ ಜಾರಿ ಇರತಕ್ಕ ರಾತ್ಲು I ರ ಚಿಲ್ಲರೆ ದರವನ್ನು ಮಾಜಾಲಿಯಾ (E. 25), ಮಾಜಾಲಿಯಾ (D. 23), ಮೋತಿಪುರ (D. 27 ತಾ 15 5-45ರ ನಂತರ ನಂತರ ಖರೀದಿ ಮಾಡಿದ್ದು,) ಮೋತಿಪುರ (D. 27 ತಾ.15 5-45 ಕ್ಕಿಂತ ಮುಂಚೆ ಖರೀದಿ ಮಾಡಿದ್ದು) ಈ ನಾಲ್ಕು ಜಾತಿಯ ಮಟ್ಟಿಗೆ ಅನುಕ್ರಮವಾಗಿ ಕೆಳಗೆ ಕೊಟ್ಟಿದೆ.

ಮಂಗಳೂರು ಪಟ್ಟಣ:-0-4 0, 0-4 0' 0-4 1, 0 4 0, ಬಂಟ್ವಾಳ 0 4 2, 0-4 3, 0 4-3; ಕಾಸರಗೋಡು, ಪುತ್ತೂರು ಮತ್ತು ಬೆಳ್ತಂಗಡಿ 0 4 3, 0-4 3, 0-4 4, 0 4-3, ಹೊಸದುರ್ಗ.-0 4 3, 0 4 3, 0-4-4, 0-4-4; ಉಡುಪಿ:-0-4 4, 0-4-4, 0-4-5, 0 4-4; ಕುಂದಾಪುರ:. 0-4-5, 0 4 5, 0-4-6, 0 4 5; ಕಾರ್ಕಳ 0 4-3, 0-4-4, 0-4 3.

ಈ ದರಗಳಲ್ಲಿ ಸೇಲ್ಸ್ ಟೇಕ್ಸ್ ಸೇರಿಲ್ಲ.

ಬಿಡುಗಡೆ- ಸ್ಥಾನಬದ್ಧ ಕೈದಿಯಾಗಿದ್ದ ಶ್ರೀ ಕೈದೇಲು ತಿಮ್ಮಪ್ಪ ಸೆಟ್ಟರು ತಾ 7ರಲ್ಲಿ ಬಿಡುಗಡೆ ಹೊಂದಿ ಮರುದಿನ ಮಂಗಳೂರಿಗೆ ಬಂದು ತಲ್ಪಿರುವರು.

(೫ನೇ ಪುಟದಿಂದ ಮುಂದುವರಿದುದು.)

ನ್ನೆಲ್ಲಾ ಬಿಡತಕ್ಕದ್ದೆಂದು ಮಾಡಿದ ಜಾಹೀರುನಾಮೆ) ಯ ಎಲ್ಲಾ ಶರ್ತಗಳನ್ನೂ ಅಕ್ಷರಶಃ ಪಾಲಿಸತಕ್ಕದ್ದು. ಮತ್ತು ಹೊನ್ಶು, ಹೊಕ್ಕಾಯಿಡೊ, ಕ್ಯೂಶು, ಶಿಕೋಕು ಹಾಗೂ ನಾವು ಸೂಚಿಸುವ ಇತರ ಸಣ್ಣ ದ್ವೀಪಗಳಲ್ಲಿ ಮಾತ್ರ ಜಾಪಾನಿನ ಅಧಿಕಾರವಿರತಕ್ಕದ್ದು. 4 ಜಾಪಾನೀ ಸೇನೆಗಳು ಪೂರ್ಣ ನಿಶ್ಶಸ್ತ್ರಗೊಂಡು ತಮ್ಮ ಮೂಲಭೂಮಿಗೆ ತೆರಳಿ ಶಾಂತ ಮತ್ತು ಕಸುಬು ಜೀವನ ಕೈಕೊಳ್ಳತಕ್ಕದ್ದು. 5 ಜಾಪಾನ್ ಜನತೆಯನ್ನು ಗುಲಾಮರನ್ನಾಗಿಸುವ ಅಥವಾ ಆ ರಾಷ್ಟ್ರವನ್ನು ಧ್ವಂಸ ಮಾಡುವ ಉದ್ದೇಶ ನಮಗಿಲ್ಲ. ವಾಕ್, ಧರ್ಮ ಮತ್ತು ಯೋಚನಾ ಸ್ವಾತಂತ್ರ್ಯ ಎಲ್ಲರಿಗೂ ಕೊಡಬೇಕಲ್ಲದೆ ಜಾಪಾನ್ ಜನತೆಯ ಪ್ರಜಾಸತ್ತಾಭಿಪ್ರಾಯಗಳ ಸಮರ್ಥನೆಗೆ ಕಂಟಕಪ್ರಾಯವಾಗಿರುವ ಎಲ್ಲವುಗಳನ್ನೂ ಜಾಪಾನ್ ಸರಕಾರವು ಕಿತ್ತೊಗೆಯಬೇಕು. 6 ಜಾಪಾನು ತನ್ನ ನಾಗರಿಕ ಆರ್ಥಿಕ ಭದ್ರತೆಗಳನ್ನೆಲ್ಲಾ ಹೊಂದಬಹುದು. ಆದರೆ ಯುದ್ಧೋಪಕರಣದ ಎಲ್ಲಾ ಉದ್ಯಮಗಳು ನಿರ್ನಾಮವಾಗಬೇಕು. ಜಾಗತಿಕ ವ್ಯಾಪಾರ ಸಂಬಂಧದ ಹಕ್ಕೂ ಜಾಪಾನಿಗಿದೆ. 7 ಈ ಕುರಿತು ಏನೊಂದು ಬದಲಾವಣೆ ಮಾಡುವದೂ ಅಸಾಧ್ಯ. ಇನ್ನು ಕಾಯುವಂತೆಯೂ ಇಲ್ಲ. ಇದಕ್ಕೊಪ್ಪಿ ಕೂಡಲೇ ಶರಣಾಗದಿದ್ದಲ್ಲಿ ಸರ್ವನಾಶವನ್ನು ಸಾಧಿಸಲಾಗುವದು.

ಜಾಪಾನಿನ ಧಿಕ್ಕಾರ

ಮಿತ್ರರ ಜಾಹೀರುನಾಮೆಯಾದೊಡನೆ ಪ್ರಧಾನ ಮಂತ್ರಿ-77 ವರುಷದ ಮುದುಕ-ಎಡ್ಮಿರಲ್ ಸುಝುಕಿಯವರ ನಿವಾಸದಲ್ಲಿ ಜಾಪಾನ್ ಮಂತ್ರಿಮಂಡಲದ ಅವಸರದ ಸಭೆ ಸೇರಿ ಮಿತ್ರರ ಶರಣು ಶರ್ತಗಳ ಪರಿಶೀಲನೆ ನಡೆಯಿತು ಪರಿಣಾಮವಾಗಿ 'ಹೋರಾಟ ಸಾಗಲಿ' ಎಂದು ಉತ್ತರ ಹೊರಟಿದೆ. "ಜಾಪಾನ್ ತನ್ನ ನಿಶ್ಚಿತ ಧೋರಣೆಗನುಸಾರವಾಗಿ ಮಹಾನ್ ಪೂರ್ವ ಏಸ್ಯಾದ ಯುದ್ಧವನ್ನು ತುತ್ತ ತುದಿವರೆಗೂ ಮುಂದೊತ್ತುವದು" ಎಂಬ ಹೇಳಿಕೆ ಯಾಗಿದೆ. ಮಿತ್ರರ ಘೋಷಣೆಯಲ್ಲಿ ಜಾಪಾನ್ ಚಕ್ರವರ್ತಿಗಳ ಪ್ರಸ್ತಾಪ ಬಂದಿಲ್ಲ. ಅವರು ಅಲ್ಲಿಯ ಯುದ್ಧ ನಾಯಕರ ವಿರುದ್ಧವಿದ್ದಾರೆಂದೂ ಸಮರ ಸಂಚಾಲಕರನ್ನೋಡಿಸುವ ಒಳಸಂಚು ಜಾಪಾನಿನಲ್ಲಿದೆಯೆಂದೂ ಮಿತ್ರರಾಷ್ಟ್ರೀಯರಿಗೆ ವರದಿಗಳು ಬಂದಿವೆ. ಈ ಭೇದವನ್ನು ಬೆಳೆಯಿಸಲು ಮಿತ್ರ ವಿಮಾನಗಳು ಜಾಪಾನಿನಲ್ಲಿ ಕರಪತ್ರಗಳನ್ನು ಚೆಲ್ಲುತ್ತಿವೆ.

ಶಿಪಾಯಿಗಳ ಮನಿಯಾರ್ಡರುಗಳು ಸೈನ್ಯದ ಟ್ರಕ್ಕುಗಳಲ್ಲಿ ರವಾನೆಯಾಗುತ್ತಿವೆ

ಭಾರತ ದಳದವರು ತಮ್ಮ ಸಂಸಾರಗಳಿಗೆ ಕಳಿಸುತ್ತಿರುವ ಲಕ್ಷಾಂತರ ರೂಪಾಯಿನ ಮನಿಯಾರ್ಡರುಗಳು ಜಲಂಧರ್ ಪ್ರಾಂತದಲ್ಲಿ ಮಿಲಿಟರಿ ಟ್ರಕ್ಕುಗಳಲ್ಲಿ ರವಾನೆಯಾಗುತ್ತಿವೆ. ಇದರಿಂದ ರವಾನಿಸುವುದಕ್ಕೂ ಹೆಚ್ಚು ಕಾಲ ಹಿಡಿಯುವುದಿಲ್ಲ ಕಳೆದ ವರ್ಷ ಈ ಹೊಸ ಉಪಾಯವನ್ನು ಪರೀಕ್ಷಿಸಿದ್ದಾಯಿತು. ಈಗ ಇದನ್ನು ಅನುಸರಿಸಲು ಅಪ್ಪಣೆಯಾಗಿದೆ. ಇದೇ ರೀತಿ ಕೊಹಾಟ್ ಜಿಲ್ಲೆಯಲ್ಲಿಯೂ ಮಾಡಬೇಕೆಂದಿವೆ ದೂರದೂರದಲ್ಲಿರುವ ಹಳ್ಳಿಗಳಿಗೆ ಈ ಹಣದ ಹೊರೆ ಹೊತ್ತ ಮೋಟಾರುಗಳು ಹೋದರೆ ಹಳ್ಳಿಯ ಜನಕ್ಕೂ ಈ ನೋಟ ಚೆನ್ನಾಗಿ ಒಗ್ಗುತ್ತದೆ'

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O S. 91/45.

V. ಶಾರದಾ ಬ್ಯಾ --ವಾದಿ

ಅೃತೆ ಹೆಂಗ್ಸು ಕೂಡಾ —ಪ್ರತಿವಾದಿರು.

16ನೇ ಪ್ರತಿವಾದಿ. ಕೊರಗಪ್ಪ, ಕೊರಪೊಳು ಹೆಂಗ್ಸಿನ ಮಗ, ಪುತ್ತೂರು ತಾಲ್ಲೂಕು ನೀರಬಂಧ ಗ್ರಾಮದ ಅರೆಬೆಟ್ಟು ಯವರೀಗೆ

ಮೇಲ್ತೋರುವ ವಾದಿಯು ನಿಮ್ಮ ಮೇಲೆ ಕೂಡಾ ತಾರೀಕು 26 3 1920ರಲ್ಲು ಬರೆಕೊಟ್ಟ ರೂಪ್ಯಾ 500 0 0ರ ಅಡವಿನ ಸ್ವಲು ಬಡ್ಡಿ ವ್ಯವಜಗೆ ಮಾಡಿದ ದಾವೆಯು ತಾರೀಕು. 10-8 45ಕ್ಕೆ ಯೀ ಕೋರ್ಟಿನಲ್ಲಿ ಯಿಟ್ಟಿರುತ್ತದೆ ಆ ದಿವಸ ನೀವು ಸ್ವತಹನಾಗಲೀ ವಕೀಲರ ದ್ವಾರನಾಗಲೀ ಗಂಟೆ 10ಕ್ಕೆ ಹಾಜ್ರಾಗದಿದ್ರೆ ನಿಮ್ಮ ಗೈರು ಹಾರು ಹಾಜರಿಯಲ್ಲಿ ವ್ಯಾಜ್ಯವು ತೀರ್ಮಾನಿಸಲಾದೀತು

(*Sd*) **B. Chidananda Rao.**
Pleader for Plaintiff.

ಪುತ್ತೂರು
ತಾ. 25-7 45

Notice

ಪುತ್ತೂರು ಡಿ ಮು ಕೋರ್ಟಿನಲ್ಲಿ.

R. E. P. 369/44 O. S. 374/40.

ಶೇಷಮ್ಮ —ಅರ್ಜಿದಾರಳು.

ಸರಸ್ವತಿ ಅಂಮ ಕೂಡಾ —ಎದ್ರಿರು

2 ಗಣಪತಿ ಭಟ್ಟ, ಮುಂದಿಲ ಬಹಾಬಲೇಶ್ವರ ಮಗ, ಪುತ್ತೂರು ಕ್ಸಬಾ ಯಿವರೀಗೆ.

ಮೇಲ್ತೋರುವ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ ಆದ್ದರಿಂದ ವಿಕ್ರಯದ ಯಿಸ್ತಿಹಾರಿನ ಷರತುಗಳನ್ನು ನಿರ್ಣಯಿಸುವ ಬಗ್ಗೆ 1945ನೇ ಯಿಸ್ವಿ ಅಗೋಸ್ತು ತಿಂಗಳ ತಾರೀಕು 8ಕ್ಕೆ 10 ಗಂಟೆಗೆ ಈ ಕೋರ್ಟು ಮುಂದೆ ನೀವು ಸ್ವತಹವಾಗಲೀ ವಕೀಲರ ಮುಖಾಂತರವಾಗಲೀ ಉಪಹರಿಸದಿದ್ದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(*Sd*) **Chidananda Rao.**
Pleader for Petitioner.
By Order of the Court.

ಪುತ್ತೂರು
ತಾ. 10-7 45

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

	ರೂ. ಆ.				
		ಮೂರು ಪ್ರಹಸನಗಳು	0-14	ವಿಧಿಭೂಮಿ	0.2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0-8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0-4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ಮುಗ್ಗುಲು	0-3
● ನಾಟಕಗಳು		ನಗೆಸೊಟಗಳು	0-14	ಶ್ರೀಮುಖ	I-0
		ಅನ್ನದೇವರು		ಪುರಂದರದಾಸರ ಕೀರ್ತನೆ	I-10
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	I 0	ಭಗವದ್ಗೀತಾ (ಮೂಲ-	
ದೇಶಭಕ್ತ	0-14	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	I-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0-10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0-3	ಮುಂದಿನ ದೇವರು	0-3
ಸಂಶಯ ಪಿಶಾಚಿ	0-8	ಕಂಡೂಕಾಣದ ನಾಟಕಗಳು	0-8	ರಾಷ್ಟ್ರಸಭೆಯ ಇತಿಹಾಸ	2 8
ರಂಗಭೂಮಿ	0-8	ನಾರೀಹೃದಯ	0-14	ಬಾಲವಾಙ್ಮಯ	0-13
ಪ್ರಕಾಶ	2-0	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0 6	ನಕ್ಷತ್ರಜ್ಞಾನ	0-8
ಆರೋಗ್ಯ ಪ್ರತಾಪ	0-12	ಅಹಲ್ಯಾ ಇತ್ಯಾದಿ ಕತೆಗಳು	0-12	ಪಾಪಪೂರಿತ ಪಟ್ಟಣಗಳು	1-8
ಪಂಚಾರತಿ	0-5	ಲೋಪಾಮುದ್ರೆ	0-6	ಚಿಗುರು	0 6
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	ಗೀತೆಯ ಕೈಗನ್ನಡಿ	0-8

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.



Approved firm by the Govt. of Mysore' Certified by the Agent of the Govt. of India in Ceylon.

ಮುಗಿ
ಪುಸ್ತಕಗಳು
ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟರುಗಳು, ದಾಖಿಲು ಮತ್ತು ಮಂತ್ಲಿ ರಿಟರ್ನ್ಸ್ ಫಾರ್ಮುಗಳು, ರಿಕಾರ್ಡು ಶೀಟುಗಳು ದೊರೆಯುತ್ತವೆ.
ಮುಗಿ ಪುಸ್ತಕ 1ಕ್ಕೆ 0—1—0
" " 50ಕ್ಕೆ 2—9—0
" " 100ಕ್ಕೆ 5—0—0
Navabharat Book Depot,
UDIPI.

(೪ನೇ ಪುಟದಿಂದ ಮುಂದುವರಿದುದು.)

ತ್ರಿಮೂರ್ತಿ ಸಮ್ಮೇಲನದಲ್ಲಿ

"ಇದು ನಿಜಕ್ಕೂ ಉಲ್ಲೇಖನೀಯ ಮತ್ತು ಕೃತಜ್ಞತಾರ್ಹ ಪರಿಣಾಮ" ಎನ್ನುತ್ತಾ ಮಿ. ಆಟ್ಲೀಯವರಂದಿದ್ದಾರೆ—"ನಮ್ಮ ತತ್ವಗಳು ಮತದಾರರಿಗೆ ಸಮ್ಮತವೆಂಬುದೂ ಅವುಗಳನ್ನೀಗ ಕಾಲಾನುಗುಣವಾಗಿ ಜ್ಯಾರಿಗೆ ತರಲೇಬೇಕೆಂಬುದೂ ಇದರಿಂದ ಸ್ಪಷ್ಟ. ಕೂಲಿಗಾರರು ಇಂತಹ ಸ್ಪಷ್ಟ ಬಹುಮತ ಪಡೆದುದು ಬ್ರಿಟಿಷ್ ಚರಿತ್ರೆಯಲ್ಲಿ ಇದೇ ಮೊದಲು. ಇದರಿಂದ ಸಮತಾವಾದಿ ಪಕ್ಷದ ಧೋರಣೆಗಳನ್ನು ಕಾರ್ಯರೂಪಕ್ಕಿಳಿಸಲು ನಮಗೆ ಸಾಧ್ಯವಾಗಿದೆ". ಮಿ ಚರ್ಚಿಲ್ಲರು ರಾಷ್ಟ್ರಕ್ಕಿತ್ತ ತನ್ನ ವಿದಾಯ ಸಂದೇಶದಲ್ಲಿ ಜಾಪಾನ್ ಯುದ್ಧ ವಿಜಯದ ಅಂತಿಮ ವ್ಯವಸ್ಥೆ ನಡೆದಿದೆಯಾದ್ದರಿಂದ ಹಲವರ ನಿರೀಕ್ಷೆಗೆ ಮೊದಲೇ ಅದು ಮುಗಿಯಬಹುದೆಂಬ ಆಶ್ವಾಸನೆಕೊಟ್ಟು, ತನ್ನಾಡಳಿತೆಯ ಕಷ್ಟಕಾಲದಲ್ಲಿ ತನಗೆ ನೆರವನ್ನೂ ತನ್ನ ಮೇಲೆ ಗೌರವವನ್ನೂ ಪ್ರದರ್ಶಿಸಿದ ರಾಷ್ಟ್ರಕ್ಕೆ ಧನ್ಯವಾದ ಕೊಟ್ಟಿದ್ದಾರೆ. ಬರ್ಲಿನ್ ಸಮ್ಮೇಲನಕ್ಕೆ ಪ್ರಧಾನ ಮಂತ್ರಿ. ಆಟ್ಲೀಯವರೊಂದಿಗೆ ಮಿ ಚರ್ಚಿಲ್ಲರೂ ಹೋಗಲಿರುವರೆಂದು ಪ್ರಥಮ ವಾರ್ತೆಯಿತ್ತು. ಆದರೆ ಕೂಲಿಗಾರ ಧೋರಣೆಯು ಸ್ಪರ್ಶದೋಷವಿಲ್ಲದೇನೇ ಸಾಗಲಿ ಎಂದು ಸೂಚಿಸಿ, ತಾನು ತ್ರಿಮೂರ್ತಿ ಸಮ್ಮೇಲನಕ್ಕೆ ಬದಲೂರೆನೆಂದು ಚರ್ಚಿಲ್ಲರು ಕೊನೆಗೆ ನಿರಾಕರಿಸಿದರು. ಆ ಕಾರ್ಯಭಾರವನ್ನು ಹೊತ್ತು ಪ್ರಧಾನಿ ಆಟ್ಲೀ ಮತ್ತು ವಿದೇಶ ಮಂತ್ರಿ ಬೆವಿನರು ಪೋಟ್ಸ್‌ಡಾಮಿಗೆ ಹೋಗಿದ್ದಾರೆ, ತಾ. 28ರಿಂದ ತ್ರಿಮೂರ್ತಿ ಸಮ್ಮೇಲನ ಪುನಃ ಆರಂಭವಾಗಿದೆ. ಮೂಲ 'ತ್ರಿಮೂರ್ತಿ'ಗಳಲ್ಲಿ ಈಗ ಉಳಿದವರು ಸ್ಟಾಲಿನರೊಬ್ಬರೇ. ಮೊದಲನೇ ಬಾರಿ ಆಟ್ಲೀಯವರನ್ನು ಹಿಂದಿಟ್ಟುಕೊಂಡು ಹೋದ ಚರ್ಚಿಲ್ಲರ. ಎರಡನೇ ಬಾರಿ ಮುಂದಿಟ್ಟುಕೊಂಡು ಹೋಗಲು ನಾಚಿದಿರುವರೆ?

ಮತದಾರರಿಂದಾದ ಮಹಾಕ್ರಾಂತಿ

ಪ್ರಜಾಪ್ರಭುತ್ವವೆಂದರೇನು ಎಂಬುದನ್ನೀ ಬಾರಿ ಬ್ರಿಟಿಷ್ ಮತದಾರರು ಲೋಕದೆದುರು ಪ್ರದರ್ಶಿಸಿದ್ದಾರೆ. ತಮ್ಮ ಮನಸ್ಸಿನಲ್ಲೇನಿದೆ ಎಂಬ ಗುಟ್ಟನ್ನು ಮತದಾರರು ಚರ್ಚಿಲ್—ಆಟ್ಲೀಗಳಿಗೂ ಕೊಟ್ಟಿದ್ದಿಲ್ಲ. ಪ್ರಜಾಪ್ರಭುತ್ವದಲ್ಲಿರಬೇಕಾದುದು ಸ್ವಾಮಿನಿಷ್ಠೆಯಲ್ಲ, ಸಾಮಾನ್ಯರ ಪ್ರತಿಷ್ಠೆ; ಮಹಾತ್ಮರ ಅನುಯಾಯಿಯತ್ವವಲ್ಲ, ಮತದಾರರ ಅಂಕೆ—ಎಂಬ ಮಾತಕ್ಕೆ ಬ್ರಿಟಿಷ್ ಜನತೆ ಮೇಲ್ಪಂಕ್ತಿ ಹಾಕಿದೆ. ಹತ್ತು ವರುಷಗಳ ಆಳ್ವಿಕೆಯಲ್ಲಿ ಟೋರಿಗಳು. ಫ್ರಾಂಕೋನ ಅಭಿವೃದ್ಧಿ, ಜೆಕೊಸ್ಲೊವೇಕಿಯದ ಬಲಿ, ಹಿಟ್ಲರ್ ಮುಸೋಲಿನಿಗಳ ಅಪರಾಧಗಳನ್ನು ಸಾಧಿಸಿದ್ದರು. ಬ್ರಿಟನನ್ನು ಬಹುತೇಕ ನಿಶ್ಶಸ್ತ್ರವಾಗಿಯೇ ಯುದ್ಧಕ್ಕಿಳಿಸಿದ್ದರು; ಇಂತಹ ಪಾಪವನ್ನು ಚರ್ಚಿಲ್ಲರ ವಿಜಯ ಸಂಪಾದನೆಯೊಂದು ತೊಳೆಯಲಾರದೆ ಹೋಯಿತು. ಮೇಲಾಗಿ ಚುನಾವಣೆಯ ವೇಳೆ ಮಿ. ಚರ್ಚಿಲ್ಲರ ತನ್ನ ಹಳೇ ಶ್ರೀಮಂತ ಪಕ್ಷಪಾತಿ ಧೋರಣೆಯೊಂದನ್ನಲ್ಲದೆ ಉಚ್ಚ ಕಾರ್ಯಕ್ರಮಗಳನ್ನು ಮುಂದಿಡಲಿಲ್ಲ. ಬದಲಿಗೆ ಸಭ್ಯತೆ ಸಮಾನತೆಗಳಿಗ್ಗೆ ಮೀರಿ ದುರಹಂಕಾರ, ದುಶ್ಚೇಷ್ಟೆಗಳನ್ನು ಪ್ರದರ್ಶಿಸಿದ್ದರು. ತನ್ನ ವಿನಹಾ ಬ್ರಿಟನಿಗೆ ಗತಿಯಿಲ್ಲವೆಂಬಂತೆ ಸರ್ವಾಧಿಕಾರಿ ರೇಂಕಾರದಿಂದಲೇ ವರ್ತಿಸಿದ್ದರು. ಲೇಬರ್ ಪಕ್ಷದ ಸೌಮ್ಯ ಸಮತಾವಾದಿ ಕಾರ್ಯಕ್ರಮಗಳನ್ನೂ 'ಜಾರಿಯಾಗಬೇಕು ಗೆಸ್ಟೆಪೋ ಸಹಾಯದಿಂದಲೇ' ಎಂದು ಜನತೆಯನ್ನು ಬೆದರಿಸುವ ಮೂಲಕ ಟೋರಿಗಳೆಂತಹ ಅಪ್ರಾಗತಿಕರೆಂಬುದರ ಸ್ಪಷ್ಟ ಪ್ರದರ್ಶನಮಾಡಿದ್ದರು. ಇದಕ್ಕೆ ಪ್ರತಿಯಾಗಿ ಕೂಲಿಗಾರ ಪಕ್ಷದ ಸರ್ವರಿಗೂ ಉದ್ಯೋಗ, ಒಳ್ಳೇ ಸಂಬಳ ಮತ್ತು ಧಾರಣೆ, ಸಾಕಷ್ಟು ಮನೆ ವ್ಯವಸ್ಥೆ, ಸಾಮಾಜಿಕ ಭದ್ರತೆ ಮೊದಲಾದ ಪ್ರಗತಿಪರ ಕಾರ್ಯಕ್ರಮಗಳಿಗೆ ಯುದ್ಧ ಪೀಡಿತ ಮತದಾರರು ಸಹಜವಾಗಿ ಒಲಿದರು. ಆದ್ದರಿಂದಲೇ ಬೇಸಾಯ ಕ್ಷೇತ್ರ ಮತ್ತು ಹಳ್ಳೀ ವಲಯಗಳಲ್ಲೆಲ್ಲಾ ಕೂಲಿಗಾರ ಪಕ್ಷಕ್ಕೆ ಪ್ರಬಲ ಬಹುಮತಗಳು ಬಿದ್ದುವು. ಹಿಂದೆಂದೂ ಕೂಲಿಗಾರ ಪ್ರತಿಷ್ಠೆಯ ಗಾಳಿ ಕೂಡಾ ಸೋಂಕದಿದ್ದ ಕಾರ್ಖಾನೆವಲಯ ಮತ್ತು ಪಟ್ಟಣ ಕೇಂದ್ರಗಳೂ ಈ ಬಾರಿ ಅವರಿಗೊಲಿದುವು. ಹಳೇ ಪಂಥವೆಂದರೆ ಉರಿದುಬೀಳುವ 30 ವರುಷದೊಳಗಿನ ಸುಮಾರು 7 ಮಿಲಿಯ ತರುಣತರುಣಿಯರು ಮತಾಧಿಕಾರ ಪಡೆದಿದ್ದು—ದುಃಕಾಲಕ್ರಾಂತಿಯ ಪರಿಣಾಮವಾಗಿ ರೈತರು ಮತ್ತು ಕೂಲಿಗಾರರಲ್ಲಿ ನವಜಾಗ್ರತಿ, ಸುಸಂಘಟನೆಯುಂಟಾಗಿದ್ದುದು—ಒಟ್ಟಿನ ಮೇಲೆ ಬೆವರು ಸುರಿಸಿದ ಕಾರ್ಮಿಕರು ಮತ್ತು ರಕ್ತ ಸುರಿಸಿದ ಯೋಧರು ಕೂಲಿಗಾರರಿಗೊಲಿದುದೇ ಈ ಪ್ರಚಂಡ ವಿಜಯಕ್ಕೆ ಕಾರಣ. ಇದೀಗ ಕಾಲಪುರುಷನ ಕೈವಾಡ; ನವ ಕ್ರಾಂತಿಯ ಪರಿಣಾಮ

ವಿಜಯದ ಕೈಯಿ

ಅವನು ಈಗ, ಅವನ ಮೈಮೇಲೆ ಅನೇಕ ಕಲಿತನದಿಂದ ಕಾದಿದ ಕಾಳಗಗಳಿಂದುಂಟಾದ ಘಾಯದ ಕಲೆಗಳಿದ್ದರೂ, ಸುಧಾರಿಸಿಕೊಳ್ಳುತ್ತಿದ್ದಾನೆ. ಅವನು ಕೆರಿನ್, ಅಂಬಾಲಲಾಗ ಮತ್ತು ಟೋಬ್ರುಕ್‌ಗಳಲ್ಲಿ ಇದ್ದನು. ಅವನು ಮೊಟ್ಟಮೊದಲು ಎಲ್ ಆಲಮೀನದಲ್ಲಿ ರೋಮೆಲನನ್ನು ತಡೆಯಲಿಕ್ಕೆ ಸಹಾಯಮಾಡಿದನು, ಮತ್ತು ನಂತರ ಅವನನ್ನು ಟ್ಯುನೀಸಿಯಾದ ಪರ್ಯಂತರ್ವ ಬೆನ್ನಟ್ಟಿದನು. ಅವನು, ಗುಸ್ಟವ್ ಲೈನು, ಅಡೋಲ್ಫ್ ಹಿಟ್ಲರ್‌ಲೈನು ಮತ್ತು ಗಾಥಿಕ್ ಲೈನು ಕಡಿದುಹಾಕಲ್ಪಟ್ಟ ಕಾಲದಲ್ಲಿ ಸಹ ಅಲ್ಲಿ ಇದ್ದನು.

ಅವನು ತನ್ನ ವಿಜಯದ ಪೂಮಾಲೆಗಳ ಮೇಲೆ ಈಗ ವಿಶ್ರಾಂತಿ ಹೊಂದುವದಿಲ್ಲ. ಅವನ ಕೆಲಸವಿನ್ನೂ ಅಪೂರ್ಣ. ಇನ್ನೂ ಯುದ್ಧ ಮಾಡಬೇಕಾದ ಇನ್ನೊಂದು ಕಾಳಗವಿದೆ.—ಇನ್ನೂ ಸಂಪಾದಿಸಬೇಕಾದ ಬೇರೊಂದು ವಿಜಯವಿದೆ. ಅವನು ಜಪಾನೀಯರ ಮೇಲೆ ಸೇಡು ತೀರಿಸಿಕೊಳ್ಳಬೇಕಾದ ಹಳೇ ಸಂಗತಿಗಳು ಅನೇಕ ಇವೆ. ಅವನು ಸಂಗ್ರಾಮದ ಕಿಚ್ಚಿನಲ್ಲಿ ಪುನಃ ಬೀಳುವನು........

ಜರ್ಮನಿಯಂತೆ ಜಪಾನವು ಸಂಪೂರ್ಣವಾಗಿ ಸೋಲಿಸಲ್ಪಟ್ಟ ಮೇಲೆ ಮಾತ್ರ ಕೊನೆಯ ವಿಜಯವನ್ನು ಸಂಪಾದಿಸಿದಂತಾಗುವದೆಂಬದು ನಮಗೆ ಗೊತ್ತಿದೆ. ಕೇವಲ ಮೂರ್ಖಭಾವದಿಂದ ಯುದ್ಧಮಾಡಬೇಕೆನ್ನುವ ಯುದ್ಧನಿಪುಣರುಳ್ಳ ರಾಷ್ಟ್ರವು ಬಿನ್‌ಶರ್ತಿನಿಂದ ಶರಣುಬರಬೇಕಾದರೆ, ನಾವು ಹಾಗೂ ನಮ್ಮ ಮಿತ್ರರು ಕಾಳಗದಲ್ಲಿ ತೊಡಗಿಸಬಹುದಾದ ಪ್ರತಿಯೊಂದು ಔನ್ಸಿನಷ್ಟು ಯತ್ನವು ಅವಶ್ಯವಿರುವದೆಂಬದು ಸಹ ನಮಗೆ ಗೊತ್ತಿದೆ. ಈಗ ಕಳೆದು ಹೋಗುತ್ತಿರುವ ಪ್ರತಿದಿವಸ, ನಮ್ಮ ವೀರರಾದ ಯುದ್ಧಮಾಡುವ ಜನರು ತಮ್ಮ ದೇಶದ ಹಾಗೂ ಸರ್ವಮಾನವರ ಸಲುವಾಗಿ ಕಷ್ಟಗಳನ್ನು ಅನುಭವಿಸುತ್ತಿರುವದನ್ನೂ, ತಮ್ಮ ಪ್ರಾಣಗಳನ್ನು ಗಂಡಾಂತರಕ್ಕೆ ಗುರಿಮಾಡುತ್ತಿರುವದನ್ನೂ ಮತ್ತು ವಿಜಯಕ್ಕೆ ಮಾರ್ಗವನ್ನು ಸಿದ್ಧಗೊಳಿಸುತ್ತಿರುವನ್ನೂ ನಾವು ನೋಡುತ್ತಿದ್ದೇವೆ. ಆ ವಿಜಯದ ಶ್ರಯವನ್ನು ಅವರು ತೆರುತ್ತಿದ್ದಾರೆ.

ಕಾಳಗದ ಕ್ಷೇತ್ರದಿಂದ ದೂರವಿದ್ದ ನಮ್ಮ ಕಷ್ಟಗಳು ನಮ್ಮ ಸೈನಿಕರ ತ್ಯಾಗಗಳಿಗೆ ಹೋಲಿಸಿದರೆ ಅಲ್ಪವಾದವು. ಅವರೆ ಯುದ್ಧವು ಬೇಗ ಮುಗಿಯುವಂತೆ ಸಹಾಯಮಾಡುವದಕ್ಕಾಗಿ ನಾವು ಯಥಾಶಕ್ತಿ ಪ್ರಯತ್ನಿಸೋಣ. ನಾವು ನಮ್ಮ ನಮ್ಮ ಭಾರಗಳನ್ನು ವಹಿಸುವದನ್ನು ಮತ್ತು ಕೊರತೆಗಳನ್ನು ಸಹಿಸುವದನ್ನು ... ದೃಢವಾದ ನಿಶ್ಚಯದಿಂದ ಸಾಗಿಸೋಣ; ಏಕೆಂದರೆ ಇದರಿಂದ ಮಾನವ ಕಲ್ಯಾಣದ ವಿಜಯವು ... ಒಂದು ಹೊಸ ಯುಗದ ಬೆಳಗು ಬೇಗನೆ ಬರಲಿಕ್ಕೆ ಸಹಾಯವಾಗುವದು.

ಭಾರತವು ಯುದ್ಧಮಾಡುತ್ತಾ ಮುಂದರಿದಿದೆ..

ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್ಮೇಶನ್ ಎಂಡ್ ಬ್ರಾಡ್‌ಕಾಸ್ಟಿಂಗ್, ಗೌರ್ನ್‌ಮೆಂಟ್ ಆಫ್ ಇಂಡಿಯಾ, ಇವರಿಂದ ಹೊರಡಿಸಲ್ಪಟ್ಟದ್ದು.

AAA 354 KN

ಬೇಕಾಗಿದ್ದಾರೆ

ಮಾರ್ಗರೇಟರ

ಫಿಟ್ಸ್ ಕ್ಯೂರ್

ಮಕ್ಕಳ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸಿಬಿಡುತ್ತದೆ.

ಬೆಲೆ ರೂ. 1—8—0

ಹೆಚ್ಚಿನ ಮಾಹಿತಿಗೆ ಮತ್ತು ವಿತರಣೆ ಬಗ್ಗೆ ನಮಗೆ ಬರೆಯಿರಿ.

Brightstar Agencies,
Hospital Road, UDIPI.

ದಕ್ಷಿಣ ಕನ್ನಡ.

ಮಂಗಳೂರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ– ಸಮಿತಿಯ ಮಹಾಸಭೆಯು ಅಗೋಸ್ತು ತಾ. ೨ರಂದು ಅಪರಾಹ್ನ ಘಂಟೆ ೪ಕ್ಕೆ ಮಂಗಳೂರಿನ ಕೊಡಿಯಾಲಬೈಲಲ್ಲಿರುವ ಥಿಯೋಸೋಫಿಕಲ್ ಕಟ್ಟಡದಲ್ಲಿ ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿಸಲಾಗಿದೆ. ಸಭೆಯಲ್ಲಿ ಮಂಜೂರಾಗತಕ್ಕ ವಿಷಯಗಳಿವು:—ಸಮಿತಿಯ ನಿಯಮಗಳ ಮಂಜೂರಾತಿ, ಸಮಿತಿಯ ಈ ವರೇಗಿನ ಕೆಲಸ, ಲೆಕ್ಕದ ರಿಪೋರ್ಟು, ಕಾರ್ಯಕಾರಿ ಮಂಡಳಿಯ ಚುನಾವಣೆ, ಈಗಿನ ರಾಜಕೀಯ, ಜಿಲ್ಲೆಯ ಪರಿಸ್ಥಿತಿ, ಸದಸ್ಯರು ಕಳುಹಿಸಿದ ಠರಾವುಗಳು. ಮತ್ತು ಸಭೆಯ ಸಮ್ಮತಿಯಿಂದ ಬರಬಹುವಾದ ಇತರ ವಿಷಯಗಳು ಇದ್ದರೆ ಅವುಗಳು. ಅದೇ ದಿನ ಅದೇ ಸ್ಥಳದಲ್ಲಿ ಘಂಟೆ ೬ಕ್ಕೆ ಆಹಾರ ಕಮಿಟಿಯ ಸಭೆ ಕೂಡಾ ನಡಿಯಲಿದೆ ಎಂದು ಶ್ರೀ. ಕೋಟ ರಾಮಕೃಷ್ಣ ಕಾರಂತ ಕನ್‌ವೀನರರು ತಿಳಿಸುತ್ತಾರೆ.

ನಗರದ ಆರೋಗ್ಯಾಧಿಕಾರಿ– ಗಳಾದ ಡಾ। ಸುಬ್ರಾಯ ಬಾಳಿಗರು ಅಗೋಸ್ತು ೧೮ಕ್ಕೆ ನಿವೃತ್ತರಾಗಲಿರುವವರು ರಜೆ ಪಡೆದ್ಕೊಂಡಿರುವ್ರದರಿಂದ, ಅವರ ಸ್ಥಾನಕ್ಕೆ ಚಿತ್ತೂರಲ್ಲಿ ಹಂಗಾಮಿ ರಿಜರ್ವ್ ಆರೋಗ್ಯಾಧಿಕಾರಿಗಳಾಗಿದ್ದ ಡಾ। ಎಂ. ನಲ್ಲಭರಾಯರಿಗೆ ಇಲ್ಲಿಗೆ ವರ್ಗವಾಗಿದೆ.

ಸಿಡುಬು– ತಾ. ೨೧ಕ್ಕೆ ಅಂತ್ಯವಾದ ವಾರದಲ್ಲಿ ನಗರದೊಳಗೆ ೬ ಮಂದಿಗೆ ಸಿಡುಬು ತಗಲಿ ಒಬ್ಬರು ಮಡಿದ ವಾರ್ತೆ ಇದೆ.

ಎಲೋಶಿಯಸ್ ಕಾಲೇಜಿ– ನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ತಾ. ೨೦ರಂದು ಕಾಲೇಜಿನ ಸಭಾ ಭವನದಲ್ಲಿ ಜರಗಿತು. ಶ್ರೀ। ಬೆನಗಲ್ ಸಂಜೀವರಾಯರು ಉದ್ಘಾಟನಾ ಭಾಷಣವನ್ನಿತ್ತರು.

ಬೆಳ್ಳಿಪ್ಪಾಡಿ ಮೊಕದ್ದಮೆ– ಶ್ರೀ।ಗಳಾದ ಕಾಂತು ಶೆಟ್ಟಿ, ತುಕ್ರಣ್ಣ, ರಾಮಯ್ಯ ಆಳ್ವ, ವಿಶ್ವನಾಥ ರೈ, ಮತ್ತು ಕೊರಗಪ್ಪ ಶೆಟ್ಟಿ ಎಂಬವರ ಮೇಲೆ, ಬಿ. ಶಿವರಾಮ ಎಂಬವರ ಕೊಲೆಯ ನಿಮಿತ್ತ ಜಿಲ್ಲಾ ಸೆಶನ್ಸ್ ಜಡ್ಜ್ ಶ್ರೀ। ಕೆ. ಶ್ರೀನಿವಾಸನ್ ಅವರ ಮುಂದೆ ನಡೆದ ಮೊಕದ್ದಮೆಯಲ್ಲಿ ಆರೋಪಿಗಳೆಲ್ಲರೂ ನಿರ್ದೋಷಿಗಳೆಂದು ಬಿಡುಗಡೆ ಹೊಂದಿರುವರು.

ರಿಕ್ರೂಟಿಂಗ್ ಟೀಮ್– ಸೇನೆಯ ಅಧಿಕಾರಿ ವರ್ಗಕ್ಕೆ ಜನರನ್ನು ಸೇರಿಸಿಕೊಳ್ಳುವುದಕ್ಕೆ ಬೆಂಗಳೂರಿನಿಂದ ಸ್ಟಾಫ್ ಆಫೀಸರರೂ, ವಿಮಾನ ಖಾತೆಯ ಮತ್ತು ನೌಕಾ ಖಾತೆಯ ಅಧಿಕಾರಿಗಳೂ ಸೇರಿದ ಸಂಗಡವೊಂದು ಬರುವ ಅಗೋಸ್ತು ತಾ. ೯ರಂದು ಮಂಗಳೂರಿಗೆ ಬಂದು ತಾ. ೧೩ರ ವರೆಗೆ ಇಲ್ಲಿರುವರು. ಶಾಲಾ ಕಾಲೇಜುಗಳಲ್ಲಿ ಭಾಷಣ, ಸಿನೆಮಾ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳು ನಡೆಯಲಿವೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— **'ಕುಮಾರಿ ಮಾತ್ರೆಗಳು'** ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

P. D. S. (A E.) Tollygunge, Calcutta,

ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

ಅಡಿಕೆಯ ಸುಂಕದ– ಮರುಪಾವತಿಯ ಪ್ರಥಮ ಚಲನು ರೂ. ೨೨೪೧ ೮–೦. ಇದೀಗ ಶ್ರೀ। ನೇಮಿವಾಳ ಪಡಿವಾಳರಿಗೆ ಕೊಡಲಾಗಿದೆ.

ಕೊಚ್ಚಿನ್ ಅಡಿಕೆ ತೋಟಿಗಾರರ ಸಭೆಯೊಂದು ಕೊಚ್ಚಿನ್ ಪುರಭವನದಲ್ಲಿ ಜರಗಿ, ಅಡಿಕೆಯ ಮೇಲಿನ ಸುಂಕವನ್ನು ರದ್ದುಗೊಳಿಸಬೇಕೆಂದು ಠರಾಯಿಸಿತು.

ಕಾಸರಗೋಡು.

ಗ್ರಾಮ ವಿಶ್ರಾಮ ಸಂಸ್ಥೆ– ಯ ಆಶ್ರಯದಲ್ಲಿ ಇತ್ತೀಚಗೆ ಹೊಸ ದುರ್ಗ ಮತ್ತು ನೀಲೇಶ್ವರಗಳಲ್ಲಿ ಸಂಗೀತ ಸ್ಪರ್ಧೆಗಳು ಏರ್ಪಡಿಸಲ್ಪಟ್ಟುವು. ನೀಲೇಶ್ವರದಲ್ಲಿ ವಿದ್ಯಾಧಿಕಾರಿಗಳಾದ ಶ್ರೀ। ಎಸ್. ಸುಬ್ಬರಾಯರೂ, ಹೊಸ ದುರ್ಗದಲ್ಲಿ ಡಿ। ತಹಸೀಲ್ದಾರರಾದ ಶ್ರೀ। ಬಂಗೇರರೂ ಅಧ್ಯಕ್ಷತೆ ವಹಿಸಿದ್ದರು. ಎರಡು ಕಡಗಳಲ್ಲಿಯೂ ಸಾವಿರಾರು ಹಳ್ಳಿಗರು ನೆರೆದಿದ್ದರು. ಸ್ಪರ್ಧಕರಿಗೆ ಬಹುಮಾನ,ಪ್ರಶಸ್ತಿ ಪತ್ರಗಳನ್ನುಕೊಡಲಾಯಿತು.

ಪುತ್ತೂರು

ಕಾಡು ಆನೆಯ ಹಾವಳಿ– ನೆರಿಯ, ಪುದವೆಟ್ಟು ಕಳೆಂಜ ಗ್ರಾಮಗಳಲ್ಲಿ ಒಂದು ತಿಂಗಳಿಂದಲೂ ಕಾಡು ಆನೆಯೊಂದು ಹಳ್ಳಿಗಳಿಗೆ ನುಗ್ಗಿ ಭತ್ತದ ಬೆಳೆ, ಬಾಳೆ, ತೆಂಗು, ಅಡಿಕೆ, ಹಲಸು, ಫಸಲುಗಳನ್ನು ತಿಂದು, ಹಾಳು ಮಾಡುತ್ತಿದೆ. ಈ ವರ್ತನೆಯ ಗ್ರಾಮದಿಂದ ಕೆಲವರು ಬಂದೂಕು ಲೈಸನ್ಸಿಗೆ ಬರಕೊಂಡರೂ ಲೈಸನ್ಸ್ ಸಿಗಲಿಲ್ಲ. ಕಾಟಿ, ಕಡವೆ ಮೊದಲಾದ ಕಾಡು ಮೃಗಗಳ ಉಪದ್ರ ಎಂದಿನಂತೆಯೇ ಇದೆ. ಇದನ್ನೆಲ್ಲಾ ಸರಕಾರದವರು ತನಿಖೆ ಮಾಡುವರೇ? ಬಡ ಹಳ್ಳಿಗರ ಕಷ್ಟದ ಕಡೆಗೆ ದೃಷ್ಟಿ ಹೊರಳಿಸುವರೇ? ಎಂದು ಹಳ್ಳಿಗರೊಬ್ಬರ ಮೊರೆ.

ನೆರೆ– ಕಳೆದ ತಾ ೯–೧೦ರ ಪ್ರಚಂಡ ಮಳೆಯಿಂದಾಗಿ ಪುಣ್ಚತ್ತಾರು ಎಂಬ ಹೊಳೆಯಲ್ಲಿ ನೀರು ಅಧಿಕವಾಗಿದ್ದು ಮುರುಳ್ಯ ಗ್ರಾಮದಲ್ಲಿ ಅನೇಕ ರೈತರ ಏಣೇಲು ಪೈರು ನೀರುಪಾಲಾಗಿರುವುದಲ್ಲದೆ, ಹೊಯ್ಗೆ ಬಿದ್ದು ನಷ್ಟ ಸಂಭವಿಸಿರುತ್ತದೆ.

ಹುಲಿ ಶಿಕಾರಿ– ತಾ. ೧೩ರಂದು ರಾತ್ರೆ ಹದಿನಾಲ್ಕು ಅಡಿ ಉದ್ದದ ಒಂದು ಹುಲಿಯನ್ನು ಕೋಡಗ ಪದವು (ವಿಟ್ಲ) ಎಂಬಲ್ಲಿ ಶ್ರೀ। ಮಾಳ ಕೃಷ್ಣ ಭಟ್ಟರು ಮತ್ತು ಶ್ರೀ। ಟಿ. ಟಿ. ಭಟ್ಟರು ಹೊಡೆದು ಕೊಂದಿರುವರು. ಆ ಹುಲಿಯು ಆಗಾಗ ನೆರೆ ಹಳ್ಳಿಗಳಿಗೆ ನುಗ್ಗಿ ಜಾನುವಾರುಗಳಿಗೆ ಬಹಳ ಉಪದ್ರ ಮಾಡುತ್ತಿದ್ದಿತು. ಮಾತ್ರವಲ್ಲದೆ ಒಂದೆರಡು ಸಲ ಜನರನ್ನೂ ಹಿಂಬಾಲಿಸಿತ್ತು. ತಾ. ೨೨ರಲ್ಲಿ ಒಂದು ಹಟ್ಟಿಗೆ ನುಗ್ಗಿ ದನವೊಂದನ್ನು ಕೊಂದು ಅಲ್ಲೇ ತಿಂದುಹೋಗಿತ್ತು. ಮಾರನೆಯ ದಿನ ಅದೇ ಹಟ್ಟಿಗೆ ಪುನಃ ನುಗ್ಗುತ್ತಿರುವಾಗ ದಾರಿಯಲ್ಲೇ ಹೊಡೆದು ಕೊಂದು ಜಾನುವಾರುಗಳನ್ನೂ ದಾರಿನಡೆಯುವವರನ್ನೂ ಅಪರ ಹಾವಳಿಯಿಂದ ಪಾರು ಮಾಡಿದುದು ಸ್ತುತ್ಯ.

ಅಖಿಲ ಭಾರತೀಯ ಆಯುರ್ವೇದ ಸಮ್ಮೇಲನ– ಸ್ವಾಗತ ಸಮಿತಿಯ ಎರಡನೆ ಸಭೆಯು ತಾ. 29 7-45ರಲ್ಲಿ ವೈದ್ಯಗುರು ಯಂ. ಆರ್. ಭಟ್ರ ಮನೆಯಲ್ಲಿ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿ ಅಖಿಲ ಭಾರತೀಯ ಆಯುರ್ವೇದ ಅಧ್ಯಾಪಕ ಸಮ್ಮೇಲನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ಕಾರ್ಯದರ್ಶಿಗಳನ್ನಾಗಿ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ ಮತ್ತು ಕವಿರಾಜ್ ಯಚ್ ರಾಮಚಂದ್ರ ಆಚಾರ್ಯ ಇವರನ್ನೂ, ಅಖಿಲ ಭಾರತೀಯ ಆಯುರ್ವೇದ ವಿದ್ಯಾಪೀಠದ ಸ್ನಾಗತ ಸಂಘದ ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳನ್ನಾಗಿ ಶ್ರೀ ಕಾರ್ಕಳ ಆಯುರ್ವೇದ ಭೂಷಣ ಆದಿ ರಾಜಯ್ಯ ಮತ್ತು ಡಾ। ಎ. ವೆಂಕಪ್ಪಯ್ಯ B. A., L. T. ಇವರನ್ನೂ ಅಖಿಲ ಭಾರತೀಯ ಆಯುರ್ವೇದ ಪ್ರದರ್ಶನ ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಯವರನ್ನಾಗಿ ಶ್ರೀಗಳಾದ ಪಾಣಾಜೆ ಶಂಕರ ನಾರಾಯಣ ಭಟ್ ಮತ್ತು ಯು. ಪುರುಷೋತ್ತಮ ಭಟ್ ಇವರನ್ನೂ ಕ್ರಮವಾಗಿ ಚುನಾಯಿಸಲಾಯಿತು.

ಮದ್ರಾಸ್ ಮೋಡರ್ನ್ ಕೆಫೆಯಲ್ಲಿ– ಮಾಲೀಕರಾದ ಶ್ರೀ. ಕೆ. ಸೀತಾರಾಮರಾಯರು ಮದ್ರಾಸ್ ಸದರ್ನ್ ಮರಾಟ ರೈಲ್ವೆಯ ಪ್ರಮುಖ ಅಧಿಕಾರಿಗಳನ್ನು ಆಹ್ವಾನಿಸಿ ತಮ್ಮ ಕೆಫೆಯಲ್ಲಿ ತಾ. ೧೪ರಂದುಭೋಜನ ಕೂಟವನ್ನು ಏರ್ಪಡಿಸಿದ್ದರು. ಸಸ್ಯಾಹಾರದ ಭೋಜನವನ್ನು ಆಂಗ್ಲೇಯರಿಗೆ ಅನುಗುಣವಾಗಿ ತಯಾರಿಸಿ, ಸಪ್ಲೈ ಮಾಡುವಂಥ ನವೀನ ವಿಧಾನವು ಆಂಗ್ಲೇಯ ಅತಿಥಿಗಳನ್ನುವಿಸ್ಮಯಗೊಳಿಸಿತು. ಶ್ರೀ. ಕೆ. ಸೀತಾರಾಮರಾಯರ ಈ ತರದ ನೂತನ ಏರ್ಪಾಡು ಮತ್ತು ವಿಧಾನವನ್ನು ಅನುಭವಿಸಿದ ಅತಿಥಿಗಳೆಲ್ಲರೂ ರಾಯರನ್ನು ವಂದಿಸಿ ಆನಂದ ಪಟ್ಟರು. ಶ್ರೀ ರಾಯರು ತಮ್ಮ ಆಹ್ವಾನವನ್ನು ಸ್ವೀಕರಿಸಿದ ಮಹನೀಯರುಗಳಿಗೆಲ್ಲಾ ಹಸ್ತಲಾಘವವನ್ನು ಕೊಟ್ಟು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ನೆರೆದ ಅತಿಥಿಗಳನೇಕರಲ್ಲಿ:—ಎಂ. ಎಸ್. ಎಂ. ರೈಲ್ವೆ ಜನರಲ್ ಮೆನೇಜರ್ ಮಿ। ಆರ್. ಡಿ. ಕವೇನಾರ್ಡ್ ಅವರಪತ್ನಿ, ಚೀಫ್ ಕಮರ್ಶಲ್ ಮೆನೇಜರ್, ಮಿ। ಥೋಮಸ್, ಚೀಫ್ ಮೆಡಿಕಲ್ ಆಫೀಸರ್ ಡಾರ್ಸನ್, ಚೀಫ್ ಇಂಜನಿಯರ್ ಬಿ. ಎಚೆರ್ರಿ,ಮಿ। ಲಾತಾಮ್, ಅವರ ಪತ್ನಿ, ಮಿ। ಹಿಲ್‌ಟರ್ನರ್, ಮಿ। ಕೋರಿ, ಅವರ ಪತ್ನಿ, ಖಾನ್ ಬಹದೂರು ಘೋಟಿ, ಅವರ ಪತ್ನಿ, ಮೆನೇಜರ್ ರೀಡ್, ಡಾ। ಪಿ. ರಾಮರಾವ್, ಹಾಲ್‌ಬಾಟ್ಲವಾಲ, ಅವರ ಪತ್ನಿ, ಡಾ। ಯು. ಕೃಷ್ಣರಾವ್, ಮಿ। ಪಿ. ಮೋರಿಸ್, ಅವರ ಪತ್ನಿ, ಡಾ। ಕೆ ಯು. ಜಿ. ರಾವ್, ಇನ್ನೂ ಅನೇಕರು ಭಾಗ ವಹಿಸಿದ್ದರು.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ 'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ

ವಾರ ವಾರವೂ ಮನಸೆಳವ ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ— ಮನಮೋಹಕ ಕತೆಗಳಿಗಾಗಿ-ಚುಟುಕು ಸುದ್ದಿಗಳಿಗಾಗಿ- ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.

ಬಿಡಿ ಸಂಚಿಕೆಗೆ ... ... 0-1-6.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಸಲಿಕ್ಕೆ ಯೋಗ್ಯ ವಾಹಕವಾಗಿದೆ.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R I A 266/45 O. S 101/43

ಯನ್. ಯಸ್. ಭಟ್, ಅರ್ಜಿದಾರ ವಾದಿ.

ಮುತ್ತಕ್ಕು ಕೂಡಾ—ಎದ್ರಿರು,

ಪ್ರತಿವಾದಿಯರು.

ಪುತ್ತೂರು ತಾಲ್ಲೂಕು ಜೊಂಡಾಲ ಗ್ರಾಮದ ಶ್ಲೆರ್ವ ಸುಬ್ಬನ ಸೊಸೆ, ಮೇಲಿನ ವ್ಯಾಜ್ಯದ I ನೇ ಪ್ರತಿವಾದಿ ಮುತ್ತಕ್ಕು ಹೆಂಗಸಿಗೆ. ಈ ಮೂಲಕ ತಿಳಿಯಪಡಿಸುವದೇನೆಂದರೆ.

ಮೇಲಿನ ವ್ಯಾಜ್ಯದಲ್ಲಿ ವಾದಿಯ ಗುಣಕ್ಕೆ ಕೊಡೋಣಾದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಡಿಕ್ರಿ ಆ್ಯವೇಜು ವಸೂಲಿಗೆ ದಾವಾ ಆಸ್ತಿ ಏಲಂ ಪಡಿಸುವರೇ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿಯು ದಾಖ್ಲು ಮಾಡಿದ ಅರ್ಜಿಯು ತನಿಕೆ ಬಗ್ಗೆ ತಾ 16-8-45ಕ್ಕೆ ಯಿರುವುದರಿಂದ ಆ ಕುರಿತು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಬೆಳಿಗ್ಯೆ 10 ಘಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ, ವಾ ವಕೀಲರ ಮೂಲಕ ದಾಖ್ಲು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿನಿಂದ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

ಪುತ್ತೂರು } ಪಿ ಕೃಷ್ಣ ಭಟ್.
ತಾ. 27 7 45 } ವಾದಿ ಕಡೆ ವಕೀಲ್.

CHAMPA.E'S

Snow & Castrex

(Sole Distributers for India.)

Sukhananda Stores

Santhekatte, UDIPI, S. K.

ಮೈಸೂರುಪತ್ರ

(ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ವಿದ್ಯಾರ್ಥಿ ಸಮ್ಮೇಳನ–ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನವು 21 7 45ನೆ ದಿನ ಬೆಂಗಳೂರು ನಗರದಲ್ಲಿರುವ ಮೈಸೂರು ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆಯಿತು ಆಂಧ್ರ ದೇಶದ ಮುಖಂಡರಾದ ಪ್ರೊ॥ ರಂಗಾರವರು ಅಧ್ಯಕ್ಷತೆ ವಹಿಸಿದ್ದರು ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ॥ ಟಿ ಸಿದ್ಧಲಿಂಗಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸಿದರು ಸಮ್ಮೇಳನದಲ್ಲಿ ಶ್ರೀಗಳಾದ ಎಲ್ ಸಿ ತಿಮ್ಮಾರೆಡ್ಡಿ ಮತ್ತು ಎಸ್ ಕೃಷ್ಣ ಶರ್ಮರವರೂ ಭಾಷಣ ಮಾಡಿದರು

ಮೈಸೂರಲ್ಲಿ ಶ್ರೀ ರಂಗಾರವರು–ಬೆಂಗಳೂರಿಗೆ ಆಗಮಿಸಿದ್ದ ಪ್ರೊ॥ ರಂಗಾರವರು 23ನೇ ತಾರೀಖು ಬೆಳಿಗ್ಗೆ ಶ್ರೀ॥ ಹಿರಳ್ಳಿ ದಾಸಪ್ಪನವರೊಡನೆ ಮೈಸೂರಿಗೆ ಆಗಮಿಸಿದರು ರೈಲ್ವೆ ನಿಲ್ದಾಣದಲ್ಲಿ ಅವರನ್ನು ಉಚಿತ ರೀತಿಯಲ್ಲಿ ಸ್ವಾಗತಿಸಲಾಯಿತು

ಮೈಸೂರಲ್ಲಿ ಅವರು ಎರಡು ದಿನಗಳಿದ್ದು ಕಾಂಗ್ರೆಸ್ ಕಾರ್ಯಾಲಯ, ತಿಲಕ ಸಂಘ ದೇಶೀಯ ವಿದ್ಯಾಶಾಲೆ, ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘಗಳಿಗೆ ಭೇಟಿಯಿತ್ತರು. 21 7 ೪೫ನೇ ರಂಗಾಚಾರ್ಲು ಸ್ಮಾರಕ ಭವನದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಸೇರಿದ್ದ ಭಾರಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು ಅವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಇತಿಹಾಸ, ಕಾಂಗ್ರೆಸ್ ತತ್ವ, ಕಮ್ಯೂನಿಸ್ಟರ ಹಾವಳಿಯನ್ನು ವಿವರಿಸಿ ಎಲ್ಲರೂ ಗಾಂಧಿ ತತ್ವವನ್ನು ಅಕ್ಷರಶಃ ಪಾಲಿಸಿಕೊಂಡು ಬಂದು ಕಿಸಾನ, ಮಜದೂರ್ ಪ್ರಜಾರಾಜ್ಯ ಸ್ಥಾಪನೆಗಾಗಿ ಹೋರಾಟ ನಡೆಸಬೇಕೆಂದರು

ಸಭೆಯ ಅಧ್ಯಕ್ಷತೆಯನ್ನು ಶ್ರೀ॥ ಬಷೀರ್ ಹುಸೇನ್‌ರವರು ವಹಿಸಿದ್ದರು. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರಿಂದ ಸ್ವಾಗತ, ಕಾರ್ಯದರ್ಶಿ ಜಿ ಪಿ ಕೃಷ್ಣರಾಯರಿಂದ ಬಿನ್ನವತ್ತಳೆ ಮತ್ತು ಇನ್ನೊಬ್ಬ ಕಾರ್ಯದರ್ಶಿ ಶ್ರೀಧರ್‌ರವರಿಂದ ವಂದನಾ ಸಮರ್ಪಣೆ ನಡೆಯಿತು

ಶ್ರೀಯುತರು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಭೇಟಿ ಮಾಡಿ 24ನೇ ರಾತ್ರಿ ಹಿಂದಿರುಗಿದರು ಅವರು ಮೈಸೂರಿನಲ್ಲಿದ್ದಾಗ ಶ್ರೀ॥ ಹಿರಳ್ಳಿ ದಾಸಪ್ಪನವರ ಅತಿಥಿಗಳಾಗಿದ್ದರು

ರಾಜಿನಾಮೆ–ಮೈಸೂರು ಪತ್ರಿಕೋದ್ಯೋಗಿ ಸಂಘದ ಉಪಾಧ್ಯಕ್ಷರಾದ 'ಹಿಂದೂ' ಪತ್ರಿಕಾ ಸ್ಥಳೀಯ ಪ್ರತಿನಿಧಿ ಶ್ರೀ. ಆರ್ ಗೋಪಾಲಕೃಷ್ಣರಾವ್‌ರವರು ಸಂಘದ ಆಡಳಿತ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದು ರಾಜಿನಾಮೆ ಕೊಟ್ಟಿದ್ದಾರೆಂದು ಗೊತ್ತಾಗಿದೆ

ಸಾಥಿ ವಾರ್ಷಿಕೋತ್ಸವ–ಮೈಸೂರು ನಗರದಿಂದ ಹೊರಡುತ್ತಲಿರುವ 'ಸಾಥಿ' ದಿನ ಪತ್ರಿಕೆಯ ಮೂರನೇ ವಾರ್ಷಿಕೋತ್ಸವವು ೨೨ನೇ ತಾರೀಖಿನ ದಿನ ಪತ್ರಿಕಾ ಕಾರ್ಯಾಲಯದಲ್ಲಿ ಮೈಸೂರು ಶಾಸನ ಸಭಾ ಮಹಿಳಾ ಸದಸ್ಯರಾದ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೌರಸಭಾ ಮಾಜಿ ಉಪಾಧ್ಯಕ್ಷರುಗಳಾದ ಶ್ರೀ ಟಿ ಮರಿಯಪ್ಪ, ವಿ ನಾರಾಯಣಸ್ವಾಮಿಯವರು ಪತ್ರಿಕೆಗಳ ಕರ್ತವ್ಯ ಪತ್ರಿಕಾ ಸ್ವಾತಂತ್ರ್ಯ ಕುರಿತು ಭಾಷಣ ಮಾಡಿದರು ಶ್ರೀಮತಿ ನೀಲಮ್ಮ ಕದಂಬಿಯವರ ಸೇಡೆಯಾದ ನಂತರ ಪತ್ರಿಕಾ ಮಾಲೀಕರಾದ ಶ್ರೀ ಆಗರಂ ರಂಗಯ್ಯನವರು ವಂದನೆಗಳನ್ನು ಅರ್ಪಿಸಿದರು

ಮೈಸೂರು ಪೌರ ಸಭೆಗೆ ಖಾಸಗಿ ಅಧ್ಯಕ್ಷರು– ಮೈಸೂರು ಪೌರಸಭೆಗೆ ಖಾಸಗಿ ಚುನಾಯಿತ ಅಧ್ಯಕ್ಷರನ್ನು ಆರಿಸುವ ಅಧಿಕಾರವನ್ನು ಕೊಡಬೇಕೆಂಬ ನಿರ್ಣಯವನ್ನು ಚರ್ಚಿಸಲು ವಿಶೇಷ ಸಭೆಯೊಂದನ್ನು ಕರೆಯಬೇಕೆಂದು ಪೌರ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ಪೌರ ಸಭಾಧ್ಯಕ್ಷರಿಗೆ ಸೂಚನೆಯೊಂದನ್ನು ಕಳುಹಿಸಿದ್ದಾರೆ.

ಕಸ್ತೂರ್ ಬಾ ಶಿಕ್ಷಣ ಶಿಬಿರ

ಮೈಸೂರು ಸಂಸ್ಥಾನದ ಕಸ್ತೂರ್ ಬಾ ಸ್ಮಾರಕ ನಿಧಿ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ನಡೆದು ಮುಂದಿನ ತಿಂಗಳು ೧೦ನೇ ತಾರೀಖಿನಿಂದ ಮೈಸೂರು ನಗರದಲ್ಲಿ ೩ ಮಹಿಳೆಯರಿಗೆ (ಕರ್ನಾಟಕದ) ಶಿಕ್ಷಣ ಕೊಡಲು ಒಂದು ಶಿಬಿರವನ್ನು ತೆರೆಯತಕ್ಕದೆಂದು ತೀರ್ಮಾನಿಸಿದಾರೆ



ನಮ್ಮ ಯುದ್ಧ

ಎಂಟು ವರ್ಷಗಳಿಂದ ಈ ... ಚೀನದ ದೇಶ ... ವಾದ ... ಪ್ರತಿಭಟಿಸಿದಂಗ ಹಿಂದೂ ... ನಮ್ಮ ಅದನ್ನು ... ಗಳಲ್ಲಿ ... ನಮ್ಮ ಯುದ್ಧ ಯಂತ್ರವನ್ನು ... ಈ ... ನ್ನು ಪ್ರತಿಭಟಿಸುವ ಹೋರಾಟ ... ತೀಗದ ... ನಮ್ಮ ಸೈನಿಕರು ... ಹಾಗೂ ... ಸಮಾನ ... ಕೊಟ್ಟಿದೆ ... ಸಾಮಗ್ರಿಯನ್ನು ... ಕೊರತೆ ... ರೂ ... ಮತ್ತು ಈಗ ... ನಾವು ಈ ... ಆಗ ಪ್ರವೇಶಿಸಿದ್ದೇವೆ ... ಹಾಗೂ ಕ್ರೂರತೆಗಳನ್ನು ಪ್ರತಿಭಟಿಸುವ ಈ ಹೋರಾಟವು ನಮ್ಮ ಯುದ್ಧವಾಗಿದೆ ... ಸುರಕ್ಷಿತತೆಗೂ ಸ್ವಾತಂತ್ರ್ಯಕ್ಕೂ ... ಯುದ್ಧ ಮಾಡುವವರಾಗಿದ್ದು ... ಮುಂದಿನ ... ಯುದ್ಧವನ್ನು ... ಜನಾಸಗಳ ... ಮಾಡುವವು

ಭಾರತವು ಯುದ್ಧದಲ್ಲಿ ಮುಂದುವರಿದಿದೆ.

ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್ಮೇಷನ್ ಎಂಡ್ ಬ್ರಾಡ್‌ಕಾಸ್ಟಿಂಗ್ ಗವರ್ನ್‌ಮೆಂಟ್ ಆಫ್ ಇಂಡಿಯಾ, ಇವರಿಂದ ಹೊರಡಿಸಲ್ಪಟ್ಟದ್ದು.

Notice

ಕಾಸರಗೋಡು ಡಿ ಮು ಕೋರ್ಟಿನಲ್ಲಿ

S C No 101'1945

M C ಸ್ವಾಮಿ — ವಾದಿ

ಅಬ್ದುಲ್ ಖಾದಿರ್ — ಪ್ರತಿವಾದಿ

ಪ್ರತಿವಾದಿ ಅಬ್ದುಲ ಖಾದಿರ್, ಮುನ್ಸಿ ಕುಂಞ ಖಾದಿರ್ ಮಗ, ಕಾಸರಗೋಡು ತಾಲೂಕು ಮೊಗ್ರಾಲ ಗ್ರಾಮದಲ್ಲಿರುವವ

ಪ್ರತಿವಾದಿಯು ವಾದಿಗೆ ಬರಕೊಟ್ಟ ಪ್ರೋನೋಟು ಪ್ರಕಾರ ಬರಬೇಕಾದ ಸಾಲು ಬಡ್ಡಿ ಖರ್ಚುಗಳಿಗೆ ವಾದಿಯು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 7 8 1945ಕ್ಕೆ ತಿಕ್ಕಿಗೆ ಬಿಟ್ಟಿರುವದರಿಂದ ಆಕ್ಷೇಪಣೆ ಇದ್ದರೆ ಪ್ರತಿವಾದಿಯು ಆ ದಿವಸ ಬೆಳಿಗ್ಗೆ 10 ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಬೇಕಾಗಿಯೂ, ತಪ್ಪಿದ್ದಲ್ಲಿ ಪ್ರತಿವಾದಿಯು ಗೈರು ಹಾಜರಿಯಿಂದ ತೀರ್ಮಾನಿಸಲಾಗುವದೆಂಬ ಸೂಚನೆ ತಿಳಿಸಲಾಗಿಯದೆ

(*sd*) **P. Ahamad.**

Advocate for Plaintiff.

ಕಾಸರಗೋಡು
24 7 45

**It is easy to earn
But difficult to save.**

We can help you to create a substantial funds by the purchase of our Laxmi Cash Certificates of 5 years Currency. They are issued at present at the prices of Rs 8/4, 82/8 412/8 & 825/ and repayable on maturity as Rs. 10, 100 500 & 1000 respectively.

Let us intimate and guide you in the saving habit. Money saved is the money earned.

The Canara Industrial & Banking Syndicate, Limited
Head Office UDIPI, (S India)
T A Pai, B Com, (Bom) A ...
General Manager

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ ರೂಮ್ಸ್ ಎಂಡ್ ಫಾರ್ಮಸಿ ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಟಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.



ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ, ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮ ವಿಜಯ

ಜೀವನ ನಾಟಕ ಬೆಲೆ ೦ ೧೪—೦

ಪವಿತ್ರ ಪ್ರೇಮಕ್ಕೆ ಜಾತಿಮತಗಳ ಭಿನ್ನತೆಯೊಂದು ತಡೆಯಾಗಬಾರದು; ತಡೆಯಾಗಿ ನಿಂತಲ್ಲಿ ಅದು ಪ್ರೇಮ ಪ್ರವಾಹದ ಸೆಳತಕ್ಕೆ ಸಿಕ್ಕಿ ನೆಲೆತಪ್ಪುತ್ತದೆ — ಎಂಬುದನ್ನು ಚಿತ್ರಿಸುವ ನಾಟಕ

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆಗೆ ರೂ. 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೪೮] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. [Vol. 24 No. 48

ಉಡುಪಿ ● 9—8—1945 ● ಮಂಗಳೂರು.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಉಳುಕು, ಕತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು, ಬಾವು, ಕೀಲುನೋವು, ಜೇನು ಹುಳು ಮುಂತಾದ ಚೇಳು ಕಚ್ಚುವಿಕೆ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧಿ. ಕಳ್ಳ ನಕಲುಗಳ ಬಗ್ಗೆ ಎಚ್ಚರಿಕೆಯಿಂದಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

CALL IT A MARVELL
OR
WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,

Head Office - **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—**ಜೀವವಿಮೆ!**

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸು ಶಾಖಾ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ವ್ಯ... ಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಆದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬೆಳವಣಿಗೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.

ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ — ಕೆನರಾ ಬೇಂಕ್ ಲಿಮಿಟೆಡ್.

ಕ್ಷೇಮನಿಧಿ ರೂಪಾಯಿ 10 ಲಕ್ಷ — (ESTD 1906 ಸ್ಥಾಪನೆ.)

CANARA BANK LIMITED
(Incorporated in British India. liability of Members Limited.)

THE
VIJAYA BANK LTD.,
Head Office: MANGALORE.

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—

Coondapoor, Brahmavar, Udipi, Kaup, Karkala, Kasaragod, Kadri Mangalore, City-Mangalore, Puttur and Bombay City.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಬ್ರಿಟನಿನಲ್ಲಿ ಸೋತವರು

ಸ್ವಭಾವ ಚಿತ್ರ.

ಬ್ರಿಟಿಷರು ಹಿಂದುಸ್ಥಾನದ ಸ್ವಾತಂತ್ರ್ಯಾಪಹಾರಕರು; ಹಿಂದೀ ಹಕ್ಕುಬಾಧ್ಯತೆಗಳ ವಿರೋಧಿಗಳೂ ಹೌದು. ಆದರೆ ಇವರು ಸ್ವಾರ್ಥಿಗಳು ಹೊರತು ಪರ್ಣಜೀವಿಗಳಲ್ಲ. ಅವರ ಸಾಮ್ರಾಜ್ಯ ಪ್ರೇಮ, ಅಧಿಕಾರಾಭಿಲಾಷೆ, ಜನಾಂಗ ದ್ವೇಷ, ವಂಚನೆ, ಮತ್ಸರದಂತಹ ಪಂಚಮಹಾ ಪಾತಕಗಳನ್ನಾದರೂ ಕಾರ್ಯರಂಗದ ಹೊರಗೆ ಕಾಣುವದು ಅಸಾಧ್ಯ. 'ಬ್ರಿಟಿಷರಿದ್ದುದರಿಂದಾಗಿ ಇಲ್ಲಿ ಇಷ್ಟಾದರೂ ನ್ಯಾಯವಿದೆ; ಇನ್ನು ನಮ್ಮವರೇ ಅಧಿಕಾರಕ್ಕೆ ಬಂದರೆ. ಹರಹರಾ!' ಎನ್ನುವವರು ನಮ್ಮಲ್ಲಿ ಈಗಲೂ ಇದ್ದಾರೆ. ದುರ್ಜನ ವಿನಹ ಬ್ರಿಟಿಷರ ದೋಷಗಳು ಕಾಣುತ್ತಿಲ್ಲವೆಂಬುದೇ ಇದರ ಅರ್ಥ. ಗುಟ್ಟೆಂದರೆ 'ಸ್ವಾತಂತ್ರ್ಯವು ಮಾನವನ ಜನ್ಮಸಿದ್ಧ ಹಕ್ಕು' ಎಂಬ ತತ್ವವೊಂದು ಪ್ರಪಂಚದಲ್ಲಿ ಬೇರೂರದೆ ಹೋಗುತ್ತಿದ್ದರೆ ಹಿಂದುಸ್ಥಾನಕ್ಕೆ ಬ್ರಿಟಿಷರು ಅನ್ಯಾಯಮಾಡಿದ್ದಾರೆಂದು ಯಾರೂ ಹೇಳುವಂತಿರಲಿಲ್ಲ. ಪಕ್ಕಾ ನಾಗರಿಕತೆಯು ಒಪ್ಪವಿದೆ ಬ್ರಿಟಿಷರ ವರ್ತನೆಯಲ್ಲಿ. ಗುಣನಡತೆಗಳ ಮಟ್ಟಿಗೆ ಅವರು ನಿಜಕ್ಕೂ ಸಭ್ಯರು. ಸಭ್ಯತೆಯ ಗಡಿಮೀರುವದನ್ನು ಸಹಿಸರು. ಆ ಹೃದಯವು ರಾಜಕೀಯ ಸಂಬಂಧದ ಮಟ್ಟಿಗೆ ಕೆಸರುಹಳ್ಳದಂತಿದ್ದರೆ, ವ್ಯಕ್ತಿಗತ ವರ್ತನೆಯಲ್ಲಿ ಅದು ತಿಳಿಬುಗ್ಗೆ. ಅವರದು ಪರಿಪಕ್ವ ಮನೋವೃತ್ತಿ. ದೃಷ್ಟಾಂತಕ್ಕಾಗಿ ನಮ್ಮಲ್ಲಿಯ ಗೊಡ್ಡು ವೈದಿಕರನ್ನು ಕಂಡರೆ ಆಂಗ್ಲಾನುಕರಣೆಯ ಒಂದು ಬಣ್ಣದ ಬೀಸಣಿಗೆ ಪರಿಹಾಸ್ಯದ ಗಾಳಿ ಬೀಸಬಹುದು; ಆದರೆ ಆತನ ಗುರು ಆಂಗ್ಲೇಯ ಹಾಗೆ ಮಾಡಲಾರ. ಆತ ಪೌಡರ್ ಬಳಿದ ಮುಖದಿದಿರಲ್ಲಿ ಹೇಗೋ ಭಸ್ಮ ಲೇಪಿತವದನವಿದಿರಲ್ಲೂ ಹಾಗೆ. ಅನ್ಯರ ವ್ಯಕ್ತಿಗತ ಮರ್ಜಿಯ ಟೀಕೆಯೂ ಅನಾಗರಿಕತೆಯ ಲಕ್ಷಣವೆಂಬುದು ನಾಗರಿಕರೆನ್ನಿಸುವವರಿಗರಿಯದು-ಆಂಗ್ಲೇಯನಿಗದು ಗೊತ್ತು. ಆತ ತುಂಬಿದ ಕೊಡ, ತುಳುಕಲಾರ. ಗುಣಸ್ವಭಾವಗಳ ರಂಗದಲ್ಲಿ ಯಾವ ಸಂದರ್ಭವಲ್ಲಾದರೂ ಅವನದು ರಕ್ಷಣಾ ಯುದ್ಧ. ಆದರೆ ಅತ್ಯಂತ ಅಪಾಯಕಾರಿ. ಆಂಗ್ಲೇಯನ ಅಸ್ತಿತ್ವವೊಂದನ್ನು ಬಿಟ್ಟು ಅಕ್ಕಪಕ್ಕಕ್ಕೆಲ್ಲಾ ಕೆಸರು ಚೆಲ್ಲುವ ಅಧಿಕಾರ ನಿಮಗಿದೆ; ಇಂತಹ ಸಂದರ್ಭದಲ್ಲಿ ಮಿಕ್ಕವರಂತೆ ಕೂಗದೆ ಕೆರಳದೆ 'ನನಗಿಲ್ಲ' ಎಂಬವ ಶಾಂತನಾಗಿ-ತ್ಯಾಗಿ; ಎಲ್ಲವನ್ನೂ ಸಹಿಸುತ್ತಾನೆಂದು ನಿಮಗನ್ನಿಸುತ್ತದೆ, ಆದರವನ ಇಸ್ತಿಕೆಗೆ ಇರಿದು ನೋಡಿ ನಿಮ್ಮನ್ನು ಪ್ರತಿಹಾರಿಸಿಯಾನು! ಇದು ಬ್ರಿಟಿಷ್ ವ್ಯಕ್ತಿತ್ವ; ಇದಕ್ಕೆ ಲೋಕ ಬಲಿಯಾಗಿದೆ; ಮೊನ್ನೆ ಅವರದೇ ಆದ ಟೋರಿ ಪಕ್ಷ ಬಲಿಬಿದ್ದುದೂ ಇದಕ್ಕೇನೇ. ಬ್ರಿಟಿಷರಲ್ಲಿರುವದು ಎದೆ ಗುಂಡಿಗೆಯಲ್ಲ-ಹೃದಯ ತಕ್ಕಡಿ! ಗುಣ-ದೋಷ, ಲಾಭ-ನಷ್ಟ, ಆಗತ್ಯ-ಅನಗತ್ಯಗಳನ್ನದು ಪ್ರತಿಯೊಂದು ಸಂದರ್ಭದಲ್ಲೂ ತೂಗುತ್ತದೆ. ತೂಕಕ್ಕೆ ಬಾರದೆ ಹೋದರೆ ತಂದೆಯನ್ನಾದರೂ ತೂರಿ ಬಿಡುತ್ತದೆ. ಓರ್ವ ಬ್ರಿಟಿಷರವ ಒಬ್ಬ ಜಡ್ಜ, ಅಥವಾ ಒಂದು ಮೊರ. ರಾಗದ್ವೇಷಗಳೇ ಮುಖ್ಯವಾಗಿರುವ ಇತರರಲ್ಲಿ ಅವರ ಕೃತ್ಯಗಳು ಒಮ್ಮೊಮ್ಮೆ ಆಶ್ಚರ್ಯವನ್ನು ನಿರ್ಮಿಸುತ್ತವೆ. ಈ ಬಾರಿಯ ಚುನಾವಣೆಯಲ್ಲಾದುದು ಅದೇ

ಚರ್ಚಿಲ್

ಇವರು ಆಧುನಿಕ ಬ್ರಿಟನ್ನಿನ ಜನಕ. ಇವರ ಕೈಯಿಂದಲೇ ಅಧಿಕಾರ ಕಸಕೊಂಡರು. ಚರ್ಚಿಲ್ಲರೀ ಬಾರಿ ಮಾಡಿದ ಅಪರಾಧವಂತಹದು. ಅವರು ಹುಟ್ಟು ಯೋಧ; ಹರಿತ ಖಡ್ಗ. ಹೋರಾಟಕ್ಕಲ್ಲದೆ ನಿಶ್ಶಬ್ದ ವೇಳೆಯಲ್ಲಿದನ್ನು ಮುಂದೊಡ್ಡಬಾರದೆಂದು ಬ್ರಿಟಿಷರಿಗೆ ಗೊತ್ತು. ಆದರೆ ತಾನು ಯುದ್ಧ ಗೆದ್ದು ಕೊಟ್ಟವನೆಂದು ಚರ್ಚಿಲ್ಲರ ಹೆಮ್ಮೆ; ಮಾಡಿದ್ದಕ್ಕೆ ಮನ್ನಣೆ ದೊರೆಯುವದೆಂದು ಅವರ ನಂಬಿಕೆ. ಬ್ರಿಟಿಷರ ಮನೋವೃತ್ತಿ ಓರ್ವ ಬ್ರಿಟಿಷರವನಿಗೇ ತಿಳಿಯದೆ ಹೋಯಿತೆ! ಹಾಗಾಯಿತು. ಯಥಾರ್ಥವಾಗಿ ಚರ್ಚಿಲ್ಲರ ಸ್ವಭಾವ ಬ್ರಿಟಿಷರದ್ದಲ್ಲ. ಅವರು ತೂಗುವ ಮನಸ್ಸಿನವರಲ್ಲ-ಕೂಗುವ ಜನ. ನಗೆ ಒರೆಸುವದೆಲ್ಲಿ, ನಗಾರಿ ಬಾರಿಸುವದೆಲ್ಲಿ ಎಂಬುದನ್ನು ತಿಳಿದಿರುವ ಬ್ರಿಟಿಷರು ಯುರೋಪು ಯುದ್ಧದಲ್ಲಿ ಈ ನಗಾರಿಯನ್ನೆತ್ತಿದರು; ಆ ಮೇಲದನ್ನು ಕೆಳಗಿಟ್ಟರು. ಚುನಾವಣೆಯ ವೇಳೆ ಅವರು ಪ್ರದರ್ಶಿಸಿದ ಠೇಂಕಾರ, ಮಾಡಿದ ಅರ್ಭಟಗಳೆಲ್ಲಾ ಬ್ರಿಟಿಷ್ ಮರ್ಜಿಯ ಹೊರಗಿನವು; ಜನರಿಗೀತ ತಮ್ಮವನಲ್ಲವೆಂಬಂತೆ ತೋರಿತು; ಹೊರಗಟ್ಟಿದರು; ಹೋಗಲಿ!

ಚರ್ಚಿಲ್ ಬಿಂಕದ ಮನುಷ್ಯ; ಹೃದಯಹೀನನೋ ಉಕ್ಕಿನವ; ಆದರವು ಸಂದರ್ಭಾನುಸಾರ ವೇಷ ಕೆಂಗಾಗಬಲ್ಲುವು. ಹಿಗ್ಗುವದು—ತಗ್ಗುವದಿದೆ. ಅದ್ದರಿಂದಲೇ ವಿಜಯದಂತೆ ಅಪಜಯವನ್ನೂ ಪಡೆಯುತ್ತಾರೆ. ಏರು ತಗ್ಗಿದ್ದರೂ ಎಷ್ಟು ತಡವು ಇಲ್ಲದ ಮನುಷ್ಯ. ಎಂತಲೇ ಸಶ್ಯಂಕೆಯಿಂದ ಜನತೆ ಅವರನ್ನೆಷ್ಟು ತಲೆಯ ವರೆಗೇರಿಸಿಕೊಳ್ಳುತ್ತದೆ; ಮತ್ತೊಮ್ಮೆ ಕಾಲಡಿಗೆ ಹಾಕಿ ನಿಲ್ಲುತ್ತದೆ. ಅವರನ್ನು 'ಬೇಕು' ಅಥವಾ 'ಬೇಡ'ವೆನ್ನಲು ಕಾಲ ಬದಲಾವಣೆಯನ್ನರಿತವರಿಗೇನೊಂದೂ ಕಷ್ಟವಿಲ್ಲ. ಅದೊಂದು 'ಟೇಂಕು'. ಕಾರನ್ನು ಹತ್ತುವ ಸಂದರ್ಭದಲ್ಲಿ ಇದನ್ನು ಹತ್ತಬಾರದೆಂಬುದನ್ನು ಕಲಿಸಬೇಕೆಂದಿಲ್ಲವಷ್ಟೆ? ಚರ್ಚಿಲ್ ಮುಂದು ನೋಡುವ ಮನುಷ್ಯ; ಹಿಂದು ಮುಂದು ನೋಡಿಕೊಳ್ಳುವವರಲ್ಲ. ಆದ್ದರಿಂದ ಯಶಸ್ಸು ಬಂದಾಗ ಹೇಗೂ ಏರುತ್ತಾರೆ, ಅಪಯಶಸ್ಸಿದಿರಾದಾಗ ಜಾರಲೇ ಬೇಕಾಗುತ್ತದೆ; ಹಿಂದು ಮುಂದು ನೋಡಿಕೊಳ್ಳುವವರು ಹಾಗಲ್ಲ— ಹೊಡೆತ ಬೀಳುವಾಗ ಹಿಂಜರಿದು ನಿಲ್ಲಲಾಗುವ ಒಂದು ಠಾಣ್ಯವನ್ನು ಅವರು ಮೊದಲೇ ನೋಡಿಕೊಂಡಿಡುತ್ತಾರೆ. ಆದ್ದರಿಂದಲೇ ಯುದ್ಧಕಾಲದಲ್ಲಿ 'ಡಿಸ್ಟ್ರೋಯರ್' ಒಂದನ್ನು ಚರ್ಚಿಲ್ ಎಂದು ಚಕ್ರವರ್ತಿಗಳು ಕರೆದಾಗ ಚರ್ಚಿಲ್ಲರ ಮುಖ ವೈಯ್ಯಾರದ ಲಜ್ಜೆಯಿಂದ ಕೆಂಪೇರಿದ್ದಿತು; ಅದೇ ಚರ್ಚಿಲ್ಲರು ಚುನಾವಣೆ ಸೋತ ಮೇಲೆ ಚಕ್ರವರ್ತಿಗಳು ಅಗ್ರಗಣ್ಯ ಬಿರುದಾದ 'ಓರ್ಡರ್ ಓಫ್ ದಿ ಗಾರ್ಟರ್'ನ್ನು ಕೊಟ್ಟಾಗ ವೈರಾಗ್ಯದ ಲಜ್ಜೆಯಿಂದ ಮುಖ ಕಪ್ಪಿಟ್ಟಿತು. 'ಸದ್ಯಸ್ಥಿತಿಯಲ್ಲಿ ನಾನಿದನ್ನು ನಿರಾಕರಿಸಬೇಕಾಗಿದೆ' ಎನ್ನುವಷ್ಟು ಇವರಿಗೆ ಸಿಟ್ಟು ಬಂತು. ಮತಗಣನೆಯ ದಿನ ಚಹಾ ಕುಡಿಯಲೇಳುವದಕ್ಕೂ ಕೈಕಾಲು ಬಿದ್ದು ಹೋದ ಮನುಷ್ಯನಿವ. ಆ ಶುಕ್ರವಾರ ತನ್ನ ಪರವಾಗಿ ಚುನಾವಣಾ ಕೆಲಸ ಮಾಡಿದ್ದವರಿಗೆ 'ಗುಡ್ ಬ್ಯಾ' ಎನ್ನುವ ಸಹನೆ ಕೂಡಾ ಇವರಿಗಿರಲಿಲ್ಲವಂತೆ. ಆ ದಿನ ಚರ್ಚಿಲ್ಲರು ನಮ್ಮ ನಿಮ್ಮಷ್ಟೇ ಸಾದಾ ಮನುಷ್ಯರಾಗಿ ಹೋಗಿದ್ದರು; ಪೀಠದಿಂದುರುಳಿದುದು ಅವರ ಪಾಲಿಗೆ ಮರದಿಂದ ಬಿದ್ದಂತಾಗಿತ್ತು. ಅಷ್ಟರ ವರೆಗೂ ಅವರ ಮೈಗಾವಲಿಗಿದ್ದ ಗುಪ್ತಚರರು ಆ ಶುಕ್ರವಾರ ರಾತ್ರಿ ಚರ್ಚಿಲ್ ಸುತ್ತು ವಲಯದಿಂದ ಆಕಸ್ಮಾತ್ ಅದೃಶ್ಯರಾಗಿದ್ದರು. ರಾತ್ರಿ ಅವರಿಗೆ ನಿದ್ದೆ ಬಿದ್ದಿತ್ತೋ ಸ್ಮೃತಿ ತಪ್ಪಿದ್ದಿತೋ ಗೊತ್ತಿಲ್ಲ; ಮುಂಜಾನೆ ಎದ್ದವರೇ "ನನ್ನ ಪೆಟ್ಟಿಗೆಗಳೆಲ್ಲಿವೆ? ನನಗೀ ಮುಂಜಾನೆ ಪೆಟ್ಟಿಗೆಯೊಂದೂ ಇಲ್ಲವೆ?" ಎಂದು ಶೋಕೋದ್ಗಾರವೆತ್ತಿದರಂತೆ. ಅವನ್ನೆಲ್ಲಾ ಆ ರಾತ್ರಿ ಅಟ್ಲೀಯವರಲ್ಲಿಗೆ ಸಾಗಿಸಿಬಿಟ್ಟಿದ್ದರು. ಗುಟ್ಟೆಂದರೆ ಸರಕಾರೀ ಪತ್ರಗಳಗೆಂತೂ ಆ ಮುಂಜಾನೆಯಿಂದ 'ಅಟ್ಲೀ ಅಭ್ಯಾಸ' ಪ್ರಾರಂಭಿಸಿದ್ದಿತು; ಚರ್ಚಿಲ್ಲರ ಇದುವರೆಗಿನ ಡ್ರೈವರ್ ಕೂಡ ಅಟ್ಲೀ ಕಾರನ್ನು ಗ್ಯಾರೇಜಿನಿಂದ ಹೊರಡಿಸುತಿದ್ದ. ಇಷ್ಟರಿಂದ ಮೇಲೆ ಚರ್ಚಿಲ್ ಹೃದಯ ಕೂಡಾ ಅಟ್ಲೀ ಸ್ಮರಣೆಯನ್ನೇ ಮಾಡುತ್ತಾ 'ದೀನ ನಾನು, ಸಮಸ್ತ ರಾಜ್ಯಕೆ ದಾನಿ ನೀನು' ಎನ್ನುತಿತ್ತೇನೋ!

ಲೋರ್ಡ್ ಬೀವರ್ ಬ್ರೂಕ್

ಕೂಲಿಗಾರರ ಉಗ್ರ ನೋಟ ಹೊಡೆಯುತ್ತಿರುವದೆಂದರೆ ತೆರೆಯ ಮರೆಯ ಲೋರ್ಡ್ ಬೀವರ್ ಬ್ರೂಕರ ಮೇಲೆ. ಚರ್ಚಿಲ್ಲರ ತಪ್ಪು ಹೆಜ್ಜೆಯ ತಾಳವೇ ಇದು-ಈ ಪ್ರಾಣಿ-ಎನ್ನುತ್ತದೆ ಬ್ರಿಟಿಷ್ ಜನತೆ! ಬ್ರಿಟನ್ನಿನ 25 ಮಿಲಿಯ ಮಂದಿ 'ಶೆಲ್ಟರ್' ಗೋಡುವಷ್ಟೇ ಗಡಿಬಿಡಿಯಿಂದ 'ಪೋಲಿಂಗ್ ಸ್ಟೇಶನು'ಗಳಿಗೋಡುವಂತೆ ಮಾಡಿದವ ಈತನೆಂದೇ ಜನರ ಕ್ರೋಧ. ಕೂಲಿಗಾರ ಪಕ್ಷೀಯರ ಮಟ್ಟಿಗೆ ಬೀವರ್ ಬ್ರೂಕ್ ಬೆವರಿಗೆ ಸಮ-ಇದನ್ನು ಉಜ್ಜಿಕೊಂಡ ಮೇಲೆಯೇ ವಿರಾಮವೆಂದು ಅವರ ಹಠ. ಲೋರ್ಡ್ ಬೀವರ್ ಬ್ರೂಕ್ ಅತಿ ದೊಡ್ಡ ಶ್ರೀಮಂತ. ದೊಡ್ಡ ವ್ಯಾಪಾರಿ. ಬ್ರಿಟಿಷ್ ವ್ಯಾಪಾರೀ ಬುದ್ಧಿಯನ್ನು ಬಟ್ಟಿಯಿಳಿಸಿ ತೆಗೆದ ಸಾರದಂತಿರುವವ; ಮಾನವ ಸಬ್‌ಮೆರೀನ್. ಇಂಥವರ ಕ್ಷೇತ್ರ ರಾಜಕೀಯವಲ್ಲ. ಆದರೆ ಬೀವರ್ ಬ್ರೂಕರ ಸಾಮರ್ಥ್ಯ ಅಪಾರವಾದುದು. ಅವರು ಹಲವು ಪತ್ರಿಕೆಗಳ ಸೂತ್ರಚಾಲಕ; ಸಂಪತ್ತಿನ ಬಲವಿದ್ದಂತೆಯೇ ಸಂಘಟನಾ ಸಾಮರ್ಥ್ಯವಿರುವ ಮನುಷ್ಯ; ಉತ್ಪಾದನೆಯಂತೆಯೇ ಉದ್ವೇಗವನ್ನೂ ನಿರ್ಮಿಸಬಲ್ಲವ. ಒಂದು ರೀತಿಯಲ್ಲಿ ಬ್ರಿಟಿಷ್ ರಾಜಕೀಯದ ಗಾಂಧಿ ಎನ್ನಬಹುದು. ಗಾಂಧಿಜೀ ಹಿಂದೀ ರಾಜಕೀಯದ 1'ಡೋಸ್'ಗೆ 2'ಡೋಸ್' ಧಾರ್ಮಿಕ ಮನೋಭಾವನೆ ಹಾಕಿ ಕದಡುತಿದ್ದಾರೆ. ಅಂತೆಯೇ ಬ್ರಿಟಿಷ್ ರಾಜಕೀಯದ ಒಂದೌನ್ಸಿಗೆ ಮೂರು ಔನ್ಸ್ ವ್ಯಾಪಾರೀ ಹಿತಸಂಬಂಧ ಮಿಶ್ರಮಾಡಿಬಿಡಬೇಕೆಂದು ಬೀವರ್ ಬ್ರೂಕನ ಬಯಕೆ. ಆದರೆ ಅದು ವಿಚಾರವಂತ ಜನಾಂಗ. ಬೀವರ್ ಬ್ರೂಕರನ್ನು ಬಹಳವಾಗಿ ದ್ವೇಷಿಸುತ್ತದೆ. ಆದ್ದರಿಂದ ಅವರು 'ರಾಷ್ಟ್ರಪಿತ' ಚರ್ಚಿಲ್ಲರ ಹಿಂದೆನಿಂತರು. ಅಥವಾ ಚರ್ಚಿಲ್ಲರ 'ಮೈಮೇಲೆ ಬಂದರು'! ತನ್ನ ಮಾತುಕೃತಿಗಳನ್ನು ಚರ್ಚಿಲ್ಲರ ಬಾಯಿಯಿಂದ ಆಡಿದರು-ಚರ್ಚಿಲ್ಲರ ಕೈಯಿಂದ ಮಾಡಿದರು. ಆದರೆ ಮೊದಲೇ ಹೇಳಿರುವಂತೆ ವರ್ತನೆಯ ಹೊರತು ವದನ ನೋಡುವ ಅಭ್ಯಾಸವಿರದ ಬ್ರಿಟಿಷ್ ಜನತೆ

(೧೧ನೇ ಪುಟ ನೋಡಿರಿ.)

ಬೇಕಾಗಿದ್ದಾರೆ
ಮಾರ್ಗರೇಟರ
ಫಿಟ್ಸ್ ಕ್ಯೂರ್
ಮಕ್ಕಳ ಬಾಲಗ್ರಹವನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸಿಬಿಡುತ್ತದೆ.
ಬೆಲೆ ರೂ. 1—8—0
ಹೆಚ್ಚಿನ ಮಾಹಿತಿಗೆ ಮತ್ತು ಏಜೆನ್ಸಿ ಬಗ್ಗೆ ನಮಗೆ ಬರೆಯಿರಿ
Brightstar Agencies
Hospital Road, UDIPI

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,
ಕಂಟ್ರಾಕ್ಟರ್ಸ್, ಉಡುಪಿ.
ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ರಿಟೇಲ್ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ.
ಬೇಕಾದಲ್ಲಿಗೆ ಲೋರಿ ಮುಖಾಂತರ ಡೆಲಿವರಿ ಕೂಡಾ ಕೊಡಲಾಗುವುದು.
ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ.
ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ ಪತ್ರ ಬರೆಯಬಹುದು.
Managing Director,
Homes & Estates Ltd., Udipi.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

ಬ್ರಿಟನಿನ ಲೇಬರ್ ಮಂತ್ರಿಮಂಡಲ.

ಯಾರಿಗೆ ಯಾವುದು.

ಹಳಬರು— ಹೊಸಬರ ಮಿಲನ.

ಬ್ರಿಟಿಷ್ ಲೇಬರ್ ಸರಕಾರದ ಮಂತ್ರಿ ಮಂಡಲ ರಚನೆಯೀಗ ಬಹುಮಟ್ಟಿಗೆ ಪೂರ್ಣಗೊಂಡಿದೆ ಇನ್ನು ಬಾಕಿಯಿರುವದು ಕೆಲವು ಕಾರ್ಯದರ್ಶಿ ಸ್ಥಾನಗಳ ನೇಮಕ ಮಾತ್ರ. ಜುಲಾಯಿ ತಾ. 27ರಲ್ಲೇ ಮುಖ್ಯ ಸ್ಥಾನಗಳ ನೇಮಕ ಮಾಡಿಕೊಂಡು ತ್ರಿಮೂರ್ತಿ ಸಮ್ಮೇಲನಕ್ಕಾಗಿ ಪೋಟ್ಸ್ ಡಾಮಿಗೆ ಹೋಗಿ ಮರಳಿದ ಪ್ರಧಾನ ಮಂತ್ರಿ ಮಿ. ಆಟ್ಲಿಯವರು ಇದೇ ತಾ. 3ರಲ್ಲಿ ಚಕ್ರವರ್ತಿಗಳ ಭೇಟಿ ಪಡೆದು ಉಳಿದ ಸ್ಥಾನಗಳನ್ನೂ ತುಂಬಿಸಿಕೊಂಡಿದ್ದಾರೆ. ಲೇಬರ್ ಮಂತ್ರಿ ಮಂಡಲದಲ್ಲಿ ಯಾರು-ಏನು ಎಂಬುದು ಇಲ್ಲಿದೆ:—

ಸಿ. ಆರ್. ಆಟ್ಲಿ, (ಪ್ರಧಾನ ಮಂತ್ರಿ)

ತೂಕ, ಮತ್ತು ಜಾಗರೂಕತೆಗೆ ಹೆಸರು ಹೋದ ಮನುಷ್ಯ; ಚರ್ಚಿಲ್ಲರು ಬಹಿರ್ಗಾಮಿಯಾದರೆ ಈತ ಅಂತರ್ಗಾಮಿ. ಆವರ ಪ್ರದರ್ಶನ ಪ್ರೀತಿ-ಎದೆಗಾರಿಕೆ-ನಾಗಾಡಂಬರಗಳ ಹತ್ತನೇ ಒಂದಂಶವೂ ಇವರಲ್ಲಿಲ್ಲ. ಪ್ರದರ್ಶನದ ಮಟ್ಟಿಗೆ ಚರ್ಚಿಲ್ಲರ ಕೈಯಿಂದ ಆಟ್ಲಿಯವರ ಕೈಗೆ ಬಂದ ಅಧಿಕಾರವು, ಧ್ವಜದ ಅರಿವೆಯಂತೆ ಲಟಪಟ ಸುತ್ತಿದ್ದುದು ಕರವಸ್ತ್ರವಾಗಿ ಜೇಬಿನೊಳಗೆ ಸೇರಿದಂತಾಗಿದೆ. ಆದ್ದರಿಂದಲೇ ಬೆವಿನ್ ಅಥವಾ ಮೋರಿಸನ್ ಪ್ರಧಾನಿಯಾಗಬೇಕೆಂದು ಬಯಸಿದವರೇ ಹೆಚ್ಚಿಗೆ. ಆದರೆ ಇವರಲ್ಲಿ ಒಂದು ಗುಣವಿದೆ ಮುಂದೆ ನುಗ್ಗುವವರಲ್ಲವಾದರೂ ಇಟ್ಟ ಹೆಜ್ಜೆಯಿಂದ ಅಲುಗಾಡುವವರೂ ಅಲ್ಲ; ಮೂರು ಮೂರ್ಸಬಾರಿ ಯೋಚಿಸಿಕೊಂಡು ಅವರು ನೆಟ್ಟದ್ದು ಕಲ್ಪವೃಕ್ಷ, ಕಟ್ಟಿದ್ದು ಕಾಮಧೇನು ಆಗುತ್ತದೆ ಕಾರ್ಯಸಾಧನೆಯೇ ಸರ್ವಸ್ವ—ಮಾಡಲಾಗುವದನ್ನಷ್ಟೇ ಆಡಬೇಕು-ಎನ್ನುವ ಜನಪಾದ್ದರಿಂದ ಅವರನ್ನು ಅಲುಗಾಡಿಸುವರು ಅಸಾಧ್ಯ 'ಸಪ್ಪಗಿನ ಮನುಷ್ಯ' ಎಂದು ದೂರಬೇಕಲ್ಲದೆ ಬೇರೆ ತಪ್ಪು ಹುಡುಕುವದೂ ಕಷ್ಟ.

ಅರ್ನೆಸ್ಟ್ ಬೆವಿನ್ (ವಿದೇಶ ಮಂತ್ರಿ)

'ಭುಜಬಲಿ ಮನುಷ್ಯ' ಎಂದು ಹೆಸರಾದವ. ಟೋರಿ ಪತ್ರಿಕೆಗಳು ಕೂಡ ವಿಮರ್ಶಿಸಲಂಜುವ ಕೂಲಿಗಾರ ಪ್ರಮುಖನೆಂದರೆ ಅರ್ನೆಸ್ಟ್ ಬೆವಿನರೇ. ಈ ವಿದೇಶಮಂತ್ರಿ ನೇಮಕವು ಬ್ರಿಟನಿನಲ್ಲಿ ಸೇಕಡಾ 100ರಷ್ಟು ಅನುಮೋದನೆ ಪಡೆದಿದೆ. 'ನೀನು ಪ್ರಧಾನಿಯಾಗುವಿಯಾದರೆ ನಾನು ಬದಿಗೆ ನಿಲ್ಲುವೆ' ಎಂದು ಕ್ಲೆಮೆಂಟ್ ಆಟ್ಲಿಯವರು ಸೂಚಿಸಿದಾಗ "ಹೋ. ಕೂಡದು ಕ್ಲೆಮಿ. ನಿನ್ನ ಜೀವಾವಧಿಯಲ್ಲದು ಬೇಕು" ಎಂದರಂತೆ. ಯುದ್ಧ ಕಾಲದಲ್ಲಿ ಬ್ರಿಟನಿನ25,000,000 ಜನಬಲದ ಅಧಿಕಾರ ಇವರ ವಿಶಾಲ ಹೆಗಲಲ್ಲಿತ್ತು; ಅವರೇ 2½ ಕೋಟಿಯ ಸರ್ವಾಧಿಕಾರಿಯೇ ಆಗಿದ್ದರು. ಉಗ್ರತೆಯಲ್ಲಿ ಚರ್ಚಿಲ್ಲರಿಗಿಂತ ಆಟ್ಲಿಯವರು ಹತ್ತು ಪಾಲು ಕಡಿಮೆಯಾದರೆ, ಈ ಡೆನರಿಗಿಂತ ಬೆವಿನರು ಹತ್ತು ಮಡಿ ಅಧಿಕವಿದ್ದಾರೆ. ಮಾಜಿ ಪ್ರಧಾನಿ ಚರ್ಚಿಲ್ಲರು 'ಬ್ರಿಟನಿನ ಹಿಟ್ಲರ'ನಂತಿದ್ದರೆ ನವ ವಿದೇಶ ಮಂತ್ರಿ ಬೆವಿನರು ಪ್ರತ್ಯಕ್ಷ ಬ್ರಿಟಿಷ್ ಸ್ಟಾಲಿನ್ ಆಗಿದ್ದಾರೆ. ಖಾಡಾಖಾಡಿ ಮನುಷ್ಯ; ಇಡೀ ಲೋಕದಿದಿರಾಗಿ ತೊಡೆ ತಟ್ಟಿಕೊಳ್ಳಬಲ್ಲ ಜಗಜಟ್ಟಿ; ಒರಟು ಸತ್ಯವನ್ನು ಸಾಣೆಗೆ ಕೊಡವೇನೇ ಆಡಿಬಿಡುವ ಎದೆಗಾರ. ಒರಗು ಸ್ವಭಾವಿ, ಆದರೆ ಮೃದು ಹೃದಯಿ. ನಿರ್ಭೀತ, ಆದರೆ ಸ್ನೇಹಿತ. ಬೆವಿನರ ಅಂತರ್ರಾಷ್ಟ್ರೀಯ ಜ್ಞಾನವು ಅಗಾಧವಾದುದು ಆದ್ದರಿಂದ ಬ್ರಿಟಿಷ್ ವಿದೇಶ ಧೋರಣೆಯು ತಪ್ಪು ಮತ್ತು ತಡೆಯಿಲ್ಲದೆ ಸಾಗುವ ಆಸೆಯಿದೆ. ಬೇರಾವ ಇಲಾಖೆಯಲ್ಲೂ ಇಡದಷ್ಟು ಭರವಸೆಯು ಬೆವಿನರ ಖಾತೆಯ ಮೇಲೆ ಮೂಡಿದೆ.

ಹರ್ಬರ್ಟ್ ಮೊರಿಸನ್ (ಲೋರ್ಡ್ ಪ್ರೆಸಿಡೆಂಟ್ ಓಫ್ ದಿ ಕೌನ್ಸಿಲ್)

ಉಪ ಪ್ರಧಾನಿಯ ಸ್ಥಾನವಿದು. ಕಾಮನ್ಸ್ ಸಭೆಯ ಚಾಲಕತ್ವವೂ ಇವರ ಕೈಯಲ್ಲೆ. ಕೂಲಿಗಾರ ಪಕ್ಷದ ತ್ರಿಮೂರ್ತಿಗಳೆಂದರೆ ಆಟ್ಲಿ, ಬೆವಿನ್, ಮೊರಿಸನ್ ಬ್ರಿಟಿಷ್ ಲೇಬರ್ ದತ್ತಾತ್ರೇಯನ ತ್ರಿಶಿರಸ್ಸುಗಳಿವು. ಉದ್ರೇಕ ಸ್ವಭಾವದ ಮನುಷ್ಯನಿವ; ಆದರೆ ಅತಿ ಸಮರ್ಥ. ಕೂಲಿಗಾರ ಪಕ್ಷದ ಸದಸ್ಯರಲ್ಲಿ ಬಹುಮಂದಿಯರ ಮೇಲೆ ಮೊರಿಸನರ ಹಿಡಿತವಿದೆ. ಆದ್ದರಿಂದ ಪಕ್ಷದ ನಾಯಕನಾಗಿ, ತದನುಸಾರ ಪ್ರಧಾನ ಮಂತ್ರಿಯಾಗಿ ಇವರನ್ನಾರಿಸುವ ಹಂಚಿಕೆ ನಡೆದಿದ್ದಿತು ಮೊರಿಸನರು ಬೆವಿನರಂತೆ ಆಟ್ಲಿಯವರ ಮೇಲಿನ ದಾಕ್ಷಿಣ್ಯದಿಂದ ಅದಕ್ಕೆ ಹಿಂಜರಿಯಲೂ ಇಲ್ಲ. ಆದರೆ ಅಸಾಧ್ಯ ಮನುಷ್ಯ ಬೆವಿನರೇ ಇದಕ್ಕೆ [illegible] ತೀರದು ಬರುತ್ತದೆ. ಇನ್ನು ಕೆಲ ಕಾಲಾನಂತರವಾದರೂ ಆಟ್ಲಿಯವರನ್ನು ಹಿಂದೆ ಹಾಕಿ ಬೆವಿನರೋ ಮೊರಿಸನನರೋ—ಪ್ರಧಾನಿಯಾಗುವದು ಸಂಭವನೀಯ. ಹೀಗೇನೇ ಇದ್ದರೂ ಬೆವಿನ್-ಮೊರಿಸನ್ ರೆಕ್ಕೆಗಳು ಆಟ್ಲಿಯನ್ನು ಮಂದ ಹೆಜ್ಜೆಯಲ್ಲಿ ನಡೆಯಲುಬಿಡದೆ ಹಾರಾಡಿಸಬಲ್ಲವು!

ಹ್ಯೂಜ್ ಡಾಲ್ಟನ್ (ಹಣಕಾಸಿನ ಮಂತ್ರಿ)

ಚುರುಕು ಮತ್ತು ಸ್ವಂತ ಬುದ್ಧಿಯಿರುವ ಮಂತ್ರಿಯೀತ. ಗತ ಆರ್ಥರ್ ಹೆಂಡರ್ಸನರ ಡೆಪ್ಯುಟಿಯಾಗಿದ್ದು ಅನುಭವವುಳ್ಳ ಇವರಿಗೆ ವಿದೇಶಮಂತ್ರಿತ್ವವೇ ಗುರಿಯಾಗಿದ್ದಿತು. ಆದರೆ ಅವರ ಅರ್ಥಶಾಸ್ತ್ರಜ್ಞತೆ ಅಪಾರವಾದುದು. ಕೂಲಿಗಾರ ಸರಕಾರವು ಮಾಡಬೇಕಾಗಿರುವ ಆರ್ಥಿಕ ಬದಲಾವಣೆಗಳೂ ಬಹಳವಿವೆ. ಡಾಲ್ಟನರಿಗೆ ದೊರೆತ ಈ ಮಹಾ ಜವಾಬ್ದಾರಿ ಸರ್ವಸಾಮಾನ್ಯ ಕಾಲದ 'ವಿದೇಶ ಮಂತ್ರಿ' ಸ್ಥಾನಕ್ಕಿಂತ ಯಾವ ದೃಷ್ಟಿಯಲ್ಲೂ ಕಡಿಮೆಯದಲ್ಲ. ದೀರ್ಘದೇಹಿ ಮತ್ತು ಬೋಳು ತಲೆಯ ಡಾಲ್ಟನರು ಚತುರರು; ಅರ್ಥಶಾಸ್ತ್ರದಲ್ಲಿ ತಜ್ಞರು; ಆದರೂ ಮಂತ್ರಿಗಳ ಬೆಂಚಿಗೆ ಅನಿರೀಕ್ಷಿತವಾಗಿ ಏರಿದವರಲ್ಲಿ ದಾಲ್ಟನರೊಬ್ಬರು.

ಸ್ಟಾಫೋರ್ಡ್ ಕ್ರಿಪ್ಸ್ (ವ್ಯಾಪಾರೀ ಬೋರ್ಡಿನ ಅಧ್ಯಕ್ಷ)

ಸರ್. ಕ್ರಿಪ್ಸರು ಭಾರತೀಯರು ಆಗಾಗ ಸ್ಮರಿಸುವ ಕೆಲವೇ ಮಂದಿ ಆಂಗ್ಲೇಯರಲ್ಲೊಬ್ಬರು. ಜರ್ಮನಿಯೊಡನೆ ಒಪ್ಪಂದವಿದ್ದ ರಶ್ಯದಲ್ಲಿ ರಾಯಭಾರಿಯಾಗಿದ್ದಾಗ ಅವರು ಬ್ರಿಟಿಷ್ ಜಾಣ್ಮೆಯ ಉಚ್ಚ ಮಾದರಿಯನ್ನೇ ಪ್ರದರ್ಶಿಸಿದ್ದರು; ಆಗ ಅವರು ಪಡೆದ ಯಶಸ್ಸಿನಿಂದಾಗಿ ಒಂದು ಕಾಲದಲ್ಲಿ ಪ್ರಧಾನಿ ಪಟ್ಟವು ಅವರಿಗೆ ಮಾರುದ್ದದಷ್ಟು ಸಮೀಪವಾಗಿತ್ತು. ಆದರೆ 1942ರಲ್ಲಿ ಚರ್ಚಿಲ್ಲರಿಗವರ ತೇಜೋವಧೆ ಮಾಡುವ ಉಪಾಯ ಹೊಳೆಯಿತು. ಕೀರ್ತಿಗಂಧಿಗಳ ಮೈಗೆ ಕೆಸರು ಲೇಪಿಸಬಲ್ಲ ಭಾರತವಿದೆ ಸಂಧಿಸೂಚನೆಗಳೊಡನೆ ಕ್ರಿಪ್ಸರು ಭಾರತಕ್ಕಾಗಮಿಸಿ ಸೋತು ಹಿಂದಿರುಗಿದರು, ಆ ಮೇಲೆ ಅವರನ್ನು ರಾಜಕೀಯ ರಂಗದಿಂದೆತ್ತಿ ಔದ್ಯೋಗಿಕ ರಂಗಕ್ಕೆಸೆಯಲಾಯಿತು ಆ ಮೊದಲು ಲೋರ್ಡ್ ಬೆವರ್ ಬ್ರೂಕರದಾಗಿದ್ದ ವಿಮಾನೋತ್ಪಾದನಾ ಮಂತ್ರಿ ಸ್ಥಾನ ಕ್ರಿಪ್ಸರಿಗೆ ದೊರೆತಿತ್ತು. ಈ ಬಾರಿ ವ್ಯಾಪಾರ ಮಂತ್ರಿಯಾಗಿದ್ದಾರೆ. ಹೊಸ ನೇಮಕಗಳ ಪೈಕಿ ಕಟು ವಿಮರ್ಶೆಗೊಳಗಾದವರಲ್ಲಿ ಸರ್. ಕ್ರಿಪ್ಸರೊಬ್ಬರು. ಹಿಂದೀ ಪ್ರಶ್ನೆಯನ್ನೆತ್ತಿಕೊಳ್ಳುವಾಗ ಆಟ್ಲಿಗಳು ಮಿಕ್ಕೆಲ್ಲರಿಗೊಂದೇ ಕಿವಿ, ಕ್ರಿಪ್ಸರ ಕಡೆಗಿನ್ನೊಂದು ಕಿವಿ ಕೊಡುವ ಸಂಭವವಿದೆ. ತಾತ್ಕಾಲಿಕ ವ್ಯವಸ್ಥೆಯ ಯೋಜನೆ ಬಿಟ್ಟು ಕ್ರಿಪ್ಸ್ ಕೊಡುಗೆಯನ್ನಯ ಶಾಶ್ವತ ರಾಜ್ಯ ವ್ಯವಸ್ಥೆ ಜ್ಯಾರಿಗೆ ತರಬೇಕೆಂದೇ ಈಗ ಕ್ರಿಪ್ಸರ ಅಭಿಮತ.

ವಿಲ್ಲಿಯಮ್ ಜೋವಿಟ್ (ಲೋರ್ಡ್ ಚಾನ್ಸೆಲರ್)

ಸರ್. ಜೋವಿಟ್ ಚರ್ಚಿಲ್ಲರ ಸಮ್ಮಿಶ್ರ ಮಂತ್ರಿ ಮಂಡಲದಲ್ಲಿ ವಿಮಾ ಮಂತ್ರಿಯಾಗಿದ್ದವರು. ಹೆಸರಾಂತ ವಾಗ್ಮಿ. ದಯಾರ್ದ್ರ ಹೃದಯಿಯಾದರೂ, ಕಠೋರಗಭೀರತೆಯುಳ್ಳವರು ಎತ್ತರದೇಹಿಯಾಗಿದ್ದು ಸಲುಗೆಗಿಂತ ಹೆಚ್ಚಿಗೆ ಭೀತಿ ಹುಟ್ಟಿಸುವವರು, ಕಾನೂನು ಪ್ರಾಜ್ಞ. ಹಿಂದೆ ಲೋರ್ಡ್ ಸೈಮನರದಾಗಿದ್ದ ಪೀಠಕ್ಕೆ ಇವರೇರಿದ್ದಾರೆ.

ಆರ್ಥರ್ ಗ್ರೀನ್‌ವುಡ್ (ಲೋರ್ಡ್ ಪ್ರಿವ್ಹಿ ಸೀಲ್)

ಬೆಳ್ಳೀ ಸರಿಗೆಯಂತಹ ಕೂದಲು-ದೀರ್ಘ ಕಾಯ-ಪಾಂಡಿತ್ಯಪೂರ್ಣ ನೋಟಗಳುಳ್ಳ ಗ್ರೀನ್‌ವುಡ್ ಎಂದರೆ ಕೂಲಿಗಾರಪಕ್ಷವು ಅತ್ಯಂತ ಮಮತೆಯಿಂದ ಕಾಣುವ ಜನಪ್ರಿಯಾಗ್ರಣಿ. ಯುದ್ಧಾವಧಿಯಲ್ಲಿ ಸಮ್ಮಿಶ್ರ ಮಂತ್ರಿಮಂಡಲದ ಸದಸ್ಯರಾಗಿದ್ದರು ಬೆವಿನ್ ಅಥವಾ ಮೊರಿಸನರಂತಹ ಪ್ರಭಾವಶಾಲಿ ವ್ಯಕ್ತಿತ್ವ ಇವರದಲ್ಲ. ಆದರೆ ಜನಪ್ರಿಯತೆಯೇ ಮುಖ್ಯವೆಂದಾಗುತಿದ್ದರೆ ಆರ್ಥರ್ ಗ್ರೀನ್‌ವುಡ್ಡರೇ ಪ್ರಧಾನಿಯಾಗಬೇಕಿತ್ತು. ಕೆನಡಾದ ಬೀಜ-ಪತ್ರಿಕಾ ಪ್ರಭು ಮಿಲಿಯಾಧಿಪ-ಟೋರಿ ಪಕ್ಷದ ದುರ್ಬುದ್ಧಿ ಮತ್ತು ಸದ್ಯದ ಆಕಸ್ಮಿಕ ಚುನಾವಣೆಯ ಮೂಲಪುರುಷ—ಲೋರ್ಡ್ ಬೆವರ್ ಬ್ರೂಕರದಾಗಿದ್ದ 'ಲೋರ್ಡ್ ಪ್ರಿವ್ಹಿ ಸೀಲ್' ಹುದ್ದೆಯನ್ನು ಪಡೆದಿದ್ದಾರೆ. ಎಲ್ಲಾ ಇಲಾಖೆಗಳ 'ಮೊಹರುಧಾರಿ' ಅಧಿಕಾರಿಯಾಗಿದ್ದಾರೆ. ಹೀಗಾಗಿ ಪ್ರತಿಯೊಂದರಲ್ಲೂ ಕೈಯ್ಯಾಡಿಸುವ ಹಕ್ಕು ಅವರಿಗಿದೆ!

ಚುಟೆರ್ ಎಡೆ (ಗೃಹ ಮಂತ್ರಿ)

63 ವರುಷ. ಮಿಶ್ರಮಂಡಲದಲ್ಲಿ ವಿದ್ಯಾಮಂತ್ರಿಗಳ ಕಾರ್ಯದರ್ಶಿಯಾಗಿದ್ದರು. ರಾಜಕೀಯ ಮತ್ತು ಪಾರ್ಲಿಮೆಂಟ್ ಕ್ಷೇತ್ರದಲ್ಲಿ ನುರಿತ ಮನುಷ್ಯ. ನೇಮಕ ತಪ್ಪಲ್ಲವೆಂದು ಒಪ್ಪಿಕೊಳ್ಳಲ್ಪಟ್ಟಿವೆ

ಲೋರ್ಡ್ ಎಡ್ಡಿಸನ್ (ಡೊಮಿನಿಯನ್ ಮಂತ್ರಿ)

ಸಮರ್ಥ. ವೈದ್ಯಕೀಯ ಅನುಭವಗಳಲ್ಲಿ

The Prabhakara Bank Limited.
(Incorporated in British India with limited liability.)
H. O. MOODBIDRI, (S. I.)
Bombay Office -
Elphinstone Road, PAREL, BOMBAY, 12.
Shortly opening branches at
MANDVI, BOMBAY
AND
MANGALORE.
All kinds of Banking business Transacted.
P. Dasa Kini, *Secretary*
K. S. Kamath, B A Cert A I I B. *Managing Director.*

ಆಟ್ಲಿ ಮಂಡಲದಲ್ಲಿ ಯಾರಾರು?

ಅಸಾಮಾನ್ಯನೆಂದು ಅವರ ಕೀರ್ತಿ. ಲೋರ್ಡ್ಸ್ ಸಭೆಯ ನಾಯಕನಾಗಿಯೂ ಇವರನ್ನು ನೇಮಿಸಲಾಗಿದೆ 1940ರಿಂದಲೂ ಆ ಸ್ಥಾನ ಇವರಿಗಿದ್ದಿತು. ಡೊಮಿನಿಯನ್‌ಗಳ ಮಂತ್ರಿಯಾಗಿ ದಕ್ಷಿಣಾಫ್ರಿಕದ ಜನರಲ್ ಸ್ಮಟ್ಸರಂತಹ ಪ್ರತಿಷ್ಠಾವಂತ ಪ್ರಗತಿ ವಿರೋಧಿಗಳೊಡನೆ ಅವರು ಹೋರಾಡಬೇಕಾಗಿ ಬಂದಿದೆ. ಸ್ಥಾನ ಘನವಾದುದು; ಕೆಲಸ ಮಾತ್ರ ಒಗಟು ಬಿಡಿಸುವಂತಹುದು. ಪ್ರಾಯ 67.

ಜಿ. ಎಚ್. ಹಾಲ್
(ವಸಾಹತು ಕಾರ್ಯದರ್ಶಿ)

ಚರ್ಚಿಲ್ಲರ ಮಿತ್ರಮಂಡಲದಲ್ಲಿ ವಿದೇಶ ಖಾತೆಯ ಉಪ ಕಾರ್ಯದರ್ಶಿಯಾಗಿದ್ದರು 64ನೇ ವಯಸ್ಸಿನಲ್ಲೀಗ ವಸಾಹತು ಕಾರ್ಯದರ್ಶಿಯಾಗಿದ್ದಾರೆ. ಬೆಳೆಸದೆಯೂ ಅಳಿಸದೆಯೂ ಇದ್ದಲ್ಲೇ ಸುಧಾರಿಸುವದು ಇವರ ಸ್ವಭಾವಕ್ಕೊಗ್ಗುತ್ತದೆ.

ಎ. ವಿ. ಅಲೆಕ್ಸಾಂಡರ್ (ಸಮುದ್ರ ಬಲದ ಮಂತ್ರಿ)

ಬ್ರಿಟನಿನ ಪ್ರಾಮುಖ ಸ್ಥಾನಗಳಲ್ಲೊಂದಕ್ಕೇರಿದ್ದಾರೆ. ಸಮ್ಮಿಶ್ರ ಮಂತ್ರಿ ಮಂಡಲದಲ್ಲಿದ್ದ ಸ್ಥಾನವೇ ಪುನಃ ದೊರೆತಿದೆ. ಪ್ರಾಯ 60. ಹಿಂದಿನಷ್ಟು ದೊಡ್ಡ ಜವಾಬ್ದಾರಿ ಇನ್ನಿಲ್ಲ.

ಜೆ. ಜೆ. ಲಾಸನ್ (ಯುದ್ಧ ಕಾರ್ಯದರ್ಶಿ)

1919ರಿಂದಲೂ ಪಾರ್ಲಿಮೆಂಟಿನಲ್ಲಿದ್ದಾರೆ. 1924ರಲ್ಲಿ ಯುದ್ಧ ಕಾರ್ಯಾಲಯದ ಆರ್ಥಿಕ ಕಾರ್ಯದರ್ಶಿಯಾಗಿಯೂ 1921ರಿಂದ 1931ರ ವರೆಗೂ ಕೂಲಿಗಾರ ಮಂತ್ರಿಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ. ಈಗ-ತನ್ನ 64ನೇ ವಯಸ್ಸಿನಲ್ಲಿ-ಒಬ್ಬ ಮಂತ್ರಿಯಾಗಿ ಕುಳಿತಿದ್ದಾರೆ. 'ಇರಲಿ' ಎಂದು ಇವರನ್ನು ಹರಸುವವರೇ ಹೆಚ್ಚಿಗೆ.

ವಿಸ್ಕೌಂಟ್ ಸ್ಟಾನ್ಸ್‌ಗಾಟೆ (ಆಕಾಶ ಕಾರ್ಯದರ್ಶಿ)

ಹಿಂದಿನ ವೆಜ್‌ವುಡ್‌ಬೆನ್. 1929 ರಿಂದ 31ರ ವರೆಗೆ ಕೂಲಿಗಾರ ಸರಕಾರದ 'ಭಾರತ ಮಂತ್ರಿ' ಸ್ಥಾನದಲ್ಲಿದ್ದವರು. ಕೊನೆಗೆ ಆಕಾಶ ಖಾತೆಯ ಸಾರ್ವಜನಿಕ ಸಂಬಂಧಾಧಿಕಾರಿಯಾಗಿಯೂ ದುಡಿದಿದ್ದರು. ಈಗ ಆ ಭಾಗದ ಅಗ್ರಪೀಠಕ್ಕೇರಿದ್ದಾರೆ. 68ರ ಹಳಬ. ಹುರುಪು ತಗ್ಗಿರಬಹುದು, ರಕ್ತಮುಪದ ಆ ಕಾಲದಲ್ಲಾದರೂ ಅಮೇರಿಯವರಂತೆ ಅಪವಾದ ಕೇಳಲಿಲ್ಲ.

ಜೋಸೆಫ್ ವೆಸ್ಟ್‌ವುಡ್
(ಸ್ಕೋಟ್ಲೆಂಡ್ ಕಾರ್ಯದರ್ಶಿ)

ಹಿಂದಿನ ಮಿಶ್ರ ಮಂಡಲದಲ್ಲಿ ಇದೇ ಖಾತೆಯ ಉಪಕಾರ್ಯದರ್ಶಿಯಾಗಿದ್ದರು. ಈಗ ಒಂದಂತಸ್ತಿಗೆ-ತುದಿಯ ಮೆಟ್ಟಿಕ್ಕೇರಿದ್ದಾರೆ. ಪ್ರಾಮುಖ್ಯ ಸ್ಥಾನವೇನೂ ಅಲ್ಲ; ಆದ್ದರಿಂದ ಡೌನಿಂಗ್ ಸ್ಟ್ರೀಟ್ ನಂ. 10ರಿಂದ ಅವರ ಕೀರ್ತಿಕಿರಣ ಹೊರ ಸೂಸುವದು ಅಸಂಭವ. ಪ್ರಾಯ 61.

ಜೆ. ಎ. ಇಸ್ಸಾಕ್ಸ್
(ಕೂಲಿಗಾರರ ಮತ್ತು ನೇಶನಲ್ ಸರ್ವಿಸ್ ಮಂತ್ರಿ)

ಮಿಶ್ರಮಂಡಲದಲ್ಲಿ ಸಮುದ್ರ ಮಂತ್ರಿ ಅಲೆಕ್ಸಾಂಡರರ ಖಾಸಗೀ ಕಾರ್ಯದರ್ಶಿಯಾಗಿದ್ದರು. ಈಗ 62ನೇ ಪ್ರಾಯದಲ್ಲಿ ಅವರ ಸಮಾನ ದರ್ಜೆಗೇರಿದ್ದಾರೆ. ಸರಕಾರವೇ ಕೂಲಿಗಾರರಿಂದ ಮೇಲೆ ಆ ಭಾಗದಲ್ಲಿ ವಿಶೇಷ ಭಾರ ಇವರ ಮೇಲೆ ಬೀಳುವಂತಿಲ್ಲ. 'ಆದರೆ 'ಪ್ರಿಂಟಿಂಗ್ & ಕಿಂಡ್ರೆಡ್ ಟ್ರೇಡ್ಸ್ ಫೆಡರೇಶನ್'ನ ಅಧ್ಯಕ್ಷರಾದ ಇವರನ್ನೇ ಹುದ್ದೆಗೇರಿಸಿದುದರಿಂದ ಬ್ರಿಟನು ಚಕಿತವಾಗಿದೆ ಸೇನಾಬರ್ಖಾಸ್ತು ಮತ್ತು ಯುದ್ಧ ಕಾರ್ಖಾನೆಗಳ ಕೆಲಸಗಾರರನ್ನು ಔದ್ಯೋಗಿಕ ಕಾರ್ಯಾಲಯಕ್ಕೆ ರವಾನಿಸುವ ಮಹತ್ವದ ಹೊಣೆ ಇವರ ಮೇಲಿದೆ. ಆಟ್ಲಿ ನಿರ್ಮಿಸಿದ ಆಶ್ಚರ್ಯಗಳಲ್ಲಿ ಈ ನೇಮಕ ದೊಡ್ಡದು. ಮಿ. ಇಸ್ಸಾಕ್ಸರ ಯೋಗ್ಯತೆಗೆ ಬ್ರಿಟಿಷ್ ಜನತೆಯ ಅಸ್ಪಷ್ಟಪ್ರಶ್ನಾತ್ಮಕ ಚಿಹ್ನೆ ಬಿದ್ದಿದೆ.

ಮಿಸ್. ಎಲ್ಲೆನ್ ವಿಲ್ಕಿನ್‌ಸನ್
((ವಿದ್ಯಾ ಮಂತ್ರಿ)

ಇದು ಮತ್ತೊಂದು ಆಶ್ಚರ್ಯ. ಮಿಶ್ರ ಮಂಡಲದ ಕಾಲದಲ್ಲಿ ಕೆಂಪು ಕೂದಲ ಈ ಗಿಡ್ಡ ಯುವತಿಯು ಗೃಹಮಂತ್ರಿಯ ಕಾರ್ಯದರ್ಶಿನಿಯಾಗಿದ್ದಾಗ ಬ್ರಿಟಿಷ್ ಜನತೆ ಆಕೆಗೆ ಅದೇ ಮಿತವಾದುದೆಂದು ನಿರ್ಧರಿಸಿದ್ದಿತು. ಕೂಲಿಗಾರ ಸರಕಾರದಲ್ಲಿ ಆಕೆ ವಿದ್ಯಾಮಂತ್ರಿಯಾಗಿ ಬೆಳೆದಿದ್ದಾಳೆ. ಬ್ರಿಟಿಷ್ ಕೆಬಿನೆಟಿನ 18 ಮಂದಿ 60 ದಾಟಿದವರ ನಡುವೆ ಜೀವನ ವೈರಾಗ್ಯ ನಿವಾರಣೆಗೆಂಬಂತೆ ಇವಳೊಬ್ಬ ಕುಮಾರಿ ರಾಜಿಸುತ್ತಿದ್ದಾಳೆ. ಬ್ರಿಟನಿನ ಚರಿತ್ರೆಯಲ್ಲೇ ಮಹಿಳೆ ಮಂತ್ರಿ ಸ್ಥಾನಕ್ಕೇರಿದುದು ಇದೀಗ ಎರಡನೇ ಬಾರಿ. ಒಂದಾನೊಂದು ಕಾಲದಲ್ಲಿ ಒಬ್ಬಳು-ಮಿಸ್. ಮಾರ್ಗರೆಟ್ ಬೋಂಡ್‌ಫೀಲ್ಡ್—ಕೂಲಿಗಾರ ಮಂತ್ರಿಯಾದುದಿದೆ.

ಅನೂರಿನ್ ಬೆವಿನ್ (ಆರೋಗ್ಯಮಂತ್ರಿ)

ಇವರು ಬಾಯಿಬಿಡುವದೂ ಕಾಲರುದ್ರ ನಿಟಿಲಾಕ್ಷಿ ತೆರೆಯುವದೂ ಒಂದೇ; ಆ ವಾಕ್ಶಕ್ತಿಯ ಬಿಸಿ ಚರ್ಚಿಲ್ಲರಿಗೇ ಗೊತ್ತು. ಕಳೆದ ಪಾರ್ಲಿಮೆಂಟಿನಲ್ಲಿ ಪ್ರಧಾನಿ ಚರ್ಚಿರ ವಿಮರ್ಶೆಗಾಗಿ ಎಲ್ಲರೂ ಶಬ್ದ ಕೋಶದ ಗಾಂಭೀರ್ಯಾನ್ವಿತ ಮೃದು ಶಬ್ದಗಳನ್ನೇ ಹೆಕ್ಕಿ ಪ್ರಯೋಗಿಸುತ್ತಿದ್ದಾಗ ನಿರ್ದಾಕ್ಷಿಣ್ಯವಾಗಿ ಅವರಿಗೆ ವಾಗ್ಬಾಣಗಳ ಪ್ರಹರ ಮಾಡುತ್ತಿದ್ದವರೆಂದರೆ ಅನೂರಿನ್. ವಿಮರ್ಶಾ ಸ್ವಾತಂತ್ರ್ಯದ ಮಟ್ಟಿಗೆ ಅವರು ಪಕ್ಷಾತೀತರು. ಆಟ್ಲಿಯವರು ಇಂತಹ ಹಾಯುವ ಹೋರಿಯ ಬೆನ್ನ ಮೇಲೇನೇ ನೊರೆ ಯೇರಿಸಿದುದು ಹಲವರನ್ನು ಆಶ್ಚರ್ಯಗೊಳಿಸಿದೆ 'ರಾಷ್ಟ್ರೀಯ ಆರೋಗ್ಯ ಖಾತೆ' -ಡಾಕ್ಟರರ ವಿರೋಧಕ್ಕೊಳಗಾಗಿರುವ ವಿಭಾಗ-ಈ ಟೀಕಾ ಭಾರ್ಗವನ ಕೈಗೆ ಬಂದಿದೆ.

ಜೋನ್ ವಿಲ್ಮೋಟ್ (ಸಪ್ಲೈ ಮತ್ತು ವಿಮಾನೋತ್ಪಾದಕ ಮಂತ್ರಿ)

ಮೊದಲು ಸಪ್ಲೈ ಮಂತ್ರಿಗಳ ಕಾರ್ಯದರ್ಶಿಯಾಗಿದ್ದರು; ಈಗ ಮಂತ್ರಿಗಳ ಪಂಗ್ತಿಗೇರಿದರು. ಸದ್ಯ ಈ ಖಾತೆಗಳ ಕಾರ್ಯದ ಕಠಿಣತೆ ಸಡಲಿದೆ; ಇದ್ದ ಹೊಣೆಯನ್ನು ಸುಗಮವಾಗಿ ನಿರ್ವಹಿಸುವಷ್ಟು ಅನುಭವಸ್ಥರಿದ್ದಾರೆ. ಪ್ರಾಯ 50.

ಅಲ್ಫ್ರೆಡ್ ಬಾರ್ನೆಸ್ (ಯುದ್ಧ ಸಾಮಾಗ್ರಿ ಸಂಚಾರಕ ಮಂತ್ರಿ)

ಇವರ ನೇಮಕವೂ ಸಂಪ್ರದಾಯ ವಿರುದ್ಧ. ಕೋಪರೇಟಿವ್ ಚಳವಳದಲ್ಲಿ ನುರಿತವರಾದ ಇವರನ್ನು ಯುದ್ಧ ಸರಬರಾಯಿಗೆ ಹಾಕಲಾಗಿದೆ. 58ನೇ ವಯಸ್ಸಿನಲ್ಲಿ ಅನುಭವರಹಿತ ಕಾರ್ಯಭಾರ ವಹಿಸಿದ್ದಾರೆ.

ಇಮಾನ್ಯುಯೆಲ್ ಶಿನ್‌ವೆಲ್
(ಕಟ್ಟಿಗೇ ಮಂತ್ರಿ)

ಇವರು ಮತ್ತು ಅನೂರಿನ್ ಬೆವಿನ್ ಮಾತುಗಾರಿಕೆಯ ಮಟ್ಟಿಗೆ ಅವಳಿ ಮಕ್ಕಳಂತೆ. ಉಗ್ರ ಸಮತಾವಾದೀ ಧೋರಣೆಯ ಸ್ಪಷ್ಟ ವಕ್ತೃಗಳು. ಭಾರತದ ಕುರಿತು ಸಹಾನುಭೂತಿ ಪ್ರದರ್ಶಿಸುತ್ತಿದ್ದ ಸದಸ್ಯರಲ್ಲೊಬ್ಬರು. ಕಳೆದ ಪಾರ್ಲಿಮೆಂಟಿನ ಜಿಗುಟಾದ ಚರ್ಚೆಯ ಸಂದರ್ಭಗಳಲ್ಲೆಲ್ಲಾ ವಿರುದ್ಧವಾದಗಳನ್ನು ಭೇದಿಸಿ ಎಲ್ಲರಿಗಿಂತ ಮುಂದಾಗಿ ನುಗ್ಗುತ್ತಿದ್ದವರೆಂದರೆ ಶಿನ್‌ವೆಲ್. ಇದ್ದಲು ಮುಂತಾದ ಪ್ರಾಮುಖ್ಯ ಕೈಗಾರಿಕೆಗಳ ರಾಷ್ಟ್ರೀಕರಣ ಮಾಡಲಿಚ್ಛಿಸುವ ಲೇಬರ್ ಸರಕಾರಕ್ಕೆ ಆ ಖಾತೆಯ ಅಧಿಕಾರಿಯಾಗಿ ಉಗ್ರ ಸಮತಾವಾದಿ ಬಂದಿದ್ದಾನೆ. ಖಾಸಗೀ ಲಾಭಖೋರರು ಹೆದರಿ ಹೋಗಿದ್ದಾರೆ. ಇವರು 61 ವಯಸ್ಸಿನವರು.

ನೋವೆಲ್ ಬೇಕರ್ (ಸ್ಟೇಟ್ ಮಂತ್ರಿ)

ಈ ನೇಮಕ 'ಸೈ' ಎನ್ನಿಸಿದೆ. 56ರ ವಯಸ್ಸು; ಈ ಮೊದಲಿನ ಮಂಡಲದಲ್ಲಿ ಯುದ್ಧ ಸರಬರಾಯಿ ಮಂತ್ರಿಯ ಕಾರ್ಯದರ್ಶಿ ಸ್ಥಾನದಲ್ಲಿದ್ದರು. ವಿದೇಶೀ ಸಂಬಂಧದ ಸಮಸ್ಯೆಗಳಲ್ಲಿ ಅತಿ ಚತುರರಾದ ಕೆಲವರಲ್ಲಿ ಇವರೊಬ್ಬರು.

ವಿಲ್ಫ್ರೆಡ್ ಪಾಲಿಂಗ್
(ಪೆನ್ಶನ್ ಖಾತೆಯ ಮಂತ್ರಿ)

ಮಿಶ್ರಮಂಡಲದಲ್ಲಿ ಇದೇ ಖಾತೆಯ ಪಾರ್ಲಿಮೆಂಟರಿ ಕಾರ್ಯದರ್ಶಿ. ವಯಸ್ಸು 62. 'ಪರವಾ ಇಲ್ಲ' ಎನ್ನಬಹುದಾದ ನೇಮಕ.

ಮಿ ಪೆಥಿಕ್ ಲಾರೆನ್ಸ್ ಭಾರತ ಕಾರ್ಯದರ್ಶಿಯಾಗಿ, ಅಮೇರಿಯವರಿಂದ ಅಪವಿತ್ರವಾಗಿದ್ದ ಸ್ಥಾನವೇರಿದ್ದಾರೆ. ಮಿ. ಆರ್ಥರ್ ಹೆಂಡರ್ಸನರು ಭಾರತದ ಉಪ ಕಾರ್ಯದರ್ಶಿಯಾಗಿದ್ದಾರೆ. ಮಿ. ವಿಲ್ಲಿಯಮ್ ವೈಟ್ಲಿಯವರನ್ನು ಖಜಾನೆಯ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ಆರಿಸಲಾಗಿದೆ. ಮಾಜೀ ಭಾರತ ಉಪ ಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲ್ ಪೋಸ್ಟ್‌ಮಾಸ್ಟರ್ ಜನರಲರಾಗಿದ್ದಾರೆ. ವಸಾಹತುಗಳ ಉಪಕಾರ್ಯದರ್ಶಿ ಮಿ. ಗ್ರೀಚ್ ಜೋನ್ಸ್—ಡೊಮಿನಿಯನುಗಳ ಉಪಕಾರ್ಯದರ್ಶಿ 39ರ ತರುಣ ಜೋನ್ ಪಾರ್ಕರ್—ಎಡ್ಮಿರಾಲ್ಟಿಯ ಸಿವಿಲ್ ಲೋರ್ಡ್ ಡಬ್ಲ್ಯು. ಜೆ. ಎಡ್ವರ್ಡ್ ನೇಮಕಗೊಂಡಿದ್ದಾರೆ. ಈಗ ತಾನೇ ಪೂರ್ಣಗೊಂಡ ಆಟ್ಲೀ ಮಂಡಲದ ಸದಸ್ಯರು 20.

ಭಾರತ ಕಾರ್ಯದರ್ಶಿಗಳ ಪರಿಚಯ ೯ನೇ ಪುಟದಲ್ಲಿದೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಪ್ಪದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುವು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/. ಕೈಮಿರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ಥ್ ಕಂಟ್ರೋಲಿಗೆ ರೂ. 4/. (ಪಿ. ಪಿ. 12 ಆಣೆ ಅಧಿಕ.)

Mrs. P. DEVEE,
P. B. 9 (A B) Tollygunge, Calcutta,
ಸ್ಟಾಕಿಸ್ಟ್: ಪಾ ಕಂಪೆನಿ, ಮಂಗಳೂರು

ಆ ದಾಖಲೆ........

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 1925ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಆಂದಿನಿಂದಲೇ ಸಿಂಡಿಕೇಟು ಬದ್ಧಕಂಕಣವಾಗಿದೆ. ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟೆಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ—ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಅಕ್ಷರಶಃ ಪಾಲಿಸಲಾಗುವುದು.
ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.
ಟಿ ಎ. ಪೈ, ಬಿ. ಕೋಮ್, ಎ. ಐ. ಐ. ಬಿ, ಜನರಲ್ ಮೆನೇಜರ್.

The Canara Industrial & Banking Syndicate Limited.
(Incorporated in British India)

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

ತ್ರಿಮೂರ್ತಿ ಘೋಷಣೆ

ಪೋಟ್ಸ್‌ಡಾಮಿನ ತ್ರಿಮೂರ್ತಿ ಸಮ್ಮೇಲನ ಮುಗಿದು ಜರ್ಮನಿ ಹಾಗೂ ಯುರೋಪಿನ ನವವ್ಯವಸ್ಥೆಯ ಕುರಿತು 7000 ಶಬ್ದಗಳ ಒಂದು ಮಹಾನ್ ವರದಿ ಪ್ರಕಟವಾಗಿದೆ. ನಾಜೀ ತತ್ವ, ಜರ್ಮನ ಸೇನಾಸೀ ಮಂಡಲ, ಜರ್ಮನಿಯ ಎಲ್ಲಾ ಯುದ್ಧೋದ್ಯಮಗಳನ್ನೂ ಪೂರ್ತಿ ನಿರ್ನಾಮ ಮಾಡುವದಷ್ಟೇ ಅಲ್ಲ, ಮುಂದೆಂದೂ ಅವುಗಳ ಪುನರುತ್ಥಾನವಾಗದಂತೆ ನೋಡುವ ವ್ಯವಸ್ಥೆಯನ್ನೂ ಘೋಷಿಸಲಾಗಿದೆ. ಆದರ ಎಲ್ಲಾ ಕಾರ್ಖಾನೆಗಳನ್ನೂ ನಾಶ ಮಾಡುವ ಅಥವಾ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ನಿರ್ಧಾರವಾಗಿದೆ. ಜರ್ಮನ್ ಸೇನೆಗಳನ್ನು ನಿಶ್ಶಸ್ತ್ರೀಕರಿಸಿ ಬರ್ಖಾಸ್ತು ಮಾಡಲಾಗುವದು, ಅವರು ಶಾಂತ ಬೇಸಾಯ ವೃತ್ತಿ ಕೈಕೊಳ್ಳಬೇಕಾಗುವದು ಬೇಸಾಯವೊಂದರ ವಿನಹ ಜರ್ಮನರ ಸರ್ವೋದ್ಯಮಗಳನ್ನೂ ನಾಶ ಅಥವಾ ಅಪಹಾರಮಾಡುವನಿರ್ಣಯವಾಗಿದೆ

ಗಡಿ ಸಮಸ್ಯೆಗಳು

ಅಖಿಲ ಜರ್ಮನಿಗೊಂದು ಕೇಂದ್ರ ಸರಕಾರದ ರಚನೆಯಿಲ್ಲ. ಫ್ರೆಂಚ್ ಮತ್ತು ಆಸ್ಟ್ರಿಯಗಳು ಬೇಡಿರುವ ಜರ್ಮನ್ ನೆಲತುಂಡುಗಳ ಕುರಿತು ತೀರ್ಮಾನವಾಗಿಲ್ಲ. ಆದರೆ ಜರ್ಮನಿಯದಾಗಿದ್ದ ಬಾಲ್ಟಿಕಿನ ಕೋಮಿನ್ಸ್‌ಬರ್ಗಿನ ಹಾನ್ಸಾ ಬಂದರ ರಶ್ಯಕ್ಕೆ ಸೇರುವದು. ಓಡರಿನ ವರೆಗಿನ ಸ್ಥಳವೂ ಪೋಲೆಂಡಿಗೆ ಸೇರುವದು. ರಶ್ಯಕ್ಕೆ ಸಂಬಂಧಿಸಿದ ಫಿನ್ಲೇಂಡ್, ರುಮೇನಿಯ, ಬಲ್ಗೇರಿಯಾ ಮತ್ತು ಹಂಗೇರಿಗಳಲ್ಲ ರಶ್ಯದ ಅಭಿಪ್ರಾಯಾನುಸಾರ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂಬ ನಿರ್ಧಾರವಾಗಿದೆ ಯುದ್ಧ ನಷ್ಟಗಳಿಗಾಗಿ ಜರ್ಮನಿಯಿಂದ ಪಡೆಯಲಿರುವ ಪರಿಹಾರದಲ್ಲಿ ಹೆಚ್ಚಿನಂಶ ರಶ್ಯಕ್ಕೇನೇ ದೊರೆಯಲಿವೆ. ಪೋಟ್ಸ್‌ಡಾಮ್ ಸಮ್ಮೇಲನವು ಕೇವಲ ಸೋವಿಯೆಟ್ ವಿಜಯವೆಂದು ತಜ್ಞರ ಅಭಿಮತ

ವಿದೇಶ ಮಂತ್ರಿಮಂಡಲ

ಯುರೋಪಿನ ಸರ್ವ ಗಡಿಗಳ ನಿರ್ಣಯಕ್ಕೂ, ಇಟಲಿ ಮತ್ತು ಆಕ್ಸಿಸ್ ಅನುಯಾಯಿ ರಾಷ್ಟ್ರಗಳೊಡನೆ ಶಾಂತಿ ಕರಾರು ತಯಾರಿಕೆಗೂ, ಜರ್ಮನಿಯ ಶಾಂತಿ ಒ

ಅಲ್ಲಿ--ಇಲ್ಲಿ

ಪ್ಪಂದಕ್ಕೂ ರಶ್ಯಾ, ಅಮೇರಿಕ, ಬ್ರಿಟನ್, ಫ್ರಾನ್ಸ್, ಚೀನಗಳ ವಿದೇಶ ಮಂತ್ರಿಗಳ ಸಂಘ ರಚಿಸಲಾಗಿದೆ. ಅದರ ಕಾರ್ಯಾಲಯ ಲಂಡನಿನಲ್ಲಿರುವದು ಮುಂದೊಂದು ಶಾಂತಿ ಸಮ್ಮೇಲನವನ್ನು ಸೇರಿಯಿಸಿ ಎಲ್ಲವನ್ನೂ ತೀರ್ಮಾನಿಸಲಾಗುವದು. ಅದರ ಪೂರ್ವ ತಯಾರಿಯು ಈ ವಿದೇಶ ಮಂತ್ರಿಕೂಟದಿಂದಾಗಬೇಕು ಪ್ರಜೆಗಳ ಬದಲಾವಣೆ ಮತ್ತು ಗಡಿ ಹೋರಾಟಗಳನ್ನೆಲ್ಲಾ ಆ ತನಕ ನಿಲ್ಲಿಸಬೇಕೆಂದು ನಿರ್ಣಯಗಳಾಗಿವೆ. ಯುದ್ಧಕಾಲದಲ್ಲಿ ತಾಟಸ್ಥ್ಯ ವಹಿಸಿದ್ದ ಎಲ್ಲಾ ರಾಷ್ಟ್ರಗಳಿಗೂ ನವ ರಾಷ್ಟ್ರಸಂಘಕ್ಕೆ ಸೇರುವ ಅಧಿಕಾರವಿದೆ. ಆದರೆ ಫೇಸಿಸ್ಟರೊಡನೆ ಸಹಕರಿಸಿದ್ದ ಜನರಲ್ ಫ್ರಾಂಕೋನ ಸ್ಪೈನಿಗೆ ಮಾತ್ರ ಆ ಅಧಿಕಾರವನ್ನು ತಿರಸ್ಕರಿಸಲಾಗಿದೆ.

ಫ್ರಾಂಕೋನ ಉತ್ತರ

ಜನರಲ್ ಫ್ರಾಂಕೋ ತ್ರಿಮೂರ್ತಿ ಘೋಷಣೆಯ ಆರೋಪಗಳನ್ನು ತಿರಸ್ಕರಿಸಿ 'ಇದು ಹೊರ ತಳ್ಳಲ್ಪಟ್ಟ ಕೆಂಪು ದಳದವರ ಮತ್ತು ಹೊರಗಡೆಯ ಅವರ ಸಹಾಯಕರ ಅಪಮಾನಕರ ಚಳವಳದಿಂದ ನಿರ್ಮಿಸಲ್ಪಟ್ಟಿರುವ ಕೃತಕ ವಿದ್ಯಮಾನದ ಪರಿಣಾಮ'ವೆಂದಿದ್ದಾನೆ. ಸ್ಪೈಯಿನಿನ ಕುರಿತು ಅನ್ಯಾಯಾರೋಪ ಮಾಡಲ್ಪಟ್ಟಿರುವಾಗ ಅದೆಂದೂ ಅಂತರ್ರಾಷ್ಟ್ರೀಯ ಸಮ್ಮೇಲನಗಳ ಪ್ರಾತಿನಿಧ್ಯಕ್ಕಾಗಿ ಬೇಡುವಂತಿಲ್ಲವೆಂದೂ ಹಳೇ ರಾಷ್ಟ್ರ ಸಂಘವನ್ನೂ ಇಂತಹ ಕಾರಣಗಳಿಗಾಗಿಯೇ ಅದು ತ್ಯಜಿಸಿದ್ದಿತೆಂದೂ ಫ್ರಾಂಕೋ ಘೋಷಿಸಿದ್ದಾನೆ ಡಾರ್ಡನೆಲ್ಸಿನ ಕುರಿತು ರಶ್ಯಾ-ಟರ್ಕಿಗಳೊಳಗಿದ್ದಿರುವ ಜಗಳದ ತೀರ್ಮಾನ ಪೋಟ್ಸ್‌ಡಾಮಿನಲ್ಲಾಗಲಿಲ್ಲ. ಪರ್ಶಿಯಾದಿಂದ ಮಿತ್ರ ಸೇನೆಗಳನ್ನು ಹಿಂದೆಗೆಯುವದು—ಗ್ರೀಸಿನ ಆಡಳಿತೆ-ಕಾರಿಂಟಿಯಾ ಮತ್ತು ಇಸ್ಟ್ರಿಯಾಗಳ ಮೇಲೆ ಮಾರ್ಶಲ್ ಟಿಟೋ ಕೇಳಿರುವ ಅಧಿಕಾರ-ಮುಂತಾದ ಯುರೋಪು ಸಮಸ್ಯೆಗಳೂ ತೀರ್ಮಾನ ಹೊಂದದೆ ಬಾಕಿಯುಳಿದಿವೆ

ಹಿಂದೀ ರಾಜಕೀಯ ರಂಗ

ಪುನಃ ಸ್ತಬ್ಧವಾಗಿದೆ ಅಗೋಸ್ತು ತಾ 1 ಮತ್ತು 2ರಲ್ಲಿ ನವಡಿಲ್ಲಿಯಲ್ಲಿ ವೈಸರಾಯರ ಅಧ್ಯಕ್ಷತೆಯಲ್ಲಿ ಪ್ರಾಂತಿಕ ಗವರ್ನರರ ಸಮ್ಮೇಲನ ನಡೆದಿದೆ. ರಾಜಕೀಯ ಕೈದಿಗಳ ಬಿಡುಗಡೆ, ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಬಹಿಷ್ಕಾರ ರದ್ದತಿ, ಪ್ರಾಂತಿಕ ಮತ್ತು ಕೇಂದ್ರ ಎಸೆಂಬ್ಲಿಗಳ ಚುನಾವಣೆ, 93ನೇ ಕಲಮಿನ ಮುಕ್ತಾಯ—ಇತ್ಯಾದಿ ಮಹತ್ವದ ಪ್ರಶ್ನೆಗಳಲ್ಲಿ ಚರ್ಚಿಸಲ್ಪಟ್ಟವೆಂದು ತಿಳಿಯಬರುತ್ತದೆ

ಚಿಮೂರು ಕೈದಿಗಳು

ಅಗೋಸ್ತು ಗಲಭೆಯ ಸಂಬಂಧವಾಗಿ ಮರಣದಂಡನೆ ವಿಧಿಸಲಾಗಿದ್ದ ಆಷ್ಟಿ ಚಿಮೂರುಗಳ ಏಳು ಬಂದಿಯ ಪರವಾಗಿ ಮಾಡಿದ ಅರ್ಜಿಯನ್ನು ಪ್ರಿವಿ ಕೌನ್ಸಿಲು ನಿರಾಕರಿಸಿದೆ ಇದು ಅವರ ಪ್ರಾಣವುಳಿಸುವ ಕೊನೆಯ ಪ್ರಯತ್ನ. ಈ ವಾರ್ತೆ ಕೇಳಿದ ಗಾಂಧಿಜೀ ಅಂತ್ಯಂತ ಯಾತನೆಗೊಂಡು ಇಂಗ್ಲೆಂಡು-ಭಾರತದ ಸುಗಮ ಸಂಬಂಧಕ್ಕಾಗಿ ಮರಣ ದಂಡನೆಗೊಳಗಾದ ಎಲ್ಲಾ ರಾಜಕೀಯ ಕೈದಿಗಳ ಶಿಕ್ಷೆಯನ್ನು ಬದಲಾಯಿಸಬೇಕೆಂದು ಹಾಗೂ ವೈಸರಾಯರಿಗೊಂದು ಪತ್ರ ಬರೆದಿದ್ದಾರೆ ಹಲವು ದುರೀಣರಿಂದ ಪ್ರಾಣದಾನದ ಬೇಡಿಕೆಗಳು ಹೋಗಿವೆ

ಶ್ರೀನಗರದ ಗಲಭೆ

ಶ್ರೀನಗರಕ್ಕೆ ನೆಹರು, ಆಜಾದ್ ಮತ್ತು ಖಾನ್ ಅಬ್ದುಲ್ ಗಫಾರ್ ಖಾನರು ಹೋಗಿದ್ದಾಗ ಅಲ್ಲಿಯ ಕಾಶ್ಮೀರ್ ರಾಷ್ಟ್ರೀಯ ಸಮ್ಮೇಲನದವರು 100 ಶೃಂಗರಿತ ಬೋಟುಗಳಲ್ಲಿ ನದಿ ಮೆರವಣಿಗೆ ನಡೆಸಿದ್ದರು ಈ ಮೆರವಣಿಗೆಯ ಮೇಲೆ ಮುಸ್ಲಿಮ್ ಸಮ್ಮೇಲನದವರು ಕಲ್ಲೆಸೆದು ಪರಸ್ಪರ ಎಸದಾಟವಾಗಿ ಇತ್ತಂಡದಲ್ಲಿಯೂ ಹಲವರಿಗೆ ಘಾಯಗಳಾಗಿವೆ ರಾಷ್ಟ್ರೀಯ ಸಮ್ಮೇಲನದ ಸಾಲಾಮ್ ಎಂಬವನು ಮಡಿದಿದ್ದಾನೆ

ತಾರೀಕು **7—8—1945**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಇಲ್ಲಿ ಪ್ರದರ್ಶಿಸಲ್ಪಡುತ್ತಿರುವ 'ಭಕ್ತ ಕಬೀರ್' ಚಿತ್ರದ ಒಂದು ದೃಶ್ಯ

Notice

ಪುತ್ತೂರು ಡಿ ಮು ಕೋರ್ಟಿನಲ್ಲಿ

S. C. P 59/1945.
in S. C. 103/39

B ಕೃಷ್ಣ ಬಾಳಿಗ —ಅರ್ಜಿದಾರ

1 ಕಿಂಞಿ ಯಾನೆ ಅಂಮುಕೊಂಡೆ 2 ಶ್ರೀಮತಿ—ಗುಂಮಕ್ಕೆ ಹೆಂಗ್ಸು ಮಕ್ಕಳು —ಎದ್ರಿರು

ಮಣಿ ನಾಲ್ಕೂರು ಗ್ರಾಮದ ನಾವೂರು

ಅರ್ಜಿದಾರನು ಮೇಲ್ಕಂಡ ಡಿಕ್ರಿ ಅಮ್ಲುಜಾರಿಯ ಬಗ್ಗೆ ಅರ್ಜಿ ಮಾಡಿದ್ದಾನೆ ಆದುದರಿಂದ ಅಮ್ಲುಜಾರಿ ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1945 ನೇ ಇಸವಿ ಅಗೋಸ್ತು ತಿಂಗಳು 28ನೇ ತಾರೀಕಿನಲ್ಲಿ ಈ ಕೋರ್ಟಿನಲ್ಲಿ ಎದ್ರಿರು ಹಾಜರಾಗಬೇಕೆಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಯಪಡಿಸಲಾಗಿದೆ

B. Achutha Baliga
Pleader for Petitioner

Puttur
Dated 2-8-45

Notice

In the Court of the Dt. Munsiff of Mangalore

O. S No 95/45

Between —

Mrs Amy Aranha, widow of the late A J Aranha, residing at Bolar, Mangalore Plaintiff

and

1 Abdul Majid Saheb, Proprietor of Kalianpur saw Mills, residing at Kallianpur S Kanara 2. S. Yusuf Saheb son of S Adam saheb trader, residing at Jeppoo, Bolar, Mangalore —Defendants

Notice to the abovenamed defendants is hereby given that the plaintiff has filed the above suit against them for the recovery of Rs 1, 350 4-0, being the principal and interest due in respect of the cheque No 024236 dated 31 7-1944 for Rs 1300/- drawn on the Southern India Apex Bank Ltd, Udipi, by the 1st defendant in favour of the 2nd defendant and negotiated by the 2nd defendant in favour of the plaintiff and that the said suit is posted for hearing in the above Court on 24th August 1945 at 11 a m On the defendants failure to appear in Court on the said day, the suit will be heard and determind in their absence

John Gonsalves, B. A., LL. B.
Vakil for Plaintiff,
Mangalore, 6 8 1945

The Canara Banking Corporation Limited.

(Incorporated in British India, with limited Liability)

Estd 1906

Head Office. **UDIPI**, (S. K)

Authorised Capital ...	Rs. 25,00,000
Issued & Subscribed Capital	Rs 16,00,000
*Paid up Capital	Rs 15,17,000
Reserves	Rs. 4,11,000

ನವಯುಗ

ಉಡುಪಿ, ಗುರುವಾರ ೯-೮-೧೯೪೫

ಸ್ವಾತಂತ್ರ್ಯ ಯಜ್ಞಕ್ಕೆ—

ಆಹುತಿಯಾದವರ ಸ್ಮರಣೆಗಾಗಿ ಈ ದಿನದಿಂದ—ಅಗೋಸ್ತು ತಾ 9ರಿಂದ—ಒಂದು ವಾರವನ್ನು ಆಚರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಮೌ. ಅಜಾದರ ವಿಜ್ಞಾಪನೆಯಿದೆ. ಪರಾಧೀನ ವ್ಯಕ್ತಿ ಅಥವಾ ರಾಷ್ಟ್ರಕ್ಕೆ ಸ್ಮರಣೆ ಮತ್ತು ಸಹನೆಯಿರಬೇಕಾದುದು ಅನಿವಾರ್ಯ. 1919ರಿಂದ (ಜಾಲಿಯಾನ್ ವಾಲಾಬಾಗಿನ ಅತ್ಯಾಚಾರ ನಡೆದಂದಿನಿಂದ) ಎಪ್ರಿಲ್ 6ನ್ನು ರಾಷ್ಟ್ರ ಮರೆತಿಲ್ಲ, 1942ರಿಂದ (ಬೊಂಬಾಯಿಯಲ್ಲಿ ಅಗೋಸ್ತು ನಿರ್ಧಾರವಾದಂದಿನಿಂದ) ಆಗೋಸ್ತು 9ನ್ನೂ ಮರೆಯುವಂತಿಲ್ಲ, ಅದು ರಕ್ತ ಬಿಸಿಯೇರಿಸುವ ಸ್ಮರಣೆ, ಧ್ಯಾನ ಮಾತ್ರದಿಂದ ಉದ್ವೇಗ, ಹೆಗ್ಗಳಿಕೆ, ಅನುತಾಪಗಳನ್ನು ನಿರ್ಮಿಸುವ ಘಟನೆ. ಅದು ಹೇಗಾಯಿತು, ಏಕಾಯಿತು, ಎಂಬ ಪ್ರಶ್ನೆ ಈಗ ಹಿಂದೀ ರಾಜಕೀಯದಿಂದ ಉಚ್ಚಳ್ಪಟ್ಟಿದೆ, ಆ ಸಂಬಂಧದ ಚರ್ಚೆಯನ್ನು ರಾಷ್ಟ್ರ ಹಿತದೃಷ್ಟಿಯಿಂದಲೇ ಬಿಡಬೇಕಾಗಿದೆ ಆದರೆ ಆ ಯಜ್ಞದಲ್ಲಿ ಆತ್ಮ ಬಲಿದಾನ ಮಾಡಿದ ನಿರಪರಾಧಿಗಳನ್ನು—ಅಥವಾ ದೇಶವನ್ನು ಪ್ರೇಮಿಸುವ ಅಪರಾಧವನ್ನು ಮಾತ್ರ ಮಾಡಿದವರನ್ನು—ಎಂದೆಂದಿಗೂ ಮರೆಯಲಾಗುವದಿಲ್ಲ, ನಾವು ಬದುಕಿರುವಾಗ, ನಮ್ಮಂತೆಯೇ ಬಾಳುವ ಅಧಿಕಾರವಿದ್ದೂ ಅದೃಶ್ಯರಾದ ಆ ಸಾರ್ಥಕ ಜೀವಿಗಳನ್ನು ನೆನಸದಿರುವುದ ಸಾಧ್ಯ

ಯಾವ ವಿಧಾನದಿಂದ ನೋಡಿದರೂ ಭಾರತೀಯರು ತಮ್ಮ ಸ್ಥಿತಿಗಾಗಿ ತಾವು ಪಶ್ಚಾತ್ತಾಪ ಪಡಬೇಕಾಗಿದೆ. ನಮ್ಮ ಜೀವನ ಮಟ್ಟ ಕೆಳಗಿದೆ, ನಾವು ಪರಾಧೀನರು ಆದರೆ ಇದು ಮಾನುಷತ್ವವನ್ನೇ ಮನ್ನಾ ಪಡಿಸುವ ಕೊರತೆಯೇನೂ ಅಲ್ಲ. ಇಂದಿನ ಪ್ರಮುಖ ರಾಷ್ಟ್ರಗಳೂ ಒಂದಾನೊಂದು ಕಾಲದಲ್ಲಿ ಗುಲಾಮಗಿರಿಯಲ್ಲಿದ್ದುವು ಆಗ ಅಲ್ಲಿಯ ಜನಜೀವನವೂ ನರಕ ಸದೃಶವಾಗಿದ್ದಿತು ಅಂತಹ ನರಕವು ಸ್ವರ್ಗವಾದುದು ಆ ರಾಷ್ಟ್ರಗಳ ಪ್ರಯತ್ನಬಲದಿಂದ; ಹೋರಾಟ ಶಕ್ತಿಯಿಂದ. ರಾಜಕೀಯ ಗುಲಾಮತ್ವ ನಿವಾರಣೆಯಾಗುವಂತಹದು ಆರ್ಥಿಕ ದುರವಸ್ಥೆಗಳಿಗೆ ಪರಿಹಾರವಿದೆ. ಭಾರತೀಯರ ಮಟ್ಟಿಗೆ ಅಂತಹ ಪರಿಹಾರ ಪ್ರಯತ್ನವೇ ಒಂದು ಸ್ಪಷ್ಟರೂಪದಲ್ಲಿಲ್ಲವೆಂಬುದೇ ನಿಜವಾದ ಕೊರತೆ ಹಿಂದೀ ಸ್ವಾತಂತ್ರ್ಯ ಹೋರಾಟದ ಮುಂದಾಳುತ್ವವು ಭಾವಪ್ರಧಾನವಾಗಿತ್ತು; ತತ್ವಗಳನ್ನಾಧರಿಸಿ ನಿಂತಿತ್ತು ಇಂತಹ ರಾಜಕೀಯ ಯೋಗಾಭ್ಯಾಸವು ಜನಸಾಮಾನ್ಯರಿಂದಾಗದ ಕಾರ್ಯ; ಅವರಿಗರ್ಥವಾಗದ ವಿಷಯ. 'ರಾಷ್ಟ್ರಸೇವೆ' 'ರಾಷ್ಟ್ರೀಯ ಹೋರಾಟ'ವೆಂದರೇನೆಂಬುದೊಂದೇ ಅವರಿಗೆ ಗೊತ್ತು. ಸರಿಯಾದ ಸಂಘಟನೆಯಿಲ್ಲದ ಹೊತ್ತಿನಲ್ಲಿ-ಜನಸಾಮಾನ್ಯರು ಸಾಗಲಾಗದ ಮಾರ್ಗದತ್ತ ಕೈತೋರಿಸಿ ಅದೃಶ್ಯ ಶಕ್ತಿಯೊಂದು ರಾಷ್ಟ್ರೀಯ ಕರೆ ಕೊಟ್ಟಂತಾಯಿತು ಪರಾಧೀನತೆಯ ಮೇಲೆ ಪ್ರಾಣಾವಧಿ ಜಿಗುಪ್ಸೆಗೊಂಡಿದ್ದ ಜನತೆ ಎಲ್ಲಿ, ಏನು, ಎಂಬುದನ್ನು ವಿಚಾರಿಸದೆ ಆ ಕರೆಗೆ ಹೊಂಗುಟ್ಟಿತು. ಸಾವಿರಾರು ಮಂದಿ ಕಾರಾಗ್ರಹ ಸೇರಿದರು; ಲಾಠಿಗೆ ತಲೆಕೊಟ್ಟರು; ಗುಂಡಿಗೆ ಎದೆಯೊಡ್ಡಿದರು; ಕ್ರಾಂತಿ-ಕಾಳಿ ಎಷ್ಟೋ ಅಮೂಲ್ಯ ಜೀವಗಳ ಆಹುತಿಪಡಕೊಂಡಳು ಪರಿಣಾಮವೇನಾಯಿತು? ಅವರು ಅನುಸರಿಸಿದ ಮಾರ್ಗ ಸರಿಯೇ, ಎಂಬ ಕುರಿತು ಚರ್ಚೆ ಬಿತ್ತು! 'ಸರಿ' ಎಂದವರು ಅಪರೂಪ. ಜನತೆಯನ್ನೀ ಹೋರಾಟಕ್ಕೆ ಕರೆದವರಾರು, ಎಂಬ ಪ್ರಶ್ನೆಯನ್ನೇ ಇಕ್ಕಡೆಯವರೂ ಚೆಂಡಾಟವಾಡುತ್ತಿರುವಾಗ ಈ ತ್ಯಾಗಿಗಳಿಗೆ 'ಶಹಭಾಸ್' ಕೊಡುವವರಾರು? ಒಂದು ಕಡೆಯವರು ತಮಗಿದು ವಿರೋಧವೆನ್ನುತ್ತಾರೆ; ಮತ್ತೊಂದು ಕಡೆಯವರು ತಾವು ತೋರಿಸಿದ ಹಾದಿ ಇದಲ್ಲವೆನ್ನುತ್ತಾರೆ ಕಷ್ಟನಷ್ಟವನುಭವಿಸಿದವರ ಅಳ್ಮವೇನನ್ನಬಹುದೋ—ಮಿಕ್ಕ ಎಲ್ಲರ ದೃಷ್ಟಿಯಲ್ಲಿ ಅವರು ತಪ್ಪುಮಾಡಿ ಶಿಕ್ಷೆಪಡೆದಂತಾಗಿದೆ! ಇದೀಗ ಭಾರತ ಯೋಧರಿಗೆ ದೊರೆಯುವ ಸಂಭಾವನೆ! ಭಾರತೀಯರ ನಿಜವಾದ ಕೊರತೆಯೆಂದರೆ ಇದೇ-ದುಃಸ್ಥಿತಿ ನಿವಾರಣೆಗೆ ಸ್ಪಷ್ಟರೂಪೀ ಸಾಧನೆಯಿಲ್ಲದಿರುವದೊಂದು; ನಡೆವ ಪ್ರಯತ್ನಗಳನ್ನೂ ಕೇಳುವವರಿಲ್ಲದಿರುವದಿನ್ನೊಂದು!

ಆದರೆ ಎಷ್ಟೆಂದರೂ ಹೃದಯವು ಬಾಯಿಗೆ ಬರುವಂತಿಲ್ಲ, ವಾದಕ್ಕಾಗಿ ಮುಂದೊಡ್ಡಿದುದೇ ಮನಸ್ಸಿನಲ್ಲಿರುವಂತಿಲ್ಲ ಯಾರೇ ಹೀಗಳೆದರೂ ರಾಷ್ಟ್ರ ಯಜ್ಞದಲ್ಲಿ ಆತ್ಮ ಬಲಿದಾನವಿತ್ತವರು ನಿಸ್ವಾರ್ಥಿಗಳು, ದೇಶ ಪ್ರೇಮದ ವಿನಹ ಅನ್ಯೋದ್ದೇಶವೇ ಇಲ್ಲದವರು ಎಂಬುದು ನಿರ್ವಿವಾದ. ಇದು ಯೋಗ್ಯ-ಅಯೋಗ್ಯ, ಸರಿ-ತಪ್ಪು, ಲಾಭ-ನಷ್ಟಗಳ ತಕ್ಕಡಿಯಲ್ಲಿಡಲಾಗದ ಆ ಮೂಲ್ಯ ಗುಣ. ಆದ್ದರಿಂದಲೇ ಆ ಗತಯೋಧರನ್ನು ಸ್ಮರಿಸಬೇಕಾಗಿದೆ; ಅವರ ಆ ಹೃದಯವನ್ನು ಪ್ರತಿಯೊಬ್ಬ ಭಾರತೀಯನೂ ತನ್ನಲ್ಲಿ ಆವಾಹನೆ ಮಾಡಿಕೊಳ್ಳಬೇಕಾಗಿದೆ. ಈ ಸ್ಮಾರಕದ ಸಮಯೋಚಿತ ರೂಪರೇಖೆಯನ್ನು ಕಾಂಗ್ರೆಸ್ ಅಧ್ಯಕ್ಷರು ಸ್ಪಷ್ಟ ವಾಣಿಯಲ್ಲಿ ಜನತೆಗೆ ತಿಳಿಸಿದ್ದಾರೆ ಅಗೋಸ್ತು 9ರಿಂದ ಒಂದು ವಾರದ ವರೆಗೆ, ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಆಚರಿಸಬೇಕು. ತಾ 9ರಲ್ಲಿ (ಅಥವಾ ವಾರದ ಯಾವುದಾದರೊಂದು ದಿನ) ಬಹಿಷ್ಕಾರವಿಲ್ಲದ ಕಡೆ ಶಾಂತರೀತಿಯಲ್ಲಿ ಸಭೆ ಜರಗಿಸಿ, ಗತಯೋಧರ ಸ್ಮರಣೆ ಮಾಡಬೇಕು; ಅಧ್ಯಕ್ಷರ ಭಾಷಣ ಮತ್ತು ಮೌನ ಪ್ರಾರ್ಥನೆಗಳ ವಿನಹ ಅಧಿಕ ಪ್ರಸಂಗಗಳಿಗವಕಾಶವಿರಬಾರದು, ಎಂಬ ನಿರ್ಬಂಧವಿದೆ ಸರ್ವೆಡೆಗಳಲ್ಲೂ ಈ ಸ್ಮಾರಕವು ಶಾಂತ ರೀತಿಯಿಂದ ಪರಿಣಾಮಕಾರಿಯಾಗಿ ನಡೆಯಲಿ, ರಾಷ್ಟ್ರೀಯ ಭಾವೋದ್ದೀಪನವಾಗಲಿ; ಗತವೀರಾತ್ಮಗಳಿಗೆ ತೃಪ್ತಿ ದೊರೆಯಲಿ!

ಹಾಗೋ : : : : ಹೀಗೋ?

"ಸದ್ಯ ಗೋಚರಕ್ಕೆ ಬರುತ್ತಿರುವ ಕಾಂಗ್ರೆಸ್ ಪ್ರಮುಖರ ಮುಖಸ್ತುತಿಗಳಿಂದ ಬ್ರಿಟನಿನ ಲೇಬರ್ ಸರಕಾರವು ತಪ್ಪು ಹಾದಿ ಹಿಡಿಯದಿರಲಿ"—ಮಿ. ಜಿನ್ನರ ಸಮಯೋಚಿತ ಎಚ್ಚರಿಕೆ.

ಹಾಗಾದರೆ 'ಕಾಂಗ್ರೆಸ್' ಪ್ರಮುಖರ ಮುಖಸ್ತುತಿಯಿಂದಾಗಿಯೇ ತಪ್ಪು ಹಾದಿ ಹಿಡಿಯುವ ಧೈರ್ಯ ಮಿ ಜಿನ್ನರಿಗೆ ಬಂತು'—ಎಂದು ಹಿಂದೂ ಮಹಾಸಭಾ ಪ್ರಮುಖರ ಮಾತು ನಿಜತಾನೆ?

೦೦ ೦೦

"ಸಿಮ್ಲಾದಲ್ಲಿ ವೈಸರಾಯಿ ಮತ್ತು ಕಾಂಗ್ರೆಸ್ ಅಧ್ಯಕ್ಷರೊಳಗೆ ನಡೆದಿದ್ದ ಪತ್ರವ್ಯವಹಾರಗಳನ್ನು ಪ್ರಕಟಿಸುವದು ಅಗತ್ಯ ನಾನದು ಹೊರ ಬೀಳುವದನ್ನೇ ಕಾಯುತಿದ್ದೇನೆ"—ಜಿನ್ನರ ಜ್ಞಾಪಕೋದ್ಗಾರ.

ಪರವಾ ಇಲ್ಲ; ಸಿಮ್ಲಾದಲ್ಲಿ ಅಷ್ಟು ದಿನವೂ ಜಿನ್ನರೊಬ್ಬರನ್ನೇ ಎಲ್ಲರೂ ಕಾದು ನಿಲ್ಲಲಿಲ್ಲವೆ?

೦೦ ೦೦

'ತಾತ್ಕಾಲಿಕ ವ್ಯವಸ್ಥೆಗಾಗಿ ಮತ್ತೊಮ್ಮೆ ಪ್ರಯತ್ನಿಸದೆ ಲೇಬರ್ ಸರಕಾರವು ಹಿಂದುಸ್ಥಾನದ ಶಾಶ್ವತ ರಾಜ್ಯ ರಚನಾ ಪ್ರಯತ್ನವನ್ನೇ ಅತಿ ಬೇಗ ಕೈಗೊಳ್ಳುವುದಗತ್ಯ"—ಸರ್ ಕ್ರಿಪ್ಸರ ಅಂಬೋಣ.

ಈಗಿನ ವ್ಯವಸ್ಥೆಯೇ ಶಾಶ್ವತವೆಂದಾದರೆ?

೦೦ ೦೦

'ಹಿಟ್ಲರನು ಅಡಗಿಕೊಂಡಿರಬಹುದೆಂಬ ಸಂದೇಹದಿಂದ ಜರ್ಮನಿಯ ಸುಮಾರು 125,000 ಚದರ ಮೈಲು ಪ್ರದೇಶದಲ್ಲಿ ಮಿತ್ರರು ಬಲವಾದ ಪಹರೆಯಿಟ್ಟಿದ್ದಾರೆ!

ಪುರಾರನಾಗಿರುವಾಗಲೂ ಇಷ್ಟು ಸುತ್ತಳತೆಯಲ್ಲಿ ಅವನಿಗೆ ವ್ಯಾಪವಲಿದ್ದೇ ಇದ್ದಿತಾದ್ದರಿಂದ, ಅಲ್ಲಿದ್ದರೂ ಗಾಬರಿಗೊಳ್ಳಲಾರ

೦೦ ೦೦

'ಹಿಂದುಸ್ಥಾನದ ಮಾರ್ಕೆಟುಗಳನ್ನು ವಶಪಡಿಸಿಕೊಳ್ಳುವ ಬಯಕೆ ಅಮೇರಿಕೆಯದ ಎಂಬ ಮಾತು ಪೂರ್ಣ ನಿರಾಧಾರವಾದುದು'-ಅಮೇರಿಕದಲ್ಲಿ ಹಿಂದುಸ್ಥಾನದ ಏಜೆಂಟ್ ಜನರಲ್ ಆಗಿರುವ ಸರ್. ಗಿರಿಜಾಶಂಕರ ವಾಜಪಾಯಿಯವರ ಮಾತು.

ಆದರೆ ಸರ್ ವಾಜಪೇಯರು ಅಮೇರಿಕದ ಅಧಿಕೃತ ವಕ್ತಾರರೆಂಬುದಕ್ಕೂ ಆಧಾರವಿಲ್ಲ.

೦೦ ೦೦

'ಪೆಥಿಕ್ ಲೋರೆನ್ಸರು ಭಾರತ ಕಾರ್ಯದರ್ಶಿಯಾದ ಸಂಬಂಧವಾಗಿ ನನಗೇನೂ ಹೇಳಲಿಕ್ಕಿಲ್ಲ'-ಗಾಂಧಿಜೀ

'ಹೇಳಲಿಕ್ಕಿಲ್ಲ' ಎಂದಾದರೂ ಹೇಳಲಿಕ್ಕಿತ್ತಷ್ಟೆ?

೦೦ ೦೦

'ಪಾರ್ಲಿಮೆಂಟಿನ ಅಗೋಸ್ತು ಅಧಿವೇಶನದ ಕಾರ್ಯಕ್ರಮ ಪಟ್ಟಿಯಲ್ಲಿ ಹಿಂದೀ ಪ್ರಶ್ನೆಯೂ ಸೇರಿದೆ; ಇಲ್ಲಿಯ ಸ್ಥಿತಿಗತಿಗಳ ವರದಿಯೊಪ್ಪಿಸಲು ಲೋರ್ಡ್ ವೇವೆಲರು ಅಗೋಸ್ತು 15ರೊಳಗೆ ಇಂಗ್ಲಾಂಡಿಗೆ ಹೋಗುವ ಸಂಭವವಿದೆ'—ಲಂಡನಿನಲ್ಲಿ ಬಲವಾದ ಊಹೆ.

ಲೋರ್ಡ್ ವೇವೆಲರನ್ನು ಕ್ಷಣಕಾಲ ಬಿಟ್ಟಿರಲಾರದಷ್ಟು ಪ್ರೇಮ ಬಿದ್ದಿರುವ ನಮ್ಮ ಕೆಲವು ಧುರೀಣರಿಗೇನು ಗತಿ?

೦೦ ೦೦

"ಹಿಂದೀ ರಾಜಕೀಯ ಚರ್ಚೆಗಾಗಿ ನೆಹರು, ಆಜಾದರಂತಹ ಪ್ರಮುಖರನ್ನು ಕೂಲಿಗಾರ ಸರಕಾರವು ಲಂಡನಿಗಾಮಂತ್ರಿಸಬಹುದು"- ಮತ್ತೊಂದು ಬಲವಾದ ವಾರ್ತೆ.

ಜಿನ್ನರನ್ನು ಕರೆಯದೆ ಬಿಟ್ಟಲ್ಲಿ ಆರೋಗ್ಯ ಸಂಪಾದನೆಗಾಗಿಯಾದರೂ ಅವರು ಲಂಡನಿಗೆ ಹೋಗಲೇ ಬೇಕಾಗಬಹುದು

೦೦ ೦೦

'ಜಪಾನರು ಬೋಂಬುಧಾಳಿ ಪ್ರದೇಶಗಳಿಗೆ ಉದ್ದೇಶಪೂರ್ವಕ ಅಮೇರಿಕನ್ ಯುದ್ಧ ಕೈದಿಗಳನ್ನು ತಂದು ನಿಲ್ಲಿಸುತ್ತಿದ್ದಾರೆ'—ಅಮೇರಿಕನರ ಆರೋಪ

ಈ ಕಾಲದಲ್ಲಿ ತನ್ನದು-ಪರರದು ಎಂಬ ಭೇದಮಾಡದವರಲ್ಲ ಎಂಬುದಕ್ಕಿದೊಂದು ಬಹುಶಃ ಬೋಂಬು ಮಾತ್ರ

೦೦ ೦೦

'ಅಮೇರಿಕನರೇ ಹೆಂಗಸರು ಮಕ್ಕಳಿದ್ದ ಸ್ಥಳನೋಡಿ ಬೋಂಬು ಹಾಕುತ್ತಿದ್ದರಲ್ಲದ ನಾವೆಂದೂ ಯುದ್ಧಕೈದಿಗಳನ್ನು ಅಂತಹ ಸ್ಥಳಕ್ಕೊಯ್ದಿಲ್ಲ'—ಜಪಾನರ ಉತ್ತರ.

ಯುದ್ಧ ಕೈದಿಗಳಾಗಿರುವ ತಮ್ಮವರಲ್ಲಿ ಬೆಳೆದ ಗಂಡಸಾದ್ದರಿಂದ ಅಮೇರಿಕನರು ಹಾಗೆ ಮಾಡಿರಬೇಕು

'ಕರ್ನಾಟಕ ಸಂಘ' ಉಡುಪಿ— ಈ ಸಂಘವನ್ನು ಸೊಸೈಟೀಸ್ ರಿಜಿಸ್ಟ್ರೇಶನ್ ಆಕ್ಟು ಮೇರೆಗೆ ರಿಜಿಸ್ಟ್ರು ಮಾಡಲಾಗಿದೆ. ಇದರ ಪ್ರಥಮ ವಾರ್ಷಿಕೋತ್ಸವವು ಬರುವ ಸೆಪ್ಟಂಬರ ತಾ 2ರಂದು ನೆರವೇರಲಿರುವುದು ಮುಂಬರುವ ದಸರಾದ ಕೊನೆಯ ನಾಲ್ಕು ದಿವಸಗಳಲ್ಲಿ ಸಂಘದ ನೇತೃತ್ವದಲ್ಲಿ ಸಾಹಿತ್ಯೋತ್ಸವವು ಜರಗಲಿರುವುದು ಈ ಸಂದರ್ಭದಲ್ಲಿ ಮುದ್ದಣ್ಣ ಕವಿಯ (ನಂದಳಿಕೆ ಲಕ್ಷ್ಮೀನಾರ್ಣಪ್ಪಯ್ಯನವರ) ಭಾವಚಿತ್ರ ಅನಾವರಣ, ಸಾಹಿತ್ಯ, ಸಂಸ್ಕೃತಿ, ಕಲಾವಿಷಯಕವಾದ ಭಾಷಣಗಳು, ವಾಚನಗಳು, ಸ್ಪರ್ಧೆಗಳು, ನಾಟಕಗಳು, ಪ್ರದರ್ಶನಗಳು, ಇವುಗಳ ಏರ್ಪಾಡಾಗತಕ್ಕದೆಂದು ಸಂಘದ ಕಾರ್ಯನಿರ್ವಾಹಕ ಸಮಿತಿಯು ನಿರ್ಧರಿಸಿರುತ್ತದೆ. ಸಕಲರೂ ಉದಾರ ಪ್ರೋತ್ಸಾಹವನ್ನಿತ್ತು ಸಹಕರಿಸಬೇಕಾಗಿ ಸಮಿತಿಯ ವಿನಂತಿ

ಜಾಪಾನ್ ಆಕ್ರಮಿಸುವ ಸಿದ್ಧತೆ!

ಜಾಪಾನಿನ ಮುತ್ತಿಗೆ ಸಿದ್ಧತೆ

ಪೋಟ್ಸ್‌ಡಾಮ್ ಸಮ್ಮೇಲನದಲ್ಲಿ ಬ್ರಿಟಿಷ್ ಮತ್ತು ಅಮೇರಿಕಗಳ ಯುದ್ಧ ಖಾತೆಯ ನಾಯಕರು ದಿನಂಪ್ರತಿ ಸಮ್ಮೇಲನ ನಡಿಸಿ ಜಾಪಾನಿನ ಮೇಲೆ ಕೊನೆಯ ಮುತ್ತಿಗೆ ನಡೆಸುವ ಹಂಚಿಕೆ ತಯಾರಿಸಿದ್ದರು. ಅಟ್ಲಿ, ಟ್ರುಮೇನರಿಂದ ಅದು ಮಂಜೂರು ಮಾಡಲ್ಪಟ್ಟಿದೆ. ಧಾಳಿಗಾಗಿ ಅನ್ಯದೇಶಗಳಲ್ಲಿರುವ ಸೇನೆಗಳನ್ನೂ ಅಮು ದು ಪಡಿಸಿಕೊಳ್ಳಲಾಗುವದು. ಬ್ರಿಟನು ತನ್ನೆಲ್ಲಾ ನೆಲ, ಜಲ, ಆಕಾಶ ಬಲಗಳನ್ನು ಕಳುಹಿಕೊಡುವದೆಂದು ನಿರ್ಣಯವಾಗಿದೆ.

ರಶ್ಯವೇನು ಮಾಡುವದು?

ಜಾಪಾನ್ ಯುದ್ಧ ಸಂಬಂಧದಲ್ಲಿ ಪೋಟ್ಸ್‌ಡಾಮಿನ ದ್ವಿಮೂರ್ತಿಗಳ ಪ್ರಕಟಣೆಯು ಪ್ರತ್ಯೇಕವಾಗಿ ಪ್ರಕಟಿಸಲ್ಪಟ್ಟಿದ್ದರೂ ರಶ್ಯವು ಜಾಪಾನಿನೊಡನೆ ಯುದ್ಧಕ್ಕಿಳಿಯುವದಿಲ್ಲವೆಂಬ ಅಭಿಪ್ರಾಯವಲ್ಲವೆಂದು ಲಂಡನಿನ ವಿದೇಶ ಖಾತೆಯ ಅಧಿಕಾರಿಯೊಬ್ಬ ತಿಳಿಸಿದ್ದಾನೆ. ಚೀನದ ಪ್ರಧಾನಿ ಡಾ। ಸುಂಗರು ಪುನಃ ಮೋಸ್ಕೋವಿಗೆ ಸಂಧಾನ ಮಾತುಕತೆಗಳಿಗಾಗಿ ತೆರಳಿದ್ದಾರೆ ಶಾಂತ ಸಮುದ್ರ ವಲಯದ ರಶ್ಯನ್ ಘೋಷಣೆಯು ಬಹುತೇಕವಾಗಿ ಆ ಮಾತುಕತೆಯ ವಿಜಯವನ್ನು ಅವಲಂಬಿಸಿದೆ.

ಜಾಪಾನಿನ ಭವಿಷ್ಯವೇನು?

ಪೋಟ್ಸ್‌ಡಾಮ್ ರಚಿತ ಶರಣು ಶರ್ತಗಳ 30 ಲಕ್ಷ ಕರಪತ್ರಗಳನ್ನು ವಿಮಾನಗಳ ಮೂಲಕ ಜಾಪಾನಿನ ಮೇಲೆ ಮಿತ್ರರು ಚೆಲ್ಲಿದ್ದಾರೆ. ಜರ್ಮನಿಯ ದೊಡ್ಡ ಉದ್ಯಮಗಳನ್ನು ಯುದ್ಧ ನಷ್ಟ ಭರ್ತಿಗಾಗಿ ಮಿತ್ರ ರಾಷ್ಟ್ರಗಳು ತಮ್ಮಲ್ಲಿಗೆ ಸಾಗಿಸಿದಂತೆ ಜಾಪಾನನ್ನು ಸೋಲಿಸಿ ಅದರ ಮಹಾ ಕಾರ್ಖಾನೆಗಳನ್ನು ಫಿಲಿಪ್ಪಾಯಿನ್ಸ್, ಚೀನಾ ಮೊದಲಾದುವುಗಳಿಗೆ ಪರಿಹಾರವಾಗಿ ಕೊಡುವ ನಿರೀಕ್ಷೆಯಿದೆ.

ಧಾಳಿ ನಿಲ್ದಾಣ

ಜಾಪಾನಿನ ಆಕ್ರಮಣಕ್ಕಾಗಿ ಹೊರಡುವ ಮಹಾ ಸೇನೆಗಳ ನಿಲ್ದಾಣವಾಗಿ ಒಕಿನಾವಾವನ್ನೊಳಗೊಂಡರ್ಯುಕ್ಯೂ ದ್ವೀಪ ಸಾಲುಗಳನ್ನು ಜನರಲ್ ಡೊಗ್ಲಾಸ್ ಮೇಕರ್ಥರರ ವಶಕ್ಕೊಪ್ಪಿಸಲಾಗಿದೆ. ಅಲ್ಲಿ ಅತಿ ಹೆಚ್ಚಿನ ಸೇನಾ ಸಂಗ್ರಹ ನಡೆದಿದೆ. 'ಮುಂಬರುವ ಈ ಆಕ್ರಮಣದ ಮೇಲೆ ವಿಶೇಷ ರೀತಿಯ ಆತ್ಮಹತ್ಯಾಯುಧಗಳ ಪ್ರಯೋಗ ಮಾಡಲು ಸಿದ್ಧರಾಗಿದ್ದೇವೆ'- ಎಂದು ಜಾಪಾನಿನ ಕಾಮಿಕಜೆ (ಆತ್ಮಹತ್ಯಾದಳ)ದ ಸೇನಾನಿ ಬೆದರಿಸಿದ್ದಾನೆ.

ಯುದ್ಧ ರಂಗದಲ್ಲಿ

ಶಾಂತ ಸಮುದ್ರದಲ್ಲಾಗಲೀ ಬರ್ಮಾ ರಂಗಗಳಲ್ಲಾಗಲೀ ವಿಶೇಷ ಯುದ್ಧ ಘಟನೆಗಳಾಗಿಲ್ಲ. ಚೀನದಲ್ಲಿ ಅಮೇರಿಕನರ ಬೆಂಬಲದಿಂದ ಚೀನೀಯರು ಪ್ರತಿಧಾಳಿ ನಡಿಸುವ ಸಿದ್ಧತೆಗಳಾಗುತ್ತಿವೆ ಆಯಕಟ್ಟಿನ ಸ್ಥಳಗಳಲ್ಲಿ ಗಾಳಿ ಕೊಡೆಯ ಸೈನಿಕರನ್ನು ಇಳಿಸಲಾಗುತ್ತಿದೆ. ಜಾಪಾನಿನ ಮೇಲಿನ ಆಕ್ರಮಣದ ಕೊನೆಯ ಧಾಳಿಯ ಸಿದ್ಧತೆಯೇ ಸಾಕಷ್ಟು ಪ್ರಾಮುಖ್ಯವಾದಂತಿದೆ ಜಾಪಾನರು ಸರ್ವಸಿದ್ಧತೆ, ವಿಶೇಷ ಜಾಗರೂಕತೆಗಳಿಂದ ಈ ಆಕ್ರಮಣ ವಿರೋಧಕ್ಕಾಗಿ ತುದಿಗಾಲಲ್ಲಿ ನಿಂತಿದ್ದಾರೆ.

ಜಾಪಾನರ ಸಂಧಿ ಸೂಚನೆ?

ಜಾಪಾನಿನ ಚಕ್ರವರ್ತಿ ಹಿರೋಹಿಟೋರು ವಿದೇಶ ಮಂತ್ರಿ ಶಿಗೆನೋರಿ ಟೋಗೋನನ್ನು ಕರೆಯಿಸಿ ಸಂಭಾಷಿಸಿದ್ದಾರೆ. ಈ ತಿಂಗಳಲ್ಲಿ ಇವರೊಳಗೆ ನಡೆದ ನಾಲ್ಕನೇ ಮಾತುಕತೆಯಿದು. ಜಾಪಾನ್ ವಿದೇಶ ಮಂತ್ರಿಗಳು ಮಿತ್ರರಾಷ್ಟ್ರಗಳ ಪೋಟ್ಸ್‌ಡಾಮ್ ಶರಣು ಸೂಚನೆಗಳಿಗೆ ಮರು ಸೂಚನೆಗಳನ್ನು ತಯಾರಿಸುತ್ತಿರುವರೆಂದು ವಾರ್ತೆ. ಮಿತ್ರರ ಶರ್ತಗಳಲ್ಲಿ ಕೆಲವುಗಳ ಸ್ಪಷ್ಟೀಕರಣವನ್ನು ಜಾಪಾನು ಅಪೇಕ್ಷಿಸುತ್ತಿದೆಯಂತೆ.

ಸ್ವಾತಂತ್ರ್ಯ ವಾರಕ್ಕೆ ಪ್ರತಿಬಂಧನೆ

ಕಾಂಗ್ರೆಸ್ ಅಧ್ಯಕ್ಷರ ಸೂಚನೆಯಂತೆ ಇದೇ ತಾ. 9ರಿಂದ ದೇಶದಲ್ಲೆಲ್ಲಾ ಆಚರಿಸಲ್ಪಡಲಿರುವ 'ಸ್ವಾತಂತ್ರ್ಯ ವಾರ'ದ ಸಂಬಂಧವಾಗಿ ಅಲ್ಲಹಾಬಾದಿನ ಜಿ. ಮೆಜಿಸ್ಟ್ರೇಟರು ಸಭೆಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಈ ಸಂಬಂಧವಾಗಿ ಮಾತಾಡಲು ಹೋದ ಜನ ಪ್ರಮುಖರಿಗೆ 'ದೊಡ್ಡ ಪರಿಮಾಣದ ಸಭೆಮೆರವಣಿಗೆಗಳನ್ನು ನಡೆಸಲು ಬಿಡಬಾರದೆಂದು ಡಿಲ್ಲಿಯಲ್ಲಿ ಸೇರಿದ ಗವರ್ನರ್ ಸಮ್ಮೇಲನದಲ್ಲಿ ನಿರ್ಧಾರವಾಗಿದೆ' ಎಂದು ಜಿ. ಮೆಜಿಸ್ಟ್ರೇಟರಂದರೆಂದು ತಿಳಿದು ಬರುತ್ತದೆ.

ರಾಜಕೀಯ ಮರಣ ದಂಡನೆ

ವಜಾಪಡಿಸಿ, ವಾತಾವರಣವನ್ನು ನಿರ್ಮಲಗೊಳಿಸಬೇಕೆಂದು ರಾಜೇಂದ್ರ ಪ್ರಸಾದರು ಸರಕಾರವನ್ನು ವಿನಂತಿಸಿದ್ದಾರೆ. ಇತರ ಧುರೀಣರೂ ಇದೇ ಅಭಿಪ್ರಾಯ ಪ್ರಕಟಿಸಿದ್ದಾರೆ. ಅಷ್ಟಿ ಚಿಮೂರಿನ ಕೈದಿಗಳ ಸಂಬಂಧವಾಗಿ ವೈಸರಾಯರಲ್ಲಿಗೆ ಹೋಗಿದ್ದ ಪ್ರಾಣದಾನದ ಅರ್ಜಿ ಬಾಕಿ ಯಿದ್ದಿತೆಂದೂ, ಈಗ ಪ್ರಿವ್ಹಿಕೌನ್ಸಿಲಿನ ತೀರ್ಮಾನ ಹೊರ ಬಿದ್ದು ಅದರ ಪರ್ಯಾಲೋಚನೆಗಿದ್ದ ಕಾನೂನಿನ ತಡೆ ತೊಲಗಿದುದರಿಂದ ವೈಸರಾಯರು ಪರ್ಯಾಲೋಚನೆ ನಡೆಸುತಿದ್ದಾರೆಂದೂ ತಿಳಿದುಬರುತ್ತದೆ.

ಧುರೀಣರ ಅಭಿಪ್ರಾಯ

"ಭಾರತವು ತುಂಡು ರಾಷ್ಟ್ರವಾಗಿ ಹರಿಹಂಚಾಗಬಾರದೆಂದೇ ಕಾಂಗ್ರೆಸಿನ ಅಭಿಪ್ರಾಯ. ಆರ್ಥಿಕ ಮತ್ತು ರಕ್ಷಣಾ ಭದ್ರತೆಗಿದು ಅಗತ್ಯ. ಭವಿಷತ್ಕಾಲದಲ್ಲಿ ಸಣ್ಣ ರಾಷ್ಟ್ರಗಳಿಗೆ ಸ್ಥಾನವಿಲ್ಲ ಅವು ಇರಾಕ್, ಇರಾನುಗಳಂತೆ ಪರೋಪಜೀವಿ ಸ್ಥಾನ ಸೇರಬೇಕಾದುದು ಖಂಡಿತ" ಎಂದು ಪಂಡಿತ ನೆಹರುಗಳು ಶ್ರೀ ನಗರದ ಭಾಷಣದಿಂದ್ಲಲಿದ್ದಾರೆ. "ಲಾಭ ಬಡುಕತನ ಮತ್ತು ಲಂಚಗೂಳಿತನ ನಿರ್ನಾಮವಾಗಬೇಕು. ಕಾಂಗ್ರೆಸಿನ ಮೇಲಿರುವ ಬಹಿಷ್ಕಾರ ನಿವಾರಣೆಯಾಗುವದು ಅತ್ಯಗತ್ಯ. ಒಂದೋ ಎಲ್ಲಾ ಸ್ಥಾನಬದ್ಧರ ಬಿಡುಗಡೆಯಾಗುವದು; ಇಲ್ಲವೇ ಮುಖಂಡರ ಬಂಧನವಾಗುವದು" ಎಂದು ಅಹಮ್ಮದಾಬಾದಿನಲ್ಲಿ ಅಭೂತ ಪೂರ್ವ ಸ್ವಾಗತ ಪಡೆದ ಸರ್ದಾರ್ ವಲ್ಲಭಭಾಯಿಯವರಿದ್ದಾರೆ. ಆಂಧ್ರ ಸರ್ಕಲಾರಿನ ಕುರಿತು ಪಟ್ಟಾಭಿ ಸೀತಾರಾಮಯ್ಯನವರಿತ್ತ ಹೇಳಿಕೆಯ ಸಂಬಂಧವಾಗಿ ಆ ಸರ್ಕಲಾರು ಕಾಂಗ್ರೆಸಿನಿಂದ ಅಥವಾ ತನ್ನಿಂದ ಅಧಿಕೃತವಾಗಿಲ್ಲ; ಆದರ ಪರ್ಯಾಲೋಚನೆಯ ಮೊದಲೇ ತಮ್ಮ ದಸ್ತಗಿರಿಯಾಗಿತ್ತು ಎಂದು ಗಾಂಧಿಜೀಯ ಹೇಳಿಕೆ

ಜಿನ್ನರಿಗೆ ಕೊಟ್ಟ ನೀತಿದೆ

"ನಾನು ಮಿ. ಜಿನ್ನರಿಗೆ ಸಂಧಿ ಸೂಚನೆ ಮಾಡಿದ್ದುದು ಲಾಭದ ದೃಷ್ಟಿಯಿಂದಲ್ಲವೆಂದು ಆಗ ಹೇಳಿದ್ದೆ: ಈಗ ಪುನರುಚ್ಚರಿಸುತ್ತೇನೆ. ಮೂಲತಃ ರಾಜಾಜಿಯಿಂದ ರಚಿಸಲ್ಪಟ್ಟಿದ್ದರೂ ಅದು ನನ್ನ ನಿಶ್ಚಿತಾಭಿಪ್ರಾಯ. ಸ್ವತಃ ವಿಚಾರಿಸಿ ಜೀರ್ಣಿಸಿಕೊಂಡ ವಿನಹ ಎಷ್ಟೇ ದೊಡ್ಡವನಿದ್ದರೂ ಯಾರೊಬ್ಬರಿಂದ ಏನನ್ನೇ ಆದರೂ ಆಯ್ದುಕೊಳ್ಳುವ ಅಭ್ಯಾಸ ನನಗಿಲ್ಲ ಆದ್ದರಿಂದ ಒಂದೊಮ್ಮೆಗೆ ರಾಜಾಜಿಯ ಹಿಂದೆ ಗೆದರೂ, ನನ್ನ ಬುದ್ಧಿ ಸರಿಯಿರುವ ವರೆಗೆ ನಾನಾ ಶಾಂತಿ ಸೂಚನೆಗೆ ಕಟ್ಟು ಬಿದ್ದೇ ಇದ್ದೇನೆ. ಅದು ಯಥಾಯೋಗ್ಯವಾದುದು; ಮತ್ತು ಕಾಂಗ್ರೆಸ್ ನಿರ್ಧಾರಗಳಿಂದಲೇ ಆಯ್ದುಕೊಂಡದ್ದಿದೆ. ಆ ನೈಕಿ ಇತ್ತೀಚಿಗಿನದೆಂದರೆ 1942ನೇ ಆಗೋಸ್ತು 8ರ ನಿರ್ಧಾರ. ನಾನದಕ್ಕೊಂದು ಸ್ಪಷ್ಟ ಆಕಾರ ಕೊಟ್ಟಿದ್ದೇನೆ"—ಎಂದು ಮಹಾತ್ಮಾ ಗಾಂಧಿಯವರ ಸ್ಪಷ್ಟ ಹೇಳಿಕೆ.

ಪ್ರಕಟಣೆ.

ಉಡ್ಪಿ ತಾಲೋಕು ಪೆರ್ಗ ಗ್ರಾಮದ ವೇಷಸ್ಥಾನ ಬೆಟ್ಟನಲ್ಲಿರುವ ಪೆರ್ಗ ರಾಮಣ ಕೆದ್ಲಾಯರ ಮಕ್ಕಳು. 1 ಶ್ರೀನಿವಾಸ ಕೆದ್ಲಾಯ 2ನೇ ನಾರಾಯಣ ಕೆದ್ಲಾಯ 3ನೇ ಗೋವಿಂದ ಕೆದ್ಲಾಯ--3 ಜನರು ಯೇಕಸ್ಥರಾಗಿ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:

ನಮಗೆ ನಂಮ ಪಿತ್ರಾರ್ಜಿತ ರೂಪ್ಯ 16 ತೀರ್ವೆ ಕೊಡುವ 14 ಹದಿನಾಲ್ಕು ಮುಡಿ ಅಕ್ಕಿ ಹುಟ್ಟುವಳಿ ಆಸ್ತಿ ಉಂಟು. ಈಗ ನಂಮ ತಂದೆ ರಾಮಣ ಕೆದ್ಲಾಯರೀಗ ಕೆಲವು ಸಮಯದಿಂದ ವೃದ್ಧಾಪ್ಯ ದೆಸೆಯಿಂದ ತಲೆ ಕೆಟ್ಟಿರುವುದರಿಂದ ಸದ್ರಿ ಆಸ್ತಿ ಸಂಬಂಧವಾದ ಯಲ್ಲಾ ವಹಿವಾಟುಗಳನ್ನು ನಂಮ ಅಣ್ಣ ವಾಸಪ್ಪ ಯಾನೆ ವೆಂಕಟ್ರಮಣ ಕೆದ್ಲಾಯರು ನೋಡಿಕೊಂಡು ಬರುತ್ತಿದ್ದರು. ಸದ್ರಿಯವರು ತಾ 28-7 45ರಲ್ಲಿ ಮೃತ ಪಟ್ಟಿರುತ್ತಾರೆ. ಅನಂತ್ರ ನಮ್ಮ ಸಮಸ್ತ ವಹಿವಾಟುಗಳನ್ನು ನಾವೇ ಅಣ್ಣ ತಂಮಂದಿರು ಯೇಕಸ್ಥರಾಗಿ ನೋಡಿಕೊಂಡು ಬರುತ್ತೇವೆ. ನಂಮ ತಂದೆ ರಾಮಣ ಕೆದ್ಲಾಯರು ಸುಮಾರು ಒಂದು ವರ್ಷದ ಒಳಗಾಯ್ತು ಸರಿಯಾಗಿ ಮನೆಗೆ ಕೂಡಾ ಬಾರದೆ ತಲೆ ಕೆಟ್ಟು ತಿರುಗಾಡುತ್ತಿದ್ದಾರೆ. ನಂಮ ಆಸ್ತಿ ಯಾ ಸ್ಥಿರಚರ ಸೊತ್ತುಗಳು ಯಾವದೊಂದು ಸಾಲ ವಗೈರೆಗಳಿಂದ ನಿರಪಹಿತವಾದದ್ದು. ಇನ್ನು ಮುಂದೆ ಯಾರಾದರೂ ಕೆಡಿಸುವ ವಿಚಾರದಿಂದ ನಂಮ ಸ್ಥಿರಚರ ಸೊತ್ತುಗಳನ್ನು ನಂಮ ತಂದೆ ರಾಮಣ ಕೆದ್ಲಾಯರಿಂದ ಪರಾಧೀನ ಯಾ ವಸೂಲಿ ಪಕ್ಕು ಯಾ ಸಾಲಗಳಿಗೆ ಗುತ್ತಿಪಡಿಸಿಕೊಳ್ಳುವರೆ ಪ್ರಯತ್ನಪಟ್ಟರೆ ಅದು ಸಿಂಧುವಾಗತಕ್ಕದ್ದಲ್ಲ. ಅದರಿಂದ ಪ್ರಯೋಜನ ಸಿಕ್ಕಲಿಕ್ಕಿಲ್ಲ. ಯಾ ನಂಮ ಸಮಸ್ತ ಸ್ಥಿರಚರ ಸೊತ್ತುಗಳಿಗೆ ಬಾಧಕ ಬರತಕ್ಕದ್ದೂ ಅಲ್ಲ. ಅಂಥಾ ಸಂದರ್ಭಗಳಲ್ಲಿ ಯಾರಾದರೂ ನಂಮ ತಂದೆಯವರಿಂದ ಬರೆಯಿಸಿಕೊಂಡಲ್ಲಿ ನಮಗೆ ಲಗಾವು ಆಗತಕ್ಕದ್ದಲ್ಲ. ಎಂತ ಈ ಮೂಲಕ ಜಾಹೀರು ಮಾಡಿಕೊಂಡಿರುತ್ತೇವೆ.

ಶ್ರೀನಿವಾಸ ಕೆದ್ಲಾಯನ ರುಜು.
ನಾರಾಯಣ ಕೆದ್ಲಾಯನ ರುಜು.
ಗೋವಿಂದ ಕೆದ್ಲಾಯನ ರುಜು.

2 8 1945 }
ಪೆರ್ಗ }

Notice

ಕುಂದಾಪುರ ಡಿ. ಮು. ಕೋರ್ಟನಲ್ಲಿ.

S C. 260/1945.

ವಾದಿ-ಗಣಪಯ್ಯ ಸೋಮಯಾಜಿ.ಸೀತಾರಾಮ ಸೋಮಯಾಜಿರ ಮಗ. ಕುಂದಾಪುರ ತಾಲೂಕು ಬೆಳ್ವಾಲ ಗ್ರಾಮ.

ಪ್ರತಿವಾದಿರು-1. ಕೃಷ್ಣ ಅಡಿಗ 2. ಮಂಜಯ್ಯ ಅಡಿಗ. ಶ್ರೀಪತಿ ಅನಂತ ಅಡಿಗರ ಮಗಂದಿರು ಕುಂದಾಪುರ ತಾಲೂಕು ಬೇಳೂರು ಗ್ರಾಮ.

ಸದರಿ ಪ್ರತಿವಾದಿರಿಗೆ ತಿಳಿಸುವುದೇನೆಂದರೆ.—

ನೀವು ನೈಲಾಡಿ ಅಂತಯ್ಯ ಶೆಟ್ರಿಗೆ ಬರೆದು ಕೊಟ್ಟ ಡಿಮಾಂಡ ನೋಟು ಪ್ರಕಾರ ನಿಂಮಿಂದ ಬರಬೇಕಾದ ವಸೂಲಿಯ ಹಕ್ಕನ್ನು ವಾದಿಯು ಟ್ರಾನ್ಸಫರ ಪಡೆದು ರೂ. 59 12 0ಕ್ಕೆ ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯನ್ನು ತಾ. 20-8-1945ಕೆ ತನಿಖೆಗೆ ಇಟ್ಟಿದೆ. ಆ ಕುರಿತು ನಿಮ್ಮ ಉಜ್ರ ಪರಿಹಾರ ಇದ್ದರೆ ತಕ್ಕ ಸಮಯದಲ್ಲಿ ಕೋರ್ಟಿಗೆ ಹಾಜರಾಗಿ ಮಾಡತಕ್ಕದ್ದು. ಇಲ್ಲವಾದರೆ ನಿಮ್ಮ ಮೇಲೆ ಎಕ್ಸಪಾರ್ಟ ಡಿಕ್ರಿ ಕೊಡಲ್ಪಡುವುದಾಗಿಯೂ ಈ ಮೂಲಕ ನಿಮಗೆ ತಿಳಿಸಿದೆ.

A. N Rao.
Advocate for Petitioner

6 8 1945 }
ಕುಂದಾಪುರ }

ನೋಟೀಸು.

ಕುಂದಾಪುರ ಡಿ. ಮು ಕೋರ್ಟನಲ್ಲಿ.

O S. 220/1945

ವಾದಿ ನರಸಿಂಹ ಉಡುಪ
ಮತ್ತು
ಪ್ರತಿವಾದಿ. ಚಿಕ್ಕಮ್ಮ ಶೆಟ್ಟಿ ಕೂಡಾ.
ಇವರೊಳಗೆ.

ಶಂಕರನಾರಾಯಣ ಗ್ರಾಮದಲ್ಲಿರುವ ಶೇಷಪ್ಪ ಅಡಿಗಳ ಮಗಂದಿರು 2ನೇ ಪ್ರತಿವಾದಿ ಸೀತಾರಾಮ ಅಡಿಗ, 3ನೇ ಪ್ರತಿವಾದಿ ಮಹಾಬಲೇಶ್ವರ ಅಡಿಗ ಮತ್ತು ಅಂಪಾರು ಗ್ರಾಮದ ಜಾಳಕಟ್ಟಿನಲ್ಲಿರುವ ಅನಂತ ಕೃಷ್ಣರಾಯರ ಮಗ 4ನೇ ಪ್ರತಿವಾದಿ ಶಂಕರ ಕೃಷ್ಣ ಮಯ್ಯ ಸಹಾ 3 ಜನರಿಗೆ ಕೊಡುವ ನೋಟೀಸು

ಮೊದಲು ಪ್ರತಿವಾದಿ ಉಡುಪರು ಹೆಸ್ತಾನವಾಗಿದ್ದ ದಾವಾ ಭೂಮಿಯನ್ನು ಕುಂದಾಪುರ ಸರಕಾರದಿಂದ ಸದ್ರಿ ಪ್ರತಿವಾದಿ ಉದ್ಯಾನ ಮಗಳು ಸುಬ್ಬಮ್ಮನ ಮಗನಾದ ಕಾವೇರಪ್ಪನಿಂದ ವಾದಿಯು ಕ್ರಯಕ್ಕೆ ಪಡೆದ ಮೇರೆಗೆ ಸುಭಾನು ಸಂ।। ದ ಲಾಗ್ಯಾಯ ಹುಟ್ಟುವಳಿ ಸಮೇತ ಭೂಮಿಸ್ವಾಧೀನತೆಗೆ ವಾದಿಯು ಫಸಿಂದ ಪಕ್ಕಿನ ಮೇಲೆ ಮಾಡಿದ ಮೇಲಿನ ದಾವೆಯಂನ್ನು ತಾರೀಕು 25 8 45 ನೇ ದಿವಸ ಈ ಕೋರ್ಟು ಮುಂದೆ ತನಿಖೆಗೆ ಇಡಲಾಗಿಯದೆ. ಉವಾದರೆ ಯರು ಪ್ರತಿವಾದಿ ಸದರೀ ದಿನ ಈ ಕೋರ್ಟು ಮುಂದೆ ಹಗಲು 11 ಗಂಟೆಗೆ ಹ್ವಾಜೀರು ಮಾಡಿಕೊಳ್ಳತಕ್ಕದ್ದು.

sd/ **A. V. N. Hebbar.**
Pleader for Plaintiff

Kundapur }
4 8-1945 }

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1—8—0** ಮಾತ್ರ.
ಬೈಂಡು ಮಾಡಿದಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಪ್ರಸಿದ್ಧ ಮೊಕದ್ದಮೆಗಳು

ಲಾವಲರ ಬಂಧನ

ಹಿಟ್ಲರ್ ಆಕ್ರಮಿತ ವಿಚಿ ಫ್ರಾನ್ಸಿನ ಪ್ರಧಾನ ಮಂತ್ರಿಯಾಗಿದ್ದು, ಕೆಲವು ಕಾಲ ಆ ಸರಕಾರದ ಶಿರಸ್ಸಾಗಿದ್ದ ಪಿಟೇನರನ್ನೂ ಕಡೆಗಣಿಸಿ ಹಿಟ್ಲರನನ್ನು ಛಾಯೆಯಂತೆ ಅನುಕರಿಸಿದ್ದ ಪಿಯರೀ ಲಾವಲರೀಗ ಫ್ರೆಂಚ್ ಬಂಧನದಲ್ಲಿದ್ದಾರೆ. ಫ್ರಾನ್ಸಿನಲ್ಲಿ ಅವರಷ್ಟು ದ್ವೇಷಕ್ಕೊಳಗಾಗಿರುವ ಮನುಷ್ಯ ಬೇರಿಲ್ಲ. 'ನಾನು ಜರ್ಮನಿಯ ವಿಜಯವನ್ನು ಹಾರೈಸುತ್ತೇನೆ' ಎಂದವರ ಕಂಠೋಕ್ತ ಘೋಷಣೆಯಾಗಿತ್ತು. ಫ್ರಾನ್ಸನ್ನು ಮಿತ್ರಸೇನೆ ಆಕ್ರಮಿಸಿದೊಡನೆ ಜರ್ಮನ್ ವಿಮಾನವೊಂದನ್ನು ಹತ್ತಿ ಲಾವಲ್ ಸ್ಪೈನಿಗೋಡಿದ್ದರು. ಅವರನ್ನು ಅಲ್ಲಿಂದ ಹಿಂದಿರುಗಿಸಬೇಕೆಂದು ಸ್ವತಂತ್ರ ಫ್ರೆಂಚ್ ಸರಕಾರವು ಜನರಲ್ ಫ್ರಾಂಕೋನಿಗೆ ಬಹುಬಾರಿ ಬೇಡಿಕೆ ಹಾಕಬೇಕಾಯಿತು. ಇದುವರೆಗೂ ವಿಳಂಬಿಸಿ, ಜುಲಾಯಿ ಅಂತ್ಯದಲ್ಲಿ ಫ್ರಾಂಕೋ ಸರಕಾರವು ಅವರನ್ನಲ್ಲಿಂದ ಹೊರಡಿಸಿತು. ಲಾವಲರು ಅಂದು ಹೋಗಿದ್ದ ವಿಮಾನವನ್ನೇ ಸಪತ್ನೀಕರಾಗಿ ಹತ್ತಿದಾಗ ಅವರು ಇಳಿಯುವ ಗುರಿಯನ್ನರಿಯದೆ ಇಡೀ ಯುರೋಪಿನಲ್ಲಿ ಸಶಸ್ತ್ರ ಸೈನಿಕರು ಕಾದು ನಿಂತಿದ್ದರು. ಸರ್ವ ಕಡೆಯ ಪೋಲಿಸರು, ಪೊದರಿನಿಂದ ಹೊರಬಿದ್ದ ನರಭಕ್ಷಕನನ್ನು ಕೊಲ್ಲುವ ಬೇಟೆಗಾರರಂತಾಗಿದ್ದರು. ಲಾವಲರ ವಿಮಾನವು ಪೆಟ್ರೋಲಿನ ಅಭಾವದಿಂದ ಗುರಿತಪ್ಪಿ ಆಸ್ಟ್ರಿಯದಲ್ಲಿಳಿಯಬೇಕಾಯಿತು. ಅಲ್ಲಿ ಅಮೇರಿಕನ್ ಸೈನಿಕರು ಅವರನ್ನು ಬಂಧಿಸಿ, ಫ್ರೆಂಚ್ ಸರಕಾರದ ಬೇಡಿಕೆಯಂತೆ ಫ್ರಾನ್ಸಿಗೆ ಬೀಳ್ಕೊಟ್ಟರು.

ಪಿಟೇನ್ ಮೊಕದ್ದಮೆಯಲ್ಲಿ ಸಾಕ್ಷಿ

ಲಾವಲರ ವಿಮಾನವಿಳಿದ ಪ್ಯಾರಿಸ್ ನಿಲ್ದಾಣವು ಸ್ಮಶಾನ ಮೌನದಲ್ಲಿತ್ತು. ಮಸಣಗಣಗಳಂತೆ ಸಶಸ್ತ್ರ ಪೋಲಿಸರು ನಿಂತಿದ್ದರು. ಲಾವಲರನ್ನು ಸಿಗಿದು ತಿನ್ನಬೇಕೆಂಬಷ್ಟು ಕ್ರೋಧದಲ್ಲಿರುವ ಜನತಂಡವನ್ನು ಪೋಲಿಸು ಬೇಲಿ ತಡೆದಿದ್ದಿತು. ಅವರನ್ನು ಕಾರು ಹತ್ತಿಸಿ ಸೈಕಲ್ ಪೋಲಿಸರ ಪಹರೆಯೊಡನೆ ಅಡ್ಡಹಾದಿಯಿಂದ ಜೈಲಿಗೊಯ್ಯುವಾಗಲೂ 'ಲಾವಲನನ್ನು ಕೊಲ್ಲಬೇಕು' ಎಂದು ಜನತಂಡ ಬೊಬ್ಬಿಡುತಿತ್ತು. ಇಂತಹ ತನಖೆಯಲ್ಲಿರುವ ಮಾರ್ಶಲ್ ಪಿಟೇನರ ಮೇಲಿನ ರಾಜ್ಯದ್ರೋಹ ಮೊಕದ್ದಮೆಯಲ್ಲಿ ಲಾವಲರು ಸಾಕ್ಷ್ಯವಿತ್ತಿದ್ದಾರೆ. ಹಿಂಬಾಗಿಲಿನಿಂದ ಕೋರ್ಟಿಗವರನ್ನು ತರಬೇಕಾಯಿತು. ಲಾವಲರನ್ನು ಕಂಡು ಉದ್ರೇಕಗೊಂಡ ಜನಸಂದಣಿಯನ್ನು ಹತೋಟಿಯಲ್ಲಿಡುವದು ಪೋಲಿಸರಿಗೆ ಅತಿ ಪ್ರಯಾಸವಾಯಿತು. ಓರ್ವ ಮಹಿಳೆಯಂತೂ ಹುಚ್ಚುಗಟ್ಟಿ ಕೋರ್ಟಿನೊಳಗೆ ನುಗ್ಗಿಬರುತಿದ್ದಳು. "ಪಿಟೇನರು ಫ್ರಾನ್ಸನ್ನು ಉಳಿಸುವರೆಂದು ನಾನು ಆಶಿಸಿದ್ದೆ. ಜರ್ಮನಿಯೊಡನೆ ಫ್ರಾನ್ಸನ್ನು ಮಿಲಿಟರಿ ಐಕ್ಯಗೊಳಿಸಲು ಪಿಟೇನರು ವಿರೋಧವಿದ್ದರು! ನನಗೆ ಬ್ರಿಟಿಷರ ಮೇಲೆ ಎಳ್ಳಷ್ಟು ದ್ವೇಷವಿಲ್ಲ. ನಾವು ಮಾಡಿದುದೆಲ್ಲಾ ಅಂದಿನ ಸ್ಥಿತಿಗನುಸಾರವಾಗಿ ಫ್ರಾನ್ಸಿನ ಹಿತಕ್ಕಾಗಿಯೇ" ಎಂಬು ಲಾವಲನ ಸಾಕ್ಷಿ.

ವೈರಿಗೂ ಬೇಡವಾದ ಸ್ಥಿತಿ!

ಪಿಟೇನರ ಮೊಕದ್ದಮೆಯಲ್ಲಿ ಫ್ರಾನ್ಸಿನ ಮಾಜಿ ಪ್ರಧಾನಿಗಳು, ಸೇನಾನಿಗಳು, ರಾಯಭಾರಿಗಳೇ ಇತ್ಯಾದಿ ಸರ್ವರೂ ಪಿಟೇನರಿಗೆ ವಿರುದ್ಧವಾಗಿಯೂ ಅನುಕೂಲವಾಗಿಯೂ ಸಾಕ್ಷ್ಯವಿತ್ತಿದ್ದಾರೆ. ಈಗ ಪ್ರೊಸಿಕ್ಯೂಶನ್ ಸಾಕ್ಷ್ಯವು ಮುಗಿದು ಡಿಫೆನ್ಸ್ ಸಾಕ್ಷ್ಯ ವಿಚಾರಣೆಗಳಾಗುತ್ತಿವೆ. ಆದರೆ ಲಾವಲರ ಮೇಲೆ ಬಾಕಿಯಿರುವ ರಾಷ್ಟ್ರದ್ರೋಹದ ಅಪಾದನೆಯಲ್ಲಿ ಅವರ ಪರವಾಗಿ ವ್ಯವಹರಿಸಲು ಯಾವನೊಬ್ಬ ವಕೀಲನೂ ಒಪ್ಪಲಿಲ್ಲ. ಲಾವಲರ ಗೈರುಹಾಜರಿಯಲ್ಲಿ ಫ್ರೆಂಚ್ ಮಿಲಿಟರಿ ಕೋರ್ಟು ಅವರಿಗೆ ಮರಣದಂಡನೆಯನ್ನು ವಿಧಿಸಿದ್ದಿತು. ಈಗ ಪುನಃ ಪಿಟೇನರನ್ನು ವಿಚಾರಣೆ ನಡೆಸುವ ಜಡ್ಜರೇ ಲಾವಲರನ್ನು ವಿಚಾರಿಸಲಿದ್ದಾರೆ. ಫ್ರಾನ್ಸಿನ ಮಾಜೀ ಮಂತ್ರಿಗಳಾದ ಪಾವುಲ್ ರೈನಾಡ್ ಮತ್ತು ಲಿಯೋನ್ ಬ್ಲಮರಿಗೆ ನಾಜಿಗಳು ಗುಂಡಿಡಲಿದ್ದಾಗ ಅದನ್ನು ತಪ್ಪಿಸಿದವನು ತಾನೆಂದು ತನ್ನ ಸಾಕ್ಷ್ಯದಲ್ಲಿ ಲಾವಲರೆಂದಿದ್ದಾರೆ. ಆದರೆ ಲಾವಲರ ಪ್ರತಿಯೊಂದು ಮಾತಿಗೂ ಕೋರ್ಟು ಮಂದಿಯ ಉಪಹಾಸ್ಯದ ನಗೆ, ತಿರಸ್ಕಾರಗಳು ದೊರೆತಿವೆ. ಇಡೀ ಪ್ರಪಂಚದಲ್ಲಿ ಒಂದಿಂಚು ಭೂಮಿಯ ಆಶ್ರಯ ಅಥವಾ ಒಬ್ಬನೇ ಒಬ್ಬನ ಸಹಾಯವಿಲ್ಲದ ಮಹಾಪಾಪಿಯೆಂದರೆ ಲಾವಲ್!

ಅಮೆರಿ ಪುತ್ರನ ವಿಚಾರಣೆ

ಮಾಜೀ ಭಾರತ ಕಾರ್ಯದರ್ಶಿ ಮಿ. ಅಮೆರಿಯವರ ಪುತ್ರ, 33 ವರುಷದ ಜೋನ್ ಅಮೆರಿಯ ವಿಚಾರಣೆಯು ಲಂಡನಿನ ಪೋಲಿಸ್ ಕೋರ್ಟಿನಲ್ಲೀಗ ನಡೆಯುತ್ತಿದೆ. ಲೋಕ ಪ್ರಾಮುಖ್ಯ ಮೊಕದ್ದಮೆಗಳಲ್ಲಿ ಇದೂ ಒಂದು. ಜೋನ್ ಅಮೆರಿ ಯುದ್ಧದ ಅಂತ್ಯ ಭಾಗದಲ್ಲಿ ಜರ್ಮನಿ, ಇಟಲಿಗಳಲ್ಲಿದ್ದು ನಾಜಿಗಳ ಪರವಾಗಿ ಆಕಾಶವಾಣಿ ಭಾಷಣ ಮತ್ತು ಪ್ರಚಾರೋಪನ್ಯಾಸಗಳನ್ನೀಯುತಿದ್ದ. ತನ್ನನ್ನು ದಸ್ತಗಿರಿಮಾಡಿದ ಇಬ್ಬರು ಬ್ರಿಟಿಷ್ ಅಧಿಕಾರಿಗಳಿಗೆ ಜೋನ್ ಅಮೆರಿಯಿತ್ತಿದ್ದ ಸುದೀರ್ಘ ಹೇಳಿಕೆಯನ್ನು ಕೋರ್ಟಿಗೆ ಹಾಜರು ಮಾಡಲಾಗಿದೆ. ಫ್ರಾನ್ಸ್ ಪತನದ ವೇಳೆ ಅಲ್ಲಿದ್ದು ಸಿಕ್ಕಿ ಬಿದ್ದಿದ್ದ ಜೋನ್ ಅಮೆರಿಯು ರಶ್ಯವು ಯುದ್ಧಕ್ಕಿಳಿದೊಡನೆಯೇ ಕಮ್ಯೂನಿಸ್ಟ್ ರಶ್ಯದ ವಿರುದ್ಧ ಹೋರಾಡಲು ಸ್ವತಂತ್ರ ಆಂಗ್ಲೇಯ ಸೇನೆಯೊಂದರ ರಚನೆಗೆ ಪ್ರಯತ್ನಿಸ ಹತ್ತಿದ. ಅಲ್ಲಿಂದ ಬರ್ಲಿನಿಗೂ ರೋಮಿಗೂ ಹೋಗಿ ಹಿಟ್ಲರ್ ಮುಸಲಿನಿಗಳ ಸಖ್ಯ ಸಂಪಾದಿಸಿದ್ದನಲ್ಲದೆ ಬ್ರಿಟಿಷ್-ರಶ್ಯಾ ಮೈತ್ರಿಯನ್ನು ಖಂಡಿಸಿ ರಶ್ಯವನ್ನು ಸದೆಬಡಿಯಲು ಆಂಗ್ಲೇಯರು ನೆರವಾಗಬೇಕೆಂದು ಶತ ಪ್ರಯತ್ನ ಮತ್ತು ಅವಿಶ್ರಾಂತ ಪ್ರಚಾರ ಮಾಡುತಿದ್ದ. ಅವನ ಪೂರ್ಣ ವಿಚಾರಣೆ ಮುಗಿದಿಲ್ಲ.

ಯುರೋಪಿನಲ್ಲೀಗ ಯುದ್ಧಾಪರಾಧಿಗಳ ವಿಚಾರಣಾಯುಗವೆನ್ನಬಹುದು. ಆಶ್ಚರ್ಯವೆಂದರೆ ಗೋರಿಂಗ್, ರಿಬ್ಬೆಂಟ್ರಪರಂತಹ ನಾಜೀ ಪ್ರಮುಖರನ್ನೀವರೆಗೂ ಕೋರ್ಟಿಗೆಳೆದಿಲ್ಲ, ಮಾತ್ರವಲ್ಲ, ಹಿಂದಿನಂತೆ ಅವರ ಪ್ರಸ್ತಾಪವೂ ಕೇಳಿ ಬರುತ್ತಿಲ್ಲ.

ಖುರ್ರೋ ಬಿಡುಗಡೆ

'ಲಕ್ಷ್ಮೀಕಾಂತನ್' ಶಿವಿತ ಮೊಕದ್ದಮೆಯು ದಕ್ಷಿಣ ಭಾರತದ ಪ್ರಸಿದ್ಧ ತಕ್ಷೀರ ದಾವೆಯಾಗಿದ್ದಂತೆ, 'ಅಲ್ಲಾಭಕ್ಷ್ ಕೊಲೆ ಮೊಕದ್ದಮೆಯು ಅಖಿಲ ಹಿಂದುಸ್ಥಾನದ ಹೆಸರಾಂತ ಕ್ರಿಮಿನಲ್ ದಾವೆ. ಸಕ್ಕೂರು ಸೆಶನ್ಸ್ ಜಡ್ಜರು ಆರೋಪಿಗಳಾದ ಖಾನ್‌ಬಹದೂರು ಎಂ. ಎ. ಖುಹ್ರೊ (ಸಿಂಧಿನ ಮಾಜೀ ಕಂದಾಯ ಮಂತ್ರಿ ಮತ್ತು ಮುಸ್ಲಿಂ ಲೀಗಿನ ಕಾರ್ಯಕಾರೀ ಸಮಿತಿ ಸದಸ್ಯ) ಅವರ ಸಹೋದರ ಮಹಮ್ಮದ್ ನವಾಝ್ ಮತ್ತು ಇತರ ಮೂವರನ್ನೂ ಬಿಡುಗಡೆ ಮಾಡಿದ್ದಾರೆ. ಪ್ರೊಸಿಕ್ಯೂಶನಿನ ವಾದ ರುಜುವಾಗಿಲ್ಲ, ಇತರ ಸಾಕ್ಷಿಗಾರರ ಹೇಳಿಕೆಗಳು ದುರ್ಬಲವಾಗಿದ್ದುದರಿಂದ ಮಾಫಿ ಸಾಕ್ಷಿಗಾರನ ಹೇಳಿಕೆಗೆ ಆಧಾರ ದೊರೆತಿಲ್ಲವೆಂಬುದೇ ಈ ಬಿಡುಗಡೆಯ ಕಾರಣ. 'ಇಡೀ ಪ್ರೊಸಿಕ್ಯೂಶನ್ ಕಥೆಯೇ ಸುಳ್ಳು' ಎಂದ ಎಸೆಸರರ ಅಭಿಪ್ರಾಯವನ್ನು ಜಡ್ಜರೊಪ್ಪದೆ 'ಆರೋಪಗಳು ರುಜುವಾಗಲಿಲ್ಲವೆಂಬುದೊಂದೇ ನನ್ನ ಅಭಿಪ್ರಾಯ' ಎಂದು ತನ್ನ ತೀರ್ಪಿನಲ್ಲಿ ಬರೆದಿದ್ದಾರೆ.

ಆರೋಪವೇನು?

ಖಾನ್ ಬಹದೂರ್ ಅಲ್ಲಾ ಭಕ್ಷರು ಸಿಂಧ ಪ್ರಾಂತ್ಯದ ರಾಷ್ಟ್ರಾಭಿಮಾನಿ ಪ್ರಧಾನಮಂತ್ರಿಯಾಗಿದ್ದರು. ಸರಕಾರದ ದಬ್ಬಾಳಿಕೆಯ ನಿಷೇಧಾರ್ಥವಾಗಿ 1942ರಲ್ಲಿ ಅವರು ತನ್ನ ಬಿರುದು ತ್ಯಾಗಮಾಡಿ ಬರೆದ ಖಂಡನಾ ಪತ್ರವು ಆಕ್ಷೇಪಾರ್ಹವಾದದೆಂದು ವೈಸರಾಯರ ಸೂಚನೆಯಂತೆ ಸಿಂಧ್ ಗವರ್ನರರು ಮಿ. ಅಲ್ಲಾಭಕ್ಷರನ್ನು ಪ್ರಧಾನಿ ಪಟ್ಟದಿಂದ ಡಿಸ್‌ಮಿಸ್ ಮಾಡಿದರು. ಆ ಮೇಲವರು ಶಿಕಾರಪುರದ ತನ್ನ ಮನೆಯಲ್ಲೇ ಇದ್ದರು. 1943ನೇ ಮೇ 14-ಲ್ಲಿ ಟೋಂಗಾ ಹತ್ತಿ ಹೋಗುತ್ತಿದ್ದಾಗ ನಡುಹಗಲಲ್ಲೇ ಗುಂಡಿನಿಂದ ಅವರನ್ನು ಕೊಲೆಮಾಡಲಾಯಿತು. ಈ ಕುರಿತು ಪೋಲಿಸ್ ಶೋಧ ನಡೆದಾಗ ಸಿಂಧಿನ ಶ್ರೀಮಂತ ಜಮೀನ್ದಾರರಲ್ಲೊಬ್ಬರೂ, ಆಗ ರೆವಿನ್ಯೂ ಮಂತ್ರಿಗಳೂ ಆಗಿದ್ದ ಖಾನ್ ಬಹದೂರ್ ಖುಹ್ರೋರವರ ಸೇವಕ ಧರೀಶನು ಕೊಲೆಯಾದಂದಿನಿಂದ ಕಾಣೆಯಾಗಿದ್ದುದು ತಿಳಿಯಿತು. ಈ ಕೊಲೆಗೆ ಖುಹ್ರೋರವರೇ ಪ್ರೇರೇಪಕರೆಂದೂ ರಾಜಕೀಯ ಧ್ಯೇಯ ಘರ್ಷಣೆಗಳೇ ಇದಕ್ಕೆ ಕಾರಣವೆಂದೂ ಹುರ್‌ಗಳಿಂದ ಕೊಲೆ ಮಾಡಿಸಿದರೆಂದೂ ಆರೋಪಿಸಿ, 1944ನೇ ಸೆಪ್ಟೆಂಬರ್ 21ರಲ್ಲಿ ಅವರನ್ನು ದಸ್ತಗಿರಿ ಮಾಡಲಾಯಿತು. ಮೊಕದ್ದಮೆಯ ವಿಚಾರಣೆಯು ೬೦ ದಿವಸ ನಡೆದು ಪ್ರೊಸಿಕ್ಯೂಶನಿನ ಪರವಾಗಿ 61 ಮಂದಿ ಸಾಕ್ಷ್ಯವಿತ್ತಿದ್ದರು. ಒಬ್ಬ ಪ್ರೊಸಿಕ್ಯೂಶನ್ ಸಾಕ್ಷಿಗಾರನು ವಿಚಾರಣಾವಧಿಯ ನಡುವೆ ಕೊಲೆಯಾಗಿದ್ದ. ಇತರ ಸಾಕ್ಷಿಗಾರರ ಪ್ರಾಣರಕ್ಷಣೆಗಾಗಿ ವಿಚಾರಣೆಯು ಸುಕ್ಕೂರು ಜೈಲಿನೊಳಗೇನೇ ನಡೆದಿದ್ದಿತು. ಸಿಂಧಿನ ನಿವೃತ್ತ ಎಡ್ವೊಕೇಟ್ ಜನರಲ್ ಶ್ರೀ. ಪ್ರತಾಪರೈ ಪುನ್ವಾನಿಯವರು ಪ್ರೊಸಿಕ್ಯೂಶನಿನ ಪರ ವಕಾಲತ್ ನಡಿಸಿದ್ದರು. ಆರೋಪಿಗಳ ಪರವಾಗಿ ಶ್ರೀ ದಿಯಾಳ್‌ಮಲ್ ಲಾಲ್ವಾನಿಯವರು ಸಹಾಯಕ ವಕೀಲರೊಂದಿಗೆ ವ್ಯವಹರಿಸಿದ್ದರು. ಖುರ್ರೋ ಪರವಾಗಿ ಶ್ರೀ ಭುಲಾಭಾಯಿ ದೇಸಾಯಿಗಳಿಗೆ ರೂ 60 ಸಾವಿರ ಫೀಗೆ ಕಂಟ್ರಾಕ್ಟಾಗಿ ರೂ. 10 ಸಾವಿರ ಮುಂಗಡ ದೊರೆತಿದ್ದರೂ ಸಿಮ್ಲಾ ಸಮ್ಮೇಲನದಿಂದಾಗಿ ದೇಸಾಯಿಗಳ ವಕಾಲತ್ ಕೊನೆಗೆ ತಪ್ಪಿಹೋಗಿದ್ದಿತು. ಆಗೋಸ್ತು 3ರಲ್ಲಿ ಶ್ರೀಮಾನವಾಗಿ ಖುಹ್ರೋರವರು ಹೊರಗೆ ಬರವಾಗ ಮುಸಲ್ಮಾನರು, ಮುಖ್ಯವಾಗಿ ಜಮೀನ್ದಾರರು ಕೋರ್ಟು ವಠಾರದಲ್ಲಿ ಬಹು ಸಂಖ್ಯೆಯಲ್ಲಿ ನೆರೆದಿದ್ದು ಆತ್ಮಾನಂದದ ಸ್ವಾಗತ ದೊರೆಯಿತು.

TENDER NOTICE

Tenders of rates to reach the Asst. Director of Fisheries (Coast) Calicut on or before 15th September '45 are invited for transporting salt bags from vessels or railway wagons and stacking them in the fish curing yards and golahs on the West Coast and for sundry other works.

Details and terms of contract can be had from the Asst. Director of Fisheries (Coast), Calicut.

T. P. BARATAN,
Special Officer (Smoked Fish (Supply)) in charge of the office of the Asst. Director of Fisheries (Coast)

CALICUT
1—8—45

WANTED.

Mathematics, Science & History L.Ts. or B.Eds for appointment as school assistants in Board Secondary Schools. Applications from untrained graduates will also be considered in case applications from trained graduates are not forthcoming. The applicants should state in their applications, age and community to which he or she belongs. The applications should reach the President, District Board on or before 15-8-1945.

(Sd) **A. Lakshminarayana Rao,**
President,
District Board, South Kanara

S. K. District Board office
MANGALORE
Dated 3-8-1945

ಭಾರತದ ಹೊಸ ಕಾರ್ಯದರ್ಶಿ—ಪೆಥಿಕ್ ಲಾರೆನ್ಸ್.

ಉಪಕಾರ್ಯದರ್ಶಿ ಅರ್ಥರ್ ಹೆಂಡರ್ಸನ್.

ಆಧುನಿಕ ಅಪಯಶಸ್ಸಿನ ಚಿರಮಾವಧಿಯನ್ನು ಮುಟ್ಟಿ ಅಧಿಕಾರ ಕ್ಷೇತ್ರದಿಂದಲೇ ಅಟ್ಟಲ್ಪಟ್ಟ, ದುರ್ದೈವಿ ಮಿ. ಅಮೆರಿಗಳ ಸ್ಥಾನದಲ್ಲಿ ಮಿ. ಎಫ್. ಡಬ್ಲ್ಯು. ಪೆಥಿಕ್ ಲಾರೆನ್ಸರು ಭಾರತ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟಿದ್ದಾರೆ. ಚಕ್ರವರ್ತಿಗಳಿಂದ ಲೋರ್ಡ್ ಪದವಿಗೇರಿಸಲ್ಪಟ್ಟಿರುವದರಿಂದ ಅವರಿನ್ನು ಮುಂದೆ ಲೋರ್ಡ್ ಸಭೆಯ ಸದಸ್ಯರಾಗಿರುವರು ಭಾರತದ ಬಿಕ್ಕಟ್ಟಿನ ನಿವಾರಣೆಯ ಸದಿಚ್ಛೆಯಿದ್ದರೂ ಅಸೆರಿಯ ಅಧಿಕಾರದಡಿ ನಿರುಪಾಯರಾಗಿದ್ದ ಮಾಜೀ ಉಪಕಾರ್ಯದರ್ಶಿ ಲೋರ್ಡ್ ಲಿಸ್ಟೋವೆಲರ ಬದಲಿಗೆ ಮಿ. ಅರ್ಥರ್ ಹೆಂಡರ್ಸನರು ಭಾರತ ಉಪಕಾರ್ಯದರ್ಶಿಪದ ಕ್ಕೇರಿದ್ದಾರೆ. ಕಾಮನ್ಸ್ ಸಭೆಯಲ್ಲಿ ಭಾರತದ ಕಾರ್ಯಭಾರ ನಿರ್ವಹಿಸುವವರು ಇವರೇ.

ಪೆಥಿಕ್ ಲಾರೆನ್ಸ್

ಹೊಸ ಭಾರತ ಕಾರ್ಯದರ್ಶಿ, ಕೂಲಿಗಾರ ಪಕ್ಷದ ಹಳೇ ಹದ್ದು 73 ವರುಷದ ಮುದುಕ. ಎಟೋನ್ ಮತ್ತು ಕೇಂಬ್ರಿಜ್ ಶಿಕ್ಷಣ ಪಡೆದವರು. ಅರ್ಥ ಶಾಸ್ತ್ರ ಪ್ರವೀಣರಿಗೆ ಮೀಸಲಿದ್ದ ಆದಮ್‌ಸ್ಮಿತ್ ಬಹುಮಾನವನ್ನು ಇವರು ಗೆದ್ದಿದ್ದರು. ಟ್ರಿನಿಟಿಯ 'ಫೆಲ್ಲೊ' ಆಗಿದ್ದರು. 1897ರಲ್ಲಿ ತನಗನುಗುಣೆಯಾದ ಇಮ್ಮೆಲಿನ್ ಪೆಥಿಕಳ ಕೈಹಿಡಿದರು. ಅವರು ಬ್ಯಾರಿಸ್ಟರ್. ಆದರೆ ಪ್ರಾಯಶಃ ಕೋರ್ಟಿನ ಹತ್ತಿ ಸಂಪಾದಿಸಿದವರೇ ಅಲ್ಲ. 1922ರಲ್ಲಿ ಕೂಲಿಗಾರ ಪ್ರತಿನಿಧಿಯಾಗಿ ಪಾರ್ಲಿಮೆಂಟಿಗೆ ಅವರ ಪ್ರಥಮ ಪ್ರವೇಶ. 1929-31ರ ವರೆಗಿದ್ದ ಮೆಕ್ಡೊನಾಲ್ಡ್ ಕೂಲಿಗಾರ ಸರಕಾರದಲ್ಲಿ ಖಜಾನೆಯ ಹಣಕಾಸಿನ ಕಾರ್ಯದರ್ಶಿಯಾಗಿದ್ದರು. 1931ರಲ್ಲಿ ಲಂಡನಿನಲ್ಲಿ ಸೇರಿದ ಭಾರತೀಯ ರೌಂಡ್ ಟೇಬಲ್ ಕಾನ್ಫರೆನ್ಸಿನ ಸದಸ್ಯರಾಗಿ ಅಮೂಲ್ಯ ಸೇವೆ ಸಲ್ಲಿಸಿದ್ದರು. 'ಮತದಾನದ ಹಕ್ಕಿಗಾಗಿ ಮಹಿಳೆಯ ಹೋರಾಟ' 'ಭಂಡವಾಳದ ಮೇಲೊಂದು ಕರ' 'ನಿರುದ್ಯೋಗಿ' 'ಸಾಮ್ರಾಜ್ಯ ಹೃದಯ' ಮೊದಲಾದ ಗ್ರಂಥಗಳ ಕರ್ತರಿವರು. 'ದಯಾಶಾಲಿಯಾಗಿದ್ದ ಭವಿಷ್ಯ' ಎಂಬ ಹೆಸರಲ್ಲಿ ಆತ್ಮಕಥೆಯನ್ನೂ ಬರೆದಿದ್ದಾರೆ. ಟೆನ್ನಿಸ್ ಮತ್ತು ಬಿಲ್ಲಿಯಾರ್ಡ್ಸ್ ಕಾಲಕ್ಷೇಪಗಳಲ್ಲಿ ಅವರ ಮೆಚ್ಚುಗೆ ಬಹಳ.

'ಜೈಲು ಹಕ್ಕಿ'

ಪೆಥಿಕ್ ಲಾರೆನ್ಸರ ನರನಾಡಿಗಳು ಬಿಸಿರಕ್ತದ ಕಾಲುವೆಗಳಾಗಿದ್ದಾಗ ಅವರೊಂದು ವಿಧದ ಕ್ರಾಂತಿ ಪುರುಷರೇ ಆಗಿದ್ದರು. ಸುಮಾರು 40 ವರುಷಗಳ ಮೊದಲು ಮತದಾನದ ಹಕ್ಕಿಗಾಗಿ ಬ್ರಿಟನಿನ ಮಹಿಳೆಯರೊಂದು ಹೋರಾಟವನ್ನೇ ಹೂಡಬೇಕಾಗಿತ್ತು. ಆ ಚಳವಳದ ಧುರೀಣತ್ವ ಪೆಥಿಕ್ ದಂಪತಿಗಳ ಕೈಯಲ್ಲಿತ್ತು. ಇಂದಿನ ಭಾರತ ಕಾರ್ಯದರ್ಶಿಯು ಆ ಸಂಬಂಧದ ಪ್ರದರ್ಶನ, ಮೆರವಣಿಗೆಗಳಲ್ಲಿ ಅಗ್ರಗಾಮಿಯಾಗಿ ಹೋಗಿ ಪೋಲಿಸರ ಹೊಡೆತ, ಜುಲ್ಮಾನೆ ಮತ್ತು ಒಂದೆರಡು ಬಾರಿ ಜೈಲುವಾಸವನ್ನೂ ಅನುಭವಿಸಿದ್ದರು. ಅವರ ಖಾಸಗೀ ಆಸ್ತಿಗಳು ಮುಟ್ಟುಗೋಲಾಗಿ ಹೋದುದೂ ಇದೆ. ಸತಿ ಲಾರೆನ್ಸರು 9 ತಿಂಗಳ ಶಿಕ್ಷೆಯನುಭವಿಸಿದ್ದರು. ಈ ಧೀರ ಮಹಿಳೆ ಆ ಕಾಲದ ಬ್ರಿಟಿಷ್ ವನಿತೆಯರಿಗೊಂದು ಮಾದರಿಯಾಗಿದ್ದಳು. ಈಗ ಕೂಡ ಹಿಂದೀ ರಾಷ್ಟ್ರೀಯತ್ವಕ್ಕೆ ಶ್ರೀಮತಿ ಪೆಥಿಕ್ ಲಾರೆನ್ಸರ ಪೂರ್ಣಾನುಮೋದನೆಯಿದೆ ಹಿಂದೀ ಸ್ವಾತಂತ್ರ್ಯವನ್ನು ಶಿಫಾರಸು ಮಾಡುವ ಪ್ರತಿಯೊಂದು ಬಿನ್ನವತ್ತಳೆಯಲ್ಲೂ ಈ ಲೇಡಿಯ ಸಹಿಯಿದ್ದೇ ಇದೆ.

ಮುಂದಗಾಮಿ

ನವಕಾರ್ಯದರ್ಶಿ ಕೂಲಿಗಾರ ಪಕ್ಷದ ಮುಂದಗಾಮಿ ಗುಂಪಿಗೆ ಸೇರಿದವರು; ತೀವ್ರಗಾಮಿಗಳಲ್ಲ. ಇವರಿಂದ ಕ್ರಾಂತಿಕಾರೀ ಬದಲಾವಣೆಗಳನ್ನು ನಿರೀಕ್ಷಿಸಿದರಾಗದು. ಹಿಂದೀ ರಾಷ್ಟ್ರೀಯತೆಗಾಗಿ-ಭಾರತ ಬಿಕ್ಕಟ್ಟಿನ ನಿವಾರಣೆಗಾಗಿ [illegible] ವರ್ಕವಾಗಿ ದುಡಿಯುವವರು. ಆದರೆ [illegible] ಜಾಗರೂಕತೆಯಿಂದ; ಅತ್ಯಂತ ಸಾವಧಾನವಾಗಿ. ಅಮೆರಿ ಧೋರಣೆಯು ಇವರಿಗೆ ಪೂರ್ಣ ಅಸಮ್ಮತ. ಆದರೆ ಆ ಕಾಲದಲ್ಲಾದರೂ ಅಮೆರಿಯವರನ್ನು ವಿಚಾರಕ್ಕೀಡುಮಾಡಿದ್ದರು, ವಿಮರ್ಶಿಸಿದ್ದರು ಹೊರತು ವಿರೋಧಿಸಿದವರಲ್ಲ; ಒಟ್ಟಿನ ಮೇಲೆ ಪೆಥಿಕ್ ಲಾರೆನ್ಸ್ ಭಾರತದ ಪಾಲಿಗೆ ಸಹೃದಯ; ಸಖ ಮತ್ತು ಸಹಾಯಕ. ಆದರೆ ಕೂಡಲೇ ಅದರ ಬಯಕೆ ಈಡೇರಿಸಿಕೊಡುವ ಮನುಷ್ಯನಲ್ಲ. ಆದರಿದು ತಾತ್ಕಾಲಿಕ ನೇಮಕ. ಬೆವಿನರಿಂದಾಗಿದ್ದ ಭಾರತ ಕಚೇರಿಯನ್ನೇ ಬರ್ಖಾಸ್ತುಪಡಿಸುವ ಯೋಜನೆ ಕೂಲಿಗಾರ ಸರಕಾರಕ್ಕಿದೆ. ಹಾಗಾಗಬೇಕಾದರೆ ರಾಜ್ಯಾಂಗ ಸೂತ್ರದಲ್ಲೇ ಬದಲಾವಣೆಯಾಗಬೇಕು. ಪಾರ್ಲಿಮೆಂಟಿನ ಸಮ್ಮತಿ ಬೇಕು; ಲೋರ್ಡರ ಸಭೆ ಮತ್ತು ಇತರ ಡೊಮಿನಿಯನುಗಳು ಈ ಬದಲಾವಣೆಗೆ ಸಮ್ಮತಿಸುವದು ಕಷ್ಟವಿದೆ. ಅಂತೂ ಆ ಪ್ರಯತ್ನಕ್ಕಾಗಿ ಅವಧಿ ಬೇಕು. ಅದುವರೆಗೊಬ್ಬ ಕಾರ್ಯದರ್ಶಿ ಬೇಕೆಂಬುದಕ್ಕಾಗಿಯೇ ಪೆಥಿಕ್ ಲಾರೆನ್ಸರಿಗೆ ಪಟ್ಟಕಟ್ಟಿದ್ದಾರೆ. ಭಾರತದ 'ಸ್ಟರ್ಲಿಂಗ್ ಸಾಲ'ದ ಸಮಸ್ಯೆಯಿರುವಾಗ ಈ ಅರ್ಥಶಾಸ್ತ್ರಜ್ಞನ ಆವಶ್ಯಕತೆಯಿದೆ. ಅಮೆರಿಯಂತಹ ಅನಾಹುತಕಾರಿಯ ಮಾತಂತಿರಲಿ; ಭಾರತ ಕಚೇರಿಗೆ ಇದುವರೆಗಾಗಿದ್ದ ನೇಮಕಗಳಲ್ಲಿ ಇದು ಉತ್ತಮವಾದುದೆಂಬುದು ನಿಸ್ಸಂದೇಹ. ಆದ್ದರಿಂದ ಹಿಂದೀ ಪ್ರಮುಖರಿಂದಲೂ ಭಾರತೀಯ ಹಿತೈಷಿಗಳಿಂದಲೂ ಶ್ಲಾಘಿಸಲ್ಪಟ್ಟಿದೆ.

ಅರ್ಥರ್ ಹೆಂಡರ್ಸನ್

ಇವರು ಭಾರತ ಮತ್ತು ಬರ್ಮಾದ ಉಪಕಾರ್ಯದರ್ಶಿ. ಕೇಂಬ್ರಿಜ್ ಶಿಕ್ಷಣ ಮುಗಿಸಿದ ಮೇಲೆ ವಕೀಲರಾಗಿ ಪ್ರಸಿದ್ಧಿ ಪಡೆದಿದ್ದರು. 1923ರಿಂದಲೂ ಪಾರ್ಲಿಮೆಂಟಿನಲ್ಲಿ ಕೂಲಿಗಾರ ಸದಸ್ಯರಾಗಿದ್ದಾರೆ. ಆ ಪಕ್ಷದ ವಕೀಲರಾಗಿಯೂ ಇದ್ದರು. ಯುದ್ಧಾರಂಭವಾದೊಡನೆ ಸೇನಾನೀ ಮಂಡಲದಲ್ಲಿ ಸೇರಿಕೊಂಡರು. ಆದರೆ ಮಿಶ್ರ ಮಂತ್ರಿಮಂಡಲ ಸ್ಥಾಪಿಸಿಕೊಂಡಾಗ ಚರ್ಚಿಲ್ಲರಿಗೆ ಹೆಂಡರ್ಸನರ ಸಹಾಯ ಬೇಕಾಯಿತು. ಯುದ್ಧ ಕಾರ್ಯಾಲಯದ ಜತೆ ಉಪಕಾರ್ಯದರ್ಶಿಯಾಗಿಯೂ ಆ ಮೇಲೆ ಆದರ ಆರ್ಥಿಕ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದ್ದರು ಈಗ ನಮ್ಮವರಾಗಿದ್ದಾರೆ. ಕಾಮನ್ಸ್ ಸಭೆಯ ತರುಣ ಕೂಲಿಗಾರ ಸದಸ್ಯರ ಬಾಯಿಯಿಂದ ತಪ್ಪಿಸುವದಕ್ಕಾಗಿಯೇ ಪೆಥಿಕ್ ಲಾರೆನ್ಸರನ್ನು ಲೋರ್ಡ್ಸ್ ಸಭೆಗೇರಿಸಿ, ಕಾಮನ್ಸ್ ಸಭೆಯ ಜವಾಬ್ದಾರಿಯನ್ನು ಇವರಿಗೀಯಲಾಗಿದೆ. ಪ್ರಾಯ 52. ಸಮರ್ಥ; ಸುಸಂಸ್ಕೃತ; ಭಾರತದ ಹಿತೈಷಿಯೂ ಹೌದು.

ಮಂಗಳೂರು

ಪಾಕಿಸ್ಥಾನ ಮತ್ತು ಬಿಕ್ಕಟ್ಟು- ಮಂಗಳೂರಿನ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. [illegible] "ಹಿಂದುಸ್ಥಾನದ ಬಿಕ್ಕಟ್ಟು ಪರಿಹರಿಸಲು ಪಾಕಿಸ್ಥಾನವೊಂದೇ ಮಾರ್ಗ"ವೆಂಬ ವಿಷಯ ಚರ್ಚಿಸಲ್ಪಟ್ಟು ಬಿದ್ದು ಹೋಯಿತು.

ಸಂಘದ ಅಧ್ಯಕ್ಷರಾದ ಕೆ. ಕೆ. ಅಡಿಯೋಡಿಯವರು ಅಧ್ಯಕ್ಷರಾಗಿದ್ದರು. ಶ್ರೀ ಜಯರಾಮ್ ಶೆಟ್ಟಿಯವರು ಈ ವಿಷಯವನ್ನು ಮಂಡಿಸಿದರು. ಮಿ. ರೇನೋಲ್ಡ್ಸರು ಖಂಡಿಸಿದರು. ಮತ ತಗೆಯಲಾಗಿ ವಿಷಯವು ಬಿದ್ದು ಹೋಯಿತು ಕಾರ್ಯದರ್ಶಿ ಚಾರ್ಲ್ಸ್ ಸಿಕೇರರವರು ವಂದನೋಕ್ತಿಗಳನ್ನರ್ಪಿಸಿದರು

ಟೆಕ್ನಿಕಲ್ ರಿಕ್ರೂಟಿಂಗ್ ಆಫೀಸರ್, ಕೊಯಮುತ್ತೂರು—ಇವರು ಇದೇ ತಾ. 12ರಲ್ಲು ಕನ್ನಾನೂರಿನಿಂದ ಮಂಗಳೂರಿಗೆ ತಲ್ಪಿ ಎರಡು ದಿವಸಗಳ ತನಕ ಮೊಕ್ಕಾಂ ಮಾಡಿ ಆಸೀಸರರನ್ನೂ ಹ್ಯಾಸ್ಪಿಟಲ್, ಕಾಲೇಜುಗಳನ್ನೂ ಸಂದರ್ಶಿಸಲಿರುವರು. ರಿಕ್ರೂಟಿಂಗ್ ಉಮೇದ್ವಾರಿಗಳು ಅವರನ್ನು ಬಂದು ಭೆಟ್ಟಿಯಾಗಿ ನೇರಲು ಅನುಕೂಲ ಸಂದರ್ಭ.

ದ-ಕ ಜಿಲ್ಲಾ ಆದಿದ್ರಾವಿಡ ಸೇವಾ ಸಂಘದ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯು ಕಳೆದ ತಾ.15ರಲ್ಲಿ ಜರಗಿತು. ಉದ್ಯಾವರ ಡಿ. ಸಿ. ಮಿಶನ್. ಶಾಲೆಯ ಸಮೀಪದ ರಸ್ತೆಯನ್ನು ಸರಿಪಡಿಸಬೇಕೆನ್ನುವ, ಹಾಳಾದ ದೀಪಕಂಬಗಳನ್ನು ದುರಸ್ತಿಪಡಿಸಬೇಕೆನ್ನುವ ನಂದಿಗುಡ್ಡೆ ಸ್ಮಶಾನದ ಕ್ರಿಮಿನಲ್ ವ್ಯವಹಾರದಲ್ಲಿ ನೆರವಾದ ಮುಖ್ಯಸ್ಥರಿಗೂ ವಕಾಲತು ನಡೆಸಿದ ಶ್ರೀಗಳಾದ ಆರ್. ಆರ್. ತಲ್ಚೇರಿಕರ್ ಮತ್ತು ಜಿ. ಸೋಮಶೇಖರ ರಾವ್ ಮೊದಲಾದವರಿಗೂ ಧನ್ಯವಾದಗಳನ್ನರ್ಪಿಸುವ ಇತ್ಯಾದಿ ನಿರ್ಣಯಗಳಾದುವು.

ಜಿಲ್ಲೆಯಲ್ಲಿ ರಾಷ್ಟ್ರೀಯ ವಾರ
ನಿನ್ನೆ ತಾ. 9ರಿಂದ ಮುಂದಿನ [illegible] ದಿವಸ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿಯವರು ಜಾಹೀರು [illegible]ದ್ದಾರೆ. ವಾರದ [illegible] ದಿನದಲ್ಲಿ [illegible] ಸಭೆಯನ್ನು ಕೂಡಿಸಿ ರಾಷ್ಟ್ರೀಯ ಸ್ವಾತಂತ್ರ್ಯವೇದಿಕೆಯಲ್ಲಿ ಪ್ರಾಣಬಲಿ ಕೊಟ್ಟ [illegible] ವೀರರನ್ನು [illegible] ಸುವ, ಇತರ ದಿವಸಗಳಲ್ಲಿ ವಿಧಾಯಕ ಕಾರ್ಯಕ್ರಮದ ಬೇರೆ ಬೇರೆ ವಿಷಯಗಳನ್ನು ನುಸುರಿಸುವ ಪ್ರಚಾರ ಕಾರ್ಯಕ್ರಮವನ್ನು ಹೂಡಬೇಕಾಗಿದೆ.

ಉಡುಪಿ

ಮಳೆಯಾಳಿ ಕುಮಾರಿ- ಸಾಧಾರಣ ಹದಿನೆಂಟು ವರ್ಷ ಪ್ರಾಯದವಳಿರಬಹುದಾದ ಗುರುವಾರ [illegible] ದಿನ ಬಾವಿಯಲ್ಲಿ ತೇಲಾಡುತ್ತಿತ್ತು. [illegible] ಸಂಬಂಧಿಕರ ಮನೆಯಲ್ಲಿದ್ದುಕೊಂಡು ಬಡತನದ ಪಾಡಿನಿಂದಾಗಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡುದೆಂದು ಸುದ್ದಿ.

ಸೇಂದಿಯಂಗಡಿಗಳ ಏಲಂ- ತಾ 6 ರಲ್ಲಿ ತಾಲೂಕು ಕಚೇರಿಯಲ್ಲಿ ಜರಗಿತು. ಕಳೆದ ವರುಷಕ್ಕಿಂತ ಈ ಬಾರಿ ಜಾಸ್ತಿ ಉತ್ಪತ್ತಿಯುಂಟೆ.

ಕಳ್ತೂರು ಕೇಸಿನಲ್ಲಿ-ಸಿಲುಕಿದ 30 ಮಂದಿಯನ್ನು ಸ್ಥಳೀಯ ಸಬ್ ಮೆಜಿಸ್ಟ್ರೇಟರು ತಾ. 6ರಲ್ಲು ಸೆಶ್ಯನ್ಸ್ ಕೋರ್ಟಿಗೆ ಕಮಿಟ್ ಮಾಡಿರುವರು. ಪ್ರೋಸಿಕ್ಯೂಶನ್ ಕಡೆಯಿಂದ ಶ್ರೀಗಳಾದ ಎಮ್. ಕೆ. ಸಂಜೀವರಾವ್, ಬಾರ್ ಎಟ್‌ಲೊ, ಕೆ. ಉಗ್ಗಪ್ಪ ಶೆಟ್ಟಿ, ಎಡ್ವೋಕೇಟ್, ಆವರೂ, ಆರೋಪಿಗಳ ಕಡೆಯಿಂದ ಶ್ರೀಗಳಾದ ಬಿ. ಎಸ್. ಹೆಗ್ಡೆ, ವಕೀಲ್, ಕೆ.ಎಸ್. ಶೆಟ್ಟಿ, ವಕೀಲ್, ಜಿ. ಸಿ. ರೇಗೋ ವಕೀಲ್, ಇವರೂ ವಕಾಲತ್ತು ನಡೆದರು.

ಹೊಸ ಸಿನೆಮಾ ಮಂದಿರ- ಮಂಗಳೂರಿನ ಕರ್ನಾಟಕ ಥಿಯೇಟರ್ಸಿನವರು ಉಡುಪಿಯಲ್ಲಿ ಒಂದು ಚಲಚ್ಚಿತ್ರ ಮಂದಿರವನ್ನು ನಿರ್ಮಿಸುವ ಸಿದ್ಧತೆಗಳನ್ನು ಮಾಡುತ್ತಿರುವರಾಗಿ ತಿಳಿದು ಬರುತ್ತದೆ

ESTD. 1926
CROWN RUBBER STAMP Co.
MFRS OF
RUBBER STAMPS & ENGRAVERS
BALMATTA ROAD MANGALORE S.K.
Approved firm by the Govt. of Mysore' Certified by the Agent of the Govt. of India in Ceylon.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ದಕ್ಷಿಣ ಕನ್ನಡ.

ಮಂಗಳೂರು.

ಕರ್ನಾಟಕ ಥಿಯೇಟರ್ಸ್:-ಶ್ರೀ ಮಂಗಳೂರು ಜಾರಪ್ಪನವರಿಂದ ಸ್ಥಾಪನೆಗೊಂಡಿರುವ ಈ ಸಂಸ್ಥೆಯು ಸದ್ಯವೇ ಲಿಮಿಟೆಡ್ ಸಂಸ್ಥೆಯಾಗಿ ರಿಜಿಸ್ಟರ್ ಮಾಡಲಿರುವುದೆಂದು ತಿಳಿದುಬರುತ್ತದೆ. ಪ್ರಭಾವ ಮತ್ತು ಪ್ರತಿಷ್ಠೆಯುಳ್ಳ ಸದಸ್ಯರು ಡೈರೆಕ್ಟರ್ ಮಂಡಲದಲ್ಲಿರುವರೆಂದೂ ಈ ಸಂಸ್ಥೆಯು ಶೀಘ್ರವಲ್ಲೇ ಚಲಚಿತ್ರ ತಯಾರಿಸಿ ಪ್ರದರ್ಶನ ಮಂದಿರಗಳನ್ನು ಸ್ಥಾಪಿಸಲಿರುವುದೆಂದೂ ಕೇಳುತ್ತೇವೆ.

ಮೋಟರ್ ಕೆಲಸಗಾರರ ಸಂಘ:- ದ. ಕ. ಜಿಲ್ಲಾ ಮೋಟರ್ ಕೆಲಸಗಾರರ ಸಂಘದ ಮಹಾಸಭೆಯು ಶ್ರೀ ಮಂಗಳೂರು ಜಾರಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಮಂಡಳಿಯು ರಚಿಸಲ್ಪಟ್ಟಿತು. ಸಂಘವನ್ನು ರಿಜಿಸ್ಟ್ರಿ ಮಾಡಿಸಬೇಕೆಂದು ನಿರ್ಣಯವೂ ಆಯಿತು.

ಶ್ರೀ ಸುಬ್ರಹ್ಮಣ್ಯ ಮಠದ- ಯತಿವರ್ಯರಾದ, ಶ್ರೀ ವಿಶ್ವಜ್ಞ ತೀರ್ಥ ಶ್ರೀಪಾದಂಗಳವರು ಇದೇ ಆಷಾಢ ಬ॥ 5 (ತಾ29 7 45) ಶ್ರೀಮತ್ ಟೀಕಾಚಾರ್ಯರ ಪುಣ್ಯ ದಿನದಂದು ಕೆಂಪೂರಿನಲ್ಲಿರುವ ಡಾ॥ ಕೆ. ಎ. ವಿಠಲ್‌ರವರ 'ಗೀತಾ' ಮಂದಿರದಲ್ಲಿ, ಉಪಸ್ಥಿತರಾಗಿದ್ದ ಶ್ರೀಗಳಾದ ಪಿ. ಪಿ. ಮಧ್ವರಾವ್ (ಆರ್. ಬಿ. ಒ.) ಪಿ. ವ್ಯಾಸರಾವ್ (ರಿಟೈರ್ಡ್ ಡಿ. ಮುನ್ಸಿಫ್), ಡಾ॥ ಪಿ. ಆ. ಗಿರಿ, ಕೆ. ಆರ್. ಆಚಾರ್, ವಕೀಲ್, ಯು. ಸಿ. ಎಸ್. ಭಟ್ ವಕೀಲ್; ಕೆ. ಕೃಷ್ಣರಾವ್ ಬಿ. ಎ. ಎಸ್. ವಿ. ಭಟ್, ಜಯಕರ ಮೊದಲಾದ ಲೌಕಿಕ ಗೃಹಸ್ಥರ ಹಾಗೂ ಐ. ಕೃಷ್ಣಾಚಾರ್ಯ; ಜಿತೇಂದ್ರಿಯಾಚಾರ್ಯ ಮೊದಲಾದ ವೈದಿಕ ವಿದ್ವಜ್ಜನರ ಸಮ್ಮುಖದಲ್ಲಿ ಪೂರ್ವ ಸಂಪ್ರದಾಯದಂತೆ ಆಶ್ರಮೋಚಿತವಾದ ತಮ್ಮ ಹನೆಯ ಚಾತುರ್ಮಾಸದೀಕ್ಷೆಯನ್ನು ಕೈಕೊಂಡರು. ನೆರೆದ ಮಹನೀಯರೆಲ್ಲರೂ ತೀರ್ಥ ಪ್ರಸಾದಾದಿಗಳಿಂದ ಸತ್ಕರಿಸಲ್ಪಟ್ಟು ಗುರುವರ್ಯರ ಅನುಗ್ರಹಕ್ಕೆ ಪಾತ್ರರಾದರು.

ಮಧ್ವ ಜಯಂತ್ಯುತ್ಸವ-ವು ಸ್ಥಳೀಯ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಮಧ್ವ ಸಿದ್ಧಾಂತ ಪ್ರಚಾರಿಣೀ ಸಭೆಯ ಆಶ್ರಯದಲ್ಲಿ ಜರಗಿತು.

ದಾಸ್ತಾನಿನ ಕುರಿತು-ಸುಳ್ಳು ಧೃಢಪತ್ರಿಕೆಯೊಪ್ಪಿಸಿದರೆಂದು ಕಾಸರಗೋಡಿನವರೊಬ್ಬರಿಗೆ ರೂ. 25 ದಂಡ ವಿಧಿಸಲಾಯಿತು.

ಸ್ಥಳೀಯ ಇಸ್ಲಾಮಿಯಾ-ಕ್ಲಬ್ಬಿನ ಆವರಣದಲ್ಲಿ ತಾ. ೨೫ರಂದು ಜ॥ ಹಮ್ಮಬ್ಬ ಸಾಹೇಬರ ಅಧ್ಯಕ್ಷತೆಯಲ್ಲಿ ಘೊಭಾವಾರೊತ್ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಲವು ಮುಸ್ಲಿಂ ಮಹನೀಯರು ಮಾತನಾಡಿದರು.

ಲೈಸನ್ಸ್ ಇಲ್ಲದೆ ಅಕ್ಕಿ ಮಿಲ್- ನಡೆಸುತ್ತಿದ್ದುದಕ್ಕಾಗಿ ಬ್ರಹ್ಮಾವರದವರೊಬ್ಬರಿಗೆ ರೂ. ೧೦೦ ದಂಡ ವಿಧಿಸಲಾಗಿದೆ.

ದ. ಕ. ಕೃಷಿಕರ ಬಂಡಸಾಲೆಯ ಸಹಕಾರಿ ನೌಕರರ ಸಂಘ-ಕಳೆದ ತಾ ೩೧ರಂದು ಸಂಜೆ ೬ ಗಂಟೆಗೆ ವರ್ತಕ ವಿಲಾಸ ಕಟ್ಟಡದ ಮಾಳಿಗೆಯಲ್ಲಿ ಶ್ರೀ॥ ಎಸ್. ಎಮ್. ಪಾಂಡುರಂಗ ಕಾಮತ್ ಇವರ ಅಧ್ಯಕ್ಷತೆಯಲ್ಲಿ ಮೇಲಿನ ಸಂಘದ ಸ್ಥಾಪನಾ ಸಭೆಯು ಜರಗಿತು. ಸಂಘ ಸ್ಥಾಪನೆಯ ಉದ್ದೇಶದ ಕುರಿತು ವಿಚಾರ ವಿನಿಮಯ ಮತ್ತು ಭಾಷಣಗಳಾದ ಬಳಿಕ ಕಾರ್ಯಕಾರಿ ಮಂಡಳಿಯ ಚುನಾವಣೆಯಾಗಿ ಶ್ರೀಯುತರುಗಳಾದ ಸಿ. ಲಕ್ಷ್ಮೀನಾರಾಯಣರಾವ್ ಬಿ. ಎ. (ಅಧ್ಯಕ್ಷ) ಕೆ. ಶಂಕರರಾವ್ (ಕಾರ್ಯದರ್ಶಿ) ಪಿ. ನಾರಾಯಣ ಕಾರಂತ, ಕೆ. ನಾರಾಯಣನಾಯ್ಕ, ಬಿ. ಎಂ. ಇದಿನಬ್ಬ ಇವರು ಸದಸ್ಯರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಭಾಷಣದ ಬಳಿಕ ಲಘು ಉಪಾಹಾರವಾಗಿ ಕಾರ್ಯದರ್ಶಿಯವರ ವಂದನೋಕ್ತಿಯೊಡನೆ ಸಭೆ ಚದರಿತು.

ಜಿಲ್ಲಾ ಕಾಂಗ್ರೆಸಿಗರ ಸಭೆ- ಇದೇ ತಾ. ೨ರಂದು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಥಿಯೋಸಾಫಿಕಲ್ ಲಾಜನಲ್ಲಿ ಶ್ರೀ॥ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಅಧ್ಯಕ್ಷರು ಮಾತನಾಡುತ್ತ, ಕಾಂಗ್ರೆಸ್ ಸಭೆಗಳಲ್ಲಿ ಕಮ್ಯೂನಿಸ್ಟರನ್ನು ಸೇರಿಸಿಕೊಳ್ಳಬೇಕೆಂದೂ, ಸೇರಿಸಿಕೊಳ್ಳಲಾರೆನೆಂಬ ಆ ನಿರ್ಬಂಧವನ್ನು ತೆಗೆಯಬೇಕೆಂದೂ ಮಂಗಳೂರು ಕಮ್ಯುನಿಸ್ಟ್ ಮುಖಂಡರು ಬರೆದ ಪತ್ರವನ್ನು ವಿವರಿಸಿ ಕಮ್ಯೂನಿಸ್ಟರಲ್ಲಿ ನನಗೆ ಯಾವ ದ್ವೇಷವೂ ಇಲ್ಲವೆಂದೂ ಈಗಿನ ಕಾಂಗ್ರೆಸ್ ಸಮಿತಿಯು ತಾತ್ಕಾಲಿಕವಾದುದರಿಂದ ಮತ್ತು ಈ ಮೊದಲಿನ ಸಭೆಯಲ್ಲಿ ರಚಿಸಿದ ಘಟನೆಗಳ ಪ್ರಕಾರವೇ ಈ ಸಭೆಯನ್ನು ಜರಗಿಸಿದುದರಿಂದ ಆ ವಿಷಯವನ್ನು ಚರ್ಚಿಸಲು ಸಾಧ್ಯವಿಲ್ಲವೆಂದೂ ಹೇಳಿದರು.

ಆನಂತರ ಕರ್ನಾಟಕದ ಕಾಂಗ್ರೆಸ್ ಮುಖಂಡರಾಗಿದ್ದ ಶ್ರೀ॥ ಹನುಮಂತರಾವ್ ಕೌಜಲಗಿಯವರ ನಿಧನಕ್ಕೆ ಸಂತಾಪ ಸೂಚಿಸುವ ಠರಾವನ್ನು ಶ್ರೀ॥ ಕೆ. ಕೆ. ಸೆಟ್ಟರು ತರಲು ಅದು ಮಂಜೂರಾಯಿತು. ಕಿಸಾನ ಮತ್ತು ಮಜೂರ ಸಬ್ ಕಮಿಟಿಯ ಕಾರ್ಯಕಲಾಪಗಳ ಮತ್ತು ಹರಿಜನೋದ್ಧಾರ ಸಮಿತಿಯ ವರದಿಯನ್ನು ಶ್ರೀ॥ ಕೆ. ಕೆ. ಶೆಟ್ಟರೂ, ಖಾದಿ ಸಮಿತಿಯ ವರದಿಯನ್ನು ಶ್ರೀ॥ ನಾರಾಯಣ ರಾಯರೂ, ಆಹಾರ ಸಮಿತಿ ಮತ್ತು ಆರ್ಥಿಕ ಸಮಿತಿಯ ವರದಿಯನ್ನು ಶ್ರೀ॥ ಕೆ. ಆರ್. ಕಾರಂತರೂ ಸಭೆಯ ಮುಂದಿಟ್ಟರು.

ಆನಂತರ ಕಾರ್ಯಕಾರೀ ಸಮಿತಿಯ ಆಯ್ಕೆ ನಡೆದು ಶ್ರೀಯುತ ಕೆ. ಆರ್. ಕಾರಂತರು ಅಧ್ಯಕ್ಷರಾಗಿಯೂ, ಕೆ. ಕೆ. ಶೆಟ್ಟರು ಕಾರ್ಯದರ್ಶಿಗಳಾಗಿಯೂ, ಯು. ಪಿ. ಮಲ್ಯರು ಉಪಾಧ್ಯಕ್ಷ ಮತ್ತು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಆನಂತರ ಈ ಕೆಳಗಿನವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು. ಕಾಸರಗೋಡು ತಾಲೂಕಿನಿಂದ ಅಚ್ಯುತ ಶೆಣೈ ಮತ್ತು ದೇವಪ್ಪ ಆಳ್ವ, ಮಂಗಳೂರು ತಾಲೂಕಿನಿಂದ ಈಶ್ವರ ಮತ್ತು ಕೈಡೇಲ್ ತಿಮ್ಮಪ್ಪ ಶೆಟ್ಟಿ, ಉಡುಪಿ ತಾಲೂಕಿನಿಂದ ಕರಿಯಣ್ಣ ಶೆಟ್ಟಿ ಮತ್ತು ಆರ್. ಆರ್. ಕುಂಜೂರ್, ಕಾರ್ಕಳ ತಾಲೂಕಿನಿಂದ ವೆಂಕಟೇಶ ಪ್ರಭು ಮತ್ತು ಎಂ. ಡಿ. ಅಧಿಕಾರಿ, ಕುಂದಾಪುರ ತಾಲೂಕಿನಿಂದ ರಾಮಕೃಷ್ಣ ನಾವುದ ಮತ್ತು ಕೃಷ್ಣರಾಯ ಕೊಡಗಿ, ಪುತ್ತೂರು ತಾಲೂಕಿನಿಂದ ಸಂಜೀವ ಶೆಣೈ ಮತ್ತು ರಾಮ ಕುದ್ವ ಇವರಲ್ಲದೆ, ಶ್ರೀಯುತರು ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕ, ಎಮ್. ಗೋಪಾಲ ಪೈ, ಎ. ಬಿ. ಶೆಟ್ಟಿ, ಎಮ್. ರಾಮರಾಯ ಕಿಣಿ, ಎನ್. ಉಪೇಂದ್ರ ನಾಯ್ಕ, ಎಚ್. ಕೃಷ್ಣಪ್ಪ ತಿಂಗಳಾಯ, ಪಿ. ಮಂಜುನಾಥ ನಾಯ್ಕ, ಎಚ್. ದಾಮೋದರ ಕಾಮತ್ ಮತ್ತು ಕಾಪು ಸಂಜೀವ ಶೆಟ್ಟಿಯವರನ್ನೂ ಸೇರಿಸಿಕೊಳ್ಳಲಾಯಿತು.

ಠರಾವುಗಳು-ಜಿಲ್ಲೆಯ ಪ್ರಮುಖ ಕಾಂಗ್ರೆಸು ಮುಂದಾಳು, ಮತ್ತು ಮಜೂರ ಮುಂದಾಳುಗಳಾದ ಶ್ರೀ॥ ಎಸ್. ಎನ್. ಹೊಳ್ಳರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಸರಕಾರದೊಡನೆ ಕೇಳಿಕೊಳ್ಳುವ ಠರಾವನ್ನು ಶ್ರೀ॥ ದೇವಪ್ಪ ಆಳ್ವರು ತರಲು ಅದು ಸರ್ವಾನುಮತದಿಂದ ಮಂಜೂರಾಯಿತು. ಸಿಮ್ಲಾ ಸಮ್ಮೇಲನದಲ್ಲಿ ಶ್ರೀ॥ ಮೌಲಾನಾ ಆಜಾದರು ವಹಿಸಿದ ಧೋರಣೆಗೆ ಈ ಸಭೆಯು ಸಂಪೂರ್ಣ ಬೆಂಬಲವನ್ನು ಕೊಡುತ್ತದೆ ಎಂಬ; ೧೯೪೨ರ ಚಳವಳಿಯಲ್ಲಿ ಭಾಗವಹಿಸಿ, ತುರಂಗದಲ್ಲಿಯೇ ಮೃತಪಟ್ಟ ಬೈಂದೂರು ಮಹಾಲಿಂಗ ಮತ್ತು ಕಾರ್ಕಳ ರಂಗನಾಥ ಪ್ರಭುಗಳವರ ನಿಧನಕ್ಕೆ ಸಂತಾಪ ಸೂಚಿಸುವ; ಸರಕಾರವು ಎ.ಐ.ಸಿ.ಸಿ.ಯ ಮೇಲಿದ್ದ ನಿರ್ಬಂಧವನ್ನು ಕೂಡಲೇ ತೆಗೆದು ಹಾಕಬೇಕೆನ್ನುವ ಮತ್ತು ಜೈಲು ಸೇರಿ ಡೆಟೆನ್ಯೂಗಳಾಗಿರುವ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುವ; ಹೊಟ್ಟೆ ಬಟ್ಟೆಯೇ ಮೊದಲಾದ ಜೀವನದ ಪ್ರಾಥಮಿಕ ಆವಶ್ಯಕತೆಗಳನ್ನು ಸರಿಯಾಗಿ ಪೂರೈಸಿ ವಿತರಣಗೊಳಿಸಲಿಕ್ಕೂ ಸಮಾಜದಲ್ಲಿ ಪ್ರಬಲವಾಗಿ ಹಬ್ಬಿರುವ ಲಾಭಬಡಕತನದ ಮತ್ತು 'ಬ್ಲಾಕ್ ಮಾರ್ಕೆಟ್' ನೌಕರರ ಲಂಚಗೂಳಿತನ ಮತ್ತು ಅನ್ಯಾಯದ ಅಧಿಕಾರ ಲಾಲಸೆಯನ್ನು ತಡೆಗಟ್ಟುವುದೂ ಈಗಿನ ಬೇಜವಾಬ್ದಾರೀ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳಿಗೆ ಅಸಾಧ್ಯವಾಗಿರುವುದರಿಂದ ಜನತೆಯ ಹಿತ ದೃಷ್ಟಿಯಿಂದ ಕೇಂದ್ರದಲ್ಲಿ ರಾಷ್ಟ್ರೀಯ ಮತ್ತು ಪ್ರಾಂತದಲ್ಲಿ ಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಡಬೇಕು; ಜಿಲ್ಲೆಯ ರಾಜಕೀಯ ಜೀವನ ವರ್ಚಸ್ಸು ಮತ್ತು ಶಕ್ತಿ ಕುಂದಲು ವೈಯಕ್ತಿಕ ಅಧಿಕಾರ ಲಾಲಸೆ ಮತ್ತು ಜಾತೀಯತೆಯು ಮೂಲ ಕಾರಣವಾಗಿರುವುದರಿಂದ ಅದನ್ನು ಕಿತ್ತು ಹಾಕಲು ಪ್ರತಿಯೋರ್ವ ಕಾಂಗ್ರೆಸಿಗನೂ ಪ್ರಯತ್ನಿಸಬೇಕು. ಮತ್ತು ಉಜ್ವಲ ರಾಷ್ಟ್ರಾಭಿಮಾನವನ್ನು ಎತ್ತಿ ಹಿಡಿಯಲು ಪ್ರಯತ್ನಿಸಬೇಕು; ಜಿಲ್ಲೆಯ ಮೂಲೆ ಮೂಲೆಗೆ ಹಬ್ಬಿರುವ ಸಟ್ಟಾ ಜುಗಾರಿಗಳಂತಹ ದುಂದುಗಾರಿಕೆಯನ್ನು ನಿಲ್ಲಿಸಬೇಕೆಂದು ಸರಕಾರವೊಡನೆ ಕೇಳಿಕೊಳ್ಳುವ; ರಾಷ್ಟ್ರದ ಕರೆಯನ್ನು ಕೇಳಿ ನಮ್ಮ ಜಿಲ್ಲೆಯ ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಯಲ್ಲಿ ತಮ್ಮ ಕಾಂಗ್ರೆಸ್ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟವರನ್ನು ಅಭಿನಂದಿಸುವ; ಸಮಿತಿಯ ಕಾರ್ಯಗಳನ್ನು ಸರಿಯಾಗಿ ನಡೆಯುವಂತೆ ಇಡೀ ದಿನ ಕೆಲಸ ಮಾಡುವವರನ್ನು ನೇಮಿಸಬೇಕೆಂಬ ನಿರ್ಣಯಗಳಾದುವು.

ಆನಂತರ ಕಾರ್ಯಕಾರಿ ಸಮಿತಿಯ ಸಭೆ ಸೇರಿ, ಇಡೀ ಜಿಲ್ಲೆಯಲ್ಲಿ ತಾ. ೯ರಂದು 'ರಾಷ್ಟ್ರೀಯ ವಾರ'ವನ್ನು ಆಚರಿಸಲು ತಕ್ಕ ವ್ಯವಸ್ಥೆ ಮಾಡಲು ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು. ಮುಂದಿನ ಕಾರ್ಯಕಾರೀ ಸಮಿತಿ ಸಭೆಯು ಸೆಪ್ಟೆಂಬರ್ ೯ಕ್ಕೆ ಸೇರುವುದು. ಆಹಾರ ಸಮಿತಿಯ ಸಭೆಯನ್ನು ಮುಂದುವರಿಸಲಾಯಿತು.

It is easy to earn
But difficult to save.
We can help you to create a substantial funds by the purchase of our Laxmi Cash Certificates of 5 years Currency They are issued at present at the prices of Rs 8/4, 82/8, 412/8 & 825/- and repayable on maturity as Rs. 10, 100 500 & 1000 respectively.
Let us intimate and guide you in the saving habit. Money saved is the money earned.
The Canara Industrial & Banking Syndicate, Limited.
Head Office: UDIPI, (S. India.)
T. A. PAI, B. Com. (Bom) A. I. I. B.
General Manager.

ಹೆಣ್ಣು ಹುಟ್ಟಿತೆಂದು
ಚಿಂತೆ ಪಡುವುದೇಕೆ?
ಹೆಂಡತಿ:—ಹೆಣ್ಣು ಮಗು ಹುಟ್ಟಿದರೆ ಹಣವಿಲ್ಲದ ಬಾಳುವೆಗೆ ಮಣ್ಣು.
ಗಂಡ:—ನಾನು ಈಕೆಯ ಹೆಸರಿನಲ್ಲಿ ಪಡೆದ ವಿಮಾ ಪಾಲಿಸಿಯು ಈಕೆಯ ರಕ್ಷಣ, ಶಿಕ್ಷಣ, ವಿವಾಹಗಳ ವ್ಯವಸ್ಥೆ ಮಾಡುವುದು.

ಇಂದೇ ಜೀವ ವಿಮಾ ಪಾಲಿಸಿಯನ್ನು ಪಡೆದು ಮಕ್ಕಳ ರಕ್ಷಣೆ ಮಾಡಿರಿ.

ಯುನೈಟೆಡ್ ಕರ್ನಾಟಕ
ಇನ್ಸುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd. DHARWAR
The Representative Insurance Concern of
KARNATAK.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಪಾರಾಯರ್,
ರಥಬೀದಿ, ಉಡುಪಿ.

ಮೈಸೂರುಪತ್ರ-

ವರ್ಧಂತಿ-ಶ್ರೀ ಮಹಾರಾಜರವರ 27ನೇ ವರ್ಧಂತಿ ಉತ್ಸವವು 30 7 45ನೇ ದಿನ ವಿಜೃಂಭಣೆಯಿಂದ ನಡೆಯಿತು. ಮಧ್ಯಾಹ್ನ ದರ್ಬಾರ್, ಸಾಯಂಕಾಲ ಸಕಲ ಮರ್ಯಾದೆಯೊಡನೆ ರಾಜಬೀದಿಯಲ್ಲಿ ಮೆರವಣಿಗೆ ನಡೆಯಿತು

ಬಿರುದುಗಳು ಪದಕಗಳು- ಮಹಾ ಪ್ರಭುಗಳು 31 ಮತ್ತು 1ನೇ ತಾರೀಖುಗಳಲ್ಲಿ ಈ ವರೆಗೆ ಅನೇಕ ಬಗೆಯ ಸೇವೆಯನ್ನು ಮಾಡಿದ ಹಲವು ಮಹನೀಯರುಗಳಿಗೆ ಬಿರುದುಗಳನ್ನೂ ಇನ್ನೂ ಕೆಲವರಿಗೆ ಪದಕಗಳನ್ನೂ ಇತ್ತು ತಮ್ಮ ಮೆಚ್ಚುಗೆಯನ್ನು ತೋರಿಸಿದರು

ರಾಜಧಾನಿಯಲ್ಲಿ ಮಂತ್ರಿಗಳು- ವರ್ಧಂತಿ ಪ್ರಯುಕ್ತ ದಿವಾನರೇ ಆದಿಯಾಗಿ ಸಂಸ್ಥಾನದ ಎಲ್ಲಾ ಮಂತ್ರಿಗಳೂ ರಾಜಧಾನಿಗೆ ಆಗಮಿಸಿದ್ದರು ಅವರು ಮೈಸೂರಲ್ಲಿ ತಾವಿದ್ದ ದಿನಗಳಲ್ಲಿ ತಮ್ಮ ಅಧಿಕಾರಾವಧಿಗೆ ಒಳಪಟ್ಟ ಹಲವಾರು ಸಂಸ್ಥೆಗಳಿಗೂ ಇಲಾಖೆಗಳಿಗೂ ಭೇಟಿಯಿತ್ತು ಪರೀಕ್ಷಿಸಿದರು ನೂತನ ಆರೋಗ್ಯ ಸಚಿವ ಡಾ॥ ಟಿ ಸಿ ಎಂ. ರಾಯನರವರು ನಗರದ ಸಣ್ಣ ಪುಟ್ಟ ಅನೇಕ ಹೋಟೇಲುಗಳಿಗೂ ಭೇಟಿಯಿತ್ತು ಆರೋಗ್ಯ ರಕ್ಷಣೆಗೆ ಬೇಕಾದ ಕೆಲವು ಸಲಹೆಗಳನ್ನು ಇತ್ತರು

ನೂತನ ನರ್ಸಿಂಗ್ ಹೋಂ ಇರ್ವಿನ್ ರಸ್ತೆಯಲ್ಲಿರುವ ಭಾರಿ ಭವನ ಶ್ರೀ ಪದ್ಮ ಡಾ। ಪ್ರಸಾದ್ ರಂಗನಾಥರ ಪ್ರಸಾದ್ ನರ್ಸಿಂಗ್ ಹೋಮಿನ ಪ್ರಾರಂಭ ಉತ್ಸವವನ್ನು ಸಂಸ್ಥಾನದ ಆರೋಗ್ಯ ಸಚಿವ ಡಾ ರಾಯನ್‌ರವರು 2 8 45ನೇ ಗುರುವಾರ ದಿನ ನೆರವೇರಿಸಿದರು ಸಮಾರಂಭಕ್ಕೆ ನಗರದ ಪ್ರಮುಖ ಅಧಿಕಾರಿಗಳೂ ಖಾಸಗಿ ದೊಡ್ಡ ಮನುಷ್ಯರೂ ಡಾಕ್ಟರುಗಳೂ ಆಗಮಿಸಿದ್ದರು

ಸತ್ಕಾರ-ಕುರುಬರ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ನೀಲಗಿರಿ ಸಾಹುಕಾರ್ ಶ್ರೀ। ಸಿದ್ದಪ್ಪನವರನ್ನು ತಮ್ಮ ನಿಲಯದ ಮೇಲ್ವಿಚಾರಕರಾಗಿದ್ದು ಊಗಳೂರಿಗೆ ಹೋಗಲಿರುವ ಶ್ರೀ। ಚಿಕ್ಕಣ್ಣನವರನ್ನೂ ಸತ್ಕರಿಸುವ ಸಲುವಾಗಿ 2-8-45ನೇ ದಿನ ಒಂದು ಟೀ ಪಾರ್ಟಿ ಏರ್ಪಡಿಸಿದ್ದರು

ಸಿಮ್ಲಾದಿಂದ ಮುಖಂಡರ ಆಗಮನ-ಸಿಮ್ಲಾಕ್ಕೆ ತೆರಳಿದ್ದ ಮೈಸೂರು ಮುಖಂಡರುಗಳಾದ ಶ್ರೀಗಳಾದ ಎಸ್ ನಿಜಲಿಂಗಪ್ಪ ಕೆ ಟಿ ಭಾಷ್ಯಂ ಎಸ್ ಚನ್ನಯ್ಯ ಮತ್ತು ವಿ. ಎಸ್ ಗುಬ್ಬಾರವರು ಹಿಂತಿರುಗಿ ಬಂದಿದ್ದಾರೆ

(ಎಸ್. ಪ್ರಿ ವಿ ಜ ಮುಂದುವರಿದುದು)

ಯ ದಿರಲ್ಲಿ ಆ ಆಟ ನಡೆದೀತೆ? ಈ ಪ್ರೇತ ಪೀಡೆಯೇ ಚರ್ಚಿಲ್ಲರ ಅಧಿಕಾರಕ್ಕೆ ಮೃತ್ಯುವಾಯಿತು. ಸ್ವಹಿತರಿಗಾಗಿ ಪ್ರಾಣ ಕೊಡುವ ಸ್ವಭಾವ ಚರ್ಚಿಲ್ಲರದು. ದುರ್ದೈವದಿಂದ ಇಂತಹ ವ ಮನುಷ್ಯನ ನಂ.

1ನೇ ಸ್ನೇಹಿತನಾಗಿದ್ದುದು ಬೀವರ್ ಬ್ರೂಕನಂತಹ ಒಂದು ಅಪಾಯ. ಆದರೆ ಒಂದು ಕಾಲದಲ್ಲಿ ಚರ್ಚಿಲ್ಲರಂತೆಯೇ ಈ ಶ್ರೀಮಂತನಿಂದಲೂ ರಾಷ್ಟ್ರಕ್ಕೆ ಮಹೋಪಕಾರವಾಗಿತ್ತು. ಬ್ರಿಟನಿನ ಆಕಾಶದಲ್ಲಿ ಹೆಣಹದ್ದುಗಳು ಮಾತ್ರ ಹಾರಾಡುತ್ತಿದ್ದ ಕಾಲದಲ್ಲಿ ವಿಮಾನೋತ್ಪಾದನಾ ಮಂತ್ರಿಯಾಗಿ ಬೀವರ್ ಬ್ರೂಕ್, ತನ್ನ ಅಸಾಧಾರಣ ಸಂಘಟನಾಬಲದಿಂದ ಸಾವಿರ ಸಂಖ್ಯೆಯಲ್ಲಿ ವಿಮಾನಗಳ ರೆಕ್ಕೆ ಬಿಡಿಸಿದ್ದರು. ಆದರೆ ಕಾಲವಂತಹದು. ಹೃದಯ ರೆಕ್ಕೆಯನ್ನು ಬಿಚ್ಚಿ ಹಾರುವವರೇ ಬೇಕಲ್ಲದೆ, ಮುದುಡಿ ಕುಳಿತು ಬಕಧ್ಯಾನ ಮಾಡುವವರನ್ನು ಜನತೆಯೊಪ್ಪುವಂತಿಲ್ಲ.

ಅಂತೋಣಿ ಈಡೆನ್

ಚರ್ಚಿಲ್ಲರಿಗೆರಡನೆಯ ಜನಪ್ರೀತರಾಗೂ ಸಮರ್ಥ ಟೋರಿಯೆಂದರೆ ವಿದೇಶ ಮಂತ್ರಿಯಾಗಿದ್ದ ಮಿ. ಅಂತೋಣಿ ಈಡೆನ್. ಚುನಾವಣಾ ನಂತರ ಜನಪ್ರಿಯತೆಯ ಪಕ್ಟಿಗೆ ಇವರೇ ಮೊದಲಸ್ಥಾನ ಪಡೆದಿದ್ದಾರೆ. ಸದ್ಯದ ಟೋರ್ಯ್ ಪ್ರೆಸಿಡೆಂಟ್ ಪೋರಿಸನರಂದಂತೆ-ಚುನಾವಣಾ ಸುಳಿಗಾಳಿಯಡಿ ಎದೆಯರ್ಧ ಮೇಲೆಯೇ ನಿಂತು, ರಾಷ್ಟ್ರಜನಕನೆಂಬ ತನ್ನ ಘನತೆಯನ್ನು ಚರ್ಚಿಲ್ಲರುಳಿಸಿಕೊಳ್ಳುವರೆಂಬ ನಿರೀಕ್ಷೆಯನ್ನು ಅವರು ಹುಸಿಮಾಡಿದ್ದರು; ಆ ಜಾಲದಲ್ಲಿ ತನ್ನ ದೊಡ್ಡ ಬಾರ ಹಾಕಿ ಬಲ್ಲಾಳಿಲ್ಲಿ ಮಾಡಿ ಕಸರನ್ನೇ ನಿರ್ಮಿಸಿದ್ದರು. 'ಇಸ್ಲೀ' ಅನ್ನಿಸಿದ್ದರು ಅದರೆ ಚರ್ಚಿಲ್ಲರ ಅಪರಾಧ ಈಡೆನ್ನರದಾಗಿಲ್ಲ. ಅವರು ಒಂದೇ ಒಂದು ಬಾರಿಯಾದರೂ ಮತದಾರರಿಗೆ ಮುಖ ತೋರಿಸಲು ಸೋಗಲಿಲ್ಲ ಒಡನೇ ಕಾರಣ ಕಾಹಿಲೆ, ಎರಡನೆಯದಾಗಿ ಕಾರ್ಯಸಾಧನಗಾಗಿ ಕ್ರಮ ತಪ್ಪುವ ಮನುಷ್ಯ ಈಡೆನ್‌ನೂ ಅಲ್ಲ ಆದ್ದರಿಂದಲೇ ಚರ್ಚಿಲ್ಲರು ಒಬ್ಬ ಕಿಂಚಿತ್ ಮನುಷ್ಯನಿದಿರಲ್ಲಿ ಒದ್ದಾಡಿ ಪಡೆದಷ್ಟೇ ಬಹುಮತ (17000)ಗಳನ್ನು, ಈಡನರು ಕುಳಿತಲ್ಲಿಯೇ ಪಡೆದಿದ್ದರು-ಅದೂ ಕೂಡಾ ಪ್ರಬಲ ಕೂಲಿಗಾರ ಇದಿರಾಳಿಯ ವಿರುದ್ಧವಾಗಿ ಈಡೆನ್ ಅತಿ ನಾಜೂಕಿನ ಮನುಷ್ಯ. ಪೋಷಾಕಿನ ಮಟ್ಟಿಗೆ ಇಡೀ ಬ್ರಿಟನಿನಲ್ಲಿ ಆತ 'ಸುಂದರ ರಾವಣ' ಎಂತಹ ಸಂದರ್ಭದಲ್ಲೂ ಒಳ್ಳೆ ಬುದ್ಧಿ ಪ್ರದರ್ಶಿಸುವವನ್ಲ ಆದ್ದರಿಂದ ನಾನಾನುಭವಿಸುವಾಗ ಚರ್ಚಿಲ್ಲರೊಂದಿಗೆ, ನಿಂದೆ ಕೇಳುವಾಗ ಆ ಸಾಲಿನಲ್ಲಿಲ್ಲ ಮೇಲಾಗಿ ಈಡೆನ್ ಟೋರಿ ಪಕ್ಷಕ್ಕಂಟಿಕೊಂಡಿದ್ದಾರೆ ಮಾತ್ರ, ಚರ್ಚಿಲ್ಲರಂತೆ ಅದನ್ನು ಆಳುವವರೂ ಅಲ್ಲ; ಬೀವರ್ ಬ್ರೂಕರಂತೆ ಅದನ್ನಾಧಿಸುವವರೂ ಅಲ್ಲ ವ ಲಿಗೆ ಒಂದ ಪಂಚಕವಾಯಕ್ಕೆ ಕೈಯೊಡ್ಡಿ ಸುಮ್ಮಾಗಿದ್ದಾರೆ.

ಮಂತ್ರಿಮಂಡಲದಲ್ಲಿ ಚರ್ಚಿಲ್ಲರ ಪ್ರಾಣಾಪ್ತರಾಗಿದ್ದವರೆಂದರೆ ನಾವೆಯ ಮಂತ್ರಿ ಬ್ರೆಂಡನ್ ಬ್ರೇಕೆನ್. ಇವರ ತಲೆಯು, ಚುನಾವಣೆ ಸೋತ ದಿನ ಪ್ರೂರ್ಣ ಹಾಳಾಯಿತಂತೆ ಬ್ರಿಟಿಷ್ ಸಭ್ಯತೆಗನುಸಾರವಾಗಿ ತನ್ನ ಪ್ರತಿಸ್ಪರ್ಧಿಗೆ ಹಸ್ತಲಾಘವ ಕೊಡುವಷ್ಟು ಮನೋಸಮೃದ್ಧಿ ಕೂಡಾ ಅಂದು ಅವರಿಗಿರಲಿಲ್ಲ ಚರ್ಚಿಲ್ಲರ ಅಣುಗ, ಅಳಿಯ, ಅನುಯಾಯಿಗಳೆನ್ನೆಲ್ಲಾ ಮತದಾರರೇ ಬಾರಿ ಬೇಟೆಯಾಡಿದ್ದರು. ಆತ್ತೆ ಕೆ ಚರ್ಚಿಲ್ ಅಳಿಯ ಸಂಪತ್ತವದ ವಾರ್ತೆ ಕೇಳಿದಾಗ ಗಳಗಳನೇ ಅತ್ತುಬಿಟ್ಟನಂತೆ! ಸ್ಥಿತಿಗತಿಗಳ ವಾರ್ತೆ ಕೇಳಿದಾಗ ಮತದಾರರಿಂದಾದ ಅನ್ಯಾಯ ದಾಸ್ಯದರಿಂದ ನಿವಾರಣೆಯಾಗಬೇಕೆನ್ನಿ ಸುತ್ತದೆ.

ಲಂಡನ ವಾರ್ತೆ

'ಬಿಟನಿನಲಿ ಗೆದ್ದವರು'

ಇನ್ನೂ ರೇಷನಿಂಗ್ ಏಕೆ?

ಬಾಯಿಯವರೆ, ನಿಮ್ಮ ಆ ಯು ನಮಗೆ ತಿಳಿಯುತ್ತದೆ ಈಗ ಕಳೆದುಹೋದ ದೀರ್ಘವಾದ ವರ್ಷಗಳಲ್ಲಿ ನೀವು ರೇಷನಿಂಗ್, ನಿಯಂತ್ರಣಗಳು ಕೊರತೆಗಳು ಏರಿದ ಧಾರಣೆಗಳು ಇವೇ ಮುಂತಾದವುಗಳನ್ನು ತುಂಬಾ ಸಹಿಸಿದ್ದೀರಿ "ಇನ್ನೂ ಎಷ್ಟು ದಿವಸ ಬಾಕಿ" ಎಂದು ನೀವು ಕೇಳುವದು ಸ್ವಾಭಾವಿಕ

ಜರ್ಮನಿಯು ಬರ್ಲಿನ್‌ನಿಂದ ಶರಣು ಬಂದ ಮೇಲೆ, ಮಿತ್ರರ ಬಲಾಢ್ಯವಾದ ದಂಡುಗಳು, ಯುದ್ಧದ ಶಸ್ತ್ರ—ಜಪಾನದ ಮೇಲೆ ನಿರ್ಣಾಯಕ ಹೊಡೆತ ಕೊಡಿಸುವದಕ್ಕಾಗಿ ಸಜ್ಜುಗೊಳಿಸಲ್ಪಡುತ್ತಿವೆ ಹಿಂದುಸ್ಥಾನವು ಒಮ್ಮೆ ಸಂಯುಕ್ತ ರಾಷ್ಟ್ರಗಳ ರಕ್ಷಣಾತ್ಮಕ ಕೊತ್ತಲವಾಗಿದ್ದು, ಅದು ಈಗ ನೇಮಿಸಿಕೊಳ್ಳುವ ಮಿತ್ರರ ಸೈನ್ಯಗಳ ಮುಖ್ಯವಾದ ಅಭಿಯೋಗದ ಕಾರ್ಯಕ್ಷೇತ್ರವಾಗಿದೆ ಆದರೆ ಶತ್ರುವು ಇನ್ನೂ ಬಲಿಷ್ಠನಿದ್ದಾನೆಂಬದನ್ನು ಮತ್ತು ಕಠಿಣವಾದ ಹೋರಾಟವು ಇನ್ನೂ ನಮ್ಮ ಮುಂದೆ ಇದೆ ಎಂಬದನ್ನು ಮರೆಯಬೇಡಿರಿ ನಾಗರಿಕರ ಉಪಯೋಗದ ಸಾಮಾನುಗಳನ್ನು ತಯಾರಿಸಬಹುದಾಗಿದ್ದ ಕಾರಖಾನೆಗಳು ಯುದ್ಧದ ಸಾಮಗ್ರಿಗಳನ್ನು ತಯಾರಿಸುವದರಲ್ಲಿ ತೊಡಗಿಸಲ್ಪಟ್ಟವಾಗಿರಲೇಬೇಕಾಗಿದೆ ಪರ ದೇಶಗಳಿಂದ ಸಾರ್ವಜನಿಕರಿಗೆ ಬೇಕಾಗುವ ಸರಕುಗಳನ್ನು ತರಬಹುದಾಗಿದ್ದ ಹಡಗುಗಳು ಜನರನ್ನು ಹಾಗೂ ಯುದ್ಧ ಸಾಮಗ್ರಿಯನ್ನು ಒಯ್ಯಲೇಬೇಕಾಗಿದೆ ಮುಂಚಿನಂತೆ, ಆಹಾರ, ಬಟ್ಟೆ, ಉರುವಲು, ಔಷಧಗಳು ಹಾಗೂ ಇತರ ಅವಶ್ಯಕತೆಗಳ ಪೂರೈಕೆಯನ್ನು ಪಡೆಯುವದಕ್ಕೆ ಎಲ್ಲಕ್ಕೂ ಮೊದಲಿನ ಹಕ್ಕು ಇದ್ದವರೆಂದರೆ ನಮ್ಮ ಯುದ್ಧ ಮಾಡುವ ಜನರಾಗಿದ್ದಾರೆ ಯುದ್ಧ ಜನ್ಯ ಕಷ್ಟಗಳಿಂದ ನಿವಾರಣೆಯು ಒಂದೇ ಬರುವದು, ಅದರೆ ನಾವು ಯುದ್ಧವು ಮುಗಿಯುವವರೆಗೆ ಮತ್ತು ಶತ್ರುವು ಬರ್ಲಿನ್-ವರ್ತಿನಂತೆ ಶರಣು ಬರುವಂತೆ ಮಾಡಲ್ಪಡುವವರೆಗೆ ತಡೆಯಬೇಕು.

ನಮ್ಮಾಂತಲೂ ಹಚ್ಚಿನ ಗಂಡಾಂತರಗಳನ್ನು ಮತ್ತು ಕಷ್ಟಗಳನ್ನು ನಮ್ಮ ಯುದ್ಧ ಮಾಡುವ ಜನರು ಅನುಭವಿಸುತ್ತಿರುವಾಗ ನಾವು ಮಾಡುವ ಪಾಲಿನ ಕೆಲಸವೆಂದರೆ ಅವರೆಂತಹ ವಿಶ್ವಾಸನ್ನಿಟ್ಟಿರುವರಾದ ಈಗ ಕೊನೆಯ ವಿಜಯವು ಕಾಣುತ್ತಿರುವದರಿಂದ, ನಾವು ಸ್ವಲ್ಪ ವಿರಮಿಸೋಣ ಯಾ ಹಿಂದೆಯುಳಿಯೋಣ, ಯತ್ನವನ್ನು ಕಡಿಮೆ ಮಾಡುವದು ಅಥವಾ ಸಂತೋಷಪಡುವದು ಈ ಯುದ್ಧವನ್ನು ಒಂದು ದಿವಸದಿಂದಾಗಲಿ ಒಂದು ಗಂಟೆಯಿಂದಾಗಲಿ ಮುಂದೆ ಹಾಕಿದಂತೆ ಸರಿ. ವಿಜಯವು ಶೀಘ್ರವಾಗಿ ಬರುವದಾಗಿ ಮತ್ತು ಅನೇಕ ಅಮೂಲ್ಯವಾದ ಮನುಷ್ಯ ಪ್ರಾಣಗಳ ನಷ್ಟವನ್ನು ಕಡಿಮೆ ಮಾಡುವದಾಗಿ ನಾವು ನಮಗೆ ನಾವು ನಿಷ್ಠರಾಗಿರೋಣ!

ಭಾರತವು ಯುದ್ಧಮಾಡುತ್ತಾ ಮುಂದುವರಿವದೆ..

ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್ಮೇಶನ್ ಎಂಡ್ ಬ್ರಾಡ್‌ಕಾಸ್ಟಿಂಗ್, ಗವರ್ನ್‌ಮೆಂಟ್ ಆಫ್ ಇಂಡಿಯಾ, ಅವರಿಂದ ಪ್ರಸಿದ್ಧಪಡಿಸಲ್ಪಟ್ಟಿದ್ದು

AAA 355 KV

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4೦೦ದ 8ಬೊಟ್ಟು, ಸಣ್ಣ ಮಕ್ಕಳಿಗೆ 1೦೦ದ2ಬೊಟ್ಟು ಲವಂಗ ಯಾ ಪಿಪಲಿದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ, ಡಾ। ಟಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ, ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-1-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ: ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ. (2) ಬೊಂಬಾಯಿ ಏಜೆಂಟರು: ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ.   ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ.   ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ.   ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. India

Regd No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ ೨೪ ವಾರ ೪೬ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. | Vol. 24 No. 49

ಉಡುಪಿ • 16—8—1945 • ಮಂಗಳೂರು.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಉಳುಕು, ಕತ್ತುಗೆ, ಥುಡ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಮತ್ತು ಕೀಲ್ನೋವು, ಚೇಳು ವಿಷ ಮುಂತಾದ ಬೇನೆ ಸರ್ಪ ವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

CALL IT A MARVELL OR WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity

For further particulars of the scheme apply to the Head Office of the Company

The Canara Mutual Assurance Co. Ltd.,

Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ— **ಜೀವವಿಮೆ!**

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಸಯ, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ **2½**ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ಶಾಖಾ ಕಾರ್ಯದರ್ಶಿಯರು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೊಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲು **53**ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.

ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ **26** ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.

ಕ್ಷೇಮನಿಧಿ ರೂಪಾಯಿ **10** ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED

(Incorporated in British India. liability of Members Limited.)

THE

VIJAYA BANK LTD.

Head Office: **MANGALORE.**

We have pleasure to announce that a branch of our Bank has been opened at BYNDOOR on 22-5-1945.

OTHER BRANCHES AT—

Coondapoor, Brahmavar, Udipi, Kaup, Karkala, Kasaragod, Kadri-Mangalore, City-Mangalore, Puttur and Bombay City.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ ಧರ್ಮ ಛತ್ರ

ಇದೇ ತಾ 8—10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್ ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಸ್ವಭಾವ ಚಿತ್ರ.

ಬ್ರಿಟನಿನಲ್ಲಿ ಗೆದ್ದವರು.

ಈ ಬಾರಿ ಬ್ರಿಟನಿನಲ್ಲಿ ಗೆದ್ದುದೆಂದರೆ ಸಾಮಾನ್ಯರ ಮತ; ಅವರ ಹಕ್ಕು ಬಾಧ್ಯತೆ. ಪ್ರಾಯ 30 ರೊಳಗಿನ ಮಿಲಿಯ ಮಂದಿ ಈ ಬಾರಿ ಹೊಸತಾಗಿ ಮತದಾನ ಮಾಡಿದ್ದರು; ಹಳ್ಳೀ ವಲಯಗಳ ರೈತರೆಲ್ಲಾ ಯುದ್ಧದ ಸೇಯಿಂದಾಗಿ ಮೊದಲಬಾರಿ ಸಂಘಟಿಸಿದ್ದರು; ಮಿಲಿಯಾಪಥಿ ಮತದಾರರು ಯುದ್ಧೋದ್ಯೋಗಿ ಶ್ರಮಜೀವಿಗಳಾಗಿ ಮತಾಂತರ ಹೊಂದಿದ್ದರು. ಒಟ್ಟಿನ ಮೇಲೆ ಆಧುನಿಕ ಬ್ರಿಟಿಷ್ ಜನಾಂಗ ಹೃದಯ ಪರಿವರ್ತನೆ ಗೊಂಡಿದ್ದಿತು; ಏಟು ತಿಂದವರೇ ವೋಟು ಕೊಟ್ಟವ್ರು ಅದು ಸಹಜವಾಗಿ ಕೂಲಿಕಾರ ಪಕ್ಷಕ್ಕೇನೇ ಬಿತ್ತು. ಚುನಾವಣೆಯ ವೇಳೆ ಚರ್ಚಿಲ್ಲರು ಬಿರುಗಾಳಿಯಂತೆ ಸುತ್ತಾಡಿದಾಗ ಲೇಬರ್ ಪ್ರಮುಖರ ಕೈಕಾಲು ಬಿದ್ದಿತ್ತು; ಮತದಾರರನ್ನು ಸಮಜಾಯಿಸುವ ಮಾತಂತಿರಲಿ-ತಮ್ಮ ಮನಸ್ಸನ್ನು ಸಂತೈಸಿಕೊಳ್ಳುವದೇ ತಮಗೆ ಕಷ್ಟವಾಯಿತು. ಬ್ರಿಟನಿನ ರಕ್ಷಕನನ್ನೆ ಬ್ರಿಟಿಷ್ ಮತದಾರರು ಕೈಬಿಟ್ಟಾರೆಂದು ನಂಬುವದು ಯಾವ ಆಧಾರದಿಂದ? ಹೋದಲ್ಲೆಲ್ಲಾ ಆಟ್ಲೀ, ಬೆವಿನ್, ಮೊರಿಸನ್, ಗ್ರೀನ್‌ವುಡ್ಡರ ಹೆಸರೆತ್ತಿ ಚರ್ಚಿಲ್ಲರು ವ್ಯಕ್ತಿ ನಿಂದೆಗೆ ತೊಡಗಿದಾಗ, ಪ್ರತಿಯಾಗಿ ಚರ್ಚಿಲ್ಲರ ಕಡೆಗೆ ವಾಗ್ಬಾಣಬಿಡುವ ಧೈರ್ಯ ಆ ಗಂಡುಗಲಿ ಬೆವಿನ್ ಮೋರಿಸನರಿಗೂ ಬರಲಿಲ್ಲ. ಜನರ ಮನಸ್ಸು ಕೆಡುವದೆಂದೇ ಅವರಭೀತಿ. ಆದರೆ ಮತದಾರರದು ಮಾತ್ರ ಎಂತಹ ಲೇಪ ಬಳಿದರೂ ಮಲಿನವಾಗದ ಮನಸ್ಸಾಗಿತ್ತು, ಪ್ರಚಾರ ಮತ್ತು ಪ್ರಭಾವದಿಂದೇನೂ ಆಗದೆ ಹೋಯಿತು; ಜನತೆಗೆ ಕ್ರಾಂತಿಕಾರೀ ಬದಲಾವಣೆ ಬೇಕಾಗಿತ್ತು. ಆದ್ದರಿಂದ ಸೋತ ಟೋರಿಗಳು ದುಃಖಗೊಂಡುದು ಮಾತ್ರವಲ್ಲ, ಭೀತಿಗೊಂಡರು. ಗೆದ್ದ ಕೂಲಿಗಾರರು ಆನಂದವನ್ನಷ್ಟೇ ಪಡೆದುದಲ್ಲ—ಆಶ್ಚರ್ಯಪಟ್ಟರು.

ಪ್ರಮಾದವೆಲ್ಲಿ?

ಚರ್ಚಿಲ್ಲರು ಒಮ್ಮಿಂದೊಮ್ಮೆಗೆ ಸಾರ್ವತ್ರಿಕ ಚುನಾವಣೆಯ ಘೋಷಣೆ ಮಾಡಿದೊಡನೆ 'ಹೋ! ನಾವು ಕೆಟ್ಟೆವು' ಎಂದಿತು ಕೂಲಿಗಾರ ಪ್ರಮುಖರ ಒಳಧ್ವನಿ. ಆದರೆ ಅದೇ ಸಮಯದಲ್ಲಿ 'ಲೋರ್ಡ್ ಬೀವರ್ ಬ್ರೂಕ್'-ಆ ಪತ್ರಿಕಾಧಿಕಾರಿ ಮಿಲಿಯನರ್—ಚರ್ಚಿಲ್ಲರನ್ನು ಕೆಡಿಸಿದರು' ಎಂದು ಬ್ರಿಟಿಷ್ ಜನತೆ ತೀರ್ಮಾನಿಸಿಕೊಂಡಿತು. ಬೀವರ್ ಬ್ರೂಕರು ಅಪ್ರಾಗತಿಕರ ಆದರ್ಶಮೂರ್ತಿ; ಟೋರಿ ಪಾಳಯದ ಅಡಿಗಲ್ಲು, ಆದ್ದರಿಂದ ಫ್ರೆಂಚ್ ಜನತೆಯ ದೃಷ್ಟಿಯಲ್ಲಿ ಲಾವಲರಿದ್ದಂತೆ ಬ್ರಿಟಿಷ್ ಸಾಮಾನ್ಯರ ಕಣ್ಣಿಗೆ ಬೀವರ್ ಬ್ರೂಕೊಂದು ಕಾಸರಕನ ಕೋಲು. ಬೀವರ್ ಬ್ರೂಕರ ಪ್ರಭಾವದ ಕಹಿಯನ್ನು ಜನತೆ ಬಲ್ಲುದು; ಜನಮತದ ಬಿಸಿಯೆಷ್ಟೆಂಬುದನ್ನು ಬೀವರ್ ಬ್ರೂಕರೂ ಬಲ್ಲರು. ಸರಿ, ಬಿಸಿಯಿರುವಾಗಲೇ ಬಡೆಯಬೇಕು-ಚರ್ಚಿಲ್ಲರ ವರ್ಚಸ್ಸು ಅಜೇಯವಿರುವಾಗಲೇ ಚುನಾವಣೆಗಿಳಿಯಬೇಕು—ಎಂದವರು ಹುರಿದುಂಬಿಸಿದರು. ಅದಕ್ಕನುಗುಣವಾಗಿ ಚರ್ಚಿಲ್ಲರು ಹಾರಿಬಿಟ್ಟರು. ನಗೆಯದೇನೋ ಸರಿ. ಆದರೆ ಸಮತಾವಾದಕ್ಕೆರಡು ಬೈಗಳು—ಯುದ್ಧ ಕಾಲದ ನಿಯಂತ್ರಣ ತೆಗೆಯುವೆನೆಂಬ ಭರವಸೆ—ಲಸ್ಕಿ ಪಾಪದಂತಹ ಅಲ್ಪ ವಿಷಯಕ್ಕೊ ಅತಿ ಪ್ರಾಧಾನ್ಯತೆ-ನಿಮ್ಮನ್ನು ಉದ್ಧರಿಸಿದ ನನಗೆ ದಗೆ ಕೊಡಬೇಡಿ ಎಂಬ ಬೇಡಿಕೆ—ಇಂತಹದಲ್ಲದೆ ಮತದಾರರ ಮುಂದಿಡಲು ಬೇರಾವುದೂ ಚರ್ಚಿಲ್ಲರಲ್ಲಿರಲಿಲ್ಲ. ಜನತೆಗೆ ಇದಾವುದೂ ಬೇಕಾಗಿರಲಿಲ್ಲ; ಕೂಲಿಗಾರ ಪಕ್ಷದ ಸೌಮ್ಯ ಸಮತಾವಾದಿ ಕಾರ್ಯಕ್ರಮಗಳ ಆವಶ್ಯಕತೆ ಮಾತ್ರವಿತ್ತು. ಅದು ತನ್ನ ಹಿತ ತಾನು ಸಾಧಿಸಿಕೊಂಡಿತು. ಇನ್ನು ಟೋರಿ ಪಕ್ಷದ ಹೆಸರಿನ ಮುಂದೆ 'ಪ್ರಗತಿ ಶೀಲ' ಎಂದೋ, ಅಥವಾ ಬೇರಾವುದಾದರೊಂದು ರಮ್ಯ ಶಬ್ದವನ್ನು ಸೇರಿಸಿಕೊಳ್ಳಬೇಕೆಂದು ಲೋರ್ಡ್ ಬೀವರ್ ಬ್ರೂಕರ ಯೋಚನೆಯಿದೆಯಂತೆ. ಇಂತಹ ಪ್ರಬಲ ಪರಾಭವದಿಂದಾದರೂ ಟೋರಿ ಪಕ್ಷ ಕಲಿತುದು ಹೆಸರು ಬದಲಾವಣೆಯ ಪಾಠವನ್ನೇ-ಹೃದಯ ಬದಲಾವಣೆಯನ್ನಲ್ಲ!

ಪ್ರೊಫೆಸರ್ ಲಸ್ಕಿ

ಈಗಿನ ವಿಜಯೀ ಧೋರಣೆಗಳಲ್ಲಿ ಪ್ರಥಮತಃ ಗುರುತಿಸಬೇಕು ಪ್ರೊ. ಲಸ್ಕಿಯವರನ್ನು. ಪ್ರೊ. ಲಸ್ಕಿ ಬ್ರಿಟಿಷ್ ಲೇಬರ್ ಪಕ್ಷದ ವಲ್ಲಭಾಯಿ. ಕಾಂಗ್ರೆಸು ಅಧಿಕಾರ ಸ್ವೀಕರಿಸಿದಾಗ ಇಲ್ಲಿ ಸರ್ದಾರರಿದ್ದಂತೆ ಅಲ್ಲಿ ಈ ಪ್ರೊಫೆಸರ್ ಇದ್ದಾರೆ. ಇಬ್ಬರೊಳಗಿನ ಸ್ಥಾನಮಾನ ಮತ್ತು ಸ್ವಭಾವಗಳಲ್ಲಿ ಕೂಡಾ ಸಾದೃಶ್ಯತೆಯಿದೆ. ವಜ್ರ ಮುಷ್ಟಿ-ಸಿಂಹ ಘರ್ಜನೆ-ಉಕ್ಕಿನ ಹೃದಯವಿರುವ ಮನುಷ್ಯ. ಯುದ್ಧ ವಿಜಯೀ ಚರ್ಚಿಲ್ಲರು ತಾನಾಗಿ ಕೊಳಕು ಟೀಕೆಗಿಳಿದು ಕೆಳಮಟ್ಟಕ್ಕೆ ಬಾರದಿರುತಿದ್ದರೆ-ಎಲ್ಲರ ನಿರೀಕ್ಷೆಯಂತೆ ಚುನಾವಣಾ ಹೋರಾಟದಲ್ಲಿ ಎದುರ್ಧ ಮೇಲೆಯೇ ನಿಲ್ಲುತಿದ್ದರೆ- ಈ ಕಾಳಗ ಅವರ ಮುಂಭಾಗದಲ್ಲಿ ನಡೆದಂತಾಗುತಿತ್ತು; ಇಂದಿನಂತೆ ಅವರ ಮೈಮೇಲೆ ಬರುತಿದ್ದಿಲ್ಲ ಆದರೂ, ಕೆಳಗಿಳಿದು ಚರ್ಚಿಲ್ ಕೆಟ್ಟರೆಂಬ ಗುಟ್ಟು ಮತಗಣನೆಯಾಗುವ ವರೆಗೂ ಕೂಲಿಗಾರ ಪ್ರಮುಖರಿಗೆ ತಿಳಿದಿರಲಿಲ್ಲ; ಆದ್ದರಿಂದ ಕೊನೆಯ ವರೆಗೂ ಚರ್ಚಿಲ್ಲರ ಕುರಿತು ಒಂದೇ ಒಂದು ಕಠಿಣ ಶಬ್ದವಾಡಿದವರಿಲ್ಲ; ಟೋರಿಗಳೆಲ್ಲರ ಪಾಲಿನ ನಿಂದೆಗೆ ತಲೆಯೊಡ್ಡಲು ಲೋರ್ಡ್ ಬೀವರ್ ಬ್ರೂಕರು ಅಕಡೆಯಲ್ಲಿದ್ದರು; ಅವರಂತೆ ಕೂಲಿಗಾರರ ಪಾಲಿನ ಎಲ್ಲಾ ಅಪಹೇಳನ ಕೇಳಲು ಈ ಕಡೆಯಲ್ಲಿದ್ದವರೆಂದರೆ ಪ್ರೊಫೆಸರ್ ಲಸ್ಕಿ. ಅವರು ಬ್ರಿಟಿಷ್ ಕೂಲಿಗಾರ ಸಮ್ಮೇಲನದ ಅಧ್ಯಕ್ಷ; ಅದರ ಕಾರ್ಯಕಾರೀ ಸಮಿತಿಯ ಶಿರಸ್ಸು. ಬುಡಕ್ಕೆ ನೀರು ಹೊಯ್ದರೆ ಕೊಂಬೆಗಳಿಗೂ ಆಯಿತೆಂಬ ಮಾರ್ಗ ಹಿಡಿದು ಚರ್ಚಿಲ್ಲರು ತನ್ನ ವಾಗ್ಧಾರೆಯನ್ನು ಪ್ರೊ. ಲಸ್ಕಿಯವರ ಮೇಲೆ ಇಳಿಬಿಟ್ಟರು. 'ತ್ರಿಮೂರ್ತೀ ಸಮ್ಮೇಳನಕ್ಕೆ ಚರ್ಚಿಲ್ಲರೊಂದಿಗೆ ಕೇವಲ ಪ್ರೇಕ್ಷಕನಾಗಿ ಆಟ್ಲೀ ಹೋಗಲಿದ್ದಾರೆ' ಎಂದ ಲಸ್ಕಿಯವರೊಂದು ಮಾತಿಗೆ ಬಣ್ಣ ಕೊಟ್ಟು, ಭಯಂಕರ ಮಾಡಿ, ರೆಕ್ಕೆ ಕಟ್ಟಿಸಿ ದಿಗಂತದಲ್ಲೆಲ್ಲಾ ಹಾರಾಡಿಸಿದ್ದರು. 'ಕೂಲಿಗಾರರ ಸರಕಾರ ಬಂದರೆ ಬೇಜವಾಬ್ದಾರಿ ಪ್ರೊಫೆಸರನಿಗೆ ಬೆಂಬಲ ಬಂದಂತೆ' ಎಂದು ಜನತೆಯನ್ನು ಬೆದರಿಸಿದ್ದರು. 'ಲಸ್ಕಿಯವರನ್ನು ರದ್ದುಗೊಳಿಸಿರಿ' ಎಂದು ಆಟ್ಲೀಯವರನ್ನು ಅಧಿಕಾರವಾಣಿಯಿಂದ ಆಜ್ಞಾಪಿಸಿದ್ದರು. ಆದರೆ ಲಸ್ಕಿಗೆ ಲಗಾಮು ಬೀಳಲಿಲ್ಲ; ಆಟ್ಲೀ ಅಲುಗಾಡಲಿಲ್ಲ; ಚರ್ಚಿಲ್ಲರಿಗೇನೇ 'ಅಧಿಕ ಪ್ರಸಂಗಿ' ಎಂಬ ಬಿರುದು ದೊರೆಯಿತು. ರಾಜರತ್ನ 'ಓರ್ಡರ್ ಓಫ್ ದಿಗಾರ್ಟರ್' ಉಡುಗೊರೆ ಬೇಡವೆಂದರೂ ಪ್ರಜೆಗಳಿಗಿತ್ತ ಈ ಬಿರುದನ್ನು ಬಿಟ್ಟು ಕೊಡುವದು ಚರ್ಚಿಲ್ಲರಿಂದಾಗದ ಕಾರ್ಯ! ಪ್ರೊಫೆಸರ್ ಲಸ್ಕಿ ಅಷ್ಟು ಬಿಗಿತದ ಮನುಷ್ಯ. ಆಟ್ಲೀಯ ಸೊಂಟಕ್ಕೆ ಲಸ್ಕಿ ಸೂತ್ರ ಬಿಗಿದಿದೆ ಎಂದು ಹಲವರನ್ನುತ್ತಾರೆ. ಆದರೆ ಸತ್ಯಾಸತ್ಯತೆ ತಿಳಿಯಬಾರದೆಂದು ಆಟ್ಲೀ ಮುಂಜಾಗ್ರತೆ ವಹಿಸಿದಂತಿದೆ. ಆದರೆ ಒಂದು ಮಾತು ಸತ್ಯ. ಲಸ್ಕಿಯ ಕೈಯಲ್ಲಿ ಕೂಲಿಗಾರ ಪಕ್ಷದ ಕಡಿವಾಣವಿರಬಹುದು; ಇಲ್ಲದಿರಬಹುದು; ಲಸ್ಕಿಗೆ ಮಾತ್ರ ಯಾವ ಕಡಿವಾಣವೂ ಇಲ್ಲ. ಆದ್ದರಿಂದ ಆಟ್ಲೀ ಸರಕಾರ ತಪ್ಪು ಮಾಡಿದಾಗ ಅದನ್ನು ತಡೆಯುವ ಅಧಿಕಾರವಿಲ್ಲವಾದರೆ ತಂಟೆ ಮಾಡುವ ಎದೆಗಾರಿಕೆಯಾದರೂ ಇದೆ. ಲಸ್ಕಿ ಇಷ್ಟರಲ್ಲೇ ಮುಂದೆ ಮುಂದೆ ಹೋಗಿಯಾಗಿದೆ. "ಜನರಲ್ ಫ್ರಾಂಕೋ, ರಾಜಾ ಲಿಯೊಪೋಲ್ಡರಂತಹ ಹಳೇ ಹದ್ದುಗಳನ್ನು ಬೇಟೆಯಾಡುವೆವು; ಭಾರತದ ಆಕಾಂಕ್ಷೆಯನ್ನು ಈಡೇರಿಸುವೆವು; ಕಟ್ಟುಗ್ರತೆಯಿಂದ ಶ್ರೀಮಂತರ ಖಾಸಗೀ ಲಾಭಗಳಿಗೆ ಅರ್ಧ ಚಂದ್ರ ಪ್ರಯೋಗಿಸುವೆವು" ಎಂದು ಲಸ್ಕಿ ಗುಡುಗಿದ್ದಾರೆ. ಸಾವಧಾನಿ ಆಟ್ಲೀಯ ಕಿವಿಗಿಂಪಾಗುವ ನಾದ ಇದಲ್ಲ. ಆದರೆ ನಿರ್ವಾಹವಿಲ್ಲ.

ಆಟ್ಲೀ-ಬೆವಿನ್-ಮೊರಿಸನ್

ಲಸ್ಕಿಯನ್ನು ಕೂಲಿಗಾರ ಪಕ್ಷದ ತಲೆಯೆಂದಿಟ್ಟುಕೊಂಡರೆ (ಇದು ಸರ್ವ ಸಮ್ಮತವಾಗಿಲ್ಲ) ಈ ಮೂವರು ಅದರ ಮುಂಡ. ಆ ವ್ಯಕ್ತಿ ಆಟ್ಲೀಯು ಹೃದಯದ ಭಾಗ. ಬೆವಿನ್—ಮೊರಿಸನ್ ಬಲ ಎಡ ಭುಜಗಳು. ವರ್ಚಸ್ಸುಳ್ಳ ಇತರರೂ ಇದ್ದಾರೆ. ಗ್ರೀನ್‌ವುಡ್, ಅನೂರಿನ್ ಬೆವಿನ್ (ಮೊದಲಿನವರು ಅರ್ನೆಸ್ಟ ಬೆವಿನ್) ಶಿನ್‌ವೆಲ್, ಕ್ರಿಪ್ಸರಂಥವರೂ ಪ್ರಭಾವಶಾಲಿಗಳೇ. ಆದರೆ ಮುಖ್ಯ ತ್ರಿಮೂರ್ತಿಗಳು ಮೇಲಿನವರೇ. ಚಾತುರ್ಯ, ಎದೆಗಾರಿಕೆ, ಚುರುಕುತನ, ಕಾರ್ಯಪಟುತ್ವಗಳ ಮಟ್ಟಿಗೆ ಬೆವಿನ್, ಮೊರಿಸನರು ಎಂತೂ ಆಟ್ಲೀಯವರನ್ನು ಹಿಂದೆಹಾಕಬಲ್ಲರು; ಆಟ್ಲೀಯನ್ನು ಎಂಟನೆ ಅಥವಾ ಒಂಭತ್ತನೆಯವನಾಗುವಂತೆ ಹಿಂದಕ್ಕೆ ಹಾಕುವ ಬೇರೆ ಸಮರ್ಥರೂ ಇದ್ದಾರೆ. ಆದರೆ ಆಟ್ಲೀಯನ್ನು ಮೊದಲಿಗನನ್ನಾಗಿ ಮಾಡಿದುದೆಂದರೆ ಅವರ ನಿರ್ಲಿಪ್ತ ಭಾವ; ಸಮತೋಲನಾ ಬುದ್ಧಿ; ಸಮಜಾಯಿಸುವಿಕೆ ಮತ್ತು ಜಾಗರೂಕತೆ. ಕೂಲಿಗಾರ ಪಕ್ಷದ ಪರಿಸ್ಥಿತಿಯು ಈ ಗುಣಗಳಿಗೇನೇ ಅಗ್ರಸ್ಥಾನ ದೊರಕಿಸಿತು. ಅಲ್ಲವಾಗಿದ್ದರೆ ನಾಯಕನಲ್ಲಿರಬೇಕಾದ ಸರ್ವ ಪ್ರಥಮ ಗುಣಗಳು ಇವಲ್ಲ; ಸಿಂಹ ಗಾಂಭೀರ್ಯ, ಅಧಿಕಾರ ದರ್ಪವಿರಬೇಕಾದುದೇ ಮುಖ್ಯ. ಆದರೆ ಕೂಲಿಗಾರ ಪಕ್ಷದಲ್ಲಿ ಇಂತಹ ಅಗ್ರಗಾಮಿಗಳು ಇಬ್ಬರಿದ್ದಾರೆ-ಬೆವಿನ್ ಮತ್ತು ಮೊರಿಸನ್. ಅವರೋ ಇವರೋ ಎಂಬ ಪ್ರಶ್ನೆ ಬರುತ್ತದೆ; ಬಂದಿದೆ. ಆಗ ಪಕ್ಷವೇ ಇಬ್ಭಾಗವಾಗುವ ಸಂಭವ. ಅಂತಹ ಅಪಾಯ ನಿವಾರಣೆಗಾಗಿ ಭಿನ್ನವರ್ಗದ ಮನುಷ್ಯ—ಎಲ್ಲಾ ಸಲ್ಲಕ್ಷಣಗಳನ್ನೂ ಮಿತ ಪರಿಮಾಣದಲ್ಲಿ ಮುದ್ದೆ ಮಾಡಿಟ್ಟಂತಿರುವ ಜನ-ಆಟ್ಲೀಯವರೇ ಮುಂದಾಳುವಾದರು; ಇದು ಎಲ್ಲರಿಗೂ ಸಮಾನ ತೃಪ್ತಿಯಿತ್ತಿದೆ; ತಕ್ಕಡಿ ಸರಿ ನಿಂತಿದೆ. ಟೋರಿ ಪಕ್ಷದಲ್ಲಿ ಇಬ್ಬರು ಚರ್ಚಿಲ್ಲರಿರುತ್ತಿದ್ದರೆ ಲೋರ್ಡ್ ಹೆಲಿಫೇಕ್ಸರೇ ಪ್ರಧಾನಮಂತ್ರಿಯಾಗುತಿದ್ದರೇನೋ! ಕೂಲಿಗಾರ ಪಕ್ಷದಲ್ಲಿ ಹಾಗಾಗಿದೆ.

ಪಕ್ಷ ಸ್ವರೂಪ

ಬ್ರಿಟನಿನ ಅಧಿಕಾರ ವಹಿಸಿರುವ ಕೂಲಿಗಾರ ಪಕ್ಷದೊಳಗೆ ವಿವಿಧ ವರ್ಗಗಳಿವೆ, ಹಲವು ಗುಂಪುಗಳಿವೆ. ಈಡೆನರಷ್ಟೇ ಮಿತಗಾಮಿಗಳಿಂದ ಹಿಡಿದು ಟ್ರಾಟ್ಸ್ಕಿಯಂತಹ ತೀಕ್ಷ್ಣವಾದಿಗಳ ವರೆಗೂ ಅಲ್ಲಿ ಇದ್ದಾರೆ. ನಿಶ್ಚಿತರ್ಥವಾಗಿ ರಶ್ಯಕ್ಕೊಲಿಯಬೇಕೆನ್ನುವವರ ಗುಂಪು—ಭಾರತದ ಭವಿಷ್ಯವನ್ನು ಭಾರತೀಯರ ಕೈಯಲ್ಲೇ ಕೊಟ್ಟುಬಿಡಬೇಕೆನ್ನುವವರ ತಂಡ-ಯಾವ ಕಡೆಗೂ ಒಲವಿಲ್ಲದಿದ್ದರೂ ಟೋರಿಗಳೊಡನೆ ವೈರ ಮಾತ್ರವಿರುವವರ ಸಂಗಡ-ಇವೆಲ್ಲಾ ಇವೆ. ಲೋರ್ಡ್ ಬೀವರ್ ಬ್ರೂಕರಂಥವರು ಕೂಲಿಗಾರಪಕ್ಷದಲ್ಲಿಯೇ ತಮಗಾಗುವವರನ್ನು ಹುಡುಕುತ್ತಿರುವದು ಈ ಭಿನ್ನಮತಗಳಿರುವುದರಿಂದಲೇ. ಆದರೆ ಮುಖ್ಯವಾಗಿ ಇಬ್ಭಾಗಮಾಡಬಹುದು--ಮಂದಗಾಮಿಗಳು ಮತ್ತು ತೀವ್ರಗಾಮಿಗಳು. ಕೂಲಿಗಾರ ನಿಶ್ಚಿತ ಕಾರ್ಯಕ್ರಮ ಬೇರಿದ್ದರೂ ಅದು ಮಂದಗಾಮಿಗಳ ಕೈಗೆ ದೊರೆತರೆ ಟೋರಿಗಳ ಪ್ರಭುತ್ವದಲ್ಲಾದುದಕ್ಕಿಂತ ಭಿನ್ನವಾದುದೇನೂ ನಡೆಯದು. ಆದರೆ ಈ ಬಾರಿ ಕೂಲಿಗಾರ ಪಕ್ಷದಲ್ಲಿ ತೀವ್ರಗಾಮಿಗಳ ಬಹುಮತವಿದೆ. ಸರಕಾರೀ ನಾವೆಯ ಚುಕ್ಕಾಣಿ ಒಂಭಾಗದಿಂದಲೇ ಬೀಳಲಿಕ್ಕಿದೆ. ಆದ್ದರಿಂದ ಆಶೆಗಾಸ್ಪದವಿದೆ. ಪ್ರಧಾನ ಮಂತ್ರಿಯಾಗಿ ಆಟ್ಲೀ, ಭಾರತ ಕಾರ್ಯದರ್ಶಿಯಾಗಿ ಪೆಥಿಕ್ ಲೋರೆನ್ಸರಂತಹ ಮಂದ ಹೆಜ್ಜೆಯವರಿದ್ದರೂ ಹಿಂಗಡೆಯಿಂದ ಒತ್ತಡ—ದೂಡಾಟ ಬೀಳುವಾಗ ಅಂಥವರೂ ಮುಂದೊತ್ತದೆ ವಿಧಿಯಿಲ್ಲ. ಮುಂದೇನೋ!

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5; 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. E.) Tollygunge, Calcutta.

ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು

★ ರಶ್ಯಾ ಜಾಪಾನಿನ ಮೇಲೆ ನೆಗೆಯಿತು! ★

'ಚಕ್ರವರ್ತಿಗಳ ಸ್ಥಾನ-ಮಾನ ಉಳಿಯಲಿ-ನಾವು ಶರಣಾಗುವೆವು'—ಜಾಪಾನ್ ಘೋಷಣೆ.

ಆಗೋಸ್ತು ತಾ. 8ನೇ ರಾತ್ರಿ ರಶ್ಯವು ಜಾಪಾನಿನ ಮೇಲೆ ಯುದ್ಧ ಸಾರಿತು; ತಾ. 9ರಲ್ಲಿ ಕೆಂಪು ಸೇನೆ ಮಂಚೂರಿಯದೊಳಗೆ ನುಗ್ಗಿತು.

ತನ್ನ ಚಕ್ರವರ್ತಿ ಮಿಕೆಡೋರವರ ವಿಶೇಷಾಧಿಕಾರಗಳಿಗೆ ಭಂಗಬಾರದಿದ್ದರೆ ಮಿತ್ರ ರಾಷ್ಟ್ರಗಳ ಪೋಟ್ಸ್ ಡಾಮ್ ಸೂಚನೆಯಂತೆ ತಾನು ಶರಣು ಬರಲು ತಯಾರಿರುವೆನೆಂದು ತಾ. 10ರಲ್ಲಿ ಜಾಪಾನು ಘೋಷಿಸಿದೆ.

ಊರೂರುಗಳನ್ನೇ ಭಸ್ಮೀಭೂತಗೊಳಿಸುವ ಪ್ರಳಯ ಚೆಂಡು 'ಅಟೋಮಿಕ್' ಬೋಂಬನ್ನು ಅಮೇರಿಕನರು ಪ್ರಯೋಗಿಸ ಹತ್ತಿದುದರಿಂದಲೂ, ರಶ್ಯವು ಅಕಸ್ಮಾತ್ ಮೇಲೇರಿ ಬಂದುದರಿಂದಲೂ ಜಾಪಾನು ನಿರ್ವಾಹವಿಲ್ಲದೆ ದೊಗ್ಗಾಲೂರಬೇಕಾಯಿತು.

ರಶ್ಯದ ಯುದ್ಧ ಘೋಷಣೆ

ತಾ.೮ರಲ್ಲಿ ಜಾಪಾನಿನ ಪಾಲಿಗೆ ದ್ವಿತೀಯ 'ಅಟೋಮಿಕ್' ಬೋಂಬು ಸಿಡಿಯಿತು. ರಶ್ಯವು ಜಾಪಾನಿನ ಮೇಲೆ ಯುದ್ಧ ಸಾರಿತು. ಸೋವಿಯೆಟ್ ವಿದೇಶಮಂತ್ರಿ ಎಮ್. ವೆಚಿಸ್ಲಾವ್ ಮೊಲಟವರು ಮೋಸ್ಕೋದಲ್ಲಿ ಜಾಪಾನ್ ರಾಯಭಾರಿಯಾಗಿದ್ದ ನವೊಟಕೆ ಸಾಟೋನನ್ನು ಕರೆಯಿಸಿ 'ನಾಳೆಯಿಂದ ರಶ್ಯವು ಜಾಪಾನಿನ ಮೇಲೆ ಯುದ್ಧಕ್ಕಿಳಿಯುವದು' ಎಂಬ ಸೂಚನೆ ಕೊಟ್ಟರು. "ನಮ್ಮ ಮಿತ್ರ ರಾಷ್ಟ್ರಗಳು ಜಾಪಾನ್ ವಿರುದ್ಧ ಯುದ್ಧದಲ್ಲಿ ಭಾಗವಹಿಸಬೇಕೆಂದು ವಿಜ್ಞಾಪಿಸಿಕೊಂಡಿವೆ. ಮಿತ್ರ ಧರ್ಮಕ್ಕನುಸಾರವಾಗಿ ನಾಳೆಯಿಂದ ರಶ್ಯವು ಜಾಪಾನಿನೊಡನೆ ಯುದ್ಧ ನಿರತವಾಗುವದು" ಎಂದು ಮೊಲಟೊವ್ ಕಾರಣ ಕೊಟ್ಟರು. ಈ ನಿರ್ಧಾರವನ್ನು ಅಮೇರಿಕ, ಬ್ರಿಟಿಷ್ ಸರಕಾರಗಳಿಗೆ ತಿಳಿಸಲಾಗಿದೆ. ಅವು ಸಮಾಧಾನ ವ್ಯಕ್ತಪಡಿಸಿವೆ. ಚೀನೀ ಜನತೆಯ ಪರವಾಗಿ ಜನರಲಿಸಮೋ ಚಿಯಾಂಗ್ ಕೈಶೇಕರು ಜನರಲಿಸಮೋ ಸ್ಟಾಲಿನರಿಗೆ ಹೃತ್ಪೂರ್ವಕ ಅಭಿನಂದನೆ ಕಳುಹಿದ್ದಾರೆ.

ಶಾಂತಿ ಸಾಮೀಪ್ಯಕ್ಕಾಗಿ

ತಾ. ೮ನೇ ರಾತ್ರಿ ಮೋಸ್ಕೋ ರೇಡಿಯೋ ತನ್ನ ನಿಶ್ಚಿತ ಕಾರ್ಯಕ್ರಮಗಳನ್ನು ಬದಿಗಿಟ್ಟು ಪ್ರಪಂಚದ ಪಾಲಿಗೊಂದು ಕೌತುಕೋದ್ವೇಗದ ಬೋಂಬಾಗಿ ಮೊಲಟವರ ಯುದ್ಧ ಜಾಹೀರುನಾಮೆಯನ್ನು ಸಿಡಿಯಿಸಿತು: "ಜಾಪಾನು ಶರಣುಬರಲು ನಿರಾಕರಿಸಿದೊಡನೆ, ಮಿತ್ರರಾಷ್ಟ್ರಗಳು ಯುದ್ಧಾವಧಿಯನ್ನು ಕಡಿಮೆಮಾಡುವದಕ್ಕಾಗಿ, ಯುದ್ಧಾಹುತಿಗಳ ಸಂಖ್ಯೆ ತಗ್ಗಿಸುವದಕ್ಕಾಗಿ, ಹಾಗೂ ಸಾರ್ವತ್ರಿಕ ಶಾಂತಿಯನ್ನು ಬೇಗನೇ ಸ್ಥಾಪಿಸುವದಕ್ಕಾಗಿ ಜಾಪಾನ್ ಆಕ್ರಮಣದ ವಿರುದ್ಧ ಯುದ್ಧದಲ್ಲಿ ಸಹಭಾಗಿಯಾಗಬೇಕೆಂದು ರಶ್ಯವನ್ನು ವಿಜ್ಞಾಪಿಸಿಕೊಂಡವು. ಮಿತ್ರ ಧರ್ಮಕ್ಕನುಸಾರವಾಗಿ ಸೋವಿಯೆಟ್ ರಶ್ಯವು ಆ ಆಮಂತ್ರಣವನ್ನು ಸ್ವೀಕರಿಸಿದೆ; ಮಿತ್ರರು ಜುಲಾಯಿ ತಾರೀಕು 26 ರಲ್ಲಿ ಮಾಡಿದ ಆ ಘೋಷಣೆಗೆ ತನ್ನ ಸಹಕಾರವನ್ನಿತ್ತಿದೆ. ತಾನಿಂತಹ ಧೋರಣೆ ವಹಿಸಿದರೇನೇ ಶಾಂತಿಯನ್ನು ಸಮೀಪಕ್ಕೆ ತರಬಹುದು—ಇನ್ನೂ ಹೆಚ್ಚಿನ ಬಲಿದಾನ ಮತ್ತು ಸಂಕಷ್ಟಗಳಿಂದ ಜನತೆಯನ್ನು ಪಾರುಮಾಡಬಹುದು-ನಿಶ್ಶರ್ತವಾಗಿ ಶರಣು ಬರಲು ತಿರಸ್ಕರಿಸಿ ಜರ್ಮನಿಯನುಭವಿಸಿದಂತಹ ದುರಂತಗಳನ್ನೇ ಜಾಪಾನರೂ ಅನುಭವಿಸುವ ಬದಲಿಗೆ ಅಪಾಯ ಮತ್ತು ಅನಾಹುತಗಳನ್ನು ತಪ್ಪಿಸಿಕೊಳ್ಳಲು ಜಾಪಾನ್ ಜನತೆಗೊಂದು ಸಂದರ್ಭವೊದಗಿಸಬಹುದು-ಎಂದು ಸೋವಿಯೆಟ್ ಸರಕಾರದ ಅಭಿಪ್ರಾಯವಿದೆ. ಇದಕ್ಕನುಸಾರವಾಗಿ ನಾಳೆ, ಆಗೋಸ್ತು 9 ರಿಂದ ಸೋವಿಯೆಟ್ ಯೂನಿಯನ್ ಜಾಪಾನಿನೊಡನೆ ಯುದ್ಧದಲ್ಲಿದೆ ಎಂದು ಸೋವಿಯೆಟ್ ಸರಕಾರವು ಜಾಹೀರುಮಾಡುತ್ತದೆ".

ಆಕ್ರಮಣಾರಂಭ

ತಾ. ೮ನೇ ಬುಧವಾರ ಮಧ್ಯ ರಾತ್ರಿ ಕಳೆದೊಡನೆಯೇ ಅಕಸ್ಮಾತ್ತಾಗಿ ಕೆಂಪು ಸೇನೆ ಸೋವಿಯೆಟ್ ಗಡಿದಾಟಿ ಮಂಚೂರಿಯದೊಳಗೆ ನುಗ್ಗಿ ಹೋಗಲಾರಂಭಿಸಿತು ನೆಲ ಸೇನೆಗೆ ಬೆಂಬಲವಾಗಿ ರಶ್ಯನ್ ವಿಮಾನಗಳು ಮಂಚೂರಿಯದ ಮೇಲೆ ಬೋಂಬುಸೆಯಹತ್ತಿದವು. ಮಂಚೂರಿಯದ ಪೂರ್ವಪಶ್ಚಿಮ ಗಡಿಗಳೊಳಗೆ ರಶ್ಯನ್ ಸೇನೆ ಧಾವಿಸಿ ಬಂದಾಗ, ಜಾಪಾನ್ ಮತ್ತು ಮಂಚುಕೋ ಸೇನೆಗಳ ಪ್ರತಿಭಟನೆಗಾರಂಭ; ಅದೇ ರಶ್ಯಾ-ಜಾಪಾನ್ ಯುದ್ಧ ಪ್ರಾರಂಭ. ಅಂದೇ ಅಪರಾಹ್ನ ಕೊರಿಯಾದೊಳಗೂ ಕೆಂಪು ಸೇನೆ ನುಗ್ಗಿತು. ಸಖಾಲಿನ್ ಮತ್ತು ಜಾಪಾನಿನ ಅತ್ಯುತ್ತರ ದ್ವೀಪವಾದ ಕರಾಫುಟೋವನ್ನು ಸೋವಿಯೆಟ್ ಸೇನೆಯಾಕ್ರಮಿಸ ಹತ್ತಿತು. ಯುದ್ಧ ಪ್ರವೇಶಿಸಿ ಎರಡು ದಿನ ಪೂರ್ತಿಯಾಗುವ ಮೊದಲೇ ಕೆಂಪು ಸೇನೆಯು ಮಂಚೂರಿಯದ ಹೃದಯ ಭಾಗದೊಳಗೆ 106 ಮೈಲು ದೂರಕ್ಕೆ ಮುಂದೊತ್ತಿ ಹೋಯಿತು. ಇಂತಹ ಮುಂದೋಟವು ಕ್ಷಿಪ್ರತೆಗೆ ಹೆಸರು ಹೋದ ಈಗಿನ ಯುದ್ಧದಲ್ಲಿ ಕೂಡಾ ಒಂದು ಅದ್ಭುತವೇ ಸರಿ. ಇದೇ ಸಮಯದಲ್ಲಿ ಅತ್ತ ಜಾಪಾನಿನ ಎರಡು ಮುಖ್ಯ ನಗರಗಳಲ್ಲಿ 'ಅಟೋಮಿಕ್' ಬೋಂಬಿನ ಹೊಗೆಯೇಳುತ್ತಲೇ ಇತ್ತು; ಇತರ ನಗರಗಳ ಮೇಲೆ ಮಿತ್ರರ ನಿತ್ಯದ ಆಕಾಶ ಹೊಡೆತ ರಭಸದಿಂದ ನಡೆದಿತ್ತು.

ಶರಣು ಸೂಚನೆ

ಕೆಂಪು ಸೇನೆಯು ಹೆಜ್ಜೆ ಜಾಪಾನ್ ನೆಲದಲ್ಲಿ ಮೂಡಿದ ಮರುದಿನ-ತಾ. 10ರಲ್ಲೇ ಜಾಪಾನ್ ಮಿತ್ರರಿಗೆ ಶರಣಾಗಲೊಪ್ಪಿತು. ಆದರ ವಿಶೇಷ ಶರ್ತವೆಂದರೆ ಒಂದು ಸ್ಪಷ್ಟೀಕರಣ ಕೇಳಿದುದಷ್ಟೆ. "ಮಿಕೇಡೋರವರ ಚಕ್ರವರ್ತಿತ್ವದ ವಿಶೇಷಾಧಿಕಾರಗಳಿಗೆ ಭಂಗಬರುವಂತಹದಾವುದೂ ಇಲ್ಲವಾದರೆ ಪೋಟ್ಸ್‌ಡಾಮ್ ಸಮ್ಮೇಲನದ ಶರ್ತಗಳನ್ನು ಅಂಗೀಕರಿಸಲು ಜಾಪಾನ್ ಸಿದ್ಧವಿದೆ" ಎಂದು ಜಾಪಾನಿನ ಆಕಾಶವಾಣಿ ಘೋಷಿಸಿದಾಗ ಮಿತ್ರ ರಾಷ್ಟ್ರಗಳ ರಾಜಧಾನಿಗಳು ಆನಂದದ ಅಮಲಿನಿಂದ ಕುಣಿದಾಡಿದುವು. ಇದೊಂದು ಸೂಚನೆ ದೊರೆತುದೇ ತಡ. ಬ್ರಿಟನಿನ ಸಾಮೂಹಿಕ ಆನಂದ ಪ್ರದರ್ಶನದ ಕೇಂದ್ರವಾಗಿರುವ ಲಂಡನಿನ ಪಿಕಾಡಿಲ್ಲಿ ಸರ್ಕಸ್ ಆನಂದೋನ್ಮತ್ತ ಜನಸಂದಣಿಯಿಂದ ತುಂಬಿ ಹೋಯಿತು. ಜಯಘೋಷಗಳ ರಂಪಾಟ-ಧ್ವಜಗಳ ಹಾರಾಟ-ಕಾರುಗಳ ಮೂಡನ್ನೇರಿ ಘೋಷಣೆಯೆಬ್ಬಿಸುತ್ತಾ ಓಡಾಟ-ಗೊಂದಲವೇ ಗೊಂದಲ! ದುರ್ಸುಬಾಣಗಳ ಹಾರಾಟ ನಡೆಯಿತು; ವಾಹನ ವ್ಯವಸ್ಥೆಗಾಗಿ ಸೈನಿಕರು ಮತ್ತು ಪೋಲೀಸರು ಬರಬೇಕಾಯಿತು. ಯುದ್ಧಾವಶೇಷವಾಗಿ ಇನ್ನೂ ಹೊಯಿಗೆ ಚೀಲಗಳ ಗಿಡ್ಡ ಪ್ರಾಕಾರದಿಂದ ಶೋಭಿಸುತ್ತಿರುವ ಪಿಕೇಡಿಲ್ಲಿ ಸರ್ಕಸ್ ವಲಯದಲ್ಲಿ ಯೋಧರು, ನಾವಿಕರು, ವೈಮಾನಿಕರು, ನಾಗರಿಕರು ನೆರೆದು ಬ್ರಿಟಿಷ್, ಅಮೇರಿಕ ಮತ್ತು ರಶ್ಯದ ರಾಷ್ಟ್ರಗೀತೆಗಳನ್ನು ಆನಂದೋದ್ರೇಕದಿಂದ ಹಾಡುತ್ತಿದ್ದರು. ವಾಷಿಂಗ್ಟನಿನ ಜನತೆಯು ಲಂಡನಿನವರಂತೆ ಆನಂದಗೊಳ್ಳುವ ಬದಲಿಗೆ ಆತುರಗೊಂಡಿತ್ತು. ಶರಣು ಸೂಚನೆ ಬಂದಿದ್ದರೂ ಅದು ಅಂಗೀಕೃತವಾಯಿತೇ, ಯುದ್ಧ ನಿಂತಿತೇ, ಎಂಬ ಅಧಿಕೃತ ವಾರ್ತೆಗಾಗಿ ಜನಸಮುದ್ರ 'ಶ್ವೇತ ಭವನ'ವನ್ನು ಮುತ್ತಿಗೆ ಹಾಕಿ ನಿರಾಶೆಗೊಂಡು ಮರುಳಬೇಕಾಯಿತು. ಚೀನದ ರಾಜಧಾನಿ ಚುಂಕಿಂಗಿನ ಆನಂದವಂತೂ ಸಹಜವಾಗಿ ಅನ್ಯಾದೃಶ್ಯವಿದ್ದಿತು. ಆನಂದೋದ್ರೇಕದ ವರ್ತನೆಗಳನ್ನು ಸರ್ವತ್ರ ಕಾಣಬಹುದಾಗಿತ್ತು; ಜಾಪಾನ್ ಅಷ್ಟು ಬೇಗನೇ ಶರಣಾಯಿತೆಂಬುದನ್ನು ಜನರು ನಂಬದಾದರು; ಅವರ ಆತುರ ಅಸಹನೀಯವಾಯಿತು. ಆನಂದ ಪ್ರವಾಹ ಕಟ್ಟೊಡೆದು ಹರಿಯಿತು ಇಡೀ ಪ್ರಪಂಚದಲ್ಲೇ ಆ ಮುಹೂರ್ತದಲ್ಲೊಮ್ಮೆ ಆನಂದ ಮತ್ತು ಆಶ್ಚರ್ಯಗಳ ವಿನಹ ಬೇರೆ ಭಾವನೆಯೇ ಇಂದಿಲ್ಲವೆನ್ನಬಹುದು.

ಜಾಪಾನ್ ಬೇಡಿಕೆಯೇನು?

[illegible], [illegible], ಚೀನಾ, ರಶ್ಯಾಗಳಿಗೆ ತಟಸ್ಥ ರಾಷ್ಟ್ರಗಳಾದ ಸ್ವಿಸ್ ಮತ್ತು ಸ್ವೀಡಿಶ್ ರಾಷ್ಟ್ರಗಳ ಮೂಲಕ ಜಾಪಾನು ತನ್ನ ಈ ಕೆಳಗಿನ ಶರಣು ಶರ್ತವನ್ನು ರವಾನಿಸಿದೆ: 'ಲೋಕ ಶಾಂತಿ ಸ್ಥಾಪನೆಯಲ್ಲಿ ಸದಾ ಆತುರರಾಗಿರುವ ನಮ್ಮ ಚಕ್ರವರ್ತಿಗಳ ಗೌರವಾರ್ಹ ಆಜ್ಞಾಗಾಮೀನವಾಗಿ, ಯುದ್ಧ ಮುಂದೊತ್ತುವದರಿಂದಾಗುವ ಅನಾಹುತಗಳಿಂದ ಮಾನವ ಜನಾಂಗವನ್ನು ಪಾರುಮಾಡಲು ರಣಾಂದೋಲನವನ್ನು ನಿಲ್ಲಿಸುವ ಮಹದಿಚ್ಛೆಯಿಂದ, ವೈರಿ ರಾಷ್ಟ್ರಗಳೊಳಗೆ ಸಂಧಾನಮಾಡಿ ಹಾಕಬೇಕೆಂದು ಜಾಪಾನ್ ಸರಕಾರವು ಕೆಲವು ವಾರಗಳಿಗೆ ಮೊದಲೇ ಆಗ ತಾಟಸ್ಥ್ಯ ಸಂ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾಸೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜಾಪಾನ್ ಶರ್ತಸಹಿತ ಶರಣುಯಾಚಿಸಿದೆ!

ಬಂಧವಿದ್ದ ಸೋವಿಯೆಟ್ ಸರಕಾರವನ್ನು ಕೇಳಿಕೊಂಡಿದ್ದಿತು. ದುರ್ದೈವವಶಾತ್, ಈ ಶಾಂತಿಯಾತ್ರದ ಪ್ರಯತ್ನ ನಿರರ್ಥಕವಾಯಿತು. ಚಕ್ರವರ್ತಿ ಪ್ರಭುಗಳ ಸಾರ್ವತ್ರಿಕ ಶಾಂತಿ ಸ್ಥಾಪನೆಯ ಘನೋದ್ದೇಶಕ್ಕನುಗುಣವಾಗಿಯೂ, ಅಪರ್ಣನೀಯ ಸಂಕಷ್ಟಗಳನ್ನು ಸಾಧ್ಯವಿದ್ದಷ್ಟು ಬೇಗನೇ ಮುಕ್ತಾಯಗೊಳಿಸಬೇಕೆಂಬ ಉದ್ದೇಶದಿಂದಲೂ ಜಾಪಾನ್ ಸರಕಾರವು ಈ ಕೆಳಗಿನ ನಿರ್ಧಾರವಮಾಡಿದೆ:—ಪ್ರಭುವರ್ಯರ ಚಕ್ರವರ್ತಿತ್ವದ ವಿಶೇಷಾಧಿಕಾರಗಳಿಗೆ ತೊಡಕಾಗದಿದ್ದಲ್ಲಿ, ಪೋಟ್ಸ್‌ಡಾಮಿನಿಂದ ಅಮೇರಿಕ, ಬ್ರಿಟನ್, ಚೀನಗಳು ಜುಲಾಯಿ ತಾ. 26ರಲ್ಲಿ ಹೊರಡಿಸಿ, ಈಗ ತಾನೇ ಸೋವಿಯೆಟ್ ರಶ್ಯವೂ ಪಾಲುಗಾರಿಕೆ ವಹಿಸಿರುವ, ಶರ್ತಗಳನ್ನು ಅಂಗೀಕರಿಸಲು ಜಾಪಾನೀ ಸರಕಾರ ತಯಾರಿದೆ. ಈ ಒಪ್ಪಂದಕ್ಕೊಂದು ಭರವಸೆ ದೊರೆಯುವದೆಂದು ಜಾಪಾನ್ ಸರಕಾರವು ಯಥಾರ್ಥವಾಗಿ ಆಶಿಸುತ್ತಿದೆಯಲ್ಲದೆ, ಅತಿ ಬೇಗನೇ ಆ ಸಂಬಂಧವ ಸ್ಪಷ್ಟ ಸೂಚನೆ ಬರುವದೆಂಬ ಗಾಢ ಬಯಕೆಯುಳ್ಳಿದೆ'

ಜುಲಾಯಿ ಮಧ್ಯ ಭಾಗದಲ್ಲಿ ಸಂಧಾನ ಮಾಡಿಸಬೇಕೆಂಬ ಸೂಚನೆಯು ಪ್ರತ್ಯಕ್ಷ ಜಾಪಾನ್ ಚಕ್ರವರ್ತಿಗಳಿಂದಲೇ ರಶ್ಯಕ್ಕೆ ಬಂದಿತ್ತೆಂದೂ ರಶ್ಯವದನ್ನು ತಿರಸ್ಕರಿಸಿದ್ದಿತೆಂದೂ, ಮೊಲಟವರು ಯುದ್ಧ ಘೋಷಿಸಿದೊಡನೆ ಬಹಿರಂಗಪಡಿಸಿದ್ದರು. ತ್ರಿಮೂರ್ತಿ ಸಮ್ಮೇಲನದಲ್ಲಿ ಸ್ಟಾಲಿನರು ದ್ವಿಮೂರ್ತಿಗಳಿಗದನ್ನು ತಿಳಿಸಿದ ಮೇಲೆಯೇ ಪೋಟ್ಸ್‌ಡಾಮ್ ಶರಣು ಶರ್ತಗಳ ಘೋಷಣೆಯಾಗಿದ್ದಿತು.

ಜಾಪಾನಿನ ಕೊನೆಯ ಶರಣು ಸೂಚನೆಯು ವಾಷಿಂಗ್ಟನ್, ಲಂಡನ್, ಚುಂಕಿಂಗ್, ಮೋಸ್ಕೋಗಳಿಗೆ ರವಾನಿಸಲ್ಪಟ್ಟು ಗಾಢ ಪರ್ಯಾಲೋಚನೆ ನಡೆದಿದೆ; ಚತುರ್ರಾಷ್ಟ್ರಗಳ ನಾಯಕರು ಸಮ್ಮೇಲನ ಸೇರಿ ವಿಶೇಷ ಯೋಚನೆ ನಡೆಸಿದ್ದಾರೆ.

ಕಳದ 9ರಿಂದ 10ನೇ ಮುಂಜಾನೆವರೆಗೆ ನಡೆದ ಜಾಪಾನ್ ಮಂತ್ರಿ ಮಂಡಲದ ಸಭೆಯಲ್ಲಿ ಒಮ್ಮತದಿಂದ ಸಂಧಿಯಾಚನೆಯ ನಿರ್ಧಾರವಾಯಿತೆಂದೂ ಯುದ್ಧ ಮತ್ತು ನಾವೆಯ ಮಂತ್ರಿಗಳು ಅಲ್ಲಿ ಹಾಜರಿದ್ದರೆಂದೂ ತಿಳಿದು ಬರುತ್ತದೆ.

ಪೋಟ್ಸ್‌ಡಾಮ್ ಶರ್ತಗಳೇನು?

ಪೋಟ್ಸ್‌ಡಾಮಿನಿಂದ ಜಾಪಾನಿಗೆ ಕಳುಹಿಸಿದ ಶರಣು ಶರ್ತಗಳ ಸಾರಾಂಶವಿಷ್ಟು: ಜಾಪಾನನ್ನು ಆಕ್ರಮಣಶೀಲರಾಷ್ಟ್ರವಾಗಿ ಮುನ್ನಡೆಸಿದವರೆಲ್ಲರ ಅಧಿಕಾರ ಮತ್ತು ಪ್ರತಿಷ್ಠೆಗೆ ಶಾಶ್ವತ ಸಮಾಧಿಯಾಗಬೇಕು; ಜಾಪಾನ್ ಭೂಮಿಯಲ್ಲಿ ಯಾವ್ಯಾವ ಮಾರ್ಮಿಕ ಸ್ಥಳಗಳನ್ನು ತಾವಾಕ್ರಮಿಸಿನಿಲ್ಲಬೇಕೆಂಬುದನ್ನು ಮಿತ್ರ ರಾಷ್ಟ್ರಗಳೇ ನಿರ್ಧರಿಸಬೇಕು; ಜಾಪಾನೀ ಪ್ರಭುತ್ವವು ಮುಖ್ಯ ಜಾಪಾನೀ ದ್ವೀಪಗಳಾದ ಹೊಕ್ಕಾಯಿಡೋ, ಕ್ಯುಶು, ಶಿಕೋಕು, ಹೊನ್ಶು ಮತ್ತು ಕೆಲವು ಸಣ್ಣ ದ್ವೀಪಗಳ ಮೇಲೆ ಮಾತ್ರ ಉಳಿಯತಕ್ಕದ್ದು; ಕೈರೋ ಜಾಹೀರುನಾಮೆಯಂತೆ ಜಾಪಾನ್ ಗೆದ್ದುಕೊಂಡ ಎಲ್ಲಾ ಸ್ಥಳಗಳನ್ನೂ ಬಿಟ್ಟುಕೊಡತಕ್ಕದ್ದು; ಜಾಪಾನ್ ಸೇನೆಗಳ ಪೂರ್ಣ ನಿಶ್ಶಸ್ತ್ರೀಕರಣವಾಗಬೇಕು; ಜಾಪಾನ್ ರಾಷ್ಟ್ರವನ್ನು ದಾಸ್ಯದಲ್ಲಿಡಲಾಗುವದಿಲ್ಲ—ಆದರೆ ಯುದ್ಧಾಪರಾಧಿಗಳೆಲ್ಲರಿಗೂ ಕಠಿಣ ಪ್ರಾಯಶ್ಚಿತ್ತವಾಗಬೇಕು; ಪ್ರಜಾಸತ್ತೆಯ ಪುನರುತ್ಥಾನವಾಗದಂತೆ ಜಾಪಾನ್ ಸರಕಾರ ಹಾಕಿರುವ ಎಲ್ಲಾ ತಡೆಗಳನ್ನೂ ಕಿತ್ತುಹಾಕಿ, ಭಾಷಣ, ಧಾರ್ಮಿಕ ಮತ್ತು ಯೋಚನಾ ಸ್ವಾತಂತ್ರ್ಯವನ್ನೀಯಬೇಕು. ಪೋಟ್ಸ್‌ಡಾಮ್ ಶರ್ತಗಳಲ್ಲಿ ಜಾಪಾನ್ ಚಕ್ರವರ್ತಿಗಳ ಪ್ರಸ್ತಾಪವಿರಲಿಲ್ಲ. ಅದಕ್ಕೆ ಕಾರಣವಿತ್ತು; ಸ್ಟಾಲಿನರಿಗೆ ಆ ಮೊದಲೇ ಚಕ್ರವರ್ತಿಗಳ ಹೆಸರಿನಿಂದ ಸಂಧಿಸೂಚನೆ ಬಂದಿದ್ದುದರಿಂದ ಜಾಪಾನಿನ ಯುದ್ಧ ನಾಯಕರ ಇಚ್ಛೆಗೆ ವಿರುದ್ಧವಾಗಿ ಮಿಕೇಡೋರವರು ಶಾಂತಿಯಾಚಿಸಿದ್ದರೆಂದು ಮಿತ್ರ ಪ್ರಮುಖರೂಹಿಸಿದ್ದರು. ಅದಕ್ಕನುಗುಣವಾಗಿ ಜಾಪಾನಿನಲ್ಲಿ ಅಂತಃಕಲಹವೇಳುವದನ್ನು ಅವರು ನಿರೀಕ್ಷಿಸಿದ್ದರು ಹೊರತು ಜಪಾನು ಹೀಗೆ ಶರಣಾಗುವದೆಂಬ ಭಾವನೆಯಿರಲಿಲ್ಲ ಆದ್ದರಿಂದ ಆಗ ಚಕ್ರವರ್ತಿಗಳ ಹೆಸರನ್ನು ಉದ್ದೇಶಪೂರ್ವಕ ಬಿಟ್ಟು, ಶಾಂತಿ ಶರ್ತಗಳನ್ನು ಸಾಧ್ಯವಿದ್ದಷ್ಟು ಮೃದುಗೊಳಿಸಿದ್ದರೂ ಈಗ ಆ ಶರ್ತಗಳಲ್ಲಿ ಚಕ್ರವರ್ತಿಗಳಿಗೆ ಲಗಾವಾಗುವದನ್ನು ಹೆಕ್ಕಲಾರಂಭಿಸಿದ್ದಾರೆ. 'ಜಾಪಾನನ್ನು ಯುದ್ಧಕ್ಕಿಳಿಸಿದವರ ಅಧಿಕಾರ ಮತ್ತು ವರ್ಚಸ್ಸಿಗೆ ಶಾಶ್ವತ ಸಮಾಧಿ'ಯಾಗಬೇಕೆಂಬ ಶರ್ತವು ಮುಖ್ಯವಾಗಿ ಚಕ್ರವರ್ತಿಗೆ ಲಗಾವಾಗಬೇಕೆಂಬ ವಾದವೆದ್ದಿದೆ.

ಚೀನದ ಅಸಮ್ಮತಿ

ಜಾಪಾನಿನ ಮಿಕೇಡೋ ಹಿರೋಹಿಟೋನಿಗೆ ಅರ್ಧಚಂದ್ರ ಪ್ರಯೋಗವಾಗಲೇಬೇಕೆಂಬ ಕಟ್ಟುಗ್ರ ಹಠವನ್ನು ಚೀನ ಪ್ರದರ್ಶಿಸಿದಷ್ಟು ಮಿಕ್ಕವರು ತೋರಿಸಿಲ್ಲ. ಅರಮನೆಯೇ ಜಾಪಾನ್ ನಾಜಿತ್ವದ ಮೂಲವೆಂದು ಚುಂಕಿಂಗಿನ ಅಭಿಪ್ರಾಯ. ಜಾಪಾನರ ರಾಷ್ಟ್ರಾಭಿಮಾನದ ಜೀವಾಳವೇ ರಾಜಭಕ್ತಿ; ೨೦ನೇ ಶತಮಾನದಲ್ಲಿ ಇಡೀ ಪ್ರಪಂಚದಲ್ಲೆಲ್ಲಿಯೂ ಕಾಣಸಿಗದಂತಹ ಅಂಧವಿಶ್ವಾಸ ಜಾಪ್ ಪ್ರಜೆಗಳಿಗೆ ರಾಜನ ಮೇಲಿದೆ. ಯಾವ ಕಾರಣದಿಂದಾದರೂ ರಾಜಾಜ್ಞೆಯನ್ನು ಪಾಲಿಸಲಾಗದ ತಪ್ಪಿಗಾಗಿ 'ಹರಿಕಿರಿ' ಮಾಡಿಕೊಳ್ಳುವದು ಜಾಪಾನರ ಸಾಮಾನ್ಯ ದರ್ಮ. ತಮ್ಮ ಚಕ್ರವರ್ತಿ ಯುದ್ಧ ಕೈದಿಯಾಗುವನೆಂದಾದರೆ ಒಬ್ಬ ಜಾಪಾನನು ಉಳಿಯುವ ವರೆಗೂ ಹೋರಾಟವಿದೆಯೆಂಬುದು ಖಂಡಿತ. ಜಾಪಾನಿನ ರಾಜತ್ವವನ್ನು ಕೀಳಬೇಕಾದರೆ ಜಾಪಾನ್ ನೆಲದ ಕೊನೆಯ ಇಂಚಿನ ವರೆಗೂ ಮುಂದೊತ್ತಬೇಕು. ಆದ್ದರಿಂದ 'ಸದ್ಯದ ರಾಜನು ಅಧಿಕಾರ ತ್ಯಾಗಮಾಡಬೇಕು'; 'ಆತನು ಇದ್ದಂತೆಯೇ ಪ್ರಜಾಪ್ರಭುತ್ವ ಸ್ಥಾಪಿಸಬೇಕು' ಇತ್ಯಾದಿ ಸೂಚನೆಗಳು ಬರುತ್ತಿವೆ. ಚೈನದ ಪ್ರಮುಖ ಪತ್ರಿಕೆ 'ಟಾಕುಂಗ್ ಪಾವೋ' ಹೇಳುತ್ತಿದೆ "ಜಾಪಾನಿನ ಚಕ್ರವರ್ತಿತ್ವವೇ ಜಾಪಾನೀ ಫೇಸಿಸಮಿನ ಮೂಲಬುಗ್ಗೆ ಮತ್ತು ಸ್ಫುರಣೆಯ ದುರ್ಗ. ಅದೆಂದರೆ ಚರಿತ್ರೆಯ ಪ್ರಗತಿಯನ್ನೇ ತಡೆಗಟ್ಟುವ ಅತ್ಯಂತ ಸಮಸ್ಯಾತ್ಮಕ ದೈತ್ಯ!"

ಅಮೇರಿಕದ ಸಮ್ಮತಿ

ಜಾಪಾನ್ ಚಕ್ರವರ್ತಿಯ ಸ್ಥಾನಮಾನವನ್ನೊಪ್ಪಿಕೊಳ್ಳಲು ಎಲ್ಲರಿಗಿಂತ ಒಂದು ಹಜ್ಜೆ ಮುಂದಿರುವ ರಾಷ್ಟ್ರವೆಂದರೆ ಅಮೇರಿಕ. ಇದುವರೆಗೂ ಜಾಪಾನ್ ಯುದ್ಧದ ಮುಕ್ಕಾಲಂಶ ಹೊಣೆ ಹೊತ್ತಿದ್ದ ಅಮೇರಿಕವು ಆದಿಯಿಂದಲೂ ಚಕ್ರವರ್ತಿಯ ವ್ಯಕ್ತಿತ್ವ ವಿರುದ್ಧವಾದ ಒಂದೇ ಒಂದು ಶಬ್ದವನ್ನಾಡಿಲ್ಲ. ಅಲ್ಲಿಯ ಅಧಿಕೃತ ಹೇಳಿಕೆಗಳೂ, ಅಧಿಕಾರಿಗಳೂ, ಚಕ್ರವರ್ತಿಗಳು ವಿಮರ್ಶಾತೀತರೆಂಬ ಧೋರಣೆ ವಹಿಸಿದಂತಿದೆ. "ಅವರ ಮೇಲಿನ ವ್ಯಕ್ತಿಗತ ಟೀಕೆಯು ಜನತೆಯಲ್ಲಿ ಉದ್ರೇಕವೆಬ್ಬಿಸಬಹುದು. ಜಾಪಾನಿನ ಸಂಬಂಧವಾಗಿ ನನ್ನ ಮಾತೆಷ್ಟು ನಡೆಯಬಹುದೋ ಹಿರೊಹಿಟೋನದೂ ಅಷ್ಟೇ" ಎಂದು ಅಮೇರಿಕದ ಯುದ್ಧ ಸುದ್ದಿಖಾತೆಯ ಮೂಲಾಧಿಕಾರಿ ಮಿ. ಎಲ್ಮೆರ್ ಡೇವಿಸನೆಂದಿದ್ದ. ಅಮೇರಿಕದ ಅಧಿಕಾರಿ ವರ್ಗದಲ್ಲಿ ಭಿನ್ನಾಭಿಪ್ರಾಯವೇನೋ ಇದೆ. ಆದರೆ ಚಕ್ರವರ್ತಿಯನ್ನು ಮಾನಮರ್ಯಾದೆ ಮಾತ್ರ ಪಡೆಯುವ 'ಗೊಂಬೆ ರಾಜ'ನಾಗಿ ಉಳಿಯಗೊಡಿಸುವದು ನಿಶ್ಶರ್ತ ಶರಣು ಶರ್ತಕ್ಕೆ ವಿರುದ್ಧವಲ್ಲವೆಂದೇ ಎಲ್ಲರ ಮತ. ಜಾಪಾನರ ಯುದ್ಧೋನ್ಮತ್ತ ನಾಯಕರ ಅಹಂಕಾರ ಭಂಗವಿನ್ನೂ ಆಗಿಲ್ಲ; ಜಾಪಾನರಿಂದ ಶಸ್ತ್ರ ಕೆಳಗಿಡಿಸಿ, ಏನೊಂದೂ ಗೊಂದಲವಿಲ್ಲದೆ ಶಾಂತಿ ಸ್ಥಾಪಿಸಲು ಚಕ್ರವರ್ತಿಯಿಂದ ಮಾತ್ರ ಸಾಧ್ಯವೆಂಬ ಭಾವನೆ ಅಮೇರಿಕಾನರಲ್ಲಿದೆ. ಬಹುಶಃ ಜಾಪಾನಿನ ಜನತೋದ್ರೇಕಕ್ಕಂಜಿ—ಅಲ್ಲಿಯ ಜನಜೀವನದ ಅಭೇದ್ಯ ಅಂಕುಶವಾದ ಚಕ್ರವರ್ತಿಯಲ್ಲದೆ ಹೋದರೆ ಆಂತರಿಕ ಅವ್ಯವಸ್ಥೆಯೇಳುವದನ್ನು ನಿರೀಕ್ಷಿಸಿ—ಅಮೇರಿಕವು ಮಿಕೆಡೋ ಸ್ಥಾನಮಾನವುಳಿಸಲು ತಯಾರಿದೆ.

ಬ್ರಿಟನಿನಲ್ಲಿ ದ್ವಿವಿಧಾಭಿಪ್ರಾಯ

ಈ ಕುರಿತು ಬ್ರಿಟನಿನ ಅಭಿಪ್ರಾಯ ಹೇಗೆ ಇಬ್ಬಗೆಯಾಗಿದೆ ಎಂಬುದಕ್ಕೆ ಅಲ್ಲಿಯ ಎರಡು ಪ್ರಮುಖ ಪತ್ರಿಕೆಗಳ ಅಭಿಪ್ರಾಯಗಳ ನಿದರ್ಶನಕೊಡಬಹುದು. ಹಿರೊಹಿಟೋ ವಿರುದ್ಧ ಪಕ್ಷದ ನಾಯಕತ್ವ

TENDER NOTICE

Tenders of rates to reach the asst. Director of Fisheries (Coast Calicut) on or before 15th September '45 are invited for transporting salt bags from vessels or railway wagons and stacking them in the fish curing yards and gollahs on the West Cost and for sundry other works.

Details and terms of contract can be had from the Asst Director of Fisheries (Coast), Calicut

T. P. BARATAN,
Special Officer (Smoked Fish (Supply) in charge of the office of the Asst. Director of Fisheries (Coast).

CALICUT,
1—8—'45

ಆ ದಾಖಲೆ.......

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 1925ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಅಂದಿನಿಂದಲೇ ಸಿಂಡಿಕೇಟು ಬದ್ಧಕಂಕಣವಾಗಿದೆ. ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟಿನಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ—ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಅಕ್ಷರಶಃ ಪಾಲಿಸಲಾಗುವುದು.

ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಟಿ. ಎ. ಪೈ, ಬಿ. ಕೋಮ್, ಎ. ಐ. ಐ. ಬಿ.,
ಜನರಲ್ ಮೆನೇಜರ್.

The Canara Industrial & Banking Syndicate Limited.

(Incorporated in British India)



Approved firm by the Govt. of Mysore' Certified by the Agent of the Govt. of India in Ceylon.

ವನ್ನು 'ಟೈಮ್ಸ್' ಪಡಿಸಿ ತನ್ನ ಅಗ್ರ ಲೇಖನದಲ್ಲಿ ಬರೆದಿದೆ: "ಟೋಕಿಯೋದ ಶರ್ತವನ್ನು ಒಪ್ಪಿಕೊಳ್ಳುವದಕ್ಕಿಂತ ಇನ್ನೂ ಕೆಲವು ದಿನ ಯುದ್ಧ ಮುಂದೊತ್ತುವದೇ ವಾಸಿ. ಜಾಪಾನಿನ ಹೊಸ ರಾಜ್ಯ ರಚನೆಯು ಜನರದೇ ಆಗಬೇಕು. ಮೇರೆರಹಿತ ಆಕ್ರಮಣಕ್ಕೆ ಜಾಪಾನ್ ಜನತೆಯನ್ನು ಉಕ್ಕಿಸಷ್ಟು ಕಠಿಣಗೊಳಿಸಿದ ಹೊಣೆಯು ಒಂದು ವಿಧದಿಂದ ಚಕ್ರವರ್ತಿಯದೇ ಎಂಬುದನ್ನು ಮರೆಯಬಾರದು. ಚಕ್ರವರ್ತಿತ್ವವನ್ನು ಈಗಿರುವ ಮಾದರಿಯಲ್ಲೇ ಉಳಿಸಿದರೆ– ಆತನ ರಾಜ್ಯಾಧಿಕಾರದ ಸ್ಥಾನಮಾನಗಳು ಇದ್ದಂತಿರುವವಾದರೆ, ಮತ್ತವನ ನಾಗರಿಕ ಅಥವಾ ಸೈನಿಕ ಸಲಹೆಗಾರರನ್ನು ಬರ್ಖಾಸ್ತು ಪಡಿಸಿದ ಮಾತ್ರಕ್ಕೆ ಸಿಂಹಾಸನದ ಮೇಲೆ ಜಪಾನರಿಗಿರುವ ಅಂಧಹುಚ್ಚು ಶ್ರದ್ಧೆಯುಂವಷ್ಟು ಮಾಸುವಂತಿಲ್ಲ". ಲಂಡನಿನ 'ಡೈಲಿ ಎಕ್ಸ್‌ಪ್ರೆಸ್'ನ ರಾಜಕೀಯ ಲೇಖಕನ ಅಭಿಪ್ರಾಯದಂತೆ "ಜಾಪಾನ್ ಚಕ್ರವರ್ತಿಯು ಪೀಠದಲ್ಲಿರುವಂತಾಗುವದು. ಶಸ್ತ್ರ ಕೆಳಗಿಡುವಂತೆ ಚಕ್ರವರ್ತಿಯ ವಿನಹ ಬೇರಾರಿಂದ ಆಜ್ಞೆ ಹೋದರೂ ಸಂಪ್ರದಾಯವಾದಿಗಳದನ್ನು ಅಲಕ್ಷ್ಯಿಸುವ ಸಂಭವವಿದೆ. ಯುದ್ಧಾಂತ್ಯದ ಬಳಿಕ ರಾಜ್ಯಭಾರ ವ್ಯವಸ್ಥೆಯನ್ನೂ ಚಕ್ರವರ್ತಿಗಳು ಸುಗಮಗೊಳಿಸಬಲ್ಲರು. ಇದು ಪ್ರಾಮುಖ್ಯ ವಿಷಯ. ಜಾಪಾನಿನಲ್ಲಿ ಪೋಲಿಸ್ ಕಚೇರಿ ನಡಿಸಬೇಕಾಗಿ ಬರುವ ಬ್ರಿಟನ್, ಅಮೇರಿಕ, ಚೀನಾ, ರಶ್ಯಗಳ ಲಕ್ಷಾವಧಿ ಸೈನಿಕರನ್ನು ಇದರಿಂದಾಗಿ ಬಿಗಡೆ ಹೊಂದಬಹುದು"!

ರಶ್ಯಾ ಮತ್ತು ಸಮಸ್ಯೆ

ಸೋವಿಯೆಟಿನ ಅಭಿಪ್ರಾಯವು 'ರಿಝರ್ವ್' ಮಾಡಿಡಲ್ಪಟ್ಟಂತಿದೆ. ಮೋಸ್ಕೋ ರೇಡಿಯೋದ ವಕ್ತಾರನು ಜಾಪಾನಿನ ಶರಣು ಶರ್ತ ಕೇಳಿದೊಡನಾಡಿದ ಮಾತುಗಳಿಷ್ಟೆ: "ನಿಶ್ಶರ್ತ ಶರಣೆಂದರೆ ನಿಶ್ಶರ್ತ ಶರಣು. ಇದಕ್ಕಿಂತ ಸ್ಪಷ್ಟ ಶಬ್ದಗಳಿರುವದು ಅಸಾಧ್ಯ. ಮಿತ್ರರಾಷ್ಟ್ರಗಳು ಯುರೋಪಿನಲ್ಲಿ ಹಿಟ್ಲರ್‌ಶಾಹಿಯನ್ನು ಝಾಡಿಸಿ ತೊಳೆಯುತ್ತಿರುವಂತೆಯೇ ಹಿಟ್ಲರ್‌ಶಾಹಿಯ ಏಸ್ಯಾದ ಮಾದರಿಯಾದ ಜಾಪಾನ್ ಆಕ್ರಮಣವನ್ನೂ ಆಕ್ರಮಣಗಾರರನ್ನೂ ಅವರು ತೊಳೆಯುವದೇ ಸರಿ!" ಇದು ಜಾಪಾನ್ ಶರ್ತಕ್ಕೆ ಬಂದ ಕಠೋರ ಉತ್ತರವಾದರೂ ವ್ಯಕ್ತಿಶಃ ಚಕ್ರವರ್ತಿಯ ಕುರಿತು ಪ್ರಸ್ತಾಪ ಬಂದಿಲ್ಲ. ಅಂತೂ ಮಿತ್ರಪಾಳಯದ ಮೇಲೆ ಜಾಪಾನೀಗ ಒಗಟು ಬೊಂಬೊಂದನ್ನು ಒಗೆದಿದೆ. ಜಾಪಾನ್ ಈಗ ಸ್ಪಷ್ಟವಾಗಿ ಸೋತಿದೆ; ಯುದ್ಧ ಕಳೆಕೊಂಡಿದೆಯಾದರೂ ವೈರಿ ಸೈನ್ಯವ್ರಳಿಸಿಕೊಳ್ಳಲು ನೋಡುತ್ತಿದೆ. ಜಾಪಾನಿನ ಇಂದಿನ ಘೋಷಣೆಯಲ್ಲಿ ಧರ್ಮದೃಷ್ಟಿ ಮತ್ತು ದೂರದೃಷ್ಟಿ ಎರಡೂ ಇದೆ ಎನ್ನಬಹುದು. ತಾವು ಬಹು ಪ್ರಯಾಸದಿಂದ, ಏಳೆಂಟು ವರುಷ ಸಂಪಾದಿಸಿದ ಚೀನದಂತಹ ಸಾಮ್ರಾಜ್ಯಗಳಿಂದದು ಉರಿ ಚೆಂಡಿನಿಂದಷ್ಟೆ ಕೈತಿಗೆಯುವಂತೆ ಫಕ್ಕನೆ ಹಿಂದೆಗೆಯಬೇಕಾಗಿ ಬಂದುದುಅದರ ಪಾಲಿಗೆ ಮರೆಯಲಾಗದ ದುರಂತ. ಆದರೆ ನಿರ್ವಾಹವಿಲ್ಲವೆಂದು ವ್ಯವಹಾರಜ್ಞರೂ ತ್ರಿಕಾಲ ಜ್ಞಾನಿಗಳೂ ಆದ ಜಾಪಾನರಿಗೆ ಗೊತ್ತು; ಸಾಮ್ರಾಜ್ಯ ಹೋದರೂ 'ಸ್ವರ್ಗಪುತ್ರ' ಮಿಕೇಡೋ ಉಳಿದರೆ, ತಮ್ಮ ಅನುಕೂಲತೆ ಹೋದರೂ ಆತ್ಮವುಳಿದಂತೆ. ಕೆಲವು ವರುಷಗಳನಂತರ ಪುನಃ ತಲೆಯೆತ್ತುವೆವೆಂಬ ಭರವಸೆಯು ಜಾಪಾನರಿಗಿರಬಹುದು. ಮಿತ್ರರಾಷ್ಟ್ರಗಳಿಗೆ ಇದೊಂದು ಸಮಸ್ಯೆಯೇಸರಿ. ಅವರ ನಿಶ್ಶರ್ತ ಶರಣು–ಯುದ್ಧಾಪರಾಧಿಗಳಿಗೆ ಕಠಿಣ ಶಿಕ್ಷೆ—ಪ್ರಜಾಪ್ರಭುತ್ವ ಸ್ಥಾಪನೆ ಮುಂತಾದ ಯುದ್ಧಗುರಿಗಳಿಗೆ ಜಾಪಾನಿನ ಶರ್ತವು ಬದ್ಧ ವಿರುದ್ಧ. ಆ ಕುರಿತು ಮುಷ್ಟಿ ಸಡಲಿಸದಿದ್ದರೆ ಜಾಪಾನರ ರಕ್ತಮಾಂಸ ಮಿಶ್ರಿತ ಮಣ್ಣಲ್ಲದೆ, ಒಂದಿಂಚು ಶುದ್ಧ ನೆಲವೂ ಅವರಿಗೆ ದೊರೆಯುವಂತಿಲ್ಲ. ಜಾಪಾನ್ ಯುದ್ಧವು ಫಕ್ಕನೆ ನಿಲ್ಲುವದರಿಂದ ಇಡೀ ಪ್ರಪಂಚದ ಔದ್ಯೋಗಿಕ, ಆರ್ಥಿಕ ಕ್ಷೇತ್ರಗಳಲ್ಲಾಗುವ ಅಡಿಮೇಲನ್ನೂ ಗಮನಿಸಬೇಕಾಗಿದೆ. ರಶ್ಯವು ಏಸ್ಯಾ ರಂಗಕ್ಕೆ ಪ್ರವೇಶಿಸಿದುದರಿಂದ ಆ ಭಾಗದ ಮುಂದಿನ ರಾಜ್ಯಭಾರ ವ್ಯವಸ್ಥೆಗೆ ಹೊಸ ರೂಪಬಂದಿದೆ. ಆಕ್ರಮಿತ ಜರ್ಮನಿಯಾಡಳಿತೆಯ ಪ್ರತಿಯೊಂದು ವಿಷಯವೂ ಒಂದೊಂದು ಒಗಟಾಗಿಯೇ ಇನ್ನೂ ಉಳಿದಿರುವಾಗ, ಜಾಪಾನ್ ಆಡಳಿತೆಯು ಮತ್ತೊಂದು ಬ್ರಹ್ಮಾಂಡರೂಪೀ ಸಮಸ್ಯೆಯಾಗುವದು ಖಂಡಿತ. ಜಾಪಾನ್ ಜ್ವಾಲಾಮುಖಿ ಶಾಂತವಾದ ಕೂಡಲೇ ಮಹಮ್ಮೇರು ಸದೃಶ ಸಮಸ್ಯಾ ಶಿಖರಗಳು ಕಾಣಿಸಿಕೊಳ್ಳಲಿವೆ:- ಬೃಹದ್ರಾಷ್ಟ್ರವಾಗಿ ಚೀನವು ಪ್ರಕಾಶಿಸಲಿದೆ. ಶಾಂತ ಸಮುದ್ರ ವಲಯದ ಅಧಿಕಾರ ತಕ್ಕಡಿ ಎತ್ತ ವಾಲುವದೋ ನೋಡಲಿದೆ –ರಶ್ಯದ ವರ್ಚಸ್ಸು ಸರ್ವ ವ್ಯಾಪಿಯಾಗಲಿದೆ—ವಸಾಹತುಗಳು ಬಿಳಿ ಜನಾಂಗದ ವಿರುದ್ಧ ಏಳಲಿವೆ. ಮಿತ್ರರಾಷ್ಟ್ರಗಳ ಪ್ರಮುಖರು ಇವುಗಳನ್ನು ತೀರ್ಮಾನಿಸಿ, ಹೊಸ ಸೃಷ್ಟಿಮಾಡುವ ಆಧುನಿಕ ವಿಶ್ವಾಮಿತ್ರರಾಗಬಲ್ಲರೆ?

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,

ಕಂಟ್ರಾಕ್ಟರ್ಸ್, ಉಡುಪಿ.

ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ರಖಂ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತದೆ. ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು.

ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ.

ಹೆಚ್ಚಿನ ಮಾಹಿತಿಗೆ ಸ್ವತಃ ಸೂತನಾಡಬಹುದು ಯಾ ಪತ್ರ ಬರೆಯಬಹುದು.

Managing Director,

Homes & Estates Ltd., Udipi.

ಜಾಪಾನ್ ಚಕ್ರವರ್ತಿ— ಮಿಕೆಡೊ ಹಿರೊಹಿಟೊ.

ಪ್ರಪಂಚ ಯುದ್ಧವು ಬರ್ಖಾಸ್ತಾಗುವ ದಿನವು ಓರ್ವ ವ್ಯಕ್ತಿಯಿಂದಾಗಿ ಹಿಂದೆಬಿತ್ತು; ಒಬ್ಬನ ಸ್ಥಾನಮಾನಕ್ಕಾಗಿ ಸ್ವಸಂತೋಷದಿಂದ ನಾಶವಾಗಲು ತಯಾರಿರುವ ರಾಷ್ಟ್ರವೊಂದು ಇಪ್ಪತ್ತನೇ ಶತಮಾನದಲ್ಲೂ ಇದೆ ಎಂಬುದು ಖಚಿತವಾಯಿತು. ಅವನೆಂದರೆ ನೋಟಕ್ಕಾವ ರಮ್ಯತೆಯೂ ಗೋಚರಿಸದ ವ್ಯಕ್ತಿ–ಜಪಾನಿನ ಮಿಕೆಡೊ ಹಿರೊಹಿಟೊ.

ಕಳೆದ ಲೋಕ ಯುದ್ಧಾನಂತರವೇ ಕಿರೀಟಗಳ ಪ್ರಭೆ ಕುಂದಲಾರಂಭವಾಗಿತ್ತು; ಈ ಯುದ್ಧದಲ್ಲಂತೂ ಅನೆಲ್ಲಾ ಪಟಪಟನೆ ಉದುರಿಹೋಗಿವೆ. ಕ್ರಾಂತಿ ಸೂರ್ಯನ ಪ್ರಕಾಶದಲ್ಲಿ--ಪ್ರಜಾಪ್ರಭುತ್ವದ ಉದಯದಲ್ಲಿ– ಎಲ್ಲಾ ನಕ್ಷತ್ರಗಳು ಮಾಸಿದರೂ ಒಂದು ಉಜ್ವಲ ತಾರೆ ಮಿನುಗುತ್ತಿದೆ. ಅವನೇ ಮಿಕೆಡೋ.

ಯುದ್ಧ ಸೋತ ಜಾಪಾನು ಸಾಮ್ರಾಜ್ಯ ಕಳೆಕೊಂಡಿತು; ಸಾಮ್ರಾಟನನ್ನು ಬಿಡಲೊಪ್ಪಲಿಲ್ಲ.

ಜಾಪಾನರು ತಮ್ಮ ರಾಜನ ಮೇಲಿಟ್ಟಿರುವದು ಗೌರವಾದರಗಳನ್ನಲ್ಲ; ಭಯಭಕ್ತಿಯನ್ನೂ ಅಲ್ಲ; ಪ್ರಾಣ ಸಮೇತ ಸರ್ವಸ್ವವನ್ನೂ! ಮಿಕೆಡೋ ಜಾಪಾನರ ದೇವರು 'ಸ್ವರ್ಗ ಪುತ್ರ'. ಆ ಜಾಪಾನೀ ಭಾವನೆಯನ್ನು ಚಿತ್ರಿಸುವದಸಾಧ್ಯ. ಅದು ನಮ್ಮಲ್ಲಿಯ ದೇವಾರಾಧನೆಯ ವಿರುದ್ಧ ರೂಪವೆಂಬಂತಿದೆ. ದೇವರಿಗೊಂದು ಮನುಷ್ಯಾಕಾರಮಾಡಿ ಸಾವಾರಾಧಿಸುತ್ತೇವಾದರೆ, ಈ ಮನುಷ್ಯನೇ ದೇವರ ಆಕಾರವೆಂದು ಭಾವಿಸಿ ಜಾಪಾನರು ಪೂಜಿಸುತ್ತಾರೆ. ಅಷ್ಟೇ ಪವಿತ್ರನಾಗಿ ಆತನನ್ನು ಗಣಿಸುತ್ತಾರೆ. ಅರಸನ ಮನಸ್ಸು ನೋಯಿತೆಂದಾದರೆ 'ಹರಿಕಿರಿ'(ಆತ್ಮ ಹತ್ಯೆ)ಮಾಡಿಕೊಳ್ಳಲುಪ್ರತಿಯೊಬ್ಬ ಜಾಪಾನನೂ ತಯಾರಿ. ಇದು ಶತಮಾನಗಳಿಂದ ಜಾಪಾನರ ರಕ್ತಗತವಾಗಿ ಬಂದಿರುವ ಗುಣ.

ಹಿಟ್ಲರನ ಸರ್ವಾಧಿಕಾರಿತ್ವವು ಅವನ ಸ್ವಸಾಮರ್ಥ್ಯದಿಂದ ಜರ್ಮನಿಯ ಸರ್ವಸ್ವದ ಮೇಲೂ ಬಿದ್ದಿತ್ತು; ಜರ್ಮನರ ಮನಸ್ಸನ್ನೂ ಆಕ್ರಮಿಸಿಕೊಂಡಿತ್ತು. ಆದರೆ ಮಿಕೆಡೋ ಅಷ್ಟೇ ಅಲ್ಲ; ಆತನ ಅಂಕೆಯಲ್ಲಿ ಜಾಪಾನರ ಆತ್ಮವೂ ಇದೆ. ಅದು ಹಿರೋಹಿಟನ ಸಂಪಾದನೆಯೂ ಅಲ್ಲ; ಯಾರೊಬ್ಬರ ತರಬೇತಿಯೂ ಅಲ್ಲ. ಜಾಪಾನರು ಹುಟ್ಟಿದುದೇ ಮಿಕೆಡೊ ಗುಲಾಮರಾಗಿ. ಅಂದಮೇಲೆ ಜಾಪಾನ್ ರಾಷ್ಟ್ರದ ಒಂದು ಕೃತ್ಯದಿಂದ ಮಿಕೆಡೋವನ್ನು ವಿಂಗಡಿಸಿಡುವದು ಅಸಾಧ್ಯ. ಇಂದು ಜಾಪಾನ್ ಆಕ್ರಮಣಶೀಲ ರಾಷ್ಟ್ರ ಹೌದಾದರೆ ಹಿರೊಹಿಟೊ ಲೋಕದ ನಂ ೧ನೇ ಯುದ್ಧಾಪರಾಧಿ ಖಂಡಿತ. ಆದರೆ ಆತನಿಗಂತಹ ಸಂಭಾವನೆ ಕೊಡಲು ಮಿತ್ರ ಪ್ರಮುಖರು ಹೆದರುತಿದ್ದಾರೆ! ಈ ಹೆದರಿಕೆಗೆ ಸುಶ್ರಾವ್ಯ ಕಾರಣವನ್ನು ಕೊಡುವದೂ ಸಾಧ್ಯ: 'ಯುದ್ಧಾಪರಾಧಿಗಳನ್ನು ಶಿಕ್ಷಿಸುವ ಹೊರತು ಒಂದು ಜನಾಂಗದ ಆತ್ಮಾಪಹಾರ ಮಾಡುವ ದುಷ್ಟಬುದ್ಧಿ ನಮ್ಮದಲ್ಲ. ಮಿಕೆಡೋ ಜಪಾನರ ಆತ್ಮವೇ ಆಗಿದ್ದಾನಾದ್ದರಿಂದ ಅದನ್ನು ನೋಯಿಸಲಾರೆವು' ಎನ್ನಬಹುದು!

ಹಿರೊಹಿಟೊ ಜಾಪಾನಿನ 128ನೇ ಚಕ್ರವರ್ತಿ. ಸ್ಫುರದ್ರೂಪಿಯೆಂತೂ ಅಲ್ಲ. ನೋಟಕ್ಕೆ ಯಾವುದೊಂದು ವೈಶಿಷ್ಟ್ಯವೂ ಕಾಣುವದಿಲ್ಲ. ಸಾಮಾನ್ಯರೂಪ. ಕುಳ್ಳಗಿದ್ದು ದೃಷ್ಟಿಮಾಂದ್ಯತೆಯಿರುವ ಮನುಷ್ಯ. ಆದ್ದರಿಂದ ಈ 'ದೇವರು' ಕನ್ನಡಕ ಧರಿಸುತ್ತಾನೆ–ಅದೂ ಉಕ್ಕಿನ ಅಂಚುಗಳುಳ್ಳದ್ದು. ಪ್ರಾಯವೀಗ 44. ಜಾಪಾನಿನಲ್ಲಿರುವ ಪ್ರತಿಯೊಂದೂ ಅವನ 'ಸ್ವಂತದ್ದು'. ಅರ್ಥಾತ್ ಒಬ್ಬನಿಗೆ ತನ್ನ ಕೈಪೆಟ್ಟಿಗೆಯಲ್ಲೆಷ್ಟು ಅಧಿಕಾರವಿದೆಯೋ ಹಿರೋಹಿಟನಿಗೆ ಜಾಪಾನಿನ ಸರ್ವಸ್ವದ ಮೇಲೂ ಅಂತಹ ಅಧಿಕಾರವಿದೆ. ಅವನು ಒಮ್ಮೆ ತೊಟ್ಟ ಉಡುಗೆಯನ್ನು ಮತ್ತೊಮ್ಮೆ ತೊಡಬಾರದು. ಒಂದು ಬಾರಿ "ಚಕ್ರವರ್ತಿಯ ಚಲ್ಲಣಗಳಲ್ಲಿ ನೆರಿಗೆ ಕಂಡಿತು" ಎಂದು ಜಾಪಾನ್ ಪತ್ರಿಕೆಗಳು ಹಾಹಾಕಾರವನ್ನೇ ಎಬ್ಬಿಸಿದ್ದವು. ಅವನು ಒಂದುಬಾರಿ ಉಟ್ಟ ತೊಡಿಗೆಗಳನ್ನು ಕೋರ್ಟು ಅಧಿಕಾರಿಗಳಿಗೆ ಬಹುಮಾನವಾಗಿ ಕೊಡಲಾಗುತ್ತದೆ. ಇದು ಜಾಪಾನರ ಪಾಲಿಗೆ ದೇವ ಪ್ರಸಾದ; ಮಹಾ ಪವಿತ್ರ ವಂಶಪಾವನವೆಂಬ ಭಾವನೆಯಿಂದ ಸಂತತಿ ಪರಂಪರೆಯಾಗಿ ಅವುಗಳನ್ನು ಉಪಯೋಗಿಸಲಾಗುತ್ತದೆ. ಮಿಕೆಡೊ ತನ್ನಪ್ರಜೆಗಳಿಗೆ ದರ್ಶನವೀಯುವದುಅತ್ಯಪರೂಪ.ಅವನು ರೈಲಿನಲ್ಲಿ ಹೋಗುತ್ತಾನಾದರೆ ಯಾರೂ ನೋಡದಂತೆ ಕಿಟಕಿಗಳಿಗೆಲ್ಲಾ ಪರದೆ ಮುಚ್ಚುತ್ತಾರೆ; ಕುದುರೆ ಸವಾರಿಮಾಡುವದಿದೆ. ಆದರೆ ಅವನು ಹೋಗುವ ರಸ್ತೆಯ ಅಕ್ಕಪಕ್ಕಗಳ ಎಲ್ಲಾ ಮಹಡಿಗಳಿಂದಲೂ ಜನರನ್ನು ಕೆಳಗಿಳಿಸುತ್ತಾರೆ. 'ದೇವರ' ಮೇಲೆ ದೃಷ್ಟಿ ಬೀಳಬಾರದೆಂಬುದೂ, 'ದೇವರಿಗಿಂತ' ಮೇಲ್ಭಾಗದಲ್ಲಿ ಯಾರೂ ಇರತಕ್ಕದಲ್ಲವೆಂಬುದೂ ಇದಕ್ಕೆ ಕಾರಣ. ಅವನೆಂದೂ ಜನರಿಗೆ ಭಾಷಣ ಕೊಟ್ಟುದಿಲ್ಲ; ಆಕಾಶವಾಣಿಯಲ್ಲಿ ಮಾತಾಡಿದುದಿಲ್ಲ. ಅಧಿಕಾರೀ ಭಾವಚಿತ್ರಗಳ ವಿನಹ ಅವನ 'ಫೋಟೋ' ತೆಗೆಯುವದೂ ಕೂಡದು. ಜಾಪಾನಿಗೆ ಆತ ದೇವ–ಮಿಕ್ಕ ಇಡೀ ಪ್ರಪಂಚಕ್ಕೊಂದು ದೊಡ್ಡ ಸಮಸ್ಯೆ!

The Canara Banking Corporation Limited.

(Incorporated in British India, with limited Liability)

Estd 1906.

Head Office: **UDIPI**, (S. K.)

Authorised Capital	Rs. 25,00,000
Issued & Subscribed Capital	Rs 16,00,000
Paid up Capital	Rs. 15,17,000
Reserves	Rs. 1,11,000

ಉಡುಪಿ, ಗುರುವಾರ ೧೬-೮-೧೯೪೫

ಯುದ್ಧ ಮುಕ್ತಾಯ!

ಜಾಪಾನ್ ಯುದ್ಧ ಮುಗಿಯಿತು; 1939ನೇ ಸೆಪ್ಟಂಬರ್ 1ರಲ್ಲಿ ಪ್ರಥಮ ಗುಂಡಿನ ಹಾರಾಟದೊಂದಿಗೆ ಪ್ರಾರಂಭವಾದ ಲೋಕ ಯುದ್ಧದ ಕೊನೆಯ ಗುಂಡು 1945ನೇ ಆಗೋಸ್ತು 14ರಲ್ಲಿ ಹಾರಿತು. ವಿಜಯ ಸಂಪೂರ್ಣಗೊಂಡಿತು. ಇದೇ ತಾ. 15ರಿಂದ ನಾವು ಯುದ್ಧ ರಹಿತ ಜಗತ್ತಿನ (ಶಾಂತ, ಸಭ್ಯಲೋಕದ ನಾಗರಿಕರೆನ್ನಲಾಗುವದಿಲ್ಲ) ಪ್ರಜೆಗಳು! ಹದಿನಾರು ದಿನ ಕಡಿಮೆ, ಇಡೀ ಆರು ವರುಷಗಳಲ್ಲಿ ಪ್ರಪಂಚವು ಕಂಡು ಕೇಳಿದ ಅದ್ಭುತಗಳೇನು! ಅನುಭವಿಸಿದ ಸಂಕಷ್ಟಗಳೆಷ್ಟು! ಆದ ಮಾರ್ಪಾಟಗಳೆಂತಹವು! 1939ನೇ ಆಗೋಸ್ತಿನಲ್ಲಿದ್ದ ಅಧಿಕಾರಗಳು-ಗಡಿ ಮೇರೆಗಳು-ಆಸೆ, ಭಾವನೆಗಳು ಕೂಡಾ-1945ನೇ ಆಗೋಸ್ತಿನಲ್ಲಿಲ್ಲ; ಇಂದಿನ ಲೋಕವೇ ಅಂದಿನದಲ್ಲ! ಹಿಂದಿನವರು ಕಾಣದಿದ್ದ, ಮುಂದಿನವರು ಕಾಣುವದು ಅಸಾಧ್ಯವಾದ ಮಹಾಮಹಾಗಳನ್ನೆಲ್ಲಾ ಇಂದಿನವರು ಕಂಡರು! ನಮ್ಮ ಕಾಲದಲ್ಲಿ ಪ್ರಪಂಚ ಕಂಪವೊಂದು ನಡೆದು ಮುಗಿದುಹೋಯಿತು. ಮುಂದೆ ಹೇಗೋ ಏನೋ! ಏನೇ ಬರಲಿ; ಕಳೆದ ಆರು ವರುಷಗಳಲ್ಲಿ ನಡೆದಂತಹ ಸ್ಮಶಾನ ಕ್ರಿಯೆಗಳಿಗೆ ಮಾತ್ರ ಶಾಶ್ವತ ವಿದಾಯವಿರಲಿ!

ಪ್ರಪಂಚವೀಗ ಕೆಂಪದಿಂದ ಹಾರಿ ಕೆಸರಿಗೆ ಬಿತ್ತು; ಕಲ್ಮಷ ತಾಗಿದೆ; ತೊಳೆದುಕೊಳ್ಳುವ ಕೆಲಸವಿದೆ, ಆದರೆ ಉರಿಯಾರಿತು. ಎಷ್ಟೆಂದರೂ ನಾವು 'ಥಂಡಾ' ಜಗತ್ತಿಗೆ ಬಿದ್ದೆವು ಇನ್ನು ಮುಂದಿನ ಪ್ರತ್ಯಕ್ಷಾನುಭವಗಳಿಗಿಂತ ಹೆಚ್ಚಾಗಿ ಗತಕಾಲದ ಘಟನೆಗಳ ಸ್ಮರಣೆಯೇ ನಮ್ಮನ್ನು ರೋಮಾಂಚಗೊಳಿಸಬಹುದು. ಹಿಟ್ಲರನು ಯುದ್ಧಾರಂಭಿಸಿದ ರೀತಿ—ಅವನ ಪ್ರಥಮ ವಿರೋಧಿಗಳಾಗಿದ್ದ ಇಂಗ್ಲಾಂಡು, ಫ್ರಾನ್ಸುಗಳ ಆಗಿನ ದೀನ ಸ್ಥಿತಿ-ನಾಜಿಗಳು ಇಡೀ ಯುರೋಪನ್ನು ಆಕ್ರಮಿಸಿಕೊಂಡ ಬಗೆ-ಆ ಸಂದಿಗ್ಧ ಕಾಲದಲ್ಲೇ ಇಟಲಿ ಯುದ್ಧಕ್ಕಿಳಿದುದು—ಬ್ರಿಟನಿನ ಆಯುಷ್ಯವು ನೂಲಿನಲ್ಲಿ ನೇತಾಡುತಿದ್ದ ಆ ದಿನಗಳು-ಆಗಲೇ ಜಾಪಾನ್ ಪೂರ್ವ ಕಡೆಯಿಂದ ಬಿದ್ದುದು-ಅಮೇರಿಕದ ಯುದ್ಧ ಭಾಗಿತ್ವ--ಹಿಂದೂಸ್ಥಾನವೊಂದನ್ನು ಬಿಟ್ಟು ವಿಸ್ತಾರದ ಬ್ರಿಟಿಷ್ ಸಾಮ್ರಾಜ್ಯವೆಲ್ಲಾ ಜಪಾನರ ಬಗಲೊಳಗಾದುದು-ರಶ್ಯದ ಅದ್ಭುತ ಯುದ್ಧ—ಇವೆಲ್ಲವುಗಳ ಸ್ಮರಣೆಯೇ ಒಂದು ಪ್ರೌಢ ಶಿಕ್ಷಣ! ಮಿತ್ರರಾಷ್ಟ್ರಗಳ ಜೀವನ ನಾಡಿಯು ಸಮೀಪದ ವರೆಗೂ ಮುಂದೊತ್ತುತ್ತಾ ಬಂದಿದ್ದ ಯುದ್ಧ ಯಂತ್ರವು ಥಕ್ಕನೇ ಹಿಮ್ಮುಖವಾಗಿ ಚಲಿಸಹತ್ತಿ ಪ್ರಥಮತಃ ಜರ್ಮನಿ, ಆ ಮೇಲೆ ಜಾಪಾನುಗಳ ನಿಪಾತವನ್ನು ಸಾಧಿಸಿಯೇ ನಿಂತಿತು-ಇದೀಗ ಅದೃಷ್ಟದ ಆಟ ಅಥವಾ ಕಾಲ ಮಹಾತ್ಮೆ! 'ಅಧಿಕಾರ ಅಹಂಕಾರಗಳ ಕಾಲ ಕಳೆಯಿತು', 'ಎಡೆ ಕಳಕೊಳ್ಳದವ ಏನನ್ನೂ ಕಳಕೊಳ್ಳಲಾರ' 'ಸಾಮ್ರಾಜ್ಯವಾದದ ಕಾಲ ಹೋಗಿ ಸಮತಾವಾದದ ಯುಗಾರಂಭ'-ಲೋಕಯಜ್ಞದ ಈ ಮಂಗಳೋತ್ಸವದಲ್ಲಿ ದೊರವ ಪ್ರಸಾದಗಳಿವು!

ಇಂದು ವಿಜಯ ದಿನ, ಸಂಪೂರ್ಣ ವಿಜಯದ ಸಂತೋಷ ಸಮಾರಂಭ ನಾಜೀ ಜರ್ಮನಿ ಅವಸಾನಗೊಂಡ ಮೇ ತಾ. 7ರಲ್ಲಿ ಅರೆವಾಸಿ ಜಯ ದೊರೆತಿತ್ತು; ಜಪಾನ್ ಶರಣು ಬಂದ ಆಗೋಸ್ತು 14ರಲ್ಲಿ ಅದು ಪೂರ್ಣವಾಯಿತು. ಜರ್ಮನಿಯ ಪತನವನ್ನು ಸಾಧಿಸಿದುದು, ಜಾಪಾನಿನ ಪರಾಭವವನ್ನು ಸಮೀಪಕ್ಕೆ ತಂದುದು ಸೋವಿಯೆಟ್ ರಶ್ಯಾ. ಯುರೋಪಿನ ದುಶ್ಶಕ್ತಿ ನಿರ್ನಾಮವಾದ ಮೇಲೆ ಮೂರು ತಿಂಗಳುಗಳಿಗಿಂತ ಹೆಚ್ಚಿಗೆ ಸಹಿಸಿ ನಿಲ್ಲಲು ಏಸ್ಯಾದ ದುಷ್ಟ ಶಕ್ತಿಯಿಂದಾಗಲಿಲ್ಲ. ಅದು ಮತ್ತೂ ಬಾಳಲು ರಶ್ಯ ಅವಕಾಶ ಕೊಡಲಿಲ್ಲ; ಪರಮಾಣು ಬೋಂಬು ಬಿಡಲಿಲ್ಲ!

'ನ್ಯಾಯ ಮೀರಿ ಯುದ್ಧ ಮಾಡಿದ ದುಷ್ಟರು'-ಎಂದು ಯಾರನ್ನಾದರೂ ಸಂಬೋಧಿಸುವವರೇ-'ಯುದ್ಧವು ನ್ಯಾಯವನ್ನಾಧರಿಸಿದೆ' ಎಂದು ನಿರೀಕ್ಷಿಸಿದ ಹುಚ್ಚರು! ಇಂದು ಕೆಲಸ ಮುಗಿದಿದೆ, ಇನ್ನಾದರೂ ಈ ಗುಟ್ಟನ್ನು ಪ್ರಪಂಚವರಿಯಬೇಕು. 'ಯುದ್ಧವೇ ಅನ್ಯಾಯ' ಎಂಬ ತತ್ವವು ಬೇರೂರಬೇಕು ಈ ಯುದ್ಧದಲ್ಲಿ ಪಂಥ ಗೆದ್ದವರೆಂದು ಮಿತ್ರಪಾಳಯವನ್ನು ಶ್ಲಾಘನೆಯ ಶಿಖರಕ್ಕೇರಿಸಬಹುದು; ವಿಜಯೋತ್ಸವವಾಚರಿಸಬಹುದು. ಸೋತವರೆಂದು ಫೇಸಿಸ್ಟರನ್ನು ಪಾತಾಳಕ್ಕೊತ್ತಬಹುದು. ಅವರಲ್ಲೊಬ್ಬರು ಗೆದ್ದರು; ಮತ್ತೊಬ್ಬರು ಸೋತರು; ಮಾನವ ಜಗತ್ತು ಇವೆರಡರಲ್ಲಿ ಯಾವ ಪಾಳಯಕ್ಕೂ ಸೇರಿಲ್ಲ-ಅದು ಸೋತು ಸುಣ್ಣವೇ ಆಗಿದೆ! ಆದ್ದರಿಂದ ಇಂತಹ ಯಜ್ಞಕ್ಕೆ ಇದೇ ಶಾಶ್ವತ ಮುಕ್ತಾಯವೆಂದಾಗಬೇಕು ಕೊನೆಯ ಭಾಗದಲ್ಲಿ ಪ್ರಕಾಶಕ್ಕೆ ಬಂದ ಆಟಂ ಬೋಂಬು ಈ ದೃಷ್ಟಿಯಿಂದ ಮಹಾ ದುಶ್ಯಕುನ.

ಸಮರ ಯುಗ ಹೋಗಿ ಸಮಸ್ಯಾ ಯುಗ ಬಂದಿದೆ. ಧಾರಣೆ, ವೇತನಗಳ ಇಳಿತ-ವ್ಯಾಪಾರ ಅಡಿ ಮೇಲು-ನಿರುದ್ಯೋಗ ಸಮಸ್ಯೆ, ಇತ್ಯಾದಿ ಇತ್ಯಾದಿಗಳು ತಲೆಯೆತ್ತಲಿವೆ; ಯುದ್ಧವು ರಣರಂಗದಿಂದ ಜೀವನ ರಂಗಕ್ಕೆ ವರ್ಗಾಯಿಸಲ್ಪಟ್ಟಿತು. ಇಡೀ ಪ್ರಪಂಚದಲ್ಲಿ ರಾಜಕೀಯ, ಆರ್ಥಿಕ, ಔದ್ಯೋಗಿಕ, ವ್ಯಾಪಾರ ವ್ಯವಹಾರಗಳ ಪುನರ್ರಚನೆಯಾಗಬೇಕಾಗಿದೆ ಕಳೆದ ಮಹಾಯುದ್ಧಾನಂತರದ ಅನುಭವದಿಂದ ಈ ಬಾರಿ ಸಾಕಷ್ಟು ಮುಂಜಾಗ್ರತೆಯನ್ನು ವಹಿಸಲಾಗಿದೆಯಾದರೂ ಯುಗ ಬದಲಾವಣೆಯ ಒತ್ತಡವು ಆ ಸಿದ್ಧತೆಗೆ ಮಿಕ್ಕಿದುದೆಂಬುದು ಖಂಡಿತ. ಆದ್ದರಿಂದ ಸರ್ವ ಶಕ್ತಿಯೂ ಕಲ್ಯಾಣ ಸಾಧನೆಗೆ ನೆರವಾಗಲಿ; ಲೋಕ ಶಾಂತಿ ಸ್ಥಾಪಿಸಲ್ಪಡಲಿ, ಅದು ಶಾಶ್ವತವಾಗಲಿ! ಸರ್ವರಿಗೂ ಸಮಾನ ಸುಖ ಸ್ವಾತಂತ್ರ್ಯ ದೊರೆಯಲಿ!

ಆಟಂ ಬಾಂಬು!

(೨ನೇ ಪುಟದಿಂದ ಮುಂದುವರಿದುದು.)

ಅತ್ಯುತ್ತರವಾದ ಉಕ್ಕಿನ ಗೋಪುರವೊಂದರ ಮೇಲೆ ಆಟಂ ಬೋಂಬನ್ನು ಏರಿಸಿ ಹೊತ್ತಿಸಿದೊಡನೆ ಪ್ರಥಮತಃ ಉಜ್ವಲ ಸೂರ್ಯನ ಬೆಳಕನ್ನೂ ಮಿಗಿಸುವ ಒಂದು ಪ್ರಕಾಶ; ಆ ಪ್ರಕಾಶದಲ್ಲಿ ಮೂರು ಮೈಲು ದೂರದ ಗುಡ್ಡ ಪ್ರದೇಶಗಳೂ ಕಣ್ಣು ಮುಂಗಡೆಯಿರುವಷ್ಟೇ ಸ್ಪಷ್ಟವಾಗಿ ಕಾಣಿಸುತಿದ್ದುವು; 120 ಮೈಲು ದೂರದಲ್ಲಿದ್ದ ಹುಟ್ಟು ಕುರುಡಿಯೊಬ್ಬಳು 'ಆ ಬೆಳಕೇನು?' ಎಂದು ಪ್ರಶ್ನಿಸಿದ್ದಳಂತೆ. ಆ ಪ್ರಕಾಶದ ಬೆನ್ನಲ್ಲೇ ಅದಕ್ಕನುಗುಣವಾದ ಸಾವಿರ ಸಿಡಿಲ ಘರ್ಜನೆ-ಅದನ್ನನುಸರಿಸಿ ಸ್ಫೋಟಸ್ಥಳದಿಂದ ಐದು ಮೈಲು ದೂರದಲ್ಲಿದ್ದ ಎರಡು ನಿಯಂತ್ರಣ ಸಲ್ದಾಣಗಳೂ ಉರುಳಿ ಬೀಳುವಂತಹ ಗಾಳಿಯೊತ್ತಡ—ಮೇಲ್ಗಡೆ 40 ಸಾವಿರ ಅಡಿಗಳ ವರೆಗೂ ಕೆಂಪು ಕಪ್ಪು ವರ್ಣದ ಭೀಕರ ಹೊಗೆ ಮೋಡ-ಇವಿಷ್ಟೂ ನಿಮಿಷಾರ್ಧದಲ್ಲಿ ಈ ಸ್ಫೋಟದಿಂದ 250 ಮೈಲು ದೂರದಲ್ಲಿದ್ದ ಕಟ್ಟಡಗಳ ಕಿಟಕಿಗಳು ಒಡೆದಿದ್ದುವು ಸ್ಫೋಟವಾದ ಮೇಲೆ ನೋಡುವಾಗ ಅದನ್ನೇರಿಸಿದ್ದ ಉಕ್ಕಿನ ಸಿಲ್ದಾಣವಿದ್ದ ಸ್ಥಳದಲ್ಲಿ ಬಾಯ್ದೆರೆದ ದೊಡ್ಡ ಜ್ವಾಲಾಮುಖಿಯೆದ್ದಿತ್ತು. ಆಟಂ ಬೋಂಬು ಕೇವಲ ಗೋಲ್ಫ್ ಚೆಂಡಿನ ಅಥವಾ ಒಂದು ಸಣ್ಣ ಕಾಯಿಯ ಗಾತ್ರದ್ದು. ಅತ್ಯಂತ ಭಾರದ ಯುರೇನಿಯಮ್ ಎಂಬ ಧಾತುವಿನ ಪರಮಾಣುಗಳ ದಿವ್ಯ ಶಕ್ತಿಯ ಸಂಗ್ರಹವಿದು.

ಲೋಕ ದಿಗಿಲುಗೊಂಡಿದೆ!

ಪ್ರಥಮ ಬೋಂಬಿನ ಪ್ರಯೋಗವಾದ ದಿನವೇ ಅಮೆರಿಕಾಧ್ಯಕ್ಷ ಟ್ರುಮೇನರು ಅದನ್ನು ವರ್ಣಿಸಿ, ಜಾಪಾನನ್ನು ಬೆದರಿಸಿದ್ದರು. ಶಾಂತಿಪ್ರೇಮಿ ಜಗತ್ತೀ ಈ ಪ್ರಳಯ ಶೋಧಕ್ಕಾಗಿ ಹಾಹಾಕಾರವೆಬ್ಬಿಸುತ್ತಿದೆ. ಬೊಂಬಾಯಿ ನಗರದ ಮಧ್ಯಕ್ಕೆ ಇದೊಂದು ಪುಟ್ಟ ಚೆಂಡು ಬಿದ್ದರೆ, ಠಾಣಾ, ಕಲ್ಯಾಣ, ಬೋರಘಾಟ ಮತ್ತು ಮೆಥೆರಾನಾ ನಗರಗಳು ನಡುಗುವವೆಂದು ಓರ್ವ ಅಮೇರಿಕನ್ ಅದನ್ನು ವರ್ಣಿಸಿದ್ದಾನೆ. ಅಂತಯೇ ತಾವಿದ್ದಲ್ಲಿ ಭೂಕಂಪವಾಗಬೇಕಾದರೆ, ತಮಗೆ 250 ಮೈಲು ದೂರದ ಯಾವುದಾದರೊಂದು ಊರಿಗೆ ಆಟಂ ಬೋಂಬು ಬಿದ್ದಂತಾಯಿತೆಂದು ಪ್ರತಿಯೊಬ್ಬನೂ ತಿಳಿದಿರಬೇಕು! ಪ್ರೋಫೆಸರುಗಳು, ವೆಲ್ಸರಂತಹ ಜ್ಞಾನಿಗಳು, ಶಾಂತಿಪ್ರೇಮಿ ಸಂಘ ಸಂಸ್ಥೆಗಳು ಮತ್ತು ಸರ್ವಪ್ರಮುಖರು ಆಟಂ ತಯಾರಿಯನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಅಧ್ಯಕ್ಷ ಟ್ರುಮೇನರು ತನ್ನ ಭಾಷಣದಲ್ಲಿ ಒಂದು ಶಮನೋಪಾಯ ಕಂಡುಹಿಡಿಯಲ್ಪಡುವ ವರೆಗೆ ಆಟಂ ಬೋಂಬು ತಯಾರಿಯ ಗುಟ್ಟು ಆಂಗ್ಲೋ ಅಮೇರಿಕಾನರಲ್ಲದೆ ಮಿಕ್ಕವರಿಗೆ ದೊರೆಯುವಂತಿಲ್ಲವೆಂದಿದ್ದಾರೆ. ಇದಕ್ಕೆ ಅಂತರ್ರಾಷ್ಟ್ರೀಯ ಕಟ್ಟೋಟೆ ಬೀಳಬೇಕೆಂದು ಬ್ರಿಟಿಷ್ ಪತ್ರಿಕೆಗಳೂ ಬೊಬ್ಬಿಡುತ್ತಿವೆ. ಆಟಂ ಬೋಂಬಿನ ಸರ್ವಾಧಿಕಾರವು ಬ್ರಿಟಿಷ್ ಅಮೇರಿಕಗಳ ಕೈಯಲ್ಲಿಯೇ ಉಳಿದರೆ ಮಿಕ್ಕೆಲ್ಲಾ ರಾಷ್ಟ್ರಗಳೂ ಅವುಗಳೆದಿರು ಗಡಗುಟ್ಟಬೇಕಾಗುವದು

ನೋಟೀಸು

The Vijaya Bank Ltd., Coondapur.

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡದೆ ಬಡ್ಡಿ ಸಹಾ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿಯವರಿಗೆ ಕಟ್ಟಿ ರಿಜಿಸ್ಟ್ರಿ ನೋಟೀಸು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ಜಾಹೀರುಪಡಿಸುವುದೇನೆಂದರೆ -

ಸದ್ರಿ ನಗಗಳನ್ನು 18 8 45ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತ ಕಂಡ ದಿನಕ್ಕೆ ಮುಂದುವರಿಸಲ್ಪಡುವುದು. ತಿಳಿದಿರುವುದು

ಸಾಲದ ನಂಬ್ರ	ಅಸಾಮಿಯ ಹೆಸರು	ಪಡಕೊಂಡ ಅಸ್ಲು ಐವೇಜು
293/41	ಎಚ್ ಎಸ್. ಸಂಜೀವ ಸೆಟ್ಟಿ, ನೂಳಪಳ್ಳಿ ದೇಸಿನಕಟ್ಟೆ ಅಂಡೆಯ ಸೆಟ್ಟಿ, ಹೆಂಗವಳ್ಳಿ ಗ್ರಾಮ. ಪೋಸ್ಟು—ಶಂಕರನಾರಾಯಣ.	100—0—0
35/44 5	ಮೃತ U ಶೀನಶೆಟ್ಟಿ, ಮಾಜಿಪೇದೆ, ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್, ಕುಂದಾಪುರ.	30—0—0

OFFICE OF THE BANK
COONDAPUR
13- 8—45

B. Jayarama Shetty,
Agent *COONDAPUR.*

ಜಾ ಪಾ ನ್ ಯು ದ್ಧ ಮು ಗಿ ಯಿ ತು !

ಲೋಕ ಯುದ್ಧ

ಆರಂಭ — ತಾ 1—7—1939 ಮುಕ್ತಾಯ — ತಾ 14—8—1945

ಆ ಪೈಕಿ

ಜರ್ಮನಿ ಯುದ್ಧ

ಆರಂಭ — ತಾ. 1—7—1939 ಮುಕ್ತಾಯ — ತಾ 7- 5—1945

ಜಾಪಾನ್ ಯುದ್ಧ

ಆರಂಭ — ತಾ 7—12—1941 ಮುಕ್ತಾಯ — ತಾ 14—8—1945

ತಮ್ಮ ಚಕ್ರವರ್ತಿಯ ಸ್ಥಾನ-ಮಾನಗಳನ್ನು ಉಳಿಸಿಕೊಡುವದಾದರೆ ಪೋಟ್ಸ್ ಡಾಮ್ ಶರ್ತಗಳಂತೆ ತಾವು ಶರಣಾಗುವೆವು ಎಂಬ ಜಾಪಾನ್ ಸರಕಾರದ ಶರಣು ಸೂಚನೆಗೆ ಚತುರ್ರಾಷ್ಟ್ರಗಳ ಅಭಿಪ್ರಾಯಾಂತರ್ಗತ ಉತ್ತರವನ್ನು ತಾ 11ರಲ್ಲಿ ಅಮೇರಿಕವು ಕಳುಹಿಸಿತು -"ಶರಣಾಗುವ ಕಾಲದಲ್ಲಿ ಜಪಾನ್ ಚಕ್ರವರ್ತಿಗಳು ಮಿತ್ರ ಸೇನಾನಿಯ ಸೂಚನೆಗಳಂತೆ ವರ್ತಿಸಲು ಬದ್ಧರಿರಬೇಕು. ಶರಣು ಸಹಿ ಹಾಕಿಸುವದಕ್ಕೂ, ಸೇನಾ ಬರ್ಖಾಸ್ತು, ನಿಶ್ಶಸ್ತ್ರೀಕರಣಗಳನ್ನು ಸಾಧಿಸುವದಕ್ಕೂ ಮಿತ್ರಸೇನಾನಿಯ ಮಾತಿನಂತೆ ವರ್ತಿಸುವವರಾಗಿರಬೇಕು"-ಎಂದು ಆ ಉತ್ತರ. ಜಾಪಾನ್ ಮಂತ್ರಿಮಂಡಲವು ಎರಡು ದಿನ ಅವಿಶ್ರಾಂತ ಪರ್ಯಾಲೋಚನೆ ನಡಿಸಿ ತಾ 13ರಲ್ಲಿ ಈ ಶರ್ತವನ್ನೊಪ್ಪಿಕೊಂಡು ಶರಣಾಯಿತು ತಾ 14ರಲ್ಲಿ ಶರಣು ಕರಾರಿಗೆ ಇತ್ತಂಡದ ಸಹಿ ಬಿದ್ದು, ಲಂಡನ್, ವಾಷಿಂಗ್ಟನ್, ಚುಂಕಿಂಗ್, ಮಾಸ್ಕೋಗಳಿಂದದು ದೃಢೀಕರಣಪಡೆದು ಗುಂಡುಹಾರಾಟ ನಿಂತಿತು

ಎರಡನೇ ಲೋಕ ಯುದ್ಧ ಮುಕ್ತಾಯ!



ಅವರು ತಿರುಗಿ ಬಂದಾಗ.

ಅವನು ಈ ಸಾರೆ ಖಾಯಂ ಆಗಿ ತಿರುಗಿ ಬಂದಿರುತ್ತಾನೆ ಅವನ ಹೆಂಡತಿಯು ಆನಂದಾಶ್ರುಗಳಿಂದ ಅವನಿಗೆ ಮನೆಯೊಳಗೆ ಸ್ವಾಗತನೀಯುತ್ತಾಳೆ ಅವನು ಬಂದ ಬಿಟ್ಟು ಹೋದಾಗ ಕೈಗೂಸಾಗಿದ್ದ ಅವನ ಮಗನು ಈಗ ಅವನ ಕಡೆಗೆ ಭಯದಿಂದಲೂ ಮೂಕದರ್ಶದಿಂದಲೂ ನೋಡುತ್ತಾನೆ ಈ ಸುಖಮಯಕಾಲವು, ಜಪಾನದ ವಿರುದ್ಧ ನಡೆದ ದೀರ್ಘವಾದ ಮತ್ತು ಘೋರ ಕಾಳಗವು ಯಶಸ್ವೀರೀತಿಯಿಂದ ಕೊನೆಗಂಡಾಗ, ಸಾವಿರಾರು ಕುಟುಂಬಗಳಿಗೆ ಪ್ರಾಪ್ತವಾಗುವದು

ಸಂಯುಕ್ತ ರಾಷ್ಟ್ರಗಳು ಯುದ್ಧವನ್ನು ಶೀಘ್ರವಾಗಿ ಮುಗಿಸುವದಕ್ಕಾಗಿ ಪ್ರತಿಯೊಂದು ಯತ್ನವನ್ನೂ ಮಾಡುತ್ತಾವೆ ಹೇರಳವಾದ ಯುದ್ಧ ಸಾಮಗ್ರಿಗಳು ಪೂರ್ವರಂಗಕ್ಕೆ ಸತತವಾಗಿ ಬರುತ್ತಿವೆ. ನಮ್ಮ ಜನರ ಪಕ್ಕದಲ್ಲಿ ನಿಂತು ಯುದ್ಧ ಮಾಡಲಿಕ್ಕೆ ದೊಡ್ಡ ದಂಡುಗಳು ಬರತೊಡಗಿವೆ. ಯುದ್ಧದ ಸಮಾಪ್ತಿಯು ಹಾಗೂ ವಿಜಯವು ಖಂಡಿತ ಆದರೂ, "ನಮ್ಮ ಹೋದವರು ಯಾವಾಗ್ಗೆ ತಿರುಗಿ ಬರುವರು?" ಎಂಬ ಪ್ರಶ್ನೆಗೆ ಉತ್ತರವು ನಾವು ನಮ್ಮ ಮನೆಗಳಲ್ಲಿ ಇದ್ದು ಏನು ಮಾಡುತ್ತೇವೆಂಬವರ ಮೇಲೆ ನಾನಾ ಅವಲಂಬಿಸಿರುತ್ತದೆ. ನಮ್ಮ ಪ್ರಯತ್ನಗಳನ್ನು ನಾವು ಕಡಿಮೆ ಮಾಡತಕ್ಕದ್ದಲ್ಲ ನಾವು ನಮ್ಮ ಯುದ್ಧ ಕಾಲದ ಭಾರಗಳನ್ನು ಮತ್ತು ನಿರ್ಬಂಧಗಳೊಳಗೆ ಸಮಾವೇಶವಾಗುವ ಎಲ್ಲ ಅನಾನುಕೂಲಗಳನ್ನು ಧೈರ್ಯದಿಂದಲೂ ದೃಢ ನಿಶ್ಚಯದಿಂದಲೂ ಮೊದಲಿನಂತೆ ಸಹಿಸುತ್ತ ಹೋಗತಕ್ಕದ್ದು

ತಮ್ಮ ಉದ್ದೇಶಗಳನ್ನು ಯುದ್ಧ ಮಾಡಿ ಸಾಧಿಕೊಳ್ಳಬೇಕೆಂಬ ವೃತ್ತಿಯುಳ್ಳ ಅಂಧಶ್ರದ್ಧೆಯ ಮತ್ತು ಕ್ರೂರರಾದ ಜಪಾನೀ ಮುಖಂಡರು, ನಾವು ಆಯಾಸಪಟ್ಟು ದಣಿದು ಹೋಗಬೇಕೆಂದು ಮತ್ತು ಒಡಂಬಡಿಕೆಯ ಸಂಧಾನವಾಗಿ ಅದರಿಂದ ಎಂಟು ವರ್ಷದ ದಾಳಿ ಮಾಡಿದ್ದರ ಫಲವು ತಮ್ಮ ಕೈಯಲ್ಲಿ ಉಳಿಯಬೇಕೆಂದು, ಹೇಗಾದರೂ ಕಾಲ ದಾಕಲು ತೊಡಗಿದ್ದಾರೆ. ಆದರೆ ನಾವು ಅವರಿಗೆ ಯುದ್ಧವನ್ನು ಅನಿವಾರ್ಯವಾದ ಅವಧಿಗಿಂತ ಒಂದು ದಿನ ಕೂಡ ಹೆಚ್ಚು ಬೆಳೆಸಲಿಕ್ಕೆ ಕೊಡಬಾರದು, ಯಾಕೆಂದರೆ ಗತಿಸಿಹೋಗುತ್ತಿರುವ ಪ್ರತಿಯೊಂದು ದಿವಸ ನಮ್ಮ ಸೈನಿಕರು, ನಾವಿಕರು ಮತ್ತು ವೈಮಾನಿಕರು ತಮ್ಮ ಪ್ರಾಣಗಳಿಂದ ದಂಡವನ್ನು ತುಂಬಿ ಕೊಡುತ್ತಿರುವದನ್ನು ನಾವು ನೋಡುತ್ತೇವೆ

ನಾವು ಈ ಯುದ್ಧವನ್ನು, ಜನರು ಶಾಶ್ವತವಾದ ಶಾಂತಿಯ ಸಮಾಧಾನ ವಾತಾವರಣದಲ್ಲಿ ಗೌರವದಿಂದಲೂ ದರ್ಪದಿಂದಲೂ ಜೀವಿಸುವಂತೆ ಮಾಡಲೋಸುಗ, ಒಮ್ಮೆಗೇ ಮುಗಿಸಿಬಿಡೋಣ

ಭಾರತವು ಯುದ್ಧಮಾಡುತ್ತಾ ಮುಂದರಿದಿದೆ..

ಡಿಪಾರ್ಟ್ ಮೆಂಟ್ ಆಫ್ ಇನ್ಫರ್ಮೇಶನ್ ಎಂಡ್ ಬ್ರಾಡ್‌ಕಾಸ್ಟಿಂಗ್ ಗವರ್ನಮೆಂಟ್ ಆಫ್ ಇಂಡಿಯಾ, ಇವರ ಮೂಲಕ ಪ್ರಕಟಿಸಲ್ಪಟ್ಟದ್ದು

A11 ಕನ FN

ಭಾರತದಲ್ಲಿ

ಜಾಪಾನಿನಲ್ಲಿದ್ದು ಬ್ರಿಟಿಷ್ ವಿರುದ್ಧ ಯುದ್ಧಪಕ್ಷ ವಹಿಸಿರುವರೆಂದು ಪ್ರಕಟಿಸಲ್ಪಟ್ಟಿರುವ ಹಾಜೀ ರಾಷ್ಟ್ರಪತಿ ಬಾಬು ಸುಭಾಸ್‌ಚಂದ್ರ ಭೋಸರ ಭವಿಷ್ಯವೇನು ಎಂಬ ಆತುರವೆದ್ದಿದೆ ಬಿಹಾರಿನ ಮಹೇಂದ್ರ ಚೌಧುರಿಯವರನ್ನು ಆಗೋಸ್ತು 7ರಲ್ಲಿ ಫಾಶಿಗೇರಿಸಿದುದರಿಂದ ರಾಷ್ಟ್ರ ಸಂತಪ್ತವಾಗಿದ ಗಾಂಧಿಜೀ ಸಂತಾಪಗೊಂಡು ನಿಷ್ಪಕ್ಷಪಾತ ವಿಚಾರಣೆ ನಡೆಯಬೇಕೆಂದು ಕೇಳಿದ್ದಾರೆ ಆಗೋಸ್ತು ದಿನಾಚರಣೆಗೆ ದೇಶದ ಹಲವೆಡೆಗಳಲ್ಲಿ ಒಹಿಷ್ಕಾರವಿತ್ತು, ಬಂಧನಗಳಾಗಿದ್ದುವು

ನ್ಯೂ ಥಿಯೇಟರಿನವರ

ಮಿನಾಕ್ಷಿ

ಎಂಬ ಚಿತ್ರವು ತಾ. 17-8-15ರಿಂದ ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ ಇಲ್ಲಿ ಪ್ರದರ್ಶಿಸಲ್ಪಡುವುದು.

ಉಡುಪಿ

ವಿದೇಶೀ ವಿದ್ಯಾರ್ಥಿವೇತನ- ಸ್ಥಳೀಯ ವಕೀಲ ಶ್ರೀ ಓ ವೆಂಕಪ್ಪ ಹೆಗ್ಡೆಯವರ ಪುತ್ರ ಶ್ರೀ ಕೆ ಶಿವರಾಮ ಹೆಗ್ಡೆ, ಬಿ ಇ ಇವರಿಗೆ ವಿದೇಶಿ ವಿದ್ಯಾರ್ಥಿ ವೇತನವು ದೊರಕಿ ಇವರು ಈ ತಿಂಗಳಾಂತ್ಯದೊಳಗೆ ಇಂಗ್ಲೆಂಡಿಗೆ ತೆರಳಲಿರುವರೆಂದು ತಿಳಿದು ಬರುತ್ತದೆ ನಮ್ಮ ಜಿಲ್ಲೆಯಿಂದ ಶ್ರೀ. ತ್ರಿವಿಕ್ರಮ ಶೆಟ್ಟಿ, ಬಿ ಇ, ಶ್ರೀ N ವಿ ಕುಡ್ವ, ಬಿ ಇ ಇವರೂ ಇದೇ ವಿದ್ಯಾರ್ಜನಕ್ಕೆ ಆರಿಸಲ್ಪಟ್ಟವರು

ಕೆದಿಯೂರು

ತಾ 1 9 1945ರಿಂದ 31 3-1947ರ ವರೆಗಿನ 19 ತಿಂಗಳುಗಳ ಮುಟ್ಟಿಗೆ ಕದಿಯೂರು ಬಂಕೇರಕಟ್ಟ ವಾರಿಯ ಸುಂಕ ವಸೂಲಿಯ ಹಕ್ಕನ್ನು ರೂ 60ರ ಬೈದಸುದಾರು ಮೂಲಕ ಇದೇ ತಾ 25 8 1945ರ ಸಾಯಾಹ್ನ ಗಂಟೆ 5ಕ್ಕೆ ಉಡುಪಿ ತಾಲೂಕು ಪಂಚಾಯತ ಬೋರ್ಡಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಮು ಮಾಡುವುದಾಗಿಯೂ, ಏಲು ಮಾಡುವವರು ಸ್ವತ ಅಥವಾ ಅಧಿಕೃತರಾದ ತಮ್ಮ ಏಜಂಟರ ಮೂಲಕ ರೂ 20ರ ಠೇವಣಿಯಿಟ್ಟು ಬಿಡ್ ಮಾಡಬೇಕಾಗಿಯೂ III (b) ತರಗತಿಯ ವಾರಿಗಳಿಗೆ ನಿರ್ದಿಷ್ಟವಾದ ಸುಂಕದ ದರಗಳೇ ಈ ವಾರಿಯಲ್ಲಿ ಜಾರಿಯಾಗಿರುವುದಾಗಿಯೂ, ಸದ್ರಿ ಬೋರ್ಡಿನ ಪ್ರೆಸಿಡೆಂಟರು ಪ್ರಕಟಿಸಿದ್ದಾರೆ.

"ಶ್ರೀ ಕೃಷ್ಣ ಸೇವಾ"ಯ ಸಮಾಜ ಸೇವಾ ಕಾರ್ಯಕರ್ತ ಸಂಘದ ಅಧ್ಯಕ್ಷರು ಆದ ಶ್ರೀ ಎಸ್ ರಾಜಗೋಪಾಲಕೃಷ್ಣ ರಾಯರ ಷಷ್ಟ್ಯಬ್ದ ಪೂರ್ತಿ ಇದೇ ತಾ 25 8 1945ನೇದ ಈ ಸಂದರ್ಭದಲ್ಲಿ ಬಂದು ಕೂಡಿಸಿರುತ್ತದೆ.

ಪ್ರಳಯ ಚಂಡು--ಆಟಂ ಬೋಂಬು!

ಇದರ ಇದಿರಲ್ಲಿ—
ಈ ವರೆಗಿನ ಅದ್ಭುತ ಅಣುಮಾತ್ರ ಮಾನವಜೀವ ಹುಳಕ್ಕೆ ಸಮಾನ ಪ್ರಪಂಚವೊಂದು ಗ್ಲಾಸಿನ ಬುರುಡೆ !

ಪ್ರಪಂಚವು ಇದು ವರೆಗೂ ಅರಿಯದಿದ್ದಂತಹ ಅದ್ಭುತಗಳನ್ನು ಇಂದಿನ ವೈಜ್ಞಾನಿಕ ಯುದ್ಧವು ಕಾಣಿಸಿದೆ. ಆದರೆ ಇಂತಹ ಅದ್ಭುತಗಳನ್ನೂ ಅಣುಮಾತ್ರವೆನ್ನಲಾಗುವಂತಹ ಮಹಾದ್ಭುತವೊಂದು ಯುದ್ಧದ ಅಂತ್ಯ ಭಾಗದಲ್ಲಿ ಪ್ರಕಾಶಕ್ಕೆ ಬಂತು-ಆಟಂ ಬೋಂಬು! ಇದರ ಪ್ರಳಯ ಶಕ್ತಿಯು ಹಿಂದಿನ ಪುರಾಣಗಾರರ ಮತ್ತು ಚರಿತ್ರೆ ಲೇಖಕರ ವರ್ಣನೆಗೆ ಕೂಡಾ ಸಿಗದಂತಹದು. ಹೆಚ್ಚೇನು, ಕೆಲವು ಸಾವಿರ ಆಟಂ ಬೋಂಬುಗಳನ್ನು ತಯಾರಿಸಿಟ್ಟುಕೊಂಡ ಒಂದು ರಾಷ್ಟ್ರವು ಇಡೀ ಪ್ರಪಂಚವನ್ನು ಒಂದೇ ದಿನದಲ್ಲಿ ಸ್ಮಶಾನಮಾಡಬಲ್ಲುದು! ಬೋಂಬು, ಟೇಂಕು, ಸಬ್‌ಮೆರೀನ್, ಗಾಳಿ ಕೊಡೆ, ಮಹಾ ಫಿರಂಗಿಗಳು, ರೋಕೆಟ್ ಬೋಂಬು-ಇವೆಲ್ಲಾ ಈ ಆಟಂ ಬೋಂಬಿನಿದಿರು ಗೋಲಿಯಾಟದಿಂದ ಕಾಣಿಸುತ್ತಿವೆ. ಇವೆಲ್ಲವುಗಳ ವಿನಾಶ ಶಕ್ತಿಯನ್ನು ಜಮಾಯಿಸಿ ತೂಕಕ್ಕಿಟ್ಟರೂ ಆಟಂ ಬಾಂಬಿನ ತಕ್ಕಡಿಯೇ ತಗ್ಗುತ್ತಿದೆ! ವರ್ಣನೆಯಲ್ಲಿ ಮಾತ್ರ ಬಂದಿರುವ ಪ್ರಳಯ ರುದ್ರನ ನಿಟಲಾಕ್ಷಿಯು ಕೂಡಾ ಇದರ ತುಲನೆಗೆ ನಿಲ್ಲದು. ಆಟಂ ಬೋಂಬಿನಂತೆ ಯಾವುದಾದರೊಂದು ಶಸ್ತ್ರ ಈ ರೀತಿ ಇಡೀ ಲೋಕಕ್ಕೆ ಸಡ್ಡು ಹೊಡೆದ-ಬೆದರಿಸಿದ--ಬೇರೆ ನಿದರ್ಶನವೇ ಇಲ್ಲ. ಇನ್ನು ಮುಂದೆ ರಾಷ್ಟ್ರ ರಾಷ್ಟ್ರಗಳ ಯುದ್ಧ ಶಕ್ತಿಯನ್ನರಿಯಬೇಕು ಸೇನೆ-ನಾವೆ-ವಿಮಾನಗಳ ಬಲವೆಷ್ಟಿದೆ ಎಂಬ ತುಲನೆಯಿಂದಲ್ಲ; ಆಟಂ ಬೋಂಬು ಯಾರಲ್ಲಿದೆ ಎಂಬುದನ್ನರಿತರಾಯಿತು. ಸದ್ಯ ಅದು ಅಮೇರಿಕದಲ್ಲಿದೆ!

ಪ್ರಥಮ ಬೋಂಬು!

ಆಗೋಸ್ತು ತಾ 6ನೇ ಸೋಮವಾರ ಅಮೇರಿಕದ ಪ್ರಥಮ ಆಟಮ್ ಬೋಂಬನ್ನು ಕೋಟೆಯಿಂದ 190 ಮೈಲು ದೂರದ ಜಾಪಾನಿನ ದೊಡ್ಡ ಬಂದರ ಹಿರೋಶಿಮದ ಮೇಲೆ ಇಳಿಸಲಾಯಿತು. ಆ ನಗರ ನಾಶಗೊಂಡಿತು—ಧ್ವಂಸವಾಯಿತು-ಎನ್ನುವದಕ್ಕಿಂತ ಅದರ ಶೇಕಡಾ 60ರಷ್ಟು ಅದೃಶ್ಯವಾಯಿತು ಎನ್ನುವದೇ ವಾಸಿ. ಇದು ಸುಮಾರು 4 ಚದರ ಮೈಲು. ಇನ್ನದು ೨೦-೨೫ ಮೈಲುಗಳ ವರೆಗೂ ಸುಟ್ಟಿದೆ; ೪೦-೪೫ ಮೈಲುಗಳ ವರೆಗೂ ಅದುರಿಸಿ ಅಪ್ಪಳಿಸಿಬಿಟ್ಟಿದೆ. ಒಂದು ಬೋಂಬು ಜಿಲ್ಲೆಯ ಯಾವುದಾದರೊಂದು ಸ್ಥಳಕ್ಕೆ ಬಿದ್ದರೆ ಇಡೀ ಜಿಲ್ಲೆಗೆ ಭಯಂಕರ ಭೂಕಂಪವಾದಂತಹ ಅನಾಹುತವದು. ಮೊದಲನೇ ಆಟೋಮಿಕ್ ಬೋಂಬನ್ನು ಪ್ರಯೋಗಿಸಿ ಬಂದ ವೈಮಾನಿಕ ಕರ್ನಲ್ ಪೌಲು ಡಬ್ಲ್ಯು. ಬಿ. ಟಿಬೆಟ್ಸ್ ತನ್ನ ಅನುಭವವನ್ನು ವರ್ಣಿಸುತ್ತಾ, "ನಾವು ಕಣ್ಣಾರೆ ಕಂಡುದನ್ನು ನಂಬುವದು ಅಸಾಧ್ಯ" ಎಂದಿದ್ದಾನೆ. "ನಮ್ಮ ಪ್ರಯೋಗದ ಗುರಿಯನ್ನು ಕಂಡುಹಿಡಿಯುವದು ಕಷ್ಟವಾಗಿತ್ತು; ನಾವು-ಬೋಂಬನ್ನು ಅಂದಾಜಿನಿಂದಲೇ ಇಳಿಸಿದೆವು. ನಾವದನ್ನು ಮುಂಜಾನೆ 9-15ಕ್ಕೆ ಸರಿಯಾಗಿ ಪ್ರಯೋಗಿಸಿ ಅದರ ಜ್ವಾಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿದ್ದಷ್ಟು ಅವಸರದಿಂದ ಆ ಸ್ಥಳ ಬಿಟ್ಟೋಡಿದೆವು. ಇಡೀ ಹಿರೋಶಿಮವೇ ಹೊಗೆಯಾಗಿ ಏಳುತ್ತಿತ್ತು. ಅದ್ಭುತ ಹೊಗೆ ಮೋಡವನ್ನಷ್ಟೇ ನಾವು ದೂರದಿಂದ ಕಂಡುದು" ಎಂದು ಪೌಲು ಅಂದಿದ್ದಾನೆ. 40 ಸಾವಿರ ಅಡಿ ಎತ್ತರಕ್ಕೆ ಅಲ್ಲಿಂದ ಹೊಗೆಯೇಳುತ್ತಿತ್ತು; ಹಲವು ಘಂಟೆಗಳ ನಂತರವೂ ಜ್ವಾಲೆ ಕಾಣುತಿತ್ತು; ಟೋಕಿಯೋದ ರೇಡಿಯೋ ಹೇಳುವಂತೆ ಹಿರೋಶಿಮದ ಮರಮಟ್ಟು, ಜನ, ಜಾನುವಾರು -ಎನಿಶ್ಶೋ ಅವೆಲ್ಲವೂ-ಗುರುತ ಹಚ್ಚಲಾಕದ ರೀತಿಯಲ್ಲಿ ಬೂದಿಯಾಗಿ ಹೋಗಿವೆ. ಮಿಕ್ಕ ಬೋಂಬು ಧಾಳಿಗಳಂತೆ ಸತ್ತವರ ಪರಿಚಯ ಕೊಡುವ ಪ್ರಯಾಸ ಈ ಧಾಳಿಯ ನಂತರವಿಲ್ಲ; ಕಾರಣ, ಎಲ್ಲರೂ ಕರಟಿ ಹೋಗುತ್ತಾರೆ. 'ಹಿರೋಶಿಮಾ ಸತ್ತಿತು!' ಎಂದೇ ಜಾಹೀರು ಮಾಡಿದರಾಯಿತು. 2000 ಮಹಾ ವಿಮಾನಗಳಿಂದಾಗುವ ಧಾಳಿಯ ಪರಿಣಾಮ ಒಂದೇ ಒಂದು ಆಟಾಂ ಬೋಂಬಿನಿಂದಾಗುತ್ತದೆ—ಎಂದು ಶಾಂತ ಸಮುದ್ರದ ವಿಮಾನ ಬಲದ ಮುಖ್ಯಸೇನಾನಿ ಜನರಲ್ ಸ್ಪಾಟ್ಸ್‌ರಂದಿದ್ದಾರೆ.

ಎರಡನೇ ಬೋಂಬು!

ತಾ. 9ನೇ ಅಪರಾಹ್ನ ಜಾಪಾನಿನ ಮತ್ತೊಂದು ಮಹಾ ಬಂದರ ನಾಗಸಾಕಿಯ ಮೇಲೆ ಅಮೇರಿಕನರು ದ್ವಿತೀಯ ಆಟೋಮಿಕ್ ಬೋಂಬನ್ನೊಗೆದರು. ಇದು ಕ್ಯೂಶುವಿನ ಪಶ್ಚಿಮ ಕರಾವಳಿಯಲ್ಲಿರುವ ಪ್ರಾಮುಖ್ಯ ಹಡಗನೆಲೆ. ಚೀನದ ಮುಖ್ಯ ಬಂದರಾಗಿದ್ದು ಚೀನಕ್ಕೂ ಯುರೋಪಿಗೂ ಜಾಪಾನರ ಪಾಲಿಗೆ ಹೆಬ್ಬಾಗಿಲಿನಂತಿತ್ತು. ಇಲ್ಲಿ 'ಡೋಕ್'ನಲ್ಲಿ ಯುದ್ಧ ಹಡಗ ಮತ್ತು ಇತರ ಹಡಗಗಳನ್ನು ಕಟ್ಟುತಿದ್ದರು. ಅಲ್ಲಿದ್ದುದು ಸುಮಾರು 23000 ಮಂದಿ. ಪ್ರಥಮ ಬೋಂಬಿಗಿಂತ ಈ ದ್ವಿತೀಯ ಬೋಂಬಿನ ಪರಿಣಾಮ ಅಧಿಕವಾಗಿತ್ತಂತೆ. ನಾಗಸಾಕಿಯ ಅದೃಷ್ಟವೇನಾಯಿತೆಂಬ ಕುರಿತು ವರ್ಣನೆಯನಗತ್ಯ.

ಜಾಪಾನಿನ ಯುದ್ಧಶಕ್ತಿ ಮತ್ತು ಯುದ್ಧಾಸಕ್ತಿ ಸಮೂಲನಾಶವಾಗುವ ವರೆಗೂ ಆಟೋಮಿಕ್ ಬೋಂಬನ್ನು ಪ್ರಯೋಗಿಸುತ್ತಾ ಹೋಗುವೆವು ಎಂದು ಅಮೇರಿಕಾಧ್ಯಕ್ಷ ಟ್ರುಮೇನರಂದಿದ್ದರೂ ಜಾಪಾನರು ಅಷ್ಟರಲ್ಲೇ ಶರಣುಸೂಚನೆ ಕಳುಹಿದುದರಿಂದ ತೃತೀಯ ಬೋಂಬು ಪ್ರಯೋಗಕ್ಕೆ ಇದು ವರೆಗೆ ಅವಕಾಶ ದೊರೆತಿಲ್ಲ. ಎರಡನೇ ಬೋಂಬು ಬಿದ್ದ ಮರುದಿನವೇ ಜಪಾನಿನ ಸಿಂಗಾಪುರ ರೇಡಿಯೋ ಘೋಷಿಸಿತು: "ಆಟೋಮಿಕ್ ಶಕ್ತಿಯನ್ನು ಸೇನಾ ಕಾರ್ಯಕ್ಕುಪಯೋಗಿಸುವ ರೀತಿಗಳು ಜಾಪಾನರಿಗೆ ಪೂರ್ಣ ಗೊತ್ತಿವೆ. ಇದೇ ರೀತಿಯ ಪ್ರತೀಕಾರಮಾಡಬೇಕಾಗಿ ಬಂದರೆ ಅಮೇರಿಕದ ಮಿಲಿಟರಿಯ ಮೇಲೆ ಮಾತ್ರ ಉಪಯೋಗಿಸಬೇಕೆಂದು ನಮ್ಮ ದೃಢ ನಿರ್ಧಾರವಿದೆ. ನಿರಪರಾಧಿ ನಾಗರಿಕರನ್ನು ಉದ್ದೇಶ ಪೂರ್ವಕ ಭಸ್ಮೀಕರಿಸುವ ಬಯಕೆ ಜಪಾನಿಗಿಲ್ಲ". ಎನ್ನುತ್ತಾ ಆಕ್ರಮಣಕ್ಕೆ ಬರುವ ಹಡಗ ಬಲದ ಮೇಲೆ ಆತ್ಮಹತ್ಯಾ ವಿಮಾನಗಳಿಂದ ಆಟೋಮಿಕ್ ಸ್ಫೋಟಕಗಳನ್ನೆಸೆಯುವ ಸಿದ್ಧತೆ ತೋರಿಸಿದೆ. "ಆಂಗ್ಲೋ ಅಮೇರಿಕಾನರು ಇಂತಹ ಕೃತ್ಯಕ್ಕಿಳಿದ ಮೇಲೆ ಜಾಪಾನು ಅದಕ್ಕೆ ಪ್ರತೀಕಾರ ಮಾಡುವದು ಪೂರ್ಣ ನ್ಯಾಯ" ಎಂದು ಸಿಂಗಾಪುರ ರೇಡಿಯೋದ ಹೇಳಿಕೆ.

ಜರ್ಮನ್ ಶೋಧ!

ಆಟೋಮಿಕ್ (ಪರಮಾಣು) ಶಕ್ತಿಯನ್ನು ಸಂಗ್ರಹಿಸಿ ಪ್ರಯೋಗಿಸುವದು ಸಾಧ್ಯವೆಂದು 1939ರಲ್ಲೇ ಮಿತ್ರ ರಾಷ್ಟ್ರೀಯ ವೈಜ್ಞಾನಿಕರು ಕಂಡು ಹಿಡಿದಿದ್ದರು. ಆದರೆ ಅದರ ರಚನೆಯ ವಿಧಾನ ತಿಳಿದವರಿರಲಿಲ್ಲ. ತಮ್ಮ ಯುದ್ಧೋಪಕರಣಗಳಿಗೆ ಆಟೋಮಿಕನ್ನು ಜೋಡಿಸಲು ಜರ್ಮನರು ಶತ ಪ್ರಯತ್ನದಲ್ಲಿದ್ದಾರೆ ಎಂದು 1942ರಲ್ಲೇ ವಾರ್ತೆಯಿತ್ತು, ಆದರೆ ಕೊನೆಯ ವರೆಗೂ ಅದನ್ನು ತಯಾರಿಸಿ ಪ್ರಯೋಗಿಸಿಲು ನಾಜಿಗಳು ಅಸಮರ್ಥರಾದರು. "ಯುದ್ಧದ ಕೊನೆಯ ಒಂದು ವಾರದಲ್ಲಿ ನಾನು ಮಾಡಬೇಕಾಗಿ ಬರುವ ಕೃತ್ಯಗಳಿಗಾಗಿ ಭಗವಂತನು ನನ್ನನ್ನು ಕ್ಷಮಿಸಲಿ" ಎಂದು ಹಿಟ್ಲರನಾಡಿದ್ದುದು ಇದಕ್ಕಾಗಿಯೇ ಎಂದು ಊಹಿಸಲಾಗಿದೆ. ಟ್ರುಮೇನರಂಥನರು-ಆಟಂ ಬೋಂಬು ಪ್ರಯೋಗಕ್ಕಾಗಿ ಹೆಗ್ಗಳಿಗೆ ಪಡುತ್ತಿದ್ದಾರೆ; ಆದರೆ ಆ ನರ ರಾಕ್ಷಸ ಹಿಟ್ಲರ್ ಅದಕ್ಕಾಗಿ ದೇವರಿಂದ ಮುಂಗಡ ಕ್ಷಮೆ ಬೇಡಿದ್ದ! ನಾಜಿಗಳಾಗ ಬರ್ಲಿನಿನ ಉತ್ತರ ಮೂಲೆಯ ಒರೇನೀನ್ ಬರ್ಗ್‌ನ ದೊಡ್ಡ ಕಾರ್ಖಾನೆಯೊಂದರಲ್ಲಿ ಆಟೋಮಿಕ್ ಅಸ್ತ್ರಗಳ ಸಿದ್ಧತೆಯನ್ನು ಭರದಿಂದ ನಡೆಸುತಿದ್ದರು. ಮಿತ್ರ ವಿಮಾನಗಳ ಆಕಾಶ ಧಾಳಿಯಿಂದ ಅದು ಗರ್ಭದಲ್ಲೇ ನಾಶವಾಯಿತೋ, ಅಥವಾ ನಿರರ್ಥಕ ಮಾನವ ಹತ್ಯೆಗೆ ಜರ್ಮನರು ಹೇಸಿದರೋ ಗೊತ್ತಿಲ್ಲ. ಸುದೈವವಶಾತ್ ವಿಷವಾಯುವಿನಂತೆಯೇ ಇದರ ಪ್ರಯೋಗವೂ ಜರ್ಮನರಿಂದಾಗಲಿಲ್ಲ.

ಅಮೇರಿಕದಲ್ಲಿ ತಯಾರಿ

ಈ ಅವಧಿಯಲ್ಲಿ ಈ ಕುರಿತು ಗಾಢ ಶೋಧ ನಡೆಯಿಸುತಿದ್ದ ಬ್ರಿಟಿಷ್ ವೈಜ್ಞಾನಿಕರು, ಇಂಗ್ಲಾಂಡಿಗಾಗಲೂ ಆಕಾರ ಧಾಳಿಯ ಭೀತಿಯಿದ್ದುದರಿಂದ ಅದನ್ನು ತಯಾರಿಸಲು ಅಮೇರಿಕಕ್ಕೆ ಬಂದರು. ಅದಕ್ಕೊಂದು ಆಕಾರ ಕೊಡಲು ಆಂಗ್ಲೋ-ಅಮೇರಿಕನ್ ವೈಜ್ಞಾನಿಕರು ಮೂರು ವರುಷ ಪ್ರಯತ್ನಿಸಬೇಕಾಯಿತು. ಇದಕ್ಕಾಗಿ ಒಂದು ನವೀನ ರಸಾಯನ ಶಾಸ್ತ್ರವನ್ನೇ ತಯಾರಿಸಬೇಕಾಯಿತು. ಇದನ್ನು ಪ್ರಥಮತಃ ಕಂಡುಹಿಡಿದಾಗ ತಯಾರಿಸಲು ಸಾಧ್ಯವಾದುದೆಂದರೆ ಒಂದು ಧಾನ್ಯದ ಮಿಲಿಯದೊಂದು ಭಾಗದಷ್ಟನ್ನು ಮಾತ್ರ. ಇದರ ಆಧಾರದಿಂದಲೇ ಮಹತ್ತಾದ ರಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಈಗ ಅಮೇರಿಕದ ಟೆನ್ನೆಸ್ಸೀ, ವಾಷಿಂಗ್ಟನ್ ಮತ್ತು ನ್ಯೂ ಮೆಕ್ಸಿಕೋಗಳ ಕಾರ್ಖಾನೆಗಳಲ್ಲಿ 65000ಕ್ಕೂ ಮಿಕ್ಕಿದ ಕೆಲಸಗಾರರು ಆಟೊಂ ಬೋಂಬುಗಳನ್ನು ತಯಾರಿಸುತಿದ್ದಾರೆ.

ಪರೀಕ್ಷಾರ್ಥ ಪ್ರಯೋಗ

ಆಟೋಮಿಕ್ ಬೋಂಬುಗಳ ಅಂಶ ಜೋಡಿಸಿ ರೂಪಕ್ಕೆ ತರುವ ಪ್ರಥಮ ಕೆಲಸವಾದುದು ಇದೇ ಜುಲಾಯಿ ತಾ 12ರಲ್ಲಿ; ನ್ಯೂ ಮೆಕ್ಸಿಕೋದ ವಿಶಾಲ ಬಂಜರು ಭೂಮಿಯ ಒಂದು ಹಳೇ ಕಟ್ಟಡದಲ್ಲಿ. ವಿಜ್ಞಾನಿಗಳು ಬಹು ದೂರದಲ್ಲಿ ನಿಂತು ಅವುಗಳನ್ನು ಜೋಡಿಸಿದ್ದರು. ಆಗ ಎಳ್ಳಷ್ಟು ಪ್ರಮಾದವಾಗುತ್ತಿದ್ದರೆ ವಿಜ್ಞಾನಿಗಳ ಸಮೇತ, ಆ ಭಾಗವೆಲ್ಲಾ ಹೊಗೆಯಾಗಿ ಹೋಗುತಿತ್ತು; ಈ ಅದ್ಭುತ ಚರಿತ್ರೆಯ ಆರಂಭವೂ ಸಮಾಪ್ತಿಯೂ ಒಟ್ಟೊಟ್ಟಿಗಾಗುತಿತ್ತು! ಜೋಡಣೆಗೇನೇ 2 ದಿನ ಹಿಡಿಯಿತು. ನಿಶ್ಚಿತ ದಿನವಾದ ಜುಲಾಯಿ 2೬ರಲ್ಲಿ ಅದರ ಪರೀಕ್ಷಾರ್ಥ ಪ್ರಯೋಗ ನಡೆಯಿತು. ಅದ್ಭುತ! ಅತ್ಯದ್ಭುತ!!

(೬ನೇ ಪುಟ ನೋಡಿರಿ)

The Vijaya Bank Limited.

ANNOUNCEMENT

We have much pleasure to announce that the New shares issued by us have been easily oversubscribed. We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ.

Head Office: MANGALORE

B. MANJAYA HEGDE.
Chairman of the Board of Directors.

ಇಂಗ್ಲೆಂಡಿಗೆ ಮೊದಲನೇ ಸಲ ತೆರಳಿದ ನೌಕಾದಳದ ಸ್ತ್ರೀ.

ಇಂಗ್ಲೆಂಡಿಗೆ ಹೋದವರಲ್ಲಿ ಭಾರತೀ ನೌಕಾಶಾಖೆಯ ಸ್ತ್ರೀ ದಳದ ದ್ವಿತೀಯ ಅಧಿಕಾರಿಣಿ ಕಲ್ಯಾಣಿ ಸೇನರೇ ಮೊದಲಿಗರು. ಹಲವು ಅಧಿಕಾರಿಗಳ ಆಹ್ವಾನದ ಮೇಲೆ ನೌಕಾಶಾಖೆಯಲ್ಲಿ ನವೀನ ಶಿಕ್ಷಣ ಪಡೆಯಲು ಹೋಗಿದ್ದರು. ಕಲ್ಕತ್ತಾದಲ್ಲಿ ಭಾರತೀ ನೌಕಾ ನಿರೂಪಕರೊಬ್ಬರು ತಮ್ಮನ್ನು ಕಂಡಾಗ ಕಲ್ಯಾಣಿ ಸೇನರು 'ಇಂಗ್ಲೆಂಡಿನ ವಾಸ ನಮಗೆ ಬಹಳ ಸ್ವಾರಸ್ಯವಾಗಿತ್ತು. ಅನೇಕ ಸಂಗತಿಗಳು ಗೊತ್ತಾದುವು. ನಮ್ಮ ತಂಡ ವಿಶೇಷವಾಗಿ ಸಂಚಾರಮಾಡಿ ಅನುಭವಗಳಿಸುವುದಕ್ಕೆ ಅವಕಾಶವಾಯಿತು. ಎಲ್ಲರೂ ನಮಗೆ ಆದರದ ಆತಿಥ್ಯ ನೀಡಿದರು. ಅವರಲ್ಲಿಯೂ ನೌಕಾಪಡೆಯ ಸ್ತ್ರೀ ದಳದವರು ಮತ್ತು ಇತರರು ನಮ್ಮನ್ನು ಬಹಳವಾಗಿ ಆದರಿಸಿದರು." ಎಂದು ಹೇಳಿದರೆಂದು ನಿರೂಪಿಸಿದ್ದಾರೆ.

ಸೇನರು ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳಲ್ಲಿ ಬಿ. ಬಿ. ಸಿ. ಬಾನುಲಿಯಲ್ಲಿ ಮಾತಾಡಿದರು; ಬಕಿಂಗ್ ಹ್ಯಾಮ್ ಅರಮನೆಯಲ್ಲಿ ಪಟ್ಟಪ್ರಧಾನ ಮಹೋತ್ಸವದಲ್ಲಿ ಭಾಗವಹಿಸಿದರು. ಭಾರತ ಹೈ ಕಮಿಷನರ್ ಅವರ ಆತಿಥ್ಯ ಸ್ವೀಕರಿಸಿದರು. ನೌಕಾ ಸ್ತ್ರೀದಳದ ವಾರ್ಷಿಕ ಸಭೆಯಲ್ಲಿ ಭಾರತೀ ನೌಕಾ ಸ್ತ್ರೀ ಶಾಖೆಯ ಪ್ರತಿನಿಧಿಯಾಗಿದ್ದರು.

ಮದುವೆಗೆ ಮುಂಚೆ ಕಲ್ಯಾಣಿ ಸೇನರಿಗೆ ಕಲ್ಯಾಣಿಗುಪ್ತ ಎಂದು ಹೆಸರು. ಲಾಹೋರಿನ ಎಸ್. ಎನ್. ಗುಪ್ತರ ಏಕಮಾತ್ರ ಪುತ್ರಿ, ಲಾಹೋರಿನಲ್ಲೇ ಅವರಿಗೆ ವಿದ್ಯಾಭ್ಯಾಸ ನಡೆಯಿತು. ೧೯೩೮ರಲ್ಲಿ ಪಂಜಾಬಿನ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ. ಎ. ಪ್ರಶಸ್ತಿ ಪಡೆದರು. ೧೯೪೧ನೇ ಅಕ್ಟೋಬರ್ ತಿಂಗಳಲ್ಲಿ ಬಲೂಚಿ ದಳದ ಲೆ. ಕ. ಎಲ್. ಪಿ. ಸೇನರನ್ನು ಮದುವೆಯಾದರು. ೧೯೪೩ರಲ್ಲಿ ತನ್ನ ತಾಯಿ ಮುಖ್ಯ ಸೇನಾ ನಾಯಕಿಯಾಗಿರುವ ಭಾರತೀ ಸ್ತ್ರೀ ಸಹಾಯ ದಳಕ್ಕೆ ಸೇರಿದರು.

ಬೆಳಗಾಮಿನಲ್ಲಿ ಕ್ಷೇಮಲಾಭ ಸಂಸ್ಥೆಯ ಸ್ಥಾಪನೆ.

ಈಗ ಸುಮಾರು ೨೫ ವರ್ಷಗಳಿಗೆ ಮುಂಚೆ ಕಳೆದ ಯುದ್ಧದಲ್ಲಿ ತೀರಿಕೊಂಡ ಬ್ರಿಗೇಡಿಯರ್ ಜನರಲ್ ಮೂಡ್‌ರವರು ಸ್ಥಾಪಿಸಿದ ಕ್ಷೇಮ ಲಾಭ ಸಂಸ್ಥೆ ಈಗ ಮತ್ತೆ ತೆರೆದಿದೆ. ಇದು ಮೂಡ್‌ರವರ ಹೆಸರಿಟ್ಟ ಕಟ್ಟಡವೊಂದರಲ್ಲಿದೆ. ಇದಕ್ಕೆ ಈಗ "ಮೂಡ್ ಸೇವಾ ಸಂಸ್ಥೆ" ಎಂದು ಹೆಸರು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲಾರುಗಳೂ ಪ್ರಕಟ
ವಾಗುತ್ತವೆ.
ವಾರ್ಷಿಕ ಚಂದಾ
ರೂ. 1—8—0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು
ಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ ಆಫೀಸು, ಉಡುಪಿ

ಭಾರತದ ರಣ ಸಂಬಂಧ

ಬೆಳಗಾಮಿನ ಸಮೀಪದಲ್ಲಿದ್ದು ಆ ಮಾರ್ಗವಾಗಿ ಹೋಗುವ ಅಥವಾ ಶಿಕ್ಷಣ ಪಡೆಯುತ್ತಿರುವ ಬ್ರಿಟಿಷ್ ಸೈನಿಕರಿಗೆ ಮುಖ್ಯವಾದ ಕ್ಷೇಮಲಾಭ ಕೇಂದ್ರವಾಗಿ ಪರಿಣಮಿಸಿದೆ.

೧೯೩೦-೩೫ ರ ಮಧ್ಯಕಾಲದಲ್ಲಿ ಈ ಕಟ್ಟಡ ವಿವಿಧ ವಿದ್ಯಾಲಯಗಳ ಕ್ರೀಡಾಸ್ಥಳವಾಗಿತ್ತು. ಈಗಿನ ಪರಿಸ್ಥಿತಿಯಲ್ಲಿ ಈ ಮೂಡ್ ಸೇವಾಸಂಸ್ಥೆ ಡೇರೆಗಳಲ್ಲಿ, ಮನೆಗಳಲ್ಲಿ ವಾಸಿಸುತ್ತ ಶಿಕ್ಷಣ ಪಡೆಯುತ್ತಿರುವವರಿಗೆ ತಕ್ಕ ಅನುಕೂಲಗಳನ್ನೊದಗಿಸುತ್ತಿದೆ. ಇದಕ್ಕೆ ಸೇರಿದಂತೆ ಭೋಜನ ಶಾಲೆ ವಿಶ್ರಾಂತಿಗೃಹ, ಕ್ರೀಡಾಗೃಹಗಳಿವೆ. ಬೆಳಗಾಮಿನ ಸಮೀಪದಲ್ಲಿ ಬೀಡು ಬಿಟ್ಟಿರುವ ದಳಗಳಿಗೆ ಇಷ್ಟರಲ್ಲೇ ಸಣ್ಣದೊಂದು ವಸತಿಗೃಹವನ್ನು ತೆರೆಯುವ ಏರ್ಪಾಡಿದೆ.

ಭಾರತ ರಕ್ಷಣಾ ಪಡೆಯ ಕಾರ್ಯ.

ಜಪಾನಿಗಳು 1942ರಲ್ಲಿ ಬರ್ಮಾದ ಗಡಿಯ ವರೆಗೆ ನುಗ್ಗಿ ಭಾರತಕ್ಕೆ ಹೆದರಿಕೆಯುಂಟು ಮಾಡುತ್ತಿದ್ದಾಗ ಭಾರತ ರಕ್ಷಣಾ ಪಡೆಯೊಂದು ಏರ್ಪಾಟಾಯಿತು. ಇಲ್ಲಿಯ ರೈಲು ಮಾರ್ಗ, ಬಂದರುಗಳು, ಅಂಚೆ ಮತ್ತು ತಂತಿ ವಿರ್ಪಾಟುಗಳನ್ನು ಸಂರಕ್ಷಿಸುವುದು ಇದರ ಕರ್ತವ್ಯವೆಂದು ಗೊತ್ತುಮಾಡಲಾಯಿತು. ಅಸ್ಸಾಂ, ಒರಿಸ್ಸಾ, ಮದರಾಸುಗಳಲ್ಲಿ ಈ ಹೊಸ ದಳಕ್ಕೆ ಜನ ಮುನ್ನುಗ್ಗಿ ಬರಬೇಕೆಂದು ಸರ್ಕಾರ ಬೇಡಿತು. ಬೇಡಿಕೆ ಬಂಜೆಯಾಗಲಿಲ್ಲ. ಬಹು ಬೇಗನೆ ಸಾಕಾದಷ್ಟು ಜನ ಬಂದು ಸೇರಿದರು. ಈಗ ಇವರು ತಮ್ಮ ಕರ್ತವ್ಯಗಳನ್ನು ಸರಾಗವಾಗಿ ಸಾಗಿಸುತ್ತಿದ್ದಾರೆ. ಇವರನ್ನು ಬೇರೆ ಬೇರೆ ಮಿಲಿಟರಿ ತಂಡಗಳನ್ನಾಗಿ ವಿಂಗಡಿಸಿದೆ. ಪ್ರತಿ ತಂಡಕ್ಕೂ ಒಬ್ಬೊಬ್ಬ ಮುಖಂಡ, ಕಟ್ಟುಕಟ್ಟಳೆಗಳು, ಸಿವಿಲ್ ದರದ ಸಂಬಳ, ಸೈನ್ಯಪರಿಹಾರ ಭತ್ಯ ಉಚಿತ ಆಹಾರ ಸಾಮಗ್ರಿ ಮತ್ತು ಇತರ ದರ್ಜೆಗಳವರಿಗೆ ಉಡುಪು-ಹೀಗೆ ಏರ್ಪಡಿಸಲಾಗಿದೆ. ಭಾರತದ ಟಪ್ಪಾಲು, ತಂತಿ, ರೈಲು ಮುಂತಾದುವನ್ನು ರಕ್ಷಿಸಿ, ಸರಿಯಾದ ಸ್ಥಿತಿಯಲ್ಲಿಡುವುದರಲ್ಲಿ ನೆರವಾದ ಇವರನ್ನು ಕಳೆದ ವರ್ಷದ ವರೆಗೆ ಭಾರತೀ ಎಂಜಿನಿಯರಿಂಗ್ ಶಾಖೆಗೆ ಸೇರಿಸಿಕೊಂಡು, ಅವರದೇ ಒಂದು ತಂಡವನ್ನಾಗಿ ಮಾಡಲಾಯಿತು.

ಭಾರತೀ ದಳವೆಂದರೆ ಲಂಡನಿನಲ್ಲಿ ಹೆಮ್ಮೆ.

ಬರ್ಮಾದಲ್ಲಿ ಭಾರತೀ ದಳಗಳು ಹೇಗೆ ಕಾದಾಡಿದುವೆಂಬುದು ಲಂಡನಿನಲ್ಲಿ ಹೆಮ್ಮೆಯ ಮಾತಾಗಿದೆ. ಲಂಡನಿನ ಲಾರ್ಡ್ ಮೇಯರರು 14ನೇ ಪಡೆಯ ಲೆ. ಜ. ಸರ್. ವಿಲಿಯಂ ಸ್ಲಿಂರವರಿಗೆ ಸಂದೇಶವೊಂದನ್ನು ಕಳಿಸಿ, ಪ್ರತಿ ಸೈನಿಕನಿಗೂ ಅದನ್ನು ತಿಳಿಯಪಡಿಸುವಂತೆ ಕೇಳಿಕೊಂಡಿದ್ದಾರೆ. ಸಂದೇಶದ ಒಕ್ಕಣೆ ಹೀಗಿದೆ: —

"ನಾವು ಅವರ ಧೈರ್ಯ ಸಾಹಸಗಳನ್ನು ಮೆಚ್ಚಿದ್ದೇವೆ; ಅವರ ರೀತಿಯೇ ನಮ್ಮ ಹೆಮ್ಮೆ; ಅವರ ವಿಜಯಗಳನ್ನು ಎವೆಯಿಕ್ಕದೆ ನೋಡುತ್ತಿದ್ದೇವೆ ಎಂದು ಲಂಡನಿನ ಜನ ನನಗೆ ಗಿಲ್ಡ್‌ಹಾಲಿನಲ್ಲಿ ಹೇಳಿದರು; ಈ ಅಂಶವನ್ನು ನೀವು ದಯವಿಟ್ಟು ದಳಗಳಿಗೆ ತಿಳಿಸುವುದು ಎಂದು ಕೇಳಿಕೊಂಡರು. ಮಿಕ್ಕವರು ಮನಬಂದಂತೆ ಹೇಳಿಕೊಳ್ಳಲಿ; ನಾವು ಮಾತ್ರ ಭಾರತೀ ದಳವನ್ನು ಮರೆತಿಲ್ಲ, ಮರೆಯುವಂತೆಯೂ ಇಲ್ಲ. ನಾವವರನ್ನು ಸರ್ವದಾ ನೆನೆಯುತ್ತೇವೆ; ನಮ್ಮ ಮನದಲ್ಲಿ, (ಪ್ರಾರ್ಥನೆಯಲ್ಲಿ) ಅವರ ನೆನಪು ಗುಡಿಗಟ್ಟಿ ನೆಲಸಿ ನಲಿಯಲಿ. ಸಂಪೂರ್ಣ ವಿಜಯವಾಗುವ ವರೆಗೆ, ಕಷ್ಟವೆಷ್ಟಾದರೂ ಬರಲಿ, ಚಿಂತೆಯಿಲ್ಲ; ನಮ್ಮ ಶಕ್ತಿಯಿದ್ದಷ್ಟೂ ನಾವು ಅವರೊಡನೆ ಸಹಕರಿಸಿ ನಂಬಿ ನಿಲ್ಲುತ್ತೇವೆ."

ಬಿಡುಗಡೆಯಾದ ಯುದ್ಧಕೈದಿಗಳಿಗೆ ವಿಶೇಷ ರೀತಿಯ ಏರ್ಪಾಟು.

ಜಾಪಾನಿಗಳ ಸೆರೆಯಿಂದ ಬಿಡುಗಡೆ ಹೊಂದಿದ ಯುದ್ಧ ಕೈದಿಗಳಿಗೋಸ್ಕರ ಬಹುಭಾರಿಯ ಏರ್ಪಾಟುಗಳು ನಡೆಯುತ್ತಿವೆ. ಜಪಾನಿಗಳು ಮಲಯಾ ಮತ್ತು ಬರ್ಮಾಗಳಿಗೆ ನುಗ್ಗಿದಾಗ ಹಲವು ಭಾರತೀ ಮತ್ತು ಬ್ರಿಟಿಷ್ ಪಡೆಗಳನ್ನು ಕೈಸೆರೆ ಹಿಡಿದರು. ಅಂದರೆ ಸುಮಾರು ೬೦,೦೦೦ ಜನ ಅವರಿಗೆ ಸೆರೆಸಿಕ್ಕಿದರು. ಬಂಧನ ವಿಮೋಚನೆಯಾದ [illegible]ರನ್ನು ಏನು ಮಾಡಬೇಕು ಎಂಬ ವಿಷಯದಲ್ಲಿ ದೆಹಲಿಯ ಸೇನಾ ಕೇಂದ್ರದಿಂದ ಹೊರಟ ಪ್ರಕಟನೆಯೊಂದು ಹೊರಬಿದ್ದಿದೆ. ಅದರಲ್ಲಿ ಎಲ್ಲ ಅಂಶಗಳನ್ನೂ ಹೀಗೆ ವಿಶದಪಡಿಸಿದೆ.

ಹಿಂದಿರುಗಿ ಬಂದ ಯುದ್ಧ ಕೈದಿಗಳನ್ನು ಬಹಳ ಎಚ್ಚರಿಕೆಯಾಗಿ, ನಯವಾಗಿ ಕಾಣುತ್ತಾರೆ. ಅವರಲ್ಲಿ ಹಲವರು ನಾಲ್ಕು ವರ್ಷಕ್ಕೆ ಮೀರಿ ಮುಳ್ಳು ತಂತಿಯ ಬೇಲಿಯ ಹಿಂದೆ ಬಂಧಿತರಾಗಿ ಕೊಳೆಯುತ್ತಿದ್ದರು. ಅರ್ಥವಿಲ್ಲದ ಕಟ್ಟುಕಟ್ಟಳೆಗಳನ್ನು ನೊಂದವರ ಮೇಲೆ ಹೇರಬಾರದು. ಅವರ ಯೋಗಕ್ಷೇಮವನ್ನು ಹುಷಾರಾಗಿ ಎಲ್ಲ ಅಧಿಕಾರಿಗಳೂ ನೋಡಿಕೊಳ್ಳಬೇಕು. ಬಂದಿಳಿದೊಡನೆ ಯುದ್ಧ ಕೈದಿಗಳಿಗೆ ಬಟ್ಟೆ ಮತ್ತು ಇತರ ಬಳಕೆಯ ಸಾಮಾನುಗಳನ್ನು ಒದಗಿಸಿಕೊಡಬೇಕು. ರಜಾನೆ ಶಿಬಿರಗಳಿಗೆ ತಲುಪಿದೊಡನೆ ಅಥವಾ ಆಸ್ಪತ್ರೆಯಿಂದ ಹೊರಕ್ಕೆ ಬಂದಾಗ ಅವರಿಗೆ ನಿಗದಿ ಮಾಡಿರುವ ಪ್ರಕಾರ ಬಕ್ಷಿ ಮುಂತಾದುವನ್ನು ಕೊಡಲಾಗುವುದು. ಬಂದರಿಗೆ ಬಂದು ತಲುಪಿದೊಡನೆ ಅವರು ತಮ್ಮ ತಮ್ಮ ಊರುಗಳಿಗೆ ತಂತಿ ವರ್ತಮಾನ ಕಳಿಸಬಹುದು. ಅವರ ಸಂಬಳ, ಭತ್ಯ, ಸಂಸಾರದ ಖರ್ಚು, ಸೇನಾ ನೌಕರಿಯಿಂದ ಬಿಡುಗಡೆಯಾಗುವಾಗ ಮತ್ತು ನಾಗರಿಕ ಜೀವನದಲ್ಲಿ ಪುನರುದ್ಯೋಗ ಮುಂತಾದ ಅಂಶಗಳನ್ನು ಕುರಿತು ಕೇಳಿ ಒಡನೆ ಉತ್ತರ ಪಡೆಯಬಹುದು. ಸೈನಿಕರಿಗೆ ನಿರ್ಗಮನದ ರಜವನ್ನು ಹೀಗೆ ಮಂಜೂರು ಮಾಡಲಾಗುವುದು. ಭಾರತೀ ಮತ್ತು ಬರ್ಮಾ ಪಡೆಗಳ ಭಾರತೀಯರಿಗೆ ಇಂಡಿಯಾದಲ್ಲಿ 2 ತಿಂಗಳು; ಬ್ರಿಟಿಷ್ ದಳದವರಿಗೆ ಇಂಗ್ಲೆಂಡಿನಲ್ಲಿ ಅಥವಾ ಅವರ ವಾಸಸ್ಥಾನದಲ್ಲಿ ೬೨ ದಿನ; ಮತ್ತು ಭಾರತೀ ಮತ್ತು ಬರ್ಮಾ ದಳಗಳ ಬ್ರಿಟಿಷ್ ಸೈನಿಕರಿಗೆ ಇಂಡಿಯಾ ಇಂಗ್ಲೆಂಡ್ ಅಥವಾ ಅವರವರ ವಾಸಸ್ಥಾನಗಳಲ್ಲಿ 2 ತಿಂಗಳು. (ಬ್ರಿಟಿಷ್ ಸೈನಿಕರು ಮಾತ್ರ ಹಡಗಿನಲ್ಲಿ ಅಥವಾ ವಿಮಾನದಲ್ಲಿ ಪ್ರಯಾಣಮಾಡಬಹುದು.) ತಮ್ಮ ಸಂಗಡ ೫೦ ಪೌಂಡಿಗೆ ಮೀರದಂತೆ ಗಂಟು ಮೂಟೆಗಳನ್ನು ಸಾಗಿಸಿಕೊಂಡು ಹೋಗಬಹುದು.

(ಭಾರತೀಯ ದಾಕ್ಷಿಣಾತ್ಯ ಸೇನೆಯ ಸಾರ್ವಜನಿಕ ಸಂಬಂಧ ವಾರ್ತೆ)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.
ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.
ಬೆಲೆ ಬರೇ ರೂ. 1—4—0. ರೂ. 1-8-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ, ಕ.

ನಗುವ ಮಗು

ಮಾರ್ಗರೇಟರ "ಫಿಟ್ಸ್‌ಕ್ಯೂರ್"
ಪ್ರಯೋಗದಿಂದೊದಗಿದ
ತಾಯಿಯ ಬೆಳಕು.
ಧರ್ಮಾರ್ಥ ಸ್ಯಾಂಪಲ್ ದಿಸಧಿ ಪ ಮಗುವಿನ ರಕ್ಷಣೆಯ ಗುಟ್ಟುಗಳಿಗಾಗಿ ನಮಗೆ ಬರೆಯಿರಿ. ಟಪ್ಪಾಲು ಖರ್ಚಿಗೆ 4 ಆಣೆ ಸ್ಟಾಂಪನ್ನು ಕಳುಹಿಸಬಹುದು.
Margaret's Fitscure Home,
UDIPI. S India.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ದಕ್ಷಿಣ ಕನ್ನಡ.

ಸುರತ್ಕಲ್-ಉಡುಪಿಯ ಪಾಂಗಾಳ ನಾಯಕ್ ಬೇಂಕಿನ ಶಾಖೆಯೊಂದು ಇಲ್ಲಿ ಶೀಘ್ರ ತೆರೆಯಲಾಗುವುದೆಂಬು ತಿಳಿದು ಬರುತ್ತದೆ.

ಬಂಟರ ಯಾನೆ ನಾಡವರ ಸಂಘ-ನೇತೃತ್ವದಲ್ಲಿ ಮುಲ್ಕಿ ಮತ್ತು ಆಸ್ಪಾಸಿನ 38 ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿಯ ಕಾರ್ಯವನ್ನು ಪ್ರಯತ್ನಿಸುತ್ತಾ ಇಂದಿಗೆ 12 ಸಭೆಗಳಾಗಿ 13ನೇ ಸಭೆಯು ಪಲಿಮಾರಲ್ಲಿ ತಾ 19-8-45ಕ್ಕೆ ಕೂಡಿ ಬರುವುದು. ಗ್ರಾಮಾಭಿವೃದ್ಧಿಗೆ ಅಗತ್ಯವುಳ್ಳ ನಿರ್ಣಯಗಳಿಂದ ಜನಮತ ಸಂಗ್ರಹಿಸುತ್ತಾ ಕೆಲಸವನ್ನು ಮಾಡುವುದಲ್ಲದೆ ಗ್ರಾಮಸ್ಥರ ಒಗ್ಗಟ್ಟಿನ ಸಲುವಾಗಿ ತಾ 2 9 45ನೇ ಆದಿತ್ಯವಾರ ಈ ಮುಂಚೆಯೇ ನಿಶ್ಚಯಿಸಿಕೊಂಡಂತೆ ಪ್ರತಿ ಒಬ್ಬ ರಹಿತನು ಮುಂದಾಗಿ ಒಂದು ಗುಳಿ ತೆಗೆದು ತುಂಬಿಸಿ ತಯಾರಿಸಿಟ್ಟು ಆ ದಿನ ಸಭೆ ಕೂಡುವಲ್ಲಿಗೆ ಸಸಿ ಒಂದನ್ನು ಹಿಡಕೊಂಡು ಬಂದು ಆ ತನಕದ ಕೆಲಸದ ವರದಿಯನ್ನೂ ಆ ಸಭೆಗೆ ಆಮಂತ್ರಿತರಾದ ಮಹನೀಯರ ಮಾತುಗಳನ್ನೂ ಕೇಳಿ ಹಿಂತಿರುಗುತ್ತಾ ಸಸಿಯನ್ನು ಕೊಂಡು ಹೋಗಿ ನಡುವಂತೆ ನಿಶ್ಚಯಿಸಿಕೊಂಡದೆ. ರಹಿತ ವರ್ಗವು ಸಸಿಯನ್ನು ಹೆಚ್ಚು ಸಂಖ್ಯೆಯಲ್ಲಿ ಇಡಬೇಕೆಂಬ ಅಭಿಪ್ರಾಯ ಈಗ ನಮ್ಮಲ್ಲಿಲ್ಲ. ಪ್ರತಿ ಒಬ್ಬನು ಒಂದರಂತೆ ಎಲ್ಲವರೂ ಇಡುವಂತೆ ಆಲೋಚಿಸಿ, ಒಂದಾಗಿ ಬಂದು, ಕೂಡಿ, ಹೋಗುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಹಲವು ಗ್ರಾಮಗಳಲ್ಲಿ ರಹಿತರು ಒಟ್ಟಾಗಿ ಕೂಡಿ ವಿಜೃಂಭಣೆಯಿಂದ ಬರುವ ಆಲೋಚನೆ ಮಾಡಿರುವರಾಗಿ ತಿಳಿದು ಬರುವುದು.

ಮುಲ್ಕಿ, ಪಳೆಯಂಗಡಿ, ಕಾಳಿಪಾಡಿ, ಮುಂಡ್ಕೂರು ಮತ್ತು ಪಲಿಮಾರಲ್ಲಿ ಈ ಕುರಿತು ರಹಿತರ ಸಭೆಯು ತಾ 2-9-45ನೇ ಆದಿತ್ಯವಾರ ಪೂರ್ವಾಹ್ನ 10 ಘಂಟೆಗೆ ಆಗುವುದು. ಈ ಸೆಂಟರುಗಳಿಗೆ ಇಬ್ಬರಂತೆ ಕ್ರಮವಾಗಿ ಈ ಮಹನೀಯರನ್ನ ಕೇಳಿಕೊಂಡಿರುವೆವು— ಜಿಲ್ಲಾ ಕಲೆಕ್ಟರ್, ರಾವ್ ಸಾಹೇಬ ರಂಗನಾಥ ಪೂಂಜ, ಶ್ರೀ ರಾಮಚಂದ್ರರಾವ್, ಶ್ರೀ. ಎ. ಬಿ. ಶೆಟ್ಟಿ, ವೆರಿರೆವೆರೆಂಡ್ ಡಾಕ್ಟರ್ ಜೆ. ಮಿನೇಜಸ್, ಡಿ. ಡಿ., ರಾವ್ ಬಹದೂರ್, ಕೆ. ಟಿ, ಆಳ್ವ, ಶ್ರೀ. ಬಿ. ವೆಂಕಟ್ರಾಯ ಬಾಳಿಗ, ಶ್ರೀ. ಕೆ. ಸದಾನಂದ ಹೆಗ್ಗಡೆ, ಮತ್ತು ಪಲಿಮಾರು ಸ್ವಾಮಿಯವರು. ಪಲಿಮಾರಿಗೆ ಇನ್ನೊಬ್ಬ ಮಹನೀಯರನ್ನು ಚುನಾಯಿಸಲಿರುವೆವು. ಈ ಕೆಲಸವು ಯಶಸ್ವಿಯಾಗಿ ನಡೆದು ಬರುವಂತೆಯೂ ರಹಿತರಲ್ಲಿ ಒಗ್ಗಟ್ಟು ಬೆಳೆದು ಬರುವಂತೆ ಆಗಬೇಕಾಗಿಯೂ ನನ್ನ ಕೋರಿಕೆಯಿರುವುದು ಎಂದು ಕಾರ್ಯದರ್ಶಿ ಶ್ರೀ. ಎಂ. ಆರ್, ಪೂಂಜರು ತಿಳಿಸುತ್ತಾರೆ.

ಗ್ರಾಮ ಸೇವಾಸಮಿತಿ, ಮುದ್ರಾಡಿ ಮೋರಿನ ಸಮಿತಿಯ ಸಭೆಯು ತಾ 9|8|'45 ರಲ್ಲಿ ಶ್ರೀ. ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದು ಈ ವರೇಗಿನ ಕಾರ್ಯವನ್ನು ಪರಿಶೀಲಿಸಲಾಯಿತು. ಈ ಸಮಿತಿಯ ಆಶ್ರಯದಲ್ಲಿ ಒಂದು ರಾಷ್ಟ್ರೀಯ ಶಾಲೆ, ಒಂದು ರಾತ್ರಿ (ಪ್ರಾಯಸ್ಥರ) ಶಾಲೆ ಮತ್ತು ಒಂದು ವಾಚನಾಲಯ ಇಷ್ಟು ನಡಿಯುತ್ತಿವೆ. ತಾ 9ಕ್ಕೆ ಸಮಿತಿಯ ಆಶ್ರಯದಲ್ಲಿ ಒಂದು ಹಿಂದಿ ವರ್ಗವೂ ತೆರೆಯಲ್ಪಟ್ಟಿತು. ರಾತ್ರಿ ಮುದ್ರಾಡಿ ಯಕ್ಷಗಾನ ಮಂಡಲಿಯವರಿಂದ ಯಕ್ಷಗಾನ ಕೂಟವೂ ನಡೆಯಿತು.

ಕುಂಬಳೆ ಆಗೋಸ್ತು ತಾ 11ರಲ್ಲಿ ಸ್ಥಳೀಯ ಮುಸ್ಲಿಂ ಉಪಾಧ್ಯಾಯರ ಸಭೆಯೊಂದು ಈ ದಿನ ಮುನೀರುಲ್ ಇಸ್ಲಾಂ ಶಾಲೆಯಲ್ಲಿ ಜ. ಯನ್. ಅಬ್ದುಲ್ಲ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಖಾಸಗಿ ಶಾಲಾ ಉಪಾಧ್ಯಾಯರಿಗೂ ಸರಕಾರೀ ಶಾಲಾ ಉಪಾಧ್ಯಾಯರಿಗೆ ಸಿಕ್ಕುವಂತೆಯೇ ತುಟ್ಟಿಭತ್ತೆಯನ್ನೂ ಸಂಬಳವನ್ನೂ ಹೆಚ್ಚಿಸಬೇಕೆಂಬ ಠರಾವನ್ನು ಪಾಸು ಮಾಡಿರುತ್ತದೆ.

ಕಟಪಾಡಿ ಸ್ಥಳೀಯ ಪ್ರಾಥಮಿಕ ಶಾಲಾ ಅಧ್ಯಾಪಕರ ಕೇಂದ್ರ ಸಂಘದ ಸಭೆಯು ತಾ 11ನೆಯ ಶನಿವಾರ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಸಭಾ ಕಾರ್ಯಕ್ರಮಗಳು ಮುಗಿದ ತರುವಾಯ ಸಂಘವು ಸ್ಥಾಪಿತವಾದಂದಿನಿಂದ ಈ ವರೆಗೆ ಅದರ ಕಾರ್ಯದರ್ಶಿಯವರೂ 'ಬಾಲಚಂದ್ರ'ದ ಸಂಪಾದಕರೂ ದ. ಕ. ಜಿಲ್ಲಾ ಹೋಲ್ ಸೇಲ್ ಸ್ಟೋರ್ಸಿನ ಉಡುಪಿ ತಾಲೂಕು ಡಿಪೊ ಇನ್ಸ್‌ಪೆಕ್ಟರರೂ ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ ಕಾರ್ಯದರ್ಶಿಯರೂ ಆದ ಶ್ರೀ. ಕೆ. ಆರ್. ಶೆಣೈ ಇವರು ಮೂನ್ನೆ ತಾನೆ ಹೊಸತಾಗಿ ತೆರೆಯಲ್ಪಟ್ಟ ಎಸ್. ವಿ. ಎಸ್. ಹೈಸ್ಕೂಲಿಗೆ ಸೇರಿದ ಕಾರಣ ಅವರು ಸಂಘದ ಸಂಬಂಧವನ್ನು ಕಳಕೊಳ್ಳಬೇಕಾಗಿ ಬಂದುದರಿಂದ ಅವರನ್ನು ಬೀಳ್ಕೊಳ್ಳಲು ವಿದಾಯ ಸತ್ಕಾರವು ಏರ್ಪಟ್ಟಿತು. ಸಭಿಕರಲ್ಲಿ ಅನೇಕರು ಶ್ರೀಯುತರ ಕಾರ್ಯದಕ್ಷತೆ, ಅವರು ಸಂಘಕ್ಕೆ ಸಲ್ಲಿಸಿದ ಸೇವೆ-ಮುಂತಾದವುಗಳನ್ನೆತ್ತಿ ಪ್ರಶಂಸೆಯ ಭಾಷಣವಿತ್ತರು.

ಉಡುಪಿ

ಸ್ವಾತಂತ್ರ್ಯ ವಾರದ ಸಲುವಾಗಿ ಮೌಲಾನಾ ಅಜಾದರ ವಿನಂತಿ ಮೇರೆಗೆ ತಾ 9ರಲ್ಲು ಸ್ಥಳೀಯ ಕಾಂಗ್ರೆಸ್ ಕೆಲಸಗಾರರ ನಾಯಕತ್ವದಲ್ಲಿ ರಥಬೀದಿಯಲ್ಲಿ ಪುರ ಜನ ಸಭೆಯೊಂದು ಡಾ| ಎಫ್. ಎಚ್. ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಖಾದಿ ಮಹತ್ವ, ಹಿಂದೂ ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಇತ್ಯಾದಿ ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳನ್ನು ಮುಂದೊತ್ತುವ ಆವಶ್ಯಕತೆಯನ್ನು ಅಧ್ಯಕ್ಷರು ವಿವರಿಸಿದ ನಂತರ ಭಾರತ ಮಾತೆಯ ಬಂಧನ ವಿಮೋಚನೆಗಾಗಿ ನಶ್ವರ ಶರೀರವನ್ನು ತ್ಯಜಿಸಿದವರ ದಿವ್ಯ ಆತ್ಮಗಳಿಗೆ ಚಿರ ಶಾಂತಿ ದೊರೆಯುವಂತೆ ಮೌನ ಪ್ರಾರ್ಥನೆ ನಡೆಯಿತು.

ಎಯಿಡೆಡ್ ಶಾಲಾ ಟೀಚರ್ಸ್ ಯೂನಿಯನ್ ಮಹಾ ಸಭೆಯು ತಾ 11 ರಲ್ಲು ಮುನ್ಸಿಪಲ್ ಮೈನ್ ಶಾಲೆಯಲ್ಲಿ ಶ್ರೀ ಯು. ವೆಂಕಟ್ರಾವ್, ಬಿ.ಎ.ಎಲ್.ಟಿ, ಬೋರ್ಡ ಹೈಸ್ಕೂಲ್ ಉಡುಪಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ 'ತುಟ್ಟಿಭತ್ತೆ ದಿನಾಚರಣೆ'ಯೂ ನಡೆಯಿತು. ಸೌತ್ ಇಂಡಿಯಾ ಟೀಚರ್ಸ್ ಯೂನಿಯನ್ನಿನ ಸೂಚನೆಯಂತೆ ತುಟ್ಟಿಭತ್ತೆಯ ಕುರಿತು ಸರಕಾರದ ಧೋರಣೆ ಬಗ್ಗೆ ವಿಷಾದ ಸೂಚಿಸಲಾಯಿತು. ಕಳದ ಜನವರಿಯಿಂದ ಸರಕಾರಿ ಸ್ಕೇಲಿನಂತೆ ತುಟ್ಟಿಭತ್ತೆ ಸಿಗುವಂತಹ ಏರ್ಪಾಡು ಆಗಬೇಕಾಗಿ ಒತ್ತಿ ಹೇಳಲಾಯಿತು. ಹಾ| ಎಲಿಮೆಂಟರಿ ಶಾಲೆಗಳಲ್ಲಿ ಕರ್ನಾಟಕ ಭಾಷೆಯು ಪ್ರಾಮುಖ್ಯ ಅಂಗವಾಗಿರುವುದರಿಂದ ಸೆಕೆಂಡರಿ ಗ್ರೇಡ್ ಮಾಸ್ತರುಗಳು ಎಷ್ಟೇ ಇರಲಿ, ಅವರಂತೆಯೇ ಕನ್ನಡ ವಿದ್ವಾನರಿಗೂ ಸರಿಸಮಾನವಾದ ಸಂಬಳ ಸಿಕ್ಕಬೇಕು; ವರ್ಷದಲ್ಲಿ ಒಂದು ತಿಂಗಳ ಮೆಡಿಕಲ್ ರಜೆಯೂ ಒಂದು ತಿಂಗಳ ಪ್ರಿವಿಲೆಜ್ ರಜೆಯೂ ಸಿಕ್ಕಬೇಕು. ಹಾ| ಎ| ಶಾಲೆಗಳ ಎಂಟನೆ ತರಗತಿಯ ಸರಕಾರಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳನ್ನು ಹೈಸ್ಕೂಲ್ ಹೆಡ್ಮಾಸ್ತರುಗಳು ನಿರಾತಂಕವಾಗಿ ದಾಖಿಲು ಮಾಡಿಕೊಳ್ಳುವಂತೆ ಇಲಾಖಾ ಆರ್ಡರಿನ ತಿದ್ದುಪಡಿಯಾಗಬೇಕು. ಜೂನ್ ತಿಂಗಳು ಶಾಲಾ ಮಕ್ಕಳನ್ನು ಒಂದನೆ ತರಗತಿಗೆ ದಾಖಿಲು ಮಾಡುವ ಸಮಯವಾದುದರಿಂದ ನಿಯಮಿತ ಸಂಖ್ಯೆ ಯಿಲ್ಲದಿದ್ದರೂ ಆ ಕ್ಲಾಸಿಗೆ ಸಂಬಂಧಪಟ್ಟ ಉಪಾಧ್ಯಾಯರಿಗೆ ಗ್ರಾಂಟು ಸಿಕ್ಕುವಂತಾಗಬೇಕು. ಇವೇ ಮೊದಲಾದ ನಿರ್ಣಯಗಳಾದುವು. ತದನಂತರ ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ಎಸ್. ಫೆರ್ನಾಂಡೀಸ್ (ಅಧ್ಯಕ್ಷ), ಟಿ. ಶ್ರೀನಿವಾಸರಾವ್ (ಕಾರ್ಯದರ್ಶಿ) ಮೆಣ್ಕ (ಖಜಾನ್ಜಿ) ಮೊದಲಾದವರು ಚುನಾಯಿಸಲ್ಪಟ್ಟರು. ಅಧ್ಯಕ್ಷರ ಮುಕ್ತಾಯ ಭಾಷಣದೊಂದಿಗೆ ಸಭಾಂತ್ಯವಾಯಿತು.

ಭಜನ ಸಪ್ತಾಹ ಸ್ಥಳೀಯ ವೆಂಕಟ್ರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗತಕ್ಕ ಭಜನಾ ಸಪ್ತಾಹವು ತಾ 13ರಲ್ಲು ಆರಂಭವಾಗಿದೆ.

ನಗರ ಸಭೆಯು ತಾ 13ರಲ್ಲು ಸಂಜೆ ಚೆಯರ್‌ಮೆನ್ ಶ್ರೀ.ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎ. ಶಂಭು ಸೆಟ್ಟರು ನಗರ ಸಭೆಯ ಪ್ರತಿನಿಧಿಯಾಗಿ ಕುಂದಾಪುರ ಡಿವಿಜನಿನ ಎಕ್ಸೈಜ್ ಎಡ್ವೈಸರಿ ಕಮಿಟಿಗೆ ಒಮ್ಮತದಿಂದ ಆರಿಸಲ್ಪಟ್ಟರು. ಸ್ಕಾವೆಂಜರ್ ಟೀಕ್ಸನ್ನು ರೂಪಾಯಿ ಎರಡಕ್ಕೆ ಏರಿಸಲಾಯಿತು. ಶ್ರೀ. ಎ. ಶಂಭು ಸೆಟ್ಟರು ಕೌನ್ಸಿಲರರಿಗೂ ಪತ್ರಿಕಾ ಪ್ರತಿನಿಧಿಗಳಿಗೂ ಚಹಾ ಕೊಟ್ಟರು.

"ಶ್ರೀ ಜಗದ್ಗುರು ಲಕ್ಷ್ಮೀ ನರಸಿಂಹ-ಸೋಮಯಾಜಿಗಳ ಶತಮಾನೋತ್ಸವವನ್ನು ಮೈಸೂರು ವೈಶ್ಯ ಯುವಜನ ಮಹಾ ಸಭೆಯ ಆಶ್ರಯದಲ್ಲಿ ತಾ29 8-45 ಲಾಗಾಯ್ತು 5 ದಿನಗಳ ವರೆವಿಗೆ ಆಚರಿಸಲಾಗುತ್ತದೆ. ಇದಕ್ಕೆ ಅಭಿಮಾನಿಗಳಾದ ವೈಶ್ಯ ಮಹಾಜನರೆಲ್ಲರೂ ಪ್ರತಿಯೊಬ್ಬರೂ ಒಂದು ನೂರು ಕಾಲಣೆಗಳಿಗೆ 1 9 0 ಕಮ್ಮಿಯಿಲ್ಲದಂತೆ ತಮ್ಮ ಉದಾರ ಕಾಣಿಕೆಗಳನ್ನು ಸಂಘದ ಸೆಕ್ರೆಟರಿಯವರಿಗೆ ಕಳುಹಿಸಬೇಕಾಗಿ ಪ್ರಾರ್ಥನೆ"—ಎಂದು ಕಾರ್ಯದರ್ಶಿ ತಿಳಿಸುತ್ತಾರೆ.

"ದಕ್ಷಿಣ ಕನ್ನಡ ಜಿಲ್ಲಾ ರಚನಾತ್ಮಕ ಕಾರ್ಯಕರ್ತರ ಸಹಾಯಕ ಸಮಿತಿ-ಮುಂಬಯಿಯಲ್ಲಿ ಈಗ ವಾಸವಾಗಿರುವ ದಕ್ಷಿಣ ಕನ್ನಡಿಗರು, ತಮ್ಮ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮದ ಬಗ್ಗೆ ಸತತ ದುಡಿಯುವವರಿಗೆ ಆರ್ಥಿಕ ಸಹಾಯದ ವ್ಯವಸ್ಥೆ ಮಾಡಲು ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ".

ಕೆ. ವಿ. ರೈ ಕಾರ್ಯದರ್ಶಿ, Modern Children's School, Musjid Bunder Road, Near Nagdevi Street, Bombay.

ಬೊಂಬಯಿ ಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣ ಸಂಘದ ಮಹಾ ಸಭೆಯು ಕಳದ ತಾ 29ರಲ್ಲು ಶ್ರೀ ಕೆ. ಭುಜಂಗ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ನರಸಿಂಗ ರಾಯರು ವರ್ಷಾವಧಿ ವರದಿಯನ್ನೋದಿದರು. ಸಂಘಕ್ಕೆ ಸ್ವತಂತ್ರ ಕಟ್ಟಡದ ಬಗ್ಗೆ ಈ ತನಕ ರೂಪಾಯಿ 6000/ ಜಮೆಯಾಗಿರುವುದೆಂದೂ ಸಮಾಜದ ಬಡವಿದ್ಯಾರ್ಥಿಗಳಪೈಕಿ ನಿಮ್ಮಂದಿಗೆ ವಿದ್ಯಾರ್ಥಿವೇತನ ಕೊಡಲಾಗಿತ್ತೆಂದೂ ವರದಿಯಿಂದ ವ್ಯಕ್ತವಾಗುತ್ತಿತ್ತು. ಚಾಲ್ತಿ ವರುಷದಲ್ಲೂ ವಿದ್ಯಾರ್ಥಿವೇತನ ಕೊಡುವ ಏರ್ಪಾಡು ನಡೆದಿರುತ್ತವೆ. ಕಟ್ಟಡ ನಿಧಿಗೆ ಹೆಚ್ಚಿನ ಧನ ಸಹಾಯದ ಆವಶ್ಯಕತೆಯನ್ನು ಅಧ್ಯಕ್ಷರು ಒತ್ತಿ ಹೇಳಿದರು. ಹೊಸ ವರುಷಕ್ಕೆ ಶ್ರೀಗಳಾದ ಕೆ. ಭುಜಂಗರಾವ್ (ಅಧ್ಯಕ್ಷ) ಡಾ| ಯು. ಬಿ. ನಾರಾಯಣ ರಾವ್ (ಖಜಾನ್ಜಿ). ಕೆ. ನರಶಿಂಗರಾವ್ ಮತ್ತು ದಾಮೋದರ ರಾವ್ (ಜತೆ ಕಾರ್ಯದರ್ಶಿಯರು), ಎ. ಎಮ್. ಭಟ್, ಆರ್. ಆಚಾರ್, ಕೆ. ಆಚಾರ್, ಎ. ವೆಂಕಟ್ರಾವ್, ಎಸ್. ಎಸ್. ರಾವ್, ಇವರು ಕಾರ್ಯ ನಿರ್ವಾಹಕ ಮಂಡಳಿಯ ಸದಸ್ಯರಾಗಿ ಆರಿಸಲ್ಪಟ್ಟರು.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A. 770/45
O. S. 290/43

ಲಕ್ಷ್ಮೀನಾರಾಯಣ ಪ್ರಭು-ಅರ್ಜಿದಾರ.
ರಾಮಕೃಷ್ಣ ಜಬ್ಬಾರ ಸಹಾ-ಎದ್ರಿರು.

ಸದ್ರಿ ವಾದಿಯು ಈ ಮೂಲ್ಕ ಜಾಹೀರು ಮಾಡುವುದೇನೆಂದ್ರೆ—

7 ಅನಂತ ಸೆಟ್ಟಿ-ಸೂರಮ್ಮ ಸೆಡ್ತಿ ಮಗ, 9 ಸೀನಪ್ಪ ಸೆಟ್ಟಿ-ಆಸೋಡು ಅನಂತ ಸೆಟ್ಟಿ ಮಗ. ಆನಗಳ್ಳಿ ಗ್ರಾಮ.

ಸದ್ರಿ ನಂಬ್ರದಲ್ಲಿ ಫೈನಲ್ ಡಿಕ್ರಿ ಆಗಬೇಕೆಂತ ಅರ್ಜಿದಾರ ಕೊಟ್ಟ ಅರ್ಜಿಯು ತಾ. 29-8-45ಕ್ಕೆ ಅಖೈರ ತನ್ಕಿಗೆ ಯಿಡೋಣಾಗಿಯದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ

Kundapur } **G. Sanjiva Rao,**
Date 8 8-45 } Pleader for Petitioner

ಏಲಂ ನೋಟೀಸು

The Karnataka Bank Limited, Udipi.

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣದ ಈಡಿನ ಮೇಲೆ ಪಡದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವದರಿಂದ, ಅವರಿಗೆ ಜಟ್ಟ ರಿಜಿಸ್ಟ್ರಿ ನೋಟೀಸು, ಅವರು ಮೃತಪಟ್ಟಿರುತ್ತಾರೆಂತ ವಾಪಾಸು ಬಂದ ಪ್ರಯುಕ್ತ, ಸದ್ರಿ ಮೃತಪಟ್ಟವರ ವಾರೀಸುದಾರರು ತಮ್ಮ ಹಕ್ಕುಗಳನ್ನು ಬೇಂಕಿಗೆ ಪ್ರುತ ಪಡಿಸಿ, ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ಐವೇಜುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ಬರುವ 22 8 45ನೇ ಬುಧವಾರದೊಳಗೆ ಬೇಂಕಿಗೆ ಪಾವತಿ ಮಾಡಿ ಸದ್ರಿ ಅಡವಿಟ್ಟ ನಗವನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದರೀ ನಗವನ್ನು ಇದೇ ತಾರೀಕು 25-8 45ನೇ ಶನಿವಾರ ದಿವಸ ಅಪರಾಹ್ನ ಘಂಟೆ 12ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಅಗತ್ಯಬಿದ್ದಲ್ಲಿ ಏಲಮಿನ ತಾರೀಕನ್ನು ಮುಂದುವರಿಸುವ ಹಕ್ಕು ಬೇಂಕಿಗೆ ಇದೆ. ತಿಳಿದಿರುವದು.

ಜಂಜಾ ನಂಬ್ರ	ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
1	46/42	ಪದ್ಮಾವತಿಯಮ್ಮ, ಪುಟ್ಟಣ್ಣ ಭಟ್ಟರವರುಗಳು, ಕುಂಜಿಬೆಟ್ಟು ಉಡುಪಿ, ದ. ಕ.	ಅಸಲು ರೂ. 60/- ಮತ್ತು ಇದರ ಮೇಲಣ ತಾ. 7 7-1944 ರಿಂದ ಸೇಕಡಾ 7ರ ಸಲೆಯಲ್ಲಿ ವಸೂಲು ವರೇಗಿನ ಬಡ್ಡಿ.

ಬೇಂಕಿನ ಆಫೀಸು:-
ತೆಂಕಪೇಟೆ, ಉಡುಪಿ, ದ. ಕ.
ತಾ. 11-8-1945

B. Venkat Rao
AGENT

ಮಂಗಳೂರು.

ಮಂಗಳೂರಿನ ಸೋವಿಯೆಟ್ ಮಿತ್ರರ ಸಂಘ-ದವರು ರಘುನಾಥಯ್ಯ ಮೆಮೋರಿಯಲ್ ಭವನದಲ್ಲಿ ಆಗೋಸ್ತು ತಾ. 12ಕ್ಕೆ ಒಂದು ಸೋವಿಯೆಟ್ ಪ್ರದರ್ಶನವನ್ನು ಏರ್ಪಡಿಸಿರುವರು. ಉದ್ಘಾಟನಾ ಸಮಾರಂಭವು ಬೆಳಿಗ್ಗೆ 10-30ಕ್ಕೆ ಜರಗುವುದು. ಪ್ರದರ್ಶನವು ಬೆಳಿಗ್ಗೆ 10-30ರಿಂದ ಮಧ್ಯಾಹ್ನ 11-30ರ ವರೆಗೂ, ಸಾಯಂ. 4 ಗಂಟೆಯಿಂದ ರಾತ್ರಿ 8 ಘಂಟೆಯ ವರೆಗೂ ತೆರೆದಿಡಲಾಗುವುದು.

ಎರಡು ರಷ್ಯನ್ ಚಿತ್ರಗಳು-ಮಂಗಳೂರು ಸೋವಿಯೆಟ್ ಮಿತ್ರ ಸಂಘದವರು ಬಾಲಾಜಿಟೋಕೀಸ್‌ನಲ್ಲಿ ಆಗೋಸ್ತು 18, 19 ಮತ್ತು 25, 26 ತಾರೀಕುಗಳಲ್ಲಿ ಬೆಳಿಗ್ಗೆ 10-30 ಘಂಟೆಗೆ ಕ್ರಮವಾಗಿ 'ಪ್ರೊ| ಮಾಮ್‌ಲಕ್' ಮತ್ತು 'ಜನರಲ್ ಸೂವೊರೊವ್' ಎಂಬ ಎರಡು ರಷ್ಯನ್ ಚಲಚ್ಚಿತ್ರಗಳನ್ನು ತೋರಿಸಲಿರುವರು. 'ಪ್ರೊ| ಮಾಮ್‌ಲಕ್' ಒರ್ವ ಜರ್ಮನಿಯ ಯಹೂದಿ ವಿಜ್ಞಾನಿ. ಯಹೂದಿಯರನ್ನು ಯಾವ ರೀತಿಯಲ್ಲಿ ನಾಜಿಗಳು ಹಿಂಸಿಸುತ್ತಿದ್ದರೆಂದೂ, ಹಿಟ್ಲರನ ಜರ್ಮನಿಯಲ್ಲೇ ಯಾವ ರೀತಿಯಲ್ಲಿ ನಾಜಿ ವಿರುದ್ಧ ಗುಪ್ತ ಚಟುವಟಿಕೆಗಳು ನಡೆಯುತ್ತಿದ್ದುವು ಎಂದೂ ಪ್ರತ್ಯಕ್ಷ ಕಾಣಬಹುದು. 'ಜನರಲ್ ಸ್ಯೂವೊರೊವ್' ಒಂದು ಚಾರಿತ್ರಿಕ ಚಿತ್ರ. ನೂರು ವರ್ಷಗಳ ಹಿಂದೆ ಮಹಾ ಗಂಡಾಂತರದಿಂದ ಯುರೋಪನ್ನು ಯಾವ ರೀತಿಯಲ್ಲಿ ರಕ್ಷಿಸಿತ್ತೆಂದು ಈ ಚಿತ್ರ ಪ್ರತಿಪಾದಿಸುತ್ತದೆ.

ಟಗೋರ್ ದಿನಾಚರಣೆ-ಯು ಸ್ಥಳೀಯ ಪ್ರಗತಿಶೀಲ ಲೇಖಕರ ಸಂಘದ ಆಶ್ರಯದಲ್ಲಿ ತಾ. 8ರಂದು ಆಚರಿಸಲ್ಪಟ್ಟಿತು. ಶ್ರೀ| ಸೇಡಿಯಾಪು ಕೃಷ್ಣ ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

NOTICE

ಮಂಗಳೂರು ತಾಲೂಕು ಕೋಟೆಕಾರು ಗ್ರಾಮದಲ್ಲಿರುವ ಬಸಪ್ಪ ಸೆಟ್ಟಿ ಮಗ ಎ. ಮಲ್ಲಯ್ಯನು ಈ ಮೂಲಕ ತಿಳಿಯಪಡಿಸುದೇನಂದರೆ:—ನನ್ನ ತಂದೆ ಮೃತ ಬಸಪ್ಪ ಸೆಟ್ಟರ ಎರಡನೆ ಹೆಂಡ್ತಿ ಉಡ್ಪಿ ಪಾಂಗಾಳ ಮರಡ ಸಿದ್ಧಲಿಂಗಯ್ಯನವರ ಮಗಳು ನಾಗಮ್ಮನು ಮೃತವಾಗಿರುತ್ತಾಳೆ. ಅವರ ಗಂಡು ಮಕ್ಕಳು 1 ಶಿವಣ್ಣ ಯಾನೆ ಜನಾರ್ಧನ, 2 ಶಂಕರ, 3 ವಿಶ್ವನಾಥ, 4 ಸೋಮಶೇಖರ ಎಂಬವರು ಮ್ಯಾನರರಾಗಿ ನನ್ನ ಸಂರಕ್ಷಣೆಯಲ್ಲಿರುತ್ತಾರೆ. ಸದ್ರಿ ಮ್ಯಾನರ ಮಕ್ಕಳಿಗೆ ಈ ಕೆಳಗೆ ಕಾಣಿಸಿದ ಸರ್ವಾದಿ ಆಸ್ತಿಗಳಲ್ಲಿರುವ ಹಕ್ಕುಗಳನ್ನು ಯಾವುದೊಂದು ತರದ ಆದವು, ಆದುವಾರು, ಮ್ಯಾನೆ ಗೇಣಿ, ಮೂಲಗೇಣಿ ವಗೈರೆ ಸದ್ರಿಯವರ ಗಾರ್ಡಿಯನಾದ ನನ್ನ ಅನುಮತಿ ಇಲ್ಲದೆ ಪರಾಧೀನ ವಗೈರೆ ಮಾಡುವವರ ಹಕ್ಕು ಇರುವುದಿಲ್ಲ. ಇದಕ್ಕೆ ವಿರೋಧವಾಗಿ ಮಾಡಿದಲ್ಲಿ ಅಂಥಾ ಪರಾಧೀನ ಈಡು ವಗೈರೆಗಳು ಸಿಂಧುವಾಗತಕ್ಕದ್ದಲ್ಲ. ಮತ್ತು ಮ್ಯಾನರರಿಗೆ ಬಾಧಿಸತಕ್ಕದ್ದಲ್ಲ ಎಂಬದಾಗಿ ಈ ಮೂಲಕ ಸರ್ವ ಜನರಿಗೂ ತಿಳಿಸುತ್ತೇನೆ.

ಆಸ್ತಿ ವಿವರ

ಉಡ್ಪಿ ತಾಲೂಕು ಪಾಂಗಾಳ ಗ್ರಾಮದ ಮೂಲಹಕ್ಕಿನ

ಸ.	ಸ.ಡಿ.	ಕಿಸಂ.	ಎಕ್ರೆ. ಸೆ.
41	4	ಪುಂಜ	0-77
	5	ಬಾಗ್ಯಾತು	0-40
	12	ಸಂಜ	1-13
	14	ನಂಜ	0-62
	17	ಬಾಗ್ಯಾತು	0-13

ಈ ಆಸ್ತಿಗಳು ಮತ್ತು ಇದರಲ್ಲಿರುವಂಥಾ ತಕ್ಕ ಪೋಷಿ ಹಂಚು ಛಾವಣಿ ಉಪ್ಪರಿಗೆ ಮನೆ, ಪಟ್ಟಿಕೊಟ್ಟಿಗೆ, ನಕ್ಲು ವಾಸ್ತವ್ಯದ ಕಟ್ಟಡಗಳು, ಕೆರೆ, ಬಾವಿ ಮುಂತಾದ ಸರ್ವಾದಿ ಆಸ್ತಿಯಾಗಿರುತ್ತದೆ.

(Sd.) *Kotekar A. Mallaya.*

ಸ್ಥಳೀಯ ಪ್ರಕಾಶ ಸಂಘದ- ಆಶ್ರಯದಲ್ಲಿಯೂ ತಾ. ಎರಡು ಟಾಗೋರ್ ದಿನಾಚರಣೆಯು ಆಚರಿಸಲ್ಪಟ್ಟಿತು. ಶ್ರೀ| ಪಿ. ಕಾಂಬರ ರಾಯರು ಭಾಷಣವಿತ್ತರು.

ಗೋರಕ್ಷ ವಿದ್ಯಾಲಯಿನಿ- ಸಮಿತಿಯ 13ನೇ ವರ್ಷಾವಧಿಯ ಮಹಾ ಸಭೆಯು ಕದ್ರಿ ಮುಂದಾಣ ಮಠದಲ್ಲಿ ತಾ. ೧೨ರಲ್ಲಿ ಶ್ರೀ| ಬಿ. ಓಬಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದಾಗ ವಾರ್ಷಿಕ ವರದಿಯನ್ನೂ ಸಂಘದ ಲೆಕ್ಕ ಪರಿಶೋಧಕರ ವರದಿಯನ್ನೂ ಓದಿ ಮಂಜೂರು ಮಾಡಲಾಯಿತು. ಅನಂತರ 1945 1946ರ ಕಾರ್ಯ ನಿರ್ವಾಹಕ ಮಂಡಳಿಯ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಸದಸ್ಯರನ್ನು ಒಳಗೊಂಡ 12ಜನರನ್ನು ಆರಿಸಲಾಯಿತು. ಸಂಘದ ಏಳಿಗೆಯ ಬಗ್ಗೆ, ಕದ್ರಿ ಮುಂದಾಣ ವೆಂಕಟ್ರಮಣ, ಗಣಪತಿ ಮಾಸ್ತರು—ಮತ್ತು ಶ್ರೀ| ಬಿ. ಓಬಯ್ಯ ಮಾಸ್ತರು ಭಾಷಣವಿತ್ತರು.

ಯುದ್ಧ ಮುಗಿದ ಮೇಲೂ- ಕೆಲವು ವರ್ಷಗಳ ವರೆಗೆ ಪಸುಗೆಯ ಪದ್ಧತಿ ಹೋಗುವಂತಿಲ್ಲ, ಆದರೆ ಪಸುಗೆಯ ಪ್ರಮಾಣವನ್ನು ಹೆಚ್ಚಿಸಬಾರದೆಂದಿಲ್ಲ. ಎಂದು ಭಾರತ ಸರಕಾರದ ಪ್ರಧಾನ ಪಸುಗೆಯ ಅಧಿಕಾರಿಗಳು ಪ್ರಕಟಿಸಿದ್ದಾರೆ.

500 ಟನ್ ಅಕ್ಕಿ - ಕಲ್ಲಿಕೋಟೆಯಿಂದ ಮಂಗಳೂರಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ.

ಕೇಂದ್ರ ಅಸೆಂಬ್ಲಿಯು- ಮತದಾರರ ಪಟ್ಟಿಯು ಸಿದ್ಧವಾಗುತ್ತಲಿದೆ. ಆಕ್ಷೇಪಕ್ಕಾದ ಕ್ಕೆ ಸ್ಥಾಪನೆ ಇತ್ಯಾದಿ ಶಿಮ ಸದಿಗಳನ್ನು ಆಗೋಸ್ತು ತಾ. 17ರ ವರೆಗೆ ಸ್ವೀಕರಿಸುವರು.

ಶೇಂದಿ ಅಂಗಡಿಗಳ ಹರಾಜು-- ಮಂಗಳೂರು ನಗರದ ಮತ್ತು ತಾಲೂಕಿನ ಶೇಂದಿ ಅಂಗಡಿಗಳ ಹರಾಜು ತಾ. 1ರಂದು ತಾಲೂಕು ಕಚೇರಿಯಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರರ ಮುಂದೆ ಜರಗಿತು. ಆದರೆ ಹರಾಜು ಪೂರ್ಣವಾಗಿಲ್ಲ. ಈ ದಿನ ನಿಲಂ ಆದ ಅಂಗಡಿಗಳನ್ನು ತಾ. 16ರಂದು ಕಾಯಂ ಮಾಡಲಾಗುವುದು. ಮತ್ತು ನಿಲಂ ಆಗದೆ ಉಳಿದ ಅಂಗಡಿಗಳ ಹರಾಜು ಆಗುವುದು. ಹೋಟೆಲು ವರ್ಷದಿಂದ ವರ್ಷಕ್ಕೆ ಏರುತ್ತಾ ಹೋಗುವುದು ಕಾಣುತ್ತದೆ. 1943ರಿಂದ 44ರಲ್ಲಿ ಹೆಚ್ಚಿನ ಸಾಲಕ್ಕೆ ಹರಾಜಾಗಿತ್ತು. ಈ ವರ್ಷ ಕಳೆದ ವರ್ಷದ ಇಷ್ಟು ಮೊಬಲಗಿಗೆ ಹರಾಜಾಗಿದೆ.

ಉದ್ಯೋಗದಿಂದ ನಿವೃತ್ತರಾದ- ನಗರ ಸಭೆಯ ಆರೋಗ್ಯಾಧಿಕಾರಿಗಳಾದ ಡಾ| ಸುಬ್ರಾಯ ಬಾಳಿಗರ ಸನ್ಮಾನಾರ್ಥವಾಗಿ ತಾ. 7ರಂದು ಸತ್ಕಾರ ಕೂಟವೊಂದನ್ನು ಸ್ಥಳೀಯ ಕೆನರಾ ಚೇಂಬರ್ ಒಫ್ ಕಾಮರ್ಸಿನವರು ಏರ್ಪಡಿಸಿದ್ದರು. ಶ್ರೀ| ಕೆ. ಬಿ. ಜಿನರಾಜ ಹೆಗ್ಡೆ, ನಗರ ಸಭಾಧ್ಯಕ್ಷ ಜ| ಮುಸೇನ್ ಸಾಹೇಬ್ ಮೊದಲಾದವರು ಸಮಾರಂಭದಲ್ಲಿ ಭಾಗ ವಹಿಸಿದ್ದರು.

ಭಟ್ಕಳ ಬಂದರದ-ಕುರಿತು ಪ್ರಚಾರ ಮಾಡಲು ಬಂದಿದ್ದ ಶ್ರೀ ಶಂಕರ ಲಿಂಗೇಗೌಡರು, ಸ್ಥಳೀಯ ವ್ಯಾಪಾರೀ ಸಂಘದಲ್ಲಿ ಆ ಬಂದರದ ಯೋಜನೆಯನ್ನು ವಿವರಿಸಿದರು. ಇದು ಸುಪ್ರಸಿದ್ಧ ಎಂಜಿನಿಯರರಾದ ಎಂ. ವಿಶ್ವೇಶ್ವರಯ್ಯನವರಿಂದ ಯೋಜಿಸಲ್ಪಟ್ಟುದಂತೆ. ಈ ಬಂದರವು ಸ್ಥಾಪಿತವಾದರೆ ಮಂಗಳೂರಿನ ವ್ಯಾಪಾರದ ಮೇಲೆ ಹೇಗೆ ಇಲ್ಲು [illegible] ನಡೆದ ಚರ್ಚೆಯಲ್ಲಿ ಶ್ರೀ| ಮ. ಗೋವಿಂದ ಪೈಗಳೂ ಭಾಗ ವಹಿಸಿದ್ದರು.

ರಮಜಾನ್ ಹಬ್ಬದ ಸಲುವಾಗಿ- ಮಂಗಳೂರು ರೇಶನ್ ಕ್ಷೇತ್ರದ ಮಹಮ್ಮದೀ ಬಂಧುಗಳಿಗೆ ಅವರವರ ರೇಶನ್ ಕಾರ್ಡುಗಳಲ್ಲಿಯ ಅರ್ಧಾಂಶ ಜಾಸ್ತಿ ಚಿಮಿಣಿ ಎಣ್ಣೆ ತಾ 31-8-45 ಮತ್ತು 15-9-45ಕ್ಕೆ ಅಂತ್ಯವಾಗುವ ಎರಡು ಪಕ್ಷಗಳಲ್ಲಿ ಕೊಡಲಾಗುವುದೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಟಿದೆ.

ಕರ್ನಾಟಕ

ಕೈಲಾಸಂರವರ ಹುಟ್ಟು ಹಬ್ಬ- ಕನ್ನಡ ಸಾಹಿತ್ಯದಲ್ಲಿ ನಾಟಕ ಕರ್ತೆಗಳನ್ನು ರಚಿಸಿ ತಮ್ಮದೇ ಆದ ವಿಶಿಷ್ಟ ಸ್ಥಾನ ಒಂದನ್ನು ಗಳಿಸಿಕೊಂಡಿರುವ ಶ್ರೀ| ಟಿ. ಪಿ. ಕೈಲಾಸಂ ಅವರ 60ನೆಯ ಹುಟ್ಟು ಹಬ್ಬವು ಬೆಂಗಳೂರಿನಲ್ಲಿ ಶ್ರೀ| ಮಾಸ್ತಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರೀ, ಸಿ. ರಾಜಗೋಪಾಲಾಚಾರಿ, ಸಿ. ಪಿ. ರಾಮಸ್ವಾಮಿ ಅಯ್ಯರ್, ಮೈಸೂರಿನ ಮಂತ್ರಿಗಳಾದ ಡಾ| ರಾಯನ್ ಮತ್ತು ಟಿ. ರಾಘವಾಚಾರಿ, ಶ್ರೀ| ಗೋವಿಂದ ಪೈ, ಶ್ರೀಮತಿ ಸೋಫಿಯ ವಾಡಿಯಾ, ಆರ್. ವಿ. ಜಾಗೀರ್‌ದಾರ್ ಮೈಸೂರ್ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ| ಟಿ. ಸುಬ್ರಹ್ಮಣ್ಯಂ ಮೊದಲಾದ ಅನೇಕ ಮಹನೀಯರು ಈ ಸಮಾರಂಭದಲ್ಲಿ ಭಾಗ ವಹಿಸಿದ್ದರು. ಹಲವರು ಕೈಲಾಸಂ ಸಾಹಿತ್ಯದ ಗುಣಗಾನ ಮಾಡಿದ ಬಳಿಕ, 'ನಾನು ಕಂಡ ಕೈಲಾಸಂ' ಮತ್ತು 'ಕೈಲಾಸಂ ಕಥನ' ಎಂಬ ಪುಸ್ತಕಗಳನ್ನು ರಾಜರತ್ನಂ ಅವರು ಶ್ರೀ| ಕೈಲಾಸಂರವರಿಗೆ ಅರ್ಪಿಸಿದರು.

ಶ್ರೀ| ಆರ್. ಆರ್. ದಿವಾಕರರನ್ನು- ಸ್ವಾಗತಿಸುವ ಸಮಾರಂಭವೊಂದು ಬೊಂಬಾಯಿಯ ಸಂಯುಕ್ತ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. ಎರಡು ಜರಗಿತು. ಬೊಂಬಾಯಿಯ ವಿವಿಧ ಕರ್ನಾಟಕ ಸಂಘಗಳು ದಿವಾಕರರಿಗೆ ಹಾರವನ್ನರ್ಪಿಸಿದ ಬಳಿಕ, ಶ್ರೀಗಳಾದ ಆರ್. ಎ. ಜಾಗಿರ್‌ದಾರ್, ಬೊಂಬಾಯಿ ಪ್ರಾಂತಿಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ನಾಗಿನ್‌ದಾಸ್ ಮಾಸ್ತರ್, ಕಾರ್ಯದರ್ಶಿ ಎಸ್. ಕೆ. ಪಾಟಿಲ್, ಹಡಪಿಟ್ರಿ, ಮುನ್ಶಿಲ್, ಗಾಯಿತೊಂಡೆ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದರು.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ
ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ



ವಾರ ವಾರವೂ ಮನಸೆಳೆವ
ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನಮೋಹಕ ಕತೆಗಳಿಗಾಗಿ-ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ
ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ **4-8-0.**
ಬಿಡಿ ಸಂಚಿಕೆಗೆ ... ... **0-1-6.**

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು [illegible] ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.

NOTICE

ಕುಂದಾಪುರದ ಡಿ ಮು. ಕೋರ್ಟಿನಲ್ಲಿ

S. C. 316/45

ವಾದಿ-ಗಂಗೊಳ್ಳಿ ಮಹಮ್ಮದ್ ಮೀರಾ ಸಾಹೇಬ ಮೂಗದುಂ ಸಾಹೇಬರ ಮಗ, ಕುಂದಾಪುರ ತಾಲ್ಲೂ ಯಡ್ತರೆ ಗ್ರಾಮದಲ್ಲಿ ಮವಹ.

ಪ್ರತಿವಾದಿರು-1 ಚಿಕ್ಕಮರಿ, 2 ಕೊರಗ. ನಾಗಮ್ಮನ ಮಕ್ಕಳು-ಕುಂದಾಪುರ ತಾಲ್ಲೂ ಯಡ್ತರೆ ಗ್ರಾಮದ ಕುಂಬಾರಬೆಟ್ಟು ಹಿತ್ಲಲ್ಲಿರುವ ಮಳೆಸ್ಕೈಕ ಕೋಣೆಮನೆ.

ಸದ್ರಿ ಪ್ರತಿವಾದಿರಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ-

ವಾದಿಯು ಸದ್ರಿ ಪ್ರತಿವಾದಿರಿಂದ ಡಿಮಾಂಡು ನೋಟಿನ ಬಾಬ್ತು ಬಡ್ಡಿ ವ್ಯಾಜೇಜು ದೂಸ್ರಾ 69-9-10ನ್ನು ಬರಮಾಡಿಕೊಳ್ಳುವರೆ ದಾಖಲ್ಲು ಮಾಡಿದ ಮೋಕ್ಷ್ಯಾಣಬಿದೆ ದಾವೆಯು ತಾರೀಕು 27-8-45ಕ್ಕೆ ತನ್ಕಿಗೆ ಬಿಟ್ಟಿದೆ. ಆ ಕುರಿತು ನಿಮ್ಮ ಉಪಾವಧಿಯಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಸದ್ರಿ ಮೋಲ್ದಾಣದ ಕೋರ್ಟು ಮುಂದೆ ಹಾಜ್ರಾಗಿ ವ್ಯಾಜ್ಯೆಹಿರುವಾಡಿಕೊಳ್ಳತಕ್ಕದ್ದು.

Y. Manjaya Shetty,
Advocate for Plaintiff.
ಮೊಕ್ಕಾಂ: ಕುಂದಾಪುರ
ತಾರೀಕು 10-8-45.

The Pangal Nayak Bank Limited.

(Incorporated in 1920.)
Registered Office Court Road, UDIPI.
Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಟಿ। ಟಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಸುರತ್ಕಲ್; ನವಭಾರತ ಬುಕ್ ಡಿಪ್ಪೊ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

೮ ಔನ್ಸಿನ ೨ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದುನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಶವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ. (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ನೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY . H. SHETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೪ ವಾರ ೫೦] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24 No. 50

Founder. SRI A. B. SHETTY.

ಉಡುಪಿ • 23—8—1945 • ಮಂಗಳೂರು.

ಅಮೃತಾಂಜನ ತಲೆನೋವನ್ನು, ಶೀತ, ನೆಗಡಿ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಚಾಕು ಕೊಯ್ದುದು, ಚೇಳು ವಿಷ ಮುಂತಾದ ಚಿನ್ನ ಸಣ್ಣ ಮಾತ್ರ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ.

REGD.

ಹಳ, ಹುಲುಕಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

CALL IT A MARVELL
OR
WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,

Head Office:- **UDIPI**, (**S. India**.)

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ— ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು.

ಮದ್ರಾಸು ಶಾಖಾ ಕಾರ್ಯದರ್ಶಿಯರು

ಮತ್ತು

ಅತ್ಯಂತ ಹಳೇ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪೊಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನಹಿತಸೇವೆಯಲ್ಲಿ ನಿರತರಾಗಿ ನಮಗೆ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲಿ 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

[illegible]ಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ **26** ಲಕ್ಷ. **ಕೆನರಾ ಬೇಂಕ್** ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ **10** ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED
(Incorporated in British India. liability of Members limited.)

The Vijaya Bank Limited.
ANNOUNCEMENT

We have much pleasure to announce that the New shares issued by us have been easily oversubscribed. We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ.

Head Office: MANGALORE } B. MANJAYA HEGDE. Chairman of the Board of Directors.

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ

ಇದೇ ತಾ. 8—10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,

ಉಡುಪಿ ಬೋರ್ಡಿಂಗ್ ಎಂಡ್ ಲಾಡ್ಜಿಂಗ್, ಮಧುರ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar. South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so far accorded to it by its esteemed well wishers

Terms of business may be had from any of our Offices

Date 25th April 1945

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರವ ಸುತ್ತ ಘಾಯವಾಗಿದ್ದರೆ, .ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ -ಗದಗ ಫಾರ್ಮಸಿ, ಹುಬ್ಬಳ್ಳಿ.-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ — ಬಾಗಲಕೋಟೆ ಫಾರ್ಮಸಿ, ಧಾರವಾಡ—ಧಾರವಾಡ ಫಾರ್ಮಸಿ, ದಾವಣಗೇರಿ.ದಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea Stomachache Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪ರಿಂದ ೮ಬೊಟ್ಟು, ಸಣ್ಣ ಮಕ್ಕಳಿಗೆ ೧ರಿಂದ೨ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ ಕ.

ಉಡುಪಿ ಸ್ಟಾಕಿಸ್ಟರು —ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ, ಡಾ। ಪಿ। ಜಿ। ಆಚಾರ್ರ್‍ಸ ಫಾರ್ಮಸಿ, ಡಾ। ಕೆ। ಶೇಷಗಿರಿ ಪೈ, L. I. M., ಡಾ। ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿಕ್ಕೆರ್ಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದ.ಕ

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧೨ಆಣೆ

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು —ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ ದಾವಣಗೇರಿ —ದಾವಣಗೇರಿ ಪ್ರೆಸ್ಸ್, ಆರ್. ಎಲ್ ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸಮಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳ [illegible] ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0, ½ ಪೌಂಡು ರೂ 3—0—0

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಕಿನ್ನುನಿಕೇತ್ರ, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ತಲ 1ರ 10-0-0, ½ ರಾತ್ತಲ 5-1-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕ್ವಾಲಿ ಸಂಗ್ತಿ ಬರವಲ್ಲಿ ರೋಗಕ್ಕೆ ತಕ್ಕ ವಾದ ಔಷಧಿ ರವಾನಿಸಬಹುದ (1) ಉಡಪಿ ಏಜಂಟರು —ನವಭಾರತ ಬುಕ್ ಡಿಪೊ. (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜಿ ಐ ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ ಐ ಪಿ. ವಾಟುಂಗಾ,

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ — ಬೆಲೆ ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY . H. SHETTY AT THE NAVAYUGA PRESS UDIPI S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6. Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೫೦] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder: SRI A. B. SHETTY. [Vol. 24 No. 50

ಉಡುಪಿ • 23-8-1945 • ಮಂಗಳೂರು.

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

REGD.

ಅಮೃತಾಂಜನ ತಲೆನೋವು, ಶೀತ, ನೆಗಡಿ, ಉಳುಕು, ಕೆಮ್ಮು, ಥಂಡಿ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಸರ್ವ ನಾಶ ಮಾಡುವ ನೋವಳಿದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಲುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

CALL IT A MARVELL OR WHAT YOU WILL

"**Canara Mutual**" has introduced a new scheme which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,
Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2⅓ ಕೋಟಿಗೂ ಮಿಕ್ಕ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸು ಶಾಖಾ ಕಾರ್ಯದರ್ಶಿಯರು
ಮತ್ತು
ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ: 1910

ಕಳೆದ 35 ವರುಷಗಳಿಂದ ಪ್ರೆಸಿಡಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯತಿ ಅನುಕೂಲತೆಗಳನ್ನು ಒದಗಿಸಿ ದೃಢಭಕ್ತಿ ವಿಶ್ವಾಸಗಳಿಂದ ಜನಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಪಾಲನೆಗೆ ಸಿದ್ಧರು.

1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗಣನೀಯ ಬಟವಾಡೆ

ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ.

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ. **ಕೆನರಾ ಬೇಂಕ್ ಲಿಮಿಟೆಡ್.**
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)

CANARA BANK LIMITED
(Incorporated in British India. liability of Members Limited)

The Vijaya Bank Limited.

ANNOUNCEMENT

We have much pleasure to announce that the New shares issued by us have been easily oversubscribed. We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ.

Head Office: MANGALORE } B. MANJAYA HEGDE. Chairman of the Board of Directors.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ. 8-10-44ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್. ನರಸಿಂಗ ರಾವ್, ಪ್ರೊಪ್ರೈಟರ್,
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

★ ನೆನಪಿರಲಿ! ★

ಹುತಾತ್ಮ ಚೌಧುರಿ!

"ಮಹೇಂದ್ರ ಚೌಧರಿಯವರನ್ನು ಫಾಶೀ ಕಂಭದಿಂದ ತಪ್ಪಿಸಲು ನನ್ನಂತೆಯೇ ಆತುರಗೊಂಡಿದ್ದವರೆಲ್ಲರೂ ಅಗೋಸ್ತು 7ರಲ್ಲಿ ಭಾಗಲ್ಪುರದ ಸೆಂಟ್ರಲ್ ಜೈಲಲ್ಲಿ ಅವರು ಗಲ್ಲಿಗೇರಿಸಲ್ಪಟ್ಟರೆಂಬುದನ್ನು ತಿಳಿದು ಶೋಕಕಂಪಿತರಾಗುವರೆಂಬುದನ್ನು ನಾನು ಬಲ್ಲೆ. ಇಂತಹ ಹಲವು ದುರಂತಗಳು ಇನ್ನೂ ನಡೆಯಲಿವೆ ಎಂಬುದನ್ನು ಉಳಿದವರು ತಿಳಿದಿರಬೇಕು. ಪ್ರತಿಯೊಂದರಿಂದಲೂ ನಾವು ಒಂದೊಂದು ಪಾಠವನ್ನು ಮಾತ್ರ ಕಲಿಯಲಿಕ್ಕಿದೆ. ಅಂದಮೇಲೆ ನಾವೀಗ ನಿರ್ವಿಕಾರ ಬುದ್ಧಿಯಿಂದ ಈ ಉಜ್ವಲ ಮರಣಶಿಕ್ಷೆಯ ಪಾಠವೇನೆಂಬುದನ್ನು ತಿಳಿಯೋಣ. ಪ್ರಥಮತಃ ಸರಕಾರ. ಸರಕಾರವು ಇದನ್ನು ರಾಜಕೀಯ ದಂಗೆಯೆನ್ನುವದಿಲ್ಲ ಪ್ರತಿಯೊಂದು ದಂಗೆಯೂ ಒಂದು ರಾಜಕೀಯ ಕೃತ್ಯವಾಗದು. ಹಲವು ಮಂದಿ ಕಸಬುದಾರಿ ದಗಾಯೋರರು ರಾಜಕೀಯ ಕ್ಷೋಭೆಯನ್ನು ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಂಡುದಿದೆ. ಒಂದು ಸರಕಾರವು-ಶುದ್ಧ ರಾಷ್ಟ್ರೀಯವಿರಲಿ, ವಿದೇಶೀ ಆಳ್ವಿಕೆಯಿರಲಿ-ಅಂತಹ ತಕ್ಸೀರುಗಳನ್ನು ಶಿಕ್ಷಿಸದೆ ಬಿಡುವಂತಿಲ್ಲ. ಈ ಸಂದರ್ಭದಲ್ಲಿಯೂ ಹಾಗಾಯಿತು; ಮಹೇಂದ್ರ ಚೌಧರಿಯವರನ್ನು ಅಂತಹ ಢಕಾಯಿತರೆಂದೇ ಗಣಿಸಿ, ಅಧಿಕಾರಿಗಳು ಪರಮಾವಧಿ ಶಿಕ್ಷೆಯನ್ನು ಜ್ಯಾರಿಮಾಡಿಯೇ ಬಿಟ್ಟರು. ಈಗ ಜನತಾಭಿಪ್ರಾಯವೇನೆಂಬುದನ್ನು ನೋಡೋಣ. ಮಹೇಂದ್ರ ಚೌಧರಿಯು 25 ವರುಷದ ಎಳೇ ತರುಣನೆಂದು ಅವರನ್ನುತ್ತಾರೆ. ಸ್ವಭಾವಬದ್ಧ-ಅಥವಾ ರಾಜಕೀಯವೆನ್ನುವ ಯಾವ ಢಕಾಯಿತಿಯಲ್ಲಿ ಸೇರುವ ಇಚ್ಛೆಯೂ ಅವರಿಗಿರಲಿಲ್ಲ. ಅವರು ತಲೆತಪ್ಪಿಸಿಕೊಂಡು ಬದುಕುತಿದ್ದರು. ಆ ದುರ್ಘಟನೆ ನಡೆದ ಮೇಲೆಯೇ ಅವರು ವಿಚಾರಣೆಗೊಳಗಾದರು; ಸಂದೇಹಾತ್ಮಕ ಸಾಕ್ಷ್ಯಗಳ ಆಧಾರದಿಂದ ಶಿಕ್ಷಿಸಲ್ಪಟ್ಟರು. ಆ ಸಾಕ್ಷ್ಯದ ಅಂಗೀಕಾರ ಮತ್ತು ತೀರ್ಮಾನವು ಜಡ್ಜನ ಅಥವಾ ಜಡ್ಜರುಗಳ ಮನಶ್ಚಾಪಲ್ಯವನ್ನು ಆಧರಿಸಿದೆ. ಮತ್ತು ಆ ಸಮಯದಲ್ಲಿ ಜಡ್ಜರಲ್ಲಿರಬಹುದಾದ-ಅಥವಾ ಹಲವೊಮ್ಮೆ ಇಲ್ಲದಿರಬಹುದಾದ-ಪಕ್ಷಪಾತವನ್ನೇ ಹೊಂದಿಕೊಂಡಿದೆ. ಜನತೆಯ ಈ ಭಾವನೆಯು ಸಾಧಾರವಾದುದಾದರೆ ಈ ಮರಣವು ಒಂದು ಕೊಲೆ. ಇದು ಕಾಯಿದೇಶೀರವಾದುದರಿಂದ ಮತ್ತಷ್ಟು ಖಂಡನೀಯ. ಪೂರ್ಣ ನಿಷ್ಪಕ್ಷಪಾತಿ ವಕೀಲರ ಒಂದು ಸಮಿತಿಯ ವಿನಹ ಇದರ ಸತ್ಯಾಂಶವನ್ನು ಬೇರಾರು ಕಂಡುಹಿಡಿಯಬಲ್ಲರು? ದಾಖಲೆಯಲ್ಲಿರುವ ರುಜುವಾತುಗಳಿಂದ ಮತ್ತು ಮೂಲಕೋರ್ಟು ಮತ್ತು ಅಪೀಲು ಕೋರ್ಟುಗಳ ತೀರ್ಮಾನಗಳಿಂದ ಅವರ ಶೋಧಮಾಡಬೇಕಾಗಿದೆ. ಮಹೇಂದ್ರ ಚೌಧರಿ ಇನ್ನಿಲ್ಲ! ಇದಕ್ಕಾಗಿ ಭಾವಪರವಶತೆಯಿಂದ ನಾವು ತಪ್ಪಿಬೀಳಲೂ ಬಾರದು; ಡೋಲಾಯಮಾನ ಬುದ್ಧಿಯಿಂದ ಈ ಘಟನೆಯನ್ನು ಮರೆಯುವದೂ ಕೂಡದು. ಸಾರ್ವಜನಿಕ ಅಭಿಪ್ರಾಯಗಳಿಗೆ ಸರಕಾರವು ಏನಾದರೂ ಬೆಲೆ ಕೊಡುತ್ತದಾದರೆ—ತನ್ನಲ್ಲಿರುವ ಅಪಾರ ಶಕ್ತಿಯೊಂದನ್ನೇ ಆಧರಿಸಿ ಅದು ನಿಲ್ಲಲಾರದಾದರೆ-ಈ ಕುರಿತು ಅದಕ್ಕೂ ಇಷ್ಟೇ ಆತುರವಿರಬೇಕು; ಅದು ಸಾರ್ವಜನಿಕರೊಡನೆ ಸಹಕರಿಸಬೇಕು".

ಮೇಲಿನವು—ಎಷ್ಟೇ ಒದ್ದಾಡಿದರೂ ಮಹೇಂದ್ರ ಚೌಧರಿಯನ್ನು ಉಳಿಸಲಾರದ ಸಂತಾಪದಿಂದ ಗಾಂಧಿಜೀಯಾಡಿದ ಮಾತುಗಳು. "ನಾವು-ಇಕ್ಕಡೆಯವರೂ-ಕ್ಷಮಿಸುವಂತಹವು, ಮರೆಯುವಂತಹವು ಬಹಳವಿವೆ" ಎಂದು ಲೋರ್ಡ್ ವೇವೆಲರು ಸಿಮ್ಲಾದಲ್ಲಾಡಿದ ಮೇಲೆ ಅವರ ಸರಕಾರದಿಂದಾದ ಕೆಲಸವಿದು! ಪ್ರಾಯಶಃ ವೈಸರಾಯರ ಮಾತಿನ ಅರ್ಥ—ಸರಕಾರದ ಇಂತಹ ಕೃತ್ಯಗಳೆಲ್ಲಾ 'ಕ್ಷಮಿಸುವಂತಹವು' ಚೌಧರಿಯಂತಹ ದರೋಡೆಗಾರರ ಪ್ರಾಣಗಳು 'ಮರೆಯುವಂತಹವು'! ಬಹುಶಃ 'ಈ ಘಟನೆಯನ್ನು ನಾವು ಮರೆಯುವದು ಬೇಡ' ಎಂಬ ಗಾಂಧಿಜೀಯ ಮಾತು ಅದಕ್ಕಾಗಿಯೇ. ಆದರೆ ಮರೆಯೋಣವೆಂದರೂ, ಭಾರತೀಯರು ಈ ಘಟನೆಯನ್ನಾಗಲೀ ಗಾಂಧಿಜಿಯನ್ನಾಗಲೀ ಹೇಗೆ ಮರೆಯಲಿ? ಇದೂ ಮರೆಯುವಂತಹದಾಗಿದ್ದರೆ ಅಗೋಸ್ತು 9ರಲ್ಲಿ ದೇಶವು 'ಹುತಾತ್ಮರ ದಿನ' ಆಚರಿಸುತಿತ್ತೆ?

ಒಂದೊಂದೇ ನೆನಪಾಗುತ್ತಿದೆ!

ಚೌಧರಿಯನ್ನು ಮರೆಯುವದಂತಿರಲಿ; ಅವರ ಸ್ಮರಣೆಯೊಂದಿಗೆ ಮಿಕ್ಕವರೂ ನೆನಪಿಗೆ ಬರುತಿದ್ದಾರೆ. ಫಾಶೀ ಶಿಕ್ಷೆಗೊಳಗಾಗಿ ದಿನ ನಿರೀಕ್ಷೆಯಲ್ಲಿರುವ ಅಷ್ಟಿ, ಚಿಮೂರಿನ ಆ ಏಳು ಮಂದಿ-ಅಂತೆಯೇ ಪ್ರಾಣಕ್ಕೆ ಸಂಚಕಾರ ಪಡೆದಿರುವ ಕುಲಶೇಖರ ಪಾಟ್ಣಮಿನ ಹುಡುಗರು-(ಅಷ್ಟಿ, ಚಿಮೂರು ಫಾಶಿ ಶಿಕ್ಷೆಯೀಗ ಅಜೀವ ಶಿಕ್ಷೆಯಾಗಿ ಮಾರ್ಪಟ್ಟುದು ಸಂತೋಷಕರ. ಅಂತೆಯೇ ಕುಲಶೇಖರ ಪಾಟ್ಣಮಿನ ರಾಜಗೋಪಾಲನ್ ಮತ್ತು ಕೃಷ್ಣನ್‌ರ ಫಾಶಿ ಶಿಕ್ಷೆಯನ್ನೂ ವೈಸರಾಯರು ಜೀವಾವಧಿ ಸಜೆಯಾಗಿ ಮಾರ್ಪಡಿಸಿದ್ದಾರೆ. 1942ರ ಗಲಭೆಯಲ್ಲಿ ಉಪ್ಪಿನ ಕಾರ್ಖಾನೆಯೊಂದರ ಮೇಲೆ ಧಾಳಿ ನಡೆಸಿ ಒಬ್ಬ ಎಕ್ಸೈಜ್ ಆಫೀಸರರನ್ನು ಕೊಂದ ಆರೋಪಿಗಳಿವರು. ಲೋರ್ಡ್ ವೇವಲರಿಗೆ ಧನ್ಯವಾದಗಳು.) ಇಂತಹ ಪ್ರಸಿದ್ಧರೂ ಅಪ್ರಸಿದ್ಧರೂ ಆಗಿರುವ ಇನ್ನು ಹಲವರು-ಇವರಿಗೇನು? ಎಲ್ಲರೂ ಲೋರ್ಡ್ ವೇವೆಲರ 'ನಾವು ಮರೆಯುವಂತ' ಪಟ್ಟಿಯಲ್ಲೇ ಬಂದರೆ? ಇರಬಹುದು; ಆದರೆ ಹಿಂದೀಯರ ಪಟ್ಟಿಗೆ ಇಂಥವರನ್ನು ಮರೆಯುವ ಮೊದಲು ಪರಕೀಯ ಅಧಿಕಾರವನ್ನಷ್ಟೇ ಅಲ್ಲ; ತಂತಮ್ಮ ಆತ್ಮವನ್ನೂ ಮರೆಯಬೇಕಾಗುವದು. ಆದ್ದರಿಂದ ಮರೆಯುವ ಮಾತು ಬೇಡ; ಸಂಜೆ ಮುಂಜಾನೆ ಸ್ಮರಿಸೋಣ! ಸರಕಾರವು ಚೌಧರಿಯರನ್ನು ಮಣ್ಣುಗೂಡಿಸುವ ವರೆಗೂ ಮರೆತು ಬಿಡಲಿಲ್ಲ-ಮಿಕ್ಕವರನ್ನು ಮರೆಯುವ ಲಕ್ಷಣ ಕಾಣುವದಿಲ್ಲ; ನಮಗೆ ಸ್ಮರಣೆಯ ಅಧಿಕಾರವೂ ಇಲ್ಲವೆ?

ಸ್ಮರಣೆಗೆ ಬರುತ್ತಿರುವದು ನಮ್ಮ ಪ್ರೀತಿಯ ಕೆಲವು ಪ್ರಾಣಗಳಷ್ಟೇ ಅಲ್ಲ-ಸ್ಥಾನಮಾನಗಳು ಕೂಡಾ. ಇವರೆಲ್ಲರೂ ಆ 'ಅಗೋಸ್ತು ಗಲಭೆ'ಗೆ ಬಲಿಬಿದ್ದವರು. ಆ ಗಲಭೆಯೂ ನೆನಪಾಗುತ್ತಿದೆ; ಅದಕ್ಕೆ ದೊರೆತ ಪ್ರೇರಣೆ, ಆಕಾರಗಳೂ ಎದ್ದು ಕಾಣುತ್ತಿವೆ. ಅದರ ಹೊಣೆಗಾರಿಕೆಯ

ಸುಭಾಸ್ ???

ಮುಂದೆ ಬಿದ್ದ ಪ್ರಶ್ನಾರ್ಥಕ ಚಿಹ್ನೆಯಂತೂ ಕಾಮನಬಿಲ್ಲಿನಂತೆ ಕಣ್ಣ ಮುಂದಿದೆ. ವೈಸರಾಯೀ ಲೋರ್ಡ್ ಲಿನ್‌ಲಿತ್‌ಗೋರವರು "ಒಂದು ದಿನ ಈ ತಪ್ಪಿಗಾಗಿ ಲೋಕದ ಮುಂದೆ ನಿಮ್ಮ ವಿಚಾರಣೆಯಾಗಲಿದೆ--ಸಿದ್ಧರಿರಿ" ಎಂದು ಆಗಾಖಾನ್ ಅರಮನೆಯಲ್ಲಿದ್ದ ಗಾಂಧಿಜೀಯನ್ನು ಬೆದರಿಸಿದ್ದರು; "ನೀವು ಟೊಳ್ಳು ಮಾತಿನವರೆಂಬ ಅಪವಾದ ಬಾರದಂತೆ ಅಗತ್ಯವಾಗಿ ಅದನ್ನೊಮ್ಮೆ ಮಾಡಿರಿ" ಎಂದು ಗಾಂಧಿಜೀ ಆಹ್ವಾನಿಸಿದ್ದರು; 'ಅಗೋಸ್ತು' ಗಲಭೆಗೆ ಕಾಂಗ್ರೆಸ್ ಪ್ರಮುಖರೇ ಹೊಣೆಗಾರರು' ಎಂಬ ಸರಕಾರೀ 'ಚಾರ್ಜ್ ಶೀಟ್' ಸಂಪೂರ್ಣಗೊಂಡಿತ್ತು. "ಅದಕ್ಕಾಗಿ ಪ್ರಮುಖರನ್ನು ವಿಚಾರಣೆಗೆ ಗುರಿಪಡಿಸಲಾಗುವುದು" ಎಂದು ಆಗ ಹಿಂದೀ ಗೃಹ ಸದಸ್ಯರಾಗಿದ್ದ ಸರ್. ರಿಚಾರ್ಡ್ ಟೋಟನ್ ಹೇಮ್‌ರ ಬಾಯಿಯಿಂದ ಬಂದಿತ್ತು. ಆದರೆ ಆ ಮೇಲೆ ನಡೆದುದೇನು? ಈ 'ಗಲಭೆ ನಿರ್ಮಾಪಕ ಬಂಡಾಯಗಾರ' ಪ್ರಮುಖರನ್ನೆಲ್ಲಾ ನಿಶ್ಶರ್ತವಾಗಿ ಬಿಟ್ಟು ಅವರನ್ನು ವಿಮಾನ ಮೂಲಕ ಸಿಮ್ಲಾಕ್ಕೆ ಮಂತ್ರಿಸಿದರು. ಗಾಂಧಿ, ನೆಹರು, ಪಟೇಲ್ ಲಾವಲರಾಗಲಿಲ್ಲ—ಇಂದಲ್ಲವಾದರೆ ನಾಳೆಯಾದರೂ ಡಿ'ಗೋಲೆಯಾಗುವರೆಂಬ ನಿರೀಕ್ಷೆಯಿದೆ. ಅವರ ಅಪರಾಧ ಕ್ಷಮಿಸಲ್ಪಟ್ಟಿದೆ. ಆದರೆ ಕುಲಶೇಖರ ಪಾಟ್ಣಂ ತರುಣರು-ಅಷ್ಟಿ ಚಿಮೂರಿನವರಂತಹ ಗುಂಪಿನೊಡನೆ ಗೋವಿಂದಹಾಕಿದವರು-ಮಹೇಂದ್ರ ಚೌಧರಿ, ಇವರಿಗೆ ಮಾತ್ರ ಕ್ಷಮೆಯಿಲ್ಲ. ಇವರು ಮಾಡಿದುದನ್ನು ಮರೆಯುವವರಿಲ್ಲ. ಜನಸಾಮಾನ್ಯರು ಈ 'ದೊಡ್ಡವರ ಜಗತ್ತ'ನ್ನು ಮರೆಯುವದಾದರೂ ಹೇಗೆ?—ಹೊಡೆದವನನ್ನು ಬಿಟ್ಟು ಅವನು ಉಪಯೋಗಿಸಿದ ಆಯುಧವನ್ನು ಮಾತ್ರ ಮುರಿದು ಹಾಕುವ ಧೋರಣೆ ಶ್ಲಾಘ್ಯವೆನ್ನೋಣವೆ? ಹಾಗಾದರೆ ಸರಕಾರದ ಈ 'ಶಸ್ತ್ರವಿರೋಧ'ವನ್ನಾದರೂ ಸ್ಮರಿಸಬೇಕಷ್ಟೆ? ಹೇಗಿದ್ದರೂ ಇದು ಮರೆಯಲಾಗದ ವಿಷಯ-ಭಾರತೀಯರು ಮನುಷ್ಯರೆಂಬಾದರೆ ಮರೆಯಲಾರರು!

ಅಗೋಸ್ತು ಸ್ಮರಣೆಗಳು

ಅಗೋಸ್ತಿನಲ್ಲಿ ಬರುವ ಒಂದೊಂದು ದಿನಗಳು-ಹಿಂದೀಯರಿಗೊಂದೊಂದು ಸ್ಮರಣೆಯನ್ನು ತರುತ್ತಿವೆ. ಅಗೋಸ್ತು ೧-ಲೋಕಮಾನ್ಯ ತಿಲಕರ ಪುಣ್ಯತಿಥಿ. 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು' ಎಂದು ಘರ್ಜಿಸಿದ ವೀರ ಕೇಸರಿ ಕಳೇಬರವನ್ನು ಉಳಿದ ದಿನ. ಆ ಕಾಲದ 'ಕ್ವಿಟ್ ಇಂಡಿಯಾ' ಈ ಮಾತು. ರಾಷ್ಟ್ರದ ಮೂಲ ಪಾಠವದು; ಆ ಮೇಲ್ಪಂಕ್ತಿ ಹಾಕಿದ ಗುರು ತಿಲಕರು. 1945ನೇ ಅಗೋಸ್ತು 6ಕ್ಕೆ ಸರ್. ಫಿರೋಜ್‌ಶಾ ಮೆಹತಾರ ಜನ್ಮ ದಿನದ ಶತಮಾನೋತ್ಸವ. ಹಿಂದುಸ್ಥಾನವು ಉದ್ಯಾನವೆನ್ನಿಸಿದುದು ಸರ್. ಮೆಹತಾರಂತಹ ಪುಷ್ಪಗಳರಳಿದುದರಿಂದಲೇ. ಕಾಂಗ್ರೆಸಿನ ಬಾಲ್ಯದಲ್ಲಿ ಫಿರೋಜರೇ ಆದರೆ ಅಬುಲ್ ಕಲಮ್ ಅಜಾದ್. ಅವರು ಮುಂದಗಾಮೀ ಪ್ರಮುಖರು; ಆದರೆ ಫಿರೋಜರ ಸೌಮ್ಯತೆಯಲ್ಲಿ ದನದ ಸಾಧುತ್ವವಿರಲಿಲ್ಲ-ಸಿಂಹ ಗಾಂಭೀರ್ಯವಿತ್ತು. ಫಿರೋಜರನ್ನು ಇಂದಿನ ಹಿಂದೀ ಸೌಮ್ಯ ಪಂಗಡದಲ್ಲಿಟ್ಟು ನೋಡಿದರೆ ಅವರೊಂದು ಉರಿ ಚಂಡಿನಂತೆ ಕಾಣುತ್ತಾರೆ. ಅಗೋಸ್ತು 8-9. ಈ ದಿನಗಳ ವರ್ಣನೆಯನಗತ್ಯ. ಅದು ಭಾರತೀಯರ ಹೃದಯಪತ್ರದಲ್ಲಿ ಅಚ್ಚಾಗಿದೆ; ಇನ್ನು ಅಳಿಸಿಹೋಗುವಂತಿಲ್ಲ. 'ಅಗೋಸ್ತು ಗಲಭೆ'ಯಾರಂಭವಾದ ದಿನಗಳವು. ಆ 'ಸಿಪಾಯಿ ದಂಗೆ' ಮತ್ತು ಈ 'ಅಗೋಸ್ತು ಗಲಭೆ'-ಇವು ಭಾರತೀಯ ಕಾಲಪುರುಷನ ಎರಡು ಕೆಂಪಕ್ಷಿಗಳು. ಅಥವಾ ಹಿಂದುಸ್ಥಾನದ 'ಹಿರೋಶಿಮಾ' ಮತ್ತು 'ನಾಗಸಾಕಿ' ಅಟಂ ಬೋಂಬುಗಳು. ಅಗೋಸ್ತು 11-ವಿಶ್ವಕವಿ ರವೀಂದ್ರನಾಥ ಠಾಗೋರರ ಪುಣ್ಯದಿನ. ಹಿಂದೂದೇಶವು ತನ್ನ ನಿಜ

(೧೧ನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

★ ಮಣ್ಣುಪಾಲಾದ ಮಹತ್ವಾಕಾಂಕ್ಷೆ! ★

ಜಪಾನಿನ ೧೪ ವರುಷಗಳ ಹೋರಾಟ.

ಹತ್ತು ಕೋಟಿ ಜಪಾನರು—ಇಂದು ತಮಗೆ ಪ್ರತ್ಯೇಕವಾಸಸ್ಥಾನ ಅಥವಾ ಪಾಕಿಸ್ತಾನ ಕೇಳುತ್ತಿರುವ ಮುಸಲ್ಮಾನರಷ್ಟೇ ಇರುವ ಒಂದು ಜನಾಂಗ-ಸಾಹಸ ಮತ್ತು ಸಹನೆಯಲ್ಲಿ ಇಡೀ ಪ್ರಪಂಚದಲ್ಲೇ ಮೊದಲಿಗರು. ಈ ಕಾಲಧಲ್ಲಿ ಬೇರೆಲ್ಲಿಯೂ ಇರದಂತಹ ವಿಲಕ್ಷಣ ಶಿಸ್ತು, ರಾಜಭಕ್ತಿ, ದೇಶ ಪ್ರೇಮವಿದ್ದವರು. ಸರ್ವ ಸಾಮಾನ್ಯ ಮಾನವ ಆಳತೆಗೆ ನಾಲ್ಕಂಗುಲ ಕಡಿಮೆಯಿರುವ ಈ ಕುಳ್ಳರಂದರೆ ವಾನರ ಚಾಪಲ್ಯ, ದಾನವ ಶಕ್ತಿಯಿರುವ ವಿಚಿತ್ರ ಜನಾಂಗ. ಆಲಸ್ಯ, ವಿಲಾಸವೇ ಮುಖ್ಯವಾಗಿರುವ ಇಡೀ ಪ್ರಪಂಚದ ಮೇಲೆ ಜಿಗುಪ್ಸೆಪಡುವ ಸಹಜಾಧಿಕಾರ ಈ ಕಾರ್ಯಮಗ್ನರಿಗಿದೆ. ವ್ಯಾಪಾರ, ವ್ಯವಹಾರ ಮತ್ತು ಯುದ್ಧ ಕೌಶಲ್ಯದಲ್ಲಿ ಯಾವ ಬಿಳಿ ಜನಾಂಗವೂ ಇವರಿಗೆ ಸಾಟಿಯುಲ್ಲ. ಹೀಗಿದ್ದೂ ತಮ್ಮ ಪಾಲಿನದಾದ ಏಸ್ಯಾ ಖಂಡ ಶ್ವೇತ ಜನಾಂಗದ ಮುಷ್ಟಿಯೊಳಗಿರುವದು ಅವರ ಪ್ರಾಮುಖ್ಯ ಎದೆಗುದಿಯಾಗಿತ್ತು. ಆದ್ದರಿಂದಲೇ 'ಏಸ್ಯವು ಏಸ್ಯಾನರಿಗ' ಎಂದವರು ಘೋಷಿಸಿದರು. ಬಿಳಿ ಜನರಿದಿರು ಅವರ ಸಿಡುಕು ಬುದ್ಧಿ ಮತ್ತು ಸಿಡಿಮದ್ದು 'ಕ್ವಿಟ್ ಏಸ್ಯಾ' ಎಂದು ಸಿಡಿಯಿತು. ಆದರೆ ಪರಿಣಾಮ ಮಾತ್ರ ಪ್ರತಿಕೂಲವಾಯಿತು. ಜರ್ಮನರ ಮಹಾತ್ವಾಕಾಂಕ್ಷೆಯಂತಯೇ ಜಪಾನರ ಹೆಬ್ಬಯಕೆಯೂ ಮಣ್ಣುಗೂಡಿತು. ಏಸ್ಯಾವನ್ನೇ ಬಿಳಿ ಜನರ ಮುಷ್ಟಿಯಿಂದ ಬಿಡಿಸಬೇಕಂದು ಮುಂದೊತ್ತಿ ಬಂದವರು ಈಗ ತಾವೇ ಅವರ ಕೈಯೊಳಗಾಗಿದ್ದಾರೆ. ರಶ್ಯಾ-ಇಂಗ್ಲಾಂಡು-ಅಮೇರಿಕಗಳೀಗ ಹೃದಯತಃ ಜರ್ಮನ ಜಪಾನುಗಳನ್ನು ಅಭಿನಂದಿಸುತ್ತಿರಬಹುದು-ಲೋಕದೊಡೆತನ ದೊರಕಿಸಿಕೊಳ್ಳುವ ಸುಸಂದರ್ಭವನ್ನು ತಮಗೊದಗಿಸಿಕೊಟ್ಟುದಕ್ಕಾಗಿ. 11 ವರುಷಗಳ ಜಪಾನ್ ಹೋರಾಟದ ಚುಟುಕು ಸಂಚಯ ಇಲ್ಲಿದೆ—

'ಮುಕ್ಡೆನ್ ದುರಂತ'

ಪ್ರಥಮ ಜಾಗತಿಕ ಯುದ್ಧವು 1918ರಲ್ಲಿ ಮುಗಿದ ಮೇಲೆ ಎರಡನೆಯದರ ಪೀಠಿಕೆಯಾಗಿ ಪ್ರಥಮ ಗುಂಡು ಹಾರಿದುದು ಜಪಾನರಿಂದಲೇ. ಇದಕ್ಕೆ ಕಾರಣ ಮುಕ್ಡೆನ್ ಸ್ಫೋಟ. ಮುಕ್ಡೆನ್ ಮಂಚೂರಿಯದ ನಗರ. ಆಗ ರಶ್ಯಾ-ಜಪಾನುಗಳು ಒಂದು ಒಪ್ಪಂದ ಮೂಲಕ ಮಂಚೂರಿಯವು ಚೀನದ ಆಸ್ತಿಯೆಂದೊಪ್ಪಿ ಎರಡೂ ದೂರಹೋಗಿದ್ದುವು. 1931ನೇ ಸೆಪ್ಟೆಂಬರ್ 18ನೇ ರಾತ್ರಿ ಮುಕ್ಡೆನಿನಲ್ಲಿ ಜಪಾನರದಾದ ದಕ್ಷಿಣ ಮಂಚೂರಿಯದೊಂದು ರೈಲ್ವೆಗೆ ಚೀನೀ ಯೋಧರ ಬೊಂಬು ಬಿದ್ದು ಗಾಡಿಯೊಂದು ಭಾಗ ಧ್ವಂಸವಾಯಿತು; ಅಥವಾ ಜಪಾನರು ಹಾಗೆಂದು ಘೋಷಿಸಿದರು. ತಾ. 8-9-1931ರಲ್ಲಿ ಮುಕ್ಡೆನಿನಲ್ಲಿ ಹತ್ತಿದ ಆ ಬೊಂಬಿನ ಕಿಡಿಯು, ತಾ. 6-8-1945ರಲ್ಲಿ ಹಿರೋಶಿಮಾದ ಮೇಲೆ ಆಟಂ ಬೋಂಬು ಸಿಡಿದು ನಂದುವ ವರೆಗೆ ಎಷ್ಟೋ ಮಿಲಿಯ ಪ್ರಾಣಗಳಾಹುತಿಯಾಗಬೇಕಾಯಿತು. ಆದರೆ ಆ ಮುಕ್ಡೆನ್ ಸ್ಫೋಟ ಮಾತ್ರ ಇದುವರೆಗೂ ಒಂದು ಸಮಸ್ಯೆಯಾಗಿದೆ. ಚೀನೀಯರು ಆ ಕೃತ್ಯಮಾಡಿದರೆಂಬುದಕ್ಕೆಂತೂ ಆಧಾರ ದೊರೆತಿಲ್ಲ. ಲೋರ್ಡ್ ಲಿಟ್ಟನರ ಅಧ್ಯಕ್ಷತೆಯಲ್ಲಿ ರಾಷ್ಟ್ರ ಸಂಘದೊಂದು ಸಮಿತಿಯು ವಿಚಾರಣೆ ನಡಿಸಿದಾಗ ಆ ಘಟನೆ ನಡೆದುದಕ್ಕೆ ಕೂಡಾ ರುಜುವಾತು ದೊರೆಯಲಿಲ್ಲ.

ಮಂಚೂರಿಯ ಆಕ್ರಮಣ

ಆದರೂ ಆ ಹೊತ್ತಿನಲ್ಲಿ ಜಪಾನರ ಸೇನೆಯು ಅಲ್ಲಿ ಸಿದ್ಧವಾಗಿತ್ತು. 'ಮುಕ್ಡೆನ್ ದುರಂತ'ದ ಹೆಸರುಬಿದ್ದ ಕೆಲವೇ ಘಂಟೆಗಳೊಳಗೆ ಜಪಾನೀ ಸೇನೆ ಪ್ರಳಯ

ಚೀನದ ಚಿಯಾಂಗ್.

ನೆರೆಯಂತೆ ಮಂಚೂರಿಯದೊಳಗ ನುಗ್ಗಿತು. ಕೆಲವು ಜಪಾನೀ ದಳಗಳು ಆ ಘಟನೆ ನಡೆಯಿತೆನ್ನುವ ಮೊದಲೇ ಹೆಜ್ಜೆ ಮುಂದಿಟ್ಟಿದ್ದುವಂತೆ. ಈಗ ರಶ್ಯವಾಕ್ರಮಿಸಿಕೊಂಡಿರುವ ಆ ಮಂಚೂರಿಯವು ಅತಿ ವಿಸ್ತಾರ ಸ್ಥಳ. ರಶ್ಯ-ಜಪಾನ್ ಮತ್ತು ಚೀನಗಳಿಗೆ ಸರಹದ್ದಾಗಿದೆ. ಆಗಿನ ರಿಪಬ್ಲಿಕನ್ ಚೀನದ ಈಶಾನ್ಯ ಮೂಲೆಯ ಮೂರು ಪ್ರಾಂತ್ಯಗಳೇ ಈ ಮಂಚೂರಿಯ. ಈ ಪ್ರಾಂತ್ಯಗಳಲ್ಲಿರುವದು ಚೀನೀಯರೇ. ಜಪಾನರು ಐದೇ ತಿಂಗಳೊಳಗೆ ಅದನ್ನು ಪೂರ್ತಿ ಆಕ್ರಮಿಸಿಕೊಂಡರು. 1925ರಲ್ಲಿ ತಲೆತಪ್ಪಿಸಿಕೊಂಡು ಜಪಾನರ ಆಶ್ರಯದಲ್ಲಿದ್ದ ಚೀನದ ಮಾಂಚೂ ಚಕ್ರವರ್ತಿ ಪುಯೀ ಎಂಬವನ ಹೆಸರಿನಲ್ಲಿ ತಮ್ಮ ಕೈಗೊಂಬೆ ಸರಕಾರವನ್ನಲ್ಲಿ ಸ್ಥಾಪಿಸಿದರು. ಮಂಚೂರಿಯಕ್ಕೆ ಜಪಾನಿ ನಾಮವಾದ 'ಮಂಚುಕೂವೋ' ಎಂದು ಹೆಸರು ಬಿತ್ತು. ಇಂಗ್ಲಾಂಡು, ಅಮೇರಿಕ, ರಶ್ಯವೊದಲಾದ ರಾಷ್ಟ್ರಗಳು ಇದುವರೆಗೂ ಈ ಸರಕಾರವನ್ನು ಒಪ್ಪಿಕೊಂಡುದಿಲ್ಲ. ಈ ಗೊಂಬೆ ಸರಕಾರದ ಸಲಹೆಗಾರರು ಮತ್ತು ಸೇನಾನಿಗಳಾಗಿ ಜಪಾನಿಗಳೇ ಇದ್ದರು. ಸರಿ ಇದಾಗಿ ವರ್ಷವೊಂದು ಕಳೆಯುವದರೊಳಗೆ ಅದರೊತ್ತಿನ ಮತ್ತೊಂದು ಚೀನೀ ಪ್ರಾಂತ್ಯ ಜೆಹೋಲನ್ನು ಮಂಚುಕುವೋ ಸರಕಾರವಾಕ್ರಮಿಸಿಕೊಂಡಿತು. ಉತ್ತರ ಚೀನದ ಪೀಪಿಂಗ್ ಮತ್ತು ಟೇಂಟ್ಸಿನ ಗೇಟಿನ ವರೆಗೂ ಜಪಾನ್ ರಾಜ್ಯ ವಿಸ್ತರಿಸಿತ. ಮೂಲತಃ ಚೈನವಾಗಿದ್ದ ಸುಮಾರು 31,201,000 ಜನಸಂಖ್ಯೆಯುಳ್ಳ 503 113 ಚದರ ಮೈಲು ಸ್ಥಳ ಜಪಾನರವಾಯಿತು. ಇದು ಜಪಾನ್ ಮೂಲ ನೆಲಕ್ಕಿಂತ ಮುಮ್ಮಡಿ, ಆ ಮೊದಲಿದ್ದ ಜಪಾನ್ ಸಾಮ್ರಾಜ್ಯಕ್ಕಿಂತ ಇಮ್ಮಡಿಯಷ್ಟಾಗುವ ಪ್ರದೇಶ. 1931ರಲ್ಲಿ ಆ ಗೊಂಬೆ ರಾಜ ಪುಯೀಯು ಚಕ್ರವರ್ತಿ ಕಾಂಗ್‌ಟೇಹ್ ಆಗಿ ಜಪಾನರಿಂದ ಸಿಂಹಾಸನಾರೂಢನಾದ. ಚಾಂಗ್‌ಚನ್ ಅವನ ರಾಜಧಾನಿಯಾಯಿತು. ಮೊನ್ನೆ ರಶ್ಯ ನುಗ್ಗುವವರೆಗೂ ಮಂಚೂರಿಯಾ ಅಥವಾ ಮಂಚುಕುವೋ ಹಾಗೆಯೇ ಇತ್ತು.

ಚೀನದ ಮೊರೆ

ಚೀನ ಜಪಾನಿನೊಳಗೆ ಮುಕ್ಡೆನಿನಲ್ಲಿ ಬಿತ್ತಲ್ಪಟ್ಟ ವಿಷ ಬೀಜವು ಮಂಚೂರಿಯಾಕ್ರಮಣದಿಂದ ಸಸಿಯಾಗಿ ಬೇರು ಬಿಟ್ಟ ಮೇಲೆ, ಅದು ಕವಲೊಡೆಯದೆ ಬಿಡಲಿಲ್ಲ. ಮುಕ್ಡೆನ್ ದುರಂತದ ಮೂರೇ ದಿನಗಳಲ್ಲಿ ಚೀನವು ಈ ಕುರಿತು ಆಗಿನ 'ಲೀಗ್ ಓಫ್ ನೇಶನ್ಸ್'ಗೆ ದೂರು ಕೊಟ್ಟಿತು. ಲೀಗು ಅರ್ಲ್ ಒಫ್ ಲಿಟ್ಟನರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಸಮಿತಿಯನ್ನು ಕಳುಹಿಸಿತು. ಆ ಸಮಿತಿಯ ರಿಪೋರ್ಟ್ ನ್ನಾಧರಿಸಿ ಮಂಚೂರಿಯದಲ್ಲಿ ಚೀನೀ ಸರಕಾರ ಸ್ಥಾಪಿಸಲ್ಪಡಬೇಕು-ಜಪಾನೀ ಸೇನೆ ಹಿಂದೆಗೆಯಬೇಕು ಎಂದು ರಾಷ್ಟ್ರ ಸಂಘ ತೀರ್ಪು ಕೊಟ್ಟಿತು. ರಾಷ್ಟ್ರ ಸಂಘ ಸದಸ್ಯತ್ವದಿಂದಲೇ ತಾನು ಹಿಂದೆಗೆಕೊಂಡೆನೆಂಬ ಎರಡು ವರುಷಗಳ ನೊಸನ್ನೇ ಜಪಾನು ಸಂಘಕ್ಕೆ ಉತ್ತರವ ಕಳುಹಿಸಿತು! ಲೀಗ್ ಓಫ್ ನೇಶನ್ಸ್ ಕಟ್ಟಿಕುಳಿತು ಕೊಂಡಿತು. ಈ ಅವಧಿಯ ಚೀನಾ-ಜಪಾನಿನೊಳಗೆ ಮತ್ತೊಂದು ಘರ್ಷಣೆ ಅಂತರ್ರಾಷ್ಟ್ರೀಯ ಬಂದರಾದ ಶಾಂಘಾಯಿಯ ಚೀನೀ ಮುನ್ಸಿಪಾಲಿಟಿ ಒಂದು ಭಾಗ ಜಪಾನೀ ಸೇನೆಯಿದಿರಾಗಿ ಚೀನೀಯರು ಜಾಪೀಯ ದೀರ್ಘಕಾಲ ಹೋರಾಡಿ ಕೊನೆಯಲ್ಲಿ ಶರಣು ಹಿಡಿದರು! ಅದನ್ನೂ ಕೇಳಿದವರಿಲ್ಲ. ಈ ರೀತಿ ರಾಷ್ಟ್ರಸಂಘಕ್ಕೆ ರಾಹುವಾದುದು ಪ್ರಥಮತಃ ಜಪಾನು. ಜಪಾನಿನ ಅನೇಕದ ಕುರಿತು ಏನೂ ಮಾಡದಿದ್ದ ಈ ಲೀಗಿನ ಗುಟ್ಟು ತಿಳಿದೊಡನೆ, ಮತ್ತದನ್ನು ಎಲ್ಲರೂ ಕಾಲಿನಿಂದೊದೆಯ ಹತ್ತಿದರು. ಇಟಾಲಿ ಯಬೀಸಿನಿಯದೊಳಗೆ ಮುಸಲನಿಯ ಫೇಸಿಸ್ಟ ಸೇನೆ ನುಗ್ಗಿತು; ಸ್ಪೈಯಿನಿನ ರಿಪಬ್ಲಿಕನ್ ಸರಕಾರದ ಇದಿರಾಗಿ ಹಿಟ್ಲರ್ ಮುಸಲನಿಗಳ ಬೆಂಬಲದಿಂದ ಫ್ರ್ಯಾಂಕೋ ದಂಗೆ ಎದ್ದ. ಎಲ್ಲರೂ ಕೆಲಸ ಪೂರೈಸಿಕೊಂಡರು; ರಾಷ್ಟ್ರ ಸಂಘದಿಂದೇನೂ ಆಗದೆ ಹೋಯಿತು!

ಚೀನಾ ಯುದ್ಧಾರಂಭ

ಮಂಚೂರಿಯಾಕ್ರಮಣ ಮಾತ್ರದಿಂ ತೃಪ್ತಿಗೊಳ್ಳುವ ಜನಾಂಗ ಜಪಾನರಲ್ಲ. 1935ರಿಂದ ಉತ್ತರ ಚೀನದಲ್ಲೆಲ್ಲಾ ಅವರ ಪ್ರಭಾವ ಹರಡಿತ್ತು; ಆ ಭಾಗದ ಪ್ರಾಂತಿಕಾಧಿಕಾರಿಗಳ ಮೇಲೆ ಜಪಾನರ ಒತ್ತಡ ಬೀಳಲಾರಂಭಿಸಿತು. 'ಉತ್ತರ ಚೀನವನ್ನೇ ನಾನ್ಕಿಂಗ್ ಸರಕಾರದಿಂದ ಕತ್ತರಿಸಿ ಕಸಗೊಳ್ಳಲಾಗುವದು' ಎಂಬ ಬೆದರಿಕೆ ಬರಹತ್ತಿತು. ಅಂತೂ ಉತ್ತರಚೀನದಲ್ಲಿ ಜಪಾನರ 'ಸ್ವಾತಂತ್ರ್ಯ ಚಳವಳ' ಸುಮಾರ ಎರಡು ವರುಷ ನಡೆಯಿತು. ಕೊನೆಗೆ ಕೆಂಡ 1937ನೇ ಜುಲ್ಯ 7ರಲ್ಲಿ ಭುಗ್ಗೆಂದು ಉರಿದುಕೊಂಡಿತು. ಹೇಗೋ ಏನೂ ಆ ದಿನ ರಾತ್ರಿ, ಪೀಪಿಂಗ್ ನಗರದ 12 ಮೈಲು ದೂರದ ಮಾರ್ಕೋ ಪೊಲೋ ಸೇತುವೆಯಲ್ಲಿ ಕಾವಲಿದ್ದ ಚೀನೀ ಸೈನಿಕರು ಮತ್ತು ಜಪಾನ್ ಯೋಧರೊಳಗೆ ಗುಂಡೆಸೆತಕ್ಕಾರಂಭ. ಅದೇ ಮೊನ್ನೆಯ ವರೆಗೂ ನಡೆದ ಎಂಟು ವರುಷಗಳ ಚೀನೀ ಯುದ್ಧದ ಮೂಲಪೀಠಿಕೆ. ಸರಿ ಜಪಾನಿನಿಂದಲೂ ಮಂಚೂರಿಯದಿಂದಲೂ ಜಪಾನ್ ಸೇನೆ ಮೇಲ್ಮೇಯುದ್ದ ಬರಹತ್ತಿತು. ಒಂದೆರಡುಬಾರಿ ಸಂಧಾನವಾಗುವ ಲಕ್ಷಣ ಕಂಡುಬಂದರೂ, ಯಾರ ಮಾಯೆಯಿಂದಲೋ-ಅವು ಫಲಿಸದೆ ದೊಡ್ಡ ಪರಿಮಾಣದ ಆಕ್ರಮಣಕ್ಕಾರಂಭವಾಯಿತು. ಚಿಯಾಂಗ್ ಕೈಶೇಕರ ನಾನ್ಕಿಂಗ್ ಸರಕಾರ ಸಡ್ಡುಹೊಡೆದು ನಿಂತಿತು. ಅದೇ ತಿಂಗಳೊಳಗೆ ಉತ್ತರ ಚೀನದ ಐದು ಪ್ರಾಂತ್ಯಗಳೂ ಜಪಾನರ ಬಗಲೊಳಗಾದುವು; ಮತ್ತೂ ಚೀನೀಯರದಾಗ ಅಲ್ಲಿದ್ದುವೆಂದರೆ ಗೊರಿಲ್ಲಾ ಯುದ್ಧ ಮಾತ್ರ! ಚಿಯಾಂಗರ ಶಿಲೆಯಂತೆ ಹೃದಯ-ಸಿಂಹ ಗರ್ಜನೆ-

ಹೋಮ್ಸ್ ಎಂಡ್ ಎಸ್ಟೇಟ್ಸ್ ಲಿಮಿಟೆಡ್,
ಕಂಟ್ರಾಕ್ಟರ್ಸ್, ಉಡುಪಿ.
ಜನರ ಸೌಕರ್ಯಕ್ಕಾಗಿ ಈ ಕಂಪೆನಿಯವರು ತಯಾರಿಸುವ ಉತ್ತಮ ತರದ ಸುಣ್ಣವು ರಖಂ ಆಗಿಯೂ ಚಿಲ್ಲರೆಯಾಗಿಯೂ ವಿಕ್ರಯಿಸಲ್ಪಡುತ್ತವೆ
ಬೇಕಾದಲ್ಲಿಗೆ ಲೋರಿ ಮೂಲಕ ಡೆಲಿವರಿ ಕೂಡಾ ಕೊಡಲಾಗುವುದು.
ಉಡುಪಿಯಲ್ಲೇ ಸಾಕಷ್ಟು ಸಂಗ್ರಹವಿದೆ.
ಹೆಚ್ಚಿನ ಮಾಹಿತಿಗೆ ಸ್ವತಃ ಮಾತನಾಡಬಹುದು ಯಾ ಪತ್ರ ಬರೆಯಬಹುದು
Managing Director,
Homes & Estates Ltd., Udipi.

ಜಾಪಾನಿನ ರಕ್ತರಂಜಿತ ದಾಖಲೆ!

ಅಖಿಲ ಚೈನವನ್ನು ಧರಿಸಿತು, ಎಬ್ಬಿಸಿತು. ಪ್ರತಿಯೊಬ್ಬ ಪ್ರಾಯಸ್ಥನೂ ಯೋಧನಾದ.

ಒಂದೇಸವನೆ ಆಕ್ರಮಣ

ಅಂತರಾಷ್ಟ್ರೀಯ ಮಹಾನೆಲೆ ಶಾಂಘಾಯಿಯನ್ನು ಅದ್ಭುತ ಸಾಹಸದಿಂದ ಜಾಪಾನರು ವಶಪಡಿಸಿಕೊಂಡರು. ಅಮೇರಿಕನ್ ಹಡಗ 'ಅಗಸ್ಟ' ಅಪರಿಚಿತ ಹೊಡೆತವೊಂದರಿಂದ ಘಾಸಿಯಾಯಿತು. ಚೀನದ ಬ್ರಿಟಿಷ್ ರಾಯಬಾರಿಯೂ ಜಾಪಾನರಿಂದ ಜಖಂಗೊಂಡ. ಶಾಂಘಾಯಿಯ ಪತನವಾದೊಡನೆಯೇ ಚೀನದ ರಾಜಧಾನಿ ನಾನ್ಕಿಂಗ್ ಮುತ್ತಿಗೆಯಾರಂಭ. ಚಿಯಾಂಗ್ ಸರಕಾರವು ಅಲ್ಲಿಂದ ಪಲಾಯನ ಮಾಡಿ ಚುಂಕಿಂಗನ್ನು ರಾಜಧಾನಿ ಮಾಡಿಕೊಂಡಿತು. ನಾನ್ಕಿಂಗಿನ ಪತನದೊಂದಿಗೆ ಚೀನೀ ಯುದ್ಧದ ಪ್ರಥಮ ಭಾಗ ಮುಗಿಯಿತು; ರಾಷ್ಟ್ರೀಯ ಚೀನದ ಅರೆಜೀವ ಹೋಯಿತು. ಈ ಸಂಧಿಕಾಲದಲ್ಲಿ ಜಾಪಾನರು ಸಂಧಾನಕ್ಕೆ ಪ್ರಯತ್ನಿಸಿದರೂ 'ಕೊನೆಯ ತನಕ ಕಾಳಗ'ವೆಂಬ ಚಿಯಾಂಗ್ ಕೈಶೇಕರ ಶಪಥದಿದಿರು ಅವರ ಬೇಳೆ ಬೇಯಲಿಲ್ಲ. ತಾವಾಕ್ರಮಿಸಿಕೊಂಡ ಉತ್ತರ ಚೀನದಲ್ಲಿ ಜಾಪಾನರು ಮತ್ತೆರಡು 'ಮಂಚುಕುವೋ'ಗಳನ್ನು ನಿರ್ಮಿಸಿದರು. ಪೀಪಿಂಗ್ ವಿಭಾಗಕ್ಕೊಂದು 'ಚೀನದ ತಾತ್ಕಾಲಿಕ ಸರಕಾರ' ರಚನೆಯಾಯಿತು; ನಾನ್ಕಿಂಗಿನಲ್ಲಿ 'ಸುಧಾರಿತ ಸರಕಾರ' ಸ್ಥಾಪಿಸಲ್ಪಟ್ಟಿತು. ಇವೆರಡೂ ಚೀನೀಯರದೇ ಆದ ಜಾಪಾನೀ ಗೊಂಬೆ ಸರಕಾರಗಳು. ಹೀಗೆ ಉತ್ತರಗಡೆಯ ಎಲ್ಲವನ್ನೂ ಹತೋಟಿ ಮತ್ತು ಅಂಕೆಗೆ ತಂದ ಮೇಲೆ ಜಾಪಾನೀ ಸೇನೆಗಳು ಚೀನಾವ ಶೇಷದ ಕರಾವಳಿ ಮತ್ತು ರೈಲ್ವೇ ಲೈನುಗಳನ್ನು ಹಿಡಿದು ಕೊಳ್ಳುತ್ತಾ ದಕ್ಷಿಣಕ್ಕೊತ್ತಿದುವು. 1938ನೇ ಅಕ್ಟೋಬರನೊಳಗೆ ಚೀನದ ಎಲ್ಲಾ ಮುಖ್ಯ ಬಂದರಗಳೂ ಜಾಪಾನರ ಬಗಲೊಳಗಾದವು. ಅಖಿಲ ಚೈನದ ಪಣ್ಯ ಮುಖಗಳಾದ ಆರು ನಗರಗಳೂ (ಪೀಪಿಂಗ್, ಟೇಂಟ್ಸಿನ್, ಶಾಂಘಾಯಿ, ನಾನ್ಕಿಂಗ್, ಕೇಂಟನ್) ಜಾಪಾನರ ವಶವಾದುವು. ಅಖಿಲ ಚೀನದ ಸರ್ವೋದ್ಯಮ ಕಾರ್ಖಾನೆಗಳಲ್ಲಿ ನೇಕಡಾ 90ರಷ್ಟು ಜಾಪಾನರ ವಶವಾಗಿ ಹೋಯಿತು. ಯುರೋಪಿನ ಒಂದು ರಾಷ್ಟ್ರವಾಗಿರುತಿದ್ದರೆ ಇಷ್ಟರಿಂದಲೇ ಅದು ನಾಶವಾದಂತೆ. ಆದರೆ ವಿಶಾಲ ರಾಷ್ಟ್ರ ಚೀನದಲ್ಲಿ ಚಿಯಾಂಗ್ ಕೈಶೇಕರಿಗೆ ನಿಲ್ಲಲಿಕ್ಕೊಂದು ನೆಲೆ ಉಳಿದಿತ್ತು. ಅವರು ಅಲ್ಲಿದ್ದುಕೊಂಡು 'ಕೊನೆಯ ವರೆಗೂ ಹೋರಾಟ' ಎಂದು ಘರ್ಜಿಸುತಿದ್ದುದರಿಂದ ಮಾತ್ರ ಚೀನಾ ಬದುಕಿರುವಂತೆ ಕಾಣುತಿತ್ತು. ವಸ್ತುಸ್ಥಿತಿಯೆಂದರೆ ಯುರೋಪು ಯುದ್ಧಾರಂಭವಾಗುವಾಗ ರಾಷ್ಟ್ರೀಯ ಚೀನ ಜೀವಂತವಿರಲಿಲ್ಲ!

ಆದರೆ ಕೊನೆಯ ವರೆಗೂ ಚೀನದ ಕಾಳಗವನ್ನು ಜಾಪಾನರು 'ಚೈನಾ ಘಟನೆ' ಯೆನ್ನುತ್ತಿದ್ದರೇ ಹೊರತು ತಮ್ಮ ಶಕ್ತಿಗೆ ಸಾಟಿಯಾಗಬಲ್ಲ ಹೋರಾಟವೆಂದದನ್ನು ಗಣಿಸಲಿಲ್ಲ. ಅವರ ಸೇನಾಬಲ ಮತ್ತು ಧನಬಲದ ಅಲ್ಪಾಂಶ ಮಾತ್ರ ಚೀನಾ ಯುದ್ಧಕ್ಕೆ ವಿನಿಯೋಗಿಸಲ್ಪಡುತಿತ್ತು; ಅಖಿಲ ಏಷ್ಯಾ ಹೋರಾಟಕ್ಕೆ ಜಾಪಾನು ಭರದಿಂದ ಅಣಿಯಾಗುತ್ತಿತ್ತು. ಈ ಅವಧಿಯಲ್ಲಿ ನಾವೆ ಕರಾರುಗಳನ್ನು ಮುರಿದುಕೊಂಡು ಇಂಗ್ಲಾಂಡು ಅಮೇರಿಕಗಳಂತೆಯೇ ಜಾಪಾನೂ ಅಧಿಕ ಸಂಖ್ಯೆಯಲ್ಲಿ ಯುದ್ಧ ಹಡಗಗಳ ನಿರ್ಮಾಣಕ್ಕೆ ತೊಡಗಿದ್ದಿತು. ಬ್ರಿಟಿಷರು ಸಿಂಗಾಪುರವನ್ನು ಅಭೇದ್ಯ ನಾವಿಕ ಕೋಟೆಯಾಗಿ ಮಾರ್ಪಡಿಸಿಕೊಂಡರು.

'ಮಹಾ ಪೂರ್ವ ಏಸ್ಯಾ'ದ ಕಲ್ಪನೆ

ಸರ್ವಶಕ್ತ ಜಾಪಾನಿಗೀಗ ಅಖಿಲ ಪೂರ್ವ ಏಸ್ಯಾದ ಸುಖಸ್ವಪ್ನ ಬೀಳುತಿತ್ತು. 1938ನೇ ದಶಂಬರಿನಲ್ಲಿ ಆಗಿನ ಜಾಪಾನ್ ಮಂತ್ರಿ ಪ್ರಿನ್ಸ್ ಕೊನೊಯೆಯವರು 'ಪೂರ್ವ ಏಸ್ಯಾದಲ್ಲಿ ಹೊಸ ವ್ಯವಸ್ಥೆ ಸ್ಥಾಪಿಸುವ' ತಮ್ಮ ದೃಢನಿರ್ಧಾರವನ್ನು ಘಂಟಾಘೋಷವಾಗಿ ಸಾರಿದರು--ಆ ಮೂಲಕ ಪಾಶ್ಚಿಮಾತ್ಯ ರಾಷ್ಟ್ರಗಳ ಆಳ್ವಿಗೊಂದು ಅಲಗನ್ನೇ ನೆಟ್ಟರು. 1939ರಲ್ಲಿ ಯುರೋಪು ಯುದ್ಧಾರಂಭವಾಯಿತು. ಜಾಪಾನು ತನ್ನಾಟವಾಡಲು ಸಿದ್ಧತೆ ಮಾಡಹತ್ತಿತು. ಈ ಸಂದರ್ಭದಲ್ಲಿ ಪ್ರಧಾನಿ ಕೊನೊಯಿಯಾ ಮತ್ತು ವಿದೇಶ ಮಂತ್ರಿ ಮಟ್ಸುವೋಕಾರವರು ತಮ್ಮ ಭಾವೀ ಸಾಮ್ರಾಜ್ಯದ ಚಿತ್ರವನ್ನು ಬಹಿರಂಗ ಪಡಿಸಿದಾಗ ಇಂಗ್ಲಾಂಡು, ಅಮೇರಿಕ ಫ್ರಾನ್ಸುಗಳ ಕಣ್ಣು ತೆರೆಯಿತು. ಜಾಪಾನ್, ಮಂಚೂರಿಯಾ, ಚೀನಾ, ಇಂಡೋ ಚೀನಾ, ಈಸ್ಟ್ ಇಂಡೀಸ್, ಥೇಲೇಂಡ್, ಬರ್ಮಾ, ನ್ಯೂ ಕೆಲಿಡೋನಿಯಾಗಳನ್ನು ಒಳಗೊಂಡಿದ್ದ ನಕಾಶೆಯಿದು. ಸರಿ; ಫ್ರಾನ್ಸ್ ಅತ್ತ ನಾಜಿಗಳೆದುರು ಪರಾಭವಗೊಂಡು ಅಲ್ಲಿ ವಿಚಿ ಸರಕಾರ ಸ್ಥಾಪಿಸಲ್ಪಟ್ಟಾಗ ಇತ್ತ ಚೀನದಲ್ಲಿದ್ದ ಜಾಪಾನೀ ಸೇನೆ ಫ್ರೆಂಚ್ ವಸಾಹತಾದ ಇಂಡೋ ಚೀನಾದ ಗಡಿಯಲ್ಲಿ ತಯಾರಾಗಿ ನಿಂತಿತ್ತು. ಆದರ ಆರ್ಥಿಕ ಕ್ಷೇತ್ರವು ಆ ಮೊದಲೇ ಜಾಪಾನರ ಹತೋಟಿಗೆ ಬಂದಿದ್ದರೂ, ಇಂಡೋ ಚೀನದಲ್ಲಿ ವಿಮಾನ ನಿಲ್ದಾಣ ಮತ್ತು ತಮ್ಮ ಸೇನಾ ಚಲನೆಯ ಹಕ್ಕನ್ನು ಜಾಪಾನು ಕೇಳಿತು. ಹಿಟ್ಲರನ ಒತ್ತಾಯದಿಂದ ವಿಚಿ ಸರಕಾರವು ಜಾಪಾನು ಕೇಳಿದುದನ್ನೆಲ್ಲಾ ಕೊಟ್ಟು ಬಿಡಬೇಕಾಯಿತು. ಇದಾದ ಐದೇ ದಿನಗಳೊಳಗೆ ಇಟೆಲಿ--ಜರ್ಮನಿ-ಜಾಪಾನುಗಳೊಳಗೆ ಆಕ್ಸಿಸ್ ಮಿಲಿಟರಿ ಒಪ್ಪಂದವಾಯಿತು. ಇದರ ಪರಿಣಾಮವು ಇನ್ನೊಂದೆಡೆಯಲ್ಲಿ ಆಗದೆ ಹೋಗಲಿಲ್ಲ. ಅಮೇರಿಕವು ಪೂರ್ಣ ಜಾಗ್ರತಿಗೊಂಡು, ಬ್ರಿಟನಿಗೆ ವಿಶೇಷ ಯುದ್ಧ ಸಹಾಯವನ್ನು ಕೊಡಹತ್ತಿತು; ಜಾಪಾನಿಗೆ ಸಾಮಾಗ್ರಿ ಸರಬರಾಯಿಯನ್ನು ನಿಲ್ಲಿಸಿ, ಚೀನಕ್ಕೆ ಒಮ್ಮೆ 25,000,000 ಪೌಂಡು ಮತ್ತೊಮ್ಮೆ 100,000,000 ಪೌಂಡುಗಳ ಸಾಲ ಕೊಟ್ಟು ಪ್ರೋತ್ಸಾಹಿತ್ತು ಬ್ರಿಟನು ಕೂಡಾ 10,000,000 ಪೌಂಡು ಸ್ಟರ್ಲಿಂಗುಗಳನ್ನು ಚಿಯಾಂಗ್ ಕೈಶೇಕರಿಗೆ ಸಲಾಯಿಸಿತು. ಶಾಂತ ಸಮುದ್ರದ ತನ್ನ ದ್ವೀಪಗಳಲ್ಲೆಲ್ಲಾ ಅಮೇರಿಕವು ವಿಶೇಷ ಸೇನಾ ಸಿದ್ಧತೆಯ ಮೂಲಕ ಯುದ್ಧಕ್ಕಣಿಮಾಡಹತ್ತಿತು. ಆ ವೇಳೆ ಅದ್ಭುತ ಘಟನೆಗಳ ಸರದಿ. 1941ರಲ್ಲಿ ರಶ್ಯಾ-ಜರ್ಮನಿ ಯುದ್ಧಾರಂಭ. ಅದೇ ವರುಷ ಎಪ್ರಿಲ್ 13ರಲ್ಲಿ ಐದು ವರುಷಾವಧೀಯ ರಶ್ಯಾ-ಜಾಪಾನ್ ತಾಟಸ್ಥ್ಯ ಒಪ್ಪಂದ. ಜೂನಿನಲ್ಲಿ ಜಾಪಾನರಿಂದ ಇಂಡೋ ಚೀನದ ಪೂರ್ಣಾಕ್ರಮಣ, ಮೂಲ ಜಾಪಾನಿನ ಇಮ್ಮಡಿ ವಿಸ್ತೀರ್ಣದ ಈ ಭೂತುಂಡು ಜಾಪಾನರದಾದೊಡನೆ ಇಂಗ್ಲಾಂಡು ಅಮೇರಿಕಗಳು ಉರಿದು ಬಿದ್ದು ಜುಲಾಯಿಯಲ್ಲಿ ತಮ್ಮ ದೇಶದಲ್ಲಿದ್ದ ಜಾಪಾನೀ ಸೊತ್ತುಗಳನ್ನೆಲ್ಲಾ ಸ್ವಾಧೀನಮಾಡಿಕೊಂಡುವು. ಈ ರಾಷ್ಟ್ರಗಳೊಳಗಿನ ವ್ಯಾಪಾರ ಸಂಬಂಧ ಕಡಿಯಿತು. ಅಮೇರಿಕ, ಇಂಗ್ಲಾಂಡು ಮತ್ತು ಜಾಪಾನ್ ಸಂಬಂಧವು ಪರಮಾವಧಿ ಕೆಟ್ಟು ಕಡಿಯಾರುವದೊಂದೇ ಬಾಕಿಯುಳಿಯಿತು. ಜಾಪಾನ್ ಮುಂದಿನ ಹೆಜ್ಜೆಯನ್ನು ಥೈಲೇಂಡಿನ ಮೇಲಿಡಬೇಕು; ಆಂಗ್ಲೋ-ಅಮೇರಿಕಾನರ ಪ್ರತಿಭಟನೆಯನ್ನು ನಿರೀಕ್ಷಿಸಿಯೇ ಹಾಗೆ ಮಾಡಬೇಕು, ಎಂಬ ಸಂದರ್ಭ ಬಂತು. ಇತ್ತ ಯುದ್ಧಕ್ಕಿಳಿಯುವಂತೆ ಹಿಟ್ಲರನ ಒತ್ತಾಯ ಬೀಳುತಿತ್ತು. ತದನುಗುಣವಾಗಿ ಜಾಪಾನಿನಲ್ಲಿ ಯುದ್ಧೋನ್ಮತ್ತ ಸರಕಾರ ರಚನೆಯಾಗುವ ಅಗತ್ಯ ಬಿದ್ದುದರಿಂದ ಪ್ರಿನ್ಸ್ ಕೊನೊಯೀ ಮಂಡಲ 1941ನೇ ಒಕ್ಟೋಬರ್ 16ರಲ್ಲಿ ರಾಜೀನಾಮೆ ಕೊಟ್ಟು ಜನರಲ್ ಹಿಡೆಕಿ ಟೋಜೋನ ನಾಯಕತ್ವದಲ್ಲಿ ಸಮರ ಸಮರ್ಥ ಸರಕಾರ ಸ್ಥಾಪನೆಯಾಯಿತು.

ಯುದ್ಧ ಸ್ಫೋಟ

ಟೋಜೋ ಅಧಿಕಾರಕ್ಕೆ ಬಂದೊಡನೆ ಸಮಯ ಸಾಧನೆಗಾಗಿ ಅಮೇರಿಕದೊಡನೆ ಕಪಟನಾಟಕವಾಡಹತ್ತಿದ. ಸಂಧಾನ ಸಾಧನೆಗೆಂದು ವಾಷಿಂಗ್ಟನಿಗೆ ರಾಯಭಾರಿಯನ್ನು ಕಳುಹಿ ದಶಂಬರ್ ಆದಿಯ ವರೆಗೂ ದಿನದೂಡಿದ. ಇದೇ ಸಮಯದಲ್ಲಿ ಇಂಡೋ-ಚೀನದೊಳಗೆ ಜಾಪಾನೀ ಸೇನೆಗಳ ವಿಶೇಷ ಸರಬರಾಯಿ ನಡೆದಿತ್ತು; ಎಲ್ಲೆಲ್ಲಿಯೂ ಗುಪ್ತಸಿದ್ಧತೆಗಳಾಗುತಿದ್ದುವು. ನವಂಬರ್ 30ರಲ್ಲೇ ಶಾಂತ ಸಮುದ್ರದ ಪ್ರಬಲ ಜಾಪಾನೀ ನಾವೆಗಳು ಪ್ರಯಾಣ ಹೊರಟ ವಾರ್ತೆ ಬಂದು ಜೋರ್ಜಿಯಾದಲ್ಲಿ ರಜೆಯ ಗಮ್ಮತ್ತಿನಲ್ಲಿದ್ದ ಅಧ್ಯಕ್ಷ ರೂಸವೆಲ್ಟರು ವಾಷಿಂಗ್ಟನಿಗೋಡಿ ಬಂದಿದ್ದರು. "ಬ್ರಿಟನ್ ಮತ್ತು ಅಮೇರಿಕನ್ ಕೊಳೆಯನ್ನು ಝಾಡಿಸಿ ತೊಳೆದುಕೊಳ್ಳಿ" ಎಂದು ಆ ದಿನವೇ ಏಸ್ಯಾದ ಜನತೆಗೆ ಪ್ರಧಾನಿ ಟೋಜೋನ ಕರೆ! ಆದರೂ ವಿನೋದದ ವಿಷಯವೆಂದರೆ ದಶಂಬರ್ 7ನೇ ಮುಂಜಾನೆಯ ವರೆಗೂ ಸಂಧಾನದ ಮಾತುಕತೆಗಾಗಿ ಜಾಪಾನ್ ರಾಯಭಾರಿಗಳು ವಾಷಿಂಗ್ಟನಿನ ವಿದೇಶ ಸಂಬಂಧ ಕಾರ್ಯಾಲಯದಲ್ಲೋಡಾಡುತಿದ್ದರು. 1941ನೇ ದಶಂಬರ್ 7, ಆದಿತ್ಯವಾರ ಮುಂಜಾನೆ 7-55ಕ್ಕೆ ಘಂಟೆ-ನಡು ಶಾಂತ ಸಮುದ್ರದಲ್ಲಿ ಅಮೇರಿಕದ ಪ್ರಾಮುಖ್ಯ ಹಡಗ ನಿಲ್ದಾಣವಾಗಿದ್ದ 'ಪರ್ಲ್ ಹಾರ್ಬರ್' ಜಾಪಾನೀ ಹಡಗಗಳ ಹೊಡೆತದಿಂದ ಪುಡಿಧ್ವಂಸ. ಈ ಸಿಡಿಲು ಬಡಿಯುವಾಗ

TENDER NOTICE

Tenders of rates to reach the asst. Director of Fisheries (Coast Calicut) on or before 15th September '45 are invited for transporting salt bags from vessels or railway wagons and stacking them in the fish curing yards and gollahs on the West Cost and for sundry other works.

Details and terms of contract can be had from the Asst Director of Fisheries (Coast), Calicut.

T. P. BARATAN,
Special Officer (Smoked Fish (Supply)
in charge of the office of the Asst.
Director of Fisheries (Coast)-

CALICUT.
1—8—45

ನವಯುಗದ ಹೊಸ ಸಂಪುಟ

ಚಂದಾದಾರರಲ್ಲಿ ವಿನಂತಿ.

ನವಯುಗದ 24ನೇ ಸಂಪುಟವು ಇದೇ ಆಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಇದೇ ಬರುವ ಸಪ್ಟಂಬರದಿಂದ 25ನೇ ಸಂಪುಟವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಮುಂಗಡ) ಆದಷ್ಟುಬೇಗನೆ ದಯಮಾಡಿ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸುವಂತೆ ವಿನಂತಿ.

ಮೆನೇಜರ್.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ' ಬೆಲೆ ರೂ. 3|- ಕ್ಲಿಷ್ಟದ ಕೇಸುಗಳಿಗೆ ರೂ. 5 6 ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,
F. D. S. (A. B.) Tollygunge, Calcutta,
ಸ್ಟಾಕಿಸ್ಟ್: ಶಾ ಕಂಪೆನಿ, ಮಂಗಳೂರು

ಪರ್ಲ್ ಹಾರ್ಬರಿನ ನಾವಿಕಾಧಿಕಾರಿಗಳು ವಿಲಾಸಮಗ್ನರಾಗಿದ್ದರು. ಅಲ್ಲಿ ಬೋಂಬು ಸಿಡಿಯಿತು ಎಂಬ ವಾರ್ತೆ ಬಂದ ಮೇಲೇನೇ ಇಲ್ಲಿ ಸಂಧಾನ ಮಾತುಕತೆಗಳ ಸೂತ್ರ ಕಡಿಯಿತು! ಈ ಆಕಸ್ಮಿಕ ಧಾಳಿಯ ಬೆನ್ನಲ್ಲಿ ಜಾಪಾನಿನೊಂದಿಗೆ, ಜರ್ಮನಿ ಇಟಲಿಗಳೂ ಅಮೇರಿಕದ ಮೇಲೆ ಯುದ್ಧಸಾರಿದುವು; ಅಮೇರಿಕ, ಬ್ರಿಟನ್‌ಗಳು ಜಾಪಾನಿನ ಮೇಲೆ ಯುದ್ಧಘೋಷಿಸಿದುವು. ಆದುವರೆಗೂ 'ಯುರೋಪು ಯುದ್ಧ' ಮಾತ್ರವಾಗಿದ್ದುದು ಅಂದಿನಿಂದ 'ಲೋಕಯುದ್ಧ'ವಾಯಿತು.

ವಿಜಯ ರಭಸ

ಯುದ್ಧಾರಂಭ ಭಾಗದಲ್ಲಿ ಇಂಗ್ಲೆಂಡು-ಅಮೇರಿಕಗಳು ಪಟ್ಟಪಾಡು ಪ್ರಾಣಿಮಾತ್ರಕ್ಕೂ ಬೇಡ! ಆ ಕಾಲದಲ್ಲಿ ಕಳೆದ ಪ್ರತಿಯೊಂದು ದಿನವೂ, ಅಮೇರಿಕಾನರಿಗೆ ಕರಾಳ ದಿನ. ಪರ್ಲ ಹಾರ್ಬರಿನ ಆ ಮುಂಜಾನೆಯ ಹೊಡತದಿಂದಲೇ ಶಾಂತ ಸಮುದ್ರದಲ್ಲಿ ಶೇಕಡಾ 60ರಷ್ಟಿದ್ದ ಅಮೇರಿಕನ್ ಹಡಗ ಬಲವು ಶೇಕಡಾ 20 ಅಥವಾ 30ಕ್ಕಿಳಿಯಿತು. ಪರ್ಲ ಹಾರ್ಬರಿನಿಂದ ಫಿಲಿಪ್ಪಾಯಿನಿನ ವರೆಗಿನ ಅಮೇರಿಕದ ಜೀವನಾಡಿಯಂತಿದ್ದ 4800 ಮೈಲು ಉದ್ದದ ಸಮುದ್ರ ಪಥವು ಎರಡೇ ದಿನಗಳೊಳಗೆ ಕಡಿದು ಹೋಯಿತು. ಒಂದೆಡೆಯಿಂದ ಇನ್ನೊಂದೆಡೆಗೆ ಸರಬರಾಯಿ ಅಸಾಧ್ಯವಾಯಿತು ಆ ಮೇಲೆ ಶಾಂತ ಸಮುದ್ರದ ಅಮೇರಿಕನ್ ದ್ವೀಪಗಳು ಮಾಗಿದ ಹಣ್ಣುಗಳಂತೆ ಪಟಪಟನೇ ಉದುರಿ ಹೋದುವು. ಫಿಲಿಪ್ಪೈನ್ ಕೈಬಿಟ್ಟಿತು; ಬ್ರಿಟಿಷರ ಹೋಂಗ್‌ಕೋಂಗ್ ಹೋಯಿತು; ಥೈಲೇಂಡ್ ಹೋರಾಡದೇನೇ ವಶವಾಯಿತು; ಮಲಯಾ ಜಪಾನರದಾಯಿತು. ಸಿಂಗಾಪುರದಲ್ಲಿ ಬ್ರಿಟನಿನ ಅಗ್ರಗಣ್ಯ ಯುದ್ಧ ಹಡಗಗಳಾದ 'ಪ್ರಿನ್ಸ್ ಓಫ್ ವೇಲ್ಸ್'ಮತ್ತು'ರಿಪಲ್ಸ್'ಗಳು ಜಾಪಾನರ ಒಂದೊಂದೇ ಹೊಡೆತದಿಂದ ಜಲಸಮಾಧಿಗೊಂಡ ಅದ್ಭುತವಂತೂ ಚರಿತ್ರಾಪೂರ್ವ! ಅಭೇದ್ಯ ಕೋಟೆಯೆನ್ನಿಸಿದ್ದ ಸಿಂಗಾಪುರದ ಆಟ ಕೆಲವೇ ದಿನಗಳೊಳಗೆ ಮುಗಿಯಿತು. ಇಷ್ಟೆಲ್ಲಾ ಅದ್ಭುತಗಳನ್ನು 1942ನೇ ಫೆಬ್ರವರಿ 15ರೊಳಗೆ—2½ ತಿಂಗಳ ಹೋರಾಟದಿಂದ—ಜಾಪಾನರು ಸಾಧಿಸಿಬಿಟ್ಟಿದ್ದರು. ಎಪ್ರಿಲ್ 28 ಬರುವಾಗ ರಂಗೂನು, ಜಾಪಾನರದಾಗಿತ್ತಲ್ಲದೆ ಬರ್ಮಾ ರಸ್ತೆಯ ಬಾಗಿಲು ಮುಚ್ಚಲ್ಪಟ್ಟು ಇಡಿಯ ಬರ್ಮವೇ ಜಾಪಾನರ ಬಗಲೊಳಗಿತ್ತು. ಸಮೃದ್ಧ ಭಾಗ ನೆದರ್ಲೇಂಡ್ ಇಂಡೀಸ್ ಪ್ರಬಲ ಹೋರಾಟ ಕೊಟ್ಟರೂ ಮಾರ್ಚಿ 10ರಲ್ಲಾದ ಜಾವಾ ಪತನದೊಂದಿಗೆ ಜಾಪಾನ್ ಸಾಮ್ರಾಜ್ಯಾಂತರ್ಗತಗೊಂಡಿತು. ದಿಗ್ವಿಜಯೀ ಜಾಪಾನರು ವಿರಾಮ ಪಡೆದುದು ಬರ್ಮಾ ಗಡಿ ಮುಟ್ಟಿದ ಮೇಲೆಯೇ. ಆಗ ಹೊಸತಾಗಿ ಯಾ 12 ಕೋಟಿ ಜನಸಂಖ್ಯೆಯಿದ್ದ 1,500,000 ಚದರ ಮೈಲು ಸ್ಥಳವನ್ನು ಜಾಪಾನರು ಗಳಿಸಿದ್ದರು. ಇತ್ತ ಮಿಡ್ವೇ ದ್ವೀಪದಿಂದ ಹಿಂದುಸ್ಥಾನದ ಎರೆಗಿನ, ಅತ್ತ ಸೈಬೇರಿಯಾದಿಂದ ಆಸ್ಟ್ರೇಲಿಯದ ವರೆಗಿನ ಸರ್ವ ಕರಾವಳಿಗಳೂ ಜಾಪಾನರ ವಶವಾಗಿದ್ದುವು. 'ಮುಂದೆ ನಾನೋ ನೀನೊ' ಎಂದು ಆಸ್ಟ್ರೇಲಿಯ ಮತ್ತು ಹಿಂದುಸ್ಥಾನಗಳು ಒಂದನ್ನೊಂದು ನೋಡುತ್ತಿದ್ದುವು. ಜಾಪಾನಿನ ನಿಶ್ಚಿತ ಯೋಜನೆ ಪೂರ್ಣಗೊಂಡು ಶಾಂತ ಸಮುದ್ರವು 'ಜಾಪಾನೀ ಸರೋವರ'ವಾಗಿ ರಾಜಿಸುತಿತ್ತು.

ಇಳಿತಕ್ಕಾರಂಭ

1942ರ ಎಪ್ರಿಲ್ 28ರಿಂದ ನವಂಬರ್ 15ರ ವರೆಗಿನ ಅವಧಿಯು ಜಾಪಾನರ ತಾಟಸ್ಥ್ಯ ಕಾಲವೆನ್ನಬಹುದು. ಈ ಅವಧಿಯಲ್ಲಿ ಅವರು ತಾವು ಗೆದ್ದುಕೊಂಡ ವಿಶಾಲ ಸಾಮ್ರಾಜ್ಯದ ಸಾರ ಸಂಗ್ರಹಿಸುವುದರಲ್ಲೂ ರಕ್ಷಣಾ ರಚನೆಯಲ್ಲೂ ನಿರತರಾಗಿದ್ದರು. ಆಗಲೇ ಜನರಲ್ ಮೇಕರ್ಥರರು ಶಾಂತ ಸಮುದ್ರದ ಮಿತ್ರಸೇನಾನಿಯಾಗಿ ಬಂದರು. ಅಮೇರಿಕನ್ ಸೇನೆಗಳು ಆಸ್ಟ್ರೇಲಿಯದಲ್ಲಿ ಜಮೆಗೊಂಡವು. ಆ ಮೇಲೆ ಮಾತ್ರ ಜಾಪಾನರ ನಿರೀಕ್ಷೆಯೊಂದೂ ಫಲಿಸಲಿಲ್ಲ. ನವಂಬರ್ ಮಧ್ಯಾನಂತರ ಜಾಪಾನ್ ಸೇನೆಗೆ ದೊರೆತುದು ತಡೆಯುವ ಕೆಲಸ ಮಾತ್ರ; ಹೊಡೆಯುವ ಕೆಲಸ ಎಪ್ರಿಲ್‌ನೊಂದಿಗೇನೇ ಮುಗಿದಿತ್ತು. ಅಮೇರಿಕನರು ಗ್ವಡೆಲ್ ಕನಾಲಿನಲ್ಲಿ ಹೂಡಿದ ಪ್ರಥಮ ಪ್ರತಿಧಾಳಿಯು ಮೂರು ತಿಂಗಳು ನಡೆದು ಫೆಬ್ರುವರಿಯಲ್ಲದು ಜಾಪಾನರಿಂದ ಸಡಲಿತು. ಆ ಮೇಲೆ ಶಾಂತಸಮುದ್ರದ ಒಂದೊಂದೇ ದ್ವೀಪಗಳು ಜಾಪ್ ಕೈಯಿಂದ ಜಾರಲಾರಂಭ 'ಎ, ಬಿ, ಸಿ, ಡಿ,' (ಅಮೇರಿಕ, ಬ್ರಿಟನ., ಚೀನಾ, ಡಚ್) ರಾಷ್ಟ್ರಗುಂಪು ಮಾತ್ರವಲ್ಲ; ಸುಮಾರು 26 ರಾಷ್ಟ್ರಗಳು ಶಾಂತಸಮುದ್ರ ಯುದ್ಧದಲ್ಲಿ ಮಿತ್ರಪಾಳಯದಲ್ಲಿ ಒಂದುಗೂಡಿದ್ದವು. ಸೊಲಮನ್ಸ್, ರಾಬೂಲ್,ನ್ಯೂಗಿನಿಯಾ, ಗಿಲ್ಬರ್ಟ್ ದ್ವೀಪ ಸಮೂಹ, ನ್ಯೂ ಬ್ರಿಟೈನ್ ಇತ್ಯಾದಿ ಇತ್ಯಾದಿ ದ್ವೀಪಗಳೆಲ್ಲಾ ಸರದಿ ಪ್ರಕಾರ ಜಪಾನರ ಕೈಬಿಟ್ಟವು; ಬರ್ಮವನ್ನು ಮಿತ್ರರಾಕ್ರಮಿಸಹತ್ತಿದರು. ಆದರೂ1944ರಲ್ಲೊಮ್ಮೆ ಜಾಪಾನೀಸೇನೆ ಪುನಃ ಬರ್ಮದಿಂದ ಭಾರತಕ್ಕೆ ನುಗ್ಗಿ ಕೊಹಿಮಾದ ವರೆಗೆ ಬಂದಿತ್ತು; ಕೊಹಿಮಾ ಮಾತ್ರ ದ್ವಿತೀಯ ಸ್ಟಾಲಿನ್‌ಗ್ರಾಡ್ ಆಗಿ, ಅಲ್ಲಿಂದ ಹಿಮ್ಮೆಟ್ಟಹತ್ತಿದ ಜಾಪಾನರು ಬರ್ಮಾ ರಸ್ತೆಯನ್ನು, ಕೊನೆಗೆ ರಂಗೂನನ್ನೂ ಬಿಡಬೇಕಾಯಿತು.1945ರಲ್ಲಿ ಜಾಪಾನ್ ಮೂಲ ನೆಲದ ಸುತ್ತಲೂ ಮಿತ್ರಸೇನೆಗಳಿಳಿದಿದ್ದುವು ಗುವಾಮ್, ಇವೊಜಿಮಾ, ಒಕಿನಾವಾದಂತಹ ಒತ್ತು ದ್ವೀಪಗಳಲ್ಲೇ ಅಮೇರಿಕಾನರು ಹೆಜ್ಜೆಯೂರಿದರು; ಜಾಪಾನಿನ ಸುತ್ತ ಉಕ್ಕಿನ ಬೇಲಿ ಬಿತ್ತು. ಮೇಲಿನಿಂದ ಸಾವಿರಸಂಖ್ಯೆಯ ವಿಮಾನಗಳಿಂದ, ಟೋಕಿಯೋದಿಂದಾರಂಭಿಸಿ ಎಲ್ಲಾ ಮುಖ್ಯ ನಗರಗಳ ಮೇಲೂ ದಿನಂಪ್ರತಿ ಹೊಡೆತ ಬೀಳಹತ್ತಿತು; ಜಾಪಾನು ಹಣ್ಣಾಯಿತು; ಹದಕ್ಕೆ ಬಂತು! ಮೇ 8ರಲ್ಲಿ ಜರ್ಮನಿ ಪೂರ್ಣ ಶರಣಾಗಿ ಜಾಪಾನೊಂದೇ ಉಳಿಯಿತು—ಬಸವಳಿದ ಹುಲಿಯಂತೆ ಉಳಿಯಿತು. ಜಾಪಾನಿನ ಶಕ್ತಿ ಅರ್ಧಕ್ಕರ್ಧವಾಗುವಾಗ, ಜರ್ಮನಿಯ ಕೆಲಸ ಮುಗಿಸಿದ ಮಿತ್ರರ ಶಕ್ತಿ ಆಗ ಇಮ್ಮಡಿಸಿತ್ತು. ಆ ಮೇಲೆ ಜಾಪಾನಿನ ಅವಸಾನದ ದಿನವನ್ನು ಗಣಿಸಬಹುದಾಗಿತ್ತು.

ಪತನ!

ಆದರೂ ಜಾಪಾನರು ಅಲ್ಲಲ್ಲಿ ಜಿಗಳೆಯಂತೆ ಅಂಟಿಕೊಂಡಿದ್ದರು. ಚೀನವನ್ನು ಕೊನೆಯ ವರೆಗೂ ಅಲ್ಲಾಡಲು ಅವರು ಬಿಟ್ಟಿರಲಿಲ್ಲ; ಸಿಂಗಾಪುರ, ಮಲಯವನ್ನು ಸ್ಪರ್ಶಿಸಿದವರಿಲ್ಲ; ಬರ್ಮದಲ್ಲಿ ಜಾಪಾನೀ ಸೇನೆಯನ್ನು ಝಾಡಿಸಿ ತೊಳೆಯಲಾಗಿರಲಿಲ್ಲ. ಜಾಪಾನೀ ಮೂಲ ನೆಲದಲ್ಲಿ ಯುರೋಪಿಯನ್ ಸೈನಿಕರು ಹೆಜ್ಜೆಯೂರಿರಲಿಲ್ಲ.ಆದರೆ ಜಾಪಾನು, ಅನಿರೀಕ್ಷಿತ ಆಕಸ್ಮಿಕ ಎರಡು ಸಿಡಿಲುಗಳಿಂದಾಗಿ ಮಂಡಿಯೂರಿತು. ಆಗೋಸ್ತು 6ರಲ್ಲಿ ಹಿರೋಶಿಮಾದ ಮೇಲೆ ಆಟಂ ಬೋಂಬು ಬಿತ್ತು; 8ರಲ್ಲಿ ರಶ್ಯ ಜಾಪಾನಿನ ಮೇಲೆಬಿತ್ತು. 9ರಲ್ಲೇ ಮತ್ತೊಂದು ಆಟಂ ಬೋಂಬು ನಾಗಸಾಕಿಯ ಮೇಲೆ! 126ನೇ ಚಕ್ರವರ್ತಿಯುಳ್ಳ ಜಾಪಾನಿನ ಹಿ... ...ಗಳ ದಿಗ್ವಿಜಯದ ಜಾಪಾನ್ ಸಾಮ್ರಾಜ್ಯಕ್ಕೆ-ಇಷ್ಟೇ ಸಾಕಾಯಿತು. ಜಾಪಾನ್ ಆಗೋಸ್ತು 14ರಲ್ಲಿ 'ಚಮ್ಮಯ್ಯ' ಹಾಕಿತು. ಅಲ್ಲಿಗೆ ಪ್ರಪಂಚ ಚರಿತ್ರೆಯ ಒಂದು ರಕ್ತಾಧ್ಯಾಯ ಮುಕ್ತಾಯ.

ರಷ್ಯಾ---ಜಾಪಾನ್

ದೀರ್ಘಕಾಲದಿಂದ ಭುಜ ತಾಡಿಸಿಕೊಂಡೇ ಇದ್ದುವು!

ರಶ್ಯವು, ಆಸ್ಯಾದ ಮತ್ತೊಂದು ಮಹಾರಾಷ್ಟ್ರವಾದ ಜಾಪಾನಿನೊಡನೆ ಮೈತ್ರಿ ಸಂಪಾದಿಸುವದೆಂದು ನಂಬಿದವರಿದ್ದರು; ಇನ್ನಾದರೂ ಜಾಪಾನನ್ನು ರಶ್ಯವೆತ್ತಿ ಹಿಡಿಯುವದೆಂದು ನಿರೀಕ್ಷಿಸುವವರಿದ್ದಾರೆ. ಆದರೆ ಅವುಗಳೊಳಗಿನ ಸಂಬಂಧ ಹೇಗಿತ್ತು ಬಲ್ಲಿರಾ?

ಹಲವು ತಿಕ್ಕಾಟಗಳು

1904—1905ರಲ್ಲಿ ರಶ್ಯಾ-ಜಾಪಾನ್ ಯುದ್ಧ ನಡೆದಿತ್ತು. ಆದರಲ್ಲಿ ರಶ್ಯ ಹಣ್ಣಾಗಿ 'ಪೋರ್ಟ್ಸ್ ಮೌತ್' ಒಪ್ಪಂದವಾಯಿತು. ಆ ಮೂಲಕ ಕೊರಿಯದ ಮೇಲಿನ ಜಾಪಾನ್ ಅಧಿಕಾರವನ್ನುಕ್ಕೆ ರಶ್ಯ ಒಪ್ಪಿಕೊಂಡಿತು. ಮಾತ್ರವಲ್ಲ, ಪೋರ್ಟ್ ಆರ್ಥರ್, ಲಿಯೋಟಂಗ್ ಪೆನಿನ್ಸುಲಾ ಕ್ಷೇತ್ರ, ಸಖಾಲಿನ್‌ನ ದಕ್ಷಿಣಭಾಗದ ಅಧಿಕಾರವನ್ನು ಜಾಪಾನಿಗೆ ಬಿಟ್ಟುಕೊಟ್ಟು, ಮಂಚೂರಿಯದ ರೈಲು ರಸ್ತೆಯನ್ನೂ ದಾನಮಾಡಿತು. ರಶ್ಯದ ಹಕ್ಕಿನ ಶಾಂತ ಸಮುದ್ರದ ಗಡಿಯಲ್ಲಿ ಜಾಪಾನರಿಗೆ ಮೀನು ಹಿಡಿಯುವ ಅಧಿಕಾರವನ್ನೂ ಒಪ್ಪಬೇಕಾಯಿತು. ಮಂಚೂರಿಯದ ಅಧಿಕಾರ ಮಾತ್ರ ಚೀನಕ್ಕೆಂದು ಇವೆರಡು ರಾಷ್ಟ್ರಗಳೂ ಆ ಒಪ್ಪಂದದಲ್ಲಿ ಒಡಂಬಟ್ಟಿದ್ದುವು.

1910ರಲ್ಲಿ ಕೊರಿಯವನ್ನು ಜಾಪಾನು ಪೂರ್ತಿ ಆಕ್ರಮಿಸಿಕೊಂಡಿತು. ಆ ಮೇಲಿನ ದಶವಾನದಲ್ಲಿ ರಶ್ಯಾ-ಜಾಪಾನ್-ಚೀನಗಳೊಳಗಿನ ಸರಹದ್ದು ಪ್ರಾಂತ್ಯಗಳ ಸಂಬಂಧದಲ್ಲಿ ಎಷ್ಟೋ ವಿವಾದ, ತಿಕ್ಕಾಟಗಳಾಗಿ, ಕೊನೆಗೆ ತೀರ್ಮಾನಕ್ಕೆ ಬಂದಿದ್ದು... ...ತಿಯೊಂ... ಸಂದರ್ಭದಲ್ಲೂ ಜಾಪಾನಿನ ಮೂಗೇ ಮೇಲಾಗುತಿತ್ತು.

1918ರಲ್ಲಿ ಪ್ರಥಮ ಜಾಗತಿಕ ಯುದ್ಧ ಮುಗಿದು ರಶ್ಯದಲ್ಲಿ ಸೋವಿಯೆಟ್ ಸರಕಾರ ಸ್ಥಾಪನೆಗೊಂಡಾಗ ಮಿತ್ರರಾಷ್ಟ್ರಗಳಂತೆ ಜಾಪಾನೂ ತನ್ನ ಸಾಯಭಾರಿಯನ್ನು ಹಿಂದೆಗೆದುಕೊಂಡು ಸಂಬಂಧ ಕಡಿದುಕೊಂಡಿತು. ಆ ಯುದ್ಧ ಗೆದ್ದ ಇತರ ರಾಷ್ಟ್ರಗಳಂತೆ ಜಾಪಾನಿಗೂ ರಶ್ಯದ ಸೈಬೇರಿಯದಲ್ಲಿ ತನ್ನ ಸೇನೆಯಿಡುವ ಅಧಿಕಾರವಿತ್ತು. ಆದರೆ ಇತರ ಮಿತ್ರರಾಷ್ಟ್ರಗಳು ತಮ್ಮ ಸೇನೆಗಳನ್ನು 1920ನೇ ಎಪ್ರಿಲಿನಲ್ಲಿ ಹಿಂದೆಗೆದುಕೊಂಡರೂ ಜಾಪಾನು 1922ನೇ ಆಕ್ಟೋಬರದ ವರೆಗೂ ಹಿಂದೆಗೆದುಕೊಳ್ಳಲಿಲ್ಲ. ಆ ವೇಳಾದರೂ ತನ್ನೊಂದು ಭಾಗ ಸೇನೆಯನ್ನು ಮಾತ್ರ ಅಲ್ಲಿಂದ ಕರೆಯಿಸಿತು. ಈ ಅವಧಿಯಲ್ಲಿ ರಶ್ಯದ ಪಾಲಿನದಾಗಿದ್ದ ಉತ್ತರ ಸಖಾಲಿನನ್ನೂ ಜಾಪಾನೀ ಸೇನೆಯಾಕ್ರಮಿಸಿಕೊಂಡು, 1925ರಲ್ಲಿ ಸೋವಿಯೆಟ್-ಜಾಪಾನ್ ಒಪ್ಪಂದಾನಂತರವೇ ಅದನ್ನು ಬಿಟ್ಟುಕೊಟ್ಟಿತು. ಈ ನಡುವೆ ರಶ್ಯದ ತಿರಸ್ಕಾರ ಪಡೆದ ಇತರ ಬೇಡಿಕೆಗಳೂ ಜಾಪಾನಿನಿಂದ ಬಾರದಿರಲಿಲ್ಲ.

ಚೀನಾ ಸಂಬಂಧದಲ್ಲಿ

1923ರಿಂದ 27ರ ವರೆಗೂ ರಶ್ಯವು ಚೀನಕ್ಕೆ ಪೂರ್ಣ ಸಹಕಾರವಿತ್ತಿದ್ದಿತು. ಆದರೆ 1927ರಿಂದ ಚೀನದ ಅಂತಃಕಲಹದಿಂದ ಜಿಗುಪ್ಸೆಗೊಂಡ ರಶ್ಯಾ ತನ್ನ ಕೈಯನ್ನು ಹಿಂದೆಳೆದುಕೊಂಡಿತು. ಈ ಅವಧಿಯಲ್ಲಿ ಮಂಚೂರಿಯದಲ್ಲಿ ಜಾಪಾನಿನ ಆಕ್ರಮಧಾಳಿ, ಸೇನಾ ಹೊಡೆತಗಳಿಗೆ ಹಲವು ಬಾರಿ ರಶ್ಯಾ ಮೈಗೊಡಬೇಕಾಯಿತು. ಮುಕ್ಡೆನ್ ದುರಂತ ನಡೆದು ಜಾಪಾನ್ ಮಂಚೂರಿಯವನ್ನು ಆಕ್ರಮಿಸಹತ್ತಿದ ಎರಡು ತಿಂಗಳೊಳಗೆ ಆಗ ರಶ್ಯದ ವಿದೇಶ ಮಂತ್ರಿಯಾಗಿದ್ದ ಲಿಟ್ವಿನೋಫರು ರಶ್ಯಾ-ಜಾಪಾನ್ ಅನಾಕ್ರಮಣ ಒಪ್ಪಂದಕ್ಕೆ ಮುಂದಾದಾಗ ಜಾಪಾನ್ ನೆವಹೇಳಿ ಅದರನ್ನು ತಿರಸ್ಕರಿಸಿಬಿಟ್ಟಿತು. 1932ರಲ್ಲಿ ಮಂಚೂರಿಯವು ಜಾಪಾನರದಾದ ಮೇಲೆ ರಶ್ಯದ್ದಾಗಿದ್ದ ಚೀನದ ಪೂರ್ವ ರೈಲ್ವೆಯ ಹತೋಟಿಯೂ ಜಾಪಾನಿನ ಕೈಗೆಬಂತು. ಉಪಾಯವಿಲ್ಲದೆ ರಶ್ಯವು ಆ ರೈಲ್ವೆಯನ್ನು ಮಾರಾಟಕ್ಕಿಟ್ಟಾಗ, ಅದನ್ನು ಪಡಕೊಳ್ಳುವ ಅಧಿಕಾರ ತನ್ನ ಮಂಚುಕುವೋ ಸರಕಾರಕ್ಕೆ ಮಾತ್ರವೆಂದು ಜಾಪಾನ್ ತಡೆಹಾಕಿತು. ಕೊನೆಗೆ ಹೇಗೂ ಒದ್ದಾಡಿ ಅದನ್ನು ಮಂಚುಕುವೋ ಸರಕಾರಕ್ಕೇನೇ ಮಾರಿ ಪ್ರತಿಫಲ ಪಡಕೊಳ್ಳಬೇಕಾದರೆ ರಶ್ಯಕ್ಕೆ ಸಾಕುಸಾಕಾಗಿ ಹೋಯಿತು!

ಅವಿರಾಮ ಬಡಿದಾಟ

ಆ ಮೇಲಾದರೂ ಮಂಚೂರಿಯಾ—ಸೈಬೇರಿಯಾ ಗಡಿಯಲ್ಲಿ ಆಗಾಗ ಜಾಪಾನ್-ರಶ್ಯಾ ಧಾಳಿ, ಹೋರಾಟಗಳು ನಡೆಯುತ್ತಲೇ ಇದ್ದುವು. ರಶ್ಯದ ರಕ್ಷಣೆಯಲ್ಲಿದ್ದ ಔಟರ್ ಮಂಗೋಲಿಯಮೊಳಗೆ ಜಾಪಾನೀ ಸೇನೆಗಳು ಬಹುಬಾರಿ ನುಗ್ಗಿ ಹೋಗಿದ್ದವು. ಕೊನೆಗೆ 1936ನೇ ಎಪ್ರಿಲಿನಲ್ಲಿ

(೮ನೇ ಪುಟ ನೋಡಿರಿ)

The Canara Banking Corporation Limited.
(Incorporated in British India, with limited Liability.)
Estd: 1906
Head Office: UDIPI, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital	Rs. 15,17,000
Reserves	Rs. 4,44,000

ಉಡುಪಿ, ಗುರುವಾರ ೨೩-೮-೧೯೪೫

ವರ್ಣ ದ್ವೇಷವೇ?

“ಕೆಲವು ಮುಖ್ಯ ಮಿತ್ರ ರಾಷ್ಟ್ರಗಳೇ ಪ್ರೋತ್ಸಾಹಪರ ಧೋರಣೆ ವಹಿಸಿದ್ದ ಆ ಕಾಲದಲ್ಲಿಯೂ ನಾಜೀಶಾಹಿ, ಫೇಸಿಸ್ಟ್ ಪದ್ಧತಿ ಮತ್ತು ಜಾಪಾನಿನ ಆಕ್ರಮಣಶೀಲತೆಯ ವಿರುದ್ಧವಾಗಿ ಸ್ವರವೆತ್ತಿದವರಲ್ಲಿ ರಾಷ್ಟ್ರೀಯ ಭಾರತವೇ ಮೊದಲಿನದೆಂಬುದನ್ನು—ನಕಾರ ಬರುವ ಸಂಭವವಿದ್ದರೂ—ನಾನಿಲ್ಲಿ ನೆನಪುಮಾಡಲಿಚ್ಛಿಸುತ್ತೇನೆ. ಆದ್ದರಿಂದ ದಬ್ಬಾಳಿಕೆ ಮತ್ತು ಅಪ್ರಾಗತಿಕ ಶಕ್ತಿಯ ನಾಶವನ್ನು ಸ್ವಾಗತಿಸುವ ಮತ್ತು ಅವುಗಳ ಮೇಲೆ ವಿಜಯ ಸಾಧಿಸಿದ ಮಾನವೀಯ ಪ್ರಜಾಸತ್ತಾತ್ಮಕ ಶಕ್ತಿಯನ್ನು ಅಭಿನಂದಿಸುವ ಮೊದಲ ಸ್ಥಾನವನ್ನು ರಾಷ್ಟ್ರೀಯ ಭಾರತವು ಸಹಜವಾಗಿ ವಹಿಸಬೇಕಾಗಿದೆ. ಲೋಕವು ಶಾಂತಿಯುಸಿರನ್ನು ಬಿಡುವಂತೆ ಮಾಡಲು ಕಷ್ಟ ವಹಿಸಿದ ಸರ್ವರನ್ನೂ ಸ್ಮರಿಸುವಾಗ ಆ ಮಾನವ ದುಃಖ ಪರಂಪರೆಗಳನ್ನು ಸಹಿಸಿ, ವಿಜಯ ಮಕುಟಧಾರಿಗಳಾದ ಧೀರ, ದೃಢನಿರ್ಧಾರಿ ಚೀನೀ ಜನತೆಗೆ ಭಾರತದ ಪರವಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳಿವೆ. ಲೋಕದ ಶಾಂತಿಪ್ರೇಮಿ ಜನತೆಯು ಈ ಯುದ್ಧಾಂತ್ಯದ ಉತ್ಸವವಾಚರಿಸುವದು ಸಹಜವೇ ಇದ್ದರೂ, ನಿಜವಾದ ಶಾಂತಿಯ ಉತ್ಕಟಾಭಿಲಾಷೆಯಿನ್ನೂ ಕೈಗೂಡಿಲ್ಲವೆಂಬುದನ್ನು ನಾವೆಂದಿಗೂ ಮರೆಯಬಾರದು. ತಮ್ಮ ವೈರಿಗಳನ್ನು ಗೆದ್ದ ರಾಷ್ಟ್ರಗಳಿಗೆ ನಿಜವಾದ ಶಾಂತಿ ಸ್ಥಾಪಿಸುವ ಮರ್ಜಿಯಿದೆಯೆ, ಎಂಬ ಪ್ರಶ್ನೆಯೇಳುತ್ತದೆ. ಪೋಟ್ಸ್‌ಡಾಮೇ ಅವುಗಳ ಮನೋಗತಿಗೆ ನಿದರ್ಶನವೆಂದಾದರೆ ವರ್ಸೇಲ್ಸ್‌ನ ಪುನರಾವರ್ತನೆಯಾಗುವದು ಅಸಂಭವವೇನೂ ಅಲ್ಲ. ಜಾಪಾನಿನ ಪರಾಭವವು ದಕ್ಷಿಣ ಆಸ್ಯಾದ ರಾಷ್ಟ್ರಗಳ ಭವಿಷ್ಯವನ್ನು ಮುಂಭಾಗಕ್ಕೆ ದೂಡಿದೆ. ಅವಕ್ಕೆ ಅವುಗಳ ಬಂಧನವೇ ಗತಿಯೆಂದಾದರೆ, ಈ ರಾಷ್ಟ್ರಗಳಪಾಲಿಗೆ ಇಂದಿನ ವಿಜಯವೆಂದರೆ ಯಜಮಾನರ ಬದಲಾವಣೆ ಮಾತ್ರ. ಈ ಯುದ್ಧದ ಒಳತಿರುಳಾಗಿರುವ ಸಬಲರಿಗನುಕೂಲ ಮತ್ತು ದುರ್ಬಲರು ಹಾಗೂ ದುರವಸ್ಥೆಯವರಿಗೆ ಪ್ರತಿಕೂಲವೆನ್ನುವ ಸ್ಥಿತಿಯ ಸಮೂಲ ನಿವಾರಣೆಯಾಗದೆ ಹೋದರೆ ಈ ವಿಜಯವು ಕ್ಷಣಿಕ ಶಾಂತಿಯ ಕೃತಕೋದಯ ಹೊರತು ಬೇರೇನೂ ಅಲ್ಲ. ಹಿಂದುಸ್ಥಾನವು ತನ್ನ ಸ್ವಾತಂತ್ರ್ಯ ಹೋರಾಟದ ಮತ್ತು ನಿಜವಾದ ಪ್ರಜಾಸತ್ತಾತ್ಮಕ ವಿಜಯದ ಫಲವನ್ನು ಇನ್ನೂ ಪಡೆದಿಲ್ಲವೆಂಬುದನ್ನು ಲೋಕ ಮರೆಯುವದಸಾಧ್ಯ. ಮಾನವ ಜನಾಂಗದ ಐದನೇ ಒಂದಂಶವಿರುವ ಈ ಜನತೆ ಇನ್ನೂ ಸ್ವತಂತ್ರರಾಗಿಲ್ಲ--ತಮ್ಮ ಹಕ್ಕಿನ ಸ್ಥಾನ ಪಡೆದಿಲ್ಲ. ಪ್ರಪಂಚದ ಇತರ ಮಹಾರಾಷ್ಟ್ರಗಳಂತೆ ಹಿಂದೂಸ್ಥಾನವನ್ನೂ ಸ್ವತಂತ್ರ ರಾಷ್ಟ್ರವಾಗಿ ಇರಗೊಡಿಸದಿದ್ದರೆ ಶಾಂತಿಭಂಗದ ಕಾಲ ದೂರವಿಲ್ಲ”.

ಮೇಲಿನ ಮಾತುಗಳು ರಾಷ್ಟ್ರಪತಿ ಮೌಲಾನಾ ಅಜಾದರವು; ಅಥವಾ 40 ಕೋಟಿ ಭಾರತೀಯಕಂಠಗಳ ಏಕನಾದ. ಈ ಹೇಳಿಕೆಯಲ್ಲೊಂದು ‘,’ವನ್ನಾದರೂ ಸೇರಿಸದೆ ಅಥವಾ ಕಳೆಯದೆ ಹಿಂದುಸ್ಥಾನದ ಹಾಗೂ ಏಸ್ಯಾ ಖಂಡದ ಜಾತಕವಿದು ಎಂದೊಪ್ಪಿಕೊಳ್ಳಬಹುದು. ಸತ್ಯಕ್ಕೂ ಭಾರತೀಯರ ವಿಜಯ ದಿನ ಬಂದಿಲ್ಲ. ಲೋಕವೀಗ ಸಂಪಾದಿಸಿರುವ ವಿಜಯಕ್ಕಿಂತ ಅದು ಕಷ್ಟದ ಕಾರ್ಯವೇನೂ ಅಲ್ಲ. ಆದರೂ ದೂರಹೋಗುತ್ತಿದೆ. ಜಾಪಾನಿನ ಸೋಲು ಖಂಡಿತವೆಂದಾದ ಮೇಲೂ ಆ ಕಾರ್ಯದಲ್ಲಿ ದಿನ ತೆಗೆಯುವ ಸಹನೆ ಮಿತ್ರರಾಷ್ಟ್ರಗಳಿಗಿರಲಿಲ್ಲ; ಆದ್ದರಿಂದಲೇ ಅಟಂ ಬೋಂಬು ಪ್ರಯೋಗದ ಅಮಾನುಷ ಕೃತ್ಯ ನಡೆಯಿತು. ಹಿಂದೀ ಸ್ವಾತಂತ್ರ್ಯವಂತೂ ಮಾಯಾಮೃಗದಂತೆ ಹಿಡಿಯಲು ಹೋದಷ್ಟು ಸಲವೂ ದೂರದೂರಕ್ಕೋಡಿದೆ. ಈ ವಿಳಂಬವು ಬ್ರಿಟಿಷರ ಅಥವಾ ಮಿತ್ರ ರಾಷ್ಟ್ರಗಳ ತಾಳ್ಮೆಯನ್ನು ಕೆಡಿಸಿಲ್ಲ. “ನನ್ನ ಹಿಂದೀ ಜನತೆಗೆ ಈ ಮೊದಲೇ ಕೊಟ್ಟಿರುವ ಆಶ್ವಾಸನೆಗನುಸಾರವಾಗಿ, ಹಿಂದೀ ಜನಾಭಿಪ್ರಾಯದ ನಾಯಕರ ಅಭಿಮತಗಳನ್ನು ಹೊಂದಿಸಿಕೊಂಡು ಭಾರತಕ್ಕೆ ಆದಷ್ಟು ಬೇಗನೇ ಪೂರ್ಣಸ್ವಾಯತ್ತೆಯನ್ನು ಜ್ಯಾರಿಗೆ ತರಲು ನನ್ನ ಸರಕಾರವು ಪರಮಾವಧಿ ಪ್ರಯತ್ನ ಮಾಡಲಿದೆ”—ಎಂಬ ಒಂದೇ ಒಂದು ವಾಕ್ಯವು ಸದ್ಯದ ಬ್ರಿಟಿಷ್ ಲೇಬರ್ ಸರಕಾರದ ಧೋರಣೆಯಾಗಿ ಚಕ್ರವರ್ತಿಗಳ ಬಾಯಿಯಿಂದ ಬಂದಿದೆ. ಲೋಕ ವಿಜಯದ ಈ ಅಭೂತಪೂರ್ವ ಉತ್ಸವ ಕಾಲದಲ್ಲಾದರೂ ಭಾರತದ ಪಾಲಿಗೆ ಬ್ರಿಟಿಷ್ ಸರಕಾರದ ಬಾಯಿಯಿಂದ ಬಂದುದು ಇಂತಹ ನಿಸ್ಸಾರವಾತುಗಳೇ. ಅಂದ ಮೇಲೆ-ಹಿಂದೀಯರಷ್ಟೇ ಅಲ್ಲ -ಕರಿ ಜನಾಂಗವೇ ತಮ್ಮ ಭವಿಷ್ಯದ ಕುರಿತು ಆತುರ ಪಡಬೇಕಾಗಿದೆ. ಗುಂಡಿನಾಟ ನಿಂತರೂ ಗುಲಾಮ ವ್ಯಾಪಾರ ನಿಲ್ಲುವ ಲಕ್ಷಣ ಕಾಣುವದಿಲ್ಲ. ಬದಲಿಗೆ ಯುದ್ಧದೊಂದಿಗೆ ರಾಷ್ಟ್ರದ್ವೇಷ ನಿರ್ನಾಮವಾಗಿ, ಇನ್ನು ಯಥಾಪ್ರಕಾರ ವರ್ಣದ್ವೇಷ ತಲೆಯೆತ್ತುವ ಲಕ್ಷಣವೇ ಕಾಣುತ್ತಿದೆ. ಕರಿ ಜನಾಂಗದ ಮೇಲೆ ಶ್ವೇತ ಜನಾಂಗಕ್ಕಿರುವ ತಾತ್ಸಾರ, ಅಧಿಕಾರಗಳು ಪ್ರಕಾಶಕ್ಕೆ ಬರುವ ಕಾಲ ಮುಂದಿನದು. ವಿಶಾಲ ಹೃದಯಿಯೆಂದು ಶ್ಲಾಘಿಸಲ್ಪಟ್ಟಿರುವ ಲೋರ್ಡ್ ವೇವೆಲರೇ “ಅರ್ಧ ನಾಗರಿಕ ವೈರಿ”, “ಕಾಡು ಮನುಷ್ಯನ ಆತ್ಮಕ್ಕೆ ನಾಗರಿಕತೆಯ ಪೋಷಾಕು” ಎಂದು ಜಾಪಾನರನ್ನು ಸಂಬೋಧಿಸಿದ್ದಾರೆ. ಈವಾಗ್ಬಾಣದ ಗುರಿ ಯುದ್ಧೋನ್ಮತ್ತ ಜಾಪಾನರ ದುರ್ಬುದ್ಧಿಯಲ್ಲ-ಆಸ್ಯಾದ ಜನತೆಯ ಮನಸ್ಸು, ಮರ್ಜಿಗಳೇ. ಯುದ್ಧಾನಂತರದ ಜಗತ್ತು ಇಂತಹ ಪಾಶವಿಕ ಪಕ್ಷಪಾತವನ್ನಾಧರಿಸುವದಾದರೆ, ಈ ಭಯಂಕರ ಯುದ್ಧದಲ್ಲಿ ಜನಸಾಮಾನ್ಯರು ಚಲ್ಲಿದ ರಕ್ತವು ಮಸಿಯಂತಾಯಿತೆಂದು ಮರುಗದೆ ನಿರ್ವಾಹವಿಲ್ಲ! ಆರ್ಥಿಕ ಸಾಮಾಜಿಕ ಸಮಾನತೆಯ ವಿನಃ ಲೋಕಶಾಂತಿಯಿಲ್ಲ.

ವಿಶೇಷ : : : ವಿಚಿತ್ರ

ಜಾಪಾನರ ರಾಜಭಕ್ತಿ

ಜಾಪಾನ್ ಚಕ್ರವರ್ತಿಗಳು ತಮ್ಮ ಸೋಲನ್ನೊಪ್ಪಿ ಪ್ರಜೆಗಳಿಗೆ ಆಕಾಶವಾಣಿ ಭಾಷಣವಿತ್ತುದನ್ನು ಕೇಳಿದ ಪ್ರತಿಯೊಬ್ಬ ಜಾಪಾನನೂ ಬಿಕ್ಕಿಬಿಕ್ಕಿ ಅತ್ತನಂತೆ, ದೊಡ್ಡ ಜನರ ಗುಂಪು ಕಣ್ಣೀರಿಡುತ್ತಾ ಅರಮನೆಯ ಮುಂದೆ ನೀಟಾನೀಟ ಅಡ್ಡ ಬಿದ್ದಿತು. ಶರಣಾದ ಮೇಲೆ ಚಕ್ರವರ್ತಿಯ ಸಮಕ್ಷಮ ಸೇರಿದ ಜಾಪಾನ್ ಮಂತ್ರಿಮಂಡಲದ ಪ್ರತಿಯೊಬ್ಬ ಸದಸ್ಯನೂ ಮಗುವಿನಂತೆ ಅಳುತ್ತಿದ್ದ. ‘ನಾವು ಕರ್ತವ್ಯ ಬಾಹಿರರಾದರೂ ಚಕ್ರವರ್ತಿಗಳು ನಮ್ಮನ್ನು ತಿರಸ್ಕರಿಸಲಿಲ್ಲ. ನಾವು ಅವರಿದಿರು ಹೃದಯ ಕರಗುವ ವರೆಗೂ ಅಳಬೇಕು; ಕ್ಷಮೆ ಬೇಡಬೇಕು’ ಎಂದು ಪ್ರಧಾನ ಮಂತ್ರಿ ಸುಝುಕಿಯ ಮಾತು. ಈ ವಾರ್ತೆ ಕೇಳಿದೊಡನೆ ವಿದೇಶಗಳಲ್ಲಿದ್ದ ಜಾಪಾನೀ ಕೈದಿಗಳೂ ಇತರರೂ ತಾಯಿಸತ್ತವರಂತೆ ಅತ್ತಿದ್ದಾರೆ.

ಕೇವಲ ಬಡಾಯಿ?

ಜಾಪಾನ್ ಮೂಲ ನೆಲವೆಂದರೆ ಜರ್ಮನಿಗಿಂತ ಹೆಚ್ಚಾಗಿ ಮಿತ್ರರು ಹೆದರುತಿದ್ದರು. ಅಟಂ ಬೋಂಬು ಮತ್ತು ರಶ್ಯದ ಆಕ್ರಮಣವಲ್ಲವಾದರೆ ಅಮೆರಿಕಾಂಗ್ಲರು ಜಾಪಾನಾಕ್ರಮಣವನ್ನು ಥಕ್ಕನೆ ಆರಂಭಿಸುವ ಸಂಭವವಿರಲಿಲ್ಲ. ಟೋಕಿಯೋವಿನ ಸುತ್ತ ತಮ್ಮ ಹಡಗಗಳಿದ್ದುದು 163 ಮಾತ್ರವೆಂದು ಎಡ್ಮಿರಲ್ ನಿಮಿಟ್ಸ್ ಬಹಿರಂಗಪಡಿಸಿದ್ದಾರೆ ಇನ್ನೂ ಆಶ್ಚರ್ಯವೆಂದರೆ ಬಹಳವಾಗಿ ವರ್ಣಿಸಲ್ಪಟ್ಟಿದ್ದ ಅಮೇರಿಕನ್ 3 ಮತ್ತು 5ನೇ ನೌಕಾಪಡೆಗಳೆಂಬವು ಇರಲೇ ಇಲ್ಲವಂತೆ! ಜಾಪಾನರನ್ನು ವಂಚಿಸಲಿಕ್ಕಾಗಿಯೇ ಆ ಬಡಾಯಿ ಬೋಲುಗಳನ್ನು ಎಸೆಯುತಿದ್ದರಂತೆ. ರಶ್ಯದ ಭೀತಿಯೊಂದಲ್ಲವಾದರೆ ತಮ್ಮಲ್ಲಿದ್ದುದು ಎರಡೇ ಆಟಂ ಬೋಂಬುಗಳೆಂದು ಈಗಲೇ ಹೇಳಿಬಿಡುತಿದ್ದರೇನೋ!

ಸುಭಾಷರ ಭವಿಷ್ಯವೇನು?

ಯುದ್ಧಾಪರಾಧಿಗಳ ವಿಚಾರಣೆಗಾಗಿ ನೇಮಿಸಲ್ಪಟ್ಟಿರುವ ಅಂತರ್‌ರಾಷ್ಟ್ರೀಯ ಸಮಿತಿಯ ಮುಂದೆ ಜಾಪಾನೀ ಪಕ್ಷಪಾತಿಗಳನ್ನು ತರಲಾಗುವದಿಲ್ಲ; ಸಂಬಂಧಪಟ್ಟ ರಾಷ್ಟ್ರಗಳಿಗೇ ಅವರನ್ನೊಪ್ಪಿಸಲಾಗುವುದು. ಸುಭಾಸ್‌ಚಂದ್ರ ಭೋಸರು ಸೆರೆಸಿಕ್ಕಿದರೆ ಅವರು ಬ್ರಿಟಿಷ್ ಸರಕಾರದ ಕೈದಿಯಾಗುವರು. ಬೋಸರ ಮತ್ತು ಬರ್ಮದ ಡಾಕ್ಟರ್ ಬಾಮಾರ ಭವಿಷ್ಯದ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬರಲಿದೆ. ಬ್ರಿಟಿಷ್ ಸರಕಾರವು ಈ ಸಂಬಂಧದ ಪೂರ್ಣಾಧಿಕಾರವನ್ನು ಹಿಂದೀ ಸರಕಾರಕ್ಕೆ ಬಿಟ್ಟುಬಿಡುವದೆಂದು ಭಾರತ ಕಚೇರಿಯಿಂದ ತಿಳಿದುಬಂದಿದೆ. ಅಂತೆಯೇ ಬೋಸರ ಸೈನಿಕರಾಗಿ ಅಲ್ಲಿದ್ದ ಸುಮಾರು 20 ಸಾವಿರ ಹಿಂದೀಯರ ಭವಿಷ್ಯವೇನೆಂಬ ಆತುರವೆದ್ದಿದೆ. ತಾನು ಯುದ್ಧ ಸಾರಿದ ಬ್ರಿಟಿಷ್ ಅಥವಾ ಅಮೇರಿಕನ್ ಸೈನಿಕರಿಗೆ ಶರಣಾಗದೆ ರಶ್ಯಕ್ಕೆ ಸೆರೆಸಿಕ್ಕುವ ಬಯಕೆಯನ್ನು ಸುಭಾಶ್ಚಂದ್ರರು ಪ್ರದರ್ಶಿದ್ದಾರೆಂಬುದು ಬೇರೆಬೇರೆ ವಾರ್ತೆಗಳು ಬಂದಿವೆ.

ಈ ಅಧಿಕ ಪ್ರಸಂಗಗಳು

ಜಾಪಾನ್ ರಾಜಧಾನಿ ಟೋಕಿಯೋದಲ್ಲಿ ‘ವಿಜಯ ಪೆರೇಡ್’ ನಡೆಸುವ ಯೋಚನೆಯಲ್ಲಿ ಜನರಲ್ ಮೇಕರ್ಥರರಿದ್ದಾರೆಂದೂ ಅದಕ್ಕಾಗಿ ಇತರ ದಳಗಳಂತೆ ಬರ್ಮದಲ್ಲಿರುವ ಬ್ರಿಟಿಷ್ ಸೇನೆಗಳಿಗೂ ಆಮಂತ್ರಣ ಬಂದಿದೆಯೆಂದೂ ವಾರ್ತೆಯಿದೆ. ಆಸ್ಯಾದಲ್ಲಿರುವ ತಮ್ಮ ಯುದ್ಧ ಕೈದಿ ಪಾಳಯಗಳ ಮೇಲೆ ಮಿತ್ರರ ಗಾಳಿಕೊಡೆಯವರು ಯಾವುದೊಂದು ಪೂರ್ವ ಸೂಚನೆ ಅಥವಾ ವ್ಯವಸ್ಥೆಯಿಲ್ಲದೆ ಇಳಿಯುತಿದ್ದಾರೆಂದು ಜಾಪಾನ್ ಮುಖ್ಯ ಕಾರ್ಯಾಲಯದಿಂದ ಜನರಲ್ ಮೇಕ್ ಆರ್ಥರರಿಗೆ ದೂರು ಬಂದಿದೆ. ಇಂತಹ ಅತಿರೇಕಗಳನ್ನು ನಿಲ್ಲಿಸಬೇಕೆಂದು ಜಾಪಾನರು ವಿಜ್ಞಾಪಿಸಿಕೊಂಡಿದ್ದಾರೆ. ಮುಕ್ಡೆನ್, ಕೀಜೋ ಮತ್ತು ಹೋಂಗ್‌ಕೋಂಗ್‌ಗಳಲ್ಲಿಳಿದ ಈ ಗಾಳಿ ಕೊಡೆಯವರನ್ನು ಅವರವರ ನಿಲ್ದಾಣಕ್ಕೆ ಹಿಂದಿರುಗಿಸಿದೆವೆಂದೂ ಜಾಪಾನರಂದಿದ್ದಾರೆ. ಜಾಪಾನ್ ಚಕ್ರವರ್ತಿಗಳು ಎಲ್ಲರೂ ಶಿಸ್ತಿನಿಂದ ವರ್ತಿಸಬೇಕೆಂದು ತನ್ನ ಸೇನೆಯನ್ನು ವಿಜ್ಞಾಪಿಸಿಕೊಂಡಿದ್ದಾರಾದರೂ, ಜಾಪಾನಿಗೆ ಹೋಗುವ ಸೈನಿಕರು ಹೋರಾಟಕ್ಕೆ ತಯಾರಿರಬೇಕೆಂದು ಅಮೇರಿಕನ್ ಸೇನಾಧಿಗಳ ಎಚ್ಚರಿಕೆಯಿದೆ.

ನವಯುಗ.

ನೋಟೀಸು

ನಾವು ವರ್ಷಕ್ಕೊಮ್ಮೆ ರಜೆ ಪಡೆವ ಪದ್ಧತಿಯಂತೆ ಬರುವ ವಾರ ಅಂದರೆ ತಾ. 30-8-45ನೇ ಗುರುವಾರದ ಸಂಚಿಕೆಯನ್ನು ನಿಲ್ಲಿಸಿರುತ್ತೇವೆ.

ಮೆನೇಜರ್.

ಜಪಾನಿನ ಶರಣುವ್ಯವಸ್ಥೆ ಸಾವಧಾನಗೊಂಡಿದೆ!

ಚೀನದಲ್ಲಿ ಅಂತರ್ಯುದ್ಧ ಮತ್ತು ಅಮೇರಿಕಾ-ರಶ್ಯಾ ತಿಕ್ಕಾಟ?

ಜಾಪಾನ್ ಶರಣಾದ ನಂತರ

ತಾ. 15ರಲ್ಲಿ ಜಾಪಾನ್ ಜನತೆ ಮತ್ತು ಏಸ್ಯಾವನ್ನು ಉದ್ದೇಶಿಸಿ ಜಾಪಾನ್ ಚಕ್ರವರ್ತಿಗಳು ಹೃದ್ರಾವಕ ಭಾಷಣವಿತ್ತರು. ಪೂರ್ವ ಏಸ್ಯಾದ ಬಿಡುಗಡೆಯ ತಮ್ಮ ಪ್ರಯತ್ನ ವಿಫಲವಾದುದಕ್ಕಾಗಿ ಸಂತಾಪ ಪ್ರದರ್ಶಿಸಿ, ಅಟಂ ಬೋಂಬಿನ ಹಾವಳಿಯಿದಿರು ಯುದ್ಧ ಮುಂದೊತ್ತುವದ ಸಾಧ್ಯವೆಂಬುದನ್ನು ವಿವರಿಸಿ, ಶಿಸ್ತಿನಿಂದ ಒಗ್ಗಟ್ಟಿನಿಂದ ಭವಿಷ್ಯ ಸಾಧಿಸಬೇಕೆಂದರು. ಪ್ರಧಾನಿ ಸುಝುಕಿಯವರೂ ಜಾಪಾನಿನ ಸೋಲಿನ ಕಾರಣವನ್ನು ವಿವರಿಸಿ ದುರಂತವನ್ನು ಸಹಿಸಿಕೊಳ್ಳುವಂತೆ ಜನತೆಯನ್ನು ವಿಜ್ಞಾಪಿಸಿದರು. ಜಾಪಾನ್ ಯುದ್ಧ ಮಂತ್ರಿಯೂ ಕೆಲವು ಸೇನಾನಿಗಳೂ ಆತ್ಮಹತ್ಯೆ ಮಾಡಿಕೊಂಡರು. ಹಲವು ಜಾಪ್ ಮುತ್ಸದ್ದಿಗಳು ಕಾಣೆಯಾಗಿದ್ದಾರೆ. ಯುದ್ಧ ಮಂತ್ರಿ ಮಂಡಲ ರಾಜೀನಾಮೆ ಕೊಟ್ಟು ರಾಣಿಯ ಚಿಕ್ಕಪ್ಪನ ಪ್ರಧಾನಿತ್ವದಲ್ಲಿ ಹೊಸ ಸರಕಾರ ರಚನೆಯಾಯಿತು. ನೌಕಾ ಮಂತ್ರಿಯೊಬ್ಬನ ಹೊರತು ಮಿಕ್ಕ ಸೇನಾಧಿಕಾರಿಗಳು ಆ ಮಂಡಲದಲ್ಲಿಲ್ಲ. ವಿವಿಧರಣಾರಂಗಗಳಲ್ಲಿರುವ ಜಾಪಾನೀ ಸೇನೆಗಳಿಗೆ ಶರಣಾಗುವ ಸೂಚನೆಗಳು ಹೋಗಿವೆ

ನಿಧಾನ ವ್ಯವಸ್ಥೆ

ಸಂಧಾನ ಕರಾರಿಗೆ ಇನ್ನೂ ಸಹಿಯಾಗಿಲ್ಲವಾದ್ದರಿಂದ ಬರ್ಮ, ಮಂಚೂರಿಯಾ, ಚೀನಾ ಮತ್ತು ಇತರ ಕಡೆಗಳ ಜಾಪಾನೀ ಯೋಧರು ಹೋರಾಡುತ್ತಾ ಸರದಿಪ್ರಕಾರ ಶರಣಾಗುತಿದ್ದಾರೆ. ಸುಮಾರು 15 ಮಿಲಿಯ ಸೈನಿಕರನ್ನು ನಿಶ್ಶಸ್ತ್ರಗೊಳಿಸುವ ಅದ್ಭುತ ಕಾರ್ಯ ಮಿತ್ರರ ಮುಂದಿದೆ. ಜಾಪಾನ್ ಚಕ್ರವರ್ತಿ ಮತ್ತು ಸರಕಾರದ ಮೇಲಧಿಕಾರಿಯಾಗಿ ಮಿತ್ರರಿಂದ ನೇಮಕಗೊಂಡ ಜನರಲ್ ಮೇಕರ್ಥರರು ಒಂದೆರಡುದಿನ ಕಾದರೂ ಸಂಧಾನ ಕರಾರಿಗಾಗಿ ಜಾಪಾನ್ ಪ್ರತಿನಿಧಿಗಳು ಬಾರದ್ದರಿಂದ ಕೊನೆಗೆ 'ಆದಿತ್ಯವಾರದೊಳಗೆ ಬಾರದಿದ್ದರೆ ಸಹಿಸಲಾರೆ' ಎಂದು ಎಚ್ಚರಿಸಬೇಕಾಯಿತು.

ಮನಿಲಾ ಸಮ್ಮೇಲನ

ಆದಿತ್ಯವಾರ ಜಾಪಾನಿನ 16ಮಂದಿ ರಾಯಭಾರಿಗಳು ಮನಿಲಾದಲ್ಲಿ ಶರಣು ಕರಾರು ತಯಾರಿಗೆ ಹಾಜರಾದರು. ತಮ್ಮನ್ನು ಪಿಸ್ತೂಲು ಸಮೇತ ಒಳಗೆ ಬರಲು ಬಿಡಬೇಕೆಂಬ ಅವರ ಬೇಡಿಕೆಯನ್ನು ತಿರಸ್ಕರಿಸಲಾಯಿತು. ಆ ಮೇಲೆ ತಮ್ಮ ಭೂಷಣಗಳಾದ ಆಯುಧ ಮತ್ತು ಪದಕಗಳ ಸಮೇತ ಅವರು ಒಳಹೊಕ್ಕುಮೇಕರ್ಥರರ ಪ್ರತಿನಿಧಿಗಳ ಇದಿರು ತಮ್ಮ ಸೂಚೀಪತ್ರಗಳನ್ನು ಒಪ್ಪಿಸಿದರು. ಅಲ್ಲಿ ಐದೂವರೆ ಘಂಟೆ ಚರ್ಚೆ ನಡೆದು ಶರಣು ಸಂಧಾನದ ಪ್ರಥಮಾಂಕ ಮುಗಿದು ಜಾಪಾನ್ ರಾಯಭಾರಿಗಳು ಕೂಡಲೇ ಟೋಕಿಯೋವಿಗೆ ಮರಳಿದ್ದಾರೆ. ಶರಣು ಕರಾರಿಗೆ ಸಹಿಯಾಗಿಲ್ಲ. ಮುಂದಿನ ವಿವರವೇನೆಂಬುದೂ ಪ್ರಕಟವಾಗಿಲ್ಲ. ಅಮೇರಿಕನ್ ಸೇನೆಗಳು ಇನ್ನು ಕೆಲವೇ ದಿನಗಳಲ್ಲಿ ಟೋಕಿಯೋವನ್ನು ಆಕ್ರಮಿಸುವವೆಂದೂ ಅಲ್ಲಿಯೇ ಶರಣು ಕರಾರಿಗೆ ಸಹಿಯಾಗುವದೆಂದೂ ಆಸ್ಟ್ರೇಲಿಯದ ರಕ್ಷಣಾ ಮಂತ್ರಿಯಂದಿದ್ದಾನೆ. ಸಿಂಗಾಪುರ, ಚೀನಾ, ಮಂಚೂರಿಯ ಮೊದಲಾದ ಕಡೆಗಳಲ್ಲೆಲ್ಲ ಬೇರೆ ಬೇರೆ ಶರಣು ಸಮ್ಮೇಲನಗಳು ನಡೆಯಲಿವೆ.

ಚೀನದ ಅಂತಃ ಕಲಹ

ಜಾಪಾನರ ಶರಣಾಗತಿಯಿಂದಾಗಿ ಚೀನದ ಚಿಯಾಂಗ್-ಕಮ್ಯೂನಿಸ್ಟ್ ವಿವಾದವು ಅಂತರ್ಯುದ್ಧವಾಗಿ ಮಾರ್ಪಡುವ ಲಕ್ಷಣ ಕಾಣುತ್ತದೆ. ಯುದ್ಧ ಮುಗಿದೊಡನೆಯೇ ಕಮ್ಯುನಿಸ್ಟ್ ಸೇನೆಗಳಿದ್ದ ಕಡೆಯಲ್ಲಿ ಜಾಪಾನೀ ಸೇನೆಗಳು ಮುಂದಾಗಿ ಅವರಿಗೆ ಶರಣಾದುವು. 'ನನ್ನ ಅಪ್ಪಣೆ ವಿನಹ ಅವರ ಶರಣಾಗತಿಯನ್ನು ಸ್ವೀಕರಿಸುವ ಅಧಿಕಾರ ನಿಮಗಿಲ್ಲ' ಎಂದು ಮಾರ್ಶಲ್ ಚಿಯಾಂಗ್ ಕೈಶೇಕರು ಕಮ್ಯೂನಿಸ್ಟ್ ಸೇನಾನಿಗಳನ್ನು ಆಜ್ಞಾಪಿಸಿದರು. ಇದನ್ನು ಕಮ್ಯೂನಿಸ್ಟರು ತಿರಸ್ಕರಿಸಿದ್ದಾರಲ್ಲದೆ ತಮ್ಮನ್ನಿದಿರಿಸಿದ್ದ ಎಲ್ಲಾ ಜಾಪಾನ್ ಸೇನೆಗಳನ್ನೂ ತಾವೇ ವಶಪಡಿಸಿಕೊಳ್ಳಲಾರಂಭಿಸಿದ್ದಾರೆ. ಮೇಲಾಗಿ ಚೀನದ ಮೂಲರಾಜಧಾನಿ ನಾನ್ಕಿಂಗನ್ನಾಕ್ರಮಿಸಿಕೊಳ್ಳಲು ಕಮ್ಯೂನಿಸ್ಟ್ ಸೇನೆ ಮುಂದೊತ್ತಿ ಯಂಗ್ಟ್ಸೀ ಹೊಳೆ ಬಂದರವು ಹುಪಿನ ಮೇಲೆ ಬಿದ್ದಿದೆ. 8 ವರುಷ ಜಾಪಾನಿನೊಡನೆ ಹೋರಾಡಿದ ಚೀನದಲ್ಲಿ ಇನ್ನು ಭಯಂಕರ ಅಂತರ್ಯುದ್ಧ ವೇಳುವ ಲಕ್ಷಣ ಕಾಣುತ್ತಿದೆ.

ರಶ್ಯಾ—ಅಮೇರಿಕ ತಿಕ್ಕಾಟ

ಚೀನದ ವಿದೇಶ ಮಂತ್ರಿ ಡಾ। ಸೂಂಗರು ರಶ್ಯದೊಡನೊಂದು ಒಪ್ಪಂದ ಮಾಡಿಕೊಂಡಿದ್ದಾರೆ. ಅಂತೆಯೇ ಅವರು ಅಮೆರಿಕಕ್ಕೂ ಹೋಗಿ ಅಧ್ಯಕ್ಷ ಟ್ರುಮೇನರೊಂದಿಗೆ ಮಾತಾಡಿದ್ದಾರೆ.ರಶ್ಯಕ್ಕೆ ಚೀನದ ವ್ಯವಸ್ಥೆಯಲ್ಲಿ ಎಲ್ಲರಿಗಿಂತ ಹೆಚ್ಚಿನ ಸಂಬಂಧವಿದೆಯಾದ್ದರಿಂದ ಅಲ್ಲಿಯ್ನ ಒಳವ್ಯವಸ್ಥೆಯಲ್ಲಿ ಕೈಯ್ಯಾಡಿಸಬಾರದೆಂದು ಅಮೇರಿಕ ಸಮೇತ ಎಲ್ಲರನ್ನೂ ರಶ್ಯವೆಚ್ಚರಿಸಿದೆ ಎಂಬ ವಾರ್ತೆಯಿದೆ. ಚೀನದಲ್ಲಿ ಕಮ್ಯೂನಿಸ್ಟರನ್ನೊಳಗೊಂಡ ಪ್ರಬಲ ಪ್ರಜಾಸತ್ತಾ ಸರಕಾರ ಸ್ಥಾಪಿಸುವದೇ ರಶ್ಯದ ಧ್ಯೇಯವೆಂದು ಸಾರಲಾಗಿದೆ. ಚೀನದ ಒಗ್ಗಟ್ಟು ಸಾಧಿಸುವ ನೆವದಿಂದ ಅಮೇರಿಕವೂ ಅಲ್ಲಿ ಕೈ ಹಾಕಲು ಮುಂದಾಗಿದೆ. ಜಾಪಾನರು ಶರಣಾದರೂ ಗಣಿಸದೆ ಕೆಂಪು ಸೇನೆಯು ಚೀನದಲ್ಲಿ ಮುಂದೊತ್ತಿ ಕಮ್ಯೂನಿಸ್ಟರನ್ನು ಕೂಡಿಕೊಳ್ಳುವ ಸಂಭವ ಕಾಣುತ್ತಿದೆ. ಅಂತೂ ಚೀನಾ ರಂಗದಲ್ಲಿ ಎಂತಹ ಪ್ರಳಯ ನರ್ತನವಾಗುವದೋ ಹೇಳಬರುವದಿಲ್ಲ.

ಪಾರ್ಲಿಮೆಂಟಿನ ಆರಂಭ

ಹೊಸ ಪಾರ್ಲಿಮೆಂಟಿನ ಅಧಿವೇಶನವು ಆಗೋಸ್ತು 15ರಲ್ಲಿ ಆರಂಭವಾಗಿದೆ. ಪದ್ಧತಿಯಂತೆ ಅದನ್ನಾರಂಭಿಸಿದ ಚಕ್ರವರ್ತಿಗಳು ಜಾಪಾನ್ ಎದುರು [illegible] ಸಹಕಾರಿಗಳನ್ನು ಅಭಿನಂದಿಸಿದರು. ಹೊಸ ಸರಕಾರದ ಘೋಷಣೆಯಾಗಿ 'ಬೇಂಕ್ ಓಫ್ ಇಂಗ್ಲಾಂಡ'ನ್ನೂ ಕಲ್ಲಿದ್ದಲು ಉದ್ಯಮವನ್ನೂ ರಾಷ್ಟ್ರೀಕರಣ ಮಾಡುವದನ್ನು ತಿಳಿಸಿದರು. ವಿದೇಶ ಸಂಬಂಧ ಮತ್ತು ಸರ್ವವಿಧದ ಪುನರ್ರಚನೆಗಳ ಧ್ಯೇಯಗಳನ್ನೂ ವಿವರಿಸಿದರು. ಒಂದೊಂದೇ ವಾಕ್ಯದಲ್ಲಿ ಮುಗಿಸಿದ.ದೆಂದರೆ ಭಾರತ ಮತ್ತು ಅಟಂ ಬೋಂಬನ್ನು! "ವಿಜ್ಞಾನವು ಈಗ ತಾನೇ ಮಾನವನ ಕೈಗೆ ಕೊಟ್ಟ ಈ ಭಯಂಕರ ಆಯುಧವು, ಜಗತ್ತಿನ ರಾಷ್ಟ್ರಗಳು ಯುದ್ಧ ಹೇತುವನ್ನು ನಿರ್ಮೂಲಿಸಬೇಕು ಅಥವಾ ಪರಸ್ಪರ ಧ್ವಂಸಕೃತ್ಯದಿಂದ ನಾಶವಾಗಬೇಕು ಎಂಬ ಪಾಠವನ್ನು ಮುಂದಿಟ್ಟುಮಾಡಿದೆ" ಎಂದರು.

ಆಟ್ಲಿ-ಚರ್ಚಿಲ್

ಪ್ರಧಾನಿ ಆಟ್ಲೀಯವರು ತನ್ನ ಸರಕಾರೀ ಘೋಷಣೆಯ ಸೂತ್ರಗಳನ್ನಷ್ಟೇ ವಿವರಿಸಿ ಅಟಂ ಬೋಂಬಿನ ಪ್ರಯೋಗವನ್ನು ನಿಯಂತ್ರಿಸಲು ಖಂಡಿತ ವ್ಯವಸ್ಥೆಮಾಡಲಾಗುವದೆಂದರು ಮಿ. ಚರ್ಚಿಲ್ಲರು ತನ್ನ ಭಾಷಣದಲ್ಲಿ ಅಟಂ ಬೋಂಬಿನ ಪ್ರಯೋಗವನ್ನು ಕಠೋರವಾಗಿ ಸಮರ್ಥಿಸಿದರು. ಅದಲ್ಲವಾದರೆ ಒಂದು ಮಿಲಿಯ ಅಮೇರಿಕನ್ ಮತ್ತು ಕಾಲು ಮಿಲಿಯ ಬ್ರಿಟಿಷ ಸೈನಿಕರು ಜಾಪಾನರ ಕೈಯಲ್ಲಿ ಸಾಯಬೇಕಾಗುತ್ತಿತ್ತೆಂದು ಅವರ ವಾದ ಪೋಲೆಂಡಿಗೆ ಜರ್ಮನಿಯ ಗಣ್ಯ ಭಾಗವನ್ನು ಸೇರಿಸಿದುದನ್ನೂ, ರಶ್ಯದ ಹಿಂಬಾಲಕ ರಾಷ್ಟ್ರಗಳಾದ ಪೋಲೆಂಡ್, ಜೆಕೊಸ್ಲೋವೇಕಿಯಾ, ಯುಗೊಸ್ಲೇವಿಯಾಗಳ ಆಳ್ವಿಕೆಯನ್ನೂ ಖಂಡಿಸಿ, ಕಮ್ಯೂನಿಸ್ಟರ ಪ್ರಾಬಲ್ಯ ಹೆಚ್ಚುತ್ತಿರುವ ಕುರಿತು ಎಚ್ಚರಿಸಿದರು. ಸ್ಪೈಯಿನಿನ ಒಳಾಡಳಿತೆಯಲ್ಲಿ ಒತ್ತಾಯ ಹಾಕುವದಕ್ಕೂ ಅವರ ಖಂಡನೆಯಿದ್ದಿತು.

ವಿದ್ಯಾರ್ಥಿ ಸಂಘದ ಸಭೆ— ಮಂಗಳೂರಿನ ವಿದ್ಯಾರ್ಥಿ ಸಂಘದ ಸಭೆಯೊಂದು ತಾ. 10ರಂದು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಭವನದಲ್ಲಿ ಜರಗಿತು. ಮಿ ವಿ. ಜಿ. ಜೋಸೆಫ್‌ರವರು ಹೊಸ ವರ್ಷಕ್ಕೆ ಅಧ್ಯಕ್ಷರಾಗಿಯೂ, ಶ್ರೀ ಬಿ. ಭುಜಂಗರಾಯರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು ಮತ್ತು 16 ಮಂದಿ ಕಾರ್ಯಕಾರೀ ಸಮಿತಿಯ ಸದಸ್ಯರ ಆಯ್ಕೆಯೂ ಆಯಿತು. ಸಭಾಂತ್ಯದಲ್ಲಿ 1942ರಲ್ಲಿ ದೇಶಕ್ಕಾಗಿ ತ್ಯಾಗ ಮಾಡಿದ ಹುತಾತ್ಮರನ್ನು ಅಭಿನಂದಿಸುವ ಠರಾವು ಮಂಜೂರಾಯಿತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. P. 42/1945

ದೇವಕ್ಕಿ. ಅನೆಕಲ್ಲು ಈಶ್ವರ ಭಟ್ರ ವಿಧವೆ. ಕಪೋಪಾಡಿ ಗ್ರಾಮ. ಪುತ್ತೂರು ತಾಲ್ಲೂಕ.

ಅರ್ಜಿದಾರಳು.

ಮತ್ತು

ದ್ರೌಪದಿ. ನಾರಾಯಣ ಭಟ್ರ ವಿಧವೆ. ಕಪೋಪಾಡಿ ಗ್ರಾಮದ ಅನೆಕಲ್ಲು. ಎದುರಿಯಳು.

ಅರ್ಜಿದಾರಳ ಗಂಡ ಮೃತ ಅನೆಕಲ್ಲು ಈಶ್ವರ ಭಟ್ರು ವಸಂತ ಇನ್ಸೂರೆನ್ಸ್ ಕಂಪೆನಿಯಲ್ಲಿ ರೂ 1000/ಕ್ಕೆ ಇನ್ಸೂರು ಮಾಡಿದ ಬಾಬ್ತು ಸದ್ರಿ ಇನ್ಸೂರೆನ್ಸ್ ಕಂಪೆನಿಯಿಂದ ವಸೂಲು ಆಗತಕ್ಕ ರೂ1000|ವನ್ನು ವಸೂಲು ಮಾಡುವದೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಸ್ಸನ್ ಸರ್ಟಿಫಿಕೇಟು ಅರ್ಜಿದಾರಳಿಗೆ ಕೊಡಿಸಬೇಕಾಗಿ ವಗೈರೆ ಕಾಣಿಸಿ ಅರ್ಜಿದಾರಳು ದಾಖಲು ಮಾಡಿದ ಮೇಲಿನ ಅರ್ಜಿಯು ತನಿಖೆ ಬಗ್ಗೆ ತಾ 30 8 45ಕ್ಕೆ ಇಟ್ಟಿರುವುದರಿಂದ ಇದಕ್ಕೆ ಆಕ್ಷೇಪವಿದ್ದವರು ಸದ್ರಿ ದಿವಸ ಕೋರ್ಟು ಮುಂದೆ ದಾಖಲು ಮಾಡಿಕೊಳ್ಳತಕ್ಕದ್ದು. ಇಂತ ಈ ಮೂಲಕ ತಿಳಿಸಲಾಗಿಯದೆ.

ಪಿ ಕೃಷ್ಣ ಭಟ್ರು
ಅರ್ಜಿದಾರಳ ಕಡೆ ವಕೀಲ್

ಪುತ್ತೂರು
8-8 45



Approved firm by the Govt. of Mysore' Certified by the Agent of the Govt. of India in Ceylon.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು **22—8—1945**ರಿಂದ

ತಲವಾರಿನವರ

ರಮೋಲಾ, ಗ್ಯಾನಿ, ರಾಮದುಲಾರಿ,

ನಟಿಸಿರುವ

ಕಾಮೋತಿ

ನಂತರ—

ಯೂನಿವರ್ಸಲ್‌ನವರ

ಮೇನ್, ಮೇಡ್ ಮೋನ್ಸ್ಟರ್.

ದಕ್ಷಿಣ ಕನ್ನಡ.

ಮಂಗಳೂರು.

ಶ್ರೀ ನರೇಂದ್ರ ಶೆಟ್ಟರ ಶೋಚನೀಯ ನಿಧನ—ಶ್ರೀ. ಎ. ಬಿ. ಶೆಟ್ಟರ ತೃತೀಯ ಪುತ್ರ ಶ್ರೀ ನರೇಂದ್ರ, ಶೆಟ್ಟರು ಸ್ವಲ್ಪ ಸಮಯ ಅಸ್ವಾಸ್ಥ್ಯದಿಂದಿದ್ದು ತಾ 16ನೆಯ ರಾತ್ರಿ ದಿವಂಗತರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ನಡುಹರೆಯದವರಿದ್ದು ಸೀನಿಯರ್ ಬಿ. ಎ. ತರಗತಿಯಲ್ಲಿ ಓದುತ್ತಿದ್ದರು. ಸೌಮ್ಯ, ಸರಳ ಸ್ವಭಾವ, ಕಲಿಯುವಿಕೆಯಲ್ಲಿ ಚುರುಕುತನ ಇತ್ಯಾದಿ ಸದ್ಗುಣಗಳಿಂದ ಕೂಡಿದ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅಪಾರ ದುಃಖಿತರಾದ ಅವರ ಕುಟುಂಬದವರೊಡನೆ ಸಹಸಂತಾಪವನ್ನು ಸೂಚಿಸುತ್ತೇವೆ.

ಹೊಸ ಸಂಸ್ಥೆ—ಶ್ರೀ ಮಂಗಳೂರು ಜಾರಪ್ಪನವರ ನೇತೃತ್ವದಲ್ಲಿ ಶ್ರೀ ನಾರಾಯಣ ಗುರು ಟೈಲ್, ಬ್ರಿಕ್ ಎಂಡ್ ಪೋಟರೀಸ್ ಫೆಕ್ಟರಿ ಲಿಮಿಟೆಡ್ ಎಂಬ ಹಂಚಿನ ಕಾರ್ಖಾನೆಯೊಂದು ರಿಜಿಸ್ಟರ್ ಆಗಲಿದೆಯೆಂದು ಕೇಳುತ್ತೇವೆ.

ಬೇಂಕ್ ಆಫ್ ಮಂಗಳೂರಿನ—ಶಾಖೆಯೊಂದು ತಾ. 12ರಲ್ಲಿ ಬದಿಯಡ್ಕದಲ್ಲಿ ಕಾಸರಗೋಡಿನ ಮುನ್ಸಿಫ್ ಮಿ।ಎಸ್. ಮಹತೋತ್ ಇವರ ಹಸ್ತದಿಂದ ತೆರೆಯಲ್ಪಟ್ಟಿರುವುದು.

ಸಿಡುಬು—ಸುಮಾರು ಎಂಟು ತಿಂಗಳ ಹಿಂದೆ ನಗರದಲ್ಲಿ ಕಾಣಿಸಿಕೊಂಡ ಸಿಡುಬು ಇನ್ನೂ ಅಡಗಿದಂತೆ ತೋರುವುದಿಲ್ಲ. ಮಳೆಗಾಲ ಆರಂಭವಾದೊಡನೆಯೆ ಅದು ಮಾಯವಾಗಬಹುದೆಂದಿದ್ದ ಹಲವರ ನಿರೀಕ್ಷೆ ಹುಸಿಯಾಯಿತು. ಪ್ರತಿ ವಾರವೂ ಸಿಡುಬಿಗಳಿದ ಹಾಗೂ ಮೈಲಿಗೆಯಿಂದ ಮರಣಪಟ್ಟವರ ಸಂಖ್ಯೆಗಳು ಪ್ರಕಟವಾಗುತ್ತಲೇ ಇವೆ. ನಗರದ ಆರೋಗ್ಯಾಧಿಕಾರಿಗಳು ಹೆಚ್ಚಿನ ಜಾಗ್ರತೆ ವಹಿಸಿಕೊಳ್ಳಬೇಕೆಂದೊಂದು ವಾರ್ತೆ.

ಅಖಿಲ ಭಾರತ ಜೇನು ವ್ಯವಸಾಯ—ಭಾರತ ಸಂಘದ ಮದ್ರಾಸ್ ಪ್ರಾಂತದ ಕಾರ್ಯದರ್ಶಿಗಳಾದ ಶ್ರೀ। ಪೈಲೂರು ಲಕ್ಷ್ಮೀನಾರಾಯಣ ರಾಯರು ಜೇನು ವ್ಯವಸಾಯ ಕೇಂದ್ರಗಳನ್ನು ಸಂದರ್ಶಿಸಿ ಹೆಚ್ಚಿನ ಅನುಭವ ಪಡೆಯುವುದಕ್ಕಾಗಿ ಉತ್ತರ ಹಿಂದುಸ್ಥಾನದ ಸಂಯುಕ್ತ ಪ್ರಾಂತಕ್ಕೆ ಇದೇ ತಾ. 15ರಲ್ಲಿ ಹೋಗಿರುವರು.

ಶಿರ್ವ—ಇತ್ತೀಚೆಗೆ ತೆರೆಯಲ್ಪಟ್ಟ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಶಂಕು ಸ್ಥಾಪನೆಯು ತಾ 17ರಲ್ಲಿ ಶ್ರೀ ಕೆ ಸಂಜೀವ ಭಟ್, ಬಿ. ಎ. ಎಲ್. ಟಿ ಯವರ ಹಸ್ತದಿಂದ ವಿಜೃಂಭಣೆಯಿಂದ ನೆರವೇರಿತು. ಹಲವರ ಸಂದರ್ಭೋಚಿತ ಭಾಷಣಗಳಿದ್ದುವು ಜನರ ಸಹಕಾರ, ಪ್ರೋತ್ಸಾಹಗಳಿಂದಲೇ ಕಟ್ಟಲ್ಪಡುತ್ತಿರುವ ಈ ಶಾಲಾ ಕಟ್ಟಡಕ್ಕೆ ಊರ ಪರವೂರ ಮಹಾ ಜನರು ಉದಾರ ಸಹಾಯವೀಯಬೇಕಾಗಿ ಶಾಲಾ ಲೇಖಕ ಶ್ರೀ. ಕೆ. ಮುದ್ದು ಶೆಟ್ಟರ ವಿನಂತಿ ಇದೆ

ಬೆಳ್ಮಪಾರ್ಡಿಯಲ್ಲಿ ರಾಷ್ಟ್ರೀಯ ಶಾಲೆ—ತಾ 12ರಲ್ಲು ಬೆಳ್ಮಪಾರ್ಡಿಯಲ್ಲಿ ರಾಷ್ಟ್ರೀಯ ಶಾಲೆಯೊಂದು ಶ್ರೀ. ಪಿ. ಎಸ್ ಮಾಧವ ರಾವ್, ಪೆರ್ಡೂರು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಅವರ ಹಸ್ತದಿಂದ ತೆರೆಯಲ್ಪಟ್ಟಿತು. ಶಾಲಾ ಸ್ಥಾಪಕ ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ಟರು ಈ ಸಂದರ್ಭದಲ್ಲಿ ರಾಷ್ಟ್ರ ಧ್ವಜದ ಆರೋಹಣವನ್ನು ಮಾಡಿದರು. ಈ ವಾರದಲ್ಲಿ ದಿನಾಲೂ 12 ಗಂಟೆಗಳ ಕಾಲ ಕೈರಾಟೆಯಲ್ಲಿ ನೂಲು ತೆಗೆಯುವ ಕಾರ್ಯಕ್ರಮವಿತ್ತು. ದ.ಕ. ಜಿಲ್ಲೆಯಲ್ಲಿ ಇಂದಿಗೂ ರಾಷ್ಟ್ರೀಯ ಶಾಲೆಗಳಿರುವ ಕೇಂದ್ರವೆಂದರೆ ಬೈರಂಪಳ್ಳಿ—ಸಾಂತ್ಯಾರು.

ಉದ್ಯಾವರ—ಇದೇ ತಾ 20ರಲ್ಲಿ ಸ್ಥಳೀಯ ಗ್ರಾಮಾಧಿಕಾರಿಗಳ ಮೇಲುಸ್ತುವಾರಿಯಿಂದ ವಿಜಯ ದಿನಾಚರಣೆಯು ವಿಜೃಂಭಣೆಯಿಂದ ಜರಗಿತು. ಊರ ಜನ ಸಾಮಾನ್ಯರ ಸಹಾಯದಿಂದಲೇ ಶಾಲಾ ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ವಿಜಯ ಮೆರವಣಿಗೆಯೂ ಇದ್ದಿತು.

ಉಡುಪಿ

ಅಖಿಲ ಭಾರತ ಆಯುರ್ವೇದ ಪರಿಷತ್ತು—ಈ ಸಂಸ್ಥೆಯ ಈ ವರೆಗೆ ಜನರಲ್ ಸೆಕ್ರೆಟರಿಗಳಲ್ಲಿ ಒಬ್ಬರಾಗಿದ್ದ ಶ್ರೀಯುತ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ರಾಜಿನಾಮೆಯನ್ನು ಕೊಟ್ಟದ್ದರಿಂದ ಆ ಸ್ಥಾನಕ್ಕೆ ಮಹಾರಾಷ್ಟ್ರ ಎಫೆಕ್ಸ್ ಬೇಂಕ್ ಲಿಮಿಟೆಡ್ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರರಾಗಿರುವ ಶ್ರೀಯುತ ಟಿ. ಉಪೇಂದ್ರ ಅನಂತ ಪೈ ಉಡುಪಿ ಇವರನ್ನು ಸೇರಿಸಲಾಗಿದೆ. ಪರ್ಯಾಯ ಮಠದ ಪುತ್ತಿಗೆ ಮಠಾಧೀಶರೂ ಅವರ ಶಿಷ್ಯ ಶ್ರೀ॥ ಸುಜ್ಞಾನೇಂದ್ರ ತೀರ್ಥ ಸ್ವಾಮಿಗಳೂ ಸ್ವಾಗತಸಮಿತಿಯನ್ನು ಅಭಿನಂದಿಸಿ ಶ್ರೇಯಸ್ಸನ್ನು ಕೋರುತ್ತಾರೆ. ಜನ ಸಮುದಾಯವು ಇದಕ್ಕೆ ತನ್ನ ತನುಮನ ಧನಗಳಿಂದ ಸಹಾಯ ಮಾಡಲಿ ಎಂದು ದೇವರನ್ನು ಪ್ರಾರ್ಥಿಸಿ ಸ್ವಾಗತ ಸಮಿತಿಯನ್ನು ಆಶೀರ್ವದಿಸಿದ್ದಾರೆ. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರು ಮತ್ತು ಜನರಲ್ ಸೆಕ್ರೆಟರಿಗಳಾಗಿದ್ದ ಶ್ರೀ. ಎಂ. ಆರ್. ಭಟ್ಟರು ಕೇಳಿಕೊಂಡ ಮೇರೆಗೆ ಮಹಾ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲು ಶ್ರೀ ಶೀರೂರು ಮಠಾಧೀಶರು ಒಪ್ಪಿರುವರು. ಪೇಜಾವರ ಕಾಣ್ಣೂರು ಕೃಷ್ಣಾಪುರ ಮತ್ತು ಸೋದೆ ಮಠಾಧೀಶರೂ ಕೂಡಾ ಈ ಸಂಸ್ಥೆಯನ್ನು ಪ್ರೋತ್ಸಾಹಿಸಿ ಆಶೀರ್ವದಿಸಿದ್ದಾರೆ.

ಅಕಾಲ ನಿಧನ—ಉಡುಪಿ ಬೋರ್ಡ್ ಹ್ಯಾಸ್ಕೂಲಿನ ಅಧ್ಯಾಪಕರೂ ಸ್ಥಳೀಯ ಹಿಂದೂಸ್ಥಾನ ಸ್ಕೌಟ್ ಸಂಘದ ಉತ್ಸಾಹಿ ಕಾರ್ಯದರ್ಶಿಗಳೂ ಆಗಿದ್ದ ಶ್ರೀ ಕೆ. ಲಕ್ಷ್ಮೀನಿಧಿ ರಾಯರು ಇದೇ ತಾ ೨೧ ಮಂಗಳವಾರ ತನ್ನ ಳ೨ನೆಯ ವಯಸ್ಸಿನಲ್ಲಿ ವಿಷಮ ಜ್ವರದಿಂದ ಅಕಾಲ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ನಿಗರ್ವಿಗಳೂ ನಿಷ್ಠಾವಂತರೂ ಆಗಿದ್ದು ಶಾಲೆಯ ಒಳಗೂ ಹೊರಗೂ ಸದ್ದಿಲ್ಲದೆ ದುಡಿಯುವಂತಹರಾಗಿದ್ದರು. ಅವರ ನಿಧನದ ದುಃಖ ಸೂಚನಾರ್ಥವಾಗಿ ಶಾಲೆಯು ಮಧ್ಯಾಹ್ನ ಮುಚ್ಚಲ್ಪಟ್ಟಿತು. ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವಲ್ಲದೆ ಅವರ ನಿಧನದಿಂದ ಬಂಧು ಬಳಗಕ್ಕಾದ ದುಃಖದಲ್ಲಿ ನಾವು ಭಾಗಿಗಳು.

ವಿಜಯ ದಿನಾಚರಣೆ—ಜಪಾನರು ಶರಣಾಗತರಾದ ಸಂತೋಷ ಸೂಚನಾರ್ಥವಾಗಿ ಉಡುಪಿಯಲ್ಲಿ ತಾ 17 ಮತ್ತು 20ರಲ್ಲು ವಿಜಯ ದಿನಾಚರಣೆ ನಡೆಯಿತು. ಪಟ್ಟಣವು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಎರಡು ದಿನಗಳಲ್ಲೂ ವಿಶೇಷ ರೀತಿಯ ಮೆರವಣಿಗೆ ನಡೆಯಿತು. ತಾ. 20ರಲ್ಲಿ ಅಲಂಕೃತವಾದ ಹನುಮಾನ್ ಕಂಪೆನಿಯ ಬಸ್ಸು, ಸ್ಥಳೀಯ ಫಯರ್‌ಸರ್ವಿಸಿನ ತಳಿರು ತೋರಣಗಳಿಂದ ಅಲಂಕೃತವಾದ ಟ್ರೈಲರ್ ಪಂಪ್ ಯೂನಿಟ್ ವಾಹನದಲ್ಲಿಯ ಸಾರ್ವಭೌಮರಭಾವ ಚಿತ್ರ, ಶ್ರೀ ಅನಂತೇಶ್ವರ ದೇವಸ್ಥಾನದ ವಿಮಾನ ರಥದಲ್ಲಿ ಮುಸಲ್ಮಾನ ಕ್ರೈಸ್ತ ಬಂಧುಗಳಿಬ್ಬರು ಸಾರ್ವಭೌಮರ ಚಿತ್ರವನ್ನು ಹಿಡಿದುಕೊಂಡು ಕುಳಿತ ದೃಶ್ಯಗಳು ಪ್ರೇಕ್ಷಣೀಯವಿದ್ದುವು. ಬಡವರಿಗೆ ಅನ್ನದಾನ ಸಾಂಗವಾಗಿ ನಡೆಯಿತು ತಾ 17ರಲ್ಲು ಮೆರವಣಿಗೆ ಮುಗಿದ ನಂತರ ತಾಲೂಕು ಕಚೇರಿಯಲ್ಲಿ ಕುಂದಾಪುರ ಡಿಪ್ಯುಟಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಮಹನೀಯರುಗಳನೇಕರ ಸಂದರ್ಭೋಚಿತ ಭಾಷಣಗಳಾದುವು ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು. ಉಡುಪಿಯಲ್ಲಿ ವಿಜಯ ದಿನಾಚರಣೆಯು ಅತಿಶಯ ಉತ್ಸಾಹದಿಂದ ಜರಗುವಂತಾಗಲು ತಹಶೀಲ್ದಾರ್ ಶ್ರೀ ಸದಾನಂದ ಪೈಗಳವರು ಕಾರಣೀಭೂತರು.

ಭಜನಾ ಸಪ್ತಾಹ ಮುಕ್ತಾಯ—ಶ್ರೀ ಲಕ್ಷ್ಮೀ ವೆಂಕಟೇಶ ದೇವಳದಲ್ಲಿ ತಾ 13ರಲ್ಲು ಆರಂಭವಾದ ಭಜನ ಸಪ್ತಾಹಕ್ಕೆ ತಾ 20ರಲ್ಲು ಮಂಗಳವಾಯಿತು. ಶ್ರೀ ಮೂಲ್ಕಿ ಸಂತ ಕೊಗ್ಗ ಕಾಮತರ ಮೆಹರ್‌ಬಾನಿಯಿಂದಾಗಿ ಭಜನ ಸಪ್ತಾಹವು ಮಹಾ ವೈಭವದಿಂದ ಜರಗುವಂತಾಯಿತು. ಶ್ರೀ ದೇವಳದ ಎದುರು ಹೆಬ್ಬಾಗಿಲು ಕಟ್ಟೋಣವು ಸಂಪೂರ್ಣವಾಗುವಂತೆ ಸಮಾಜದ ಹತ್ತು ಸಮಸ್ತರು ಮುಂದೆ ಬರಬೇಕಾಗಿದೆ.

ಮೂಡನಿಡಂಬೂರು- ಪಂಚಾಯತ ಕೋರ್ಟಿಗೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಪಿ. ನಾರಾಯಣ ಪ್ರಭು, ಎಮ್. ವಾಮನಭಟ್, ಲಕ್ಷ್ಮೀನಾರಾಯಣ ಕಾಮತ್, ರಾಯಪ್ಪ ಗಾಂಸ, ಕೃಷ್ಣ ಭಟ್, ಸೀನ ಶೆಟ್ಟರು ಚುನಾಯಿಸಲ್ಪಟ್ಟಿದ್ದಾರೆ.

(೫ನೇ ಪುಟದಿಂದ ಮುಂದುವರಿದುದು.)

ಗಡಿ ಜಗಳ ತೀರ್ಮಾನಕ್ಕಾಗಿ ಒಂದು ಕಮಿಶನನ್ನು ನೇಮಿಸಲು ರಶ್ಯ ಮತ್ತು ಜಪಾನ್ ಒಪ್ಪಿಕೊಂಡವು. ಆದರೆ ಆನೇ ನವಂಬರಿನಲ್ಲಿ ರಶ್ಯದ ವಿರುದ್ಧವಾದ 'ಕಾಮಿಂಟರ್ನ್ ವಿರೋಧಿ ಒಪ್ಪಂದ'ಕ್ಕೆ ಜಪಾನೂ ಜರ್ಮನಿಯೊಡನೆ ಸಹಿಮಾಡಿತು. ರಶ್ಯವು ಬಡಪಾಯಿಯಂತೆ ಎಲ್ಲವನ್ನೂ ಸಹಿಸುತ್ತಾ ಬಂತು. 1937ರಲ್ಲಂತೂ ಮಂಚೂರಿಯಾ ಸೈಬೇರಿಯದ ಗಡಿಯ ಅಮೂರು ಹೊಳೆ ಬದಿಯ ದ್ವೀಪಗಳಿಗಾಗಿ ರಶ್ಯಾ ಜಪಾನ್ ಯುದ್ಧ ನಡೆದು ಆದರಲ್ಲೂ ರಶ್ಯವೇ ಸೇನೆ ಹಿಂದೆಗೆದುಕೊಳ್ಳಬೇಕಾಯಿತು. ಅದೇ ವರುಷ ಚೀನದ ಮೇಲೆ ಜಪಾನ್ ಬಿದ್ದಾಗ ಮಾತ್ರ, ತಮ್ಮ ಭೂಮಿಗೆ ಕಾಲಿಟ್ಟಲ್ಲಿ ನಿಮ್ಮನ್ನು ಹೊಡೆದಟ್ಟುವೆವೆಂಬ ಸ್ಪಷ್ಟ ಎಚ್ಚರಿಕೆಯನ್ನು ರಶ್ಯ ಕೊಡಬೇಕಾಯಿತು. ಆ ಮೇಲೆಯೇ ರಶ್ಯದ ಬಿಗಿತಕ್ಕಾರಂಭ. ಚೀನಕ್ಕೆ ಸಹಾಯ ಕೊಡುವ ಕುರಿತು ಜಪಾನ್ ನಿಷೇಧಿಸಿದಾಗ ರಶ್ಯ ಧಿಕ್ಕರಿಸಿ ಬಿಟ್ಟಿತು. ಆದರೂ 1938ರಲ್ಲಿ ಚಾಂಕುಫೆಂಗಿನಲ್ಲಿ ಇವೆರಡು ರಾಷ್ಟ್ರಗಳ ಸೈನಿಕರೊಳಗೆ ತೀವ್ರ ಗಡಿ ಹೋರಾಟವಾಯಿತು. 1939ರಲ್ಲಿ ಮಂಚೂರಿಯಾ-ಮಂಗೋಲಿಯದಲ್ಲಿ ಅಂತಹದೇ ಮತ್ತೊಂದು ಕಾಳಗ ನಡೆಯಿತು- ಆದರೆ ಯುರೋಪು ಯುದ್ಧಾರಂಭವಾದ ಮೇಲೆ—ಅದೇನೋ— ಈ ಚಿಕ್ಕಾಟಗಳ ಸುದ್ದಿಯಡಗಿತು. 1941ನೇ ಎಪ್ರಿಲ್‌ನಲ್ಲಿ ರಶ್ಯಾ-ಜಪಾನ್ ತಾಟಸ್ಥ್ಯ ಕರಾರಾಯಿತು. ಅಂದಿನಿಂದ ಇವೆರಡು ರಾಷ್ಟ್ರಗಳ ಮುಖಗಳು ಬೇರೆ ಬೇರೆ ದಿಕ್ಕುಗಳಿಗೆ ತಿರುಗಿದರೂ ಮಿಕ್ಕಕಡೆಯ ತನ್ನ ಕೆಲಸ ಮುಗಿದೊಡನೆ 1945ನೇ ಎಪ್ರಿಲಿನಲ್ಲಿ ಸೋವಿಯಟ್ ರಶ್ಯಾ ಜಪಾನ್ ಒಪ್ಪಂದವನ್ನು ಹರಿಮುಹಾಕಿತು ಆಗೋಸ್ತಿನಲ್ಲಿ ಆಕಸ್ಮಾತ್ ಜಪಾನಿನ ಮೇಲೆಬಿದ್ದು ಇದುವರೆಗಿನ ಎಲ್ಲಾ ಮಯ್ಯನ್ನೂ ತೀರಿಸಿತು! ತಾನು ಕಳಕೊಂಡ ಸ್ಥಳಗಳೆಲ್ಲವನ್ನೂ ಒಂದೇ ಹೊಡೆತದಿಂದ ಮರಳಿ ಪಡೆಯಿತು.

AWAIT

THE INCORPORATION OF

The Karnataka Theatres, Ltd.

MANGALORE.

to establish a Film Studio for South Kanara District and Exhibition Theatres in

MANGALORE, KARKALA, UDIPI, COONDAPOOR &c.

The Govt. of India has been pleased to accord sanction for the capital issue of Rs. 3,00,000.

ದಕ್ಷಿಣ ಕನ್ನಡ.

ಕುಂಜಾರ್‍ಗಿರಿ ಪೋಸ್ಟಾಫೀಸು— ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕಿನ ಕುರುಕಾಲು ಗ್ರಾಮಕ್ಕೆ ಈ ವರೆಗೆ ಇತರ ಪೋಸ್ಟಾಫೀಸುಗಳಿಂದ ಟಪ್ಪಾಲು ಬಟವಾಡೆ ಆಗುತ್ತಿದ್ದರೂ, ಇನ್ನು ಮುಂದಕ್ಕೆ ಕುರುಕಾಲು ಗ್ರಾಮದ ಬಗ್ಗೆ, ಕುಂಜಾರ್ ಗಿರಿಜಾ ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ "ಕುಂಜಾರ್‍ಗಿರಿ ಪೋಸ್ಟ್" ಎಂಬ ಹೆಸರಿನಿಂದ ಒಂದು ಹೊಸ ಪೋಸ್ಟಾಫೀಸು ತಾ 15-8-45ರಲ್ಲು ಮ. ರಾ. ರಾ. ಉಡುಪಿ ಡಿವಿಜನಿನ ಪೋಸ್ಟಲ್ ಇನ್ಸ್‌ಪೆಕ್ಟರರ ಮುಖಾಂತರ ತೆರೆಯಲ್ಪಟ್ಟಿತು. ಆದ ಕಾರಣ ಕುರುಕಾಲು ಗ್ರಾಮದಲ್ಲಿರುವ ಶಾಲೆಗಳು, ಸಹಕಾರ ಸಂಘ, ಐಕ್ಯಯ ಸ್ಟೋರು, ಮತ್ತು ಇನ್ನೂರೆನ್ನು ಆಫೀಸು ವಗೈರೆ ಸಂಸ್ಥೆಗಳಿಗೂ ಎಲ್ಲಾ ಜನತೆಗೂ ಕಳುಹಿಸಲ್ಪಡುವ ಮನಿಯಾರ್ಡರು ವಗೈರೆ ಟಪ್ಪಾಲುಗಳನ್ನು "ಕುಂಜಾರು ಗಿರಿ ಪೋಸ್ಟ್" ಎಂಬ ಹೆಸರಿನಿಂದ ಕಳುಹಿಸಿದರೆ ವಿಳಂಬ ಶಿವ್ಯಾ ತಲಪುತ್ತವೆಎಂದು ಈ ಮೂಲಕ ತಿಳಿಸಲಾಗಿದೆ.

ಬಸ್ರೂರು—ಸ್ಥಳೀಯ ಪಂಚಾಯತ ಕೋರ್ಟಿನ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರ ಚುನಾವಣೆಯು ತಾ. 7 8 1945 ರಲ್ಲಿ ನಡೆದು ಶ್ರೀ. ಕೆ. ಶಂಕರ ಸೆಟ್ಟರು, ಪ್ರೆಸಿಡೆಂಟರಾಗಿಯೂ, ಶ್ರೀ. ಬಿ. ವಿಠಲ ಸೆಟ್ಟರು ವೈಸ್ ಪ್ರೆಸಿಡೆಂಟರಾಗಿಯೂ, ಅವಿರೋಧವಾಗಿ ಸರ್ವಾನುಮತದಿಂದ ಚುನಾವಣೆ ಹೊಂದಿರುತ್ತಾರೆ.

ಪಡುಬಿದ್ರಿ—ತಾ 15 8 1945ರಲ್ಲು ಡಾ। ಕೆ. ಶ್ಯಾಮ ಸೆಟ್ರ ಅಧ್ಯಕ್ಷತೆಯಲ್ಲಿ ಸ್ವತಂತ್ರ ದಿನದ ಸಮ್ಮಂಧ ಒಂದು ಸಾರ್ವಜನಿಕ ಸಭೆಯು ನೆರೆಯಿತು. ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಮತ್ತು ಮೂಲ್ಕಿಯ ಬೋಳ ನಾರಾಯಣರಾಯರು ಬಂದಿದ್ದರು. ಪ್ರಥಮದಲ್ಲಿ ನೂಲುವ ಸ್ಪರ್ಧೆಯು ಏರ್ಪಟ್ಟು, ಪ್ರಥಮ ಬಹುಮಾನವು ಎರ್ಮಾಳದ ಮನ್ಸೂರ್ ಸಾಹೇಬ್ ಎಂಬ ಬಾಲಕನಿಗೂ ಎರಡನೇ ಮತ್ತು ಮೂರನೇ ಬಹುಮಾನಗಳು ಕ್ರಮವಾಗಿ ಶಾಂತಿ ಬಾೈ ಮತ್ತು ಸಾವಿತ್ರಿ ಎಂಬ ಬಾಲಕಿಯರಿಗೂ ಕೊಡಲ್ಪಟ್ಟುವು. ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಸಭೆಯ ಕಾರಣಗಳನ್ನು ವಿವರಿಸಿದ ನಂತರ ಮಹದೇವ ದೇಸಾಯಿ ಮತ್ತು ಇತರ ಮೃತ ದೇಶಭಕ್ತರ ಆತ್ಮ ಸಮ್ಮಂಧ ದುಃಖ ಸೂಚನೆ ಮತ್ತು ಪ್ರಾರ್ಥನೆಯೊಂದಿಗೆ ಸಭೆಯು ಅಂತ್ಯವಾಯಿತು.

ಕಾರ್ಕಳ

ವಿಜಯೋತ್ಸವ ಆಚರಣೆ—ಇಡೀ ಪೇಟೆ, ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದು, ತಾಲೂಕು ಆಫೀಸಿನಿಂದಲೂ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಿಂದಲೂ ಮೆರವಣಿಗೆಗಳಿದ್ದು, ತಾಲಿಂ ಪಂಗಡದವರ ಕವಾತಿನೊಂದಿಗೆ ಬೇಂಡುವಾದ್ಯ ಘೋಷಣೆಗಳಿಂದೊಡಗೂಡಿ ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲೆ ಸೇರಿದ ಬಳಿಕ 'ಹೊಲಿ'ನಲ್ಲಿ ಡಿ. ಮುನ್ಸಿಫ್ ಶ್ರೀ. ಬಿ. ಕೊರಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. ಬಡಬಗ್ಗರಿಗೆ ಪಾಯಸ ಹಂಚುವ ವ್ಯವಸ್ಥೆ ಶ್ರೀ. ಬಿ. ಎಸ್. ಹೆಗ್ಡೆ ಬಿ.ಎ. ಇವರ ಸಮಕ್ಷಮದಲ್ಲಿ ಮಾಡಲಾಯಿತು. ಶ್ರೀ. ಕೆ ಕೃಷ್ಣ ಆಚಾರ್, ಶ್ರೀ ಭವಾನಿ ಶಂಕರ ರಾವ್, ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ಮೊದಲಾದವರ ಪ್ರಸಂಗೋಚಿತ ಭಾಷಣಗಳಾದ ಬಳಿಕ ತಹಶಿಲ್ದಾರ್ ಶ್ರೀ. ಬಿ. ನಾರಾಯಣ ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಾರ್ವಜನಿಕರಿಗೆ ಮಿಠಾಯಿ ಹಂಚೋಣವಾದ ಬಳಿಕ ಸಭಾಂತ್ಯವಾಯಿತು ಇದೇ ರೀತಿ ತಾ 20ನೇ ಸೋಮವಾರ ಬಡಬಗ್ಗರಿಗೆ ಊಟೋಪಚಾರ, ಮಕ್ಕಳಿಗೆ ತಿಂಡಿ ಹಂಚೋಣ, ಆಟ ಸ್ಪರ್ಧೆಗಳೂ ನಡೆದುವು.

ಕಡಬ—ಇಲ್ಲಿಯ ವೇದಾಂತ ಸಂಘದವರು ಕಳೆದ ಕರ್ಕಾಟಕ ಮಾಸದಲ್ಲಿ ನಡೆಯಿಸಿದ ಭಾರತ ವಾಚನದ ಮಂಗಳೋತ್ಸವವು ತಾ. 17-8-45ನೇ ಶುಕ್ರವಾರ ಚಿತ್ತರಂಜನ ಕ್ಲಬ್ಬಿನಲ್ಲಿ ಬಹಳ ಸಂಭ್ರಮದಿಂದ ಶ್ರೀ. ಕೆ. ಲಕ್ಷ್ಮೀನಾರಾಯಣ ರಾಯರ ಸಭಾಧ್ಯಕ್ಷತೆಯಲ್ಲಿ ಜರಗಿತು. ಬಳಿಕ ಓಡುಗರಾದ ಶ್ರೀ ಎಂ. ವೆಂಕಟ್ರಾಯರು ಅರ್ಥ ವಿವರಿಸಿ ಶ್ರೀ। ವಾಸ್ತೇವ ಬೈಪಾಡಿತ್ತಾಯರು ಭಾರತ ವಾಚನದ ಮಂಗಲ ಮಾಡಿದರು; ಡಾ। ಕೆ. ಕೆ. ರೈಗಳೇ ಮೊದಲಾದ ಮಹನೀಯರು ಪುರಾಣವಾಚನ, ವೇದಾಂತ ಸಂಘದ ಅವಶ್ಯಕತೆಗಳ ಕುರಿತು ಉಪಯುಕ್ತ ಸಲಹೆಗಳೊಂದಿಗೆ ಭಾಷಿಸಿದರು. ಆ ನೇಲೆ ಸಭಾಧ್ಯಕ್ಷರ ಸಂದರ್ಭೋಚಿತ ಸುರಸ ಭಾಷಣವಾಯಿತು. ಕಾರ್ಯದರ್ಶಿಗಳು ಧನ್ಯವಾದವನ್ನಿತ್ತರು.

ಮಂಗಳೂರು

ವಿಜಯ ದಿನಾಚರಣೆ—ವಿಜಯ ದಿನಾಚರಣೆಯು ಮಂಗಳೂರಲ್ಲಿ 16 ಮತ್ತು 17ನೇ ತಾರೀಕುಗಳಲ್ಲಿ ಆಚರಿಸಲ್ಪಟ್ಟಿತು. ಆ ಎರಡು ದಿನಗಳು ಸಾರ್ವಜನಿಕ ರಜಾ ದಿನಗಳಾಗಿ ಎಲ್ಲಾ ಶಾಲಾ ಆಫೀಸುಗಳಿಗೆ ರಜೆಯಿತ್ತು. ಮುದ್ರಣಾಲಯಗಳೂ, ಕಾರ್ಖಾನೆಗಳೂ, ಮತ್ತು ಹೆಚ್ಚಿನ ಅಂಗಡಿಗಳೂ ಅಂದು ಮುಚ್ಚಲ್ಪಟ್ಟಿದ್ದುವು ಬಸ್ಸು, ಲೋರಿಗಳು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟು ಓಡುತ್ತಿದ್ದುವು. ತಾ. 17ರಂದು ನಗರದ ಬೇರೆ ಬೇರೆ ಆರು ಕಡೆಗಳಲ್ಲಿ ಬಡವರಿಗೆ ಗೋದಿ ಪಾಯಸವನ್ನೂ, ಸಜ್ಜಿಗೆ ಪಾಯಸವನ್ನೂ ಹಂಚಲಾಯಿತು. ಸಂಜೆ 5 30 ಗಂಟೆಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಸಾರ್ವಜನಿಕ ಸಭೆಯು ರಾವ್ ಬಹದೂರ್ ರಾಮ ಬೋಸ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಖಾನ್ ಸಾಹೇಬ್, ಹುಸೇನ್ ಸಾಹೇಬ್, ಮಿ। ಸಿ. ಎಲ್. ಲೋಬೋ, ಶ್ರೀ॥ ಕೆ. ಸದಾನಂದ ಹೆಗ್ಡೆ, ಮತ್ತು ಶ್ರೀ। ಪಣಂಬೂರು ಗಣಪತಿ ಜೋಯಿಸರು ಯುದ್ಧ ವಿಜಯದ ಕುರಿತು ಮಾತನಾಡಿದರು. "ಈ ಯುದ್ಧವೇ ಕೊನೆಯದಾಗಲಿ. ಆಟಾಮಿಕ್ ಬಾಂಬು ಇನ್ನು ಉಪಯೋಗಿಸುವಂತಾಗದಿರಲಿ. ಶಾಂತಿ ಕಾಲದಲ್ಲಿ ಹಿಂದುಸ್ಥಾನಕ್ಕೆ ಸಲ್ಲುವಂತಾದ್ದು ಆದಷ್ಟು ಬೇಗನೆ ಬರಲಿ" ಎಂದು ಭಾಷಣಗಾರರು ತಮ್ಮ ಮಾತಿನಲ್ಲಿ ಹೇಳಿದರಲ್ಲದೆ ಯುದ್ಧಕ್ಕೆ ಜಿಲ್ಲೆಯು ಸಲ್ಲಿಸಿದ ಸೇವೆಯನ್ನೂ ಸೂಚಿಸಿದರು. ಯುದ್ಧದಲ್ಲಿ ಮಡಿದವರನ್ನು ಸ್ಮರಿಸಿದರು.

ಜಿಲ್ಲೆಯಲ್ಲಿ ಯುದ್ಧ ಕಾರ್ಯದಲ್ಲಿ ಅವಿಶ್ರಾಂತ ಸೇವೆ ಸಲಿಸಿದಂತೆದು ಮಿ। ಸಿ. ಎಲ್. ಲೋಬೋ ಮತ್ತು ಕಾಸರಗೋಡಿನ ಎಡ್ವೋಕೇಟರಾದ ಪಿ. ಜಿ. ಸುಬ್ರಹ್ಮಣ್ಯಂ ಅವರಿಗೆ ಬೆಂಗಳೂರಿನ ಸಿವಿಲ್ ಡಿಫೆನ್ಸ್ ಆಫೀಸರರು ಕಳುಹಿಸಿದ ಪ್ರಶಸ್ತಿ ಪತ್ರವನ್ನೂ ಪದಕಗಳನ್ನೂ ಅಧ್ಯಕ್ಷರು ಅರ್ಪಿಸಿದರು.

ಅಧ್ಯಕ್ಷರಾದ ರಾಮಬೋಸರು ತಮ್ಮ ಭಾಷಣದಲ್ಲಿ ಈ ಮಾರಕ ಯುದ್ಧ ನಿಂತು ಲೋಕಕ್ಕೆ ಸಂತೋಷವಾಗುವಂತೆ ಹೆಣಗಾಡಿದ ಯೋಧರನ್ನೂ ಮಿತ್ರ ಪಕ್ಷದ ನಾಯಕರನ್ನೂ ಅಭಿನಂದಿಸಿದರು. ಮುಂದುವರಿಸುತ್ತಾ, ಜಿಲ್ಲೆಯ ಆಕ್ಕಿ ಪರಿಸ್ಥಿತಿಯ ಕುರಿತು ಎರಡು ತಿಂಗಳು ಕಠಿನ ಕಾಲವೆಂದು ಸೂಚಿಸಿದರು. ಕೊನೆಯಲ್ಲಿ ಜಿಲ್ಲೆಯ ಯುದ್ಧ ಸಮಿತಿಯ ಕಾರ್ಯವನ್ನೂ ವಿಜಯ ದಿನಾಚರಣೆಯಲ್ಲಿ ನೆರವಾದವರನ್ನೂ ಸ್ಮರಿಸಿದರು. ಜಿಲ್ಲಾ ಯುದ್ಧ ಸಮಿತಿಯ ಪರವಾಗಿ ಸಿ. ಎಲ್. ಲೋಬೋರವರು ಧನ್ಯವಾದಗಳನ್ನು ಅರ್ಪಿಸಿದರು.

ಸಭಾರಂಭದಲ್ಲಿ ಮತ್ತು ಸಭಾಂತ್ಯದಲ್ಲಿ ಆಗ್ನೆಸ್ ಕೊನ್ವೆಂಟಿನ ಬಾಲಕಿಯ ನರ್ತನವಿತ್ತು. ತಾ. 20ನೇ ಸೋಮವಾರವು ಕೂಡ ವಿಜಯ ದಿನವಾಗಿ ನಗರದಲ್ಲಿ ಆಚರಿಸಲ್ಪಟ್ಟಿತು ಅಂದು ಶಾಲಾ ಮಕ್ಕಳಿಗೆ ಮಿಠಾಯಿ ಹಂಚಲಾಗಿದೆ.

ನಗರದಲ್ಲಿ ರಾಷ್ಟ್ರೀಯ ದಿನ—ತಾ. ೧೫ನೇ ಸಂಜೆ ಘಂಟೆ 6-30ಕ್ಕೆ ಕೆನರಾ ಹೋಸ್ಟೆಲಿನಲ್ಲಿ ಶ್ರೀ। ಮು. ಪಾಂಡುರಂಗ ಬಾಳಿಗರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಸ್ವಾತಂತ್ರ್ಯ ದಿನವನ್ನಾಚರಿಸಲಾಯಿತು. ಶ್ರೀ। ಕೆ. ಕೆ. ಶೆಟ್ಟರು, ಆಗೋಸ್ತು ಸಮರದ ಮಹತ್ವಿಕೆಯನ್ನು ವಿವರಿಸಿ ಸ್ಫೂರ್ತಿ ಯುಕ್ತ ಭಾಷಣವಿತ್ತರು. ಶ್ರೀ। ಯೋಗೀಶ್ವರ ಪೊಳ್ಳರು ಇಂಗ್ಲಿಷಿನಲ್ಲಿ ಮಾತಾಡಿದರು. ಕಡೆಗೆ ಶ್ರೀ ಪಿ. ನಾಯ್ಕರು ವಂದನಾರ್ಪಣೆ ಮಾಡಿದರು.

ತಾ. 11ನೇ ಬೆಳಿಗ್ಗೆ ಇಲ್ಲಿಯ ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿ ಭವನದಲ್ಲಿ ಶ್ರೀ ಈಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಸ್ವಾತಂತ್ರ್ಯ ದಿನವಾಚರಿಸಲ್ಪಟ್ಟಾಗ ಶ್ರೀ। ಕೆ. ಕೆ. ಶೆಟ್ಟರು ಮಾತಾಡಿ ಆಗೋಸ್ತು ಚಳವಳದಲ್ಲಿ ವಿದ್ಯಾರ್ಥಿಗಳು ವಹಿಸಿದ ಪ್ರಾಮುಖ್ಯ ಭಾಗಕ್ಕಾಗಿ ಅವರನ್ನು ಅಭಿನಂದಿಸಿದರು.

ತಾ. 12ನೇ ಸಂಜೆ ಸ್ವಾತಂತ್ರ್ಯ ಸಪ್ತಾಹದ ಸಂಬಂಧವಾಗಿ ಇಲ್ಲಿಯ ಜೈನ ವಿದ್ಯಾರ್ಥಿ ಭವನದಲ್ಲಿ ಶ್ರೀ। ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ನಡದಾಗ ಶ್ರೀ। ಕೆ. ಕೆ. ಶೆಟ್ಟರು ಭಾಷಣವಿತ್ತರು.

ಅಖಿಲ ಕರ್ನಾಟಕ ಸ್ಟೂಡೆಂಟ್ಸ್ ಕಾಂಗ್ರೆಸ್, ಧಾರವಾಡ— ಸಂಸ್ಥೆಯ ಕಾರ್ಯದರ್ಶಿಯವರು ಜಾಹೀರು ಪ್ರಕಟಣೆಯೊಂದನ್ನು ಹೊರಡಿಸಿ ಈ ರೀತಿ ಬರೆಯುತ್ತಾರೆ. ಕರ್ನಾಟಕ ಪ್ರಾಂತದಲ್ಲಿರುವ ವಿವಿಧ ವಿದ್ಯಾರ್ಥಿ ಸಂಘಗಳು ರಾಜಕೀಯ ಸೆರೆಯಾಳುಗಳ ಹಿತಾರ್ಥವಾಗಿ ಧನ ಸಂಗ್ರಹಿಸಬೇಕಾಗಿ ಸ್ಟೂಡೆಂಟ್ಸ್ ಕಾಂಗ್ರೆಸ್ ಸಮಿತಿಯು ವಿನಂತಿಯಿದೆ. ದೇಶಸೇವಾ ನಿರತರಾಗಿ ತನು ಮನ ಧನಗಳನ್ನು ಅರ್ಪಿಸಿ ಈಗ ಸೆರೆಮನೆಯಲ್ಲಿರುವ ವೀರರಿಗೆ ಸಹಾಯ ಧನವನ್ನು ಶಕ್ಯವಿದ್ದಷ್ಟು ಸಂಗ್ರಹಿಸುವುದು ವಿದ್ಯಾರ್ಥಿ ಸಂಘಗಳ ಅತ್ಯಂತ ಕರ್ತವ್ಯವಿದೆ. ಸ್ವಾತಂತ್ರ್ಯ ಚಳವಳಿಯ ಸಲುವಾಗಿ ತರುಣ ವಿದ್ಯಾರ್ಥಿ ಸಂಘಗಳು ತಮ್ಮ ಪಾಲಿನ ಕರ್ತವ್ಯವನ್ನು ಪರಿಪಾಲಿಸಬೇಕಾಗಿದೆ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಆಫೀಸು, ಉಡುಪಿ

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ 'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ ಹೊರಡುವ ಹೊಸಮಾದರಿಯ ಸಚಿತ್ರ ವಾರ ಪತ್ರಿಕೆ.



ವಾರ ವಾರವೂ ಮನಸೆಳೆವ ಬೇರೆ ಬೇರೆ ಮುಖಪತ್ರ.

ವಿಚಾರದ ಕಿಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ— ಮನಮೋಹಕ ಕತೆಗಳಿಗಾಗಿ- ಚುಟುಕು ಸುದ್ದಿಗಳಿಗಾಗಿ- ಅಂತರಂಗವು ಅಖಿಲ ಕರ್ನಾಟಕದಲ್ಲಿ ಹೆಸರಾಗಿದೆ.

ವಾರ ಭವಿಷ್ಯವೂ ಬಿಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.

ಬಿಡಿ ಸಂಚಿಕೆಗೆ ... ... 0-1-6.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕನ್ನಡಿಗರು ನೆಲಸಿರುವ ಇತರ ಕಡೆಗಳಲ್ಲಿಯೂ ವಿಶೇಷ ಪ್ರಚಾರದಲ್ಲಿರುವ 'ಅಂತರಂಗ'ವು ಜಾಹೀರಾತು ಪ್ರಕಟಿಸಲಿಕ್ಕೆ ಯೋಗ್ಯ ವಾಹಕವಾಗಿದೆ.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—

ಮೆನೇಜರ್, ಅಂತರಂಗ, ಉಡುಪಿ.



ನಾನಾವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ, ರಥಬೀದಿ, ಉಡುಪಿ.

ಮೈಸೂರು ಪತ್ರ-

ಕಸ್ತೂರ್ ಬಾ ಶಿಕ್ಷಣ ಶಿಬಿರ— ಮೈಸೂರು ಮತ್ತು ಕರ್ನಾಟಕ ಪ್ರಾಂತ್ಯದ ಕಸ್ತೂರ್ ಬಾ ಸ್ಮಾರಕ ನಿಧಿಯಾಶ್ರಯದಲ್ಲಿ ಮೈಸೂರು ನಗರದಲ್ಲಿ ಕಾರ್ಯಕರ್ತೆಯರ ಶಿಕ್ಷಣ ಶಿಬಿರವು 15ನೇ ತಾರೀಕಿನಿಂದ ಪ್ರಾರಂಭವಾಯ್ತು. ಶಿಬಿರಕ್ಕೆ ಶ್ರೀಮತಿ ಉಮಾಬಾಯಿ ಕುಂದಾಪುರ, ಇವರ ನೇತೃತ್ವದಲ್ಲಿ ಹನ್ನೆರಡು ಮಂದಿ ಮಹಿಳೆಯರು 15ಕ್ಕೆ ಬಂದರು. ಮೈಸೂರು ಸಂಸ್ಥಾನದಿಂದ 8 ಮಂದಿ ಬಂದಿರುತ್ತಾರೆ. ನಾಲ್ಕು ಮಂದಿ ಬರಲಿದ್ದಾರೆ. ಶಿಬಿರವು ನಗರಕ್ಕೆ ಮೂರು ಮೈಲು ದೂರವಿರುವ ಮೈಸೂರು ಮಡಿಕೇರಿ ರಸ್ತೆಯಲ್ಲಿರುವ ರಾಜಕುಮಾರಿ ಲೀಲಾವತಿಯವರಿಗೆ ಸೇರಿದ ದೊಡ್ಡ ಬಂಗಲೆಯಲ್ಲಿ ನಡೆಯಲು ಏರ್ಪಾಡಾಗಿದೆ. ಬಂಗಲೆಯು ನಗರಕ್ಕೆ ಸಮೀಪವಾಗಿದ್ದರೂ ಸುತ್ತ ಮುತ್ತ ಹಳ್ಳಿಗಳಿದ್ದು ವಿಶಾಲವಾದ ಉದ್ಯಾನದ ಮಧ್ಯದಲ್ಲಿ ಮಹಿಳೆಯರ ಶಿಕ್ಷಣಕ್ಕಾಗಿ ಕಟ್ಟಲ್ಪಟ್ಟಿದೆಯೋ ಎಂಬಂತಿದೆ.

ಮೈಸೂರು ಪ್ರಾಂತ ಸಮಿತಿ ಕಾರ್ಯದರ್ಶಿ ಶ್ರೀಮತಿ ಯಶೋಧರಾ ದಾಸಪ್ಪನವರೇ ಶಿಬಿರ ಮೇಲ್ವಿಚಾರಕರಾಗಿರುವರು. ಉಪಾಧ್ಯಕ್ಷರಾದ ಶ್ರೀ। ಹೆಚ್. ಸಿ. ದಾಸಪ್ಪ ಕಾರ್ಯದರ್ಶಿ. ಪ್ರೊ। ಕೆ. ಎಸ್. ಕೃಷ್ಣ ಅಯ್ಯಂಗಾರರು ಶಿಬಿರದಲ್ಲೇ ಇದ್ದು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಶ್ರೀ। ಗಳಾದ ಖಾದ್ರಿ ಶಾಮಣ್ಣ ಮತ್ತು ಶ್ರೀನಿವಾಸ ರಾವ್‌ರವರು ಅಧ್ಯಾಪಕ ವರ್ಗದಲ್ಲಿದ್ದಾರೆ.

ಶಿಬಿರವು ಯಶಸ್ವಿಯಾಗಿ ನಡೆಯಲು ನಗರದ ನಾನಾ ಸಂಸ್ಥೆಗಳು ಹಾಗೂ ಸಾರ್ವಜನಿಕರು ಎಲ್ಲಾ ವಿಧವಾದ ಸಹಾಯ ಸಹಕಾರಗಳನ್ನು ನೀಡುತ್ತಿದ್ದಾರೆ.

ಇಂತಹ ಮಹಿಳಾ ಕೆಲಸಗಾರರ ಶಿಕ್ಷಣ ಶಿಬಿರವು ನೆರೆಯಲ್ಪಡುವದು ಇದೇ ಮೊದಲನೆಯದಾದ್ದರಿಂದ ಶಿಬಿರವನ್ನು ನೋಡಲು ಈಗಾಗಲೇ ಜನರು ಬರುತ್ತಿದ್ದಾರೆ.

ನಾಮಕರಣ ಒಪ್ಪಬೇಡಿ— ಮೈಸೂರು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿ ಕಾರ್ಯದರ್ಶಿಗಳು ಒಂದು ಮನವಿಯನ್ನು ಹೊರಡಿಸಿ ಕಾಂಗ್ರೆಸ್ಸಿನವರ್‍ಯಾರೂ ಸರಕಾರದಿಂದ ಮಾಡಲ್ಪಟ್ಟ ನಾಮಕರಣವನ್ನು ಒಪ್ಪಬಾರದೆಂದು ಪ್ರಾರ್ಥಿಸಿದ್ದಾರೆ.

ಪತ್ರಿಕೋದ್ಯೋಗಿಗಳ ಸಭೆ— ಮೈಸೂರು ನಗರದ ಪತ್ರಿಕಾಕರ್ತರ ಸಭೆಯು ಕಳೆದ ವಾರ ಹಲವಾರು ವಿಷಯಗಳನ್ನು ಚರ್ಚಿಸಿತು. ಸಂಘದ ಅಧ್ಯಕ್ಷರಾದ ಶ್ರೀ। ಆಗರಂ ರಂಗಯ್ಯನವರು ಒಂದು ಮನವಿಯನ್ನು ಹೊರಡಿಸಿ ಪತ್ರಿಕಾ ವೃತ್ತಿಯಲ್ಲಿರುವವರೆಲ್ಲರೂ ಸಂಘದ ಸದಸ್ಯರಾಗಬೇಕೆಂದು ಪ್ರಾರ್ಥಿಸಿದ್ದಾರೆ.

ನಗುವ ಮಗು

ಮಾರ್ಗರೇಟರ "ಫಿಟ್ಸ್‌ಕ್ಯೂರ್"
ಪ್ರಯೋಗದಿಂದೊದಗಿದ
ತಾಯಿಯ ಬೆಳಕು.

ಧರ್ಮಾರ್ಥ ಸ್ಯಾಂಪಲ್ ಔಷಧಿ ಮಗುವಿನ ರಕ್ಷಣೆಯ ಗುಟ್ಟುಗಳಿಗಾಗಿ ನಮಗೆ ಬರೆಯಿರಿ. ಟಪ್ಪಾಲು ಖರ್ಚಿಗೆ 4 ಆಣೆ ಸ್ಟಾಂಪನ್ನು ಕಳುಹಿಸಬಹುದು.

Margaret's Fitscure Home,
UDIPI. S. India.

ಸಂಸ್ಥಾನದ ಸಭೆ—ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಭೆಯು ಡಿಸೆಂಬರಿನಲ್ಲಿ ಹಾಸನದಲ್ಲಿ ನಡೆಯುವುದೆಂದು ಗೊತ್ತಾಗಿದೆ.

ಕರ್ನಾಟಕ

ಕವಿ ಅಂಬಿಕಾತನಯ ದತ್ತರ ೫೦ನೆಯ ಹುಟ್ಟು ಹಬ್ಬ—17ನೆಯ ಫೆಬ್ರವರಿ 1946ಕ್ಕೆ ಶ್ರೀಯುತ ದ. ರಾ. ಬೇಂದ್ರೆಯವರಿಗೆ 50 ವರುಷ ತುಂಬುತ್ತವೆ. ಶ್ರೀ. ಬೇಂದ್ರೆಯವರ ಹೆಸರು ಕನ್ನಡಿಗರಿಗೆಲ್ಲ ಸುಪರಿಚಿತವಾದುದು. ಅವರ ಕವನಗಳು ಜನಮಾನಕ್ಕೆ ಅತ್ಯುಚ್ಚ ತರಗತಿಯ ವಿಕಾಸವನ್ನೂ ವಿಹಾರವನ್ನೂ ಒದಗಿಸಬಲ್ಲ ಕಾವ್ಯಸ್ಫೂರ್ತಿಯಿಂದ ಕಳೆಗೊಂಡಿವೆ. ಈ ಕವಿತ್ವದ ಮೂಲಕವಾಗಿ ಶ್ರೀ. ಬೇಂದ್ರೆಯವರು ಕನ್ನಡ ನಾಡಿನ ಪಂಡಿತ-ಪಾಮರರೆಲ್ಲರ ಪ್ರೇಮಾದರಗಳಿಗೆ ಪಾತ್ರರಾಗಿದ್ದಾರೆ. ಅವರು ಕಟ್ಟಿದ ಭಾವ ಗೀತಗಳು ಕನ್ನಡಿಗರ ಮನೆ-ಮನೆಗಳಲ್ಲಿ ಶಾಲೆ ಕಾಲೇಜುಗಳಲ್ಲಿ ಅತಿಶಯವಾಗಿ ಪ್ರಚಾರಗೊಂಡಿವೆ. ಅವರ ಕವಿತ್ವವನ್ನು ಮೆಚ್ಚಿರುವ ಕೆಲವು ಸಾಹಿತಿಗಳು ಅವರ ಹಲವು ಕವಿತೆಗಳನ್ನು ಇಂಗ್ಲೀಷ, ಹಿಂದೀ, ಮರಾಠೀ ಭಾಷೆಗಳಲ್ಲಿ ಅನುವಾದ ಮಾಡಿದ್ದುಂಟು. ಶ್ರೀ. ಬೇಂದ್ರೆಯವರು ಕವಿತೆಗಳನ್ನಲ್ಲದೆ ಕೆಲವು ಉತ್ಕೃಷ್ಟ ವಿಚಾರ ಪ್ರಚೋದಿತ ಪ್ರಬಂಧಗಳನ್ನೂ ನಾಟಕಗಳನ್ನೂ ಸಣ್ಣ ಕತೆಗಳನ್ನೂ ರಚಿಸಿದುದು ಕನ್ನಡಿಗರಿಗೆಲ್ಲ ಗೊತ್ತಿದೆ. ಶ್ರೀ. ಬೇಂದ್ರೆಯವರ ವ್ಯಕ್ತಿತ್ವವು ಅತ್ಯಂತ ಪ್ರಭಾವಶಾಲಿಯಾದುದು. ನೂರಾರು ಕನ್ನಡ ತರುಣರು ಸಾಹಿತ್ಯ ಪ್ರಪಂಚದಲ್ಲಿ ಅವರಿಂದ ಪ್ರೋತ್ಸಾಹಗೊಂಡಿದ್ದಾರೆ, ಸ್ಫೂರ್ತಿ ಪಡೆದಿದ್ದಾರೆ. ಆದುದರಿಂದ ಶ್ರೀ. ಬೇಂದ್ರೆಯವರ ಸ್ನೇಹಿತರೂ ಅಭಿಮಾನಿಗಳೂ ಕೂಡಿ ಅವರ ೫೦ನೆಯ ಹುಟ್ಟುಹಬ್ಬವನ್ನು ಅವರ ಘನತೆಗೆ ತಕ್ಕಂತೆ ಆಚರಿಸಬೇಕೆಂಬ ಅಪೇಕ್ಷೆಬಟ್ಟುದು ಸಹಜ. ಈ ಕಾರ್ಯಕ್ಕಾಗಿ ತಾತ್ಪೂರ್ತಿಕವಾದ ಸಮಿಯೊಂದು ಏರ್ಪಟ್ಟು ಈ ಬಿನ್ನಹಪತ್ರಿಕೆಯನು ಹೊರಡಿಸಿದೆ. ಶ್ರೀಯುತ ಬೇಂದ್ರೆಯವರ ನೂರಾರು ಗೆಳೆಯರೂ ಅವರ ಸಾಹಿತ್ಯ ಪ್ರೇಮಿಗಳೂ ಈ ಬಿನ್ನಹವನ್ನು ಮಾನ್ಯಮಾಡಿ ಹುಟ್ಟು-ಹಬ್ಬದ ಕಾರ್ಯಕ್ರಮಗಳೆಲ್ಲ ಯಶಸ್ವಿಯಾಗುವಂತೆ ನಡೆಸಿಕೊಡುವರೆಂದು ದೃಢವಾಗಿ ನಂಬಲಾಗಿದೆ. ಶ್ರೀ. ಬೇಂದ್ರೆಯವರಿಗೆ ಅವರ ೫೦ನೆಯ ಹುಟ್ಟು ಹಬ್ಬದ ದಿನ ಅವರಿಗೆ ಯೋಗ್ಯವಾದ ಒಂದು ನಿಧಿಯನ್ನರ್ಪಿಸಬೇಕೆಂದೂ ಕನ್ನಡ ಸಾಹಿತ್ಯ ರಾಶಿಗೆ ಕಳೆಕೊಡಬಲ್ಲ ಒಂದಾಗಲಿ ಹೆಚ್ಚಾಗಲಿ ಗ್ರಂಥಗಳನ್ನು ಈ ಹುಟ್ಟು ಹಬ್ಬದ ನಿಮಿತ್ತವಾಗಿ ಪ್ರಕಟಿಸಬೇಕೆಂದೂ ತಾತ್ಪೂರ್ತಿಕ ಸಮಿತಿಯವರು ನಿರ್ಣಯಿಸಿದ್ದಾರೆ. ಗೆಳೆಯರಿಂದ ಮತ್ತೀನಾದರೂ ಸಲಹೆ ಸೂಚನೆಗಳು ಬಂದಲ್ಲಿ ಅವುಗಳಿಗೆ ಯೋಗ್ಯ ಗಮನವೀಯಲಾಗುವದು. ನಿಧಿಗೆ ಸಹಾಯ ಮಾಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಹಣ ಕಳಿಸಬೇಕೆಂದು ಪ್ರಾರ್ಥನೆ:—

ಶ್ರೀಯುತ ಎಲ್. ಆರ್. ದುರ್ಗ
ಬಿ. ಎ., ಎಲ್. ಎಲ್. ಬಿ.
ಕಾರ್ಯದರ್ಶಿ, ಬೇಂದ್ರೆಸತ್ಕಾರ ಸಮಿತಿ.

22-7-1944
ಮಾಳಮಡ್ಡಿ, ಧಾರವಾಡ

ಮನೋಹರ ಗ್ರಂಥಮಾಲೆ, ಧಾರವಾಡ-ಕನ್ನಡ ಭಾಷಾ ಪ್ರಿಯರಲ್ಲಿ ವಿನಂತಿ— ನಮ್ಮ ಕನ್ನಡ ನಾಡು ವಿಸ್ತಾರವಾದುದಾದರೂ, ಅದರ ಜನಬಾಹುಳ್ಯ ಸಾಕಷ್ಟು ಇದ್ದರೂ ಜನತೆಯಲ್ಲಿ ಭಾಷೆ, ಸಾಹಿತ್ಯಗಳ ಮೇಲಣ ಮಮತೆ ಅಷ್ಟೊಂದು ಆಶಾಜನಕವಾಗಿಲ್ಲವೆಂದೇ ಹೇಳಬೇಕು. ಈ ಒಂದು ಕಾಲು ಶತಮಾನದಲ್ಲಿ ನಾಡಿನಲ್ಲಿ ಹೊಸ ಜಾಗ್ರತಿಯನ್ನು ಕಾಣುತ್ತಿದ್ದೇವಾದರೂ ನಾಡಿನ ಹಿರಿತನಕ್ಕೆ ಸಮನಾದ ಪ್ರಮಾಣದಲ್ಲಿ ಸಾಹಿತ್ಯದ ಗುಣ, ಪ್ರಮಾಣಗಳ ಬೆಳೆವಣಿಗೆಯಾಗಲಿ, ಜನತೆಯಲ್ಲಿ ವಾಚನಾಭಿರುಚಿಯಾಗಲಿ, ಯಾವ ಪ್ರಮಾಣದಲ್ಲಿ ಬೆಳೆಯಬಹುದೋ ಅಷ್ಟು ಬೆಳೆದಿಲ್ಲವೆಂಬ ಮಾತನ್ನು ಎಲ್ಲರೂ ಒಪ್ಪಬಹುದಾಗಿದೆ. ನಾಡು ಹಲವು ರಾಜಕೀಯ ಆಡಳಿತೆಗಳಲ್ಲಿ ಹರಿದು ಹಂಚಿಹೋದುದು ನಮ್ಮ ಮಂದಗಾಮಿತ್ವಕ್ಕೆ ಮುಖ್ಯ ಕಾರಣವೇನೊ ನಿಜ. ಆದರೂ ಉಳಿದೆಲ್ಲ ರೀತಿಯಿಂದ ಜನತೆಯ ಮನಸ್ಸನ್ನು ಬೆಳೆಯಿಸುವುದು, ಒಂದುಗೂಡಿಸುವುದು ಸಾಹಿತ್ಯ, ಭಾಷಾಪ್ರಿಯರ ಮುಖ್ಯ ಕರ್ತವ್ಯ. ಜನಜೀವನವನ್ನು ಉಜ್ವಲಗೊಳಿಸುವುದರಲ್ಲಿ ಮೊದಲನೆಯ ಹೊಣೆ—ಸಾಹಿತಿಗಳದು. ಅವರು ನಾಡಿನ ವಿವಿಧ ಜೀವನಗಳನ್ನು, ನಾನಾ ರೀತಿಗಳಿಂದ ಚಿತ್ರಿಸಿ ಜನರ ಮನಸ್ಸನ್ನು ಸೆಳೆಯಬೇಕು, ತಿದ್ದಬೇಕು. ಆದರೆ ಅವರಿಗೆ ಕಡಿಮೆಯಲ್ಲದ ಜವಾಬುದಾರಿ ಪ್ರಕಾಶಕರದೂ ಇರುತ್ತದೆ. ಬರೆದವನೇ ತನ್ನ ಪುಸ್ತಕಗಳನ್ನು ಅಚ್ಚು ಹಾಕಿಸಿ, ಓದುಗರಿಗೆ ಮುಟ್ಟಿಸುವ ಕೆಲಸ ವ್ಯವಹಾರಿಕವಾಗಿಯೂ ಅಸಾಧ್ಯವೇ.

ಮನೋಹರ ಗ್ರಂಥಮಾಲೆಯು ಈ ಹಲವು ವರ್ಷಗಳಿಂದ ಮುಖ್ಯವಾದ ಈ ಕೆಲಸವನ್ನು ಮಾಡುತ್ತ ಬಂದಿದೆ. ಸಾಹಿತಿಗೂ ಜನರಿಗೂ ಸೇತುವೆಯಾಗಿ ಅವರ ಸಂದೇಶವನ್ನು ಜನಸಾಮಾನ್ಯರಿಗೆ ಒದಗಿಸಿಕೊಡುವ ಕೆಲಸ ಮಾಡುತ್ತಿದೆ. ಈ ಗ್ರಂಥಮಾಲೆಯ ಹೆಸರನ್ನು ಬಲ್ಲವರಿಗೆ ಅದು ಏನೇನು ಕೆಲಸ ಮಾಡಿದೆಯೆಂಬುದರ ವಿವರ ಹೇಳಬೇಕಿಲ್ಲ; ಇಲ್ಲಿ ಹೇಳ ಬಯಸುವ ವಿಷಯ ಇಷ್ಟೆ, ಮಾಲೆಯ ಪ್ರಕಾಶಕರಾದ ನಾವು ಇನ್ನೂ ಈ ಕೆಲಸದಲ್ಲಿ ತೃಪ್ತರಾಗಿಲ್ಲ ಎಂಬುದು. ಈ ಕೆಲಸವು ಅಮಿತವಾಗಿದೆಯೆಂದೂ ಬಲ್ಲೆವು. ಆದರೂ ಅದರಲ್ಲಿ ಎಷ್ಟು ಹೆಚ್ಚು ನಡೆಯಿಸಲು ಬಂದೀತೋ ಅಷ್ಟು ನಡೆಯಿಸಬೇಕೆಂಬ ಉತ್ಕಟ ಅಭಿಲಾಷೆಯಿಂದ ಮುಂದಕ್ಕೆ ನಡೆಯುತ್ತಿದ್ದೇವೆ. ಆ ಬಯಕೆ ಕೈಗೂಡಲು ಒಂದು ಕಡೆ ಓದುಗರು ನಮಗೆ ಬೇಕು; ಇನ್ನೊಂದು ಕಡೆಯಿಂದ ಬರಹಗಾರರ ಬೆಂಬಲ ಬೇಕು. ಅವರಿಗೂ ತಮ್ಮ ಆ ಉದ್ಯೋಗ ಲೌಕಿಕ ದೃಷ್ಟಿಯಿಂದ ಜೀವನಕ್ಕೆ ನೆರವಾಗಲೂ ಬೇಕು. ಇವೆಲ್ಲವೂ ತೀರ ಮಂದಗಮನದಿಂದ ನಮ್ಮ ನಾಡಿನಲ್ಲಿ ನಡೆಯುತ್ತಿದೆಯಲ್ಲ ಎಂಬುದೇ ನಮ್ಮ ಅತೃಪ್ತಿಗೆ ಮೂಲ.

ಈ ದೃಷ್ಟಿಯಿಂದಲೆ ನಾವು ಮೂರು ವರ್ಷಗಳ ಹಿಂದೆ ನಮ್ಮ ಮಾಲೆಯಲ್ಲಿ ಐವತ್ತು ಗ್ರಂಥಗಳು ಪ್ರಕಟವಾಗಿದ್ದರ ನೆನವಿಗಾಗಿ ಒಂದು ಸಾಹಿತ್ಯೋತ್ಸವವನ್ನು, ಸಾಹಿತಿಗಳನ್ನೂ ಅಭಿಮಾನಿಗಳನ್ನೂ ಕರೆಯಿಸಿಕೊಂಡು ಜರುಗಿಸಿದೆವು. ಇನ್ನೊಂದು ವರ್ಷದಲ್ಲಿಯೆ ನೂರು ಪುಸ್ತಕಗಳ ಪ್ರಕಟಣೆ ಮುಗಿದ ಬಗ್ಗೆ ಒಂದು ಉತ್ಸವ ಜರುಗಿಸುವ ಸಂಕಲ್ಪ ಮಾಡಿದ್ದೇವೆ. ಈ ನಾಡಿಗೆ ತಿಂಗಳಲ್ಲಿ ಅಷ್ಟು ಸಂಖ್ಯೆಯಿಂದ ಗ್ರಂಥಗಳು ಬರುತ್ತಿರಬೇಕಾದ ಈ ಯುಗದಲ್ಲಿ ಹದಿನೆರಡು ವರ್ಷಗಳ ಅವಧಿಯಲ್ಲಿ ನಾವು ನೂರು ಗ್ರಂಥ ಹೊರಡಿಸಿದೆವು—ಎಂಬುದು ಹೆಮ್ಮೆಯ ಮಾತಲ್ಲ. ಈ ಶತ ಗ್ರಂಥೋತ್ಸವವನ್ನು ನಡೆಯಿಸುವುದರ ಉದ್ದೇಶವೇ ನಮ್ಮ ಸಾಹಿತ್ಯದ ಗತಿಯು ಇನ್ನಷ್ಟು ತೀವ್ರವಾದೀತೇ—ಎಂಬ ಬಯಕೆಯಿಂದ. ಸಾಹಿತಿಗಳೂ ಉತ್ಸಾಹ ತಾಳಬೇಕು. ಹೊಸ ರೀತಿಯ ಹೊಸ ವಿಷಯಗಳನ್ನು ಕುರಿತಾದ, ಹೊಸ ಬದುಕನ್ನು ಚಿತ್ರಿಸುವ ಅನೇಕ ಬರಹಗಳು ಮುಂದೆ ಬಂದರೇನೆ ನಮ್ಮ ಹಾರೈಕೆ ಸಫಲವಾದೀತು. ಈ ನಾಡಿನ ಯಾವತ್ತೂ ಹೊಣೆಯನ್ನು ಮನೋಹರ ಗ್ರಂಥಮಾಲೆಯೆ ಹೊರುತ್ತದೆ ಎಂಬಹುಚ್ಚನ್ನು ಅದು ತೊಟ್ಟಿಲ್ಲ. ಆದರೆ ಈ ಉದ್ದೇಶ ನೆರವೇರಿಸುವುದರಲ್ಲಿ ತನ್ನ ಸೇವೆ ಸಲ್ಲಿಸಬೇಕೆಂದು ಅದು ಹಾತೊರೆದಿದೆ.

ಆ ಉದ್ದೇಶದಿಂದಲೇ ಶತ ಗ್ರಂಥೋತ್ಸವದ ಕಾಲಕ್ಕೆ ಕಾದಂಬರಿ, ಕತೆ, ನಾಟಕ, ಏಕಾಂಕ, ವ್ಯಕ್ತಿಚಿತ್ರ, ಪ್ರಬಂಧ, ಕಾವ್ಯ ಮೊದಲಾದ ಸಾಹಿತ್ಯದ ಬೇರೆಬೇರೆ ಬಗೆಗಳನ್ನು ಕುರಿತಾದ ಬರೆವಣಿಗೆಗಳ ಅನೇಕ ಮುಖ್ಯವಾದ ಸ್ಪರ್ಧೆಗಳನ್ನು ಏರ್ಪಡಿಸಿ, ಆಕರ್ಷಕವಾದ ಬಹುಮಾನಗಳನ್ನು ಮುಂದಿರಿಸಿ, ನಾಡಿನ ಬರೆಹಗಾರರಿಗೆ ಒಂದು ಒಳ್ಳೆಯ ಸಂಧಿಯನ್ನು ಕಲ್ಪಿಸಿಕೊಡುವ ಅಪೇಕ್ಷೆಯಿಂದ ಈ ಸಾಹಸ ಮಾಡಿದ್ದೇವೆ. ಇದರಿಂದ ಹತ್ತೇ ಹತ್ತು ಸೊಗಸಾದ ಒಳ್ಳೆಯ ಬರಹಗಳು ಬೆಳಕಿಗೆ ಬಂದರೂ ನಾವು ತೃಪ್ತರಾಗುತ್ತೇವೆ. ಈ ನಮ್ಮ ಹಿರಿದಾದ ಬಯಕೆಯನ್ನು ಕೈಗೂಡಿಸುವ ಹೊಣೆ ನಾಡಿನ ಎಲ್ಲ ಬರಹಗಾರರ ಪಾಲಿಗೆ ಸೇರಿದೆ; ಜನರನ್ನು ಸೇರಿದೆ. ಅವರು ನಮ್ಮ ಕೇಳಿಕೆಗೆ ಮನ್ನಣೆಯಿತ್ತು, ಈ ಗ್ರಂಥಸ್ಪರ್ಧೆಗಳಲ್ಲಿ ಭಾಗ ವಹಿಸುವುದು ಕೇಳಿಂದು ತಿಳಿಯದೆ—ತಮ್ಮ ಉತ್ಸಾಹವನ್ನು ನಮ್ಮದರೊಂದಿಗೆ ಸೇರಿಸಿ ನಾವು ಸಂಕಲ್ಪಿಸಿರುವ ಶತ ಗ್ರಂಥೋತ್ಸವವನ್ನು ಕನ್ನಡ ನಾಡಿನ ಉತ್ಸವವನ್ನಾಗಿ ಮಾಡಿ ತೋರಿಸಬೇಕೆಂಬುದೇ ನಮ್ಮ ಕೋರಿಕೆ.

(ಸ್ಪರ್ಧೆಯ ವಿವರಗಳನ್ನು ಬರೆದು ತಿಳಿದುಕೊಳ್ಳಬಹುದು)

ತಮ್ಮವನಾದ,
ಜಿ. ಬಿ. ಜೋಶಿ,
ಸಂಪಾದಕ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಆ ದಾಖಲೆ......

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 1925ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಅಂದಿನಿಂದಲೇ ಸಿಂಡಿಕೇಟು ಬದ್ಧ ಕಂಕಣವಾಗಿದೆ. ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟಿನಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ—ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಅಕ್ಷರಶಃ ಪಾಲಿಸಲಾಗುವುದು.

ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಟಿ. ಎ. ಪೈ, ಬಿ. ಕೋಮ್, ಎ. ಐ. ಐ. ಬಿ.,
ಜನರಲ್ ಮೆನೇಜರ್.

The Canara Industrial & Banking Syndicate Limited.

(Incorporated in British India)

ನೆನಪಿರಲಿ!

(೨ನೇ ಪುಟದಿಂದ ಮುಂದುವರಿದುದು.)

ವಾದ ಕೊಹಿನೂರನ್ನು--ಲೋಕಶಾಂತಿ ಪ್ರವಾದಿ ಮಹಾ ಕವಿಯನ್ನು–ಕಳಕೊಂಡ ದಿನ. ಇವರೆಲ್ಲರೂ ವರುಷದ 365 ದಿನಗಳಲ್ಲಿ-ವಿಶೇಷವಾಗಿ ಆಗೋಸ್ಟಿನಲ್ಲಿ-ಸ್ಮರಣೆಗೆ ಬರುತ್ತಾರೆ. ಇನ್ನು ಭಗತ್‌ಸಿಂಗನಂತಹ ಹುತಾತ್ಮರೆಷ್ಟೋ ಮಂದಿ ಬದುಕಿರುವವರಿಗಿಂತ ಹೆಚ್ಚಾಗಿ ನಮ್ಮ ರಕ್ತ ಕುದಿಸುತಿದ್ದಾರೆ. ಅಂತೂ, ಭಾರತಕ್ಕೆ ಆಗೋಸ್ಟು 'ಆಗೋ...' ಎಂದು ಕೈ ತೋರಿಸುತ್ತಲೇ ಬರುತ್ತಿದೆ. ಈ ಬಾರಿ ಮತ್ತೊಂದು ಹೊಸ ನೆನಹು–ಸುಭಾಸ್ ಬೋಸರದು.

ಸುಭಾಸ್!

“ಆಗೋ, ಇಲ್ಲಿದ್ದಾನೆ, ಸಂಭಾವಿತ ನಿರ್ಲಿಪ್ತ ಮನುಷ್ಯ. ಮತ್ತು ಆ ಮನುಷ್ಯನೇ ನಿಮ್ಮ ಸಮ್ಮುಖಕ್ಕೆ ಜೈಲು ಗಾಡಿಯಿಂದ ತರಲ್ಪಟ್ಟಿದ್ದಾನೆ. ಇಲ್ಲಿದೆ ಅವನ ತಲೆ. ಬೇಕಾಗಿದ್ದರೆ ನೀವದನ್ನು ತಗೊಳ್ಳಿ. ನೀವೀತನಿಗೆ ಮರಣ ಶಿಕ್ಷೆ ವಿಧಿಸ.ವಿರಾದರೆ ಅದೇ ಕೊನೆಯದು. ಮಾರ್ಶಲ್ ಪಿಟೇನರು ಎಂದಿಗೂ ದಯಾಯಾಚನೆ ಮಾಡುವಂತಿಲ್ಲ-ಪಿಟೇನರು ತನ್ನ ಪ್ರಾಣಕ್ಕಾಗಿ ವಾದಿಸುತ್ತಿಲ್ಲ— ಮಾನಕ್ಕಾಗಿ” ಮಾಜೀ ಫ್ರಾನ್ಸಿನ ಶಿರಸ್ಸಾಗಿದ್ದ ಮಾರ್ಶಲ್ ಪಿಟೇನರ ವಿಚಾರಣೆ ಮುಗಿದಾಗ ಡಿಫೆನ್ಸ್‌ವಕೀಲ್ ಮೆಟ್ರ್ ಫೆರ್ನಾಂಡ್ ಪಾಯನರು ತನ್ನ ವಾದವನ್ನು ಮಂಡಿಸುತ್ತಾ ಜ್ಯೂರಿಗಳಿಗೆ ಕೊನೆಗೆ ಹೇಳಿದ ಮಾತುಗಳವು. 40 ಕೋಟಿ ಭಾರತೀಯರೂ ಹೀಗೆಯೇ ಬಾಯಿ ಬಿಡುವ ಕಾಲ ಬರಬಹುದೆ? ಮಾಜೀ ರಾಷ್ಟ್ರ ಪತಿ—ರಾಷ್ಟ್ರ ಗೌರವ—ಸುಭಾಸ್ ಭೋಸರ ಭವಿಷ್ಯವೇನು? “ಸುಭಾಸರು ಜಾಪಾನರ ಪರವಾಗಿ ಭಾರತವನ್ನಾಕ್ರಮಿಸಲು ಬರುತ್ತಾರಾದರೆ ನನ್ನ ತೀವ್ರ ಪ್ರತಿಭಟನೆ ಅವರನ್ನು ಕಾದಿದೆ. ತದ್ವಿರುದ್ಧವಾದರೆ ಅವರಿಗೆ ನನ್ನ ಸ್ವಾಗತವಿದೆ. ಎಷ್ಟೆಂದರೂ ಒಬ್ಬ ಹಿಂದೀ ಧುರೀಣನು ಮತ್ತೊಬ್ಬ ಧುರೀಣನ ಹೃದಯವನ್ನು ಅಲ್ಲಗಳೆಯಲಾರ. ಸುಭಾಸಚಂದ್ರ ಭೋಸರ ಏಕಮಾತ್ರ ಗುರಿಯೆಂದರೆ ಭಾರತ ಸ್ವಾತಂತ್ರ್ಯಸಾಧನೆಯೆಂಬುದು ನಿರ್ವಿವಾದ”--ಎಂದಿದ್ದರು ಸಿಮ್ಲಾದಲ್ಲಿ ಪಂಡಿತ ನೆಹರು. ಮುಂದೇನು? ಬೋಸ್ ಬಾಬು ಹೇಗಿದ್ದವರು! ಹೇಗಿದ್ದಾರೆ? ಇನ್ನೇನಾಗಲಿದ್ದಾರೆ? ಅವರ ಚಿತ್ರ ಕಣ್ಣ ಮುಂದೆ ಬಂದಾಗ ಸ್ಮರಣೆಯೋಡುತ್ತಿದೆ, ಹಿಂದಕ್ಕೂ ಮುಂದಕ್ಕೂ!

ಹಿಂದೆ—

ರಾಷ್ಟ್ರಪತಿ– ರಾಷ್ಟ್ರಗೌರವ–ಕ್ರಾಂತಿಪುರುಷ–ಯುವಕರ ಆದರ್ಶಮೂರ್ತಿ-- ಭಾರತೀಯರ ಹೃದಯಾಧಿದೇವತೆ ಸುಭಾಸ್.

ಬಂಗಾಳ-ಸ್ವಾತಂತ್ರ್ಯ ಕೇಸರಿಗಳಿಗೆ ಜನ್ಮವೀಯುವದಕ್ಕೆ ಹೆಸರಾದ ಭಾರತದ ಸಿಂಹಗಡ-ಸುಭಾಸರನ್ನು ಹೆತ್ತಿತು. ಐ. ಸಿ. ಎಸ್. ಪರೀಕ್ಷೆಗೆ ನಿಲ್ಲಲಿದ್ದವರು ಕಲೆಕ್ಟರರಾಗುವ ಬದಲಿಗೆ ಕ್ರಾಂತಿಪುರುಷರಾಗಿ ಬಂದರು. ದೇಶಸೇವೆಗಾಗಿ ಬೆವರು, ರಕ್ತ ಸುರಿಸಿದರು. ರಾಷ್ಟ್ರಸೇವೆಗಾಗಿಯೇ ಬ್ರಹ್ಮಚಾರಿಯಾಗಿ ಉಳಿದರು. ಸದಾಕಾಲ ಜೈಲರನ ಮುಖವನ್ನಲ್ಲದೆ ಇದುವರೆಗೂ ಮಾವನ ಮುಖ ಕಂಡವರಲ್ಲ. ಪೋಲೀಸ್ ಲಾಠಿಯೊಂದಿಗೆ ಸುಭಾಸರ ಎಲಬು ಕೋಲಾಟವಾಡಿದಷ್ಟು ಇನ್ನೊಬ್ಬ ಪ್ರಮುಖನದ್ದಿಲ್ಲ. ಸಾಹಸಪ್ರೇಮಿ; ಕಲ್ಮಷರಹಿತ ಮನೋವೃತ್ತಿಯ ತರುಣ. ಛಲವಾದಿ. ಕಾಂಗ್ರೆಸಿನಲ್ಲಿ ಅವರಾವ ಬದಿಯಲ್ಲಿದ್ದರೆಂಬುದು ಸ್ಪಷ್ಟವಲ್ಲ; ಕೋರ್ಪರೇಶನಿನಂತಹ ಚುನಾವಣೆಗಳ ಸಮಯ ಕಾಂಗ್ರೆಸಿನ ಬಲಪಕ್ಷೀಯರಾಗಿದ್ದರು. ಕಲ್ಕತ್ತಾದ ಕೋರ್ಪರೇಶನ್ ತನ್ನಾಯುಷ್ಯದಲ್ಲಿ ಕಂಡ ಅತಿ ಸಮರ್ಥ ಮೇಯರರಲ್ಲಿ ಸುಭಾಸರೊಬ್ಬರು. ಉಗ್ರಗಾಮಿ ಚಳವಳಿಗಳ ಸಮಯ ಅವರು ಎಡ ಪಕ್ಷೀಯರೇ. ರಾಷ್ಟ್ರ ಪ್ರಮುಖರ ಪೈಕಿ ಸುಭಾಸರಲ್ಲಿ ಒಡೆದು ಕಾಣುತ್ತಿದ್ದ ಒಂದು ವಿಶೇಷವೆಂದರೆ ಅವರಲ್ಲಿದ್ದುದು ತುಲನಾತ್ಮಕ ಬುದ್ಧಿಯಲ್ಲ-ತುಂಟ ಮನೋವೃತ್ತಿ. ಸುಭಾಸ್ ಎಡೆಗಾಡ- ಬುದ್ಧಿಜೀವಿಯಲ್ಲ. 'ಭಾರತಕ್ಕೆ ಸ್ವಾತಂತ್ರ್ಯ ಬೇಕು-ಅದಕ್ಕೆ ಸಾಹಸ ಬೇಕು' ಇದೊಂದೇ ಮಂತ್ರ ಅವರ ಹಣೆಯಲ್ಲಿದ್ದುದು. ಅದಕ್ಕೆ ಸಹನೆ ಬೇಕು-ಸಂದರ್ಭ ನೋಡಿಕೊಳ್ಳಬೇಕು–ಸಮಾಲೋಚನೆ ಬೇಕು, ಎಂಬುದನ್ನೇ ಅವರರಿಯರು. ಈ ಸ್ವಭಾವದಿಂದಲೇ ಅವರೊಂದು 'ಅತಿರೇಕ'ವಾಗಿ ಕಾಂಗ್ರೆಸ್ ಪ್ರಮುಖರ ನಡುವೆ ಪ್ರತ್ಯೇಕಸಲ್ಪಟ್ಟಿದ್ದರು. ಬಂಗಾಳದಲ್ಲಿ ಗಾಂಧೀವಾದಿಗಳ ಪ್ರಮುಖನಾಗಿ ಬ್ಯಾರಿಸ್ಟರ್ ಸೆನ್ ಗುಪ್ತರಿದ್ದಾಗ ಸುಭಾಸರು ಅವರ ವಿರುದ್ಧ ಪಕ್ಷದ ನಾಯಕ. ಆಗ ಬಂಗಾಳದ ಕಾಂಗ್ರೆಸ್ ಪಾಳಯದಲ್ಲಿ ಬಿಯಾಂಗ್-ಕಮ್ಯೂನಿಸ್ಟ್ ಕಾಳಗವೇ ನಡೆದಿತ್ತು. ಈ ಸಂಬಂಧದ ಒಂದು ವಿವಾದದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಂ. ಮೋತೀಲಾಲರ ತೀರ್ಮಾನವು ತನಗೆ ವಿರುದ್ಧವಾದಾಗ 'ಪಕ್ಷಪಾತಿ' ಎಂದು ಪಂಡಿತರ ಸಮ್ಮುಖದಲ್ಲೇ ಸುಭಾಸರು ಉರಿಕಾರಿಬಿಟ್ಟರು. ಮೋತೀಲಾಲರಿಗೆ ರೇಗಿತು. ಈ ಕುರಿತು ವಿಚಾರಣೆ ನಡೆಯಲೇಬೇಕೆಂದು ಹಠ ಹಿಡಿದರು. ಆ ಹೊತ್ತಿನಲ್ಲಿ ಈ ನಿಷ್ಕಳಂಕ ಬುದ್ಧಿಯ ಯುವಕನ ಹೃದಯ ಕುದಿದ ನೊರೆ ಮಾತಾಗಿ ಹೊರಬಿದ್ದು ಮುಗಿದಿತ್ತು. 'ಮೋತೀಲಾಲರೆಂದರೆ ನನಗೆ ತಂದೆಗೆ ಸಮಾನ' ಎಂದು ಒಡನೆಯೇ ಕ್ಷಮೆ ಯಾಚಿಸಿದರು. ಅಂತಹ ಮನುಷ್ಯ ಸುಭಾಸ್. ಈ ನಿಸ್ವಾರ್ಥಿಗೆ, ಉಗ್ರರಾಷ್ಟ್ರಪ್ರೇಮಿ ಯುವಕನಿಗೆ ಹಿಂದೀಯರ ಗೌರವ ಮಾತ್ರ ದೊರೆತುದಲ್ಲ-ಹೃದಯ ಪೀಠವೇ ದೊರೆಯಿತು. ಬೋಸ್ ಮತ್ತು ನೆಹರು ಭಾರತದ ಎಡ ಬಲ ಭುಜಗಳಾದರು; ತರುಣ ಮಹಾಭಾರತದ ಕೃಷ್ಣಾರ್ಜುನರಾದರು. ದೇಶವು ಸುಭಾಸರಿಗೆ 'ರಾಷ್ಟ್ರಪತಿ' ಪಟ್ಟ ಕಟ್ಟಿತು; ಮರು ವರುಷವಾದರೂ ಆ ಪೀಠದಿಂದಿಳಿಸುವ ಮನಸ್ಸು ರಾಷ್ಟ್ರಕ್ಕೆ ಬರಲಿಲ್ಲ. ಪಟೇಲ್, ಆಜಾದ್, ಪ್ರಸಾದರಂತಹ ಧುರೀಣರು ಪಟ್ಟಾಭಿಯವರನ್ನು ಬಹಿರಂಗವಾಗಿ ಶಿಫಾರಸು ಮಾಡಿದರೂ ದೇಶವು ಸುಭಾಸರನ್ನೇ ಅಧ್ಯಕ್ಷ ಪದವಿಗೆ ಪುನಃ ಆರಿಸಿತು. ಆಗ ಗಾಂಧಿಜೀ ಮುಂದೆ ಬಂದು 'ಈ ಸೋಲು ನನ್ನದು' ಎಂದೊಡನೆ ರಾಷ್ಟ್ರ ಹೆಜ್ಜೆ ಹಿಂದಿಟ್ಟಿತು. ದೇಶದ ಮುಂದೆ ಗಾಂಧಿಯವರನ್ನು ನೋಯಿಸಲೋ ಸುಭಾಸರನ್ನು ಸೋಲಿಸಲೋ ಎಂಬ ಪ್ರಶ್ನೆ ಬಂದರೂ ಬೋಸರು ತಪ್ಪು ಮಾಡಿದುದೂ ಇಲ್ಲ; ತನ್ನ ಪಂಥ ಬಿಟ್ಟುದೂ ಇಲ್ಲ. ಅಂದಿನ ಸುಭಾಸ್-ಸ್ವಯಂಸೇವಕ ದಳದ ಸೇನಾನಿಯಾಗಿದ್ದ ಆ ಬೋಸ್,-ರಾಷ್ಟ್ರಾಧ್ಯಕ್ಷನಾಗಿದ್ದ ಸುಭಾಸ್ಚಂದ್ರ--ಅವರನ್ನು ಭಾರತವೆಂದಿಗೂ ಮರೆಯದು.

ಆ ಮೇಲೆ-ಇನ್ನು ಮುಂದೆ?

ಯುದ್ಧಾರಂಭವಾಯಿತು. ರಾಜದ್ರೋಹದ ಕಕ್ಷಿಯೊಂದು ನಡೆಯುತ್ತಿದ್ದಂತೆಯೇ 1942ರ ಆದಿಯಲ್ಲಿ ಕಲ್ಕತ್ತಾದ ತನ್ನ ಮನೆಯ ಸ್ವಂತ ಕೋಣೆಯಲ್ಲಿ ಸುಭಾಸ್ ತಪಶ್ಚರ್ಯೆ ಕೈಕೊಂಡರು. ಬಹಿರ್ ಪ್ರಪಂಚದ ಸಂಬಂಧ ಕಡಿದುಕೊಂಡು ಕುಳಿತರು; ಒಂದು ದಿನ ಮುಂಜಾನೆ ಅಲ್ಲಿರಲಿಲ್ಲ. [illegible] ವಾರ್ತೆ ಬಂದುದು ಜರ್ಮನಿಯಿಂದ. ನಡುರಾತ್ರಿಯಲ್ಲಿ ಜಾಪಾನರು ಅವರನ್ನೊಯ್ದು ಆಗ ಹಿಂದೂದೇಶಕ್ಕೆ ಸಂಚಕಾರ ಕೊಟ್ಟಿದ್ದ ಇಟಲಿ, ಜರ್ಮನಿಗಳ ವಶಕ್ಕೆ ಕೊಟ್ಟರೆಂಬ ವಾರ್ತೆಬಂತು. ಸುಭಾಸರ ಸ್ವರ ಆಕಾಶವಾಣಿಯಾಗಿ ಬರುತಿತ್ತಂತೆ. ಸ್ಟಾಲಿನ್‌ಗ್ರಾಡ್ ಯುದ್ಧಾನಂತರ ಸುಭಾಸರು ಜಾಪಾನರ ಸೊತ್ತಾಗಿದ್ದಾರೆ ಎಂಬ ವಾರ್ತೆ ಬಂತು. ಅಸ್ಸಾಮಿನೊಳಗೆ ಜಾಪಾನೀ ಸೇನೆ ನುಗ್ಗಿದಾಗ ಬೋಸರು ಹಿಂದೂಸ್ಥಾನದ ಗಡಿವರೆಗೂ ಬಂದಿದ್ದರಂತೆ. ಅವರು ಒಂದು 'ಹಿಂದೀ ರಾಷ್ಟ್ರೀಯ ಸೇನೆ'ಯ ಸೇನಾನಿ. ಅಲ್ಲಿ 'ಭಾರತದ ಫ್ಯುರರ್' 'ಸ್ವತಂತ್ರಭಾರತದ ಶಿರಸ್ಸು' ಸುಭಾಸ್. (ಇಲ್ಲಿದ್ದ ಅವರ ಮನೆ ಮತ್ತು ಆಸ್ತಿಗಳನ್ನೆಲ್ಲಾ ಸರಕಾರ ಏಲಮಿಗಿಟ್ಟಿದೆ)

ಈಗ ಜಾಪಾನ್ ಸೋತು ಶರಣಾಗಿದೆ. ಸುಭಾಸರ ಭವಿಷ್ಯವೇನು? ಕೊನೆಯ ಬಾರಿ ಅವರು ಸಿಂಗಾಪುರದಲ್ಲಿದ್ದು ಅಲ್ಲಿಯ ಆಕಾಶವಾಣಿಯಲ್ಲಿ '[illegible]ಡಿದರೆಂಬ ವಾರ್ತೆಯಿದೆ ಈಗೆಲ್ಲಿ? ಇನ್ನೇನು?

“ಸುಭಾಸರ ಕೊನೆಯ ಮಾತು ಸಿಂಗಾಪುರದಿಂದ ಬಂದಿತ್ತು; ಅವರು ಸೆರೆಸಿಕ್ಕಿದರೆ ಯೋಗ್ಯ ಶಿಕ್ಷೆ ವಿಧಿಸಲು ಪದ್ಧತಿ ಪ್ರಕಾರ ಬ್ರಿಟಿಷರ ವಶಕ್ಕೊಪ್ಪಿಸಲಾಗುವದು” ಎಂದು ಈಗತಾನೇ ವಾಷಿಂಗ್ಟನಿನಿಂದ ವಾರ್ತೆಬಂದಿದೆ. ಜಾಪಾನ್ ಪಕ್ಷಪಾತಿಗಳ ಕುರಿತು ಮಿತ್ರರಾಷ್ಟ್ರಗಳೇನೂ ಪ್ರತೀಕಾರಮಾಡದೆ ಸಂಬಂಧಪಟ್ಟ ರಾಷ್ಟ್ರಗಳಿಗೇನೇ ಅಂಥವರನ್ನು ಒಪ್ಪಿಸುವ ಧರ್ಮಸ್ವೀಕಾರವಾಗಿದೆ. ಸುಭಾಸ್ ಬೋಸರು ಯುದ್ಧ ಕೈದಿಯಾಗಿ ಬ್ರಿಟಿಷರ ಕೈಗೆ ಹೋಗಲಿದ್ದಾರೆ. ಜಾಪಾನ್ ಪಕ್ಷಪಾತಿಗಳ ಮೇಲಿನ ಅಧಿಕಾರವು ಶರಣು ಶರ್ತಗಳಿಗನುಸಾರವಾಗಿ ಮಿತ್ರ ರಾಷ್ಟ್ರಗಳದ್ದು; ಈ ಅಪರಾಧಿಗಳು ನುಸುಳಿ ತಪ್ಪಿಸಿಕೊಳ್ಳುವೆವೆಂದರೆ ಇಡೀ ಲೋಕದಲ್ಲೀಗ ಒಂದಿಂಚು ಸ್ಥಳವೂ ಇಲ್ಲ. ಆದರೆ ಸುಭಾಸರ ಪಟ್ಟಿಗೆ ಒಂದು ರಾಜ್ಯದಷ್ಟೇ ವಿಸ್ತಾರವುಳ್ಳ 40 ಕೋಟಿ ಹಿಂದೀಯರ ಹೃದಯಪೀಠ!— ಹಿಂದೀಯರೇ,

ನೆನಪಿರಲಿ-ಸುಭಾಸ್ ಚಂದ್ರಭೋಸ್.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

CHAMPAE'S
Snow & Castrex
(SoleDistributers for (India.)
Sukhananda Stores
Santhekatte, UDIPI, S. K.

ತುಸು ಓದಿ!

ವರ್ಗದಾರ—ಪಟೇಲರೆ, ಆರನೇ ಕ್ಲಾಸಿನಲ್ಲೊ ಏನೋ ಶಾಲೆ ಬಿಟ್ಟ ನೀವು ತಹಶೀಲ್ದಾರರೊಡನೆ ಸರಾಗವಾಗಿ ಇಂಗ್ಲಿಷು ಮಾತಾಡಿದಿರಲ್ಲ? ಯಾರು ಕಲಿಸಿದರು ನಿಮಗೆ?

ಪಟೇಲ—ಯಾರೇತಕ್ಕೆ? ನಾನೇ ನನ್ನಷ್ಟಕ್ಕೆ ಕಲಿತುಕೊಂಡೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನು ಅಭ್ಯಾಸಿಸಿದೆ. ಅದನ್ನು ಕಲಿತರೆ ಯಾವ ಆಫೀಸರರೊಡನೆಯೂ ಇಂಗ್ಲಿಷಿನಲ್ಲಿ ಮಾತಾಡುವ ಸಾಮರ್ಥ್ಯ ಬರುತ್ತದೆ. ಈ ಕಾಲದಲ್ಲಿ ಅಷ್ಟು ಇಂಗ್ಲಿಷು ಕಲಿತುಕೊಳ್ಳದಿದ್ದರೆ ನಮ್ಮ ಅನುದಿನದ ವ್ಯವಹಾರದಲ್ಲ ಬಾಯಿಕಟ್ಟಿದಂತಾಗುತ್ತದಲ್ಲ?

ವರ್ಗದಾರ—ಅದು ನಿಜ. ಆದರೆ ನನಗೆ ಇಂಗ್ಲಿಷು ಅಕ್ಷರವೂ ಗೊತ್ತಿಲ್ಲವಲ್ಲ!

ಪಟೇಲ—ಕನ್ನಡ ಗೊತ್ತಿದ್ದರೆ ಸಾಕು. ಮತ್ತೆಲ್ಲ ಆ ಪುಸ್ತಕ ಸುಲಭವಾಗಿ ಕಲಿಸಿ ಬಿಡುತ್ತದೆ. ಇಂದೇ ಕೊಂಡುಕೊಂಡು ಅಭ್ಯಾಸಮಾಡಿರಿ.

ವರ್ಗದಾರ—ಎಲ್ಲಿ ಸಿಗುತ್ತದೆ? ಬೆಲೆ ಏನು?

ಪಟೇಲ—ಉಡುಪಿಯ 'ನವಭಾರತ [illegible]'ದಲ್ಲಿದೆ. ಬೆಲೆ ಬರೇ 1—4—0! ಯಾವ ವೃತ್ತಿಯವರೇ ಇರಲಿ, ಅವರಿಗೆ ಸ್ವಲ್ಪ ಇಂಗ್ಲಿಷು ಗೊತ್ತಿದ್ದರೆ ಅವರ ಕಸುಬಿಗೆ ಕಳೆಯೇರುತ್ತದೆ. ಆದುದರಿಂದ ವ್ಯಾಪಾರಿಗಳು, ಚಿಕ್ಕ ಪುಟ್ಟ ನೌಕರರು, ಕೆಲಸಗಾರರು ಈ ಪುಸ್ತಕದ ಅಭ್ಯಾಸದಿಂದ ತಮ್ಮ ತಮ್ಮ ಉದ್ಯೋಗಗಳನ್ನು ಮಿರುಗುಗೊಳಿಸಬಹುದು. ಇಂಗ್ಲಿಷು ಮಾತಾಡಲಿಕ್ಕೆ, ಆರ್ಡರು ಕೊಡಲಿಕ್ಕೆ, ತಂತಿ ಬಿಡಲಿಕ್ಕೆ, ಎಡ್ರೆಸ್ಸು ಬರೆಯಲಿಕ್ಕೆ, ಎಲ್ಲಾ ಗೊತ್ತಾಗುತ್ತದೆ.

ವರ್ಗದಾರ— ಹಾಗಾದರೆ ಇಂದೇ ಅದನ್ನು ಕೊಂಡುಕೊಳ್ಳಬೇಕು.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

The Directors and the members of the staff of the above Bank are gratified to announce that this Bank has completed on the 24th instant a reliable and tireless financial service of a quarter of a century and entered upon the next quarter with the confident hope that all its constituents would be pleased to continue to evince as much interest in the welfare as ever before. They also GRATEFULLY ACKNOWLEDGE that the Bank's achievements are the outcome of the warm attention so for accorded to it by its esteemed well-wishers.

Terms of business may be had from any of our Offices.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಫೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೭ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಾರ್ತೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ದ.ಕ**

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಫೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ವಾಲಿಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನ್ಸಿಬಹುದು. (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ. (2) ಬೊಂಬಾಯಿ ಏಜೆಂಟರು - ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್, ಜ. ಐ. ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಅಂತರಂಗದ ಕತೆಗಳು

೧೫ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೫—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA
ನವಯುಗ

ವರ್ಷ ೨೫] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 25
ವಾರ ೧] Founder: **SRI A. B. SHETTY.** [No. 1

ಉಡುಪಿ • **6—9—1945** • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಮೃತಾಂಜನ ತಲೆವೇದನೆ, ಶಿರೋ, ವೇದನೆ, ಉಳುಕು ಕತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಜೇನೆ ಕಲ್ಲು ವಾತ, ಮೊದಲು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

REGD

ಕಫ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

CALL IT A MARVELL
OR
WHAT YOU WILL

"**Canara Mutual**" has introduced a new scheme, which is the last straw on the unbeliever's back. Its Fair Deal Endowment Policy Explodes all the longstanding objections to insurance, for IT GUARANTEES, IN ADDITION TO THE SUM ASSURED, THE RETURN OF ALL PREMIUMS PAID EXCLUDING THE FIRST YEAR'S on the occurance of a claim whether by death or maturity.

For further particulars of the scheme apply to the Head Office of the Company.

The Canara Mutual Assurance Co. Ltd.,
Head Office:- **UDIPI, (S. India.)**

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನಾಯು, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.
(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ:—**53,00,000.**

KOCHIKAR BROTHERS, LTD.
Central Office:—**UDIPI**. S. K
Mangalore ○ Calicut ○ Bangalore ○ Madras ○ Madura ○ Trivandrum ○ Bombay

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪಾಯಿ 26 ಲಕ್ಷ.
ಕ್ಷೇಮನಿಧಿ ರೂಪಾಯಿ 10 ಲಕ್ಷ.

ಕೆನರಾ ಬೇಂಕ್ ಲಿಮಿಟೆಡ್.
(ESTD. 1906 ಸ್ಥಾಪನೆ.)

CANARA BANK LIMITED
(Incorporated in British India. liability of Members Limited.)

The Vijaya Bank Limited.
ANNOUNCEMENT

We have much pleasure to announce that the New shares issued by us have been easily oversubscribed. We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ತುಂಬಾ ಅರ್ಜಿಗಳು ಬಂದ ಕಾರಣ, ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ.

Head Office: MANGALORE } B. MANJAYA HEGDE. Chairman of the Board of Directors.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

★ ಸುಭಾಸ್ ಬಾಬು ಇನ್ನಿಲ್ಲ! ★

ಯೋಧ ಮರಣ.

ಸುಭಾಸ್ ಚಂದ್ರಬೋಸ್, ಇಹ ಯಾತ್ರೆ ಮುಗಿಸಿದರು. ನಮ್ಮ ಬಾಬು ಇನ್ನಿಲ್ಲ! ಆಗೋಸ್ತು ತಾ. 23ರಲ್ಲಿ ಜಾಪಾನೀ ವಾರ್ತಾವಾಹಕ ಸಂಸ್ಥೆಯು 40 ಕೋಟಿ ಭಾರತೀಯರ ಹೃದಯಕರಟಿಸುವ ಆಟಂ ಬೋಂಬನ್ನು ಸಿಡಿಯಿಸಿಯದೆ:—

“ಶ್ರೀ. ಬೋಸ್, ಆಜಾದ್ ಹಿಂದ್‌ನ ತಾತ್ಕಾಲಿಕ ಸರಕಾರದ ನಾಯಕ, ಜಾಪಾನೀ ಸರಕಾರದೊಡನೆ ಪರ್ಯಾಲೋಚನೆ ನಡಿಸಲು ಆಗೋಸ್ತು ತಾ. 16ರಲ್ಲಿ ವಿಮಾನ ಹತ್ತಿ ಸಿಂಗಾಪುರದಿಂದ ಟೋಕಿಯೋವಿಗಾಗಿ ಹೊರಟದ್ದರು. ಆಗೋಸ್ತು 18ರಲ್ಲಿ ಘಂಟೆ 14·00ಕ್ಕೆ ಆ ವಿಮಾನವು ತಾಯಿಹೋಕು ವಿಮಾನ ನಿಲ್ದಾಣದಲ್ಲಿ ಅವಘಡಗೊಂಡಾಗ ಅವರಿಗೆ ವಿಶೇಷ ಜಖಮಾಯಿತು. ಜಾಪಾನಿನ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ದೊರೆಯಿತು. ಮಧ್ಯ ರಾತ್ರಿ ಅವರು ಮರಣಗೊಂಡರು. ಲೆಫ್ಟನೆಂಟ್ ಜನರಲ್ ಟ್ಸುನಮಾದಿಯವರು ಈ ಅವಘಡದಲ್ಲಿಯೇ ಮರಣ ಪಟ್ಟರಲ್ಲದೆ, ಸುಭಾಸರ ಅನುಯಾಯಿ ಕರ್ನಲ್ ಹಬಿಬುರ್ ರಹಿಮಾನರಿಗೆ ಜಖಮಾಗಿದೆ. ಇತರ ನಾಲ್ವರು ಜಾಪಾನೀ ಅಧಿಕಾರಿಗಳೂ ಈ ಅವಘಡದಲ್ಲಿ ಘಾಯಗೊಂಡಿದ್ದಾರೆ.”

ಈ ವಾರ್ತಾ ಸಿಡಿಲು ಬಡಿದಾಗ-ಕರಾಳ ಮೃತ್ಯು ಎಡಗಾಲಿನಿಂದ ತನ್ನ ಹೃದಯಕ್ಕೆ ಝಾಡಿಸಿ ಒದೆದ ನೋವನ್ನು ಭಾರತವನುಭವಿಸಿದೆ. ದುಃಖವು ವರ್ಣ್ಣನಾತೀತ. ಸುಭಾಸರು ಚಿರಂಜೀವಿಯಲ್ಲವೆಂಬುದು ಗೊತ್ತಿದ್ದದ್ದೇ. ಆದರೆ ಆ ದಿನ-ಆ ರೀತಿ–ಸಾಯಬೇಕೆಂದೇನು?-ಹಿಂದುಸ್ಥಾನದಿಂದ ಟೋಕಿಯೋವಿಗೆ—ಟೋಕಿಯೊದಿಂದ ಬರ್ಲಿನಿಗೆ--ಬರ್ಲಿನಿನಿಂದ ರೋಮಿಗೆ–ರೋಮಿನಿಂದ ಟೋಕಿಯೋವಿಗೆ-ಟೋಕಿಯೋದಿಂದ ಸಿಂಗಾಪುರಕ್ಕೆ---ಸಿಂಗಾಪುರದಿಂದ ರಂಗೂನಿಗೆ–ರಂಗೂನಿನಿಂದ ಪುನಃ ಸಿಂಗಾಪುರಕ್ಕೆ ಹಾರಿದಾಗ ಸುಭಾಸರು ಯಾವ ವಿಮಾನಕ್ಕೂ ಭಾರವಾದುದಿಲ್ಲ; ಈ ಬಾರಿ ಜಾಪಾನ್ ಸೋತು, ಮಿತ್ರ ಸೇನೆ ಜಾಪಾನಿನೊಳಗೆ ಹೊಗುವ ದಿನ ಬರುತ್ತದೆನ್ನುವಾಗಲೇ ಸುಭಾಸರು ಜಾಪಾನೀ ವಿಮಾನಕ್ಕಷ್ಟೇ ಅಲ್ಲ,ಭೂಮಿಗೂ ಭಾರವಾದರೇಕೆ? ಅವರು ಚಿಕಿತ್ಸೆ ಹೊಂದಿದುದು ‘ಜಾಪಾನೀ ಆಸ್ಪತ್ರೆಯಲ್ಲಿ’; ಜಾಪಾನಿನ ಯಾವ ಆಸ್ಪತ್ರೆಯಲ್ಲಿ? ಉತ್ತರ ಕ್ರಿಯೆ ಹೇಗೆ ನಡೆಯಿತು? ಸುಭಾಸ್ ಸತ್ತುದು 18ರಲ್ಲಿ—ಸುದ್ದಿ ಹುಟ್ಟಿದುದು 25ರಲ್ಲೇಕೆ? 1942ರಲ್ಲೊಮ್ಮೆ ಸುಭಾಸರು ‘ಸತ್ತಿದ್ದರು’;ಗಾಂಧಿಜೀ ಮೊದಲಾದ ಕಾಂಗ್ರೆಸ್ ಪ್ರಮುಖರೂ ಹಿಂದೀಯರೂ ಅದಕ್ಕಾಗಿ ಅತ್ತಿದ್ದರು. ಈ ಬಾರಿ? ಭಾರತೀಯರು ಅಳಬೇಕೋ ಆಲೋಚಿಸಬೇಕೊ?

ಭಾರತೀಯರು ಅಳುತಿದ್ದಾರೆ ವಾರ್ತೆ ಬಂದೊಡನೆ ಗಾಂಧಿಜೀ ರಾಷ್ಟ್ರ ಧ್ವಜವನ್ನು ಇಳಿಸ ಹೇಳಿ ಸಾವು ಪ್ರಾರ್ಥನೆ ಸಲ್ಲಿಸಿದ್ದಾರೆ. ದೇಶದಲ್ಲೆಲ್ಲಾ ಹರತಾಳ, ದುಃಖ ಸೂಚನೆಗಳಾಗಿವೆ-ಆಗುತ್ತಿವೆ.

ಪಂಡಿತ ಜವಾಹಿರಲಾಲ್ ಕಣ್ಣಲ್ಲಿ ನೀರು ತಂದು ಹೇಳಿದ ಮಾತುಗಳು: “ಅವರು ಧೈರ್ಯಶಾಲಿಯಾಗಿದ್ದುದು ಮಾತ್ರವಲ್ಲ; ಸ್ವಾತಂತ್ರ್ಯದ ಗಾಢ ಪ್ರೇಮಿಯಾಗಿದ್ದರು. ತಪ್ಪಾಗಲಿ, ಸರಿಯಾಗಲಿ, ಅವರೇನೆಲ್ಲಾ ಮಾಡಿದ್ದರೋ ಅವೆಲ್ಲವೂ ಭಾರತ ಸ್ವಾತಂತ್ರ್ಯಕ್ಕಾಗಿ ಎಂದವರು ನಂಬಿದ್ದರು. ಸುಭಾಸ್ ಬೋಸರ ಮರಣ ವಾರ್ತೆ ನನ್ನನ್ನು ಶೋಕ ಕಂಪಾಯಮಾನಗೊಳಿಸಿರುವಾಗ ಒಂದು ನೆಮ್ಮದಿಯನ್ನೂ ಕೊಟ್ಟಿದೆ; ಭಾರತ ಸ್ವಾತಂತ್ರ್ಯ ಸಮರದಲ್ಲಿ ಅವರು ತನ್ನ ಪ್ರಾಣ ಕೊಟ್ಟರು. ಅದೇ ಸಮಯದಲ್ಲಿ ಅವರಿಗಾಗಿ ಕಾದಿದ್ದ-ಅವರಂತೆಸಗುವ ಎಲ್ಲಾ ಧೀರ ಯೋಧರೂ ಇದಿರಿಸಬೇಕಾಗಿರುವ-ತೊಂದರೆಗಳಿಂದ ಪಾರಾಗಿ ಹೋದರು”.

ನಿಜ, ಸುಭಾಸರು ಸ್ವಾತಂತ್ರ್ಯವನ್ನು ಹುಡುಕಿಕೊಂಡು ಭಾರತ ಬಿಟ್ಟು ಹೋಗಿದ್ದರು; ಆದರೆ ಗುಲಾಮತ್ವಅಲ್ಲಿಗೂ ಅವರನ್ನು ಬೆನ್ನಟ್ಟಿಕೊಂಡು ಹೋಯಿತು; ಅವರು ಅಲ್ಲಿಂದಲೂ ಹೋದರು! ಸ್ವಾತಂತ್ರ್ಯದೊಟ್ಟಿಗೆ ಪುನರ್ಜನ್ಮ ಹೊಂದಬಹುದೆ?

ಬಾಲ್ಯ—ಶಿಕ್ಷಣ

ಸುಭಾಸರ ಜನ್ಮ 1892ನೇ ಜನವರಿ 23ರಲ್ಲಿ; ಒರಿಸ್ಸಾದ ಕಟಕಿನಲ್ಲಿ. ಬಂಗಾಳದ 24 ಪರಗಣದ ದೊಡ್ಡ ವಂಶಜರಿವರು. ತಂದೆ ರಾಯಿ ಜನಕನಾಥ ಬೋಸರು ಒರಿಸ್ಸಾದ ಸರಕಾರೀ ವಕೀಲರಾಗಿದ್ದರು.

ಅವರ 8 ಗಂಡು 5 ಹೆಣ್ಣು ಮಕ್ಕಳಲ್ಲಿ ಸುಭಾಸರು 6ನೆಯವರು. ಈಗ ನಿರ್ಬಂಧದಲ್ಲಿರುವ ಶರಚ್ಚಂದ್ರ ಬೋಸರು ಮತ್ತು ಡಾ! ಸುನಿಲ್ ಚಂದ್ರ ಬೋಸರು ಈ ಸಹೋದರ ಸರಣಿಯಲ್ಲಿ ಮತ್ತಿಬ್ಬರು. ಮೆಟ್ರಿಕಿನ ವರೆಗೆ ಕಟಕಿನಲ್ಲಿಯೇ ಕಲಿತು ಸುಭಾಸರು ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು. ಕಾಲೇಜು ಶಿಕ್ಷಣದ ಎರಡನೇ ವರುಷ, ಒಂದು ದಿನ ಸುಭಾಸರು ಮನೆಯಿಂದ ಪರಾರಿ. ಕಾರಣ, ಅವರಲ್ಲಿ ಸ್ವಾಮಿ ವಿವೇಕಾನಂದರ ಆಶೆಯೇ ಮೊಳೆತಿತ್ತು; ಅವರಿಗೊಬ್ಬ ಧರ್ಮ ಗುರುಬೇಕಾಗಿದ್ದ ಅದಕ್ಕಾಗಿ ಹೇಳದೆ ಕೇಳದೆ ಮನೆಯಿಂದೋಡಿ ಹರಿದ್ವಾರ, ಬೃಂದಾವನ, ಕಾಶಿ, ಮತ್ತು ಉಳಿದೆಲ್ಲಾ ಪುಣ್ಯಕ್ಷೇತ್ರಗಳನ್ನೂ ಸುತ್ತಾಡಿದರು. ಆದರೆ ಅಲ್ಲಿಯ ಮಹಂತರ, ಸ್ವಾಮಿಗಳ ವಿಷಯಲಾಲಸೆಗಳನ್ನು ಕಂಡು ಜಿಗುಪ್ಸೆಗೊಂಡು ಮರಳಿ ಬಂದು ವಿದ್ಯಾಭ್ಯಾಸ ಮುಂದುವರಿಸಿದರು. 1915ರಲ್ಲಿ, ‘ಇಂಟರ್ ಮಿಡಿಯೇಟ್’ ಪರೀಕ್ಷೆ ಮುಗಿಸಿ, ‘ಫಿಲೋಸೊಫಿ’ ತೆಗೆದುಗೊಂಡು ಬಿ. ಎ. (ಓನರ್ಸ್)ಗೆ ಸೇರಿದರು. ಆವರೆ ಪ್ರೊಫೆಸರ್ ಸಿ. ಎಫ್. ಓಟೆನ್ (ಆ ಮೇಲೆ ಬಂಗಾಳದ ಡಿ. ಪಿ. ಐ.) ಇವರ ಕೆನ್ನೆಗೇರಿಸಿದ ಆರೋಪದಿಂದ ಕಲ್ಕತ್ತಾ ಕಾಲೇಜಿನಿಂದ ಹೊರದೂಡಲ್ಪಟ್ಟರು. ಆ ಬಿಳಿ ಪ್ರೊಫೆಸರ್ ಓಟೆನನಿಗೆ ಹಿಂದೀಯರ ಮೇಲಿದ್ದ ದ್ವೇಷ ತಿರಸ್ಕಾರಗಳಿಗಾಗಿಯೇ ಸುಭಾಸರಿಂದ ಆ ಉಡುಗೊರೆ! ಕೊನೆಗೆ ಎರಡು

ಧೀರ ಜೀವನ

ವರುಷಗಳ ನಂತರ ಕಟಕ್ಕಿನ ಸ್ಕೋಟಿಶ್ ಚರ್ಚ್ ಕಾಲೇಜಿನಲ್ಲಿ ಅದೇ ತರಗತಿಗೆ ಸೇರಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡರು. ಆ ಮೇಲೆ ಎಂ. ಎ. ಡಿಗ್ರಿಗಾಗಿ ತರಬೇತಿಗಾರಂಭಿಸಿದರೂ ಪೂರ್ತಿಗೊಳಿಸಲಾಗಲಿಲ್ಲ. ಕೆಲವೇ ತಿಂಗಳುಗಳಲ್ಲಿ ಐ. ಸಿ. ಎಸ್. ಪರೀಕ್ಷೆ ಕೊಡಲು ಇಂಗ್ಲಂಡಿಗೆ ಹೊರಡಬೇಕಾಯಿತು. ಅಲ್ಲಿ ಕೇಂಬ್ರಿಜ್ ಯೂನಿವರ್ಸಿಟಿಯ ಬಿ. ಎ. ಮತ್ತು ಐ. ಸಿ. ಎಸ್. ಪಾಸಾದರು. ಆ ಬಾರಿ ಐ. ಸಿ. ಯಸ್. ತೇರ್ಗಡೆಯಾದವರಲ್ಲಿ ಸುಭಾಸರು ಚತುರ್ಥ ಸ್ಥಾನ ಗಳಿಸಿದ್ದರು.

ಕಲೆಕ್ಟರ್---ಕ್ರಾಂತಿಕಾರ

ಹಿಂದುಸ್ಥಾನಕ್ಕೆ ಮರಳಿದ ಸುಭಾಸ್ ಎರಡು ತಿಂಗಳು ಐ. ಸಿ. ಎಸ್. ಆಫೀಸರ್. ಆಗಲೇ ಗಾಂಧಿಜೀಯ ಅಸಹಕಾರ ಚಳವಳ ಪ್ರಾರಂಭ. ಸುಭಾಸರು ಐ. ಸಿ. ಎಸ್. ಗೆ ರಾಜೀ ನಾಮೆಕೊಟ್ಟು ಚಳವಳದಲ್ಲಿ ಧುಮುಕಿದರು; ದೇಶಬಂಧು ಸಿ. ಆರ್. ದಾಸರ ಬಲಗೈಯಾಗಿ ನಿಂತರು; ಬಂಗಾಳವನ್ನೂ ಅಖಿಲ ಭಾರತವನ್ನೂ ಬಡಿದೆಬ್ಬಿಸಿದರು. ಆಗ ಬಂಗಾಳದ ರಾಷ್ಟ್ರೀಯ ಕಾಲೇಜಿನ ಪ್ರಿನ್ಸಿಪಾಲರು ಅವರೇ. ರಾಷ್ಟ್ರೀಯ ಸ್ವಯಂಸೇವಕ ದಳದ ಕೇಪ್ಟನರೂ ಅವರೇ. 1921ನೇ ದಸಂಬರಿನಲ್ಲಿ ಅವರ ಪ್ರಥಮ ದಸ್ತಗಿರಿ; 6 ತಿಂಗಳ ಸಾದಾಸಜೆ! ಜೈಲಿನಿಂದ ಬಿಡುಗಡೆಗೊಂಡಾಗ ಬಂಗಾಳ ನೆರೆ ಹಾವಳಿಯಿಂದ ನೆಲಹಿಡಿದಿತ್ತು; ಅದರ ನಿವಾರಣೆಗಾಗಿ ಸುಭಾಸ್ ಅವಿಶ್ರಾಂತವಾಗಿ ದುಡಿದರು. ಸಿ. ಆರ್. ದಾಸರು ಬಂಗಾಳದಲ್ಲಿ ಸ್ವರಾಜ್ಯ ಪಕ್ಷ ಸ್ಥಾಪಿಸಿದಾಗ ಸುಭಾಸರದನ್ನು ಸೇರಿಕೊಂಡರು. ಆ ಪಕ್ಷದ ಮುಖಪತ್ರವಾದ ‘ಫೋರ್ವರ್ಡ್’ನ ಸಂಪಾದಕರಾಗಿದ್ದರೂ ಯಾವ ಶಾಸನ ಸಭೆಗೂ

(೧೧ನೇ ಪುಟ ನೋಡಿರಿ).

ಆಟಂ ಸಿಡಿತ ವಿಧಾಯಕ ರೀತಿಯಲ್ಲಾದರೆ?

ಸಹರಾ ಮರುಭೂಮಿ ಹೂದೋಟವಾದೀತು!

[ಇದು ನೂರು ವರುಷಗಳ ವೈಜ್ಞಾನಿಕ ಬರಹಗಳಲ್ಲಿ ಲೋಕಪ್ರಸಿದ್ಧರಾದ ಜೋನ್ ಲ್ಯಾಂಗ್ಡನ್ ಡೇವಿಸ್ ಸ್ಪೈನಿನ ಅಂತರ್ಯುದ್ಧ ಕಾಲದಲ್ಲಿ ಡೇವಿಸ್ ಲಿಲ್ಲಿಯಲ್ಲಿ ಇದ್ದರು; ಡೇವಿಸ್ರು ವಿರೋಧಿ ಜಾತ್ರೀಯವಾದರಾಗಿ ಪ್ರಸಿದ್ಧರಾಗಿದ್ದರು. ಇವರ 'ಶರಹದ್ದುಗಳ ಹಿಂಭಾಗದಲ್ಲಿ' ಎಂಬ ಪುಸ್ತಕವು ಲೋಕಪ್ರಿಯವಾಗಿದೆ. ಹಲವು ಉಪಯುಕ್ತ ಗ್ರಂಥಗಳನ್ನಿವರು ಬರೆದಿದ್ದಾರೆ. 'ಆಟಮಿನ ಒಳಗಡೆ' ಎಂಬುದು ಅವುಗಳಲ್ಲೊಂದು. ಇಂದಿನ ಆಟಂ ಯುಗದಲ್ಲಿ ಹೇಳಿಸಲಂತಹ ವಿಜ್ಞಾನಿಗಳ ಮಾತು 'ಡೇಲಿವರ್ಕರ್' ಪತ್ರದಿಂದ ಇಲ್ಲಿ ಕೊಡಲಾಗಿದೆ.]

ನಿರೀಕ್ಷಿಸಬೇಕಾಗಿದ್ದಂತೆ, ಆಟೋಮಿಕ್ ಬೋಂಬಿನಿಂದಾಗಿ ವಿಜ್ಞಾನ ಮತ್ತು ವೈಜ್ಞಾನಿಕರ ಮೇಲೆ ಹಲವರು ಉರಿದು ಬೀಳುತ್ತಿದ್ದಾರೆ 'ವೈಜ್ಞಾನಿಕಕ್ಕೆ ರಜೆದೊರೆಯಲಿ' 'ವೈಜ್ಞಾನಿಕ ಶೋಧಕ್ಕೆ ನಿರ್ಬಂಧ ಹಾಕಿರಿ; ಆಟೋಮಿಕ್ ಶಕ್ತಿಯನ್ನು ಬಹಿಷ್ಕರಿಸಿರಿ' ಎಂದವರು ಹೇಳಹತ್ತಿದ್ದಾರೆ. ಸಾಧುವರ್ತನೆಯ ಓರ್ವ ಶಾಂತತಾಪ್ರವಾದಿಯ ಬಾಯಿಯಿಂದ ನಾನೀ ಮಾತನ್ನು ಕೇಳಿದ್ದೆ:—"ಆ ಬೋಂಬಿನ ಕುರಿತು ಏನಾದರೂ ತಿಳಿದಿರುವ ಪ್ರತಿಯೊಬ್ಬ ವೈಜ್ಞಾನಿಕನನ್ನೂ ವಿಷವಾಯು ಪ್ರಯೋಗದಿಂದ ತೀರಿಸಿ ಮಾನವ ವರ್ಗಕ್ಕೆ ಆ ವಿಷಯವೇ ಮರೆತುಹೋಗುವಂತೆ ಮಾಡಬೇಕು" ಸಿದ್ದೆಯಲ್ಲೂ ತಮ್ಮ ಹಾಸಿಗೆ ಪಕ್ಕದ ಗೋಡೆಯಲ್ಲಿ ಬೋಲ್ಶೆವಿಕ್ ಭೂತವನ್ನು ಕಾಣುವವರು ಈ ಹೊಸ ಶಕ್ತಿಯ ಪೂರ್ಣಾಧಿಕಾರವನ್ನು ಇಂಗ್ಲಾಂಡು ಮತ್ತು ಅಮೇರಿಕಗಳೇ ಇಟ್ಟುಕೊಳ್ಳಬೇಕೆಂದು ಬಯಸುತ್ತಾರೆ. ಹಾಗೆ ಮಾಡುವುದಸಾಧ್ಯ. ಆಟೋಮಿಕ್ ಜ್ಞಾನವನ್ನು ರದ್ದುಗೊಳಿಸುವದಾಗಲೀ ನಿಯಂತ್ರಿಸುವುದಾಗಲೀ ಅಗದಕಾರ್ಯ; ಮತ್ತದು ಸಾಧ್ಯವಾಗುವದಾದರೆ ಹಾನಿಕೂಡಾ ಇದೆ. ಆಟಂ ಸಿಡಿತದ ಮೂಲಭೂತ ಶೋಧನೆಗೆ ಒಹಮಟ್ಟಿಗೆ ಕಾರಣೀ ಭೂತರಾದ ಮಹಾ ಬ್ರಿಟಿಷ್ ವೈಜ್ಞಾನಿ ಸರ್ ಜೇಮ್ಸ್ ಚೆಡ್ವಿಕರನ್ನುವದನ್ನು ಕೇಳಿ 'ಕೆಲವು ನೂರು ಮಿಲಿಯಗಳನ್ನು ವ್ಯಯಿಸಬಲ್ಲ ಯಾವುದೊಂದು ರಾಷ್ಟ್ರವಾದರೂ ಒಂದಲ್ಲೊಂದು ರೀತಿಯ ಆಟೋಮಿಕ್ ಬೋಂಬನ್ನು ವರುಷದೊಳಗೆ ತಯಾರಿಸಬೇಕೆಂದು ಅತ್ಯಾತುರಗೊಂಡಲ್ಲಿ ಅದನ್ನು ತಡೆಯುವಂತಹದಾವುದೂ ಇಲ್ಲ. ಅದರ ಸರ್ವಸಾಮಾನ್ಯ ರೀತಿನೀತಿಗಳು ಅಷ್ಟೂ ಜಗಜ್ಜಾಹೀರಾಗಿ ಹೋಗಿವೆ' ಎಂದು ಅವರನ್ನುತ್ತಾರೆ. ಸದ್ಯ, ಅದಕ್ಕಗತ್ಯವಿರುವ ಸಂಪತ್ತಿರುವ ರಾಷ್ಟ್ರಗಳೆಂದರೆ ಮೂರೇ-ಬ್ರಿಟನ್, ಅಮೇರಿಕ, ರಶ್ಯಾ. ನಿಜಕ್ಕೂ ಈ ಮೂರು ರಾಷ್ಟ್ರಗಳು ಬೇಕಾದ ಸಾಮಾನುಗಳನ್ನು ನಿರ್ಮಿಸಿಕೊಳ್ಳಬಲ್ಲವು; ಮತ್ತು ಮಿಕ್ಕ ರಾಷ್ಟ್ರಗಳಿಗದನ್ನು ಮಾರಲೂ ಬಲ್ಲವು. ನಿದರ್ಶನಕ್ಕಾಗಿ ಡೆನ್ಮಾರ್ಕ್-ಅದರ ಅನಿವಾರ್ಯ ನಿತ್ಯ ಜೀವನಕ್ಕೆ ಬೇಕಾಗುವ ಎಲ್ಲಾ ಬೆಳಕು, ಸೆಖೆ, ಮತ್ತು ಪವರಿನಿಂದ ಕೆಲವು ಪೌಂಡು ಯುರೇನಿಯಮ್ 235, ಮತ್ತು ಅದನ್ನು ಉಪಯೋಗಿಸುವ ಗೂಢವಿಧಾನಗಳ ಸರಬರಾಯಿಯಾಗಬಹುದು.

× × ×

ಈಗ ತಿಳಿಗೇಡಿ ಜನರು ಅಪವಾದಹೊರಿಸುತ್ತಿರುವ ವಿಜ್ಞಾನಿಗಳ ಕಡೆಗೆ ನೋಡೋಣ. ಯುದ್ಧಾರಂಭದ ಮೊದಲು ಅವರ ಪೈಕಿ ಯಾರೊಬ್ಬನೂ ಒಂದು ಬೋಂಬು ನಿರ್ಮಿಸಬೇಕೆಂದು ಯೋಚಿಸಿರಲಿಲ್ಲ. ಆಟೋಮಿಕ್ ಶಕ್ತಿಯ ಕುರಿತು ಅವರು ಮಾಡಿರುವ ವರದಿಗಳ ಹಲವಾರು ಮುದ್ರಿತ ಸಂಚಿಕೆಗಳನ್ನು ನಾನು ನೋಡಿದ್ದೆ; ಅವರ ವಿಮರ್ಶೆಗಳನ್ನೋದಿದ್ದೆ. ಅದರ ವಿನಾಶಕ ಶಕ್ತಿ ಹೊಂದಬೇಕುವ ದಿನವು ಬಹುಶಃ ಬಹುದೂರದಲ್ಲಿದೆ ಎಂಬ ಸ್ಪಷ್ಟ ಸಮಾಧಾನವನ್ನಲ್ಲದೆ ಬೇರಾವ ವಿಷಯವನ್ನೂ ಅವುಗಳಲ್ಲಾವುದರಲ್ಲಿ ನಾನು ಕಂಡುದಿಲ್ಲ. ಅತ್ಯೇಕೆ ಒಂದು ಪರಮಾಣುವು ಮತ್ತೊಂದು ಪರಮಾಣುವನ್ನು ಸಿಡಿಸುತ್ತಾ ಹೋಗಬಲ್ಲದೆಂಬ ತತ್ವವನ್ನು 1935ರಲ್ಲಿ ಮಹಾ ಮನುಷ್ಯ ಲೋರ್ಡ್ ರೂಥರ್ ಫೋರ್ಡರೇ 'ಫೂಫೂ' ಮಾಡಿದ್ದರು. ಇದೇ ರೂಥರ್ ಫ್ಲೋರ್ಡರೆಂದಿದ್ದರು:—"ಇದು ಸತ್ಯವಾಗುತ್ತಿದ್ದರೆ ನಮ್ಮ ಶೋಧನಾಲಯಗಳಲ್ಲಿಯೇ ಎಂದೋ ಅದ್ಭುತ ಸ್ಫೋಟಗಳು ನಡೆದು ಆ ಕಥೆ ಹೇಳುವದಕ್ಕೊಬ್ಬ ಕೂಡಾ ಉಳಿಯದಂತಾಗುತಿತ್ತು!" ಸರಿ. ಅದರೆ ಈಗ ಅದೇ ಸಂಭವಿಸಿದೆ. ಯುದ್ಧೋದ್ದೇಶಕ್ಕಾಗಿ ಅದನ್ನು ಈ ರೀತಿ ಸಜ್ಜುಗೊಳಿಸಿದ ರೂಥರ್ ಫೋರ್ಡರ ವಿದ್ಯಾರ್ಥಿಗಳಿಗೂ ಅನುಯಾಯಿಗಳಿಗೂ ಧನ್ಯವಾದಗಳಿರಲಿ. ಸಿಡಿದ ಒಂದು ಪರಮಾಣುವು ತನ್ನ ಒತ್ತಿನ ಪರಮಾಣುವನ್ನು ಸಿಡಿಯಿಸುತ್ತಾ ಹೋಗಬಲ್ಲುದೆಂಬುದನ್ನು ಅವರೀಗ ಕಂಡುಕೊಂಡರು· ಮತ್ತು ಒಂದು ಅದ್ಭುತ ಸ್ಫೋಟಕವನ್ನೇ ತಯಾರಿಸಿದರು. ಅದರೆ-ನಮ್ಮ ಯುದ್ಧ ಹೋರಾಡಲು ನಾವವರನ್ನು ಕರೆಯುವವರೆಗೆ ಅವರ ನಿರೀಕ್ಷೆಯೇ ನಿದ್ರಿತ್ತು! ಆಗ ಅವರಲ್ಲಿ ಹೆಚ್ಚಿನವರು ಕಣ್ಣಮುಂದೆ ಸದುಪಯೋಗಕಾರಿ, ಅಥವಾ ವ್ಯವಹಾರ್ಯವಾದುದಾವುದೂ ಇರಲಿಲ್ಲ. ವಸ್ತುಸ್ಥಿತಿಗಳ ಮೇಲೆ ಬೀಳುವ ಈ ಪರಮಾಣು ಸ್ಫೋಟದ ಬೆಳಕಿನ ಮೇಲೆ ಮಾತ್ರವೇ ಅವರಿಗೆ ಅಭಿರುಚಿಯಿದ್ದಿತ. ಅವರಾಗ ಪ್ರಯತ್ನಿಸುತಿದ್ದುದು ಜ್ಞಾನ ಸಂಪಾದನೆಗಾಗಿ ಹೊರತು ಕಾರ್ಯಕ್ಕಾಗುವ ತಿಳುವಳಿಕೆಗಾಗಿಯಲ್ಲ. ಸ್ವತಃ ರುಥರ್ ಫೋರ್ಡರೇ ಈಗ ಬೋಂಬಾಗಿ ಪರಿಣಮಿಸಿರುವ ಈ ನವಶೋಧಗಳನ್ನು ಸ್ವಾಗತಿಸಿದ್ದರು 'ನಮ್ಮ ಭೂಮಿಯಲ್ಲಿರುವ ವಿವಿಧ ವಸ್ತುಗಳೊಳಗಿನ ಸಂಬಂಧಾವಿವರಗಳನ್ನು ತಿಳಿಯಲು ಇದರಿಂದಸಾಧ್ಯವಾಗಬಹುದು' ಎಂಬುದೇ ಅವರ ಆಗಿನ ಕಾರಣ. ಈ ಸಂಬಂಧದಲ್ಲಾವ ದಾವುದೂ ಊಹೆಯಿರಲಿಲ್ಲ. ವೈಜ್ಞಾನಿಕರು-ವಿಶೇಷತಃ ಬ್ರಿಟಿಷ್ ವೈಜ್ಞಾನಿಕರ ತಮ್ಮಷ್ಟಕ್ಕೆ ತಾವಿದ್ದುಕೊಂಡು, ಈ ಸಂಬಂಧದ ತಿಳುವಳಿಕೆಯನ್ನು ಕೇವಲ ತಿಳುವಳಿಕೆಗಾಗಿಯೇ ಸಾಧಿಸಿದ್ದರು.

ರೋಗಗಳಿಗೆ ಚಿಕಿತ್ಸೆಯಾಗ ಬಲ್ಲುದು.

ಪರಮಾಣುಸ್ಫೋಟವನ್ನು ಪ್ರಥಮತಃ ವ್ಯವಹಾರಕ್ಕಿಳಿಸಿದವನು ಅಮೇರಿಕನ್ ಲಾರೆನ್ಸ್. ಅವನದನ್ನು ಪ್ರಯೋಗಿಸಿದುದು ಮಾನವ ಪ್ರಾಣದ ರಕ್ಷಣೆಗಾಗಿ ಹೊರತು ಧ್ವಂಸಕ್ಕಾಗಿ ಅಲ್ಲ. ಕಲಿಫ್ಹೋರ್ನಿಯದಲ್ಲಿದ್ದ ತನ್ನ ಅತಿ ದೊಡ್ಡ 'ಸೈಕ್ಲೋಟ್ರೋನ್'ನಲ್ಲಿ ಅತ ಕೆಲವು ಕೃತಕ ರೇಡಿಯೋ ಸಂಚಲನ ಸತ್ವಗಳನ್ನು ನಿರ್ಮಿಸಿಕೊಂಡ. ಒಂದು ಫ್ರಾಂಕ್ ತೂಕದ ರೇಡಿಯಮಿನಿಂದ ಡಾಕ್ಟರೀ ಚಿಕಿತ್ಸೆಗಾಗಿ 24ಘಂಟೆಗಳ ಬೋಂಬು ಥಳಿಗೆ ಸಾಕಾಗುವಷ್ಟು 'ಸೋಡಿಯಂ' ತಯಾರಿಸಲು ಸಮರ್ಥನಾದ. ಕೆಲವೇ ಘಂಟೆಗಳೊಳಗೆ ಇಡೀ ಜಗತ್ತಿನಲ್ಲಿರುವ ನಿಜವಾದ ರೇಡಿಯಮಿನಷ್ಟೇ ಆಗುವ 'ಸಂಯೋಜಿತ ರೇಡಿಯಂ' (Synthetic radium) ನಿರ್ಮಿಸಬಲ್ಲ ಹೊಸ 'ಸೈಕ್ಲೋಟ್ರೋನ್'ನ್ನು ಲಾರೆನ್ಸ್ ಕಟ್ಟುತಿದ್ದ. ಈ ಮೂಲಕ 'ಕೇನ್ಸರ್' ಮತ್ತು ಇತರ ಕಾಹಿಲೆಗಳಿಗೆ ... ... ವಿಶೇಷ ವಿಶ್ವಾಸದಿಂದ ಚಿಕಿತ್ಸೆ ನಡಿಸಲು ಸಾಧ್ಯವಾಗುವಂತಿತ್ತು.

ಮಾನವ ದೇಹದೊಳಗಿನ ಚಲನವಲನಗಳ ಕುರಿತು ನಮಗಿದ್ದ ಅಸಡ್ಡೆಯನ್ನು ಆಟೋಮಿಕ್ ಶಕ್ತಿಯು ಇಷ್ಟರಲ್ಲೇ ಕಡಿಮೆಮಾಡುತ್ತಾ ಬಂದಿದೆ. ಒಂದು ದೃಷ್ಟಾಂತ: ನಾವು ಆಹಾರವಾಗಿ ನುಂಗಿದ ವಿವಿಧ ಪದಾರ್ಥಗಳು ಯಾವ ಭಾಗಕ್ಕೆ ಹೋಗುತ್ತವೆ ಎಂಬುದು ಇತ್ತೀಚೆಗಿನ ವರೆಗೂ ನಮಗೆ ತಿಳಿದಿರಲಿಲ್ಲ. ಅದರ ತಿಳುವಳಿಕೆಯಿದ್ದಲ್ಲಿ ಆಹಾರ ಮೂಲಕ ತಗುವ ರೋಗಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಗುವುದು. ಆಹಾರದೊಂದು ಭಾಗಕ್ಕೆ ಪರಮಾಣು ಸಿಡಿತದಿಂದ ರೇಡಿಯೋ ಸಂಚಲನವಿತ್ತು ಒಬ್ಬನನ್ನು ಉಣ್ಣಿಸಿದರೆ ನಾವು ಆ ಆಹಾರವು ಹೋಗುತ್ತಿರುವದನ್ನೂ ಅದು ... ಸ್ಥಳವನ್ನೂ ಕಾಣಬಹುದಾಗುತ್ತದೆ. ಆಹಾರ ದೋಷದಿಂದಾಗಿ ಕುರಿಗಳಿಗೆ ತಾಗುವ ಒಂದು ರೋಗ ಪ್ರಸಿದ್ಧವಿದೆ ಆ ಆಹಾರವು ಎಲ್ಲಿ ಹೋಗಿ ನಿಂತಿತೆಂಬುದು ಸ್ಪಷ್ಟ ತಿಳಿಯದೆ ಅದಕ್ಕೆ ಚಿಕಿತ್ಸೆಮಾಡುವದು ಕಷ್ಟ. ಆದರೆ ಈ ರೇಡಿಯೋ ಸಂಚಲನ ಆಹಾರವನ್ನು ಕುರಿಗೆ ಕೊಟ್ಟರೆ ಅದು ಹೋಗುವ ದಾರಿವೆಲ್ಲಾ ಕಂಡು ಬಂದು ಚಿಕಿತ್ಸೆಯನ್ನು ಸೂಚಿಸಲು ಸಾಧ್ಯವಾಗುತ್ತದೆ. ಒಬ್ಬ ಮನುಷ್ಯನ ಹೊಟ್ಟೆಯ ಮಾಂಸ ಪಿಂಡವು ಬೊಜ್ಜಾಗಿ ಬೆಳೆದಿದೆಯೆಂದು ಭಾವಿಸೋಣ. ಸಹಜವಾಗಿ ನಾವು ಸೇವಿಸಿದ ಆಹಾರಸತ್ವವು ಆ ಅಂಗವನ್ನು ಸೇರಬೇಕು. ಆಹಾರದಲ್ಲಿ ಕೆಲವಂಶವನ್ನು ರೇಡಿಯೋ ಸಂಚಲನಗೊಳಿಸಿದಲ್ಲಿ ಅದೇ ಕೊಬ್ಬನ್ನು ನಾಶಮಾಡಬಲ್ಲುದು. ಇದೇ ರೀತಿ ಈಗ ಆಟಂ ಬೊಂಬಾಗಿ ರೂಪಾಂತರಗೊಂಡ, ಕೃತಕ ರೇಡಿಯೋ ಸಂಚಲನಾಣುಗಳನ್ನು ಅದೇ ಮೂಲ ಶೋಧನೆಯಲ್ಲಿ ಬೇರೆ ವಿಧದಿಂದ ತಯಾರಿಸಿದರೆ ಇತರ ಹಲವು ರೋಗಗಳಿಗೆ ಚಿಕಿತ್ಸೆಯಾಗುತಿತ್ತು.

ಅದರೆ ಇದು ವರೆಗೂ ಪರಮಾಣುಸ್ಫೋಟದ ಈ ವಿಧಾನವು ಪರೀಕ್ಷಾರ್ಥ ಪ್ರಯೋಗದ ಪ್ರಥಮಾವಸ್ಥೆಯಲ್ಲಿಯೇ ಇದೆ. ಅದೇಕೆ? ಯಾಕೆಂದರೆ ಕೇವಲ ಇಷ್ಟಕ್ಕಾಗಿ ಅದನ್ನು ನಿರ್ಮಿಸಲು 500,000,000 ಅಥವಾ 5,000,000 ಪೌಂಡುಗಳನ್ನು ವ್ಯಯಿಸುವದು ಯೋಗ್ಯವೆಂದು ಯಾವದೊಂದು ದೇಶಕ್ಕೂ ಅನ್ನಿಸಲಿಲ್ಲ.

೦೦ ೦೦ ೦೦

ಸಹಾರಾ ಮರುಭೂಮಿಯಲ್ಲಿ ಅಷ್ಟೊಂದು ವಿಸ್ತಾರದಲ್ಲಿರುವ ಹೊಯಿಗೆಯನ್ನೆಲ್ಲಾ ಈ ಆಟೋಮಿಕ್ ಶಕ್ತಿಯೇನು ಮಾಡಬಲ್ಲುದೆಂಬುದನ್ನು ನೀವು ಮನಸ್ಸಿಗೆ ತಂದಿರುವಿರಾ? ಒಂದೇ ಒಂದು ಆಟೋಮಿಕ್ ಬೊಂಬಿನ ಶಕ್ತಿಯನ್ನು ಸಹಾರಾದಿಂದ ನೀರು ಕೊರೆಯಲು ಕೇಂದ್ರೀಕರಿಸಿದರೆ ಅಲ್ಲಿಯ ಸಾವಿರಾರು ಚದರ ಮೈಲುಗಳಷ್ಟು ಸ್ಥಳವನ್ನು ತೋಟವನ್ನಾಗಿ ಮಾರ್ಪಡಿಸಬಲ್ಲುದು! ಇಲ್ಲ; ನಾವಿನ್ನು ಹೆಜ್ಜೆ ಹಿಂದಿಡುವಂತಿಲ್ಲ ಅದನ್ನು ಪುನ ಬಾಟ್ಲಿಯೊಳಗೆ ತುಂಬಿಸಿಡುವದು ಅಸಾಧ್ಯ. ನಾವು ಸರಿಯಾದ ದಿಕ್ಕು ಹಿಡಿದು ಮುಂದೊತ್ತೋಣ.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಪಾರಾರ್ಯ,
ರಥಬೀದಿ, ಉಡುಪಿ.

ನಗುವ ಮಗು

ಮಾರ್ಗರೇಟರ "ಫಿಟ್ಸ್‌ಕ್ಯೂರ್" ಪ್ರಯೋಗದಿಂದೊದಗಿದ ತಾಯಿಯ ಬೆಳಕು.

ಧರ್ಮಾರ್ಥ ಸ್ಯಾಂಪಲ್ ಔಷಧ ವ ಮಗುವಿನ ರಕ್ಷಣೆಯ ಗುಟ್ಟುಗಳಿಗಾಗಿ ನಮಗೆ ಬರೆಯಿರಿ ಟಪ್ಪಾಲು ಖರ್ಚಿಗೆ 4 ಆಣೆ ಸ್ಟಾಂಪನ್ನು ಕಳುಹಿಸಬಹುದು.

Margaret's Fitscure Home,
UDIPI S. India.

ಯುರೋಪಿಯನ್ ಸದಸ್ಯರಿಗೆ ಕಲ್ಕತ್ತಾ ಅಧ್ಯಕ್ಷರ ಕಟ್ಟಾಜ್ಞೆ—

'ಎದ್ದು ನಿಲ್ಲಿ, ಅಥವಾ ನಡೆಯಿರಿ ಹೊರಗೆ!'

ಸುಭಾಸ್ ಚಂದ್ರಬೋಸರ ನಿಧನಕ್ಕಾಗಿ ಸಂತಾಪ ಸೂಚಿಸಲು ಆಗೋಸ್ತು ತಾ. 28ರಲ್ಲಿ ಕಲ್ಕತ್ತಾ ಕೋರ್ಪರೇಶನಿನ ವಿಶೇಷ ಸಭೆ ನೆರೆದಿತ್ತು. ಮೇಯರರಾದ ಶ್ರೀ. ಡಿ. ಎನ್. ಮುಖರ್ಜಿಯವರು ದುಃಖ ಸೂಚಕ ಠರಾವನ್ನು ಮುಂತಂದು ಸಭಾ ನಿಯಮದಂತೆ ಎಲ್ಲರೂ ಎದ್ದು ನಿಂತು ಅದನ್ನು ಮಂಜೂರು ಮಾಡುವಂತೆ ಕೇಳಿಕೊಂಡರು. ಎಲ್ಲಾ ಪಕ್ಷ ಪಂಗಡಗಳವರೂ ಎದ್ದರು. ಮುಸ್ಲಿಂ ಲೀಗ್ ಸದಸ್ಯರೂ ನಿಂತರು ಆದರೆ ಯುರೋಪಿಯನ್ ಪಂಗಡದವರು ತಮ್ಮಾಸನಗಳಿಂದ ಕದಲಲಿಲ್ಲ ಅವರ ಪಕ್ಷ ನಾಯಕ ಮಿ ಜೆ. ಎಚ್. ಮೆಥೋಲ್ಡರ ಮೂಲಕ, ಮೇಯರರು ಅವರೂ ಎದ್ದು ನಿಲ್ಲಬೇಕೆಂದು ಕೇಳಿಕೊಂಡರು.

ಮೆಥೋಲ್ಡ—"ಇಲ್ಲ, ಸರ್, ಅವರು ಸತ್ತಿದ್ದಾರೆಂದು ನಾವು ಭಾವಿಸುವದೇ ಇಲ್ಲ"

ಮೇಯರ್—"ವಾದವಾವುದೂ, ಬೇಡ. ನೀವು ದಯವಿಟ್ಟು ಎದ್ದು ನಿಲ್ಲುವಿರಾ? ಅಥವಾ ಹೊರಗೆ ನಡೆಯುವಿರಾ?'

ಕೂಡಲೇ ಯುರೋಪಿಯನ್ ಸದಸ್ಯರಲ್ಲಿ ಒಬ್ಬನನ್ನು ಉಳಿದು ಮಿಕ್ಕವರೆಲ್ಲರೂ ಸಭೆಯಿಂದ ಹೊರಬಿದ್ದರು. ಅಲ್ಲಿ ಉಳಿದ ಏಕಮಾತ್ರ ಯುರೋಪಿಯನ್ ಮಿ ಎ. ಎ. ವೈಸರನ್ನು 'ನೀವು ಎದ್ದು ನಿಲ್ಲುವವರೇ?' ಎಂದು ಮೇಯರರು ವಿಚಾರಿಸಿದರು.

ವೈಸರ್—'ನೀವೀಗ ಸಾಯದೆ ಇರುವವರಿಗಾಗಿ ದುಃಖ ಸೂಚನೆ ಮಾಡಲು ಎದ್ದು ನಿಲ್ಲಬೇಕೆಂದು ನನ್ನನ್ನು ಕೇಳಿಕೊಳ್ಳುತ್ತಿದ್ದೀರಿ. ನೀವು ಅದನ್ನೇ ಅಪೇಕ್ಷಿಸುವದಾದರೆ ನಾನು ಸತ್ಯಕ್ಕೂ ನಿಮ್ಮ ಆಜ್ಞೆಯನ್ನು ಶಿರಸಾವಹಿಸುತ್ತೇನೆ. ಆದರೆ ಆ ಗೃಹಸ್ಥ ನಿಜಕ್ಕೂ ಸತ್ತಿಲ್ಲವೆಂದು ವಸ್ತುಸ್ಥಿತಿಯ ಮೇಲಿಂದ ನಾನು ನಂಬುತ್ತೇನೆ. ಹೀಗಿರುವಾಗ ನಾವು ಏತಕ್ಕಾಗಿ ದುಃಖ ಸೂಚಿಸಬೇಕೋ ನನಗರಿಯದು'.

ಮೇಯರ್—'ನನಗೀಗ ನಿಮ್ಮ ಉದಾಹರಣೆ ಅಥವಾ ತರ್ಕವಾವುದೂ ಬೇಕಾಗಿಲ್ಲ. ನೀವು ದಯವಿಟ್ಟು ನಿಲ್ಲುವಿರಾ? ಇಲ್ಲವಾದರೆ ಹೊರ ಹೊರಡಿ'.

ವೈಸರ್—'ಇದು ಎದ್ದು ನಿಲ್ಲಲೇ ಬೇಕೆಂಬ ಆಜ್ಞೆಯೆಂದಾದರೆ ನಾನದನ್ನು ಶಿರಸಾವಹಿಸುತ್ತೇನೆ'.

ಆ ಸದಸ್ಯನ ಸಮೇತ ಉಳಿದವರೆಲ್ಲರೂ ಎದ್ದು ನಿಂತು ಠರಾವು ಪಾಸಾಯಿತು. ದುಃಖ ಸೂಚನಾರ್ಥವಾಗಿ ಸಭೆಯನ್ನು ಮುಂದುವರಿಸಲಾಯಿತಲ್ಲದೆ ಕಲ್ಕತ್ತಾ ಕೋರ್ಪರೇಶನಿನ ಎಲ್ಲಾ ಆಫೀಸುಗಳು, ಶಾಲೆಗಳು ಮತ್ತು ಕಾರ್ಯಾಲಯಗಳಿಗೆ ಮೂರು ದಿನ ರಜೆ ದೊರೆಯಿತು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. ೬ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

P. O. S. (N. E.) Tollygunge, Calcutta.

ಸ್ಟಾಕಿಸ್ಟ್: ಸ್ವಾ ಕಂಪೆನಿ, ಮಂಗಳೂರು

ಭಾರತದ ಸ್ಥಿತಿ ಬದಲಾವಣೆ

ವಾತಾವರಣ ತಯಾರಿ

ಸಿಮ್ಲಾ ಸಮ್ಮೇಲನ ಪ್ರಾರಂಭವಾಗೊಂಡಾಗ ಸಹಕಾರವನ್ನೇ ಮುಂದುವರಿಸಬೇಕೆಂದು ಗಾಂಧಿ ಅಜಾದರನ್ನು ವೈಸರಾಯರು ಆಗ್ರಹ ಪೂರ್ವಕ ಕೇಳಿಕೊಂಡಿದ್ದರು. ಆಗ ಬ್ರಿಟನಿನಲ್ಲಿ ಅಧಿಕಾರ ಬದಲಾವಣೆಯಾಗಲಿದ್ದುದರಿಂದ ಮುಂದೆ ಪುನಃ ಪ್ರಯತ್ನಿಸಲನುಕೂಲವೊದಗುವದೆಂಬ ನಿರೀಕ್ಷೆ ಲೋರ್ಡ್ ವೇವೆಲರಲ್ಲಿದ್ದುದೇ ಇದಕ್ಕೆ ಕಾರಣ.

ತದನುಸಾರವಾಗಿ ಗಾಂಧಿಜೀ ಸಿಮ್ಲಾ ಪರಾಭವದ ಕುರಿತು ಯಾವ ಹೇಳಿಕೆಯನ್ನೂ ಕೊಟ್ಟಿರಲಿಲ್ಲ. ವಾತಾವರಣವನ್ನು ಉದ್ರೇಕಿಸುವ ಭಾಷಣವೇನನ್ನೂ ಮಾಡಬಾರದೆಂದು ಮಿಕ್ಕ ಕಾಂಗ್ರೆಸ್ ಪ್ರಮುಖರಿಗೂ ಗಾಂಧಿಜೀಯ ಬೋಧನೆಯಿದ್ದಿತು.

ಸಿಮ್ಲಾದಲ್ಲಿ ಕಾಂಗ್ರೆಸ್ ಪ್ರಮುಖರು ಎಲ್ಲರ ಸಹಾನುಭೂತಿ, ಗೌರವಗಳನ್ನು ಸಂಪಾದಿಸಿದ್ದರು. ಮಿ. ಜಿನ್ನರು ವ್ಯಕ್ತಿಶಃ ಗೂಢ ದ್ವೇಷಕ್ಕೊಳಗಾಗಿದ್ದರು. ಲೋರ್ಡ್ ವೇವೆಲರ ವ್ಯಕ್ತಿಗತ ಅಭಿಪ್ರಾಯವು ಕಾಂಗ್ರೆಸ್ ಧೋರಣೆಯ ಪರವಾಗಿದ್ದಿತಾದರೂ ಅಮೆರಿ ಕಾಲದ ಲಂಡನಿನ ಒತ್ತಾಯದಿಂದಾಗಿ ಅವರಾಗ ನಿರುಪಾಯರಾಗಿದ್ದರು.

ಸಿಮ್ಲಾ ಸಮ್ಮೇಲನದಿಂದ ಮರಳಿ ಬಂದೊಡನೆ ಜಿನ್ನಾ–ವೇವೆಲ್ ಪತ್ರವ್ಯವಹಾರಗಳನ್ನು ಜಿನ್ನರು ಪ್ರಕಟಿಸಿಬಿಟ್ಟರು. ಅಜಾದ್–ವೇವೆಲ್ ಪತ್ರವ್ಯವಹಾರಗಳು ಬಹಿರಂಗವಾಗಬೇಕೆಂದು ಜಿನ್ನರು ಹಲವು ಬಾರಿ ಆಗ್ರಹಪಡಿಸಿದರೂ 'ಬೇಕಾದರೆ ಮಿ. ಜಿನ್ನರು ಖಾಸಗಿಯಲ್ಲಿ ಬಂದು ಅದನ್ನು ನೋಡಬಹುದು—ಈಗ ಪ್ರಕಟಿಸುವಂತಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷರೆಂದರು. ಸರಕಾರೀ–ಕಾಂಗ್ರೆಸ್ ಸಂಬಂಧ ಕೆಡಬಾರದೆಂದೇ ಈ ಜಾಗ್ರತೆ.

ಸಿಮ್ಲಾ ಸಮ್ಮೇಲನ ಮುಗಿದೊಡನೆಯೇ ವೈಸರಾಯರು ಗವರ್ನರರ ಸಭೆ ಕರೆದಿದ್ದರು. ಕಾಂಗ್ರೆಸಿಗರ ಸಹಕಾರಕ್ಕೆ ಪ್ರತಿಸಹಕಾರಕೊಟ್ಟು ವಾತಾವರಣವನ್ನು ಶುಭ್ರಗೊಳಿಸುವದಕ್ಕಾಗಿ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಮತ್ತು ಕಾಂಗ್ರೆಸ್ ಸಮಿತಿಗಳ ಬಹಿಷ್ಕಾರಗಳನ್ನು ತೆಗೆಯುವ ಪರ್ಯಾಲೋಚನೆ ಅಲ್ಲಿ ನಡೆಯಿತು.

ಮುಂದಿನ ಹೊಸ ಕಾರ್ಯಕ್ರಮಕ್ಕಾರಂಭಿಸುವಾಗಲೇ ಎಲ್ಲಾ ಕಡೆಯ ಬಹಿಷ್ಕಾರಗಳನ್ನೂ ತೆಗೆದು ಹಾಕಿ ಒಮ್ಮೆಗೇ ಸದ್ಭಾವನೆ ಹುಟ್ಟಿಸಬೇಕೆಂದು ಗವರ್ನರರ ಸಭೆಯಲ್ಲಿ ನಿರ್ಣಯವಾಗಿರಬೇಕು. ಅದಕ್ಕನುಗುಣವಾಗಿ ಲೋರ್ಡ್ ವೇವೆಲರಿಗೆ ಈ ಬಾರಿ ಲಂಡನಿನಿಂದ ಕರೆ ಬಂದೊಡನೆ ಎಲ್ಲಾ ಪ್ರಾಂತಿಕ ಸರಕಾರಗಳೂ ಕಾಂಗ್ರೆಸ್ ಸಮಿತಿಗಳ ಮೇಲಿದ್ದ ನಿರ್ಬಂಧಗಳನ್ನು ತೆಗೆದು ಹಾಕಿದುವು; ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದುವು.

'ಹುತಾತ್ಮರ ದಿನಾಚರಣೆ'ಗೆ ದೇಶ ತುಂಬಾ ಪ್ರತಿಬಂಧಕಗಳಿದ್ದುವು. 'ಸಮತಾವಾದಿ ಪಕ್ಷ' 'ಫೋರ್ವರ್ಡ್ ಬ್ಲೋಕ್'ಗಳಂತಹ ಉಗ್ರಗಾಮಿಗಳ ಮೇಲೆ ಇನ್ನೂ ನಿಷೇಧವಿದೆ ಕೆಲವು ರಾಜಕೀಯ ಕೈದಿಗಳ ಬಿಡುಗಡೆ ಬಾಕಿಯುಳಿದಿದೆ. ದೇಶದ ಪ್ರಾರ್ಥನೆಯನ್ನಲಕ್ಷಿಸಿ ಮಹೇಂದ್ರ ಚೌಧರಿಯಂಥವರನ್ನು ಫಾಶಿಗೆ ಕೊಟ್ಟರು. ಕಾಂಗ್ರೆಸಿಗರ ಜನತಾ ಸಂಘಟನೆಯು ಸರಕಾರಕ್ಕಿನ್ನೂ ಅಸಹನೀಯವಾಗುತ್ತಿದೆ ಎಂಬುದಕ್ಕೆ ಸತಾರಾ ಜಿಲ್ಲೆಯ ದಬ್ಬಾಳಿಕೆಯಂತಹ ನಿದರ್ಶನಗಳು ಇನ್ನೂ ಇವೆ. ಆದರೂ—

ಅಷ್ಟಿ ಚಿಮೂರು, ಕುಲಶೇಖರ ಪಟ್ಣಮಿನಂತಹ ರಾಜಕೀಯ ಕೈದಿಗಳ ಮರಣ ದಂಡನೆಯು ಜೀವಾವಧಿ ಸಜೆಯಾಗಿ ಮಾರ್ಪಟ್ಟಿತು ಸರ್ವೆಡೆಯ ಕಾಂಗ್ರೆಸ್ ಕಾರ್ಯಾಲಯಗಳು, ನೊತ್ತು ನಿಧಿಗಳು ಮರಳಿ ದೊರೆತವು. ಲೋರ್ಡ್ ವೇವೆಲರು ರಾಜಕೀಯ ವಾತಾವರಣವನ್ನು ಶೇಕಡಾ 70ರಷ್ಟು ಸುಧಾರಿಸಿದ್ದಾರೆ.

ದೇಶದಲ್ಲೀಗ ಕಾಂಗ್ರೆಸಿನ 'ಕ್ವಿಟ್ ಇಂಡಿಯಾ'ದಂತಹ ಚಳವಳವಿಲ್ಲ, ಲೋರ್ಡ್ ಲಿನ್‌ಲಿತ್‌ಗೋರಂತಹ ವೈಸರಾಯರಿಲ್ಲ; ಲಂಡನಿನಲ್ಲಿ ಮಿ. ಅಮೆರಿಯಂತಹ ಭಾರತ ದ್ರೋಹೀ ಅಧಿಕಾರಿಗಳಿಲ್ಲ. ಲೋಕದಲ್ಲಿ ಯುದ್ಧವಿಲ್ಲ. 'ಸದ್ಯ ಭಾರತದ ಸ್ಥಿತಿ ಬದಲಾವಣೆಯಿಲ್ಲ' ಎನ್ನುತ್ತಿದ್ದ ಕಾಲ ಹೋಗಿ 'ಕೂಡಲೇ ಸರ್ವ ಪ್ರಯತ್ನ ಮಾಡಲಾಗುವದು' ಎಂಬ ಕಾಲ ಬಂದಿದೆ.

ಚುನಾವಣೆಯ ಸಿದ್ಧತೆ

ಈಗ ನಿಶ್ಚಯವಾಗಿರುವದೆಂದರೆ ಕೇಂದ್ರ ಮತ್ತು ಪ್ರಾಂತಿಕ ನ್ಯಾಯವಿಧಾಯಕ ಸಭೆಗಳ ಸಾರ್ವತ್ರಿಕ ಚುನಾವಣೆ. ಕೇಂದ್ರ ಎಸೆಂಬ್ಲಿ ಚುನಾವಣೆಯು ಬರುವ ಡಿಶಂಬರಿನೊಳಗೆ ದೇಶದಲ್ಲೆಲ್ಲಾ ನಡೆಯಲಿರುವದು ಖಂಡಿತವೆನ್ನಬಹುದು. ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಯು ಆಯಾಯಾ ಪ್ರಾಂತ್ಯಗಳ ಅನುಕೂಲತೆಗನುಸಾರವಾಗಿ ಪ್ರತ್ಯ ಪ್ರತ್ಯೇಕ ಕಾಲಗಳಲ್ಲಿ ನಡೆಯಬಹುದು. ಅಂತೂ 1946ನೇ ಎಪ್ರಿಲಿನೊಳಗೆ ಎಲ್ಲಾ ಚುನಾವಣೆಗಳು ಮುಗಿಯುವದು ಸಂಭವನೀಯ.

ಪ್ರಾಯಸ್ಥರಿಗೆಲ್ಲಾ ಮತದಾನದ ಹಕ್ಕಿರಬೇಕೆಂದು ಪ್ರಗತಿಶೀಲ ರಾಜಕಾರಣಿಗಳೆಲ್ಲರ ಅಭಿಮತವಿದೆ. ಆದರೆ ಈ ಬಾರಿ ಮತದಾರ ಪದ್ಧತಿಯಲ್ಲಿ ಬದಲಾವಣೆಯಾಗುವ ಸಂಭವ ಕಾಣುವದಿಲ್ಲ. ಯುದ್ಧೋದ್ಯೋಗದಲ್ಲಿದ್ದವರಿಗೂ ಮತದಾನದ ಅನುಕೂಲತೆಯೊದಗಿಸುವ ಮಸೂದೆ ಪಾರ್ಲಿಮೆಂಟಿನಲ್ಲಿ ಮಂಜೂರಾಗಿದೆ. ಇದ್ದ ಮತದಾರ ಪಟ್ಟಿಯನ್ನೇ ದುರಸ್ತಿಪಡಿಸಿಕೊಳ್ಳಲು ಕೆಲವು ಪ್ರಾಂತಿಕ ಸರಕಾರಗಳಿಗೆ ಸಮಯ ಬೇಕಾಗಿದೆ.

ಈ ಬಾರಿಯ ಚುನಾವಣೆಯು ಎರಡು ವಿಧದಿಂದ ಪ್ರಾಮುಖ್ಯದ್ದಿದೆ. ಮೊದಲನೆಯದಾಗಿ ಚುನಾಯಿಸಲ್ಪಟ್ಟ ಸದಸ್ಯರಿಂದಲೇ ಭಾವೀ 'ರಾಜ್ಯಾಂಗ ರಚನಾ ಸಭೆ' ರಚಿಸಲ್ಪಡುವ ನಿರೀಕ್ಷೆಯಿದೆ ಆದರಿಂದ

ಆ ದಾಖಲೆ........

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 1925ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಅಂದಿನಿಂದಲೇ ಸಿಂಡಿಕೇಟು ಬದ್ಧ ಕಂಕಣವಾಗಿದೆ ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟಿನಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ—ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಅಕ್ಷರಶಃ ಪಾಲಿಸಲಾಗುವುದು.

ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಕೆ. ಎ. ಪೈ, ಬಿ. ಕೋಮ್, ಎ. ಐ. ಐ. ಬಿ.,
ಜನರಲ್ ಮೆನೇಜರ್.

The Canara Industrial & Banking Syndicate Limited.

(Incorporated in British India)

ರಾಷ್ಟ್ರದ ಭವಿಷ್ಯವು ಬಹುಮಟ್ಟಿಗೆ ಮುಂಬರುವ ಚುನಾವಣೆಯ ಫಲಿತಾಂಶವನ್ನು ಅವಲಂಬಿಸಿದೆ

ಎರಡನೆಯದಾಗಿ ಈಗಿನ ಪ್ರಾಮುಖ್ಯ ಕಂಟಕವಾಗಿರುವ ಪಾಕಿಸ್ತಾನ ವೇದಿಕೆಗೆ ಬೆಂಬಲವೆಷ್ಟು ಎಂಬುದನ್ನೂ ಈ ಚುನಾವಣೆಯು ತಿಳಿಸಬೇಕಾಗಿದೆ ಸಿಮ್ಲಾದಲ್ಲಿ ಮಿ ಜಿನ್ನಾರು ಚುನಾವಣೆಯನ್ನು ಯಾಚಿಸಿದ್ದರೆಂಬುದನ್ನೂ ಸರಕಾರವು ಕೂಡಲೇ ಅದಕ್ಕಣಿಯಾಗಲು ಇದೊಂದು ಮೂಲ ಕಾರಣವೆಂಬುದನ್ನೂ ಮರೆಯಬಾರದು

ಮುಸ್ಲಿಂ ಲೀಗು ಚುನಾವಣಾ ಸಿದ್ಧತೆಯಲ್ಲಿ ಎಲ್ಲರಿಗಿಂತ ಮುಂದಾಗಿದೆ. ಲೀಗಿನ ಚುನಾವಣಾ ನಿಧಿಭಾರದಿಂದ ಸಂಗ್ರಹಿಸಲ್ಪಡುತ್ತಿದೆ. ಚುನಾವಣಾ ಸಮಿತಿಗಳು ಸಂಘಟಿಸಲ್ಪಡುತ್ತಿವೆ ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿದ್ದ ಮಿ. ಅಬ್ದುಲ್ ಕ್ವಯುಮ್ ಆಜಾದರೇ ಲೀಗಿಗೆ ಸೇರಿ ಗಡಿನಾಡಿಗ ಹೋಗಿ ಪ್ರಚಾರಕ್ಕಾರಂಭಿಸಿದ್ದಾರೆ.

ವೈಸರಾಯಿ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರಾಗಿದ್ದ ಸುಪ್ರಸಿದ್ಧ ಸರ್. ಖಾನ್‌ನೂನರು ಲೀಗ್ ಟಿಕೇಟಿನಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಪಂಜಾಬ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಿ. ಇಫ್ತಿಕಾರುದ್ದೀನರೂ ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ ಈ ರೀತಿ ಮುಸ್ಲಿಂ ಜನತೆಯಲ್ಲಿ ಪ್ರಮುಖರಲ್ಲೂ ಲೀಗಿನ ಪ್ರಭಾವ ಅಧಿಕಾಧಿಕವಾಗಿ ಹರಡುತ್ತಿದೆ.

ಕಾಂಗ್ರೆಸ್ ಸಮಿತಿಗಳ ತಲೆಯೆತ್ತಲು ಅವಕಾಶ ದೊರೆತುದು ಈಗ ತಾನೇ ಆದರೂ ಎಲ್ಲೆಲ್ಲೂ ಕಾರ್ಯಾರಂಭವಾಗಿದೆ ಇದೇ ಮುಂತಾದ ಪ್ರಾಮುಖ್ಯ ವಿಷಯಗಳ ಪರ್ಯಾಲೋಚನೆಗಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಸೆಪ್ಟಂಬರ್ ತಾ. 12ರಿಂದ ಪೂನದಲ್ಲಿಯೂ, ಅ. ಭಾ. ರಾ ಸಮಿತಿಯ ಸಭೆಯು ಸೆಪ್ಟೆಂಬರ್ 21ರಿಂದ ಬೊಂಬಾಯಿಯಲ್ಲಿಯೂ ಸೇರಲಿವೆ.

ಭಾವೀ ವ್ಯವಸ್ಥೆಯೇನು?

ಈಗ ಎಲ್ಲರ ದೃಷ್ಟಿ ಲಂಡನಿನ ಕಡೆಗಿದೆ. ಲೋರ್ಡ್ ವೇವೆಲರು ಭಾರತ ಕಾರ್ಯದರ್ಶಿ, ಪ್ರಧಾನ ಮಂತ್ರಿ, ವಿದೇಶ ಮಂತ್ರಿ ಮತ್ತು ಬ್ರಿಟಿಷ್ ಮಂತ್ರಿಮಂಡಲದೊಡನೆ ಗಾಢ ಪರ್ಯಾಲೋಚನೆಯಲ್ಲಿದ್ದಾರೆ.

ಯುದ್ಧ ಮುಗಿದಿರುವದರಿಂದಲೂ ಸಿಮ್ಲಾ ಸಮ್ಮೇಲನ ವಿಫಲವಾದುದರಿಂದಲೂ ಈ ಬಾರಿ ಶಾಶ್ವತ ರಾಜ್ಯ ವ್ಯವಸ್ಥೆಯನ್ನೇ ರೂಪಿಸಲಾಗುವದಲ್ಲದೆ ತಾತ್ಕಾಲಿಕ ವ್ಯವಸ್ಥೆಯೊಂದನ್ನು ಸೂಚಿಸುವಂತಿಲ್ಲ. ಈ ಶಾಶ್ವತ ವ್ಯವಸ್ಥೆಗೆ ಅನುಕ್ರಮವಾಗಿ ಬೆಳೆಯುತ್ತಾ ಹೋಗುವ ದೀರ್ಘಾವಧಿಯ ರೂಪ ಕೊಡಬಹುದೆಂದು ನಂಬಲಾಗಿದೆ

ಲಂಡನಿನ ಚರ್ಚೆಯಲ್ಲಿ ಭಾಗವಹಿಸಿದವರಿಗೊಂದು ಒಗಟಾಗಿರುವದೆಂದರೆ ದೇಶ ವಿಭಜನೆಯ ಪ್ರಶ್ನೆ ಈ ಕುರಿತು ಬ್ರಿಟಿಷ್ ಪ್ರಮುಖರಲ್ಲಿ ಭಿನ್ನಾಭಿಪ್ರಾಯವಿರುವಂತಿದೆ.

ಲೋರ್ಡ್ ವೇವೆಲರೂ, ಬ್ರಿಟಿಷ್ ಮಂತ್ರಿಮಂಡಲದಲ್ಲಿ ವಿಶೇಷ ವರ್ಚಸ್ಸಿರುವ ವಿದೇಶ ಮಂತ್ರಿ ಬೆವಿನರೂ ಪಾಕಿಸ್ತಾನಕ್ಕೆ ವಿರೋಧವಿದ್ದಾರಂತೆ ಆದರೆ ಸರ್. ಕ್ರಿಪ್ಸ್ ಮತ್ತು ವಿಶೇಷಾಮಂತ್ರಣ ಪಡೆದು ಈ ಚರ್ಚೆಯಲ್ಲಿ ಭಾಗವಹಿಸುತ್ತಿರುವ ಪ್ರೊಫೆಸರ್ ಕಪ್ಲೆಂಡರು ಪಾಕಿಸ್ತಾನಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದಾರೆ

ಈ ಕಪ್ಲೆಂಡರು 'ಪ್ರಾದೇಶಿಕತ್ವ'ದ ನಿರ್ಮಾಣಕರ್ತರು. ಸರ್ ಕ್ರಿಪ್ಸರು 1942ರ ವರೆಗೂ ಪಾಕಿಸ್ತಾನಕ್ಕೆ ವಿರೋಧವಿದ್ದರೂ ಕಪ್ಲೆಂಡರ ಅಭಿಪ್ರಾಯಕ್ಕೆ ಕಟ್ಟು ಬಿದ್ದು ಈಗ ಪಾಕಿಸ್ಥಾನ್ ಮತ್ತು ಜಿನ್ನಾ ವಾದಕ್ಕೆ ವಿಶೇಷ ಬೆಲೆ ಕೊಡುತ್ತಿದ್ದಾರೆ. ಕ್ರಿಪ್ಸ್ ಕೊಡುಗೆಯಲ್ಲಿ ಪ್ರಾದೇಶಿಕಾಧಿಕಾರದ ನಿರೂಪಣೆಯಿರಲು ಕಪ್ಲೆಂಡರೇ ಕಾರಣ.

ಈ ಬಾರಿಯ ಸೂಚನೆಗಳು ಬಹುತೇಕವಾಗಿ ಕ್ರಿಪ್ಸ್ ಕೊಡುಗೆಯ ಮಾದರಿಯಲ್ಲೇ ಇರುವಂತೆ ಕಾಣುತ್ತದೆ. ಹೇಗಿದ್ದರೂ ಹೊಸ ವ್ಯವಸ್ಥೆ ಒಪ್ಪಿಯಾಗಲು ಸಾಕಷ್ಟು ಅವಧಿ ಬೇಕಾಗಬಹುದು ಈ ನಡುವೆ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಸ್ವೀಕರಿಸಬೇಕೆಂಬ ವಾದವೆದ್ದಿದೆ

ಪ್ರಾಂತಿಕ ಎಸೆಂಬ್ಲಿಗಳನ್ನು ಕರೆಯುವಂತೆ ಕಾಂಗ್ರೆಸ್ ಗವರ್ನರರುಗಳನ್ನು ಕೇಳಬೇಕೆಂದು ಭಾರತದ ಉಪಕಾರ್ಯದರ್ಶಿ ಮಿ ಆರ್ಥರ ಹೆಂಡರ್ಸನರೂ ಹೇಳಿದ್ದರು ಆದರೆ ಬಿಹಾರಿನ ಗವರ್ನರರು ಇಷ್ಟರಲ್ಲೇ ಬಿಹಾರ್ ಎಸಂಬ್ಲಿಯನ್ನು ವಿಸರ್ಜಿಸಿದ್ದಾರೆ. ಲೀಗ್ ಮಂತ್ರಿ ಮಂಡಲವಿರುವ ಸಿಂಧ್ ಗವರ್ನರರೂ ಅಲ್ಲಿಯ ಎಸೆಂಬ್ಲಿಯನ್ನು ಒಮ್ಮೆಗೆ ಸ್ತ ಪಡಿಸಿದ್ದಾರೆ ಎಲ್ಲಾ ಪ್ರಾಂತ್ಯಗಳೂ ಇದೇ ಮಾದರಿಯನ್ನನುಸರಿಸಿ ಹೊಸ ಚುನಾವಣೆ ನಡೆಸುವ ಲಕ್ಷಣ ಕಾಣುತ್ತಿದೆ

ಇನ್ನು ಒಂದು ವಾರದೊಳಗೆ ಲಂಡನ್ ಸಂಭಾಷಣೆ ಮುಗಿದು ಲೋರ್ಡ್ ವೇವೆಲರು ಲಂಡನಿನಿಂದ ಹೊರಡುವ ಮೊದಲೇ ಅಥವಾ ಇಲ್ಲಿ ಮುಟ್ಟಿದೊಡನೆ ಇವೆಲ್ಲಾ ವಿಷಯಗಳನ್ನೊಳಗೊಂಡ ಹೊಸ ಯೋಜನೆ ಪ್ರಕಟಿಸಲ್ಪಡುವದು.

ಅಮೇರಿಕ ಹೊಡೆದ ಎರಡು ಬೋಂಬುಗಳು.

ಲೋಕದ ಮಹಾ ರಾಷ್ಟ್ರಗಳ ಪೈಕಿ ಸ್ಥಾನ ಸುತ್ತ ಧನ ಬಲದಿಂದ ಅಕ್ರಮಣ ಕ್ಕಸಾಧ್ಯವಾಗಿದ್ದ ಒಂದು ಮಹಾ ರಾಷ್ಟ್ರವೆಂದರೆ ಅಮೇರಿಕ ಸಾಹಸದಲ್ಲಿ ಮಾತ್ರ ಅಮೆರಿಕಾನರು ತುಸು ಹಿಂದೆ 'ಗುಂಡಿಗೊಂದು ಚಂದದ ಗುರಿ' ಎಂದು ದೀರ್ಘಕಾಯದ ಅಮೇರಿಕನ್ ಯೋಧರನ್ನು ಹಿಟ್ಲರ್ ಪರಿಹಾಸ್ಯ ಮಾಡಿದ್ದ. ಆದರೆ ಈ ಅಪವಾದ ಕೂಡಾ ಪೋಟ್ಸ್‌ಡಾಮ್ ಸಮ್ಮೇಲನದ ವರೆಗ ಮಾತ್ರ ಈಗ ಅಮೇರಿಕವು ಎಲ್ಲಾ ವಿಧಾನದಲ್ಲೂ ನಂ. 1ನೇ ರಾಷ್ಟ್ರವಾಗಿದೆ ಪೋಟ್ಸ್‌ಡಾಮ್ ತ್ರಿಮೂರ್ತಿ ಸಮ್ಮೇಲನದ ನಂತರ ಅದು ಸಿಡಿಯಿಸಿದ ಎರಡು ಬೋಂಬುಗಳು ಲೋಕದ ಕಾದ್ಯಕ್ಷರ ಮಾತಿಗೆ ಸೈಗಟ್ಟಿತು, ಆ ವಾದವನ್ನೇ ಸಮರ್ಥಿಸಿತು ಇದರಿಂದ ಸ್ಟಾಲಿನರು ದಿಗಿಲುಗೊಂಡಿರಬೇಕೆಂಬುದು ನಿರ್ವಿವಾದ. ಜಾಪಾನ್ ಸೋತು ಒಳಗಿಂದೊಳಗೆ ಸಂಧಾನ ಹೂಡಿರುವ ಯುದ್ಧದ ಕೊನೆಯ ಅಂಕದಲ್ಲಿ ಅಮೆರಿಕಾನರು ಅಟಂ ಪ್ರಯೋಗಿಸಿದ ಗುಟ್ಟು ಬೇರೆಯೇ ಇದೆ. ರಶ್ಯದ ಕಡೆಗೆ ನೋಡುತ್ತಾ ಆ ಬೋಂಬನ್ನು ಜಾಪಾನಿನ ಮೇಲೆ ಕಳಿಸಿದರೆಂದು ತಜ್ಞರ ಅಭಿಮತ. ಆದರೆ ಸ್ಟಾಲಿನರೀಗ ಮಾತಾಡದೆ ಕಾರ್ಯಕ್ಕೆ ಕೈಹಾಕಿದ್ದಾರೆ, ಉರಾಲ್ ಪ್ರದೇಶದಲ್ಲಿ ಅಟಂ ತಯಾರಿ ಕಾರ್ಖಾನೆ ಸ್ಥಾಪಿಸಿ ಸ್ವತಃ ತಾನೇ ಅದರ ಮುಖ್ಯಾಧಿಕಾರ ವಹಿಸಿದ್ದಾರೆ ಒಂದು ವರುಷದೊಳಗೆ ಪ್ರಮಮ ಅಟಂ ಬೋಂಬುಗಳು ರೂಪುಗೊಳ್ಳಬೇಕೆಂದು ರಶ್ಯದ ವೈಜ್ಞಾನಿಕರಿಗೆ ಅವರ ಕಟ್ಟಪ್ಪಣೆಯಾಗಿದೆ



ಪೋಟ್ಸ್‌ಡಾಮ್ ತ್ರಿಮೂರ್ತಿ ಸಮ್ಮೇಲನ

ಅಧ್ಯಕ್ಷ ಟ್ರುಮೇನರು ಮಧ್ಯದಲ್ಲಿ ಚರ್ಚಿಲ್, ಸ್ಟಾಲಿನರ ಕೈ ಹಿಡಿದು ನಿಂತಿದ್ದಾರೆ. ಆದರೆ ಕಾರ್ಯತಃ ಈಗ ಇಬ್ಬರ ಕೈಯನ್ನೂ ಬಿಟ್ಟಿದ್ದಾರೆ!

...ನ್ನು ಕಡೆಗಣಿಸುವ ಎದೆಗಾರಿಕೆಯೂ ಅಮೇರಿಕಕ್ಕೀಗ ಬಂದಿದೆ ಎಂಬುದಕ್ಕೆ ನಿದರ್ಶನ ಒಂದನೆಯದು ಅಟಂ ಬೋಂಬು, ಎರಡನೆಯದು 'ಕಡ ಒತ್ತಿ' ಸಹಾಯದ ರದ್ದತಿ!

ಅಟಂ ಗುಟ್ಟು

ಮೇಕ್ಸಿಕೋ ಮರುಭೂಮಿಯಲ್ಲಿ ಅಟಂ ಬೋಂಬಿನ ಪರೀಕ್ಷೆ ನಡೆಯಿಸಿಯೇ ಅಧ್ಯಕ್ಷ ಟ್ರುಮೇನರು ಸಮ್ಮೇಲನಕ್ಕೆ ಬಂದಿದ್ದರು. ಪೋಟ್ಸ್‌ಡಾಮಿನಲ್ಲಿ ಅದರ ಅದ್ಭುತ ವರ್ಣನೆ ಕೇಳಿದ ಸ್ಟಾಲಿನರು ನಂಬಲಿಲ್ಲವಂತೆ ಜಾಪಾನಿನ ಹಿರೋಶಿಮಾದ ಮೇಲೆ ಅದು ಸಿಡಿದ ಮೇಲೆಯೇ ಸ್ಟಾಲಿನರು ಅದರ ಪ್ರಳಯ ಶಕ್ತಿಯನ್ನೊಪ್ಪಿಕೊಂಡರೆಂದೂ ಆ ಮೇಲೆ ತಡಮಾಡದೆ ಜಾಪಾನಿನ ಮೇಲೆ ಬಿದ್ದರೆಂದೂ ಕೆಲವು ಪಾಶ್ಚಾತ್ಯರನ್ನುತ್ತಾರೆ ಬ್ರಿಟನಿನ ಕೂಲಿಗಾರ ಪ್ರಮುಖರೂ ಪತ್ರಿಕೆಗಳೂ ಅಟಂ ಬೋಂಬನ್ನು ಅಂತರ್‌ರಾಷ್ಟ್ರೀಯ ಹತೋಟಿಯಲ್ಲಿಡಬೇಕೆಂಬ ಪ್ರಥಮತ. ಒಲವಾಗಿ ವಾದಿಸಿದ್ದರೂ ಕೊನೆಗೆ ಲೇಬರ್ ಸರಕಾರವೂ 'ಅಟಂ ಬೋಂಬಿನ ಪೂರ್ಣಾಧಿಕಾರ ಆಂಗ್ಲೋ ಅಮೆರಿಕಾನರಿಗೆ ಮಾತ್ರ' ಎಂದ ಅಮೇರಿ...

ಲೀಸ್-ಲೆಂಡ್ ರದ್ದತಿ

ಅಟಂ ಬೋಂಬಿನ ಅಧಿಕಾರ ಕೊಡದೆ ಅಮೇರಿಕವು ರಶ್ಯವನ್ನು ಕಡೆಗಣಿಸಿದೆಯಾದರೆ 'ಕಡ ಒತ್ತಿ' ಸಹಾಯವನ್ನು ಏಕಾಏಕ ರದ್ದುಪಡಿಸಿ ಬ್ರಿಟನನ್ನೂ ನಡು ನೀರಿನಲ್ಲಿ ಕೈ ಬಿಟ್ಟಿದೆ! ಇದರಿಂದ ಬ್ರಿಟಿಷ್ ಪ್ರಮುಖರ ತಲೆಗೆ ಸಿಡಿಲು ಬಿದ್ದಂತಾದ ಚಿಹ್ನೆಯನ್ನು ಕಾಣಬಹುದು ಜರ್ಮನಿ ಮತ್ತು ಜಪಾನ್ ಯುದ್ಧಗಳೆರಡೂ ನಿರೀಕ್ಷೆಗೆ ವಿರುದ್ಧವಾಗಿ ಅಕಸ್ಮಾತ್ ನಿಂತುದರಿಂದ ಬ್ರಿಟನಿನ ಆರ್ಥಿಕ ಯೋಜನೆಗಳೆಲ್ಲಾ ಅಲ್ಲಾಡಿದ್ದುವು. ಆಗಲೇ ಯುದ್ಧಾರಂಭದಿಂದ ಇದುವರೆಗೂ ಸಲ್ಲಿಸುತ್ತಿದ್ದ 'ಲೇಂಡ್‌ಲೀಸ್' ಸಹಾಯವನ್ನು ಪೂರ್ವ ಸೂಚನೆ ಕೊಡದೆಯೇ ನಿಲ್ಲಿಸಿಬಿಟ್ಟುದರಿಂದ ಇಂಗ್ಲಾಂಡಿನ ಆರ್ಥಿಕ ತಳಗಟ್ಟೇ ಒಮ್ಮೆಗೆ ಅದಿರೇಲಾದಂತಿದೆ ಹೊರ ವಲಯಗಳಲ್ಲಿ ಬ್ರಿಟನ್ ಇದುವರೆಗೂ ವರುಷಕ್ಕೆ

(೭ನೇ ಪುಟ ನೋಡಿರಿ)

The Canara Banking Corporation Limited.
(Incorporated in British India, with limited Liability)
Estd: 1906
Head Office: **UDIPI**, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital	Rs. 15,17,000
Reserves	Rs. 4,44,000

ನವಯುಗ

ಉಡುಪಿ, ಗುರುವಾರ ೬-೯-೧೯೪೫

ಸ್ವವಿಷಯ.

ಈ ಸಂಚಿಕೆಯೊಂದಿಗೆ 'ನವಯುಗ' ತನ್ನ ಇಪ್ಪತ್ತೈದನೇ ವರುಷವನ್ನಾರಂಭಿಸಿದೆ; ರಜತೋತ್ಸವದ ಗಡಿಗೆ ಬಂದಿದೆ. ಹಿಂದೀಯರ ಸರಾಸರಿ ಆಯುಷ್ಯವು ಇದು ವರೆಗೆ ಈ ಗಡಿ ಮುಟ್ಟಿಲ್ಲ. ಶಿಶು ಮರಣಕ್ಕೆ ಹೆಸರು ಹೋದ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಆಯುರ್ಮಾನದ ಸರಾಸರಿಯಂತೂ ಇನ್ನೂ ಕಡಿಮೆಯಿರಬಹುದು. ಅಂದ ಮೇಲೆ ಪ್ರಥಮ ಕಂಟಕಗಳೆಲ್ಲಾ ನವಯುಗವು ೨೫ನೇ ವರುಷಕ್ಕಿಟ್ಟ ಹೆಜ್ಜೆಯಡಿಗೆ ಬಿದ್ದುವೆಂದು ಹಿಗ್ಗಳಿಕೆಯಿಂದ ಹೇಳಲಿಚ್ಛಿಸುತ್ತೇವೆ.

ನಾವು ಕನ್ನಡಿಗರಿಗೆ ೨೪ ವರುಷಗಳ ಅವಿಶ್ರಾಂತ ಸೇವೆ ಸಲ್ಲಿಸಿದ್ದೇವೆ; ಎರಡೂವರೆ ದಶಮಾನಗಳ ಸಂಬಂಧದ ಬಲದಿಂದ, ಇನ್ನು ನಾವು ಜನತೆಯ ಚಿರಸಂಬಂಧಿಕರೆಂಬ ಆತ್ಮವಿಶ್ವಾಸ ದೊರಕಿಸಿಕೊಂಡಿದ್ದೇವೆ. ನಾವು ಹಾದು ಬಂದ ಹಾದಿಯನ್ನೊಮ್ಮೆ ತಿರುಗಿ ನೋಡುವಾಗ—ಅಲ್ಲಿದ್ದ ಏರುತಗ್ಗುಗಳನ್ನು ಕಣ್ಣ ಮುಂದೆ ತರುವಾಗ–ಅದೂ ಒಂದು 'ಬರ್ಮಾ ರಸ್ತೆ' ಯನ್ನಿಸುತ್ತದೆ. ಪತ್ರಿಕಾ ವಾಚನವು ಒಂದು 'ದೊಡ್ಡಸ್ತಿಕೆ'ಯನ್ನಿಸಿದ್ದ ಕಾಲ ಕಳೆದು 'ಇಂದಿನ ಪತ್ರಿಕೆಯೇಕೆ ಬರಲಿಲ್ಲ?' ಎಂದು ಹಳ್ಳಿಗನೂ ವಿಚಾರಿಸುವ ಕಾಲವೀಗ ಬಂದಿದೆ; ಇಂತಹ ಸ್ಥಿತ್ಯಂತರಕ್ಕೆ ನವಯುಗವೂ ತನ್ನ ಅಳಿಲಸೇವೆಯನ್ನು ಸಲ್ಲಿಸಿದೆ. ಅಲ್ಲಿಂದಿಲ್ಲಿ ವರೆಗಿನ ಪಥ ಸಾಗಬೇಕಾದರೆ, ಪರಿಶ್ರಮ, ಪ್ರಸಂಗಾವಧಾನತೆ, ಕಷ್ಟಸಹಿಷ್ಣುತೆ, ಎಲ್ಲಾ ಬೇಕು ಹಾಗೆ ಪಡೆಯುವ ತಂಬೇತಿಯೇ ಜೀವನಸಂಗ್ರಾಮದ ಯೋಧ ಶಿಕ್ಷಣ; ಅದರ ಹಲವು ತರಗತಿಗಳಲ್ಲಿ ತೇರ್ಗಡೆಗೊಂಡ ನವಯುಗದ ಸ್ಥಾನವು ಭದ್ರವಿದೆ, ನಾಡ ಸೇವೆಯನ್ನು ನಿಶ್ಶಂಕೆಯಿಂದ ಮಾಡುವ ಯೋಗ್ಯತೆ ಪೂರ್ಣಗೊಂಡಿದೆ,ಎಂದು ನಮ್ಮ ನಂಬಿಕೆ. ಕಳೆದ ೨೪ ವರುಷಗಳಲ್ಲಿ ನವಯುಗದಿಂದಾದ ಸೇವೆ-ಜನತಾ ಶಿಕ್ಷಣ—ಅದೆಷ್ಟು ಎಂಬುದನ್ನು ಅಳೆಯುವ ಹೊಣೆಯನ್ನು ಕನ್ನಡಿಗರಿಗೆ ಬಿಟ್ಟಿದ್ದೇವೆ.

ಈ ವರುಷಾವಧಿಯಲ್ಲಿ ನವಯುಗದ ಬೆಳ್ಳಿ ಹಬ್ಬವನ್ನಾಚರಿಸಬೇಕೆಂಬ ಸಂಕಲ್ಪವಿದೆ, ಸರ್ವಾಂಗ ಸುಂದರ 'ರಜತೋತ್ಸವ ಸಂಚಿಕೆ'ಯೊಂದನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಸಮರ್ಪಿಸಬೇಕೆಂದೂ ನಿರ್ಧರಿಸಿದ್ದೇವೆ. ಈ ಸವಾರಂಭ ಮತ್ತು ವಿಶೇಷ ಕಾಣಿಕೆಯು ಕನ್ನಡಿಗರು ಇದು ವರೆಗೆ ನಮಗಿತ್ತ ಪ್ರೋತ್ಸಾಹದ ಸ್ಮಾರಕವಾಗಿ; ನಾವೊಂದು ಗಡಿಯನ್ನು ಸುಗಮವಾಗಿ ಮುಟ್ಟಿದ ಸಂತೋಷಕ್ಕಾಗಿ; ಇನ್ನೂ ಹೆಚ್ಚಿನ ಸೇವೆಯನ್ನು ಜನತೆ ನಮ್ಮಿಂದ ಕೈಕೊಳ್ಳಬೇಕೆಂಬುದಕ್ಕೊಂದು ಉಡುಗೊರೆಯಾಗಿ. ಮುಂದಕ್ಕೂ ಎಲ್ಲರ ಪ್ರೋತ್ಸಾಹಾಶೀರ್ವಾದಗಳನ್ನು ಕೋರುತ್ತೇವೆ.

ಇದು ವರೆಗೆ ನವಯುಗಕ್ಕೆ ನೆರವಾದ ವಾಚಕರು, ಲೇಖಕರು, ಜಾಹೀರಾತುದಾರರು ಮತ್ತು ಎಲ್ಲಾ ಹಿತಚಿಂತಕರಿಗೂ ನಮ್ಮ ಅಭಿನಂದನೆಗಳನ್ನು ಸಲ್ಲಿಸಿ, ಅವರ ಬೆಂಬಲವನ್ನು ಸದಾ ಕಾಲಕ್ಕೂ ಹಾರೈಸುತ್ತೇವೆ

ಕ್ಷಯರೋಗಿ ಚಿಕಿತ್ಸೆಗಾಗಿ—

ಆಸ್ಪತ್ರೆಯೊಂದನ್ನು ತೆರೆಯಬೇಕೆಂದು ನಿರ್ಧರಿಸಿ,ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಅದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿದೆ. ಈ ಕುರಿತು ಜಿಲ್ಲಾ ಬೋರ್ಡಿನ ಅಧ್ಯಕ್ಷರು ಬರೆದಿದ್ದ ಪತ್ರಕ್ಕುತ್ತರವಾಗಿ, ಸಮಿತಿ ಸದಸ್ಯರಲ್ಲೊಬ್ಬರಾಗಿರುವ ಡಾ। ಟಿ. ಮಾಧವ ಪೈಗಳು ಮಣಿಪಾಲವೇ ಕ್ಷಯರೋಗಿ ಆಸ್ಪತ್ರೆಗೆ ಯೋಗ್ಯ ಸ್ಥಳವೆಂದು ಶಿಫಾರಸು ಮಾಡಿರುವರು. ಡಾ। ಪೈಗಳ ಅಭಿಪ್ರಾಯವು ಸಮಿತಿಗೂ ಜಿಲ್ಲಾ ಬೋರ್ಡಿಗೂ ಪೂರ್ಣ ಸಮ್ಮತವಾಗುವದೆಂದು ನಂಬುತ್ತೇವೆ. ಡಾ। ಪೈಗಳು 1935ರಲ್ಲೇ ಕ್ಷಯ ರೋಗಿಗಳ ಚಿಕಿತ್ಸೆಗಾಗಿ ಮಣಿಪಾಲದಲ್ಲೊಂದು ಕಟ್ಟಡ ರಚಿಸಿ, ಪಬ್ಲಿಕ್ ಟ್ರಸ್ಟಿನ ಮೂಲಕ ಅದನ್ನು ನಡೆಸಿಕೊಂಡು ಬರುತಿದ್ದಾರೆ ಮಿರಾಜ್, ಮದನಪಳ್ಳಿ, ಬೆಂಗಳೂರು, ಮೈಸೂರುಗಳಿಗೆ ಹೋಗಿ ಸಫಲರಾಗದ ರೋಗಿಗಳೂ ಈ ಮಣಿಪಾಲ ವಸತಿಯಲ್ಲಿ ಗುಣಹೊಂದಿದ ದಾಖಲೆಗಳಿವೆ. ಈಗಲೇ ಈ ಆರೋಗ್ಯಧಾಮದಲ್ಲಿ 14 ರೋಗಿಗಳಿಗೂ ಓರ್ವ ದಾದಿಯ ವಸತಿಗೂ ಸಾಕಾಗುವ ಸ್ಥಳಾವಕಾಶವಿದೆಯಲ್ಲದೆ, 14½ ಎಕ್ರೆಯಷ್ಟು ಸ್ಥಳವೂ ಅದಕ್ಕಿದೆ. ಮಣಿಪಾಲದ ಆರೋಗ್ಯದಾಯೀ ಹವಾಮಾನವು ಚಿಕಿತ್ಸಾ ತಜ್ಞರ ಶಿಫಾರಸಿಗೊಳಗಾಗಿದೆ; ಕೊನೆಯ ಅಂಕಕ್ಕೆ ಬಂದಿದ್ದ ಹಲವು ಕೇಸುಗಳು ಇಲ್ಲಿ ಗುಣಹೊಂದಿದ ಅನುಭವದಿಂದಲೂ ಒಪ್ಪಲ್ಪಟ್ಟಿದೆ. ಸಮುದ್ರ ಮಟ್ಟದಿಂದ 360 ಅಡಿ ಎತ್ತರದಲ್ಲಿ-ಸಂಚಾರ ಮತ್ತುತಂತೀ ಟಪ್ಪಾಲು ಅನುಕೂಲತೆಗಳಿದ್ದರೂ ಧೂಳು ಗಲಭೆಗಳಿಂದ ದೂರವಾಗಿ ಅಗತ್ಯವಿರುವ ತರಕಾರಿ, ಹಾಲು ಮೊಟ್ಟೆ ಮುಂತಾದುವುಗಳನ್ನು ಸರಬರಾಯಿ ಮಾಡಬಲ್ಲ ಗ್ರಾಮಗಳ ನಡುವೆ- ಇರುವ ಈ ನೆಲೆಯಂತಹ ಬೇರೊಂದು ಸ್ಥಳ ದಕ್ಷಿಣ ಕನ್ನಡದಲ್ಲಿ ದೊರೆಯುವದು ಅಸಂಭವ. ಡಾ। ಪೈಗಳು ತನ್ನ 20 ವರುಷಗಳ ಅನುಭವ ಬಲದಿಂದ ಮಾಡಿರುವ ಈ ಶಿಫಾರಸಿಗೆ ಜಿಲ್ಲಾ ಬೋರ್ಡು ಯೋಗ್ಯಗಮನವೀಯುವದೆಂದು ನಂಬುತ್ತೇವೆ.

ಆಹಾರ ವ್ಯವಸ್ಥಾಧಿಕಾರಿಗಳು ಕಣ್ಣು ತೆರೆಯುವರೆ?

[ಪ್ರತ್ಯಕ್ಷಾನುಭವಿಯಿಂದ]

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆಹಾರಾಭಾವವು ಗಡಿ ಮುಟ್ಟುವ ಕಾಲವೆಂದರೆ ಇದೇ–ಮಳೆಗಾಲದ ಉತ್ತರ ಭಾಗ. ಸಪ್ಟೆಂಬರ್, ಒಕ್ಟೋಬರ್ ತಿಂಗಳುಗಳನ್ನು ಒಪ್ಪೊತ್ತು ಉಂಡು ದೂಡುವ ಕುಟುಂಬಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ಈ ವರುಷವಂತೂ ಸರ್ತಿ ಬಿಡದೆ ನಾಲ್ಕೈದು ಏಕಾದಶಿಗಳನ್ನೇ ಹಳ್ಳಿಗರು ಆಚರಿಸಬೇಕಾಗಿ ಬಂದಿದೆ. ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಎರಡು, ಮೂರು, ನಾಲ್ಕು ದಿನಗಳ ಅಕ್ಕಿ ದೊರೆತಿಲ್ಲವೆಂಬ ರೋದನ ಕೇಳಿ ಬರುತ್ತಿದೆ. ಆದರೆ ಯಾವ ನಗರದಿಂದಲೂ ಅಂತಹ ದೂರು ಬರುವದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊನೆಯ ಭಾಗಕ್ಕೆ ಆಹಾರ ಧಾನ್ಯವು ಕಡಿಮೆ ಬೀಳಬಹುದೆಂಬುದನ್ನು ಜಿಲ್ಲಾ ಆಹಾರ ಸಮಿತಿಯೂ ಅಧಿಕಾರಿಗಳೂ ಲೆಕ್ಕ ಹಾಕಿ ಮೊದಲೇ ಕಂಡುಕೊಂಡಿದ್ದಾರೆ. ಕಡಿಮೆ ಬೀಳುವ ಅಂಶವನ್ನು ಕಳುಹಿ ಕೊಡುವಂತೆ ಮದ್ರಾಸ್ ಸರಕಾರವನ್ನು ಸಕಾಲದಲ್ಲಿ ಕೇಳಿಕೊಂಡು, ಸಾಧ್ಯವಿದ್ದ ಪ್ರಯತ್ನವನ್ನೆಲ್ಲಾ ಮಾಡಿದ್ದಾರೆ. ಪರಿಣಾಮವೇನಾಯಿತೆಂಬ ಕುರಿತು ಇತ್ತೀಚೆಗೆ ಅಧಿಕೃತ ಪ್ರಕಟಣೆ ಯಾವುದೂ ಇಲ್ಲ. ಹೊರಗಿನಿಂದ ಅಕ್ಕಿ ಬಂದಿದೆಯೆಂದೋ ಬರಲಿದೆಯೆಂದೋ ವದಂತಿಯಿದೆ. ಅದು ಹೇಗಿದ್ದರೂ ಆ ಮಟ್ಟಿನ ಹೊಣೆಗಾರಿಕೆಯು ಸಂಬಂಧಪಟ್ಟ ಅಧಿಕಾರಿಗಳದ್ದೇ ಅದು ಜನರ ಕೈಯಲ್ಲಿಲ್ಲ. ರೇಶನ್ ಪರಿಮಾಣದ ತಮ್ಮ ಪಾಲನ್ನು ಯಾಚಿಸುವ ಅಧಿಕಾರವು ಜನರಿಗಿದ್ದೇ ಇದೆ. ಅಂದ ಮೇಲೆ ಅಕ್ಕಿ ಹಂಚುವ ಅಂಗಡಿಗಳನ್ನು ದಿನಗಟ್ಟಲೆ ಮುಚ್ಚಿಸಿ, ಜನರನ್ನು ಉಪವಾಸಾಗ್ನಿಯಿಂದ ಬೇಯಿಸಿದ ಪಾಪವು ಅಧಿಕಾರಿಗಳ ತಲೆಯ ಮೇಲಿಲ್ಲವೆ? ಒಂದೊಮ್ಮೆಗೆ ಅಕ್ಕಿಯ ಅಭಾವದಿಂದಲೇ ಹೀಗಾಯಿತೆನ್ನೋಣವೆ? ಪಟ್ಟಣಗಳಿಗೂ ಇತರ ಕೆಲವು ಕಡೆಗಳಿಗೂ ನಿಶ್ಚಿತ ಪರಿಮಾಣದಲ್ಲಿ ಅಕ್ಕಿ ದೊರೆಯುತ್ತದೆ; ಕೆಲವು ಹಳ್ಳೀ ಸ್ಟೋರುಗಳಲ್ಲಿ ಮಾತ್ರ ಅಕ್ಕೀ ಕಾಳಿಲ್ಲವೆಂದರೇನು? ಅಭಾವದ ಅಂಶವನ್ನು ಸರ್ವೆಡೆಗಳಿಗೂ ಸಮಾನವಾಗಿ ಹಂಚಬೇಕಲ್ಲದೆ ಹೀಗೆ ಪಕ್ಷಪಾತಮಾಡುವದು ನ್ಯಾಯವೆ?ದೃಷ್ಟಾಂತಕ್ಕಾಗಿ ಕಳೆದ ತಿಂಗಳಾಂತ್ಯ ಭಾಗದಲ್ಲಿ ಉಡುಪಿ ನಗರಬದಿಯ ಶಿವಳ್ಳೀ ಗ್ರಾಮದ ಹಳ್ಳಿಗಳಿಗೆ ನಾಲ್ಕೈದು ದಿನಗಳ ಅಕ್ಕಿ ದೊರೆಯದೆ ಅವರೆಲ್ಲಾ ಉಡುಪಿಗೆ ಬಂದು ತಾಲೂಕು ಅಧಿಕಾರಿಗಳೊಡನೆ ಮೊರೆಯಿಡಬೇಕಾಯಿತು. ಹೊಟ್ಟೆ ತುಂಬಾ ಉಂಡು ಬಂದಿದ್ದ ಉಡುಪಿ ಪಟ್ಟಣಿಗರಿಗೆ ಆ ಹಳ್ಳಿಗರ ಮುಖವನ್ನು ನೋಡುವಾಗ 1944ರ ಬಂಗಾಳಿಗಳ ನೆನಪಾಗುತಿತ್ತು. ಇಂತಹ ದುರಂತ ಕಥೆಗಳು ಕಲ್ಯಾಣಪುರದತ್ತ ಕಡೆಯಿಂದಲೂ ಕೇಳಿಬಂದಿವೆ. ಪಟ್ಟಣದ ಒತ್ತುಭಾಗಗಳ ಅವಸ್ಥೆಯೇ ಹೀಗಾದ ಮೇಲೆ ದೂರದ ಹಳ್ಳಿಗರ ಸ್ಥಿತಿ ಹೇಗಿರಬಹುದು? ಸಂಬಂಧಪಟ್ಟ ಆಹಾರಾಧಿಕಾರಿಗಳು ಆ ಕಡೆಗೆ ಕಣ್ಣು ಬಿಟ್ಟುದಿದೆಯೆ?

ಮತ್ತೊಂದು ಸಂಗತಿ. ಬೇಸಿಗೇ ಕಾಲದಲ್ಲಿ ಬೆಳ್ತಿಗೇ ಅಕ್ಕಿಯ ಸ್ಪೆಶ್ಯಲ್ ಕಾರ್ಡಿದ್ದವರಿಗೂ ಬೆಳ್ತಿಗೆಯನ್ನು ಕೊಡುತ್ತಿರಲಿಲ್ಲ. ಈಗ ಹೆಚ್ಚಿನ ಕಡೆಗಳಲ್ಲಿ ಎಲ್ಲರಿಗೂ ಜಾಸ್ತಿ ಬೆಲೆಯಲ್ಲಿ ಬೆಳ್ತಿಗೆಯನ್ನೇ ಕೊಡಹತ್ತಿದ್ದಾರೆ.ಆಗ ಬೆಳ್ತಿಗೆಯಿರಲಿಲ್ಲವೆಂದೂ ಈಗ ಅದು ಹೊರಗಿನಿಂದ ಬಂದಿರಬೇಕೆಂದೂ ನೆನೆಸಬಹುದೆ? ಅಥವಾ ಆಗ ಬೆಳ್ತಿಗೆಯನ್ನು ಬೇಕಾದವರಿಗೂ ಹೊರಹಾಕದೆ, ಈಗ ಎಲ್ಲರಿಗೂ ಹಂಚುತ್ತಿರಬಹುದೆ? ಜನತೆಯ ಹಿತದೃಷ್ಟಿಯಿಂದ ಅಧಿಕಾರಿಗಳು ಈ ವಿಷಯಗಳಕಡೆಗೆ ಕೂಡಲೇ ಯೋಗ್ಯಗಮನಕೊಡಬೇಕೆಂದುಆಗ್ರಹದ ವಿನಂತಿ.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ನವಯುಗದ ಹೊಸ ಸಂಪುಟ

ಚಂದಾದಾರರಲ್ಲಿ ವಿನಂತಿ.

ನವಯುಗದ 24ನೇ ಸಂಪುಟವು ಇದೇ ಕಳೆದ ಅಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಇದೇ ಸಪ್ಟಂಬರದಿಂದ 25ನೇ ಸಂಪುಟವು ಆರಂಭವಾಗಿರುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಮುಂಗಡ) ಆದಷ್ಟುಬೇಗನೆ ದಯಮಾಡಿ ಕಳುಹಿಸಿಕೊಟ್ಟು, ಎಂದಿನಂತೆ ಪ್ರೋತ್ಸಾಹಿಸುವಂತೆ ವಿನಂತಿ.

ಮೆನೇಜರ್.

ಜಾಪಾನ್ ಶರಣುಕರಾರಿಗೆ ಸಹಿ ಹಾಕಿತು.

ಶರಣು ಸಹಿ

ಇದೇ ತಾ. 2ನೇ ಆದಿತ್ಯವಾರ ಮುಂಜಾನೆ 8·8 ಘಂಟೆಗೆ ಟೋಕಿಯೋದ ಬಳಿ ಅಮೇರಿಕನ್ ಯುದ್ಧ ಹಡಗ ಮಿಸ್ಸೋರಿಯಲ್ಲಿ ಜಾಪಾನಿನ ಶರಣು ಕರಾರಿಗೆ ಸಹಿಯಾಯಿತು. ಎರಡನೇ ಜಾಗತಿಕ ಮಹಾಯುದ್ಧವು ಅಧಿಕೃತವಾಗಿ ಮುಕ್ತಾಯಗೊಂಡುದು ಆ ಮುಹೂರ್ತದಲ್ಲಿಯೇ. ಜಾಪಾನ್ ಶರಣಾಗಲು ಒಪ್ಪಿ ಮೂರು ವಾರಗಳು ಕಳೆದರೂ ತಾ. 2ರ ವರೆಗೂ ಯುದ್ಧಾಂತ್ಯವಾಯಿತೆನ್ನುವ ಧೈರ್ಯವು ಇರಲಿಲ್ಲ. ಅಮೇರಿಕದಲ್ಲಿ ವಿಜಯ ದಿನಾಚರಣೆ ಕೂಡಾ ಅದುವರೆಗೆ ನಡೆದಿರಲಿಲ್ಲ. ಜಾಪಾನರ ಕಟ್ಟುಗ್ರ ರಾಷ್ಟ್ರಾಭಿಮಾನ, ಕುಯುಕ್ತಿಗಳ ಪರಿಜ್ಞಾನವಿದ್ದವರಾರೂ ಇಂತಹ ಸುಗಮ ವ್ಯವಸ್ಥೆಯನ್ನು ಕೊನೆಯ ವರೆಗೂ ನಿರೀಕ್ಷಿಸಿರಲಿಲ್ಲ. ಈಗ ಯುದ್ಧ ಅಧಿಕೃತವಾಗಿ ಮುಗಿದಿದೆ. ಇಡೀ ಪ್ರಪಂಚವು ತ್ರಿಮೂರ್ತಿಗಳ ಅಂಕೆಗೆ ಬಂದಂತಾಗಿದೆ

ಮಿಲಿಟರಿ ಜಾಪಾನಿನ ಮುಕ್ತಾಯ

ಜಾಪಾನಿನ ಮಿಲಿಟರಿ ಅಧಿಕಾರ ಪೂರ್ತಿ ಮುಗಿಯಿತು. ಚಕ್ರವರ್ತಿಯಿಂದ ಆಜ್ಞಾಪತ್ರ ಪಡೆದ ಜಾಪಾನಿನ ವಿದೇಶ ಮಂತ್ರಿ ಶಿಗೆಮಿಟ್ಸೊ ಮಿಸ್ಸೋರಿಯಲ್ಲಿ ಜನರಲ್ ಮೇಕರ್ಥರರ ಸಮ್ಮುಖದಲ್ಲಿ ಶರಣು ಸಹಿಯೂರಿದ. ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳೂ ಸಹಿ ಮಾಡಿದರು. ಜನರಲ್ ಮೇಕರ್ಥರರೂ ಎಡ್ಮಿರಲ್ ನಿಮಿಟ್ಸರೂ ಅಲ್ಲಿಯೇ ವಿಜಯ ಭಾಷಣವಿತ್ತರು. ವಾಷಿಂಗ್ಟನಿನಲ್ಲಿ ಅಧ್ಯಕ್ಷ ಟ್ರುಮೇನರ ಉತ್ಸಾಹ ಪೂರ್ಣ ವಿಜಯೋಪನ್ಯಾಸವಾಯಿತು. ಜಾಪಾನ್ ಪ್ರಧಾನ ಮಂತ್ರಿಯು ಎಲ್ಲರೂ ನಿಷ್ಠೆಯಿಂದ ಶರಣು ಶರ್ತಗಳನ್ನು ಪಾಲಿಸಿ ನಾಗರಿಕ ನವ ಜಾಪಾನನ್ನು ನಿರ್ಮಿಸಬೇಕೆಂದು ಜಾಪಾನರನ್ನು ವಿನಂತಿಸಿಕೊಂಡಿದ್ದಾರೆ. ಸಿಂಗಾಪುರದ ಜಾಪಾನ್ ಸೇನಾನಿಯು ಮೇಲಧಿಕಾರಿಗಳ ಆಜ್ಞೆಗೊಗ್ಗದೆ ವಿರೋಧಿಸುವನೆಂಬ ವಾರ್ತೆ ಬಂದಿದ್ದರೂ ಈಗ ಆತನೂ ಶರಣಾಗಲೊಪ್ಪಿದ್ದಾನೆ. ಆದರೆ ಅಲ್ಲಿಯ ಶರಣು ವ್ಯವಸ್ಥೆ ನಡೆಯುವದು ಇನ್ನೂ ಬಾಕಿಯಿದೆ.

ಪೂರ್ಣ ಮೇಲಧಿಕಾರ

ಶರಣು ಪತ್ರಕ್ಕೆ ಸಹಿಯಾದೊಡನೆ, ಶರ್ತಗಳ ಜ್ಯಾರಿಗೆ ವಿಳಂಬಿಸಿದರೆ ಕಠಿಣ ಶಿಕ್ಷೆ ವಿಧಿಸಲಾಗುವದೆಂದು ಜ. ಮೇಕರ್ಥರರು ಜಾಪಾನರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಜಪಾನೀ ಸೇನೆಗಳು ಎಲ್ಲೆಲ್ಲಿವೆಯೋ ಅಲ್ಲಲ್ಲೇ ಇದ್ದು ಶಸ್ತ್ರ ಕೆಳಗಿಟ್ಟು ತಮ್ಮ ಸೇನೆಗಳಿಗೆ ಶರಣು ಹೋಗತಕ್ಕದ್ದೆಂಬುದು ಮೇಕರ್ಥರರ ಪ್ರಥಮಾಜ್ಞೆಯಾಗಿದೆ ಜಾಪಾನಿನಲ್ಲಿರುವ ಮಿತ್ರರಾಷ್ಟ್ರೀಯ ಕೈದಿಗಳಿರುವ ಸ್ಥಳಗಳ ವಿವರ ಕೇಳಿದ್ದಾರೆ. ಜಾಪಾನ್ ಚಕ್ರವರ್ತಿಗಳು ಮೇಕರ್ಥರರ ಆಜ್ಞೆಯಂತೆ ವರ್ತಿಸತಕ್ಕದ್ದು. ನಿರಾಯುಧ ಜಾಪಾನಿನಲ್ಲಿ ಅಮೆರಿಕಾನರ ಸೈನಿಕಾಡಳಿತೆ ಕಠಿಣವಾಗಿ ಜಾರಿಗೆ ಬರಲಿದೆ. ಮಂಚೂರಿಯದ ಸೇನೆಯು ರಶ್ಯಕ್ಕೂ ಚೀನದ ಸೇನೆಗಳೂ ಚಿಯಾಂಗ್ ಕೈಶೇಕರಿಗೂ ಶರಣುಬಂದಿರುವವು ಹೋಂಗ್‌ಕೋಂಗನ್ನು ಬ್ರಿಟಿಷರಿಗೆ ಬಿಟ್ಟು ಕೊಡುವ ವ್ಯವಸ್ಥೆಯಾಗಿದೆ. ಶಾಂತ ಸಮುದ್ರದ ದ್ವೀಪಗಳಲ್ಲೂ, ಬರ್ಮ ಮತ್ತು ಇತರ ಎಲ್ಲಾ ಕಡೆಗಳಲ್ಲೂ ಶರಣು ಸಮಾರಂಭ ಮತ್ತು ಜಾಪಾನೀ ಸೇನೆಯನ್ನು ನಿಶ್ಶಸ್ತ್ರಗೊಳಿಸುವ ಕಾರ್ಯಗಳು ನಡೆಯುತ್ತಿವೆ.

ರಶ್ಯದ ವಿಶೇಷ ಸಂಬಂಧ

ಜಾಪಾನ್ ಆಕ್ರಮಣಗಾರರು ನಮ್ಮ ಮಿತ್ರ ರಾಷ್ಟ್ರಗಳಿಗಷ್ಟೇ ಅಲ್ಲ; ನಮ್ಮ ದೇಶಕ್ಕೆ ಅತಿ ಹೆಚ್ಚಿನ ಹಾನಿ ಮಾಡಿದ್ದಾರೆ. ಆದ್ದರಿಂದ ಜಾಪಾನಿನೊಡನೆ ನಾವು ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ ಎಂದು ಸ್ಟಾಲಿನರಂದಿದ್ದಾರೆ. ದಕ್ಷಿಣ ಸಖಾಲಿನ್ ಮತ್ತು ಕುರ್ಲೆ ದ್ವೀಪಗಳು ತಮಗೆ ದೊರೆಯಬೇಕೆಂದು ಸ್ಟಾಲಿನರು ಕೇಳಿದ್ದಾರೆ. ಚೀನಾ-ರಶ್ಯಾಗಳೊಳಗೆ ಪರಸ್ಪರ ಮೈತ್ರಿಯ ಒಪ್ಪಂದವಾಗಿದೆ. ಜಾಪಾನ್ ಶರಣಾದ ಮೂರು ತಿಂಗಳೊಳಗೆ ಮಂಚೂರಿಯವನ್ನು [illegible] ಡಲಿದೆ. ಮಂಚೂರಿಯಾ ರೈಲ್ವೆ ಮತ್ತು ಅಲ್ಲಿಯ ಬಂದರಗಳ ಅಧಿಕಾರವೂ 30 ವರುಷಗಳ ವರೆಗೆ ಇಕ್ಕಡೆಯ ಅಧಿಕಾರದಲ್ಲಿದ್ದು ಕೊನೆಗೆ ಚೀನಕ್ಕೇನೇ ದೊರೆಯಲಿದೆ. ಚೀನದ ಕೇಂದ್ರ ಸರಕಾರದೊಡನೆಯೇ ರಶ್ಯದ ಸಂಬಂಧ. ಎರಡು ರಾಷ್ಟ್ರಗಳೂ ಪರಸ್ಪರ ಸಮ್ಮತಿ ವಿನಹ ಇತರ ರಾಷ್ಟ್ರಗಳೊಡನೆ ಕೂಡಿ ನಡೆಯುವಂತಿಲ್ಲ.

ಚಕ್ರವರ್ತಿಯ ಕೆಲಸ

ಜಾಪಾನ್ ಚಕ್ರವರ್ತಿಗಳು ರಾಜತ್ವದ ಮೇಲಿದ್ದ ಮಿಲಿಟರಿ ವರ್ಚಸ್ಸನ್ನು ಕಡೆಗಣಿಸಿ ತಾನಾಗಿ ಸಂಧಾನಕ್ಕೆ ಮುಂದಾಗಿದ್ದರೆಂದೂ ಜಾಪಾನಿನ ಸೇನೆಯೂ ಜನತೆಯೂ ಕೊನೆಯ ವರೆಗೂ ಯುದ್ಧ ನಡೆಸುವ ಹಠದಲ್ಲಿದ್ದರೆಂದೂ ತಿಳಿದುಬರುತ್ತದೆ. ಚಕ್ರವರ್ತಿಗಳು ಶರಣು ಘೋಷಣೆ ಮಾಡುವ ವರೆಗೂ ಸೇನಾ ಕೇಂದ್ರಗಳಿಗದು ತಿಳಿದಿರಲಿಲ್ಲ. ಕೊನೆಗೆ ಮನಿಲಕ್ಕೆ ಸಂಧಾನ ಮಾತುಕತೆಗಾಗಿ ಹೋಗಿದ್ದ ಜಾಪಾನ್ ಪ್ರತಿನಿಧಿಗಳನ್ನು ಗುಂಡಿಕ್ಕಿ ಕೊಲ್ಲುವದಕ್ಕೂ ಜಾಪಾನ್ ಉಗ್ರಗಾಮಿಗಳು ತಯಾರಿದ್ದರು. ಶರಣು ವ್ಯವಸ್ಥೆಗೆ ವಿಳಂಬವಾಗಲು ಇದೇ ಕಾರಣವೆಂದೂ ರಾಜಭಕ್ತಿಯ ದೆಸೆಯಿಂದಾಗಿ ಕೊನೆಗೆ ಎಲ್ಲರೂ ಶಾಂತರಾದರೆಂದೂ ತಿಳಿದುಬರುತ್ತದೆ. ಈಗ ಜಾಪಾನಿನ ಅತ್ಯುಗ್ರವಾದಿ ಸೇನಾನಿ ಯಾಮುಶಿಟನ ಮಿತ್ರರಿಗೆ ಸೆರೆಯಾಗಲೊಪ್ಪಿದ್ದಾನೆ.

ಜಾಪಾನಿನ ದೈನ್ಯತೆ

ಜಾಪಾನಿನ ದೀರ್ಘಾವಧಿಯ ಚರಿತ್ರೆಯಲ್ಲಿ ಇದೀಗ ಮೊದಲ ಬಾರಿ ಅದು ಸರ್ವಾಧಿಕಾರವನ್ನೂ ಕಳಕೊಂಡಿತು. ಪಹರೆ ಪೋಲಿಸರ ಹೊರತು ಮಿಕ್ಕ ಜಪಾನರನ್ನೆಲ್ಲಾ ನಿಶ್ಶಸ್ತ್ರಗೊಳಿಸಲಾಗುವದು. ಅವರ ನಾವೆಗಳನ್ನೂ, ವಿಮಾನಗಳನ್ನೂ ಅಲ್ಲಲ್ಲೇ ಕೂಡಿಸಿಡಲಾಗುವದು ಈಗ ಟೋಕಿಯೋದ 700 ಮೈಲೊಳಗೆ ನಿಂತಿರುವ ಅಮೇರಿಕನ್ ಸೇನೆಯೊಂದಿಗೆ ಜ. ಮೇಕರ್ಥರರು ಇದೇ ತಾ. 10ರಲ್ಲಿ ಟೋಕಿಯೋ ಪ್ರವೇಶಿಸಲಿದ್ದಾರೆಂದು ತಿಳಿದುಬರುತ್ತದೆ. ಶರಣು ಸಹಿಯಾದ ಮೇಲೆ ಜಾಪಾನಿಗಳು ಅರಮನೆಯ ಮುಂದೆ ಕಣ್ಣೀರಿಡುತ್ತಾ ಅಡ್ಡಬಿದ್ದರು. ಚಕ್ರವರ್ತಿಗಳು ತಮ್ಮ ಹಿರಿಯರ ಸಮಾಧಿಯೆದುರು ಆತ್ಮನಿವೇದನೆ ಮಾಡಿಕೊಂಡರು.

ಸುಭಾಸರಿದ್ದಾರೆಯೆ?

ಸುಭಾಸ್ ಬೋಸರಿಗೆ ರಿಯಾಯತಿ ಕೋರಿದ ಪಂಡಿತ ನೆಹರುಗಳ ವಾದದಿಂದ ಅಮೇರಿಕನರು ಉರಿದುಬಿದ್ದಿದ್ದಾರೆ. ಜಾಪಾನ್ ರೇಡಿಯೋ ಅವರ ಮರಣವಾರ್ತೆಯನ್ನು ಘೋಷಿಸಿದ ಕೆಲವು ದಿನಗಳ ನಂತರ ಸುಭಾಸರನ್ನು ಸೈಗೋನಿನಲ್ಲಿ ಕಂಡವರಿದ್ದಾರೆಂದು ಅಮೇರಿಕನ್ ಬಾತ್ಮೀದಾರನೊಬ್ಬನು ಸಂಧಕಟ್ಟಿದ್ದಾನೆ. ಸುಭಾಸರ 'ಭಾರತ ರಾಷ್ಟ್ರೀಯ ಸೇನೆ'ಯ ನಾಯಕರನ್ನು ಕೋರ್ಟು ಮಾರ್ಶಲ್ ವಿಚಾರಣೆಗೊಳಪಡಿಸಲಾಗುವದೆಂದೂ ನಿರುಪಾಯರಾಗಿ ಅದಕ್ಕೆ ಸೇರಿದ್ದ ಸಾಮಾನ್ಯ ಸೋಲ್ಜರರಿಗೆ ರಿಯಾಯತಿಯಿಂದ ಕಾಣಲಾಗುವದೆಂದೂ ಹಿಂದೀ ಸರಕಾರವು ಪ್ರಕಟಿಸಿದೆ.

(೫ನೇ ಪುಟದಿಂದ ಮುಂದುವರಿದುದು)

2000 ಮಿಲಿಯ ಪೌಂಡುಗಳನ್ನು ವ್ಯಯಿಸುತ್ತಿದೆ. ಆ ಪೈಕಿ ಅದರ ಸ್ವಂತ ದಪ್ತ್ರ 250 ಮಿಲಿಯ ಪೌಂಡಿನಷ್ಟು ಖರ್ಚಿನ ಬಾಬ್ತು, ಆಶ್ರಿತ ರಾಜ್ಯಗಳು ಮತ್ತು ಅಮೇರಿಕವು 450 ಮಿಲಿಯ ಪೌಂಡುಗಳನ್ನು ಕೊಡುತ್ತಿದ್ದವು. ಇವಿಷ್ಟು ಹೋಗಲಾಗಿ ವರುಷಕ್ಕೆ 1200 ಮಿಲಿಯ ಪೌಂಡು ಕಡಿಮೆಬೀಳುತಿತ್ತು. ಅದನ್ನೆಲ್ಲಿಂದ ತರಬೇಕು? ಏಕ ಮಾತ್ರ ಸಹಾಯವಾಗಿದ್ದ ಲೆಂಡ್—ಲೀಸ್ ಇದೇ ಹೊತ್ತಿನಲ್ಲಿ ಅಕಸ್ಮಾತ್ ನಿಂತುದರಿಂದ ಬ್ರಿಟನು ತಬ್ಬಿಬ್ಬಾಗಿದೆ. ಬ್ರಿಟನು ಅಮೇರಿಕಗಳೊಳಗೀಗ ಮಾತುಕತೆ ನಡೆಯುತ್ತಿದೆ. ಅಮೇರಿಕವು ಇದುವರೆಗೆ ಮಿತ್ರ ರಾಷ್ಟ್ರಗಳಿಗೆ 42,000,000,000 ಡೋಲರುಗಳಷ್ಟು 'ಕಡ-ಒತ್ತಿ' ಸಾಲ ಕೊಟ್ಟಿದೆ. ಅವನ್ನೆಲ್ಲಾ ನಗದಾಗಿ ಕೊಡಬೇಕೆಂದು ಒತ್ತಾಯ ಮಾಡಿದರೆ ಮೂರನೇ ಜಾಗತಿಕ ಯುದ್ಧವಾಗಬಹುದು, ಎಂದು ಅಧ್ಯಕ್ಷ ಟ್ರುಮೇನರೇ ಅಮೇರಿಕನ್ ಕಾಂಗ್ರೆಸಿನೆದುರು ನಿವೇದಿಸಿಕೊಂಡರು. ಬ್ರಿಟನಿಗೆ ಹೊಸ ಸಾಲ ಕೊಡುವ ಬಯಕೆಯನ್ನೂ ಪ್ರದರ್ಶಿಸಿದರು. ಆದರೆ ಕಾಂಗ್ರೆಸಿನ ರಿಪಬ್ಲಿಕನ್ ಪಕ್ಷ ಮತ್ತು ಬಲಪಕ್ಷೀಯ ಡೆಮೊಕ್ರೆಟಿಕ್‌ರು ಈ ರಿಯಾಯತಿಗಳಿಗೆ ಬದ್ಧ ವಿರೋಧವಿದ್ದು, ಅಮೇರಿಕದ ಯುದ್ಧೋತ್ತರ ರಚನೆಗಳಿಗಾಗಿ ಆ ಹೇರಳ ಸಾಲವನ್ನು ಪಡೆಯಲೇಬೇಕೆಂಬ ಹಠ ತೊಟ್ಟಿದ್ದಾರೆ. ಹೀಗಾಗಿ ಅಮೇರಿಕ ಬ್ರಿಟನುಗಳ ಆರ್ಥಿಕ ಸಂಬಂಧ ವಿಷಮವಾಗಿದೆ.

Notice

ಪುತ್ತೂರು ಡಿ ಮು. ಕೋರ್ಟಿನಲ್ಲಿ.

S C. 95/1945

ಲುವಿಸ್ ಡಿಯಾಸ್, ಪೀಟರ್ ಡಿಯಾಸರ ಮಗ, ವ ಪುತ್ತೂರು ತಾಲೂಕು ಆಫೀಸಿನ ಪೇಟೆ, ಪುತ್ತೂರು ಕಸಬಾ —ವಾದಿ.

ಉಮಾ ಸುಂದರ ರಾಯ, ಉಲೆ ಸಿವರಾಯರ ಮಗ, ಈಗ ಹಾಲ್ ಸುಳ್ಯ ಕಸಬಾ ಗ್ರಾಮ, ಸುಳ್ಯ, ಪುತ್ತೂರು ತಾಲ್ಲೂಕು—ಪ್ರತಿವಾದಿ.

ಸದ್ರಿ ಪ್ರತಿವಾದಿ ಉಮಾ ಸುಂದರ ರಾಯರಿಗೆ, ಮತ್ತು ಯಿತರ ಸಮಸ್ತ ಜನರಿಗೆ ಸಹಾ ಯೀ ಮೂಲ್ಕ ತಿಳಿಯಪಡಿಸುವದೇನೆಂದ್ರೆ:—

ಪ್ರತಿವಾದಿಯಿಂದ ವಾದಿಗೆ ದಿಮಾಂಡು ಪ್ರೋಮಿಸರಿ ನೋಟು ಪ್ರಕಾರ ಬಹಾ ಅಸ್ಲು ಬಡ್ಡಿ ರೂಪಾಯಿ 56-4-5ಕ್ಕೆ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 13-9-1945ಕ್ಕೆ ತನ್ಸಿಗೆ ಯಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಣೆಯಿದ್ರೆ ಸದ್ರಿ ತನ್ಸಿ ವ್ಯಾದೆ ದಿವ್ಸ ಹಗಲು 10 ಗಂಟೆಗೆ ಯೀ ಕೋರ್ಟು ಮುಂದೆ ನೀವು ಸ್ವತಹಾ ಯಾ ವಕೀಲ ದ್ವಾರ ಹಾಜ್ರಾಗಿ ಉದಪರಿಸಿಕೊಳ್ಳದಿದ್ರೆ ನಿಮ್ಮನ್ನು ಸಿವಾಯಿ ಮಾಡಿ ಕೋರ್ಟಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು.

ಕೆ ಯಸ್. ಮಲ್ಯ.
ವಾದಿ ಕಡೆ ವಕೀಲ್.

ಮೊಕ್ಕಾಂ ಪುತ್ತೂರು, ತಾ. 22 8-1945

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು **7—9—1945**ರಿಂದ

ಬೊಂಬೇ ಟಾಕೀಸಿನವರ

ಜೈರಾಜ್ ಮತ್ತು ಲೀಲಾ ಚಿಟ್ನೀಸ್

ನಟಿಸಿರುವ

ಚಾರ್ ಆಂಖೇ

ನಂತರ—

ಪ್ರಕಾಶ್ ಚಿತ್ರ

ಮಾಲಾ

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R E. A. 202/1945

ಅರ್ಜಿದಾರ ಗಣಪತಿ ಭಟ್ಟ, ಅಭ್ಯಂಕರ ಮಹಾದೇವ ಭಟ್ರ ಮಗ ಶಿಬಾಜೆ ಗ್ರಾಮದ ಪತ್ತಿಮಾರು

ಯೆದ್ರಿಕ — ಸುಮಿತ್ರಾ ಯಾನೆ ಅನ್ನಪೂರ್ಣಾ ಬ್ಯಾ-ಪತ್ತಿಮಾರು ಗೋವಿಂದ ಭಟ್ರ ವಿಧವೆ ಪತ್ತಡ್ಕ ಗ್ರಾಮದ ಪರ್ಣತಡ್ಕದಾಳ್ವನೆ ವಾಳಂದೆ ವೆಂಕಟೇಶ ಭಟ್ರಲ್ಲಿರುತ್ತಾಳೆ.

ಸದ್ರಿ ಯೆದ್ರಿಗೆ ಈ ಮೂಲಕ ತಿಳಿಸುವದೇನೆಂದ್ರೆ:

ನೀವು ವಾದಿಯಾಗಿ ಅರ್ಜಿದಾರ ಗಣಪತಿ ಭಟ್ರ ಮೇಲೆ ಪುತ್ತೂರು ಡಿ ಮುನ್ಸಿಫ ಕೋರ್ಟು ಕ್ರಮ ನಂಬ್ರ 15/1938ನೆ ಡಿಕ್ರಿ ಪ್ರಕಾರ ನಿಮಗೆ 1944 ನೆ 1945ನೆ ಯಿಸ್ವಿಗಳ ಫಾಲ್ಗುಣ ಬ. 30ಕ್ಕೆ ಸಲತಕ್ಕ ಅ್ಯವಜನ್ನು ಬಡ್ಡಿಯನ್ನೂ ಕೋರ್ಟಿನಲ್ಲಿ ಹಾಜ್ರುಪಡಿಸಿ, ಆ ಮಟ್ಟಿನ ಡಿಕ್ರಿಯ ಸಂದಾಯ ರಿಕಾರ್ಡು ಮಾಡಬೇಕಾಗಿ ಅರ್ಜಿದಾರನು ಮಾಡಿದ ಮೇಲ್ಕಂಡ ಅರ್ಜಿಯು ತಾ 18 9 1945ಕ್ಕೆ ನಿಮಗೆ ನೋಟಿಸಿಗೆ ಇಟ್ಟಿದೆ. ನೀವು ಆ ದಿವ್ಸ ಕೋರ್ಟಿಗೆ ಹಗಲು ಗಂಟೆ 11ಕ್ಕೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ದಾಕಲ್ಲು ಮಾಡ ತಪ್ಪಿದ್ರೆ ನಿಮ್ಮನ್ನು ಶಿವಾಯಿ ಮಾಡಿ ಅರ್ಜಿದಾರನ ಅಪೇಕ್ಷೆಯಂತೆ ಸಂದಾಯ ರಿಕಾರ್ಡು ಮಾಡಲಾದೀತು

ಸಪೂರ ಆನಂದ ರಾವ್:
ಅರ್ಜಿದಾರನ ವಕೀಲ,

ಪುತ್ತೂರು, 30-8 1945

ಉಡುಪಿ

ಬೀಡಿ ಲೇಬರ್ ಯೂನಿಯನಿನ ಮಹಾ ಸಭೆಯು–ತಾ ೨೨ರಲ್ಲಿ ಜರಗಿ, ತಿ ವಳ್ಳಿ ಗ್ರಾಮದ ಗಡಿಯ ಅಕ್ಕಿ ವಿತರಣೆಯಿಂ ಗಡಿಯಲ್ಲಿ ಮೂರು ನಾಲ್ಕು ದಿವಸಗಳಲ್ಲಿ ಅ ಕ್ಕಿಯಿಲ್ಲದಿದ್ದುದರಿಂದ ಬಡವರಿಗೆ ಉಪವಾಸ ವ್ರತದ ಪ್ರಸಂಗ ಬಂದುದಕ್ಕಾಗಿ ವಿಷಾದಸೂ ಚಿಸಿ ಇನ್ನು ಮುಂದೆಯಾದರೂ ಇಂತಹ ಪ ರಿಸ್ಥಿತಿಗೆ ಅವಕಾಶ ದೊರೆಯದಂತೆ ತಕ್ಕ ಏ ರ್ಪಾಡು ಮಾಡಬೇಕಾಗಿ ಸಂಬಂಧಪಟ್ಟವರಿ ಗೆ ವಿನಂತಿಸಲಾಯಿತು. ಕಾರ್ಯಕಾರಿ ಮಂ ಡಳಿಯ ಚುನಾವಣೆ ನಡೆದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಮಜೂರ ವರ್ಗದಲ್ಲಿ ಸಂ ಘ ಶಕ್ತಿಯ ಆವಶ್ಯಕತೆ ವಿದ್ಯಾ ಪ್ರಚಾರದ ಆವಶ್ಯಕತೆ ಇತ್ಯಾದಿ ವಿಷಯಗಳನ್ನೆತ್ತಿ ಅಧ್ಯ ಕ್ಷರು ಮಾತನಾಡಿದರು.

ವರ್ಧಂತ್ಯುತ್ಸವ–ಸಂಸ್ಕೃತ ಮಹಾ ಪಾಠಶಾಲೆಯ ವರ್ಧಂತ್ಯುತ್ಸವವು ತಾ. 25ರ ಲ್ಲಿ ಶ್ರೀ ಅನಂತೇಶ್ವರ ದೇವಸ್ಥಾನದ ಹೊರ ಪೌಳಿಯಲ್ಲಿ ಪರ್ಯಾಯ ಪೀಠಸ್ಥರಾದ ಶ್ರೀ ಪುತ್ತಿಗೆ ಮಠದ ಶ್ರೀಸುಧೀಂದ್ರ ತೀರ್ಥ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೇದವ್ಯಾಸ ದೇವರ ಪೂಜೆ, ವರದಿವಾ ಚನಗಳಾದ ಬಳಿಕ ಶಾಲಾ ಪಂಡಿತರಿಗೂ ವಿ ದ್ಯಾರ್ಥಿಗಳಿಗೂ ಒಂದೊಂದು ಜತೆ ಸಂಜ ಮಾನವೀಯಲಾಯಿತು. ಬಹುಮಾನ ವಿತರ ಣೆಯೂ ನಡೆಯಿತು.

ಶೋಕ ಪ್ರದರ್ಶನ–ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನಿನ ಕಾರ್ಯನಿ ರ್ವಾಹಕ ಮಂಡಳಿಯ ಸಭೆಯು ಇತ್ತೀಚೆಗೆ ಡಾ। ಸುಂದರರಾಮ ಪೈಗಳವರ ಅಧ್ಯಕ್ಷತೆ ಯಲ್ಲಿ ಜರಗಿ ಡಾ। ಅರುಂಡೇಲರ ಮತ್ತು ಸಂಘದ ಕಾರ್ಯದರ್ಶಿ ಶ್ರೀ. ಕೆ ಎಲ್. ನಿ ಧಿ ರಾಯರ ನಿಧನದ ಸಲುವಾಗಿ ಶೋಕ ಪ್ರ ದರ್ಶಿಸಿತು. ಕ್ರಿಶ್ಚಿಯನ್ ಹೈಸ್ಕೂಲಿನ ಸ್ಕೌ ಟ್ ಮಾಸ್ತರ್ ಶ್ರೀ ಕೆ. ಗೋಪಾಲ ಸೆಟ್ಟಿ ರು ಕಾರ್ಯದರ್ಶಿಯರಾಗಿ ಆರಿಸಲ್ಪಟ್ಟರು.

ಮುನಿಸಿಪಲ್ ಕೌನ್ಸಿಲ್ ಮೀಟಿಂಗು–ತಾ 24ರಲ್ಲಿ ಶ್ರೀ। ಎ. ಲಕ್ಷ್ಮೀನಾ ರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ರೂಪಾಯಿ 15000 ಸಾಲ ತರಿಸಬೇಕೆಂದು ನಿರ್ಧರಿಸಲಾಯಿತು. ಧೂಳು ಹಾರದ ರಸ್ತೆಗ ಳ ನಿರ್ಮಾಣದ ಖರ್ಚಿನಲ್ಲಿ ಸೇಕಡ 75ರಷ್ಟು ಗ್ರಾಂಟು ದೊರೆಯಬೇಕಾಗಿ ಕೇಳಿಕೊಳ್ಳಲಾ ಯಿತು. ಮೆಟರ್ನಿಟಿ ಸೆಂಟರನ್ನು ನಗರ ಸಭೆ ಯ ಪರವಾಗಿ ತೆರೆಯಲು ಕೌನ್ಸಿಲಿಗೆ ಒಪ್ಪಿ ಗೆಯಿದೆ. ಆದರೆ ಅದಕ್ಕೆ ತಗಲುವ ಖರ್ಚಿನ ಲ್ಲಿ ಸೇಕಡಾ 25ರಷ್ಟು ಸರಕಾರದಿಂದ ದೊರೆ ಯಬೇಕೆಂದು ನಿರ್ಣಯಿಸಲಾಯಿತು. ಓವರ್ ಸೂಲಗಿತ್ತಿಯ ನೇಮಕ ಮಾಡುವರೆ ಕೌನ್ಸಿ ಲಿನ ಒಪ್ಪಿಗೆ ದೊರೆಯಿತು.

ಕರ್ಣಾಟಕ ಸಂಘದ ವರ್ಧಂತಿ ದಿನಾಚರಣೆಯು–ತಾ. 2ನೇ ಆದಿತ್ಯವಾರ ನಡೆಯಿತು. ಬೆಳಿಗ್ಗೆ ಸಂಘದ ಅಧ್ಯಕ್ಷರಾದ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರ ಷಷ್ಠಿ ಪೂರ್ತಿ ಸಮಾರಂಭವು ಸದ ಇದೇ ಸಂ ದರ್ಭದಲ್ಲಿ ಅವರ 'ಶ್ರೀ ವಿಲಾಸ' ಗೃಹದಲ್ಲಿ ಶ್ರೀ ಕೊಡ್ಡಿಕಾರ್ ಪದ್ಮನಾಭ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಲಘೂಪಹಾರದ ಮೊಡನೆ ಪ್ರಾರ್ಥನಾ ಕಾರ್ಯಕ್ರಮವು ಜರ ಗಿತು. ಆ ಬಳಿಕ ಸಂಘದ ಪ್ರಧಾನ ಕಾರ್ಯ ದರ್ಶಿಯರಾದ ಶ್ರೀ. ಕೊರಡ್ಕಲ್ ಶ್ರೀನಿವಾ ಸರಾಯರು ಸಂಘದ ಕಾರ್ಯಕಲಾಪಗಳನ್ನು ಸವಿಸ್ತಾರವಾಗಿ ಸೂಚಿಸಿ ಸಂಘದೇಳಿಗೆಯ ಬಗ್ಗೆ ಮಹಾಜನರ ಸಹಕಾರ, ಪ್ರೋತ್ಸಾಹ ವನ್ನು ಕೋರಿದರು. ಡಾ। ಟಿ. ಮಾಧವ ಪೈ, ಶ್ರೀ. ಆರ್. ಆರ್. ಕುಂಜೂರು ಅವರುಗಳ ಸಂದರ್ಭೋಚಿತ ಮಾತುಗಳಾದುವು. ಸಂಜೆ ಮಹಾಸಭೆಯು ಬೋರ್ಡು ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮಾಸ್ತರ್ ಶ್ರೀ. ಎಸ್. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯ ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ. ಆ ರ್. ವೇಣುಗೋಪಾಲರಾಯರು 'ಕರ್ನಾಟಕ ಸಂಗೀತ'ದ ಕುರಿತು ಮಾತನಾಡಿದರು. ಶ್ರೀ. ಚಕ್ರಕೋಡಿ ನಾರಾಯಣ ಶಾಸ್ತ್ರಿಗಳ ಸಂಗೀ ತ, ಕುಮಾರಿ ರಾಜಮಣಿಯ ಭರತನಾಟ್ಯ ಮೊದಲಾದ ಕಾರ್ಯಕ್ರಮಗಳು ಆದಬಳಿಕ ಶ್ರೀ ಎಸ್. ಆರ್. ಕೊರಡ್ಕಲ್ಲರು ಧನ್ಯವಾದ ಗಳನ್ನರ್ಪಿಸಿದರು.

ಯಕ್ಷಗಾನ ಸಂಘ–ವು ಈಗ ರಿಜಿಸ್ಟ್ರ ಮಾಡಲ್ಪಟ್ಟು ಸುವ್ಯವಸ್ಥೆಯಿಂದ ಯಕ್ಷಗಾನ ಕಲಾಸೇವೆಗೆ ತೊಡಗಿದೆ. ಸಂಘವು ಮೊಂಟೆ ರಂಗಡಿಯಲ್ಲಿ ನಡೆಸಿದ ಸಹಾಯಾರ್ಥ ಯಕ್ಷ ಗಾನ ಸಭೆಯಲ್ಲಿ ಜನರಿಂದ ವಿಶೇಷ ಪ್ರೋತ್ಸಾ ಹ ದೊರೆತಿದೆ. ಆಗೋಸ್ತು ತಾ. 31ರಲ್ಲಿ ಶ್ರೀ ಮದನಂತೇಶ್ವರ ದೇವಳದ ಹೊರಪೌಳಿಯ ಲ್ಲಿ ಸಂಘದ ಮಾಸಿಕ ಕಲಾಸೇವೆಯು ಸು ಪ್ರಾವ್ಯವಾಗಿ ನಡೆಯಿತು. ಶ್ರೀ. ಪಿ. ದೇಜು ಸೆಟ್ಟರು ಸಂಘದ ಸದುದ್ದೇಶಗಳನ್ನು ವಿವ ರಿಸಿ ಭಾಷಣವಿತ್ತರು.

ಶಿರ್ವ–ಶ್ರೀ ಬಿ. ಎನ್. ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿದ್ದು ಇತ್ತೀಚೆಗೆ ಹಯ ರ್ ಎಲಿಮೆಂಟರಿಯಾಗಿ ಅಭಿವೃದ್ಧಿ ಹೊಂದಿ ಹೊಸ ಕಟ್ಟಡದ ಶಂಕುಸ್ಥಾಪನೆ ನಡೆದಿರುವ ಶಿರ್ವ ಹಿಂದೂ ಶಾಲೆಯನ್ನು ಹೈಸ್ಕೂಲಾಗಿ ಮಾರ್ಪಡಿಸುವ ಉತ್ಕಟೇಚ್ಛೆಯಿದೆಯೆಂದೂ ಕಟ್ಟಡದ ಸಹಾಯಾರ್ಥವಾಗಿ ಸಂಘದ ಅಧ್ಯಕ್ಷ ಶ್ರೀ. ಕೆ. ಮುದ್ದು ಸೆಟ್ಟರು ಸಹಾ ಯ ಸಂಗ್ರಹಕ್ಕಾಗಿ ಬೊಂಬಾಯಿಯತ್ತ ಹೋಗಲಿರುವರೆಂದೂ, ಸರ್ವರೂ ಸಹಕರಿಸ ಬೇಕೆಂದೂ ಸಂಬಂಧಪಟ್ಟವರ ವಿಜ್ಞಾಪನೆ ಯಿದೆ.

ಕುಂದಾಪುರ–ತಾ. ೧೯೪೫ನೇ ಅಪ ರಾಹ್ನ ಕುಂದಾಪುರ ತಾಲೂಕು ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಹಿಂದೀ ಪ್ರಚಾರ ಕಾರ್ಯಾಲಯದಲ್ಲಿ ಶ್ರೀ. ಬಿ. ಸುಬ್ಬಣ್ಣ ಸೆಟ್ಟ ರ ಅಧ್ಯಕ್ಷತೆಯಲ್ಲಿ ಸೇರಿ ಮಾಜೀ ರಾಷ್ಟ್ರ ಪತಿ ಸುಭಾಸ್ ಬೋಸರ ನಿಧನಕ್ಕಾಗಿ ಶೋಕ ಪ್ರದರ್ಶಿಸಲಾಯಿತು. ಶ್ರೀಗಳಾದ ಬಿ. ಸುಬ್ಬ ಣ್ಣ ಸೆಟ್ಟಿ, ಕೆ. ಕೃಷ್ಣ ಭಂಡಾರಿ, ಕೆ. ರಾಮ ಕೃಷ್ಣ ನಾವಡ, ಎಚ್. ಚಂದ್ರಶೇಖರಹೆಗ್ಡೆ, ಬಿ. ಎ. ಎಲ್.ಎಲ್. ಬಿ. ಇವರ ಶೋಕ ಸೂಚಕ ಭಾಷಣಗಳಾದುವು.

ಆಮಂತ್ರಣ–ಕುಂದಾಪುರ ತಾಲೂ ಕು ಕಾಂಗ್ರೆಸ್ ಕೆಲಸಗಾರರ ಸಭೆಯು ಕಾಂ ಗ್ರೆಸಿನ ಮುಂದಿನ ಕಾರ್ಯಕ್ರಮಗಳ ನಿ ರ್ಧಾರಕ್ಕಾಗಿ ಕುಂದಾಪುರದಲ್ಲಿರುವ ಹಿಂದೀ ಪ್ರಚಾರ ಸಭೆಯ ಆಫೀಸಿನಲ್ಲಿ ತಾ.೯.೯.೪೫ ನೇ ಅಪರಾಹ್ನ 3 ಘಂಟೆಗೆ ಸೇರಲಿರುವದು. ತಾಲೂಕಿನ ಎಲ್ಲಾ ಕಾರ್ಯಕರ್ತರೂ ಇದ ನ್ನೇ ಆಮಂತ್ರಣವೆಂದು ಅಂಗೀಕರಿಸಿ ತಪ್ಪದೆ ಹಾಜರಾಗಬೇಕೆಂದು ಶ್ರೀ. ಬಿ. ಸುಬ್ಬಣ್ಣ ಶೆ ಟ್ಟರ ವಿಜ್ಞಾಪನೆಯಿದೆ.

ಬಸ್ರೂರು–ಇದೇ ತಾ. ೧ನೇ ಅಪರಾ ಹ್ನ ಬಸ್ರೂರು ಯುವಕ ಸಂಘದ ಆಶ್ರಯ ದಲ್ಲಿ ಸಾರ್ವಜನಿಕ ಸಭೆಯೊಂದು ಡಾ.ಪಿ.ಬಿ. ಭಟ್ಟರ ಅಧ್ಯಕ್ಷತೆಯಲ್ಲಿ ನೆರೆದು ಸುಭಾಸ್ ಬೋಸರ ನಿಧನಕ್ಕಾಗಿ ದುಃಖ ಪ್ರದರ್ಶನ ನಡೆಯಿತು. ಡಾ. ಪಿ. ಬಿ. ಭಟ್ ಮತ್ತು ಶ್ರೀ ಬಿ. ಎಸ್. ಸೂರಪ್ಪ ಸೆಟ್ಟರು ಮೃತ ದೇಶ ಭಕ್ತರ ಗುಣಕಥನಮಾಡಿದರು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O P. No 52/45

ಗಂಗಮ್ಮ—ಅರ್ಜಿದಾರಳು.

ಮೇಲ್ಕಂಡ ಅರ್ಜಿ ವಿವರಗೆಯ ಅರ್ಜಿ ದಾರಳ ಗಂಡ ಕರ್ಜೆ ಸುಬ್ಬಣ್ಣ ಭಟ್ಟರು ತಾ 16 7 45ರಲ್ಲಿ ಮೃತಪಟ್ಟು ಅವರು ತಾ. 13 7 45ರಲ್ಲಿ ಬರೆದಿಟ್ಟ ವೀಲು ಮೇರಗೆ ಸ ದ್ರಿ ಮೃತಗೆ ಉಡ್ಪಿ ತಾಲ್ಲೂಕು ಪೆಜಮಂಗೂರು ಗ್ರಾಮದ ಸೂರಾಲು ಅರಮನೆ ಗುಂಡಣ್ಣ ಯ್ಯನ ಅಳಿಯ ಜಿನ್ನರಾಜಯ್ಯನು ತಾ. 9-7 45ರಲ್ಲಿ ರೂಪಾಯಿ 692-0 0ಕ್ಕೆ ಬರಕೊಟ್ಟ ಪ್ರೊ ನೋಟು ಮೇರೆಗೆ ಬರತಕ್ಕ ಅಸಲು ಬಡ್ಡಿ ಕೂಡಾ ರೂಪಾಯಿ 695 8 0ನ್ನು ಅ ರ್ಜಿದಾರಳು ವಸೂಲು ಪಡಿಯಲಿಕ್ಕೆ ಪಕ್ಕ ದಾರಳಾಗಿ ಸದ್ರಿ ಆವಳು ತನಗೆ ಸಿಕ್ಕುವಂ ತೆ ಸಕ್ಸೆಸರ್ ಸರ್ಟಿಫಿಕೇಟು ಕೊಡಿಸುವಂತೆ ಕೊಟ್ಟ ಅರ್ಜಿಯು ತಾ.25-9-1945ಕ್ಕೆ ತಸ್ಕಿ ಗೆ ಇಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವ ರು ಆ ದಿವಸ ಸದ್ರಿ ಕೋರ್ಟು ಮುಂದೆ ಹಾ ಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

(ಸಹಿ) **P Padmanabha Rao**
Vakil for Petitioner

ಉಡ್ಪಿ ತಾ. 31 8-45

NOTICE

ಪುತ್ತೂರು ಡಿ ಮು ಕೋರ್ಟಿನಲ್ಲಿ

R. E. P. 231/45 os 156/1915.

ಕಮಲಾವತಿ ಯಾನೆ ರುಕ್ಮಿಣಿ —ಅರ್ಜಿದಾರಳು.

ಶ್ರೀನಿವಾಸ ಪೈ ಕೂಡಾ ಎದ್ರಿರು.

1. ಶ್ರೀನಿವಾಸ ಪೈ. 2. ಗೋಪಾಲ ಪೈ 3. ನಾಗ ಪೈ. ದಾಮೋಧರ ಪೈ ಮಕ್ಕಳು ಕ ರಾಯ ಗ್ರಾಮದಲ್ಲಿರುವವರು. 4. ಕಲ್ಯಾಣಿ ಯಾನೆ ಗೌರಮ್ಮ—ಮುಂಕುಂದ ಪೈ ವಿಧ ವೆ, ಕರಾಯ ಗ್ರಾಮ—ಯಿವರೀಗೆ—

ಮೇಲೆ ಹೇಳೋಗಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ವಾದಿಳು ಸ್ಥಿರಾಸ್ತಿ ವಿಕ್ರ ಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಆದುದ ರಿಂದ ವಿಕ್ರಯದ ಯಿಸ್ತಿಹಾರಿನ ಷರತುಗಳ ನ್ನು ನಿರ್ಣಯಿಸ್ಸಲಿಕ್ಕೆ 1945ನೇ ಯಿಸ್ವಿಯ ಸಪ್ಟಂಬ್ರ ತಾ 11ಕ್ಕೆ ಇಟ್ಟಿರುತ್ತದೆ. ಆ ದಿನ ನೀವು ಸ್ವತಹವಾಗಲೀ ವಕೀಲರ ದ್ವಾರವಾಗ ಲೀ ಹಾಜರಾಗದಿದ್ದರೆ ನಿಂನ ಗೈರುಹಾಜರಿ ಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾ ದೀತು.

By order of Court
(*sd*) **B. Chidananda Rao.**
Pleader for Petitioner

ಪುತ್ತೂರು, 13 8 45.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R, E. P. 237/45 sc 216/42

ಸರ್ಪೋತ್ತಮ ಜೋಯ್ಸ. & M. ಪಾಂಡು ರಂಗ ದೇವಪ್ಪ ಕಾಮತ್ —ಅರ್ಜಿದಾರರು

ಕೋಜು ಬ್ಯಾರಿ ಕೂಡಾ —ಎದ್ರಿರು.

1. ಕೋಜು ಬ್ಯಾರಿ, ಯಿಸ್ಮಾಲಿ ಬ್ಯಾರಿ ಮ ಗ, ಪುತ್ತೂರು ತಾಲ್ಲೂಕು ಕರೋಪಾಡಿ ಗ್ರಾಮ ದಲ್ಲಿರುವವ ಯಿವರೀಗೆ.

ಸದ್ರಿ sc 216/42ನೆ ವ್ಯಾಜ್ಯದ ಡಿಕ್ರಿಯ ಅಮಲ್‌ಜ್ಯಾರಿ ಬಗ್ಗೆ ವಾದಿರು ಈ ಕೋರ್ಟಿ ಗೆ ಅರ್ಜಿಯನ್ನು ಮಾಡಿ ಸದ್ರಿ ಅಮ್ಲಜ್ಯಾರಿ ಯಲ್ಲಿ ನಿಮ್ಮನ್ನು ಸಿವಿಲ್ ಬಂದಿಕಾನೆಯಲ್ಲಿ ಯಾಕೆ ಹಾಕಕೂಡದು ಎಂಬದಕ್ಕೆ ಸಬಬು ತೋರಿಸಲಿಕ್ಕೆ 1945ನೇ ಯಿಸ್ವಿಯ ಸಪ್ಟಂಬ್ರ 14ಕ್ಕೆ ಈ ಕೋರ್ಟು ಮುಂದೆ ನೀವು ಸ್ವತಹ ವಾಗಲೀ ವಕೀಲರ ದ್ವಾರವಾಗಲೀ ಹಾಜ್ರಾ ಗದಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷ ವಾಗಿ ತೀರ್ಮಾನಿಸಲಾದೀತು.

(By order of the Court)
(*sd*) **B. Chindananda Rao.**
Pleader for Petitioners

ಪುತ್ತೂರು, ತಾ 19-8 45



Approved firm by the Govt. of Mysore.
Certified by the Agent of the Govt. of India in Ceylon.

AWAIT

THE INCORPORATION OF

The Karnataka Theatres, Ltd.

MANGALORE.

to establish a Film Studio for South Kanara District and Exhibition Theatres in

MANGALORE, KARKALA, UDIPI, COONDAPOOR &c.

The Govt. of India has been pleased to accord sanction for the capital issue of Rs. 3,00,000.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institutio non sound lines and advantageous terms.

Please ascertain business particulars from any of our Offices at the above places.

Date 25th April 1945

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಬಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಳಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ರಿಂದ 80 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ ... ಬೊಟ್ಟು ... ಮಂದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ (ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಹಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನೇಕ ಫಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಆ ಬಿಸ್ತಿನ ತಿಂಬ್ಟುಗಳು ಹೆಚ್ಚು ಕಡಿಮೆ ಅಲದಿವಸಗಳಿಗೆ ಬರುವವು. ಅಂದರೆ ಕೇವಲ ೮ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಲಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ದಕ್ಷಿಣ ಕನ್ನಡ.

ಉಚ್ಚಿಲ- ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಸಾರ್ವಜನಿಕರ ಸಭೆಯು ತಾ 21-8-45ರಲ್ಲಿ ಗ್ರಾಮಸ್ಥರು ಕೂಡಿ ನಡಿಸಿ ಆ ಬಗ್ಗೆ ವಂತಿಗೆ ಪಟ್ಟಿ ಕೂಡಾ ಅ ದಿವಸವೇ ಆರಂಭಿಸಲ್ಪಟ್ಟಿತು. ಸುಮಾರು ಜನರ ಪ್ರೋತ್ಸಾಹದಿಂದ ಸುಮಾರು 6000 ರೂಪಾಯಿಗಳು ಚಂದಾ ಸಂದಾಗಿರುತ್ತದೆ. ನಗದಿಯಾಗಿ 500/ ಜಮೆಯಾಗಿರುತ್ತದೆ. ಸದ್ರಿ ಜೀರ್ಣೋದ್ಧಾರದ ಕೆಲಸವನ್ನು ಶ್ರೀ ಉಚ್ಚಿಲ ವೆಂಕಟಪ್ಪಯ್ಯನವರು ವಹಿಸಿಕೊಂಡಿರುತ್ತಾರೆ. ಆಸ್ತಿಕ ಮಹಾಶಯರೆಲ್ಲರೂ ಅವರು ಕೈಕೊಂಡ ಕಾರ್ಯವನ್ನು ನೆರವೇರಿಸಿಕೊಡಬೇಕಾಗಿ ಅಪೇಕ್ಷಿಸುತ್ತಾರೆ.

ಸಾಂತೂರು ಕೊಪ್ಲ ಬೋರ್ಡು ಶಾಲೆ-ಯು ಅಭಿವೃದ್ಧಿಯಾಗುತ್ತಲಿದೆ. ಶಾಲಾ ಕಟ್ಟಡದ ಬಗ್ಗೆ ಸುಮಾರು 1000, (ಒಂದು ಸಾವಿರ) ರೂಪಾಯಿಗಳನ್ನು ಮೆನೆಜ್‌ಮೆಂಟಿಗೆ ಕಳುಹಿಸಲಾಗಿದೆ ಎಂದೂ, ಕೂಡಲೇ ಇನ್ನೊಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ಅಗತ್ಯ ನೇಮಿಸಬೇಕೆಂದು ಶಾಲಾ ಇನ್ಸ್‌ಪೆಕ್ಟರರು ಅಭಿಪ್ರಾಯಪಟ್ಟಿರುತ್ತಾರೆಂದೂ ತಿಳಿದು ಬರುತ್ತದೆ.

ಬಿಲ್ಲವರ ಎಸೋಸಿಯೇಶನ್, ಮುಂಬಯಿ- ಈ ಎಸೋಸಿಯೇಶನಿನ ನೇತೃತ್ವದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಕೊಂಭತ್ತನೇ ಜನ್ಮ ದಿನೋತ್ಸವವು ತಾ 11-9-1945ನೇ [illegible] 2ಕ್ಕೆ [illegible] ಅಂದು [illegible] ಕನ್ನಡ [illegible] ಗುರು [illegible] ಜೀವನ ಕಥೆಯು [illegible] ಮಾಡಲಿರುವರು.

ಪಡುಬಿದ್ರೆ- [illegible] 30-9-45ನೇ ಆದಿತ್ಯವಾರ ದಿವಸ [illegible] ಶ್ರೀ ಪಿ. ವಿ. ಉಪಾಧ್ಯಾಯ B. A. L. L. B ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಅಂದು ಬೆಳಿಗ್ಗೆ 10ಕ್ಕೆ ಭಾಷಣ, ಕವನ, ಚಿತ್ರ, ರಸಪ್ರಕಟನ, ನಾಟ್ಯ, ವ್ಯಾಯಾಮ, ಶಿಲ್ಪ, ಕೈಗಾರಿಕೆ, ಕೃಷಿ, ಸ್ವದೇಶ ಮತ್ತು ಸಂಗೀತ ಕಲೆಗಳಲ್ಲಿ ಪ್ರದರ್ಶನ ಮತ್ತು ಸ್ಪರ್ಧೆಗಳೂ ನಡೆಯಲಿವೆ. [illegible] ಬಹುಮಾನ ವಿತರಣೆಯೂ ಆಗಲಿದೆ. ಉಪಾಧ್ಯಾಯರು ತಂತಮ್ಮ ವಿದ್ಯಾರ್ಥಿಗಳೊಡನೆ ಬಂದು ಭಾಗವಹಿಸಿ ಪ್ರೋತ್ಸಾಹಿಸಬೇಕೆಂದೂ ಉಮೇದುವಾರರು ತಮ್ಮ ಸಂಖ್ಯೆಯನ್ನು ಸ್ಪರ್ಧೆಯ ವಿಷಯಗಳನ್ನು ಒಂದು ವಾರಕ್ಕೆ ಮೊದಲು ತಮಗೆ ತಿಳಿಸಬೇಕೆಂದೂ ಪ್ರದರ್ಶನದ ಶಿಲ್ಪ, ಕೈಗಾರಿಕೆ, ಕೃಷಿ ವಸ್ತುಗಳ ಸಾಧನಗಳು ತಾ 29ರ ಸಂಜೆಯೊಳಗೆ ತಮ್ಮ ಕೈಸೇರಬೇಕೆಂದೂ 'ಸೆಕ್ರೆಟರಿ, ಬಾಲಸಾಹಿತ್ಯ ಕಮಿಟಿ, ಪಡುಬಿದ್ರಿ' ಇವರು ತಿಳಿಸುತ್ತಾರೆ.

ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷ- ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಕೊಲ್ಹಾಪುರದ ಪ್ರಮುಖ ನಾಗರಿಕರೊಡನೆ ಒಂದು ಒಪ್ಪಂದ ಮಾಡಿಕೊಂಡಿರುವರು. ಕೊಲ್ಹಾಪುರ ತಾಲೂಕು ಮತ್ತು ಕೊಲ್ಹಾಪುರ ಸಿಟಿಯಲ್ಲಿ ಕನ್ನಡವೇ ಪ್ರಾತ್ಯಭಾಷೆಯಾಗಿರುವ ಭಾಗಗಳಾವುವೆಂಬುದನ್ನು ನಿರ್ಧರಿಸಲು ಕರ್ನಾಟಕ ಏಕೀಕರಣ ಸಂಘ ಮತ್ತು ಕೊಲ್ಹಾಪುರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಒಬ್ಬೊಬ್ಬ ಪ್ರತಿನಿಧಿಗಳೂ, ಇವರಿಂದಾರಿಸಲ್ಪಡುವ ಬೇರೊಬ್ಬರೂ ಕೂಡಿ ಮೂರು ಮಂದಿಯಿರುವ ಶಿಷ್ಟಮಂಡಲವೊಂದು ಸಂಬಂಧಪಟ್ಟ ಭಾಗಗಳಲ್ಲಿ ಸಂಚರಿಸಲಿರುವುದು. ಸ್ಥಳೀಯ ಅಧಿಕಾರಿಗಳು, ಕೊಲ್ಹಾಪುರ ನಗರ ಸಭೆ, ಜಿಲ್ಲಾ ಬೋರ್ಡುಗಳು ಆಯಾ ಗ್ರಾಮಗಳ ಜನತೆಯು ಸಾರ್ವಭಾಷೆಯ ಬಗ್ಗೆ [illegible] ಸಿದ್ಧವಿದ್ದ ಸರ್ವ ಸಹಾಯವನ್ನೂ ನೀಡಬೇಕು. ಅಗತ್ಯವಿದ್ದವರಿಗೆ ಸ್ಥಳೀಯ ಕೋ[illegible]

ಮೈಸೂರು ಪತ್ರ-

ಬೋಸರ ಬಗ್ಗೆ ಸಂತಾಪ ನಿರ್ಣಯ – ರಾಷ್ಟ್ರಪತಿಗಳಾಗಿದ್ದು ಜಪಾನಿನ ಬಳಿ ಅಕಾಲಮರಣಕ್ಕೆ ತುತ್ತಾದ ಸುಭಾಸ್ ಚಂದ್ರಬೋಸರ ಬಗ್ಗೆ ಇಲ್ಲಿ ಅನೇಕ ಕಡೆಗಳಲ್ಲಿ ಸಂತಾಪ ಸೂಚಕ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

ಪೌರ ಸಭೆಯಲ್ಲಿಲ್ಲ-ಮೈಸೂರು ಪೌರ ಸಭೆಯಲ್ಲಿ ಸಂತಾಪ ನಿರ್ಣಯವನ್ನು ಕಾಂಗ್ರೆಸ್ ಪಕ್ಷದ ಸದಸ್ಯರು ತರಲಾಗಿ ಮರಣದ ವಾರ್ತೆ ಅಧಿಕಾರ ಯುತವಾಗಿ ಹೊರಪಟ್ಟಿಲ್ಲವೆಂದು ಅಧಿಕಾರಿ ಅಧ್ಯಕ್ಷರು ತಳ್ಳಿ ಹಾಕಿದರು.

28ನೇ ತಾರೀಖು ಇಲ್ಲಿಯ ಅನೇಕ ಅಂಗಡಿಗಳವರು ತಮ್ಮತಮ್ಮ ಅಂಗಡಿಗಳನ್ನು ಮುಚ್ಚಿ ತಮ್ಮ ದುಃಖವನ್ನು ವ್ಯಕ್ತಪಡಿಸಿದರು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಅಲ್ಲಲ್ಲಿ ಸಭೆ ಸೇರಿ ಸಂತಾಪ ನಿರ್ಣಯಗಳನ್ನು ಅಂಗೀಕರಿಸಿದರು. ಕಾಂಗ್ರೆಸ್ ಕಾರ್ಯಾಲಯದಲ್ಲಿ ಶ್ರೀ. ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿರ್ಣಯ ಮಾಡಲಾಯಿತು.

ಜಿಲ್ಲಾ ಬೋರ್ಡು ಸಭೆ- ಮೈಸೂರು ಜಿಲ್ಲಾ ಬೋರ್ಡಿನ ತ್ರೈಮಾಸಿಕ ಸಭೆಯು ಜಿಲ್ಲಾ ಬೋರ್ಡು ಭವನದಲ್ಲಿ ಅಧ್ಯಕ್ಷರಾದ ಶ್ರೀ ಕೆ. [illegible] ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಆದ ತಕ್ಷಣ ಸಮ್ಮುಖದಲ್ಲಿ ಅನೇಕ ನಿರ್ಣಯಗಳನ್ನು ಅಂಗೀಕರಿಸಿತು.

ಇಂಡಿಯಾ ದಂಡ ನಾಯಕರ ಆಗಮನ ಇಂಡಿಯಾ ದಂಡ ನಾಯಕರಾದ ಸರ್ ಅಕಿನ್‌ಲೆಕ್‌ರವರು [illegible] ವಿಮಾನ ಮೂಲಕ ಇಲ್ಲಿಗೆ ಆಗಮಿಸಿ ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಹಿಂತಿರುಗಿದರು.

ಕಸ್ತೂರ್‌ಬಾ ಶಿಕ್ಷಣ ಶಿಬಿರ ಕಸ್ತೂರ್‌ಬಾ ಶಿಕ್ಷಣ ಶಿಬಿರವು ಮೈಸೂರಿನಲ್ಲಿ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಸರ್ವಸಾಧಾರಣ ಸಾಧಾರಣಕ್ಕೆ ಹೊಸ ಜನವು ಸೇವಾ ಗ್ರಾಮವನ್ನು ಹೇಗೆ ಸಂದರ್ಶಿಸುವರೋ ಹಾಗೆಯೇ ಮೈಸೂರು ನಗರಕ್ಕೆ ಹೊರಗಿನಿಂದ ಬರುವ ರಾಷ್ಟ್ರೀಯ ವಾದಿಗಳು ಶಿಬಿರಕ್ಕೆ ಭೇಟಿ ಕೊಡದೆ ಇಲ್ಲ. ಹೆಚ್ಚು ಕಡಿಮೆ ಸಾಯಂಕಾಲ ಪ್ರಾರ್ಥನೆಯು ಸೇವಾಗ್ರಾಮದಂತೆಯೇ ಇರುವುದರಿಂದ ಅನೇಕರು ಪ್ರಾರ್ಥನೆಗೆ ಹಾಜರಾಗುವರು. ಶಿಬಿರದ ಕಾರ್ಯಕರ್ತೆಯರೂ ಪ್ರತಿ ದಿನವೂ ಪಕ್ಕದ ಹಳ್ಳಿಗೆ ಹೋಗಿ ಅಲ್ಲಿಯ ಜನರಿಗೆ ಗ್ರಾಮ ನೈರ್ಮಲ್ಯ, ಮಕ್ಕಳ ಪಾಲನೆ, ಆರೋಗ್ಯದ ವಿಚಾರವಾಗಿ ತಿಳುವಳಿಕೆಗಳನ್ನು ಕೊಡುವರು. ಬೇರೆಬೇರೆ ಗ್ರಾಮ ಕೈಗಾರಿಕಾ ಪ್ರವೀಣರುಗಳು ಬಂದು ಭಾಷಣಗಳನ್ನು ಕೊಡುತ್ತಲಿದ್ದಾರೆ.

ವಿದ್ಯಾರ್ಥಿ ನಿಲಯ ಮುಚ್ಚಿತು- ರಾಜಧಾನಿಯಲ್ಲಿರುವ ಕಬ್ಬಳ್ಳಿ ವಿದ್ಯಾರ್ಥಿ ನಿಲಯದ ವ್ಯವಸ್ಥಾಪಕರಿಗೂ ವಿದ್ಯಾರ್ಥಿಗಳಿಗೂ ಭಿನ್ನಾಭಿಪ್ರಾಯ ಬಂದುದರಿಂದ 27ನೇ ತಾರೀಖಿನಿಂದ ಅದನ್ನು ಮುಚ್ಚಲಾಗಿದೆ.

ಇಂಟರ್ ಕಾಲೇಜ್ ಸಂಘ- ಇಲ್ಲಿಯ ಇಂಟರ್ ಮೀಡಿಯೆಟ್ ಕಾಲೇಜ್ ಸಂಘದ ಚುನಾವಣೆಯು ಮೊನ್ನೆ ನಡೆದು ಶ್ರೀ ಕೆ. ಎಸ್. ಸುಬ್ರಹ್ಮಣ್ಯಂರವರು ಅಧ್ಯಕ್ಷರಾಗಿಯೂ ಶ್ರೀ ಕೆ. ಸಿದ್ದಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು.

[illegible]ರ್ಟುಗಳಲ್ಲಿ ಕನ್ನಡದಲ್ಲಿಯೇ ಸಾಕ್ಷ್ಯಗಳನ್ನು ನೀಡುವ ಅನುಕೂಲತೆಯಿರಬೇಕು. ಕನ್ನಡವನ್ನು ಕೊಲ್ಹಾಪುರದ ಕೋರ್ಟು ಭಾಷೆಯಾಗಿ ಗಣಿಸಬೇಕಲ್ಲದೆ, ರಿಜಿಸ್ಟ್ರಿಯಾಗುವ ದಾಖಲೆಗಳು ಕನ್ನಡದಲ್ಲಿರುವುದಕ್ಕೆ ಅವಕಾಶ ದೊರೆಯಬೇಕು ಎಂದು ಆ ಒಪ್ಪಂದದಲ್ಲಿದೆ.

ದಕ್ಷಿಣ ಕನ್ನಡ.

ಮಂಗಳೂರು

ಬೆಳ್ಳಾರೆ ಮೊಕದ್ದಮೆ–ಪೊಲೀಸ್ ಸಬ್ ಇನ್ಸ್‌ಪೆಕ್ಟರರೊಬ್ಬರಿಗೆ ಹೊಡೆದರೆಂಬ ಆರೋಪಣೆಯ ಮೇಲೆ, ಇಲ್ಲಿಯ ಐದು ಮಂದಿಯ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಪುತ್ತೂರು ಡಿಪ್ಟಿ ಕಲೆಕ್ಟರರು ಶ್ರೀ ರಾಘವ ಎಂಬವರಿಗೆ ಒಂದು ವರ್ಷ ಶಿಕ್ಷೆ, 1200 ರೂ ಜುರುಮಾನೆಯನ್ನೂ ಉಳಿದವರಿಗೆ ಒಂದೊಂದು ವರ್ಷ ಶಿಕ್ಷೆ 50 ರೂ ಜುರುಮಾನೆಯನ್ನೂ ವಿಧಿಸಿದ್ದರಷ್ಟೆ ಈ ಬಗ್ಗೆ ಜಿಲ್ಲಾ ಕೋರ್ಟಿನಲ್ಲಿ ಅಪೀಲು ನಡೆದು, ತಾ 21ರಂದು ಜಿಲ್ಲಾ ಜಡ್ಜರು ಮೂಲ ತೀರ್ಪನ್ನೇ ಕಾಯಂ ಮಾಡಿದರು

ಜಿಲ್ಲಾ ಪಂದ್ಯಾಟಗಳು- ಜಿಲ್ಲೆಯ ಸರಕಾರೀ ಗ್ರಾಮ ವಿಶ್ರಾಮ ಸಂಸ್ಥೆಯ ಆಶ್ರಯದಲ್ಲಿ ಚೆಂಡು ಗುಡು ಮತ್ತು ವಾಲ್ಲಿಬಾಲ್ ಪಂದ್ಯಾಟ ಒಂದನ್ನು ಏರ್ಪಡಿಸಲಾಗುವುದು ಬರುವ ತಿಂಗಳಲ್ಲೆ ಪಂದ್ಯಾಟವು ಆರಂಭವಾಗುವುದು. ಮಂಗಳೂರು, ಮೂಲ್ಕಿ, ಬಂಟ್ವಾಳ, ಕಾರ್ಕಳ, ಮೂಡಬಿದ್ರಿ, ಹೆಬ್ರಿ, ಪುತ್ತೂರು, ವಿಟ್ಲ, ಉಪ್ಪಿನಂಗಡಿ, ಕಾಸರಗೋಡು, ನೀಲೇಶ್ವರ, ಕುಂದಾಪುರ, ಬೈಂದೂರು, ಉಡುಪಿ, ಬ್ರಹ್ಮಾವರ, ಕಾಪು ಈ ಕೇಂದ್ರಗಳಲ್ಲಿ ಪಂದ್ಯಾಟ ನಡೆಯುವುದು ಸ್ಪರ್ಧಕರು ಪ್ರವೇಶ ಹಣ ಕೊಡಬೇಕಾಗಿಲ್ಲ ಸರ್ವ ಪ್ರಥಮ ಮತ್ತು ದ್ವಿತೀಯ ಟೀಮುಗಳಿಗೆ ಬಹುಮಾನ ಕೊಡಲಾಗುವುದು.

ಬೋಳೂರಿನಲ್ಲಿ ವಿಜಯೋತ್ಸವ-ದ ಸಲುವಾಗಿ ತಾ 20ರಂದು ಲೇಬರ್ ಶಾಲಾ ಮಕ್ಕಳಿಗೆ ಮಿಠಾಯಿ ಹಂಚೋಣ ಹಾಗೂ ಬೋಳೂರು ಉರ್ವದ ಸಾವಿರಾರು ಮಂದಿ ಹರಿಜನರಿಗೆ ಊಟ ಹಾಕಲಾಯಿತು ಭೋಜನ ಸಮಾರಂಭ ನಡೆಯುತ್ತಿದ್ದಾಗಲೆ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟ್ ಜನಾಬ್ ಗುಲಾಮ್ ಮಹಮ್ಮದ್, ಸ ಡಿ. ಆಫೀಸರ್ ಮಾಧವ ರಾವ್, ಖಾ। ಸಾ ಎಚ್ ಎಸ್. ಹುಸೇನ್ ಸಾಹೇಬ್, ಶ್ರೀ। ಸಿ ಎಲ್. ಲೋಬೊ ಮೊದಲಾದವರೂ ಆಗಮಿಸಿದರು ಸತ್ಕಾರ ಕೂಟದ ಮುಂದಾಳುಗಳಾದ ಶ್ರೀ। ಚೂಡಪ್ಪ, ಮಿ। ಸಿಕ್ವೇರ ಮತ್ತು ಜ ಒ ಮೃದ್ಧೀನರನ್ನೊಳಗೊಂಡ ಗ್ರೂಪ್ ಫೋಟೊ ತೆಗೆಯಲಾಯಿತು

ಜಿಲ್ಲೆಯ ಮಿಲಿಟರಿ- ಉದ್ದೇಶಗಳಿಗಾಗಿ ಸ್ವಾಧೀನ ಮಾಡಿಕೊಂಡಿರುವ ಸ್ಥಳಗಳ ಪರಿಹಾರ ದ್ರವ್ಯವನ್ನು ನಿರ್ಧರಿಸುವ ಸ್ಪೆಷ್ಯಲ್ ಆರ್ಬಿಟ್ರೇಟರರೊಬ್ಬರನ್ನು ನೇಮಿಸಲಾಗಿದೆಯಷ್ಟೆ ಅವರ ಕಛೇರಿಯನ್ನು ಮಂಗಳೂರು ತಾಲೂಕು ಆಫೀಸಿನಲ್ಲಿ ತೆರೆಯಲಾಗಿದೆ ಆಫೀಸರರು ಶ್ರೀ। ಎಂ ಆರ್ ಚಂದರ್

ಜಿಲ್ಲಾ ಬೋರ್ಡಿನ–ವಿಶೇಷ ಸಭೆಯೊಂದು ತಾ 13 9-45ರಂದು ಜಿ. ಬೋ ಆಫೀಸಿನಲ್ಲಿ ಸೇರುವುದು

ಸ್ಥಳೀಯ ಗೋಪಾಲ-ಕೃಷ್ಣ ದೇವಸ್ಥಾನದಲ್ಲಿ ಕೆಲವು ದಿನಗಳಿಂದ ನಡೆದು ಬರುತ್ತಿದ್ದ ಭಾರತ ವಾಚನವು ಮಂಗಳೋತ್ಸವದೊಂದಿಗೆ ಮುಕ್ತಾಯಗೊಂಡಿತು ಈ ಸಂದರ್ಭದಲ್ಲಿ ಪ್ರವಚನ ಕರ್ತೃಗಳಾದ ಶ್ರೀ। ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು ಕಳೆದ ಆರು ವರ್ಷಗಳಿಂದ ಸಾಗುತ್ತಿದ್ದ ಯುದ್ಧವು ಕೊನೆಗೊಂಡುದಕ್ಕಾಗಿ ಮಹಾ ಜನರ ಪರವಾಗಿ ಪರಮಾತ್ಮನಿಗೆ ಕೃತಜ್ಞತೆಯನ್ನರ್ಪಿಸಿದರು

ಕೃಷ್ಣ ಜಯಂತಿ–ಕನ್ನಡ ಮ್ಯೊಲಿಯವರ ಸಮಾಜ ಸುಧಾರಕ ಸಂಘದ ಆಶ್ರಯದಲ್ಲಿ ಶ್ರೀ। ಸಿ. ಜಿ ನಾಯಕ್ ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರೊಫೆಸರ್ ಕರ್ನೀಕ್, ಸಂಪಾದಕಾರ್ಯದರ್ಶಿ ಶ್ರೀ। ಎಂ. ರಾಮ ಶ್ರೀಯಾನ್, ಇವರು ಶ್ರೀಕೃಷ್ಣನ ಆದರ್ಶ ಜೀವನದ ಕುರಿತು ಮಾತನಾಡಿದರು ಅನಂತರ ಭಜನೆ, ಪ್ರಸಾದ ಸ್ವೀಕಾರದೊಂದಿಗೆ ಕೃಷ್ಣ ಜಯಂತಿಯು ಕೊನೆಗೊಂಡಿತು.

ಶ್ರೀ। ಬೈಂದೂರು ನರಸಿಂಗರಾಯರು–ಜಿಲ್ಲೆಯ ಸುಪ್ರಸಿದ್ಧ ಕ್ರಿಮಿನಲ್ ವಕೀಲರಾದ ಶ್ರೀ। ಬೈಂದೂರು ನರಸಿಂಗರಾಯರು ತಾ 30ರಂದು ಮುಂಜಾನೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಗೂಡ್ಸ್ ಬಂಡಿ ಯೊಂದು ತಾ 27 ರಂದು ರಾತ್ರಿ ಮಂಗಳೂರು ರೈಲ್ವೆ ನಿಲ್ದಾಣದ ಬಳಿ ಅಪಘಾತಕ್ಕೆ ತುತ್ತಾಯಿತು. ಹಂಚು ತುಂಬಿದ ನಾಲ್ಕು ಬಂಡಿಗಳು ಇಂಜಿನು ಸಹಿತವಾಗಿ, ನಿಜವಾದ ದಾರಿ ಬಿಟ್ಟು, ಬಂಡಿ ಜೋಡಿಸಲು ಉಪಯೋಗಿಸುವ ಚಿಕ್ಕ ಕಂಬಿಯ ದಾರಿಯಲ್ಲಿ ಅದೇ ಸರಿಯಾದ ಮಾರ್ಗವೆಂಬ ತಪ್ಪು ಗ್ರಹಿಕೆಯಿಂದ ಮುಂದುವರಿದು, ಆ ಕಂಬಿ ಅಂತ್ಯವಾಗುವಲ್ಲಿ ನೆಲದ ಮೇಲೆ ಸರಿಯಲು, ಇಂಜಿನೂ, ವೇಗನುಗಳೂ ಅಲ್ಲೆ ಸ್ವಲ್ಪ ಮಟ್ಟಿಗ ಹೂತು ಹೋದುವು

ನೇಣು ಹಾಕಿಕೊಂಡು–ಕೃಷ್ಣ ಕಾಮತನೆಂಬ ೨೦ ವರ್ಷದ ತರುಣ ವಿದ್ಯಾರ್ಥಿಯೊಬ್ಬನು ಮಡಿದ ವಾರ್ತೆ ಬಂದಿದೆ

ಬೈಂದೂರು–ತಾ 21 8 45ರಲ್ಲಿ ಶ್ರೀ ಬಿ ಶ್ರೀನಿವಾಸ ಹೊಳ್ಳರ ಅಧ್ಯಕ್ಷತೆಯಲ್ಲಿ ಬೈಂದೂರು, ಯಡ್ತರೆ, ಪಡುವರಿ ಮತ್ತು ಸಗ್ಗಸೇ ಗ್ರಾಮಗಳ ಮಹಾ ಜನರ ಸಭೆಯೊಂದು ಜರಗಿ ಈ ಗ್ರಾಮಗಳಲ್ಲಿಯ 1670 ಹಸುಗೆ ಚೀಟಿ ಇರುವವರು ಪಾರಕ್ಕೆ 390 ಮಾನಿಗೆ ಅಕ್ಕಿ ಕೊಳ್ಳುವವರಾಗಿಯೂ, ಮತ್ತು ಶಿರೂರು ಗ್ರಾಮಸ್ಥರು ಬೈಂದೂರು ಅಕ್ಕಿ ಡಿಪೋವಿನ ಮೇಲೆ ಹೊಂದಿಕೊಂಡು ವಾರಕ್ಕೆ 300 ಮಾನಿಗೆ ಅಕ್ಕಿ ಪ್ರಕಾರ ಖರ್ಚು ಮಾಡುವುದರಿಂದಲೂ, ಈಗ ಇರುವ 1412 ಮುಡಿ ಅಕ್ಕಿಯು ಸಪ್ಟಂಬರ 1ನೇ ವಾರದ ವರೆಗೂ ಸಾಕಾಗದೆಂದೂ ಕಂಡುಬಂದಿರುವುದರಿಂದ, ಸಂಬಂಧಪಟ್ಟ ಅಧಿಕಾರಿಗಳಿಗೆ ಗ್ರಾಮಸ್ಥರ ಈ ಗೋಳನ್ನು ತಿಳಿಸಿ, ಈ ಪ್ರಾಂತದಲ್ಲಿ ಬೆಳೆಯು ಕೈಗೆ ಬರಬಹುದಾದ ಸಮಯವಾದ ನವಂಬರ 15ರ ವರೇಗೆ ಸಾಕಾಗುವಷ್ಟು ಕನಿಷ್ಟಪಕ್ಷ 7000 ಮುಡಿ ಅಕ್ಕಿಯನ್ನಾದರೂ ತರಿಸಿ ಕೊಡುವ ಹಾಗೆ ಕೇಳಿಕೊಳ್ಳಬೇಕೆಂದೂ ಠರಾವಾಯಿತು

ಸೋಮೇಶ್ವರ–ಸೋಮೇಶ್ವರ ಜೀಟಿ ಬೋರ್ಡು ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಸಭೆಯು ತಾ 29 8 45ರಲ್ಲಿ ಶ್ರೀ ಎಸ್ ಗಣಪಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಮಕ್ಕಳು ವಿವಿಧ ವಿನೋದಾವಳಿಗಳನ್ನು ತೋರಿಸಿದರು ಮಕ್ಕಳಿಗೆ ಇನಾಮುಗಳು ಸೋಮೇಶ್ವರ ಚೌಕಿ ಸ್ಟಾಫಿನಿಂದ ಮತ್ತು ಎಚ್. ಶ್ರೀಧರ ಪೈಗಳವರಿಂದ ಹಂಚಲ್ಪಟ್ಟಿತು ಶ್ರೀ ತಿಂಗಳೆ ಭೋಜರಾಜಹೆಗ್ಗಡರು ಮತ್ತು ಶ್ರೀ ಕೇಶವ ಆಚಾರಿಯವರು ಭಾಷಣ ಮಾಡಿದರು ಧನ್ಯವಾದಾರ್ಪಣೆಯಾದೊಡನೆ ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಚದರಿತು

ಮುದ್ರಾಡಿ–ತಾ 26 8 45ರಲ್ಲು ಬಾಬು ಸುಭಾಸ್ ಚಂದ್ರಬೋಸರ ನಿಧನ ವಾರ್ತೆಯನ್ನು ಕೇಳಿದೊಡನೆಯೇ ಊರವರೆಲ್ಲರು ಖಿನ್ನ ಪ್ರದರ್ಶನ ಮಾಡಿದರು ಊರಲ್ಲಿ ಸರ್ವತ್ರ ಹರತಾಲ(ಮುಸ್ಲಿಮರ ಅಂಗಡಿ ಸಹ) ಇತ್ತು

ತಾ 28 8 45ರಲ್ಲಿ ಮುದ್ರಾಡಿ ಗ್ರಾಮಸ್ಥರ ಅಪೇಕ್ಷೆ ಮೇರೆಗೆ ಉಡುಪಿ ಸಬ್ ಡಿವಿಜನಲ್ ಪೋಸ್ಟಲ್ ಇನ್ಸ್‌ಪೆಕ್ಟರರು ಇಲ್ಲಿಗೆ ಬಂದು ಬ್ರಾಂಚ್ ಪೋಸ್ಟಾಫೀಸನ್ನು ತೆರೆದಿರುವರು ಇದರ ಬಗ್ಗೆ ಪೋಸ್ಟಲ್ ಇನ್ಸ್‌ಪೆಕ್ಟರರು ಇಲ್ಲಿ ಒಂದು ಇಡೀ ದಿನ ಮೊಕ್ಕಾಂ ಮಾಡಿದ್ದರು

ಮೂಲಿ–ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮ ದಿನಾಚರಣೆಯು ತಾ 23 8-45ರಲ್ಲಿ ಶ್ರೀ ಮನ ಮೋಹನನವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಅಂದಿನ ಯಾವತ್ತೂ ವೆಚ್ಚವನ್ನು ಶ್ರೀ ಕೋಡಿ ಕುಕ್ಕ ಮಾಸ್ತರರು ವಹಿಸಿದ್ದರು.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೪ಆಣೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ ದಾವಣಗೇರಿ —ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪ್ರಸುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲ 1ರ 10-0-0, ½ ರಾತ್ಲ 5-1-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಖ್ಯಾತಿ ಸಂಗ್ರಹ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನ್ನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ. (2) ಬೊಂಬಾಯಿ ಏಜೆಂಟರು ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ ಐ ಪಿ. ಮಾಟುಂಗಾ.

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ಸಿದ್ಧಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಸುಭಾಸರು ಇನ್ನಿಲ್ಲ!

(೨ನೇ ಪುಟದಿಂದ ಮುಂದುವರಿದುದು.)

ಪ್ರವೇಶಿಸಲಿಲ್ಲ. ಆಮೇಲೆ ಕಲ್ಕತ್ತಾ ಕಾರ್ಪೋರೇಶನಿನ ಸದಸ್ಯನಾಗಿ-ಆದರ ಚೀಫ್ ಎಕ್ಸಿಕ್ಯೂಟಿವ್ ಆಫೀಸರನಾಗಿ-ಚುನಾಯಿಸಲ್ಪಟ್ಟರು. 1924ರಲ್ಲಿ ಪುನಃ ಅವರ ದಸ್ತಗಿರಿ. ಸ್ವಲ್ಪ ಸಮಯ ಆಲೀಪುರ ಮತ್ತು ಬರ್ಹಾಂಪುರ ಸೆಂಟ್ರಲು ಜೈಲುಗಳಲ್ಲಿರಿಸಿ, ಆ ಮೇಲೆ ಆದೇಕೋ ಅವರನ್ನು ಉತ್ತರ ಬರ್ಮದ ಮಂಡಾಲೆ ಬಂದೀಖಾನೆಗೆ ಸಾಗಿಸಲಾಯಿತು. ಅಲ್ಲಿರುವಾಗ, ಕೈದಿಗಳ ಧಾರ್ಮಿಕಾಚರಣೆಗೆ ಅಧಿಕಾರಿಗಳು ಪ್ರತಿಬಂಧ ಹಾಕಿದರೆಂದು ಬೋಸ್ ಉಪವಾಸವ್ರತ ಕೈಕೊಂಡರು. ಅವರ ಆರೋಗ್ಯ ಕೆಟ್ಟಿತು. 1927ರಲ್ಲಿ ಅವರನ್ನು ಬಿಡುಗಡೆಮಾಡಲಾಯಿತು.

ಬಹುಮುಖಿ ಹೋರಾಟ

1928ರಲ್ಲಿ ಭಾರತಕ್ಕೆ ಸೈಮನ್ ಕಮಿಶನ್ ಬಂದಾಗ ಸುಭಾಸ್ ಬೋಸ್ ಬಂಗಾಳದಲ್ಲೆಲ್ಲಾ ಅದಕ್ಕೆ ಬಹಿಷ್ಕಾರ ಹಾಕಿಸಿದರು. ಅದೇ ವರುಷ ಮಹಾರಾಷ್ಟ್ರೀಯ ಪ್ರಾಂತಿಕ ಸಮ್ಮೇಲನದ ಅಧ್ಯಕ್ಷರಾದರು. ಪಂಡಿತ ಮೋತಿಲಾಲರ ಅಧ್ಯಕ್ಷತೆಯಲ್ಲಿ ಸೇರಿದ 43ನೇ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರ ಕಮಾಂಡರ್ ಆಗಿದ್ದ ಬಾಬೂಜಿಯ ಭವ್ಯ ರೂಪ-ಸಿಂಹ ಗಾಂಭೀರ್ಯಗಳು ಇಂದೂ ಕಣ್ಣ ಮುಂದಿವೆ. ಅಲ್ಲಿ ಬ್ರಿಟನಿನೊಡನೆ ಸಂಧಾನಕ್ಕೆಳೆಯಬೇಕೆಂಬ ಗಾಂಧಿಜೀಯ ಠರಾವನ್ನಿದಿರಿಸಿದವರ ನಾಯಕ ಸುಭಾಸರೇ. ಕಾಂಗ್ರೆಸಿನ ಆಗಿನ ನಮ್ರ ಧೋರಣೆ ಧೀರ ಸುಭಾಸರಿಗೆ ಪಥ್ಯವಾಗಲಿಲ್ಲ. ಅವರು ದಿವಂಗತ ಶ್ರೀನಿವಾಸ ಅಯ್ಯಂಗಾರ್ ಮತ್ತು ಪಂಡಿತ ಜವಾಹಿರಲಾಲರೊಂದಿಗೆ ಕಾಂಗ್ರೆಸಿನಿಂದ ಪ್ರತ್ಯೇಕವಾಗಿ 'ಸ್ವಾತಂತ್ರ್ಯ ಸಂಘ' (ಲೀಗ್ ಓಫ್ ಇಂಡಿಪೆಂಡೆನ್ಸ್)ವನ್ನು ಸ್ಥಾಪಿಸಿಕೊಂಡರು. 1927ರಲ್ಲಿ ಬಂಗಾಳ ಪ್ರಾಂತಿಕ ಕಾಂಗ್ರೆಸಿನ ಅಧ್ಯಕ್ಷ ಮತ್ತು ಅ. ಭಾ. ಕಾಂಗ್ರೆಸಿನ ಕಾರ್ಯದರ್ಶಿಯಾದರು. 1929ರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. 1929ರಲ್ಲಿ ಪುನಃ ದಸ್ತಗಿರಿಯಾಗಿ 1 ವರುಷ ಕಠಿಣ ಶಿಕ್ಷೆಗೊಳಗಾದರು. 1931ರಲ್ಲಿ ಎರಡು ಬಾರಿ ಶಿಕ್ಷಿಸಲ್ಪಟ್ಟರು. ಗಾಂಧೀ-ಇರ್ವಿನ್ ಒಪ್ಪಂದಾನುಸಾರ ಬಿಡುಗಡೆ ಹೊಂದಿದರೂ 1932ರಲ್ಲಿ ಮತ್ತೊಮ್ಮೆ ದಸ್ತಗಿರಿಯಾದರು. ಆ ಬಾರಿ ಜೈಲಿನಲ್ಲಿದ್ದಾಗ ಅವರಲ್ಲಿ ಕ್ಷಯರೋಗದ ಚಿಹ್ನ ಕಾಣಿಸಿಕೊಂಡಿತು. ಕೈದಿಯಾಗಿದ್ದಂತೆಯೇ ಸರಕಾರದ ಅನುಮತಿಯಿಂದ 1933ರಲ್ಲಿ ಚಿಕಿತ್ಸೆಗಾಗಿ ಯುರೋಪಿಗೆ ಹೋಗಬೇಕಾಯಿತು. ವಿಯೆನ್ನಾನಲ್ಲಿ ಅವರಂತೆಯೇ ಆರೋಗ್ಯ ಸಂಪಾದನೆಗಾಗಿ ನಿಂತಿದ್ದು ಕೊನೆಗೆ ಮಡಿದ ವಿಟ್ಠಲ ಭಾಯಿ ಪಟೇಲರ ಆತ್ಮೀಯರಾಗಿ ಹೋದರು. ವಿಟ್ಠಲ ಭಾಯಿಗಳು ಮಡಿಯುವಾಗ ತನ್ನೊಂದು ಲಕ್ಷ ರೂ.ಗಳನ್ನು ದೇಶ ಸೇವೆಗಾಗಿ ಸುಭಾಸರ ಹೆಸರಿಗೆ 'ವೀಲ್‌ನಾಮೆ' ಮಾಡಿದ್ದರು. ಆದರೆ ವಲ್ಲಭಾಯಿಗಳ ನೇತೃತ್ವದಲ್ಲಿ ಕೊನೆಗದಕ್ಕೆ ಆಕ್ಷೇಪ ಬಾರದೆ ಹೋಗಲಿಲ್ಲ. 1934ರಲ್ಲಿ ಸುಭಾಸರ ತಂದೆ ಕಠಿಣ ಕಾಹಿಲೆಯಲ್ಲಿ ಬಿದ್ದರು, ಅವರನ್ನು ಕಾಣುವದಕ್ಕಾಗಿ ಭಾರತಕ್ಕೆ ಹಿಂದಿರುಗುವೆನೆಂದರೆ ಸುಭಾಸರಿಗೆ ಸರಕಾರದ ಪರವಾನಗಿ ದೊರೆಯಲಿಲ್ಲ. ಆದರೆ ಈ ಕೇಸರಿ ಆಜ್ಞೆಯನ್ನಲಕ್ಷಿಸಿ ಯುರೋಪಿನಿಂದ ಭಾರತಕ್ಕೆ ಹಾರಿತು, ಇಲ್ಲಿ ಸರಕಾರವು ಅವರನ್ನು ಸೆರೆ ಹಿಡಿದು ಅವರ ಮನೆಯಲ್ಲಿಯೇ ದಿಗ್ಬಂಧನದಲ್ಲಿಟ್ಟಿತು. ಕೆಲಸ ಆ ಮೊದಲೇ ಮಿಂಚಿ ಹೋಗಿತ್ತು. ಬೋಸರು ಬಂದು ಮುಟ್ಟುವ ಮೊದಲೇ ತಂದೆ ತೀರಿ ಹೋಗಿದ್ದರು. ತಿಂಗಳೊಳಗೆ ಸುಭಾಸರು ಪುನಃ ಯುರೋಪು ಪ್ರವಾಸ ಕೈಕೊಂಡರು. ಅಲ್ಲಿಯೇ 'ಭಾರತ ಹೋರಾಟ' ಪುಸ್ತಕ ಬರೆದರು. 1936ರಲ್ಲಿ ಹಿಂದುಸ್ಥಾನಕ್ಕೆ ಮರಳಿದೊಡನೆ ಸರಕಾರವವರನ್ನು ದಸ್ತಗಿರಿ ಮಾಡಿ ಸುಮಾರು ಒಂದು ವರುಷ ಬಂದೀಖಾನೆಯಲ್ಲಿಟ್ಟಿತು. 1939ರಲ್ಲಿ ಮತ್ತೊಮ್ಮೆ ಬೋಸರ ಯುರೋಪು ಪಯಣ ಈ ಬಾರಿ ಅಯರ್ಲೆಂಡಿಗೆ ಹೋಗಿ ಡಿ'ವೆಲರಾರ ಭೇಟಿ ಪಡೆದು ಅವರ ಗಾಢ ಮಿತ್ರರಾದರು. ಬೋಸರು ಹಲವು ಬಾರಿ ಲಾಠಿ ಹೊಡೆತ ತಿಂದಿದ್ದರು, ಕೈಯ್ಯ ಒಂದು ಎಲುಬು ಕೀಲು ಕೂಡಾ ತಪ್ಪಿ ಹೋಗಿತ್ತು.

ರಾಷ್ಟ್ರಪತಿ

ಬಾಬುಜೀ ಯುರೋಪಿನಲ್ಲೇ ಇದ್ದರು. ಇಲ್ಲಿ 1938ನೇ ಜನವರಿಯಲ್ಲಿ ಹರಿಪುರದಲ್ಲಿ ನೆರೆಯುವ ಕಾಂಗ್ರೆಸಿಗೆ ದೇಶವು ಅವರನ್ನು ಅಧ್ಯಕ್ಷರಾಗಿ ಆರಿಸಿಕೊಂಡಿತು. ಸುಭಾಸರು ಯುರೋಪಿನಿಂದ ಮರಳಿದರು; ಜವಾಹಿರರಿಂದ ಅಧ್ಯಕ್ಷ ಗದ್ದುಗೆಯನ್ನೇರಿದರು. ತನ್ನ ಅಧಿಕ[illegible]ಸ್ ಸಮತಾವಾದಿ ಪಕ್ಷದೊಡನೆ ಸಹಕರಿಸಿ ಅದಕ್ಕೆ ರಾಷ್ಟ್ರ ಪ್ರಾಮುಖ್ಯತೆ ದೊರಕಿಸಿಕೊಟ್ಟರು. ಜವಾಹಿರಲಾಲರ ನಾಯಕತ್ವದಲ್ಲಿ 'ರಾಷ್ಟ್ರ ರಚನಾ ಸಮಿತಿ' ನಿರ್ಮಾಣಗೊಂಡುದು ಬೋಸರು ಅಧ್ಯಕ್ಷರಾಗಿದ್ದಾಗಲೇ. ಮರುವರುಷ ಗಾಂಧಿಜಿಗೂ, ಅವರ ಅನುಯಾಯಿಗಳಾದ ಪಟೇಲ್, ರಾಜೇಂದ್ರ ಪ್ರಸಾದ್, ಕೃಪಲಾನಿ ಮೊದಲಾದ ಪ್ರಮುಖರಿಗೂ ಸುಭಾಸರ ಕೆಲಸ ಸಾಕೆನ್ನಿಸಿದ್ದಿತು. ಗಾಂಧಿಜೀಯವರನ್ನು ಬಿಟ್ಟು ಮಿಕ್ಕವರೆಲ್ಲರೂ ಪಟ್ಟಾಭಿ ಸೀತಾರಾಮಯ್ಯನವರನ್ನು ಬಹಿರಂಗವಾಗಿ ಅಧ್ಯಕ್ಷತೆಗೆ ಶಿಫಾರಸು ಮಾಡಿದರು. ಆದರೆ ಸುಭಾಸ್ ಹೆಜ್ಜೆ ಹಿಂದಿಡಲಿಲ್ಲ. ಚುನಾವಣೆಯೇ ನಡೆಯಿತು. ಮದ್ರಾಸ್ ಸಮೇತ ಎಲ್ಲಾ ಕಾಂಗ್ರೆಸ್ ಸಮಿತಿಗಳಿಂದಲೂ ಸುಭಾಸರಿಗೆ ಪ್ರಬಲ ಬಹುಮತ ದೊರೆಯಿತು. ಹಳೇ ನಾಯಕರು ಅಡ್ಡಗಾಲಿಟ್ಟರು; ಬೋಸರೊಡನೆ ಮುಷ್ಕರ ಹೂಡಿದರು. ಸುಭಾಸರ ವಿಜಯವನ್ನೇ 'ನನ್ನ ಸೋಲು' ಎಂದು ಗಾಂಧಿಜೀ ಕರೆದು ಹೇಳಿದರು. ಪರಿಣಾಮ ವಿಪರೀತವಾಯಿತು. ಕಲ್ಕತ್ತದಲ್ಲಿ ನೆರೆದ ಅ. ಭಾ. ರಾ. ಸಮಿತಿಗೆ ಬಂದಿದ್ದ ಬಲಪಕ್ಷೀಯ ಧುರೀಣರನ್ನು ವೀರಬಂಗಾಳಿಗಳ ಪ್ರತಿರೋಧವಿದಿರಿಸಿತು. ರಾಜೇಂದ್ರರ ಅಂಗಿ ಹರಿಯಿತು. ಯಾರೋ ಮಂಕರು ಗಾಂಧಿಜೀ ಕುಳಿತಿದ್ದ ಬಂಡಿಗೆ ಪಾದರಕ್ಷೆಯನ್ನೂ ಬಿಸಾಡಿದರು. ಗಾಂಧಿಜೀಯ ಸೂಚನೆಯಂತೆ ವಲ್ಲಭಾಯಿ ಕಲ್ಕತ್ತೆಗೆ ಬಾರದುದರಿಂದಾಯಿತು; ಬರುತಿದ್ದರೆ ಮರಳುತ್ತಿರಲಿಲ್ಲವೇನೋ! ಆದರೆ ಗಾಂಧಿಜೀ ಬಂದಾಗ ಸ್ವತಃ ಸುಭಾಸರೇ ಅವರ ಸ್ವಾಗತವಲಿಗೆ ಬಂದು ಹೂವಿನಂತೆ ಅವರನ್ನು ರಕ್ಷಿಸಿ, ಶಿರಸ್ಸಿಗೇರಿಸಿಕೊಂಡು ಬೀಳ್ಕೊಟ್ಟಿದ್ದರು. ಬಲಪಕ್ಷೀಯ ಪ್ರಮುಖರು —ಕಾರ್ಯಕಾರೀ ಸಮಿತಿ ಸದಸ್ಯರು— ಹಿಡಿದ ಮುಷ್ಕರದಿಂದಾಗಿ ಸುಭಾಸ್ ಬೋಸ್ ಅಧ್ಯಕ್ಷಸ್ಥಾನಕ್ಕೆ ರಾಜಿಕೊಡಬೇಕಾಯಿತು.

ಅಪ್ರದಕ್ಷಿಣೆ

ಆ ಮೇಲೆ ಕಾಂಗ್ರೆಸಿನ ಉಗ್ರಗಾಮಿಗಳಲ್ಲಿ ಕೆಲವರನ್ನು ಕೂಡಿಕೊಂಡು ಸುಭಾಸರು 'ಫೋರ್ವರ್ಡ್ ಬ್ಲೋಕ್'ನ್ನು ಸ್ಥಾಪಿಸಿ ಕ್ರಾಂತಿಕಾರೀ ಕಾರ್ಯಕ್ರಮ ಕೈಕೊಂಡರು. 1939ನೇ ಜೂನಿನ ಬೊಂಬಾಯಿ ಅ. ಭಾ. ರಾ. ಸಮಿತಿಯಲ್ಲಾದ ಎರಡು ನಿರ್ಣಯಗಳ ವಿರುದ್ಧವಾಗಿ ಸುಭಾಸ್ ಚಂದ್ರರು ಖಾಡಾಖಾಡಿ ನಿಷೇಧ ಪ್ರದರ್ಶನಗಳನ್ನು ಸಂಘಟಿಸಹತ್ತಿದರು. ಕಾಂಗ್ರೆಸ್ ಅಧ್ಯಕ್ಷರು ಈ ಕ್ರಮ ವಿರುದ್ಧ ವರ್ತನೆಯ ಕುರಿತು ಮಾಜೀ ರಾಷ್ಟ್ರಪತಿಗೆ ಎರಡು ಬಾರಿ ಎಚ್ಚರಿಕೆ ಕೊಟ್ಟರು. ಅದಕ್ಕೆ ಬೆಲೆ ಬರಲಿಲ್ಲವಾದ್ದರಿಂದ ಕೊನೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸುಭಾಸರ ಮೇಲೆ ಶಿಸ್ತುಕ್ರಮ ಕೈಕೊಂಡು ಮೂರು ವರುಷಗಳ ವರೆಗೆ ಕಾಂಗ್ರೆಸಿನಲ್ಲಿ ಯಾವ ಸ್ಥಾನವನ್ನೂ ಅಂಗೀಕರಿಸಲು ಅಯೋಗ್ಯರೆಂದು ತೀರ್ಮಾನಿಸಿತು

ಎರಡನೇ ಲೋಕ ಯುದ್ಧ ಸ್ಫೋಟವಾಯಿತು. ಹಿಂದೀ ಸರಕಾರದ ಯುದ್ಧ ಯತ್ನಗಳನ್ನೆಲ್ಲಾ ವಿರೋಧಿಸಿರೆಂದು ಜನತೆಗೆ ಸುಭಾಸರ ಕರೆ ಬಂತು. ಅವರ 'ಫೋರ್ವಾರ್ಡ್ ಬ್ಲೋಕ್' ಪತ್ರಿಕೆಯಲ್ಲಿ ಬಂದ ಒಂದು ಲೇಖನವು ಆಕ್ಷೇಪಾರ್ಹವೆಂದು ಬಂಗಾಳಾ ಸರಕಾರವು ಬೋಸರ ಮೇಲೆ ತಕ್ಷೀರು ಹೂಡಿತು. ದಾವೆ ಕೋರ್ಟಿನಲ್ಲಿದ್ದಂತೆಯೇ 1940ನೇ ಅಂತ್ಯ ಭಾಗದಲ್ಲಿ ಸುಭಾಸರು ತನ್ನ ಮನೆಯೊಳಗೆ ಏಕಾಂತ ವಾಸದಲ್ಲುಳಿದರು. ಹೊರಗಡೆ ಪೋಲೀಸ್ ಪಹರೆಯಿತ್ತು. ಒಂದು ದಿನ ಅಂತರ್ಧಾನ! ಏನಾದರೆಂದು ಯಾರೂ ಅರಿಯರು. ಕೊನೆಗೊಂದು ದಿನ ಟೋಕಿಯೋದ ಆಕಾಶವಾಣಿಯಲ್ಲಿ 'ನಾನಿಲ್ಲಿದ್ದೇನೆ' ಎಂದು ಬಾಬುಗಳ ಸ್ವರ ಕೇಳಿ ಬಂತು. ಅಲ್ಲಿಂದ ಜರ್ಮನಿಗೆ ಹೋಗಿ ಕೆಲ ಕಾಲ ಬರ್ಲಿನಿನಿಂದ ಆಕಾಶವಾಣಿ ಭಾಷಣಮೀಯುತಿದ್ದರು. ಜಪಾನ್ ಯುದ್ಧಕ್ಕಿಳಿದಾಗ ಸುಭಾಸ್ ಪುನಃ ಜಪಾನಿಗೆ ಸೇರಿದರು. ಅವರು ಸಿಂಗಾಪುರದಲ್ಲಿದ್ದು ಅಲ್ಲಿ 'ಭಾರತ ರಾಷ್ಟ್ರೀಯ ಸರಕಾರ' ಮತ್ತು 'ಭಾರತ ರಾಷ್ಟ್ರೀಯ ಸೇನೆ'ಯನ್ನು ಸ್ಥಾಪಿಸಿಕೊಂಡರು. 1942ರಲ್ಲೊಮ್ಮೆ ಏಕ್ಸಿಸ್ ರೇಡಿಯೋ ಘೋಷಿಸಿತು: 'ಸುಭಾಸರು ವಿಮಾನ ಅಪಘಾತದಿಂದ ಮೃತಪಟ್ಟರು' ಆದರೆ ಈ ವಾರ್ತೆ ಸುಳ್ಳೆಂದು ಸ್ವಲ್ಪ ಸಮಯದಲ್ಲಿಯೇ ತಿಳಿದು ಬಂತು. ಇತ್ತ ಕಲ್ಕತ್ತಾ ಕೋರ್ಟಿನಲ್ಲಿದ್ದ ದಾವೆ ಆರೋಪಿ ಹಾಜರಿಲ್ಲವೆಂಬ ಕಾರಣದಿಂದ ಕೆಲವು ಬಾರಿ ಮುಂದುವರಿಯಿತು; ಕೊನೆಯ ಬಾರಿ ಸುಭಾಸರ ಪಾಲಿನ ಮನೆ ಆಸ್ತಿಗಳನ್ನು ಸರಕಾರ ಏಲಮಿಗಿಟ್ಟಿತು. ಆದರೆ ಇದೇ ಆಗೋಸ್ತು 22ರಲ್ಲಿ ಏಲಂ ಕರೆದಾಗ ಅದನ್ನು ವಹಿಸಿಕೊಳ್ಳಲು ಒಂದು ನರಪ್ರಾಣವೂ ಮುಂದಾಗಲಿಲ್ಲ! ಅಸ್ಸಾಮಿನೊಳಗೆ ಜಾಪಾನೀ ಸೇನೆ ಹೊಕ್ಕಾಗ ಸುಭಾಸರು ತನ್ನ ಸೇನೆಯೊಂದಿಗೆ ಬರ್ಮಕ್ಕೆ ಬಂದು ರಂಗೂನಿನಲ್ಲಿ ಠಾಣ್ಯ ಬಿಟ್ಟಿದ್ದರು. ಬ್ರಿಟಿಷ್ ಸೇನೆ ಅದನ್ನು ಮರಳಿ ಕಿತ್ತುಕೊಳ್ಳುವ ವರೆಗೂ ಕೊನೆ ತನಕ ಅಲ್ಲಿದ್ದು, ಮತ್ತೆ ಸಿಂಗಾಪುರಕ್ಕೆ ಹಾರಿದ್ದರು. ಅಲ್ಲಿಂದ ಮೊನ್ನೆ ಟೋಕಿಯೋವಿಗೆ ಹಾರುವಾಗ ಹೀಗಾಯಿತಂತೆ-ಈ ಅಮೂಲ್ಯ ಪ್ರಾಣವೂ ಹಾರಿ ಹೋಯಿತಂತೆ!

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು- ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 1—8—0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ರಾಷ್ಟ್ರಸಭೆಯ ಇತಿಹಾಸ ...	2	8	0
2	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5.	ಭಾರತ ಗೀತಾಂಜಲಿ	0	2	0
6	ಪುರಂದರದಾಸರ ಕೀರ್ತನ ಭಾಗ 4ರ ಸ್ಟಿಫ್ ಬೈಂಡ್	1	4	0
7	ಶಾಂತಿಪುರಾಣ	3	0	0
8	ಸಾಮುದ್ರಿಕ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ತ್ ಮದ್‌ಮಾಯೆ ...	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ ..	0	2	0
ಬಂಗಾರ್ದ ಅಂಗಿದ ಕತೆ	9	2	0
ಮಿತ್ಯ ನಾರಾಯಣ ಕತೆ	1	0	0
ಸತೀ ಕಮಲೆ	0	12	0
ಜೊಬ್ಬಯೆರ್	0	4	0
ತೊಡಕಿನಾರ್	0	4	0
ಮುಂಡತ್ತಾಯೆ	0	4	0
ಕನ್ನಡಕೊ	0	1	0
ವಿಶ್ವರೂಪದರ್ಶನೊ	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಖರಿಯು ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು.

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಶೆಣೈ ಬ್ರದರ್ಸ್, ,,
ಕೆ. ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪ್ಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ್ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India.

Regd No. M. 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

NAVAYUGA ನವಯುಗ

ವರ್ಷ ೨೫ ವಾರ ೨ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. | Vol 25 No. 2

Founder SRI A. B. SHETTY.

ಉಡುಪಿ ● 13—9—1945 ● ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ.0—1—6.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು ಕತ್ತಿಗೆ, ಛುಟ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಕಷ್ಟಗಳ ನೋವನು ನೋದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಕಥ, ಹುಳುಕಡ್ಡಿ ಮುದ್ದ ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office - **UDIPI, (S. India)**

UDIPI,
4th September, 1945.

New Appointments.

Applications from candidates of S S L C standard (only boys) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of their School and another from any local gentleman

T R A Pai,
Managing Director

The Jupiter General Insurance Co., Ltd.,

ಮರಣದಿಂದ ತಪ್ಪಿಸಿಕೊಳ್ಳುವ ಹಾದಿಯೇ ಇಲ್ಲ; ಮರಣದ ಹಾನಿಯಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಹಾದಿಯಿದೆ—ಜೀವವಿಮೆ!

ನೀವು ಜೀವನದಲ್ಲಿ ಆನಂದ ಕಾಣಬೇಕೆ? ನಿಮ್ಮ ಆಶ್ರಿತರ ಬಾಳುವೆಗೆ ಆಧಾರವಾಗಬೇಕೆ? ಹಾಗಾಗಬೇಕಾದರೆ ಇಂದೇ ವಿಮೆ ತೆಗೆಯಬೇಕು! ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್' ಈ ಸತ್ಕಾರ್ಯದಲ್ಲಿ ನಿಮಗೆ ನೆರವಾಗಬೇಕೆಂದು ಸರ್ವ ವಿಧದ ರಿಯಾಯತಿ, ಸೌಕರ್ಯ, ಸಹಕಾರಗಳನ್ನೀಯಲು ಸಿದ್ಧವಿದೆ

ವಿಮೆಯಿಳಿಸುವವರೂ ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—

ಸಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ಏಜಂಟರು

ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—೬೩, ೦೦೦.

KOCHIKAR BROTHERS, LTD.

Central Office:—UDIPI S. K

Mangalore O Calicut O Bangalore O Madras O Madura O Trivandrum O Bombay

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಅಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪ್ಯಾ 26 ಲಕ್ಷ
ಕ್ಷೇಮನಿಧಿ ರೂಪ್ಯಾ 10 ಲಕ್ಷ

ಕೆನರಾ ಬೇಂಕ್ ಲಿಮಿಟೆಡ್.
(ESTD 1906 ಸ್ಥಾಪನೆ.)

CANARA BANK LIMITED

(Incorporated in British India, liability of Members Limited.)

The Vijaya Bank Limited.

ANNOUNCEMENT

We have much pleasure to announce that the New shares issued by us have been easily oversubscribed. We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ

Head Office. MANGALORE } B. MANJAYA HEGDE. Chairman of the Board of Directors

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

★ 'ಕಾಂಗ್ರೆಸ್ ಫೇಸಿಸ್ಟ್ ಸಂಸ್ಥೆ!' ★

[ಹಿಂದೀ ರಾಷ್ಟ್ರೀಯ ಭಾವನೆಯನ್ನು ಅವಮಾನಿಸುವ ಪ್ರಸಿದ್ಧ ಗ್ರಂಥಗಳಲ್ಲಿ ಮಿಸ್ ಮೇಯೋಳ 'ಮದರ್ ಇಂಡಿಯಾ' ಒಂದು, ಬೆವರ್ಲೆ ನಿಕೋಲಸರ 'ವರ್ಡಿಕ್ಟ್ ಒನ್ ಇಂಡಿಯಾ' (ಹಿಂದು ಸ್ಥಾನದ ಮೇಲೊಂದು ತೀರ್ಮಾನ) ಮತ್ತೊಂದು. ಇತ್ತೀಚೆಗೆ ಪ್ರಕಟವಾಗಿ ಎಲ್ಲೆಲ್ಲೂ ಪ್ರತಿಧ್ವನಿ, ವಿರೋಧ ಘೋಷಗಳ ಸೃಷ್ಟಿಸಿದ್ದ ನಿಕೋಲಸ್ ಗ್ರಂಥದ ಒಂದು ಭಾಗವಿದು. ಭಾರತ ರಾಷ್ಟ್ರೀಯತೆಯ ವಿರೋಧಿಗಳಾದ ಬ್ರಿಟಿಷರ ಕನ್ನಡಿಗಳಿಂದೂ ನಮ್ಮನ್ನು ನಾವು ನೋಡಿಕೊಳ್ಳುವದು ನಮ್ಮ ಆತ್ಮ ಶುದ್ಧಿಗೂ ಬ್ರಿಟಿಷರ ನಿಜ ರೂಪದರ್ಶನಕ್ಕೂ ಅನುಕೂಲವೆಂಬ ಕಾರಣದಿಂದ ಇದನ್ನು ಕೊಡಲಾಗಿದೆ].

ದಿವಸದ ಕಡೇ ಭಾಗದಲ್ಲಿ—ಥರಾತಡವಾಗಿ ಎಂದೇ ಹೇಳಬಹುದು—ಹಿಂದೀಯ ಉತ್ಕೃಷ್ಟ ಮೆದುಳುಗಳಲ್ಲಿ ಕೆಲವು ಕಾಂಗ್ರೆಸ್ ಆಡಳಿತೆಯ ನಿಜರೂಪ ಮತ್ತದರ ಹಿಂಬದಿಯ ಫೇಸಿಸ್ಟ್ ಗಂಡಾಂತರದ ವಿರುದ್ಧವಾಗಿ ದಂಗೆಯೆದ್ದಿವೆ.

ನಾಜೀ ಚಳವಳದ ಬಾಲ್ಯಾವಸ್ಥೆಯಲ್ಲಿ ಅದು ರಾಷ್ಟ್ರೀಯ ಪುನರುದ್ಧಾರದ ಉಪಕರಣವಾಗಬಲ್ಲುದೆಂಬ ಯಥಾರ್ಥ ನಂಬಿಕೆಯಿಂದ ಉಚ್ಚ ನಾಗರಿಕರಾದ ಹಲವು ಜರ್ಮನರು ಅದನ್ನು ಸೇರಿಕೊಂಡಂತೆ ಕಾಂಗ್ರೆಸ್ ಚಳವಳಕ್ಕೂ ಕೆಲವು ಹಿಂದೀ ಸದ್ಗೃಹಸ್ಥರ ಬೆಂಬಲ ದೊರೆತಿದ್ದಿತು. ಅವರಿಗೆ ಆ ಮೂಲಕ ಸ್ವಾತಂತ್ರ್ಯದ ನಿಜವಾದ ಆಸೆ ಕಂಡು ಬರುತಿತ್ತು; ಸ್ವಾತಂತ್ರ್ಯಕ್ಕಿಂತಲೂ ಹೆಚ್ಚಾಗಿ ಒಕ್ಕಟ್ಟು ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸಲ್ಪಡುವವೆಂದೂ ಅವರ ನಿರೀಕ್ಷೆಯಿದ್ದಿತು.

ಆ ಜರ್ಮನ್ ಸಭ್ಯರ ಭ್ರಾಂತಿಯೆಂದಿಗೆ ನಿರಸನಗೊಂಡಿತೋ ಅಂದೇ ಅವರನ್ನೆಲ್ಲಾ ನಾಜೀ ಪಕ್ಷದಿಂದ ಹೊರಗಟ್ಟಲಾಯಿತು ಮಾತ್ರವಲ್ಲ, ಅವರ ಪೈಕಿ ದೇಶ ಬಿಟ್ಟೋಡಲಾಗದವರು ಗುಂಡಿಗೆ ಬಲಿ ಬಿದ್ದರು. ಹಿಂದೀ ಸಭ್ಯರ ಸ್ಥಿತಿಯೂ ಅಲ್ಲಿಗೇ ಬಂತು. ಅವರ ಭ್ರಾಂತಿ ನಿವಾರಣೆಗೊಂಡೊಡನೆ ಅವರನ್ನೆಲ್ಲಾ ಕಾಂಗ್ರೆಸ್ ಪಕ್ಷದಿಂದ ಒದ್ದು ಓಡಿಸಲಾಯಿತು. ಆದರೆ ಹಿಂದುಸ್ಥಾನವಿನ್ನೂ ಬ್ರಿಟಿಷ್ ಕಾನೂನಿನಿಂದ ಆಳಲ್ಪಡುತ್ತಿರುವುದರಿಂದಾಗಿ ಅವರಿಗೆ ಗುಂಡು ಬೀಳುವದೊಂದು ತಪ್ಪಿದೆ! ಮತ್ತು ಫೇಸಿಸ್ಟ್ ಹಾದಿಯಲ್ಲಿ ವಾಯು ವೇಗದಿಂದ ಧಾವಿಸುತ್ತಿರುವ ತಮ್ಮ ದೇಶಬಾಂಧವರಿಗೆ ಅವರು ಕೊಡುತ್ತಿರುವ ಎಚ್ಚರಿಕೆಯೂ ಕೇಳಿ ಬರುತ್ತಿದೆ.

ಅವರ ಪೈಕಿ ಅತ್ಯಂತ ಮನಮುಟ್ಟುವ ಒಂದು ಸ್ವರವೆಂದರೆ ಎಮ್. ಎನ್. ರೋಯಿಗಳದು.

ರೋಯಿ ವ್ಯಕ್ತಿತ್ವ

'ಬಿರುಗಾಳಿಯ ಧೂಳು' 'ಅಪಾಯದ ಮಾರಿ' ಇತ್ಯಾದಿಯಾಗಿ ರೋಯಿಗಳ ಮೇಲೆ ರಾಜಕೀಯ ಹಳೇ ಹದ್ದುಗಳೆಸ್ತವರುಗಳಿಂದಯ ಸುರಿಮಳೆಯಾಗುತ್ತಿದೆ. ರೋಯಿಗಳ ಮೊದಲ ದಿನಗಳಲ್ಲಿ ಅವರ ಅಭಿರುಚಿಯಿದ್ದುದು ರಶ್ಯದ ಮೇಲೆ. ಕಮ್ಯೂನಿಸ್ಟ್ ಪ್ರಯೋಗಗಳಲ್ಲಿ ಅವರಿಗೆ ಅತಿಶಯ ಆತುರವಿದ್ದಿತು ಭಾರತಕ್ಕೂ ಅದನ್ನು ಅಮೂಲಾಗ್ರವಾಗಿ ಅಂಟಿಸಬಹುದೆಂದು ಅವರ ನಂಬಿಕೆಯಿದ್ದಂತೆ ಕಾಣುತ್ತಿತ್ತು. ಅವರು ರಶ್ಯವನ್ನೇಕೆ ಬಿಟ್ಟರೆಂಬುದು ಸ್ಪಷ್ಟವಾಗಿ ತಿಳಿದುಬರುವದಿಲ್ಲ. ಆದರೂ ಕೆಲವೊಂದು ವಿಷಯಗಳಲ್ಲಿ ಅವರ ಭ್ರಮೆ ತೊಲಗಿರಬೇಕೆಂಬುದು ಖಂಡಿತ. ಹೇಗಿದ್ದರೂ ನಮಗಿಲ್ಲಿ ಸಂಬಂಧಿಸಿರುವದು 1930ರ ವಿಷಯ ಮಾತ್ರ. ಕೀರ್ತಿ ಮತ್ತು ಸಮಸ್ಯೆಯಿಂದ ಆವರಿಸಲ್ಪಟ್ಟ ರೋಯಿಗಳು ಆಗ ಭಾರತದ ರಾಜಕೀಯರಂಗದಲ್ಲಿ ಪುನಃ ಕಾಣಿಸಿಕೊಂಡರು. ಅಲ್ಲಿಂದ ಪ್ರಕಾಶಿಸುತ್ತಾ ಮುಂದೊತ್ತಿ ಹತ್ತಿದ ರೋಯಿಗಳು ಸಿಂಹದ ಕೇಸರದಿಂದ ಹಿಡಿದು ಬ್ರಾಹ್ಮಣನ ಚಂಡಿಕೆಯ ವರೆಗೆ ಪ್ರತಿಯೊಬ್ಬನ ತಲೆಕೂದಲಲ್ಲೂ ಸೇರಿಹೋದರು. ರೋಯಿಗಳು ಜನತೆಯ ರೋಮರೋಮಗಳನ್ನೂ ನಿಗುರಿಸಿ ನಿಂತುದಾದರೂ ಹೇಗೆ? ಎರಡು ಕಾರಣಗಳಿಂದಾಗಿ. ಮೊದಲನೆಯದಾಗಿ ಅವರು ಶಿಲಾಸದೃಶ ಯಥಾರ್ಥವಾದಿ; ಶಿಲಾಸದೃಶ ದೃಢ ಯಥಾರ್ಥತೆಯ ಹಿಂದೀ ರಾಜಕಾರಣಿಗಳು ವಜ್ರಕ್ಕಿಂತಲೂ ಅಪ

ರೋಯಿ—

'ಶಿಲಾ ಸದೃಶ ಪ್ರಾಮಾಣಿಕ'

ರೂಪವಿದ್ದಾರೆ! ಎರಡನೆಯದಾಗಿ ಅವರೊಬ್ಬ ಸಮಾಜವಾದಿ. ಇವೆಲ್ಲಾ ಧಾರ್ಮಿಕ ಮತ್ತು ರಾಜಕೀಯ ಘರ್ಷಣೆಗಳ ಹಿಮ ಮತ್ತು ಉರಿಯ ಹಿಂಭಾಗದಲ್ಲಿ ಜರ್ಝರಿತ ಆರ್ಥಿಕ ಚೌಕಟ್ಟು ಅಡಗಿದೆಯೆಂದೂ, ಅದು ಹುಳಹಿಡಿದು ಹಾಳಾಗಿದೆಯೆಂಬುದನ್ನೂ ಅವರು ಮನಗಂಡಿದ್ದರು. ಆ ತಳಕಟ್ಟನ್ನು ಕೆಳಗೆ ದೂಡಿಬಿಡಬೇಕೆಂದು ರೋಯಿಗಳ ಇಚ್ಛೆ; ಅದನ್ನೆತ್ತಿ ಆಧರಿಸಬೇಕೆಂದು ಕಾಂಗ್ರೆಸಿನ ಬಯಕೆ.

('ವರ್ಡಿಕ್ಟ್ ಒನ್ ಇಂಡಿಯಾ' ಗ್ರಂಥದಿಂದ)

●

ರೋಯಿ ಪಂಥ

ರೋಯಿಗಳಿಗೆ 'ಭಾರತದ ಕಾರ್ಲ್ ಮಾರ್ಕ್ಸ್' ಎಂಬ ಹೆಸರು ಬಿದ್ದಿದೆ. ಅಗ್ರಗಣ್ಯತ್ವದಲ್ಲಿ ಅವರು ಯಾರೊಬ್ಬನಿಗೂ ಕಡಿಮೆಯಿಲ್ಲ. ಅವರ ವ್ಯಕ್ತಿತ್ವವೇನೋ ಅಸಾಧ್ಯ ವಿದ್ಯುತ್‌ಪ್ರಭಾವವುಳ್ಳದ್ದು; ಆದರೂ ಮಿಂಚು ಕಿರಣ ಪ್ರವಾಹಕ್ಕೊಂದು ಗುರುತು ಚೀಟಿಯನ್ನು ಅಂಟಿಸಲೇ ಬೇಕಾಗುತ್ತದೆ. ಅದಕ್ಕನುಸಾರವಾಗಿ ರೋಯಿಗಳು ತನ್ನ ವ್ಯಕ್ತಿತ್ವವನ್ನು 'ರೇಡಿಕಲ್



ನೆಹರು—

'ಹಿಂದೀ ಫೇಸಿಸ್ಟ್ ನಾಯಕ'

ಡೆಮೊಕ್ರಟಿಕ್ ಪಾರ್ಟಿ' ಎಂಬ ಒಂದು ಸಣ್ಣ-ಆದರೂ ಅತ್ಯಂತ ಪ್ರಭಾವಶಾಲಿ ರಾಜಕೀಯ ಪಕ್ಷದ ಮೂಲಕ ಹೊರಸೂಸುತ್ತಾರೆ. ಈ ಪಕ್ಷದ ಅಧಿಕೃತ ಪತ್ರಿಕೆ 'ಇಂಡಿಪೆಂಡೆಂಟ್ ಇಂಡಿಯಾ'ವು ನವ ಡಿಲ್ಲಿಯಿಂದ ಪ್ರಕಟಿಸಲ್ಪಡುತ್ತಿದೆ. ರೋಯಿಗಳು ಈ ಪತ್ರಿಕೆಗೆ ಬರೆಯುತ್ತಿರುವುದಷ್ಟೇ ಅಲ್ಲ; ಸಫಲ ಲೇಖಕರಾದ ಅವರು ಗ್ರಂಥಿತ್ವ, ಕಾಂಗ್ರೆಸ್ ಮತ್ತು ಫೇಸಿಸಮಿನೊಳಗಿನ ಗುಪ್ತ ಮೈತ್ರಿ ಸಂಬಂಧದ ಪಾಶವಿಕ ಪ್ರಯೋಗಗಳಿಗೆಲ್ಲಾ ಪ್ರತಿಬಂಧವೊಡ್ಡುತಿದ್ದಾರೆ. ಆ ಹೇಯ ಮಿತ್ರತ್ವವನ್ನು ಸಂಬಂಧಪಟ್ಟವರು ಕಂಠೋಕ್ತವಾಗಿ ಅಲ್ಲಗಳೆದಿರುವರಾದರೂ ಅದು ಸಂದೇಹಾತೀತ ವಿಷಯ; ಅವೆರಡು ಚಳವಳಗಳ ಆಕಾರದಲ್ಲೇ ಜನ್ಮಸಿದ್ಧ ಸಾಮ್ಯತೆಯಿದೆ. ರೋಯಿಗಳ ವ್ಯಕ್ತಿತ್ವವನ್ನು ಗಣಿಸುವವರಲ್ಲ ಜವಾಹಿರಲಾಲ ನೆಹರುಗಳ-ಭಾರತದ ನಂ. ೨ನೇ ರಾಜಕಾರಣಿಯ-ಗಾಂಧಿಯ ಸಹಜ ವಾರೀಸ್ದಾರನ ಕುರಿತು ಅವರು ಹೀಗೆ ಬರೆದಿದ್ದಾರೆ.—

ಹಿಂದೀ ಫೇಸಿಸ್ಟ್ ನಾಯಕ

"ತತ್ವತಃ ಫೇಸಿಸ್ಟ್ ವಿರೋಧಿಯಾಗಿರುವ ನೆಹರು ಹಿಂದೀ ಫೇಸಿಸಮಿನ ನಾಯಕನಂತೆ ವರ್ತಿಸುತಿದ್ದಾರೆ ಮಾತ್ರವಲ್ಲ, ಸ್ವಭಾವತಃ ಆ ಸ್ಥಾನಕ್ಕೆ ಅವರಿಗಿಂತ ಯೋಗ್ಯರು ಇನ್ನೊಬ್ಬರಿಲ್ಲ. ಮೂಲತತ್ವಾನುಸಾರವಾಗಿ ಅವರೊಬ್ಬ 'ರಾಷ್ಟ್ರೀಯ ಸಮತಾವಾದಿ'; ರಾಷ್ಟ್ರೀಯ ವಾದಿಯೂ ಅಲ್ಲ, ಸಮತಾವಾದಿಯೂ ಅಲ್ಲ. ಘಂಟಾಘೋಷವಾಗಿ ಸಾರಲ್ಪಡುತ್ತಿರುವ ಅವರ ಅಂತರಾಷ್ಟ್ರೀಯತೆಯಿಂದ ಅವರ ರಾಷ್ಟ್ರೀಯತೆ ವಜಾ ಮಾಡಲ್ಪಟ್ಟಿದೆ; ಮತ್ತವರ

ಆಚಾರಿ —

'ಕುಟಿಲತಂತ್ರ ಪ್ರವೀಣ'

ಕಟ್ಟುಗ್ರ ರಾಷ್ಟ್ರೀಯತೆಯಿಂದ ಅವರ ಸಮತಾವಾದ ರದ್ದಾಗಿದೆ. ಕಾಂಗ್ರೆಸಿಗೆ ಗಾಂಧಿಯ ಭಾವ ಪ್ರಚೋದಕ ಧುರೀಣನಾಗಿದ್ದರೆ, ನೆಹರು ಅದರ ಪರಿಣಾಮಕಾರೀ ನಾಯಕ. ಹೀಗಾಗಿ ಹಿಂದೀ ಫೇಸಿಸಮಿನ ಮುಖಂಡನೆಂದರೆ ನೆಹರು". ಬಹು ಸಂಖ್ಯೆಯಲ್ಲಿ ಮಾರಾಟವಾಗಿರುವ ನೆಹರುಗಳ ಆತ್ಮ ಕಥೆಯನ್ನು ಓದಿದ-ಅದರಲ್ಲಿ ಸೂಕ್ಷ್ಮ ಪ್ರಕೃತಿಯ, ಸುಸಂಸ್ಕೃತ ಮನಃವ್ಯನೊಬ್ಬನ ಚಿತ್ರವನ್ನು ಕಂಡ-ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಪಾಶವಿಕತೆಗೆ ವಿರುದ್ಧವೆದ್ದವನನ್ನು ಗುರುತಿಸಿಕೊಂಡ—ಸಾವಿರಾರು ಮಂದಿಯನ್ನು ಮೇಲಿನ ಅಭಿಪ್ರಾಯವೊಂದು ಸಿಡಿಲಾಗಿ ಕಂಪಕ್ಕೀಡು ಮಾಡುವದು ಸಹಜವೇ.

ಆಚಾರಿಗಳ ಅಂಬೋಣ

194೧ರಲ್ಲಿ ಜೈಲಿನಿಂದ ಹೊರಗಿದ್ದ ಕೆಲವೇ ಮಂದಿ ಗಣ್ಯ ಮಾಜೀ ಕಾಂಗ್ರೆಸ್ ನಾಯಕರಲ್ಲಿ ಸಿ. ರಾಜಗೋಪಾಲಾಚಾರಿಗಳೊಬ್ಬರು ಅವರು ಆ ಅವಧಿಯ ಹೆಚ್ಚಿನ ಭಾಗವನ್ನು ಗಾಂಧೀ—ಜಿನ್ನರ ಮತವನ್ನೊಂದುಗೂಡಿಸುವ ವ್ಯರ್ಥ ಪ್ರಯತ್ನದಲ್ಲೇ ಕಳದಿದ್ದರು. ನಾನು ಮದ್ರಾಸಿನಲ್ಲಿ 'ಸಿ. ಆರ್.'ರೊಡನೆ ದೀರ್ಘ ಸಂಭಾಷಣೆ

(೧೧ನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಕುಂದಾಪುರ ಡಿವಿಜನಿನ ಹಳ್ಳಿಗಳಿಗೆ ಹ್ಯಾಸ್ಕೂಲುಗಳನ್ನು ಒದಗಿಸಿಕೊಡುವ ಯೋಜನೆ.

ಹಳ್ಳಿಗಳಲ್ಲಿ ಹ್ಯಾಸ್ಕೂಲುಗಳು ಬೇಕೆಂಬ ಹಂಬಲವು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಕಾಣಬರುತ್ತಿದೆ. ಇಂತಹ ಆತುರತೆಯು ತೋರಿ ಬರುವುದು ನ್ಯಾಯವೆಂದೂ ಹೇಳಬಹುದು. ಏಕೆಂದರೆ ಮುಂಬರುವ ಕಾಲದ ಲಕ್ಷಣವನ್ನು ಪರಿಶೀಲಿಸಿದರೆ ಆ ಕಾಲದಲ್ಲಿ ಬಾಳಬೇಕಾಗಿರುವ ನಮ್ಮ ಇಂದಿನ ತರುಣರಿಗೆ ಹ್ಯಾಸ್ಕೂಲಿನ ಮಟ್ಟದ ವಿದ್ಯಾಭ್ಯಾಸದ ಪೂರ್ವ ಸಿದ್ಧತೆಯು ಅವಶ್ಯವಿದೆ. ನಾಳಿನವರು ಸಮಗ್ರ ಜಗತ್ತಿನ ನಡೆಯನ್ನು ಪರಿಶೀಲಿಸಿಕೊಂಡು ಅದಕ್ಕೆ ತಕ್ಕಂತೆ ತಾವೂ ಅಡಿಯಿಡದೆ ತಾವೊಂದು ಹಳ್ಳಿಯ ಮೂಲೆಯಲ್ಲಿ ತಮ್ಮಷ್ಟಕ್ಕೆ ಬದುಕುವುದೆಂದರೆ ಕಾಲದ ಮಹಿಮೆಗೆ ಸಲ್ಲದ ಮಾತು. ಏಕೆಂದರೆ ಮುಂಬರುವ ಪರಿಪೂರ್ಣ ವಿಜ್ಞಾನಯುಗವು ಜಗತ್ತಿನ ದೂರದೂರದ ರಾಷ್ಟ್ರಗಳೂ ನಮ್ಮ ನೆರೆಮನೆಗಳಾಗುವಂತೆ ಸಮೀಪಕ್ಕೆ ತಂದೇ ತರುವುದು. ವಿಜ್ಞಾನದ ದೃಷ್ಟಿಯಿಂದ ನೋಡಿ ಸುಧಾರಿಸಿಕೊಳ್ಳದ ಯಾವ ವೃತ್ತಿಯೂ ಏಳಿಗೆಗೆ ಬರಲಾರದು. ಸುತ್ತುಮುತ್ತಲಿನ ಜಾಗತಿಕ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ಜೀವನ ರೀತಿನೀತಿಗಳನ್ನು ಸುಧಾರಿಸಿಕೊಳ್ಳದ ವ್ಯಕ್ತಿಯು ಬಾಳುವುದು ಕಷ್ಟವಾದೀತು. ಸಂಕ್ಷೇಪವಾಗಿ ಹೇಳುವುದಾದರೆ ಮುಂಬರುವ ಕಾಲದಲ್ಲಿ ಪ್ರತಿಯೊಂದು ವ್ಯಕ್ತಿಯ ಹಾಗೂ ದೇಶದ ಜೀವನವು ಇತರ ವ್ಯಕ್ತಿಗಳ ಹಾಗೂ ರಾಷ್ಟ್ರಗಳ ಬಾಳಿನೊಡನೆ ನಿಕಟ ಸಂಬಂಧವುಳ್ಳ ಹಾಸು ಹೊಕ್ಕಾಗಿ ಬೆರೆತುಹೋಗಲಿಕ್ಕಿದೆ. ಆದು ಕಾರಣ ಜಾಗತಿಕ ಪರಿಸ್ಥಿತಿಯನ್ನು ದಿನದಿನವೂ ಎಂಬಂತೆ ಪರಿಶೀಲಿಸಿಕೊಂಡು ತನ್ನ ಹಾಗೂ ತನ್ನ ನಾಡಿನ ನಡೆ ಹೇಗಿರಬೇಕೆಂಬುದನ್ನು ನಿರ್ಧರಿಸುವಷ್ಟು ಸ್ವತಂತ್ರ ವಿಚಾರಶಕ್ತಿಯೂ ಬುದ್ಧಿ ಪ್ರೌಢಿಮೆಯೂ ಪ್ರತಿಯೊಂದು ವ್ಯಕ್ತಿಗೂ ಬೇಕಾಗುವುದು. ಇವನ್ನುಳ್ಳವನು ಮಾತ್ರ ತನ್ನ ಉದ್ಯೋಗವೇನೇ ಇರಲಿ, ಅದನ್ನೂ ತನ್ನ ಜೀವನ ವ್ಯವಹಾರದ ಇತರ ಸಮಸ್ಯೆಗಳನ್ನೂ ಸರಿಗೊಳಿಸಿಕೊಳ್ಳಲು ಸಮರ್ಥನಾಗುವನು. ಇಂದಿನ ತರುಣರಲ್ಲಿ ಎಂಟ ಈ ಸ್ವತಂತ್ರ ವಿಚಾರ ಶಕ್ತಿ ಮತ್ತು ಬುದ್ಧಿ ಪ್ರೌಢಿಮೆ ಮೊಳೆತು ಬೆಳೆದು ಬೆಳಗಬೇಕಾದರೆ ಅವರಿಗಿಂದು ಹ್ಯಾಸ್ಕೂಲು ಮಟ್ಟದ ವಿದ್ಯಾಭ್ಯಾಸವು ಅವಶ್ಯವಿದೆ.

ಆದರೆ ಇದಕ್ಕಾಗಿ ಹಳ್ಳಿಗರು ತಮ್ಮ ಮಕ್ಕಳನ್ನು ಕಳುಹಿಸುವುದಾದರೆ ಬಹಳ ವೆಚ್ಚಮಾಡಬೇಕಾಗುವುದು. ಮಾತ್ರವಲ್ಲ, ನೈಸರ್ಗಿಕ ಸಿರಿಸೊಬಗು ಆಹಾರವಿಹಾರ ಮುಂತಾದ ಜೀವನದ ಸಹಜ ನೀತಿರೀತಿಗಳಿಗೆ ಅವಕಾಶವಿಲ್ಲದೆ ಅನಿವಾರ್ಯವಾಗಿ ಪಟ್ಟಣವು ಮಾಡಿಕೊಂಡಿರುವ ಕೃತಕ ಸಿರಿಸೊಬಗು ಆಹಾರವಿಹಾರಾದಿ ಜೀವನದ ರೀತಿನೀತಿಗಳ ಮರುಗಿಗೆ ಈ ತರುಣರು ಮರುಳಾಗಿ ತಮ್ಮ ಹಳ್ಳಿಯ ಸಹಜ ಸುಂದರ ಜೀವನ ಉದ್ಯೋಗಗಳ ಕಡೆಗೆ ಜುಗುಪ್ಸೆಯುಳ್ಳವರಾಗಿ ಬೆಳೆಯುತ್ತಾರೆ. ಕೊನೆಗೆ ತಮ್ಮ ಹಿರಿಯರ ಮನೆ ಕಸುಬನ್ನು ಬಿಟ್ಟು ದೊರಕಲಾರದ ಲೇಖನಿಯ ಉದ್ಯೋಗಕ್ಕೆ ಹಾತೊರೆಯುತ್ತ ನಿರುದ್ಯೋಗಿಗಳಾಗಿ ಅಲೆಯುವ ಅಥವಾ ಮನೆ ಸೇರಿ ಸೋಮಾರಿಯಾಗಿದ್ದು ಹಿರಿಯರಿಗೆ ಹೊರೆಯಾಗಿ ಸಾಲಸೋಲಗಳಿಗೀಡಾಗಿ ಮೂಲವನ್ನೂ ಕಳೆದುಕೊಳ್ಳುವ ಕೀಳ್ಮೆಗೂ ಇಳಿಯುತ್ತಾರೆ. ಹೀಗಾಗಬಾರದು. ಹಳ್ಳಿಯ ತರುಣರಲ್ಲಿ ಹಳ್ಳಿಯ ಅಭಿಮಾನವು ಕುಗ್ಗದೆ, ಹಳ್ಳಿಯ ಆಕರ್ಷಣೆಯು ಶಿಥಿಲವಾಗದೆ, ಹಳ್ಳಿಯ ಉದ್ಯೋಗಗಳಲ್ಲಿ ಅನಾಸಕ್ತಿ ಬಾರದೆ, ಅವರು ನಾಳೆಗೆ ತಮ್ಮ ಮತ್ತು ತಮ್ಮ ಹಳ್ಳಿಯ ಉದ್ಧಾರದ ಧೀರ ವೀರರಾಗುವಂತೆ ಅವರ ವಿದ್ಯಾಭ್ಯಾಸವು ಹಳ್ಳಿಯ ವಾತಾವರಣದಲ್ಲೇ ಸಾಗಬೇಕು. ಆದರೆ ಹಳ್ಳಿಯ ಉದ್ಯೋಗಗಳಲ್ಲಿ ಜೀವನದ ರೀತಿನೀತಿಗಳಲ್ಲಿ ತೋರಿಬರುವ ಪರಂಪರಾಗತವಾದ ಅವಿಚಾರ, ಅಜ್ಞಾನ, ಕಾಲಕ್ಕೆ ಸಲ್ಲದ ರೂಢಿ ಸಂಪ್ರದಾಯ, ಅಂಧಶ್ರದ್ಧೆ, ಮೂಢನಂಬಿಕೆ, ಇವೆಲ್ಲವುಗಳ ಮೇಲೆ ವಿಜ್ಞಾನ ವಿಚಾರಗಳ ಪ್ರಭೆ ಬೀಳುವಂತಾಗಿ ಜೀವನೋದ್ಯೋಗಗಳು ಸುಧಾರಿತವಾಗಬೇಕು. ಇವೆರಡನ್ನೂ ಸಾಧಿಸಬೇಕಾದರೆ ಹಳ್ಳಿಯ ಮಕ್ಕಳಿಗೆ ಹಳ್ಳಿಯಲ್ಲಿಯೇ ಹ್ಯಾಸ್ಕೂಲು ವಿದ್ಯಾಭ್ಯಾಸವಾಗಬೇಕಾಗಿದೆ.

ಈ ದೃಷ್ಟಿಯಿಂದ ಹ್ಯಾಸ್ಕೂಲುಗಳನ್ನು ಸ್ಥಾಪಿಸಲು ನಮ್ಮ ಜಿಲ್ಲೆಯ ಉತ್ತರಾರ್ಧ ಭಾಗವಾದ ಕುಂದಾಪುರ ಡಿವಿಜನಿನಲ್ಲಿ ಹಿರಿಯಡ್ಕ, ಬೈಲೂರು, ಹೆಬ್ರಿ, ಶಂಕರನಾರಾಯಣ, ಬಾರ್ಕೂರು, ಕೋಟೇಶ್ವರ, ಬ್ರಹ್ಮಾವರ, ಕೆಮ್ಮಣ್ಣು, ವಡಭಾಂಡೇಶ್ವರ ಮುಂತಾದ ಯೋಗ್ಯ ಕೇಂದ್ರಗಳಿವೆ.

ಆದರೆ ಈ ಕೇಂದ್ರಗಳಲ್ಲಿ ಹ್ಯಾಸ್ಕೂಲುಗಳನ್ನು ಸ್ಥಾಪಿಸುವುದು ಆಯಾ ಕೇಂದ್ರದ ಆಶಾಸಲೆಯೊಳಗಿನವರಿಗೆ ಸಾಧ್ಯವಾಗದಿರಬಹುದು. ಏಕೆಂದರೆ ಕನಿಷ್ಠ ಪಕ್ಷದಲ್ಲಿಯೂ ಆರಂಭದ ವೆಚ್ಚಕ್ಕೆ ಸುಮಾರು ಐವತ್ತು ಅರುವತ್ತು ಸಾವಿರ ರೂಪಾಯಿಗಳಾದರೂ ಬೇಕಾಗುವುದು. ಅನಂತರ ವಾರ್ಷಿಕ ಪುನರ್ವ್ಯಯವು ಏಳೆಂಟು ಸಾವಿರಕ್ಕೆ ಬಂದೀತು. ಮೇಲಾಗಿ ಹ್ಯಾಸ್ಕೂಲನ್ನು ಸುವ್ಯವಸ್ಥೆಯಿಂದ ನಡೆಯಿಸಿಕೊಂಡು ಹೋಗುವ ದಕ್ಷತೆಯುಳ್ಳ ಸಮಿತಿಯೂ ಬೇಕು ಅಂತೂ ಇದೊಂದು ಬಿಗುವಿನ ಸಮಸ್ಯೆ. ಇದನ್ನು ಹೇಗೆ ಬಗೆಹರಿಸಬಹುದೆಂದು, ಕಳೆದ ಮೂರು ವರುಷಗಳಿಂದ ಕೆಲವು ಔದ್ಯೋಗಿಕ ಶಿಕ್ಷಣ ಮತ್ತು ಪರೀಕ್ಷೆಗಳ ಏರ್ಪಾಡುಗಳನ್ನು ಮಾಡಿ ಹಲವು ಯುವಕರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿರುವ ಕೊಡುತ್ತಲಿರುವ ಹಾಗೂ ಇತ್ತೀಚೆಗೆ ಉಡುಪಿಯಲ್ಲಿ ಕಾಲೇಜನ್ನು ಸ್ಥಾಪಿಸಬೇಕೆಂಬ ಯೋಜನೆಯನ್ನು ಕೈಕೊಂಡಿರುವ 'ಎಕಡೆಮಿ ಆಫ್ ಜನರಲ್ ಎಜ್ಯುಕೇಶನ್' ಎಂಬ ಸಂಸ್ಥೆಯ ರಿಜಿಸ್ಟ್ರಾರರಾಗಿರುವ ಡಾ ಟಿ ಮಾಧವ ಪೈಗಳವರೊಡನೆ ಚರ್ಚಿಸಿದಾಗ ಮುಂಬಂದ ಕೆಲ ಕೆಲವು ವಿಚಾರಗಳೇ ಸಂಬಂಧಪಟ್ಟ ಕೇಂದ್ರಗಳ ಉತ್ಸಾಹೀ ಮುಂದಾಳುಗಳ ಅವಗಾಹನೆಗಾಗಿ ಲೇಖನ ರೂಪದಲ್ಲಿ ಇಲ್ಲಿ ಬಂದಿವೆ.

ಒಂದು ಕೇಂದ್ರ ಹಾಗೂ ಅದರ ಸುತ್ತುಮುತ್ತಲಿನ ಹಳ್ಳಿಗಳವರಲ್ಲಿ ಒಂದು ನೂರು ಮಂದಿಯಾದರೂ ಏಕಡೆಮಿಯ ಎಸೋಸಿಯೇಟ್ ಮೆಂಬರರಾಗಿ ಸೇರಬೇಕು. ಮೆಂಬರನಾಗಬೇಕಾದರೆ ಒಮ್ಮೆ ಏಕಗಂಟಿನಿಂದ ಬರೇ ಐದುರೂಪಾಯಿಗಳನ್ನು ತೆರಬೇಕೆಂದಿರುವ ನಿಯಮವಿರುವುದರಿಂದಲೇ ಇದು ಕೇವಲ ಹಣ ಸಂಗ್ರಹದ ದೃಷ್ಟಿಯಿಂದ ಕೊಟ್ಟ ಶರತವಲ್ಲವೆಂದು ಸ್ವಯಂ ವ್ಯಕ್ತವಾಗುವುದು. ಎಸೋಸಿಯೇಟ್ ಮೆಂಬರನಾಗಬೇಕಾದರೆ ಉದ್ಯೋಗ ಮತ್ತು ವಿದ್ಯಾವಿಷಯಕವಾದ ಇತರ ಅರ್ಹತೆಯೂ ಬೇಕಾಗಿದೆ. ಅಂದರೆ ಇದರ ಮುಖ್ಯ ಉದ್ದೇಶವು ಗ್ರಾಮಸ್ಥರಲ್ಲಿ ಒಳ್ಳೆಯವರನ್ನು ಆಯ್ದು ತೆಗೆಯುವುದೇ. ಇಂತಹ ಮೆಂಬರರು ತಮ್ಮೊಳಗಿಂದ ಹನ್ನೆರಡು ಮಂದಿಯನ್ನು ಚುನಾಯಿಸಿ ಅವರ ಹೆಸರುಗಳನ್ನು ಎಕೆಡೆಮಿಗೆ ಕಳುಹಿಸಬೇಕು. ಇವರಲ್ಲಿ ಆರು ಮಂದಿಯನ್ನು ಎಕೆಡೆಮಿಯು ಆಯ್ದು ಸ್ಥಳೀಯ ಹ್ಯಾಸ್ಕೂಲ್ ಕಮಿಟಿಯನ್ನು ನಿರ್ಮಿಸುವುದು. ಈ ಕಮಿಟಿಯೂ ಮಿಕ್ಕ ಮೆಂಬರರೂ ತಮ್ಮ ಗ್ರಾಮಗಳಲ್ಲಿ ಸಂಚರಿಸಿ ಜನಮತವನ್ನು ಒಲಿಸಿಕೊಂಡು ಹತ್ತು ಸಾವಿರ ರೂಪಾಯಿಯ ನಿಧಿಯನ್ನು ಸಂಗ್ರಹಿಸಿ ಎಕೆಡೆಮಿಗೆ ಕೊಡತಕ್ಕದು. ಮತ್ತು ಮುಂದೆ ಎಕೆಡೆಮಿಯು ಆ ಕೇಂದ್ರದಲ್ಲಿ ರಚಿಸಲಿಕ್ಕಿರುವ ಹ್ಯಾಸ್ಕೂಲು ಕಟ್ಟಡದ ಒಂದು ಅಂಶವಾಗುವಂತೆ ಮೂರು ಕ್ಲಾಸುಗಳನ್ನಾದರೂ ನಡೆಯಿಸಲಾಗುವಂತಹ ಒಂದು ಭಾಗವನ್ನು ಕಟ್ಟಿಸಿ ಕೊಡಬೇಕು. ಇಷ್ಟಾದರೆ ಎಕೆಡೆಮಿಯು ಕೂಡಲೆ ಆ ಕೇಂದ್ರದಲ್ಲಿ ಹ್ಯಾಸ್ಕೂಲನ್ನು ತೆರೆದು ಅನಂತರ ಯಾವ ಸಹಾಯವನ್ನೂ ಕೇಳದೆಯೇ ಅದನ್ನು ನಡೆಯಿಸಿಕೊಂಡು ಹೋಗುವ ಭಾರವನ್ನು ಹೊರುವುದು. ಅಲ್ಲದೆ ಆ ಹ್ಯಾಸ್ಕೂಲಿನ ಸಾಮಾನ್ಯ ಮೇಲ್ವಿಚಾರವನ್ನು ಮತ್ತು ಅನುದಿನದ ಆಡಳಿತೆಯ ವಿಷಯವನ್ನು ಸ್ಥಳೀಯ ಕಮಿಟಿಗೆ ಒಪ್ಪಿಸುವುದು. "ಹಳ್ಳಿಗಳವರು ಮುಂದು ಬಂದಲ್ಲಿ ಇಂತಹ ಯೋಜನೆಯನ್ನು ಕೈಗೊಳ್ಳುವ ವಿಚಾರವು ಇದೇ ತಾ. 19ಕ್ಕೆ ಜರಗಲಿರುವ ಎಕೆಡೆಮಿಯ ಸುಪ್ರೀಮ್ ಕೌನ್ಸಿಲಿನ ಮುಂದೆ ಬರಲಿಕ್ಕಿದೆ. ಆದಕ್ಕೆ ಮುಂಚಿತವಾಗಿಯೇ ಆಯಾ ಕೇಂದ್ರಗಳ ಮುಂದಾಳುಗಳು ಈ ಯೋಜನೆಯ ಯುಕ್ತಾಯುಕ್ತತೆಯ ವಿಷಯವಾಗಿ ರಿಜಿಸ್ಟ್ರಾರರಿಗೆ ಒರೆದರೆ ಕೌನ್ಸಿಲಿನ ನಿರ್ಧಾರಕ್ಕೆ ಸಹಾಯಕವಾದೀತು.

ಕೊರಡ್ಕಲ್ ಶ್ರೀನಿವಾಸ ರಾವ್
(ಎಕೆಡೆಮಿಯ ಸುಪ್ರೀಮ್ ಕೌನ್ಸಿಲಿನ ಮೆಂಬರ)



ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ.
ರಥಬೀದಿ, ಉಡುಪಿ.

ಆ ದಾಖಲೆ.......

ಸಿಂಡಿಕೇಟ್ ಬೇಂಕು ಜನ್ಮ ತಾಳಿದುದು 19.5ನೆಯ ಇಸವಿಯಲ್ಲಿ. ಸಾರ್ವಜನಿಕರ ಬೇಂಕಿಂಗ್ ಆವಶ್ಯಕತೆಗಳನ್ನು ಸಮರ್ಥ ರೀತಿನೀತಿಗಳಿಂದ ಪೂರೈಸಿಕೊಂಡು ಬರಲು ಅಂದಿನಿಂದಲೇ ಸಿಂಡಿಕೇಟು ಬದ್ಧಕಂಕಣವಾಗಿದೆ ವರ್ಷಂಪ್ರತಿಯೂ ಚಿಕ್ಕ ವಹಿವಾಟನ್ನು ದೊಡ್ಡ ವಹಿವಾಟಿನಂತೆಯೇ ಪರಿಗಣಿಸಿ ಜಾಗರೂಕತೆಯಿಂದ ನಡೆಸಿಕೊಂಡು ಬರುವಂತಹದ್ದಾಗಿದೆ. ಪ್ರತಿಯೊಂದು ಬೇಂಕಿನ ಅಕೌಂಟು ಚಿಕ್ಕದಿರಲಿ— ದೊಡ್ಡದಿರಲಿ, ಸರ್ವಸಮತೆಯ ದೃಷ್ಟಿಯಿಂದಲೇ ನೋಡಲಾಗಿದೆ. ಇದೇ ಸಿಂಡಿಕೇಟಿನ ಆ ದಾಖಲೆ.

ಆ ದಾಖಲೆಯನ್ನೇ ಅಕ್ಷರಶಃ ಪಾಲಿಸಲಾಗುವುದು.

ಅಖಂಡ ಹಿಂದೂಸ್ಥಾನದಲ್ಲೆಲ್ಲಾ ಶಾಖೆಗಳೂ ಏಜನ್ಸಿಗಳೂ ಇವೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಟಿ. ಎ. ಪೈ, ಬಿ. ಕೋಮ್, ..., ...
ಜನರಲ್ ಮೆನೇಜರ್.

The Canara Industrial & Banking Syndicate Limited.

(Incorporated in British India)

ಮುಗ್ಗಿ ಪುಸ್ತಕಗಳು

ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಗಳು, ದಾಖಲು ಮತ್ತು ಮಂತ್ಲಿ ರಿಟರ್ನ್ಸ್ ಫಾರ್ಮುಗಳು, ರಿಕಾರ್ಡ ಶೀಟುಗಳು ದೊರೆಯುತ್ತವೆ.

ಮುಗ್ಗಿ ಪುಸ್ತಕ	1ಕ್ಕೆ	0—1—0
,, ,,	50ಕ್ಕೆ	2—9—0
,, ,,	100ಕ್ಕೆ	5—0—0

Navabharat Book Depot,
UDIPI.

ಹಳೇ ನೆನಪುಗಳು

ಹೀಗೆ ಸಂದಾಯ

ಸರ್. ಮಾರ್ಕ್ಸ್ ಕಬ್ಬನರು 1834 ರಿಂದ 1861ರ ವರೆಗೆ ಮೈಸೂರಿನ ಚೀಫ್ ಕಮಿಶನರರಾಗಿದ್ದರು. ಅವರ ಕೈಕೆಳಗಿನ ಓರ್ವ ತರುಣ ಅಧಿಕಾರಿಗೆ 400ರೂ.ಗಳ ಅಡಚಣೆಯೊದಗಿತು. ಅವನು ಅದಕ್ಕಾಗಿ ಒದ್ದಾಡುತಿದ್ದಾಗ ಸರ್. ಕಬ್ಬನರು ಆ ಹಣವನ್ನು ಅವನ ಕೈಗೆ ತುರುಕಿಸುತ್ತಾ ಹೇಳಿದರು, "ನೀನು ಈ ಹಣವನ್ನು ನನಗೆ ಮರಳಿ ಕೊಡಬೇಕೆಂದು ನಾನು ನಿನ್ನನ್ನು ಕೇಳಲಾರೆ. ಆದರೆ ನೆನಪಿರಲಿ; ನೀನು ಮುದುಕನಾದಾಗ ಇದೇ ರೀತಿ ಒಬ್ಬ ತರುಣ ಅಧಿಕಾರಿಗೆ ಸಹಾಯವಾಗಿ ಸಲ್ಲಿಸಬೇಕು."

ವಿಲಕ್ಷಣ ಭೇಟಿ

ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ತನ್ನ ಆತ್ಮಕಥೆಯಲ್ಲಿ ಲಂಡನಿನ ಒಂದು ಅನುಭವವನ್ನು ಹೀಗೆ ಬರೆದಿದ್ದಾರೆ. 'ಮೂರು ದಿನಗಳ ಹಿಂದಿನ ರಾತ್ರಿ (1924 ನೇ ಎಪ್ರಿಲಿನಲ್ಲಿ) ನಾನೊಂದು ಔತಣಕೂಟದಿಂದ ಮನೆಗೆ ಹಿಂದಿರುಗುತಿದ್ದೆ; ನಡೆದುಕೊಂಡೇ ಬರುತಿದ್ದೆ. ಕುರೂಪಿ ಮತ್ತು ಹಲವು ದಿನಗಳಿಂದ ಮಡಿಯಾಗದ ಕೊಳಕು ಪೋಷಾಕಿನಲ್ಲಿದ್ದ ಓರ್ವ ವ್ಯಕ್ತಿ ಮುಂಭಾಗಕ್ಕೆ ಧಾವಿಸಿ ಬಂದು 'ಮಿಸ್ಟರ್ ರಂಗಾಚಾರಿಯರ್' ಎಂದು ನನ್ನನ್ನು ಸಂಬೋಧಿಸಿದ. ನಾನು 'ರಂ' ಅಲ್ಲವೆಂದು ಸಂತಾಪ ಸೂಚಿಸಿ, ರಂಗಾಚಾರ್ಯರಿಗೇನಾದರೂ ವಾರ್ತೆಕೊಡಲಿಕ್ಕಿದೆಯೋ, ಅಥವಾ ಅವರ ವಿಳಾಸಬೇಕೇ ಎಂದು ಆ ವ್ಯಕ್ತಿಯನ್ನು ವಿಚಾರಿಸಿದೆ. "ಉಪಕಾರವಾಯಿತು; ಅಂತಹದೇನೂ ಇಲ್ಲ ಆದರೆ ನೀವು ಯಾರು?' ಎಂದು ಆತ ನನ್ನನ್ನು ಪ್ರಶ್ನಿಸಿದ.

"ನಾನು ಶಾಸ್ತ್ರಿ"

"ಹೋ, ನೀವು ಶಾಸ್ತ್ರಿಗಳೇ? ನಾನು ತಮ್ಮನ್ನು ಈ ಮೊದಲು ನೋಡಿದ ನೆನಪಾಗುತ್ತಿದೆ"

"ಹಾಗಿದ್ದರೆ ನಾವೆಲ್ಲಿ ಒಟ್ಟಾಗಿದ್ದೆವೆಂಬ ನೆನಪೇ ನನಗಾಗುವದಿಲ್ಲವಲ್ಲ!"

"ಕಳೆದ ವರುಷ 'ದಾಸ್ಯ ನಿರೋಧಕ ಸಂಸ್ಥೆ'ಯ ಸಭೆಯಲ್ಲಿ. ನೀವು ಕೆನ್ಯದ ವಿಷಯವಾಗಿ ಅಲ್ಲಿ ಭಾಷಣವಿತ್ತಿದ್ದಿರಿ."

"ಹೋ! ತಾವು ಯಾರೆಂಬುದನ್ನು ನಾನು ತಿಳಿಯಬಹುದೇ?"

"ನಾನೇ? ನಾನು ಭಾರತದ ಸ್ಟೇಟ್ ಸೆಕ್ರೆಟರಿಯಾಗಿದ್ದವ."

ಅವರೇ ಲೋರ್ಡ್ ಒಲಿವರ್.

ಆ ಎದೆಗಾರಿಕೆ

ಬೊಂಬಾಯಿಯಲ್ಲಿ ಸರ್ ಜೇಮ್ಸ್ ಔಟ್ರಾಮರು ಅಧಿಕಾರದಲ್ಲಿದ್ದ ಕಾಲವದು. ಸರ್. ಔಟ್ರಾಮರು ಇತರ ಹಲವರೊಂದಿಗೆ ಕಟ್ಟಡದೊಂದು ಅಂತಸ್ತಿನಲ್ಲಿ ನಿಂತುಕೊಂಡು, ಕೆಳಗಡೆಯಲ್ಲಿರುವ ಮೊಸಳೆಗಳಿಂದ ತುಂಬಿಹೋಗಿದ್ದ ಮಡುವನ್ನು ನೋಡುತ್ತಿದ್ದರು. ಮೊಸಳೆಗಳು ಗಿಜಿಗಿಜಿ ಈಜಾಡುತಿದ್ದುವು. ಅಲ್ಲಿದ್ದವರ ಪೈಕಿ ಒಬ್ಬರೆಂದರು: "ಈ ಭಯಂಕರ ಜಂತುಗಳ ವಧ್ಯಕ್ಕಾರಾದರೂ ಧುಮುಕಬಲ್ಲರೆ?" ಇದಕ್ಕುತ್ತರವಾಗಿ ಸರ್. ಔಟ್ರಾಮರು ಒಮ್ಮೆಗೇ ಧೊಪ್ಪನೆ ಮಡುವಿಗೆ ಹಾರಿದರು ಎಂತಹ ರಭಸದಿಂದ ಬಿದ್ದರೆಂದರೆ ಆ ಅಬ್ಬರಕ್ಕೆ ಮೊಸಳೆಗಳೆಲ್ಲಾ ಹೆದರಿ ಚಲ್ಲಾಪಿಲ್ಲಿಯಾಗಿ ಜಾರಿಬಿಟ್ಟುವು. ಸರ್. ಜೇಮ್ಸರ ಚಾತುರ್ಯ ಮತ್ತು ಧೈರ್ಯವಂತಹದಾದ್ದರಿಂದಲೇ ಆ ಕಾಲದ ಬೊಂಬಾಯಿ ಸಿವಿಲ್ ಸರ್ವಿಸಿನಲ್ಲೊಂದು ಗಾದೆ ಪ್ರಚಾರದಲ್ಲಿತ್ತು:-'ಜೇಮ್ಸ್ ಔಟ್ರಾಮನೊಡನೆ ಹೋಲಿಸಿದರೆ ನರಿಯೊಂದು ಮಂಕು, ಸಿಂಹವೊಂದು ಹೇಡಿ'.

ಆಧ್ಯಾತ್ಮಿಕ ಅಧಿಕಾರ

ವಾರನ್ ಹೇಸ್ಟಿಂಗ್ಸ್ ಹಿಂದುಸ್ಥಾನದ ವೈಸರಾಯಿಗಳಲ್ಲಿ ಪ್ರಸಿದ್ಧರು. ವೇದಗಳ ಭೂಮಿಯಾದ ಭಾರತಕ್ಕೆ ಆಧ್ಯಾತ್ಮಿಕಾಧಿಕಾರವೇ ಗುರಿಯೆಂದು ಅವರು ಬಹಿರಂಗವಾಗಿ ಘೋಷಿಸಿದುದಿದೆ. 1789ರಲ್ಲಿ ಭಗವದ್ಗೀತೆಯ ಒಂದು ಭಾಷಾಂತರವನ್ನು ವಾರನ್ ಹೇಸ್ಟಿಂಗ್ಸರು 'ಈಸ್ಟ್ ಇಂಡಿಯಾ ಕಂಪೆನಿ'ಯ ಅಧ್ಯಕ್ಷರಿಗೆ ಶಿಫಾರಸು ಮಾಡಿದ್ದರು. ಮತ್ತದಕ್ಕೆ ತಾನೇ ಬರೆದ ಮುನ್ನುಡಿಯಲ್ಲಿ ಹೀಗೆಂದಿದ್ದರು: "ದೀರ್ಘಾವಧಿಯ ಬಳಿಕ ಭಾರತದ ಬ್ರಿಟಿಷ್ ಆಡಳಿತೆಯಂತ್ಯವಾಗಿ ಅದಕ್ಕೆ ಧನ ಮತ್ತು ಅಧಿಕಾರ ದೊರಕಿಸಿಕೊಟ್ಟ ಮೂಲಾಧಾರಗಳು ಮರೆತುಹೋಗುವ ಕಾಲದಲ್ಲಿ ಭಾರತೀಯ ತತ್ವಗಳ ಲೇಖಕರೇ ಪುನರಧಿಕಾರಿಗಳಾಗಲಿದ್ದಾರೆ".

ಸಿಂಧು ಸ್ವಾಹಾ

ಸಿಂಧ ಪ್ರಾಂತ್ಯವು ಬ್ರಿಟಿಷರ ವಶವಾದುದು ಲೋರ್ಡ್ ಎಲ್ಲಿನ್‌ಬರೋ ಗವರ್ನರ್ ಜನರಲ್ ಆಗಿದ್ದಾಗ. 1843ರಲ್ಲಿ ನಡೆದ ಎರಡು ಯುದ್ಧಗಳಲ್ಲಿ—ಮಿಯಾನಿ ಮತ್ತು ಹೈದರಾಬಾದ್ ಕಾಳಗಗಳಲ್ಲಿ—ಸಿಂಧಿನ ಅಮೀರರು ಹೋರಾಡಿಕೊಂಡು ಬ್ರಿಟಿಷ್ ಯುದ್ಧದಡಿಯಲ್ಲಿ ನಜ್ಜುಗುಜ್ಜಾಗಿ ಹೋಗಿದ್ದರು. ಆ ಯುದ್ಧಗಳನ್ನು ಜಯಿಸಿಕೊಟ್ಟ ಬ್ರಿಟಿಷ್ ಸೇನಾನಿ ಸರ್. ಚಾರ್ಲೆಸ್ ನೇಪಿಯರ್ ಸ್ಪಷ್ಟವಾಗಿ ಬರೆದಿದ್ದ:—'ಸಿಂಧವನ್ನು ಕಿತ್ತುಕೊಳ್ಳುವ ಅಧಿಕಾರ ನನಗಿಲ್ಲ. ಆದರೂ ಹಾಗೆ ಮಾಡುವುದೆಂದರೆ ಅದೊಂದು ಸಾಹಸಪೂರ್ಣ, ಉಪಯುಕ್ತ, ದಗಾಕೃತ್ಯವಾಗುವದು". ಸಿಂಧ್ ವಿಜಯಾನಂತರ ತಾನು ಕಳುಹಿದ ಚುಟುಕು ದ್ವಯಾರ್ಥದ ಸಂದೇಶದಲ್ಲಿ 'ಪೆಕ್ಕಾವಿ' ಎಂಬ ಶಬ್ದವನ್ನು ಸರ್. ಚಾರ್ಲೆಸ್ ಬರೆದಿದ್ದಾನೆ. ಅದಕ್ಕೆ ಇಂಗ್ಲೀಷಿನಲ್ಲಿ ಎರಡರ್ಥವಾಗುತ್ತದೆ:-'ನಾನು ಪಾಪ (ಸಿಂಧ್) ಸಂಪಾದಿಸಿದೆನು. (I have sinned (Sindh)'.

NOTICE

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. P. 89/1945

ಅರ್ಜಿದಾರ—ಪಟೇಲ ವೀರಣ್ಣ ಶೆಟ್ಟಿ, ಶೇರಿಗಾರ್ತಿಯ ಮಗ, ಕುಂದಾಪುರ ತಾಲೂಕು ಪಡುವರಿ ಗ್ರಾಮಸ್ಥ

ಎದುರಿದಾರರು -1 ಶಿವಮ್ಮ ಸೆಟ್ಟಿ, ನಾಗಿ ಸೆಟ್ಟಿತಿಯ ಮಗ. 2 ದೇವಮ್ಮ ಸೆಟ್ತಿ, ಶೇರಿಗಾರ್ತಿಯ ಮಗಳು ಕುಂದಾಪುರ ತಾಲೂಕು ಪಡುವರಿ ಗ್ರಾಮಸ್ಥರು.

ಅರ್ಜಿದಾರರ ಮಾವ ತಾ 17-7-44ರಲ್ಲಿ ಪಡುವರಿ ಗ್ರಾಮದಲ್ಲಿ ಮೃತಪಟ್ಟ ಶೇಶೆಟ್ಟಿಯು ತಾ. 11 7 44ರಲ್ಲು ಬರದಿಟ್ಟ ವೀಲುನಾಮೆಯ ಆಧಾರದ ಮೇಲೆ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದ ಡಿಕ್ರಿಗಳ ಹಣಗಳನ್ನು ವಸೂಲುಮಾಡಿಕೊಳ್ಳುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಮೇಲ್ಕಂಡ ಅರ್ಜಿ ದಾಖಲು ಮಾಡಿದ್ದಾನೆ. ಸದ್ರಿ ಅರ್ಜಿಯು ತಾ. 27 9 45ಕ್ಕೆ ತಸ್ಕಿಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ಯಾರದ್ದಾದರೂ ಆಕ್ಷೇಪಣೆ ಇದ್ದರೆ ಸದ್ರಿ ತಾರೀಕಿನ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ

B Mahabala Holla,
Advocate for petitioner.

ತಾರೀಕು 7-9-45
ಮೊಕ್ಕಾಂ: ಕುಂದಾಪುರ

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institutio non sound lines and advantageous terms.

Please ascertain business particulars from any of our Offices at the above places.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂವಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

ಶಿರ್ವಾ ಪಂಚಾಯ್ತ ಬೋರ್ಡು ಪ್ರೆಸಿಡೆಂಟರಿಂದಾ—

ಟೆಂಡರು ನೋಟೀಸು

ನಮ್ಮ ಪಂಚಾಯ್ತ ಬೋರ್ಡಿನ ಬಾಬ್ತು ಶಿರ್ವಾ ಮಂಚಕಲ್ಲು ಪೇಟೆಯಲ್ಲಿ ಹೊಸತಾಗಿ ತೋಡಿಸಿದ ಬಾವಿಗೆ ಕಲ್ಲುಕಟ್ಟುವರೆ ಎಸ್ಟಿಮೇಟು ಪ್ರಕಾರ ರೂ 2000/- ಸೇಂಕ್ಶನ್ ಮಾಡೋಣಾಗಿಯದೆ. ಉಮೇದ್ವಾರ ಕಂಟ್ರಾಕ್ಟರರು ಸೀಲ್ಡು ಟೆಂಡರುಗಳನ್ನು ಇದೇ ತಾ. 30-9-45ರೊಳಗೆ, ರೂ. 50/- ಡಿಪೋಜಿಟ್‌ನೊಂದಿಗೆ ನಮ್ಮ ಆಫೀಸಿಗೆ ಕಳುಹುವುದು. ತಾರೀಕು 1-10-45ನೇ ಸಾಯಂಕಾಲ ಗಂಟೆ ೫ಕ್ಕೆ ಟೆಂಡರುಗಳನ್ನು ಒಡೆದು ಓದಲಾಗುವುದು. ಎಸ್ಟಿಮೇಟು ಪ್ರತಿಗಳನ್ನು ಆಫೀಸಿನಲ್ಲಿ ಓದಿ ಅನುಭವ ಪಡೆಯಬಹುದು.

S. Annaya Hegde,
President Panchayat Bd., Shirva.

ಶಿರ್ವಾ, ತಾ. 8 9 45.

NOTICE

ಉಡುಪಿ ಡಿ. ಮು ಕೋರ್ಟಿನಲ್ಲಿ

O P 53/45

ಕಮಲಾ ಬ್ರಾ ಸುಬ್ರಾಯ ನಾಯ್ಕರ ಮಗಳು. ಜಂಗಮರ ಮಠದ ಎದುರಿನಲ್ಲಿರುವವಳು. ಉಡುಪಿ ಕಸಬಾ ಅರ್ಜಿದಾರಳು.

ಮತ್ತು

ಭವಾನಿ ಅಮ್ಮ—ಬೈಂದೂರು ಶ್ರೀನಿವಾಸರ ವಿಧವೆ. ಜಂಗಮರ ಮಠದ ಎದುರಿನಲ್ಲಿರುವವಳು. ಉಡುಪಿ ಕಸಬಾ -ಎದುರಿ.

ಎದುರಿಳ ಗಂಡ, ಈಗ ಮೃತಪಟ್ಟಿರುವ ಬೈಂದೂರು ಶ್ರೀನಿವಾಸರು ತಾ. 11-10-45 ರಲ್ಲು ಅಪ್ಪೈರು ಮಾಡಿಟ್ಟ; ರಿಜಿಸ್ಟ್ರಿ ವಿಲ್‌ನಾಮೆ ಪ್ರಕಾರ, ಸದ್ರಿಯವರ ಯಾವತ್ತು ಸ್ಥಿರಚರ ಸೊತ್ತುಗಳಿಗೂ, ಹೊರಗಿನಿಂದ ಬರತಕ್ಕ ಯಾವತ್ತೂ ಸಮಸ್ತ ವಿಧದ ಹಣಗಳಿಗೂ ಅರ್ಜಿದಾರಳೊಬ್ಬಳೇ ಹಕ್ಕುದಾರಳಾಗಿದ್ದು ಆ ಪ್ರಕಾರ ಸದ್ರಿ ಶ್ರೀನಿವಾಸರಾಯರಿಗೆ ಹೊರಗಿನಿಂದ ಬರತಕ್ಕ ಹಣಗಳ ಬಾಬಿನಲ್ಲಿ ವಸೂಲಿ ಕುರಿತು ತನಗೆ ವಂಡು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಮೇಲ್ಕಂಡ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ. 26-9 45ಕ್ಕೆ ತಸ್ಕಿಗೆ ಇಡೋಣಾಗಿಯದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

Udipi, 6 9-45. | K Vittal Nayak,
Pleader for petitioner.

ಕಾಂಗ್ರೆಸಿನ ಮುಂದಿರುವ ಸಮಸ್ಯೆಗಳು.

ರಾಷ್ಟ್ರಸಭೆಯ ಕಾರ್ಯಕಾರೀ ಸಮಿತಿಯ ಸಭೆಯು ಇದೇ ಸೆಪ್ಟೆಂಬರ್ ತಾ.12ಕ್ಕೆ ಪೂನದಲ್ಲಿ ಸೇರಲಿದೆ.

ಅ. ಭಾ. ರಾ. ಸಮಿತಿ (A.I.C.C.)ಯ ಸಭೆಯು ಪೂರ್ತಿ ಮೂರು ವರುಷಗಳನಂತರ ಇದೀಗ ಮೊದಲ ಬಾರಿ ಸೆಪ್ಟೆಂಬರ್ 21ಕ್ಕೆ ಬೊಂಬಾಯಿಯಲ್ಲಿ ಸೇರಲಿದೆ.

ಇವೆರಡು ಸಮಿತಿಗಳು ದೇಶಪ್ರಾಮುಖ್ಯವಾದ ಹಲವು ವಿಷಯಗಳ ಪರ್ಯಾಲೋಚನೆ ನಡಿಸಿ ನಿರ್ಧರಿಸಲಿವೆ.

ಮುಖ್ಯ ಪ್ರಶ್ನೆಗಳು

ಮುಖ್ಯವಾಗಿ ಕಾಂಗ್ರೆಸಿನ ಮುಂದಿರುವ ಸಮಸ್ಯೆಗಳು:—

೧ ವೇವೆಲ್ ರಾಯಭಾರದ ಫಲಶ್ರುತಿಯಾಗಿ ದೊರೆಯಲಿರುವ ಹೊಸ ರಾಜ್ಯಭಾರ ಯೋಜನೆ. ಇದರ ರೂಪರೇಷೆಯೇನೆಂಬುದು ಕಾಂಗ್ರೆಸ್ ಸಮಿತಿಗಳು ಸಭೆ ಸೇರುವ ಮೊದಲೇ ಪ್ರಕಟವಾಗದಿದ್ದಲ್ಲಿ ಆ ಸಂಬಂಧದ ಪರ್ಯಾಲೋಚನೆ ನಡೆಯುವದು ಅಸಂಭವ

೨ ಮುಂಬರುವ ಸಾರ್ವತ್ರಿಕ ಚುನಾವಣೆ—ಪ್ರಾಯಸ್ಥರಿಗೆಲ್ಲಾ ಮತದಾನವಿರಬೇಕೆಂದೂ ಕಾಂಗ್ರೆಸ್ ಅಧ್ಯಕ್ಷರು ಇಷ್ಟರಲ್ಲೇ ಒತ್ತಾಯಿಸಿದ್ದಾರೆ. ರಾಜಕೀಯ ಕೈದಿಗಳ ಬಿಡುಗಡೆ ಮತ್ತು ಭಾಷಣ, ಲೇಖನ, ಸಭೆ, ಪ್ರಚಾರ ಸ್ವಾತಂತ್ರ್ಯಗಳಿನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ಆವಸರದ ಚುನಾವಣೆಗೆ ಕಾಂಗ್ರೆಸ್ ಪ್ರಬಲಾಕ್ಷೇಪ ಹೂಡುವ ಸಂಭವವಿದೆ.

೩. ತಾತ್ಕಾಲಿಕ ರಾಜ್ಯ ವ್ಯವಸ್ಥೆ—ಚುನಾವಣೆಯಾಗಿ ಹೊಸ ಸರಕಾರಗಳ ರಚನೆಯಾಗುವ ವರೆಗೆ ದೇಶದ ಒಳಾಡಳಿತೆಯಲ್ಲಿ ಬದಲಾವಣೆಯಾಗುವ ಸಂಭವವಿಲ್ಲ. ಕಾಂಗ್ರೆಸ್ ಅಧಿಕಾರದಲ್ಲಿದ್ದ ಪ್ರಾಂತ್ಯಗಳಲ್ಲಿ ಪುನಃ ಮಂತ್ರಿ ಮಂಡಲ ರಚಿಸಲು ಕಾಂಗ್ರೆಸಿಗರು ಆತುರ ಪಡುತ್ತಿಲ್ಲ. ಮುಸ್ಲಿಂ ಲೀಗಂತೂ ಅಂತಹ ವ್ಯವಸ್ಥೆಗೆ ಬದ್ಧವಿರೋಧವಿದೆ. ೯೩ನೇ ಸೆಕ್ಷನಿನಾಳ್ವಿಕೆಯದ್ದಲ್ಲಿಂದ ಅದನ್ನು ಹಿ[illegible] ಸಂಭವವಿಲ್ಲ. 'ದೇಶ ರಕ್ಷಣಾ' ಶಾಸನವನ್ನು ಸದ್ಯ ಹಿಂದೆಗೆಯುವದಿಲ್ಲವೆಂದೂ ಚುನಾವಣೆಗಳಿಗೆ ಅದರಿಂದ ಯಾವ ವಿಧದ ಬಾಧೆಯೂ ಇಲ್ಲವೆಂದೂ ತಾತ್ಕಾಲಿಕ ವೈಸರಾಯಿಗಳು ತಿಳಿಸಿದ್ದಾರೆ. ಆದರೆ ವೇವೆಲ್ ಯೋಜನೆಯನ್ವಯ ಕೇಂದ್ರದಲ್ಲಿ ತಾತ್ಕಾಲಿಕ ಬದಲಾವಣೆ ಮಾಡುವ ವಿಷಯವು ಲಂಡನ್ ಮಾತುಕತೆಗಳಲ್ಲಿ ಚರ್ಚಿಸಲ್ಪಟ್ಟಿದ್ದಿತೆಂಬ ವಾರ್ತೆಯಿದೆ.

೪ ಗಾಂಧಿ-ಪಟೇಲ್ ಯೋಜನೆ—ಬಹುಶಃ ಕಾಂಗ್ರೆಸಿನ ಈ ಬಾರಿಯ ಮುಖ್ಯನಿರ್ಧಾರವೆಂದರೆ ಇದೇ. ಪ್ರಕೃತಿ ಚಿಕಿತ್ಸೆಗಾಗಿ ಪೂನೆಯಲ್ಲಿ ನಿಂತಿರುವ ವಲ್ಲಭಾಯಿಗಳೂ ಅವರೊಂದಿಗೆ ಬಂದು ನೆಲಸಿರುವ ಗಾಂಧಿಜೀಯೂ ಒಂದಾಗಿ ಸರಕಾರಕ್ಕೊಂದು ಯುದ್ಧಾಹ್ವಾನವನ್ನು ತಯಾರಿಸಿದ್ದಾರೆ. ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಮಾಡಿ ಭಾಷಣ ಮತ್ತು ಕಾರ್ಯ ಸ್ವಾತಂತ್ರ್ಯದೊರೆಯದಿದ್ದರೆ ಸರಕಾರವು ಜ್ಯಾರಿಗೆ ತರುವ ಯಾವುದೇ ತಾತ್ಕಾಲಿಕ ವ್ಯವಸ್ಥೆಯನ್ನಾದರೂ ಪ್ರತಿಭಟಿಸಬೇಕೆಂಬ ನಿರ್ಧಾರ ಈ ಯೋಜನೆಯಲ್ಲಿದೆ. ಸರಕಾರದ ಉದ್ದೇಶದ ಯಥಾರ್ಥತೆಯನ್ನು ಪರೀಕ್ಷಿಸುವ ಬಗೆಗಲ್ಲಾಗಿ ಗಾಂಧಿಜೀ ಇದನ್ನು ತಯಾರಿಸಿದರೆಂದು ನಂಬಲಾಗಿದೆ. ಈ ಮೂಲಕ ವೈಸರಾಯೀ ಕೌನ್ಸಿಲು ಬದಲಾವಣೆ, ಪ್ರಾಂತ್ಯಗಳಲ್ಲಿ ಅಧಿಕಾರ ಸ್ವೀಕಾರ ಮತ್ತು ಸಾರ್ವತ್ರಿಕ ಚುನಾವಣೆಗಳನ್ನು ಕೂಡಾ ಬಹಿಷ್ಕರಿಸುವ ನಿರ್ಧಾರವಾಗಬಹುದು.

೫ ಕಮ್ಯೂನಿಸ್ಟರ ಮೇಲೆ ಶಿಸ್ತುಜ್ಯಾರಿ—ಕಾಂಗ್ರೆಸ್ ಸದಸ್ಯರಾಗಿದ್ದುಕೊಂಡು ಕಮ್ಯೂನಿಸ್ಟರು 'ಆಗೋಸ್ತು ನಿರ್ಧಾರ'ಕ್ಕೆ ವಿರುದ್ಧ ವರ್ತಿಸಿದ್ದರೆಂಬ ಕಾರಣದಿಂದ ಅವರನ್ನು ಕಾಂಗ್ರೆಸಿನಿಂದ ಹೊರಗಟ್ಟಬೇಕೋ ಬೇಡವೋ ಎಂಬ ನಿರ್ಧಾರವಾಗಬೇಕಾಗಿದೆ.

೬ 'ಭಾರತ ರಾಷ್ಟ್ರೀಯಸೇನೆ'-ಸುಭಾಸಚಂದ್ರಭೋಸರ ನಾಯಕತ್ವದಲ್ಲಿ ಜಪಾನರೊಡನೆ ಸಹಕರಿಸಿದ ಆರೋಪಕ್ಕೊಳಗಾಗಿರುವ 'ಭಾರತ ರಾಷ್ಟ್ರೀಯ ಸೇನೆ'ಯ ಸಂಬಂಧವಾಗಿ ಕಾಂಗ್ರೆಸು ತನ್ನ ಅಭಿಪ್ರಾಯ ವ್ಯಕ್ತಪಡಿಸಬಹುದು.

೭ ಸ್ವಯಂ ನಿರ್ಣಯಾಧಿಕಾರ-ಅರ್ಥಾತ್ ಪಾಕಿಸ್ತಾನ್ ಸಮಸ್ಯೆಗೆ ಸಂಬಂಧಪಟ್ಟ ಪ್ರಶ್ನೆ. ಈ ಕುರಿತು ಕಾಂಗ್ರೆಸ್ ನಿರ್ಧಾರಗಳಿಗನುಸಾರವಾಗಿ ಯಾವುದಾದ[illegible] ಭಾಗವು ತಾನು ಪ್ರತ್ಯೇಕವಾಗಬೇಕೆಂದು ಅಪೇಕ್ಷಿಸುವದಾದರೆ, ಅಂತಹ ಅಧಿಕಾರವನ್ನೊಪ್ಪಲಾಗುವದೆಂದು ಕಾಂಗ್ರೆಸ್ ಅಧ್ಯಕ್ಷರ ವಿವರಣೆಯಿದೆ. ಈ ಕುರಿತು ಕಾಂಗ್ರೆಸಿನ ಸ್ಪಷ್ಟ ಅಭಿಪ್ರಾಯವು ಪ್ರಕಟೀಕೃತವಾಗುವದು.

'ಭಾರತ ರಾಷ್ಟ್ರೀಯ ಸೇನೆ'

ಕಾಂಗ್ರೆಸ್ ತತ್ವಕ್ಕೆ ಸಂಬಂಧ ಪಟ್ಟ ಎರಡು ಮುಖ್ಯ ಸಮಸ್ಯೆಗಳೆಂದರೆ ಸುಭಾಸರ 'ಭಾರತ ರಾಷ್ಟ್ರೀಯ ಸೇನೆ' ಮತ್ತು 'ಕಾಂಗ್ರೆಸಿನೊಳಗಿನ ಕಮ್ಯೂನಿಸ್ಟ'ರು. ಭಾರತ ರಾಷ್ಟ್ರೀಯ ಸೇನೆಯು ಜಾಪಾನ್ ಆಕ್ರಮಣದ ವೇಳೆ ಸಿಂಗಪುರ ಮೊದಲಾದ ಕಡೆಗಳಲ್ಲಿ ಸಿಕ್ಕಿ ಬಿದ್ದ ಹಿಂದೀಯರಿಂದ ಸಂಘಟಿಸಲ್ಪಟ್ಟಿದು. ಅವರ ಸಂಖ್ಯೆ ಸುಮಾರು 30 ಸಾವಿರವೆಂದೂಹಿಸಲಾಗಿದೆ. ಬ್ರಿಟಿಷ್‌ರೇಡಿಯೋ ಅವರನ್ನು ಆದಿಯಿಂದಲೂ 'ದ್ರೋಹಿಗಳು' ಎಂದೇ ಸಂಬೋಧಿಸುತಿತ್ತು. ಆದರೆ ಬ್ರಿಟಿಷರು ರಂಗೂನನ್ನು ವಶಪಡಿಸಿಕೊಂಡಾರಭ್ಯದಿಂದ ಸರಕಾರದ ಘೋಷಣೆ ತುಸು ಬದಲಾಯಿಸಿದಂತಿದೆ. ಅವರನ್ನು ದ್ರೋಹಿಗಳೆಂದಾಗಲೀ, ವಿರೋಧಿಗಳೆಂದಾಗಲೀ ಭಾವಿಸದೆ 'ನಿಸ್ಸಹಾಯಕರು' 'ಅಪದ್ಧರ್ಮ ಪರಿಪಾಲಕರು' ಎಂದು ರಿಯಾಯತಿಯಿಂದ ಕಾಣಬೇಕಾದ ನೀತಿ ಗೋಚರಕ್ಕೆ ಬಂದಿದೆ. ಬರ್ಮಾದಲ್ಲಿದ್ದ ಜಪಾನೀ ಸೇನೆಯು ಶತ ಪ್ರಯತ್ನದಿಂದ ಪಾರಾಗಿ ಹೋಗಿದ್ದರೂ ಈ ಹಿಂದೀ ಸೇನೆಯಲ್ಲಿ ಹಲವರು ಸ್ವಸಂತೋಷದಿಂದ ಅಲ್ಲಿ ಬ್ರಿಟಿಷರಿಗೆ ಸೆರೆ ಸಿಕ್ಕಿದ್ದರು. ರಂಗೂನಿಗೆ ಬಂದಿದ್ದ ಸುಭಾಸರೇ ಕೈದಿಯಾಗಿ ಹಿಂದುಸ್ಥಾನಕ್ಕೆ ಬರಲು ತಯಾರಿದ್ದರೆಂದೂ, ಆದರೆ ಆ ಕಡೆಯುಳಿದಿರುವ ಇತರ ಹಿಂದೀಯರ ಕ್ಷೇಮ ಸಾಧನೆಯ ಹೊಣೆಯನ್ನರಿತು ಜೊತೆಯವರ ಒತ್ತಾಯದಿಂದ ಅವರು ವಿಮಾನ ಹತ್ತಿ ಹಿಂದಿರುಗಿ ಅಪಘಾತಕ್ಕೊಳಗಾದರೆಂದೂ ಪ್ರಕಟವಾಗಿತ್ತು. ಸುಭಾಸರಂತಹ ಸ್ವಾಭಿಮಾನಿಯು ಎಂದೂ ಜಪಾನರ ಕೈಗೊಂಬೆಯಾಗಿರದೆ ಸ್ವತಂತ್ರ ಧೋರಣೆಯಿಂದ ವರ್ತಿಸಿದ್ದರೆಂಬುದರ ಕುರಿತೂ ನಿದರ್ಶನಗಳು ದೊರೆತಿವೆ. ಅವರು ಅಪಘಾತಗೊಂಡದಲ್ಲ, ಅಡುತಿಯಾಗಿರಬೇಕೆಂದು ನಿರೀಕ್ಷಿಸುವವರ ದೃಷ್ಟಿಯಲ್ಲಿ ಹೆಚ್ಚಾಗಿ ಜಪಾನರೇ ಅಪರಾಧಿಗಳಾಗಿ ಕಾಣುತಿದ್ದಾರೆ. ಅವರ ಸೇನೆಗೆ ಸೇರಿಕೊಂಡ ಸಾಮಾನ್ಯರ ಕುರಿತಂತೂ ಅತ್ಯಂತ ಸಹಾನುಭೂತಿಯಿಂದ ಕಾಣಬೇಕಾದ ಆವಶ್ಯಕತೆ ಬಹಳವಿದೆ.

ಅನ್ಯಮನಸ್ಕರು

ಸಿಂಗಾಪುರ ಮೊದಲಾದೆಡೆಗಳಿಂದ ಮಿತ್ರಸೇನೆಯು ಅವಸರದಿಂದೋಡಿಬರುವಾಗ ಅಲ್ಲಿಂದ ಹಿಂದೀಯರನ್ನೂ ಸಾಗಿಸಿ ತರುವಷ್ಟು ಸಮರ್ಥವಾಗಿರಲಿಲ್ಲ; ಹಲವು ಹಿಂದೀ ಯೋಧರೂ ಜಾಪಾನೀ ಕೈದಿಗಳಾದರು. ಇಂತಹ ನಿರ್ಗತಿಕರ ಮೇಲೆ ಜಾಪಾನಿಗಳು ಚತುರೋಪಾಯಗಳನ್ನೂ ಪ್ರಯೋಗಿಸಿದರು; ಅವರನ್ನು ಮಂಕುಗೊಳಿಸಿ ಅಥವಾ ಬಲಾತ್ಕಾರದಿಂದ ಮತಾಂತರಿಸಿ ಸೇನೆಕಟ್ಟಿದರು. ಹೃದಯಮಥಾ[illegible] ಯಂತ್ರದಿಂದ ಈ ದುರ್ದೈವೀ ಹಿಂದೀಯರ ಅಂತಃಕರಣ ಶೋಧಿಸಲು ಸಾಧ್ಯವಾದರೆ ಅಲ್ಲಿ ಪ್ರಾಣಭಯ, ಅಜ್ಞಾನ, ಅಮಲು, ಭ್ರಮೆ ಹೊರತು ಬ್ರಿಟಿಷ್ ದ್ರೋಹವೆಂಬುದರ ಅಂಶವೂ ದೊರೆಯಲಾರದೆಂದು ತಜ್ಞರನ್ನುತ್ತಾರೆ. ಆದರೆ ಸೇನಾ ಕಾನೂನಿನಂತೆ ಇಂಥವರಿಗೆ ಶಿಕ್ಷೆ ಕಾದಿದೆಯೆಂಬುದು ನಿರ್ವಿವಾದ. ಆದರಲ್ಲೂ 'ದ್ರೋಹಿ'ಗಳೆಂದು ಅವರನ್ನು ಗಣಿಸಿದಲ್ಲಿ ಮಾನಕ್ಕೂ ಪ್ರಾಣಕ್ಕೂ ಧಕ್ಕೆ ವಿಶೇಷ. ಆದ್ದರಿಂದಲೇ ಪಂಡಿತ ನೆಹರುಗಳಂಥವರು ಅವರನ್ನು 'ವೈರಿಸೇನಾಕೈದಿ'ಗಳನ್ನು ಕಾಣುವಂತಾದರೂ ಕಾಣಬೇಕೆಂದು ಆಗ್ರಹಪಡಿಸುತ್ತಿದ್ದಾರೆ.

ಮುಂದೇನು?

'ಭಾರತ ರಾಷ್ಟ್ರೀಯ ಸೇನೆ'ಯು ಈಗ ಎಲ್ಲೆಲ್ಲಿದೆ ಎಂಬ ಸ್ಪಷ್ಟ ವಿವರ ತಿಳಿದು ಬಂದಿಲ್ಲ ಕೆಲವರು ಇಷ್ಟರಲ್ಲೇ ಬ್ರಿಟಿಷ್ ಸರಕಾರದ ಕೈದಿಗಳಾಗಿರುವರೆಂದೂ ಅವರಿಗೆ ಅಧಿಕಾರಿಗಳಿಂದ ಯಮಯಾತನೆ ದೊರೆತಿದೆಯೆಂದೂ ವಾರ್ತೆಯಿದೆ. ಇನ್ನು ಕೆಲವರು ಹೊರ ದೇಶಗಳಲ್ಲಿರಬಹುದು. ಎಲ್ಲಿದ್ದರೂ ಎಲ್ಲರೂ ಹಿಂದೀ ಸರಕಾರದ ವಶವಾಗುವದು ಖಂಡಿತ. ಸೇನೆಗೆ ಅನಿವಾರ್ಯವಾಗಿ ಸೇರಿದವರನ್ನು ರಿಯಾಯತಿಯಿಂದ ಕಂಡು, ಆ ಸೇನಾ ನಾಯಕರುಗಳನ್ನೂ ಉದ್ದೇಶಪೂರ್ವಕ ಸೇರಿದವರನ್ನೂ 'ಕೋರ್ಟ್ ಮಾರ್ಶಲ್' ವಿಚಾರಣೆಗೊಳಪಡಿಸುವ ಆಲೋಚನೆ ಹಿಂದೀ ಸರಕಾರಕ್ಕಿದೆ. ಸುಭಾಸ್ ಬೋಸರ ಮರಣವನ್ನು ಕೂಡಾ ಸರಕಾರವು ನಂಬುವದಿಲ್ಲವೆಂದೂ ಅವರ ಪತ್ತೆಗಾಗಿ ಪ್ರಯತ್ನ ನಡೆದಿರಬಹುದೆಂದೂ ಊಹಿಸಬಹುದು ಅಂತರ್ರಾಷ್ಟ್ರೀಯ ಕಾನೂನಿನಂತೆ ಈ ಸೇನೆಯ ಸ್ಥಾನಮಾನವೇನೆಂಬುದು ಅತ್ಯಂತ ಸೂಕ್ಷ್ಮ ವಿಚಾರ, ಅವರು ವಿಚಾರಣೆಗೊಳಗಾಗುವಾಗ 'ಡಿಫೆನ್ಸ್' ನಡಿಸಲು ಒಂದು ಸಮಾ

(೮ನೇ ಪುಟ ನೋಡಿರಿ)



Approved firm by the Govt. of Mysore. Certified by the Agent of the Govt. of India in Ceylon.

ನವಯುಗದ ಹೊಸ ಸಂಪುಟ

ಚಂದಾದಾರರಲ್ಲಿ ವಿನಂತಿ.

ನವಯುಗದ 24ನೇ ಸಂಪುಟವು ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಇದೇ ಸಪ್ಟಂಬರದಿಂದ 25ನೇ ಸಂಪುಟವು ಆರಂಭವಾಗಿರುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಮುಂಗಡ) ಆದಷ್ಟುಬೇಗನೆ ದಯಮಾಡಿ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸುವಂತೆ ವಿನಂತಿ

ಮೆನೇಜರ್.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ— 'ಕುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೀರಿದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

P. D. S. (A F) Tollygunge, Calcutta.

ಸ್ಟಾಕಿಸ್ಟ್: ಷಾ ಕಂಪೆನಿ, ಮಂಗಳೂರು

The Canara Banking Corporation Limited.

(Incorporated in British India, with limited Liability)

Estd. 1906

Head Office: **UDIPI**, (S. K.)

Authorised Capital	Rs. 25,00,000
Issued & Subscribed Capital	Rs. 16,00,000
Paid up Capital . . .	Rs. 15,17,000
Reserves	Rs. 4,41,000

ನವಯುಗ

ಉಡುಪಿ, ಗುರುವಾರ ೧೩-೯-೧೯೪೫

ಅಲ್ಪಸಂಖ್ಯಾತರ ಹಕ್ಕು

ಭಾರತೀಯ ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿಗಳಿಗೆ ಸದ್ಯದಲ್ಲೇ ಸಾರ್ವತ್ರಿಕ ಚುನಾವಣೆ ನಡೆಯಲಿದೆ ಮುಂಬರುವ ಚುನಾವಣೆಯಲ್ಲಿರುವ ಮಹತ್ವವನ್ನು ಅಲಕ್ಷ್ಯಿಸಲಾಗುವದಿಲ್ಲ, ಈ ಬಾರಿ ಆರಿಸಲ್ಪಡುವ ಸದಸ್ಯರ ಮೇಲೆ ಪ್ರಚಲಿತ ನ್ಯಾಯವಿಧಾಯಕ ಸಭೆಗಳಲ್ಲಿ ಜನಪ್ರತಿನಿಧಿಗಳಾಗಿರುವ ಹೊಣೆಗಾರಿಕೆ ಮಾತ್ರವಲ್ಲ, ಮುಂದಿನ ರಾಜ್ಯಾಂಗ ರಚನಾ ಸಭೆ(Constituent Assembly)ಯನ್ನು ನಿರ್ಮಿಸುವ ಜವಾಬ್ದಾರಿಯೂ ಅವರದೇ ಆಗಲಿದೆ. ದೇಶದ ವರ್ತಮಾನ ಮತ್ತು ಭವಿಷತ್ಕಾಲಗಳೆರಡೂ ಅವರ ಕೈಗೆ ಬಂದಿವೆ. ಅಂತಹ ಹೊಣೆ ಹೊರುವವರು ಜನತೆಯ ನಿಜವಾದ ಪ್ರತಿನಿಧಿಗಳಾಗಬೇಕು; ಹಾಗಾಗಬೇಕಾದರೆ ಜನಮತ ಪ್ರಕಟಣೆಗೆ, ಯಾವ ವಿಧದ ಅಡ್ಡಿ ಆತಂಕಗಳೂ ಇರಬಾರದು. ಪೂರ್ಣ ಹಾಗೂ ಸ್ಪಷ್ಟವಾದ ಪ್ರಜಾಮತವನ್ನಾದರಿಸಿ ರಚಿಸಲ್ಪಡುವ ಸರಕಾರವೇ ನಿಜವಾದ ಪ್ರಜಾಪ್ರಭುತ್ವ; ಅದನ್ನು ವಂಚಿಸಿ ಕಟ್ಟಲ್ಪಡುವಂತಹ ರಾಜ್ಯಭಾರವೆಂತಹದಿದ್ದರೂ ಅದು ಒಂದಲ್ಲೊಂದು ದಿನ ಜನತಾಕ್ಷೋಭೆಯಿಂದ ಕರಗುವ ತರಗಿನ ಅರಮನೆಯೇ ಸರಿ. ಮುಂಬರುವ ಹಿಂದೀ ಚುನಾವಣೆಯು ಇವೆರಡರಲ್ಲಿ ಯಾವ ವರ್ಗಕ್ಕೆ ಸೇರುವದೆಂಬುದೇ ಗಮನಿಸಬೇಕಾದ ವಿಚಾರ. ಸರಕಾರವು ಈ ಕುರಿತು ಅವಸರಗೊಂಡಿದೆಯೆಂದು ನಾವೆನ್ನುವದಿಲ್ಲ; ಆದರೆ ನಿಜಕ್ಕೂ ಅಸಡ್ಡೆ ವಹಿಸಿದೆ. ವಾಯಿದೆ ಮೀರಿ ನೆನೆಗುದಿಗೆ ಬಿದ್ದಿರುವ ನ್ಯಾಯವಿಧಾಯಕ ಸಭೆಗಳಿಗೆ ಇಂದಾದರೂ ಮರುಚುನಾವಣೆನಡೆಸುವ ಸನ್ನಾಹವು ಅವಸರದ ಕೃತ್ಯವಲ್ಲ; ಆದರೆ ಜನಮತದ ಪ್ರಕಟಣೆಗೆ ಅವಕಾಶವೊದಗಿಸಿಕೊಡದ ಅಸಡ್ಡೆಯೊಂದೇ ಒಡೆದು ಕಾಣುತ್ತಿದೆ ಪ್ರಚಲಿತ ಮತದಾನ ಕ್ರಮದಂತೆ ಈ ಬಾರಿಯೂ ಚುನಾವಣೆ ನಡೆಸುವ ಸಿದ್ಧತೆಯಲ್ಲಿ ಸರಕಾರವಿದೆ. ಆ ಮೂಲಕ ಅಲ್ಪ ಸಂಖ್ಯಾಕರ ಅಭಿಮತವನ್ನೇ ಪ್ರಜಾಮತವೆಂದು ಗಣಿಸಿ ಜನತೆಯ ಬಹುಭಾಗವನ್ನು ಕತ್ತಲೆಯಲ್ಲಿ ಕೆಡಹಲಿದೆ; ಸದ್ಯದ ಮತದಾನ ಪದ್ಧತಿಯಂತೆ ಸೇಕಡಾ 13 ಮಂದಿಗೆ ಮಾತ್ರ ಪ್ರಾಂತಿಕ ಎಸೆಂಬ್ಲಿಗಳಿಗೆ ಮತದಾನಮಾಡುವ ಅಧಿಕಾರವಿದೆ; ಕೇಂದ್ರ ಎಸೆಂಬ್ಲಿಯ ಮತದಾರರಾಗಿರುವದು ಸೇಕಡಾ3 ಮಂದಿ ಮಾತ್ರ. ಇದುವರೆಗೂ ಅಲ್ಪಾಧಿಕಾರ-ಅದಕ್ಕೂ ಅಲ್ಪಸಂಖ್ಯಾಕರ ಮತಾಧಿಕಾರವಿದ್ದ ದೆಸೆಯಿಂದಲೇ ಭಾರತೀಯರು ಪರಾಧೀನತೆಯ ಸಂಕಟವನ್ನನುಭವಿಸುತ್ತಿದ್ದಾರೆ. ಮುಂದಕ್ಕೂ ಅದೇ ದುರ್ವಿಧಿಯೊಂದಾದರೆ, ಸ್ವಾಧಿಕಾರವೆಂಬುದು ಹಗಲು ಕನಸೇ ಸರಿ. ಸೇಕಡಾ 87ಮಂದಿಯ ಪ್ರತಿನಿಧಿಗಳಲ್ಲದ ಪ್ರಾಂತಿಕ ಸದಸ್ಯರೂ ಸೇಕಡಾ 97 ಮಂದಿಯ ಪ್ರತಿನಿಧಿಗಳಲ್ಲದಕೇಂದ್ರ ಸಭಾಸದಸ್ಯರೂ ಜನಪ್ರತಿನಿಧಿಗಳಾಗಲಾರರು. ಅಲ್ಪ ಸಂಖ್ಯಾಕರ ಆಡಳಿತೆ ಪ್ರಜಾಪ್ರಭುತ್ವವಾಗದು ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವಿರಬೇಕು. ಇದು ಪ್ರಜಾ ಪ್ರಭುತ್ವದ ಮೂಲ ತತ್ವ; ಕಾಂಗ್ರೆಸಿನ 25ವರುಷಗಳ ಬೇಡಿಕೆ; ಪ್ರಜಾ ಜವಾಬ್ದಾರಿ ಆಡಳಿತೆಯಿರುವ ಪ್ರತಿಯೊಂದು ರಾಷ್ಟ್ರದಲ್ಲೂ ಅಸ್ತಿತ್ವದಲ್ಲಿರುವ ಪದ್ಧತಿ ಆದ್ದರಿಂದಲೇ ಮತಾಧಿಕಾರವನ್ನು ವಿಸ್ತೃತಗೊಳಿಸುವ ದಕ್ಕಾಗಿ ಚುನಾವಣೆಗಳನ್ನು ಮುಂದುವರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರ ಬೇಡಿಕೆಯಿದೆ ಅದನ್ನು ಮನ್ನಿಸಲು ಅಸಾಧ್ಯವಾಗುವಷ್ಟು ಚುನಾವಣೆಯ ಅವಸರವಿದೆ ಎಂದು ಸರಕಾರವನ್ನುವದಾದರೆ ಅದು ಆತ್ಮದ್ರೋಹವಾಗುವದು; ಚುನಾವಣೆಯ ಮೂಲಭೂತ ತತ್ವವನ್ನೇ ಮೂಲೆಗೊತ್ತಿದಂತಾಗುವದು. ಮತದಾರ ಪಟ್ಟಿಗಳ ದುರಸ್ತಿಗಾಗಿ ಸರಕಾರಕ್ಕೆ ಹೇಗೂ ಸಮಯ ಬೇಕು. ಸದ್ಯದ ಮತದಾರ ಪಟ್ಟಿಗಳಲ್ಲಿ ಬಿಟ್ಟುಹೋಗಿರುವ ಹೆಸರುಗಳನ್ನು ಕೇಳುವಾಗ ನಗುಬರುತ್ತಿದೆ, ಕೆಲವು ಮಂತ್ರಿಗಳ ಹೆಸರುಗಳೇ ಕಾಣೆಯಾಗಿವೆ! ಪಟ್ಟಿ ತಿದ್ದುವವರು ಪದ್ಧತಿಯನ್ನೇ ಸುಧಾರಿಸಲಿರುವ ಆತಂಕಗಳೇನು? ಮತದಾನದ ಅಧಿಕಾರವನ್ನು ವಿಸ್ತರಿಸಲು ಕಾಯಿದೆ ಬದ್ಧ ತೊಡಕುಗಳೇನೂ ಇಲ್ಲ; ಈ ಪ್ರಶ್ನೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಬರುವ ಆವಶ್ಯಕತೆ ಕೂಡಾ ಇಲ್ಲ. ಅದನ್ನು ವಿಸ್ತರಿಸುವ ಅವಕಾಶವು 1935ನೇ ಭಾರತಶಾಸನದಲ್ಲಿಯೇ ಇದೆ; ಹೊಸ ನಿಯಮಗಳನ್ನು ಸೇರಿಸಿ ಅಥವಾ ಕೌನ್ಸಿಲಿನೊಂದು ಆಜ್ಞೆಯ ಮೂಲಕ ಅಂತಹ ತಿದ್ದುಪಡಿ ಮಾಡಲು ಸಾಧ್ಯವಿದೆ. ಪ್ರಜಾ ಪ್ರಭುತ್ವದ ಮೂಲ ತತ್ವ ಪಾಲನೆಗಾಗಿ ಇಷ್ಟೊಂದ. ಅಲ್ಪ ಪ್ರಯಾಸ ವಹಿಸಲು ಸರಕಾರವು ತಯಾರಿಲ್ಲವಾದರೆ, ಅದು ಪ್ರಜಾಮತವನ್ನರಿಯಲು ತಯಾರಿಲ್ಲವೆಂದೇ ಅರ್ಥ. ಆದ್ದರಿಂದ ಇಂದಿನ ಅವಾಯಕಾರೀ ಅವಸರದ ಬದಲಿಗೆ ಪ್ರಾಯಸ್ಥರಿಗೆಲ್ಲಾ ಮತಾಧಿಕಾರ ದೊರೆಯಲಿ ಎಂದು ಹಾರೈಸುತ್ತೇವೆ.

ಕವಿ ಬೇಂದ್ರೆಯವರಿಗೆ-

೧೯೪೬ನೇ ಫೆಬ್ರವರಿ ೧೬ಕ್ಕೆ ೫೦ ವರುಷ ತುಂಬುವಾಗ ಅವರ ಹುಟ್ಟು ಹಬ್ಬವನ್ನು ಯಥಾಯೋಗ್ಯವಾಗಿ ಆಚರಿಸಬೇಕೆಂದು ಧಾರವಾಡದ ಗೆಳೆಯರು ನಿರ್ಧರಿಸಿದ್ದಾರೆ. ಅದಕ್ಕಾಗಿ ಒಂದು ತಾತ್ಕಾಲಿಕ ಸಮಿತಿಯ ರಚನೆಯಾಗಿದೆ. ಅದರ ವಿಜ್ಞಾಪನೆಯನ್ನು ಹಿಂದಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದ್ದೆವು. ಕವಿಗೊಂದು ನಿಧಿ ಸಮರ್ಪಿಸುವದು; ಕನ್ನಡ ಸಾಹಿತ್ಯ ರಾಶಿಗೆ ಕಳೆಗೊಡಬಲ್ಲ ಒಂದಾಗಲಿ ಹೆಚ್ಚಾಗಲಿ ಗ್ರಂಥಗಳನ್ನು ಈ ಹುಟ್ಟು ಹಬ್ಬದ ನೆನಪಿಗಾಗಿ ಪ್ರಕಟಿಸುವದು; ಬೇರೇನಾದರೂ ಸಲಹೆ ಸೂಚನೆಗಳು ಬಂದಲ್ಲಿ ಅವುಗಳನ್ನು ಗಮನಿಸಿ ವರ್ತಿಸುವದು --ಮೊದಲಾದ ವಿಧಾನಗಳು ಈ ಸಮಿತಿಯ ದೃಷ್ಟಿಪಥದಲ್ಲಿವೆ. ಈನಿಧಿಗೆ ಅಖಿಲಕನ್ನಡಿಗರಿಂದ ಸಹಾಯ ಯಾಚಿಸಲ್ಪಟ್ಟಿದೆ. ತನ್ನ ತನದ ಅರಿವಿರುವ ಕನ್ನಡಿಗರಾರೂ ಇದೊಂದು ಬೇಡಿಕೆಯನ್ನಲಾರರು; ಸಮಿತಿಯು ತಮಗೆ ಮಾಡಿದ ಉಪಕಾರವೆಂದೇ ಭಾವಿಸಿಯಾರು. ಕವಿ ಬೇಂದ್ರೆಯವರನ್ನರಿಯದ ಕನ್ನಡಿಗನಿರಲಾರ. ಮಾನವ ಹೃದಯದಲ್ಲಿ ಕವನ ಅಥವಾ ಕೃತಿಗಳು ಮಾಡಬೇಕಾದ ಕೆಲಸವಿದೆ. ಅದು ಬೇರೆ ವಿಧಾನದಿಂದ ಆಗದು; ಕವಿಗಳು, ಲೇಖಕರೇ ಹುಟ್ಟಿ ಬರಬೇಕು ಪ್ರತಿಯೊಂದು ಜನಾಂಗದಲ್ಲೂ ಪ್ರತಿಭಾವಂತರು ಕಾಣಿಸಿಕೊಳ್ಳುವದು, ಜನತೆ ಅವರ ಸಂಬಂಧವಿಟ್ಟುಕೊಳ್ಳುವದು ಇದಕ್ಕಾಗಿಯೇ: ಕನ್ನಡಿಗರ ಪಾಲಿಗೆ ಬೇಂದ್ರೆಯಿದ್ದಾರೆ. ಅವರ ಕವನಗಳು, ಸಣ್ಣ ಕತೆಗಳು, ನಾಟಕಗಳು, ಪ್ರಬಂಧಗಳು ಕನ್ನಡ ವಾಙ್ಮಯದ ಅಮೂಲ್ಯ ಸೊತ್ತುಗಳಾಗಿವೆ ಸಾಹಿತ್ಯ ಮೂಲಕ ಆಗಬಲ್ಲ ಭಾವ ವಿಕಾಸ, ಸ್ಫೂರ್ತಿ, ವಿಚಾರ ಮಂಥನ, ಆದಷ್ಟೋ ಅಷ್ಟು ಈ ಕವಿಯಿಂದಾಗಿದೆ. ಅಂತೂ ಬೇಂದ್ರೆ ಕನ್ನಡಿಗರನ್ನು ಸಂತೈಸಿದ್ದಾರೆ; ಉಪಕಾರ ಮಾಡಿದ್ದಾರೆ. ಅವರ ಕೃತಿಗಳನ್ನೋದಿದವರಾರೂ ಕವಿಯ ಮೇಲೆ ಗೌರವ ಪಡದಿರಲಾರರು ಹೃದಯದ ಈ ಗೌರವಕ್ಕೆ ಒಂದು ರೂಪ ಕೊಟ್ಟು ಪ್ರದರ್ಶಿಸುವ ಸಂದರ್ಭವೀಗ ಬಂದಿದೆ; ಧಾರವಾಡದ ಬೇಂದ್ರೆ ಸಮಿತಿಯು ಅಖಿಲ ಕನ್ನಡಿಗರಿಗೆ ಅದನ್ನು ಒದಗಿಸಿಕೊಟ್ಟಿದೆ ಆದ್ದರಿಂದಲೇ ಅದು ಕನ್ನಡಿಗರಿಗೆ ಉಪಕಾರ ಮಾಡಿತು ಎನ್ನುತ್ತೇವೆ ಕನ್ನಡಿಗರೆಲ್ಲರೂ ಈ ಸುಸಂಧಿಯನ್ನು ಕಳೆಕೊಳ್ಳದೆ ಬೇಂದ್ರೆ, ನಿಧಿಗೆ ಶಕ್ತಿ ಮೀರಿ ಸಹಾಯ ಸಲ್ಲಿಸುವರೆಂದು ನಂಬುತ್ತೇವೆ.

'ಕರ್ನಾಟಕ ಏಕೀಕರಣವಾಗಬೇಕು' 'ಕನ್ನಡಿಗರೆಲ್ಲರೂ ಒಂದೇ' ಎಂಬ ಕೂಗು ಹಳೆಯದು. ಆದರೆ ಹಾಗೆ ಎಲ್ಲರನ್ನೂ ಒಟ್ಟುಗೂಡಿಸುವ ಜೀವಂತ ಶಕ್ತಿಗಳು ಕನ್ನಡ ನಾಡಿನಲ್ಲಿ ಕಡಿಮೆಯಾದುದರಿಂದಲೇ ಅದು ಹಿಂದೆ ಬಿದ್ದಿದೆ. ಆ ಮೂಲೆಯಿಂದ ಈ ಮೂಲೆಯ ವರೆಗಿನ ಸರ್ವ ಕನ್ನಡಿಗರಿಗೂ ಸಮಾನ ಆದರಣೀಯರಾದ ಬೇಂದ್ರೆಯಂತಹ ಸಾಹಿತಿಗಳು ಏಕೀಕರಣದ ಚೇತನಗಳು ಬೇಂದ್ರೆ ಸ್ವತಃ ಒಂದು ಏಕೀಕರಣ ಸಂಸ್ಥೆ; ಹರಿಹಂಚಾಗಿ ಬಿದ್ದಿರುವ ಕನ್ನಡಿಗರೆಲ್ಲರ ಮನಸ್ಸು ಒಂದೆಡೆ ಕೇಂದ್ರೀಕೃತವಾಗುವದು-ಎಲ್ಲಾ ಕನ್ನಡಿಗರಲ್ಲೂ ಏಕರೀತಿಯ ಭಾವತರಂಗಗಳೇಳುವದು--ಬೇಂದ್ರೆಯಂಥವರ ಕೃತಿಗಳಿಂದಲೇ. ಇಂತಹ ಕೇಂದ್ರಗಳು ಕನ್ನಡಿಗರ ಪಾಲಿಗೆ ಬಹಳವಿಲ್ಲ ಇದ್ದವುಗಳನ್ನಾದರೂ ವಿಶೇಷ ರೀತಿಯಿಂದಾದರಿಸಿ ಈ ಅಭಾವವನ್ನು ನಿವಾರಿಸಿಕೊಳ್ಳಬಹುದು, ಗಾಂಧಿ ನೆಹರುಗಳಂತಹ ಸರ್ವರಿಗೂ ಸಮಾನರಾದ ನಾಯಕರಿರುವುದರಿಂದಲೇ ಕನ್ಯಾಕುಮಾರಿಯಲ್ಲಿರುವ ಹಿಂದೀಯನೂ ಅಖಿಲ ರಾಷ್ಟ್ರವನ್ನು 'ಭಾರತಮಾತೆ'ಯೆನ್ನುತ್ತಾನೆ; ಬೇಂದ್ರೆಯಂತಹ ಸರ್ವಮಾನ್ಯ ಸಾಹಿತಿಗಳಿಂದಲೇ ಕಾಸರಗೋಡಿನಲ್ಲಿರುವವನಿಗೂ 'ಕರ್ಣಾಟಕಾಂಬೆ'ಯ ರೂಪು ತೋರುತ್ತಿದೆ. ಕನ್ನಡಕವಿ ಬೇಂದ್ರೆಯ ಹುಟ್ಟು ಹಬ್ಬವು ನಾಡಿನ ಒಗ್ಗಟ್ಟಿಗೂ ಅನುಕೂಲವೆಂಬುದರಿಂದ ಸರ್ವ ಕನ್ನಡಿಗರೂ 'ಬೇಂದ್ರೆ ನಿಧಿ'ಗೆ ನೆರವಾಗಬೇಕು. ಆಂಧ್ರರು, ತಮಿಳರು, ಮರಾಠರು ತಂತಮ್ಮ ನಾಡಿನ ಪ್ರತಿಭಾವಂತರನ್ನು ಯಾವ ರೀತಿ ಗೌರವಿಸುತ್ತಿದ್ದಾರೆಂಬುದನ್ನು ನೋಡಬೇಕು. ಕೆಲವು ಕ್ಷೇತ್ರಗಳಲ್ಲಿ ಅವರ ಅನುಕರಣೆಯನ್ನೋ ಅವರೊಡನೆ ಮೇಲಾಟವನ್ನೋ ಮಾಡುತ್ತಿದ್ದೇವೆ, ನಮ್ಮವರನ್ನು ನಾವು ಗೌರವಿಸುವದರಲ್ಲಾದರೂ ಅವರನ್ನು ಹಿಂದಿಕ್ಕುವಂತೆ ಸರ್ವ ಕನ್ನಡಿಗರೂ ಈ ಕಾರ್ಯಕ್ಕೆ ನೆರವಾಗಬೇಕೆಂದು ವಿಜ್ಞಾಪಿಸುತ್ತೇವೆ.

ನವಯುಗಕ್ಕೆ ಇಂದೇ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 13—9—1945ರಿಂದ

ಕರದಾರರವರ ಚಾಕ್ಯರಸದಿಂದ ಕೂಡಿದ

ಪ್ರತಿಮಾದಾಸ್ ಗುಪ್ತಾ, ವಾಸ್ತಿ, ಜಗದೀಶ್ ಶೇಟ್

ಮುಂತಾದವರು ನಟಿಸಿರುವ

★ **"ನಮಸ್ತೆ"** ★

ಮುಂದಿನ ಚಿತ್ರ—

ಡೆಸ್ಪರೇಟ್ ಜರ್ನಿ

ಅನಂತರ—

ಪತ್ಥರೋಂಕಾ ಸೌದಾಗರ್.

ಜಾ. ಜ. ಯುದ್ಧಾಪರಾಧಿಗಳ ಭವಿಷ್ಯವೇನು?

ಜಾಪಾನಿನ ಶರಣು ವ್ಯವಸ್ಥೆ.

ಎಲ್ಲೆಡೆಗಳಲ್ಲೂ ಜಾಪಾನೀ ಸೇನೆ ಶಸ್ತ್ರ ತ್ಯಾಗವಮಾಡಿ ಶರಣಾಗಿದೆ, ಬೇರೆ ಬೇರೆ ಶಾಂತಿ ಕರಾರುಗಳೂ ನಡೆದಿವೆ ಸಿಂಗಪುರದಲ್ಲಿ ಏನೊಂದು ಪ್ರತಿಭಟನೆಯಿಲ್ಲದೆ ಬ್ರಿಟಿಷ್ ಸೇನೆ ಪ್ರವೇಶಿಸಿದೆ ಚೀನದಲ್ಲಿದ್ದ 10 ಲಕ್ಷ ಜಾಪಾನೀ ಸೇನೆಗಳಿಗೆ ಸಂಬಂಧಿಸಿದ ಶರಣು ಕರಾರು ಹಿಂದಿನ ರಾಜಧಾನಿ ನಾನ್ಕಿಂಗಿನಲ್ಲಿ ಸಹಿ ಮಾಡಲ್ಪಟ್ಟಿತು. ಜನರಲ್ ಮೆಕರ್ಥರರು ಸೇನಾ ಸಮೇತ ಟೋಕಿಯೋ ಪ್ರವೇಶಿಸಿದ್ದಾರೆ ಅಲ್ಲಿಯ ಜಾಪಾನೀ ಸೇನೆಗಳನ್ನು ನಿಶ್ಶಸ್ತ್ರಗೊಳಿಸಿ ಬರ್ಖಾಸ್ತುಗೊಳಿಸುವ ಕಾರ್ಯವು ಸಾವಧಾನವಾಗಿ ನಿರಾತಂಕವಾಗಿ ನಡೆಯಲಿದೆ

ಒಳ ವ್ಯವಸ್ಥೆ ಹೇಗೆ?

ಜಾಪಾನಿನಲ್ಲಿ ಸೇನಾಧಿಕಾರವನ್ನು ಮಿತ್ರರು ಸ್ಥಾಪಿಸುವದಿಲ್ಲವೆಂದೂ ಒಳಾಡಳಿತೆಯ ಸಂಬಂಧವಾಗಿ ಜಾಪಾನೀ ಸರಕಾರದೊಡನೆ ವಿನಂತಿಯನ್ನಷ್ಟೇ ಅವರು ಮಾಡಿಕೊಳ್ಳಲಿರುವರೆಂದೂ ಜಾಪಾನಿನ ವಿದೇಶ ಮಂತ್ರಿಗಳ ಹೇಳಿಕೆಯಿದೆ ಜಾಪಾನಿನೊಳಗೆ ಅಮೇರಿಕನ್ ಸೇನೆಗಳು ಅಧಿಕ ಸಂಖ್ಯೆಯಲ್ಲಿ ಆಪರಿಸಿ ನಿಲ್ಲುವವು ಮೇಕರ್ಥರರ ಸೂಚನೆಗಳಂತೆ ಚಕ್ರವರ್ತಿ ಮತ್ತು ಜಾಪಾನೀ ಸರಕಾರ ವರ್ತಿಸಿದರಾಯಿತು. ನಾಗರಿಕಾಡಳಿತೆಯಲ್ಲಿ ಕೈ ಹಾಕುವಂತಿಲ್ಲ ತನ್ನ ಸೂಚನೆಗಳಿಗೆ ವ್ಯತಿರಿಕ್ತವಾದಲ್ಲಿ ಉಪಯೋಗಿಸುವದಕ್ಕಾಗಿ ಮಾತ್ರ ಮೇಕರ್ಥರ್ ಜಾಪಾನಿನೊಳಗೆ ಸೇನೆಯನ್ನು ನಿಲ್ಲಿಸಿದ್ದಾರೆ

ಯುದ್ಧಾಪರಾಧಿಗಳು

ಎಲ್ಲಾ ಜಾಪಾನೀ ಸೇನೆಗಳನ್ನು ನಿಶ್ಶಸ್ತ್ರೀಕರಿಸಿ, ಮಿತ್ರ ಕೈದಿಗಳೆಲ್ಲರ ಬಿಡುಗಡೆಯಾದ ವೇಳೆಯೇ ಜಾಪಾನಿನ ಯುದ್ಧಾಪರಾಧಿಗಳನ್ನು ಸೆರೆಹಿಡಿಯಲಾಗುವದೆಂದು ಪ್ರಕಟವಾಗಿದೆ ಜಾಪಾನಿನ ವಶವಿದ್ದ ಯುದ್ಧಕೈದಿಗಳೆಲ್ಲಾ ಈಗ ಬಿಡುಗಡೆ ಹೊಂದುತ್ತಿದ್ದಾರೆ. ಸಿಂಗಾಪುರದಲ್ಲಿದ್ದ 40 ಸಾವಿರ ಮಂದಿ ಹೊರಬಂದರು ಬಿಡುಗಡೆಗೊಂಡವರು ಜಾಪಾನರ ಅತ್ಯಾಚಾರದ ಕುರಿತು ವಿಲಕ್ಷಣ ರೋಮಾಂಚಕಾರೀ ಕಥೆಗಳನ್ನು ಹೇಳುತಿದ್ದಾರೆ. ಜಾಪಾನೀ ಸೋಲ್ಜರರು ಅಮೇರಿಕ, ಆಸ್ಟ್ರೇಲಿಯ ಮತ್ತು ಸ್ವತಃ ತಮ್ಮವರ ಹೆಣಗಳನ್ನೇ ಕೊಯಿದು ತಿಂದಿದ್ದಾರೆಂದು ಮಿತ್ರರಾಷ್ಟ್ರೀಯ ಯುದ್ಧಾಪರಾಧಿ ವಿಚಾರಣಾ ಸಮಿತಿಗೆ ಜಸ್ಟೀಸ್ ವೆಬ್ಬರು ವರದಿಯೊಪ್ಪಿಸಿದ್ದಾರೆ. ಇದರಿಂದ ಮಿತ್ರರಾಷ್ಟ್ರಗಳಲ್ಲಿ, ವಿಶೇಷವಾಗಿ ಆಸ್ಟ್ರೇಲಿಯದಲ್ಲಿ ಜಾಪಾನರ ಮೇಲೆ ರೋಷವೆದ್ದಿದೆ ಚಕ್ರವರ್ತಿ ಹಿರೋಹಿಟೊ ಸಮೇತ ಎಲ್ಲಾ ಜಪಾನೀ ಯುದ್ಧನಾಯಕರಿಗೂ ತೀವ್ರ ಪ್ರತೀಕಾರ ಮಾಡಬೇಕೆಂಬ ಚಳವಳವಾರಂಭವಾಗಿದೆ

ರಶ್ಯದ ಧೋರಣೆ

ರಶ್ಯದ ಪಾಲಿಗೆ ಬಂದಿದ್ದ ಜರ್ಮನಿಗೆ ಮಾರ್ಶಲ್ ಝುಕೋವರು ಹೊಸ ಜರ್ಮನ್ ಸರಕಾರವೊಂದನ್ನು ರಚಿಸಿದ್ದಾರೆ ಈ ನವಿ [illegible] ಬರ್ಲಿನಿನಲ್ಲಿದ್ದುಕೊಂಡು ರಶ್ಯಾಕ್ರಮಿತ ಜರ್ಮನಿಯ ರಾಜ್ಯಭಾರ ನಡಿಸುವದು ಜರ್ಮನ್ ಕಮ್ಯೂನಿಸ್ಟರು ಸೋಶಿಯಾಲಿಸ್ಟರು ಮತ್ತು ಇತರ ಪಕ್ಷಗಳಿಂದಲೇ ಆರಿಸಲ್ಪಟ್ಟ ಸೋವಿಯೆಟಿನ ಕೈಕೆಳಗೆ ಅಧಿಕಾರವನ್ನದು ಚಲಾಯಿಸಲಿರುವದು ಇದರಿಂದ ಇಂಗ್ಲಂಡು ಅಮೇರಿಕಗಳು ತಲ್ಲಣಿಸಿವೆ ತ್ರಿರಾಷ್ಟ್ರಗಳ ವಿದೇಶಿ ಮಂತ್ರಿಮಂಡಲದ ಅಧಿಕಾರಕ್ಕೊಪ್ಪಿಸಲ್ಪಟ್ಟಿದ್ದ ವಿಭಾಗಗಳ ಆಳ್ವಿಕೆಯನ್ನೂ ಈ ಸರಕಾರಕ್ಕೆ ವಹಿಸಿಕೊಟ್ಟಿರುವುದರಿಂದ ಮುಂದೆ ಹೇಗೆ ಎಂಬ ಪ್ರಶ್ನೆಯೆದ್ದಿದೆ

'ಬೋಸರು ಸತ್ತದ್ದು ನಿಜ'

ಯುದ್ಧಾರಂಭದ ಮೊದಲು ಜಾಪಾನಿ ವಿದೇಶ ಕಚೇರಿಯಲ್ಲಿ ಉದ್ಯೋಗದಲ್ಲಿದ್ದು 'ಸುಸಂಸ್ಕೃತ ಪ್ರಚಾರಕಾರ್ಯ' ಎಂಬ ಪುಸ್ತಕವನ್ನು ಬರೆಯುತ್ತಿದ್ದು ಈಗಲೂ ಟೋಕಿಯೋದಲ್ಲಿರುವ ಹಿಂದೀ ಪತ್ರಿಕೋದ್ಯಮಿ ಶ್ರೀ. ಅಮಿರ್ ಲಾಹಿರಿಯವರು ಸುಭಾಸರ ಮರಣ ನಿಜವೆಂದೂ, ಹಿಂದುಸ್ಥಾನದ ಮನಸ್ಸು ಕೆಡದಂತೆ ಮಾಡುವದು ಹೇಗೆಂಬ ಯೋಚನೆಯಿಂದಲೇ ಜಾಪಾನೀ ಸರಕಾರವು ಆ ಸದ್ದಿ ಪ್ರಕಟಣೆಗೆ 5 ದಿನ ತಡಮಾಡಿತೆಂದೂ ಹೇಳಿದ್ದಾರೆ ಸುಭಾಸರ ಮನಸ್ಸು ರಶ್ಯದ ಮೇಲಿತ್ತು, ಅದು ಅವರಿಗೆ ಸ್ವರ್ಗ ಸಮಾನವಾಗಿ ಕಾಣುತಿತ್ತು. ಅವರಿಗೆ ಹಲವು ರಶ್ಯನ್ ಸ್ನೇಹಿತರಿದ್ದರಲ್ಲದೆ, ರಶ್ಯವನ್ನು ಸಂದರ್ಶಿಸುವಂತೆ ಒಮ್ಮೆ ಸ್ವತಃ ಸ್ಟಾಲಿನರೇ ಸುಭಾಸರನ್ನು ಆಮಂತ್ರಿಸಿದ್ದರು. ರಶ್ಯಾ-ಜಪಾನ್ ಮೈತ್ರಿ ಸಾಧನೆಗೆ ಸುಭಾಸರನ್ನು ಜಾಪಾನರು ಬಿಟ್ಟಿದ್ದರಲ್ಲದೆ, ತಾವು ಸೋಲುತ್ತೇವಾದರೆ ಸುಭಾಸರ ರಕ್ಷಣೆಗಾಗಿ ಅಧಿಕಾರಿಗಳಿಗೊಪ್ಪಿಸುವ ಭರವಸೆಯನ್ನೂ ಜಾಪಾನರಿತ್ತಿದ್ದರು ಕೊನೆಯ ಭಾಗದಲ್ಲಿ 'ಜಾಪಾನು ಸೋಲುವದು ಖಂಡಿತ ನಾವು ನಮ್ಮ ಹಾದಿನೋಡಿಕೊಳ್ಳಬೇಕು' ಎಂದು ಬೋಸರು ತನ್ನ ಅನುಯಾಯಿಗಳೊಡನೆ ಹೇಳಿದ್ದರು ಚಕ್ರವರ್ತಿಗಳು ಶರಣಾಘೋಷಣೆ ಮಾಡಿದ ಮೇಲೆ ಸುಭಾಸರನ್ನು ಹಾರ್ಬಿನ್‌ನಲ್ಲಿದ್ದ ರಶ್ಯನ್ ಸೇನಾನಿಯ ವಶಕ್ಕೊಪ್ಪಿಸಲು ಮಂಚೂರಿಯಕ್ಕೆ ಸಾಗಿಸುವದಕ್ಕಾಗಿಯೇ ಟೋಕಿಯೋವಿಗೆ ತರಿಸಲಾಗಿತ್ತು ಆದರೆ ವಿಮಾನದ ಯಂತ್ರ ಹಾಳಾಗಿ ಆ ಅಪಘಾತದಿಂದಲೇ ಅವರು ಆಸ್ಪತ್ರೆಯಲ್ಲಿ ಸತ್ತರು ಎಂದು ಲಾಹಿರಿಯನ್ನುತ್ತಾನೆ

ಆಟಂ ಬಾಂಬಿನ ಹಾವಳಿ

ಪ್ರಪಂಚದಲ್ಲಿ ಪ್ರಥಮತಃ ಆಟಂ ಬೋಂಬಿಗೆ ಬಲಿಯಾದ ಹಿರೋಶಿಮಾ ನಗರದಲ್ಲಿ 2,50,000 ಜನರಿದ್ದರು ಅವರ ಪೈಕಿ ಕೇವಲ 6000 ಮಂದಿ ಮಾತ್ರ ಮರಣ ಅಥವಾ ಗಾಯಕ್ಕೊಳಗಾಗದೆ ಪಾರಾದರು ಉಳಿದ 2 44,000 ಜನರೂ ಅದಕ್ಕಾಹುತಿಯಾದರು ಎಂದು ಜಾಪಾನ್ ಸರಕಾರದ ಹಕ ಸಂಸ್ಥೆಯು ಅಧಿಕೃತವಾಗಿ ಪ್ರಕಟಿಸಿದೆ ಆ ಬೋಂಬು ಸಿಡಿದಂದಿನಿಂದ ಇದುವರೆಗೆ ಅಲ್ಲಿದ್ದವರು ವಿಲಕ್ಷಣ ಪೀಡೆಗೊಳಗಾಗಿ ಹುಳಗಳಂತೆ ಸಾಯುತ್ತಲಿದ್ದಾರೆ ನಗರದ 63ನೆಯ ಪಾಲು ವಿಸ್ತೀರ್ಣದಲ್ಲಿ ಏನೊಂದೂ ಉಳಿದಿಲ್ಲ ಆ ಮೊದಲೊಂದು ನಗರವಿದ್ದಿತೆಂಬ ಚಿಹ್ನೆ ಕೂಡ ಉಳಿಯದಂತೆ ಪೂರ್ಣ ಮರುಭೂಮಿಯಾಗಿ ಹೋಗಿದೆ

ಯುದ್ಧಾಪರಾಧಿಗಳು 10000

ಯುದ್ಧಾಪರಾಧಿಗಳ ವಿಚಾರಣೆಗಾಗಿ ನೇಮಿಸಲ್ಪಟ್ಟಿರುವ ಮಿತ್ರ ರಾಷ್ಟ್ರೀಯ ವಿಚಾರಣಾ ಮಂಡಲಿಯು 4 ಲಕ್ಷ ನಾಜಿಗಳನ್ನು ವಿಚಾರಿಸಿ ಶಿಕ್ಷಿಸಲಿದೆ ಎಂದು ತಿಳಿದು ಬರುತ್ತದೆ ಪ್ರಮುಖ ಅಪರಾಧಿಗಳನ್ನು ಪ್ರಾಯಶಃ ಗಲ್ಲಿಗೇರಿಸಲಾಗುವದು. ಅಲ್ಪಾಪರಾಧಿಗಳಿಗೆ ಸಕ್ರಮ ಶಿಕ್ಷೆ ವಿಧಿಸಿ, ಅವರು ಹಾಳುಗೆಡಹಿದ ರಶ್ಯ ಮೊದಲಾದ ಸ್ಥಳಗಳ ಪುನರ್ರಚನೆಯ ಕೆಲಸಗಳಿಗಾಗಿ ಕಳುಹಿಕೊಡಲಾಗುವದು ಗೋರಿಂಗನೇ ಮೊದಲಾದ ಪ್ರಮುಖ ನಾಜಿಗಳ ವಿಚಾರಣೆಯು ಒಕ್ಟೋಬರ್ ಅಥವಾ ನವಂಬರಿನಲ್ಲಿ ಪ್ರಾರಂಭಿಸಬಹುದು. ಜರ್ಮನ್ ಸೇನಾನಿ ಮಂಡಲ, ಮತ್ತಿತರ ನಾಜೀ ಸಂಸ್ಥೆಗಳ ಮೇಲೆ ಸಾಮೂಹಿಕವಾಗಿ ಆರೋಪ ಹೊರಿಸಿ ಶಿಕ್ಷಿಸುವ ಸಂಭವವೂ ಇದೆ ಆಕ್ರಮಣ ಯುದ್ಧ ಹೂಡುವದು ಸ್ವತಃ ಒಂದು ಅಪರಾಧವೆಂಬ ಕುರಿತು ಫ್ರಾಂಚರು ತುಸು ಮೃದು ಧೋರಣೆ ವಹಿಸಿದ್ದಾರೆಂದು ತಿಳಿದುಬರುತ್ತದೆ

ನಾಜಿಗಳ ಗುಪ್ತ ಕೇಂದ್ರಾಲಯ?

ಜರ್ಮನಿಯಲ್ಲಿ ಸರ್ವವ್ಯಾಪೀ ನಾಜೀ ಸಂಸ್ಥೆಯೊಂದು ಅಸ್ತಿತ್ವದಲ್ಲಿದೆಯೆಂದೂ ಅವರ ಕೇಂದ್ರಾಲಯವನ್ನು ಪತ್ತೆಹಚ್ಚಲು ಮಿತ್ರರಾಷ್ಟ್ರೀಯರಿಂದ ಇನ್ನೂ ಆಗಿಲ್ಲವೆಂದೂ. ಜರ್ಮನಿಯಿಂದ ಈಗತಾನೇ ಮರಳಿಬಂದಿರುವ ಹಲವು ಮಂದಿ ಬ್ರಿಟಿಷ್ ಪರಿಶೋಧಕರಂದಿದ್ದಾರೆ ವಿದೇಶಿ ಕೆಲಸಗಾರರ ಅಥವಾ ಮಾಜೀ ಕೈದಿಗಳ ವೇಷದಲ್ಲಿ ಸಾವಿರಾರು ಮಂದಿ ಉಗ್ರ ನಾಜಿಗಳು ಜರ್ಮನಿಯಲ್ಲೆಲ್ಲಾ ಹರಡಿಹೋಗಿದ್ದಾರೆ ಅವರ ಕೇಂದ್ರ ಕಾರ್ಯಾಲಯವನ್ನು ಪತ್ತೆಹಚ್ಚದೆ ಬಿಟ್ಟಲ್ಲಿ ಅಪಾಯಕಾರೀ ಚಳವಳಿಯೇಳುವ ಸಂಭವವಿದೆ. ವ್ಯಕ್ತಿಶಃ ಹಿಟ್ಲರನೇ ಅವರ ಆಜ್ಞಾಧಾರಕನಾಗಿ ಕಾರ್ಯ ಸಾಗಿಸುತ್ತಿರಲೂ ಬಹುದು. ಸದ್ಯ ಅವರ ಕಾರ್ಯರೀತಿಯೆಂದರೆ ಆಕ್ರಮಿತ ಸರಕಾರದ ಜವಾಬ್ದಾರಿ ಸ್ಥಾನಗಳಲ್ಲಿ ನಾಜಿಗಳನ್ನು ತುರುಕಿಸುವದೇ— ಎಂದು ಈ ಶೋಧಕರು ಎಚ್ಚರಿಕೆಯಿತ್ತಿದ್ದಾರೆ

ಫ್ರಾಂಕೋನ ಮೇಲೆ ಪ್ರಥಮ ಗದೆ

ಟೇಂಜೀರಿನಿಂದ ಸ್ಪೈಯಿನಿನ ಸೇನೆಯನ್ನು ಹಿಂದೆಗೆಯಬೇಕೆಂದು ಪೇರಿಸಿನಲ್ಲಿ ಸೇರಿದ ರಶ್ಯ ಅಮೇರಿಕ, ಇಂಗ್ಲಂಡು, ಫ್ರಾನ್ಸಗಳ ಸಮ್ಮಿಶ್ರ ಸಮ್ಮೇಲನವು ಜನರಲ್ ಫ್ರಾಂಕೋನಿಗೆ ಸೂಚನೆ ಕಳುಹಿದ್ದಿತು. ಈ ಸೂಚನೆ ಬರುವ ಮೊದಲೇ ಸ್ಪೈಯಿನಿನ ಕಮಿಶನರ್ ಕೊಟ್ಟಿದ್ದ ಆಜ್ಞೆಯಂತೆ ಟೇಂಜೀರಿನಲ್ಲಿದ್ದ ಸ್ಪೇನೀಶ್ ಸೇನೆಗಳನ್ನು ಈಗ ತಾನೇ ಹಿಂಪಗೆದಿದ್ದಾರೆ. ಟೇಂಜೀರ್ 1940ರ ವರೆಗೂ ಅಂತರ್ರಾಷ್ಟ್ರೀಯ ಕ್ಷೇತ್ರವಾಗಿದ್ದಿತು ಜನರಲ್ ಫ್ರಾಂಕೋನ ಸೇನೆಯು ಅದನ್ನಾಕ್ರಮಿಸಿಕೊಂಡಾಗ ಆ ಕಾಲದ ಯುದ್ಧದ ಪರಿಯಿಂದ ಯಾರ ವಿರೋಧವೂ ಬಂದಿಲ್ಲ ಈಗ ಚತುರ್ರಾಷ್ಟ್ರಗಳು ಅಲ್ಲಿ ಪುನಃ ಅಂತರ್ರಾಷ್ಟ್ರೀಯ ಅಧಿಕಾರ ಸ್ಥಾಪಿಸಲು ನಿರ್ಧರಿಸಿ ಎಚ್ಚರಿಕೆ ಕೊಟ್ಟೊಡನೆ ಜನರಲ್ ಫ್ರಾಂಕೋನು ಪ್ರಸಂಗಾವಧಾನತೆಯಿಂದ ವರ್ತಿಸಿದ್ದಾನೆ ಆದರೂ ಸ್ಪೈನಿನಲ್ಲಿ ಫ್ರಾಂಕೋ ವಿರುದ್ಧ ಸಂಚು ಹೆಚ್ಚುತ್ತಿವೆ.

Notice

ಉಡುಪಿ ಡಿ. ಮು ಕೋರ್ಟಿನಲ್ಲಿ

O P No 49/1945

1 [illegible] 2 [illegible] 3 [illegible] 4 [illegible] 5 [illegible] 6 [illegible] 2ರಿಂದ 6ನೇ ನಂಬ್ರದವರು ಮೈನರರು, [illegible] 1ನೇ ಅರ್ಜಿದಾರಳು [illegible]

ಈ [illegible] ಮಾಲ್ಲಂಡ O P No 49/45ನೇ ಅರ್ಜಿಯ 1ನೇ ಅರ್ಜಿದಾರಳ [illegible] ನರ್ 2ರಿಂದ 6ನೇ ಅರ್ಜಿದಾರರ [illegible] The Canara Banking Corporation Ltd, Udipi ಈ [illegible] 134/42ನೇ ಫಿಕ್ಸೆಡ್ ಡಿಪಾಸಿಟ್ [illegible] ಫಿಕ್ಸೆಡ್ ಡಿಪಾಜಿಟ್ [illegible] ರೂ 500 0 0 [illegible] 3 [illegible] 21 6 44ಕ್ಕೆ [illegible] 21 12 44ಕ್ಕೆ ಬರಬೇಕಾದ ಬಡ್ಡಿ ರೂ 15 0 0ನ್ನು [illegible] ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ [illegible] 2ರಿಂದ 6ನೇ ಅರ್ಜಿದಾರರ [illegible] 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ [illegible] ಮಾಲ್ಲಂಡ ಅರ್ಜಿಯು ತಾ 19 9 45ಕ್ಕೆ ಇಟ್ಟಿದೆ ಆಕ್ಷೇಪ ಹೇಳುವವರು ಸದ್ರಿ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಮೇಲೆ ನಮೂದಿಸಿದ ಕೋರ್ಟು ಮುಂದೆ ಸ್ವಂತ ಅಥವಾ ವಕೀಲರ ಮುಖೇನ ಹಾಜರಾಗಿ [illegible] ಮಾಡಿಕೊಳ್ಳತಕ್ಕದ್ದು

Gratiane C Rego, Vakil,
ಉಡುಪಿ ತಾ 11 9 1945

NOTICE

In the Court of the District Munsif of Mangalore

S. C. No 169 of 1945

between

G Ramnath Pai —Plaintiff
AND
Sanjiva Shetty Defendant.

To

Defendant, Sanjiva Shetty, son of Hosamane Madappa Shetty residing in Ammunaje village Mangalore Taluk

Take notice that the above named plaintiff has instituted the above suit against you for recovery of Rs 129-14 0 for principal and interest due on a Demand Promissory with future interest and costs to suit and the same is posted of 19 9 1945 for your appearance. If you wish you may appear in person or by a pleader at 10 A M on the said date and contest the same failing which the suit will be proceeded with in your absence

By order of the Court

Mangalore 11 9 1945 } *Sd* B Srinivasa Pai
Vakil for plaintiff

ಕಾಂಗ್ರೆಸಿನ ಮುಂದಿರುವ ಸಮಸ್ಯೆಗಳು.

(೫ನೇ ಪುಟದಿಂದ ಮುಂದುವರಿಸುದು)

ಯಕ ಸಮಿತಿಯನ್ನು ರಚಿಸುವ ಪ್ರಯತ್ನಗಳು ನಡೆದಿವೆ ಸರ್ ತೇಜಬಹದೂರು ಸಪ್ರುಗಳಂತಹ ಪ್ರಸಿದ್ಧ ವಕೀಲರು ಆ ಸಮಿತಿಯಲ್ಲಿ ಸೇರಲಿದ್ದಾರೆ ಆದರೆ ಕಾನೂನು ಮೂಲಕ ಈ ಯೋಧರ ರಕ್ಷಣೆಯನ್ನು ಸಾಧಿಸುವದು ಅತ್ಯಂತ ಕಷ್ಟದ ಕಾರ್ಯ. ಇಡೀ ರಾಷ್ಟ್ರವು ದಯಾಯಾಚನೆಗೆ ಮುಂದಾದಲ್ಲಿ ಮಾತ್ರವೇ ಆ ಕೆಲಸ ಸಾಧ್ಯವಾಗಬಹುದು. ಪಂಡಿತ ನೆಹರುಗಳ ನಾಯಕತ್ವದಲ್ಲಿ ಕಾಂಗ್ರೆಸ್ ಕಮಿಟಿಯು ಆ ಕುರಿತು ಸ್ಪಷ್ಟ ನಿರ್ಧಾರ ಮಾಡುವದೆಂದು ನಿರೀಕ್ಷಿಸಲಾಗಿದೆ

ಕಾಂಗ್ರೆಸ್-ಕಮ್ಯೂನಿಸ್ಟ್ ಕಾಳಗ

ಕಾಂಗ್ರೆಸಿನ ಕೆಲವು ಮೂಲಭೂತ ತತ್ವಗಳಿಗೆ ಬದ್ಧ ವಿರೋಧಿಗಳಾದ ಕಮ್ಯೂನಿಸ್ಟರು ಕಾಂಗ್ರೆಸಿನೊಳಗಿರುವದು ಹಲವು ಬಲಪಕ್ಷೀಯ ಧುರೀಣರಿಗೆ ಆದಿಯಿಂದಲೂ ಅಸಹ್ಯವಾಗಿದ್ದಿತು ಆಗೋಸ್ತು ಗಲಭೆಯ ನಂತರ ಆ ಭೇದಭಾವವು ಪ್ರಜ್ವಲಿಸಿತೆನ್ನಬಹುದು. ಇದು 'ಹಿಂದೀ ರಾಷ್ಟ್ರೀಯ ಸೇನೆ'ಯ ಸಂಬಂಧಕ್ಕಿಂತಲೂ ಜಿಗುಟಾದ ಪ್ರಶ್ನೆ. ಆಗೋಸ್ತು ಗಲಭೆಯು ತನ್ನದೆಂದು ಕಾಂಗ್ರೆಸ್ ಒಪ್ಪಿಕೊಂಡಿಲ್ಲ; ಆ ಸಮಯದಲ್ಲಿ ಜನತೆ ಪ್ರದರ್ಶಿಸಿದ ಧೈರ್ಯ, ಸ್ಥೈರ್ಯ, ಸ್ವಾಭಿಮಾನಗಳಿಗಾಗಿ ಕಂಠೋಕ್ತ ಅಭಿನಂದನೆ ಸಲ್ಲಿಸುವ ಧೈರ್ಯಕ್ಕೊಂದು ಮೇಲ್ಪಂಕ್ತಿ ಹಾಕಿದವರು ಪಂಡಿತ ನೆಹರುಗಳೇ. ಈಗ ತಾನೇ ಪುನರುತ್ಥಾನಗೊಂಡು ಸಭೆ ಸೇರಲಾರಂಭಿಸಿರುವ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಅದಕ್ಕಾಗಿ ಜನತೆಯನ್ನು ಅಭಿನಂದಿಸಹತ್ತಿವೆ. ಆದರೆ ಆಗೋಸ್ತು ಗಲಭೆಯ ವಿಧ್ವಂಸಕ ಕಾರ್ಯಾಚರಣೆಗಳು ತನ್ನದೆಂದು ಕಾಂಗ್ರೆಸ್ ಎಂದಿಗೂ ಒಪ್ಪುವಂತಿಲ್ಲ ಅಂದಮೇಲೆ ಕಮ್ಯೂನಿಸ್ಟರು ಆ ಗೊಂದಲಗಳನ್ನೆಲ್ಲಾ ಸಂಘಟನೆಯಿಂದ ವಿರೋಧಿಸಿದ್ದ ಮಾತ್ರಕ್ಕೆ ಅವರ ಮೇಲೆ ಶಿಸ್ತು ಜ್ಯಾರಿಮಾಡಲಾಗುವದಿಲ್ಲ ಕಮ್ಯೂನಿಸ್ಟರು ಕಾಂಗ್ರೆಸಿನ ಆಗೋಸ್ತು ನಿರ್ಧಾರಕ್ಕೇನೇ ವಿರುದ್ಧಾಚರಣೆ ಕೈಗೊಂಡಿದ್ದರೆಂದು ಈಗ ಅವರ ಮೇಲೆ ಆರೋಪವಿದೆ ಕಾಂಗ್ರೆಸ್ ಬಹಿಷ್ಕೃತ ಸಂಸ್ಥೆಯಾಗಿದ್ದ ಕಾಲದಲ್ಲಿ ರಚಿಸಲ್ಪಟ್ಟ 'ಕಾರ್ಯಕರ್ತ'ರ ಸಂಘಗಳಿಂದ ಕಮ್ಯೂನಿಸ್ಟರನ್ನು ಉದ್ದೇಶಪೂರ್ವಕ ಬಹಿಷ್ಕರಿಸಲಾಗಿದ್ದಿತು. ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ. ಎಸ್ ಕೆ ಪಾಟೀಲರೇ ಮೊದಲಾದವರು ಅವರನ್ನೋಡಿಸುವ ಚಳವಳವನ್ನೇ ಆರಂಭಿಸಿದ್ದರು. ಶ್ರೀಮತಿ ಸರೋಜಿನಿಯಂಥವರು ಕಮ್ಯೂನಿಸ್ಟರನ್ನಾಧರಿಸಿದ್ದಾರೆ. ಮೌಲಾನಾ ಅಜಾದ್, ನೆಹರು, ವಲ್ಲಭಾಯಿಗಳಂಥವರು ನ್ಯಾಯ ಶೋಧಕನ ಮಧ್ಯವರ್ತಿ ಧೋರಣೆ ವಹಿಸಿದ್ದಾರೆ ಆದರೆ ಕಾರ್ಯತಃ ಕಮ್ಯೂನಿಸ್ಟರು ಕಾಂಗ್ರೆಸಿನಿಂದ ಹೊರಗೆ ಎಂಬುದೇ ಸಾಧಿಸಲ್ಪಡುತ್ತಿದೆ

ಭುಲಾಭಾಯಿ ತೀರ್ಮಾನ

ದೇಶದಲ್ಲೆಲ್ಲಾ ಕೆಲಸಗಾರ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಸಂಘಟನೆಯಿಂದ ಕಾರ್ಯ ಸಾಗಿಸುತ್ತಿರುವ ಕಮ್ಯೂನಿಸ್ಟರ ಹಿತೋಟಿಯನ್ನು ಕೆಲಸಗಾರ ಕ್ಷೇತ್ರಗಳಿಂದ ತಪ್ಪಿಸಲು ಕಾಂಗ್ರೆಸ್ ಪರವಾಗಿ ಕೆಲಸಗಾರ ಸಂಘಗಳ ರಚನೆಗಳಾಗಹತ್ತಿವೆ ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತ್ಯಗಳಂತಹ ಕಾಂಗ್ರೆಸ್ ಸಮಿತಿಗಳು ಇಷ್ಟರಲ್ಲೇ ಕಮ್ಯೂನಿಸ್ಟ ಸದಸ್ಯರ ಮೇಲೆ ಶಿಸ್ತು ಜ್ಯಾರಿ ಕಾರ್ಯಕ್ರಮ ಕೈಗೊಂಡಿವೆ. ಶ್ರೀ. ಶಂಕರರಾವ್ ದೇವರ ಭಾಷಣ ನಡೆಯುತ್ತಿದ್ದ ಬೊಂಬಾಯಿ ಸಭೆಯೊಂದರಲ್ಲಿ ಕಾಂಗ್ರೆಸಿಗರಿಗೂ ಕಮ್ಯೂನಿಸ್ಟರಿಗೂ ಹೊಯ್ಕೈಯ್ಯಾಗಿ ಹಲವರು ಜಖಂಗೊಂಡಿದ್ದಾರೆ. ದೇಶ ಸರ್ವತ್ರ ಬಲಪಕ್ಷೀಯ ಕಾಂಗ್ರೆಸಿಗರು ಮತ್ತು ಕಮ್ಯೂನಿಸ್ಟರೊಳಗೆ ಕಾಳಗ ನಡೆಯುತ್ತಿದೆ. ಗಾಂಧಿಜೀ ಬಿಡುಗಡೆಗೊಂಡಂದಿನಿಂದ ದೇಶದ ವಿವಿಧ ಪ್ರಾಂತ್ಯಗಳಿಂದ ಕಮ್ಯೂನಿಸ್ಟರ ಮೇಲಿನ ದೂರುಗಳು ರಾಶಿರಾಶಿಯಾಗಿ ಅವರಿಗೆ ಬಂದಿವೆ, ಈ ಕುರಿತು ಮಹಾತ್ಮರು ಕಮ್ಯೂನಿಸ್ಟ್ ಪಕ್ಷ ನಾಯಕ ಕಾಮ್ರೇಡ್ ಪಿ. ಸಿ. ಜೋಶಿಯವರೊಂದಿಗೆ ಪತ್ರವ್ಯವಹಾರ ನಡೆಸಿದ್ದರು. ಜೋಶಿಯವರು ಅದಕ್ಕುತ್ತರವಾಗಿ ಕಮ್ಯೂನಿಸ್ಟ್ ವಿರೋಧಿ ದಾಖಲೆಗಳನ್ನೆಲ್ಲಾ ನಿಷ್ಪಕ್ಷಪಾತಿ ಜಡ್ಜರೊಬ್ಬರ ವಿಚಾರಣೆಗೊಪ್ಪಿಸಿ ಪರೀಕ್ಷಿಸಿರೆಂದು ಗಾಂಧೀಜೀಯನ್ನು ಕೇಳಿಕೊಂಡಿದ್ದರು. ಭುಲಾಭಾಯಿ ದೇಸಾಯಿ, ರಾಜಗೋಪಾಲಾಚಾರಿ, ಅಥವಾ ಶ್ರೀಮತಿ ಸರೋಜಿನಿ ನಾಯಿಡುಗಳ ಹೆಸರನ್ನು ಆ ನ್ಯಾಯಾಧೀಶನ ಸ್ಥಾನಕ್ಕೆ ಕಾ. ಜೋಶಿಗಳೇ ಸೂಚಿಸಿದ್ದರು ಮಹಾತ್ಮಾ ಗಾಂಧಿಯವರು ಅದಕ್ಕನುಸಾರವಾಗಿ ಶ್ರೀ. ಭುಲಾಭಾಯಿ ದೇಸಾಯಿಗಳಿಗೆ ಆ ಆರೋಪಣೆಗಳನ್ನೆಲ್ಲಾ ವಿಚಾರಣೆಗಾಗಿ ಒಪ್ಪಿಸಿದ್ದರು ವಿಚಾರಣಾನಂತರ ಕಮ್ಯೂನಿಸ್ಟರು ಅಪರಾಧಿಗಳೆಂಬ ತನ್ನ ತೀರ್ಮಾನವನ್ನು ಗಾಂಧೀಜಿಗೆ ದೇಸಾಯಿಗಳು ತಿಳಿಸಿದ್ದಾರೆಂದೂ, ಆ ವಿಚಾರಣಾ ಫಲಿತಾಂಶವನ್ನು ಗಾಂಧಿಜೀ ಕಮ್ಯೂನಿಸ್ಟ ಪ್ರಮುಖರಿಗೆ ತಿಳಿಸಿರುವರೆಂದೂ ಗೊತ್ತಾಗಿದೆ ಈ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತೀರ್ಮಾನವೀಯಲಿದೆ. ಏ ಐ ಸಿ ಸಿ. ಯು ಅದನ್ನು ಮಂಜೂರು ಮಾಡಲಿದೆ ಆದರೆ ಹಾಗೆ ತೀರ್ಮಾನಿಸುವ ಮೊದಲು ಕಮ್ಯೂನಿಸ್ಟರ ಹೇಳಿಕೆಗಳನ್ನು ಕೇಳಿಕೊಳ್ಳುವೆವೆಂದು ಅಧ್ಯಕ್ಷ ಅಜಾದರು ಆಶ್ವಾಸನೆಯಿತ್ತಿದ್ದಾರೆ. ಕಮ್ಯೂನಿಸ್ಟರನ್ನು ಪೂರ್ಣ ಹೊರಗಟ್ಟಬೇಕೆಂಬುದಕ್ಕೇನೇ ಕಾಂಗ್ರೆಸಿನಲ್ಲಿ ಬಹುಮತವಿರುವಂತಿದೆ ಅವರು ತಮ್ಮ ಇದುವರೆಗಿನ ಕೃತ್ಯಕ್ಕಾಗಿ ಪಶ್ಚಾತ್ತಾಪ ಸೂಚಿಸಿ, ಮುಂದೆ ಕಾಂಗ್ರೆಸ್ ಶಿಸ್ತಿಗನುಸಾರವಾಗಿ ವರ್ತಿಸುವ ಭರವಸೆಯಿತ್ತರೆ, ಜವಾಬ್ದಾರಿ ಸ್ಥಾನವೀಯದೆ ಸಾದಾ ಸದಸ್ಯರಾಗಿ ಅವರನ್ನಿಟ್ಟುಕೊಳ್ಳಬಹುದೆಂದು ಅಭಿಪ್ರಾಯಪಡುವ ಮತ್ತೊಂದು ಪಂಗಡವೂ ಇದೆ. ಅಂತೂ ಈ ಬಾರಿಯ ರಾಷ್ಟ್ರಸಭಾ ಸಮಿತಿಯ ಅಧಿವೇಶನದಲ್ಲಿ ಇದೊಂದು ಕಚ್ಚಾಟ ಬಲಗೊಳ್ಳುವ ಲಕ್ಷಣಗಳು ಕಾಣುತ್ತಿವೆ.

ಉಡುಪಿ ಮುನಿಸಿಪಾಲಿಟಿ

ನೋಟೀಸು

(1920ನೇ ಇಸವಿ ಮದ್ರಾಸು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಗಳ ಆಕ್ಟಿನ 78ನೇ ಸೆಕ್ಷನ್ ಪ್ರಕಾರ)

1946ನೇ ಎಪ್ರಿಲ್ ತಿಂಗಳ ತಾರೀಕು 1ರಿಂದ ಉಡುಪಿ ಮುನಿಸಿಪಾಲಿಟಿ ಒಳಗೆ ಇರುವ ಯಾ ಉಪಯೋಗಿಸಲ್ಪಡುವ ಪ್ರತಿಯೊಂದ ಸೈಕಲಿನ ಮೇಲಣ ತೆರಿಗೆಯ ದರವನ್ನು ರೂಪಾಯಿ 1/4ರಿಂದ ರೂಪಾಯಿ 2ಕ್ಕೆ (ಬೇಜ ಕ್ರಯ ಹೊರತು) ಏರಿಸುವುದಾಗಿ ಉಡ್ಪಿ ಮುನ್ಸಿಪಲ್ ಕೌನ್ಸಿಲು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುತ್ತದೆ.

ಈ ನೋಟೀಸು ಜಾಹೀರಾದ ಒಂದು ತಿಂಗಳೊಳಗೆ ಮೇಲಿನ ಸೂಚನೆಗೆ ಹಾಜರುಪಡಿಸೋಣಾಗುವ ಆಕ್ಷೇಪಣೆಗಳು ಉಡ್ಪಿ ಮುನ್ಸಿಪಲ್ ಕೌನ್ಸಿಲಿನವರಿಂದ ಆಲೋಚಿಸಲ್ಪಡುವುವು.

(ಸಹಿ) ಟಿ. ಹರಿಶ್ಚಂದ್ರ ರಾವ್,
ಕಮಿಶನರ್.

ಉಡ್ಪಿ ಮುನ್ಸಿಪಲ್ ಆಫೀಸು,
ಮೊಕ್ಕಾಂ ಉಡುಪಿ
ತಾ. 6-9-1945

ಮಂಗಳೂರು—ಕ್ಷಯರೋಗಿ ನಿವಾರಣಾ ಸಮಸ್ಯೆಯ ಕಮಿಟಿ ಸಭೆಯು ಇದೇ ತಾ. 18ರಲ್ಲು ರಾ। ಬ। ಡಾ। ಕೇಶವ ಪೈಗಳವರ ನಿವಾಸದಲ್ಲಿ ಜರಗಲಿರುವುದಾಗಿ ಕೇಳುತ್ತೇವೆ

ಉಡುಪಿ

ಸಹಾಯಾರ್ಥ ನಾಟಕ— ಉಡುಪಿ ಮುನಿಸಿಪಲ್ ಸೌತ್ ಗರ್ಲ್ಸ್ ಹಾ। ಎ ಶಾಲೆಯ ಕಟ್ಟಡದ ಸಹಾಯಾರ್ಥವಾಗಿ ಇದೇ ತಾ 19ನೆ ಬುಧವಾರ ರಾತ್ರಿ 9. 30ಕ್ಕೆ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ "ಕಾಯಿದೆ ಭಂಗ" ಎಂಬ ನಾಟಕ ಅಭಿನಯಿಸಲಾಗುವುದು ಉಡುಪಿಯ ಪ್ರಸಿದ್ಧ ವಕೀಲರುಗಳೂ ಡಾಕ್ಟರರೂ, ಮುನಿಸಿಪಲ್ ಕೌನ್ಸಿಲರುಗಳೂ ಪ್ರಮುಖ ಪಾತ್ರಗಳನ್ನು ವಹಿಸುವರು ಈಗಾಗಲೇ ಸೀಟುಗಳನ್ನು ಕಾದಿಡಲು ಕೇಳಿಕೆಗಳು ಬರುತ್ತಿವೆ ಜಿಲ್ಲಾ ಕಲೆಕ್ಟರ್ ರಾವ್ ಬಹದೂರ್ ಶ್ರೀ ಪಿ ರಾಮದಾಸರು ಈ ಸಮಾರಂಭದ ಅಧ್ಯಕ್ಷತೆ ವಹಿಸಲು ಒಪ್ಪಿರುವರು

ಮುನ್ಸಿಪಲ್ ಕೌನ್ಸಿಲು ಸಭೆಯು ತಾ 11ರಲ್ಲು ಜರಗಲಿದ್ದು ಕಾರಣಾಂತರಗಳಿಂದ ಮುಂದರಿಹಾಕಬೇಕಾಗಿ ಬಂತು ಮುಂದಿನ ಸಭೆಯು ತಾ 18ರಲ್ಲು ಜರಗುವುದು

ಗಣೇಶ ಹಬ್ಬ—ವು ಎಲ್ಲೆಡೆಗಳಲ್ಲೂ ಭಕ್ತಿಪೂರಿ ಆಚರಿಸಲಾಗಿದೆ. ಪಾಡಿಗಾರು ಮಠದಲ್ಲಿ ಶ್ರೀಕೃಷ್ಣಾಪುರ ಮಠದ ಶ್ರೀವಿದ್ಯಾರತ್ನತೀರ್ಥ ಸ್ವಾಮಿಯವರು ಕಳೆದ ವರುಷಕ್ಕಿಂತಲೂ ಈ ಬಾರಿ ವಿಶೇಷ ಆಕರ್ಷಣ ರೀತಿಯಲ್ಲಿ ಗಣೇಶ ಹಬ್ಬದ ಆಚರಣೆಯನ್ನು ಕೈಕೊಂಡಿದ್ದರು ದೃಶ್ಯಾವಳಿಗಳನ್ನು ನೋಡಲು ಜನರು ಗುಂಪುಗುಂಪಾಗಿ ಬರುತ್ತಿದ್ದರು

ಕಲ್ಯಾಣಪುರ— ಮಗುವಾಗಿದ್ದಾಗ ಕುಟುಂಬದೊಂದಿಗೆ ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದ ಪಾವುಲ್ ಪಾಯಸನನ್ನು ಕಳೆದ ತಾ 4ರಲ್ಲಿ ಶುದ್ಧೀಕರಿಸಿ 'ರಂಗ' ಎಂಬ ಹೆಸರು ಕೊಟ್ಟು ಹಿಂದೂ ಮತಕ್ಕೆ ಸೇರಿಸಲಾಯಿತು ಆ ದಿನ ಗರಡಿಯಿಂದ ದೇವಾಲಯದವರೆಗೆ ಹಿಂದೂಗಳು ಸಂಭ್ರಮದ ಮೆರವಣಿಗೆಯಿಂದ ಬೇಂಡು ವಾಲಗದೊಂದಿಗೆ ಶುದ್ಧೀಕೃತನನ್ನು ಸುತ್ತಾಡಿಸಿದರು

ಕುಂಜೂರು—ಶ್ರೀ ವಿವೇಕಾನಂದ ಸೇವಾ ಸಂಘ'ದ ಕೆಲಸಗಾರರ ಸಭೆಯು ತಾ. 10 9 45ರಲ್ಲಿ ಜರಗಿ ತಾ 16-9-45ನೇ ಆದಿತ್ಯವಾರ ಪೂರ್ವಾಹ್ನ 10 ಘಂಟೆಗೆ ಸಂಘದ ಭವನದಲ್ಲಿ 10ನೇ ವಾರ್ಷಿಕ ಮಹಾ ಸಭೆಯನ್ನು ಜರಗಿಸುವ ನಿರ್ಧಾರವಾಯಿತು

ಕಡಬ— ಶ್ರೀ ಕೃಷ್ಣ ಜಯಂತ್ಯುತ್ಸವವು ತಾ 30 8 45ರಲ್ಲು ವೇದಾಂತ ಸಂಘದವರಿಂದ ಡಾ। ಕೆ ಕೆ ರೈಗಳವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು ಕಾರ್ಯದರ್ಶಿಗಳಾದ ಶ್ರೀ। ಕೆ ವಿ ಸುಬ್ಬರಾಯರು ಶ್ರೀ ಕೃಷ್ಣ ಜನ್ಮೋತ್ಸವದ ಪೀಠಿಕಾ ಭಾಷಣವನ್ನಿತ್ತರು. ಬಳಿಕ ಶ್ರೀ। ವಾಸುದೇವ ಉಪಾಧ್ಯಾಯರು "ಶ್ರೀ ಕೃಷ್ಣ ಜನ್ಮ" ಕಥೆಯನ್ನು ವಿವರಿಸಿದರು ನಂತರ ಆನಂದದ ಕೋಲಾಟ ಗಾನ ನಡೆಯಿತು. ಬಳಿಕ ಬೋರ್ಡ ಹಾ ಎ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ। ಕೆ. ವೆಂಕಟ್ರಾವ್, ಸಹಾಯಕ, ಶ್ರೀ। ಇ ರಾಮಣ್ಣ ರೈಗಳು ಶ್ರೀ ಕೃಷ್ಣನ ವಿಷಯವಾಗಿ ಮಾತನಾಡಿದರು ಬಳಿಕ ಶ್ರೀ। ಕೆ ವಿ. ಸುಬ್ಬರಾಯರು 'ಶ್ರೀಕೃಷ್ಣನ ಬೋಧಾಮೃತ'ದ ಸಾರವನ್ನು ವಿವರಿಸಿದರು ಆ ಮೇಲೆ ಶ್ರೀ। ಶಾಂತಿರಾಜ ಹೆಗ್ಗಡೆಯವರ ಕೊಳಲಗಾನವು ನಡೆಯಲು, ಅಧ್ಯಕ್ಷರು ಯಥೋಚಿತವಾದ ಭಾಷಣದಿಂದ ಸಭಿಕರನ್ನು ಸಂತೋಷಿಸಿದರು.

ದೇವಡಿಗ ಸುಧಾರಕ ಸಂಘ, ಮುಂಬಾಯಿ—ಈ ಸಂಘ ಸ್ಥಾಪನೆಯಾದಂದಿನಿಂದ ಕಮಿಟಿ ಮೆಂಬರರಾಗಿ, ಉಪಾಧ್ಯಕ್ಷರಾಗಿ, ಮತ್ತು ಅಧ್ಯಕ್ಷರಾಗಿ ತನು ಮನ ಧನಗಳನ್ನರ್ಪಿಸಿ ಸಂಘಕ್ಕೆ ಸೇವೆ ಸಲ್ಲಿಸಿದ ಶ್ರೀ ಹೆಜಮಾಡಿ ಸೇಸ ಆರ್ ಗುಜರು ತಾ. 20-8 45ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ ಎಂದು ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು
ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೀ ರೂ. 1—4—0.

ರೂ 1-8-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,
ರಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ, ಕ

ಮಂಗಳೂರು.

ಹಸುಗೆ ಆಫೀಸರರ ಪ್ರಕಟಣೆ

ಮಂಗಳೂರು ಹಸುಗೆ ಸರಹದ್ದಿನೊಳಗೆ ಭತ್ತ ಸಾಗುವಳಿ ಇರುವ ಭೂಮಾಲಿಕರ ಮತ್ತು ಸಾಗುವಳಿದಾರರ ಅವಗಾಹನೆ ಬಗ್ಗೆ

೧. ಮಂಗಳೂರು ಹಸುಗೆ ಸರಹದ್ದಿನೊಳಗಿರುವ ಭತ್ತದ ಪೈರನ್ನು ಮಂಗಳೂರು ಹಸುಗೆ ಆಫೀಸರರ ಬರಹ ಮೂಲಕ ಅನುಮತಿ ಇಲ್ಲದೆ ಕಟಾವು ಮಾಡಕೂಡದು.

೨. ಹಾಗೆ ಗದ್ದೆಯಿಂದ ಪೈರನ್ನು ಕಟಾವು ಮಾಡಲು ಅಪೇಕ್ಷಿಸುವವರು ಮಂಗಳೂರು ಹಸುಗೆ ಆಫೀಸರರಿಗೆ ಸರ್ವೆ ನಂಬ್ರ, ವಿಸ್ತೀರ್ಣ, ಅಂದಾಜು ಭತ್ತದ ಪರಿಮಾಣ ಮತ್ತು ಕಟಾವು ಮಾಡುವ ತಾರೀಕು ನಮೂದಿಸಿ ಒಂದು ವಾರದ ಮೊದಲೇ ಅರ್ಜಿ ಬರಕೊಂಡು ಬರಹ ಮೂಲಕ ಹುಕುಂ ಪಡೆಯತಕ್ಕದ್ದು. ಅರ್ಜಿಯ ಮಾದರಿಯನ್ನು ಮಂಗಳೂರಲ್ಲಿರುವ ಮೂರು ಹಸುಗೆ ಆಫೀಸುಗಳ ನೋಟೀಸು ಬೋರ್ಡುಗಳಲ್ಲಿ ಕಾಣಬಹುದು.

೩. ಮಳೆ ಅಥವಾ ಇತರ ಕಾರಣಗಳಿಂದ ಪೈರನ್ನು ಕೂಡಲೇ ಕಟಾವು ಮಾಡಿ ಒಯ್ಯಬೇಕಾಗಿದ್ದಲ್ಲಿ ನೋಟೀಸು ವಿನಾ ಕಟಾವು ಮಾಡಬಹುದು. ಆದರೆ ಕಟಾವು ಮಾಡಿದ ಕೂಡಲೇ ಸಾಗುವಳಿದಾರರು ಭತ್ತದ ಸಜಾವಾದ ಪರಿಮಾಣವನ್ನು ಹಸುಗೆ ಆಫೀಸರರಿಗೆ ತಿಳಿಸತಕ್ಕದ್ದು.

೪. ಹಸುಗೆ ಸರಹದ್ದಿನ ಹೊರಗೆ ವಾಸಿಸುವ ಭೂಮಾಲಿಕನಾಗಲೀ ಸಾಗುವಳಿದಾರನಾಗಲೀ ಪೈರನ್ನು ಒಯ್ಯಬೇಕಾದಲ್ಲಿ ಹಸುಗೆ ಆಫೀಸರರಿಗೆ ಅರ್ಜಿ ಬರಕೊಂಡು ಪರ್ಮಿಟು ಪಡಕೊಳ್ಳಬೇಕು.

೫. ಒಂದೇ ಬೆಳೆಯ ಸಾಗುವಳಿದಾರರಿಗೆ ಯಾ ಭೂಮಾಲಿಕರಿಗೆ ಒಂದು ವರ್ಷಕ್ಕೆ ಬೇಕಾದ ಭತ್ತ ಬಿಟ್ಟುಕೊಡಲ್ಪಡುವುದು. ಎರಡು ಅಥವಾ ಮೂರು ಬೆಳೆಯ ಸಾಗುವಳಿದಾರರಿಗೆ ಮೊದಲನೆ ಬೆಳೆಯಿಂದ ೫ ತಿಂಗಳಿಗೆ ಬೇಕಾದಷ್ಟು ಮಾತ್ರ ಬಿಟ್ಟುಕೊಡುವುದು. ಉಳಿದ ೭ ತಿಂಗಳ ಭತ್ತ ಉಳಿದ ಬೆಳೆಯಿಂದ

೬. ಸಾಗುವಳಿದಾರರು ಬೆಳೆಯನ್ನು ಕಟಾವು ಮಾಡಿದ ಕೂಡಲೇ ಅದರಿಂದ ಉತ್ಪತ್ತಿ ಬಂದ ಭತ್ತದ ಜುಮ್ಲಾ ಪ್ರಮಾಣವನ್ನು ಅಳತೆ ಮಾಡಿ ಮುಡಿ (೪೨ ಸೇರಿನ) ಲೆಕ್ಕದಲ್ಲಿ ಬರೆದಿಡತಕ್ಕದ್ದು ಮತ್ತು ಅದನ್ನು ಹಸುಗೆ ಆಫೀಸಿಗೆ ತಿಳಿಸಬೇಕು. ಲೆಕ್ಕ ಬರೆದಿಡುವ ಫೋರ್ಮನ್ನು ಮತ್ತು ಅರ್ಜಿಯ ಮಾದರಿಯನ್ನು ಹಸುಗೆ ಆಫೀಸಿನ ನೋಟೀಸು ಬೋರ್ಡುಗಳಲ್ಲಿ ಕಾಣಬಹುದು.

೭. ಹಸುಗೆ ಆಫೀಸರರ ಬರಹ ಮೂಲಕ ಹುಕುಂ ಇಲ್ಲದೆ ಸಾಗುವಳಿದಾರರು ಭತ್ತವನ್ನು ಯಾವ ರೀತಿಯಲ್ಲಿಯೂ ಉಪಯೋಗಿಸಬಾರದು, ಅದರ ಭತ್ತವನ್ನು ಅಕ್ಕಿಯಾಗಿ ಮಾಡಬಹುದು.

೮. ಮಂಗಳೂರು ಹಸುಗೆ ಸರಹದ್ದಿನೊಳಗಿರುವ ಸ್ಥಳಗಳ ನಿವಾಸಿಗಳಿಗೆ ತಮ್ಮ ಮನೆ ಖರ್ಚಿಗೆ ಬೇಕಾಗುವ ಅಕ್ಕಿಯನ್ನು ತಮ್ಮ ಗೇಣಿಯಿಂದ ಪಡೆಯಬೇಕಾದಲ್ಲಿ, ಒಂದು ವರ್ಷದ ಖರ್ಚಿಗೆ ಬೇಕಾಗುವ ತಮ್ಮ ಅಕ್ಕಿಯನ್ನು ಯಾವ ಯಾವ ಸಾಗುವಳಿದಾರರಿಂದ ತರುತ್ತೇವೆ ಎಂಬುದರ ಬಗ್ಗೆ ತಮಗೆ ಗೇಣಿರೂಪವಾಗಿ ಬರತಕ್ಕ ಎಲ್ಲಾ ವಿವರಗಳನ್ನು ಕಾಣಿಸಿ ಒಂದು ಧೃಢಪತ್ರಿಕೆಯನ್ನು ಮಂಗಳೂರು ಹಸುಗೆ ಆಫೀಸರರಿಗೆ ಇದೇ ಸಪ್ಟಂಬರ ತಿಂಗಳ ಅಂತ್ಯದೊಳಗೆ ತಿಳಿಸತಕ್ಕದ್ದು. ಧೃಢಪತ್ರಿಕೆಯ ಮಾದರಿಯನ್ನು ಹಸುಗೆ ಆಫೀಸಿನ ನೋಟೀಸು ಬೋರ್ಡುಗಳಲ್ಲಿ ಕಾಣಬಹುದು.

ಸಹಕಾರಿ ಉದ್ಯೋಗಸ್ಥರ:—ವಾರ್ಷಿಕ ತ್ಸವವು ತಾ. ೩ರಂದು ಸ್ಥಳೀಯ ಸಹಕಾರಿ ಬೇಂಕಿನ ಕಟ್ಟಡದಲ್ಲಿ ಶ್ರೀ ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಎಲೋಸಿಯಸ್ ಕಾಲೇಜಿನ ಬಿ. ಕಾಮ್ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ತಾ. ೮ರಂದು ಶ್ರೀ. ಬಿ ಪ್ರಭಾಕರ ಬಾಳಿಗರು ನೆರವೇರಿಸಿದರು

ಎಲೋಸಿಯಸ್ ಕಾಲೇಜಿನ ಹಿಂದೀ ಸಂಘದ ಆಶ್ರಯದಲ್ಲಿ ತಾ. ೯ರಂದು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಬೇಕೇ ಬೇಡವೇ ಎಂಬ ಕುರಿತು ಚರ್ಚಾಕೂಟ ನಡೆಯಿತು. ಶ್ರೀ ಶ್ರೀನಿವಾಸ ಪೈ ಅವರು ಅಧ್ಯಕ್ಷತೆ ವಹಿಸಿದ್ದರು.

ರಿಕ್ವಿಸಿಶನಿನ ವಿಚಾರ ಕಲೆಕ್ಟರರ ಪ್ರಕಟಣೆ

ಸ್ವಂತ ಸಾಗುವಳಿ ಇಲ್ಲದ, ಅಥವಾ ಒಂದು ವರ್ಷಕ್ಕೆ ಬೇಕಾದಷ್ಟು ಸ್ವಂತ ಸಾಗುವಳಿಯಿಲ್ಲದ ದ. ಕ. ಜಿಲ್ಲೆಯ ವರ್ಗದಾರರು, ಕೆಳಗೆ ತೋರುವ ರೀತಿಯ ಧೃಢಪತ್ರಿಕೆಯೊಂದನ್ನು ಯಾರ ಲೆಕ್ಕದಿಂದ ಸ್ವಂತ ಉಪಯೋಗಕ್ಕಾಗಿ ಗೇಣಿಯನ್ನು ಅಕ್ಕಿಯ ರೂಪದಲ್ಲಿ ಪಡೆಯಬೇಕೆಂದಿರುವರೆಂಬುದನ್ನು ಕಾಣಿಸಿ, ಆಯಾ ತಾಲೂಕಿನ ತಹಸೀಲ್ದಾರರ ಬಳಿಗೆ ಇದೇ ಸಪ್ಟಂಬರ ತಾ 30 ರೊಳಗೆ ಕಳುಹತಕ್ಕದ್ದು.

ಧೃಢಪತ್ರಿಕೆಯಲ್ಲಿರತಕ್ಕ ವಿವರ 1 ಗ್ರಾಮ, 2. ಅರ್ಜಿದಾರನ ಹೆಸರು, ಪೇಶ, ೩ ಮನೆ ಮಂದಿಯ ಸಂಖ್ಯೆ (ಮಕ್ಕಳು ಮತ್ತು ಪ್ರಾಯಸ್ಥರು) 1 ಪ್ರಾಯಸ್ಥರಿಗೆ ದಿವಸಕ್ಕೆ 1 ಪಾತ್ಲಿ ನಂತೆ (1/2 ಸೇರು) ಯೂ ಮಕ್ಕಳಿಗೆ (2ರಿಂದ 12 ವರ್ಷದವರು) ದಿನಕ್ಕೆ 1/2 ಪಾತ್ಲಿನಂತೆಯೂ, ಒಂದು ವರ್ಷಕ್ಕೆ ಬೇಕಾಗುವ ಅಕ್ಕಿ 5. ಇತರ ಅಗತ್ಯಗಳಿದ್ದಾದರೂ ಉದ್ದರಿ ಆ ಬಗ್ಗೆ, 6 ಸ್ವಂತ ಸಾಗುವಳಿ ಇದ್ದರೆ, ಬೀಜ ಮತ್ತು ಮಜೂರಿಯನ್ನು ಕಳೆದು ಉಳಿಯುವ ಮೂರು ಬೆಳೆಯ ಎಲ್ಲಾ ಅಕ್ಕಿಯ ಪ್ರಮಾಣ. 7 ಮತ್ತೆ ಬೇಕಾಗುವ ಅಕ್ಕಿ. 8 ಅಕ್ಕಿಯನ್ನು ಪಡೆಯಲಿಚ್ಛಿಸುವ ಒಕ್ಕಲಿನ ಹೆಸರು, ಗ್ರಾಮ, ತಾಲೂಕು, ಯಾವ ಯಾವ ಬೆಳೆಯಿಂದ ಎಷ್ಟೆಷ್ಟು

ಪ್ರತಿ ಬೆಳೆ ಕಟಾವಾಗಿ 14 ದಿವಸಗಳೊಳಗಾಗಿ ವರ್ಗದಾರರ ವಕ್ಕಲು ತನ್ನ ಸ್ವಾಧೀನವಿರುವ ಒಟ್ಟು ಅಕ್ಕಿ ಅಥವಾ ಭತ್ತದ ಪ್ರಮಾಣವನ್ನು ತೋರಿಸುವ ಸ್ಟಾಕ್ ಧೃಢಪತ್ರಿಕೆಯೊಂದನ್ನು ಆಯಾ ತಾಲೂಕಿನ ತಹಸೀಲ್ದಾರರಿಗೆ ಕಳುಹಿಸಬೇಕಷ್ಟೆ. ಅದರಲ್ಲಿರಬೇಕಾದ ವಿವರಗಳಿವು 1 ಗ್ರಾಮದ ಹೆಸರು, 2. ಧೃಢ ಪತ್ರಿಕೆ ಕೊಡುವವನ ಹೆಸರು, 3 ಒಕ್ಕಲೇ ಅಥವಾ ವರ್ಗದಾರನೇ? 4 ಒಕ್ಕಲಾಗಿದ್ದರೆ, ಧನಿಯ ಹೆಸರು, 5 ಬೇಸಾಯ ಮಾಡುವ ವಿಸ್ತೀರ್ಣ. 6. ಉತ್ಪತ್ತಿ 7 ಈ ಕೊಯಿಲಾದಾಗ ಹಿಂದಿನ ಬೆಳೆಯಲ್ಲಿ ಉಳಿದದ್ದು. 8. ಕೂಲಿಗೆ ಮತ್ತು ಮನೆ ಉಪಯೋಗಕ್ಕೆ ಆ ದಿವಸದಿಂದ ಬೇಕಾಗುವ ಅಕ್ಕಿಯ ಪ್ರಮಾಣ, 9 ಈ ದಿನ (ಧೃಢ ಪತ್ರಿಕೆ ಬರೆದ ದಿನ) ಇದ್ದ ಅಕ್ಕಿಯ ಸ್ಟಾಕ್

ಸ್ಟೋರಿಗೊಪ್ಪಿಸುವ ವಾಯಿದೆ—ಮೊದಲನೆಯ ಬೆಳೆಯ ಉಳಿತಾಯದ ಅಕ್ಕಿಯನ್ನು ಸ್ಟೋರುಗಳಿಗೆ ತಂದೊಪ್ಪಿಸುವ ವಾಯಿದೆಯನ್ನು ಜಿಲ್ಲಾ ಕಲೆಕ್ಟರರು ಪ್ರಕಟಿಸಿದಾರೆ. ಹೊಸ ವರ್ಗ ಉಪತಾಲೂಕಿನಲ್ಲಿ, ಕೆನ್ನೂರ ಮತ್ತು ಕಿನ್ನಿಗಳಲ್ಲಿ ತಾ 20 9 45 ರೊಳಗೆ. ಬೆಳ್ತಂಗಡಿಯಲ್ಲಿ ತಾ 20 10 45 ರೊಳಗೆ

ಜಿಲ್ಲೆಯ ಇತರ ಕಡೆಗಳಲ್ಲಿ, ಬತ್ತವಾಗಿದ್ದರೆ, ಅಘಾರದವರನ್ನು ತಾ 31 10 45 ರೊಳಗೆ ಉಳಿದರ್ಧ 15-11 45ರೊಳಗೆ. ಅಕ್ಕಿಯಾಗಿದ್ದರೆ, ಕಾಲಂಶ ತಾ 31 10 45 ರೊಳಗೆ, ಕಾಲಂಶ 30-11 45ರೊಳಗೆ, ಕಾಲಂಶ 31-12-45ರೊಳಗೆ ಮತ್ತು ಕಾಲಂಶ 31-1 46ರ ಒಳಗೆ. ಮೊದಲಿನ ಕಂತನು ಅಕ್ಕಿ ಅಥವಾ ಭತ್ತದ ರೂಪದಲ್ಲಿ ಕೊಡಬಹುದು.

ಪ್ರಾಂತೀಯ ಮಹಿಳಾ ಸಮ್ಮೇಲನ—ಸ್ಥಳೀಯ ಭಗಿನೀ ಸಮಾಜದ ಆಶ್ರಯದಲ್ಲಿ ತಾರೀಕು 7 10-1945ರಂದು ಕೆನರಾ ಹೈಸ್ಕೂಲಿನಲ್ಲಿ ಜರಗುವುದು. ಶ್ರೀಮತಿ ರಮಾಬಾಯಿ ಪಂಡಿತರು ಸ್ವಾಗತಾಧ್ಯಕ್ಷೆ ಶ್ರೀಮತಿಯರಾದ ಕಲ್ಯಾಣಿ ಎ. ಶೆಟ್ಟಿ ಮತ್ತು ಕಮಲಾ ಶೆಟ್ಟಿ ಇವರು ಜತೆ ಕಾರ್ಯದರ್ಶಿಗಳು. ಸಮ್ಮೇಲನದಲ್ಲಿ ಈ ಕೆಲವು ಠರಾವುಗಳು ಮಂಡಿಸಲ್ಪಡುವವು 1 ಹುಡುಗಿಯರ ಅಧಿಕ ಸಂಖ್ಯೆಯಲ್ಲಿ ವಾದಿ (ನರ್ಸ್)ಯರ ಉದ್ಯೋಗವನ್ನು ಕೈಕೊಳ್ಳಬೇಕು 2. ಹಿಂದೂ ಬಾಧ್ಯಸ್ಥಿಕೆಯ ಹಾಗೂ ವಿವಾಹ ಶಾಸನಗಳನ್ನು ಈ ಪರಿಷತ್ತು ಸಮರ್ಥಿಸುತ್ತದೆ. 3. ಹಿಂದೂಸ್ಥಾನ ಜನಮಾನವನ್ನು ಪ್ರೋತ್ಸಾಹಿಸುವುದಲ್ಲದೆ, ಇತರ ಸ್ತ್ರೀ ಸಿಬ್ಬಂದಿಗಳನ್ನು ಇನ್ನೂ ಸುಧಾರಿಸಬೇಕು. 4 ಗನಿಗಳಲ್ಲಿ ಸ್ತ್ರೀಯರನ್ನು ದುಡಿಸುವ ಸರಕಾರದ ನೀತಿಯನ್ನು ಖಂಡಿಸುತ್ತದೆ. 5 ಕಸ್ತೂರಿ ಬಾಯಿ ಸಮಿತಿಗೆ ಸ್ಥಳೀಯ ಸ್ತ್ರೀ ಸಂಸ್ಥೆಯಿಂದ ಒಂದು ಪರ್ಸ್ ಸಮರ್ಪಿಸಿಕೊಳ್ಳಬೇಕು 6 ವಾರ್ಷಿಕ ಕೈಗಾರಿಕೆಯನ್ನು ವೃದ್ಧಿಪಡಿಸುವುದಲ್ಲದೆ, ಸ್ವದೇಶಿ ವಸ್ತುಗಳನ್ನೇ ಉಪಯೋಗಿಸಬೇಕೆಂದು ಸ್ತ್ರೀಯರೊಡನೆ ವಿನಂತಿಸುತ್ತದೆ 7 ವಿದ್ಯಾಭ್ಯಾಸ ಶಿಕ್ಷಣವನ್ನು ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲೂ ಆರಂಭಿಸುವುದಲ್ಲದೆ, ಕನ್ನಡವನ್ನೇ ಮೂಲ ಭಾಷೆಯಾಗಿ ಮಾಡಬೇಕೆಂದೂ ಅಭಿಪ್ರಾಯ ಪಡುತ್ತದೆ.

ಶ್ರೀ ಎಸ್ ಎನ್. ಹೊಳ್ಳರ—ಬಿಡುಗಡೆಯಾಗಿದೆ. 1942ರಲ್ಲಿ ಒ. ಎಸ್ ಅಲ್ಲಿ ವಿಗ್ರಹಬಂಧನದಲ್ಲಿದ್ದ ಶ್ರೀ ಹೊಳ್ಳರು, ಮದ್ರಾಸ್ ಪ್ರಾಂತದ ಇತರ 24 ಮಂದಿ ದಿಗ್ಬಂಧಿತರ ಜತೆಗೆ ತಾ ೪ರಂದು ಬಿಡುಗಡೆ ಹೊಂದಿದ್ದಾರೆ ಸದ್ಯ ಈ ಪ್ರಾಂತದಲ್ಲಿ ಮೂವರು ಮಾತ್ರ ಇನ್ನೂ ದಿಗ್ಬಂಧನದಲ್ಲಿದ್ದಾರೆ.

ಡಿಸ್ಟ್ರಿಕ್ಟ್ ಜಡ್ಜ್—ಸ್ವಲ್ಪ ಕಾಲದ ಹಿಂದೆ ನಮ್ಮ ಸೆಶನ್ಸ್ ಹಾಗೂ ಜಿಲ್ಲಾ ಜಡ್ಜರಾಗಿ ಶ್ರೀ ಎಂ. ಬಿ. ಸಿ. ಕೋಮನ್ ಅವರನ್ನು ಮದ್ರಾಸ್ ಹೈಕೋರ್ಟಿನ ಅಡಿಶನಲ್ ಜಡ್ಜರಾಗಿ ನೇಮಿಸಲಾಗಿದೆ

ವಿದ್ಯಾರ್ಥಿ ಸಂಘದ—ಉದ್ಘಾಟನೆಯು ತಾ 1ರಂದು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಭವನದಲ್ಲಿ ಪ್ರೊ. ಸಿ. ಜಿ. ಜೋಶಿಯರ ಅಧ್ಯಕ್ಷತೆಯಲ್ಲಿ ಜರಗಿತು. ನಾರಾಯಣರಾವ್ ಅವರು ಉದ್ಘಾಟನೆಯನ್ನು ನೆರವೇರಿಸಿದರು. ಸುಧಾಕರ ನಿವಾಸಕ್ಕಾಗಿ ಸಂತಾಪ ಸೂಚಿಸುವ ಠರಾವು ಮಾಡಲಾಯಿತು

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 6 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಪಿಮ್ಮದ ಎಲ್ಲ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡರೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು—ಡಾ ಪಾಯಸ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಟಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L I M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೨ ಬಾಟ್ಲಿಗಳು ಹುಟ್ಟು ಕಳಿವ: ೪೮ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

NOTICE

In the Court of the Dt. Munsiff of Kasargod.

O. S. No. 229/45

K. Sarvothuma Kamath, son of K Anantha Kamath, Merchant, Kasargod Plaintiff.

AND

Rama Bhatta & others- respondants

Take notice that the above named plaintiff has filed a suit for possession of the plaint properties with income profits till delivery of possession and the suit is posted to 14-9-45 for fresh notice to 3rd deft. Vishnu Ballullaya and 6th deft. Gopalkrishna Rao. They are hereby informed that if they have any objections they will have to file their statement on that date

Kasargod } K Devadas Shenoy
27 8-45 } Vakil for plaff.

ದಕ್ಷಿಣ ಕನ್ನಡ.

ಮುಲ್ಕಿ ಸೆಂಟರಿನಲ್ಲಿ ಸಸಿ ದಿನಾಚರಣೆ— ತಾ. 2 9 45ರಲ್ಲಿ ಮುಲ್ಕಿ, ಪಳೆಯಂಗಡಿ, ಕಿನ್ನಿಗೋಳಿ, ಮುಂಡ್ಕೂರು ಮತ್ತು ಫಲಿಮಾರು ಕ್ಷೇತ್ರಗಳಲ್ಲಿ ಅವುಗಳಿಗೆ ಸೇರಿದ ನೆರೆ ಗ್ರಾಮಗಳೊಡನೆ ಸಸಿ ನಡುವ ದಿನಾಚರಣೆ ಈ ಮುಂಚೆ ಪ್ರಕಟಮಾಡಿದಂತೆ ಆಚರಿಸಲಾಯಿತು. ಪ್ರತಿ ಕ್ಷೇತ್ರಗಳಲ್ಲಿಯೂ ಬಹು ಮಂದಿ ರೈತರು ಬಂದು ಭಾಗವಹಿಸಿದ್ದರು. 5 ಕ್ಷೇತ್ರಗಳಲ್ಲಿಯೂ 4, 5,ಸಾವಿರಸಂಖ್ಯೆಗೆ ಮಿಕ್ಕಿದಜನರಿದ್ದು, ಹೆಚ್ಚಿನವರು ರೈತ ವರ್ಗದವರೆಂಬುದು ನಡಲು ತಂದುಕೊಂಡುಹೋದ ಸುಮಾರು 2500ಕ್ಕೆ ಮಿಕ್ಕಿದ ಸಸಿಗಳಿಂದ ವ್ಯಕ್ತವಾಗುವುದು.

ಮುಲ್ಕಿಯಲ್ಲಿ ಜಿಲ್ಲಾ ಕಲೆಕ್ಟರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕೃಷಿ ಇಲಾಖಾ ಜಿಲ್ಲಾ ಆಫೀಸರರು ಹಾಜರಿದ್ದರು. ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರು ಮುಂಡ್ಕೂರಲ್ಲಿಯೂ, ರೆವರೆಂಡ್ ಫಾದರ್ ಡಾಕ್ಟರ್ ಮಿನೆಜಸ್, ಡಿ. ಡಿ.ಯವರು ಆ ಯಿಕಳ (ಕಿನ್ನಿಗೋಳಿ) ದಲ್ಲಿಯೂ ಶ್ರೀ ರಾಮಚಂದ್ರರಾವ್, ವಕೀಲ್, ಕಾರ್ಕಳ, ಪಡುಪಣಂಬೂರು (ಪಳೆಯಂಗಡಿ) ಲ್ಲಿಯೂ ಶ್ರೀ ಮೋಹನ್‌ದಾಸ್ ಅಡ್ಯಂತಾಯ, ವಕೀಲ್, ಕಾರ್ಕಳ, ಫಲಿಮಾರಲ್ಲಿಯೂ ಅಧ್ಯಕ್ಷಸ್ಥಾನ ವಹಿಸಿದ್ದರು. ಬಂಟರ ಯಾನೆ ನಾಡವರ ಸಂಘದ ಮೆಂಬರರು ರಾವ್ ಬಹದ್ದೂರ್, ಕೆ. ಟಿ. ಆಳ (ಅಧ್ಯಕ್ಷ) ರಾವ್ ಸಾಹೇಬ ರಂಗನಾಥ ಪೂಂಜ (ಉಪಾಧ್ಯಕ್ಷ) ಶ್ರೀ. ಕೆ. ಸದಾನಂದ ಹೆಗ್ಗಡೆ (ಕಾರ್ಯದರ್ಶಿ)ಯವರು ಆ ಯಿಕಳ, ಪಡುಪಣಂಬೂರು ಮತ್ತು ಮುಂಡ್ಕೂರಲ್ಲಿ ನಂಮ ಆಮಂತ್ರಣದಂತೆ ಬಂದು ಶ್ಲಾಘನೀಯವಾದ ಸಹಾಯವನ್ನು ಕೊಟ್ಟಿದ್ದರು. ಪುತ್ತೂರು, ಮಂಗಳೂರು, ಕಾರ್ಕಳ ಮತ್ತು ಉಡುಪಿಯ ಕೃಷಿ ಇಲಾಖಾ ಡೆಮೊನ್ಸ್ಟ್ರೇಟರರು ಪ್ರತಿ ಒಂದು ಮೇಲಿನ ಕ್ಷೇತ್ರಗಳಲ್ಲಿ ಕ್ರಮವಾಗಿ ಇದ್ದು ಬಿತ್ತು, ಗೊಬ್ಬರಗಳ ಕುರಿತಾಗಿ ಅನುಭವಗಳನ್ನು ಸ್ತುತ್ಯವಾಗಿ ಕೊಟ್ಟಿರುತ್ತಾರೆ. ಎಲ್ಲಾ ಕಡೆಗಳಲ್ಲೂ ಸಿ. ರಾಜಗೋಪಾಲಾಚಾರ್ಯರೇ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಲಾಯಿತು.

ಪ್ರತಿ ಕಡೆಗಳಲ್ಲೂ ಸಭೆಗೆ ಬಂದಿದ್ದ ಕೆಲವು ಮಹನೀಯರು ಹಿತೋಕ್ತಿಗಳನ್ನು ಹೇಳಿ ಸಹಾಯಮಾಡಿರುವರು. ಅಧ್ಯಕ್ಷರುಗಳೆಲ್ಲಾ ತಮ್ಮ ಉತ್ತಮ ಅನುಭವಯುಕ್ತವಾದ ಮಾತುಗಳಿಂದ ರೈತ ವರ್ಗಕ್ಕೆ ತಕ್ಕ ಬುದ್ಧಿ ಮಾತುಗಳನ್ನು ಹೇಳಿದುದಲ್ಲದೆ ಗ್ರಾಮೋನ್ನತಿಯ ಪ್ರಬಲ ಕಾರ್ಯದಲ್ಲಿ ಕೈಕೊಂಡಿರುವ ಪ್ರತಿ ಒಂದು ಭಾಗವು ಅತೀ ಅಗತ್ಯವೂ ಸರಕಾರದ ಬೆಂಬಲವು ಇರತಕ್ಕದೆಂದೂ ಹೇಳಿ, ರೈತ ವರ್ಗವೆಲ್ಲಾ ಕೂಡಿ ಮಾಡುವ ಪ್ರಯತ್ನದಿಂದ ಇತರ ಕಡೆಯವರು ಎಚ್ಚತ್ತು ಮಾಡುವಂತಾಗಲು ಈ ಕ್ಷೇತ್ರವು ಮಾದರಿ ರೂಪ ಬೆಳೆದು ಬರಲೆಂದು ಆಶೀರ್ವದಿಸಿದರು.

33 ಗ್ರಾಮಗಳಲ್ಲಿಯೂ ಅತಿ ಬೇಗನೆ ಕಡ್ಡಾಯ ಶಿಕ್ಷಣ ಜ್ಯಾರಿಗೆ ತರುವಂತೆಯೂ, ಇಂಡಿಯಾ ಸರಕಾರವು ಗ್ರಾಮೋನ್ನತಿ ಯೋಜನೆ ಪ್ರಕಾರ ಈ ಕ್ಷೇತ್ರವನ್ನು ಆರಿಸುವಂತೆಯೂ, ಜಿಲ್ಲಾ ಅಭಿವೃದ್ಧಿ ಸಂಘವು ಇದೇ ಬರುವ ಡಿಸಂಬರದಲ್ಲಿ ಜಿಲ್ಲಾ ಪ್ರದರ್ಶನವನ್ನು ಮುಲ್ಕಿಯಲ್ಲಿ ಮಾಡಬೇಕೆಂದೂ, 1946ನೇ ಡಿಸಂಬರದಲ್ಲಿ ಇದೇ ಕ್ಷೇತ್ರವು ಪ್ರದರ್ಶನ ಒಂದಕ್ಕೆ ಅಣಿಯಿಸಿಂದಲೇ ಪ್ರಯತ್ನಿಸಬೇಕೆಂದೂ, ಈ ಕ್ಷೇತ್ರಕ್ಕಾಗಿಯೇ ಒಂದು ಕೃಷಿ ಇಲಾಖಾ ಡೆಮೊನ ಸ್ಟ್ರೇಟರರನ್ನೂ, ಡಿಪೋಗಳಿಗೆ ಹಬ್ಬಿಗೆ ಒಂದು ಮೇಸ್ತ್ರಿಯನ್ನು Bee Messenger ಒಬ್ಬನನ್ನು ಇಡಬೇಕೆಂದೂ, ಪ್ರತಿ ಕ್ಷೇತ್ರದಲ್ಲಿ ರೇಡಿಯೋ ಇದ್ದು ನಾಲ್ಕು ಎಕ್ರೆ ವಿರಾಮ ಸ್ಥಳ ಅನುಕೂಲಿಸಿಕೊಳ್ಳಬೇಕಾಗಿಯೂ, ಪ್ರತಿ ಗ್ರಾಮದಲ್ಲಿ ಕೆಲವು ಸೇವಕರಂತೆ ಒಂದು ಸೇವಕ ದಳಕ್ಕೆ ಪ್ರಯತ್ನಿಸಬೇಕಾಗಿಯೂ ನಿರ್ಣಯಗಳಾದವು. ಈ ಸಕಲ ನಿರ್ಣಯಗಳು ಮಾದರಿ ರೂಪವಾಗಿ ಗ್ರಾಮಾಭಿವೃದ್ಧಿಗೆ ಪೂರ್ಣ ಸಹಕಾರ ಕೊಡು ಸಂಘವುಗಳಿಂದೂ ತನ್ನ ಮುಖಾಂತರ ಜಿಲ್ಲೆಗೆ ಇದನ್ನು ಕಳುಹಿಸಿ ಕೊಡುವುದಾಗಿಯೂ ಜಿಲ್ಲಾ ಕಲೆಕ್ಟರರು ತನ್ನ ಭಾಷಣದಲ್ಲಿ ಹೇಳುತ್ತಾ, ಹೆಚ್ಚಿನ ಸಂತೋಷವನ್ನು ಸೂಚಿಸಿರುವರು.

ಮಲ್ಪೆ— ಕೊಡವೂರು ಗ್ರಾಮದ ಮಲ್ಪೆಯಲ್ಲಿ ಇಗರ್ಜಿಯೊಂದನ್ನು ಕಟ್ಟಲು ಆರಂಭಿಸಿದ ಸಾರ್ವಜನಿಕ ಫಂಡಿಗೆ ಶ್ರೀ ನಾರಾಯಣ ಗುರು ಬೇಂಕ್ ಲಿಮಿಟೆಡ್‌ನ ಮೆನೇಜಿಂಗ್ ಡ್ಯಾರೆಕ್ಟರರಾದ ಶ್ರೀ ಮಂಗಳೂರು ಜಾರಪ್ಪನವರು ರೂ 201/ ರ ಆದರ್ಶ ಸಹಾಯ ಮಾಡಿರುವುದನ್ನು ತಿಳಿಸಲು ತುಂಬಾ ಸಂತೋಷ ಪಡುವೆವು ಎಂದು ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಹೆಬ್ರಿ— ತಾ. 21 8 45ರಲ್ಲ ಹೆಬ್ರಿ ಪ್ರೈಮ್ಯಾರ್ ಎಲಿಮೆಂಟರಿ ಶಾಲೆಯಲ್ಲಿ ಇಲ್ಲಿಯ ರೂರಲ್ ಡಿಸ್ಪೆನ್ಸರಿ, ಡಾಕ್ಟರವರ ಅಧ್ಯಕ್ಷತೆಯಲ್ಲಿ ವಿಜಯ ದಿನವನ್ನು ಆಚರಿಸಲಾಯಿತು. ಅಧ್ಯಕ್ಷರು ಯುದ್ಧದ ವಿಷಯವಾಗಿಯೂ, ಯುದ್ಧದಿಂದ ಉಂಟಾದ ಲೋಕ ಹಾನಿಯನ್ನೂ ವಿವರಿಸಿದರು. ಅಧ್ಯಕ್ಷರು ಸ್ವಂತ ಖರ್ಚಿನಿಂದ, ಶಾಲೆಯ ಬಾಲ ಬಾಲಿಕೆಯರಿಗೂ ಸಭಿಕರಿಗೂ ಲಾಡಿನ ಉಂಡೆಯನ್ನು ಹಂಚಿದರು. ಶಾಲೆಯ ಹೆಡ್ ಮಾಸ್ತರ್ ವಿದ್ವಾನ್ ಕಾಡಪ್ಪಯ್ಯನವರು, ಧನ್ಯವಾದವನ್ನು ಅರ್ಪಿಸಿದರು.

ಬಾರಕೂರು— ಹ್ಯಾಸ್ಕೂಲು ಸ್ಥಾಪಿಸುವ ಬಗ್ಗೆ ಊರ ಪ್ರಮುಖರ ಸಭೆಯು ತಾ. 3-8-45 ರಂದು ಬೋ. ಹಾ. ಎ. ಮುಡುಗರ ಶಾಲೆಯಲ್ಲಿ ಶ್ರೀ ಶೆಂಕನಾರಾಯಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿ ಬಾರಕೂರು ಎಜ್ಯುಕೇಶನಲ್ ಸೊಸ್ಯಾಟಿ ಎಂಬ ಒಭಿಧಾನದಿಂದ ಒಂದು ಸಮಿತಿಯು ರಚಿಸಲ್ಪಟ್ಟು ಅದರ ಧ್ಯೇಯ, ನಿಯಮ ನಿಬಂಧನೆಗಳು ಚರ್ಚಿಸಿ ನಿರ್ಣಯಿಸಿ ಸದ್ರಿ ಸಂಘವನ್ನು ರಿಜಿಸ್ಟ್ರಿ ಒಗ್ಗೆ ಜಿಲ್ಲಾರಿಜಿಸ್ಟ್ರಾರ್ ಮಂಗಳೂರು ಇವರಲ್ಲಿಗೆ ಕಳುಹಬೇಕೆಂದು ಸಭೆಯು ಏಕಮತದ ಅಭಿಪ್ರಾಯಪಟ್ಟಿತು. ಇಷ್ಟರ ತನಕ ಹ್ಯಾಸ್ಕೂಲು ಬಗ್ಗೆ 30 ಸಾವಿರ ರೂಪಾಯಿಗಳ ವಾಗ್ದಾನಗಳು ಸಿಕ್ಕಿರುತ್ತವೆಂದು ತಿಳಿದು ಬರುತ್ತದೆ.

ಮೂಲ್ಕಿ ನಾಲ್ಕು ಪಟ್ಣ ಮೊಗವೀರ ಸಭಾ, ಮುಂಬಯಿ— ಇದರ ವಾರ್ಷಿಕ ಮಹಾ ಸಭೆಯು ತಾ. 26 8-45ರಲ್ಲಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ಸಭಾ ಮಂದಿರದಲ್ಲಿ-ಶ್ರೀ ಜೆ. ಟಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು ಗತ ವರ್ಷದ ವರದಿ ಮತ್ತು ಲೆಖ್ಖ ಪಟ್ಟಿಯನ್ನು ಮಂಜೂರು ಮಾಡಿದ ಬಳಿಕ; 1945 46ನೇ ಇಸವಿಯ ಕಾರ್ಯಕಾರಿ ಸಮಿತಿಯನ್ನು ಪ್ರಥೀಕರಿಸಿ, ಲೆಖ್ಖ ಪರಿಶೋಧಕರನ್ನು ಚುನಾಯಿಸಲಾಯಿತು.

ಈ ಸಭೆಯವರು ನಡಿಸಿಕೊಂಡು ಬರುತ್ತಿರುವ "ಮೊಗವೀರ, ಸಮಾಜ ಸೇವಾ ಸಂಘ"ವೆಂಬ ಧಾರ್ಮಿಕ ಸಂಸ್ಥೆಯ ಕಾರ್ಯಭಾರವು ಸುಸೂತ್ರವಾಗಿ ನೆರವೇರುವಂತೆ, 4 ಜನ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ಹೆಚ್ಚಿಗೆ ಚುನಾಯಿಸಲಾಯಿತು.

ಸೀತಾನದಿ— ನಾಡ್ಪಾಲು ಗ್ರಾಮದ ಸೀತಾನದಿ ಬೊ. ಶಾಲೆಯ ಹೆತ್ತವರ ಕೂಟವು ತಾ 4-9-45ರಲ್ಲಿ ಡಾಕ್ಟರ್ ಹಾಮಂಜೆ ಜಲ್ಲಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

CHAMPAE'S
Snow & Castrex
(SoleDistributers for (India.)
Sukhananda Stores
Santhekatte, UDIPI, S. K.

— ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಹುಂಬರವಾಡಿ ಸ್ಟೋರ್ಸ. ಡಾವಣಗೇರಿ:— ಡಾವಣಗೇರಿ ಪ್ರೆಸ್. ಆರ್. ಎಲ್. ಕವಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲೆಂಡರ್ ಬರದಕ್ಷಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವದು, (1) ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ. (2) ಬೊಂಬಾಯಿ ಏಜೆಂಟರು: ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ 183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ ಬೆಲೆ ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಗ್ರಾಮಾಭಿವೃದ್ಧಿ

ಲೇಖಕ:- ಶ್ರೀ. ಕೆ. ಟಿ. ಆಳ್ವ,
ರಿಟಾಯರ್ಡ್ ಡಿಪ್ಯುಟಿ ಡೈರೆಕ್ಟರ್, ಕೃಷಿ ಇಲಾಖೆ.

ಹಳ್ಳಿಗಳ ಸ್ಥಿತಿಗತಿಯು ಕ್ರಮೇಣ ಕೀಳು ಸ್ಥಿತಿಗೆ ಬರುತ್ತಿದೆಯೆಂದು ಸರ್ವಸಾಧಾರಣ ಎಲ್ಲರೂ ಒಪ್ಪತಕ್ಕ ಸಂಗತಿ. ಇಂಥಾ ಕ್ಷೀಣತೆಯನ್ನು ನಿಲ್ಲಿಸಿ, ಹಳ್ಳಿಗಳ ಅಭಿವೃದ್ಧಿಯನ್ನು ಕೈಕೊಳ್ಳುವದು ಅವಶ್ಯವೆಂದು ಸರಕಾರವೂ, ಪ್ರಜಾ ಮುಂದಾಳುಗಳೂ ಅಭಿಪ್ರಾಯಪಟ್ಟಿರುತ್ತಾರೆ. ಹಳ್ಳಿ ನಿವಾಸಿಕರು ಹೆಚ್ಚೆಚ್ಚಾಗಿ ಪಟ್ಟಣಗಳನ್ನು ಸೇರುತ್ತಿರುವರು. ಬಡವರಿಗೆ ತಮ್ಮ ಜೀವನೋಪಾಯಕ್ಕೆ ಬೇಕಾದಷ್ಟು ಕೆಲಸ ದೊರೆಯದಿರುವದೂ, ಐಶ್ವರ್ಯವಂತರಿಗೆ ತಮ್ಮ ನವನಾಗರೀಕತ್ವಕ್ಕೆ ಬೇಕಾದ ಸೌಕರ್ಯಗಳು ಇಲ್ಲದಿರುವದೂ, ವಿದ್ಯಾವಂತರಿಗೆ ತಮ್ಮ ಚಟುವಟಿಕೆಗೆ ಬೇಕಾದ ಮಾರ್ಗಗಳು ಕಾಣದಿರುವದೂ ಹಳ್ಳಿಯ ಕ್ಷೀಣತೆಗೆ ಮುಖ್ಯ ಕಾರಣಗಳೆಂದು ಸಂಕ್ಷೇಪವಾಗಿ ಹೇಳಬಹುದು. ಈ ನ್ಯೂನತೆಗಳನ್ನು ಆದಷ್ಟು ಕಮ್ಮಿ ಮಾಡಿ ಹಳ್ಳಿಗರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟಲ್ಲಿ ಗ್ರಾಮಗಳು ಕ್ರಮೇಣ ತಲೆಯೆತ್ತುವವು.

ಗ್ರಾಮಗಳ ಅಭಿವೃದ್ಧಿಯನ್ನು ಸಾಗಿಸಲಿಕ್ಕೆ ಬೇಕಾದ ಹಲವು ಇಲಾಖೆಗಳನ್ನು ಸರಕಾರವು ಏರ್ಪಡಿಸಿ ಕೆಲಸವನ್ನು ನಡಿಸಿ ಬರುತ್ತಿರುವದಾದರೂ, ಗ್ರಾಮಸ್ಥರ ಜವಾಬ್ದಾರಿಯು ಕೂಡಿಕೊಳ್ಳದ ಕಾರಣ ಅಭಿವೃದ್ಧಿಯ ಪರಿಣಾಮಗಳು ಹೆಚ್ಚೆಚ್ಚಾಗಿ ಕಾಣಬರುವದಿಲ್ಲ. ಉದಾಹರಣೆಗಾಗಿ ಗ್ರಾಮಸ್ಥರ ಮುಖ್ಯ ಕಸಬಾದ ಕೃಷಿ ಸುಧಾರಣೆಯನ್ನು ವಿಮರ್ಶಿಸಿ ನೋಡಬಹುದು. ಸಾಧಾರಣ 40 ವರ್ಷಗಳ ಹಿಂದೆ ಕೃಷಿ ಇಲಾಖೆಯು ನಿರ್ಮಿಸಲ್ಪಟ್ಟಿತು. ಒಂದು ತಾಲೂಕಿನಲ್ಲಿ ಲಕ್ಷ ಸಂಖ್ಯೆಯ ರೈತರಿರುವರು. ಮತ್ತು ಇವರು ಹಲವು ತರದ ಪೈರುಗಳನ್ನು ಹಲವು ಲಕ್ಷ ಎಕ್ರೆಗಳಲ್ಲಿ ವ್ಯವಸಾಯ ಮಾಡುವರು. ಒಬ್ಬ ಕೃಷಿ ಇಲಾಖೆಯ ಉದ್ಯೋಗಸ್ಥನಿಗೆ ಇಷ್ಟು ಜನ ರೈತರನ್ನು ಸಂದರ್ಶಿಸಿ, ಅವರ ಹಲವು ಎಕ್ರೆಯಲ್ಲಿ ಬೆಳೆಸಿದ ಪೈರುಗಳನ್ನು ನೋಡಿ ಕೃಷಿ ಸುಧಾರಣೆಯನ್ನು ನಡೆಸುವದು ಅಸಾಧ್ಯವಾದ ಕಾರ್ಯ. ಇಂಥಾ ಕಾರ್ಯದಲ್ಲಿ ಗ್ರಾಮಸ್ಥರ ಸಂಘಗಳು ಮತ್ತು ಅವರ ಜವಾಬ್ದಾರಿಯು ಅವಶ್ಯ. ಈ ಜಿಲ್ಲೆಯ ಮುಖ್ಯ ಪೈರು ಬತ್ತವಾಗಿರುತ್ತದೆ. ಈ ಪೈರಿನಲ್ಲಿ ಹೆಚ್ಚಿಗೆ ಉತ್ಪತ್ತಿ ಕೊಡುವ ಜಾತಿಯ ಬೀಜಗಳನ್ನು ಕೃಷಿ ಇಲಾಖೆಯವರು ಪರಿಶೋಧಿಸಿ ಕಂಡು ಹಿಡಿದಿರುತ್ತಾರೆ. ಅವುಗಳನ್ನು ಕೆಲವು ಗ್ರಾಮಗಳಲ್ಲಿ ಒಬ್ಬಿಬ್ಬರು ರೈತರು ಕೆಲವು ಸಮಯಗಳಿಂದ ಬೆಳೆಸಿಕೊಂಡು ಬರುತ್ತಿದ್ದರೂ ಅವುಗಳು ಗ್ರಾಮಗಳಲ್ಲಿ ಹೆಚ್ಚಾಗಿ ಪಸರಿಸಿ ಹೆಚ್ಚಿನ ರೈತರ ಗಮನಕ್ಕೆ ಬರಲಿಲ್ಲ. ಇದಕ್ಕೆ ಒಂದೆರಡು ಮುಖ್ಯ ಕಾರಣಗಳಿವೆ.

ಒಂದು ಗ್ರಾಮದ ಸಾವಿರಾರು ಎಕ್ರೆಗಳಿಗೆ ಬೇಕಾದಷ್ಟು ಬೀಜವು ಕೃಷಿ ಇಲಾಖೆಯವರ ಹತ್ತಿರ ದಾಸ್ತಾನು ಇಲ್ಲದಿರುವದು, ಮತ್ತು ಹೊಸ ಪೈರನ್ನು ಗ್ರಾಮದ ಎಲ್ಲಾ ರೈತರು ಬೆಳಸಿ ಅದರಿಂದ ಪ್ರಯೋಜನ ಪಡೆಯಬೇಕೆಂದು ಜವಾಬ್ದಾರಿಯುಳ್ಳ ಗ್ರಾಮಕೂಟ ಪ ಸಂಘಗಳು ಇರದಿರುವದು. ಕೃಷಿ ಸುಧಾರಣೆಯಲ್ಲಿ ಮುಂದರಿದ ಎಲ್ಲಾ ದೇಶಗಳಲ್ಲಿ ರೈತರ ಸಂಘಗಳು ಕೃಷಿ ಇಲಾಖೆಯವರಿಂದ ಕಂಡುಹಿಡಿಯಲ್ಪಟ್ಟ ಪ್ರಯೋಜನ ಯುಕ್ತವಾದ ಕ್ರಮಗಳನ್ನೂ, ಪೈರುಗಳನ್ನೂ ಗ್ರಾಮಗಳಲ್ಲಿ ಪರೀಕ್ಷಿಸಿ ಅವುಗಳು ಅಷ್ಟಪಾಯಕವೆಂದು ಕಂಡುಬಂದಲ್ಲಿ ಅವುಗಳನ್ನು ಗ್ರಾಮಗಳಲ್ಲಿ ವಿಸ್ತರಿಸಿ ಸಂಘದ ಎಲ್ಲಾ ಮಂದಿರವು ಪ್ರಯೋಜನ ಹೊಂದುವ ಏರ್ಪಾಡಗಳು ನಡಿಸಲಾಗುವವು. ಪರಿಶೋಧನೆಯಿಂದ ಕೆಲವು ಕೃಷಿ ಇಲಾಖೆಯವರಿಂದಲೂ ಪ್ರಜಾ ರಣೆಯ ಕಾರ್ಯವು ಗ್ರಾಮ ಸಂಘಗಳಿಂದ ಲೇ ನಡೆಯುತ್ತಿದೆ. ಉತ್ತಮ ದರದ ಒಂದೆರಡು ಸೇರು ಬೀಜವನ್ನು ಗ್ರಾಮ ಸಂಘದವರು ಕೃಷಿ ಇಲಾಖೆಯವರಿಂದ ಕೊಂಡುಹೋಗಿ ಎರಡು ಮೂರು ವರುಷ ಸಮಯದಲ್ಲಿ ಸಾವಿರಾರು ಎಕ್ರೆಗಳಿಗೆ ಸಾಕಾಗುವಷ್ಟು ಬೀಜವನ್ನು ಸಂಘದ ಮುಖಾಂತರ ವೃದ್ಧಿಪಡಿಸಿ ಮೆಂಬರರು ತಮ್ಮ ಭೂಮಿಗಳಲ್ಲಿ ಪೈರು ಮಾಡಿ ಪ್ರಯೋಜನ ಹೊಂದುವರು.

ಗ್ರಾಮ ಸಂಘಗಳು ಕೃಷಿ ಸುಧಾರಣೆಯನ್ನು ಮಾತ್ರವಲ್ಲದೆ ಗ್ರಾಮದ ಅಭಿವೃದ್ಧಿಗೆ ಬೇಕಾದ ವಿದ್ಯಾಭಿವೃದ್ಧಿ, ಕೈಗಾರಿಕೆ, ವೈದ್ಯ ಚಿಕಿತ್ಸೆ ಅನುಕೂಲತೆ, ಆರೋಗ್ಯ, ಜಾನುವಾರು ಅಭಿವೃದ್ಧಿ, ಸಂತೆಗಳು, ಮಾರ್ಗಗಳು, ಐಕ್ಯ ಸಂಘಗಳು ಮತ್ತು ಸ್ವೈರಿಗಳು, ವಿರಾಮ ಸ್ಥಳಗಳು, ಗರಡಿಸಾಧಕಗಳಿಂದ ಕೂಡಿದ ವ್ಯಾಯಾಮ ಸ್ಥಳಗಳು, ವಸ್ತು ಪ್ರದರ್ಶನಗಳು, ಪಂಚಾಯತ ಕೋರ್ಟುಗಳು ಇವೆ ಮೊದಲಾದ ಅನೇಕ ಸಂಗತಿಗಳಿಗೆ ಗಮನ ಕೊಡುವದು ಅವಶ್ಯ. ಹಳ್ಳಿಗರ ಮನಸ್ಸನ್ನು ಹೊಸ ಹೊಸ ಸಂಸ್ಥೆಗಳು ಆಕರ್ಷಿಸುವದಿಲ್ಲವಾದರೂ, ಪುರಾತನದಿಂದ ನಡೆದು ಬಂದ ಮತ ಸಂಸ್ಥೆಗಳ ಕಡೆಗೆ ಅವರಿಗೆ ಈಗಲೂ ಭಕ್ತಿ ಭಾವನೆಯುಂಟು. ಗ್ರಾಮಾಭಿವೃದ್ಧಿಯ ಹೊಸ ಸಂಸ್ಥೆಗಳು ಮತ ಸಮ್ಬಂಧವಾದ ಹಳೆ ಸಂಸ್ಥೆಗಳನ್ನು ಕೂಡಿಕೊಂಡಿರುವದು ಅವಶ್ಯ. ಪುರಾತನ ಕಾಲದಲ್ಲಿ ಹಳ್ಳಿಯ ಅಭಿವೃದ್ಧಿಯು ಗ್ರಾಮ ದೇವತೆಯ ಹೆಸರಲ್ಲಿ ನಡೆದು ಬರುತ್ತಿತ್ತು. ಆದ್ದರಿಂದ ಗ್ರಾಮದ ಹೊಸ ಸುಧಾರಣೆಯಲ್ಲಿ ದೇವಸ್ಥಾನಗಳೂ, ಇಗರ್ಜಿಗಳೂ, ಮಠಗಳೂ ಭಾಗ ವಹಿಸುವದು ಅವಶ್ಯವೆಂತ ಕಾಣುತ್ತದೆ.

ಒಂದೊಂದೆ ಗ್ರಾಮಗಳ ಅಭಿವೃದ್ಧಿಗೆ ಪ್ರತ್ಯಪ್ರತ್ಯೇಕ ಮನಸ್ಸು ಕೊಡುವರೆ ಬೇಕಾದಷ್ಟು ಸರಕಾರಿ ಸಿಬಂದಿಯು ಕೂಡಲೆ ದೊರೆಯುವದು ಕಷ್ಟವಾದ ಕಾರಣ ಹಲವು ಗ್ರಾಮಗಳನ್ನು ಜತೆಗೊಳಿಸಿ, ಗ್ರಾಮಸ್ಥರ ಜವಾಬ್ದಾರಿಯಿಂದ ಹೆಚ್ಚಿನ ಶ್ರದ್ಧೆಯಿಂದ ಗ್ರಾಮಾಭಿವೃದ್ಧಿಯ ಕೆಲಸವನ್ನು ನಡಿಸಬೇಕೆಂದು ಸರಕಾರದವರ ಅಭಿಪ್ರಾಯ ಉಂಟೆಂದು ತಿಳಿದು, ಮೂಲ್ಕಿಯ ಸುತ್ತಮುತ್ತಲಿನ ಹತ್ತಿಪ್ಪತ್ತು ಗ್ರಾಮಗಳಲ್ಲಿ ಇಂಥಾ ಕೆಲಸವನ್ನು ನಡಿಸಬೇಕೆಂದು ಗ್ರಾಮಸ್ಥರು ಅಭಿಪ್ರಾಯಪಟ್ಟು ಸರಕಾರದ ಜವಾಬ್ದಾರಿಯನ್ನು ಕೇಳಿಕೊಂಡು ಕೆಲಸ ನಡಿಸಿಕೊಂಡು ಬರುವದು ಶ್ಲಾಘನೀಯವಾದ ಕಾರ್ಯ.

ಹಳ್ಳಿಗಳ ಐಶ್ವರ್ಯವು ಕ್ರಮೇಣ ಪಟ್ಟಣಗಳಿಗೆ ಸರಿದು ಹೋಗುವದು. ಗ್ರಾಮಸ್ಥರ ಅಯುಕ್ತವಾದ ವ್ಯಯವೇ ಜಾಸ್ತಿ. ಪುರಾತನ ಕಾಲದಲ್ಲಿ ಹಳ್ಳಿಗರಿಗೆ ಬೇಕಾದ ಹೆಚ್ಚಿನ ವಸ್ತುಗಳು ಹಳ್ಳಿಯಲ್ಲಿ ತಯಾರಾಗುತ್ತಿತ್ತು. ಹಳ್ಳಿಯ ಸೈಗಕಾರ, ಕಮ್ಮಾರ, ಬಡಗಿ, ಕುಂಬಾರ, ಅಕ್ಕಸಾಲೆ ಮೊದಲಾದ ಕೈಗಾರಿಕೆಗಳು ಕಸ್ಟಮರರಿಗೋಸ್ಕರ ಹಳ್ಳಿಗಳನ್ನು ಬಿಟ್ಟು ಬಿಟ್ಟು ಪಟ್ಟಣಕ್ಕೆ ಹೋಗುವರು. ಇಲ್ಲವಾದರೆ ಪಾರಂಪರೆ ಅನುಭವಯುಕ್ತವಾದ ತಮ್ಮ ಪಿತ್ರಾರ್ಜಿತ ಕಸಬುಗಳನ್ನು ಬಿಡುವರು. ಗ್ರಾಮಗಳ ಪುನರುಜ್ಜೀವನದ ಪ್ರಯತ್ನದಲ್ಲಿ ಹಳ್ಳಿಗರ ಎಲ್ಲಾ ಕಸಬುಗಳಿಗೆ ಗಮನಕೊಟ್ಟು ಗ್ರಾಮಗಳ ಉತ್ಪತ್ತಿಯನ್ನು ಹೆಚ್ಚಿಸತಕ್ಕದ್ದು. ಅನಾವಶ್ಯಕವಾದ ಖರ್ಚುಗಳನ್ನು ತಗ್ಗಿಸಬೇಕು. ಹಳ್ಳಿಗರ ಸಾಲವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಶುಭಶೋಭನಾದಿಗಳಿಗೆ ಮಾಡಿದ ಸಾಲವು ಹೆಚ್ಚಾಗಿರುತ್ತದೆಂದು ಕಾಣುತ್ತದೆ. ತಮ್ಮ ಕೈಮೀರಿ ಖರ್ಚು ಮಾಡುವ ಕೆಲವು ಪದ್ಧತಿಗಳನ್ನು ನಿಲ್ಲಿಸಿ, ಅವುಗಳನ್ನು ಮಿತ ವ್ಯಯಕ್ಕೆ ತರುವ ಪ್ರಯತ್ನಗಳು ನಡೆಯತಕ್ಕದ್ದು. ಗ್ರಾಮಾಭಿವೃದ್ಧಿಯ ಕೆಲಸವು ಕಷ್ಟದ ಕೆಲಸವು, ಆದರೆ ಇದು ಮುಖ್ಯ ಕೆಲಸವು ಈ ಕೆಲಸವನ್ನು ಕೈಕೊಳ್ಳುವವರು ಗ್ರಾಮವಾಸಿಗಳಾಗಿದ್ದು ಹಳ್ಳಿಗರ ಸ್ಥಿತಿಗತಿಗಳನ್ನು ತಿಳಿದು ಅವರ ಅಧೋಗತಿಗೆ ಪಶ್ಚಾತ್ತಾಪ ಪಡುವವರಾಗಿದ್ದು, ಹಲವು ಜನರ ಮತ್ತು ಸರಕಾರದ ಜವಾಬ್ದಾರಿಯನ್ನು ಸಹಿಯುವ ಶ್ರದ್ಧೆಯೂ ತಾಳ್ಮೆಯೂ ಉಳ್ಳವರಾಗಿರತಕ್ಕದ್ದು. ಇದು ಒಂದೆರಡು ದಿವಸದ ಆಟವಲ್ಲ. ದೀರ್ಘಕಾಲದ ಪ್ರಯತ್ನ. ಈ ಕಾರ್ಯಕ್ಕೆ ದೇಶ ಹಿತಚಿಂತಕರು ತಮ್ಮ ಸಹಾಯವನ್ನು ಕೊಡುವದು ಅತೀ ಅಗತ್ಯ.

'ಕಾಂಗ್ರೆಸ್ ಫೇಸಿಸ್ಟ್ ಸಂಸ್ಥೆ!'

(೩ನೇ ಪುಟದಿಂದ ಮುಂದುವರಿದುದು)

ಮಾಡಿದ್ದೆ. ಮತ್ತು ನನಗವರು ಮಾರ್ಮಿಕ ಬುದ್ಧಿವಂತಿಕೆಯುಳ್ಳ ಮನುಷ್ಯನಾಗಿ ಕಂಡುಬಂದರು. ಕುಟಿಲ ವಾದದಿಂದ ಗೆಲ್ಲಲಾಗುವ ಯಾವುದಾದರೊಂದು ವ್ಯವಹರಣೆ ನನಗೆ ಗಂಟುಬಿದ್ದಲ್ಲಿ ನಾನು ಸತ್ಯಶ್ಯೂ ವಕಾಲತ್ ಕೊಡುವದು ರಾಜಗೋಪಾಲಾಚಾರಿಗಳಿಗೇನೇ. ನಿಜ, ಅವರು ಬ್ರಾಹ್ಮಣರಲ್ಲ ಬ್ರಾಹ್ಮಣರು; ಕಟ್ಟುಗ್ರ ಪಾನ ನಿಷೇಧಕ; ಗಾಂಧೀ ವಾದವನ್ನು ಅರ್ಥವತ್ತಾಗಿ ಚಿತ್ರಿಸಬಲ್ಲ ಸಮರ್ಥಾಗ್ರೇಸರರಲ್ಲೊಬ್ಬ. ತಾನು ಹೇಳಿದ್ದನ್ನು ಎತ್ತಿ ತೋರಿಸಬಾರದೆಂದು ಅವರು ನನ್ನನ್ನು ಕೇಳಿಕೊಂಡಿದ್ದಾರೆ. ನಾನಾ ಮಾತನ್ನು ಮನ್ನಿಸುತ್ತೇನೆ. ಆದರೆ ಅವರು ಸಾರ್ವಜನಿಕವಾಗಿ ಘೋಷಿಸಿದುದನ್ನು ಆದಕ್ಕಾಗಿ ನಾವು ಎತ್ತಿಕೊಳಬಾರದೆಂಬೇನೂ ಇಲ್ಲ. ಲಕ್ನೋ ಯುನಿವರ್ಸಿಟಿಯಲ್ಲಿ ಅವರು ಇತ್ತೀಚೆಗೆ ಮಾಡಿದ ಭಾಷಣವೊಂದರಲ್ಲಿ ಫ್ರೆಡರಿಕ್, ವೋನ್ ಮೋಲ್ಟ್ಕೆ ಮತ್ತು ಹಿಂಡನ್‌ಬರ್ಗ್ ಜರ್ಮನಿಯ ಕುರಿತು ತನಗಿರುವ ಗೌರವವನ್ನು ಸಾಧ್ಯವಿದ್ದಷ್ಟು ಮನಃಪೂರ್ವಕವಾಗಿ ಸೂಚಿಸಿದ್ದಾರೆ. "ಜರ್ಮನ್ ಸೇನೆಯ, ಆ ವೈಜ್ಞಾನಿಕ ಸಂಸ್ಥೆಯ ಆಶ್ಚರ್ಯಕರ ಪರಿಣಾಮ"ಗಳನ್ನು ತರುಣ ಭಾರತದ ಮನಸಾಕರ್ಷಣೆಗಾಗಿ ಎತ್ತಿ ತೋರಿಸಿದ್ದಾರೆ. ಮತ್ತವರು ಅಲ್ಲಿ ಆಗ್ರಹದಿಂದ ಕೇಳಿಕೊಂಡಿದ್ದರು:"—ಕಳೆದ ಮಹಾ ಯುದ್ಧಾನಂತರ ಜರ್ಮನಿಯು ತಲೆಯೆತ್ತಿತಾದರೆ, ಪುನರುತ್ಥಾನಗೊಂಡಿತಾದರೆ (ಜರ್ಮನಿಯು ನಾಜೀ ಕಣಿವೆಗೆ ಬಿದ್ದುದನ್ನು ವರ್ಣಿಸುವ ರೀತಿಯಿದು!) ಅವರ ಮಾದರಿಯನ್ನು ಅನುಕರಿಸಲು ಹಿಂದೀ ರಾಷ್ಟ್ರೀಯತೆಯೇಕೆ ಹಿಂಜರಿಯಬೇಕು?" ಈ ಕುರಿತು ರೋಯಿಗಳ ಟಿಪ್ಪಣಿಯನ್ನು ಕೆಳಗಡೆ ಕೊಡಲಾಗಿದೆ:—

ಹಿಟ್ಲರ್-ಕಾಂಗ್ರೆಸ್

"ಗೋಥೆ, ಲೆಸ್ಸಿಂಗ್, ಬೀಥೋವೆನ್, ಅಥವಾ 1648ರ ದರೋಡೆಗಾರರ ಜರ್ಮನಿಯನ್ನೂ ಅಲ್ಲ. ಹೈಕೆಲ್, ಹೆಲ್ಮೋಲ್ಟ್ಸ್, ಕೋಚ್, ವಿರ್ಚೋ, ಪ್ಲೇಂಕ್ ಮೊದಲಾದವರ ಜರ್ಮನಿ ಕೂಡಾ ಅಲ್ಲ; ಕೈಸರರ ಮತ್ತು ಹಿಟ್ಲರರ ಜರ್ಮನಿಯೇ ಸದಾಕಾಲ ಹಿಂದೀ ರಾಷ್ಟ್ರೀಯ ವಾದಿಗಳ ವ.ಪ ತೆಗೊಳಗಾಗಿದೆ. ಈ ವಿಲಕ್ಷಣ ಸಹಾನುಭೂತಿಗೆ ಪ್ರತಿಯಾಗಿ, ಮಹಾ ಮಹಾ ಕ್ರಾಂತಿಗಳ ಪೀಠ ಭೂಮಿಯಾಗಿರುವ ಫ್ರಾನ್ಸಿನ ಮೇಲೆ ಹಿಂದೀ ರಾಷ್ಟ್ರೀಯರು ಎಂದೂ ಸಹಾನುಭೂತಿ ತೋರಿಸಿದುದಿಲ್ಲ. ಪ್ರಶ್ಯನರಲ್ಲಿ ಅದ್ಯಂತವಾಗಿ ಹರಡಿದ್ದ ಸರ್ವಶಕ್ತ ರಾಷ್ಟ್ರದ ಪೂರ್ಣ ಹಾಗೂ ಕಾರ್ಯಕಾರಿ ಕಲ್ಪನೆಗೆ ಹೆಗೆಲನು ಕಲಿಸಿದ ತತ್ವಗಳೇ ಮೂಲಾಧಾರ. ಈ ದಬ್ಬಾಳಿಕೆಯ ದುರಂತಗಳನ್ನು ತ್ಯಾಗದ ರಮ್ಯ ಒಪ್ಪ ಕೊಟ್ಟು ಸುಂದರಗೊಳಿಸಿ ಪ್ರದರ್ಶಿಸಲಾಗಿತ್ತು. ರಾಷ್ಟ್ರವೇ ದೇವರಾಗಿದ್ದರು. ಅದರ ಹೆಸರಿನಿಂದ ಪಿಲಿಯಾವಧಿ ಜನರು ಕಾರ್ಯಕ್ಕೆ, ಕಷ್ಟಾನುಭವಕ್ಕೆ ಮತ್ತು ನಿರ್ನಾಮವಾಗುವದಕ್ಕೆ ತಯಾರರಬೇಕಿದ್ದಿತು. ಶ್ರೀ ರಾಜಗೋಪಾಲಾಚಾರ್ಯರು ಬೇರದ ಮುಂದಿಟ್ಟ ಮೇಲ್ಪಂಕ್ತಿಯೆಂದರೆ ಪೂರ್ಣ ಅದೇ. ಅವರ ಅಭಿಪ್ರಾಯದಲ್ಲಿ ಆಧುನಿಕ ಜರ್ಮನಿಯ ಪುನರುತ್ಥಾನವೇ ಆ ವಾದದಿಯ ಸತ್ಪರಿಣಾಮಕ್ಕೊಂದು ನಿದರ್ಶನ. 'ಅಂದ ಮೇಲೆ ನಾವೇಕೆ ಹಿಂಜರಿಯಬೇಕು?' ಸ್ವತಂತ್ರ ಪಾರ್ಯಿ ಶಕ್ತಿಯನ್ನು ಸಂಘಟಿಸಿಕೊಳ್ಳಬೇಕಾದರೆ ಹೆಗೆಲನ ರಾಷ್ಟ್ರೀಯ ಘಟನಾ ತತ್ವಗಳನ್ನು ಕಲಿತುಕೊಂಡರಾಯಿತು. ಭಾರತ ರಾಷ್ಟ್ರೀಯತೆಯ ಸರ್ವಮಾನ್ಯ ಧುರೀಣನೊಬ್ಬನ ಅಭಿಪ್ರಾಯದಂತೆ ಈ ಸೂತ್ರಗಳೇ ಜರ್ಮನಿಯನ್ನು ಉಳಿಸಿದುವು; ಭಾರತವನ್ನು ಕೂಡಾ ಉಳಿಸಬಲ್ಲುವು ಆ ಶೋಚನೀಯ ಶಕ್ತಿಯು ನೈತಿಕ ಬಲವೇನೂ ಅಲ್ಲ; ಬದಲಿಗೆ ಅತ್ಯುಚ್ಚ ರೀತಿಯಿಂದ ಸಂಘಟನೆ ಹೊಂದಿದ ಪಶುಶಕ್ತಿಯಿದು. ಗಾಂಧಿಯ ಅಹಿಂಸಾತತ್ವದ ವತ್ತಿನ ಭಾಗವಾದ ಸತ್ಯವನ್ನು ಈ ರೀತಿ ಆಚರಿಸಿದುದಕ್ಕಾಗಿ ನಾವು ಆಚಾರ್ಯರಿಗೆ ಧನ್ಯವಾದ ಕೊಡಬೇಕು!"

ಗಾಂಧಿ—
'ಭಾರತೀಯ ಫೇಸಿಸಮ್ ಪ್ರವಾದಿ'

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1—8—0 ಮಾತ್ರ
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1. ರಾಷ್ಟ್ರಸಭೆಯ ಇತಿಹಾಸ	2	8	0
2 ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3. ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4 ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5. ಭಾರತ ಗೀತಾಂಜಲಿ	0	2	0
6. ಪುರಂದರದಾಸರ ಕೀರ್ತನೆ ಭಾಗ 4ರ ಸ್ಟಿಫ್ ಬೈಂಡ್	1	4	0
7. ಶಾಂತಿಪುರಾಣ	3	0	0
8. ಸಾಮುದ್ರಿಕ ಶಾಸ್ತ್ರ	0	8	0
9. ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್‌ದ ಗುಟ್ಟ್	0	8	0
ಕಾಸಿಗೆ	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ತ್ ಮದ್‌ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	9	2	0
ಸತ್ಯ ನಾರಾಯಣ ಕತೆ	1	0	0
ಸತೀ ಕಮಲ್	0	12	0
ಜೋಬ್ಬ ಯೆರ್	0	4	0
ತೊಡಕಿನಾರ್	0	4	0
ಮುಂಡತ್ತಾಯೆ	0	4	0
ಕನ್ನಡಕೊ	0	1	0
ವಿಶ್ವರೂಪದರ್ಶನೊ	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, ಉಡುಪಿ.

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಶೆಣೈ ಬ್ರದರ್ಸ್, ,,
ಕೆ. ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ್ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ
ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

NAVAYUGA ನವಯುಗ

ವರ್ಷ 25] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol 25
ವಾರ 3] Founder. SRI A. B. SHETTY. [No. 3
ಉಡುಪಿ ● 20—9—1945 ● ಮಂಗಳೂರು.
ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ
ತಲೆನೋವು, ಶೀತ, ನೆಗಡಿ, ಉಳುಕು, ಕೆಮ್ಮು, ಗಂಟಲು, ಕೀಲು ನೋವು, ಕಜ್ಜಿ, ಚೇಳು ಕಡಿತ ಮುಂತಾದ ಎಲ್ಲಾ ರೋಗಗಳಿಗೂ
REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,
Head Office:- UDIPI, (S. India.)

UDIPI,
4th September, 1945.

New Appointments.

Applications from candidates of S S L C standard (only boys) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of their School and another from any local gentleman.

T. R. A Pai,
Managing Director

The Jupiter General Insurance Co., Ltd.,
ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?- ಇಲ್ಲ-
ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಅದು 'ಜುಪಿಟರ್' (ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!
ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.
ವಿಮೆಯಿಳಿಸುವವರೂ ಏಜಂಟರು ಮತ್ತು ಓರ್ಗನೈಝರರಾಗುವವರೂ ಕೂಡಲೇ ಬರೆಯಿರಿ:—
ಪಿ. ಡಿ. ನಾಯಕ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.
ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.
(ESTD: 1908)
ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾಸಂಸ್ಥೆಗಳಲ್ಲೊಂದು
ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910
ದಕ್ಷಿಣ ಭಾರತದ ಚೀಫ್ ಏಜಂಟರು
ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.
1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ಒಟ್ಟು ಉದ್ಯೋಗದ ದಾಖಲೆ.—53,00,000.
KOCHIKAR BROTHERS, LTD.
Central Office:—UDIPI. S. K
Mangalore O Calicut O Bangalore O Madras O Madura O Trivandrum O Bombay

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.
ಶಾಖೆಗಳು:

ಕ್ವಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲೆಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟೆ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.
ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.
ಮೂಲಧನ ರೂಪಾಯಿ 26 ಲಕ್ಷ. ಕೆನರಾ ಬೇಂಕ್ ಲಿಮಿಟೆಡ್.
ಕ್ಷೇಮನಿಧಿ ರೂಪಾಯಿ 10 ಲಕ್ಷ. (ESTD. 1906 ಸ್ಥಾಪನೆ.)
CANARA BANK LIMITED
(Incorporated in British India. liability of Members Limited.)

The Vijaya Bank Limited.
ANNOUNCEMENT

We have much pleasure to announce that the New shares issued by us have been easily oversubscribed We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟ ಆಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ಅಸಾಧ್ಯವಾದುದರಿಂದ, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ.

Head Office } B. MANJAYA HEGDE.
MANGALORE } Chairman of the Board of Directors

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್

ಅಮೇರಿಕದ ಭಾಷಣೋದ್ಯಮ.

(ಡೇವಿಡ್ ಜಿ. ಜೋನ್ಸ್‌ಸ್ಟನ್ ಲೇಖನದಿಂದ)

ಯುರೋಪು ಯುದ್ಧವು ಅಂತ್ಯವಾದೊಡನೆಯೇ ಅಮೇರಿಕವು ತನ್ನ ಪದ್ಧತಿಯ 'ಭಾಷಣ ಪರ್ವ'ಕ್ಕೆ ಸಿದ್ಧತೆ ಮಾಡಹತ್ತಿದೆ. ಈ ಬಾರಿಯ ಭಾಷಣೋತ್ಸವವು ಒಂದು ಹೊಸ ದಾಖಲೆಯೇ ಆಗುವದೆಂದು ನಂಬಲಾಗಿದೆ. ಹಲವು ವಿಖ್ಯಾತ ಬ್ರಿಟಿಷರು ಭಾಷಣಗಾರರಾಗಿ ಬರಲಿದ್ದಾರೆ. ಪ್ರತಿಯೊಂದು ಭಾಷಣ ಋತುವಿನಲ್ಲಿ ಅಮೇರಿಕವು ಸುಮಾರು ಒಂದು ಮಿಲಿಯ ಪೌಂಡುಗಳನ್ನು ಉಪನ್ಯಾಸಕರಿಗೆ ರುಸುಮ್ ಆಗಿ ಸಲ್ಲಿಸುತ್ತಿದೆ. ಸುಮಾರು ಮೂರು ಮಿಲಿಯ ಅಮೇರಿಕಾನರಿಂದ-ಸುದ್ದಿ, ಭಾವ ಪ್ರಚೋದಕ, ಅಥವಾ ಸಂಸ್ಕೃತಿಯ ಸಂಬಂಧದ ವಾಗ್ಝರಿಯಲ್ಲಿ ತೇಲ-ಡಲಿಚ್ಛಿಸುವವರಿಂದ—ಈ ಒಂದು ಮಿಲಿಯ ಪೌಂಡು ಸಂದಾಯವಾಗುತ್ತಿದೆ,

ಅಮೇರಿಕನ್ ವೈಶಿಷ್ಟ್ಯ

ಅಮೇರಿಕನ್ ಸಾಂಘಿಕ ವ್ಯವಹಾರಗಳ ಪೈಕಿ ಅತ್ಯಂತ ವಿಶಿಷ್ಟತೆಯುಳ್ಳದ್ದೆಂದರೆ ಉಪನ್ಯಾಸ ಪ್ರಪಂಚದ ಬೇರಾವ ರಾಷ್ಟ್ರದಲ್ಲೂ ಭಾಷಣವು ಇಷ್ಟೊಂದು ಸುವ್ಯವಸ್ಥೆಯಿಂದ, ಇಷ್ಟು ದೊಡ್ಡ ಪ್ರಮಾಣದಲ್ಲಿ, ಒಂದು ದೊಡ್ಡ ವ್ಯಾಪಾರವೇ ಆಗಿ ನಡೆಯುತ್ತಿಲ್ಲ. ವಯರ್‌ಲೆಸ್ ಬಂದು ಈ ಭಾಷಣೋದ್ಯೋಗವನ್ನು ನಿರ್ನಾಮಮಾಡುವದೆಂದು ಕೆಲವು ನಿರಾಶಾವಾದಿಗಳು ಭವಿಷ್ಯವಾಡಿದ್ದರು ಆದರೆ ಈ ರಂಜನೆ ಬೆರೆತ ವಿದ್ಯಾಭ್ಯಾಸ ಕ್ರಮವು ಕಾಲಕಾಲಕ್ಕೂ ಬೆಳೆಯುತ್ತಾ ಬಂದಿದೆ; ಯುದ್ಧ ಕಾಲದ ಕೆಲವು ಅನಾನುಕೂಲತೆಗಳಿಂದಾಗಿ ಅದು ತಾತ್ಕಾಲಿಕವಾಗಿ ಹಿಮ್ಮೆಟ್ಟಿರಬಹುದು, ಅಷ್ಟೆ. ಆಕಾಶವಾಣಿಯು ಉಪನ್ಯಾಸಕಲೆಗೆ ಕೊಡಲಿಯಿಡಲಿಲ್ಲ. ಇದಕ್ಕೆ ಕಾರಣವಿದೆ. ಹೆಚ್ಚಿನ ಸಂದರ್ಭಗಳಲ್ಲಿ ಒಬ್ಬ ಭಾಷಣಗಾರ ಅಥವಾ ಭಾಷಣಗಾತಿಯ ಮಾತನ್ನು ಜನ ಸಮೂಹವು ರೇಡಿಯೋದಲ್ಲಿ ಕೇಳಿದ್ದಿರಬಹುದಾದರೂ, ಆ ವ್ಯಕ್ತಿಯನ್ನದು ನೋಡಿರಲಿಲ್ಲವಾದ್ದರಿಂದ ಅಂಥವರ ಪ್ರತ್ಯಕ್ಷ ದರ್ಶನಕ್ಕಾಗಿ ಹಣ ತೆರಲು ಅವರು ಸಿದ್ಧರೇ. ನಿಜರೂಪದರ್ಶನದಿಂದ ಸಭಿಕರಿಗೆ ಮತ್ತೊಂದು ದೊಡ್ಡ ಲಾಭವೂ ಇದೆ-ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬಹುದು. 'ಟೆಲಿವಿಶನ್'ನೊಡನೆ ಭಾಷಣೋದ್ಯೋಗವು ಸ್ಪರ್ಧಿಸಿ ಬಾಳುತ್ತಿರುವದಕ್ಕೆ ಇದೂ ಒಂದು ಕಾರಣ. ಬೇರೆ ಪ್ರಯೋಜನಗಳೂ ಇವೆ. ಮಿತ್ರರು ಮತ್ತು ಪರಿಚಿತರನ್ನು ಕೂಡಿಕೊಂಡು ಬಂದು ಭಾಷಣ ಕೇಳಿ ಹೋಗಬಹುದು; ಆ ಮೇಲದನ್ನು ತಮ್ಮೊಳಗೆ ಚರ್ಚಿಸಿಕೊಂಡು ಪರ್ಯಾಲೋಚಿಸಬಹುದು

ಸಡುದ್ಯೋಗ

ಭಾಷಣದ ರುಸುಮಾಗಿ ಅಮೇರಿಕವು ಸುಮಾರು 1000000 ಪೌಂಡನ್ನು ಸಲ್ಲಿಸುತ್ತಿದೆಯಷ್ಟೆ; ಅದರಲ್ಲಿ ಅರೆವಾಸಿಯಷ್ಟು ಮಹಿಳಾ ಕ್ಲಬ್ಬುಗಳಿಂದಲೂ ಮಹಿಳಾ ಸಂಘಸಂಸ್ಥೆಗಳಿಂದಲೂ ಬರುತ್ತಿದೆ. ಉಪನ್ಯಾಸೋದ್ಯಮದ ಬೆಂಗೋಲೆಂದರೆ ಅವರೇ. ಅವರು ಉಪನ್ಯಾಸ ವೆಚ್ಚಕ್ಕಾಗಿ ತಂತಮ್ಮ ಸಂಸ್ಥೆಗಳ ಆದಾಯದೊಂದು ಭಾಗವನ್ನು ಕಾದಿಡುತ್ತಾರೆ. ಆದರೆ ಉಪನ್ಯಾಸಕನಿಗೆ ವಿಸ್ತೃತ ರಂಗವನ್ನೊದಗಿಸಿಕೊಡುವದು ವ್ಯಾಪಾರೋದ್ಯಮಿ ಪುರುಷರ ಕ್ಲಬ್ಬುಗಳೇ. 20ಸಾವಿರ ಮತ್ತು ಮಿಕ್ಕಿ ಜನಸಂಖ್ಯೆ ಇರುವ ಪ್ರತಿಯೊಂದು ನಗರದಲ್ಲಿಯೂ ಇಂತಹ ಒಂದೊಂದು ಕ್ಲಬ್ಬು ಇದೆ. ಭಾಷಣದ ಏಜೆನ್ಸಿಗಳು 'ಪ್ರಸಿದ್ಧ ಚರ್ಚಾಕೂಟ' 'ಔತಣ ಕ್ಲಬ್ಬು' 'ಸಾಂಸ್ಕೃತಿಕ ತಂಡ'ಗಳನ್ನು ಇದಕ್ಕಾಗಿ ನಿರ್ಮಿಸಿಕೊಳ್ಳಲು ಅವಿಶ್ರಾಂತವಾಗಿ ದುಡಿಯುತ್ತಿವೆ. ಭಾಷಣಗಾರರನ್ನು ಆರಿಸಿಕೊಡುವದು, ಅವರನ್ನು ಕಂಟ್ರಾಕ್ಟಿಗೆ ಹಿಡಿಯುವದು, ಮತ್ತವರ ಆಮದು ರಫ್ತುಗಳ ವ್ಯವಸ್ಥೆ ನೋಡುವದು, ಏಜನ್ಸಿಗಳ ಹೊಣೆಗಾರಿಕೆ. ಪ್ರಚಾರ ಮೌಲ್ಯದ ಅಗಾಧ ಜ್ಞಾನವಿರಬೇಕಾದ ಈ ಉದ್ಯೋಗವನ್ನು ಹಲವು ವರುಷಗಳ ಅನುಭವವಿರುವ ಏಜನ್ಸಿಗಳು ಮಾಡುತ್ತವೆ. ಅಮೇರಿಕದ ಬೇರೆ ಬೇರೆ ಕಡೆಯ ಜನದ ವಿವಿಧ ಮನೋವೃತ್ತಿಯ ಪರಿಚಯವು ಈ ಏಜನ್ಸಿಗಳಿಗಿರಬೇಕು; ರೈಲು, ರಸ್ತೆ, ಅಥವಾ ಆಕಾಶ ಮೂಲಕ ಪ್ರಯಾಣ ವ್ಯವಸ್ಥೆ ಮಾಡುವ ವ್ಯವಹಾರಜ್ಞತೆಯೂ ಬೇಕು.



ಈಗ ಅಮೆರಿಕಾನರ ದೃಷ್ಟಿ ನೆಹರುಗಳ ಮೇಲೆ ಬಿದ್ದಿದೆ. ಸಮಯ ದೊರೆತೊಡನೆ ಪಂಡಿತಜೀ ಭಾಷಣ ದಿಗ್ವಿಜಯಕ್ಕೆ ಹೊರಡಲಿದ್ದಾರೆ.

ಆಯವ್ಯಯ

ಏಜೆನ್ಸಿಯು ತನ್ನೀ ವಿಶೇಷ ಕಾರ್ಯಗಳಿಗಾಗಿ 'ಕಮಿಶನ್' ಪಡೆಯುತ್ತದೆ; ಅದೂ ವಿಶೇಷವಾಗಿಯೇ. ಈ ಕಮಿಶನ್, ಜಾಹೀರಾತು ಮತ್ತು ಪ್ರಯಾಣ ವೆಚ್ಚ ಹೋಗಲಾಗಿ ಒಬ್ಬ ಭಾಷಣಗಾರನಿಗೆ ಅವನ ಉತ್ಪತ್ತಿಯ ಸೇಕಡಾ 45ರಷ್ಟು ಉಳಿಯಬಹುದು. ಅವನು ತನ್ನ ಊಟ, ಉಳಕೊಂಡ ವೆಚ್ಚವನ್ನು ಈ ಉಳಿದ ಅಂಶದಿಂದಲೇ ಸಲ್ಲಿಸಬೇಕು. ಆದರೆ ಅವನಿಗೆ ದೊರೆಯುವ ವಿಶೇಷಾತಿಥ್ಯಗಳಿಂದಾಗಿ ಈ ಭಾಗದಲ್ಲಿ ವೆಚ್ಚ ಬೀಳುವದು ಕಡಿಮೆ. ಉಪನ್ಯಾಸಕಿಯಾಗಿದ್ದರೆ ಸಭಿಕರನ್ನಾಕರ್ಷಿಸುವಂತೆ ಆವಳು ತೊಟ್ಟುಕೊಳ್ಳಬೇಕಾದ ವಿಶೇಷ ಉಡುಗೆಯ ಬಿಲ್ಲೂ ಆವಳ ಜೇಬಿನಿಂದಲೇ ಸಂದಾಯವಾಗಬೇಕು. ಹೀಗಾಗಿ ಒಬ್ಬ ಉಪನ್ಯಾಸೋದ್ಯಮಿಯು ಜನರ ನಿರೀಕ್ಷೆಯಿರುವಷ್ಟು ಉಳಿಸಲಾರ. ಸರ್ವಸಾಧಾರಣವಾಗಿ ಒಬ್ಬ ಭಾಷಣೋದ್ಯಮಿಗೆ ಒಂದು ಭಾಷಣಕ್ಕೆ 30ರಿಂದ 50ಪೌಂಡು'ಗಳ ವರೆಗೆ ತಲಬಿದೆ. ಆತ ಭಾಷಣ ಋತುವಿನಲ್ಲಿ ಸುಮಾರು 2000 ಪೌಂಡು ಸಂಪಾದಿಸಬಹುದು. ಆದರೆ ಕಮಿಶನ್ ಮತ್ತು ವೆಚ್ಚಗಳೆಲ್ಲಾ ಕಳೆದು ಅವನ ಪಾಲಿಗುಳಿಯುವದೆಂದರೆ 800 ಪೌಂಡು ಮಾತ್ರ. ಒಂದು ಹೊಟೆಲಿನಿಂದ ಇನ್ನೊಂದು ಹೊಟೆಲಿಗೆ ಬಿಡಾರ ಕೀಳುತ್ತಾ ಹಲವು ಬಾರಿ ರೈಲು ಪ್ರಯಾಣವನುಭವಿಸುವ ಆತನ ಪ್ರಯಾಸವನ್ನು ಗಣಿಸಿದರೆ ಅಮೇರಿಕದಲ್ಲಿ ಈ ಉಳಿತಾಯವು ಒಂದು ದೊಡ್ಡ ಬಹುಮಾನವೇನೂ ಅಲ್ಲ.

ವಿಶೇಷೋಪನ್ಯಾಸಕರು

ಆದರೆ 'ಪ್ರಸಿದ್ಧ ಉಪನ್ಯಾಸಕ'ರ ಪರಿಸ್ಥಿತಿ ಬೇರೆ. ಅವರಿಗೆ ವಿಶೇಷ ಸಂಪಾದನೆಯಿದೆ. ಈ ಅಧಿಕ ತಲಬು ಆತ ಅಥವಾ ಆಕೆ ಏನು ಹೇಳುತ್ತಾರೆಂಬುದನ್ನು ಆಧರಿಸಿರುವದಕ್ಕಿಂತ ಹೆಚ್ಚಾಗಿ ಅವರ ಹೆಸರು ಅಥವಾ ವ್ಯಕ್ತಿತ್ವವನ್ನು ಅವಲಂಬಿಸಿದೆ. ಇಂಥವರಿಗೆ ಒಂದು ಉಪನ್ಯಾಸಕ್ಕೆ 60ರಿಂದ 600 ಪೌಂಡುಗಳ ವರೆಗೂ ದೊರೆಯುತ್ತದೆ. 600 ಪೌಂಡಿನ ತಲಬು ಕೆಲವು ವರುಷಗಳ ಮೊದಲು ಎಚ್. ಜಿ. ವೆಲ್ಸರಿಗೆ ಮಾತ್ರ ದೊರೆತಿತ್ತಂತೆ. ಮಿ. ಚರ್ಚಿಲ್ಲರು ಅಮೇರಿಕದಲ್ಲಿ ಕೈಗೊಂಡ ಭಾಷಣ ಸಂಚಾರದಲ್ಲಿ ಅವರ ಕೆಲವು ಉಪನ್ಯಾಸಗಳಲ್ಲಿ ಪ್ರತಿಯೊಂದಕ್ಕೂ 500 ಪೌಂಡುಗಳಂತೆ ದೊರೆತಿದ್ದಿತು. ಒಬ್ಬ ವಿದೇಶೀ ಅಥವಾ ಯುದ್ಧ ಬಾತ್ಮೀದಾರನೆಂದಿಟ್ಟುಕೊಳ್ಳಿ. ಅದರಲ್ಲೂ ಆತ ಜನಪ್ರೀತ ಗ್ರಂಥಗಳನ್ನು ಬರೆದವನಾಗಿದ್ದರೆ ಭಾಷಣವೊಂದಕ್ಕೆ 100 ಪೌಂಡುಗಳಂತೆ ಪಡೆಯಬಹುದು. ಮಿ. ವಿನ್ಸೆಂಟ್ ಶೀಯನ್ ಇತ್ತೀಚೆಗಿನ ಒಂದು ಭಾಷಣ ಋತುವಿನಲ್ಲಿ 75ಭಾಷಣಗಳಿಗೆ 10000 ಪೌಂಡುಗಳ ಕಂಟ್ರಾಕ್ಟಿಗೊಪ್ಪಿದ್ದ; ಆದರಲ್ಲಿ ಅರೆವಾಸಿಗೂ ಮಿಕ್ಕಿ ಏಜೆನ್ಸಿ ಮತ್ತು ಇತರ ವೆಚ್ಚಗಳಿಗಾಗಿ ಹೋಗಿದ್ದಿತು.

ಆಧುನಿಕ ಅಭಿರುಚಿ

ಎಪ್ಪತ್ತೆಂಭತ್ತು ವರುಷಗಳ ಮೊದಲಿನ ಚಾರ್ಲೆಸ್ ಡಿಕೆನ್ಸನನ್ನು ಹಿಂದಿಕ್ಕಲು ಯಾವ ಆಧುನಿಕ ಭಾಷಣಗಾರನಿಂದಲೂ ಆಗಿಲ್ಲವೆಂಬುದೊಂದು ವಿಲಕ್ಷಣವೇ ಸರಿ. ಅವನ ಭಾಷಣ ಸಂಚಾರದ ತಲಬು 50 ಸಾವಿರ ಪೌಂಡುಗಳನ್ನು ಮಿಕ್ಕಿದ್ದಿತು. ಮಾತ್ರವಲ್ಲ, ಅಂತಹ ಮತ್ತೊಂದು ದಿಗ್ವಿಜಯದ ಪೂರ್ವ ವ್ಯವಸ್ಥೆಯೂ ಆಗಲೇ ನಡೆಯಿತು. ನವಯುಗದಲ್ಲಿ ಒಬ್ಬನು

[೧೧ನೇ ಪುಟ ನೋಡಿರಿ.]



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

- **ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.**

Indra Bhavan Coffee Hotel,
Balmatta Road, Mangalore.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಜಾಪಾನೀ ಪ್ರಮುಖರ 'ಹರಿಕಿರಿ'

ಟೋಜೋನ ಆತ್ಮಹತ್ಯಾ ಪ್ರಯತ್ನ

ಜಾಪಾನನ್ನು ಯುದ್ಧಕ್ಕಿಳಿಸಿದ—ಪರ್ಲ್ ಹಾರ್ಬರ್ ಸಿಡಿಲು ಧಾಳಿಯಾಜ್ಞೆಯಿತ್ತಿದ್ದ—ಮಾಜೀ ಪ್ರಧಾನ ಮಂತ್ರಿ ಜನರಲ್ ಟೋಜೋ ವೈರಿಗಳ ಕೈಗೆ ಸಿಕ್ಕುವ ಬದಲು ಆತ್ಮಹತ್ಯ ಮಾಡಿಕೊಳ್ಳುವದೇ ವಾಸಿಯೆಂದು ಎದೆಗೆ ಗುಂಡಿಟ್ಟುಕೊಂಡರೂ ಸಾಯದೆ ಉಳಿದಿದ್ದಾನೆ; ಈಗ ಅಮೇರಿಕಾನರ ಕೈಗೆ ಸಿಕ್ಕಿ ಚಿಕಿತ್ಸೆ ಪಡೆಯುತ್ತಿದ್ದಾನೆ ಆ ಘಟನೆ ಸ್ವಾರಸ್ಯದ್ದಿದೆ. ಜಾಪಾನರ ಕೈಯಿಂದ ಮಿತ್ರರು ಅಪಹರಿಸಿಕೊಂಡ ಅಧಿಕಾರಗಳಲ್ಲಿ ಜಾಪಾನರ ಜೀವ ತೆಗೆಯುವ ಕೃತ್ಯವೂ ಸೇರಿದೆ ಎಂಬಂತೆ ಕಾಣುತ್ತಿದೆ. ಇಲ್ಲವಾದರೆ ತಾವು ಮರಣ ದಂಡನೆ ವಿಧಿಸುವ ಟೋಜೋ ತಾನಾಗಿ ಸಾಯದಂತೆ ತಡೆಯೇಕೆ?

ಅಪರಾಧಿ ಯಾರು?

ಮಿತ್ರರ ಮೂಲ ಸೇನಾನಿ ಜನರಲ್ ಮೇಕರ್ಥರರಿಂದ ಮಾಜೀ ಜಾಪಾನೀ ಪ್ರಧಾನಿ ಹಿಡೆಕಿ ಟೋಜೋನನ್ನು ದಸ್ತಗಿರಿ ಮಾಡುವ ಅಜ್ಞೆ ಹೊರಟಿದ್ದಿತು. ಟೋಜೋ ಇತ್ತೀಚಿಗೆ ಜಾಪಾನೀ ರಾಜಕೀಯ ರಂಗದಿಂದ ಅದೃಶ್ಯನಾಗಿದ್ದ, ಆತ ಜೀವದಲ್ಲಿದ್ದಾನೆಂದೂ ಅಮೇರಿಕಾನರು ತನ್ನ ಮೇಲೆ ಹೊರಿಸಬಹುದಾದ ಆರೋಪಗಳನ್ನು ಪ್ರತಿಭಟಿಸಿ ವಾದಿಸುವ ಸಿದ್ಧತೆ ಮಾಡುತ್ತಿದ್ದಾನೆಂದೂ ವಾರ್ತೆಬಂದ ಹತ್ತು ದಿನಗಳ ನಂತರ ಆತನನ್ನು ಕೈದು ಮಾಡುವ ಅಜ್ಞೆ ಹೊರಟಿದ್ದಿತು. ಅದು ವರಿಗೂ ಟೋಕಿಯೋದ ಹೊರವಳಯದ ತನ್ನ ತನ್ನ ಕೃಷಿವಲಯದಲ್ಲಿ, ಒಂದು ಕಾಲದ ಅಸ್ವಾದ ಕೇಸರಿ ಟೋಜೋ, ಶಾಂತ ಜೀವನ ನಡಿಸುತಿದ್ದ. ತನ್ನ ಭವಿಸ್ಯದ ಕುರಿತು ಕೇಳಲ್ಪಡುವ ಪ್ರಶ್ನೆಗಳಿಗೆ ಉತ್ತರಕೊಡಲೊಪ್ಪದೆ ನಗೆಚಾಟಿಕೆಯಲ್ಲೇ ಎಲ್ಲವನ್ನೂ ತೇಲಿಸಿಬಿಡುತಿದ್ದನಾದರೂ ಏನೋ ಒಂದು ಗೂಢ ಯೋಚನೆಯ ಚಿನ್ಹೆ ಅವನ ಮುಖದಲ್ಲಿ ಕಂಡು ಬರುತಿತ್ತು. ಯುದ್ಧ ಪ್ರಾರಂಭಿಸಿದ ಜವಾಬ್ದಾರಿ ಯಾರದೆಂಬ ಪ್ರಶ್ನೆ ಬಂದಾಗ ಅತನಂದಿದ್ದ: "ನೀವೀಗ ಗೆದ್ದಿದ್ದೀರಿ. ಅದ್ದರಿಂದ ಆ ಹೊಣೆಗಾರಿಕೆಯನ್ನು ಮನಬಂದವರ ತಲೆಯಮೇಲೆ ಹೇರ ಬಲ್ಲಿರಿ. ಆದರೆ ಇಂದಿನಿಂದ 500 ಅಥವಾ 1000 ವರುಷಗಳ ನಂತರದ ಚರಿತ್ರಕಾರರು ಬೇರೆ ತೀರ್ಮಾನವನ್ನೇ ಕೊಡಬಹುದು".

ಅವನ ದೃಢ ಬುದ್ಧಿ

ಜಾಪಾನ್ ಶರಣಾದ ಮೇಲೆ ಜಪಾನರಿಗೂ ಜನರಲ್ ಟೋಜನ ಮೇಲೆ ಜಿಗುಪ್ಸೆ ಮೂಡಿದ್ದಿತು. ರಾಷ್ಟ್ರವನ್ನು ಯುದ್ಧಕ್ಕಿಳಿಸಿದ ಹೊಣೆಗಾರನು, ತನ್ನ ಕೃತ್ಯದ ಪ್ರತಿಫಲವಾಗಿ ಅದಕ್ಕಾಗುವ ಅಪಮಾನವನ್ನು ಕಂಡೂ ಜೀವದಿಂದಿರುವದು ಜಾಪಾನೀ ಧರ್ಮದಂತೆ ಮಹಾ ಹೇಡಿತನ. ಅವನೂ ಟೋಜೋ ನಿಶ್ಚಲ ಮನಸ್ಕನಾಗಿದ್ದ. ಆತ ಕೋರ್ಟಿಗೆ ಹಾಜರಾಗಿ ಅಧ್ಯಕ್ಷ ಬಸವೆಲ್ಟರೀ ಯುದ್ಧಾಪರಾಧಿಯೆಂದು ಸಾಬೂಪಡಿಸಿ ಕೊನೆಗೆ 'ಹರಿಕಿರಿ' ಮಾಡಿಕೊಳ್ಳಲಿದ್ದಾನೆ' ಎಂದು ಜಾಪಾನೀ ಅಧಿಕಾರಿಯೊಬ್ಬನಂದಿದ್ದ. ಈ ಕುರಿತು ಪ್ರಶ್ನೆ ಕೇಳಿದಾಗ ಟೋಜೋ ತೀಕ್ಷ್ಣಭಾವ ಪ್ರದರ್ಶಿಸಿ ಉತ್ತರಕೊಡಲು ನಿರಾಕರಿಸಿಬಿಟ್ಟ. "ನಿಜವಾದ ಯೋಧರು ರಣರಂಗದಲ್ಲಿ ಹೋರಾಡಿ ಸಾಯುತ್ತಾರೆ. ಶಾಂತಿ ಘೋಷಣೆಯಾದಮೇಲೆ ಯುದ್ಧ ನಿಲ್ಲುತ್ತದೆ ಶುದ್ಧ ಸಾಹಸದಿಂದ ಕಠಿಣವಾಗಿ ಹೋರಾಡಿದ ವೈರಿಯನ್ನು ಯಾವ ಕಡೆಯವರಾದರೂ ಗೌರವಿಸುತ್ತಾರೆ ಅದ್ದರಿಂದ ಜನರಲ್ ಮೇಕರ್ಥರರಿಗೆ ಜಾಪಾನೀ ಜನತೆಯ ಮೇಲೂ ನನ್ನ ಮೇಲೂ ಗೌರವವಿದೆ" ಎಂದೇ ಆಗ ಟೋಜೋನ ಹೇಳಿಕೆ.

ಆ ದಿನ

ಆದರೆ ಮೇಕರ್ಥರ್ ತಡೆಯಲಿಲ್ಲ. ಸೆಪ್ಟಂಬರ್ 11ರಲ್ಲಿ ಟೋಜೋನನ್ನು ಹಿಡಿಯಲು ಅಮೇರಿಕನ್ ಯೋಧರು ಅವನ ಮನೆಯತ್ತ ಧಾವಿಸಿದರು. ಅವರೊಂದಿಗೆ ಕೆಲವು ಯುದ್ಧ ಬಾತ್ಮೀದಾರರೂ ಹೋಗಿದ್ದರು. ಇವರು ಮಾಜೀ ಜಪಾನ್ ಮಂತ್ರಿಯ ಮನೆಯ ಹೆಬ್ಬಾಗಿಲನ್ನು ಸಮೀಪಿಸಿದಾಗ ಪಕ್ಕದ ದೊಡ್ಡ ಕಿಟಕಿಯು ಎರಡು ಬಾರಿ ತೆರೆಯಲ್ಪಟ್ಟಿತು. ಆ ಮೂಲಕ ಉಕ್ಕಿನಂತಹ ಕರ್ಕಶ ವದನವೊಂದು ಕಾಣಿಸಿಕೊಂಡು ಮೆಲುಧ್ವನಿಯಲ್ಲಿ 'ನಾನೇ ಟೋಜೋ' ಎಂದಿತು. ಅಷ್ಟು ಹೇಳಿ ಟೋಜೋ ಸಟಕ್ಕನೆ ಕಿಟಕಿಯ ಬಾಗಿಲು ಹಾಕಿಕೊಂಡ. ಆದರೆ ಅಷ್ಟರೊಳಗೆ ಒಬ್ಬ ಫೋಟೋಗ್ರಾಫರನ ಕೆಮರದಲ್ಲಿ ಟೋಜೋ ವದನದ—ವಿಶಾಲ ಹಣೆಯಿಂದೆದ್ದು ಬುಡದ ವರೆಗೂ ಕತ್ತರಿ ಬಿದ್ದಿದ ಕೂದಲಿನ, ಕೊಂಬಿನ ಚೌಕಟ್ಟಿನ ಕನ್ನಡಕದೊಳಗಿಂದ ಧಳಧಳಿಸುವ ಕಣ್ಣುಗಳ-ಭಾವಚಿತ್ರ ಬಿದ್ದಿತ್ತು. ಕಿಟಕಿಯ ಬಾಗಿಲು ಬಿದ್ದೊಡನೆಯೇ ಸೋಲ್ಜರರು ಮನೆಯೊಳಗೆ ನುಗ್ಗಲು ಹೆಜ್ಜೆ ಮುಂದಿಟ್ಟಾಗ ಒಳಗಡೆಯಿಂದ ಗುಂಡಿನ ಸದ್ದು ಕೇಳಿಸಿತು. ಅವರು ಹೆಬ್ಬಾಗಿಲನ್ನೊಡೆದು ಒಳನುಗ್ಗಿದರು; ಒಳಗೆ ಮತ್ತೊಂದು ಬಾಗಿಲನ್ನೂ ಒಡೆಯೇ ಹೋಗಬೇಕಾಯಿತು.

ಆ ದೃಶ್ಯ

ಕೋಣೆಯಲ್ಲಿ ತಗ್ಗಾದ ಕುರ್ಚಿಯೊಂದರಲ್ಲಿ ಟೋಜೋ ಅಸ್ತವ್ಯಸ್ತನಾಗಿ ಬಿದ್ದಾನೆ. ಎದೆಯ ಕೆಳಭಾಗದೊಂದು ಗುಂಡಿನ ಘಾಯದಿಂದ ರಕ್ತವು ರಭಸದಿಂದ ಚಿಮ್ಮುತ್ತಿದೆ, ಆ ಗುಂಡು ನೇರಾಗಿ ದೇಹದೊಳಗೆ ಪ್ರವೇಶಿಸಿದ್ದಿತು. ಪಕ್ಕದ ಮೇಜಿನ ಮೇಲೆ ಶುದ್ಧ ಬಿಳಿಯ 'ಹರಿಕಿರಿ' ವಸ್ತ್ರ ಸುತ್ತಿದ್ದ ಎರಡು ಹರಿತ ಚೂರಿಗಳಿದ್ದುವು; ಆದರವುಗಳಿಗೆರುಧಿರ ಸೋಕಿರಲಿಲ್ಲ; ಟೋಜೋ ಅವುಗಳನ್ನು ಉಪಯೋಗಿಸಿರಲಿಲ್ಲ ಅಮೇರಿಕನ್ ಡಾಕ್ಟರನೊಬ್ಬನಿಗೆ ಅವಸರದ ಕರೆ ಹೋಯಿತು. ದೇಹಕ್ಕೆ ಹೊಸ ರಕ್ತವನ್ನು ಹೊಗಿಸಿ, ಘಾಯಕ್ಕೆ ಚಿಕಿತ್ಸೆ ಮಾಡಹತ್ತಿದ್ದಾಗ ಟೋಜೋ ತೇಕುತ್ತಾ ನರಳುತ್ತಾ 'ನಾನು ಸಾಯಲಿಚ್ಛಿಸುತ್ತೇನೆ' ಎಂದ. ಆಲ್ಲಿ ಟೋಜೋನ ಬಾಯಿಯಿಂದ ಬಂದ ಮಾತುಗಳು. "ಮಹಾ ಪೂರ್ವ ಏಸ್ಯಾದ ಜನತೆಗಾಗಿ ನಾನು ಪಶ್ಚಾತ್ತಾಪ ಪಡುತ್ತೇನೆ. ಎಲ್ಲಾ ಹೊಣೆಗಾರಿಕೆಗೂ ನಾನೇ ತಲೆ ಕೊಡುತ್ತೇನೆ. ಮಹಾ ಪೂರ್ವ ಏಸ್ಯಾದ ಯುದ್ಧ-ಅದೊಂದು ನ್ಯಾಯ ಪೂರ್ಣ ಯುದ್ಧ. ನಮ್ಮ ಎಲ್ಲಾ ಶಕ್ತಿಗಳು ಬರಿದಾದ ಮೇಲೆ ಕೊನೆಯಲ್ಲಿ ನಾವು ನೆಲಹಿಡಿದೆವು. ಸೋತವನಂತೆ ವಿಜಯಿಗಳೆದಿರು ವಿಚಾರಣೆಗಾಗಿ ಕೈಕಟ್ಟಿ ನಿಲ್ಲುವ ಇಚ್ಛೆ ನನಗಿರಲಿಲ್ಲ. ಒಂದೇ ಹೊಡೆತದಿಂದ ನನ್ನನ್ನು ನಾನೇ ತೀರಿಸಿಕೊಳ್ಳಲಿಚ್ಛಿಸಿದೆ. ನನ್ನ ಆಯುಧವನ್ನು ಪ್ರಯೋಗಿಸಿಕೊಳ್ಳಲು ಪ್ರಥಮತಃ ಯೋಚಿಸಿದೆನಾದರೂ, ಅದು ಫಲಿಸದಿರಬಹುದು, ನಾನು ಉಳಿಯುವಂತಾಗಬಹುದೆಂಬ ಹೆದರಿಕೆಯಿಂದ ರಿವೋಲ್ವರನ್ನೇ ಉಪಯೋಗಿಸಿಕೊಂಡೆ". ಆತ್ಮಹತ್ಯಾ ಪ್ರಯತ್ನದ ಮೊದಲು ಟೋಜೋ ಬರೆದಿಟ್ಟಿದ್ದ ಚೀಟಿಯೊಂದರಲ್ಲಿ 'ಜಾಪಾನೀ ಜನತೆಗೆ ನನ್ನ ಗುರುತವಾಗಬೇಕು, ನಾನೀ ತ್ಯಾಗಮಾಡಿದುದನ್ನು ಅವರು ತಿಳಿಯುವಂತಾಗಬೇಕು ಎಂಬುದಕ್ಕಾಗಿ ತಲೆಯ ಬದಲಿಗೆ ಎದೆಗೆ ಗುಂಡಿಕ್ಕಿಕೊಂಡೆ' ಎಂದು ಇತ್ತಂತೆ. ಚೀಟಿಯನ್ನು 'ಬಾಂರ್ಝಾಯಿ ಎಂಪರರ್" ಎಂಬ ರಾಜಭಕ್ತಿ ಪ್ರಮಾಣದೊಡನೆ ಕೊನೆಗೊಳಿಸಲಾಗಿತ್ತಂತೆ.

ಕಟ್ಟುಗ್ರ ಮನುಷ್ಯ

ಟೋಕಿಯೋ ಬಳಿಯ ಯೊಕೊಹೊಮಾ ಆಸ್ಪತ್ರೆಯಲ್ಲಿ ಟೋಜೋನೀಗ ಗುಣಮುಖಿವಾಗುತಿದ್ದಾನೆಂದು ತಿಳಿದು ಬರುತ್ತದೆ, 20 ಸಾವಿರ ಯುನಿಟ್ ಪೆನಿಸಿಲಿನ್'ನ್ನು ಅವನ ದೇಹದೊಳಕ್ಕೆ 'ಇಂಜೆಕ್ಟ್' ಮಾಡಲಾಯಿತು ಆದರೂ ಘಾಯದೊಳಗೆ ಕೀವಾಗುವ ಸಂಭವವು ತಪ್ಪಿಲ್ಲವಾದ್ದರಿಂದ ಇನ್ನೂ ಅಪಾಯದ ಅವಧಿ ದಾಟಿಲ್ಲ. ಜನರಲ್ ಟೋಜೋ ಒಂದು ಕಾಲದಲ್ಲಿ ಜಾಪಾನಿನ ಕಟ್ಟುಗ್ರ ಸೇನೆಯಾಗಿದ್ದ ಕ್ವಾಂಟುಂಗಿನ ನಾಯಕನಾಗಿದ್ದ. 1941ನೇ ಒಕ್ಟೋಬರಿನಲ್ಲಿ ಸಾಬಾ ಪ್ರವೃತ್ತಿಯ ಮಂತ್ರಿ ಮಂಡಲ ರಾಜಿಕೊಟ್ಟಾಗ ಪ್ರಧಾನ ಮಂತ್ರಿಯಾಗಿ ಸರಕಾರ ಸ್ಥಾಪಿಸಿಕೊಂಡ. ಅಧಿಕಾರಕ್ಕೆ ಬಂದ ಏಳು ವಾರಗಳಲ್ಲಿ ಪರ್ಲ್‌ಹಾರ್ಬರ್ ಧಾಳಿ ನಡೆಯಿಸಿದ. ಅವನು ಆದಿಯಿಂದಲೂ ಜರ್ಮನ್ ಪಕ್ಷಪಾತಿ. ಬ್ರಿಟನ್ ಮತ್ತು ಅಮೇರಿಕಗಳೆಂದರೆ ಆತನಿಗೆ ಪರಮಾವಧಿ ಜಿಗುಪ್ಸೆ 'ಕರೆಯದೆ ಬರವವರು' ಎಂದು ಅಂಗ್ಲೋ ಅಮೆರಿಕಾನರಿಗೆ ಟೋಜೋದತ್ತ ಬಿರುದು ಜಾಪಾನಿನ ಅದೃಷ್ಟ ಹಿಮ್ಮುಖವಾಗ ಹತ್ತಿದ 1944ನೇ ಜುಲಾಯಿಯಲ್ಲಿ ಅವನು ಅಧಿಕಾರ ತ್ಯಾಗ ಮಾಡಬೇಕಾಯಿತು. ಟೋಜೋ ಸಾಮಾನ್ಯ ಜಾಪಾನರಿಗಿಂತ ದೀರ್ಘದೇಹಿ ಮುಖವು ಬಿಗಿದು ಕಟ್ಟಿದಂತಿದ್ದು, ತೀಕ್ಷ್ಣ ಕರಿಕಣ್ಣುಗಳಿಂದ ಹೊಳೆಯುತ್ತಿದೆ. ಅತ್ಯಂತ ಚುರುಕು ಮತ್ತು ಆವೇಶ ಬುದ್ಧಿಯ ಮನುಷ್ಯ ಅದ್ದರಿಂದಲೇ ಜಾಪಾನಿನಲ್ಲಿ ಅವನನ್ನು 'ಕಮಿಸಿರಿ' (ಕ್ಷೌರದ ಬ್ಲೇಡು) ಎಂದು ಕರೆಯುವದಿದೆ.

ಜಾಪಾನಿನಲ್ಲಿ ಹರಿಕಿರಿ

39ಮಂದಿ ಜಾಪಾನ್ ಯುದ್ಧ ಪ್ರಮುಖರು ಮೇಕರ್ಥರರ ಯುದ್ಧಾರೋಪಿ ಪಟ್ಟಿಯಲ್ಲಿದ್ದಾರೆ. ಆ ಪೈಕಿ ಟೋಜೋನ ಮಂತ್ರಿಮಂಡಲದಲ್ಲಿದ್ದ 10ಮಂದಿಯನ್ನು ಕೂಡಲೇ ಕೈದುಮಾಡುವ ಹುಕುಮಾಗಿದೆ. ಜಾಪಾನಿನಲ್ಲಿ ಸರ್ವತ್ರ 'ಹರಿಕಿರಿ'ಹವೆ ಹಬ್ಬಿದೆ ಜಾಪಾನೀ ಸೇನೆಯ ಮೂಲನಾಯಕ ಮತ್ತು ಮಾಜೀ ಯುದ್ಧಮಂತ್ರಿ ಫೀಲ್ಡ್ ಮಾರ್ಶಲ್ ಸುಗಿಯಾಮಾ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಫಿಲಿಪ್ಪಾಯಿನುಗಳ ಮಾಜೀ ಸರ್ವಸೇನಾನಿ ಜನರಲ್ ಸೀಚಿಟನಾಕನೂ ಗುಂಡಿಕ್ಕಿಕೊಂಡು ಮಡಿದನೆಂದು ವಾರ್ತೆ. ಟೋಜೋ ಮಂಡಲದಲ್ಲಿ ನಾವೆಯ ಶಿರಸ್ತಾಗಿದ್ದ ಎಡ್ಮಿರಲ್ ಶಿಮಡಾ ಆತ್ಮಹತ್ಯೆಯ ಯೋಜನೆ ಮಾಡಿದ್ದನಾದರೂ ಈಗ ಶರಣು ಶರ್ತಗಳ ಪಾಲನೆಗಾಗಿ ಜೀವನ್ಮೃತನಂತೆ ಬದುಕುತ್ತೇನೆನ್ನುತ್ತಾನೆ. ಟೋಜೋ ಕಾಲದ ವಿದ್ಯಾಮಂತ್ರಿ ಕುನ್ಹಿಹಿಕೋ ಹಶಿಡಾ ವಿಷ ತಿಂದು ಸತ್ತ; ಓರ್ವ ಸೇನಾನಿ ಕಾತಿ ಮೋಟೋ ಗುಂಡಿಟ್ಟುಕೊಂಡು ಮಡಿದ; ಅಲ್ಲಲ್ಲಿದ್ದ ಇತರ ಹಲವು ಜಾಪಾನೀ ಅಧಿಕಾರಿಗಳೂ ಸೇನಾನಿಗಳೂ ಹರಿಕಿರಿ ಮಾಡಿಕೊಂಡಿದ್ದಾರೆ. ಅಭಿಮಾನದಿದಿರು ಪ್ರಾಣವನ್ನು ತೃಣವಾಗಿ ಗಣಿಸಿ ಜಾಪಾನರು ಜೀವಬಿಡುತಿದ್ದಾರೆ. ಟೋಜೋ ಕಾಲದ ವಿದೇಶ ಮಂತ್ರಿಯಾಗಿದ್ದ ಶಿಗೆನೋರಿ ಟೋಗೋನನ್ನು ಹುಡುಕಲಾರಂಭಿಸಿದ್ದಾರೆ; ಅತ್ತ ಪರ್ಲ್ ಹಾರ್ಬರ್ ಧಾಳಿ ನಡೆಯುವಾಗಲೇ ಇತ್ತ ಮಾತುಕತೆಯ ಕಪಟ ನಾಟಕವಾಡಿದವನೆಂಬ ಕಾರಣದಿಂದ ಟೋಗೋನ ಮೇಲೆ ಅಮೇರಿಕಾನರಿಗೆ ಅತಿ ಹೆಚ್ಚಿನ ವೈಷಮ್ಯವಿದೆ. ಟೋಜೋ

(ಹನೇ ಪುಟ ನೋಡಿರಿ.)

ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ಔನ್ಸಿನ ೩ಬಾಟ್ಲುಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ,
ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

★ ಕಾಂಗ್ರೆಸ್ ಕಾರ್ಯಕಾರಿ ಸಮಿತಿ. ★

ಮಹತ್ವಪೂರ್ಣ ಪೂನಾ ನಿರ್ಧಾರಗಳು.



ಅಧ್ಯಕ್ಷ ಆಜಾದ್

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ತಾ 12ರಿಂದ ಪೂನೆಯಲ್ಲಿ ಕೂಡಿ ಬಂದು ಮಹತ್ವದ ನಿರ್ಧಾರಗಳನ್ನು ಮಾಡಿದೆ. ಪೂನೆಯ ಪ್ರಕೃತಿ ಚಿಕಿತ್ಸಾಲಯದಲ್ಲಿರುವ ಮಹಾತ್ಮಾ ಗಾಂಧಿಯವರ ಗುಡಿಸಲಿನ ಮುಂಬಾಗದಲ್ಲಿ ವಿಶೇಷವಾಗಿ ಕಟ್ಟಲ್ಪಟ್ಟ ಚಪ್ಪರದೇರಿಯಲ್ಲಿ ತಾ 12ನೇ ಅಪರಾಹ್ನ 3-15ಕ್ಕೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೇರಿಬರಲಾರಂಬ ಅಂದಿನಿಂದ ತಾ 15ರ ವರೆಗೆ ಐದು ದಿನಗಳ ಪರ್ಯಾಲೋಚನೆ ನಡಿಸಿ ಪ್ರಾಮುಖ್ಯ ವಿಷಯಗಳ ಕುರಿತು ನಾಲ್ಕ ಮಹತ್ವದ ನಿರ್ಧಾರಗಳನ್ನು ವರ್ಕಿಂಗ್ ಕಮಿಟಿ ಜಾಹೀರುಮಾಡಿದೆ.

೧ ರಾಷ್ಟ್ರಕ್ಕೆ ಧನ್ಯವಾದ

ಮೊದಲನೇ ಠರಾವಿನಲ್ಲಿ-1942ರಿಂದ ಮೂರುವರುಷಗಳ ವರೆಗೆ ಸೋನ್ಯ,ಪೋಲಿಸ್ ಮತ್ತು ಓರ್ಡಿನೆನ್ಸ್ ಆಳ್ವಿಕೆಗೆದೆ ಕೊಟ್ಟು ಅಂತ ಧೈರ್ಯ ಸ್ಥೈರ್ಯಗಳಿಗಾಗಿ ಕಾಂಗ್ರೆಸ್ ಕಮಿಟಿಯು ರಾಷ್ಟ್ರವನ್ನು ಹೃತ್ಪೂರ್ವಕವಾಗಿ ಅಬಿನಂದಿಸಿದೆ. ಮೂರು ವರುಷಗಳಲ್ಲ ನಡೆಸಿದ ಭೀತಿದಾಯೀ ದಬ್ಬಾಳಿಕೆಗಾಗಿ ಸರಕಾರವನ್ನು ಖಂಡಿಸಿ, ಯುದ್ಧ ಮುಗಿದರೂ ವಸಾಹತು ಮತ್ತು ಪರಾಧೀನ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆಯುವದನ್ನು ನಿಷೇಧಿಸಿದ 1942ನೇ ಅಗೋಸ್ತ ನಿರ್ಧಾರದಲ್ಲಿ ನಮೂದಿಸಲ್ಪಟ್ಟಿರುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಧ್ಯೇಯಗುರಿಗಳನ್ನೇ ದೃಡೀಕರಿಸಿ ಲೋಕಶಾಂತಿಗೆ ಭಾರತವು ಸ್ವತಂತ್ರವಾಗುವದು ಅಗತ್ಯವೆಂಬುದನ್ನು ಒತ್ತಿ ಹೇಳಿದೆ.

2 ಚುನಾವಣೆಗಿಳಿಯುವೆವು

ಎರಡನೇ ಠರಾವಿನಲ್ಲಿ-ಮುಂಬರುವ ಚುನಾವಣೆಯಲ್ಲಿ ಭಾಗ ವಹಿಸುವ ನಿರ್ಧಾರವನ್ನು ಘೋಷಿಸಿದೆ ಸದ್ಯದ ಮತದಾನ ಪದ್ಧತಿ ಅತ್ಯಂತ ಸಂಕುಚಿತವಿದೆ. ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವಿರಬೇಕೆಂಬುದೇ ಕಾಂಗ್ರೆಸಿನ ಪಂಥ. ಮತದಾರ ಪಟ್ಟಿಯು ಎಷ್ಟೋ ವರುಷಗಳಿಗೆ ಹಿಂದಿನವು. ಈ ಅವಧಿಯಲ್ಲಿ ಜನಗಣದಲ್ಲಿ ಹಲವು ಬದಲಾವಣೆಗಳಾಗಿವೆ. ಕೇಂದ್ರ ಎಸೆಂಬ್ಲಿಯ ಮತದಾರರ ಸಂಖ್ಯೆ 100ಕ್ಕೊಂದರಷ್ಟೂ ಇಲ್ಲ ಅದಿನ್ನೂ 1919ನೇ ಏಕ್ಟಿನನ್ವಯ ಜವಾಬ್ದಾರಿ ಸಲಹೆಗಾರರನ್ನೊಳಗೊಂಡೇ ಇದೆ ಬ್ರಿಟಿಷ್ ಸರಕಾರದ ಗೊತ್ತುಗಳು ಯಾವುದೆಂಬ ಪ್ರಕಟಣೆ ಆಗಿಲ್ಲ. ಅಂತೂ ಯೋಗ್ಯ ಹಾಗೂ ಸ್ವತಂತ್ರವಾದ ಚುನಾವಣೆಗಳ ಪರಿಸ್ಥಿತಿಯೇ ಸದ್ಯಕ್ಕೆ ಗೋಚರಿಸುವದಿಲ್ಲ ಆದರೂ 'ಕೂಡಲೇ ಸ್ವಾತಂತ್ರ್ಯ ಬೇಕೆಂಬ ಏಕ ಮಾತ್ರ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಜನತೆಯ ಮನೋಗತಿಯ ಪ್ರದರ್ಶನಕ್ಕಾಗಿ ಕಾಂಗ್ರೆಸು ಚುನಾವಣೆಯಲ್ಲಿ ಸ್ಪರ್ಧಿಸಲಿರುವದು' ಇದು ಸದ್ಯ ಸ್ಥಿತಿಗೆ ಕೂಡಲೇ ಹೊಂದಿಕೆಯಾಗಲಿರುವ ಅತಿ ಮುಖ್ಯ ನಿರ್ಧಾರ.

3. ತಾತ್ಕಾಲಿಕ ದುರವಸ್ಥೆಯ ನಿಷೇಧ

ಮೂರನೇ ಠರಾವಿನಲ್ಲಿ-ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪಿಸದ ಸರಕಾರದ ವರ್ತನೆಯ ಖಂಡನೆಯಿದೆ ಸಿಮ್ಲಾ ಸಮ್ಮೇಲನದ ಪರಾಭವಕ್ಕೆ ಹೇತುವಾದ ಸರಕಾರೀ ಧೋರಣೆಯ ಖಂಡನೆ-ಆ ಸಮ್ಮೇಲನದಲ್ಲಿ ಕಾಂಗ್ರೆಸು ಪ್ರತಿನಿಧಿಗಳು ವಹಿಸಿದ ಧೋರಣೆಯ ಸಮರ್ಥನೆ-ರಾಜಕೀಯ ಕೈದಿಗಳ ಬಿಡುಗಡೆಯಲ್ಲಿಯೂ ಕಾಂಗ್ರೆಸು ಕಮಿಟಿಗಳ ಮೇಲಿನ ನಿಷೇಧಗಳನ್ನು ಹಿಂತೆಗೆಯುವುದರಲ್ಲಿಯೂ ಸರಕಾರವು ವಹಿಸಿರುವ ಶಂಕೆಯ ತೀವ್ರ ನಿಷೇಧ-ನಾಗರಿಕ ಹಕ್ಕಿಗಿರುವ ಪ್ರತಿಬಂಧಗಳನ್ನು ತೆಗೆಯಲು ಆಳುಕುತ್ತಿರುವ ಅಧಿಕಾರೀ ವರ್ತನೆಯ ಖಂಡನೆ, ಮಾಡಲಾಗಿದೆ ಕೆಲವು ಪ್ರಾಂತ್ಯಗಳಲ್ಲಿ ಇನ್ನೂ 93ನೇ ಕಲಮಿನ ಆಳ್ವಿಕೆಯಿರುವುದನ್ನೂ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆಯಾಗದುದನ್ನೂ ನಿಷೇಧಿಸಿ, ಕೆರಳಿಸುವ ವಿದ್ಯಮಾನಗಳೆಷ್ಟೇ ನಡೆದರೂ ಸಂಧಾನ, ಸಮಾಲೋಚನೆಗಳೇ ಶಾಂತಿದಾಯಿ ತೀರ್ಮಾನದ ಕೀಲಿಕೈಯೆಂಬ ತನ್ನ ಧೋರಣೆಯನ್ನು ಕಾಂಗ್ರೆಸು ಎಂದೂ ಬಿಡುವಂತಿಲ್ಲವೆಂದು ಸ್ಪಷ್ಟಪಡಿಸಲಾಗಿದೆ ಸಾಧ್ಯವಿದ್ದಲ್ಲಿ ಸಂಧಾನ ಮತ್ತು ತೀರ್ಮಾನ ಸಾಧನೆ-ಅಗತ್ಯ ಬಿದ್ದಲ್ಲಿ ಅಸಹಕಾರ ಮತ್ತು ಪ್ರತ್ಯಕ್ಷ ಕಾರ್ಯಾಚರಣೆ, ಎಂಬ ಕಾಂಗ್ರೆಸ್ ತತ್ವವು ಅಚಲವಿದೆ ಎಂದೂ ಆ ಠರಾವು ಘೋಷಿಸಿದೆ

4 ಭಾರತದ ಏಕರೂಪವೇ ಮುಖ್ಯ

ನಾಲ್ಕನೇ ಠರಾವಿನಲ್ಲಿ — ಕಾಂಗ್ರೆಸು ಸಂಯುಕ್ತ ಭಾರತದ ತನ್ನ ಗುರಿಯನ್ನು ಸ್ಪಷ್ಟ ಪಡಿಸಿದೆ ಕ್ರಿಪ್ಸ್ ಸಂಧಾನ ಭಂಗದ ವೇಳೆ ಭಾರತಕ್ಕೆ ಫೆಡರಲ್ ರೀತಿಯ ರಾಜ್ಯಭಾರಬೇಕೆಂದು ಕಾಂಗ್ರೆಸ್ ಅಭಿಪ್ರಾಯ ಪಟ್ಟಿದ್ದಿತು. 1942ರಲ್ಲಿ ಅಲಹಾಬಾದಿನಲ್ಲಿ ಸೇರಿದ ಅ ಭಾ ಕಾಂಗ್ರೆಸ್ ಸಮಿತಿ ಸಭೆಯು ರಾಷ್ಟ್ರದ ವಿಭಜನೆಯನ್ನು ಕಾಂಗ್ರೆಸ್ ಎಂದಿಗೂ ಒಪ್ಪುವಂತಿಲ್ಲವೆಂಬ ನಿರ್ಧಾರ ಮಾಡಿದ್ದಿತು ಆ ಮೇಲೆ ಮೂರು ತಿಂಗಳ ನಂತರ ಬೊಂಬಾಯಿಯಲ್ಲಿ 1942ನೇ ಅಗೋಸ್ತು 8ರಲ್ಲಿ ಸೇರಿದ ಕಾಂಗ್ರೆಸ್ ಕಮಿಟಿ ಸಭೆಯು, ರಾಷ್ಟ್ರದ ಯಾವುದಾದರೊಂದು ವಿಭಾಗಿತ ಪ್ರದೇಶದ ಜನತೆಯ ಜಾಹೀರಾದ ಹಾಗೂ ದೃಢವಾದ ಅಭಿಪ್ರಾಯಕ್ಕೆ ವಿರುದ್ಧವಾಗಿ, ಆ ಭಾಗವು ಸಂಯುಕ್ತ ಭಾರತದ ಪೆಡರಲಿನಲ್ಲಿಯೇ ಸೇರಿರಬೇಕೆಂದು ಒತ್ತಾಯಿಸುವಂತಿಲ್ಲವೆಂಬ ನಿರ್ಧಾರವಾಗಿತ್ತು. ಮೇಲಿನ ಮೂರು ನಿರ್ಣಯಗಳನ್ನೂ ಇಂದಿನ ನಿರ್ಧಾರದಲ್ಲಿ ಗರ್ಭೀಕರಿಸಿಕೊಳ್ಳಲಾಗುತ್ತದೆ. ಕಮಿಟಿಯ ಅಭಿಪ್ರಾಯದಂತೆ ಅವು ಮೂರರಲ್ಲಿ ಭಿನ್ನತೆ ಅಥವಾ ಪರಸ್ಪರ ವಿರುದ್ಧಾಂಶವೇನೂ ಇಲ್ಲ ಕಮಿಟಿಗೆ ಸಂಯುಕ್ತ ಭಾರತದಲ್ಲಿಯೇ ನಂಬಿಕೆಯಿದೆ ಎಂಬುದರ ದೃಢೀಕರಣವೇ ಅದರ ಸಾರ. ಅರ್ಥಾತ್ ಮುಸ್ಲಿಂ ಧುರೀಣರು ಕೇಳುತ್ತಿರುವ ಪಾಕಿಸ್ತಾನ್ ವಿಭಜನೆಯನ್ನು ಕಮಿಟಿಯು ತಿರಸ್ಕರಿಸುತ್ತದೆ. ಮತ್ತು ಈ ಮೂಲಕ ಆ ನಾಯಕರಾರಿತ್ತಿರುವ ಭಾರತದ ವಿಭಜನೆಯ ಧುರವೀಳ್ಯವನ್ನು ಈ ಕಮಿಟಿಯು ಅಂಗೀಕರಿಸುತ್ತದೆ



ಕಾರ್ಯದರ್ಶಿ ಕೃಪಾಲನಿ.

ಇತರ ನಿರ್ಧಾರಗಳು

ಮೇಲಿನ ನಾಲ್ಕು ನಿರ್ಧಾರಗಳು ಕಾಂಗ್ರೆಸಿನ ಆಧುನಿಕ ಚತುಸ್ಸೂತ್ರಗಳು-ಸದ್ಯದ ಕಾಂಗ್ರೆಸ್ ಭಾವನಾಲಯದ ಚತುರ್ಗಂಭಗಳ-ಎನ್ನಬಹುದು ಈ ಮುಖ್ಯ ನಿರ್ಧಾರಗಳಲ್ಲದೆ ಇತರ ಹಲವು ನಿರ್ಣಯಗಳನ್ನೂ ಪೂನಾ ಸಭೆ ಮಾಡಿದೆ. ಇನ್ನು ಕೆಲವು ವಿಷಯಗಳು ಪರ್ಯಾಲೋಚನೆಯಲ್ಲಿವೆ. ಬೇಜವಾಬ್ದಾರೀ ವೈಸರಾಯೀ ಕೌನ್ಸಿಲ್, ಬ್ರೆಟ್ಟನ್ ವುಡ್ ನಿರ್ಧಾರಗಳು, ಸ್ಟರ್ಲಿಂಗ್ ಸಾಲಗಳು, ಫ್ರಿಸ್ಕೋ ಸಮ್ಮೇಲನದ ನಿರ್ಧಾರಗಳು, ಮೊದಲಾದುವುಗಳ ಕುರಿತೂ ಕಾಂಗ್ರೆಸ್ ಧೋರಣೆಗನುಸಾರವಾದ ನಿರ್ಣಯಗಳಾದುವು. ಸುಭಾಷರ ನಾಯಕತ್ವದಲ್ಲಿದ್ದು, ಈಗ ಅಖಿಲ ಭಾರತದ ಆತುರದ ಪ್ರಶ್ನೆಯಾಗಿರುವ 'ಭಾರತ ರಾಷ್ಟ್ರೀಯ ಸೇನೆ'ಯ ಸದಸ್ಯರ ಸಂಬಂಧದ ಠರಾವೇ ಆ ಪೈಕಿ ಮುಖ್ಯವೆನ್ನಬಹುದು ಆ ಸೇನೆಯ ಅಧಿಕಾರಿಗಳನ್ನೂ ಅನುಯಾಯಿಗಳನ್ನೂ ಬಿಡುಗಡೆ ಮಾಡಬೇಕು-ಯುದ್ಧ ಸಂಬಂಧವಾಗಿ ಮರಣದಂಡನೆ ವಿಧಿಸಲ್ಪಟ್ಟಿರುವ ಹಿಂದೀ ಸೈನಿಕರು ಆ

Announcing!

The Directors of the Syndicate have great pleasure in announcing the opening of Branches of the Bank shortly at

BEZWADA & GUNTUR.

Every type of Banking Business will be transacted.

Branches & Agencies all over India

The Canara Industrial & Banking Syndicate Ltd.,

ESTD: 1925

Central Office HOMJI STREET FORT BOMBAY

ಮಹತ್ವಪೂರ್ಣ ಪೂನಾ ನಿರ್ಧಾರ

ಥವಾ ನಾಗರಿಕರ ಶಿಕ್ಷೆಯನ್ನು ಜಾರಿ ಮಾಡಬಾರದ.-ಎಂದು ಕಮಿಟಿಯು ಆಗ್ರಹ ಪೂರ್ವಕ ಸರಕಾರವನ್ನು ಕೇಳಿಕೊಂಡಿದೆ.

ಕಾಂಗ್ರೆಸಿನೊಳಗಿನ ಪಕ್ಷಗಳು

ಈಗ ತೀರಾ ತಿಕ್ಕಾಟದ ಪ್ರಶ್ನೆಯಾಗಿರುವ ಕಮ್ಯೂನಿಸ್ಟರೇ ಮೊದಲಾದ ಕಾಂಗ್ರೆಸಿನೊಳಗಿನ ಪಂಗಡಗಳ ಪ್ರಶ್ನೆಯನ್ನು ಪಂಡಿತ ನೆಹರು, ಬಾಬು ರಾಜೇಂದ್ರ ಪ್ರಸಾದ್, ಡಾ| ಪಟ್ಟಾಭಿ ಸೀತಾರಾಮಯ್ಯ

ಜವಾಹರ ನೆಹರು.

ರುವ ಒಂದು ಉಪಸಮಿತಿಯ ತೀರ್ಮಾನಕ್ಕೆ ಒಪ್ಪಿಸಲಾಗಿದೆ. ಕಾಂಗ್ರೆಸಿನೊಳಗೆ ಹಲವು ಪಕ್ಷಗಳಿವೆ. ಫೋರ್ವರ್ಡ್ ಬ್ಲೋಕ್; ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ, ಕಾಂಗ್ರೆಸ್ ಕಮ್ಯೂನಿಸ್ಟ್ ಪಕ್ಷ, ಕಿಸಾನ್ ಸಭಾ, ಕೂಲಿಗಾರ ಸಂಘಗಳ ಸದಸ್ಯರು ಕಾಂಗ್ರೆಸಿನೊಳಗಿದ್ದಾರೆ. ಇವರೆಲ್ಲಾ ಸ್ವಂತ ಸಂಘಗಳ ನಿಯಮಗಳಿಗೆ ಕಟ್ಟುಬಿದ್ದವರು. ಈ ಭಿನ್ನ ಪಕ್ಷಗಳ ನಿಯಮಗಳು ಹಲವು ವೇಳೆ ಕಾಂಗ್ರೆಸಿನೊಡನೆ ಘರ್ಷಣೆಹೊಂದುವದಿದೆ. ಆದ್ದರಿಂದ ಆ ಕುರಿತು ಕಾಂಗ್ರೆಸಿಗೆ ಸ್ಪಷ್ಟ ಧೋರಣೆ ವಹಿಸಬೇಕಾಗಿದೆ. ಮೇಲಾಗಿ ಪ್ರಕೃತ ಕಮ್ಯೂನಿಸ್ಟರ ಮೇಲೆ ಬಿದ್ದಿರುವ ಶಿಸ್ತು ಭಂಗದ ಆರೋಪಗಳಿಗೆ ಒಂದು ತೀರ್ಮಾನವಾಗುವ ಆವಶ್ಯಕತೆಯೂ ಇದೆ. ಕಮ್ಯೂನಿಸ್ಟರ ಮೇಲೆ ಪ್ರಥಮ ಗದೆ ಬೀಸಿದ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ. ಎಸ್. ಕೆ. ಪಾಟೀಲರು ಕಾಂಗ್ರೆಸಿನೊಳಗಿರುವ ಎಲ್ಲಾ ಪಕ್ಷಗಳನ್ನೂ ಬರ್ಖಾಸ್ತುಪಡಿಸಬೇಕೆಂಬ ಠರಾವೊಂದನ್ನು ತರುವ ನೋಟೀಸು ಕೊಟ್ಟಿದ್ದಾರೆ. ಹೀಗಾಗಿ ಆ ಪ್ರಶ್ನೆಯು 'ಕಮ್ಯೂನಿಸ್ಟರ ಮೇಲೆ ಪ್ರತೀಕಾರ' ಎಂಬ ಅಪವಾದ ಕೇಳುವ ಬದಲಿಗೆ 'ಕಾಂಗ್ರೆಸಿನ ಶುದ್ಧೀಕರಣ'ದ ರೂಪು ಹೊಂದಲಿದೆ. ಕೂನೂರು ಜೈಲಿನಿಂದ ತಾ 14ರಲ್ಲಿ ಬಿಡುಗಡೆಗೊಂಡು ಎಲ್ಲೆಡೆಗಳಲ್ಲೂ ಸಂಭ್ರಮದ ಸ್ವಾಗತ ಪಡೆದು, ಅ. ಭಾ. ಕಾಂ. ಸಮಿತಿ ಸಭೆಗಾಗಿ ಬೊಂಬಾಯಿಗ ಹೊರಟಿರುವ ಸುಭಾಷ್ಚಂದ್ರ ಬೋಸರ ಅಣ್ಣ ಶರತ್‌ಚಂದ್ರ ಬೋಸರೂ, ಅವರೊಂದಿಗೆ ಬಿಡಲ್ಪಟ್ಟ ಫೋರ್ವರ್ಡ್ ಬ್ಲೋಕಿನ ನಾಯಕ ಲಾಲಾ ಶಂಕರ ಲಾಲರೂ ಫೋರ್ವರ್ಡ್ ಬ್ಲೋಕನ್ನು ಪಿಸರ್ಜಿಸಿ ಕಾಂಗ್ರೆಸಿನೊಡನೆ ಮಿಲನಗೊಳ್ಳುವ ಬಯಕೆಯನ್ನು ಅಧ್ಯಕ್ಷರಿಗೆ ಬರೆದು ತಿಳಿಸಿದ್ದಾರೆಂದು ತಿಳಿದುಬರುತ್ತದೆ. ನೆಹರು, ಪ್ರಸಾದ್, ಪಟ್ಟಾಭಿಯವರ ಉಪ ಸಮಿತಿಯು ರಾಷ್ಟ್ರ ಸಭೆಯ ಮಹಾಧಿವೇಶನ ನೆರೆಯಿಸುವ ಸ್ಥಳ ಕಾಲಗಳನ್ನೂ ನಿರ್ಧರಿಸಲಿದೆ. ಕಳೆದ ಐದು ವರುಷಗಳಿಂದ ಕಾಂಗ್ರೆಸಿನ ವಾರ್ಷಿಕಾಧಿವೇಶನ ನಡೆದುದಿಲ್ಲ. ಅಧ್ಯಕ್ಷ ಅಜಾದರು ಅನಿರೀಕ್ಷಾಧ್ಯಕ್ಷರ ಅವಧಿಯನ್ನು ಮುಟ್ಟಿದ್ದಾರೆ. ಆದಷ್ಟು ಬೇಗನೇ ಕಾಂಗ್ರೆಸು ಮಹಾ ಸಭೆ ನೆರೆಯಿಸುವ ಆತುರವೆಲ್ಲಾ ಪ್ರಮುಖರಲ್ಲೂ ಇದೆ.

ಅ. ಭಾ. ಕಾಂಗ್ರೆಸ್ ಸಮಿತಿ

ಇದೇ ತಾ. 21ರಂದ ಬೊಂಬಾಯಿಯಲ್ಲಿ ಸೇರಲಿದೆ. ಅದರ ಸಿದ್ಧತೆಯೀಗ ಅಭೂತ ಪೂರ್ವ ಉತ್ಸಾಹದಿಂದ ಪೂರ್ಣಗೊಂಡಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರಗಳೆಲ್ಲಾ ಈ ಅ. ಭಾ. ಸಮಿತಿಯ ಮುಂದೆ ಬರಲಿವೆ. ಬೊಂಬಾಯಿಯಲ್ಲಿ 25 ಸಾವಿರ ಪ್ರೇಕ್ಷಕರಿಗೆ ಸಾಕಾಗುವಂತಹ ಭವ್ಯ ಸಭಾ ಭವನವು ಅದಕ್ಕಾಗಿ ರಚಿಸಲ್ಪಟ್ಟಿದೆ. ಈ ಸಭಾ ವ್ಯವಸ್ಥೆಗೆ $1\frac{1}{2}$ ಲಕ್ಷ ರೂ. ವ್ಯಯಮುಟ್ಟಬಹುದೆಂದೂ ಸಭಾ ಪ್ರವೇಶದ ಟಿಕೇಟು ಹಣವು ರೂ. $3\frac{1}{2}$ ಲಕ್ಷಕ್ಕೂ ಮಿಕ್ಕ ಬಹುದೆಂದೂ ಅಂದಾಜು ಮಾಡಲಾಗಿದೆ. ದೇಶದ ಬೇರೆ ಬೇರೆ ಕಡೆಗಳಿಂದ ಪ್ರೇಕ್ಷಕರಾಗಿ ಪ್ರವೇಶಿಸಲಿಚ್ಛಿಸುವವರ ಸಂಖ್ಯೆಯು ಅಗಣಿತವಿದ್ದು, ಅನುಕೂಲತೆಯಿರುತ್ತಿದ್ದರೆ ಒಂದು ಲಕ್ಷಕ್ಕೂ ಮಿಕ್ಕಿ ಪ್ರೇಕ್ಷಕರನ್ನೂ 10 ಲಕ್ಷಕ್ಕೂ ಮಿಕ್ಕಿ ಪ್ರವೇಶ ಹಣವನ್ನೂ ಸಂಗ್ರಹಿಸಬಹುದಿದ್ದಿತು. ಆದರೆ ಬೊಂಬಾಯಿಯಂತಹ ಸ್ಥಳಾವಕಾಶ ಕಡಿಮೆಯಿರುವ, ಕಟ್ಟುನಿಟ್ಟಿನ ಪಸುಗೇ ಪದ್ಧತಿಯಿರುವ ನಗರದಲ್ಲಿ ಅಂತಹ ವ್ಯವಸ್ಥೆ ಅಸಾಧ್ಯವಾದ್ದರಿಂದ ಎಲ್ಲರೂ ತಮ್ಮಾತುರವನ್ನು ದಮನಿಸಿಕೊಳ್ಳಬೇಕೆಂದು ಬೊಂಬಾಯಿ ಪ್ರಾಂ. ಕಾಂ. ಸಮಿತಿ ಕಾರ್ಯದರ್ಶಿ ವಿಜ್ಞಾಪಿಸಿದ್ದಾರೆ. ಧುರೀಣರನ್ನೆಲ್ಲಾ ಕತ್ತಲೆಯಲ್ಲಿಡಗಿಸಿ ದೇಶವ್ಯಾಪೀ ಕ್ಷೋ[illegible]ಬ್ಬಿಸಿದ್ದ 1942ನೇ ಅಗೋಸ್ತು 8ರ ಅ[illegible] ಚರಿತ್ರಾರ್ಹ ಬೊಂಬಾಯಿ ಸಭೆಯ ನಂತರ ಅ. ಭಾ. ಕಾಂಗ್ರೆಸ್ ಸಮಿತಿಯು ಆ[illegible] ಸ್ಥಳದಲ್ಲಿ ಇದೀಗ ಮೊದಲ ಬಾರಿ ಸೇರಲಿದೆ. ಮುಂದಿನ ಚುನಾವಣೆಯಲ್ಲಿ ಭಾಗವಹಿಸುವಂತಹ ದೇಶ ವ್ಯಾಪೀ ಕಾರ್ಯಕ್ರಮ ಕೈಕೊಳ್ಳುವ ನಿರ್ಧಾರ ಮಾಡಲಿದೆ. ಆದ್ದರಿಂದ ಈ ಬಾರಿಯ ಸಭೆಯು ದೇ[illegible]

ವಲ್ಲಭ್ ಪಟೇಲ್.

ದೇಶಗಳವರನ್ನು ಆಕರ್ಷಿಸಿದೆ. ಕಾಂಗ್ರೆಸ್ ಪ್ರಮುಖರೆಲ್ಲಾ ಪೂನೆಯಿಂದ ಬೊಂಬಾಯಿಗೆ ಹೊರಟಿದ್ದಾರೆ.

ಜಪಾನೀ ಪ್ರಮುಖರ ಹರಿಕಿರಿ

(೧ನೇ ಪುಟದಿಂದ ಮುಂದುವರಿದುದು)

ಮಂಡಲದಲ್ಲಿದ್ದ ನಾಲ್ವರು ಸಿಕ್ಕಿದ್ದರು; ಮತ್ತಿಬ್ಬರು ಆತ್ಮಹತ್ಯೆ ಮಾಡಿಕೊಂಡರು. ಅಪೇಕ್ಷಿತ ಸೇನಾನಿಗಳು ಕೆಲವರೂ, ಸಿಕ್ಕಿದರು. ಹೀಗಾಗಿ ಜಪಾನೀ ಯುದ್ಧಾಪರಾಧಿಗಳೆಂದು ದಾಖಲೆ ಮಾಡಿಕೊಂಡವರೆಲ್ಲರೂ ಈಗ ಆತ್ಮಹತ್ಯೆ ಅಥವಾ ದಸ್ತಗಿರಿಗೊಳಗಾದಂತಿದೆ. ತಮ್ಮ ಹಸ್ತಕರಾದ ಏಳು ಮಂದಿಯನ್ನು ಜಪಾನೀ ಸರಕಾರವು ಮೇಕರ್ಥರರಿಗೊಪ್ಪಿಸಿರುವದೆಂದೂ ಅವರಲ್ಲಿ ಹಿಂದೀ 'ಆರ್ಯನ್ ಸೇನೆ'ಯ ಪ್ರತಾಪ ಮಹೇಂದ್ರರೊಬ್ಬರೆಂದೂ ಅಧ್ಯಕ್ಷ ತಿಳಿದುಬರುತ್ತದೆ.

[illegible]
ಗದ. [illegible]
ಯಾ ಪ್ರಿ[illegible]
ಕಾಂಗ್ರೆಸ್ [illegible]
ಯು ತನ್ನ [illegible]
ತು. [illegible]
ಮಾಡ[illegible]
ರೂ ತಾತ್ಕಾಲಿಕ [illegible]
ವಿರಲಾರದೆಂದೂ [illegible]
ರಿಣಾಮವನ್ನ[illegible]
ಬಹುದೆಂದೂ [illegible]
ಡಗೆಯ ಅಧಿ[illegible]
ರಾಯರೊಂದಿಗೆ [illegible]
ದು ತಿಳಿದು ಬರುತ್ತದೆ.

1000's SAVED
Margaret's
FITS CURE
Stops childrens fits in 3 minutes
Ask for a box with your chemist.
Sole Agents:-
BRIGHTSTAR AGENCIES,
Hospital Rd., Udipi, S. K.

ನವಯುಗದ ಹೊಸ ಸಂಪುಟ

ಚಂದಾದಾರರಲ್ಲಿ ವಿನಂತಿ.

ನವಯುಗದ 24ನೇ ಸಂಪುಟವು ಇದೇ ಕಳೆದ ಅಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಇದೇ ಸಪ್ಟಂಬರದಿಂದ 25ನೇ ಸಂಪುಟವು ಆರಂಭವಾಗಿರುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಮುಂಗಡ) ಆದಷ್ಟುಬೇಗನೆ ದಯಮಾಡಿ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸುವಂತೆ ವಿನಂತಿ

ಮೆನೇಜರ್.

ಮುಗ್ಗಿ ಪುಸ್ತಕಗಳು

ಮಕ್ಕಳ ಮತ್ತು ಉ[illegible] ಹಾಜರಿ ರಿಜಿಸ್ಟ್ರಿಗಳು, ದಾಖಲ[illegible] ಸಾಂಕ್ಷ್ಲಿರಿಟಿಂಗ್ ಫಾರ್ಮುಗಳು, ರಿ[illegible]ರ್ಡ ಶೀಟುಗಳು ದೊರೆಯುತ್ತವೆ

ಮುಗ್ಗಿ ಪುಸ್ತಕ 1ಕ್ಕೆ 0—1—0
,, ,, 50ಕ್ಕೆ 2—9—0
,, ,, 100ಕ್ಕೆ 5—0—0

Navabharat Book Depot,
UDIPI.